ಕರ್ನಾಟಕ ಸರ್ಕಾರ

## ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

## ಮತ್ತು

# ಭಾಷಣಗಳು



೧೯


**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೨೦೨
ವಿಚಾರ ಸಾಹಿತ್ಯಮಾಲೆ - ೧೦೦

# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೧೯

## ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೧೯


## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

## ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 19** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; Revised First Edition : 2015; Pp. xx + 760; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೊದಲ ಮುದ್ರಣ : ೨೦೧೫
ಪುಟಗಳು : xx + ೭೬೦
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೨೧೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫
ದಿನಾಂಕ : ೦೫.೦೬.೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೩೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೯೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

# ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಮೊದಲ ಮಾತು

ಕರ್ನಾಟಕ ಸರಕಾರವು ಭಾರತರತ್ನ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಎಲ್ಲ ಬರಹ ಮತ್ತು ಭಾಷಣಗಳ ಸಂಕಲನಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಆರಂಭಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಮೊದಲ ಹಂತದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತನ್ನ ವ್ಯಾಪ್ತಿಯಲ್ಲಿ ಈ ಯೋಜನೆಯನ್ನು ನಿರ್ವಹಿಸುತ್ತಿತ್ತು. ಬಳಿಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಕಾರ್ಯನಿರ್ವಹಿಸಲು ಮೊದಲು ಮಾಡಿದಾಗ ಅದರ ಅನುವಾದ ಮತ್ತು ಪ್ರಕಟಣೆಯ ಹೊಣೆಯನ್ನು ವಹಿಸಿತು. ಪ್ರಾಧಿಕಾರವು ಮೊದಲು ಪ್ರಕಟವಾಗಿದ್ದ ಸಂಪುಟಗಳ ಪರಿಷ್ಕರಣ ಮತ್ತು ಉಳಿದ ಸಂಪುಟಗಳ ಅನುವಾದ ಇದೆಲ್ಲ ಕೆಲಸವನ್ನು ಈಗ ಪೂರೈಸಿದೆ. ಇಪ್ಪತ್ತು ಸಂಪುಟಗಳಲ್ಲಿ ಹರಡಿರುವ ಈ ಬರಹಗಳೀಗ ಕನ್ನಡ ಓದುಗರ ಕೈಸೇರಿವೆ. ಒಂದು ಸಂಪುಟ (೧೮) ಬಾಬಾಸಾಹೇಬ್ ಅವರ ಮರಾಠಿ ಬರಹ ಮತ್ತು ಭಾಷಣಗಳ ಸಂಕಲನವಾಗಿದೆ. ಮರಾಠಿಯಿಂದ ನೇರವಾಗಿ ಕನ್ನಡಕ್ಕೆ ಅನುವಾದಗೊಂಡಿದೆ. ಈಗಾಗಲೇ ಹೊರಬಂದಿರುವ ಸಂಪುಟಗಳು ಅಪಾರವಾದ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಮೊದಲ ಹದಿನೈದು ಸಂಪುಟಗಳು ಮರುಮುದ್ರಣಗೊಳ್ಳುತ್ತಿವೆ. ಈ ಸಂಪುಟವು ಮೊದಲ ಬಾರಿಗೆ ಹೊರಬರುತ್ತಿದೆ. ಈ ಸಂಪುಟದ ಬರಹಗಳನ್ನು ಅನುವಾದಿಸಿಕೊಟ್ಟ ಎಲ್ಲರಿಗೂ ನಮ್ಮ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಯೋಜನೆಗೆ ಬೇಕಾದ ಅನುದಾನ, ಆಡಳಿತಾತ್ಮಕ ಒತ್ತಾಸೆಯನ್ನು ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀಮತಿ ಉಮಾಶ್ರೀ ಅವರಿಗೆ, ಸರ್ಕಾರದ ಕಾರ್ಯದರ್ಶಿಗಳಾದ ಡಾ.ಎನ್.ಎಸ್. ಚನ್ನಪ್ಪಗೌಡ ಅವರಿಗೆ, ನಿರ್ದೇಶಕರಾದ ಶ್ರೀ ಕೆ.ವಿ. ದಯಾನಂದ್ ಅವರಿಗೆ ಕೃತಜ್ಞತೆಗಳು. ಪ್ರಾಧಿಕಾರದ ಸಹೋದ್ಯೋಗಿಗಳು ಈ ಕೆಲಸದಲ್ಲಿ ಪೂರ್ಣವಾಗಿ ಸಹಕರಿಸಿದ್ದಾರೆ. ಸಂಪಾದನ ಸಮಿತಿಯ ಸದಸ್ಯರು ಉದ್ದಕ್ಕೂ ಸೂಕ್ತ ಸಲಹೆಗಳನ್ನು ನೀಡುತ್ತ ಈ ಕೆಲಸ ಸರಿದಿಕ್ಕಿನಲ್ಲಿ ನಡೆಯುವಂತೆ ನೋಡಿಕೊಂಡಿದ್ದಾರೆ. ಎಲ್ಲರಿಗೂ ಪ್ರಾಧಿಕಾರದ ಪರವಾಗಿ ನಮಸ್ಕಾರಗಳು.

ಮೆ. ರಾಜಾ ಪ್ರಿಂಟರ್ಸ್ ಅವರು ಈ ಸಂಪುಟಗಳ ಅಚ್ಚು ಕೆಲಸವನ್ನು ಮುಗಿಸಿಕೊಟ್ಟಿದ್ದಾರೆ. ಸಂಪುಟಗಳು ಚಂದವಾಗಿ ಕಾಣಲು ಅವರೆಲ್ಲರ ಶ್ರಮವೂ ಕಾರಣವಾಗಿದೆ. ಅವರಿಗೆ ವಂದನೆಗಳು.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಪರಿವಿಡಿ


ಸಂದೇಶಗಳು v

ಮೊದಲಮಾತು x

೧. ಜನ್ಮ ಸಿದ್ಧ ಶ್ರೇಷ್ಠತೆ ಹಾಗೂ ಪಾವಿತ್ರ್ಯತೆಯಿಂದ ಅಯೋಗ್ಯ ಬ್ರಾಹ್ಮಣರು ಕೂಡ ಉದ್ಧಾರವಾಗುತ್ತಿದ್ದಾರೆ ೧

೨. ಏಳಿಗೆಯ ಮಾರ್ಗದಲ್ಲಿ ಅಡ್ಡ ಬರುವವರಿಗೆ ಧಿಕ್ಕಾರ ೬

೩. ಏಳು ಕೋಟಿ ದಲಿತರು ಸೇರಿ ಹಿಮಾಲಯವನ್ನೇ ನೆಲಸಮ ಮಾಡಿಯಾರು ೧೦

೪. ಸಮಾಜ ಜೀವನದಲ್ಲಿ ನಿರಪೇಕ್ಷ ಬುದ್ಧಿಯಿಂದ ಕೆಲಸ ಮಾಡಬೇಕು ೧೨

೫. ಹೋರಾಟದಿಂದ ಮಾತ್ರ ಮನುಷ್ಯತ್ವ ಮತ್ತೆ ಸಿಕ್ಕೀತು ೨೨

೬. ನಾನು ನನ್ನ ಕುರುಡುಜನತೆಯ ಕೋಲು ೨೮

೭. ಜಾಗೃತಿಯ ದೀಪವನ್ನು ಎಂದೂ ನಂದಿಸಬೇಡಿ ೩೦

೮. ರಾಜ್ಯದ ಅಭಿಮಾನವಿಲ್ಲದಿದ್ದರೆ ರಾಜ್ಯ ಉಳಿಯುವುದಿಲ್ಲ ೪೫

೯. ನಮ್ಮ ಉದ್ಧಾರ ನಾವೇ ಮಾಡಿಕೊಳ್ಳಲು ಕಟಿಬದ್ಧರಾಗಬೇಕು ೪೭

೧೦. ನಮಗೆ ಕೆಚ್ಚೆದೆಯ ಹಾಗೂ ಸ್ವಾಭಿಮಾನವಿರುವಂತಹ ಜನ ಬೇಕು ೪೯

೧೧. ಹೊಲೆಯರ ಮೇಲಿರುವ ಸ್ವಾರ್ಥಿತನದ ಆರೋಪ ತಿರುಳಿಲ್ಲದ್ದು ೫೧

೧೨. ನಾವು ಯಾರಿಗೂ ಕಡಿಮೆಯಿಲ್ಲ ಅನ್ನುವುದನ್ನು ತೋರಿಸಿಕೊಡಬೇಕಿದೆ ೫೩

೧೩. ದಲಿತ ವಿದ್ಯಾರ್ಥಿಗಳ ಕರ್ತವ್ಯದ ಮೇಲೆಯೇ ದಲಿತರ ಭವಿಷ್ಯ ಅವಲಂಬಿಸಿದೆ ೫೪

೧೪. ಅಸ್ಪೃಶ್ಯತೆ ಹಾಗೂ ಸತ್ಯಾಗ್ರಹದ ಸಫಲತೆ ೫೬

೧೫. ಅಸ್ಪೃಶ್ಯೋನ್ನತಿಯ ಆರ್ಥಿಕ ಅಡಿಪಾಯ ೭೪

೧೬. ಹಕ್ಕುಗಳನ್ನು ಪಡೆಯಲು ಎಲ್ಲರೂ ಸಿದ್ಧರಾಗಬೇಕು ೮೬

೧೭. ಮಹಾಡ್ ಸತ್ಯಾಗ್ರಹ ಪರಿಷತ್ತು ೮೮

೧೮. ಅಸ್ಪೃಶ್ಯರಾಗಿದ್ದೂ ಕೂಡ ಅಸ್ಪೃಶ್ಯರ ಚಳುವಳಿಯಲ್ಲಿ ಭಾವಹಿಸದಿರುವುದು ನಾಚಿಕೆಗೇಡು ೧೧೮

೧೯. ದಲಿತೋದ್ಧಾರ ಹಾಗೂ ಸ್ತ್ರೀಯರ ಜವಾಬ್ದಾರಿ ೧೨೧

೨೦. ಬದಲಾಗಿರುವ ಪರಿಸ್ಥಿಯ ಅರಿವಿರಲಿ ೧೨೪

೨೧. ಮೇಲ್ಜಾತಿಯವರು ದಲಿತರಿಗಿಂತ ತಮ್ಮ ಜಾತಿಯವರಿಗೆ ದಾರಿ ತೋರಿಸುವುದೇ ಒಳ್ಳೆಯದು ೧೨೬

೨೨. ಜಾತಿ ಭೇದದಿಂದಲೇ ಅಸ್ಪೃಶ್ಯತೆಯ ಉಗಮ ೧೨೮

೨೩. ಇದೇ ಜನ್ಮದಲ್ಲಿ ಎಲ್ಲ ರೀತಿಯಿಂದಲೂ ಏಳಿಗೆಯಾಗಬೇಕು ೧೩೨

೨೪. ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ದಬ್ಬಾಳಿಕೆ ನಡೆಸದೆ ಬೇರೆ ಮಾರ್ಗವಿಲ್ಲ. ೧೩೩

೨೫. ಗುಲಾಮಗಿರಿ ಪದ್ಧತಿಯನ್ನು ನಷ್ಟ ಮಾಡಿ ಕೆಟ್ಟ ರೂಢಿ ಪರಂಪರೆಗಳನ್ನು ಮುಗಿಸಿ ೧೩೯

೨೬. ಸ್ವಾವಲಂಬನೆ ಹಾಗೂ ಸ್ವಾಭಿಮಾನ ಬೆಳೆಸಿಕೊಳ್ಳುವುದನ್ನು ಬಿಟ್ಟರೆ ಬೇರೆ ದಾರಿಯಿಲ್ಲ. ೧೪೧

೨೭. ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ ೧೪೪

೨೮. ಮನುಷ್ಯತ್ವದ ಹಕ್ಕು ಪಡೆಯಲು ಅನ್ಯಾಯದ ವಿರುದ್ಧ ಬಂಡೇಳಿ ೧೪೯

೨೯. ದಲಿತರು ಕೊಟ್ಟಿರುವ ಧರ್ಮಾಂತರದ ನೋಟೀಸು ೧೫೦

೩೦. ನಮಗೆ ದಲಿತರಷ್ಟೆ ಗೊತ್ತು ೧೫೨

೩೧. ಕಾರ್ಮಿಕರಿಗೆ ಜಾತಿಯಿಲ್ಲ ಎಂದು ಬೊಬ್ಬೆ ಹೊಡೆಯುವ ಬ್ರಾಹ್ಮಣ
ನೇತಾರರು ಇದಕ್ಕೆ ಉತ್ತರ ಕೊಡಲಿ ೧೫೪

೩೨. ಕೇವಲ ಶಿಕ್ಷಣದಿಂದ ಯೋಗ್ಯತೆ ಬರುವುದಿಲ್ಲ ೧೫೭

೩೩. ಸಂಯುಕ್ತ ರಾಷ್ಟ್ರ ನಮ್ಮ ಗುರಿ. ೧೬೧

೩೪. ದೇಶದ ಸ್ವಾತಂತ್ರ್ಯಕ್ಕೆ ನನ್ನ ಬೆಂಬಲವಿದೆ ೧೯೮

೩೫. ಬ್ರಿಟಿಷ್ ಸರ್ಕಾರ ಈ ದೇಶದಲ್ಲಿರುವ ತನಕ ನಮಗೆ ರಾಜಕೀಯ ಅಧಿಕಾರ ಸಿಗುವುದಿಲ್ಲ ೨೦೩

೩೬. ಭಾರತದ ಸಂರಕ್ಷಣೆ ವಿಶಿಷ್ಟ ಜಾತಿಗಷ್ಟೇ ಸೀಮಿತವಿರದೆ ಎಲ್ಲ ಜನತೆಗೆ ಸಂಬಂಧಿಸಿದ್ದಿರಬೇಕು ೨೧೧

೩೭. ವಿಚಿತ್ರ ದೇಶಭಕ್ತರಲ್ಲಿ ನಾನೊಬ್ಬನಲ್ಲ ೨೧೩

೩೮. ಸ್ವತಂತ್ರ ದೇಶದಲ್ಲಿ ಅಸ್ಪೃಶ್ಯರಿಗೆ ಸಮಾನ ಹಕ್ಕಿನಿಂದ ಬದುಕಲು ಬರಬೇಕು ೨೧೭

೩೯. ಘನತೆ ಹಾಗೂ ನಿರ್ಧಾರದಿಂದ ಹೋರಾಡಿದರೆ ಮಾತ್ರ ನಮ್ಮ ಚಳುವಳಿಗೆ ಯಶಸ್ಸು ಸಿಗುತ್ತದೆ ೨೨೧

೪೦. ದಲಿತರಲ್ಲಿ ಜಗಳ ಹಚ್ಚುವ ಹಿತಶತೃಗಳ ಆಟವನ್ನು ಗುರುತಿಸಿ ೨೨೪

೪೧. ಕಠಿಣ ಪರಿಸ್ಥಿತಿಯೊಡನೆ ಹೋರಾಡಿಯೇ ಸಮಾಜದ ಏಳಿಗೆ ಸಾಧ್ಯ ೨೨೮

೪೨. ಅಸ್ಪೃಶ್ಯತೆ ಜಗತ್ತಿನ ಎಲ್ಲ ರೀತಿಯ ಗುಲಾಮಗಿರಿಗಿಂತ ಭಯಂಕರ ಹಾಗೂ ಭೀಷಣವಾದದ್ದು ೨೨೯

೪೩. ದಲಿತ ಸ್ತ್ರೀಯರು ತಮ್ಮ ಸಂಪೂರ್ಣ ವಿಕಾಸಕ್ಕಾಗಿ ಕಷ್ಟಪಡಬೇಕು ೨೩೧

೪೪. ಹೋರಾಟ ಕಠಿಣವಾಗಿದ್ದರೂ ಅದರ ಜವಾಬ್ದಾರಿ ಮಾತ್ರ ಆತ್ಮೀಯತೆಯಿಂದ ಸ್ವೀಕರಿಸಿ ೨೩೨

೪೫. ನನ್ನ ಜನರ ಹಿತಸಂಬಂಧದ ಪ್ರತಿನಿಧಿ ನಾನೇ ಆಗಿದ್ದೇನೆ ೨೩೫

೪೬. ದೇಶದ ಒಗ್ಗಟ್ಟಿಗಾಗಿ ಸಂಘಟನೆ ಅಗತ್ಯ ೨೩೭

೪೭. ಸ್ವಾಭಿಮಾನ ಹಾಗೂ ಸ್ವಾತಂತ್ರ್ಯದ ದೀಪ ಯಾವತ್ತೂ ಆರಗೊಡಬಾರದು ೨೪೧

೪೮. ಸ್ವಾವಲಂಬನೆಗೆ ವೃತ್ತಪತ್ರಿಕೆಯ ಅಗತ್ಯ ೨೪೯

೪೯. ಭೇದನೀತಿ ಪ್ರಯೋಗಕ್ಕೆ ಬಲಿ ಬೀಳದ ನಾನು ೨೫೧
೫೦. ಕಂಡವರ ಕುತಂತ್ರಕ್ಕೆ ನಾವು ಬಲಿಯಾಗಬಾರದು ೨೫೩
೫೧. ಅಸ್ಪೃಶ್ಯ ಸಮಾಜದ ಕೈಗೆ ರಾಜಕೀಯ ಅಧಿಕಾರ ಬೇಕೇ ಬೇಕು ೨೫೪
೫೨. ಸ್ವಾವಲಂಬನೆಯೊಂದೇ ಅಸ್ಪೃಶ್ಯರಿಗೆ ಪರ್ಯಾಯ ೨೬೩
೫೩. ದೇವ ದರ್ಶನ ಇಲ್ಲದಿದ್ದರೆ ಯಾರೂ ಸಾಯುವುದಿಲ್ಲ. ೨೬೪
೫೪. ರಾಜಕೀಯ ಅಧಿಕಾರಕ್ಕಾಗಿ ಇಂದಿನ ನಮ್ಮ ಹೋರಾಟ ೨೬೬
೫೫. ಅಸ್ಪೃಶ್ಯ ಸಮಾಜಕ್ಕೆ ಶಿಕ್ಷಣ ಅನಿವಾರ್ಯ ೨೯೦
೫೬. ನನ್ನ ಜನರ ಹೋರಾಟ ಹಾಗೂ ನ್ಯಾಯಯುತ ಹಕ್ಕುಗಳಿಗಾಗಿ ರಸ್ತೆಯ ಮೇಲಿನ
ದೀಪದ ಕಂಬಕ್ಕೆ ನೇಣು ಹಾಕಿದರೂ ನಾನು ಬೆದರಲಾರೆ ೨೭೩
೫೭. ಪುಣೆ ಒಪ್ಪಂದಕ್ಕೆ ಸ್ಪೃಶ್ಯ ಬಂಧುಗಳ ಬದ್ಧತೆ ಇರಲಿ ೩೨೬
೫೮. ದೇವ ದರ್ಶನದಿಂದ ನಿಮ್ಮ ಉದ್ಧಾರವಾಗುವುದಿಲ್ಲ ೩೨೮
೫೯. ಮುಗ್ಧ ಕಲ್ಪನೆಯಿಂದಾಗಿ ಇಹಲೋಕದ ಜೀವನವೂ ಕಷ್ಟಕರವಾಗಿದೆ ೩೩೨
೬೦. ಮುಂದುವರಿದವರು ಸ್ಪೃಶ್ಯಾಸ್ಪೃಶ್ಯತೆ ನಿರ್ಮೂಲನೆಗೆ ಮುಂದಾಗಲಿ ೩೩೫
೬೧. ಕುಲಕಸುಬು ಬಿಡಿ ಶಿಕ್ಷಣದ ಕೆಚ್ಚಲು ಹಿಡಿಯಿರಿ
೬೨. ನಮ್ಮಲ್ಲಿನ ಭೇದವೂ ಇಲ್ಲವಾಗಬೇಕು ೩೩೮
೬೩. ಏಕತೆ ಇದ್ದರೆ ಭವಿಷ್ಯದ ರಾಜಕಾರಣವೇ ದಾಸ್ಯ ಇಲ್ಲವಾಗಿಸುತ್ತದೆ ೩೪೦
೬೪. ದೇವರ ಮೇಲೆ ನಂಬಿಕೆ ಇಟ್ಟು ಬದುಕಬೇಡಿ ಬದುಕುವುದಾದರೆ ಗಟ್ಟಿತನದ ಮೇಲೆ ಬದುಕಿ ೩೪೨
೬೫. ಕೋಕಣಸ್ಥ–ದೇಶಸ್ಥ ಭೇದಕ್ಕೆ ನನ್ನ ಸಹಮತವಿಲ್ಲ ೩೪೬
೬೬. ಜನರ ಧಾರ್ಮಿಕ ಮುಗ್ಧತೆಯ ಲಾಭ ಪಡೆಯುವವರಿಂದ ಎಚ್ಚರ ಇರಲಿ ೩೪೮
೬೭. ವಿದ್ಯಾರ್ಥಿ ದೆಸೆಯಲ್ಲಿಯೇ ಸ್ವಯಂ ಅರ್ಹತೆ ಬೆಳೆಸಿಕೊಳ್ಳಿ ೩೫೩
೬೮. ಖೊಟ್ಟಿ, ಸ್ವಘೋಷಿತ ಮುಖಂಡರ ಬಗ್ಗೆ ಎಚ್ಚರವಿರಲಿ ೩೫೫
೬೯. ನಿಮ್ಮ ಜವಾಬ್ದಾರಿಯನ್ನು ನೀವೇ ಗುರುತಿಸಬೇಕು ೩೫೮
೭೦. ಜಾತಿಭೇದ ನಿರ್ಮೂಲನೆಯಾಗದೇ ಉನ್ನತಿಯ ಮಾರ್ಗ ಸಾಧ್ಯವಿಲ್ಲ ೩೬೧
೭೧. ಕೂಪ ಮಂಡೂಕ ಬುದ್ಧಿ ಬಿಡಿ, ಸಮಾಜ ಸೇವೆಗೆ ಹಣ ನೀಡಿ ೩೬೨
೭೨. ಈ ದೇಶದ ಬ್ರಿಟಿಷ್ ಸರ್ಕಾರ ನಿಷ್ಕ್ರಿಯ ೩೬೪
೭೩. ಅನ್ನ, ಶಿಕ್ಷಣ ಮತ್ತು ಅಧಿಕಾರಕ್ಕಾಗಿ ಬುದ್ಧಿಯ ಬಳಕೆಯಾಗಲಿ ೩೬೮
೭೪. ಹಿಂದೂ ಸಮಾಜದ ಶಕ್ತಿ ಸಾಮರ್ಥ್ಯಗಳು ಸಾಮಾಜಿಕ ಸುಧಾರಣೆಗಾಗಿ
ಪ್ರಾಮಾಣಿಕವಾಗಿ ಬಳಕೆಯಾಗಲಿ ೩೭೧

೭೫. ಗುಲಾಮನೆಂಬ ಅವಮಾನವನ್ನು ಅದೆಷ್ಟು ದಿನ ಸಹಿಸುವಿರಿ? ೩೭೩
೭೬. ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹಣ ಖರ್ಚಾದರೆ ಒಳಿತು ೩೮೨
೭೭. ಅಸ್ಪೃಶ್ಯ ಹಿಂದೂ ಆಗಿ ಜನಿಸಿದ್ದರೂ ಹಿಂದೂ ಆಗಿ ನಾನು ಸಾಯಲಾರೆ ೩೮೩
೭೮. ಮಾನವೀಯತೆ ಇಲ್ಲದ ಧರ್ಮ ಎಂತಹದ್ದು? ೩೮೭
೭೯. ಧರ್ಮಾಂತರದಿಂದ ಅಲ್ಪಸಂಖ್ಯಾತರ ಕಲ್ಯಾಣ ೩೯೨
೮೦. ಸಂಘಟಿತ ದೃಢ ನಿಶ್ಚಯದಿಂದ ಮುನ್ನಡೆಯಬೇಕಿದೆ ೩೯೮
೮೧. ಗುಲಾಮರಾಗಿ ಇರಬೇಕಾ ಇಲ್ಲವೇ ಸ್ವತಂತ್ರರಾಗಿ ಬದುಕಬೇಕಾ? ೪೦೦
೮೨. ಚಳವಳಿಯ ಲಾಭ ಆಗಿದ್ದು ಎಲ್ಲ ಅಸ್ಪೃಶ್ಯರಿಗೆ ೪೦೮
೮೩. ಮತ ಮಾರಾಟ ಅಪರಾಧವಷ್ಟೇ ಅಲ್ಲ ಅದು ಆತ್ಮದ್ರೋಹ ೪೧೦
೮೪. ಒಂದೇ ಬಾರಿಗೆ ಏಳು ಕೋಟಿ ಅಸ್ಪೃಶ್ಯರ ಧರ್ಮಾಂತರ ೪೧೪
೮೫. ನ್ಯಾಯ ಮತ್ತು ಉದಾರ ಬುದ್ಧಿಯಿಂದ ರಾಜಕೀಯ ಅಧಿಕಾರ ಬಳಕೆಯಾಗಲಿ ೪೧೮
೮೬. ನೂರಾರು ವರ್ಷಗಳಿಂದ ಆಗದ ಆ ಕೆಲಸ ಹತ್ತು ವರ್ಷಗಳ ಅಲ್ಪಾವಧಿಯಲ್ಲಿ ಆಗಿದೆ ೪೨೧
೮೭. ಸಮಾನತೆ, ಪ್ರೀತಿ ಮತ್ತು ಬಂಧುತ್ವವಿಲ್ಲದ ಧರ್ಮ, ಧರ್ಮವಾಗಲಾರದು ೪೨೩
೮೮. ಮಣ್ಣು ಪಾಲಾದ ನಮ್ಮ ಜೀವನಕ್ಕೆ ಬಂಗಾರದ ಮೌಲ್ಯ ಬೇಕೆಂದರೆ ಧರ್ಮಾಂತರ ಅತ್ಯಗತ್ಯ ೪೨೫
೮೯. ಮುಕ್ತಿಗೆ ಯಾವ ಪಥ? ೪೩೦
೯೦. ಈಗ ಸದ್ಯ ಸನ್ಯಾಸತ್ವದ ಅಸ್ಥಿಪಂಜರ ಮಾತ್ರ ಉಳಿದಿದೆ ೪೭೧
೯೧. ಕಾಯ್ದೆ ಮಂಡಳಿಗೆ ಪಕ್ಷದ ಅರ್ಹ ಅಭ್ಯರ್ಥಿಗಳ ಆಯ್ಕೆಯಾಗಲಿ ೪೭೭
೯೨. ಧರ್ಮಾಂತರದಿಂದ ಅಸ್ಪೃಶ್ಯರಿಗೆ ಸಮಾನತೆಯ ಹಕ್ಕು ಲಭ್ಯ ೪೮೧
೯೩. ಸಹೋದರಿಯರೇ ಸಮಾಜಕ್ಕೆ ಕಳಂಕ ತರುವ ವೃತ್ತಿ ಬೇಡ ೪೯೧
೯೪. ನಾವೀಗ ಬೃಹತ್ ಸಮುದ್ರ ದಾಟಬೇಕಿದೆ ೪೯೫
೯೫. ಅಂಧ, ಸ್ವಾರ್ಥ ದೃಷ್ಟಿಕೋನದಿಂದ ಇಡೀ ಸಮಾಜವೇ ಸರ್ವನಾಶ ೪೯೮
೯೬. ಯಾವ ವೃಕ್ಷದ ನೆರಳಿನಡಿ ಸುಖದಿಂದ ಕೂಡ್ರಬೇಕಾಗಿದೆಯೋ ಆ ವೃಕ್ಷದ ರೆಂಬೆಗಳನ್ನು ಕತ್ತರಿಸುವ ದುಷ್ಟತನ ಬೇಡ ೫೦೧
೯೭. ಈ ಸ್ಥಾನ ಗೌರವದ್ದಲ್ಲ, ಹೋರಾಟದ್ದಾಗಿದೆ ೫೦೫
೯೮. ಯಾರಿಗೆ ಪಕ್ಷವಿಲ್ಲ, ಧ್ಯೇಯವಿಲ್ಲ, ತತ್ವವಿಲ್ಲ ಅಂಥ ಅಧಾಂತರವಾಗಿ ಜೋತಾಡುವ ಅಭ್ಯರ್ಥಿಯನ್ನು ಆಯ್ಕೆಮಾಡಬೇಡಿರಿ ೫೧೩
೯೯. ಖೊಟ್ಟಿ ದಸ್ತಾವೇಜು ಸೃಷ್ಟಿಸುವವರು ಬಡವ, ರೈತ, ಕಾರ್ಮಿಕರ ಏಳ್ಗೆ ಮಾಡಿಯಾರೆ? ೫೧೬
೧೦೦. ಪೊಳ್ಳುಮಾತುಗಳಿಗೆ ಬಲಿಯಾಗದೆ ಎಚ್ಚರದಿಂದ ವರ್ತಿಸಬೇಕಿದೆ ೫೨೩

೧೦೧. ಕೇವಲ ಚುನಾವಣೆಯಲ್ಲಿ ಗೆದ್ದಮಾತ್ರಕ್ಕೆ ಚಳುವಳಿಯ ಕಾರ್ಯಮುಗಿಯಿತು ಎಂದು ತಿಳಿಯಬೇಡಿರಿ ೫೨೫
೧೦೨. ಶಿಸ್ತು ಮತ್ತು ಸಂಘಟನೆಯೇ ನಮ್ಮ ಪಕ್ಷದ ಧ್ಯೇಯ ೫೩೨
೧೦೩. ಸಾಮ್ರಾಜ್ಯಶಾಹಿಗಿಂತ ಬ್ರಾಹ್ಮಣ್ಯ ಸಾವಿರಪಟ್ಟು ಕೆಟ್ಟದ್ದು ೫೩೪
೧೦೪. ನೀವು ಸ್ವತಂತ್ರ ಮಜೂರ ಪಕ್ಷವನ್ನು ಸಂಘಟಿಸಿ ಬಲಪಡಿಸಿರಿ ೫೪೦
೧೦೫. ಪ್ರಾಂತದ ಪ್ರಧಾನ ಮಂಡಳವು ಅದರ ಬುದ್ಧಿವಂತಿಕೆಯ ಅಲೌಕಿಕ ಸಂಚಯವಾಗಬೇಕಿದೆ ೫೪೪
೧೦೬. ದೇವರನ್ನು ಯಾಕೆ ಪೂಜಿಸಬೇಕು? ೫೪೭
೧೦೭. ಬಹುಜನ ಸಮಾಜದ ಮೇಲೆ ಅನ್ಯಾಯ ಆಗಕೂಡದೆಂಬ ಕಾನೂನು ರಚಿಸಬೇಕು ೫೫೦
೧೦೮. ಮನುಷ್ಯರಾಗಿಯೂ ರೊಟ್ಟಿಗಾಗಿ ಸ್ವಾಭಿಮಾನ ಶೂನ್ಯರಾಗುವಿರೇನು? ೫೫೫
೧೦೯. ನಾನೇನನ್ನು ಸಂಪಾದಿಸಿದ್ದೇನೆಯೋ ಅದೆಲ್ಲವು ಅಖಿಲ ಅಸ್ಪೃಶ್ಯರಿಗಾಗಿ ೫೫೭
೧೧೦. ನಮ್ಮ ಅಸ್ತಿತ್ವಗಳನ್ನು ಸ್ವತಂತ್ರವಾಗಿಡದೆ ಹೋದಲ್ಲಿ ವೇದನೆಗೆ ಆಸ್ಪದವಿಲ್ಲ ೫೫೮
೧೧೧. ನಾಯಕರ ನಿಧನದ ನಂತರವೂ ಸಮಾಜಕಾರ್ಯ ಅವ್ಯಾಹತವಾಗಿ ಚಲಿಸಿ,
ಚಿರಕಾಲ ಉಳಿಯಬೇಕು ೫೬೦
೧೧೨. ಅಸ್ಪೃಶ್ಯ ಸಮಾಜದೊಳಗೆ ಒಗ್ಗಟ್ಟಿಲ್ಲ, ಇದಕ್ಕೆ ಕಾರಣ ಜಾತಿಭೇದವೇ ಆಗಿದೆ ೫೬೩
೧೧೩. ಅನ್ಯಾಯ ಮಾಡುವವರ ಸಂಗಡ ಜಗಳ ಕಾಯುವ ಸಿದ್ಧತೆಯಿರಲಿ ೫೬೭
೧೧೪. ರಾಜಕಾರಣದ ಬಂಡಿ ಎಳೆಯುವಾಗ ಚಕ್ರ ಮೈಮೇಲೆ
ಬರದಂತೆ ಎಚ್ಚರವಹಿಸಿರಿ ೫೭೨
೧೧೫. ಹಾವು-ಮುಂಗುಸಿ, ಇಲಿ-ಬೆಕ್ಕು ಇವುಗಳ ಮೈತ್ರಿ ಎಂದಾದರು ಆದೀತೆ? ೫೭೪
೧೧೬. ರಾಷ್ಟ್ರೀಯ ಐಕ್ಯತೆಯ ಭಾವನೆಗಾಗಿ ಹಿಂದೂ-ಮುಸ್ಲಿಮ್ ವಿಭಕ್ತಿಕರಣವು ವಿನಾಶಕ ೫೮೦
೧೧೭. ಚಾತುರ್ವರ್ಣದಿಂದ ಹಿಂದೂಸ್ಥಾನದ ಕ್ಷೀಣತೆ ಮತ್ತು ಅಧಃಪತನ ೫೮೨
೧೧೮. ಸ್ವಾತಂತ್ರ್ಯ, ಸಮತೆ ಮತ್ತು ಬಂಧುಭಾವ-ಈ ತತ್ವಗಳ ಆಧಾರದ ಹೊಸಪದ್ಧತಿಯು
ಕಾರ್ಮಿಕ ಸಂಘಟನೆಯ ಧ್ಯೇಯ ೫೮೭
೧೧೯. ಸಚ್ಚಾರಿತ್ರ್ಯ ಸೌಜನ್ಯವಿಲ್ಲದಿದ್ದರೆ ಸುಶಿಕ್ಷಿತ ಮನುಷ್ಯನು ಕಾಡುಪ್ರಾಣಿಗಿಂತಲೂ ಕ್ರೂರ ಮತ್ತು
ಭಯಪ್ರದನಾಗುತ್ತಾನೆ ೬೧೨
೧೨೦. ಬಡವರ ಹೊಟ್ಟೆಯ ಮೇಲೆ ಕಾಲಿಡುವ ಸರಕಾರವು ಅಧಿಕಾರವನ್ನು ತ್ಯಾಗ ಮಾಡುವುದೇ ಯೋಗ್ಯ ೬೧೬
೧೨೧. ಅಪರಾಧಿಗೆ ನೀಡಿದ ಶಿಕ್ಷೆಯನ್ನು ಸ್ಥಗಿತಗೊಳಿಸುವುದೆಂದರೆ ಕಾಯ್ದೆಯನ್ನು ಉಲ್ಲಂಘಿಸಿದಂತೆಯೇ ೬೨೧
೧೨೨. ಸತ್ಯಾಗ್ರಹದ ಯಶಸ್ಸಿನ ಫಲ ನನ್ನೊಬ್ಬನದೇ ಅಲ್ಲ ನಿಮ್ಮೆಲ್ಲರದ್ದು ೬೨೫
೧೨೩. ಶ್ರೀಮಂತರ ಹಣದಿಂದ ಪಕ್ಷದ ಕಾರ್ಯವನ್ನು ಮುಂದುವರೆಸಿದರೆ ಪಕ್ಷದ ವೈಶಿಷ್ಟ್ಯವೇ ನಾಶವಾಗಬಹುದು ೬೨೮
೧೨೪. ಪ್ರತಿಯೊಬ್ಬನು ಮೊದಲು ಭಾರತೀಯ, ಕೊನೆಗೂ ಭಾರತೀಯ ಎಂಬ ನಿಲುವನ್ನು ಹೊಂದಿರಬೇಕು ೬೩೦
೧೨೫. ನಿಮ್ಮ ಪವಿತ್ರ ಮತವನ್ನು ಮಾರಬೇಡಿ, ಸತ್ಕಾರ್ಯಕ್ಕಾಗಿ ಬಳಸಿ ೬೩೩
೧೨೬. ಅನ್ಯರನ್ನು ಅವಲಂಬಿಸುವುದೆಂದರೆ ಪೇಶ್ವೆಕಾಲದ ಗಡಿಗೆಯನ್ನು ಕೊರಳಿಗೆ ಕಟ್ಟಿಕೊಂಡಂತೆ ೬೩೫
೧೨೭. ದಂಗೆಯನ್ನು ನಿಯಂತ್ರಿಸಲು ಉಗ್ರಕ್ರಮ ಅಗತ್ಯ ೬೩೬
೧೨೮. ಚುನಾಯಿತನಾದ ಅಭ್ಯರ್ಥಿಯು ತನ್ನ ಕರ್ತವ್ಯ ಮಾಡುತ್ತಾನೋ ಇಲ್ಲವೋ ಎಂಬ ಬಗ್ಗೆ ಪಹರೆ ನಡೆಸಿ ೬೩೮
೧೨೯. . . .ಇಲ್ಲದಿದ್ದರೆ ನಿಮ್ಮ ಸ್ವತಂತ್ರ ಯೂನಿಯನ್ ಸ್ಥಾಪಿಸಿ ೬೪೦

೧೩೦. ನ್ಯಾಯಯುತವಾದ ಹಕ್ಕಿಗಾಗಿ ಯುವಕರು ಸಾಯಲೂ ಸಿದ್ಧರಾಗಬೇಕು ೬೪೨

೧೩೧. ಬಹುಸಂಖ್ಯಾತ ರೈತ ಮತ್ತು ಕಾರ್ಮಿಕ ವರ್ಗದವರೇ ಈ ದೇಶದ ಸತ್ತಾಧಾರಿಗಳಾಗಬೇಕು ೬೪೬

೧೩೨. ಜೀವನದಲ್ಲಿ ಸರ್ವೋಚ್ಚಸ್ಥಾನ ಪ್ರಾಪ್ತಿಯ ಮಹಾತ್ವಾಕಾಂಕ್ಷೆ ಬೆಳೆಸಿಕೊಳ್ಳಿ ೬೫೦

೧೩೩. ಗೌಡಕಿಯನ್ನು ನಾಶಗೊಳಿಸಲು ನಾನು ಕೈಗೆ ಕಂಕಣ ಕಟ್ಟಿದ್ದೇನೆ ೬೫೩

೧೩೪. ನಮ್ಮ ಪಕ್ಷದ ಸದಸ್ಯರಾಗಿ, ಪಕ್ಷವನ್ನು ಬಲಪಡಿಸಿ ೬೫೫

೧೩೫. ದ್ವಂದ್ವದಿಂದಾಗಿ ಯಾವ ಕಾರ್ಯವೂ ಸಾಧ್ಯವಾಗಲಾರದು ೬೫೭

೧೩೬. ರಾಜಕಾರಣದಲ್ಲಿಯ ನಮ್ಮ ಏಳ್ಗೆಯನ್ನು ಬ್ರಹ್ಮದೇವನೂ ತಡೆಯುವುದು ಸಾಧ್ಯವಿಲ್ಲ ೬೫೯

೧೩೭. ಪರರನ್ನು ನಂಬಿದರೆ ನಿಮ್ಮ ಕೆಲಸ ಹಾಳು ೬೬೪

೧೩೮. ಮಹಾರಾಷ್ಟ್ರ ಏಕೆ ಹಿಂದುಳಿದಿದೆ? ೬೬೭

೧೩೯. ಹೊಲಸು ಮಾಡಿದವನೇ ಬಳಿದು ಸ್ವಚ್ಛ ಮಾಡಬೇಕು ೬೭೪

೧೪೦. ಸತತ ಉದ್ಯೋಗ ಮತ್ತು ಕಷ್ಟ ಪಡುವುದರಿಂದ ಯಶ ಪ್ರಾಪ್ತಿಯಾಗುತ್ತದೆ ೬೭೯

೧೪೧. ಕಾರ್ಮಿಕರನ್ನು ಗುಲಾಮರನ್ನಾಗಿ ಮಾಡುವುದೆಂದರೆ ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿದಂತೆ ೬೮೭

೧೪೨. ಬಂಡವಾಳದಾರರ ಕೃಪೆಯಿಂದ ಶ್ರಮಜೀವಿ ವರ್ಗದ ಕಲ್ಯಾಣ ಅಸಾಧ್ಯ ೭೦೨

೧೪೩. ನನ್ನ ಮತ್ತು ಮಹಾತ್ಮಾಜಿಯ ಭೇಟಿಯಾದಾಗ– ೭೦೫

೧೪೪. ರಾಜಕಾರಣದ ಮಾತುಗಳನ್ನು ಮರುಕ್ಷಣವೇ ಮರೆತು ಬಿಡಬೇಕು ೭೧೦

೧೪೫. ಮಾಲೀಕ–ಕಾರ್ಮಿಕರ ಜಗಳದ ನಿವಾರಣೆಯ ಕಾನೂನು ಕಾರ್ಮಿಕರ ಗೋಣು ಮುರಿಯುವಂತಹದಾಗಿದೆ ೭೧೩

೧೪೬. ಯಾವುದೇ ಪರಿಸ್ಥಿತಿಯಲ್ಲಿ ಕಾರ್ಮಿಕ ಪ್ರತಿನಿಧಿಗಳನ್ನು ಚುನಾವಣೆಯಲ್ಲಿ ಗೆಲ್ಲಿಸಲೇಬೇಕು ೭೧೬

೧೪೭. ಸ್ವತಂತ್ರ ಕಾರ್ಮಿಕ ಪಕ್ಷದ ಪ್ರಭಾವ ೭೧೮

೧೪೮. ನನ್ನ ಪುಸ್ತಕಗಳನ್ನು ಗುಮಾಸ್ತನು ಮುಟ್ಟಿದರೆ ನಾನವನನ್ನು ಗುಂಡು ಹೊಡೆದು ಕೊಲ್ಲುತ್ತೇನೆ ೭೨೦

೧೪೯. ಸ್ವಾತಂತ್ರ್ಯ, ಮಾನವೀಯತೆ, ಸಮಾನ ಹಕ್ಕು ಸಿಕ್ಕರೆ ಅದೇ ಸ್ವರಾಜ್ಯ ೭೨೪

೧೫೦. ಸಮತಾಸೈನಿಕ ದಳದ ಸೈನಿಕರೆಂದರೆ ನಿರ್ಭಯ ಯೋಧರೆನ್ನಬಹುದು ೭೨೮

ವಿಷಯಸೂಚಿ ೭೩೩

# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

# ೧.

# ಜನ್ಮ ಸಿದ್ಧ ಶ್ರೇಷ್ಠತೆ ಹಾಗೂ ಪಾವಿತ್ರ್ಯತೆಯಿಂದ ಅಯೋಗ್ಯ ಬ್ರಾಹ್ಮಣರು ಕೂಡ ಉದ್ಧಾರವಾಗುತ್ತಿದ್ದಾರೆ

ದಕ್ಷಿಣ ಮಹಾರಾಷ್ಟ್ರದ ದಲಿತ ಪರಿಷತ್ತಿನ ಮೊದಲ ಸಭೆ ಮಾಣಗಾಂವ್ ಸಂಸ್ಥಾನಿನ ಕಾಗಲ್‌ನಲ್ಲಿ ೧೯೨೦ ಮಾರ್ಚ್ ೨೧/೨೨ಕ್ಕೆ ಜರುಗಿತು. ಸಭೆಯ ಮೊದಲ ದಿನ ಯುಗಾದಿಯಾಗಿದ್ದರೂ ಐದು ಸಾವಿರದಷ್ಟು ಜನ ಸೇರಿದ್ದರು. ಇದಕ್ಕೂ ಹೆಚ್ಚು ಜನ ಬರಬಹುದಿತ್ತು ಆದರೆ ಅಕ್ಕಪಕ್ಕದ ಹಳ್ಳಿಯ ಕುಲಕರ್ಣಿ, ತಲಾಠಿಯವರೆಲ್ಲ ಸೇರಿ 'ಇದು ಜಾತಿಬಿಟ್ಟವರ ಸಭೆ, ಇದರ ಅಧ್ಯಕ್ಷರೂ ತಮ್ಮ ಜಾತಿ ಬಿಟ್ಟು ಬೇರೆ ಜಾತಿ ಸೇರಿದವರು ಹಾಗಾಗಿ ಇಂತಹ ಸಭೆಗಳಿಗೆ ಹೋಗುವುದು ಉಚಿತವಲ್ಲ'ಎಂದೆಲ್ಲ ದಲಿತರ ಮನಸ್ಸು ಕೆಡಿಸಿ ಅವರು ಸಭೆಗೆ  ಬರದಂತೆ ತಡೆದರು. ಈ ಸಭೆಗೆ ಕೊಲ್ಹಾಪುರ ದರ್ಬಾರದ ಅನೇಕ ವರಿಷ್ಠರು ಹಾಗೂ ಬಹಿಷ್ಕೃತರ ಹಿತೈಷಿಗಳಷ್ಟೇಯಲ್ಲದೆ ಬೆರಳೆಣಿಕೆಯಷ್ಟು ಬ್ರಾಹ್ಮಣರೂ ಹಾಜರಿದ್ದರು. ಆದರೆ ಡಿಪ್ರೆಸ್ಡ್ ಮಿಶನ್ ಹಾಗೂ ಬಹಿಷ್ಕೃತರ ಹಿತಕ್ಕಾಗಿ ಕಷ್ಟಪಡುವ ಯಾವುದೇ ಸಂಸ್ಥೆಯ ಒಂದು ನರಪಿಳ್ಳೆಯೂ ಹಾಜರಿರಲಿಲ್ಲ ಅನ್ನುವುದನ್ನು ಗಮನಿಸಬೇಕು.

**ಮೊದಲನೆಯ ದಿನ :**

ಮಾರ್ಚ್ ೨೧, ೧೯೨೦ರ ಸಾಯಂಕಾಲ ೫ ಘಂಟೆಗೆ ಪರಿಷತ್ತಿನ ಕೆಲಸ ಆರಂಭವಾಗಿ ಮೊದಲಿಗೆ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀ ದಾದಾಸಾಹೇಬ್ ರಾಜೇಸಾಹೇಬ್ ಇನಾಂದಾರ ಅವರ ಭಾಷಣವಾಯಿತು. ತಮ್ಮ ಭಾಷಣದಲ್ಲವರು ಹಬ್ಬ, ರಜೆ, ಮನೆಯ ಸಮಸ್ಯೆಗಳನ್ನು ಮರೆತು ಸಭೆಗೆ ಬಂದಿದ್ದಕ್ಕಾಗಿ ಎಲ್ಲ ಪ್ರತಿನಿಧಿಗಳನ್ನು ಅಭಿನಂದಿಸಿದರು. ಪ್ರಸ್ತುತ ಪರಿಸ್ಥಿತಿಯನ್ನು ವಿವರಿಸುತ್ತ ಈ ಸಭೆ ಕರೆದ ಉದ್ದೇಶವನ್ನು ಅರುಹಿದರು. ಇಂದು ಸ್ವಾತಂತ್ರ್ಯದ ಗಾಳಿ ಬೀಸುತ್ತಿರುವ ಕಾಲದಲ್ಲಿ ಯಾರೋ ಬಂದು ತಮ್ಮ ಉದ್ಧಾರ ಮಾಡಿಯಾರು ಎಂದು ಕೈಕಟ್ಟಿ ಕುಳಿತುಕೊಳ್ಳುವುದನ್ನು ಬಿಟ್ಟು ತಮ್ಮ ಜನರ ಉದ್ಧಾರದ ಕಾರ್ಯವನ್ನು ನಾವೇ ಸ್ವತಃ ಕೈಗೊಳ್ಳಬೇಕು ಅಂದರು. ತದನಂತರ ಅನುಮೋದನೆಯ ಮೇರೆಗೆ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಭೀಮರಾವ್ ಅಂಬೇಡ್ಕರ್ ಅವರು ಚಪ್ಪಾಳೆಯ ಕರತಾಡನದ ನಡುವೆ ವೇದಿಕೆಗೆ ಬಂದು ಕುಳಿತರು. ತಮ್ಮ ಭಾಷಣದಲ್ಲವರು,

'ಈ ಪರಿಷತ್ತು ಸಾಕಷ್ಟು ಕಾರಣಗಳಿಂದ ಬಹಳ ಅಪರೂಪದ್ದಾಗಿದೆ. ಮುಂಬಯಿ ಇಲಾಖೆಯ ಇದು ಮೊದಲನೆಯ ಪರಿಷತ್ತು. ನಮ್ಮ ಜನರಲ್ಲಿ ತಮ್ಮ ಏಳಿಗೆಯ ಬಗ್ಗೆ ಕಾಣುತ್ತಿರುವ ತುಡಿತ ಹಾಗೂ ವಿಚಾರಕ್ರಾಂತಿ ಅಪರೂಪದ್ದಾಗಿದೆ. ಇಷ್ಟು ವರ್ಷದಿಂದ ನಮ್ಮ ಅಧೋಗತಿಗೆ ನಮ್ಮ ದುರ್ಭಾಗ್ಯವೇ ಕಾರಣ. ಈ ದುರ್ಭಾಗ್ಯ ತಡೆಯುವುದು ಅಸಾಧ್ಯ. ಹಾಗಾಗಿ ಇಂತಹ ಅನ್ಯಾಯಗಳನ್ನು, ಸಮಸ್ಯೆಗಳನ್ನು ಬಾಯಿ ಮುಚ್ಚಿ ಸಹಿಸಬೇಕು ಎಂದು ನಮ್ಮ ಜನರಿಗನಿಸುತ್ತಿತ್ತು. ಆದರೆ ಇಂದಿನ ಪೀಳಿಗೆಗೆ ಮಾತ್ರ ತಮ್ಮ

ಈ ಪರಿಸ್ಥಿತಿ ಭಾಗ್ಯ ದುರ್ಭಾಗ್ಯಗಳ ಪರಿಣಾಮ ಅನಿಸದೆ ಇದು ಕೇವಲ ಮೇಲ್ಜಾತಿ ಜನರ ದುಷ್ಕೃತ್ಯದ ಪರಿಣಾಮ ಅನ್ನುವುದು ಅರ್ಥವಾಗಿದೆ. ಹಿಂದೂ ಧರ್ಮದಲ್ಲಿ ಮನುಷ್ಯನನ್ನು ಎರಡು ಮುಖ್ಯ ಆದಿತತ್ವಗಳ ಆಧಾರದ ಮೇಲೆ ವಿಭಜಿಸಿದ್ದಾರೆ. ಒಂದು ಜನ್ಮಸಿದ್ಧ ಯೋಗ್ಯತೆ, ಎರಡನೆಯದ್ದು ಜನ್ಮಸಿದ್ಧ ಪಾವಿತ್ರ್ಯತೆ. ಈ ಎರಡು ತತ್ವಗಳನುಸಾರವಾಗಿ ಹಿಂದೂ ಜನರನ್ನು ವಿಭಾಗಿಸಿದರೆ ಅದರಲ್ಲೂ ಮೂರು ವರ್ಗಗಳಾಗುತ್ತವೆ. ೧. ಹುಟ್ಟಾ ಸರ್ವಶ್ರೇಷ್ಠ ಹಾಗೂ ಪವಿತ್ರರು, ಇವರನ್ನು ನಾವು ಬ್ರಾಹ್ಮಣರು ಅನ್ನುತ್ತೇವೆ. ೨. ಹುಟ್ಟಿನಿಂದಲೇ ಬ್ರಾಹ್ಮಣರಿಗಿಂತ ಕಡಿಮೆ ದರ್ಜೆಯಿರುವ ಬ್ರಾಹ್ಮಣೇತರ ವರ್ಗ. ೩. ಹುಟ್ಟಿನಿಂದಲೇ ಕನಿಷ್ಠ ಹಾಗೂ ಅಪವಿತ್ರ ಅನಿಸಿಕೊಳ್ಳುವ ನಮ್ಮಂತಹ ಬಹಿಷ್ಕೃತ ವರ್ಗ. ಹೀಗೆ ಧರ್ಮವನ್ನು ಆಧಾರವಾಗಿರಿಸಿಕೊಂಡು ವರ್ಗೀಕರಿಸಿರುವ ರೀತಿ ಈ ಮೂರೂ ವರ್ಗಗಳ ಮೇಲೆ ವಿಪರೀತ ಪರಿಣಾಮ ಬೀರಿದೆ. ಜನ್ಮಸಿದ್ಧ ಯೋಗ್ಯತೆ ಹಾಗೂ ಪವಿತ್ರತೆಯಿಂದ ಅಯೋಗ್ಯ ಬ್ರಾಹ್ಮಣರು ಕೂಡ ಉದ್ಧಾರವಾಗಿದ್ದಾರೆ. ಬ್ರಾಹ್ಮಣೇತರರಿಗೆ ಅಯೋಗ್ಯತೆಯ ಚೀಟಿ ಅಂಟಿಸಿದ್ದರೂ, ವಿದ್ಯೆಯಿಲ್ಲದ ಕಾರಣ ಬ್ರಾಹ್ಮಣೇತರರಿಂದು ಹಿಂದುಳಿದಿದ್ದರೂ ವಿದ್ಯೆ ಪಡೆಯುವ ಹಾಗೂ ಹಣ ಗಳಿಸುವ ಹಕ್ಕು ಇವರಿಗಿರುವುದರಿಂದ ಈ ಮಾರ್ಗ ಅವರಿಗೆ ತೆರೆದಿದೆ. ಹಣ ಹಾಗೂ ವಿದ್ಯೆ ಅವರಲ್ಲಿಂದು ಇರದಿದ್ದರೂ ನಾಳೆ ಅವರಿಗದು ಸಿಕ್ಕೇ ಸಿಗುತ್ತದೆ. ಆದರೆ ಈ ಜನ್ಮಸಿದ್ಧ ಯೋಗ್ಯತೆ ಹಾಗೂ ಪವಿತ್ರತೆಯ ಪರಿಣಾಮದಿಂದ ನಮ್ಮ ಹಿಂದುಳಿದ ಜಾತಿಯ ಪರಿಸ್ಥಿತಿ ಮಾತ್ರ ಬಹಳ ಶೋಚನೀಯವಾಗಿದೆ. ಅಯೋಗ್ಯ, ಅಪವಿತ್ರ ಅನ್ನುವ ಮಾತುಗಳನ್ನು ಕೇಳಿ ಕೇಳಿ ಪ್ರಗತಿಗೆ ಕಾರಣವಾಗಿರುವ ಆತ್ಮಬಲ ನೆಲಕಚ್ಚಿದೆ. ಸಾಮಾಜಿಕ ದೃಷ್ಟಿಯಿಂದ ಹಿಂದೂಗಳಿಗಿರುವ ಹಕ್ಕು ಇವರಿಗಿಲ್ಲ. ಇವರು ಶಾಲೆಗೆ ಹೋಗುವಂತಿಲ್ಲ, ಸಾರ್ವಜನಿಕ ಭಾವಿಗಳಿಂದ ನೀರು ತುಂಬುವಂತಿಲ್ಲ, ರಸ್ತೆಯಲ್ಲಿ ತಲೆಯೆತ್ತಿ ನಡೆಯುವಂತಿಲ್ಲ ಇತರರಿಗಿರುವ ಸಾಮಾನ್ಯ ಹಕ್ಕುಗಳು ಕೂಡ ಇವರಿಗಿಲ್ಲ. ಜನ್ಮಸಿದ್ಧ ಅಯೋಗ್ಯತೆ ಹಾಗೂ ಅಪವಿತ್ರತೆಯಿಂದ ಆರ್ಥಿಕವಾಗಿಯೂ ನಷ್ಟವನ್ನನುಭವಿಸುವ ಇವರಿಗಾಗಿ ವ್ಯಾಪಾರ, ಕೆಲಸ ಹಾಗೂ ಬೇಸಾಯದಂತಹ ಮೂರು ಹಣಗಳಿಸುವ ಮಾರ್ಗವೂ ತೆರೆದಿಲ್ಲ. ಇವರನ್ನು ಮುಟ್ಟಿದರೆ ಮೈಲಿಗೆಯಾಗುತ್ತದೆ ಅನ್ನುವ ವಿಚಾರಗಳಿಂದ ಇವರು ವ್ಯಾಪಾರವನ್ನೂ ಮಾಡುವಂತಿಲ್ಲ. ಮೈಲಿಗೆ ಮೈಲಿಗೆಯೆಂದು ಇವರಿಗೆಲ್ಲೂ ಕೆಲಸ ಸಿಗುವುದಿಲ್ಲ. ಕೆಲವೊಮ್ಮೆ ಕೆಲಸಕ್ಕೆ ಸೇರುವ ಯೋಗ್ಯತೆಯಿದ್ದರೂ ಇವರ ಕೈಕೆಳಗೆ ಕೆಲಸ ಮಾಡಲು ಯಾರೂ ಒಪ್ಪುವುದಿಲ್ಲ ಹಾಗಾಗಿ ಇವರಿಗೆ ಕೆಲಸ ಸಿಗುವುದು ಕಷ್ಟವಾಗುತ್ತದೆ. ಇದೇ ಕಾರಣಗಳಿಂದ ಮಿಲಿಟರಿಯಿಂದ ಕೂಡ ಇವರ ಎತ್ತಂಗಡಿಯಾಗಿದೆ. ಬೇಸಾಯವೂ ಮಾಡಲಾರದಂತಹ ಇಕ್ಕಟ್ಟಿನ ಪರಿಸ್ಥಿಯಲ್ಲಿ ಸಿಲುಕಿರುವ ಈ ಸಮಾಜದ ಏಳಿಗೆ ಸಾಧ್ಯವೇ ಇಲ್ಲ. ಯೋಗ್ಯತೆ ಹಾಗೂ ಅನುಕೂಲ ಪರಿಸ್ಥಿತಿ ಸಮಾಜದ ಏಳಿಗೆಗೆ ಕಾರಣ. ಬಹಿಷ್ಕೃತ ವರ್ಗದಲ್ಲಿ ಯೋಗ್ಯತೆಗೆ ಕೊರತೆಯಿಲ್ಲ ಅನ್ನುವುದು ಎಲ್ಲರಿಗೂ ಗೊತ್ತು ಆದರೂ ಅವರ ಏಳಿಗೆಯಾಗುತ್ತಿಲ್ಲ ಅನ್ನುವುದಕ್ಕೆ ಅವರಿಗೆ ಅನುಕೂಲ ಪರಿಸ್ಥಿತಿಯಿಲ್ಲ ಅನ್ನುವುದೇ ಕಾರಣ. ಪರಿಸ್ಥಿತಿ ಅನುಕೂಲ ಮಾಡಿಕೊಳ್ಳಲು ಅನೇಕ ಉಪಾಯಗಳಿವೆ ಆದರೆ ಪರಿಸ್ಥಿಯನ್ನು ನಮ್ಮ ಅನುಕೂಲಕ್ಕೆ ಪರಿವರ್ತಿಸಿಕೊಳ್ಳಲು ರಾಜಕೀಯ ಸಾಮರ್ಥ್ಯ ಸಂಪಾದಿಸಿಕೊಳ್ಳಬೇಕು ಹಾಗೂ ಜಾತಿ ಆಧಾರಿತ ಪ್ರತಿನಿಧಿತ್ವ ಪಡೆದುಕೊಳ್ಳದೆ ರಾಜಕೀಯ ಸಾಮರ್ಥ್ಯ ದೊರೆಯದು. 'ಸತ್ಯಮೇವಜಯತೆ' ಅನ್ನುವ ಮಾತು ತಿರುಳಿಲ್ಲದ್ದು. ಸತ್ಯದ ಜಯವಾಗಲು ನಾವು ನಮ್ಮ ಚಳುವಳಿಗಳನ್ನು ಮುಂದುವರೆಸಬೇಕು' ಎಂದು ಹೇಳಿ ಅವರು ತಮ್ಮ ಪ್ರಾಸ್ತಾವಿಕ ಭಾಷಣವನ್ನು ಮುಗಿಸಿದರು. ನಂತರ ವಿಷಯ ನಿಯಾಮಕ ಕಮಿಟಿಯನ್ನು ಸ್ಥಾಪಿಸಿ ಪರಿಷತ್ತಿನ ಮೊದಲನೆಯ ದಿನದ ಕೆಲಸವನ್ನು ಮುಗಿಸಲಾಯಿತು.

**ಎರಡನೆಯ ದಿನ :**

ಮಧ್ಯಾಹ್ನ ಮೂರು ಘಂಟೆಗೆ ಪರಿಷತ್ತಿನ ಎರಡನೆಯ ದಿನದ ಕಾರ್ಯಕಲಾಪಗಳು ಆರಂಭವಾದವು. ಕೊಲ್ಹಾಪುರದ ಶ್ರೀಮಂತ ಛತ್ರಪತಿ ಶಾಹೂ ಮಹಾರಾಜರು ಅಂದಿನ ಸಭೆಗೆ ಹಾಜರಿದ್ದಿದ್ದರಿಂದ ಬಹಿಷ್ಕೃತರೆಲ್ಲರೂ ಅವರಿಗೆ ಋಣಿ. ತಮ್ಮ ಭಾಷಣದಲ್ಲವರು,

'ನನ್ನ ಪ್ರೀತಿಯ ಮಿತ್ರರಾದ ಅಂಬೇಡ್ಕರರು ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದಾರೆ. ಅವರ ಭಾಷಣ ಕೇಳಲೆಂದೇ ನಾನು ಶಿಕಾರಿಯಿಂದ ಬುಧ್ಯಾಗೆ ಬಂದಿದ್ದೇನೆ. ಮಿ. ಅಂಬೇಡ್ಕರ್ ಅವರು ಎಲ್ಲ ಕೆಳವರ್ಗದ ಜನರ ಬಗ್ಗೆ ಸಾಕಷ್ಟು ಚಿಂತಿಸುತ್ತಾರೆ ಅನ್ನುವುದಕ್ಕೆ ನಾನವರನ್ನು ಅಭಿನಂದಿಸುತ್ತೇನೆ.

ಹಿಂದೆ ಮಾಂಗ್, ಮಹರ್, ಚಮ್ಮಾರರು ಇವರೆಲ್ಲ ವೈಶ್ಯಜಾತಿಯವರಾಗಿದ್ದು ಒಂದು ಕಾಲದಲ್ಲಿ ಮಾಂಗ್ ಚರಕ ನೇಯ್ದು ನೂಲಿನ ವ್ಯಾಪಾರ ಮಾಡುತ್ತಿದ್ದರು. ಹೀಗಿರುವಾಗ ಅವರನ್ನು ಅಸ್ಪೃಶ್ಯರೆಂದದ್ದು ಯಾರು? ಹಾಗೂ ಹೇಗೆ? ಇಂತಹ ವೈಶ್ಯರ ವ್ಯಾಪಾರ ಬಿಟ್ಟು ದಾಸ್ಯ (ದಾಸ್ಯ ಅಂದರೆ ಆಳು, ಆಳು ಅಂದರೆ ಅತಿ ಶೂದ್ರ,) ದಂತಹ ಕೀಳು ಕೆಲಸವನ್ನು ಡಾ. ಅಂಬೇಡ್ಕರರು ಹೇಗೆ ಸ್ವೀಕರಿಸಿದರು? ಅನ್ನುವುದೇ ತಿಳಿಯದಾಗಿದೆ. ಸರ್ಕಾರ ನಡೆಸಲು, ನಮ್ಮ ಮಾತುಗಳನ್ನು ಮುಂದಿಡಲು ನಾವೇ ನಮ್ಮಲ್ಲಿರುವ ಒಳ್ಳೆಯ ನಾಯಕರನ್ನು ಆರಿಸಿ ಕಳಿಸುವುದಿಲ್ಲವಾದ್ದರಿಂದ ಇಂದು ನಮ್ಮ ಇಂತಹ ಅಧೋಗತಿಗೆ ನಾವೇ ಕಾರಣರಾಗುತ್ತಿದ್ದೇವೆ. ಕೇವಲ ಹೆಸರು ಗಳಿಸಲು ಅಯೋಗ್ಯ ನಾಯಕನನ್ನು ಆರಿಸುವ ಮೂಲಕ ನಮ್ಮಲ್ಲಿರುವ ಕೆಲವು ಸ್ವಾರ್ಥಿಜನ ತಿಳುವಳಿಕೆಯಿಲ್ಲದ ಜನರಿಗೆ ಮೋಸ ಮಾಡುತ್ತಿದ್ದಾರೆ. ಪಕ್ಷಿಗಳು ತಮ್ಮ ನಾಯಕನನ್ನಾಗಿ ತಮ್ಮ ಜಾತಿಯ ಪಕ್ಷಿಯನ್ನೇ ಆರಿಸಿಕೊಳ್ಳುತ್ತಾವಂತೆ. ಪಕ್ಷಿಯ ನಾಯಕ ಯಾವತ್ತೂ ಪ್ರಾಣಿಯಾಗಿರುವುದಿಲ್ಲ ಆದರೆ ದನಗಳ ನಾಯಕ ಮಾತ್ರ ಒಬ್ಬ ಮನುಷ್ಯನೇ ಆಗಿರುತ್ತಾನೆ ಹಾಗಾಗಿ ಕಡೆಗವು ಹೋಗುವುದು ಕಟುಕನ ಅಂಗಡಿಗೇ! ಅನ್ನುವುದು ನೆನಪಿರಲಿ.

ಇಂದು ಅಂಬೇಡ್ಕರರಿಗೆ 'ಪಂಡಿತ್'ಅನ್ನುವ ಬಿರುದನ್ನೇಕೆ ಕೊಡಬಾರದು? ಆರ್ಯ ಸಮಾಜ, ಬೌದ್ಧ ಸಮಾಜ ಹಾಗೂ ಕ್ರಿಶ್ಚನ್ ಸಮಾಜ ಸಂತೋಷದಿಂದ ಅವರನ್ನು ತಮ್ಮ ಸಮಾಜದಲ್ಲಿ ಸೇರಿಸಿಕೊಳ್ಳಲು ಸನ್ನದ್ಧರಾಗಿದ್ದರೂ ಕೇವಲ ನಿಮ್ಮ ಉದ್ಧಾರ ಮಾಡಲೆಂದೇ ಅವರು ಆ ಸಮಾಜಗಳಿಗೆ ಸೇರಿಲ್ಲ. ಡಾ. ಅಂಬೇಡ್ಕರರು ನಿಮ್ಮ ಉದ್ಧಾರ ಮಾಡದೆ ಸುಮ್ಮನಿರುವವರಲ್ಲ. ಅಷ್ಟೇಯಲ್ಲ ಮುಂಬರುವ ದಿನಗಳಲ್ಲಿ ಅವರು ಅಖಂಡ ಭಾರತದ ನಾಯಕರಾಗುತ್ತಾರೆ ಎಂದು ನನ್ನ ಮನಸ್ಸು ಹೇಳುತ್ತದೆ' ಅಂದರು.

ನಂತರ ಕೆಳಗಿನ ಕೆಲವು ಮಸೂದೆಗಳು ಸರ್ವಾನುಮತದಿಂದ ಮಂಜೂರಾದವು.

೧. ಮಹಾಯುದ್ಧದಲ್ಲಿ ಬ್ರಿಟಿಷ್ ಹಾಗೂ ಇತರ ಮಿತ್ರ ರಾಷ್ಟ್ರಗಳಿಗೆ ಜಯ ಲಭಿಸಿದ್ದಕ್ಕಾಗಿ ಈ ಪರಿಷತ್ತು ಸಂತೋಷ ವ್ಯಕ್ತಪಡಿಸುತ್ತದೆ.

೨. ಶ್ರೀಮನ್ ಮಹಾರಾಜ ಶಾಹೂ ಛತ್ರಪತಿ ಸರ್ಕಾರ ಇಲಾಖೆ ಕರವೀರ್ (ಕೊಲ್ಹಾಪೂರ) ಇವರು ತಮ್ಮ ರಾಜ್ಯದಲ್ಲಿ ಬಹಿಷ್ಕೃತರಿಗೆ ಸಮಾನ ಹಕ್ಕು ಕೊಟ್ಟು ಅವರ ಏಳಿಗೆಗೆ ಪ್ರಯತ್ನಿಸುವಂತಹ ಸತ್ಕಾರ್ಯವನ್ನು ಆರಂಭಿಸಿರುವುದರಿಂದ ಅವರ ಹುಟ್ಟು ಹಬ್ಬವನ್ನು ಪ್ರತಿಯೊಬ್ಬ ಬಹಿಷ್ಕೃತ ವ್ಯಕ್ತಿಯು ಹಬ್ಬದಂತೆ ಆಚರಿಸಬೇಕು ಅನ್ನುವುದು ಪರಿಷತ್ತಿನ ಅನಿಸಿಕೆ.

೩. ಬಹಿಷ್ಕೃತರ ಉನ್ನತಿಗಾಗಿ ಶ್ರಮಿಸುವ ಎಲ್ಲ ರಾಜ ಮಹಾರಾಜರನ್ನು ಹಾಗೂ ಸಂಸ್ಥಾನಿಕರನ್ನು ಈ ಪರಿಷತ್ತು ಮನಃಪೂರ್ವಕವಾಗಿ ಅಭಿನಂದಿಸುತ್ತದೆ.

೪. ಪ್ರತಿಯೊಬ್ಬ ವ್ಯಕ್ತಿಯ ಉನ್ನತಿಗಾಗಿ ಅನುಕೂಲ ಸಾಮಾಜಿಕ ಪರಿಸ್ಥಿತಿಯಿರಬೇಕಾದ್ದು

ಅಗತ್ಯವಾಗಿದೆ. ಹುಟ್ಟಿನಿಂದ ಅಯೋಗ್ಯತೆ ಹಾಗೂ ಅಪವಿತ್ರತೆ ಎಂಬುವುದರಿಂದಾಗಿ ಭಾರತದ ಸಾಮಾಜಿಕ ಪರಿಸ್ಥಿತಿ ಬಹಿಷ್ಕೃತರ ಉನ್ನತಿಗಾಗಿ ಅಷ್ಟು ಅನುಕೂಲವಾಗಿಲ್ಲ. ಅಷ್ಟೇಯಲ್ಲ. ಇದೆಲ್ಲದರಿಂದಾಗಿ ಈ ವರ್ಗವು ಸಾಮಾನ್ಯ ಹಕ್ಕುಗಳಿಂದಲೂ ವಂಚಿತವಾಗಿದೆ. ಬಹಿಷ್ಕೃತರು ಕೂಡ ಹಿಂದೂಗಳೇ, ಹಿಂದೂ ಸಮಾಜದ ಘಟಕಗಳು ಉಳಿದವರಂತೆ ಇವರಿಗೂ ಕೆಳಕಂಡ ಕೆಲವು ಹಕ್ಕುಗಳು ಸಿಗಲೇ ಬೇಕು.

(ಕ) ಸಾರ್ವಜನಿಕ ರಸ್ತೆಗಳು, ಬಾವಿ ಕೆರೆಗಳು, ಶಾಲೆ, ಧರ್ಮಶಾಲೆ, ಲೈಸೆನ್ಸ್ ಹೊಂದಿರುವ ಮನರಂಜನೆಯ ಸ್ಥಳಗಳು, ಭೋಜನ ಗೃಹ, ವಾಹನಗಳು ಇತ್ಯಾದಿ ಸಾರ್ವಜನಿಕ ಸೌಲಭ್ಯವುಳ್ಳ ವಸ್ತುಗಳನ್ನು ಉಪಯೋಗಿಸುವ ಹಕ್ಕು ಅವರಿಗಿದೆ.

(ಖ) ಯೋಗ್ಯತೆಯ ದೃಷ್ಟಿಯಿಂದ ಅವರಿಗೆ ವ್ಯಾಪಾರ ಮಾಡುವ ಹಾಗೂ ಕಛೇರಿಗಳಲ್ಲಿ ಕೆಲಸ ಮಾಡುವ ಹಕ್ಕು ಅವರಿಗಿದೆ.

ಮೇಲೆ ಹೇಳಿದ ಹಕ್ಕುಗಳನ್ನು ಬಳಸುವಾಗ ಏನಾದರೂ ಸಮಸ್ಯೆಗಳು ಬಂದರೆ ಸರ್ಕಾರ ಕಾನೂನಿನ ನೆರವು ಅವರಿಗೆ ಕೊಡತಕ್ಕದ್ದು ಅನ್ನುವುದು ಪರಿಷತ್ತಿನ ಅನಿಸಿಕೆ.

೫. ಹೆಣ್ಣುಗಂಡು ಅನ್ನುವ ಭೇದ ಭಾವವಿಲ್ಲದೆ ಕಡ್ಡಾಯ ಹಾಗೂ ನಿಶುಃಲ್ಕ ಪ್ರಾಥಮಿಕ ಶಿಕ್ಷಣವನ್ನು ಆದಷ್ಟು ಬೇಗ ಜಾರಿಗೆ ತರಬೇಕು.

೬. ಬಹಿಷ್ಕೃತ ವರ್ಗದಲ್ಲಿ ಶಿಕ್ಷಣದ ಪ್ರಸಾರವಾಗದೆ ಅವರ ಏಳಿಗೆ ಸಾಧ್ಯವಿಲ್ಲ.
ಶೈಕ್ಷಣಿಕ ಪ್ರಸಾರಕ್ಕಾಗಿ ಶಾಲಾ ಮಾಸ್ತರರು, ಡೆಪ್ಯೂಟಿ ಹಾಗೂ ಅಸಿಸ್ಟಂಟ್ ಡೆಪ್ಯೂಟಿ ಇನ್ಸ್‌ಪೆಕ್ಟರುಗಳು ಬಹಿಷ್ಕೃತರ ಹಿತೈಷಿಗಳಾಗಿರಬೇಕು. ಈ ಹುದ್ದೆಯಲ್ಲಿರುವ ಇತರ ಜಾತಿಯ ಜನ ಬಹಿಷ್ಕೃತರನ್ನು ಕೀಳಾಗಿ ಕಂಡು ಅವರ ಶಿಕ್ಷಣದ ಬಗ್ಗೆ ಅನಾಸ್ಥೆ ತೋರಿಸುವುದರಿಂದ ಈ ಹುದ್ದೆಗಳಿಗಾಗಿ ದಲಿತರನ್ನೇ ಶಾಲಾ ಮಾಸ್ತರರನ್ನಾಗಿ ತರಬೇತು ಮಾಡಬೇಕೆಂದು ಈ ಪರಿಷತ್ತು ವಿನಂತಿಸುತ್ತದೆ. ಹಿಂದುಳಿದ ಜಾತಿಯಲ್ಲಿ ಶಿಕ್ಷಣದ ಪ್ರಸಾರವಾಗಬೇಕಾದರೆ ಪ್ರತಿಯೊಂದು ಜಿಲ್ಲೆಯಲ್ಲಿ ದಲಿತ ಜಾತಿಯ ಒಬ್ಬ ಡೆಪ್ಯೂಟಿ ಇಲ್ಲವೆ ಅಸಿಸ್ಟಂಟ್ ಡೆಪ್ಯೂಟಿ ಎಜ್ಯುಕೇಶನ್ ಮಿನಿಸ್ಟರನ್ನು ನೇಮಿಸಬೇಕು. ಈ ಹುದ್ದೆಗಾಗಿ ಟ್ರೈಚರ್ ಟ್ರೇನಿಂಗ್ ಕಾಲೇಜಿನ ಮೂರನೆಯ ವರ್ಷ ಉತ್ತೀರ್ಣನಾದ ಇಲ್ಲವೆ ಕನಿಷ್ಠ ಹತ್ತನೆಯ ತರಗತಿ ಉತ್ತೀರ್ಣನಾದವನನ್ನು ಯೋಗ್ಯನೆಂದು ತಿಳಿಯಬೇಕು ಅನ್ನುವುದು ಪರಿಷತ್ತಿನ ಅಭಿಪ್ರಾಯ.

೭. ಖಾಲಸಾದಲ್ಲಿ ಮುಸಲ್ಮಾನರಿಗೆ ಹಾಗೂ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರರು ಹಾಗೂ ದಲಿತ ವಿದ್ಯಾರ್ಥಿಗಳಿಗೆ ಮಧ್ಯಮ ಹಾಗೂ ಉಚ್ಚ ಶಿಕ್ಷಣಕ್ಕಾಗಿ ಹೇರಳವಾಗಿ ಕೊಡಲಾಗುತ್ತಿರುವ ಶಿಷ್ಯವೃತ್ತಿಯಂತೆ ಬ್ರಿಟಿಷ್ ರಾಜ್ಯದಲ್ಲಿ ದಲಿತರಿಗೆ ಶಿಷ್ಯವೃತ್ತಿಗಳು ಸಿಗುವಂತಾಗಬೇಕು ಅನ್ನುವುದು ಈ ಪರಿಷತ್ತಿನ ವಿನಂತಿ.

೮. ಭಾರತದಾದ್ಯಂತ ಬ್ರಾಹ್ಮಣರು ಮತ್ತು ದಲಿತರಿಗಾಗಿ ಒಂದೇ ಶಾಲೆಯಿರಬೇಕು ಅನ್ನುವುದು ಈ ಪರಿಷತ್ತಿನ ಅನಿಸಿಕೆ.

೯. ಇಂದು ಮಾಂಗ್ ವತನದಾರರ ಪರಿಸ್ಥಿತಿ ಸಾಕಷ್ಟು ಹದಗೆಟ್ಟಿದೆ ಎಂದು ದುಃಖದಿಂದ ಹೇಳುತ್ತಿದ್ದೇವೆ. ಅವರ ಈ ಹದಗೆಟ್ಟ ಪರಿಸ್ಥಿತಿಗೆ ಕೆಳಗಿನ ಎರಡು ಕಾರಣಗಳಿರಬಹುದು.

೧. ಮಾಂಗ್ ವತನದಾರರಿಗೆ ಸಾಕಷ್ಟು ಹೊಲಸು ಕೆಲಸಗಳನ್ನೇ ಮಾಡಬೇಕಾಗಿರುವುದರಿಂದ ಅವರ ವತನದಾರಿಕೆ ಕೀಳುಮಟ್ಟದ್ದು ಅನಿಸಿಬಿಟ್ಟಿದೆ.

೨. ಅವರ ವತನಿ ಜಮೀನು ತಲತಲಾಂತರದಿಂದ ವಿಭಾಗಿಸಲ್ಪಡುತ್ತಿರುವುದರಿಂದ ಮಾಂಗ್ ವತನದಾರನಿಗೆ ಹೆಚ್ಚು ಇಳುವರಿಯಾಗದೆ ಅವನ ಪರಿಸ್ಥಿತಿ ಹದಗೆಟ್ಟಿದೆ. ಇಂತಹ ವತನ ಪದ್ಧತಿಯಲ್ಲಿ ಬದಲಾವಣೆಯಾಗಬೇಕು ಅನ್ನುವುದು ಈ ಪರಿಷತ್ತಿನ ಅನಿಸಿಕೆ. ಮಾಂಗ್‌ರ ವತನವನ್ನು ಎಲ್ಲ ಮಾಂಗ್‌ರಲ್ಲಿ ಹಂಚಿ ಅವರೆಲ್ಲರನ್ನೂ ಹದಗೆಡಿಸುವುದಕ್ಕಿಂತ ವತನವನ್ನು ಕೆಲವೇ ಮಾಂಗ್‌ರಲ್ಲಿ ಹಂಚಿ ಆ ಕೆಲವರ ಪರಿಸ್ಥಿಯನ್ನಾದರೂ ಸುಧಾರಿಸಬೇಕು. ಮಾಂಗ್‌ರ ವತನೀಜಮೀನನ್ನು ಕೆಲವೇ ಮಾಂಗ್‌ರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹಂಚಿ ಉಳಿದ ಮಾಂಗ್‌ರಿಗೆ ಎಲ್ಲಿ ಸಾಧ್ಯವೋ ಅಲ್ಲಿ ಬರಡು ಜಮೀನನ್ನು ನಿಯಮಕ್ಕನುಸಾರವಾಗಿ ಕೊಡಮಾಡಿ ಅವರ ವ್ಯವಸ್ಥೆಯನ್ನು ನೋಡಿಕೊಳ್ಳಬೇಕು. ದೊಡ್ಡ ಪ್ರಮಾಣದಲ್ಲಿ ಜಮೀನನ್ನು ಹಂಚಿರುವ ಮಾಂಗ್‌ರ ಮಕ್ಕಳಿಗೆ ಮಾಂಗ್‌ರ ಮೂಲಕವೇ ಶಿಕ್ಷಣದ ವ್ಯವಸ್ಥೆ ಮಾಡಿಸಿ ಅವರ ಅಂತಸ್ತಿನ ಪ್ರಕಾರ ಅವರು ಬದುಕುವ ನಿಯಮಗಳನ್ನು ಬರೆಯಿಸಿಕೊಳ್ಳಬೇಕು.

೧೦. ಸತ್ತಪ್ರಾಣಿಗಳ ಮಾಂಸ ಯಾವುದೇ ಜಾತಿಯವರು ತಿನ್ನುವುದು ಅಪರಾಧವೆಂದು ಕಾನೂನು ಒಪ್ಪಿಕೊಳ್ಳಲೇ ಬೇಕು ಅನ್ನುವುದು ಈ ಸಭೆಯ ಅಭಿಪ್ರಾಯ.

೧೧. ತಲಾಠಿ ಹುದ್ದೆಗಾಗಿ ದಲಿತರ ನೇಮಕಾತಿಯಾಗಬೇಕು ಅನ್ನುವುದು ಈ ಪರಿಷತ್ತಿನ ಬೇಡಿಕೆ. ದಲಿತರ ಏಳಿಗೆಗಾಗಿ ಪ್ರಯತ್ನಿಸುತ್ತಿರುವ ಇತರ ಬ್ರಾಹ್ಮಣೇತರ ಸಂಸ್ಥೆ ಹಾಗೂ ಜನರಿಗೆ ಈ ಪರಿಷತ್ತು ಆಭಾರಿಯಾಗಿದೆ. ಆದರೂ ದಲಿತರ ಸಾಮಾಜಿಕ ಹಾಗೂ ರಾಜಕೀಯ ಏಳಿಗೆಗಾಗಿ ಅವರು ಸೂಚಿಸಿರುವ ಎಲ್ಲ ಉಪಾಯಗಳನ್ನು ದಲಿತರು ಸ್ವೀಕರಿಸುತ್ತಾರೆ ಎಂದೇನಿಲ್ಲ ಅನ್ನುವುದನ್ನು ಈ ಪರಿಷತ್ತು ಹೇಳಬಯಸುತ್ತದೆ.

೧೨. ಮುಂಬಯಿಯ ಕಾಯಿದೆ ಕೌನ್ಸಿಲ್‌ನಲ್ಲಿ ದಲಿತರ ಪ್ರತಿನಿಧಿಗಳು ಅವರ ಜನಸಂಖ್ಯೆ ಹಾಗೂ ಅವಶ್ಯಕತೆಯಿರುವಷ್ಟು ಪ್ರಮಾಣದಲ್ಲಿ ಅವರ ಸ್ವತಂತ್ರ ಮತದಾರರ ಸಂಘದಿಂದ ಆರಿಸಿಕೊಡಬೇಕಾಗಿ ಪರಿಷತ್ತು ಹಕ್ಕಿನಿಂದ ಕೇಳುತ್ತದೆ.

೧೩. ಈ ಪರಿಷತ್ತು ಸಫಲವಾಗುವ ದೃಷ್ಟಿಯಿಂದ ದುಡಿದ ಎಲ್ಲರ ಹಾಗೂ ವಿಶೇಷವಾಗಿ ಶ್ರೀ ಅಪ್ಪಾ ದಾದಾಗೌಡಾ ಪಾಟೀಲರಿಗೆ ನಾವು ಆಭಾರಿಗಳಾಗಿದ್ದೇವೆ.

೧೪. ಮೇಲಿನ ಎಲ್ಲ ಮಸೂದೆಗಳನ್ನು ಆಯಾ ಅಧಿಕಾರಿಗಳಿಗೆ ಹಾಗೂ ಇತರ ಸಂಬಂಧಪಟ್ಟವರಿಗೆ ಕಳಿಸಿಕೊಡುವ ಅಧಿಕಾರ ಈ ಪರಿಷತ್ತು ಪರಿಷತ್ತಿನ ಅಧ್ಯಕ್ಷರಿಗೆ ವಹಿಸುತ್ತದೆ.

# ೨.

# ಏಳಿಗೆಯ ಮಾರ್ಗದಲ್ಲಿ ಅಡ್ಡ ಬರುವವರಿಗೆ ಧಿಕ್ಕಾರ

ನಾಗಪೂರ್‌ನಲ್ಲಿ ಬರುವ ಏಪ್ರಿಲ್–ಮೇ ತಿಂಗಳಲ್ಲಿ ಭಾರತದಾದ್ಯಂತ ಮಾಂಗ್, ಮಹರ್, ಚಮ್ಮಾರರು, ಪಾರಿಯಾ, ಹಾಗೂ ಪಂಚಮ ಜಾತಿಯವರು ತಮ್ಮ ಮೇಲೆ ಹೇರಲಾಗಿರುವ ಬಹಿಷ್ಕಾರವನ್ನು ತೆಗೆದೊಗೆಯಲು ಹಾಗೂ ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಪ್ರಗತಿ ಸಾಧಿಸಲು ಒಂದು ಪರಿಷತ್ತನ್ನು ಆಯೋಜಿಸಲು ನಿರ್ಧರಿಸುವುದನ್ನು ೨೭ ನೆಯ ಮಾರ್ಚ್ ೧೯೨೦ ರ ಮಹಾನಾಯಕ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಈ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಶ್ರೀಮಾನ್ ಮಹಾರಾಜ ಶಾಹೂ ಛತ್ರಪತಿ ಸರಕಾರ ಕರವೀರ (ಕೊಲ್ಹಾಪುರದ ರಾಜಾ ಸಾಹೇಬರು) ಇವರು ಸ್ವೀಕರಿಸುವುದಾಗಿ ಒಪ್ಪಿಕೊಂಡಿದ್ದರು.

ನಿರ್ಧರಿಸಿದಂತೆ ಭಾರತೀಯ ದಲಿತ ಪರಿಷತ್ತಿನ ಅಧಿವೇಶನ ನಾಗಪೂರಿನಲ್ಲಿ ೩೦, ೩೧ ಮೇ ಹಾಗೂ ೧ನೆಯ ಜೂನ್ ೧೯೨೦ ರಂದು ಕರೆಯಲಾಯಿತು. ದಲಿತರ ರಾಜಕೀಯ ಹಕ್ಕುಗಳ ಬೇಡಿಕೆಯ ಹಿನ್ನೆಲೆಯಲ್ಲಿ ಕರೆಯಲಾಗುತ್ತಿರುವ ಬಹಿಷ್ಕೃತ ಸಮಾಜದ ಇದು ಮೊದಲನೆಯ ಪರಿಷತ್ತಾಗಿರುವುದರಿಂದ ಇದಕ್ಕೊಂದು ಐತಿಹಾಸಿಕ ಮಹತ್ವವಿತ್ತು. ಈ ಸಭೆಗೆ ಕೊಲ್ಹಾಪುರದ ಛತ್ರಪತಿ ಶಾಹೂ ಮಹಾರಾಜರು ಅಧ್ಯಕ್ಷರಾಗಿಯೂ, ಗೋಂದಿಯಾದ ಬಾಬು ಕಾಲೀಚರಣ್ ನಂದಾಗವಳಿಯವರು ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿಯೂ, ಗಣೇಶ್ ಗವಯಿ ಹಾಗೂ ಕಿಸನ್ ಫಾಗೂಜಿ ಬನ್‌ಸೋಡೆ ಸಚಿವರಾಗಿಯೂ ನೇಮಕಗೊಂಡಿದ್ದರು. ಈ ಪರಿಷತ್ತಿಗೆ ಮದ್ರಾಸ್, ಮುಂಬಯಿ, ಖಡಕ್‌ಪುರ್, ಮಧ್ಯಪ್ರದೇಶ್ ಹಾಗೂ ವರಾಡ್‌ದಿಂದ ಸುಮಾರು ೫೦೦ ಪ್ರತಿನಿಧಿಗಳು ಉಪಸ್ಥಿತರಿದ್ದರು. ಡಾ. ಅಂಬೇಡಕ್ಕರ್, ಸಿ.ನಾ ಶಿವತರ್ಕರ್, ಶಿ.ಬಾ.ಕಾಂಬಳೆ, ಕದಮ್, ಗೊ.ಗೊ.ಕಾಳೆ, ಪಿದಾಳೆ, ಭೋಸಲೆ ಇವರುಗಳು ಮುಂಬಯಿಯ ಪ್ರತಿನಿಧಿಯಾಗಿ ಬಂದಿದ್ದರು. ಹಾಗೆಯೇ ಕೊಲ್ಹಾಪುರದಿಂದ ಬ್ರಾಹ್ಮಣೇತರ ಚಳುವಳಿಯ ಪ್ರಮುಖ ಕಾರ್ಯಕರ್ತರಾಗಿರುವ ಸರ್ವಶ್ರೀ ರಣದಿವೆ, ಬಾಬುರಾವ್ ಹೈಬತರಾವ್ ಯಾದವ್, ಕೊಠಾರಿ, ಶ್ರೀಪತರಾವ್ ಶಿಂದೆ, ಕಾಂಬಳೆ, ಡಿಪ್ರೆಸ್ಡ್ ಕ್ಲಾಸ್ ಮಿಶನ್ನಿನ ಸುಪರಿಂಟೆಂಡೆಂಟ್ ಶ್ರೀ.ಬರ್ವೆ ಇವರು ಕೂಡ ಉಪಸ್ಥಿತರಿದ್ದರು. ಅಷ್ಟೇಯಲ್ಲದೆ ನಾಗಪೂರಿನ ಸುಶಿಕ್ಷಿತ ಸುಧಾರಕರಲ್ಲೊಬ್ಬರಾದ ಸರ್ವಶ್ರೀ ಪಂಡಿತ್ ಸರ್ ಗಂಗಾಧರ್ ಚಿಟಣಿಸ್, ಶಂಕರರಾವ್ ಚಿಟಣಿಸ್ ಹಾಗೂ ಹಿಂದೂ ಮಿಶನರಿ ಸೊಸೈಟಿಯ ಅಧಿಕಾರಿ ಡಾ. ಪರಾಂಜಪೆಯವರೂ ಹಾಜರಿದ್ದರು.

ಪರಿಷತ್ತಿಗಾಗಿ ಸ್ಟೇಶನ್ನಿನಿಂದ ನಾಲ್ಕು ಫರ್ಲಾಂಗ್‌ದೂರ ಹಳೆಯ ಅರ್ಸೆನಲ್ ಗ್ರೌಂಡ್ (ಕಸ್ತೂರಚಂದ್ ಪಾರ್ಕ್)ನಲ್ಲಿ ದೊಡ್ಡ ಪೆಂಡಾಲ್ ಹಾಕಿ ಒಳ್ಳೆಯ ರೀತಿಯಲ್ಲಿ ಅಲಂಕರಿಸಲಾಗಿತ್ತು. ವ್ಯಾಸಪೀಠದ ಮೇಲೆ ಇಡಲಾಗಿದ್ದ ಸಿಂಹಾಸನ ದೀಪಮಾಲೆಗಳ ಬೆಳಕಿನಲ್ಲಿ ಝಗಮಗಿಸುತ್ತಿತ್ತು. ಅಂದಿನ ಕಾರ್ಯಕ್ರಮಕ್ಕೆ ಅನೇಕ ದಲಿತ ಮಹಿಳೆಯರೂ ಉಪಸ್ಥಿತರಿದ್ದರು.

## ೧೯೨೦ ರ ನಾಗಪೂರ್ ಅಧಿವೇಶನ ಕರೆದಿದ್ದರ ಉದ್ದೇಶ

೧೯೧೭ ರಲ್ಲಿ ಭಾರತದ ಮಂತ್ರಿ ಮಾಂಟೆಗ್ಯೂ ಅವರು ಭಾರತಕ್ಕೆ ಬಂದಿದ್ದಾಗ ದಲಿತ ಸಮಾಜದ ವತಿಯಿಂದ ದಲಿತರ ರಾಜಕೀಯ ಬೇಡಿಕೆಗಳ ಬಗ್ಗೆ ಮಾತಾಡಲು ಸರ್ ನಾರಾಯಣರಾವ್ ಚಂದಾವರಕರ್ ಹಾಗೂ ವಿಠ್ಠಲ್ ರಾಮಾಜಿ ಶಿಂಧೆ ಇವರ ನೇತೃತ್ವದಲ್ಲಿ ಒಂದು ಪ್ರತಿನಿಧಿ ಮಂಡಳವು ಅವರನ್ನು ಭೇಟಿ ಮಾಡಿತ್ತು. ಡಿಪ್ರೆಸ್ಡ್ ಕ್ಲಾಸ್ ಮಿಶನ್ನಿನ ಅಧ್ಯಕ್ಷರಾದ ನಾರಾಯಣರಾವ್ ಚಂದಾವರಕರ್ ಹಾಗೂ ವಿ.ರಾ. ಶಿಂಧೆ ಅವರ ವರ್ಚಸ್ಸು ದಲಿತ ಸಮಾಜದ ಮೇಲಿದ್ದದ್ದರಿಂದ ಎಲ್ಲ ಸಮಾಜ ಸುಧಾರಕರು ಅವರ ಮಾತಿನಂತೆ ಅವರ ಸಲಹೆಯಡಿ ಕೆಲಸ ಮಾಡುತ್ತಿದ್ದರು. ಶ್ರೀ ಗಣೇಶ್ ಅಕಾಜಿ ಗವಯಿ ಹಾಗೂ ಕಿಸನ್ ಫ಼ಾಗೂ ಬನಸೋಡೆ ಇವರುಗಳು ಕೂಡ ಡಿಪ್ರೆಸ್ಡ್ ಇಂಡಿಯಾ ಅಸೋಸಿಯೇಶನ್ನಿನ ಮೂಲಕ ದಲಿತರ ಬೇಡಿಕೆಗಳ ಮೆಮೋರಾಂಡ ಒಂದನ್ನು ಭಾರತದ ಮಂತ್ರಿಗಳಿಗೆ ಕೊಡಲು ತಯಾರಿಸಿದ್ದರು.

ನಂತರ ಸೌತ್ ಬರೋ ಕಮಿಟಿ ಭಾರತಕ್ಕೆ ಬಂದಾಗ ಹಿಂದೂ ನಾಯಕರು ಅವರೆದುರು ಸ್ವಾತಂತ್ರ್ಯದ (ಹೋಮ್‌ರೂಲ್) ಬೇಡಿಕೆ ಮುಂದಿಟ್ಟರು. ಡಿಪ್ರೆಸ್ಡ್ ಕ್ಲಾಸ್ ಮಿಶನ್ನಿನ ಶ್ರೀ ವಿ.ರಾ. ಶಿಂಧೆಯವರು ದಲಿತರ ರಾಜಕೀಯ ಬೇಡಿಕೆಗಳನ್ನು ಮುಂದಿಟ್ಟುಕೊಂಡು 'ದಲಿತರಿಗೆ ಸ್ವತಂತ್ರ ಪ್ರತಿನಿಧಿತ್ವ ಕೊಡದೆ ಅವರ ಹಿತ ಸಂರಕ್ಷಣೆಯನ್ನು ಉಚ್ಚ ಜಾತೀಯ ಹಿಂದೂ ಪ್ರತಿನಿಧಿಗಳ ಕೈಗೆ ಒಪ್ಪಿಸಬೇಕು'ಎಂದೆಲ್ಲ ಪ್ರಚಾರ ಮಾಡಲಾರಂಭಿಸಿದಾಗ ಚಂದಾವರಕರ ಮತ್ತು ಶಿಂಧೆಯವರ ಅನಿಸಿಕೆಯ ವಿರುದ್ಧ ಡಾ.ಅಂಬೇಡಕ್ಕರ್ ಅವರು 'ತಮ್ಮ ಮನೆಯಲ್ಲಿಯ ಹೊಲಸನ್ನು ಎತ್ತಲಾರದ ಹಿಂದೂಗಳಿಗೆ ಸ್ವಾತಂತ್ರ್ಯ ಕೇಳುವ ಹಕ್ಕು ಎಲ್ಲಿದೆ?' ಅನ್ನುವ ಹೇಳಿಕೆಯನ್ನು ೨೬ನೆಯ ಜನವರಿ ೧೯೧೯ರ ಟೈಮ್ಸ್‌ನ ಪತಿಕೆಯಲ್ಲಿ A Mahar on Homeruleನ ಲೇಖನದಲ್ಲಿ ಬರೆದರು. ಹಾಗಾಗಿ ದಲಿತರ ಕಷ್ಟಗಳನ್ನು ದಲಿತರ ಪ್ರತಿನಿಧಿಗಳಿಂದಲೇ ಸೌತ್ ಬರೋ ಕಮಿಟಿಯೆದುರು ಮಂಡಿಸುವ ಅಗತ್ಯ ಉಂಟಾಯಿತು.

ಡಾ. ಅಂಬೇಡ್ಕರ್ ಅವರು ಪ್ರಯತ್ನಪೂರ್ವಕವಾಗಿ ಸೌತ್ ಬರೋ ಕಮಿಟಿಯೆದುರು ದಲಿತರ ರಾಜಕೀಯ ಬೇಡಿಕೆಗಳ ದೂರುಗಳನ್ನು ಮಂಡಿಸುವ ಅವಕಾಶ ಪಡೆದುಕೊಂಡರು. ಕಮಿಟಿ ಎದುರು ಶಿಂಧೆ ಹಾಗೂ ಡಾ. ಅಂಬೇಡ್ಕರರು ದಲಿತರ ಬೇಡಿಕೆಗಳನ್ನು ಭಿನ್ನ ದೃಷ್ಟಿಕೋನದಿಂದ ಸಾದರಪಡಿಸಿದರು. ಶಿಂದೆಯವರು ಸೌತ್ ಬರೋ ಕಮಿಟಿಯೆದುರು ಕೊಟ್ಟಿರುವ ಸಾಕ್ಷಿಗಳನ್ನು ಕಮಿಟಿ ಒಪ್ಪಿಕೊಂಡರೆ ದಲಿತ ಸಮಾಜ ತನ್ನ ಹಕ್ಕುಗಳನ್ನು ಕಳೆದುಕೊಳ್ಳುತ್ತದೆ. ಏಕೆಂದರೆ ಶಿಂಧೆಯವರು ದಲಿತರ ಮತದಾನಕ್ಕಾಗಿ ಮುಂದಿಟ್ಟಿರುವ ಯೋಗ್ಯತೆ ಬೆರಳೆಣಿಕೆಯಷ್ಟು ದಲಿತರಲ್ಲೂ ಇಲ್ಲ. ಒಂದು ಪಕ್ಷ ಆ ಯೋಗ್ಯತೆಯಿರುವ ಕೆಲವೇ ದಲಿತರು ಶಿಂಧೆಯವರಿಗೆ ಬೆಂಬಲವಾಗಿ ನಿಂತು ಅವರನ್ನು ಆರಿಸಿ ತಂದರೆ ಈಗ ಆರ್ಥಿಕವಾಗಿ ದಲಿತರು ಬ್ರಾಹ್ಮಣರ ಗುಲಾಮರಾಗಿರುವಂತೆ ರಾಜಕೀಯವಾಗಿಯೂ ಅವರಿಗೆ ಬ್ರಾಹ್ಮಣರ ಗುಲಾಮಗಿರಿ ಒಪ್ಪಿಕೊಳ್ಳಬೇಕಾದೀತು. ಬೇರೆ ಭಾಷೆಯಲ್ಲಿ ಹೇಳುವುದಾದರೆ ವರಿಷ್ಠ ಹಿಂದೂ ಜನ ದಲಿತರ ಮೇಲೆ ಗುಲಾಮಗಿರಿಯನ್ನು ಹೇರಬಯಸುತ್ತಿದ್ದಾರೆ ಅನ್ನುವ ಪರಿಸ್ಥಿಯನ್ನು ಗಮನಿಸಿ ಅಂಬೇಡ್ಕರ್ ಅವರು ಡಿಪ್ರೆಸ್ಡ್ ಕ್ಲಾಸ್ ವತಿಯಿಂದ ಶಿಂಧೆಯವರು ಮಂಡಿಸಿರುವ ದೂರುಗಳು ದಲಿತರ ಹಿತದೃಷ್ಟಿಯಿಂದ ಮಂಡಿಸಿದ್ದಲ್ಲ ಎಂದು ಸಾರಿದರು. ದಲಿತರ ರಾಜಕೀಯ ಅಪೇಕ್ಷೆಗಳೇನು ಅನ್ನುವುದನ್ನು ಒಬ್ಬ ದೊಡ್ಡ ಮನುಷ್ಯನ ನೇತೃತ್ವದಡಿ ಎಲ್ಲ ಜನತೆಗೆ ಗೊತ್ತಾಗಲೆಂದು ದಲಿತರ ಒಂದು ಪರಿಷತ್ತು ಛತ್ರಪತಿ ಶಾಹೂ ಮಹಾರಾಜರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ. ಹಾಗಾಗಿ ೧೯೨೦ರ ಭಾರತೀಯ ದಲಿತರ ಪರಿಷತ್ತನ್ನು ನಾಗಪೂರಿನಲ್ಲಿ ಆಯೋಜಿಸಲಾಯಿತು.

**ಡಿಪ್ರೆಸ್ಡ್ ಕ್ಲಾಸ್ ಮಿಶನ್ ವಿರುದ್ಧ ಮಸೂದೆ**

ಈ ಪರಿಷತ್ತಿನಲ್ಲಿ ಡಿಪ್ರೆಸ್ಡ್ ಕ್ಲಾಸ್ ಮಿಶನ್ ಸಂಸ್ಥೆ ಹಾಗೂ ಅದರ ಮಾಲೀಕರ ನಿಷೇಧದ ಮಸೂದೆತಯಾರಾಗುತ್ತಿದೆ ಅನ್ನುವ ಮಾತು ಅಣ್ಣಾ ಸಾಹೇಬ ಶಿಂಧೆಯವರ ಕಿವಿಗೆ ಮೊದಲೇ ತಲುಪಿತ್ತು. ಹಾಗಾಗಿ ಅವರು ಶ್ರೀ ಗ. ಆ. ಗವಯಿಯವರಲ್ಲಿ ಒಬ್ಬ ಮನುಷ್ಯನನ್ನು ಕಳಿಸಿ 'ನಾನು ನಿಮ್ಮ ವರಾಡ ಪ್ರಾಂತ್ಯದ ೫೦ ಮಕ್ಕಳನ್ನು ನನ್ನ ಬೋರ್ಡಿಂಗ್‌ನಲ್ಲಿ ಉಳಿಸಿಕೊಳ್ಳುತ್ತೇನೆ ಆದರೆ ಡಾ. ಅಂಬೇಡ್ಕರ್ ಹಾಗೂ ಶಿವತರಕರ್ ಅವರು ನಮ್ಮ ಸಂಸ್ಥೆಯ ವಿರುದ್ಧ ಹೂಡಲಿರುವ ನಿಷೇಧವನ್ನು ನೀವು ತೆಗೆದು ಹಾಕಬೇಕು'ಎಂದು ಹೇಳಿ ಕಳಿಸಿದರು. ಅದರಂತೆ ಶ್ರೀ.ಗವಯಿ ಹಾಗೂ ಬೆಳಗಾವಿಯ ಶ್ರೀ ಪಾಪಣ್ಣಾ ಸೇರಿ ಆ ನಿಟ್ಟಿನಲ್ಲಿ ಸಂಪೂರ್ಣ ತಯಾರಿ ನಡೆಸಿದ್ದರು. ನಾವು ನಾಗಪೂರಿಗೆ ಹೋಗುವಾಗ ಡಿ. ಸಿ. ಮಿಶನ್ನಿನ ಮಾಲೀಕರು ದಲಿತರ ಹಿತದ ವಿರುದ್ಧ ಸರ್ಕಾರಕ್ಕೆ ಕೊಟ್ಟ ಹೇಳಿಕೆ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದು ಎರಡು ವರ್ಷ ಹಿಂದಿನ ಮಾತಾಗಿದ್ದದ್ದರಿಂದ ಎರಡು ರೂಪಾಯಿ ಖರ್ಚು ಮಾಡಿ ಆ ಪತ್ರಿಕೆಯ ಪ್ರತಿಯನ್ನು ಕೊಂಡುಕೊಳ್ಳಬೇಕಾಯಿತು. ಪರಿಷತ್ತಿನ ಮೊದಲ ದಿನದ ಕೆಲಸಕಾರ್ಯಗಳು ಮುಗಿದೊಡನೆ ರಾತ್ರಿ ಕರೆಯಲಾಗಿದ್ದ ವಿಷಯ ನಿಯಾಮಕ ಮಂಡಲಿಯ ಸಭೆಯೊಂದರಲ್ಲಿ ಕೆಲವು ಮಸೂದೆಗಳು ಮಂಜೂರಾದ ಮೇಲೆ ಅಧ್ಯಕ್ಷರ ಅನುಮತಿ ಪಡೆದು ಡಾ. ಅಂಬೇಡ್ಕರ್ ಅವರು ಮಾತನಾಡುತ್ತ,

ದಲಿತರ ಏಳಿಗೆ ಹೇಗೆ ಸಾಧ್ಯ? ಅನ್ನುವುದನ್ನು ಚರ್ಚಿಸಲು ನಾವೆಲ್ಲ ಪ್ರತಿನಿಧಿಗಳು ಇಂದಿಲ್ಲಿ ಸೇರಿದ್ದೇವೆ. ನಮ್ಮ ಏಳಿಗೆಗೆ ಅಡ್ಡ ಬರುವ ಯಾವನೇ ಇರಲಿ, ದಲಿತನೇ ಇರಲಿ ಇಲ್ಲ ಬ್ರಾಹ್ಮಣನೇ ಇರಲಿ ಅಥವಾ ಯಾವುದೇ ಸಂಸ್ಥೆಗೆ ಸಂಬಂಧಪಟ್ಟವನಿರಲಿ ನಮ್ಮ ಹಿತದ ವಿರುದ್ಧ ಯಾವುದಾದರೂ ಕೆಲಸ ಮಾಡುತ್ತಿದ್ದರೆ ಇಲ್ಲವೆ ಹಿಂದೊಮ್ಮೆ ಅಂತಹ ಕೆಲಸ ಮಾಡಿದ್ದರೆ ನಾವದನ್ನು ಖಂಡಿಸಬೇಡವೆ? ಎಂದು ಕೇಳಿದಾಗ ಎಲ್ಲ ಪ್ರತಿನಿಧಿಗಳು ಒಕ್ಕೊರಲಿನಿಂದ 'ಖಂಡಿಸಬೇಕು, ನಮ್ಮ ಏಳಿಗೆಯ ಅಡ್ಡ ಬರುವ ವ್ಯಕ್ತಿಯಾಗಲಿ ಸಂಸ್ಥೆಯಾಗಲಿ ನಾವವರನ್ನು ಖಂಡಿಸಲೇ ಬೇಕು' ಅಂದರು. 'ನೀವೆಲ್ಲರೂ ಇದನ್ನು ಒಪ್ಪಿದ್ದೀರಿತಾನೆ?'ಎಂದು ಅಂಬೇಡ್ಕರರು ಮೂರು ಮೂರು ಸಲ ಕೇಳಿದರು. ಇದಾದ ನಂತರ ಅಂಬೇಡ್ಕರರು ಟೈಮ್ಸ್ ಪತ್ರಿಕೆಯ ಆ ಪ್ರತಿಯನ್ನು ಶಿವತರಕರ ಅವರಿಂದ ಪಡೆದು ಅದರಲ್ಲಿ ಡಿಪ್ರೆಸ್ಡ್ ಕ್ಲಾಸ್ ಮಿಶನ್ ಸಂಸ್ಥೆ ಸರ್ಕಾರಕ್ಕೆ ಬರೆದುಕೊಟ್ಟ ಹೇಳಿಕೆಯನ್ನು ಓದಿ ತೋರಿಸಿದಾಗ ಗವಯಿ ಹಾಗೂ ಅವರ ಸಹಚರರ ತೆರೆದ ಬಾಯಿಗಳು ಮುಚ್ಚಿಕೊಳ್ಳಲೇ ಇಲ್ಲ. ಉಳಿದ ಕೆಳಗಿನ ಕೆಲವು ಮಸೂದೆಗಳನ್ನು ಪರಿಷತ್ತಿನಲ್ಲಿ ಹಾಜರಿದ್ದ ಎಲ್ಲರ ಅನುಮತಿಯಿಂದ ಮಂಜೂರು ಮಾಡಲಾಯಿತು.

ಮಸೂದೆ ೩: ದಲಿತರ ಸುಧಾರಿತ ಕೌನ್ಸಿಲ್‌ನಲ್ಲಿ ಪ್ರತಿನಿಧಿಗಳನ್ನು ಸರ್ಕಾರ ನೇಮಿಸಿದವರನ್ನೋ ಇಲ್ಲ ಜಾತಿ ಆಧಾರಿತ ಸಂಘದಿಂದಲೋ ಆರಿಸಿಕೊಳ್ಳದೆ ಬಹಿಷ್ಕೃತರೇತರ ಕೌನ್ಸಿಲ್‌ನಲ್ಲಿ ಆರಿಸಿ ಬಂದ ಪ್ರತಿನಿಧಿಗಳನ್ನು ಆರಿಸಿಕೊಳ್ಳಬೇಕು ಎಂದು ದಲಿತರ ಏಳಿಗೆಗಾಗಿಯೇ ಸ್ಥಾಪಿಸಲ್ಪಟ್ಟ ಡಿಪ್ರೆಸ್ಡ್ ಕ್ಲಾಸ್ ಮಿಶನ್ನಿನವರು ಹೇಳಿದಾಗಿನಿಂದ ದಲಿತರು ಅಸ್ವಸ್ಥರಾಗಿದ್ದಾರೆ. ಬಹಿಷ್ಕೃತೇತರ ಪ್ರತಿನಿಧಿಗಳನ್ನು ಬಹಿಷ್ಕೃತರನ್ನಾಳುವ ಅಧಿಕಾರ ಕೊಟ್ಟರೆ ತಮ್ಮನ್ನು ಹಾಳು ಗುಂಡಿಗೆ ಬೀಳುವಂತೆ ಮಾಡಿರುವ ಆ ಚತುರ್ವರ್ಣವನ್ನು ಒಪ್ಪಿಕೊಳ್ಳುವ ದಲಿತರನ್ನೇ ಅವರು ಪ್ರತಿನಿಧಿಗಳನ್ನಾಗಿ ಆರಿಸಿಕೊಳ್ಳುತ್ತಾರೆ ಅನ್ನುವುದರಲಿ ಯಾವುದೇ ಬೇರೆ ಮಾತಿಲ್ಲ ಅನ್ನುವುದು ಗೊತ್ತಿರುವ ದಲಿತರ ಮನಸ್ಸು ಘಾಸಿಗೊಂಡಿದೆ. ಡಿಪ್ರೆಸ್ಡ್ ಕ್ಲಾಸ್ (ಭಾರತೀಯ ನಿರಾಶ್ರಿತ ಸಹಾಯಕಾರಿ ಮಂಡಲಿ) ಮಿಶನ್ನಿನವರು ಈ ರೀತಿ ತಮ್ಮ ಆಶ್ರಿತರಿಗೇ ದ್ರೋಹ ಬಗೆದಿರುವುದರಿಂದ ಅದು ದಲಿತರ ನಂಬಿಕೆಗೆ ಅರ್ಹವಲ್ಲ ಅನ್ನುವುದು ಪರಿಷತ್ತಿನ ನಂಬಿಕೆ.

ಈ ಮಸೂದೆಯ ಬಗ್ಗೆ ಪಿ. ಭಟಕರ್, ದ್ರವಿಡ್, ಕದಮ್ ವಕೀಲರ ಭಾಷಣಗಳಾದ ಮೇಲೆ ಗವಯಿಯವರು ಅದಕ್ಕೆ ಪುಷ್ಟಿ ಕೊಡುತ್ತ 'ನಿಮ್ಮಂತಹವರಿಗೆ ನಾಮಿನೇಶನ್ನಿನ ಅಗತ್ಯವಿಲ್ಲವೆಂದ ಮೇಲೆ ನಮ್ಮಂತಹವರಿಗಾದರೂ ಯಾಕಿರಬೇಕು? ಸರ್ಕಾರ ನಮ್ಮ ನಮ್ಮ ಪ್ರತಿನಿಧಿಗಳನ್ನೇ ಆರಿಸಲಿ ಎಂದು ಮಿಶನ್ ಬೇಡಿಕೊಂಡಿದ್ದರೂ ಒಳ್ಳೆಯದಿತ್ತು ಆದರೆ ನಮ್ಮ ಪ್ರನಿಧಿಗಳನ್ನು ಆರಿಸಲಿ ಅನ್ನುವ ಬೇಡಿಕೆ ತೀರಾ ಘಾತುಕವಾಗಿದೆ ಹಾಗಾಗಿ ಡಿಪ್ರೆಸ್ಡ್ ಮಿಶನ್ ನಮ್ಮ ನಂಬಿಕೆ ಕಳೆದುಕೊಂಡಿದೆ' ಅಂದರು.

೧೯೨೦ರ ಭಾರತೀಯ ಬಹಿಷ್ಕೃತರ ಮೊದಲ ಪರಿಷತ್ತು ಆಯೋಜಿಸುವ ಸನ್ಮಾನ ಇಲ್ಲಿಯ ದಲಿತ ಕಾರ್ಯಕರ್ತರಿಗೆ ದೊರಕಿದ್ದು ನಾಗಪೂರಿನ ಜನತೆಯ ಸುದೈವ ಅನ್ನಬಹುದು. ಈ ಪರಿಷತ್ತು ಆಯೋಜಿಸುವ ಅಗತ್ಯವೇನಿತ್ತು ಅನ್ನುವುದಕ್ಕೆ ಮೇಲೆ ಹೇಳಿದ ಪಾರ್ಶ್ವಭೂಮಿಯನ್ನು ಗಮನಿಸಿದರೆ ದಲಿತರು ರಾಜಕೀಯವಾಗಿ ಒಂದು ಹೆಜ್ಜೆ ಮುಂದಿಡುವ ದೃಷ್ಟಿಯಿಂದ ಈ ಪರಿಷತ್ತಿಗೆ ಅಪೂರ್ವ ಸ್ಥಾನ ದೊರಕಿತು ಅನ್ನುವುದರಲ್ಲಿ ಅನುಮಾನವಿಲ್ಲ.

೩.

# ಏಳು ಕೋಟಿ ದಲಿತರು ಸೇರಿ ಹಿಮಾಲಯವನ್ನೇ ನೆಲಸಮ ಮಾಡಿಯಾರು

೯ನೆಯ ಮಾರ್ಚ್ ೧೯೨೪ ರಂದು ಮುಂಬಯಿಯ ದಾಮೋದರ ಹಾಲಿನಲ್ಲಿ ಸಾಯಂಕಾಲ ೪ ಘಂಟೆಗೆ ಜರುಗಿದ ಸಮಾಜ ಸೇವಕರ ಸಭೆಗೆ ಡಾ. ಅಂಬೇಡ್ಕರ ಅವರ ಸಲಹೆಯ ಮೇರೆಗೆ 'ಬಹಿಷ್ಕೃತ ಹಿತಕಾರಿಣಿ ಸಭೆ' ಎಂದು ಹೆಸರಿಸಲಾಯಿತು. Educate, Agitate and organize (ಕಲಿಸು, ಮನವರಿಕೆ ಮಾಡಿಸು ಮತ್ತು ಸಂಘಟಿಸು) ಜನರಿಗೆ ಕಡ್ಡಾಯ ಶಿಕ್ಷಣ ಒದಗಿಸುವುದು, ಅವರ ಮನಸ್ಸಿನಲ್ಲಿ ತಮ್ಮ ಹೀನ ಅವಸ್ಥೆಯ ಬಗ್ಗೆ ಜಾಗರೂಕತೆ ಮೂಡಿಸಿ ಅವರನ್ನು ಸಂಘಟಿಸಿ ಅನ್ನುವ ಅರ್ಥದ ಸಭೆಯ ಘೋಷಣೆಯನ್ನು ಸೂಚಿಸಿ ೨೦ನೆಯ ಜುಲೈ ೧೯೨೪ರಲ್ಲಿ ಈ ಸಭೆ ಸ್ಥಾಪಿತವಾಗಿದೆ ಎಂದು ಸಾರಿದರು. ಈ ಹಿತಕಾರಿಣಿ ಸಂಸ್ಥೆಯ ಸದಸ್ಯರನ್ನು ಕಲೆಹಾಕುವ ಕೆಲಸ ಭರದಿಂದ ಸಾಗಲು ಅಲ್ಲಲ್ಲಿ ಶನಿವಾರ–ಭಾನುವಾರದಂದು ಸಭೆಗಳನ್ನು ಆಯೋಜಿಸಲಾಯಿತು. ದಿನೇ ದಿನೇ ಸದಸ್ಯರ ಸಂಖ್ಯೆ ಹೆಚ್ಚುತ್ತಿದ್ದ ಈ ಸಂಸ್ಥೆಯ ಕೆಲಸದ ಹೊರೆ ಶಿವತರಕರ ಅವರ ಹೆಗಲಿಗಿತ್ತು. ತನ್ನ ಜವಾಬ್ದಾರಿಯನ್ನವರು ಬಹಳ ಚನ್ನಾಗಿ ನಿಭಾಯಿಸುತ್ತಿದ್ದರು. ಮೊದಲಿಗೆ ಶ್ರೀ ನಾರಾಯಣರಾವ್. ಸ. ರಾಜರೋಳಕರ, ಸಖಾರಾಮ್ ಬುವಾ, ನಾ. ರಾಜರೋಳಕರ್, ಬಾಲಕೃಷ್ಣ ದೇವರುಖಕರ್, ಶಿರಸೇಕರ್, ಚಾಂದೋರಕರ, ವನಮಾಳಿ, ಬಾಳೂಜಿ ಬಾಬಾಜಿ ಪಾಲವನಕರ್, ಬೋರಘರಕರ್ ಹೀಗೆ ಚಮ್ಮಾರಜಾತಿಯ ದೊಡ್ಡ ದೊಡ್ಡಜನ ಸಾಹೇಬರ ಆಫೀಸಿಗೆ ಬಂದು ಕೂರುತ್ತಿದ್ದರು. ಮುಂಬಯಿಯ ಅಸ್ಪೃಶ್ಯರ ನಡುವೆ ಜಾತಿಭೇದ ನಷ್ಟವಾಗಬೇಕು, ಹುಡುಗ ಹುಡುಗಿಯರಿಗಾಗಿ ಬೇರೆ ವಸತಿ ಗೃಹಗಳನ್ನು ಕಟ್ಟಬೇಕು. ಮದುವೆ ಸಮಾರಂಭಗಳಿಗಾಗಿ ಭವ್ಯವಾದ ಛತ್ರ ಕಟ್ಟಬೇಕು. ಮುದ್ರಣ ಯಂತ್ರವನ್ನು ಖರೀದಿಸಿ ವಾರ್ತಾಪತ್ರಿಕೆಯೊಂದನ್ನು ಮುದ್ರಿಸಲು ಆರಂಭಿಸಬೇಕು ಅನ್ನುವಂತಹ ವಿಷಯಗಳ ಬಗ್ಗೆ ಘಂಟೆಗಟ್ಟಲೆ ಚರ್ಚಿಸುತ್ತಿದ್ದರು. ಈ ಎಲ್ಲ ಜನ ಸಾಹೇಬರನ್ನು ತಮ್ಮ ಜೀವಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿದ್ದರು. ಅವರೆಲ್ಲರ ಸಿಟ್ಟು ಶಿವತರಕರರ ಮೇಲಿತ್ತು, ಅದಕ್ಕೂ ಕಾರಣಗಳಿರದೇ ಇರಲಿಲ್ಲ. ಶಿವತರಕರರು ಎಲ್ಲರೊಡನೆ ಬಹಳ ಗತ್ತಿನಲ್ಲಿ, ಹಾಗೂ ದಿಮಾಕಿನಲ್ಲಿ ಮಾತಾಡುತ್ತಿದ್ದರು. ಮಾದಿಗ ಸಮಾಜದ ಸಮಾಜ ಸುಧಾರಕರಿಗೂ ಈ ವಿಷಯದ ಬಗ್ಗೆ ತಕರಾರಿತ್ತು. ಹೀಗೆಯೇ ಒಮ್ಮೆ ಆಫೀಸಿನಲ್ಲಿ ಶಿವತರಕರರ ಬಗ್ಗೆ ತಕರಾರು ಬಂದಾಗ ಸಾಹೇಬರು ಶಿವತರಕರ ಅವರನ್ನು ವಹಿಸಿಕೊಂಡು,

'ಶಿವತರಕರ ಅವರು ಯಾವತ್ತೂ ನನ್ನೊಂದಿಗೆ ಇದ್ದುಕೊಂಡು ಸಂಸ್ಥೆಯ ಯಾವುದೇ ಕೆಲಸ ಬೇಕಾದರೂ ಮಾಡಬಲ್ಲ ಮನುಷ್ಯ. ನೀವ್ಯಾಕೆ ಅವರನ್ನು ದೂರುತ್ತೀರಿ? ನಾನು ನಮ್ಮ ಸಮಾಜದ ಸರ್ವಾಂಗೀಣ ವಿಕಾಸಕ್ಕಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದೇನೆ. ನಾನು ಕಲಿತದ್ದನ್ನು ನನ್ನ ಕುಟುಂಬಕ್ಕಷ್ಟೇಯಲ್ಲ ನನ್ನ ಇಡೀ ಸಮಾಜಕ್ಕಾಗಿ ಉಪಯೋಗಿಸುತ್ತಿದ್ದೇನೆ. ಅದಕ್ಕೆಂದೇ ಅನೇಕ ಯೋಜನೆಗಳನ್ನು ಜಾರಿಗೆ

ತರುತ್ತೇನೆ. ಈ ಯೋಜನೆಗಳು ಸಫಲವಾದರೆ ದಲಿತರಿಗಷ್ಟೇಯಲ್ಲ ಬ್ರಾಹ್ಮಣರಿಗೂ ಲಾಭವಿದೆ. ದಲಿತರ ಸಮಸ್ಯೆಗಳಿಂದು ಬಿಡಿಸಲಾಗದಷ್ಟು ಕಠಿಣವಾಗಿವೆ. ಎಲ್ಲ ಪ್ರಶ್ನೆಗಳಿಗೂ ಉತ್ತರ ಹುಡುಕುವುದು ನನ್ನಿಂದ ಸಾಧ್ಯವಿಲ್ಲ ಅನ್ನುವುದು ನನಗೆ ಗೊತ್ತು. ಆದರೆ ಆ ಪ್ರಶ್ನೆಗಳನ್ನು ಭಾರತದಾದ್ಯಂತ ಮಂಡಿಸಿ ಎಲ್ಲರ ಗಮನ ಸೆಳೆಯುವಂತಾದರೂ ಮಾಡಿಯೇನು ಅನ್ನುವ ಭರವಸೆ, ಆತ್ಮವಿಶ್ವಾಸ ನನಗಿದೆ. ದಲಿತರ ಸಮಸ್ಯೆಗಳು ಹಿಮಾಲಯದಂತಿವೆ, ಈ ಹಿಮಾಲಯವನ್ನು ಎದುರು ಹಾಕಿಕೊಂಡು ನಾನು ನನ್ನ ತಲೆ ಒಡೆದುಕೊಂಡರೂ ಚಿಂತೆಯಿಲ್ಲ. ಹಿಮಾಲಯ ಅಲುಗಾಡದಿದ್ದರೂ ನನ್ನ ಒಡೆದ ತಲೆ ನೋಡಿ ೭ ಕೋಟಿ ದಲಿತರು ಆ ಹಿಮಾಲಯವನ್ನು ನೆಲಸಮ ಮಾಡಿಯಾರು ಹಾಗೂ ತಮ್ಮ ಪ್ರಾಣವನ್ನೂ ಅರ್ಪಿಸಿಯಾರು ಅನ್ನುವುದನ್ನು ನೆನಪಿಡಿ. ಇವರನ್ನು ತಡೆಯುವುದು ಆ ದೇವರಿಂದಲೂ ಸಾಧ್ಯವಿಲ್ಲ' ಅಂದರು.

ಸಾಹೇಬರ ಎದುರು ಕುಳಿತಿದ್ದವರ ಮೇಲೆ ಈ ಮಾತಿನ ಪರಿಣಾಮ ಎಷ್ಟಾಗಿತ್ತೆಂದರೆ ಅಲ್ಲಿಂದ ಮುಂದೆ ಎಲ್ಲರೂ ಶಿವತರಕರರ ಜೊತೆ ಸಹಕರಿಸಿ ಕೆಲಸಮಾಡ ತೊಡಗಿದರು.

# ೪.

# ಸಮಾಜ ಜೀವನದಲ್ಲಿ ನಿರಪೇಕ್ಷ ಬುದ್ಧಿಯಿಂದ ಕೆಲಸ ಮಾಡಬೇಕು

ಸೋಲಾಪುರ ಜಿಲ್ಲೆಯ ಬಾರ್ಶಿಯಲ್ಲಿ ಮುಂಬಯಿ ಪ್ರಾಂತ್ಯ ಬಹಿಷ್ಕೃತ ಪರಿಷತ್ತು ಮೇ ೧೯೨೪ ರಲ್ಲಿ ಆಯೋಜಿಸಲಾಗಿತ್ತು. ಅಂದು ಬ್ಯಾರಿಸ್ಟರ್ ಅಂಬೇಡ್ಕರರು ಮಾಡಿದ ಭಾಷಣ.

'ಈ ಅಸ್ಪೃಶ್ಯತೆ ನಮ್ಮನ್ನು ಗುಲಾಮರನ್ನಾಗಿಸಲಿಲ್ಲವಲ್ಲ ಎಂದು ಮನಸ್ಸಿಗೆ ಸಮಾಧಾನವೆನಿಸುತ್ತದೆ. ಇಲ್ಲದಿದ್ದರೆ ದನಕರುಗಳಂತೆ ಇಲ್ಲವೆ ದಿನಸಿ ಸಾಮಾನುಗಳಂತೆ  ನಮ್ಮನ್ನೂ ಮಾರಾಟಕ್ಕಿಡುತ್ತಿದ್ದರೇನೋ. ಈ ರೀತಿಯ ಗುಲಾಮಗಿರಿಯಲ್ಲಿ ನಾವು ಸಿಲುಕಲಿಲ್ಲವೆಂದೂ ಯಾರೂ ಸಮಾಧಾನಪಡಬೇಕಿಲ್ಲ ಏಕೆಂದರೆ ಒಂದು ಪಕ್ಷ ಈ ರೀತಿಯ ಗುಲಾಮಗಿರಿಯಲ್ಲಿ ನಾವಿರುತ್ತಿದ್ದರೆ ನಮಗೆ ಬೇಗ ಮುಕ್ತಿ ಸಿಗುತ್ತಿತ್ತು. ಪ್ರಾಚೀನ ಕಾಲದ ರೋಮ್, ಗ್ರೀಸ್ ರಾಷ್ಟ್ರಗಳಲ್ಲಿ ದಾಸ್ಯತ್ವ ಅಂದರೆ ಗುಲಾಮಗಿರಿಯು ಬಹು ದೊಡ್ಡ ಪ್ರಮಾಣದಲ್ಲಿತ್ತು. ಅನೇಕ ಕಾರಣಗಳಿಂದ ಆ ದೇಶದ ಜನರಿಗೆ ಗುಲಾಮರಾಗುವ ಪರಿಸ್ಥಿತಿ ಬರುತ್ತಿತ್ತು. ಒಮ್ಮೆ ಒಬ್ಬ ಮನುಷ್ಯ ಗುಲಾಮನಾದನೆಂದರೆ ಅವನ ಪರಿಸ್ಥಿತಿ ಜಡವಸ್ತುವಿನಂತಾಗಿ ಅವರು ಎಲ್ಲ ಹಕ್ಕುಗಳಿಂದ ವಂಚಿತರಾಗುತ್ತಿದ್ದರು. ಭಾರತದ ಅಸ್ಪೃಶ್ಯ ಜನ ರೋಮ್‌ನ ಗುಲಾಮರಂತೆ ಜಡವಸ್ತುವಿನ ಸ್ಥಿತಿಗೆ ತಲುಪಿಲ್ಲ ಅನ್ನುವ ದೃಷ್ಟಿಯಿಂದ ನೋಡಿದರೆ ಭಾರತದ ಅಸ್ಪೃಶ್ಯತೆ ರೋಮನ್ ಹಾಗೂ ಗ್ರೀಕ್ ಗುಲಾಮರಿಗಿಂತ ಎಷ್ಟೋ ಬೇಕು ಅನ್ನುವುದು ನಿಜ. ಆದರೆ ಮತ್ತೊಂದು ದೃಷ್ಟಿಯಿಂದ ನೋಡಿದರೆ ಅಸ್ಪೃಶ್ಯತೆ ಗುಲಾಮಗಿರಿಗಿಂತ ಬಹಳ ಕೆಟ್ಟದ್ದು. ಗುಲಾಮರು ಗುಲಾಮಗಿರಿಯಿಂದ ಮುಕ್ತರಾಗಿ ಸ್ವತಂತ್ರ ಪ್ರಜೆಗಳಾಗಿ ಬಾಳುತ್ತಿರುವುದಕ್ಕೆ ಇಡೀ ರೋಮ್ ಸಾಕ್ಷಿಯಾಗಿದೆ. ಆದರೆ ಭಾರತದ ಇತಿಹಾಸದಲ್ಲಿ ದಲಿತರು ಮೇಲ್ಜಾತಿಯವರಾಗಿ ಬಾಳುತ್ತಿರುವ ಒಂದು ಉದಾಹರಣೆಯೂ ಇಲ್ಲ. ರೋಮನ್ ಜನರ ಗುಲಾಮಗಿರಿ ತಾತ್ಕಾಲಿಕವಾಗಿತ್ತು ಹಾಗೂ ಅದರಿಂದ ಬಿಡುಗಡೆ ಹೊಂದುವ ಅನೇಕ ಮಾರ್ಗಗಳಿದ್ದವು. ಆದರೆ ಅಸ್ಪೃಶ್ಯತೆ ತ್ರಿಕಾಲಾಬಾಧಿತ ಸ್ಥಿತಿಯಾಗಿದೆ ಹಾಗೂ ಅದರಿಂದ ಬಿಡುಗಡೆ ಹೊಂದುವ ಯಾವ ಮಾರ್ಗವೂ ಇಲ್ಲ. ಅಸ್ಪೃಶ್ಯನಾಗಿ ಹುಟ್ಟುವವನು ಸಾಯುವತನಕವೂ ಅಸ್ಪೃಶ್ಯನಾಗೇ ಇರುತ್ತಾನೆ ಅನ್ನುವ ಕಟ್ಟಾ ನಿಯಮದಿಂದ ಶತಶತಮಾನಗಳಿಂದಲೂ ಅಸ್ಪೃಶ್ಯ ಸಮಾಜ ಅಸ್ಪೃಶ್ಯವಾಗಿಯೇ ಇದೆ. ಇನ್ನೂ ಉಳಿದ ಬೇರೆ ದೃಷ್ಟಿಯಿಂದಲೂ ಭಾರತದ ಅಸ್ಪೃಶ್ಯತೆ ರೋಮನ್ ಗುಲಾಮಗಿರಿಗಿಂತ ಬಹಳ ಕೆಟ್ಟದೆಂದೇ ಹೇಳಬೇಕಾಗುತ್ತದೆ. ರೋಮ್‌ನ ಗುಲಾಮಗಿರಿ ಅವರ ಏಳಿಗೆಯ ಅಡ್ಡ ಬರುತ್ತಿದ್ದಕ್ಕಿಂತ ಹೆಚ್ಚು ನಮ್ಮ ಏಳಿಗೆಯ ಅಡ್ಡ ನಮ್ಮ ಅಸ್ಪೃಶ್ಯತೆ ಬರುತ್ತಿದೆ ಎಂದರೆ ತಪ್ಪಾಗಲಾರದು. ಇವರು ಹೊಲಸು ಕೆಲಸಗಳನ್ನು ಮಾಡುತ್ತಾರೆ, ಸತ್ತ ದನ ಕರುಗಳನ್ನು ಸುಲಿಯುತ್ತಾರೆ, ಭಯಾನಕವಾದ ದೇವರುಗಳನ್ನು ಪೂಜಿಸುತ್ತಾರೆ, ಇಂತಹ ಒಂದಲ್ಲ ಎರಡಲ್ಲ ಒಂಭತ್ತು ಲಕ್ಷ ಆರೋಪಗಳು ನಮ್ಮ ಮೇಲಿವೆ. ಆರೋಪಿಸುವುದು ಬಹಳ ಸುಲಭ ಆದರೆ ಈ ಆರೋಪಗಳಿಗೆ ಜವಾಬ್ದಾರರ್ಯಾರು? ಅನ್ನುವುದನ್ನು ಯಾರೂ ಯೋಚಿಸುವುದಿಲ್ಲ.

ನಿಜ ಹೇಳುವುದಾದರೆ ಈ ಜವಾಬ್ದಾರಿ ಆರೋಪಿಸುವವರ ಮೇಲೆಯೆ ಇರುತ್ತದೆ. ತನ್ನ ಕರ್ತವ್ಯಗಳನ್ನು ಮುಗಿಸಿ ಮನುಷ್ಯ ಈ ಇಹಲೋಕವನ್ನು ತ್ಯಜಿಸುತ್ತಾನೆ. ಆದರೆ ಸಮಾಜ ಅವ್ಯಾಹತವಾಗಿ ಮುಂದುವರೆಯಲು

ಆತನ ಮುಂಬರುವ ಪೀಳಿಗೆ ತನ್ನೆಲ್ಲ ಸಂಪ್ರದಾಯ, ಪದ್ಧತಿ, ಧರ್ಮ, ಕರ್ಮ ಸಂಸ್ಕೃತಿಗಳನ್ನು ತನ್ನ ಹಿಂದಿನ ಪೀಳಿಗೆಯಿಂದ ಕಲಿಯುತ್ತದೆ. ಆದರೆ ನಮ್ಮ ಹಿಂದೂ ಸಮಾಜದಲ್ಲಿ ಇಂತಹ ಕಲಿಸುವ ಕಲಿಯುವ ಸಾಧ್ಯತೆಗಳಿಲ್ಲ. ಉದಾಹರಣೆಗೆ ನಮ್ಮ ಭೂದೇವರು ಅಂದರೆ ಬ್ರಾಹ್ಮಣರಿಗೂ (ಭೂಮಿಯ ಮೇಲೆ ಅವರೇ ಎಲ್ಲರಿಗೂ ದೇವರು) ನಮಗೂ ಯಾವತ್ತೂ ಹತ್ತಿರದಿಂದ ಸಂಬಂಧ ಏರ್ಪಡುವುದೇಯಿಲ್ಲ ಅಂದ ಮೇಲೆ ಅವರ ರೀತಿ ಪದ್ಧತಿಗಳು ನಮ್ಮಲ್ಲಿ ಬರುವುದಾದರೂ ಹೇಗೆ? ಉಪನಿಷತ್ತಿನ ತತ್ವಗಳು ನಮ್ಮ ಕಿವಿಗೆ ಬೀಳಬಾರದು ಅಂದಮೇಲೆ ನಾವು ಮಾರಿ ಅಮ್ಮನನ್ನು ಪೂಜಿಸುವುದು ಹೇಗೆ ಬಿಟ್ಟೇವು? ನಾವು ವೇದಗಳನ್ನು ಕೇಳಕೂಡದು ಅನ್ನುವುದು ಅವರ ಆಜ್ಞೆಯಾಗಿದ್ದರೆ ಲಾವಣಿ ನಮ್ಮನ್ನು ಹೇಗೆ ಬಿಟ್ಟೀತು? ನಮ್ಮ ಉಪನಯನ ಮಾಡಿ ನಮಗೆ ಜನಿವಾರ ತೊಡಿಸಿದರೆ ನಾವೂ ಶುಚಿರ್ಭೂತರಾಗೇ ಇರುತ್ತೇವೆ. ನಮ್ಮಲ್ಲೆಲ್ಲ ಕೆಟ್ಟ ಗುಣಗಳೇ ಇವೆ ಎಂದು ಆರೋಪಿಸುವಿರಾದರೆ ನೀವೆಂದಾದರೂ ನಮಗೆ ಒಳ್ಳೆಯದನ್ನು ಹೇಳಿಕೊಡಲು ಪ್ರಯತ್ನಿಸಿದ್ದೀರಾ? ಬ್ರಾಹ್ಮಣರ ಮಕ್ಕಳಲ್ಲಿ ಬ್ರಾಹ್ಮಣರ ರೀತಿ ಪದ್ಧತಿಗಳು ಇಲ್ಲವೆ ನಮ್ಮಲ್ಲಿ ಕ್ರಿಶ್ಚನ್ನರಾಗಿ ಪರಿವರ್ತನೆಗೊಂಡವರಲ್ಲಿ ಕ್ರಿಶ್ಚನ್ ಪದ್ಧತಿಗಳು ದೊಡ್ಡ ಪ್ರಮಾಣದಲ್ಲಿ ಹೇಗೆ ಕಾಣಿಸಿಕೊಳ್ಳುತ್ತವೆ? ಬ್ರಾಹ್ಮಣ ರೀತಿ ಪದ್ಧತಿಗಳು ನಮ್ಮಲ್ಲೇಕೆ ಕಾಣಿಸಿಕೊಳ್ಳುವುದಿಲ್ಲ? ಅನ್ನುವುದರ ಬಗ್ಗೆ ಕೂಲಂಕಷವಾಗಿ ಯೋಚಿಸಿದಾಗ ಹೀಗೆ ಪದ್ಧತಿಗಳು ಒಬ್ಬರಿಂದ ಒಬ್ಬರಿಗೆ ಬರಲು ಅವರಲ್ಲಿ ಆತ್ಮೀಯ ಬಂಧನವಿರಬೇಕು ಅನ್ನುವುದು ಗೊತ್ತಾಗುತ್ತದೆ. ಅಸ್ಪೃಶ್ಯತೆಯಿಂದಾಗಿ ಹಿಂದೂ ಸವಾಜದ ಜೊತೆ ಅಂತಹ ಸಂಬಂಧವೇರ್ಪಡುವುದು ಸಾಧ್ಯವಿಲ್ಲದ ಮಾತು. ಹಾಗಾಗಿ ಆಯಾ ಸಮಾಜದ ಒಳ್ಳೆಯ ಕೆಟ್ಟ ರೀತಿ ಪದ್ಧತಿಗಳು ಆಯಾ ಸಮಾಜಕ್ಕೇ ಅಂಟಿಕೊಂಡುಬಿಟ್ಟಿವೆ. ರೋಮನ್ನರ ಗುಲಾಮಗಿರಿಯಲ್ಲಿ ಇಂತಹ ಯಾವುದೇ ಅಸ್ಪೃಶ್ಯತೆಯ ಬಣ್ಣಗಳಿರಲಿಲ್ಲವಾದ್ದರಿಂದ ಅವರ ವರಿಷ್ಠರ ಗುಣಾವಗುಣಗಳು ಅವರೆದು ಇರುತ್ತಿದ್ದವು. ಆ ಗುಲಾಮರು ಆ ಗುಣಾವಗುಣಗಳನ್ನೇ ದಿನನಿತ್ಯ ಕಣ್ಣೆದುರು ಇಟ್ಟುಕೊಳ್ಳುತ್ತ ಅದನ್ನು ಕಲಿಯುತ್ತ ಮುಂದುವರೆದರು.

ಮೇಲೆ ಹೇಳಿದಂತೆ ನಮ್ಮಂತಹ ಅಸ್ಪೃಶ್ಯರಿಗೆ ಸರಿಯಾದ ವರ್ತನೆ ಸಿಗಲಿಲ್ಲವಾದ್ದರಿಂದ ನಮಗೆ ಅಂಟಿಕೊಂಡಿರುವ ಕಳಂಕವನ್ನು ತೊಳೆದುಹಾಕಲು ನಾವೇ ಪ್ರಯತ್ನಿಸುತ್ತಿದ್ದೇವೆ. ಇದಕ್ಕೆ ಅನೇಕರು ಅನೇಕ ಉಪಾಯಗಳನ್ನು ಸೂಚಿಸಿದ್ದಾರೆ. ಅದರಲ್ಲಿ ಮೊದಲನೆಯದು ದಲಿತರು ಈ ದೇಶ ಬಿಟ್ಟು ವಲಸೆ ಹೋಗುವುದು, ನಿರಾಶ್ರಿತ ಸಹಾಯಕಾರಿ ಮಂಡಲವು ಸ್ಥಾಪಿತವಾದ ದಿನವೇ ವರಿಷ್ಠ ಬ್ರಾಹ್ಮಣ ಜಾತಿಯವರೊಬ್ಬರು ದಲಿತರು ತಮ್ಮ ತಮ್ಮ ಪೀಡೆಯನ್ನೆತ್ತಿಕೊಂಡು ಮತ್ತೊಂದು ದೇಶಕ್ಕೆ ಯಾಕೆ ಹೋಗುವುದಿಲ್ಲ ಅಂದರಂತೆ ಎಂದು ಕೇಳಿದ್ದೇವೆ. ಇಂತಹ ತಿರಸ್ಕಾರಭರಿತ ಉಪದೇಶ ಮಾಡುವ ಜನರನ್ನು ನೋಡಿ ಸಧ್ಯ ನಾವು ಉಚ್ಚ ಜಾತಿಯಲ್ಲಿಲ್ಲವಲ್ಲ ಅನ್ನುವುದೇ ಸಮಾಧಾನದ ವಿಷಯವಾದರೂ ನಮ್ಮ ಜನರ ಹಿತದ ದೃಷ್ಟಿಯನ್ನಷ್ಟೇ ನೋಡುವುದಾದರೆ ಈ ದೇಶ ಬಿಟ್ಟು ವಲಸೆ ಹೋಗಿ ಅನ್ನುವ ಸೂಚನೆಯಲ್ಲಿ ಸಾಕಷ್ಟು ನಮ್ಮ ಹಿತವೇ ಅಡಗಿದೆ ಅಂದರೆ ತಪ್ಪಿಲ್ಲ. ಒಂದು ಚೂರು ರೊಟ್ಟಿಗೋಸ್ಕರ ಊರಲ್ಲಿರುವ ಸಣ್ಣವರ ದೊಡ್ಡವರ ಒದೆ ತಿನ್ನುವುದಕ್ಕಿಂತ ಈಸ್ಟ್ ಆಫ್ರಿಕಾ, ನ್ಯೂಗಿನಿ ಅಥವಾ ಫ್ಲಿಜಿಯಂತಹ ದೇಶಗಳಿಗೆ ಹೋಗಿ ನಮ್ಮ ಹಣೇಬರಹವನ್ನು ಪರೀಕ್ಷಿಸುವುದರಲ್ಲಿ ತಪ್ಪೇನಿದೆ? ಹೊರದೇಶದಲ್ಲಿ ಭಾರತೀಯರಿಗೆ ಅಲ್ಲಿಯ ಜನರಂತೆ ಸಮಾನ ಹಕ್ಕುಗಳು ಸಿಗುವುದಿಲ್ಲ ಅನ್ನುವುದೊಂದು ದುರ್ದೈವವಾದರೂ, ಹಿಂದೂ ಜನರೆಂದು ಹೊರದೇಶದಲ್ಲಿ ತೊಂದರೆ ಅನುಭವಿಸಬೇಕಾದೀತಾದರೂ ಹಿಂದೂಗಳೆಂದು ತಮ್ಮ ದೇಶದಲ್ಲಿ ಅನುಭವಿಸುವ ಕಷ್ಟಕ್ಕಿಂತ ಅದು ಕಡಿಮೆ ಅನಿಸೀತು. ಅಷ್ಟೇಯಲ್ಲ ನಮ್ಮ ದೇಶದ ಹಿಂದೂ ಧರ್ಮದ ಕೆಲವು ಬಂಧನಗಳಿಂದಾಗಿ

ನಮಗಾಗಿ ಮುಚ್ಚಲ್ಪಟ್ಟ ಅರ್ಥಾರ್ಜನೆಯ ಮಾರ್ಗವೂ ಹೊರದೇಶಕ್ಕೆ ಹೋದ ಮೇಲೆ ತೆರೆದೀತು ಹಾಗೂ ನಮ್ಮ ಜನರ ಆರ್ಥಿಕ ಸ್ಥಿತಿ ಸುಧಾರಿಸಬಹುದು.

ಆದರೆ ಎಲ್ಲರೂ ದೇಶಾಂತರಕ್ಕೆ ಹೋಗುವುದು ಸಾಧ್ಯವಿಲ್ಲದ ಮಾತು. ಹೋದರೆ ಕೆಲವೇ ಜನ ಹೋಗಬಹುದಷ್ಟೆ. ಹಾಗಾಗಿ ಈ ದೇಶದಲ್ಲಿದ್ದುಕೊಂಡೇ ಅಸ್ಪೃಶ್ಯ ನಿವಾರಣೆಯ ಮಾರ್ಗವನ್ನು ಕಂಡುಹಿಡಿಯಬೇಕು. ಅಂತಹ ಇನ್ನೊಂದು ಮಾರ್ಗವೆಂದರೆ ಧರ್ಮಾಂತರಗೊಳ್ಳುವುದು. ಯಾವುದೇ ಧರ್ಮವನ್ನು ತಾತ್ವಿಕ ದೃಷ್ಟಿಯಿಂದ ನೋಡುವಂತೆ ವ್ಯಾವಹಾರಿಕ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಸಧ್ಯಕ್ಕಂತೂ ತಾತ್ವಿಕವಾಗಿ ಹಿಂದೂ ಧರ್ಮ ಯಾವುದೇ ಧರ್ಮಕ್ಕೆ ಬಗ್ಗುವಂತೆ ಕಾಣುವುದಿಲ್ಲ. ಎಲ್ಲಕ್ಕಿಂತ ಹಿಂದೂ ಧರ್ಮವೇ ಶ್ರೇಷ್ಠ ಎಂದು ಪರಿಗಣಿಸಲ್ಪಡುತ್ತದೆ. ಈ ಹಿಂದೂ ಧರ್ಮದಲ್ಲಿ 'ಸರ್ವಾಂಭೂತಿ ಏಕ ಆತ್ಮಾ' ಅನ್ನುವ ಮೂಲ ತತ್ವವೊಂದಿದೆ. ಈ ಉದಾತ್ತ ತತ್ವದಂತೆಯೇ ಸಮಾಜವೂ ಇದ್ದಿದ್ದರೆ? ಮನೆಯ ಮೇಲಿನ ದೀಪವೊಂದು ಆ ಮನೆಗಷ್ಟೇ ಬೆಳಕು ಕೊಡದೆ ತನ್ನ ಸಂಪೂರ್ಣ ಪರಿಸರವನ್ನು ಬೆಳಗುವಂತೆ ಇಲ್ಲವೆ ತನಗೆ ನೀರುಣಿಸುವವನಿಗೆ ನೆರಳು ಕೊಡುವಂತೆ ತನ್ನನ್ನು ಕತ್ತರಿಸುವವನಿಗೂ ನೆರಳು ಕೊಡುವ ಮರದಂತೆ ಅಥವಾ ಹಸುವಿನಂತೆ ಹುಲಿಯ ಬಾಯಾರಿಕೆಯನ್ನೂ ಈಡೇರಿಸುವ ನೀರಿನಂತೆ ಹಿಂದೂಗಳಿಗೆ ಒಳ್ಳೆಯ ಬುದ್ಧಿ ಇರುತ್ತಿದ್ದರೆ? ಆದರೆ ಹಿಂದೂ ಸಮಾಜದ ವ್ಯವಹಾರಿಕ ರೂಪ ಎಷ್ಟು ಹೊಲಸಾಗಿ ಕಾಣುತ್ತಿದೆ. ಆಚಾರಕ್ಕೂ ವಿಚಾರಕ್ಕೂ ಸಂಬಂಧವೇ ಇಲ್ಲವಾಗಿದೆ. ಸರ್ವಾಂಭೂತಿ ಏಕ ಆತ್ಮಾ ಎಂದು ಸಾರುವ ಜನರೇ ತಮ್ಮಂತಹ ಮನುಷ್ಯನಿಗೆ ಅಪವಿತ್ರ ಹಾಗೂ ಅಸ್ಪೃಶ್ಯನಂತೆ ಕಾಣುವುದು ಆಶ್ಚರ್ಯವಲ್ಲವೆ? ಇನ್ನೊಂದು ತುಂಬಾ ಸಿಟ್ಟು ತರಿಸುವ ವಿಷಯವೆಂದರೆ ಹಿಂದೂ ಧರ್ಮದವರಲ್ಲದವರನ್ನು ಮಾತ್ರ ಇವರು ಸಮಾನದೃಷ್ಟಿಯಿಂದ ಕಾಣುತ್ತಾರೆ. ಕ್ರಿಶ್ಚನ್ನರು ಅಸ್ಪೃಶ್ಯರೂ ಅಲ್ಲ ಅಪವಿತ್ರರೂ ಅಲ್ಲ, ಉಚ್ಚ ಹಿಂದೂ ಧರ್ಮದವರಿಗೆ ಅವರನ್ನು ಮುಟ್ಟಿದರೆ ಮೈಲಿಗೆಯಾಗುವುದಿಲ್ಲ ಹಾಗೂ ಅವರ ಕೈಕೆಳಗೆ ಕೆಲಸ ಮಾಡಲು ನಾಚಿಕೆಯೂ ಅನಿಸುವುದಿಲ್ಲ. ಹಾಗೆ ನೋಡಲು ಹೋದರೆ ಮುಸಲ್ಮಾನರು ಹಿಂದೂಗಳ ಅತಿ ನೀಚಜಾತಿಗಿಂತಲೂ ಅಸ್ಪೃಶ್ಯ ಹಾಗೂ ಅಪವಿತ್ರರಾಗಿದ್ದಾರೆ. ಹಿಂದೂ ಜನ ಗೋಹತ್ಯೆ ಮಾಡಿ ತನ್ನ ಹೊಟ್ಟೆ ತುಂಬಿಕೊಳ್ಳುವುದಿಲ್ಲ, ಮುಸಲ್ಮಾನರಿಗೆ ಹಾಗು ಕ್ರಿಶ್ಚನ್ನರಿಗೆ ಮಾತ್ರ ಗೋಹತ್ಯೆ ಮಾಡಲು ಅನುಮತಿಯಿದೆ. ಆದರೂ ಅವರನ್ನು ಮಹರ್, ಮಾಂಗ್ ಹಾಗೂ ಇನ್ನಿತರ ಹಿಂದೂ ಕೆಳವರ್ಗದ ಜಾತಿಗಿಂತಲೂ ಪವಿತ್ರ ಎಂದು ಪರಿಗಣಿಸಲಾಗುತ್ತದೆ. ಕ್ರಿಶ್ಚನ್ ಮುಸಲ್ಮಾನ ಹಾಗೂ ಹಿಂದೂ ಜಾತಿಗಳ ನಡುವೆ ಮನೆಯ ಹೊರಗೆ ಎಲ್ಲ ವ್ಯವಹಾರಗಳು ನಡೆಯುತ್ತವೆ ಹಾಗೂ ಅವರ ಮಕ್ಕಳು ಕೂಡ ಒಟ್ಟಿಗೆ ಒಂದೇ ಶಾಲೆಯಲ್ಲಿ ಕಲಿಯುತ್ತಾರೆ. ಒಂದೇ ರಸ್ತೆಯಲ್ಲಿ ಓಡಾಡುತ್ತಾರೆ. ಒಂದೇ ಭಾವಿಯಿಂದ ನೀರು ತುಂಬುತ್ತಾರೆ ಹಾಗೂ ಉಳಿದೆಲ್ಲ ವಿಷಯಗಳಲ್ಲಿ ಸಮಾನರಂತೆ ಬದುಕುತ್ತಾರೆ, ಆದರೆ ವೈದಿಕ ಧರ್ಮವನ್ನು ನಂಬುವ ಹಿಂದೂಗಳ ಆಚಾರವಿಚಾರಗಳನ್ನೇ ಪರಿಪಾಲಿಸುವ ನಮ್ಮನ್ನು ತಿರಸ್ಕರಿಸುತ್ತಾರೆ. ಅಷ್ಟೇಯಲ್ಲ ನಮ್ಮನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುತ್ತಾರೆ.

ಉಚ್ಚ ವಿಚಾರ ನೀಚ ಆಚಾರವಿರುವಂತಹ ಧರ್ಮದಲ್ಲಿದ್ದು ನಮ್ಮ ಏಳಿಗೆ ಸಾಧ್ಯವೆ? ಅನ್ನುವ ಪ್ರಶ್ನೆ ಕಾಡುವುದೇನೋ ನಿಜ ಆದರೆ ನಮ್ಮ ಜನ ಧರ್ಮಾಂತರಗೊಳ್ಳಬೇಕೆ ಇಲ್ಲವೆ ಅನ್ನುವ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟ. ಮನುಷ್ಯನಿಗೆ ಧರ್ಮದ ಅವಶ್ಯಕತೆ ಇದೆಯೆ ಇಲ್ಲವೆ ಅನ್ನುವ ವಾದಗ್ರಸ್ತ ಪ್ರಶ್ನೆಯನ್ನೆತ್ತುವುದು ನನಗೆ ಬೇಕಿಲ್ಲ ಆದರೆ ಕೆಲವರಿಗೆ ವಿಶೇಷವಾಗಿ ಹಿಂದೂ ಜನರಿಗೆ ತಮ್ಮ ಪ್ರಾಣಕ್ಕಿಂತಲೂ ಪ್ರಿಯವಾದದ್ದ್ಯಾವುದಾರೂ ಇದ್ದರೆ ಅದು ಧರ್ಮ. ಮನುಷ್ಯತ್ವವೇ ಇಲ್ಲವೆಂದ ಮೇಲೆ ಧರ್ಮವನ್ನು ನಂಬಿ

ಏನಾಗಬೇಕಿದೆ? ತಮ್ಮ ಅನುಯಾಯಿಗಳಿಗೆ ಐಹಿಕ ಹಾಗೂ ಪಾರಲೌಕಿಕ ಸುಖದ ಬಾಗಿಲುಗಳನ್ನು ತೆರೆಯುವದನ್ನು ಬಿಟ್ಟು ಆ ಬಾಗಿಲುಗಳನ್ನು ಮುಚ್ಚಿ ಅವರನ್ನು ಅಧೋಗತಿಗೆ ತಳ್ಳುವಂತೆ ಮಾಡುವ ಧರ್ಮಕ್ಕೆ ಅಂಟಿಕೊಂಡಿರುವುದರಲ್ಲೇನು ಅರ್ಥವಿದೆ? ಧರ್ಮಾಂತರ ಮಾಡಿಕೊಂಡ ಮೇಲೇ ಇದೇ ಜನ ನಮ್ಮನ್ನು ತಮ್ಮ ಜನರಾಗಿ ಪರಿಗಣಿಸಿ ಸಮಾನವಾಗಿ ನಡೆಸಿಕೊಳ್ಳುತ್ತಾರಾದರೆ ಧರ್ಮಾಂತರ ಯಾಕೆ ಮಾಡಿಕೊಳ್ಳಬಾರದು? ವೈಕಾಮ್‌ನಲ್ಲಿಯ ಸತ್ಯಾಗ್ರಹದ ವಿಷಯವನ್ನೇ ತೆಗೆದುಕೊಳ್ಳಿ, ಅಸ್ಪೃಶ್ಯರು ಓಡಾಡಬಾರದು ಎಂದು ಅಪ್ಪಣೆಯಿರುವ ರಸ್ತೆಯ ಮೇಲೆಯೇ ಮುಸಲ್ಮಾನರು, ಕ್ರಿಶ್ಚನ್ನರು ಹಾಗೂ ಇತರ ಹಿಂದೂಗಳಲ್ಲದ ಜನರು ಓಡಾಡುತಾರೆ. ಈ ಪಕ್ಷಪಾತಕ್ಕೆ ಕಾರಣ ಕೇಳಿದಾಗ, ಅಸ್ಪೃಶ್ಯರು ಹಿಂದೂಗಳು ಹಾಗಾಗಿ ಅವರು ಆ ರಸ್ತೆಯ ಮೇಲೆ ಓಡಾಡುವ ಹಾಗಿಲ್ಲ ಎಂದು ರಾಜಾರೋಷವಾಗಿ ಹೇಳಿದರು. ಹೀಗೆಂದು ಹಿಂದೂಗಳ ನಿಯಮವಿದ್ದರೆ ನಾವಿಂದು ಧರ್ಮದ ತ್ಯಾಗ ಮಾಡಿ ಧರ್ಮಾಂತರಗೊಂಡು ನಮ್ಮನ್ನು ಈ ಪರಿಸ್ಥಿಯಿಂದ ಯಾಕೆ ಬಿಡಿಸಿಕೊಳ್ಳಬಾರದು? ನನ್ನನ್ನು ಕೇಳುವಿರಾದರೆ, ನೀವಿಂದು ಧರ್ಮತ್ಯಾಗ ಮಾಡಿ ಬೇರೆ ಧರ್ಮವನ್ನು ಸ್ವೀಕರಿಸಬೇಕೆಂದಿದ್ದರೆ ಮೊಹಮ್ಮದೀಯ ಧರ್ಮವನ್ನೇ ಸ್ವೀಕರಿಸಿ, ನಮ್ಮನ್ನು ತಿರಸ್ಕರಿಸುವ ಹಿಂದೂಗಳು ಆಗ ನಮಗೆ ಬೆಲೆ ಕೊಟ್ಟಾರು. ನಾವೀಗ ಇರುವಂತೆ ಬಹಿಷ್ಕೃತರಾಗಿರದೆ ಒಂದು ದೊಡ್ಡ ಸಮಾಜದ ಘಟಕರಾಗಿದ್ದು ಸ್ವಲ್ಪ ಸಮಯದಲ್ಲೇ ನಮ್ಮ ಏಳಿಗೆ ಮಾಡಿಕೊಳ್ಳಬಹುದು.

ದೇಶಾಂತರ ಹಾಗೂ ಧರ್ಮಾಂತರವಲ್ಲದೆ ನಾಮಾಂತರ ಕೂಡ ಅಸ್ಪೃಶ್ಯತೆಯ ನಿವಾರಣೆಗಾಗಿ ಹೇಳಿರುವ ಒಂದು ಉಪಾಯ. ಇತ್ತೀಚೆಗೆ ಅಸ್ಪೃಶ್ಯರು ಆದಿಹಿಂದೂಗಳೆಂದು ಅನಿಸಿಕೊಳ್ಳಬೇಕು ಅನ್ನುವ ಉಪಾಯಗಳನ್ನು ಸೂಚಿಸಲಾಗುತ್ತಿದೆ. ನಮಗೆ ಯಾವ ಹೆಸರು ಸಮರ್ಪಕವಾಗಿರುತ್ತದೆ ಅನ್ನುವುದರ ಬಗ್ಗೆಯೇ ಈ ವಿಷಯದಲ್ಲಿ ಮತಭೇದಗಳಾಗುವ ಸಾಧ್ಯತೆಗಳಿದ್ದರೂ ಇದು ಅವರವರ ಆಸಕ್ತಿಗೆ ಬಿಟ್ಟದ್ದು. ಹಾಗಾಗಿ ಈ ಪ್ರಶ್ನೆಯನ್ನು ವಾದವಿವಾದ ಮಾಡಿ ಬಿಡಿಸಬಹುದು ಎಂದು ಹೇಳಲಾಗದು. ಹಾಗಿದ್ದರೂ ಹೆಸರಿನಲ್ಲೇನಿದೆ ಎಂದು ಸುಮ್ಮನಿದ್ದರಾದೀತೆ? ಹೆಸರಿನಲ್ಲೇ ಎಲ್ಲ ಅಡಗಿದೆ ಅಂದರೆ ಅತಿಶಯೋಕ್ತಿಯಾಗಲಾರದು. ಇದಕ್ಕೆ ಅನೇಕ ಕಾರಣಗಳಿವೆ.

ಅಸ್ಪೃಶ್ಯರಲ್ಲೂ ಜಾತಿಭೇದದ ವಿವಾದಗಳಾಗುವ ಕಾರಣಗಳು ಅಸ್ಪೃಶ್ಯ ಜಾತಿಯಲ್ಲಿರುವ ವಿವಿಧ ಉಪಜಾತಿಗಳು. ಈ ಉಪಜಾತಿಗಳಿರುವುದರಿಂದಲೇ ತಮ್ಮ ಉಪಜಾತಿಯ ಹೊರಗೆ ಹೆಣ್ಣು ಕೊಡುವುದೋ ಇಲ್ಲವೋ ಅವರ ಜೊತೆ ಕುಳಿತು ಊಟ ಮಾಡುವುದೋ ಇಲ್ಲವೋ ಅನ್ನುವಂತಹ ನಿಯಮಗಳನ್ನು ಪ್ರತಿಯೊಂದು ಜಾತಿ ಉಪಜಾತಿಯವರು ಪಾಲಿಸುತ್ತಾರೆ. ಜಾತಿಭೇದಗಳಿಂದಾಗಿಯೇ ಜನ ಹೆಣ್ಣು ಕೊಡುವುದರಲ್ಲಿ ಹಿಂದೆ ಮುಂದೆ ನೋಡುವುದಾದರೆ ಕಾಯಿದೆ ಹಿಂದೂ ಧರ್ಮದ ಯಾವುದೇ ಜಾತಿಯವರು ಹಿಂದೂ ಧರ್ಮದ ಯಾವುದೇ ಜಾತಿಯಲ್ಲಿ ಹೆಣ್ಣು ಕೊಡಬಹುದು ಹಾಗೂ ತೆಗೆದುಕೊಳ್ಳಬಹುದು ಅನ್ನುವ ಕಾನೂನು ತಂದರೆ ಜನ ಅದನ್ನು ಒಪ್ಪಿಕೊಳ್ಳಬೇಕು ಅನ್ನುವುದರಲ್ಲಿ ಬೇರೆ ಮಾತಿಲ್ಲ. ಹಾಗೆ ನೋಡಲು ಹೋದರೆ ಹೆಣ್ಣು ಕೊಡುವ ಹಾಗೂ ತರುವ ಬಗ್ಗೆ ಕಾಯಿದೆ ಮಂಜೂರಾಗಿ ೩ ವರ್ಷಗಳೆ ಕಳೆದಿವೆ. ಆದರೆ ಈ ಕಾಯಿದೆಯನ್ನು ಬಳಸಿಕೊಂಡವರು ಬೆರಳೆಣಿಕೆಯಷ್ಟೂ ಇಲ್ಲ. ಇದರರ್ಥ ಜಾತಿಭೇದ ಹಾಗೂ ಅಸ್ಪೃಶ್ಯತೆ ಜಾತಿ ಹಾಗೂ ಉಪಜಾತಿಗಳಲ್ಲಿಲ್ಲ ಭಾವನಾತ್ಮಕವಾಗಿದೆ. ಹಾಗಾಗಿ ಜಾತಿಭೇದವನ್ನು ತೊಡೆದುಹಾಕಬೇಕೆಂದರೆ ನಾವು ಜಾತಿ ಉಪಜಾತಿಗಳನ್ನು ದೂಷಿಸುವುದಕ್ಕಿಂತ ಒಪ್ಪಿಕೊಳ್ಳುವುದು ಒಳ್ಳೆಯದು. ಈ ಭಾವನೆಯನ್ನು ಹೇಗೆ ನಷ್ಟಮಾಡಬಹುದು? ಅನ್ನುವುದರ ಬಗ್ಗೆ ನಾನು ಸಾಕಷ್ಟು ಯೋಚಿಸಿದಾಗ ಅಸ್ಪೃಶ್ಯತೆ ಹಾಗೂ ಜಾತಿಭೇದಗಳನ್ನುವುದು ಕೇವಲ ಹೆಸರಿನಲ್ಲಡಗಿದೆ ಅನ್ನುವುದು ಗೊತ್ತಾಯಿತು. ವರಿಷ್ಠ

ಹಿಂದೂಗಳು ನಮ್ಮನ್ನು ತಿರಸ್ಕರಿಸುವುದು ಕೇವಲ ನಮ್ಮ ಹೆಸರಿನಿಂದ. ಮಾಂಗ್ ಅಂದಕೂಡಲೇ ಕೇಳುವವನ ಮನಸ್ಸಿನಲ್ಲಿ ತಿರಸ್ಕಾರ ಮೂಡುತ್ತದೆ. ಮರಾಠಾ ಅಂದ ಕೂಡಲೆ ಬೇರೆಯೇ ಭಾವನೆ ಬರುತ್ತದೆ. ಅದೇ ಬ್ರಾಹ್ಮಣರು ಅಂದ ಕೂಡಲೆ ಆದರದ ಭಾವನೆ ಹುಟ್ಟುತ್ತದೆ. ನಾನು ಯೋಚಿಸುತ್ತಿರುವ ರೀತಿ ತಪ್ಪು ಎಂದು ಯಾರೂ ಹೇಳಲಾರರು. ಇದರ ಉದಾಹರಣೆಯನ್ನು ಢೇಡ ಜನಾಂಗದವರು ಕೊಡಬಲ್ಲರು. ಗುಜರಾತಿನ ಢೇಡ ಜನಾಂಗದವರಿಗೆ ಅಸ್ಪೃಶ್ಯತೆ ಎಷ್ಟು ಪ್ರಖರವಾಗಿ ಕಾಡುತ್ತದೆ ಎಂದು ಮಾತಿನಲ್ಲಿ ಹೇಳುವುದು ಕಷ್ಟ. ಆದರೂ ಅವರು ಮುಂಬಯಿಗೆ ಬಂದು ದಕ್ಷಿಣದ ಮರಾಠರ ಜೊತೆ ವ್ಯವಹರಿಸಲು ಆರಂಭಿಸಿದ್ದಾರೆ. ಅವರ ನಡುವೆ ಮದುವೆ ಸಂಬಂಧಗಳು ಏರ್ಪಡುತ್ತವೆ ಹಾಗೂ ಪರಸ್ಪರರ ಮನೆಯಲ್ಲಿ ಊಟ ಉಪಚಾರಗಳೂ ನಡೆಯುತ್ತವೆ.

ಇದಕ್ಕೆ ವಿರುದ್ಧವಾಗಿ ಮಹಾರಾಷ್ಟ್ರದಿಂದ ಯಾವುದೇ ಅಸ್ಪೃಶ್ಯ ಗುಜರಾತಿಗೆ ಹೋದರೆ ದಕ್ಷಿಣದವನು ಎಂದು ಹೇಳಿ ಬ್ರಾಹ್ಮಣನ ಖಾನಾವಳಿಯಲ್ಲಿ ಊಟ ಮಾಡಿ ವಸತಿ ಮಾಡಬಹುದು ಅನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇತ್ತೀಚಿನ ಎರಡು ಮೂರು ವರ್ಷಗಳಲ್ಲಿ ಸಂಪೂರ್ಣ ಮದ್ರಾಸ್ ಹೊಟ್ಟೆ ಹೊರೆದುಕೊಳ್ಳಲು ಮುಂಬಯಿಗೆ ಬಂದು ಸೇರಿದೆ. ಇವರಲ್ಲಿ ಮದ್ರಾಸ್‌ನ ಅಸ್ಪೃಶ್ಯರನೇಕರಿದ್ದಾರೆ. ಇದೇ ಮದ್ರಾಸಿನ ಅಸ್ಪೃಶ್ಯರು ಹಿಂದೂಗಳ ವಿಶ್ರಾಂತಿಗೃಹಗಳಲ್ಲಿ ತಿಂದುಂಡು ಸುಖವಾಗಿದ್ದಾರೆ. ಯಾರೂ ಇದಕ್ಕೆ ನಿಷೇಧಿಸುವುದಿಲ್ಲ. ಒಂದೂರಿನ ಅಸ್ಪೃಶ್ಯ ಮತ್ತೊಂದೂರಿಗೆ ಹೋದರೆ ಆತನ ಅಸ್ಪೃಶ್ಯತೆ ತೊಳೆದುಹೋಗುತ್ತದೆಯೆ? ಇದಕ್ಕೆ ಕಾರಣ ಹುಡುಕಿದಾಗ ಒಂದೂರಿನ ಅಸ್ಪೃಶ್ಯತೆಯ ಪರಿಚಯ ಇನ್ನೊಂದೂರಿಗಿಲ್ಲ ಅನ್ನುವುದು ಗೊತ್ತಾಯಿತು. ಹಾಗಾಗಿ ಆತ ತನ್ನೂರು ಬಿಟ್ಟು ಇನ್ನೊಂದೂರಿಗೆ ಹೋದಾಗ ಅತನನ್ನು ಗುರುತಿಸುವವರು ಯಾರೂ ಇಲ್ಲದೆ ಆತ ಅಲ್ಲಿ ಅಸ್ಪೃಶ್ಯನಾಗುಳಿಯುವುದಿಲ್ಲ. ಇಂತಹ ಜಾತಿಯ ಹೆಸರಿನ ಒಬ್ಬ ಮನುಷ್ಯ ಅಸ್ಪೃಶ್ಯ, ಆತನ ಜಾತಿಗೆ ಆ ಹೆಸರಿಲ್ಲದಿದ್ದರೆ ಆತ ಅಸ್ಪೃಶ್ಯನಲ್ಲ ಅನ್ನುವುದು ಸಮಾಜದ ನಿಯಮವಾಗಿಬಿಟ್ಟಿದೆ. ಇಲ್ಲದಿದ್ದರೆ ಅಸ್ಪೃಶ್ಯ ಹಾಗೂ ಉಚ್ಚ ಜಾತಿಯ ಮನುಷ್ಯನ ರಚನೆ, ತ್ವಚೆ, ಬಣ್ಣದಲ್ಲಿ ಯಾವುದೇ ಬದಲಾವಣೆಯಿಲ್ಲ. ಸಿದ್ಧಿ ಜನರು ಯುರೋಪಿಯನ್ನರಿಂದ ಇಲ್ಲವೆ ಚೀನಿಯರನ್ನು ಜಾಪಾನಿಯರಿಂದ ಬೇರೆಯೇ ಕಾಣುವಂತೆ ಅಸ್ಪೃಶ್ಯರೇನು ಬ್ರಾಹ್ಮಣರಿಗಿಂತ ಬೇರೆ ಕಾಣುವುದಿಲ್ಲ. ಹೆಸರೊಂದೇ ಅಸ್ಪೃಶ್ಯರನ್ನು ಬ್ರಾಹ್ಮಣರಿಂದ ಬೇರೆ ಮಾಡುವ ಗುರುತು ಹಾಗಾಗಿ ನಾಮಾಂತರ ಮಾಡುವುದೇ ಅಸ್ಪೃಶ್ಯತೆಯನ್ನು ತೊಲಗಿಸುವ ಒಳ್ಳೆಯ ಉಪಾಯ ಎಂದು ನನಗನಿಸುತ್ತದೆ.

ನಾಮಾಂತರ ಮಾಡಿಕೊಂಡು ಹೆಸರು ಬದಲಿಸಿ ಎಂದು ಹೇಳುವವರ ಮಾತನ್ನು ನಾನು ಒಪ್ಪುತ್ತೇನೆ ಆದರೆ ಮುಂಬಯಿಯ ಅಸ್ಪೃಶ್ಯರು ಆದಿ-ಹಿಂದೂಗಳೆಂದು ಕರೆಯಿಸಿಕೊಳ್ಳುವುದರಲ್ಲೇನು ಅರ್ಥವಿದೆ ಅಥವಾ ಅದರಿಂದ ಅಸ್ಪೃಶ್ಯರಿಗೆ ಸಿಗುವ ಲಾಭವೇನು ಅನ್ನುವುದು ನನಗರ್ಥವಾಗಿಲ್ಲ. ಇದರಿಂದ ಅಸ್ಪೃಶ್ಯ ಜಾತಿಗೆ ಸೇರುವ ಎಲ್ಲರ ಏಕೀಕರಣವಾಗುವುದಾದರೆ ಅವರಿಗೆ ಈಗಿರುವ 'ಬಹಿಷ್ಕೃತರು' ಅನ್ನುವ ಹೆಸರೇ ಸಾಕಲ್ಲವೆ? ಇದಕ್ಕಿಂತ ಅರ್ಥಪೂರ್ಣ ಅಡ್ಡೆಸರು ಅವರಿಗೆ ಸಿಗಲಾರದು. ನಾವೀಗಾಗಲೆ ಹಿಂದೂಗಳೇ ಆ ಹಿಂದೂವಿನ ಹಿಂದೆ ಆದಿ ಅನ್ನುವ ಹೆಸರನ್ನು ಸೇರಿಸುವುದರಿಂದ ಅಸ್ಪೃಶ್ಯತೆ ತೊಲಗುತ್ತದೆ ಅಂದುಕೊಂಡರೆ ಅದು ಕೇವಲ ಭ್ರಮೆ. ಮಾಂಗ್‌ರಿಗೆ ಅವರ ಜಾತಿ ಕೇಳಿದರೆ ಮಾಂಗ್‌ರೆನ್ನಲಾಗದೆ ನಾಚಿಕೆಯಿಂದ ಅವರುಗಳು ನಾವು ಚೋಖಾಗಳು ಅನ್ನುತ್ತಾರೆ. ಚಮ್ಮಾರರು ತಮ್ಮನ್ನು ರೋಹಿದಾಸ್ ಎಂದು ಹೇಳಿಕೊಳ್ಳುತ್ತಾರೆ (ಚೋಖಾಮೇಳಾ ಹಾಗೂ ರೋಹಿದಾಸ್ ಇವರುಗಳು ಆಯಾ ಜಾತಿಯಲ್ಲಿ ಹುಟ್ಟಿ ದೈವತ್ವಕ್ಕೇರಿದ ಸಾಧುಗಳು, ವಿಠಲನ ಭಕ್ತಿ ಮಾಡಿ ಆತನಲ್ಲಿ ಲೀನರಾದವರು). ಮಾಂಗ್ ಅಥವಾ ಚಮ್ಮಾರ ಅನ್ನುವ

ಹೆಸರಿನಷ್ಟೇ ಚೋಖಾ ಹಾಗೂ ರೋಹಿದಾಸ್ ಅನ್ನುವ ಹೆಸರಿನಿಂದಲೂ ಅವರು ಅಸ್ಪೃಶ್ಯರಾಗೇ ಉಳಿಯುತ್ತಾರೆ. ಮದ್ರಾಸಿನ ಅಸ್ಪೃಶ್ಯರು ತಮ್ಮನ್ನು ಆದಿ-ದ್ರವಿಡರು ಎಂದು ಹೇಳಿಕೊಳ್ಳುತ್ತಾರೆ. ಅದರಿಂದ ಅವರ ಅಸ್ಪೃಶ್ಯತೆ ತೊಲಗಿರುವುದು ಕಾಣುವುದಿಲ್ಲ. ಹಾಗಾಗಿ ಅಸ್ಪೃಶ್ಯತೆ ಹಾಗೂ ಜಾತಿಭೇದಗಳೆರಡೂ ಹೆಸರಿನಲ್ಲಿ ಅಡಗಿದೆ ಅನ್ನುವುದು ಸತ್ಯ ಹಾಗೂ ಆ ಹೆಸರುಗಳನ್ನು ತೊಲಗಿಸದೆ ಅಸ್ಪೃಶ್ಯತೆ ತೊಲಗಲಾರದು. ಕೇವಲ ನಾವೇ ನಮ್ಮ ಹೆಸರುಗಳನ್ನು ಬದಲಿಸಿದರೆ ಆಗದು. ನಮ್ಮೊಂದಿಗೆ ಎಲ್ಲ ಜಾತಿಯವರು ತಮ್ಮ ಜಾತಿವಾಚಕ ಹೆಸರುಗಳನ್ನು ಬದಲಿಸಿಕೊಂಡು ಎಲ್ಲರೂ ಒಂದು ಸರ್ವಸಾಧಾರಣ ಹೆಸರನ್ನಿಟ್ಟುಕೊಳ್ಳಬೇಕಾಗುತ್ತದೆ. ಎಲ್ಲರೂ ಹಿಂದೂಗಳು ಅನಿಸಿಕೊಂಡು ಅವರವರ ಜಾತಿಯ ಹೆಸರನ್ನು ತೆಗೆದುಹಾಕಬೇಕು ಎಂದು ನನ್ನನಿಸಿಕೆ. ಯಾರೂ ತಮ್ಮನ್ನು ಬ್ರಾಹ್ಮಣರು, ಮರಾಠಾಗಳು, ಮಾಂಗ್, ಮಹರ್, ಚಮ್ಮಾರರು ಅಂದುಕೊಳ್ಳದೆ ಕೇವಲ ಹಿಂದೂಗಳು ಅಂದುಕೊಂಡರೆ ಸಮಾಜದಲ್ಲಿ ಒಗ್ಗಟ್ಟು ಏರ್ಪಡಬಹುದು. ಎಲ್ಲರೂ ಹಿಂದೂ ಅಂದಮೇಲೆ ಯಾರೂ ಯಾರನ್ನೂ ಹೀನರು ಅನ್ನದೆ, ಒಬ್ಬರನ್ನೊಬ್ಬರು ತಿರಸ್ಕರಿಸದೆ ಯಾರೂ ಶ್ರೇಷ್ಠರಾಗದೆ ಕನಿಷ್ಠರಾಗದೆ ಸಮಾನರಾಗಿ ಬದುಕುವ ಅವಕಾಶ ಎಲ್ಲರಿಗೂ ಸಿಗುತ್ತದೆ. ಅಲ್ಲದೆ ಪರಸ್ಪರ ಸಹಾನುಭೂತಿ ಕೂಡ ಜಾತಿವಾಚಕವಾಗುಳಿಯದೆ ಸಮಾಜದಲ್ಲಿರುವ ಅನ್ಯಾಯ, ಅಸಮಾನತೆ ತೊಲಗಲು ಸಹಾಯವಾಗುತ್ತದೆ.ಇಂದು ಮರಾಠಾ ಕೇವಲ ಮಾರಾಠಾ ಜಾತಿಯವನಿಗೇ ಬ್ರಾಹ್ಮಣರು ತಮ್ಮ ಜಾತಿಯವರಿಗಷ್ಟೇ ಸಹಾನುಭೂತಿ ತೋರಿಸುತ್ತಾರೆ. ಆದರೆ ಎಲ್ಲರೂ ಹಿಂದೂಗಳೇ ಅಂತಾದ ಮೇಲೆ ಸಹಾನುಭೂತಿಯ ಅಡ್ಡ ಯಾವ ಜಾತಿಯೂ ಬರುವುದಿಲ್ಲ. ಇಂದು ಮುಸಲ್ಮಾನರಲ್ಲಿರುವ ಒಗ್ಗಟ್ಟಿಗೆ ಇದೇ ಕಾರಣ. ಅವರಲ್ಲಿ ಮುಸಲ್ಮಾನನೆಂದರೆ ತಮ್ಮವನು ಅನ್ನುವ ಭಾವನೆಯಿದೆ. ಇದೇ ಭಾವನೆ ಹಿಂದೂಗಳಲ್ಲಿ ಬರಲು ಎಲ್ಲರೂ ಹಿಂದೂಗಳೆನಿಸಿಕೊಳ್ಳಬೇಕು ಎಂದು ನನಗನಿಸುತ್ತದೆ.

ಈ ಬದಲಾವಣೆ ಬಂದ ದಿನವೇ ಸುದಿನ, ಆದರೆ ಈ ಬದಲಾವಣೆ ತರಲು ಏನು ಮಾಡಬೇಕಾದೀತು? ಅನ್ನುವುದೇ ದೊಡ್ಡ ಪ್ರಶ್ನೆ.

ಕೆಲವೊಮ್ಮೆ ಕೆಲವೊಂದು ವಿಷಯಗಳಲ್ಲಿ ಕಾನೂನಿನ ಭಯವಿಲ್ಲದೆ ಸಾಮಾಜದಲ್ಲಿರುವ ಅನ್ಯಾಯ ತೊಡೆದುಹಾಕುವುದು ಅಸಾಧ್ಯ. ಹಾಗಾಗಿ ಸಾಮಾಜಿಕ ಹಾಗೂ ಧಾರ್ಮಿಕ ವಿಷಯಗಳಲ್ಲಿ ಕಾಯಿದೆ ಅನ್ವಯಿಸಿ ಸುಧಾರಣೆ ಮಾಡಬೇಕೆ ಇಲ್ಲವೆ ಅನ್ನುವ ಬಗ್ಗೆ ಸಾಕಷ್ಟು ಚರ್ಚೆಗಳಾಗಿ ಕಡೆಗೆ ಬ್ರಿಟಿಷ್ ಸರ್ಕಾರ ಜಾತಿ ಹಾಗೂ ರೂಢಿ ಪರಂಪರೆಗಳ ಮೇಲೆ ನಾವು ಕಾನೂನನ್ನು ಹೇರುವುದಿಲ್ಲ ಅನ್ನುವ ನಿರ್ಧಾರ ತೆಗೆದುಕೊಂಡಿದೆ. ಈ ದೃಷ್ಟಿಯಿಂದ ನೋಡಿದರೆ ಭಾರತಕ್ಕೆ ಸ್ವಾತಂತ್ರ್ಯ ಸಿಗಲಿದೆ ಅನ್ನುವುದು ಸಂತೋಷದ ವಿಷಯ ಎಂದು ನನಗನಿಸುತ್ತದೆ. ಏಕೆಂದರೆ **ಬ್ರಿಟಿಷರ ಕಾನೂನು ಇದ್ದರೂ ತೊಂದರೆ ಇಲ್ಲದಿದ್ದರೂ ತೊಂದರೆ ಅನ್ನೋಹಾಗಿದೆ.** ನಮ್ಮ ಜನರಿಗೆ ಸ್ವಾತಂತ್ರ್ಯದ ಬಗ್ಗೆ ಭಯವಿದ್ದರೆ ನಮಗೆ ಎಲ್ಲಿ ಈ ಸ್ವಾತಂತ್ರ್ಯ ಪೇಶ್ವೇ ರಾಜ್ಯಾಡಳಿತದಲ್ಲಿ ರೂಪಾಂತರಗೊಂಡೀತೋ ಅನ್ನುವ ಅಳುಕಿದೆ. ನಮ್ಮ ಅನಿಸಿಕೆ ಏನನ್ನು ಸೂಚಿಸುತ್ತದೆ? ಪೇಶ್ವೆ ಕಾಲದ ಸ್ವಾತಂತ್ರ್ಯ ಹಾಗೂ ಈಗ ಸಿಗಲಿರುವ ಸ್ವಾತಂತ್ರ್ಯದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಪೇಶ್ವೆ ಕಾಲದಲ್ಲಿ ಒಮ್ಮೆ ಒಬ್ಬನನ್ನು ರಾಜನನ್ನಾಗಿ ಮಾಡಿದರೆ ಅವರ ಮನೆತನದವರೇ ತಲತಲಾಂತರದವರೆಗೂ ರಾಜ್ಯವನ್ನಾಳುತ್ತಿದ್ದರೆ ಹೊರತು ಎಂದೂ ಪ್ರಜೆಯ ಸಮ್ಮತಿಯಿಂದ ರಾಜ್ಯವಾಳುತ್ತಿರಲಿಲ್ಲ. ಆದರೆ ಈಗ ಸಿಗಲಿರುವ ಸ್ವಾತಂತ್ರ್ಯದಲ್ಲಿ ಸರ್ಕಾರ ಪ್ರಜೆಯ ಸಮ್ಮತಿಯಿಂದ ನಡೆಸಲ್ಪಟ್ಟು ಯಾವುದೇ ರಾಜ ಶಾಶ್ವತನಾಗುವುದಿಲ್ಲ. ಈ ರೀತಿಯ ಸ್ವಾತಂತ್ರ್ಯದಲ್ಲಿ ಆಳುವವರು ಪ್ರಜೆಯ ಹಿತಾಸಕ್ತಿಯ ಬಗ್ಗೆ ನಿರಾಸಕ್ತರಾದರೆ ಬೇರೆ ಯಾವುದೇ ರೀತಿಯ ರಾಜಕಾರಣದಲ್ಲಿ ಪ್ರಜೆಯ ಏಳಿಗೆ ಸಾಧ್ಯವಿಲ್ಲ ಅನ್ನುವುದು ನಿರ್ವಿವಾದ. ಇನ್ನು ಮುಂದೆ ಪ್ರಜೆಯ

ಸಮ್ಮತಿಯಿಂದ ರಾಜ್ಯ ನಡೆಯುವಹಾಗಾದರೆ ಸ್ವಾತಂತ್ರ್ಯಕ್ಕೆ ಹೆದರದೆ ಇಂತಹ ಸ್ವಾತಂತ್ರ್ಯ ಪಡೆಯಲು ನಾವು ಸತತವಾಗಿ ಪ್ರಯತ್ನಿಸುತ್ತಿರಬೇಕು. ಸ್ವಾತಂತ್ರ್ಯ ಹೇಗಿರಬೇಕು ಅನ್ನುವುದರ ಬಗ್ಗೆ ನನ್ನ ಅಭಿಪ್ರಾಯವನ್ನು ನೀವು ಗಮನಿಸಬೇಕು.

ಸ್ವಾತಂತ್ರ್ಯದ ಬಗ್ಗೆ ಭಾರತದಲ್ಲಿಂದು ಆಗುತ್ತಿರುವ ಚರ್ಚೆಗಳಲ್ಲಿ ಬ್ರಿಟಿಷರ ಕೈಯಲ್ಲಿರುವ ಅಧಿಕಾರವನ್ನು ಸ್ವಲ್ಪಸ್ವಲ್ಪವೇ ಹಿಂತೆಗೆದುಕೊಳ್ಳುವುದೋ ಇಲ್ಲವೆ ಒಂದೇ ಸಲಕ್ಕೆ ಹಿಂತೆಗೆದುಕೊಳ್ಳುವುದೋ ಅನ್ನುವ ಚರ್ಚೆ ಭರದಿಂದ ಸಾಗುತ್ತಿದೆ. ಬ್ರಿಟಿಷರ ಕೈಯಿಂದ ನಾವು ಹಿಂತೆಗೆದುಕೊಳ್ಳುವ ದೇಶವನ್ನು ಅದರ ಕಾರುಭಾರವನ್ನು ಯಾರ ಸಮ್ಮತಿಯಿಂದ ನಡೆಸುವುದು ಅನ್ನುವುದನ್ನು ಮಾತ್ರ ಯಾರೂ ಯೋಚಿಸುತ್ತಿಲ್ಲ. ಒಂದು ಪಕ್ಷ ನಮಗೆ ಮರಳಿ ಸಿಕ್ಕಿರುವ ದೇಶವನ್ನು ಯಾವುದಾದರೂ ಒಂದೇ ವರ್ಗದ ಸಮ್ಮತಿಯಿಂದ ನಡೆಸಿದರೆ ಆಗಿನ ಪರಿಸ್ಥಿತಿ ಈಗಿನ ಪರಿಸ್ಥಿತಿಗಿಂತ ಹತ್ತರಷ್ಟು ಹೆಚ್ಚು ಕೆಟ್ಟದ್ದಾಗಿರುತ್ತದೆ.

ಹಾಗಾಗಿ ಕಾರುಭಾರವನ್ನು ಬ್ರಿಟಿಷರಿಂದ ಯಾವ ರೀತಿ ಹಿಂತೆಗೆದುಕೊಳ್ಳಬೇಕು ಅನ್ನುವ ಪ್ರಶ್ನೆಗಿಂತ ಸರ್ಕಾರ ಯಾರ ಸಮ್ಮತಿಯಿಂದ ನಡೆಸಬೇಕು ಅನ್ನುವ ಪ್ರಶ್ನೆ ಮುಖ್ಯವಾಗಿದೆ. ಆದರೂ ಅದೇನು ಅಷ್ಟು ದೊಡ್ಡ ವಿಷಯವಲ್ಲ ಎಂದು ನಮ್ಮ ಮುಖಂಡರು ಈ ವಿಷಯವನ್ನು ಕಡೆಗಾಣಿಸುವುದನ್ನು ನೋಡಿದರೆ ಇವರಿಗೆ ಲೋಕಾಪವಾದದ ಭಯವೇ ಇಲ್ಲ ಅನಿಸುತ್ತದೆ. ಆದರೆ ನಾವು ಮಾತ್ರ ಈ ಪ್ರಶ್ನೆಯನ್ನು ಬಿಡಿಸಲೇ ಬೇಕು. ಸ್ವಾತಂತ್ರ್ಯ ಸಿಕ್ಕೇ ಸಿಗುತ್ತದೆ ಎಂದಾದರೆ ಈ ಸ್ವತಂತ್ರ ದೇಶದಲ್ಲಿ ನಮಗೂ ಉಳಿದವರಂತೆ ಎಲ್ಲ ಹಕ್ಕುಗಳು ಬೇಕು ಹಾಗೂ ಆ ಅಧಿಕಾರ ಪಡೆಯಲು ಮತದಾನದಂತಹ ರಾಜಕೀಯ ಹಕ್ಕನ್ನು ನಾವು ಪಡೆದುಕೊಳ್ಳಬೇಕು. ಇತ್ತೀಚೆಗೆ ಮತದಾನದ ಹಕ್ಕುಗಳು ಎಷ್ಟು ಸಂಕುಚಿತವಾಗಿವೆಯೆಂದರೆ ಇಡೀ ಭಾರತದಲ್ಲಿ ನೂರರಲ್ಲಿ ಕೇವಲ ಇಬ್ಬರಿಗೇ ಆ ಹಕ್ಕು ಸಿಗುತ್ತದೆ. ಈ ಹಕ್ಕು ಪಡೆಯುವುದರಿಂದ ನಮಗೆ ಎರಡು ರೀತಿಯಿಂದ ಲಾಭವಾಗಲಿದೆ, ಒಂದೋ ಇಂದು ಕಾಯಿದೆ ಕೌನ್ಸಿಲ್‌ನಲ್ಲಿ ನಮ್ಮ ಮೇಲಾಗುತ್ತಿರುವ ಅನ್ಯಾಯ ಕೊನೆಗೊಳ್ಳುತ್ತದೆ. ಹಾಗೂ ಮತದಾನದ ಹಕ್ಕಿನಿಂದ ನಾವು ಆರಿಸಿ ತರುವ ಮುಖಂಡರ ಭವಿಷ್ಯ ನಮ್ಮ ಕೈಯಲ್ಲಿರುವುದರಿಂದ ನಮ್ಮ ಹಿತಗಳ ಬಗ್ಗೆ ಅವರು ಅಸಡ್ಡೆ ತೋರಿಸುವುದನ್ನು ತಪ್ಪಿಸಬಹುದು. ಇಷ್ಟೇ ಯಲ್ಲ. ಮತದಾನದ ಹಕ್ಕು ನಮಗೆ ಸಿಗುವುದರಿಂದ ನಮಗಾಗುವ ಇನ್ನೊಂದು ಮುಖ್ಯವಾದ ಲಾಭವೆಂದರೆ ವರ್ಣಾಶ್ರಮವೆಂಬ ಪದ್ಧತಿ ನೆಲಸಮವಾಗಲಿದೆ. ರಾಜಕೀಯ ಕ್ಷೇತ್ರದಲ್ಲಿ ಜಾತಿಭೇದ ಮುಗಿಸಿದಾಗ ಸಾಮಾಜಿಕ ಜೀವನದಲ್ಲೂ ಜಾತಿಭೇದ ಉಳಿಯುವುದು ಸಾಧ್ಯವಿಲ್ಲ. ಬ್ರಾಹ್ಮಣ ಉಮೇದುವಾರನಿಗೆ ಭಂಗಿಯ ಹತ್ತಿರ ವೋಟು ಕೇಳುವಂತಹ ಪರಿಸ್ಥಿತಿ ಬಂದಾಗ ವರ್ಣಾಶ್ರಮ ಮುಗಿಯಿತು ಅಂತಲೇ ಇಟ್ಟುಕೊಳ್ಳಿ. ಭಿಕಾರಿಯನ್ನು ರಾಜನನ್ನಾಗಿ ಮಾಡಬಹುದಾದ ಈ ಹಕ್ಕನ್ನು ನಾವು ಪಡೆದುಕೊಳ್ಳಲು ಪ್ರಯತ್ನಿಸಬೇಕು. ಕೆಲವು ವರ್ಷಗಳ ಹಿಂದೆ ಇಂಗ್ಲಂಡಿನಲ್ಲಿಯ ಕಾರ್ಮಿಕರ ಪರಿಸ್ಥಿತಿ ನಮ್ಮಂತೆಯೇ ದಯನೀಯವಾಗಿತ್ತು. ೧೮೬೦ರ ತನಕ ಲಿಬರಲ್ ಜನ ನಮ್ಮನ್ನು ಉದ್ಧಾರ ಮಾಡುತ್ತಾರೆ ಅನ್ನುವ ಭರವಸೆಯ ಮೇಲೆ ಅವರು ಬದುಕುತ್ತಿದ್ದರು ಆದರೆ ಬೇರೆಯವರ್ಯಾರೋ ಬಂದು ನಮ್ಮನ್ನು ಉದ್ಧಾರ ಮಾಡುತ್ತಾರೆ ಎಂದು ಕುಳಿತವರಿಗೆ ಅಧೋಗತಿ, ತಾನೇ ಎದ್ದು ಪ್ರಾಣ ಒತ್ತೆ ಇಟ್ಟು ಹೋರಾಡುವವನಿಗೆ ವಿಜಯಗತಿ ಅನ್ನುವುದನ್ನರಿತ ಕಾರ್ಮಿಕರು ತಾವೇ ತಮ್ಮ ಉದ್ಧಾರ ಮಾಡಿಕೊಳ್ಳಬೇಕು ಎಂದು ನಿರ್ಧರಿಸಿದಾಗ ಅವರು ಮೊದಲು ಮತದಾನದ ಹಕ್ಕು ಪಡೆಯಲು ಪ್ರಾಧಾನ್ಯತೆ ಕೊಟ್ಟರು ಹಾಗೂ ಆ ಹಕ್ಕು ಪಡೆಯಲು ತಮ್ಮೆಲ್ಲ ಶಕ್ತಿಯನ್ನು ವ್ಯಯಿಸಿದರು. ಕಡೆಗೂ ತಮ್ಮ ಕಾರ್ಯದಲ್ಲಿ ಯಶಸ್ವಿಯಾಗಿ ಇಂದು ಅವರು ಅಧಿಕಾರಾರೂಢರಾಗಿ ತಮಗೆ ಬೇಕಂತೆ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸುಧಾರಣೆ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಮತದಾನದ

ಹಕ್ಕು ಸಿಕ್ಕಿರುವುದೇ ಅವರ ಈ ಯಶಸ್ಸಿಗೆ ನಿಜವಾದ ಕಾರಣ. ನಾವೂ ಈ ರೀತಿ ಪ್ರಯತ್ನಿಸಿದರೆ ನಮ್ಮ ಉದ್ಧಾರವೂ ಖಂಡಿತವಾಗಿ ಸಾಧ್ಯ.

ಆದರೆ ನಮ್ಮ ಗುರಿ ಹಾಗೂ ಆ ಗುರಿಗೆ ಕಾರಣವಾದ ತತ್ವಗಳನ್ನು ಪ್ರತಿಪಕ್ಷದೆದುರು ಮಂಡಿಸುವುದರಿಂದ ಮಾತ್ರ ನಮ್ಮ ಕೆಲಸ ಮುಗಿಯುವುದಿಲ್ಲ ಅನ್ನುವುದನ್ನು ನಾವು ನೆನಪಿಡಬೇಕು. ಎಂತಹುದೇ ಪರಿಸ್ಥಿತಿ ಇರಲಿ ಆ ಪರಿಸ್ಥಿತಿ ಅನುಭವಿಸಿದ ಮನುಷ್ಯ ಮೊದಲು ತತ್ವಗಳ ಮೇಲೆಯೇ ವಾದವಿವಾದ ಮಾಡಲು ಶುರು ಮಾಡುತ್ತಾನೆ. ಇದರಲ್ಲಿ ತಪ್ಪೇನೂ ಇಲ್ಲ. ಆದರೆ ತತ್ವಗಳನ್ನೇ ಆಧಾರವಾಗಿಟ್ಟುಕೊಂಡು ನಡೆದರೆ ಕೆಲಸವಾಗುತ್ತದೆ ಎಂದು ಎಷ್ಟೋ ಜನರಿಗೆ ಅನಿಸುವುದು ಮಾತ್ರ ಕೇವಲ ಭ್ರಮೆ. ಕೇವಲ ತತ್ವಗಳನ್ನು ಮಂಡಿಸಿದರೆ ಸಾಲದು, ತತ್ವಗಳನ್ನು ಮಂಡಿಸಿದೊಡನೆ ಜಗತ್ತು ಬದಲಾಗುವುದಿಲ್ಲ. ಆ ತತ್ವಗಳನ್ನು ಪಾಲಿಸಿ ಯಶಸ್ವಿಯಾಗಲು ಯೋಗ್ಯವಾದ ಸಂಘಟನೆ ತಯಾರಿಸುವುದು ಅದಕ್ಕಿಂತ ಮುಖ್ಯವಾಗಿದೆ. ಎಲ್ಲಿಯ ತನಕ ಸಂಘಟನೆ ತಯಾರಾಗುವುದಿಲ್ಲವೋ ಅಲ್ಲಿಯತನಕ ನಮ್ಮ ತತ್ವಗಳಿಗಾಗಿ ನಾವು ಎಷ್ಟೇ ಹೋರಾಡಿದರೂ ಪ್ರತಿಪಕ್ಷಕ್ಕವು ಅರ್ಥವಾಗಲಾರವು. ಪ್ರತಿಪಕ್ಷ ನಮ್ಮ ತತ್ವಗಳನ್ನು ಒಪ್ಪಿಕೊಂಡರೂ ಅವು ಕಾರ್ಯರೂಪಕ್ಕಿಳಿಯದೆ ನಮ್ಮದು ಕೇವಲ ಅರಣ್ಯರೋದನವಾಗುವ ಸಾಧ್ಯತೆಗಳಿವೆ. ನಾವು ಯಶಸ್ವಿಯಾಗಲು ಜೀವನವೆಂಬ ರಥಕ್ಕೆ ಪ್ರಯತ್ನವೆಂಬ ಸಾರಥಿಯಿರುವುದು ಎಷ್ಟು ಅಗತ್ಯವೋ ನಮ್ಮ ತತ್ವಗಳು ಒಳ್ಳೆಯ ಪರಿಣಾಮ ಬೀರಲು ಸಂಘಟನೆಯೂ ಅಷ್ಟೇ ಮಹತ್ವದ್ದಾಗಿದೆ.

ನಾವು ಒಂದು ಭವ್ಯವಾದ ಸಂಘ ಶಕ್ತಿಯನ್ನು ನಿರ್ಮಿಸಲು ನಮ್ಮ ದಲಿತರ ಒಂದು ವ್ಯಾಪಕ ಸಂಸ್ಥೆಯನ್ನು ನಿರ್ಮಿಸುವುದು ಅಗತ್ಯವಾಗಿದೆ ಎಂದು ನನಗನಿಸುತ್ತದೆ. ಈ ಸಂಸ್ಥೆಯ ವತಿಯಿಂದ ನಾವು ಎರಡು ಕೆಲಸಗಳನ್ನು ಮಾಡಬಹುದು. ಒಂದೋ ಸಾರ್ವಜನಿಕ ಕೆಲಸಗಳಿಗಾಗಿ ಬೇಕಿರುವ ಹಣ ಒಟ್ಟು ಮಾಡುವುದು ಈ ಸಂಸ್ಥೆಯಿಂದ ಸಾಧ್ಯ. ಬಡವರ ಆಸೆಗಳು ಹುಟ್ಟಿದಲ್ಲೇ ಕಮರಿಕೊಳ್ಳುತ್ತವೆ ಅನ್ನುವ ಗಾದೆಯೊಂದು ಮರಾಠಿಯಲ್ಲಿದೆ. ನಮ್ಮಂತಹ ಬಡ ಸಮಾಜದಿಂದ ಇಂತಹ ದೊಡ್ಡ ಕೆಲಸ ಸಾಧ್ಯವೇ? ಅನ್ನುವುದು ಕೆಲವರ ಅನುಮಾನ. ಆದರೆ ಈ ಗಾದೆ ಕೇವಲ ವ್ಯಕ್ತಿಯೊಬ್ಬನಿಗೇ ಸಂಬಂಧಿಸಿದ್ದು ಸಮಾಜಕ್ಕೆ ಸಂಬಂಧಿಸಿದ್ದಲ್ಲ ಎಂದು ನನಗನಿಸುತ್ತದೆ. 'ಹನಿಹನಿ ಕೂಡಿದರೆ ಹಳ್ಳ ತೆನೆ ತೆನೆ ಕೂಡಿದರೆ ಬಳ್ಳ' ಅನ್ನುವ ಇನ್ನೊಂದು ಗಾದೆಯನ್ನೂ ಎಲ್ಲರೂ ಕೇಳಿರಬಹುದು, ನಮ್ಮದು ಬಡ ಸಮಾಜವಾದರೂ ಸಂಖ್ಯೆಯಲ್ಲಿ ನಾವು ದೊಡ್ಡವರು. ನಮ್ಮಲ್ಲಿಯ ೨೪ ಲಕ್ಷ ಜನರಲ್ಲಿ ಕೇವಲ ಎರಡು ಲಕ್ಷ ಜನರು ವರ್ಷಕ್ಕೆ ಎಂಟಾಣೆ ಕೊಟ್ಟು ವರ್ಷಕ್ಕೆ ಒಂದು ಲಕ್ಷ ರೂಪಾಯಿಯ ಫ಼ಂಡ್ ಜಮಾ ಮಾಡಿದರೆ ನಮ್ಮ ಪ್ರಗತಿಯಾಗಲು ಹೆಚ್ಚು ದಿನ ಬೇಕಾಗಲಾರದು. ಆದರೆ ಇದಕ್ಕಾಗಿ ಒಂದು ಮಧ್ಯವರ್ತಿ ಸಂಸ್ಥೆಯಿರುವುದು ಅಗತ್ಯವಾಗಿದೆ. ಇಂತಹ ಜವಾಬ್ದಾರಿಯುತ ಸಂಸ್ಥೆಯಿಂದ ಹಣ ಯಾವತ್ತೂ ಕಲೆ ಹಾಕುವ ಕೆಲಸದ ಜೊತೆಗೆ ನಮ್ಮ ಉದ್ದೇಶವನ್ನೂ ಜನರ ಗಮನಕ್ಕೆ ತರುವುದು ಸುಲಭವಾಗುತ್ತದೆ. ಸದ್ಯದ ನಮ್ಮ ಪರಿಸ್ಥಿತಿ ಹೇಗಿದೆಯೆಂದರೆ ಒಂದೆರಡು ಕೆಲಸ ಮಾಡಿದವರಿಗೆ ನಾವೂ ಪುಢಾರಿಗಳು ಅನಿಸಲು ಶುರುವಾಗಿ ನಮ್ಮ ಹೆಸರೂ ಎಲ್ಲರೆದುರು ಬರಬೇಕು ಅನಿಸಲು ಶುರುವಾಗಿಬಿಟ್ಟಿದೆ. ಅಷ್ಟೇಯಲ್ಲ ಸಂಸ್ಥೆಯ ಪರವಾಗಿ ಕೆಲಸ ಮಾಡಿದರೆ ನಮ್ಮ ಹೆಸರು ಯಾರಿಗೂ ಗೊತ್ತಾಗುವುದಿಲ್ಲ ಅನ್ನುವ ಕಾರಣ ಸಂಸ್ಥೆಯ ಪರವಾಗಿ ಕೆಲಸ ಮಾಡಲು ಯಾರೂ ಮುಂದೆ ಬರುವುದಿಲ್ಲ, ಒಟ್ಟಾರೆ ನಮ್ಮದು ಗೊಂದಲದ ನಗರವಾಗಿಬಿಟ್ಟಿದೆ. ನೋಡಿದವರೆಲ್ಲ ತಮ್ಮ ಹೆಸರು ಜನರೆದುರು ಬರಲು ಯಾವುದಾದರೂ ಸಾಕ್ಷಿಯನ್ನು ತೋರಿಸುತ್ತ ಓಡಾಡುತ್ತಿರುತ್ತಾರೆ. ಎರಡನೆಯದಾಗಿ ನಾವು ಈ ದೇಶದ ವಾಸಿಗಳು, ನಮ್ಮ ಮೇಲೆ ಸಾಕಷ್ಟು ಅನ್ಯಾಯಗಳಾಗುತ್ತಿವೆ, ನಾವೇನು ಅಲ್ಪಸಂಖ್ಯಾಕರಲ್ಲ

ಆದರೂ ಸರ್ಕಾರ ನಮ್ಮ ಯಾವುದೇ ಮಾತು ಕೇಳುತ್ತಿಲ್ಲ. ಅವರು ಮನಸ್ಸು ಮಾಡಿದರೆ ನಮ್ಮ ಬಗ್ಗೆ ಕೇವಲ ಕನಿಕರಪಟ್ಟು ಒಂದು ತುಂಡು ರೊಟ್ಟಿ ನಮ್ಮೆದುರು ಬಿಸಾಕಿಯಾರು. ನಮ್ಮ ಹಕ್ಕುಗಳನ್ನೂ ಕೇಳಲು ನಾವು ಲಾಯಕ್ಕಿಲ್ಲದವರಾಗಿಬಿಟ್ಟಿದ್ದೇವೆ. ನಮ್ಮನ್ನು ಇಷ್ಟು ನಿಕೃಷ್ಟರನ್ನಾಗಿ ಮಾಡಿ ಆ ಮುಸಲ್ಮಾನರನ್ನು ಎಷ್ಟು ಪ್ರೀತಿಸುತ್ತಿದ್ದಾರೆ! ಇದಕ್ಕೆ ಕಾರಣ ಅವರ ಸಂಘಶಕ್ತಿ ಹಾಗೂ ಅವರ ಸಂಸ್ಥೆಗಳು! ನಮ್ಮಲ್ಲೂ ಇಂತಹ ಸಂಸ್ಥೆಗಳಿದ್ದಿದ್ದರೆ ಅದು ನಮ್ಮಲ್ಲಿಯ ಕೆಲಸಕ್ಕೆ ಬಾರದ ಪುಢಾರಿಗಳನ್ನು ಕಿತ್ತೊಗೆದು ನಮ್ಮ ಜನರನ್ನು ಒಟ್ಟುಗೂಡಿಸಿ ನಮಗಾಗುತ್ತಿರುವ ಅನ್ಯಾಯವನ್ನು ನಿಲ್ಲಿಸಲು ಸಾಧ್ಯವಾಗುತ್ತಿತ್ತು.

ಕೇವಲ ಅಸ್ಪೃಶ್ಯತೆಯ ವಿರುದ್ಧ ತಕರಾರು ಮಾಡದೆ ಈ ಸಂಸ್ಥೆಯು ಹಣ ಕೂಡಿಟ್ಟು ನಮ್ಮ ದಲಿತರ ಆಂತರಿಕ ಸುಧಾರಣೆ ಮಾಡಲು ಆರಂಭಿಸಬೇಕು. ಇಂದು ಹಿಂದೂ ಸಮಾಜದಲ್ಲಿ ಜಾತಿಭೇದದ ಜೊತೆಗೆ ಗುಣಭೇದವೂ ಇದೆ, ಜಾತಿಭೇದ ಕೊನೆಗೊಂಡರೂ ಗುಣಭೇದ ಹಾಗೇ ಉಳಿಯಲಿದೆ. ಇಂದು ಎಲ್ಲ ಅಸ್ಪೃಶ್ಯರನ್ನು ಬ್ರಾಹ್ಮಣರೆಂದು ಕರೆದರೂ ಇವರಲ್ಲೊಬ್ಬರಿಗೂ ನಾ. ಪರಾಂಜಪೆಯವರ ಜೊತೆಗೆ ಕುಳಿತುಕೊಳ್ಳುವ ಯೋಗ್ಯತೆ ಇಲ್ಲ ಏಕೆಂದರೆ ಜಾತಿಭೇದ ಕೊನೆಗೊಂಡರೂ ಗುಣಭೇದ ಹಾಗೇ ಇದೆ. ಎಲ್ಲ ಜಾತಿಗಳಲ್ಲಿ ಈ ಗುಣಭೇದಗಳಿರದಿದ್ದರೆ ಜಾತಿಭೇದವೂ ಇಲ್ಲಿಯವರೆಗೆ ಕೊನೆಗಾಣುತ್ತಿತ್ತು. ಎಲ್ಲ ಜಾತಿಯ ಜನ ಒಂದೇ ಗುಣದವರಾಗಿದ್ದಿದ್ದರೆ ಒಂದೇ ಜಾತಿಯ ವರ್ಚಸ್ಸನ್ನವರು ಒಪ್ಪಿಕೊಳ್ಳುತ್ತಿರಲಿಲ್ಲ. ಗುಣಭೇದ ಇರದೆ ಇದ್ದಿದ್ದರೆ ಜಾತಿಭೇದ ಯಾವತ್ತೋ ನಷ್ಟವಾಗುತ್ತಿತ್ತು ಎಂದು ನನಗೆ ಎಷ್ಟೋ ಸಲ ಅನಿಸಿದ್ದಿದೆ. ಉಳಿದೆಲ್ಲರು ನಮ್ಮ ಜಾತಿಗಿಂತ ಶ್ರೇಷ್ಠರಾಗಿರುವಂತೆ ವ್ಯಾವಹಾರಿಕ ಗುಣಗಳಿಂದಲೂ ಶ್ರೇಷ್ಠರಾಗಿದ್ದಾರೆ, ಹಾಗಾಗಿ ನಾವು ನಮ್ಮ ಜನರಲ್ಲಿ ವ್ಯಾವಹಾರಿಕ ಗುಣಗಳನ್ನು ಬೆಳೆಸಲು ಪ್ರಯತ್ನಿಸುತ್ತಿರಬೇಕು. ನಮ್ಮಲ್ಲಿಯ ಕೆಲವು ಜನರಿಗೆ ಜಾತಿಭೇದದಿಂದ ದಂಗೆಗಳಾಗುತ್ತಿಲ್ಲ ಹಾಗೂ ನಮ್ಮ ಮೇಲಾಗುತ್ತಿರುವ ಅನ್ಯಾಯ ದೂರ ಮಾಡಲು ಅವರು ಪ್ರಯತ್ನಿಸುತ್ತಿಲ್ಲಾ ಅನ್ನುವುದರ ಬಗ್ಗೆ ಅಶ್ಚರ್ಯವಾಗುತ್ತದೆ. ಆದರೆ ಅದರಲ್ಲಿ ಆಶ್ಚರ್ಯಪಡುವಂತಹದ್ದೇನಿಲ್ಲ. ನಿಮ್ಮಿಂದ ಇದೆಲ್ಲ ಸಾಧ್ಯವಿಲ್ಲ ಅನ್ನುವ ಆವೇಶದ ಮಾತುಗಳನ್ನು ಕೇಳಿ ಸಿಟ್ಟು ಬರುತ್ತಿಲ್ಲವೆಂದರೆ ಅವರ ಮೇಲಾಗುತ್ತಿರುವ ಅನ್ಯಾಯದ ಬಗ್ಗೆ ಅವರಿಗೆ ಅರಿವಿಲ್ಲ. ಒಂದು ಹುದ್ದೆಗಾಗಿ ಒಬ್ಬ ಮನುಷ್ಯ ಯೋಗ್ಯನಾಗಿದ್ದರೂ ಜಾತಿಭೇದ ಅವನು ಆ ಹುದೆ ಪಡೆಯುವುದಕ್ಕೆ ಅಡ್ಡ ಬರುತ್ತಿದೆ ಅನ್ನುವುದವನಿಗೆ ಅರ್ಥವಾದರೆ ಆತ ತಂತಾನೇ ನಮ್ಮ ಚಳುವಳಿಯ ದಾರಿ ಹಿಡಿಯುತ್ತಾನೆ ಹಾಗೂ ಅದನ್ನು ಪುರಸ್ಕರಿಸುತ್ತಾನೆ. ಆದರೆ ಆ ಹುದ್ದೆಗೆ ಯೋಗ್ಯತೆಯಿರದವನಿಗೆ ಜಾತಿಭೇದದ ಉಗ್ರ ಸ್ವರೂಪ ಹೇಗೆ ಅರ್ಥವಾದೀತು? ಜಾತಿಭೇದ ಇದ್ದರೂ ತೊಲಗಿದರೂ ತನ್ನ ಸ್ಥಾನವನ್ನದು ಬದಲಿಸಲಾರದು ಹಾಗಾಗಿ ನಾವು ನಮ್ಮ ಜನರ ಯೋಗ್ಯತೆಯನ್ನು ಹೆಚ್ಚಿಸುವಲ್ಲಿ ಪ್ರಯತ್ನಿಸಬೇಕು, ಗುಣಗಳಲ್ಲಿ ಸಮಾನತೆ ಬಂದರೆ ಜಾತಿಭೇದಗಳಲ್ಲಿರುವ ಅಸ್ಪೃಶ್ಯತೆ ಹೆಚ್ಚು ದಿನ ಉಳಿಯಲಾರದು.

ಈ ರೀತಿ ನಮ್ಮ ಸಮಾಜ ಸಿದ್ಧವಾಗಬೇಕು. ನಮಗೆ ಬೇಕಿರುವಂತಹ ಸಮಾಜಿಕ ಇಲ್ಲವೆ ರಾಜಕೀಯ ಪರಿಸ್ಥಿತಿಯನ್ನು ನಾವು ಸ್ವಲ್ಪ ಸಮಯದಲ್ಲೇ ಸುಧಾರಿಸಬಹುದು, ನನ್ನ ಮಾತು ನಿಮಗೆ ಮಕ್ಕಳಾಟ ಅನಿಸಬಹುದು ಆದರೆ ಇದರಲ್ಲಿ ಸಾಕಷ್ಟು ಅರ್ಥವಿದೆ ಎಂದು ನನಗೆ ಗೊತ್ತು.

ದೇಶಕ್ಕಾಗಿ ಇದು ಸಂಕಟದ ಸಮಯ, ೧೯೧೭ರಲ್ಲಿ ಸ್ವಾತಂತ್ರ್ಯದ ಅಡಿಪಾಯ ಹಾಕಿದಾಗಿನಿಂದ ದೇಶದಲ್ಲಿ ಮೂರು ಗುಂಪುಗಳಾಗಿವೆ. ೧. ಯುರೋಪಿಯನ್‌ರ ಗುಂಪು, ೨. ಮುಸಲ್ಮಾನರ ಗುಂಪು, ೩.ಹಿಂದೂಗಳ ಗುಂಪು. ೧೯೧೭ರ ಮೊದಲು ಹಿಂದೂಗಳಿಗೂ ಮುಸಲ್ಮಾನರಿಗೂ ಸ್ವಲ್ಪವೂ ಆಗಿಬರುತ್ತಿರಲಿಲ್ಲ, ಆದರೀಗ ಇಬ್ಬರ ನಡುವೆ ಅದೆಷ್ಟು ಗಾಢವಾದ ಗೆಳೆತನವಿದೆಯೆಂದರೆ ಇಬ್ಬರೂ ಒಟ್ಟಿಗೆ

ಸೇರಿ ಸ್ವಾತಂತ್ರ್ಯದ ಮೊದಲನೆಯ ಕಂತನ್ನು ಬ್ರಿಟಿಷರಿಂದ ಪಡೆದುಕೊಂಡಿದ್ದಾರೆ. ಆದರೆ ಪಾಲು ಮಾಡುವಾಗ ಸ್ವಂತ ಅಣ್ಣತಮ್ಮಂದಿರಲ್ಲೂ ದೊಡ್ಡ ಜಗಳಗಳಾಗಿವೆ ಅನ್ನುವುದು ನೆನಪಿರಬೇಕು. ಸ್ವಾತಂತ್ರ್ಯ ಕೇಳುವುದು ದೊಡ್ಡ ಮಾತಲ್ಲ, ಒಂದು ಪಕ್ಷ ಸ್ವಾತಂತ್ರ್ಯ ಸಿಕ್ಕರೆ ದೊಡ್ಡ ಪಾಲು ಯಾರ ಪಕ್ಷಕ್ಕೆ ಬರುತ್ತದೆ ಅನ್ನುವ ದೊಡ್ಡ ಪ್ರಶ್ನೆ ಎಲ್ಲರೆದುರು ಇದೆ. ಯಾರ ಜನಸಂಖ್ಯೆ ಹೆಚ್ಚಿದೆಯೋ ಅವರಿಗೇ ಹೆಚ್ಚಿನ ಪಾಲು ಸಿಗುತ್ತದೆ ಅನ್ನುವುದೇ ಈ ಪ್ರಶ್ನೆಗಿರುವ ಉತ್ತರ. ಮುಸಲ್ಮಾನರಿಗೆ ತಮ್ಮ ಸಂಖ್ಯೆ ಹೆಚ್ಚಿರಬೇಕು ಅನಿಸುವುದು ಸಹಜ, ಹಾಗೆಯೇ ಹಿಂದೂಗಳಿಗೆ ತಮ್ಮಲ್ಲಿರುವ ಸಂಖ್ಯೆ ಕಡಿಮೆಯಾಗಬಾರದು ಎಂದೆನಿಸುವುದೂ ಅಷ್ಟೆ ಸಹಜ. ಇಬ್ಬರಿಗೂ ನಮ್ಮ ಮೇಲೆ ಕಣ್ಣಿದೆ. ನಾವಿಲ್ಲದೆ ಮುಸಲ್ಮಾನರಿಗೆ ಗೆಲುವಿಲ್ಲ, ನಾವಿಲ್ಲದೆ ಹಿಂದೂಗಳಿಗೆ ಗತಿಯಿಲ್ಲ. ನಾವಿಂದು ಹಿಂದೂಗಳಾಗಿ ಉಳಿದರೆ ಮಾತ್ರ ಈ ಆರ್ಯಧರ್ಮದ ಸಂಸ್ಕೃತಿ ಈ ದೇಶದಲ್ಲಿ ನೆಲೆಸಲಿದೆ. ಒಂದು ಪಕ್ಷ ನಾವು ಮುಸಲ್ಮಾನರಾಗಿ ಪರಿವರ್ತಿತರಾದರೆ ಈ ದೇಶ ಯವನ ಸಂಸ್ಕೃತಿಯ ಪ್ರಾಬಲ್ಯ ಮೆರೆಯಲಿದೆ ಅನ್ನುವುದು ಹಿಂದೂ ಹಾಗೂ ಮುಸಲ್ಮಾನರಿಬ್ಬರಿಗೂ ಚನ್ನಾಗಿ ಗೊತ್ತು. ಹಾಗಿಲ್ಲದಿದ್ದರೆ ವೈಕೊಮ್‌ನಲ್ಲಿ ಬ್ರಾಹ್ಮಣರು ಶೂದ್ರರಿಗಾಗಿ ಸತ್ಯಾಗ್ರಹ ಮಾಡಲು ಸಿದ್ಧರಾಗುತ್ತಿರಲಿಲ್ಲ ಇಲ್ಲವೆ ಮುಸಲ್ಮಾನರು ಒಂದು ಕೋಟಿ ರೂಪಾಯಿ ಖರ್ಚು ಮಾಡಿ ನಮಗೆ ತಮ್ಮ ದೀಕ್ಷೆ ಕೊಡಲು ಸಿದ್ಧರಾಗುತ್ತಿರಲಿಲ್ಲ. ನಾವಿಂದು ತೀರಾ ಕೆಳದರ್ಜೆಯಲ್ಲಿದ್ದರೂ ಈ ಹಿಂದೂ ಮುಸಲ್ಮಾನ ಸಂಸ್ಕೃತಿಯ ಸಂಗ್ರಾಮದಲ್ಲಿ ನಮ್ಮ ಕುಮ್ಮಕ್ಕು ನಮ್ಮ ಸಂಖ್ಯೆಗಿಂತಲೂ ಹೆಚ್ಚಿದೆ ಹಾಗೂ ಮಹತ್ವದ್ದಾಗಿದೆ ಹಾಗಾಗಿ ನಾವು ನಮ್ಮ ಸಂಘಶಕ್ತಿಯನ್ನು ಹುಟ್ಟುಹಾಕಿದರೆ ನಾವು ಕೇಳಿದ್ದೆಲ್ಲ ನಮಗೆ ಸಿಗುವ ಸಾಧ್ಯತೆಗಳಿವೆ. ಅಸ್ಪೃಶ್ಯತೆಯನ್ನು ತೊಲಗಿಸಿ ಎಂದು ಹೇಳಿದಾಗ ಈ ಇಪ್ಪತ್ತನೆಯ ಶತಮಾನದಲ್ಲೂ ಧೂಳು ತಿನ್ನುತ್ತ ಬಿದ್ದಿರುವ ಪುರಾಣ ನೋಡಿ ಅದರಲ್ಲಿ ಬರೆದಂತೆ ಮಾಡುತ್ತೇವೆ ಅನ್ನುವ ಹಿಂದೂಗಳು ಈ ಯುದ್ಧ ಗೆಲ್ಲಲು ಪುರಾಣಗಳನ್ನು ಸುಟ್ಟು ನಮ್ಮನ್ನು ತಮ್ಮಲ್ಲಿ ಸೇರಿಸಿಕೊಳ್ಳುತ್ತಾರೆ ಅನ್ನುವುದರಲ್ಲಿ ಅನುಮಾನವಿಲ್ಲ. ಸಮಯವೇ ಹಾಗಿದೆ, ಅವರದನ್ನು ಮಾಡಲೇ ಬೇಕಿದೆ. ಬೇರೆ ಉಪಾಯವಿಲ್ಲ.

ನಮ್ಮ ಸಮಾಜವಿಂದು ಎಲ್ಲ ರೀತಿಯಿಂದಲೂ ಹಿಂದುಳಿದಿದೆ. ಆರ್ಥಿಕವಾಗಿಯೂ ಹಿಂದುಳಿದಿದೆ. ಮನೋಧೈರ್ಯವಿಲ್ಲದೆ ಹಿಂದುಳಿದಿದೆ. ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಅಸಮಾನತೆ ಹಾಗೂ ಅನ್ಯಾಯದಿಂದಾಗಿ ಬಹಳ ತೊಂದರೆ ಅನುಭವಿಸುತ್ತಿರುವವರಿಗೆ, ನಿಗೂಢವಾದ ಅಜ್ಞಾನ ಸುತ್ತಿಕೊಂಡಿರುವವರಿಗೆ, ವಿಪತ್ತುಗಳಿಂದುಂಟಾಗುವ ಯಾತನೆ ಅನುಭವಿಸುತ್ತಿರುವವರಿಗೆ ಹಾಗೂ ಆ ಯಾತನೆಗೆ ಪರಿಹಾರವೇನು ಅನ್ನುವುದು ಕಾಣದಾಗಿರುವವರ ಗತಿಯೇನಾಗಬಹುದು ಅನ್ನುವುದು ಹೇಳಲಸಾಧ್ಯ. ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವವರು, ಕರ್ತವ್ಯಬುದ್ಧಿ, ಪರೋಪಕಾರ ಬುದ್ಧಿಯಿರುವವರು, ಸಮಾಜ ಸುಧಾರಣೆಗಾಗಿ ಹಗಲು ರಾತ್ರಿ ಶ್ರಮಪಡಬೇಕಾಗಿದೆ. ಇದೆಲ್ಲವನ್ನೂ ಅರ್ಥಮಾಡಿಕೊಂಡೂ ಇಂತಹ ಜನ ಸುಮ್ಮನಿದ್ದರೆ ದುರಂತ ಸ್ಥಿತಿಯಲ್ಲಿರುವ ತಮ್ಮ ಬಾಂಧವರನ್ನು ಇನ್ನೂ ದುರಂತ ಸ್ಥಿತಿಗೆ ತಳ್ಳುವ ಪಾಪ ಇವರಿಗೆ ತಟ್ಟಲಿದೆ. ಹಾಗಾಗಿ ಸುಶಿಕ್ಷಿತ ಬಾಂಧವರೆ! ನಿಮ್ಮ ಬಾಂಧವರಿಂದ ಹಾಗೂ ಉಳಿದ ಜನರಿಂದ ಒಳ್ಳೆಯವರೆನಿಸಿಕೊಳ್ಳಬೇಕಾದರೆ ನಿಮ್ಮ ಇಂದಿನ ಪರಿಸ್ಥಿತಿಯನ್ನು ಸುಧಾರಿಸಿ ನಿಮ್ಮ ಬಾಂಧವರ ಹಾಗೂ ಮಕ್ಕಳ ಪರಿಸ್ಥಿತಿ ಇನ್ನೂ ಹದಗೆಡದಿರಲು ಹಾಗೂ ನಮ್ಮ ಜನರ ಬುದ್ಧಿ, ಕೀರ್ತಿ ಹಾಗೂ ಪರಿಸ್ಥಿಯನ್ನು ಹದಗೆಡಿಸಿರುವ ದುರಾಚಾರರ ನಿರ್ಮೂಲನೆ ಮಾಡುವುದು ನಿಮ್ಮ ಕರ್ತವ್ಯವಾಗಿದೆ ಹಾಗೂ ನೀವು ಆ ಕರ್ತವ್ಯವನ್ನು ನಿಭಾಯಿಸಲೇಬೇಕು ಎಂದು ಹೇಳುತ್ತ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

೫.

# ಹೋರಾಟದಿಂದ ಮಾತ್ರ ಮನುಷ್ಯತ್ವ ಮತ್ತೆ ಸಿಕ್ಕೀತು

ಬಹಿಷ್ಕೃತ ಹಿತಕಾರಿಣಿ ಸಭೆಯ ವತಿಯಿಂದ ಜನಜಾಗೃತಿಗಾಗಿ ಜಿಲ್ಲೆಯಲ್ಲೊಂದು ಸಭೆಯನ್ನು ಆಯೋಜಿಸುವ ಕಾರ್ಯಕ್ರಮವನ್ನು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಹಮ್ಮಿಕೊಂಡಿದ್ದರು. ಬೆಳಗಾಂವ್ ಜಿಲ್ಲೆಯ ನಿಪ್ಪಾಣಿಯಲ್ಲಿ 'ಮುಂಬಯಿ ಇಲಾಖಾ ಪ್ರಾಂತೀಯ ಬಹಿಷ್ಕೃತ ಪರಿಷತ್ತು ಮೂರನೆಯ ಅಧಿವೇಶನ' ಅನ್ನುವ ಸಭೆ ಬಾಬಾಸಾಹೇಬರ ಅಧ್ಯಕ್ಷತೆಯಲ್ಲಿ ದಿ. ೧೦-೧೧ ನೆಯ ಏಪ್ರಿಲ್ ೧೯೨೫ ರಂದು ಆಯೋಜಿಸಲಾಯಿತು. ಅಂದು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಮಾತನಾಡುತ್ತ,

ಈ ದೇಶದಲ್ಲಾಗುತ್ತಿರುವ ವಿವಿಧ ಘಟನೆಗಳಲ್ಲಿ ನಮಗೆಲ್ಲ ಅತ್ಯಂತ ಹತ್ತಿರದ ಘಟನೆಯೆಂದರೆ ವೈಕಮ್‌ನಲ್ಲಿಯ ಸತ್ಯಾಗ್ರಹ ಹೌದು. ಹಾಗಾಗಿಯೇ ವೈಕಮ್ ಸತ್ಯಾಗ್ರಹದಿಂದ ನನಗೆ ಹೊಳೆದಿರುವ ವಿಚಾರಗಳನ್ನು ನಾನು ನಿಮ್ಮ ಮುಂದಿಡುತ್ತಿದ್ದೇನೆ.

ವೈಕಮ್‌ನಲ್ಲಿ ಯಾವ ಚರ್ಚೆಗಳಾಗುತ್ತಿವೆ ಅನ್ನುವುದು ಸಾಕಷ್ಟು ಜನರಿಗೆ ಗೊತ್ತಿದೆ. ಎಲ್ಲ ಜನರು, ಪ್ರಾಣಿಗಳು ಓಡಾಡುವಂತಹ ರಸ್ತೆಗಳ ಮೇಲೆ ನಾವೂ ಓಡಾಡುವಂತಾಗಬೇಕು ಅನ್ನುವ ಹಠ ವೈಕಮ್‌ನ ದಲಿತರು ಹಿಡಿದಿದ್ದಾರೆ.

ಈ ಸತ್ಯಾಗ್ರಹದಲ್ಲಾದ ಬದಲಾವಣೆಗಳ ಬಗ್ಗೆ ನನಗಿಲ್ಲಿ ಮಾತನಾಡುವುದಿಲ್ಲ, ಅದು ನಮಗೆ ಸಂಬಂಧಪಟ್ಟಿದ್ದೂ ಅಲ್ಲ. ಆದರೆ ಈ ಸತ್ಯಾಗ್ರಹ ಒಂದು ವರ್ಷಕ್ಕೂ ಮೇಲ್ಪಟ್ಟು ನಡೆದು ಕಡೆಗೆ ವಿಫಲವಾದದ್ದೊಂದೇ ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಸತ್ಯಾಗ್ರಹದಿಂದ ಕೆಲವು ರಾಜಕೀಯ ನೇತಾರರ ದೃಷ್ಟಿಕೋನ ಬದಲಾಗಿದೆ ಅನ್ನುವ ಮಾತು ಮಾತ್ರ ನಿಜ. ಏಕೆಂದರೆ ಮೊದಲು ರಾಜಕೀಯ ಆಮೇಲೆ ಸಾಮಾಜಿಕ ಪ್ರಶ್ನೆಗಳು ಅನ್ನುವ ಮೀಮಾಂಸೆ ಹುಚ್ಚುತನದ್ದು ಅನ್ನುವುದೀಗ ಸಿದ್ಧವಾಗಿದೆ. ಇಷ್ಟು ದಿನ ಕೇವಲ ರಾಜಕೀಯ ಮಾಡಿದ ಮೇಲೆ ರಾಜಕೀಯದ ಗುರಿಯ ಅಡ್ಡ ಏನಾದರೂ ಬರುತ್ತಿದ್ದರೆ ಅದು ಸಾಮಾಜಿಕ ವಿಷಯ ಮಾತ್ರ. ಸಾಮಾಜಿಕ ಪ್ರಶ್ನೆ ಎಷ್ಟು ಮಹತ್ವದ್ದಾಗಿಯೆಂದರೆ ಅದನ್ನು ಎಷ್ಟೇ ಕಡೆಗಾಣಿಸಿದರೂ ಒಂದಲ್ಲ ಒಂದು ದಿನ ಅದು ಮತ್ತೊಮ್ಮೆ ಬಾಯಿ ತೆರೆದು ನಿಲ್ಲುತ್ತದೆ. ಸಾಮಾಜಿಕ ಪ್ರಶ್ನೆಗಳನ್ನು ಬದಿಗೊತ್ತಿ ರಾಜಕಾರಣವನ್ನು ಕೈಗೆತ್ತಿಕೊಂಡ ಧುರೀಣರು ಅಥವಾ ಒತ್ತಾಯದಿಂದ ರಾಜಕಾರಣವನ್ನು ಕೈಗೆತ್ತಿಕೊಂಡವರು ಏನನ್ನೂ ಸಾಧಿಸಿಲ್ಲ. ಅಷ್ಟೇಯಲ್ಲ ಸಾಮಾಜಿಕ ಪ್ರಶ್ನೆಗಳನ್ನು ಬದಿಗೊತ್ತಿದ್ದರಿಂದ ಅವರು ತಮ್ಮ ರಾಜಕೀಯ ಗುರಿಯನ್ನು ಕೂಡ ಸಾಧಿಸಲಾಗಿಲ್ಲ ಅನ್ನುವುದಕ್ಕೆ ಇಂದಿನ ಪರಿಸ್ಥಿತಿಯೇ ಸಾಕ್ಷಿ. ಆ ಸಾಮಾಜಿಕ ಪ್ರಶ್ನೆಯನ್ನವರು ಮೊದಲೇ ಬಗೆಹರಿಸಿದ್ದಿದ್ದರೆ ಇಂದು ಎಲ್ಲೆಡೆ ವೈಮನಸ್ಸು ಕಾಣುತ್ತಿರಲಿಲ್ಲ. ಈ ವೈರತ್ವ ಹಾಗೂ ವೈಮನಸ್ಸನ್ನು ತೊಲಗಿಸಲು ಈ ದೇಶದಲ್ಲಾಗುತ್ತಿರುವ ಸಾಮಾಜಿಕ ಅನ್ಯಾಯವನ್ನು ನಿಲ್ಲಿಸುವುದು ಮೊದಲ ಹಾಗೂ ಮಹತ್ವದ ಕೆಲಸವಾಗಿದೆ ಹಾಗೂ ಪ್ರತಿಯೊಬ್ಬ ಹಿಂದುವೂ ಇದನ್ನು ತನ್ನ ಪವಿತ್ರ ಕಾರ್ಯವೆಂದುಕೊಂಡು ಮಾಡಬೇಕಿದೆ ಎಂದು ಹೇಳುವ ಮಹಾನುಭಾವ ಮಹಾತ್ಮ ಗಾಂಧೀಜಿಯವರು ಮೊದಲು ಈ ದೇಶದಲ್ಲಿ ಹುಟ್ಟಲೇ ಇಲ್ಲ. ಅವರ ಪ್ರಕಾರ ಸಾಮಾಜಿಕ ಹಾಗೂ ರಾಜಕೀಯ ಅನ್ನುವ ಎರಡು ಬೇರೆ ವಿಷಯಗಳಿಲ್ಲ,

ಅವೆರಡೂ ಒಂದೇ ಹಾಗಾಗಿ ಹಿಂದೂ ಮುಸಲ್ಮಾನರ ಐಕ್ಯ ಹಾಗೂ ಅಸ್ಪೃಶ್ಯ ನಿವಾರಣೆಯಾಗದೆ ಈ ದೇಶಕ್ಕೆ ಸ್ವಾತಂತ್ರ್ಯ ಸಿಗಲಾರದು ಎಂದವರು ಯಾವಾಗಲೂ ಹೇಳುತ್ತಿರುತ್ತಾರೆ. ಸೂಕ್ಷ್ಮವಾಗಿ ನೋಡಿದಾಗ ಮಾತ್ರ ಕಾಣುವಂತಹ ಕಸ್ತೂರಬಾ ಗಾಂಧೀ ಹಾಗೂ ಲಕ್ಷ್ಮಿಯವರ ನಡುವೆಯಿರುವ ಪಕ್ಷಪಾತದಂತೆಯೇ ಗಾಂಧೀಜಿ ಹಾಗೂ ಅಸ್ಪೃಶ್ಯತೆ ಇವರುಗಳ ನಡುವೆ ಪಕ್ಷಪಾತವಿದೆ. ಏಕೆಂದರೆ ಖಾದಿ ಪ್ರಸಾರ ಹಾಗೂ ಹಿಂದೂ ಮುಸಲ್ಮಾನರ ಐಕ್ಯದ ಬಗ್ಗೆಯೇ ಹೆಚ್ಚು ಒತ್ತು ಕೊಡುವ ಗಾಂಧೀಜಿಯವರು ಅಸ್ಪೃಶ್ಯ ನಿವಾರಣೆಯ ಬಗ್ಗೆ ಅಷ್ಟಾಗಿ ಒತ್ತು ಕೊಡುವುದಿಲ್ಲ. ಹಾಗೇನಾದರೂ ಅವರು ಒತ್ತು ಕೊಟ್ಟಿದ್ದಿದ್ದರೆ ನೂಲು ತೆಗೆಯದವರ ಮಾತಿಗೆ ಬೆಲೆಯಿಲ್ಲ ಎಂದು ಸಾರಿದಂತೆ ಅಸ್ಪೃಶ್ಯತೆ ನಿವಾರಣೆ ಮಾಡದೆ ಕಾಂಗ್ರೆಸ್ಸಿನಲ್ಲಿ ಪ್ರವೇಶವಿಲ್ಲ ಅನ್ನುವ ಹಠ ಅವರು ಹಿಡಿಯಬಹುದಿತ್ತು. ಇರಲಿ! ಯಾರೂ ಆತ್ಮೀಯತೆಯಿಂದ ಹತ್ತಿರ ಕೂರಿಸದಿರುವಾಗ ಗಾಂಧೀಜಿಯವರ ಸಹಾನುಭೂತಿ ಯಾವುದೇ ಕೆಲಸಕ್ಕಿಲ್ಲದ್ದು. ಈ ತೋರಿಕೆಯ ಸಹಾನುಭೂತಿಯಂತೆಯೇ ವೈಕಮ್‌ನಲ್ಲಿಯ ಸತ್ಯಾಗ್ರಹದ ವ್ಯವಸ್ಥೆ ಮಾಡಲು ಅವರು ಸ್ವತಃ ವೈಕಮ್‌ಗೆ ಹೋಗಿದ್ದರು ಹಾಗೂ ಅಲ್ಲಿಯ ಬ್ರಾಹ್ಮಣರಿಗೆ ಹೊಂದಿಕೊಳ್ಳುವ ಮೂರು ಮಾರ್ಗಗಳನ್ನು ತಿಳಿಹೇಳಿದರು. ೧. ಒಂದೋ ಜನಮತ ಸಂಗ್ರಹಿಸಿ ಎಂದು. ೨. ಎರಡನೆಯದಾಗಿ ಅಸ್ಪೃಶ್ಯತೆ ಇದೆ ಎಂದು ಹೇಳುವ ಶಾಸ್ತ್ರ ನಿಜವೋ ಸುಳ್ಳೋ ಅನ್ನುವುದನ್ನು ಯಾವುದಾದರೂ ಪಂಡಿತರಿಂದ ಖಚಿತಪಡಿಸಿಕೊಳ್ಳಿ ಎಂದು. ೩. ಇಲ್ಲದಿದ್ದರೆ ತ್ರಾವಣಕೋರಿನ ದಿವಾನರನ್ನು ಸರಪಂಚರನ್ನಾಗಿ ನೇಮಿಸಿ ಕೆಲವೇ ಆಯ್ದ ಪಂಡಿತ ಪಂಚರ ಸಹಾಯದಿಂದ ಈ ವಿಷಯವನ್ನು ಮುಗಿಸಿ. ಆದರೆ ಆಶ್ಚರ್ಯದ ಸಂಗತಿಯೆಂದರೆ ಅಲ್ಲಿಯ ಒಬ್ಬ ಬ್ರಾಹ್ಮಣನಿಗೂ ಈ ಮೂರೂ ಮಾರ್ಗಗಳು ಸರಿ ಬರಲಿಲ್ಲ. ಅವರು ಅಸ್ಪೃಶ್ಯರನ್ನು ತಡೆಯುತ್ತಲೇ ಇದ್ದರು ಹಾಗೂ ತಮ್ಮ ನಿರ್ಧಾರಕ್ಕಂಟಿಕೊಂಡೆ ಇದ್ದರು. ಅಷ್ಟೇಯಲ್ಲ ಇದು ದಲಿತರ ಮೇಲೆ ಅನ್ಯಾಯ ಎಂದು ಹೇಳುವ ಗಾಂಧೀಜಿಯವರಿಗೂ ಯಾವುದೋ ಒಂದು ಶಾಸ್ತ್ರ ಮುಂದಿಡುತ್ತ ತಮ್ಮನ್ನು ಸಮರ್ಥಿಸಿಕೊಂಡರು.

ಹಿಂದೂಗಳ ಈ ಶಾಸ್ತ್ರಗಳನ್ನು ನಾನಿದುವರೆಗೂ ಓದಿಲ್ಲ ಹಾಗಾಗಿ ಅದರಲ್ಲೇನಡಗಿದೆ ಅನ್ನುವುದು ನನಗೆ ಗೊತ್ತಿಲ್ಲ. ಆ ಶಾಸ್ತ್ರದಲ್ಲಿ ಅಸ್ಪೃಶ್ಯತೆಯಿರುವುದು ನಿಜ ಅನ್ನುವ ಖಾತ್ರಿ ನನಗಿದೆ. ಆದರೆ ವ್ಯಾವಹಾರಿಕ ಜೀವನದಲ್ಲಿ ಅಸ್ಪೃಶ್ಯತೆಯನ್ನು ಪಾಲಿಸುವುದು ಧರ್ಮ ಎಂದು ನಮ್ಮ ಧರ್ಮಮಾರ್ತಾಂಡರು ಎದೆ ತಟ್ಟಿ ಹೇಳಬಹುದು ಅಂದುಕೊಂಡಿರಲಿಲ್ಲ. ಇದರರ್ಥ ಒಂದೋ ನಾವು ಎಲ್ಲ ಶಾಸ್ತ್ರಗಳನ್ನು ಸುಟ್ಟು ಭಸ್ಮ ಮಾಡಬೇಕಿದೆ, ಇಲ್ಲವೆ ಆ ಎಲ್ಲ ಶಾಸ್ತ್ರಗಳನ್ನು ವಿಸ್ತಾರವಾಗಿ ಅಭ್ಯಸಿಸಿ ಅಸ್ಪೃಶ್ಯತೆಯ ಸಂಬಂಧವಾಗಿ ತೆಗೆದುಕೊಂಡಿರುವ ನಿರ್ಣಯಗಳನ್ನು ಸುಳ್ಳು ಸಾಬೀತು ಮಾಡಬೇಕಿದೆ. ಆ ನಿರ್ಣಯಗಳನ್ನು ಸುಳ್ಳು ಸಾಬೀತು ಮಾಡುವುದರಲ್ಲಿ ನಮಗೆ ಅಪಯಶಸ್ಸು ಬಂದರೆ ಕಡೆಯ ತನಕ ಈ ಅಸ್ಪೃಶ್ಯತೆಯನ್ನು ನಾವು ಅನುಭವಿಸಬೇಕಿದೆ. ಇದೇ ನಮ್ಮ ಧರ್ಮಮಾರ್ತಾಂಡರ ದುರಾಗ್ರಹವಿದ್ದರೆ ಈ ಶಾಸ್ತ್ರಗಳನ್ನು ನಾವು ಬೇರೆಯೇ ರೀತಿಯಲ್ಲಿ ನಾಶ ಮಾಡುವುದು ಅಗತ್ಯವಾಗಿದೆ. ಇಂಗ್ಲಂಡ್‌ನಲ್ಲಿ ಬರ್ಕಲೆ ಅನ್ನುವ ದೊಡ್ಡ ತತ್ವಜ್ಞಾನಿಯಿದ್ದ. ಅವನು ಅನೇಕ ರೀತಿಯ ತತ್ವಜ್ಞಾನದ ಪ್ರಶ್ನೆಗಳನ್ನು ಕೇಳಿ ಜನರನ್ನು ಪೀಡಿಸುತ್ತಿದ್ದ. ಅವನ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಜನ ರೋಸಿಹೋಗಿದ್ದರು. ಹೀಗೆಯೇ ಬರ್ಕಲೆನ ಪ್ರಶ್ನೆಗಳಿಂದ ರೋಸಿಹೋಗಿದ್ದ ಮನುಷ್ಯನೊಬ್ಬ ಡಾ. ಜಾನ್ಸನ್ ಅವರ ಸಹಾಯ ಕೇಳಲು ಅವರಲ್ಲಿಗೆ ಹೋಗಿ ಬರ್ಕ್ಲೆ ಹಾಕಿದ ಪ್ರಶ್ನೆಯನ್ನು ಅವರೆದುರಿಗಿಟ್ಟು ಇದಕ್ಕೆ ಉತ್ತರ ಕಂಡುಕೊಳ್ಳುವಂತೆ ಯಾಚಿಸಿದ. ಡಾ. ಜಾನ್ಸನ್ ಅವರು ಹತ್ತಿರವೇ ಬಿದ್ದಿದ್ದ ಕಲ್ಲೊಂದರ ಮೇಲೆ ಪಶ್ನೆ ಬರೆದಿದ್ದ ಕಾಗದದವನ್ನಿಟ್ಟು ಅದನ್ನೊಮ್ಮೆ ಜೋರಾಗಿ ಒದ್ದು 'ನೋಡು ಇದು ನಾನವನ ಪ್ರಶ್ನೆ ಕಂಡುಕೊಂಡ ಉತ್ತರ' ಅಂದರು. ಇದೇ ನ್ಯಾಯ ಈ ಶಾಸ್ತ್ರಗಳಿಗೂ ಅನ್ವಯಿಸುತ್ತದೆ.

ನಿಜವಾಗಿಯೂ ಈ ಎಲ್ಲ ಶಾಸ್ತ್ರಗಳು ಜನತೆಗೆ ಅವಮಾನ ಮಾಡುವಂತಹವು. ಸರ್ಕಾರ ಯಾವತ್ತೋ ಇವುಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕಿತ್ತು. ಏನಿಲ್ಲವೆಂದರೂ ಈ ಶಾಸ್ತ್ರಗಳನ್ನು ತಮ್ಮ ಅಸ್ತ್ರಗಳನ್ನಾಗಿ ಮಾಡಿಕೊಳ್ಳುವ ಜನ ಇಂದಿನ ಸಾಮಾಜಿಕ ಪರಿಸ್ಥಿತಿ ಸುಧಾರಿಸುವವರೆಗಾದರೂ ಸುಮ್ಮನಿರಬೇಕು, ಇಲ್ಲದಿದ್ದರೆ ನಾವೆಲ್ಲರೂ ಭಯಂಕರ ಪರಿಸ್ಥಿಯನ್ನು ಎದುರಿಸಬೇಕಾಗುತ್ತದೆ. ಎಲ್ಲರೂ ಸಮಾನರಾಗಿ ಪ್ರಸಂಗಕ್ಕನುಗುಣವಾಗಿ ಒಬ್ಬರಿಗೊಬ್ಬರು ಸಹಾಯ ಮಾಡುತ್ತ ಸಮಾಜದಲ್ಲಿ ಸುಖಶಾಂತಿ ನೆಲೆಸುವಂತೆ ವರ್ತಿಸುವುದೇ ಸಮಾಜ ರಚನೆಯ ಆದ್ಯ ಗುರಿಯಾಗಿದೆ. ಸಮಾಜದ ಕೆಲವೇ ಜನ ಪ್ರಬಲರಾಗಿ ಉಳಿದ ಜನರನ್ನು ಪೀಡಿಸುವುದರಿಂದಲೇ ಸಮಾಜಸಂಘಟನೆಯ ಗುರಿ ಸಾಧಿಸಲಾಗುತ್ತಿಲ್ಲ ಅನ್ನುವುದು ಕಣ್ಣಿಗೆ ಕಂಡ ದಿನವೇ ತನ್ನೆಲ್ಲ ಕೆಲಸಗಳನ್ನು ಬದಿಗೊತ್ತಿ ಕಷ್ಟಪಟ್ಟು ಆ ಮತಾಂಧರ ಜುಟ್ಟು ಹಿಡಿದು ಅವರನ್ನು ಬಗ್ಗಿಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ಎಲ್ಲರ ಪರಿಸ್ಥಿಯೂ ಸಮನಾಗಿಡಲು ಪ್ರತಿಯೊಬ್ಬರೂ ಹೋರಾಡಬೇಕು ಅನ್ನುವುದು ನನ್ನ ಬೇಡಿಕೆಯಲ್ಲ. ಇಜ್ಜೋಡು ಮದುವೆಗಳಲ್ಲಿ ಅಂದರೆ ಸಣ್ಣ ವಯಸ್ಸಿನ ಮದುಮಗ ಹಾಗೂ ದೊಡ್ಡ ವಯಸ್ಸಿನ ಮದುಮಗಳ ಮದುವೆ ಗೊತ್ತಾದರೆ ಯೌವ್ವನಾವಸ್ಥೆಗೆ ಬಂದಿರುವ ಹೆಂಡತಿಯನ್ನು ಕಟ್ಟಿಕೊಂಡು ಗಂಡನ ಫಜೀತಿಯಾಗುವುದು ಬೇಡ ಅಂದುಕೊಂಡು ಆಕೆಯ ಉಪ್ಪುಖಾರ ನಿಲ್ಲಿಸಿಬಿಡಿ ಎಂದು ಆಜ್ಞೆ ಕೊಡುತ್ತಾರೆ (ಇಲ್ಲಿ ಅಂಬೇಡ್ಕರರು ಚಿಕ್ಕ ವಯಸ್ಸಿನ ಮದುಮಗ ಅಂದರೆ ದಲಿತರು ಹಾಗೂ ದೊಡ್ಡ ವಯಸ್ಸಿನ ಮದುಮಗಳು ಅಂದರೆ ಮೇಲ್ಜಾತಿಯವರು ಅನ್ನುವ ರೀತಿಯಲ್ಲಿ ಮಾತನಾಡುತ್ತಾರೆ). ನಾವಿಲ್ಲಿ ದರಿದ್ರರಾದರೂ ಶ್ರೀಮಂತರ ಹಣ ದೋಚಿ ಅವರನ್ನೂ ದರಿದ್ರರನ್ನಾಗಿ ಮಾಡಿ ಎಂದು ಹೇಳುತ್ತಿಲ್ಲ. ನಾವು ಕೇವಲ ಮಾನವ ಜಾತಿಗೆ ಸೇರಿದ ನಮ್ಮ ಹಕ್ಕುಗಳನ್ನು ನಮಗೆ ಕೊಡಿ ಎಂದಷ್ಟೇ ಹೇಳುತ್ತಿದ್ದೇವೆ. ಆದರೆ ಅವುಗಳನ್ನೇ ಪಡೆಯಲು ನಮಗೆ ಈ ಶಾಸ್ತ್ರಗಳು ಅಡ್ಡಿಯಾಗುತ್ತಿವೆ. ಮಾನವ ಹಕ್ಕುಗಳನ್ನು ಕಸಿದುಕೊಂಡಾಗಲೆಲ್ಲ ದೊಡ್ಡ ದೊಡ್ಡ ಹೋರಾಟಗಳೇ ಆಗಿವೆ. ಫ್ರಾನ್ಸಿನಲ್ಲಿ ಶ್ರೀಮಂತರು ಬಡವರನ್ನು ಪೀಡಿಸಿದಾಗ ಬಡವರು ಶ್ರೀಮಂತರನ್ನು ಕೊಚ್ಚಿಹಾಕಿದ್ದಾರೆ. ಅಮೇರಿಕಾದಲ್ಲಿ ನೀಗ್ರೋ ಜನರನ್ನು ಗುಲಾಮಗಿರಿಯಿಂದ ಮುಕ್ತಗೊಳಿಸಲು ಆರು ವರ್ಷ ಅಮೇರಿಕನ್ ಜನ ತಮ್ಮತಮ್ಮಲ್ಲೇ ಹೋರಾಡಿದ್ದಾರೆ. ಈ ಹೋರಾಟದಲ್ಲಿ ಅನೇಕ ಜನ ಸಾವನ್ನಪ್ಪಿದ್ದಾರೆ ಅನ್ನುವುದು ನಿಜವಾದರೂ ಸತ್ತವರ ಬಲಿದಾನ ವ್ಯರ್ಥವಾಗಲಿಲ್ಲ. ಅವರ ಬಲಿದಾನದಿಂದ ಬದುಕಿದವರ ಜೀವನ ಸಾರ್ಥಕವಾಯಿತು. ಇಂತಹ ಹೋರಾಟದಿಂದಲೇ ನಮ್ಮಿಂದ ಕಸಿದುಕೊಂಡಿರುವ ಮನುಷ್ಯತ್ವ ಮರಳಿ ನಮಗೆ ದೊರಕೀತೆ ಇಲ್ಲ ಏನಾದರೂ ಸಣ್ಣಪುಟ್ಟ ಉಪಾಯದಿಂದ ದೊರಕೀತೆ? ಅನ್ನುವ ಪ್ರಶ್ನೆಯನ್ನು ಬದಿಗಿಟ್ಟರೂ ಇಷ್ಟೊಂದು ಅನ್ಯಾಯ, ಅವಮಾನ, ಒತ್ತಾಯ ನಮ್ಮ ಮೇಲಾಗುತ್ತಿದ್ದರೂ ನಾವು ಮೂಗರಂತೆ ಕಿವುಡರಂತೆ ಶಾಂತರಾಗಿದ್ದು ಕೈಲಾಗದವರಾಗಿದ್ದೇವೆ ಅನ್ನುವುದನ್ನು ನೆನಪಿಟ್ಟುಕೊಳ್ಳಬೇಕು. ನಮಗದರ ಬಗ್ಗೆ ದುಃಖವಿಲ್ಲ, ನಮಗೆ ಸಿಟ್ಟು ಬರುವುದಿಲ್ಲ, ನಮಗದರ ಅರಿವೂ ಇಲ್ಲ ಅನ್ನುವುದು ಸೋಜಿಗದ ವಿಷಯ. ಸಣ್ಣ ಇರುವೆ ಕೂಡ ತನ್ನ ಮೇಲೆ ಯಾರದ್ದಾದರೂ ಕಾಲು ಬಿದ್ದರೆ ಕಚ್ಚಿ ಪ್ರತೀಕಾರ ತೋರಿಸುತ್ತದೆ. ನಾವಿಷ್ಟು ದೊಡ್ಡವರಾಗಿದ್ದರೂ ನಮ್ಮ ಮೇಲೆ ಅನ್ಯಾಯವೆಸಗುತ್ತಿರುವವರ ವಿರುದ್ಧ ನಾವು ತಿರುಗೇಳುವುದಿಲ್ಲ. ಇದಕ್ಕೆ ಕಾರಣ ಹುಡುಕಲು ಹೊರಟಾಗ ನನಗೆ ಎರಡು ಕಾರಣಗಳು ಕಂಡವು. ಒಂದೊ ನಮ್ಮಲ್ಲಿ ಜ್ಞಾನ ಹಾಗೂ ಬುದ್ಧಿ ಇಲ್ಲ. ಇವೆರಡೂ ಇರುವವರು ತಮ್ಮ ಅಧಿಕಾರ ಉಪಯೋಗಿಸಿ ನಮ್ಮ ಮೇಲೆ ಅನ್ಯಾಯ ಮಾಡಿದರು ಹಾಗೂ ಹೀಗೇ ವರ್ತಿಸಬೇಕು, ಹೀಗೆ ನಡೆದುಕೊಳ್ಳಬೇಕು ಅನ್ನುವ ನಿಯಮಗಳನ್ನು ನಮ್ಮನ್ನು ಕೇಳದೆ ನಮ್ಮ ಮೇಲೆ ಹೇರಿ ನಾವು ಹಾಗೇ ನಡೆದುಕೊಳ್ಳುವಂತೆ ಬಲವಂತ ಮಾಡಿದರು. ನಾವು ನಮ್ಮ ಕರ್ತವ್ಯದಿಂದ ವಿಮುಖರಾಗಿದ್ದರಿಂದಲೇ ಇಂದು ನಾವಿದನ್ನು ಅನುಭವಿಸುತ್ತಿದ್ದೇವೆ

ಹಾಗೂ ನಾವೇ ನಮ್ಮ ಕಾಲ ಮೇಲೆ ಚಪ್ಪಡಿ ಎಳೆದುಕೊಂಡಂತಾಗಿದೆ. ನಮ್ಮ ಮನುಷ್ಯತ್ವವನ್ನು ಕಸಿದುಕೊಂಡವರಿಗೆ ನಾವಂದೇ ಶಿಕ್ಷಿಸಿದ್ದಿದ್ದರೆ ಇಂದಿನ ಪರಿಸ್ಥಿತಿ ನಮಗೆ ಯಾವತ್ತೂ ಬರುತ್ತಿರಲಿಲ್ಲ ಹಾಗೂ ಚಿನ್ನದಂತಹ ಈ ಭೂಮಿಯ ಮೇಲೆ ಅನ್ನದ ಕಣಕಣಕ್ಕೂ ಪರರಲ್ಲಿ ಯಾಚಿಸುವ ದಯನೀಯ ಸ್ಥಿತಿ ನಮಗೆಂದೂ ಬರುತ್ತಿರಲಿಲ್ಲ. ಅನ್ಯಾಯವನ್ನು ವಿರೋಧಿಸುವ ಬದಲು ನಾವು ಹಳೆಯ ರೂಢಿಪರಂಪರೆಗಳನ್ನು ಆಲಂಗಿಸಿಕೊಂಡು ನಮ್ಮ ಶಕ್ತಿಯನ್ನು ಕಳೆದುಕೊಂಡಿದ್ದೇವೆ. ಕೇವಲ ಜವಾಬ್ದಾರಿಗಳನ್ನೇ ತಲೆ ಮೇಲೆ ಹೊತ್ತುಕೊಂಡು ಅವುಗಳನ್ನೂ ಸರಿಯಾಗಿ ನಿಭಾಯಿಸಲಾಗದೆ ತಂದೆ ತಾಯಿಗಳಾಗಿ ತಮ್ಮ ಮಕ್ಕಳ ಬಗ್ಗೆ ತಮ್ಮ ಕರ್ತವ್ಯವನ್ನೂ ಮರೆತಿದ್ದರಿಂದ ನಮ್ಮ ಮಕ್ಕಳ ನಾಶಕ್ಕೆ ನಾವು ತಂದೆತಾಯಂದಿರೇ ಕಾರಣರಾಗಿದ್ದೇವೆ. ನಮ್ಮಲ್ಲಿ ತಂದೆಯೇ ಮಗನ ಮದುವೆ ಮಾಡಿಕೊಡಬೇಕು ಅನ್ನುವ ಒಂದು ದೊಡ್ಡ ಜವಾಬ್ದಾರಿ ತಂದೆಯ ಮೇಲಿದೆ. ಹಾಗೆ ತಂದೆ ಮಗನ ಮದುವೆ ಮಾಡಿಕೊಡುತ್ತಾನೆ. ಮದುವೆ ಮಾಡಿಕೊಂಡು ಇನ್ನೇನು ಸಂಸಾರ ಆರಂಭವಾಗಿದೆ ಅನ್ನುವಾಗಲೇ ಆತ ತನ್ನ ಮಕ್ಕಳನ್ನು ಈ ಪ್ರಪಂಚಕ್ಕೆ ತರುವ ಪರಂಪರೆಯನ್ನು ಆರಂಭಿಸುತ್ತಾನೆ. ನಾಲ್ಕೈದು ವರ್ಷಗಳಲ್ಲಿ ಒಂದೆರಡು ಮಕ್ಕಳು ಹುಟ್ಟುತ್ತವೆ. ಅವು ದೊಡ್ಡವರಾಗುವುದರೊಳಗೆ ಅವರ ತಮ್ಮಂದಿರೋ ತಂಗಿಯಂದಿರೋ ಆಗಮಿಸಿರುತ್ತಾರೆ. ಮೊದಲಿಬ್ಬರ ಮಕ್ಕಳ ಮದುವೆ ಆಗುತ್ತಲೇ ಹಿಂದಿರುವ ಮಕ್ಕಳು ಮದುವೆಗೆ ಸಿದ್ಧರಾಗಿ ನಿಲ್ಲುತ್ತಾರೆ. ಆಮೇಲೆ ಆ ಮಕ್ಕಳ ಮಗುವಿನ ಜವಾಬ್ದಾರಿ. ಈ ಪ್ರಕಾರ ಮೇಲ್ಜಾತಿಯವರಲ್ಲೂ ಇದೆ. ಆದರೆ ಈ ಪದ್ಧತಿಯ ಅನಿಷ್ಟ ಪರಿಣಾಮ ನಮ್ಮಷ್ಟು ಅವರ ಮೇಲಾಗುವುದಿಲ್ಲ. ಏಕೆಂದರೆ ಅವರು ತಮ್ಮ ಮಕ್ಕಳ ಮದುವೆ ಮಾಡುವ ಮೊದಲು ಅವರನ್ನು ತಮ್ಮ ಕಾಲ ಮೇಲೆ ನಿಲ್ಲಿಸುತ್ತಾರೆ, ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಅವರು ತಮ್ಮ ಹೆಂಡತಿ ಮಕ್ಕಳ ಜವಾಬ್ದಾರಿ ತಾವು ಹೊರುವಂತಾಗಲು ಸಹಾಯ ಮಾಡುತ್ತಾರೆ. ಹೀಗೆ ಮೇಲ್ಜಾತಿಯವರು ತಮ್ಮ ಮಕ್ಕಳನ್ನು ಮೊದಲು ಚೆನ್ನಾಗಿ ಓದಿಸಿ ಅವರು ಜವಾಬ್ದಾರಿ ಹೊರುವಂತಾದ ಮೇಲೆಯೇ ಮದುವೆ ಮಾಡುತ್ತಾರೆ. ಆದರೆ ನಮ್ಮ ಜನ ಮಕ್ಕಳ ಮದುವೆ ಮಾಡುವುದನ್ನು ಬಿಟ್ಟರೆ ಬೇರೇನೂ ಮಾಡುವುದಿಲ್ಲ. ಒಂದೋ ಸಾಲ ಮಾಡಿ ಮದುವೆ ಮಾಡುವುದು. ಮದುವೆಯಾಗುವ ಹುಡುಗ ಸ್ವತಂತ್ರವಾಗಿ ಹಣಗಳಿಸುವ ಯೋಗ್ಯತೆ ಇಲ್ಲದವನಾಗುವುದರಿಂದ ಮೊದಲೇ ಸಾಲದಲ್ಲಿ ಮುಳುಗಿ ಮಕ್ಕಳಾದ ಮೇಲೆ ಮತ್ತಷ್ಟು ಜವಾಬ್ದಾರಿ ಹೆಚ್ಚುತ್ತದೆ. ತಮ್ಮ ಮಕ್ಕಳಿಗೆ ತನಗಿಂತ ಒಳ್ಳೆಯ ಶಿಕ್ಷಣ ಕೊಡಿಸುವ ಸಾಮರ್ಥ್ಯವಿರುವುದಿಲ್ಲ ಹಾಗಾಗಿ ತಮ್ಮ ಸಂಸಾರವೇ ಬೆಳೆಯುತ್ತಿರುವಾಗ ಮಕ್ಕಳಿಗೆಲ್ಲಿ ಶಿಕ್ಷಣ ಕೊಡಿಸುವುದು ಅಂದುಕೊಂಡು ಬುದ್ಧಿಯಿರದ ಆ ಮಕ್ಕಳನ್ನು ಯಾವುದೋ ಕೆಲಸಕ್ಕೆ ಸೇರಿಸಿ ಅವರಿಂದ ಬರುವ ಹಣದಿಂದ ತಮ್ಮ ಸಂಸಾರ ಸರಿದೂಗಿಸುತ್ತಾರೆ. ಮದುವೆಯ ಬಂಧನದಲ್ಲಿ ಸಿಕ್ಕು ತೊಳಲಾಡುವ ತಂದೆ ಬುದ್ಧಿಯನ್ನಂತೂ ಕಲಿಯುವುದಿಲ್ಲ ಆದರೆ ತನ್ನ ಮಕ್ಕಳನ್ನೂ ಆತ ಅದೇ ಸಂಸಾರ ಚಕ್ರದಲ್ಲಿ ಸಿಲುಕಿಸಿ ಅವರನ್ನೂ ಮುಳುಗಿಸಿಬಿಡುತ್ತಾನೆ.

ನಮ್ಮ ಜಾತಿಯ ತಂದೆತಾಯಂದಿರು ತಮ್ಮ ಗಂಡು ಮಕ್ಕಳನ್ನು ಹಾಳುಮಾಡುತ್ತಿರುವಂತೆ ಹೆಣ್ಣು ಮಕ್ಕಳ ಭವಿಷ್ಯವನ್ನೂ ಹಾಳುಮಾಡುತ್ತಿದ್ದಾರೆ. ಸಣ್ಣ ವಯಸ್ಸಿನಲ್ಲೇ ಹೆಣ್ಣುಮಕ್ಕಳ ಮದುವೆ ಮಾಡುವುದರಿಂದ ಆಗುವ ನಷ್ಟಕ್ಕಿಂತಲೂ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿ ಮಾಡುವುದರಲ್ಲೂ ಅದಕ್ಕಿಂದ ಹೆಚ್ಚು ನಷ್ಟವಿದೆ. ಹೆಣ್ಣು ಮಕ್ಕಳನ್ನು ಹಿಂದೂ ದೇವತೆಗಳಿಗೆ ವಹಿಸಿಬಿಡುವ ಪರಂಪರೆ ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಅದರ ಪ್ರಸಾರ ನಮ್ಮ ಜಾತಿಯಲ್ಲೂ ಕೆಲವೆಡೆ ಜೋರಾಗಿದೆ. ಹಿಂದಿನ ಕಾಲದಲ್ಲಿ ಈ ಪದ್ಧತಿ ಸದ್ಭಾವನೆ ಪ್ರೇರಿತವಾಗಿಯೂ ಇದ್ದಿರಬಹುದು ಆದರೆ ಇಂದು ದೇವರ

ದಾಸಿ ಎಂದರೆ ಇಡೀ ಜಗತ್ತಿನ ಹೊಟ್ಟೆ ಹೊರೆಯುವವಳು ಅನ್ನುವುದೇ ನಿಜ. ಆಕೆ ದೇಹ ಮಾರಿ ತಮ್ಮ ಜನರ ಹೊಟ್ಟೆ ಹೊರೆಯತಕ್ಕದ್ದು ! ಈ ದೇವದಾಸಿಯನ್ನಾಗಿ ಬಿಡುವ ಪದ್ಧತಿ ಎಷ್ಟು ಗಟ್ಟಿಯಾಗಿ ಬೇರು ಬಿಟ್ಟಿವೆಯೆಂದರೆ ಇದನ್ನು ಪಾಲಿಸುವ ಜನ ಕಾನೂನಿಗೂ ಹೆದರದವರಾಗಿದ್ದಾರೆ. ಇವರು ತಮ್ಮ ಮಗಳ ಹಿತಶತೃಗಳಷ್ಟೆ ಅಲ್ಲ ಸಮಾಜದ ಶತೃಗಳೂ ಕೂಡ. ಇವರು ಮಾಡುವ ಕೆಲಸದ ಪರಿಣಾಮ ಆದ್ಯ ವ್ಯವಸ್ಥೆ ಅಂದರೆ ಕೌಟುಂಬಿಕ ವ್ಯವಸ್ಥೆಯ ಮೇಲೂ ಆಗುತ್ತದೆ. ಏಕಪತ್ನಿ ಹಾಗೂ ಏಕ ಪತಿಯೇ ಸರಿಯಾದ ಕೌಟುಂಬಿಕ ಪದ್ಧತಿ. ಕುಟುಂಬವೆಂದರೆ ತಮ್ಮ ಪ್ರಜೆಯ ರಕ್ಷಣೆ ಹಾಗೂ ಪಾಲನೆ ಮಾಡಲು ಸಮಾಜ ರಚಿಸಿರುವ ಸಂಸ್ಥೆ. ಈ ಸಂಸ್ಥೆಯನ್ನು ನಡೆಸುವ ದಂಪತಿಗಳು ಹೆಚ್ಚು ಶುದ್ಧ, ಸಾತ್ವಿಕರು ಹಾಗೂ ಸ್ವಾಭಿಮಾನಿಗಳಿದ್ದಷ್ಟು ಅವರ ಸಂತತಿಗಳೂ ಶುದ್ಧ, ಸಾತ್ವಿಕ ಹಾಗೂ ಸ್ವಾಭಿಮಾನಿಗಳಾಗಿರುವ ಸಾಧ್ಯತೆಗಳಿರುತ್ತವೆ. ಓರ್ವ ಹೆಣ್ಣು ಒಂದಕ್ಕಿಂತ ಹೆಚ್ಚು ಗಂಡಂದಿರನ್ನು ಹೊಂದಿರುವುದು ಇಲ್ಲವೆ ಗಂಡಸೊಬ್ಬ ಹೆಚ್ಚು ಹೆಂಡತಿರನ್ನು ಹೊಂದಿರುವಂತಹದ್ದು ಸರಿಯಲ್ಲ.

ಭಗವಂತನು ನಮ್ಮ ಭವಿಷ್ಯ ಒಪ್ಪಿಸಿರುವಂತಹ ಜನರಿಗೆ ತಮ್ಮ ಆದ್ಯ ಕರ್ತವ್ಯಗಳ ಪರಿಚಯವಿಲ್ಲದ್ದರಿಂದಲೇ ನಾವಿಂದು ಮಾನಸಿಕ ದೌರ್ಬಲ್ಯಗಳ ಗುಲಾಮರಾಗಿದ್ದೇವೆ. ಅವರಿಗೆ ಅದರ ಪರಿಚಯವಿದ್ದಿದ್ದರೆ ನಮ್ಮ ಪರಿಸ್ಥಿತಿ ದಯನೀಯವಾಗಿರುತ್ತಿರಲಿಲ್ಲ. ಆ ಜನ ನಮ್ಮನ್ನು ಗುಲಾಮರಂತೆ ನಡೆಸಿಕೊಳ್ಳುತ್ತಾರೆ ಅನ್ನುವುದು ಬಹಳ ದುಃಖದ ಸಂಗತಿ. ನಮ್ಮ ತಂದೆತಾಯಿಗಳು ಭವಿಷ್ಯದ ಬಗ್ಗೆ ಯೋಚಿಸದೆ ಸಿಕ್ಕಾಪಟ್ಟೆ ಮಕ್ಕಳನ್ನು ಹಡೆದು ಗುಲಾಮಗಿರಿಯ ಮಾರುಕಟ್ಟೆಯನ್ನೇ ತೆರೆದಿದ್ದಾರೆ ಅನ್ನುವುದು ಮುಂಬರುವ ಅನರ್ಥದ ಸೂಚನೆಯಾಗಿದೆ.

ಮಾನ್ಯರೆ! ನಮ್ಮ ಪರಿಸ್ಥಿತಿ ಬಹಳ ಕೆಟ್ಟದ್ದಾಗಿದೆ ಎಂದೆಲ್ಲ ನಾವು ಮಾತನಾಡಿಕೊಳ್ಳುತ್ತೇವೆ. ಆ ಜನ ನಮಗೆ ಅನ್ಯಾಯ ಮಡುತ್ತಿದ್ದಾರೆ ಅನ್ನುವುದೆಲ್ಲ ನಿಜ, ಆದರೆ ಈ ಅನ್ಯಾಯವನ್ನು ತಡೆಗಟ್ಟುವುದು ಹೇಗೆ? ಇದಕ್ಕಿರುವ ಒಂದೇ ಉಪಾಯವೆಂದರೆ, ಅನ್ಯಾಯ ಮಾಡುತ್ತಿರುವ ಜನರಿಗಿಂತಲೂ ಶಕ್ತಿಶಾಲಿಗಳಾಗಿ ಬುದ್ಧಿವಂತರಾಗಿ ಅವರನ್ನು ಎದುರುಗೊಂಡು, ಅವರಿಗಿಂತ ಒಂದು ಕೈ ಮೇಲಾಗಿ ಅವರ ಕಪಿಮುಷ್ಠಿಯಿಂದ ನಮ್ಮನ್ನು ನಾವೇ ಬಿಡಿಸಿಕೊಳ್ಳುವುದು. ಇಂತಹ ಜಾಣತನ ಹಾಗೂ ಸಾಮರ್ಥ್ಯ ನಮಗೆ ಹೇಗೆ ಮತ್ತು ಯಾವಾಗ ಸಿಕ್ಕೀತು? ನಾವು ಜಾಣತನ ಹಾಗೂ ಸಾಮರ್ಥ್ಯವನ್ನು ಕಳೆದುಕೊಂಡಿರುವುದು ಮೇಲ್ಜಾತಿಯ ಜನ ನಮ್ಮ ಮೇಲೆ ಮಾಡುವ ಅನ್ಯಾಯದಿಂದಲ್ಲ. ಒಂದು ಪಕ್ಷ ಹಾಗಿದ್ದರೂ ಕೆಲವೊಂದಕ್ಕೆ ಪರಿಹಾರವಿದೆ. ನಮ್ಮ ಜನ ತಿನ್ನುವ ಕಡಿಮೆ ದರ್ಜೆಯ ಅನ್ನವನ್ನು ಉಳಿದ್ಯಾವ ಜಾತಿಯವರು ತಿನ್ನುವುದಿಲ್ಲ ಆದರೆ ನಮ್ಮ ಜನ ಇದರ ಬಗ್ಗೆ ಯಾವತ್ತಾದರೂ ತಕರಾರು ಮಾಡಿದ್ದಾರೆಯೆ? ಊರೆಲ್ಲ ಸುತ್ತಿ ಬೇಡಿ ತಂದು ತಿನ್ನುವುದರಲ್ಲೇ ನಮ್ಮಲ್ಲಿಯ ಎಷ್ಟೋ ಜನರಿಗೆ ಅಭಿಮಾನವೆನಿಸುತ್ತದೆ. ಎಷ್ಟೋ ಮೇಲ್ಜಾತಿಯವರು ಒಳ್ಳೆ ಬಟ್ಟೆ ತೊಡುತಾರೆ ಆದರೆ ನಮ್ಮ ಜನರಿಗೆ ಒಂದು ಪಂಚೆ, ಕಂಬಳಿ ಹಾಗೂ ದಪ್ಪದ ಐವತ್ತು ಮೊಳದ ಮುಂಡಾಸು ಬಿಟ್ಟರೆ ಬೇರೇ ಏನೂ ಸಿಗುವುದಿಲ್ಲ. ಆದರೆ ಈ ದಾರಿದ್ರ್ಯದ ಬಗ್ಗೆ ನಮ್ಮ ಜನರು ಯಾವತ್ತಾದರೂ ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದಾರೆಯೆ? ಹೆಣದ ಮೇಲಿನ ಬಟ್ಟೆಯನ್ನೂ ತೊಡಲು ನಾವು ಸಿದ್ಧರಿರುತ್ತೇವೆ. ಸರ್ಕಾರದ ದರ್ಬಾರು, ಕೋರ್ಟು ಕಛೇರಿಗಳಲ್ಲಿ ನಾವು ಒಳಗೆ ಹೋಗುವಂತಿಲ್ಲ ಅನ್ನುವ ಹಕ್ಕುಗಳನ್ನು ಕಳೆದುಕೊಂಡಾಗ್ಯೂ ನಮ್ಮ ಜನ ಸುಮ್ಮನಿದ್ದಾರೆ. ಮೇಲ್ಜಾತಿಯವರ್ಯಾರಾದರೂ ಮನುಷ್ಯತ್ವಕ್ಕೆ ಬೆಲೆ ಕೊಟ್ಟು ಮೇಲೆ ಕುಳಿತುಕೊಳ್ಳಲು ಹೇಳಿದರೆ ನಮ್ಮ ಜನ 'ಯಜಮಾನರೆ, ನಮ್ಮನ್ನು ಎಕ್ಕಡದಿಂದ ಹೊಡೆಯಿರಿ ಬೇಕಾದರೆ' ಎಂದು ನಾವೇ ಮುಂದಾಗಿ ಹೇಳುತ್ತೇವೆ. ಈ ಮಾನಸಿಕ ದೌರ್ಬಲ್ಯಕ್ಕೆ ನಾವೇ ಕಾರಣರಲ್ಲವೆ?

ನಮ್ಮ ತಂದೆತಾಯಂದಿರು ತಮ್ಮ ಕರ್ತವ್ಯವನ್ನರಿತು ಸಾಲ ಮಾಡಿ ಮಗಳ ಮದುವೆ ಮಾಡಿ ಇಲ್ಲವೆ ಅವಳನ್ನು ದೇವದಾಸಿಯನ್ನಾಗಿ ಮಾಡಿ ಅವರಿಂದ ಬರುವ ಹಣದಿಂದ ತಮ್ಮ ಸಂಸಾರ ಸರಿದೂಗಿಸುವುದಕ್ಕಿಂತ ಮಕ್ಕಳನ್ನು ಜ್ಞಾನಸಂಪನ್ನರನ್ನಾಗಿ ಮಾಡಿದ್ದಿದ್ದರೆ ನಾವಿಂದು ಈ ಪರಿಸ್ಥಿಯಲ್ಲಿ ಬದುಕುತ್ತಿರಲಿಲ್ಲ. ಇದರಿಂದ ಹೊರಬರುವ ಉಪಾಯ ನಮ್ಮ ಕೈಯಲ್ಲಿಲ್ಲವೆ? ಆ ಉಪಾಯಗಳನ್ನು ನಾವು ಜಾರಿಗೆ ತಂದರೆ ನಮ್ಮನ್ಯಾರು ತಡೆಯುತ್ತಾರೆ?

ಮಾನ್ಯರೆ! ಎಲ್ಲ ಕಾಲದಲ್ಲೂ ಹಳೆಯದಾದರೂ ಚಿನ್ನ ಚಿನ್ನವೆ ಎಂದು ಹೇಳಿದರಾಗುತ್ತದೆಯೆ? ತಂದೆ ಮಾಡಿದ್ದನ್ನೇ ಮಕ್ಕಳೂ ಮಾಡಬೇಕು ಅನ್ನುವುದು ಸರಿಯಲ್ಲ. ವಸ್ತುಸ್ಥಿತಿ ಬದಲಾದ ಮೇಲೆ ಆಚಾರ ವಿಚಾರಗಳು ಬದಲಾಗಲೇ ಬೇಕು. ಹಾಗಾಗದಿದ್ದರೆ ಪರಿಸ್ಥಿತಿಯನ್ನೆದುರಿಸಲು ನಾವು ಯಾವತ್ತೂ ಸಮರ್ಥರಾಗಲಾರೆವು. ಎಲ್ಲವನ್ನೂ ಸಮಯದ ಮೇಲೆ ಹಾಕಿ ಕೈಕಟ್ಟಿ ಕುಳಿತರಾಗುತ್ತದೆಯೆ? ಕಾಲಗತಿಯ ಜೊತೆ ನಮ್ಮಿಂದಾದಷ್ಟು ಕಾರ್ಯಗಳನ್ನು ಮಾಡುವುದು ಬಹಳ ಅವಶ್ಯಕವಾಗಿದೆ. ಹಾಗೆ ಮಾಡದಿದ್ದರೆ ಕಾಲ ಬದಲಾಗುತ್ತ ಹೋದಂತೆ ನಮ್ಮ ಪರಿಸ್ಥಿತಿ ಮಾತ್ರ ಹಾಗೇ ಉಳಿದುಕೊಳ್ಳುತ್ತದೆ. ಒಳ್ಳೆಯ ಕೆಲಸ ಮಾಡದೆ ಸಾಕಷ್ಟು ಕಾಲ ಕಳೆದದ್ದಾಗಿದೆ. ಇನ್ನೂ ಹೆಚ್ಚು ಕಾಲಹರಣ ಮಾಡುವುದು ನಮ್ಮ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಈ ಪ್ರಾಂತ್ಯದ ನಮ್ಮ ಜನರ ಮೇಲೆ ಶಿಕ್ಷಣದ ಪ್ರಸಾರ ಅಷ್ಟಾಗಿ ಆಗಿಲ್ಲ. ಅಷ್ಟೇಯಲ್ಲದೆ ಇಲ್ಲಿನ ಸಾಕಷ್ಟು ಜನರ ಕೈಯಲ್ಲಿ ತಂಬಾಕುವಿನ ವ್ಯಾಪಾರ ಎಷ್ಟು ಹೆಚ್ಚಿದೆಯೆಂದರೆ ಪ್ರತಿಯೊಬ್ಬರೂ ದೊಡ್ಡ ಪೆಟ್ಟಿಗೆಗೆ ಎಂಟಾಣೆ ಕೊಟ್ಟರೂ ವರ್ಷಕ್ಕೆ ಐದಾರು ಸಾವಿರ ರೂಪಾಯಿ ಸಿಗಬಹುದು. ಹಾಗೇನಾದರೂ ಆದರೆ ಈ ಪ್ರಾಂತ್ಯದ ಹದಿನೈದು ಇಪ್ಪತ್ತು ಹುಡುಗರ ಬೋರ್ಡಿಂಗ್ ಒಳ್ಳೆಯ ರೀತಿಯಲ್ಲಿ ನಡೆಯಬಹುದು. ಈ ಸೂಚನೆಯನ್ನು ನಮ್ಮ ಸ್ಥಳೀಯ ನೇತಾರರು ಗಮನದಲ್ಲಿಟ್ಟುಕೊಳ್ಳಬೇಕು ಎಂದು ವಿನಂತಿಸುತ್ತೇನೆ. ಅವರು ನನ್ನ ಮನವಿಯನ್ನು ಸ್ವೀಕರಿಸಿದರೆ ನೀವುಗಳು ಪರಿಷತ್ತು ಆಯೋಜಿಸಿದ್ದಕ್ಕೂ ಹಾಗೂ ನಾನಿಲ್ಲಿ ಬಂದದ್ದಕ್ಕೂ ಸಾರ್ಥಕವಾಗುತ್ತದೆ.

## ೬.

# ನಾನು ನನ್ನ ಕುರುಡುಜನತೆಯ ಕೋಲು

ಸಾತಾರಾ ಜಿಲ್ಲೆಯ ಮಾಂಗ್‌ರ ಪರಿಷತ್ತಿನ ಅಧಿವೇಶನ ರಹಿಮತ್‌ಪುರ ತಾಲೂಕಿನ ಕೊರೆಗಾಂವ್ ಜಿಲ್ಲಾ ಸಾತಾರಾದಲ್ಲಿ ೧೯೨೮ರ ಮೇ ತಿಂಗಳಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರ ಅಧ್ಯಕ್ಷತೆಯಲ್ಲಿ ಜರುಗಿತು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಮುಂಬಯಿಯಿಂದ ರಹಿಮತ್‌ಪೂರಗೆ ಬಂದು ಮಾಂಗ್‌ರ ಒಂದು ಓಣಿಯಲ್ಲಿ ತಂಗಿದ್ದರು. ಶಿವತರಕರ್, ವನಮಾಳಿ, ಗಾಯಕವಾಡ, ಖೊಲವಡಿಕರ, ಖೇಡಕರ, ಜಾವಳೆ ಇತ್ಯಾದಿ ಜನ ಮುಂಬಯಿಯಿಂದ, ಕೃಷ್ಣರಾವಕದಮ್, ಮಾ. ಸಾ. ಗಾಯಕವಾಡ, ಜನಾರ್ದನರಣಪಿಸೆ, ಧರ್ಮಾಜಿ ಸಾವಂತ ಇವರು ಪುಣೆಯಿಂದ, ಹಾಗೂ ಫಲಟನ್‌ನಿಂದ ಮಾಧವರಾವ್ ಅಹಿವಲೆಯವರು ಸಾತಾರಾಜಿಲ್ಲೆಯಿಂದ ಅಧಿವೇಶನಕ್ಕಾಗಿ ಬಂದಿದ್ದರು. ಮಧ್ಯಾಹ್ನ ಮೂರು ಘಂಟೆಗೆ ಅಧಿವೇಶನ ಆರಂಭವಾಯಿತು. ಸಾತಾರಾ ಜಿಲ್ಲೆಯ ಪ್ರಮುಖ ವ್ಯಕ್ತಿಗಳಾದ ಧನಜೀಭಾಯಿ ಕೂಪರ್, ಎಜ್ಯುಕೇಶನಲ್ ಅಡ್ಮಿನಿಸ್ಟ್ರೇಟಿವ್ ಆಫೀಸರ್, ಸೀತಾರಾಮ್, ರಾಮಜೀ, ತಾವಡೆ, ಮಾಮಲೆದಾರ ದುದುಸ್ಕರ್, ರಾಮಚಂದ್ರ. ಗ. ಸೋಮಣ ಅವರು ಅಧಿವೇಶನಕ್ಕೆ ಹಾಜರಿದ್ದರು. ಬಹಿಷ್ಕೃತರಲ್ಲಿಯೇ ಒಬ್ಬ ಯೋಗ್ಯ ಮನುಷ್ಯನನ್ನು ಜೆ. ಪಿ. (ಜಿಲ್ಲಾ ಪ್ರೆಸಿಡೆಂಟ್)ಯನ್ನಾಗಿ ಆರಿಸುವುದು ಅನ್ನುವ ಮಸೂದೆಗೆ ಸೋಮಣ ಅವರು ವಿರೋಧಿಸಿದರು. ದೇಶದಲ್ಲಿ ಸ್ವಾತಂತ್ರ್ಯದ ಗಾಳಿ ಬೀಸುತ್ತಿರುವಾಗ ಬಹಿಷ್ಕೃತರು ಸರ್ಕಾರ ತಮಗೆ ಪದವಿ ಹಾಗೂ ಪುರಸ್ಕಾರಗಳನ್ನು ಕೊಡಲಿ ಎಂದು ವಿನಂತಿಸಿ ದೇಶದ ಗುಲಾಮಗಿರಿಗೆ ಬೆಂಬಲಿಸುತ್ತಿರುವುದು ಸರಿಯಲ್ಲ ಅನ್ನುವುದು ಸೋಮಣ ಅವರ ವಿರೋಧಪರ ಭಾಷಣದ ಸಾರಾಂಶವಾಗಿತ್ತು. ಸೋಮಣರ ಭಾಷಣ ಮುಗಿಯುತ್ತಲೆ ಸಿಟ್ಟಿನಿಂದ ಧಿಗ್ಗನೆ ಎದ್ದ ಸಾಹೇಬರ ಮುಖ ಕೆಂಪಡರಿತ್ತು. ಅವರು ತಮ್ಮ ಭಾಷಣದಲ್ಲಿ,

ಹಿಂದೂ ಸಮಾಜದಲ್ಲಿರುವ ನೌಕರದಾರರು ಹಾಗೂ ವಿಶೇಷವಾಗಿ ಬ್ರಾಹ್ಮಣರು ಧರ್ಮದ ಹೆಸರಿನಲ್ಲಿ ದೇಶ ಬಾಂಧವರನ್ನೇ ತಮ್ಮ ಕಾಲಡಿ ತುಳಿದು ಈಗ ಇದೇ ಜನ ಹಿಂದೂ ಮುಸಲ್ಮಾನ ಹಾಗೂ ಬ್ರಿಟಿಷ ರಾಜ್ಯ ಕಾರ್ಯಕರ್ತರ ಕಾಲು ನೆಕ್ಕಿ ಐಶಾರಾಮದ ಜೀವನ ನಡೆಸುತ್ತಿದ್ದಾರೆ. ಇದೇ ಜನ ಸ್ವಾರ್ಥಿಗಳಾಗಿ ತಮ್ಮ ಧರ್ಮ ಬಾಂಧವರನ್ನೂ ದೇಶಬಾಂಧವರನ್ನೂ ಪರಕೀಯರ ಹಾಗೂ ತಮ್ಮ ಗುಲಾಮ ಗಿರಿಯಲ್ಲಿ ಬಂಧಿಸಿ ಈ ಗುಲಾಮಗಿರಿಯನ್ನು ೫೦೦ ವರ್ಷಗಳವರೆಗೆ ಮುಂದುವರೆಸಿ ಈಗ ಇದೇ ಜನ ರಾಜಕೀಯ ಗುಲಾಮಗಿರಿಯ ವಿರುದ್ಧ ಮಾತಾಡುತ್ತಿದ್ದಾರೆ ಹಾಗೂ ಕಾಂಗ್ರೆಸ್‌ನ ಮುಂದಾಳತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಜೀವಕೊಡಲೂ ಸಿದ್ಧರಾಗಿದ್ದಾರೆ. ಈ ಜನದಲಿತರಿಗೆ ಸಾಮಾಜಿಕ ಹಾಗೂ ಧಾರ್ಮಿಕ ಸಮಾನತೆ ಕೊಡಲು ಸಿದ್ಧರಿಲ್ಲ. ದೇಶ ಹಾಗೂ ಜನತೆಯನ್ನು ಎಲ್ಲ ರೀತಿಯಿಂದಲೂ ಇವರು ಸರ್ವನಾಶಕ್ಕೀಡು ಮಾಡಿದ್ದಾರೆ. ನಾನೀಗ ಹೇಳಿರುವ ಮಾತಿನ ಬಗ್ಗೆ ಯಾರಿಗಾದರೂ ಇನ್ನೂ ಹೆಚ್ಚಿನ ಮಾಹಿತಿ ಬೇಕಿದ್ದರೆ ನಾನು ಕೊಡಬಲ್ಲೆ. ನನ್ನ ಮಾತು ಸುಳ್ಳು ಅನಿಸಿದರೆ ಧೈರ್ಯವಾಗಿ ಹಾಗೆಂದು ಹೇಳಬಹುದು ಆದರೆ ನಾನು ನನ್ನ ಮಾತನ್ನು ಸಾಬೀತುಪಡಿಸಲು ಸಿದ್ಧನಿದ್ದೇನೆ. ದಲಿತರ ಕೈಗೆ ಸಂಪತ್ತು ಹಾಗೂ ಆಡಳಿತ ಅಧಿಕಾರ ಸಿಗುತ್ತ

ಹೋದಂತೆ ಅವರ ಏಳಿಗೆಯಾಗುತ್ತದೆ. ಜಿಲ್ಲಾ ಪ್ರೆಸಿಡೆಂಟ್ ಇಲ್ಲವೆ ಶಾಸಕನಾಗುವುದು ಏಳಿಗೆಯ ಒಂದು ಮಾರ್ಗ ಹಾಗೂ ನಮ್ಮ ಹಕ್ಕು. ನಾವದನ್ನು ಪಡೆಯಲೇ ಬೇಕು. ಈ ಹಕ್ಕನ್ನು ನೀವು ಪಡೆಯ ಬೇಡಿ ಎಂದು ಸೋಮಣರಂತೆ ಹೇಳುವ ಜನ ನಮ್ಮ ಜನರ ಬುದ್ಧಿ ಕೆಡಿಸಿ ಅದೇ ಗುಲಾಮಗಿರಿಯಲ್ಲಿ ಬಂಧಿಸಿಡುವ ಆಟ ಆಡುತ್ತಿದ್ದಾರೆ. ಸೋಮಣರ ಜಾತಿಬಾಂಧವರು ಕಳೆದ ಐದು ಸಾವಿರ ವರ್ಷಗಳಿಂದ ಬ್ರಾಹ್ಮಣೇತರರು ಹಾಗೂ ದಲಿತರನ್ನು ಬೇರೆ ಬೇರೆ ರೀತಿಯಿಂದ ಸಾಕಷ್ಟು ಪೀಡಿಸಿದ್ದಾರೆ. ನಿಮಗೆ ಧಾರ್ಮಿಕ ಹಕ್ಕುಗಳಿಲ್ಲ, ಬ್ರಾಹ್ಮಣರಿಗಿಂತ ನೀವು ಕೀಳು ಅನ್ನುತ್ತ ಪುರಾಣಗಳಲ್ಲಿ ಬರೆದಿಟ್ಟಿದ್ದನ್ನು ತಮ್ಮ ತಮ್ಮ ರಾಜರ ಮೂಲಕ ಪಾಲಿಸಿಕೊಂಡು ಬರುತ್ತಿದ್ದಾರೆ. ದೇಶಾಭಿಮಾನ ಕೇವಲ ಬ್ರಾಹ್ಮಣರ ಸೊತ್ತು ಹಾಗಾಗಿ ಬಾಹ್ಮಣರೇ ದೇಶಕ್ಕಾಗಿ ಕಾರಾಗೃಹವಾಸ, ಗಲ್ಲು ಶಿಕ್ಷೆ ಅನುಭವಿಸಿದ್ದಾರೆ ಎಂದು ಕೊಚ್ಚಿಕೊಳ್ಳುತ್ತಿದ್ದಾರೆ. ಬ್ರಾಹ್ಮಣೇತರರು ಹಾಗೂ ದಲಿತರು ದೇಶಕ್ಕಾಗಿ ಶಿಕ್ಷೆ ಅನುಭವಿಸಲು ಮುಂದಾದರೆ ಇದೇ ಬ್ರಾಹ್ಮಣರು 'ನಿಮಗೆ ರಾಜಕಾರಣ ಅರ್ಥವಾಗುವುದಿಲ್ಲ'ಎಂದು ಓಡಿಸಿಯಾರು.ಸರ್ಕಾರಿ ಕಛೇರಿಗಳಲ್ಲಿ ಮುಖ್ಯ ಅಧಿಕಾರಗಳೆಲ್ಲ ಬ್ರಾಹ್ಮಣರ ಕೈಯಲ್ಲಿವೆ, ಈ ಅಧಿಕಾರಗಳನ್ನು ಬ್ರಾಹ್ಮಣೇತರರು ಇಲ್ಲವೆ ದಲಿತರು ಪಡೆಯಲು ಪ್ರಯತ್ನ ಪಟ್ಟರೆ ಇದೇ ಬ್ರಾಹ್ಮಣರು 'ನೀವು ಈ ಅಧಿಕಾರಕ್ಕೆ ಯೋಗ್ಯರಲ್ಲ' ಅನ್ನಬಹುದು. ಧರ್ಮ, ರಾಜಕಾರಣ ಎಲ್ಲದರಲ್ಲೂ ಇವರೇ ಶ್ರೇಷ್ಠರು ಉಳಿದವರೆಲ್ಲ ಕನಿಷ್ಠರು ಅನ್ನುವ ರೀತಿ ಬ್ರಾಹ್ಮಣರು ವರ್ತಿಸುತ್ತಿದ್ದಾರೆ ಹಾಗಾಗಿ ಅವರಲ್ಲಿ ಅತೀವ ಅಹಂಕಾರ ಹಾಗೂ ಬೌದ್ಧಿಕ ವ್ಯಭಿಚಾರ ಹೆಚ್ಚಿದೆ. ಬ್ರಾಹ್ಮಣೇತರ ಸಮಾಜ ಹಾಗೂ ದಲಿತ ಸಮಾಜವು ಬ್ರಾಹ್ಮಣರ ಈ ಅಹಂಕಾರ ಹಾಗೂ ಬೌದ್ಧಿಕ ವ್ಯಭಿಚಾರಕ್ಕೆ ಹೆದರಿ ಅವರ ಗುಲಾಮರಾಗಿ ಬದುಕುತ್ತಿದ್ದಾರೆ. ಈಗ ಈ ಎರಡೂ ಸಮಾಜದ ಜನರಿಗೆ ತಮ್ಮ ತಪ್ಪಿನ ಅರಿವಾಗಿದೆ. ಈ ಎರಡೂ ಸಮಾಜಗಳು ಒಟ್ಟಾಗಿ ಆತ್ಮಪ್ರಗತಿಯ ಚಳುವಳಿ ನಡೆಸಿದರೆ ಈ ಗುಲಾಮಗಿರಿಯಿಂದ ಆದಷ್ಟು ಬೇಗ ಬಿಡುಗಡೆ ಪಡೆಯಬಹುದು. ಆದರೆ ಹೀಗಾಗುವುದು ಸುಲಭ ಅನಿಸುತ್ತಿಲ್ಲ. ಏಕೆಂದರೆ ಮರಾಠಾಜನರು ಸತ್ಯಶೋಧಕ (ಸತ್ಯಶೋಧಕ ಸಮಾಜವನ್ನು ಮಹಾತ್ಮ ಜ್ಯೋತಿಬಾ ಫುಲೆಯವರು ಹುಟ್ಟು ಹಾಕಿದರು. ಒಗ್ಗಟ್ಟು, ಸಮಾನತೆ ಹಾಗೂ ಸರಳ ಧಾರ್ಮಿಕ ತತ್ವಗಳ ಆಚರಣೆ ಇವು ಸತ್ಯಶೋಧಕ ಸಮಾಜದ ವಿಚಾರಗಳಾಗಿದ್ದವು) ವಿಚಾರಗಳನ್ನು ನಂಬುತ್ತೇವೆಂದು ಎಷ್ಟೇ ಹೆಮ್ಮೆಪಟ್ಟುಕೊಂಡರೂ ಮನಸ್ಸು ಹಾಗೂ ಬುದ್ಧಿಯಿಂದ ಇಂದಿಗೂ ಕೂಡ ಅವರು ಬ್ರಾಹ್ಮಣರ ವಿಚಾರಗಳ ಅಧೀನರಾಗಿದ್ದಾರೆ. ನಮ್ಮ ದಲಿತರು ಮರಾಠಾಜನರ ಮುಖ ನೋಡುತ್ತ ಕುಳಿತುಬಿಟ್ಟಿದ್ದಾರೆ. ನಾನು ಈ ಸಮಾಜಕ್ಕೆ ಹೇಳುವುದಿಷ್ಟೆ, ನೀವು ಯಾರದ್ದೇ ಗುಲಾಮಗಿರಿ ಮಾಡುವ ಅಗತ್ಯವಿಲ್ಲ. ನಾನು ಮನಸ್ಸು ಹಾಗೂ ಬುದ್ಧಿ ಎರಡರಿಂದಲೂ ಬ್ರಾಹ್ಮಣರ ಗುಲಾಮಗಿರಿಯಿಂದ ಮುಕ್ತನಾಗಿದ್ದೇನೆ. ಅವರಪ್ಪನ ತಿಥಿ ಊಟ ತಿಂದು ಬಂದಿದ್ದೇನೆ. ಈ ಜಾತಿಯ ಜನ ತಾವೇ ಎಲ್ಲದರಲ್ಲೂ ಶ್ರೇಷ್ಠರಾಗಿರಲು ಜನರಿಗೆ ಸರಿಯಾದ ಮಾರ್ಗ ತೋರಿಸುತ್ತಿಲ್ಲ. ಅವರ ವಂಚಕತೆಯನ್ನು ಎಲ್ಲರ ಗಮನಕ್ಕೆ ತಂದು ದಲಿತರನ್ನು ಅವರಿಂದ ದೂರವಿಡುವುದು ನನ್ನ ಕರ್ತವ್ಯವೆಂದು ನಾನು ತಿಳಿದುಕೊಳ್ಳುತ್ತೇನೆ. ನಾನು ನನ್ನ ಕುರುಡು ಜನತೆಯ ಕೋಲು ಈ ಕೋಲು ಹಿಡಿದು ನನ್ನ ಜನ ಪ್ರಗತಿಯ ಮಾರ್ಗ ಹಿಡಿದರೆ ಸೋಮಣರಂತಹ ವಂಚಕರು ತೋಡಿರುವಂತಹ ಗುಂಡಿಯಲ್ಲಿ ಬೀಳಲಾರರು.

# ೭.

# ಜಾಗೃತಿಯ ದೀಪವನ್ನು ಎಂದೂ ನಂದಿಸಬೇಡಿ

ಕೊಲಾಬಾ ಜಿಲ್ಲೆಯ ಬಹಿಷ್ಕೃತರ ಪರಿಷತ್ತು ಮಹಾಡನಲ್ಲಿ ಸಿ.ಪ್ರಾ.ನಾ. ಮಂಡಳದ ನಾಟ್ಯಗೃಹದಲ್ಲಿ ಮಾರ್ಚ್ ೧೯೨೭ ಶನಿವಾರ ೧೯ ಹಾಗೂ ಭಾನುವಾರ ೨೦ನೆಯ ತಾರೀಖಿನಂದು ಜರುಗಿತು. ಪರಿಷತ್ತಿಗೆ ಸುಮಾರು ೩೦೦೦ ಜನ ದಲಿತರು ಸೇರಿದ್ದರು. ಈ ಪರಿಷತ್ತಿಗೆ ಹಾಜರಿದ್ದ ಕೆಲವು ಪ್ರಸಿದ್ಧ ಜನರಲ್ಲಿ ಮೆಸ್ಸರ್ಸ್ ಗ. ನಿ. ಸಹಸ್ರಬುದ್ಧೆ, ಅನಂತ ವಿನಾಯಕ ಚಿತ್ರೆ, ಸೀತಾರಾಮ್ ನಾಮದೇವ್ ಶಿವತರಕರ್, ಬಾಲಾರಾಮ್ ಅಂಬೇಡ್ಕರ್, ಪಾಂಡುರಂಗ ನಥುರಾಮ್ ರಾಜಭೋಜ್, ಶಾಂತಾರಾಮ್ ಅನಾಜಿ ಉಪಶಾಮ್, ಮೊರೆ, ರಾಮಚಂದ್ರ ಶಿಂಧೆ, ಧೊಂಡಿರಾಮ್ ನಾರಾಯಣ್ ಗಾಯಕವಾಡ್, ಶಿವರಾಮ್ ಗೋಪಾಲ್ ಜಾಧವ್ ಇವರು ದಲಿತರ ವತಿಯಿಂದ ಹಾಜರಿದ್ದರು. ೧೯ನೆಯ ತಾರೀಖಿನಂದು ಸಾಯಂಕಾಲ ಐದು ಘಂಟೆಗೆ ಪರಿಷತ್ತಿನ ಕಾರ್ಯಕಲಾಪಗಳಾರಂಭವಾದವು.ಆರಂಭದಲ್ಲಿ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಸಂಭಾಜಿ ತುಕಾರಾಮ್ ಗಾಯಕವಾಡ್ ಅವರು ನೆರೆದ ಜನರಿಗೆ ಸ್ವಾಗತ ಕೋರಿ ಪರಿಷತ್ತು ಆಯೋಜಿಸಿರುವುದಕ್ಕೆ ಕಾರಣ ವಿವರಿಸಿದರು. ನಂತರ ನಿಯಮದಂತೆ ಸೂಚನೆ ಹಾಗೂ ಅನುಮೋದನೆಯ ಮೇರೆಗೆ ಪರಿಷತ್ತಿನ ನಿಯೋಜಿತ ಅಧ್ಯಕ್ಷರಾದ ಡಾ. ಭೀಮರಾವ್ ರಾಮಜಿ ಅಂಬೇಡ್ಕರ್ ಎಮ್.ಎ. ಪಿಎಚ್. ಡಿ. ಡಿ.ಎಸ್‌ಸಿ. ಬಾರ್–ಎಟ್–ಲಾ ಅವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಭಾಷಣ ಮಾಡಿದರು. ತಮ್ಮ ಭಾಷಣದಲ್ಲವರು,

ಮಾನ್ಯರೆ!

ನೀವು ನನ್ನನ್ನಿಂದು ಗೌರವಿಸಿದ್ದಕ್ಕೆ ನಾನು ನಿಮಗೆ ಋಣಿ. ಈ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ನಾನು ಸ್ವೀಕರಿಸಬೇಕು ಅನ್ನುವ ಕೋರಿಕೆ ನನ್ನಲ್ಲಿ ಬಂದಾಗ ನನ್ನ ಸ್ವಭಾವದಿಂದಾಗಿ ನಾನಿದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದೆ. ಆದರೆ ನಾನದನ್ನು ತಪ್ಪಿಸಲಾರದೆ ಹೋದೆ, ಹಾಗೇನಾದರೂ ತಪ್ಪಿಸಿದರೆ ಜನ ಸಿಟ್ಟಿಗೇಳಬಹುದು ಎಂದು ಗೊತ್ತಿದ್ದರಿಂದ ನಾನು ಸಂತೋಷದಿಂದ ಈ ಜವಾಬ್ದಾರಿಯನ್ನು ಒಪ್ಪಿದೆ. ಹಾಗಾಗಿ ಈಗ ನಿಮ್ಮೆದುರಿಗಿದ್ದೇನೆ.

ಮಾನ್ಯರೆ! ನಾನಿಲ್ಲಿಗೆ ಬಂದಿದ್ದು ಒಂದು ರೀತಿಯಿಂದ ನನಗೆ ಸಂತೋಷವಾಗುತ್ತಿದೆ. ಪ್ರತಿಯೊಬ್ಬರಿಗೂ ತಮ್ಮ ಊರಿನ ಬಗ್ಗೆ ಒಂದು ಪಕ್ಷ ಅಭಿಮಾನವಿರದಿದ್ದರೂ ಪ್ರೀತಿಯಂತೂ ಇರುತ್ತದೆ. ನನ್ನ ತಂದೆ ಪೆನ್ಶನ್ ತೆಗೆದುಕೊಂಡು ಶಾಶ್ವತವಾಗಿ ದಾಪೋಲಿಗೆ ಬಂದು ಇರತೊಡಗಿದರು. ನನ್ನ ಶಿಕ್ಷಣ ದಾಪೋಲಿಯಲ್ಲೇ ಆರಂಭವಾದದ್ದು. ಆದರೆ ಅನಿವಾರ್ಯ ಕಾರಣದಿಂದಾಗಿ ನಾನು ಘಟ್ಟದ ಮೇಲೆ ಹೋಗಿ ವಾಸಿಸಬೇಕಾಯಿತು. ಇಂದು ಇಪ್ಪತ್ತೈದು ವರ್ಷಗಳ ನಂತರ ನಾನು ಘಟ್ಟ ಇಳಿದು ಬಂದಿದ್ದೇನೆ. ಸೃಷ್ಟಿ ತನ್ನ ಸೌಂದರ್ಯದಿಂದ ಶೃಂಗರಿಸಿರುವಂತಹ ಪ್ರದೇಶಕ್ಕೆ ಬಂದರೆ ಯಾರಿಗೆ ತಾನೆ ಸಂತೋಷವಾಗುವುದಿಲ್ಲ? ಇದು ತನ್ನ ಮಾತೃಭೂಮಿಯೆಂದು ಹೆಮ್ಮೆಯಿರುವವನಿಗೆ ಎರಡು ಪಟ್ಟು ಸಂತೋಷವಾದರೆ ಆಶ್ಚರ್ಯವಿಲ್ಲ. ಆದರೆ

ನನಗಿಂದು ಸಂತೋಷದಷ್ಟೆ ದುಃಖವೂ ಆಗುತ್ತಿದೆ. ಒಂದು ಕಾಲದಲ್ಲಿ ಅಸ್ಪೃಶ್ಯರಿಗಾಗಿ ಇದು ಸಾಕಷ್ಟು ಮುಂದುವರಿದ ಪ್ರದೇಶವಾಗಿತ್ತು, ದಲಿತ ಅಧಿಕಾರಿಗಳಿಂದ ತುಂಬಿತ್ತು. ಹಾಗೆಯೇ ಮೇಲ್ಜಾತಿಯ ಜನ ಬಿಟ್ಟರೆ ಉಳಿದ ಜಾತಿಯ ಜನರಿಗಿಂತ ದಲಿತರೆ ಹೆಚ್ಚು ಕಲಿತವರಾಗಿದ್ದರು.

ಈ ಏಳಿಗೆಯಹಿಂದೆ ಕೆಲಸಕ್ಕಾಗಿ ಸೈನ್ಯದಲ್ಲಿ ಸಿಗುತ್ತಿದ್ದ ಪ್ರವೇಶವೂ ಒಂದು ಕಾರಣ. ಬ್ರಿಟಿಷ್ ಸರ್ಕಾರ ಅಸ್ತಿತ್ವಕ್ಕೆ ಬರುವ ಮೊದಲು ದಲಿತರಿಗೆ ತಮ್ಮ ಏಳಿಗೆ ಮಾಡಿಕೊಳ್ಳುವ ಅವಕಾಶ ಎಷ್ಟಿತ್ತೋ ಗೊತ್ತಿಲ್ಲ ಆದರೆ ಅಸ್ಪೃಶ್ಯತೆಯ ಭಾವನೆ ಎಷ್ಟು ತೀವ್ರವಾಗಿತ್ತೆಂದರೆ ನಡೆಯುವಾಗ ತನ್ನ ನೆರಳು ಮೇಲ್ಜಾತಿಯವನ ಮೇಲೆ ಬೀಳದಂತೆ ಅಸ್ಪೃಶ್ಯನಿಗೆ ಬೇರೆ ದಾರಿ ಬಳಸಿಕೊಂಡು ಹೋಗಬೇಕಿತ್ತು. ದಾರಿಯಲ್ಲಿ ಉಗುಳಿದರೆ ಆ ದಾರಿ ಅಪವಿತ್ರವಾದೀತು ಎಂದು ಕತ್ತಿನಲ್ಲಿ ಗಡಿಗೆ ಕಟ್ಟಿಕೊಂಡು ಅದರಲ್ಲಿ ಉಗುಳಬೇಕಿತ್ತು ಹಾಗೂ ತಾನು ದಲಿತ ಎಂದು ಉಳಿದವರಿಗೆ ಗೊತ್ತಾಗಲು ಕೈಯಲ್ಲಿ ಕಪ್ಪು ದಾರ ಕಟ್ಟಿಕೊಳ್ಳಬೇಕಿತ್ತು. ಆ ಕಾಲದಲ್ಲಿ ದಲಿತರಿಗೆ ಅವಕಾಶಗಳಿರುತ್ತಿದ್ದರೂ ಕಡಿಮೆ ಇರುತ್ತಿರಬೇಕು. ಬ್ರಿಟಿಷರು ಈ ದೇಶದಲ್ಲಿ ಕಾಲಿಡುತ್ತಲೆ ದಲಿತರು ಸ್ವಲ್ಪ ತಲೆಯೆತ್ತಿ ಓಡಾಡುವಂತಾಯಿತು. ಈ ಅವಕಾಶವನ್ನು ಬಳಸಿಕೊಂಡು ದಲಿತರು ತಮ್ಮಲ್ಲೆಷ್ಟು ಧೈರ್ಯ ಶೌರ್ಯಗಳಿವೆ ಹಾಗೂ ತಮ್ಮ ಬುದ್ಧಿ ಎಷ್ಟು ಚುರುಕಾಗಿದೆ ಅನ್ನುವುದನ್ನು ತೋರಿಸಿಕೊಟ್ಟರು. ಇದಕ್ಕೆ ಪುರಾವೆಗಳು ಬೇಕಿದ್ದರೆ ಹಳೆಯ ಆರ್ಮಿಯ ಪಟ್ಟಿಯನ್ನು ತೆಗೆದು ನೋಡಿದರೂ ಸಾಕು. ಈ ಪ್ರದೇಶದ ಅಸ್ಪೃಶ್ಯರಲ್ಲಿ ಎಷ್ಟು ಜನ ಸುಭೇದಾರರಾಗಿದ್ದರು ಎಷ್ಟು ಜನ ಹವಾಲ್ದಾರರಾಗಿದ್ದರು? ನಾರ್ಮಲ್ ಶಾಲೆಯಂತಹ ಶಾಲೆಯಲ್ಲಿ ಕಲಿತು ಎಷ್ಟು ಜನ ಹೆಡ್‌ಮಾಸ್ತರನ ಹುದ್ದೆಗೇರಿದರು? ಎಜುಟಂಟ್ ಕ್ಲಾರ್ಕ್ ಹಾಗೂ ಕ್ವಾರ್ಟರ್ ಮಾಸ್ಟರ್ ಕ್ಲಾರ್ಕ್‌ನಂತಹ ಜವಾಬ್ದಾರಿಯುತ ಹುದ್ದೆಗಳನ್ನು ಎಷ್ಟು ಜನ ಅಲಂಕರಿಸಿದರು ಅನ್ನುವ ವಿವರಗಳನ್ನು ಕೊಡುತ್ತ ಹೋದರೆ ನನ್ನ ಭಾಷಣ ತನ್ನ ಅವಧಿ ಮೀರುತ್ತದೆ. ಇಷ್ಟು ಹೇಳಿದರೂ ಸೇವಕರೆಂದು ಬದುಕುತ್ತಿದ್ದ ಜನ ಸೈನ್ಯದಲ್ಲಿ ಕೆಲಸ ಮಾಡಿ ವೈಭವಸಂಪನ್ನರಾಗಿ ಇತರ ಜಾತಿಗಳ ಮೇಲೆ ಅಧಿಕಾರ ಚಲಾಯಿಸುತ್ತಿದ್ದರು ಎಂದು ಹೇಳಿದರೆ ತಪ್ಪಿಲ್ಲ. ಮಾಂಗ್ ಮಾದಿಗರನ್ನು ಮುಟ್ಟಿಕೊಳ್ಳದಿದ್ದ ಮರಾಠಾ ಜನ ಹಾಗೂ ಜೋಹಾರ್ ಇಲ್ಲವೆ ರಾಮರಾಮ್ ಅನ್ನದಿದ್ದರೆ ತಮ್ಮ ಅವಮಾನ ಅನ್ನುತ್ತಿದ್ದ ಮರಾಠಾ ಜನ ಮಾಂಗ್ ಸಿಪಾಯಿ ಹಾಗೂ ಮಾದಿಗ ಚಮ್ಮಾರರಿಗೆ ಬಗ್ಗಿ ನಮಸ್ಕರಿಸುತ್ತಿದ್ದರು. ಹಾಗೂ 'ಯಾಕೋ??' ಅಂದರೆ ಈ ದಲಿತ ಅಧಿಕಾರಿಗಳೆದುರು ಕಣ್ಣೆತ್ತಿ ನೋಡುವ ಧೈರ್ಯವೂ ಆ ಮೇಲ್ಜಾತಿಯ ಜನರಲ್ಲಿರಲಿಲ್ಲ. ಇಷ್ಟೊಂದು ಅಧಿಕಾರ ದೇಶದ ಯಾವುದೇ ಭಾಗದಲ್ಲಿ ಇದಕ್ಕೂ ಮುನ್ನ ದಲಿತರಿಗೆ ಸಿಕ್ಕಿರಲಿಲ್ಲ. ಈ ಪ್ರಾಂತ್ಯದ ಜನ ಕೇವಲ ತಮ್ಮ ಮಟ್ಟವನ್ನಷ್ಟೆ ಏರಿಸಿರಲಿಲ್ಲ ಇವರುಗಳು ಸಾಕಷ್ಟು ವಿದ್ಯಾವಂತರಾಗಿದ್ದರು. ಅವರಲ್ಲಿ ೯೦% ಜನ ಕಲಿತವರಾಗಿರುತ್ತಿದ್ದರು. ಅಷ್ಟೇಯಲ್ಲದೆ ೫೦% ಜನ ಮೇಲ್ದರ್ಜೆಯ ಸುಶಿಕ್ಷಿತರಾಗಿರುತ್ತಿದ್ದರು. ವಿಶೇಷವಾಗಿ ಗಮನಿಸಬೇಕಾದ ಸಂಗತಿಯೆಂದರೆ ಗಂಡಸರಂತೆ ಹೆಂಗಸರು ಕೂಡ ವಿದ್ಯೆ ಕಲಿಯುತ್ತಿದ್ದರು. ಕೆಲವು ಸ್ತ್ರೀಯರು ಗಂಡಸರ ತುಂಬಿದ ಸಭೆಯಲ್ಲಿ ಶಾಸ್ತ್ರ ಪುರಾಣಗಳ ಅರ್ಥ ಹೇಳುವಷ್ಟು ಕಲಿತಿರುತ್ತಿದ್ದರು. ಈ ಶಿಕ್ಷಣದ ಪ್ರಗತಿಗೆ ಅವರ ಸೈನ್ಯದ ಕೆಲಸವೂ ಒಂದು ಕಾರಣವಾಗಿತ್ತು.

ಬ್ರಿಟಿಷ್ ರಾಜ್ಯ ಆರಂಭವಾಗಿ ೧೫೦ ವರ್ಷಗಳು ಕಳೆದರೂ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬರುತ್ತಿಲ್ಲ ಎಂದು ಖೇದಗೊಂಡು ಆದಷ್ಟು ಬೇಗ ಅದನ್ನು ಜಾರಿಗೆ ತನ್ನಿ ಎಂದು ದುಂಬಾಲು ಬೀಳುತ್ತಿರುವ ಜನರಿಗೆ ಒಂದು ಮಾತು ಸರಿಯಾಗಿ ತಿಳಿದಿಲ್ಲ. ಈಸ್ಟ್ ಇಂಡಿಯಾ ಕಂಪನಿಯು ತಮ್ಮ ಲಾಭಕ್ಕೆ ಹೆಚ್ಚು ಮಹತ್ವ ಕೊಟ್ಟು ಜನತೆಯ ಶಿಕ್ಷಣದ ಕಡೆ ಹೆಚ್ಚು ಗಮನ ಕೊಡಲಿಲ್ಲ ಎಂದು

ಶಿಕ್ಷಣಪ್ರೇಮಿ ಜನ ದೂಷಿಸುತ್ತಾರೆ, ಆದರೆ ಈ ಮಾತು ನಿಜವಲ್ಲ. ಈಸ್ಟ್ ಇಂಡಿಯಾ ಕಂಪನಿಯ ಮಿಲಿಟರಿ ಖಾತೆಯಲ್ಲಿ ಕೆಲಸ ಮಾಡುವ ಜನರ ಬಗ್ಗೆಯಂತೂ ಈ ಮಾತು ಸುಳ್ಳು. ಪೀಳಿಗೆಗಳಿಂದ ಮಿಲಿಟರಿಯಲ್ಲಿ ಕೆಲಸ ಮಾಡಿದ ಜನ ಇದಕ್ಕೆ ಸಾಕ್ಷಿ ಕೊಟ್ಟಾರು. ಮಿಲಿಟರಿಯಲ್ಲಿ ಕೆಲಸ ಮಾಡುವವರಿಗೆ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವಿತ್ತು. ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಸಮನಾದ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯಿರುತ್ತಿತ್ತು. ಹುಡುಗರಿಗೆ ಪ್ರಾಥಮಿಕ ಶಿಕ್ಷಣವನ್ನಲ್ಲದೆ ಕೆಳದರ್ಜೆಯ ಮಾಧ್ಯಮಿಕ ಶಿಕ್ಷಣವನ್ನೂ ಕಡ್ಡಾಯವಾಗಿ ಕೊಡಿಸಲಾಗುತ್ತಿತ್ತು. ಯಾವುದೇ ವಿಷಯವನ್ನು ಕಡ್ಡಾಯ ಮಾಡುವುದು ಸುಲಭವಾಗಿರಲಿಲ್ಲ. ಮಗು ಶಾಲೆಗೆ ಹೋಗದಿದ್ದರೆ ತಂದೆತಾಯಂದಿರು ದಂಡ ಕೊಟ್ಟು ಬಿಡಿಸಿಕೊಳ್ಳಲಾಗುತ್ತಿರಲಿಲ್ಲ.ಹೊಸದಾಗಿ ಭರ್ತಿಯಾದ ವಯಸ್ಸಾದ ವಿದ್ಯಾರ್ಥಿಗಳಿಗೆ ರಾತ್ರಿ ಶಾಲೆಗೆ ಹೋಗುವ ಕಡ್ಡಾಯವಿತ್ತು. ಕಂಪನಿಯ ರಾಜ್ಯ ಮುಗಿದು ಬಾದಶಾಹಿ ರಾಜ್ಯ ಆರಂಭವಾಗಿ ೫೭ನೆಯ ಇಸವಿಯ ದಂಗೆಯನ್ನು ಮೆಟ್ಟುಹಾಕಿದ ಮೇಲೆ ಬ್ರಿಟಿಷ್ ಸರ್ಕಾರ ಭಾರತದ ಸೈನ್ಯಕ್ಕೆ ಸಂಬಂಧಿಸಿದಂತೆ ತನಿಖೆ ಮಾಡಲು ಒಂದು ಕಮಿಶನ್ ನೇಮಿಸಿತ್ತು. ಅದರಲ್ಲಿಯ ಕೆಲವು ಸಾಕ್ಷಿದಾರರು ಸೈನ್ಯದಲ್ಲಿ ಶಿಕ್ಷಣದ ಪ್ರಸಾರ ಮಾಡಿದರೆ ಅನರ್ಥವಾದೀತು ಎಂದು ಸಾರಿದರು. ಅದಕ್ಕೆ ಹೆದರಿ ಮಿಲಿಟರಿ ಖಾತೆಯಲಿದ್ದ ಕಡ್ಡಾಯ ಶಿಕ್ಷಣವನ್ನು ಮೊದಲಿಗೆ ಕಡೆಗಾಣಿಸಿ ಕೊನೆಗೊಂದು ದಿನ ಅದನ್ನು ತೆಗೆದುಹಾಕಲಾಯಿತು. ಅದೇನೇ ಇರಲಿ ಎಲ್ಲಿಯವರೆಗೆ ಕಡ್ಡಾಯ ಶಿಕ್ಷಣವಿತ್ತೊ ಅಲ್ಲಿಯವರೆಗೆ ದಲಿತರಿಗೆ ಸಾಕಷ್ಟು ಲಾಭವಾಯಿತು. ಅವರು ತಮ್ಮ ಬಗ್ಗೆ ಅಭಿಮಾನವೆನಿಸಬೇಕು ಅನ್ನುವಷ್ಟರಮಟ್ಟಿಗೆ ಶಿಕ್ಷಣ ಪಡೆದರು.ಈ ಜ್ಞಾನದ ಪ್ರಸಾರಣೆಯಿಂದ ಅಸ್ಪೃಶ್ಯರಲ್ಲಾದ ಗ್ರಂಥ ಸಂಗ್ರಹ ಅವರ ಜನಸಂಖ್ಯೆಗಿಂತಲೂ ಹೆಚ್ಚಿತ್ತು ಅಂದರೂ ಅತಿಶಯೋಕ್ತಿಯಾಗಲಾರದು. ಶ್ರೀಧರ ಸ್ವಾಮಿಯವರ ಗ್ರಂಥದ ಕೈಬರಹವಂತೂ ಸಾಕಷ್ಟಿವೆ. ಜೊತೆಗೆ ಮುಕುಂದರಾಜ, ಜ್ಞಾನೇಶ್ವರ, ಹಾಗೂ ಮುಕ್ತೇಶ್ವರನಂತಹ ಮಹಾರಾಷ್ಟ್ರದ ಹಳೆಯ ಹಾಗೂ ಮಹಾನ್ ಕವಿಗಳ ಗ್ರಂಥದ ಹಸ್ತಲಿಖಿತಗಳನ್ನು ಅನೇಕ ದಲಿತರಲ್ಲಿ ಕಂಡಿದ್ದೇನೆ. ಅಷ್ಟೇಯಲ್ಲ ದಲಿತರ ಮನೆಗಳಲ್ಲಿ ಅಪರೂಪವಾದಂತಹ ಕೆಲವು ಗ್ರಂಥಗಳು ಸಿಗಬಹುದು ಅನ್ನುವ ಖಾತ್ರಿ ನನಗಿದೆ. ಜ್ಞಾನೇಶ್ವರ ಮಹಾರಾಜರು ಪಂಚೀಕರಣ ಅನ್ನುವ ಗ್ರಂಥವೊಂದನ್ನು ಬರೆದಿದ್ದರು. ಈ ಗ್ರಂಥ ಅಷ್ಟೇನೂ ಹೆಸರುವಾಸಿಯಾಗಿರಲಿಲ್ಲ ಆದರೆ ಅದನ್ನು ನಾನು ನನ್ನ ದಿವಂಗತ ಗೆಳೆಯನೊಬ್ಬನ ಮನೆಯಲ್ಲಿ ನೋಡಿದ್ದೆ. ಕೆಲವು ವರ್ಷಗಳ ಹಿಂದೆ ಶ್ರೀ. ಪಾಂಗಾರಕರ್ ಅವರು ರಾಘವಚಿತ್ತಘನ ಅನ್ನುವ ಕವಿ ರಚಿಸಿರುವ 'ಜ್ಞಾನಸುಧಾ' ಅನ್ನುವ ಗ್ರಂಥ ಯಾರಲ್ಲಾದರೂ ಇದ್ದರೆ ತಿಳಿಸಿ ಅನ್ನುವ ಜಾಹಿರಾತನ್ನು ಕೇಸರಿ ಪತ್ರಿಕೆಯಲ್ಲಿ ಕೊಟ್ಟಿದ್ದರು. ಆ ಗ್ರಂಥದ ಹಸ್ತಪ್ರತಿ ಅವರಿಗಿನ್ನೂ ಸಿಕ್ಕಿರದಿದ್ದರೆ ನನ್ನ ಗೆಳೆಯನೊಬ್ಬನಲ್ಲಿ ಅದನ್ನವರು ನೋಡಬಹುದು. ದಲಿತರಿಗೆ ವಿದ್ಯೆಯ ಎಲ್ಲ ಬಾಗಿಲುಗಳು ಮುಚ್ಚಿದ್ದಂತಹ ಕಾಲದಲ್ಲಿ ಇಂತಹ ಗ್ರಂಥಗಳನ್ನು ಸಂಗ್ರಹಿಸಲು ಅವರಿಗೆ ಎಷ್ಟು ಕಷ್ಟವಾಗಿರಬಹುದು? ಹಣ ಎಷ್ಟು ಖರ್ಚಾಗಿರಬಹುದು ಅನ್ನುವುದು ಅವರಿಗೇ ಗೊತ್ತು. ಈ ಜ್ಞಾನದ ಬಯಕೆ ಆ ಕಾಲದ ಸಮಾಜಕ್ಕೆ ಭೂಷಣವಾಗಿತ್ತು ಅನ್ನುವುದರಲ್ಲಿ ಬೇರೆ ಮಾತಿಲ್ಲ ಆದರೆ ಮತ್ತೊಂದು ದೃಷ್ಟಿಯಿಂದ ನೋಡಿದಾಗ ಆ ಕಾಲದ ಜನ ತಮಗೆ ದೊರಕಿದ ಜ್ಞಾನವನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡರು ಅನ್ನುವುದು ಕಾಣುತ್ತದೆ.

ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವವರನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ೧. ಹೆಸರು ಗಳಿಸಲು ತೊಡಗಿಕೊಳ್ಳುವವರು ಹಾಗೂ ೨. ನಿಜವಾಗಿಯೂ ಕೆಲಸ ಮಾಡಲೆಂದೇ ತೊಡಗಿಕೊಳ್ಳುವವರು. ಹೆಚ್ಚಾಗಿ ಹೆಸರು ಗಳಿಸಲೆಂದೆ ತಮ್ಮನ್ನು ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುತ್ತಾರೆ. ಇತ್ತೀಚೆಗೆ ದಲಿತರಲ್ಲೂ ಹೆಸರುವಾಸಿಯಾಗಲು ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿಕೊಂಡಿರುವ ನಾಯಕರೇ

ಹೆಚ್ಚಾಗಿದ್ದಾರೆ. ದಲಿತರಲ್ಲಿ ಜಾಗೃತಿ ಬೆಳೆಸಲು ನಾವೇ ಕಾರಣ ಎಂದು ಪೂನಾದ ಜನ ಹೇಳಿಕೊಳ್ಳುತ್ತಾರೆ, ಮುಂಬಯಿಯ ಕೆಲವು ಜನಪ್ರಿಯ ಜನ ಕೂಡ ಈ ಶ್ರೇಯಸ್ಸು ತಮ್ಮದು ಎಂದು ಹೇಳಿಕೊಳ್ಳುತ್ತಿದ್ದಾರೆ. ಡಿಪ್ರೆಸ್ಡ್ ಕ್ಲಾಸ್ ಮಿಶನ್ ಸೊಸೈಟಿ, ಭಾರತೀಯ ನಿರಾಶ್ರಿತ ಸಹಾಯ ಮಂಡಳಿಯ ಕೆಲವು ಕಾರ್ಯಕರ್ತರು ದಲಿತರಲ್ಲಿ ಜಾಗೃತಿಯುಂಟಾಗಲು ನಾವೇ ಕಾರಣ ಅನ್ನುತ್ತಿದ್ದಾರೆ. ಹೀಗೇ ಬೇಡಿ ಸನ್ಮಾನ ಪಡೆಯುವವರಿಗೆ ಅಸ್ಪೃಶ್ಯೋನ್ನತಿ ಚಳುವಳಿಯ ಇತಿಹಾಸ ಗೊತ್ತಿಲ್ಲ. ಮುಂಬಯಿಯಲ್ಲಿ ದಲಿತರ ಸಾರ್ವಜನಿಕ ಕೆಲಸ ಕಾರ್ಯ ಮಾಡಲು ಕಾಲಾಂತರದಿಂದ ಹುಟ್ಟಿಕೊಂಡ ಮೊದಲ ಸಂಸ್ಥೆ 'ಅನಾರ್ಯ ದೋಷ ಪರಿಹಾರಕ ಮಂಡಳಿ' ಅನ್ನುವುದು ಸಂಶೋಧನೆಗಳಿಂದ ತಿಳಿದುಬರುತ್ತದೆ. ೧೮೯೩ರಲ್ಲಿ ದಲಿತರನ್ನು ಸೈನ್ಯದಲ್ಲಿ ಭರ್ತಿಮಾಡಿಕೊಳ್ಳಲು ನಿರಾಕರಿಸಿದಾಗ ಇದೇ ಸಂಸ್ಥೆಯು ಪ. ವಾ. ಮಹಾದೇವ್ ಗೋವಿಂದ ರಾನಡೆ ಅವರ ಸಹಾಯದಿಂದ ಸರ್ಕಾರಕ್ಕೊಂದು ದೊಡ್ಡ ಅರ್ಜಿ ಬರೆದಿತ್ತು. ಈ ಉದಾಹರಣೆಯಿಂದ ಈ ಸಂಸ್ಥೆ ದೊಡ್ಡ ದೊಡ್ಡ ಜನರೊಡನೆ ಮಾತುಕತೆ ನಡೆಸಿತ್ತು ಅನ್ನುವುದು ತಿಳಿಯುತ್ತದೆ. ಇದೇ ಸಂಸ್ಥೆಯು ಒಂದು ಪ್ರಶ್ನೆಗಳ ಪಟ್ಟಿ ತಯಾರಿಸಿ ಅದರಲ್ಲಿ ಸಾಮಾಜಿಕ ಸುಧಾರಣೆ ಮಾಡದೆ ನಿಮಗೆ ರಾಜಕೀಯ ಸುಧಾರಣೆ ಬೇಡುವ ಹಕ್ಕು ಎಲ್ಲಿದೆ? ಅನ್ನುವ ಪ್ರಶ್ನೆ ಕೇಳಿತ್ತು. ಇದರಿಂದ ಸಂಸ್ಥೆಗೆ ಎಷ್ಟು ಶಕ್ತಿಯಿತ್ತು ಅನ್ನುವುದು ಗೊತ್ತಾಗುತ್ತದೆ. ೧೮೯೮ರಲ್ಲಿ ಸರ್ ರಾಬರ್ಟ್ ರಿಸ್ಲೆ ಸಾಹೇಬರು ಭಾರತೀಯರ ರೀತಿ ರಿವಾಜುಗಳನ್ನು ಸಂಗ್ರಹಿಸಲು ಮಾಹಿತಿ ಸಂಗ್ರಹಿಸುತ್ತಿದ್ದಾಗ ತನಗೆ ಬೇಕಾಗಿರುವ ಮಾಹಿತಿಯ ಪ್ರಶ್ನೆಗಳ ಪಟ್ಟಿಯೊಂದನ್ನು ಈ ಸಂಸ್ಥೆಗೆ ಕಳಿಸಿದ್ದರು. ಇದರಿಂದ ಸರ್ಕಾರವೂ ಗಮನಿಸಬಹುದಾದಂತಹ ಹೆಸರು ಈ ಸಂಸ್ಥೆಗಿತ್ತು ಅನ್ನುವುದನ್ನು ಕಾಣಬಹುದು. ಇದೆಲ್ಲಕ್ಕೂ ನಾನು ಪುರಾವೆ ಕೊಡಬಲ್ಲೆ ಏಕೆಂದರೆ ಇತ್ತೀಚೆಗಷ್ಟೆ ಈ ಸಂಸ್ಥೆಯ ಎಲ್ಲ ಕಾಗದ ಪತ್ರಗಳು ನನ್ನ ಕೈ ಸೇರಿವೆ. ಈ ಸಂಸ್ಥೆ ರತ್ನಗಿರಿ ಜಿಲ್ಲೆಯ ದಾಪೋಲಿಯಲ್ಲಿ ಸ್ಥಾಪನೆಯಾಗಿದ್ದರಿಂದ ಅಸ್ಪೃಶ್ಯೋನ್ನತಿ ಚಳುವಳಿಯನ್ನು ಆರಂಭಿಸುವ ಶ್ರೇಯಸ್ಸನ್ನು ಕೊಡುವುದಾದರೆ ಇದೇ ಸಂಸ್ಥೆಗೆ ಕೊಡಬೇಕು. ಈ ಸಂಸ್ಥೆಯ ಚಾಲಕರು ತಮ್ಮ ಸಂಸ್ಥೆಯ ವತಿಯಿಂದ ಕೇವಲ ದಲಿತರ ತೊಂದರೆಗಳನ್ನು ದೂರ ಮಾಡಿದ್ದಷ್ಟೇಯಲ್ಲದೆ ತಮ್ಮ ಲೇಖನಗಳಿಂದ ದಲಿತರಲ್ಲಿ ಅರಿವು ಮೂಡಿಸುವ ಕೆಲಸಗಳನ್ನೂ ಸಾಕಷ್ಟು ಮಾಡಿದ್ದಾರೆ. ಈ ಸಂಸ್ಥೆಯ ಅನೇಕ ಚಾಲಕರು ಸತ್ಯಶೋಧಕ ಸಮಾಜದ ನಾಯಕರಾದ ಜ್ಯೋತಿಬಾ ಫುಲೆಯವರ ಉತ್ಸಾಹಿ ಶಿಷ್ಯರು ಹಾಗೂ ನಿಜವಾದ ಸಂಗಾತಿಗಳು.ಇಲ್ಲಿ ಕೈಲಾಸವಾಸಿ ಗೋಪಾಳಬುವಾ ವಲಂಗಕರ್ ಅವರ ಹೆಸರು ಹೇಳಲಿಲ್ಲ ಅಂದರೆ ತಪ್ಪಾಗುತ್ತದೆ. ಅವರು ತಮ್ಮ ಲೇಖನಗಳ ಮೂಲಕ ಮಾಡಿರುವ ಜನಜಾಗೃತಿಗೆ ಸಾಟಿಯಿಲ್ಲ. ಯಾರಿಗಾದರೂ ಆ ಲೇಖನಗಳನ್ನು ಓದುವುದಿದ್ದರೆ 'ದೀನಬಂಧು' ವಿನ ಹಳೆಯ ಫೈಲುಗಳನ್ನು ತೆಗೆದು ಓದಬಹುದು.

ಒಂದು ಕಾಲದಲ್ಲಿ ಉನ್ನತ ಸ್ಥಿಯಲ್ಲಿದ್ದ ಜನ ಇಂದೇಕೆ ಇಷ್ಟು ಅವನತಿಗಿಳಿದಿದ್ದಾರೆ? ತಾರತಮ್ಯವಾಗಿ ನೋಡಿದರೆ ಈ ಪ್ರಾಂತ್ಯದಲ್ಲಿ ಇರುವಷ್ಟು ದಲಿತ ಬಡವರು, ಅಶಿಕ್ಷಿತರು ಹಾಗೂ ಮೂಢ ಜನ ಬೇರೆ ಯಾವ ದಲಿತ ವರ್ಗದಲ್ಲೂ ಇಲ್ಲ ಅನ್ನಬಹುದು. ಈ ಪ್ರಾಂತ್ಯದ ದಲಿತರಿಗೆ ಈ ಶೋಚನೀಯ ಸ್ಥಿತಿ ಬಂದಿದ್ದು ಹೇಗೆ ಅನ್ನುವುದೊಂದು ಗೂಢ ಪ್ರಶ್ನೆ. ಬ್ರಿಟಿಷ್ ಸರ್ಕಾರ ದಲಿತರನ್ನು ಸೈನ್ಯದಲ್ಲಿ ಭರ್ತಿ ಮಾಡಲು ನಿರಾಕರಿಸಿದ್ದರಿಂದ ಅವರಿಗೆ ಈ ಪರಿಸ್ಥಿತಿಯುಂಟಾಗಿದೆ ಅನ್ನುವುದೊಂದೇ ಇದಕ್ಕೆ ಕೊಡಲಾಗುತ್ತಿರುವ ಉತ್ತರ. ಇದು ಸಾಕಷ್ಟು ನಿಜ ಅನ್ನುವುದರಲ್ಲಿ ಅನುಮಾನವಿಲ್ಲ. ರಾಜಕೀಯ ದೃಷ್ಟಿಯಿಂದ, ನೈತಿಕ ಹಾಗೂ ಆರ್ಥಿಕ ದೃಷ್ಟಿಯಿಂದ ಯಾವುದೇ ಪ್ರಜೆಗಳಿಗೆ ಸರ್ಕಾರಿ ಕೆಲಸದಲ್ಲಿ ಸೇರಿಸಿಕೊಳ್ಳದಿರುವುದು ಅನ್ಯಾಯ. ದಲಿತರನ್ನು ಸೈನ್ಯದಲ್ಲಿ ಭರ್ತಿಮಾಡಿಕೊಳ್ಳಲು ಒಪ್ಪದಿರುವುದು ಪಕ್ಷಪಾತದ ಧೋರಣೆ ಹೌದು, ಜೊತೆಗೆ

ವಿಶ್ವಾಸಘಾತ ಹಾಗೂ ಮಿತ್ರದ್ರೋಹದ ಲಕ್ಷಣವೂ ಹೌದು. ದಲಿತರ ಸಹಾಯವಿಲ್ಲದೆ ಬ್ರಿಟಿಷರು ಈ ದೇಶದಲ್ಲಿ ಕಾಲಿಡಲು ಸಾಧ್ಯವಾಗುತ್ತಲೇ ಇರಲಿಲ್ಲ. ಮರಾಠರನ್ನು ಮೆಟ್ಟಿಹಾಕಲು ಅವರಿಗೆ ಹೇಗೆ ಸಾಧ್ಯವಾಯಿತು? ಅನ್ನುವುದರ ಬಗ್ಗೆ ಇತಿಹಾಸ ಸಂಶೋಧಕರಿಂದ ಅನೇಕ ಕಾರಣಗಳನ್ನು ಕೊಡಲಾಗುತ್ತದೆ. ಕೆಲವು ಇತಿಹಾಸಕಾರರು ಮರಾಠರಲ್ಲಿ ಹೆಚ್ಚಿದ್ದ ಜಾತಿಭೇದ ಒಂದು ಕಾರಣ ಅನ್ನುತ್ತಾರೆ. ಮತ್ತೊಬ್ಬರು ಮರಾಠರಲ್ಲಿ ಹೆಚ್ಚುತ್ತಿದ್ದ ವೈಷಮ್ಯ ಹಾಗೂ ಒಡಕು ಎಂದು ಹೇಳುತ್ತಾರೆ. ಆದರೆ ಈ ಯಾವುದೇ ಕಾರಣಗಳು ನಿಜವಲ್ಲ ಎಂದು ನನಗನಿಸುತ್ತದೆ. ಮರಾಠರಲ್ಲಿ ಹೆಚ್ಚುತ್ತಿದ್ದ ಜಾತಿಭೇದ ಹಾಗೂ ವೈಶಮ್ಯದಿಂದ ಮರಾಠರ ಶಕ್ತಿ ಕ್ಷೀಣಿಸುತ್ತಿತ್ತು ನಿಜ ಆದರೆ ಬ್ರಿಟೀಷರೇನು ಹೆಚ್ಚು ಶಕ್ತಿವಂತರಾಗಿರಲಿಲ್ಲ. ನಿಜ ಹೇಳಬೇಕೆಂದರೆ ಬ್ರಿಟಿಷರು ಈ ದೇಶವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದ ಕಾಲದಲ್ಲಿ ನೇಪೋಲಿಯನ್ನನು ಇಂಗ್ಲಂಡ್ ದೇಶವನ್ನು ಎಷ್ಟರಮಟ್ಟಿಗೆ ವಿನಾಶದ ಅಂಚಿನಲ್ಲಿ ತಂದಿಟ್ಟಿದ್ದನೆಂದರೆ ಭಾರತವನ್ನಾಳುತ್ತಿದ್ದ ಅವರದೇ ಈಸ್ಟ್ ಇಂಡಿಯಾ ಕಂಪನಿಗೆ ಅವರು ಹಣಸಹಾಯವಾಗಲಿ ಸೈನ್ಯದ ಸಹಾಯವಾಗಲಿ ಕೊಡಲು ಸಾಧ್ಯವಿರಲಿಲ್ಲ. ನೆಪೋಲಿಯನ್‌ನಿಂದ ಪಾರಾಗಲು ಇವರು ಈಸ್ಟ್ ಇಂಡಿಯಾ ಕಂಪನಿಯಿಂದಲೇ ಹಣದ ಸಹಾಯ ಹಾಗೂ ಸೈನ್ಯದ ಸಹಾಯ ಕೇಳಿದ್ದರು. ಬ್ರಿಟೀಷರ ಪರಿಸ್ಥಿತಿ ಇಷ್ಟು ಕೆಟ್ಟದ್ದಾಗಿರುವಾಗ ಅವರು ಈ ದೇಶವನ್ನು ಗೆದ್ದದ್ದಾದರೂ ಹೇಗೆ? ಅನ್ನುವುದಕ್ಕೆ ಕಾರಣ ಮರಾಠಾರಲ್ಲಿ ವೈಶಮ್ಯವಿತ್ತು ಇಲ್ಲವೆ ಒಡಕಿತ್ತು ಅನ್ನುವುದಲ್ಲ. ಇದಕ್ಕಿರುವ ಸಮಾಧಾನಕರ ಉತ್ತರ ಒಂದೇ, ಈ ದೇಶಕ್ಕೆ ಕಾಲಿಟ್ಟು ಅವರು ಇಲ್ಲಿಯ ಜನರ ಸೈನ್ಯ ಕಟ್ಟಲು ಸಾಧ್ಯವಾಗದಿದ್ದಿದ್ದರೆ ಈ ದೇಶವನ್ನಾಳಲು ಸಾಧ್ಯವೇ ಇರಲಿಲ್ಲ. ಹಾಗಾಗಿ ನಮ್ಮ ಕರುಣಾಳು ಹಾಗೂ ನ್ಯಾಯಪ್ರೇಮಿಗಳಾಗಿರುವ ಬ್ರಿಟಿಷ್ ಸರ್ಕಾರಕ್ಕೆ ನಾನು ಹೇಳುವುದಿಷ್ಟೆ, ಭಾರತದ ಸೈನ್ಯದಲ್ಲಿ ಯಾವ ಜನ ಸೇರಿದ್ದರು? ಅನ್ನುವ ಪ್ರಶ್ನೆಯನ್ನೊಮ್ಮೆ ನಿಮಗೆ ನೀವೇ ಕೇಳಿಕೊಳ್ಳಿ. ಅವರು ತಮ್ಮ ಹಳೆಯ ಫೈಲುಗಳನ್ನು ತೆಗೆದು ನೋಡಿದರೆ ಸೈನ್ಯದಲ್ಲಿ ದಲಿತರಲ್ಲದೆ ಬೇರೆ ಯಾರೂ ಇರಲಿಲ್ಲ ಅನ್ನುವುದು ಅವರಿಗೆ ತಿಳಿಯುತ್ತದೆ. ಹಾಗಾಗಿ ದಲಿತರ ತಾಕತ್ತು ಬ್ರಿಟೀಷರ ಹಿಂದಿರದಿದ್ದಿದ್ದರೆ ಅವರು ಈ ದೇಶವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವೇ ಇರಲಿಲ್ಲ. ಈ ದೇಶವನ್ನು ಗೆಲ್ಲಲು ನಿಮಗೆ ಸಹಾಯ ಮಾಡಿದವರನ್ನೇ ನೀವು ಸೈನ್ಯದಿಂದ ಎತ್ತಂಗಡಿ ಮಾಡಿದ್ದು ಅನ್ಯಾಯವಲ್ಲದೆ ಮತ್ತೇನು? ಬ್ರಿಟಿಷರೆಷ್ಟು ಸ್ವಾರ್ಥಿಗಳು ಅನ್ನುವುದಕ್ಕೆ ಮತ್ತೊಂದು ಉದಾಹರಣೆಗೆ ಇತ್ತೀಗಷ್ಟೆ ನಡೆದ ಘಟನೆಯೆ ಸಾಕ್ಷಿ. ೧೯೧೭ರಲ್ಲಿ ಆರಂಭವಾದ ಮಹಾಯುದ್ಧದ ಸಮಯದಲ್ಲಿ ನಮ್ಮ ಸರ್ಕಾರಕ್ಕೆ ಮತ್ತೆ ದಲಿತರು ನೆನಪಾದರು. ಬೆಟಾಲಿಯನ್‌ಗೆ ಸೇರಲು ನಮ್ಮ ದಲಿತರು ಯಾವತ್ತೂ ಉತ್ಸಾಹದಿಂದ ಸಿದ್ಧರಿರುತ್ತಾರೆ. ಒಂದೇ ಬೆಟಾಲಿಯನ್‌ಗಾಗಿ ಅರ್ಜಿ ಕರೆದಿದ್ದರೆ ನಮ್ಮ ದಲಿತರು ಎರಡು ಬಟಾಲಿಯನ್‌ಗಾಗುವಷ್ಟು ಜನ ಸ್ವಂತ ಖುಷಿಯಿಂದ ಹೋಗಿದ್ದರು. ಸರ್ಕಾರ ಒಂದು ಬಟಾಲಿಯನ್ ಸಿದ್ಧಪಡಿಸಿತು. ಒಂದು ಕಾಲದಲ್ಲಿ ಹಾಕಲಾಗಿದ್ದ ನಿಷೇಧವನ್ನು ತೆಗೆದುಹಾಕಿ ಮತ್ತೊಮ್ಮೆ ದಲಿತರನ್ನು ಸೈನ್ಯದಲ್ಲಿ ಭರ್ತಿ ಮಾಡಿಕೊಳ್ಳುತ್ತಿದ್ದಾರೆ ಅನ್ನುವುದನ್ನು ಕೇಳಿ ಎಲ್ಲರಿಗೂ ಸಂತೋಷವಾಯಿತು. ಈ ಪ್ರಾಂತ್ಯದ ದಲಿತರ ಭಾಗ್ಯೋದಯಕ್ಕೆ ಆರಂಭವಾಯಿತು ಅನ್ನುವ ಆಸೆ ದಲಿತರಲ್ಲಿ ಹುಟ್ಟಿತು. ಆದರೆ ಯುದ್ಧ ಮುಗಿಯುತ್ತಲೆ ಆರ್ಥಿಕ ಮುಗ್ಗಟ್ಟಿನ ಕಾರಣ ಹೇಳಿ ಬಟಾಲಿಯನ್ ತೆಗೆದುಹಾಕಿದರು. ಸರ್ಕಾರದ ಈ ಬೇಕಾಬಿಟ್ಟಿ ವರ್ತನೆಗೆ ಏನೆಂದು ಹೇಳಬೇಕು? ಮಾನ್ಯರೆ! ನಾವು ಯಾವತ್ತೂ ಸರ್ಕಾರಕ್ಕೆ ಅನುಕೂಲಕರವಾಗಿರುವಂತೆ ವರ್ತಿಸುತ್ತೇವೆಂದೇ ಸರ್ಕಾರ ನಮ್ಮನ್ನು ಉಪೇಕ್ಷಿಸುತ್ತದೆ ಎಂದು ನನಗನಿಸುತ್ತದೆ. ಸರ್ಕಾರ ಕೊಟ್ಟದ್ದನ್ನು ತೆಗೆದುಕೊಳ್ಳುವುದು, ಸರ್ಕಾರ ಹೇಳಿದಂತೆ ಕೇಳುವುದು, ಇಟ್ಟಂತೆ ಇರುವುದರಿಂದ ನಮ್ಮದು ದಾಸ್ಯತ್ವದ ಸ್ವಭಾವಾಗಿಬಿಟ್ಟಿದೆ. ಈ ಸ್ವಭಾವವೆ ನಮಗೆ ಮುಳುವಾಗಿದೆ. ನಮ್ಮ ಮೇಲಾಗುತ್ತಿರುವ

ಅನ್ಯಾಯವನ್ನು ನಾವು ಬಾಯಿ ಮುಚ್ಚಿ ಸಹಿಸಿಕೊಳ್ಳುತ್ತಿದ್ದೇವೆ. ಬಲಗೆನ್ನೆಗೆ ಯಾರಾದರು ಹೊಡೆದರೆ ನಾವು ಎಡಗೆನ್ನೆಯನ್ನೂ ಮುಂದೆ ಮಾಡುತ್ತೇವೆ. ಆದರೆ ಹೊಡೆಯುವವರನ್ನು ನಿಲ್ಲಿಸಲು ನಾವು ಕೈಯೆತ್ತುವುದಿಲ್ಲ. ಆಕಾಶ ಕಳಚಿ ಬಿದ್ದರೂ ನಾವು ದೈನ್ಯರಂತೆ ನಮ್ಮ ಹಣೇ ಬರಹವನ್ನು ಹಳಿಯುತ್ತ ಸುಮ್ಮನಿರುತ್ತೇವೆ. ಈ ಆತ್ಮಘಾತಿ ಸ್ವಭಾವವನ್ನು ನಾವು ಆದಷ್ಟು ಬೇಗ ಬಿಟ್ಟರೆ ನಮಗೆ ಲಾಭವಿದೆ ಹಾಗಾಗಿ ನಮ್ಮನ್ನು ಸೈನ್ಯದಲ್ಲಿ ಸೇರಿಸಿಕೊಳ್ಳಲು ಹಾಕಿರುವ ನಿಷೇಧವನ್ನು ನಾವು ಆದಷ್ಟು ಬೇಗ ತೆಗೆದುಹಾಕಲು ಪ್ರಯತ್ನಿಸಬೇಕು.

ಸೈನ್ಯದಲ್ಲಿ ಪ್ರವೇಶ ಸಿಕ್ಕಿದರೆ ಎಲ್ಲ ಕೆಲಸ ಮುಗಿಯಿತೆ? ಅನ್ನುವ ಪ್ರಶ್ನೆಯನ್ನು ನಾನು ನಿಮಗೆ ಕೇಳುತ್ತೇನೆ. ಸೈನ್ಯದಲ್ಲಿ ಒಮ್ಮೆ ಪ್ರವೇಶ ಸಿಕ್ಕರೆ ಬೇರೆ ಏನೂ ಮಾಡುವ ಅವಶ್ಯಕತೆಯಿಲ್ಲ ಅನ್ನುವ ತಪ್ಪುತಿಳುವಳಿಕೆ ನಮ್ಮಲ್ಲಿ ಕೆಲವರಿಗಿದೆ. ಆದರೆ ಹೀಗೆ ಯೋಚಿಸುವುದು ತಪ್ಪು. ಏಕೆಂದರೆ ಒಂದೋ ಎಲ್ಲ ಜನರನ್ನು ಒಟ್ಟಿಗೆ ಸೈನ್ಯದಲ್ಲಿ ಸೇರಿಸಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಸೈನ್ಯದಲ್ಲಿ ಸೇರಲು ಬೇರೆ ಯಾರೂ ಒಪ್ಪದಿದ್ದ ಕಾಲದಲ್ಲಿ ನಮ್ಮ ದಲಿತರಿಗೆ ಸಾಕಷ್ಟು ಅವಕಾಶಗಳಿದ್ದವು ಆದರೆ ಈಗ ಪರಿಸ್ಥಿತಿ ಹಾಗಿಲ್ಲ, ಉಳಿದವರಿಗೆಷ್ಟು ಸಿಗುತ್ತದೆಯೋ ನಮಗೂ ಅಷ್ಟೇ ಸಿಗಲಿದೆ, ಹೆಚ್ಚಿನ ಆಸೆಪಡುವ ಹಾಗಿಲ್ಲ. ಹಾಗಾಗಿ ಸೈನ್ಯ ಬಿಟ್ಟರೆ ನಮ್ಮ ಏಳಿಗೆಗಾಗಿ ನಾವು ಬೇರೆ ಯಾವುದಾದರೂ ದಾರಿಯ ಬಗ್ಗೆ ಯೋಚಿಸಬೇಕಿದೆ. ದಲಿತರಲ್ಲಿ ಚಮ್ಮಾರರನ್ನು ಬಿಟ್ಟರೆ ವ್ಯಾಪಾರ ಮಾಡುವ ಜನ ಬಹಳ ಕಡಿಮೆ. ಚಮ್ಮಾರರು ಕೂಡ ಈಗ ತಮ್ಮ ವ್ಯಾಪಾರವನ್ನು ಬಿಟ್ಟುಬಿಟ್ಟಿದ್ದಾರೆ. ಇಂತಹ ಜಾತಿಯವರು ಇಂತಹ ವ್ಯಾಪಾರ ಮಾಡಬೇಕು ಅನ್ನುವಂತಹ ಪ್ರದ್ಧತಿಯಿರುವ ಕಡೆಗಳಲ್ಲಿ ನಿಮ್ಮ ಜಾತಿಯವರಿಗೆ ಹೇಳಿಟ್ಟಿರುವಂತಹ ವ್ಯಾಪಾರವನ್ನು ನೀವು ಮಾಡಿ ಎಂದು ದಲಿತರಿಗೆ ಉಪದೇಶಿಸುವುದು ಸರಿಯಲ್ಲ. ದಲಿತರಿಂದ ವ್ಯಾಪಾರ ಮಾಡಿಸಬೇಕೆಂದರೆ ಅದು ಯಾವುದೇ ಜಾತಿಯವರು ಮಾಡಬಹುದಾದ ವ್ಯಾಪಾರವೇ ಆಗಿರಬೇಕು. ಇಂತಹ ವ್ಯಾಪಾರಗಳು ಎರಡೇ ಇವೆ. ಒಂದೋ ಉನ್ನತ ಅಧಿಕಾರದ ಕೆಲಸ ಇಲ್ಲವೆ ರೈತನಾಗುವುದು.

ಉನ್ನತ ಅಧಿಕಾರದ ಕೆಲಸವನ್ನು ದಲಿತರು ಸ್ವೀಕರಿಸಿ ಎಂದು ಉಪದೇಶಿಸುವುದು ಮೇಲ್ವರ್ಗದ ಜನರಿಗೆ ಇಷ್ಟವಗುವುದಿಲ್ಲ ಅನ್ನುವುದು ನನಗೆ ಗೊತ್ತು. ದಲಿತರು ಕೇವಲ ಬಡಗಿಯ, ಕಬ್ಬಿಣದ, ಬಟ್ಟೆ ಮಾಂಗ್‌ರ ಕೆಲಸಗಳನ್ನೇ ಮಾಡಬೇಕು ಆದರೆ ಉನ್ನತ ಅಧಿಕಾರದ ಕೆಲಸವನ್ನು ಯಾವತ್ತೂ ಸ್ವೀಕರಿಸಬಾರದು ಎಂದು ಮೇಲ್ವರ್ಗದವರಿಗೆ ಅನಿಸುತ್ತದೆ. ಅವರ ಈ ಉಪದೇಶ ನಮ್ಮ ಹಿತದ್ದಲ್ಲ ಎಂದು ನಾನು ನಿಮಗೆಲ್ಲ ಹೇಳುತ್ತಿದ್ದೇನೆ. ದಲಿತರ ಏಳಿಗೆಗಾಗಿ ಎರಡು ವಿಷಯಗಳು ಅತ್ಯಂತ ಮಹತ್ವದ್ದಾಗಿವೆ ಎಂದು ನನಗನಿಸುತ್ತದೆ. ೧. ದಲಿತರ ಮನಸ್ಸಿನ ಮೇಲಾಗಿರುವ ಹಳೆಯ ಹುಚ್ಚು ಹಾಗೂ ಅನಿಷ್ಟ ವಿಚಾರಗಳು ಅಳಿಸಲ್ಪಡಬೇಕು. ಆಚಾರ, ವಿಚಾರ ಹಾಗೂ ಉಚ್ಚಾರ ಇವುಗಳು ಎಲ್ಲಿಯವರೆಗೆ ಶುದ್ಧವಾಗುವುದಿಲ್ಲವೊ ಅಲ್ಲಿಯವರೆಗೆ ದಲಿತರಲ್ಲಿ ಜಾಗೃತಿಯ ಇಲ್ಲವೆ ಪ್ರಗತಿಯ ಬೀಜ ಬಿತ್ತಲು ಸಾಧ್ಯವಿಲ್ಲ. ಇಂದಿರುವ ಅವರ ಕಲ್ಲು ಮನಸ್ಸಿನ ಮೇಲೆ ಯಾವುದೇ ಹೊಸ ಬೀಜ ಅಂಕುರಿಸಲಾರದು. ಅವರ ಮನಸ್ಸು ಸುಸಂಸ್ಕೃತವಾಗಲು ಅವರು ಉನ್ನತ ಅಧಿಕಾರದ ಕೆಲಸವನ್ನು ಸ್ವೀಕರಿಸಲೇ ಬೇಕು. ದಲಿತರು ಆ ಕೆಲಸವನ್ನು ಯಾಕೆ ಮಾಡಬೇಕು ಅನ್ನುವುದಕ್ಕೆ ನನ್ನಲ್ಲಿ ಮತ್ತೊಂದು ಕಾರಣವೂ ಇದೆ. ನಮ್ಮ ಸರ್ಕಾರ ಒಂದು ಬಹಳ ಮಹತ್ವದ ಸಂಸ್ಥೆ. ಸರ್ಕಾರ ತಮ್ಮ ಮನಸ್ಸಿಗೆ ಬಂದದ್ದನ್ನ ಜಾರಿಗೆ ತರುತ್ತದೆ ಆದರೆ ಸರ್ಕಾರ ಯಾವುದನ್ನು ಜಾರಿಗೆ ತರುತ್ತದೆ ಅನ್ನುವುದು ಸರ್ಕಾರಿ ನೌಕರರನ್ನು ಅವಲಂಬಿಸಿರುತ್ತದೆ. ಸರ್ಕಾರದ ಮನಸ್ಸೆಂದರೆ ಸರ್ಕಾರಿ ನೌಕರನ ಮನಸ್ಸು. ಸರ್ಕಾರದಿಂದ ನಮ್ಮ ಹಿತದ ಕೆಲಸಗಳನ್ನು ಮಾಡಿಸಿಕೊಳ್ಳಬೇಕೆಂದರೆ ಸರ್ಕಾರಿ ಕೆಲಸಗಳಲ್ಲಿ ನಮ್ಮ ಜನರ ಪ್ರವೇಶವಾಗಬೇಕು ಇಲ್ಲದಿದ್ದರೆ ನಾವಿಂದು ಅನುಭವಿಸುತ್ತಿರುವ ತೊಂದರೆಗಳನ್ನು ಇನ್ನು

ಮುಂದೆಯೂ ಅನುಭವಿಸಬೇಕಾಗುತ್ತದೆ. ಹಾಗಾಗಿ ಆದಷ್ಟು ಹೆಚ್ಚು ದಲಿತರು ಸರ್ಕಾರಿ ಕೆಲಸಗಳಲ್ಲಿ ಪ್ರವೇಶ ಪಡೆಯುವಂತೆ ಪ್ರಯತ್ನಿಸಬೇಕು ಇಲ್ಲದಿದ್ದರೆ ನಮ್ಮ ಏಳಿಗೆ ಸಾಧ್ಯವಿಲ್ಲ. ಸರ್ಕಾರಿ ಕೆಲಸಗಳಲ್ಲಿ ಪ್ರವೇಶ ಪಡೆಯಲು ಉನ್ನತ ಅಧಿಕಾರಗಳ ಕೆಲಸ ಸ್ವೀಕರಿಸುವುದು ಅನಿವಾರ್ಯವಾಗಿದೆ. ಈ ವಿಷಯದ ಮಹತ್ವವನ್ನು ಮುಸಲ್ಮಾನ ಹಾಗೂ ಮರಾಠಾ ಜನರು ಅರಿತುಕೊಂಡಿದ್ದಾರೆ ಹಾಗೂ ಆ ನಿಟ್ಟಿನಲ್ಲಿ ಅವರು ಸಾಕಷ್ಟು ಪ್ರಯತ್ನಿಸುತ್ತಿದ್ದಾರೆ. ನಾವೂ ಸರಿಯಾದ ಸಮಯಕ್ಕೆ ಎಚ್ಚೆತ್ತುಕೊಂಡು ಸರ್ಕಾರಿ ಕೆಲಸಗಳಲ್ಲಿ ಪ್ರವೇಶ ಪಡೆಯುವಂತಾಗಬೇಕು. ಬ್ರಾಹ್ಮಣರು ಈ ನಮ್ಮ ಚಳುವಳಿಯನ್ನು ನಿಂದಿಸುತ್ತ ಸರ್ಕಾರಿ ಕೆಲಸಗಳಲ್ಲೇನೂ ತಿರುಳಿಲ್ಲ ಎಂದು ಹೇಳಿಕೊಂಡು ತಿರುಗುತ್ತಿರುತ್ತಾರೆ. ಆದರೆ ಅವರ ಈ ಮಾತಿನಲ್ಲಿ ಯಾವುದೇ ನಿಜವಾಗಲಿ ಅಥವಾ ಪ್ರಾಮಾಣಿಕತೆಯಾಗಲಿ ಇಲ್ಲ.ಸತ್ಯ ಯಾಕಿಲ್ಲ ಅಂದೆ ಅಂದರೆ ಈ ಪ್ರಾಂತ್ಯದ ಬಾಹ್ಮಣರಲ್ಲಿ ಸರ್ಕಾರಿ ಕೆಲಸಗಳಿರದಿದ್ದರೆ ಉಳಿದ ಪ್ರಾಂತ್ಯದ ಬ್ರಾಹ್ಮಣರಂತೆ ಅವರು ಅಡುಗೆ ಭಟ್ಟರೊ ಇಲ್ಲ ಮನೆಮನೆಗೆ ನೀರು ತುಂಬುವವರೋ ಆಗಿರುತ್ತಿದ್ದರು. ಕೇವಲ ಪುರಾಣ ಕಥೆಗಳನ್ನು ಹೇಳಿಕೊಂಡು ಅವರು ತಮ್ಮ ಶ್ರೇಷ್ಠತೆಯನ್ನು ಸಿದ್ಧಪಡಿಸಲು ಸಾಧ್ಯವಾಗಿಲ್ಲ. ಕೇವಲ ಸರ್ಕಾರಿ ಕೆಲಸಗಳ ಆಧಾರದಿಂದಲೇ ಅವರಿಂದು ಇಷ್ಟೆತ್ತರಕ್ಕೆ ಬೆಳೆದಿದ್ದಾರೆ. ಸರ್ಕಾರಿ ಕೆಲಸಗಳಲ್ಲಿ ತಿರುಳಿಲ್ಲದಿದ್ದರೆ ಬ್ರಾಹ್ಮಣರು ಸರ್ಕಾರಿ ಕೆಲಸಗಳನ್ನು ಬಿಟ್ಟು ಬಿಡುತ್ತಿರಲಿಲ್ಲವೆ? ಅವರು ಸರ್ಕಾರಿ ಕೆಲಸಕ್ಕೆ ಸಾಕಷ್ಟು ಅಂಟಿಕೊಂಡೇ ಇದ್ದಾರೆ ಅನ್ನುವುದರರ್ಥ ಅವರ ಮಾತಿನಲ್ಲೇ ತಿರುಳಿಲ್ಲ. ಹಾಗಾಗಿ ಬ್ರಾಹ್ಮಣರ ಅಸತ್ಯ ಹಾಗೂ ಅಪ್ರಾಮಾಣಿಕ ಯುಕ್ತಿವಾದಕ್ಕೆ ನಾವು ಬಲಿಯಾಗಬಾರದು.

ಮಾನ್ಯರೆ! ಇಂದು ನನಗೆ ಒಂದು ದುಃಖಕರವಾದ ವಿಷಯವನ್ನು ನೆನಪಿಸಿಕೊಡಬೇಕಾಗುತ್ತಿದೆ. ಹಿಂದೆ ನಾನು ಹೇಳಿದಂತೆ ಈ ಪ್ರದೇಶ ಸುಭೇದಾರರು, ಹೆಡ್ ಕಾನ್‌ಸ್ಟೆಬಲ್‌ಗಳಿಂದ ತುಂಬಿಹೋಗಿತ್ತು ಹಾಗೂ ಈ ಜನರು ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದರು. ಆದರೆ ಅವರು ಒಂದು ಕೆಲಸವನ್ನು ಮಾತ್ರ ಮಾಡಲಿಲ್ಲ, ಅವರದನ್ನು ಮಾಡಿದ್ದಿದ್ದರೆ ಇಂದು ಎಲ್ಲರ ಉಪಯೋಗಕ್ಕೆ ಬರುತ್ತಿತ್ತು. ಅವರು ತಮ್ಮ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಲಿಲ್ಲ. ಮಾನ್ಯರೆ! ಈ ಜನರು ಬಡವರೇನು ಆಗಿರಲಿಲ್ಲ, ಅವರಿಗೆ ದೊಡ್ಡ ಮೊತ್ತದ ಪೆನ್ಶನ್ ಸಿಗುತ್ತಿತ್ತು. ಮನಸ್ಸು ಮಾಡಿದ್ದಿದ್ದರೆ ಅವರು ತಮ್ಮ ಮಕ್ಕಳನ್ನು ಬಿ.ಎ., ಎಮ್.ಎ. ತನಕ ವಿದ್ಯೆ ಕಲಿಸಬಹುದಿತ್ತು. ಇದರ ಪರಿಣಾಮ ಏನಾಗುತ್ತಿತ್ತು ಅನ್ನುವುದನ್ನು ಊಹಿಸುವುದು ಬಹಳ ಸುಲಭ. ಓದಿದ ಈ ಮಕ್ಕಳು ಇಂದು ಮಾಮಲೇದಾರ, ಕಲೆಕ್ಟರ್ ಇಲ್ಲವೆ ಮೆಜಿಸ್ಟ್ರೇಟ್ ಆಗಿರುತ್ತಿದ್ದರು ಹಾಗೂ ಎಲ್ಲ ದಲಿತ ಜಾತಿಯವರ ಮೇಲೆ ಅವರ ವರ್ಚಸ್ಸಿರುತ್ತಿತ್ತು. ಅವರ ನೆರಳಿನಲ್ಲಿ ನಮ್ಮ ಬೆಳವಣಿಗೆಯಾಗುತ್ತಿತ್ತು. ಆದರೆ ಹಾಗಾಗದೆ ನಾವಿಂದು ಸುಡು ಬಿಸಿಲಿನಲ್ಲಿ ಸುಟ್ಟು ಕರಕಲಾಗುತ್ತಿದ್ದೇವೆ. ನಮ್ಮ ಮೇಲೊಂದು ನೆರಳನ್ನು ಸೃಷ್ಟಿಸಿಕೊಳ್ಳದೆ ನಮ್ಮ ಬೆಳವಣಿಗೆ ಅಸಾಧ್ಯ ಅನ್ನುವ ದೃಢ ಭಾವನೆ ನನ್ನದಾಗಿದೆ. ಉನ್ನತ ಅಧಿಕಾರ ಸ್ವೀಕರಿಸಿ ಸರ್ಕಾರಿ ಕೆಲಸಗಳಲ್ಲಿ ಪ್ರವೇಶ ಪಡೆಯದೆ ಈ ನೆರಳನ್ನು ನಾವು ಪಡೆಯಲಾರೆವು. ಅದಕ್ಕಾಗಿ ನೀವು ಮೊದಲು ಉನ್ನತ ವಿದ್ಯೆ ಕಲಿಯಿರಿ. ಒಬ್ಬ ಹುಡುಗ ಬಿ.ಎ. ಕಲಿತು ತನ್ನ ಇಡೀ ದಲಿತ ಜಾತಿಗೆ ಆಧಾರ ಕೊಡುವಂತೆ ಒಂದು ಸಾವಿರ ಹುಡುಗರು ನಾಲ್ಕನೆಯ ಕ್ಲಾಸಿನ ತನಕ ಕಲಿತರೂ ಆ ಆಧಾರ ಕೊಡಲು ಸಾಧ್ಯವಿಲ್ಲ. ಪ್ರಾಥಮಿಕ ಶಿಕ್ಷಣವನ್ನು ಕಡೆಗಾಣಿಸಿ ಎಂದು ನಾನು ಹೇಳುತ್ತಿಲ್ಲ ಆದರೆ ಇಂದಿನ ನಮ್ಮ ಪರಿಸ್ಥಿತಿ ಎಷ್ಟು ವಿಚಿತ್ರವಾಗಿದೆಯೆಂದರೆ ಉನ್ನತ ಶಿಕ್ಷಣ ಪಡೆದ ಹುಡುಗನನ್ನು ಆದಷ್ಟು ಬೇಗ ಯಶಸ್ಸಿನ ತುತ್ತ ತುದಿಗೆ ತಲುಪಿಸಿದರೆ ಒಳ್ಳೆಯದು. ಇದಕ್ಕಾಗಿ ಈ ಪ್ರದೇಶದಲ್ಲಿ ನಮ್ಮ ಮಕ್ಕಳಿಗಾಗಿ ಒಂದು ಬೋರ್ಡಿಂಗ್ ವ್ಯವಸ್ಥೆಯ ಅವಶ್ಯಕತೆಯಿದೆ. ಠಾಣೆ ಕೊಲಾಬಾ ಜಿಲ್ಲೆಯ ಮಕ್ಕಳಿಗೆ ಸುಲಭವಾಗಲೆಂದು ನಾನು ಪನವೇಲ್‌ನಲ್ಲಿ ಬೋರ್ಡಿಂಗ್ ವ್ಯವಸ್ಥೆಯಾಗುವಂತೆ ನೋಡಿಕೊಳ್ಳುತ್ತಿದ್ದೇನೆ. ನೀವೆಲ್ಲರೂ ಇದಕ್ಕೆ

ತಮ್ಮಿಂದಾದಷ್ಟು ಧನಸಹಾಯ ಮಾಡಿವಿರೆಂದು ನಂಬಿದ್ದೇನೆ.

ನಾನು ನಿಮಗೆ ಸೂಚಿಸಿರುವ ಎರಡನೆಯ ಉದ್ಯೋಗ ಬೇಸಾಯ. ನಮ್ಮ ದಲಿತ ಬಂಧುಗಳು ಆರ್ಥಿಕವಾಗಿ ಸ್ವತಂತ್ರವಾಗಿ ಬದುಕು ನಡೆಸುವಂತಾಗಲು ನಾನು ಈ ಬೇಸಾಯ ಸೂಚಿಸಿದೆ. ದಲಿತರಲ್ಲಿಯ ಮಾಂಗ್‌ರ ಜಾತಿಯೆಂದರೆ ಭಿಕಾರಿಗಳ ಒಂದು ದೊಡ್ಡ ತಂಡವೆ ಅನ್ನಬಹುದು. ದಿನವೂ ತಮ್ಮ ಹಕ್ಕು ಎಂಬಂತೆ ಮನೆ ಮನೆಗೂ ಹೋಗಿ ಭಿಕ್ಷೆ ಬೇಡಿ ಬುಟ್ಟಿಬುಟ್ಟಿಗಟ್ಟಲೆ ತಂಗಳನ್ನವನ್ನು ತಿಂದು ಬದುಕುವುದು ಇವರಿಗೆ ಅಭ್ಯಾಸವಾಗಿಬಿಟ್ಟಿದೆ. ಈ ಕೆಲಸಗಳಿಂದ ಊರಲ್ಲಿ ಇವರಿಗೆ ಮಾನ ಸನ್ಮಾನವಿಲ್ಲ ಹಾಗೂ ಭಿಕ್ಷೆ ಬೇಡುವುದರಿಂದ ಇವರ ಸ್ವಾಭಿಮಾನ ನಷ್ಟವಾಗಿದೆ. ಏನೇ ಮಾಡಿ, ಎಕ್ಕಡದಲ್ಲಿ ಹೊಡೆಯಿರಿ ಅದರೆ ನನಗೆ ಅನ್ನ ಕೊಡಿ ಅನ್ನುವುದು ಈ ಜಾತಿಯ ವರ್ತನೆಯಾಗಿದೆ. ಅವರ ಈ ರೀತಿಯ ಬದುಕಿನಿಂದಾಗಿ ಅವರಿಗೆ ಏಳಿಗೆಯ ಮಾರ್ಗ ಕಾಣುತ್ತಿಲ್ಲ. ಒಂದು ಪಕ್ಷ ಇವರು ದೇವಸ್ಥಾನದ ಮೆಟ್ಟಿಲು ಹತುತ್ತೇವೆಂದರೆ, ಸಾರ್ವಜನಿಕ ಕೆರೆ ಭಾವಿಗಳಲ್ಲಿ ನೀರು ತುಂಬುತ್ತೇವೆಂದರೆ ಇಲ್ಲವೆ ಸತ್ತ ಜಾನುವಾರುಗಳನ್ನು ಹೊತ್ತೊಯ್ಯುವುದಿಲ್ಲವೆಂದರೆ ಊರವರು ಸಿಟ್ಟಿಗೆದ್ದು ಅವರಿಗೆ ಭಿಕ್ಷೆ ಹಾಕುವುದನ್ನು ನಿಲ್ಲಿಸಿದರೆ ಇವರು ಸತ್ತಂತೆಯೆ. ಹೀಗೆ ತಂಗಳು ಹಾಗೂ ಎಂಜಲು ತಿನ್ನಲು ತಮ್ಮ ಆತ್ಮಾಭಿಮಾನವನ್ನೇ ಮಾರುವುದು ನಾಚಿಕೆಗೇಡು. ಹೀಗೆ ಭಿಕ್ಷೆ ಬೇಡುವುದನ್ನು ನಿಲ್ಲಿಸಿ ಊರ ಇತರ ಜನರಂತೆ ಒಕ್ಕಲುತನ ಮಾಡಿದರಾಗದೆ? ಹಾಂ, ಹೊಲವನ್ನು ಖರೀದಿಸುವುದು ಬಹುಶಃ ದಲಿತರಿಗೆ ಸಾಧ್ಯವಾಗದಿರಬಹುದು, ಅರಣ್ಯಖಾತೆಯ ಎಷ್ಟೋ ಪಾಳು ಬಿದ್ದ ಜಮೀನುಗಳಿವೆ. ದಲಿತರು ಕೇಳಿದರೆ ಅವರಿಗದು ಸಿಗುವ ಸಾಧ್ಯತೆಗಳಿವೆ.

ಆದರೆ ಇದೆಲ್ಲ ಹೇಗೆ ಸಾಧ್ಯ? ಎಲ್ಲಿಯವರೆಗೆ ತಂಗಳನ್ನ ಸಿಗುತ್ತಿದೆಯೋ ಅಲ್ಲಿಯವರೆಗೆ ನಮ್ಮ ಸ್ಥಿತಿ ಹಾಗೇ ಇರುತ್ತದೆ. ಹಳೆಯ ದಾರಿ ತೊರೆಯುವವರೆಗೂ ಹೊಸ ದಾರಿ ಕಾಣಿಸಲಾರದು. ನಮ್ಮ ಆತ್ಮಾಭಿಮಾನವನ್ನೇ ಕೊಂದಿರುವ ಈ ದಾರಿಯನ್ನು ನಾವು ಎಷ್ಟು ದಿನ ತುಳಿಯಬೇಕು ಅನ್ನುವುದನ್ನು ನೀವೆ ಯೋಚಿಸಿ. ಮಾನ್ಯರೆ! ಯಾವುದೇ ಸುಧಾರಣೆಯ ಕಾಲದಲ್ಲಿ 'ನಮ್ಮ ಪರಂಪರೆ, ನಮ್ಮ ಪದ್ಧತಿ' ಅನ್ನುವುದು ಈ ಪ್ರದೇಶದ ಜನರ ಮಹಾಮಂತ್ರವಾಗಿಬಿಟ್ಟಿದೆ. ಈ ಪರಂಪರೆ, ರೀತಿ ಒಳ್ಳೆಯದಿರಲಿ ಕೆಟ್ಟದ್ದಿರಲಿ ಒಟ್ಟಿನಲ್ಲಿ ಸುಧಾರಣೆಯ ಕಾಲ ಬಂದಾಗ ಆ ಮಂತ್ರವನ್ನೇ ಜಪಿಸುವುದು. ಅದೆಷ್ಟೇ ಘಾತುಕವಾಗಿದ್ದರೂ ಅಪ್ಪ ಯೋಚಿಸದೆ ಆರಂಭಿಸಿದ ಪದ್ಧತಿಯೊಂದನ್ನು ಮುಂದುವರೆಸಿಕೊಂಡು ಹೋಗುವುದು ಎಷ್ಟು ಉಚಿತ? ವರ್ಷಾನುವರ್ಷ ಹಳೆಯ ಪದ್ಧತಿಗಳನ್ನೇ ಎದೆಗವಚಿಕೊಂಡರೆ ಹೊಸ ಗಾಳಿ ಬೀಸುವುದ್ಯಾವಾಗ? ನಮ್ಮ ಪರಿಸ್ಥಿಗಿಂತ ನಮ್ಮ ಮಕ್ಕಳ, ಮೊಮ್ಮಕ್ಕಳ ಪರಿಸ್ಥಿತಿ ಸುಧಾರಿಸಬೇಕು ಎಂದು ಪ್ರತಿಯೊಂದು ತಂದೆತಾಯಂದಿರಿಗೆ ಅನಿಸುತ್ತದೆ. ಯಾರಿಗೆ ಹಾಗನಿಸುವುದಿಲ್ಲವೋ ಅಂತಹವರ ನಡುವೆ ಹಾಗೂ ಪಶುಗಳ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಮಾನ್ಯರೆ! ನಿಮಗಾಗಿ ಅಲ್ಲದಿದ್ದರೂ ನಿಮ್ಮ ಮಕ್ಕಳಿಗಾಗಿಯಾದರೂ ನನ್ನ ಮಾತು ಕೇಳಿ.ಇಂದು ನಮ್ಮ ಪಾಲಿಗೆ ಸಿಗುತ್ತಿರುವಷ್ಟು ಸಾಕು, ನಮಗ್ಯಾಕೆ ಈ ಉಸಾಬರಿ? ಅರ್ಧ ರೊಟ್ಟಿ ತಿಂದು ಸಮಾಧಾನದಿಂದಿರೋಣ, ಇಡೀ ರೊಟ್ಟಿ ಯಾರಿಗೆ ಬೇಕು? ಎಂದೇನಾದರೂ ಸುಮ್ಮನಾದಿರೋ ನಾಳೆ ನಿಮಗೆ ಕಾಲು ಭಾಗ ರೊಟ್ಟಿಯೂ ಸಿಗಲಾರದು ಅನ್ನುವ ಎಚ್ಚರಿಕೆ ಕೊಡುತ್ತಿದ್ದೇನೆ.

ಈ ಮಾತುಗಳನ್ನು ನಾನು ನಿಮಗಷ್ಟೇ ಹೇಳುತಿದ್ದೇನೆ ಅಂದುಕೊಳ್ಳಬೇಡಿ, ನನ್ನನ್ನು ಮಾತನಾಡಲು ಕರೆದ ಕಡೆಗಳಲ್ಲೆಲ್ಲ ಈ ಮಾತುಗಳನ್ನು ಹಂಚಿಕೊಂಡಿದ್ದೇನೆ. ನಿಮಗೆ ವಿಶೇಷವಾಗಿ ಹೇಳಬೇಕಾದ್ದಿಷ್ಟೆ, ನಾವೆಲ್ಲರೂ ಜಾಗೃತಿಯ ಕೆಲಸವನ್ನು ಹೆಚ್ಚು ವೇಗವಾಗಿ ಮಾಡಬೇಕಿದೆ. ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದ

ಪೀಳಿಗೆಗೆ ನಷ್ಟವಾದ ಮೇಲೆ ಈ ಪ್ರದೇಶದ ಜನರು ಕಳಾಹೀನರಾಗಿದ್ದಾರೆ. ಯಾವುದೇ ಚಳುಟುವಟಿಗೆಳಿಲ್ಲದೆ ಹೆಣದಂತೆ ಕಾಣುತ್ತಿದ್ದಾರೆ. ಘಟ್ಟದ ಮೇಲೆ ಅನೇಕ ಪರಿಷತ್ತುಗಳಾದವು, ಆದರೆ ಇಲ್ಲಿ ಇದೇ ಮೊದಲನೆಯದು.ಜಾಗೃತಿಯ ಜ್ಯೋತಿಯನ್ನೆಂದೂ ನೀವು ನಂದಿಸಬೇಡಿ. ಮಾರ್ಗದರ್ಶಕರಿಲ್ಲದೆ ನಡೆಯುವುದು ಅಸಾಧ್ಯ ಹಾಗಾಗಿ ನಿಮಗೆ ಈ ಜಾಗೃತಿಯ ಕೆಲಸಕ್ಕಾಗಿ ಒಳ್ಳೆಯ ನಾಯಕನ ಅವಶ್ಯಕತೆಯಿದೆ. ನಿಮ್ಮಲ್ಲಿಯ ಕೆಲವು ಪೆನ್ಶನರ್ಸ್ ಈ ವಿಷಯದಲ್ಲಿ ಗಮನಕೊಟ್ಟು ನಿಮ್ಮ ಜಾತಿಬಾಂಧವರ ಉದ್ಧಾರದ ಮಹತ್ಕಾರ್ಯಕ್ಕಾಗಿ ಮುಂದಾಳತ್ವ ವಹಿಸಿಕೊಳ್ಳಬೇಕು ಎಂದಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ ಅಂದರು.

**ಮರುದಿನ ಮತ್ತೆ ಬೆಳಿಗ್ಗೆ ೯ ಘಂಟೆಗೆ ಪರಿಷತ್ತು ಆರಂಭವಾಗಿ ಕೆಳಗಿನ ನಿಯಮಾವಳಿಗಳನ್ನು ಜಾರಿಗೊಳಿಸಲು ನಿರ್ಧರಿಸಲಾಯಿತು.**

## ಭಾಗ–೧

ನಿಯಮ ೧: ದಲಿತರು ಆರಂಭಿಸಿರುವ ಆತ್ಮೋದ್ಧಾರದ ಚಳುವಳಿಯಿಂದ ಮೇಲ್ವರ್ಗ ಹಾಗೂ ಬಹಿಷ್ಕೃತರಲ್ಲಿ ಘರ್ಷಣೆಯುಂಟಾಗಬಾರದೆಂದು ಮೇಲ್ವರ್ಗದವರಿಗನಿಸುತ್ತಿದ್ದರೆ ಈ ಪರಿಷತ್ತು ಅವರಿಗೆ ಕೆಳಗಿನ ಕೆಲವು ಸೂಚನೆಗಳನ್ನು ಕೊಡುತ್ತದೆ.

(ಅ) ದಲಿತರು ಸಾರ್ವಜನಿಕ ಕೆರೆ ಭಾವಿಗಳಲ್ಲಿ ನೀರು ತುಂಬಿ ತಮ್ಮ ನಾಗರೀಕತ್ವದ ಹಕ್ಕು ಪಡೆಯಲು ಪ್ರಯತ್ನಿಸುತ್ತಿರುವಾಗ ಮೇಲ್ವರ್ಗದವರು ಅವರ ವಿರುದ್ಧ ಮಾತನಾಡದೆ ಅವರಿಗೆ ಎಲ್ಲ ರೀತಿಯಿಂದ ಸಹಾಯ ಮಾಡಬೇಕು.

(ಬ) ಮೇಲ್ವರ್ಗದವರು ದಲಿತರನ್ನು ಮನೆಕೆಲಸಕ್ಕಾಗಿ ಇಟ್ಟುಕೊಳ್ಳಬೇಕು.

(ಕ) ಜಾತಿಭೇದವನ್ನು ತೊಡೆದುಹಾಕಲು ಅಂತರ್ಜಾತೀಯ ವಿವಾಹ ಪದ್ಧತಿಯನ್ನು ಆರಂಭಿಸಬೇಕು.

(ಡ) ದಲಿತರಲ್ಲಿಯ ಬಡ ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲಿ ವಾರಾನ್ನಕ್ಕಾಗಿಯೋ ಇಲ್ಲವೆ ಅವರ ಊಟದ ವ್ಯವಸ್ಥೆ ಮಾಡಿ ಅವರಿಗೆ ಸಹಾಯ ಮಾಡಬೇಕು.

(ಇ) ಸತ್ತ ಜಾನುವಾರ ಗಳನ್ನೆತ್ತಲು ದಲಿತರನ್ನು ಅವಲಂಬಿಸದೆ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳ ಬೇಕು.

## ಭಾಗ–೨

ಮಸೂದೆ ೧: ಕಳೆದ ಕಾಯಿದೆ ಕೌನ್ಸಿಲ್‌ನಲ್ಲಿ ಶ್ರೀ. ಸಿ. ಕೆ. ಬೊಲೆಯವರು ಸಾರ್ವಜನಿಕ ಕೆರೆ ಭಾವಿಗಳ ಬಗ್ಗೆ ಒಂದು ನಿಯಮ ತಂದಿದ್ದರು. ಸರ್ಕಾರ ಆ ನಿಯಮವನ್ನು ಜಾರಿಗೆ ತಂದು ಅಲ್ಲಿ ಕಲ್ಲು ಚಪ್ಪಡಿಗಳನ್ನು ಹಾಕಿಸಿ ಅಗತ್ಯವಿದ್ದರೆ ಕ್ರಿ.ಪ್ರೊ. ಕೋಡ್ (Criminal Procedure Code) ಸೆಕ್ಷನ್ ೧೪೪ನ್ನು ಜಾರಿಗೆ ತಂದು ಸ್ಥಳೀಯ ನೇತಾರನ ಜಾಮೀನು ಪಡೆದು ದಲಿತರು ತಮ್ಮ ಹಕ್ಕುಗಳನ್ನು ಪಡೆಯಬಹುದು ಅಂದಿದೆ.

ಮಸೂದೆ ೨: ಹಳ್ಳಿಗಳಲ್ಲಿ ದಲಿತರಿಗೆ ನೀರಿನ ಸಮಸ್ಯೆ ತೀವ್ರವಾಗಿ ಕಾಡುತ್ತದೆ. ಹಾಗಾಗಿ ಸರ್ಕಾರ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಈ ಪರಿಷತ್ತು ವಿನಂತಿಸುತ್ತದೆ.

ಮಸೂದೆ ೩: ದಲಿತರ ಏಳಿಗೆಗಾಗಿ ಅರಣ್ಯ ಇಲಾಖೆಯ ಜಮೀನುಗಳನ್ನು ಉಳುವವರಿಗಾಗಿ ಬಿಟ್ಟುಕೊಡತಕ್ಕದ್ದು

ಮಸೂದೆ ೪: ತೀರಾ ಹಿಂದುಳಿದ ದಲಿತರ ಆರ್ಥಿಕ ಮಟ್ಟ ಏರಿಸಲು ಹಾಗೂ ಅವರ ದುಃಖ ಕಡಿಮೆ ಮಾಡಲು ಸರ್ಕಾರ ಕೆಳಗಿನ ಕೆಲವು ವಿಷಯಗಳತ್ತ ಗಮನ ಹರಿಸಬೇಕು.

(೧) ಅನ್‌ಕ್ವಾಲಿಫೈಡ್ ದಲಿತರಿಗೆ ಸಾಧ್ಯವಿದ್ದಲ್ಲಿ ಸರ್ಕಾರಿ ಕೆಲಸ ಕೊಡಿಸಬೇಕು.

(೨) ದಲಿತರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳಬೇಕು.

(೩) ಸೆಕಂಡ್ ಇಯರ್ ತರಬೇತಿ ಪಡೆದ ಮಾಸ್ತರರಿಗೆ ಶಾಲೆಯಲ್ಲಿ ಸುಪರ್ವೈಝರ್ ಪೋಸ್ಟ್ ಕೊಡತಕ್ಕದ್ದು.

(೪) ದಲಿತರಲ್ಲಿಯ ವಿದ್ಯಾವಂತರಿಗೆ ಮುಲ್ಕಿ ಪೊಲೀಸ್ ಖಾತೆಯಲ್ಲಿ ಕೆಲಸ ಕೊಡಿಸತಕ್ಕದ್ದು.

(೫) ಶಸ್ತ್ರಾಗಾರ ಖಾತೆಯಲ್ಲಿ ದಲಿತ ಉಮೇದುವಾರರಿರಬೇಕು.

(೬) ಆದಷ್ಟು ಹೆಚ್ಚು ದಲಿತರು ಪೊಲೀಸ್ ಖಾತೆಯಲ್ಲಿರಬೇಕು.

ಮಸೂದೆ ೫: ಸರ್ಕಾರಿ ಕೆಲಸಕ್ಕೆ ಜನತೆಯಿಂದ ಬಲುತೆ ಕೊಡುವ ಪದ್ಧತಿಯನ್ನು ರದ್ದು ಮಾಡಿ ಅದಕ್ಕೆ ಬದಲಾಗಿ ಊರಿನ ಜನತೆಯ ಮೇಲೆ ಸಿ.ಪಿ. ಪ್ರದೇಶದಲಿ ಸೆಸ್ ಜಾರಿಗೆ ತರಬೇಕು ಹಾಗೂ ಈ ಸೆಸ್‌ನ ಹಣದಿಂದ ಕಾರ್ಮಿಕರ ತಿಂಗಳ ಸಂಬಳ ಕೊಡುವ ವ್ಯವಸ್ಥೆಯಾಗಬೇಕು.

ಮಸೂದೆ ೬: ದಲಿತರು ಸತ್ತ ಜಾನುವಾರುಗಳ ಮಾಂಸ ತಿನ್ನುವುವುದನ್ನು ಸರ್ಕಾರ ಕಾಯಿದೆಯಿಂದ ನಿಲ್ಲಿಸಬೇಕು. ಸತ್ತ ಜಾನುವಾರುಗಳ ಮಾಂಸ ತಿನ್ನುವುದು ಆರೋಗ್ಯಕ್ಕೆ ಹಾನಿಕಾರಕ ಹಾಗೂ ಇದರಿಂದ ದಲಿತರ ಸಾಮಾಜಿಕ ಮಟ್ಟ ಕೀಳು ದರ್ಜೆಗಿಳಿಯುತ್ತದೆ.

ಮಸೂದೆ ೭: ಶಿಕ್ಷಣದ ಪ್ರಸಾರ ಹೆಚ್ಚಲು ಹಾಗೂ ಮದ್ಯಪಾನ ನಿಲ್ಲಲು ಕಡ್ಡಾಯವಾದ ಕಾನೂನು ಜಾರಿಗೆ ಬರಬೇಕು.

ಮಸೂದೆ ೮: ಶ್ರೀಯುತ ಎಮ್. ಕೆ. ಜಾಧವ್ ಅವರಿಗೆ ಡೆಪ್ಯುಟಿ ಕಲೆಕ್ಟರ್‌ನ ಪೋಸ್ಟ್ ಕೊಡದಿದ್ದಕ್ಕೆ ಈ ಪರಿಷತ್ತಿಗೆ ಅತ್ಯಂತ ದುಖಃವಾಗುತ್ತಿದೆ.

ಮಸೂದೆ ೯: ೧೧೧ ನೆಯ ಬಟಾಲಿಯನ್‌ನಲ್ಲಿ ಹಿಂದೊಮ್ಮೆ ಸಂಗ್ರಹಿಸಿದ್ದ ನಿಧಿಯಲ್ಲಿ ಮಹಾಡ ತಾಲೂಕಿನಿಂದ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬರ ಹಣ ಈ ನಿಧಿ ಸಂಗ್ರಹದಲ್ಲಿದೆ, ಆ ಹಣದಿಂದ ಈ ತಾಲೂಕಿದ ದಲಿತ ಮಕ್ಕಳಿಗೆ ಒಂದು ಬೋರ್ಡಿಂಗ್ ಕಟ್ಟಿಕೊಡಬೇಕು.

ಮಸೂದೆ ೧೦: ಶೈಕ್ಷಣಿಕ ವಿಷಯದಲ್ಲಿ ಅಧೋಗತಿಗಿಳಿದಿರುವ ದಲಿತ ಸಮಾಜದ ಏಳಿಗೆಗಾಗಿ ಕೆಲವು ವಿಷಯಗಳನ್ನು ಜಾರಿಗೆ ತರಬೇಕು.

(೧) ಶೈಕ್ಷಣಿಕ ಪ್ರಗತಿ ಹೇಗೆ ಸಾಧ್ಯ ಅನ್ನುವುದರ ಬಗ್ಗೆ ವಿಚಾರವಿನಿಮಯ ಮಾಡಲು ಒಂದು ಕಮಿಟಿಯನ್ನು ನೇಮಿಸಬೇಕು.

(೨) ಜಿಲ್ಲೆಯೊಂದರಂತೆ ಬೋರ್ಡಿಂಗ್ ಕಟ್ಟಬೇಕು.

(೩) ಖಾಸಗಿ ಸಂಸ್ಥೆಗಳು ನಡೆಸುವ ಬೋರ್ಡಿಂಗ್‌ನಲ್ಲಿ ಪ್ರತಿ ವಿದ್ಯಾರ್ಥಿಗೆ ತಿಂಗಳು ೧೦ ರೂಪಾಯಿ ಗ್ರಾಂಟ್ ಕೊಡಬೇಕು.

(೪) ೩೦ ಮಕ್ಕಳಿರುವ ಊರಿನಲ್ಲೊಂದು ಶಾಲೆ ಕಟ್ಟಬೇಕು.

(೫) ಶಿಷ್ಯವೃತ್ತಿಗಳನ್ನು ಕೊಡಬೇಕು.

**ಭಾಗ–೩**

ಮಸೂದೆ ೧: ದಲಿತ ವರ್ಗದ ಪಂಚರು (ಪಾಟೀಲರು) ತಮ್ಮ ಮಕ್ಕಳ ಮದುವೆಗಳಲ್ಲಿ ಕೆಳಗಿನ ಕೆಲವು ವಿಷಯಗಳನ್ನು ಜಾರಿಗೆ ತರಬೇಕು ಎಂದು ಈ ಪರಿಷತ್ತು ವಿನಂತಿಸುತ್ತದೆ.

(೧) ೨೦ ವರ್ಷಕ್ಕಿಂತ ಸಣ್ಣ ಹುಡುಗ ಹಾಗೂ ೧೫ ವರ್ಷಕ್ಕಿಂತ ಸಣ್ಣ ಹುಡುಗಿಯ ಮದುವೆ ಮಾಡುವುದನ್ನು ನಿಲ್ಲಿಸಬೇಕು.

(೨) ಶಾಲೆಗಳಿರುವಲ್ಲಿ ಜನ ತಮ್ಮೆಲ್ಲ ಗಂಡು ಹಾಗೂ ಹೆಣ್ಣು ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳಿಸಬೇಕು ಎಂದು ಆಯಾ ಊರಿನ ಪಾಟೀಲರು ತಾಕೀತು ಮಾಡಬೇಕು. ಹಾಗೆ ಕಳಿಸದಿದ್ದರೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಅನ್ನುವ ಭಯ ತೋರಿಸಬೇಕು.

(೩) ಪುನರ್ವಿವಾಹ ಮಾಡುವ ಮೊದಲು ವಧು ಹಾಗೂ ವರನ ಬಗ್ಗೆ ಸರಿಯಾಗಿ ಕೇಳಿ ತಿಳಿದುಕೊಳ್ಳದೆ ಮರು ವಿವಾಹ ಮಾಡಬಾರದು.

(೪) ಪುನರ್ವಿವಾಹದಲ್ಲಿ ೭ ರೂಪಾಯಿ ದಂಡ ಕೊಡತಕ್ಕದ್ದು,(ಆ ಕಾಲದಲ್ಲಿ ಪುನರ್ವಿವಾಹಕ್ಕೆ ಹಿಂದೂ ಸಂಸ್ಕೃತಿಯಲ್ಲಿ ಅನುಮತಿಯಿರಲಿಲ್ಲ ಹಾಗಾಗಿ ದಂಡ ಕಟ್ಟಿ ಪುನರ್ವಿವಾಹ ಮಾಡುವುದು) ಜೊತೆಗೆ ಸೀರೆ ರವಿಕೆ, ಬಳೆ, ನಥನಿ ಹಾಗೂ ಪಂಚರ ಊಟ ಬಿಟ್ಟರೆ ಪಂಚರ ಇನ್ಯಾವುದೇ ತೆರಿಗೆ ಇರಬಾರದು.

ಮಸೂದೆ **೨:** (೧) ದಲಿತರು ಭಿಕ್ಷೆ ಬೇಡುವುದನ್ನು ನಿಲ್ಲಿಸಿ ಒಕ್ಕಲುತನದಂತಹ ಸ್ವತಂತ್ರ ಕೆಲಸ ಮಾಡಲು ಆರಂಭಿಸಬೇಕು.

(೨) ಬೇಸಾಯಕ್ಕೆ ಅಗತ್ಯವಿರುವಂತಹ ಸಹಕಾರಿ ಪತಪೇಢಿಗಳನ್ನು (credit society) ತೆರೆಯಬೇಕು.

(೩) ಬರ ಹಾಗೂ ಕ್ಷಾಮ ಅತಿವೃಷ್ಟಿಗಳನ್ನೆದುರಿಸಲು ಹಾಗೆಯೇ ಸಾಹುಕಾರನ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಲು 'ಸರ್ಕಾರಿ ಕೋಶ'ವೊಂದನ್ನುಸ್ಥಾಪಿಸಬೇಕು ಎಂದು ಈ ಸಭೆಯು ದಲಿತರಿಗೆ ವಿನಂತಿಸುತ್ತದೆ.

**ಭಾಗ–೪**

ಮಸೂದೆ ೧: ಸ್ವಾಮಿ ಶ್ರದ್ಧಾನಂದರ ಕೊಲೆ ಮಾಡಿದ್ದಕ್ಕಾಗಿ ಈ ಪರಿಷತ್ತು ಸಂತಾಪ ವ್ಯಕ್ತಪಡಿಸುತ್ತದೆ ಹಾಗೂ ಅವರು ತೋರಿಸಿಕೊಟ್ಟಿರುವ ದಾರಿಯಲ್ಲಿ ನಡೆದು ಹಿಂದೂ ಜನರು ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತೆಸೆಯಬೇಕು.

ನಂತರ ಅಧ್ಯಕ್ಷರು ಪರಿಷತ್ತಿನ ಸಮಾರೋಪ ಸಮಾರಂಭವನ್ನು ಮುಗಿಸಿದರು. ರಾ. ಶಿವರಾಮ್ ಗೋಪಾಳ್ ಜಾಧವ್ ಅವರು ನೆರೆದ ಜನರಿಗೆ ಹಾಗೂ ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿದರು. ರಾ. ಅನಂತ ವಿನಾಯಕ ಚಿತ್ರೆಯವರು ಕೂಡ ಧನ್ಯವಾದಗಳನ್ನರ್ಪಿಸಿ ಸಭೆಯನ್ನುದ್ದೇಶಿಸಿ ಎರಡು ಮಾತುಗಳನ್ನಾಡಿದರು.'ಇಂದು ಆಯೋಜಿಸಲಾಗಿರುವ ಇಷ್ಟು ದೊಡ್ಡ ಪರಿಷತ್ತು ಏನಾದರೊಂದು ಮಹತ್ವದ ಕಾರ್ಯ ಮಾಡದೆ ಮುಗಿಯಬಾರದು ಎಂದು ನನಗನಿಸುತ್ತದೆ. ಈ ಮಹಾಡ ನಗರದಲ್ಲಿ ನೀರಿನ ಸಮಸ್ಯೆ ತೀವ್ರವಾಗಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಇಲ್ಲಿಯ ಕೆರೆ ಭಾವಿಗಳು ಎಲ್ಲರಿಗಾಗಿ ತೆರೆದಿವೆಯೆಂದು ಇಲ್ಲಿಯ ಮುನಿಸಿಪಾಲ್ಟಿ ಎಂದೋ ಘೋಷಿಸಿದೆ. ಆದರೆ ಆ ಕೆರೆಗಳಲ್ಲಿ ದಲಿತರು ಇಂದಿನವರೆಗೂ ನೀರು

ತುಂಬಲು ಆರಂಭಿಸಿಲ್ಲ. ಈ ಪರಿಷತ್ತು ಇಂದು ದಲಿತರಿಂದ ನೀರು ತುಂಬಿಸಿಕೊಂಡರೆ ಈ ಪರಿಷತ್ತಿನಿಂದ ಒಂದು ಮಹತ್ಕಾರ್ಯವಾಗುತ್ತದೆ. ಈಗ ನಾವೆಲ್ಲರೂ ಅಧ್ಯಕ್ಷರೊಡನೆ ಮಹಾಡ್‌ನಲ್ಲಿಯ ಚವದಾರ್ ಕೆರೆಗೆ ಹೋಗಿ ನೀರು ಕುಡಿದು ಬರೋಣ ಅಂದರು. ನಂತರ ಪರಿಷತ್ತಿನ ಎಲ್ಲ ಜನ ಅಧ್ಯಕ್ಷರೊಂದಿಗೆ ಸಭಾಮಂಟಪದಿಂದ ಹೊರಬಂದು ಎಲ್ಲರೊಂದಿಗೆ ಒಂದು ಮೆರವಣಿಗೆ ಮಾಡಿದರು. ಮಹಾಡ್ ನಗರದಲ್ಲಿ ಅತ್ಯಂತ ಶಾಂತವಾಗಿ ಮೆರವಣಿಗೆ ಮಾಡುತ್ತ ಎಲ್ಲರೂ ಕೆರೆದಂಡೆಗೆ ಬಂದರು.

ಈಗ ಅಂಬೇಡ್ಕರರು ಚವದಾರ್ ಕೆರೆ ದಂಡೆಯ ಮೇಲೆ ನಿಂತಿದ್ದರು. ಜಗತ್ತಿನ ಎಲ್ಲ ಪಂಡಿತರಲ್ಲಿ ಒಬ್ಬ ಜಗದ್ವಿಖ್ಯಾತ ಪಂಡಿತ, ದೊಡ್ಡ ಗುರಿಯೊಂದರಿಂದ ಪ್ರೇರಿತನಾಗಿದ್ದ ಓರ್ವ ಮಹಾನ್ ಹಿಂದೂ ನಾಯಕ, ದಲಿತರ ಸ್ವಾತಂತ್ರ್ಯಸೂರ್ಯ ಡಾ.ಅಂಬೇಡ್ಕರ್ ತಮ್ಮ ಕಾರ್ಯಕ್ಷೇತಕ್ಕಿಳಿದರು. ಸ್ವಾತಂತ್ರ್ಯದ ಹಕ್ಕು ಭಿಕ್ಷೆಬೇಡಿದರೆ ಸಿಗುವುದಿಲ್ಲ, ಸ್ವಂತ ಸಾಮರ್ಥ್ಯದಿಂದ ಅದನ್ನು ಪಡೆಯಬೇಕಾಗುತ್ತದೆ. ಅನ್ನುವ ಸಾರ್ವತ್ರಿಕ ಸತ್ಯವನ್ನವರು ದಲಿತರಿಗೆ ಹೇಳುತ್ತಿದ್ದರು. ಆತ್ಮೋದ್ಧಾರ ಅನ್ನುವುದು ಮತ್ಯಾರದ್ದೋ ಕೃಪೆಯಿಂದ ಆಗುವಂತಹದ್ದಲ್ಲ ಅದನ್ನು ನಾವೇ ಮಾಡಿಕೊಳ್ಳಬೇಕಾಗುತ್ತದೆ. ಡಾ.ಬಾಬಾಸಾಹೇಬ ಅಂಬೇಡ್ಕರರು ತಾವು ಸ್ವತಃ ಕೃತಿವೀರರಾಗಿ ತಮ್ಮ ಅನುಯಾಯಿಗಳಿಗೆ ಈ ಪಾಠ ಹೇಳುತ್ತಿದ್ದರು. ಎಲ್ಲ ದಲಿತರನ್ನು ಸಂಘಟಿಸುತ್ತ ಪ್ರತಿಭಟಿಸುವ ಶಕ್ತಿ ಕೊಡುತ್ತಿದ್ದರು. ಹೇಳಿದಂತೆ ಮಾಡಿ ತೋರಿಸುವುದು ಇತಿಹಾಸ ರಚಿಸುವ ಮಹಾನ್ ಪುರುಷನ ಸ್ವಭಾವವಾಗಿರುತ್ತದೆ.

ಗುರಿಯನ್ನು ನಂಬಿ ಡಾ.ಅಂಬೇಡ್ಕರರು ದಲಿತರಲ್ಲಿ ನಿಷ್ಠೆ ಬೆಳೆಸುತ್ತಿದ್ದರು. ಅವರು ತಮ್ಮ ಮಾತಿನಲ್ಲಿ ಹೇಳುತ್ತಿದ್ದ ಗುರಿ ಈಗ ಹೋರಾಟದ ಅಗ್ನಿದಿವ್ಯದಿಂದ ಪರಿಶುದ್ಧವಾಗುತ್ತಿತ್ತು. ಡಾ.ಅಂಬೇಡ್ಕರರೀಗ ಸ್ವತಃ ಕೆರೆ ದಂಡೆಯ ಮೇಲೆ ನಿಂತರು. ಅದು ತಮ್ಮೂರ ಪುಣ್ಯಭೂಮಿಯ ಕೆರೆಯಾಗಿದ್ದರೂ ಪ್ರಾಣಿ ಪಕ್ಷಿಗಳು ಕೂಡ ತಮ್ಮ ಬಾಯಾರಿಕೆ ನೀಗಿಸಿಕೊಳ್ಳುವಂತಹ ಕೆರೆಯಲ್ಲಿ ನೀರು ಕುಡಿಯಲು ಅನುಮತಿಯಿಲ್ಲದ ಅಂಬೇಡ್ಕರರು, ಸಾರ್ವಜನಿಕ ಸ್ಥಳಗಳು ಹಾಗೂ ದೇವಸ್ಥಾನದಲ್ಲಿ ಕಾಲಿಡಲು ನಿಷೇಧವಿದ್ದ ಮಹಾಪುರುಷನು ಹಿಂದೂಧರ್ಮ ಮಾರ್ತಾಂಡರ ಹಾಗೂ ಹಿಂದೂ ಧರ್ಮದ ಡಾಂಭಿಕತೆಯನ್ನು ಊರವರಿಗೆ ಸಾರುತ್ತಿದ್ದ. ದೇವರು ಎಲ್ಲರಲ್ಲೂ ಇದ್ದಾನೆ ಎಂದು ಹೇಳಿಕೊಂಡು ತಿರುಗುತ್ತಿದ್ದರೂ ನಾಯಿ ಬೆಕ್ಕಿನಂತಹ ಪ್ರಾಣಿಗಳನ್ನು ಪ್ರೀತಿಸಿ ಮನುಷ್ಯನನ್ನು ಪ್ರಾಣಿಗಿಂತಲೂ ಕೀಳಾಗಿ ಕಾಣುವ ಆ ಮಹಾನ್ ಪಾತಕನ ಅಘೋರ ಪಾತಕವನ್ನು ಆ ಕ್ರಾಂತಿಪುರುಷ ಜಗತ್ತಿಗೆ ಎತ್ತಿ ತೋರಿಸುತ್ತಿದ್ದ.

ಅಂಬೇಡ್ಕರರು ಚವ್‌ದಾರ ಕೆರೆಯ ಮೆಟ್ಟಲುಗಳನ್ನಿಳಿದು ಹೋದರು. ಬಗ್ಗಿ ತಮ್ಮ ಕೈಯಿಂದ ಒಂದು ಬೊಗಸೆ ನೀರು ಕುಡಿದರು. ಅಲ್ಲಿ ನೆರೆದಿದ್ದ ಪ್ರಚಂಡ ಜನಸಮೂದಾಯವು ತನ್ನ ನಾಯಕನ ಅನುಕರಣೆ ಮಾಡಿ ತಮ್ಮ ನಾಗರೀಕತ್ವದ ಹಾಗೂ ಮಾನವೀಯತೆಯ ಹಕ್ಕು ಪಡೆಯಿತು. ಮೆರವಣಿಗೆ ಮತ್ತೆ ಪರಿಷತ್ತು ನಡೆದ ಜಾಗಕ್ಕೆ ತೆರಳಿ ಅಲ್ಲಿಂದ ಜನ ತಮ್ಮ ತಮ್ಮ ಮನೆಗಳಿಗೆ ಹೋದರು. ನಾಯಕನು ಸರಿಯಾದ ಸಮಯಕ್ಕೆ ಸರಿಯಾದ ಹೆಜ್ಜೆಯಿಡಬೇಕು. ನೂರಾರು ನಿಯಮಾವಳಿಗಳಿಂದ ಆಗದ ಕೆಲಸಗಳು ಒಂದು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದರಿಂದ ಆಗುತ್ತದೆ. ಅದಕ್ಕೇ 'ಕಾರ್ಲಾಯೀಲ' ಹೇಳಿರುವುದು 'ಕೃತಿಯೇ(ಕೆಲಸ) ಮಾನವನ ನಿಜವಾದ ಧ್ಯೇಯ' ಎಂದು.

ಹೀಗೆ ಒಂದು ಮಹಾನ್ ಕಾರ್ಯದೊಂದಿಗೆ ಪರಿಷತ್ತು ಮುಗಿಯಿತು. ಭಾರತದ ಮೂರುಸಾವಿರ ವರ್ಷಗಳ ಇತಿಹಾಸದಲ್ಲಿಯ ಪರಮಮಂಗಲವಾದಂತಹ ಅತ್ಯಂತ ಭಾಗ್ಯದ ದಿವಸ. ಮನುಷ್ಯತ್ವ ಹಾಗೂ ಸಮಾನತೆಯ ಸಂದೇಶವನ್ನು ಭಾರತಕ್ಕೆ ಸಾರಿದ ಬಂಗಾರದ ದಿನ ೨೦ನೆಯ ಮಾರ್ಚ ೧೯೨೭ ಹೌದು!

ಡಾ.ಅಂಬೇಡ್ಕರರ ಜೀವನದ ಪರಮ ಭಾಗ್ಯದ ದಿನ ಕೂಡ, ಆ ದಿನದಿಂದ ಡಾ.ಅಂಬೇಡ್ಕರರ ಕೀರ್ತಿ ಇಡೀ ದೇಶದಲ್ಲೇ ಹರಡಿತು.

## ‘ಮಹಾಡ್‌ನಲ್ಲಿಯ ಮೇಲ್ವರ್ಗದ ಜನರ ಅತ್ಯಾಚಾರ’

ಪರಿಷತ್ತು ಮುಗಿದ ಮೇಲೆ ಅಧ್ಯಕ್ಷರು ಹಾಗೂ ಉಳಿದ ಅತಿಥಿಗಳು ಸರಕಾರಿ ಬಂಗಲೆಗೆ ತೆರಳಿದರೆ ಉಳಿದ ಜನ ತಮ್ಮ ತಮ್ಮ ಊರಿಗೆ ಹೋಗುವ ಮುನ್ನ ಭೋಜನಗೃಹಕ್ಕೆ ತೆರಳಿದರು. ಸುಮಾರು ಮಧ್ಯಾಹ್ನ ಎರಡು ಘಂಟೆಗೆ ವಿಶ್ವೇಶ್ವರ ದೇವಸ್ಥಾನದ ಅರ್ಚಕನು ‘ದಲಿತರು ವಿಶ್ವೇಶ್ವರ ದೇವಸ್ಥಾನದಲ್ಲಿ ನುಗ್ಗಲಿದ್ದಾರೆ, ನೀವೆಲ್ಲ ಹೋಗಿ ದೇವಸ್ಥಾನವನ್ನು ರಕ್ಷಿಸಿ’ ಎಂದು ಸುಳ್ಳು ಡಂಗೂರ ಸಾರಲಾರಂಭಿಸಿದ. ದಲಿತರು ಕೆರೆಯನ್ನು ಹಾಳು ಮಾಡಿದ್ದಕ್ಕೆ ಸಿಟ್ಟು ತೋರಿಸಲು ಮೇಲ್ವರ್ಗದ ಜನರಿಗಿದೊಂದು ಮಾರ್ಗ ಸಿಕ್ಕಂತಾಯಿತು, ಡಂಗೂರ ಕೇಳುತ್ತಲೆ ಸುಮಾರು ೪೦೦–೫೦೦ ಜನ ಕೋಲು ಹಿಡಿದು ವಿಶ್ವೇಶ್ವರ ದೇವಸ್ಥಾನದೆದುರು ನಿಂತು ದಲಿತರು ದೇವಸ್ಥಾನದೊಳಗೆ ನುಗ್ಗಲಿದಾರೆ ಎಂದು ಬೊಬ್ಬೆ ಹೊಡೆಯಲಾರಂಬಿಸಿದರು. ಇದನ್ನೆಲ್ಲ ನೋಡಿದ ನಗರದ ಫೌಜದಾರ ಡಾಕ್ ಬಂಗಲೆಗೆ ಹೋಗಿ ಅಂಬೇಡ್ಕರರನ್ನು ಕುರಿತು, ‘ನಿಮ್ಮ ಜನ ದೇವಸ್ಥಾನದಲ್ಲಿ ನುಗ್ಗಲಿರುವ ಸುದ್ದಿ ಕೇಳಿ ಊರಿನ ಜನರೆಲ್ಲ ದೇವಸ್ಥಾನದಲ್ಲಿ ಜಮಾಯಿಸಿದ್ದಾರೆ, ನಾನವರಿಗೆಲ್ಲ ಏನು ಹೇಳಲಿ?’ ಎಂದು ಕೇಳಿದ. ಅದಕ್ಕೆ ಅಂಬೇಡ್ಕರರು, ‘ನಮಗೆ ದೇವಸ್ಥಾನದಲ್ಲಿ ನುಗ್ಗುವ ಯಾವ ಆಸೆಯೂ ಇಲ್ಲ, ಹಾಗಾಗಿ ನೀವ್ಯಾರೂ ಹೆದರುವ ಅಗತ್ಯವಿಲ್ಲ, ನೀವು ನೆರೆದಿರುವ ಜನರನ್ನು ಶಾಂತಗೊಳಿಸಿ’ ಎಂದರು. ಫೌಜದಾರ ಹೋದ ಮೇಲೆ ತಮ್ಮ ಜನರಿಗೆ ತಾಕೀತು ಮಾಡಲು ಅಂಬೇಡ್ಕರರು ತಮ್ಮ ಕೆಲವು ಜನರನ್ನು ಭೋಜನಗೃಹಕ್ಕೆ ಕಳಿಸಿದರು. ಅದರಂತೆ ಪರಿಷತ್ತಿಗೆ ಬಂದಿದ್ದ ಜನ ಊಟ ಮುಗಿಸಿ ತಮ್ಮ ತಮ್ಮ ಊರಿಗೆ ಹೋಗಲು ಸಿದ್ಧರಾದರು. ಸಾಕಷ್ಟು ದಲಿತರು ಊರಿಗೆ ಹೊರಟು ಹೋದ ಮೇಲೆ ದೇವಸ್ಥಾನದ ಹತ್ತಿರ ಸೇರಿದ್ದ ಊರಿನ ಗೂಂಡಾಗಳು ಮಾರುಕಟ್ಟೆಯಿಂದ ಮನೆಗೆ ಹೋಗುತ್ತಿದ್ದ ದಲಿತರ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿದರು. ಈ ಅತಿಪ್ರಸಂಗ ನಡೆಯುವವರೆಗೆ ಮಹಾಡ್‌ನ ಮಾಮಲೆದಾರರು ಗದ್ದಲ ಕಡಿಮೆ ಮಾಡಲು ಯಾವುದೇ ಉಪಾಯ ಮಾಡಿದಂತೆ ಕಾಣುತ್ತಿರಲಿಲ್ಲ. ಕಡೆಗೆ ಸಾಯಂಕಾಲ ೪–೧೫ ಕ್ಕೆ ಮಾಮಲೆದಾರರು ಪೊಲೀಸ್ ಸಬ್ ಇನ್ಸಪೆಕ್ಟರ್‌ಅವರ ಜೊತೆ ಬಂದು ‘ಶಾಂತತೆ ಕಾಪಾಡಲು ನೀವು ನಮ್ಮ ಜೊತೆ ಬನ್ನಿ’ ಎಂದು ಅಂಬೇಡ್ಕರರಿಗೆ ಕೇಳಿಕೊಂಡರು. ಅದಕ್ಕೆ ಅಂಬೇಡ್ಕರರು, ‘ನಿಮ್ಮ ಜನರಿಗೆ ನೀವು ಹೇಳಿ ನಮ್ಮ ಜನರಿಗೆ ನಾನು ಹೇಳುತ್ತೇನೆ’ ಅಂದರು. ನಿಜ ಹೇಳಬೇಕೆಂದರೆ ದಲಿತರಿಗೆ ತಿಳಿಸಿ ಹೇಳುವ ಅಗತ್ಯವೇ ಇರಲಿಲ್ಲ. ನೆರೆದಿದ್ದ ದಲಿತ ಜನಸ್ತೋಮ ಯಾವತ್ತೂ ಶಾಂತಿಭಂಗ ಮಾಡಿರಲಿಲ್ಲ.ಅಲ್ಲದೆ ಸಾಕಷ್ಟು ಜನ ದಲಿತರು ತಮ್ಮೂರಿಗೆ ಹೋಗಿಯೂ ಆಗಿತ್ತು. ಆದರೂ ಮಾಮಲೆದಾರರು ಹೇಳಿದ್ದರಿಂದ ಬಂಗಲೆಯಲ್ಲಿ ಉಳಿದಿದ್ದ ಕೆಲವು ದಲಿತ ನಾಯಕರೊಂದಿಗೆ ಅಂಬೇಡ್ಕರರು ನಗರದತ್ತ ಹೊರಟರು. ದಾರಿಯಲ್ಲಿ ವಿಶ್ವೇಶ್ವರ ದೇವಸ್ಥಾನದೆದುರು ಮೇಲ್ಜಾತಿಯ ಜನ ಅಂಬೇಡ್ಕರರನ್ನು ತಡೆದ. ಅವರಲ್ಲಿಯ ಡಿಂಗಣಕರ್, ಹಾಗೂ ತುಳಜಾರಾಮ್ ಶೇಟಜಿಯ ತಮ್ಮ ಚುನ್ನಿಲಾಲ್ ಇವರು ದೇವಸ್ಥಾನದಲ್ಲಿ ಪ್ರವೇಶಿಸುವ ಬಗ್ಗೆ ವಿವರಣೆ ಕೊಡಿ ಅಂದರು. ಅದಕ್ಕೆ ಅಂಬೇಡ್ಕರ್ ಅವರು ಫೌಜದಾರನಿಗೆ ಕೊಟ್ಟ ಉತ್ತರವನ್ನೇ ಈ ಜನಸಮುದಾಯಕ್ಕೆ ಕೊಟ್ಟರಾದರೂ ಜನ ಸುಮ್ಮನಾಗದೆ ಶಾಂತತೆ ಕಾಪಾಡುವುದನ್ನು ಬಿಟ್ಟು ಮನ ನೋಯುವಂತಹ

ಮಾತುಗಳನ್ನಾಡಲು ಆರಂಭಿಸಿದರು. ಮುನಿಸಿಪಾಲ್ಟಿಯ ನಿಯಮಗಳೆಂದರೆ ಜನರ ನಿಯಮಗಳಲ್ಲ, ನೀವು ಕೆರೆಗೆ ಹೋಗುವ ಮುನ್ನ ನಮಗೇಕೆ ಹೇಳಲಿಲ್ಲ? ಅನ್ನುವ ಪ್ರಶ್ನೆಗಳ ಸುರಿಮಳೆ ಆಗುತ್ತಿತ್ತು. ಮಾತಿಗೆ ಮಾತು ಬೆಳೆಸುವುದು ಸರಿಯಲ್ಲ ಎಂದು ಗೊತ್ತಿದ್ದ ಅಂಬೇಡ್ಕರರು ತಮ್ಮ ಜೊತೆಯವರೊಡನೆ ಮುಂದೆ ಹೋಗಲಾರಂಭಿಸಿದರು. ದಾರಿಯಲ್ಲಿ ಕೆಲವು ಜನರಂತೂ 'ಅಸ್ಪೃಶ್ಯರು ದೇವಸ್ಥಾನದೊಳಗೆ ನುಗ್ಗಿದರಪ್ಪೋ' ಎಂದು ಕೂಗುತ್ತ ಅಲ್ಲಿ ಇಲ್ಲಿ ಬೇಕಾಬಿಟ್ಟಿ ಓಡತೊಡಗಿದರು. ಮೆಜಿಸ್ಟ್ರೇಟ್ ಸಾಹೇಬರು ಇದನ್ನೆಲ್ಲ ನೋಡಿಯೂ ಕೂಡ ಯಾರನ್ನೂ ಬಂಧಿಸುವ ಪ್ರಯತ್ನ ಮಾಡಲಿಲ್ಲ. ದಲಿತರಿಗೆ ತಿಳಿಹೇಳಲು ಬಂದಿದ್ದ ಅಂಬೇಡ್ಕರರು ಅಲ್ಲಿ ಒಬ್ಬ ದಲಿತನನ್ನೂ ಕಾಣದೆ ಮತ್ತೆ ಸರಕಾರಿ ಬಂಗಲೆಗೆ ಬಂದಾಗ ನೂರಾರು ಜನ ದಲಿತರು ಬಂಗಲೆಯ ಹೊರಗಡೆ ಸೇರಿರುವುದನ್ನು ಕಂಡರು. ಅದರಲ್ಲಿ ಕೆಲವು ದಲಿತರು ಗಾಯಗೊಂಡಿದ್ದರು. ಇದನ್ನು ನೋಡುವವರೆಗೂ ಈ ದಂಗೆಯ ಕೊನೆ ರಕ್ತಪಾತದಲ್ಲಾಗಿದೆ ಅನ್ನುವುದು ಯಾರಿಗೂ ಗೊತ್ತಿರಲಿಲ್ಲ. ಅಂದು ಮೆಜಿಸ್ಟ್ರೇಟ್ ಸಾಹೇಬರು ಊರಿನಲ್ಲಿದ್ದಾಗಲೂ ಈ ದಂಗೆಯನ್ನು ಯಾಕೆ ತಡೆಗಟ್ಟಲಿಲ್ಲ ಅನ್ನುವ ಆಶ್ಚರ್ಯ ಅಲ್ಲಿದ್ದ ಪ್ರತಿಯೊಬ್ಬ ದಲಿತ ನಾಯಕನಿಗಾಗಿತ್ತು, ಆದರೆ ಅದೆಲ್ಲ ಯೋಚಿಸುವ ಸಮಯ ಅದಾಗಿರಲಿಲ್ಲ.ಎಲ್ಲ ಪ್ರಶ್ನೆಗಳನ್ನು ಪಕ್ಕಕ್ಕಿಟ್ಟು ಮೊದಲು ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅವರಿಗೆ ಚಿಕಿತ್ಸೆ ಮಾಡಿಸಿ ಅಲ್ಲಿಂದ ಅವರನ್ನು ಪೊಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ದೂರು ಬರೆಸಿದರು.ಪುರಾವೆಗಳನ್ನು ಒಟ್ಟು ಮಾಡುವುದು ಸಾಕಷ್ಟು ಕಠಿಣವಾದ ಕೆಲಸವಾಗಿತ್ತು. ಮೇಲ್ಜಾತಿಯ ಜನ ಒಗ್ಗಟ್ಟಾಗಿದ್ದರಿಂದ ಯಾರೂ ಏನನ್ನೂ ಹೇಳಲು ಸಿದ್ಧರಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮುಂಬಯಿಯ ನಾಯಕರು ಎರಡು ದಿನ ಇದ್ದು ಸಾಧ್ಯವಾದಷ್ಟು ಪುರಾವೆಗಳನ್ನು ಒಟ್ಟು ಮಾಡಲು ಪ್ರಯತ್ನಿಸಿದರು. ಆರೋಪಿಗಳಿಗೆ ಶಿಕ್ಷೆ ಕೊಡಿಸುವಲ್ಲಿ ಸ್ಥಳೀಯ ಪೊಲೀಸರ ಉತ್ಸಾಹ ಕಡಿಮೆ ಕಾಣುತ್ತಿತ್ತು. ಇದನ್ನೆಲ್ಲ ನೋಡಿ ಆಗಿರುವ ಪ್ರಕಾರವನ್ನೆಲ್ಲ ನಾ. ಗವರ್ನರ್ ಸಾಹೇಬರು ಹಾಗೂ ಜಿಲ್ಲೆಯ ಕಲೆಕ್ಟರ್ ಸಾಹೇಬರಿಗೆ ತಂತಿಯ ಮೂಲಕ ವಿಷಯ ತಿಳಿಸಿ ಪೊಲೀಸರಿಗೆ ಈ ವಿಷಯದಲ್ಲಿ ತಾಕೀತು ಕೊಡಬೇಕಾಗಿ ವಿನಂತಿಸಲಾಯಿತು. ಈ ದಂಗೆಯ ಪರಿಣಾಮ ಮಹಾಡ್ ನಗರದ ಹೊರಗೂ ಆಗಿರುವುದು ಕಂಡುಬಂತು.ನಗರದ ಕೆಲವು ದುಷ್ಟ ಮೇಲ್ಜಾತಿಯ ಜನ ಹಳ್ಳಿಗಳಲ್ಲಿ ವಾಸಿಸುತ್ತಿರುವ ಮರಾಠಾ ಜನರಿಗೆ 'ಮಾಂಗ್ ನಿಮ್ಮೂರಿಗೆ ಮರಳಿದಾಗ ಅವರಿಗೆ ಥಳಿಸಿ'ಅನ್ನುವ ಸಂದೇಶ ಕಳಿಸಿದರು. ಅದರಂತೆ ಈ ದುಷ್ಟ ಜನರು 'ಮಹಾಡ್‌ನ ಭಾವಿ ಕೆರೆಗಳನ್ನು ದಲಿತರು ಹಾಳು ಮಾಡಿದರು, ನಿಮ್ಮ ಕೆರೆ ಭಾವಿಗಳನ್ನು ಕಾಪಾಡಿ' ಅನ್ನುವ ಲಿಖಿತ ಸಂದೇಶವನ್ನು ದೂರದೂರದ ಹಳ್ಳಿಗಳಿಗೆ ಕಳಿಸಿದರು. ಇದರ ಪರಿಣಾಮವಾಗಿ ಈ ದಂಗೆ ಎಲ್ಲೆಡೆ ಹರಡಿ ಅಲ್ಪಸಂಖ್ಯಾತರಾದ ದಲಿತರಿಗೆ ಸಾಕಷ್ಟು ಏಟು ತಿನ್ನಬೇಕಾಯಿತು. ಕೆಲವರಿಗಂತೂ ದೊಡ್ಡ ದೊಡ್ಡ ಗಾಯಗಳಾಗಿದ್ದವು.

ದಲಿತರನ್ನು ಕಾಪಾಡಲು ಇಂತಹ ಘಟನೆಗಳಾದ ಊರುಗಳಿಂದ ಆರೋಪಿಗಳ ಪಟ್ಟಿಯೊಂದನ್ನು ತಯಾರಿಸಿ ಕೊಲಾಬಾ ಪೊಲೀಸ್ ಸುಪರಿಂಟೆಂಡೆಂಟರಿಗೆ ಕಳಿಸಲಾಯಿತು. ಇಷ್ಟೆಲ್ಲ ಆದ ಮೇಲೆ ಹೆಚ್ಚು ದಿನಗಳ ರಜೆ ಹಾಕಲಾಗದೆ ಡಾ.ಅಂಬೇಡ್ಕರ್ ಹಾಗೂ ಚಿತ್ರೆ ಇವರನ್ನು ಬಿಟ್ಟು ಮುಂಬಯಿಯ ಜನ ಮುಂಬಯಿಗೆ ಮರಳಿದರು. ಇವರಿಬ್ಬರೂ ಮತ್ತೊಮ್ಮೆ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರನ್ನು ಭೇಟಿಯಾಗಿ ದಲಿತರನ್ನು ಕಾಪಾಡಲು ಏನೇನು ಮಾಡಬೇಕು ಅನ್ನುವುದನ್ನು ತಿಳಿಸಿ ಹೇಳಿದರು. ಮಂಗಳವಾರ ಸಾಯಂಕಾಲ ಬ್ರಾಹ್ಮಣೇತರ ನಾಯಕರ ಒಂದು ಖಾಸಗಿ ಸಭೆಯನ್ನು ಕರೆಯಲಾಯಿತು. ಮಹಾಡ್‌ನಲ್ಲಾದ ದಂಗೆಯಲ್ಲಿ ಬ್ರಾಹ್ಮಣೇತರರು ವಿಶೇಷವಾಗಿ ಭಾಗವಹಿಸಿದ್ದರು ಅನ್ನುವುದು ಗೊತ್ತಾದ ಮೇಲೆ ಇಂತಹ ದುಷ್ಕೃತ್ಯಗಳನ್ನು

ನಿಲ್ಲಿಸಲು ಯಾವ ಉಪಾಯ ಯೋಜನೆಗಳನ್ನು ಮಾಡಬಹುದು ಅನ್ನುವುದನ್ನು ಚರ್ಚಿಸಲು ಈ ಸಭೆ ಕರೆಯಲಾಗಿತ್ತು. ಆದರೆ ಒಂದಿಬ್ಬರನ್ನು ಬಿಟ್ಟು ಉಳಿದೆಲ್ಲರೂ ದುಷ್ಕೃತ್ಯ ತಡೆಯುವ ಕಾರ್ಯದಿಂದ ದೂರವೇ ಉಳಿದರು ಅನ್ನುವುದು ದುಃಖದ ಸಂಗತಿ. ಇಷ್ಟೆಲ್ಲ ಕಷ್ಟಪಟ್ಟು ಅಂಬೇಡ್ಕರ್ ಹಾಗೂ ಚಿತ್ರೆ ಬುಧವಾರ ಮರಳಿ ಮುಂಬಯಿಗೆ ಬಂದರು. ಎಲ್ಲ ದೃಷ್ಟಿಯಿಂದಲೂ ಈ ಪರಿಷತ್ತು ಮಹತ್ವದ್ದಾಗಿತ್ತು. ಇದರ ಪರಿಣಾಮ ಕೆಟ್ಟದ್ದೋ ಒಳ್ಳೆಯದೋ ಅನ್ನುವುದನ್ನು ಕಾಲವೇ ನಿರ್ಧರಿಸಲಿ ಆದರೆ ಪರಿಷತ್ತು ಮಾತ್ರ ಪರಿಣಾಮಕಾರಿಯಾಗಿ ಕೊನೆಗೊಂಡಿತು ಎಂದೇ ಹೇಳಬಹುದು.

ಪರಿಷತ್ತನ್ನು ಯಶಸ್ವಿಯಾಗಿಸಲು ಹಾಗೂ ದಂಗೆಯಲ್ಲಿ ಗಾಯಗೊಂಡ ದಲಿತರಿಗೆ ಸಹಾಯ ಮಾಡಲು ಮುಂದಾದ ಚಾಂದ್ರಸೇನಿಯ ಕಾಯಸ್ಥ ಪ್ರಭು ಜಾತಿಯ ತರುಣರಿಗೆ ಕೊಲಾಬಾ ಜಿಲ್ಲೆಯ ದಲಿತರು ಯಾವತ್ತೂ ಋಣಿಯಾಗಿದ್ದಾರೆ.

# ೮.

# ರಾಜ್ಯದ ಅಭಿಮಾನವಿಲ್ಲದಿದ್ದರೆ ರಾಜ್ಯ ಉಳಿಯುವುದಿಲ್ಲ

ಠಾಣೆಯಲ್ಲಿಯ ಬದಲಾಪುರ ಜಿಲ್ಲೆಯಲ್ಲಿ ತ್ರಿಶತ ಸಾಂವತ್ಸರಿಕ ಶ್ರೀ ಶಿವಾಜಿ ಉತ್ಸವವು ೩ನೆಯ ಮೇ ೧೯೨೭ರಂದು ಸಾಯಂಕಾಲ ಆರು ಘಂಟೆಗೆ ಡಾ.ಬಿ.ಆರ್. ಅಂಬೇಡ್ಕರ್ ಬಾರ್–ಎಟ್–ಲಾ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು.

ಈ ಉತ್ಸವದ ವ್ಯವಸ್ಥಾಪಕ ಕಮಿಟಿಯ ಅಧ್ಯಕ್ಷತೆಯನ್ನು ಯಾರಿಗೆ ವಹಿಸಬೇಕು ಅನ್ನುವುದರ ಬಗ್ಗೆ ಸಾಕಷ್ಟು ಸಮಾಲೋಚನೆ ನಡೆಯುತ್ತಿದ್ದವು. ಕಡೆಗೆ ಊರಿನ ಎಲ್ಲ ಜನರ ಸಮ್ಮತಿಯಿಂದ ಈ ಉತ್ಸವದ ಅಧ್ಯಕ್ಷತೆಯನ್ನು ಮುಂಬಯಿಯ ದಲಿತ ವರ್ಗದ ನೇತಾರರಾದ ಡಾ.ಅಂಬೇಡ್ಕರರಿಗೆ ವಹಿಸಬೇಕು ಎಂದು ನಿರ್ಧಾರವಾಯಿತು. ಈ ನಿರ್ಧಾರದಂತೆ ಉತ್ಸವ ಕಮಿಟಿಯ ಮುಖ್ಯ ವ್ಯವಸ್ಥಾಪಕರಾದ ಪಾಲಯೆ ಶಾಸ್ತ್ರಿಯವರು ಮುಂಬಯಿಗೆ ಹೋಗಿ ಬ್ರಾಹ್ಮಣ–ಬ್ರಾಹ್ಮಣೇತರ ಪತ್ರಿಕೆಯ ಸಂಪಾದಕರಾದ ರಾ. ನಾಯಿಕ ಇವರ ಸಹಾಯದಿಂದ ಡಾ. ಅಂಬೇಡ್ಕರ್ ಅವರನ್ನು ಭೇಟಿ ಮಾಡಿ ಶಿವಾಜಿ ಉತ್ಸವದ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸುವಂತೆ ವಿನಂತಿಸಿಕೊಂಡರು. ಪಾಲಯೆ ಶಾಸ್ತ್ರಿಗಳಂತಹ ಭಿಕ್ಷೆ ಬೇಡಿ ಹೊಟ್ಟೆಹೊರೆದುಕೊಳ್ಳುವಂತ ಬ್ರಾಹ್ಮಣ ಬಂದು ವಿನಂತಿಸಿಕೊಂಡಾಗ ಡಾ. ಅಂಬೇಡ್ಕರರು ಅವರ ವಿನಂತಿಯನ್ನು ಸಂತೋಷದಿಂದ ಸ್ವೀಕರಿಸಿ ಉತ್ಸವದ ದಿನ ೪ ಘಂಟೆಗೆ ಮುಂಬಯಿಯಿಂದ ರಾ. ನಾಯಿಕ್, ರಾ. ಸೀತಾರಾಮ್, ನಾಮದೇವ್ ಶಿವತರ್ಕರ್, ರಾ. ಗಣಪತ್ ಮಾಹ್ದೂಜಾಧವ್‌ರೊಂದಿಗೆ ಬದಲಾಪೂರ್‌ಗೆ ಆಗಮಿಸಿ ಪಾಲಯೆ ಶಾಸ್ತ್ರಿಗಳ ಮನೆಯಲ್ಲಿ ಉಳಿದುಕೊಂಡರು. ಚಹಾ ಕುಡಿದು ಸರಿಯಾಗಿ ಆರು ಘಂಟೆಗೆ ಉತ್ಸವ ನಡೆಯಲಿದ್ದ ಸ್ಥಳಕ್ಕೆ ತಲುಪಿದರು.

ಉತ್ಸವ ಆರಂಭಿಸುವ ಮುನ್ನ ದೇವರನಾಮ ಹಾಡಲಾಯಿತು. ತದನಂತರ ರಾ.ಪಾಲೆಯ ಶಾಸ್ತ್ರಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ನಾನಾಸಾಹೇಬ ಚಾಫೇಕರ್ ಅವರು ಅಂದಿನ ಉತ್ಸವದ ಅಧ್ಯಕ್ಷತೆಯನ್ನು ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಸ್ವೀಕರಿಸಬೇಕು ಎಂದು ಊರಿನ ಜನರ ವತಿಯಿಂದ ವಿನಂತಿಸಿದರು. ಅವರ ವಿನಂತಿಯನ್ನು ತೀಸ್ ಮೆಸ್ಸರ್ಸ್ ಕಾಳೆ, ಸುಳೆ, ಪಾಟೀಲ್ ಹಾಗೂ ಮೊಕಾಶಿಯವರು ಅನುಮೋದಿಸಿದ ಮೇಲೆ ಡಾ. ಅಂಬೇಡ್ಕರ್ ಸ್ಥಾನಾಪನ್ನರಾದರು. ಅವರು ತಮ್ಮ ಭಾಷಣದಲ್ಲಿ ಶಿವಾಜಿಯ ವಿವಿಧ ಗುಣಗಳ ಬಗ್ಗೆ ಅತ್ಯಂತ ಪರಿಣಾಮಕಾರಿಯಾಗಿ ಒಂದು ಘಂಟೆ ಭಾಷಣ ಮಾಡಿದರು. ಕಡೆಗೆ, 'ತನ್ನ ಅಸಾಮಾನ್ಯ ಗುಣಗಳಿಂದ ಶಿವಾಜಿ ಪಡೆದರಾಜ್ಯ ಕಡೆಯ ತನಕ ಉಳಿಯಲಿಲ್ಲವೇಕೆ?' ಅನ್ನುವುದಕ್ಕೆ ಕಾರಣಒಂದೇ, ಎಲ್ಲರಿಗೂ ಆ ರಾಜ್ಯದ ಬಗ್ಗೆ ಸಮನಾದ ಅಭಿಮಾನವಿರಲಿಲ್ಲ. ಒಬ್ಬ ರಾಜ ಹೋಗಿ ಅವನ ಜಾಗಕ್ಕೆ ಮತ್ತೊಬ್ಬ ರಾಜ ಬಂದರೂಜನತೆಯ ನಿತ್ಯ ವ್ಯವಹಾರದ ಮೇಲೆ ಅಷ್ಟೇನೂ ಪರಿಣಾಮವಾಗುತ್ತಿರಲಿಲ್ಲ. ನೆಪೋಲಿಯನ್ ಇಂಗ್ಲಂಡಿನ ಮೇಲೆ ದಾಳಿ ಇಟ್ಟಾಗ ಇಂಗ್ಲಂಡಿನಲ್ಲಿಯ ಕಾರ್ಮಿಕರು ಸೇರಿ ತಮ್ಮ ದೇಶದ ಜನರಿಗೆ ಕೊಟ್ಟ ಉದಾಹರಣೆಯೇ ಇಲ್ಲಿ ಅನ್ವಯಿಸುತ್ತದೆ ಅಂದರು. ಡಾ. ಅಂಬೇಡ್ಕರ್ ಅವರ ಈ ರೀತಿಯ ಭಾಷಣವಾದ ಮೇಲೆ ರಾ. ನಾಯಿಕ್ ಅವರು ಕೂಡ ವಿಚಾರ ಪರಿಪೂರ್ಣವಾಗಿ ಭಾಷಣ

ಮಾಡಿದರು. ನಂತರ ರಾ. ಭಾ. ರಾಓಕ್ ಅವರು ತಮ್ಮ ಹಾಸ್ಯಮಯ ಶೈಲಿಯಲ್ಲಿ ಎಲ್ಲರಿಗೂ ವಂದನಾರ್ಪಣೆ ಹೇಳಿದಾಗ ಕಾರ್ಯಕ್ರಮದ ಮೊದಲ ಭಾಗ ಮುಗಿದಿತ್ತು. ಅಧ್ಯಕ್ಷರು ನಂತರ ಶ್ರೀ. ಪಾಲಯೆ ಶಾಸ್ತ್ರಿಯವರ ಮನೆಗೆ ಊಟಕ್ಕೆ ಹೋದರು. ರಾ. ಪಾಲಯೆ ಶಾಸ್ತ್ರಿಗಳು ಮನಸ್ಸಿನಲ್ಲಿ ಯಾವುದೇ ಕೀಳು ಭಾವನೆಗಳನ್ನಿಟ್ಟುಕೊಳ್ಳದೆ ತಮ್ಮ ಮನೆಯಲ್ಲಿ ಡಾ. ಅಂಬೇಡ್ಕರ್ ಹಾಗೂ ಅವರ ಜೊತೆಗಿದ್ದ ದಲಿತರೊಡನೆ ಸಹಭೋಜನ ಮಾಡಿದರು.

ರಾತ್ರಿ ೯ ರಿಂದ ೧೧.೩೦ ರತನಕ ಕೀರ್ತನೆ ನಡೆಯಿತು. ಯಾವುದೇ ಪ್ರಕಾರದ ಜಾತಿ ಭೇದವಿಲ್ಲದೆ ಎಲ್ಲರೂ ಕೀರ್ತನ ಶ್ರವಣಕ್ಕೆ ಬಂದಿದ್ದರು. ಕೆಲವು ಮಾಂಗ್ ಜನರಂತೂ ಕೀರ್ತನೆ ಮಾಡುವ ಮಹಾರಾಜರ ಎದುರೇ ಕುಳಿತಿದ್ದರು. ಕೀರ್ತನೆ ಮುಗಿದ ಮೇಲೆ ರಾತ್ರಿ ಶಿವಾಜಿ ಮಹಾರಾಜರ ಪಲ್ಲಕ್ಕಿಯು ಡಾ. ಅಂಬೇಡ್ಕರ ಅವರ ನೇತೃತ್ವದಲ್ಲಿ ೧೫೦೦೦ ಜನರೊಟ್ಟಿಗೆ ಪ್ರದಕ್ಷಿಣೆ ಮಾಡಿ ಬಂದ ಮೇಲೆ ಕಾರ್ಯಕ್ರಮ ಮುಗಿಯಿತು.

# ೯.

# ನಮ್ಮ ಉದ್ಧಾರ ನಾವೇ ಮಾಡಿಕೊಳ್ಳಲು ಕಟಿಬದ್ಧರಾಗಬೇಕು

ಮುಂಬಯಿ–ಚೇರಾಬಾಝಾರನಲ್ಲಿ ೪ನೆಯ ಜೂನ್ ೧೯೨೭ ರಂದು ರಾತ್ರಿ ಎಂಟುವರೆ ಘಂಟೆಗೆ ಬಹಿಷ್ಕೃತ ಭಾರತದ ಸಂಪಾದಕರಾದ ಡಾ. ಬಾಬಾಸಾಹೇಬ ಅಂಬೇಡ್ಕರ್ ಬಾರ್–ಎಟ್_ಲಾ ಅವರ ಅಧ್ಯಕ್ಷತೆಯಲ್ಲಿ ಬಹಿಷ್ಕೃತ ಜನರ ಜಾಹೀರು ಸಭೆ ನಡೆಯಿತು. ಬ.ಹಿತಕಾರಿಣಿ ಸಭೆಯ ಜನರಲ್ ಸೆಕ್ರೆಟರಿ ಶ್ರೀಯುತ ಎಸ್.ಎನ್. ಶಿವತರಕರ ಅವರು ಮಹಾಡ ಪರಿಷತ್ತಿನ ನಂತರ ಮೇಲ್ಜಾತಿಯವರು ಮಾಡುತ್ತಿರುವ ಗೂಂಡಾಗಿರಿಯ ಬಗ್ಗೆ ವಿಸ್ತ್ರತವಾಗಿ ನೀಡಿದ ಮಾಹಿತಿ ಕೇಳಿ ನೆರೆದಿದ್ದ ಜನರ ಮನಸ್ಸಿಗೆ ದುಃಖವಾಯಿತು. ನಂತರ ಶ್ರೀ ಗಂಗಾವಣೆ, ತಾಂಬೆ, ಗಿಮೊನಕರ, ವೀರಕರ್, ಭೆಸನಕರ್, ಭಾತಕುಡೆ ಇವರ ಸ್ಫೂರ್ತಿದಾಯಕ ಭಾಷಣಗಳಾದವು. ದಲಿತರ ಪರಿಸ್ಥಿತಿಯಿಂದು ಎಷ್ಟು ಶೋಚನೀಯವಾಗಿದೆ ಅನ್ನುವುದನ್ನವರು ತಮ್ಮ ಭಾಷಣಗಳಲ್ಲಿ ಸ್ಪಷ್ಟವಾಗಿ ಮನವರಿಕೆ ಮಾಡಿದರು. 'ನಮ್ಮ ಏಳಿಗೆ ಮಾಡಿಕೊಳ್ಳಲು ನಾವೇ ಕಟಿಬದ್ಧರಾಗಬೇಕು, ಇದು ಒಂದಿಬ್ಬರು ಮಾತ್ರ ಸೇರಿ ಮಾಡುವಂತಹ ಕೆಲಸವಲ್ಲ, ಅನೇಕರು ಧೈರ್ಯದಿಂದ ಮುಂದೆ ಬಂದು ತಮ್ಮ ಮನುಷ್ಯತ್ವವನ್ನು ಮೇಲ್ಜಾತಿಯವರಿಗೆ ತೋರಿಸಬೇಕಿದೆ. ಈ ಕೆಲಸದಲ್ಲಿ ಅನೇಕ ಜನ ತಮ್ಮ ಪ್ರಾಣವನ್ನೇ ಬಲಿಕೊಡಬೇಕಾಗಬಹುದು, ನಮ್ಮ ಪೂರ್ವಜರು ತಂತಮ್ಮ ಕೈಯ ಬಲವನ್ನು ರಣಭೂಮಿಯಲ್ಲಿ ಖಡ್ಗದ ಮೂಲಕ ತೋರಿಸಿದ್ದಾರೆ. ನಾವಿಂದು ನಮ್ಮ ಬುದ್ಧಿಯ ಬಲದ ಮೇಲೆ ಈ ಸಾಮಾಜಿಕ ಯುದ್ಧವನ್ನು ಗೆದ್ದು ನಮ್ಮಜಾಗ ಪಡೆಯಬೇಕಿದೆ!' ಅನ್ನುವ ಉದ್ಗಾರ ಕೇಳಿ ಅಲ್ಲಿರುವ ತರುಣರು ಧಿಗ್ಗನೆದ್ದು 'ಬಾಬಾಸಾಹೇಬರೆ ತಮ್ಮಾಶ್ರಯದಲ್ಲಿ ನಾವು ಹೋರಾಡಲು ಸಿದ್ಧರಿದ್ದೇವೆ' ಎಂದರು. ಮಹಾಡ ಅತ್ಯಾಚಾರ ಫಂಡಗಾಗಿ ಸ್ಥಳೀಯರು ಸೇರಿ ೨೦ರೂಪಾಯಿಯನ್ನು ಹಾಗೂ ಭಾತಕುಡೆ ಮತ್ತು ವೀರಕರ ಅವರು ತಮ್ಮ ಸ್ಕಾಲರ್‌ಶಿಪ್ಪಿನಿಂದ ೫ ರೂಪಾಯಿಯನ್ನು ಅಧ್ಯಕ್ಷರಿಗೆ ಕೊಟ್ಟರು. ಅಷ್ಟೇಯಲ್ಲದೆ ಇನ್ನೂ ಸ್ವಲ್ಪ ಹಣ ಕೂಡಿತು. ನಂತರ ಚಪ್ಪಾಳೆಯ ಕರತಾಡನದ ನಡುವೆ ಅಧ್ಯಕ್ಷರಿಗೆ ಹೂವಿನ ಹಾರ ಹಾಕಿ ಸನ್ಮಾನಿಸಲಾಯಿತು. 'ಬಾಬಾಸಾಹೇಬ್ ಅಂಬೇಡ್ಕರರಿಗೆ ಜಯವಾಗಲಿ ಅನ್ನುವ ಘೋಷಣೆಯಲ್ಲಿ ಸಭೆ ಮುಗಿಯಿತು.

# ೧೦.

# ನಮಗೆ ಕೆಚ್ಚೆದೆಯ ಹಾಗೂ ಸ್ವಾಭಿಮಾನವಿರುವಂತಹ ಜನ ಬೇಕು

ಭಾನುವಾರ ೫ನೆಯ ಜುಲೈಯಂದು ಮುಂಬಯಿ ದಲಿತರ ಜಾಹೀರು ಸಭೆ ಮಹಾಡನ ಸರಕಾವಸಜೀಜಹಾಂಗೀರ ಹಾಲ್‌ನಲ್ಲಿ ಜರುಗಿತು. ಅತ್ಯಾಚಾರದ ನಿಷೇಧಾರ್ಥ ಹಾಗೂ ಇದಕ್ಕೆ ಸಂಬಂಧಿಸಿದಂತೆ ಮುಂದೇನು ಮಾಡಬೇಕುಅನ್ನುವ ನಿರ್ಧಾರ ತೆಗೆದುಕೊಳ್ಳಲು ಎಲ್ಲರು ಸೇರಿದ್ದರು. ಡಾ. ಭೀಮರಾವ್ ಅಂಬೇಡ್ಕರ್ ಎಮ್.ಎ. ಪಿಎಚ್.ಡಿ., ಎಸ್‌ಸಿ ಬಾರ್‌ಅಟ್ ಲಾ. ಎಮ್.ಎಲ್.ಸಿ ಅವರು ಅಧ್ಯಕ್ಷಸ್ಥಾನ ವಹಿಸಿಕೊಂಡಿದ್ದರು. ಈ ಸಭೆಗೆ ದಲಿತ ವರ್ಗದ ವಿವಿಧ ಜಾತಿಯ ಮುಖ್ಯಸ್ಥರು ಹಾಜರಿದ್ದು ಬ್ರಾಹ್ಮಣ–ಬ್ರಾಹ್ಮಣೇತರ ಪತ್ರಿಕೆಯ ಸಂಪಾದಕರಾದ ದೇವರಾವ್, ನಾಯಿಕ, ಸೋಶಿಯಲ್ ಸರ್ವಿಸ್ ಲೀಗ್‌ನ ಕಾರ್ಮಿಕರಾದ ಗ. ನಿ. ಸಹಸ್ರಬುದ್ಧೆ ಹಾಗೂ ಮದ್ರಾಸ್‌ನ ಗೀತಾನಂದ ಬ್ರಹ್ಮಚಾರಿಯಂತಹ ಜನ ಕೂಡ ಹಾಜರಿದ್ದರು. ಕೆಳಗೆ ಹೇಳಿರುವಂತಹ ಮಸೂದೆಗಳು ಸಭೆಯಲ್ಲಿ ಮಂಜೂರಾದವು.

೧. ದಲಿತರ ದೂರುಗಳು ಹಾಗೂ ಅವರ ಮೇಲಾಗುತ್ತಿರುವ ಅನ್ಯಾಯವನ್ನು ಸರ್ಕಾರ ಯೋಗ್ಯವಾದ ರೀತಿಯಲ್ಲಿ ನಿವಾರಣೆ ಮಾಡಲಿ. ಹಾಗೆಯೆ ಸರ್ಕಾರ ದಲಿತರ ಉನ್ನತಿಗಾಗಿ ಮಾಡಿರುವ ಉಪಾಯ ಯೋಜನೆಗಳು ಹಾಗೂ ಮುಂದಿನ ಉಪಾಯ ಯೋಜನೆಗಳು ಸರಿಯಾದ ಸಮಯಕ್ಕೆ ಜಾರಿಗೆ ಬರಲು ಮದ್ರಾಸ್ ಇಲಾಖೆಯಂತೆ ಮುಂಬಯಿ ಇಲಾಖೆಯಲ್ಲಿಯೂ ಒಬ್ಬ ಸ್ವತಂತ್ರ ಅಧಿಕಾರಿಯನ್ನು ನೇಮಿಸಬೇಕು ಎಂದು ಈ ಸಭೆ ಕೋರುತ್ತದೆ.

೨. ಬಹಿಷ್ಕೃತ ಹಿತಕಾರಿಣಿ ಸಭೆಯು ಮಹಾಡನಲ್ಲಿ ಸತ್ಯಾಗ್ರಹ ಮಾಡುವ ಯೋಚನೆಯಲ್ಲಿದೆ. ಈ ಸತ್ಯಾಗ್ರಹಕ್ಕೆ ನಮ್ಮ ಸಭೆ ಸಂಪೂರ್ಣ ಬೆಂಬಲ ಕೊಡುವುದರೊಂದಿಗೆ ದಲಿತರ ಎಲ್ಲ ಜಾತಿಯವರು ಈ ಸತ್ಯಾಗ್ರಹದಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತದೆ.

ಮೇಲಿನ ಮಸೂದೆಯ ಮೇಲೆ ಮೆಸ್ಸರ್ಸ ವನಮಾಳಿ, ಮೊಹಿತೆ, ಮಾರವಾಡಿ ಮಾಸ್ತರ, ಖೊಲವಡೀಕರ, ಗೊವಿಂದ ಜಿ. ಮಾಧವದಾಸ, ಗಂಗಾವಣೆ, ಹಾಗೂ ಜಾಧವ ಅವರು ಭಾಷಣ ಮಾಡಿದ ನಂತರ ಅಧ್ಯಕ್ಷರು ಶ್ರೀ. ನಾಯಿಕ್ ಹಾಗೂ ಗೀತಾನಂದ ಬ್ರಹ್ಮಚಾರಿ ಇವರನ್ನು ಭಾಷಣ ಮಾಡಲು ವಿನಂತಿಸಿದರು. ಅವರಿಬ್ಬರೂ ತಮ್ಮ ಭಾಷಣದಲ್ಲಿ, 'ನೀವು ನಿಮ್ಮ ಮನುಷ್ಯತ್ವದ ಹಕ್ಕುಗಳನ್ನು ಪಡೆಯಲು ಆದಷ್ಟು ಪ್ರಯತ್ನಿಸಬೇಕು, ವರಿಷ್ಠ ಜಾತಿಯವರು ಬರೀ ಬುಡಬುಡಿಕೆಯ ಜನ, ಅವರಿಗೆ ನಿಮ್ಮ ಬಗ್ಗೆ ನಿಜವಾದ ಚಿಂತೆಯಿದ್ದಿದ್ದರೆ ಎಲ್ಲ ವೃತ್ತಪತ್ರಿಕೆಗಳಲ್ಲೂ ಈ ಸಭೆಯ ಜಾಹೀರು ಆಮಂತ್ರಣ ಅಚ್ಚಾಗಿದ್ದರೂ ಅವರಲ್ಲಿ ಒಬ್ಬರಾದರೂ ಬರುತ್ತಿದ್ದರು. ಇಂತಹ ಸಭೆಗಳಲ್ಲಿ ಹಿಂದೂ ಮಹಾಸಭೆಯ ಚಾಲಕರು ಭಾಗವಹಿಸಬೇಕು. ಅವರೆಲ್ಲ ಭಾಗವಹಿಸಲಿಲ್ಲದಿದ್ದರೂ ಚಿಂತೆಯಿಲ್ಲ. ನೀವು ಮುಂದುವರೆಯಿರಿ. ನಿಮ್ಮನ್ಯಾರಾದರೂ ಅಸ್ಪೃಶ್ಯರೆಂದರೆ ಅವರು ನಿಮ್ಮನ್ನು ಅಸ್ಪೃಶ್ಯ ಅನ್ನುವುದನ್ನು ಬಿಡುವವರೆಗೂ ಅವನನ್ನು ನೀರಿನಲ್ಲಿ ಅದ್ದಿಅದ್ದಿ ತೆಗೆಯಿರಿ' ಅಂದರು. ನಂತರ ಸಭೆಯ ಅಧ್ಯಕ್ಷರಾದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ,

'ನಾವೀಗ ಎರಡೂ ಮಸೂದೆಯನ್ನು ಚಪ್ಪಾಳೆಯ ಕರತಾಡನದ ನಡುವೆ ಮಂಜೂರು ಮಾಡಿದ್ದೇವೆ.

ಆದರೆ ಇವೆರಡರರಲ್ಲಿ ಎರಡನೆಯ ಮಸೂದೆಯ ಬಗ್ಗೆ ನಿಮಗೆ ಹೆಚ್ಚಿನ ಮಾಹಿತಿ ಸಿಕ್ಕಿಲ್ಲ ಅನಿಸುತ್ತಿದೆ. ಎರಡನೆಯ ಮಸೂದೆ ಸತ್ಯಾಗ್ರಹ ಮಾಡುವ ಬಗ್ಗೆಯಿದೆ. ಸತ್ಯಾಗ್ರಹವೆಂದರೆ ಹೋರಾಟ. ಆದರೆ ಈ ಹೋರಾಟ ಕತ್ತಿ, ಬಂದೂಕು, ತೋಪು, ಇವುಗಳಿಂದ ಮಾಡುವ ಹೋರಾಟವಲ್ಲ. ಈ ಹೋರಾಟವನ್ನು ನಾವು ಶಸ್ತ್ರಗಳ ಸಹಾಯವಿಲ್ಲದೆ ಮಾಡಬೇಕಿದೆ. ಈ ಸತ್ಯಾಗ್ರಹಕಾಲದಲ್ಲಿ ಶಾಂತಿ ಭಂಗವಾಗದಿರಲೆಂದು ಸರ್ಕಾರ ನಮ್ಮಲ್ಲಿ ಯಾರಾದರನ್ನು ಯಾವುದಾದರೂ ಕಲಮಿನಡಿ ಬಂಧಿಸಬಹುದು. ಕಾರಾಗೃಹಕ್ಕೆ ಹೋಗಲು ನೀವು ಎಂದೆಂದೂ ಸಿದ್ಧರಿರಬೇಕು. ತಮ್ಮ ಹೆಂಡತಿ ಮಕ್ಕಳ ಚಿಂತೆಯಿರುವವರು ಈ ಸತ್ಯಾಗ್ರಹದಲ್ಲಿ ಭಾಗವಹಿಸಕೂಡದು ಅನ್ನುವುದನ್ನಿಲ್ಲಿ ನಾನು ಖಡಾಖಂಡಿತವಾಗಿ ಹೇಳುತ್ತಿದ್ದೇನೆ. ಸತ್ಯಾಗ್ರಹಕ್ಕಾಗಿ ನಮಗೆ ಕೆಚ್ಚೆದೆಯ ಹಾಗೂ ಸ್ವಾಭಿಮಾನವಿರುವ ಜನ ಬೇಕು. ಅಸ್ಪೃಶ್ಯತೆ ನಮ್ಮ ದೇಶಕ್ಕಂಟಿಕೊಂಡಿರುವ ಕಳಂಕ. ಈ ಕಳಂಕವನ್ನು ನಾನು ತೊಡೆದುಹಾಕುತ್ತೇನೆ ಎಂದು ನಿರ್ಧರಿಸಿರುವ ಜನರೇ ಈ ಸತ್ಯಾಗ್ರಹಕ್ಕೆ ತಮ್ಮ ಹೆಸರು ನೋಂದಾಯಿಸಬಹುದು ಹಾಗೂ ಇಂತಹ ನಿರ್ಧಾರ ತೆಗೆದುಕೊಳ್ಳಬಲ್ಲ ಕೆಚ್ಚೆದೆಯ ಜನ ನಮ್ಮ ದಲಿತ ಸಮಾಜದಲ್ಲಿದ್ದಾರೆ ಅನ್ನುವ ಭರವಸೆ ನನಗಿದೆ'. ಅಂದರು. ಅಂಬೇಡ್ಕರರ ಭಾಷಣದ ನಂತರ ಶ್ರೀ ಸೀತಾರಾಮ್, ನಾಮದೇವ್, ಶಿವತರಕರ ಅವರು ಎಲ್ಲರಿಗೂ ಧನ್ಯವಾದಗಳನ್ನರ್ಪಿಸುವಾಗ, ಇಂದು ಈ ಸಭೆಗೆ ದಲಿತರ ಎಲ್ಲ ಜಾತಿಯ ಜನ ಹಾಗೆಯೇ ಗೀತಾನಂದ ಬ್ರಹ್ಮಚಾರಿ, ರಾ.ನಾಯಿಕ್, ಹಾಗೂ ಸಹಸ್ರಬುದ್ಧೆಯವರು ಹಾಜರಿದ್ದದ್ದಕ್ಕೆ ನಾವವರಿಗೆ ಋಣಿ. ಮಹಾಡ ಪ್ರಕರಣಕ್ಕೆ ಸಂಬಂಧಿಸಿದ ಇದು ಕೊನೆಯ ಸಭೆ. ಇನ್ನು ಮುಂದೆ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಸಭೆಗಳಾಗುವುದಿಲ್ಲ ಆದರೆ ಇಂದಿನ ಸಭೆಯಲ್ಲಿ ಮಂಜೂರಾದ ಮಸೂದೆಯಂತೆ ನಾವು ಸತ್ಯಾಗ್ರಹದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ. ಮಳೆಗಾಲದ ನಂತರ ಸತ್ಯಾಗ್ರಹವನ್ನಿಟ್ಟುಕೊಳ್ಳಲಿದ್ದೇವೆ. ಆದರೂ ಅಧ್ಯಕ್ಷರು ಹೇಳಿದಂತೆ ತಮ್ಮ ಹೆಸರನ್ನು ನೋಂದಾಯಿಸಲಿಚ್ಛಿಸುವವರು ದಾಮೋದರ ಹಾಲ್, ಪರಳನಲ್ಲಿರುವ ಬಹಿಷ್ಕೃತ ಹಿತಕಾರಿಣಿ ಸಭೆಯ ಆಫೀಸಿನಲ್ಲಿ ನೋಂದಾಯಿಸಬೇಕು' ಅಂದರು.

# ೧೧.

# ಮಾಂಗ್‌ರ ಮೇಲಿರುವ ಸ್ವಾರ್ಥಿತನದ ಆರೋಪ ತಿರುಳಿಲ್ಲದ್ದು

ಬುಧವಾರ ೨೦ನೆಯ ಜುಲೈ ೧೯೨೭ರಂದು ಸಾಯಂಕಾಲ ೭ ಘಂಟೆಗೆ ಪುಣೆಯ ಮಾಂಗ್‌ರ ವಸತಿಯಲ್ಲಿ ಪುಣೆಯ 'ದೀನಬಂಧು' ಪತ್ರಿಕೆಯ ಸಂಪಾದಕರಾದ ನವಲೆಯವರ ಅಧ್ಯಕ್ಷತೆಯಲ್ಲಿ ದಲಿತರ ಜಾಹೀರು ಸಭೆಯೊಂದನ್ನು ಆಯೋಜಿಸಲಾಗಿತ್ತು. ದಲಿತ ಹಾಗೂ ಮೇಲ್ಜಾತಿಯ ಒಟ್ಟು ೩೦೦ ಜನ ನೆರೆದಿದ್ದರು. ಮುಂಬಯಿ ಕಾಯಿದೆ ಮಂಡಳದ ಸರ್ಕಾರ ನೇಮಿಸಿರುವಂತಹ ಸಭಾಸದರಾದ ಡಾ. ಅಂಬೇಡ್ಕರ್ ಬಾರ್–ಎಟ್–ಲಾ ಹಾಗೂ ಡಾ.ಸಾಳುಂಖೆ, ಸುಭೇದಾರ್ ಘಾಡಗೆ, ಮಿ. ರಾಜಭೋಜ್, ಮಿ. ಕೆ. ಎಮ್. ಜಾಧವ್, ಬಿ. ಎ, ಮಿ. ಪಾತಾಡೆ, ಮಿ. ಗಾಯಕವಾಡ್, ಮಿ. ಸಾಳವೆಕರ್, ಮಿ. ಇಂಗಳೆ, ಮಿ. ಲಾಂಡಗೆ, ಮಿ. ಸಾವಳೆಕರ್, ಮಿ. ಕೆ. ಕೆ. ಸಕಟ್, ಮಿ. ಘಾಡಗೆ, ಮಿ. ವಾಯದಂಡೆ, ವರ್ಹಾಡ್‌ನ ಆನಂದಸ್ವಾಮಿ ಹಾಗೂ ರಾ. ಶಂಕರಾವ್ ಪೋತನೀಸ್, ರಾ. ದೇಶಪಾಂಡೆ ಇವರುಗಳು ಮುಖ್ಯವಾಗಿ ಸಭೆಗೆ ಹಾಜರಿದ್ದರು. ಸಭೆ ಆರಂಭವಾದಾಗ ಜಿಟಿಜಿಟಿ ಮಳೆ ಆರಂಭವಾಗಿದ್ದರೂ ಡಾ. ಅಂಬೇಡಕರ್ ಹಾಗೂ ಅವರ ಅನುಭವಸ್ಥ ನಾಯಕರ ಭಾಷಣಗಳನ್ನು ಕೇಳುವುದರಲ್ಲಿ ಜನ ಸಾಕಷ್ಟು ಉತ್ಸುಕರಾಗಿದ್ದರಿಂದ ಮಳೆಗೆ ಬೆಲೆ ಕೊಡದೆ ಸಭೆಯ ಕಾರ್ಯಕಲಾಪಗಳು ನಡೆದಿದ್ದವು.

ರಾ.ಕೆ.ಎಮ್. ಜಾಧವ್ ಅವರ ಸೂಚನೆಯಂತೆ ಡಾ. ನವಲೆಯವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ಮೇಲೆ ಡಾ. ಅಂಬೇಡ್ಕರ್ ಕೆಳಗಿನಂತೆ ಭಾಷಣ ಮಾಡಿದರು.

ನಾನಿಂದು ಮನಬಿಚ್ಚಿ ಮಾತಾಡುವವನಿದ್ದೇನೆ, ನನ್ನ ಭಾಷಣವನ್ಯಾರೂತಪ್ಪಾಗಿ ಅರ್ಥೈಸಿಕೊಳ್ಳಬಾರದು. ಮಿ. ಸಕಟ್ ಹಾಗೂ ಮಿ. ವಾಯದಂಡೆಯವರು ಕಾರಣವಿಲ್ಲದೆ ನನ್ನನ್ನು ಟೀಕಿಸುತ್ತಿದ್ದಾರೆ. ನಾಯಕರ ಮೇಲೇ ಯಾವತ್ತೂ ಟೀಕೆಗಳಾಗುತ್ತವೆ ಅನ್ನುವುದನ್ನು ನಾನು ಬಲ್ಲೆ. ನಾನು ಮಾಂಗ್ ಜಾತಿಯವನು ಅನ್ನುವುದು ನಿಮಗೆಲ್ಲಗೊತ್ತು, ಮಾಂಗ್ ಸ್ವಾರ್ಥಿಗಳು ಅನ್ನುವುದು ಈ ಟೀಕಾಕಾರರ ಅಂಬೋಣ, ಆದರೆ ದಲಿತರ ಮಾಂಗ್‌ರೇತರ ಜಾತಿಯ ನಾಯಕರು ಮಾಂಗ್‌ರಿಗಾಗಿ ನಿಸ್ವಾರ್ಥ ಬುದ್ಧಿಯಿಂದ ಕೆಲಸ ಮಾಡಿದ್ದಾರೆಯೆ? ಅನ್ನುವ ಪ್ರಶ್ನೆಯನ್ನಿಲ್ಲಿ ನೆರೆದಿರುವರೆಲ್ಲರಿಗೆ ಕೇಳುತ್ತಿದ್ದೇನೆ.

ವಾಸ್ತವಿಕವಾಗಿ ನೋಡಿದರೆ ಮಾಂಗ್‌ರೇತರ ಜಾತಿಗಳು ಶೈಕ್ಷಣಿಕ ಹಾಗೂ ಆರ್ಥಿಕ ದೃಷ್ಟಿಯಿಂದ ಸುಧಾರಿಸಿವೆ, ಮುಂಬಯಿಯ ಕೆಲವು ಚಮ್ಮಾರರು ಹಾಗೂ ಢ್ವಾರರು ಇನ್‌ಕಮ್‌ಟ್ಯಾಕ್ಸ್ ಕಟ್ಟುವಷ್ಟು ಹಣವಂತರಾಗಿದ್ದಾರೆ. ಹೀಗಿದ್ದೂ ಮಾಂಗ್‌ರ ಏಳಿಗೆಗಾಗಿ ಅವರೆಂದಾದರೂ ಪ್ರಯತ್ನಿಸಿದ್ದಾರೆ ಅನ್ನುವುದನ್ನು ನಾನು ಕಂಡಿಲ್ಲ. ಆದರೆ ನಾವು ಅನೇಕ ಉಪಯುಕ್ತ ಸಂಸ್ಥೆಗಳನ್ನು ಕಟ್ಟಿಕೊಂಡು ಕೇವಲ ಮಾಂಗ್‌ರಿಗಷ್ಟೇಯಲ್ಲ ದಲಿತರ ಎಲ್ಲ ಜಾತಿಗಾಗಿ ಕಾಯಾ–ವಾಚಾ–ಮನಸಾ ಕಷ್ಟಪಡುತ್ತಿದ್ದೇವೆ. ಬಹಿಷ್ಕೃತ ಹಿತಕಾರಿಣಿ ಸಭೆಯನ್ನು ಸ್ಥಾಪಿಸಿ ಅಸ್ಪೃಶ್ಯೋನ್ನತಿಯ ಕೆಲಸವನ್ನಾರಂಭಿಸಿದ್ದೇವೆ. ಸೋಲಾಪೂರಿನಲ್ಲಿ ದಲಿತರಿಗಾಗಿ ನಾವು ವಸತಿಗೃಹಗಳನ್ನು ಕಟ್ಟಿದ್ದೇವೆ, ಚಮ್ಮಾರರುಅದಕ್ಕೆ ಸಹಾಯ ಮಾಡಿಲ್ಲ ಆದರೂ ಮಾಂಗ್ ಮಹರ್ ಚಮ್ಮಾರಾರಾದಿ ಎಲ್ಲ ಜಾತಿಯ ಮಕ್ಕಳು ಈ ವಸತಿಗೃಹದಲ್ಲಿದ್ದಾರೆ. 'ಇನ್ನಷ್ಟು ಮಹರ್ ಮಕ್ಕಳನ್ನು

ಈ ವಸತಿಗೃಹಕ್ಕೆ ಕಳಿಸಿಕೊಡಿ' ಎಂದು ಮಿ. ಸಕಟ್ ಅವರಿಗೆ ವಿನಂತಿಸಿದ್ದೇನೆ. ಅದರಂತೆಯೇ ನಾಸಿಕ್, ಹಾಗೂ ಜಳಗಾಂವ್‌ನಲ್ಲಿ ವಸತಿಗೃಹಗಳನ್ನಾರಂಭಿಸಿ ಮಾಂಗ್ ಹಾಗೂ ಮಾಂಗ್‌ರೇತರ ಜಾತಿಯ ಏಳಿಗೆಗಾಗಿ ನಾವು ಅನವರತವಾಗಿ ಕಷ್ಟಪಡುತ್ತಿದ್ದೇವೆ. ಹೀಗಿದ್ದೂ ಮಾಂಗ್ ಜಾತಿಯ ವಿರುದ್ಧ ಸುಮ್ಮನೆ ಗುಲ್ಲೆಬ್ಬಿಸುವುದರಲ್ಲೇನರ್ಥವಿದೆ? ಅನ್ನುವುದೇ ನಮಗರ್ಥವಾಗುತ್ತಿಲ್ಲ.

ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಮಾಂಗ್ ಸ್ವಾರ್ಥಿಗಳಾಗಿ ಎಲ್ಲವನ್ನೂ ಕಬಳಿಸುತ್ತಾರೆ ಅನ್ನುವುದು ಟೀಕಾಕಾರರ ಅಂಬೋಣ. ಮುಂಬಯಿಯಲ್ಲಿ ನಿಕಾಳಜೆ ಅನ್ನುವ ಮಾಂಗ್‌ಜಾತಿಯ ಮನುಷ್ಯನನ್ನು ಮುಂಬಯಿ ಕಾರ್ಪೋರೇಷನ್‌ನಲ್ಲಿ ನೇಮಿಸಲಾಗಿತ್ತು. ಆದರೆ ಅಖಿಲ ದಲಿತರ ಉನ್ನತಿ ಹೇಳಿಕೊಳ್ಳುವಷ್ಟು ಅವರಿಂದಾಗಲಿಲ್ಲ ಅನ್ನುವ ವಿಷಯ ನನ್ನ ಗಮನಕ್ಕೆ ಬಂದಾಗ ಆ ಜಾಗಕ್ಕೆ ಚಮ್ಮಾರ ಜಾತಿಯ ಪ್ರಸಿದ್ಧ ಕ್ರಿಕೆಟ್ ಆಟಗಾರ ಮಿ. ಬಾಳು ಅವರಿಗೆ ನಾನೇ ಸರ್ಕಾರದಿಂದ ನೇಮಿಸಿದೆ. ಸಾತಾರ ಜಿಲ್ಲೆಯಲ್ಲಿ ಸಾಕಷ್ಟು ಮಾಂಗ್‌ರ ವಸತಿಯಿದ್ದರೂ ಅಲ್ಲಿಯ ಮುನಿಸಿಪಾಲ್ಟಿಯಲ್ಲಿ ಸರ್ಕಾರ ನೇಮಿಸಿರುವ ಸಭಾಸದ ಚಮ್ಮಾರ ಜಾತಿಯವನೇ ಆಗಿದ್ದಾನೆ. ಈ ಎಲ್ಲ ವಿಷಯಗಳನ್ನು ಗಮನಿಸಿದಾಗ ಮಾಂಗ್‌ರ ಮೇಲೆ ಸ್ವಾರ್ಥಿತನದ ಆರೋಪ ಎಷ್ಟು ಸುಳ್ಳು ಅನ್ನುವುದು ಗೊತ್ತಾಗುತ್ತದೆ.

ಕೆಲವು ಮಾಂಗ್ ದೂರದೃಷ್ಟಿಯುಳ್ಳವರಲ್ಲದಿರಬಹುದು, ಹಾಗೆಂದು ಎಲ್ಲ ಮಾಂಗ್‌ರನ್ನು ದೂಷಿಸುವುದು ಒಳ್ಳೆಯದಲ್ಲ. ಮಾಂಗ್ ಜಾತಿಯ ನಾಯಕರೇನು ಮಾಡುತ್ತಿದ್ದಾರೆ ಅನ್ನುವುದು ಸರಿಯಾಗಿ ಗಮನಿಸಿ ಆಮೇಲೆ ಆರೋಪಿಸಿ ಎಂದು ನಾನು ಇತರ ಜಾತಿಯ ನಾಯಕರಲ್ಲಿ ಬೇಡಿಕೊಳ್ಳುತ್ತೇನೆ. ನಾನು ಸ್ವತಃ ಮಹರ್‌ರೊಡನೆ ಊಟದ ಹಾಗೂ ಹೆಣ್ಣು ಕೊಡುಕೊಳ್ಳಿಕೆಯ ಸಂಬಂಧವಿಟ್ಟುಕೊಳ್ಳಲು ಸಿದ್ಧನಿರುವಾಗ ಮಾಂಗ್ ಮಹರ್‌ರ ನಡುವೆ ವೈರತ್ವವೇಕೆ? ನಾನು ಮಹರ್ ಹುಡುಗನನ್ನು ನನ್ನ ಸ್ವಂತ ಮಗನಂತೆ ಸಾಕಿದ್ದೆ, ಯಾರಾದರೂ ಇನ್ನೊಬ್ಬ ಮಹರ್ ಹುಡುಗನನ್ನು ಕರೆದುಕೊಂಡು ಬಂದರೆ ಅವನ ಪಾಲನೆ ಪೋಷಣೆಯನ್ನೂ ನೋಡಿಕೊಳ್ಳುತ್ತೇನೆ. ನಾವು ಬರಿಯ ಬಾಯಿ ಮಾತಿನ ನೇತಾರರಲ್ಲ, ಪ್ರತಿಯೊಂದು ಕೆಲಸವನ್ನು ಮಾಡಿ ತೋರಿಸುತ್ತೇವೆ. ಕಾಂಗ್ರೆಸ್‌ನ ಅಧಿವೇಶನದಲ್ಲಿ ಊಟದ ಸಮಯದಲ್ಲಿ ಪ್ರತಿಯೊಂದು ಜಾತಿಗೆ ಬೇರೆ ಬೇರೆ ಕೂರಿಸಿ ಊಟ ಹಾಕಲಾಗುತ್ತದೆ ಆದರೆ ನನ್ನ ನೇತೃತ್ವದಲ್ಲಾಗುವ ಪರಿಷತ್ತಿನಲ್ಲಿ ಎಲ್ಲ ಜಾತಿಯವರು ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ. ಇದೆಲ್ಲದರಿಂದ ಎಲ್ಲ ಜಾತಿಗಳಲ್ಲೂ ಐಕ್ಯತೆ ಬೆಳೆಯಲು ನಾವೆಷ್ಟು ಪ್ರಯತ್ನಿಸುತ್ತೇವೆ ಅನ್ನುವುದುಗೊತ್ತಾದೀತು.

ಇಷ್ಟೆಲ್ಲ ಇದ್ದೂ ಮಾಂಗ್‌ರೇತರ ಜಾತಿಗಳು ಮಾಂಗ್‌ರಿಂದ ಬೇರೆ ಇರಬಯಸಿದರೆ ಇರಬಹುದು, ಅವರುಗಳು ಸ್ವತಂತ್ರವಾಗಿದ್ದು ಅಸ್ಪೃಶ್ಯೋದ್ಧಾರದ ಕೆಲಸ ಮಾಡಿದರೂ ನನಗೇನೂ ತೊಂದರೆಯಿಲ್ಲ. ಆದರೆ ಅವರು ಕೆಲವು ವಿಶಿಷ್ಟ ಜಾತಿಯ ಜನರ ಕೈ ಕೆಳಗಿರಬಾರದು ಅನ್ನುವುದೊಂದೇ ವಿನಂತಿ. ಕೆಲವು ಬ್ರಾಹ್ಮಣರು ಅಸ್ಪೃಶ್ಯೋದ್ಧಾರಕ್ಕಾಗಿ ಕಷ್ಟಪಡುತ್ತಿದ್ದಾರೆ ಅನ್ನುವುದು ನಿಜವಾದರೂ ಅನೇಕ ಬ್ರಾಹ್ಮಣರು–ಬ್ರಾಹ್ಮಣೇತರರು ತಮ್ಮ ಪಕ್ಷವನ್ನು ಗಟ್ಟಿಗೊಳಿಸಲು ಮಾಂಗ್‌ರನ್ನು ಹತ್ತಿರ ಸೇರಿಸುತ್ತಾರೆ ಎಂದು ನನಗನಿಸುತ್ತದೆ. ಕೇವಲ ನಮ್ಮ ಉದ್ಧಾರಕ್ಕಾಗಿ ನಿಸ್ವಾರ್ಥದಿಂದ ಕೆಲಸ ಮಾಡುವ ಬ್ರಾಹ್ಮಣರು ಇಲ್ಲವೆ ಮರಾಠರು ನಮಗೆ ಬೇಕಿದ್ದಾರೆ. ಬೇರೆಯವರ ಕೈಯಕೋಲಾಗುವುದು ನಮಗೆ ಬೇಕಿಲ್ಲ.

ಸ್ವಾರ್ಥ ಬುದ್ಧಿಯಿಂದ ಪ್ರೇರಿತರಾದ ಜನರಿಂದ ಅಸ್ಪೃಶ್ಯತೆ ನಿವಾರಣೆಯ ಕೆಲಸವಾದರೂ ಚಿಂತೆಯಿಲ್ಲ, ಏಕೆಂದರೆ ಅಸ್ಪೃಶ್ಯರಾಗಿ ಸಿಗುವ ಸವಲತ್ತಿನ ಸಹಾಯದಿಂದ ನಮ್ಮ ಏಳಿಗೆ ಮಾಡಿಸಿಕೊಳ್ಳುವುದೇ ನಮಗೆ ಸುಲಭವಾದೀತು ಎಂದು ನನಗನಿಸುತ್ತದೆ. ಅಸ್ಪೃಶ್ಯರನ್ನು ಹತ್ತಿರ ಸೇರಿಸಿ ಬ್ರಾಹ್ಮಣೇತರರನ್ನು ಪಕ್ಕಕ್ಕೆ

ಸರಿಸುವುದಕ್ಕೆ ಬ್ರಾಹ್ಮಣರು ಪ್ರಯತ್ನಿಸುತ್ತಿದ್ದಾರೆ ಅನ್ನುವುದು ನನ್ನನಿಸಿಕೆ. ರಾ. ಮಾಟೆಯವರು ನನ್ನ ಅನಿಸಿಕೆ ಸುಳ್ಳು ಮಾಡಿದಲ್ಲಿ ನಾನವರಿಗೆ ಬೇಕಾದ ಸಹಾಯವನ್ನೆಲ್ಲ ಮಾಡುವೆ.

ಮುಸಲ್ಮಾನರಿಂದ ಬಿಡುಗಡೆ ಹೊಂದಲು ಅಸ್ಪೃಶ್ಯತೆಯನ್ನು ನಿವಾರಿಸುವ ಆಟ ಇತ್ತೀಚೆಗೆ ಹಿಂದೂ ಮಹಾಸಭೆ ಆಡುತ್ತಿದೆ ಎಂದು ನನಗನಿಸುತ್ತಿದೆ. ಹಾಗಾಗಿ ಮಾಂಗ್‌ರೇತರ ಬಂಧುಗಳು ಯಾರಿಗೂ ಬಲಿಯಾಗಬೇಡಿ ಎಂದು ನಾನವರನ್ನು ವಿನಂತಿಸುತ್ತೇನೆ. ಮಿ. ಸಕಟ್ ಅವರು ಭಿಕ್ಷೆ ಬೇಡಿದರೂ ನನಗೆ ದುಃಖವಾಗಲಿಕ್ಕಿಲ್ಲ ಆದರೆ ಅವರು ಮಿ. ಮಾಟೆಯವರ ಸಂಗ ಬಯಸಿದರೆ ಮಾತ್ರ ನನಗೆ ಬಹಳ ದುಃಖವಾದೀತು. ಸ್ವತಂತ್ರವಾಗಿರಿ ಆದರೆ ಇನ್ನೊಬ್ಬರ ಗುಲಾಮರಾಗಬೇಡಿ ಎಂದಷ್ಟೆ ನಾನವರಿಗೆ ಹೇಳಬಯಸುತ್ತೇನೆ.

ಮಾಂಗ್ ಜಾತಿಯ ನಾಯಕರೇ ಕೌನ್ಸಿಲ್ ಜಾಗಗಳನ್ನು ಕಬಳಿಸುತ್ತಾರೆ ಅನ್ನುವ ಆರೋಪ ನಮ್ಮ ಮೇಲಿದೆ. ದಲಿತರ ಹಕ್ಕುಗಳನ್ನು ರಕ್ಷಿಸಲು ಯೋಗ್ಯ ಮನುಷ್ಯನೇ ಅಲ್ಲಿರಬೇಡವೆ? ಮಾಂಗ್‌ರೇತರಲ್ಲಿ ನನ್ನಂತಹ ಮನುಷ್ಯ ಹುಟ್ಟಿಲ್ಲ ಅನ್ನುವುದು ಅವರ ದುರ್ದೈವವಲ್ಲವೆ? ಆದರೆ ನನಗೆ ಕೌನ್ಸಿಲ್‌ನ ಜಾಗದ ಆಸೆಯಿಲ್ಲ, ಮಾಂಗ್‌ರೇತರರಲ್ಲಿ ಯೋಗ್ಯ ಮನುಷ್ಯನಿದ್ದರೆ ಸಂತೋಷವಾಗಿ ನನ್ನ ಜಾಗಕ್ಕೆ ಬರಲಿ, ನಾನಿಲ್ಲಿಂದಲೇ ರಾಜಿನಾಮೆ ಕೊಡಲು ಸಿದ್ಧನಿದ್ದೇನೆ. ಕೌನ್ಸಿಲ್‌ನಲ್ಲಿ ನಾನು ಯಾವಾಗಲಾದರೂ ಮಾಂಗ್‌ರ ಪರ, ಮಾಂಗ್‌ರ ಹಿತಕ್ಕಾಗಿಯೇ ಕೆಲಸ ಮಾಡುತ್ತಿದ್ದೇನೆ ಅನ್ನುವ ಅನುಮಾನ ಕಾಡಿದರೆ ಪತ್ರದ ಮೂಲಕ ನೀವು ನನಗೆ ತಿಳಿಸಿದರೆ ನಾನು ನಿಮ್ಮ ಅನುಮಾನಗಳನ್ನು ಪರಿಹರಿಸುತ್ತೇನೆ.

'ಸುಶಿಕ್ಷಿತರಾದರೆ ಅಸ್ಪೃಶ್ಯತೆ ತಂತಾನೆ ತೊಲಗುತ್ತದೆ'ಎಂದು ಮೇಲ್ಜಾತಿಯವರು ಆಗಾಗ ಹೇಳುತ್ತಿರುತ್ತಾರೆ. ಕೇವಲ ಸುಶಿಕ್ಷಿತರಾದರೆ ಅಸ್ಪೃಶ್ಯತೆ ತೊಲಗುತ್ತದೆ ಅಂದುಕೊಳ್ಳುವುದು ಶತ ಮೂರ್ಖತನ. ನಾನೊಂದು ಉಹಾಹರಣೆ ಕೊಡುತ್ತೇನೆ, ನಾನು ಮಾಂಗ್‌ನೊಂದು ಮುಂಬಯಿಯ ನನ್ನ ಚೇಂಬರ್ ಹತ್ತಿರದ ಅಡುಗೆ ಭಟ್ಟನಿಗೆ ಹಾಗೂ ಹೋಟೇಲಿನವನಿಗೆ ಎಲ್ಲಿಯವರೆಗೆ ಗೊತ್ತಿರಲಿಲ್ಲವೋ ಅಲ್ಲಿಯವರೆಗೆ ನನಗೆ ಅವರ ಕಪ್ಪು ಬಸ್ಸಿಯಲ್ಲಿ ಚಹಾ ಮತ್ತು ಪ್ಲೇಟಿನಲ್ಲಿ ಭಜ್ಜಿಗಳನ್ನು ಕೊಡುತ್ತಿದ್ದರು. ಇತ್ತೀಚೆಗೆ ನಾನು ಮಾಂಗ್‌ನೆಂಬುದು ಗುಜರಾತಿ ಪತ್ರಿಕೆಯಲ್ಲಿ ಅಚ್ಚಾದ ನನ್ನ ಛಾಯಾಚಿತ್ರದ ಮೂಲಕ ಗೊತ್ತಾದ ಮೇಲಿನಿಂದ ನನಗವರು ಗಾಜಿನ ಗ್ಲಾಸಿನಲ್ಲಿ ಚಹಾ ಕೊಡುತ್ತಿದ್ದಾರೆ. ಹಾಗೆ ಮಾಡಲು ಮೇಲ್ಜಾತೀಯ ಒಬ್ಬ ಕಾರಕೂನನು ಕಿವಿ ಚುಚ್ಚಿದ್ದ. ಇಂತಹ ಪರಿಸ್ಥಿತಿಯಿರುವಾಗ ಸುಶಿಕ್ಷಿತರಾದರೆ ಅಸ್ಪೃಶ್ಯತೆ ತೊಲಗುತ್ತದೆ ಅನ್ನುವುದು ಎಷ್ಟು ತಪ್ಪು ಅನ್ನುವುದು ತಿಳಿಯುತ್ತದೆ.

ಇನ್ನು ಆಯೋಜಿಸಲಾಗುವ ಪರಿಷತ್ತಿನ ಕೊನೆ ದೇವಸ್ಥಾನದಲ್ಲಿ ಪ್ರವೇಶಿಸುವುದು, ಸಾರ್ವಜನಿಕ ಕೆರೆಗಳಲ್ಲಿ ನೀರು ತುಂಬುವುದು ಅಂತಹ ಕೆಲಸಗಳಿಂದಾಗಬೇಕು ಎಂದು ನನಗನಿಸುತ್ತದೆ. ದಲಿತರ ಸಭೆಯನ್ನೀಗ ನಾವು ಆಳಂದಿಯಲ್ಲಿ ಆಯೋಜಿಸಲಿದ್ದೇವೆ, ಆಗ ಏನಾದರೂ ನಾವು ಅಲ್ಲಿಯ ದೇವಸ್ಥಾನದಲ್ಲಿ ಪ್ರವೇಶಿಸಲಿದ್ದೇವೆ. ಹಾಗೆ ಮಾಡುವುದರಿಂದಲೇ ನಮ್ಮ ಕಾರ್ಯ ಸಫಲವಾಗಲಿದೆ' ಅಂದರು.

ಮೇಲಿನಂತೆ ಡಾ.ಅಂಬೇಡ್ಕರರ ಭಾಷಣವಾದ ಮೇಲೆ ಡಾ.ಸೋಲಂಕಿಯವರು ಸ್ವಲ್ಪ ಹೊತ್ತು ಮಾತನಾಡುತ್ತ ಗುಜರಾತ್‌ನಲ್ಲಿಯ ದಲಿತರ ಹಾಗೂ ಮಹಾರಾಷ್ಟ್ರದ ದಲಿತರ ಚಳುವಳಿಗೆ ಸಂಪೂರ್ಣ ಬೆಂಬಲ ಕೊಡುವ ಆಶ್ವಾಸನೆಯಿತ್ತರು. ನಂತರ ವರಾಡ್‌ನ ರಾ. ಪಂಢರಿನಾಥ ಪಾಟೀಲರು ಭಾಷಣ ಮಾಡುತ್ತಿದ್ದಾಗ ಮಾಂಗ್ ಕೇರಿಯ ಸಾಕಷ್ಟು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಯಾರೋ ಒಬ್ಬ ತೀರಿಕೊಂಡಿದ್ದರಿಂದ ಸಭೆಯ ಕಾರ್ಯಕಲಾಪಗಳನ್ನು ನಿಲ್ಲಿಸಲಾಯಿತು.

# ೧೨.

# ನಾವು ಯಾರಿಗೂ ಕಡಿಮೆಯಿಲ್ಲ ಅನ್ನುವುದನ್ನು ತೋರಿಸಿಕೊಡಬೇಕಿದೆ

ಶನಿವಾರ ತಾರೀಖು ೧೭ ನೆಯ ಸಪ್ಟೆಂಬರ್ ೧೯೨೭ ರಂದು ರಾತ್ರಿ ೯ ಘಂಟೆಗೆ ಎಲ್ಫಿಸ್ಟನ್ ರೋಡ್‌ನಲ್ಲಿಯ ಡೆವ್ಹಿಡ್ ಮಿಲ್ ಚಾಳಿನ ಕಾಂಪೌಂಡಿನಲ್ಲಿ ೨೫ ನೆಯ ಡಿಸೆಂಬರ್‌ನಿಂದ ಮಹಾಡ್‌ನಲ್ಲಿ ಆರಂಭವಾಗುತ್ತಿರುವ ಸತ್ಯಾಗ್ರಹದ ಹಿನ್ನೆಲೆಯಲ್ಲಿ ಡಾ. ಭೀಮರಾವ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಒಂದು ಜಾಹೀರು ಸಭೆ ಜರುಗಿತು. ಈ ಸಭೆಗೆ ದಲಿತರ ಜನ ಸ್ತೋಮವೇ ನೆರಿದಿತ್ತು. ಮೆಸ್ಸರ್ಸ್ ಗಣಪತ ಜಾಧವ, ಧೊಂಡಿ ರಾಮಗಾಯಕವಾಡ, ಸಾಳುಂಕೆ ಬುವಾ, ಹಾಗೂ ಶಿವತರಕರ ಇವರು ಸತ್ಯಾಗ್ರಹ ಯಾಕೆ ಮಾಡಬೇಕು ಅನ್ನುವ ಬಗ್ಗೆ ಬಾಷಣ ಮಾಡಿದರು. ನಂತರ ಅಧ್ಯಕ್ಷರಾದ ಡಾ.ಅಂಬೇಡ್ಕರ್ ಸಾಹೇಬರು ಬಹಳ ಸರಳವಾದ ಭಾಷೆಯಲ್ಲಿ ಭಾಷಣ ಮಾಡುತ್ತ,

ಮಾನ್ಯರೆ,

ನಾವು ಸತ್ಯಾಗ್ರಹ ಯಾಕೆ ಮಾಡಬೇಕು ಅನ್ನುವುದರ ಬಗ್ಗೆ ನನಗೂ ಮೊದಲು ಇವರೆಲ್ಲ ಹೇಳಿದ್ದಾರೆ. ಅಸ್ಪೃಶ್ಯತೆ ನಮಗಂಟಿಕೊಂಡಿರುವ ಕಳಂಕವಲ್ಲ, ನಮ್ಮ ಅಕ್ಕ ತಂಗಿಯರ ಮೇಲೆ ತಾಯಿಯ ಮೇಲೆ ಅಂಟಿಕೊಂಡಿರುವ ಕಳಂಕ. ಏಕೆಂದರೆ ಮೇಲ್ಜಾತಿಯವರೆನಿಸಿಕೊಂಡವರು ತನಗೆ ಜನ್ಮ ಕೊಡುವ ತಾಯಿ ದಲಿತನಿಗೆ ಜನ್ಮಕೊಡುವ ತಾಯಿಗಿಂತ ಶ್ರೇಷ್ಠಳು ಅಂದುಕೊಂಡಿದ್ದಾರೆ. ಆದರೆ ಪ್ರತಿಯೊಬ್ಬ ಹೆಣ್ಣು ಒಂಭತ್ತು ತಿಂಗಳು ಹೊತ್ತನಂತರವೇ ಹೆರುತ್ತಾಳೆ. ಹಾಗಾಗಿ ಒಂದು ಹೆಣ್ಣು ಮತ್ತೊಂದು ಹೆಣ್ಣಿಗಿಂತ ಭಿನ್ನವಾಗಿಲ್ಲ. ಉಳಿದವರು ಅಧಮರು ನಾನೇ ಶ್ರೇಷ್ಠ ಅನ್ನುವವರಿಗೆ ಒಳ್ಳೆಯ ಪಾಠ ಕಲಿಸಿ ನಾವೂ ಯಾರಿಗೆ ಕಡಿಮೆಯಿಲ್ಲ ಅನ್ನುವುದನ್ನು ತೋರಿಸಿಕೊಡಬೇಕಿದೆ. ಮನುಷ್ಯರು ಅಂದಮೇಲೆ ಧರ್ಮದ ದೃಷ್ಟಿಯಿಂದ ಎಲ್ಲರಿಗೂ ಸಮಾನ ಹಕ್ಕಿದೆ. ಹಾಗಾಗಿ ಸತ್ಯಾಗ್ರಹ ಮಾಡಿ ನಮ್ಮ ಹಕ್ಕುಗಳನ್ನು ನಾವು ಪಡೆಯಬೇಕಿದೆ. ಈ ಸತ್ಯಾಗ್ರಹದಲ್ಲಿ ಭಾಗವಹಿಸುವವರು ದಯವಿಟ್ಟು ಮುಂದೆ ಬನ್ನಿ. ತಮ್ಮ ಕೆಲಸಗಳಿಂದ ಬಿಡುವು ಮಾಡಿಕೊಂಡು ಭಾಗವಹಿಸಲಾರದವರು ಧನಸಹಾಯ ಮಾಡಬೇಕಾಗಿ ನಾವು ವಿನಂತಿಸಿಕೊಳ್ಳುತ್ತೇವೆ' ಅಂದರು. ನಂತರ ಸಭೆಯ ಅಧ್ಯಕ್ಷರು ಹಾಗೂ ನೆರೆದಿದ್ದ ಜನರಿಗೆ ಧನ್ಯವಾದ ಹೇಳಿ ಸಭೆಯನ್ನು ಮುಗಿಸಿದರು.

# ೧೩.

# ದಲಿತ ವಿದ್ಯಾರ್ಥಿಗಳ ಕರ್ತವ್ಯದ ಮೇಲೆಯೇ ದಲಿತರ ಭವಿಷ್ಯ ಅವಲಂಬಿಸಿದೆ

ದಲಿತ ವಿದ್ಯಾರ್ಥಿಗಳ ನಾಲ್ಕನೆಯ ವಾರ್ಷಿಕ ಸಾಮಾಜಿಕ ಸಮ್ಮೇಲನವು ಪುಣೆಯಲ್ಲಿ ದಲಿತರ ನಾಯಕರಾದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬಾರ್–ಅಟ್–ಲಾ ಅವರ ಅಧ್ಯಕ್ಷತೆಯಲ್ಲಿ ಭಾನುವಾರ ೨ನೆಯ ಅಕ್ಟೋಬರ್ ೧೯೨೭ರಂದು ಬಹಳ ಉತ್ಸಾಹದಿಂದ ಜರುಗಿತು. ಈ ಸಮಾರಂಭಕ್ಕಾಗಿ ಡಿ.ಸಿ.ಮಿಶನ್ನಿನ ಅಹಲ್ಯಾಶ್ರಮ ಸಭಾಗೃಹವನ್ನು ಅಲಂಕರಿಸಿದ್ದರು. ಸಮ್ಮೇಲನದ ಕಾರ್ಯಕ್ರಮವನ್ನು ಶನಿವಾರ ಹಾಗೂ ಭಾನುವಾರದ ದಿನಗಳಂದು ಎರಡು ದಿನಗಳವರೆಗೆ ಹಮ್ಮಿಕೊಳ್ಳಲಾಗಿತ್ತು. ಶನಿವಾರ ವಿದ್ಯಾರ್ಥಿಗಳ ಭಾಷಣ ಹಾಗೂ ಆಟಗಳ ಸ್ಪರ್ಧೆಗಳಿದ್ದವು. ಇದರಲ್ಲಿ ಮಾಂಗ್, ಮಹರ್ ಹಾಗೂ ಚಮ್ಮಾರ ವಿದ್ಯಾರ್ಗಳು ಭಾಗವಹಿಸಿದ್ದರು ಎಂದು ಹೇಳಲು ಸಂತೋಷವಾಗುತ್ತದೆ. ಗೆದ್ದ ವಿದ್ಯಾರ್ಥಿಗಳಿಗೆ ಪಾರಿತೋಷಕ ವಿತರಣೆ ಸಮಾರಂಭ ಭಾನುವಾರ ಸಾಯಂಕಾಲ ೫ ಘಂಟೆಗೆ ಇಡಲಾಗಿತ್ತು. ಅದಕ್ಕೆಂದೇ ಅಧ್ಯಕ್ಷರಾದ ದಲಿತರ ನಾಯಕ ಡಾ. ಭೀಮರಾವ್ ಅಂಬೇಡ್ಕರ್ ಬಾರ್–ಅಟ್–ಲಾ, ಸೋಳಂಕಿ, ಕದಮ್ ಅವರು ಸರಿಯಾಗಿ ೫ ಘಂಟೆಗೆ ಹಾಜರಾದರು. ಅಧ್ಯಕ್ಷರ ಸ್ವಾಗತಕ್ಕಾಗಿ ಗವರ್ನಮೆಂಟ್ ಡಿ.ಸಿ. ಹಾಸ್ಟೆಲ್ ಹಾಗೂ ಡಿ.ಸಿ ಮಿಶನ್ನಿನ ಮಕ್ಕಳ ಬಾಲವೀರ್ ಗುಂಪು ಬಾಗಿಲಲ್ಲಿ ಸಿದ್ಧವಾಗಿ ನಿಂತಿತ್ತು. ಅಧ್ಯಕ್ಷರು ಬಂದ ಕೂಡಲೇ ಸುಭೇದಾರ ಘಾಟಗೆ ಅವರ ನೇತೃತ್ವದಲ್ಲಿ ಬಾಲವೀರ್ ಮಕ್ಕಳ ಗುಂಪು ಅವರಿಗೆ ವಂದಿಸಿ ಬರಮಾಡಿಕೊಂಡಿತು. ಡಾ. ಅಂಬೇಡ್ಕರ್ ಅವರ ಜಯಜಯಕಾರದೊಂದಿಗೆ ಅತಿಥಿಗಳು ಆಶ್ರಮದಲ್ಲಿ ಕಾಲಿಟ್ಟರು. ಅಲ್ಪೋಪಹಾರದ ನಂತರ ಅಧ್ಯಕ್ಷರು, ವಿದ್ಯಾರ್ಥಿಗಳು ಹಾಗೂ ಕೆಲವೇ ಅತಿಥಿಗಳ ಜೊತೆ ಗ್ರೂಪ್ ಫ್ಲೋಟೋ ತೆಗೆದ ಮೇಲೆ ಸರಿಯಾಗಿ ಆರು ಘಂಟೆಗೆ ಪಾರಿತೋಷಿಕ ವಿತರಣಾ ಸಮಾರಂಭ ಆರಂಭವಾಯಿತು.

ಅತಿಥಿಗಳಲ್ಲಿ ಡಾ.ಸೋಳಂಕಿ, ಪ್ರಿ. ತಾವಡೆ, ರಾ.ಶ್ರೀಧರಪಂತ್ ಟಿಳಕ್, ರಾ.ಸಂಗಮನೇರಕರ್, ಕದಮ್, ಐದಾಳೆ, ಬಾರಾಥ್, ಭಂಡಾರೆ, ರಾಜಭೋಜ, ಲಾಂಡಗೆ, ವಾಯದಡೆ, ಡಿ.ಸಿ. ಮಿಶನ್ನಿನ ರಾ. ಪಾತಾಡೆ, ಸುಭೇದಾರ ಘಾಟಗೆ ಬಂಧು, ಗಾಯಕವಾಡ ಹಾಗೆಯೇ ಸೇವಾಸದನದ ಪ್ರೌಢ ವಿದ್ಯಾರ್ಥಿನಿಯರು, ಟ್ರೈನಿಂಗ್ ಕಾಲೇಜಿನ ಪ್ರೌಢ ವಿದ್ಯಾರ್ಥಿಗಳು ಕಾಣುತ್ತಿದ್ದರು. ನಂತರ ಜಾಯಿಂಟ್ ಸೆಕ್ರೆಟರಿ ರಾ. ರಣದಿವೆಯವರು ವಿವಿಧ ಸ್ಪರ್ಧೆಗಳ ಬಗ್ಗೆ ವಿಶದವಾಗಿ ಮಾತಾಡಿದರು. ಅಧ್ಯಕ್ಷರು ತಮ್ಮ ಕೈಯಾರೆ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ತಮ್ಮ ಭಾಷಣದಲ್ಲವರು, ದಲಿತರ ಸಧ್ಯದ ಭಯಾನಕ ಹಾಗೂ ಚಿಂತಾಜನಕ ಪರಿಸ್ಥಿಯನ್ನು ವಿವರಿಸುತ್ತ ಇಂತಹ ವಿಷಮ, ಬೇಸರತರಿಸುವ ಪರಿಸ್ಥಿಯಲ್ಲಿ ದಲಿತ ವಿದ್ಯಾರ್ಥಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸುವುದರ ಮೇಲೆ ಎಲ್ಲ ದಲಿತರ ಭವಿಷ್ಯ ಅವಲಂಬಿಸಿದೆ ಅಂದರು. ಹಾಗೆಯೇ ದಲಿತ ಸ್ತ್ರೀಯರು ಕೂಡ ತಮ್ಮ ಶೀಲ ಹಾಗೂ ಕರ್ತವ್ಯವನ್ನು ಸರಿಯಾಗಿ ಕಾಪಾಡಿಕೊಂಡು ಸಮಾಜದ ಪ್ರಗತಿಗೆ ಸಹಾಯ ಮಾಡಬೇಕು ಎಂದು ಉಪದೇಶಿಸಿದರು.

ಸುಶಿಕ್ಷಿತರಾಗಿದ್ದರೂ ಕೇವಲ ಅಸ್ಪೃಶ್ಯರೆನಿಸಿಕೊಳ್ಳುವುದರಿಂದ ದಲಿತರಲ್ಲಿ ಅನೇಕ ಯೋಗ್ಯ ವ್ಯಕ್ತಿಗಳಿಗೆ ಅನ್ಯಾಯವಾಗುತ್ತಿದೆ ಅಂದರು. ಇದನ್ನವರು ಉದಾಹರಣೆಸಹಿತ ವಿವರಿಸಿ ಹೇಳಿದಾಗ ಎಲ್ಲರ ಮುಖದಲ್ಲೂ ಚಿಂತೆ ಎದ್ದು ಕಾಣುತ್ತಿತ್ತು. ಡಾಕ್ಟರ್ ಸಾಹೇಬರು ಬಹಳ ಆತ್ಮೀಯತೆಯಿಂದ ಮಾತಾಡುತ್ತಿದ್ದರು. ಅವರ ಮನಸ್ಸಿನ ತಳಮಳ ಅವರ ಪ್ರತಿಯೊಂದು ಶಬ್ದದಲ್ಲೂ ಕಾಣುತ್ತಿತ್ತು. ಒಟ್ಟಿನಲ್ಲಿ ಅಧ್ಯಕ್ಷರ ಭಾಷಣ ಬಹಳ ಸ್ಫೂರ್ತಿದಾಯಕವಾಗಿತ್ತು. ಕಾರ್ಯಕ್ರಮದ ಕೊನೆಯಲ್ಲಿ ವಂದನಾರ್ಪಣೆಯಾದ ಮೇಲೆ ಅಧ್ಯಕ್ಷರಿಗೆ ಹೂವಿನ ಹಾರ ಹಾಕಿ ಸನ್ಮಾನಿಸಲಾಯಿತು. ಒಟ್ಟಿನಲ್ಲಿ ಈ ಕಾರ್ಯಕ್ರಮ ಯಾವತ್ತೂ ನೆನಪಿನಲ್ಲುಳಿಯುವಂತಾಯಿತು.

# ೧೪.

# ಅಸ್ಪೃಶ್ಯತೆ ಹಾಗೂ ಸತ್ಯಾಗ್ರಹದ ಸಫಲತೆ

ಕೇವಲ ಸ್ಪೃಶ್ಯ ಅಸ್ಪೃಶ್ಯದ ಪ್ರಶ್ನೆಯಲ್ಲ, ನ್ಯಾಯ–ಅನ್ಯಾಯದ ಪ್ರಶ್ನೆ ಕೂಡ ಹೌದು. ತಮ್ಮ ವಿಚಾರಗಳ ಅಮರಾವತಿಯ ಇಂದ್ರಭುವನ್ ಥಿಯೇಟರಿನಲ್ಲಿ ವರಾಡ್ ಪ್ರಾಂತ್ಯದ ದಲಿತರ ಪರಿಷತ್ತಿನ ಎರಡನೆಯ ಅಧಿವೇಶನವನ್ನು ೧೩ ಹಾಗೂ ೧೪ ನವಂಬರ್ ೧೯೨೭ರಂದು ಆಯೋಜಿಸಲಾಗಿತ್ತು.

೧೩ನೆಯ ನವಂಬರ್ ೧೯೨೭ರಂದು ಸಭೆಯ ನಿಯೋಜಿತ ಅಧ್ಯಕ್ಷರಾದ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಬಡನೇರಾದಲ್ಲಿ ಶ್ರೀ. ಗವಯಿ ಎಮ್.ಎಲ್.ಸಿ. ಅವರು ಸ್ವಾಗತಿಸಿದ ಮೇಲೆ ಉಳಿದ ಜನರೊಡನೆ ಅವರು ಮಧ್ಯಾಹ್ನ ೧.೩೦ಕ್ಕೆ ಅಮರಾವತಿಗೆ ಬಂದು ತಲುಪಿದರು. ಸ್ಟೇಷನ್‌ನಲ್ಲಿ ಸ್ವಾಗತಕ್ಕಾಗಿ ಎಲ್ಲ ಜಾತಿಯ ಜನರ ದೊಡ್ಡ ತಂಡವೆ ಸೇರಿತ್ತು. ಸರಿಯಾಗಿ ಮೂರುವರೆಗೆ ಸಭೆಯ ಕಾರ್ಯ ಕಲಾಪಗಳಾರಂಭವಾದವು. ಮೊದಲಿಗೆ ದಲಿತರ ಕೆಲವು ಮಕ್ಕಳು ಸುಶ್ರಾವ್ಯವಾಗಿ ಸ್ವಾಗತ ಗೀತೆಗಳನ್ನು ಹಾಡಿ ತೋರಿಸಿದರು. ಡಾ. ಪಂಜಾಬರಾವ್ ದೇಶಮುಖ್ ಅವರು ಶೀಘ್ರದಲ್ಲೇ ಜರುಗಲಿರುವ ಶ್ರೀ ಅಂಬೆಮಾತೆ ದೇವಸ್ಥಾನ ಸತ್ಯಾಗ್ರಹದ ದೃಷ್ಟಿಯಿಂದ ಈ ಸಭೆಯ ಮಹತ್ವವನ್ನು ಪ್ರತಿನಿಧಿಗಳಿಗೆ ತಿಳಿಸಿ ಹೇಳಿದರು. ನಂತರ ಡಾ.ಅಂಬೇಡ್ಕರ್ ಅವರ ಪರಿಚಯ ಮಾಡಿಕೊಡುತ್ತ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಲು ಅವರಿಗೆ ವಿನಂತಿಸಿದರು. ಅದಕ್ಕೆ ಮೋರ್ಶಿಯ ಸುಪ್ರಸಿದ್ಧ ಬ್ರಾಹ್ಮಣೇತರ ನೇತಾರರಾದ ನಾನಾಸಾಹೇಬ ಅಮೃತಕರ್ ಅವರು ಬೆಂಬಲಿಸಿದರು ಹಾಗೂ ಸತ್ಯಾಗ್ರಹ ಕಮಿಟಿಯ ಸೆಕ್ರೆಟರಿಯಾದ ಶ್ರೀ.ನಾಯಿಕ್ ಹಾಗೂ ಅಧ್ಯಕ್ಷರಾದ ಶ್ರೀ. ಗವಯಿ ಎಮ್.ಎಲ್.ಸಿ. ಅವರು ಅನುಮೋದಿಸಿದ ಮೇಲೆ ಡಾ. ಅಂಬೇಡ್ಕರ್ ಅವರು ಚಪ್ಪಾಳೆಯ ಕರತಾಡನದ ನಡುವೆ ಅಧ್ಯಕ್ಷ ಸ್ಥಾನಕ್ಕೆ ಬಂದು ಕುಳಿತುಕೊಂಡರು. ಆರಂಭದಲ್ಲಿ ತನಗೆ ಅಧ್ಯಕ್ಷ ಸ್ಥಾನ ಕೊಟ್ಟಿದ್ದಕ್ಕೆ ಸ್ವಾಗತ ಮಂಡಳ ಹಾಗೂ ಪ್ರತಿನಿಧಿಗಳಿಗೆ ಧನ್ಯವಾದ ಹೇಳಿದರು. ತಮ್ಮ ಭಾಷಣದಲ್ಲವರು,

न जानपदिकं दुखमेकः शोचितुमर्हति।
अशोचन्प्रति कुर्वीत यदि पश्येद्रुपक्रमम।

ಸಾರ್ವಜನಿಕ ದುಃಖಗಳಿಗೆ ಶೋಕಿಸುತ್ತ ಕುಳಿತರೆ ಲಾಭವಿಲ್ಲ, ಅಳುತ್ತ ಕೂಡುವುದಕ್ಕಿಂತ ಜಾಣ ಮನುಷ್ಯನು ಅದಕ್ಕೆ ಉಪಾಯ ಕಂಡು ಹಿಡಿಯಬೇಕು.

अपहाय निजं कर्म कृष्ण कृष्णेति वादिनः।
ते हरेद्वषिणः पापाः धर्मार्थ जन्म यद्धरे।

'ತಮ್ಮ ಕರ್ತವ್ಯಗಳನ್ನು ಮರೆತು ಹರಿಹರಿ ಅನ್ನುತ್ತ ಕುಳಿತುಕೊಳ್ಳುವವರು ಪಾಪಿಗಳು ಹಾಗೂ ಹರಿಯ ಶತೃಗಳಾಗಿದ್ದಾರೆ. ಏಕೆಂದರೆ ಹರಿಯ ಜನ್ಮ ಕೂಡ ಧರ್ಮರಕ್ಷಣೆಗಾಗಿಯೇ ಆಗಿದೆ'.

ದಲಿತರು ಹಾಗೂ ಮೇಲ್ಜಾತಿಯವರು ಒಂದೇ ಧರ್ಮದ ಜನ ಅನ್ನುವುದನ್ನು ಉಭಯ ಪಕ್ಷದವರು ನಂಬುತ್ತಾರೆ. ಮೇಲ್ಜಾತಿಯವರು ದಲಿತರನ್ನು ನೀವು ಹಿಂದೂಗಳಲ್ಲ ಎಂದು ಯಾವತ್ತೂ ಹೇಳುವುದಿಲ್ಲ.

ಇದಕ್ಕೆ ಉದಾಹರಣೆ ಕೊಡುವುದಾದರೆ ೧೯೧೦ ರ ಜನಗಣನೆಯಲ್ಲಿ ಕೆಲವು ಮುಸಲ್ಮಾನರು ದಲಿತರನ್ನು ಹಿಂದೂಗಳಲ್ಲಿ ಸೇರಿಸಬಾರದು ಎಂದು ಗುಲ್ಲೆಬ್ಬಿಸಿದಾಗ ಮೇಲ್ಜಾತಿಯ ಸುಧಾರಕರಷ್ಟೇಯಲ್ಲ ಸನಾತನ ಧರ್ಮಿಗಳು ಕೂಡ ಅಸ್ಪೃಶ್ಯರು ಹಿಂದೂಗಳೇ ಎಂದು ಹಟ ಹಿಡಿದಿದ್ದರು. ಅದರಂತೆ ದಲಿತರು ಕೂಡ ನಮ್ಮನ್ನು ಹಿಂದೂಗಳಿಂದ ಹೊರಹಾಕದೆ ಹಿಂದೂ ಜಾತಿಯವರಾಗೇ ಪರಿಗಣಿಸಿ ಎಂದರು. ನಾವು ಒಂದೇ ಧರ್ಮಕ್ಕೆ ಸಂಬಂಧಪಟ್ಟವರು ಅನ್ನುವ ಭಾವನೆ ಈರ್ವರಲ್ಲೂ ಪೀಳಿಗೆಗಳಿಂದಲೂ ಇದೆ ಅನ್ನುವುದು ನಿಜವಾದರೂ ದಲಿತರ ದೃಷ್ಟಿಕೋನದಲ್ಲಿಂದು ಸಾಕಷ್ಟು ವ್ಯತ್ಯಾಸವಾಗಿರುವುದು ಕಂಡು ಬರುತ್ತದೆ. ನಾವು ಹಿಂದೂ ಧರ್ಮದವರೇ ಆಗಿದ್ದರೆ ಉಳಿದ ಹಿಂದೂಗಳಿಗೆ ಸಿಗುವ ಹಕ್ಕುಗಳು ನಮಗೇಕೆ ಸಿಗಬಾರದು? ಅವರು ನೀರು ತುಂಬುವ ಕೆರೆ ಭಾವಿಗಳಲ್ಲಿ ನಾವೇಕೆ ನೀರು ತುಂಬುವಂತಿಲ್ಲ? ಅವರು ಪೂಜೆ ಮಾಡುವ ದೇವಸ್ಥಾನಗಳಲ್ಲಿ ನಾವೇಕೆ ಪೂಜೆ ಮಾಡುವಂತಿಲ್ಲ? ಅನ್ನುವಂತಹ ಸಮಾನತೆಯ ಪ್ರಶ್ನೆಗಳನ್ನವರು ಕೇಳುತ್ತಿದ್ದಾರೆ, ಹಾಗೂ ಆ ಹಕ್ಕುಗಳನ್ನು ಪಡೆಯಲು ಅವರು ಪ್ರಯತ್ನಿಸುತ್ತಿದ್ದಾರೆ. ಯಾವುದೇ ಮನುಷ್ಯ ಹಳೆಯದನ್ನು ಬಿಟ್ಟು ಹೊಸತರ ಬೆನ್ನತ್ತುವಾಗ ತಾನು ಮಾಡುತ್ತಿರುವುದು ಸರಿಯೋ ತಪ್ಪೋ ಅನ್ನುವ ಪ್ರಶ್ನೆ ಅವನಿಗೆ ಕಾಡುವುದು ಸಹಜ, ಯಾವತ್ತೂ ಹಳೆಯದು ಪರಂಪರೆಯಿಂದ ಪುನೀತವಾಗಿರುತ್ತದೆ ಹಾಗಾಗಿ ಅದರ ಸತ್ಯತೆಯ ಬಗ್ಗೆ ಅವನಿಗೆ ನಂಬಿಕೆಯಿರುತ್ತದೆ. ಹೊಸದಕ್ಕೆ ಪರಂಪರೆಯಿರುವುದಿಲ್ಲ ಅದೆಷ್ಟೇ ಒಳ್ಳೆಯದಿದ್ದರೂ ಅದನ್ನನುಸರಿಸಲು ಜನ ಹಿಂಜರಿಯುತ್ತಾರೆ. ಸಮಾನ ಹಕ್ಕುಗಳಿಗಾಗಿ ಒತ್ತಾಯಿಸುತ್ತಿರುವ ದಲಿತರ ಪರಿಸ್ಥಿತಿಯೂ ಈ ಹೊಸ ಧೋರಣೆಯ ಬಗ್ಗೆ ಹೀಗೇ ಇದೆ. ಇದಕ್ಕೂ ಮುಂಚೆ ನಾವು ಯಾವತ್ತೂ ದೇವಸ್ಥಾನಕ್ಕೆ ಹೋಗಿಲ್ಲ! ಕೆರೆ ಭಾವಿಗಳಲ್ಲಿ ನೀರು ತುಂಬಿಲ್ಲ! ಅಂತಹ ಹಕ್ಕುಗಳನ್ನು ಪಡೆಯಲು ಒತ್ತಾಯ ಹೇರಬೇಕು ಎಂದು ಜನರೇನೋ ಹೇಳುತ್ತಾರೆ ಆದರೆ ಈ ಒತ್ತಾಯ ಸತ್ಯಾಗ್ರಹವಾದೀತೆ? ಅನ್ನುವ ಅನುಮಾನ ದಲಿತರಿಗೆ ಕಾಡುವುದು ಸಹಜ. ಇಂತಹ ಕೆಲಸಗಳಲ್ಲಿ ಯಶಸ್ಸು ಸಿಗಬಹುದೆ? ಅನ್ನುವುದು ಅಗತ್ಯವಿರುವ ಸಂಪನ್ಮೂಲಗಳನ್ನವಲಂಬಿಸುವಷ್ಟೆ ಆ ಕೆಲಸದ ನೈತಿಕ ಸ್ವರೂಪವನ್ನೂ ಅವಲಂಬಿಸುತ್ತದೆ. ನಾವು ಮಾಡುವ ಕೆಲಸ ಸತ್ಯವನ್ನಾಧರಿಸಿರುವುದಾದರೆ ಯಶಸ್ಸು ಖಂಡಿತ ಸಿಗುತ್ತದೆ ಆದರೆ ಅದೇ ಕೆಲಸ ಅಸತ್ಯತೆಯನ್ನಾಧರಿಸಿದ್ದಿದ್ದರೆ ಯಶಸ್ಸು ಮರಿಚೀಕೆಯಾಗುತ್ತದೆ. ಹಾಗಾಗಿ ನಮ್ಮ ಕಾರ್ಯದ ನೈತಿಕ ಸ್ವರೂಪವೇನು ಅನ್ನುವುದನ್ನು ಪ್ರತಿಯೊಬ್ಬ ದಲಿತನೂ ಅರ್ಥಮಾಡಿಕೊಳ್ಳಬೇಕು. ಅದನ್ನು ಗುರುತಿಸಲು ದೇವಸ್ಥಾನದಲ್ಲಿ ಪ್ರವೇಶಿಸುವ ದಲಿತರ ಹಟ ಸತ್ಯಾಗ್ರಹವೇ ಇಲ್ಲ ದುರಾಗ್ರಹವೇ ಅನ್ನುವುದರ ಬಗ್ಗೆ ಯೋಚಿಸುವುದು ಅಗತ್ಯವಾಗಿದೆ.

ಸತ್ಯಾಗ್ರಹದ ಬಗ್ಗೆ ಯೋಚಿಸಬೇಕಾದ ಮೊದಲನೆಯ ವಿಷಯವೆಂದರೆ ಸತ್ಯ ಯಾವುದು ಹಾಗೂ ಅಸತ್ಯ ಯಾವುದು ಅನ್ನುವುದನ್ನು. ಸತ್ಯ ಅನ್ನುವುದೇನು ಅನ್ನುವುದನ್ನೇ ಸರಿಯಾಗಿ ನಿರ್ಧರಿಸದಿದ್ದರೆ ಸತ್ಯಾಗ್ರಹದ ಅಡಿಪಾಯ ದುರ್ಬಲವಾಗಿರುತ್ತದೆ. ನಮ್ಮ ಆಗ್ರಹ ಸತ್ಯಾಗ್ರಹ ಹೌದೋ ಅಲ್ಲವೋ ಅನ್ನುವುದು ಸತ್ಯಾಗ್ರಹ ಮಾಡುವವನಿಗೆ ಗೊತ್ತಿಲ್ಲದಿದ್ದರೆ ಅವನಿಂದ ಸತ್ಯಾಗ್ರಹ ಹೇಗೆ ಜರುಗೀತು? ಸತ್ಯಾಗ್ರಹದ ಯಶಸ್ಸು ಯಾವತ್ತೂ ಸತ್ಯಾಗ್ರಹ ಮಾಡುವವನ ಆತ್ಮಬಲವನ್ನವಲಂಬಿಸಿರುತ್ತದೆ. ನಾನು ಮಾಡುತ್ತಿರುವುದು ಸತ್ಯ ಅನ್ನುವ ಭಾವನೆ ಅವನಲ್ಲಿ ಬಂದರೆ ಮಾತ್ರ ಆತನಲ್ಲಿ ಆತ್ಮಬಲ ಜಾಗೃತವಾಗುತ್ತದೆ. ಈ ಭಾವನೆ ಅನುಮಾನಾಸ್ಪದವಾಗಿದ್ದರೆ ಸತ್ಯಾಗ್ರಹಕ್ಕೆ ಬೇಕಿರುವ ಆತ್ಮಬಲ ಅವನಲ್ಲಿ ಜಾಗೃತವಾಗುವುದಿಲ್ಲ. ಹಾಗಾಗಿ ಸತ್ಯ ಅಂದರೇನು ಅನ್ನುವುದು ಸತ್ಯಾಗ್ರಹ ಮಾಡುವವನಿಗೆ ಗೊತ್ತಿರಬೇಕು. ನನ್ನ ಪ್ರಕಾರ ಸ್ವಲ್ಪದರಲ್ಲಿ ಹೇಳುವುದಾದರೆ ಜನರನ್ನು ಒಟ್ಟುಗೂಡಿಸುವುಕ್ಕಾಗುತ್ತಿರುವ ಯಾವುದೇ ಕಾರ್ಯ ಸತ್ಕಾರ್ಯವಾಗಿದ್ದು

ಅದಕ್ಕಾಗಿ ಮಾಡಿದ ಒತ್ತಾಯ ಸತ್ಯಾಗ್ರಹ ಅನ್ನಬಹುದು. ಈಗ ಜನರನ್ನು ಒಟ್ಟುಗೂಡಿಸುವುದರ ಬಗ್ಗೆ ಮತಭೇದಗಳಾಗುವ ಸಾಧ್ಯತೆಗಳಿವೆ. ಒಬ್ಬನು ಜನರನ್ನು ಒಟ್ಟುಗೂಡಿಸುವ ಕೆಲಸ ಮತ್ತೊಬ್ಬನಿಗೆ ಜನರನ್ನು ಬೇರ್ಪಡಿಸುವ ಕೆಲಸ ಅನಿಸೀತು. ಆದರೆ ಜನ ಒಟ್ಟುಗೂಡಿಸುವವನ ಅಂತಃಕರಣ ಶುದ್ಧವಾಗಿರದಿದ್ದರೆ ಹಾಗೂ ಸ್ವಾರ್ಥ ಬುದ್ಧಿಯಿಂದ ಆ ಕೆಲಸವನ್ನಾತ ಮಾಡುತ್ತಿದ್ದರೆ ಮಾತ್ರ ಆತನ ಕೆಲಸ ಜನರನ್ನು ಬೇರ್ಪಡಿಸುವುದಾಗುತ್ತದೆ. ಅದೇ ಅವನ ಮನಸ್ಸಿನಲ್ಲಿ ಸಮಭಾವವಿದ್ದರೆ ಆತನ ಕೈಯಿಂದ ಎಂದೂ ಜನರನ್ನು ಬೇರ್ಪಡಿಸುವ ಕೆಲಸ ಸಾಧ್ಯವಿಲ್ಲ. ಆತನಲ್ಲಿ ಸ್ವಾರ್ಥದ ಲವಲೇಶವೂ ಇಲ್ಲದ ಕಾರಣ ಅವನ ಮನಸ್ಸು ಯಾವತ್ತೂ ಜನರನ್ನು ಒಟ್ಟುಗೂಡಿಸುವುದರಲ್ಲೇ ತೊಡಗಿರುತ್ತದೆ, ಹಾಗಾಗಿ ಈ ಎರಡು ತತ್ವಗಳ ಆಧಾರವನ್ನಿಟ್ಟುಕೊಂಡು ಸಮಭಾವವಿದ್ದಲ್ಲಿ ಜನರ ಒಟ್ಟುಗೂಡುವಿಕೆಯಿದೆ ಹಾಗೂ ಜನರ ಒಟ್ಟುಗೂಡುವಿಕೆಯಿದ್ದಲ್ಲಿ ಸತ್ಕಾರ್ಯವಿದೆ ಹಾಗೂ ಇಂತಹ ಕಾರ್ಯದ ಬಗ್ಗೆ ಎಲ್ಲಿ ಆಗ್ರಹವಿರುತ್ತದೆಯೋ ಅಲ್ಲಿ ಸತ್ಯಾಗ್ರಹವಿರುತ್ತದೆ ಅನ್ನುವುದು ಸತ್ಯಾಗ್ರಹದ ನಮ್ಮ ವ್ಯಾಖ್ಯೆ.

ಇವು ನಮ್ಮ ವಿಚಾರಗಳಲ್ಲ, ನಾನಿವುಗಳನ್ನು ಭಗವದ್ಗೀತೆಯಿಂದ ತೆಗೆದುಕೊಂಡಿದ್ದೇನೆ. ಸತ್ಯಾಗ್ರಹದ ವಿಷಯದಲ್ಲಿ ನಾವು ಭಗವದ್ಗೀತೆಯ ಆಧಾರ ಪಡೆಯುತ್ತೇವೆ ಎಂದು ಕೆಲವರಿಗೆ ಆಶ್ಚರ್ಯವಾಗುತ್ತದೆ. ಸತ್ಯಾಗ್ರಹ ಅನ್ನುವುದು ಗೀತೆಯ ವಿಷಯವಲ್ಲ ಎಂದು ಸಾಧಾರಣವಾಗಿ ಎಲ್ಲರಿಗೂ ಅನಿಸುತ್ತದೆ.ನನ್ನ ಪ್ರಕಾರ ಹೀಗಂದುಕೊಳ್ಳುವುದು ತಪ್ಪು. ಸತ್ಯಾಗ್ರಹವೇ ಗೀತೆಯ ಮುಖ್ಯ ವಿಷಯ ಹಾಗೂ ಗೀತೆಯನ್ನು ಏಕೆ ಉಪದೇಶಿಸಲಾಗಿದೆ ಅನ್ನುವುದನ್ನು ಗಮನಕ್ಕೆ ತೆಗೆದುಕೊಂಡಾಗ ನಾವು ಹೇಳುತ್ತಿರುವುದರ ಸತ್ಯತೆ ನಿಮಗರ್ಥವಾಗಬಹುದು. ಗೀತೆಯಲ್ಲಿ ಅರ್ಜುನನು ಕೃಷ್ಣನಿಗೆ ಕೇಳಿದ ಪ್ರಶ್ನೆ ಯಾವುದು ಹಾಗೂ ಕೃಷ್ಣ ಅದಕ್ಕೆ ಕೊಟ್ಟ ಉತ್ತರ ಯಾವುದು ಅನ್ನುವುದನ್ನು ಯಾರಾದರೂ ಗಮನಿಸಿದರೆ,

ಅರ್ಜುನ ಹತಾಶನಾಗಿ ರಥದಿಂದಿಳಿದು ಕುಳಿತುಕೊಳ್ಳುವಾಗ, 'ಕುಳಿತುಕೊಳ್ಳಬೇಡ ಅರ್ಜುನ, ನಿನ್ನ ರಾಜ್ಯಾಧಿಕಾರ ಕಸಿದುಕೊಂಡವರ ಜೊತೆ ಯುದ್ಧ ಮಾಡಲು ನಿನ್ನ ಮನಸ್ಸನ್ನು ಒತ್ತಾಯಿಸು' ಎಂದು ಶ್ರೀ ಕೃಷ್ಣ ಪರಮಾತ್ಮ ಅರ್ಜುನನಿಗೆ ಹೇಳಿದಾಗ ಅರ್ಜುನ 'ಹೇಳು ಶ್ರೀಕೃಷ್ಣ ನನ್ನವರ ವಿರುದ್ಧವೇ ಹೋರಾಡಬೇಕೆನ್ನುವ ನಿನ್ನ ಈ ಒತ್ತಾಯ ನ್ಯಾಯ ಸಮ್ಮತವೆ?' ಎಂದು ಅರ್ಜುನ ಕೇಳುತ್ತಾನೆ. ಆ ಪ್ರಶ್ನೆಗೆ ಗೀತೆಯೊಂದೇ ಭಗವಂತ ಕೊಟ್ಟಿರುವ ಉತ್ತರ. ಈ ಗೀತೋಪದೇಶದಂತಹ ಗ್ರಂಥದಲ್ಲಿ ಹೋರಾಟಕ್ಕಿಂತ ಬೇರೆ ಮುಖ್ಯ ವಿಷಯವಿರುವುದು ಸಾಧ್ಯವೇಯಿಲ್ಲ. ದಲಿತರು ಮೇಲ್ಜಾತಿಯವರೊಡನೆ ಸಮಾನ ಹಕ್ಕುಗಳಿಗಾಗಿ ಮಾಡುತ್ತಿರುವ ಆಗ್ರಹ ಸತ್ಯಾಗ್ರಹ ಹೌದೋ ಅಲ್ಲವೋ ಅನ್ನುವುದನ್ನು ನಿರ್ಧರಿಸಲು ನಾನು ಆಧಾರವಾಗಿ ತೆಗೆದುಕೊಂಡಿರುವ ಗೀತೆ ಸತ್ಯಾಗ್ರಹದ ಮೇಲೊಂದು ಮೀಮಾಂಸೆಯಾಗಿದೆ. ಅಲ್ಲದೆ ಇದಕ್ಕೆ ಮತ್ತೊಂದು ಕಾರಣವೆಂದರೆ ಈ ಧರ್ಮಗ್ರಂಥಕ್ಕೆ ದಲಿತರು ಹಾಗೂ ಮೇಲ್ಜಾತಿಯವರು ಇಬ್ಬರೂ ಮನ್ನಣೆ ಕೊಡುತ್ತಾರೆ. ಬೇರೆ ಯಾವುದೇ ಗ್ರಂಥದ ಆಧಾರ ಪಡೆದಿದ್ದರೆ ಅದಕ್ಕೆಂದೇ ಕಾಯುತ್ತಿದ್ದ ಮೇಲ್ಜಾತಿಯವರು ನಿಮ್ಮ ಆಧಾರವನ್ನು ನಾವು ಒಪ್ಪುವುದಿಲ್ಲವೆಂದು ಹೇಳುತ್ತಿದ್ದರು. ದಲಿತರು ಆರಂಭಿಸಿರುವ ಸತ್ಯಾಗ್ರಹ ಗೀತೆಯ ಆಧಾರವನ್ನು ನಿಜ ಮಾಡಿದರೆ ಅದನ್ನು ಯಾವ ಮೇಲ್ಜಾತಿಯವನೂ ವಿರೋಧಿಸಲಾರ. ಹಾಗೆ ಮಾಡುವುದರಿಂದ ಭಗವದ್ಗೀತೆಯನ್ನು ಧಿಕ್ಕರಿಸಿದಂತಾಗುತ್ತದೆ.

ಈಗ ದಲಿತರ ಈ ಸತ್ಯಾಗ್ರಹ ಗೀತೆಯ ಆಧಾರವನ್ನು ನಿಜ ಮಾಡುತ್ತದೆಯೆ ಅನ್ನುವುದನ್ನು ನೋಡೋಣ. ಮೊದಲನೆಯದಾಗಿ ನಾವು ಆರಂಭಿಸಿರುವ ಕೆಲಸ ಜನರನ್ನು ಒಟ್ಟುಗೂಡಿಸುವ ಕೆಲಸವೆ? ಅಸ್ಪೃಶ್ಯತೆ ತೊಲಗಿ ನಾವು ಮೇಲ್ಜಾತಿಯವರಾಗುವುದಷ್ಟೆ ಈ ಚಳುವಳಿಯ ವ್ಯಾಪ್ತಿಯಿದೆಯೆಂದು

ಕೆಲವರಂದುಕೊಳ್ಳುತ್ತಾರೆ. ಹಾಗಂದುಕೊಳ್ಳುವುದು ತಪ್ಪು. ಅಸ್ಪೃಶ್ಯತೆಯಿಂದ ಕೇವಲ ಮೇಲ್ಜಾತಿಯವರದ್ದಷ್ಟೇಯಲ್ಲ ದೇಶಕ್ಕೂ ಕೂಡ ಅಪರಿಮಿತ ನಷ್ಟವುಂಟಾಗಿದೆ.ದಲಿತರಿಗಿರುವ ಕಲಂಕದಿಂದ ದಲಿತರಷ್ಟೇಯಲ್ಲ ಮೇಲ್ಜಾತಿಯವರು ಕೂಡ ಕಲಂಕಿತರಾಗಿದ್ದಾರೆ. ಕೆಳದರ್ಜೆಯವರೆಂದು ಸಂಬೋಧಿಸಲ್ಪಡುವ ಜನರಿಗೆ ಅವಮಾನವಾಗುವುದಲ್ಲದೆ ಕೆಳಜಾತಿಯುವರೆಂದು ಸಂಬೋಧಿಸುವ ಜನರ ನೀತಿ ಕೂಡ ಕೆಳದರ್ಜೆಯದಾಗಿಬಿಡುತ್ತದೆ. ದಲಿತರು ಅಸ್ಪೃಶ್ಯತೆಯಂತಹ ವಿಷಚಕ್ರದಿಂದ ಹೊರಬಂದು ತಮ್ಮ ಏಳಿಗೆಯನ್ನು ಮಾಡಿಕೊಳ್ಳುವುದರ ಜೊತೆಗೆ ತಮ್ಮ ಬುದ್ಧಿ, ಪರಾಕ್ರಮ ಹಾಗೂ ಕೆಲಸಗಳಿಂದ ದೇಶದ ಏಳಿಗೆಗೆ ಕೂಡ ಕಾರಣರಾದಾರು ಅನ್ನುವ ದೃಷ್ಟಿಯಿಂದ ನೋಡಿದರೆ ಅಸ್ಪೃಶ್ಯತಾ ನಿವಾರಣೆಯ ಚಳುವಳಿ ಕೇವಲ ಪತಿತೋದ್ಧಾರ ಚಳುವಳಿಯಾಗಿರದೆ ನಿಜ ಅರ್ಥದಲ್ಲಿ ಜನರನ್ನು ಒಟ್ಟುಗೂಡಿಸುವ ಚಳುವಳಿಯಾಗಿದೆ. ದಲಿತರು ಸ್ವಾರ್ಥಬುದ್ಧಿಯಿಂದ ಕೇವಲ ತಮ್ಮ ಬೆಳವಣಿಗೆ, ತಮ್ಮ ಉದ್ಧಾರವನ್ನೇ ಮಾಡಿಕೊಳ್ಳುವುದಿದ್ದರೆ ಚಳುವಳಿಯಂತಹ ಕಷ್ಟಕರವಾದ ವ್ರತ ಹಿಡಿಯುವ ಅಗತ್ಯವಿರಲಿಲ್ಲ. ಮನುಷ್ಯತ್ವ ಪಡೆಯಲು ಹಾಗೂ ಸಮಾನತೆಯ ವರ್ತನೆ ಸಿಗಲೆಂದು ಹೊರಾಡುತ್ತಿರುವ ಇವರು ಬೇರೆ ಧರ್ಮಕ್ಕೆ ಸೇರಿಕೊಂಡರೆ ಅವರುದ್ದೇಶ ಸುಲಭವಾಗಿ ಈಡೇರುತ್ತದೆ ಹಾಗೂ ಅಸ್ಪೃಶ್ಯತೆ ನಿವಾರಣೆಯ ಕೆಲಸದಲ್ಲಿ ಉಪಯೋಗಿಸುತ್ತಿರುವ ತಮ್ಮ ಶಕ್ತಿಯನ್ನೆಲ್ಲ ಅವರು ತಮ್ಮ ಶೈಕ್ಷಣಿಕ ಹಾಗೂ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಉಪಯೋಗಿಸಬಹುದು. ಹಿಂದೂ ಧರ್ಮ ಪಾಲಿಸುವ ಜನರ ಆಚಾರದಲ್ಲೊಂದು ಗಮ್ಮತ್ತಿದೆ.ಎಲ್ಲಿಯವರೆಗೆ ಒಬ್ಬ ಮನುಷ್ಯ ಹಿಂದೂ ಧರ್ಮದ ಘಟಕನಾಗಿರುತ್ತಾನೊ ಅಲ್ಲಿಯವರೆಗೆ ಹಿಂದೂ ಧರ್ಮ ಹಾಕಿಕೊಟ್ಟಿರುವ 'ಗೌರವ–ಅಗೌರವ, ಪಾಪ–ಪುಣ್ಯ, ಹಾಗೂ ಸ್ಪೃಶ್ಯ–ಅಸ್ಪೃಶ್ಯದಂತಹ ಯಮನಿಯಮಗಳನ್ನವನು ಪಾಲಿಸಬೇಕಾಗುತ್ತದೆ. ಆದರೆ ಅವನು ಹಿಂದೂ ಧರ್ಮವನ್ನು ತ್ಯಜಿಸಿ ಧರ್ಮಾಂತರಗೊಳ್ಳುವ ದಿನದಿಂದ ಅವನಿಗೆ ಈ ಯಾವ ನಿಯಮಗಳೂ ಪಾಲಿಸುವ ಅಗತ್ಯವಿರುವುದಿಲ್ಲ. ಆಗ ಅವನನ್ನು ಮಾನವ ಧರ್ಮ ಹಾಕಿಕೊಟ್ಟಿರುವ ಗೌರವ–ಅಗೌರವ, ಪಾಪ–ಪುಣ್ಯ, ಸ್ಪೃಶ್ಯ–ಅಸ್ಪೃಶ್ಯದಂತಹ ಕಠಿಣ ನಿಯಮಗಳಂತೆ ಅವನೊಡನೆ ವರ್ತಿಸಲಾಗುತ್ತದೆ. ಮೇಲ್ಜಾತಿಯವರು ಅಸ್ಪೃಶ್ಯರನ್ನು ಮೈಲಿಗೆಯೆಂದು ಅಸಹ್ಯವಾಗಿ ನೋಡುವಂತೆ ನಾಯಿ ಬೆಕ್ಕನ್ನು ಹಾಗೂ ಮುಸಲ್ಮಾನರನ್ನೇಕೆ ನೋಡುವುದಿಲ್ಲ? ಅನ್ನುವ ಪ್ರಶ್ನೆಯ ಉತ್ತರ ಇನ್ನು ಸಿಕ್ಕಿಲ್ಲ. ಅಸ್ಪೃಶ್ಯರು ಹಿಂದೂ ಧರ್ಮಕ್ಕೆ ಸಂಬಂಧಪಟ್ಟಿರುವುದರಿಂದ ಅವರೊಡನೆ ಹಿಂದೂ ಧರ್ಮದ ನಿಯಮಗಳಂತೆ ವರ್ತಿಸಲಾಗುತ್ತದೆ. ಅಂತೆಯೇ ನಾಯಿ ಬೆಕ್ಕುಗಳು, ಹಾಗೂ ಮುಸಲ್ಮಾನರು ಹಿಂದೂ ಧರ್ಮೀಯಗಳಲ್ಲವಾದ್ದರಿಂದ ಅವರೊಡನೆಯೂ ಮಾನವ ಧರ್ಮದಂತೆ ವರ್ತಿಸಲಾಗುತ್ತದೆ. ಈ ವಿಶೇಷತೆ ದಲಿತರಿಗೆ ಗೊತ್ತಿಲ್ಲದೇನಿಲ್ಲ, ಒಬ್ಬ ದಲಿತನು ಹಿಂದೂ ಧರ್ಮದಲ್ಲಿರುವವರೆಗೆ ಅವನನ್ನು ಅಸಹ್ಯವಾಗಿಯೇ ಕಾಣಲಾಗುತ್ತದೆ, ಅದೇ ಮುಸಲ್ಮಾನ ಇಲ್ಲವೆ ಕ್ರಿಶ್ಚನ್ನನಾದರೆ ಅವರೊಡನೆ ತಮ್ಮ ಜೊತೆಯವರಂತೆ ವರ್ತಿಸುತ್ತಾರೆ ಅನ್ನುವುದು ದಲಿತರಿಗೆ ಚನ್ನಾಗಿ ಗೊತ್ತು. ಹೀಗಿದ್ದೂ ಕೂಡ ಅಸ್ಪೃಶ್ಯತೆ ನಿವಾರಣೆಗಾಗಿರುವ ಧರ್ಮಾಂತರದ ದಾರಿ ತುಳಿದು ಹಿಂದೂ ಧರ್ಮಕ್ಕೆ ಹಾನಿ ತಲುಪಿಸುವುದಕ್ಕಿಂತ ಹಿಂದೂ ಧರ್ಮದಲ್ಲೇ ಇದ್ದುಕೊಂಡು ತಮ್ಮಲ್ಲಿರುವ ಶಕ್ತಿಯನ್ನು ಖರ್ಚು ಮಾಡಿ ಮನುಷ್ಯತ್ವ ಪಡೆಯುವ ನಿರ್ಧಾರ ಮಾಡಿದ್ದಾರೆ. ಹಾಗಾಗಿ ಅವರು ಆರಂಭಿಸಿರುವ ಕಾರ್ಯ ಕೇವಲ ತಮ್ಮ ಉದ್ಧಾರವಾಗಿರದೆ ಹಿಂದೂ ಧರ್ಮದ ಉದ್ಧಾರ ಕೂಡ ಹೌದು. ದಲಿತರು ಆರಂಭಿಸಿರುವ ಈ ಚಳುವಳಿಯಲ್ಲಿ ಸಮಾನತೆಯ ಭಾವನೆಯಿಲ್ಲ ಎಂದು ಕೂಡ ಯಾರೂ ಹೇಳುವಂತಿಲ್ಲ. ದಲಿತರ ಬೇಡಿಕೆಗಳು ವಿಶೇಷ ಹಕ್ಕುಗಳಿಗಾಗಿರದೆ ಸಮಾನ ಹಕ್ಕುಗಳಿಗಾಗಿವೆ. ಹಿಂದೂ ಧರ್ಮದ ಹಕ್ಕುಗಳು ಕೇವಲ ತಮಗೇ ಸಿಗಬೇಕು ಇತರರಿಗೆ

ಸಿಗಬಾರದು ಎಂದೇನೂ ಅವರ ಹಟವಿಲ್ಲ.ಮೇಲ್ಜಾತಿಯವರಿಗಿರುವ ಹಕ್ಕುಗಳು ತಮಗೂ ಬೇಕು ಅನ್ನುವ ಸಮಾನತೆಯ ಬೇಡಿಕೆಯಾಗಿದೆ. ಹಾಗಾಗಿ ಗೀತೆಯಲ್ಲಿ ಹೇಳಿರುವುದನ್ನು ಒರೆಗೆ ಹಚ್ಚಿ ನೋಡಿದಾಗ ಅಸ್ಪೃಶ್ಯರ ಆಗ್ರಹ (ಒತ್ತಾಯ) ನಿಜವಾದ ಸತ್ಯಾಗ್ರಹ ಎಂದೇ ಹೇಳಬಹುದು.

ಅಸ್ಪೃಶ್ಯರ ಕಾರ್ಯ ದೇಶದ ಕಾರ್ಯ ಎಂದು ಹೇಳಿಯೂ ಕೂಡ ದಲಿತರಿಗೆ ದೇವಸ್ಥಾನದಲ್ಲಿ ಕಾಲಿಡುವ ಅಧಿಕಾರವಿಲ್ಲ ಎಂದು ಹೇಳುವ ಸಮಾಜಕಂಟಕರಿದ್ದಾರೆ. ಅವರಲ್ಲಿ ಕೆಲವರ ಯುಕ್ತಿವಾದ ಕೇಳಲು ಎಷ್ಟು ಇಂಪಾಗಿರುತ್ತದೆಂದರೆ  ಅವರ ಮಾತುಗಳನ್ನು ಕೇಳಿದ ಮೇಲೆ ನಮ್ಮದೇ ತಪ್ಪು, ನಮ್ಮ ವಿಚಾರಗಳಿಗೆ ಆಧಾರವಿಲ್ಲ ಅನಿಸಿಬಿಡುತ್ತದೆ.  ಮೇಲ್ಜಾತಿಯವರ ದೇವಸ್ಥಾನಕ್ಕೆ ಹೋದರೆ ಮಾತ್ರ ಆರಾಧನೆ ಸಾಧ್ಯ ಅಂದುಕೊಂಡು ದಲಿತರು ದೇವಸ್ಥಾನಕ್ಕೆ ಹೋಗಲು ಪ್ರಯತ್ನಿಸುತ್ತಿದ್ದರೆ ಸರಿಯಲ್ಲ ಅನ್ನುವುದು ಈ ವಿರೋಧಿಗಳ ಅಂಬೋಣ.  ನಮಾಜ್ ಪಠಿಸುವುದಷ್ಟೆ ಮುಸಲ್ಮಾನ ಧರ್ಮದ ಪಾಲನೆಯ ಲಕ್ಷಣವಾಗಿದ್ದರೆ ಮೇಲ್ಜಾತಿಯವರು ಕೇವಲ ದೇವಸ್ಥಾನದ ದೇವರ ದರ್ಶನವಷ್ಟೆ ಹಿಂದೂ ಧರ್ಮದ ಪಾಲನೆಯ ಲಕ್ಷಣವೆನ್ನದೆ ಸಾಕಾರ ಮೂರ್ತಿಯ ಪೂಜೆ, ನಿರಾಕಾರನ ಧ್ಯಾನ ಹಾಗೂ ಪರಮೇಶ್ವರನ ನಾಮೋಚ್ಚಾರಣೆ ಹೀಗೆ ಉಪಾಸನೆಯ ವಿವಿಧ ಮಾರ್ಗಗಳನ್ನನುಸರಿಸುತ್ತಾರೆ.  ಈ ಉಪಾಸನೆಗಳಲ್ಲಿ ಯಾವುದೊಂದನ್ನೂ ದಲಿತರು ಮಾಡಬಾರದೆಂದು ನಾವು ಹೇಳುತ್ತಿಲ್ಲ ಅವುಗಳಲ್ಲಿ ಒಂದು ಸಾಧನೆಯನ್ನು ಮಾಡಿದರೂ ಹಿಂದುತ್ವಕ್ಕೆ ಸಾಕು. ಹಿಂದೂ ಸಮಾಜದಲ್ಲಿ ಉಪಾಸನೆಯ, ಉಪಾಸಕರ ವಿವಿಧ ಪ್ರಕಾರಗಳಿರುವವರೆಗೆ ಮೇಲ್ಜಾತಿಯವರ ದೇವಸ್ಥಾನಕ್ಕೆ ಹೋದರೆ ಮಾತ್ರ ಉಪಾಸನೆ ಸಾಧ್ಯ ಅನ್ನುವ ದಲಿತರ ಮಾತಿಗೆ ಯಾವುದೇ ಅರ್ಥವಿಲ್ಲ ಎಂದವರಿಗೆ ಅನಿಸುತ್ತದೆ. ಈ ಆಕ್ಷೇಪಕ್ಕೆ ನಾನು ಕೊಡುವ ಉತ್ತರವಿಷ್ಟೆ, ಹಿಂದೂ ಸಮಾಜದಲ್ಲಿ ಉಪಾಸನೆಯ ನಾನಾ ವಿಧಗಳಿವೆ ಹಾಗೂ ಅವುಗಳಲ್ಲಿ ಒಂದು ಉಪಾಸನೆ ಮಾಡಿದರೂ ಸಾಕು ಹಿಂದೂ ಧರ್ಮದ ಪಾಲನೆ ಮಾಡಿದಂತೆ ಅನ್ನುವುದನ್ನು ಒಪ್ಪಿಕೊಂಡರೂ ಸಾಕಾರ ಮೂರ್ತಿಯ ಪೂಜೆ ಮಾಡಬೇಕೆನಿಸುವವನಿಗೆ ಅಂತಹ ಸ್ವಾತಂತ್ರ್ಯವೇಕಿರಬಾರದು? ಈ ಉಪಾಸನೆಯ ಮಾರ್ಗ ಒಬ್ಬನಿಗೆ ತೆರೆದಿದ್ದರೆ ಮತ್ತೊಬ್ಬನಿಗಾಗಿ ಮುಚ್ಚಿರುವುದೇಕೆ? ದಲಿತರಿಗಾಗಿ ಮುಚ್ಚಿರುವ ಈ ಮಾರ್ಗವನ್ನವರು ತೆರವುಮಾಡಿಕೊಳ್ಳಲು ಹಟ ತೊಟ್ಟರೆ ತಪ್ಪೇನು? ಉಪಾಸನೆಯ ನಾನಾವಿಧ ಪ್ರಕಾರಗಳಿರುವಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತನಗ್ಯಾವ ಉಪಾಸನೆ ಯೋಗ್ಯ ಅನ್ನುವುದನ್ನು ನಿರ್ಧರಿಸುವ ಹಕ್ಕಿರಬೇಕು. ದಲಿತರು ಈ ಹಕ್ಕಿಗಾಗಿ ಹೋರಾಡುತ್ತಿದ್ದಾರೆ. ಅವರದ್ದು ಕುಂಟು ನೆಪ ಅನ್ನುವುದು ತಪ್ಪು.

ಈ ಮೇಲ್ಜಾತಿಯ ಜನ ದಲಿತರನ್ನು ತಮ್ಮ ದೇವಸ್ಥಾನದಲ್ಲಿ ದರ್ಶನಕ್ಕೆ ಅನುವು ಮಾಡಿಕೊಡದಿದ್ದರೂ 'ಯಾರಿಗೆ ಯಾವ ದೇವರು ಇಷ್ಟವೋ ಅವರು ಆ ದೇವರನ್ನು ಸ್ಥಾಪಿಸಿಕೊಳ್ಳಲಿ' ಅನ್ನುವ ದ್ವಂದ್ವಾರ್ಥದ ಮಾತುಗಳನ್ನು ಕೂಡ ಈ ವಿರೋಧಿ ಜನ ಮಾತಾಡುತ್ತಾರೆ.ದಲಿತರಿಗೆ ಪ್ರತ್ಯಕ್ಷ ಸಾಕಾರ ಮೂರ್ತಿಯ ಉಪಾಸನೆ ಮಾಡುವ ಆಸೆಯಿದ್ದರೆ ಅವರು ಬೇರೆ ದೇವರನ್ನು ಸ್ಥಾಪಿಸಲಿ ಅನ್ನುವಂತಹ ಸ್ವಾತಂತ್ರ್ಯವನ್ನು ಮೇಲ್ಜಾತಿ ಜನ ಕೊಟ್ಟಿದ್ದಾರೆ. ಕೇವಲ ಉಪಾಸನೆಗಾಗಿ ದಲಿತರು ಮೇಲ್ಜಾತಿ ದೇವರ ಮೇಲೆ ಹಕ್ಕು ಸಾಧಿಸುವ ಅಗತ್ಯವಿಲ್ಲ. ಹೀಗೆಲ್ಲ ದ್ವಂದ್ವಾರ್ಥದಲ್ಲಿ ಮಾತಾಡುವ ವಿದ್ಯಾವಂತ ಮೂರ್ಖರಿಗೆ ನಾನೊಂದೇ ಪ್ರಶ್ನೆ ಕೇಳುತ್ತೇನೆ, ರೇಲ್ವೆ ಅಧಿಕಾರಿಗಳು ಬಿಳಿಯರಿಗೆ ಬೇರೆ ಬೋಗಿ ಹಾಗೂ ಕರಿಯರಿಗೆ ಬೇರೆ ಬೋಗಿ ಎಂದು ಮಾಡಿರುವ ವ್ಯವಸ್ಥೆಯನ್ನು ನೀವೇಕೆ ಒಪ್ಪುವುದಿಲ್ಲ? ಯಾಕೆ ಅದರ ವಿರುದ್ಧ ಹೋರಾಡುತ್ತೀರಿ? ಬಿಳಿ ಜನರಿಗೆ ಬೇರೆ ಬೋಗಿಗಳಿದ್ದರೂ ನೀವು ಉಳಿದ ಯಾವುದೇ ಬೋಗಿಗಳಲ್ಲಿ ಪ್ರವಾಸ ಮಾಡುವ ಅನುಮತಿ ನಿಮಗಿದೆ. ಬೇರೆ ಬೋಗಿಯಲ್ಲಿ ಪ್ರವಾಸ ಮಾಡುವ ಸ್ವಾತಂತ್ರ್ಯ ನಿಮಗೆ ಕೊಟ್ಟಿರುವಾಗ

ನೀವೇಕೆ ಬಿಳಿಯರ ಬೋಗಿಗಳ ಮೇಲೆ ಹಕ್ಕು ಸಾಧಿಸುತ್ತೀರಿ? ಇದಕ್ಕಿರುವ ಉತ್ತರ ಒಂದೆ, ಇದು ಕೇವಲ ಪ್ರವಾಸದ ಪ್ರಶ್ನೆಯಲ್ಲ, ಸಮಾನತೆಯ ಪ್ರಶ್ನೆ, ಮೇಲಿನ ದ್ವಂದ್ವಾರ್ಥಕ್ಕೆ ದಲಿತರ ಉತ್ತರವೂ ಅದೇ ಅರ್ಥದ್ದಾಗಿದೆ. ದಲಿತರು ದೇವಸ್ಥಾನದಲ್ಲಿ ಪ್ರವೇಶಿಸುವುದಕ್ಕೆ ಹಿಡಿದಿರುವ ಹಟವೂ ಸಾಕಾರ ಮೂರ್ತಿಯ ಪ್ರತ್ಯಕ್ಷ ಪೂಜೆ ಮಾಡುವುದಕ್ಕಲ್ಲ, ಅವರು ದೇವಸ್ಥಾನದಲ್ಲಿ ಕಾಲಿಡುವುದರಿಂದ ದೇವಸ್ಥಾನ ಮೈಲಿಗೆಯಾಗುವುದಿಲ್ಲ. ದೇವರ ಮೂರ್ತಿಯನ್ನು ಮುಟ್ಟುವುದರಿಂದ ಅದರ ಪವಿತ್ರತೆ ನಷ್ಟವಾಗುವುದಿಲ್ಲ ಅನ್ನುವುದನ್ನವರು ಸಾಬೀತು ಪಡಿಸಬೇಕಿದೆ. ಬೇರೆ ದೇವರನ್ನು ಸ್ಥಾಪಿಸಿ ಇದನ್ನು ಸಾಬೀತು ಪಡಿಸಲಾಗುವುದಿಲ್ಲ. ಹಾಗಾಗಿ ನಮ್ಮ ದೇವರು ಪವಿತ್ರನಾಗಿದ್ದಾನೆ ಎಂದು ಕಲ್ಪಿಸಿಕೊಂಡು ಮೇಲ್ಜಾತಿಯವರು ಪೂಜಿಸುವ ದೇವರನ್ನೇ ನಾವೂ ಪೂಜಿಸುತ್ತೇವೆ ಅನ್ನುವ ದಲಿತರ ಹಟ ಸರಿಯಾದ್ದೆ. ಕೇವಲ ಪಾಪಿ ಜನಗಳ ಸ್ಪರ್ಶದಿಂದ ದೇವರ ಪವಿತ್ರತೆ ಕಡಿಮೆಯಾಗುತ್ತದೆಯೆ ಹೊರತು ನಮ್ಮ ಸ್ಪರ್ಶದಿಂದಲ್ಲ. ನಾವು ಪಾಪಿಗಳಲ್ಲ. ಹಾಗಾಗಿ ದೇವರ ಉಪಾಸಕರಲ್ಲಿ ಪವಿತ್ರ ಅಪವಿತ್ರರೆಂಬ ಭೇದವಿಲ್ಲವೆನ್ನುವುದೇ ದಲಿತರ ಚಳುವಳಿಯ ತತ್ವ ಅನ್ನುವುದು ಸ್ಪಷ್ಟವಾಗಿದೆ. ಹಾಗೆಂದೇ ದಲಿತರು ಮೇಲ್ಜಾತಿಯವರು ಸ್ಥಾಪಿಸಿರುವ ಮೂರ್ತಿಯ ಪೂಜೆ ಮಾಡುವ ಹಟ ಹಿಡಿದಿದ್ದಾರೆ. ಅವರ ಈ ಹಟ ಸತ್ಯಾಗ್ರಹವಲ್ಲ ಎಂದು ಸಾಬೀತುಪಡಿಸುತ್ತೀರಾ?

ದಲಿತರ ಸತ್ಯಾಗ್ರಹದ ವಿರುದ್ಧ ಮೇಲೆ ಹೇಳಿದ ಆಕ್ಷೇಪಗಳಲ್ಲದೆ ಮೇಲ್ಜಾತಿಯವರು ಕೆಲವು ವ್ಯಾವಹಾರಿಕ ಆಕ್ಷೇಪಗಳನ್ನೆತ್ತಿದ್ದರೆ. ಅವರ ಪ್ರಕಾರ ಮೇಲ್ಜಾತಿಯವರು ದಲಿತರಿಗೆ ದೇವಸ್ಥಾನಗಳನ್ನು ತೆರವು ಮಾಡಿ ಕೊಡಲಿ ಎಂದು ಸಂಘಟನೆಯವರು ಹೇಳುವುದು ಬೇರೆ ಮಾತು ಹಾಗೂ ದಲಿತರು, 'ನೀವು ನಮಗಾಗಿ ದೇವಸ್ಥಾನ ತೆರೆಯದಿದ್ದರೆ ನಾವು ಸತ್ಯಾಗ್ರಹ ಮಾಡುತ್ತೇವೆ' ಎಂದು ಮೇಲ್ಜಾತಿಯವರ ಮೇಲೆ ಹಕ್ಕು ಸಾಧಿಸುವುದು ಬೇರೆ ಮಾತು. ಏಕೆಂದರೆ ಈ ಸ್ಪೃಶ್ಯ–ಅಸ್ಪೃಶ್ಯದ ಭೇದಭಾವ ಅನಂತಕಾಲದಿಂದ ನಡೆದುಕೊಂಡು ಬಂದಿದೆ, ಅದು ಸರಿಯೋ ತಪ್ಪೋ ಅಂತೂ ಆ ಭೇದಭಾವವಿದೆ. ಆದರೆ ಈ ಭೇದಭಾವ ಆರಂಭವಾದ ಮೇಲೆಯೇ ನಾವು ದೇವಸ್ಥಾನಗಳನ್ನು ಕಟ್ಟಿ ನಡೆಸುತ್ತಿರುವುದರಿಂದ ದಲಿತರು ಅವುಗಳ ಮೇಲೆ ಹಕ್ಕು ಸಾಧಿಸುವುದು ಅನ್ಯಾಯ ಅನ್ನುವುದು ಮೇಲ್ಜಾತಿಯವರ ಅನಿಸಿಕೆ. ದಲಿತರ ಸತ್ಯಾಗ್ರಹಬಗ್ಗೆ ಮೇಲ್ಜಾತಿಯವರಿಗೆ ಎಷ್ಟು ನಂಬಿಕೆಯಿದೆಯೆಂದರೆ ಅವರ ಹೇಳಿಕೆಯ ಪ್ರಕಾರ ಅಮರಾವತಿಯ ಅಂಬಾದೇವಿಯ ದೇವಸ್ಥಾನದ ಅಧಿಕಾರಿಗಳು ದಲಿತರ ಅರ್ಜಿಯನ್ನು ಕಸದಬುಟ್ಟಿಗೆ ಹಾಕಿದ್ದರೂ ರೂಢಿ–ಪರಂಪರೆಗಳು ಹಾಗೂ ಕಾನೂನು ಅವರ ಕಡೇಗೇ ಇದೆ ಏಕೆಂದರೆ ಸಮಾಜದಲ್ಲಿ ಎಲ್ಲ ರೀತಿಯಿಂದ ಅಸ್ಪೃಶ್ಯತೆ ತೊಲಗಿದರೂ ದೇವಸ್ಥಾನದ ಒಬ್ಬ ಅಧಿಕಾರಿ ಇದು ನಮ್ಮ ಆಚರಣೆಯ ವಿರುದ್ಧ ಅಂದು ಬಿಟ್ಟರೂ ಕಾಯಿದೆ ಹಾಗೂ ನ್ಯಾಯದ ಆಧಾರದ ಮೇಲೆ ಆತ ಅಸ್ಪೃಶ್ಯನನ್ನು ದೇವಸ್ಥಾನದೊಳಗೆ ಬರಲು ಅನುಮತಿ ಕೊಡಲಾರ. ಇವೆಲ್ಲ ತಲೆಬುಡವಿಲ್ಲದ ಮಾತುಗಳು. ಮೇಲ್ಜಾತಿಯವರು ದೇವಸ್ಥಾನಗಳನ್ನು ಕಟ್ಟಿ ನಡೆಸುತ್ತಿದ್ದಾರೆ ಅನ್ನುವ ವಿಷಯ ದಲಿತರು ಒಪ್ಪುವುದು ಅನಿವಾರ್ಯ. ಆದರೆ ಅಷ್ಟಕ್ಕೆ ನೀವು ನಿಮ್ಮ ದೇವಸ್ಥಾನಗಳನ್ನು ನಮಗೆ ತೆರವು ಮಾಡಿ ಕೊಡಿ ಎಂದು ಹೇಳುವ ಹಕ್ಕು ದಲಿತರಿಗಿಲ್ಲ ಅನ್ನುವುದನ್ನು ಯಾರೂ ಒಪ್ಪುವುದಿಲ್ಲ. ಮೇಲ್ಜಾತಿಯವರು ಈ ದೇವಸ್ಥಾನಗಳನ್ನು ಕಟ್ಟಿರುವುದು ನಿಜವಾದರೂ ಅವು ಹಿಂದೂ ಧರ್ಮದ ದೇವಸ್ಥಾನಗಳಾಗಿದ್ದು ಅವುಗಳನ್ನು ಹಿಂದೂಧರ್ಮೀಯರಿಗಾಗಿ ಕಟ್ಟಲಾಗಿದೆ. ಒಬ್ಬನಿಂದಲೇ ಕಟ್ಟಲಾಗಿದ್ದರೂ ಹಿಂದೂಗಳು ಉಪಯೋಗಿಸಲೆಂದೇ ಕಟ್ಟಲಾಗಿದೆ.ಇದರರ್ಥ ಪ್ರತಿಯೊಬ್ಬ ಹಿಂದುವಿಗೂ ಈ ದೇವಸ್ಥಾನದೊಳಗೆ ಹೋಗಿ ಪೂಜೆ ಮಾಡುವ ಅಧಿಕಾರವಿದೆ. ಮೇಲ್ಜಾತಿಯವರ ಅಧಿಕಾರವಿರುವಷ್ಟೆ ಹಿಂದುತ್ವದ ಮೇಲೆ ದಲಿತರ ಅಧಿಕಾರವೂ ಇದೆ. ಈ ಹಿಂದುತ್ವದ ಪ್ರಾಣಪ್ರತಿಷ್ಠೆಯನ್ನು ವಶಿಷ್ಠರಂತಹ ಬ್ರಾಹ್ಮಣರು, ಕೃಷ್ಣರಂತಹ

ಕ್ಷತ್ರಿಯರು, ಹರ್ಷನಂತಹ ವೈಶ್ಯರು ಹಾಗೂ ತುಕಾರಾಮನಂತಹ ಶೂದ್ರರು ಮಾಡಿದಷ್ಟೆ ವಾಲ್ಮೀಕಿ, ಚೋಖಾ ಮೇಳಾ, ಹಾಗೂ ರೋಹಿದಾಸನಂತಹ ಅಸ್ಪೃಶ್ಯರೂ ಮಾಡಿದ್ದಾರೆ. ಈ ಹಿಂದುತ್ವವನ್ನು ರಕ್ಷಿಸಲು ಅನೇಕ ಅಸ್ಪೃಶ್ಯರು ತಮ್ಮ ಮನುಷ್ಯತ್ವವನ್ನು ಬಲಿಕೊಟ್ಟಿದ್ದಾರೆ. ಪುರಾಣಕಾಲದ ಬೇಡ ಜಾತಿಯ ಅಸ್ಪೃಶ್ಯರಿಂದ ಹಿಡಿದು ಈಗಿನ ಖರ್ಡಿಯ ಯುದ್ಧದಲ್ಲಿ ತನ್ನ ಪ್ರಾಣ ತೆತ್ತ ಸಿಧನಾಕ್ ಮಾಂಗ್‌ನವರೆಗೆ ಹಿಂದುತ್ವದ ರಕ್ಷಣೆಗಾಗಿ ತಮ್ಮ ಪ್ರಾಣದ ಬಲಿದಾನ ಕೊಟ್ಟ ದಲಿತರ ಸಂಖ್ಯೆ ಕಡಿಮೆಯೇನಲ್ಲ. ಹಿಂದುತ್ವವನ್ನು ಬೆಳೆಸಲು ದಲಿತರು ಹಾಗೂ ಮೇಲ್ಜಾತಿಯವರಿಬ್ಬರೂ ಕಷ್ಟಪಟ್ಟಿದ್ದಲ್ಲದೆ ಅದೇ ಹಿಂದುತ್ವಕ್ಕೆ ಧಕ್ಕೆ ಬಂದಾಗ ಬದುಕಿನ ಹಂಗಿಲ್ಲದೆ ಅದನ್ನು ರಕ್ಷಿಸಿದ್ದಾರೆ ಕೂಡ. ಅಂತಹ ಹಿಂದುತ್ವದ ಹೆಸರಿನಲ್ಲಿ ಕಟ್ಟಿರುವ ದೇವಸ್ಥಾನಗಳು ಮೇಲ್ಜಾತಿಯವರಂತೆ ದಲಿತರ ದೇವಸ್ಥಾನಗಳು ಹೌದು. ದಲಿತರಿಗೂ ಆ ದೇವಸ್ಥಾನಗಳ ಮೇಲೆ ಅಷ್ಟೇ ಹಕ್ಕಿದೆ. ಒಬ್ಬ ಅಧಿಕಾರಿ ಮತ್ತೊಬ್ಬ ದಾಸ ಎಂದು ಯಾರೂ ಹೇಳುವಂತಿಲ್ಲ. ಅಸ್ಪೃಶ್ಯರು ದಾಸರಲ್ಲ ಅವರು ಹಿಂದೂಗಳು, ಅವರು ಹಿಂದೂ ಧರ್ಮದವರು ಹಾಗೂ ಹಿಂದೂ ಧರ್ಮ ಅವರದ್ದಾಗಿದೆ. ಇವೆಲ್ಲದರಿಂದಲೇ ಹಿಂದೂ ದೇವಸ್ಥಾನಗಳ ಮೇಲೆ ದಲಿತರ ಹಕ್ಕಿದೆ ಅನ್ನುವುದನ್ನು ಎಲ್ಲರೂ ನಂಬಲೇ ಬೇಕು. ಅವರ ಹಕ್ಕುಗಳನ್ನು ಒಪ್ಪಿಕೊಂಡಮೇಲೆ ಹಳೆಯ ಪರಂಪರೆಗಳ ಪ್ರಶ್ನೆಯೇ ಉಳಿಯುವುದಿಲ್ಲ. ಕಾಯಿದೆಯ ದೃಷ್ಟಿಯಿಂದ ನೋಡಿದರೆ ಸಾರ್ವಜನಿಕ ವಿಷಯಗಳಲ್ಲಿ ವ್ಯಕ್ತಿಯೊಬ್ಬನ ಹಕ್ಕುಗಳನ್ನು ಯಾರಿಗೂ ಯಾವುದೇ ಸನದು ಕೊಟ್ಟು ನಿರ್ಮಿಸಲಾಗದಂತಹದ್ದು ಅದು ಪ್ರತಿಯೊಬ್ಬನಲ್ಲಿ ಚಿರಸ್ಥಾಯಿಯಾಗಿ ಇರುವಂತಹದ್ದು. ಹಕ್ಕುಗಳಿಗೂ ರೂಢಿ ಪರಂಪರೆಗಳಿಗೂ ಯಾವುದೇ ಸಂಬಂಧವಿಲ್ಲ. ಹಕ್ಕುಗಳ ಪರಂಪರೆ ಇದ್ದರೂ ಇಲ್ಲದಿದ್ದರೂ ಅಥವಾ ಅವುಗಳನ್ನು ಪಡೆಯುವುದರಲ್ಲಿ ತಡವಾಗಿದ್ದರೂ ಅವುಗಳನ್ನು ಯಾರಿಂದಲೂ ಕಸಿಯಲಾಗುವುದಿಲ್ಲ. ಒಬ್ಬ ಮನುಷ್ಯ ಒಂದು ರಸ್ತೆಯ ಮೇಲೆ ಒಮ್ಮೆಯೂ ಹೋಗಿಲ್ಲ ಅಂದ ಮಾತ್ರಕ್ಕೆ ಮುಂದೆಯೂ ಆತ ಆ ರಸ್ತೆಯನ್ನು ಬಳಸುವಂತಿಲ್ಲ ಅನ್ನುವುದು ಎಷ್ಟು ಮೂರ್ಖತನದ್ದೋ ಆತ ಯಾವತ್ತೂ ಕೆರೆಗೆ ಇಲ್ಲವೇ ದೇವಸ್ಥಾನಕ್ಕೆ ಹೋಗಿಲ್ಲ ಅಂದ ಮಾತ್ರಕ್ಕೆ ಈಗಲೂ ಆತ ಹೋಗುವಂತಿಲ್ಲ ಅನ್ನುವುದೂ ಅಷ್ಟೇ ಮೂರ್ಖತನದ್ದು. ಹಾಗಾಗಿ ನಮ್ಮ ಆಗ್ರಹ ಸತ್ಯಾಗ್ರಹವೆ ಅನ್ನುವುದನ್ನು ಪ್ರತಿಯೊಬ್ಬ ದಲಿತನೂ ನೆನಪಿಡಲಿ. ಅಷ್ಟೇಯಲ್ಲದೆ ಹಿಂದೂ ಧರ್ಮವನ್ನು ಊರ್ಜಿತಾವಸ್ಥೆಗೆ ತಂದು ಅದಕ್ಕೆ ಮಾನವ ಧರ್ಮದ ಸ್ವರೂಪ ಕೊಡಲು ಅವತರಿಸಿರುವ ದೇವದೂತರು ನಾವು ಅಂದುಕೊಳ್ಳಲೂ ಅಡ್ಡಿಯಿಲ್ಲ.

ಇಲ್ಲಿಯವರೆಗೆ ದಲಿತರ ಸಮಾನ ಹಕ್ಕು ಪಡೆಯುವ ಆಗ್ರಹ ಸತ್ಯಾಗ್ರಹ ಹೌದೋ ಅಲ್ಲವೋ ಅನುವುದರ ಬಗ್ಗೆ ಚರ್ಚೆಯಾಯಿತು. ಈಗ ದಲಿತರು ಈ ಸತ್ಯಾಗ್ರಹವನ್ನು ಹೇಗೆ ದಡ ಸೇರಿಸಬಹುದು ಅನ್ನುವುದರ ಬಗ್ಗೆ ಯೋಚಿಸೋಣ. ಮೊದಲಿಗೆ ಸತ್ಯಾಗ್ರಹದ ರೀತಿ ಹೇಗಿರಬೇಕು ಅನ್ನುವುದು ನಿರ್ಧಾರವಾಗಬೇಕು. ಮಹಾತ್ಮ ಗಾಂಧೀಜಿಯವರು ಆಧುನಿಕ ಕಾಲದ ಸತ್ಯಾಗ್ರಹದ ಜನಕರು. ಗಾಂಧೀಜಿಯವರು ಹಾಕಿಕೊಟ್ಟ ರೀತಿಯಲ್ಲೇ ಸತ್ಯಾಗ್ರಹವಾಗಬೇಕು ಅನ್ನುವುದು ಎಲ್ಲರಲ್ಲಿರುವ ಅನಿಸಿಕೆ. ಮಹಾತ್ಮ ಗಾಂಧಿಯವರು ತಮ್ಮ ಸತ್ಯಾಗ್ರಹದಲ್ಲಿ ಹಿಂಸೆಗೆ ಮಾನ್ಯತೆ ಕೊಟ್ಟಿಲ್ಲ. ಅಷ್ಟೇಯಲ್ಲ ಹಿಂಸೆಯಿದ್ದಲ್ಲಿ ಸತ್ಯಾಗ್ರಹವಿಲ್ಲ ಅನ್ನುವುದು ಅವರ ಅನಿಸಿಕೆಯಾಗಿದೆ. ಅವರ ಈ ಅನಿಸಿಕೆ ತರ್ಕಶುದ್ಧವಾಗಿದೆಯೆಂದು ಯಾರೂ ಒಪ್ಪಲಾರರು ಎಂದು ನನಗನಿಸುತ್ತದೆ. ಒಬ್ಬ ಮನುಷ್ಯನ ಹಟ ಸತ್ಯಾಗ್ರಹವೋ ಇಲ್ಲ ದುರಾಗ್ರಹವೋ ಅನ್ನುವುದು ಆತ ತನ್ನ ಹಟ ಪೂರೈಸಲು ಉಪಯೋಗಿಸಿರುವಂತಹ ಸಂಪನ್ಮೂಲಗಳನ್ನವಲಂಬಿಸುವುದಿಲ್ಲ, ಅದು ಆಯಾ ಕಾರ್ಯದ ನೈತಿಕ ಸ್ವರೂಪವನ್ನವಲಂಬಿಸಿರುತ್ತದೆ. ಆತ ಕೈಗೊಂಡಿರುವುದು ಸತ್ಕಾರ್ಯವಾಗಿದ್ದರೆ ಅದಕ್ಕಾಗಿ ತೊಟ್ಟಿರುವ ಹಟ ಸತ್ಯಾಗ್ರಹ ಅನ್ನಲೇ ಬೇಕಾಗುತ್ತದೆ, ಹಾಗೂ ಅದೇ ಕಾರ್ಯ ದುಷ್ಕೃತ್ಯವಾಗಿದ್ದರೆ

ಆ ಕಾರ್ಯದ ಹಟ ದುರಾಗ್ರಹ ಅನಿಸಿಕೊಳ್ಳುತ್ತದೆ. ಹಿಂಸೆ ಹಾಗೂ ಅಹಿಂಸೆ ಇವುಗಳು ಕೇವಲ ತಮ್ಮ ಗುರಿ ಮುಟ್ಟುವ ಸಾಧನಗಳಾಗಿವೆ. ಕರ್ತೃ ಹಾಗೂ ಕರ್ಮದ ಅನುಸಾರವಾಗಿ ಕ್ರಿಯಾಪದ ಬದಲಾಗುವಂತೆ ಕೆಲವು ಸಾಧನಗಳನುಸಾರವಾಗಿ ಹಟದ ನೈತಿಕ ಸ್ವರೂಪ ಬದಲಾಗುವುದಿಲ್ಲ. ದುರಾಗ್ರಹಿಯೊಬ್ಬನು ತನ್ನ ಕಾರ್ಯ ಸಿದ್ಧಿಯಾಗಲು ಅಹಿಂಸೆಯ ದಾರಿ ಹಿಡಿದರೆ ಅವನ ದುರಾಗ್ರಹಕ್ಕೆ ಸತ್ಯಾಗ್ರಹ ಅನ್ನಲಾಗುವುದಿಲ್ಲ ಅಥವಾ ಒಬ್ಬ ಸತ್ಯಾಗ್ರಹಿಯು ತನ್ನ ಸತ್ಯಾಗ್ರಹವನ್ನು ದಡ ಮುಟ್ಟಿಸಲು ಅಹಿಂಸೆಯ ದಾರಿ ಹಿಡಿದ ಅಂದ ಮಾತ್ರಕ್ಕೆ ಆತನ ಸತ್ಯಾಗ್ರಹವನ್ನು ದುರಾಗ್ರಹ ಅನ್ನಲಾಗುವುದಿಲ್ಲ. ಹಾಗೇನಾದರೂ ಆದರೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಆತನ ಕಾರ್ಯಸಿದ್ಧಿಗಾಗಿ ಹಿಂಸೆಯ ದಾರಿ ತೋರಿಸಿದ್ದಕ್ಕೆ ಏನನ್ನುವುದು? ಹಾಗಿದ್ದರೆ ಆತ ಪಾಪಾತ್ಮನೆ? ಹಾಗನ್ನಲು ಯಾವ ಹಿಂದುವೂ ಒಪ್ಪಲಾರ. ಹಾಗನ್ನಲು ಅಪ್ಪಿತಪ್ಪಿ ಯಾರಾದರೂ ಒಪ್ಪಲು ಸಿದ್ಧರಿದ್ದರೂ ಆತನ ಮಾತನ್ನು ಎಲ್ಲರೂ ಒಪ್ಪುವುದು ಅಸಾಧ್ಯ. ಅಹಿಂಸಾ ಪರಮೋ ಧರ್ಮಃ ಎಂದು ಎಲ್ಲೆಡೆ ಹೇಳಲಾಗುತ್ತಿದ್ದರೂ ಪಾಲಿಸುವುದು ಬಲು ಕಷ್ಟ. ಕಣ್ಣಿಗೆ ಕಾಣದಿದ್ದರೂ ಅಸ್ತಿತ್ವದಲ್ಲಿರುವಂತಹ ಅನೇಕ ಸೂಕ್ಷ್ಮ ಜಂತುಗಳು ಈ ಜಗತ್ತಿನಲ್ಲಿ ಎಷ್ಟು ತುಂಬಿವೆಯೆಂದರೆ ನಾನು ಕಣ್ರೆಪ್ಪೆ ಮಿಟುಕಿಸಿದರೂ ಅವುಗಳ ಕೈ ಕಾಲು ಮುರಿದಾವು. ಗಾಳಿ, ನೀರು, ಹಣ್ಣುಗಳಲ್ಲಿ ನೂರಾರು ಸೂಕ್ಷ್ಮ ಜಂತುಗಳು ಸೇರಿಕೊಂಡಿವೆ ಅವುಗಳ ಹತ್ಯೆಯನ್ನು ಹೇಗೆ ನಿಲ್ಲಿಸುವಿರಿ? ಡಾ. ಜಗದೀಶಚಂದ್ರ ಬೋಸ್ ಅವರ ಶಾಸ್ತ್ರೀಯ ಸಂಶೋಧನೆಯ ಪ್ರಕಾರ ವನಸ್ಪತಿಯಲ್ಲಿ ಕೂಡ ಜೀವವಿದೆ. ಹಾಗಿದ್ದರೆ ವನಸ್ಪತಿಯನ್ನು ಕೊಲ್ಲುವ ಬ್ರಾಹ್ಮಣರು ಹಾಗೂ ಮೂಗಿಗೆ ಬಟ್ಟೆ ಕಟ್ಟಿ ಓಡಾಡುವ ಜೈನ ತೀರ್ಥಂಕರರು ಮಾಡುವ ಅಹಿಂಸೆಯ ಆಡಂಬರದಲ್ಲೇನರ್ಥವಿದೆ? ಅಹಿಂಸೆಯಿಂದಲೇ ಎಲ್ಲ ಕೆಲಸಗಳಾಗುತ್ತವೆ ಅಂದರೂ ತಪ್ಪಾದೀತು. ಯಾವನೋ ಒಬ್ಬ ನಿಮ್ಮನ್ನು ಕೊಲ್ಲಲೋ, ನಿಮ್ಮ ಹೆಂಡತಿ ಇಲ್ಲವೆ ಮಗಳ ಮೇಲೆ ಬಲಾತ್ಕಾರ ಮಾಡಲೋ, ನಿಮ್ಮ ಮನೆಗೆ ಬೆಂಕಿ ಇಡಲೋ ಇಲ್ಲವೆ ನಿಮ್ಮ ಆಸ್ತಿ ಲಪಟಾಯಿಸಲೋ ಕೈಯಲ್ಲಿ ಶಸ್ತ್ರ ಹಿಡಿದು ಬಂದರೆ ನೀವೇನು ಮಾಡುತ್ತೀರಿ? ಕಣ್ಣು ಮುಚ್ಚಿ ಅಹಿಂಸೋ ಪರಮೋ ಧರ್ಮಃ ಎಂದು ಆತನನ್ನು ಕಂಡೂ ಕಾಣದಂತೆ ಸುಮ್ಮನಿದ್ದುಬಿಡುತ್ತೀರೋ ಇಲ್ಲ ನೀವು ಪ್ರೀತಿಯಿಂದ ಹೇಳುವ ಮಾತನ್ನು ಆತ ಕೇಳದಿದ್ದರೆ ಆತನನ್ನು ದಂಡಿಸುತ್ತೀರೋ? ಯಾರೇ ಆದರೂ ದಂಡಿಸುವ ದಾರಿಯನ್ನೇ ಆರಿಸುತ್ತಾರೆ, ಹಾಗೆ ಮಾಡುವುದು ಶಾಸ್ತ್ರ ಸಮ್ಮತವಲ್ಲ ಎಂದು ಯಾರೂ ಹೇಳುವುದಿಲ್ಲ ಏಕೆಂದರೆ ಇಂತಹ ಸಮಯದಲ್ಲಿ ಹತ್ಯೆಯ ಪಾಪ ಹತ್ಯೆ ಮಾಡುವವನಿಗಂಟುವುದಿಲ್ಲ ಸಾಯುವವನು ತನ್ನ ದುಷ್ಕರ್ಮಗಳಿಂದ ಸತ್ತ ಎಂದೇ ಶಾಸ್ತ್ರಕಾರರು ಹೇಳುತ್ತಾರೆ. ಪ್ರಾಚೀನ ಶಾಸನಕರ್ತರಷ್ಟೇಯಲ್ಲ ಆಧುನಿಕ ಫೌಜದಾರಿ ಕಾಯಿದೆ ಕೂಡ ಆತ್ಮಸಂರಕ್ಷಣೆಗಾಗಿ ಹಿಂಸೆ ಮಾಡುವ ಹಕ್ಕು ಸ್ವಲ್ಪಮಟ್ಟಿಗೆ ಮಂಜೂರು ಮಾಡಿದೆ.ಹಿಂಸೆ ಮಾಡುವುದು ಯೋಗ್ಯವಲ್ಲದಿದ್ದರೂ ಆತ್ಮಸಂರಕ್ಷಣೆಗಾಗಿ ಬೇರೆ ದಾರಿಯಿಲ್ಲದಿದ್ದರೆ ಹಿಂಸೆಯ ದಾರಿ ಆಯ್ದುಕೊಳ್ಳುವುದು ತಪ್ಪಲ್ಲ ಎಂದು ತಿಳಿಯುತ್ತಾರೆ. ಭ್ರೂಣ ಹತ್ಯೆ ಅಂದರೆ ಆಗಷ್ಟೇ ಮೊಳಕೆಯೊಡೆದ ಜೀವವನ್ನು ಕೊಲ್ಲುವುದು ಮಹಾಪಾಪ ಅನ್ನುತ್ತಾರೆ. ಆದರೆ ಅದೇ ಮಗು ತಾಯಿಯ ಹೊಟ್ಟೆಯಲ್ಲಿ ಅಡ್ಡಡ್ಡ ಬೆಳೆದರೆ ಅದನ್ನು ಕತ್ತರಿಸಿ ತೆಗೆಯುವುದರಲ್ಲಿ ಯಾವುದೇ ಪಾಪವಿಲ್ಲ.ಇದೇ ತರ್ಕ ಸತ್ಯಾಗ್ರಹಕ್ಕೆ ಅನ್ವಯಿಸುತ್ತದೆ. ಸತ್ಯಾಗ್ರಹ ಮಾಡುವವನಿಗೆ ಹಿಂಸೆಯ ದಾರಿ ಹಿಡಿಯಬೇಕಾದ ಪ್ರಮೇಯ ಬಂದರೆ ಅವನನ್ನು ಕ್ಷಮಿಸಬಹುದು. ಗಾಂಧೀಜಿಯವರ ಅಹಿಂಸಾ ಸತ್ಯಾಗ್ರಹವನ್ನು ಈ ದೃಷ್ಟಿಯಂದ ನೋಡಿದಾಗ ತೀರಾ ಅವ್ಯವಹಾರಿಕ ಅನಿಸಿಬಿಡುತ್ತದೆ. ಹಾಗೂ ಅವರ ಸತ್ಯಾಗ್ರಹ ಅಹಿಂಸಾತ್ಮಕವಾಗಿರುತ್ತದೆ ಅನ್ನುವುದು ಕೂಡ ಭ್ರಮೆಯೆ. ಹಿಂಸೆಯೆಂದರೆ ಹತ್ಯೆ ಮಾಡುವುದು ಎಂದು ಹಿಂಸೆಯ ಅರ್ಥವನ್ನು ಸಂಕುಚಿತವಾಗಿಸಿದರೆ ಮಾತ್ರ ಹಿಂಸೆ ಹಾಗೂ ಅಹಿಂಸೆ ಇವುಗಳ ನಡುವೆ ಭೇದ

ಮಾಡಬಹುದು. ಆದರೆ ಹಿಂಸೆಯೆಂದರೆ ಕೇವಲ ಜೀವ ತೆಗೆದುಕೊಳ್ಳುವುದಲ್ಲ ಮತ್ತೊಬ್ಬ ಮನುಷ್ಯನ ಮನಸ್ಸು ಇಲ್ಲವೆ ಶರೀರವನ್ನು ನೋಯಿಸುವುದು ಕೂಡ ಹಿಂಸೆಯೆ. ಇದರರ್ಥ ಅಹಿಂಸೆಯೆಂದರೆ ಯಾವುದೇ ಜೀವಂತ ಪ್ರಾಣಿಯನ್ನು ನೋಯಿಸದಿರುವುದು ಅನ್ನುವ ವ್ಯಾಪಕ ಅರ್ಥ ತೆಗೆದುಕೊಂಡರೆ ಮ. ಗಾಂಧೀಜಿಯವರ ಅಹಿಂಸೆ ಕೂಡ ಒಂದು ರೀತಿಯ ಹಿಂಸೆಯೆ ಅನ್ನಬಹುದು. ಅವರ ಸತ್ಯಾಗ್ರಹದಿಂದ ಯಾವುದೇ ಪ್ರಾಣಿಗಳ ಶರೀರದ ಮೇಲೆ ಆಘಾತವಾಗದಿದ್ದರೂ ಮನಸ್ಸು ಮಾತ್ರ ನೋಯುತ್ತದೆ ಅನ್ನುವುದರಲ್ಲಿ ಅನುಮಾನವಿಲ್ಲ. ಗಾಂಧೀಜಿಯವರ ಸತ್ಯಾಗ್ರಹಿಗಳು ಯಾರನ್ನೂ ಕೊಲೆ ಮಾಡದಿದ್ದರೂ ತಮ್ಮ ಹಟದಿಂದ ಪ್ರತಿಪಕ್ಷದವನ ಮನಸ್ಸಿನ ಶಾಂತಿಯನ್ನು ಕದಡುತ್ತಾರೆ. ಹಾಗಾಗಿ ನಮ್ಮ ಸತ್ಯಾಗ್ರಹದಲ್ಲಿ ಅಹಿಂಸೆಯಿಲ್ಲ ಎಂದು ಹೇಳುವ ಮ. ಗಾಂಧೀಜಿಯವರ ಮಾತು ನಿಜವಲ್ಲ ಎಂದು ಹೇಳಬೇಕಾಗುತ್ತದೆ. ನಿಜ ಹೇಳಬೇಕೆಂದರೆ ಅಹಿಂಸೆಯನ್ನು ಗುರಿಯಾಗಿಟ್ಟುಕೊಂಡು ಅಗತ್ಯವಿದ್ದರೆ ಮಾತ್ರ ಹಿಂಸೆಯನ್ನವಲಂಬಿಸುವುದು ಯಶಸ್ಸಿನ ದೃಷ್ಟಿಯಿಂದಷ್ಟೇಯಲ್ಲ ನೀತಿಯ ದೃಷ್ಟಿಯಿಂದಲೂ ಯೋಗ್ಯವಾಗಿದೆ. ಗಾಂಧೀಜಿಯುವರು ಅಹಿಂಸಾವಾದಿಗಳಾಗಿದ್ದಾರೆ ಅನ್ನುವ ಕಾರಣಕ್ಕೆ ಮಾತ್ರ ಅವರು ಅಹಿಂಸೆಗೆ ಒತ್ತುಕೊಟ್ಟಿದ್ದಾರೆಂದೇನಲ್ಲ, ಅದಕ್ಕೆ ಬೇರೆಯೇ ಕಾರಣವಿದೆ. ಮ. ಗಾಂಧೀಜಿಯವರು ಸತ್ಯಾಗ್ರಹದ ಮೀಮಾಂಸೆಯಲ್ಲಿ ಸತ್ಯ ಅಂದರೇನು? ಹಾಗೂ ಅದನ್ನು ನಿರ್ಧರಿಸುವುದು ಹೇಗೆ? ಅನ್ನುವುದನ್ನು ನಿರ್ಧಾರಾತ್ಮಕವಾದ ಪರೀಕ್ಷೆಗೆ ಒಡ್ಡಲು ತನ್ನಿಂದ ಸಾಧ್ಯವಾಗುತ್ತಿಲ್ಲ ಎಂದು ಹೇಳುತ್ತಾರೆ. ತಾನು ಸತ್ಯಾಗ್ರಹ ಅನ್ನುವುದನ್ನು ಜನ ದುರಾಗ್ರಹ ಅಂದಾರು ಎಂದವರಿಗನಿಸುತ್ತದೆ. ಈ ಅವರ ಅನಿಸಿಕೆಯನ್ನವರು ಹಂಟರ್ ಕಮಿಶನ್ನಿನೆದುರು ಬರೆದುಕೊಟ್ಟಿರುವ ದೂರಿನಲ್ಲಿ ನಮೂದಿಸಿದ್ದಾರೆ. ಸತ್ಯದ ಬಗ್ಗೆ ಪ್ರಾಮಾಣಿಕವಾಗಿ ಮತಭೇದಗಳಿರುವಲ್ಲಿ ಹಿಂಸೆ ಮಾಡುವುದು ಸರಿಯಲ್ಲ ಅನ್ನುವುದು ಅವರ ಅನಿಸಿಕೆಯಾಗಿದೆ. ಹಾಗೂ ಇದೇ ಕಾರಣಗಳಿಂದವರು ತಮ್ಮ ಸತ್ಯಾಗ್ರಹದಿಂದ ಹಿಂಸೆಯನ್ನು ತೆಗೆದುಹಾಕಿದ್ದಾರೆ. ನಾವು ಮಾಡುತ್ತಿರುವ ಕಾರ್ಯದ ಬಗ್ಗೆ ಯಾವುದೇ ಸಂದಿಗ್ಧತೆ, ಅನುಮಾನವಿಲ್ಲ ಎಂದು ಯಾರಾದರೂ ಅವರಿಗೆ ಭರವಸೆ ಕೊಟ್ಟರೆ ಅವರು ಆರಂಭಿಸಿರುವ ಸತ್ಯಾಗ್ರಹದ ಯಶಸ್ಸಿಗಾಗಿ ಹಿಂಸೆ ಮಾಡಬೇಕಾಗಿ ಬಂದರೂ ಅವರು ಒಪ್ಪಿಕೊಂಡಾರು. ಹಿಂಸೆಯು ಸತ್ಯಾಗ್ರಹದ ನೈತಿಕ ಸ್ವರೂಪಕ್ಕೆ ಅಪಾಯಕಾರಿಯಲ್ಲ ಎಂದು ಸಾಬೀತುಪಡಿಸಲು ಈ ವಿವೇಚನೆ ಮಾಡಿದ್ದೇನೆ. ಇದಕ್ಕೂ ಹೆಚ್ಚು ಈ ವಿಷಯದ ಬಗ್ಗೆ ಚರ್ಚೆ ಮಾಡುವುದರಲ್ಲರ್ಥವಿಲ್ಲ. ಏಕೆಂದರೆ ಸತ್ಯಾಗ್ರಹವನ್ನು ಯಶಸ್ವಿಯಾಗಿ ದಡ ಮುಟ್ಟಿಸಲು ಹಿಂಸೆ ಕೈಗೊಳ್ಳಲು ತಾತ್ವಿಕವಾಗಿ ಅಡ್ಡಿಯಿಲ್ಲದಿದ್ದರೂ ಇಂದಿನ ಪರಿಸ್ಥಿತಿಯಲ್ಲಿ ಹಾಗೆ ಮಾಡಲು ಯಾರಿಗೂ ಸಮಯವಿಲ್ಲ. ಈ ದೇಶದ ಪ್ರಜೆಗಳು ನಿಶ್ಶಸ್ತ್ರರಾಗಿರುವುದರಿಂದ ಸತ್ಯಾಗ್ರಹಕ್ಕಾಗಿ ಅಹಿಂಸೆಯ ಮಾರ್ಗವೊಂದೇ ಉಳಿದಿರುವುದು. ಹಾಗೂ ಸತ್ಯಾಗ್ರಹಕ್ಕೆ ಸಿದ್ಧರಿರುವ ದಲಿತರು ಇದೇ ಉಪಾಯದ ಮೇಲೆ ಭರವಸೆ ಇಟ್ಟು ಮುನ್ನಡೆಯುವುದು ಅಗತ್ಯವಾಗಿದೆ. ಅಲ್ಲದೆ ಅಸ್ಪೃಶ್ಯತೆ ನಿವಾರಣೆಗಾಗಿ ಸತ್ಯಾಗ್ರಹ ಈಗಷ್ಟೇ ಆರಂಭವಾಗಿರುವುದರಿಂದ ಈ ಉಪಾಯ ದಲಿತರ ಪ್ರಶ್ನೆಗಳನ್ನು ಬಿಡಿಸುವಲ್ಲಿ ಅಸಮರ್ಪಕವಾಗಿದೆ ಅಂದುಕೊಳ್ಳಲು ಯಾವುದೇ ಸಾಕ್ಷಿಗಳಿಲ್ಲ. ಹಾಗಾಗಿ ನಾವು ಮಾಡಲಿರುವ ಸತ್ಯಾಗ್ರಹ ಅಹಿಂಸಾತ್ಮಕ ರೀತಿಯಲ್ಲೇ ಇರುತ್ತದೆ ಬೇರೆಯೇನೂ ಇಲ್ಲ ಅನ್ನುವುದನ್ನು ಪ್ರತಿಯೊಬ್ಬರೂ ಗಮನದಲ್ಲಿಡಬೇಕು.

ಈಗ ಈ ಸತ್ಯಾಗ್ರಹವನ್ನು ಯಾರ ವಿರುದ್ಧ ಮಾಡಬೇಕು? ಅನ್ನುವುದರ ಬಗ್ಗೆ ಚರ್ಚೆ ಮಾಡಬೇಕಿದೆ. ದಲಿತರ ಸಮಾನ ಹಕ್ಕುಗಳ ಬೇಡಿಕೆ ಮೇಲ್ಜಾತಿಯವರಲ್ಲಿದೆ. ಮೇಲ್ಜಾತಿಯವರೇ ದಲಿತರಿಗೆ ನ್ಯಾಯವಾಗಿ ಸಲ್ಲಬೇಕಾದ ಹಕ್ಕುಗಳನ್ನು ಕೊಡಲು ವಿರೋಧಿಸುತ್ತಿದ್ದಾರೆ. ಹಾಗಾಗಿ ನಾವು ಮೇಲ್ಜಾತಿಯವರ ವಿರುದ್ಧ ಸತ್ಯಾಗ್ರಹ ಮಾಡಬೇಕಿದೆ ಎಂದು ಪ್ರತಿಯೊಬ್ಬ ದಲಿತನಿಗೆ ಅನಿಸುವುದು ಸಹಜ. ಆದರೆ ಹಾಗಂದುಕೊಳ್ಳುವುದು

ತಪ್ಪು. ನಾಳೆ ದಲಿತರು ಸಾರ್ವಜನಿಕ ಕೆರೆಯೊಂದಕ್ಕೆ ಇಲ್ಲವೆ ದೇವಸ್ಥಾನಕ್ಕೆ ತಮ್ಮ ಹಕ್ಕುಗಳನ್ನು ಕೇಳಲು ಹೋದರು ಅಂದಿಟ್ಟುಕೊಳ್ಳಿ, ಮೇಲ್ಜಾತಿ ಜನರು ಅವರನ್ನು ತಡೆಯುವ ಉದ್ದೇಶದಿಂದ ಅಡ್ಡ ಬಂದರೆ ಮುಂದೇನು? ಅನ್ನುವ ಪ್ರಶ್ನೆಯ ಬಗ್ಗೆ ಯೋಚಿಸದೆ ಸತ್ಯಾಗ್ರಹವನ್ನು ಯಾರ ವಿರುದ್ಧ ಮಾಡಬೇಕಿದೆ ಅನ್ನುವುದನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ. ದಲಿತರು ಸತ್ಯಾಗ್ರಹಕ್ಕಾಗಿ ಸಿದ್ಧರಾಗಿ ಅಪೇಕ್ಷೆಯಂತೆ ಮೇಲ್ಜಾತಿಯವರು ತಡೆದರೆ ಹಾಗೂ ಅವರ ಅಪಕೃತ್ಯಗಳಿಂದ ಶಾಂತಿ ಭಂಗವಾದರೆ ಶಾಂತತೆ ಕಾಪಾಡುವುದು ಸರ್ಕಾರದ ಕರ್ತವ್ಯವಾಗಿರುವುದರಿಂದ ಸರ್ಕಾರ ಮಧ್ಯೆ ಬರಬೇಕಾಗುತ್ತದೆ. ಸರ್ಕಾರ ಈ ಹೋರಾಟದ ಮಧ್ಯೆ ಬಂದರೆ ಯಾವ ಧೋರಣೆಯನ್ನು ಸ್ವೀಕರಿಸಬಹುದು ಅನ್ನುವುದನ್ನು ಅರ್ಥಮಾಡಿಕೊಳ್ಳದೆ ಸತ್ಯಾಗ್ರಹ ಯಾರ ವಿರುದ್ಧ ಮಾಡಬೇಕು ಅನ್ನುವುದನ್ನು ನಿರ್ಧರಿಸುವುದು ಸಾಧ್ಯವಾಗಲಾರದು. ಸರ್ಕಾರ ದಲಿತರ ಪರ ವಹಿಸಿದರೆ ಈ ಪ್ರಶ್ನೆ ಚಿಟಿಕೆ ಹೊಡೆಯುವಷ್ಟರಲ್ಲಿ ಪರಿಹಾರವಾಗುತ್ತದೆ. ಆದರೆ ಹಾಗಾಗದೆ ಸರ್ಕಾರ ಪಲ್ಟಿ ಹೊಡೆದು, 'ನೀವು ಹೊಸಹೊಸ ಯುಕ್ತಿಗಳಿಂದ ಏನೇನೋ ಮಾಡಿ ಶಾಂತಿ ಭಂಗ ಮಾಡುತ್ತಿದ್ದೀರಿ, ಹಾಗಾಗಿ ನಿಮಗೆ ಇದನ್ನೆಲ್ಲ ಮಾಡಗೊಡುವುದಿಲ್ಲ' ಅಂದರೆ ಮುಂದೇನು? ಹೀಗೇನಾದರೂ ಆದರೆ ದಲಿತರು ಮಾಡುವ ಸತ್ಯಾಗ್ರಹ ಮೇಲ್ಜಾತಿಯವರ ವಿರುದ್ಧ ಅನಿಸಿದರೂ ಅದು ನಿಜಾರ್ಥದಲ್ಲಿ ಸರ್ಕಾರದ ವಿರುದ್ಧವೇ ಆಗಿರುತ್ತದೆ ಅನ್ನುವುದು ನಿಜ. ಹಾಗಾಗಿ ಈ ಸತ್ಯಾಗ್ರಹದ ಜವಾಬ್ದಾರಿಗಳೇನು ಅನ್ನುವುದನ್ನು ದಲಿತರು ಅರಿತರೆ ಒಳ್ಳೆಯದು. ಸ್ವಲ್ಪದರಲ್ಲಿ ಹೇಳುವುದಾದರೆ ಈ ಸತ್ಯಾಗ್ರಹದಲ್ಲಿ ದೇವಸ್ಥಾನ ಇಲ್ಲವೆ ಕೆರೆಗೆ ಹೋಗುವ ನಮ್ಮ ಹಟ ಪೂರೈಸಲು ದಲಿತರು ಸರ್ಕಾರದ ಆಜ್ಞೆ ಮುರಿಯದೆ ಬೇರೆ ದಾರಿಯಿಲ್ಲ ಹಾಗೂ ಸರ್ಕಾರಿ ಅಜ್ಞೆ ಮುರಿದದ್ದಕ್ಕಾಗಿ ಸರ್ಕಾರ ಸತ್ಯಾಗ್ರಹಿಗಳನ್ನು ಜೈಲಿಗೆ ಹಾಕದೆ ಇರದು. ಒಟ್ಟಿನಲ್ಲಿ ಸತ್ಯಾಗ್ರಹ ಮಾಡುವ ದಲಿತರು ಸಮಯ ಬಂದರೆ ಈ ಕೆಲಸಕ್ಕಾಗಿ ಜೈಲುವಾಸವನ್ನೂ ಅನುಭವಿಸಬೇಕಾದೀತು ಅನ್ನುವುದನ್ನು ನೆನಪಿನಲ್ಲಿಟ್ಟು ಸಿದ್ಧರಾಗಿ. ನಿಜ ಹೇಳುವುದಾದರೆ ಅಸ್ಪೃಶ್ಯತೆ ಅನ್ನುವುದು ಎಷ್ಟು ಅಪಮಾನಾಸ್ಪದವಾಗಿದೆಯೆಂದರೆ ಇದನ್ನು ನಿವಾರಿಸಲು ಕೆಲವರ ಪ್ರಾಣ ಹೋದರೂ ಚಿಂತೆಯಿಲ್ಲ. ನಾವು ಸ್ಪರ್ಶಿಸಿದ ವಸ್ತುಗಳು ಗೋಮೂತ್ರ ಸಿಂಪಡಿಸಿದರೆ ಪವಿತ್ರವಾಗುತ್ತದೆ ಅನ್ನುವುದು ಮೇಲ್ಜಾತಿ ಜನರ ಅನಿಸಿಕೆ. ತನ್ನ ಧರ್ಮದ ಮನುಷ್ಯನ ಸ್ಪರ್ಶದಿಂದ ಮೈಲಿಗೆಯಾಗುವ ವಸ್ತು ಒಂದು ಪ್ರಾಣಿಯ ಮೂತ್ರವನ್ನು ಸಿಂಪಡಿಸುವುದರಿಂದ ಶುದ್ಧವಾಗುತ್ತದೆ ಅನ್ನುವ ಅತ್ಯಂತ ಹೇಸಿಗೆ ತರಿಸುವ ವಿಚಾರದಲ್ಲಿ ಮಾನವನ ಸ್ಪರ್ಶದಿಂದ ಮೈಲಿಗೆಯ ಕಲ್ಪನೆ ಹೆಚ್ಚು ಧಿಕ್ಕರಿಸುವಂತಹದ್ದೋ ಇಲ್ಲ ಪ್ರಾಣಿಯ ಮೂತ್ರದಿಂದ ಶುದ್ಧಪಡಿಸುವ ಭಾವನೆ ತಿರಸ್ಕರಿಸುವಂತಹದ್ದೋ ಎಂದು ಹೇಳುವುದು ಕಷ್ಟವಾದರೂ ಒಂದು ಮಾತ್ರ ನಿಜ, ಮೇಲ್ಜಾತಿಯವರ ದೃಷ್ಟಿಯಲ್ಲಿ ಪ್ರಾಣಿಯ ಮಲಮೂತ್ರದಲ್ಲಿರುವಷ್ಟು ಪವಿತ್ರತೆ ಅಸ್ಪೃಶ್ಯರಂತಹ ಮನುಷ್ಯರಲ್ಲಿಲ್ಲ ಅನ್ನುವುದು ಬದುಕಲು ಅನುಕೂಲವಾದ ಸ್ಥಿತಿಯೆಂದು ಯಾವುದೇ ಸ್ವಾಭಿಮಾನಿ ಮನುಷ್ಯನಿಗೆ ಅನಿಸಲಿಕ್ಕಿಲ್ಲ. ಬದುಕುವುದೇ ಜಗತ್ತಿನಲ್ಲೊಂದು ದೊಡ್ಡ ಪುರುಷಾರ್ಥವಲ್ಲ. ಬದುಕುವ ಅನೇಕ ರೀತಿಗಳಿವೆ. ಕಾಕಬಲಿಯನ್ನು (ಶ್ರಾದ್ಧದಲ್ಲಿ ಕಾಗೆಗಿಡುವ ಎಡೆ) ತಿಂದು ಕಾಗೆಗಳೂ ಅನೇಕ ವರ್ಷಗಳ ತನಕ ಬದುಕುತ್ತವೆ ಆದರೆ ಅವುಗಳ ಬದುಕಿನಲ್ಲಿ ಪುರುಷಾರ್ಥವಿದೆಯೆಂದು ಯಾರೂ ಹೇಳಲಾರರು. ಇಂದಲ್ಲ ನೂರು ವರ್ಷಗಳ ನಂತರವೂ ಸಾವು ಯಾರಿಗೂ ತಪ್ಪಿದ್ದಲ್ಲ ಅಂದಮೇಲೆ ಸಾವಿಗೇಕೆ ಹೆದರುವುದು? ಹೇಗೂ ಇಂದಲ್ಲ ನಾಳೆ ಈ ಶರೀರ ನಾಶವಾಗಲಿದೆ ಅಂದ ಮೇಲೆ ಆತ್ಮದ ಕಲ್ಯಾಣಕ್ಕಾಗಿ ಏನಾದರೂ ಮಾಡಲು ಈ ನಾಶವಂತ ಶರೀರವೊಂದೇ ಸಾಧನವಾಗಿರುವುದರಿಂದ 'ಆತ್ಮನಾಂ ಸತತಂ ರಕ್ಷೇತ್ ದಾರೈರಪಿ ಧನೈರಪಿ!' ಹೆಂಡತಿ ಮಕ್ಕಳು ಇಲ್ಲವೆ ಸಂಪತ್ತಿಗಿಂತ ನಮ್ಮನ್ನು ನಾವು ಮೊದಲು ರಕ್ಷಿಸಿಕೊಳ್ಳಬೇಕು ಎಂದು ಶಾಸ್ತ್ರದಲ್ಲಿ ಹೇಳಿದೆ. ಹಾಗಾಗಿ

ಇದಕ್ಕೂ ಹೆಚ್ಚಿನದೇನನ್ನಾದರೂ ಹೆಚ್ಚು ಶಾಶ್ವತವಾದಂತಹದ್ದೇನಾದರೂ ಪಡೆಯಲು ದುರ್ಲಭವಾದ ಆದರೆ ನಶಿಸಿಹೋಗುವಂತಹ ಮಾನವದೇಹವನ್ನು ವ್ಯಯಿಸಬೇಕು. ಉದಾಹರಣೆಯಾಗಿ ದೇಶಕ್ಕಾಗಿ, ಸತ್ಯಕ್ಕಾಗಿ, ತಾವು ಕೊಟ್ಟ ಮಾತಿಗಾಗಿ, ಗುರಿಗಾಗಿ, ವ್ರತಕ್ಕಾಗಿ, ಯಶಸ್ಸಿಗಾಗಿ, ಮಾನಕ್ಕಾಗಿ ಅಥವಾ ತನ್ನೆಲ್ಲ ಜನತೆಗಾಗಿ ಅನೇಕ ಮಹಾಪುರುಷರು ಆಯಾ ಕಾಲಕ್ಕೆ ಕರ್ತವ್ಯದ ಅಗ್ನಿಯಲ್ಲಿ ತಮ್ಮ ಪ್ರಾಣದ ಆಹುತಿಯನ್ನು ಕೊಟ್ಟಿದ್ದಾರೆ. ಮಹಾಭಾರತದಲ್ಲಿ ವೀರಪತ್ನಿ ವಿದುಲಾ 'ಹಾಸಿಗೆಯ ಮೇಲೆ ಕೊಳೆಯುತ್ತ ಇಲ್ಲವೆ ನೂರಾರು ವರ್ಷ ನಿರರ್ಥಕವಾಗಿ ಬದುಕುವುದಕ್ಕಿಂತ ಕೆಲವೇ ಕ್ಷಣ ಪರಾಕ್ರಮದ ಬೆಳಕು ತೋರಿಸಿ ಸತ್ತರೂ ಚಿಂತೆಯಿಲ್ಲ'ಎಂದು ತನ್ನ ಮಗನಿಗೆ ಹೇಳುತ್ತಾಳೆ. ಇಂತಹ ದೊಡ್ಡ ವ್ರತ ಪಾಲಿಸಲು ದಲಿತರಿಗೆ ಮಾತ್ರ ಯಾರೂ ಹೇಳುವುದಿಲ್ಲ ಆದ್ದರಿಂದ ಪ್ರತಿಯೊಬ್ಬ ದಲಿತ ಮಾತೆಯು ತನ್ನ ಮಗನಿಗೆ ಹೀಗೆ ಹೇಳುವ ಕಾಲ ಬಂದಿದೆ. ಕೇವಲ ಕಾರಾಗೃಹಕ್ಕೆ ಹೋಗಲು ಸಿದ್ಧರಾಗಿ ಅನ್ನುವುದನ್ನು ಬಿಟ್ಟರೆ ಬೇರೆ ಯಾವ ಸ್ವಾರ್ಥ ತ್ಯಾಗವನ್ನು ಅವರಿಂದ ಬೇಡುವುದಿಲ್ಲ. ಅವರಿಂದ ಅಷ್ಟೂ ಆಗದಿದ್ದರೆ ದಲಿತರು ಗಂಡಸರಲ್ಲ ಹಿಜಡಾಗಳು ಅನ್ನಬೇಕಾಗುತ್ತದೆ. ಏಕೆಂದರೆ ಮಹಾಭಾರತದಲ್ಲಿ ಒಂದೆಡೆ

एतादानेव पुरुषो यदमर्षी यदक्षमि।
क्षमावन्निरमर्षश्च नैव स्त्री न पुनः पुमान।

'ಅನ್ಯಾಯದ ಬಗ್ಗೆ ಸಿಟ್ಟು ಬರುವ ಹಾಗೂ ಅವಮಾನವನ್ನು ಸಹಿಸದ ಗಂಡೇ ನಿಜವಾದ ಗಂಡಸು'. ಎಂದಿದೆ. ಸಿಟ್ಟು ಬರದ ಮನುಷ್ಯ ಹಾಗೂ ನಪುಂಸಕ ಇಬ್ಬರೂ ಒಂದೇ. ಅಸ್ಪೃಶ್ಯತೆ ನಿವಾರಣೆಗಾಗಿ ಪ್ರಾಣವನ್ನೂ ಕೊಡುವ ನಿರ್ಧಾರ ಕೆಲವೇ ದಲಿತರದ್ದಾಗಿದ್ದರೂ ಅಸ್ಪೃಶ್ಯತೆಯನ್ನು ನಿವಾರಿಸಲು ಜೈಲುವಾಸ ಸ್ವೀಕರಿಸುವ ನಿರ್ಧಾರ ಅನೇಕ ದಲಿತರು ಮಾಡಿಯಾಗಿದೆ ಎಂದು ಆಶಿಸುತ್ತೇನೆ. ಹಾಗೇನಾದರೂ ಇದ್ದರೆ ಅವರ ಕಾರ್ಯದಲ್ಲವರಿಗೆ ಯಶಸ್ಸು ಸಿಕ್ಕೇ ಸಿಗುತ್ತದೆ. ಸರ್ಕಾರ ಅನ್ಯಾಯವಾಗಿ ದಲಿತರನ್ನು ಜೈಲಿಗೆ ತುಂಬಿದರೂ ಎಷ್ಟು ಜನರನ್ನು ತುಂಬಿ ಯಾರು? ಹಾಗೂ ಎಷ್ಟು ದಿನ ಅವರನ್ನು ಜೈಲಿನಲ್ಲಿಟ್ಟಾರು? ಅಲ್ಲದೆ ಮೇಲ್ಜಾತಿಯವರೂ ಎಷ್ಟು ದಿನಾ ಅಂತ ಸರ್ಕಾರದ ಆಧಾರ ಪಡೆದಾರು? ಒಂದಾನೊಂದು ದಿನ ಸರ್ಕಾರಕ್ಕೂ ಈ ವಿಷಯದ ಬಗ್ಗೆ ಯೋಚಿಸಬೇಕಾಗುತ್ತದೆ. ಸರ್ಕಾರ ಅಂದರೂ ಅದಕ್ಕೂ ನಾಚಿಕೆಯನ್ನುವುದು ಇದ್ದೇ ಇರುತ್ತದೆ. ಸ್ವಲ್ಪ ಸಮಯ ಅದಕ್ಕೇನೂ ಅನಿಸದಿದ್ದರೂ ಸರ್ಕಾರ ನಾಚಿಕೆಪಡುವಂತೆ ಮಾಡುವುದು ಕೂಡ ದಲಿತರ ಕೈಯಲ್ಲಿದೆ. ಶಾಂತಿಭಂಗವಾಗುತ್ತದೆಂದು ಸರ್ಕಾರ ನಮ್ಮ ನ್ಯಾಯವಾದ ಹಕ್ಕುಗಳನ್ನು ಉಪಯೋಗಿಸಲು ಅನುಮತಿ ಕೊಡದಿದ್ದರೆ ಮುಂದುವರೆದ ರಾಷ್ಟ್ರದ ನ್ಯಾಯಾಲಯವಾದ ರಾಷ್ಟ್ರಸಂಘಕ್ಕೆ ದೂರು ಬರೆದು ಸರ್ಕಾರ ಮಾಡುತ್ತಿರುವ ಅನ್ಯಾಯದ ಬಗ್ಗೆ ಅವರ ಗಮನ ಹರಿಸಬಹುದು. ಮೇಲ್ಜಾತಿಯವರ ಜಿದ್ದಿಗೆ ಕಟ್ಟುಬಿದ್ದು ದಲಿತರನ್ನು ಸರ್ಕಾರ ದಂಡಿಸುತ್ತಿರುವ ಬಗ್ಗೆ ಮೇಲ್ಜಾತಿಯವರಿಗೂ ಯೋಚಿಸಬೇಕಾಗುತ್ತದೆ. ಮೇಲ್ಜಾತಿಯವರಿಗೆ ದಲಿತರ ಬಗ್ಗೆ ಪ್ರೀತಿ, ಮಮತೆಯಿಲ್ಲದಿದ್ದರೂ ತಮ್ಮ ಪ್ರಾಣದ ರಕ್ಷಣೆಯ ಚಿಂತೆಯಿದೆ. ಆ ಚಿಂತೆಯಲ್ಲವರು ಬೇಯದಿದ್ದರೂ ಸತ್ಯಾಗ್ರಹದ ಮಾಧ್ಯಮದಿಂದ ಅವರು ಬೇಯುವಂತೆ ಮಾಡಬಹುದು. ನಾವು ದಲಿತರೊಂದಿಗೆ ಒಂದು ಕೈ ನೋಡಿಯೇ ಬಿಡುತ್ತೇವೆ ಎಂದು ಮೇಲ್ಜಾತಿಯವರು ನಿರ್ಧರಿಸಿದ್ದರೆ ಹೆಚ್ಚೆಚ್ಚು ಅಂದರೆ ಸತ್ಯಾಗ್ರಹ ನೆಲಕಚ್ಚಬಹುದು. ಸತ್ಯಾಗ್ರಹ ನೆಲ ಕಚ್ಚಿದರೆ ನಷ್ಟ ಯಾರಿಗೆ? ಮೇಲ್ಜಾತಿಯವರಿಗೆ! ಸತ್ಯಾಗ್ರಹ ಮಾಡಿಯೂ ಹಿಂದೂ ಧರ್ಮದಲ್ಲಿ ನಮಗೆ ಜಾಗ ಕೊಡುವುದಿಲ್ಲ ಎಂದರಿಯುವ ದಲಿತರು ಹಿಂದೂ ಧರ್ಮ ಪಾಷಾಣ ಧರ್ಮ ಹಣೆ ಚಚ್ಚಿಕೊಂಡರೂ ಲಾಭವಿಲ್ಲ ಎಂದು ಖಚಿತವಾದಾಗ, ಮೇಲ್ಜಾತಿಯವರೆ! ಇಗೊಳ್ಳಿ ನಿಮ್ಮ ಧರ್ಮ! ಅಂದು ತಂತಾನೆ ಪರಧರ್ಮಕ್ಕೆ ಸೇರಿಕೊಂಡಾರು. ಮೇಲ್ಜಾತಿಯವರು

ಈ ವಿಷಯವನ್ನು ಇಷ್ಟೊಂದು ವಿಕೋಪಕ್ಕೆ ಹೋಗಗೊಡಲಾರರು. ಆದರೆ ಸರ್ಕಾರದ ಜೈಲು ದಲಿತರಿಂದ ತುಂಬಿ ತುಳುಕಿ ಇವರದು ಮಕ್ಕಳಾಟ ಅಂದುಕೊಳ್ಳುವ ಮೇಲ್ಜಾತಿಯವರಿಗೆ ಭಯ ಹುಟ್ಟಿಸುವಷ್ಟರ ಮಟ್ಟಿಗೆ ನಮ್ಮ ಸತ್ಯಾಗ್ರಹವಾಗಬೇಕು.

ಸತ್ಯಾಗ್ರಹದ ಯಶಸ್ಸಿಗಾಗಿ ಯೋಚಿಸುವಾಗ ಸತ್ಯಾಗ್ರಹವನ್ನು ಯಾರ ವಿರುದ್ಧ ಮಾಡಬೇಕು ಅನ್ನುವಷ್ಟೆ ಸತ್ಯಾಗ್ರಹ ಯಾರು ಮಾಡಬೇಕು ಅನ್ನುವುದರ ಬಗ್ಗೆ ಯೋಚಿಸುವುದೂ ಅಗತ್ಯವಾಗಿದೆ. ನಮ್ಮ ಮಾನವ ಹಕ್ಕುಗಳನ್ನು ಪಡೆಯುವ ದಾರಿ ಸತ್ಯಾಗ್ರಹ ಅನ್ನುವುದು ನಿಜ, ಅದು ಯಶಸ್ವಿಯಾಗಲು ಎಷ್ಟು ಜನ ಸಾಧ್ಯವೋ ಅಷ್ಟು ದಲಿತ ಹೆಂಗಸರು ಗಂಡಸರು ಇದರಲ್ಲಿ ಭಾಗವಹಿಸುವುದು ಸತ್ಯಾಗ್ರಹದ ಯಶಸ್ಸಿನ ದೃಷ್ಟಿಯಿಂದ ಅವಶ್ಯಕವಾಗಿದೆ. ಆದರೆ ನಮ್ಮ ಮಟ್ಟಿಗೆ ಸತ್ಯಾಗ್ರಹವೆನ್ನುವುದು ಕೇವಲ ವ್ಯಾವಹಾರಿಕ ಉಪಾಯವಷ್ಟೇಯಲ್ಲ ಆತ್ಮಶುದ್ಧಿ ಮಾಡಿಕೊಳ್ಳಲು ಆರಂಭಿಸಿರುವ ಯಜ್ಞವೂ ಹೌದು. ಪ್ರತಿಯೊಬ್ಬ ದಲಿತನೂ ಈ ಯಜ್ಞದಲ್ಲಿ ಪಾಲ್ಗೊಂಡು ತಮ್ಮ ಆತ್ಮಶುದ್ಧಿ ಮಾಡಿಕೊಳ್ಳಬೇಕು. ಮೇಲ್ಜಾತಿಯವರು ದಲಿತರನ್ನು ಅಪವಿತ್ರ ಹಾಗೂ ಅಶುದ್ಧರೆನ್ನುತ್ತಾರೆ ಅನ್ನುವುದು ಎಷ್ಟು ಸತ್ಯವೋ ಅಸ್ಪೃಶ್ಯರು ತಮ್ಮನ್ನು ತಾವು ಅಶುದ್ಧ ಹಾಗೂ ಅಪವಿತ್ರರೆಂದುಕೊಂಡು ವರ್ತಿಸುವುದೂ ಅಷ್ಟೇ ಸತ್ಯ. ಇಲ್ಲಿಯವರೆಗೆ ಮೇಲ್ಜಾತಿಯವರ ವರ್ಚಸ್ಸೇ ಸ್ಥಾಪಿತವಾಗಿರುವುದರಿಂದ ಅವರು ಹೇಳುವಂತೆ ಮಾಡುವ ಹಾಗೂ ನಡೆಸಿಕೊಂಡಂತೆ ನಡೆಯುವ ಅಭ್ಯಾಸವಾಗಿದೆ ದಲಿತರಿಗೆ. ಮೇಲ್ಜಾತಿಯವರು ಶ್ರೇಷ್ಠರು, ನಾವು ಕನಿಷ್ಠರು. ಅವರು ನಮ್ಮ ನಾಯಕರು, ನಾವವರ ಸೇವಕರು ಅನ್ನುವ ಭಾವನೆ ದಲಿತರ ಮನಸ್ಸನ್ನಾವರಿಸಿರುವುದರಿಂದ ಅಸ್ಪೃಶ್ಯತೆ ಇಂದಿನವರೆಗೆ ಮುಂದುವರೆದುಕೊಂಡು ಬಂದಿದೆ. ಇಂತಹ ಭಾವನೆಗಳನ್ನು ಮನಸ್ಸಿನಿಂದಾಚೆ ತೆಗೆದುಹಾಕದಿದ್ದರೆ ಆತ್ಮಸನ್ಮಾನದ ಭಾವನೆ ದಲಿತರಲ್ಲಿ ಜಾಗೃತವಾಗಲಾರದು. ಹಾಗೂ ಅದು ಜಾಗೃತವಾಗದೆ ಅಸ್ಪೃಶ್ಯತೆ ನಿವಾರಣೆ ಸಾಧ್ಯವಿಲ್ಲ. ಈ ಆತ್ಮಶುದ್ಧಿಯ ದೃಷ್ಟಿಯಿಂದ ಪ್ರತಿಯೊಬ್ಬ ದಲಿತನು ಈ ಸತ್ಯಾಗ್ರಹದಲ್ಲಿ ಭಾಗವಹಿಸುವುದು ಅಗತ್ಯವಾಗಿದ್ದರೂ ಸಂಸಾರದ ಬಂಧನದಲ್ಲಿ ಸಿಕ್ಕಿಕೊಂಡಿರುವ ದಲಿತರಿಗೆ ಆತ್ಮಶುದ್ಧಿ ಮಾಡಿಕೊಳ್ಳಲು ಪ್ರತ್ಯಕ್ಷವಾಗಿ ಸತ್ಯಾಗ್ರಹದಲ್ಲಿ ಭಾಗವಹಿಸಲು ಸಿಗುತ್ತದೆಯೋ ಇಲ್ಲವೋ ಅನ್ನುವ ಅನುಮಾನ ಕಾಡುವುದು ಸಹಜ. ಸಾಧ್ಯವಾದರೆ ಕೆಲವೇ ದಲಿತರಿಗೆ ಭಾಗವಹಿಸುವ ಅವಕಾಶ ಸಿಗಬಹುದು. ಸಾಕಷ್ಟು ಜನ ಸತ್ಯಾಗ್ರಹದಲ್ಲಿ ಭಾಗವಹಿಸದಿದ್ದರೆ ಅದರಿಂದ ವಿಶೇಷವಾದ ಲಾಭವಾಗಲಾರದು ಏಕೆಂದರೆ ಸತ್ಯಾಗ್ರಹ ಅನ್ನುವುದು ದುರಾಗ್ರಹಿ ಮನುಷ್ಯನಿಗೆ ಸತ್ಯ ಮಾರ್ಗವನ್ನು ಸ್ವೀಕರಿಸಲು ಕಲಿಸುವ ಒಂದು ಮಾರ್ಗ ಹಾಗೂ ಇಂತಹ ದುರಾಗ್ರಹಿ ಜನರಿಗೆ ಸಾಕಪ್ಪ ಸಾಕು ಅನಿಸುವಷ್ಟರ ಮಟ್ಟಿಗೆ ಸತ್ಯಾಗ್ರಹವಾಗದಿದ್ದರೆ ಅವರು ತಮ್ಮ ದುರಾಗ್ರಹ ಬಿಡಲಾರರು. ಹಾಗಾಗಿ ಸಂಸಾರ ಬಂಧನದಿಂದ ಮುಕ್ತರಾಗಿರುವ ಅಥವಾ ಬಂಧನದಲ್ಲಿ ಸಿಲುಕದೆ ಇರುವಂತಹ ೫೦೦೦ ಜನ ಯುವಕರ ಸತ್ಯಾಗ್ರಹದ ಒಂದು ತಂಡವನ್ನು ನಿರ್ಮಿಸಿ ಆ ತಂಡದ ಮುಖಾಂತರ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಸತ್ಯಾಗ್ರಹ ಮಾಡಿಸಿಕೊಳ್ಳಿ ಎಂದು ಸೂಚಿಸುತ್ತೇನೆ. ಈ ಯೋಜನೆಯನ್ನು ಜಾರಿಗೆ ತಂದರೆ ಸತ್ಯಾಗ್ರಹದ ಸಿದ್ಧತೆಯಲ್ಲಿ ಯಾವುದೇ ಕೊರತೆಯಿರಲಾರದು. ಹಾಗೂ ೫೦೦೦ ಸಾವಿರ ಜನರ ಇಷ್ಟು ದೊಡ್ಡ ತಂಡವಿದ್ದರೆ ಸತ್ಯಾಗ್ರಹದ ಯಶಸ್ಸಿನ ಬಗ್ಗೆ ಅನುಮಾನವೇ ಇರದು. ಆದರೆ ಇಷ್ಟು ದೊಡ್ಡ ತಂಡ ತಯಾರಿಸಲು ಹಣದ ಸಹಾಯ ಬೇಕು ಹಾಗೂ ಸ್ವಲ್ಪ ಸಮಯವೂ ಬೇಕು. ಆದರೆ ಇದಾಗುವ ತನಕ ದಲಿತರು ಸಣ್ಣ ಸಣ್ಣ ಪ್ರಮಾಣದಲ್ಲಿ ಸತ್ಯಾಗ್ರಹವನ್ನು ಮಾಡಬಹುದು ಹಾಗೂ ಈ ಪ್ರಮಾಣದಲ್ಲಿಯೇ ಸತ್ಯಾಗ್ರಹವನ್ನಾರಂಭಿಸುವುದರಲ್ಲಿ ತೊಂದರೆಯಿಲ್ಲ.

ಮೇಲ್ಜಾತಿಯ ಕೆಲವು ಜನ ದಲಿತರ ಸತ್ಯಾಗ್ರಹಕ್ಕೆ ಅಡ್ಡ ಬರುತ್ತಿದ್ದಾರೆ ಅನ್ನುವುದು ನಮಗೆ ಗೊತ್ತಿದೆ.

'ದಲಿತರ ಸಮಾನ ಹಕ್ಕಿನ ಪ್ರಶ್ನೆ ಸತ್ಯಾಗ್ರಹ ಮಾಡುವುದರಿಂದ ಪರಿಹಾರವಾಗುವುದಿಲ್ಲ. ಮೇಲ್ಜಾತಿಯವರು ತಮ್ಮಲ್ಲಿ ಚಳುವಳಿ ಮಾಡಿಕೊಂಡು ಆ ಪ್ರಶ್ನೆಯನ್ನು ಬಿಡಿಸಬೇಕಿದೆ. "ದಲಿತರು ದೇವಸ್ಥಾನದೊಳಗೆ ಪ್ರವೇಶಿಸಬಹುದು'' ಅನ್ನುವ ಫಲಕವನ್ನು ನಾವು ಸ್ವಂತ ಖುಷಿಯಿಂದ ಹಾಕಿದ ದಿನದಿಂದ ನೀವುಗಳು ದೇವರ ದರ್ಶನ ಮಾಡಲು ಬನ್ನಿ ಅಲ್ಲಿಯವರೆ ಯಾವುದೇ ಗೊಂದಲ, ಗಡಿಬಿಡಿ ಮಾಡಬೇಡಿ!'ಎಂದು ಮೇಲ್ಜಾತಿಯವರು ಅನ್ನುತ್ತಿದ್ದಾರೆ. ಆದರೆ ಮೇಲ್ಜಾತಿಯವರು ಸ್ವಂತ ಖುಷಿಯಿಂದ ಈ ಪ್ರಶ್ನೆ ಬಿಡಿಸಿಯಾರೆ? ನಮಗಂತೂ ನಂಬಿಕೆಯಿಲ್ಲ. ಏಕೆಂದರೆ ಮೇಲ್ಜಾತಿಯವರ ಪ್ರಕಾರ ಇದು ಬಹುಮತದ, ದಯೆಯ, ಮಾಯೆಯ, ನೀತಿಯ ಇಲ್ಲವೆ ಸಮಾನ ಹಕ್ಕಿನ ಪ್ರಶ್ನೆಯಾಗಿರದೆ ಇದು ಕೇವಲ ಧರ್ಮ ತತ್ವದ ಪ್ರಶ್ನೆಯಾಗಿದೆ. ದಲಿತರು ಸ್ವಧರ್ಮರೂಪಿ ವಿರಾಟ ಪುರುಷನ ಯಾವುದೇ ಭಾಗವಾಗಿರಲು ಸಾಧ್ಯವಿಲ್ಲ. ಬ್ರಾಹ್ಮಣರು ಧರ್ಮ ಪುರುಷನ ಮುಖ, ಕ್ಷತ್ರಿಯರು, ಎರಡು ಕೈಗಳು, ವೈಶ್ಯರು ಆತನ ತೊಡೆಗಳಾಗಿದ್ದರೆ ಶೂದ್ರರು ಆತನ ಕಾಲುಗಳಿದ್ದಂತೆ ಹಾಗಾಗಿ ಅಸ್ಪೃಶ್ಯರಿಗೆ ಆತನ ದೇಹದಲ್ಲಿ ಸ್ಥಾನವೇ ಇಲ್ಲ. ಅವರುಗಳು ಹಿಂದೂ ವಿರಾಟ ಪುರುಷನ ಕಾಲಿನ ಎಕ್ಕಡ ಅಷ್ಟೆ. ಎಕ್ಕಡ ಯಾವತ್ತೂ ಶರೀರದ ಭಾಗವಾಗಿರಲು ಸಾಧ್ಯವಿಲ್ಲ. ದಲಿತ ವರ್ಗವು ಮುಸಲ್ಮಾನ ಜಾತಿಯಂತೆ ನಮ್ಮ ಧರ್ಮದ ಹೊರಗಿನ ಜಾತಿ. ಧರ್ಮ ಪುರುಷನ ಕಾಲಕೆಳಗಿನ ಹಾಗೂ ದೇಹಕ್ಕೆ ಪ್ರತ್ಯಕ್ಷವಾಗಿ ಸಂಬಂಧಪಟ್ಟಿರದ ಬೇರೆ ಭಾಗ. ಹೀಗೆಲ್ಲ ಯೋಚಿಸುವ ಜನರ ದಾನಮಾಡುವ ಇಚ್ಛೆ ಹಾಗೂ ಶೀಲವನ್ನು ನಂಬಿ ಕೈಕಟ್ಟಿ ಕುಳಿತುಕೊಳ್ಳಬೇಕು ಅನ್ನುವ ಉಪದೇಶ ಕಪಟತನದ್ದಲ್ಲವಾದರೂ ಮೂರ್ಖತನದ್ದಾಗಿದೆ.

ಮೇಲ್ಜಾತಿಯ ಇನ್ನೂ ಕೆಲವು ಜನರಂತು, ದಲಿತರು ಸತ್ಯಾಗ್ರಹವನ್ನಾರಂಭಿಸಿದರೆ ಮುಟ್ಟುವುದು ಅವರಿಂದ ಸಾಧ್ಯವಿಲ್ಲ ಅನ್ನುತ್ತಿದ್ದಾರೆ. ಏಕೆಂದರೆ ಮೇಲ್ಜಾತಿ ಸಮಾಜದ ಮೇಲೆ ದಲಿತರು ಸತ್ಯಾಗ್ರಹದ ಶಸ್ತ್ರ ಎತ್ತಿದರೆ ಅಸ್ಪೃಶ್ಯತೆ ನಿವಾರಣೆಗೆ ಅಲ್ಪಸ್ವಲ್ಪ ಬೆಂಬಲ ತೋರಿಸುತ್ತಿರುವ ಮೇಲ್ಜಾತಿ ಜನರ ಸಹಾನುಭೂತಿಯನ್ನವರು ಕಳೆದುಕೊಂಡಾರು ಅನ್ನುವುದು ಅವರ ಅನಿಸಿಕೆ. ಈ ಶಸ್ತ್ರದ ಆಘಾತ ಎಲ್ಲ ಮೇಲ್ಜಾತಿಯವರ ಮೇಲಾಗುವುದರಿಂದ ಇದನ್ನು ವಿರೋಧಿಸಲು ಸುಧಾರಕರು ಹಾಗೂ ಸನಾತನ ಮೇಲ್ಜಾತಿಯವರು ಒಟ್ಟಾಗುತ್ತಾರೆ ಎಂದವರ ಅನಿಸಿಕೆ. ಹೀಗೆಂದು ಹೇಳುವವರಿಗೆ ನಾನು ಹೇಳುವುದಿಷ್ಟೆ, ಅದರೆ, ಮೇಲ್ಜಾತಿಯ ಕೆಲವರು ನಮ್ಮೊಂದಿಗಿದ್ದಾರೆ ಎಂದು ಹೇಳಲು ನೀವ್ಯಾರು? ನಮಗದು ಗೊತ್ತಿದೆ. ನಿಜವಾಗಿಯೂ ನಿಮಗೆ ನಮ್ಮ ಬಗ್ಗೆ ಸಹಾನುಭೂತಿಯಿದ್ದರೆ ಕೆಲವು ಮೇಲ್ಜಾತಿಯ ಜನ ನಮಗೆ ಬೆಂಬಲ ಕೊಡುತ್ತಿದ್ದಾರೆ ಅನ್ನುವ ಕಾರಣಗಳನ್ನು ಕೊಟ್ಟು ಸತ್ಯಾಗ್ರಹದಿಂದ ನಮ್ಮನ್ನು ದೂರವಿಡಬೇಡಿ. ನಿಜವಾಗಿಯೂ ನೀವು ನಮ್ಮ ಕಡೆಯವರಾಗಿದ್ದರೆ, ನಮ್ಮ ಮೇಲಾಗುತ್ತಿರುವ ಅನ್ಯಾಯದ ಬಗ್ಗೆ ನಿಮಗೆ ಸಿಟ್ಟಿದ್ದರೆ ನೀವೂ ನಮ್ಮ ಸತ್ಯಾಗ್ರಹದಲ್ಲಿ ಭಾಗವಹಿಸಿ, ಇದರಲ್ಲೇ ನಿಮ್ಮ ಸಹಾನುಭೂತಿಯ ಪರೀಕ್ಷೆಯಾಗುತ್ತದೆ, ಇಲ್ಲದಿದ್ದರೆ ನೀವು ಗೆಳೆಯರಾದರೆಷ್ಟು ವೈರಿಗಳಾದರೆಷ್ಟು ನಮಗೆ ಒಂದೆ.

अमर्षशून्येन जनस्य जन्तुना जातहार्देन न
िाद्विषादराः।

ಅಮೇರಿಕಾದಲ್ಲಿಯ ಗುಲಾಮಗಿರಿಯನ್ನು ನಷ್ಟ ಮಾಡಲು ಆಂದೋಲನಗಳು ಆರಂಭವಾದ ಕಾಲದಲ್ಲಿ ಅಮೇರಿಕಾದಲ್ಲಿ ಎರಡು ಪಕ್ಷಗಳಿದ್ದವು. ಅಮೇರಿಕಾದ ದಕ್ಷಿಣದಲ್ಲಿದ್ದ ಬಿಳಿ ಜನ ಈ ಆಂದೋಲನವನ್ನು ವಿರೋಧಿಸುತ್ತಿದ್ದರೆ ಉತ್ತರದ ಬಿಳಿ ಜನ ಇದರ ಪರವಾಗಿದ್ದರು. ಈ ಪರವಾಗಿದ್ದ ಉತ್ತರದ ಬಿಳಿ ಜನರು 'ದಕ್ಷಿಣದ ಬಿಳಿ ಜನ ನಿಮ್ಮ ವಿರೋಧದಲ್ಲಿದ್ದಾರೆ ಹಾಗಾಗಿ ನೀವೂ ಈ ಆಂದೋಲನವನ್ನು ಹಿಂತೆಗೆದುಕೊಳ್ಳಿ'

ಅನ್ನುವ ಉಪದೇಶವನ್ನು ಗುಲಾಮಗಿರಿಯ ದಾಸ್ಯತ್ವದಲ್ಲಿ ಕೊಳೆಯುತ್ತಿದ್ದ ಶಿದ್ದಿ ಜನರಿಗೆ ಕೊಡದೆ ಶಿದ್ದಿ ಜನರೊಂದಿಗೆ ಒಟ್ಟಾಗಿ ಅವರಿಗೆ ಸಹಾಯ ಮಾಡುತ್ತ ಅವರ ಸ್ವಾತಂತ್ರ್ಯಕ್ಕೆ ವಿರೋಧಿಸುತ್ತಿದ್ದ ತಮ್ಮ ಬಾಂಧವರಿಗೆ ಸ್ವರ್ಗದ ದಾರಿ ತೋರಿಸಿದರು. ಅದರಂತೆಯೇ ನಿಮಗೆ ಸಹಾನುಭೂತಿ ತೋರಿಸುವ ಮೇಲ್ಜಾತಿಯ ಜನ ಶಿದ್ದಿ ಜನರಿಗೆ ಸಹಾನುಭೂತಿ ತೋರಿಸುತ್ತಿದ್ದ ಬಿಳಿ ಜನರಂತೆ ವರ್ತಿಸಿದರೆ ಮಾತ್ರ ನಿಮ್ಮನ್ನು ನಂಬುವೆವು ಎಂದು ದಲಿತರು ಮೇಲ್ಜಾತಿಯವರಿಗೆ ಸ್ಪಷ್ಟವಾಗಿ ಹೇಳಿ. ಇಲ್ಲದಿದ್ದರೆ ಸಹಾನುಭೂತಿಯ ಸಕ್ಕರೆ ಪೇರಿಸಿ ಅನ್ಯಾಯ ಮಾಡುತ್ತಿರುವ ಈ ಜನ ಒಂದು ದಿನವೂ ಸಹಿಸಿಕೊಳ್ಳಲಸಾಧ್ಯವಾದ ಅನ್ಯಾಯವನ್ನು ನಾವು ಸ್ವಂತ ಖುಷಿಯಿಂದ ಸಹಿಸಿಕೊಳ್ಳುವಂತೆ ಮಾಡಿಯಾರು.

ಇಷ್ಟೊತ್ತು ಎರಡು ರೀತಿಯಲ್ಲಿ ಮಾತನಾಡುವ ಮೇಲ್ಜಾತಿಯವರ ಬಗ್ಗೆ ಹೇಳಿದೆ, ಈಗ ಮೂರನೆಯ ರೀತಿಯ ಮೇಲ್ಜಾತಿ ಜನ 'ದಲಿತರು ಹಾಗೂ ಮೇಲ್ಜಾತಿಯವರು ಒಂದೇ ಸಮಾಜದ ಘಟಕಗಳಾಗಿರುವುದರಿಂದ ತಮ್ಮ ಜಾತಿಯವರೊಡನೆ ಸತ್ಯಾಗ್ರಹ ಮಾಡಬಾರದು, ಪರಕೀಯರೊಡನೆ ಮಾಡಬೇಕು, ಹಿಂದೂ ಸಮಾಜದ ಮೇಲೆ ಹೊರಗಿನಿಂದ ಹಲ್ಲೆಗಳಾಗುತ್ತಿರುವಾಗ ದಲಿತರು ಆ ಹಲ್ಲೆಗಳನ್ನು ತಡೆಯುವುದನ್ನು ಬಿಟ್ಟು ತಮ್ಮತಮ್ಮಲ್ಲೆ ಯುದ್ಧ ಮಾಡಿಕೊಳ್ಳುತ್ತಿದ್ದಾರೆ ಅನ್ನುವುದು ಸರಿಯಲ್ಲ' ಅನ್ನುತ್ತಿದ್ದಾರೆ. ಇವರು ಮಾಡುತ್ತಿರುವ ಉಪದೇಶವೇನೋ ತುಂಬಾ ಸಿಹಿಯಾಗಿದೆ! ಆದರೆ ದಲಿತರು ಇವರ ಉಪದೇಶವನ್ನೇಕೆ ಕೇಳಬೇಕು? ಯಾವ ಧರ್ಮದಲ್ಲಿ ತಮಗೆ ಸ್ಥಾನವಿಲ್ಲವೊ, ಯಾವ ಧರ್ಮದಲ್ಲಿ ಅವರನ್ನು ಕಾಲ ಕಸದಂತೆ ಕಾಣಲಾಗುತ್ತದೆಯೋ ಆ ಧರ್ಮದ ರಕ್ಷಣೆಗಾಗಿ ದಲಿತರು ಯಾಕಾಗಿ ಸಾಯಬೇಕು? ಧರ್ಮ ರಕ್ಷಣೆಯ ಜವಾಬ್ದಾರಿ ಮೇಲ್ಜಾತಿ ಜನರದ್ದು. ಹಿಂದೂ ಧರ್ಮದ ಹಕ್ಕು ಅವರ ವೃಥಾ ಅಭಿಮಾನ. 'ಖಾನೆಕೂ ಹಮ್ ಔರ್ ಲಡ್ನೇಕು ತುಮ್'' ಅನ್ನುವಂತಹ ಈ ಉಪದೇಶ ಹುಚ್ಚುತನದ್ದು. ಅವರ ಉಪದೇಶವನ್ನು ಒಪ್ಪುವಂತಹ ಮೂರ್ಖರು ದಲಿತರಲ್ಲ. ಇಷ್ಟು ವರ್ಷ ಹಿಂದೂ ಧರ್ಮದ ರಕ್ಷಣೆ ಮಾಡಿದ್ದೇ ಮೂರ್ಖತನದ್ದು ಎಂದವರಿಗೀಗ ಅನಿಸುತ್ತಿದೆ. ಹೀಗಂದುಕೊಳ್ಳುವ ಅಸ್ಪೃಶ್ಯರಿಗೆ ಮೇಲಿನಂತೆ ಉಪದೇಶ ಮಾಡುವ ಅಧಿಕಾರ ಮೇಲ್ಜಾತಿಯವರಿಗಿದೆ ಎಂದು ನನಗನಿಸುತ್ತಿಲ್ಲ. ವಿರೋಧಿ ಪಕ್ಷದ ಜನರ ದುರ್ಬಲತೆಯ ಲಾಭ ಪಡೆದು ನಮ್ಮ ಕೆಲಸವನ್ನು ಸಾಧಿಸಿಕೊಳ್ಳುವುದು ವ್ಯವಹಾರ ಸಮ್ಮತ, ಬ್ರಿಟಿಷರು ಇದನ್ನೇ ಮಾಡುತ್ತ ಬಂದಿದ್ದಾರೆ. ದಲಿತರು ಕೂಡ ತಮ್ಮ ಸಾಮಾಜಿಕ ಹಕ್ಕುಗಳನ್ನು ಪಡೆಯಲು ಮೇಲ್ಜಾತಿಯವರೊಡನೆ ಇದೇ ಧೋರಣೆಯನ್ನಿಟ್ಟುಕೊಂಡರೆ ತಪ್ಪೇನು? ನ್ಯಾಯ ನೀತಿಯ ದೃಷ್ಟಿಯಿಂದ ಇದು ಸರಿಯಲ್ಲದಿರಬಹುದು ಆದರೆ ಮೇಲ್ಜಾತಿ ಜನ ರಾಜಕೀಯ ಹಕ್ಕುಗಳನ್ನು ಪಡೆಯಲು ಮಾಡುವುದು ಅದನ್ನೆ, 'ಸ್ವಾತಂತ್ರ್ಯ ಪಡೆಯಲು ನಾವು ಹೋರಾಡುತ್ತಿರುವಾಗ ಬ್ರಿಟಿಷ್ ಸಾಮ್ರಾಜ್ಯದ ಕೆಲಸಕಾರ್ಯಗಳ ಅಗತ್ಯವೇನು?' ಅನ್ನುವ ಘೋಷಣೆ ಕೂಗಿ ಹೋರಾಟದ ಸಮಯದಲ್ಲಿ ಸರಕಾರವನ್ನು ಅಡಚಣೆಯಲ್ಲಿ ತರಲು ಹಿಂದು ಮುಂದು ನೋಡದ ಮೇಲ್ಜಾತಿ ಜನರಿಗೆ ಬೇರೆಯವರಿಗೆ ಹೆಸರಿಡುವ ಹಕ್ಕು ಹೇಗೆ ಸಿಗುತ್ತದೆ ಅನ್ನುವುದು ನನಗೆ ತಿಳಿಯುವುದಿಲ್ಲ. ನಿಮ್ಮನಿಮ್ಮಲ್ಲೇ ಜಗಳವಾಡಿಕೊಳ್ಳಬೇಡಿ ಎಂದು ಉಪದೇಶಿಸುವವರಿಗೆ ನಾನು 'ನಿಮ್ಮ ಗೀತೆ ಏನು ಹೇಳುತ್ತದೆ ಅನ್ನುವುದನ್ನೊಮ್ಮೆ ಗಮನಿಸಿ' ಅನ್ನುವ ಉಪದೇಶ ಕೊಡಬಯಸುತ್ತೇನೆ. ಗೀತೆಯಲ್ಲಿ ಕೃಷ್ಣ ಅರ್ಜುನನಿಗೆ ಉಪದೇಶಿಸಿರುವುದಕ್ಕಿಂತ ಭಿನ್ನವಾದದ್ದೇನನ್ನೂ ನಾವು ಹೇಳಿಲ್ಲ. ಕೌರವ–ಪಾಂಡವರ ಸೇನೆ ಯುದ್ಧಕ್ಕೆ ಸನ್ನದ್ಧರಾಗಿ ಕುರುಕ್ಷೇತ್ರದಲ್ಲಿ ನಿಂತಿದ್ದಾಗ ಯುದ್ಧ ಆರಂಭವಾಗುವ ಮುನ್ನ ಅರ್ಜುನ ತನ್ನ ರಥವನ್ನು ಎರಡೂ ಸೈನ್ಯಗಳ ಮಧ್ಯೆ ನಿಲ್ಲಿಸಿ ಎರಡೂ ಸೈನ್ಯದೆಡೆ ದೃಷ್ಟಿ ಬೀರಿದಾಗ ಎದುರಾಳಿ ಪಕ್ಷದಲ್ಲಿ ಆತ ಕಾಣುವುದು ತನ್ನ ಸ್ನೇಹಿತರು, ಆಪ್ತರು, ಗುರುಗಳನ್ನು, ಆಗ ಈ ಯುದ್ಧದ ಒಟ್ಟು

ಸ್ವರೂಪ ಅವನ ಕಣ್ಣೆದುರಿಗೆ ಬರುತ್ತದೆ. ಯುದ್ಧ ಮಾಡುವುದಕ್ಕೆ ನಿರಾಕರಿಸಿ ತನ್ನ ಕೈಯಲ್ಲಿರುವ ಶಸ್ತ್ರವನ್ನು ಕೆಳಗಿಟ್ಟು ಕುಳಿತುಕೊಳ್ಳುತ್ತಾನೆ. ಕೌರವ ಪಾಂಡವರು ಆಪ್ತರು ಅನ್ನುವುದು ಕೃಷ್ಣನಿಗೆ ಗೊತ್ತಿಲ್ಲದಿಲ್ಲ, ಕೌರವರು ಪಾಂಡವರ ಹಕ್ಕುಗಳನ್ನು ಕೊಡಲು ನಿರಾಕರಿಸಿದ್ದರೂ ಭೀಷ್ಮ, ದ್ರೋಣ, ವಿದುರರಂತಹ ಜ್ಯೇಷ್ಠರು ಅವರಿಗೆ ಹಕ್ಕುಗಳನ್ನು ಕೊಡಲು ಸಿದ್ಧರಿದ್ದರು ಹಾಗೂ ಸಮಯ ಕಳೆದಂತೆ ಅವರ ಮಾತನ್ನು ಕೌರವರು ಕೇಳಿಯಾರು ಅನ್ನುವುದು ಶ್ರೀಕೃಷ್ಣನಿಗೆ ಗೊತ್ತಿತ್ತು. ತಮ್ಮತಮ್ಮಲ್ಲೆ ಜಗಳಾಡಬಾರದು ಅನ್ನುವುದು ನಿಜವೇ ಆಗಿದ್ದರೆ ಅರ್ಜುನನ ವರ್ತನೆಯನ್ನು ನೋಡಿ 'ನೀನು ಹೇಳುವುದೇ ನಿಜ ಅರ್ಜುನ, ನಿನಗಾದ ಸಾಕ್ಷಾತ್ಕಾರ ನೋಡಿ ನನಗೆ ಸಂತೋಷವಾಗುತ್ತಿದೆ' ಎಂದು ಶ್ರೀಕೃಷ್ಣ ಪರಮಾತ್ಮ ಯಾಕೆ ಹೇಳಲಿಲ್ಲ? ಆದರೆ ಶ್ರೀಕೃಷ್ಣನು 'ನಿನಗೇಕೆ ಈ ಕೆಟ್ಟ ಯೋಚನೆ ಬಂತು? ಈ ದುರ್ಬಲತೆಯನ್ನು ಬಿಟ್ಟು ಯುದ್ಧಕ್ಕೆ ಸಿದ್ಧನಾಗು' ಎಂದವನು ಅರ್ಜುನನಿಗೆ ಹೇಳಿದ. ಅಷ್ಟೇಯಲ್ಲ ಈ ಯುದ್ಧದಲ್ಲಿ ಅಸಂಖ್ಯ ಜನರ ಪ್ರಾಣಹಾನಿಯಾಗಲಿದೆ ಅನ್ನುವುದು ಗೊತ್ತಿದ್ದರೂ ಅದರ ಬಗ್ಗೆ ಅವನಿಗೆ ಕಿಂಚಿತ್ತೂ ತೊಂದರೆಯೆನಿಸಲಿಲ್ಲ. ಶ್ರೀಕೃಷ್ಣ ಇದನ್ನೆಲ್ಲ ಮಾಡಿದ್ದು ಕೌರವರು ಕಸಿದುಕೊಂಡಿದ್ದ ಪಾಂಡವರ ರಾಜ್ಯವನ್ನವರಿಗೆ ಮರಳಿಸಲು! ಯಾವ ವಸ್ತುವಿಗಾಗಿ ಅರ್ಜುನ ಹೋರಾಡುತ್ತಿದ್ದನೋ ಅದರ ಬೆಲೆ ದಲಿತರ ಸತ್ಯಾಗ್ರಹದೆದುರು ಕವಡೆಯಷ್ಟೂ ಇಲ್ಲ. ಪಾಂಡವರು ರಾಜ್ಯಕ್ಕಾಗಿ ಹೋರಾಡಿದರು ಆದರೆ ದಲಿತರು ಮನುಷ್ಯತ್ವ ಪಡೆಯಲು ಹೋರಾಡುತ್ತಿದ್ದಾರೆ. ಮನುಷ್ಯತ್ವ ಕಳೆದುಕೊಂಡರೆ ಮನುಷ್ಯ ತನ್ನೆಲ್ಲವನ್ನೂ ಕಳೆದುಕೊಳ್ಳುತ್ತಾನೆ ಆದರೆ ರಾಜ್ಯ ಹೋದರೆ ಮನುಷ್ಯತ್ವವಾದರೂ ಉಳಿದುಕೊಳ್ಳುತ್ತದೆ. ರಾಜ್ಯವಿಲ್ಲದೆ ಪಾಂಡವರೇನು ಸಾಯುತ್ತಿರಲಿಲ್ಲ ಆದರೆ ಮನುಷ್ಯತ್ವವಿಲ್ಲದೆ ದಲಿತರು ಬದುಕಿಯೂ ಸತ್ತಂತಿದ್ದಾರೆ. ರಾಜ್ಯದಂತಹ ಕ್ಷುಲ್ಲಕ ವಸ್ತುವಿಗಾಗಿ ಪಿತೃ ಹತ್ಯೆ, ಗುರು ಹತ್ಯೆ ಹಾಗೂ ಬಂಧು ಹತ್ಯೆಯಂತಹ ಘೋರ ಕರ್ಮ ಮಾಡಲು ಶ್ರೀಕೃಷ್ಣ ಅರ್ಜುನನಿಗೆ ಹೇಳುವಾಗ ಮನುಷ್ಯತ್ವ ಪಡೆಯುವಂತಹ ಅತ್ಯುತ್ತಮ ಗುರಿಗಾಗಿ ಸಾಮಾನ್ಯವಾದ ಹಠಯೋಗ ಕೂಡ ದಲಿತರು ಮಾಡಕೂಡದು ಎಂದು ದಲಿತರಿಗೆ ಹೇಳುವುದು ಅರ್ಥವಿಲ್ಲದ ಮಾತು.

ನಿಜ ಹೇಳುವುದಾದರೆ ಈ ಮೇಲ್ಜಾತಿಯವರ ಮಾತು ಕೇಳಬೇಕಾದ ಅಗತ್ಯ ನಮಗಿಲ್ಲ. ಅವರೆಷ್ಟೇ ನಮ್ಮ ಹಿತಚಿಂತಕರಾಗಿದ್ದರೂ ನಮಗೆ ಉಪದೇಶ ಮಾಡುವ ಪಾತ್ರತೆ ಅವರಿಗಿಲ್ಲ. ಇದು ಅಧಿಕಾರದ, ಜಾತಿಯ, ಸ್ವಾರ್ಥದ ಹಾಗೂ ಮನೋಧರ್ಮದ ಪ್ರಶ್ನೆಯಾಗಿದೆ. ವಿದ್ಯೆಯ, ಜ್ಞಾನದ ಇಲ್ಲವೆ ಬುದ್ಧಿಯ ಪ್ರಶ್ನೆಯಲ್ಲ. ಹಾಗಾಗಿ ಅವರ ಸ್ವಾರ್ಥಭರಿತ ಉಪದೇಶವನ್ನು ಕಡೆಗಾಣಿಸಿ 'ನೀವು ನಮಗೆ ಉಪದೇಶ ಕೊಡುವ ಅಗತ್ಯವಿಲ್ಲ' ಎಂದವರಿಗೆ ಸ್ಪಷ್ಟವಾಗಿ ಹೇಳಬೇಕಾಗಿದೆ.

ಯಾವುದೇ ಯುದ್ಧದಲ್ಲಿ ಮೊದಲು ಮಧ್ಯಸ್ತಿಕೆಯಾಗುತ್ತದೆ, ಮಧ್ಯಸ್ತಿಕೆಯ ಉಪಯೋಗವಾಗದಿದ್ದರೆ ಮಾತ್ರ ಯುದ್ಧ ಮಾಡುವ ಪರಿಸ್ಥಿತಿ ಬರುತ್ತದೆ. ಅಸ್ಪೃಶ್ಯತೆಯನ್ನು ನಾಶಪಡಿಸಲು ಇದಕ್ಕೂ ಮುನ್ನ ಸಾಕಷ್ಟು ಮಧ್ಯಸ್ತಿಕೆಗಳಾಗಿವೆ ಎಂದನಿಸುತ್ತದೆ. ಈ ಅಸ್ಪೃಶ್ಯತೆ ಸಮಾಜದಲ್ಲಿ ಆರಂಭವಾದಾಗಿನಿಂದ ಅನೇಕ ಮಹಾತ್ಮರು ಇದರ ವಿರುದ್ಧ ಹೋರಾಡಲು ಪ್ರಯತ್ನಿಸಿದ್ದಾರೆ. ಆದರೆ ಈ ವಿಷಯದಲ್ಲಿ ಮೇಲ್ಜಾತಿಯವರ ದುರಾಗ್ರಹ ಎಷ್ಟು ಭಯಂಕರವಾಗಿದೆಯೆಂದರೆ ಕೆಲವು ಅಪರಿಹಾರ್ಯ ಪ್ರಸಂಗಗಳನ್ನು ಬಿಟ್ಟರೆ ಈ ವಿಷಯದಲ್ಲವರು ಸೂಜಿಯ ಮೊನೆಗೆ ಹತ್ತಿಕೊಳ್ಳುವ ಮಣ್ಣಿನ ಕಣದಷ್ಟು ಭೂಮಿಯನ್ನು ಪಾಂಡವರಿಗೆ ಕೊಡದ ಪಾಷಾಣಹೃದಯಿ, ಹಾಗೂ ಅಧರ್ಮಿ ದುರ್ಯೋಧನನಿಗಿಂತ ಹೆಚ್ಚು ಔದಾರ್ಯ ತೋರಿಸಿರಬಹುದು ಎಂದು ಯಾರಿಗೂ ಅನಿಸುವುದಿಲ್ಲ. ಇನ್ನು ಮುಂದೆಯೂ ದಲಿತರಿಗೆ ಅನುಕೂಲವಾಗಬಹುದಾದಂತಹ ಪರಿವರ್ತನೆ ಆತ್ಮಪ್ರೇರಣೆಯಿಂದಾಗಬಹುದು ಎಂದೂ ಅನಿಸುತ್ತಿಲ್ಲ. ನಿಜ ಹೇಳುವುದಾದರೆ ಈ ಅನ್ಯಾಯಕ್ಕೆ ನಾವು

ಹೆಗಲು ಕೊಟ್ಟಿರುವುದರಿಂದ ಅದು ಇಷ್ಟು ಕಾಲದವರೆಗೆ ನಡೆದುಕೊಂಡು ಬಂದಿದೆ. ಈ ಅನ್ಯಾಯವನ್ನು ತೊಡೆದುಹಾಕುವ ನಿರ್ಧಾರ ನಾವು ಮಾಡಿದರೆ ಯಾರಪ್ಪನೂ ಅದನ್ನು ನಮ್ಮ ಮೇಲೆ ಹೇರಲಾರ. ನಮ್ಮನ್ನು ಹೀನರೆಂದು ನಿರ್ಧರಿಸಿದ ಬ್ರಾಹ್ಮಣ ಧರ್ಮ ಕಾಯಸ್ಥ ಜಾತಿಯವರನ್ನೂ ಹೀನ ಜಾತಿಯೆಂದು ನಿರ್ಧರಿಸುವ ಪ್ರಯತ್ನ ಅನೇಕ ಸಲ ಮಾಡಿದೆ ಆದರೆ ಆ ಜಾತಿಯ ಜನ ಸರಿಯಾದ ಸಮಯಕ್ಕೆ ತಮ್ಮ ಸಮಾನತೆಯನ್ನು ಪಡೆಯಲು ಪ್ರಯತ್ನಿಸಿ ಯಶಸ್ವಿಯಾದರು. ಕಾಲದ ಚಕ್ರ ವಿರುದ್ಧ ದೆಸೆಯಲ್ಲಿ ತಿರುಗುತ್ತಿದ್ದರೂ ನಮ್ಮ ಪೂರ್ವಜರು ಗಾಢವಾಗಿ ನಿದ್ರಿಸಿದರು. ಉಳಿದ ಜನರಂತೆ ನಮ್ಮವರು ಕೂಡ ಕಣ್ಣು ತೆರೆದಿಟ್ಟು ಆಗುತ್ತಿದ್ದ ಅನ್ಯಾಯದ ವಿರುದ್ಧ ಹೋರಾಡಿದ್ದಿದ್ದರೆ ಇಂದು ಅಸ್ಪೃಶ್ಯತೆ ಇತಿಹಾಸದ ಮಾತಾಗಿರುತ್ತಿತ್ತು. ಹಾಗೆ ಮಾಡುವ ನಿರ್ಧಾರ ಹಿಂದಿನ ಪೀಳಿಗೆಯವರು ಮಾಡಲಿಲ್ಲ ಅನ್ನುವುದು ಅತ್ಯಂತ ದುಃಖದ ಸಂಗತಿ. ಆದರೆ ಹಿಂದಿನ ಪೀಳಿಗೆಯಲ್ಲಿ ಜ್ಞಾನದ ಪ್ರಸಾರವಿರಲಿಲ್ಲವಾದ್ದರಿಂದ ಅವರ ವರ್ತನೆಯನ್ನು ಕ್ಷಮಿಸಬಹುದಾಗಿದೆ ಆದರೆ ಇಂದಿನ ಪೀಳಿಗೆಗೆ ಸಾಕಷ್ಟು ಜ್ಞಾನ ಸಿಕ್ಕಿದೆ ಹಾಗಾಗಿ ಹಿಂದಿನ ಪೀಳಿಗೆಯವರು ಮಾಡಲು ಸಾಧ್ಯವಾಗದಿರುವ ಕೆಲಸವನ್ನು ಮಾಡಿ ತೋರಿಸುವುದು ಇಂದಿನ ಪೀಳಿಗೆಯ ಕರ್ತವ್ಯ, ಅದನ್ನು ಮಾಡದಿದ್ದರೆ ಅವರು ಕುಲವಂತರಲ್ಲ ಕುಲಕ್ಕೆ ಕಲಂಕ ಹಾಗೂ ಅಯೋಗ್ಯರಾಗಿದ್ದಾರೆ ಅನ್ನಬೇಕಾಗುತ್ತದೆ' ಅಂದರು.

ಅಧ್ಯಕ್ಷರ ಭಾಷಣವಾದ ಮೇಲೆ ನಿಯಾಮಕ ಕಮಿಟಿಯ ಚುನಾವಣೆಗಳಾಗಿ ಸಭೆಯ ಕಾರ್ಯಕಲಾಪಗಳನ್ನು ೮ ಘಂಟೆಯ ತನಕ ನಿಲ್ಲಿಸಲಾಯಿತು.

ಪರಿಷತ್ತಿನಲ್ಲಿ ಕೆಳಗಿನ ಗಣ್ಯರು ಹಾಜರಿದ್ದರು. ಖುದ್ದು ಅಮರಾವತಿಯ ಡಾ. ಪಂಜಾಬರಾವ್ ದೇಶಮುಖ್, ಬ್ಯಾರಿಸ್ಟರ್ ತಿಡಕೆ, ಶ್ರೀ ಚೌಬಳ ವಕೀಲರು, ಶ್ರೀ ಗವಯಿ ಎಮ್. ಎಲ್. ಸಿ, ಶ್ರೀ ಕೆ. ಬಿ. ದೇಶಮುಖ್, ಡಾ. ಭೋಜರಾಜಾ, ಡಾ. ಪಟವರ್ಧನ್, ಶ್ರೀ ಉತ್ತಮರಾವ್ ಕದಮ್, ಇತ್ಯಾದಿ. ಪರಿಷತ್ತಿಗಾಗಿ ಹೊರಗಿನಿಂದ ಬಂದವರಲ್ಲಿ ಶ್ರೀ ನಾನಾಸಾಹೇಬ್ ಅಮೃತಕರ್, ಮೋರ್ಶಿಯಿಂದ, ಶ್ರೀ ದೆ. ವಿ. ನಾಯಿಕ್ ಬ್ರಾಹ್ಮಣೇತರ ಸಂಘ, ಶ್ರೀ ದತ್ತಾತ್ರೇಯ ವಿಠ್ಠಲ್ ಪ್ರಧಾನ್, ಶ್ರೀ ರಾ. ದಾ. ಕವಳಿ, ಶ್ರೀ ದ. ರಾ. ರಾರಾವಿಕರ್ ಹಾಜರಿದ್ದರು.

ವಿಷಯ ನಿಯಾಮಕ ಕಮಿಟಿಯು ಆ ರಾತ್ರಿ ಕುಳಿತು ಮರುದಿನ ಪರಿಷತ್ತಿನೆದುರು ಇಡುವ ಮಸೂದೆಗಳ ಬಗ್ಗೆ ಚರ್ಚಿಸಿದರು.

ತಾ. ೧೪ನೆಯ ನವಂಬರ್ ೧೯೩೭ ಬೆಳಿಗ್ಗೆ ೭ ಘಂಟೆಗೆ ಅಮರಾವತಿಯ ದಲಿತ ವಿದ್ಯಾರ್ಥಿಗಳಿಂದ ಡಾ. ಅಂಬೇಡ್ಕರ ಅವರಿಗೆ ಸನ್ಮಾನ ಪತ್ರ ಹಾಗೂ ತಾಂಬೂಲ ಕೊಡುವ ಕಾರ್ಯಕ್ರಮದಲ್ಲಿ ಡಾ. ಅಂಬೇಡ್ಕರ್ ಹಾಗೂ ಇತರ ಅತಿಥಿಗಳೊಂದಿಗೆ ಎಲ್ಲ ವಿದ್ಯಾರ್ಥಿಗಳ ಫ಼ೋಟೊ ತೆಗೆದುಕೊಳ್ಳಲಾಯಿತು. ಮಕ್ಕಳ ಸನ್ಮಾನ ಪತ್ರಕ್ಕೆ ಉತ್ತರಿಸುತ್ತ ಡಾ. ಸಾಹೇಬರು ಮಕ್ಕಳು ತಮ್ಮ ವ್ಯಕ್ತಿತ್ವವನ್ನು ಹೇಗೆ ನಿರ್ಮಿಸಬೇಕು ಎಂದು ಸ್ವಲ್ಪದರಲ್ಲಿ ಉಪದೇಶಿಸಿ ನಿಮ್ಮ ಕುಲಕ್ಕೆ ಅಂಟಿಕೊಂಡಿರುವಂತಹ ಅಸ್ಪೃಶ್ಯತೆಯ ಕಲಂಕವನ್ನು ಅಳಿಸಲು ನೀವು ಯಾವ ರೀತಿಯ ಸಹಾಯ ಮಾಡಬಹುದು ಅನ್ನುವುದನ್ನು ವಿಷದವಾಗಿ ತಿಳಿಸಿದರು. ಸರಿಯಾಗಿ ೮ ಘಂಟೆಗೆ ಈ ಜನ ಪರಿಷತ್ತಿಗೆ ಹಾಜರಾದೊಡನೆ ಪರಿಷತ್ತಿಗಾರಂಭವಾಯಿತು. ಆರಂಭದಲ್ಲೇ ಮುಂಬಯಿಯ ಶ್ರೀ ಬಾಳಾರಾಮ್ ಅಂಬೇಡ್ಕರ್ ಅವರ ನಿಧನದ ವಾರ್ತೆ ಟೆಲಿಗ್ರಾಮ್ ನಿಂದ ಬಂತು ತಲುಪಿತು. ಈ ವಾರ್ತೆಯನ್ನು ಕೇಳಿ ಡಾ. ಅಂಬೇಡಕರರಿಗೆ ಬಹಳ ದುಃಖವಾದರೂ ಪರಿಷತ್ತಿನ ಕೆಲಸವನ್ನವರು ನಿಜವಾದ ಜನನಾಯಕನಂತೆ ಧೈರ್ಯದಿಂದ ಮುಂದುವರೆಸಿಕೊಂಡು ಹೋದರು. ಮಧ್ಯಾಹ್ನ

೧ ಘಂಟೆಯವರೆಗೆ ಸಭೆಯ ಕಾರ್ಯಕಲಾಪಗಳು ನಡೆದು ಅದರಲ್ಲಿ ಕೆಳಗಿನ ಕೆಲವು ಮಸೂದೆಗಳು ಮಂಜೂರಾದವು.

**ಮಸೂದೆ ೧**

ನಮ್ಮ ಸಭೆಯ ಮಾನ್ಯ ಅಧ್ಯಕ್ಷರಾದ ಡಾ.ಅಂಬೇಡ್ಕರ ಅವರ ಅಣ್ಣ ಶ್ರೀ ಬಾಳಾರಾಮ್‌ಜಿ ಅಂಬೇಡ್ಕರ್ ಅವರ ನಿಧನದ ವಾರ್ತೆ ಈಗಷ್ಟೆ ಬಂದಿರುವುದನ್ನು ಕೇಳಿ ಈ ಸಭೆಗೆ ಬಹಳ ದುಃಖವಾಗುತ್ತಿದೆ. ಕೈ.ಬಾಳಾರಾಮ್‌ಜಿ ಅಂಬೇಡ್ಕರ್ ಅವರ ನಿಧನದಿಂದಾಗಿ ಈ ಸಭೆ ೧೦ ನಿಮಿಷ ತನ್ನ ಕೆಲಸ ಕಾರ್ಯಗಳನ್ನು ನಿಲ್ಲಿಸುತ್ತದೆ.

**ಮಸೂದೆ ೨**

(ಅ) ಇಲ್ಲಿಯ ವಯೋವೃದ್ಧ ಹಾಗೂ ಸನ್ಮಾನ್ಯ ನೇತಾರರಾದ ನಾ. ಗಣೇಶ್ ಶ್ರೀಕೃಷ್ಣ ಖಾಪರ್ಡೆ ಕೌನ್ಸಿಲ್ ಆಫ್ ಸ್ಟೇಟ್ಸ್‌ನ ಸದಸ್ಯರು ಹಾಗೂ ಅಂಬಾದೇವಿ ದೇವಸ್ಥಾನದ ಕಮಿಟಿಯ ಅಧ್ಯಕ್ಷರು, ಇವರ ಪತ್ರವನ್ನು ಸತ್ಯಾಗ್ರಹ ಕಮಿಟಿಯ ಅಧ್ಯಕ್ಷರಾದ ಶ್ರೀ ಗವಯಿ ಎಮ್. ಎಲ್.ಸಿ. ಇವರೆದುರು ಮಂಡಿಸಲಾಗಿದೆ. ಅವರು ತಮ್ಮ ಪತ್ರದಲ್ಲಿ ಬರೆದಿರುವ ಒಕ್ಕಣೆಯ ಬಗ್ಗೆ ಯೋಚಿಸುತ್ತ ನಾ. ಖಾಪರ್ಡೆಯವರು ರಾಜಿ ಮಾಡಿಕೊಳ್ಳುವ ಇಚ್ಛೆಯನ್ನು ಪ್ರಕಟಿಸಿದ್ದಾರೆ ಹಾಗೂ ಅದರ ಸಫಲತೆಗಾಗಿ ಸ್ವಲ್ಪ ಸಮಯ ಕಾದಿರಿಸಲು ಕೇಳಿಕೊಂಡಿದ್ದಾರೆ, ಅವರ ಬೇಡಿಕೆಗೆ ಮನ್ನಣೆ ಕೊಟ್ಟು ಹಾಗೂ ನಾ. ಖಾಪರ್ಡೆಯವರು ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತಾರೆ ಅನ್ನುವ ನಂಬಿಕೆಯಿಟ್ಟು ಈ ಕೆಲಸದಲ್ಲಿ ಅವರಿಗೆ ಸಮಯಾವಕಾಶ ಕೊಡಲು ೧೫ ನೆಯ ತಾರೀಖಿಗೆ ಆಗಲಿರುವ ಸತ್ಯಾಗ್ರಹದ ತಾರೀಖನ್ನು ಮುಂದೂಡಲು ಅಡ್ಡಿಯಿಲ್ಲ ಎಂದು ಸತ್ಯಾಗ್ರಹ ಕಮಿಟಿಗೆ ಸೂಚಿಸುತ್ತದೆ.

(ಬ) ಹಾಗೆಯೇ ಸತ್ಯಾಗ್ರಹದ ತಾರೀಖು ೧೫ ನವಂಬರ್‌ನಿಂದ ಮೂರು ತಿಂಗಳ ಒಳಗೆ ನಡೆಯತಕ್ಕದ್ದು, ಯಾವುದೇ ಕಾರಣಕ್ಕೆ ಅದನ್ನು ಮತ್ತೆ ಮುಂದೂಡುವಂತಿಲ್ಲ.

(ಕ) ದಲಿತರು ದೇವಸ್ಥಾನದ ಅಂತಿಮ ಸೀಮೆಯವರೆಗೆ ಹೋಗುವ ಹಕ್ಕಿನಲ್ಲಿ ಅಡಚಣೆ ಉಂಟಾಗುವಂತಹ ಯಾವುದೇ ರಾಜಿಗೆ ಒಪ್ಪಿಗೆ ಕೊಡಬಾರದು ಎಂದು ಈ ಸಭೆ ಸತ್ಯಾಗ್ರಹ ಕಮಿಟಿಗೆ ಸೂಚಿಸುತ್ತದೆ.

(ಡ) ಮುಂದೊಂದು ದಿನ ಮಾಡಬೇಕಿರುವ ಸತ್ಯಾಗ್ರಹ ಸಾಧ್ಯವಾದಲ್ಲಿ ಸಾಮೂಹಿಕವಾದದ್ದಿರಬೇಕು ಎಂದು ಈ ಸಭೆ ಸತ್ಯಾಗ್ರಹ ಕಮಿಟಿಗೆ ಸೂಚಿಸುತ್ತದೆ.

ಮೇಲಿನ ಮಸೂದೆಗಳ ಮೇಲೆ ಅನೇಕ ಭಾಷಣಕಾರರು ಪರವಾಗಿಯೂ ವಿರೋಧವಾಗಿಯೂ ಮಾತನಾಡಿದ ಮೇಲೆ ಈ ಎಲ್ಲ ಮಸೂದೆಗಳು ಪ್ರಚಂಡ ಬಹುಮತದಿಂದ ಆರಿಸಿ ಬಂದವು, ಕಡೆಗೆ ಶ್ರೀ.ಗವಯಿ ಹಾಗೂ ಅಮೃತಕರ್ ಅವರು ಯಥೋಚಿತ ಶಬ್ದಗಳಲ್ಲಿ ಅಧ್ಯಕ್ಷರ ಹಾಗೂ ನೆರೆದ ಅತಿಥಿಗಳಿಗೆ ಧನ್ಯವಾದಗಳನ್ನರ್ಪಿಸಿದನಂತರ ಡಾ. ಅಂಬೇಡ್ಕರ್ ಹಾಗೂ ಶಾಹೂ ಚತ್ರಪತಿಯವರ ಜೈಕಾರದೊಂದಿಗೆ ಸಭೆಯ ಕಾರ್ಯಕಲಾಪಗಳು ಮುಗಿದವು.

ಮರುದಿನ ಮಹಾರಾಷ್ಟ್ರ ಕೇಸರಿ ಪತ್ರಿಕೆಯ ಸಂಪಾದಕರಾದ ಶ್ರೀ. ಚವ್ಹಾಣ ಹಾಗೂ ಶ್ರೀ. ಕೆ. ಬಿ. ದೇಶಮುಖ್ ಅವರ ಮನೆಯಲ್ಲಿ ಡಾ.ಅಂಬೇಡಕರ್ ಹಾಗೂ ಅತಿಥಿಗಳಿಗೆ 'ಚಹಾ ಪಾರ್ಟಿ'ಯನ್ನು

ಆಯೋಜಿಸಲಾಗಿತ್ತು.

ಡಾ. ಅಂಬೇಡ್ಕರ್ ಅವರು ಅಮರಾವತಿ ಪರಿಷತ್ತಿನಲ್ಲಿದ್ದಾಗ ಅವರ ಅಣ್ಣ ಬಾಳಾರಾಮ್ ಅವರು ಭಾನುವಾರ ೧೨ನೆಯ ನವಂಬರ್ ೧೯೨೭ರಂದು ಮಧ್ಯಾಹ್ನ ಹನ್ನೆರಡು ಘಂಟೆಗೆ ಅಚಾನಕ್ಕಾಗಿ ಹೃದಯಾಘಾತದಿಂದ ನಿಧನರಾದರೆಂದು ತಿಳಿದುಬಂತು. ಅಮರಾವತಿಯಲ್ಲಿದ್ದ ಡಾ.ಅಂಬೇಡ್ಕರ್ ಅವರು ಅಂತ್ಯಯಾತ್ರೆಗೆ ತಲುಪಲಾಗಲಿಲ್ಲ, ಅವರ ಗೈರುಹಾಜರಿಯಲ್ಲಿ ಅಂತ್ಯಯಾತ್ರೆಗೆ ಹಾಜರಿದ್ದ ದಲಿತ ಬಂಧುಗಳಿಗೆ ಧನ್ಯವಾದಗಳನ್ನರ್ಪಿಸುವಾಗ ೨೫ ನವಂಬರ ೧೯೨೭ರ 'ಬಹಿಷ್ಕೃತ ಭಾರತ' ಪತ್ರಿಕೆಯಲ್ಲಿ ಡಾ. ಅಂಬೇಡ್ಕರ್ ಹೀಗೆ ಬರೆಯುತ್ತಾರೆ.

'ನನ್ನಣ್ಣ ತೀರಿಕೊಂಡಾಗ ನಾನು ಮುಂಬಯಿಯಲ್ಲಿರಲಿಲ್ಲ. ಅಂಬಾದೇವಿ ಸತ್ಯಾಗ್ರಹಕ್ಕಾಗಿ ೧೩ನೆಯ ನವಂಬರ್ ನಂದು ನನ್ನ ಅಧ್ಯಕ್ಷತೆಯಲ್ಲಿ ಅಮರಾವತಿಯಲ್ಲಿ ನಡೆದ ಪರಿಷತ್ತಿಗೆ ನಾನು ಹೋಗಿದ್ದೆ. ನನ್ನ ಗೈರುಹಾಜರಿಯಲ್ಲಿ ಮೂರು ನಾಲ್ಕು ಸಾವಿರ ದಲಿತ ಬಂಧುಗಳು ಅಂತ್ಯ ಯಾತ್ರೆಗೆ ಹಾಜರಾಗಿ ಇಂತಹ ನಾಜೂಕು ಪ್ರಸಂಗದಲ್ಲಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ ಅವರೆಲ್ಲರಿಗೂ ನಾನು ಋಣಿಯಾಗಿದ್ದೇನೆ'.— ಭೀಮರಾವ್ ಅಂಬೇಡ್ಕರ್.

# ೧೫.

# ಅಸ್ಪೃಶ್ಯೋನ್ನತಿಯ ಆರ್ಥಿಕ ಅಡಿಪಾಯ

ಮೊದಲೇ ಪ್ರಕಟಿಸಿದಂತೆ ಶನಿವಾರ ೨೬ ಹಾಗೂ ಭಾನುವಾರ ೨೭ನೆಯ ನವಂಬರ್ ೧೯೨೭ ರಂದು ಸೋಲಾಪೂರ್ ಜಿಲ್ಲೆಯ ವತನದಾರ ಮಾಂಗ್‌ರ ಪರಿಷತ್ತು ೨ರ ಅಧಿವೇಶನ ಸೊಲ್ಲಾಪೂರದಲ್ಲಿ ಡಾ. ಭೀಮರಾವ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು.  ಸೋಲ್ಲಾಪೂರ ಜಿಲ್ಲೆಯ ಪ್ರತಿಯೊಂದು ಹಳ್ಳಿಯ ಪ್ರತಿನಿಧಿಗಳು ಈ ಪರಿಷತ್ತಿಗೆ ಹಾಜರಿದ್ದರು. ೨೬ನೆಯ ತಾರೀಖು ಸಾಯಂಕಾಲ ಐದು ಘಂಟೆಯಿಂದಲೇ ಪ್ರಚಂಡ ಜನಸ್ತೋಮ ನೆರೆಯಲು ಆರಂಭವಾಯಿತು. ಎಲ್ಲರ ಕಣ್ಣುಗಳು ಡಾ.ಅಂಬೇಡ್ಕರರ ಬರುವಿಕೆಯನ್ನೇ ಕಾಯುತ್ತಿದ್ದವು. ಸರಿಯಾಗಿ ಐದು ಘಂಟೆಗೆ ಡಾ. ಅಂಬೇಡ್ಕರರು ತಮ್ಮ ಪರಿವಾರದ ಜನರೊಡನೆ ಸಭೆಗೆ ಹಾಜರಾದಾಗ ಎಲ್ಲರೂ ಎದ್ದು ನಿಂತು ಚಪ್ಪಾಳೆಯ ಕರತಾಡನದ ನಡುವೆ ಅವರನ್ನು ಸ್ವಾಗತಿಸಿದರು. ಮಕ್ಕಳು ದೇವರ ನಾಮ ಹಾಡಿದ ಮೇಲೆ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಜೀವಪ್ಪಾ ಏದಾಳೆಯವರು ಕೆಲಸವನ್ನಾರಂಭಿಸಿ ಸ್ವಾಗತಪರ ಭಾಷಣ ಮಾಡಿದರು.

ನಂತರ ಅಧ್ಯಕ್ಷರಾದ ಡಾ. ಅಂಬೇಡ್ಕರ್ ಅವರ ಸುವಿಚಾರಗಳಿಂದ ಕೂಡಿದಂತಹ ಭಾಷಣವಾಯಿತು. ಡಾ. ಅಂಬೇಡ್ಕರ ಭಾಷಣ ಮಾಡುತ್ತಿದ್ದಾಗ ಎಲ್ಲ ಜನ ಸ್ಥಬ್ಧರಾಗಿ ಏಕಚಿತ್ತದಿಂದ ಭಾಷಣ ಕೇಳುತ್ತಿದ್ದರು. ಸರಳ ಹಾಗೂ ಮಾರ್ಮಿಕವಾಗಿದ್ದ ಅವರ ಭಾಷಣ ಬಹಳ ಪರಿಣಾಮಕಾರಿಯಾಗಿತ್ತು. ತಮ್ಮ ಭಾಷಣದಲ್ಲವರು,

ಮಾನ್ಯರೆ!

ಕಳೆದ ಮಾರ್ಚ ೧೮ರಂದು ಸಾರ್ವಜನಿಕ ಹಕ್ಕುಗಳನ್ನು ಪಡೆಯುವ ಉದ್ದೇಶದಿಂದ ಮಹಾಡ್‌ನಲ್ಲಿ ಚವ್‌ದಾರ್ ಕೆರೆಯಲ್ಲಿ ನೀರು ತುಂಬುವ ಕಾರ್ಯಕ್ರಮ ಹಮ್ಮಿಕೊಂಡಿದ್ದರಿಂದ ಆ ಪರಿಷತ್ತು ಅಸ್ಪೃಶ್ಯೋನ್ನತಿಯ ಇತಿಹಾಸದಲ್ಲಿ ಅವಿಸ್ಮರಣೀಯವಾಗಿ ಉಳಿದಿದೆ ಅನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಲ್ಲಿಯ ಮೇಲ್ಜಾತಿ ಜನರು ಚವ್‌ದಾರ್ ಕೆರೆಯಲ್ಲಿ ನಾವು ದಲಿತರಿಗೆ ನೀರು ತುಂಬಲು ಸುತಾರಾಂ ಬಿಡುವುದಿಲ್ಲ ಎಂದು ಹಟ ತೊಟ್ಟಿದ್ದರು. ನಾವಾದರೋ ಮಹಾಡನ್ನು ಪಾನಿಪತ್ ಎಂದೇ ತಿಳಿದಿದ್ದವರು ಅಂದಮೇಲೆ ಅದನ್ನು ಗೆಲ್ಲದೆ ಬಿಡುವುದಿಲ್ಲ ಎಂದು ಪರಿಷತ್ತಿನ ಚಾಲಕರು ಆಶ್ವಾಸನೆ ನೀಡಿದ್ದರು. ಅಷ್ಟೇಯಲ್ಲ ಕಾರ್ಯ ಕೈಗೂಡಲು ಅಗತ್ಯಬಿದ್ದರೆ ಸತ್ಯಾಗ್ರಹ ಮಾಡಿ ಮುಯ್ಯಿಗೆ ಮುಯ್ಯಿ ತೀರಿಸುವುದಾಗಿ ಪ್ರತಿಜ್ಞೆ ಮಾಡಿದ್ದರು. ಈ ವಾರ್ತೆ ಹರಡುತ್ತಲೆ ಮೇಲ್ಜಾತಿಯವರಿಂದ ದಲಿತರಿಗೆ ಉಪದೇಶಗಳು ಬರಲಾರಂಭಿಸಿದವು. ಮಹಾಡ್‌ನ ಘಟನೆ ಇನ್ನೂ ಹೊಸದು ಅನ್ನುವಾಗಲೇ ಬೇರೆ ಏನು ಗೊತ್ತಿರದಿದ್ದರೂ ಭಾರತದ ಹವಾಮಾನ ಹಾಗೂ ನೀರು ಚನ್ನಾಗಿ ಗೊತ್ತಿದೆ ಎಂದು ಎದೆಯುಬ್ಬಿಸಿ ಸಾರುವ ಚಿತ್ರಾವ್ ಶಾಸ್ತ್ರಿಯವರು ತಮ್ಮ ಗಂಭೀರ ಶಬ್ದಗಳಲ್ಲಿ, 'ಇಂತಹ ಚಳುವಳಿಗಳನ್ನು ಮಾಡುವಾಗ  ದಲಿತರು ಹಾಗೂ ಮೇಲ್ಜಾತಿಯ ಜನರ ನಡುವಿನ ಜನಸಂಖ್ಯೆಯ ವ್ಯತ್ಯಾಸವನ್ನು ಗಮನದಲ್ಲಿಡಬೇಕು. ನಮ್ಮ ಮರಾಠಿ ಜನರಲ್ಲಿ ೩ ಭಾಗ ಮೇಲ್ಜಾತಿಯವರದ್ದಾಗಿದ್ದರೆ ನಾಲ್ಕನೆಯ ಭಾಗ ಕೆಳಜಾತಿಯವರದ್ದಾಗಿದೆ. ಮೇಲ್ಜಾತಿಯವರಲ್ಲಿ ಎಷ್ಟೇ ಭೇದಭಾವ ಹಾಗೂ ವಿರೋಧಗಳಿದ್ದರೂ ಅಸ್ಪೃಶ್ಯರ ಬಗ್ಗೆ ನಾವೆಲ್ಲ ಒಂದೇ ಮತದವರಾಗಿದ್ದೇವೆ ಅನ್ನುವುದರ ಅನುಭವ

ಮಹಾಡ್ ಹಾಗೂ ಎಲ್ಲ ಕಡೆಗಳಲ್ಲೂ ಆಗುತ್ತಿದೆ. ಮುಖ್ಯವಾಗಿ ದಲಿತರ ಬದುಕು ನಮ್ಮಂತಹ ಜನರ ಕೈಯಲ್ಲಿದೆ. ದಲಿತರ ಬದುಕು ಸ್ವತಂತ್ರವಾದ ದಿನ ಹಾಗೂ ತಮ್ಮ ಬದುಕಿಗಾಗಿ ಅವರು ತಾವೇ ದುಡಿದು ತಿನ್ನುವ ದಿನ ಹಿಂದೂಗಳಿಗಷ್ಟೇಯಲ್ಲ ಹಿಂದುಸ್ತಾನದ ದೃಷ್ಟಿಯಿಂದಲೂ ಅದು ಬೇರೆಯೇ ದಿನ ಆಗಿರುತ್ತದೆ ಅನ್ನುವುದರಲ್ಲಿ ಅನುಮಾನವಿಲ್ಲ' ಅನ್ನುವ ಹೇಳಿಕೆ ಕೊಟ್ಟರು. ಒಂದು ಕೈಯಿಂದ ಹಿಂದೂ ಸಂಘಟನೆಗಾಗಿ ಹಾಗೂ ಮತ್ತೊಂದು ಕೈಯಿಂದ ಸ್ವಜಾತಿಯ ಶ್ರೇಷ್ಠತೆಗಾಗಿ ಹೋರಾಡುವ ಮುಂಬಯಿಯ ಒಂದು ಸಾಪ್ತಾಹಿಕದ ಪತ್ರಕರ್ತನೂ ಇದೇ ರೀತಿಯ ಮಾತುಗಳನ್ನಾಡಿದ್ದಾನೆ. ಈ ಸಂಪಾದಕರು, 'ಸತ್ಯಾಗ್ರಹ ಅನ್ನುವ ಶಬ್ದ ಕಿವಿಗೆ ಇಂಪನಿಸುತ್ತದೆ ಅನ್ನುವುದು ನಿಜವಾದರೂ ಸತ್ಯಾಗ್ರಹ ಅನ್ನುವುದು ಎರಡೂ ಕಡೆಗಳಿಂದ ಮೊನಚಿರುವ ಶಸ್ತ್ರ ಅನ್ನುವುದು ಕೂಡ ನಿಜ. ಸತ್ಯಾಗ್ರಹದ ಬಲದ ಮೇಲೆ ನಾಳೆ ಡಾ. ಅಂಬೇಡ್ಕರರು ತಮ್ಮ ಅನುಯಾಯಿಗಳೊಡನೆ ಮಹಾಡನ ಕೆರೆಯಲ್ಲಿ ನೀರು ಕುಡಿದಾರು ಆದರೆ ಅವರ ಈ ಕ್ರಿಯೆಯ ಪ್ರತಿಕ್ರಿಯೆ ಊರೂರಿನಲ್ಲಿ ಹರಡಿ ಅದರ ಪರಿಣಾಮ ದಲಿತರ ಮೇಲಾದರೆ ಅದರ ಜವಾಬ್ದಾರಿ ಯಾರದ್ದು? ದಲಿತರ ಒಂದೆರಡು ಕಡೆಗಳ ಸತ್ಯಾಗ್ರಹಗಳು ಯಶಸ್ಸು ಕಂಡಿವೆ ಅಂದ ಮಾತ್ರಕ್ಕೆ ಭಾರತದಲ್ಲಿ ಅಸ್ಪೃಶ್ಯತೆ ನಷ್ಟವಾಗುತ್ತದೆ ಎಂದು ಡಾಕ್ಟರ್ ಸಾಹೇಬರಿಗೆ ಅನಿಸುತ್ತಿದೆಯೆ? ಡಾಕ್ಟರ ಸಾಹೇಬರ ಈ ಸತ್ಯಾಗ್ರಹದ ಅಂತ ಭಯಾನಕವಾದ ಸಾಮಾಜಿಕ ಕಲಹ ಹಾಗೂ ರಕ್ತಪಾತದಲ್ಲಾಗುವ ಸಾಧ್ಯತೆಗಳಿವೆ ಎಂದು ನನಗನಿಸುತ್ತಿದೆ!' ಅಂದಿದ್ದಾರೆ.

ಇಲ್ಲಿಯ ಜನರು ಮಹಾಡ್‌ನಲ್ಲಿ ಸತ್ಯಾಗ್ರಹ ಮಾಡುತ್ತಿರುವ ದಲಿತರಿಗೆ ಅಪಾಯದ ಸೂಚನೆ ಕೊಡುತ್ತಿರುವಂತೆ ಅಲ್ಲಿ ವರ್ಹಾಡ್ ಪ್ರಾಂತ್ಯದ ಜನ ಅಮರಾವತಿಯಲ್ಲಿ ಅಂಬಾ ಮಾತೆಯ ದೇವಸ್ಥಾನದೊಳಗೆ ಪ್ರವೇಶಿಸಲು ಸತ್ಯಾಗ್ರಹ ಮಾಡಲು ಸಿದ್ಧರಿರುವ ದಲಿತರಿಗೆ ಕೊಡುತ್ತಿದ್ದಾರೆ ಎಂದು ಪುಣೆಯಿಂದ ಪ್ರಕಾಶನಗೊಳ್ಳುವ 'ಸ್ವರಾಜ್ಯ' ಅನ್ನುವ ಪತ್ರಿಕೆಯ ಮೂಲಕ ತಿಳಿಯುತ್ತದೆ. ಅಮರಾವತಿಯಲ್ಲಿ ಶ್ರೀ ಹನುಮಾನ ವ್ಯಾಯಾಮ ಮಂದಿರದ ಮೈದಾನದಲ್ಲಿ ಮೇಲ್ಜಾತಿಯವರ ಒಂದು ಜಾಹೀರು ಸಭೆಯು ಅಕ್ಟೋಬರ್ ತಿಂಗಳಲ್ಲಿ ಕರೆಯಲಾಗಿತ್ತು. ಅವರು ದಲಿತರನ್ನು ಬೆದರಿಸುತ್ತ, 'ನೀವು ದರಿದ್ರರು ಹಾಗೂ ಪರೋಪಜೀವಿಗಳಾಗಿರುವುದರಿಂದ ಹಿಂದೂಗಳ ಮನನೋಯಿಸಿ ಹಾಗೂ ಬೆದರಿಸಿ ನಿಮ್ಮ ಪ್ರಶ್ನೆಯನ್ನು ಪರಿಹರಿಸಬಯಸಿದರೆ ನಿಮಗೆ ಸಿಗುತ್ತಿರುವ ಆಶ್ರಯವನ್ನು ಹಿಂತೆಗೆದುಕೊಂಡು ನಾವು ನಿಮ್ಮನ್ನು ಉಪವಾಸ ಕೆಡವಿ ಸರಿ ದಾರಿಗೆ ತರುತ್ತೇವೆ' ಅಂದಿದ್ದಾರೆ.

ಸಂಪತ್ತು ರಾಷ್ಟ್ರದ ಏಳಿಗೆಗೆ ಕಾರಣವಾಗುವಂತಹ ದೃಷ್ಟಿಯಿಂದ ಸಂಗ್ರಹಿಸಬೇಕು. ಆದರೆ ಬಡವರನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡು ಕಾಡಲು ಇಲ್ಲವೆ ಅವರ ಬೆಳವಣಿಗೆ ಕುಂಠಿತಗೊಳಿಸಲು ಹಾಗೂ ತಮ್ಮ ಪ್ರೌಢಿಮೆ ಹಾಗೂ ವರ್ಚಸ್ಸು ತೋರಿಸಲು ಜನ ಸಂಪತ್ತನ್ನು ಸಂಗ್ರಹಿಸಿದರೆ ಅಂತಹ ಸಂಪತ್ತನ್ನು ಶಾಸ್ತ್ರಕಾರರು ಅಸೂರಿ ಸಂಪತ್ತಿ ಎಂದು ಹೆಸರಿಸಿ ಅಂತಹ ಸಂಪತ್ತನ್ನು ಧಿಕ್ಕರಿಸಿದ್ದಾರೆ ಕೂಡ. ಧರ್ಮಶಾಸ್ತ್ರದ ಪಾಠವನ್ನು ನಮಗೆ ಉಪದೇಶಿಸುತ್ತಿರುವವರು ಕೂಡ ಇದನ್ನು ಒಪ್ಪಿಕೊಳ್ಳುತ್ತಾರೆ. ಹಾಗಿರದಿದ್ದರೆ ಮುಂಬಯಿಯಲ್ಲಿ ಮಾಲೀಕರು ಹಾಗೂ ಕಾರ್ಮಿಕರ ನಡುವೆ ಆಗುವ ಮುಷ್ಕರದಲ್ಲಿ ಈ ಸುಸಂಸ್ಕೃತ ಜನ 'ಮಾಲೀಕನು ನಿಮ್ಮ ಮೇಲೆ ಬಹಿಷ್ಕಾರ ಹಾಕಿಯಾನು, ಜೋಕೆ! ನಿಮ್ಮ ಬದುಕು ಅವನ ಕೈಯಲ್ಲಿದೆ' ಎಂದು ಮುಷ್ಕರ ಹೂಡುವ ಜನರಿಗೆ ಹೇಳುತ್ತಿದ್ದರು. ಆದರೆ ಈ ಜನ ಕಾರ್ಮಿಕರಿಗೆ ಮುಷ್ಕರ ಹೂಡಲು ಉತ್ತೇಜಿಸುವುದಷ್ಟೇಯಲ್ಲದೆ ಮಾಲೀಕರಿಗೆ ನೀವು ಹಣದ ಜೋರು ತೋರಿಸಿ ನ್ಯಾಯಕ್ಕಾಗಿ ಹೋರಾಡುವ ಬಡವರನ್ನು ಅದುಮಿಡುವ ಪಾಪ ಮಾಡಬೇಡಿ ಅನ್ನುವ ಉಪದೇಶ ಕೊಡುತ್ತಾರೆ. ಮೇಲ್ಜಾತಿಯವರ

ಇಂತಹ ವರ್ತನೆಯಿಂದ ನಮಗೆ ಬೇಸರವಿಲ್ಲ, ಆದರೆ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಜನರ ವಿರುದ್ಧ ಸಂಪತ್ತನ್ನು ವ್ಯಯಿಸುವುದು ಅಧರ್ಮ ಅಂತಾದರೆ ಸಾಮಾಜಿಕ ಸಮತೆ ಪಡೆಯಲು ಹೋರಾಡುವ ಅಸ್ಪೃಶ್ಯರ ವಿರುದ್ಧ ಸಂಪತ್ತಿಯನ್ನು ವ್ಯಯಿಸುವುದು ಅಧರ್ಮವಲ್ಲದೆ ಮತ್ತಿನ್ನೇನು? ಅನ್ನುವ ಪ್ರಶ್ನೆಯನ್ನು ನಾನಿವರಿಗೆ ಕೇಳುತ್ತೇನೆ. ಅದು ಅಧರ್ಮವೇ ಆಗಿದ್ದರೆ ಸತ್ಯಾಗ್ರಹದ ಬಗ್ಗೆ ಉಪದೇಶ ಮಾಡುವ ನೀವುಗಳು ನಮ್ಮ ಮೇಲೆ ಸಂಪತ್ತಿನ ಬಲದ ಮೇಲೆ ಬಹಿಷ್ಕಾರ ಹಾಕಿ ನಮ್ಮ ಬೆಳವಣಿಗೆ ಕುಂಠಿತಗೊಳಿಸುವುದು ಪಾಪ ಎಂದು ನಮ್ಮ ಪ್ರತಿಪಕ್ಷಕ್ಕೆ ಯಾಕೆ ಹೇಳುವುದಿಲ್ಲ? ನಮ್ಮ ಗುರಿಯ ಅಡ್ಡ ಅವರು ಬರದೇ ಇದ್ದಿದ್ದರೆ ಅವರ ಮನಸ್ಸಿನ ನಿರ್ಮಲತೆ ನಮಗೆ ಕಾಣುತ್ತಿತ್ತು. ಆದರೆ ಅವರು ಹಾಗೆ ಮಾಡದೆ ಇದ್ದಿದ್ದರಿಂದ ನಮ್ಮನ್ನು ಎಚ್ಚರಿಸುವ ಉದ್ದೇಶದಿಂದ ಮಾತ್ರ ಅವರು ಉಪದೇಶ ಮಾಡುತ್ತಿರುವುದು ಅನ್ನುವುದನ್ನು ನಾವು ನಂಬುವುದಿಲ್ಲ. ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿಕಟ್ಟುವಂತಹ ವಿಷ ಇವರ ಉಪದೇಶದಲ್ಲಿದೆ ಅನಿಸುತ್ತಿದೆ. ಎಲ್ಲರೆದುರು ನಿಷೇಧ ತೋರಿಸಲು ನಾಚಿಕೆಯಾಗುವ ಜನ ಹೀಗೆ ಉಪದೇಶ ಮಾಡಿ ನಿಷೇಧ ತೋರಿಸಿ ತೃಪ್ತರಾಗುತ್ತಾರೆ. ಇದು ಅಂತಹುದೇ ಪ್ರಕಾರ, ಆದರೆ ಇದು ಸರಳ ಉಪದೇಶ ಇಲ್ಲವೆ ಸರಳವಾದ ನಿಷೇಧವಾಗಿರದೆ ಮೇಲ್ಜಾತಿಯ ವಿರುದ್ಧ ಸತ್ಯಾಗ್ರಹ ಮಾಡುತ್ತಿರುವ 'ಅತಿ ಉತ್ಸಾಹಿ' ದಲಿತರನ್ನು ದಂಡಿಸಿ ಸರಿ ದಾರಿಗೆ ತರುವ ಉಪಾಯವಿದು ಎಂದು ನೆನಪಿಸಿಕೊಡಲು ಇರುವ ದಾರಿ ಎಂದು ನಮಗನಿಸುತ್ತದೆ. ನಿಜ ಹೇಳಬೇಕೆಂದರೆ ಸತ್ಯಾಗ್ರಹಕ್ಕೆ ಬಹಿಷ್ಕಾರ ಹಾಕಿ ವಿರೋಧಿಸುತ್ತೇವೆ ಎಂದು ದಲಿತರಿಗೆ ಹೇಳುವ ಅಗತ್ಯವಿಲ್ಲ. ಸತ್ಯಾಗ್ರಹ ಮಾಡುತ್ತಿರುವ ದಲಿತರಿಗೆ ಅದರ ಪರಿಣಾಮ ಮೊದಲೇ ಗೊತ್ತಿದೆ. ಗೊತ್ತು ಗುರಿಯಿಲ್ಲದ ಮನುಷ್ಯ ಇಂತಹ ಬಹಿಷ್ಕಾರಕ್ಕೆ ಹೆದರುತ್ತಾನೆ, ಗುರಿ ಹಾಗೂ ಒಳ್ಳೆಯ ಉದ್ದೇಶವಿರುವ ನಾವು ನಿಮ್ಮ ಬೆದರಿಕೆಗೆ ಹೆದರುವವರಲ್ಲ. ಗುರಿ ಎಷ್ಟೇ ಸರಳವಾಗಿದ್ದರೂ ಅದರೆಡೆಗೆ ತಲುಪಲು ಒಂದು ತಪವಾದರೂ ಬೇಕು ಅನ್ನುವುದು ನಮಗೆ ಗೊತ್ತು. ಗುರಿ ಕಠಿಣವಾದಷ್ಟು ಅದನ್ನು ತಲುಪಲು ಅಷ್ಟೇ ಹೆಚ್ಚಿನ ತಪಸ್ಸು ಮಾಡಬೇಕಾಗುತ್ತದೆ, ಕೇವಲ ಸುಖ ಮತ್ತು ಆರೋಗ್ಯ ಮಾತ್ರ ಮನುಷ್ಯನ ಜೀವನದ ಗುರಿಯಲ್ಲ, ಹಾಗಿದ್ದಿದ್ದರೆ ಈ ಜಗತ್ತಿನಲ್ಲಿ ಮನುಷ್ಯನಿಂದ ಯಾವುದೇ ಮಹಾನ್ ಕಾರ್ಯಗಳು ಆಗುತ್ತಲೇ ಇರಲಿಲ್ಲ. ಪಶುಗಳು ತಮಗೆಷ್ಟಿದೆಯೋ ಅಷ್ಟರಲ್ಲೆ ಸಮಾಧಾನದಿಂದಿರುತ್ತವೆ. ಮಾನವ ಹಾಗೂ ಪಶುಗಳಲ್ಲಿ ನಿದ್ದೆ, ಭಯ, ಆಹಾರ ಈ ಶಾರೀರಿಕ ಧರ್ಮಗಳು ಒಂದೇ ಆದರೂ ಬುದ್ಧಿ ಅನ್ನುವುದನ್ನು ಆ ಪರಮೇಶ್ವರ ಕೇವಲ ಮನುಷ್ಯನಿಗೇ ಕೊಟ್ಟಿದ್ದಾನೆ ಆದರೆ ಬುದ್ಧಿ ಇಲ್ಲದ ಮನುಷ್ಯ ಪಶುವಿಗೆ ಸಮನಾಗುತ್ತಾನೆ ಹಾಗೂ ಹೆಚ್ಚಿನ ಆಸೆ ತೋರದೆ ಇರುವುದರಲ್ಲೇ ಸಮಾಧಾನಪಡುತ್ತಾನೆ. ಆದರೆ ಅದೇ ಬುದ್ಧಿಯಿರುವ ಹಾಗೂ ಚೇತನವಿರುವ ಮನುಷ್ಯ ಸ್ಮಶಾನಮೌನ ಇಷ್ಟಪಡುವುದಿಲ್ಲ. ತನ್ನಲ್ಲಿರುವುದೇ ತನಗೆ ಸಾಕೆ? ಇಲ್ಲ ತನ್ನ ಬುದ್ಧಿಯಿಂದ ನಿರ್ಧರಿಸಿರುವ ಧ್ಯೇಯ ಬೇಕೆ ಅನ್ನುವ ನಿರ್ಧಾರವನ್ನಾತ ತೆಗೆದುಕೊಳ್ಳುತ್ತಾನೆ. ದಲಿತರಿಂದು ಎಚ್ಚೆತ್ತುಕೊಂಡಿದ್ದಾರೆ ಹಾಗೂ ತಾನು ಇರುವುದರಲ್ಲೇ ಸಮಾಧಾನಪಡಬೇಕೆ ಇಲ್ಲ ಸಮಾನ ಹಕ್ಕುಗಳು ಬೇಕೆ ಅನ್ನುವುದನ್ನು ನಿರ್ಧರಿಸುವ ಸಮಯ ಇದಾಗಿದ್ದು ಆತ ಸಮಾನ ಹಕ್ಕುಗಳನ್ನು ಪಡೆಯಲು ನಿರ್ಧರಿಸಿದ್ದಾನೆ ಹಾಗೂ ಎಚ್ಚೆತ್ತ ದಲಿತರು ತಮ್ಮ ದಾರಿಗೆ ಅಡ್ಡಗಟ್ಟುವ ಎಲ್ಲ ಅಡಚಣೆಗಳನ್ನು ದೂರ ಮಾಡಲು ಅಗತ್ಯವಿರುವ ಎಲ್ಲ ಸ್ವಾರ್ಥಗಳನ್ನು ತ್ಯಾಗ ಮಾಡಿಯಾರು ಅಷ್ಟೇಯಲ್ಲ ತನ್ನ ಹಕ್ಕುಗಳನ್ನು ಪಡೆಯಲು ಪ್ರಾಣ ಕೊಡಲು ಕೂಡಾ ಅವರು ಸಿದ್ಧ. ಇಷ್ಟೆಲ್ಲ ಮಾಡಲು ಸಿದ್ಧನಿರುವ ನಮ್ಮ ಪ್ರಜೆ ಬಹಿಷ್ಕಾರಕ್ಕೆ ಹೆದರುತ್ತಾನೆಯೆ? ಬೇಕೆಂದೆ ಸ್ವೀಕರಿಸಿರುವ ತಪಶ್ಚರ್ಯಕ್ಕೆ ಬೆದರಿಕೆ ಒಡ್ಡುವ ಕಾರಣವೇನು? ಬಹಿಷ್ಕಾರದಂತಹ ಆತ್ಮಘಾತುಕ ಶಸ್ತ್ರವನ್ನು ಯಾರೂ ಹೆಚ್ಚು ದಿನ ಹಿಡಿದಿಟ್ಟುಕೊಳ್ಳಲಾಗುವುದಿಲ್ಲ,

ಹಿಡಿದಿಟ್ಟುಕೊಂಡರೂ ಹೆಚ್ಚು ಉಪಯೋಗಿಸುವುದು ಸಾಧ್ಯವಿಲ್ಲ ಹಾಗಾಗಿ ಈ ಹಾಳು ಜನ ಬಾರಿಸುತ್ತಿರುವ ಬಹಿಷ್ಕಾರ ಅನ್ನುವ ಘಂಟಾನಾದಕ್ಕೆ ಹೆದರುವ ಅಗತ್ಯವಿಲ್ಲ. ಅಸ್ಪೃಶ್ಯರು ತಾವು ಅಸ್ಪೃಶ್ಯರೆಂದು ಒಪ್ಪಿಕೊಳ್ಳುವುದಿಲ್ಲ ಹಾಗೆಯೆ ಸ್ವಾತಂತ್ರ್ಯ ಪಡೆಯಲು ನೀವು ಯೋಗ್ಯರೆಂದು ನಾವು ಒಪ್ಪಿಕೊಳ್ಳುವುದಿಲ್ಲವೆಂದು ಬ್ರಿಟಿಷರು ಮೇಲ್ಜಾತಿ ಜನಕ್ಕೆ ಹೇಳುತ್ತಾರೆ. ಇಂದು ದಲಿತರನ್ನು ಸರಿದಾರಿಗೆ ತರಲು ಮೇಲ್ಜಾತಿಯ ಜನ ಬಹಿಷ್ಕಾರದಂತಹ ಅಸ್ತ್ರವನ್ನು ಉಪಯೋಗಿಸುತ್ತಿರುವಂತೆ ಬ್ರಿಟಿಷ್ ಸರ್ಕಾರವನ್ನು ಸರಿ ದಾರಿಗೆ ತರಲು ಬಹಿಷ್ಕಾರ ಇಲ್ಲವೆ ಸ್ವದೇಶಿ ಚಳುವಳಿಯನ್ನು ಸಾಕಷ್ಟು ವರ್ಷ ನಡೆಸಲಾಯಿತು. ಆದರೆ ಇದೆಲ್ಲದರಿಂದ ಬ್ರಿಟಿಷ್ ಸರ್ಕಾರದ ಕೂದಲೆಳೆಯನ್ನೂ ಅಲ್ಲಾಡಿಸಲಾಗಲಿಲ್ಲ ಅನ್ನುವುದು ಎಲ್ಲರಿಗೂ ಗೊತ್ತು. ಇಬ್ಬರ ನಡುವೆ ಕೊಡುಕೊಳ್ಳಿಕೆಯ ಆರ್ಥಿಕ ಸಂಬಂಧವಿದ್ದರೆ ಬಹಿಷ್ಕಾರ ಯಶಸ್ವಿಯಾಗುತ್ತದೆ. ಏಕೆಂದರೆ ಕೊಡುವವನು ಯಾಚಕನ ಮೇಲೆ ಬಹಿಷ್ಕಾರ ಹಾಕಿದರೆ ಕೊಡುವವನಿಗೆ ಯಾವ ರೀತಿಯ ನಷ್ಟವೂ ಆಗುವುದಿಲ್ಲ ಆದರೆ ಇಬ್ಬರ ನಡುವಿನ ಸಂಬಂಧ ದಾನದ ಸ್ವರೂಪದ್ದಾಗಿರದೆ ವಿನಿಮಯ ಸ್ವರೂಪದ್ದಾಗಿದ್ದರೆ ಬಹಿಷ್ಕಾರ ಯಶಸ್ವಿಯಾಗುವುದಿಲ್ಲ. ಇಂತಹ ಅವಸ್ಥೆಯಲ್ಲಿ ಬಹಿಷ್ಕಾರ ಹಾಕುವುದೆಂದರೆ ವಿನಿಮಯದಿಂದ ಸಿಗುವ ಲಾಭವನ್ನು ಕಡೆಗಾಣಿಸುವುದು ಎಂದರ್ಥವಾಗುತ್ತದೆ. ಪ್ರತಿಯೊಬ್ಬರ ಕಣ್ಣು ಲಾಭದ ಮೇಲೇ ಇರುವುದರಿಂದ ಒಬ್ಬರ ಮೇಲೊಬ್ಬರು ಬಹಿಷ್ಕಾರ ಹಾಕಿ ವಿನಿಮಯದಿಂದಾಗುವ ಲಾಭ ಬಿಟ್ಟುಕೊಡಲು ಯಾರೂ ಸಿದ್ಧರಿರುವುದಿಲ್ಲ. ಹಾಗಿರದಿದ್ದರೆ ಗಿರಣಿ ಮಾಲಿಕರು ತಮ್ಮ ಕಾರ್ಮಿಕರ ಮೇಲೆ ಖಾಯಂ ಆಗಿ ಬಹಿಷ್ಕಾರ ಹಾಕುತ್ತಿದ್ದರು ಹಾಗೂ ಬ್ರಿಟಿಷ್ ವ್ಯಾಪಾರಿಗಳ ವಿರುದ್ಧ ಸ್ವಾತಂತ್ರ್ಯ ಪಡೆಯಲು ಹಾಕಿದ್ದ ಬಹಿಷ್ಕಾರ ಯಶಸ್ವಿಯಾಗುತ್ತಿತ್ತು. ಬಹಿಷ್ಕಾರ ಯಾಕೆ ಯಶಸ್ವಿಯಾಗುವುದಿಲ್ಲ? ಬಹಿಷ್ಕಾರದ್ಸಿಂದ ಕೇವಲ ಶತೃವಿಗೇ ಗಾಯ ಮಾಡುವಂತಾಗಿದ್ದರೆ ಇದರಂತಹ ಬೇರೆ ಶಸ್ತ್ರವಿರುತ್ತಿರಲಿಲ್ಲ ಆದರೆ ಈ ಶಸ್ತ್ರದಿಂದ ಶತೃವಿನ ಜೊತೆ ನಮಗೂ ಗಾಯಗಳಾಗುತ್ತವೆ. ಬಹಿಷ್ಕಾರ ಹಾಕುವವರಿಗೆ ಒಂದೋ ಬಹಿಷ್ಕಾರ ಅನ್ನುವುದು ಯಾವ ರೀತಿಯ ಅಸ್ತ್ರ ಅನ್ನುವುದು ಗೊತ್ತಿರಲಿಕ್ಕಿಲ್ಲ ಇಲ್ಲವೆ ದಲಿತ ಸಮಾಜವು ಪರೋಪಜೀವಿಯಾಗಿದ್ದು ನಾವು ಮೇಲ್ಜಾತಿಯ ಜನ ಅವರನ್ನು ಸಾಕುತ್ತೇವೆ ಅನ್ನುವ ತಪ್ಪು ಕಲ್ಪನೆ ಮೇಲ್ಜಾತಿಯ್ವರದ್ದಾಗಿದೆ. ಹಿಂದೂ ಸಮಾಜದ ರಚನೆ ಇತರ ಸಮಾಜದಂತೆ ವಿನಿಮಯದ ಮೇಲೆಯೇ ಆಗಿದೆ ಅನ್ನುವಾಗ ಒಬ್ಬರು ಇನ್ನೊಬ್ಬರಿಗೆ ಉಪಕಾರ ಮಾಡುತ್ತಾರೆ ಅಂದುಕೊಳ್ಳುವ ಅಗತ್ಯವಿಲ್ಲ. ಯಜಮಾನನು ಕೆಲಸದವನನ್ನು ಕೆಲಸಕ್ಕಿಟ್ಟುಕೊಂಡು, 'ನನ್ನ ಮನೆಯಲ್ಲಿ ಕೆಲಸ ಮಾಡಿ ನೀನು ನನ್ನ ಮೇಲೆ ಉಪಕಾರ ಮಾಡುತ್ತಿಲ್ಲ' ಎಂದು ದಿಮಾಕಿನಲ್ಲಿ ಹೇಳುವಾಗ 'ನಾನು ನಿಮ್ಮ ಮೇಲಂತೂ ಉಪಕಾರ ಮಾಡುತ್ತಿಲ್ಲ ಆದರೆ ನನ್ನನ್ನು ಕೆಲಸಕ್ಕಿಟ್ಟುಕೊಂಡು ನೀವು ಕೂಡ ನನ್ನ ಮೇಲೆ ಉಪಕಾರ ಮಾಡುತ್ತಿಲ್ಲ ಎಂದು ಕೆಲಸದವನು ಯಜಮಾನನಿಗೆ ಹೇಳಬಹುದು. ತಾವು ಮಾಡಬಹುದಾದಂತಹ ಕೆಲಸವನ್ನು ಇಲ್ಲವೆ ತನಗೆ ಬರುವ ಕೆಲಸವನ್ನು ಸ್ವಾಭಾವಿಕವಾಗಿ ಯಾರೂ ಮತ್ತೊಬ್ಬರಿಂದ ಮಾಡಿಸಿಕೊಳ್ಳುವುದಿಲ್ಲ, ತಮ್ಮ ಕೈಯಿಂದಾಗದ ಕೆಲಸ ಮಾಡಿಸಿಕೊಳ್ಳಲು ಮತ್ತೊಬ್ಬರ ಅಗತ್ಯವುಂಟಾಗುತ್ತದೆ. ಯಜಮಾನ ಕೆಲಸದವನ ಜೊತೆ ಸಂಬಂಧ ಕಳೆದುಕೊಂಡರೆ ಕೆಲಸದವನಿಗೆ ತಾಪತ್ರಯವಾಗುತ್ತದೆ ಆದರೆ ಕೆಲಸದವನು ಯಜಮಾನನ ಜೊತೆ ಸಂಬಂಧ ಕಡಿದುಕೊಂಡರೆ ಹಣ ಇದ್ದು ಕೂಡ ಯಜಮಾನನಿಗೆ ತೊಂದರೆಯುಂಟಾಗುತ್ತದೆ. ಒಟ್ಟಿನಲ್ಲಿ ಇಬ್ಬರಿಗೂ ಪರಸ್ಪರರ ಅಗತ್ಯವಿರುವುದರಿಂದಲೇ ಇಬ್ಬರಲ್ಲಿ ಸಂಬಂಧ ಗಟ್ಟಿಯಾಗುತ್ತದೆ. ಹಾಗೆ ಸ್ವಾರ್ಥದ ಅಡಿಪಾಯದ ಮೇಲೆ ಬೆಳೆಸುವ ಈ ಸಂಬಂಧ ಸಾಮಾನ್ಯವಾಗಿ ಯಾರಿಂದಲೂ ಕಡಿದುಕೊಳ್ಳಲಾಗುವುದಿಲ್ಲ, ಹಾಗೇನಾದರೂ ಆದರೆ ಇಬ್ಬರಿಗೂ ನಷ್ಟವಾಗುತ್ತದೆ. ಇದೇ ಉದಾಹರಣೆ ದಲಿತರು ಹಾಗೂ ಮೇಲ್ಜಾತಿ ಜನರ ನಡುವಿನ ಸಂಬಂಧಕ್ಕೂ ಅನ್ವಯಿಸುತ್ತದೆ. ಮೇಲ್ಜಾತಿ

ಜನರ ಮನೆಯಲ್ಲಿ ಕೆಲಸ ಮಾಡುವ ದಲಿತರು ನಾವು ಇವರ ಮೇಲೆ ಉಪಕಾರ ಮಾಡುತ್ತೇವೆ ಅನ್ನುವುದಿಲ್ಲ, ಹಾಗೆಯೇ ಮೇಲ್ಜಾತಿ ಜನ ಕೂಡ ನಾವು ನಿಮ್ಮನ್ನು ಸಾಕುತ್ತೇವೆ ಅನ್ನುವ ಅಹಂಕಾರ ತೋರಿಸುವುದು ಒಳ್ಳೆಯದಲ್ಲ. ಇಬ್ಬರ ನಡುವಣ ಸಂಬಂಧ ಕೇವಲ ಸ್ವಾರ್ಥವಾಗಿದೆ. ಇಬ್ಬರೂ ಒಬ್ಬರನ್ನೊಬ್ಬರು ಬಿಟ್ಟು ಬಾಳುವುದಿಲ್ಲ ಹಾಗಾಗಿ ಇಂತಹ ವ್ಯವಸ್ಥೆಯಿಂದ ಬೆಸೆದಿರುವಂತಹ ಜನ ಬಹಿಷ್ಕಾರ ಹಾಕಲು ಸಾಧ್ಯವಿಲ್ಲ. ಹಾಕಿದರೂ ಬಹಿಷ್ಕಾರ ಹೆಚ್ಚು ದಿನ ಉಳಿಯಲಾರದು.

ಮೇಲ್ಜಾತಿ ಹಾಗೂ ದಲಿತರ ನಡುವಿನ ಸಂಬಂಧ ಸ್ವಾರ್ಥ ಭಾವನೆಯಿಂದ ಕೂಡಿದ್ದರೂ ಈ ಎರಡು ಜಾತಿಯ ಸ್ಥಿತಿ ಹಾಗೂ ಆರ್ಥಿಕ ಮಟ್ಟದಲ್ಲಿ ಸ್ವಲ್ಪ ವ್ಯತ್ಯಾಸವಿದೆ ಅನ್ನುವುದನ್ನು ಸ್ವೀಕರಿಸಬೇಕು ಹಾಗಾಗಿ ಮೇಲ್ಜಾತಿಯ ಜನ ದಲಿತರಿಗಾಗಿ ಅಪಾಯಕಾರಿಗಳಾದಷ್ಟು ದಲಿತರು ಮೇಲ್ಜಾತಿಯವರಿಗೆ ಅಪಾಯಕಾರಿಯಾಗಲಾರರು. ಕೆಳಮಟ್ಟದ ಆರ್ಥಿಕ ಸಾಮಾಜಿಕ ಪರಿಸ್ಥಿತಿ ಇರುವ ಜನ ತಮಗಿಂತ ಆರ್ಥಿಕ ಹಾಗೂ ಸಾಮಾಜಿಕ ದೃಷ್ಟಿಯಿಂದ ಮೇಲ್ಪಟ್ಟ ಜನರ ಜೊತೆ ಹೋರಾಡುವ ಪ್ರಸಂಗ ಬಂದರೂ ಕೆಳವರ್ಗದವರಿಗೆ ಆ ಹೋರಾಟವನ್ನು ಕೊನೆಯ ಹಂತಕ್ಕೆ ತಲುಪಿಸುವುದು ಕಠಿಣವಾಗುತ್ತದೆ. ಶಕ್ತಿವಂತರೊಂದಿಗೆ ಹೋರಾಡಿ ಹೋಗುವುದೆಲ್ಲಿಗೆ? ಎಂದು ಯೋಚಿಸುವ ಪರಿಸ್ಥಿತಿ ಕೆಳವರ್ಗದವರಿಗೆ ಬರುವುದರಿಂದ ಮೇಲ್ವರ್ಗದವರ ಜೊತೆ ಹೋರಾಡಿ ಸಿಗುವ ಶಾಶ್ವತವಾದ ಹಕ್ಕುಗಳನ್ನೂ ಅವರು ಬಿಟ್ಟುಬಿಡಬೇಕಾಗುತ್ತದೆ. ಇದರ ಉತ್ತಮ ಉದಾಹರಣೆ ಮಾಹಾಭಾರತದಲ್ಲಿ ಕಾಣಸಿಗುತ್ತದೆ. ಕೌರವ ಪಾಂಡವರ ಸೈನ್ಯ ಯುದ್ಧಕ್ಕಾಗಿ ಕುರುಕ್ಷೇತ್ರದಲ್ಲಿ ಸಿದ್ಧವಾಗಿದ್ದ ಸಮಯ, ಯುದ್ಧವನ್ನಾರಂಭಿಸುವ ಮುನ್ನ ಭೀಷ್ಮ, ದ್ರೋಣ, ಹಾಗೂ ಶಲ್ಯರಂತಹ ಮಹಾರಥಿಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳಬೇಕು ಎಂದು ಯುಧಿಷ್ಠಿರನಿಗೆ ಅನಿಸುತ್ತದೆ. ರಣಭೂಮಿಯ ಮೇಲೆ ತನ್ನ ಕವಚ ಹಾಗೂ ಶಸ್ತ್ರಗಳನ್ನಿಟ್ಟು ಆತ ಅವರಿದ್ದಲ್ಲಿಗೆ ಹೋಗುತ್ತಾನೆ. ಎಲ್ಲ ಶಿಷ್ಟಾಚಾರಗಳನ್ನು ವಿನಮ್ರನಾಗಿ ಪಾಲಿಸಿದ ಯುಧಿಷ್ಠಿರನಿಗೆ ಅವರು ಆಶೀರ್ವಾದ ಕೊಡಲೇಬೇಕಾಗುತ್ತದೆ. ಆದರೆ ಆಶೀರ್ವಾದ ಕೊಡುವಾಗ ಮಾತ್ರ ಅವರಿಗೆ ತಮ್ಮ ಪರಿಸ್ಥಿತಿ ಅರ್ಥವಾಗುತ್ತದೆ ಹಾಗೂ 'ನಮ್ಮದು ಸತ್ಯದ ಪರ, ಕೌರವರದ್ದು ಅಸತ್ಯದ ಪರ ಅನ್ನುವುದು ಗೊತ್ತಿದ್ದರು ಸತ್ಯದ ಪರವಾಗಿ ನೀವೇಕೆ ಯುದ್ಧ ಮಾಡುತ್ತಿಲ್ಲ' ಅನ್ನುವ ಪ್ರಶ್ನೆ ಯುಧಿಷ್ಠಿರ ಕೇಳಿಬಿಡುತ್ತಾನೇನೋ ಅಂದುಕೊಂಡು ಅವರಿಗೆ ನಾಚಿಕೆಯಾಗಿ ಅವನು ಕೇಳುವ ಮೊದಲೆ

अर्थस्य पुरुषा दासो दासस्त्वर्थो न कस्यचित।
इति सत्य माहाराज बद्धोस्मर्थेनकओरवैः।

'ಮನುಷ್ಯ ಹಣದ ಗುಲಾಮ, ಹಣ ಯಾರ ಗುಲಾಮವೂ ಅಲ್ಲ. ಅನ್ನುವ ಅರ್ಥದ ಪ್ರಕಾರವಾಗಿರುವುದರಿಂದ ಹೇ ಮಹಾರಾಜ ಯುಧಿಷ್ಠಿರನೆ, ಕೌರವರು ನಮ್ಮನ್ನು ಹಣಬಲದಿಂದ ಬಂಧಿಸಿಬಿಟ್ಟಿದ್ದಾರೆ' ಎಂದು ಹೇಳುತ್ತಾರೆ. ಇಂತಹ ಪ್ರಸಂಗ ದಲಿತರ ಮೇಲ್ಯಾಕೆ ಬರಲಾರದು ಅನ್ನುವುದಕ್ಕೆ ಈ ಉದಹರಣೆ.

ಅಂತಹ ಪ್ರಸಂಗ ಬಂದಿದ್ದೇ ಆದರೆ ಅವರ ಆರ್ಥಿಕ ಮಟ್ಟ ಹೇಗೆ ಸುಧಾರಿಸಬಹುದು ಹಾಗೂ ಅವರು ಸ್ವಾವಲಂಬಿಗಳಾಗುವುದು ಹೇಗೆ ಅನ್ನುವುದನ್ನು ಯೋಚಿಸಬೇಕಾಗಿದೆ. ಇಂದು ಅದೇ ವಿಷಯದ ಬಗ್ಗೆ ನಮ್ಮ ವಿಚಾರಗಳನ್ನು ತಮ್ಮ ಮುಂದಿಡಲು ಯೋಚಿಸಿದ್ದೇನೆ.

ಮೊದಲಿಗೆ ದಲಿತರಲ್ಲಿರುವ ಬೇರೆ ಬೇರೆ ಜಾತಿಗಳಲ್ಲಿ ಈ ಬಹಿಷ್ಕಾರದ ಪರಿಣಾಮ ಹೆಚ್ಚು ಯಾವ ಜಾತಿಯ ಮೇಲಾಗಬಹುದು ಅನ್ನುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಚಮ್ಮಾರರು ಹಾಗೂ ಢ್ವಾರರು ವ್ಯಾಪಾರಸ್ಥರು, ಹಾಗಾಗಿ ಅವರ ಮೇಲೆ ಬಹಿಷ್ಕಾರದ ಯಾವುದೇ ಪರಿಣಾಮವಾಗಲಾರದು. 'ನಿಮ್ಮ ಚಪ್ಪಲಿ ಮಾಂಗುವುದಿಲ್ಲ, ಹಳೆಯ ಚಪ್ಪಲಿಗಳನ್ನು ಹೊಲೆದು ಕೊಡುವುದಿಲ್ಲ' ಅನ್ನುತ್ತ ಇವರೇ ಮೇಲ್ಜಾತಿಯವರ ಮೇಲೆ ಬಹಿಷ್ಕಾರ ಹಾಕಿದರೆ ಇವರ ಬಹಿಷ್ಕಾರ ಪರಿಣಾಮಕಾರಿಯಾಗಿರುತ್ತದೆ. ಅದರಂತೆ ಮಹರ್ ಕೂಡ ವ್ಯಾಪಾರಸ್ಥರೆ, ಇವರುಗಳು ಬೇರೆ ಬೇರೆ ಹಗ್ಗಗಳು ಹಾಗೂ ಕಸಬರಿಗೆಗಳನ್ನು ತಯಾರಿಸುವುದನ್ನು ಬಿಟ್ಟರೆ ಮೇಲ್ಜಾತಿಯವರಿಗೆ ತೊಂದರೆಯಾಗುತ್ತದೆ. ಎತ್ತಿಗೆ ಮೂಗುದಾರ ಹಾಗೂ ಮಟ್ಟಿಗೆ ಎಳೆದಾರ ಇವು ರೈತನ ಆಯುಧಗಳಲ್ಲಿ ಮುಖ್ಯವಾದವುಗಳು. ಇವುಗಳನ್ನು ತಯಾರಿಸುವುದು ಮಾದಿಗರ ಕೈಯಲ್ಲಿದೆ ಹಾಗಾಗಿ ಇವರ ಮೇಲೆ ಬಹಿಷ್ಕಾರ ಹಾಕುವುದು ಸಲ್ಲದು. ಮಹರ್‌ರೇ ಇವರ ಮೇಲೆ ಬಹಿಷ್ಕಾರ ಹಾಕಿದರೆ ದಲಿತರೆದುರು ಇವರು ತಲೆಬಾಗಿಸಬೇಕಾಗುತ್ತದೆ. ಭಂಗಿಗಳಂತೂ ಮೇಲ್ಜಾತಿಯವರನ್ನು ಎಂದೇ ಕ್ಷಣದಲ್ಲಿ ತಲೆ ಬಾಗಿಸುವಂತೆ ಮಾಡಿಯಾರು. ಭಂಗಿಗಳ ಕೆಲಸ ಕೆಳಮಟ್ಟದ್ದಾಗಿದ್ದರೂ ಆ ಕೆಲಸದ ಉಪಯುಕ್ತತೆ ಎಷ್ಟಿದೆಯೆಂದರೆ ಅವರು ಮನಸ್ಸು ಮಾಡಿದರೆ ಊರಲ್ಲೆಲ್ಲ ರೋಗ ಹರಡಿ ಊರಿಗೆ ಊರೇ ನಾಶವಾಗಲು ಕಾರಣರಾದಾರು. ಈಗ ಮಾಂಗ್‌ರ ಪರಿಸ್ಥಿತಿ ಏನಿದೆ ಅನ್ನುವುದನ್ನು ನೋಡೋಣ. ಮಾಂಗ್‌ರಿಗೆ ಅವರದೇ ಜಾತಿಯ ವಿಶಿಷ್ಟ ವ್ಯಾಪಾರ ಅನ್ನುವುದಿಲ್ಲ. ಕನಿಷ್ಟ ದರ್ಜೆಯದ್ದಾದರೂ ಸರ್ಕಾರಿ ಕೆಲಸದಲ್ಲಿ ಅವರಿಗೊಂದು ಸ್ಥಾನವಿದೆ. ಸರ್ಕಾರಿ ಕೆಲಸವೇ ಅವರ ಬದುಕಿನ ಆಧಾರ. ಸರ್ಕಾರಿ ನೌಕರನಿಗೆ ಯಾರ ಭಯವೂ ಇಲ್ಲ. ನಾವಾಯ್ತು ನಮ್ಮ ಸರ್ಕಾರಿ ಕೆಲಸವಾಯ್ತು. ಬೇರೆಯವರ ಬಗ್ಗೆ ಯೋಚಿಸಿ ನಮಗೇನಾಗುವುದಿದೆ ಎಂದು ಮಾಂಗ್ ಯೋಚಿಸುವಂತಾದಾಗ ಮಾತ್ರ ನಾವೂ ಬಹಿಷ್ಕಾರಕ್ಕೆ ಹೆದರುವುದಿಲ್ಲ ಎಂದವರು ಹೇಳಬಹುದು. ಆದರೆ ಅವರ ದುರ್ದೈವದಿಂದ ಈಗಂತೂ ಅವರು ಹಾಗೆ ಹೇಳುವಂತಿಲ್ಲ ಎಂದು ನಮಗನಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಮಾಂಗ್‌ರ ವತನ. ಈ ವತನದಿಂದ ಮಾಂಗ್ ಮೇಲ್ಜಾತಿಯವರ ಅಧೀನರಾಗಿದ್ದಾರೆ. ಮೇಲ್ಜಾತಿಯವರ ಅಧೀನ ಯಾಕಂದೆ ಅಂದರೆ ಮಾಂಗ್ ಸರ್ಕಾರಿ ಕಚೇರಿಗಳಲ್ಲಿ ಯಾರ ಕೈಕೆಳಗೆ ಕೆಲಸ ಮಾಡುತ್ತಾರೋ ಅವರೆಲ್ಲ ಮೇಲ್ಜಾತಿಯವರೆ. ಈ ಮೇಲ್ಜಾತಿಯ ಜನ ಇವರಿಂದ ಕೇವಲ ಸರ್ಕಾರಿ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕಷ್ಟೆ ತಮ್ಮ ಅಧಿಕಾರವನ್ನು ಉಪಯೋಗಿಸದೆ ಮಾಂಗ್ ತಮ್ಮ ಮಿತಿಯಲ್ಲಿರುತ್ತಾರೋ ಇಲ್ಲವೋ ಅನ್ನುವುದರ ಮೇಲೊಂದು ಕಣ್ಣಿಟ್ಟು ಹಾಗೇನಾದರೂ ಮಿತಿಮೀರಲು ಪ್ರಯತ್ನಿಸಿದರೆ ಶಿಕ್ಷೆ ಕೊಡುವ ಮಟ್ಟದಲ್ಲಿ ಕೂಡ ತಮ್ಮ ಅಧಿಕಾರವನ್ನು ಉಪಯೋಗಿಸುತ್ತಾರೆ. ಸರ್ಕಾರಿ ಕೆಲಸಗಳನ್ನು ಸಕಾಲಿಕವಾಗಿ ಮಾಡಿ ಮುಗಿಸದಿದ್ದರೆ ಮಾಂಗ್‌ರಿಗೆ ಶಿಕ್ಷೆ ಸಿಗುವ ಒಂದೆರಡು ಉದಾಹರಣೆಗಳನ್ನು ಕೊಡಬಹುದೇನೋ ಅದರ ಜೊತೆಗೆ ಊರ ಪಾಟೀಲನ ಸೌದೆ ಕಡಿಯಲಿಲ್ಲವೆಂದೋ, ಮಾಮಲೆದಾರನ ಕುದುರೆಗೆ ಹುಲ್ಲು ಹಾಕಲಿಲ್ಲವೆಂದೋ ಕುಲಕರ್ಣಿಯ ಹೊಲ ಉಳಲಿಲ್ಲವೆಂದೋ ಊರಿನಲ್ಲಿ ಬೇಡಿ ತಿನ್ನುವುದನ್ನು ಬಿಟ್ಟನೆಂದೋ, ಸತ್ತ ಜಾನುವಾರಿನ ಮಾಂಸ ತಿನ್ನುವುದನ್ನು ಬಿಟ್ಟನೆಂದೋ ಊರಿನ ಜನತೆಗೆ ಜೋಹಾರ (ನಮಸ್ಕಾರ) ಹೇಳಲಿಲ್ಲವೆಂದೋ ಇಲ್ಲ ಮೈಮೇಲೆ ಒಳ್ಳೆಯ ಬಟ್ಟೇ ಹಾಕಿಕೊಂಡನೆಂದೋ ಸಿಗುವ ಶಿಕ್ಷೆಯ ಅನೇಕ ಉದಾಹರಣೆಗಳನ್ನು ಕೊಡಬಹುದು. ಈ ಎಲ್ಲ ವಿಷಯಗಳಿಗೂ ಸರ್ಕಾರಿ ಕೆಲಸಕ್ಕೂ ಯಾವುದೇ ಸಂಬಂಧವಿಲ್ಲ. ಒಂದು ಪಕ್ಷ ಮುಸಲ್ಮಾನ ಪಾಟೀಲ ಇಲ್ಲವೆ ಪಾರ್ಸಿ ಕುಲಕರ್ಣಿಯಾಗಿದ್ದಿದ್ದರೆ ಮಾಂಗ್‌ರಿಗೆ ಸುಖದ ನೆರಳು ಸಿಗುತ್ತಿತ್ತು, ಇವರುಗಳು ಕೇವಲ ಸರ್ಕಾರಿ ಕೆಲಸ ಮಾಡದಿದ್ದರೆ ಮಾತ್ರ ದಂಡಿಸಿರುತ್ತಿದ್ದರು. ಮಾಂಗ್ ಒಳ್ಳೆ ಬಟ್ಟೇ ಹಾಕಿಕೊಂಡಿದ್ದಕ್ಕೊ, ಬೇಡಿ ತಿನ್ನುವುದನ್ನು

ಬಿಟ್ಟಿದ್ದಕ್ಕೊ ಇಲ್ಲ ಸತ್ತ ಜಾನುವಾರಿನ ಮಾಂಸ ತಿನ್ನುವುದನ್ನು ಬಿಟ್ಟಿದ್ದಕ್ಕೊ ದಂಡಿಸುತ್ತಿರಲಿಲ್ಲ. ಮಾಂಗ್ ಅಶುಚಿಯಾಗಿರುವುದನ್ನು ಬಿಟ್ಟು ಶುಚಿಯಾಗಿರಲು ಪ್ರಯತ್ನಿಸಿದರೆ ಮುಸಲ್ಮಾನನ ಪಾರ್ಸಿಯ ಮಾನಹನಿಯಾಯಿತು ಇಲ್ಲವೆ ಮಾಂಗ್‌ರಿಗೆ ಅಹಂಕಾರ ಬಂದಿದೆ ಎಂದವರು ಅಂದುಕೊಳ್ಳುತ್ತಿರಲಿಲ್ಲ. ಆದರೆ ಅದೇ ಮೇಲ್ಜಾತಿಯ ಹಿಂದೂ ಪಾಟೀಲ ಹಾಗೂ ಕುಲಕರ್ಣಿಗೆ ಮಾಂಗ್ ತನ್ನ ಮಿತಿಮೀರಿದರೆ ಸಿಟ್ಟು ಬರುತ್ತದೆ ಹಾಗೂ ಸಿಟ್ಟಿನ ಭರದಲ್ಲಿ ಇವರಿಬ್ಬರೂ ಯೋಜನೆಗಳನ್ನು ತಯಾರಿಸಿ ವತನದಿಂದ ಸಿಕ್ಕಿರುವ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತ ಮಾಂಗ್ ಸರ್ಕಾರಿ ಕೆಲಸಗಳನ್ನು ಮಾಡುವುದಿಲ್ಲ ಎಂದು ಮಾಮಲೆದಾರರಿಗೆ ಸುಳ್ಳು ರಿಪೋರ್ಟ್ ಕೊಡುತ್ತಾರೆ. ಮಾಮಲೆದಾರನು ಈ ಆರೋಪಗಳಿಗೆ ತಲೆಬಾಗಿ ಅವುಗಳನ್ನು ರಾಜ್ಯಕ್ಕೆ ಕಳಿಸುತ್ತಾನೆ ರಾಜ್ಯ ಶಾಸನ ಮಾಂಗ್‌ರನ್ನು ಸಸ್ಪೆಂಡ್ ಮಾಡಿ ಎಂದು ಆಜ್ಞೆ ಹೊರಡಿಸುತ್ತದೆ. ಕೇವಲ ಮೇಲಿನ ಅಧಿಕಾರಿಗಳು ಮೇಲ್ಜಾತಿಯವರಾಗಿರುವುದರಿಂದ ಹಾಗೂ ಸುಳ್ಳು ಧರ್ಮಾಭಿಮಾನದಿಂದ ಮೆರೆಯುತ್ತಿರುವುದರಿಂದ ವತನದ ಗದೆ ಮಾಂಗ್‌ರ ತಲೆಗೆ ಬಿದ್ದು ಬಿದ್ದು ಮಾಂಗ್ ಮೇಲ್ಜಾತಿ ಅಧಿಕಾರಿಗಳ ಅಧೀನರಾಗಿರುವುದನ್ನು ತಪ್ಪಿಸಲಾಗುತ್ತಿಲ್ಲ. ವತನದಿಂದ ಮಾಂಗ್ ಮೇಲ್ಜಾತಿಯವರ ಅಧೀನರಾದಂತೆ ಅವರು ಮೇಲ್ಜಾತಿ ಜನರನ್ನು ಅವಲಂಬಿಸಿರಬೇಕಾಗುತ್ತದೆ. ಮಾಂಗ್ ವತನದಾರ ಕಾರ್ಮಿಕರು ಅನ್ನುವ ಹೆಸರಿನಲ್ಲಿ ಸರ್ಕಾರಿ ಕೆಲಸದಲ್ಲಿದ್ದಾರೆ ಆದರೆ ಈ ಕೆಲಸದಿಂದ ಸಿಗುವ ಸಂಬಳ ಸರ್ಕಾರದಿಂದ ಸಿಗದೆ ಈ ಮೇಲ್ಜಾತಿ ಜನರಿಂದ ಪಡೆದುಕೊಳ್ಳಬೇಕಾಗುತ್ತದೆ. ವತನದ ವ್ಯವಸ್ಥೆ ಈ ರೀತಿಯಾಗಿರುವುದರಿಂದ ಮಾಂಗ್ ಸುಲಭವಾಗಿ ಮೇಲ್ಜಾತಿಯವರ ಮೇಲೆ ಅವಲಂಬಿತರಾಗಿದ್ದಾರೆ. ಕೆಲಸ ಸರ್ಕಾರದ್ದಾಗಿದ್ದರೂ ಸಂಬಳ ಕೊಡಬೇಕೇ ಇಲ್ಲವೆ ಅನ್ನುವುದನ್ನು ನಿರ್ಧರಿಸುವ ಅಧಿಕಾರ ಜನತೆಯ ಕೈಯಲ್ಲಿದ್ದು ಜನತೆ ಸುಳ್ಳು ಧರ್ಮಾಭಿಮಾನದಿಂದ ಸುತ್ತುವರೆದಿರುವುದರಿಂದ ಮಾಂಗ್ ತಮ್ಮ ಮಿತಿಯಲ್ಲಿರುತ್ತಾರೋ ಇಲ್ಲವೋ ಅನ್ನುವ ಎಚ್ಚರಿಕೆ ವಹಿಸದೆ ಸಂಬಳ ಕೊಡುವುದಿಲ್ಲ. ಒಟ್ಟಿನಲ್ಲಿ ಅಧಿಕಾರಿಗಳು ಹಾಗೂ ಜನತೆಯ ನಡುವೆ ಕತ್ತರಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಮಾಂಗ್ ಈ ವತನ ವ್ಯವಸ್ಥೆಯಿಂದ ಮೇಲ್ಜಾತಿಯವರ ಗುಲಾಮಗಿರಿಯನ್ನು ಒಪ್ಪಿಕೊಳ್ಳಬೇಕಾಗಿದೆ. ಮಾಂಗ್ ಈ ಗುಲಾಮಗಿರಿಯಿಂದ ಮುಕ್ತರಾಗಬೇಕೆಂದರೆ ಆರ್ಥಿಕವಾಗಿ ಸ್ವತಂತ್ರರಾಗಬೇಕು, ಅದಕ್ಕೇ ನಾವು ಮಾಂಗ್‌ರ ವತನದಲ್ಲಿ ಬದಲಾವಣೆ ಮಾಡಿ ಎಂದು ಹೇಳುವುದು. ಅದರಲ್ಲಿ ಮೊದಲನೆಯ ಬದಲಾವಣೆಯೆಂದರೆ ಮಾಂಗ್ ತಮಗೆ ಉಡುಗೊರೆಯಾಗಿ ಸಿಕ್ಕಿರುವ ಜಮೀನುಗಳ ಮೇಲೆ ತೆರಿಗೆ ಕಟ್ಟಿ ಜಮೀನನ್ನು ತಮ್ಮಲ್ಲೇ ಇಟ್ಟುಕೊಳ್ಳುವ ವ್ಯವಸ್ಥೆಯಾದರೆ ಮಾಂಗ್ ವತನಿ ಕೆಲಸಗಳನ್ನು ತಕ್ಷಣ ಬಿಟ್ಟುಬಿಡಬೇಕು. ಆಗಲೇ ಮೇಲ್ಜಾತಿಯವರ ಆಧೀನರಾಗಿರುವ ಹಾಗೂ ಅವಲಂಬಿತರಾಗಿರುವ ಮಾಂಗ್ ಆರ್ಥಿಕವಾಗಿ ಸ್ವತಂತ್ರರಾದಾರು. ಇಷ್ಟೆಲ್ಲ ಮಾಡಲು ಸಾಧ್ಯವಾಗದಿದ್ದರೂ ಅವರು ಜನತೆಯಿಂದ ಸಂಬಳ ಪಡೆಯದೆ ಸರ್ಕಾರದಿಂದ ಸಂಬಳ ಪಡೆಯುವಂತಾದರೆ ಅವರು ಮೇಲ್ಜಾತಿಯವರ ಅಧೀನರಾದರೂ ಅವಲಂಬಿತರಾಗುವ ಅವಶ್ಯಕತೆಯಿಲ್ಲ. ಈ ಸುಧಾರಣೆಗಳಾದರೆ ಬಹಿಷ್ಕಾರದ ಪರಿಣಾಮ ನಮ್ಮ ಮೇಲಾಗಬಹುದು ಅನ್ನುವ ಭಯ ಮಾಂಗ್‌ರಿಗಿರಲಾರದು.

ವತನವನ್ನು ಬಿಟ್ಟು ಸ್ವತಂತ್ರರಾಗಿ ಎಂದು ಮಾಂಗ್‌ರಿಗೆ ಹೇಳಿದರೆ ವತನ ಬಿಟ್ಟರೆ ನಮಗೆ ಬೇರೆ ಮಾರ್ಗವಾದರೂ ಯಾವುದು? ಅನ್ನುವ ಪ್ರಶ್ನೆ ಮಾಂಗ್‌ರಿಗೆ ಕಾಡುತ್ತದೆ. ನಿಜ ಹೇಳಬೇಕೆಂದರೆ ಮಾಂಗ್‌ರಿಗೆ ಈ ಪ್ರಶ್ನೆ ಕಾಡಬಾರದು, ಹುಟ್ಟುವ ಪ್ರತಿಯೊಬ್ಬ ಮನುಷ್ಯ ತನ್ನ ಹೊಟ್ಟೆ ಹೊರೆದುಕೊಳ್ಳುವ ವ್ಯಾಪಾರವನ್ನು ತನ್ನ ಜೊತೆ ತಂದಿರುತ್ತಾನೆ. ಹುಟ್ಟಿದ ಮೇಲೆ ಅವನು ತನ್ನ ಅರ್ಹತೆಯನುಸಾರವಾಗಿ ಯಾವುದಾದರೊಂದು ಕೆಲಸವನ್ನು ಮಾಡಿಯೇ ಮಾಡುತ್ತಾನೆ. ಹೀಗಿರುವಾಗ ಮಾಂಗ್‌ರೇಕೆ ಮಾಡಬಾರದು? ಆರ್ಥಿಕ ಸ್ವಾತಂತ್ರ್ಯ

ಪಡೆಯಲು ಮಾಂಗ್‌ರಿಗೆ ನಾನಿಂದು ಒಂದೆರಡು ಉಪಾಯಗಳನ್ನು ಹೇಳುತ್ತೇನೆ. ಮಾಂಗ್‌ರೆ ನೀವು ಮೊದಲು ನಿಮ್ಮ ಬೇರೆ ವಸತಿಗಳನ್ನು ತಯಾರಿಸಿಕೊಳ್ಳಿ, ಮಾಂಗ್‌ರಿಗೆ ತಮ್ಮೂರಿನ ಬಗ್ಗೆ ಬಹಳ ಅಭಿಮಾನವಿದೆ. ಅಪ್ಪನ ಊರು ಬಿಟ್ಟು ಹೋಗುವುದೆಂದರೆ ಅವರ ಜೀವಕ್ಕೆ ಬರುತ್ತದೆ ಅನ್ನುವುದನ್ನು ನಾನು ಬಲ್ಲೆ, ತನ್ನ ತಂದೆ ಸತ್ತ ಊರಿನಲ್ಲೇ ತಾನೂ ಸಾಯುವುದು ತನ್ನ ಕರ್ತವ್ಯ ಎಂದವರು ತಿಳಿಯುತ್ತಾರೆ. ಅವರಿರುವ ಊರಿನ ಜನ ಅವರನ್ನು ಸನ್ಮಾನದಿಂದ ನೋಡಿಕೊಂಡರೆ ಆ ಊರಿನ ಬಗ್ಗೆ ಅಭಿಮಾನ ಪಡುವುದು ಸರಿ ಆದರೆ ಊರಿನ ಜನ ಮಾಂಗ್‌ರನ್ನು ಕಸಕ್ಕೆ ಸಮಾನ ಕಂಡರೆ ಸಣ್ಣಪುಟ್ಟ ಕಾರಣಗಳಿಗೆ ಅವರನ್ನು ಊರಿನಿಂದ ಹೊರಗೆ ಹಾಕಿದರೆ, ಊರಿನ ಜನ ಅವರೊಡನೆ ಬೈಗಳಿಂದಲೇ ಮಾತನಾಡಿದರೆ ಅಂತಹ ಊರಿನಲ್ಲೇ ಇರುವಂತಹ ಹಠ ಮಾಂಗ್‌ರಿಗಿದ್ದರೆ ನಾಚಿಕೆಯ ವಿಷಯ. ಇಂತಹ ದಬ್ಬಾಳಿಕೆಯ ಕಥೆಗಳನ್ನು ಮಾಂಗ್‌ರಿಗೆ ಯಾರೂ ಹೇಳಬೇಕಿಲ್ಲ.ಸೊಲ್ಲಾಪುರ ಜಿಲ್ಲೆಯಲ್ಲಿ ಮಾಸಣೂರ, ರಾತಂಜನ್, ರಾಳೆಸರ್, ಪಾನಗಾಂವ್, ಸುರಡಿ, ಮಾಲವಂಡಿ, ಚಿರಖಡೆ, ಕಾಸೆಗಾಂವ್, ಶಿರಬಾಬಿಯಂತಹ ಊರುಗಳಲ್ಲಿ ಮಾಂಗ್‌ರ ಮೇಲೆ ಯಾವ ರೀತಿಯಲ್ಲಿ ದಬ್ಬಾಳಿಕೆ ನಡೆಯುತ್ತದೆ ಅನ್ನುವುದು ಎಲ್ಲ ದಲಿತರಿಗೂ ಗೊತ್ತು. ಈ ಊರುಗಳಪೈಕಿ ಅನೇಕ ಊರುಗಳಲ್ಲಿಯ ಜನ ಮಾಂಗ್‌ರನ್ನು ಊರು ಬಿಟ್ಟು ಓಡಿಸಲು ನಿರ್ಧರಿಸಿದ್ದಾರೆ ಹಾಗೂ ಅವರದನ್ನು ಮಾಡಿಯೇ ತೋರಿಸುತ್ತೇವೆ ಎಂದು ನಿರ್ಧರಿಸಿದ್ದಾರೆ. ಇಂತಹ ಪರಿಸ್ಥಿತಿಗಳನ್ನು ನಿಭಾಯಿಸುವುದು ಮಾಂಗ್‌ರಿಂದ ಸಾಧ್ಯವಾಗುವುದಿಲ್ಲ. ಇನ್ನೂರು ಮನೆಗಳಿರುವ ಊರಿನಲ್ಲಿ ಮಾಂಗ್ ಕೇವಲ ಐದೋ ಹತ್ತೋ ಜನರಷ್ಟೇ ಇರುತ್ತಾರೆ. ಇಂತಹ ಅಲ್ಪಸಂಖ್ಯಾತ ಜನರನ್ನು ಬಹುಸಂಖ್ಯಾತ ಗುಂಡಾಗಳ ಅತ್ಯಾಚಾರವನ್ನೆದುರಿಸುವುದು ಸಾಧ್ಯವಾಗುವುದಿಲ್ಲ. ಹಾಗಾಗಿ ಪ್ರತಿ ಊರಿನಲ್ಲಿ ಐದೋ ಹತ್ತೋ ಮನೆಗಳ ವಸತಿಗಳನ್ನಿಟ್ಟು ಉಸಿರುಗಟ್ಟಿಸಿಕೊಳ್ಳುವುದಕ್ಕಿಂತ ಎಲ್ಲ ಊರಿನ ಸಣ್ಣ ಸಣ್ಣ ವಸತಿಗಳನ್ನು ಕಿತ್ತು ಬೇರೆಯೇ ಒಂದು ವಸಾಹತನ್ನು ನಿರ್ಮಿಸಿದರೆ ಮಾಂಗ್‌ರ ದೃಷ್ಟಿಯಿಂದ ಒಳ್ಳೆಯದು. ಇಂತಹ ವಸತಿಗಳನ್ನು ಅರಣ್ಯ ಇಲಾಖೆಯ ಭೂಮಿಗಳ ಮೇಲೆ ಕಟ್ಟಿದರೆ ವತನವನ್ನು ಕಳೆದುಕೊಳ್ಳುವ ಮಾಂಗ್ ಬೇಸಾಯ ಮಾಡಿ ಅದರ ಸಾವಿರಪಟ್ಟು ಗಳಿಸಬಹುದು ಅದೂ ಯಾರ ಗುಲಾಮಗಿರಿ ಮಾಡದೆ ಸ್ವತಂತ್ರವಾಗಿ. ಈ ಹೊಸ ವಸಾಹತುಗಳಿಂದ ಕೇವಲ ಮಾಂಗ್ ತಮ್ಮ ಹೊಟ್ಟೆಹೊರೆದುಕೊಳ್ಳಬಹುದಷ್ಟೆಯಲ್ಲದೆ ಇನ್ನೂ ಅನೇಕ ಲಾಭಗಳಿವೆ. ಊರಿನಲ್ಲಿರುವುದರಿಂದ ಮಾಂಗ್ ಯಾವುದೇ ಸ್ವತಂತ್ರ ವ್ಯಾಪಾರ ಮಾಡಲು ಸಾಧ್ಯವಾಗುವುದಿಲ್ಲ ತಮ್ಮ ಮನೆಗಳನ್ನವರು ಬೇರೆಡೆ ಸ್ಥಳಾಂತರಿಸಿದರೆ ಎಲ್ಲ ಮಾರ್ಗಗಳು ಅವರಿಗಾಗಿ ತೆರೆದಾವು. ಮಾಂಗ್ ಪಾಟೀಲನಾದಾನು, ಮಾಂಗ್‌ನಿಗೆ ಕಿರಾಣಾ ಅಂಗಡಿ ಇಟ್ಟುಕೊಳ್ಳಬಹುದು, ಆತ ಬಟ್ಟೆ ಮಾಂಗುವ ಅಂಗಡಿಯನ್ನಿಟ್ಟುಕೊಳ್ಳಬಹುದು. ಒಟ್ಟಿನಲ್ಲಿ ಊರಿನಲ್ಲಿದ್ದು ಮಾಡಲಾಗದ ವ್ಯಾಪಾರಗಳೆಲ್ಲವನ್ನೂ ಅವನು ಹೊಸ ವಸತಿಗಳಲ್ಲಿ ಮಾಡಬಹುದು. ಮಾಂಗ್‌ನಿಗೆ ಹುಟ್ಟಿದ ಮಗುವಿನ ಹೊಟ್ಟೆಯಲ್ಲಿ ಹುಟ್ಟಾ ಬೈಗಳ ಭಯ ಆರಂಭವಾಗುತ್ತದೆ. ಇಲ್ಲಿ ಮುಟ್ಟ ಬೇಡ, ಅದನ್ನು ಮುಟ್ಟಬೇಡ ಅನ್ನುವ ಶಬ್ದಗಳನ್ನು ಕೇಳಿ ಕೇಳಿ ಚಿಕ್ಕಂದಿನಿಂದ ತಾನು ಅಪವಿತ್ರ ಎಂದು ಹೀನ ಭಾವನೆ ಬೆಳೆಸಿಕೊಳ್ಳುವ ಆತ ಕಡೆಯುವರೆಗೂ ಅದೇ ಭಾವನೆಯಲ್ಲಿ ಕೊನೆಯುಸಿರೆಳೆಯುತ್ತಾನೆ. ಈ ಒತ್ತಡ ಅವನ ಮನಸ್ಸು ದುರ್ಬಲಗೊಳಿಸಿ ಅವನ ಕೈಯಿಂದ ಯಾವುದೇ ಒಳ್ಳೆಯ ಕೆಲಸಗಳಾಗುವುದಿಲ್ಲ. ಈ ವಸತಿಗಳಲ್ಲಿ ಬೆಳೆಯುವ ಮಾಂಗ್‌ರ ಮಕ್ಕಳು ಯಾವುದೇ ಭಯವಿಲ್ಲದೆ ಬೆಳೆದಾರು. ಬೈಗಳ ಭಾಷೆ ಅವರ ಕಿವಿಮೇಲೆ ಬೀಳುವುದು ತಪ್ಪೀತು. ಎಲ್ಲರಿಗಿಂತ ನಾವು ಕೀಳು, ಉಳಿದವರು ನಮಗಿಂತ ಶ್ರೇಷ್ಠರು ಅನ್ನುವ ಭಾವನೆ ಅವರಿಗೆ ಬರಲಿಕ್ಕಿಲ್ಲ ಹಾಗೂ ಅವರ ಮನಸ್ಸು ದುರ್ಬಲವಾಗಲಿಕ್ಕಿಲ್ಲ. ಅವರಿಗಾಗಿ

ಇದೊಂದು ದೊಡ್ಡ ಲಾಭ. ಅದರಂತೆ ಬೇಸಾಯ ಮಾಡುವಂತಹ ಸ್ವತಂತ್ರ ಅವಕಾಶ ಅವರಿಗೆ ಸಿಕ್ಕರೆ ಅದನ್ನವರು ಬಿಡಬಾರದು. ಈ ಹೊಸ ವಸಾಹತುಗಳನ್ನು ನಿರ್ಮಿಸಲು ಎರಡು ರೀತಿಯ ಸಹಾಯ ಬೇಕಿದೆ. (೧) ಸರ್ಕಾರದ ಸಹಾಯ, (೨) ಮಾಂಗ್ ಊರು ಬಿಡಲು ಸಿದ್ಧರಿರಬೇಕು. ಇವುಗಳಲ್ಲಿ ಮೊದಲನೆಯದು ಅಂದರೆ ಸರ್ಕಾರದ ಸಹಾಯ ಸಿಗುವುದು ಕಠಿಣವಲ್ಲ. ಮೈಸೂರು ಸಂಸ್ಥಾನದಲ್ಲಿ ದಲಿತರ ಪ್ರತಿಯೊಂದು ಕುಟುಂಬಕ್ಕೆ ೭ ಎಕರೆ ಜಮೀನು ಕೊಟ್ಟು ಅದರ ಬೇರೆ ವಸಾಹತು ನಿರ್ಮಿಸುವುದಕ್ಕೆ ನಿರ್ಧರಿಸಿದ್ದಾರೆ. ನಮ್ಮ ಇಲಾಖೆಯ ಬ್ರಿಟಿಷ್ ಸರ್ಕಾರವು ಬೆರಡ್ ಜನರ ಇದೇ ರೀತಿಯ ವಸಾಹತ್ತನ್ನು ನಿರ್ಮಿಸಲು ನಿರ್ಧರಿಸಿದೆ, ಅದೇ ಯೋಜನೆಯನ್ನು ಮಾಂಗ್‌ರಿಗಾಗಿ ಕೊಡಲು ಸರ್ಕಾರ ಒಪ್ಪುತ್ತದೆ ಆದರೆ ಮಾಂಗ್ ತಮ್ಮೂರನ್ನು ಬಿಟ್ಟು ಸ್ಥಳಾಂತರಗೊಂಡಾರೆಯೆ? ಅನ್ನುವುದೇ ಈಗಿರುವ ದೊಡ್ಡ ಪ್ರಶ್ನೆ.

ಎಲ್ಲ ಮಾಂಗ್ ಬೇಸಾಯ ಮಾಡುವಷ್ಟು ದೊಡ್ಡ ಜಾಗ ಸಿಗುವುದು ಕಷ್ಟ, ಹಾಗಾಗಿ ಮಾಂಗ್ ಬೇಸಾಯಕ್ಕೆ ಪೂರಕವಾಗಿರುವಂತಹ ಮತ್ತೊಂದು ವ್ಯಾಪಾರ ಮಾಡುವುದು ಅವಶ್ಯಕವಾಗಿದೆ. ಮಾಂಗ್ ವ್ಯಾಪಾರ ಮಾಡುವ ಜಾತಿಯವರಲ್ಲ, ಆದರೆ ಅವರು ಮಾಡಲು ಸಾಧ್ಯವಾಗುವಂತಹ ವ್ಯಾಪಾರವನ್ನವರು ಮಾಡಲು ಅಡ್ಡಿಯಿಲ್ಲ. ಹಣ ಹಾಗೂ ಅನುಭವದ ಕೊರತೆಯಿಂದಾಗಿ ಉತ್ತಮವಾದ ವ್ಯಾಪಾರ ಈ ಜಾತಿಗೆ ಸಿಗುವ ಸಾಧ್ಯತೆಗಳು ಬಹಳ ಕಡಿಮೆ. ಸಾಧ್ಯವಾದರೆ ಒಂದೆರಡು ಕಡಿಮೆ ದರ್ಜೆಯ ವ್ಯಾಪಾರ ಮಾಡಬಹುದು. ಆದರೆ ಬ್ರಾಹ್ಮಣರ ಭಯದಿಂದ ನಡುಗುವ ಮಾಂಗ್ ಕಡಿಮೆದರ್ಜೆಯ ವ್ಯಾಪಾರವನ್ನೂ ಮಾಡಿಯಾರು ಎಂದು ಹೇಳಲಾಗುವುದಿಲ್ಲ. ಯಾವುದೇ ಹೊಲಸಿಲ್ಲದ ವ್ಯಾಪಾರ ಇಲ್ಲವೆ ಯಾವುದೇ ಜಾತಿಗೆ ಸಂಬಂಧಪಟ್ಟಿರದ ವ್ಯಾಪಾರವಿದ್ದರೆ ಬಹುಶಃ ಮಾಂಗ್ ಒಪ್ಪಿಕೊಂಡಾರು. ನನ್ನ ಪ್ರಕಾರ ಅಂತಹ ಒಂದೇ ಒಂದು ವ್ಯಾಪಾರವೆಂದರೆ ಖಾದಿ ಬಟ್ಟೆ ನೇಯುವುದು. ಹಾಗಾಗಿ ಮಾಂಗ್ ಖಾದಿ ಬಟ್ಟೆ ನೇಯುವ ವ್ಯಾಪಾರ ಮಾಡಬೇಕು ಅನ್ನುವುದು ನನ್ನ ಅಭಿಪ್ರಾಯ.

ನಾವು ನೇಯುವ ಖಾದಿ ಬಟ್ಟೆಯನ್ನು ಖರೀದಿಸುವವರ್ಯಾರು? ಹಾಗೂ ಯಾರೂ ಖರೀದಿಸದಿದ್ದರೆ ಅದನ್ನು ನೇಯುವ ಪ್ರಮೇಯವಾದರೂ ಏನು? ಅನ್ನುವ ಪ್ರಶ್ನೆಯೀಗ ಮಾಂಗ್‌ರಿಗೆ ಕಾಡಲು ಆರಂಭವಾಗಿರಬೇಕು. ಈ ಪ್ರಶ್ನೆಯನು ಬಿಡಿಸುವುದು ಅಷ್ಟು ಕಷ್ಟವಲ್ಲ. ಮಾಂಗ್‌ರಿಗೆ ತಮಗಾಗಿ ಬಟ್ಟೆಯನ್ನು ಖರೀದಿಸಲೇ ಬೇಕಾಗುತ್ತದೆ, ಎಲ್ಲ ಮಾಂಗ್ ಖಾದಿ ಬಟ್ಟೆಯನ್ನು ಹಾಕುವ ನಿರ್ಧಾರ ಮಾಡಿದರೆ ಹಾಗೂ ಮಾಂಗ್ ನೇಯ್ದ ಖಾದಿಯನ್ನಲ್ಲದೆ ಬೇರೆ ಯಾವ ಬಟ್ಟೆಯನ್ನೂ ಉಪಯೋಗಿಸುವುದಿಲ್ಲ ಎಂದು ಪ್ರಮಾಣ ಮಾಡಿದರೆ ಮಾಂಗ್ ನೇಕಾರರಿಗೆ ತಮ್ಮ ಜಾತಿಯ ಗ್ರಾಹಕರೇ ಸಾಕಷ್ಟು ಸಿಕ್ಕಾರು. ಮಾಂಗ್ ಇಷ್ಟು ನಿರ್ಧಾರ ಮಾಡಿದರೆ ಕೆಲಸ ಸಿಗುವುದು ಹಾಗೂ ಗ್ರಾಹಕರು ಸಿಗುವುದು ಕಷ್ಟವಾಗಲಾರದು.

ಮಾಂಗ್ ಮತ್ತೆ ತನ್ನ ಮನುಷ್ಯತ್ವ ಪಡೆಯಲು ಜನರ ಗುಲಾಮಗಿರಿಯಿಂದ ಮುಕ್ತರಾಗಬೇಕು ಹಾಗೂ ಗುಲಾಮಗಿರಿಯಿಂದ ಮುಕ್ತರಾಗಬೇಕೆಂದರೆ ಮೇಲೆ ಹೇಳಿರುವಂತಹ ಕೆಲಸಗಳನ್ನವರು ನಿರ್ಧಾರದಿಂದ ಮಾಡಬೇಕು ಇಲ್ಲದಿದ್ದರೆ ಅವರ ಮಾರ್ಗ ಕಠಿಣವಾಗಿದೆ ಅನ್ನುವುದನ್ನವರು ನೆನಪಿಡಲಿ ಅಂದರು.

ಮೊದಲನೆಯ ದಿನದ ಕೆಲಸ ಕಾರ್ಯಗಳು ಮುಗಿದು ನಂತರ ಅದೇ ಸಭಾಮಂಟಪದಲ್ಲಿ ಅದೇ ಸಮಯಕ್ಕೆ ಡಾ.ಅಂಬೇಡ್ಕರರು ಮುಂಬಯಿ ಕೌನ್ಸಿಲ್‌ನಲ್ಲಿ ತಂದಿದ್ದ ಮಾಂಗ್‌ರ ವತನದಲ್ಲಿ ಮಾಡಬಹುದಾದ ಸುಧಾರಣೆಯ ಬಿಲ್‌ಗೆ ಬೆಂಬಲ ನೀಡಲು ಶೇಟ್ ಮಾಣಿಕ್‌ಚಂದ್ ಶಾಹ್ ಅವರ ಅಧ್ಯಕ್ಷತೆಯಲ್ಲಿ ಎರಡನೆಯ ಸಭೆ ಆರಂಭಿಸಿದರು. ಆ ಸಭೆಯಲ್ಲಿ ಕೆಳಗೆ ಹೇಳಿದ ಮಸೂದೆಗಳನ್ನು ಮಂಡಿಸಲಾಯಿತು.

'ಡಾ. ಅಂಬೇಡ್ಕರ್ ಸಾಹೇಬರು ಮಾಂಗ್‌ರ ವತನದಲ್ಲಿ ಸುಧರಣೆ ತರುವ ದೃಷ್ಟಿಯಿಂದ ತಂದಿರುವ

ಬಿಲ್‌ಗೆ ಈ ವತನದಾರ ಮಾಂಗ್‌ರ ಪರಿಷತ್ತು ಬೆಂಬಲ ಕೊಡುತ್ತದೆ'.

ಈ ನಿಯಮಾವಳಿಗಳನ್ನು ಹರಿಭಾವು ತೋರಣೆಯವರು ಮಂಡಿಸಿದರು. ಅದನ್ನು ಗೊ. ಗೊ. ಕಾಂಬಳೆಯವರು ಅನುಮೋದಿಸಿದರು ಹಾಗೂ ಭೀಮಾ ತಾತ್ಯಾ ವೆಸಕರ್ ಮತ್ತು ನಿವೃತ್ತಿ ಬನಸೋಡೆಯವರು ಅದಕ್ಕೆ ಪುಷ್ಟಿ ನೀಡಿದ ಮೇಲೆ ಶೇಟ್ ಮಾಣೇಕಚಂದ್‌ರವರು ಮಾಂಗ್‌ರ ವತನದ ಬಿಲ್ಲಿನ ಸ್ಪಷ್ಟೀಕರಣ ಕೊಡಲು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ವಿನಂತಿಸಿದರು. ಡಾ. ಅಂಬೇಡ್ಕರ್ ಅವರು ತಾವು ತಂದಿರುವ ಬಿಲ್ಲಿನ ಸುಧಾರಣೆಯ ಬಗ್ಗೆ ಜನರಿಗೆ ಮನವರಿಕೆಯಾಗುವಂತೆ ತಿಳಿಸಿ ಹೇಳಿದಾಗ ಜನರಿಗದು ತಕ್ಷಣ ಮನವರಿಕೆಯಾಯಿತು. ಡಾ. ಅಂಬೇಡ್ಕರ್ ಅವರು ಹೇಳಿದಂತೆ ಮಾಂಗ್‌ರ ವತನದ ಬಿಲ್‌ನಲ್ಲಿ ಸುಧಾರಣೆಯಾದರೆ ವತನದ ರೌರವ ನರಕದಲ್ಲಿ ಬಿದ್ದು ಒದ್ದಾಡುತ್ತಿರುವ ನಮ್ಮಂತಹ ಕ್ರಿಮಿಗಳ ಉದ್ಧಾರ ಆಗೇ ಆಗುತ್ತದೆ ಎಂದು ಎಲ್ಲ ಜನ ಸಭೆಯಲ್ಲಿ ಮಾತಾಡಿಕೊಳ್ಳತೊಡಗಿದರು. ಎಲ್ಲರೂ ಡಾ. ಅಂಬೇಡ್ಕರರ ಜಯಘೋಷ ಕೂಗುತ್ತ ಮಾಂಗ್‌ರ ವತನದ ಬಗ್ಗೆ ಇಲ್ಲದ್ದು ಮಾತಾಡಿ ಜನರ ದಾರಿ ತಪ್ಪಿಸುತ್ತಿರುವವರು ಮೋಸಗಾರರು ಎಂದು ಸಾರಲಾರಂಭಿಸಿದರು. ಸಭೆಯ ಅಧ್ಯಕ್ಷರಾದ ಮಾಣೆಕಚಂದ್ ಅವರು ಕೂಡ ಬಿಲ್‌ನ ಪರ ಭಾಷಣ ಮಾಡಿ ಈ ಮಸೂದೆಗಳ ವಿರುದ್ಧ ಇಲ್ಲವೆ ಇನ್ನೂ ಯಾವುದಾದರೂ ಪ್ರಶ್ನೆಗಳಿದ್ದರೆ ಧೈರ್ಯವಾಗಿ ಕೇಳುವಂತೆ ಹೇಳಿದರು. ಆದರೆ ಯಾರೂ ಯಾವುದೇ ಪ್ರಶ್ನೆಗಳನ್ನು ಕೇಳಲಿಲ್ಲ. ನಂತರ ಈ ಮಸೂದೆಗಳನ್ನು ಜನರ ಚುನಾವಣೆಗೆ ಬಿಟ್ಟಾಗ ಚಪ್ಪಾಳೆಯ ನಡುವೆ ಜನ ಈ ಮಸೂದೆಗಳನ್ನು ಪಾಸ್ ಮಾಡಿದರು. ಇಷ್ಟಾದ ಮೇಲೆ ಸಭೆಯ ಉಳಿದ ಕೆಲಸಗಳನ್ನು ಎರಡನೆಯ ದಿನಕ್ಕಾಗಿ ಮುಂದೂಡಲಾಯಿತು.

ತಾ: ೨೭-೧೨-೨೭ ರಂದು ಬೆಳಿಗ್ಗೆ ವಿಷಯನಿಯಾಮಕ ಕಮಿಟಿಯ ಸಭೆಯನ್ನು ಕರೆಯಲಾಯಿತು. ಈ ಸಭೆಯಲ್ಲಿ ಕೆಳಗಿನ ಮಸೂದೆಗಳನ್ನು ಸಭೆಯಲ್ಲಿ ಮಂಡಿಸಿ ಎಲ್ಲರ ಅನುಮತಿಯಂತೆ ಮಂಜೂರು ಮಾಡಲಾಯಿತು. ಭಾನುವಾರ ಬೆಳಿಗ್ಗೆ ೧೧,೩೦ಕೆ ಡಾ. ಬಾಬಾಸಾಹೇಬ್ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಪರಿಷತ್ತಿನ ಕಾರ್ಯಕಲಾಪಗಳಾರಂಭವಾದವು.

## ಪರಿಷತ್ತಿನಲ್ಲಿ ಕೆಳಗಿನ ಮಸೂದೆಗಳು ಮಂಜೂರಾದವು

(೧) ಭಗವದ್ಗೀತೆಯಲ್ಲಿ ಹೇಳಿರುವಂತೆ ಗುಣಕರ್ಮ ತತ್ವಗಳನ್ನು ಪಕ್ಕಕ್ಕೆ ಸರಿಸಿ ಜನ್ಮಜಾತಿಗಳನುಸಾರವಾಗಿ ಸಮಾಜವನ್ನು ರಚಿಸಿರುವುದರಿಂದ ಎಲ್ಲ ರೀತಿಯಿಂದಲೂ ಹಿಂದೂ ಸಮಾಜಕ್ಕೆ ನಷ್ಟವಾಗಿದೆ ಅನ್ನುವುದು ಈ ಪರಿಷತ್ತಿನ ಅನಿಸಿಕೆ. ಹಾಗಾಗಿ ಹಿಂದೂ ಧರ್ಮಾಧಿಕಾರಿಗಳು ಪ್ರಚಲಿತ ಚಾತುರ್ವರ್ಣದ ಕಲ್ಪನೆಯನ್ನು ಬಿಟ್ಟು ಹಿಂದೂ ಸಮಾಜ ಏಕವರ್ಣವನ್ನಾಗಿ ಪುನಸ್ಥಾಪಿಸುವ ಕೆಲಸವನ್ನು ಆರಂಭಿಸಬೇಕು ಎಂದು ಹಿಂದೂ ಧರ್ಮಾಧಿಕಾರಿಗಳಿಗೆ ಸೂಚಿಸುತ್ತೇವೆ. ಈ ಕೆಲಸದಲ್ಲಿ ತಡವಾದರೆ ಇಲ್ಲವೆ ಈ ಕೆಲಸ ಮಾಡಲು ನೀವು ತಪ್ಪಿದರೆ ಚಾತುರ್ವರ್ಣದ ಚೌಕಟ್ಟಿನಲ್ಲಿ ಸಿಕ್ಕಿ ನರಳುತ್ತಿರುವ ದಲಿತರು ತಮ್ಮನ್ನು ಈ ವಿಷಚಕ್ರದಿಂದ ಬಿಡಿಸಿಕೊಳ್ಳಲು ಧರ್ಮಾಂತರ ಮಾಡಬೇಕಾದೀತೆ? ಅನ್ನುವುದರ ಬಗ್ಗೆ ಯೋಚನೆ ಮಾಡಬೇಕಾದೀತು.

(೨) ಶ್ರೀಕ್ಷೇತ್ರ ಪಂಢರಪುರದ ವಿಠೋಬಾನ ದೇವಸ್ಥಾನದಲ್ಲಿ ಪ್ರವೇಶಿಸುವಂತಾಗಲು ದಲಿತರು ಪ್ರಯತ್ನಿಸಿ ಹಾಗೂ ಅಗತ್ಯವಿದ್ದರೆ ಅಲ್ಲಿ ಸತ್ಯಾಗ್ರಹವನ್ನೂ ಮಾಡಿ ಎಂದು ಈ ಪರಿಷತ್ತಿಗೆ ಅನಿಸುತ್ತದೆ.

(೩) ವತನದಾರ ಮಾಂಗ್‌ರ ದೂರುಗಳಿಗೆ ನ್ಯಾಯ ಒದಗಿಸಿಕೊಡಲು ಖಾಯಂ ವ್ಯವಸ್ಥೆ ಮಾಡಲು ಪ್ರತಿಯೊಂದು ಜಿಲ್ಲೆಯಿಂದ ಒಬ್ಬ ಮಾಂಗ್ ವತನದಾರ ಸಂಘವನ್ನು ಸ್ಥಾಪಿಸಬೇಕು ಅದರಂತೆ ಸೋಲಾಪೂರ

ಜಿಲ್ಲೆಗಾಗಿ ಒಂದು ಸಂಘ ಸ್ಥಾಪಿಸಿ ಪ್ರತಿ ಊರಿನಿಂದ ೫ ರೂಪಾಯಿಯಂತೆ ವಾರ್ಷಿಕ ಹಣ ಸಂಗ್ರಹಿಸಲು ಈ ಪರಿಷತ್ತು ಅನುಮತಿ ಕೊಡುತ್ತದೆ ಹಾಗೂ ಆ ಸಂಘದ ನಿರ್ವಹಣೆಯ ಜವಾಬ್ದಾರಿಯನ್ನು ಕೆಳಕಂಡ ಜನರಿಗೆ ವಹಿಸುತ್ತದೆ

| | |
|---|---|
| ಸೋಲಾಪೂರ ತಾಲುಕಾ: | ವಿಶ್ವನಾಥ್ ಮೇಘಾಜಿ ಬಂದಸೊಡೆ |
| ಪಂಢರಪೂರ ತಾಲುಕಾ: | ಬಾಪೂ ಐಲೋನಿ ಸರ್ವಗೋಡ |
| ಕರಮಾಳೆ ತಾಲೂಕಾ: | ಗೋವಿಂದ ಗೋಪಾಳ ಕಾಂಬಳೆ |
| ಮಾಳಶಿರಸ್ ತಾಲೂಕಾ: | ಚೋಖಾ ಶಿದೂ ಕಾಟೆ |
| ಮಾಂಢೆ ತಾಲೂಕಾ: | ಪಿರಾಜಿ ಮರೀಬಾ ಸರವದೆ |
| ಬಾರ್ಶಿ ತಾಲೂಕಾ: | ಸಖಾರಾಮ್ ಮಹಾದೂ ಬೊಕೆಫ್ಲೋಡೆ |
| ಸೋಲಾಪೂರ ನಗರ: | ಜಿವಾಪ್ಪಾ ಸುಭಾನರಾವ್ ಐದಾಳೆ |
| ಸೆಕ್ರೆಟರಿ: | ಹರಿಭಾವು ತೋರಣೆ |

ಮೇಲೆ ನೇಮಿಸಿರುವ ಜನರಿಗೆ ಅವರ ಸಂಘದ ನಿಯಮಗಳನ್ನು ತಯಾರಿಸುವ ಅಧಿಕಾರ ಈ ಸಭೆ ಕೊಡುತ್ತದೆ. ಹಾಗೂ ಅವರು ತಯಾರಿಸಿರುವ ನಿಯಮಗಳನ್ನು ಮುಂದಿನ ವತನದಾರ ಜಿಲ್ಲಾ ಸಭೆಯಲ್ಲಿ ಮಂಜೂರು ಮಾಡಿಸಿಕೊಳ್ಳಬೇಕು ಅಲ್ಲದೆ ಸಭೆಯನ್ನು ಎರಡು ವರ್ಷಗಳಾದರೂ ಸೇರಿಸಬೇಕು.

(೪) ಸೋಲಾಪೂರ, ಪಂಢರಪೂರದಂತಹ ಮುನಿಸಿಪಾಲ್ಟಿಯ ಊರುಗಳಲ್ಲಿ ಹಾಗೂ ಜಿಲ್ಲೆಯ ರಾತಂಜನ, ಕಾರಿ, ದೇಗಾವನಂತಹ ಊರುಗಳಲ್ಲಿ ಮಾಂಗ್‌ರ ಸ್ವತ್ತಿನ ಜಾಗಗಳನ್ನು ಊರಿನ ಒಳಗೆ ಸೇರಿಸಿಕೊಳ್ಳಲಾಗಿರುವುದರಿಂದ ಮಾಂಗ್‌ರಿಗೆ ಸಾಕಷ್ಟು ನಷ್ಟವಾಗಿದೆ. ಜಿಲ್ಲೆಯ ಕಲೆಕ್ಟರ್ ಸಾಹೇಬರು ಇದರ ಬಗ್ಗೆ ವಿಚಾರಣೆ ನಡೆಸಬೇಕೆಂದು ಈ ಸಭೆ ವಿನಂತಿಸುತ್ತದೆ.

(೫) ವತನಿ ಜಮೀನು ಇಲ್ಲದಿರುವ ಈ ಜಿಲ್ಲೆಯ ಮಾಂಗ್‌ರಿಗೆ ಅವರ ಊರುಗಳಲ್ಲಿ ಬಂಜರು ಜಮೀನು ಇಲ್ಲವೆ ಅರಣ್ಯ ಇಲಾಖೆಯ ಜಮೀನುಗಳಿದ್ದರೆ ಅದನ್ನವರಿಗೆ ವತನ ಇನಾಮುಗಳನ್ನಾಗಿ ಕೊಡಬೇಕಾಗಿ ವಿನಂತಿ.

(೬) ಬೇಲಾಪೂರ, ಮಾಸಣೂರ್, ರಾಳೆಸರ್, ಪಾನಗಾಂವ್, ಸುರಡಿ, ಗುರಸಾಳೆ ತಾಲೂಕು ಮಾಳಶಿರಸ್, ಲೋಣಂದ ಈ ಊರುಗಳಲ್ಲಿ ಅಲ್ಲಿಯ ಪಾಟೀಲ, ಕುಲಕರ್ಣಿಯವರ ಕೆರಳಿಸುವಿಕೆಯಿಂದ ಎಲ್ಲ ಜನತೆಯು ಮಾಂಗ್‌ರನ್ನು ಊರಿನಿಂದ ಹೊರಗಟ್ಟುವ ಉಪಾಯ ಮಾಡುತ್ತಿದ್ದಾರೆ. ಈ ಊರುಗಳಲ್ಲಿ ಮಾಂಗ್‌ರ ಮೇಲಾಗುತ್ತಿರುವ ಅನ್ಯಾಯದ ಬಗ್ಗೆ ಸರ್ಕಾರ ವಿಚಾರಣೆ ನಡೆಸಿ ಮಾಂಗ್‌ರ ಸಂರಕ್ಷಣೆಗಾಗಿ ಯೋಗ್ಯವಾದ ಉಪಾಯ ಕೈಗೊಳ್ಳಬೇಕು ಎಂದು ಈ ಸಂಸ್ಥೆ ವಿನಂತಿಸುತ್ತದೆ.

(೭) ಈ ಜಿಲ್ಲೆಯ ಮಾಂಗ್‌ರಲ್ಲಿ ವತನಿ ಜಮೀನುಗಳಿಲ್ಲದಿದ್ದರೆ ಅವರ ಊರುಗಳಲ್ಲಿ ಬಂಜರು ಜಮೀನು ಇಲ್ಲವೆ ಅರಣ್ಯ ಇಲಾಖೆಯ ಜಮೀನುಗಳಿದ್ದರೆ ವತನಿ ಇನಾಮುಗಳಾಗಿ ಕೊಡಮಾಡಬೇಕು.

(೮) ಜಿಲ್ಲೆ ಜಿಲ್ಲೆಗಳ ಮಾಂಗ್‌ರ ಆರ್ಥಿಕ ಗುಲಾಮಗಿರಿಯನ್ನು ಕಿತ್ತೆಸೆಯಲು ಹಾಗೂ ಅವರ ಸಂಸಾರ ಹೆಚ್ಚು ಸುಖಕರವಾಗಲು ಪ್ರತಿಯೊಂದು ಜಿಲ್ಲೆಯ ವತನದಾರ ಮಾಂಗ್‌ರ ಸಂಘವು ಸಹಕಾರಿ ಮಂಡಳವನ್ನು ಸ್ಥಾಪಿಸುವುದು, ನೂಲು ತೆಗೆಯುವ ಹಾಗೂ ಬಟ್ಟೆ ನೇಯುವ ಕೆಲಸಗಳ ಪ್ರಸಾರ ಮಾಡುವ ಹಾಗೂ ಸಹಕಾರಿ ಹೊಲಗಳ ವಸಾಹತು ಸ್ಥಾಪಿಸಲು ಆದಷ್ಟು ಬೇಗ ವ್ಯವಸ್ಥೆ ಮಾಡಬೇಕು.

(೯) ಅರಣ್ಯ ಇಲಾಖೆಯ ಜಮೀನುಗಳನ್ನು ಉಳಿದವರಿಗೆ ಕೊಡುವ ಮೊದಲು ದಲಿತರ ಅರ್ಜಿಗಳನ್ನು ಮೊದಲು ಗಣನೆಗೆ ತೆಗೆದುಕೊಂಡು ಅರಣ್ಯ ಇಲಾಖೆಯ ನಿಯಮಗಳು ದಲಿತರು ಒಪ್ಪುವಂತಿದ್ದರೆ ಇತರ ಅರ್ಜಿದಾರರಿಗೆ ಕೊಡುವುದಕ್ಕಿಂತ ದಲಿತರಿಗೆ ಆ ಜಮೀನುಗಳನ್ನು ಕೊಡಬೇಕು ಎಂದು ಈ ಸಭೆಯು ಸರ್ಕಾರಕ್ಕೆ ವಿನಂತಿಸುತ್ತದೆ.

ಮೇಲಿನ ನಿಯಮಾವಳಿಗಳ ಮೇಲೆ ಮೆಸ್ಸರ್ಸ್ ಸೀತಾರಾಮ್ ನಾಮದೇವ್ ಶಿವತರ್‌ಕರ್, ಧೋಂಡೀರಾಮ್ ಗಾಯಕವಾಡ್, ಬೊರಕರ್, ಮಾನೆ, ಕಾಂಬಳೆ ಬಂದಸೋಡೆ, ಗೋವಿಂದ ಕಾಂಬಳೆ, ವೇಸಕರ್, ಶಿವಣಕರ್, ಬೊಕೆಘೋಡೆ, ಸಾಬಳೆ, ತೋರಣೆ ಇವರುಗಳು ಸಮಯವನ್ನು ಪಾಲಿಸಿ ಭಾಷಣ ಮಾಡಿದರು.

ಹೀಗೆ ನಿಯಮಾವಳಿಗಳು ಮಂಜೂರಾದ ಮೇಲೆ ಅಧ್ಯಕ್ಷರು ಹಾಗೂ ನೆರೆದ ಜನರಿಗೆ ಧನ್ಯವಾದಗಳನ್ನು ಹೇಳಿ ಹೂವು ಹಾರಗಳಿಂದ ಸನ್ಮಾನ ಮಾಡಿ ಡಾ. ಅಂಬೇಡ್ಕರರ ಜಯಘೋಷದಲ್ಲಿ ಪರಿಷತ್ತಿನ ಕಾರ್ಯಕಲಾಪಗಳು ಮುಗಿದವು.

# ೧೬.

# ಹಕ್ಕುಗಳನ್ನು ಪಡೆಯಲು ಎಲ್ಲರೂ ಸಿದ್ಧರಾಗಬೇಕು

ಬಾರಾ ಪಾಖಾಡಿ, ಪಾಲಿ, ದಾಂಡಾರೋಡ, ವಾಂದ್ರೆ ನಲ್ಲಿಯ ಜನರ ಸಹಾಯದಿಂದ ೧೧ನೆಯ ಡಿಸಂಬರ್ ೧೯೨೭ರಂದು ಸಾಯಂಕಾಲ ೪ ಘಂಟೆಗೆ ವಾಂದ್ರೆಯಲ್ಲಿ ಡಾ.ಭೀಮರಾವ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಮಹಾಡ್ ಸತ್ಯಾಗ್ರಹದ ಸಹಾಯಕ್ಕಾಗಿ ಜಾಹೀರು ಸಭೆಯನ್ನು ಆಯೋಜಿಸಲಾಗಿತ್ತು. ಸಭೆಗಾಗಿ ಎಲ್ಲರೂ ಸೇರಿವೇದಿಕೆಯನ್ನು ಅಲಂಕರಿಸಿದ್ದರು. ವಾಂದ್ರೆ ಹಾಗೂ ಅಕ್ಕಪಕ್ಕದ ಹಳ್ಳಿಯ ಸುಮಾರು ಒಂದು ಸಾವಿರದಷ್ಟು ಜನಸಮುದಾಯ ಸಭೆಗೆ ಸೇರಿತ್ತು. ಮುಂಬಯಿಯಿಂದ ಡಾ. ಅಂಬೇಡ್ಕರರೊಂದಿಗೆ ಮೆಸ್ಸರ್ಸ್ ಶಿವತರಕರ, ಪ್ರಧಾನ್, ಗುಪ್ತೆ, ಜಾಧವ್, ಗಂಗಾವಣೆ, ಗಾಯಕವಾಡ, ಖೊಲವಡೀಕರಕೂಡ ಇದ್ದರು. ಅಲ್ಲದೆ ಬಹಿಷ್ಕೃತ ಹಿತಕಾರಿಣಿ ಸಭೆ ಹೊಸದಾಗಿ ಸ್ಥಾಪಿಸಿದ್ದ ಅಂಬೇಡ್ಕರ್ ಪಥಕವನ್ನು ಈ ಸಭೆಯ ವ್ಯವಸ್ಥಾಪನೆಗಾಗಿ ಕರೆಸಿಕೊಂಡಿತ್ತು. ಮುಂಬಯಿಯ ಜನ ಸ್ಟೇಷನ್‌ನಲ್ಲಿ ಇಳಿದ ಕೂಡಲೆ ವಾಂದ್ರೆಯ ಜನ ಅವರಿಗಾಗಿಯೆಂದೇ ತರಿಸಿದ್ದ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಸಭಾಮಂಟಪಕ್ಕೆ ಬಂದರು. ತಲುಪಿದ ಕೂಡಲೆ ಸಭೆಯ ಕಾರ್ಯಕಲಾಪಗಳು ಆರಂಭಗೊಂಡವು. 'ನಾವು ಬಾರಾ ಪಾಖಡಿತಾ. ಬಾಂದ್ರಾದಲ್ಲಿರುವ ಜನ ೨೫ನೆಯ ಡಿಸೆಂಬರ್‌ನಿಂದ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ನೇತೃತ್ವದಲ್ಲಾಗುತ್ತಿರುವ ಮಹಾಡ್ ಸತ್ಯಾಗ್ರಹಕ್ಕಾಗಿ ೧೭೫ ರೂ ಚಂದಾ ಕೊಡುತ್ತಿದ್ದೇವೆ, ನೀವೂ ಆದಷ್ಟು ಈ ಸತ್ಯಾಗ್ರಹಕ್ಕೆ ಸಹಾಯ ಮಾಡಿ ಎಂದು ನಾನು ಇಲ್ಲಿ ಸೇರಿರುವ ಜನರಲ್ಲಿ ವಿನಂತಿಸುತ್ತೇನೆ' ಎಂದು ಬರೆದಿದ್ದ ಮಸೂದೆಯನ್ನು ಎಲ್ಲರೆದುರು ಮಂಡಿಸಲಾಯಿತು. ಅಲ್ಲಿಯ ನಿವಾಸಿಗಳಾದ ಮೆಸರ್ಸ್‌ಜಯಗುರುದೇವ ಗಾವಕರ್, ಸಖಾರಾಮ ಭಿಕು, ಕಾಶೀರಾಮ ಹವಾಲದಾರ, ಗೋವಿಂದ ತುಳಸಕರ ಇವರ ಭಾಷಣಗಳಾದ ಮೇಲೆ ಮತ್ತೊಬ್ಬ ಸೋನುಸಜನ ಸಂದೀರಕರ ಇವರು ಭಾಷಣ ಮಾಡಿ ೧೭೫ ರೂ.ಗಳನ್ನು ಡಾ. ಅಂಬೇಡ್ಕರ್ ಅವರ ಕೈಗೆ ಕೊಟ್ಟರು. ಡಾ. ಸಾಹೇಬರು ವಿನಯಪೂರ್ವಕವಾಗಿ ಅದನ್ನು ಸ್ವೀಕರಿಸಿ ಕೆಳಗಿನಂತೆ ಭಾಷಣ ಮಾಡಿದರು.

ಮಾನ್ಯರೆ!

ನೀವು ಚಂದಾ ಕೊಟ್ಟಿರುವ ಬಗ್ಗೆ ನಾನು ಆಭಾರಿಯಾಗಿದ್ದೇನೆ. ನಮ್ಮ ಪೂರ್ವಜರು ಮಾಡಿದ ಕೆಲಸಗಳತ್ತ ಒಂದು ನೋಟ ಬೀರಿದರೆ ನಾವಿಂದು ನಾಚಿಕೆಯಿಂದ ತಲೆತಗ್ಗಿಸಬೇಕಾಗುತ್ತದೆ. ಕೊಂಕಣದ ದಾಪೋಲಿಯಲ್ಲಿ ಮೊದಲು ಸುಭೇದಾರ, ಜಮಾದಾರ ಹವಾಲದಾರರ ದೊಡ್ಡದೊಡ್ಡ ಭವ್ಯವಾದ ಬಂಗಲೆಗಳಿದ್ದವು. ಈಗ ಅಲ್ಲಿ ಮುಸಲ್ಮಾನರು ಬಂದು ತಮ್ಮ ಹಕ್ಕು ಸ್ಥಾಪಿಸಿ ಕುಳಿತಿದ್ದಾರೆ. ಈಗ ಅಲ್ಲಿ ಮೊದಲಿನ ಬಂಗಲೆಗಳ ಯಾವುದೇ ಕುರುಹುಗಳಿಲ್ಲ. ಈ ಪರಿಸ್ಥಿತಿ ನಮಗೇಕೆ ಬಂತು ಅನ್ನುವುದನ್ನೊಮ್ಮೆ ಯೋಚಿಸಿ. ಈಸ್ಟ್ ಇಂಡಿಯಾ ಕಂಪನಿ ನಮ್ಮಲ್ಲಿಗೆ ರಾಜ್ಯ ಸ್ಥಾಪನೆ ಮಾಡುವ ಯೋಜನೆಯಿಂದ ಬಂದಾಗ ನಮ್ಮಜನರೇ ಅವರಿಗೆ ಸಹಾಯ ಮಾಡಿದರು. ಎಲ್ಲಿಯವರೆಗೆ ನಮ್ಮ ಜನ ಅವರ ಸೈನ್ಯದಲ್ಲಿದ್ದರೋ

ಅಲ್ಲಿಯವರೆಗೆ ಅವರ ಆರ್ಥಿಕ ಪರಿಸ್ಥಿತಿ ಸಾಕಷ್ಟು ಸುಧಾರಿಸಿತ್ತು. ಆದರೆ ಸೈನ್ಯದಿಂದ ಹೊರಬಂದೊಡನೆ ಪರಿಸ್ಥಿತಿ ಹದಗೆಟ್ಟಿದೆ. ಇಂದು ನಮ್ಮ ಜನರನ್ನು ಪೊಲೀಸ ಖಾತೆಯಲ್ಲೂ ಭರ್ತಿಮಾಡಿಕೊಳ್ಳುವುದಿಲ್ಲ ಹಾಗೂ ಬೇರೆ ಎಲ್ಲಿಯೂ ಕೆಲಸ ಸಿಗುತ್ತಿಲ್ಲ. ಪುಣೆಯಲ್ಲಿ ನಮ್ಮ ಜಾತಿಯ ಒಬ್ಬನೇ ಗ್ರಾಜುಯೇಟ್ ಹುಡುಗನಿದ್ದಾನೆ. ಅವನಿಗೆ ಕೆಲಸ ಸಿಗಲೆಂದು ಕಳೆದ ಎರಡು ವರ್ಷಗಳಿಂದ ನಾನು ಸರ್ಕಾರದೊಟ್ಟಿಗೆ ಕಾದಾಡುತ್ತಿದ್ದೇನೆ. ಸರ್ಕಾರದ ಕೆಲವು ವರಿಷ್ಠ ಅಧಿಕಾರಿಗಳೇ ಅಡ್ಡಗಾಲು ಹಾಕುತ್ತಿದ್ದಾರೆ ಅನ್ನುವುದು ನನಗೆ ಗೊತ್ತು. ಮಹಾಡನಲ್ಲಿ ಸತ್ಯಾಗ್ರಹ ಮಾಡಲು ನಾವು ಸಾಕಷ್ಟು ಕಷ್ಟಪಡುತ್ತಿದ್ದೇವೆ ಹಾಗೂ ನೀವು ಅದಕ್ಕೆ ಧನಸಹಾಯ ಮಾಡುತ್ತಿದ್ದೀರಿ. ಧನಸಹಾಯ ಮಾಡಿದಾಕ್ಷಣ ಕಷ್ಟಪಡುತ್ತಿರುವ ನಾವು ಕುದುರೆಗಳು ಹಾಗೂ ಧನಸಹಾಯ ಮಾಡಿ ನೀವು ನಮಗೆ ಹುಲ್ಲು ಮೇಯಿಸುತ್ತಿದ್ದೀರಿ ಅಂದುಕೊಳ್ಳಬೇಡಿ. ಇದು ಎಲ್ಲರೂ ಸೇರಿ ಮಾಡುವ ಕೆಲಸ. ಮಹಾಡ್ ಚವ್‌ದಾರ ಕೆರೆಯಲ್ಲಾಗುತ್ತಿರುವ ಸತ್ಯಾಗ್ರಹ ಮೇಲ್ಜಾತಿಯವರಿಂದ ನಾವು ಅಪವಿತ್ರರೆಂದು ಪರಿಗಣಿಸಲ್ಪಡುವುದರಿಂದ. ಮಹಾಡಿನಲ್ಲಿ ದಲಿತರು ನೀರಿನ ಕೊರತೆಯಿಂದ ಬಳಲುತ್ತಿದ್ದಾರೆ ಅನ್ನುವ ಕಾರಣಕ್ಕೆ ನಾವು ಸತ್ಯಾಗ್ರಹ ಮಾಡುತ್ತಿದ್ದೇವೆ ಎಂದಲ್ಲ ಆದರೆ ನಾವೂ ಮತ್ತು ಮೇಲ್ಜಾತಿಯವರು ಒಂದೇ ಎಂದು ತೋರಿಸಲು ಮಾಡುತ್ತಿದ್ದೇವೆ. ಇದು ನಮ್ಮ ಹಕ್ಕು ಹಾಗೂ ಈ ಹಕ್ಕು ಪಡೆಯಲು ಎಲ್ಲರೂ ಸಿದ್ಧರಾಗಬೇಕು. ಸತ್ಯಾಗ್ರಹದಲ್ಲಿ ಯಾವುದೇ ಅನಿಷ್ಟ ಘಟನೆಯಾಗುವುದಿಲ್ಲ ಅನ್ನುವ ಭರವಸೆ ನನಗಿದೆ ಹಾಗಾಗಿ ಎಲ್ಲರೂ ಧೈರ್ಯವಾಗಿ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಿ ಅನ್ನುವುದು ನನ್ನ ವಿನಂತಿ.

# ೧೭.

# ಮಹಾಡ್ ಸತ್ಯಾಗ್ರಹ ಪರಿಷತ್ತು

ಮಹಾಡ್ ಸತ್ಯಾಗ್ರಹದ ಪೂರ್ವ ಸಿದ್ಧತೆಗಳನ್ನು ಮಾಡಲು ಡಾ. ಬಾಬಾಸಾಹೇಬ್ ಅಂಬೇಡ್ಕರರು ಒಂದು ಲೇಖನವನ್ನು ತಯಾರಿಸಿ ಅದರಲ್ಲಿ ದಲಿತರು ಸತ್ಯಾಗ್ರಹಕ್ಕಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಿ ಅನ್ನುವ ಸಂದೇಶ ಬರೆದರು. ಆ ಸಂದೇಶ ಕೆಳಗಿನಂತಿತ್ತು

**ಬಹಿಷ್ಕೃತ ಹಿತಕಾರಿಣಿ ಸಭೆಯ ಆಶ್ರಯದಲ್ಲಿ**

ಮಹಾಡ್‌ನಲ್ಲಿ ೨೫ನೆಯ ಡಿಸಂಬರ್ ೧೯೨೭ರಿಂದ ಸತ್ಯಾಗ್ರಹ ಆರಂಭವಾಗಲಿದೆ

ಮಹಾಡ್ ಸತ್ಯಾಗ್ರಹಕ್ಕೆ ಸಹಾಯ ಮಾಡಿ

**ಉನ್ನತ ಕುಲದಲ್ಲಿ ಹುಟ್ಟಿದವರು ಬನ್ನಿ ಬೇಗ ಬೇಗ**

**ಬಾರದಿದ್ದವರು ಕಷ್ಟಕ್ಕೀಡಾಗಬೇಕಾದೀತು**

೨೫ ನೆಯ ಡಿಸಂಬರ್ ೧೯೨೭ರಂದು ಮಹಾಡ್‌ನಲ್ಲಿ ಒಂದು ಸಭೆ ಕರೆಯಲಾಗಿದೆ ಎಂದು ಎಲ್ಲ ದಲಿತ ಜಾತಿಬಾಂಧವರಿಗೆ ತಿಳಿಸಲಾಗುತ್ತದೆ. ಕಳೆದ ಮಾರ್ಚ್ ತಿಂಗಳ ೧೯ನೆಯ ತಾರೀಖಿಗೆ ಮಹಾಡ್‌ನಲ್ಲಿ ಸಭೆ ಕರೆಯಲಾಗಿದ್ದಂತೆ ಮತ್ತೆ ಅಲ್ಲೇ ಎರಡನೆಯ ಸಭೆಯನ್ನು ಕರೆಯುವ ಕಾರಣವೇನು ಎಂದು ಕೆಲವರು ವಿಚಾರಿಸಬಹುದು, ಅದಕ್ಕೆ ಕಾರಣ ಇಷ್ಟೆ. ಮಹಾಡ್‌ನ ಚವ್‌ದಾರ್ ಕೆರೆಯಲ್ಲಿ ನಮ್ಮ ಜಾತಿಬಂಧುಗಳು ನೀರು ಕುಡಿದ ಮೇಲೆ ಮೇಲ್ಜಾತಿಯ ಜನ ಅದನ್ನು ತಡೆಯಲು ಸಾಕಷ್ಟು ಹೊಡೆದಾಟ ಮಾಡಿದರು. ಅದರಲ್ಲಿ ದಲಿತರಿಗೆ ಹೊಡೆದ ಮೇಲ್ಜಾತಿಯ ಕೆಲವು ಜನರಿಗೆ ೪ ತಿಂಗಳ ಕಠಿಣ ಶಿಕ್ಷೆಯಾಗಿದೆ. ನ್ಯಾಯಾಲಯದ ಈ ತೀರ್ಪು ಇಬ್ಬರ ದೃಷ್ಟಿಯಿಂದಲೂ ಮಹತ್ವದ್ದಾಗಿತ್ತು.

ದಲಿತರನ್ನು ಚವ್‌ದಾರ್ ಕೆರೆಗೆ ಬರಗೊಡದಿರುವುದು ನಮ್ಮ ಅಧಿಕಾರ ಅನ್ನುವ ಮೇಲ್ಜಾತಿಯವರ ಮನಸ್ಸಿನಲ್ಲಿದ್ದ ಭಾವನೆಗೀಗ ಯಾವುದೇ ಆಧಾರವಿಲ್ಲ. ಈಗ ಮತ್ತೇನಾದರೂ ತಲೆಕೆಟ್ಟವರಂತೆ ಅವರು ನಮ್ಮನ್ನು ಎದುರುಹಾಕಿಕೊಂಡರೆ ಮತ್ತೊಮ್ಮೆ ಜೈಲಿನ ದಾರಿ ತುಳಿಯಬೇಕಾಗುತ್ತದೆ ಅನ್ನುವುದರಲ್ಲಿ ಅನುಮಾನವಿಲ್ಲ. ಅಷ್ಟೇಯಲ್ಲದೆ ಚವ್‌ದಾರ್ ಕೆರೆಗೆ ಹೋಗಲು ನಮಗ್ಯಾವ ಹಕ್ಕಿಲ್ಲ ಅನ್ನುವುದೂ ತಪ್ಪೆನ್ನುವುದು ಸಾಬೀತಾಗಿ ಅಲ್ಲಿಯೂ ನಮ್ಮ ಹಕ್ಕು ಸ್ಥಾಪಿತವಾಗಿದೆ ಅನ್ನಬಹುದು. ಹಾಗಿಲ್ಲದಿದ್ದರೆ ನಮ್ಮನ್ನು ತಡೆಯುವವರಿಗೆ ಜೈಲಾಗದೆ ನಮ್ಮಂತಹ ಜನರಿಗೆ ಜೈಲಾಗುತ್ತಿತ್ತು. ಈಗ ಕಾನೂನಿನ ಮೂಲಕ ಸ್ಥಾಪಿತವಾಗಿರುವ ಈ ಹಕ್ಕುಗಳ ವಾಡಿಕೆಯಾಗುವ ಕೆಲಸ ಮಾತ್ರ ಉಳಿದಿದೆ ಹಾಗಾಗಿ ಡಿಸಂಬರ್ ೨೫ರ ನಂದು ಸೇರಲಿರುವ ಸಭೆ ಕೇವಲ ವಾಡಿಕೆಯನ್ನು ಮುಂದುವರೆಸಿಕೊಂಡು ಹೋಗುವ ಉದ್ದೇಶದಿಂದ ಮಾತ್ರ ಕರೆಯಲಾಗಿದೆ.

ಹಾಗಾಗಿ ಈ ಸಭೆಗೆ ಹಾಜರಿರಲು ಯಾರಿಗೂ ಹೆದರುವ ಅಗತ್ಯವಿಲ್ಲ. ಹಾಗೂ ಯಾವುದೇ ಸನಾತನ ಧರ್ಮೀಯ ಜನರ ಸ್ವಾರ್ಥಪೂರ್ಣವಾದ ಉಪದೇಶ ಕೇಳುವ ಅಗತ್ಯವಿಲ್ಲ. ಇದು ಎಲ್ಲರ ಮನುಷ್ಯತ್ವದ ಪ್ರಶ್ನೆ. ಉಳಿದ ಮೇಲ್ಜಾತಿಯ ಜನರಿಂದ ಹುಟ್ಟಾ ಅಪವಿತ್ರ ಎಂದು ಅಂಟಿಕೊಂಡಿರುವ ಕಳಂಕವನ್ನೀಗ ತೊಳೆದುಹಾಕಬೇಕಿದೆ.

ಇದು ಕೇವಲ ನಮಗಂಟಿರುವ ಕಳಂಂಕವಷ್ಟೇಯಲ್ಲ, ನಾವು ಹುಟ್ಟಿರುವ ಸುಶೀಲ ತಂದೆತಾಯಂದರಿಗೆ ಅಂಟಿರುವ ಕಳಂಕವೂ ಹೌದು. ಅದನ್ನು ತೊಳೆಯುವುದು ಪ್ರತಿಯೊಬ್ಬ ಸುಪುತ್ರನ ಆದ್ಯ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಪೂರೈಸಲು ಈ ಪರಿಷತ್ತಿಗೆ ಎಲ್ಲರೂ ಬನ್ನಿ ಎಂದು ವಿನಂತಿಸುತ್ತೇನೆ.

ಈ ಕೆಲಸಕ್ಕೆ ಹಣದ ಅವಶ್ಯಕತೆಯಿದೆ. ಹಣದಿಂದಲೋ ಇಲ್ಲ ಧಾನ್ಯದ ರೂಪದಲ್ಲೋ ಯಾರಿಗಾದರೂ ಸಹಾಯ ಮಾಡುವುದಿದ್ದಲ್ಲಿ ದಯವಿಟ್ಟು ಮುಂದೆ ಬನ್ನಿ. ಈ ಕೆಲಸಕ್ಕಾಗಿ ನಮ್ಮ ಸಹಿ ಹಾಗೂ ಸ್ಟ್ಯಾಂಪ್ ಇರುವ ಕಾಗದ ಹಾಗೂ ಪಾವತಿಗಳನ್ನು ಹಿಡಿದು ನಮ್ಮ ಕಾರ್ಯಕರ್ತರು ಹೊರಡಲಿದ್ದಾರೆ. ಸಹಾಯ ಮಾಡುವವರು ಅವರನ್ನು ಸಂಪರ್ಕಿಸಬಹುದು ಹಾಗೂ ಪಾವತಿ ಪಡೆಯಿರಿ, ಇಲ್ಲವಾದಲ್ಲಿ ಸೆಕ್ರೆಟರಿ, ಬಹಿಷ್ಕೃತ ಹಿತಕಾರಿಣಿ ಸಭೆ, ದಾಮೋದರ್ ಹಾಲ್, ಪರೆಲ್, ಮುಂಬಯಿ ಈ ವಿಳಾಸಕ್ಕೆ ಹಣ ಕಳಿಸಬಹುದು ಎಂದು ಕೇಳಿಕೊಳ್ಳುತ್ತೇನೆ.

ತಮ್ಮ ವಿಧೇಯ,<br>
ಡಾ. ಭೀಮರಾವ್ ಅಂಬೇಡ್ಕರ್,<br>
ಎಮ್.ಎ., ಪಿಎಚ್.ಡಿ., ಡಿ.ಎಸ್ಸಿ., ಬಾರ್–ಎಟ್–ಲಾ., ಎಮ್.ಎಲ್.ಸಿ

ಸಭಾಸದರು,

ರಾ.ರಾ.ಶಿವರಾಮ್ ಗೋಪಾಲ್ ಜಾಧವ್

„ ಸಂಭಾಜಿ ತುಕಾರಾಮ್ ಪೌಡಕರ್

„ ಬಾಳಾರಾಮ್ ರಾಮಜಿ ಅಂಬೇಡ್ಕರ್* (ಬಾಳಾರಾಮ್ ಅಂಬೇಡ್ಕರ್ ಅವರ ನಿಧನ ೧೨ನೆಯ ನವಂಬರ್ ೧೯೨೭ರಂದಾಯಿತು. ಡಾ. ಬಾಬಾಸಾಹೇಬ್ ಅಂಬೇಡ್ಕರರು ಲೇಖನವನ್ನು ಅವರು ತೀರಿಹೋಗುವ ಮೊದಲೇ ಬರೆದಿರಬಹುದು – ಸಂಪಾದಕರು)

„ ನಿರ್ಮಳ ಲಿಂಬಾಜಿ ಗಂಗಾವಣೆ

„ ರಾಧೆ ನಾರಾಯಣ ವನಮಾಳಿ

„ ಗಣಪತ್ ಮಹಾದೇವ್ ಜಾಧವ್

„ ಗೊವಿಂದ್ ರಾಮಜಿ ಆದರೇಕರ್

„ ಪಾಂಡುರಂಗ್ ಮಹಾದೇವ್ ವವೂರಕರ್

„ ಲಕ್ಷ್ಮಣ ಗಣೂ ಮುಸಯೀನಕರ್

„ ಸಖಾರಾಮ್ ರತ್ನಾಜಿ ನಾಗಾವಕರ್

„ ಅರ್ಜುನ್ ರಾಮಜಿ ನಾಗಾವಕರ್

„ ಚಾಂಗದೇವ್ ರಾಮಾಯಣ ಮೊಹಿತೆ

„ ಪಾಂಡುರಂಗ ಬಾಬಾಜಿ ಮಾಂಡಲೆಕರ್

„ ಭಾಗೂರಾಮ್ ರಾಮಜಿ ಶಿರಗಾಂವಕರ್

„ ರಾ. ರಾ. ಸೋನೂ ಸಜನ ಸಂದೀರಕರ್

„ ವಿಠ್ಠಲ್ ಲಕ್ಷ್ಮಣ ತಿಡಕರ್

,, ಭಾವೂ ಬಾಳೂ ಜಾಧವ್

,, ಭಾವಿಕನಾಥ್ ರತ್ನು ಸಾಳವೆ

,, ಪಂಢರಿನಾಥ್ ರಾಮಚಂದ್ರ ಆಸೂಡಕರ್

ರಾ.ರಾ. ಸೀತಾರಾಮ್ ನಾಮದೇವ್ ಶಿವತರಕರ್
ಸೆಕ್ರೆಟರಿ, ಸತ್ಯಾಗ್ರಹ ಕಮಿಟಿ.

ಈ ಪರಿಷತ್ತನ್ನು ೨೫\೨೬\೨೭ ನೆಯ ಡಿಸಂಬರ್ ೧೯೨೭ರಂದು ಆಯೋಜಿಸಲಾಗಿತ್ತು. ಸಭೆಯ ಎಲ್ಲ ತಯಾರಿ ನಡೆಸಲು ರಾ. ಅನಂತ ವಿನಾಯಕ ಚಿತ್ರೆಯವರನ್ನು ನೇಮಿಸಲಾಗಿತ್ತು ಮಹಾಡ್ ಸತ್ಯಾಗ್ರಹದಲ್ಲಿ ಚಿತ್ರೆಯವರು ತಮ್ಮ ಶೂರತೆಯನ್ನು ಮೆರೆದಿದ್ದರು. ಅವರ ದೇಹ ನೋಡಿದರೆ ಇಂತಹ ಸಣ್ಣ ಜೀವ ಇಷ್ಟೊಂದು ದೊಡ್ಡ ಕೆಲಸವನ್ನು ಮಾಡೀತೆ ಎಂದು ಯಾರಿಗೂ ಅನುಮಾನ ಬರುತ್ತಿತ್ತು. ಆದರೆ ಚಿತ್ರೆಯವರನ್ನು ನೇಮಿಸಿದ ಸತ್ಯಾಗ್ರಹ ಕಮಿಟಿಗೆ ಚಿತ್ರೆಯವರಲ್ಲಿ ಎಂತಹ ಚೈತನ್ಯ ತುಂಬಿ ತುಳುಕುತ್ತಿದೆ ಅನ್ನುವುದು ಗೊತ್ತಿತ್ತು. ಚಿತ್ರೆಯವರು ಈ ಪರಿಷತ್ತಿನಲ್ಲಿ ಮಾಡಿದ ಕೆಲಸವನ್ನು ನೋಡಿದವರಿಗೆ ಅದರ ಅನುಭವವಾಗಿರುತ್ತದೆ. ಈ ಪರಿಷತ್ತಿನ ಎಲ್ಲ ಶ್ರೇಯಸ್ಸು ರಾ. ಚಿತ್ರೆಯವರಿಗೇ ಸಲ್ಲುತ್ತದೆ. ರಾ. ಚಿತ್ರೆಯವರು ಹದಿನೈದು ದಿನ ಮೊದಲೇ ಮಹಾಡ್‌ಗೆ ಹೋಗಿ ತಲುಪಿದರು. ಕೆಲವು ಯುವಕರನ್ನು ಬಿಟ್ಟು ಉಳಿದೆಲ್ಲ ಮೇಲ್ಜಾತಿ ಜನ ಈ ಸತ್ಯಾಗ್ರಹಕ್ಕೆ ವಿರೋಧದಲ್ಲಿರುವುದು ಹಾಗೂ ಪರಿಷತ್ತಿನ ಕಾರ್ಯದಲ್ಲಿ ವಿಘ್ನ ತಂದಿಟ್ಟು ಪರಿಷತ್ತಿಗೆ ಬೇಕಾಗಿರುವ ಯಾವುದೇ ಸಾಮಾನು ಊರಿನಿಂದ ಕೊಡದಿರುವಂತೆ ಊರಿನ ಜನ ನಿರ್ಧರಿಸಿರುವುದು ಅವರಿಗೆ ಗೊತ್ತಾಯಿತು. ಆಗ ತಮ್ಮ ಕಾಯಸ್ಥ ಜಾತಿಯ ಕೆಲವು ಯುವಕರೊಡಗೂಡಿ ತಮ್ಮ ಕೆಲಸ ಪೂರೈಸಬೇಕೆಂದು ಅವರು ನಿರ್ಧರಿಸಿದರು. ಈ ಕೆಲಸದಲ್ಲವರಿಗೆ ಶಾಂತಾರಾಮ್ ಪೋತನೀಸ್, ಕೇಶವರಾವ್ ದೇಶಪಾಂಡೆ, ರಾ. ವಾಮನರಾವ್ ಪತ್ಕಿ, ಕಮಲಾಕರ್ ಟಿಪಣಿಸ್ ಇವರುಗಳು ಸಾಕಷ್ಟು ಸಹಾಯ ಮಾಡಿದರು. ರಾ. ಪತ್ಕಿಯವರ ಸಹಾಯವಂತೂ ಎಲ್ಲರಕ್ಕಿಂತ ಹೆಚ್ಚಿತ್ತು. ಅವರ ಸಹಾಯವಿಲ್ಲದೆ ಪರಿಷತ್ತಿಗೆ ಬೇಕಿದ್ದ ಸಾಮಾನು ಯಾವತ್ತೂ ಸಿಗುತ್ತಿರಲಿಲ್ಲ. ಪರಿಷತ್ತಿಗೆ ಬೇಕಿದ್ದ ಕೆಲವು ಸಾಮಾನುಗಳನ್ನು ಉದ್ದರಿಯಾಗಿ ತೆಗೆದುಕೊಂಡು ಕೆಲಸ ಮಾಡಿಕೊಳ್ಳಬಹುದಿತ್ತು. ಆದರೆ ಊರಿನ ಜನರ ಪ್ರತಿಕೂಲತೆ ನೋಡಿ ಕೆಲವೇ ಸಮಯಕ್ಕೆ ಬೇಕಾಗಿರುವಂತಹ ಎಲ್ಲ ವಸ್ತುಗಳನ್ನು ಖರೀದಿಸಬೇಕಾಯಿತು ಹಾಗಾಗಿ ಪರಿಷತ್ತಿಗೆ ಸಾಕಷ್ಟು ಖರ್ಚಾಯಿತು. ಬಂಗಾರ ಕೊಟ್ಟರೂ ಕೆಲಸವಾಗದಂತಹ ಪರಿಸ್ಥಿತಿಯಲ್ಲಿ ಎಲ್ಲ ವ್ಯವಸ್ಥೆಯನ್ನು ಉತ್ತಮವಾಗಿ ಮಾಡಿಕೊಟ್ಟಿದ್ದು ಆಶ್ಚರ್ಯಕರವಾದ ಸಂಗತಿ ಹಾಗೂ ಇದಕ್ಕಾಗಿ ರಾ. ಚಿತ್ರೆಯವರಿಗೆ ಧನ್ಯವಾದ ಹೇಳಿದಷ್ಟು ಕಡಿಮೆಯೆ. ಅವರ ಜೊತೆಗೆ ಪುಣೆಯ ಸುಭೇದಾರ ಘಾಡಗೆ, ರಾ. ಘೋರಾತ್, ಹಾಗೂ ಭಾನಗರ್‌ದಿಂದ ರಾ.ಭಾನಗರಕರ್ ಜಮೇದಾರ್ ಇವರು ೨೪ನೆಯ ತಾರೀಖಿನಂದು ಮಾಹಾಡ್‌ಗೆ ಬಂದಿಳಿದರು. ಬಂದಿರುವ ಪ್ರತಿನಿಧಿಗಳಿಗೆ ಶಿಸ್ತು ಪಾಲನೆ ಹೇಳಿಕೊಡುವುದು, ಇಷ್ಟು ದೊಡ್ಡ ಸಮುದಾಯದ ಊಟದ ವ್ಯವಸ್ಥೆ ಮಾಡುವಂತಹ ಬಹಳ ಕಷ್ಟದ ಕೆಲಸಗಳನ್ನು ಸುಭೇದಾರ ಘಾಡಗೆಯವರಿಗೆ ವಹಿಸಲಾಗಿತ್ತು. ಸುಭೇದಾರ ಘಾಡಗೆಯವರ ಕೆಲಸದ ಚಾಕಚಕ್ಯತೆಯನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾಗಿದ್ದರು. ಸಭೆಯ ಮಹತ್ವವನ್ನು ಗಮನಿಸಿ ೧೯ನೆಯ ತಾರೀಖಿನಿಂದಲೆ ಕಲೆಕ್ಟರ್, ಜಿಲ್ಲೆಯ ಪೊಲೀಸ್ ಸುಪರಿಂಟೆಂಡೆಂಟ್ ಅಧಿಕಾರಿಗಳು ಮಹಾಡ್‌ಗೆ ಬಂದು ತಂಗಿದ್ದರು. ೨೩ನೆಯ ತಾರೀಖಿನಿಂದ ಪ್ರತಿನಿಧಿಗಳು ಬರಲಾರಂಭಿಸಿದರು

ಹಾಗೂ ೨೫ನೆಯ ತಾರೀಖಿನವರೆಗೆ ೧೦ ಸಾವಿರದಷ್ಟು ಜನ ಸೇರಿದರು. ಈ ನಡುವೆ ಕಲೆಕ್ಟರ್ ಸಾಹೇಬರಿಂದ ತಡೆಯಾಜ್ಞೆ ಬರುತ್ತಿಲ್ಲ ಅನ್ನುವುದನ್ನು ಕಂಡ ಮೇಲ್ಜಾತಿಯ ಜನ ಏನಾದರೂ ಮಾಡಿ ದಲಿತರನ್ನು ತಡೆಯುವ ಉದ್ದೇಶದಿಂದ ಡಾ.ಅಂಬೇಡ್ಕರ್ ಹಾಗೂ ಇನ್ನಿತರ ನಾಲ್ಕು ಜನರ ಮೇಲೆ ಮಾಹಾಡ್‌ನ ದಿವಾನೀ ಕೋರ್ಟಿನಲ್ಲಿ ಫಿರ್ಯಾದು ದಾಖಲಿಸಿ ೨೫ನೆಯ ತಾರೀಖಿನಂದು ದಲಿತರು ಕೆರೆಗೆ ಹೋಗದಂತೆ ಅರ್ಜಿ ಬರೆದು ತತ್ಕಾಲಿಕ ತಡೆಯಾಜ್ಞೆ ಪಡೆದರು. ಇದರಿಂದ ಕಲೆಕ್ಟರ್ ಸಾಹೇಬರಿಗೆ ಬೇಸರವಾದರೂ ದಿವಾಣಿ ಕೋರ್ಟಿನ ಅವಮಾನವಾಗಬಾರದೆಂದು ಅವರು ತಮ್ಮ ಮೊದಲಿನ ವರಸೆಯನ್ನು ಸ್ವಲ್ಪ ಬದಲಿಸಬೇಕಾಯಿತು. ಹಾಗಾಗಿ ಅವರು ಕಡೆಯತನಕ ಸಾಮದಾಮದ ಧೋರಣೆಯನ್ನವಲಂಬಿಸಿ ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೪೪ ಕಾಲಮ್‌ನಡಿ ತಮಗೆ ತಡೆಯಾಜ್ಞೆ ಹೊರಡಿಸುವ ಅಧಿಕಾರವಿದ್ದರೂ ಅವರು ಹಾಗೆ ಮಾಡಲಿಲ್ಲ ಅನ್ನುವುದನ್ನು ನೆನಪಿಡಬೇಕು. ಆದರೆ ೨೩ನೆಯ ತಾರೀಖಿನಿಂದ ಪರಿಷತ್ತಿನ ಕ್ಯಾಂಪಿನಲ್ಲಿ ಬೆಳಿಗ್ಗೆ, ಸಾಯಂಕಾಲ ಗಸ್ತು ಹಾಕಿ ಜನರಿಗೆ ಉಪದೇಶ ಕೊಡುತ್ತ ಸತ್ಯಾಗ್ರಹದಿಂದ ದೂರವಿಡಲು ಪ್ರಯತ್ನಿಸಿದರು. ಅವರಿಗೆ ಉಪದೇಶಿಸುವಾಗ 'ನೀವು ಜಿಲ್ಲೆಯ ಕಲೆಕ್ಟರ್ ಸಾಹೇಬರ ಮಾತನ್ನು ಕೇಳುತ್ತೀರೋ ಇಲ್ಲ ಡಾ. ಅಂಬೇಡ್ಕರರ ಮಾತು ಕೇಳುತ್ತೀರೋ' ಎಂದವರು ಕೇಳಿದಾಗ ಡಾ. ಅಂಬೇಡ್ಕರ್ ಅವರ ಮಾತನ್ನೇ ಕೇಳುತ್ತೇವೆ ಅನ್ನುವ ಉತ್ತರ ಜನರಿಂದ ಅವರಿಗೆ ಸಿಗುತ್ತಿತ್ತು.

### ಡಾ. ಅಂಬೇಡ್ಕರ್ ಅವರ ಮಹಾಡ್‌ಗೆ ಪ್ರಯಾಣ

ಮುಂಬಯಿಯಿಂದ ಡಾ. ಅಂಬೇಡ್ಕರ್ ಹಾಗೂ ೨೫೦ ಜನ ೨೪ ರಂದು ಬೆಳಿಗ್ಗೆ ಪದ್ಮಾವತಿ ಬೋಟಿನಿಂದ ಹೊರಟರು. ಈ ಜನರಲ್ಲಿ ರಾ. ಶಿವತರಕರ್, ಧೊಂಡಿ ನಾರಾಯಣ ಗಾಯಕವಾಡ್, ಕಾಂಬಳೆ, ಗಂಗಾವಣೆ, ವನಮಾಳಿ, ಪುಣೆಯ ರಾಜಭೋಜ, ನಾಸಿಕ್‌ನಿಂದ ಭಾವುರಾವ್ ಗಾಯಕವಾಡ್, ನಂತಹ ದಲಿತರ ನಾಯಕರಿದ್ದರು. ಅವರೊಂದಿಗೆ ಮೇಲ್ಜಾತಿಯ ಜನರ ಪೈಕಿ ಸೋಶಲ್ ಸರ್ವಿಸ್ ಲೀಗ್‌ನ ಕಾರ್ಯಕರ್ತರಾದ ಶ್ರೀ. ಸಹಸ್ರಬುದ್ಧೆ ಹಾಗೂ ಸಮತಾಸಂಘದ ಪ್ರಧಾನ ಬಂಧುಗಳು ಸೇರಿಕೊಂಡಿದ್ದರು. ಬ್ರಾಹ್ಮಣ–ಬ್ರಾಹ್ಮಣೇತರರ ಸಂಪಾದಕರಾದ ರಾ. ದೇವರಾವ್ ನಾಯಿಕ್ ಅವರು ಅನಾರೋಗ್ಯದ ಕಾರಣ ಬರಲಾಗಲಿಲ್ಲ. ಸತ್ಯಾಗ್ರಹಿ ಜನ ಬಂದರಿಗೆ ತಲುಪುವ ಮೊದಲೇ ಅವರನ್ನು ಅಭಿನಂದಿಸಲು ಜನ ಸೇರಿದ್ದರು. ಈ ಜನ ದಲಿತ ನಾಯಕರಿಗೆ ಹೂವಿನ ಹಾರ ಹಾಕಿ 'ಮಹಾಡ್ ಸತ್ಯಾಗ್ರಹ ಕೀ ಜಯ್' ಅನ್ನುವ ಜಯಘೋಷ ಕೂಗಿದರು. ಬೆಳಿಗ್ಗೆ ೯ ಘಂಟೆಗೆ ಮುಂಬಯಿಯಿಂದ ಹೊರಟಿದ್ದ ಪದ್ಮಾವತಿ ಸಾಯಂಕಾಲ ಐದು ಘಂಟೆಗೆ ಹರೇಶ್ವರ ಬಂದರು ತಲುಪಿತು. ದಾರಿಯುದ್ದಕ್ಕೂ ಹಾಗೂ ಪ್ರತಿಯೊಂದು ಬಂದರಿನಲ್ಲೂ 'ಸತ್ಯಾಗ್ರಹ ಕೀ ಜಯ್' ಅನ್ನುವ ಜಯಘೋಷ ಮೊಳಗುತ್ತಿತ್ತು.

### ಕೋಳಮಾಂಡಲಾ ದಲ್ಲಿ ಸ್ವಾಗತ

ಧರಮತರ್‌ನಿಂದ ಮಹಾಡ್‌ಗೆ ಹೋಗುವುದು ಬಹಳ ಸುಲಭವಾಗಿತ್ತು ಆದರೆ ಮೋಟರ್ಮನ್‌ಗಳು ಮುಷ್ಕರ ಹೂಡುವ ಸಾಧ್ಯತೆಗಳಿದ್ದವು. ಹಾಗೇನಾದರೂ ಆಗಿದ್ದಿದ್ದರೆ ಮುಂಬಯಿಯ ಜನ ೫೦\೫೫ ಮೈಲು ಮಹಾಡ್‌ಗೆ ತಲುಪುವುದು ಅಸಾಧ್ಯವಾಗುತ್ತಿತ್ತು ಹಾಗಾಗಿ ಧರಮತರ್ ದಾರಿಯಿಂದ ಹೋಗದೆ ದಾಸಗಾಂವ್ ದಾರಿಯಿಂದ ಮಹಾಡ್ ತಲುಪುವುದು ಎಂದು ಮುಂಬಯಿಯ ಜನ ನಿರ್ಧರಿಸಿದರು. ಈ ವಿಷಯ ಕೋಳಮಾಂಡಲಾದ ಜನರಿಗೆ ಗೊತ್ತಿದ್ದರಿಂದ ಅವರೊಂದು ಸ್ವಾಗತ ಕಮಿಟಿಯನ್ನು ನೇಮಿಸಿ

ಮುಂಬಯಿಯಿಂದ ಬರುವ ಜನರನ್ನು ಸ್ವಾಗತಿಸುವ ಸಿದ್ಧತೆ ಮಾಡಿಕೊಂಡಿದ್ದರು. ಈ ಸ್ವಾಗತ ಕಮಿಟಿಯ ಅಧ್ಯಕ್ಷತೆಯನ್ನು ರಾ.ಪಾಂಡುರಂಗ. ಬಾಬಾಜಿ ಮಾಂಡಲೆಕರ್ ವಹಿಸಿಕೊಂಡಿದ್ದರು. ಕೋಳಮಾಂಡಲಾದಂತಹ ಹಳ್ಳಿಯಲ್ಲಿ ಅವರು ಮಾಡಿಕೊಂಡಿದ್ದ ವ್ಯವಸ್ಥೆ ಎಷ್ಟು ಉತ್ತಮವಾಗಿತ್ತೆಂದರೆ ಅಂತಹ ವ್ಯವಸ್ಥೆ ಮುಂಬಯಿಯಲ್ಲೂ ಸಾಧ್ಯವಿರಲಿಲ್ಲ. ಈ ಹಳ್ಳಿಯಲ್ಲಿ ರಾತ್ರಿಯೆಲ್ಲ ಸುಖವಾಗಿ ನಿದ್ರಿಸಿ ಮರುದಿನ ಬೆಳಿಗ್ಗೆ ಫಲಾಹಾರ ಮಾಡಿ ೮ ಘಂಟೆಗೆ ದಾಸಗಾಂವ್‌ಗೆ ಹೋಗಲು 'ಅಂಬಾ' ಬೋಟಿನಲ್ಲಿ ಕುಳಿತರು. ಇಬ್ಬದಿಯಲ್ಲಿ ಪರ್ವತಗಳು, ಮಧ್ಯದಲ್ಲಿ ಹಿನ್ನೀರು ಹಾಗೂ ಅಕ್ಕಪಕ್ಕದಲ್ಲಿ ಹಸಿರಿನಿಂದ ಕಂಗೊಳಿಸುತ್ತಿದ್ದ ಗಿಡಮರಗಳಂತಹ ರಮಣೀಯ ಪ್ರವಾಸ ಮುಂಜಾವಿನ ಹೊಂಗಿರಣದಲ್ಲಿ ಮನಸ್ಸಿಗೆ ಮುದ ನೀಡುತ್ತಿತ್ತು.'ಅಂಬಾ' ಮಧ್ಯಾಹ್ನ ಹನ್ನೆರಡುವರೆಗೆ ದಾಸ್‌ಗಾಂವ್ ಬಂದರು ತಲುಪಿತು. ಅಲ್ಲಿ ಸುಮಾರು ಮೂರುಸಾವಿರ ಜನ ಮಹಾಡ್‌ಗೆ ಹೋಗಲು ಡಾ. ಅಂಬೇಡ್ಕರ್ ಹಾಗೂ ಮುಂಬಯಿ ಜನರನ್ನು ಕಾಯುತ್ತಿದ್ದರು. ಅವರಷ್ಟೇಯಲ್ಲದೆ ಜೊತೆಗೆ ಕೊಲಾಬಾ ಜಿಲ್ಲೆಯ ಪೊಲೀಸ್ ಸುಪರಿಂಟೆಂಡೆಂಟ್ ಮಿ.ಫ್ಲ್ಯಾರೆನ್ಸ್, ಪೊಲೀಸ್ ಇನ್ಸಪೆಕ್ಟರ್, ಫೌಜದಾರರು ಹಾಗೂ ಇತರ ಪೊಲೀಸ್ ಅಧಿಕಾರಿಗಳು ಹಾಜರಿದ್ದರು. ಪೊಲೀಸ್ ಸುಪರಿಂಟೆಂಡೆಂಟ್ ಹಾಗೂ ಡಾ.ಅಂಬೇಡ್ಕರರು ಪರಸ್ಪರ ಕುಶಲೋಪರಿ ಪ್ರಶ್ನೆಗಳನ್ನು ಕೇಳಿದ ಮೇಲೆ 'ಕಲೆಕ್ಟರ್ ಸಾಹೇಬರಾದ ಮಿ. ಹೊಡ್ ತಮ್ಮನ್ನು ಭೇಟಿಯಾಗಲು ಕರೆಯುತ್ತಿದ್ದಾರೆ ಅನ್ನುವ ಪತ್ರವೊಂದನ್ನು ಅವರು ಅಂಬೇಡ್ಕರ ಅವರ ಕೈಗೆ ಕೊಟ್ಟಾಗ ಡಾ. ಅಂಬೇಡ್ಕರ್ ಹಾಗೂ ಶ್ರೀ. ಸಹಸ್ರಬುದ್ಧೆಯವರು ಫ್ಲ್ಯಾರೆನ್ಸ್ ಸಾಹೇಬರ ಗಾಡಿಯಲ್ಲಿ ಕುಳಿತು ಮಹಾಡಿಗೆ ಹೋದರು. ಹೊರಡುವ ಮುನ್ನ ದಾಸಗಾಂವ್‌ನಲ್ಲಿ ಜಮಾಯಿಸಿದ್ದ ಜನರಿಗೆ 'ನನ್ನ ಹಿಂದೆ ಶಾಂತತೆಯಲ್ಲಿ ಹಾಗೂ ಶಿಸ್ತಿನಲ್ಲಿ ಬನ್ನಿ' ಎಂದು ತಾಕೀತು ಮಾಡಿದರು.

### ದಾಸಗಾಂವ್‌ನಿಂದ ಮಹಾಡ್

ದಾಸಗಾಂವ್ ಬಂದರಿನಿಂದ ಮಾಹಾಡ್ ಸುಮಾರು ಐದು ಮೈಲಿ ದೂರವಿದೆ. ಡಾ. ಅಂಬೇಡ್ಕರ್ ಹಾಗೂ ರಾ. ಸಹಸ್ರಬುದ್ಧೆಯವರು ಹೋದ ಮೇಲೆ ರಾ. ಶಿವತರಕರ್ ಹಾಗೂ ಪ್ರಧಾನ ಬಂಧುಗಳು ಅಲ್ಲಿ ಸೇರಿದ್ದ ಸತ್ಯಾಗ್ರಹಿ ಜನರಿಗೆ ಡಾ. ಅಂಬೇಡ್ಕರ್ ಹೇಳಿದ್ದ ತಾಕೀತನ್ನು ನೆನಪಿಸಿ ಐದು ಜನರ ಒಂದು ಸಾಲು ತಯಾರಿಸಿ ಒಂದು ರೀತಿಯ ಪದಾತಿ ದಳವನ್ನೇ ನಿರ್ಮಿಸಿದರು. ಈ ದೊಡ್ಡ ಪದಾತಿ ದಳದ ಮೆರವಣಿಗೆ 'ಹರಹರ ಮಾಹಾದೇವ್', ಮಹಾಡ್ ಸತ್ಯಾಗ್ರಹ ಕೀ ಜಯ್' ಅನ್ನುವ ಘೋಷಣೆಗಳನ್ನು ಕೂಗುತ್ತ ಮುನ್ನಡೆಯಿತು. ಮೆರವಣಿಗೆಯಲ್ಲಿ ಬೋಧ ವಚನಗಳು ಬರೆದ ೨೦-೨೫ ಫಲಕಗಳಿದ್ದವು. ಬಹಿಷ್ಕೃತ ಹಿತಕಾರಿಣಿ ಸಭೆಯು ತಯಾರಿಸಿದ್ದ ಸ್ವಯಂಸೇವಕ ದಳದ ಬ್ಯಾಂಡ್ ಬಾರಿಸುತ್ತ ಹಾಗೂ ಸತ್ಯಾಗ್ರಹದ ಹಾಡುಗಳನ್ನು ಹೇಳುತ್ತ ಈ ಮೆರವಣಿಗೆ ಮಹಾಡ್ ಊರಿಗೆ ಕಾಲಿಟ್ಟಿತು. ಪೋಲಿಸ್ ಸುಪರಿಂಟೆಂಡೆಂಟ್ ಸಾಹೇಬರು ಮೆರವಣಿಗೆಯೊಂದಿಗೆ ಗಸ್ತು ಹಾಕುತ್ತಿದ್ದರು. ನಿಯೋಜಿಸಿದ್ದ ರಸ್ತೆಯಿಂದ ಈ ಪದಾತಿ ದಳ ಸತ್ಯಾಗ್ರಹದ ಸ್ಥಳಕ್ಕೆ ಬಂದು ತಲುಪಿದಾಗ ಶ್ರೀ. ಅನಂತರಾವ್ ಚಿತ್ರೆ ಮುಂದಾಗಿ ಎದುರಿಗೆ ಕಾಣುತ್ತಿದ್ದ ರಾಯಗಡ ಕೋಟೆಯತ್ತ ಕೈಮಾಡಿ ಕೈಗೊಂಡ ಕಾರ್ಯದಲ್ಲಿ ಯಶಸ್ಸು ಸಿಗಲಿ ಎಂದು ಬೇಡಿಕೊಂಡು ಶಿವಾಜಿ ಮಹಾರಾಜ್ ಹಾಗೂ ಜೀಜಾಮಾತಾ ಇವರ ಜೈಕಾರ ಮಾಡಲು ಹೇಳಿದರು. ಆ ಜಯಜಯಕಾರದಿಂದ ದಶದಿಕ್ಕುಗಳು ನಿನಾದಿಸಿದವು. ಎಲ್ಲರಲ್ಲೂ ವೀರಶ್ರೀ ಸಂಚಾರವಾಗಿ ಬಹಳ ಉತ್ಸಾಹದಿಂದ ಜನ ಸತ್ಯಾಗ್ರಹ ಸ್ಥಳ ತಲುಪಿದರು.

## ಪರಿಷತ್ತಿನ ಅಧಿವೇಶನ
## ಮೊದಲನೆಯ ದಿನ ೨೫-೧೨-೧೯೨೭

ಮಹಾಡ್‌ನ ಮೇಲ್ಜಾತಿ ಜನರು ಈ ಪರಿಷತ್ತು ಆಗಗೊಡಕೂಡದು ಎಂದು ಟೊಂಕ ಕಟ್ಟಿ ಕುಳಿತಿದ್ದರು ಎಂದು ಮೊದಲೇ ಹೇಳಿದ್ದೆ. ಹಾಗಾಗಿ ಮಂಟಪಕ್ಕೆ ಜಾಗ ಸಿಗುವುದು ಬಹಳ ಕಷ್ಟವಾಯಿತು. ಮಹಾಡ್‌ನ ಅಕ್ಕಪಕ್ಕದ ಎಲ್ಲ ಜಮೀನುಗಳು ಗುಜರ ಬ್ರಾಹ್ಮಣರದ್ದಾಗಿದ್ದರಿಂದ ಪರಿಷತ್ತಿನ ನಾಡಿ ನಮ್ಮ ಕೈಯಲ್ಲಿದೆ ಎಂದವರು ಬಹಳ ಸಂತೋಷದಲ್ಲಿದ್ದರು. ಆದರೆ ಹತ್ತಿರದ ಒಂದು ಜಮೀನು ಫತ್ತೇಖಾನ ಅನ್ನುವ ಮುಸಲ್ಮಾನನದ್ದಾಗಿದ್ದರಿಂದ ಆತ ಬಹಳ ಸಂತೋಷದಿಂದ ಪರಿಷತ್ತಿಗೆ ತನ್ನ ಜಮೀನನ್ನು ಬಿಟ್ಟುಕೊಟ್ಟ. ಈ ವಿಷಯ ತಿಳಿದ ಗುಜರ ಬ್ರಾಹ್ಮಣರ ಕೈಕಾಲು ತಣ್ಣಗಾದರೂ ಏನಾದರಾಗಲಿ ಪರಿಷತ್ತು ಅಗಕೂಡದು ಎಂದು ಯೋಚಿಸಿ ರಾ.ಫತ್ತೇಖಾನನ ಮನೆಯೆದುರು ಬಂದು ಮುಷ್ಕರಕ್ಕೆ ಕೂತು ನೀವು ದಲಿತರಿಗೆ ಪರಿಷತ್ತಿಗಾಗಿ ಜಮೀನು ಕೊಡಬೇಡಿ ಎಂದು ಅವರ ಕಾಲು ಹಿಡಿದರು. ಆದರೆ ಅವರ ಬೇಳೆ ಅಲ್ಲಿ ಬೇಯಲಿಲ್ಲ. 'ಕೊಟ್ಟ ವಚನವನ್ನು ನಾನು ಮುರಿಯಲಾರೆ' ಎಂದು ಹೇಳಿ ಫತ್ತೇಖಾನ್ ಎಲ್ಲರನ್ನೂ ಅಲ್ಲಿಂದ ಓಡಿಸಿದರು. ಹೀಗೆ ಸಿಕ್ಕ ಜಾಗದಲ್ಲಿ ಏಳೆಂಟು ಸಾವಿರ ಜನ ಕುಳಿತುಕೊಳ್ಳಬಹುದಾದಂತಹ ದೊಡ್ಡ ಮಂಟಪವನ್ನು ಕಟ್ಟಲಾಯಿತು. ಹೂವು ಹಾಗೂ ಹಸಿರು ಎಲೆಗಳಿಂದ, ವಿವಿಧ ಬಣ್ಣಬಣ್ಣದ ಕಾಗದದ ತೋರಣಗಳಿಂದ ಮಂಟಪ ಕಂಗೊಳಿಸುತ್ತಿತ್ತು. ಅಲ್ಲಲ್ಲಿ ಕೆಲವು ಬೋಧಪ್ರದ ವಾಕ್ಯಗಳನ್ನು ಬರೆದಿತ್ತು.

ಒಳಗೆ ಒಂದು ಮಹಾತ್ಮ ಗಾಂಧೀಜಿಯವರ ಫೋಟೊ ಇಡಲಾಗಿತ್ತು. ಮಂಟಪದ ಬಾಗಿಲಲ್ಲಿ ಮನುಸ್ಮೃತಿಯನ್ನು ಸುಡಲು ಸುಂದರವಾದ ವೇದಿಕೆಯೊಂದನ್ನು ತಯಾರಿಸಲಾಗಿತ್ತು.ಮನುಸ್ಮೃತಿಯನ್ನು ಸುಟ್ಟಿದ್ದಕ್ಕಾಗಿ ಬ್ರಾಹ್ಮಣರು 'ನೀವು ಸತ್ಯಾಗ್ರಹಕ್ಕಾಗಿ ಬಂದಿಲ್ಲ, ಆದರೆ ಬಂದಿದ್ದಕ್ಕೆ ಏನಾದರೊಂದು ಮಾಡಬೇಕು ಅನ್ನುವ ಉದ್ದೇಶದಿಂದ ಡಾ.ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ಸುಡುವ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ' ಎಂದೆಲ್ಲ ಸಾರುತ್ತಿದ್ದರು. ಮಂಟಪವನ್ನು ಕಟ್ಟುವಾಗಲೇ ಮನುಸ್ಮೃತಿ ಸುಡಲು ಬೇರೊಂದು ವೇದಿಕೆಯನ್ನು ತಯಾರಿಸುತ್ತಿರುವುದನ್ನು ನೋಡಿದವರಿಗೆ ಈ ಆರೋಪ ಎಷ್ಟು ಸುಳ್ಳು ಅನ್ನುವುದು ಗೊತ್ತಿರುತ್ತದೆ. ಮನುಸ್ಮೃತಿ ಸುಡುವ ನಿರ್ಧಾರ ಕೊನೆಯ ಘಳಿಗೆಯಲ್ಲಿ ತೆಗೆದುಕೊಂಡಿದ್ದಲ್ಲ, ಮೊದಲೇ ನಿರ್ಧರಿಸಿದ್ದು ಅನ್ನುವುದು ಕೆಳಗೆ ಕೊಟ್ಟಿರುವ ಕಾರ್ಯಕ್ರಮದ ರೂಪುರೇಷೆಯಿಂದಲೂ ಗೊತ್ತಾಗುತ್ತದೆ.

## ಮಹಾಡ್ ಸತ್ಯಾಗ್ರಹ ಪರಿಷತ್ತು
## ಕಾರ್ಯಕ್ರಮ
## ೨೫ನೆಯ ಡಿಸಂಬರ್ ೧೯೨೭

ಬೆಳಿಗ್ಗೆ ೧೦ ಘಂಟೆಗೆ ಅಧ್ಯಕ್ಷರ ಭಾಷಣ, ನಂತರ ಪರಿಷತ್ತಿನ ಎಲ್ಲ ಜನರು ಕೆರೆಗೆ ಹೋಗಿ ನೀರು ತುಂಬುವುದು.

ಮಧ್ಯಾಹ್ನ ಹನ್ನೆರಡುವರೆಗೆ ಊಟ, ೩ ಘಂಟೆಗೆ ಮನುಸ್ಮೃತಿಯ ದಹನವಿಧಿ ಹಾಗೂ ಪ್ರಾಸಂಗಿಕ ಭಾಷಣ, ತದನಂತರ ಮತ್ತೆ ಎಲ್ಲ ಜನ ಸೇರಿ ಕೆರೆಗೆ ಹೋಗಿ ನೀರು ತುಂಬುವುದು. ರಾತ್ರಿ ೭.೩೦ಕ್ಕೆ ಅಲ್ಪೋಪಹಾರ, ಕೀರ್ತನೆ ಹಾಗೂ ಸತ್ಯಶೋಧಕ ತಮಾಶಾ.

**೨೬ನೆಯ ಡಿಸಂಬರ್ ೧೯೨೭**

ಬೆಳಿಗ್ಗೆ ಹತ್ತು ಘಂಟೆಗೆ ಜಾತಿಯ ಅಂತರ್‌ವ್ಯವಸ್ಥೆ ಸುಧಾರಿಸಲು ಮಸೂದೆ. ನಂತರ ಎಲ್ಲ ಜನ ಸೇರಿ ಮತ್ತೆ ಕೆರೆಯಿಂದ ನೀರು ತುಂಬುವುದು. ಮಧ್ಯಾಹ್ನ ಹನ್ನೆರಡುವರೆಗೆ ಊಟ, ಮಧ್ಯಾಹ್ನ ಮೂರು ಘಂಟೆಗೆ ಸಾರ್ವಜನಿಕ ಮಸೂದೆಗಳು, ಮತ್ತೆ ಕೆರೆಯಿಂದ ನೀರು ತುಂಬುವುದು. ರಾತ್ರಿ ಏಳುವರೆಗೆ ಅಲ್ಪೋಪಹಾರ, ಕೀರ್ತನೆ ಹಾಗೂ ಸತ್ಯಶೋಧಕ ತಮಾಶಾ. ಇದಾದ ನಂತರ ಪರಿಷತ್ತನ್ನು ಬರಖಾಸ್ತು ಮಾಡಲಾಗುವುದು. ಕೇವಲ ೨೫೦ ಜನರನ್ನಿಟ್ಟುಕೊಂಡು ಉಳಿದವರನ್ನು ಕಳಿಸಿಕೊಡಲಾಗುವುದು. ಈ ೨೫೦ ಜನ ೨ನೆಯ ಜನವರಿ ೧೯೨೮ರ ತನಕ ಕೆರೆಯಲ್ಲಿ ನೀರು ತುಂಬುವ ಕಾರ್ಯಕ್ರಮವನ್ನು ಮುನ್ನಡೆಸಿಕೊಂಡು ಹೋಗುತ್ತಾರೆ.

**ವಿಶೇಷ ಸೂಚನೆ**: ಈ ಎರಡು ದಿನಗಳಲ್ಲಿ ಸೇರುವ ಎಲ್ಲ ಜನ ಅತ್ಯಂತ ವಿನಯರಾಗಿ ಹಾಗೂ ಶಾಂತವಾದ ರೀತಿಯಲ್ಲಿ ವರ್ತಿಸಬೇಕೆಂದು ಸತ್ಯಾಗ್ರಹ ಕಮಿಟಿ ವಿನಂತಿಸುತ್ತದೆ ಹಾಗೂ ಎಂತಹುದೇ ಪ್ರಸಂಗ ಬಂದರೂ ಶಾಂತಿ ಭಂಗವಾಗದಂತೆ ಎಲ್ಲ ಜನ ಜವಾಬ್ದಾರಿ ವಹಿಸುತ್ತಾರೆ ಎಂದು ಆಶಿಸುತ್ತೇವೆ.

ತಮ್ಮ,
ಸೀತಾರಾಮ್ ನಾಮದೇವ್ ಶಿವತರಕರ್
ಸೆಕ್ರೆಟರಿ, ಸತ್ಯಾಗ್ರಹ ಕಮಿಟಿ.

ಈಗ ಮುಂಬಯಿಯ ಜನ ಸರಿಯಾದ ಸಮಯಕ್ಕೆ ತಲುಪಲು ಸಾಧ್ಯವಾಗದಿದ್ದ ಕಾರಣ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಯಿತು ಅನ್ನುವುದು ಬೇರೆ ವಿಷಯ. ಆದರೆ ನಿರ್ಧರಿಸಿದ್ದ ಕಾರ್ಯಕ್ರಮದಂತೆ ಮನುಸ್ಮೃತಿಯ ದಹನವಿಧಿ ಕೊನೆ ಕ್ಷಣದಲ್ಲಿ ನಿರ್ಧರಿಸಿದ್ದಿರಲಿಲ್ಲ. ಬದಲಾದ ಕಾರ್ಯಕ್ರಮಕ್ಕನುಗುಣವಾಗಿ ಪರಿಷತ್ತು ಸುಮಾರು ನಾಲ್ಕು ಘಂಟೆಗೆ ಆರಂಭವಾಯಿತು. ಮೊದಲಿಗೆ ಮಕ್ಕಳಿಂದ ದೇವರ ಸ್ತುತಿಯಾದ ಮೇಲೆ ಸತ್ಯಾಗ್ರಹ ಕಮಿಟಿಯ ಸೆಕ್ರೆಟರಿ ರಾ. ಶಿವತರಕರ್ ಇವರು ರಾ.ಶ್ರೀಧರ. ಬಳವಂತ ಟಿಳಕ್, ಡಾ.ಪುರುಷೋತ್ತಮ ಸೋಳಂಕಿ, ಎಮ್.ಎಲ್.ಸಿ.ಇವರ ಸಹಾನುಭೂತಿ ಸೂಚಿಸುವ ಟೆಲಿಗ್ರಾಮ್ಸ್ ಹಾಗೂ ಕೆಲವರ ಪತ್ರಗಳನ್ನು ಓದಿ ತೋರಿಸಿದರು. ನಂತರ ಚಪ್ಪಾಳೆಯ ನಡುವೆ ಸತ್ಯಾಗ್ರಹ ಕಮಿಟಿಯ ಅಧ್ಯಕ್ಷರಾದ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ತಮ್ಮ ಭಾಷಣವನ್ನು ಓದಿ ತೋರಿಸಿದರು.

ತಮ್ಮ ಭಾಷಣದಲ್ಲವರು,

ಗಣ್ಯರೆ, ಸತ್ಯಾಗ್ರಹ ಕಮಿಟಿಯ ಆಮಂತ್ರಣಕ್ಕೆ ಮನ್ನಣೆ ಕೊಟ್ಟು ನೀವೆಲ್ಲರೂ ಇಲ್ಲಿ ಬಂದಿದ್ದೀರಿ, ಕಮಿಟಿಯ ಅಧ್ಯಕ್ಷನಾಗಿ ನಾನು ನಿಮ್ಮೆಲ್ಲರನ್ನು ಸ್ವಾಗತಿಸುತ್ತೇನೆ.

ಕಳೆದ ವರ್ಷ ಮಾರ್ಚ್ ತಿಂಗಳ ೧೯ನೆಯ ತಾರೀಖಿನಂದು ನಾವೆಲ್ಲರೂ ಸೇರಿ ಇಲ್ಲಿಯ ಚವ್‌ದಾರ್ ಕೆರೆಗೆ ಹೋಗಿದ್ದೆವು ಅನ್ನುವುದು ನಿಮ್ಮಲ್ಲಿ ಸಾಕಷ್ಟು ಜನರಿಗೆ ನೆನಪಿರಬಹುದು. ಕೆರೆಗೆ ಹೋಗುವುದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ ಎಂದು ತೋರಿಸಿದ ಮೇಲ್ಜಾತಿ ಜನ ಮಾತ್ರ ನಂತರ ಹೊಡೆದಾಟ ಮಾಡಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿಯೇ ಇದ್ದರು. ಆ ಹೊಡೆದಾಟದ ಕೊನೆ ಯಾವ ರೀತಿ ಆಗಬೇಕಿತ್ತೋ ಆದೇ ರೀತಿಯಲ್ಲಾಯಿತು.

ಹೊಡೆದಾಟ ಮಾಡಿದ ಮೇಲ್ಜಾತಿ ಜನರಿಗೆ ನಾಲ್ಕು ತಿಂಗಳ ಕಠಿಣ ಶಿಕ್ಷೆಯಾಯಿತು, ಆ ಎಲ್ಲ ಜನರಿಂದು ಜೈಲಿನಲ್ಲಿದ್ದಾರೆ. ಕಳೆದ ಮಾರ್ಚ್ ೧೯ರಂದು ನಮಗೆ ಇಂತಹ ತೊಂದರೆಯಾಗಿರದಿದ್ದರೆ ಕೆರೆಯಲ್ಲಿ ನೀರು ತುಂಬುವ ನಮ್ಮ ಹಕ್ಕನ್ನು ಮೇಲ್ಜಾತಿ ಜನ ಒಪ್ಪಿಕೊಂಡಿದ್ದಾರೆ ಎಂದು ಸಾಬೀತಾಗಿ ನಮಗೆ ಇಂದಿನ ಕಾರ್ಯಕ್ರಮ ಮಾಡುವ ಅಗತ್ಯವಿರುತ್ತಿರಲಿಲ್ಲ. ಆದರೆ ದುರ್ದೈವದಿಂದ ಹಾಗಾಗಲಿಲ್ಲ ಹಾಗಾಗಿ ಇಂದಿನ ಸಭೆ ಕರೆಯುವ ಅಗತ್ಯವುಂಟಾಯಿತು. ಮಹಾಡ್‌ನ ಈ ಕೆರೆ ಸಾರ್ವಜನಿಕರದ್ದಾಗಿದೆ. ಮಹಾಡ್‌ನ ಮೇಲ್ಜಾತಿಯ ಜನ ಎಷ್ಟು ತಿಳುವಳಿಕೆಯುಳ್ಳವರೆಂದರೆ ತಾವಷ್ಟೇಯಲ್ಲದೆ ಊರಿನ ಯಾವುದೇ ಧರ್ಮದ ಜನರಿಗೆ ಆ ಕೆರೆಯಿಂದ ನೀರು ತುಂಬಲು ಬೇಡ ಅನ್ನುವುದಿಲ್ಲ, ಮುಸ್ಲಿಮಾದಿ ಎಲ್ಲ ಪರಧರ್ಮೀಯರು ಈ ಕೆರೆಯಿಂದ ನೀರು ತುಂಬುತ್ತಾರೆ. ಮಾನವರಿಗಿಂತಲೂ ಕಡಿಮೆ ದರ್ಜೆಯ ಯೋನಿಯಲ್ಲಿ ಹುಟ್ಟಿದಂತಹ ಪಶುಪಕ್ಷಿಗಳು, ಕ್ರಿಮಿ ಕೀಟಗಳಿಗೂ ಇವರು ಕೆರೆಯಲ್ಲಿ ನೀರು ಕುಡಿಯುವದನ್ನು ತಡೆಯುವುದಿಲ್ಲ. ಅಷ್ಟೇಯಲ್ಲದೆ ಅಸ್ಪೃಶ್ಯರ ದನಕರುಗಳು ಕೂಡ ಈ ಕೆರೆಯಲ್ಲಿ ಧಾರಾಳವಾಗಿ ನೀರು ಕುಡಿಯುತ್ತವೆ. ಮೇಲ್ಜಾತಿಯ ಹಿಂದೂ ಜನರೆಂದರೆ ದಯೆಯ ತವರುಮನೆ, ಅವರು ಯಾವತ್ತೂ ಹಿಂಸೆ ಮಾಡುವುದಿಲ್ಲ, ಹಾಗೂ ಯಾರಿಗೂ ತೊಂದರೆ ಕೊಡುವುದಿಲ್ಲ. ಎಂಜಲು ಕೈಯಿಂದ ಕಾಗೆಯನ್ನೂ ಓಡಿಸದಂತಹ ಜಿಪುಣ ಹಾಗೂ ಸ್ವಾರ್ಥಿ ಜನರ ಜಾತಿಯಲ್ಲ ಇದು. ಸಾಧುಸಂತರ ಹಾಗೂ ಯಾಚಕರಲ್ಲಾಗಿರುವ ಸಾಕಷ್ಟು ಪ್ರಮಾಣದ ಹೆಚ್ಚುವರಿ ಇವರ ದಾನಬುದ್ಧಿಗೆ ಸಾಕ್ಷಿಯಾಗಿದೆ. ಪರೋಪಕಾರ ಪುಣ್ಯ ಹಾಗೂ ಪರಪೀಡೆ ಮಹಾಪಾಪವೆನ್ನುವಂತೆ ಇವರು ವರ್ತಿಸುತ್ತಾರೆ. ಅಷ್ಟೇಯಲ್ಲ "ನಮಗೆ ಬೇರೆಯವರು ಕೊಟ್ಟ ದುಃಖವನ್ನು ನಾವು ಮತ್ತೆ ಇನ್ಯಾರಿಗೋ ಕೊಡಬಾರದು, ನಾವೇ ಸಹಿಸಿಕೊಳ್ಳಬೇಕು" ಅನ್ನುವುದು ಅವರ ಸ್ವಭಾವ. ಆದ್ದರಿಂದಲೇ ಹಸುವಿನಂತಹ ನಿರುಪದ್ರವಿ ಪ್ರಾಣಿಗೂ ಅವರು ದಯೆ ಕರುಣಿಸುವಂತೆ ಹಾವಿನಂತಹ ವಿಷ ಪ್ರಾಣಿಗೂ ರಕ್ಷಣೆ ನೀಡುತ್ತಾರೆ. ಒಟ್ಟಿನಲ್ಲಿ "ಸರ್ವ ಭೂಮಿ ಏಕ ಆತ್ಮಾ" ಅನ್ನುವುದು ಅವರ ನೀತಿ. ಇಂತಹ ಮೇಲ್ಜಾತಿ ಜನ ನಮ್ಮ ಜಾತಿಯ ಜನರನ್ನೇ ಚವ್‌ದಾರ್ ಕೆರೆಗೆ ಹೋಗಲು ತಡೆಯುತ್ತಾರೆ!! ಇವರು ನಮ್ಮನ್ನೇ ಯಾಕೆ ತಡೆಯುವುದು? ಅನ್ನುವ ಪ್ರಶ್ನೆ ಯಾರಿಗೂ ಕಾಡುವುದು ಸಹಜ. ಈ ಪ್ರಶ್ನೆಗೆ ಉತ್ತರವೇನು? ಅನ್ನುವುದನ್ನು ಎಲ್ಲರೂ ತಿಳಿದುಕೊಳ್ಳದೆ ಇಂದಿನ ಮಹತ್ವ ಸಂಪೂರ್ಣವಾಗಿ ಯಾರಿಗೂ ಅರ್ಥವಾಗದು. ಹಿಂದೂಗಳಲ್ಲಿ ಶಾಸ್ತ್ರವಾಗಿ ನಾಲ್ಕು ಹಾಗೂ ರೂಢಿಯಲ್ಲಿರುವ ಐದು ವರ್ಣಗಳಿವೆ. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ ಹಾಗೂ ಅತಿಶೂದ್ರ. ವರ್ಣ ವ್ಯವಸ್ಥೆ ಹಿಂದೂ ಧರ್ಮದ ಯಮನಿಯಮದ ಮೊದಲನೆಯ ನಿಯಮ. ಅದೇ ಧರ್ಮದ ಯಮನಿಯಮದ ಎರಡನೆಯ ನಿಯಮವೆಂದರೆ ಈ ವರ್ಣ (ಬ್ರಾಹ್ಮಣಜಾತಿ) ಅಸಮಾನ್ಯ ದರ್ಜೆಯದ್ದಾಗಿದೆ ಅನ್ನುವುದು. ಒಂದಕ್ಕಿಂತ ಮತ್ತೊಂದು ಕೆಳದರ್ಜೆಯದು ಅನ್ನುತ್ತ ಪ್ರತಿಯೊಂದು ವರ್ಣ ಇಳಿಮುಖವಾಗುತ್ತ ಹೋಗುತ್ತದೆ. ಈ ನಿಯಮದಂತೆ ಕೇವಲ ದರ್ಜೆಗಳು ನಿರ್ಧಾರವಾಗಿಬಿಟ್ಟಿವೆ, ಅಷ್ಟೇಯಲ್ಲದೆ ಯಾರು ಯಾವ ದರ್ಜೆಯವರು ಎಂದು ಗೊತ್ತಾಗಲು ಪ್ರತಿಯೊಂದು ವರ್ಣದ ಮಿತಿ ಇಂತಿಷ್ಟು ಎಂದು ನಿರ್ಧರಿಸಲಾಗಿದೆ. ಹಿಂದೂ ಸಮಾಜದಲ್ಲಿ ಹೆಣ್ಣಿನ ಕೊಡುಕೊಳ್ಳಿಕೆ, ಆಹಾರದ ಕೊಡುಕೊಳ್ಳಿಕೆ, ಪಾತ್ರೆಯ ಕೊಡುಕೊಳ್ಳಿಕೆ ಹಾಗೂ ಪರಸ್ಪರ ಭೇಟಿಯಾಗುವುದರಲ್ಲೂ ಬಂಧನಗಳಿವೆ ಅನ್ನುವ ಅನಿಸಿಕೆಗಳಿವೆ. ಆದರೆ ಈ ಸಮಾಜ ಅಪೂರ್ಣವಾಗಿದೆ. ಏಕೆಂದರೆ ಈ ಐದು ರೀತಿಯ ಬಂಧನಗಳೆಷ್ಟೇಯಲ್ಲದೆ ಬದುಕಲೂ ಬಂಧನ ಹಾಕುವುದರ ಜೊತೆಗೆ ಆ ಅಸಮಾನ ದರ್ಜೆಯ ಜನರಿಗೆ ತಮ್ಮ ದರ್ಜೆ ಯಾವುದು ಎಂದು ತೋರಿಸಲು ಹಾಕಿರುವ ಬಂಧನಗಳಾಗಿವೆ. ಒಟ್ಟಿನಲ್ಲಿ ಈ ಒಟ್ಟಿಗೆ ಬಾಳುವುದರಲ್ಲಿ ಹಾಕಿರುವ ಬಂಧನಗಳು ಅಸಮಾನತೆಯ ಕುರುಹಾಗಿದೆ. ತಲೆಯ ಮೇಲೆ ಕಿರೀಟವಿದ್ದರೆ

ಅವನನ್ನು ರಾಜ ಅನ್ನುತ್ತೇವೆ, ಹಾಗೆಯೇ ಕೈಯಲ್ಲಿ ಧನುಷ್ಯವಿದ್ದರೆ ಆತ ಕ್ಷತ್ರಿಯ ಅನಿಸಿಕೊಳ್ಳುತ್ತಾನೆ, ಹಾಗೆಯೇ ಈ ಐದು ಬಂಧನಗಳಿಲ್ಲದವನು ಬ್ರಾಹ್ಮಣನೆನಿಸಿಕೊಳ್ಳುತ್ತಾನೆ ಹಾಗೂ ಈ ಐದೂ ಬಂಧನಗಳಿಂದ ಬಂಧಿಸಲ್ಪಟ್ಟವನು ಹೀನನೆನಿಸಿಕೊಳ್ಳುತ್ತಾನೆ. ಧರ್ಮ ಹಾಕಿಕೊಟ್ಟ ಈ ಅಸಮಾನತೆ ಮುರಿದು ಸಮಾನತೆ ಸ್ಥಾಪಿತವಾಗಬಾರದೆಂದು ಈ ಐದು ಬಂಧನಗಳನ್ನು ರಕ್ಷಿಸಲು ಸಾಕಷ್ಟು ಪ್ರಯತ್ನಗಳು ನಡೆಯುತ್ತವೆ. ಅಸ್ಪೃಶ್ಯರು ಚವ್‌ದಾರ್ ಕೆರೆಯ ನೀರು ಕುಡಿದರೆ ಆ ನೀರು ಮೈಲಿಗೆಯಾಗುತ್ತದೆ ಇಲ್ಲವೆ ಆವಿಯಾಗಿಬಿಡುತ್ತದೆಂದು ಬ್ರಾಹ್ಮಣರು ದಲಿತರಿಗೆ ನೀರು ಕುಡಿಯಗೊಡುತ್ತಿಲ್ಲ, ಶಾಸ್ತ್ರವು ನಮಗಿಂತ ಕೀಳದರ್ಜೆಯಲ್ಲಿಟ್ಟಿರುವ ದಲಿತರಿಗೆ ನೀರು ಕುಡಿಸಿ ಅವರೂ ನಮಗೆ ಸಮಾನರು ಎಂದವರಿಗೆ ತೋರಿಸಿಕೊಡುವುದಿಲ್ಲ, ಶಾಸ್ತ್ರ ಸಮ್ಮತಿಸಿರುವ ಅಸಮಾನತೆಯನ್ನು ಹೋಗಲಾಡಿಸುವುದಿಲ್ಲ. ಗಣ್ಯರೆ! ನಾವು ಆರಂಭಿಸಿರುವ ಹೋರಾಟದ ಭಾವಾರ್ಥವೇನು ಅನ್ನುವುದು ನಿಮಗಿದರಿಂದ ಅರ್ಥವಾಗಿರಬಹುದು. ಸತ್ಯಾಗ್ರಹ ಕಮಿಟಿಯು ನಿಮಗೆ ಮಹಾಡ್‌ಗೆ ಕರೆದಿರುವುದು ಚವದಾರ್ ಕೆರೆಯ ನೀರು ಕುಡಿಯಲು ಎಂದು ತಿಳಿದುಕೊಳ್ಳಬೇಡಿ. ಈ ಕೆರೆಯ ನೀರು ಕುಡಿಯುವುದರಿಂದ ನಾನು ನೀವು ಅಮರರಾಗುತ್ತೇವೆ ಎಂದಲ್ಲ, ಇಂದಿನವರೆಗೆ ಆ ಕೆರೆಯ ನೀರು ಕುಡಿಯಲಿಲ್ಲ ಅಂದ ಮಾತ್ರಕ್ಕೆ ನಾವೇನು ಸಾಯಲಿಲ್ಲ. ಕೇವಲ ನೀರು ಕುಡಿಯುವುದಕ್ಕಷ್ಟೇ ಕೆರೆಗೆ ಹೋಗುತ್ತಿಲ್ಲ, ಎಲ್ಲರಂತೆ ನಾವೂ ಮನುಷ್ಯರು ಎಂದು ಸಿದ್ಧಪಡಿಸಲು ನಾವು ಕೆರೆಗೆ ಹೋಗಬೇಕಿದೆ. ಅಂದರೆ ಈ ಸಭೆ ಸಮತೆಯನ್ನಾರಂಭಿಸಲು ಕರೆಯಲಾಗಿದೆ ಅನ್ನುವುದು ಸ್ಪಷ್ಟವಾಗಿದೆ. ಸಮತೆಯ ದೃಷ್ಟಿಯಿಂದ ಯೋಚಿಸಿದಾಗ ಈ ಸಭೆ ಅಪೂರ್ವದ್ದಾಗಿದೆ ಅನ್ನುವುದರ ಬಗ್ಗೆ ಅನುಮಾನವೇಯಿಲ್ಲ. ಇಂದಿನ ಪ್ರಸಂಗಕ್ಕೆ ಸಮಾನಾದ ಬೇರೆ ಯಾವುದೇ ಪ್ರಸಂಗ ಭಾರತದ ಇತಿಹಾಸದಲ್ಲಿ ಸಿಗಲಾರದು. ಇಂದಿನ ಸಭೆಗೆ ಸಮನಾದ ಮತ್ತೊಂದು ಸಭೆಯನ್ನು ಹುಡುಕುತ್ತ ಹೋದರೆ ನಾವು ಯೂರೋಪ್ ಖಂಡದ ಫ್ರಾನ್ಸ್ ದೇಶಕ್ಕೆ ಹೋಗಬೇಕಾಗುತ್ತದೆ. ೧೩೮ ವರ್ಷಗಳ ಹಿಂದೆ ಫ್ರಾನ್ಸ್ ದೇಶದ ಹದಿನಾರನೆಯ ಲೂಯಿ ರಾಜಾ ೨೪ನೆಯ ಜನವರಿ ೧೭೮೯ರಂದು ಒಂದು ಆಜ್ಞಾಪತ್ರವನ್ನು ಹೊರಡಿಸಿ ತನ್ನ ರಾಜ್ಯದ ಪ್ರಜೆಗಳ ಎಲ್ಲ ಪ್ರತಿನಿಧಿಗಳ ಸಭೆ ಕರೆದಿದ್ದನು. ಈ ಫ್ರೆಂಚ್ ರಾಷ್ಟ್ರೀಯ ಸಭೆಯನ್ನು ಕೆಲವು ಇತಿಹಾಸಕಾರರು ತೆಗಳುತ್ತಾರೆ, ಈ ಸಭೆಯು ಫ್ರಾನ್ಸ್ ದೇಶದ ರಾಜಾ ರಾಣಿಯರನ್ನು ಗಲ್ಲಿಗೇರಿಸಿ ಮೇಲ್ಜಾತಿಯವರನೇಕರನ್ನು ಓಡಿಸಿ ಓಡಿಸಿ ಕೊಂದರು, ಉಳಿದವರನ್ನು ದೇಶ ಬಿಟ್ಟು ಓಡಿಸಿದರು. ಶ್ರೀಮಂತರ ಆಸ್ತಿಯನ್ನೆಲ್ಲ ಕೊಳ್ಳೆ ಹೊಡೆದರು, ಇವರಿಂದ ೧೫ ವರ್ಷಕ್ಕೂ ಹೆಚ್ಚು ಕಾಲ ಯುರೋಪಿನಲ್ಲಿ ಅಂತರ್ಯುದ್ಧವಾಯಿತು ಎಂದೆಲ್ಲ ಆರೋಪಿಸುತ್ತಾರೆ. ನನ್ನ ಪ್ರಕಾರ ಇದು ಸುಳ್ಳು ಆರೋಪವಾಗಿದ್ದು ಇಂತಹ ಇತಿಹಾಸಕಾರರಿಗೆ ಫ್ರೆಂಚ್ ರಾಷ್ಟ್ರೀಯ ಸಭೆ ಮಾಡಿದ ಕೆಲಸ ಅರ್ಥವಾಗಲೇ ಇಲ್ಲ ಅನ್ನಬಹುದು. ಈ ಸಭೆ ಮಾಡಿದ ಕಾರ್ಯದಿಂದ ಕೇವಲ ಫ್ರಾನ್ಸ್ ಅಷ್ಟೇಯಲ್ಲ ಇಡೀ ಯೂರೋಪ ಖಂಡದ ಕಲ್ಯಾಣವಾಗಿದೆ. ೧೭೮೯ರಲ್ಲಿ ಕ್ರಾಂತಿಕಾರಕ ಫ್ರೆಂಚ್ ರಾಷ್ಟ್ರೀಯ ಸಭೆ ಬಿಗಡಾಯಿಸಿದ್ದ ಫ್ರೆಂಚ್ ರಾಷ್ಟ್ರದೆದುರು ಮಂಡಿಸಿ ಬಲವಂತವಾಗಿ ಹೇರಿದ ಸಮಾಜಸಂಘಟನೆಯ ತತ್ವಗಳನ್ನು ಮುಂದೆ ಇಡೀ ಯುರೋಪ ಖಂಡ ಸ್ವೀಕರಿಸಿದ್ದರಿಂದ ಇಂದು ಯೂರೋಪಿಯನ್ ರಾಷ್ಟ್ರ ಸುಖ ಸಮೃದ್ಧಿಯಲ್ಲಿದೆ.

ಈ ಫ್ರೆಂಚ್ ರಾಷ್ಟ್ರೀಯ ಸಭೆಯ ಮಹತ್ವ ಹಾಗೂ ಅದರ ತತ್ವಗಳ ಮಹತ್ವವನ್ನು ತಿಳಿದುಕೊಳ್ಳಲು ಆ ಕಾಲದ ಫ್ರೆಂಚ್ ಸಮಾಜದ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ನಮ್ಮ ಹಿಂದು ಧರ್ಮ ವರ್ಣಾಶ್ರಮದ ಮೇಲೆ ಆಧಾರಿತವಾಗಿದೆ ಅನ್ನುವುದು ಎಲ್ಲರಿಗೂ ಗೊತ್ತು.ಇದೇ ರೀತಿಯ ವರ್ಣಾಶ್ರಮ ಪದ್ಧತಿ ಫ್ರಾನ್ಸ್‌ನಲ್ಲಿ ೧೭೮೯ರಲ್ಲಿತ್ತು. ಫ್ರಾನ್ಸ್ ತ್ರಿವರ್ಣೀಯ ಸಮಾಜವಾಗಿತ್ತು ಅನ್ನುವುದೇ ಇದ್ದ ವ್ಯತ್ಯಾಸ.

ಹಿಂದೂ ಸಮಾಜದಂತೆ ಫ್ರೆಂಚ್ ಸಮಾಜದಲ್ಲಿಯೂ ಬ್ರಾಹ್ಮಣರೂ ಇದ್ದರೂ ಕ್ಷತ್ರಿಯರೂ ಇದ್ದರು. ಆದರೆ ವೈಶ್ಯ, ಶೂದ್ರ ಹಾಗೂ ಅತಿಶೂದ್ರ ಅನ್ನುವ ಮೂರು ಬೇರೆ ವರ್ಣಗಳನ್ನು ನಿರ್ಮಿಸದೆ ಕೇವಲ ತೃತೀಯ ವರ್ಣವೊಂದನ್ನು ನಿರ್ಮಿಸಲಾಗಿತ್ತು. ಇದು ಅಷ್ಟೇನು ಹೇಳಿಕೊಳ್ಳುವಂತಹ ವ್ಯತ್ಯಾಸವಲ್ಲ. ಹಿಂದೂ ಹಾಗೂ ಫ್ರೆಂಚ್ ಸಮಾಜದಲ್ಲಿ ವರ್ಣಾಶ್ರಮ ಪದ್ಧತಿಯಿತ್ತು ಅನ್ನುವುದು ಮಹತ್ವವಾದ ವಿಷಯ. ವರ್ಣ ವ್ಯವಸ್ಥೆಯಿಂದ ಉತ್ಪನ್ನವಾಗುವ ಭಿನ್ನತೆ ಅನ್ನುವುದೇ ಸಾಮ್ಯತೆಯ ದೃಷ್ಟಿಯಿಂದ ಗಮನಿಸಬೇಕಾದ ವಿಷಯ ಎಂದಲ್ಲ, ವರ್ಣವ್ಯವಸ್ಥೆಯಲ್ಲಿರುವ ಅಸಮಾನತೆಯೂ ಫ್ರೆಂಚ್ ಸಾಮ್ರಾಜ್ಯದಲ್ಲಿತ್ತು. ಆದರೆ ಈ ಅಸಮಾನತೆಯ ಸ್ವರೂಪ ಆ ದೇಶದಲ್ಲಿ ಬೇರೆ ರೀತಿಲ್ಲಿತ್ತು.ಇಲ್ಲಿ ಆರ್ಥಿಕಸ್ವರೂಪದ ಅಸಮಾನತೆಯಿತ್ತು ಹಾಗೂ ಬಹಳ ತೀವ್ರವಾಗಿತ್ತು. ಒಟ್ಟಿನಲ್ಲಿ ಗಮನಿಸಬೇಕಾದಂತಹ ವಿಷಯವೆಂದರೆ ಇಂದಿನ ನಮ್ಮ ಸಭೆಯಲ್ಲಿ ಹಾಗೂ ಫ್ರಾನ್ಸಿನ ವ್ಹರ್ಸಾಯ್‌ದಲ್ಲಿ ೫ನೆಯ ಮೇ ೧೭೮೯ ರಂದು ಸೇರಿದ ಫ್ರೆಂಚ್ ಜನರ ಕ್ರಾಂತಿಕಾರಕ ರಾಷ್ಟ್ರೀಯ ಸಭೆಯಲ್ಲಿ ದೊಡ್ಡ ಸಾಮ್ಯತೆ ಇದೆ.

ನಮ್ಮ ಪರಸ್ಪರರ ಪರಿಸ್ಥಿತಿಯಲ್ಲಿ ಸಾಮ್ಯವಿರುವುದಷ್ಟೇಯಲ್ಲದೆ ನಮ್ಮ ಉದ್ದೇಶದಲ್ಲೂ ಸಾಕಷ್ಟು ಸಾಮ್ಯವಿದೆ. ಫ್ರೆಂಚ್ ಜನರ ಆ ಸಭೆ ಫ್ರೆಂಚ್ ಸಮಾಜವನ್ನು ಸಂಘಟಿಸಲು ಕರೆಯಲಾಗಿತ್ತು, ಇಂದಿನ ಈ ಸಭೆಯನ್ನು ಹಿಂದೂ ಸಮಾಜವನ್ನು ಸಂಘಟಿಸಲು ಕರೆಯಲಾಗಿದೆ. ಯಾವ ತತ್ವದ ಮೇಲೆ ಈ ಸಂಘಟನೆ ಮಾಡುವುದು ಅನ್ನುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮುಂಚೆ ಫ್ರೆಂಚ್ ಜನರ ಸಭೆಯು ಫ್ರಾನ್ಸ್ ದೇಶವನ್ನು ಸಂಘಟಿಸಲು ಯಾವ ಧೋರಣೆಯನ್ನು ಸ್ವೀಕರಿಸಿತು? ಹಾಗೂ ಯಾವ ತತ್ವಗಳನ್ನು ಪಾಲಿಸಿತು ಅನ್ನುವುದರ ಬಗ್ಗೆ ನಾವಿವತ್ತು ತಿಳಿದುಕೊಳ್ಳಬೇಕಿದೆ. ಫ್ರೆಂಚ್ ಸಭೆಯ ವ್ಯಾಪ್ತಿ ನಮ್ಮ ಸಭೆಗಿಂತ ಬಹಳ ದೊಡ್ಡದಿತ್ತು. ಫ್ರೆಂಚ್‌ನ ಈ ಸಭೆಗೆ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಹೀಗೆ ಮೂರು ರೀತಿಯಿಂದಲೂ ಸಂಘಟನೆ ತರುವುದಿತ್ತು. ನಾವು ಕೇವಲ ಸಾಮಾಜಿಕ ಹಾಗೂ ಧಾರ್ಮಿಕ ಸಂಘಟನೆಯನ್ನು ಹೇಗೆ ತರುವುದು ಅನ್ನುವುದರ ಬಗ್ಗೆ ಮಾತ್ರ ಯೋಚಿಸಬೇಕಿದೆ. ರಾಜಕೀಯ ಸಂಘಟನೆಯ ಬಗ್ಗೆ ನಾವು ತುರ್ತಾಗಿ ಯೋಚಿಸಬೇಕಾದ್ದಿಲ್ಲವಾದ್ದರಿಂದ ಧಾರ್ಮಿಕ ಹಾಗೂ ಸಾಮಾಜಿಕ ಸಂಘಟನೆಗಾಗಿ ಫ್ರೆಂಚ್ ಸಭೆ ಏನು ಮಾಡಿತು ಅನ್ನುವುದನ್ನು ನಾವು ನೋಡಬೇಕಿದೆ. ನಾವಿಂದು ಈ ಸಭೆಯಲ್ಲಿ ಬರೆದಿರುವ ಮೂರು ಘೋಷಣೆಗಳಿಂದಲೇ ಫ್ರೆಂಚ್ ಸಭೆ ಸಾಮಾಜಿಕ ಹಾಗೂ ಧಾರ್ಮಿಕ ಸಂಘಟನೆಗಾಗಿ ಯಾವ ಧೋರಣೆಯನ್ನವಲಂಬಿಸಿತ್ತು ಅನ್ನುವುದು ಅರ್ಥವಾಗುತ್ತದೆ. ಮೊದಲನೆಯ ಘೋಷಣೆಯನ್ನು ೧೭ನೆಯ ಜೂನ್ ೧೭೮೯ರಂದು ಬರೆಯಲಾಯಿತು. ಅದು ಫ್ರಾನ್ಸ್ ದೇಶದ ವರ್ಣಾಶ್ರಮದ ಧರ್ಮಕ್ಕೆ ಸಂಬಂಧಪಟ್ಟಿದ್ದಿತ್ತು. ಮೊದಲೇ ಹೇಳಿದಂತೆ ಫ್ರೆಂಚ್ ತ್ರಿವರ್ಣೀಯ ಸಮಾಜವಾಗಿತ್ತು. ಈ ಘೋಷಣೆಯಿಂದ ಈ ತ್ರಿವರ್ಣ ಮುರಿದು ಬಿದ್ದು ಸಮಾಜ ಏಕವರ್ಣೀಯವಾಯಿತು. ಅಷ್ಟೇಯಲ್ಲ ರಾಜಕೀಯ ಸಭಾಗೃಹದಲ್ಲಿ ಈ ಮೂರೂ ವರ್ಣದ ಜನರಿಗಿಟ್ಟಿದ್ದ ಬೇರೆಬೇರೆ ಜಾಗಗಳನ್ನು ಒಟ್ಟುಮಾಡಲಾಯಿತು. ಎರಡನೆಯ ಘೋಷಣೆ ಧರ್ಮೋಪದೇಶಕರಿಗೆ ಸಂಬಂಧಿಸಿದ್ದಿತ್ತು. ಪುರಾತನ ರೂಢಿ ಪರಂಪರೆಗಳಂತೆ ಈ ಧರ್ಮೋಪದೇಶಕರನ್ನು ನೇಮಿಸುವುದು ಅಥವಾ ತೆಗೆದುಹಾಕುವುದು ರಾಷ್ಟ್ರದ ಕೈಯಲ್ಲಿಲ್ಲದೆ ಪೋಪ್‌ನಂತಹ ಹೊರದೇಶದ ಧರ್ಮಾಧಿಕಾರಿಯ ಕೈಯಲ್ಲಿತ್ತು. ಜನತೆಯ ದೃಷ್ಟಿಯಲ್ಲಿ ಅವನು ಅಧಿಕಾರಕ್ಕೆ ಯೋಗ್ಯನಿರಲಿ ಇಲ್ಲದಿರಲಿ! ಪೋಪ್ ಒಬ್ಬ ಧರ್ಮೋಪದೇಶಕ, ಧರ್ಮದ ಉಪದೇಶ ಮಾಡುವವನು. ಈ ಘೋಷಣೆಯು ಧರ್ಮಾಧಿಕಾರಿ ವರ್ಗದ ಏಕಾಧಿಕಾರವನ್ನು ಕಿತ್ತೊಗೆದು ಈ ಕೆಲಸವನ್ನು ಯಾರು ಮಾಡಬೇಕು? ಈ ಕೆಲಸಕ್ಕೆ ಯೋಗ್ಯನಾರು? ಅಯೋಗ್ಯನಾರು? ಅವನಿಗೆ ಸಂಬಳ ಕೊಡಬೇಕೆ ಬೇಡವೆ? ಅನ್ನುವುದನ್ನು

ನಿರ್ಧರಿಸುವ ಅಧಿಕಾರವನ್ನು ಫ್ರೆಂಚ್ ದೇಶಕ್ಕೆ ಕೊಡಲಾಯಿತು. ಮೂರನೆಯ ಘೋಷಣೆ ರಾಜಕೀಯ, ಆರ್ಥಿಕ ಇಲ್ಲವೆ ಧಾರ್ಮಿಕ ವ್ಯವಸ್ಥೆಗೆ ಸಂಬಂಧಿಸಿದ್ದಿರಲಿಲ್ಲ, ಅದು ಕೇವಲ ಸಾಮಾನ್ಯ ಘೋಷಣೆಯಾಗಿದ್ದು ಪ್ರತಿಯೊಂದು ಸಾಮಾಜಿಕ ವ್ಯವಸ್ಥೆ ಯಾವ ತತ್ವವನ್ನಾಧರಿಸಿರಬೇಕು ಅನ್ನುವುದಕ್ಕೆ ಸಂಬಂಧಿಸಿದ್ದಿತ್ತು. ಹಾಗಾಗಿ ಮೂರೂ ಘೋಷಣೆಗಳಲ್ಲಿ ಇದು ಅತ್ಯಂತ ಮಹತ್ವವಾದ ಘೋಷಣೆಯಾಗಿತ್ತು. ಈ ಘೊಷಣೆ ಮಾನವನ ಜನ್ಮಸಿದ್ಧ ಹಕ್ಕಿನ ಘೋಷಣೆ ಎಂದು ಜಗತ್ತಿನಾದ್ಯಂತ ಹೆಸರುವಾಸಿಯಾಯಿತು. ಕೇವಲ ಫ್ರಾನ್ಸ್‌ನಲ್ಲಷ್ಟೇಯಲ್ಲ ಮುಂದುವರೆದ ಎಲ್ಲ ದೇಶಗಳ ಇತಿಹಾಸದಲ್ಲೇ ಅದು ಅಪೂರ್ವವಾದಂತಹ ಘೋಷಣೆ. ಈ ಸಭೆಯನ್ನು ಅನುಕರಿಸಿ ಯೂರೋಪ್‌ನ ಪ್ರತಿಯೊಂದು ದೇಶವು ಅದನ್ನು ತಮ್ಮ ರಾಜ್ಯವ್ಯವಸ್ಥೆಯಲ್ಲಿ ಜಾಗ ಕೊಟ್ಟಿವೆ. ಹಾಗಾಗಿ ಇದರಿಂದ ಕೇವಲ ಫ್ರಾನ್ಸ್‌ನಲ್ಲಷ್ಟೇಯಲ್ಲ ಇಡೀ ಜಗತ್ತಿನಲ್ಲಿ ಕ್ರಾಂತಿಯಾಯಿತು ಅನ್ನಲು ಅಡ್ಡಿಯಿಲ್ಲ. ಈ ಘೋಷಣೆಯ ಒಟ್ಟು ೧೭ ಕಲಮುಗಳಿವೆ.ಅವುಗಳಲ್ಲಿ ಕೆಳಗಿನ ಕೆಲವು ಕಲಮುಗಳು ಬಹಳ ಮುಖ್ಯವಾಗಿವೆ.

೧. ಎಲ್ಲ ಮನುಷ್ಯರು ಹುಟ್ಟಾ ಸಮಾನ ದರ್ಜೆಯವರಾಗಿರುತ್ತಾರೆ, ಹಾಗೂ ಕೊನೆಯವರೆಗೂ ಸಮಾನ ದರ್ಜೆಯವರಾಗಿಯೇ ಉಳಿಯುತ್ತಾರೆ. ಜನಹಿತಕ್ಕಾಗಿ ಅವರ ದರ್ಜೆಯಲ್ಲಿ ವ್ಯತ್ಯಾಸ ಮಾಡಬಹುದೇ ಹೊರತು ಅವರ ಸಮಾನ ದರ್ಜೆ ಹಾಗೇ ಇರಬೇಕು.

೨. ಮೇಲೆ ಹೇಳಿರುವ ಮಾನವನ ಜನ್ಮಸಿದ್ಧ ಹಕ್ಕು ಶಾಶ್ವತವಾಗಿಡುವುದೇ ರಾಜಕಾರಣದ ಅಂತಿಮ ಧ್ಯೇಯವಿರಬೇಕು.

೩. ಎಲ್ಲ ಪ್ರಜೆಗಳಿಗೂ ಸಮಾನ ಹಕ್ಕು ಸಿಗಬೇಕು. ಯಾವುದೇ ವ್ಯಕ್ತಿಯ, ಸಮುದಾಯದ ಅಥವಾ ವಿಶಿಷ್ಟ ಜಾತಿಯ ಹಕ್ಕು ಅವರಿಗಿಲ್ಲ ಅಂದಮೇಲೆ ರಾಜಕೀಯ ಆಧಾರದಿಂದಾಗಲಿ ಇಲ್ಲವೆ ಧರ್ಮದ ಆಧಾರದಿಂದಾಗಲಿ ಅವರಿಗವು ಸಿಗಲಾರವು.

೪. ಯಾವುದೇ ವ್ಯಕ್ತಿಗೆ ತನ್ನ ಜನ್ಮಸಿದ್ಧ ಹಕ್ಕಿನಂತೆ ವರ್ತಿಸುವ ಸ್ವಾತಂತ್ರ್ಯವಿದೆ. ಅದಕ್ಕೆ ಇತಿ ಮಿತಿಯಿರಬೇಕು ಎಂದಾದರೆ ಆ ವ್ಯಕ್ತಿ ತನ್ನ ಜನ್ಮಸಿದ್ಧ ಹಕ್ಕುಗಳನ್ನು ಆಸ್ವಾದಿಸುವಷ್ಟರಮಟ್ಟಿಗೆ ಇರಲಿ, ಹಾಗೂ ಇತಿಮಿತಿ ಎಷ್ಟಿರಬೇಕು ಅನ್ನುವುದನ್ನು ಕಾನೂನು ನಿರ್ಧರಿಸಲಿ. ಧರ್ಮಶಾಸ್ತ್ರದ ಆಧಾರದಿಂದಲೋ ಇಲ್ಲ ಉಳಿದ ಇನ್ಯಾವುದೋ ಆಧಾರದಮೇಲೆ ನಿರ್ಧರಿಸಲಾಗುವುದಿಲ್ಲ.

೫. ಸಮಾಜಕ್ಕೆ ಅಪಾಯಕಾರಿಯಾಗಿರುವಂತಹ ಕಾರ್ಯವನ್ನು ಮಾಡಲು ಮಾತ್ರ ನಿಷೇಧಿಸಲಾಗುವುದು. ಕಾನೂನು ನಿಷೇಧಿಸದೇ ಇರುವಂತಹ ಕಾರ್ಯಗಳನ್ನು ಮಾಡಲು ಎಲ್ಲರಿಗೂ ಸ್ವಾತಂತ್ರ್ಯವಿರಬೇಕು. ಬಂಧನಕಾರಕವಲ್ಲದಂತಹ ಕೆಲಸ ಮಾಡಲು ಯಾರಿಗೂ ಬಲವಂತ ಮಾಡುವಂತಿಲ್ಲ.

೬. ಕಾನೂನು ಅನ್ನುವುದು ಯಾವುದೋ ಒಂದು ಜಾತಿ ಹಾಕಿಕೊಟ್ಟಿರುವ ಬಂಧನವಲ್ಲ. ಅದು ಯಾವ ರೀತಿಯದ್ದಾಗಿರಬೇಕು ಎಂದು ನಿರ್ಧರಿಸುವ ಹಕ್ಕು ಎಲ್ಲ ಪ್ರಜೆಗಳು ಇಲ್ಲವೆ ಅವರ ಪ್ರತಿನಿಧಿಗಳಿಗಿದೆ. ಈ ಕಾನೂನು ಸಂರಕ್ಷಕಾತ್ಮಕವಿರಲಿ ಇಲ್ಲವೆ ಕಠಿಣ ಶಿಕ್ಷೆ ವಿಧಿಸುವಂತಹದ್ದಿರಲಿ ಎಲ್ಲರಿಗೂ ಸಮನಾದ್ದಿರಬೇಕು. ಎಲ್ಲರೂ ಸಮಾನರು ಅನ್ನುವ ತತ್ವದ ಮೇಲೆ ಎಲ್ಲ ರೀತಿಯ ವ್ಯವಸ್ಥೆ ಇರುವುದು ನ್ಯಾಯ ಸಮ್ಮತವಾಗಿರುವುದರಿಂದ ಎಲ್ಲರೂ ಯಾವುದೇ ರೀತಿಯ ಮಾನ ಸನ್ಮಾನ, ಅಧಿಕಾರ, ವ್ಯಾಪಾರ ಎಲ್ಲದಕ್ಕೂ ಸಮನಾಗಿ ಪಾತ್ರರಾಗಿದ್ದಾರೆ. ಇದರಲ್ಲೇನಾದರೂ ವ್ಯತ್ಯಾಸವಾದರೆ ಆ ವ್ಯಕ್ತಿಯ ಗುಣದೋಷಗಳಿಂದ ಮಾತ್ರ ಆಗಲು ಸಾಧ್ಯ, ಜನ್ಮದೋಷದಿಂದಲ್ಲ.

ನಮ್ಮ ಇಂದಿನ ಈ ಸಭೆಯು ಫ್ರೆಂಚ್ ರಾಷ್ಟ್ರೀಯ ಸಭೆಯ ಪ್ರತಿಮೆಯನ್ನು ಕಣ್ಣೆದುರಿಡಬೇಕು

ಎಂದು ನನಗನಿಸುತ್ತದೆ. ಫ್ರಾನ್ಸ್ ತನ್ನ ದೇಶದ ಉನ್ನತಿಗಾಗಿ ತೋರಿಸಿದ ಮಾರ್ಗವನ್ನು ಹಾಗೂ ಮುಂದುವರೆದ ದೇಶಗಳೂ ತಮ್ಮ ಉನ್ನತಿಗಾಗಿ ಒಪ್ಪಿಕೊಂಡಂತಹ ಈ ಮಾರ್ಗವನ್ನು ಹಿಂದೂ ಸಮಾಜದ ಸಂವರ್ಧನೆಗಾಗಿ ಈ ಸಭೆಯು ಯೋಜಿಸಬೇಕಿದೆ. ಹೆಣ್ಣು ಕೊಡುಕೊಳ್ಳಿಕೆಯಿಂದ ಹಿಡಿದು ಪರಸ್ಪರ ಭೇಟಿಯಾಗುವುದರಲ್ಲೂ ಇರುವ ಬಂಧನದಂತಹ ವರ್ಣಾಶ್ರಮದ ಚೌಕಟ್ಟಿನಲ್ಲಿರುವ ಈ ಮೊಳೆಗಳನ್ನು ಕಿತ್ತು ಹಿಂದೂ ಸಮಾಜವನ್ನು ಒಂದೇ ವರ್ಣದಲ್ಲಿ ಪರಿವರ್ತಿಸಬೇಕು. ಇಲ್ಲದಿದ್ದರೆ ಅಸ್ಪೃಶ್ಯತೆಯೂ ತೊಲಗಲಾರದು ಹಾಗೂ ಸಮಾನತೆ ಸ್ಥಾಪನೆಯಾಗಲಾರದು.

ಈಗ ನಾವು ಅಸ್ಪೃಶ್ಯರಾಗಿದ್ದೇವೆ ಹಾಗಾಗಿ ಹೆಣ್ಣು ಕೊಡುಕೊಳ್ಳಿಕೆಯಲ್ಲಿರುವ ಬಂಧನ ಹಾಗೂ ಪರಸ್ಪರ ಭೇಟಿಯಾಗುವುದರಲ್ಲಿರುವ ಬಂಧನಗಳು ಸರಿದರೂ ಸಾಕು ವರ್ಣವ್ಯವಸ್ಥೆಗೂ ನಮಗೂ ಯಾವುದೇ ಸಂಬಂಧವಿಲ್ಲ, ಅದು ಇದ್ದರೆಷ್ಟು ಬಿಟ್ಟರೆಷ್ಟು? ಎಂದು ಕೆಲವರಿಲ್ಲಿ ಯೋಚಿಸುತ್ತಿರಬಹುದು. ಆದರೆ ನನ್ನ ಪ್ರಕಾರ ಹೀಗೆ ಯೋಚಿಸುವುದು ಸುತಾರಾಂ ತಪ್ಪು. ಕೇವಲ ಅಸ್ಪೃಶ್ಯತೆಯನ್ನು ತೊಲಗಿಸಿ ವರ್ಣಾಶ್ರಮವನ್ನು ಹಾಗೇ ಇಟ್ಟರೆ ಜನ ನಮ್ಮ ಉದ್ದೇಶ ಕಡಿಮೆ ಗುಣಮಟ್ಟದ್ದು ಅಂದುಕೊಂಡಾರು. ಮಾನವನ ಉದ್ಧಾರಕ್ಕಾಗಿ ಬಾಹ್ಯ ಪ್ರಯತ್ನಗಳು ಅಗತ್ಯವಿರುವಂತೆ ಆಂತರಿಕ ಬಯಕೆಯಿರುವುದೂ ಅಷ್ಟೇ ಅಗತ್ಯವಾಗಿದೆ. ಬಯಕೆ ಇರದೆ ಮನುಷ್ಯನಿಂದ ಯಾವುದೇ ಪ್ರಯತ್ನಗಳಾಗುವುದಿಲ್ಲ. ಪ್ರಯತ್ನವಿದ್ದಷ್ಟು ದೊಡ್ಡದಿದ್ದಷ್ಟು ಬಯಕೆಯೂ ಪ್ರಬಲವಾಗಿರಬೇಕು. ಯಾವುದೇ ಕೆಲಸದ ಬಯಕೆಯನ್ನಿಟ್ಟುಕೊಳ್ಳುವಾಗ ಆ ಕೆಲಸ ನನ್ನಿಂದ ಸಾಧ್ಯವೆ? ಅನ್ನುವುದರ ಬಗ್ಗೆ ಭಯ, ನಾಚಿಕೆ ಇಟ್ಟುಕೊಳ್ಳುವ ಅಗತ್ಯವಿಲ್ಲ. ಸಣ್ಣಪುಟ್ಟ ಬಯಕೆಗಳಿದ್ದರೆ ಮಾತ್ರ ನಾಚಿಕೆಯೆನಿಸಬೇಕು. ದೊಡ್ಡ ಬಯಕೆಗಳನ್ನು ಪೂರೈಸುವಾಗ ಅಪಯಶಸ್ಸು ಬಂದರೂ ಭಯಪಡುವ ಇಲ್ಲವೆ ನಾಚಿಕೆಪಡುವ ಅಗತ್ಯವಿಲ್ಲ. ಅಸ್ಪೃಶ್ಯತೆ ತೊಲಗುವುದರಿಂದ ಅತಿಶೂದ್ರರಿರುವ ನಾವು ಶೂದ್ರರಾದೇವು ಆದರೆ ಅತಿಶೂದ್ರರಿಂದ ಶೂದ್ರರಾಗುವುದರಿಂದ ಅಸ್ಪೃಶ್ಯತೆ ಬೇರುಸಹಿತ ನಾಶವಾಗಬಹುದೆ? ಅಸ್ಪೃಶ್ಯತೆಯನ್ನು ತೊಲಗಿಸಲು ಹೆಣ್ಣು ಕೊಡುಕೊಳ್ಳಿಕೆ ಹಾಗೂ ಪರಸ್ಪರರ ಜೊತೆ ಭೋಜನ ಮಾಡುವಂತಹ ಪದ್ಧತಿಯಲ್ಲಿರುವ ಬಂಧನವನ್ನು ತೆಗೆಹಾಕುವಷ್ಟರಮಟ್ಟಿಗೆ ನಮ್ಮ ಬಯಕೆಯಿಟ್ಟು ಅಸ್ಪೃಶ್ಯತೆ ತೊಲಗುವಂತಿದ್ದಿದ್ದರೆ ವರ್ಣಾಶ್ರಮ ವ್ಯವಸ್ಥೆಯನ್ನು ತೆಗೆದುಹಾಕಲು ಪ್ರಯತ್ನಿಸಿ ಎಂದು ನಾನು ನಿಮಗೆ ಸೂಚಿಸುತ್ತಿರಲಿಲ್ಲ. ಗಣ್ಯರೆ! ಹಾವನ್ನು ಕೊಲ್ಲುವುದಿದ್ದರೆ ಅದರ ಬಾಲಕ್ಕೆ ಪೆಟ್ಟು ಹಾಕಿ ಅದನ್ನು ಕೊಲ್ಲಲಾಗುವುದಿಲ್ಲ ಅನ್ನುವುದು ನಿಮ್ಮೆಲ್ಲರಿಗೂ ಗೊತ್ತು. ಹಾವಿನ ಹೆಡೆಯನ್ನೇ ಜಜ್ಜಬೇಕಾಗುತ್ತದೆ. ಯಾವುದೇ ರಗಳೆಯನ್ನು ನಾಶ ಮಾಡಲು ಅದರ ಬೇರು ಕಂಡುಹಿಡಿದು ಆ ಬೇರನ್ನೇ ಕಡಿಯಬೇಕಾಗುತ್ತದೆ.

ಯಾರ ಸಾವು ಯಾವುದರಲ್ಲಿದೆ ಅನ್ನುವುದನ್ನು ಕಂಡುಹಿಡಿದು ಅದಕ್ಕೇ ಪೆಟ್ಟು ಕೊಡಬೇಕಾಗುತ್ತದೆ. ಭೀಮ ದುರ್ಯೋಧನ ತೊಡೆಗೆ ಪೆಟ್ಟು ಕೊಟ್ಟಿದ್ದರಿಂದಲೇ ದುರ್ಯೋಧನ ಸತ್ತ. ಅದೇ ಪೆಟ್ಟನವನು ದುರ್ಯೋಧನನ ತಲೆಗೆ ಕೊಟ್ಟಿದ್ದರೆ ಅವನು ಸಾಯುತ್ತಿರಲಿಲ್ಲ. ದುರ್ಯೋಧನನ ಸಾವು ಅವನ ತೊಡೆಯಲ್ಲಿತ್ತು, ತಲೆಯಲ್ಲಿರಲಿಲ್ಲ. ಶಾರೀರಿಕ ರೋಗವನ್ನು ಯಾವ ರೀತಿ ಗುಣಪಡಿಸಬಹುದು ಅನ್ನುವುದು ಗೊತ್ತಿರದೆ ಔಷಧಿ ಕೊಡುವ ವೈದ್ಯನ ಪ್ರಯತ್ನಗಳು ಅಸಫಲವಾಗುವ ಅನೇಕ ಉದಾಹರಣೆಗಳಿರುವಂತೆ ಸಾಮಾಜಿಕ ರೋಗದ ಚಿಕಿತ್ಸೆಯಾವುದು ಅನ್ನುವುದು ಗೊತ್ತಿರದೆ ಅದರನ್ನು ಪರಿಹರಿಸಲು ಮಾಡಿರುವ ಪ್ರಯತ್ನಗಳು ವಿಫಲವಾಗಿರುವಂತಹ ಉದಾಹರಣೆಗಳು ಇತಿಹಾಸದಲ್ಲಿ ಎಲ್ಲೂ ನಮೂದಿಸಿಲ್ಲ ಹಾಗಾಗಿ ಅವು ಓದಲೂ ಸಿಗುವುದಿಲ್ಲ. ಆದರೆ ನಾನು ಓದಿರುವಂತಹ ಇಂತಹ ಒಂದು ಉದಾಹರಣೆಯನ್ನು ನಾನಿಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಯೂರೋಪಿನ ಪ್ರಾಚೀನ ರೋಮ್‌ನಲ್ಲಿ ಪ್ಯಾಟ್ರಿಶಿಯನ್ ಹಾಗೂ ಪ್ಲೇಬಿಯನ್ ಅನ್ನುವ

ಎರಡು ಪಂಗಡಗಳಿದ್ದವು. ಅವರಲ್ಲಿ ಪ್ಯಾಟ್ರಿಶಿಯನ್ ಉಚ್ಚ ಜಾತಿಯವರು ಹಾಗೂ ಪ್ಲೇಬಿಯನ್ ಕೆಳಜಾತಿಯವರೆಂದು ಪರಿಗಣಿಸಲಾಗುತ್ತಿತ್ತು. ಪ್ಯಾಟ್ರಿಶಿಯನ್ ಜನರ ಕೈಯಲ್ಲಿ ಎಲ್ಲ ಅಧಿಕಾರಗಳಿರುತ್ತಿದ್ದವು ಹಾಗು ಅವುಗಳ ಬಲದ ಮೇಲೆ ಅವರು ಪ್ಲೇಬಿಯನ್ ಜನರೊಡನೆ ಕೆಟ್ಟದಾಗಿ ವರ್ತಿಸುತ್ತಿದ್ದರು. ಈ ಪರಿಸ್ಥಿತಿಯಿಂದ, ತೊಂದರೆಯಿಂದ ಮುಕ್ತರಾಗಲು ಒಗ್ಗಟ್ಟಿನ ಬಲದ ಮೇಲೆ ಅವರು 'ಮನಬಂದಂತೆ ಕಾಯಿದೆ ಕಾನೂನುಗಳನ್ನು ತಯಾರಿಸುವುದಕ್ಕಿಂತ ಎಲ್ಲರ ಮಾಹಿತಿಗಾಗಿ ಹಾಗೂ ನ್ಯಾಯದ ಅನುಕೂಲಕ್ಕಾಗಿ ಕಾಯಿದೆಗಳನ್ನು ಬರೆಯಿರಿ ಅನ್ನುವ ಬೇಡಿಕೆಯನ್ನು ಮುಂದಿಟ್ಟರು. ಅವರ ಪ್ರತಿಪಕ್ಷದಲ್ಲಿದ್ದ ಪ್ಯಾಟ್ರಿಶಿಯನ್ನರು ಅವರ ಮಾತನ್ನು ಮನ್ನಿಸಿ ಅದರಂತೆ ಹನ್ನೆರಡು ಕಾಯಿದೆಗಳ ಒಂದು ಪಟ್ಟಿಯನ್ನು ತಯಾರಿಸಿದರು. ಆದರೆ ಅಷ್ಟರಿಂದ ಪಾಪ ಆ ಪ್ಲೇಬಿಯನ್ ಜನರ ತೊಂದರೆ ತಪ್ಪಲಿಲ್ಲ. ಕಾಯಿದೆಯನ್ನು ಜಾರಿಗೆ ತರುವ ಎಲ್ಲ ಅಧಿಕಾರಿಗಳು ಪ್ಯಾಟ್ರಿಶಿಯನ್ ಆಗಿದ್ದರು. ಅಷ್ಟೇಯಲ್ಲ ರೋಮ್ ದೇಶದ ಟ್ರಾಬ್ಯೂನ್ ಅನಿಸಿಕೊಳ್ಳುವ ಮುಖ್ಯ ಅಧಿಕಾರಿ ಪ್ಯಾಟ್ರಿಶಿಯನ್ನೇ ಆಗಿದ್ದ. ಹಾಗಾಗಿ ಕಾನೂನು ಎಲ್ಲರಿಗೂ ಸಮನಾಗಿದ್ದರೂ ಜಾರಿಗೆ ತರುವಾಗ ಮಾತ್ರ ಪಕ್ಷಪಾತವಾಗುತ್ತಿತ್ತು. ಕಡೆಗೆ ಕಡೆಯ ಒಂದು ಉಪಾಯವೆಂದು ಪ್ಲೇಬಿಯನ್ನರು 'ರೋಮನ್ ದೇಶದ ಕಾರ್ಯಭಾರ ಒಬ್ಬನೇ ಟ್ರಾಬ್ಯೂನನ ಕೈಯಲ್ಲಿರದೆ ಎರಡು ಟ್ರೈಬ್ಯೂನರ ಕೈಯಲ್ಲಿರಬೇಕು, ಒಬ್ಬನನ್ನು ಪ್ಯಾಟ್ರಿಶಿಯನ್ನರು ಆರಿಸಿಕೊಟ್ಟರೆ ಮತ್ತೊಬ್ಬನನ್ನು ಪ್ಲೇಬಿಯನ್ನರು ಆರಿಸಿಕೊಡಬೇಕು'ಅನ್ನುವಂತಹ ಬೇಡಿಕೆಯನ್ನು ಪ್ಯಾಟ್ರಿಶಿಯನ್ನೆದುರಿಟ್ಟರು. ಈ ಬೇಡಿಕೆಯನ್ನೂ ಪ್ಯಾಟ್ರಿಶಿಯನ್ನು ಮನ್ನಿಸಿದರು ಹಾಗಾಗಿ ತಮ್ಮೆಲ್ಲ ದುಃಖ ಕ್ಲೇಶಗಳು ಕಳೆದವು ಎಂದು ಪ್ಲೇಬಿಯನ್ನರಿಗೆ ಸಂತೋಷವಾಯಿತು. ಆದರೆ ಅವರ ಈ ಸಂತೋಷ ಹೆಚ್ಚು ದಿನ ಉಳಿಯಲಿಲ್ಲ. ರೋಮನ್ ದೇಶದ ಡೆಲ್ಫಿ ಅನ್ನುವ ಗ್ರಾಮದೇವತೆಯ ಅನುಮತಿ ಸಿಗದೆ ಅಥವಾ ಅವಳ ಅನುಮತಿ ಪಡೆಯದೆ ಯಾವುದೇ ಕೆಲಸ ಮಾಡಬಾರದು ಅನ್ನುವ ಒಂದು ರೂಢಿಯಿತ್ತು. ಅದರಂತೆ ಟ್ರಾಯಬ್ಯೂನ್‌ನನ್ನು ಆರಿಸಿದರೂ ಆ ಗ್ರಾಮದೇವತೆಗೆ ಅವನು ಇಷ್ಟವಿಲ್ಲದಿದ್ದರೆ ಆಕೆಯ ಇಷ್ಟದಂತೆ ಮತ್ತೊಬ್ಬ ಟ್ರಾಬ್ಯೂನನನ್ನು ಆರಿಸಬೇಕಿತ್ತು. ಈಗ ಆ ದೇವತೆಗೆ ಯಾವುದು ಇಷ್ಟ ಅಥವಾ ಇಷ್ಟವಿಲ್ಲ ಅನ್ನುವುದನ್ನು ತಿಳಿಯಲು ದೇವತೆಯ ತೀರ್ಪು ಪಡೆಯುತ್ತಿದ್ದರು. ಈ ತೀರ್ಪು ಪಡೆಯುವ ಕೆಲಸ ಯಾರ ಕೈಯಲ್ಲಿರುತ್ತಿತ್ತು ಅನ್ನುವುದನ್ನು ನೋಡಿ. ಹಾಗೆ ತೀರ್ಪು ಪಡೆಯುವ ಜವಾಬ್ದಾರಿಯ ಕೆಲಸ ಒಬ್ಬ ಪುರೋಹಿತನಿಗಿರುತ್ತಿತ್ತು. ಆತ ಅಂತಿಂತಹ ಪುರೋಹಿತನಾಗಿರುತ್ತಿರಲಿಲ್ಲ, ರೋಮನ್ ಜನರಲ್ಲಿ ಮದುವೆಯ ಅನೇಕ ಪದ್ಧತಿಗಳಲ್ಲಿ ಕಾನಫ್ಲೇಷಿಯಸ್ ಪದ್ಧತಿ ಒಂದು, ಈ ಕಾನ್ಫೇಷಿಯಸ್ ಪದ್ಧತಿಯಿಂದ ಮದುವೆಯಾದ ತಂದೆ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ಆ ಪುರೋಹಿತನಾಗಿರಬೇಕಿತ್ತು. ಕಾನ್ಫ್ಲೇಶಿಯಸ್ ಪದ್ಧತಿಯಿಂದ ಮದುವೆಯಾಗುವ ಪರಂಪರೆ ಕೇವಲ ಪ್ಯಾಟ್ರಿಶಿಯನ್ ಜನರಲ್ಲಿತ್ತು. ಹಾಗಾಗಿ ಈ ಡೆಲ್ಫಿ ದೇವತೆಯ ಪುರೋಹಿತ ಕೂಡ ಪ್ಯಾಟ್ರಿಶಿಯನ್ನೇ ಆಗಿರುತ್ತಿದ್ದ. ಈ ಪುರೋಹಿತನ ಕೆಲಸದಿಂದ ಕಡೆಗೆ ಆಗುತ್ತಿದ್ದಿದ್ದಷ್ಟೆ, ಪ್ಲೇಬಿಯನ್ನರು ತಮ್ಮ ಒಬ್ಬ ಕಟ್ಟಾಭಿಮಾನಿಯನ್ನು ಆರಿಸಿ ತಂದೊಡನೆ ಡೆಲ್ಫಿ ದೇವಿ ಅವನಿಗೆ ಪ್ಲೇಬಿಯನ್ನರ ಪರವಾಗಿ ತೀರ್ಪು ಕೊಡುತ್ತಿರಲಿಲ್ಲ. ಒಂದು ಪಕ್ಷ ಪ್ಲೇಬಿಯನ್ನರು ಟ್ರಾಯಬ್ಯೂನ್‌ಗಾಗಿ ಪ್ಯಾಟ್ರಿಶಿಯನ್ನರ ಮರ್ಜಿಯ ಮನುಷ್ಯನನ್ನು ಆರಿಸಿದರೆ ಮಾತ್ರ ಆ ದೇವತೆ ತೀರ್ಪು ಕೊಡುತ್ತಿದ್ದಳು. ಟ್ರಾಯಬ್ಯೂನ ಅರಿಸುವ ಅಧಿಕಾರ ಪಡೆದು ಕೂಡ ಪ್ಲೇಬಿಯನ್ನರು ಸಾಧಿಸಿದ್ದೇನು? ಅವರ ಈ ಪ್ರಯತ್ನ ಸಫಲವಾಗಲಿಲ್ಲ ಅನ್ನುವುದಕ್ಕೆ ಕಾರಣ ಅವರಿಗಿದ್ದ ತೊಂದರೆಯ ಬೇರನ್ನವರು ಕಡಿಯಲಿಲ್ಲ ಅನ್ನುವುದಷ್ಟೆ. ತಮ್ಮ ಸಾಮಾಜಿಕ ರೋಗದ ಚಿಕಿತ್ಸೆ ಅವರಿಗೆ ತಿಳಿದಿದ್ದರೆ ತಮ್ಮ ಜಾತಿಯವನೇ ಎರಡನೆಯ ಟ್ರಾಬ್ಯೂನ್ ಆಗಿರಬೇಕು ಅನ್ನುವ ಬೇಡಿಕೆಯನ್ನವರು

ಮುಂದಿಡುವಾಗ ಪುರೋಹಿತನೂ ಯಾರಾಗಿರಬೇಕು ಅನ್ನುವ ಪ್ರಶ್ನೆಯನ್ನವರು ಬಿಡಿಸಿಕೊಳ್ಳುತ್ತಿದ್ದರು. ರೋಗದ ಪರಿಹಾರ ಕೇವಲ ಟ್ರಾಬ್ಯೂನ್ ಕೇಳುವುದರಲ್ಲಿರಲಿಲ್ಲ, ಪುರೋಹಿತನ್ಯಾರಾಗಿರಬೇಕು ಅನ್ನುವುದರಲ್ಲಿತ್ತು. ನಾವು ಕೂಡ ಅಸ್ಪೃಶ್ಯತೆಯನ್ನು ತೊಲಗಿಸುವುದರ ಬಗ್ಗೆ ಯೋಚಿಸುವಾಗ ಈ ರೋಗದ ಚಿಕಿತ್ಸೆ ಯಾವುದರಲ್ಲಿದೆ ಅನ್ನುವುದರ ಬಗ್ಗೆ ಸಂಪೂರ್ಣವಾಗಿ ಯೋಚಿಸಬೇಕು. ಇಲ್ಲದಿದ್ದರೆ ನಮ್ಮ ಅವಕಾಶವೂ ತಪ್ಪುವ ಸಾಧ್ಯತೆಗಳಿವೆ.

ಕೇವಲ ಪರಸ್ಪರ ಭೇಟಿಯಾಗಲಿ ಹಾಗೂ ಒಟ್ಟಿಗೆ ಊಟ ಮಾಡಲು ಸಿಕ್ಕರೆ ಅಸ್ಪೃಶ್ಯತೆ ತೊಲಗಿತು ಅಂದುಕೊಳ್ಳುವಂತಹ ಮೂರ್ಖತನ ಮಾಡಬೇಡಿ. ಇವೆರಡರ ಅನುಮತಿ ಸಿಕ್ಕರೆ ಅಸ್ಪೃಶ್ಯತೆ ತೊಲಗುವುದಿಲ್ಲ, ಹೆಚ್ಚೆಚ್ಚು ಅಂದರೆ ಮನೆಯ ಹೊರಗಿನ ಅಸ್ಪೃಶ್ಯತೆ ತೊಲಗೀತು. ಆದರೆ ಮನೆಯೊಳಗಿನ ಅಸ್ಪೃಶ್ಯತೆ ತೊಲಗಲಾರದು. ಮನೆಹೊರಗಿನ ಅಸ್ಪೃಶ್ಯತೆಯ ಜೊತೆ ಮನೆಯ ಒಳಗಿನ ಅಸ್ಪೃಶ್ಯತೆಯನ್ನು ತೊಲಗಿಸಲು ನಾವು ಹೆಣ್ಣು ಕೊಡುಕೊಳ್ಳಿಕೆಯಲ್ಲಿರುವ ಬಂಧನವನ್ನು ತೆಗೆಯಬೇಕಿದೆ ಅನ್ನುವುದನ್ನು ಬಿಟ್ಟರೆ ಬೇರೆ ಉಪಾಯವಿಲ್ಲ. ಬೇರೆ ದೃಷ್ಟಿಯಿಂದ ಯೋಚಿಸಿದರೂ ಕಡೆಗೆ ಹೆಣ್ಣು ಕೊಡುಕೊಳ್ಳಿಕೆಯೇ ನಿಜವಾದ ಸಮತೆ ಸ್ಥಾಪಿಸುವ ಮಾರ್ಗವೆಂದು ಸಿದ್ಧವಾಗುತ್ತದೆ. ಮುಖ್ಯವಾದ ಭೇದಗಳು ಒಮ್ಮೆ ಇಲ್ಲವಾದ ಮೇಲೆ ಸಣ್ಣಪುಟ್ಟ ಭೇದಗಳು ತಂತಾನೆ ಮಾಯವಾಗುತ್ತವೆ. ಆದರೆ ಸಣ್ಣಪುಟ್ಟ ಭೇದಗಳು ಮಾಯವಾದರೆ ದೊಡ್ಡ ಭೇದಗಳು ಮಾಯವಾಗುತ್ತವೆ ಎಂದು ಹೇಳಲಾಗುವುದಿಲ್ಲ. ಜೊತೆಗೆ ಭೋಜನ ಮಾಡಲು ನಿರ್ಬಂಧ, ಒಬ್ಬರನ್ನೊಬ್ಬರು ಭೇಟಿಯಾಗುವ ನಿರ್ಬಂಧಗಳು ಕೇವಲ ಒಂದು ಹೆಣ್ಣು ಕೊಡುಕೊಳ್ಳಿಕೆಯ ನಿರ್ಬಂಧನೆಗಳಿಂದ ಹುಟ್ಟಿಕೊಂಡಿರುವಂತಹವು. ಈ ನಿರ್ಬಂಧನೆಯೊಂದು ತೊಲಗಿದರೆ ಉಳಿದವು ತಂತಾನೆ ತೊಲಗುತ್ತವೆ. ನನ್ನ ಪ್ರಕಾರ ಹೆಣ್ಣು ಕೊಡುಕೊಳ್ಳಿಕೆಯ ನಿರ್ಬಂಧನೆಯನ್ನು ತೊಲಗಿಸುವುದೇ ನಿಜವಾಗಿ ಅಸ್ಪೃಶ್ಯತೆಯನ್ನು ತೊಲಗಿಸಿದಂತೆ ಹಾಗೂ ಇದರಿಂದ ಸಮಾನತೆ ಸ್ಥಾಪಿತವಾಗಲಿದೆ. ಅಸ್ಪೃಶ್ಯತೆಯನ್ನು ನಮಗೆ ತೊಲಗಿಸುವುದಿದ್ದರೆ ಅಸ್ಪೃಶ್ಯತೆಯ ಬೇರಾಗಿರುವ ಹೆಣ್ಣು ಕೊಡುಕೊಳ್ಳಿಕೆಯ ನಿರ್ಬಂಧನೆಯನ್ನು ತೊಲಗಿಸಬೇಕು. ಇಲ್ಲದಿದ್ದರೆ ಅಸ್ಪೃಶ್ಯತೆಯನ್ನು ಬೇರುಸಹಿತ ಕಿತ್ತೆಸೆಯಲಾಗದು.

ಈ ಕೆಲಸವನ್ನು ಮಾಡುವವರಾರು? ಬ್ರಾಹ್ಮಣರಿಗಂತೂ ಸಾಧ್ಯವಿಲ್ಲ ಅನ್ನುವುದನ್ಯಾರೂ ಹೇಳಬೇಕಿಲ್ಲ. ವರ್ಣವ್ಯವಸ್ಥೆ ಇರುವವರೆಗೂ ಬ್ರಾಹ್ಮಣರ ಶ್ರೇಷ್ಠತೆ ಶಾಶ್ವತವಾಗಿರುತ್ತದೆ. ಯಾರೂ ತಮ್ಮ ಶ್ರೇಷ್ಠತೆಯನ್ನು ಬಿಟ್ಟುಕೊಡಲಾರರು. ತಮ್ಮ ಕೈಯಲ್ಲಿರುವ ಅಧಿಕಾರಗಳನ್ನು ತಾನಾಗೇ ಯಾರೂ ಬಿಟ್ಟುಕೊಡುವುದಿಲ್ಲ. ಶತಕಾನುಶತಕಗಳಿಂದ ಬ್ರಾಹ್ಮಣರು ಇತರ ಜಾತಿಗಳ ಮೇಲೆ ತಮ್ಮ ಸಾರ್ವಭೌಮತ್ವವನ್ನು ಸಿದ್ಧಪಡಿಸಿದ್ದಾರೆ. ಅದನ್ನೆಲ್ಲ ಬಿಟ್ಟು ನಾವೂ ಎಲ್ಲರಂತೆ ಸಾಮಾನ್ಯ ಮನುಷ್ಯರು ಅಂದುಕೊಂಡು ಬಾಳುವುದು ಅವರಿಂದ ಸಾಧ್ಯವಿಲ್ಲದ ಮಾತು. ಜಪಾನಿನ ಸಾಮುರಾಯಿ ಜನರಲ್ಲಿರುವ ದೇಶಭಕ್ತಿ ಈ ಬ್ರಾಹ್ಮಣರಲ್ಲಿಲ್ಲ, ಸಾಮುರಾಯಿ ಜನ ತಮ್ಮ ವಿಶಿಷ್ಟ ಸಾಮಾಜಿಕ ಹಕ್ಕುಗಳನ್ನು ಬಿಟ್ಟು ರಾಷ್ಟ್ರದ ಒಗ್ಗಟ್ಟಿಗಾಗಿ, ಸಮತೆಯ ಅಡಿಪಾಯದ ಮೇಲೆರಾಷ್ಟ್ರವನ್ನು ಒಗ್ಗೂಡಿಸಲು ಮಾಡಿದಷ್ಟು ಸ್ವಾರ್ಥತ್ಯಾಗ ನಮ್ಮ ಬ್ರಾಹ್ಮಣರು ಮಾಡಿಯಾರು ಅನ್ನುವ ಭರವಸೆಯಿಲ್ಲ. ಬ್ರಾಹ್ಮಣೇತರರಿಂದಲೂ ಈ ಕೆಲಸ ಸಾಧ್ಯವಿಲ್ಲ. ಬ್ರಾಹ್ಮಣೇತರರೆಂದರೆ ಮರಾಠಾ ಹಾಗೂ ತತ್ಸಮ ಜಾತಿಯವರು. ಇವರು ಅಧಿಕಾರವರ್ಗ ಹಾಗೂ ಅನಧಿಕಾರ ವರ್ಗದ ನಡುವಿನ ಜನ. ಅಧಿಕಾರ ವರ್ಗ ಸ್ವಲ್ಪ ಸ್ವಾರ್ಥತ್ಯಾಗ ಮಾಡಿ ಔದಾರ್ಯ ಮೆರೆಯಬಹುದೇನೊ ಅನಧಿಕಾರ ವರ್ಗ ಯಾವತ್ತೂ ಉದ್ದೇಶಪೂರಿತವಾಗಿರುತ್ತಾನೆ, ಅವನಿಗೆ ಸ್ವಾರ್ಥಕ್ಕಾಗಿಯಾದರೂ ಸಮಾಜಕ್ರಾಂತಿ ಮಾಡಬೇಕಾಗಿರುತ್ತದೆ. ಹಾಗಾಗಿ ಸ್ವಾರ್ಥಕ್ಕಿಂತ ಅವನಿಗೆ ತತ್ವಗಳು ಬಲು ಪ್ರಿಯವಾಗಿರುತ್ತವೆ. ಬ್ರಾಹ್ಮಣೇತರ ವರ್ಗ ಈ ಎರಡು ವರ್ಗದ ನಡುವಿನ ವರ್ಗವಾಗಿರುವುದರಿಂದ ಒಬ್ಬನಿಗಿರುವ ಔದಾರ್ಯ ಇವರಿಗಿಲ್ಲ ಹಾಗೂ ಇನ್ನೊಬ್ಬನಲ್ಲಿರುವ

ತತ್ವಪ್ರಿಯತೆ ಇವರಲ್ಲಿ ಬರುವುದು ಸಾಧ್ಯವಿಲ್ಲ. ಹಾಗಾಗಿ ಬ್ರಾಹ್ಮಣರ ಜೊತೆ ಸಮಾನ ಅಧಿಕಾರಿಗಳಾಗಿರುವುದಕ್ಕಿಂತ ಅಸ್ಪೃಶ್ಯರಿಂದ ತಮ್ಮ ಅಧಿಕಾರಗಳನ್ನಿವರು ಹೆಚ್ಚು ಜೋಪಾನ ಮಾಡುತ್ತಾರೆ. ಈ ಸಮಾಜ ಕ್ರಾಂತಿಯ ಕೆಲಸದಲ್ಲಿ ಈ ವರ್ಗ ಕೆಲಸಕ್ಕೆ ಬಾರದು. ಇವರ ಸಹಾಯಕ್ಕೆ ನಾವು ಕಾದು ಕುಳಿತರೆ ಲಾವಿ ಪಕ್ಷಿ ಮತ್ತದರ ಮರಿಗಳು ಅನ್ನುವ ಪಾಠದಲ್ಲಿ ಫಸಲು ಕೊಯ್ಯಲು ಪಕ್ಕದ ರೈತನನ್ನು ಕಾದು ಕೂತ ರೈತನ ಗತಿಯೇ ನಮ್ಮದಾಗುವುದರಲ್ಲಿ ಅನುಮಾನವಿಲ್ಲ. ಅಸ್ಪೃಶ್ಯತೆಯನ್ನು ತೊಲಗಿಸಿ ಸಮಾನತೆ ಸ್ಥಾಪಿಸಲು ಕೈಗೊಂಡಿರುವ ಕಾರ್ಯವನ್ನು ನಾವೇ ಪೂರೈಸಬೇಕಿದೆ. ಬೇರೆ ಯಾರಿಂದಲೂ ಈ ಕೆಲಸ ಸಾಧ್ಯವಿಲ್ಲ. ನಾವು ಹುಟ್ಟಿರುವುದೇ ಈ ಕೆಲಸಕ್ಕಾಗಿ ಅಂದುಕೊಳ್ಳುವುದರಲ್ಲೇ ನಮ್ಮ ಬದುಕಿನ ಸಾರ್ಥಕತೆಯಿದೆ. ನಮಗೆ ಸಿಗುತ್ತಿರುವ ಪುಣ್ಯವನ್ನು ನಾವು ಸ್ವೀಕರಿಸೋಣ.

ಇದು ಆತ್ಮೋದ್ಧಾರದ ಕೆಲಸವಂತೂ ಹೌದು ಜೊತೆಗೆ ನಮ್ಮ ಏಳಿಗೆಯ ಮಾರ್ಗದಲ್ಲಿರುವ ಅಡೆತಡೆಗಳನ್ನು ದೂರ ಮಾಡುವ ಮಾರ್ಗವಾಗಿಸಿಕೊಳ್ಳಲು ನಾವು ಈ ಕೆಲಸವನ್ನು ಕೈಗೊಳ್ಳಬೇಕಿದೆ. ಅಸ್ಪೃಶ್ಯತೆಯಿಂದ ನಮ್ಮ ಬದುಕಿನಲ್ಲಿ ಯಾವ ರೀತಿಯ ಕತ್ತಲು ತುಂಬಿದೆ ಅನ್ನುವುದನ್ನು ನಾವೆಲ್ಲ ಊಹಿಸಬಹುದು. ಒಂದು ಕಾಲದಲ್ಲಿ ಸೈನ್ಯದಲ್ಲಿ ನಮ್ಮಲ್ಲಿಯ ಸಾಕಷ್ಟು ಜನ ಕೆಲಸ ಮಾಡುತ್ತಿದ್ದರು ಅನ್ನುವುದು ನಿಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಸೈನ್ಯದ ಕೆಲಸವೆಂದರೆ ನಮಗೆ ವತನವಿದ್ದಂತೆ ಅನಿಸುತ್ತಿತ್ತು. ಸೈನ್ಯದಲ್ಲಿ ಕೆಲಸ ಮಾಡುವಾಗ ಹೊಟ್ಟೆಪಾಡಿನ ಚಿಂತೆ ಯಾವತ್ತೂ ಕಾಡುತ್ತಿರಲಿಲ್ಲ. ಉಳಿದೆಲ್ಲ ಜಾತಿಯ ಜನ ಸೈನ್ಯದಲ್ಲಿ, ಪೋಲಿಸ್ ಖಾತೆಯಲ್ಲಿ, ನ್ಯಾಯಾಲಯದಲ್ಲಿ ಕೆಲಸ ಪಡೆದುಕೊಂಡು ಸಂತೋಷವಾಗಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದಾರೆ. ಆದರೆ ಈ ಕಛೇರಿಗಳಲ್ಲಿಂದು ನಮ್ಮ ಜನ ಹುಡುಕಿಯೂ ಸಿಗಲಾರರು. ಕಾನೂನು ನಮ್ಮನ್ನು ಈ ಕೆಲಸಗಳಿಗೆ ಭರ್ತಿಮಾಡಿಕೊಳ್ಳಲು ನಿರ್ಬಂಧಿಸಿಲ್ಲ, ಆದರೆ ಈ ಮೇಲ್ಜಾತಿ ಜನ ನಮ್ಮನ್ನು ಅಸ್ಪೃಶ್ಯರಾಗಿ ಪರಿಗಣಿಸುವುದರಿಂದ ನಮ್ಮನ್ನು ಹೀನರೆನ್ನುವುದರಿಂದ ಸರ್ಕಾರ ಕೈಚೆಲ್ಲಿ ಕುಳಿತಿದೆ ಹಾಗೂ ನಮ್ಮನ್ನು ಯಾವುದೇ ಸರ್ಕಾರಿ ಕಛೇರಿಗಳಲ್ಲಿ ಕೆಲಸ ಕೊಡಿಸಲು ಅಸಮರ್ಥವಾಗಿದೆ. ಹಾಗೆಯೇ ತಲೆಯೆತ್ತಿ ನಾವು ಯಾವುದೇ ವ್ಯಾಪಾರ ಮಾಡುವಂತಿಲ್ಲ. ನಮ್ಮಲ್ಲಿ ಹಣವಿಲ್ಲವೆಂದು ನಾವು ಸರಿಯಾದ ವ್ಯಾಪಾರ ಮಾಡಲಾಗುತ್ತಿಲ್ಲ ಅನ್ನುವ ಮಾತು ನಿಜವಾದರೂ ಹಣ ಒಟ್ಟು ಮಾಡಿ ವ್ಯಾಪಾರ ಮಾಡಿದರೂ ನಮ್ಮ ಕೈಯಾರೆ ತಯಾರಿಸಿದ ವಸ್ತುಗಳನ್ನು ಕೊಂಡುಕೊಳ್ಳುವವರ್ಯಾರು? ಅನ್ನುವುದೇ ದೊಡ್ಡ ಪ್ರಶ್ನೆ. ಒಟ್ಟಿನಲ್ಲಿ ಅಸ್ಪೃಶ್ಯತೆ ಅನ್ನುವುದು ಸಣ್ಣಪುಟ್ಟ ವಿಷಯವಾಗಿರದೆ ಅದು ನಮ್ಮ ದಾರಿದ್ರ್ಯದ ಹೀನತೆಯ ತಾಯಿಯಾಗಿದ್ದಾಳೆ, ಆಕೆಯಿಂದಲೇ ನಮಗೆ ಈ ವಿಪನ್ನ ದಶೆಯುಂಟಾಗಿದೆ. ಈ ಹೀನ ದೆಸೆಯಿಂದ ಹೊರಬರಲು ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಕಾರ್ಯವನ್ನು ನಾವೇ ಕೈಗೊಳ್ಳಬೇಕಿದೆ, ಇಲ್ಲದೆ ನಮಗೆ ಉಳಿಗಾಲವಿಲ್ಲ.

ಇದು ಸ್ವಕಾರ್ಯದಂತೆ ರಾಷ್ಟ್ರಹಿತದ ಕಾರ್ಯವೂ ಹೌದು. ಚತುರ್ವರ್ಣದಿಂದ ಅಸ್ಪೃಶ್ಯತೆ ತೊಲಗದೆ ಹಿಂದೂ ಸಮಾಜಕ್ಕೆ ಉಳಿಗಾಲವಿಲ್ಲ. ಇಂತಹ ಸಂಕಟದಿಂದ ಬದುಕುಳಿಯಲು ಅಗತ್ಯವಾಗಿ ಬೇಕಿರುವ ಸಾಧನವೆಂದರೆ ನೀತಿಮತ್ತೆ ಹೌದು ಅನ್ನುವುದನ್ನು ಯಾರೂ ಒಪ್ಪಿಕೊಂಡಾರು. ಸಮಾಜದ ಒಗ್ಗಟ್ಟಿಗೆ ಅಡ್ಡಿಬರುವ ವಿಷಯಗಳನ್ನು ಸ್ವೀಕರಿಸಿ ಸಮಾಜನ್ನು ಒಟ್ಟುಗೂಡಿಸುವ ವಿಷಯಗಳನ್ನು ಧಿಕ್ಕರಿಸುವಂತಹ ನೀತಿಮತ್ತೆಯಿರುವ ಸಮಾಜ ಇಂತಹ ಸಂಕಟಗಳಲ್ಲಿ ಸೋಲಬೇಕಾಗುತ್ತದೆ. ಇದರ ವಿರುದ್ಧವಾಗಿ ಸಮಾಜವನ್ನು ಒಗ್ಗೂಡಿಸುವ ವಿಷಯಗಳನ್ನು ಸ್ವೀಕರಿಸಿ ಸಮಾಜವನ್ನು ಬೇರ್ಪಡಿಸುವ ವಿಷಯಗಳನ್ನು ದೂರ ಸರಿಸಿದರೆ ಆ ಸಮಾಜಕ್ಕೆ ಯಶಸ್ಸು ಖಂಡಿತ ಸಿಗುತ್ತದೆ. ಇದೇ ನ್ಯಾಯ ಹಿಂದೂ ಸಮಜಕ್ಕೂ ಅನ್ವಯಿಸುತ್ತದೆ. ಚತುರ್ವರ್ಣ ಅನ್ನುವುದು ಜನರನ್ನು ಬೇರ್ಪಡಿಸುವ ವ್ಯವಸ್ಥೆಯಾಗಿದ್ದು ಒಂದೇ ವರ್ಣವಿರುವ ವ್ಯವಸ್ಥೆ

ಜನರನ್ನು ಒಗ್ಗೂಡಿಸುವ ವ್ಯವಸ್ಥೆಯಾಗಿದೆ ಅನ್ನುವುದು ಕಣ್ಣಿಗೆ ಕಾಣುತ್ತಿದ್ದರೂ ಜನರನ್ನು ಬೇರ್ಪಡಿಸುವ ವ್ಯವಸ್ಥೆಯನ್ನು ಹೊಗಳುವ ಹಿಂದೂ ಸಮಾಜ ಮತ್ತೆಮತ್ತೆ ಸೋಲುಂಡರೆ ಆಶ್ಚರ್ಯವಿಲ್ಲ. ಈ ದುರವಸ್ಥೆಯನ್ನು ದೂರ ಮಾಡಲು ಚಾತುರ್ವರ್ಣ್ಯವನ್ನು ಏಕವರ್ಣದಲ್ಲಿ ಬದಲಿಸಲೇ ಬೇಕಾಗಿದೆ, ಇಷ್ಟರಿಂದಲೇ ಆಗದು. ಚತುರ್ವರ್ಣದಲ್ಲಿರುವ ಅಸಮಾನತೆಯನ್ನೂ ಹೋಗಲಾಡಿಸಬೇಕು. ಅನೇಕರು ಸಮಾನತೆಯ ಬಗ್ಗೆ ಕುಚೇಷ್ಟೆ ಮಾಡುತ್ತಾರೆ. ನೈಸರ್ಗಿಕವಾಗಿ ಯಾವುದೇ ಮನುಷ್ಯ ಮತ್ತೊಬ್ಬನಿಗೆ ಸಮನಾಗಿರುವುದಿಲ್ಲ, ಒಬ್ಬ ಕುಳ್ಳ, ಮತ್ತೊಬ್ಬ ಉದ್ದ, ಒಬ್ಬ ಕಪ್ಪು, ಮತ್ತೊಬ್ಬ ಬೆಳ್ಳಗಿನವ, ಒಬ್ಬ ಹುಟ್ಟಾ ಜಾಣ, ಮತ್ತೊಬ್ಬ ಹುಟ್ಟು ದಡ್ಡ, ಹೀಗೆ ಹುಟ್ಟಿನಿಂದಲೇ ಮನುಷ್ಯ ಅಸಮಾನತೆ ಪಡೆದು ಹುಟ್ಟಿರುವಾಗ ಅವನನ್ನು ಸಮಾನತೆಯಿಂದ ಕಾಣಿರಿ ಎಂದು ಸಮತಾವಾದಿಗಳ ಮಾತು ಇವರಿಗೆ ಹುಚ್ಚಾಟ ಅನಿಸುತ್ತದೆ. ಈ ಜನರಿಗೆ ಸಮಾನತೆಯ ಅರ್ಥವೇ ಗೊತ್ತಿಲ್ಲ ಅನ್ನಬೇಕಾಗುತ್ತದೆ. ಅಧಿಕಾರ ಪಡೆಯುವಂತಹ ವಿಷಯವನ್ನು ಹುಟ್ಟಿಗೆ, ಹಣಕ್ಕೆ ಅಥವಾ ಇನ್ನಾವುದನ್ನೂ ಅವಲಂಬಿಸದೆ ಕೇವಲ ಮನುಷ್ಯನ ಗುಣವನ್ನೇ ಅವಲಂಬಿಸಿರಬೇಕು ಅನ್ನುವುದು ಸಮಾನತೆಯ ತತ್ವವಾಗಿದ್ದರೆ ಅದಕ್ಕೆ ಅರ್ಥವಿಲ್ಲ, ಹೊಲಸಾಗಿರುವ, ದುರ್ವರ್ತನೆಯಿರುವ ಮನುಷ್ಯನೊಡನೆ ಅಚ್ಚುಕಟ್ಟಾಗಿ, ಗುಣವುಳ್ಳ, ಸದ್ವರ್ತನೆಯಿಂದ ನಡೆಯುವ ಮನುಷ್ಯ ಸಮಾನತೆಯಿಂದ ವರ್ತಿಸಲೆಂದು ಏಕೆ ಅಪೇಕ್ಷಿಸುತ್ತೀರಿ ಅನ್ನುವ ಪ್ರಶ್ನೆ ಕೇಳುತ್ತಾರೆ. ಗುಣದಿಂದ ಸಮನಾಗಿರುವವನ ಜೊತೆ ಸಮನಾಗಿ ವರ್ತಿಸುವಂತಹ ಸಮತೆಯ ವ್ಯಾಖ್ಯೆಯನ್ನು ಅಧಿಕಾರ ಕೊಡುವಾಗ ಅನ್ವಯಿಸಬೇಕು ಆದರೆ ಎಷ್ಟೇ ಅಸಮಾನನಿರುವ ಒಬ್ಬ ವ್ಯಕ್ತಿ ತನ್ನಲ್ಲಿರುವ ಗುಣಗಳನ್ನು ವಿಕಸಿಸಿಕೊಂಡು ಅವನು ಅಧಿಕಾರಕ್ಕೆ ಯೋಗ್ಯನಾಗುವ ಮುನ್ನ ಅವನನ್ನು ಸಮಾನತೆಯಿಂದ ಕಾಣುವುದೇ ನಿಜವಾದ ನ್ಯಾಯ. ಸಮಾಜಶಾಸ್ತ್ರದ ಪರವಾಗಿ ಒಬ್ಬನಲ್ಲಿರುವ ಗುಣಗಳನ್ನು ವಿಕಸಿಸಲು ಅವನ ಸಾಮಾಜಿಕ ವ್ಯವಸ್ಥೆ ಅತ್ಯಂತ ಮಹತ್ವವಾದ ಪಾತ್ರ ವಹಿಸುತ್ತದೆ. ಗುಲಾಮರನ್ನು ಅಸಮಾನತೆಯಿಂದ ಕಂಡರೆ ಅವರಲ್ಲಿ ಕೇವಲ ಗುಲಾಮಗಿರಿಗೆ ಪೂರಕವಾದಂತಹ ಗುಣಗಳೇ ವಿಕಸಿತವಾಗುತ್ತವೆಯೇ ಹೊರತು ಬೇರೆ ಯಾವುದೇ ಅಧಿಕಾರಕ್ಕೆ ಪೂರಕವಾಗಿರುವಂತಹ ಗುಣಗಳನ್ನವನು ವಿಕಸಿತಗೊಳಿಸಲಾರ. ಹಾಗೆಯೇ ಅಶುಚಿಯಾದ ಮನುಷ್ಯನನ್ನು ಅಚ್ಚುಕಟ್ಟಾದ ಮನುಷ್ಯ ದೂರ ಇಟ್ಟರೆ ಅಶುಚಿಯಾದವನು ಶುಚಿಯಾಗಿರಲು ಮನಸ್ಸು ಮಾಡಲಾರ. ಅಪರಾಧಿಗಳನ್ನು ಅಥವಾ ಅನೈತಿಕತೆಯಿಂದ ವರ್ತಿಸುವವರನ್ನು ನೈತಿಕತೆಯಿರುವವರು ದೂರವೇ ಇಟ್ಟರೆ ಅವರಿಗೆ ನೈತಿಕತೆಯ ಪಾಠ ಸಿಗುವುದಾದರೂ ಹೇಗೆ? ಸಮಾನತೆಯ ವರ್ತನೆ ಆತನಲ್ಲಿಲ್ಲದಿರುವ ಗುಣಗಳನ್ನು ವಿಕಸಿತಗೊಳಿಸಲು ಸಹಾಯ ಮಾಡದಿದ್ದರೂ ಸಮಾನತೆಯಿಂದ ವರ್ತಿಸದಿದ್ದರೆ ನೈಸರ್ಗಿಕ ಗುಣಗಳು ಯಾವತ್ತೂ ವಿಕಸಿತವಾಗಲಾರವು ಅನ್ನುವುದು ಮೇಲ್ಕಂಡ ಉದಾಹರಣೆಯಿಂದ ಸಾಬೀತಾಗುತ್ತದೆ. ಸಮಾನತೆಯಿಂದ ವರ್ತಿಸದಿದ್ದರೆ ನೈಸರ್ಗಿಕ ಗುಣಗಳು ವಿಕಸಿತವಾಗದಂತೆ ಆತನಲ್ಲಿರುವ ಮೈಗುಣಗಳು ವಿಕಸಿತವಾಗಲಾರವು. ಹಿಂದೂ ಸಮಾಜದಲ್ಲಿರುವ ಅಸಮಾನತೆಯು ಒಂದು ಕೈಯಿಂದ ಮನುಷ್ಯನ ವಿಕಾಸವನ್ನು ನಿಲ್ಲಿಸಿ ಸಮಾಜವನ್ನು ಕುಂಠಿತಗೊಳಿಸುತ್ತದೆ. ಇದೇ ಅಸಮಾನತೆ ಮತ್ತೊಂದು ಕೈಯಿಂದ ಒಬ್ಬ ವ್ಯಕ್ತಿಯಲ್ಲಿರುವ ಸಾಮರ್ಥ್ಯವನ್ನು ಸಮಾಜಕ್ಕೆ ಉಪಯೋಗವಾಗುವಂತೆ ಉಪಯೋಗಿಸಲು ಕೊಡುವುದಿಲ್ಲ. ಚಾತುರ್ವರ್ಣ್ಯದಿಂದ ಅಸ್ತವ್ಯಸ್ತವಾದ ಹಿಂದೂ ಸಮಾಜವನ್ನು ಈ ಅಸಮಾನತೆ ಎರಡೂ ಕೈಯಿಂದ ದುರ್ಬಲ ಮಾಡುತ್ತಿದೆ. ಈ ಹಿಂದೂ ಸಮಾಜವನ್ನು ಸಾಮರ್ಥ್ಯವುಳ್ಳ ಸಮಾಜವನ್ನಾಗಿ ಪರಿವರ್ತಿಸುವುದಿದ್ದರೆ ಚಾತುರ್ವರ್ಣ್ಯ ಹಾಗೂ ಅಸಮಾನತೆಯನ್ನು ತೊಲಗಿಸಿ ಹಿಂದೂ ಸಮಾಜವನ್ನು ಏಕವರ್ಣ ಹಾಗೂ ಸಮಾನತೆಯ ತತ್ವಗಳನ್ನಾಧರಿಸಿ ರಚಿಸಬೇಕು. ಅಸ್ಪೃಶ್ಯತೆಯನ್ನು ತೊಲಗಿಸುವ ಮಾರ್ಗ ಹಿಂದೂ ಸಮಾಜವನ್ನು ಸಮರ್ಥಪಡಿಸುವ ಮಾರ್ಗಕ್ಕಿಂತ

ಬೇರೆಯಾಗಿಲ್ಲ. ಅದಕ್ಕೆ ನಾನು ಹೇಳಿದಂತೆ ನಮ್ಮದು ಸ್ವಕಾರ್ಯವಿದ್ದಂತೆ ರಾಷ್ಟ್ರಹಿತದ ಕಾರ್ಯ ಕೂಡ ಹೌದು ಅನ್ನುವುದರಲ್ಲಿ ಎರಡು ಮಾತಿಲ್ಲ. ನಿಜವಾದ ಕ್ರಾಂತಿ ತರಲು ಈ ಕಾರ್ಯವನ್ನು ಕೈಗೊಳ್ಳಲಾಗಿದೆ.

ಕೇವಲ ಮಧುರ ಮಾತುಗಳನ್ನಾಡಿ ಮುದಗೊಂಡ ನಿಮ್ಮ ಮನಸ್ಸನ್ನು ತಿಳಿಹೇಳಲು ನಡೆಸಿರುವ ಆಟ ಎಂದು ಯಾರೂ ತಪ್ಪು ತಿಳಿದುಕೊಳ್ಳಬೇಡಿ. ಈ ಕಾರ್ಯಕ್ಕೆ ಭಾವನೆಯ ಆಧಾರವಿದೆ ಹಾಗೂ ಈ ಭಾವನೆಯೇ ನಮ್ಮ ಕಾರ್ಯಕ್ಕೆ ಚಾಲನೆ ಕೊಡುವ ಶಕ್ತಿಯಾಗಿರುವುದರಿಂದ ಈ ಕಾರ್ಯವನ್ನು ನಿಲ್ಲಿಸುವುದು ಯಾರಿಂದಲೂ ಸಾಧ್ಯವಿಲ್ಲ. ಇಂದು ಆರಂಭವಾಗಿರುವ ಸಮಾಜ ಕ್ರಾಂತಿಯ ಕೆಲಸವು ಶಾಂತಿಯಿಂದ ನಡೆಯಲಿ ಎಂದು ನಾನು ಆ ದೇವರನ್ನು ಪ್ರಾರ್ಥಿಸುತ್ತೇನೆ. ಈ ಸಮಾಜಕ್ರಾಂತಿಯನ್ನು ಶಾಂತತೆಯಲ್ಲಿ ನಡೆಸುವ ಜವಾಬ್ದಾರಿ ನಮಗಿಂತ ನಮ್ಮ ಪ್ರತಿಪಕ್ಷದ ಮೇಲಿದೆ ಅನ್ನುವುದರಲ್ಲಿ ಅನುಮಾನವಿಲ್ಲ. ಈ ಸಮಾಜಕ್ರಾಂತಿಯಲ್ಲಿ ಅತ್ಯಾಚಾರವಾಗುವುದೋ ಇಲ್ಲವೊ ಅನ್ನುವುದು ಕೇವಲ ಮೇಲ್ಜಾತಿ ಜನರ ವರ್ತನೆಯನ್ನು ಅವಲಂಬಿಸಿದೆ. ೧೭೮೯ರಲ್ಲಿ ಫ್ರೆಂಚ್ ರಾಷ್ಟ್ರೀಯ ಸಭೆಯ ಮೇಲೆ ಅತ್ಯಾಚಾರದ ಆರೋಪ ಹೊರಿಸುವ ಜನ ಒಂದು ಮುಖ್ಯವಾದ ವಿಷಯವನ್ನು ಮರೆತಂತಿದೆ. ಫ್ರೆಂಚ್ ರಾಷ್ಟ್ರೀಯ ಸಭೆಯ ಜೊತೆ ಫ್ರೆಂಚ್ ದೇಶದ ರಾಜಾ ಮೋಸತನದಿಂದ ವರ್ತಿಸಿರದಿದ್ದರೆ, ಅವರ ಸಭೆಗೆ ಫ್ರೆಂಚ್ ಮೇಲ್ಜಾತಿಯ ಜನ ವಿರೋಧಿಸದಿದ್ದಿದ್ದರೆ, ಪರಕೀಯರ ಸಹಾಯ ಪಡೆದು ಈ ಸಭೆಯನ್ನು ಮಟ್ಟ ಹಾಕಲು ಪ್ರಯತ್ನಿಸಿರದಿದ್ದಿದ್ದರೆ ಕ್ರಾಂತಿಯ ಕಾರ್ಯದಲ್ಲಿ ಈ ಸಭೆಗೆ ಅತ್ಯಾಚಾರ ಮಾಡುವ ಅಗತ್ಯವಿರುತ್ತಿರಲಿಲ್ಲ. ನಮ್ಮ ಪ್ರತಿಪಕ್ಷಕ್ಕೂ ನಾವು ಇದನ್ನೇ ಹೇಳಬಯಸುತ್ತೇವೆ. ನೀವು ನಮಗೆ ವಿರೋಧಿಸಬೇಡಿ, ಪರಕೀಯ ಸರ್ಕಾರದ ಇಲ್ಲವೆ ಪರಧರ್ಮೀಯರ ಸಹಾಯ ಪಡೆದು ನಮ್ಮ ಮೇಲೇರಿ ಬರಬೇಡಿ. ಶಾಸ್ತ್ರಗಳನ್ನು ತಳ್ಳಿ ಆಚೆ, ನ್ಯಾಯಕ್ಕನುಸರಿಸಿಕೊಂಡಿರಿ, ಈ ಕಾರ್ಯಕ್ರಮವನ್ನು ನಾವು ಶಾಂತಿಯಿಂದ ಮಾಡುತ್ತೇವೆ ಅನ್ನುವ ಆಶ್ವಾಸನೆಯನ್ನು ನಾವು ನಿಮಗೆ ಕೊಡುತ್ತೇವೆ.

ಡಾ.ಅಂಬೇಡ್ಕರರ ಭಾಷಣವಾದ ಮೇಲೆ ಕೆಳಗಿನ ಕೆಲವು ಮಸೂದೆಗಳು ಮಂಜೂರಾದವು.

## ಹಿಂದೂ ಜನರ ಜನ್ಮಸಿದ್ಧ ಹಕ್ಕುಗಳ ಘೋಷಣೆ

ಮಸೂದೆ ೧: ಸಾಮಾಜಿಕ ಅನ್ಯಾಯ, ಧಾರ್ಮಿಕ ನಿಶ್ಶಕ್ತಿ, ರಾಜಕೀಯ ಅವನತಿ ಹಾಗೂ ಆರ್ಥಿಕ ಗುಲಾಮಗಿರಿ ಇವುಗಳಿಂದ ದೇಶ ಹೇಗೆ ಅಧೋಗತಿಗಿಳಿಯುತ್ತದೆ ಅನ್ನುವುದಕ್ಕೆ ಹಿಂದು ಸಮಾಜ ಇಂದು ಉತ್ತಮ ಉದಾಹರಣೆ. ಇಲ್ಲಿಯ ಬಹಜನ ಸಮಾಜ ಮನುಷ್ಯನ ಜನ್ಮಸಿದ್ಧ ಹಕ್ಕುಗಳ್ಯಾವವು ಅನ್ನುವುದರ ಬಗ್ಗೆ ತಿಳಿದುಕೊಳ್ಳುವುದರಲ್ಲಿ ಆಸಕ್ತಿ ತೋರಿಸಿಲ್ಲ ಹಾಗೂ ಅವುಗಳನ್ನು ಕಾಪಾಡಲೂ ಪ್ರಯತ್ನಿಸಿಲ್ಲ. ಅಷ್ಟೇಯಲ್ಲದೆ ಸ್ವಾರ್ಥಿ ಜನರ ಕೆಟ್ಟ ಕೆಲಸಗಳಿಗೆ ತಡೆಯೊಡ್ಡಿಲ್ಲ, ಆದ್ದರಿಂದಲೇ ಹಿಂದೂ ಸಮಾಜ ಇಂತಹ ಘೋರ ಸ್ಥಿತಿಗೆ ತಲುಪಿದೆ. ತಮ್ಮ ಜನ್ಮಸಿದ್ಧ ಹಕ್ಕುಗಳನ್ನು ತಿಳಿದುಕೊಳ್ಳುವುದು, ಆಪತ್ಕಾಲದಲ್ಲಿ ಅವುಗಳನ್ನು ರಕ್ಷಿಸುವುದು, ಪರಸ್ಪರರ ವ್ಯವಹಾರದಲ್ಲಿ ಅವುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು ಇವು ಸಮಾಜದ ಪ್ರತಿಯೊಬ್ಬ ಮನುಷ್ಯನ ಕರ್ತವ್ಯ. ಹಿಂದೂಗಳ ಹಕ್ಕುಗಳ್ಯಾವವು ಅನ್ನುವುದು ಪ್ರತಿಯೊಬ್ಬ ಹಿಂದೂವಿನ ಕಣ್ಣೆದುರಿರಬೇಕು ಅನ್ನುತ್ತ ಆ ದೇವರನ್ನು ಸಾಕ್ಷಿಯಾಗಿಟ್ಟುಕೊಂಡು ಆತನ ಆಶೀರ್ವಾದ ಪಡೆಯುತ್ತ ಕೆಳಗಿನ ಕೆಲವು ಘೋಷಣೆಗಳನ್ನು ಎಲ್ಲ ಮಾಹಿತಿಗಾಗಿ ಪ್ರಕಟಿಸುತ್ತಿದ್ದೇನೆ.

೧. ಎಲ್ಲ ಜನರು ಹುಟ್ಟಾ ಸಮಾನ ದರ್ಜೆಯವರಾಗಿರುತ್ತಾರೆ ಹಾಗೂ ಸಾಯುವವರೆಗೂ ಸಮಾನರಾಗೇ ಇರಲಿ. ಜನಹಿತದ ದೃಷ್ಟಿಯಿಂದ ಅವರ ದರ್ಜೆಯಲ್ಲಿ ವ್ಯತ್ಯಾಸವಾಗಬಹುದೇ ಹೊರತು ಅವರ ಸಮಾನ ದರ್ಜೆ ಶಾಶ್ವತವಾಗಿ ಹಾಗೇ ಇರುಬೇಕು. ಹಾಗಾಗಿ ದೇಶದ ಕೆಲಸಕಾರ್ಯಗಳಲ್ಲಿ ಹಾಗೂ

ಸಾರ್ವಜನಿಕ ವ್ಯವಹಾರದಲ್ಲಿ ಸಮಾನತೆಯ ತತ್ವಕ್ಕೆ ಬಾಧೆ ತರುವಂತಹ ಯಾವುದೇ ಧೋರಣೆ ಇಲ್ಲವೆ ವಿಚಾರಗಳಿಗೆ ಸ್ಥಾನ ಸಿಗಬಾರದು ಅನ್ನುವುದು ಈ ಸಭೆಯ ಅನಿಸಿಕೆ.

೨. ಮೇಲಿನ ಜನ್ಮಸಿದ್ಧ ಮಾನವ ಹಕ್ಕುಗಳನ್ನು ಶಾಶ್ವತವಾಗಿಡುವುದೇ ದೇಶದ ವ್ಯವಸ್ಥೆಯ ಹಾಗೂ ಸಮಾಜ ವ್ಯವಸ್ಥೆಯ ಅಂತಿಮ ಗುರಿಯಾಗಿರಬೇಕು. ಹಾಗೆಂದೇ ಈ ಸಭೆ ಹಿಂದೂ ಸಮಾಜದ ವಿಷಮ ರಚನೆಗಳ ಹಾಗೂ ಅಂತಹ ರಚನೆಗಳನ್ನು ಪುರಸ್ಕರಿಸುವ ಪ್ರಾಚೀನ ಹಾಗೂ ಅರ್ವಾಚೀನ ಗ್ರಂಥಗಳನ್ನು ನಿಷೇಧಿಸುತ್ತದೆ.

೩.ಅಖಿಲ ಪ್ರಜೆಯೇ ಎಲ್ಲ ರೀತಿಯ ಅಧಿಕಾರಗಳ ಹಾಗೂ ಸಾರ್ವಭೌಮತ್ವದ ಉಗಮಸ್ಥಾನವಾಗಿದೆ. ಯಾವುದೇ ವ್ಯಕ್ತಿಯ, ಸಮುದಾಯದ ಇಲ್ಲವೆ ಜಾತಿಯ ಹಕ್ಕುಗಳನ್ನು ಬಹುಜನ ಸಮಾಜ (ಬ್ರಾಹ್ಮಣರು) ಅವರಿಗೆ ಕೊಟ್ಟಿರದಿದ್ದರೆ ಅದನ್ನವರು ರಾಜಕಾರಣವಾಗಲಿ ಇಲ್ಲವೆ ಧರ್ಮದ ಆಧಾರದ ಮೇಲೆ ಪಡೆದುಕೊಳ್ಳಲು ಸಾಧ್ಯವಿಲ್ಲ ಹಾಗಾಗಿ ಸಮಾಜ ವ್ಯವಸ್ಥೆಯಲಿರುವ ಶೃತಿ, ಸ್ಮೃತಿ ಹಾಗೂ ಪುರಾಣಗಳ ಗ್ರಂಥಗಳ ಪ್ರಮಾಣವನ್ನು ಈ ಸಭೆ ಒಪ್ಪುವುದಿಲ್ಲ.

೪. ಯಾವುದೇ ವ್ಯಕ್ತಿಗೆ ತನ್ನ ಜನ್ಮಸಿದ್ಧ ಹಕ್ಕಿನಂತೆ ವರ್ತಿಸುವ ಅಧಿಕಾರವಿದೆ. ಅದಕ್ಕೆ ಮಿತಿ ಇರಬೇಕು ಎಂದಾದರೆ ಈ ಮಿತಿ ಪ್ರತಿಯೊಬ್ಬ ವ್ಯಕ್ತಿಗೂ ಇರಬೇಕು. ಈ ಮಿತಿಯನ್ನು ಖುದ್ದು ಜನರ ಕಾನೂನು ನಿರ್ಧರಿಸಿರಬೇಕು, ಧರ್ಮಶಾಸ್ತ್ರದ ಇಲ್ಲವೆ ಬೇರೆ ಯಾವುದೋ ಆಧಾರದ ಮೇಲೆ ನಿರ್ಧರಿಸಿರಬಾರದು. ಹಾಗಾಗಿ ಅಷ್ಟಾಧಿಕಾರದಂತಹ ವಿಷಯದಲ್ಲಿ ಜಾತಿಜಾತಿಗಳಲ್ಲಿ ನಿರ್ಧರಿಸಿರುವ ಅಸಮಾನತೆಯನ್ನು ಈ ಸಭೆ ಧಿಕ್ಕರಿಸುತ್ತದೆ.

೫. ಯಾವ ವಿಷಯಗಳು ಸಮಾಜಕ್ಕೆ ಘಾತಕವಾಗಿವೆಯೋ ಅವುಗಳನ್ನೇ ಕಾನೂನು ನಿರ್ಬಂಧಿಸಬೇಕು. ಕಾನೂನು ನಿರ್ಬಂಧನೆ ಹಾಕದಿರುವುದನ್ನು ಮಾಡಲು ಎಲ್ಲರಿಗೂ ಸ್ವಾತಂತ್ರ್ಯವಿರಬೇಕು. ಹಾಗೆಯೇ ಕಾನೂನು ಕಡ್ಡಾಯಮಾಡದಿರುವಂತಹದ್ದನ್ನು ಒಪ್ಪಿಕೊಳ್ಳಲು ಯಾರಿಗೂ ಒತ್ತಾಯ ಮಾಡುವಂತಿಲ್ಲ. ಇದಕ್ಕಾಗಿ ರಸ್ತೆಗಳ, ಸಾರ್ವಜನಿಕ ಜಾಗಗಳ, ಸಾರ್ವಜನಿಕ ಕೆರೆ, ಭಾವಿಗಳ ಹಾಗೂ ದೇವಾಲಯಗಳನ್ನು ಉಪಯೋಗಿಸಲು ಯಾರನ್ನೂ ನಿರ್ಬಂಧಿಸಬಾರದು. ಹಾಗೆ ನಿರ್ಬಂಧಿಸುವ ಜನ ಸುವ್ಯವಸ್ಥಿತ ಸಮಾಜರಚನೆಯ ಹಾಗೂ ನ್ಯಾಯದ ಶತೃಗಳಾಗಿದ್ದಾರೆ ಎಂದು ಈ ಸಭೆಗೆ ಅನಿಸುತ್ತದೆ.

೬. ಕಾಯಿದೆ ಕಾನೂನುಗಳೆಂದರೆ ವಿಶಿಷ್ಟ ಜಾತಿ ಇಲ್ಲವೆ ಪಂಗಡದವರು ನಿರ್ಧರಿಸಿದ ಬಂಧನಗಳಲ್ಲ. ಯಾವ ರೀತಿಯ ಕಾನೂನುಗಳಿರಬೇಕು ಅನ್ನುವುದನ್ನು ನಿರ್ಧರಿಸುವ ಅಧಿಕಾರ ಎಲ್ಲ ಪ್ರಜೆಗಳಿಗೆ ಇಲ್ಲವೆ ಅವರ ಪ್ರತಿನಿಧಿಗಳಿಗಿರಬೇಕು. ಸಂರಕ್ಷಣಾತ್ಮಕ ಕಾಯಿದೆಯಾಗಲಿ ಇಲ್ಲವೆ ಶಿಕ್ಷೆಗೆ ಗುರಿಪಡಿಸುವ ಕಾಯಿದೆಯಾಗಲಿ ಎಲ್ಲರಿಗೂ ಸಮನಾಗಿರಬೇಕು. ಸಮಾಜರಚನೆಯನ್ನು ಸಮಾನತೆಯ ಅಡಿಪಾಯದ ಮೇಲೆ ರಚಿಸಬೇಕಾಗಿರುವುದರಿಂದ ಗೌರವ, ಅಧಿಕಾರ, ಹಾಗೂ ವ್ಯಾಪಾರ ಇವುಗಳಿಗೆ ಸಂಬಂಧಿಸಿದಂತೆ ಜಾತಿ ಅಡ್ಡ ಬರುವಂತಿಲ್ಲ. ಭೇದಭಾವವಾಗುವುದೇ ಆದರೆ ಅದು ಕೇವಲ ಒಬ್ಬ ವ್ಯಕ್ತಿಯ ಗುಣದೋಷಗಳಿಂದಾಗಬೇಕು, ಜನ್ಮದೋಷದಿಂದಲ್ಲ. ಇದಕ್ಕಾಗಿ ಪ್ರಚಲಿತ ಜಾತಿಭೇದ ಪದ್ಧತಿಯ ಹಾಗೂ ಅದರನುಗುಣವಾಗಿ ವಿಷಮತೆಯನ್ನು ಈ ಸಭೆ ತೀವ್ರವಾಗಿ ವಿರೋಧಿಸುತ್ತದೆ.

ಮಂಡಿಸಿದವರು: ರಾ. ಸೀತಾರಾಮ್. ನಾಮದೇವ್ ಶಿವತರಕರ್

ಅನುಮೋದಿಸಿದವರು: ರಾ. ಭಾವು ಕೃಷ್ಣರಾವ್ ಗಾಯಕವಾಡ್

ಪುಷ್ಟಿ: ರಾ. ಎನ್. ಟಿ. ಜಾಧವ್

ಬೆಂಬಲ ನೀಡಿದವರು: ಶ್ರೀಮತಿ. ಗಂಗಾಬಾಯಿ ಸಾವಂತ್

**ಮಸೂದೆ ೨**: ಶೂದ್ರ ಜಾತಿಯನ್ನು ಹೀಯಾಳಿಸುವ, ಅವರ ಏಳಿಗೆಯನ್ನು ತಡೆಯುವ, ಅವರ ಆತ್ಮಬಲವನ್ನು ನಷ್ಟಪಡಿಸಿ ಅವರ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಗುಲಾಮಗಿರಿಯನ್ನು ಶಾಶ್ವತವಾಗಿಡುವ ಮನುಸ್ಮೃತಿಯಲ್ಲಿಯ ಕೆಳಗಿನ ವಚನಗಳನ್ನು ಗಮನದಲ್ಲಿಟ್ಟು ಹಾಗೂ ಮೇಲೆ ಹೇಳಿದ ಹಿಂದೂಗಳ ಜನ್ಮಸಿದ್ಧ ಹಕ್ಕುಗಳ ಘೋಷಣೆಗಳಲ್ಲಿ ಪೇರಿಸಿರುವಂತಹ ತತ್ವಗಳ ತುಲನೆ ಮಾಡಿ ಮನುಸ್ಮೃತಿ ಗ್ರಂಥವು 'ಧರ್ಮಗ್ರಂಥ'ವೆನ್ನಲು, ಪವಿತ್ರ ಗ್ರಂಥವೆನ್ನಲು ಅಪಾತ್ರವಾಗಿದೆ ಅನ್ನುವುದು ಈ ಸಭೆಯ ಅನಿಸಿಕೆಯಾಗಿದೆ ಹಾಗೂ ಅದನ್ನು ಅನುಮೋದಿಸಲು ಇಂತಹ ಲೋಕವಿಗ್ರಹಿ ಹಾಗೂ ಮನುಷ್ಯತ್ವಕ್ಕೆ ಕಲಂಕವಿರುವಂತಹ ಧರ್ಮಗ್ರಂಥವನ್ನು ನಾವು ಸುಡುತ್ತಿದ್ದೇವೆ.

ಮಂಡಿಸುವವರು: ರಾ. ಗಂಗಾಧರ್ ನೀಲಕಂಠ ಸಹಸ್ರಬುದ್ಧೆ

ಅನುಮೋದನೆ: ರಾ. ರಾಜಭೋಜ

ಪುಷ್ಟಿ: ರಾ. ಥೋರಾತ್

ಟಿಪ್ಪಣಿ: ಮೇಲೆ ಹೇಳಿದ ವಚನಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು (ಸಂಬಂಧಿತ ಸಂಚಿಕೆ ಸಿಗಲಿಲ್ಲ –ಸಂಪಾದಕರು)

**ಮಸೂದೆ ೩**: ಎಲ್ಲ ಹಿಂದೂಗಳನ್ನು ಒಂದೇ ವರ್ಣದವರೆಂದು ತಿಳಿದುಕೊಳ್ಳಬೇಕು ಹಾಗೂ ಇವರನ್ನು ಹಿಂದೂಗಳೆಂದು ಕರೆಯಬೇಕು. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ ಅನ್ನುವ ಹೆಸರಿನಿಂದಲೋ ಇಲ್ಲ ಮಾಂಗ್, ಮಾದಿಗ ಅನ್ನುವ ಜಾತಿಗಳಿಂದ ತನ್ನನ್ನು ಇಲ್ಲವೆ ಬೇರೆಯವರನ್ನು ಕರೆಯುವುದನ್ನು ಕಾನೂನಿನ ಪ್ರಕಾರ ನಿಷೇಧಿಸಬೇಕೆಂದು ಈ ಪರಿಷತ್ತಿನ ಅನಿಸಿಕೆ. ಬೇಕಾದರೆ ಅವರವರ ವ್ಯಾಪಾರವಿದ್ದಂತೆ 'ದರ್ಜಿ, ಅಕ್ಕಸಾಲಿಗ, ಮಾಳಿ, ಅನ್ನುವುದರಲ್ಲಿ ತೊಂದರೆಯಿಲ್ಲ. ಹಾಗೆಯೆ ಕೊಕಣಸ್ಥ, ದೇಶಸ್ಥ ಮುಂತಾದ ಅವರವರ ಪ್ರಾಂತ್ಯದ ಹೆಸರಿನಿಂದ ಕರೆಯುವುದರಲ್ಲಿ ತೊಂದರೆಯಿಲ್ಲ.

ಮಂಡಿಸುವವರು: ರಾ. ಕೊಂಡಿರಾಮ್ ಖೋಲವಡಿಕರ್

ಅನುಮೋದನೆ: ಸುಭೇದಾರ ಘಾಡಗೆ

ಪುಷ್ಟಿ: ರಾ. ನಿರ್ಮಳ ಗಂಗಾವಣೆ

ಬೆಂಬಲ: ಧೊಂಡಿರಾಮ್ ನಾರಾಯಣ್ ಗಾಯಕವಾಡ್

**ಮಸೂದೆ ೪**: (೧) ಧರ್ಮಾಧಿಕಾರಿ ಅನ್ನುವ ಸ್ಥಾನವನ್ನು ಜನಮತಗಳು ಸಾರವಾಗಿ ಆರಿಸಬೇಕು. (೨) ಈ ಸ್ಥಾನ ಸ್ವೀಕರಿಸಲು ಹಾಗೂ ಅದಕ್ಕಾಗಿ ಯೋಗ್ಯತೆ ಪಡೆಯುವ ಹಕ್ಕು ಹಾಗೂ ಅವಕಾಶ ಪ್ರತಿಯೊಬ್ಬ ಹಿಂದೂಗೆ ಕೊಡಬೇಕು. (೩) ಧರ್ಮಾದಿಕಾರನ ಪರೀಕ್ಷೆ ತೆಗೆದುಕೊಂಡ ಮೇಲೆಯೇ ಅವರಿಗೆ ಪ್ರಶಸ್ತಿ ಪತ್ರವನ್ನು ಕೊಡಬೇಕು. ಪ್ರಶಸ್ತಿ ಪತ್ರ ಸಿಗದಿರುವ ಯಾವುದೇ ವ್ಯಕ್ತಿಗೆ ಧರ್ಮಾಧಿಕಾರಿ ಅನಿಸಿಕೊಳ್ಳಲು ಇಲ್ಲವೆ ಯಾವುದೇ ವಿಧಿ ಕರ್ಮಗಳನ್ನು ಮಾಡಲು ಕಾನೂನಿನ ಪ್ರಕಾರ ನಿಷೇಧಿಸಬೇಕು. (೪) ಗ್ರಾಮ ಧರ್ಮಾಧಿಕಾರಿ, ತಾಲೂಕು ಧರ್ಮಾಧಿಕಾರಿ ಹಾಗೂ ಪ್ರಾಂತದ ಧರ್ಮಾಧಿಕಾರಿ ಎಂದು ಧರ್ಮಾಧಿಕಾರಿಗಳನ್ನು ವಿಂಗಡಿಸಬೇಕು. (೫) ಮೇಲಿನಂತೆ ನೇಮಿಸಿದ ಧರ್ಮಾಧಿಕಾರಿಗೆ ಧರ್ಮವಿಧಿಗಳನ್ನು ಮಾಡಿದ್ದಕ್ಕಾಗಿ ದಕ್ಷಿಣೆಯನ್ನೋ ಇಲ್ಲವೆ ಸಂಬಳವನ್ನೋ, ಪಾರಿತೋಷಕವನ್ನೋ ಸ್ವೀಕರಿಸುವ ಅಧಿಕಾರ ಇರಕೂಡದು. ಅದರ ಬದಲಾಗಿ ಇತರ ಖಾತೆಯ ಅಧಿಕಾರಿಗಳಂತೆ ಇವರನ್ನೂ ಸಣ್ಣಮಟ್ಟ ಸರ್ಕಾರಿ ಅಧಿಕಾರಿಗಳೆಂದು ಪರಿಗಣಿಸಬೇಕು ಹಾಗೂ ಸರ್ಕಾರದಿಂದ ಅವರಿಗೆ ಸಂಬಳ ಕೊಡುವಂತಾಗಬೇಕು.

ಮಂಡಿಸುವವರು: ರಾ. ಪತಿತಪಾವನದಾಸ್ ಬುವಾ

ಅನುಮೋದನೆ: ರಾ. ಗಿರಿಜಾಶಂಕರ್ ಶಿವದಾಸ್

ಪುಷ್ಟಿ: ರಾ. ಚವರೆ ಮಾಸ್ತರ್

ಬೆಂಬಲ: ರಾ. ರಾಧೆ ನಾರಾಯಣ್ ಮಾಳಿ

ಮೇಲಿನ ಮಸೂದೆಯ ಮೇಲೆ ಅತ್ಯಂತ ಮಾರ್ಮಿಕವಾದ ಹಾಗೂ ಮನಮುಟ್ಟುವಂತಹ ಭಾಷಣಗಳಾದವು.

'ಸತ್ಯಾಗ್ರಹ ಸಭೆಯ ಮನುಸ್ಮೃತಿ ದಹನಭೂಮಿಯನ್ನು ತಯಾರಿಸಲು ಆರು ಕಾರ್ಮಿಕರು ಎರಡು ದಿನ ಮೈಮುರಿದು ದುಡಿಯುತ್ತಿದ್ದರು. ಆರು ಇಂಚು ಆಳ ಹಾಗೂ ಒಂದುವರೆ ಫೂಟು ಅಗಲ ಗುಂಡಿ ತೋಡಿ ಅದನ್ನು ಚಂದನದ ಕಟ್ಟಿಗೆಯಿಂದ ತುಂಬಿಸಿಟ್ಟಿದ್ದರು. ನಾಲ್ಕು ಫೂಟು ಎತ್ತರದ ನಾಲ್ಕು ಕಂಬಗಳನ್ನು ನಾಲ್ಕು ಕಡೆಗಳಲ್ಲಿ ನೆಟ್ಟಿದ್ದರು. 'ಮನುಸ್ಮೃತಿ ದಹನಭೂಮಿ' 'ಅಸ್ಪೃಶ್ಯತೆಯನ್ನು ತೊಲಗಿಸಿ' 'ಭಿಕ್ಷೆ ಬೇಡಿ ತಿನ್ನುವ ಪದ್ಧತಿಯನ್ನು ಹೂತು ಹಾಕಿ' ಯಂತಹ ಪತಾಕೆಗಳು ಮೂರು ಕಡೆಗಳಿಂದ ಹಚ್ಚಿದ್ದರು. ೨೫ನೆಯ ಡಿಸಂಬರ್ ೧೯೨೭ರಂದು ರಾತ್ರಿ ೯ ಘಂಟೆಗೆ ಬಾಪುಸಾಹೇಬ ಸಹಸ್ರಬುದ್ಧೆ ಹಾಗೂ ಇತರ ಐದಾರು ಅಸ್ಪೃಶ್ಯ ಸಾಧುಗಳ ಕೈಯಿಂದ ಈ ದಹನಭೂಮಿಯ ಮೇಲೆ ಮನುಸ್ಮೃತಿಯ ಪುಸ್ತಕವನ್ನಿಟ್ಟು ಸುಡಲಾಯಿತು.'

ಇಲ್ಲಿಗೆ ಮೊದಲನೆಯ ದಿನದ ಕೆಲಸಕಾರ್ಯಗಳು ಮುಗಿದವು.

## ಎರಡನೆಯ ದಿನ

ಮೊದಲನೆಯ ದಿನದ ಕೆಲಸಕಾರ್ಯಗಳು ಸಾಯಂಕಾಲ ಏಳುವರೆಗೆ ಮುಗಿದ ಮೇಲೆ ಎಲ್ಲ ಜನ ಆತುರತೆಯಿಂದ ಊಟಕ್ಕೆ ಕಾಯುತ್ತಿದ್ದರು. ಜಿಲ್ಲೆಗಳಿಂದ ಬಂದ ಜನ ಸತ್ಯಾಗ್ರಹ ಕಮಿಟಿ ಹೇಳಿದಂತೆ ತಮ್ಮ ಜೊತೆ ರೊಟ್ಟಿ ಕಟ್ಟಿಕೊಂಡು ಬಂದಿದ್ದರು. ಆದರೆ ಈ ಜನ ಸಭೆಗೆ ಎರಡು ದಿನ ಮೊದಲೇ ಬಂದು ತಳವೂರಿದ್ದರಿಂದ ಅವರು ಕಟ್ಟಿ ತಂದಿದ್ದ ರೊಟ್ಟಿಗಳು ಮುಗಿದಿದ್ದವು. ಮುಂಬಯಿಯಿಂದ ಬಂದ ಜನರಿಗಂತೂ ಇಡೀ ದಿನ ಉಪವಾಸವಾಗಿತ್ತು ಹಾಗೂ ಎಂದಾದರೂ ಊಟ ಮಾಡುತ್ತೇವೋ ಅನಿಸಿತ್ತು. ಆದರೆ ಪಾತ್ರೆಪಡಗಗಳು ಮುಂಬಯಿಯಿಂದ ಇಲ್ಲಿಗೆ ತಲುಪದೇ ಇದ್ದ ಕಾರಣ ಎಲ್ಲ ಸಾಮಗ್ರಿಗಳಿದ್ದೂ ಅಡುಗೆ ಮಾಡುವುದು ಸಾಧ್ಯವಿರಲಿಲ್ಲ. ಹಾಗಾಗಿ ಎಲ್ಲರೂ ನಿರಾಶರಾಗಿದ್ದರು. ಹೀಗಾಗಬಹುದು ಎಂದು ಸತ್ಯಾಗ್ರಹ ಕಮಿಟಿಗೆ ಗೊತ್ತಿದ್ದರಿಂದ ಅಕ್ಕಿ ಬೆಳೆಯೊಂದಿಗೆ ಅವರು ಸಾಕಷ್ಟು ಹುರಿದ ಕಡಲೆಗಳನ್ನೂ ಕೊಂಡುಕೊಂಡಿದ್ದರು. ಆ ದಿನ ರಾತ್ರಿ ಊಟದ ಬದಲಿಗೆ ಕಡಲೆ ತಿಂದು ಬದುಕಬೇಕಾಯಿತು. ಕಡಲೆ ತಿಂದಿರಲು ಯಾರಿಗೂ ಇಷ್ಟವಿರಲಿಲ್ಲ ಆದರೆ ಡಾ. ಅಂಬೇಡ್ಕರರು ಕಡಲೆಗಳನ್ನು ತಿನ್ನಲು ಶುರುಮಾಡಿದಾಗ ಉಳಿದವರು ಅವರನ್ನನುಸರಿಸಿದರು. ೨೬-೧೨-೧೯೨೭ ರಂದು ಬೆಳಿಗ್ಗೆ ೯ ಘಂಟೆಗೆ ಪರಿಷತ್ತಿನ ಕೆಲಸಕ್ಕೆ ಆರಂಭವಾಯಿತು. ಆದಿನ ಸತ್ಯಾಗ್ರಹದ ಬಗ್ಗೆ ಸಾಕಷ್ಟು ಸಂಧಾನ ನಡೆಸಬೇಕಾಗಿದ್ದರಿಂದ ಪರಿಷತ್ತಿಗೆ ವಿಷಯನಿಯಾಮಕ ಕಮಿಟಿಯ ಸ್ವರೂಪ ಕೊಡಲಾಗಿತ್ತು. ಹಾಗೂ ಅದಕ್ಕಾಗಿ ಡಾ. ಅಂಬೇಡ್ಕರ್ ಅವರು ಸಭೆಯ ಸುತ್ತ ನಿಲ್ಲಿಸಿದ್ದ ಸ್ವಯಂಸೇವಕರಿಗೆ ಯಾವುದೇ ಪರಕೀಯರನ್ನು ಒಳಗೆ ಬಿಡಬಾರದು ಅನ್ನುವ ತಾಕೀತು ಕೊಟ್ಟಿದ್ದರು. ನಂತರ ಡಾ.ಅಂಬೇಡ್ಕರ್ ಅವರು ಸತ್ಯಾಗ್ರಹ ಮಾಡಬೇಕು ಅನ್ನುವ ಅರ್ಥದ ಮಸೂದೆಯನ್ನು ಮಂಡಿಸಿದರು.

ಮಸೂದೆಯನ್ನು ಮಂಡಿಸುವಾಗ ಡಾ. ಅಂಬೇಡ್ಕರ್ ಅವರು,

'ನಿನ್ನೆ ಕಲೆಕ್ಟರ್ ಸಾಹೇಬರು ಮಾತನಾಡಲು ನನ್ನನ್ನು ಕರೆದಿದ್ದರು. ಹಾಗೇ ಮಾತನಾಡುತ್ತ, 'ತಾವೇನು

ಸತ್ಯಾಗ್ರಹದ ವಿರೋಧದಲ್ಲಿಲ್ಲ, ಆದರೆ ಮೇಲ್ಜಾತಿಯ ಜನ ಇದರ ವಿರುದ್ಧ ದಿವಾಣಿ ಕೋರ್ಟಿನಲ್ಲಿ ಫಿರ್ಯಾದು ದಾಖಲಿಸಿರುವುದರಿಂದ ಅದರ ತೀರ್ಪು ಬರುವವರೆಗೆ ದಲಿತರು ಚವ್‌ದಾರ್ ಕೆರೆಗೆ ಹೋಗಕೂಡದು ಅನ್ನುವ ಅರ್ಥದ ತಡೆಯಾಜ್ಞೆಯ ಹುಕುಮನ್ನು ಪಡೆದಿದ್ದರು. ಆ ನ್ಯಾಯಾಲಯದ ಅವಮಾನವಾಗಬಾರದೆಂದು ಅವರಿಗೆ ಈದರಲ್ಲಿ ತಲೆ ಹಾಕಬೇಕಿದೆ' ಅಂದರು. ಅದಕ್ಕೆ ನಾನು, 'ನಾನು ಸ್ವತಃ ಸತ್ಯಾಗ್ರಹ ಮಾಡುವ ನಿರ್ಧಾರದಿಂದ ಬಂದಿದ್ದೇನೆ. ನಾನು ನನ್ನ ನಿರ್ಧಾರವನ್ನು ಬದಲಿಸುವುದಿಲ್ಲ ಹಾಗೂ ಸತ್ಯಾಗ್ರಹಕ್ಕಾಗಿ ಸೇರಿರುವ ಜನರಿಗೂ ಸತ್ಯಾಗ್ರಹ ಮಾಡಿ ಅನ್ನುವ ಸಲಹೆಯನ್ನೇ ಕೊಡುವೆನೆಯೇ ಹೊರತು ನನ್ನ ನಿರ್ಧಾರಗಳನ್ನು ಅವರ ಮೇಲೆ ಹೇರಲಾರೆ, ಆದರೆ ತಡೆಯಾಜ್ಞೆ ಹೊರಡಿಸಿರುವುದರಿಂದ ಸತ್ಯಾಗ್ರಹ ಮಾಡಬೇಡಿ ಎಂದು ನಾನವರನ್ನು ಸತ್ಯಾಗ್ರಹ ಮಾಡುವುದರಿಂದ ತಡೆಯಲಾರೆ'. ಅಂದೆ, ಅದಕ್ಕೆ ಕಲೆಕ್ಟರ್ ಸಾಹೇಬರು, 'ಸತ್ಯಾಗ್ರಹ ಮಾಡಲೇಬೇಕೆಂದು ಎಲ್ಲರೂ ಸೇರಿ ನಿರ್ಧರಿಸಿದರೆ ಸೇರಿರುವ ಜನರಿಗೆ ಕೆಲವು ಸದುಪದೇಶ ಕೊಡಲು ನನಗೆ ಅವಕಾಶ ಕೊಡಿ' ಎಂದು ವಿನಂತಿಸಿದರು. ಅಂತಹ ಅವಕಾಶ ಕೊಡುತ್ತೇವೆ ಎಂದು ಕಲೆಕ್ಟರ್ ಸಾಹೇಬರಿಗೆ ನಾನು ಮಾತು ಕೊಟ್ಟಿದ್ದೇನೆ. ಇದಕ್ಕೂ ಹೆಚ್ಚು ನಾನು ಯಾವ ಮಾತನ್ನೂ ಕೊಟ್ಟಿಲ್ಲ. ಇಷ್ಟಕ್ಕೂ ನಿಮ್ಮ ನಿರ್ಧಾರವೇನು ಅನ್ನುವುದನ್ನು ನೀವು ಯೋಚಿಸಿ. ಯಾವುದೇ ಶಾಶ್ವತವಾದ ಲಾಭಕ್ಕಾಗಿ, ಹಿತಕ್ಕಾಗಿ ನಾವು ತೊಂದರೆ ಹಾಗೂ ಕ್ಲೇಶವನ್ನನುಭವಿಸಲೇ ಬೇಕು ಅನ್ನುವುದನ್ನು ಎಲ್ಲರೂ ನೆನಪಿಡಬೇಕು. ತಪಸ್ಸು ಮಾಡದೆ ಯಾರಿಗೂ ಯಾವುದೇ ವರ ಸಿಕ್ಕಿದ್ದು ಇತಿಹಾಸ ಇಲ್ಲವೆ ಪುರಾಣಗಳಲ್ಲಿ ಓದಿಲ್ಲ. ಸುಖ ಯಾವತ್ತೂ ದುಃಖದ ನಂತರವೇ ಸಿಗುತ್ತದೆ. ಹಾಗಾಗಿ ತಡೆಯಾಜ್ಞೆಯನ್ನು ಮುರಿದು ಜೈಲಿಗೆ ಹೋಗಬೇಕಾದರೂ ಹೆದರುವ ಅಗತ್ಯವಿಲ್ಲ. ನಿತ್ಯಕ್ರಮದ ಆಧಾರದ ಮೇಲೆ ತಡೆಯಾಜ್ಞೆ ಹೊರಡಿಸಲಾಗಿದೆ ಆದರೆ ಅವರ ಈ ನಿತ್ಯಕ್ರಮ ನ್ಯಾಯವಾದದ್ದೇ ಅನ್ಯಾಯವಾದದ್ದೆ? ಅನ್ನುವುದನ್ನು ಕೂಡ ಕಂಡುಹಿಡಿಯಬೇಕಿದೆ. ಇಲ್ಲದಿದ್ದರೆ ನ್ಯಾಯಾಲಯದ ಹುಕುಮನ್ನು ಪಾಲಿಸುವ ಭ್ರಾಂತಿನಲ್ಲಿ ನಾವು ಯಾವ ಅನ್ಯಾಯದ ವಿರುದ್ಧ ಹೋರಾಡುತ್ತಿದ್ದೇವೆಯೋ ಅದೇ ಅನ್ಯಾಯವನ್ನು ಸ್ವೀಕರಿಸುವ ಪ್ರಮೇಯ ನಮಗೆ ಬಂದೀತು. ಸತ್ಯಾಗ್ರಹ ಅನ್ನುವುದು ಒಂದು ಕಠಿಣ ತಪಸ್ಸು. ಮನಸ್ಸನ್ನು ಹದ್ದುಬಸ್ತಿನಲ್ಲಿಟ್ಟು ಸತ್ಯಾಗ್ರಹ ಮಾಡುವ ಜನರಿಗೆ ತುಂಬ ತೊಂದರೆಗಳನ್ನು ಅನುಭವಿಸಬೇಕಿದೆ. ನಾವಾಗೇ ನಮ್ಮ ಕತ್ತನ್ನು ಮತ್ತೊಬ್ಬರ ಕೈಗೆ ಸಂತೋಷದಿಂದ ಕೊಡಬೇಕಿದೆ. ಕೋಲುಗಳನ್ನಿಟ್ಟುಕೊಂಡು ನೀವುಗಳು ಸತ್ಯಾಗ್ರಹಕ್ಕೆ ಹೋಗುವಂತಿಲ್ಲ, ಅಧಿಕಾರಿಗಳ ಯಾವುದೇ ಆಜ್ಞೆಯನ್ನು ಉಲ್ಲಂಘಿಸುವಂತಿಲ್ಲ, ಸತ್ಯಾಗ್ರಹಕ್ಕೆ ಹೋಗುವಾಗ ಸರ್ಕಾರಿ ಅಧಿಕಾರಿಗಳು ನಿಮ್ಮನ್ನು ಹಿಡಿದು ಬಂಧಿಸಿದರೆ ಯಾರೂ ಕ್ಷಮೆ ಕೇಳುವಂತಿಲ್ಲ. ನಾವು ಮಾಡಿದ್ದೇ ಸರಿ ಅನ್ನುವುದನ್ನು ಕಡೆಯತನಕ ಹೇಳುತ್ತಿರಬೇಕು. ಒಟ್ಟಿನಲ್ಲಿ (೧) ಯಾರೂ ಕೋಲುಗಳನ್ನು ಇಟ್ಟುಕೊಳ್ಳುವಂತಿಲ್ಲ, (೨) ಸರ್ಕಾರದ ಆಜ್ಞೆ ಪಾಲಿಸುವುದು, (೩) ಕಾರಾವಾಸಕ್ಕೆ ಸಿದ್ಧರಿರುವುದು (೪)ಸರ್ಕಾರದೆದುರು ಕ್ಷಮೆ ಬೇಡದಿರುವುದು ಈ ನಿಯಮಗಳನ್ನು ನೀವೆಲ್ಲರೂ ಪಾಲಿಸಿದರೆ ಮಾತ್ರ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಕ್ಕೂ ಸಾರ್ಥಕ. ನಾನು ಹೇಳಿದೆನೆಂದು ನೀವು ಸತ್ಯಾಗ್ರಹಕ್ಕೆ ಬಂದರೆ ಲಾಭವಿಲ್ಲ. ನಮ್ಮದು ನ್ಯಾಯವಾದ ಮಾರ್ಗ ಅನ್ನುವುದು ನೀವು ಒಪ್ಪಿದರೆ ಹಾಗೂ ಅನೇಕಾನೇಕ ತೊಂದರೆ ಕಷ್ಟಗಳನ್ನು ಸಹಿಸಲು ನೀವು ಸಿದ್ಧರಿರುವಿರಾದರೆ ಮಾತ್ರ ನೀವು ಸತ್ಯಾಗ್ರಹ ಮಾಡಿ.

ಮಸೂದೆಯ ಬಗ್ಗೆ ಈ ರೀತಿಯ ಭಾಷಣವಾದ ಮೇಲೆ ಡಾ.ಅಂಬೇಡ್ಕರರು, 'ಈ ಮಸೂದೆಯ ಬಗ್ಗೆ ಅನುಕೂಲ ಹಾಗೂ ಪ್ರತಿಕೂಲ ಭಾಷಣಗಳಾಗಲಿವೆ, ಅವುಗಳನ್ನು ಕೇಳಿದ ಮೇಲೆ ನಿಮಗ್ಯಾವುದು ಸರಿ ಅನಿಸುತ್ತದೆಯೋ ಹಾಗೆ ನಿರ್ಧರಿಸಿ' ಅಂದರು. ನಂತರ ಒಂದು ಪರ ಮತ್ತೊಂದು ವಿರೋಧದಲ್ಲಿ

ಭಾಷಣಗಳಾದವು. ಪರವಾಗಿ ಮಾತನಾಡಿದವರಲ್ಲಿ

೧. ಪದ್ಮನಾಭ ರಾಜಾರಾಮ ಝುಟೆ, ೨. ಪಾಂಡುರಂಗ ಬಾಬಾಜಿ ಮಂಡಲೇಕರ್, ೩. ಧೋಡಿರಾಮ್ ಗಾಯಕವಾಡ್, ೪. ಪಾಂಡುರಂಗಜಿ ನಥುಜಿ ರಾಜಭೋಜ, ೫. ಭಿಕಾಜಿ ಮಹಾದು ಪೆನ್ಸನರ್, ೬. ಭಾಂಬೂ ಗಣೂ ಶೆಣವಲೀಕರ್, ೭. ಸೋನೂ ದೇವಜಿ ಖಾಂಬೋಲಿಕರ್, ೮. ಹೀರೂ ಬಾರಕೂ ಶೇಲಾರ್, ೯. ಗೋವಿಂದಬುವಾ ಮಾಲಖೇಡಕರ್, ೧೦. ಭಿವಬಾ ಭೋವಡಕರ್, ೧೧. ಗಿರಿಜಾ ಶಂಕರ ಶಿವದಾಸ್, ೧೨. ಗಣೂ ಧರ್ಮಾ ಅಂಬೋಲಿಕರ್,

ವಿರೋಧವಾಗಿ ಮತನಾಡಿದವರು ಕೆಳಗಿನಂತಿದ್ದಾರೆ

೧. ಶಿವರಾಮ್ ಸಖಾರಾಮ್ ಹಾಟೆ, ೨. ಕೃಷ್ಣಾ ಯೆಸೂ, ೩. ಗಾಡಗೆಬುವಾ ಸಾಹೇಬ, ೪. ಗೋಂವಿಂದ ಹವಾಲಕರ್, ೫. ರಾಘು ಆನಂದಾ ಶಿವತರಕರ್, ೬. ರಾಘೋ ನಾರಾಯಣ್ ವನಮಾಳಿ, ೭. ಪುಂಜಾಜಿ ನರಸಾಜಿ ಜಾಧವ್, ೮. ಎನ್. ಟಿ. ಜಾಧವ್.

ಅಂದು ನೆನಪಿನಲ್ಲಿಡುವಂತಹ ಒಂದು ಘಟನೆಯಾಯಿತು. ಸತ್ಯಾಗ್ರಹಕ್ಕಾಗಿ ಕೋಲವಲಿ ಅನ್ನುವ ಊರಿನ ರಾ.ರಾ. ವಿಠೋಬಾ ಮಹಾದೇವ ವಾದವಲ್ ಅನ್ನುವ ಒಬ್ಬರೇ ಒಬ್ಬರು ಮರಾಠಿ ಜಾತಿಯ ಅಜ್ಜ ಬಂದಿದ್ದರು. ಪರ–ವಿರೋಧ ಭಾಷಣಗಳಾದ ಮೇಲೆ ಅವರು ಎದ್ದು ನಿಂತು 'ನಾನು ಮರಾಠಾ ಜಾತಿಯವನು, ನಮ್ಮೂರಿನ ಮಾಂಗ್ ಬಾಂಧವರು ನಮ್ಮೊಡನೆ ಮಾತು ಬಿಟ್ಟಿದ್ದಾರೆ, ಊರಒಳಗೆ ಅವರು ಕಾಲಿಡುತ್ತಿಲ್ಲ, ಅವರಿಲ್ಲದೆ ಬಿಕೋ ಅನ್ನುತ್ತಿರುವ ಊರಿನ ಗಡಿ ನಮಗಿಷ್ಟವಿಲ್ಲ. ನಮ್ಮ ಮಾಂಗ್ ಬಾಂಧವರು ನೀರಿಗೆ ಹಟ ಹಿಡಿದಿದ್ದರೆ ನಾವವರ ಹಟವನ್ನು ಪೂರೈಸಬೇಕು. ಅದಕ್ಕೆಂದೇ ನಾನು ಸತ್ಯಾಗ್ರಹ ಮಾಡಲು ಬಂದಿದ್ದೇನೆ' ಅಂದರು. ಮೇಲಿನ ಎಲ್ಲ ಭಾಷಣಕಾರರ ಭಾಷಣಗಳಾದ ಪರಿಣಾಮ ಏನಾಗುತ್ತದೆ ಅನ್ನುವುದರ ಬಗ್ಗೆ ಅನುಮಾನವಿರಲಿಲ್ಲ. ಹಾಗೆ ಅನುಮಾನವಿದ್ದವರ ಅನುಮಾನ ಕೂಡ ಬೇಗನೇ ಪರಿಹಾರವಾಯಿತು. ಸತ್ಯಾಗ್ರಹದ ಪರವಾಗಿ ಮಾತನಾಡುವವರಿಗೆ ಮಾತನಾಡಲು ಅವಕಾಶ ಕೊಟ್ಟ ಹಾಗೆ ವಿರೋಧವಾಗಿ ಮಾತನಾಡುವವರಿಗೆ ಜನ ಅವಕಾಶ ಕೊಡದಾದರು. 'ವಿರೋಧವಾಗಿ ಮಾತನಾಡುವವರ ಮಾತನ್ನೂ ನೀವು ಕೇಳಿ'ಎಂದು ವಿನಂತಿಸಬೇಕಾಯಿತು. ಪರ ವಿರೋಧ ಭಾಷಣಗಳಾದ ಮೇಲೆ ಡಾ. ಅಂಬೇಡ್ಕರ್ ಅವರು ಎದ್ದು,

'ಒಟ್ಟಿನಲ್ಲಿ ಈ ಸಭೆ ಸತ್ಯಾಗ್ರಹದ ಪರವಾಗಿದೆ ಅನ್ನಲು ಅಡ್ಡಿಯಿಲ್ಲ, ನನಗಿಂದು ಬಹಳ ಖುಷಿಯಾಗುತ್ತಿದೆ ಆದರೆ ನನಗೆ ಕುರುಡರ ಸೈನ್ಯ ಬೇಡ. ನಾನು ಹೇಳುತ್ತಿದ್ದೇನೆಂದೋ ಇಲ್ಲ ಬೇರೆಯವರು ಹೇಳುತ್ತಿದ್ದಾರೆಂದೋ ಕಾರಾವಾಸಕ್ಕೆ ಹೋಗಿ ಗಲ್ಲಿಗೇರುವ ಜನ ನನಗೆ ಬೇಕಿಲ್ಲ. ಜೈಲಿಗೆ ಹೋದರೂ ಚಿಂತೆಯಿಲ್ಲ ನನ್ನ ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತೇನೆ ಅನ್ನುವ ಜನ ನನಗೆ ಬೇಕು. ಸತ್ಯಾಗ್ರಹ ಮಾಡಬೇಕೋ ಇಲ್ಲವೊ ಅನ್ನುವುದನ್ನು ನಿರ್ಧರಿಸುವ ಮೊದಲು ಇಂತಹ ಆತ್ಮಜ್ಞಾನ ಮಾಡಿಕೊಳ್ಳುವ ಜನರೆಷ್ಟಿದ್ದಾರೆ ಅನ್ನುವುದನ್ನು ಕಂಡುಕೊಳ್ಳಬೇಕಿದೆ. ಚಪ್ಪಾಳೆಯ ಮೂಲಕ ಇಲ್ಲವೆ ಕೈಯೆತ್ತಿ ಅನುಮೋದಿಸುವಂತಹ ಸುಲಭವಾದ ವಿಷಯ ಇದಲ್ಲ. ಎಣಿಕೆ ಇಲ್ಲಿ ಮುಖ್ಯ. ಹಾಗಾಗಿ ಜೈಲಿಗೆ ಹೋಗಲು ಸಿದ್ಧರಿರುವ ಜನರನ್ನು ಎಣಿಸಲು ಹೇಳುವವನಿದ್ದೇನೆ. ಈ ಎಣಕೆ ಸತ್ಯಾಗ್ರಹಕ್ಕೆ ಬಹುಮತ ತೋರಿಸಿದರೆ ಮಾತ್ರ ನಾನು ಕಲೆಕ್ಟರ್ ಸಾಹೇಬರಿಗೆ ತಿಳಿಸಿ ಸಾಯಂಕಾಲ ನಿಮ್ಮೆದುರು ಭಾಷಣ ಮಾಡಲು ಅವರನ್ನು ಆಮಂತ್ರಿಸುತ್ತೇನೆ. ಅವರ ಮಾತನ್ನೂ ಕೇಳಿಯೂ ಕೂಡ ಸತ್ಯಾಗ್ರಹ ಮಾಡಲು ನಿಮ್ಮ ಮನಸ್ಸು ಒಪ್ಪಿದರೆ ಸತ್ಯಾಗ್ರಹ ಮಾಡೋಣ. ಈಗ ಸಮಯ ೧೨–೩೦ ಆಗಿದೆ, ಇಂದಿನ ಸಭೆ ಇಲ್ಲಿಗೆ ಮುಕ್ತಾಯವಾಯಿತು ಎಂದು ಹೇಳುವಷ್ಟರಲ್ಲಿ

ಮುಂಬಯಿಯ ಬ್ರಾಹ್ಮಣೇತರ ಪಕ್ಷದ ಶ್ರೀ. ಕೇಶವರಾವ್ ಜೆಧೆ ಹಾಗೂ ಶ್ರೀ. ದಿನಕರರಾವ್ ಜವಳಕರ್ ಅವರು ಮುಂಬಯಿಯಿಂದ ಸ್ಪೆಷಲ್ ಗಾಡಿಯಲ್ಲಿ ಬಂದಿಳಿದು ಸಭೆಯಲ್ಲಿ ಹಾಜರಾದರು. ಅಧ್ಯಕ್ಷರು ಒಂದೆರಡು ಮಾತುಗಳನ್ನಾಡಲು ವಿನಂತಿಸಿದಾಗ ಶ್ರೀ. ಜವಳಕರ್ ಅವರು ಮಾತನಾಡುತ್ತ, 'ಧರ್ಮಯುದ್ಧ ಮಾಡಲು ನೀವಿಲ್ಲಿ ಸೇರಿರುವುದು ಒಳ್ಳೆಯ ವಿಷಯ, ದುರ್ದೈವದಿಂದ ಕೆಲವು ಮರಾಠ ಜನರು ನಿಮಗೆ ವಿರೋಧಿಸುತ್ತಿರುವುದರಿಂದ ನಾನು ಮಾರಾಠನಾಗಿ ನನಗೆ ಬಹಳ ನಾಚಿಕೆಯೆನಿಸುತ್ತಿದೆ. ನಾವು ಮರಾಠ ಹಾಗೂ ಬ್ರಾಹ್ಮಣರು ನಿಮಗೆ ಕೊಟ್ಟಿರುವ ತೊಂದರೆಗಳಿಂದ ನಾವು ಪಾಪಿಗಳಾಗಿದ್ದೇವೆ. ನಿಮ್ಮ ಕೈಗೆ ನಾವು ಕೊಟ್ಟಿರುವ ಕಸಬರಿಗೆಯನ್ನು ನೀವು ಬಿಸಾಕಬೇಕು. ನಮ್ಮ ಹಕ್ಕುಗಳಿರುವಲ್ಲಿ ನಿಮ್ಮ ಹಕ್ಕುಗಳು ಇವೆ. ನಿಮ್ಮ ನಾಯಕರಾದ ಡಾ. ಅಂಬೇಡ್ಕರರು ನಿಮಗೆ ಸಿಗಬೇಕಿರುವ ಹಕ್ಕುಗಳನ್ನು ಕೊಡಿಸಲೆಂದೇ ಈ ಸತ್ಯಾಗ್ರಹವನ್ನಾರಂಭಿಸಿದ್ದಾರೆ. ನಾನು ಎರಡು ಸಲ ಕಾರಾವಾಸವನ್ನನುಭವಿಸಿದ್ದೇನೆ. ಕಾರಾಗೃಹದಲ್ಲಿ ಹೆದರುವ ಅಗತ್ಯವಿಲ್ಲ. ಬ್ರಿಟಿಷರ ಕಾರಾಗ್ರುಹದಲ್ಲಿ ಜಾತಿಭೇದವಿಲ್ಲ. ಹೊರಗಿನ ಈ ಜಾತಿಭೇದ ನರಕದಲ್ಲಿರುವುದಕ್ಕಿಂತ ಕಾರಾಗೃಹದಲ್ಲಿರುವುದು ಎಷ್ಟೋ ಮೇಲು. ನಾನು ಹಾಗೂ ಶ್ರೀ. ಜೆಧೆಯವರು ನಿಮಗೆ ಸತ್ಯಶೋಧಕ ಸಮಾಜದ ಸಹಾನುಭೂತಿ ತೋರಿಸಲು ಬಂದಿದ್ದೇವೆ. ಮರಾಠಾ ಜನರು ಅಸ್ಪೃಶ್ಯರಿಂದ ಸಾಕಷ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ. ಅವರು ಹರಿಸುವ ಬೆವರು ನೋಡಿಯೂ ಕೂಡ ಕುಲಕರ್ಣಿಗಳಿಗೆ ದಯೆ ಬರುವುದಿಲ್ಲ. ಮರಾಠರು ಮುಂದಿನ ಜನ್ಮದಲ್ಲಿ ಅಸ್ಪೃಶ್ಯರಾಗಿ ಹುಟ್ಟುವಂತೆ ದೇವರು ಕರುಣಿಸಲಿ. ದಲಿತರಲ್ಲಿ ಡಾ. ಅಂಬೇಡ್ಕರರಂತಹ ನಾಯಕರು ಮತ್ತೊಬ್ಬರಿಲ್ಲ. ಅವರು ಕೇವಲ ನಿಮಗಾಗಿ ಇಷ್ಟು ಪ್ರಯತ್ನಿಸುತ್ತಿದ್ದಾರೆ. ಅವರ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ನಾವು ನಡೆಯಬೇಕಿದೆ. ಭಾರತದ ದೇವರು ಬ್ರಾಹ್ಮಣರ ಅಧೀನದಲ್ಲಿದ್ದಾನೆ, ನಿಮ್ಮ ಸಹಾಯಕ್ಕವನು ಎಂದು ಬರಲಾರ. ಕೇವಲ ಬ್ಯಾರಿಸ್ಟರ್ ಅಂಬೇಡ್ಕರನಂತಹ ಮನುಷ್ಯನೇ ನಿಮ್ಮ ಸಹಾಯ ಮಾಡಬಲ್ಲ. ನಾನಿಂದು ಮಾಂಗ್‌ನಾಗಿದ್ದಿದ್ದರೆ ಸಂತೋಷದಿಂದ ನಿಮ್ಮೊಡನೆ ಜೈಲಿಗೆ ಬರುತ್ತಿದ್ದೆ. ಕಾನೂನನ್ನು ಮುರಿದು ನೀವು ಹಕ್ಕುಗಳನ್ನು ಪಡೆಯಬೇಕು, ಇಂದಿನ ದಿನವನ್ನು ಹಿಂದೂಗಳ ಇತಿಹಾಸದಲ್ಲಿ ಬಹಳ ಮಹತ್ವಪೂರ್ಣವಾದ ದಿನವೆಂದು ಪರಿಗಣಿಸಲಾಗುತ್ತದೆ. ಜೈಲಿಗೆ ಹೆದರುವ ಅಗತ್ಯವಿಲ್ಲ, ಆ ಭಯ ರೊಟ್ಟಿ ತುಪ್ಪ ತಿನ್ನುವ ಬ್ರಾಹ್ಮಣರಿಗಿರಲಿ. ಮೇಲ್ಜಾತಿಯವರಿಗೆ ಪಾಠ ಕಲಿಸುವುದು ನಿಮ್ಮ ಕೈಯಲ್ಲಿದೆ. ನೀವು ಹಿಂದೂಪುತ್ರರು. ಹರಹರ ಮಹಾದೇವ್ ಅನ್ನುತ್ತ ಕೆರೆಯನ್ನು ವಶಪಡಿಸಿಕೊಳ್ಳಿ ಹಾಗೂ ನಿಮ್ಮ ಸೇನಾಪತಿಗಳಾದ ಡಾ. ಅಂಬೇಡ್ಕರ್ ಹೇಳಿದಂತೆ ಕೇಳಿ ಎಂದು ನನಗನಿಸುತ್ತದೆ. ಬ್ರಾಹ್ಮಣೇತರ ಪಕ್ಷದ ಸಂದೇಶ ಸ್ವಲ್ಪ ಬೇರೆಯದಾಗಿದೆ, ಅದನ್ನು ನಿಮ್ಮಲ್ಲಿ ಹೇಳಲೆಂದೇ ನಾನು ಬಂದಿದ್ದೇನೆ. ಕೋರ್ಟಿನ ತೀರ್ಪು ಬರುವವರೆಗೆ ಸತ್ಯಾಗ್ರಹವನ್ನು ನಿಲ್ಲಿಸಬೇಕೆನ್ನುವುದು ಬ್ರಾಹ್ಮಣೇತರ ಪಕ್ಷ ನಿಮಗೆ ಸಂದೇಶ ಕಳಿಸಿದೆ. ಸರ್ಕಾರವನ್ನು ಎದುರುಹಾಕಿಕೊಳ್ಳುವುದು ದಲಿತರಿಗೆ ಒಳ್ಳೆಯದಲ್ಲ ಎಂದು ಈ ಪಕ್ಷದ ಅನಿಸಿಕೆ ಅಂದರು. ಆನಂತರ ಶ್ರೀ.ಕೃಷ್ಣರಾವ್ ಜೇಧೆಯವರು ಮಾತನಾಡುತ್ತ, ನಿಮ್ಮನ್ನು ಪೀಡಿಸಿದವರಿಗೆ ನೀವು ಪಾಠ ಕಲಿಸಲೇ ಬೇಕು. ಇದು ಮನುಷ್ಯತ್ವವನ್ನು ಪುನರ್‌ಸ್ಥಾಪಿಸುವ ಹೋರಾಟವಾಗಿದೆ. ಕತ್ತೆ ಮತ್ತು ನಾಯಿಗಳು ಕುಡಿಯಬಹುದಾದಂತಹ ಕೆರೆಯಲ್ಲಿ ನೀರು ಕುಡಿಯಲು ನಿಮಗೆ ನಿರ್ಬಂಧನೆಯೆ? ಇದು ನಾಚಿಕೆಗೇಡು. ನೀವು ಭಾಲಾ, ಸಂಗ್ರಾಮ್ ಹಾಗೂ ಮನುಸ್ಮೃತಿಯನ್ನು ಸುಟ್ಟಿದ್ದು ಒಳ್ಳೆಯದಾಯಿತು. ಸತ್ಯಾಗ್ರಹ ಮಾಡಿ ಜೈಲಿಗೆ ಹೋಗುವುದೇ ಒಳ್ಳೆಯದು. ನಿಮ್ಮ ವಿರೋಧಿಸುವ ಜನರ ಮಾತನ್ನು ನೀವು ಕೇಳಬೇಡಿ ಅಂದರು. ಹೀಗೆ ಮತ್ತೆರಡು ಭಾಷಣಗಳಾದ ಮೇಲೆ ಮದ್ಯಾಹ್ನ ಒಂದುವರೆಗೆ ಸಭೆಯನ್ನು ಬರಖಾಸ್ತು ಮಾಡಲಾಯಿತು.

## ಕಲೆಕ್ಟರ್ ಸಾಹೇಬರ ಮಧ್ಯಸ್ತಿಕೆ

ಸತ್ಯಾಗ್ರಹಿ ಜನರನ್ನು ಎಣಿಸುತ್ತೇನೆ ಎಂದು ಮೊದಲೆ ಹೇಳಿದಂತೆ ಡಾ. ಅಂಬೇಡ್ಕರರು ಜೈಲಿಗೆ ಹೋಗಲು ಸಿದ್ಧರಿರುವ ಜನರ ಹೆಸರು ಹಾಗೂ ಅವರ ಊರಿನ ಹೆಸರನ್ನು ನೋಂದಾಯಿಸುವ ಕೆಲಸಕ್ಕೆ ಹತ್ತು ಹನ್ನೆರಡು ಜನರನ್ನು ನೇಮಿಸಿದರು. ಕೇವಲ ಒಂದು ಘಂಟೆಯಲ್ಲಿ ೩೮೮೪ ಹೆಸರುಗಳು ನೋಂದಾಯಿಸಲ್ಪಟ್ಟವು. ಮನೆಯಿಂದ ಹೊರಡುವಾಗ ಜೈಲಿಗೆ ಹೋಗುತ್ತಿದ್ದೇವೆ ಎಂದು ಹೇಳಿಯೇ ಬಂದಿದ್ದೇವೆ, ಈಗ ಹಾಗೇ ಮನೆಗೆ ಹೇಗೆ ಹೋಗುವುದು ಎಂದು ಜನ ಮಾತನಾಡಲಾರಂಭಿಸಿದರು. ಹೆಸರು ನೋಂದಾಯಿಸಲು ಕಳಿಸಿದ್ದ ಜನ ಕೂಡ 'ಎಲ್ಲರೂ ಜೈಲಿಗೆ ಹೋಗಲು ಸಿದ್ದರಿರುವಾಗ ಹೆಸರನ್ನೇಕ್ಕೆ ನೋಂದಾಯಿಸುವುದು?' ಅನ್ನಲಾರಂಭಿಸಿದಾಗ ಆ ಕಾರ್ಯಕ್ರಮವನ್ನು ಅಲ್ಲಿಗೆ ನಿಲ್ಲಿಸಲಾಯಿತು. ೩–೩೦ಕ್ಕೆ ಹೆಸರು ಬರೆದುಕೊಳ್ಳುವ ಕೆಲಸವನ್ನು ನಿಲ್ಲಿಸಿ ಡಾ.ಅಂಬೇಡ್ಕರರು ಕಲೆಕ್ಟರ್ ಸಾಹೇಬರಿಗೆ ಪತ್ರ ಬರೆದರು. 'ಈ ಜನ ಸತ್ಯಾಗ್ರಹ ಮಾಡುವುದೆಂದು ನಿರ್ಧರಿಸಿದ್ದಾರೆ. ನೀವು ಸಭೆಗೆ ಆಗಮಿಸಿ ನಿಮ್ಮ ವಿಚಾರಗಳನ್ನು ಮಂಡಿಸಬೇಕೆಂದು ಕೇಳಿಕೊಂಡಿದ್ದೀರಿ, ಸಾಯಂಕಾಲ ಐದು ಘಂಟೆಗೆ ಸಭೆ ಆರಂಭವಾಗುತ್ತದೆ, ನಿಮಗೆ ಬಂದು ಮಾತಾಡುವ ಮನಸ್ಸಿದ್ದರೆ ಬನ್ನಿ'. ಅದರಂತೆ ಕಲೆಕ್ಟರ್ ಸಾಹೇಬರು, ಪೊಲೀಸ್ ಸುಪರಿಂಟೆಂಡೆಂಟ್ ಮಿ. ಫ಼ಾರೆಂಟ್, ಪೋಲಿಸ್ ಇನ್ಸ್ಪೆಕ್ಟರ್, ಫ಼ೌಜದಾರರು ಇವರುಗಳು ಬಂದರು. ಸಭೆಯನ್ನುದ್ದೇಶಿಸುತ್ತ ಡಾ. ಅಂಬೇಡ್ಕರರು,

'ಕಲೆಕ್ಟರ್ ಸಾಹೇಬರು ಒಂದೆರಡು ಮಾತುಗಳನ್ನಾಡಲಿದ್ದಾರೆ ಅನ್ನುವುದನ್ನು ನಾನು ನಿಮಗೆ ಹೇಳಿದ್ದೆ, ಅದರಂತೆ ಅವರಿಲ್ಲಿಗೆ ಬಂದಿದ್ದಾರೆ. ಅವರು ತಮ್ಮ ವಿಚಾರಗಳನ್ನು ತಮ್ಮೆಲ್ಲರೆದುರು ಇಡಲಿ ಎಂದು ಕೇಳಿಕೊಳ್ಳುತ್ತೇನೆ'. ಅದರಂತೆ ಕಲೆಕ್ಟರ್ ಸಾಹೇಬರು ಈ ರೀತಿ ಭಾಷಣ ಮಾಡಿದರು.

'ನಾನಿಲ್ಲಿ ಯಾಕೆ ಬಂದಿದ್ದೇನೆ ಅನ್ನುವುದನ್ನು ಡಾ. ಅಂಬೇಡ್ಕರರು ನಿಮಗೆಲ್ಲ ಹೇಳಿದ್ದಾರೆ. ನನಗೆ ಮರಾಠಿ ಭಾಷೆ ಸರಿಯಾಗಿ ಮಾತನಾಡಲು ಬರುವುದಿಲ್ಲ ಹಾಗಾಗಿ ಮೊದಲೆ ಕ್ಷಮೆ ಕೇಳುತ್ತೇನೆ. ನೀವೆಲ್ಲ ಮೂರ್ನಾಲ್ಕು ತಿಂಗಳಿನಿಂದ ಸತ್ಯಾಗ್ರಹದ ಸಿದ್ಧತೆಗಳನ್ನು ನಡೆಸಿದ್ದಿರಿ ಎಂದು ಕೇಳಿದ್ದೇನೆ ಹಾಗಾಗಿ ನೀವು ಸಧ್ಯಕ್ಕೆ ಸತ್ಯಾಗ್ರಹ ಮಾಡುವಂತಿಲ್ಲ ಎಂದು ಹೇಳುವಾಗ ಬೇಸರವಾಗುತ್ತಿದೆ. ಈ ವಿಷಯದ ಬಗ್ಗೆ ನಿಮಗೆ ಉಪದೇಶ ಮಾಡುವ ಇಚ್ಛೆ ನನಗಿದೆ. ಮುಂಬಯಿ ಲೆಜಿಸ್ಲೆಟಿವ್ ಕೌನ್ಸಿಲ್ನ ಮಸೂದೆಯ ಪ್ರಕಾರ ಶಾಲೆ ಹಾಗೂ ಸಾರ್ವಜನಿಕ ಕೆರೆ, ಭಾವಿಗಳನ್ನು ಉಪಯೋಗಿಸಲು ಅನುಮತಿಯಿದೆ. ಅದರಂತೆ ಮುಂಬಯಿ ಸರ್ಕಾರ ಕೂಡ ಆದೇಶ ಕೊಟ್ಟಿದೆ ಹಾಗೂ ಮುನಿಸಿಪಾಲ್ಟಿ ಲೋಕಲ್ ಬೋರ್ಡ್‌ಗೆ ಕೂಡ ದಲಿತರನ್ನು ತಡೆಯಬೇಡಿ ಎಂದು ತಿಳಿಸಿದೆ. ಸರ್ಕಾರದ ಆದೇಶದಂತೆ ಚವ್‌ದಾರ್ ಕೆರೆಗೆ ಹೋಗಬೇಕೆನ್ನುವುದು ನಿಮ್ಮಾಸೆಯಾಗಿದೆ. ತಡೆಯಾಜ್ಞೆ ಇರದಿದ್ದಿದ್ದರೆ ಕೆರೆಗೆ ಹೋಗಲು ನಾವು ಅನುಮತಿ ಕೊಡುತ್ತಿದ್ದೆವು ಆದರೆ ೧೦/೧೨ ಮೇಲ್ಜಾತಿಯವರು ಸೇರಿ ದಿವಾಣಿ ಕೋರ್ಟಿನಲ್ಲಿ 'ಈ ಕೆರೆ ಖಾಸಗಿಯಾಗಿದೆ' ಎಂದು ದಾವೆ ಹೂಡಿದ್ದಾರೆ. ಇದು ಸಾರ್ವಜಕಿನ ಕೆರೆಯೋ ಇಲ್ಲ ಯಾರದ್ದಾದರೂ ಖಾಸಗೀ ಕೆರೆಯೋ ಅನ್ನುವುದನ್ನು ನಾನು ಹೇಳಲಾರೆ, ಆದರೆ ಕಾಗದಪತ್ರಗಳನ್ನು ಸರಿಯಾಗಿ ಪರಿಶೀಲಿಸಿ, ವಕೀಲರ ವಾದಗಳನ್ನು ಕೇಳಿ ತೀರ್ಪು ಕೊಡುವೆವು. ಆ ಕೆರೆ ಖಾಸಗಿಯದ್ದಾಗಿದ್ದರೆ ಮೇಲ್ಜಾತಿಯವರು ನಿಮ್ಮನ್ನು ತಡೆಯುವುದು ಯೋಗ್ಯವಾಗಿರುತ್ತದೆ. ಸಾರ್ವಜನಿಕವಾಗಿದ್ದರೆ ಮಾತ್ರ ನೀವು ಕೆರೆಗೆ ಹೋಗಲು ಅಡ್ಡಿಯಿಲ್ಲ. ಆದರೆ ಸರ್ಕಾರ ಅದನ್ನು ಸಾರ್ವಜನಿಕವೆಂದು ಘೋಷಿಸಿದರೆ ಮಾತ್ರ ನಿಮಗಾಗಿ ಅದನ್ನು ತೆರವು

ಮಾಡಿಕೊಡಲಾಗುತ್ತದೆ. ನ್ಯಾಯಾಲಯದಿಂದ ತಾತ್ಕಾಲಿಕವಾಗಿ ಆಜ್ಞೆ ಪಡೆದರೂ ಕೇಸ್ ಇತ್ಯರ್ಥವಾಗದೆ ಹೋಗುವಂತಿಲ್ಲ. ನ್ಯಾಯಾಲಯದ ಆದೇಶವನ್ನು ಶಿರಸಾ ವಹಿಸಿ ಅನ್ನುವುದೇ ನಿಮಗೆ ನನ್ನ ಉಪದೇಶವಾಗಿದೆ. ನ್ಯಾಯಾಲಯದ ಆದೇಶ ಉಲ್ಲಂಘಿಸಿದರೆ ನಿಮಗೆ ಲಾಭವಾಗುತ್ತದೆ ಎಂದು ನನಗನಿಸುವುದಿಲ್ಲ. ಮೂರ್ನಾಲ್ಕು ತಿಂಗಳಿನಿಂದ ಚವ್‌ದಾರ್ ಕೆರೆಗೆ ಹೋಗಲು ನೀವೆಲ್ಲರೂ ಉತ್ಸಾಹದಿಂದ ಸಿದ್ಧತೆಗಳನ್ನು ನಡೆಸಿದ್ದೀರಿ ಆದರೆ ಜಾಣ ಮನುಷ್ಯ ಯಾವತ್ತೂ ಕಾಯಿದೆಯನ್ನು ಪಾಲಿಸುತ್ತಾನೆ ಹಾಗೂ ಅದರಂತೆ ನಡೆದುಕೊಳ್ಳುತ್ತಾನೆ. ನಿಮ್ಮ ವಿರುದ್ಧ ನಡೆದುಕೊಂಡು ಕಾಯಿದೆ ಮುರಿದವರಿಗೆ ಶಿಕ್ಷೆಯಾಗಿದೆ ಅನ್ನುವುದು ನಿಮಗೆ ಗೊತ್ತೇಯಿದೆ. ಹಾಗೆಯೇ ನೀವೂ ನಡೆದುಕೊಂಡರೆ, ಕಾನೂನು ಮುರಿದರೆ ನಿಮಗೂ ಶಿಕ್ಷೆಯಾದೀತು, ಲಾಭವಾಗದು. ಕೆರೆಗೆ ಹೋಗುವ ನಿಮ್ಮ ಉದ್ದೇಶವನ್ನು ನಾವು ತಡೆಗಟ್ಟಬಲ್ಲೆವು. ನಿಮಗೆ ಗೊತ್ತಿರುವಂತೆ ನಾನು ಈ ಜಿಲ್ಲೆಯ ಕಲೆಕ್ಟರ್, ನಿಮಗಾಗಿ ಹೇಳುತ್ತಿದ್ದೇನೆ, ಇಲ್ಲಿ ಎರಡು ಪಕ್ಷಗಳಿವೆ, ದಲಿತರು ಮತ್ತು ಮೇಲ್ಜಾತಿಯವರು. ಸರ್ಕಾರ ನಿಮ್ಮ ಪಕ್ಷದಲ್ಲಿದೆ, ನೀವು ಸರ್ಕಾರಕ್ಕೆ ಅವಮಾನ ಮಾಡಿದರೆ ಪರಿಣಾಮ ನೆಟ್ಟಗಿರುವುದಿಲ್ಲ. ಮೇಲೆ ನಾನು ಹೇಳಿರುವ ಎಲ್ಲ ವಿಷಯಗಳನ್ನು ಸರಿಯಾಗಿ ನೆನಪಿಡಿ. ನಾನು ನಿಮ್ಮವನೆ ಹಾಗೂ ಸರ್ಕಾರ ನಿಮ್ಮ ತಂದೆತಾಯಿಯಿದ್ದ ಹಾಗೆ. ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಸತ್ಯಾಗ್ರಹ ಮಾಡಲೇಬೇಕು, ಏನೇ ಆದರೂ ಸರ್ಕಾರವನ್ನು ಅವಮಾನಿಸಿ ಕೆರೆಗೆ ಹೋಗಲೇ ಬೇಕು ಎಂದು ನಿಮ್ಮ ಗೆಳೆಯರು ಹೇಳುತ್ತಿರುವುದನ್ನು ಕೇಳಿ ಬಹಳ ದುಃಖವಾಗುತ್ತಿದೆ. ಹಾಗೆ ಹೇಳಿಕೊಡುವ ಜನ ಆಪ್ತ ಗೆಳೆಯರಾಗಿರಲು ಸಾಧ್ಯವಿಲ್ಲ. ಏನೇ ಮಾಡುವುದಿದ್ದರೂ ಶಾಂತತೆಯಿಂದ ಕಾನೂನಿನ ಚೌಕಟ್ಟಿನಲ್ಲಿದ್ದು ಮಾಡಬೇಕು. ಸ್ವಲ್ಪ ಧೈರ್ಯವಾಗಿರಿ, ಕಾಯಿದೆಯ ಪ್ರಕಾರ ಕೋರ್ಟಿನಲ್ಲಿ ಕೇಸ್ ಆರಂಭವಾಗಿದೆ. ತೀರ್ಪು ನಿಮ್ಮ ಕಡೆಯದ್ದಾದರೆ ಕೆರೆ ನಿಮಗಾಗಿ ತೆರೆಯಲ್ಪಡುತ್ತದೆ. ನಿಮ್ಮ ವಿರುದ್ಧ ತೀರ್ಪು ಬಂದರೆ ಮತ್ತೆ ಕೋರ್ಟಿನಲ್ಲಿ ಅಪೀಲ್ ಮಾಡಿ. ಅಲ್ಲಿಯತನಕ ಬೇರೆ ಸಾರ್ವಜನಿಕ ಕೆರೆಯ ಸತ್ಯಾಗ್ರಹದ ಬಗ್ಗೆ ಯೋಚಿಸಿ. ಸಧ್ಯಕ್ಕಂತೂ ಕಾಯಿದೆ ಹಾಗೂ ಸರ್ಕಾರದ ವಿರುದ್ಧ ಹೋಗಬೇಡಿ. ಇದೆಲ್ಲದರಿಂದ ಲಾಭವಿಲ್ಲ ಅನ್ನುವುದಕ್ಕೆ ಒಂದು ಕಥೆ ಹೇಳುತ್ತೇನೆ. ಒಬ್ಬರು ಒಡಹುಟ್ಟಿದವರಿರುತ್ತಾರೆ ಅಂದುಕೊಳ್ಳಿ. ಒಬ್ಬ ಹರಿ ಮತ್ತೊಬ್ಬ ಭಾವು. ಬೇಸಿಗೆ ಮುಗಿದ ಮೇಲೆ ಅಕ್ಕಿ ಬೆಳೆ ಬೆಳೆಯೋಣ ಎಂದು ಹರಿ ಅಂದರೆ ಬೇಡ ಎಲ್ಲ ಸಿದ್ಧತೆಗಳನ್ನು ಮಾಡಿ ಅಕ್ಕಿ ಬೆಳೆಯೋಣ ಎಂದು ಭಾವು ಹೇಳುತ್ತಾನೆ. ಹರಿ ಅವನ ಮಾತು ಕೇಳದೆ ಗಡಿಬಿಡಿಯಲ್ಲಿ ಅಕ್ಕಿ ಬೆಳೆ ಬಿತ್ತಿತ್ತಾನೆ. ಆದರೆ ಭಾವು ಭೂಮಿಯನ್ನು ಸರಿಯಾಗಿ ಉತ್ತು ಅಕ್ಕಿ ಬೀಜ ಬಿತ್ತುತ್ತಾನೆ. ಇಲ್ಲಿ ಯಾರಿಗೆ ಒಳ್ಳೆಯ ಬೆಳೆ ಸಿಗುತ್ತದೆ ಅನ್ನುವುದನ್ನು ಯೋಚಿಸಿ ಸ್ವಲ್ಪ? ನೀವು ಕೂಡ ಸ್ವಲ್ಪ ಯೋಚಿಸಿಯೇ ಹೆಜ್ಜೆ ಹಾಕಿದರೆ ನಿಮಗೂ ಸಫಲತೆ ಸಿಗುತ್ತದೆ. ಈಗ ಗಡಿಬಿಡಿಯಲ್ಲಿ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಹೆಜ್ಜೆ ಹಾಕಿದರೆ ಮೇಲಿನ ಉದಾಹರಣೆಯಂತೆ ನಷ್ಟ ಕಟ್ಟಿಟ್ಟ ಬುತ್ತಿ. ನಾವೀಗಾಗಲೆ ಸತ್ಯಾಗ್ರಹಕ್ಕಾಗಿ ಸೇರಿದ್ದೇವೆ, ಎಂದು ನೀವನ್ನಬಹುದು, ನೀವು ಸೇರಿರುವುದೇನೋ ನಿಜ. ಈಗ ಸತ್ಯಾಗ್ರಹ ಮಾಡುವುದಕ್ಕಿಂತ ಸಾರ್ವಜನಿಕರಿಗೆ ಕೆರೆ ತೆರವಾಗುವತನಕ ನಾವು ಕೆಲಸ ಮಾಡುತ್ತಲೇ ಇರುತ್ತೇವೆ ನಿಲ್ಲುವುದಿಲ್ಲ ಎಂದು ನಿರ್ಧರಿಸಿ. ನಿಮ್ಮ ಅಧ್ಯಕ್ಷರು ಬ್ಯಾರಿಸ್ಟರಾಗಿದ್ದಾರೆ, ಅವರಿಗೆ ಕಾಯಿದೆ ಕಾನೂನುಗಳು ಗೊತ್ತು, ಅವರ ಜೊತೆ ವಿಚಾರವಿನಿಮಯ ಮಾಡಿ ಪುರಾವೆಗಳಿಗಾಗಿ ಸಾಕ್ಷಿಗಳನ್ನು ಹುಡುಕಿ. ಈ ಕೆಲಸಕ್ಕಾಗಿ ಹಣದ ಅವಶ್ಯಕತೆಯನ್ನು ನೀಗಿಸಿಕೊಳ್ಳಲು ಕೂಡ ಸಿದ್ಧತೆಗಳನ್ನು ಮಾಡಿಕೊಳ್ಳಿ. ಒಂದು ವಿಷಯ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ೧೨ ವರ್ಷಗಳಿಂದ ಈ ತಾಲುಕಾದಲ್ಲಿ ವಾಸಿಸುತ್ತಿರುವ ಮಾಂಗ್ ನನಗೆ ಗೊತ್ತು. ಇವರೆಲ್ಲ ಒಳ್ಳೆಯ ಜನ. ಕೆಲವರು ಸರ್ಕಾರಿ ಖಾತೆಗಳಲ್ಲಿ, ಮತ್ತೆ ಕೆಲವರು ಸೈನ್ಯದಲ್ಲಿ ಸುಭೇದಾರ, ಹವಾಲದಾರ್, ಜಮಾದಾರ, ಶಿಪಾಯಿಯಂತಹ

ಹುದ್ದೆಗಳನ್ನಲಂಕರಿಸಿದ ಜನ ಸರ್ಕಾರಕ್ಕೆ ಅವಮಾನವಾಗುವಂತೆ ನಡೆದುಕೊಳ್ಳಲಾರರು. ಮೇಲ್ಜಾತಿಯವರು ಹಾಕಿರುವ ಕೇಸ್ ಇತ್ಯರ್ಥವಾಗುವ ತನಕ ಕೆರೆಗೆ ಹೋಗಬೇಡಿ ಎಂದು ನಿಮಗೆ ಉಪದೇಶಿಸುತ್ತೇನೆ. ನನ್ನ ಮಾತು ಕೇಳದಿದ್ದರೆ ನಿಮ್ಮ ಉದ್ದೇಶ ಸಫಲವಾಗಲಿಕ್ಕಿಲ್ಲ. ನಾವು ಪೊಲೀಸ್ ಬಂದೋಬಸ್ತ್ ಮಾಡಿಕೊಂಡಿದ್ದೇವೆ ಅನ್ನುವುದು ನಿಮಗೆ ಗೊತ್ತಿದೆ. ಕೆರೆಗೆ ಹೋಗುವ ದಾರಿಯನ್ನು ಮುಚ್ಚಿದ್ದೇವೆ, ಹಾಗೇನಾದರೂ ನೀವು ಹೋಗಲು ಪ್ರಯತ್ನಿಸಿದರೆ ಮೇಲ್ಜಾತಿಯವರಷ್ಟೇಯಲ್ಲ ಸರ್ಕಾರ ಕೂಡ ನಿಮ್ಮ ವಿರುದ್ಧವಾದೀತು. ಇದನ್ನೆಲ್ಲ ಮಾಡುವುದರಲ್ಲಿ ಯಾವುದೇ ಲಾಭವಿಲ್ಲ, ಸ್ವಲ್ಪ ತಡೆಯಿರಿ. ನಿಮ್ಮ ನಾಯಕರು ಜಾಣರಾಗಿದ್ದಾರೆ, ಅವರಿಗೆ ಕೋರ್ಟು ಕಛೇರಿಯ ಕೆಲಸಗಳು ಗೊತ್ತು, ಅವರೊಂದಿಗಿದ್ದು ಕೆಲಸ ಮಾಡಿದರೆ ನಿಮ್ಮ ಕೆಲಸವಾದೀತು. ನಿಮ್ಮಜೊತೆ ಮಾತನಾಡಿದವನು, ನಿಮಗೆ ಉಪದೇಶ ಕೊಟ್ಟವನು ನಿಮ್ಮ ಗೆಳೆಯ ಅಂದುಕೊಂಡು ನೀವು ನನ್ನ ಮಾತು ಕೇಳುವಿರಿ ಎಂದು ಆಶಿಸುತ್ತೇನೆ.

ನಂತರ ಅಧ್ಯಕ್ಷರ ಅನುಮತಿ ಪಡೆದು ಶ್ರೀ. ಜವಳಕರ್ ಮಾತನಾಡಿದರು,

'ಬೆಳಿಗ್ಗೆ ಬಂದಾಗಿನಿಂದ ನಾವು ಮಹಾಡ್‌ನ ಎಲ್ಲ ಮರಾಠಾ ನೇತಾರರನ್ನು ಭೇಟಿಯಾದೆವು. ಅವರಲ್ಲಿಯ ಎಲ್ಲರೂ ನಾವು ಅಸ್ಪೃಶ್ಯರನ್ನು ವಿರೋಧಿಸುವುದಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ಸಾಕ್ಷಿಯಾಗಿ ಅವರೊಂದು ಹೇಳಿಕೆಯನ್ನು ಬರೆದುಕೊಟ್ಟಿದ್ದಾರೆ.

ಶ್ರೀ. ಕೇಶವರಾವ್ ಜೇಧೆ ಹಾಗೂ ಶ್ರೀ. ದಿನಕರರಾವ್ ಜವಳಕರ್ ಅವರಿಗೆ

ಮಹಾಡ್ ತಾರೀಖು ೨೬-೧೨-೧೯೨೭. ಮಹಾಡ್ ಮರಾಠಾ ಸಮಾಜದ ಹೇಳಿಕೆಯನ್ನು ದಲಿತರ ಎದುರಿಡುವುದು.

ಮಹಾಡ್ ಚವ್‌ದಾರ್ ಕೆರೆಯಲ್ಲಿ ತಮ್ಮ ಏಳಿಗಾಗಿ ಸತ್ಯಾಗ್ರಹ ಮಾಡಲು ದಲಿತರು ದೊಡ್ಡ ಸಂಖ್ಯೆಯಲ್ಲಿ ಸೇರಿ ಪ್ರಯತ್ನಿಸುತ್ತಿದ್ದಾರೆ. ಮರಾಠಾ ಜನ ದಲಿತರ ವಿರೋಧವಾಗಿದ್ದಾರೆ ಅನ್ನುವ ಸುಳ್ಳು ಮಾತನ್ನು ಕೆಲವು ಬೇರೆ ಜಾತಿಯ ಜನ ಹರಡುತ್ತಿದ್ದಾರೆ. ಇದು ಶುದ್ಧ ಸುಳ್ಳು. ನಾವು ಮಹಾಡ್‌ನ ಮರಾಠಗಳು. ದಲಿತರು ಮನುಷ್ಯತ್ವದ ತಮ್ಮ ಹಕ್ಕುಗಳನ್ನು ಪಡೆಯಲೇ ಬೇಕು ಎಂದು ನಾವು ಮರಾಠಾ ಜಾತಿಯ ನೇತಾರರಾಗಿ ಹೇಳುತ್ತಿದ್ದೇವೆ. ನಾವವರ ದಾರಿಗೆ ಅಡ್ಡ ಬರುವುದಿಲ್ಲ.ಅವರ ಪ್ರಯತ್ನದ ಬಗ್ಗೆ ನಮಗೆ ಸಂಪೂರ್ಣ ಸಹಾನುಭೂತಿಯಿದೆ. ಆದರೆ ಈ ಎಲ್ಲ ಪ್ರಯತ್ನಗಳನ್ನವರು ಒಳ್ಳೆಯ ಮನಸ್ಸಿನಿಂದ ಮಾಡಿದರೆ ಅವರ ಸಮಾಜದ ಏಳಿಗೆ ಬಹುಬೇಗನೆ ಸಾಧ್ಯ ಎಂದು ನಮಗನಿಸುತ್ತದೆ.

ಸತ್ಯಾಗ್ರಹದ ವಿಷಯದಲ್ಲಿ ನಾವು ತಟಸ್ಥರಾಗಿರುತ್ತೇವೆ ಅನ್ನುವ ಮನವಿ ಪತ್ರವೊಂದು ೨೧-೧೨-೨೭ರಂದು ಮಂಜೂರಾಗಿದೆ.

ಇತ್ತೀಚೆಗೆ ಕೋರ್ಟಿನಲ್ಲಿ ನಡೆಯುತ್ತಿರುವ ಅಸ್ಪೃಶ್ಯರ ಕೆರೆ ಸಂಬಂಧಿತ ದಾವೆ ಹೂಡುವವರಲ್ಲಿ ಒಟ್ಟು ೯ ಜನ ಮೇಲ್ಜಾತಿಯವರಲ್ಲಿ ಒಬ್ಬ ಮರಾಠ ಜಾತಿಯವನಾಗಿದ್ದು ಈ ವಿಷಯದಲ್ಲವನು ನಮ್ಮ ಸಮಾಜದೊಂದಿಗೆ ವಿಚಾರವಿನಿಮಯ ಮಾಡಿಲ್ಲ ಹಾಗಾಗಿ ನಾವವನಿಗೆ ಬೆಂಬಲ ಕೊಡುವುದಿಲ್ಲ.

ಹಸ್ತಾಕ್ಷರ

ನಾರಾಯಣ ಮಾಮಾ ಮಾಂಗಡೆ ಪೆಂಟರ್

ಕೊಂಡಿರಾಮ ಪಾಂಡುರಂಗ ಶಿಂಧೆ

ಕಿಸನ್ ಬಾಬಾ ಧುಮಾಲ್

ತುಕಾರಾಮ್ ಸಾವಲಾರಾಮ್ ಪಾನಸರೆ

ಕೃಷ್ಣಾಜಿ ಗ್ಯಾನುಬಾ ಪವಾರ್
ಬಾಬಾಜಿರಾವ್ ಮಾಧವರಾವ್ ದಳವಿ
ಸೀತಾರಾಮ್ ಗೋಪಾಳ್ ಚೌಧರಿ

ಇದೆಲ್ಲದರಿಂದ ಮರಾಠಾ ಜಾತಿಯವರು ನಿಮ್ಮ ವಿರುದ್ಧವಾಗಿಲ್ಲ ಅನ್ನುವುದು ಕಂಡುಬರುತ್ತದೆ. ಬ್ರಾಹ್ಮಣೇತರರು ಈ ಕೇಸಿನ ತೀರ್ಪು ಬರುವವರೆಗೂ ಸತ್ಯಾಗ್ರಹ ಮಾಡುವುದು ಉಚಿತವಲ್ಲ ಅನ್ನುತ್ತಿದ್ದಾರೆ, ಕಲೆಕ್ಟರ್ ಸಾಹೇಬರೂ ಹಾಗೇ ಅನ್ನುತ್ತಿದ್ದಾರೆ. ಈ ಉಭಯಪಕ್ಷಗಳ ಮಾತುಗಳನ್ನು ನೀವು ಸರಿಯಾಗಿ ಕೇಳಿ ತಿಳಿದುಕೊಳ್ಳುವುದೇ ಒಳ್ಳೆಯದು ಎಂದು ನನಗನಿಸುತ್ತದೆ.' ನಂತರ ಸುಭೆದಾರ ಘಾಡಗೆಯವರು, 'ನನಗೂ ಹಾಗೇ ಅನಿಸುತ್ತದೆ, ನಾನು ಪೆನ್ಶನರ್ ಸುಭೇದಾರ, ಸತ್ಯಾಗ್ರಹದಲ್ಲಿ ಭಾಗವಹಿಸಿದರೆ ನನ್ನ ಪೆನ್ಶನ್‌ಗೆ ಧಕ್ಕೆ ಬರುತ್ತದೆ ಅನ್ನುವುದು ನನಗೆ ಗೊತ್ತು, ಆದರೂ ಸತ್ಯಾಗ್ರಹ ಮಾಡಲೇ ಬೇಕು ಅನ್ನುವ ಉದ್ದೇಶದಿಂದ ನಾನಿಲ್ಲಿಗೆ ಪೂನಾದಿಂದ ಬಂದಿದ್ದೇನೆ. ನಾನಿಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ, ನಾನಿಲ್ಲಿ ಮೇಲ್ಜಾತಿಯವರ ವಿರುದ್ಧ ಸತ್ಯಾಗ್ರಹ ಮಾಡಲು ಬಂದಿದ್ದೇನಾದರೂ ಈ ಜನ ಸರ್ಕಾರದ ಆಸರೆ ಪಡೆದು ನಮ್ಮ ಹಾಗೂ ಸರ್ಕಾರದ ನಡುವೆ ಹೋರಾಟದ ಪರಿಸ್ಥಿತಿ ತಂದಿಟ್ಟಿದ್ದಾರೆ. ಆದರೆ ನಾವು ಮಾತ್ರ ಸಾಕಷ್ಟು ಯೋಚಿಸಿ ಈ ಹೋರಾಟ ನಡೆಸಬೇಕಿದೆ. ಸರ್ಕಾರ ಮೊಂಡುತನಮಾಡಿದರೆ ನಮಗೆ ಹೋರಾಟ ಅವಶ್ಯಕವಾಗುತ್ತಿತ್ತು ಆದರೆ ಕಲೆಕ್ಟರ್ ಸಾಹೇಬರ ಭಾಷಣದಲ್ಲಿ ಹಾಗೇನೂ ಅನಿಸಲಿಲ್ಲ.ಸರ್ಕಾರ ನಮಗೆ ಸಂಪೂರ್ಣ ಸಹಾನುಭೂತಿ ತೋರಿಸುತ್ತಿದೆ ಹೀಗಿರುವಾಗ ಸುಮ್ಮನೆ ಏಕೆ ಸರ್ಕಾರದೊಂದಿಗೆ ವಾದ ಹೆಚ್ಚಿಸುವುದು? ನೀವಿವತ್ತು ತೋರಿಸುತ್ತಿರುವ ಉತ್ಸಾಹ ಅಪೂರ್ವವಾದದ್ದು, ಅದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ ಕೂಡ. ಇಷ್ಟೊಂದು ಉತ್ಸಾಹವಿರುವಾಗ ಯಶಸ್ಸು ಸಿಕ್ಕೇ ಸಿಗುತ್ತದೆ ಆದರೆ ಬದಲಾಗಿರುವ ಪರಿಸ್ಥಿಯನ್ನು ಗಮನಿಸಿ ನೀವುಗಳು ಸ್ವಲ್ಪ ಕಾದು ನೋಡಬೇಕು' ಅಂದರು. ಕಲೆಕ್ಟರ ಸಾಹೇಬರಿಗೆ ಬೇಗ ಹೋಗುವುದಿತ್ತಾದ್ದರಿಂದ ಡಾ. ಅಂಬೇಡ್ಕರ ಅವರು ಕಲೆಕ್ಟರ್ ಸಾಹೇಬರಿಗೆ ಧನ್ಯವಾದಗಳನ್ನು ಹೇಳಿ ಬೀಳ್ಕೊಟ್ಟರು. ಕಲೆಕ್ಟರ್ ಸಾಹೇಬರ ಭಾಷಣದ ಪರಿಣಾಮ ಕಿಂಚಿತ್ತೂ ಆಗಿರಲಿಲ್ಲ ಅನ್ನುವುದು ಕಾಣುತ್ತಿತ್ತು, ಏಕೆಂದರೆ ಕಲೆಕ್ಟರ್ ಸಾಹೇಬರು ಹೋದ ಮೇಲೆ ಸತ್ಯಾಗ್ರಹದ ವಿರುದ್ಧ ಮಾತನಾಡುವವರ ಮಾತು ಕೇಳಲು ಯಾರೂ ಸಿದ್ಧರಿದ್ದಂತೆ ಕಾಣಲಿಲ್ಲ. ಆದರೆ ರಾ. ಕೃಷ್ಣಾಜಿ ದಾವಣೆ ಹಾಗೂ ಕುಮಾರಿ ಶಾಂತಾಬಾಯಿ ಶಿಂಧೆಯಂತಹ ಸತ್ಯಾಗ್ರಹದ ಪರ ಮಾತನಾಡುವ ಜನರ ಭಾಷಣಕ್ಕೆ ಜೋರಾಗಿ ಚಪ್ಪಾಳೆ ತಟ್ಟುತ್ತಿದ್ದರು. ಈ ಚರ್ಚೆ ಸಾಯಂಕಾಲ ೭ ಘಂಟೆಯ ತನಕ ನಡೆಯಿತು. ಕಡೆಗೆ ಡಾ. ಅಂಬೇಡ್ಕರ್ ಅವರು ಎಲ್ಲರನ್ನುದ್ದೇಶಿಸಿ ಇಂದು ರಾತ್ರಿ ಮತ್ತೆ ಇದರ ಬಗ್ಗೆ ಯೋಚಿಸಿ ನಾಳೆ ಬೆಳಿಗ್ಗೆ ಏನನ್ನುವುದನ್ನು ಹೇಳಲಾಗುವುದು ಎಂದು ಹೇಳಿ ಆವತ್ತಿನ ಸಭೆ ಮುಕ್ತಾಯವಾಯಿತೆಂದು ಘೋಷಿಸಿದರು.

**ಮೂರನೆಯ ದಿನ**

ಮರುದಿನ ಪರಿಷತ್ತಿನ ಸಭೆ ಮುಗಿದ ಮೇಲೆ ಸತ್ಯಾಗ್ರಹ ಮಾಡುವುದೋ ಬೇಡವೋ ಅನ್ನುವುದನ್ನು ನಿರ್ಧರಿಸಲು ಮತ್ತೊಮ್ಮೆ ರಾತ್ರಿ ಕೆಲವೇ ಕೆಲವು ಜನ ಸೇರಿ ಸಾಕಷ್ಟು ಚರ್ಚೆಗಳಾಗಿ ಕಡೆಗೆ ಸತ್ಯಾಗ್ರಹವನ್ನು ಸಧ್ಯಕ್ಕೆ ಮುಂದೂಡಿ ಊರಿನಲ್ಲೊಂದು ಮೆರವಣಿಗೆ ಮಾಡಿ ಆ ಮೆರವಣಿಗೆಯನ್ನು ಕೆರೆಯ ಸುತ್ತ ಸುತ್ತಿಸಿ ತರುವುದು ಅನ್ನುವ ವ್ಯವಸ್ಥೆಯನ್ನು ಬಹುಮತದಿಂದ ನಿರ್ಧರಿಸಲಾಯಿತು. ಅದರಂತೆ ರಾತ್ರೋರಾತ್ರಿ ಕಲೆಕ್ಟರ್ ಸಾಹೇಬರಿಗೆ ತಿಳಿಸಲಾಯಿತು ಕೂಡ. ಆದರೆ ಸತ್ಯಾಗ್ರಹವನ್ನು ಮುಂದೂಡಿದ ವಾರ್ತೆಯನ್ನು ಸಭೆಯೆದುರು ಮಂಡಿಸುವವರ್ಯಾರು? ಅನ್ನುವ ದೊಡ್ಡ ಪ್ರಶ್ನೆ ಎದುರಿಗಿತ್ತು. ಡಾ. ಅಂಬೇಡ್ಕರ್ ಅವರು

ಮಂಡಿಸಿದರೆ ಮಾತ್ರ ಅದಕ್ಕೆ ಬೆಂಬಲ ಸಿಗುವ ಸಾಧ್ಯತೆಯಿತ್ತು. ಸತ್ಯಾಗ್ರಹಕ್ಕೆ ಸೇರಿರುವ ಜನ ಕೇವಲ ಡಾ. ಅಂಬೇಡ್ಕರ್ ಅವರ ಮಾತನ್ನು ಮಾತ್ರ ಕೇಳುತ್ತಾರೆ ಅನ್ನುವುದು ಎಲ್ಲರಿಗೂ ಗೊತ್ತಿದ್ದರಿಂದ ಡಾ.ಅಂಬೇಡ್ಕರರೇ ಈ ಪ್ರಸ್ತಾಪವನ್ನು ಮಂಡಿಸಲಿ ಎಂಬ ಎಲ್ಲರ ಸಲಹೆಯಿಂದ ಡಾ. ಅಂಬೇಡ್ಕರ್ ಈ ಜವಾಬ್ದಾರಿಯನ್ನು ವಹಿಸಿಕೊಂಡರು. ಅದರಂತೆ ಮೂರನೆಯ ದಿನ ಬೆಳಿಗ್ಗೆ ಪರಿಷತ್ತು ಆರಂಭವಾದಾಗ ಅವರು ಕೆಳಗಿನಂತೆ ಮನವಿ ಪತ್ರವನ್ನು ಸಭೆಯೆದುರು ಮಂಡಿಸಿದರು.

ಮನವಿ ಪತ್ರ: ದಲಿತರಿಗೆ ಚವ್‌ದಾರ್ ಕೆರೆಯ ನೀರು ಕುಡಿಯಲು ಕೊಡದ ಮೇಲ್ಜಾತಿಯವರ ವಿರುದ್ಧ ಸತ್ಯಾಗ್ರಹ ಮಾಡಲು ಈ ಸಭೆಯನ್ನು ಕರೆದಿರುವಾಗ ಅದೇ ಮೇಲ್ಜಾತಿಯ ಜನ ಸರ್ಕಾರದ ಬೆನ್ನಡಿ ಕೊನೆ ಘಳಿಗೆಯಲ್ಲಿ ದಿವಾಣಿ ಕೋರ್ಟಿನಲ್ಲಿ ದಲಿತರ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆದಿರುವುದರಿಂದ ಸರ್ಕಾರದ ವಿರುದ್ಧ ಸತ್ಯಾಗ್ರಹ ಮಾಡುವ ಪರಿಸ್ಥಿತಿ ಈ ಸಭೆಗೆ ತಂದಿಟ್ಟಿದೆ ಅನ್ನುವುದನ್ನು ಗಮನದಲ್ಲಿಟ್ಟುಕೊಂಡು ಹಾಗೂ ಮೆ. ಕಲೆಕ್ಟರ್ ಸಾಹೇಬರು ಸತ್ಯಾಗ್ರಹ ಹಿಂದೆಗೆದುಕೊಳ್ಳಿ ಎಂದು ಹೇಳುವುದರಲ್ಲಿ ಸರ್ಕಾರದ ಯಾವುದೇ ದುರುದ್ದೇಶವಿಲ್ಲವೆಂದೂ ಸಮಾನ ಹಕ್ಕಿಗಾಗಿ ದಲಿತರು ನಡೆಸಿರುವ ಈ ಚಳುವಳಿಯಲ್ಲಿ ಸರ್ಕಾರದ ಸಂಪೂರ್ಣ ಬೆಂಬಲವಿದೆಯೆಂದು ಸಭೆಗೆ ಕೊಟ್ಟ ಆಶ್ವಾಸನೆಯ ಬಗ್ಗೆ ಯೋಚಿಸಿ ಈ ಪರಿಷತ್ತು ದಿವಾಣಿ ದಾವೆಯ ತೀರ್ಪು ಬರುವತನಕ ಸತ್ಯಾಗ್ರಹವನ್ನು ಮುಂದೂಡಿದೆ.ಮನವಿ ಪತ್ರವನ್ನು ಮಂಡಿಸುವಾಗ ಡಾ. ಅಂಬೇಡ್ಕರ್ ಮಾತನಾಡುತ್ತ,

'ನಿನ್ನೆ ಸತ್ಯಾಗ್ರಹ ಮಾಡಿ ಅನ್ನುವ ಮನವಿ ಪತ್ರವನ್ನು ಮಂಡಿಸಿ ಈಗ ಸತ್ಯಾಗ್ರಹ ಮುಂದೂಡಿ ಅನ್ನುವ ಪ್ರಸ್ತಾಪವನ್ನು ನಾನೇ ನಿಮ್ಮೆದುರು ಇಡುತ್ತಿರುವುದನ್ನು ನೋಡಿ ಈ ಮನುಷ್ಯನ ಮನಸ್ಸು ಎಷ್ಟು ಚಂಚಲ ಎಂದು ನೀವಂದುಕೊಳ್ಳಬಹುದು. ಆದರೆ ಅದು ಹಾಗಲ್ಲ, ಎರಡೂ ವಿಷಯಗಳನ್ನು ನಾನು ಸಾಕಷ್ಟು ಯೋಚಿಸಿಯೇ ನಿರ್ಧರಿಸಿದ್ದೇನೆ. ನಿಮ್ಮಲ್ಲಿ ಧೃಡನಿರ್ಧಾರ ಎಷ್ಟರಮಟ್ಟಿಗಿದೆ ಅನ್ನುವುದು ನಿನ್ನೆ ನನಗೆ ನೋಡುವುದಿತ್ತು. ಈಗ ನನಗದು ಗೊತ್ತಾಯಿತು. ನಿಮ್ಮ ಧೃಡನಿರ್ಧಾರದ ಬಗ್ಗೆನನಗಷ್ಟೇಯಲ್ಲ ಯಾರಿಗೂ ಅನುಮಾನ ಉಳಿದಿಲ್ಲ ಅನ್ನುವುದು ನನಗೆ ಸಾಕಷ್ಟು ಸಮಾಧಾನ ಕೊಟ್ಟಿದೆ. ಇದಕ್ಕೂ ಮುನ್ನ ನಿಮ್ಮಲ್ಲಿ ನಿರ್ಧಾರದ ಕೊರತೆಯಿತ್ತು ಅನ್ನುವುದೇ ನಮ್ಮಲ್ಲಿದ್ದ ಕೊರತೆಯಾಗಿತ್ತು, ಆ ಕೊರತೆಯೀಗ ನೀಗಿದೆ. ನಾನು ಸಾಕಷ್ಟು ಯೋಚಿಸಿದ ಮೇಲೆಯೇ ಸತ್ಯಾಗ್ರಹವನ್ನು ಮುಂದೂಡಲು ಹೇಳುತ್ತಿದ್ದೇನೆ. ಮೈಯಲ್ಲಿ ಶಕ್ತಿ ಬಂದೊಡನೆ ಅದನ್ನು ಉಪಯೋಗಿಸಬೇಕೆಂದೇನಿಲ್ಲ. ಸಮಯಾವಕಾಶ ನೋಡಿ ಉಪಯೋಗಿಸಬೇಕು. ಸಾಕಷ್ಟು ಯೋಚಿಸಿದ ಮೇಲೆ ನಮ್ಮ ಈ ಶಕ್ತಿಯನ್ನು ಈಗ ಉಪಯೋಗಿಸಬಾರದು ಎಂದೆನಿಸಿತು. ನಾವಿವತ್ತು ಮಾಡುವ ಸತ್ಯಾಗ್ರಹ ಸರ್ಕಾರದ ವಿರೋಧದಲ್ಲಾಗುತ್ತದೆ. ಸತ್ಯಾಗ್ರಹ ನಿಲ್ಲಿಸುವುದರಲ್ಲಿ ಸರ್ಕಾರದ ದುರುದ್ದೇಶವಾಗಿದ್ದರೆ ನಾವು ಹೇಗೂ ಸತ್ಯಾಗ್ರಹ ಮಾಡಬಹುದಿತ್ತು. ಆದರೆ ನಿಜವಾಗಿಯೂ ಸರ್ಕಾರದ ದುರಾಗ್ರಹವಿದೆಯೆ ಅನ್ನುವುದರ ಬಗ್ಗೆ ಯೋಚಿಸಿ. ಸರ್ಕಾರಕ್ಕೆ ನಮ್ಮ ಬಗ್ಗೆ ಸಹಾನುಭೂತಿಯಿರುವಾಗ ನಾವ್ಯಾಕೆ ಸುಮ್ಮನೆ ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸುವುದು? ಎರಡನೆಯದಾಗಿ ಮೇಲ್ಜಾತಿ ಜನರಿಗೆ ನಮ್ಮ ಸತ್ಯಾಗ್ರಹದಬಗ್ಗೆ ಕಿಂಚಿತ್ತೂ ಸಹಾನುಭೂತಿಯಿಲ್ಲ ಅನ್ನುವುದು ನಿಮಗೆ ಗೊತ್ತೇಯಿದೆ, ಎಲ್ಲ ರೀತಿಯಿಂದಲೂ ಅವರು ನಮ್ಮೊಡನೆ ಅಸಹಕಾರ ತೋರಿಸುತ್ತಿದ್ದಾರೆ. ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಮುಚ್ಚಿದ್ದಾರೆ, ಖೋತ್ ಜನರು ನಿಮ್ಮ ಜಮೀನುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ, ಹಾಗೂ ಕುಣಬಿ ಜನರು ಜಾನುವಾರುಗಳನ್ನು ಕೊಂಡ್ವಾಡಿಯಲ್ಲಿ ಹಾಕಿಡುವ ಪ್ರಯತ್ನದಲ್ಲಿದ್ದಾರೆ. ಈ ಎಲ್ಲ ಬೇಡದ ಬಲವಂತಗಳ ನಡುವೆಯೂ ನಾವು ಮುನ್ನಡೆಯಬೇಕಾದರೆ ಸರ್ಕಾರದ ಸಹಾಯ ನಮಗೆ ಬೇಕೇ ಬೇಕು. ಅಂತಹ ಸಹಾಯ ಕೊಡುವ

ಆಶ್ವಾಸನೆ ಸರ್ಕಾರ ಕೊಡುತ್ತಿರುವಾಗ ಅವರ ವಿರುದ್ಧ ಸತ್ಯಾಗ್ರಹ ಮಾಡುವುದು ಉಚಿತವಲ್ಲ ಎಂದು ಕೆಲವರಂದರೆ ಅದರಲ್ಲಿ ತಪ್ಪೇನಿಲ್ಲ. ಹಾಗಾಗಿ ನೀವು ನನ್ನ ಮಾತು ಕೇಳಿ ಈ ಮನವಿ ಪತ್ರಕ್ಕೆ ಸಮ್ಮತಿಸಿ. ನೀವು ಸತ್ಯಾಗ್ರಹ ಮುಂದೂಡಿದರೆ ನಿಮ್ಮನ್ನು ನೋಡಿ ಯಾರೂ ನಗುವುದಿಲ್ಲ, ಖುದ್ದು ಕಲೆಕ್ಟರ್ ಸಾಹೇಬರೇ ವಿನಂತಿಸಿಕೊಳ್ಳುತ್ತಿರುವುದರಿಂದ ನೀವುಗಳು ಹೆದರಿ ಸತ್ಯಾಗ್ರಹ ಮುಂದೂಡಿದೀರಿ ಎಂದು ಯಾರೂ ಮಾತಾಡಿಕೊಳ್ಳುವುದಿಲ್ಲ. ಹೆಚ್ಚೆಚ್ಚು ಅಂದರೆ ನಿಮ್ಮ ನಾಯಕರೇ ಹಿಂದೆ ಸರಿದರೆಂದು ಮಾತನಾಡಿಕೊಂಡು ಹೀಯಾಳಿಸಬಹುದು. ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ನಾನು ನಿಮ್ಮ ಒಳ್ಳೆಯದಕ್ಕಾಗಿ ಹಿಂತಿರುಗಿರುವುದರಿಂದ ನನಗಿದರ ಬಗ್ಗೆ ದುಃಖವಿಲ್ಲ. ನನ್ನ ಅನುಯಾಯಿಗಳು ನನಗಿಂತ ನಾಲ್ಕು ಹೆಜ್ಜೆ ಮುಂದಿದ್ದಾರೆ ಅನ್ನುವುದು ಸಂತೋಷವಷ್ಟೇಯಲ್ಲ ಅಭಿಮಾನದ ಸಂಗತಿ ನನಗಾಗಿ. ಈ ಸತ್ಯಾಗ್ರಹವನ್ನು ಮುಂದೂಡಲು ನಾನು ನಿರ್ಧರಿಸಿದ್ದರೂ ಮುಂದೊಂದು ದಿನ ಕೆರೆಯನ್ನು ವಶಪಡಿಸಿಕೊಳ್ಳದೆ ಸುಮ್ಮನಿರಬಾರದು ಅನ್ನುವ ನಿರ್ಧಾರ ನಿಮ್ಮಂತೆ ನನ್ನದು ಕೂಡ. ಆ ಕೆಲಸವಾಗದೆ ನಾನು ಸುಮ್ಮನಿರುವವನಲ್ಲ.

ಈ ಭಾಷಣವನ್ನು ಕೇಳಿ ಸತ್ಯಾಗ್ರಹಕ್ಕೆ ಸೇರಿದ ಜನ ಬಹಳ ನಿರಾಶರಾದರು. ಆದರೂ ಡಾ.ಅಂಬೇಡ್ಕರರ ಮಾತಿಗೆ ಬೆಲೆ ಕೊಟ್ಟು ಎಲ್ಲರೂ ಬಾಯಿಮುಚ್ಚಿ ಮನವಿ ಪತ್ರಕ್ಕೆ ಸಮ್ಮತಿ ಸೂಚಿಸಿದರು.

**ಪ್ರತಿನಿಧಿಗಳ ದೊಡ್ಡ ಮೆರವಣಿಗೆ**

ಇದೆಲ್ಲದರ ನಂತರ ಊರಲ್ಲೆಲ್ಲ ಸೇರಿದ್ದ ಪ್ರತಿನಿಧಿಗಳ ಮೆರವಣಿಗೆ ಹೊರಟಿತು. ಮೆರವಣಿಗೆಯಲ್ಲಿ ಮುಂಬಯಿಯಿಂದ ಬಂದ ೫೦ ಪ್ರತಿನಿಧಿಗಳು, ಸಭೆಗೆ ಬಂದಿದ್ದ ೫೦ ಮಹಿಳೆಯರಿದ್ದರು, ಮಧ್ಯಮಧ್ಯದಲ್ಲಿ ಬಾವುಟಗಳನ್ನು ಹಾಗೂ ಸುವಿಚಾರಗಳನ್ನು ಬರೆದ ಪತಾಕೆಗಳನ್ನು ಹಿಡಿದ ಜನ ನಡೆಯುತ್ತಿದ್ದರು. ಕಳೆದ ಮಾರ್ಚ್ ತಿಂಗಳಲ್ಲಿ ಅಸ್ಪೃಶ್ಯರು ಕೆರೆಯನ್ನು ಮೈಲಿಗೆ ಮಾಡಿದರು ಎಂದು ಸಿಟ್ಟಿನಲ್ಲಿ ಎಗರಾಡಿ ರಾಡಿ ಮಾಡಿ ಜೈಲಿಗೆ ಹೋದ ಮೇಲ್ಜಾತಿಯವರಿಂದು ತಲೆಯೆತ್ತಿ ನಡೆಯುವುದನ್ನು ಬಿಟ್ಟು ಮನೆಯಲ್ಲಿ ಬಾಗಿಲುಗಳನ್ನು ಹಾಕಿ ಕುಳಿತಿದ್ದರು. ಮಕ್ಕಳು ಮಹಿಳೆಯರಷ್ಟೇಯಲ್ಲ ಗಂಡಸರು ಕೂಡ ಮನೆಬಿಟ್ಟು ರಸ್ತೆಗೆ ಬಂದಿರಲಿಲ್ಲ.ಅವರ ನೇತಾರರಂತೂ ಹೆದರಿ ಊರೇ ಬಿಟ್ಟು ಓಡಿಹೋಗಿದ್ದರು. ಊರಲ್ಲಿ ಒಬ್ಬನೂ ಇರಲಿಲ್ಲ. ಸರ್ಕಾರ ತತ್ಕಾಲಿಕ ತಡೆಯಾಜ್ಞೆಯನ್ನು ಹೊರಡಿಸಿ ಸ್ವಲ್ಪ ಸಮಯಕ್ಕಾದರೂ ಅವರ ಜೊತೆಗಿದ್ದರೂ ಮಹಾಡ್‌ನ ಪ್ರಜೆ ಇಷ್ಟು ದಯನೀಯರೇಕಾದರು? ಎಂದು ಎಲ್ಲರಿಗೂ ಆಶ್ಚರ್ಯವಾಗುತ್ತಿತ್ತು. ಸಿಂಹದ ಮರಿಗಳು ಬೆಕ್ಕಿನ ಮರಿಗಳಾದದ್ದು ಹೇಗೆ? ಅನ್ನುವುದೇ ಇದ್ದ ದೊಡ್ಡ ಸವಾಲು! ಮೊದಲೇ ಹೆದರಿದ್ದ ಈ ಜನ ದೊಡ್ಡ ಮೆರವಣಿಗೆ ಮಾರುಕಟ್ಟೆಯಿಂದ ಹೋಗುತ್ತಿರುವುದನ್ನು ನೋಡಿ ಕಂಗಾಲಾದರು. ಮಹಾಡ್‌ನ ಜನ ಇಂತಹ ದೊಡ್ಡ ಮೆರವಣಿಗೆ ಅಂದೇ ಮೊದಲು ನೋಡುತ್ತಿದ್ದರು. ಪಂಚಮ್ ಜಾರ್ಜ ಕೀ ಜಯ್, ಮಹಾಡ್ ಸತ್ಯಾಗ್ರಹ ಕೀ ಜಯ್, ಗಾಂಧಿ ಕೀ ಜಯ್, ಅಗರಕರ್ ಕೀ ಜಯ್, ಲೋಕಹಿತವಾದಿ ಕೀ ಜಯ್, ಏಕನಾಥ್ ಮಹಾರಾಜ್ ಕೀ ಜಯ್, ಅನ್ನುವ ಜಯಘೋಷಗಳಿಂದ ಮಹಾಡ್ ತುಂಬಿಹೋಯಿತು. ಮಾರುಕಟ್ಟೆಯಿಂದ ಮೆರವಣಿಗೆ ಚವ್‌ದಾರ್ ಕೆರೆಗೆ ಬಂತು. ಅಲ್ಲಿ ಜನರನ್ನು ವಿಭಾಗಿಸಿ ಒಂದು ಭಾಗದ ಜನ ಕೆರೆಯ ಬಲಭಾಗದಿಂದಲೂ ಮತ್ತೊಂದು ಭಾಗ ಎಡಗಡೆಯಿಂದ ಸುತ್ತಿಬರುತ್ತ ಕೆರೆಯ ಒಂದು ಜಾಗದಲ್ಲಿ ಒಟ್ಟಿಗೆ ಸೇರಿ ಮುನ್ನಡೆಯುತ್ತ ಮಂಟಪದತ್ತ ಮರಳಿತು. ಹೀಗೆ ಕೆರೆಯನ್ನು ಎಲ್ಲ ಕಡೆಯಿಂದಲೂ ಸುತ್ತುವರಿದಿರುವ ದೃಶ್ಯ ನೋಡಿ ಇನ್ನು ಕೆರೆ ವಶಪಡಿಸಿಕೊಳ್ಳಲು ಏನು ಬಾಕಿ ಉಳಿದಿದೆ ಅನ್ನುವ ಉದ್ಗಾರಗಳು ಊರಿನ ಜನರಿಂದ ಬರುತ್ತಿದ್ದವು. ಇಂತಹ ಉದ್ಗಾರಗಳು ಬರುವುದು ಸಹಜವಾಗಿತ್ತು. ಏಕೆಂದರೆ ಕೈಯಲ್ಲಿ

ಕೋಲು ಹಿಡಿದು ನಡೆದುಕೊಂಡು ಬರುತ್ತಿರುವ ಜನರ ದೃಶ್ಯ ಶಿವಾಜಿಯ ಸೈನ್ಯದ ನೆನಪು ತರಿಸುತ್ತಿತ್ತು. ಮುಂದಿದ್ದ ಜನ ಮಂಟಪಕ್ಕೆ ಬಂದರೂ ಹಿಂದಿದ್ದ ಜನ ಇನ್ನೂ ಕೆರೆಯ ಹತ್ತಿರವೇ ಇದ್ದರು. ಅಷ್ಟು ದೊಡ್ಡ ಮೆರವಣಿಗೆಯಿತ್ತು. ಮೆರವಣಿಗೆ ಮೆಲ್ಲಗೆ ನಡೆಯುತ್ತಿರಲಿಲ್ಲ ಆದರೂ ಹತ್ತುವರೆಗೆ ಆರಂಭವಾದ ಮೆರವಣಿಗೆ ಮುಗಿಯುವಾಗ ಮಧ್ಯಾಹ್ನ ಹನ್ನೆರಡು ಘಂಟೆಯಾಗಿತ್ತು.ಇದರಿಂದ ಎಷ್ಟು ದೊಡ್ಡ ಮೆರವಣಿಗೆಯಿದ್ದಿರಬಹುದು ಅನ್ನುವುದು ಗೊತ್ತಾಗುತ್ತದೆ.

ಮೆರವಣಿಗೆ ಮುಗಿಸಿ ಜನ ಮರಳಿದಾಗ ಪರಿಷತ್ತು ಮತ್ತೆ ಆರಂಭವಾಯಿತು. ರಾ.ಶಿವತರಕರ್ ಅವರು ಕೆಳಗಿನ ಕೆಲವು ಮನವಿ ಪತ್ರಗಳನ್ನು ಸಾದರಪಡಿಸಿದರು.

ಈ ಪರಿಷತ್ತಿಗೆ ಎಲ್ಲ ರೀತಿಯಿಂದಲೂ ಸಹಾಯ ಮಾಡಿ ಅದರ ಯಶಸ್ಸಿಗೆ ಕಾರಣರಾದ ಅಸ್ಪೃಶ್ಯ ಸದಸ್ಯರ ವಿಶೇಷವಾಗಿ ಕೆಳಗಿನ ಸದ್ಗೃಹಸ್ಥರಿಗೆ ಈ ಸಭೆಯು ಕೃತಜ್ಞತೆ ವ್ಯಕ್ತಪಡಿಸುತ್ತದೆ.

೧. ಅ.ವಿ.ಚಿತ್ರೆ, ೨. ಸುರೇಂದ್ರನಾಥ ಟಿಪಣಿಸ್, ೩. ಫತ್ತೆಖಾನ ಸಾಹೇಬ ಮುಠೋಲಿಕರ್, ೪. ಶಾಂತಾರಾಮ್ ರಘುನಾಥ್ ಪೋತನೀಸ್, ೫. ಕೇಶವರಾವ್ ದೇಶಪಾಂಡೆ, ೬. ಗ.ನಿ.ಸಹಸ್ರಬುದ್ಧೆ ಈ ಪತ್ರಕ್ಕೆ ಶ್ರೀಯುತ ಪಾಂಡುರಂಗ ನಥುಜಿ ರಾಜಭೋಜ್, ಶ್ರೀಯುತ ಮೋರೆ, ಶ್ರೀಯುತ ವನಮಾಳಿ ಜನರು ಚರಿತ್ರಾತ್ಮಕ ಭಾಷಣಗಳನ್ನು ಮಾಡಿದರು ಹಾಗೂ ಈ ಕೃತಜ್ಞತೆ ವ್ಯಕ್ತಪಡಿಸುವ ಕಾರ್ಯಕ್ರಮ ಚಪ್ಪಾಳೆಯ ಕರತಾಡನದ ನಡುವೆ ಮುಗಿಯಿತು. ಕೃತಜ್ಞತೆಗಳಿಗೆ ಉತ್ತರ ಕೊಡುತ್ತ ರಾ.ಅನಂತರಾವ್ ಚಿತ್ರೆ ಹಾಗೂ ಸಹಸ್ರಬುದ್ಧೆಯವರ ಭಾಷಣಗಳಾದ ಮೇಲೆ ಡಾ. ಅಂಬೇಡ್ಕರ್ ಅವರು ಮಾತನಾಡುತ್ತ 'ಸಭೆ ಈಗ ಮುಗಿಯುತ್ತಿರುವುದು ನಿಜವಾದರೂ ಕೆಲವು ಮಹತ್ವವಾದ ವಿಷಯಗಳ ಬಗ್ಗೆ ಇನ್ನೂ ಚರ್ಚಿಸುವುದಿದೆ. ಅವು ಸಾಕಷ್ಟು ಮಹತ್ವವಾದ ವಿಷಯಗಳಾಗಿರುವುದರಿಂದ ಅವುಗಳ ಬಗ್ಗೆ ವಿಚಾರವಿನಿಮಯಗಳಾಗದೆ ಈ ಸಭೆಯನ್ನು ಮುಗಿಸಲಾಗದು. ಈಗ ಸಾಕಷ್ಟು ಸಮಯವಾಗಿರುವುದರಿಂದ ಈ ಚರ್ಚೆಯನ್ನು ಸಾಯಂಕಾಲಕ್ಕೆ ಮುಂದೂಡಲಾಗಿದೆ. ತಾವುಗಳು ಈಗ ಮನೆಗೆ ತೆರಳದೆ ಸಾಯಂಕಾಲದ ಚರ್ಚೆಯಲ್ಲಿ ಭಾಗವಹಿಸಿ ಎಂದು ವಿನಂತಿಸುತ್ತೇನೆ ಅಂದರು. ಈ ರೀತಿ ಸಭೆಯ ಅಧ್ಯಕ್ಷರ ಭಾಷಣವಾದ ಮೇಲೆ ಒಂದು ಘಂಟೆಗೆ ಸಭೆಯ ಕೆಲಸಕಾರ್ಯಗಳನ್ನು ಮುಗಿಸಲಾಯಿತು.

# ೧೮.

# ಅಸ್ಪೃಶ್ಯರಾಗಿದ್ದೂ ಕೂಡ ಅಸ್ಪೃಶ್ಯರ ಚಳುವಳಿಯಲ್ಲಿ ಭಾವಹಿಸದಿರುವುದು ನಾಚಿಕೆಗೇಡು

ಮಹಾಡ್‌ನಲ್ಲಿ ೨೫ ರಿಂದ ೨೭ನೆಯ ಡಿಸೆಂಬರ್ ೧೯೨೭ರ ಸತ್ಯಾಗ್ರಹ ಪರಿಷತ್ತಿನ ಕಾರ್ಯಕ್ರಮದಲ್ಲಿ ಚಮ್ಮಾರ ಸಮಾಜವೂ ಎಚ್ಚರಗೊಂಡು ೨೭ನೆಯ ಡಿಸಂಬರ್ ೧೯೨೭ರ ಸಾಯಂಕಾಲ ಚಮ್ಮಾರರ ಓಣಿಯಲ್ಲಿ ಸಭೆ ಆಯೋಜಿಸುವುದೆಂದು ನಿರ್ಧರಿಸಿ ಡಾ. ಅಂಬೇಡ್ಕರರನ್ನುಅಲ್ಲಿಗೆ ಬರುವಂತೆ ವಿನಂತಿಸಿದರು. ಅವರ ವಿನಂತಿಯನ್ನು ಮನ್ನಿಸಿ ಡಾ.ಅಂಬೇಡ್ಕರರು ತಮ್ಮ ಗೆಳೆಯರೊಂದಿಗೆ ಸಾಯಂಕಾಲ ಏಳುವರೆಗೆ ಚಮ್ಮಾರರ ಓಣಿಗೆ ತಲುಪಿದರು. ಮಹಾಡ್‌ನಲ್ಲಿ ಚಮ್ಮಾರರ ಓಣಿ ಸಾಕಷ್ಟು ದೊಡ್ಡದಿದೆ ಹಾಗಾಗಿ ಚಮ್ಮಾರರ ಸಾಕಷ್ಟು ಗಂಡಸರು, ಹೆಂಗಸರು ಸಭೆಗೆ ಸೇರಿದ್ದರು. ಮೊದಲಿಗೆ ಶ್ರೀಯುತ ರಾ.ನಾ. ವನಮಾಳಿ, ರಾ. ಗಿರಿಜಾಶಂಕರ್ ಶಿವದಾಸ್, ಎಲ್.ಆರ್. ಚಾಂದೋರಕರ್, ಶ್ರೀಯುತ್ ಗೋವಿಂದ್ ಝಿಪರೂ ಜಾಧವ್ ಇವರುಗಳು ಸಾಮಾಜಿಕ ವಿಷಯಗಳ ಬಗ್ಗೆ ಸ್ಫೂರ್ತಿದಾಯಕ ಭಾಷಣಗಳನ್ನು ಮಾಡಿದ ನಂತರ ಡಾ. ಅಂಬೇಡ್ಕರ್ ಸಾಹೇಬರು ತಮ್ಮ ಭಾಷಣದಲ್ಲಿ,

'ನಾಲ್ಕಾರು ಚಮ್ಮಾರರನ್ನು ಬಿಟ್ಟರೆ ಉಳಿದ ಯಾವುದೇ ಚಮ್ಮಾರ ಬಂಧುಗಳು ಸತ್ಯಾಗ್ರಹದಂತಹ ಮಹತ್ವದಕಾರ್ಯದಲ್ಲಿ ಭಾಗವಹಿಸುವುದಿಲ್ಲ ಅನ್ನುವುದು ಆಶ್ಚರ್ಯದ ವಿಷಯವಲ್ಲದೆ ಇದರ ಹಿಂದಿನ ಕಾರಣ ನನಗೆ ಅರ್ಥವಾಗುತ್ತಿಲ್ಲ. ಮಾಂಗ್ ಸಮಾಜದ ಜೊತೆ ನೀವ್ಯಾಕೆ ಅನುಸರಿಸಿಕೊಂಡು ಹೋಗುವುದಿಲ್ಲವೆನ್ನುವುದು ನನಗೆ ತಿಳಿಯದಾಗಿದೆ. ಸತ್ಯಾಗ್ರಹದಂತಹ ದೊಡ್ಡ ಕಾರ್ಯವನ್ನು ನೀವು ಸ್ವತಂತ್ರವಾಗಿ ಕೈಗೊಳ್ಳುತ್ತೇವೆಂದು ಮುಂದಾದರೆ ನಿಮ್ಮ ಜಾತಿಯ ಕಡಿಮೆ ಜನಸಂಖ್ಯೆಯಿಂದಾಗಿ ನಿಮ್ಮಿಂದ ಸಾಧ್ಯವಿಲ್ಲದ ಮಾತು ಎಂದು ನನಗನಿಸುತ್ತದೆ ಹಾಗಾಗಿ ಮಾಂಗ್‌ರಂತಹ ಸಾಕಷ್ಟು ಜನಸಂಖ್ಯೆಯಿರುವ ಜನರೊಂದಿಗೆ ಕಾರ್ಯಕ್ಷಮತೆಯ ದೃಷ್ಟಿಯಿಂದ ಸಹಕಾರ್ಯ ಮಾಡದೆ ನಿಮಗೆ ಬೇರೆ ದಾರಿಯಿಲ್ಲ. ಮಾಂಗ್‌ರೊಡನೆ ಸಹಕಾರ್ಯ ಮಾಡಿದರೆ ನಮ್ಮ ಜಾತಿ ಕುಲಗೆಡುತ್ತದೆ ಅನ್ನುವ ಭಯ ಬೇಡ. ನಿಜ ಹೇಳುವುದಾದರೆ ಸತ್ಯಾಗ್ರಹಿಗಳ ಗುಂಪು ವೀರರ ಗುಂಪು ಎಂದು ಪರಿಗಣಿಸಲಾಗುತ್ತದೆ ಹಾಗೂ ವೀರರ ಗುಂಪಿನಲ್ಲಿ ಜಾತಿಭೇದಗಳಿಗೆ ಆಸ್ಪದವಿಲ್ಲ ಅನ್ನುವುದನ್ನು ಪೇಶ್ವೆಗಳಂತಹ ಬ್ರಾಹ್ಮಣರ ರಾಜ್ಯದಲ್ಲೂ ಎಲ್ಲರೂ ಒಪ್ಪಿಕೊಂಡಿದ್ದರು. ಹಾಗಿರದಿದ್ದರೆ ಸಿದ್ದನಾಕ್ ಮಾಂಗ್‌ನ ಶಿಬಿರವನ್ನು ಮರಾಠಾ ಸರದಾರನ್ ಛಾವಣಿಯಲ್ಲಿ ಕಟ್ಟಗೊಡುತ್ತಿರಲಿಲ್ಲ. ನಿಜ ಹೇಳುವುದಾದರೆ ನೀವು ತಿಂದುಂಡು, ಒಳ್ಳೆಯ ವ್ಯಾಪಾರ ಮಾಡಿಕೊಂಡು ಹಣವಂತರಾಗಿ ಸುಖವಾಗಿದ್ದಿರಿ, ಹೀಗಿರುವಾಗ ನೀವು ನಮ್ಮಂತಹಜನರಿಗೆ ಸಹಾಯ ಮಾಡಬೇಕು. ಯಾರಿಗೂ ಚಪ್ಪಲಿ ಹೊಲೆದು ಕೊಡಬಾರದಂತಹ ಸತ್ಯಾಗ್ರಹವನ್ನು ನೀವು ಮಾಡಬಹುದು. ನಿಮ್ಮ ಸಮಾಜದಲ್ಲಿ ಇಷ್ಟೆಲ್ಲ ಸಾಮರ್ಥ್ಯವಿದ್ದರೂ ನೀವದನ್ನು ಉಪಯೋಗಿಸಿಕೊಳ್ಳುತ್ತಿಲ್ಲ ಅನ್ನುವುದನ್ನು ನಿಮ್ಮಲ್ಲಿರುವ ಆಲಸ್ಯ ಎನ್ನಲೆ ಇಲ್ಲ ಅಸಡ್ಡೆತನ ಅನ್ನಲೆ? ನಿಮಗೆ ಸುಖ ಬೇಕೆ ಇಲ್ಲ ಮನುಷ್ಯತ್ವ ಬೇಕೆ ಅನ್ನುವುದನ್ನು ನೀವೆ

ನಿರ್ಧರಿಸಿ, ಮನುಷ್ಯತ್ವವಿಲ್ಲದೆ ನಿಮ್ಮ ವೈಭವ ಅರ್ಥವಿಲ್ಲದ್ದು ಅನ್ನುವುದನ್ನು ನೆನಪಿಟ್ಟುಕೊಳ್ಳಿ. ನಿಮ್ಮಂತಹ ಸ್ವತಂತ್ರ ಹಾಗೂ ಸುಖಿ ಜನರು ದಲಿತರಿಗೆ ಅವರ ಮನುಷ್ಯತ್ವ ಮರಳಿಸುವ ಕಾರ್ಯದಲ್ಲಿ ಭಾಗವಹಿಸಬೇಕು, ಆಗಲೆ ಇತಿಹಾಸ ಮಾಂಗ್‌ರ ಜೊತೆ ನಿಮ್ಮ ಹೆಸರನ್ನೂ ಗೌರವದಿಂದ ತೆಗೆದುಕೊಳ್ಳುತ್ತದೆ. ಇಷ್ಟು ಮಾಡಿ ಪುಣ್ಯ ಕಟ್ಟಿಕೊಳ್ಳಿ, ಇಲ್ಲದಿದ್ದರೆ ನಿಮ್ಮ ಮುಂಬರುವ ಪೀಳಿಗೆ ನೀವು ಕೈಲಾಗದವರಾಗಿದ್ದಿರಿ ಎಂದು ನಿಮ್ಮನ್ನೇ ದೂಷಿಸಲಿದೆ ಅಂದರು.

ತದನಂತರ ಶ್ರೀ.ಎಸ್.ಎನ್.ಶಿವತರ್ಕರ್ ಅವರು ಭಾಷಣ ಮಾಡುತ್ತ, 'ದಲಿತೋದ್ಧಾರದ ಕಾರ್ಯದಲ್ಲಿ ನೀವು ಭಾಗವಹಿಸುತ್ತಿಲ್ಲವಾದ್ದರಿಂದ ನೀವು ಹೆದರು ಪುಕ್ಕಲುಗಳು ಎಂದು ಪರಿಗಣಿಸಲಾಗುತ್ತಿದ್ದೀರಿ. ಇದು ಕೇವಲ ದಲಿತರ ಕಾರ್ಯವಾಗಿರದೆ ಅಖಿಲ ಮಾನವಜಾತಿಯ ಕೆಲಸವಾಗಿದೆ. ನೀವಿಲ್ಲಿ ದಲಿತರಾಗಿದ್ದು ಕೂಡ ದಲಿತೋದ್ಧಾರದಂತಹ ಕೆಲಸಗಳಲ್ಲಿ ಭಾಗವಹಿಸುವುದಿಲ್ಲ ಅನ್ನುವುದು ನಾಚಿಕೆಗೇಡು. ನೀವೂ ಬ್ರಾಹ್ಮಣರಂತಾಗದೆ ಈ ಪವಿತ್ರಕಾರ್ಯದಲ್ಲಿ ಸಹಾಯ ಮಾಡಿ' ಅಂದರು. ನಂತರ ಶ್ರೀ. ಪಾ. ನಾ. ರಾಜಭೋಜ್ ಅವರು ಭಾಷಣ ಮಾಡುತ್ತ, 'ಚಮ್ಮಾರರು ಬ್ರಾಹ್ಮಣರಂತಾಗುತ್ತಿದ್ದಾರೆ ಅನ್ನುವುದನ್ನು ನೋಡಿ ನನಗೆ ಬಹಳ ದುಃಖವಾಗುತ್ತದೆ ಹಾಗೂ ಮಾತಂಗ ಸಮಾಜದ ಕೆಲವು ಜನರ ಬಗ್ಗೆ ಅದಕ್ಕಿಂತಲೂ ಹೆಚ್ಚು ದುಃಖವಾಗುತ್ತದೆ. ಚಮ್ಮಾರರು ಉಳಿದ ದಲಿತರಿಗಿಂತ ಸುಖವಾಗಿದ್ದರೂ ಅವರಿಗೆ ಶಿಕ್ಷಣ ಸಿಗುತ್ತಿಲ್ಲ ಹಾಗಾಗಿ ಅವರು ಕರ್ತವ್ಯವಿಮುಖರಾಗಿದ್ದಾರೆ. ದಲಿತ ನೇತಾರರ ಮೇಲಿಂದು ಅನಿಷ್ಟ ಕಾದಿದೆ, ಇಂತಹ ಪರಿಸ್ಥಿಯಲ್ಲಿ ದ್ವೇಷ, ಮತ್ಸರಗಳನ್ನು ಬಿಡಬೇಕು, ಭಯಂಕರವಾದ ಜಾತಿ ಭೇದವನ್ನು ಮರೆತು ನೀವು ಮಾಂಗ್‌ರಿಗೆ ಸಹಾಯ ಮಾಡಿ, ಸತ್ಯಾಗ್ರಹಿಗಳಾಗಿ ಅನ್ನುವುದರಲ್ಲೇ ಎಲ್ಲರಿಗೂ ಲಾಭವಿದೆ' ಅಂದರು. ನಂತರ ಸಹಸ್ರಬುದ್ಧೆಯವರು ಮಾತನಾಡುತ್ತ, 'ಬ್ಯಾರಿಸ್ಟರ್ ಸಾಹೇಬರು ನಿಮ್ಮ ಜಾತಿಯಲ್ಲಿ ಹುಟ್ಟಿದರೂ ವಿದೇಶಕ್ಕೆ ಹೋಗಿ ಬಂದು ಇಂದು ವಿದ್ವಾಂಸ ಬ್ರಾಹ್ಮಣರಿಗಿಂತ ಹೆಚ್ಚು ವಿದ್ವಾಂಸರಾಗಿ ಬಂದಿದ್ದಾರೆ, ಹಾಗಾಗಿಯೇ ನಾನು ಅವರ ಶಿಷ್ಯನಾಗಿದ್ದೇನೆ. ನೀವೂ ಹೀಗೆಯೇ ಕಲಿತು ದೊಡ್ಡವರಾಗಿ, ಜಾತಿಭೇದವನ್ನು ತೊಡೆದುಹಾಕಿ ಹಾಗೂ ದಲಿತೋದ್ಧಾರದ ಕೆಲಸದಲ್ಲಿ ಸಹಾಯ ಮಾಡಿ. ಬ್ಯಾರಿಸ್ಟರ್ ಸಾಹೇಬರ ಜೊತೆ ನಾನು ಯಾವತ್ತೂ ಊಟ ಮಾಡುತ್ತಿರುತ್ತೇನೆ, ನನಗೆಲ್ಲಿ ಕೆಟ್ಟದ್ದಾಗಿದೆ? ಉಣ್ಣುವ ತಿನ್ನುವ ವಿಷಯಗಳಲ್ಲಿ ಸುಮ್ಮನೆ ಭೇದ ಮಾಡಬೇಡಿ'ಅಂದರು. ನಂತರ ವನಮಾಳಿಯವರು ಮಾತನಾಡುತ್ತ, 'ನೀವು ಸತ್ಯಾಗ್ರಹದಲ್ಲಿ ಭಾಗವಹಿಸಲಿಲ್ಲ ಅನ್ನುವುದಕ್ಕೆ ನನಗೆ ಬಹಳ ಖೇದವಿದೆ. ನಿಮ್ಮ ಕರ್ತವ್ಯ ಪಾಲಿಸುವ ಈ ಅವಕಾಶವನ್ನು ಬಿಟ್ಟುಕೊಡದೆ ಕೆಲಸ ಮಾಡಿದಿರಾದರೆ ಇತಿಹಾಸದಲ್ಲಿ ನಿಮ್ಮ ಹೆಸರು ಅಜರಾಮರವಾದೀತು'ಅಂದರು. ಹೀಗೆ ಭಾಷಣಗಳಾದ ಮೇಲೆ ಚಹಾ ಪಾನೀಯಗಳ ಕಾರ್ಯಕ್ರಮವಾದ ಮೇಲೆ ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿ ಸುಮಾರು ೯ ಘಂಟೆಗೆ ಸಭೆಯನ್ನು ಬರಖಾಸ್ತು ಮಾಡಲಾಯಿತು.

ಡಾ. ಬಾಬಾಸಾಹೇಬ್ ಅಂಬೇಡ್ಕರರು ತಮ್ಮ ಗೆಳೆಯರೊಡನೆ ಚಮ್ಮಾರರ ಓಣಿ ತಿರುಗಿ ಬಂದ ಮೇಲೆ ರಾತ್ರಿ ಹತ್ತುಘಂಟೆಗೆ ಮತ್ತೆ ಸತ್ಯಾಗ್ರಹ ಪರಿಷತ್ತಿಗೆ ಆರಂಭವಾಯಿತು. ಧುಳೆಯ ಖಾದಿ ಪ್ರಸಾರಕ ಮಂಡಳದ ಆದ್ಯ ಪ್ರವರ್ತಕರಾದ ರಾ. ದೇವ್ ಅವರ ವ್ಯಾಖ್ಯಾನ ಇಡಲಾಗಿತ್ತು. ಆದರೆ ಅವರು ಬರುವುದಕ್ಕಿನ್ನು ಸಮಯವಿದ್ದದ್ದರಿಂದ ಶ್ರೀಯುತ ಗಣಪತ್ ಬುವಾ ಹಾಗೂ ಶ್ರೀಯುತ ಕಾಂಬಳೆ ಇವರು ದೇವರು ಹಾಗೂ ಭಕ್ತ ಅನ್ನುವ ವಿಷಯದ ಬಗ್ಗೆ ಹದಿನೈದು ಇಪ್ಪತ್ತು ನಿಮಿಷ ಹಾಸ್ಯ ಕಾರ್ಯಕ್ರಮವೊಂದನ್ನು ಸಾದರಪಡಿಸಿದರು. ಇದು ಜನರ ಮನಸ್ಸಿನ ಮೇಲೆ ಸಾಕಷ್ಟು ಪರಿಣಾಮ ಬೀರಿತು. ರಾ. ದೇವ್ ಅವರು ವ್ಯಾಖ್ಯಾನ ಕೊಟ್ಟು ಹೋದ ಮೇಲೆ ಪರಿಷತ್ತಿನ ಕಾರ್ಯ ಕಲಾಪಗಳು ಆರಂಭವಾದವು. ಮೊದಲಿಗೆ

ಶ್ರೀಯುತ ವಾಮನ್‌ರಾವ್ ಪತ್ಕಿ ಹಾಗೂ ಕಮಲಾಕರ್ ಟಿಪಣಿಸ್ ಅನ್ನುವ ಇಬ್ಬರು ಕಾಯಸ್ಥ ಜಾತಿಯ ತರುಣರಿಗೆ ಧನ್ಯವಾದಗಳನ್ನರ್ಪಿಸುವ ಹಾಗೂ ಅವರು ಮಾಡಿದ ಕೆಲಸಕ್ಕಾಗಿ ಸತ್ಯಾಗ್ರಹ ಕಮಿಟಿ ವತಿಯಿಂದ ಪಾರಿತೋಷಕವಾಗಿ ಇಬ್ಬರಿಗೂ ಒಂದೊಂದು ಚಿನ್ನದ ಉಂಗುರ ಕೊಡುವುದೆಂದು ನಿರ್ಧರಿಸಲಾಯಿತು. ಈ ನಿರ್ಧಾರದ ಬಗ್ಗೆ ಶ್ರೀಯುತ ಸಂಭಾಜಿ ಗಾಯಕವಾಡ್, ಗೋವಿಂದ್ ರಾಮಜಿ ಆಡೆರಕರ್ ಹವಾಲ್‌ದಾರ್ ಹಾಗೂ ಶ್ರೀಯುತ ಮೋರೆ ಇವರ ಭಾಷಣಗಳಾದವು. ಇದೇ ನಿರ್ಧಾರದ ಬಗ್ಗೆ ಮಾತನಾಡುತ್ತ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು,

ಮೇಲೆ ಹೇಳಿದ ಯುವಕರ ಕಾರ್ಯ ಅವರ ಜಾತಿಗೆ ಒಪ್ಪುವಂತಹದ್ದು. ಬ್ರಾಹ್ಮಣರು ಕಾಯಸ್ಥರಿಗೆ ನೀಚ ಜಾತಿಯವರೆಂದು ಹೇಳಿ ಅವಮಾನ ಮಾಡುವ ಪ್ರಯತ್ನ ಮಾಡಿದ್ದಾರೆ. ಆದರೆ ಸಾಕಷ್ಟು ಸಲ ಕಠಿಣ ಪ್ರಸಂಗಗಳನ್ನು ಎದುರಿಸುತ್ತ ಯಶಸ್ವಿಯಾಗಿ ಇವರು ಬ್ರಾಹ್ಮಣರ ಇಂತಹ ಕೆಲಸಗಳಿಗೆ ತಡೆ ಒಡ್ಡಿದ್ದಾರೆ. ಸಮಾನತೆಗಾಗಿ ಹೋರಾಡಿದ ಕಾಯಸ್ಥ ಜಾತಿಯವರಿಗೆ ಸಮಾನತೆಗಾಗಿಯೇ ಹೋರಾಡುತ್ತಿರುವ ದಲಿತರ ಬಗ್ಗೆ ಸಹಾನುಭೂತಿಯುಂಟಾಗಿ ತಾವೂ ಇವರಿಗಾಗಿ ಸಹಾಯ ಮಾಡಬೇಕು ಎಂದು ಅನಿಸಿದ್ದು ಸಹಜವೆ' ಅಂದರು. ನಂತರ ಶ್ರೀಯುತ ಕಮಲಾಕರ್. ಟಿಪಣಿಸ್ ಹಾಗೂ ಶ್ರೀಯುತ ಪತ್ಕಿ ಅವರು ಪ್ರತ್ಯುತ್ತರವಾಗಿ ಭಾಷಣಗಳನ್ನು ಮಾಡಿದರು. ತದನಂತರ ಮಹಾಡ್ ಮುನಿಸಿಪಾಲಟಿಯ ಅಧ್ಯಕ್ಷರಾದರಾ. ಸುರೇಂದ್ರನಾಥ್‌ಟಿಪಣಿಸ್ ಅವರು ಮಾತನಾಡಲು ಎದ್ದು ಹಿಂದೂ ಧರ್ಮದ ಸಂರಕ್ಷಣೆಗಾಗಿ ದಲಿತರ ಅಗತ್ಯ ಎಷ್ಟರಮಟ್ಟಿಗಿದೆ ಅನ್ನುವುದನ್ನು ವಿವರಿಸಿ ಹೇಳಿದರು. ಅವರ ನಂತರ ರಾ. ಶಾಂತಾರಾಮ್ ಪೋತ್‌ನೀಸ್ ಅವರು 'ಉಳಿದ ಗುಜರ ಸಮಾಜ ಹಾಗೂ ಬ್ರಾಹ್ಮಣ ಸಮಾಜ ನಮ್ಮ ಎದುರಾಗಿ ನಿಂತರೂ ನಾವು ಮಾತ್ರ ತನು ಮನ ಧನದಿಂದ ನಿಮಗೆ ಸಹಾಯ ಮಾಡುವೆವು, ನಮ್ಮ ಕಾಯಸ್ಥ ಜಾತಿಯ ಹಿಂದಿನ ಪೀಳಿಗೆಯ ಜನ ಕೂಡ ನಿಮಗೆ ವಿರೋಧವಾಗಿದ್ದಾರೆ ಆದರೆ ನಾವು ಮಾತ್ರ ಅವರಿಗೆ ಕಿಂಚಿತ್ತೂ ಬೆಲೆ ಕೊಡುವುದಿಲ್ಲ ಎಲ್ಲಿಯವರೆಗೆ ಚವ್‌ದಾರ್ ಕೆರೆಯಲ್ಲಿ ದಲಿತರಿಗೆ ನೀರು ಕುಡಿಯುವ ಅನುಮತಿ ಸಿಗುವುದಿಲ್ಲವೋ ಅಲ್ಲಿಯವರೆಗೆ ನಾನು ಕೂಡ ಚವ್‌ದಾರ ಕೆರೆಯ ನೀರು ಕುಡಿಯುವುದಿಲ್ಲ' ಅಂದರು.

ಡಾ. ಅಂಬೇಡ್ಕರ್ ಅವರು ಮಂಡಿಸಿದ ಇನ್ನೊಂದು ನಿರ್ಧಾರದಲ್ಲಿ 'ಸತ್ಯಾಗ್ರಹ ಪರಿಷತ್ತಿಗಾಗಿ ನೇಮಿಸಲ್ಪಟ್ಟಿರುವ ಪ್ರಚಾರಕರಾದ ರಾ. ಶಿವರಾಮ್ ಗೋಪಾಲ್ ಜಾಧವ್, ಸಂಭಾಜಿತು ಕಾರಾಮ್ ಗಾಯಕವಾಡ್, ಭಾವು ಬಾಳು ವಾರಂಗಕರ್, ಪಂಢರಿನಾಥ್ ರಾಮಚಂದ್ರ ಆಸೂಡಕರ್, ಭಾವಿಕನಾಥ್ ಬುವಾ ಫಲಾನಕರ್, ಹಾಗೂ ಪಾಂಡುರಂಗ್ ಮಹಾದೇವ್ ವೊವೂರಕರ್ ಇವರುಗಳು ತಮ್ಮ ಕೆಲಸವನ್ನು ಒಳ್ಳೆಯ ರೀತಿಯಲ್ಲಿ ಮಾಡಿದ್ದಕ್ಕಾಗಿ ಈ ಪರಿಷತ್ತು ಅವರಿಗೆ ಧನ್ಯವಾದಗಳನ್ನರ್ಪಿಸುತ್ತದೆ ಹಾಗೂ ರಾ. ಬೊವೂರಕರ್, ಸಖಾರಾಮ್ ಗೋಪಾಲ್ ಅಚಲೀಲಕರ್, ಮಹಾದೇವ್ ಅಚಲೋಲಕರ್ ಇವರುಗಳು ಸತ್ಯಾಗ್ರಹದ ಕೆಲಸಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದನ್ನು ಗಮನಿಸಿ ಪ್ರತಿಯೊಬ್ಬರಿಗೂ ಒಂದೊಂದು ಬೆಳ್ಳಿಯ ನಾಣ್ಯವನ್ನು ಪಾರಿತೋಷಕವಾಗಿ ಕೊಡಲಾಗುತ್ತಿದೆ' ಅಂದರು.

## ೧೯.

# ದಲಿತೋದ್ಧಾರ ಹಾಗೂ ಸ್ತ್ರೀಯರ ಜವಾಬ್ದಾರಿ

೨೭ ನೆಯ ಡಿಸೆಂಬರ್ ೧೯೨೭ ರಂದು ಮಧ್ಯಾಹ್ನ ಪರಿಷತ್ತನ್ನು ಮುಗಿಸಿ ಪ್ರತಿನಿಧಿಗಳು ಊಟಕ್ಕೆಂದು ಮಂಟಪಕ್ಕೆ ತೆರಳಿದರು ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ವಾಸಿಸಲು ವ್ಯವಸ್ಥೆ ಮಾಡಿದ್ದ ಪರಿಷತ್ತಿನ ಆಫೀಸಿಗೆ ಹೋದರು. ಅವರಲ್ಲಿ ಹೋಗಿ ಕುಳಿತುಕೊಳ್ಳಬೇಕು ಅನ್ನುವಷ್ಟರಲ್ಲಿ ಅವರನ್ನು ಕಾಣಲು ಹೆಂಗಸರದಂಡೇ ಬಂತು. ಈ ಹೆಂಗಸರು ಬಹಳ ದೂರದಿಂದ ಒಂಭತ್ತು ಹತ್ತು ಮೈಲಿಗಳಷ್ಟು ದೂರದಿಂದ ಡಾ. ಅಂಬೇಡ್ಕರ್ ಅವರನ್ನು ಕಾಣಲೆಂದೇ ಬಂದಿದ್ದರು. ಡಾ. ಅಂಬೇಡ್ಕರ್ ಅವರನ್ನು ಕಾಣುವ ಬಯಕೆ ಅವರಿಗೆಷ್ಟಿತ್ತೆಂದರೆ ಅವರಲ್ಲಿಯ ಕೆಲವು ಹೆಂಗಸರು ತಮ್ಮ ಸಣ್ಣ ಸಣ್ಣ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಬಂದಿದ್ದರು. ಸಾಯಂಕಾಲವಂತೂ ಅಲ್ಲಿ ಸಾಕಷ್ಟು ಹೆಂಗಸರು ಸೇರಿದರು. ಅವರಲ್ಲೊಬ್ಬ ಮುದುಕಿ ಅಂಬೇಡ್ಕರರನ್ನು ನೋಡಿ ಅಳಲಾರಂಭಿಸಿದ್ದನ್ನು ನೋಡಿದವರಿಗೆಲ್ಲ ಇವಳಿಗ್ಯಾರೋ ಮೇಲ್ಜಾತಿಯ ಗೂಂಡಾ ಹೊಡೆದ್ದಾನೆ ಅನಿಸುತ್ತಿತ್ತು. 'ನೀನ್ಯಾಕೆ ಅಳುತ್ತಿದ್ದಿ? ನಿನಗ್ಯಾರಾದರೂ ಹೊಡೆದರೆ? ಎಂದು ನೆರೆದಜನ ಅವಳನ್ನು ಕೇಳಿದ್ದಕ್ಕೆ ಆಕೆ, 'ನನಗ್ಯಾರೂ ಹೊಡೆಯಲಿಲ್ಲ, ಆದರೆ ದಾರಿಯಲ್ಲಿ ಬರುವಾಗ ಕೆಲವು ದುಷ್ಟರು ನಿಮ್ಮ ರಾಜನ ಫಜೀತಿಯಾಯಿತು ಅಂದರು'ಎಂದಾಕೆ ಹೇಳಿದಾಗ ಆಕೆಯ ಅಳುವಿನ ಹಿಂದಿನ ಕಾರಣ ಹಾಗೂ ಇಷ್ಟೊಂದು ಹೆಂಗಸರು ಒಟ್ಟಿಗೆ ಅಂಬೇಡ್ಕರ್ ಅವರನ್ನು ಕಾಣಲು ಬಂದಿರುವುದಕ್ಕೆ ಕಾರಣ ಗೊತ್ತಾಯಿತು. ಎಷ್ಟು ಪ್ರೀತಿಯಿಂದ ಇಷ್ಟೊಂದು ಹೆಂಗಸರು ತನ್ನನ್ನು ಕಾಣಲು ಬಂದಿದ್ದಾರೆ ಅನ್ನುವುದರ ಲಾಭ ಪಡೆದು ಡಾ.ಅಂಬೇಡ್ಕರ್ ಅವರು ಅವರನ್ನೆಲ್ಲ ಕೂರಿಸಿ 'ನಿಮಗೆ ಕೆಲವು ಸಮಾಜ ಹಿತದ ಮಾತುಗಳನ್ನು ನಾನು ಹೇಳಬಯಸುತ್ತೇನೆ ಹಾಗಾಗಿ ನೀವು ಸಾಯಂಕಾಲ ಪರಿಷತ್ತಿಗೆ ಬನ್ನಿರೆಂದು ವಿನಂತಿಸಿಕೊಳುತ್ತೇನೆ' ಅಂದರು. ಅವರ ವಿನಂತಿಗೆ ಬೆಲೆ ಕೊಟ್ಟು ಎಲ್ಲ ಹೆಂಗಸರು ಅಲ್ಲೇ ಉಳಿದರು.

ಚಮ್ಮಾರರ ಓಣಿಯ ಸಭೆ ಮುಗಿದ ಮೇಲೆ ಬಾಬಾಸಾಹೇಬರು ಅಲ್ಲಿ ಸೇರಿದ್ದ ಹೆಂಗಸರನ್ನುದ್ದೇಶಿಸಿ ಭಾಷಣ ಮಾಡಿದರು. ನಂತರ ಜಾತಿಯ ಪಂಚರು, ಮ್ಹೆತ್ರೆಯಂತಹ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡಿದರು. ನಿರ್ಧರಿಸಿದ್ದಂತೆ ಅಧ್ಯಕ್ಷರು ಕಡೆಯ ಹಾಗೂ ಮಹತ್ವದ ಕಾರ್ಯಕ್ರಮವನ್ನು ಆರಂಭಿಸಿದರು. ಈ ಕಡೆಯ ಕಾರ್ಯಕ್ರಮ ಎಷ್ಟು ಮಹತ್ವದ್ದಾಗಿತ್ತೆಂದರೆ ಪರಿಷತ್ತಿನ ಎಲ್ಲ ಕಾರ್ಯಕ್ರಮಗಳಲ್ಲಿ ಅದಕ್ಕೆ ಶ್ರೇಷ್ಠ ಸ್ಥಾನವಿತ್ತು. ಅಷ್ಟೇಯಲ್ಲದೆ ಈ ಕಾರ್ಯಕ್ರಮವನ್ನು ಎಷ್ಟು ಗಂಭೀರವಾಗಿ ನಡೆಸಿದರೆಂದರೆ ನೆರೆದ ಸಭಾಜನರಿಗೆಲ್ಲ ತಮ್ಮ ಕರ್ತವ್ಯದ ಅರಿವು ಕಣ್ಣೆದುರು ಸ್ಪಷ್ಟವಾಗಿ ಕಾಣುತ್ತಿತ್ತು. ಈ ಕಾರ್ಯಕ್ರಮದ ಮೊದಲ ಮುಖ್ಯ ಕಾರ್ಯಕ್ರಮ ಮಹಿಳೆಯರಿಗೆ ವ್ಯಾಖ್ಯಾನ ಕೊಡುವುದಾಗಿತ್ತು. ಮಧ್ಯಾಹ್ನ ನಿರ್ಧರಿಸಿದ್ದಂತೆ ಎಲ್ಲ ಮಹಿಳೆಯರು ಸಂಕೋಚ ಬಿಟ್ಟು ಮಂಟಪದಲ್ಲಿ ಬಂದು ಕುಳಿತಿದ್ದರು. ಅವರಿಗೆ ಕುಳಿತುಕೊಳ್ಳಲು ಮಧ್ಯದಲ್ಲಿ ಜಾಗ ಬಿಡಲಾಗಿತ್ತು. ಡಾ.ಅಂಬೇಡ್ಕರ್ ಅವರನ್ನುದ್ದೇಶಿಸಿ ಮಾತನಾಡುತ್ತ,

ನಿ'ೀವೆಲ್ಲ ಈ ಸಭೆಗೆ ಬಂದಿರುವುದು ನೋಡಿ ನನಗೆ ಬಹಳ ಸಂತೋಷವಾಗುತ್ತಿದೆ. ಮನೆಯ ಸಮಸ್ಯೆಗಳನ್ನು ಗಂಡು-ಹೆಣ್ಣು ಸೇರಿ ಬಿಡಿಸುವಂತೆ ಸಮಾಜದ ಸಮಸ್ಯೆಗಳನ್ನು ಕೂಡ ಇವರಿಬ್ಬರೂ ಸೇರಿ

ಬಿಡಿಸಬೇಕು. ಕೇವಲ ಗಂಡಸರೇ ಈ ಜವಾಬ್ದಾರಿಯನ್ನು ಹೊತ್ತರೆ ಗುರಿ ತಲುಪಲು ಅವರಿಗೆ ಹೆಚ್ಚು ಸಮಯ ಬೇಕಾಗಬಹುದು ಅನ್ನುವುದರಲ್ಲಿ ಅನುಮಾನವಿಲ್ಲ. ಹೆಂಗಸರು ಈ ಕೆಲಸವನ್ನು ವಹಿಸಿಕೊಂಡರೆ ಆ ಕೆಲಸದಲ್ಲವರು ಬೇಗ ಯಶಸ್ಸು ಗಳಿಸಬಹುದು ಎಂದು ನನಗನಿಸುತ್ತದೆ. ತಾವೊಬ್ಬರೇ ಈ ಜವಾಬ್ದಾರಿ ವಹಿಸಲಾರೆವು ಎಂದೆನಿಸಿದರೆ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಗಂಡಸರಿಗೆ ಸಹಾಯ ಮಾಡಬಹುದು. ಅದಕ್ಕಾಗಿ ನೀವು ಇನ್ನು ಮುಂದೆ ಪರಿಷತ್ತುಗಳಲ್ಲಿ ಭಾಗವಹಿಸುತ್ತಿರಿ. ನಿಜ ಹೇಳಬೇಕೆಂದರೆ ಅಸ್ಪೃಶ್ಯತೆಯನ್ನು ತೊಲಗಿಸುವ ಕೆಲಸ ಗಂಡಸರದ್ದಲ್ಲ, ಹೆಂಗಸರದ್ದೆ. ನೀವು ನಮ್ಮಂತಹ ಗಂಡಸರಿಗೆ ಜನ್ಮಕೊಟ್ಟಿದ್ದೀರಿ. ಇತರ ಜನರೆಲ್ಲ ನಮ್ಮನ್ನು ಹೇಗೆ ಪ್ರಾಣಿಗಳಿಗಿಂತಲೂ ಕಡೆಯಾಗಿ ಕಾಣುತ್ತಾರೆ ಅನ್ನುವುದು ನಿಮಗೆ ಗೊತ್ತೇಯಿದೆ. ನಮ್ಮ ನೆರಳು ಕಂಡರೂ ಅವರಿಗಾಗುವುದಿಲ್ಲ. ಉಳಿದವರಿಗೆ ಕೋರ್ಟು ಕಛೇರಿಗಳಲ್ಲಿ ಗೌರವದ ಹುದ್ದೆಗಳು ಸಿಗುತ್ತವೆ. ಆದರೆ ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಪೊಲೀಸ್ ಖಾತೆಯಲ್ಲಿ ಸಿಪಾಯಿಯ ಹುದ್ದೆಯೂ ಸಿಗುವುದಿಲ್ಲ ಅನ್ನುವಷ್ಟು ನಮ್ಮದು ಹೀನ ದರ್ಜೆಯಾಗಿದೆ. ಹೀಗೆಲ್ಲ ಇರುವಾಗ ನೀವು ನಮ್ಮನ್ನು ಹುಟ್ಟಿಸಿದ್ದೇಕೆ ಅನ್ನುವ ಪ್ರಶ್ನೆಯನ್ನು ನಿಮ್ಮ ಮಕ್ಕಳು ಕೇಳಿದರೆ ನೀವೇನು ಉತ್ತರಿಸುತ್ತೀರಿ? ಇಲ್ಲಿ ಕುಳಿತಿರುವ ಕಾಯಸ್ಥ ಹಾಗೂ ಇತರ ಮೇಲ್ಜಾತಿಯ ಹೆಣ್ಣಿನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಲ್ಲೂ ನಿಮ್ಮ ಹೊಟ್ಟೆಯಲ್ಲಿ ಹುಟ್ಟಿರುವ ನಮ್ಮಂತಹ ಮಕ್ಕಳಲ್ಲೂ ಯಾವ ವ್ಯತ್ಯಾಸವಿದೆ? ಬ್ರಾಹ್ಮಣ ಹೆಣ್ಣಿನಲ್ಲಿರುವಷ್ಟೇ ಶೀಲ ನಿಮ್ಮಲ್ಲಿಯೂ ಇದೆ ಅನ್ನುವುದರ ಬಗ್ಗೆ ನೀವು ಯೋಚಿಸಬೇಕು. ಬ್ರಾಹ್ಮಣ ಹೆಣ್ಣಿನಲ್ಲಿರುವ ಪಾತಿವ್ರತ್ಯ ನಿಮ್ಮಲ್ಲೂ ಇದೆ. ನಿಮ್ಮಲ್ಲಿರುವ ಮನೋಧೈರ್ಯ, ಧೃಡನಿರ್ಧಾರ ಹಾಗೂ ಶಕ್ತಿ ಮಾತ್ರ ಬ್ರಾಹ್ಮಣ ಸ್ತ್ರೀಯರಲ್ಲಿಲ್ಲ. ಹೀಗಿರುವಾಗ ಬ್ರಾಹ್ಮಣ ಮಹಿಳೆಯ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗೆ ಎಲ್ಲೆಡೆ ಗೌರವ ಹಾಗೂ ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗೆ ಎಲ್ಲೆಡೆ ಉಪೇಕ್ಷೆ, ಅವಮಾನ, ಆ ಮಗುವಿನ ಮನುಷ್ಯತ್ವದ ಹಕ್ಕು ಕೂಡ ಸಿಗಬಾರದೆ? ಅನ್ನುವುದರ ಬಗ್ಗೆ ನೀವೆಂದಾದರೂ ಯೋಚಿಸಿದ್ದೀರಾ? ನನಗನಿಸಿದ ಮಟ್ಟಿಗೆ ನೀವದರ ಬಗ್ಗೆ ಎಂದೂ ಯೋಚಿಸಿಲ್ಲ. ನೀವು ಯೋಚಿಸಿದ್ದಿದ್ದರೆ ಗಂಡಸರ ಮೊದಲು ನೀವೆ ಸತ್ಯಾಗ್ರಹ ಆರಂಭಿಸಿರುತ್ತಿದ್ದಿರಿ. ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ್ದೇವೆ ಅನ್ನುವುದಷ್ಟೆ ನಾವು ಮಾಡಿರುವ ಪಾಪ, ಆ ಪಾಪಕ್ಕಾಗಿ ನಾವು ಅಸ್ಪೃಶ್ಯತೆಯ ಶಿಕ್ಷೆ ಅನುಭವಿಸುತ್ತಿದ್ದೇವೆ. ನಿಮ್ಮ ಹೊಟ್ಟೆಯಲ್ಲಿ ಹುಟ್ಟುವುದು ಪಾಪ, ಇತರ ಹೆಂಗಸರ ಹೊಟ್ಟೆಯಲ್ಲಿ ಹುಟ್ಟುವುದು ಪುಣ್ಯವೇಕಾಗಬೇಕು? ಅನ್ನುವುದರ ಬಗ್ಗೆ ನೀವು ಯೋಚಿಸಿದರೆ ನೀವು ಮುಂಬರುವ ಪೀಳಿಗೆಯನ್ನು ಹುಟ್ಟಿಸುವುದು ನಿಲ್ಲಿಸಬೇಕಾಗುತ್ತದೆ ಇಲ್ಲವಾದರೆ ನಿಮ್ಮಿಂದ ಅವರಿಗೆ ತಗಲುವ ಕಳಂಕವನ್ನಾದರೂ ತೊಳೆಯಬೇಕಾಗುತ್ತದೆ. ಇನ್ನು ಮುಂದೆ ಇಂತಹ ಕಳಂಕಿತ ಸ್ಥಿತಿಯಲ್ಲಿ ನಾವು ಬದುಕುವುದಿಲ್ಲವೆಂದು ಪ್ರತಿಜ್ಞೆ ಮಾಡಿ. ಸಮಾಜದ ಏಳಿಗೆ ಮಾಡುವುದಾಗಿ ಗಂಡಸರು ನಿರ್ಧರಿಸಿರುವಂತೆ ನೀವೂ ನಿರ್ಧರಿಸಿ. ನಿಮಗೆ ಹೇಳಬೇಕಿರುವ ಮತ್ತೊಂದು ಮುಖ್ಯವಾದ ವಿಷಯವೆಂದರೆ ನೀವು ಹೊಲಸಾದ ರೂಢಿ ಪರಂಪರೆಗಳನ್ನಾಚರಿಸುವುದನ್ನು ಬಿಟ್ಟುಬಿಡಬೇಕು. ನಿಜ ಹೇಳಬೇಕೆಂದರೆ ಈತ ಅಸ್ಪೃಶ್ಯ ಎಂದು ತೋರಿಸುವ ಯಾವುದೇ ಅಚ್ಚು ಅಸ್ಪೃಶ್ಯನ ಹಣೆಯ ಮೇಲೆ ಒತ್ತಿರುವುದಿಲ್ಲ, ಆದರೆ ಅಸ್ಪೃಶ್ಯರ ರೂಢಿ ಪರಂಪರೆಗಳಿಂದ ಎಲ್ಲರಿಗೂ ನೀವು ಅಸ್ಪೃಶ್ಯರೆನ್ನುವುದು ಗೊತ್ತಾಗುತ್ತದೆ. ಈ ರೂಢಿ ಪರಂಪರೆಗಳು ಒಂದಾನೊಂದು ಕಾಲದಲ್ಲಿ ನಮ್ಮ ಮೇಲೆ ಒತ್ತಾಯದಿಂದ ಹೇರಲಾಗಿದ್ದವು ಎಂದು ನನಗನಿಸುತ್ತದೆ. ಆದರೆ ಬ್ರಿಟಿಷರ ರಾಜ್ಯದಲ್ಲಿ ಇಂತಹ ಒತ್ತಾಯಗಳಾಗಲಾರವು ಹಾಗಾಗಿ ನೀವು ಅಸ್ಪೃಶ್ಯರೆಂದು ಗುರುತಿಸಲ್ಪಡುವ ಆಚಾರ, ರೂಢಿಗಳನ್ನು ನೀವು ತೊರೆಯಬೇಕು. ನೀವು ಸೀರೆ ಉಡುವ ರೀತಿ ನಿಮ್ಮ ಅಸ್ಪೃಶ್ಯತೆಗೆ ಸಾಕ್ಷಿ. ಮೇಲ್ಜಾತಿಯ ಹೆಂಗಸರು ಸೀರೆ ಉಡುವ ರೀತಿಯಲ್ಲಿ ನೀವೂ ಉಡಲು ಪ್ರಯತ್ನಿಸಬೇಕು. ಹಾಗೆ

ಮಾಡುವುದರಲ್ಲಿ ನಿಮ್ಮ ಗಂಟೇನೂ ಹೋಗುವುದಿಲ್ಲ. ಹಾಗೆಯೇ ಕತ್ತಿನಲ್ಲಿ ನೂರಾರು ಸರಗಳು ಕೈಯಲ್ಲಿ ಮೇಲಿನತನಕ ಬೆಳ್ಳಿಯ ಇಲ್ಲವೆ ಲಾಖಿನ ಬಳೆಗಳನ್ನು ಹಾಕುವ ಪದ್ಧತಿಯೂ ನಿಮ್ಮನ್ನು ಅಸ್ಪೃಶ್ಯರೆಂದು ಪರಿಚಯಿಸುತ್ತದೆ. ಕತ್ತಿನಲ್ಲಿ ಒಂದಕ್ಕಿಂತ ಹೆಚ್ಚು ಸರಗಳಿರುವ ಅಗತ್ಯವಿಲ್ಲ. ಹೆಚ್ಚು ಸರಗಳನ್ನು ಹಾಕಿಕೊಂಡರೆ ಗಂಡನ ಆಯುಷ್ಯ ಹೆಚ್ಚುತ್ತದೆಂದೋ ಇಲ್ಲ ನಮ್ಮ ಶರೀರಕ್ಕೆ ಮೆರಗು ಬರುತ್ತದೆಂದೋ ಅಲ್ಲ. ಒಡವೆಗಳಿಗಿಂತ ಬಟ್ಟೆಯಿಂದ ನಮ್ಮ ಶರೀರಕ್ಕೆ ಮೆರಗು ಸಿಗುತ್ತದೆ. ಆದ್ದರಿಂದ ಲಾಖ ಇಲ್ಲವೆ ಬೆಳ್ಳಿಯ ಒಡವೆಗಳಲ್ಲಿ ಹಣ ಖರ್ಚು ಮಾಡುವುದಕ್ಕಿಂತ ಒಳ್ಳೆಯ ಬಟ್ಟೆ ಕೊಂಡುಕೊಳ್ಳಲು ಹಣ ಖರ್ಚು ಮಾಡಿ. ಒಡವೆಗಳನ್ನು ಹಾಕಲೇ ಬೇಕೆಂದರೆ ಚಿನ್ನದ ಒಡವೆಗಳನ್ನು ಮಾಡಿಸಿ ಹಾಕಿಕೊಳ್ಳಿ ಇಲ್ಲವೆ ಹಾಕಲೇ ಬೇಡಿ. ಅದರಂತೆಯೇ ಸ್ವಚ್ಛವಾಗಿರಲು ಪ್ರಯತ್ನಿಸಿ. ನೀವು ಮನೆಯ ಲಕ್ಷ್ಮಿಗಳು, ಮನೆಯಲ್ಲಿ ಯಾವುದೇ ರೀತಿಯ ಅಮಂಗಲವಾಗದಂತೆ ನೀವು ಎಚ್ಚರಿಕೆ ವಹಿಸಬೇಕು. ಕಳೆದ ಮಾರ್ಚ ತಿಂಗಳಿಂದ ನೀವೆಲ್ಲರೂ ಸತ್ತ ಪ್ರಾಣಿಗಳ ಮಾಂಸ ತಿನ್ನುವುದನ್ನು ನಿಲ್ಲಿಸಿದ್ದೀರಿ ಅನ್ನುವುದು ಸಂತೋಷದ ವಿಷಯ. ಆದರೆ ಯಾವುದಾದರೂ ಕುಟುಂಬದಲ್ಲಿ ಇನ್ನೂ ತಿನ್ನುತಿದ್ದರೆ ಅದನ್ನು ನಿಲ್ಲಿಸುವ ಜವಾಬ್ದಾರಿಯನ್ನು ನೀವು ವಹಿಸಿಕೊಳ್ಳಬೇಕು. ಸತ್ತ ಪ್ರಾಣಿಯ ಮಾಂಸವನ್ನು ನಿಮ್ಮ ಗಂಡ ಮನೆಗೆ ತಂದರೆ 'ಇಂತಹ ಅಮಂಗಲ ಪ್ರಕಾರ ಇನ್ನು ಮುಂದೆ ನನ್ನ ಮನೆಯಲ್ಲಿ ನಡೆಯುವುದಿಲ್ಲ'ಎಂದವನಿಗೆ ಸ್ಪಷ್ಟವಾಗಿ ಹೇಳಿ. ನೀವು ಮನಸ್ಸು ಮಾಡಿದರೆ ಇಂತಹ ಘಟನೆಗಳಾಗುವುದನ್ನು ನೀವು ತಪ್ಪಿಸಬಹುದು ಅನ್ನುವ ಭರವಸೆ ನನಗಿದೆ. ಜೊತೆಗೆ ನೀವು ನಿಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕು. ಜ್ಞಾನ ಹಾಗೂ ವಿದ್ಯೆ ಇವೆರಡು ಕೇವಲ ಗಂಡಸರ ಸೊತ್ತಲ್ಲ ಹೆಂಗಸರಿಗೂ ಕಡ್ಡಾಯವಾಗಿ ಸಿಗಬೇಕಾದ್ದಂತಹದ್ದು ಅನ್ನುವುದನ್ನು ನಮ್ಮ ಪೂರ್ವಜರೂ ತಿಳಿದುಕೊಡಿದ್ದರು. ಇಲ್ಲದಿದ್ದರೆ ಸೈನ್ಯದಲ್ಲಿ ಕೆಲಸ ಮಾಡುತ್ತಿದ್ದ ನಮ್ಮ ಪೂರ್ವಜರು ತಮ್ಮ ಹುಡುಗಿಯರಿಗೆ ವಿದ್ಯೆ ಕಲಿಸುತ್ತಿರಲಿಲ್ಲ. ಫಲವತ್ತಾದ ಭೂಮಿಯಲ್ಲಿ ಬೆಳೆಯೂ ಫಲವತ್ತಾಗೇ ಬರುತ್ತದೆ ಅನ್ನುವುದನ್ನು ನೆನಪಿಟ್ಟು ನಿಮ್ಮ ಮುಂದಿನ ಪೀಳಿಗೆಯನ್ನು ಸುಧಾರಿಸಬೇಕೆಂದಿದ್ದರೆ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸಲೇ ಬೇಕು. ನಾನಿಂದು ನಿಮಗೆ ಕೊಟ್ಟಿರುವ ಉಪದೇಶವನ್ನು ನೀವು ಗಾಳಿಗೆ ತೂರಲಾರಿರಿ ಅನ್ನುವ ಅಪೇಕ್ಷೆಯಿದೆ. ಆದಷ್ಟು ಬೇಗ ಅದನ್ನು ಜಾರಿಗೆ ತನ್ನಿ. ಹಾಗಾಗಿ ನೀವು ಬೆಳಿಗ್ಗೆ ಮನೆಗೆ ಹೋಗುವ ಮೊದಲು ನೀವು ಸೀರೆ ಉಡುವ ರೀತಿಯನ್ನು ಬದಲಿಸಿ ತೋರಿಸಿದ ಹೋದರೆ ಮಾತ್ರ ನಾನು ಹೇಳಿದ್ದು ಸಾರ್ಥಕವಾಯಿತೆಂದು ಕೊಳ್ಳುತ್ತೇನೆ' ಅಂದರು.

ನೆರೆದ ಹೆಂಗಸರಲ್ಲಿ ಶ್ರೀಮತಿ ವಿಠಾಬಾಯಿ ಅನ್ನುವವರು ನೀವು ಹೇಳಿದಂತೆಯೇ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಳು.

ಅಲ್ಲಿಯ ಹೆಂಗಸರ ಮೇಲೆ ಡಾ.ಅಂಬೇಡ್ಕರ್ ಭಾಷಣದ ತಾತ್ಕಾಲಿಕ ಪರಿಣಾಮಗಳಾಗಿರುವುದು ಕಂಡಿತು. ಬೆಳಿಗ್ಗೆ ತಮ್ಮ ತಮ್ಮ ಊರಿಗೆ ಹೋಗುವ ಮೊದಲು ಆ ಹೆಂಗಸರು ತಮ್ಮ ಉಡುಗೆಯಲ್ಲಿ ಸಂಪೂರ್ಣ ಬದಲಾವಣೆ ಮಾಡಿಕೊಂಡಿದ್ದರು. ಅವರ ಈ ನಿರ್ಧಾರಕ್ಕಾಗಿ ಒಬ್ಬೊಬ್ಬಳಿಗೂ ಬಳೆ ಮತ್ತು ಕುಪ್ಪಸ ಖರೀದಿಸಲು ಎಂಟಾಣೆ ಕೊಡಲಾಯಿತು. ಹೆಂಗಸರಂತೆ ಗಂಡಸರಲ್ಲೂ ಬದಲಾವಣೆ ಕಾಣುತ್ತಿತ್ತು. ಅವರು ಕೂಡ ಮೂಗಲ್ಲಿ ಕೈಯಲ್ಲಿ ಹಾಕುತ್ತಿದ್ದ ವಿಚಿತ್ರ ರೀತಿಯ ಒಡವೆಗಳನ್ನು ತೆಗೆದೊಗೆದಿದ್ದರು. ಅಷ್ಟೇಯಲ್ಲ ಮಹಾಡ್ ಮುನಿಸಿಪಾಲ್ಟಿಯಲ್ಲಿ ಕಸ ಎತ್ತಲು, ಕಸ ಗುಡಿಸಲು ಕೆಲಸ ಮಾಡುತ್ತಿದ್ದ ಮಾಂಗ್ ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರು.

# ೨೦.

# ಬದಲಾಗಿರುವ ಪರಿಸ್ಥಿಯ ಅರಿವಿರಲಿ

೨೭ನೆಯ ಡಿಸೆಂಬರ್ ೧೯೨೭ರಂದು ಮಹಾಡ ಸತ್ಯಾಗ್ರಹ ಪರಿಷತ್ತಿನಲ್ಲಿ ಮಹಿಳೆಯರ ಜವಾಬ್ದಾರಿಯನ್ನು ತೋರಿಸಿಕೊಟ್ಟ ನಂತರ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಪಂಚ ಹಾಗೂ ಮ್ಹೆತ್ರೆ ಜಾತಿಯ ಅಧಿಕಾರಿಗಳನ್ನು ಒಟ್ಟುಗೂಡಿಸಿ ಅವರಿಗೆ ಕೆಳಗಿನಂತೆ ಉಪದೇಶಿಸಿದರು.

ನನ್ನ ಮಾತು ಕೇಳಿ ಯಾರೂ ಸಿಟ್ಟಾಗಬೇಡಿ. ನಾನು ಪಂಚರನ್ನು ಸಾಕಷ್ಟು ಗೌರವಿಸುತ್ತೇನೆ, ಪಂಚರ ನ್ಯಾಯವನ್ನು ಒಪ್ಪುತ್ತೇನೆ. ನಾನೆಲ್ಲಾದರೂ ತಪ್ಪಿದಲ್ಲಿ ನನ್ನನ್ನು ಕ್ಷಮಿಸಿ. ನಮ್ಮ ಪೂರ್ವಜರು ನಮ್ಮ ಜಾತಿಗಾಗಿ ಒಬ್ಬ ಪಂಚರ (ಪಂಚಾಯಿತಿಯ ಸರಪಂಚ ಅಥವಾ ನ್ಯಾಯಾಧೀಶರು) ವ್ಯವಸ್ಥೆ ಮಾಡಿದರು ಅನ್ನುವುದು ಸಂತೋಷದ ವಿಷಯ. ಪ್ರತಿಯೊಂದು ಸಮಾಜದ ರೀತಿ, ರೂಢಿ ಪರಂಪರೆಗಳು ನಿರ್ಧರಿಸಲ್ಪಟ್ಟಿರುತ್ತವೆ. ಅ ರೂಢಿ ಪರಂಪರೆಗಳನುಸಾರವಾಗಿಯೇ ಎಲ್ಲರೂ ನಡೆಯಬೇಕಾಗುತ್ತದೆ. ಹಾಗೆ ನಡೆದುಕೊಳ್ಳದವನಿಗೆ ಶಿಕ್ಷೆಯೋ ಇಲ್ಲ ಬಹಿಷ್ಕಾರದಂತಹ ದಂಡನೆಯನ್ನು ಆ ಜಾತಿ ಅವನಿಗೆ ವಿಧಿಸುತ್ತದೆ. ಈ ಶಿಕ್ಷೆ ವಿಧಿಸುವ ಅಧಿಕಾರವನ್ನು ನಮ್ಮ ಜಾತಿಯು ಈ ಮ್ಹೆತ್ರೆಗಳಿಗೆ ಕೊಟ್ಟಿದೆ, ಹಾಗಾಗಿ ನಮ್ಮ ಜಾತಿಯಲ್ಲಿ ನಿಮ್ಮ ಯೋಗ್ಯತೆ ಎಷ್ಟು ಮಹತ್ತರವಾಗಿದೆ ಅನ್ನುವುದು ಗೊತ್ತಾಗುತ್ತದೆ. ನೀವು ಸಮಾಜದ ನ್ಯಾಯಾಧಿಕಾರಿ ಹಾಗೂ ದಂಡಾಧಿಕಾರಿಗಳಾಗಿದ್ದೀರಿ. ನೀವು ಹಾಕಿಕೊಟ್ಟ ಧರ್ಮ ಹಾಗೂ ನೀವು ಪಾಲಿಸುವ ನ್ಯಾಯದ ಆಧಾರದ ಮೇಲೆಯೇ ಸಮಾಜಕ್ಕೆ ಒಳ್ಳೆಯ ಇಲ್ಲವೆ ಕೆಟ್ಟ ಸಂಸ್ಕಾರ ಸಿಗಲಿವೆ. ಅದರೆ ನೀವು ನಿಮಗೆ ಲಾಭವಿದ್ದಲ್ಲಿ ಹಾಗೂ ಲಾಭವಾಗುವ ಹಾಗೆ ಮಾತ್ರ ಮಾತನಾಡುತ್ತೀರಿ ಹಾಗೂ ನಡೆದುಕೊಳ್ಳುತ್ತೀರಿ ಅನ್ನುವ ಆರೋಪವಿದೆ. ನೀವು ನಿಜವನ್ನು ಸುಳ್ಳಾಗಿಯೂ ಹಾಗೂ ಸುಳ್ಳನ್ನು ನಿಜವಾಗಿಯೂ ಪರಿವರ್ತಿಸುತ್ತಿರುವುದರಿಂದ ಸಮಾಜದಲ್ಲಿ ಅಧರ್ಮ ಹೆಚ್ಚುತ್ತಿದೆ. ಇದಕ್ಕೆಲ್ಲ ನೀವೇ ಕಾರಣರು. ನೀವು ನಿಮ್ಮ ಕರ್ತವ್ಯ ಅರ್ಥಮಾಡಿಕೊಂಡು ಮುನ್ನಡೆಯಿರಿ, ಕಾಲ ಬದಲಾಗುತ್ತಿದೆ ಅನ್ನುವುದನ್ನು ನೆನಪಿಟ್ಟುಕೊಂಡು ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಯಾವ ರೀತಿ ನಡೆದುಕೋಳ್ಳಬೇಕು ಅನ್ನುವ ಅರಿವಿರಲಿ. ಹಳೆಯ ರೂಢಿ ಪರಂಪರೆಗಳನ್ನು ತ್ಯಜಿಸಿ ಹೊಸ ರೂಢಿ ಪರಂಪರೆಗಳನ್ನು ನೀವು ಜನರಿಗೆ ಹಾಕಿಕೊಡಬೇಕು. ಇವುಗಳನ್ನು ಪಾಲಿಸದ ಜನರಿಗೆ ಬಹಿಷ್ಕಾರದಂತಹ ಶಿಕ್ಷೆ ಕೊಟ್ಟು ಅವರನ್ನು ಸರಿದಾರಿಗೆ ತರಬೇಕು.ಇಷ್ಟೆಲ್ಲ ಮಾಡುವುದಕ್ಕೆ ನೀವು ಒಪ್ಪಿಕೊಂಡರೆ ಮಾತ್ರ ವಂಶಪರಂಪರಾಗತವಾಗಿ ನಿಮಗೆ ಸಿಕ್ಕಿರುವ ಈ ಪಂಚರ ಅಧಿಕಾರವನ್ನು ನಾವು ಒಪ್ಪಿಕೊಳ್ಳುತ್ತೇವೆ ಇಲ್ಲವಾದಲ್ಲಿ ಹೊಸ ಧೋರಣೆಯ ಪಂಚರನ್ನು ನೇಮಿಸಿ ನಿಮ್ಮ ಅಧಿಕಾರಗಳನ್ನು ಕಸಿದುಕೊಳ್ಳುತ್ತೇವೆ. ಬದಲಾಗಿರುವ ಪರಿಸ್ಥಿಯಲ್ಲಿ ನಮ್ಮ ಜಾತಿಯವರಿಗೆ ಯಾವ ನಿಯಮಗಳನ್ನು ಹಾಕಿಕೊಟ್ಟರೆ ಒಳ್ಳೆಯದು ಅನ್ನುವುದರ ಬಗ್ಗೆ ಚರ್ಚಿಸುವುದಕ್ಕಾಗಿ ನಾನು ಎಲ್ಲ ಮ್ಹೆತ್ರೆ ಜನರ ಸಭೆಯೊಂದನ್ನು ಕರೆಯುವವನಿದ್ದೇನೆ. ಆ ಸಭೆಯಲ್ಲಿ ಎಲ್ಲರ ಅನುಮತಿಯಿಂದ ನಿರ್ಧರಿಸಲಾದ ನಿಯಮಗಳನ್ನು ಜಾರಿಗೆ ತರುವ ಕೆಲಸವನ್ನು ನೀವು ಮಾಡುವಿರಿ ಅನ್ನುವ ಭರವಸೆ ನನಗಿದೆ'.

ತದನಂತರ ರಾ.ಶಿವತರಕರ ಅವರು ಸಭೆಯೆದುರು ಕಡೆಯ ಮಸೂದೆಯೊಂದನ್ನು ಮಂಡಿಸಿದರು. ಆ ಮಸೂದೆಯಲ್ಲಿ ಸತ್ಯಾಗ್ರಹ ಕಮಿಟಿಯ ವತಿಯಿಂದ ಮುಂಬಯಿಯಿಂದ ಮಾರಾಠಿ ಮಾತನಾಡುವ ಹಾಗೂ ಮಹಾರಾಷ್ಟ್ರದ ಎಲ್ಲ ಜಿಲ್ಲೆಯಿಂದ ಮಹಾಡ್ ಸತ್ಯಾಗ್ರಹಕ್ಕಾಗಿ ಬಂದ ಪ್ರತಿನಿಧಿಗಳಿಗೆ ಧನ್ಯವಾದಗಳನ್ನರ್ಪಿಸಲಾಯಿತು. ಮಹಾಡ್ ಪರಿಷತ್ತಿನಲ್ಲಾದ ವಿಶೇಷ ಘಟನೆಗಳಲ್ಲಿ, ಮಹಾಡ್‌ನ ಚವ್‌ದಾರ್ ಸರೋವರ ಸತ್ಯಾಗ್ರಹ ಕೇವಲ ಕೊಲಾಬಾ ಜಿಲ್ಲೆಯ ಜನರಿಗಷ್ಟೇ ಸಂಬಂಧಪಡದೆ ಅದು ಎಲ್ಲ ದಲಿತರಿಗಾಗಿ ಸಂಬಂಧಪಟ್ಟದ್ದು ಎಂದು ಎಲ್ಲರೂ ತಿಳಿದುಕೊಂಡಿದ್ದೇ ಹೇಳಿಕೊಳ್ಳುವಂತಹ ಒಂದು ವಿಶೇಷ ಸಂಗತಿ. ಮರಾಠಿ ಮಾತನಾಡುವ ಎಲ್ಲ ಜಿಲ್ಲೆಯಿಂದಲೂ ಈ ಸತ್ಯಾಗ್ರಹಕ್ಕಾಗಿ ಜನ ಸೇರಿದ್ದರು. ದಲಿತರು ಇಂತಹ ಒಗ್ಗಟ್ಟನ್ನು ಎಲ್ಲೆಡೆಯೂ ತೋರಿಸಿದ್ದರೆ ಅಸ್ಪೃಶ್ಯತೆ ಬೇಗ ತೊಲಗಿಸುವುದು ಸುಲಭವಾಗುತ್ತಿತ್ತು. ಎಂದು ರಾ. ಶಿವತರಕರ ತಮ್ಮ ಭಾಷಣದಲ್ಲಂದರು. ಇದಕ್ಕೆ ರಾ. ಸಂಭಾಜಿ ಗಾಯಕವಾಡರು ಸಮ್ಮತಿ ಸೂಚಿಸಿದೊಡನೆ ಭರ್ಜರಿ ಕರತಾಡನದ ನಡುವೆ ಮಸೂದೆ ಮಂಜೂರಾಯಿತು.

## ೨೧.

# ಮೇಲ್ಜಾತಿಯವರು ದಲಿತರಿಗಿಂತ ತಮ್ಮ ಜಾತಿಯವರಿಗೆ ದಾರಿ ತೋರಿಸುವುದೇ ಒಳ್ಳೆಯದು

ನಿವೃತ್ತಿನಾಥರ ಜಾತ್ರೆಯ ನಿಮಿತ್ತ ಶ್ರೀ ಕ್ಷೇತ್ರ ತ್ರಯಂಬಕೇಶ್ವರದಲ್ಲಿ ದಲಿತರು ಬಹುದೊಡ್ಡ ಸಂಖ್ಯೆಯಲ್ಲಿ ಸೇರುತ್ತಾರೆ ಅನ್ನುವುದರ ಲಾಭ ಪಡೆದು ಜನ ಜಾಗೃತಿಯ ದೃಷ್ಟಿಯಿಂದ ಅಲ್ಲಿಯೇ ಒಂದು ಸಭೆ ಕರೆಯುವ ಉದ್ದೇಶದಿಂದ ಸಭೆಯ ಜಾಹಿರಾತುಗಳನ್ನು ಎಲ್ಲೆಡೆ ಹಂಚಲಾಯಿತು. ಅದರ ಪರಿಣಾಮವಾಗಿ ಬುಧವಾರ ಅಂದರೆ ತಾ. ೧೮ನೆಯ ಜನವರಿ ೧೯೨೮ ರಂದು ಒಂದು ಸಭೆಯನ್ನು ಆಯೋಜಿಸಿ ಅಧ್ಯಕ್ಷತೆಯನ್ನು ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರಿಗೆ ವಹಿಸಲಾಗಿತ್ತು. ಸಭೆಗೆ ಸಾಕಷ್ಟು ಜನ ನೆರೆದಿದ್ದರು, ಸ್ತ್ರೀಯರ ಸಂಖ್ಯೆ ಸಾಕಷ್ಟಿತ್ತು ಅನ್ನುವುದು ವಿಶೇಷ. ಸಭೆಯಲ್ಲಿ ಮುಖ್ಯವಾಗಿ ತ್ರಯಂಬಕೇಶ್ವರದಲ್ಲಿ ಸಂತ ಚೋಖೋಬಾ ಅವರ ದೇವಸ್ಥಾನ ಕಟ್ಟಬೇಕೇ ಬೇಡವೆ ಅನ್ನುವುದೊಂದೇ ಮಹತ್ವದ ವಿಷಯವಾಗಿದ್ದರೂ ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ದಲಿತರ ಎಲ್ಲ ಪ್ರಶ್ನೆಗಳ ಬಗ್ಗೆ ವಿವರವಾಗಿ ಮಾತನಾಡುತ್ತ ಸಂತ ಚೊಖೋಬಾರ ದೇವಾಲಯ ಕಟ್ಟುವುದಕ್ಕಿಂತ ಅವರು ಆರಂಭಿಸಿದ್ದ ಅಸ್ಪೃಶ್ಯ ನಿವಾರಣೆಯ ಕಾರ್ಯವನ್ನು ಗುರಿ ಮುಟ್ಟಿಸಲು ಸತತವಾಗಿ ಕಾರ್ಯರತರಾದರೆ ಸಂತ ಚೊಖೋಬಾರ ಸ್ಮಾರಕ ಕಟ್ಟಿದಂತೆಯೆ. ನಿಮಗಿದನ್ನು ಮಾಡುವುದಿದ್ದರೆ ಬಹಿಷ್ಕೃತ ಭಾರತ ಪತ್ರಿಕೆಗೆ ಅನ್ಯಾಯವಾಗದಂತೆ ನಾನು ಆರಂಭಿಸಿರುವ ಬಹಿಷ್ಕೃತ ಭಾರತದ ಬೆಳವಣಿಗೆಗಾಗಿ ಎಲ್ಲರೂ ಧನಸಹಾಯ ಮಾಡಿ ಎಂದು ಸೂಚಿಸಿದರು. ತದನಂತರ ಶ್ರೀ ಭಾವುರಾವ್ ಗಾಯಕವಾಡ್, ರಾ. ಭಾಲೆರಾವ್, ಪುಂಜಾಜಿ, ನವಸಾಜಿಜಾಧವ್ ಇವರ ಭಾಷಣಗಳಾದವು. ಇವರೆಲ್ಲರ ಭಾಷಣದ ಪರಿಣಾಮ ಎಷ್ಟಿತ್ತೆಂದರೆ ಪ್ರೆಸ್ ಫಂಡಿನ ಸಹಾಯಕ್ಕಾಗಿ ಜಾಗದಲ್ಲೇ ೨೦೩ ರೂಪಾಯಿಯ ಧನರಾಶಿ ಒಟ್ಟುಗೂಡಿತು. ಅದರಲ್ಲೂ ಸಾಮಾಜಿಕ ಜ್ಞಾನದ ಅರಿವೇ ಇಲ್ಲದ ಬಡ ಹೆಂಗಸರು ಹಾಗೂ ಸಾಧುಗಳು ಕೂಡ ತಮ್ಮಲ್ಲಿದ್ದ ಪುಡಿಗಾಸು ಕೊಟ್ಟರು. ಸಭೆಯ ನಂತರಎಲ್ಲರಿಗೂ ನಿವೃತ್ತಿನಾಥರ ಪಲ್ಲಕ್ಕಿ ಸಮಾರಂಭಕ್ಕೆ ಹೋಗುವುದಿದ್ದದ್ದರಿಂದ ಸಭೆ ನಾಲ್ಕುವರೆಗೆ ಮುಗಿಯಲೇ ಬೇಕು ಅನ್ನುವ ಆದೇಶವಿತ್ತು. ಹಾಗಾಗಿ ಸಭೆಯನ್ನು ಮಧ್ಯಾಹ್ನ ಎರಡು ಘಂಟೆಗೆ ಅರಂಭಿಸಿದ್ದರು. ಐದು ಗಂಟೆಗಾಗಲೇ ಸಭೆ ಮುಗಿಯಬಹುದಿತ್ತು ಆದರೆ ಅದೇ ಸಮಯಕ್ಕೆ ಸರಿಯಾಗಿ ನಾಸಿಕ್‌ನಿಂದ ದಾತಾರ ಶಾಸ್ತ್ರಿ ಹಾಗೂ ಸ್ವರಾಜ್ಯ ಪತ್ರಿಕೆಯ ಸಂಪಾದಕರಾದ ರಾ.ಮರಾಠೆಯವರು ಬಂದದ್ದರಿಂದ ಜನರ ಗಮನ ಪಲ್ಲಕ್ಕಿಗಿಂತ ಸಭೆಯ ಕಡೆಯೇ ಹೆಚ್ಚು ಇದ್ದದ್ದನ್ನು ಗಮನಿಸಿ ಸಭೆಯನ್ನು ಮುಗಿಸುವುದಕ್ಕಿಂತ ಮುಂದುವರೆಸಬೇಕೆಂದು ನಿರ್ಧರಿಸಲಾಯಿತು. ದಾತಾರ ಶಾಸ್ತ್ರಿಯವರು ಹಾಗೂ ಮರಾಠೆಯವರು ದಲಿತರ ಚಳುವಳಿಯ ಬಗ್ಗೆ ಸಹಾನುಭೂತಿಪರ ಭಾಷಣಗಳನ್ನು ಮಾಡಿದರು. ಈ ಭಾಷಣಗಳು ನಡೆಯುತ್ತಿದ್ದಾಗಲೇ ರಾ.ಥೊರಾತ, ವಡೇಕರ ಹಾಗೂ ಜಲಗಾಂವ್ ನಿಂದ ಚೌಧರಿಯವರು ಬಂದು ಇವರುಗಳೂ ತಂತಮ್ಮ ಭಾಷಣ ಮಾಡಿದರು. ರಾ.ಥೋರಾತ್ ಅವರು 'ದಲಿತರನ್ನು ತಮ್ಮ ಕಾಲ ಮೇಲೆ ನಿಲ್ಲಿ ಎಂದು ಹೇಳುವುದು

ಶತಮೂರ್ಖತನ, ನಮ್ಮಂತಹ ಮೇಲ್ಜಾತಿಯವರು ಸೇರಿ ಅವರ ಅಸ್ಪೃಶ್ಯತೆಯನ್ನು ತೊಲಗಿಸಲು ಪ್ರಯತ್ನಿಸಬೇಕು'. ಅಂದರು. ಇದರ ನಂತರ ಭಾವು ರಾವ್‌ಗಾಯಕವಾಡ್ ಅವರು ಭಾಷಣ ಮಾಡಿ ಮೇಲ್ಜಾತಿಯವರು ದಲಿತರ ವಿರುದ್ಧ ಮಂಡಿಸಿದ್ದ ವಿಷಯಗಳನ್ನು ಖಂಡಿಸಿದರು. ಕಡೆಗೆ ಅಂಬೇಡ್ಕರ್ ಅವರು ಸಮಾರೋಪದ ಭಾಷಣ ಮಾಡುತ್ತ.

'ನಿಮಗೆ ನಮ್ಮ ಬಗ್ಗೆ ಸಹಾನುಭೂತಿಯಿದ್ದರೆ ನಮ್ಮ ಸಭೆಗಳಲ್ಲಿ ಭಾಷಣ ಮಾಡುವುದನ್ನು ಬಿಟ್ಟು ಮೇಲ್ಜಾತಿಯವರ ಸಭೆ ಆಯೋಜಿಸಿ ಅವರಲ್ಲಿ ನಮ್ಮ ಬಗ್ಗೆ ಸಹಾನುಭೂತಿ ಬರುವಂತೆ ಪ್ರಯತ್ನಿಸಿದರೆ ಒಳ್ಳೆಯದು' ಅಂದರು. ಮರಾಠರನ್ನು ಕುರಿತು 'ನೀವು ನಗರಗಳಲ್ಲಿ ಸಭೆಗಳನ್ನು ಆಯೋಜಿಸುವುದಕ್ಕಿಂತ ಹಳ್ಳಿಗಳಲ್ಲಿ ಸಭೆಗಳನ್ನು ಆಯೋಜಿಸಬೇಕು ಹಳ್ಳಿಗಳ ಮರಾಠರ ಪರಿಸ್ಥಿತಿ ಕೋಲಾಬಾ ಜಿಲ್ಲೆಯ ಮರಾಠರಿಗಿಂತ ಬಹಳ ಶೋಚನೀಯವಾಗಿದೆ. ನೀವವರನ್ನು ಜಾಣರನ್ನಾಗಿ ಮಾಡಬೇಕೆಂದು ಅಂಬೇಡ್ಕರ್ ಅವರು ಕೆಲವು ಮಾತುಗಳನ್ನು ಹೇಳಿದರು. ಈ ರೀತಿಯ ಭಾಷಣಗಳಾದ ಮೇಲೆ ಸಭೆಯ ಕಾರ್ಯಕ್ರಮಗಳನ್ನು ಮುಗಿಸಲಾಯಿತು. ಒಟ್ಟಿನಲ್ಲಿ ಸಭೆ ನಿರ್ವಿಘ್ನವಾಗಿ ಮುಗಿದು ಎಲ್ಲರ ಸಂತೋಷಕ್ಕೆ ಎಡೆ ಮಾಡಿಕೊಟ್ಟಿತು, ಆದರೂ 'ಸ್ವರಾಜ್ಯ ಪತ್ರಿಕೆಯ ಸಂಪಾದಕರು ಡಾ.ಅಂಬೇಡ್ಕರರ ಭಾಷಣದ ವಿಪರೀತ ಅರ್ಥ ಬರೆದು ಅದನ್ನು ಟೀಕಿಸಿದ್ದು ಓದಿದರೆ ಸಭೆಗೆ ಹಾಜರಿದ್ದ ಎಲ್ಲರಿಗೂ ಸ್ವರಾಜ್ಯದ ಸಂಪಾದಕ ಓರ್ವ ನೀಚ ವೃತ್ತಿಯ ಮನುಷ್ಯ ಅನಿಸಿದ್ದಲ್ಲಿ ಬೇರೆ ಮಾತಿಲ್ಲ. ಹಾಗಾಗಿ ಆ ವಿಷಯವಾಗಿ ಹೆಚ್ಚು ಬರೆಯುವ ಅಗತ್ಯವಿಲ್ಲ.

## ೨೨.

# ಜಾತಿಭೇದದಿಂದಲೇ ಅಸ್ಪೃಶ್ಯತೆಯ ಉಗಮ

ಮಂಗಳವಾರ ೨೫ನೆಯ ಸಪ್ಟೆಂಬರ್ ೧೯೨೮ರಂದು ರಾತ್ರಿ ಎಂಟು ಘಂಟೆಗೆ ಮುಂಬಯಿ ದಾದರ್‌ನ ಗಣೇಶೋತ್ಸವದಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಪುಣೆಯ ಶ್ರೀ.ಬಾಪುಸಾಹೇಬ್ ಮಾಟೆಯವರ ವ್ಯಾಖ್ಯಾನಗಳನ್ನು ಒಂದೇ ದಿನ ಆಯೋಜಿಸಲಾಗಿತ್ತು. ಆದರೆ ಮಾಟೆಯವರು ತಮ್ಮ ಗಂಟಲು ನೋವಿನ ಕಾರಣ ಹೇಳಿ ವ್ಯಾಖ್ಯಾನಕೊಡಲು ಬರಲಿಲ್ಲ. ಅವರು ಬರಲಾಗುವುದಿಲ್ಲ ಅನ್ನುವುದನ್ನು ಕೇಳಿ ಬ್ರಾಹ್ಮಣರು ವಿಶೇಷವಾಗಿ ಸನಾತನಧರ್ಮದ ಜನರಿಗೆ ಬೇಸರವಾಗಿತ್ತು. ಅಲ್ಲದೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾಷಣ ಮಾಡುವಾಗ ಅವರಿಗೆ ತೊಂದರೆ ಕೊಡುವ, ಗದ್ದಲ ಮಾಡುವ, ಅವರನ್ನು ತೊಂದರೆಯಲ್ಲಿ ಸಿಲುಕಿಸುವ ಎಲ್ಲ ಯೋಜನೆಗಳು ತಲೆಕೆಳಗಾಗಿದ್ದವು. ಇಷ್ಟಿದ್ದರೂ ಈ ಭಾಷಣದಲ್ಲಿ ಅಂಬೇಡ್ಕರ್ ಅವರು ಬ್ರಾಹ್ಮಣರ ಬಗ್ಗೆ ಏನಾದರೂ ಹೆಚ್ಚು ಕಡಿಮೆ ಮಾತಾಡಿದರೆ ಅವರನ್ನು ಯಾವ ರೀತಿಯಲ್ಲಿ ತರಾಟೆಗೆ ತೆಗೆದುಕೊಳ್ಳಬೇಕು ಅನ್ನುವುದನ್ನು ಯೋಚಿಸಿ ಇಟ್ಟಿದ್ದರು. ಈ ಎಲ್ಲ ಸುದ್ದಿ ಗುರುವರ್ಯರಾದ ಕೇಳುಸ್ಕರ್ ಅವರಿಗೆ ತಿಳಿದಾಗ ಅವರು ಖುದ್ದಾಗಿ ಸಭೆಗೆ ಹಾಜರಾಗಿದ್ದರು.

ಆದರೆ ಡಾ. ಅಂಬೇಡ್ಕರ್ ಅವರ ಭಾಷಣ ವಿಷಯಕ್ಕಂಟಿಕೊಂಡು ಸರಳವಾಗಿ ಹಾಗೂ ಪರಿಣಾಮಕಾರಿಯಾಗಿತ್ತು. ಸಭೆಯಲ್ಲಿ ಗದ್ದಲ ಎಬ್ಬಿಸುವ ಉದ್ದೇಶದಿಂದ ಬಂದ ಜನ ಕೂಡ ಶಾಂತವಾಗಿ ಅವರ ಭಾಷಣ ಕೇಳಿ ಅವರ ವಿದ್ವತ್ತಿನ ಗುಣಗಾನ ಮಾಡುತ್ತಲೇ ತಮ್ಮ ತಮ್ಮ ಮನೆಗೆ ಹೋದರು.

ಈ ಸಭೆಯನ್ನು ಗೆದ್ದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ತಮ್ಮ ಭಾಣದಲ್ಲಿ,

'ದಲಿತರು ಅಸ್ಪೃಶ್ಯತೆ ನಿವಾರಣೆಗಾಗಿ ನಡೆಸಿರುವ ಚಳುವಳಿ ಹಾಗೂ ಬ್ರಾಹ್ಮಣಾದಿ ಮೇಲ್ಜಾತಿಯವರು ಈ ಚಳುವಳಿಗೆ ತೆಗೆದುಕೊಂಡ ಆಕ್ಷೇಪದ ಬಗ್ಗೆ ನಾನಿಂದು ಮಾತನಾಡಲಿದ್ದೇನೆ. ವಿಷಯ ಸಾಕಷ್ಟು ದೊಡ್ಡದಿದೆ, ಆದರೆ ನಮ್ಮಲ್ಲಿ ಸಮಯದ ಅಭಾವದಿಂದಾಗಿ ಅದರ ಚರ್ಚೆ ನೀರಸವಾಗಬಾರದು ಅನ್ನುವುದು ನನ್ನಿಚ್ಛೆಯಾಗಿದೆ.

ನಮ್ಮ ಚಳುವಳಿಯ ಮೇಲೆ ಮೂರು ಆಕ್ಷೇಪಣೆಗಳಿವೆ, ಮೊದಲನೆಯದು: ನಾವು ಮೇಲ್ಜಾತಿಯವರಿಗೆ ಸಹಕರಿಸದೆ ಸ್ವಾತಂತ್ರ್ಯ ಚಳುವಳಿ ನಡೆಸುತ್ತೇವೆ. ಎರಡನೆಯದು: ನಾವು ಜನರ ಮೇಲೆ ದಬ್ಬಾಳಿಕೆ ನಡೆಸುತ್ತೇವೆ, ಹಾಗೂ ಮೂರನೆಯದು ನಾವು ಜಾತಿಭೇದ ಹಾಗೂ ಅಸ್ಪೃಶ್ಯತೆ ಅನ್ನುವ ಎರಡು ಬೇರೆ ಹಾಗೂ ಸ್ವತಂತ್ರ ಪ್ರಶ್ನೆಗಳನ್ನು ಒಂದು ಮಾಡಿ ವಿನಾಕಾರಣ ಕಲಸುಮೇಲೋಗರ ಮಾಡುತ್ತಿರುವುದರಿಂದ ಅಸ್ಪೃಶ್ಯತೆ ತೊಲಗಲು ತಡವಾಗುತ್ತಿದೆ.

ಈ ಮೂರರ ಪೈಕಿ ಮೊದಲನೆಯ ಆಕ್ಷೇಪಣೆಯ ಬಗ್ಗೆ ಯೋಚಿಸುವುದಾದರೆ, ಸಹಕಾರ ಕೊಡದೇ ಇರುವುದರ ಅರ್ಥ ಸ್ವತಂತ್ರವಾಗಿ ಸ್ವಾವಲಂಬನೆಯ ತತ್ವದ ಮೇಲೆ ಚಳುವಳಿ ಮಾಡುವುದು ಎಂದಾದರೆ ಈ ಆಕ್ಷೇಪಣೆ ಯತಾರ್ಥವಾಗಿದೆ. ಆದರೆ ಇದರರ್ಥ ನಾವು ಯಾವುದೇ ಮೇಲ್ಜಾತಿ ಜನರಿಗೆ ಸಹಕಾರ್ಯ ಕೊಡುತ್ತಿಲ್ಲ ಎಂದೋ ಇಲ್ಲವೆ ಯಾರ ಸಹಾಯವನ್ನೂ ಪಡೆಯಲಿಚ್ಛಿಸುವುದಿಲ್ಲ ಎಂದಿದ್ದರೆ ಈ ಆಕ್ಷೇಪಣೆ

ಸುಳ್ಳು. ಈತ ನಮ್ಮವನು ಎಂದು ನಮಗೆ ಅನಿಸಿದಾಗ ಆತ ಯಾವ ಜಾತಿಯವನೇ ಆಗಿರಲಿ ಅವರಿಗೆ ನಾವು ಸಹಾಯ ಮಾಡಲು ಯಾವತ್ತೂ ಸಿದ್ಧರು. ಈ ಸಂಘದ ಅಧ್ಯಕ್ಷನಾಗುವ ಭಾಗ್ಯ ನನಗೆ ದೊರೆತಿದೆ. ಹಿಂದೂ ಸಮಾಜದಿಂದ ಜಾತಿಭೇದ ಹಾಗೂ ಅಸ್ಪೃಶ್ಯತೆಯನ್ನು ಬೇರುಸಹಿತ ಕಿತ್ತೆಸೆಯಲು ಪ್ರಯತ್ನಿಸುತ್ತಿರುವ ಈ ಸಮಾಜ ಸಮತಾಸಂಘದಲ್ಲಿ ಬ್ರಾಹ್ಮಣರು, ಬ್ರಾಹ್ಮಣೇತರರು, ದಲಿತರು ಹೀಗೆ ಎಲ್ಲ ಜಾತಿಯ ಜನರಿದ್ದಾರೆ. ಈ ಸಂಘದಲ್ಲಿ ಸೇರಿಕೊಳ್ಳಲು ಯಾರನ್ನೂ ನಾವು ಬೇಡ ಅನ್ನುವುದಿಲ್ಲ. ಇಷ್ಟೆಲ್ಲ ಜನರಿದ್ದರೂ ಈ ಚಳುವಳಿಯ ಸೂತ್ರಗಳನ್ನು ದಲಿತರು ತಮ್ಮ ಕೈಗೆ ತೆಗೆದುಕೊಂಡಿದ್ದಾರೆ ಅನ್ನುವುದರಲ್ಲಿ ಆಶ್ಚರ್ಯವೇನಿಲ್ಲ. ತೀರಾ ಕೆಳವರ್ಗದ ಸಮಾಜವನ್ನು ಮೇಲೆತ್ತಲು, ಅದನ್ನು ಸುಸ್ಥಿತಿಗೆ ತರಲು ಮೇಲ್ವರ್ಗದ ಸಮಾಜ ತನ್ನ ಸಹಾಯ ಹಸ್ತ ಚಾಚಿ ತನ್ನ ಸ್ಥಿತಿಗೆ ತರಲು ಮುಂದಾಗುತ್ತದೆ. ನಮ್ಮ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಸ್ಥಾಪಿಸಲು ಕೆಲವು ಇಂಗ್ಲಿಷ್ ಜನರು ಮುಂದಾಗಿದ್ದರು. ಹಾಗೆಯೆ ಇಂಗ್ಲಂಡಿನಲ್ಲಿ ಕಾರ್ಮಿಕರ ಪಕ್ಷ ಸ್ಥಾಪಿಸಲು ಉದಾರಮತವಾದಿ ಲಿಬರಲ್ ಪಕ್ಷದ ಜನರ ಸಹಾಯ ಮುಖ್ಯವಾಗಿತ್ತು. ಆದರೆ ಹಿಂದುಳಿದ ಜನರಿಗೆ ಮೇಲ್ವರ್ಗದ ಜನರ ಸಹಾಯ ಒಂದು ಹಂತದವರೆಗೆ ಮಾತ್ರ ಸಿಗಲು ಸಾಧ್ಯ. ಆ ಹಂತದ ಮುಂದೆ ಮೇಲ್ವರ್ಗದ ಜನ ಹಿಂದುಳಿದ ಜನರ ಜೊತೆ ನಡೆಯಲಾರರು. ಅಷ್ಟೇಯಲ್ಲ ಮೊದಲು ಸಹಾಯಕರಾಗಿ ಬರುವ ಈ ಕೈವಾರಿಗಳು ಬರಬರುತ್ತ ಇವರ ಪ್ರತಿಸ್ಪರ್ಧಿಗಳು, ಶತೃಗಳು ಹಾಗೂ ವಿರೋಧಿಗಳಾಗುತ್ತಾರೆ. ಒಂದು ಕಾಲದಲ್ಲಿ ಸಹಾಯಕರೂ ಹಾಗೂ ಆಶ್ರಯದಾತರಾಗಿದ್ದ ಲಿಬರಲ್ ಪಕ್ಷ ಇಂದು ಕಾರ್ಮಿಕ ಪಕ್ಷದ ತೀವ್ರ ಶತೃ ಹಾಗೂ ಪ್ರತಿಸ್ಪರ್ಧಿಯಾಗಿರುವುದನ್ನು ಕಾಣಬಹುದು. ಸಹಾಯಕ ಪಕ್ಷವೇ ಈಗ ಶತೃವಾಗಿದೆ ಅಂದ ಮಾತ್ರಕ್ಕೆ ಕಾರ್ಮಿಕ ಪಕ್ಷ ಕೃತಜ್ಞವಾಗಿದೆ, ಅದು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಕೂಡದು ಎಂದು ಯಾವುದೇ ಜಾಣ ಮನುಷ್ಯ ಅನ್ನಲಾರ.

ಅಸ್ಪೃಶ್ಯ ಚಳುವಳಿಯ ಇತಿಹಾಸವೂ ಹಾಗೇ ಇದೆ. ಬ್ರಾಹ್ಮಣಾದಿ ಕುಲದ ಕೆಲವು ಉಚ್ಚಜಾತಿಯ ಜನ ದಲಿತರಿಗೆ ಸಹಾಯ ಹಸ್ತ ಚಾಚಿದರು. ಕೈ.ಅಗರಕರ್, ರಾನಡೆಯಂತಹ ಕೆಲವು ಜನ ಅಸ್ಪೃಶ್ಯರನ್ನು ಮುಟ್ಟಲು ಅಡ್ಡಿಯಿಲ್ಲ ಅನ್ನುತ್ತಿದ್ದರು ಹಾಗೂ ದಲಿತರ ಸಭೆಗೆ ಹಾಜರಿದ್ದು ಅವರಿಗೆ ಸುಧಾರಣೆಯ ಕೆಲವು ಸಹಾನುಭೂತಿಪರ ವಿಷಯಗಳನ್ನೂ ಹೇಳುತ್ತಿದ್ದರು. ಇದರಿಂದ ಅವರು ತಮ್ಮ ಜಾತಿಯವರಿಂದ ನಿಂದನೆಗೆ ಒಳಗಾದರು. ಮೇಲ್ಜಾತಿಯವರಿಗೆ ಅವರ ಜಾತಿಯಲ್ಲೇ ಕೆಲವು ಸುಧಾರಣೆಗಳನ್ನು ತರುವುದಿತ್ತು. ಬ್ರಾಹ್ಮಣ ಸ್ತ್ರೀಯರ ಪುನರ್ವಿವಾಹ ಮಾಡಬೇಕೆ ಬೇಡವೆ? ವಿಧವೆಯರು ತಲೆ ಬೋಳಿಸುವುದು ಶಾಸ್ತ್ರ ಸಮ್ಮತವೆ ಇಲ್ಲ ಧರ್ಮಶಾಸ್ತ್ರದ ವಿರುದ್ಧವೆ? ಗಂಡಸರು ಕೂದಲನ್ನು ಬೆಳೆಸಬೇಕೆ ಇಲ್ಲ ಕತ್ತರಿಸಬೇಕೆ? ಸ್ತ್ರೀಯರಿಗೆ ಶಿಕ್ಷಣ ಕೊಡಿಸಬೇಕೆ ಬೇಡವೆ? ಅನ್ನುವ ಪ್ರಶ್ನೆಗಳ ಚರ್ಚೆಯಲ್ಲೇ ಇವರ ಸಾಕಷ್ಟು ಸಮಯ ಹಾಳಾಗುತ್ತಿತ್ತು. ದಲಿತರ ಹಿತಕ್ಕೂ ಈ ಚರ್ಚೆಗೂ ಯಾವುದೇ ಸಂಬಂಧವಿರಲಿಲ್ಲ. ಬ್ರಾಹ್ಮಣ ಸ್ತ್ರೀಯರ ಪುನರ್ವಿವಾಹ ಆಗಲಿ ಆಗದಿರಲಿ, ವಿಧವೆಯರ ತಲೆ ಬೋಳಿಸುವ ಪದ್ಧತಿ ನಿಂತರೂ ದಲಿತರ ರೂಢಿ ಪರಂಪರೆಗಳ ಮೇಲೆ ಅದರಿಂದ ಯಾವುದೇ ಪರಿಣಾಮವಾಗುವಂತಿರಲಿಲ್ಲ.

ಇದು ರಾ. ರಾನಡೆ, ಅಗರಕರ್‌ರಂತಹ ಮಾಹಾರಾಷ್ಟ್ರದ ಬ್ರಾಹ್ಮಣ ಸುಧಾರಕರ ಅಸ್ಪೃಶ್ಯತೆ ನಿವಾರಣೆಯದಾರಿ ಹಾಗೂ ಇತಿಮಿತಿಗಳ ಬಗ್ಗೆಯಾಯಿತು. ಇತ್ತೀಚೆಗೆ ಹಿಂದೂ ಸಭೆಯವರು ತಮ್ಮ ಪ್ರಯತ್ನ ಜೋರಾಗಿ ನಡೆಸಿದ್ದಾರೆ. ಆದರೆ ರಾನಡೆ, ಅಗರಕರರಲ್ಲಿ ಕಾಣುತ್ತಿದ್ದ ಸುಧಾರಣೆಯ ಕಳಕಳಿ ಮಹಾರಾಷ್ಟ್ರದ ಹಿಂದು ಶುದ್ಧಿ ಸಂಘಂಟನೆಗಳಲ್ಲಿ ಕಾಣುತ್ತಿಲ್ಲ. ಆತ್ಮಶುದ್ಧಿಗಿಂತ ಪರಧರ್ಮೀಯರ ಶುದ್ಧಿ ಹಾಗೂ ಸಂಘಟನೆಗಿಂತ ಹಿಂದೂಧರ್ಮದಲ್ಲಿ ಜನಸಂಖ್ಯೆ ಹೆಚ್ಚಿಸುವುದರೆಡೆ ಅವರ ಗಮನವಿದೆ. ನಿಜವಾದ

ಸಾಮರ್ಥ್ಯ ಅಂಕಿಅಂಶಗಳಲ್ಲಿದೆ ಅನ್ನುವುದಾದರೆಇಂದುಕೂಡ ಹಿಂದೂಗಳೆ ಬಹುಸಂಖ್ಯಾತರಾಗಿದ್ದಾರೆ. ಆದರೆ ಅವರಲ್ಲಿ ಸಂಘಟನೆ ಇಲ್ಲದ ಕಾರಣ ಯಾವ ಉಪಯೋಗಕ್ಕೂ ಬಾರದವರಾಗಿದ್ದಾರೆ. ಈ ವಿಷಯ ಅವರಿಗೆ ಗೊತ್ತಿದ್ದರೂ ಅವರದನ್ನು ಕಡೆಗಣಿಸುತ್ತಿದ್ದಾರೆ. ಇವರಲ್ಲಿರುವ ಅನೇಕ ನಾಯಕರು ಗಾಳಿ ಬಂದಲ್ಲಿ ತೂರಿಕೊಳ್ಳುತ್ತಿದ್ದಾರೆ. ಇಂತಹವರನ್ನು ನಂಬಿಕೊಂಡು ಅಸ್ಪೃಶ್ಯತೆಯಿಂದ ನಮ್ಮ ಬಿಡುಗಡೆಯಾಗುವುದಿಲ್ಲ ಎಂದು ದಲಿತರಿಗನಿಸಿದಲ್ಲಿ ತಪ್ಪೇನು?

ಒಂದು ಮಾನವ ಜಾತಿಯನ್ನು ಸ್ವಕೀಯರ ಗುಲಾಮಗಿರಿಯಿಂದ ಬಿಡುಗಡೆ ಮಾಡಲು ಮತ್ತೊಂದು ಮಾನವ ಜಾತಿಯು ಮನಸಾರೆ ಪ್ರಯತ್ನಿಸಿರುವುದು ಜಗತ್ತಿನಲ್ಲಿ ಒಂದೇ ಒಂದು ಉದಾಹರಣೆ ಸಿಗುತ್ತದೆ. ಅದು ನೀಗ್ರೋಗಳನ್ನು ಗುಲಾಮಗಿರಿಯಿಂದ ಮುಕ್ತ ಮಾಡಲು ಶ್ರಮಿಸಿದ ಬಿಳಿಯ ಅಮೇರಿಕನ್ನರು. ಅಣ್ಣ ತಮ್ಮನೊಡನೆ, ಮಗಳು ತಂದೆಯೊಡನೆ, ಗೆಳೆಯ ಗೆಳೆಯನೊಡನೆ ನೀಗ್ರೋಗಳಿಗಾಗಿ ಹೋರಾಡಿದರು. ಜಾತಿಭೇದವನ್ನು ಬೇರುಸಹಿತ ಕಿತ್ತೆಸೆಯಲು ಹಾಗೂ ಅಸ್ಪೃಶ್ಯತೆಯ ಪಾಪವನ್ನು ತೊಡೆದು ಹಾಕಲು ಒಬ್ಬ ಧರ್ಮವೀರನು ಭಾರತದಲ್ಲಿ ಜನಿಸಿರುವುದೇ ಆದರೆ ಆತ ಕೇವಲ ಗೌತಮ ಬುದ್ಧ ಒಬ್ಬನೆ. ಆದರೆ ಅಮೇರಿಕಾದಂತಹ ಪ್ರಸಂಗ ಹಾಗೂ ಗೌತಮ ಬುದ್ಧನ ಜನ್ಮದಂತಹ ಘಟನೆಗಳು ಮತ್ತೆ ಮತ್ತೆ ಘಟಿಸಲಾರವು. ಅಂತಹ ಹುಚ್ಚು ಆಸೆಯ ಮೇಲೆ ನಾವು ಬದುಕಲಾರೆವು ಕೂಡ.

ನಾವು ದಬ್ಬಾಳಿಕೆ ನಡೆಸುತ್ತೇವೆ, ನಮ್ರತೆಯಿಂದ ತಲೆಬಾಗಿ ನಮಗೆ ಬೇಕಿರುವುದನ್ನು ಬೇಡುವುದಿಲ್ಲ ಹಾಗಾಗಿ ಅಸ್ಪೃಶ್ಯತೆ ನಿವಾರಣೆ ಸಮರ್ಥಿಸುವ ಜನ ಕೂಡ ಅಸ್ಪೃಶ್ಯತೆ ನಿವಾರಣೆಯನ್ನು ವಿರೋಧಿಸುತ್ತಾರೆ. ಅನ್ನುವ ಮತ್ತೊಂದು ಆರೋಪ ನಮ್ಮ ಮೇಲಿದೆ. ಹೀಗನ್ನುವವರಿಗೆ ತಮ್ಮ ಬಗ್ಗೆಯೇ ನಾಚಿಕೆಯೆನಿಸಬೇಕು. ದಲಿತರಷ್ಟು ನಮ್ರ ಹಾಗೂ ಕೈಲಾಗದ ಸಮಾಜ ಜಗತ್ತಿನಲ್ಲಿ ಬೇರೆಯಾವುದಿದೆ? ನೂರಾರು ವರ್ಷಗಳಿಂದ ನಾವು ನಮ್ರರಾಗಿ ವರ್ತಿಸಲಿಲ್ಲವೆ? ಕಲ್ಲು ಕೂಡ ಕರಗುವಂತಹ ದೀನ ಹಾಗೂ ನಮ್ರತೆಯಲ್ಲಿ ನಾವು ಬದುಕಲಿಲ್ಲವೆ? ಈಗಲಾದರೂ ನಮಗೆ ನಮ್ರತೆಯ ಹಾಗೂ ವಿನಯತೆಯ ಪಾಠ ಕಲಿಸುವುದನ್ನು ನಿಲ್ಲಿಸಿ. ಇವುಗಳೆಲ್ಲವನ್ನು ಮೇಲ್ಜಾತಿಯವರಿಗೆ ಹೇಳಿಕೊಡಿ. ವಿನಂತಿ, ಅರ್ಜಿ, ಶಿಷ್ಟಮಂಡಳಿ ಇವುಗಳ ಸಹಾಯದಿಂದ ಕಳೆದುಕೊಂಡ ಸ್ವಾತಂತ್ರ್ಯ ಹಾಗೂ ಕಸಿದುಕೊಂಡಿರುವ ನಮ್ಮ ಹಕ್ಕುಗಳನ್ನು ಮರಳಿ ಪಡೆಯುವಂತಿದ್ದಿದ್ದರೆ ಈಗಿರುವ ಪಕ್ಷದ ಜನ ಈ ದೇಶದ ರಾಜರಾಗಿರುತ್ತಿದ್ದರು ಹಾಗೂ ಹಿಂದೂ ಧರ್ಮ ದಲಿತರ ಮನೆಯಲ್ಲಿ ಕಾಲುಮುರಿದು ಬಿದ್ದಿರುತ್ತಿತ್ತು! ದಬ್ಬಾಳಿಗೆ ಮಾಡುವ ಇಲ್ಲವೆ ಆಢ್ಯತೆಯಿಂದ ನಡೆದುಕೊಳ್ಳುವ ಅಭ್ಯಾಸ ನಮಗಿಲ್ಲ! ದಿನವೆಲ್ಲ ಮೈಮುರಿದು ದುಡಿದಾಗ ಎರಡು ತುತ್ತು ಹೇಗೆ ಸಿಕ್ಕೀತು ಅನ್ನುವ ಪ್ರಶ್ನೆಯೇ ನಮ್ಮ ದಿನದ ಸಂಗಾತಿ! ಆದರೆ ಅನ್ನಕಿಂತಲೂ ಮನುಷ್ಯತ್ವ ಶ್ರೇಷ್ಠ ಎಂದು ತಿಳಿದು ನಾವು ಇದನ್ನೆಲ್ಲ ಮಾಡುತ್ತಿದ್ದೇವೆ. ತಟ್ಟದೆ ಯಾರೂ ತಮ್ಮ ಬಾಗಿಲು ತೆರೆಯುವುದಿಲ್ಲ ಹಾಗೂ ಕಸಿದುಕೊಳ್ಳದೆ ಮನುಷ್ಯತ್ವದಂತಹ ಸಾಧಾರಣ ಹಕ್ಕುಗಳನ್ನೂ ನೀವುಗಳು ಕೊಡುವುದಿಲ್ಲ.

ಮೂರನೆಯ ಆರೋಪಕ್ಕೆ ಉತ್ತರಿಸುವ ಮುನ್ನ ನಾನು ನಿಮಗೆ ಹೇಳುವುದಿಷ್ಟೆ, ಅಸ್ಪೃಶ್ಯತಾ ನಿವಾರಣೆಯ ಈ ಚಳುವಳಿಯು ಕೇವಲ ದಲಿತರಿಗೆ ಮಾತ್ರ ಸೀಮಿತವಲ್ಲ. ಇಡೀ ಹಿಂದೂ ಸಮಾಜದ ಈ ಹುಟ್ಟು ಅಸ್ಪೃಶ್ಯತೆಯನ್ನು ನಾಶ ಮಾಡುವುದೇ ನಮ್ಮ ಈ ಚಳುವಳಿಯ ಮುಖ್ಯ ಉದ್ದೇಶ. ಈ ಉದ್ದೇಶ ಸಫಲವಾಗುವುದು ಸುಲಭವಲ್ಲ ಅನ್ನುವುದು ನಮಗೆ ಗೊತ್ತಿದೆ. ಆದರೆ ಹಿಂದೂ ಸಮಾಜಕ್ಕಂಟಿಕೊಂಡಿರುವ ಈ ರೋಗವನ್ನು ನಾಶಮಾಡುವ ಕಳಕಳಿ ಯಾರಿಗಾದರೂ ಇರುವುದಾದರೆ ಅದು ಕೇವಲ ನಮಗೆ ಮಾತ್ರ. ಬ್ರಾಹ್ಮಣರನ್ನು ಬಿಟ್ಟರೆ ಉಳಿದ ಎಲ್ಲ ಜಾತಿಯವರಿಗೆ ಈ ಸಾಮಾಜಿಕ ಹಾಗೂ ಧಾರ್ಮಿಕ

ಅಸ್ಪೃಶ್ಯತೆಯ ಧಗೆ ತಗುಲಿದೆ ಹಾಗೂ ತಗಲುತ್ತಿದೆ. ಮುಖ್ಯವಾಗಿ ಬ್ರಾಹ್ಮಣರು ಹಾಗೂ ಅಬ್ರಾಹ್ಮಣರಲ್ಲೇ ಅಸ್ಪೃಶ್ಯತೆ ಹಾಗೂ ಉಚ್ಚನೀಚತೆಯ ಭಾವನೆಗಳಿವೆ. ಚಿತ್ಪಾವನ ಬ್ರಾಹ್ಮಣ ಪೂಜೆಗೆ ಕುಳಿತಾಗ ಪಳಶೀಕರ ಬ್ರಾಹ್ಮಣ ಎದುರಾದರೆ ಮೈಲಿಗೆ ಅನಿಸುತ್ತದೆ. ಕಾಯಸ್ಥ ಜಾತಿಯ ಹೆಣ್ಣು ಮುಟ್ಟಿದರೆ ತನ್ನ ಬಟ್ಟೇ ಮೈಲಿಗೆಯಾಗುತ್ತದೆ ಅಂದುಕೊಂಡು ಆಕೆಗೆ ಕುಂಕುಮ ಕೊಡುವಾಗ ಬ್ರಾಹ್ಮಣ ಹೆಣ್ಣು ಕುಂಕುಮದ ಬಟ್ಟಲನ್ನು ನೆಲದ ಮೇಲಿಡುತ್ತಾಳೆ. ಈ ರೀತಿ ಮೇಲ್ಜಾತಿಯವರಲ್ಲೇ ಅಸ್ಪೃಶ್ಯತೆ ನೆಲೆಸಿದೆಯಾದರೂ ದಲಿತರಲ್ಲಿ ಅಸ್ಪೃಶ್ಯತೆ ಸಾಕಷ್ಟು ಪ್ರಮಾಣದಲ್ಲಿದೆ ಅನ್ನುವುದೇ ವ್ಯತ್ಯಾಸ. ಎಲ್ಲರೊಡನೆ ಒಂದಾಗಿಯೂ ನಾವು ಶೂದ್ರತೆಯಲ್ಲಿದ್ದರೂ, ಮುಸಲ್ಮಾನಾದಿ ಪರಧರ್ಮೀಯರಷ್ಟು ನಾವು ಸ್ಪಶ್ಯರಾದರೂ ಅಸ್ಪೃಶ್ಯತೆಯ ಭಾವನೆತೊಲಗುವುದಿಲ್ಲ. ಅದನ್ನು ಹೊಡೆದೋಡಿಸುವುದಾದರೆ ರೋಟಿ–ಬೇಟಿ ವ್ಯವಹಾರ (ಇತರ ಜಾತಿಯವರೊಡನೆ ಕುಳಿತು ಊಟ ಮಾಡುವುದು–ಜಾತಿಯ ಹೊರಗಿನಿಂದ ಹೆಣ್ಣು ತರುವುದು ಹಾಗೂ ಹೆಣ್ಣುಕೊಡುವ ವ್ಯವಹಾರ) ಆರಂಭವಾಗಲೇ ಬೇಕು. ಇಲ್ಲದಿದ್ದರೆ ಅಸ್ಪೃಶ್ಯತೆಯಂತಹ ರೋಗ ನಾಶವಾಗಲಾರದು. ಈ ರೋಗ ಬೇರು ಸಹಿತ ನಾಶವಾಗಬೇಕೆಂದೇ ನಾವು ಕಷ್ಟಪಡುತ್ತಿದ್ದೇವೆ. ಕೇವಲ ಸ್ಪರ್ಶಪಾವನವೇ ಆಗಬೇಕೆಂದಿದ್ದರೆ ಯಾವತ್ತೋ ಪರಧರ್ಮವನ್ನು ಸ್ವೀಕರಿಸಿ ನಮಗೆ ಆ ಸನ್ಮಾನ ಸಿಗುತ್ತಿತ್ತು, ಇಷ್ಟೊಂದು ಕಷ್ಟಪಡುವ ಅಗತ್ಯವೂ ಇರುತ್ತಿರಲಿಲ್ಲ.

# ೨೩.

# ಇದೇ ಜನ್ಮದಲ್ಲಿ ಎಲ್ಲ ರೀತಿಯಿಂದಲೂ ಏಳಿಗೆಯಾಗಬೇಕು

ವಾಲಪಾಖಾಡಿಯಲ್ಲಿ ೨ ನೆಯ ಫೆಬ್ರುವರಿ ೧೯೨೯ ರಂದು ರಾತ್ರಿ ಡಾ. ಬಾಬಾಸಾಹೇಬ್ ಅಂಬೇಡ್ಕರರು ಅಧ್ಯಕ್ಷತೆಯಲ್ಲಿ ಮರಾಠಿ, ಗುಜರಾತಿ, ಹಾಗೂ ದಲಿತರ ದೊಡ್ಡ ಸಭೆ ಜರುಗಿತು.'ಬಹಿಷ್ಕೃತ ಭಾರತ' 'ಹಾಗೂ ಸಮತಾ ಪತ್ರಿಕೆಗಳ ಬಗ್ಗೆ ಪ್ರಸಾರ ಮಾಡುವುದು, ದಲಿತರಲ್ಲಿ ಜಾಗೃತಿ ಮೂಡಿಸುವುದು, ತಾ.೯–೧೦ ಮಾರ್ಚ್‌ನಂದು ಮುಂಬಯಿಯಲ್ಲಿ ಜರುಗಲಿರುವ ಮಾಂಗ್ ವತನದಾರರ ಪರಿಷತ್ತಿಗೆ ಸಹಾಯ ಮಾಡುವಂತಹ ಮಸೂದೆಗಳು ಮಂಜೂರಾದವು. ದಲಿತೋದ್ಧರಕರಾದ ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ,

'ತಾವಿರುವ ಪರಿಸ್ಥಿಯಲ್ಲೇ ಬದುಕುವುದನ್ನು ದಲಿತರು ಬಿಡಬೇಕು, ಹಾಗೂ ಇತರ ಸಮಾಜದ ಜನರು ಪಡೆಯುವ ವಿದ್ಯೆ, ಅಧಿಕಾರ, ಹಾಗೂ ಸಂಪತ್ತನ್ನು ಪಡೆಯಲು ಪ್ರಯತ್ನಿಸಬೇಕು. ಮುಂದಿನ ಜನ್ಮದಲ್ಲಿ ನಮ್ಮ ಉದ್ಧಾರವಾದೀತು ಅನ್ನುವ ತಿರುಳಿಲ್ಲದ ಮಾತಿನಲ್ಲಿ ನಂಬಿಕೆಯಿಡದೆ ಇದೇ ಜನ್ಮದಲ್ಲಿ ಇದೇ ಕಾಲದಲ್ಲಿ ತನ್ನ ಸರ್ವಾಂಗೀಣ ಉನ್ನತಿಯನ್ನು ಮಾಡಿಕೊಂಡು ಮಾನವ ಸಮಾಜದಲ್ಲಿ ಸಮಾನತೆಯ ದರ್ಜೆ ಸ್ಥಾಪಿಸಿಕೊಂಡು ಹಿಂದೂ ಸಮಾಜವನ್ನು ಅಸ್ಪೃಶ್ಯತೆಯ ಪಾಪದಿಂದ ಬಿಡುಗಡೆ ಮಾಡಬೇಕು' ಅಂದರು. ಸಭೆಯಲ್ಲಿ ಪ್ರಧಾನ ಬಂಧುಗಳು, ಕದ್ರೇಕರ್, ಗಣಪತ ಬುವಾ ಜಾಧವ್, ಗಂಗಾವಣೆ ಹಾಜರಿದ್ದರು.

# ೨೪.

# ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ದಬ್ಬಾಳಿಕೆ ನಡೆಸದೆ ಬೇರೆ ಮಾರ್ಗವಿಲ್ಲ

೨೩ನೆಯ ಮಾರ್ಚ ೧೯೨೯ರಂದು ಬೆಳಗಾವಿಯಲ್ಲಿ ಸಾಯಂಕಾಲ ೪ ಘಂಟೆಗೆ ಬೆಳಗಾಂವ್ ಜಿಲ್ಲಾ ಬಹಿಷ್ಕೃತ ವರ್ಗದ ಸಾಮಾಜಿಕ ಪರಿಷತ್ತನ್ನು ಆಯೋಜಿಸಲಾಗಿತ್ತು! ಅದರಲ್ಲಿ ಅಲ್ಲಿಯ ಅಧ್ಯಕ್ಷರಾದ ದಲಿತರ ಸುಪ್ರಸಿದ್ಧ ನಾಯಕರಾದ ಶ್ರೀ. ಸೀತಾರಾಮ್, ನಾಮದೇವ್, ಶಿವತರ್ಕರ್ ಅವರು ಶ್ರೀ. ಕೊಂಡದೇವ್ ಶ್ರೀರಾಮ್ ಖೋಲವಡೀಕರ್ ಅವರೊಡನೆ ೨೨-೩-೧೯೨೯ರಂದು ಬೆಳಗಿನ ಹತ್ತೂಕಾಲಿನ ಮೇಲ್‌ನಲ್ಲಿ ಬೆಳಗಾವಿಗೆ ಬಂದಿಳಿದರು. ಅವರನ್ನು ಸ್ವಾಗತಿಸಲು ಸ್ವಾಗತ ಕಮಿಟಿಯ ಅಧ್ಯಕ್ಷರಾದ ಶ್ರೀ. ಡಿ. ಆರ್. ಇಂಗಳೆಯವರು ಕೆಲವು ದಲಿತರೊಡನೆ ಹೋಗಿದ್ದರು. ಶಿವತರಕರ್ ಅವರಿಗೆ ಹೂವಿನ ಹಾರ ಹಾಕಿ ಸ್ವಾಗತಿಸಿದ ಮೇಲೆ ಶೃಂಗರಿಸಲಾಗಿದ್ದ ಗಾಡಿಯೊಂದರಲ್ಲಿ ಕೂರಿಸಿ ಶ್ರೀ. ಖೋಲವಡಿಕರರೊಡನೆ ಮೆರವಣಿಗೆ ಮಾಡಿದರು. ಮೆರವಣಿಗೆಯು ಕಲಭಾಟ್‌ರಸ್ತೆ, ಲಷ್ಕರ್, ಹಜಾಮ್‌ಗಲ್ಲಿ, ಕಂಗರಾಳ್ ಗಲ್ಲಿ, ದರಬಾರ್ ಗಲ್ಲಿ, ಹಾಗೂ ಚಬಾಟ್‌ಗಲ್ಲಿಯಿಂದ ಹಾದು ಕರ್ನಾಟಕ ಬಹಿಷ್ಕೃತ ವಿದ್ಯಾರ್ಥಿ ಆಶ್ರಮದವರೆಗೆ ತರಲಾಯಿತು. ಅಲ್ಲಿ ದಲಿತ ಜಾತಿಯ ಹುನರ್ಗೆಯ ಬ್ಯಾಂಡಿನವರು ತಮ್ಮ ವಾದನದಿಂದ ಎಲ್ಲರ ಮನಸೂರೆಗೊಂಡರು, ಅಲ್ಲಿಂದ ಮೆರವಣಿಗೆಯು ೧೧ ಗಂಟೆಗೆ ದಲಿತರ ಬೋರ್ಡಿಂಗ್ ಹೌಸ್ ಹತ್ತಿರ ಮುಗಿಯಿತು. ಸಾಯಂಕಾಲ ೬ ಘಂಟೆಗೆ ಶ್ರೀ. ಡಿ. ಆರ್. ಕಾಂಬಳೆಯವರ ಮನೆಯಲ್ಲಿ ಅಧ್ಯಕ್ಷರಿಗಾಗಿ ಚಹಾ ಪಾರ್ಟಿಯೊಂದನ್ನು ಆಯೋಜಿಸಲಾಗಿತ್ತು.

೨೩ನೆಯ ಮಾರ್ಚ್ ೧೯೨೯ರಂದು ಶನಿವಾರ ಪರಿಷತ್ತಿನ ಕೆಲಸ ಬೆಳಗಾವಿಯ ವಿದ್ಯಾರ್ಥಿ ಆಶ್ರಮದ ಮಾವಿನ ತೋಪಿನಲ್ಲಾರಂಭವಾಯಿತು.

ಮೊದಲಿಗೆ ವಿಷಯ ನಿಯಾಮಕ ಮಂಡಳದ ಜನ ಮಸೂದೆಗಳನ್ನು ತಯಾರಿಸಿಕೊಂಡರು. ಈ ಸಂದರ್ಭದಲ್ಲಿ ದಲಿತರ ಅಭ್ಯುದಯಕ್ಕಾಗಿ ನೇಮಿಸಲಾಗಿದ್ದ ಸ್ಟಾರ್ಟ್ ಕಮಿಟಿಯ ಸಭಾಸದರಾದ ಡಾ. ಬಾಬಾಸಾಹೇಬ್. ಅಂಬೇಡ್ಕರ್, ಡಾ. ಸೋಲಂಕಿ, ಮೆಸ್ಸರ್ಸ್ ಜಾನವೇಕರ್, ದೇಶಪಾಂಡೆ, ರಾವಸಾಹೇಬ ಚಿಕ್ಕೋಡಿ, ರಾವಸಾಹೇಬ್ ಥೋರಾತ್, ಹಾಗೆಯೇ ಬೆಳಗಾಂವನ ಮೇಲ್ಜಾತಿಯ ನಾಯಕರುಗಳಾದ ರಾ. ಮರಾಠೆ, ರಾ. ಗಜೇಂದ್ರಗಡಕರ್, ನಾಗಗೌಡಾ ಇವರುಗಳಲ್ಲದೆ ದಲಿತರ ನಾಯಕರುಗಳಾದ ರಾ. ಕೊಂಡದೇವ್ ಖೋಲವಡೀಕರ್, ದತ್ತೋಪಂತ ಪವಾರ್, ಡಾ. ರಮಾಕಾಂತ್ ಕಾಂಬಳೆ, ರಾ. ಯಶವಂತವಾರ್ ಪೋಳ್, ರಾಮಪ್ಪಾ ಕಾಂಬಳೆ ಹಾಗೂ ಧರ್ಮಣ್ಣಾ ಸಾಂಬ್ರಾಣಿ ಹಾಜರಿದ್ದರು.

(೨) ಮೊದಲಿಗೆ ದೇವರನಾಮ ಹಾಗೂ ಅಧ್ಯಕ್ಷರ ಸ್ವಾಗತದ ಹಾಡುಗಳಾದವು. ನಂತರದ ಸ್ವಾಗತಾಧ್ಯಕ್ಷರ ಭಾಷಣ ಪ್ರತಿಪಕ್ಷಕ್ಕೆ ಸರಿಯಾಗಿ ಉತ್ತರ ಕೊಡುವಂತಹ ಭಾಷಣವಾಗಿತ್ತು. ಈ ಭಾಷಣ ಜನರ ಮನಸ್ಸಿನ ಮೇಲೆ ಸಾಕಷ್ಟು ಪರಿಣಾಮ ಬೀರಿತು. ಮೇಲ್ಜಾತಿಯವರು ಕೂಡ ಈ ಬಾಷಣದಿಂದ ಸಾಕಷ್ಟು ಕಲಿತರಾದ್ದರಿಂದ

ಅವರ ಮನಸ್ಸಿನ ಮೇಲೂ ಈ ಭಾಷಣ ಒಳ್ಳೆಯ ಪರಿಣಾಮ ಬೀರಿರಬಹುದು. ಅಧ್ಯಕ್ಷರ ಭಾಷಣ ಮುಗಿದ ಮೇಲೆ ಸ್ಟಾರ್ಟ್ ಕಮಿಟಿಯ ಎಲ್ಲ ಸದಸ್ಯರಿಗೆ, ಡಾ. ಅಂಬೇಡ್ಕರ್, ಸೋಳಂಕಿ, ಅಯ್ಯರ್ ಹಾಗೂ ಅಧ್ಯಕ್ಷರಿಗೂ ಚಹಾ ಪಾರ್ಟಿ ಕೊಡಲಾಯಿತು. ನಂತರ ಅಧ್ಯಕ್ಷರ ವಿನಂತಿ ಹಾಗೂ ಎಲ್ಲ ಸಭೀಕರ ವಿನಂತಿಯನ್ನು ಮನ್ನಿಸಿ ದಲಿತೋದ್ಧಾರಕರು ಹಾಗೂ ದಲಿತರ ನಾಯಕರಾದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಮಾತನಾಡಲು ಎದ್ದು ನಿಂತರು. ಚಪ್ಪಾಳೆಯ ಕರತಾಡನದಲ್ಲಿ ಅವರು ತಮ್ಮ ಭಾಷಣವನ್ನಾರಂಭಿಸಿದರು.

ಅಧ್ಯಕ್ಷರೆ ಹಾಗೂ ನನ್ನ ಮೆಚ್ಚಿನ ಸಭಿಕರೆ,

ಸಮಯ ಸಾಕಷ್ಟಾಗಿದೆ, ಮಳೆ ಬೀಳುವ ಸಾಧ್ಯತೆಯಿದೆ, ಅಷ್ಟೇಯಲ್ಲದೆ ನನ್ನ ಹಾಗೂ ನಿಮ್ಮ ಮಾತೃಭಾಷೆ ಭಿನ್ನವಾಗಿದೆ. ಭಾಷೆಯ ತೊಂದರೆಯಿಂದಾಗಿ ನಿಮಗೆ ನಾನು ಹೇಳಿದ್ದು ಎಷ್ಟು ಅರ್ಥವಾಗುತ್ತದೆ ಅನ್ನುವುದೇ ಅನುಮಾನ, ನಾನು ನನ್ನ ಮಾತನ್ನು ಸ್ವಲ್ಪದರಲ್ಲೇ ಹೇಳಿ ಮುಗಿಸುತ್ತೇನೆ.

ನಾವುಗಳು ಬೇರೆಬೇರೆ ಜಾಗಗಳಲ್ಲಿ ಸಭೆಗಳನ್ನು ಆಯೋಜಿಸುತ್ತೇವೆ, ಭಾಷಣ ಮಾಡುತ್ತೇವೆ ಹಾಗೂ ಮಸೂದೆಗಳನ್ನು ಮಂಡಿಸುತ್ತೇವೆ. ದೊಡ್ಡದೊಡ್ಡ ಭಾಷಣಕಾರರನ್ನು ಕರೆಯಿಸಿ ಭಾಷಣಗಳನ್ನು ಮಾಡಿಸುತ್ತೇವೆ. ನನ್ನ ದೃಷ್ಟಿಯಲ್ಲಂತೂ ಇದು ಅಸ್ಪೃಶ್ಯತೆಯನ್ನು ತೊಲಗಿಸುವ ಮಾರ್ಗವಲ್ಲ. ನಮ್ಮ ಮೇಲಾಗುತ್ತಿರುವ ಅನ್ಯಾಯ ಅತ್ಯಾಚಾರಗಳ ಬಗ್ಗೆ ಮಸೂದೆ ತಯಾರಿಸಿ ಸರ್ಕಾರಕ್ಕೆ ಕಳುಹಿಸಿದೆವು ಅಂದಿಟ್ಟುಕೊಳ್ಳಿ, ಒಂದು ಪಕ್ಷ ಸರ್ಕಾರ ನಮ್ಮ ಅಸ್ಪೃಶ್ಯತೆಯನ್ನು ನಾಶ ಮಾಡಲು ಕಾನೂನಿನ ಮೂಲಕ ನಮಗಾಗಿ ಸಾರ್ವಜನಿಕ ಭಾವಿ, ಕೆರೆ, ಚಹಾದ ಅಂಗಡಿ, ದೇವಾಲಯಗಳನ್ನು ತೆರವುಮಾಡಿಕೊಟ್ಟರೂ ಆ ಕಾನೂನನ್ನು ನಾವೇ ಜಾರಿಗೆ ತರದೆ ಬೇರೆ ಮಾರ್ಗವಿಲ್ಲ.  ನಾವು ಹಾಗೆ ಜಾರಿಗೆ ತರಲು ಅಸಮರ್ಥರಾಗಿದ್ದರೆ ಎಷ್ಟೇ ಒಳ್ಳೆಯ ಕಾಯಿದೆಗಳು ಬಂದರೂ ಉಪಯೋಗವಿಲ್ಲ.

ನಮ್ಮ ಅಸ್ಪೃಶ್ಯತೆಯನ್ನು ನಾವೇ ನಾಶ ಮಾಡಬೇಕು! ಆ ದೃಷ್ಟಿಯಲ್ಲಿ ನಾವು ಪ್ರಬಲ ಹಾಗೂ ದಿಟ್ಟರಾದರೆ ಮಾತ್ರ ನಮ್ಮ ಅಸ್ಪೃಶ್ಯತೆ ನಾಶವಾದೀತು. ಇದಕ್ಕಾಗಿ ನಾವು ಸಾಕಷ್ಟು ಕಷ್ಟಪಡಬೇಕಿದೆ ಹಾಗೂ ಅಗತ್ಯ ಬಿದ್ದರೆ ಮೇಲ್ವರ್ಗದವರೊಡನೆ ಒಂದು ಕೈ ನೋಡಿಕೊಳ್ಳುವ ಪ್ರಸಂಗ ಬಂದರೂ ಧೈರ್ಯಗೆಡದೆ ಮುನ್ನಡೆಯಬೇಕಿದೆ. ದಲಿತ ಸಮಾಜ ಮೇಲ್ವರ್ಗದ ಸಮಾಜದೊಡನೆ ಸಹಕಾರ್ಯದಿಂದ ವರ್ತಿಸದೆ ಬೇರೆ ಮಾರ್ಗವಿಲ್ಲ. ದಲಿತ ಸಮಾಜ ಪರಾವಲಂಬಿಯಾಗಿದೆ, ಅದು ತಪ್ಪು ಅಂತ ಕೂಡ ನಾನು ಹೇಳುತ್ತಿಲ್ಲ. ದಲಿತ ಸಮಾಜ ಮೇಲ್ಜಾತಿಯವರೊಡನೆ ಸಹಕರಿಸದೆ ಬದುಕುವುದು ಕಷ್ಟ! ಇಷ್ಟೊಂದು ತಾಕತ್ತಿರುವ ಸಮಾಜದ ವಿರುದ್ಧ ಅಸಹಕಾರ ಘೋಷಿಸಿದರೆ ನಮ್ಮ ಕೆಲಸವಾಗುವುದಾದರೂ ಹೇಗೆ? ಎಂದು ಕೆಲವು ಚಿಂತಿಸುತ್ತಾರೆ. ಆದರೆ ಸ್ವಾವಲಂಬನೆಯ ದಾರಿಯೊಂದನ್ನು ಬಿಟ್ಟರೆ ಉಳಿದೆಲ್ಲ ದಾರಿಗಳು ಘಾತಕ ಹಾಗೂ ಉಪಯೋಗವಿಲ್ಲದ ದಾರಿಗಳಾಗಿರುವುದರಿಂದ ಆ ದಾರಿಗೆ ಹೋಗುವುದೇ ಬಿಟ್ಟುಬಿಡಬೇಕು ಅನ್ನುವುದನ್ನು ದಲಿತ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಅರ್ಥಮಾಡಿಕೊಳ್ಳಬೇಕು.

ದಲಿತ ಸಮಾಜದ ಮನುಷ್ಯ ಹೇಗೇ ಇರಲಿ, ಆತ ಎಷ್ಟೇ ಸರ್ವಗುಣ ಸಂಪನ್ನನಿರಲಿ! ಎಷ್ಟೇ ದೊಡ್ಡ ವಿದ್ವಾಂಸನಿರಲಿ! ಆತ ಕೇವಲ ಒಂದು ವಿಶಿಷ್ಟ ಜಾತಿಯಲ್ಲಿ ಹುಟ್ಟಿರುವುದರಿಂದ ಆತನ ಗುಣಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗಾಗಿ ನಾವು ನಮ್ಮ ಹಕ್ಕುಗಳನ್ನು ಪಡೆಯಲು ದಬ್ಬಾಳಿಕೆಯ ಧೋರಣೆ ಸ್ವೀಕರಿಸಲೇ ಬೇಕಿದೆ ಹಾಗೂ ಸ್ವೀಕರಿಸದೆ  ಈ ನೂಕುನುಗ್ಗಲಿನ ಜೀವನದಲ್ಲಿ ಬದುಕುವುದು ಕಷ್ಟ.

ನಮ್ಮ ಮೇಲಾಗುತ್ತಿರುವ ಅನ್ಯಾಯವನ್ನು ದೂರ ಮಾಡಬೇಕಾದರೆ ನಮಗಿರುವ ಎರಡನೆಯ

ಉಪಾಯವೆಂದರೆ ಸರ್ಕಾರದಲ್ಲಿ ಅಧಿಕಾರ ಸ್ಥಾನ ಗಳಿಸುವುದು! ವರ್ಣಾಶ್ರಮದ ಚೌಕಟ್ಟಿನಿಂದ ನಮಗೆಂದೂ ಹೊರಗೇ ಉಳಿದುಕೊಳ್ಳಬೇಕಾಗುತ್ತದೆ. ಈ ಚೌಕಟ್ಟನ್ನು ಮುರಿದು ಒಳಗೆ ಹೋಗಲು ರಾಜಕೀಯ ಅಧಿಕಾರ ನಮಗೆ ಬೇಕೆ ಬೇಕು. ಅದಿಲ್ಲದೆ ಸಮಾಜದಲ್ಲಿ ನಾವು ವರ್ಚಸ್ಸು ಸಾಧಿಸಲಾರೆವು. ಮಹಾರಾಷ್ಟ್ರದಲ್ಲಿ ಇಂದು ಬ್ರಾಹ್ಮಣರ ವರ್ಚಸ್ಸೇಕೆ ಇಷ್ಟೊಂದಿದೆ? ಅನುವುದಕ್ಕೆ ಉತ್ತರ ಒಂದೆ ಬೇರೆ ಏನೇ ಇರಲಿ ಇರದಿರಲಿ ಅವರ ಕೈಯಲ್ಲಿ ರಾಜಕೀಯ ಅಧಿಕಾರವಿದೆ ಅನ್ನುವುದನ್ನು ಮರೆಯುವಂತಿಲ್ಲ.

ಇಂದು ಮಹಾರಾಷ್ಟ್ರದಲ್ಲಿ ಬ್ರಾಹ್ಮಣರ ವರ್ಚಸ್ಸೇಕಿದೆ ಅನ್ನುವುದಕ್ಕೆ ಒಂದು ಇತಿಹಾಸಪ್ರಸಿದ್ಧ ಕತೆ ಹೇಳುತ್ತೇನೆ. ನನ್ನ ಪ್ರಾಂತ್ಯದಲ್ಲಿರುವ ಬಾಳಾಜಿ ವಿಶ್ವನಾಥ್ ಹಾಗೂ ಅವರ ಜಾತಿ ಬಾಂಧವರಾದ ಚಿತ್ಪಾವನ ಬ್ರಾಹ್ಮಣರು ಪೇಶ್ವೆಗಳ ಆಳ್ವಿಕೆಯ ಮೊದಲು ಬಹಳ ಕಷ್ಟದಿಂದ ದಿನ ಕಳೆಯುತ್ತಿದ್ದರು.ಆದರೆ ಪೇಶ್ವೇಕಾಲದಲ್ಲಿ ರಾಜಕೀಯ ಅಧಿಕಾರ ಅವರ ಕೈಗೆ ಬಂದ ಕೂಡಲೆ ಮಹಾರಾಷ್ಟ್ರದಲ್ಲಿ ತಮ್ಮ ವರ್ಚಸ್ಸನ್ನವರು ಸ್ಥಾಪಿಸಿದರು. ಇಂದು ಸರ್ಕಾರಿ ಕಛೇರಿಗಳಿಂದ ಬ್ರಾಹ್ಮಣರನ್ನು ತೆಗೆದು ಹಾಕಿದರೆ ಅವರ ವರ್ಚಸ್ಸೂ ಇರುವುದಿಲ್ಲ. ಉಳಿದ ಪ್ರಾಂತ್ಯಗಳಲ್ಲಿ ಬ್ರಾಹ್ಮಣರಿಗೆ ಯಾವುದೇ ಮಹತ್ವವಿಲ್ಲ, ಗುಜರಾತಿನಲ್ಲಿ ಬ್ರಾಹ್ಮಣರಿಗೆ ಅಡುಗೆ ಮಾಡುವುದು ಹಾಗೂ ದೊಡ್ಡದೊಡ್ಡ ಮನೆಗಳಲ್ಲಿ ನೀರು ತುಂಬುವುದು ಬಿಟ್ಟರೆ ಅವರಿಗೆ ಯಾವುದೇ ಮಹತ್ವವಿಲ್ಲ. ಸಂಯುಕ್ತ ಹಾಗೂ ಪಂಜಾಬ್ ಪ್ರಾಂತ್ಯದಲ್ಲಿ ಬ್ರಾಹ್ಮಣರು ಮಾಂಗ್ ಹಾಗೂ ಮಾದಿಗರಂತೆ ತಂಗಳನ್ನ ಬೇಡಿ ತಿನ್ನುತ್ತಾರೆ. ಒಟ್ಟಿನಲ್ಲಿ ನಮ್ಮ ಹಕ್ಕುಗಳನ್ನು ಪಡೆಯಲು ದಬ್ಬಾಳಿಕೆ ನಡೆಸುವುದು ಹಾಗೂ ರಾಜಕೀಯ ಅಧಿಕಾರ ದೊರಕಿಸಿಕೊಳ್ಳುವುದರ ಮೂಲಕವೇ ನಾವು ಅಸ್ಪೃಶ್ಯತೆಯನ್ನು ಹೋಗಲಾಡಿಸಬಹುದು ಹಾಗೂ ಉಳಿದ ಸಮಾಜದೊಂದಿಗೆ ಸಮಾನ ದರ್ಜೆ ಗಳಿಸಬಹುದು. ಇಷ್ಟು ಹೇಳಿ ನೀವು ನನ್ನ ಎರಡು ಮಾತನ್ನು ಶಾಂತಚಿತ್ತರಾಗಿ ಕೇಳಿಸಿಕೊಂಡಿದ್ದಕ್ಕೆ ನಿಮಗೆ ಧನ್ಯವಾದಗಳನ್ನರ್ಪಿಸಿ ಭಾಷಣ ಮುಗಿಸುತ್ತೇನೆ.

ಪರಿಷತ್ತಿನಲ್ಲಿ ಮಂಜೂರಾದ ಮಸೂದೆಗಳ ಮೇಲೆ ಮೆಸ್ಸರ್ಸ್ ಮಾನೆ, ವರಾಳೆ, ಆಸೋದೆ, ಇಂಗಳೆ, ಕೊಂಡದೇವ್, ಶ್ರೀರಾಮ್ ಖೋಲವಡೇಕರ್, ಕೋಲ್ಹಾಪೂರಿನ ಪೋಳ್(ಥೋರ್) ಹಾಗೂ ಧಾರವಾಡಿನ ಸಾಂಬ್ರಾಣಿ (ಥೋರ್) ಈ ಪ್ರಸಿದ್ಧ ನಾಯಕರ ಭಾಷಣಗಳಾದವು. ನಂತರ ಎಲ್ಲರಿಗೂ ಪುಷ್ಪಹಾರಗಳನ್ನು ತೊಡಿಸಿ ಡಾ. ಬಾಬಾಸಾಹೇಬ್ ಅಂಬೇಡ್ಕರರ ಜೈಜೈಕಾರದಲ್ಲಿ ಸಭೆಯ ಕೆಲಸಗಳು ಮುಗಿದವು.

## ಬೆಳಗಾಂವ್ ಜಿಲ್ಲೆ ಬಹಿಷ್ಕೃತ ವರ್ಗದ ಸಾಮಾಜಿಕ ಪರಿಷತ್ತಿನ ೧ನೆಯ ಅಧಿವೇಶನದಲ್ಲಿ ಮಂಜೂರಾದ ಮಸೂದೆಗಳು

### ಮೊದಲನೆಯ ಮಸೂದೆ

(ಅ) ಅಸ್ಪೃಶ್ಯತೆಯನ್ನು ನಂಬುವುದು ಕಾನೂನಿನ ದೃಷ್ಟಿಯಲ್ಲಿ ಅಪರಾಧವಾಗಿ ಪರಿಗಣಿಸತಕ್ಕದ್ದು.

(ಬ) ಸರಕಾರದ ಪಟ್ಟಿಯಿಂದ ಜಾತಿ ಅನ್ನುವ ಕಾಲಂನ್ನು ತೆಗೆದುಹಾಕಬೇಕು.

### ಎರಡನೆಯ ಮಸೂದೆ

(ಅ) ಹುಟ್ಟಾ ಯಾರನ್ನೂ ಶ್ರೇಷ್ಠ ಅಥವಾ ಕನಿಷ್ಠ ಎಂದು ತಿಳಿಯಬಾರದು. ವೇದ, ಪುರಾಣ, ಶಾಸ್ತ್ರ ಹಾಗೂ ಇತರ ಧರ್ಮಗ್ರಂಥಗಳಲ್ಲಿ ಹುಟ್ಟಾ ಉಚ್ಚನೀಚತೆಯನ್ನು ಪ್ರತಿಪಾದಿಸಲಾಗಿರುವುದರಿಂದ ಈ ಗ್ರಂಥಗಳನ್ನು ನಂಬಬಾರದು.

(ಬ) ವರ್ಣಾಶ್ರಮ ಧರ್ಮವು ಹಿಂದೂ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಅನ್ನುವ ಭೇದ ಭಾವ ಮಾಡಿಸಿದೆ ಹಾಗಾಗಿ ವರ್ಣಾಶ್ರಮದ ಘಾತಕ ತತ್ವಗಳನ್ನು ಈ ಪರಿಷತ್ತು ನಿಷೇಧಿಸುತ್ತದೆ. ತಮ್ಮ ಜಾತಿಯನ್ನು ಎತ್ತಿತೋರಿಸುವ ಶಬ್ದಗಳನ್ನು ತಮ್ಮ ಹೆಸರಿನ ಮುಂದೆಯಾಗಲಿ ಹಿಂದೆಯಾಗಲಿ ಬರೆಯತಕ್ಕದ್ದಲ್ಲ.

(ಕ) ರಾಷ್ಟ್ರದ ಪ್ರಗತಿಗಾಗಿ ಹಾಗೂ ಸಮಾನತೆ ಸ್ಥಾಪಿಸುವುದಕ್ಕಾಗಿ ಅಸ್ಪೃಶ್ಯತೆಯ ರೂಢಿಯನ್ನು ಆದಷ್ಟು ಬೇಗ ಹೋಗಲಾಡಿಸುವುದು ಅಗತ್ಯವಾಗಿದೆ. ಹಾಗಾಗಿ ಸಮಾಜದ ಅಥವಾ ಕಾಯಿದೆಯ ದೃಷ್ಟಿಯಿಂದ ಯಾವುದೇ ಜಾತಿಯನ್ನು ಉಚ್ಚ ಇಲ್ಲವೆ ನೀಚವೆಂದು ಪರಿಗಣಿಸುವುದುತ`ಪ್ಪು. ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಗೂ ಸಾರ್ವಜನಿಕ ಸ್ಥಳಗಳಿಗೆ ಹೋಗುವ ಹಕ್ಕಿದ್ದು ಆ ಹಕ್ಕನ್ನು ಆತ ಪಡೆದುಕೊಳ್ಳಲೇ ಬೇಕು.

### ಮೂರನೆಯ ಮಸೂದೆ

ಸರ್ಕಾರ ತಾಳುವ ಕೆಲವು ಧಾರ್ಮಿಕ ಧೋರಣೆಯಿಂದಾಗಿ ಅಸಂಖ್ಯ ಬಹುಜನ ಸಮಾಜಕ್ಕೆ ಅವಮಾನ ಸಹಿಸಿಕೊಳ್ಳಬೇಕಾಗುತ್ತಿದೆ. ಈ ಜನರ ಸಾಮಾಜಿಕ ಹಕ್ಕುಗಳು ಕಸಿಯಲ್ಪಟ್ಟಿವೆ ಹಾಗೂ ಅವರ ಏಳಿಗೆಗೆ ಪೆಟ್ಟು ಬಿದ್ದಿದೆ. ಹಾಗಾಗಿ ಇನ್ನು ಮುಂದೆಯಾದರೂ ಸರ್ಕಾರ ಧಾರ್ಮಿಕತೆಯ ಬಗ್ಗೆ ತಟಸ್ಥ ಧೋರಣೆಯನ್ನು ಬಿಟ್ಟು ಬಹುಜನ ಸಮಾಜದ ಸಾಮಾಜಿಕ ಸ್ವಾತಂತ್ರ್ಯವನ್ನು ಕಾಪಾಡುವ ಪ್ರಯತ್ನ ಮಾಡಬೇಕು. ಹಾಗೆಯೇ ಈ ವಿಷಯದಲ್ಲಿ ಸಮಾಜ ಸುಧಾರಕರ ವತಿಯಿಂದ ಪ್ರಚಲಿತ ಕಾಯಿದೆಯಲ್ಲಿ ಬದಲಾವಣೆ ತರಬೇಕು.

### ನಾಲ್ಕನೆಯ ಮಸೂದೆ

(ಅ) ಸರ್ಕಾರ ಇನ್ನು ಮುಂದೆ ವಾರಸುದಾರರೇ ಇಲ್ಲದಂತಹ ಜಮೀನುಗಳನ್ನು ಅತ್ಯಂತ ಬಡವರಿಗೆ ಕೊಡತಕ್ಕದ್ದು. ಎಲ್ಲಕ್ಕೂ ಮೊದಲು ಈ ಜಮೀನುಗಳನ್ನು ದಲಿತರಿಗೆ ಕೊಡತಕ್ಕದ್ದು. ಸರ್ಕಾರ ಇಂತಹ ಜನರಿಗೆ ಹೆಚ್ಚು ಮೊತ್ತದ ಗ್ರಾಂಟ್‌ಗಳನ್ನು ಕೊಡಮಾಡಿ ಇಂತಹ ಜಮೀನುಗಳನ್ನು ಸಮತಟ್ಟು ಮಾಡಿಕೊಳ್ಳುವುದಕ್ಕೆ ಉತ್ತೇಜನ ನೀಡಬೇಕು ಎಂದು ಈ ಪರಿಷತ್ತು ವಿನಂತಿಸುತ್ತದೆ. ಅಷ್ಟೇಯಲ್ಲದೆ ಸರ್ಕಾರಿ ಕೆಲಸಗಳಲ್ಲಿ ದಲಿತ ಉಮೇದುವಾರರನ್ನು ಸೇರಿಸಿಕೊಳ್ಳುವ ಉದಾರತೆಯನ್ನು ತೋರಿಸಬೇಕು.

(ಬ) ದಲಿತ ಸಮಾಜದ ಸಾಕ್ಷರತೆಯು ಉಳಿದ ಸಮಾಜದ ಸಾಕ್ಷರತೆಯ ಮಟ್ಟಕ್ಕೆ ತಲುಪುವತನಕ ಸರ್ಕಾರದಲಿತ ವಿದ್ಯಾರ್ಥಿಗಳಿಗಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ನೂರು ಮಕ್ಕಳಿಗಾಗುವಷ್ಟು ಬೋರ್ಡಿಂಗ್ ಕಟ್ಟಡಗಳ ವ್ಯವಸ್ಥೆ ಮಾಡಬೇಕು.

### ಐದನೆಯ ಮಸೂದೆ

ರಾ. ಸಾ. ಪಾಪಣ್ಣಾ ಅವರ ಮಗನ ಸಾವಿಗಾಗಿ ಈ ಸಭೆ ದುಃಖ ವ್ಯಕ್ತಪಡಿಸುತ್ತದೆ. ದೇವರು ಆವನ ಆತ್ಮಕ್ಕೆ ಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

### ಆರನೆಯ ಮಸೂದೆ

ಚಮ್ಮಾರರ ವ್ಯಾಪಾರ ಸಾಕಷ್ಟು ನಷ್ಟ ಅನುಭವಿಸುತ್ತಿದೆ. ಹಾಗಾಗಿ ಅವರಿಗೆ ಶಿಕ್ಷಣ ತರಗತಿಗಳನ್ನು ಆರಂಭಿಸಬೇಕು ಹಾಗೂ ಈ ಸಮಾಜದ ಜನ ಸಹಕಾರತತ್ವದ ಮೇಲೆ ಆರಂಭಿಸಿರುವ ಸಂಸ್ಥೆಗಳಿಗೆ ಸರ್ಕಾರ ಉದಾರತೆಯಿಂದ ಸಹಾಯ ಮಾಡಿ ಅವರಲ್ಲಿರುವ ಯೋಗ್ಯ ವಿದ್ಯಾರ್ಥಿಗಳಿಗಾಗಿ ಹಣ ಖರ್ಚು

ಮಾಡಿ ಅವರು ತಮ್ಮ ವ್ಯಾಪಾರದ ಶಿಕ್ಷಣ ಪಡೆಯುವಂತಾಗಲು ವಿದೇಶಕ್ಕೆ ಕಳಿಸಬೇಕು ಎಂದು ಪರಿಷತ್ತಿಗೆ ಅನಿಸುತ್ತದೆ.

**ಏಳನೆಯ ಮಸೂದೆ**

(ಅ) ಹುಡುಗರಿಗೆ ೨೦ ವರ್ಷ ಹಾಗೂ ಹುಡುಗಿಯರಿಗೆ ೧೬ ವರ್ಷ ವಯಸ್ಸಾಗುವ ತನಕ ಮದುವೆ ಮಾಡಬಾರದು.

(ಬ) ಯಾವುದೇ ಸಮಾಜದ, ಜಾತಿಯ ಇಲ್ಲವೆ ವರ್ಗದ ಹೆಣ್ಣು ಗಂಡಿಗೆ ಅಂತರ್ಜಾತಿಯ ವಿವಾಹವಾಗಲು ಸ್ವಾತಂತ್ರ್ಯವಿರಬೇಕು.

(ಕ) ಮದುವೆ ಇಲ್ಲವೆ ಇತರ ಉತ್ಸವಗಳಲ್ಲಿ ದಲಿತರು ಆದಷ್ಟು ಕಡಿಮೆ ಖರ್ಚು ಮಾಡಬೇಕು ಹಾಗೆಯೇ ಸಾರ್ವಜನಿಕ ಮದುವೆಗಳಲ್ಲಿ ಒಂದೇ ಊಟ ಹಾಕಿಸುವುದನ್ನು ಬಿಟ್ಟರೆ ಹೆಚ್ಚು ಖರ್ಚು ಮಾಡಬಾರದು. ಉಳಿದ ಹಣವನ್ನು ತಮ್ಮ ಮಕ್ಕಳ ಶಿಕ್ಷಣಕ್ಕೆ ಖರ್ಚು ಮಾಡಬೇಕು.

**ಎಂಟನೆಯ ಮಸೂದೆ**

ದಲಿತರಿಗೆ ಪ್ರವೇಶ ನಿಷಿದ್ಧವಿರುವಂತಹ ಹೋಟೆಲ್ ಇಲ್ಲವೆ ಖಾನಾವಳಿಗಳನ್ನು ತೆರೆಯಲು ಸರ್ಕಾರ ಅನುಮತಿ ಕೊಡಬಾರದು. ಹಾಗೆಯೇ ರೇಲ್ವೆಯವರ ಅಧಿಕಾರದಲ್ಲಿರುವ ಹೋಟೆಲ್ ಹಾಗೂ ಖಾನಾವಳಿಗಳಲ್ಲಿ ದಲಿತರನ್ನು ಸಮನಾಗಿ ಕಾಣುವಂತೆ ರೈಲಿನ ಅಧಿಕಾರಿಗಳು ಪ್ರಯತ್ನಿಸಬೇಕು.

# ೨೫.

# ಗುಲಾಮಗಿರಿ ಪದ್ಧತಿಯನ್ನು ನಷ್ಟ ಮಾಡಿ ಕೆಟ್ಟ ರೂಢಿ ಪರಂಪರೆಗಳನ್ನು ಮುಗಿಸಿ

ಭಾರತೀಯ ಬಹಿಷ್ಕೃತ ಸಮಾಜ ಸೇವಕ ಸಂಘದ ಸಹಾಯದಿಂದ ರತ್ನಗಿರಿ ಜಿಲ್ಲೆಯ ಖೇಡ್ ಹಾಗೂ ಚಿಪಳೂಣ್ ತಾಲೂಕಾ ವತಿಯಿಂದ ರತ್ನಗಿರಿ ಜಿಲ್ಲಾ ಪರಿಷತ್ತಿನ ಎರಡನೆಯ ಅಧಿವೇಶನವನ್ನು ಚಿಪಳೂಣ್‌ನಲ್ಲಿ ಶನಿವಾರ ೧೩ನೆಯ ಏಪ್ರಿಲ್ ೧೯೨೯ ರಂದು ಸಾಯಂಕಾಲ ४.३೦ಕ್ಕೆ ಡಾ. ಬಾಬಾಸಾಹೇಬ್ ಅಂಬೇಡ್ಕರ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧಿವೇಶನಕ್ಕಾಗಿ ಕಟ್ಟಿದ್ದ ಸಭಾ ಮಂಟಪವು ಬಣ್ಣಬಣ್ಣದ ಕಾಗದಗಳ ತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಮೇಲ್ಜಾತಿಯ ಜನ ಕೂಡ ಪರಿಷತ್ತಿತ ತಯಾರಿ ನೋಡಿ ಆಶ್ಚರ್ಯಪಟ್ಟರು. ಈ ಪರಿಷತ್ತಿಗೆಂದೇ ಮುಂಬಯಿಯಿಂದ ದೇವರಾವ್ ನಾಯಿಕ್, 'ಸಮತಾ' ಪತ್ರಿಕೆಯ ಸಂಪಾದಕರು. ಶ್ರೀ. ಎಸ್.ಎನ್. ಶಿವತರ್‌ಕರ್, ದ.ವಿ. ಪ್ರಧಾನ್, ಶಂ.ಶಾ. ಗುಪ್ತೆ, ಭಾ.ರ. ಕದ್ರೇಕರ್ ರಂತಹ ಜನ ಡಾ. ಅಂಬೇಡ್ಕರ್ ಅವರೊಂದಿಗೆ ಬಂದಿದ್ದರು. ಕರಾಡಿನಿಂದ ಚಿಪಳೂಣಿಗೆ ಬರುವಾಗ ದಾರಿಯಲ್ಲಿ ಅಡರೆ ಅನ್ನುವ ಊರಿನಲ್ಲಿ ದಲಿತರಿಂದ ವೀಳ್ಯೆದೆಲೆ ಕೊಡುವ ಚಿಕ್ಕ ಸಮಾರಂಭವೂ ಜರುಗಿತು. ಅಧ್ಯಕ್ಷರು ಹಾಗೂ ಮುಂಬಯಿಯ ಅತಿಥಿಗಳು ಉಳಿದುಕೊಳ್ಳಲು ಸರ್ಕಾರಿ ಡಾಕ್ ಬಂಗಲೆಯಲ್ಲಿ ವ್ಯವಸ್ಥೆಯಾಗಿತ್ತು. ಶನಿವಾರ ಪರಿಷತ್ತನ್ನು ಆರಂಭಿಸುವ ಮುನ್ನ ಸುಮಾರು ೮,೦೦೦ ಜನ ಮಂಟಪದಲ್ಲಿ ಕಿಕ್ಕಿರಿದು ತುಂಬಿದ್ದರು. ನಗರದಲ್ಲಿ ವಾಸಿಸುತ್ತಿರುವ ಇತರ ಸಮಾಜದ ಜನರೂ ಸಾಕ್ಷಿದ್ದರು. ಅವರಲ್ಲಿ ಖಾನ್ ಸಾಹೇಬ್ ದೇಸಾಯಿ, ಶ್ರೀ ಸಾಠೆ, ಶ್ರೀ ವಿನಾಯಕ್‌ರಾವ್ ಬರ್ವೆ ವಕೀಲರು, ಸ್ಥಳೀಯ ಮ್ಯುನಿಸಿಪಾಲಟಿಯ ಅಧ್ಯಕ್ಷರಾದ ಶ್ರೀ ಖಾತು, ಶ್ರೀ ರಾಜ್ಯಾಧ್ಯಕ್ಷ, ಶ್ಯಾಮ್ ಕವಿ, ಓಂ ಸ್ವಾಮಿ, ಬೆಡಕೆ ಪ್ರಭುತಿ ಪರಿವಾರ (ತಂದೆ ಮತ್ತು ಮಕ್ಕಳು) ಮುಖ್ಯವಾಗಿ ಕಾಣುತ್ತಿದ್ದರು. ಪರಿಷತ್ತಿನ ಅಧ್ಯಕ್ಷರನ್ನು ನೇಮಿಸಿದ ನಂತರ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ. ರಗಜಿಯವರು ಭಾಷಣಮಾಡಿದರು. ಕಡೆಗೆ ಪರಿಷತ್ತಿನ ಅಧ್ಯಕ್ಷರಾದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾಷಣ ಮಾಡಲು ಎದ್ದಾಗ ಜನ ಚಪ್ಪಾಳೆಯ ಕರತಾಡನಗೈದರು. ಭಾಷಣ ಆರಂಭವಾಗುತ್ತಲೆ ದಲಿತ ಹಾಗೂ ಮೇಲ್ಜಾತಿಯ ಜನ ಶಾಂತವಾಗಿ ತಮ್ಮ ತಮ್ಮ ಜಾಗದಲ್ಲಿ ಕುಳಿತುಕೊಂಡಿದ್ದನ್ನು ನೋಡಬಹುದಿತ್ತು. ಬಾಬಾ ಸಾಹೇಬರು ತಮ್ಮ ಭಾಷಣದಲ್ಲಿ.

ನಾನು ನನ್ನ ಬಾಂಧವರಿಗಿಂದು ಹೇಳಲಿರುವ ವಿಷಯದ ಜವಾಬ್ದಾರಿ ಕೇವಲ ನನ್ನೊಬ್ಬನದಲ್ಲ, ನಾನಿಂದು ಅಧ್ಯಕ್ಷನಾಗಿದ್ದರೂ ನಿಮ್ಮೊಂದಿಗೆ ಎಲ್ಲ ಬಾಂಧವರ ಪರವಾಗಿ ಕೆಲವು ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದೇನೆ. ಎರಡು ವರ್ಷಗಳ ಹಿಂದೆ ನಾನು ನನ್ನ ಸಮಾಜ ಬಾಂಧವರೆದುರಿಗೆ ಮಂಡಿಸಿದ್ದ ವಿಷಯದ ಸಂದೇಶವನ್ನಿಂದು ನಿಮಗೆ ಕೊಡುತ್ತಿದ್ದೇನೆ. ನನ್ನ ಸಂದೇಶದ ಉದ್ದೇಶವನ್ನು ಸಮಾಜ ಅಂಗೀಕರಿಸಿರುವುದರಿಂದ ಅದಕ್ಕೆ ಕೇವಲ ನಾನೊಬ್ಬನೇ ಅಲ್ಲ ನೀವೆಲ್ಲರೂ ಜವಾಬ್ದಾರರಾಗಿದ್ದೀರಿ. ಇವತ್ತಿನ

ಸಂದೇಶ ನಮ್ಮ ಜಾತಿಗಾಗಿ. ಒಮ್ಮತದಿಂದ ಹಾಗೂ ಜವಾಬ್ದಾರಿಯಿಂದ ಒಪ್ಪಿಕೊಂಡಿರುವ ಸಂದೇಶವನ್ನು ತಾವೂ ಒಪ್ಪಿಕೊಳ್ಳುತ್ತೀರಿ ಅನ್ನುವ ಆಸೆ ನನಗಿದೆ. ಒಮ್ಮತದಿಂದ ಒಪ್ಪಿಕೊಂಡಿರುವ ಸಂದೇಶ ಎಲ್ಲರಿಗೂ ಕಡ್ಡಾಯವಾಗಿದೆ. ಇಂದು ನಾವೆಲ್ಲ ಇಲ್ಲಿ ಯಾಕೆ ಸೇರಿದ್ದೇವೆ ಹಾಗೂ ಏನು ಮಾಡುತ್ತಿದ್ದೇವೆ ಅನ್ನುವುದೇ ಇಂದಿನ ಸಂದೇಶ. ಇವತ್ತಿನ ಸಂದೇಶದ ಜವಾಬ್ದಾರಿಗಳೇನು? ಅನ್ನುವುದರ ಬಗ್ಗೆ ಯೋಚಿಸುವುದು ಬಹಳ ಮುಖ್ಯವಾಗಿದೆ. ಅಖಿಲ ಹಿಂದೂ ಸಮಾಜ ವಂಶಪರಂಪರಾಗತವಾಗಿ ನಮ್ಮ ಸಮಾಜದ ಮೇಲೆ ಹೇರಿರುವ ಕೆಲವು ಹೊಲಸು ರೂಢಿ ಪರಂಪರೆಗಳನ್ನು ಧಿಕ್ಕರಿಸುವುದೇ ಇಂದಿನ ಸಂದೇಶದ ಮುಖ್ಯ ಉದ್ದೇಶ. ನನ್ನ ಇಂದಿನ ಸಂದೇಶ ಬಹಳ ಮುಖ್ಯವಾಗಿದೆ. ಭಾರತದಲ್ಲಿ ಅತ್ಯಂತ ಹೊಲಸಾದ ಕೆಲವು ಕೆಲಸಗಳನ್ನು ತಾವೇ ಮಾಡಿಕೊಳ್ಳದೆ ಇಲ್ಲವೆ ಮಾಡುವವರ ಖುಷಿಗೂ ಬಿಡದೆ ನಮ್ಮ ಅಸ್ಪೃಶ್ಯ ಸಮಾಜದ ಮೇಲೆ ಹೇರಿರುವ ಒತ್ತಾಯಕ್ಕೆ ನನ್ನ ವಿರೋಧವಿದೆ. ಇಂದಿನ ಕಾಲದಲ್ಲಿ ದಲಿತ ಮನುಷ್ಯ ಎಷ್ಟೇ ಮೇಲಿನ ದರ್ಜೆಗೇರಿದರೂ ಅವನ ಹೀನತ್ವ ಅಳಿಸಲ್ಪಡುವುದಿಲ್ಲ. ಈ ಹೀನತ್ವದ ಭಾವನೆ ಮೈಯ ಕಣಕಣದಲ್ಲಿರುವವರೆಗೆ ಸ್ವಾಭಿಮಾನ ಜಾಗೃತವಾಗುವುದಿಲ್ಲ. ಚಮ್ಮಾರರು, ಭಂಗಿಗಳು, ಮಾಂಗ್‌ರಂತಹ ಅಸ್ಪೃಶ್ಯರಿಗೆ 'ನೀನು ಹುಟ್ಟಿರುವಂತೆ ನಡೆದುಕೊ'ಅಂದರೆ ನೀನು ಯಾವ ಜಾತಿಯಲ್ಲಿ ಹುಟ್ಟಿರುವೆಯೋ ಅದರಂತೆ ನಡೆದುಕೊ ಎಂದು ಹೇಳಿಕೊಡಲಾಗುತ್ತದೆ. ಹೀಗಿರುವಾಗ ಈ ಜಾತಿಗಳಲ್ಲಿ ಯಾರೂ ದೊಡ್ಡ ಮನುಷ್ಯನಾಗಲು ಸಾಧ್ಯವೇ ಇಲ್ಲ. ಬ್ರಾಹ್ಮಣರು ಇಲ್ಲವೆ ಮೇಲ್ಜಾತಿಗಳಲ್ಲಿ ಹುಟ್ಟುವ ಮಕ್ಕಳು ಮುನ್‌ಸಿಫ್, ಮಾಮಲೆದಾರ, ಇಲ್ಲವೆ ವಕೀಲರೆ ಯಾಕಾಗುತ್ತಾರೆ? ಮರಾಠಾ ಜಾತಿಯ ಮಕ್ಕಳು ಪೊಲೀಸ್, ಪೊಲೀಸ್ ಅಧಿಕಾರಿಗಳೇ ಯಾಕಾಗುತ್ತಾರೆ? ಅಸ್ಪೃಶ್ಯಜಾತಿಯಲ್ಲಿ ಹುಟ್ಟಿದ ಮಕ್ಕಳೇಕೆ ಈ ಹುದ್ದೆಗಳನ್ನಲಂಕರಿಸುವುದಿಲ್ಲ? ಅಸ್ಪೃಶ್ಯ ಹಾಗೂ ಮೇಲ್ಜಾತಿಯ ಮಕ್ಕಳಲ್ಲಿ ಭೇದಭಾವ ಯಾಕಾಯಿತು? ಈ ಎಲ್ಲ ಪ್ರಶ್ನೆಗಳಿಗಿರುವ ಉತ್ತರ ಒಂದೆ 'ಸಮಾಜ ಪರಿಸ್ಥಿತಿ'. ದಲಿತ ಮಕ್ಕಳ ಮೇಲೆ ಈ ಹೊಲಸು ಪರಿಸ್ಥಿಯ ಪರಿಣಾಮ ಸಾಕಷ್ಟಾಗಿ ಗುಲಾಮಗಿರಿಯೇ ನಮ್ಮ ಬದುಕುಅನ್ನುವ ದೀಕ್ಷೆ ಸಿಕ್ಕಿದೆ. ಈ ಪರಿಸ್ಥಿಯೇನು ಸಂತೋಷದಿಂದ ಒಪ್ಪಿಕೊಂಡಿದ್ದಲ್ಲ. ಗುಲಾಮಗಿರಿ ಪದ್ಧತಿಯನ್ನು ನಷ್ಟ ಮಾಡಬೇಕಾದ್ದು ನಮ್ಮ ಕರ್ತವ್ಯವಾಗಿದೆ ಅದಕ್ಕೆಂದೇ ನಮ್ಮ ಸಮಾಜದಲ್ಲಿರುವ ಕೆಲವು ಹೊಲಸು ರೂಢಿ ಪರಂಪರೆಗಳನ್ನು ಕಿತ್ತೆಸೆಯಬೇಕಿದೆ. ಈ ರೂಢಿ ಪರಂಪರೆಗಳನ್ನು ಕಿತ್ತೆಸೆದರೆ ಆರ್ಥಿಕವಾಗಿ ನಷ್ಟವಾಗಬಹುದು ಹಾಗೂ ನಮ್ಮಸಮಾಜದ ಜನ ಹೊಟ್ಟೆ ಹೊರೆಯಲು ಪರದಾಡಬೇಕಾಗಬಹುದು ಎಂದು ಕೆಲವರನ್ನಬಹುದು. ಆದರೆ ನನ್ನ ಪ್ರಕಾರ ನಮ್ಮ ಬೆಳವಣಿಗೆಯ ಮಾರ್ಗ ತಡೆಯಲು ಇದೆಲ್ಲ ಮೇಲ್ಜಾತಿಯವರು ನಡೆಸಿರುವ ಫಿತೂರಿ. ಹೊಲಸು ರೂಢಿ ಪರಂಪರೆಗಳನ್ನು ಕಿತ್ತೆಸೆಯಲು ಹೆದರುವವರಿಗೆ ನಾನೊಂದು ಪ್ರಶ್ನೆ ಕೇಳುತ್ತೇನೆ. ವೈಶ್ಯೆಯೊಬ್ಬಳು ತನ್ನ ಐಶಾರಾಮದ ಬದುಕಿಗಾಗಿ ಅವಲಂಬಿಸಿರುವ ಮಾರ್ಗಕ್ಕೂ ಹಾಗೂ ಕೇವಲ ಮೈತುಂಬ ದುಡಿದು ಸಿಗುವ ಅನ್ನವನ್ನೇ ಅವಲಂಬಿಸಿ ಬದುಕುವ ಪತಿವ್ರತೆ ನಾರಿಗೆ ಎಲ್ಲಾದರೂ ಸಮಾನತೆ ಇದೆಯೆ? ವೇಶ್ಯೆಯ ಐಶಾರಾಮದ ಬದುಕಿನಲ್ಲಾಕೆ ಎಂತಹ ಹೊಲಸು ಕೆಲಸಗಳನ್ನು ಮಾಡುತ್ತಾಳೆಂಬುದು ನೀವೆಂದಾದರೂ ಯೋಚಿಸಿದ್ದೀರಾ? ಸ್ಪಷ್ಟವಾಗಿ ಹೇಳುವುದಾದರೆ ಸ್ವಾಭಿಮಾನವಿಲ್ಲದಂತಹ ಬದುಕು ನಡೆಸುವುದೆಂದರೆ ಹೇಡಿಗಳ ಲಕ್ಷಣ. ಒಳ್ಳೆಯ ಜೀವನ ಬದುಕಲು ಸ್ವಾಭಿಮಾನವಿರಲೇ ಬೇಕು. ಆರ್ಥಿಕವಾಗಿ ನಷ್ಟವಾದರೂ ಪರವಾಗಿಲ್ಲ ಮೊದಲು ನಮ್ಮ ಕರ್ತವ್ಯಕ್ಕೆ ಪ್ರಾಧಾನ್ಯತೆ ಕೊಡಬೇಕು. ಸುಖ, ಕೀರ್ತಿ ಇವುಗಳು ಸುಲಭವಾಗಿ ಸಿಗುವಂತಹದ್ದಲ್ಲ. ಕಲ್ಲುಬಂಡೆ ಕೆತ್ತದೆ ದೇವರ ಆಕೃತಿ ಹೊಮ್ಮುವುದಿಲ್ಲ, ಅಂತೆಯೇ ಕಷ್ಟಪಡದೆ ನಮ್ಮ ಹಕ್ಕುಗಳು ನಮಗೆ ಸಿಗುವುದಿಲ್ಲ. ನಮ್ಮ ಕರ್ತವ್ಯಗಳನ್ನು ಪಾಲಿಸುವಾಗ ಮೇಲ್ಜಾತಿಯ ಜನರಿಂದ ನಮಗೆ ತೊಂದರೆಯಾಗುವ ಸಾಧ್ಯತೆಗಳಿವೆ

ಅನ್ನುವುದು ನನಗೆ ಗೊತ್ತು. ಆದರೆ ನಮ್ಮ ಕೆಲಸವಾಗಲು ನಾವು ತೊಂದರೆಗಳನ್ನು ಅನುಭವಿಸಲೇ ಬೇಕು, ಗೌಡಕಿಯಿಂದ [ಗೌಡಕಿಯೆಂದರೆ ಅಂಬೇಡ್ಕರ್ ಅವರ ಕಾಲದಲ್ಲಿ ಹೊಲದ ಕರ ವಸೂಲಿ ಮಾಡಲು ಸರ್ಕಾರ ಕೆಲವು ಮೇಲ್ಜಾತಿ ಜನರನ್ನು ನೇಮಿಸಿರುತ್ತಿತ್ತು. ಅವರನ್ನು ಗೌಡರು ಎಂದು ಕರೆಯುತ್ತಿದ್ದರು. ಈ ಗೌಡರು ಜನರನ್ನು ಸಾಕಷ್ಟು ಪೀಡಿಸಿ ಕರ ವಸೂಲು ಮಾಡುತ್ತಿದ್ದರು. ಸಾಮಾನ್ಯ ಹಾಗೂ ಕೆಳಜಾತಿಯ ಜನಇವರಿಂದ ಸಾಕಷ್ಟು ತೊಂದರೆ ಅನುಭವಿಸಬೇಕಾಗುತ್ತಿತ್ತು] ನಾವಂದುಕೊಂಡ ಕೆಲಸ ಮಾಡಲಾಗುತ್ತಿಲ್ಲ ಎಂದು ಕೆಲವರು ದೂರುತ್ತಾರೆ. ನಿಜ ನಾನವರ ಮಾತು ನಂಬುತ್ತೇನೆ. ಗೌಡಕಿಯ ಬಗ್ಗೆ ಆದಷ್ಟು ಬೇಗ ನಾನೊಂದು ವ್ಯವಸ್ಥೆ ಮಾಡಲಿದ್ದೇನೆ ಎಂದಷ್ಟೇ ಹೇಳುತ್ತೇನೆ, ಆದರೆ ಒಂದು ವಿಷಯ ಮೊದಲು ಇತ್ಯರ್ಥವಾಗಲಿ ಆಮೇಲೆ ಮುಂದಿನದು ನೋಡೋಣ ಎಂದು ಕೈಕಟ್ಟಿ ಕುಳಿತುಕೊಳ್ಳಲಾಗದು. ನಾವು ಯಾವಾಗಲೂ ಕೆಲಸ ಮಾಡುತ್ತಲೇ ಇರಬೇಕು. ಕೇವಲ ಗೌಡಕಿಯನ್ನು ನಿಲ್ಲಿಸಿ ನಮ್ಮ ಕಾರ್ಯ ಸಫಲವಾಗುವುದಿಲ್ಲ, ಮೇಲ್ಜಾತಿಯವರು ನಿಮ್ಮ ಮೇಲೆ ಗುಂಡಾಗಳನ್ನೂ ಬಿಟ್ಟಾರು ಅನ್ನುವುದು ನೆನಪಿರಲಿ. ಊರಿನಲ್ಲಿರುವ ಸಾರ್ವಜನಿಕ ಕೆರೆ ಭಾವಿಗಳಿಂದ ನೀರು ತುಂಬುವುದು ಕೇವಲ ನಿಮ್ಮ ಧೈರ್ಯವನ್ನವಲಂಬಿಸಿದೆ. ನಿಮ್ಮ ನ್ಯಾಯವಾದ ಹಕ್ಕುಗಳನ್ನು ಪಡೆಯಲು ನೀವು ಮೇಲ್ಜಾತಿಯ ಗುಮ್ಮನಿಗೆ ಹೆದರಿದರೆ ನಿಮ್ಮಿಂದ ಯಾವ ಕೆಲಸಗಳೂ ಸಾಧ್ಯವಿಲ್ಲ. ದಲಿತರ ಸುಧಾರಣೆಗಾಗಿ ನಾನು ಕೊಂಕಣ ಪ್ರಾಂತ್ಯಕ್ಕೆ ಬಂದರೆ ನಿಮ್ಮನ್ನು ಗುಂಡಿಕ್ಕಿ ಕೊಲ್ಲುತ್ತೇವೆ ಎಂದು ಬೆದರಿಕೆಯ ಅನೇಕ ಪತ್ರಗಳು ನನಗೆ ಬಂದಿವೆ. ನಾನಿಂತಹದ್ದಕ್ಕೆಲ್ಲ ಬೆಲೆ ಕೊಟ್ಟಿದ್ದಿದ್ದರೆ ನಿಮ್ಮೆದುರು ನಾನಿಂದು ನಿಲ್ಲುವುದು ಸಾಧ್ಯವೇ ಇರಲಿಲ್ಲ. ನಿಮಗಾಗಿ ಕೇವಲ ನಿಮಗಾಗಿ ಇಲ್ಲಿಗೆ ಬಂದಿದ್ದೇನೆ. ಇಡೀ ಜಗತ್ತಿನಲ್ಲೇ ಕೊಂಕಣ ಪ್ರಾಂತ್ಯ ಭಿಕಾರಿಯಾಗಿದೆ. ಬುದ್ಧಿಮತ್ತೆಯಲ್ಲಿ ಶ್ರೀಮಂತ ಪ್ರಾಂತ್ಯವಾಗಿದ್ದರೂ ಸಂಪತ್ತಿಯ ವಿಷಯದಲ್ಲಿ ಮಾತ್ರ ಸಾಕಷ್ಟು ಹಿಂದುಳಿದಿದೆ. ಗೌಡರು, ಬ್ರಾಹ್ಮಣರು ಹಾಗೂ ಮರಾಠರಿಗೂ ಈ ಪ್ರಾಂತ್ಯದಲ್ಲಿ ಸುಖ ಸಿಗಲಾರದು, ನೀವು ವ್ಯಾಪಾರ ಹಾಗೂ ಉದ್ಯೋಗದ ಕಡೆ ಹೆಚ್ಚು ಗಮನ ಕೊಟ್ಟರೆ ಈ ಸಂಕಟದಿಂದ ಹೊರಬರಬಹುದು. ಖೋತಿ ಪದ್ಧತಿಯಿಂದ ಮುಕ್ತವಾಗ ಬಯಸುವ ಜನರಿಗಾಗಿ ಸಿಂಧ್ ಹಾಗೂ ಇಂದೋರ್ ಪ್ರಾಂತ್ಯಗಳಲ್ಲಿ ಹೊಲ ಖರೀದಿಸುವಂತಾಗಲು ನಾನು ಪ್ರಯತ್ನಿಸುತ್ತೇನೆ. ಈ ವಿಷಯದಲ್ಲಿ ಆಫ್ರಿಕಾದಂತಹ ದೇಶಗಳಿಗೆ ಹೋಗಿ ವ್ಯಾಪಾರ ಮಾಡಿ ಶ್ರೀಮಂತರಾದ ಮುಸಲ್ಮಾನರ ಉದಾಹರಣೆಗಳನ್ನು ನೀವು ನೆನಪಿಡಬೇಕು. ಪೀಳಿಗೆಗಳಿಂದ ಬಂದಂತಹ ಜಮೀನುಗಳನ್ನು ಬಿಟ್ಟು ಬೇರೆ ಪ್ರಾಂತ್ಯಗಳಲ್ಲಿ ಹೋಗಿರುವುದು ತುಂಬ ಕಷ್ಟ ಅನ್ನುವುದು ನನಗೆ ಗೊತ್ತು ಆದರೆ ನಮ್ಮ ಸಾಮಾಜಿಕ ಬೆಳವಣಿಗೆಯಾಗಲು ಇಂತಹ ಮಾರ್ಗಗಳನ್ನು ಅವಲಂಬಿಸಲೇ ಬೇಕು. ಸತ್ತ ಪ್ರಾಣಿಗಳ ಮಾಂಸ ತಿನ್ನುವುದು, ಅಮಂಗಲ ಕೃತ್ಯಗಳನ್ನು ಮಾಡುವಂತಹದ್ದನ್ನು ನೀವೀಗ ನಿಲ್ಲಿಸಬೇಕು. ಇಂದಿನ ನನ್ನ ಸಂದೇಶದ ಬಗ್ಗೆ ಯೋಚಿಸಿ ಇಂದಿನಿಂದಲೇ ಕೆಲಸಕ್ಕೆ ತೊಡಗಿ. ಇಂದಿನ ನವಯುಗದಲ್ಲಿ ಯಾರೂ ಗುಲಾಮರಲ್ಲ ಅನ್ನುವುದನು ನೆನಪಿರಲಿ.

## ೨೬.

# ಸ್ವಾವಲಂಬನೆ ಹಾಗೂ ಸ್ವಾಭಿಮಾನ ಬೆಳೆಸಿಕೊಳ್ಳುವುದನ್ನು ಬಿಟ್ಟರೆ ಬೇರೆ ದಾರಿಯಿಲ್ಲ

ರತ್ನಗಿರಿ ಜಿಲ್ಲೆಯ ರೈತರ ಪರಿಷತ್ತನ್ನು ಚಿಪಳೂಣ್‌ನಲ್ಲಿ ಭಾನುವಾರ ೧೪ನೆಯ ಏಪ್ರಿಲ್ ೧೯೨೯ರಂದು ಆಯೋಜಿಸಲಾಗಿತ್ತು. ಮುಂಬಯಿಯ ಸೀ. ದೇವರಾವ್ ನಾಯಿಕ್. ದ.ವಿ. ಪ್ರಧಾನ್, ಭಾ.ರ. ಕದ್ರೇಕರ್, ಶಂಕರರಾವ್ ಗುಪ್ತೆ, ಶಂಕರ ವಡವಲಕರ್, ಶ್ರೀ. ಶಿವತರಕರ್, ಬಾಬಾ ಅಂಬೇಡ್ಕರ್, ಗಾಯಕವಾಡ್, ಮೋರೆ ಇವರುಗಳು ಅತಿಥಿಗಳಾಗಿ ಆಗಮಿಸಿದ್ದರು. ಚಿಪಳೂಣ್ ವಾಸಿಗಳಾದ ಶ್ರೀ. ವಿನಾಯಕ್ ಬರ್ವೆ, ಸಾಠೆ, ರಾಜ್ಯಾಧ್ಯಕ್ಷ, ಖಾನ್‌ಸಾಹೇಬ್, ಬೆಂಡಕೆ ಪಿತಾ ಪುತ್ರರು, ಶಿವರಾಮ್ ಜಾಧವ್ ಇವರುಗಳು ಪರಿಷತ್ತಿಗೆ ಹಾಜರಿದ್ದರು.

ಪರಿಷತ್ತಿನ ಆರಂಭದಲ್ಲಿ ಅಧ್ಯಕ್ಷರನ್ನಾಗಿ ಡಾ. ಬಾಬಾ ಸಾಹೇಬ್ ಅಂಬೇಡ್ಕರರನ್ನು ನೇಮಿಸಲಾಯಿತು. ಶ್ರೀ. ರಂಗಜಿಯವರ ಭಾಷಣದ ನಂತರ ಶ್ರೀ. ಬೆಂಡಕೆಯವರು ರಾವ್‌ಬಹಾದ್ದೂರ್ ಬೊಲೆ, ಅಡ್ವೋಕೇಟ್ ಆನಂದರಾವ್ ಸುರ್ವೆ, ಶ್ರೀ. ಸಾಳವಿ ಸಬ್‌ಜಜ್ ಇವರುಗಳ ಸಂದೇಶಗಳನ್ನು ಓದಿ ತೋರಿಸಿದ ಮೇಲೆ ಅಧ್ಯಕ್ಷರಾದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾಷಣ ಮಾಡಿದರು. ತಮ್ಮ ಭಾಷಣದಲ್ಲವರು,

ಎಲ್ಲ ಸಾಮಾನ್ಯ ಜನತೆಯ ಜವಾಬ್ದಾರಿ ಹೊರಲೆಂದೇ ನಾನು ಹುಟ್ಟಿರುವುದೆಂದು ನನಗೆ ಆಗಾಗ ಅನಿಸುತ್ತದೆ. ನಾನು ಕೂಡ ಕಾರ್ಮಿಕ ವರ್ಗದಿಂದಲೇ ಬಂದಂಥವನಾಗಿದ್ದು ಇಂಪ್ರೂವಮೆಂಟ್ ಟ್ರಸ್ಟಿನ ಚಾಳಿನಲ್ಲಿ ವಾಸಿಸುತ್ತೇನೆ. ಇತರ ಬ್ಯಾರಿಸ್ಟರ್‌ಗಳಂತೆ ನಾನು ಕೂಡ ಬಂಗಲೆಗಳಲ್ಲಿರಬಹುದಾಗಿತ್ತು. ಆದರೆ ನನ್ನರೈತ ಹಾಗೂ ದಲಿತ ಬಾಂಧವರ ಚಳುವಳಿಗಾಗಿ ನಾನು ಚಾಳಿನಲ್ಲಿದ್ದೇ ಕೆಲಸ ಮಾಡಬೇಕಾಗುತ್ತದೆ ಅನ್ನುವುದರ ಬಗ್ಗೆ ನನಗೆಂದೂ ದುಃಖವಾಗುವುದಿಲ್ಲ. ನಾನು ಮುಂಬಯಿಗೆ ಬಂದು ಈಗಾಗಲೆ ನಾಲ್ಕು ವರ್ಷಗಳೇ ಕಳೆದಿವೆ. ಅತ್ಯಂತ ಹೀನ ಜಾತಿಯಲ್ಲಿ ಹುಟ್ಟಿದ್ದರಿಂದ ನಾನು ಆ ಸಮಾಜಕ್ಕಾಗಿ ಮನಸಾರೆ ಕಷ್ಟಪಡಲೇ ಬೇಕು. ಅದರಲ್ಲೂ ದಲಿತ ಕಾರ್ಮಿಕರಿಗೆ ಇತರ ಕಾರ್ಮಿಕರಿಗಿರುವಂತಹ ಹಕ್ಕುಗಳನ್ನು ದೊರಕಿಸಿ ಕೊಡುವುದು ನನ್ನ ಆದ್ಯ ಕರ್ತವ್ಯವಾಗಿದೆ. ಕಳೆದ ಎರಡು ವರ್ಷಗಳಲ್ಲಿ ನನಗೆ ಶ್ರೀ. ಬೆಂಡಕೆಯವರ ಪರಿಚಯವಾಯಿತು, ಅವರು ಗೌಡಕಿಯನ್ನು ನಿರ್ನಾಮ ಮಾಡುವಜವಾಬ್ದಾರಿ ನನಗೆ ವಹಿಸಿದ್ದಾರೆ ಹಾಗೂ ನಾನದನ್ನು ಸ್ವೀಕರಿಸಿದ್ದೇನೆ. ಗೌಡಕಿಯ ಲಾಭಹಾಗೂ ನಷ್ಟಗಳನ್ನು ಅಭ್ಯಸಿಸಿ ಅದರ ಬಗ್ಗೆ ಯೋಜನೆಗಳನ್ನು ಕಾನೂನಿನ ಬಿಲ್‌ಗಳ ಮೂಲಕ ಹಮ್ಮಿಕೊಳ್ಳಬೇಕಾದ್ದು ನನ್ನ ಕರ್ತವ್ಯ. ಗೌಡಕಿ ಆರಂಭವಾದದ್ದು ಹೇಗೆ? ಅನ್ನುವುದೇ ಆಶ್ಚರ್ಯ. ಇದರಿಂದ ರೈತರ ಮನಃಶಾಂತಿ ಕದಡಿದೆ. ಮೈಯೆಲ್ಲ ದುಡಿದು ಬೆಳೆ ಬಿತ್ತುವವರು ರೈತರು, ಫಸಲು ತಯಾರಾದ ಮೇಲೆ ಅದನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವವರು ಗೌಡರು. ರೈತರ ಪಾಡು ಇವರ ಇಲ್ಲವೆ ಹಣವಂತರ ಮನಸ್ಸನ್ನು ಕಲಕುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಶ್ರಮಜೀವಿಗಳಾದ ರೈತರಿಗೆ ಅವರ ಕಷ್ಟದ ಫಲ ಸರ್ಕಾರ ದೊರಕಿಸಿ ಕೊಡಬೇಕು. ಮನುಷ್ಯನ ಬದುಕು ಹಾಗೂ ಸಂಪತ್ತನ್ನು

ರಕ್ಷಿಸುವುದು ಸರ್ಕಾರದ ಆದ್ಯಕರ್ತವ್ಯ ಹಾಗೂ ಸರ್ಕಾರ ಇಂತಹ ವಿಷಯಗಳಲ್ಲಿ ಬಡವರ ದೂರು ಕೇಳಿಸಿಕೊಳ್ಳದಿದ್ದರೆ ಅದು ಪ್ರಗತಿಪರ ಸರ್ಕಾರವೆನಿಸಿಕೊಳ್ಳುವುದಿಲ್ಲ. ರತ್ನಗಿರಿಯ ಪ್ರಬಲವಾದ ಗೌಡನೊಬ್ಬ ತನ್ನ ಅಧಿಕಾರವನ್ನು ಹೆಣ್ಣುಮಕ್ಕಳ ಮಾನ ಕಳೆಯುವುದಕ್ಕೆ ಉಪಯೋಗಿಸುತ್ತಾನೆ. ರೈತರು ಈ ಗೌಡಕಿಯಿಂದಾಗಿ ಗುಲಾಮಗಿರಿಯ ದುಷ್ಟಚಕ್ರದಲ್ಲಿ ಸಿಲುಕಿದ್ದಾರೆ.  ಅಧಿಕಾರದ ದುರುಪಯೋಗವನ್ನು ನ್ಯಾಯ ಅನ್ನಲು ಹೇಗೆ ಸಾಧ್ಯ! ಬ್ರಿಟಿಷ್‌ರಾಜ್ಯದಲ್ಲಿ ನಡೆಯುತ್ತಿರುವ ಗುಲಾಮಗಿರಿ ಸರ್ಕಾರ ಅಯೋಗ್ಯವೆನ್ನುವುದನ್ನು ಸಾಬೀತುಪಡಿಸಿದೆ. ಅನ್ಯಾಯದ ಹೊಸ್ತಿಲಿನಲ್ಲಿ ಆರೋಗ್ಯವಂತ ಸಮಾಜ ಸ್ಥಾಪಿಸಲು ಸಾಧ್ಯವಿಲ್ಲ. ಶಾಂತತೆಯಿರಬೇಕೆಂದರೆ ಸರ್ಕಾರ ನ್ಯಾಯ ಕೊಡಲೇಬೇಕು. ನ್ಯಾಯವಾದಿ ಸರ್ಕಾರ ಇಷ್ಟು ವರ್ಷಗಳವರೆಗೆ ಗೌಡಕಿಯನ್ನು ಮುಂದುವರೆಸಿ ಕೊಂಡು ಹೋಗುತ್ತಿರುವುದು ಅನ್ಯಾಯ.  ಸರ್ಕಾರಿ ಜಮೀನುಗಳ ಮೇಲೆ ಗೌಡರು ಹಕ್ಕುಗಳನ್ನು ಹೇಳಿಕೊಂಡು ರೈತ ಕಾರ್ಮಿಕರಿಗೆ (ಕೇವಲ ಗೌಡನ ಹೊಲ ಉತ್ತು ಬಿತ್ತುವವರು) ಕಿರುಕುಳ ಕೊಡುವಂತಹದ್ದು ಯಾವ ಪದ್ಧತಿ? ಇವೆಲ್ಲ ರೀತಿಯಿಂದಲೂ ಯೋಚಿಸಿದಾಗ ಗೌಡಕಿ ದೋಷ ಪೂರಿತವಾಗಿರುವುದು ಕಂಡುಬರುತ್ತದೆ. ಸಣ್ಣಪುಟ್ಟ ದೂರುಗಳಿಗೆ ಸರ್ಕಾರ ಯಾವತ್ತೂ ಕಿವಿಗೊಡುವುದಿಲ್ಲ. ನೀವು ನಿಮ್ಮ ಚಳುವಳಿಯನ್ನು ಧೈರ್ಯದಿಂದ ಮುಂದುವರೆಸಿರಿ. ನಮ್ಮ ಮೇಲಾಗುತ್ತಿರುವ ಅನ್ಯಾಯದ ಬಗ್ಗೆ ಮತೆ ಮತ್ತೆ ಸರ್ಕಾರದ ಗಮನ ಸೆಳೆಯುತ್ತ ಎದುರಾಳಿಯ ವಿರುದ್ಧ ಹೋರಾಡಿದರೆ ಮಾತ್ರ ಮುಂಬರುವ ನಾಲ್ಕೈದು ವರ್ಷಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಪೋಷಕವಾಗಿರುವಂತಹ ಹಕ್ಕುಗಳು ನಮಗೆ ಸಿಗಲಿವೆ. ಇಲ್ಲಿಯವರೆಗೆ ಚಳುವಳಿ ನಡೆಸಲು ಸರ್ಕಾರದ ಕಾಲು ಬಿದ್ದು ಅನುಮತಿ ಪಡೆಯಬೇಕಾಗುತ್ತಿತ್ತು ಆದರೆ ನಾಲ್ಕೈದು ವರ್ಷದಲ್ಲಿ ಸಂಪೂರ್ಣ ಅಧಿಕಾರ ಸಿಗಲಿದೆ.

ಕೌನ್ಸಿಲ್‌ನಲ್ಲಿ ನಿಮ್ಮ ಪ್ರಾಂತ್ಯದ ಪ್ರತಿನಿಧಿಗಳನ್ನು ಕಳಿಸುವಾಗ ಜಾಗರೂಕತೆ ವಹಿಸಿ. ಯಾರು ಏನೇ ಹೇಳಿದರೂ ಯಾರದ್ದೇ ಹೇಳಿಕೆಗೆ ಕಟ್ಟು ಬೀಳದೆ ನಿಮ್ಮ ವಿಚಾರಗಳನ್ನು ಅನುಮೋದಿಸುವವನನ್ನೇ ಕೌನ್ಸಿಲ್ಲಿಗೆ ಕಳಿಸಿಕೊಡಿ. ಎಲ್ಲರೀತಿಯಿಂದ ಯೋಚಿಸಿಯೇ ಪ್ರತಿನಿಧಿಗಳನ್ನು ಆರಿಸಿ, ಖೋತರನ್ನು ಇಲ್ಲವೆ ಗೌಡರನ್ನು ತಪ್ಪಿಯೂ ಕೌನ್ಸಿಲ್ಲಿಗೆ ಆರಿಸಿ ಕಳಿಸಬೇಡಿ. ನಮ್ಮ ಸಾಮಾಜಿಕ ಜೀವನ ಪರಾವಲಂಬಿಯಾಗಿರುವುದರಿಂದ ಒಬ್ಬರನ್ನೊಬ್ಬರು ನಂಬಿ ಬಾಳದೆ ಬೇರೆ ದಾರಿಯಿಲ್ಲ, ಕುಣಬಿ ಜಾತಿಯವರು ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬರುವಂತಹ ಮೇಲ್ಜಾತಿಯ ಜನರ ಕಡಿಮೆ ದರ್ಜೆಯ ಕೆಲಸಗಳನ್ನು ಮಾಡಿತಮ್ಮ ಸಾಮಾಜಿಕ ಸ್ಥಿತಿಯನ್ನು ಹೀನ ದರ್ಜೆಗೆ ತರಬಾರದು. ಸ್ವಾವಲಂಬನೆ ಹಾಗೂ ಸ್ವಾಭಿಮಾನವನ್ನು ಕಾಪಾಡಿಕೊಂಡು ತಮ್ಮ ಕಾರ್ಯ ನಿರ್ವಹಿಸುವಾಗ ಒಗ್ಗಟ್ಟು ಹಾಗೂ ಸಂಘಟನೆಯನ್ನೂ ಸ್ಥಾಪಿಸಬೇಕು. ಹೀಗೆ ಒಗ್ಗಟ್ಟಿನಿಂದ ಹಾಗೂ ಸಂಘಟನೆಯ ಮೂಲಕ ನಡೆಸುವ ಚಳುವಳಿಯಿಂದ ನಾವು ನಮ್ಮ ದೂರುಗಳನ್ನು ಕೌನ್ಸಿಲ್‌ನ ಗಮನಕ್ಕೆ ತರಬಹುದು. ಹೀಗೆ ಪಟ್ಟು ಬಿಡದೆ ಪ್ರಯತ್ನಿಸಿದರೆ ಯಶಸ್ಸು ಖಂಡಿತ ಸಿಗುತ್ತದೆ ಅನ್ನುವುದರಲ್ಲಿ ಅನುಮಾನವೇಯಿಲ್ಲ' ಅಂದರು.

ಅಧ್ಯಕ್ಷರ ಭಾಷಣವಾದ ಮೇಲೆ ಕೆಳಗಿನ ಕೆಲವು ಮಸೂದೆಗಳು ಒಮ್ಮತದಿಂದ ಮಂಜೂರಾದವು.

'ಗೌಡಕಿಯು ಸಂಪೂರ್ಣವಾಗಿ ಗುಲಾಮಗಿರಿಯಾಗಿದ್ದು ಇದರಿಂದ ರೈತರು ಸಂಪೂರ್ಣವಾಗಿ ಗೌಡರ ನಿಯಂತ್ರಣದಲ್ಲಿದ್ದಾರೆ.. . . . . . . .

ಗೌಡಕಿಯು ಆರ್ಥಿಕವಾಗಿ ಜೀತದಾಳುಗಳಿಗೆ ನಷ್ಟದಾಯಕವಾಗಿದೆ ಅಷ್ಟೇಯಲ್ಲ ನೈತಿಕ ದೃಷ್ಟಿಯಿಂದ ಕೂಡ ಘಾತುಕವಾಗಿದ್ದು ಜೀತದಾಳುಗಳಿಗೆ ಯಾವುದೇ ರೀತಿಯಿಂದ ತಮ್ಮಲ್ಲಿ ಸುಧಾರಣೆ ಮಾಡಿಕೊಳ್ಳುವ ಸ್ವಾತಂತ್ರ್ಯ ಉಳಿಯುವುದಿಲ್ಲ. ಇಂತಹ ಗೌಡಕಿಯನ್ನು ಈ ಪರಿಷತ್ತು ನಿಷೇಧಿಸುತ್ತದೆ ಹಾಗೂ ಅದನ್ನು

ನಿಲ್ಲಿಸುವಂತೆ ಸರ್ಕಾರಕ್ಕೆ ಒತ್ತಾಯಿಸುತ್ತದೆ.

ಮೇಲಿನ ಮಸೂದೆಯ ಪರವಾಗಿ ಶ್ರೀ. ರಗಜಿ, ಶ್ರೀ. ಬೆಂಡಕೆ ಇವರುಗಳ ಭಾಷಣಗಳಾದವು. ಅಷ್ಟೇಯಲ್ಲದೆ ಇನ್ನೂ ಸಣ್ಣಪುಟ್ಟ ಮಸೂದೆಗಳು ಮಂಜೂರಾದವು. ಈ ಪರಿಷತ್ತಿನ ಕಾರ್ಯಕಲಾಪಗಳು ಸಾಯಂಕಾಲ ೭ ಘಂಟೆಗೆ ಮುಗಿದವು.'ಡಾ.ಅಂಬೇಡ್ಕರ್ ಕೀ ಜಯ್' ಅನ್ನುವ ಘೋಷಣೆಯೊಂದಿಗೆ ವಂದನಾರ್ಪಣೆ ಹಾಗೂ ಹಾರ, ಎಲೆ ಅಡಿಕೆಕೊಟ್ಟು ಸನ್ಮಾನಿಸುವುದರ ಮೂಲಕ ಸಮಾರಂಭ ಮುಕ್ತಾಯಗೊಂಡಿತು.

## ೨೭.

# ಮುಂಬಯಿ ಇಲಾಖೆಯ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ

ಮುಂಬಯಿಯ ಶಿಕ್ಷಣ ಮಂತ್ರಿಗಳಾದ ನಾ.ಮೌಲವಿ ರಫಿಉದ್ದೀನ್ ಅಹಮದ್ ಅವರ ಆಮಂತ್ರಣದ ಮೇರೆಗೆ ಮಹಾಬಳೇಶ್ವರ್‌ನಲ್ಲಿ ಕಳೆದ ತಿಂಗಳ ೬ ನೆಯ ಮೆ ೧೯೨೫ ರಂದು ಈ ಭಾಗದಲ್ಲಿ ಆದಷ್ಟು ವೇಗವಾಗಿ ಪ್ರಾಥಮಿಕ ಶಿಕ್ಷಣದ ಪ್ರಸಾರವನ್ನು ಯಾವ ರೀತಿಯಲ್ಲಿ ಮಾಡಲು ಸಾಧ್ಯ? ಅನ್ನುವುದರ ಬಗ್ಗೆ ವಿಚಾರ ವಿನಿಮಯ ಮಾಡಲು ಪ್ರಾಥಮಿಕ ಶಿಕ್ಷಣದ ಪ್ರಸಾರದ ಬಗ್ಗೆ ಆಸಕ್ತಿಯಿರುವಂತಹ ವಿವಿಧ ಜಿಲ್ಲೆಗಳಿಂದ ಹಾಗೂ ವಿವಿಧ ಜಾತಿ ಧರ್ಮಗಳ ಜನರ ಒಂದು ಚಿಕ್ಕ ಪರಿಷತ್ತು ಸೇರಿತ್ತು. ಡಾ. ಬಾಬಾ ಸಾಹೇಬ್ ಅಂಬೇಡ್ಕರರು ಕೂಡ ಈ ಪರಿಷತ್ತಿಗೆ ಹಾಜರಿದ್ದರು.ಅವರು ಶಿಕ್ಷಣ ಮಂತ್ರಿ ಹಾಗೂ ಪರಿಷತ್ತಿನ ಸಭಾಸದರೆದುರು ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಮಂಡಿಸಿದರು. ತಮ್ಮ ಭಾಷಣದಲ್ಲವರು,

'ಪ್ರಾಥಮಿಕ ಶಿಕ್ಷಣದ ಪ್ರಸಾರ ಅನ್ನುವುದು ದೇಶದ ದೃಷ್ಟಿಯಲ್ಲಿ ಅತ್ಯಂತ ಮಹತ್ವವಾದ ಪ್ರಶ್ನೆಯಾಗಿದೆ. ಈಗಿನ ಕಾಲದಲ್ಲಿ ಸಾಕಷ್ಟು ಅನಕ್ಷರಸ್ಥರಿರುವ ದೇಶದ ಭವಿಷ್ಯ ಕತ್ತಲಿನಲ್ಲಿದೆ. ಪ್ರಾಥಮಿಕ ಶಿಕ್ಷಣದ ಪ್ರಸಾರ ದೇಶದ ವ್ಯಾಪಕ ಬೆಳವಣಿಗೆಯ ಅಡಿಪಾಯ. ಈ ಪ್ರಶ್ನೆಯನ್ನು ಕೇವಲ ಜನರ ಇಷ್ಟಾನಿಷ್ಟದ ಮೇಲೆ ಬಿಟ್ಟರೆ ಪ್ರಾಥಮಿಕ ಶಿಕ್ಷಣದ ಪ್ರಸಾರವಾಗಲು ಶತಕಗಳೆ ಕಳೆದಾವು ಹಾಗಾಗಿ ಶಿಕ್ಷಣದ ವಿಷಯದಲ್ಲಿ ಕಡ್ಡಾಯವಾದ ಕಾನೂನು ಜಾರಿಗೆ ತರಬೇಕಾಗುತ್ತದೆ. ಈಗ ಸಾಕಷ್ಟು ಮುಂದುವರೆದ ದೇಶಗಳಲ್ಲಿ ಶಿಕ್ಷಣದ ಬಗ್ಗೆ ಕಡ್ಡಾಯವಾದ ಕಾನೂನಿನ ಮೂಲಕವೆ ಜನತೆಯ ನಿರಕ್ಷರತೆಯನ್ನು ಹೋಗಲಾಡಿಸಿರುವುದನ್ನು ನಾವು ಕಾಣುತ್ತೇವೆ. ಶಿಕ್ಷಣದ ಲಾಭ ಈಗಾಗಲೇ ಪಡೆಯುತ್ತಿರುವವರ ಮೇಲೆ ಕಡ್ಡಾಯದ ಅಗತ್ಯವಿಲ್ಲ. ಆದರೆ ಶಿಕ್ಷಣದ ಮಹತ್ವವೇಗೊತ್ತಿರದ ಹಾಗೂ ಶಿಕ್ಷಣದ ಬಗ್ಗೆ ಉದಾಸೀನವಿರುವವರಿಗೆ ಕಡ್ಡಾಯವಾದ ಕಾನೂನಿನ ಅಗತ್ಯವಿದೆ. ಹಾಗಾಗಿ ಇಂದು ಶಿಕ್ಷಣದಲ್ಲಿ ಹಿಂದುಳಿದಿರುವ ಜನರಿಗಾಗಿ ಇದು ಅತ್ಯಂತ ಶ್ರದ್ಧೆಯ ಪ್ರಶ್ನೆಯಾಗಿದೆ. ಪ್ರಾಥಮಿಕ ಶಿಕ್ಷಣದ ಬಗ್ಗೆ ಕಡ್ಡಾಯವಾದ ಕಾನೂನು ಇರಬೇಕು ಎಂದು ಕೈ. ನಾ. ಗೋಪಾಲ ಕೃಷ್ಣ ಗೋಖಲೆಯವರು ತಂದ ಬಿಲ್‌ನಿಂದ ಚಳುವಳಿ ಆರಂಭವಾಯಿತು. ಆ ಬಿಲ್ಲಿಗೆ ದೇಶದ ಎಲ್ಲಜನತೆ ವಿಶೇಷವಾಗಿ ಹಿಂದುಳಿದ ಜನಾಂಗದ ನಾಯಕರು ಉತ್ಸಾಹದಿಂದ ಬೆಂಬಲ ನೀಡಿದರು.ಆದರೆ ಕೆಲವು ಪ್ರಾಂತ್ಯಗಳಲ್ಲಿ ಕಡ್ಡಾಯವಾದ ಕಾನೂನು ಜಾರಿಗೆ ತರಲು ಸಾಕಷ್ಟು ವರ್ಷಗಳೇ ಕಳೆದವು. ಮುಂಬಯಿ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣದ ಕಡ್ಡಾಯವಾದ ಕಾನೂನು ಬಂದಾಗಿದೆ. ಆದರೆ ಅದನ್ನು ಮುಂಬಯಿಯ ಎಲ್ಲೆಡೆ ಜಾರಿಗೆ ತರಲು ಮ್ಯುನಿಸಿಪಾಲಟಿ ಹಾಗೂ ಲೋಕಲ್ ಬೋರ್ಡ್‌ಗಳನ್ನವಲಂಬಿಸಿದ್ದಾರೆ. ಸರ್ಕಾರ ಸ್ವಲ್ಪಮಟ್ಟಿಗೆ ಸಹಾಯ ಮಾಡುವ ಆಶ್ವಾಸನೆ ಕೊಟ್ಟಿದೆಯಾದರೂ ಈ ಕಾನೂನು ಜಾರಿಗೆ ತಂದರೆ ಆಗುವ ಖರ್ಚು ಭರಿಸುವ ಜವಾಬ್ದಾರಿ ಮುನಿಸಿಪಾಲ್ಟಿ ಇಲ್ಲವೆ ಲೋಕಲ್ ಬೋರ್ಡಗಳು ಹೊರುತ್ತಿಲ್ಲ, ಹಾಗಾಗಿ ಇದನ್ನುಜಾರಿಗೆ ತರುವಲ್ಲಿ ಸಾಕಷ್ಟು ತಡವಾಗುತ್ತಿದೆ. ೧೯೨೦-೨೧ರಲ್ಲಿ ಈ ಇಲಾಖೆಯ ಗಂಡು ಹಾಗೂ ಹೆಣ್ಣುಮಕ್ಕಳ ಶಾಲೆಗಳ ಸಂಖ್ಯೆ ೧೩,೦೦೦ ಸಾವಿರಕ್ಕಿಂತ ಕಡಿಮೆಯಿತ್ತು ಹಾಗೂ ಅಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ೮ ಲಕ್ಷ ೧ ಸಾವಿರದಷ್ಟಿತ್ತು. ೧೯೨೬-೨೭ ರಲ್ಲಿ ಶಾಲೆಗಳ ಸಂಖ್ಯೆ ೧೩,೮೩೫

ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಶೇಕಡ ೧೪ ರಷ್ಟು ಹೆಚ್ಚಿತು. ೧೯೨೦-೨೧ರಲ್ಲಿ ಪ್ರಾಥಮಿಕ ಶಿಕ್ಷಣದ ಖರ್ಚು ೧ ಕೋಟಿ ೨೭ ಲಕ್ಷ ರೂಪಾಯಿಗಳು ಹಾಗೂ ೧೯೨೬-೨೭ರಲ್ಲಿ ೧ ಕೋಟಿ ೯೭ ಲಕ್ಷ ರೂಪಾಯಿಗಳಷ್ಟಾಗಿತ್ತು. ಈ ಅಂಕಿಗಳು ಪ್ರಗತಿ ತೋರಿಸುತ್ತಿದ್ದರೂ ಬಹುಜನ ಸಮಾಜದ ನಿರಕ್ಷರತೆ ಇನ್ನೂ ಯಾವ ಹಂತದಲ್ಲಿದೆ ಅನ್ನುವುದನ್ನು ಗಮನಿಸಿದಾಗ ಒಟ್ಟು ಪ್ರಗತಿ ತುಂಬಾ ನಿಧಾನವಾಗಿ ಸಾಗಿದೆ ಅನ್ನಬಹುದು. ೧೯೨೧ರ ಚಂದಾವರಕರ್ ಕಮಿಟಿಯ ರಿಪೋರ್ಟ್‌ನಲ್ಲಿಯ ಶಿಫಾರಸ್ಸುಗಳು ಜಾರಿಗೆ ಬಂದಿದ್ದಿದ್ದರೆ ಇಂದು ಪ್ರಾಥಮಿಕ ಶಿಕ್ಷಣದಲ್ಲಿ ಸಾಕಷ್ಟು ಬೆಳವಣಿಗೆ ಕಂಡುಬರುತ್ತಿತ್ತು. ಈ ಕಮಿಟಿಯು ಹತ್ತು ವರ್ಷಗಳ ಕಾರ್ಯ ಕ್ರಮಗಳನ್ನು ಯೋಜಿಸಿ ಅವುಗಳನ್ನು ಜಾರಿಗೆ ತರಲು ವರ್ಷಕ್ಕೆ ೧ ಕೋಟಿ ೧೦ ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಬೇಕಾದೀತು ಅನ್ನುವ ಅಂದಾಜು ಕೊಟ್ಟಿತ್ತು. ಈ ಮೊತ್ತದಲ್ಲಿ ೭೭ ಲಕ್ಷ ರೂಪಾಯಿಗಳಷ್ಟು ಹಣ ಸರ್ಕಾರ ಕೊಡಬೇಕಿತ್ತು. ಆದರೆ ಮುಂದಿನ ವರ್ಷಗಳಲ್ಲಿ ಹೆಚ್ಚುವ ಮೊತ್ತವನ್ನು ಗಮನಿಸಿ ಈ ಅಂಕಿಯಲ್ಲಿ ಬದಲಾವಣೆ ಮಾಡಬೇಕಾಯಿತು. ಕಡ್ಡಾಯ ಶಿಕ್ಷಣದ ಕಾನೂನನ್ನು ಎಲ್ಲೆಡೆ ಜಾರಿಗೆ ತರಲು ೧ ಕೋಟಿ ೮೩ ಲಕ್ಷ ರೂಪಾಯಿಗಳಷ್ಟು ಹೆಚ್ಚು ಖರ್ಚು ಮಾಡಬೇಕಾದೀತು ಹಾಗೂ ಅದರಲ್ಲಿ ೧ ಕೋಟಿ ೨೧ ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಡಬೇಕಾಗುತ್ತದೆ ಅನ್ನುವುದು ಇಂದಿನ ಅಂದಾಜಾಗಿದೆ. ಕಡ್ಡಾಯ ಶಿಕ್ಷಣಕ್ಕಾಗಿ ತಗಲುತ್ತಿರುವ ಖರ್ಚನ್ನು ಜಿಲ್ಲಾ ಲೋಕಲ್ ಬೋರ್ಡ್ ೨\೩ ರಷ್ಟು ಹಾಗೂ ಮುನಿಸಿಪಾಲ್ಟಿಯು ೧\೨ ರಷ್ಟು ಹಣ ಭರಿಸುವ ಜವಾಬ್ದಾರಿಯನ್ನು ಕಾನೂನು ಸರ್ಕಾರಕ್ಕೆ ವಹಿಸಿದೆ. ಹಾಗೆಯೇ ಸ್ವಯಂಪ್ರೇರಿತ (ಸ್ವಂತ ಖುಷಿಯಿಂದ) ಶಿಕ್ಷಣಕ್ಕೆ ಸಂಬಂಧಿಸಿದಂತಹ ಯೋಜನೆಯ ಖರ್ಚನ್ನು ಕೂಡ ಅದೇ ಪ್ರಮಾಣದಲ್ಲಿ ಆದರೆ ಅವರಲ್ಲಿ ಹಣದ ವ್ಯವಸ್ಥೆಯಾದಾಗ ಕೊಡುವುದಾಗಿ ಸರ್ಕಾರ ಆಶ್ವಾಸನೆ ನೀಡಿದೆ. ೧೯೨೨-೨೩ ರಿಂದ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮುಂಬಯಿ ಸರ್ಕಾರದ ಖರ್ಚು, ಮುಂಬಯಿ ಮುನಿಸಿಪಾಲಟಿಯ ಗ್ರಾಂಟ್‌ಎಲ್ಲವನ್ನು ಸೇರಿಸಿ ೨೮ ಲಕ್ಷದಷ್ಟು ಹೆಚ್ಚಿದೆ. ಆದರೆ ಈ ಹೆಚ್ಚಿದ ಖರ್ಚಿನ ಹೆಚ್ಚಿನ ಭಾಗ ಶಿಕ್ಷಕರ ಹೆಚ್ಚಿರುವ ಸಂಬಳ ನುಂಗಿಹಾಕಿದೆ. ಕಡ್ಡಾಯ ಹಾಗೂ ಸ್ವಯಂಪ್ರೇರಿತ ಶಿಕ್ಷಣಗಳ ಯೋಜನೆಗಳನ್ನು ಮಂಡಿಸಿ ಸರ್ಕಾರದೆದುರು ಕೈಒಡ್ಡಿ ಸಹಾಯ ಬೇಡಿದಾಗ ಸರ್ಕಾರ ಕೇವಲ ೬ ಲಕ್ಷ ರೂಪಾಯಿಗಳ ಯೋಜನೆಯನ್ನು ಮಾತ್ರ ಮಂಜೂರು ಮಾಡಿತು. ಕಾನೂನು ಯೋಜಿಸಿರುವಂತೆ ಕಡ್ಡಾಯ ಶಿಕ್ಷಣದ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಇನ್ನೂ ೧ ಕೋಟಿ ೭೨ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಹಾಗೂ ಅದರಲ್ಲಿ ೧ ಕೋಟಿ ೧೫ ಲಕ್ಷ ರೂಪಾಯಿ ಸರ್ಕಾರ ಕೊಡಬೇಕಾಗುತ್ತದೆ. ಇಷ್ಟು ದೊಡ್ಡ ಮೊತ್ತದ ಹಣ ಖರ್ಚು ಮಾಡಬೇಕೆಂದರೆ ಜನತೆಯ ಮೇಲೆ ಹೆಚ್ಚಿನ ತೆರಿಗೆ ಹೇರಲಾಗಬಹುದು ಹಾಗಾಗಿ ಎಂತಹ ತೆರಿಗೆಗಳಿರಬೇಕು ಅನ್ನುವುದನ್ನು ಕೂಡ ಚಂದಾವರಕರ್ ಕಮಿಟಿ ಸೂಚಿಸಿತ್ತು. ಆದರೆ ಆ ವಿಷಯದ ಬಗ್ಗೆ ಇನ್ನು ಯಾವುದೇ ನಿರ್ಧಾರ ತೆಗೆದುಕೊಂಡಂತೆ ಕಾಣುವುದಿಲ್ಲ. ಒಂದೋ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ನಡುವೆ ತೆರಿಗೆ ಹೊಂಚಿಕೊಳ್ಳುವ ವಿಷಯದ ಬಗ್ಗೆ ವಾದ ನಡೆದಿದೆ. ಕೇಂದ್ರ ಸರ್ಕಾರದಿಂದ ಮುಂಬಯಿ ಸರ್ಕಾರಕ್ಕೆ ಪ್ರತಿ ವರ್ಷ ಹೆಚ್ಚು ಮೊತ್ತ ಸಿಕ್ಕರೆ ಅಷ್ಟರ ಮಟ್ಟಿಗೆ ಹಣದ ಸಮಸ್ಯೆ ಪರಿಹಾರವಾಗುತ್ತದೆ. ಈ ವಿಷಯದಲ್ಲಿ ಸೈಮನ್ ಕಮಿಶನ್ ನಿಂದ ಕೂಡ ಕೆಲವು ಸೂಚನೆಗಳು ಬರುವ ಸಾಧ್ಯತೆಗಳಿವೆ. ಹಾಗಾದರೆ ಹೆಚ್ಚಿನ ತೆರಿಗೆ ವಿಧಿಸಿ ಶಿಕ್ಷಣಕ್ಕೆ ಬೇಕಾದಂತಹ ಹೆಚ್ಚು ಮೊತ್ತದ ಸಮಸ್ಯೆ ಪರಿಹಾರ ಮಾಡುವ ಸಾಧ್ಯತೆಗಳಿವೆ. ನಮ್ಮ ಮಟ್ಟಿಗೆ ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಶ್ನೆಗಳ ಎರಡು ಮುಖ್ಯ ಭಾಗಗಳಿವೆ. ೧. ಶಿಕ್ಷಣದ ಮೇಲಿನ ಹಿಡಿತ ೨. ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವ ಜವಾಬ್ದಾರಿ. ಈ ಎರಡೂ ಭಾಗಗಳಲ್ಲಿ ಸಧ್ಯದ ಕಡ್ಡಾಯ

ಪ್ರಾಥಮಿಕ ಶಿಕ್ಷಣದ ಕಾಯಿದೆಯಲ್ಲಿ ದೋಷಗಳಿವೆ ಎಂದು ನನಗನಿಸುತ್ತದೆ. ಆಂತರಿಕ ಸ್ವರಾಜ್ಯದ ವಿರುದ್ಧ ನಾವಿಲ್ಲ. ಆದರೆ ಸಧ್ಯಕ್ಕೆ ಈ ವಿಷಯ ಶೈಕ್ಷಣಿಕ ವಿಷಯದ ಮಧ್ಯೆ ಬರದಿದ್ದರೆ ಒಳ್ಳೆಯದು. ಮುನಿಸಿಪಾಲ್ಟಿ ಹಾಗೂ ಲೋಕಲ್ ಬೋರ್ಡ್‌ಗೆ ಆರಿಸಿ ಬರುವ ಜನರಲ್ಲಿ ಕೆಲವರು ಶಿಕ್ಷಣದ ಮೇಲೆ ಹಿಡಿತವಿಡಲು ಅಸಮರ್ಥರಾಗಿದ್ದಾರೆ. ಅನೇಕರಿಗೆ ಶಿಕ್ಷಣದ ಧ್ಯೇಯ ಹಾಗೂ ಶಿಕ್ಷಣ ಪದ್ಧತಿ ಇವುಗಳ ಬಗ್ಗೆ ಸರಿಯಾದ ಕಲ್ಪನೆಯೂ ಇರುವುದಿಲ್ಲ. ಅಲ್ಲದೆ ಜಾತಿಭೇದ ಹಾಗೂ ಪಕ್ಷಭೇದ ಇವುಗಳಿಂದಾಗಿ ಸಭಾಸದರಲ್ಲಿ ಸ್ಪರ್ಧೆ ಏರ್ಪಡುತ್ತದೆ. ಇವೆಲ್ಲದರ ಪರಿಣಾಮ ಶಾಲೆಗಳ ವ್ಯವಸ್ಥೆಯ ಮೇಲಾಗುತ್ತದೆ. ಶಿಕ್ಷಕರು ಕೂಡ ತಮ್ಮ ಲಾಭಕ್ಕಾಗಿ ಇಲ್ಲವೆ ತಮ್ಮ ಉಳಿವಿಗಾಗಿ ಸಭಾಸದರಲ್ಲಿ ಶಿಫಾರಸ್ಸಿಗಾಗಿ ದುಂಬಾಲು ಬೀಳುತ್ತಾರೆ. ಸಭಾ ಸದರಿಗೂ ಚುನಾವಣೆ ಕಾಲದಲ್ಲಿ ಮತ್ತು ಸಿಗಲು ಶಿಕ್ಷಕರ ಅವಶ್ಯಕತೆಯಿರುತ್ತದೆ. ಈ ಎಲ್ಲ ಪ್ರಸಂಗಗಳಿಂದ ಶಾಲೆಯ ಕೆಲಸಕಾರ್ಯಗಳಲ್ಲಿ ಶಿಸ್ತು ಇಲ್ಲದಾಗುತ್ತದೆ. ಮುಂಬಯಿ ಮುನಿಸಿಪಾಲಿಟಿಯ ಶಾಲೆಗಳ ಕೆಲಸಕಾರ್ಯಗಳಲ್ಲೂ ಈ ಎಲ್ಲ ಪ್ರಕಾರಗಳು ಕಂಡುಬರುತ್ತವೆ ಅಂದಮೇಲೆ ಸಣ್ಣಪುಟ್ಟ ಮುನಿಸಿಪಾಲಟಿ ಹಾಗೂ ಲೋಕಲ್ ಬೋರ್ಡಿನ ನಿಯಂತ್ರಣದಲ್ಲಿರುವ ಶಾಲೆಯ ಕೆಲಸಗಳು ಹೇಗೆ ನಡೆಯುತ್ತಿರಬಹುದು ಅನ್ನುವುದನ್ನು ಪ್ರತಿಯೊಬ್ಬರೂ ಯೋಚಿಸಬೇಕು. ಈಗಿರುವ ಪದ್ಧತಿಯಿಂದ ತೀರ ಹಿಂದುಳಿದ ಇಲ್ಲವೆ ಅಲ್ಪಸಂಖ್ಯಾತರ ಹಿತಾಸಕ್ತಿಯ ರಕ್ಷಣೆಯಾಗುವುದಿಲ್ಲ. ಸುಮಾರು ಸಲ ದಲಿತರ ಹಾಗೂ ಮುಸಲ್ಮಾನರ ಪೈಕಿ ಒಬ್ಬನೇ ಸಭಾಸದನಿರುತ್ತಾನೆ. ಅವನು ಮುನಿಸಿಪಾಲಿಟಿಯ ಇಲ್ಲವೆ ಲೋಕಲ್ ಬೋರ್ಡಿನ ಕೆಲಸಕಾರ್ಯಗಳಲ್ಲಿ ವತನದಾರ ಜಾತಿಯ ಸಭಾಸದನೆದುರು ಅಸಹಾಯಕನಾಗಬೇಕಾಗುತ್ತದೆ. ಈ ಎಲ್ಲ ವಿಷಯಗಳ ಬಗ್ಗೆ ಯೋಚಿಸಿದಾಗ ಶಿಕ್ಷಣದ ಮೇಲೆ ರಾಜ್ಯ ಸರ್ಕಾರದ ಹಿಡಿತ ಇರಬೇಕಾದ್ದು ಅಗತ್ಯವಾಗಿದೆ ಅನಿಸುತ್ತದೆ. ರಸ್ತೆಗಳನ್ನು ತಯಾರಿಸುವುದು, ಚರಂಡಿ ಸ್ವಚ್ಛ ಮಾಡುವ ಕೆಲಸಗಳಿಗಿಂತಲೂ ಶಿಕ್ಷಣ ಸಾಕಷ್ಟು ಬೇರೆಯದಾಗಿದೆ. ರಾಜ್ಯದಲ್ಲಿ ಆಂತರೀಕ ಸ್ವಾತಂತ್ರ್ಯ ಕೇಳಿ ಪಡೆದು ದೇಶದ ದೃಷ್ಟಿಯಿಂದ ಶಿಕ್ಷಣದ ಧೋರಣೆಯನ್ನು ನಿರ್ಧರಿಸಿದರೆ ನಮಗ್ಯಾವ ಆಪತ್ತಿಯೂ ಇಲ್ಲ. ಆದರೆ ಶಿಕ್ಷಣದಲ್ಲಿ ನಿರಂಕುಶತೆ ಇರಬೇಕು. ಶಾಲೆಯ ಕೆಲಸಕಾರ್ಯಗಳು ಶಿಸ್ತಿನಲ್ಲಿ ನಡೆಯಬೇಕು, ಹಾಗೂ ಒಳ್ಳೆಯ ಶಿಕ್ಷಣ ಸಿಗಬೇಕು. ಯಾವಯಾವದೋ ಜನ ಬಂದು ಶೈಕ್ಷಣಿಕ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುವಂತಾಗಬಾರದು. ಕಳೆದ ಕೆಲವು ವರ್ಷಗಳಲ್ಲಿ ಸ್ಥಳೀಯ ಸ್ವಾರಾಜ್ಯ ಸಂಸ್ಥೆಗಳ ಅಶಿಸ್ತು ಕಾರುಬಾರು ಎಲ್ಲರೆದುರು ಬಹಿರಂಗವಾಗಿದೆ ಹಾಗೂ ಸರ್ಕಾರ ಆ ಸಂಸ್ಥೆಯ ಅಧಿಕಾರಗಳನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡಿದೆ. ಉಳಿದ ವಿಷಯಗಳಲ್ಲಿ ಬೇಕಾಬಿಟ್ಟಿ ಕೆಲಸಗಳನ್ನು ಮಾಡಿದರೆ ಸಾರ್ವಜನಿಕರ ಹಣ ಪೋಲಾಗಬಹುದು ಆದರೆ ಶೈಕ್ಷಣಿಕ ಕಾರುಬಾರಿನಲ್ಲಿ ಬೇಕಾಬಿಟ್ಟಿತನ ಹೆಚ್ಚಾದರೆ ಹೊಸ ಪೀಳಿಗೆ ನಷ್ಟ ಅನುಭವಿಸುತ್ತದೆ ಅನ್ನುವ ಈ ವ್ಯತ್ಯಾಸವನ್ನು ಎಂದೂ ಮರೆಯಬಾರದು. ಇದಲ್ಲದೆ ಶಿಕ್ಷಣದ ಮೇಲೆ ರಾಜ್ಯ ಸರ್ಕಾರದ ಹತೋಟಿಯೇ ಏಕಿರಬೇಕು ಅನ್ನುವ ಪ್ರಶ್ನೆಗೆ ಪುಷ್ಟಿ ಕೊಡುವ ಮಹತ್ವದ ವಿಷಯ ಏನೆಂದರೆ ಶಿಕ್ಷಣಕ್ಕಾಗಿ ೮೦% ಕ್ಕಿಂತ ಹೆಚ್ಚು ಖರ್ಚು ರಾಜ್ಯ ಸರ್ಕಾರದಿಂದಾಗುತ್ತದೆ. ಸ್ಥಳೀಯ ಸಂಸ್ಥೆಗಳು ಕೇವಲ ೧೫\೨೦ ರಷ್ಟೇ ಖರ್ಚು ಮಾಡುತ್ತವೆ. ಹಾಗಾಗಿ ಶಿಕ್ಷಣದ ಮೇಲೆ ಹತೋಟಿ ಇಡುವ ಹಕ್ಕು ರಾಜ್ಯ ಸರ್ಕಾರಕ್ಕೇ ಸಿಗಬೇಕು. ಅದರಂತೆ ಪ್ರಾಥಮಿಕ ಶಿಕ್ಷಣ ಎಲ್ಲೆಡೆ ಹರಡುವಂತೆ ಮಾಡುವ ಜವಾಬ್ದಾರಿ ಕೂಡ ಸರ್ಕಾರದ ಮೇಲಿರಬೇಕಾದ್ದು ಅಗತ್ಯವಾಗಿದೆ. ಸಧ್ಯದ ಕಡ್ಡಾಯ ಶಿಕ್ಷಣದ ಕಾಯಿದೆಯಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ಮುನಿಸಿಪಾಲ್ಟಿ ಹಾಗೂ ಲೋಕಲ್ ಬೋರ್ಡಿನ ಮೇಲೆ ಹಾಕಿ ಸರ್ಕಾರ ಕೈತೊಳೆದುಕೊಂಡಿದೆ. ಲೋಕಲ್ ಬೋರ್ಡಿಗೆ ೨\೩ ಹಾಗೂ ಮುನಿಸಿಪಾಲ್ಟಿಗೆ ಅರ್ಧದಷ್ಟು ಖರ್ಚಿನ ಜವಾಬ್ದಾರಿ ಸರಿಯಲ್ಲ. ಲೋಕಲ್ ಬೋರ್ಡ್ ಹಾಗೂ ಮುನಿಸಿಪಾಲ್ಟಿಗಳ ಆರ್ಥಿಕ

ಪರಿಸ್ಥಿತಿ ಅಸಮಾಧಾನಕರವಾಗಿದ್ದು ಈಗಿರುವುದಕ್ಕಿಂತ ಹೆಚ್ಚಿನ ಆರ್ಥಿಕ ಭಾರ ಅವರು ವಹಿಸಲಾರರು. ಹೊಸ ಖರ್ಚನ್ನು ಭರಿಸಲು ಆದಾಯ ಹೆಚ್ಚಿಸಬೇಕೆಂದರೂ ಅವರಲ್ಲಿ ತುಂಬಾ ಕಡಿಮೆ ಸಾಧನಗಳಿವೆ. ಹಾಗಾಗಿ ಮನಸ್ಸಿದ್ದರೂ ಸಾಕಷ್ಟು ಜನ ಲೋಕಲ್ ಬೋರ್ಡ್ ಹಾಗೂ ಮುನಿಸಿಪಾಲ್ಟಿಯ ಕಡ್ಡಾಯ ಶಿಕ್ಷಣ ಕೈಗೊಳ್ಳಲು ಮುಂದೆ ಬರುವುದಿಲ್ಲ. ಅಷ್ಟೇಯಲ್ಲದೆ ಸಾಕಷ್ಟು ಕಲಿತಂತಹ ಜನರ ಭರ್ತಿಯೇ ಹೆಚ್ಚಿರುವಂತಹ ಲೋಕಲ್ ಬೋರ್ಡ್ ಹಾಗೂ ಮುನಿಸ್ಪಾಲ್ಟಿಗಳಲ್ಲಿ ಕಡ್ಡಾಯ ಶಿಕ್ಷಣದ ಬಗ್ಗೆ ಒಲವಿರುವುದಿಲ್ಲ. ಕಡ್ಡಾಯವಿಲ್ಲದೆಯೇ ಅವರ ಜಾತಿಗಳಲ್ಲಿ ಜನ ಕಲಿಯುವುದರಿಂದ ಕಲಿಯಲು ಹಿಂದುಳಿದಂತಹ ಜನರಿಗೆ ಕಡ್ಡಾಯವಾಗಿ ಕಲಿಸಿ ತಮ್ಮ ಸಾಮಾಜಿಕ ವರ್ಚಸ್ಸಿನ ಮೇಲೆ ಅವರೇಕೆ ಕೊಡಲಿ ಏಟು ಹಾಕಿಕೊಂಡಾರು? ಮೇಲೆ ಹೇಳಿರುವ ಎರಡು ಅಡಚಣೆಗಳಿಂದ ಕಡ್ಡಾಯ ಶಿಕ್ಷಣ ಕಾಯಿದೆ ಬಂದು ಇಷ್ಟು ವರ್ಷಗಳಾದರೂ ಇನ್ನೂ ಜಾರಿಗೆ ಬರುತ್ತಿಲ್ಲ. ಜನರನ್ನು ಅಕ್ಷರಸ್ಥರನ್ನಾಗಿಸಿ ಅನಕ್ಷರತೆಯನ್ನು ಓಡಿಸುವಂತಹ ಜವಾಬ್ದಾರಿ ರಾಜ್ಯ ಸರ್ಕಾರದ್ದಾಗಿದೆ. ಈ ಜವಾಬ್ದಾರಿಯನ್ನವರು ಯಾವತ್ತೂ ಅಲ್ಲಗಳೆಯುವಂತಿಲ್ಲ. ಅವರೇನಾದರೂ ಅಲ್ಲಗಳೆದರೆ ಒಂದು ಪವಿತ್ರಕಾರ್ಯ ಮಾಡುವುದರಲ್ಲಿ ಅದು ದಾರಿ ತಪ್ಪಿದೆ ಎಂದಷ್ಟೆ ಹೇಳಬಹುದು. ಇಂತಹ ಪವಿತ್ರ ಕಾರ್ಯದ ಜವಾಬ್ದಾರಿ ಹಾಗೂ ಅರಿವಿರುವ ಸರ್ಕಾರ ಯಾವತ್ತೂ ಕಾರಣಗಳನ್ನು ಕೊಟ್ಟು ಹಿಂದೆ ಸರಿಯಲಾರದು. ಸಾರ್ವತ್ರಿಕ ಶಿಕ್ಷಣದ ಪ್ರಶ್ನೆ ಸ್ವಲ್ಪ ಸ್ವಲ್ಪವೇ ಬಿಡಿಸುವಂತಹ ಪ್ರಶ್ನೆಯಲ್ಲ, ಅದನ್ನುಇಡಿಯಾಗಿ ಬಿಡಿಸಬೇಕಾಗುತ್ತದೆ. ಎಲ್ಲ ರಾಜ್ಯಗಳಲ್ಲೂ ಸಮಾನ ಶೈಕ್ಷಣಿಕ ಪ್ರಗತಿಯಾಗಬೇಕೆಂದರೆ ಪ್ರಾಂತೀಯ ಸರ್ಕಾರವೇ ಇದರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಎಲ್ಲ ಲೋಕಲ್ ಬೋರ್ಡ್ ಹಾಗೂ ಮುನಿಸಿಪಾಲ್ಟಿಯ ಆರ್ಥಿಕ ಸ್ಥಿತಿ ಸಮನಾಗಿರುವುದಿಲ್ಲ. ಪರಿಸ್ಥಿಯಂತೆ ಉತ್ಪನ್ನದ ಸಾಧನಗಳು ಹೆಚ್ಚುಕಡಿಮೆ ಇರುತ್ತವೆ. ಫಲವತ್ತಾದ ಜಮೀನು, ವ್ಯಾಪಾರ, ಕಾರ್ಖಾನೆಗಳು, ಗಿರಣಿಗಳು ಹಾಗೂ ತೀರ್ಥಯಾತ್ರೆಗಳು ಇವುಗಳಿಂದ ಅನೇಕ ಲೋಕಲ್ ಬೋರ್ಡ್ ಹಾಗೂ ಮುನಿಸಿಪಾಲ್ಟಿಯವರಲ್ಲಿ ಗಳಿಕೆಯ ಸಾಧನಗಳಿರುತ್ತವೆ. ಆದರೆ ಕೆಲವೆಡೆ ಗಳಿಕೆ ಅವರ ದೈನಂದಿನ ಸಾಧಾರಣ ಖರ್ಚಿಗೂ ಸಾಕಾಗುವುದಿಲ್ಲ ಹಾಗೂ ಗಳಿಕೆ ಹೆಚ್ಚಿಸುವುದೂ ಸಾಧ್ಯವಿರುವುದಿಲ್ಲ. ತಮ್ಮ ತಮ್ಮ ಜಿಲ್ಲೆಯ ಆರ್ಥಿಕ ಪರಿಸ್ಥಿಯಂತೆ ಕಡ್ಡಾಯ ಶಿಕ್ಷಣದ ಪ್ರಸಾರವನ್ನು ಕೈಗೊಳ್ಳಬೇಕು ಅಂತಿದ್ದರೆ ರತ್ನಗಿರಿ ಹಾಗೂ ಪಂಚಮಹಲ್‌ನಂತಹ ಬಡ ಜಿಲ್ಲೆಗಳು ಜಗತ್ತಿನ ಅಂತಿಮ ದಿನಗಳವರೆಗೆ ಕಾಯಬೇಕಾಗುತ್ತದೆ! ಇಂತಹ ಬಡ ಜಿಲ್ಲೆಗಳು ಶಿಕ್ಷಣ ಪ್ರಸಾರದಿಂದ ವಂಚಿತರಾಗುವುದು ನ್ಯಾಯವೆ? ಇದುರಾಜ್ಯ ಸರ್ಕಾರದ ಜವಾಬ್ದಾರಿ ಅಂತಿಟ್ಟುಕೊಂಡರೂ ಈ ಜವಾಬ್ದಾರಿಯನ್ನವರು ಒಪ್ಪಿಕೊಂಡು ಎಲ್ಲಾ ಇಲಾಖೆಗಳಲ್ಲಿ ಕಡ್ಡಾಯ ಶಿಕ್ಷಣದ ಯೋಜನೆಯನ್ನು ಜಾರಿಗೆ ತರಲು ಬೇಕಿರುವ ಖರ್ಚು ಭರಿಸಲು ಹಣ ಎಲ್ಲಿಂದ ಬರಬೇಕು? ಅನ್ನುವ ಪ್ರಶ್ನೆಯೂ ಉಳಿದುಕೊಳ್ಳುತ್ತದೆ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳಲ್ಲಿರುವ ಒಟ್ಟು ಹಣವನ್ನು ಯೋಗ್ಯ ರೀತಿಯಲ್ಲಿ ಹಂಚಿದರೆ ಶೈಕ್ಷಣಿಕ ಪ್ರಸಾರಕ್ಕಾಗಿ ಮುಂಬಯಿ ಸರ್ಕಾರಕ್ಕೆ ಈಗಿರುವುದಕ್ಕಿಂತಲೂ ಹೆಚ್ಚು ಮೊತ್ತ ಸಿಗಬಹುದು. ಅಲ್ಲದೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿದರೂ ಎಲ್ಲರಿಗೂ ಉಚಿತ ಶಿಕ್ಷಣ ಕೊಡುವ ಅಗತ್ಯವಿಲ್ಲ. ಪ್ರಾಥಮಿಕ ಶಿಕ್ಷಣದ ಫೀಸು ಹೇಳಿಕೊಳ್ಳುವಂತಹದ್ದೇನು ಇರುವುದಿಲ್ಲ, ಅದನ್ನು ಕೊಡಲು ಸಮರ್ಥರಿರುವವರಿಂದ ವಸೂಲು ಮಾಡಲು ಅಡ್ಡಿಯಿಲ್ಲ, ಇಂಗ್ಲಂಡಿನಲ್ಲಿ ಕೂಡ ಪ್ರಾಥಮಿಕ ಶಿಕ್ಷಣ ಕಡ್ಡಾಯ ಮಾಡಿದ ಕಾಲದಲ್ಲಿ ಎಲ್ಲರಿಗೂ ಅದನ್ನು ಉಚಿತವಾಗಿ ಕೊಟ್ಟಿರಲಿಲ್ಲ. ಉಚಿತ ಕೊಡಬೇಕೆ ಬೇಡವೆ ಅನ್ನುವುದು ನಂತರದ ವಿಷಯ, ಕಡ್ಡಾಯ ಶಿಕ್ಷಣ ಜಾರಿಗೆ ತರುವುದು ಮೊದಲ ಹಾಗೂ ಮಹತ್ವದ ವಿಷಯವಾಗಿದೆ. ಕಡಿಮೆ ಫೀಸು ಕೂಡ ಕೊಡುವುದು ಕಠಿಣವಾಗುವಂತಹ ವರ್ಗಗಳಿಗೆ ಮಾತ್ರ

ಉಚಿತ ಶಿಕ್ಷಣ ಕೊಡುವಂತಾಗಬೇಕು, ಉದಾರತೆಯಿಂದ ಅವರ ಫೀಸನ್ನು ಮನ್ನಾ ಮಾಡಬೇಕು. ಆದರೆ ಫೀಸು ಕೊಡಲು ಸಾಧ್ಯವಿರುವವರಿಂದ ಫೀಸ್ ತೆಗೆದುಕೊಳ್ಳುವುದರಲ್ಲಿ ಯಾವ ಪಾಪವೂ ಅನ್ಯಾಯವೂ ಅಲ್ಲ. ಈ ರೀತಿಯಲ್ಲಿ ಫೀ ವಸೂಲಾದರೆ ಕಡ್ಡಾಯ ಶಿಕ್ಷಣದ ಹೆಚ್ಚಿನ ಖರ್ಚು ಭರಿಸಲು ಸಹಾಯವಾಗುತ್ತದೆ. ಈಗಿನ ದ್ವಿದಳ ರಾಜ್ಯ ಪದ್ಧತಿಯಿಂದಾಗಿ ಒಂದು ಕಡೆ ಶಿಕ್ಷಣದ ಖರ್ಚು ಹೆಚ್ಚುತ್ತಿದ್ದರೆ ಮತ್ತೊಂದೆಡೆ ಅಬಕಾರಿಯ ಉತ್ಪನ್ನವನ್ನು ಕಡಿಮೆ ಮಾಡಿ ಮದ್ಯ ನಿಷೇಧ ಧೋರಣೆಯನ್ನು ಜಾರಿಗೆ ತರಬೇಕು ಅನ್ನುವುದು ಜನರ ಬೇಡಿಕೆಯಿರುವುದರಿಂದ ಈ ಜವಾಬ್ದಾರಿ ವಹಿಸಿರುವ ಖಾತೆಗಳ ಖರ್ಚಿನ ಜವಾಬ್ದಾರಿ ನಿಭಾಯಿಸುವುದು ಕಠಿಣವಾಗಿದೆ. ಮದ್ಯ ನಿಷೇಧ ಹಾಗೂ ಸಾರ್ವತ್ರಿಕ ಶಿಕ್ಷಣ ಎರಡೂ ಒಟ್ಟೊಟ್ಟಿಗೆ ಜಾರಿಗೆ ಬರುವುದು ಸಾಧ್ಯವಿಲ್ಲವಾಗಿದೆ. ಕಡ್ಡಾಯ ಶಿಕ್ಷಣದ ಖರ್ಚು ಭರಿಸಲು ಜನರ ಮೇಲೆ ಹೆಚ್ಚಿನ ತೆರಿಗೆ ವಿಧಿಸಬೇಕಾಗುವಂತೆ ಮದ್ಯ ನಿಷೇಧ ಜಾರಿಗೆ ತರಲು ಕೂಡ ಹೆಚ್ಚಿನ ತೆರಿಗೆ ವಿಧಿಸಬೇಕಾಗುತ್ತದೆ. ತೆರಿಗೆಗಳ ಈ ಹೆಚ್ಚಿನ ಭಾರ ಹೊರಲು ಜನತೆ ಎಷ್ಟು ಸಮರ್ಥವಾಗಿದೆ ಅನ್ನುವುದು ನನಗಂತೂ ಅನುಮಾನವೆ. ಆದರೆ ಈ ಎರಡು ಸುಧಾರಣೆಗಳು ಅಗತ್ಯವಾಗಿದ್ದು ಒಂದು ಪೀಳಿಗೆಯ ನಂತರ ಎಲ್ಲರಿಗೂ ಇದರ ಒಳ್ಳೆಯ ಫಲ ಸಿಗಲಿರುವುದರಿಂದ ಸರ್ಕಾರ ಉಳಿದ ಕಡೆಗಳಲ್ಲಿ ಆದಷ್ಟು ಮಿತವ್ಯಯ ಮಾಡಿ ಈ ಸುಧಾರಣೆಗಳಿಗಾಗಿ ಹೆಚ್ಚಿನ ತೆರಿಗೆಯ ಭಾರ ಹೊರಲು ಸಿದ್ಧರಾಗುವುದು ದೂರದರ್ಶಿತನ ಅನಿಸಿಕೊಳ್ಳುತ್ತದೆ. ಏತನ್ಮಧ್ಯೆ ಮೊದಲು ಮದ್ಯ ನಿಷೇಧವೋ ಇಲ್ಲ ಕಡ್ಡಾಯ ಸಾರ್ವತ್ರಿಕ ಶಿಕ್ಷಣವೋ ಅನ್ನುವ ಪ್ರಶ್ನೆಯನ್ನ್ಯಾರಾದರೂ ಕೇಳಿದರೆ, 'ಮೊದಲು ಸಾರ್ವತ್ರಿಕ ಶಿಕ್ಷಣ'ಎಂದೆ ನಾವು ಹೇಳಬಯಸುತ್ತೇವೆ. ಸಾರ್ವತ್ರಿಕ ಶಿಕ್ಷಣ ಮೊದಲು ಜಾರಿಗೆ ಬಂದರೆ ಮದ್ಯ ಕುಡಿಯುವವರನ್ನು ನಾವು ತಂತಾನೆ ಹತೋಟಿಗೆ ತರಬಹುದು ಅಷ್ಟೇಯಲ್ಲದೆ ಜನತೆಯ ಮದ್ಯ ನಿಷೇಧದ ಬೇಡಿಕೆಯನ್ನು ನಿಶ್ಚಿತವಾಗಿ ಮುಂದುವರೆಸಿಕೊಂಡು ಹೋಗಬಹುದು ಅನ್ನುವ ಭರವಸೆ ನನಗಿದೆ. ಮದ್ಯ ನಿಷೇಧವನ್ನು ಜಾರಿಗೆ ತರುವ ಬಗ್ಗೆ ಸರ್ಕಾರ ಇನ್ನೂ ವಂಚಿಸುತ್ತಿದೆ. ಸಧ್ಯದ ಪರಿಸ್ಥಿತಿಯಲ್ಲಿ ಮದ್ಯ ನಿಷೇಧ ಯಾವಾಗ ಜಾರಿಗೆ ಬರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಹೀಗಿರುವಾಗ ಮದ್ಯ ನಿಷೇಧವೂ ಇಲ್ಲ ಹಾಗೂ ಸಾರ್ವತ್ರಿಕ ಶಿಕ್ಷಣವೂ ಇಲ್ಲ ಅನ್ನುವಂತಹ ಪರಿಸ್ಥಿತಿಯನ್ನು ಸ್ವೀಕರಿಸುವುದರಲ್ಲಿ ಅರ್ಥವೇನು? ಅದಕ್ಕಿಂತ ತುರ್ತಾಗಿ ಮದ್ಯ ನಿಷೇಧ ಕಾನೂನು ಜಾರಿಗೆ ತರುವ ದೃಷ್ಟಿಯಿಂದ ಅಬಕಾರಿ ಖಾತೆಯ ಉತ್ಪನ್ನ ಹೆಚ್ಚಿಸಲು ಜನತೆ ಹೊಸ ತೆರಿಗೆಯ ಭಾರ ಸಹಿಸಬೇಕಾಗಿ ಬಂದರೂ ಚಿಂತೆಯಿಲ್ಲ. ಸಾರ್ವತ್ರಿಕ ಶಿಕ್ಷಣದ ಸುಧಾರಣೆಯಾದರೂ ಅವರ ಪಾಲಿಗಿರುವಂತಾಗಲಿ. ಸಾತೆ ಕಮಿಟಿಯು ಮದ್ಯ ನಿಷೇಧ ಜಾರಿಗೆ ತರಲು ಸೂಚಿಸಿರುವ ಹೆಚ್ಚಿನ ತೆರಿಗೆಯ ಉಪಾಯವನ್ನು ಪ್ರಾಥಮಿಕ ಶಿಕ್ಷಣವನ್ನು ಎಲ್ಲೆಡೆ ಹರಡುವಲ್ಲಿಯೂ ಉಪಯೋಗಿಸಿಕೊಂಡರೆ ಮಹತ್ವದ ಪ್ರಶ್ನೆಯೊಂದು ಪರಿಹಾರವಾಗುತ್ತದೆ. ಈ ಕಮಿಟಿಯ ಶಿಫಾರಸ್ಸಿನಲ್ಲಿ ಸುಧಾರಣೆಗೆ ಸ್ಥಾನವಿಲ್ಲ ಎಂದಲ್ಲ ಆದರೆ ಈ ಧೋರಣೆಯು ಕಡ್ಡಾಯ ಶಿಕ್ಷಣದ ಖರ್ಚನ್ನು ಸ್ವಲ್ಪಮಟ್ಟಿಗೆ ಭರಿಸಲು ಸಹಾಯವಾಗಬಹುದು. ಏನೇ ಆದರೂ ಶಿಕ್ಷಣದ ಪ್ರಶ್ನೆಯನ್ನು ಪರಿಹಾರ ಮಾಡದೆ ಇಡುವಂತಿಲ್ಲ.

# ೨೮.

# ಮನುಷ್ಯತ್ವದ ಹಕ್ಕು ಪಡೆಯಲು ಅನ್ಯಾಯದ ವಿರುದ್ಧ ಬಂಡೇಳಿ

ಸ್ವಾಭಿಮಾನ ಸಂರಕ್ಷಕ ಪರಿಷತ್ತಿನ ಅಧಿವೇಶನ ನಾಸಿಕ್ ಜಿಲ್ಲೆಯ ವತಿಯಿಂದ ಚಿತ್ತೆಗಾಂವ್‌ನಲ್ಲಿ ಕಳೆದ ಭಾನುವಾರ ೨೬ನೆಯ ಮೇ ೧೯೨೯ ರಂದು ಜರುಗಿತು. ಡಾ. ಭೀಮರಾವ. ಅಂಬೇಡ್ಕರ ಬಾರ್-ಎಟ್-ಲಾ, ಎಮ್.ಎಲ್.ಸಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಈ ಪರಿಷತ್ತಿಗೆ ಸುಮಾರು ಆರು ಸಾವಿರ ಪ್ರೇಕ್ಷಕರು ಹಾಗೂ ಪ್ರತಿನಿಧಿಗಳು ಸೇರಿದ್ದರು. ನಾಸಿಕ್‌ನಿಂದ ಪ್ರೊ. ಸಬನೀಸ್, ಮೆಸರ್ಸ್ ಗಾಯಕವಾಡ, ಶೇಂಠರಣ ಖಾಂಬೆ, ಕಾಳೆ. ಪಶ್ಚಿಮ ದೇವಳಾಲಿಯಿಂದ ಸ್ವಯಂ ಸೇವಕರ ಪಥಕ, ಹಾಗೂ ಮುಂಬಯಿಯಿಂದ ಸಮತಾ ಪತ್ರಿಕೆಯ ಸಂಪಾದಕರಾದ ಶ್ರೀ. ದೇವರಾವ್ ನಾಯಿಕ, ಸಮಾಜ ಸಮತಾ ಸಂಘದ ಮೆಸರ್ಸ್. ವಿ. ಪ್ರಧಾನ, ರಾ. ಕವಳಿ, ಬಿ.ಎ. ಭಾ. ವಿ. ಪ್ರಧಾನ, ಬಿ.ಎ.ಎಲೆಲ್.ಬಿ. ಬಾ. ದೇಶಮುಖ, ಎಮ್.ಎ. ಶಂ.ಶಾಂ. ಗುಪ್ತೆ, ಬಿ.ಎಸ್ಸಿ. ಭಾ.ರ. ಕದ್ರೆಕರ ಹಾಜರಿದ್ದರು. ಸ್ವಾಗತಾಧ್ಯಕ್ಷರಾದ ಶ್ರೀ. ರೋಕಡೆಯವರ ಆರೋಗ್ಯ ಸರಿಯಿರದ ಕಾರಣ ಅವರು ಭಾಷಣ ಮಾಡಲಿಲ್ಲ.

ಅಧ್ಯಕ್ಷರಾದ ಡಾ.ಅಂಬೇಡ್ಕರರು ತಮ್ಮ ಭಾಷಣದಲ್ಲಿ,

ಸ್ವಾಭಿಮಾನ ಸಂರಕ್ಷಣೆಯ ಚಳುವಳಿಯನ್ನು ಜೋರಾಗಿ ಆರಂಭಿಸುವುದು ಈಗಿನ ಪರಿಸ್ಥಿಯಲ್ಲಿ ಅಗತ್ಯವಾಗಿದೆ. ಈ ಚಳುವಳಿಯಿಂದ ಮೇಲ್ಜಾತಿ ಹಾಗೂ ಕೀಳುಜಾತಿಯ ಭೇದಭಾವ ಎಲ್ಲರಿಗೂ ಅರ್ಥವಾಗಿ ಸಮಾಜದಲ್ಲಿ ಸಮಾನತೆ ಸ್ಥಾಪಿಸಲು ಸಹಾಯವಾಗಬಹುದು. ದಲಿತೋದ್ಧಾರದಂತಹ ಉದ್ಧಾರದ ಮಾತುಗಳನ್ನಾಡುವ ಸಮಯ ಈಗ ಕಳೆದಿದ್ದು ಈಗ ಸ್ವಾಭಿಮಾನ ಜಾಗೃತಿಯ ಸಮಯ. ದಲಿತ ಸಮಾಜದ ಒಟ್ಟು ಪರಿಸ್ಥಿತಿ ನೋಡಿದರೆ ಅವರ ಸ್ಥಿತಿಯ ಬಗ್ಗೆ ಅಸಮಾಧಾನವೇ ಕಂಡುಬರುತ್ತದೆ. ಹುಟ್ಟಿನಿಂದಲೇ ಅಸ್ಪೃಶ್ಯ ಅನಿಸಿಕೊಂಡ ಸಮಾಜದಲ್ಲಿ ಇವರು ಸೇರಿಕೊಂಡಿರುವುದರಿಂದ ಮೇಲ್ಜಾತಿಯವರಿಗಿಂತ ಇವರಲ್ಲಿ ಒಳ್ಳೆಯ ಗುಣಗಳಿದ್ದರೂ ಇವರು ಅಸಹಾಯಕರಾಗಿದ್ದಾರೆ. ಮೇಲ್ಜಾತಿಯವರು ತಂದಿಟ್ಟ ಪರಿಸ್ಥಿತಿ ನಮಗೂ ನಮ್ಮ ಸ್ವಾಭಿಮಾನ ಪೂರ್ವಕ ಗುರಿಗೂ ಅಡ್ಡ ಬರುತ್ತಿದೆ. ದೇವಸ್ಥಾನದಲ್ಲಿ, ನೀರಿನ ಕೊಳ, ಭಾವಿಗಳ ಹತ್ತಿರ ಅಸ್ಪೃಶ್ಯರು ಪ್ರವೇಶಿಸದಂತೆ ತಡೆದು ದಲಿತರ ಮೇಲೆ ಅನ್ಯಾಯ ಅತ್ಯಾಚಾರ ಮಾಡಲಾಗುತ್ತಿದೆ. ಇಂತಹ ಹೀನಾಯ ಪರಿಸ್ಥಿಯಿಂದ ಬಿಡುಗಡೆ ಹೊಂದಲು ದಲಿತರು ತಮ್ಮ ಸ್ವಾಭಿಮಾನವನ್ನು ಜಾಗೃತಗೊಳಿಸಿ ಮನುಷ್ಯತ್ವದ ಹಕ್ಕಿಗಾಗಿ ದೃಢವಾಗಿ ಹೋರಾಡಬೇಕಿದೆ. ಕೇವಲ ಶಿಕ್ಷಣದಿಂದ ಮನುಷ್ಯತ್ವ ಸಿಗುತ್ತಿದ್ದಿದ್ದರೆ ಸುಧಾರಣೆಯ ಈ ಕಾಲದಲ್ಲಿ ಸುಶಿಕ್ಷಿತ ವರ್ಗದಿಂದ ನಮಗೆ ಈ ರೀತಿಯ ಅನ್ಯಾಯವಾಗುತ್ತಿರಲಿಲ್ಲ. ನಮ್ಮನ್ನು ಹೀಗಳೆದು ಹಿಂದೂ ಸಮಾಜತನ್ನ ಹೀನ ದರ್ಜೆ ತೋರಿಸಿದೆ. ನಮಗಂಟಿಕೊಂಡಿರುವ ಈ ಹೀನತ್ವವನ್ನು ತೊಳೆದುಹಾಕಲು ಈ ಸ್ವಾಭಿಮಾನ ಜಾಗೃತಿಯ ದಾರಿಯೇ ಸರಿದೋರುತ್ತದೆ. ಹಾಗಾಗಿ ಬಂಧುಗಳೆ ನಿಮ್ಮ ಸ್ವಾಭಿಮಾನವನ್ನು ಹೊಡಿದೆಬ್ಬಿಸಿ ನಮ್ಮ ಮೇಲಾಗುತ್ತಿರುವ ಅನ್ಯಾಯದ ವಿರುದ್ಧ ಬಂಡೇಳದೆ ನಮಗೆ ನಿಜವಾದ ಮನುಷ್ಯತ್ವದ ಹಕ್ಕು ಸಿಗಲಾರದು.

## ೨೯.

# ದಲಿತರು ಕೊಟ್ಟಿರುವ ಧರ್ಮಾಂತರದ ನೋಟೀಸು

ಮೊದಲೇ ನಿರ್ಧರಿಸಿದಂತೆ ಪಾರ್ತುಡಾ ಜಿ. ಬುಲಢಾಣಾದಲ್ಲಿ ತಾ. ೨೯ನೆಯ ಮೇ ೧೯೨೯ ರಂದು ಡಾ. ಬಾಬಾಸಾಹೇಬ್ ಅಂಬೇಡ್ಕರ ಬಾರ–ಎಟ್–ಲಾ ಇವರ ಅಧ್ಯಕ್ಷತೆಯಲ್ಲಿ ಮಧ್ಯಪ್ರಾಂತ್ಯ ಹಾಗೂ ವರಾಡ್‌ನಲ್ಲಿಯ ದಲಿತರ ಅಧಿವೇಶನ ನಿರ್ವಿಘ್ನವಾಗಿ ಜರುಗಿತು. ಈ ಪರಿಷತ್ತಿಗೆ ಹೊರ ಊರಿನಿಂದ ದಲಿತರ ನೇತಾರರಾದ ರಾ.ಪಿ.ಮಟಕರ್, ರಾ. ಸೋನೇನೆ, ರಾ. ಮಕೇಸರ, ರಾ. ಕೇಶವರಾವ್ ಖಂಡಾರೆ, ರಾ. ಸಂಭಾಜಿ. ಜಾಧವ್, ರಾ. ರಾಯಭಾನ ಇಂಗಳೆ, ರಾ. ಸಂಭೂಜಿ. ಖಂಡಾರೆ ಹಾಜರಿದ್ದರು. ಹಾಗೆಯೇ ಬ್ರಾಹ್ಮಣೇತರ ಪಕ್ಷದ ನೇತಾರರಾದ ವೆ.ಶಾ.ಸಂ. ಆನಂದಸ್ವಾಮಿ, ಶ್ರೀ. ಉಕಂಡರಾವ್ ಟಾಲೆಯವರೂ ಹಾಜರಿದ್ದರು. ಒಟ್ಟು ಸಾವಿರದ ಐನೂರರಷ್ಟು ಜನ ಸಮೂದಾಯ ಸೇರಿತ್ತು. ಸಾಯಂಕಾಲ ಏಳು ಘಂಟೆಗೆ ಪರಿಷತ್ತು ಆರಂಭವಾಯಿತು. ಆರಂಭದಲ್ಲಿರಾ. ಭಕ್ಷುರಾಮಜೀ ದಾಭಾಡೆ ಇವರ ಕನ್ಯೆ ಕು. ಕವತಿಕಾಬಾಯಿ ಹಾಗೂ ಸಖಾರಾಮ ಇಂಗಳೆ ಇವರ ವಿವಾಹವನ್ನು ಸುಧಾರಿತ ಪದ್ಧತಿಯಲ್ಲಿ ಹಾಗೂ ಕಡಿಮೆ ಖರ್ಚಿನಲ್ಲಿ ಮಾಡಿಕೊಡಲಾಗಿದ್ದು ಇಂತಹ ಮದುವೆಗಳಿಗಾಗಿ ರಾ. ಭಕ್ಷುರಾಮರವರು ದಲಿತರಿಗೆ ಉತ್ತಮ ಉದಾಹರಣೆಯಾದರು.

ನಂತರ ಪರಿಷತ್ತಿನ ಕಾರ್ಯಕಲಾಪಗಳು ಆರಂಭವಾಗಿ ಪರಿಷತ್ತಿನ ಸ್ವಾಗತಾಧ್ಯಕ್ಷರು ತಮ್ಮ ಭಾಷಣ ಮುಗಿಸಿದೊಡನೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿದ್ವತ್ಪೂರ್ಣ ಭಾಷಣವಾಯಿತು. ತಮ್ಮ ಭಾಷಣದಲ್ಲವರು,

ವಿಶೇಷವಾಗಿ ಈ ಜಿಲ್ಲೆಯ ದಲಿತ ಹಾಗೂ ಬ್ರಾಹ್ಮಣೇತರ ನೇತಾರರು ಸೇರಿ ಅಸ್ಪೃಶ್ಯತೆಯನ್ನು ತೊಲಗಿಸಲು ಪ್ರಯತ್ನಿಸಬೇಕು, ಆದರೆ ಅವರಿಗೆ ಹೇಳಿಕೊಳ್ಳುವಂತಹ ಯಶಸ್ಸು ಸಿಗುತ್ತಿಲ್ಲ. ಅಷ್ಟೇಯಲ್ಲ ಬ್ರಾಹ್ಮಣರು ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಇವರನ್ನು ಸತಾಯಿಸಿ ಇವರ ಪ್ರಯತ್ನವನ್ನು ಅಸಫಲಗೊಳಿಸಿ ಚಳುವಳಿಯನ್ನು ಮೆಟ್ಟಿಹಾಕುವ ಪ್ರಯತ್ನ ನಡೆಸಿದ್ದಾರೆ. ದಲಿತ ನೇತಾರರ ವಿಷಯದಲ್ಲಿ ಸುಳ್ಳು ಸುದ್ದಿಗಳನ್ನು ಪತ್ರಿಕೆಗಳಲ್ಲಿ ಬರೆಯುವುದು, ದಲಿತರಲ್ಲಿ ಒಡುಕುಂಟುಮಾಡುವುದು, ಬ್ರಾಹ್ಮಣ ಅಧಿಕಾರಿಗಳಿಂದ ಇವರನ್ನು ಸತಾಯಿಸುವುದು, ಅವರ ಮೇಲೆ ಬಹಿಷ್ಕಾರ ಹಾಕುವಂತಹ ನಿಂದನೀಯ ಪ್ರಕಾರಗಳನ್ನು ಆರಂಭಿಸಿ ನಮ್ಮ ಚಳುವಳಿಗಳು ನಿಲ್ಲಿಸಲೇ ಬೇಕೆನ್ನುವ ಮನಸ್ಸು ಮಾಡಿದ್ದಾರೆ. ಇವರ ಲೀಲೆಗಳಿಗೆ ಬೇಸತ್ತು ಈ ಜಿಲ್ಲೆಯ ಕೆಲವು ಭಾಗಗಳ ಸಾವಿರಾರು ದಲಿತರು ಧರ್ಮಾಂತರಗೊಳ್ಳಲು ಸಿದ್ಧರಾಗಿದ್ದಾರೆ ಹಾಗೂ ಅಂತಹ ಒಂದು ನೋಟೀಸನ್ನು ಕೂಡ ಮೇಲ್ವರ್ಗದವರಿಗೆ ಕಳಿಸಿದ್ದಾರೆ. ಆದರೆ ಸ್ವಾರ್ಥಿಗಳಾದ ಬ್ರಾಹ್ಮಣರಲ್ಲಿ ಇದರಿಂದ ಯಾವ ವ್ಯತ್ಯಾಸವೂ ಕಾಣಲಿಲ್ಲ. ಹಾಗೂ ಹಿಂದೂಸಭಾದವರಿಗೆ ಹಾಗೂ ಶುದ್ಧೀಕರಣದ ಬೆನ್ನು ಹತ್ತಿರುವವರು ತಮಗೆ ಇದ್ಯಾವುದರ ಬಗ್ಗೆ ಗೊತ್ತೇ ಇಲ್ಲ ಅನ್ನುವುದನ್ನು ತೋರಿಸಿಕೊಡಲು ದಲಿತರ ದುಃಖದ ಬಗ್ಗೆ ಕಿಂಚಿತ್ತೂ ಪರಿವೆ ತೋರಲಿಲ್ಲ.

ಈ ಧರ್ಮಾಂತರದ ಬಗ್ಗೆ ನಮ್ಮ ದಲಿತ ಬಾಂಧವರ ಅನಿಸಿಕೆಗಳನ್ನು ತಿಳಿದುಕೊಳ್ಳಲು ಜಳಗಾಂವ ತಾಲೂಕಿನ ದಲಿತರ ನೇತಾರರು ಈ ಪರಿಷತ್ತನ್ನು ಆಯೋಜಿಸಿದ್ದಾರೆ.ಈ ಪರಿಷತ್ತಿನ ಮೊದಲನೆಯ ದಿನ ಧರ್ಮಾಂತರಗೊಳ್ಳುವುದರ ಬಗ್ಗೆ ಅನೇಕ ಊಹಾಪೋಹಗಳಾದವು. ಈ ಚರ್ಚೆಯಲ್ಲಿ ಸಂಪೂರ್ಣ ದಲಿತ ಸಮಾಜ ಈ ಧರ್ಮಾಂತರಕ್ಕೆ ಬೆಂಬಲವಾಗಿದೆ ಅನ್ನುವುದು ಕಂಡುಬಂತು. ಬ್ರಾಹ್ಮಣೇತರ ಪಕ್ಷದ ನೇತಾರರು ಆವೇಶಭರಿತ ಭಾಷಣಗಳನ್ನು ಮಾಡಿ ಧರ್ಮಾಂತರಕ್ಕೆ ಪುಷ್ಟಿ ಕೊಟ್ಟರು. ಅಧ್ಯಕ್ಷರು ಮಸೂದೆಯನ್ನು ಮತದಾನದ ಮೂಲಕ ಮಂಜೂರು ಮಾಡಲೆತ್ನಿಸಿದಾಗ ಯಾರೂ ವಿರೋಧಿಸಲಿಲ್ಲ. ಸರ್ವಾನುಮತದಿಂದ ಧರ್ಮಾಂತರದ ಮಸೂದೆ ಮಂಜೂರಾಗಿ ಆ ದಿನದ ಕಾರ್ಯಕಲಾಪಗಳು ಮುಗಿದವು.

## ೩೦.

# ನಮಗೆ ದಲಿತರಷ್ಟೆಗೊತ್ತು

ಶನಿವಾರ ತಾ.೨೯ನೆಯ ಜೂನ್ ೧೯೨೯ ರಂದು ರಾತ್ರಿ ೭ ಘಂಟೆಗೆ ಮುಂಬಯಿಯ ಪರೇಲ್‌ನ್ ದಾಮೋದರ ಹಾಲ್‌ನಲ್ಲಿ ರಾವ್‌ಬಹಾದ್ದೂರ ಬೊಲೆ.ಜೆ.ಪಿ. (ಜಿಲ್ಲಾ ಪ್ರೆಸಿಡೆಂಟ್) ಇವರ ಅಧ್ಯಕ್ಷತೆಯಲ್ಲಿ ದಲಿತರ ಬಹುದೊಡ್ಡ ಜಾಹೀರು ಸಭೆ ಸೇರಿತ್ತು. ಸಭೆಗೆ ದಲಿತರ ಜನಸಾಗರವೇ ನೆರೆದಿತ್ತು. ವ್ಯಾಸಪೀಠದ ಮೇಲೆ ಡಾ.ಬಾಬಾಸಾಹೇಬ ಅಂಬೇಡ್ಕರ್, ಮೆ.ಡಾ. ಸೋಲಂಕಿ, ಮೆ. ಶಿವತರಕರ್, ಮೆ.ದ.ವಿ. ಪ್ರಧಾನ್, ಭಾ.ರ. ಕದ್ರೆಕರ್, ರಾ. ಗುಪ್ತೆ, ತೀ. ಗಾಯಕವಾಡ್, ತೀ. ಜಾಧವ್ ಇವರುಗಳು ಮುಖ್ಯವಾಗಿ ವಿರಾಜಮಾನರಾಗಿದ್ದರು. ತೀ. ಗಾಯಕವಾಡ್ ಅವರು ಅಧ್ಯಕ್ಷರ ಸೂಚನೆಯನ್ನು ಎಲ್ಲರೆದುರು ಮಂಡಿಸಿದರು ರಾ. ವಾಲಾವಲಕರ್ ಅದನ್ನು ಅನುಮೋದಿಸಿದೊಡನೆ ನಿಯೋಜಿತ ಅಧ್ಯಕ್ಷರಾದ ರಾವ್‌ಬಹದ್ದೂರ್ ಬೋಲೆ, ಜೆ.ಪಿ ಅವರು ಚಪ್ಪಾಳೆಯ ನಡುವೆ ಅಧ್ಯಕ್ಷ ಸ್ಥಾನದಲ್ಲಿ ಬಂದು ಕುಳಿತರು. ಅಧ್ಯಕ್ಷರ ಪ್ರಾಸ್ತಾವಿಕ ಭಾಷಣವಾದ ಮೇಲೆ ಸಭೆಯಲ್ಲಿ ಕೆಳಗಿನಂತೆ ಮಸೂದೆಗಳು ಮಂಜೂರಾದವು.

ಮಸೂದೆ ೧.: ಕೊಂಕಣ ವಿಭಾಗದ ಹೆಚ್ಚಾಗಿ ಚಿಪಳೂಣ್, ಖೇಡ ಹಾಗೂ ದಾಪೋಲಿ ತಾಲೂಕಿನ ದಲಿತರು ತಮ್ಮ ಏಳಿಗೆಯ ಮಾರ್ಗದಲ್ಲಿ ಮುನ್ನಡೆಯುತ್ತಿರಬೇಕಾದರೆ ಮೇಲ್ಜಾತಿಯ ಹಿಂದೂ ಜನರು ಅವರಿಗೆ ಅಪರಿಮಿತ ತೊಂದರೆ ಕೊಡುತ್ತಿದ್ದಾರೆ. ಅವರ ಇಂತಹ ಅಧಮ ಕೆಲಸಗಳನ್ನು ಈ ಸಭೆ ಖಂಡಿಸುತ್ತದೆ. ಹಾಗೂ ಈ ಸಂದರ್ಭದಲ್ಲಿ ನ್ಯಾಯ ಕೇಳಲು ದಲಿತರ ಒಂದು ಪಥಕವು ನಾಮದಾರ ಗವರ್ನರ್ ಸಾಹೇಬರಲ್ಲಿಗೆ ಹೋಗಲು ಅನುಮತಿ ಕೊಡುತ್ತಿದೆ.

ಮಸೂದೆ ೨: ಕೊಂಕಣದಲ್ಲಿಯ ದಲಿತರ ಹಿತಸಂರಕ್ಷಣೆಗಾಗಿ ಒಂದು 'ಕೊಂಕಣ ಸಂರಕ್ಷಕ ಫಂಡ್'ನ್ನು ನಿರ್ಮಿಸಬೇಕೆನ್ನುವುದು ಈ ಸಭೆಯ ಸೂಚನೆ.

ಮಸೂದೆ ೩: ದಲಿತರ ಶ್ರೀ.ಚಾ.ಬ. ಖೈರಮೋಡೆ ಹಾಗೂ ರಾ. ಗಾಡೇಕರ್ ಅನ್ನುವ ಇಬ್ಬರು ವಿದ್ಯಾರ್ಥಿಗಳು ಈ ವರ್ಷದ ಬಿ.ಎ ಪರೀಕ್ಷೆಯಲ್ಲಿ ಹಾಗೂ ರಾ.ಕದಮ್ ಇವನು ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಕ್ಕಾಗಿ ಈ ಸಭೆ ಇವರನ್ನು ಅಭಿನಂದಿಸುತ್ತದೆ.

ಮಸೂದೆ೪.: ಡಾ.ಪಿ.ಜಿ. ಸೋಲಂಕಿ, ಎಮ್.ಎಲ್.ಸಿ ಇವರನ್ನು ಸರ್ಕಾರ ಮುನಿಸಿಪಾಲ್ಟಿಗಾಗಿ ಆರಿಸಿದ್ದರಿಂದ ಈ ಸಭೆಡಾ. ಸೋಲಂಕಿ ಸಾಹೇಬರನ್ನು ಅಭಿನಂದಿಸುತ್ತದೆ ಹಾಗೂ ಸರ್ಕಾರ ಯೋಗ್ಯ ನಿರ್ಧಾರ ತೆಗೆದುಕೊಂಡಿದ್ದಕ್ಕೆ ಸಂತೋಷ ವ್ಯಕ್ತಪಡಿಸುತ್ತದೆ.

ಜನರ ಒತ್ತಾಯಕ್ಕೆ ಮಣಿದು ಹಾಗೂ ಅಧ್ಯಕ್ಷರ ಮನಸ್ಸು ನೋಯಿಸಲಾಗದೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮಾತನಾಡಲು ಎದ್ದರು. ತಮ್ಮ ಭಾಷಣದಲ್ಲವರು,

ಇಂದಿನ ಕಠಿಣ ಪ್ರಸಂಗದಲ್ಲಿ ನಾವೆಲ್ಲ ದಲಿತರು ಒಗ್ಗಟ್ಟಾಗಿ ಕೆಲಸ ಮಾಡಬೇಕು. ನಮ್ಮಲ್ಲಿಯ ಕೆಲವು ಜನ ಮಾಂಗ್ ಹಾಗೂ ಮಾಂಗ್‌ರೇತರರು ಅನ್ನುವ ಭೇದಭಾವ ಮಾಡುತ್ತಿದ್ದಾರೆ ಅನ್ನುವುದು ಬಹಳ ದುಃಖದ ಸಂಗತಿ. ಮಹಾಡ್‌ನ ಚವದಾರ ಕೆರೆಯ ಮೇಲೆ ಮಾಂಗ್ ತಮ್ಮ ಹಕ್ಕು ಸ್ಥಾಪಿಸಿ ಆ ಕೆರೆಯನ್ನು

ತಮ್ಮದಾಗಿಸಿಕೊಂಡಿದ್ದರೂ ಆ ಕೆರೆಯ ನೀರು ಚಮ್ಮಾರರು ಹಾಗೂ ಮಹರ್ ಕೂಡ ಕುಡಿಯಬಹುದು! ನಮ್ಮಲ್ಲಿ ಒಗ್ಗಟ್ಟಿರದೆ ನಾವು ಬದುಕಲಾರೆವು! ನಮ್ಮ ಸಂಸ್ಥೆಯ ವತಿಯಿಂದ ಈ ಭಾಗದಲ್ಲಿ ಆರಂಭಿಸಿರುವ ಬೋರ್ಡಿಂಗ್‌ಗಳಲ್ಲಿ ಯಾವುದೇ ರೀತಿಯ ಭೇದ ಭಾವವಿಲ್ಲ. ಯಾವುದೇ ದಲಿತ ಜಾತಿಯ ಮಕ್ಕಳನ್ನು ಅಲ್ಲಿ ಸೇರಿಸಬಹುದಾಗಿದೆ. ಹಾಗಾಗಿ ಎಲ್ಲ ಜಾತಿಯ ಮಕ್ಕಳು ಈ ಬೋರ್ಡಿಂಗ್ ಶಾಲೆಯಲ್ಲಿದ್ದಾರೆ.

ತಮ್ಮ ಸ್ವಾರ್ಥಕಾಗಿ ಕೆಲವು ಚಮ್ಮಾರರು ಸುಮ್ಮನೆ ಮಾಂಗ್‌ರ ವಿರುದ್ಧ ಡಂಗೂರ ಸಾರಿ ಇಲ್ಲ ಸಲ್ಲದ್ದನ್ನು ಪ್ರಚಾರ ಮಾಡಿ ತಾವೇ ಸರಿ ಅಂದುಕೊಳ್ಳುತ್ತಿದ್ದಾರೆ. ನಿಜ ಹೇಳುವುದಾದರೆ ನಾವು ನಡೆಸುತ್ತಿರುವ ಚಳುವಳಿಯನ್ನು ನೋಡಿ ಮಹಾರಾಷ್ಟ್ರದ ಇತರ ಚಳುವಳಿ ಪ್ರಮುಖರು ಪಾಠ ಕಲಿಯಬೇಕು. ಪುಣೆ ಹಾಗೂ ಸೋಲಾಪೂರನಲ್ಲಿಯ ಮಹಾನಗರ ಪಾಲಿಕಾ ಚುನಾವಣೆಯಲ್ಲಿ ನಾನು ಮುಂದಾಳತ್ವ ವಹಿಸಿಕೊಂಡು ಮಾಂಗ್ ಉಮೇದುವಾರರ ಹೆಸರನ್ನು ತೆಗೆಸಿ ಆ ಎರಡೂ ಜಾಗದಲ್ಲಿ ದಲಿತರ ವತಿಯಿಂದ ಕೇವಲ ಚಮ್ಮಾರರನ್ನು ಚುನಾವಣೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟೆ. ನಾವು ಎಲ್ಲ ದಲಿತರು ಒಂದೇ ಅಂದುಕೊಳ್ಳುತ್ತೇವೆ ಅನ್ನುವುದು ಈ ಘಟನೆಯಿಂದ ಎಲ್ಲರಿಗೂ ಅರ್ಥವಾಗಬಹುದು. ಇಲ್ಲಿ ಜಾತಿ ಹಾಗೂ ಪಂಗಡಗಳ ಮೇಲೆ ಜಾತಿಭೇದ ಮಾಡುವ ಅಗತ್ಯ ನಮಗಿಲ್ಲ. ಏಕೆಂದರೆ ಪರಿಸ್ಥಿತಿಯ ಗುಂಡುಕಲ್ಲು ಎಲ್ಲರ ತಲೆಯ ಮೇಲೆ ಸಮನಾಗಿಯೇ ತಿರುಗುತ್ತಿದೆ ಅಂದರು. ಕಡೆಗೆ ಅಧ್ಯಕ್ಷರಿಗೆ ಧನ್ಯವಾದ ಹೇಳಿ ಹೂವಿನ ಹಾರ ಅರ್ಪಿಸಿ ಸಭೆ ಮುಗಿಯಿತು.

# ೩೧.

# ಕಾರ್ಮಿಕರಿಗೆ ಜಾತಿಯಿಲ್ಲ ಎಂದು ಬೊಬ್ಬೆ ಹೊಡೆಯುವ ಬ್ರಾಹ್ಮಣ ನೇತಾರರು ಇದಕ್ಕೆ ಉತ್ತರ ಕೊಡಲಿ

ಬುಧವಾರ ೧೬ನೆಯ ಅಕ್ಟೋಬರ್ ೧೯೨೯ ರಂದು ಸಾಯಂಕಾಲ ೬.೩೦ ಕ್ಕೆ ಪರೇಲ್ ನಲ್ಲಿ ಮುಂಬಯಿ ಬಹಿಷ್ಕೃತ ವರ್ಗದ ಒಂದು ದೊಡ್ಡ ಜಾಹೀರು ಸಭೆಯನ್ನು ಆಯೋಜಿಸಲಾಗಿತ್ತು. ಪುಣೆಯ ಪರ್ವತಿ ಸತ್ಯಾಗ್ರಹಕ್ಕೆ ಬೆಂಬಲ ನೀಡಲು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಯಿತು. ಸಭೆಗೆಂದೇ ಪಡೆದಿದ್ದ ಹಾಲ್ ಜನರಿಂದಕಿಕ್ಕಿರಿದು ತುಂಬಿತ್ತು. ವೇದಿಕೆಯ ಮೇಲೆ ಶ್ರೀ. ಭುರಕುಟೆ, ದೇವರಾವ್ ನಾಯಿಕ್, ಠಾಕರೆ, ಪ್ರಧಾನ್, ಖಾಂಡಕೆ, ಕವಳಿ, ಕದ್ರೆಕರ್, ಆಚಾರ್ಯ, ಡಾ. ಸೂರತ್‌ಕರ್‌ರಂತಹ ಮೇಲ್ಜಾತಿಯ ಜನ, ಹಾಗೆಯೇ ಶ್ರೀ. ಶಿವತರ್‌ಕರ್, ಮಾಳಿ, ಆಡರೆಕರ್‌ರಂತಹ ದಲಿತರು ಕೂಡ ಉಪಸ್ಥಿತರಿದ್ದರು. ಶ್ರೀ. ಶಿವತರ್ಕರ್ ಅವರು ಡಾ.ಅಂಬೇಡಕರ್ ಅವರನ್ನು ಅಧ್ಯಕ್ಷಸ್ಥಾನ ಸ್ವೀಕರಿಸುವಂತೆ ವಿನಂತಿಸಿಕೊಂಡಾಗ ಖಾಂಡಕೆ ಅವರ ಅನುಮೋದನೆ ಸಿಕ್ಕಿದ ಕೂಡಲೆ ಡಾ.ಅಂಬೇಡ್ಕರ್ ಚಪ್ಪಾಳೆಯ ಕರತಾಡನದ ನಡುವೆ ಅಧ್ಯಕ್ಷ ಸ್ಥಾನದಲ್ಲಿ ಬಂದು ಕುಳಿತರು.

ಭಾಷಣದ ಆರಂಭದಲ್ಲಿ ಪುಣೆ ಸತ್ಯಾಗ್ರಹದ ಇತಿಹಾಸವನ್ನು ಸ್ವಲ್ಪದರಲ್ಲಿ ಹೇಳಿ ಪುಣೆಯ ಬಹಿಷ್ಕೃತರ ಸತ್ಯಾಗ್ರಹಕ್ಕೆ ಎಲ್ಲ ಬಹಿಷ್ಕೃತರು ಬೆಂಬಲ ನೀಡುವುದು ಅವರ ಪವಿತ್ರ ಕರ್ತವ್ಯವಾಗಿದೆ ಅಂದರು. ಹಾಗೂ ಅಗತ್ಯವಿದ್ದರೆ ನೀವೆಲ್ಲರೂ ಪುಣೆಯ ಸತ್ಯಾಗ್ರಹಕ್ಕೆ ಹೋಗಲು ಸಿದ್ಧರಿದ್ದೀರಾ? ಎಂದು ಸಭೀಕರಿಗೆ ಪ್ರಶ್ನೆ ಕೇಳಿದಾಗ ಎಲ್ಲರೂ ಒಕ್ಕೊರಲಿನಿಂದ 'ಹೌದು'ಅಂದರು.

'ಮೇಲ್ಜಾತಿ ಜನರ ವರ್ತನೆ ಹಾಗೂ ದಲಿತರ ಬಗ್ಗೆಯಿರುವ ಅವರ ದೃಷ್ಟಿ ಕೋನವನ್ನು ನೀವು ನಿಷೇಧಿಸುತ್ತಿರಿ, ಜೊತೆಗೆ ನಿಮ್ಮ ಬಗ್ಗೆ ಮೇಲ್ಜಾತಿಯವರ ವಿಚಾರ ಪರಿವರ್ತನೆಯಾಗುತ್ತದೆಯೇ ಅನ್ನುವುದರ ಬಗ್ಗೆ ಇನ್ನು ಸ್ವಲ್ಪ ದಿನ ಕಾದುನೋಡಿ'ಎಂದು ನಮಗೆ ತಿಳಿಹೇಳುವ ಜನ ಎಷ್ಟು ನೀಚ ವೃತ್ತಿಯವರಾಗಿರಬಹುದು. ೩೧ನೆಯ ಡಿಸೆಂಬರ್ ಒಳಗೆ ಡೊಮಿನಿಯನ್ ಸ್ಟೇಟಸ್ ಕೊಡದಿದ್ದರೆ ತಮಗೆ ಬ್ರಿಟೀಷ್ ಸರ್ಕಾರದೊಂದಿಗಿರುವ ಸಂಬಂಧವನ್ನು ಕಡಿದುಹಾಕುವೆವು ಎಂದು ಕಾಂಗ್ರೆಸ್ ಕೂಡ ಹೇಳಿದ ಮೇಲೆ ಸುಮ್ಮನೆ ದಲಿತರಿಗೆ ಸುಳ್ಳು ಹೇಳುವುದರಲ್ಲಿ ಅರ್ಥವಿದೆಯೆ? ನುಡಿದಂತೆ ನಡೆ ಅನ್ನುವುದು ಅವರಿಗೆ ಗೊತ್ತೇಯಿಲ್ಲ. ಸಾವಿರಾರು ವರ್ಷಕಾದರೂ ಏನನ್ನೂ ಕೊಡದ ಮೇಲ್ಜಾತಿಯವರ ನೀಚತನವೇ ಹೆಚ್ಚು ಎದ್ದು ಕಾಣುತ್ತಿದ್ದು ಇನ್ನೂ ಸ್ವಲ್ಪಕಾದು ನೋಡಿ ಎಂದು ಹೇಳುವುದು ಬರೀ ನಾಟಕ. ಇಂತಹ ಸವಿಮಾತುಗಳಿಗೆ ಮನಸೋಲುವಷ್ಟು ದಲಿತರೀಗ ಮುಗ್ಧರಲ್ಲ, ಅವರು ಸ್ವಾಭಿಮಾನಿಗಳು ಹಾಗೂ ಜಾಗೃತ ಪ್ರಜೆಗಳಾಗಿದ್ದಾರೆ. ಅದರ ಉದಾಹರಣೆಯೆ ಪುಣೆಯ ಸತ್ಯಾಗ್ರಹ. ಮುಂಬಯಿಯಲ್ಲಿ ಆದಷ್ಟು ಬೇಗ ದೇವಸ್ಥಾನ ಪ್ರವೇಶಿಸುವ ಸತ್ಯಾಗ್ರಹವನ್ನಾರಂಭಿಸಲಿದ್ದೇವೆ ಹಾಗೂ ಅದನ್ನು ಯಶಸ್ವಿಯಾಗಿಸಲು ಮುಂಬಯಿಯ ದಲಿತರು ಟೊಂಕ ಕಟ್ಟಿದ್ದಾರೆ' ಅಂದರು. ಪ್ರಾಸ್ತಾವಿಕ ಭಾಷಣದ ನಂತರ ಅವರು ಶ್ರೀ. ವನಮಾಳಿಯವರಿಗೆ ಕೆಳಗಿನ ಮಸೂದೆಗಳನ್ನು ಓದಿ ಹೇಳಲು ವಿನಂತಿಸಿದರು.

'ಸಮಾಜ ಸಮತಾ ಸಂಘ ಮತ್ತು ಭಾರತೀಯ ಬಹಿಷ್ಕೃತ ಸೇವಾ ಸಂಘ ಇವರ 'ಆಶ್ರಯದಲ್ಲಿ ತೆಗೆದುಕೊಂಡ ಈ ಸಭೆ ಪುಣೆಯಲ್ಲಿ ಬಹಿಷ್ಕೃತ ಹಿಂದೂಗಳು ತಮ್ಮ ನ್ಯಾಯ ಹಾಗೂ ಹಕ್ಕುಗಳಿಗಾಗಿ ಆರಂಭಿಸಿರುವ ಸತ್ಯಾಗ್ರಹಕ್ಕೆ ತಮ್ಮ ಸಂಪೂರ್ಣ ಬೆಂಬಲ ಕೊಡುತ್ತಿದ್ದು ಇದಕ್ಕೆ ಸಹಾಯ ಮಾಡಿದ ಮೇಲ್ಜಾತಿಯ ಜನರಿಗೆ ಮನಃಪೂರ್ವಕ ಕೃತಜ್ಞತೆ ವ್ಯಕ್ತಪಡಿಸುತ್ತದೆ. ತಮ್ಮ ಧೃಡ ನಿರ್ಧಾರವನ್ನು ಅಲುಗಾಡಿಸದೆ ಸತ್ಯಾಗ್ರಹದ ಹೋರಾಟವನ್ನು ಮುಂದುವರೆಸುವಂತೆ ದಲಿತರಿಗೆ ವಿನಂತಿಸುತ್ತದೆ.

ಮೇಲಿನ ನಿರ್ಧಾರವನ್ನು ಮಂಡಿಸುವಾಗ ಶ್ರೀ. ವನಮಾಳಿಯವರು 'ದಲಿತರು ದೇವಸ್ಥಾನದೊಳಗೆ ಕಾಲಿಡುವ ತಮ್ಮ ಹಕ್ಕು ಪಡೆಯುತ್ತಿರುವಾಗ ಮೇಲ್ಜಾತಿಯವರೇಕೆ ವಿರೋಧಿಸಬೇಕು'? ಅನ್ನುವುದರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದರು.

ಶ್ರೀ. ವಡವಲಕರ್ ಅವರು ಮಸೂದೆಯ ಪರ ಭಾಷಣ ಮಾಡಿದರು. ನಂತರ, ಶಾಂತವಾಗಿ ಸತ್ಯಾಗ್ರಹ ಮಾಡುವ ಜನರ ಮೇಲೆ ಹಲ್ಲೆ ನಡೆಸುವ ಮೇಲ್ಜಾತಿ ಜನರನ್ನು ಈ ಸಭೆ ನಿಷೇಧಿಸುತ್ತದೆ ಅನ್ನುವ ಅರ್ಥದ ಮಸೂದೆಯನ್ನು ಶ್ರೀ.ಕೆ.ಸಿ. ಠಾಕರೆಯವರು ಮಂಡಿಸಿದರು.

ಮೇಲಿನ ನಿರ್ಧಾರದ ಪರ ಶ್ರೀ.ದ.ವಿ. ಪ್ರಧಾನರವರು ಮಾತನಾಡಿದರು.

ಶ್ರೀ. ಖಟಾವಕರ್ ಹಾಗೂ ಆಚಾರ್ಯರವರ ಭಾಷಣಗಳಾದ ಮೇಲೆ ಮಸೂದೆಯನ್ನು ಮಂಜೂರು ಮಾಡಲಾಯಿತು. ಮೂರನೆಯ ಮಸೂದೆಯಲ್ಲಿ ದಲಿತರ ಮೇಲಾಗುತ್ತಿರುವ ಹಲ್ಲೆಗಳನ್ನು ನೋಡಿಯೂ ಕೂಡ ಕಲೆಕ್ಟರ್ ಸಾಹೇಬರು ಯಾವುದೇ ಬಂದೋಬಸ್ತು ಮಾಡಲಿಲ್ಲ ಅನ್ನುವುದಕ್ಕೆ ದುಃಖ ವ್ಯಕ್ತಪಡಿಸಲಾಯಿತು. ಈ ಸಭೆಯಲ್ಲಿ ದೇವರಾವ್ ನಾಯಿಕ್ ಹಾಗೂ ಭುಸ್ಕುಟೆಯವರು ಕೂಡ ಭಾಷಣ ಮಾಡಿದರು. ಯಾವುದೇ ದಬ್ಬಾಳಿಕೆಯ ಇಲ್ಲವೆ ಕ್ರೂರ ಸರ್ಕಾರದ ವಿರುದ್ಧ ಅನ್ಯಾಯಕ್ಕೊಳಗಾದವರು ಸತ್ಯಾಗ್ರಹ ಮಾಡಬಹುದು ಎಂದು ಡಾ. ಅಂಬೇಡಕರ್ ಹೇಳುತ್ತಾರೆ. ಹಾಗಾದರೆ ಗಿರಣಿಯ ಮಾಲಿಕರ ವಿರುದ್ಧ ಗಿರಣಿ ಕಾರ್ಮಿಕರು ಮಾಡುತ್ತಿರುವ ಸತ್ಯಾಗ್ರಹವನ್ನು ಅಂಬೇಡ್ಕರರು ವಿರೋಧಿಸಿದ್ದೇಕೆ? ಅನ್ನುವ ಪ್ರಶೆಯನ್ನು ಸಭೆಯಲ್ಲಿದ್ದವನೊಬ್ಬ ಆರಂಭದಲ್ಲಿ ಕೇಳಿದ್ದ, ಅದಕ್ಕೆ ಸಭೆಯ ಕೊನೆಗೆ ಈ ಪ್ರಶ್ನೆಗೆ ಉತ್ತರಿಸುತ್ತೇನೆ ಎಂದು ಅಂಬೇಡ್ಕರರು ಅವನಿಗೆ ಆಶ್ವಾಸನೆ ಕೊಟ್ಟಿದ್ದರು, ಹಾಗಾಗಿ ಸಭೆ ಮುಗಿಯುತ್ತಿದ್ದಂತೆ ಅವನ ಪ್ರಶ್ನೆಗೆ ಉತ್ತರ ಕೊಡಲು ಅಂಬೇಡ್ಕರ್ ಮಾತನಾಡಲಾರಂಭಿಸಿದರು.

ನಾನು ಗಿರಣಿಕಾರ್ಮಿಕರ ಯೂನಿಯನ್‌ಗೆ ಯಾಕೆ ವಿರೋಧಿಸಿದೆ? ಬಹುಶಃ ಮುಷ್ಕರದ ಕಾರಣ ಹಾಗೂ ಪರಿಸ್ಥಿತಿಯ ಬಗ್ಗೆ ಅನೇಕರಿಗೆ ಸರಿಯಾದ ಮಾಹಿತಿಯಿಲ್ಲ. ಒಂದೋ ಈ ಮುಷ್ಕರ ಒಂದೇ ಜಾಗಕ್ಕೆ ಸೀಮಿತವಾಗಿದ್ದು ಸಾರ್ವತ್ರಿಕವಾಗಿರಲಿಲ್ಲ. ಗಿರಣಿಯಲ್ಲಿ ಕೆಲಸ ಮಾಡುವ ಒಬ್ಬ ಮುಸಲ್ಮಾನ ಕಾರ್ಮಿಕನೂ ಮುಷ್ಕರದಲ್ಲಿ ಭಾಗವಹಿಸಿರಲಿಲ್ಲ ಅಲ್ಲದೆ ಮುಸಲ್ಮಾನ ಕಾರ್ಮಿಕರು ಹೆಚ್ಚು ಸಂಖ್ಯೆಯಲ್ಲಿ ಕೆಲಸ ಮಾಡುವ ಗಿರಣಿಗಳು ಯಾವುದೇ ಅಡೆತಡೆಗಳಿಲ್ಲದೆ ನಡೆಯುತ್ತಿದ್ದವು. ಹಾಗೆಯೇ ಮುಷ್ಕರ ಆರಂಭವಾಗುವ ಒಂದು ದಿನ ಮೊದಲು ಕಾರ್ಮಿಕ ಯೂನಿಯನ್ನಿನ ಅಧ್ಯಕ್ಷರು, ಸೆಕ್ರೆಟರಿ ಹಾಗೂ ಇನ್ನಿಬ್ಬರು ನನ್ನನ್ನು ಕಾಣಲು ಬಂದಿದ್ದರು. ಶ್ರೀ. ದೇವರಾವ್ ನಾಯಿಕ್ ಹಾಗೂ ಶ್ರೀ. ದ.ವಿ. ಪ್ರಧಾನರವರು ಕೂಡ ನನ್ನೊಂದಿಗಿದ್ದರು. ಸಾಕಷ್ಟು ಚರ್ಚೆಗಳಾದ ಮೇಲೆ ಮುಷ್ಕರ ಹೂಡಲು ಸರಿಯಾದ ಕಾರಣಗಳಿಲ್ಲದೆ, ಹಾಗೂ ಹಣದ ಬೆಂಬಲವಿಲ್ಲದೆ ಮುಷ್ಕರ ಹೂಡುವುದು ಹುಚ್ಚುತನ ಎಂದು ನಾನು ಯುನಿಯನ್ ಜನರಿಗೆ ತಿಳಿಸಿ ಹೇಳಿದೆ. ಮುಷ್ಕರಕ್ಕೆ ಸರಿಯಾದ ಕಾರಣಗಳಿರುವುದಾದರೆ ಹಾಗೂ ನಮ್ಮ ದಲಿತರಿಗೆ ಅದರಿಂದ ಲಾಭವಾಗುವುದಾದರೆ ನಾನು ಸಂತೋಷದಿಂದ ಮುಷ್ಕರದಲ್ಲಿ ಭಾಗವಹಿಸುತ್ತೇನೆ ಎಂದು

ಕೂಡ ಹೇಳಿದೆ.

ನಂತರ ನಾನು ಮುಷ್ಕರದ ಕಾರಣಗಳನ್ನು ಹುಡುಕಿ ತೆಗೆದಾಗ ಕೆಲವು ಜನ ಈ ಮುಷ್ಕರವನ್ನು ತಮ್ಮ ಸೊಕ್ಕು ತೋರಿಸಿ ಮುಂದುವರೆಸುತ್ತಿದ್ದಾರೆ. ಯುನಿಯನ್ ಕೊಟ್ಟಿರುವ  ಭರವಸೆಯನ್ನು ಯೂನಿಯನ್ ಮಾಲೀಕರು ಕಾಪಾಡದಿದ್ದರೆ ಯೂನಿಯನ್‌ನ ಯಾವುದೇ ಶಬ್ದಕ್ಕೆ ಬೆಲೆ ಇರುವುದಿಲ್ಲ ಅನ್ನುವ ಪರಿಸ್ಥಿತಿಯಿತ್ತು. ಮುಂಬಯಿ ಸರ್ಕಾರ ನೇಮಿಸಿದ್ದ ಮುಷ್ಕರ ವಿಚಾರಣೆ ನ್ಯಾಯಾಲಯದಲ್ಲಿ ಯೂನಿಯನ್ ಅಧಿಕಾರಿಗಳು 'ನಮ್ಮ ಸಂಘಟನೆ ಅಸ್ತವ್ಯಸ್ತವಾಗಿದ್ದರಿಂದ ನಾವು ಮುಷ್ಕರ ಹೂಡಿದೆವು ಎಂದು ಹೇಳಿರುವುದನ್ನು ಎಲ್ಲರು ನೆನಪಿಡಿ.

ಮೂರನೆಯ ಮುಖ್ಯ ಕಾರಣವೆಂದರೆ ಇಲ್ಲಿಯವರೆಗಾದ ಮುಷ್ಕರಗಳಲ್ಲಿ ದಲಿತರಿಗೆ ಯಾವುದೇ ರೀತಿಯ ಲಾಭವಾಗಲಿಲ್ಲ, ಬಟ್ಟೆ ಗಿರಣಿಗಳಲ್ಲಿ ಅವರಿಗಿನ್ನೂ ಪ್ರವೇಶವಿಲ್ಲ. ಬಟ್ಟೆ ಗಿರಣಿಗಳು ದಲಿತರಿಗಾಗಿತೆರವಾಗಿ ಮುಂಬಯಿಯ ದಲಿತರಿಗೆ ಬಟ್ಟೆ ತಯಾರಿಸುವ ಕೆಲಸ ಕಲಿಯುವಂತಾಗಲಿ ಅನ್ನುವ ಕಾರಣಕ್ಕಾಗಿಯೂ ನಿಮ್ಮ ಮುಷ್ಕರವನ್ನು ವಿರೋಧಿಸಿದೆ. ಇಲ್ಲಿಯ ಮೇಲ್ಜಾತಿ ಜನ ಅವರಿಗೆ ಕೆಲಸ ಕಲಿಸಲು ಸಿದ್ಧರಿಲ್ಲ, ವರಾಡನಿಂದ ೧೩೦ ಜನರನ್ನು ಈ ಕೆಲಸಕ್ಕಾಗಿ ಕರೆಸಿದ್ದೆ ಕೂಡ ಆದರೆ ಮೇಲ್ಜಾತಿ ಜನರು ನಾವು ಅಸ್ಪೃಶ್ಯರೊಂದಿಗೆ ಕೆಲಸ ಮಾಡುವುದಿಲ್ಲ ಎಂದು ಸಾಕಷ್ಟು ಕಡೆಗಳಲ್ಲಿ ಮುಷ್ಕರ ಹೂಡಿದ್ದರಿಂದ ನಾನು ಕರೆಯಿಸಿದ ದಲಿತರು ಮರಳಿ ತಮ್ಮೂರಿಗೆ ಹೋಗಬೇಕಾಯಿತು. ದಲಿತರ ಮೇಲಾಗುತ್ತಿವ ದೌರ್ಜನ್ಯವೇ ಕಾರ್ಮಿಕ ಚಳುವಳಿಯ ಕಾರಣ ಅನ್ನುವುದಾದರೆ ಕಾರ್ಮಿಕರಿಗೆ ಜಾತಿಯಿರುವುದಿಲ್ಲ ಎಂದು ಹೇಳುವ ಮೇಲ್ಜಾತಿಯ ನಾಯಕರು ಇದಕ್ಕೆ ಉತ್ತರಿಸಲಿ.

ಜಾತಿ ಭೇದವನ್ನು ಪುರಸ್ಕರಿಸುವ ಮೇಲ್ಜಾತಿಯ ಕಾರ್ಮಿಕರು ಅಸ್ಪೃಶ್ಯ ಅಮಲದಾರರಾಗಲಿ ಇಲ್ಲವೆ ಮುಕಾದ ಮರ ಕೈಕೆಳಗೆ ಕೆಲಸ ಮಾಡಲು ಸಿದ್ಧರಿರುವುದಿಲ್ಲ ಹಾಗಾಗೀ ಗಿರಣಿಯ ಯಾವುದೇ ದೊಡ್ಡ ಹುದ್ದೆಗಳನ್ನು ದಲಿತರಿಗಾಗಿ ತೆರವು ಮಾಡಿಕೊಡಲಾಗುವುದಿಲ್ಲ. ಗಿರಣಿಯ ನಲ್ಲಿಗಳ ಹತ್ತಿರದ ಜಗಳಗಳು ಹಾಗೂ ಮೇಲ್ಜಾತಿಯ ಹೆಣ್ಣುಮಕ್ಕಳಿಂದ ದಲಿತ ಹೆಣ್ಣುಮಕ್ಕಳ ಅವಮಾನ ದಿನಾಲೂ ನಡೆಯುವ ವಿದ್ಯಮಾನಗಳು. ಬಹಿಷ್ಕೃತರ ಮೇಲೆ ಅನ್ಯಾಯವಾಗುತ್ತಿರುವ ಅದನ್ನು ಮುಂದುವರೆಸುವ ಮನೋಭಾವವಿರುವ ಯಾವುದೇ ಚಳುವಳಿಯನ್ನು ವಿರೋಧಿಸುವುದೇ ನಮ್ಮ ಮೊದಲ ಕರ್ತವ್ಯ. ದಲಿತರ ಸಹಕಾರ್ಯದ ಅಪೇಕ್ಷೆಯಿರುವವರು ದಲಿತರಿಗೆ ಮೊದಲು ನ್ಯಾಯ ಕೊಡಬೇಕು. ನಮ್ಮ ದಲಿತ ಬಂಧುಗಳಿಗೆ ನ್ಯಾಯ ಒದಗಿಸಿ ಅವರನ್ನು ಗುಲಾಮಗಿರಿಯಿಂದ ಹಾಗೂ ಸಧ್ಯದ ಪರಿಸ್ಥಿಯಿಂದ ಪಾರು ಮಾಡಲು ಯಾರಾದರೂ ತನು ಮನ ಧನದಿಂದ ಪ್ರಯತ್ನಿಸುತ್ತಿದ್ದಲ್ಲಿ ಅಂತಹವರಿಗೆ ಸಹಾಯ ಮಾಡಲು ನಾನೆಂದೂ ಹಿಂದುಳಿಯುವವನಲ್ಲ. ಆದರೆ ಪ್ರತಿಯೊಂದು ಚಳುವಳಿಯ ಸೂತ್ರ ದಲಿತರಿಗೆ ನ್ಯಾಯ ದೊರಕಿಸಿ ಕೊಡುವುದು ಹಾಗೂ ಸಮಾನತೆಯ ವರ್ತನೆಯಿಟ್ಟುಕೊಳ್ಳುವುದಷ್ಟೆ ಇರುವುದಾದರೆ ಅದು ನ್ಯಾಯ. ಸ್ವಾರ್ಥಿ ಮೇಲ್ಜಾತಿಯ ಜನರ ಚಳುವಳಿಯಲ್ಲಿ ನನಗ್ಯಾವ ಆಸಕ್ತಿಯಿಲ್ಲ. ಮತ್ತೊಮ್ಮೆ ನಾನೆಲ್ಲರಿಗೂ ಪರ್ವತಿ ಸತ್ಯಾಗ್ರಹಕ್ಕೆ ಸಹಾಯ ಮಾಡಲು ವಿನಂತಿಸುತ್ತೇನೆ'. ಅಂದರು ಹೀಗೆ ಸಭೆಯ ಕಾರ್ಯಕಲಾಪಗಳು ಮುಗಿಯಲು ರಾತ್ರಿ ೯ ಘಂಟೆಯಾಯಿತು.

# ೩೨.

# ಕೇವಲ ಶಿಕ್ಷಣದಿಂದ ಯೋಗ್ಯತೆ ಬರುವುದಿಲ್ಲ

ಧಾರವಾಡ ಜಿಲ್ಲೆಯ ಮೊದಲ ಬಹಿಷ್ಕೃತರ ಪರಿಷತ್ತು ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ತಾ. ೨೮ನೆಯ ಡಿಸೆಂಬರ್ ೧೯೨೯ರಂದು ಸಾಯಂಕಾಲ ಆಗಷ್ಟೆ ಕಟ್ಟಿದ್ದ ಕೋಟೆಯ ಪ್ರವೇಶದ್ವಾರದ ಹತ್ತಿರವಿದ್ದ ಮೈದಾನದಲ್ಲಿ ಅತ್ಯಂತ ಉತ್ಸಾಹದಲ್ಲಿ ಜರುಗಿತು. ಸಭೆಗೆ ದಲಿತರ ಪ್ರತಿನಿಧಿಗಳಾಗಿ ಮಾಂಗ್, ಮಹರ್, ಚಮ್ಮಾರರು, ಭಂಗಿಗಳು, ಕಟುಕರು ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು. ದಲಿತರಲ್ಲದೆ ಅನೇಕ ಮೇಲ್ಜಾತಿಯ ಜನ ಕೂಡ ಹಾಜರಿದ್ದರು. ವುಂಚದ ಮೇಲೆ ಮೈಸೂರಿನ ಸೌ. ಕನಕಲಕ್ಷ್ಮಿ ಅಮ್ಮಾ, ಶ್ರೀ. ಮುದವೇಡು ಕೃಷ್ಣರಾಯಪ್ಪ ಕುಳಿತಿದ್ದರು. ಮೇಲ್ಜಾತಿಯವರಲ್ಲಿ ಡಾ. ಕಿರ್ಲೋಸ್ಕರ್, ಡಾ. ಕಮಲಾಪುರ್, ನಂತಹ ಪ್ರಸಿದ್ಧ ಜನ ಕುಳಿತಿದ್ದರು. ಸ್ವಾಗತಪರ ಗೀತೆಗಳಾದ ಮೇಲೆ ಸ್ವಾಗತಾಧ್ಯಕ್ಷರಾದ ವಾಯ್. ಬಿ. ಸಾಂಬಾಣಿ ಅವರ ಚಿಕ್ಕ ಭಾಷಣವಾಯಿತು.

ಕರ್ನಾಟಕ ಕಾಲೇಜಿನ ದಲಿತ ವಿದ್ಯಾರ್ಥಿಯಾದ ಮಿ.ಎಸ್.ಎನ್.ಮಾನೆಯವರು ಡಾ. ಅಂಬೇಡ್ಕರ್ ಅವರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಬೇಕು ಎಂದು ಮರಾಠಿಯಲ್ಲಿ ಆಮಂತ್ರಿಸಿದಾಗ ಅದಕ್ಕೆ ಸೆಕ್ರೆಟರಿ ಮಿ. ಸಬಾಣಿಯವರು ಕನ್ನಡದಲ್ಲಿ ಅನುಮೋದಿಸಿದರು. ರಾ.ಸಾ. ಪಾಪಣ್ಣಾ ಜಾಲಿಹಾಳ, ಬೆಳಗಾಂವ್ ಇವರು ಅದನ್ನು ಖಚಿತಪಡಿಸಿದಾಗ ಅಧ್ಯಕ್ಷರು ಚಪ್ಪಾಳೆಯ ಕರತಾಡನದ ನಡುವೆ ಅಧ್ಯಕ್ಷ ಸ್ಥಾನವವನ್ನಲಂಕರಿಸಿದರು. ಅಧ್ಯಕ್ಷರ ಭಾಷಣದ ಮೊದಲು ಸೆಕ್ರೆಟರಿಯವರು ಹೊರ ಊರಿನಿಂದ ಪರಿಷತ್ತಿಗಾಗಿ ಕಳಿಸಿದ್ದ ಸಂದೇಶಗಳನ್ನು ಓದಿದರು. ಮಿ. ರಾಜಭೋಜ, ಪುಣೆ, ಮಿ. ಸ್ಟಾರ್ಟ್ ನಾಸಿಕ್, ದೆ. ಭ. ಗಂಗಾಧ ರಾವ್ ದೇಶಪಾಂಡೆ ಹುಬ್ಬಳ್ಳಿ (ಬೆಳಗಾಂವ್), ನಾ. ಜಾಧವ್, ಸುಭೆದಾರ ಘಾಡಗೆ, ಡಿ.ಸಿ. ಮಿಶನ್ ಪುಣೆ ಇವರುಗಳು ಸಂದೇಶ ಓದಿದ ಮೇಲೆ ಭಾಷಣ ಮಾಡಿದರು. ಈ ಎಲ್ಲ ಭಾಷಣಗಳು ಮರಾಠಿ ಭಾಷೆಯಲ್ಲಾದವು. ಡಾ.ಅಂಬೇಡ್ಕರರು ತಮ್ಮ ಭಾಷಣದಲ್ಲಿ,

ನಮಗೆ ಸಿಕ್ಕ ಹೊಗಳಿಕೆಗೆ ನಾವು ಯೋಗ್ಯರೋ ಅಲ್ಲವೋ ಅನ್ನುವುದನ್ನು ನಾವೇ ನಿರ್ಧರಿಸುವುದು ಬಹಳ ಕಷ್ಟ. ಶ್ರೋತೃಗಳೆ ಸ್ತುತಿಯ ಯೋಗ್ಯತೆಯನ್ನು ನಿರ್ಧರಿಸುವವರು. ನಾನು ಲಂಡನ್ನಿನಿಂದ ಬಂದಾಗ ನನಗೆ ಮಾನಪತ್ರ ಕೊಡಿಸುವ ಬಗ್ಗೆ ಜನ ಸಾಕಷ್ಟು ಕಷ್ಟಪಟ್ಟರು. ಆದರೆ ನಾನು ಯಾವುದೇ ಮೋಹಕ್ಕೆ ಬಲಿಯಾಗದೆ ಮಾನಪತ್ರ ಸ್ವೀಕರಿಸಲಿಲ್ಲ ಅನ್ನುವುದಕ್ಕೆ ಕಾರಣ ಒಂದೆ, ಮಾನಪತ್ರ ಸ್ವೀಕರಿಸಲು ಕೂಡ ಯೋಗ್ಯತೆ ಬೇಕು, ಕೇವಲ ವಿದ್ಯೆ ಕಲಿತರೆ ಆ ಯೋಗ್ಯತೆ ಬರುತ್ತದೆ ಎಂದು ನನಗನಿಸುವುದಿಲ್ಲ. ಮನುಷ್ಯ ವಿದ್ವಾಂಸನಾದರೆ ಆತ ಸಮಾಜಕ್ಕಾಗುತ್ತಾನೆ ಎಂದೇನೂ ಇಲ್ಲ. ವಿದ್ವಾಂಸ ಮನುಷ್ಯ ವಂಚಕ, ಮೋಸಗಾರ, ಸಾಲಗಾರ ಇನ್ನೇನೇನೋ ಆಗಿರುತ್ತಾನೆ. ಇಂದಿನ ಪರಿಸ್ಥಿಯಲ್ಲಿ ವಿದ್ಯೆ ಕಲಿತ ಆಧುನಿಕ ಜನ ದಲಿತರೊಂದಿಗೆ ಯಾವ ರೀತಿ ವರ್ತಿಸುತ್ತಿದ್ದಾರೆ ಅನ್ನುವುದನ್ನು ನೀವೇ ನೋಡುತ್ತಿದ್ದೀರಿ. ಇದೆಲ್ಲ ಸಹಜ ಏಕೆಂದರೆ ಸ್ಪೃಶ್ಯ ಅಸ್ಪೃಶ್ಯ ಅನ್ನುವುದು ಸನಾತನಕಾಲದಿಂದಲೂ ನಡೆದುಕೊಂಡು ಬಂದಂತಹದ್ದು. ಈ ಸಮಸ್ಯೆ ಯಾವ ಕಾಲಕ್ಕೆ ಪರಿಹಾರವಾಗಬಹುದು ಅನ್ನುವುದನ್ನು ಯಾರೂ ಹೇಳಲಾರರು. ಅಸ್ಪೃಶ್ಯತೆಯನ್ನು ಹೋಗಲಾಡಿಸುವ

ಅನೇಕ ಮಾರ್ಗಗಳಿವೆ. ಅದರಲ್ಲಿ ಮಹತ್ವವಾದದ್ದು ರಾಜಕೀಯ ಅಧಿಕಾರವನ್ನು ನಮ್ಮ ಕೈಯಲ್ಲಿ ತೆಗೆದುಕೊಳ್ಳುವುದು. ಇತ್ತೀಚೆಗೆ ನಮ್ಮನ್ನು ಸುಧಾರಿಸಲು ಅನೇಕ ಮೇಲ್ಜಾತಿಯ ಜನ ಮುಂದೆ ಬರುತ್ತಿದ್ದಾರೆ, ದೊಡ್ಡ ದೊಡ್ಡ ಸಾಹೇಬರು ನಮ್ಮ ಬಗ್ಗೆ ಆತ್ಮೀಯತೆ ತೋರಿಸುತ್ತಿದ್ದಾರೆ ಆದರೆ ಮೆತ್ತಗೆ ಬಂದು ಯಾವಾಗಲೂ ಸ್ವಚ್ಛವಾಗಿರಿ, ಹೊಸ ದೃಷ್ಟಿಯಿಟ್ಟುಕೊಳ್ಳಿ ಎಂದೆಲ್ಲ ಹೇಳುತ್ತಾರಲ್ಲ  ಇದೆಲ್ಲ ಸರಿಯೆ? ದಲಿತರ ಸುಧಾರಣೆ ಕೇವಲ ಒಳ್ಳೊಳ್ಳೆ ಬಟ್ಟೆ ಹಾಕಿಕೊಳ್ಳುವುದರಲ್ಲಿಲ್ಲ  ಆದರೆ ಇವೆಲ್ಲ ವಿಷಯಗಳು ರಾಜಕೀಯದ ಅಧೀನವಾಗಿವೆ ಅನ್ನುವುದನ್ನು ನೆನಪಿಡಿ.

ಕಾಡು ಮನುಷ್ಯರು, ಹಿಂದೂ ಸಮಾಜ ಹಾಗೂ ದಲಿತ ಸಮಾಜ ಇವುಗಳ ನಡುವೆ ಸಾಕಷ್ಟು ವ್ಯತ್ಯಾಸವಿದೆ. ಪ್ರತಿಯೊಬ್ಬರ ರೂಢಿ ಪರಂಪರೆಗಳು ಭಿನ್ನವಾಗಿವೆ, ದಲಿತೋದ್ಧಾರದ ವಿಷಯದಲ್ಲಿ ಹೊಸ ಕಾನೂನನ್ನು ಜಾರಿಗೆ ತರುವ ಧೈರ್ಯ ಸರ್ಕಾರ ತೋರುತ್ತಿಲ್ಲ, ಸ್ವಲ್ಪಮಟ್ಟಿಗಾದರೂ ರಾಜಕೀಯ ಅಧಿಕಾರ ಸಿಗದೆ ನಮ್ಮ ಸುಧಾರಣೆ ವೇಗ ಪಡೆಯಲಾರದು. ರಾಜಕೀಯ ಅಧಿಕಾರ ಪಡೆಯಲು ನಾವು ಪ್ರಯತ್ನಿಸಬೇಕು ಅಂತೆಯೆ ಮೇಲ್ಜಾತಿ ಜನರ ಅನ್ಯಾಯವನ್ನೂ ದೂರ ಮಾಡಲು ಕಷ್ಟಪಡಬೇಕು. ಎಲ್ಲ ದಿಕ್ಕಿನಿಂದಲೂ ಶೀಘ್ರತೆಯಿಂದ ಕೆಲಸಗಳು ನಡೆಯಬೇಕಿವೆ. ಕೊಂಕಣದಲ್ಲಿ ದಲಿತರ ಸ್ಥಿತಿ ಅವರಿರುವ ಊರಿನ ಜನರನ್ನು ಅವಲಂಬಿಸಿದೆ. ದಲಿತರಿಗೆ ಊರಿನ ಪಾಟೀಲನು ಅನುಕೂಲಕರವಾಗಿರಬೇಕು, ಆತನ ತಲೆಕೆಟ್ಟರೆ ತನ್ನ ಗೂಂಡಾಗಳನ್ನು ಕಳಿಸಿ ದಲಿತರನ್ನು ಸಾಕಷ್ಟು ಪೀಡಿಸುತ್ತಾನೆ, ಈ ಪಾಟೀಲರು ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕುತ್ತಾರೆ, ಹಾಗೆ ಬಹಿಷ್ಕಾರ ಹಾಕುವ ಹಕ್ಕು ಅಲ್ಲಿ ಅವರಿಗಿರುತ್ತದೆ. ಇಂತಹ ಬಹಿಷ್ಕಾರಕ್ಕೆ ದಲಿತರು ಹೆದರುತ್ತಾರೆ ಹಾಗಾಗಿ ಈಗ ನಡೆಸುತ್ತಿರುವ ಚಳುವಳಿಯಿಂದವರು ದೂರವಿರಬಯಸುತ್ತಿದ್ದಾರೆ. ದಲಿತರ ಪರಿಸ್ಥಿತಿ ಇಂದಿಗು ಕೂಡ ವಿಚಿತ್ರವಾಗಿದೆ.

ಬ್ರಿಟಿಷರ ಈ ರಾಜ್ಯದಲ್ಲಿ ದಲಿತರ ಮೇಲೆ ಹಾಕಲಾಗುವ ಸಾಮಾಜಿಕ ಬಹಿಷ್ಕಾರವನ್ನು ದೂರ ಮಾಡುವ ಇಲ್ಲವೆ ಸರಿಪಡಿಸುವ ಯಾವುದೇ ಕಾಯಿದೆ ಇನ್ನೂ ಜಾರಿಗೆ ಬರುತ್ತಿಲ್ಲ.  ನಾವೆಲ್ಲರೂ ಈಗ ಸ್ವಾತಂತ್ರ್ಯವಾದಿಗಳಾಗಬೇಕು ಎಂದು ನನಗನಿಸುತ್ತದೆ. ಈ ದೇಶದಲ್ಲಿ ಮಹರ್ ಹಾಗೂ ಮಾಂಗ್‌ರಿಗಾದರೂ ಸ್ವಾತಂತ್ರ್ಯ ಬೇಕು, ಇತ್ತೀಚೆಗೆ ಎಲ್ಲೆಲ್ಲೂ ಸ್ವಾತಂತ್ರ್ಯ ಬೇಡುವ ಚಳುವಳಿಗಳು ನಡೆದಿವೆ. ನನಗನಿಸಿದ ಮಟ್ಟಿಗೆ ಈ ಸ್ವಾತಂತ್ರ್ಯದ ಎಲ್ಲ ಲಾಭಗಳು ಬೇರೆಯವರ ಪಾಲಾಗಲಿವೆ. ಇದರಲ್ಲಿ ನಮ್ಮಂತಹ ನಿರ್ಗತಿಕರಿಗೆ ಮಾತ್ರ ಲಾಭವಾಗಬೇಕು, ಆದರೆ ಸ್ವಾತಂತ್ರ್ಯದ ಈ ಕೊಡುಕೊಳ್ಳಿಕೆಯಲ್ಲಿ ಯಾವುದೇ ಅರ್ಥವಿದೆ ಎಂದು ನನಗನಿಸುವುದಿಲ್ಲ. ನನಗೆ ಬ್ರಿಟಿಷ್ ಸರ್ಕಾರದ ಮೇಲೆ ಎಳ್ಳಷ್ಟು ನಂಬಿಕೆಯಿಲ್ಲ ಅನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಸರ್ಕಾರ ನಮ್ಮ ಉದ್ಧಾರಕ್ಕಾಗಿ ಏನೂ ಮಾಡುತ್ತಿಲ್ಲ, ನಮ್ಮ ಉದ್ಧಾರ ನಾವೇ ಮಾಡಿಕೊಳ್ಳಬೇಕಿದೆ. ಅಸ್ಪೃಶ್ಯತೆ ಇರುವವರೆಗೆ ಸ್ವಾತಂತ್ರ್ಯ ಸಿಗುವುದಿಲ್ಲ ಎಂದು ಇಂದಿನ ಸ್ವಾಗತಾಧ್ಯಕ್ಷರು ಹೇಳಿದರು, ಆದರೆ ಇದು ಸುಳ್ಳು, ಬ್ರಿಟಿಷ್ ಸರ್ಕಾರ ತತ್ವಜ್ಞಾನಿ ಸರ್ಕಾರವಲ್ಲ, ಅದು ಪಕ್ಕಾ ವ್ಯವಹಾರಿ ಸರ್ಕಾರ. ಕೇಳಿಕೊಂಡು ಬಂದವರಿಗೆ ಸ್ವಾತಂತ್ರ್ಯ ಕೊಡಲು ಅವರು ಕುಳಿತಿಲ್ಲ.  ಬೇರೆಯವರನ್ನು ಲೂಟಿಮಾಡುವ, ಬೇರೆಯವರಿಗೆ ತೊಂದರೆ ಕೊಡುವವರನ್ನೇ ಖುಷಿಪಡಿಸುತ್ತದೆ ಈ ಸರ್ಕಾರ. ನಮಗೆ ಸ್ವಾತಂತ್ರ್ಯ ಕೊಟ್ಟರೂ ತಮ್ಮ ಸಾಮ್ರಾಜ್ಯ ಸುರಕ್ಷಿತವಾಗಿದೆಯೆ? ಅನ್ನುವುದನ್ನು ಖಚಿತಪಡಿಸಿಕೊಂಡ ನಂತರವೇ ಮುಂದಿನ ಹೆಜ್ಜೆಯಿಡುತ್ತದೆ, ನಿಮ್ಮ ವ್ಯವಹಾರ, ತೊಂದರೆಗಳು ಅವರಿಗೆ ಸಂಬಂಧಪಟ್ಟಿದ್ದಲ್ಲ.ಈ ದೇಶದ ಒಳ್ಳೆಯದಕ್ಕಾಗಿ ಸ್ವಾತಂತ್ರ್ಯ ಯಾರೂ ಕೊಡುತ್ತಿಲ್ಲ. ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವ ಮಾತುಕತೆಯಲ್ಲಿ ನಿಮ್ಮನ್ನು ನಮ್ಮನ್ನು ಯಾರಾದರೂ ಕೇಳುತ್ತಿದ್ದಾರೆಯೆ? ಮಹಾತ್ಮ ಗಾಂಧಿ, ಸಪ್ರೂ, ನೆಹರು ಜಿನ್ನಾ

ಇವರೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ. ಈ ಜನ ನಮ್ಮೊಂದಿಗೆ ಎಷ್ಟರಮಟ್ಟಿಗೆ ಸಂಬಂಧವಿಟ್ಟುಕೊಂಡಿದ್ದಾರೆ ಅನ್ನುವುದು ಕಾಣುತ್ತಿದೆ. ಹಾಗಾಗಿ ನಾವು ಈಗ ಸ್ವಾತಂತ್ರ್ಯವಾದಿಗಳಾಗಬೇಕಿದೆ. ಆದರೆ ಕೇವಲ ಸ್ವಾತ್ಯಂತ್ರ್ಯ ಪಡೆದು ಏನಾಗಲಿದೆ? ಅದಕ್ಕಾಗಿ ಯೋಗ್ಯತೆ ಬೇಡವೆ? ನಾವು ಹಠ ಮಾಡಿ, ಕಾಡಿ ಬೇಡಿದರೆ ನಮಗೆ ಬೇಕಿರುವ ಅಧಿಕಾರಗಳು ನಮಗೆ ಸಿಕ್ಕಾವು ಆದರೆ ಜ್ಞಾನವಿಲ್ಲದೆ ಅಧಿಕಾರವೂ ವ್ಯರ್ಥ. ದಲಿತರು ಬಹುಸಂಖ್ಯಾತರಾಗಿದ್ದಾರೆ ಅನ್ನುವುದರಿಂದೇನೂ ಆಗದು, ಸ್ವಾತಂತ್ರ್ಯ ಅನುಭವಿಸಲು ಕೂಡ ಯೋಗ್ಯತೆ ಬೇಕು. ನಮ್ಮ ಸಾಮಾಜಿಕ ಪರಿಸ್ಥಿತಿ ಉಳಿದ ಸಮಾಜಕ್ಕಿಂತ ಭಿನ್ನವಾಗಿದೆ. ಜಾತಿಭೇದ ಉಳಿದ ಸಮಾಜದಲ್ಲೂ ಇದೆ ಆದರೆ ನಮ್ಮಲ್ಲಿ ಗುಣಭೇದ ಅನ್ನುವ ವಿಶೇಷವಾದ ಭೇದವಿದೆ.

ಜಾತಿಭೇದ ಹಾಗೂ ಗುಣಭೇದಗಳು ಸಮಾಂತರವಾಗಿ ನಡೆಯುತ್ತವೆ. ಅವು ಇಂದು ಕೂಡ ಪ್ಯಾರಲಲ್ ಆಗಿವೆ. ಇಂತಹ ಪ್ರಕಾರಗಳು ಯಾವುದೇ ದೇಶದಲ್ಲಿಲ್ಲ. ನಾವು ಅನಾದಿ ಕಾಲದಿಂದ ಅನುವಂಶಿಕ ಗುಣಗಳನ್ನು ಒಪ್ಪಿಕೊಂಡಿರುವುದರಿಂದ ಅದರ ದುಷ್ಪರಿಣಾಮಗಳನ್ನೀಗ ಅನುಭವಿಸುತ್ತಿದ್ದೇವೆ. ಒಬ್ಬ ವಿದ್ಯಾವಂತ ದಲಿತ ಎಲ್ಲರಿಂದ ದೂರವೇ ಉಳಿಯುತ್ತಾನೆ. ಆದರೆ ಒಬ್ಬ ಅವಿದ್ಯಾವಂತ ಬ್ರಾಹ್ಮಣ ದೊಡ್ಡ ದೊಡ್ಡ ಹುದ್ದೆಗಳನ್ನಲಂಕರಿಸುತ್ತಾನೆ. ಕೇವಲ ಅಜ್ಞಾನವಿದ್ದಿದ್ದರಿಂದಲೇ ಇದೆಲ್ಲವನ್ನು ಮುಂದುವರೆಸಿಕೊಂಡು ಹೋಗಲಾಯಿತು. ಅಜ್ಞಾನವಿರದಿದ್ದರೆ ಸಮತೆಯ ಹೋರಾಟ ಎಂದೋ ಆರಂಭವಾಗಿರುತ್ತಿತ್ತು. ಬ್ರಾಹ್ಮಣ ಗುಣಗಳಿಂದ ನೀಚನಾಗಿದ್ದರೂ ಜಾತಿಯಿಂದ ಶ್ರೇಷ್ಠನಾಗಿರುತ್ತಾನೆ. ಗುಣಭೇದಗಳ ಈ ಅಂತರ ಕಡಿಮೆಯಾಗಬೇಕು. ಅದಕ್ಕಾಗಿ ಶಿಕ್ಷಣದ ಪ್ರಸಾರವಾಗಬೇಕು. ನಾವು ಜಾಗೃತರಾಗಬೇಕು. ಅವಕಾಶಗಳನ್ನು ಪಡೆದು ತಮ್ಮ ಪಾಲಿಗವುಗಳನ್ನು ಗಿಟ್ಟಿಸಿಕೊಳ್ಳುವುದು ನಮಗೆ ಗೊತ್ತು ಆದರೆ ಶಿಕ್ಷಣವಿಲ್ಲದೆ ನಮಗದು ಸಾಧ್ಯವಾಗುತ್ತಿಲ್ಲ. ನಮ್ಮ ಹಕ್ಕುಗಳನ್ನು ಕಸಿದುಕೊಳ್ಳಲು ನಾನಿಲ್ಲಿ ಬೇಕೆಂದೇ ಕಸಿದುಕೊಳ್ಳಲು ಎಂದು ಶಬ್ದ ಉಪಯೋಗಿಸುತ್ತಿದ್ದೇನೆ, ಪ್ರಯತ್ನಿಸಬೇಕು.

ಇದು ಮನುಷ್ಯತ್ವಕ್ಕಾಗಿ ನಡೆಸಿರುವ ಹೋರಾಟ. ಅದಕ್ಕಾಗಿ ಸತ್ಯಾಗ್ರಹ ನಡೆಸಬೇಕಾಗಿರುವುದು ಕಡೆಯ ಉಪಾಯ. ನಾವಿಂದು ಸ್ವಕೀಯರು ಹಾಗೂ ಪರಕೀಯರಿಬ್ಬರೊಂದಿಗೂ ಸತ್ಯಾಗ್ರಹ ಮಾಡಬೇಕಿದೆ. ಇಬ್ಬರೂ ಯಾವ ರೀತಿಯ ಅನ್ಯಾಯ ಮಾಡುತ್ತಾರೋ ಆ ರೀತಿಯ ಉಪಾಯ ಅವರ ವಿರುದ್ಧ ಮಾಡಬೇಕಿದೆ. ಪುರಾಣದಲ್ಲಿ ಕೌರವ ಪಾಂಡವರಲ್ಲಿ ಇಷ್ಟು ದೊಡ್ಡ ಹೋರಾಟವೇಕಾಯಿತು? ಕೇವಲ ರಾಜ್ಯಕ್ಕಾಗಿ. ಅಸ್ಪೃಶ್ಯತೆ ಎಲ್ಲ ಸಮಾಜದ ಕಲ್ಯಾಣವಾಗಗೊಡಲಾರದು. ನಮ್ಮ ಅಂತಸ್ತನ್ನು ನಾವೇ ಹೆಚ್ಚಿಸಿಕೊಳ್ಳಬೇಕಿದೆ. ನಮ್ಮ ಉದ್ಧಾರಕ್ಕಾಗಿ ಈ ಹೋರಾಟ ನಾವು ಇಂದಲ್ಲ ನಾಳೆ ಮಾಡಲೇ ಬೇಕಿದೆ ಅನ್ನುವುದನ್ನು ನೆನಪಿಡಿ, ಇಲ್ಲದಿದ್ದರೆ ಮೇಲ್ಜಾತಿ ಜನರ ದುರಭಿಮಾನ ಹೋಗಲಾಡಿಸಲು ಸಾಧ್ಯವಿಲ್ಲ. ಗೊಡ್ಡು ಮತಗಳಿರುವ ಜನ ಎಲ್ಲೆಲ್ಲೂ ಇದ್ದಾರೆ. ಹಾಗಾಗಿ ನೀವು ಸ್ವಾವಲಂಬನೆಯ ದಾರಿ ಹಿಡಿಯಿರಿ ಎಂದಷ್ಟೆ ನನಗೆ ಹೇಳುವುದಿದೆ. ನಿಮ್ಮನ್ನು ಇದೇ ಸ್ಥಿಯಲ್ಲಿಡಬೇಕು ಅನ್ನುವ ಅವರ ನಿರ್ಧಾರ ಬಹಳ ಗಟ್ಟಿಯಾಗಿದೆ. ನಿಮ್ಮ ಮಾಂಗ್‌ರ ವತನದ ಅಭಿಮಾನದಿಂದ ನೀವುಗಳು ಎಷ್ಟು ಪರಾವಲಂಬಿಗಳಾಗಿದ್ದೀರಿ ಅನ್ನುವುದು ನಿಮಗೆ ಗೊತ್ತಿದೆಯೆ? ಈ ಮಾಂಗ್‌ರ ವತನದಿಂದಾಗಿ ಮಾಂಗ್ ಹಳ್ಳಿಗಳಲ್ಲೇ ಖಾಯಂ ಆಗಿ ಬಂದಿಗಳಾಗಿದ್ದಾರೆ.

ಮಾಂಗ್‌ನೆಂದರೆ ಸರ್ಕಾರಿ ಭಿಕಾರಿ. ಈ ವತನದಿಂದ ಪ್ರತಿಯೊಂದು ಹಳ್ಳಿಯಲ್ಲಿ ಇಂತಹ ಭಿಕಾರಿಗಳು ಸರ್ಕಾರಕ್ಕೆ ಸಿಕ್ಕಿದ್ದಾರೆ. ಮಾಂಗ್‌ರನ್ನು ಭಿಕಾರಿಗಳನ್ನಾಗಿ ಮಾಡುವ ಈ ವತನಗಳಿಗೆ ಮೊರೆ ಹೋಗದೆ ಧೈರ್ಯದಿಂದ ಇದರ ವಿರುದ್ಧ ಹೋರಾಡಬೇಕಿದೆ. ತನ್ನ ಶಿಕ್ಷಣಕ್ಕಾಗಿ ಆತ ತನ್ನ ಸಹಾಯವನ್ನು ತಾನೇ

ಮಾಡಿಕೊಳ್ಳಬೇಕಿದೆ. ಬೇರೆ ಯಾರೂ ಅವನಿಗೆ ಸಹಾಯ ಮಾಡಲಾರರು. ಉದಾರ ಮನಸ್ಸಿರುವವರು ಕೆಲವರು ಸಹಾಯ ಮಾಡಬಹುದೆನ್ನಿ.

ಉದಾರಿಗಳ ಸಹಾಯ ಕೇವಲ ಎರವಲು. ಮಾಂಗ್ ಬಡವರಾದರೂ ಸಂಖ್ಯೆಯಲ್ಲಿ ಕಡೆಮೆಯಿದ್ದಾರೆಯೆ? ಅವರು ಒಗ್ಗಟ್ಟಾದರೆ ತಮ್ಮ ಶಿಕ್ಷಣದ ಪ್ರಶ್ನೆಯನ್ನು ತಾವೇ ಪರಿಹರಿಸಿಕೊಂಡಾರು. ಧಾರವಾಡ ಜಿಲ್ಲೆಯಲ್ಲಿ ಒಂದು ಲಕ್ಷದಷ್ಟು ಮಾಂಗ್‌ರಿರಬಹುದು, ಪ್ರತಿಯೊಬ್ಬರೂ ಒಂದೊಂದು ರೂಪಾಯಿ ತೆಗೆದರೆ ಒಂದು ಲಕ್ಷ ರೂಪಾಯಿಷ್ಟು ಹಣ ಒಟ್ಟುಗೂಡುತ್ತದೆ. ಆ ಹಣದಿಂದ ನೂರು ಮಕ್ಕಳ ಬೋರ್ಡಿಂಗಿನ ವ್ಯವಸ್ಥೆಯಾಗಬಹುದು. ಸಧ್ಯಕ್ಕೆ ಇಲ್ಲೊಂದು ಬೋರ್ಡಿಂಗ್ ಸ್ಥಾಪನೆಯಾಗಿದೆ. ಅದೊಂದು ಸರ್ಕಾರಿ ಆಶ್ರಮವಾಗಿದ್ದು ಸಿಕ್ಕಿರುವ ಗ್ರಾಂಟ್ ಸಾಕಷ್ಟಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ಹತ್ತು ರೂಪಾಯಿಗಳು ಸಿಗುತ್ತವೆ. ಉಳಿದ ಕಡೆಗಳಲ್ಲಿ ಇಷ್ಟೊಂದು ಮೊತ್ತದ ಸಾಹಾಯ ಸಿಗುವುದಿಲ್ಲ. ಸಧ್ಯಕ್ಕೆ ಹದಿನೈದು ಮಕ್ಕಳ ವ್ಯವಸ್ಥೆಯಾಗಿದೆ. ಸ್ವಲ್ಪ ಹೋರಾಡಿದರೆ ಇನ್ನೂ ಹದಿನೈದು ಮಕ್ಕಳ ವ್ಯವಸ್ಥೆಯಾಗಬಹುದು ಆದರೆ ಇಷ್ಟೆಲ್ಲ ಮಾಡುವುದಕ್ಕಿಂತ ನಿಮ್ಮ ಸಹಾಯ ನೀವೇ ಮಾಡಿಕೊಂಡರೆ ಒಳ್ಳೆಯದಲ್ಲವೆ? ಈಗ ಈ ವ್ಯವಸ್ಥೆ ಕೇವಲ ನಮ್ಮಲ್ಲಿದೆ. ನಾವಿರುವುದು ಮುಂಬಯಿಯಲ್ಲಿ, ಬೋರ್ಡಿಂಗ್ ಇರುವುದು ಇಲ್ಲಿ, ಅಂತರ ಸಾಕಷ್ಟು ದೂರವಿದೆ. ನಿಮಗೆ ಬೇಕಿರುವಂತಹ ವ್ಯವಸ್ಥೆ ಮಾಡಿಕೊಳ್ಳಲು ಒಂದು ಕಮಿಟಿಯನ್ನು ಸ್ಥಾಪಿಸಿ ಅದರ ಮೂಲಕ ತಮ್ಮ ವ್ಯವಸ್ಥೆ ಮಾಡಿಕೊಳ್ಳಿ. ಧಾರವಾಡ ಜಿಲ್ಲೆಯ ದಲಿತ ವಿದ್ಯಾರ್ಥಿಗಳ ವ್ಯವಸ್ಥೆಯಾಗಿದೆ. ಇದಕ್ಕಿಂತ ಹೆಚ್ಚಿನ ವ್ಯವಸ್ಥೆಯನ್ನು ನೀವೇ ಮಾಡಿಕೊಳ್ಳಬಹುದು.

ಹೀಗೆ ತಮ್ಮ ಬಾಂಧವರಿಗೆ ತೀವ್ರ ಕಳಕಳಿಯಿಂದ ಉಪದೇಶ ಮಾಡಿ ತನಗೆ ಅಧ್ಯಕ್ಷಸ್ಥಾನ ಕೊಟ್ಟು ಗೌರವಿಸಿದ್ದಾಕ್ಕಾಗಿ ಧನ್ಯವಾದಗಳನ್ನರ್ಪಿಸಿ ತಮ್ಮ ಭಾಷಣ ಮುಗಿಸಿದರು.

## ೩೩.

# ಸಂಯುಕ್ತ ರಾಷ್ಟ್ರ ನಮ್ಮ ಗುರಿ

ಸೈಮನ್ ಕಮಿಶನ್ನಿನ ಶಿಫಾರಸ್ಸಿನ ಬಗ್ಗೆ ಅಸ್ಪೃಶ್ಯರ ಪ್ರತಿಕ್ರಿಯೆ ತಿಳಿದುಕೊಂಡು ಅವರ ರಾಜಕೀಯ ಹಕ್ಕಿಗಾಗಿ ಮುಂದಿನ ಧೋರಣೆಯನ್ನು ನಿರ್ಧರಿಸುವುದು ಅಗತ್ಯವಾಗಿತ್ತು. ಅಷ್ಟೇಯಲ್ಲದೆ ಲಂಡನ್ನಿನಲ್ಲಾಗಲಿರುವ ದುಂಡು ಮೇಜಿನ ಪರಿಷತ್ತಿನಲ್ಲಿ ದಲಿತರ ಪ್ರತಿನಿಧಿಯೊಬ್ಬ ಹೋಗುವುದು ಅಷ್ಟೇ ಅಗತ್ಯವಾಗಿತ್ತು. ಏಕೆಂದರೆ ಭಾರತದ ಭಾವೀ ಸಂವಿಧಾನದ ಯೋಜನೆ ಆ ಪರಿಷತ್ತಿನಲ್ಲಿ ಸಿದ್ಧವಾಗಲಿತ್ತು, ಹಾಗೂ ದೇಶದ ಭವಿಷ್ಯವನ್ನು ನಿರ್ಧರಿಸುವಾಗ ದೇಶದ ೭ ಕೋಟಿ ದಲಿತರ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಹಕ್ಕು ಆ ಸಮಾಜದ ಪ್ರತಿನಿಧಿಗೆ ಸಿಗುವುದು ಅವಶ್ಯಕವಾಗಿತ್ತು. ಅದಕ್ಕೆಂದೇ ಅಖಿಲ ಭಾರತೀಯ ದಲಿತರ ಅಧಿವೇಶನವೊಂದನ್ನು ಕರೆಯುವ ಅವಶ್ಯಕತೆಯಿತ್ತು. ಇಂತಹ ಅಧಿವೇಶನವೊಂದನ್ನು ಆಯೋಜಿಸುವ ಸನ್ಮಾನ ನಾಗಪೂರಿಗೆ ಸಿಕ್ಕಿತು.

ಇಲ್ಲಿಯ ಸ್ಥಳಿಯ ನೇತಾರರು ಈ ಅಖಿಲ ಭಾರತೀಯ ದಲಿತರ ಪರಿಷತ್ತು ನಾಗಪೂರಿನಲ್ಲಾಗಲಿ ಎಂದು ನಿರ್ಧರಿಸಿ ಅದರಂತೆ ದಶರಥ ಪಾಟೀಲ ಹಾಗೂ ಲಕ್ಷ್ಮಣರಾವ್ ಓಗಲೆ ಎಮ್.ಎಲ್.ಸಿ. ಅವರು ಮುಂಬಯಿಗೆ ಹೋಗಿ ಡಾ. ಅಂಬೇಡ್ಕರ್ ಅವರನ್ನು ಭೇಟಿಯಾದರು. ಆ ಭೇಟಿಯಲ್ಲಿ ಅಖಿಲ ಭಾರತೀಯ ದಲಿತ ವರ್ಗದ ಪರಿಷತ್ತು ಡಾ.ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ನಾಗಪೂರಿನಲ್ಲಿ ಸೇರಿಸುವುದೆಂದು ನಿರ್ಧರಿಸಲಾಯಿತು. ನಾಗಪೂರಿನಲ್ಲಾಗುವ ೮ ಹಾಗೂ ೯ ನೆಯ ಆಗಸ್ಟ್ ೧೯೩೦ರ ಅಖಿಲ ಭಾರತೀಯ ಡಿಪ್ರೆಸ್ಡ್ ಕ್ಲಾಸ್ ಕಾಂಗ್ರೆಸ್‌ನ ಅಧಿವೇಶನವು ದಲಿತರ ಏಳಿಗೆಯ ಚಳುವಳಿಯಲ್ಲಿಯ ವ್ಯಾಪಕ ರೀತಿಯ ಹಾಗೂ ಪ್ರಾತಿನಿಧಿಕ ಸ್ವರೂಪದ ಮೊದಲನೆಯ ಪರಿಷತ್ತು!

## ಸ್ವಾಗತ ಕಮಿಟಿಯ ಪದಾಧಿಕಾರಿಗಳು

ಸ್ವಾಗತಾಧ್ಯಕ್ಷ ಟಿ.ಸಿ. ಸಾಖರೆ, ನಾಗಪೂರ್ ಉಪಾಧ್ಯಕ್ಷ ದಶರಥ ಲಕ್ಷಮಣ ಪಾಟೀಲ್, ಬೇಲಾ, ಖಜೀನದಾರರು ವಿಶ್ರಾಮಜಿ ಸವಾಯಿಥೂಲ್, ನಾಗಪೂರ್, ಸೆಕ್ರೆಟರಿ ಎಲ್.ಕೆ.ಓಗಲೆ, ಎಮ್.ಎಲ್.ಸಿ, ಅಮರಾವತಿ; ಹರದಾಸ್ ಎಲ್.ಎನ್. ಕಾಮಠಿ, ಪಿ.ಕೆ. ಭಾಟಕರ್, ಅಮರಾವತಿ; ಶಾಮರಾವ್.ಜಿ.ರಹಾಟೆ, ವದಗಾಂವ್, ಎಚ್.ಡಿ.ಬೆಹಾಡೆ (ಮಾತಂಗ ಜಾತಿಯ ನೇತಾರರು), ನಾಗಪೂರ್.

ಅ. ಭಾ. ದಲಿತ ಕಾಂಗ್ರೆಸ್ ಪರಿಷತ್ತಿಗೆ ಯಾರನ್ನು ಕರೆಯುವುದು ಹಾಗೂ ಪರಿಷತ್ತು ಯಾರ ಅಧ್ಯಕ್ಷತೆಯಲ್ಲಿ ಸೇರಿಸುವುದು ಅನ್ನುವುದಕ್ಕಾಗಿ ಪರಿಷತ್ತಿನ ಸಚಿವರಾದ ಹರದಾಸ್ ಎಲ್. ಎನ್. ಅವರು ಶಿವರಾಮ್. ಜಾನಬಾ ಕಾಂಬಳೆ ಪುಣೆ ಇವರಿಗೆ ಪತ್ರ ಬರೆದರು. ಆ ಪತ್ರ ಹಾಗೂ ಅದಕ್ಕೆ ಶಿವರಾಮ್ ಜಾನಬಾ ಕಾಂಬಳೆಯವರು ಅವರಿಗೆ ಕೊಟ್ಟ ಉತ್ತರ ಕೆಳಗಿನಂತಿದೆ.

"THE ALL INDIA DEPRESSED CLASS CONGRESS"

Office
Vishram Haal,
Lakadganj Circle,15\10,
Nagapur City,
Dated the 1st February, 1930.

Reception committee Chairman-K.G.Nandagawali,
Vice-chairman-D.L.Patil,
Treasurar-V.S.Sawaitul,
Secretary- L.K.Ogle,MLC, Hardas L.N.,
P.K.Bhatkar, H.D.Behde.

To,
Mr.S.J.Kamble,
Poona,

Dear Sir,

You are aware of the proposed Round Table Conference which is to be held in London next autumn to discuss the future political Constitution of India. I am sure, you will agree that the depressed classes must at this critical juncture assert themselves and make it clear to the power that be as to what safeguards and guarantees the future Constitution of India must contain for the protection their civic right. The discussion of this momentous issue requires the immediate attention of our people. To bring out people from the different provinces of India together for the purpose of this discussion we have in consultation with Dr. B.R. Ambedkar, MA, Ph.D., D.Sc., Bar-at-Law, MLC, Bombay, thought of convening an All India Depressed Classess Congress at Nagpur some time immediately after the publication of the Report of the Simon Commission and have in anticipation of your consent formed a Reception Committee.

We shall feel obliged, if you kindly favour us before the 15th February next with your views about the advisability of holding such a Congress and name of the person, whom you would like to preside over it.

Thanking You in anticipation,

Remain,
Yours sincerely,
Hardas L.N.
Secretary, A.I.D.C.
C.C.Nagpur

ಶಿವರಾಮ್ ಜಾನಬಾ ಕಾಂಬಳೆಯವರು ಈ ಪತ್ರಕ್ಕೆ ಕೊಟ್ಟ ಉತ್ತರ ಕೆಳಗಿನಂತಿದೆ.

Kamathipura, 5th street,
Camp Poona,
February,1930.

To
The Secretary,
All India Depressed Claases Congress,
Nagpur.

Dear Sir,

I am in receipt of your printed letter of 1st February 1930 and I am glad to read that you are holding shortly an 'All India Depressed Classes Congress' at Nagpur.

With regards to the Presidentship of the proposed Congress, I suggest the name of Dr.Ambedkar and also that he should be sent to London as the representative of the Depressed Classes for the Round Table Conference.

Wishing very success in your endeavour, to uplift the cause of our six crores of fellow brothers, who have been downtrodden by the Caste Hindus for years together.

I remain,
Yours sincerely,
Shivaram. J. Kamble.

೮ ಹಾಗೂ ೯ನೆಯ ಆಗಸ್ಟ್ ೧೯೩೦ರಂದು ಪರಿಷತ್ತು ಕರೆಯುವುದು ಎಂದು ನಿರ್ಧರಿಸಿದ ಮೇಲೆ ಪರಿಷತ್ತಿನ ಸೆಕ್ರೆಟರಿ ಹರದಾಸ್ ಎಸ್.ಎನ್. ಅವರು ಕೆಳಗಿನಂತೆ ಒಂದು ಕರಪತ್ರವನ್ನು ಪ್ರಕಟಿಸಿದರು.

"THE ALL INDIA DEPRESSED CLASSES CONGRESS OFFICE
VISHRAM HALL NAGPUR CITY''

Dated 20th june 1930

Circular No.5
Ref. No.

Dear Sir,

As it was noticed from reports in the papers that the Report of the Simon Commision will be published on the 24th June, we were in a position to fix the date of our Congress and the Provincial Reception Committee at it's meeting dated 24th May 1930 had appointed the 12th and 13th of July 1930, giving sufficient time for our leaders to study the Report and come to some definite understanding.

But we asked by Dr.Ambedkar to reconsider the dates fixed. He says that the first colume of the Simon report was out on 10th instant, but there is no copy available as yet and he is told that it will not be available till the 22nd. The second volume is due on the 24th and if similar delay taken place in getting the copies thereof, we are afraid we shall be holding the Congress , if we keep to the above dates, either without seeing the Report or without having studied it. Such a situation if it were to materialize will render the Congress futile. We must therefore, guard against such a contingency and the dates of the Congress ought to be changed.

For this purpose our Reception Committee met on 20th and fixed the 8th and 9th August 1930 as the dates of our Congress. We may also have time for the subject committee to meet and according to the suggestion of Dr.Ambedkar on Reception Committee invites all our leaders to be in Nagpur on the 7th, a day previous to the meeting. No doubt these dates being holiday will suit to our leaders to attend the Sessions.

It has been also decided by the Provincial Reception Committee that Social, educational, Youth and Women's Conference's should also be held along with the Congress and that Rao Sahib Rama Cjaran B.A., LL.B, Advocate, MLC (UP) of Lucknow, Rao Sahib V.I.Munishwamy Pillai, F.M.U.M.T.C. (Madras) of Ottacamund, Mr. M.G. Mullick, M.A., B.L. Advocate MLC (Bengal of calcutta and Shreematee Gunabai Gadekar of Poona should be invited to preside over the Conference in the order they have been mentioned above and I have the pleasure to

inform you that they have accepted the offers. Separate Reception Committee have been formed for each of these Conferences and 10th and 11th have been appointed for them.

Depressed Classes all over India are earnestly requested to send their delegates to make the Congress and the Conference successful. The names of delegates, drafts resolutions will be sent to the Secretary of the All India Depressed Classes Congress Office, Vishram hall, Nagpur City.

I remain,
Yours most sincerely,
Hardas L.N.
Secretary.

Nagpur City,
The 20th June 1930.

'ಡಾ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗಾಗಿ ರಾಜ್ಯಪಾಲ ಭವನದ ಪಕ್ಕದಲ್ಲಿದ್ದ ಅಬ್ದುಲ್‌ಭಾಯಿ ಖಾಕರಾ ಅವರ ಬಂಗಲೆಯಲ್ಲಿ ತಂಗುವ ವ್ಯವಸ್ಥೆ ಮಾಡಲಾಗಿತ್ತು ಆದರೆ ತಾನೊಬ್ಬನೆ ಅಲ್ಲಿರುವುದಕ್ಕಿಂತ ಬಂದಿರುವ ಇತರ ನೇತಾರರೊಂದಿಗಿರುತ್ತೇನೆ ಅಂದರು ಡಾ. ಅಂಬೇಡ್ಕರ್. ಬಂದಿದ್ದ ಇತರ ಅಭ್ಯಾಗತರಿಗಾಗಿ ಕಾಟನ್ ಮಾರ್ಕೆಟ್ಟಿನಲ್ಲಿ ಶಾಮಿಯಾನಾ ಹಾಕಿ ತಂಗುವ ವ್ಯವಸ್ಥೆ ಮಾಡಿದ್ದರು. ಅಧಿವೇಶನ ವೆಂಕಟೇಶ್ ಥಿಯೇಟರಿನಲ್ಲಾಯಿತು.

ಈ ಪರಿಷತ್ತಿನೊಂದಿಗೆ ಸಾಮಾಜಿಕ, ಮಹಿಳಾ, ಯುವಕ ಹಾಗೂ ಶೈಕ್ಷಣಿಕ ವಿಷಯದ ಕುರಿತ ಪರಿಷತ್ತುಗಳನ್ನೂ ಆಯೋಜಿಸಲಾಯಿತು. ಈ ಕಾರ್ಯಕ್ರಮಗಳನ್ನು ೧೧ನೆಯ ಆಗಸ್ಟ್‌ಗೆ ಆಯೋಜಿಸಲಾಗಿದ್ದವು. ಪಾ.ನಾ. ರಾಜಭೋಜ್ ಅವರು ಸಾಮಾಜಿಕ ಪರಿಷತ್ತಿನ ಅಧ್ಯಕ್ಷರು ಹಾಗೂ ದಶರಥ್ ಪಾಟೀಲ್ ಅವರು ಸ್ವಾಗತಾಧ್ಯಕ್ಷರಾಗಿದ್ದರು. ಪುಣೆಯ ಸೌ. ಗುಣಾಬಾಯಿ ಗಡೇಕರ್ ಅವರು ಮಹಿಳಾ ಪರಿಷತ್ತಿನ ಅಧ್ಯಕರಾಗಿದ್ದರು. ಅಮರಾವತಿಯ ಸೌ. ಶೇವಂತಾಬಾಯಿ ಓಗಲೆ ಮಹಿಲಾ ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿದ್ದರೆ ನಾಗಪೂರಿನ ಸೌ. ತುಲಸಾಬಾಯಿ ಬನಸೋಡೆ ಪಾಟೀಲ್, ಸೌ. ಜಾಯಿಬಾಯಿ ಚೌಧರಿ, ನಾಗಪೂರ್. ಹಾಗೂ ಸೌ.ಕಾಶಿಬಾಯಿ ಮಂಡವಧರೆ ಅಕೋಲಾ ಇವರು ಸೆಕ್ರೆಟರಿಯಾಗಿದ್ದರು. ಲಖನೌನ ಅಡ್ವೋಕೇಟ್ ಶಿವದಯಾಲ ಸಿಂಗ್ ಚೌರಸಿಯಾ ಅವರು ಯುವಕ ಪರಿಷತ್ತಿನ ಅಧ್ಯಕ್ಷರಾಗಿದ್ದರೆ. ರಾಘವೇಂದ್ರರಾವ್ ಬೋರಕರ್ ಇವರು ಸ್ವಾಗತಾಧ್ಯಕ್ಷರಾಗಿದ್ದರು.

## ದಲಿತ ಕಾಂಗ್ರೆಸ್ ಪರಿಷತ್ತಿನ ಮಹತ್ವ

೧೯೩೦ರಲ್ಲಿ ನಾಗಪೂರನಲ್ಲಾದ ಅ. ಭಾ. ದಲಿತ ಕಾಂಗ್ರೆಸ್ ಪರಿಷತ್ತಿಗೆ ದಲಿತರ ಏಳಿಗೆಯ ಚಳುವಳಿಗೆ ವಿಶೇಷವಾದ ರಾಜಕೀಯ ಐತಿಹಾಸಿಕ ಮಹತ್ವವಿದೆ. ಮೊದಲನೆಯದಾಗಿ ಭಾರತದ ಎಲ್ಲ ದಲಿತ ಸಮಾಜ ಒಂದು ಸೂರಿನಡಿ ಅಖಿಲ ಭಾರತೀಯ ಮಟ್ಟದಲ್ಲಿ ಆಯೋಜಿಸಿದ್ದ ದಲಿತ ಕಾಂಗ್ರೆಸ್ಸಿನ ಮೊದಲನೆಯ ಪರಿಷತ್ತು! ಎರಡನೆಯದಾಗಿ ಮೊದಲನೆಯ ಸಲ ದಲಿತರೆಲ್ಲರು ಡಾ. ಅಂಬೇಡ್ಕರ್‌ರ

ನೇತೃತ್ವವನ್ನು ಒಮ್ಮತದಿಂದ ಒಪ್ಪಿಕೊಂಡು ಭಾರತ ಮಟ್ಟದಲ್ಲಿ ತಮ್ಮ ರಾಜಕೀಯ ಬೇಡಿಕೆಗಳನ್ನು ಒಮ್ಮುಖದಿಂದ ಮುಂಡಿಟ್ಟರು. ಮೂರನೆಯದಾಗಿ ಲಂಡನ್ನಿನಲ್ಲಾಗುತ್ತಿರುವ ದುಂಡು ಮೇಜಿನ ಪರಿಷತ್ತಿಗಾಗಿ ಡಾ. ಅಂಬೇಡ್ಕರರನ್ನು ದಲಿತರ ನೇತಾರರಾಗಿ ಒಮ್ಮತದಿಂದ ಆರಿಸಿದರು. ನಾಲ್ಕನೆಯದಾಗಿ ದಲಿತ ವರ್ಗದ ಅಖಿಲ ಭಾರತೀಯ ಸಂಘಟನೆಯನ್ನು ತಯಾರಿಸಲಾಯಿತು. ಹಾಗೂ ಐದನೆಯದಾಗಿ ಈ ಪರಿಷತ್ತಿನಲ್ಲಿ ಬಹಿಷ್ಕೃತ ವರ್ಗದ ಭಾವಿ ರಾಜಕೀಯ ಜೀವನದ ಗುರಿ ಹಾಗೂ ಧೋರಣೆಯ ಮೂಲಭೂತ ಅಡಿಪಾಯ ಹಾಕಲಾಯಿತು. ಸಾರಾಂಶವಿಷ್ಟೆ ಮನುಷ್ಯತ್ವಕ್ಕೆ ಎರವಾಗಿದ್ದ ಈ ಬಹಿಷ್ಕೃತ ಭಾರತದ ಸ್ವಾತಂತ್ರ್ಯ ಆಂದೋಲನದ ಇತಿಹಾಸದ ಮೊದಲನೆಯ ಹಾಳೆ ದಲಿತ ಕಾಂಗ್ರೆಸ್ ಅಧಿವೇಶನದಿಂದ ಬರೆಯಲಾಯಿತು.

## ಸಮಾಜದ ಶತಶಃ ಧನ್ಯವಾದಗಳು

ಈ ದಲಿತ ಕಾಂಗ್ರೆಸ್ಸ್ ಅಧಿವೇಶನದ ಜವಾಬ್ದಾರಿ ವಹಿಸಿಕೊಂಡು ಬಹಿಷ್ಕೃತರ ರಾಜಕೀಯ ಕ್ರಾಂತಿಗೆ ಮೊದಲು ಚಾಲನೆ ನೀಡಿ ಸಾಮಾಜಿಕ ಜೀವನದಲ್ಲಿ ಆಮೂಲಾಗ್ರ ಬದಲಾವಣೆ ತರಲು ಸಂಘಟಿತ ಹೆಜ್ಜೆ ಇಟ್ಟ ನೇತಾರರ, ಸಾಮಾಜಿಕ ಕಾರ್ಯಕರ್ತರ ಹಾಗೂ ಸೇವಕರ ಈ ಸಮಾಜದ ಮೇಲೆ ಸಾಕಷ್ಟು ಉಪಕಾರಗಳಿವೆ. ಆತ್ಮೋದ್ಧಾರದ ಆಂದೋಲನದಲ್ಲಿ ಡಾ. ಅಂಬೇಡಕರ್ ಅವರ ನೇತೃತ್ವದಲ್ಲಿ ೧೯೩೦ರಲ್ಲಿ ದಲಿತ್ ಕಾಂಗ್ರೆಸ್ಸಿನವರು ಅಧಿವೇಶನದ ಮೂಲಕ ಮೊದಲ ಸಂಘಟಿತ ಹೆಜ್ಜೆಯನ್ನಿಟ್ಟರು.

## ಪರಿಷತ್ತಿನ ಠರಾವು

ಅಖಿಲ ಭಾರತೀಯ ಡಿಪ್ರೆಸ್ಡ ಕ್ಲಾಸೆಸ್ ಕಾಂಗ್ರೆಸ್ ೧೯೩೦ರ ನಾಗಪೂರ್ ಅಧಿವೇಶನದಲ್ಲಿ ಮಂಜೂರಾದ ಠರಾವುಗಳು ಕೆಳಗಿನಂತಿವೆ.

೧. ಭಾರತದ ರಾಷ್ಟ್ರೀಯ ಕಾಂಗ್ರೆಸ್ ಯೋಚಿಸಿರುವ ಸಂಪೂರ್ಣ ಸ್ವಾತಂತ್ರ್ಯ ಭಾರತದ ಹಿತಸಂಬಂಧಕ್ಕೆ ಧಕ್ಕೆ ಹಾಗೂ ನಷ್ಟ ತರುವಂತಹದ್ದಾಗಿದೆ. ಹಾಗಾಗಿ ರಾಷ್ಟ್ರೀಯ ಕಾಂಗ್ರೆಸ್ಸಿನ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಗೆ ನಮ್ಮ ಬೆಂಬಲವಿಲ್ಲ. ನಮ್ಮ ಕಾಂಗ್ರೆಸ್ಸಿನ ಪ್ರಕಾರ ವಸಾಹತು ಸ್ವರಾಜ್ಯವೇ ಭಾರತದ ಪರೀಸ್ಥಿತಿಗೆ ಸರ್ವೋತ್ತಮ ಗುರಿಯಾಗಿದೆ ಎಂದು ಘೋಷಿಸುವಾಗ ನಮ್ಮ ಮನಸ್ಸಿನಲ್ಲಿ ಯಾವುದೇ ಸಂದಿಗ್ಧತೆಯಿಲ್ಲ.

೨. ವಸಾಹತು ಸ್ವರಾಜ್ಯ ತಕ್ಷಣ ಸಿಗುವ ಉದ್ದೇಶದ ಬಗ್ಗೆ ಅಧಿಕಾರಗಳನ್ನು ಹಸ್ತಾಂತರಿಸುವಾಗ ಜವಾಬ್ದಾರಿಯುತ ಅಧಿಕಾರಗಳ ವಿಷಯದಲ್ಲಿ ತಕ್ಷಣದ ಬದಲಾವಣೆ ರಾಜ್ಯ ಕಾರುಭಾರದ ಕುಶಲತೆಯ ದೃಷ್ಟಿಯಿಂದ ಅವ್ಯಾವಹಾರಿಕವಾಗಿರುವಂತಹ ವಿಷಯಗಳನ್ನು ಬಿಟ್ಟು ಉಳಿದೆಲ್ಲ ಜವಾಬ್ದಾರಿಯುತ ಅಧಿಕಾರಗಳ ವಿಷಯದಲ್ಲಿ ಅಧಿಕಾರಗಳನ್ನು ಹಂಚುವುದಕ್ಕೆ ಈ ಕಾಂಗ್ರೆಸ್ಸಿನ ವಿರೋಧವಿಲ್ಲ. ಆದರೆ ಇದೆಲ್ಲವನ್ನು ಮಾಡುವಾಗ ದಲಿತರ ಹಿತಸಂಬಂಧಗಳ ರಕ್ಷಣೆಯಾಗಲು ಭಾರತದ ಸಂವಿಧಾನದಲ್ಲಿ ಕೆಳಗಿನ ವಿಷಯಗಳನ್ನು ಸೇರಿಸಿಕೊಳ್ಳಬೇಕು.

(೧) ದೇಶದ ಎಲ್ಲ ಕಾಯಿದೆ ಮಂಡಳದಲ್ಲಿ, ಮಧ್ಯವರ್ತಿ ಅಂತೆಯೇ ಪ್ರಾಂತಿಕ ಕಾಯಿದೆ ಮಂಡಳಗಳಲ್ಲಿ ಯೋಗ್ಯ ಪ್ರತಿನಿಧಿತ್ವ.

(೨) ದೇಶದಲ್ಲಿಯ ಸರ್ಕಾರಿ ಕಚೇರಿಗಳಲ್ಲಿ ಯೋಗ್ಯ ಪ್ರಮಾಣದಲ್ಲಿ ಜಾಗಗಳ ಕಾಯ್ದಿರಿಸುವಿಕೆ.

(೩) ದಲಿತರ ಶಿಕ್ಷಣದ ಬಗ್ಗೆ, ಸ್ಥಳೀಯ ಸ್ವರಾಜ್ಯ ಹಾಗೂ ಅದರ ಹಕ್ಕು ಮತ್ತು ಹಿತಸಂಬಂಧಗಳ ಬಗ್ಗೆ ಅಸಡ್ಡೆಯಾದರೆ ಅದರ ಬಗ್ಗೆ ಭಾರತದ ಮಂತ್ರಿಗಳ ಕಡೆ (ಸೆಕ್ರೆಟರಿ ಆಫ್ ಸ್ಟೇಟ್) ನ್ಯಾಯ ಕೇಳುವ

ಅಧಿಕಾರಗಳಿರಬೇಕು. ಅಷ್ಟೇಯಲ್ಲದೆ ಇಂತಹ ಪರಿಸ್ಥಿಯಲ್ಲಿ ಅಂದಾಜು ಪತ್ರದಲ್ಲಿ ಇಲ್ಲವೆ ಕಾಯಿದೆಯಲ್ಲಿ ವ್ಯವಸ್ಥೆ ಮಾಡಿಡಲು ಭಾರತದ ಮಂತ್ರಿಗಳು ಕೊಡುವ ಸೂಚನೆಯು ಮಧ್ಯವರ್ತಿ ಹಾಗೂ ಪ್ರಾಂತಿಕ ಮಂತ್ರಿ ಮಂಡಳಕ್ಕೆ ಬಂಧನಕಾರವಾಗಿರಬೇಕು.

(೪) ಸನಾತನ ಬ್ರಾಹ್ಮಣ ವರ್ಗದವರು ದಲಿತರ ಜೊತೆ ವರ್ತಿಸುವ ಅಮಾನವೀಯ (ಕ್ರೂರ) ರೀತಿಯನ್ನು ಕಿಂಚಿತ್ತೂ ಬದಲಿಸಲಿಲ್ಲವಾದ್ದರಿಂದ ಅವರು ದಲಿತರ ನಂಬುಗೆಯನ್ನು ಕಳೆದುಕೊಂಡಿದ್ದಾರೆ. ಹಾಗೆಯೇ ಭಾರತದ ಭಾವಿ ಸಂವಿಧಾನದಲ್ಲಿ ದಲಿತರಿಗೆ ಸಂರಕ್ಷಣೆ ನೀಡಲು ಒಪ್ಪುತ್ತಿಲ್ಲ ಹಾಗಾಗಿ ಎಲ್ಲರೂ ಒಪ್ಪುವಂತಹ ಭಾರತದ ಸಂವಿಧಾನವನ್ನು ಬರೆಯುವಾಗ ದೇಶದಲ್ಲಿ ಈಗಿರುವ ಸಾಮಾಜಿಕ ಪರಿಸ್ಥಿಯ ಬಗ್ಗೆ ಯೋಚಿಸುವುದು ಅಗತ್ಯವಾಗಿದೆ. ಹಾಗೂ ಅದಕ್ಕಾಗಿ ಸಂವಿಧಾನದಲ್ಲಿ ಮಾಡಬೇಕಾಗಿರುವ ಕೆಲವು ಮುಖ್ಯವಾದ ವ್ಯವಸ್ಥೆ ಕೇವಲ ಪರಸ್ಪರ ಸಮ್ಮತಿಯಿಂದ ಮಾತ್ರ ಸಾಧ್ಯ. ಕಾಯಿದೆ ಭಂಗ ಚಳುವಳಿಯು ಒತ್ತಡದ ನೀತಿಯಾಗಿದ್ದು ಶಾಂತಿಯಿಂದ ವ್ಯವಸ್ಥೆಯನ್ನು ಸರಿಪಡಿಸುವುದರ ವಿರುದ್ಧವಾಗಿರುವುದರಿಂದ ಈ ನಮ್ಮ ಕಾಂಗ್ರೆಸ್ ಕಾಯಿದೆ ಭಂಗದ ಧೋರಣೆಯನ್ನು ಒಪ್ಪುವುದಿಲ್ಲ ಹಾಗೂ ಬಹಿಷ್ಕೃತರು ಇದರಲ್ಲಿ ಭಾಗವಹಿಸಬೇಡಿ ಅನ್ನುವ ಹಿತೋಪದೇಶ ಕೊಡುತ್ತದೆ.

(೫) ಸಧ್ಯದ ಸಂವಿಧಾನದ ಕಠಿಣ ಪರಿಸ್ಥಿಯನ್ನು ಸುಲಭವಾಗಿಸಲು ದುಂಡು ಮೇಜಿನ ಪರಿಷತ್ತು ಒಳ್ಳೆಯ ಮಾರ್ಗ ಅನ್ನುವುದು ಈ ಕಾಂಗ್ರೆಸ್ ಒಪ್ಪುತ್ತದೆ. ಹಾಗೂ ದಲಿತರು ಇದರಲ್ಲಿ ಭಾವಹಿಸಲಿ ಅನ್ನುವ ಹಿತೋಪದೇಶ ನೀಡುತ್ತದೆ. ಈ ದುಂಡು ಮೇಜಿನ ಪರಿಷತ್ತನ್ನು ಯಶಸ್ವಿಯಾಗಿಸಲು ಎಲ್ಲ ಪಕ್ಷಗಳು ಇದರಲ್ಲಿ ಭಾಗವಹಿಸುವಂತೆ ದಲಿತರೂ ಭಾಗವಹಿಸುವಂತಾಗಲು ಅವರ ಯೋಗ್ಯ ಪ್ರತಿನಿಧಿಯನ್ನು ಕರೆಯಿಸಬೇಕು ಎಂದು ಈ ಕಾಂಗ್ರೆಸ್ ಸರ್ಕಾರಕ್ಕೆ ಸೂಚಿಸುತ್ತದೆ.

(೬) ಈ ದೇಶದ ಕಾಯಿದೆ ಮಂಡಳದಲ್ಲಿ ದಲಿತರ ಪ್ರತಿನಿಧಿಗಳನ್ನು ಆರಿಸಿಕೊಳ್ಳಲಾಗುತ್ತಿರುವ ಪದ್ಧತಿಯನ್ನು ಈ ಕಾಂಗ್ರೆಸ್ ವಿರೋಧಿಸುತ್ತದೆ. ದಲಿತರ ಪ್ರತಿನಿಧಿಗಳನ್ನು ಆ ಸಮಾಜ ಚುನಾವಣೆ ಪದ್ಧತಿಯಿಂದ ಆರಿಸಿ ಕಳಿಸಲಿ ಅನ್ನುವುದು ಈ ಕಾಂಗ್ರೆಸ್ಸಿನ ಬೇಡಿಕೆ. ಸೈಮನ್ ಕಮಿಶನ್ ಕೊಟ್ಟಿರುವ ಶಿಫ಼ಾರಸ್ಸಿನ ಪ್ರಕಾರ ದಲಿತರ ಪ್ರತಿನಿಧಿಗಳನ್ನು ಬೇರೆ ಜಾತಿಯ ಪ್ರತಿನಿಧಿಗಳು ಆರಿಸಿ ಅದಕ್ಕೆ ಗವರ್ನರ್ ಸಾಹೇಬರ ಪ್ರಮಾಣಪತ್ರವಿರಲಿ ಅನ್ನುವ ವ್ಯವಸ್ಥೆಯನ್ನು ನಾವು ನಿಷೇಧಿಸುತ್ತೇವೆ.

(೭) ಸ್ವತಂತ್ರ ಚುನಾವಣೆ ಸಂಘದ ಉಪಯುಕ್ತತೆಯ ಬಗ್ಗೆ ನಂಬಿಕೆಯಿದ್ದರೂ ದಲಿತರ ಪ್ರತಿನಿಧಿತ್ವಕ್ಕಾಗಿ ಕಾಯ್ದಿರಿಸುವ ಜಾಗದ ಜೊತೆಗೆ ಸಂಯುಕ್ತ ಮತದಾನ ಸಂಘದ ತತ್ವಗಳನ್ನು ಒಪ್ಪಿಕೊಳ್ಳಲು ಈ ಕಾಂಗ್ರೆಸ್ ಸಿದ್ಧವಿದೆ, ಆದರೆ ಅದಕ್ಕಾಗಿ ಪ್ರೌಢ ಮತದಾನ ಪದ್ಧತಿಯನ್ನು ಸ್ವೀಕರಿಸುವುದು ಅವಶ್ಯಕವಾಗಿದೆ.

(೮) ಸಾಮಾಜಿಕ ವಿಷಮತೆಯಲ್ಲಿ ಅತ್ಯಂತ ನಿಕೃಷ್ಟವಾಗಿ ಬದುಕುತ್ತಿರುವ ಅಸ್ಪೃಶ್ಯರೆದುರು ಉಳಿದ ಅಲ್ಪಸಂಖ್ಯಾತರ ಪರಿಸ್ಥಿತಿ ಎಷ್ಟೋ ಬೇಕು. ಹೀಗಿರುವಾಗಲೂ ದಲಿತರಿಗೆ ಪ್ರತಿನಿಧಿತ್ವ ಸಿಗಬೇಕು ಅನ್ನುವ ಬೇಡಿಕೆಯನ್ನು ಕಡೆಗಾಣಿಸಿ ಅವರ ಹಕ್ಕುಗಳನ್ನು ದುರ್ಲಕ್ಷಿಸಿ ಉಳಿದ ಅಲ್ಪಸಂಖ್ಯಾತರಿಗೆ ಮಾತ್ರ ವಿಶೇಷ ಪ್ರತಿನಿಧಿತ್ವವನ್ನು ಕೊಟ್ಟಿರುವ ಸೈಮನ್ ಕಮಿಶನ್ನಿನ ನಿರ್ಧಾರಕ್ಕೆ ಈ ಕಾಂಗ್ರೆಸ್ ಖೇದ ವ್ಯಕ್ತಪಡಿಸುತ್ತದೆ. ಎಲ್ಲ ಅಲ್ಪಸಂಖ್ಯಾತರಿಗೂ ಸಮಾನ ತತ್ವಗಳನ್ನು ಸಮ ಪ್ರಮಾಣದಲ್ಲಿ ಅನ್ವಯಿಸಲ್ಪಡಬೇಕು ಅನ್ನುವುದು ಈ ಕಾಂಗ್ರೆಸ್ಸಿನ ಯೋಚನೆಯಾಗಿದ್ದು ಅಸ್ಪೃಶ್ಯರ ನಿಕೃಷ್ಟ ಸಾಮಾಜಿಕ ಬದುಕನ್ನು ಗಮನಿಸಿ ಅವರ ಸಂಖ್ಯೆಯ ಪ್ರಮಾಣದಲ್ಲಿ ಸಿಗುವ ಪ್ರತಿನಿಧಿತ್ವದ ಜೊತೆಗೆ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಜಾಗಗಳನ್ನು ಕೊಡಬೇಕು ಅನ್ನುವ ಬೇಡಿಕೆಯನ್ನಿಡುತ್ತದೆ.

(೯) ಈ ಕಾಂಗ್ರೆಸ್ ಅಸೆಂಬ್ಲಿ ಹಾಗೂ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ದಲಿತರ ಪ್ರತಿನಿಧಿಗಳನ್ನು ದಲಿತರೇ ಆರಿಸಿ ಕೊಡಲು ಅಪ್ರತ್ಯಕ್ಷ ಮತದಾನ ಪದ್ಧತಿಯನ್ನು ಒಪ್ಪುತ್ತದೆ. ಆದರೆ ಅದರಲ್ಲಿ ದಲಿತರ ಯೋಗ್ಯ ಪ್ರತಿನಿಧಿತ್ವದ ಹಕ್ಕುಗಳನ್ನು ಒಪ್ಪಿಕೊಳ್ಳುವಂತಾಗಬೇಕು ಎಂದು ಬೇಡಿಕೊಳ್ಳುತ್ತದೆ.

(೧೦) ಸೈಮನ್ ಕಮಿಶನ್ನು ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ದಲಿತರ ಪ್ರತಿನಿಧಿತ್ವದ ಯಾವುದೇ ವ್ಯವಸ್ಥೆ ಮಾಡಿಲ್ಲ ಅನ್ನುವುದರ ಬಗ್ಗೆ ಈ ಕಾಂಗ್ರೆಸ್ ದುಃಖ ವ್ಯಕ್ತಪಡಿಸುತ್ತದೆ ಹಾಗೂ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ದಲಿತರ ಯೋಗ್ಯ ಪ್ರತಿನಿಧಿತ್ವವನ್ನು ಒಪ್ಪಿಕೊಳ್ಳಿ ಎಂದು ಬೇಡಿಕೊಳ್ಳುತ್ತದೆ.

(೧೧) ಅಸೆಂಬ್ಲಿಯಲ್ಲಿ ಬದಲಾವಣೆ ತರುವ ದೃಷ್ಟಿಯಿಂದ ಸೈಮನ್ ಕಮಿಶನ್ ತಯಾರಿಸಿರುವ ರಚನೆಯ ಉಪಯುಕ್ತತೆಯನ್ನು ಗಮನಿಸಿ ಆ ರಚನೆ ಅಸೆಂಬ್ಲಿಗಿಂತ ಕೌನ್ಸಿಲ್ ಆಫ್ ಸ್ಟೇಟ್‌ಗಾಗಿ ಉಪಯುಕ್ತವಾಗಿದೆ ಎಂದು ಈ ಕಾಂಗ್ರೆಸ್ಸಿಗನಿಸುತ್ತದೆ. ಈ ವಿಷಯವನ್ನು ಗಮನದಲ್ಲಿಟ್ಟು ಹಾಗೂ ಕೌನ್ಸಿಲ್ ಆಫ್ ಸ್ಟೇಟನ್ನು ಹೆಚ್ಚು ಪ್ರಜಾಪ್ರಭುತ್ವ ಪ್ರಧಾನವನ್ನಾಗಿಸಲು ಅದರಲ್ಲಿ ಅವಶ್ಯಕವಾದ ಸಂವಿಧಾನಾತ್ಮಕ ಸುಧಾರಣೆ ತರುವ ಅವಶ್ಯಕತೆಯನ್ನು ಗಮನದಲ್ಲಿಟ್ಟು ಸೈಮನ್ ಕಮಿಶನ್ ಅಸೆಂಬ್ಲಿಗಾಗಿ ತಯಾರಿಸಿರುವ ರಚನೆಯನ್ನು ಕೌನ್ಸಿಲ್ ಆಫ್ ಸ್ಟೇಟ್‌ಗಾಗಿ ಅನ್ವಯಿಸಲಿ ಹಾಗೂ ಅಸೆಂಬ್ಲಿಯ ಬದಲಾವಣೆ ಪ್ರತ್ಯಕ್ಷವಾಗಿ ಚುನಾವಣೆಯ ಮೂಲಕ ಆಗಲಿ ಎಂದು ಈ ಕಾಂಗ್ರೆಸ್ ಯೋಚಿಸುತ್ತದೆ.

(೧೨) ಭಾರತದ ಸೈನ್ಯದ ಬಗ್ಗೆ ಸೈಮನ್ ಕಮಿಶನ್ ಸೂಚಿಸಿರುವ ಯೋಜನೆಗಳನ್ನು ಈ ಕಾಂಗ್ರೆಸ್ ಸುತಾರಾಂ ಒಪ್ಪುವುದಿಲ್ಲ. ಸೈನ್ಯ ಅನ್ನುವುದು ಕಾಯ್ದಿಟ್ಟಿರುವ ಖಾತೆಯಾಗಿದ್ದರೂ ಭಾರತ ಸರ್ಕಾರದ ಅಧಿಕಾರದಿಂದ ಅದನ್ನು ಬೇರ್ಪಡಿಸಬಾರದು ಅನ್ನುವುದು ಈ ಕಾಂಗ್ರೆಸ್ಸಿನ ಅನಿಸಿಕೆ.

(೧೩) ಭಾರತದ ದಲಿತರ ಒಂದು ಮಧ್ಯವರ್ತಿ ಅಖಿಲ ಭಾರತೀಯ ಸಂಘಟನೆಯಿರುವುದು ಬಹಳ ಅವಶ್ಯಕವಾಗಿದೆ ಅನ್ನುವುದು ಈ ಕಾಂಗ್ರೆಸ್ಸಿನ ಖಾತ್ರಿಯಾಗಿರುವುದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಈ ಕಾಂಗ್ರೆಸ್ ಒಂದು ಕಮಿಟಿಯನ್ನು ನೇಮಿಸುತ್ತಿದೆ ಹಾಗೂ

೧. ಈ ಕಮಿಟಿಯು ಇಂತಹ ಅಖಿಲ ಭಾರತೀಯ ಸಂಘಟನೆಯ ಸಂವಿಧಾನವನ್ನು ತಯಾರಿಸಿ ಕಾಂಗ್ರೆಸ್ಸಿನ ಮುಂದಿನ ಅಧಿವೇಶನದಲ್ಲಿ ಮಂಡಿಸಲಿ ಹಾಗೂ

೨. ಈ ಕಮಿಟಿ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯಾಗಿ ಮುಂದಿನ ವರ್ಷಕ್ಕಾಗಿ ಕಾರ್ಯ ನಿರ್ವಹಿಸಲಿ ಹಾಗೂ ದಲಿತರಿಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳು ಹಾಗೆಯೇ ದೇಶದ ಸಧ್ಯದ ರಾಜಕೀಯ ಪರಿಸ್ಥಿಯಲ್ಲಿ ಉದ್ಭವಿಸಬಹುದಾದಂತಹ ಪ್ರಶ್ನೆಗಳ ಬಗ್ಗೆ ಯೋಚಿಸಲಿ''.

## ಅಧ್ಯಕ್ಷರ ಭಾಷಣ

೮ನೆಯ ಆಗಸ್ಟ್ ೧೯೩೦ರ ಈ ಅಧಿವೇಶನದಲ್ಲಿ ಡಾ. ಅಂಬೇಡ್ಕರ್ ಅವರು ಅಧ್ಯಕ್ಷರಾಗಿ ಮಾಡಿದ ಭಾಷಣ ಬಹಳ ಮಹತ್ವದ ಹಾಗೂ ವಿಚಾರ ಪ್ರವರ್ತಕವಾಗಿತ್ತು. ತಮ್ಮ ಭಾಷಣದಲ್ಲವರು,

'ಮಾನ್ಯರೆ!

ಈ ಕೆಲಸದ ಅಧ್ಯಕ್ಷತೆಯನ್ನು ಸ್ವೀಕರಿಸಲು ತಾವು ಕೊಟ್ಟ ಆಮಂತ್ರಣವನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತಿದ್ದು ಈ ಸನ್ಮಾನ ನನಗೆ ಕೊಟ್ಟಿದ್ದಕ್ಕಾಗಿ ನಾನು ನಿಮಗೆಲ್ಲರಿಗೂ ಕೃತಜ್ಞನಾಗಿದ್ದೇನೆ. ನೀವು ನನ್ನ ಮೇಲಿಟ್ಟಿರುವ ನಂಬಿಕೆಯ ಬೆಲೆ ನಾನು ಬಲ್ಲೆ. ಹಾಗಾಗಿ ನೀವು ನನಗೆ ವಹಿಸಿರುವ ಜವಾಬ್ದಾರಿ ಅತ್ಯಂತ ಕಠಿಣ ಹಾಗೂ ಅಸಾಮಾನ್ಯವಾಗಿದ್ದು ನಾನು ಈ ಜವಾಬ್ದಾರಿ ವಹಿಸಿಕೊಳ್ಳುವುದರಿಂದ ತಪ್ಪಿಸಿಕೊಳ್ಳಲು

ಪ್ರಯತ್ನಿಸಿದ್ದರೆ ಜಾಣತನವಾಗುತ್ತಿರಲಿಲ್ಲ ಎಂದು ನನಗನಿಸುತ್ತದೆ. ಹೀಗಿದ್ದರೂ ನಾನದಕ್ಕೆ ಸಮ್ಮತಿಸಿದ್ದು ಸಧ್ಯದ ಕಠಿಣ ಪ್ರಸಂಗದಲ್ಲಿ ನಮ್ಮ ಸಮಾಜ ಸಂಬಂಧದ ಹಿತಕ್ಕಾಗಿ ಪ್ರತಿಯೊಬ್ಬರೂ ತಮ್ಮಿಂದಾದಷ್ಟು ಸೇವೆ ಮಾಡಬೇಕು ಅನಿಸಿದ್ದರಿಂದ. ಅಷ್ಟೇಯಲ್ಲದೆ ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ಪೂರೈಸಲು ನೀವು ಸಹಾಯ ಮಾಡಲು ಹಿಂಜರಿಯಲಾರಿರಿ ಹಾಗೂ ಇಲ್ಲಿ ಸೇರಿರುವ ನಮ್ಮ ಸಾಮಾಜದ ನೇತಾರರು ತಮ್ಮ ಅನುಭವದ ಹಾಗೂ ವಿಚಾರಪೂರ್ವಕವಾದ ನಿರ್ಣಯದ ಲಾಭ ನನಗೆ ಕೊಡಲಿದ್ದಾರೆ ಅನ್ನುವ ಅರಿವಿದ್ದಿದ್ದರಿಂದಲೇ ನಾನು ಈ ಜವಾಬ್ದಾರಿಯನ್ನು ಸ್ವೀಕರಿಸಿದ್ದೇನೆ.

## ೧. ಭಾರತದ ಸ್ವಾತಂತ್ರ್ಯದ ಪ್ರಶ್ನೆ

೨. ಸ್ವಯಂಶಾಸಿತವಾದಂತಹ ಒಗ್ಗಟ್ಟಿನ ಸಮಾಜ ಭಾರತದ ಜನರ ಪಾಲಿಗಿದೆಯೆ? ಅನ್ನುವ ಪ್ರಶ್ನೆ ಭಾರತದ ಕ್ಷಿತಿಜದ ಮೇಲೆ ದೊಡ್ಡ ಪ್ರಮಾಣದಲ್ಲಿ ತಲೆ ಎತ್ತಿರುವಂತೆ ಕಾಣುತ್ತಿದೆ. ಈ ಪ್ರಶ್ನೆಗೆ ಸಂಬಂಧಿಸಿದಂತೆ ದಲಿತರ ವಿಚಾರಗಳೇನು ಅನ್ನುವುದನ್ನು ನಿರ್ಧರಿಸಲು ನಾವಿಲ್ಲಿ ಸೇರಿದ್ದೇವೆ. ಈ ಪ್ರಶ್ನೆ ಕೇವಲ ಭಾರತದ ಜನರನ್ನಷ್ಟೇಯಲ್ಲ ಸಂಪೂರ್ಣ ಬ್ರಿಟಿಷ್ ರಾಜ್ಯದಲ್ಲಿ ಹಾಗೂ ಇಡೀ ಜಗತ್ತಿನಲ್ಲಿ ಕಂಪನ ಮೂಡಿಸಿದೆ. ನಾವು ಈ ಪ್ರಶ್ನೆಗೆ ಯಾವ ರೀತಿ ಉತ್ತರ ಕೊಡುತ್ತೇವೆ ಅನ್ನುವುದರ ಮೇಲೆ ಈ ದೇಶದ ಭವಿಷ್ಯ ಅವಲಂಬಿಸಿದೆ. ನಾವು ಈ ಪ್ರಶ್ನೆಗೆ ಬೆಂಬಲ ಕೊಟ್ಟು ಚಾಲನೆ ಕೊಡಬಹುದು ಇಲ್ಲವೆ ವಿರೋಧಿಸಿ ಅದನ್ನು ಮುಂದೆ ದೂಡಬಹುದು. ಒಟ್ಟಿನಲ್ಲಿ ಈ ಪ್ರಶ್ನೆ ನಮ್ಮ ವಿಚಾರಗಳನ್ನವಲಂಬಿಸಿದೆ ಹಾಗಾಗಿ ಇದನ್ನು ನಾವ್ಯಾರೂ ಉದಾಸೀನತೆಯಿಂದ ಕಾಣುವಂತಿಲ್ಲ ಎಂದು ನನಗನಿಸುತ್ತದೆ. ನೀವದರ ಎರಡು ಬದಿಗಳ ಬಗ್ಗೆ ಯೋಚಿಸಿಯೇ ನಿರ್ಧಾರ ತೆಗೆದುಕೊಳ್ಳಬೇಕು. ನಮ್ಮ ನಿರ್ಧಾರ ಉಳಿದವರಿಗಿಂತ ಬೇರೆಯದಾದರೆ ಏನಾಗಬಹುದು ಅನ್ನುವ ಭಯಪಡುವ ಅಗತ್ಯವಿಲ್ಲ. ಆದರೆ ನಮ್ಮ ನಿರ್ಧಾರ ಸ್ವತಂತ್ರ ವಿಚಾರದ್ದು ಹಾಗೂ ಶುದ್ಧ ಶ್ರದ್ಧೆಯಿಂದ ತೆಗೆದುಕೊಂಡಿದ್ದಿರಬೇಕು.

೩. ಈ ಪ್ರಶ್ನೆಗೆ ಎರಡು ಬದಿಗಳಿವೆ ಅನ್ನುವುದು ನಿಮ್ಮೆಲ್ಲರಿಗೂ ಗೊತ್ತು. ಭಾರತದ ಜನತೆ ಭಿನ್ನ ಮಾನವ ವಂಶದಿಂದ ನಿರ್ಮಿಸಲ್ಪಟ್ಟಿದೆ ಎಂದು ಹೇಳುತ್ತಾರೆ. ಏಕೆಂದರೆ ಇಲ್ಲಿಯ ಜನ ಪರಸ್ಪರ ವಿರೋಧವಾದ ರೂಢಿ, ಪರಂಪರೆಗಳು ಹಾಗೂ ತತ್ವಗಳಿರುವ ಭಿನ್ನ ಧರ್ಮದ ಉಪಾಸಕರಾಗಿದ್ದಾರೆ. ಅವರು ಬೇರೆ ಬೇರೆ ಭಾಷೆ ಮಾತನಾಡುತ್ತಾರೆ ಹಾಗೂ ಪರಸ್ಪರ ವಿರೋಧವಾಗಿರುವ ಅವರ ಸಾಮಾಜಿಕ ರೂಢಿಗಳಿಂದ ಹಾಗೂ ಭಿನ್ನ ಹಿತಸಂಬಂಧಗಳಿಂದ ಇಲ್ಲಿಯ ಜನತೆಯಲ್ಲಿ ಸಾಕಷ್ಟು ದ್ವೇಷ ತುಂಬಿಕೊಂಡಿದೆ ಅನ್ನುತ್ತಾರೆ. ಇಂತಹ ಭಿನ್ನ ವಂಶದ ಜನರ ಒಂದು ಸಮೂಹ ಸ್ವಯಂಶಾಸಿತ ಸಮಾಜವಾಗಿ ಹೇಗೆ ಯಶಸ್ವಿಯಾದೀತು? ಅನ್ನುವ ಪ್ರಶ್ನೆಯನ್ನವರು ಕೇಳುತ್ತಿದ್ದಾರೆ. ಇದು ಕಠೋರ ವಸ್ತು ಸ್ಥಿತಿಯಾಗಿದ್ದು ಭಾರತದ ಸ್ವಾತಂತ್ರ್ಯದ ಮೇಲೆ ಇದು ಯಾವ ರೀತಿಯ ಪರಿಣಾಮ ಬೀರಬಹುದು ಅನ್ನುವುದನ್ನು ಯಾವ ಜಾಣನೂ ನಿರ್ಲಕ್ಷಿಸಲಾರ. ಈ ಕಠೋರ ಸತ್ಯವನ್ನೊಪ್ಪಿಕೊಂಡರೂ ಅದರಿಂದ ಸಿಗುವ ಫಲವೇನು?ಮಾನ್ಯರೆ, ಈ ಪ್ರಶ್ನೆಯ ಬಗ್ಗೆ ನಿಮ್ಮ ವಿಚಾರಗಳನ್ನು ನೀವು ಮಂಡಿಸುವ ಮುನ್ನ ಕೆಲವು ಅಷ್ಟೇ ಕಠೋರ ಸತ್ಯದ ಕಡೆ ನಾನು ನಿಮ್ಮ ಗಮನ ಸೆಳೆಯಲಿಚ್ಛಿಸುತ್ತೇನೆ. ಲುಟಿವ್ವಿಯಾ, ರುಮಾನಿಯಾ, ಲಿಥಿಯಾನಿಯಾ, ಯುಗೋಸ್ಲಾವಿಯಾ, ಇಸ್ಟೋನಿಯಾ ಹಾಗೂ ಝೆಕೋಸ್ಲೋವಾಕಿಯಾ ದೇಶಗಳ ಪರಿಸ್ಥಿತಿಯ ಬಗ್ಗೆಯೂ ಯೋಚಿಸಿ. ಇವುಗಳು ಹೊಸ ರಾಷ್ಟ್ರಗಳಾಗಿದ್ದು 'ಸ್ವಯಂಶಾಸನ' ತತ್ವದ ಸ್ಥಾಪನೆಗಾಗಿ ಆದ ೧೯೧೪ರ ಮಹಾಯುದ್ಧದ ನಂತರ ಸ್ಥಾಪಿತವಾದ ರಾಷ್ಟ್ರಗಳು. ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಈ ರಾಷ್ಟ್ರಗಳು ಸ್ವಯಂಶಾಸಿತ, ಸಾರ್ವಭೌಮ,

ಸ್ವತಂತ್ರ ಹಾಗೂ ತಮ್ಮ ಆಂತರಿಕ ಹಾಗೂ ಬಾಹ್ಯ ನಿರ್ಣಯಗಳಲ್ಲಿ ಸರ್ವಶ್ರೇಷ್ಠ ಅಧಿಕಾರಿ ರಾಷ್ಟ್ರಗಳಾಗಿವೆ. ಈ ರಾಷ್ಟ್ರಗಳ ಆಂತರಿಕ ಸಾಮಾಜಿಕ ಪರಿಸ್ಥಿತಿ ಹೇಗಿದೆ? ಭಾರತಕ್ಕಿಂತ ಹೆಚ್ಚಲ್ಲವಾದರೂ ಅವರ ಸಾಮಾಜಿಕ ಪರಿಸ್ಥಿತಿ ಭಾರತದಷ್ಟೇ ಕೆಟ್ಟದಾಗಿದೆ. ಲ್ಯಾಟಿವ್ಹಿಯಾದಲ್ಲಿ ಲೆಟ್ ಜನ, ರಶಿಯನ್ ಜ್ಯೂ ಹಾಗೂ ಜರ್ಮನ್ ಅಲ್ಲದೆ ಇತರ ಜನರೂ ಇದ್ದಾರೆ. ಲಿಥಿಯಾನಿಯಾದಲ್ಲಿ ಲಿಥೊನಿಯನ್, ಜ್ಯೂ, ಪೋಲ್ ರಶಿಯನ್ ಹಾಗೂ ಇತರ ಜನರಿದ್ದಾರೆ. ಯುಗೋಸ್ಲಾವಿಯಾದಲ್ಲಿ ಸಬ್ರ, ಕ್ರೋಟ್, ಸ್ಲಾವ್ಹನ್ ರೂಮಾನಿಯನ್, ಹಂಗೇರಿಯನ್, ಅಲ್ಬೇನಿಯನ್, ಜರ್ಮನ್ ಅಲ್ಲದೆ ಇತರ ಸ್ಲಾವ್ ಜನರಿದ್ದಾರೆ. ಇಸ್ಟೋನಿಯಾದಲ್ಲಿ ಇಸ್ಟೋನಿಯನ್, ರಶಿಯನ್, ಜರ್ಮನ್ ಹಾಗೂ ಇತರ ಸಣ್ಣ ಗುಂಪಿನ ಜನರಿದ್ದಾರೆ. ಝೆಕೋಸ್ಲೋವಾಕಿಯಾದಲ್ಲಿ ಝೆಕ್, ಜರ್ಮನ್, ಮೆಗ್ಯರ್, ರುಥಿನಿಯನ್ ಹಾಗೂ ಇತರ ಜನರಿದ್ದಾರೆ. ಹಂಗೇರಿಯಲ್ಲಿ ಮೆಗ್ಯರ್, ಜರ್ಮನ್, ಹಾಗೂ ಸ್ಲೋವ್ಹಾಕ್ ಜನರಿದ್ದಾರೆ. ಇವರೆಲ್ಲ ವಂಶ ಹಾಗೂ ಭಾಷೆಯಿಂದ ಭಿನ್ನ ಜನರಾಗಿದ್ದರೂ ಹೋರಾಡಲು ಸಿದ್ಧರಿರುವಂತಹ ರಾಷ್ಟ್ರವನ್ನು ನಿರ್ಮಿಸಿದರು. ಒಂದು ಸಂಪೂರ್ಣ ರಾಷ್ಟ್ರ ನಿರ್ಮಾಣಕ್ಕಾಗಿ ಈ ಭಿನ್ನ ವಂಶದ ಜನರನ್ನು ಒಟ್ಟುಮಾಡಲು ಧಾರ್ಮಿಕ ಒಗ್ಗಟ್ಟಿನ ಆಧಾರವೂ ಇರಲಿಲ್ಲ ಅವರಲ್ಲಿ. ಅವರಲ್ಲಿ ನಾಲ್ಕು ಇಲ್ಲವೆ ಐದು ರೀತಿಯ ಕ್ಯಾಥೊಲಿಕ್ ಪಂಥದ ಜನ ನಿಮಗೆ ಕಂಡಾರು. ಅಲ್ಲಿ ರೋಮನ್ ಕ್ಯಾಥೋಲಿಕ್, ಗ್ರೀಕ್ ಕ್ಯಾಥೋಲಿಕ್, ಝೆಕೋಸ್ಲೋವ್ಹಾಕ್ ಕ್ಯಾಥೋಲಿಕ್ ಪಂಥದ ಜನರಿದ್ದಾರೆ. ಈ ಕ್ಯಾಥೋಲಿಕರಲ್ಲದೆ ಎವ್ಹಾಂಜಕೀಲನ್, ಜ್ಯೂ, ಪ್ರೊಟೆಸ್ಟೆಂಟ್ ಜನ ಹಾಗೂ ಇನ್ನಿತರ ಸಣ್ಣ ಸಣ್ಣ ಪಂಥದ ಅನೇಕ ಜನರಿದ್ದಾರೆ ಅನ್ನುವುದರ ಬಗ್ಗೆ ಗಂಭೀರವಾಗಿ ಯೋಚಿಸಿ. ಈ ದೇಶಗಳಲ್ಲಿ ಕಾಣುವಂತಹ ಮಾನವ ಜಗತ್ತಿಗಿಂತ ಭಾರತದ ಮಾನವ ಜಗತ್ತು ಹೆಚ್ಚು ಭಿನ್ನ ವಂಶದ ಹಾಗೂ ಹೆಚ್ಚು ಗೋಜಗೋಜಲಾಗಿದೆಯೆ? ಇಲ್ಲ ಹಾಗೇನು ಇಲ್ಲ ಅನ್ನುವ ನಂಬಿಕೆ ನನಗಿದೆ. ಭಾರತಕ್ಕೆ ಸಂಬಂಧಪಟ್ಟಂತೆ ನಿಮ್ಮ ನಿರ್ಧಾರ ಪ್ರಾಮಾಣಿಕವಾಗಿ ಹಾಗೂ ಸ್ವತಂತ್ರವಾಗಿರಬೇಕೆನ್ನುವುದು ನಿಮ್ಮಾಸೆಯಾಗಿದ್ದರೆ ಈ ವಸ್ತುಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಮಾನ್ಯರೆ! ಈ ತುಲನೆಯ ಪರಿಣಾಮವಾಗಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಲ್ಯಾಟ್ವಿಯಾ, ಲಿಥಿಯೋನಿಯಾ, ಯುಗೋಸ್ಲಾವಿಯಾ, ಇಸ್ಟೋನಿಯಾ, ಝೆಕೊಸ್ಲೋವಾಕಿಯಾ, ಹಂಗೇರಿಯಾ ಹಾಗೂ ರುಮಾನಿಯಾ ದೇಶಗಳು ವಂಶ, ಭಾಷೆ, ದೇಶ, ಧರ್ಮ ಹಾಗೂ ಸಂಸ್ಕೃತಿ ಇವುಗಳಲ್ಲಿ ಭಿನ್ನವಾಗಿದ್ದರೂ ಏಕಸಂಘ ಹಾಗೂ ಸ್ವಯಂಶಾಸಿತ ರಾಷ್ಟ್ರವಾಗಿ ಬದುಕಬಹುದಾದರೆ ಭಾರತವೇಕೆ ಬದುಕಲಾರದು? ಅನ್ನುವ ಪ್ರಶ್ನೆಗೆ ಉತ್ತರವಿದೆಯೆ? ನನ್ನಲ್ಲಂತೂ ಯಾವುದೇ ಉತ್ತರವಿಲ್ಲ ನನ್ನ ಗೆಳೆಯರಲ್ಲ್ಯಾರಾದರೂ ಉತ್ತರಿಸಬಲ್ಲವರಾಗಿದ್ದರೆ ಕೇಳಲು ನಾನು ಉತ್ಸುಕನಾಗಿದ್ದೇನೆ.

೪. ಸ್ವಾತಂತ್ರ್ಯ ಸಿಗುವ ಮೊದಲು ಒಂದು ರಾಷ್ಟ್ರದ ಎಲ್ಲ ಪರಸ್ಪರ ವಿರೋಧಿ ಘಟಕಗಳು ನಷ್ಟವಾಗಿ ಅದು ಸಂಪೂರ್ಣವಾಗಿ ಏಕಸಂಘ ರಾಷ್ಟ್ರವಾಗಬೇಕು ಅನ್ನುವ ದುರಾಗ್ರಹವಿಟ್ಟುಕೊಳುವುದು ನನ್ನ ಪ್ರಕಾರ ವಸ್ತುಸ್ಥಿಯನ್ನು ವಿರುದ್ಧ ಕ್ರಮದಲ್ಲಿಡುವುದಾಗಿದ್ದು ಸ್ವಯಂಶಾಸನದ ಕಾರ್ಯವಿಧಾನದಲ್ಲಿ ಏಕಸಂಘ ರಾಷ್ಟ್ರವನ್ನು ನಿರ್ಮಿಸುವ ಶಕ್ತಿಯನ್ನು ಉಪೇಕ್ಷಿಸುವುದಾಗುತ್ತದೆ. ಒಂದೇ ಭಾಷೆ, ಒಂದೇ ಧರ್ಮ, ಹಾಗೂ ಒಂದೇ ಸಂಸ್ಕೃತಿಯ ಸೂತ್ರದಲ್ಲಿ ಬಂಧಿಸಲ್ಪಟ್ಟಿರುವ ರಾಷ್ಟ್ರಗಳು ಬಹಳ ಕಡಿಮೆ. ಆದರೆ ಧರ್ಮ, ಭಾಷೆ, ಹಾಗೂ ಸಂಸ್ಕೃತಿಯಲ್ಲಿ ಭಿನ್ನತೆಯಿರುವ ಜನಸಮೂಹ ರಾಜಕೀಯ, ಭೌಗೋಲಿಕ ಹಾಗೂ ಐತಿಹಾಸಿಕ ಸಮಾನತೆಯಿಂದಾಗಿ ಒಟ್ಟಿಗೆ ಬಂದು ಏಕಸಂಘ ರಾಷ್ಟ್ರದ ಜನತೆಗಳಾಗಿ ಬಾಳುತ್ತಿರುವ ಉದಾಹರಣೆಗಳು ಸಾಕಷ್ಟಿವೆ. ಇಂತಹ ರಾಷ್ಟ್ರಗಳಿಗೆ ಒಂದೇ ರಾಷ್ಟ್ರೀಯತ್ವದ ಒರೆಗೆ ಹಚ್ಚಿದ್ದರೆ ಅವುಗಳಿಗೆ

ಸ್ವಯಂಶಾಸನದ ಹಕ್ಕುಗಳು ಯಾವತ್ತೂ ಸಿಗುತ್ತಿರಲಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿದ್ದು ಮಾಡಿದ್ದೆಲ್ಲವನ್ನೂ ಪರಿಗಣಿಸಿದರೂ ಅನೇಕ ರಾಷ್ಟ್ರಗಳಿಗೆ ಸಂಘಟಿತವಾಗಲು ಸ್ವಯಂಶಾನವೊಂದೇ ಮಹತ್ವದ ಕಾರಣವಾಗಲಿಲ್ಲವೆ? ಹಾಗೂ ಆ ರಾಷ್ಟ್ರಗಳು ಸ್ವಯಂಶಾಸನದ ಅಭಾವದಿಂದಾಗಿ ಮೊದಲಿದ್ದ ಹಾಗೆ ಭಿನ್ನ ಜನರ ಸಮೂಹದೊಂದಿಗೆ ಇರುತ್ತಿರಲಿಲ್ಲವೆ? ಜರ್ಮನ್ ಸಾಮ್ರಾಜ್ಯವು ಸ್ವಯಂಶಾಸನದ ನಿಯಮಗಳನ್ನು ಸ್ವೀಕರಿಸಿದ್ದರಿಂದಲೇ ಒಂದೇ ರಾಷ್ಟ್ರೀಯತ್ವ ಪಡೆಯಲು ಕಾರಣವಾಯಿತು. ಬವ್ಹೇರಿಯನ್, ಪ್ರುಶಿಯನ್, ಸ್ಯಾಕ್ಸನ್ ಹಾಗೂ ಇತರ ಅನೇಕ ಭಿನ್ನ ಜನಸಮೂದಾಯ ಒಂದು ರಾಷ್ಟ್ರವಾಗಿ ಪರಿಣಮಿಸಿ ಒಂದೇ ಶಾಸನದಡಿ ಬರದಿದ್ದಿದ್ದರೆ ೧೮೭೦ ರ ಮೊದಲು ಅವುಗಳು ಇದ್ದ ಹಾಗೇ ಇದ್ದುಬಿಡುತ್ತಿರಲಿಲ್ಲವೆ? ಭಿನ್ನ ವಂಶದ ಜನಸಮೂಹವನ್ನು ಒಂದು ರಾಷ್ಟ್ರದಲ್ಲಿ ಸಮಾವೇಶಗೊಳಿಸಲು 'ಒಂದೇ ಶಾಸನ' ಒಂದು ಒಳ್ಳೆಯ ಉಪಾಯ ಸಾಬೀತಾಗುತ್ತದೆ. ಭಾರತದ ತನ್ನ ಸ್ವಂತದ ಉದಾಹರಣೆಯಿಂದ ಇದು ಸಾಬೀತಾಗುವುದಿಲ್ಲವೆ? ಇಂದು ಭಾರತದಲ್ಲಿ ಸ್ವಲ್ಪವಾದರೂ ಕಾಣಸಿಗುವ ಒಂದು ರಾಷ್ಟ್ರೀಯತ್ವ ಹಾಗೂ ಒಗ್ಗಟ್ಟಿನ ಭಾವನೆ ಬ್ರಿಟಿಷ್ ರಾಜ್ಯದ ಒಂದು ಸಾಮಾನ್ಯ ಶಾಸನದಿಂದ ಬಂದಿರುವುದು ಅನ್ನುವುದು ಸಾಮಾನ್ಯ ವಿಷಯ. ಐತಿಹಾಸಿಕ ಇಲ್ಲವೆ ತಾರ್ಕಿಕ ದೃಷ್ಟಿಯಿಂದ ನೋಡಿದರೂ ಭಾರತದ ಜನತೆಯ ಭಿನ್ನತೆ ಭಾರತದ ಸ್ವಯಂಶಾಸನದ ದಾರಿಯಲ್ಲಿ ಅಡ್ಡ ಬರಲಾರದು ಎಂದು ನನಗನಿಸುತ್ತದೆ. ಹಾಗೂ ಭಾರತ ಏಕ ರಾಷ್ಟ್ರವಾಗಬೇಕು ಅನ್ನುವ ಗುರಿಯಿದ್ದರೆ ಈ ಗುರಿ ಮುಟ್ಟಲು ಸ್ವಾತಂತ್ರ್ಯ ತುಂಬ ಮಹತ್ವವಾದ ಸಾಧನವಾಗಿದೆ ಅನ್ನುವುದನ್ನು ಹೇಳಬಯಸುತ್ತೇನೆ.

## ೨. ಈ ಸಮಸ್ಯೆಯಲ್ಲಿಯ ನಿಯಮಗಳು

೫. ಒಟ್ಟಾರೆ ಸ್ವಾತಂತ್ರ್ಯದ ಮೇಲೆ ಭಾರತದಲ್ಲಿರುವ ವಿಭಿನ್ನತೆಯ ಯಾವುದೇ ಪರಿಣಾಮವಾಗಲಿಕ್ಕಿಲ್ಲವೆ? ಸ್ವಾತಂತ್ರ್ಯದ ಸಂವಿಧಾನವನ್ನು ತಯಾರಿಸುವಾಗ ಇದರ ಬಗ್ಗೆ ನಾವು ಸ್ವಲ್ಪವೂ ಗಮನಿಸಬೇಡವೆ? ಅನ್ನುವ ಪ್ರಶ್ನೆಯನ್ನು ನೀವು ನನಗೆ ಕೇಳಲಿರುವಿರಿ ಅನ್ನುವುದರ ಬಗ್ಗೆ ಯಾವುದೇ ಅನುಮಾನವಿಲ್ಲ. 'ನಾವದನ್ನು ತಪ್ಪದೆ ಗಮನಕ್ಕೆ ತೆಗೆದುಕೊಳ್ಳಬೇಕು!' ಅನ್ನುವುದು ನನ್ನುತ್ತರ. ಈ ಜನಸಮೂಹದ ಭಿನ್ನತೆಯನ್ನು ಕಡೆಗಾಣಿಸಿ ಯಾವುದೇ ನಿಯಮ ಹಾಗೂ ಪರಿಮಿತಿಯಿಲ್ಲದ ಸ್ವಾತಂತ್ರ್ಯದ ಹಠ ಭಾರತದ ಕಾಂಗ್ರೆಸ್ಸಿನವರ ಮನೋವೃತ್ತಿಯಾಗಿದೆ. ಮಾನ್ಯರೆ! ಭಾರತದ ವಿಭಿನ್ನತೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಒಂದು ಪಕ್ಷ ಸಂವಿಧಾನವನ್ನು ಬರೆದರೆ ಶಾಸನದ ಅಧಿಕಾರಗಳು ಯಾರ ಕೈಗೆ ಹೋಗಬಹುದು? ಅಲ್ಪಸಂಖ್ಯಾತರ ಕೈಗೆ ಅಧಿಕಾರಗಳು ಹೋಗಲಿ ಎಂದು ನಿಮಗನಿಸುತ್ತದೆಯೆ? ಇಲ್ಲ ಕೆಳವರ್ಗದ ಜನರ ಕೈಗೆ ಕೊಟ್ಟರೆ ಒಳ್ಳೆಯದು ಎಂದನಿಸುತ್ತಿದೆಯೆ? ಭಾರತೀಯ ಸಮಾಜದ ವಸ್ತುಸ್ಥಿಯನ್ನು ಗಮನಕ್ಕೆ ತೆಗೆದುಕೊಳ್ಳದಿದ್ದರೆ ಭಾರತದ ಭಾವೀ ಸ್ವಾತಂತ್ರ್ಯದ ಅಧಿಕಾರಗಳು ಭಾರತದ ಉಚ್ಚಶಿಕ್ಷಿತ, ಪ್ರತಿಷ್ಠಿತ, ಹಾಗೂ ಮಹತ್ವಾಕಾಂಕ್ಷಿಯಾಗಿರುವಂತಹ ಮೇಲ್ಜಾತಿ ಜನರ ಕೈಗೆ ಹೋಗುತ್ತವೆ ಅನ್ನುವುದು ನನಗೆ ಗೊತ್ತು. ಬದುಕಿನ ಉಳಿದ ಕ್ಷೇತ್ರಗಳಂತೆ ರಾಜಕಾರಣದಲ್ಲೂ ಶಕ್ತಿಶಾಲಿ ಜನರೇ ಗೆಲ್ಲುತ್ತಾರೆ. ಈ ಊಳಿಗಮಾನ್ಯ ವರ್ಗಕ್ಕೆ ಶಿಕ್ಷಣ ಹಾಗೂ ಸಂಪತ್ತಿನ ತಾಕತ್ತು ಸಹಾಯ ಮಾಡಲಿದೆ.ತಮ್ಮ ರಾಜಕೀಯ ಹಕ್ಕಿಗಾಗಿ ದುರ್ಬಲ ಸಮಾಜಘಟಕಕ್ಕೆ ಊಳಿಗಮಾನ್ಯ ವರ್ಗಕ್ಕೆ ಸಹಾಯಕವಾಗುವಂತಹ ಕೇವಲ ಈ ಶಕ್ತಿಗಳೊಡನೆ ಹೋರಾಡಿದರೆ ಮಾತ್ರ ಸಾಲದು, ಕಾಣಲು ಅತ್ಯಂತ ಸೂಕ್ಷ್ಮವಾಗಿರುವ ಆದರೆ ಪ್ರಭಾವಶಾಲಿಯಾಗಿರುವ ಮತ್ತೊಂದು ಶಕ್ತಿಯಿದೆ ಆ ಶಕ್ತಿ ಅವರ ಸಾಮಾಜಿಕ ಸ್ಥಿತಿಯಲ್ಲಿ ಅಡಕವಾಗಿದೆ. ಈ ಸಮಾಜರಚನೆಯ ನಿರ್ಧಾರಿತ

ಮಾದರಿಯಲ್ಲಿ ಪಾತ್ರತೆಗೆ ಇಲ್ಲವೆ ಗುಣಮಟ್ಟಕ್ಕೆ ಸ್ಥಾನವಿಲ್ಲ. ಭಾರತದಲ್ಲಿ ಕೇವಲ ಜಾತಿ ಭಾವನೆಗೆ ಮಹತ್ವವಿದ್ದು ಈ ಭಾವನೆ ಪರಜಾತಿಯವರೊಡನೆ ಹೋರಾಡಲು ಪ್ರೇರೇಪಿಸುತ್ತದೆ.ಈ ಭಾವನೆ ಬಹುಸಂಖ್ಯಾತರ ಮನಸ್ಸಿನಲ್ಲಿರುವುದರಿಂದ ಅಲ್ಪಸಂಖ್ಯಾತರಿಗದು ಸಾಕಷ್ಟು ತೊಂದರೆಗಳನ್ನು ತಂದೊಡ್ಡಬಹುದು ಹಾಗೂ ರಾಜ್ಯ ಶಾಸನದ ಬಾಗಿಲುಗಳು ಬಹುಶಃ ಶಾಶ್ವತವಾಗಿ ಮುಚ್ಚಲ್ಪಡಬಹುದು. ಈ ಸಾಮಾಜಿಕ ಪರಿಸ್ಥಿತಿಯ ಅನುಷ್ಠಾನದ ಭಯಾನಕ ಪರಿಣಾಮ ದಲಿತರ ಮೇಲಾಗದೆ ಇರದು. ಹಿಂದೂ ಧರ್ಮದನುಸಾರ ಭಾರತದಲ್ಲಿಯ ಜಾತಿಗಳ ರಚನೆ ಏರಿಕೆಯ ಕ್ರಮದಲ್ಲಿ ಗೌರವದ ಹಾಗೂ ಇಳಿಕೆ ಕ್ರಮದಲ್ಲಿ ತಿರಸ್ಕಾರಭರಿತವಾಗಿದೆ ಅನ್ನುವುದು ನಿಮ್ಮೆಲ್ಲರಿಗೂ ಗೊತ್ತು. ಈ ಸ್ಥಿತಿಯಲ್ಲಿ ಇಳಿಮುಖದ ಪರಿಣಾಮವಾಗಿ ಕೆಳದರ್ಜೆ ಜನರ ಮನಸ್ಸಿನಲ್ಲಿ ಮೇಲ್ಜಾತಿ ಉಮೇದುವಾರನನ್ನು ತಂತಾನೆ ಒಪ್ಪಿಕೊಳ್ಳುವ ಭಾವನೆ ನಿರ್ಮಾಣವಾಗುತ್ತದೆ. ರಾಜಕೀಯ ಅಧಿಕಾರಕ್ಕಾಗಿ ಹೋರಾಡುತ್ತಿರುವ ದಲಿತರ ಮನಸ್ಸಿನ ಮೇಲೆ ಈ ಮಾನಸಿಕ ಸ್ಥಿತಿ ಕೆಟ್ಟ ಪರಿಣಾಮ ಬೀರುವ ಸಾಧ್ಯತೆಗಳಿವೆ. ದಲಿತ ಉಮೇದುವಾರನಿಗೆ ಒಂದೂ ಮತವನ್ನು ಹಾಕದೆ ಮೇಲ್ಜಾತಿಯ ಜನ ದಲಿತರ ಅನೇಕ ಮತಗಳನ್ನು ಪಡೆಯಲು ಸಾಧ್ಯವಾಗಬಹುದು. ಇದರ ಪರಿಣಾಮವಾಗಿ ದಲಿತರು ಚುನಾವಣೆ ಸೋಲುವುದಷ್ಟೇಯಲ್ಲ ಅರಿವಿಲ್ಲದೆ ಅವರು ತನ್ನ ಪ್ರತಿಸ್ಪರ್ಧಿಯ ಸಹಾಯಕ್ಕೆ ಕಾರಣರಾದಾರು. ಸಾಮಾಜಿಕ ಸ್ಥಿತಿಯನ್ನು ಕಡೆಗಾಣಿಸುವುದರಿಂದ ಸರ್ಕಾರದಲ್ಲಿ ಶ್ರೀಮಂತರು, ಉಚ್ಚ ಶಿಕ್ಷಿತರು ಹಾಗೂ ಮೇಲ್ಜಾತಿಯ ಜನರ ಊಳಿಗಮಾನ್ಯ ಪದ್ಧತಿ ಸ್ಥಾಪನೆಯಾಗುವುದಿದ್ದರೆ ನಮ್ಮ ಗುರಿಗೆ ಸುಸಂಗತವಾಗಿರುವಂತಹ ಎಲ್ಲ ಉಪಾಯಗಳಿಂದ ಅದನ್ನು ತಡೆಯುವುದು ನಮ್ಮ ಕರ್ತವ್ಯವಾಗಿದೆ ಅನ್ನುವುದು ನನ್ನನಿಸಿಕೆ. ಕೇವಲ ತಮ್ಮ ಮಾಲೀಕರು ಬದಲಾದರು ಅನ್ನುವುದರ ಬಗ್ಗೆಯಷ್ಟೇ ಸಮಾಧಾನವಾದರಾಗದು, ಯಾವುದೇ ದೇಶ ಮತ್ತೊಂದು ದೇಶದ ಮೇಲೆ ರಾಜ್ಯವನ್ನಾಳುವುದು ಒಳ್ಳೆಯದಲ್ಲ ಅನ್ನುವ ಕಾಂಗ್ರೆಸ್ಸಿನವರ ಮಾತನ್ನು ನಾನು ನಂಬುತ್ತೇನೆ ಆದರೆ 'ಯಾವುದೇ ಒಂದು ಜಾತಿ ಮತ್ತೊಂದು ಜಾತಿಯ ಮೇಲೆ ಅಧಿಕಾರ ಚಲಾಯಿಸುವುದು ಒಳ್ಳೆಯದಲ್ಲ ಅನ್ನುವುದೂ ಅಷ್ಟೇ ನಿಜ' ಎಂದವರಿಗೆ ಸ್ಪಷ್ಟವಾಗಿ ಹೇಳುವ ಸ್ವಾತಂತ್ರ್ಯ ನನಗಿದೆ. ಯುರೋಪಿಯನ್ ಆಡಳಿತಶಾಹಿ ಹಾಗೂ ಸ್ವದೇಶಿಯರ ಊಳಿಗಮಾನ್ಯ ಪದ್ಧತಿ, ಅನ್ನುವ ಶಬ್ದವನ್ನು ಸಂಪತ್ತು, ಶಿಕ್ಷಣ ಹಾಗೂ ಸಾಮಾಜಿಕ ದರ್ಜೆ ಇವುಗಳಿಗಾಗಿ ನಾನು ಒಟ್ಟಿಗೆ ಬಳಸುತ್ತಿದ್ದೇನೆ. ಇವೆರಡರಲ್ಲಿ ಜನತೆಯ ಬಗ್ಗೆ ಹೆಚ್ಚು ಚಿಂತಿಸುವವರ್ಯಾರು? ಊಳಿಗಮಾನ್ಯರ ಪ್ರಕಾರ ಜನತೆಯ ಪರಿಸ್ಥಿತಿ, ಅವರ ಅಭ್ಯಾಸಗಳು, ಅವರು ಯೋಚಿಸುವ ಹಾಗೂ ಬದುಕುವ ರೀತಿ, ಅವರ ಬೇಕು ಬೇಡಗಳು, ಅವರ ದೂರುಗಳು ಹಾಗೂ ಅವರ ಹೊಂದಾಣಿಕೆಗಳ ಜ್ಞಾನ ಆಡಳಿತಶಾಹಿಗಳಿಗಿಂತ ಹೆಚ್ಚು ಅವರಿಗಿದೆ. ಹಾಗಿರಲೂ ಬಹುದು? ಆದರೆ ಊಳಿಗಮಾನ್ಯರ ಮನಸ್ಸಿನಲ್ಲಿ ಇತರ ಜಾತಿಗಳ ಬಗ್ಗೆ ಸಾಕಷ್ಟು ಪಕ್ಷಪಾತವಿದೆ, ಎದ್ದು ಕಾಣುವ ವಂಶಾಭಿಮಾನವಿದೆ, ತಮ್ಮ ಜಾತಿಬಾಂಧವರನ್ನು ವಹಿಸಿಕೊಂಡು ಮಾತನಾಡುವ ಪ್ರವೃತ್ತಿಯಿದೆ, ಹಾಗಾಗಿ ಸಾಮಾನ್ಯ ಜನತೆಯ ಭವಿಷ್ಯ ನಿರ್ಧರಿಸುವ ಶಾಸನದ ಅಧಿಕಾರಗಳನ್ನು ಅವರಿಗೆ ಕೊಡಕೂಡದು ಅನ್ನುವ ಅವರ ಮೇಲಿನ ಆರೋಪದಿಂದವರು ಬಿಡುಗಡೆ ಹೊಂದಲಾರರು ಎಂದು ನನಗನಿಸುತ್ತದೆ. ಅವರ ಹಾಗೂ ಸಾಮಾನ್ಯ ಜನರ ನಡುವೆ ದೊಡ್ಡ ಕಂದಕವಿರುವುದರಿಂದ ಸಾಮಾನ್ಯ ಜನತೆಯ ಅವಶ್ಯಕತೆಗಳು, ಆಸೆ ಆಕಾಂಕ್ಷೆಗಳ ಜ್ಞಾನ ಊಳಿಗಮಾನ್ಯರಿಗಿರುವುದು ಸಾಧ್ಯವೇಯಿಲ್ಲ ಎಂದು ಕೆಲವರನ್ನಬಹುದು, ಅಷ್ಟೇಯಲ್ಲ ಈ ಜನ ಸಮಾನ್ಯ ಜನತೆಯ ಆಕಾಂಕ್ಷೆಯ ದೊಡ್ಡ ವೈರಿಯಾಗಿದ್ದಾರೆ. ನಾನೇಕೆ ಇಷ್ಟು ಒತ್ತು ಕೊಟ್ಟು ಹೇಳುತ್ತಿದ್ದೇನೆಂದರೆ ಈ ಊಳಿಗಮಾನ್ಯರ ಕೈಯಲ್ಲಿ ಶಾಸನದ ಅಧಿಕಾರಗಳನ್ನು ಕೊಡಲಾಗದು? ಏಕೆಂದರೆ ಇಂದಿನ ಸ್ವಾತಂತ್ರ್ಯದ ಕಲ್ಪನೆ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಹಾಗೂ ಇಂದಿಗೂ

ಆಚರಣೆಯಲ್ಲಿರುವ, ಸಾಮಾನ್ಯ ಜನರ ಕಲ್ಪನೆಯಲ್ಲಿರುವ ಪ್ರಜಾಭುತ್ವದ ವಿರೋಧಿಯಾಗಿದೆ. ಆಧುನಿಕ ಪ್ರಜಾಪ್ರಭುತ್ವ ದೇಶದ ಮೂಲಭೂತ ತತ್ವಗಳೆಂದರೆ ಪ್ರತಿಯೊಬ್ಬ ವ್ಯಕ್ತಿಗೆ ಬೆಲೆ ಕೊಡುವುದು, ಹಾಗೂ ಪ್ರತಿಯೊಬ್ಬನಿಗೂ ಒಂದೇ ಜೀವನ ಸಿಗುವುದರಿಂದ ಆತನಲ್ಲಿರುವ ಸೂಪ್ತ ಗುಣಗಳನ್ನು ವಿಕಸಿಸಲು ಎಲ್ಲ ಸೌಲಭ್ಯಗಳು ಆತನಿಗೆ ಸಿಗಬೇಕು. ಆದರೆ ಭಾರತದ ಊಳಿಗಮಾನ್ಯರು ಈ ಯಾವುದೇ ತತ್ವಗಳನ್ನು ಒಪ್ಪಬಹುದು ಅನಿಸುತ್ತಿಲ್ಲ. ಸದ್ಯದ ಬದುಕು ಅವರ ಅನೇಕ ಹಿಂದಿನ ಬದುಕುಗಳ ಸರಮಾಲೆಯಾಗಿದ್ದು ಈ ಜೀವನದ ಅವರ ಸ್ಥಿತಿ ಕಳೆದ ಜನ್ಮದ ಪಾಪಪುಣ್ಯಗಳಿಂದ ನಿರ್ಧಾರವಾಗುತ್ತದೆ. ಆದ್ದರಿಂದ ಒಬ್ಬನ ಶೀಲ ಎಷ್ಟೇ ಒಳ್ಳೆಯದಾಗಿದ್ದರೂ ಅಥವಾ ಅವನು ಎಷ್ಟೇ ದೊಡ್ಡ ಕೀರ್ತಿ ಗಳಿಸಿದ್ದರೂ ಹುಟ್ಟಾ ಪಡೆದುಕೊಂಡು ಬಂದಿರುವ ಅವನ ಸಾಮಾಜಿಕ ಪರಿಸ್ಥಿತಿ ಬದಲಾಗುವುದಿಲ್ಲ ಅನ್ನುವುದು ಊಳಿಗಮಾನ್ಯರ ಕೆಲವರ ಅಂಬೋಣ. ಬ್ರಾಹ್ಮಣನಾಗಿ ಒಬ್ಬ ಜನಿಸಿದರೆ ಆತ ಬ್ರಾಹ್ಮಣನಲ್ಲದೆ ಮತ್ತೇನೂ ಆಗಲಾರ, ಪರಿಯಾ (ಒಂದು ಜಾತಿ) ಪರಿಯಾ ಆಗಿಯೇ ಉಳಿಯುತ್ತಾನೆ ಅನ್ನುವುದು ಈ ಉಳಿಗಮಾನ್ಯರ ತತ್ವ. ಇವುಗಳು ಪುಕ್ಕಟ್ಟೆ ಕುಳಿತು ಹರಟಿದ ಮಾತುಗಳಲ್ಲ, ಈಗ ಅಸ್ತಿತ್ವದಲ್ಲಿರುವ ಧರ್ಮ ಮತಗಳು. ಇಂತಹ ಜನರ ಕೈಯಲ್ಲಿ ಅನಿರ್ಬಂಧ ಶಾಸನದ ಅಧಿಕಾರಗಳನ್ನು ಕೊಟ್ಟರೆ ಗಲ್ಲಿಗೇರಿಸುವವನ ಕೈಯಲ್ಲಿ ಚೂರಿಯೂ ಕೊಟ್ಟಂತೆ.

೬. ಇಂತಹ ವಿಚಾರಗಳನ್ನಿಟ್ಟುಕೊಳ್ಳುವುದರಿಂದ ನಾವು ಜಾತೀಯವಾದಿಗಳು ಹಾಗೂ ದೇಶದ ಶತೃಗಳು ಎಂದು ನಿರ್ದಯವಾಗಿ ಬಹುಶಃ ಘೋಷಿಸಲಾಗುತ್ತದೆ. ಪ್ರತಿಯೊಂದು ದೇಶದಲ್ಲಿ ದೇಶದ ಅಧಿಕಾರಗಳು ಸುಶಿಕ್ಷಿತ ಹಾಗೂ ಕಲಿತ ಜನರ ಕೈಯಲ್ಲಿರುತ್ತವೆ ಹಾಗೂ ಪ್ರಬಲ ಶಾಸನದ ದೃಷ್ಟಿಯಿಂದ ಹಾಗಿರಬೇಕು ಕೂಡ ಎಂದು ಹೇಳುವಾಗ ಕಾಂಗ್ರೆಸ್ಸಿನವರಿಗೆ ಯಾವತ್ತೂ ದಣಿವಾಗುವುದಿಲ್ಲ. ಭವಿಷ್ಯದಲ್ಲಿ ನಮ್ಮ ಯಜಮಾನರು ಯಾರು ಬೇಕಾದರೂ ಆಗಲಿ, ಆದರೆ ಈ ಊಳಿಗಮಾನ್ಯರ ಕೈಗೆ ಅಧಿಕಾರ ಕೊಡುವಾಗ ಅವರು ಸಾಮಾಜಿಕ ಹಾಗೂ ರಾಜಕೀಯ ಪ್ರಶ್ನೆ ಇವೆರಡೂ ಭಿನ್ನ ವಿಷಯಗಳಾಗಿದ್ದು ಇಬ್ಬರಲ್ಲೂ ಪರಸ್ಪರ ಯಾವುದೇ ಸಂಬಂಧವಿಲ್ಲ ಎಂದು ಯೋಚಿಸುತ್ತಾರೆ ಎಂದೆನಿಸುತ್ತದೆ. ಮಾನ್ಯರೆ! ಮನುಷ್ಯನ ಜೀವನದ ಬಗ್ಗೆ ಹೀಗೆ ಯಾಂತ್ರಿಕವಾದ ಕಲ್ಪನೆಗಳನ್ನಿಟ್ಟುಕೊಂಡು ಮುಂದುವರೆಯುಲು ಪ್ರಯತ್ನಿಸುತ್ತಿರುವವರ ಬಗ್ಗೆ ನೀವು ಜಾಗರೂಕರಾಗಿರಬೇಕು. ಇಂತಹ ಕಳ್ಳ ಪ್ರಯತ್ನಗಳಿಂದ ನೀವು ಜಾಗರೂಕರಾದರೆ ವ್ಯಕ್ತಿಯೊಬ್ಬನಿಗೆ ಆತನ ಸ್ವಭಾವದೋಷದಿಂದಾಗಿ ರಾಜಕಾರಣದಿಂದ ದೂರ ಇಡಲಾಗುವುದಿಲ್ಲ ಅನ್ನುವುದು ನಿಮಗೆ ತಿಳಿದೀತು. ಮನುಷ್ಯನೊಬ್ಬ ರಾಜಕಾರಣಿಯಾಗಿ ಮತ ಕೇಳಲು ಬರುವಾಗ ಆತ ತನ್ನ ಕೋಟನ್ನು ತೆಗೆದು ಗೋಡೆಗೆ ನೇತುಹಾಕಿಬಿಡುವಂತೆ ತನ್ನ ವಿಚಾರಗಳು, ಹಿತಸಂಬಂಧಗಳು ಹಾಗೂ ತನ್ನ ಸ್ವಭಾವವನ್ನು ಪಕ್ಕಕ್ಕಿಟ್ಟು ಬರುವುದಿಲ್ಲ, ಸ್ವಭಾವ, ಸಂಬಂಧಗಳೆಲ್ಲವನ್ನು ಜೊತೆಗಿಟ್ಟುಕೊಂಡೇ ಆತ ಮತ ಕೇಳಲು ಬರುತ್ತಾನೆ. ಊಳಿಗಮಾನ್ಯರ ಬುದ್ಧಿ ದೇಶದ ಬಹುದೊಡ್ಡ ಸಂಪತ್ತು. ಆದರೆ ಆ ಬುದ್ಧಿಯಿಂದ ಅವರಿಗೆ ಶಾಸನದ ಸ್ವಯಂಸಿದ್ಧ ಅಧಿಕಾರಗಳು ಸಿಗಲೇಬೇಕೆಂದೇನಿಲ್ಲ. ಅವರ ಶೀಲ ಹಾಗೂ ಅವರು ತಮ್ಮ ಬುದ್ಧಿಯನ್ನು ಯಾವ ರೀತಿ ಉಪಯೋಗಿಸುತ್ತಾರೆ ಅನ್ನುವುದರ ಮೇಲೆ ಈ ಅಧಿಕಾರಗಳು ಅವರಿಗೆ ಸಿಗಬೇಕೋ ಇಲ್ಲವೋ ಅನ್ನುವುದು ಅವಲಂಬಿಸಿದೆ. ನಾವು ಕೇವಲ ಕಾರ್ಯಕ್ಷಮತೆಯಕಡೆಗಷ್ಟೇ ಗಮನ ಕೊಡಬೇಕು. ಏಕೆಂದರೆ ಆಡಿಸನ್ ಹೇಳುವುದೇನೆಂದರೆ 'ಒಬ್ಬ ಮನುಷ್ಯನ ಬುದ್ಧಿಯಿಂದ ಸಮಾಜಕ್ಕೆ ಒಳ್ಳೆಯದಾಗುತ್ತಿದೆಯೋ ಇಲ್ಲವೊ ಅನ್ನುವುದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಜನ ಅವನ ಯೋಗ್ಯತೆಯ ಬಗ್ಗೆ ಗೌರವ ಕೊಡುತ್ತಿದ್ದರೆ ಸಮಾಜಕ್ಕಾಗಿ ಇದಕ್ಕಿಂತ ಹೆಚ್ಚು

ಘಾತುಕವಾದಂತಹ ವಿಷಯ ಬೇರೆ ಯಾವುದೂ ಇಲ್ಲ. ಬುದ್ಧಿಯ ಈ ನೈಸರ್ಗಿಕ ಕೊಡುಗೆ ಹಾಗೂ ಕಲಾತ್ಮಕ ಸಾಧನೆಯ ಉಪಯೋಗ ಸದ್ಗುಣಗಳ ವಿಕಾಸಕ್ಕಾಗುತ್ತಿದ್ದರೆ ಹಾಗೂ ಸಭ್ಯತೆಗೆ ಹಾನಿ ತರುವಂತಹದ್ದಿರದಿದ್ದರೆ ಮಾತ್ರ ಆ ಸಾಧನೆಗೆ ಬೆಲೆಯಿದೆ. ನಾವು ಮಾತನಾಡುತ್ತಿರುವ ಮನುಷ್ಯನ ಮನಸ್ಸು ಹಾಗೂ ಸ್ವಭಾವ ಸರಿಯಾಗಿ ತಿಳಿಯದ ಹೊರತು ಆತನ ಬಗ್ಗೆ ಒಳ್ಳೆಯ ವಿಚಾರಗಳನ್ನು ಬೆಳೆಸಿಕೊಳ್ಳುವುದನ್ನು ನಿಲ್ಲಿಸಬೇಕು.ಇಲ್ಲದಿದ್ದರೆ ಅವರ ವ್ಯಕಿತ್ವದ ಆಕರ್ಷಣೆಯಿಂದ ತಿರಸ್ಕಾರಕ್ಕೆ ಯೋಗ್ಯನಾದ ಮನುಷ್ಯನ ಬಲೆಗೆ ನಾವು ಬಿದ್ದೇವು'. ಶಾಸನದ ಅಧಿಕಾರಕ್ಕಾಗಿ ಹಗಲು ರಾತ್ರಿ ಪ್ರಯತ್ನಿಸುತ್ತಿರುವ ಹಣವಂತರ ಚರಿತ್ರೆಯ ಬಗ್ಗೆ ನಾನು ಮೊದಲೇ ವಿವರಿಸಿರುವುದರಿಂದ ಅದರ ಬಗ್ಗೆಯೀಗ ಹೆಚ್ಚು ಹೇಳುವ ಅಗತ್ಯವಿಲ್ಲ. ಆದರೆ ಈ ಶ್ರೀಮಂತ ಉಮರಾವಗಳಿಂದ ಈ ದೇಶದಲ್ಲಾಗುತ್ತಿರುವ ನಾಚಿಕೆಗೇಡು ವಿಷಯದ ಕಡೆ ಉದಾಸೀನತೆ ತೋರಿಸುವಂತಿಲ್ಲ. ಈ ದೇಶದಲ್ಲಿ ಆರರಿಂದ ಏಳು ಕೋಟಿ ಜನ ಅಸ್ಪೃಶ್ಯತೆಯ ಶಾಪ ಅನುಭವಿಸುತ್ತಿದ್ದಾರೆ.ಅವರ ಈ ಶಾಪ ಹಾಗೂ ದುಃಖ ಎಷ್ಟು ಭಯಾನಕವಾಗಿದೆಯೆಂದರೆ ಜಗತ್ತಿನಲ್ಲಿ ಬೇರೆಲ್ಲೂ ಇಂತಹ ದುಃಖ ಕಾಣುವುದಿಲ್ಲ. ಪ್ರತಿಯೊಬ್ಬ ಮನುಷ್ಯನಿಗೂ ಅಗತ್ಯವಾಗಿರುವಂತಹ ಮೂಲಭೂತ ಹಕ್ಕುಗಳನ್ನು ಕೊಡಲು ನಿರಾಕರಿಸಲಾಗಿದೆ, ಸಂಸ್ಕೃತಿ ಹಾಗೂ ಸುಧಾರಣೆಯಿಂದ ಅವರನ್ನು ವಂಚಿತವಿಡಲಾಗಿದೆ. ಸಮಾನ ಅವಕಾಶಗಳ ಅಭಾವವಿರುವುದರಿಂದ ಅವರ ಸ್ಥಿತಿ ದಯನೀಯವಾಗಿದೆ. ದಲಿತರಲ್ಲದೆ ಈ ದೇಶದಲ್ಲಿ ಆದಿವಾಸಿಗಳು ಹಾಗೂ ಇತರ ಪಂಗಡಗಳು ಅಷ್ಟೇ ಸಂಖ್ಯೆಯಲ್ಲಿದ್ದಾರೆ. ಅವರನ್ನು ಕೂಡ ನಮ್ಮ ಸಂಸ್ಕೃತಿ ಹಾಗೂ ಸುಧಾರಣೆಯ ಬೆಳಕಿನಲ್ಲಿ ತರುವುದನ್ನು ಬಿಟ್ಟು ಹಾಗೇ ಕಾಡು ಹಾಗೂ ಪುರಾತನ ಅವಸ್ಥೆಯಲ್ಲಿ ಬಿಟ್ಟುಬಿಡಲಾಗಿದೆ. ಊಳಿಗಮಾನ್ಯರು ಭೂತಕಾಲದಲ್ಲಿ ತೋರಿಸಿರುವ ಬೇಜವಾಬ್ದಾರಿತನ ಹಾಗೂ ಸೇವಾವೃತ್ತಿಯ ಅಭಾವಕ್ಕೆ ಇವು ಜೀವಂತ ಸಾಕ್ಷಿಗಳಾಗಿವೆ. ಭವಿಷ್ಯಕಾಲದಲ್ಲಿ ಈ ಶ್ರೀಮಂತ ಉಮರಾವರ ವರ್ತನೆ ಬದಲಾಗಬಹುದು ಅನ್ನುವುದನ್ನು ನಂಬಲು ನಮಗೆ ಹೇಳಲಾಗುತ್ತಿದೆ. ಅದನ್ನು ನಂಬುವಷ್ಟು ನಾನು ಮುಗ್ಧನಲ್ಲ. ಏಕೆಂದರೆ ರಾಕ್ಷಸ ಒಂದೇ ರಾತ್ರಿಯಲ್ಲಿ ಬದಲಾಗಿ ದೇವದೂತನಾದ ಅನ್ನುವ ಉದಾಹರಣೆ ನನಗಂತೂ ಗೊತ್ತಿಲ್ಲ.

೭. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಗುವ ತನಕ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವುದನ್ನು ಮುಂದೂಡಬೇಕೆ ಎಂದು ನಮಗೆ ಹೇಳಲಾಗುತ್ತದೆ. ಯಾವುದೇ ಜಾಣ ಮನುಷ್ಯ ಇಂತಹ ಯೋಚನೆಗಳ ಬಲೆಯಲ್ಲಿ ಸಿಲುಕಲಾರ. ಯಾವುದೇ ಮನೆಯಲ್ಲಿ ಪ್ರವೇಶಿಸುವ ಮುನ್ನ ಅದೊಂದು ಪಂಜರವಲ್ಲ ತಾನೆ ಅನ್ನುವುದನ್ನು ಯೋಚಿಸಲೇ ಬೇಕಾಗುತ್ತದೆ. ಸಕಲ ಸೌಕರ್ಯಗಳಿರುವ ಮನುಷ್ಯ ಸೌಕರ್ಯಗಳಿಲ್ಲದವನಿಗಿಂತ ಶಕ್ತಿಶಾಲಿಯಾಗಿರುತ್ತಾನೆ ಅನ್ನುವುದು ಎಲ್ಲರಿಗೂ ಗೊತ್ತು ಹಾಗೂ ಎಲ್ಲರೂ ಅದನ್ನು ಗೊತ್ತುಮಾಡಿಕೊಳ್ಳಬೇಕು. ಅಧಿಕಾರಗಳಿರುವವನು ಕ್ವಚಿತ್ತವಾಗಿ ಅಧಿಕಾರವಿಲ್ಲದವನ ಪರ ವಹಿಸಿ ಅವನೊಂದಿಗೆ ಶಾಸನದ ಅಧಿಕಾರಗಳನ್ನು ಹಂಚಿಕೊಳ್ಳುತ್ತಾನೆ ಅನ್ನುವುದು ಕೂಡ ನಮಗೆ ಗೊತ್ತಿರಬೇಕು. ಹಾಗಾಗಿ ಸಾಮಾಜಿಕ ಪ್ರಶ್ನೆಗಳನ್ನು ಬಿಡಿಸುವುದರಿಂದ ಹಾನಿಗೊಳಗಾಗುವ ಜನರ ಕೈಗೆ ನೀವು ಅಧಿಕಾರಗಳನ್ನು ಕೊಟ್ಟರೆ ಸಾಮಾಜಿಕ ಪ್ರಶ್ನೆಗಳು ಬಿಡಿಸುವ ಆಸೆ ಆಸೆಯಾಗಿಯೇ ಉಳಿದೀತು ಹಾಗೂ ನಮ್ಮ ದೇಶವನ್ನಾಳಲು ಹೊರಟವರಿಗೆ ನೀವು ಮಾಡಲು ಹೊರಟಿರುವ ಸಹಾಯ ಮುಂದೊಂದು ದಿನ ಅವರನ್ನೇ ಕೆಳಗಿಳಿಸಲು ಕ್ರಾಂತಿಯನ್ನಾಗಿ ಪರಿವರ್ತಿಸಬೇಕಾದೀತು! ಮಾನ್ಯರೆ! ನಾನೀಗ ಕೊಡುತ್ತಿರುವ ಸಲಹೆ ಓರ್ವ ದೊಡ್ಡ ರಾಜಕೀಯ ತತ್ವಜ್ಞಾನಿಯಾದ ಎಡ್‌ಮಂಡ್ ಬರ್ಕ್ ಕೊಟ್ಟಿರುವ ಸಲಹೆ. ಆತ ಹೇಳುವುದೇನೆಂದರೆ– "ತಮ್ಮ ಒಪ್ಪಿಗೆ ಕೊಡುವಾಗ ಇತರರು ತಮ್ಮನ್ನು ತಿರಸ್ಕರಿಸಲು ಕಾರಣವಾಗುವಷ್ಟು ಅನಗತ್ಯ ಕುತೂಹಲ ತೋರಿಸಿದರೂ

ನಂಬಿ ಸರ್ವನಾಶವಾಗುವುದಕ್ಕಿಂತ ಅದು ಎಷ್ಟೋ ಮೇಲು ಅನ್ನುವ ಅವನ ಸಲಹೆಯನ್ನನುಸರಿಸಿ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವ ವ್ಯವಸ್ಥೆಯಲ್ಲಿ ವಿಶೇಷ ಒತ್ತು ಕೊಟ್ಟು ಸಂವಿಧಾನದಲ್ಲೇ ಸಾಮಾಜಿಕ ಪ್ರಶ್ನೆಗಳನ್ನು ಸರಿಪಡಿಸುವಂತಹ ಒಂದು ಹಟ ಹಿಡಿಯಬೇಕು ಎಂದು ನನಗನಿಸುತ್ತದೆ. ಇಂತಹ ಅನಿರ್ಬಂಧ ಶಾಸನದ ಅಧಿಕಾರಗಳು ತಮ್ಮ ಕೈಗೆ ಸಿಗಬೇಕು ಎಂದು ಹಗಲು ರಾತ್ರಿ ಪ್ರಯತ್ನಿಸುತ್ತಿರುವ ಜನರ ಇಚ್ಛೆಯ ಮೇಲೆ ಈ ಪ್ರಶ್ನೆಗಳನ್ನು ಯಾವತ್ತೂ ಬಿಡುವಂತಿಲ್ಲ.

## ೩. ದಲಿತರಿಗಾಗಿ ಸಂರಕ್ಷಣೆಯ ವ್ಯವಸ್ಥೆ

೮. ಸಾಮಾಜಿಕ ಪ್ರಶ್ನೆಗಳು ಭಾರತದ ಸ್ವಾತಂತ್ರ್ಯಕ್ಕೆ ಅಡ್ಡಬರಲಾರವಾದರೂ ಭಾರತದ ರಾಜಕೀಯ ಸಂವಿಧಾನವನ್ನು ಹೊಸತಾಗಿ ರಚಿಸುವಾಗ ದುರ್ಬಲ ಸಮಾಜ ಘಟಕವು ದುಃಖದ ಮಡುವಿನಲ್ಲಿ ದೂಡಲ್ಪಡಬಾರದು ಅನ್ನುವುದನ್ನು ನಾನಿಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇದಕ್ಕಾಗಿ ಭಾರತದ ಸಂವಿಧಾನದಲ್ಲಿ 'ರಾಜಕೀಯ ಸಮತೋಲನೆಯ ತತ್ವವನ್ನು ಅವಲಂಬಿಸುವ ಅವಶ್ಯಕತೆಯಿಲ್ಲ' ಅನ್ನುವ ಅಭಿಪ್ರಾಯಕ್ಕೆ ನನ್ನ ವಿರೋಧವಿದೆ. ದಲಿತರಿಗೆ ಸಂಬಂಧಪಟ್ಟಂತೆ ಯೋಚಿಸುವಾಗ ಈ ಪ್ರಶ್ನೆಯನ್ನು ಆದಷ್ಟು ಒಳ್ಳೆಯ ರೀತಿಯಲ್ಲಿ ಹೇಗೆ ಬಿಡಿಸಬಹುದು ಅನ್ನುವುದರ ಬಗ್ಗೆ ನಾನು ಇನ್ನು ಮುಂದೆ ಯೋಚಿಸುವವನಿದ್ದೇನೆ. ನನ್ನ ಹಾಗೆ ಯೋಚಿಸುವ ರಾಜನೀತಿಜ್ಞರಿದ್ದಾರೆ. ಈ ಯೋಜನೆಯನ್ನು ಸ್ವಯಂಶಾಸಿತ ಭಾರತದ ಸಂವಿಧಾನದಲ್ಲಿ ಅಳವಡಿಸಿಕೊಳ್ಳಬೇಕು ಅನ್ನುವ ಅಭಿಪ್ರಾಯವನ್ನವರು ಒಪ್ಪುತ್ತಾರೆ. ಈ ರಾಜನೀತಿ ತಜ್ಞರು ಮಹಾಯುದ್ಧದ ನಂತರ ಅಸ್ತಿತ್ವಕ್ಕೆ ಬಂದ ಹಾಗೂ ನನ್ನ ಇದಕ್ಕೂ ಮೊದಲ ಭಾಷಣಗಳಲ್ಲಿ ಉಲ್ಲೇಖಿಸಿರುವ ದೇಶಗಳ ಸಂವಿಧಾನವನ್ನು ಅಭ್ಯಸಿಸಿ ಈ ಪ್ರಶ್ನೆಗಳ ಮೇಲೆ ಕೆಲವು ಉಪಾಯಗಳನ್ನು ಸೂಚಿಸಿದ್ದಾರೆ. ಈ ದೇಶಗಳ ಸಂವಿಧಾನವನ್ನು ಅಭ್ಯಸಿಸಿ ದಾರಿ ಹುಡುಕುವ ಅವರ ಪ್ರಯತ್ನ ಸ್ವಾಭಾವಿಕವಾಗಿದೆ, ಏಕೆಂದರೆ ಕೇವಲ ಈ ದೇಶಗಳಲ್ಲೇ ಭಾರತದ ಇಂದಿನ ಪರಿಸ್ಥಿತಿಗೆ ಹೋಲುವಂತಹ ಸ್ಥಿತಿಯಿದೆ. ಈ ದೇಶಗಳಲ್ಲಿ ಅಲ್ಪಸಂಖ್ಯಾಕರ ಸಂರಕ್ಷಣೆಯ ವ್ಯವಸ್ಥೆ ಸಂವಿಧಾನದ ಕಾಯಿದೆಯಲ್ಲೇ ಮಾಡಲಾಗಿದ್ದು ಅದನ್ನು ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳೆಂದು ಕರೆಯಲಾಗಿದೆ. ನೆಹರು ಕಮಿಟಿಯು ಕೂಡ ದಲಿತರ ಸಂರಕ್ಷಣೆಯ ವ್ಯವಸ್ಥೆಯೆಂದು ತಮ್ಮ ಅಹವಾಲಿನಲ್ಲಿ ಈ ಯೋಜನೆಗೆ ಸಮ್ಮತಿ ಕೊಟ್ಟಿದೆ. ಆದರೆ ಇಂತಹ ಯೋಜನೆಗಳಿಂದ ನೀವು ಮೋಸ ಹೋಗುವ ಸಾಧ್ಯತೆಗಳಿವೆ ಎಂದು ನಾನು ನಿಮಗೆ ಎಚ್ಚರಿಸುತ್ತಿದ್ದೇನೆ. ಮೂಲಭೂತ ಹಕ್ಕು ಎಂದು ಕರೆಯಲಾಗುವ ಸಂವಿಧಾನದ ಕಲಮಿನ ಮೇಲೆ ಭಾರತದ ರಾಜಕಾರಣಿಗಳ ನಂಬಿಕೆಯಿರುವಂತೆ ಕಾಣುತ್ತದೆ ಹಾಗೂ ಇಂಗ್ಲೀಷರ ಆಕ್ರಮಣದ ವಿರುದ್ಧ ಅವರು ತಮಗಾಗಿ ಈ ಮೂಲಭೂತ ಹಕ್ಕುಗಳನ್ನು ಕೇಳುತ್ತಿರುವಂತೆ ತಮ್ಮ ಜಾತಿಯ ಅನ್ಯಾಯದ ವಿರುದ್ಧ ಅಲ್ಪಸಂಖ್ಯಾತರಿಗೂ ಅಂತಹ ಮೂಲಭೂತ ಹಕ್ಕುಗಳನ್ನು ಕೊಟ್ಟುಬಿಡಲು ಈ ಜನ ಉತ್ಸುಕರಾಗಿದ್ದಾರೆ. ಆದರೆ ನಮ್ಮ ಸಂರಕ್ಷಣೆಗಾಗಿ ಇಂತಹ ವ್ಯವಸ್ಥೆಯ ಯೋಜನೆಗಳನ್ನು ನಾವು ಧಿಕ್ಕರಿಸಬೇಕು. ಇಂತಹ ಯೋಜನೆಗಳು ಎಷ್ಟೇ ಸ್ವಾಗತಾರ್ಹವಾಗಿದ್ದರೂ, ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಯಾವುದೇ ದಾವೆಗಳು ಎಷ್ಟೇ ವ್ಯಾಪಕವಾಗಿದ್ದು, ಆರ್ಥಿಕವಾಗಿ ಹಾಗೂ ಸಂಶೋಧನೆಯ ದೃಷ್ಟಿಯಿಂದ ಎಷ್ಟೇ ಸ್ಪಷ್ಟವಾಗಿದ್ದರೂ ಆ ಹಕ್ಕುಗಳ ಬಳಕೆಯ ಬಗ್ಗೆ ಯಾವ ಭರವಸೆಯನ್ನೂ ಕೊಡಲಾಗುವುದಿಲ್ಲ ಅನ್ನುವುದನ್ನು ಸ್ಪಷ್ಟವಾಗಿ ಹೇಳಲಿಚ್ಛಿಸುತ್ತೇನೆ. ಕೇವಲ ಹಕ್ಕುಗಳನ್ನು ಘೋಷಿಸಿದರೆ ಸಾಲದು, ಮೂಲಭೂತ ಹಕ್ಕುಗಳನ್ನು ಕಸಿದುಕೊಂಡರೆ ಅದರ ವಿರುದ್ಧ ಮಾಡಬೇಕಾದ ಉಪಾಯ ಯೋಜನೆಯ ಮೇಲೆ ಮೂಲಭೂತ ಹಕ್ಕುಗಳ ಭರವಸೆ ಅವಲಂಬಿಸಿರುತ್ತದೆ. ೧೯೧೪ರ ಮಹಾಯುದ್ಧದ ನಂತರ ಅಸ್ತಿತ್ವಕ್ಕೆ

ಬಂದ ಹಾಗೂ ನಾನು ಇದಕ್ಕೂ ಮೊದಲು ಉಲ್ಲೇಖಿಸಿರುವಂತಹ ದೇಶದ ಸಂವಿಧಾನದಲ್ಲಿ ಕೆಲವು ವ್ಯವಸ್ಥೆಗಳನ್ನು ಮಾಡಲಾಗಿದ್ದೆ ಅದರಲ್ಲಿ ಅಲ್ಪಸಂಖ್ಯಾತರಿಗೆ ತಮ್ಮ ಮೂಲಭೂತ ಹಕ್ಕುಗಳ ಮೇಲೆ ಅತಿಕ್ರಮಣವಾಗುತ್ತಿದೆ ಅನಿಸಿದರೆ ಹಾಗೂ ಅಧಿಕಾರದಲ್ಲಿರುವ ಬಹುಸಂಖ್ಯಾತರು ಈ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದಾರೆ ಅನಿಸಿದರೆ ಅವರು ರಾಷ್ಟ್ರಸಂಘದ ಮೊರೆ ಹೋಗಬಹುದು. ರಾಷ್ಟ್ರ ಸಂಘವು ಈ ಕೆಲಸಕ್ಕಾಗಿ ಒಂದು ಕಮಿಟಿ ಸ್ಥಾಪಿಸಿದ್ದು ಇಂತಹ ದೂರುಗಳನ್ನು ಕೇಳಿ ಅದಕ್ಕೆ ನ್ಯಾಯ ಕೊಡಬೇಕಾಗುತ್ತದೆ. ಮೂಲಭೂತ ಹಕ್ಕುಗಳ ಉಲ್ಲಂಘನೆಯಾದರೆ ಅದರ ವಿರುದ್ಧ ಯಾವುದಾದರೂ ಯೋಜನೆ ನೆಹರು ಕಮಿಟಿಯ ರಿಪೋರ್ಟಿನಲ್ಲಿದೆಯೆ? ನನಗಂತೂ ಯಾವ ಯೋಜನೆಯೂ ಕಾಣಲಿಲ್ಲ. ಅಷ್ಟೇಯಲ್ಲ ದೂರು ಕೊಡಬಹುದಾದಂತಹ ಯಾವ ವ್ಯವಸ್ಥೆಯೂ ಇಲ್ಲ. ಹಾಗಾಗಿ ನೆಹರೂ ಕಮಿಟಿಯ ಸಂರಕ್ಷಣೆಯ ವ್ಯವಸ್ಥೆಯ ಭರವಸೆ ಮೋಸವಾಗಿದೆ.

೯. ನೆಹರೂ ಯೋಜನೆಯಲ್ಲಿ ದೂರು ಕೊಡುವಂತಹ ಯಾವುದೇ ವ್ಯವಸ್ಥೆಯಿದ್ದರೂ ನೀವು ಆ ಯೋಜನೆಗಳನ್ನು ಸ್ವೀಕರಿಸಬೇಡಿ ಅನ್ನುವ ಸಲಹೆಯನ್ನೇ ನಾನು ನಿಮಗೆ ಕೊಡುತ್ತೇನೆ. ಗವರ್ನರ್, ವಾಯಿಸರಾಯ್ ಇಲ್ಲವೆ ರಾಷ್ಟ್ರ ಸಂಘಕ್ಕೆ ದೂರು ಕೊಡುವ ಇಲ್ಲವೆ ಮೊರೆ ಹೋಗುವ ಹಕ್ಕುಗಳು ಸಿಗುವುದೆಂದರೆ ದಲಿತರ ಶಸ್ತ್ರಾಗಾರದಲ್ಲಿ ಒಂದು ಮುಖ್ಯವಾದ ಶಸ್ತ್ರ ಸೇರಿಕೊಂಡಂತೆ ಹಾಗೂ ಆ ಹಕ್ಕುಗಳು ಅಪೇಕ್ಷೆ ಮಾಡುವಂತಹವು. ಆದರೆ ಈ ಶಸ್ತ್ರ ಕೂಡ ಪರಿಣಾಮಕಾರಿಯಾಗುವುದಿಲ್ಲ. ನಿಮ್ಮ ಹಿತಸಂಬಂಧಗಳನ್ನು ಕಾಪಾಡುವ ಉತ್ತಮ ಅವಕಾಶವೆಂದರೆ ನಿಮ್ಮ ಕೈಯಲ್ಲೇ ಶಾಸನದ ಅಧಿಕಾರಗಳನ್ನು ಕೊಡುವುದು. ಏಕೆಂದರೆ ಅಧಿಕಾರಗಳಿರುವಾಗ ಯಾರಾದರೂ ನಿಮ್ಮ ಹಿತದ ವಿರುದ್ಧ ಕೆಲಸ ಮಾಡಿದರೆ ನೀವವರನ್ನು ದಂಡಿಸಬಹುದು. ಅಷ್ಟೇಯಲ್ಲ ಮುಂದಾಗಬಹುದಾದಂತಹ ಇಂತಹ ಬಾಧಕ ಕೆಲಸಗಳನ್ನು ತಡೆಯಲು, ನಿಮ್ಮ ಹಿತರಕ್ಷಣೆಗಾಗಿ ಇಂತಹ ಕಾರ್ಯಗಳ ಮೇಲೆ ಹದ್ದಿನ ಕಣ್ಣಿಡಬಹುದು. ಗವರ್ನರ್ ಇರಲಿ ವಾಯಿಸರಾಯ್ ಇರಲಿ ಇಲ್ಲವೆ ರಾಷ್ಟ್ರಸಂಘವೇ ಇರಲಿ ಇಂತಹ ಹೊರಗಿನವರ ಕೈಗೆ ಅಧಿಕಾರಗಳನ್ನು ಕೊಟ್ಟರೆ ಅದೆಂದೂ ಸಾಧ್ಯವಾಗಲಾರದು. ನಾವು ಅಧಿಕಾರ ಕೊಡುವ ಜನ ನಮ್ಮ ಹಿತರಕ್ಷಣೆಗಾಗಿ ಕೆಲಸ ಮಾಡದಿದ್ದರೆ ಅವನ ಅಧಿಕಾರದ ಉಪಯೋಗವೇನು? ನಮ್ಮ ಹಿತರಕ್ಷಣೆಗಾಗಿರುವ ಒಂದೇ ಉಪಾಯವೆಂದರೆ ಮುಂಬರುವ ಭಾರತದ ಸ್ವಯಂಶಾಸಿತ ಕಾರ್ಯಕಾರಿ ಮಂಡಳದ ಮೇಲೆ ಅಧಿಕಾರ ಪಡೆಯುವುದು. ಹಾಗೂ ದೇಶದ ಕಾಯಿದೆ ಮಂಡಳದಲ್ಲಿ ಸಾಕಷ್ಟು ಪ್ರತಿನಿಧಿತ್ವ ಪಡೆಯುವುದರ ಮೂಲಕ ನೀವಿದನ್ನು ಸಾಧಿಸಬಹುದು. ಕೇವಲ ಇದೊಂದೇ ಉಪಾಯದಿಂದ ಶಾಸನದ ಅಧಿಕಾರಿಗಳ ದೈನಂದಿನ ಕಾರ್ಯಗಳ ಮೇಲೆ ಕಣ್ಣಿಡಬಹುದು. ಇದನ್ನು ಬಿಟ್ಟು ನಿಮಗೆ ಇನ್ನಾವುದಾದರೂ ಸಂರಕ್ಷಣೆಯ ಭರವಸೆ ಸಿಗುತ್ತಿದ್ದರೆ ಅದನ್ನೂ ಪಡೆದುಕೊಳ್ಳಿ. ಅದರಿಂದ ನಿಮ್ಮ ರಕ್ಷಣೆ ಹಾಗೂ ಸಮಾಧಾನ ಹೆಚ್ಚಾದೀತು. ಆದರೆ ಸಾಕಷ್ಟು ಪ್ರತಿನಿಧಿತ್ವದ ಬದಲಿಗೆ ಬೇರೆ ಯಾವುದನ್ನೂ ನೀವು ಸ್ವೀಕರಿಸುವಂತಿಲ್ಲ. ಜೊತೆಗೆ ನಿಮಗೆ ಸಾಕಷ್ಟು ಪ್ರತಿನಿಧಿತ್ವದ ಭರವಸೆ ಕೊಡದೆ ಸಧ್ಯದ ಸಂವಿಧಾನದಲ್ಲಿ ಬದಲಾವಣೆ ಮಾಡುವ ಪ್ರಯತ್ನವಾದರೆ ಅದನ್ನು ನಿರಾಕರಿಸುವ ಹಕ್ಕು, ಅಧಿಕಾರ ನಿಮಗಿದೆ.

೧೦. 'ಸಾಕಷ್ಟು ಪ್ರತಿನಿಧಿತ್ವ' ಅನ್ನುವ ಈ ಶಬ್ದ ಅಲ್ಪಸಂಖ್ಯಾತರ ಬಾಯಿಯಲ್ಲಿ ಕೇಳಬರುತ್ತದೆ. ಆದರೆ ಸಾಕಷ್ಟು ಅಂದರೆಷ್ಟು? ಎಂದು ಪ್ರತ್ಯಕ್ಷವಾಗಿ ಸಂಖ್ಯೆಯ ರೂಪದಲ್ಲಿ ಅದನ್ನು ವಿವರಿಸುವುದು ಕಠಿಣವಾಗಿರುವುದರಿಂದ ಸಂದಿಗ್ಧ ಹಾಗೂ ಅನಿಶ್ಚಿತ ಅರ್ಥದ ರೂಪದಲ್ಲಿ ಈ ಶಬ್ದ ಕುಚೋದ್ಯದ ವಿಷಯವಾಗಿಬಿಟ್ಟಿದೆ. ನಮ್ಮ ಬೇಡಿಕೆಗಳನ್ನು ನಾವು ಮುಂದಿಡಬೇಕೆಂದಿದ್ದರೆ ಆ 'ಶಬ್ದದ' ನಿಶ್ಚಿತ ಅರ್ಥವನ್ನು

ಸಂಖ್ಯೆಯ ರೂಪದಲ್ಲಿ ನಾವು ಸಿದ್ಧಪಡಿಸಬೇಕಿದೆ. ಕಾಂಗ್ರೆಸ್ಸಿನವರ ಗುಂಪಿನಲ್ಲಿ ಪ್ರಚಲಿತವಾಗಿರುವ ಮತ ಪದ್ಧತಿಯನುಸಾರವಾಗಿ 'ಸಾಕಷ್ಟು ಪ್ರತಿನಿಧಿತ್ವದ'ದ ಅರ್ಥ 'ಜನಸಂಖ್ಯೆಯ ಪ್ರಮಾಣದಲ್ಲಿ ಪ್ರನಿಧಿತ್ವ' ಎಂದಿದೆ. ನನ್ನ ಪ್ರಕಾರ ಅಲ್ಪಸಂಖ್ಯಾತರ ಪ್ರತಿನಿಧಿತ್ವದ ಗಣನೆ ಬುದ್ಧಿ ಹಾಗೂ ಯೋಚಿಸುವ ತಾಕತ್ತಿನ ಅಪಕ್ವತೆ ಹಾಗೂ ಮೂರ್ಖತೆಯ ಕಲ್ಪನೆಯಾಗಿದೆ. ಅಷ್ಟೇಯಲ್ಲದೆ ಭಾರತದ ಬಹುಸಂಖ್ಯಾತರ ಮನಸ್ಸಿನಲ್ಲಿ ಅಲ್ಪಸಂಖ್ಯಾತರ ಬಗ್ಗೆಯಿರುವ ಜಿಪುಣತನ ತೋರಿಸುತ್ತದೆ. ತಮ್ಮ ಜಾತಿಬಾಂಧವರಿಂದ ಹಾಗೂ ಅವರ ಸಾಮಾಜಿಕ ದರ್ಜೆಯಿಂದ ಪಡೆಯಬಹುದಾದ ತಾಕತ್ತು ಈ ಅಲ್ಪಸಂಖ್ಯಾತರ ಹತ್ತಿರ ಇದೆಯಾದರೂ ಅದಿನ್ನೂ ಸಾಕಷ್ಟಿಲ್ಲ ಅನಿಸಿದ್ದರಿಂದಲೇ ನಮ್ಮ ರಕ್ಷಣೆಗಾಗಿ ಆ ತಾಕತ್ತು ಹೆಚ್ಚಬೇಕು ಅನ್ನುವ ಹಕ್ಕನ್ನವರು ಕೇಳುತ್ತಿದ್ದಾರೆ. ಇಂತಹ ಪ್ರತಿನಿಧಿತ್ವ ಹೆಚ್ಚಾಗದೆ ಶಾಸಕೀಯ ಅಧಿಕಾರದಿಂದ ಸಜ್ಜಾಗಿರುವ ಬಹುಸಂಖ್ಯಾತರಿಗೆ ಸರಿಸಮಾನರಾಗುವುದು ಸಾಧ್ಯವಿಲ್ಲವೆಂದು ಅವರಿಗನಿಸುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಅಲ್ಪಸಂಖ್ಯಾತರ ಜನಸಂಖ್ಯೆಯಂತೆ ಕೊಡಲಾಗುತ್ತಿರುವ ಪ್ರನಿಧಿತ್ವವನ್ನು ಹೆಚ್ಚಿಸಿದರೆ ಮಾತ್ರ ಅವರಿಗೆ ಸಂರಕ್ಷಣೆ ಕೊಟ್ಟಂತಾಗುತ್ತದೆ. ಇದು ನಿಜವೇ ಆಗಿದ್ದರೆ ಅಲ್ಪಸಂಖ್ಯಾತರ ಜನಸಂಖ್ಯೆಯಂತೆ ಪ್ರತಿನಿಧಿತ್ವ ಕೊಟ್ಟರೆ ಅವರಿಗೆ ಸಂರಕ್ಷಣೆ ಕೊಟ್ಟಂತೆ ಹೇಗಾಗುತ್ತದೆ? ಅನ್ನುವ ಪ್ರಶ್ನೆ ನೀವು ಕೇಳಬಹುದು. ಅಲ್ಪಸಂಖ್ಯಾತರ ಸಂರಕ್ಷಣೆಯ ಬಗ್ಗೆ ಮಾತನಾಡಿ ಅವರ ಪ್ರತಿನಿಧಿತ್ವವನ್ನು ಕೇವಲ ಅವರ ಜನಸಂಖ್ಯೆಯ ಪ್ರಮಾಣದಷ್ಟೇ ಇಡುವುದು ಪರಸ್ಪರ ವಿರೋಧಿಗಳಾಗಿವೆ. ಅಲ್ಪಸಂಖ್ಯಾತರಿಗೆ ಅದೇ ಪ್ರಮಾಣದಲ್ಲಿ ಕಾಯಿದೆಮಂಡಳದಲ್ಲಿ ಪ್ರತಿನಿಧಿತ್ವ ಕೊಡುವುದನ್ನು ನಿರ್ಧರಿಸುವುದೆಂದರೆ ಸಮಾಜದಲ್ಲಿ ಇವತ್ತಿರುವ ಪರಿಸ್ಥಿತಿಯನ್ನೇ ಕಾಯಿದೆಮಂಡಳದಲ್ಲೂ ಇಡುವುದಾಗುತ್ತದೆ. ಹೀಗೆ ಹೊರಗಿನ ಸಮಾಜದಲ್ಲಿರುವ ಬಹುಸಂಖ್ಯ ಹಾಗೂ ಅಲ್ಪಸಂಖ್ಯಾತ ಜಾತಿಯ ಬಲವನ್ನು ಯಾವುದೇ ಬದಲಾವಣೆ ಮಾಡದೆ ಸಂಸತ್ತಿನಲ್ಲೂ ಹಾಗೇ ಇಡುವುದು. ಈ ರೀತಿಯ ಯೋಜನೆಗಳು ಸಾಮಾಜಿಕ ಸ್ಥಿತಿಯನ್ನು ಹಾಗೇ ಇಡುತ್ತದೆ. ಹಾಗಾಗಿ ಅಲ್ಪಸಂಖ್ಯಾತರ ಸಂರಕ್ಷಣೆಯ ದೃಷ್ಟಿಯಿಂದ ನಿಜವಾಗಿಯೂ ಸುಧಾರಣೆ ಮಾಡಬೇಕೆಂದಿದ್ದರೆ ಅಲ್ಪಸಂಖ್ಯಾತರಿಗೆ ಅನುಕೂಲವಾಗುವಂತಹ ಬದಲಾವಣೆಯನ್ನು ಸಾಮಾಜಿಕ ಶಕ್ತಿಯ ಸಮತೋಲನೆಯಲ್ಲಿ ಮಾಡಬೇಕು ಹಾಗೂ ಜನಸಂಖ್ಯೆಯ ಪ್ರಮಾಣಕ್ಕಿಂತ ಹೆಚ್ಚು ಹತ್ತಿರದ ಜಾಗಗಳು ಅಲ್ಪಸಂಖ್ಯಾತರಿಗೆ ಕೊಟ್ಟರೆ ಮಾತ್ರ ಎಲ್ಲವೂ ಸಾಧ್ಯ.

೧೧. ಎಲ್ಲ ಅಲ್ಪಸಂಖ್ಯಾತರಿಗೆ ಈಗಿರುವುದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಸರಿಸಮನಾದ ಪ್ರತಿನಿಧಿತ್ವ ಕೊಡಬೇಕು ಅನ್ನುವುದನ್ನು ಒಪ್ಪಿಕೊಂಡಿದ್ದರೂ ಅದನ್ನು ಕಾರ್ಯರೂಪದಲ್ಲಿ ತರಲು ಒಮ್ಮತವಾಗಿರುವುದು ಕಾಣುತ್ತಿಲ್ಲ. ಸರಿಸಮನಾದ ಪ್ರತಿನಿಧಿತ್ವ ಕೊಡುವುದರಿಂದ ಆಗುವುದೇನು ಅನ್ನುವುದರ ಬಗ್ಗೆ ಗೊತ್ತಿಲ್ಲದಿರುವುದರಿಂದ ಹೀಗಾಗುತ್ತಿದೆ ಎಂದು ನನಗನಿಸುತ್ತಿದೆ. ಮೇಲೆ ನಾನು ಹೇಳಿರುವಂತೆ ಸರಿಸಮನಾದ ಅಧಿಕಾಂಶ ಜಾಗಗಳ ಯೋಜನೆ ಅಲ್ಪಸಂಖ್ಯಾತರ ಬಲ ಹೆಚ್ಚಿಸಲು ಹಮ್ಮಿಕೊಳ್ಳಲಾಗಿದೆ ಅನ್ನುವುದು ನಿಮಗೆ ಸ್ಪಷ್ಟವಾದೀತು. ಇಲ್ಲದಿದ್ದರೆ ಈ ಅಧಿಕಾಂಶ ಜಾಗಗಳಿಲ್ಲದೆ ಅಲ್ಪಸಂಖ್ಯಾತರ ಸಂರಕ್ಷಣೆಗಾಗಿ ಅವರ ಈಗಿರುವ ಶಕ್ತಿ ಸಾಕಾಗಲಾರದು. ಹಾಗಾಗಿ ಸಧ್ಯದ ಪರಿಸ್ಥಿತಿಯಲ್ಲಿ ಅವರಿಗೆ ಎಷ್ಟರ ಮಟ್ಟಿಗೆ ಹೆಚ್ಚು ಶಕ್ತಿಯ ಅವಶ್ಯಕತೆಯಿದೆ ಅನ್ನುವುದರ ಲೆಕ್ಕಾಚಾರ ಮಾಡಿಯೆ ಸಂಖ್ಯೆಯನ್ನು ಬೆಳೆಸಬೇಕಾಗಿದೆ. ತಾಕತ್ತು ಕಡಿಮೆ ಇರುವವರಿಗೆ ಹೆಚ್ಚಿನ ರೂಪದಲ್ಲಿ ಆ ತಾಕತ್ತು ಪೂರೈಸಿಕೊಡಬೇಕಿದೆ. ಹೆಚ್ಚು ತಾಕತ್ತಿರುವವರಿಂದ ಅದನ್ನು ಮರಳಿ ಪಡೆಯಬೇಕಾಗಿದೆ. ಇದನ್ನೇ ಇನ್ನೊಂದು ಭಾಷೆಯಲ್ಲಿ ಹೇಳುವುದಾದರೆ ಎಲ್ಲ ಅಲ್ಪಸಂಖ್ಯಾತ ಜಾತಿಗಳಿಗೆ ಸಮ ಪ್ರಮಾಣದಲ್ಲಿ ಈ ಹೆಚ್ಚಿನ ಜಾಗಗಳು ಸಿಗುವುದಿಲ್ಲವೆಂದಾದರೆ ಅವರ ಸಾಮಾಜಿಕ ಸ್ಥಿತಿಯನುಸಾರವಾಗಿ ಅದರ ಪ್ರಮಾಣ ಬದಲಾಗಲಿ. ಒಬ್ಬ ಅಲ್ಪಸಂಖ್ಯಾತನ ಸಾಮಾಜಿಕ ಸ್ಥಿತಿ

ಕೆಳದರ್ಜೆಯದ್ದಾಗಿದ್ದರೂ ಆತನಿಗೆ ಹೆಚ್ಚು ಜಾಗಗಳು ಸಿಗಲಿ ಹಾಗೂ ಸಮಾಜದಲ್ಲಿ ಮೇಲ್ದರ್ಜೆಯ ಸ್ಥಿತಿ ಇರುವವನಿಗೆ ಕಡಿಮೆ ಜಾಗಗಳು ಸಿಗಲಿ. ದುರ್ದೈವದಿಂದ ಕೆಲವು ಅಲ್ಪಸಂಖ್ಯಾತರ ಮನೋವೃತ್ತಿ ಉಳಿದವರಿಗಿಂತ ತಾವು ಮೇಲಿನ ಹುದ್ದೆಯಲ್ಲಿರಬೇಕು ಅನ್ನುವುದಕ್ಕಿಂತ ಎಲ್ಲರಿಗಿಂತ ಹೆಚ್ಚು ಪ್ರತಿನಿಧಿತ್ವದ ಜಾಗ ಪಡೆದುಕೊಳ್ಳುವುದಾಗಿದೆ, ಅದೂ ಅವರ ಸಾಮಾಜಿಕ ಸ್ಥಿತಿ ಸ್ವಲ್ಪ ಮೇಲ್ದರ್ಜೆಯದಾಗಿರುವುದರಿಂದ. ಸರಿಸಮನಾದ ಹೆಚ್ಚಿನ ಜಾಗಗಳನ್ನು ಕೊಡಿಸುವುದರ ಹಿಂದಿನ ಉದ್ದೇಶವನ್ನು ನಾನು ಮೊದಲೇ ಅರುಹಿದ್ದೇನೆ, ಬಿರುಗಾಳಿಯಲ್ಲಿ ಸಿಲುಕಿ ತತ್ತರಿಸುತ್ತಿರುವ ಕುರಿಮರಿಗೆ ಆಸರೆ ಸಿಗಬೇಕೆನ್ನುವುದೇ ನನ್ನ ಉದ್ದೇಶ. ಹಾಗಾಗಿ ಮೇಲೆ ಹೇಳಿರುವಂತಹ ವಿಪರೀತ ಮನೋವೃತ್ತಿಯನ್ನು ವಿರೋಧಿಸುವುದರಿಂದ ದೇಶಹಿತಕ್ಕೆ ಹಾಗೂ ಅಲ್ಪಸಂಖ್ಯಾತರ ಹಿತಕ್ಕೆ ಅಪಾಯವಾಗದಿರದು.

೧೨. ಅಲ್ಪಸಂಖ್ಯಾತರಿಗೆ ಕೊಡಬೇಕಾದ ಸರಿಸಮಾನ ಹೆಚ್ಚಿನ ಜಾಗಗಳನ್ನು ಯಾವ ತತ್ವಗಳ ಆಧಾರದ ಮೇಲೆ ಕೊಡಬೇಕು ಅನ್ನುವುದರ ಬಗ್ಗೆ ಯೋಗ್ಯವಾದ ಮಾರ್ಗವನ್ನು ನಾನಿಲ್ಲಿಯವರೆಗೆ ಸೂಚಿಸುತ್ತ ಬಂದಿದ್ದೇನೆ. ಹಾಗಾಗಿ ಈ ಹೆಚ್ಚಿನ ಜಾಗಗಳನ್ನು ಎಷ್ಟರ ಸಂಖ್ಯೆಯಲ್ಲಿ ಕೊಡಬೇಕು ಅನ್ನುವ ಪ್ರಶ್ನೆ ಉಳಿದುಬಿಡುತ್ತದೆ. ಪ್ರತಿನಿಧಿಗಳ ಸಂಖ್ಯೆ ಪರಿಸ್ಥಿತಿಯನುಸಾರವಾಗಿ ಬದಲಾಗುತ್ತಿರಬೇಕು ಹಾಗೂ ಅವರ ಸಂಖ್ಯೆಯನ್ನು ನಿರ್ಧರಿಸಲು ಕೇವಲ ಒಂದು ಸಾಧಾರಣವಾದ ತತ್ವವನ್ನು ಸೂಚಿಸುವುದನ್ನು ಬಿಟ್ಟರೆ ಸಧ್ಯಕ್ಕೆ ಹೆಚ್ಚೇನೂ ಮಾಡುವಂತಿಲ್ಲ. ಆ ತತ್ವ ಹೀಗಿದೆ. ಮೊದಲಿಗೆ ಬಹುಸಂಖ್ಯಾತರು ಹಾಗೂ ಅಲ್ಪಸಂಖ್ಯಾತರು ಸೇರಿ ಪರಸ್ಪರ ಸಮ್ಮತಿಯಿಂದ ಜನಸಂಖ್ಯೆಯ ಪ್ರತಿನಿಧಿತ್ವಕ್ಕಿಂತ ಹೆಚ್ಚೆಚ್ಚು ಎಷ್ಟು ಸರಿಸಮನಾದ ಜಾಗಗಳನ್ನಾಗಿ ಕೊಡಬಹುದು ಅನ್ನುವುದನ್ನು ನಿರ್ಧರಿಸಬೇಕು. ನಂತರ ಒಂದು ವಿಶಿಷ್ಟ ಅಲ್ಪಸಂಖ್ಯಾತ ಜಾತಿಯ ಹೆಚ್ಚಿನ ಪ್ರತಿನಿಧಿತ್ವವನ್ನು ನಿರ್ಧರಿಸುವಾಗ ಆ ಜಾತಿಯ ಸಾಮಾಜಿಕ ಪರಿಸ್ಥಿಯಿಯ ವಿರುದ್ಧ ಪ್ರಮಾಣದಲ್ಲಿ ನಿರ್ಧರಿಸಬೇಕು. ಈ ಸಾಮಾಜಿಕ ಪರಿಸ್ಥಿಯನ್ನು ನಿರ್ಧರಿಸುವಾಗ ಆ ಜಾತಿಯ ೧. ಸಾಮಾಜಿಕ ಸ್ಥಿತಿಗತಿ, ೨. ಆರ್ಥಿಕ ಬಲ, ೩. ಆತನ ಶೈಕ್ಷಣಿಕ ಪಾತ್ರತೆಯನ್ನು ಕಂಡುಕೊಳ್ಳಬೇಕು. ಹೀಗೆ ಮಾಡುವುದರಿಂದ ಇತರ ಅಲ್ಪಸಂಖ್ಯಾತರಿಗೂ ನ್ಯಾಯ ಹಾಗೂ ಸರಿಯಾದ ವ್ಯವಸ್ಥೆ ದೊರಕೀತು ಹಾಗೂ ಯಾವುದೇ ಪಕ್ಷಕ್ಕೆ ದೂರಲು ಕಾರಣ ಸಿಗಲಾರದು.

೧೩. ನಮ್ಮ ವಿವೇಚನೆಗಾಗಿ ಮುಂದಿನ ಪ್ರಶ್ನೆ ಮತದಾರ ಸಂಘ ಹಾಗೂ ಮತದಾನದ ಹಕ್ಕುಗಳಿಗಾಗಿ. ಮಾನ್ಯರೆ, ಈ ಸಂದರ್ಭದಲ್ಲಿ ನಮ್ಮ ಬೇಡಿಕೆಗಳೇನಿರಬೇಕು? ಮತದಾರ ಸಂಘದ ರಚನೆಯ ಬಗ್ಗೆ ನಮ್ಮೆದುರು ಎರಡು ಪರ್ಯಾಯಗಳಿವೆ. ಮೊದಲನೆಯದು ಸ್ವತಂತ್ರ ಮತದಾರ ಸಂಘದ ಯೋಜನೆಯಾಗಿದ್ದು ಎರಡನೆಯದು ಕಾಯ್ದಿರಿಸಲಾದ ಜಾಗಗಳೊಂದಿಗೆ ಸಂಯುಕ್ತ ಮತದಾರ ಸಂಘದ ಯೋಜನೆ. ಈ ವಿಷಯದ ಬಗ್ಗೆ ದಲಿತರಲ್ಲಿ ಮತಭೇದಗಳಿವೆ ಅನ್ನುವುದು ನನಗೆ ಗೊತ್ತು. ಸಾಕಷ್ಟು ಜನ ಸ್ವತಂತ್ರ ಮತದಾರರ ಸಂಘದ ಪಕ್ಷದಲ್ಲಿದ್ದಾರೆ, ಸಂಯುಕ್ತ ಮತದಾರ ಸಂಘ ಪದ್ಧತಿಯಲ್ಲಿ ಬಹುಸಂಖ್ಯಾತರು ಕೂಡ ನಮ್ಮ ಜಾತಿಯ ಉಮೇದುವಾರರಿಗೆ ಮತ ಕೊಡಲಿರುವುದರಿಂದ ಅವರು ತಮಗೆ ಲಾಭ ತರುವಂತಹ ಉಮೇದುವಾರನಿಗೆ ಮಾತ್ರ ಮತ ಕೊಟ್ಟಾರು ಅನ್ನುವ ಭಯ ಅವರಿಗೆ ಕಾಡುತ್ತದೆ. ಈ ಭಯ ನಿರಾಧಾರವಾಗಿದೆ ಎಂದು ನಾನು ಹೇಳುತ್ತಿಲ್ಲ, ಇದು ನಿಜ ಹೌದಾದರೂ ಸ್ವತಂತ್ರ ಮತದಾರ ಸಂಘದಲ್ಲಿ ತಮ್ಮನ್ನು ಕೂಡಿಟ್ಟುಕೊಳ್ಳುವುದು ಇದಕ್ಕಿರುವ ಉಪಾಯವಲ್ಲ. ಪ್ರೌಢ ಮತದಾನ ಪದ್ಧತಿಯ ಬೇಡಿಕೆನ್ನು ಮುಂದಿಟ್ಟು ನಮ್ಮ ಜಾತಿಯ ಮತದಾನದ ಶಕ್ತಿಯನ್ನು ಹೆಚ್ಚಿಸುವುದು ಕೂಡ ಒಂದು ಉಪಾಯವಾಗುತ್ತದೆ. ಇದರಿಂದ ಬಹುಸಂಖ್ಯಾತರು ತಮಗೆ ಬೇಕಾದ ಉಮೇದುವಾರನಿಗೆ ಮತ

ಕೊಡಬಹುದಾದ್ದರಿಂದ ಆಗುವ ದುಷ್ಪರಿಣಾಮಗಳನ್ನು ತಡೆಯಬಹುದು. ಪ್ರೌಢ ಮತದಾನವನ್ನು ನಮ್ಮ ಅನಿವಾರ್ಯ ಬೇಡಿಕೆಯಾಗಿ ಮುಂದಿಡಬೇಕು ಅನ್ನುವುದನ್ನು ನಾನಿಲ್ಲಿ ಹೇಳಲೇ ಬೇಕು. ದಲಿತರಿಗೆ ಕಾಯ್ದಿರಿಸಿದ ಜಾಗಗಳನ್ನು ಕೊಟ್ಟು ನಾವು ಸಂಯುಕ್ತ ಮತದಾರ ಸಂಘವನ್ನು ಕೂಡ ಸ್ವೀಕರಿಸಲು ತೊಂದರೆಯಿಲ್ಲ ಎಂದು ನನಗನಿಸುತ್ತದೆ.

೧೪. ಇಲ್ಲಿ ಇನ್ನೊಂದು ವಿಷಯದ ಬಗ್ಗೆ ಮಾತನಾಡಬೇಕಿದೆ. ಈ ದೇಶ ಜಾತಿ ಪಂಗಡಗಳಿಂದ ವಿಭಾಗಿಸಲ್ಪಟ್ಟಿದ್ದು ಜಾತಿಗಳ ಸಂರಕ್ಷಣೆಯ ವ್ಯವಸ್ಥೆಯನ್ನು ಸಂವಿಧಾನದಲ್ಲಿ ಮಾಡಿಡದೆ ಈ ದೇಶ ಸ್ವಯಂಶಾಸಿತ ಹಾಗೂ ಸಂಯುಕ್ತ ರಾಷ್ಟ್ರವಾಗಿರಲು ಸಾಧ್ಯವೇಯಿಲ್ಲ ಅನ್ನುವುದು ವಸ್ತುಸ್ಥಿತಿಯಾಗಿದ್ದು ಯಾರೂ ಅದನ್ನು ಅಲ್ಲಗಳೆಯಲಾರರು. 'ನಮ್ಮ ಮೇಲಿಂದು ಈ ಜಾತಿ ಪಂಗಡಗಳು ಏರಿ ಕುಳಿತಿವೆಯಾದರೂ ನಾವು ಜಾತಿ ಪಂಗಡಗಳಿಂದ ವಿಭಜಿತರಾಗಿದ್ದರೂ ಸಂಯುಕ್ತ ಭಾರತ ನಮ್ಮ ಗುರಿ' ಅನ್ನುವುದನ್ನು ಅಲ್ಪಸಂಖ್ಯಾತರು ಯಾವತ್ತೂ ಮರೆಯಬಾರದು. ತಮ್ಮ ಪ್ರತಿಷ್ಠೆ ಶಾಶ್ವತವಾಗಿರಬೇಕು ಎಂದೆನಿಸುವ ಪ್ರತಿಯೊಬ್ಬ ಅಲ್ಪಸಂಖ್ಯಾತನೂ ಈ ಗುರಿಯನ್ನಿಟ್ಟುಕೊಳ್ಳಬೇಕು. ಸಂರಕ್ಷಣೆ ವ್ಯವಸ್ಥೆಯ ಬೇಡಿಕೆಯಿಡುತ್ತಿರುವ ಪ್ರತಿಯೊಬ್ಬ ಅಲ್ಪಸಂಖ್ಯಾತನು ತನ್ನ ಸಂರಕ್ಷಣೆಯ ಹಕ್ಕು ಪಡೆಯುವಾಗ ಭಾರತದ ಒಗ್ಗಟ್ಟಿಗೆ ಅಡ್ಡ ಬರುತ್ತಿಲ್ಲ ಅನ್ನುವುದರ ಬಗ್ಗೆ ಚಿಂತಿಸಬೇಕು ಅನ್ನುವುದು ಇದೆಲ್ಲದರಿಂದ ಸ್ಪಷ್ಟವಾಗುತ್ತದೆ. ನಿಮ್ಮ ಮೇಲೆ ಹಾಕಿರುವ ಬಂಧನಗಳು, ತೊಂದರೆಗಳು ನಿಜವಾಗಿರುವುದರಿಂದ ಅದರ ವಿರುದ್ಧ ಸಂರಕ್ಷಣೆ ಪಡೆಯಲು ನೀವು ಹಗಲು ರಾತ್ರಿ ಪ್ರಯತ್ನಿಸಬೇಕು. ಆದರೆ ನಿಮಗೆ ಕೊಡಲಾಗುವ ಸಂರಕ್ಷಣೆ ಈ ದೇಶದಲ್ಲಿ ಭೇದಭಾವಗಳ ಕಂದಕ ಹೆಚ್ಚಿಸಬಾರದು ಅನ್ನುವಂತಿರಬೇಕು. ಈ ಭಿನ್ನತೆಯ ಕಂದಕ ಸೇತುವೆಯ ಮೂಲಕ ಬೆಸೆಯಬೇಕು ಅನ್ನುವ ಅಪೇಕ್ಷೆ ನಮ್ಮದಾಗಿರಬೇಕು. ಅಲ್ಪಸಂಖ್ಯಾತರ ಸಂರಕ್ಷಣೆಯ ವ್ಯವಸ್ಥೆಗೆ ಒಪ್ಪಿಗೆ ಕೊಡುವುದು ಬಹುಸಂಖ್ಯಾತರ ಕರ್ತವ್ಯವಾಗಿದೆ. ಆದರೆ ಎಲ್ಲರನ್ನು ಒಟ್ಟಾಗಿಸುವ ದಾರಿಯಲ್ಲಿ ಅಡ್ಡ ಬರದಂತೆ ಕಾಯ್ದುಕೊಳ್ಳುವುದು ಕೂಡ ಅಲ್ಪಸಂಖ್ಯಾತರ ಪವಿತ್ರ ಕರ್ತವ್ಯವಾಗಿದೆ. ಈ ದೃಷ್ಟಿಕೋನದಿಂದ ಸಂಯುಕ್ತ ಮತದಾರ ಸಂಘದ ಯೋಜನೆ ಹಾಗೂ ಕಾಯ್ದಿರಿಸಿದ ಜಾಗ ಇವುಗಳು ಸ್ವತಂತ್ರ ಮತದಾರ ಸಂಘಕ್ಕಿಂತ ಒಳ್ಳೆಯ ಉಪಾಯ ಅನ್ನಬಹುದು.

೧೫. ದಲಿತರ ಸಂರಕ್ಷಣೆಗಾಗಿ ಮತ್ತೊಂದು ವಿಶೇಷವಾದ ವಿಷಯ ಮಹತ್ವದ್ದಾಗಿದೆ. ಅದು ಕೆಲಸಕ್ಕಾಗಿ ಸರ್ಕಾರಿ ಕಚೇರಿಗಳಲ್ಲಿ ಸೇರಿಕೊಳ್ಳುವುದಕ್ಕೆ ಸಂಬಂಧಪಟ್ಟಿದೆ. ಕಾಯಿದೆಗಳನ್ನು ತಯಾರಿಸುವ ಅಧಿಕಾರಕ್ಕಿಂತ ಅವುಗಳನ್ನು ಜಾರಿಗೆ ತರುವ ಅಧಿಕಾರ ಕಡಿಮೆ ಮಹತ್ವದ್ದೇನಲ್ಲ. ಕಾಯಿದೆ ಜಾರಿಗೆ ತರುವುದರಿಂದ ಕಾಯಿದೆ ತಯಾರಿಸುವವನ ಧೈರ್ಯವನ್ನು ಸಂಪೂರ್ಣವಾಗಿ ಉಡುಗಿಸಲು ಸಾಧ್ಯವಾಗದಿದ್ದರೂ ಸುಲಭವಾಗಿ ನಿಯಂತ್ರಿಸಬಹುದು. ಶಾಸನದ ಕಾರ್ಯಕಾರಿ ಯಂತ್ರಣದ ಮೇಲೆ ದಲಿತರು ಹತೋಟಿ ಪಡೆಯಲು ಉತ್ಸುಕತೆ ತೋರಿಸಬೇಕು. ಕೆಲಸದ ಗಡಿಬಿಡಿಯಲ್ಲಿ ಅಥವಾ ಪರಿಸ್ಥಿತಿಯ ಅಡಚಣೆಯಿಂದಾಗಿ ಸುಮಾರು ಸಲ ಕಾಯಿದೆಯನ್ನು ಜಾರಿಗೆ ತರುವ ಅಧಿಕಾರಿಯ ಕೈಯಲ್ಲಿ ತಾರತಮ್ಯದಿಂದ ನಿರ್ಧಾರ ತೆಗೆದುಕೊಳ್ಳುವ ಅಧಿಕಾರಗಳಿರುತ್ತವೆ. ಈ ಸಕಾಲಿಕ ನಿರ್ಧಾರ ತೆಗೆದುಕೊಳ್ಳುವ ಅಧಿಕಾರಿ ಕಾಯಿದೆಯನ್ನು ನಿರಪೇಕ್ಷವಾಗಿ ಜಾರಿಗೆ ತರುತ್ತಾನೋ ಇಲ್ಲವೋ ಅನ್ನುವುದರ ಮೇಲೆ ಜನತೆಯ ಏಳಿಗೆ ಅವಲಂಬಿಸಿರುತ್ತದೆ. ಕಾನೂನು ಜಾರಿಗೆ ತರುವ ಅಧಿಕಾರ ಒಂದೇ ಜಾತಿಯ ಜನರ ಕೈಯಲ್ಲಿರುವಂತಹ ಭಾರತ ದೇಶದಲ್ಲಿ ಸಕಾಲಿಕ ನ್ಯಾಯ ಕೊಡುವ ಅಧಿಕಾರವನ್ನು ಒಂದೇ ಜಾತಿಯ ಏಳಿಗೆಗಾಗಿ ದುರುಪಯೋಗ ಪಡಿಸಿಕೊಳ್ಳಬಹುದಾಗಿದೆ. ಇದಕ್ಕಿರುವ ಒಂದೇ ಉಪಾಯವೆಂದರೆ ದೇಶದಲ್ಲಿಯ ಸರ್ಕಾರಿ ಕಛೇರಿಗಳಲ್ಲಿ

ದಲಿತರೊಂದಿಗೆ ಎಲ್ಲ ಜಾತಿಯ ಜನರ ಸಮಾವೇಶವಿರಬೇಕು ಎಂದು ಒತ್ತಾಯ ಹೇರುವುದು. ದಲಿತರಿಗಾಗಿ ಸರ್ಕಾರಿ ಕೆಲಸಗಳಲ್ಲಿ ವಿಶಿಷ್ಟ ಪ್ರಮಾಣದಲ್ಲಿ ಜಾಗಗಳನ್ನು ಮೀಸಲಾಗಿಡುವಂತಹ ಬೇಡಿಕೆಯನ್ನು ನಾವು ಮುಂದಿಡಲೇ ಬೇಕು ಹಾಗೂ ಈಸಂರಕ್ಷಣೆ ವ್ಯವಸ್ಥೆಯನ್ನು ಸಂವಿಧಾನದ ಒಂದು ಕಲಮಿನ ಮೂಲಕ ಜಾರಿಗೆ ತರಲು ಯಾವುದೇ ತೊಂದರೆಯಿಲ್ಲ. ಇಂತಹ ಸಂರಕ್ಷಣೆ ಯೋಜನೆಯ ಮೂಲಕವೆ ನೀವು ಭವಿಷ್ಯದಲ್ಲಿ ದೇಶದ ಮಂತ್ರಿಮಂಡಳದಲ್ಲಿ ಕೆಲವು ಜಾಗಗಳನ್ನು ಗಳಿಸಬಹುದು. ಆದರೆ ದಲಿತರು ಯಾವತ್ತೂ ಅಲ್ಪಸಂಖ್ಯಾತರಾಗೇ ಉಳಿಯುವುದರಿಂದ ಸಧ್ಯಕ್ಕಂತೂ ಇಂತಹ ಯಾವುದೇ ಸಾಧ್ಯತೆಗಳು ಕಡಿಮೆ ಹಾಗಾಗಿ ಈ ರೀತಿಯ ಆಶ್ವಾಸನೆಗಳನ್ನು ಕೇಳುವುದು ಅತ್ಯವಶ್ಯಕವಾಗಿದೆ ಅನ್ನುವುದು ಖಚಿತ.

## ೪. ದಲಿತ ವರ್ಗ ಹಾಗೂ ಸೈಮನ್ ಕಮಿಶನ್

೧೬. ಭಾರತದ ಸ್ವಾತಂತ್ರ ಸಂವಿಧಾನದಲ್ಲಿ ಯಾವಯಾವ ರೀತಿಯ ಸಂರಕ್ಷಣೆ ವ್ಯವಸ್ಥೆಯ ಸಮಾವೇಶವಾಗಬೇಕು ಅನ್ನುವುದರ ಬಗ್ಗೆ ನಿಮ್ಮ ಗಮನ ಸೆಳೆಯಲು ಪ್ರಯತ್ನಿಸಿದೆ. ಈಗ ಸೈಮನ್ ಕಮಿಶನ್ ನಮ್ಮ ಪರವಾಗಿ ಕೊಟ್ಟಿರುವ ಸೂಚನೆಗಳತ್ತ ಹೊರಳುತ್ತೇನೆ. ಸಂವಿಧಾನದ ಮೂಲಕ ದಲಿತರ ಸಂರಕ್ಷಣೆ ವ್ಯವಸ್ಥೆಯ ಬಗ್ಗೆ ಸೈಮನ್ ಕಮಿಶನ್ ಸಹಾನುಭೂತಿಯಿಂದ ಯೋಚಿಸಿದೆ ಅನ್ನುವುದರಲ್ಲಿ ಅನುಮಾನವೇಯಿಲ್ಲ. ಯಾವುದೇ ರೀತಿಯಿಂದ ಅದು ಪರಿಪೂರ್ಣವಾಗಿರದಿದ್ದರೂ ಸೈಮನ್ ಕಮಿಶನ್ ದಲಿತರ ಸ್ಥಿತಿಯ ವಾಸ್ತವ ಚಿತ್ರವನ್ನು ಬಿಡಿಸಲು ಪ್ರಯತ್ನಿಸಿದೆ. ಅವರು ಕೇವಲ ಶಾಲೆ ಹಾಗೂ ನೀರಿನ ಹಳ್ಳಗಳ ಬಗ್ಗೆಯಷ್ಟೇ ಯೋಚಿಸಿದ್ದಾರೆ. ಈ ದುರ್ದೈವಿ ಜನರು ಅನುಭವಿಸಬೇಕಾಗುವಂತಹ ಪಟ್ಟಿಯಲ್ಲಿ ಅದೊಂದು ಪುಟ್ಟ ಭಾಗ ಅಷ್ಟೆ. ಆದರೂ ಸಂವಿಧಾನದ ಮೂಲಕ ದಲಿತರ ಸಂರಕ್ಷಣೆ ವ್ಯವಸ್ಥೆಯ ಮಹತ್ವವನ್ನು ಮಾಂಟಫ್ಲೋರ್ಡ ರಿಪೋರ್ಟಿಗಿಂತ ಸೈಮನ್ ಕಮಿಶನ್ ಹೆಚ್ಚು ಒಳ್ಳೆಯ ರೀತಿಯಲ್ಲಿ ಅರ್ಥಮಾಡಿಕೊಂಡಿದೆ ಅನ್ನುವುದನ್ನು ಒಪ್ಪಿಕೊಳ್ಳಬೇಕು. ಆದರೆ ನಮ್ಮ ಪ್ರತಿನಿಧಿಗಳ ಸಂಖ್ಯೆ ಹಾಗೂ ಅವರ ಪದ್ಧತಿ ಇವೆರಡರ ಬಗ್ಗೆ ಸೈಮನ್ ಕಮಿಶನ್ ಶಿಫಾರಸ್ಸು ಅತ್ಯಂತ ನಿರಾಶಾಜನಕವಾಗಿದೆ ಎಂದು ಬಹಳ ದುಃಖದಿಂದ ಹೇಳಬೇಕಾಗುತ್ತದೆ.

೧೭. ನಿಮಗೆಲ್ಲರಿಗೂ ಗೊತ್ತಿರುವಂತೆ ದಲಿತರ ಪ್ರತಿನಿಧಿಗಳನ್ನು ಇತ್ತೀಚೆಗೆ ನೇಮಕಾತಿಯ ಮೂಲಕ ಆರಿಸಿಕೊಳ್ಳುತ್ತಾರೆ. ಸಂಸತ್ತಿನಲ್ಲಿ ಪ್ರತಿನಿಧಿಗಳಾಗಿ ಕೆಲಸ ಮಾಡುವ ದುರ್ದೈವ ಹೊಂದಿದವರು ನೇಮಕಾತಿ ಪದ್ಧತಿಯಲ್ಲಿರುವ ದುಷ್ಪರಿಣಾಮವನ್ನು ನಿಮಗೆ ತಿಳಿಸಿ ಹೇಳಬಹುದು ಹಾಗೂ ಸೈಮನ್ ಕಮಿಶನ್ನಿನೆದುರು ಸಾಕ್ಷಿ ಕೊಟ್ಟ ನಮ್ಮ ಎಲ್ಲ ಜನ ಈ ಪದ್ಧತಿಯನ್ನು ನಿಂದಿಸಿದ್ದಾರೆ ಎಂದು ಹೇಳಲು ನನಗೆ ಸಂತೋಷವಾಗುತ್ತಿದೆ. ಈ ಪದ್ಧತಿಯಲ್ಲಿ ನಮ್ಮ ಪ್ರತಿನಿಧಿಗಳಾಗಿ ಸಂಸತ್ತಿಗೆ ಹೋಗುವ ಜನರನ್ನು ಆರಿಸುವ ಹಕ್ಕನ್ನು ಕಸಿದುಕೊಳ್ಳಲಾಗಿದೆ ಹಾಗೂ ಈ ಪದ್ಧತಿಯಿಂದ ನೇಮಕಾತಿಯಾದ ಪ್ರತಿನಿಧಿಗಳಿಗೆ ಆಚರಣೆಯ ಸ್ವಾತಂತ್ರ್ಯ ಉಳಿಯುವುದಿಲ್ಲ. ಸೈಮನ್ ಕಮಿಶನ್ ಈ ದುಷ್ಟ ಪದ್ಧತಿಯನ್ನು ತ್ಯಜಿಸಿಲ್ಲ ಅನ್ನುವುದೊಂದು ದೊಡ್ಡ ದುಃಖದ ಸಂಗತಿ. ಇಂದಿಗೂ ಕೂಡ ಅವರು ಈ ಪದ್ಧತಿಗೆ ಅಂಟಿಕೊಂಡಿದ್ದು ಯೋಗ್ಯ ಉಮೇದುವಾರು ಸಿಗಲಿಲ್ಲ ಅನ್ನುವ ಪಕ್ಷದಲ್ಲಿ ಗವರ್ನರ್ ದಲಿತ ಉಮೇದುವಾರನನ್ನು ಆರಿಸಲಿ ಅನ್ನುವುದು ಅವರ ಶಿಫಾರಸ್ಸು. ಅಷ್ಟೇಯಲ್ಲ ದಲಿತನಲ್ಲದ ವ್ಯಕ್ತಿಯನ್ನು ಕೂಡ ದಲಿತರ ಪ್ರತಿನಿಧಿಯನ್ನಾಗಿ ಆರಿಸುವ ಅಧಿಕಾರ ಕೊಡುವಂತಹ ಅತ್ಯಂತ ಅನಪೇಕ್ಷಿತ ಶಿಫಾರಸ್ಸು ಸೈಮನ್ ಕಮಿಶನ್ ಕೊಟ್ಟಿದೆ. ಹಾಗಾಗಿ ಇವುಗಳು ಮೀಸಲಾಗಿಟ್ಟಿರುವ ಉಪಾಯಗಳಾಗಿರುವುದರಿಂದ ಅವುಗಳ ಬಗ್ಗೆ ಯೋಚಿಸಲು ಸಮಯ ವ್ಯರ್ಥಮಾಡುವ ಅಗತ್ಯವಿಲ್ಲ.

ಆದರೆ ಸೈಮನ್ ಕಮಿಶನ್ನಿನ ಮುಖ್ಯ ಯೋಜನೆ ಕೂಡ ನನ್ನ ಪ್ರಕಾರ ಸ್ವೀಕರಿಸುವಂತಿಲ್ಲ. ಸೈಮನ್ ಕಮಿಶನ್ ಪ್ರಕಾರ ದಲಿತರಿಗಾಗಿ ಜಾಗಗಳನ್ನು ಮೀಸಲಿಟ್ಟು ಸಂಯುಕ್ತ ಮತದಾನ ಸಂಘದ ಮೂಲಕ ಅವರ ಪ್ರತಿನಿಧಿಗಳ ಆಯ್ಕೆ ಆಗಲಿದೆ. ಇದಕ್ಕಿಂತ ಹೆಚ್ಚೇನು ಅದರಲ್ಲಿ ಇರದಿದ್ದಿದ್ದರೆ ಈಗಿನ ನಮ್ಮ ಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆಗಳಾಗುತ್ತಿದ್ದವು. ಆದರೆ ಯಾವುದೇ ದಲಿತ ಉಮೇದುವಾರನು ಆಯಾ ಪ್ರಾಂತ್ಯದ ಗವರ್ನರ್‌ರಿಂದ ಪ್ರಮಾಣಪತ್ರ ಪಡೆಯದೆ ಚುನಾವಣೆಯಲ್ಲಿ ಭಾಗವಹಿಸುವಂತಿಲ್ಲ ಎಂದು ಈ ಯೋಜನೆಗೆ ಶರತ್ತು ಹಾಕಲಾಗಿದೆ. ಈ ಪದ್ಧತಿಯು ಸಧ್ಯದ ಚುನಾವಣೆಯನ್ನು ಸಾಕಷ್ಟು ಹೋಲುತ್ತಿದ್ದು ಇವೆರಡರಲ್ಲಿ ಯಾವ ಪದ್ಧತಿಯನ್ನಾರಿಸಬೇಕು ಅನ್ನುವ ಪ್ರಶ್ನೆ ಕಾಡುವುದರಿಂದ ಇಂತಹ ಪದ್ಧತಿಯನ್ನು ಸ್ವೀಕರಿಸುವಂತಿಲ್ಲ. ಅಲ್ಲದೆ ಖಾಲಿಯಿರುವ ಒಂದೇ ಜಾಗಕ್ಕೆ ಗವರ್ನರ್ ಒಬ್ಬನಿಗೆ ಪ್ರಮಾಣ ಪತ್ರ ಕೊಡುವವರಿದ್ದಾರೆ, ಹಾಗಾಗಿ ಇಂತಹ ಮತದಾನ ಸಂಘದ ಈ ಚುನಾವಣೆಯ ಪದ್ಧತಿಯೆಂದರೆ ಕೇವಲ ಸರಳ ಹಾಗೂ ಸುಲಭವಾದ ನೇಮಕಾತಿ ಪದ್ಧತಿ ಮಾತ್ರ. ಈ ಪ್ರಮಾಣ ಪತ್ರ ಕೊಡುವ ಪದ್ಧತಿ ಪ್ರತ್ಯಕ್ಷವಾಗಿ ಯಾವ ರೀತಿ ಕಾರ್ಯ ಮಾಡಲಿದೆ ಅನ್ನುವುದರ ಬಗ್ಗೆ ಏನೂ ಹೇಳಲಾಗುವುದಿಲ್ಲ ಹಾಗೂ ಈ ಪ್ರಮಾಣ ಪತ್ರ ಕೊಡಲು ಯಾವ ಯಾವ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಿದ್ದಾರೆ ಅನ್ನುವುದು ಕೂಡ ಗೌಪ್ಯವಾಗಿದೆ. 'ಗವರ್ನರ್ ಸಾಹೇಬರು ದಲಿತರ ಸಂಘಟನೆಯ ಸಲಹೆ ಪಡೆದು ನಿರ್ಧರಿಸಲಿ ಇಲ್ಲವೆ ಅವರಿಗೆ ಯೋಗ್ಯವೆನಿಸಿದರೆ ಯಾವ ಸಲಹೆಗಳನ್ನು ಪಡೆಯದೆಯೆ ಪ್ರಮಾಣ ಪತ್ರ ಕೊಡಲಿ' ಎಂದು ಕಮಿಶನ್ ಹೇಳುತ್ತದೆ. ಇವೆರಡರಲ್ಲಿ ಯಾವುದೇ ಸೂಚನೆಗೆ ನಾವು ಸಮ್ಮತಿ ಕೊಡುವಂತಿಲ್ಲ. ಸಂಘಟನೆಗಳ ಸಲಹೆ ಪಡೆಯುವ ಪದ್ಧತಿ ಜಾರಿಗೆ ಬಂದರೆ ಜನತೆಗೆ ಇಷ್ಟವಿರದಿದ್ದರೂ ತಮ್ಮ ಉಮೇದುವಾರನೇ ಆರಿಸಿ ಬರಲಿ ಅನ್ನುವ ಉದ್ದೇಶದಿಂದ ಆತನಿಗೆ ಕೇವಲ ಬೆಂಬಲ ಕೊಡುವ ದೃಷ್ಟಿಯಿಂದ ಅನೇಕ ಸಂಘಟನೆಗಳು ಹುಟ್ಟಿಕೊಂಡಾವು. ಎರಡನೆಯ ಪದ್ಧತಿ ಜಾರಿಗೆ ಬಂದರೆ (ಸಲಹೆ ಪಡೆಯದೆ ಪ್ರಮಾಣ ಪತ್ರ ಕೊಡುವ ಪದ್ಧತಿ) ಅದರ ಪರಿಣಾಮವಾಗಿ ಹೊಲಸು ಅಧಿಕಾರಶಾಹಿ ಹುಟ್ಟಿಕೊಂಡು ಪ್ರಮಾಣ ಪತ್ರ ಕೊಡುವ ಅಧಿಕಾರ ಮಾಮಲೆದಾರ ಹಾಗೂ ತಹಸೀಲ್ದಾರರ ಕೈಗಳಿಗೆ ಹೋದಾವು. ಗವರ್ನರಗೇನಾದರೂ ಬುದ್ಧಿವಾದಿ ಧೋರಣೆಯನ್ನು ಸ್ವೀಕರಿಸುವುದಿದ್ದರೆ ಈ ಅಧಿಕಾರಿಗಳ ಸಲಹೆಯಂತೆ ಆತನಿಗೆ ಪ್ರಮಾಣ ಪತ್ರ ಕೊಡಬೇಕಾಗುತ್ತದೆ. ಈ ತಹಸೀಲದಾರ್ ಹಾಗೂ ಮಾಮಲೆದಾರ್ ಜನ ಯಾರ ಪೈಕಿ ಅನ್ನುವುದು ನಿಮಗೆ ಗೊತ್ತೇಯಿದೆ, ದಲಿತರ ಬಗ್ಗೆ ಹಾಗೂ ಅವರಲ್ಲಿಯ ವಿದ್ಯೆ ಕಲಿತವರ ಬಗ್ಗೆ ಅವರ ನಡವಳಿಕೆ ಹೇಗಿದೆ ಅನ್ನುವುದು ಕೂಡ ನಿಮಗೆ ಗೊತ್ತಿದೆ. ಆದ್ದರಿಂದಲೇ ಈ ಜನ ಪ್ರಮಾಣ ಪತ್ರಕ್ಕಾಗಿ ಯಾವ ರೀತಿಯ ಜನರ ಶಿಫಾರಸ್ಸು ಮಾಡಿಯಾರು ಅನ್ನುವ ಅಂದಾಜು ನಿಮಗಿದೆ.

೧೮. ದಲಿತರ ಪ್ರತಿನಿಧಿಗೆ ಪ್ರಮಾಣ ಪತ್ರದ ವಿಶೇಷ ಅವಶ್ಯಕತೆಯಿದೆ ಅನ್ನುವ ಕಮಿಶನ್ನಿನ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಅವರ ಉದ್ದೇಶ ಸಂಸತ್ತಿನಲ್ಲಿ ಕಾರ್ಯಕ್ಷಮತೆಯ ಕೊರತೆಯನ್ನು ಇಲ್ಲವಾಗಿಸುವುದೇ ಆಗಿರುವುದಾದರೆ ಆ ದೃಷ್ಟಿಯಿಂದ ಉಳಿದ ಅನೇಕ ಜಾತಿಗಳಿಗೆ ಈ ಪ್ರಮಾಣ ಪತ್ರ ಕೊಡುವ ಪದ್ಧತಿಯನ್ನು ಜಾರಿಗೆ ತರಬೇಕು. ಕಾರ್ಯಕ್ಷಮತೆಯ ಕೊರತೆ ಅನ್ನುವುದರ ಒಳಾರ್ಥ ಇಂಗ್ಲಿಷ್ ಭಾಷೆಯ ಕಡಿಮೆ ಜ್ಞಾನ ಹಾಗೂ ಆ ಭಾಷೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಅಸಮರ್ಥರಾಗಿರುವುದು ಅನ್ನುವುದಾದರೆ ಬಾಂಬೆ ಲೆಜಿಸ್ಲೆಟಿವ್ ಕೌನ್ಸಿಲ್ಲಿನಲ್ಲಿ ಬಹುಸಂಖ್ಯಾತ ಅಬ್ರಾಹ್ಮಣರು ಹಾಗೂ ಸಿಂಧಿ ಮುಸಲ್ಮಾನರಿಗೆ ಇಂಗ್ಲಿಷ್ ಭಾಷೆಯ ಕಿಂಚಿತ್ ಜ್ಞಾನವೂ ಇರಲಿಲ್ಲ ಅನ್ನುವ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ಅವರು ಕೌನ್ಸಿಲ್ಲಿನಲ್ಲಿ ಯಾವತ್ತೋ ಒಂದು ಪ್ರಶ್ನೆ ಕೇಳಿರಬಹುದು

ಹಾಗೂ ಯಾವತ್ತೋ ಒಮ್ಮೆ ಭಾಷಣ ಮಾಡಿರಬಹುದು. ಅನೇಕ ವಿಧಾನಸಭೆಗಳಲ್ಲಿರುವ ದಲಿತರ ಪ್ರತಿನಿಧಿಗಳು ಹಾಗೂ ನಮ್ಮ ಗೆಳೆಯರು ವಿಧಾನಸಭೆಯಲ್ಲಿಯ ತಮ್ಮ ಇಂತಹ ಉದಾಹರಣೆಯನ್ನು ಕೊಡಬಲ್ಲರು ಅನ್ನುವ ಭರವಸೆ ನನಗಿದೆ. ಇವರೆಲ್ಲರಿಗೆ ಪ್ರಮಾಣ ಪತ್ರದ ಅವಶ್ಯಕತೆಯಿರದಿರುವಾಗ ದಲಿತರಿಗೆ ಮಾತ್ರ ಅವಶ್ಯಕತೆಯಿರುವುದರ ಹಿಂದಿನ ಕಾರಣ ತಿಳಿಯುತ್ತಿಲ್ಲ. ಹಾಗಾಗಿ ಸೈಮನ್ ಕಮಿಶನ್ ತಯಾರಿಸಿರುವ ಈ ಯೋಜನೆಯನ್ನು ತಿರಸ್ಕರಿಸಿ ಯಾವುದೇ ಶರತ್ತಿಲ್ಲದೆ ನಮ್ಮ ಪ್ರತಿನಿಧಿಗಳನ್ನು ನಾವೇ ಆರಿಸುವಂತಹ ಸ್ವಾತಂತ್ರ್ಯದ ಬೇಡಿಕೆಯನ್ನು ಮುಂದಿಡಬೇಕು. ಅಷ್ಟೇಯಲ್ಲದೆ ನಮ್ಮ ಒಳಿತು ಯಾವುದರಲ್ಲಿದೆ ಅನ್ನುವುದನ್ನು ನಿರ್ಧರಿಸುವ ಹಕ್ಕನ್ನು ನಾವು ಗವರ್ನರ್ ಸಾಹೇಬರಿಗೆ ಕೂಡ ಕೊಡಬಾರದು.

೧೯. ಕೇಂದ್ರ ಸಂಸತ್ತಿನ ರಚನೆಗೆ ಸಂಭಂದಿಸಿದಂತೆ ಈ ಸೈಮನ್ ಕಮಿಶನ್ನಿನ ಯೋಜನೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು ಅನ್ನುವುದು ಯಾರಿಗೆ ಗೊತ್ತು? ಸಧ್ಯದ ರಾಜ್ಯಸಭೆಯ ಚುನಾವಣೆ ಪದ್ಧತಿ ಹಾಗೂ ಪ್ರಾಂತ್ಯದ ಲೆಜಿಸ್ಲೇಟಿವ್ ಅಸೆಂಬ್ಲಿಯ ಚುನಾವಣೆ ಪದ್ಧತಿ ಕಣ್ಣೆದುರಿಗಿದೆ. ಸೈಮನ್ ಕಮಿಶನ್ ಈ ವಿಷಯದಲ್ಲಿ ಕೊಟ್ಟಿರುವ ಶಿಫಾರಸ್ಸು ಹೀಗಿದೆ: "ಪ್ರಾಂತಿಕ ಸಭೆಗಳ ಚುನಾವಣೆಗಳ ಪದ್ಧತಿಯಲ್ಲಿ ಬದಲಾವಣೆ ಮಾಡದೆ ಈಗಿರುವಂತೆಯೇ ಇಟ್ಟು ವಿಧಾನಸಭೆಯ ಚುನಾವಣೆಗಳು ಮಾತ್ರ ಪ್ರಾಂತ್ಯ ವಿಧಾನ ಪರಿಷತ್ತಿನ ಸದಸ್ಯರ ಮೂಲಕ ಅಪ್ರತ್ಯಕ್ಷರೂಪದಲ್ಲಾಗಬೇಕು''. ಮುಂಬಯಿ ಪ್ರಾಂತ್ಯದ ಸೈಮನ್ ಕಮಿಶನ್ನಿನ ಒಬ್ಬ ಸಭಾಸದನಾಗಿ ಅವರ ವಿರೋಧದಲ್ಲಿ ಒಂದು ಟಿಪ್ಪಣಿಯನ್ನು ಬರೆದು ಕಳಿಸಿದ್ದು ಅದರಲ್ಲಿ ಅವರ ಯೋಜನೆಯಲ್ಲಿಯ ದೋಷಗಳನ್ನು ಬರೆದಿದ್ದೇನೆ. ಆದರೆ ಸೈಮನ್ ಕಮಿಶನ್ ಮಂಡಿಸಿರುವ ಸ್ವರೂಪದಲ್ಲಿ ಕೆಲವು ಅನುಕೂಲತೆಗಳಿರುವಂತೆ ಅನಾನುಕೂಲತೆಗಳೂ ಇವೆ. ಮೊದಲಿಗೆ ಅಲ್ಪಸಂಖ್ಯಾತರಿಗಾಗಿ ಸ್ವತಂತ್ರ ಮತದಾನ ಸಂಘವೇ ಇಲ್ಲ ಸಂಯುಕ್ತ ಮತದಾನ ಸಂಘವೆ ಅನ್ನುವ ಪ್ರಶ್ನೆಯನ್ನು ಪಕ್ಕಕ್ಕಿಟ್ಟುಬಿಟ್ಟಿದ್ದಾರೆ. ಎರಡನೆಯದಾಗಿ ಅವಳಿ ಮತದಾನದ ಅಧಿಕಾರವನ್ನು ತಪ್ಪಿಸಿದ್ದಾರೆ. (ಒಂದು ಪ್ರಾಂತೀಯ ಕೌನ್ಸಿಲ್‌ಗಾಗಿ ಹಾಗೂ ಎರಡನೆಯದು ಸಂಸತ್ತಿಗಾಗಿ) ಮೂರನೆಯದಾಗಿ ಇದೆಲ್ಲದರಿಂದ ಸಂಸತ್ತಿಗೆ ಸರಳ ಸ್ವರೂಪ ಬಂದಿದೆ. ಅಸೌಕರ್ಯದ ದೃಷ್ಟಿಯಿಂದ ನೋಡಿದಾಗ ಸರ್ಕಾರ ಹಾಗೂ ಜನತೆ ಇವೆರಡರ ನಡುವಿನ ಬಂಧ ಸಡಿಲವಾಗುವ ಸಾಧ್ಯತೆಗಳಿದ್ದು ಒಗ್ಗಟ್ಟಿನ ಬಲ ಕಡಿಮೆಯಾಗಲಿದೆ. ಇಡೀ ದೇಶದ ಜನತೆಯ ಕರ್ತವ್ಯ ಕಣ್ಮರೆಯಾಗುತ್ತಿರುವುದರಿಂದ ಅವರ ದೃಷ್ಟಿಯಿಂದ ಇಡೀ ದೇಶದ ಬಗ್ಗೆ ಜನತೆಗೆ ಯಾವ ಕರ್ತವ್ಯವೂ ಉಳಿಯುವುದಿಲ್ಲ. ಈ ಯೋಜನೆ ಸೌಕರ್ಯ ಕೊಡಲಿ ಇಲ್ಲವೆ ಅಸೌಕರ್ಯ ಕೊಡಲಿ ಕೇಂದ್ರೀಯ ಸಂಸತ್ತಿನಲ್ಲಿ ಸೈಮನ್ ಕಮಿಶನ್ ಯೋಜನೆಗೆ ಸ್ಥಾನ ಸಿಗಲೇ ಬೇಕು. ಆದರೆ ಅದರ ಯೋಗ್ಯ ಸ್ಥಾನದ ಬಗ್ಗೆ ಮಾತ್ರ ಪ್ರಶ್ನೆ ಉಳಿದುಕೊಳ್ಳುತ್ತದೆ. ಈ ಯೋಜನೆ ಕೇಂದ್ರೀಯ ವಿಧಾನಸಭೆಗಾಗಿ ಯೋಗ್ಯವೋ ಇಲ್ಲ ರಾಜ್ಯ ಸಭೆಗಾಗಿ ಯೋಗ್ಯವೋ? ಈ ಯೋಜನೆ ಎರಡಕ್ಕೂ ಅನ್ವಯಿಸುವುದಿಲ್ಲ ಅನ್ನುವುದು ಸ್ಪಷ್ಟವಾಗಿದೆ. ಅಪ್ರತ್ಯಕ್ಷ ಚುನಾವಣೆಯ ಬಹುದೊಡ್ಡ ದೋಷವೆಂದರೆ ಅದು ಮೊದಲನೆಯ ಸುತ್ತಿನಲ್ಲೇ ಮುಗಿದುಬಿಡುತ್ತದೆ. ಒಬ್ಬ ಮತದಾರನು ಒಂದೇ ಸಲ ಮತ ಚಲಾಯಿಸಿದರೆ ಅದಕ್ಕೆ ವಿಶೇಷ ಮಹತ್ವ ಸಿಗಬಹುದು ಅನ್ನುವ ಯೋಚನೆಯಿಂದ ಈ ಯೋಜನೆಯನ್ನು ರಚಿಸಿರಬಹುದು. ಎರಡು ಸಲ ಮತ ಚಲಾಯಿಸುವ ಅಗತ್ಯವೂ ಇರುವುದಿಲ್ಲ. ಇದರರ್ಥ ಎರಡು ಸಭಾಗೃಹಗಳ ಪದ್ಧತಿಯನ್ನಿಡುವುದಾದರೆ ಚುನಾವಣೆಯ ಈ ರೀತಿಯನ್ನು ವಿಧಾನಸಭೆಗೆ ಅನ್ವಯಿಸಿದರೆ ರಾಜ್ಯಸಭೆಯ ಸಭಾಸದರನ್ನು ಆರಿಸುವ ಬೇರೆ ದಾರಿಯೇ ಉಳಿಯುವುದಿಲ್ಲ. ಈಗಿನ ಸರ್ಕಾರದ ರಚನೆಯಲ್ಲಿ ರಾಜ್ಯಸಭೆಯನ್ನು ರಚಿಸಿರುವ ರೀತಿ ಬಹಳ ಕೆಟ್ಟದ್ದಾಗಿದೆ. ಪುನರ್ಪರೀಕ್ಷೆ ಮಾಡುವ ಸಭೆ ಎಂದು ಅದರ ಅಸ್ತಿತ್ವವನ್ನು ಶಾಶ್ವತವಾಗಿಡುವುದಾದರೆ

ಈಗಿರುವ ಸ್ಥಿತಿಯಲ್ಲಿ ಅದನ್ನು ಇಡಲಾಗದು. ನನ್ನ ಅಭಿಪ್ರಾಯ ಸರಿಯಾಗಿದ್ದರೆ ವಿಧಾನ ಸಭೆಗಾಗಿ ಪ್ರತ್ಯಕ್ಷ ಚುನಾವಣೆ ಪದ್ಧತಿಯನ್ನು ಆರಿಸಿಕೊಂಡು ಅಪ್ರತ್ಯಕ್ಷ ಚುನಾವಣೆ ಪದ್ಧತಿಯಿಂದ ರಾಜ್ಯ ಸಭೆಯನ್ನು ರಚಿಸಬೇಕು ಅನ್ನುವ ತೀರ್ಮಾನಕ್ಕೆ ಬರಬಹುದು. ಪ್ರಾಂತ್ಯದ ವಿಧಾಸಭೆಯ ಸದಸ್ಯರಿಂದ ಈ ಚುನಾವಣೆಯನ್ನು ಪ್ರತಿನಿಧಿತ್ವದ ಪ್ರಮಾಣಾನುಸಾರವಾಗಿ ಮಾಡುವುದೊಂದೇ ಒಳ್ಳೆಯ ಉಪಾಯ. ಕಡೆಗೆ ಕೇಂದ್ರೀಯ ಸಂಸತ್ತನ್ನು ರಚಿಸುವ ಯಾವುದೇ ಆಧಾರ ನಿರ್ಧಾರವಾಗಲಿ ಆದರೆ ದಲಿತರ ಪ್ರತಿನಿಧಿಗಳಿಗಾಗಿ ಅಪ್ರತ್ಯಕ್ಷ ಚುನಾವಣೆಯ ರೀತಿಯೇ ಸರಳವಾದ ಉಪಾಯ ಅನ್ನುವುದು ಸಂಶೋಧನೆಯ ವಿಷಯವೇನಲ್ಲ. ಇದನ್ನು ನೇಮಕಾತಿ ಪದ್ಧತಿಗೆ ತುಲನೆ ಮಾಡಿದರೆ ಅದು ಹೆಚ್ಚು ಹಿತಕಾರಿಯಾಗಿದೆ.

೨೦. ಈಗಿರುವ ಪ್ರಾಂತೀಯ ವಿಧಾನಸಭೆಯಲ್ಲಿ ದಲಿತರ ಪ್ರತಿನಿಧಿಗಳು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಈ ವಿಷಯದಲ್ಲಿ ೧೯೧೯ರ ಸೌಥ್‌ಬರೋ ಕಮಿಟಿಯು ಸಾಕಷ್ಟು ಅನ್ಯಾಯ ಮಾಡಿದ್ದು ಆ ಕಮಿಟಿ ನಿರ್ಧರಿಸಿರುವ ಪಾಲಿನಲ್ಲಿ ಭಾರತ ಸರ್ಕಾರ ಕೂಡ ಹೆಚ್ಚಳವನ್ನು ಸೂಚಿಸಿಲ್ಲ. ಆ ತಪ್ಪುಗಳು ಇನ್ನೂ ಹಾಗೇ ಇದ್ದು ಅವುಗಳಲ್ಲಿ ಯಾವುದೇ ಸುಧಾರಣೆಗಳಾಗಿಲ್ಲ. ೧೯೨೩ರಲ್ಲಿ ನೇಮಿಸಲ್ಪಟ್ಟ ಮುದ್ದಿಮನ್ ಕಮಿಟಿಯು ಸಂಸತ್ತಿನಲ್ಲಿ ದಲಿತರ ಪ್ರತಿನಿಧಿಗಳ ಸಂಖ್ಯೆ ಎಷ್ಟು ಕಡಿಮೆಯಿದೆ ಅನ್ನುವುದನ್ನು ತೋರಿಸಿಕೊಟ್ಟಿತ್ತು. ಆದರೆ ಎಲ್ಲೋ ಒಂದೆರಡು ಕಡೆ ಸಭಾಸದರನ್ನು ಹೆಚ್ಚಿಸಿರುವುದನ್ನು ಬಿಟ್ಟರೆ ಈ ಸಮಸ್ಯೆ ನಿವಾರಣೆ ಮಾಡುವುದರಲ್ಲಿ ಈ ಕಮಿಟಿಯು ಯಾವುದೇ ದೊಡ್ಡ ಪ್ರಯತ್ನ ಮಾಡಿಲ್ಲ. ದಲಿತರಿಗೆ ಇದೇ ದುರ್ಬಲ ಅವಸ್ಥೆಯಲ್ಲಿ ಅಧಿಕಾರಿಗಳ ಸಹಾಯವನ್ನವಲಂಬಿಸಿರಲು ಹೇಳಲಾಗುತ್ತದೆ. ಈ ಅಧಿಕಾರಿಗಳು ಕೇವಲ ತಮ್ಮ ಸ್ವಂತದ ಗೆಳೆಯರಷ್ಟೇ ಆಗಿರುತ್ತಾರೆ ಅನ್ನುವುದು ಅನುಭವದಿಂದ ನಮಗೆ ಗೊತ್ತಾಗಿದೆ. ಅವನ ಗೆಳೆತನ ಹಾಗೂ ಸಹಾಯ ಆತನ ಹಿತಸಂಬಂಧಗಳನ್ನವಲಂಬಿಸಿರುತ್ತದೆ. ಈ ಹತ್ತು ವರ್ಷಗಳಲ್ಲಿ ಈ ಅಧಿಕಾರಿಗಳು ದಲಿತರಿಂದ ಪಡೆದಿರುವುದು ಹೆಚ್ಚು, ಕೊಟ್ಟಿರುವುದು ಕಡಿಮೆ ಎಂದು ಹೇಳಲು ನನಗೆ ಬಹಳ ದುಃಖವಾಗುತ್ತದೆ. ಅದೇನೆ ಇರಲಿ ಅನುಮಾನಾಸ್ಪದವಾಗಿರುವ ಈ ಅಧಿಕಾರಿಗಳ ಸಹಾಯವನ್ನು ಮುಂಬರುವ ಭಾರತದ ದಲಿತರು ಅಪೇಕ್ಷಿಸಲಾರರು, ಹಾಗಾಗಿ ಉಳಿದ ಪ್ರತಿಯೊಬ್ಬ ಅಲ್ಪಸಂಖ್ಯಾತರಿಗೆ ಸಾಕಷ್ಟು ಪ್ರತಿನಿಧಿತ್ವವನ್ನು ಕೊಡಲಾಗುತ್ತಿದ್ದರೆ ದಲಿತರಿಗೇಕೆ ಸಿಗಬಾರದು? ಪ್ರಾಂತೀಯ ವಿಧಾನ ಸಭೆಯಲ್ಲಿ ಸೈಮನ್ ಕಮಿಶನ್ ದಲಿತರಿಗಾಗಿ ಸೂಚಿಸಿರುವ ಪ್ರತಿನಿಧಿತ್ವದ ಸಂಖ್ಯೆಯೆಷ್ಟು? 'ಈ ರೀತಿಯ ಮೀಸಲಾತಿಯ ಸಂಖ್ಯೆ ಆ ಮತದಾನ ಸಂಘದ ದಲಿತರ ಒಟ್ಟು ಜನಸಂಖ್ಯೆಯ ಯಾವ ಪ್ರಮಾಣದಲ್ಲಿದೆಯೋ ಅದರ ಮುಕ್ಕಾಲದಷ್ಟು ಇರಬೇಕು' ಅನ್ನುವುದು ಅವರ ಅಭಿಪ್ರಾಯ. ಈಗ ಭಾರತದ ಉಳಿದ ಅಲ್ಪಸಂಖ್ಯಾತರಿಗೆ ಸೈಮನ್ ಕಮಿಶನ್ ಕೊಡುವ ಪ್ರತಿನಿಧಿತ್ವವನ್ನು ನೋಡಿ, ಮುಸಲ್ಮಾನರು ಲಖನಿ ಕರಾರಿನಲ್ಲಿ ಕಾಂಗ್ರೆಸ್ಸನ್ನು ಮೀರಿಸಿ ಬಲವಂತವಾಗಿ ಪಡೆದ ಅತ್ಯಾಧಿಕ ಪ್ರತಿನಿಧಿತ್ವಗಳನ್ನು ಹಾಗೇ ಇಡಬೇಕು ಅನ್ನುವುದಕ್ಕೆ ಅನುಮತಿ ಕೊಡಲಾಗಿದೆ. ಭಾರತೀಯ ಕ್ರಿಶ್ಚನ್ನರಿಗೆ, ಆಂಗ್ಲೋ-ಇಂಡಿಯನ್ ಹಾಗೂ ಯೂರೋಪಿಯನ್ನರಿಗೆ ಅವರ ಜನಸಂಖ್ಯೆಯ ಪ್ರಮಾಣದಲ್ಲೇ ಪ್ರತಿನಿಧಿತ್ವ ಕೊಟ್ಟು ಅಧಿಕ ಪ್ರಮಾಣದಲ್ಲಿ ಸರಿಸಮನಾದ ಜಾಗಗಳನ್ನೂ ಕೊಡಲಾಗಿದೆ. ಇದು ವಂಚನೆಯಲ್ಲವೆ? ಅನೇಕ ತೊಂದರೆಗಳಲ್ಲಿ ಸಿಲುಕಿಕೊಂಡಿರುವ ಜಾತಿಯೊಡನೆ ಉದಾರತೆಯಿಂದ ವರ್ತಿಸಲು ಸಾಧ್ಯವಿರದಿದ್ದರೆ ನ್ಯಾಯಸಮ್ಮತವಾಗಿ ವರ್ತಿಸಬೇಡವೆ? ಭಾರತದ ಕೇಂದ್ರೀಯ ಕಮಿಟಿ ಕೂಡ ದಲಿತರ ಮೇಲೆ ಅನ್ಯಾಯ ಮಾಡಿ ಕೇವಲ ಅವರ ಜನಸಂಖ್ಯೆಯ ಪ್ರಮಾಣದಲ್ಲೇ ಅವರಿಗೆ ಪ್ರತಿನಿಧಿತ್ವ ಕೊಟ್ಟಿದೆ.

೨೧. ಆರಂಭದಿಂದಲೇ ಕೇಂದ್ರೀಯ ಸಂಸತ್ತಿನ ಬಾಗಿಲುಗಳು ದಲಿತರಿಗಾಗಿ ಮುಚ್ಚಲ್ಪಟ್ಟಿದ್ದು

೧೯೨೧ರಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಅದರ ಪುನರ್ಸಂಘಟನೆ ಮಾಡಿದಾಗಲೂ ಕೂಡ ದಲಿತರಿಗಲ್ಲಿ ಪ್ರವೇಶ ಸಿಗಲಿಲ್ಲ. ೧೯೩೪ರ ತನಕ ೧೪೦ ಸಭಾಸದರಿರುವ ವಿಧಾನಸಭೆಯಲ್ಲಿ ದಲಿತರಿಗೆ ಕೇವಲ ಒಂದೇ ಜಾಗ ಕೊಟ್ಟು ಉಪಕಾರ ಮಾಡಲಾಯಿತು. ರಾಜ್ಯಸಭೆಯಂತೂ ಇನ್ನೂ ಅವರಿಗಾಗಿ ತೆರೆದಿಲ್ಲ. ಕೇಂದ್ರ ವಿಧಾನಸಭೆಯಲ್ಲಿ ದಲಿತರಿಗೆ ಪ್ರತಿನಿಧಿತ್ವ ಸಿಗಲು ಸೈಮನ್ ಕಮಿಶನ್ ಸ್ವಲ್ಪ ಪ್ರಯತ್ನಿಸಿದ್ದರೂ ಅವನ ಯೋಜನೆ ಕೇವಲ ವಿಧಾನಸಭೆಗಷ್ಟೇ ಸೀಮಿತವಾಗಿದ್ದು ರಾಜ್ಯ ಸಭೆಯ ತನಕ ತಲುಪಿಲ್ಲ. ಈ ಸಣ್ಣಪುಟ್ಟ ಸಹಾನುಭೂತಿಗಾಗಿ ನಾನವರಿಗೆ ಆಭಾರಿಯಾಗಿದ್ದರೂ ಅವರ ಕೆಟ್ಟ ವರ್ತನೆಯ ಬಗ್ಗೆ ನನಗೆ ಬೇಸರವಿದೆ ಕೂಡ. ಸೈಮನ್ ಕಮಿಶನನ್ನು ನೇಮಿಸುವ ಮುನ್ನ ದಲಿತರಲ್ಲನೇಕರನ್ನು ವಿಧಾನಸಭೆಯಲ್ಲಿ ಕರೆಸಿಕೊಳ್ಳಲಾಗಿತ್ತು, ಹಾಗೂ ಸರ್ಕಾರವಷ್ಟೇಯಲ್ಲ ದೇಶದ ಎಲ್ಲ ಭಾಗಗಳಿಂದಲೂ ದಲಿತರ ಜನಗಣನೆಯಲ್ಲಿ ನಮೂದಿಸಿರುವುದಕ್ಕಿಂತಲೂ ಹೆಚ್ಚಿದೆ ಅನ್ನುವ ಪ್ರಚಾರ ಮಾಡಲಾಯಿತು. ಜನಗಣನೆಯ ಕಡಿಮೆ ಅಂಕೆಯನ್ನು ತೆಗೆದುಕೊಂಡರೂ ಸೈಮನ್ ಕಮಿಶನ್ನಿನ ಅನುಸಾರ ದಲಿತರ ಸಂಖ್ಯೆ ನೂರಕ್ಕೆ ಇಪ್ಪತ್ತರಷ್ಟಿದೆ. ಆದರೆ ಸೈಮನ್ ಕಮಿಶನ್ ವಿಧಾನ ಸಭೆಯಲ್ಲಿ ಜಾಗಗಳನ್ನು ಕೊಡುವಾಗ ಮಾತ್ರ ನೂರಕ್ಕೆ ಎಂಟಕ್ಕಿಂತ ಹೆಚ್ಚು ಜಾಗ ಕೊಡಲು ನಿರಾಕರಿಸಿತು ಹಾಗೂ ರಾಜ್ಯಸಭೆಯಲ್ಲಂತೂ ಒಂದೂ ಜಾಗವನ್ನು ಕೊಡಲಿಲ್ಲ.

೨೨. ಸೈಮನ್ ಕಮಿಶನ್ ಮೂಲಕ ನಮ್ಮ ಹಕ್ಕು ಹಾಗೂ ಅವಶ್ಯಕತೆಗಳು ಏಕೆ ಅಪಮೌಲ್ಯಗೊಂಡವು? ಅನ್ನುವುದು ನನಗೆ ತಿಳಿಯಲಿಲ್ಲ. ಸೈಮನ್ ಕಮಿಶನ್ ದಲಿತರ ಬಗ್ಗೆ ಕೇವಲ ನ್ಯಾಯವಷ್ಟೇಯಲ್ಲ ಉದಾರತೆಯ ಪಾತ್ರವನ್ನೂ ವಹಿಸಬೇಕು ಅನ್ನುವುದು ನಮ್ಮ ಪ್ರತಿಯೊಬ್ಬರ ಅಪೇಕ್ಷೆಯಾಗಿದೆ. ಇವರೇಕೆ ಉದಾರತೆ ತೋರಿಸುತ್ತಿಲ್ಲ ಅನ್ನುವುದಕ್ಕೆ ಯಾವುದೇ ಕಾರಣಗಳಿಲ್ಲ. ಓರ್ವ ಅಲ್ಪಸಂಖ್ಯಾತರ ರಾಜನಿಷ್ಠೆಯ ಬಗ್ಗೆ ಸಂವಿಧಾನವನ್ನು ತಯಾರಿಸುವಾಗ ಅವರಿಗೆ ಯಾವ ಹಕ್ಕುಗಳು ಸಿಗಬಹುದು ಅನ್ನುವುದರ ಬಗ್ಗೆ ಸಧ್ಯಕ್ಕಂತೂ ನನಗ್ಯಾವ ಅಂದಾಜಿಲ್ಲ. ಆದರೆ ಭಾರತದಲ್ಲಿ ಹಕ್ಕುಗಳನ್ನು ಕೊಡುವಾಗ ಈ ರಾಜನಿಷ್ಠೆಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆಯೆಂದರೆ ಇದರರ್ಥ ದಲಿತರ ರಾಜನಿಷ್ಠೆಗೆ ಮಿತಿಯೇಯಿಲ್ಲ ಅನ್ನಬೇಕಾಗುತ್ತದೆ. ದಲಿತರು ಬ್ರಿಟಿಷ್ ರಾಜ್ಯದ ಮೇಲೆ ಇದೊಂದು ತತ್ವದ ಪ್ರಶ್ನೆ ಅಂದುಕೊಂಡು ಪ್ರೀತಿಸಿಲ್ಲ, ಬ್ರಿಟಿಷ್ ರಾಜ್ಯವನ್ನವರು ಮನಸಾರೆ ಪ್ರೀತಿಸಿದ್ದಾರೆ. ಹಾಗಾಗಿ ದಲಿತರಿಗೆ ಹೆಚ್ಚು ಉದಾರ ವರ್ತನೆ ಸಿಗಬೇಕು ಅನ್ನುವುದರ ಹಿಂದೆ ಅವರ ಆಗತಿಕ ಸ್ಥಿತಿಯೇ ಮುಖ್ಯ ಯುಕ್ತಿವಾದವಾಗಿದೆ. ಭಾರತದಲ್ಲಿ ಇಷ್ಟು ಹೀನ ದರ್ಜೆಗೆ ತಲುಪಿರುವ, ನಿಗ್ರಹಿಸಲ್ಪಟ್ಟಿರುವ ಹಾಗೂ ದುರ್ಬಲವಾಗಿರುವ ಅಲ್ಪಸಂಖ್ಯಾತ ಜಾತಿ ಮತ್ತೊಂದಿಲ್ಲ. ಅವರ ಸರಳ ಆದರೆ ಹೆಚ್ಚಿರುವ ಅವಶ್ಯಕತೆಗಳನ್ನು ಮನಗಂಡು ಭಾರತ ಇಂದು ಸ್ವಯಂಶಾಸಿತ ರಾಷ್ಟ್ರವಾಗಬೇಕು ಅನ್ನುವ ಬೇಡಿಕೆಯನ್ನಿಡುವುದು ಅವರಿಗೆ ಅಗತ್ಯವಾಗಿದೆ. ಇಷ್ಟೊಂದು ಅನ್ಯಾಯವಾಗಿರುವ ಜಾತಿಯ ಬಗ್ಗೆ ಉದಾರತೆಯ ವರ್ತನೆ ತೋರಿಸಬೇಕು. ಆದರೆ ಸೈಮನ್ ಕಮಿಶನ್ ಮೂಲಕ ದಲಿತರಿಗೆ ಉದಾರ ವರ್ತನೆ ಸಿಗಲಿಲ್ಲವಷ್ಟೇಯಲ್ಲ ನ್ಯಾಯ ಕೂಡ ಸಿಗಲಿಲ್ಲ. ಲಾರ್ಡ್ ಬರ್ಕನಹೆಡ್ ಅವರು ಸೈಮನ್ ಕಮಿಶನ್ನನ್ನು ನೇಮಿಸುವ ಮಸೂದೆಯನ್ನು ಮಂಡಿಸಿದ್ದಾಗ ವ್ಯಕ್ತಪಡಿಸಿದ್ದ ಭಾವನೆಗಳೇನಾದವು? ಎಂದು ಯಾರಾದರೂ ಕೇಳಬಹುದು. ಸೈಮನ್ ಕಮಿಶನ್ ನೇಮಿಸುವಾಗ ಮಸೂದೆಯನ್ನು ಮಂಡಿಸುವಾಗ 'ನಾವು ದಲಿತರ ವಿಶ್ವಸ್ಥರಾಗಿದ್ದೇವೆ (ಟ್ರಸ್ಟಿ) ಅವರ ರಕ್ಷಣೆಯ ವ್ಯವಸ್ಥೆ ಮಾಡದೆ ನಾವವರನ್ನು ಬೇರೆಯವರ ಕೈಗೆ ಒಪ್ಪಿಸಲಾರೆವು' ಎಂದೆಲ್ಲ ಹೇಳಿದ್ದರು. ಈ ಗಂಭೀರ ಭಾವನೆಯ ಪೂರ್ತಿ ಸೈಮನ್ ಕಮಿಶನ್ನಿನ ಶಿಫ಼ಾರಸ್ಸಿನಲ್ಲಿ ಕಾಣುತ್ತಿದ್ದೆಯೆ? ಮಾನ್ಯರೆ! ಬೇರೆಯವರು ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತಿದ್ದಾರೆ ಅನ್ನುವುದರ ಬಗ್ಗೆ ನಾವು ಜಾಗರೂಕರಾಗಿರಬೇಕು. ಬ್ರಿಟಿಷ್ ಸರ್ಕಾರ ನಮ್ಮ ದುರ್ದೈವವನ್ನು ಹೋಗಲಾಡಿಸಲಿಲ್ಲ ಆದರೆ

ಭಾರತದ ಸ್ವಾತಂತ್ರ್ಯದ ದಾರಿಗಡ್ಡವಾಗಲು ನಮ್ಮ ಸ್ಥಿತಿಯ ಬಗ್ಗೆ ಈ ರೀತಿಯ ಪ್ರಚಾರ ಮಾಡುತ್ತಿದ್ದಾರೇನೋ ಅನ್ನುವ ಭಯ ನನಗೆ ಕಾಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಬ್ರಿಟಿಷರು ನಮಗಾಗಿ ಸ್ವಲ್ಪವಾದರೂ ಒಳ್ಳೆಯದನ್ನು ಮಾಡಿದ್ದಾರೆ ಅನ್ನುವ ಬಗ್ಗೆ ವಿಚಲಿತರಾಗದೆ ಇನ್ನು ಮುಂದೆ ಭವಿಷ್ಯದಲ್ಲಿ ನಮ್ಮ ಪರಿಸ್ಥಿತಿ ಏನಾಗುತ್ತದೋ ಅನ್ನುವ ಅನವಶ್ಯಕ ಭಯವಿಟ್ಟುಕೊಳ್ಳದೆ ಹಾಗೂ ಹೆಚ್ಚು ಚಿಂತಿಸದೆ ಉದಾರತೆಯ ನಡವಳಿಕೆಯಲ್ಲದಿದ್ದರೂ ಯೋಗ್ಯ ನಡವಳಿಕೆ ಸಿಗಲೆಂದು ಒತ್ತಾಯ ಹೇರಬೇಕು. ಇದು ಅವರ ಕರ್ತವ್ಯ. ನಮ್ಮ ಪರಿಸ್ಥಿಯೂ ಹಾಗೇ ವೈಶಿಷ್ಟ್ಯಪೂರ್ಣವಾಗಿರುವುದರಿಂದ ಹಾಗೆ ಒತ್ತಾಯಿಸುವುದು ನಮ್ಮ ಹಕ್ಕು ಕೂಡ.

## ೫. ದಲಿತರು ಹಾಗೂ ಸ್ವಾತಂತ್ರ್ಯ

೨೫. ಮುಂಬರುವ ಸ್ವಯಂಶಾಸಿತ ಭಾರತದಲ್ಲಿ ನಮಗೆ ಯಾವ ರಕ್ಷಣೆಯ ವ್ಯವಸ್ಥೆ ಹಾಗೂ ಆಶ್ವಾಸನೆಗಳು ಬೇಕು ಅನ್ನುವುದರ ಬಗ್ಗೆ ನಾನು ಸಾಕಷ್ಟು ಮಾಹಿತಿ ಕೊಟ್ಟಿದ್ದೇನೆ ಎಂದು ನನಗನಿಸುತ್ತದೆ. ಆದರೆ ಈ ಪರಿಷತ್ತಿನಲ್ಲಿರುವ ವಿಷಯಗಳು ಇಷ್ಟಕ್ಕೆ ಮುಗಿಯುವುದಿಲ್ಲ. ದೇಶದಲ್ಲಿ ಇತ್ತೀಚೆಗೆ ನಡೆಯುತ್ತಿರುವಂತಹ ರಾಜಕೀಯ ಚಳುವಳಿಯ ಬಗ್ಗೆ ಈ ಪರಿಷತ್ತು ಚರ್ಚಿಸುವುದನ್ನು ಕಡೆಗಾಣಿಸಿದರೆ ಹಾಗೂ ಅದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸದಿದ್ದರೆ ಪರಿಷತ್ತಿನ ಉದ್ದೇಶ ಸಫಲವಾಗುವುದಿಲ್ಲ. ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಕಲಕತ್ತಾದಲ್ಲಿ ೧೯೨೮ರ ಡಿಸೆಂಬರ್‌ನಲ್ಲಿ ಆಯೋಜಿಸಿದ್ದ ಪರಿಷತ್ತಿನಲ್ಲಿ ಬ್ರಿಟಿಷ್ ಪಾರ್ಲಿಮೆಂಟಿಗೆ ಕೊಡಬೇಕಾದ ಕಡೆಯ ನೋಟೀಸಿನ ರೂಪದಲ್ಲಿ ಒಂದು ಮಸೂದೆಯನ್ನು ಮಂಜೂರು ಮಾಡಿಕೊಳ್ಳಲಾಯಿತು ಅನ್ನುವುದು ನಿಮಗೆಲ್ಲರಿಗೂ ನೆನಪಿರಬಹುದು. ಈ ಮಸೂದೆಯಲ್ಲಿ ಡಿಸೆಂಬರ್ ೧೯೨೮ರ ಒಳಗೆ ಭಾರತಕ್ಕೆ ಬ್ರಿಟಿಷ್ ಸಾಮ್ರಾಜ್ಯದ ಆಂತರಿಕ ಸಾರ್ವಭೌಮ ರಾಷ್ಟ್ರದ ದರ್ಜೆ ಕೊಡಬೇಕು ಅನ್ನುವ ಬೇಡಿಕೆ ಮುಂದಿಡಲಾಗಿದ್ದು ಇದರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಯಶಸ್ವಿಯಾಗದಿದ್ದರೆ ಭಾರತೀಯ ಕಾಂಗ್ರೆಸ್ ತನ್ನ ಗುರಿಯನ್ನು ಬದಲಿಸಿ ಸಂಪೂರ್ಣ ಸ್ವಾತಂತ್ರ್ಯ ಬೇಡುತ್ತದೆ ಅನ್ನುವ ಬೆದರಿಕೆಯನ್ನೂ ಕೊಡಲಾಗಿದೆ. ಕಾಂಗ್ರೆಸ್ಸಿನ ಅಂತಿಮ ಎಚ್ಚರಿಕೆಯ ಪತ್ರವನ್ನು ನೋಡಿ, 'ಭಾರತದ ದರ್ಜೆ ಬ್ರಿಟಿಷ್ ಸಾಮ್ರಾಜ್ಯದ ಆಂತರಿಕ ಸಾರ್ವಭೌಮತ್ವವಾಗಿರಬೇಕೆನ್ನುವುದೇ ಬ್ರಿಟೀಷರ ಉದ್ದೇಶ ಕೂಡ' ಎಂದು ವೈಸ್‌ರಾಯ್ ಅವರ ಮೂಲಕ ಘೋಷಿಸಲಾಯಿತು. ಆದರೆ ಕ್ರಾಂಗ್ರೆಸ್ಸಿಗೆ ಇದರಿಂದ ಸಮಧಾನವಾಗಲಿಲ್ಲ. 'ಅದೊಂದು ಉದ್ದೇಶವಾಗಿರಬೇಕು' ಅನ್ನುವುದಷ್ಟೆ ಅವರಿಗೆ ಸಾಕಾಗಿರಲಿಲ್ಲ ಸಾರ್ವಭೌಮತ್ವದ ದರ್ಜೆ ತಕ್ಷಣ ಕೊಡಬೇಕು ಎಂದವರಿಗೆ ಅನಿಸುತ್ತಿತ್ತು. ಹಾಗಾಗಿ ಅದರ ಅಧಿವೇಶನ ಡಿಸೆಂಬರ್ ೧೯೨೮ರಲಿ ಸೇರಿದ್ದಾಗ ಅದು ನಮ್ಮ ಗುರಿ ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕು ಅನ್ನುವುದಾಗಿದೆ ಎಂದು ಘೋಷಿಸುವ ಮಸೂದೆಯೊಂದನ್ನು ಮಂಜೂರು ಮಾಡಿ ಮತ್ತೊಂದು ಹೆಜ್ಜೆ ಮುಂದಿಟ್ಟಿತು. ಈ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ಸಿನ ಗುರಿಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನು ಅನ್ನುವುದನ್ನು ನೀವು ಘೋಷಿಸಬೇಕಾಗುತ್ತದೆ. ನಮ್ಮ ದೃಷ್ಟಿಯಿಂದ ಸ್ವಾತಂತ್ರ್ಯದ ಬೇಡಿಕೆಯನ್ನು ನಾವು ವಜಾಗೊಳಿಸಬಹುದು. ಆ ಬೇಡಿಕೆ ಅವ್ಯವಹಾರಿಕವಾಗಿದ್ದು ದೇಶದ ಸಧ್ಯದ ಪರಿಸ್ಥಿತಿಯಲ್ಲಿ ಸಂಕಟಕ ತರುವ ಸಾಧ್ಯತೆಗಳಿವೆ ಎಂದು ನನಗನಿಸುತ್ತದೆ. ಒಂದೇ ರಾಷ್ಟ್ರೀಯತ್ವದ ಭಾವನೆಯಿಂದ, ಒಂದೇ ಸಂವಿಧಾನದಿಂದ ಹಾಗೂ ಸಮಾನ ಭವಿಷ್ಯದಿಂದ ಬಂಧಿಸಲ್ಪಟ್ಟ ದೇಶದ ಜನರೇ ಸ್ವಾತಂತ್ರ್ಯದ ಅಪಾಯವನ್ನು ಎದುರಿಸಬಲ್ಲರು. ಇಂತಹ ಸ್ಥಿತಿಯಿಂದ ಈ ದೇಶ ನೂರಾರು ಮೈಲಿ ದೂರವಿದೆ ಅನ್ನುವುದನ್ನು ಯಾರೂ ಅಲ್ಲಗಳೆಯಲಾರರು. ದೇಶದ ಆಂತರಿಕ ಸ್ವಯಂಶಾಸನದ ಗುರಿ ಒಳ್ಳೆಯದೇ ಎಂದು ನನಗನಿಸುತ್ತದೆ. ಏಕೆಂದರೆ ಸಂಪೂರ್ಣ ಸ್ವಾತಂತ್ರ್ಯದ ಅಪಾಯ ತಪ್ಪಿಸಿ ನಮಗೆ

ಸ್ವಯಂಶಾಸಿತ ರಾಷ್ಟ್ರದ ಲಾಭ ಅದರಿಂದ ಸಿಗುತ್ತದೆ. ಕಾಂಗ್ರೆಸ್ಸಿನವರ ಮನಸ್ಸಿನಲ್ಲೇ ಅದರ ಬಗ್ಗೆ ಇನ್ನೂ ಅನುಮಾನವಿರುವುದರಿಂದ ಸಂಪೂರ್ಣ ಸ್ವಾತಂತ್ರ್ಯದ ಗುರಿಯ ಬೆಂಬಲವನ್ನು ನಾವು ನಿರಾಕರಿಸಬೇಕು.

೨೪. ಆದರೆ ಸಾಮ್ರಾಜ್ಯದೊಳಗಿನ ಸ್ವಯಂಶಾಸನಕ್ಕೆ ಸಂಬಂಧಿಸಿದಂತೆ ನಿಮ್ಮ ವಿಚಾರಗಳೇನು? ಏಕೆಂದರೆ ಇದು ಕೂಡ ಒಂದು ರೀತಿಯಲ್ಲಿ ಸ್ವರಾಜ್ಯ– ಅಂದರೆ ಜನತೆಯ, ಜನತೆಗಾಗಿ, ಜನತೆಯಿಂದ ನಡೆಸಲ್ಪಡುವ ಸರ್ಕಾರವಾಗಿರುತ್ತದೆ. ಈ ಪ್ರಶ್ನೆಯ ಬಗ್ಗೆ ನಿರ್ಧರಿಸುವಾಗ ನೀವು ಸಾಕಷ್ಟು ಯೋಚಿಸಬೇಕಾಗುತ್ತದೆ. ಈ ದೇಶದಲ್ಲಿ ಬ್ರಿಟಿಷರ ಆಗಮನ ಅದಕ್ಕೊಂದು ವರದಾನವಾಯಿತು ಅನ್ನುವುದರ ಬಗ್ಗೆ ಅನುಮಾನವಿಲ್ಲ. ಇವರ ಸಹಾಯವಿಲ್ಲದೆ ಭಾರತದಲ್ಲಿ ಬೌದ್ಧಿಕ ಜಾಗೃತಿ ಹಾಗೂ ಪ್ರಗತಿ ಇಷ್ಟು ಬೇಗ ಆಗುತ್ತಿತ್ತೋ ಇಲ್ಲವೊ ಅನ್ನುವುದು ಅನುಮಾನವೆ. ಸಮಾನತೆ, ಸ್ವಾತಂತ್ರ್ಯ, ಹಾಗೂ ಬಂಧುತ್ವದ ಮೂಲಭೂತ ತತ್ವಗಳಿಂದ ಕೂಡಿದ ಯುರೋಪಿಯನ್ ಸಂಸ್ಕೃತಿಯ ಆಧಾರವಿರದಿದ್ದಿದ್ದರೆ ಹಿಂದೂ ಧರ್ಮದಲ್ಲಿರುವ ಅನೇಕ ಕೆಟ್ಟ ರೂಢಿಪರಂಪರೆಗಳ ಬಗ್ಗೆ ಬ್ರಿಟಿಷರಿಗೆಂದೂ ನಾಚಿಕೆಯಾಗುತ್ತಿರಲಿಲ್ಲ. (ಸಮಾನತೆ, ಸ್ವಾತಂತ್ರ್ಯ ಹಾಗೂ ಬಂಧುತ್ವದ ಮೂಲಭೂತ ತತ್ವಗಳನ್ನು ಫ್ರೆಂಚ್ ಕ್ರಾಂತಿಯಿಂದಾಗಿ ಫ್ರೆಂಚ್ ರಾಷ್ಟ್ರ ಇಡೀ ಜಗತ್ತಿಗೆ ಕೊಟ್ಟ ಸಂದೇಶ, ಹಾಗೂ ಈ ತತ್ವಗಳನ್ನು ಮುಂದೇ ಇಡೀ ಜಗತ್ತು ಸ್ವೀಕರಿಸಿತು) ಏಕೆಂದರೆ ಇದು ಅವರ ಧರ್ಮ ಹಾಗೂ ನೀತಿಶಾಸ್ತ್ರದ ಒಂದು ಭಾಗವಾಗಿತ್ತು. ಭಾರತ ಹಾಗೂ ಯೂರೋಪಿನ ಈ ಎರಡೂ ಸಂಸ್ಕೃತಿಗಳು ಎದುರಾದಾಗ ಅವುಗಳಲ್ಲಿರುವ ವ್ಯಾತ್ಯಾಸ ಭಾರತೀಯರ ಗಮನಕ್ಕೆ ಬಂದು ಈ ಸಾಮಾಜಿಕ ದುಷ್ಟ ರೂಢಿ ಪರಂಪರೆಗಳು ತೊಲಗಬೇಕೆಂದೆನಿಸತೊಡಗಿತು. ಬೇರೆ ಯಾವುದೇ ಉಪಾಯದಿಂದ ಮರುಸಂಘಟನೆಯಾಗದಂತೆ ಈ ಅವಕಾಶ ಉಪಯೋಗಿಸಿಕೊಂಡು ಸಂಘಟಿಸಲಾಗುತ್ತಿದೆ. ಬ್ರಿಟಿಷರು ಭಾರತಕ್ಕೆ ಬರದಿದ್ದಿದ್ದರೆ ಒಂದೇ ಶಾಸನ ಪದ್ಧತಿ ಹಾಗೂ ಎಲ್ಲರಿಗೂ ಒಂದೇ ಕಾನೂನು ಅನ್ನುವ ವ್ಯವಸ್ಥೆ ಭಾರತಕ್ಕೆಂದೂ ಸಿಗುತ್ತಿರಲಿಲ್ಲ. ಯಾವುದೇ ಒಂದು ದೇಶದ ಏಳಿಗೆಗಾಗಿ ಇದೇನು ಸಣ್ಣಮಟ್ಟ ವಿಷಯವಲ್ಲ, ಭಾರತಕ್ಕಾಗಿ ಅದರ ಬೆಲೆ ಬಹಳ ದೊಡ್ಡದು. ದೇಶಭಕ್ತಿಯ ಭಾವನೆಯನ್ನು ಬೇಕಾದಷ್ಟು ಆಳವಾಗಿ ಬೇರುಬಿಡಬಹುದಾದಂತಹ ರೀತಿಯಲ್ಲಿ ಈ ಭೂಮಿ ಸಿದ್ಧವಾಗಿದ್ದು ಸ್ಥಿರ ರಾಜ್ಯ ಶಾಸನದ ಅಡಿಪಾಯವನ್ನು ಕೂಡ ಅವರು ತಯಾರಿಸಿಟ್ಟಿದ್ದಾರೆ. ಬ್ರಿಟಿಷರು ಹಣಕಾಸಿನ ವ್ಯವಸ್ಥೆ, ರಸ್ತೆ, ಕಾಲುವೆ, ರೇಲ್ವೆ, ಪೋಸ್ಟ್ ಇತ್ಯಾದಿ ಸುಧಾರಣೆಗಳನ್ನು ಮಾಡದೆ ದೇಶವನ್ನು ಆಧುನಿಕ ಸಂಸ್ಕೃತಿಯಿಂದ ದೂರವಿಟ್ಟರು ಎಂದು ಕೂಡ ಹೇಳುವಹಾಗಿಲ್ಲ.

೨೫. ಇದೆಲ್ಲ ನಿಜ, ಆದರೆ ಇದೆಲ್ಲ ಯಾವುದರ ಬದಲಾಗಿ? ಅನ್ನುವ ಪ್ರಶ್ನೆ ಎದುರಾಗುತ್ತದೆ. ಬ್ರಿಟಿಷ್ ಶಾಸನದಡಿ ಭಾರತದ ಪ್ರಜೆ ಒಂದು ರೀತಿಯಿಂದ ಕುಬ್ಜರಾಗುತ್ತಿದ್ದು ಅವರ ಬೆಳವಣಿಗೆ ಕುಂಠಿತವಾಗುತ್ತಿದೆ ಅನ್ನುವುದರಲ್ಲಿ ಅನುಮಾನವಿಲ್ಲ. ಕೈ. ಗೋಖಲೆಯವರ ಮಾತಿನಲ್ಲಿ ಹೇಳುವುದಾದರೆ 'ಎಲ್ಲ ದಿನಗಳನ್ನು ನಾವು ಕೀಳರಿಮೆಯಲ್ಲಿ ಕಳೆಯಬೇಕು, ಹಾಗೂ ನಮ್ಮಲ್ಲಿ ಸ್ವಲ್ಪ ಎತ್ತರದಲ್ಲಿರುವವರು ತಗ್ಗಿ ಬಗ್ಗಿ ನಡೆಯಬೇಕು'. ಸ್ವಯಂಶಾಸಿತ ದೇಶಗಳಲ್ಲಿ ಕಂಡುಬರುವ ಆತ್ಮ ಸನ್ಮಾನದ ಭಾವನೆ ಭಾರತದ ಯಾರಲ್ಲೂ ಕಂಡುಬರುವುದೇಯಿಲ್ಲ. ಯಾವ ನೈತಿಕ ಆಧಾರದ ಮೇಲೆ ಸ್ವಾತಂತ್ರ್ಯದ ಬೇಡಿಕೆಯನ್ನಿಟ್ಟಿದ್ದಾರೋ ಅದು ನಿಮಗೆ ಇಷ್ಟವಾಗಲಿಕ್ಕಿಲ್ಲ. ಅಷ್ಟೇಯಲ್ಲ ಒಬ್ಬ ರಾಕ್ಷಸನು ಧರ್ಮಗ್ರಂಥದ ಆಧಾರ ಪಡೆದು ತನ್ನ ಕಾರ್ಯ ಕೈಗೊಳ್ಳುವಂತೆ ಊಳಿಗಮಾನ್ಯರು ಸ್ವಾತಂತ್ರ್ಯ ಕೇಳುವುದನ್ನು ನೋಡಿ ನಿಮಗೆ ಬೇಸರದ ಜೊತೆಗೆ ಕ್ಷಣಹೊತ್ತು ಮಜವೆನಿಸಬಹುದು. ಅವರ ನೈತಿಕ ಸಾಮರ್ಥ್ಯವನ್ನು ನೋಡಿದರೆ ಬ್ರಿಟಿಷ್ ಆಳ್ವಿಕೆ ಬಹಳ ದುಬಾರಿಯಾಗಿ ಪರಿಣಮಿಸಿದೆ ಅನ್ನುವುದರಲ್ಲಿ ಅನುಮಾನವಿಲ್ಲ ಅನ್ನುವ ನನ್ನ ಈ ಮಾತನ್ನು ನೀವು

ನಂಬಲಿಕ್ಕಿಲ್ಲ, ದೇಶದಲ್ಲಿ ಶಾಂತಿ ಹಾಗೂ ಸೌಹಾರ್ದತೆ, ಸುರಕ್ಷಿತತೆಗಾಗಿ ನಾವು ಯಾವ ಬೆಲೆಯನ್ನೂ ತೆತ್ತರೂ ಕಡಿಮೆಯೆ ಎಂದು ನನ್ನೊಡನೆ ವಾದಿಸಬಹುದು. ಆದರೆ ನೀವು ಹೆಮ್ಮೆಪಡಬಹುದಾದಂತಹ ಒಂದು ವಿಷಯವೂ ಇದೆ, ಈ ದೇಶದ ದಾರಿದ್ರ್ಯ! ಬಡತನದಲ್ಲಿ ಜಗತ್ತಿನ ಯಾವುದೇ ದೇಶ ಭಾರತವನ್ನು ಮೀರಿಸಿಲ್ಲ ಅನ್ನುವಷ್ಟು ಬಡತನವಿದೆಯೆ? ೧೯ನೆಯ ಶತಮಾನದ ಮೊದಲನೆಯ ೨೫ ವರ್ಷಗಳಲ್ಲಿ ಬ್ರಿಟಿಷರ ಆಳ್ವಿಕೆಯನ್ನುಒಪ್ಪಿಕೊಳ್ಳುವಂತಹ ಪರಿಸ್ಥಿಯಲ್ಲಿದ್ದಾಗ ೧೦ ಲಕ್ಷ ಜನರ ಬಲಿ ತೆಗೆದುಕೊಳ್ಳುವಂತಹ ಬರಗಾಲ ಬಂತು. ಮುಂದಿನ ಇಪ್ಪತ್ತೈದು ವರ್ಷಗಳಲ್ಲಿ ಎರಡು ಸಲ ಬರಗಾಲ ಬಂತು ಹಾಗೂ ಅದರಲ್ಲಿ ನಾಲ್ಕು ಲಕ್ಷ ಜನ ಸತ್ತರು. ಮತ್ತೂ ಮುಂದಿನ ೨೫ ವರ್ಷಗಳಲ್ಲಿ ಎದುರಿಸಬೇಕಾಗಿ ಬಂದ ಆರು ಬರಗಾಲಗಳಲ್ಲಿ ಸತ್ತ ಜನರ ಸಂಖ್ಯೆ ೫೦ ಲಕ್ಷಕ್ಕೆ ಏರಿತು. ಹಾಗೂ ಈ ಶತಕದ ಕಡೆಯ ಇಪ್ಪತ್ತೈದು ವರ್ಷಗಳಲ್ಲಿ ನಮಗೆ ಕಾಣುವುದೇನು? ಹದಿನೆಂಟು ಬರಗಾಲಗಳು! ಹಾಗೂ ಅದರಲ್ಲಿ ಸತ್ತ ಜನರ ಸಂಖ್ಯೆ ಒಂದು ಕೋಟಿ ಐವತ್ತು ಲಕ್ಷದಿಂದ ಹಿಡಿದು ಎರಡು ಕೋಟಿ ಆರವತ್ತು ಲಕ್ಷದ ತನಕ.ಹಾಗೂ ಒಂದೇ ವರ್ಷದಲ್ಲಿ ಸರ್ಕಾರದ ಭಿಕ್ಷಾಗೃಹದಲ್ಲಿಡಲಾಗಿದ್ದ ಆರವತ್ತು ಲಕ್ಷ ಜನರನ್ನು ಇದರಲ್ಲಿ ಸೇರಿಸಿಲ್ಲ. ಮಾನ್ಯರೆ! ಇದಕ್ಕೆ ಕಾರಣವೇನಿರಬಹುದು? ಬ್ರಿಟಿಷರು ಈ ದೇಶದಲ್ಲಿ ಅವಲಂಬಿಸಿರುವ ಧೋರಣೆಯೇ ಇದಕ್ಕೆ ಕಾರಣ ಎಂದು ಸ್ಪಷ್ಟವಾಗಿ ಹೇಳಬಹುದು. ಈ ದೇಶದ ವ್ಯಾಪಾರ ಹಾಗೂ ಕಾರ್ಖಾನೆಗಳನ್ನು ಕಡಿಮೆ ಮಾಡುವುದೇ ಇವರ ಗುರಿಯಾಗಿದೆ.ಕೇವಲ ತರ್ಕದ ಆಧಾರದ ಮೇಲೆ ಈ ಆರೋಪ ಹೊರೆಸಿಲ್ಲ, ಭಾರತ ಯಾವತ್ತೂ ಬ್ರಿಟಿಷರು ತಯಾರಿಸುವ ವಸ್ತುಗಳ ಗ್ರಾಹಕರಾಗಿರಬೇಕು ಅನ್ನುವ ರೀತಿಯಲ್ಲಿ ಭಾರತದ ರಾಜ್ಯ ನಡೆಸಲಾಗುತ್ತಿದೆ. ಇದು ಬ್ರಿಟಿಷ್ ಶಾಸನದ ಮುಖ್ಯ ಸೂತ್ರ. ಈ ಧೋರಣೆಯಿಂದ ಭಾರತ ಯುಗಯುಗಳ ತನಕ ಬಡ ದೇಶವಾಯಿತು. ಮುಂಬರುವ ಆರು ತಿಂಗಳಗಳವರೆಗೆ ಹೊಟ್ಟೆಗೆ ಸರಿಯಾಗಿ ಅನ್ನವೂ ಸಿಗುವ ಸಾಧ್ಯತೆಯಿರದ ದಲಿತ ಒಕ್ಕಲಿಗರು ಈ ದೇಶವನ್ನು ಬಡವಾಗಿಸುವ ಕಾರ್ಯದಲ್ಲಿ ಬಲಿಯಾಗಿರಬೇಕು. ಅವರ ದಿನನಿತ್ಯದ ಬಡತನದಿಂದಾಗಿ ಬರಗಾಲದಲ್ಲಿ ಅವರು ಸಾಯಬಹುದಾದಂತಹ ಅನುಕೂಲ ಸ್ಥಿತಿ ಅವರಲ್ಲಿತ್ತು ಆದ್ದರಿಂದ ಬರಗಾಲಕ್ಕೇ ಅವರೇ ಹೆಚ್ಚು ತುತ್ತಾಗಿರಬೇಕು. ಬಲಿಯಾದ ಜನ ನಿಮ್ಮವರಾಗಿದ್ದರೆ, ಅವರ ಬಗ್ಗೆ ನಿಮ್ಮ ಮನಸಿನಲ್ಲಿ ಸ್ವಲ್ಪವಾದರೂ ಕನಿಕರವಿದ್ದರೆ ನೀವು ಕಣ್ಣು ಮುಚ್ಚಿ ಕುಳಿತುಕೊಳ್ಳಲಾರಿರಿ, ಅಥವಾ ಹೃದಯವೇ ಕಿತ್ತು ಬರುವಂತಹ ಸನ್ನಿವೇಶದಲ್ಲಿ ಉದಾಸೀನರಾಗಿ ಸುಮ್ಮನಿರಲಾರಿರಿ. ಮಾನ್ಯರೆ! ಕೇವಲ ಹೊಸ ರಸ್ತೆಗಳನ್ನು ಕಟ್ಟುವುದರಿಂದ. ಹೊಸ ಕಾಲುವೆಗಳನ್ನು ಕಟ್ಟುವುದರಿಂದ, ರೇಲ್ವೆ ತರುವುದರಿಂದ, ಪೋಸ್ಟಿನ ಮೂಲಕ ಹಣ ತಲುಪಿಸುವುದರಿಂದ, ಹೊಸ ಸುಧಾರಿತ ಹಣಕಾಸಿನ ವ್ಯವಸ್ಥೆ ತರುವುದರಿಂದ, ಭೂಗೋಳ ಇಲ್ಲವೆ ಖಗೋಳಶಾಸ್ತ್ರದ ಹೊಸ ಸಿದ್ಧಾಂತಗಳನ್ನು ಮಂಡಿಸುವುದರಿಂದ ಅಥವಾ ಆಂತರೀಕ ಜಗಳಗಳನ್ನು ನಿಲ್ಲಿಸಿದ್ದರಿಂದ ಬ್ರಿಟಿಷರ ಆಡಳಿತ ವರ್ಗವನ್ನು ಸ್ತುತಿಸುತ್ತ ನೀವು ಸುಮ್ಮನೆ ಕುಳಿತುಕೊಳ್ಳಲಾಗುವುದಿಲ್ಲ. ಸುರಕ್ಷೆ ಹಾಗೂ ಸುವ್ಯವಸ್ಥೆಯನ್ನು ನಿಭಾಯಿಸಿದ್ದಕ್ಕಾಗಿ ಅವರು ಮೆಚ್ಚುಗೆಗೆ ಪಾತ್ರರು ಹೌದು ಆದರೆ ಮಾನ್ಯರೆ! ದಲಿತರಿಂದ ಹಿಡಿದು ಎಲ್ಲ ಜನರು ಸುವ್ಯವಸ್ಥೆ ಇಲ್ಲವೆ ಸುರಕ್ಷೆಯನ್ನು ತಿಂದು ಬದುಕುತ್ತಿಲ್ಲ ಅವರುಗಳು ರೊಟ್ಟಿ ತಿಂದು ಬದುಕುತ್ತಿದ್ದಾರೆ, ಅನ್ನುವುದನ್ನು ನಾವು ಮರೆಯುವಂತಿಲ್ಲ. ಜೀವನದ ಈ ಕಠೋರ ಸತ್ಯದಿಂದಾಗಿ ದೇಶದ ಆರ್ಥಿಕ ಏಳಿಗೆ ತರುವುದರ ಮೂಲಕ ಭೌತಿಕ ಜೀವನದಲ್ಲೂ ಸುಧಾರಣೆ ತರಬಹುದಾದಂತಹ ಸರ್ಕಾರ ಕೇಳುವುದು ಈಗ ದಲಿತರಿಗೂ ಅಗತ್ಯವಾಗಿದೆ. ಜನರ ಬಡತನಕ್ಕೆ ಉತ್ಪಾದನೆಯ ಕೊರತೆಯಾಗಿದ್ದು ಆಗುವ ಉತ್ಪಾದನೆಯಲ್ಲೂ ಸಮಾನ ಭಾಗ ಸಿಗುವುದಿಲ್ಲ ಅನ್ನುವ ವಿಷಯ ನಿಮ್ಮಲ್ಲ್ಯಾರಾದರೂ ಎತ್ತಬಹುದು. ಈ ದೇಶದ ಬಡ ಕಾರ್ಮಿಕರಿಂದ

ದೊಡ್ಡ ಬಂಡವಾಳದಾರರು ಹಾಗೂ ಜಮೀನುದಾರರು ಒತ್ತಾಯದಿಂದ ವಸೂಲು ಮಾಡುವ ಹಣದತ್ತ ಗಮನ ಹರಿಸಿದರೆ ಪ್ರಜೆಗಳು ಇಡೀ ವರ್ಷ ಮಾಡಿದ ಬ್ರಿಟೀಷರ ಸ್ತುತಿಗೆ ಅರ್ಥವೇ ಉಳಿಯುವುದಿಲ್ಲ ಅನಿಸಿಬಿಡುತ್ತದೆ. ಹಾಗಾಗಿ ಶೋಷಣೆ ಮಾಡುವ ಬಂಡವಾಳದಾರರು ಹಾಗೂ ಜಮೀನುದಾರರ ಕಪಿಮುಷ್ಟಿಯಿಂದ ಜನರನ್ನು ಬ್ರಿಟಿಷ್ ಸರ್ಕಾರ ಬಿಡಿಸಬೇಕೆನ್ನುವ ಅಪೇಕ್ಷೆ ನೀವು ಹೇಗೆ ಮಾಡಲು ಸಾಧ್ಯ ಅನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಒಂದು ಮುಖ್ಯವಾದ ವಿಷಯವನ್ನು ನಾವು ಗಮನಿಸಬೇಕು. ಪ್ರೊ. ಡಾಯಸಿಯವರು ಹೇಳಿದಂತೆ ಯಾವುದೇ ಸರ್ಕಾರ ಅದೆಷ್ಟೇ ಶಕ್ತಿಶಾಲಿಯಾಗಿದ್ದರೂ ಅದಕ್ಕೆ ಎರಡು ವಿಷಯಗಳ ಮಿತಿಯಿರುತ್ತದೆ. ಮೊದಲನೆಯದಾಗಿ ಆಂತರೀಕ ಮಿತಿ, ಅದು ರಾಜ್ಯವನ್ನಾಳುವವರ ಸ್ವಭಾವ, ಉದ್ದೇಶ ಹಾಗೂ ಹಿತಸಂಬಂಧಗಳನ್ನವಲಂಬಿಸಿರುತ್ತದೆ. ಬ್ರಿಟಿಷ್ ಸರ್ಕಾರ ಭಾರತೀಯ ಸಮಾಜದಲ್ಲಿ ಪ್ರಚಲಿತವಿರುವ ಶಕ್ತಿಗಳಿಗೆ ಚಾಲನೆ ಕೊಡದಿರುವುದರರ್ಥ ಹಾಗೆ ಮಾಡುವುದು ಅವರ ಉದ್ದೇಶಕ್ಕೆ ವಿರುದ್ಧವಾಗಿದೆ, ಶಿಕ್ಷಣದ ಬಗ್ಗೆ ಅವರು ಉದಾಸೀನರಾಗಿದ್ದು ಸ್ವದೇಶಿಯ ವಿರೋಧದಲ್ಲಿದ್ದಾರೆ ಏಕೆಂದರೆ ಅವರದಕ್ಕೆ ಬೆಂಬಲ ಕೊಡುತ್ತಿಲ್ಲ ಎಂದಲ್ಲ. ಅದು ಅವರ ಸ್ವಭಾವ ಹಾಗೂ ಉದ್ದೇಶದ ವಿರುದ್ಧವಾಗಿದೆ. ರಾಜ್ಯವಾಳುವವರ ಮೇಲಿರುವ ಎರಡನೆಯ ಮಿತಿಯೆಂದರೆ ಹೊರಗಿನಿಂದ ಪ್ರತಿಭಟನೆಯಾಗುವ ಭಯ ಅವರಿಗೆ ಕಾಡುತ್ತದೆ. ಭಾರತೀಯ ಸಮಾಜದ ಜೀವನ ಮೌಲ್ಯಗಳನ್ನೇ ನಾಶ ಮಾಡಬಹುದಾದಂತಹ ಸಾಮಾಜಿಕ ದೋಷಗಳ ಗಾಂಭೀರ್ಯ ಬ್ರಿಟಿಷರಿಗೆ ಗೊತ್ತಿಲ್ಲವೆ? ಭಾರತದ ಜಮೀನುದಾರರು ಜನತೆಯನ್ನು ಶೋಷಣೆ ಮಾಡುತ್ತಿದ್ದಾರೆ ಅನ್ನುವುದು ಸರ್ಕಾರಕ್ಕೆ ಗೊತ್ತಿಲ್ಲವೆ? ಭಾರತದ ಬಂಡವಾಳದಾರರು ಕಾರ್ಮಿಕರಿಗೆ ಬದುಕು ಸಾಗಿಸಲು ಅಗತ್ಯವಿರುವ ವೇತನ ಹಾಗೂ ಯೋಗ್ಯವಾದ ಸವಲತ್ತುಗಳನ್ನು ಕೊಡುತ್ತಿಲ್ಲ ಅನ್ನುವುದು ಈ ಸರ್ಕಾರಕ್ಕೆ ಗೊತ್ತಿಲ್ಲವೆ? ಇದೆಲ್ಲ ಸರ್ಕಾರಕ್ಕೆ ಗೊತ್ತಿದೆ. ಆದರೆ ಇವರ್ಯಾರನ್ನು ಮುಟ್ಟುವ ಧೈರ್ಯ ಅವರಿನ್ನೂ ಮಾಡಿಲ್ಲ ಯಾಕೆ? ಈ ಪದ್ಧತಿಗಳನ್ನು ನಷ್ಟ ಮಾಡುವ ಕಾನೂನುಬದ್ಧ ಅಧಿಕಾರ ಅವರಿಗಿಲ್ಲವೆಂದೆ? ಅಲ್ಲವೆ ಅಲ್ಲ. ಅವರು ಈ ವಿಷಯದಲ್ಲಿ ತಲೆಹಾಕದಿರುವುದಕ್ಕೆ ಕಾರಣ ಈಗಿರುವ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯನ್ನವರು ಸುಧಾರಿಸಿದರೆ ಪ್ರತಿಭಟನೆಯಾಗಬಹುದು ಅನ್ನುವ ಭಯ ಅವರಿಗಿತ್ತು. ಈ ಸರ್ಕಾರದಿಂದ ಯಾರಿಗೆ ಯಾವ ಲಾಭವಿದೆ? ಹೀಗೆ ಎರಡೂ ಕಡೆಯಿಂದ ಕುಂಟು, ದುರ್ಬಲ ಸರ್ಕಾರದ ಆಧಿಪತ್ಯದಲ್ಲಿ ಜೀವನ ಹೇಗಿದೆಯೋ ಹಾಗೇ ಸ್ಥಿರವಾಗಿರುತ್ತದೆ. ದೇಶದ ಒಳಿತಿಗಾಗಿ ಅವಿರತವಾಗಿ ತನ್ನ ನಿಷ್ಠೆಯನ್ನು ಹರಿಯಬಿಡುವಂತಹ ಜನ, ಅಧಿಕಾರದಲ್ಲಿರುವಂತಹ ಸರ್ಕಾರ ನಮಗೆ ಬೇಕು. ಆಜ್ಞಾಪಾಲನೆಯ ಭಾವನೆ ಎಲ್ಲಿ ಮುಗಿಯುತ್ತದೆ ಹಾಗೂ ಪ್ರತಿಭಟನೆ ಯಾವಾಗ ಆರಂಭವಾಗುತ್ತದೆ ಅನ್ನುವುದರ ಬಗ್ಗೆ ಅರಿವಿದ್ದು ಕೂಡ ಅತ್ಯಂತ ಅವಶ್ಯಕವಾಗಿರುವಂತಹ ನ್ಯಾಯ, ಆರ್ಥಿಕ ಹಾಗೂ ಸಾಮಾಜಿಕ ಸುಧಾರಣೆ ಮಾಡಲು ಹಿಂಜರಿಯದಂತಹ ಸರ್ಕಾರ ನಮಗೆ ಬೇಕು. ಬ್ರಿಟಿಷ್ ಸರ್ಕಾರ ಇದೆಲ್ಲವನ್ನು ಪಾಲಿಸಲು ಯಾವತ್ತೂ ಸಮರ್ಥವಾಗಿಲ್ಲ. ಜನತೆಯ, ಜನತೆಗಾಗಿ ಹಾಗೂ ಜನತೆಯಿಂದ ನಡೆಸಲ್ಪಡುವ ಸರ್ಕಾರ, ಮತ್ತೊಂದು ಭಾಷೆಯಲ್ಲಿ ಹೇಳಬೇಕೆಂದರೆ ಸ್ವಕೀಯ ಸರ್ಕಾರಕ್ಕೆ ಮಾತ್ರ ಇದೆಲ್ಲ ಸಾಧ್ಯ.

೨೬. ನಿಮ್ಮ ಉದ್ದೇಶಕ್ಕಷ್ಟೇ ಸೀಮಿತವಾಗಿಟ್ಟುಕೊಂಡು ಈ ಪ್ರಶ್ನೆಯ ಬಗ್ಗೆ ಯೋಚಿಸಿ. ಬ್ರಿಟಿಷರು ಬರುವ ಮುನ್ನ ಅಸ್ಪೃಶ್ಯತೆಯಿಂದ ನಿಮ್ಮ ಸ್ಥಿತಿ ಅತ್ಯಂತ ದಯನೀಯವಾಗಿತ್ತು. ನಿಮ್ಮ ಅಸ್ಪೃಶ್ಯತೆಯನ್ನು ತೊಲಗಿಸಲು ಬ್ರಿಟಿಷರೇನಾದರೂ ಮಾಡಿದ್ದಾರೆಯೆ? ಬ್ರಿಟಿಷರು ಬರುವ ಮೊದಲು ಹಳ್ಳಿಯ ಭಾವಿಗಳಲ್ಲಿ ನೀವು ನೀರು ತುಂಬಲು ಸಾಧ್ಯವಿರಲಿಲ್ಲ, ನಿಮ್ಮ ಈ ಹಕ್ಕುಗಳನ್ನು ಮರಳಿಸಲು ಬ್ರಿಟಿಷ್ ಸರ್ಕಾರ

ಎಂದಾದರೂ ಪ್ರಯತ್ನಿಸಿದೆಯೆ? ಬ್ರಿಟಿಷರು ಬರುವ ಮುನ್ನ ದೇವಸ್ಥಾನದಲ್ಲಿ ನೀವು ಪ್ರವೇಶಿವಂತಿರಲಿಲ್ಲ, ಈಗ ನೀವು ಪ್ರವೇಶಿಸುತ್ತಿದ್ದೀರಾ? ಬ್ರಿಟಿಷರು ಬರುವ ಮುನ್ನ ನೀವು ಪೋಲಿಸ್ ಖಾತೆಯಲ್ಲಿ ಪ್ರವೇಷಿಸುವಂತಿರಲಿಲ್ಲ, ಬ್ರಿಟಿಷ್ ಸರ್ಕಾರ ಈಗ ನಿಮ್ಮನ್ನು ಪೊಲೀಸ್ ಖಾತೆಯಲ್ಲಿ ಕೆಲಸ ಕೊಡಿಸುತ್ತಿದೆಯೆ? ಬ್ರಿಟಿಷರು ಬರುವ ಮುನ್ನ ಸೈನ್ಯದಲ್ಲಿ ನಿಮಗೆ ಕೆಲಸ ಮಾಡುವ ಅನುಮತಿಯಿರಲಿಲ್ಲ, ಆ ಸೌಲಭ್ಯ ನಿಮಗೆ ಈಗ ಇದೆಯೆ? ಮಾನ್ಯರೆ! ಮೇಲಿನ ಯಾವುದೇ ಪ್ರಶ್ನೆಗಳಿಗೆ ನೀವು ಹೌದೆನ್ನುವ ಉತ್ತರ ಕೊಡಲಾರಿರಿ. ಈ ದೇಶವನ್ನು ಇಷ್ಟೊಂದು ವರ್ಷಗಳತನಕ ಆಳಿದವರು ಯಾವುದಾದರೂ ಒಳ್ಳೆಯ ಕೆಲಸಗಳನ್ನು ಮಾಡಬಹುದಿತ್ತು. ಆದರೆ ನಿಮ್ಮ ಪರಿಸ್ಥಿತಿಯಲ್ಲಿ ಹೇಳಿಕೊಳ್ಳುವಂತಹ ಯಾವುದೇ ಬದಲಾವಣೆಯಾಗಿಲ್ಲ. ನಿಮಗೆ ಸಂಬಂಧಪಟ್ಟ ವಿಷಯದಲ್ಲಂತೂ ಬ್ರಿಟಿಷರು ತಾವು ಬರುವಾಗ ಇದ್ದ ಪರಿಸ್ಥಿತಿಯನ್ನೇ ಇಂದಿನವರೆಗೂ ನಿಷ್ಠೆಯಿಂದ ಕಾಪಾಡಿಕೊಂಡು ಬಂದಿದ್ದಾರೆ. ಒಮ್ಮೆ ಒಬ್ಬ ಚೀನಾದ ದರ್ಜಿಯೊಬ್ಬನಿಗೆ ಹೊಸ ಕೋಟ್ ಮಾಂಗ್‌ಲು ಕೊಟ್ಟರಂತೆ ಹಾಗೂ ಹಳೆಯ ಕೋಟನ್ನು ತೋರಿಸಿ ಹೀಗೆ ಮಾಂಗ್‌ಬೇಕೆಂದರಂತೆ. ಆ ದರ್ಜಿ ಬಹಳ ಮುತುವರ್ಜಿಯಿಂದ ಹಳೆಯ ಕೋಟಿಗಿದ್ದಂತೆಯೇ ಹೊಸ ಕೋಟಿಗೂ ತೇಪೆ ಹಚ್ಚಿ, ತೂತು ಮಾಡಿ ಹೊಲೆದನಂತೆ. ಬ್ರಿಟಿಷರು ನಿಮ್ಮ ಸಮಾಜರಚನೆಯಲ್ಲಿದ್ದ ದೋಷದ ತೂತುಗಳನ್ನು ಹಾಗೂ ವರ್ಣ ವ್ಯವಸ್ಥೆಯಲ್ಲಿದ್ದ ತೇಪೆಗಳನ್ನು ಸರಿಪಡಿಸದೆ ಹಾಗೇ ಇಟ್ಟರು. ಬ್ರಿಟಿಷರ ಎಲ್ಲ ಶಕ್ತಿ ಹಾಗೂ ತತ್ವಗಳ ಬಗ್ಗೆ ಯೋಚಿಸಿದಾಗ ದೂರುಗಳನ್ನು ನಿವಾರಿಸುವ ಇಲ್ಲವೆ ಸಮಾಜರಚನೆಯಲ್ಲಿ ಬದಲಾವಣೆ ತರುವ ಯೋಗ್ಯತೆ ಬ್ರಿಟಿಷರಲ್ಲಿರಲಿಲ್ಲ ಎಂದೇ ಹೇಳಬೇಕಾಗುತ್ತದೆ. ಎಲ್ಲಿಯವರೆಗೆ ಶಾಸನದ ಅಧಿಕಾರಗಳು ನಿಮ್ಮ ಕೈಗೆ ಬರುವುದಿಲ್ಲವೊ ಅಲ್ಲಿಯವರೆಗೆ ನಿಮ್ಮ ದುಃಖಗಳ ನಿವಾರಣೆ ಸಾಧ್ಯವಿಲ್ಲ, ಹಾಗೂ ಬ್ರಿಟಿಷರ ರಾಜ್ಯ ಇಲ್ಲಿರುವವರೆಗೆ ಶಾಸನದ ಅಧಿಕಾರಗಳು ನಿಮ್ಮ ಕೈಸೇರಲಾರವು. ಕೇವಲ ಸ್ವತಂತ್ರ ಸಂವಿಧಾನದಲ್ಲೇ ನಿಮ್ಮ ಕೈಗೆ ಶಾಸನದ ಅಧಿಕಾರಗಳ ಪಾಲು ಸಿಗುವ ಸಾಧ್ಯತೆಗಳಿದ್ದು ಅದಿಲ್ಲದೆ ನೀವು ನಿಮ್ಮ ಜನರಿಗೆ ಅಸ್ಪೃಶ್ಯತೆಯಿಂದ ಮುಕ್ತಿ ದೊರಕಿಸಿಕೊಡಲಾರಿರಿ. ನಮ್ಮ ದೇಶದ ಅನೇಕ ಜನರ ಕೈಯಲ್ಲಿ ಸ್ವಾತಂತ್ರ್ಯವೆಂದರೆ ದೆವ್ವದಾಟದಂತಿದೆ ಅನ್ನುವುದೂ ನನಗೆ ಗೊತ್ತು. ನಮ್ಮ ದೇಶದ ಜನರು ಪೇಶ್ವೆ ಕಾಲದಲ್ಲಿ ದಲಿತರ ಮೇಲೆಸಗಿದ ಅನ್ಯಾಯ, ಅತ್ಯಾಚಾರ, ಎಲ್ಲವೂ ನನಗೆ ನೆನಪಿದೆ ಹಾಗೂ ಮುಂಬರುವ ಸ್ವತಂತ್ರದೇಶದಲ್ಲೂ ಇದೇ ಅತ್ಯಾಚಾರಗಳಾಗುತ್ತವೇನೋ ಅನ್ನುವ ಭಯವೂ ನನಗಿದೆ. ಆದರೆ, ಮಾನ್ಯರೆ! ಸ್ವಲ್ಪ ಸಮಯಕ್ಕಾಗಿ ನೀವು ಭೂತಕಾಲವನ್ನು ಮರೆಯಲೆತ್ನಿಸಿದರೆ ಹಾಗೂ ಮುಂಬರುವ ಸ್ವಾತಂತ್ರ್ಯದಲ್ಲಿ ಕೆಲವು ಜಾತಿಗಳಿಂದ ಸಾಮಾನ್ಯ ಜನರನ್ನು ರಕ್ಷಿಸುವ ಸಂವಿಧಾನಯುಕ್ತ ಸಂರಕ್ಷಣೆ ವ್ಯವಸ್ಥೆಯ ಬಗ್ಗೆ ನೀವು ಯೋಚಿಸಿದರೆ ಮುಂಬರುವ ಸ್ವಾತಂತ್ರ್ಯ ದೆವ್ವದಾಟವಾಗದೆ ಶಾಸನದ ಅಧಿಕಾರ ನಿಮ್ಮ ಕೈಗೆ ಬರುವ ಸಾಧ್ಯತೆಗಳು ನಿಮಗೆ ಕಂಡಾವು. ಉಳಿದವರೊಡನೆ ನೀವೂ ಈ ದೇಶವನ್ನಾಳುವ ಸಾರ್ವಭೌಮರಾಗುತ್ತೀರಿ. ಭೂತಕಾಲದ ಭೂತ ನಿಮ್ಮಮೇಲೆರಗಲು ಬಿಡಬೇಡಿ. ಯಾವುದೇ ಭಯ ಅಥವಾ ಉಪಕಾರದ ಪರಿಣಾಮ ನಿಮ್ಮ ನಿರ್ಧಾರವನ್ನು ಅಲುಗಿಸದಿರಲಿ. ನಿಮ್ಮ ಏಳಿಗೆಯ ಬಗ್ಗೆ ಯೋಚಿಸಿದರೆ ಸ್ವಾತಂತ್ರ್ಯವೇ ನಿಮ್ಮ ಗುರಿ ಅನ್ನುವುದನ್ನು ನೀವು ಒಪ್ಪುವಿರಿ ಅನ್ನುವ ಭರವಸೆ ನನಗಿದೆ.

೨೭. ಈ ಮನೋಭಾನೆಯನ್ನು ನೀವು ಒಪ್ಪುತ್ತಿದ್ದರೆ ಭಾರತದ ಮುಂಬರುವ ಸ್ವಾತಂತ್ರ್ಯದ ಬಗ್ಗೆ ಸೈಮನ್ ಕಮಿಶನ್ ಯೋಜನೆಗೆ ನೀವು ಒಪ್ಪಿಗೆ ಕೊಡಲಾರಿರಿ, ಕಮಿಶನ್ನಿನ ರಿಪೋರ್ಟಿನ ಮಾಹಿತಿಯ ವಿವರದಲ್ಲಿ ನಾನು ಹೆಚ್ಚು ಒಳಹೊಕ್ಕುವುದಿಲ್ಲ, ಹಾಗೆ ಮಾಡಲು ನನ್ನಲ್ಲಿ ಹೆಚ್ಚು ಸಮಯವೂ ಇಲ್ಲ. ಕಮಿಶನ್ ಸೂಚಿಸಿರುವ ಯೋಜನೆಯಲ್ಲಿ ದೇಶದ ಸರ್ಕಾರದ ಜವಾಬ್ದಾರಿ ಎಷ್ಟು ಅನ್ನುವುದರ ಕಡೆ ನಿಮ್ಮ

ಗಮನ ಸೆಳೆಯುವುದರಲ್ಲೇ ನಾನು ಸಮಾಧಾನಪಟ್ಟುಕೊಳ್ಳುತ್ತೇನೆ. ಕೇಂದ್ರ ಸರ್ಕಾರದಲ್ಲಿಯ ಕಾರ್ಯಕಾರಿ ಮಂಡಳದ ಮಂತ್ರಿ ಮಂಡಳದ ಸ್ಥಿತಿಯಲ್ಲಿ ಕಮಿಶನ್ ಯಾವುದೇ ಮೂಲಭೂತ ಬದಲಾವಣೆ ಸೂಚಿಸಿಲ್ಲ. ಈ ಕಾರ್ಯಕಾರಿ ಮಂಡಳವು ಈಗಿರುವಂತೆ ಮುಂದೆಯೂ ಬೇಜವಾಬ್ದಾರಿಯಾಗೇ ಇರುತ್ತದೆ. ಪ್ರಾಂತ್ಯದ ಕಾರ್ಯಕಾರಿ ಮಂಡಳವು ವಿಧಾನಸಭೆಗೆ ಜವಾಬ್ದಾರಿ ವಹಿಸುವ ಪ್ರಯತ್ನ ಮಾಡಿದೆ. ಆದರೆ ಅದರ ಮೇಲೆ ಗವರ್ನರ್ ಸಾಹೇಬರ ಅಧಿಕಾರಗಳ ಬಂಧನ ಹೇರಲಾಗಿದೆ ಹಾಗೂ ಸಂಕಟಗ್ರಸ್ತ ಕಾಲದಲ್ಲಿ ವಿಧಾನಸಭೆಗೆ ಜವಾಬ್ದಾರರಲ್ಲದ ಕಾರ್ಯಕಾರಿ ಮಂಡಳವನ್ನು ನೇಮಿಸುವ ಅಧಿಕಾರ ಗವರ್ನರ್‌ಗೆ ಕೊಡಲಾಗಿದೆ. ಹೀಗಾದರೆ ಗವರ್ನರ್ ಯಾವುದೇ ಖಾತೆಯನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳಬಹುದಾಗಿದೆ. ಮಾನ್ಯರೆ! ಸೈಮನ್ ಕಮಿಶನ್ನಿನ ಈ ಯೋಜನೆಯ ಬಗ್ಗೆ ನನ್ನ ಅಭಿಪ್ರಾಯವಿಷ್ಟೆ, ಈ ಸಮಸ್ಯೆಯತ್ತ ಎರಡು ರೀತಿಯಿಂದ ನೋಡಬಹುದು. ಮೊದಲನೆಯದು, ಭಾರತದ ಕೇಂದ್ರ ಸಭೆ ಹಾಗೂ ಪ್ರಾಂತಿಕ ವಿಧಾನ ಸಭೆಗೆ ಕಾರ್ಯಕಾರಿ ಮಂಡಳಕ್ಕೆ ಎಷ್ಟರ ಮಟ್ಟಿಗೆ ಅಧಿಕಾರ ಕೊಡಬಹುದು? ಎರಡನೆಯದಾಗಿ ಕಾರ್ಯಕಾರಿ ಮಂಡಳಕ್ಕೆ ಅಥವಾ ಪ್ರಾಂತೀಯ ವಿಧಾನ ಸಭೆಗೆ ಎಷ್ಟು ಹೆಚ್ಚಿನ ಪ್ರಮಾಣದಲ್ಲಿ ಅಧಿಕಾರ ಕೊಡಬಹುದು. ಇವೆರಡು ಮಾರ್ಗಗಳಲ್ಲಿ ಸೈಮನ್ ಕಮಿಶನ್ ಮೊದಲನೆಯ ಮಾರ್ಗ ಆರಿಸಿಕೊಂಡಿದೆ. ಹೀಗಿರುವುದಾದರೆ ಪ್ರತಿಯೊಂದು ವಿಷಯದಲ್ಲೂ ಜವಾಬ್ದಾರಿ ವಹಿಸಿ ಕೊಡಬೇಕು. ಪ್ರಾಂತೀಯ ಕಾರ್ಯಕಾರಿ ಮಂಡಳಕ್ಕೆ ಸಂಪೂರ್ಣ ಜವಾಬ್ದಾರಿ ಯಾಕೆ ಕೊಟ್ಟಿಲ್ಲ? ಅನ್ನುವುದಕ್ಕೆ ಯಾವುದೇ ಕಾರಣ ನನಗಂತೂ ಗೋಚರಿಸುತ್ತಿಲ್ಲ. ಅಲ್ಲದೆ ಮಿಲಿಟ್ರಿ, ಪರರಾಷ್ಟ್ರೀಯ ವ್ಯವಹಾರ ಬಿಟ್ಟರೆ ಕೇಂದ್ರೀಯ ಮಂತ್ರಿಮಂಡಳಕ್ಕೂ ಜವ್ಾಬ್ದಾರಿ ಹೊರಿಸುವುದು ಹೆಚ್ಚು ಕಠಿಣವಲ್ಲ.

೨೮. ದಿಲ್ಲಿ ಇನ್ನೂ ಸಾಕಷ್ಟು ದೂರವಿದೆ ಸರ್, ಎಂದು ನಮ್ಮಲ್ಲ್ಯಾರಾದರೂ ಹೇಳಬಹುದು. ದಲಿತರು ಸಧ್ಯಕ್ಕೆ ಪ್ರಾಂತಿಕ ರಾಜ್ಯಕ್ಕಷ್ಟೆ ತಮ್ಮನ್ನು ಸೀಮಿತವಾಗಿಡಲಿ. ನಮ್ಮ ಪ್ರಾಂತ ಹಾಗೂ ಕೇಂದ್ರ ಮಂತ್ರಿಮಂಡಳದ ಜವಾಬ್ದಾರಿಯ ಬಗ್ಗೆ ಯೋಚಿಸುವಾಗ ಎರಡು ವಿಷಯಗಳನ್ನು ನೆನಪಿಡಬೇಕು. ಮೊದಲನೆಯದು, ದಲಿತರು ಹಾಗೂ ಉಳಿದೆಲ್ಲ ಜನರ ಒಳಿತು ಹೆಚ್ಚು ವ್ಯಾಪಕವಾಗಿ ಹಾಗೂ ಆಳವಾಗಿ ಪ್ರಾಂತ್ಯ ಸರ್ಕಾರಕ್ಕಿಂತ ದೇಶದ ಕೇಂದ್ರ ಸರ್ಕಾರವನ್ನವಲಂಬಿಸಿದೆ ಹಾಗಾಗಿ ಈ ಕೇಂದ್ರ ಸರ್ಕಾರ ಹೇಗೆ ನಡೆಯಬಹುದು ಅಥವಾ ಸಹಜವಾಗಿ ನಡೆಯಬಹುದೇ? ಅನ್ನುವುದರ ಮೇಲೆ ಈ ದೇಶದ ಜನರ ಪ್ರಗತಿ ಅವಲಂಬಿಸಿದೆ. ವಿಧಾನ ಸಭೆಯ ಬಗ್ಗೆ ಅದಕ್ಕೆಷ್ಟು ಸಹಾನುಭೂತಿಯಿದೆ ಅನ್ನುವುದರ ಮೇಲೆ ಅದರ ಅಸ್ತಿತ್ವ ನಿರ್ಧಾರವಾಗುತ್ತದೆ. ಈ ದೃಷ್ಟಿಕೋನದಿಂದ ನೋಡುವಾಗ ನಿಮಗೆ ಈ ದೇಶದ ಜನರ ನೈತಿಕ ಹಾಗೂ ಭೌತಿಕ ಏಳಿಗೆ ಬೇಕಿದ್ದರೆ ಕೇಂದ್ರ ಸರ್ಕಾರದ ಜವಾಬ್ದಾರಿಯ ಬಗ್ಗೆ ನೀವು ಉದಾಸೀನರಾಗಬಾರದು. ಆದರೆ ಇದೇ ನಿರ್ಧಾರವನ್ನು ಸೂಚಿಸುವ ಮತ್ತೊಂದು ದೃಷ್ಟಿಕೋನವಿದೆ. ಸುರಕ್ಷೆ ಹಾಗೂ ಸುವ್ಯವಸ್ಥೆ ಕಾಪಾಡುವ ಬಗ್ಗೆ ಪ್ರಾಂತೀಯ ಸರ್ಕಾರ ಯಾವತ್ತೂ ಕೇಂದ್ರ ಸರ್ಕಾರದ ಜವಾಬ್ದಾರಿಯುತ ಪ್ರತಿನಿಧಿಯಾಗಿರುತ್ತದೆ. ಇವರಿಬ್ಬರೂ ಪರಸ್ಪರ ಸಹಕಾರದಿಂದ ಕೆಲಸ ಮಾಡುವುದಿದ್ದರೆ ಇವರಿಬ್ಬರಿಗೂ ಒಂದೇ ಅಧಿಕಾರಿಯಿಂದ ಆಜ್ಞೆ ಸಿಗಬೇಕು. ಪ್ರಾಂತಿಕ ಕಾರ್ಯಕಾರಿ ಮಂಡಳವು ಪ್ರಾಂತಿಕ ವಿಧಾನಸಭೆ ಜವಾಬ್ದಾರಿಯಾಗಿರುವುದರಿಂದ ಕೇಂದ್ರ ಮಂತ್ರಿಮಂಡಳದ ಆಜ್ಞೆಯನ್ನು ಪಾಲಿಸಲು ಬಂಧನಕಾರಕರಾಗುವುದಿಲ್ಲ. ಏಕೆಂದರೆ ಕೇಂದ್ರೀಯ ಮಂತ್ರಿಮಂಡಳವು ಈ ಯೋಜನೆಯಡಿ ಕೇಂದ್ರ ವಿಧಾನಸಭೆಗೆ ಜವಾಬ್ದಾರಿಯಾಗಿಲ್ಲದಿದ್ದು ಅದು ದೇಶದ ಸೆಕ್ರೆಟರಿಗೆ ಜವಾಬ್ದಾರನನ್ನಾಗಿ ಮಾಡಿದೆ. ಈ ಮತಭೇದಗಳಲ್ಲಿ ಕಠಿಣ ಪ್ರಸಂಗಗಳಲ್ಲಿ ದೇಶದ ಶಾಸನವನ್ನು ಸಂಪೂರ್ಣವಾಗಿ ದುರ್ಬಲ ಮಾಡುವ ಸಾಧ್ಯತೆಗಳಿವೆ. ಆದ್ದರಿಂದ ನಿಮಗೆ ಇಷ್ಟವಿರಲಿ

ಇರದಿರಲಿ ಇಂತಹ ಪರಿಸ್ಥಿತಿಯಲ್ಲಿ ಪ್ರಾಂತಿಕ ಮಂತ್ರಿಮಂಡಳದ ಜವಾಬ್ದಾರಿಯನ್ನು ಕೇಂದ್ರ ಮಂತ್ರಿಮಂಡಲದ ಮೇಲೆ ಹಾಕಲಾಗದು.

## ೬. ದಲಿತರು ಹಾಗೂ ಅಸಹಕಾರ

೨೯. ಮಾನ್ಯರೆ! ಮೀಸಲಾತಿಯೊಂದಿಗೆ ಆಂತರಿಕ ಸಾಮ್ರಾಜ್ಯದ ಉದ್ದೇಶಕ್ಕೆ ನಾವು ಬೆಂಬಲ ಕೊಡುತ್ತಿದ್ದೇವೆ. ಅನ್ನುವುದರರ್ಥ ಮಹಾತ್ಮ ಗಾಂಧೀಜಿಯವರು ಕಳೆದ ಮೇ ತಿಂಗಳಿಂದ ದೇಶದಾದ್ಯಂತ ಆರಂಭಿಸಿರುವ ಅಸಹಕಾರ ಚಳುವಳಿಯಲ್ಲಿ ಭಾವಹಿಸುವುದು ನಮ್ಮ ಕರ್ತವ್ಯವಾಗುತ್ತದೆಯೆ? ಅನ್ನುವುದರ ಬಗ್ಗೆಯ ಪಾತ್ರವನ್ನು ನೀವು ಸ್ಪಷ್ಟಪಡಿಸಬೇಕು. ಎಲ್ಲ ಉದಾರಮತವಾದಿ ಜನ ಈ ಚಳುವಳಿ ಅಧಿಕೃತವಲ್ಲ ಎಂದು ಹೇಳಿ ದೂಷಿಸಿದ್ದಾರೆ. ಈ ಯುಕ್ತಿವಾದ ನನಗಿಷ್ಟವಿಲ್ಲ ಅನ್ನುವುದನ್ನು ನಾನು ಒಪ್ಪಿಕೊಳ್ಳಲೇಬೇಕು. ದೇವಸ್ಥಾನ ಪ್ರವೇಶಿಸುವ ನಿಮ್ಮ ಚಳುವಳಿ ಅನಧಿಕೃತ ಎಂದು ಸಂಪ್ರದಾಯಸ್ಥ ಜನ ಅಂದರೆ ನೀವದಕ್ಕೇನು ಉತ್ತರಿಸುತ್ತೀರಿ? ಹೀಗೆ ನೇರ ಕ್ರಮ ಕೈಗೊಳ್ಳುವುದಕ್ಕಿಂತ ಜನರಿಗೆ ವಿನಂತಿಸುವುದು ಸರಿಯೆ? ಇಲ್ಲ ಕಾಯಿದೆಯನ್ನೇ ಬದಲಿಸುವಂತಹ ನೇರ ಪ್ರಯತ್ನ ಕಾನೂನಿನ ದೃಷ್ಟಿಯಿಂದ ಹೆಚ್ಚು ಸರಿಯೊ? ಸಂಪ್ರದಾಯಸ್ಥ ಜನರೊಂದಿಗೆ ಆರಂಭಿಸಿರುವ ನಿಮ್ಮ ಸ್ವಾತಂತ್ರ್ಯ ಚಳುವಳಿಯಲ್ಲಿ ಯಾರಾದರೂ ಬಂಧನಗಳನ್ನು ಹೇರಿದರೆ ನಿಮಗೆ ಇಷ್ಟವಾಗಬಹುದೆ? ನನ್ನ ಪ್ರಕಾರ ಸ್ವೀಕರಿಸಬಹುದಾದಂತಹ ಸಂವಿಧಾನ ಮಾರ್ಗವೊಂದು ಸಿದ್ಧವಿದ್ದರೆ ನೀವು ಅಧಿಕೃತವಾದ ಮಾರ್ಗವನ್ನು ಒತ್ತಾಯಿಸಬಹುದು ಆದರೆ ಇಂತಹ ಮಾರ್ಗವೇ ಇಲ್ಲವೆಂದ ಮೇಲೆ ಅಧಿಕೃತ ಮಾರ್ಗದ ಉಪದೇಶ ಕೇಳಲು ತುಂಬಾ ಕಡಿಮೆ ಜನ ಇಷ್ಟಪಟ್ಟಾರು. ಈ ವಿಷಯ ಬ್ರಿಟಿಷರಿಗೂ ಹೊಸದೇನಲ್ಲ. ಅಲ್ಸಟರ್ ಚಳುವಳಿ ಕೂಡ ಅಸಹಕಾರ ಚಳುವಳಿಯಾಗಿರಲಿಲ್ಲವೆ? ಅಲ್ಲದೆ ಬ್ರಿಟಿಷ್ ಅನೇಕ ಉತ್ತಮೋತ್ತಮ ರಾಜನೀತಿಜ್ಞರು ಅದಕ್ಕೆ ಬೆಂಬಲ ಕೊಟ್ಟಿರಲಿಲ್ಲವೆ? ನಮ್ಮ ಹಿತಸಂಬಂಧದ ದೃಷ್ಟಿಯಿಂದ ಅದು ಸುಸಂಗತ ಹಾಗೂ ಸಮಯೋಚಿತವಾಗಿದೆಯೆ? ಇಲ್ಲವೆ? ಅನ್ನುವ ಪ್ರಶ್ನೆ ಇಲ್ಲಿ ಮಹತ್ವದ್ದಾಗಿದೆ. ಈ ಅಸಹಕಾರ ಚಳುವಳಿಗೆ ನಾನು ವಿರೋಧಿಸುವ ಕಾರಣವೆಂದರೆ ಅದು ಸ್ವಲ್ಪವೂ ಸಮಯೋಚಿತವಾಗಿಲ್ಲ ಅನ್ನುವುದು ನನಗೆ ಖಚಿತವಾಗಿದೆ. ಬ್ರಿಟೀಷ್ ಸಾಮ್ರಾಜ್ಯದಲ್ಲಿ ದೋಷಗಳಿದ್ದರೂ ಭಾರತೀಯರಿಗಾಗಿ ಪ್ರಗತಿಯ ಮಾರ್ಗವನ್ನವರು ತೆರೆದಿಟ್ಟಿದ್ದಾರೆ ಎಂದು ಯೋಚಿಸುವವನು ನಾನೊಬ್ಬನೆ ಅಲ್ಲ. ಭಾರತದಲ್ಲಿ ಸ್ಥಾಪಿಸಲ್ಪಟ್ಟಿರುವ ಸರ್ಕಾರಕ್ಕೆ ನಂಬಿಕೆದ್ರೋಹ ಬಗೆಯಬಾರದೆನ್ನುವುದು ನನ್ನ ಅನಿವಾರ್ಯ ಕರ್ವವ್ಯ ಅನ್ನುವ ಮಹಾತ್ಮಾ ಗಂಧಿಯವರದ್ದೇ ಈ ದೃಷ್ಟಿಕೋನವಾಗಿದೆ. ಇದು ಬ್ರಿಟಿಷ್ ಸಾಮ್ರಾಜ್ಯದ ಕೇವಲ ಪ್ರವೃತ್ತಿಯಿತ್ತೆಂದಲ್ಲ ಭಾರತದ ಸ್ವಯಂಶಾಸನದ ಪ್ರಗತಿಗಾಗಿ ೧೯೨೦ರಲ್ಲೇ ಜನರಿಗೆ ಪ್ರಾಂತಿಕ ಅಧಿಕಾರದ ಜವಾಬ್ದಾರಿ ವಹಿಸುವ ತಮ್ಮ ಉದ್ದೇಶವನ್ನು ಜಾರಿಗೊಳಿಸಲು ಅವರು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ. ಬಹುಶಃ ಆದರ್ಶದ ದೃಷ್ಟಿಯಿಂದ ಅನುಷ್ಠಾನ ಅಪೂರ್ಣವಾಗಿರಬಹುದು, ಬಹುಶಃ ಗುರಿ ತಲುಪುವ ಗತಿ ನಿಧಾನವಾಗಿರಬಹುದು ಆದರೆ ತಾವು ನಿರ್ಧರಿಸಿದ್ದ ಉದ್ದೇಶದ ವಿರುದ್ಧ ಬ್ರಿಟಿಷ್ ಸರ್ಕಾರ ವರ್ತಿಸಿತು ಎಂದು ಹೇಳಲು ಸಾಧ್ಯವೆ? ಅವರೇನಾದರೂ ಅಂದುಕೊಂಡ ಉದ್ದೇಶದ ವಿರುದ್ಧ ವರ್ತಿಸಿದ್ದರೆ ಅಸಹಕಾರ ಚಳುವಳಿ ಸಮಯೋಚಿತವಾಗಿದೆ ಅನ್ನುವುದು ಯಾರಿಗೂ ಅರ್ಥವಾಗುತ್ತಿತ್ತು. ಆದರೆ ವೈಸ್‌ರಾಯ್ ತಮ್ಮ ಘೋಷಣೆಯ ಮೂಲಕ ಆಂತರಿಕ ಸ್ವಾತಂತ್ರ್ಯ ಕೊಡುವ ತಮ್ಮ ಉದ್ದೇಶವನ್ನು ಮತ್ತೊಮ್ಮೆ ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಉದ್ದೇಶ ಆದಷ್ಟು ಬೇಗ ಕಾರ್ಯಗತವಾಗಲು ಭಾರತೀಯರಿಗೆ ದುಂಡು ಮೇಜಿನ ಪರಿಷತ್ತಿನ ಅವಕಾಶ ಕೊಟ್ಟು ಸ್ವಾತಂತ್ರ್ಯದ ಬಗ್ಗೆ ಚರ್ಚಿಸಲು ಅನುವು ಮಾಡಿಕೊಟ್ಟಿದ್ದಾರೆ. ಆಂತರಿಕ ಸ್ವಾತಂತ್ರ್ಯ ಬೇಡುವವರ ದೃಷ್ಟಿಯಿಂದ ಅದರಲ್ಲಿ ಅನೇಕ ಕೊರತೆಗಳಿವೆ ಅನ್ನುವುದು ನಿಜವಾದರೂ

ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಭಾಗವಹಿಸಲಿಲ್ಲ ಅನ್ನುವುದಕ್ಕೆ ಇದು ಕಾರಣವಲ್ಲ. ವೈಸ್‌ರಾಯ್ ಅವರಲ್ಲಿ ಇಲ್ಲವೆ ಬ್ರಿಟಿಷ್ ಮಂತ್ರಿಮಂಡಳದವರಲ್ಲಿ ಆಶ್ವಾಸನೆಗಾಗಿ ಅಥವಾ ಒಪ್ಪಂದಕ್ಕಾಗಿ ಇಲ್ಲವೆ ಯಾವುದೋ ಒಂದು ಉದ್ದೇಶಕ್ಕಾಗಿ ಜಗಳ ನಿಷ್ಪ್ರಯೋಗಿಕವಲ್ಲದಿದ್ದರೂ ಅರ್ಥವಿಲ್ಲದ್ದು ಅನಿಸುತ್ತದೆ. ಏಕೆಂದರೆ ಇಂತಹ ಒಂದು ಒಪ್ಪಂದವಾಗುವುದು ಅಥವಾ ಆಗದಿರುವುದು ಭಾರತೀಯರ ಒಟ್ಟು ಧ್ವನಿಯನ್ನವಲಂಬಿಸಿದ್ದು ವಸಾಹತುಗಳ ಸ್ವಾತಂತ್ರ್ಯಕ್ಕಾಗಿ ನಾವೆಲ್ಲ ಭಾರತೀಯರು ಧ್ವನಿಯೆತ್ತಲು ಸಾಧ್ಯವಾದರೆ ಅದರ ಪರಿಣಾಮ ಬ್ರಿಟಿಷ್ ಪಾರ್ಲಿಮೆಂಟಿನ ಮೇಲಾಗದಿರದು. ಅದೇನೆ ಇರಲಿ ಆದರೆ ಕಾಂಗ್ರೆಸ್ ದುಂಡು ಮೇಜಿನ ಪರಿಷತ್ತಿನ ಆಂತ್ರಣವನ್ನು ಸ್ವೀಕರಿಸಿದ್ದರೆ ನಮಗೇನೂ ನಷ್ಟವಿರಲಿಲ್ಲ. ದುಂಡು ಮೇಜಿನ ಪರಿಷತ್ತಿನಲ್ಲಿ ಅಪಯಶಸ್ಸು ಬಂದಿದ್ದರೂ ಕಾಂಗ್ರೆಸ್ಸಿಗೆ ತನ್ನ ಅಸಹಕಾರ ಚಳುವಳಿಯನ್ನು ಒಂದು ವರ್ಷ ಮುಂದೂಡಬೇಕಾಗುತ್ತಿತ್ತು ಹಾಗೂ ಅದರಲ್ಲೂ ಅವರಿಗೇನೂ ನಷ್ಟವಿರಲಿಲ್ಲ, ನನ್ನ ಮಟ್ಟಿಗೆ ಲಾಭವೇ ಆಗುತ್ತಿತ್ತು. ಏಕೆಂದರೆ ಕಾರಣ ನಿಜವೋ ಸುಳ್ಳೋ ಇಂದು ಬ್ರಿಟಿಷ್ ಸರ್ಕಾರದ ಮೇಲೆ ನಿಷ್ಠೆಯಿರುವವರ ಎಲ್ಲರ ಭ್ರಮೆ ಕಳಚಿ ಬೀಳಲಿದೆ. ಈ ಎಲ್ಲ ವಿಷಯಗಳನ್ನು ಗಮನಿಸುತ್ತ ಇಂತಹ ಸಮಯದಲ್ಲಿ ಕಾಂಗ್ರೆಸ್ಸ್ ಕಾಯಿದೆಭಂಗ ಚಳುವಳಿಯನ್ನಾರಂಭಿಸಿ ಹಾಗೂ ದುಂಡು ಮೇಜಿನ ಪರಿಷತ್ತು ಶಾಂತತೆಯಿಂದ ಮಾತುಕತೆ ಮಾಡುವ ಅವಕಾಶವನ್ನೂ ಕೊಟ್ಟರೂ ನಿರಾಕರಿಸಿ ದೊಡ್ಡ ತಪ್ಪು ಮಾಡಿದೆ.

೩೦. ಈ ಕಾಯಿದೆಭಂಗ ಚಳುವಳಿಗೆ ನಾನು ಬೆಂಬಲ ಕೊಡಲಾರೆ ಅನ್ನುವುದಕ್ಕೆ ಮತ್ತೊಂದು ಕಾರಣವಿದೆ. ನಮ್ಮ ಹಿತಸಂಬಂಧ, ಸುರಕ್ಷೆ ಹಾಗೂ ಸಂರಕ್ಷಣೆಯ ದೃಷ್ಟಿಯಿಂದ ಈ ಚಳುವಳಿ ಸುಸಂಗತವಾಗಿಲ್ಲ ಅನ್ನುವುದು ನನ್ನನಿಸಿಕೆ. ಒತ್ತಾಯ ಈ ಚಳುವಳಿಯ ಮುಖ್ಯ ತತ್ವವಾಗಿದೆ. ಇದು ಸಾಕಷ್ಟು ಗೊಂದಲದ ಪದ್ಧತಿಯಾಗಿದ್ದು ದೊಡ್ಡ ಪ್ರಮಾಣದಲ್ಲದನ್ನು ಆರಂಭಿಸಿದರೆ ಕ್ರಾಂತಿಯ ರೂಪ ಪಡೆಯುವುದರಲ್ಲಿ ಅನುಮಾನವಿಲ್ಲ. ಒಂದು ಕ್ರಾಂತಿ ಅದು ರಕ್ತರಂಜಿತವಾಗಿದ್ದರೂ ಇಲ್ಲವೆ ರಕ್ತರಹಿತವಾಗಿರದಿದ್ದರೂ ವ್ಯತ್ಯಾಸವಿರುವುದಿಲ್ಲ. ಯಶಸ್ಸಿನ ದೃಷ್ಟಿಯಿಂದ ಇದು ಅತ್ಯಂತ ಅನಿಶ್ಚಿತವಾಗಿದ್ದು ಈ ರೀತಿಯಲ್ಲಿ ನೂಕುನುಗ್ಗಲಾಗುವ ಹಾಗೂ ಭಯಾನಕ ಪ್ರಸಂಗಗಳನ್ನೆದುರಿಸಬೇಕಾಗಿ ಬರುವಂತಹ ಸಾಧ್ಯತೆಗಳಿವೆ. ಫ್ರೆಂಚ್ ಕ್ರಾಂತಿಯ ಉದಾಹರಣೆ ನಮ್ಮೆದುರಿಗಿದೆ. ಅದರ ಉದ್ದೇಶ ಪ್ರಜಾಪ್ರಭುತ್ವ ಸ್ಥಾಪಿಸುವುದಿತ್ತು ಆದರೆ ಕಡೆಗೆ ಆ ಕ್ರಾಂತಿಯ ಪರಿಣಾಮ ಅನಿರ್ಬಂಧ ನಿರಂಕುಶಪ್ರಭುತ್ವ ನಿರ್ಮಾಣ ಮಾಡುವಲ್ಲಾಯಿತು. ಸಾಕಷ್ಟು ಸಲ ಕ್ರಾಂತಿ ಅನಿವಾರ್ಯವಾಗಿರುತ್ತದೆ. ವಿಜಯ ಸಾಧಿಸಿದರೆ ಒಂದು ರಾಷ್ಟ್ರದಿಂದ ಅಥವಾ ಒಂದು ವಂಶದಿಂದ ಅಧಿಕಾರಗಳು ಮತ್ತೊಂದು ರಾಷ್ಟ್ರದ ಇಲ್ಲವೆ ವಂಶದ ಕೈ ಸೇರುವಂತೆ ಕ್ರಾಂತಿಯಿಂದಲೂ ಅಧಿಕಾರ ಒಂದು ಪಕ್ಷದಿಂದ ಮತ್ತೊಂದು ಪಕ್ಷ ಸೇರುತ್ತದೆ. ಇಂತಹ ಪೊಳ್ಳು ಬದಲಾವಣೆಯಲ್ಲಿ ನಮಗೆ ಸಮಾಧಾನವಿಲ್ಲ. ಭಾರತೀಯ ಸಮಾಜದಲ್ಲಿ ಕೆಲಸ ಮಾಡುತ್ತಿರುವ ಶಕ್ತಿಗಳಲ್ಲಿ ರಾಜಕೀಯ ಅಧಿಕಾರಗಳನ್ನು ಹಂಚುವುದರ ಮೂಲಕ ತುಲನಾತ್ಮಕ (ಸಾಪೇಕ್ಷ) ಬದಲಾವಣೆಗಳಾಗುವಂತಹ ಸರ್ಕಾರ ನಮಗೆ ಬೇಕಿದೆ. ಇದಕ್ಕಾಗಿ ಹೊಂದಾಣಿಕೆ ಬೇಕು. ಈ ರೀತಿಯ ಹೊಂದಾಣಿಗಳಾಗುವುದರಿಂದ ಹಾಗೂ ಆ ಹೊಂದಾಣಿಕೆಯಲ್ಲಿ ಕೆಲಸಗಳಾಗುವುದರ ಮೇಲೆಯೇ ದಲಿತರ ಭವಿಷ್ಯ ಅವಲಂಬಿಸಿದೆ. ಭಾರತದಲ್ಲಿ ಸಮಸ್ಯೆ ಕೇವಲ ಸರ್ಕಾರ ಸ್ಥಾಪಿಸುವುದೋ ಇಲ್ಲ ಸ್ವಾತಂತ್ರ್ಯ ಪಡೆಯುವುದೋ ಆಗಿರದೆ ನಿಜವಾದ ಅರ್ಥದಲ್ಲಿ ಸ್ವತಂತ್ರ ಶಾಸನವನ್ನು ಸ್ಥಾಪಿಸುವುದಾಗಿದೆ. ಬರ್ಕನ ಭಾಷೆಯಲ್ಲಿ ಮತ್ತೊಮ್ಮೆ ಹೇಳುವುದಾದರೆ 'ನಿಜವಾದ ಸರ್ಕಾರ ಸ್ಥಾಪಿಸುವಾಗ ಸಾಕಷ್ಟು ಜಾಣತನದ ದೃಷ್ಟಿ ಬೇಕು. ಶಾಸನದ ಅಧಿಕಾರಗಳ ಸ್ಥಾನಗಳನ್ನು ನಿರ್ಧರಿಸಿ ಜನರಿಗೆ ಆಜ್ಞೆಯನ್ನು ಪಾಲಿಸುವ ಪಾಠ ಕಲಿಸಿದರೆ ನಿಮ್ಮ ಕೆಲಸವಾದಂತೆ ಎಂದು ತಿಳಿದುಕೊಳ್ಳಿ. ಸ್ವಾತಂತ್ರ್ಯ

ಕೊಡುವುದು ಬಹಳ ಸುಲಭದ ಕೆಲಸ. ಅದಕ್ಕೆ ಯಾವತ್ತೂ ಮಾರ್ಗದರ್ಶನದ ಅಗತ್ಯವಿಲ್ಲ. ಕೇವಲ ಅಧಿಕಾರಗಳನ್ನು ಬಿಟ್ಟುಕೊಡುವುದಷ್ಟೆ ಅಗತ್ಯವಿರುತ್ತದೆ.ಆದರೆ ನಿಜವಾದ ಸ್ವಾತಂತ್ರ್ಯ ಸರ್ಕಾರ ಸ್ಥಾಪಿಸುವುದಾಗಿರುತ್ತದೆ ಅಂದರೆ ಸ್ವಾತಂತ್ರ್ಯದ ಆಸೆಯುಳ್ಳ ಎಲ್ಲ ವಿರೋಧಿ ಶಕ್ತಿಗಳನ್ನು ಒಗ್ಗೂಡಿಸಿ, ಅವರಿಗೆ ತಿಳಿ ಹೇಳಿ ಸಂಯುಕ್ತ ರಾಷ್ಟ್ರದ ಸೂತ್ರದಲ್ಲಿ ಬಂಧಿಸುವುದು.ಇದು ಸುಲಭದ ಕೆಲಸವಲ್ಲ, ಅದಕ್ಕೆ ಸಾಕಷ್ಟು ಯೋಚನೆ ಹಾಗೂ ಗಂಭೀರ ಚಿಂತನೆಯ ಅಗತ್ಯವಿದೆ'. ಈ ಪ್ರಶ್ನೆ ಯೋಗ್ಯವಾದ ಹೊಂದಾಣಿಕೆಯದ್ದಾಗಿದ್ದು ಕಾಯಿದೆ ಭಂಗದಂತಹ ಗೊಂದಲವನ್ನುಂಟುಮಾಡುವ ಪದ್ಧತಿಯಿಂದ ಪರಿಹಾರವಾಗುವುದು ಸಾಧ್ಯವಿಲ್ಲ ಅನ್ನುವುದನ್ನು ನಾನು ಬಲ್ಲೆ.

೩೧.ಮಾನ್ಯರೆ! ಈ ಕಾಯಿದೆಭಂಗ ಚಳುವಳಿಗೆ ದಲಿತರು ಬೆಂಬಲ ಕೊಡಬಾರದು ಎಂದು ನನಗನಿಸುತ್ತದೆ. ಇದಕ್ಕೂ ಕಾರಣಗಳಿವೆ. ದುಂಡು ಮೇಜಿನ ಪರಿಷತ್ತಿನ ಮೂಲಕ ಸಿಗುತ್ತಿರುವ ಶಾಂತಿಪೂರ್ಣ ರೀತಿಯಿಂದಲೇ ಈ ಕೆಲಸ ಸುಲಭವಾಗಲಿದೆ. ಆದ್ದರಿಂದ ಈ ದುಂಡು ಮೇಜಿನ ಪರಿಷತ್ತಿಗಾಗಿ ನಿಮ್ಮ ನಂಬಿಕೆಯ ಹಾಗೂ ಉತ್ತಮ ಯೋಗ್ಯತೆಯಿರುವ ನಿಮ್ಮಲ್ಲಿಯ ಸಾಕಷ್ಟು ಜನರನ್ನು ಆರಿಸಿ ಎಂದು ನೀವು ಒತ್ತಾಯಿಸಬೇಕು.

## ೭. ದಲಿತರ ಸಂಘಟನೆ

೩೨. ಈ ನಮ್ಮ ತಟಸ್ಥ ಧೋರಣೆಯಿಂದ ದಲಿತರು ಬಹಳ ನಷ್ಟ ಅನುಭವಿಸಲಿದ್ದಾರೆ ಎಂದು ನನ್ನ ಅನೇಕ ಗೆಳೆಯರು ಹೇಳಿದ್ದಾರೆ. ದಲಿತರು ಬ್ರಿಟಿಷ್ ಸರ್ಕಾರ್ ಇಲ್ಲವೆ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಇವರಲ್ಲಿ ಯಾರಾದರೂ ಒಬ್ಬರೊಡನೆ ಗೆಳೆತನ ಮಾಡಿಕೊಳ್ಳಬೇಕು ಅನ್ನುವುದು ಅವರ ಅನಿಸಿಕೆ. ನಾನು ಈ ಪ್ರಶ್ನೆಯ ಬಗ್ಗೆ ಮತ್ತೆ ಮತ್ತೆ ಯೋಚಿಸಿ ನೋಡಿದಾಗ ಇವರಿಬ್ಬರಿಂದ ಬೇರೆಯಾಗಿರುವುದರಲ್ಲೆ ದಲಿತರ ಸುರಕ್ಷಿತತೆಯಿದೆ ಅನ್ನುವುದು ಖಚಿತವಾಯಿತು. ಮೊದಲೆ ಹೇಳಿದಂತೆ ನಮ್ಮ ಸಮಸ್ಯೆಗಳನ್ನು ಬಿಡಿಸುವ ಸಾಮರ್ಥ್ಯ ಬಿಟಿಷ್ ಸರ್ಕಾರದಲ್ಲಿಲ್ಲ ಹಾಗಾಗಿ ನಾನು ಆಂತರಿಕ ಸ್ವಾರಾಜ್ಯವನ್ನೆಂದೂ ವಿರೋಧಿಸುವುದಿಲ್ಲ. ಆದರೆ ಕಾಂಗ್ರೆಸ್‌ಗೆ ಸೇರುವುದರಿಂದ ನಮ್ಮೆಲ್ಲ ಸಮಸ್ಯೆಗಳು ನಿವಾರಣೆಯಾಗಿ ನಮ್ಮ ಪ್ರಗತಿಯಾಯಿತು ಎಂದು ಹೇಗೆ ಹೇಳುವುದು ಅನ್ನುವುದೇ ನನಗೆ ಗೊತ್ತಾಗುವುದಿಲ್ಲ. ಈಗ ಕಾಂಗ್ರೆಸ್ ಅಸ್ಪೃಶ್ಯತೆ ಪಾಲಿಸುವುದರಲ್ಲಿ ನಂಬಿಕೆಯಿಡುವುದಿಲ್ಲ ಹಾಗೂ ಎಲ್ಲ ಜನತೆಯ ಪ್ರತಿನಿಧಿಗಳೆಂದು ಇರುವುದು ಅದೊಂದೇ ಸಂಸ್ಥೆ ಎಂದು ಹೇಳಲಾಗುತ್ತದೆ. ಕಾಂಗ್ರೆಸ್ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಅಸ್ಪೃಶ್ಯತೆಯನ್ನು ನಿಂದಿಸುವ ಮಸೂದೆಯನ್ನು ಮಂಜೂರು ಮಾಡಿದೆ ಅನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಆ ಮಸೂದೆಯನ್ನು ಜಾರಿಗೊಳಿಸುವಲ್ಲಿ ಯಾವ ಹೆಜ್ಜೆಯಿಟ್ಟಿದೆ? ತಮ್ಮ ಧೋರಣೆಯ ಪ್ರಚಾರ ಮಾಡಲು ಕಾಂಗ್ರೆಸ್ ತನ್ನ ಸಭಾಸದರಿಗೆ ಖಾದಿ ಉಪಯೋಗಿಸುವ ನಿಯಮ ಹಾಕಿತು. ಆದರೆ ತನ್ನ ಅದೇ ಸಭಾಸದರ ಮೇಲೆ ಅಸ್ಪೃಶ್ಯತೆ ಪಾಲಿಸಬೇಡಿ ಅನ್ನುವ ನಿಯಮವನ್ನೇಕೆ ಹಾಕಲಿಲ್ಲ? ಈ ನಿಯಮವನ್ನವರು ಸಹಜವಾಗಿ ಪಾಲಿಸಬಹುದಾಗಿತ್ತು. ಕಾಂಗ್ರೆಸ್ಸಿನ ಸಭಾಸದನೊಬ್ಬ ದಲಿತನನ್ನು ತಮ್ಮ ಮನೆಯಲ್ಲಿ ಕೆಲಸಕ್ಕೆಂದೋ ಇಲ್ಲ ದಲಿತ ವಿದ್ಯಾರ್ಥಿಯೊಬ್ಬನನ್ನು ಕಲಿಯಲಿಕ್ಕೆಂದೋ ಮನೆಯಲ್ಲಿ ಇಟ್ಟುಕೊಂಡು ಅಸ್ಪೃಶ್ಯತೆ ಪಾಲಿಸದಂತಹ ನಿಯಮವನ್ನು ಸುಲಭವಾಗಿ ಪಾಲಿಸಬಹುದಿತ್ತು. ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆ ನಿವಾರಣೆಗಾಗಿ ಮಾಡಿರುವ ಪ್ರಯತ್ನಕ್ಕೆ ಫಲ ಸಿಕ್ಕಿದೆಯೆ? ನೈತಿಕ ಬೆಂಬಲ ಅವರಿಗೆಷ್ಟೇ ಇದ್ದರೂ ಅವರ ವ್ಯಕ್ತಿಗತ ಪ್ರಭಾವ, ಹಾಗೂ ಅವರ ಸಾಧನೆಗಳನ್ನು ಗಮನಿಸಿದರೆ ತಮ್ಮ ಉದ್ದೇಶವನ್ನು ಪೂರೈಸಲು ಅವರು ಮಾಡಿರುವ ಪ್ರಯತ್ನ ಬಹಳ ಅತ್ಯಲ್ಪ. ನೂಲು ತೆಗೆಯುವುದಕ್ಕಾಗಿ ಪ್ರತಿ ವರ್ಷ ಫಂಡ್ ಜಮಾ ಮಾಡಲು ಅವರು

ತಿರುಗುತ್ತಿರುತ್ತಾರೆ, ಅಸ್ಪೃಶ್ಯತೆ ಹೋಗಲಾಡಿಸಲು ಅವರೆಂದಾರೂ ಹೀಗೆ ತಿರುಗಿದ್ದುಂಟೆ? ಚರಕದ ಮೇಲೆ ಅವರು ಎಷ್ಟು ಸಮಯ ಹಾಳುಮಾಡುತ್ತಾರೋ ಅದರ ಶೇಕಡ ಒಂದರಷ್ಟು ಸಮಯವನ್ನು ಅವರು ಈ ಕೆಲಸಕ್ಕಾಗಿ ಖರ್ಚು ಮಾಡಿಲ್ಲ. ಹಿಂದೂ ಮುಸಲ್ಮಾನರಲ್ಲಿ ಒಗ್ಗಟ್ಟಾಗಬೇಕೆಂದು ಹೇಗೆ ಮೂರು ವಾರ ಉಪವಾಸಕ್ಕೆ ಕುಳಿತಿದ್ದರು ಅನ್ನುವುದು ಎಲ್ಲರಿಗೂ ಗೊತ್ತು. ಮೇಲ್ಜಾತಿಯವರ ಮನಸ್ಸಿನಲ್ಲಿ ಅಸ್ಪೃಶ್ಯರ ಬಗ್ಗೆ ದಯೆ ಹುಟ್ಟಲೆಂದು ಒಂದು ದಿನವಾದರೂ ಉಪವಾಸ ಮಾಡಿದ್ದಾರೆಯೆ? ಈ ಘಟನೆಗಳು ನಡೆದಿದ್ದರೆ ಕಾಂಗ್ರೆಸ್‌ನ ಸಹವಾಸವನ್ನು ಯಾರು ಬೇಕಾದರೂ ಸ್ವೀಕರಿಸುತ್ತಿದ್ದರು. ಅಸ್ಪೃಶ್ಯತೆಯ ಕಳಂಕ ತೊಳೆಯಲು ಕಾಂಗ್ರೆಸ್ಸಿನವರು ಪ್ರಾಮಾಣಿಕವಾಗಿ ಪ್ರಯತ್ನಿಸಿಲ್ಲ, ಸ್ವಾಮಿ ಶ್ರದ್ಧಾನಂದರು ಕೂಡ ಕಾಂಗ್ರೆಸ್ಸಿನವರು, ಈ ವಿಷಯದಲ್ಲಿ ಬರೀ ಪ್ರದರ್ಶನಗಳನ್ನು ಮಾಡುವುದನ್ನು ಬಿಟ್ಟರೆ ಕಾಂಗ್ರೆಸ್ಸಿನವರಿಗೇನೂ ಮಾಡುವುದಿಲ್ಲ ಅನ್ನುವ ಕಾರಣಕ್ಕಾಗಿ ಕಾಂಗ್ರೆಸ್ ಬಿಟ್ಟರು ಅನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಕಾಂಗ್ರೆಸ್ ಮಂಜೂರು ಮಾಡಿಸಿಕೊಂಡಿರುವ ಮಸೂದೆಯನ್ನು ನೋಡಿ ಅದರ ಅಂತರಂಗವನ್ನು ತಡಕಾಡುವುದಿದ್ದರೆ ಕಾಂಗ್ರೆಸ್ ಸಾಮಾನ್ಯ ಜನರಿಗಾಗಿ ಇದೆಯೋ ಇಲ್ಲವೋ ಅನ್ನುವುದನ್ನು ಬೇಗ ನಿರ್ಧರಿಸಲು ಅವಸರ ಮಾಡಬಾರದು. ಕಾಂಗ್ರೆಸ್ಸಿನ ಆರ್ಥಿಕ ಮಸೂದೆಯಲ್ಲಿ ಉಚ್ಚ ಹಾಗೂ ಮಧ್ಯಮವರ್ಗದವರ ಹಿತಸಂಬಂಧಗಳ ಪ್ರತಿಬಿಂಬ ಕಾಣುತ್ತದೆ. ಅದರ ವ್ಯಾಪಾರದ ಮಸೂದೆಗಳ ಸಂಬಂಧ ಕೇವಲ ವ್ಯಾಪಾರಿಗಳು, ಕಾರ್ಖಾನೆಗಳ ಮಾಲೀಕರು ಇವರಷ್ಟಕ್ಕೇ ಇದ್ದು ಕಾರ್ಮಿಕರನ್ನು ಪಕ್ಕಕ್ಕಿಡಲಾಗಿದೆ. ಕೇವಲ ಕಾಲು ಭಾಗ ಇಲ್ಲವೆ ೧\೬ ರಷ್ಟೇ ಜನರ ಕೆಲಸ ಮಾಡುವಂತಹ ಕಾಂಗ್ರೆಸ್ ತಮ್ಮದು ಜನತೆಯ ಪ್ರಾತಿನಿಧಿಕ ಸಂಘಟನೆಯೆಂದು ಹೇಳುವುದನ್ನು ನಿಲ್ಲಿಸಬೇಕು. ಉಪ್ಪಿನ ಸತ್ಯಾಗ್ರಹ ಕಾರ್ಯಕ್ರಮ ಕಾಂಗ್ರೆಸ್ಸಿನ ಪಾಲಿಗೆ ಬಂದಾಕ್ಷಣ ಅದರ ಮೂಲ ಸ್ವರೂಪ ಬದಲಾಗುವುದಿಲ್ಲ. ಉಪ್ಪಿನ ಮೇಲೆ ಹೇರಲಾಗಿರುವ ಕರದ ಬಗ್ಗೆ ನಡೆಯುತ್ತಿರುವ ನಿಂದೆ ಒಂದು ರಾಜಕೀಯ ಚಳುವಳಿಯ ಭಾಗ. ಈ ಚಳುವಳಿಯ ಪ್ರಾಮಾಣಿಕ ಉದ್ದೇಶವನ್ನು ಸಮಯವೇ ನಿರ್ಧರಿಸಲಿ. ಆದರೆ ನಿರ್ಧಾರ ತೆಗೆದುಕೊಳ್ಳುವ ಸಮಯ ಬಂದಾಗ ಮಾತ್ರ ಕಾಂಗ್ರೆಸ್ಸಿನವರು ಸಾಮಾನ್ಯ ಜನರ ಪರ ವಹಿಸುವುದನ್ನು ಬಿಟ್ಟು ಮೇಲ್ಜಾತಿಯವರ ಪರವನ್ನೇ ವಹಿಸುತ್ತಾರೆ ಅನ್ನುವುದರಲ್ಲಿ ನನಗೆ ಅನುಮಾನವೇಯಿಲ್ಲ. ಕಾಂಗ್ರೆಸ್ಸ್ ಸಾಮಾನ್ಯ ಜನತೆಯ ಬಗ್ಗೆ ಉದಾಸೀನ ಹಾಗೂ ನಿರ್ಲಕ್ಷ್ಯದಿಂದಿರುವುದು ಒಂದು ರೀತಿಯಿಂದ ಅನಿವಾರ್ಯವಾಗಿದೆ. ಏಕೆಂದರೆ ಅದೇನು ರಾಜಕೀಯ ಪಕ್ಷವಲ್ಲ ಅದು ಕೇವಲ ರಾಷ್ಟ್ರವಾದಿ ಜನತೆಯನ್ನು ಪ್ರತಿನಿಧಿಸುತ್ತದೆ. ಹಾಗಾಗಿ ಅದರ ಧೋರಣೆ ಹಾಗೂ ಕಾರ್ಯಕ್ರಮಗಳು ವಿಶಾಲವಾಗಿರುತ್ತವೆ. ಒಂದು ಸಂಘಟನೆಯ ಮೇಲೆ ಎಲ್ಲರ ಹಿತಸಂಬಂಧಗಳ ಅನೇಕ ರೀತಿಯ ಜವಾಬ್ದಾರಿಗಳನ್ನು ಹೊರಿಸಿದರೆ ಎಲ್ಲರ ಹೆಸರಿನಲ್ಲಿ ಅದು ಕೇವಲ ಕೆಲವು ಜನರಿಗೆ ಮಾತ್ರ ಒಳ್ಳೆಯದನ್ನು ಮಾಡಲು ಸಾಧ್ಯ. ಹಿತಸಂಬಂಧದಲ್ಲೇನಾದರೂ ವಿರೋಧ ನಿರ್ಮಾಣವಾದರೆ ದುರ್ಬಲ ಜನರನ್ನು ಗಾಳಿಗೆ ತೂರಲಾಗುತ್ತದೆ ಅನ್ನುವುದು ಎಲ್ಲರಿಗೂ ಗೊತ್ತು. ಆದ್ದರಿಂದ ಕಾಂಗ್ರೆಸ್ ತಮ್ಮ ಕೆಲಸದ ಜವಾಬ್ದಾರಿ ಹೊರಲಿ ಹಾಗೂ ಇಂತಹ ವಿರೋಧಗಳು ನಮ್ಮ ಪ್ರತಿಪಕ್ಷದವರೊಂದಿಗೆ ಉದ್ಭವಿಸುತ್ತದೆಯಾದ್ದರಿಂದ ಅಂತಹ ಪರಿಸ್ಥಿತಿಯಲ್ಲಿ ನಮ್ಮ ಪರ ವಹಿಸಿ ಕಾಂಗ್ರೆಸ್ ನಮಗಾಗಿ ಹೋರಾಡಲಿ ಅನ್ನುವ ಅಪೇಕ್ಷೆಯನ್ನು ನಾವು ಹೇಗೆ ಇಟ್ಟುಕೊಳ್ಳಲು ಸಾಧ್ಯ ಅನ್ನುವುದೇ ನನಗೆ ತಿಳಿಯುತ್ತಿಲ್ಲ.

೩೩. ನಮ್ಮಲ್ಲಿಯ ಕೆಲವು ಜನ ಕಾಂಗ್ರೆಸ್ಸಿನ ಸೇವೆ ಮಾಡಲಿಚ್ಛಿಸುವವರು, 'ನಾವು ಈಗ ಕಾಂಗ್ರೆಸ್ಸಿನ ಸೇವೆ ಮಾಡಿದರೆ ಸ್ವಾತಂತ್ರ್ಯದ ನಂತರ ಆ ಸೇವೆಯ ಫಲವಾಗಿ ಕಾಂಗ್ರೆಸ್ಸ್ ನಮ್ಮ ಅಸ್ಪೃಶ್ಯತೆಯನ್ನು ತೊಲಗಿಸುತ್ತದೆ. ಒಂದು ಪಕ್ಷ ನಾವೀಗ ಅದರ ಸೇವೆ ಮಾಡದಿದ್ದರೆ ಅದು ನಮ್ಮನ್ನು ದಾಸ್ಯತ್ವದ ಕೂಪಕ್ಕೆ

ತಳ್ಳುತ್ತದೆ' ಅನ್ನುವ ಬಹಳ ದೊಡ್ಡ ತಪ್ಪು ತಿಳುವಳಿಕೆಯಲ್ಲಿದ್ದಾರೆ. ಪುಗಸಟ್ಟೆ ಮಾಡುವ ಸಹಾಯಕ್ಕಾಗಿ ಯಾರೂ ಪ್ರತಿಫಲ ಕೊಡುವುದಿಲ್ಲ ಹಾಗೂ ಈ ವಿಚಾರಗಳ ಬಗ್ಗೆ ನನ್ನ ಅಭಿಪ್ರಾಯ ಹೇಳುವುದು ಅಗತ್ಯವೆನಿಸುತ್ತಿಲ್ಲ. ಆದರೆ ಒಂದು ವಿಷಯವನ್ನು ಮಾತ್ರ ಸ್ಪಷ್ಟಪಡಿಸಬೇಕೆಂದು ನನಗನಿಸುತ್ತಿದೆ, ನೀವೀಗ ಕಾಂಗ್ರೆಸ್ಸಿನ ಎಷ್ಟೇ ಸೇವೆ ಮಾಡಿದರೂ ಸ್ವಾತಂತ್ರ್ಯದ ನಂತರ ನೀವು ಹುಡುಕಿದರೂ ನಿಮಗೆ ಕಾಂಗ್ರೆಸ್ ಸಿಗಲಾರದು, ಆಗ ನಾವು ನಮ್ಮ ಶಕ್ತಿಯನ್ನೇ ಅವಲಂಬಿಸಿರಬೇಕಾಗುತ್ತದೆ. ಏಕೆಂದರೆ ಕಾಂಗ್ರೆಸ್‌ನ ಉದ್ದೇಶ ಪೂರ್ತಿಯಾದ ಮೇಲೆ ಸ್ವಾತಂತ್ರ್ಯ ಸಿಕ್ಕ ಕೂಡಲೇ ಅದು ಗಾಳಿಯಲ್ಲಿ ಹಾರಿ ಹೋಗಲಿದೆ. ಹಾಮಿಲ್ಟನ್‌ನ ಮಾತಿನಲ್ಲಿ ಹೇಳುವುದಾದರೆ 'ನಮಗಿಲ್ಲಿ ಜನತೆಯ ರೂಪದಲ್ಲಿರುವ ಭಯಾನಕ ಪ್ರಾಣಿಗಳ ದ್ವೇಷದೊಂದಿಗೆ ಹಾಗೂ ಪ್ರಕ್ಷುಬ್ಧ ಬಯಕೆಗಳೊಂದಿಗೆ ಹೋರಾಡಬೇಕಿದೆ. ನನಗೆ ಭಯವೆನಿಸುವ ಇನ್ನೊಂದು ವಿಷಯವೆಂದರೆ ನಮ್ಮ ಭರವಸೆಯ ಮೇಲೆ ಎಲ್ಲ ಪ್ರಯತ್ನಗಳನು ಬಿಟ್ಟುಬಿಡಿ ಎಂದು ಹೇಳುವ ಮಹಾತ್ಮ ಗಾಂಧೀಜಿಯಂತಹವರಿಗೆ ಒಬ್ಬ ಸಾಮಾನ್ಯ ಮನುಷ್ಯನಿಗೆ ಸಿಗುವುದಕ್ಕಿಂತಲೂ ಹೆಚ್ಚಿನ ಆಯಸ್ಸು ಸಿಕ್ಕಿದೆ, ಒಂದು ಪಕ್ಷ ಸ್ವಾತಂತ್ರ್ಯದ ನಂತರವೂ ಅವರು ಬದುಕಿದರೂ ಈ ಭಯಾನಕ ಪಶುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅಸಮರ್ಥರಾದಾರು.

೩೪. ನನ್ನ ವಿಚಾರಗಳು ಸರಿಯಾಗಿದ್ದಲ್ಲಿ ನಾವು ನಮಗಾಗಿ ದಾರಿಯನ್ನು ಕಂಡುಕೊಳ್ಳಬೇಕಿದೆ ಅನ್ನುವುದೇ ಇದರರ್ಥ. ಈ ಮಾರ್ಗವನ್ನವಲಂಬಿಸಲು ಹೆದರುತ್ತಿರುವವರ ಮನಸ್ಥಿತಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಕಾಂಗ್ರೆಸ್ ಹಾಗೂ ಬ್ರಿಟಿಷ್ ಸರ್ಕಾರ ಇವರಿಬ್ಬರಲ್ಲದೆ ಮೂರನೆಯ ಮಾರ್ಗವನ್ನವಲಂಬಿಸುವುದರಲ್ಲಿ ಅವರಿಗೆ ಅಪಾಯ ಕಾಣುತ್ತಿದೆ. ಹಾಗಾದರೆ ನಮ್ಮ ದುರ್ಬಲತೆಯನ್ನು ಒಪ್ಪಿಕೊಂಡಂತಾಗುತ್ತದೆ ಹಾಗೂ ದಲಿತರು ಶಾಸನ ಶಕ್ತಿಯ ಆಧಾರವಿಲ್ಲದೆ ಸ್ವತಂತ್ರ ಮಾರ್ಗವನ್ನವಲಂಬಿಸುವುದು ಸುಖಕರವಾದ ವಿಷಯವಲ್ಲ ಅನ್ನುವುದನ್ನು ನಾನು ಒಪ್ಪಿಕೊಳುತ್ತೇನೆ. ಆದರೆ ಬ್ರಿಟಿಷ್ ಸರ್ಕಾರ ಇಲ್ಲವೆ ಕ್ರಾಂಗ್ರೆಸ್ಸನ್ನು ನಂಬಿ ನಮಗಾಗುವ ಲಾಭವೇನು? ಅನ್ನುವುದನ್ನು ಹೇಳಿ. ಒಂದು ರಾಜಕೀಯ ಪಕ್ಷ ಶಕ್ತಿಶಾಲಿಯಾಗಿದೆ ಅಂದ ಮಾತ್ರಕ್ಕೆ ನಮಗಲ್ಲಿ ಬೆಲೆ ಇರಲಿ ಇಲ್ಲದಿರಲಿ ಅವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ನಾಚಿಕೆಗೇಡುತನ ಹಾಗೂ ಸಭ್ಯ ಜನ ಇದನ್ನು ಸಹಿಸಿಕೊಳ್ಳಲಾರರು. ಎಲ್ಲರೂ ನೆನಪಿಡುವಂತಹ ಶಕ್ತಿಯನ್ನು ದಲಿತರು ಹೇಗೆ ಗಳಿಸಿಕೊಳ್ಳುವುದು ಹಾಗೂ ತಮ್ಮ ಏಳಿಗೆ ಹೇಗೆ ಮಾಡಿಕೊಳ್ಳುವುದು ಅನ್ನುವುದೇ ಅವರೆದುರಿರುವ ಪ್ರಶ್ನೆ. ದಲಿತರ ಚಳುವಳಿಯಲ್ಲಿ ಎರಡು ಗಂಭೀರವಾದ ಕೊರತೆಗಳಿವೆ ಅನಿಸುತ್ತದೆ. ಮೊದಲನೆಯದು ದಲಿತರ ಸಾರ್ವಜನಿಕ ಅಭಿಪ್ರಾಯ ಅನ್ನುವುದು ಒಂದೂ ಕಾಣುತ್ತಿಲ್ಲ. ಎರಡನೆಯದು ಎಲ್ಲ ದಲಿತರು ಸೇರಿ ವಿಚಾರವಿನಿಮಯ ಮಾಡಿಕೊಂಡು ನಿರ್ಧರಿಸಿರುವಂತಹ ಯಾವುದೇ ಸಾಧನಗಳು ಅವರಲ್ಲಿಲ್ಲ. ಇಂದಿನವರೆಗೆ ನಮ್ಮ ದುಃಖಗಳು ಕಡಿಮೆಯಾಗಲಿಲ್ಲ ಅನ್ನುವುದಕ್ಕೆ ನಮ್ಮ ಮೂಕತನ ಹಾಗೂ ದುಃಖವನ್ನು ಕಡಿಮೆ ಮಾಡಿಕೊಳ್ಳುವುದರ ಬಗ್ಗೆ ನಮ್ಮ ಉದಾಸೀನತೆಯೇ ಕಾರಣ ಅನಿಸುತ್ತದೆ. ನ್ಯಾಯದ ದೃಷ್ಟಿಯಿಂದ ನೋಡಿದರೆ ನಮ್ಮ ಪರಿಸ್ಥಿತಿಯ ಬಗ್ಗೆ ಸರ್ಕಾರವನ್ನೋ ಇಲ್ಲ ಸುಧಾರಕರನ್ನೋ ದೂಷಿಸಲಾಗುವುದಿಲ್ಲ. ನಾವು ಬೇಕೆಂದಲೇ ನಮ್ಮನ್ನು ಈ ಪರಿಸ್ಥಿಯಲ್ಲಿಟ್ಟಿದ್ದೇವೆ ಹಾಗೂ ಅವರಿಗೆ ನಮ್ಮ ದುಃಖದ ಬಗ್ಗೆ ಅರಿವಾಗದಂತೆ ಇಲ್ಲವೆ ಅವರ ಪ್ರಯತ್ನಕ್ಕೆ ಬೆಂಬಲಿಸದೆ ಸುಮ್ಮನೆ ಅವರನ್ನು ದೂಷಿಸುತ್ತಿದ್ದೇವೆ ಅನ್ನುವುದನ್ನು ನಾವು ಒಪ್ಪಿಕೊಳ್ಳಬೇಕು. ನಮ್ಮ ಸಭೆಗಳಲ್ಲಿ ಮಂಜೂರು ಮಾಡಿದಂತಹ ಮಸೂದೆಗಳು, ನಾವು ಸರ್ಕಾರದ ಮುಂದಿಟ್ಟ ಬೇಡಿಕೆಗಳು, ಹಾಗೂ ಸರ್ಕಾರ ಇತರ ಜಾತಿಗಳ ದೂರುಗಳನ್ನು ಗಂಭೀರವಾಗಿ ಪರಿಗಣಿಸುವಂತೆ ನಮ್ಮ ಜಾತಿಯ ದೂರುಗಳನ್ನೇಕೆ ಪರಿಗಣಿಸುವುದಿಲ್ಲ

ಅನ್ನುವುದರೆಲ್ಲದರ ಬಗ್ಗೆ ನಾನು ಬಹಳ ಚಿಂತಾತುರನಾಗಿ ಯೋಚಿಸಿದ್ದೇನೆ. ಇದೆಲ್ಲದರಿಂದ ನಾವಿಂದಿನವರೆಗೆ ಕೇವಲ ಪ್ರಾಂತ್ಯಕ್ಕಷ್ಟೇ ಸೀಮಿತವಾಗುವಂತಹ ಚಳುವಳಿಗಳನ್ನು ಮಾಡಲು ಸಾಧ್ಯವಾಗಿದೆ ಅನ್ನುವುದು ನನಗೆ ಖಚಿತವಾಗಿದ್ದು.ಒಂದು ಪ್ರಾಂತ್ಯದಲ್ಲಿ ಮಾಡಿದ ಚಳುವಳಿಗೆ ಇನ್ನೊಂದು ಪ್ರಾಂತ್ಯದಲ್ಲಿ ಬೆಂಬಲ ಸಿಗುವುದಿಲ್ಲ. ಇಂತಹ ಚಳುವಳಿಗಳನ್ನು ದೇಶದ ಕೇಂದ್ರ ಸಂಘಟನೆಗಳು ಮಾಡಿದರೆ ಎಲ್ಲ ಪ್ರಾಂತ್ಯದ ಬೆಂಬಲ ಸಿಗುತ್ತಿತ್ತು ಅನ್ನುವುದು ಖಚಿತ. ದಲಿತರು ಈ ವಿಷಯದ ಬಗ್ಗೆ ಎಚ್ಚೆತ್ತುಕೊಂಡು ಅಖಿಲ ಭಾರತೀಯ ಸ್ವರೂಪದ ಸಂಘಟನೆಯನ್ನು ನಿರ್ಮಿಸಿ ಅದರ ಮೂಲಕ ನಿಶ್ಚಿತವಾದಂತಹ ಚಳುವಳಿಯನ್ನು ನಡೆಸಲು ಈಗ ಅಪೂರ್ವವಾದ ಅವಕಾಶ ಲಭಿಸಿದೆ. ಕಳೆದ ಎರಡು ಮೂರು ವರ್ಷಗಳಿಂದ 'ಆಲ್ ಇಂಡಿಯಾ ಡಿಪ್ರೆಸ್ಡ್ ಕ್ಲಾಸ್ ಅಸ್ಸೋಸಿಯೇಶನ್' ಅನ್ನುವ ಒಂದು ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆ. ಆದರೆ ಆ ಸಂಸ್ಥೆಯಲ್ಲಿ ಕೇವಲ ಪದಾಧಿಕಾರಿಗಳಿದ್ದು ಅದಕ್ಕೆ ಸದಸ್ಯರಿಲ್ಲ ಅನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ನನ್ನ ಪ್ರಾಂತ್ಯದಲ್ಲಿರುವ ಅದರ ಸ್ಥಿತಿಯೂ ಹೀಗೇಯಿದೆ, ಇಂತಹ ಸುಳ್ಳು ಕಲ್ಪನೆಯಲ್ಲಿರುವ ಸಂಸ್ಥೆ ಯಾವುದೇ ರೀತಿಯಿಂದ ದಲಿತರ ಸಹಾಯ ಮಾಡಲಾರದು. ನೀವು ನಿಜವಾದ ಸಂಸ್ಥೆಯೊಂದನ್ನು ಆರಂಭಿಸಬೇಕು. ಹಾಗೂ ದೇಶದಾದ್ಯಂತ ಅದರ ಕಾರ್ಯಕರ್ತರನ್ನು ನೇಮಿಸಿ ಅದರ ಮೂಲಕ ನೀವು ದಲಿತರ ಭಾವನೆಗಳನ್ನು ವ್ಯಕ್ತಪಡಿಸಬೇಕು. ನಾನು ಹೇಳಿದಂತಹ ಸಂಘಟನೆಯನ್ನಾರಂಭಿಸಲು ಈ ಸಭೆಯಲ್ಲೇ ಒಂದು ಸಂವಿಧಾನವನ್ನು ತಯಾರಿಸಲು ನೀವೊಂದು ಸಣ್ಣ ಕಮಿಟಿಯನ್ನು ನೇಮಿಸಿದರೆ ಒಳ್ಳೆಯದು. ನಮ್ಮಲ್ಲಿರುವ ಕೊರತೆಗಳನ್ನು ನಾವು ಆದಷ್ಟು ಬೇಗ ನೀಗಿಸಿಕೊಳ್ಳಬೇಕಿದೆ.

## ೮. ದಲಿತರ ಏಳಿಗೆ

೩೫. ಮಾನ್ಯರೆ! ನಾವು ರಾಜಕೀಯ ಅಧಿಕಾರಗಳನ್ನು ಪಡೆಯಬೇಕು ಅನ್ನುವುದರ ಬಗ್ಗೆ ನಾನು ಸಾಕಷ್ಟು ಸಮಯದಿಂದ ಒತ್ತಾಯಿಸುತ್ತಿದ್ದೇನೆ. ಆದರೆ ದಲಿತರ ರೋಗದ ಮೇಲೆ ರಾಜಕೀಯ ಅಧಿಕಾರವೆನ್ನುವ ಒಂದೇ ಔಷಧ ಪರಿಣಾಮಕಾರಿಯಾಗುವುದಿಲ್ಲ ಅನ್ನುವುದನ್ನು ಕೂಡ ಹೇಳಿದ್ದೇನೆ. ಅವರ ಮುಕ್ತಿ ಸಾಮಾಜಿಕ ಏಳಿಗೆಯಲ್ಲಿದೆ. ದಲಿತರು ತಮ್ಮ ಕೆಟ್ಟ ರೂಢಿ ಪರಂಪರೆಗಳನ್ನು ತ್ಯಜಿಸಬೇಕು. ಬದುಕಲು ಅವರು ಅವಲಂಬಿಸುವ ಕೆಟ್ಟ ದಾರಿಯನ್ನವರು ಬಿಡಬೇಕು. ಬದುಕುವ ರೀತಿಯಲ್ಲಿ ಬದಲಾವಣೆ ತರುವುದರಿಂದ ಉತ್ಕೃಷ್ಟ ಜೀವನಶೈಲಿ ನಿಮ್ಮದಾಗಿ ಎಲ್ಲರಿಗೂ ನಿಮ್ಮ ಬಗ್ಗೆ ಗೌರವ ಮೂಡಿ ನಿಮ್ಮ ಗೆಳೆತನಕ್ಕಾಗಿ ಎಲ್ಲರೂ ಹಾತೊರೆಯುವಂತಾಗಬೇಕು. ನೀವು ಸುಶಿಕ್ಷಿತರಾಗಬೇಕು. ಕೇವಲ ಓದು ಬರೆಯಲು ಬರೆಯುವಷ್ಟೇ ಕಲಿತರೆ ಸಾಲದು ನಿಮ್ಮಲ್ಲಿ ಕೆಲವರು ಶಿಕ್ಷಣದ ಎತ್ತರಕ್ಕೇರಬೇಕು, ಅವರ ನಡತೆಯಿಂದ ಇಡೀ ಸಮಾಜದ ದರ್ಜೆ ಏರುವಂತಾಗಬೇಕು. 'ದೇವರಿಟ್ಟಂತಾಗಲಿ' ಅನ್ನುವ ಉದಾಸೀನತೆಯನ್ನು ತ್ಯಜಿಸಲು ಜನರನ್ನು ಪ್ರೋತ್ಸಾಹಿಸಬೇಕು. ಇರುವ ಸ್ಥಿತಿಯಲ್ಲೇ ಸಮಾಧಾನ ಹೊಂದದ ಪ್ರವೃತ್ತಿಯಿಂದಲೇ ಸಮಾಜದ ಏಳಿಗೆಯಾಗುತ್ತದೆ. ಕಡೆಯದಾಗಿ ಆದರೆ ಹೆಚ್ಚು ಮಹತ್ವದ ವಿಷಯ ದಲಿತರಲ್ಲಿ ಸ್ಫೂರ್ತಿ ಹಾಗೂ ಉತ್ಸಾಹ ನಿರ್ಮಿಸಿದರೆ ಅವರ ಮನಸ್ಸಿನಲ್ಲಿರುವ ಭಯ ದೂರವಾಗಿ ಎಲ್ಲರೊಡನೆ ಅವರು ಕೂಡ ತಮ್ಮ ಹಕ್ಕಿನ ವಹಿವಾಟಿಗೆ ಆರಂಭಿಸಲಿ. ಕೇವಲ ರಾಜಕೀಯ ಅಧಿಕಾರಗಳು ನಮ್ಮ ಕೈಗೆ ಬರುವುದರಿಂದ ಇದೆಲ್ಲ ಸಾಧ್ಯವಾಗದು. ಅದು ನಮ್ಮ ಉದ್ದೇಶ ಪೂರೈಸಿಕೊಳ್ಳುವ ಒಂದು ದಾರಿಯಷ್ಟೆ ಅನ್ನುವುದನ್ನು ನೆನಪಿಡಬೇಕು. ನಾನು ಈ ಅಪಾಯದ ಸೂಚನೆ ಕೊಡುವ ಕಾರಣವೆಂದರೆ ಕೇವಲ ದಲಿತರಲ್ಲಿಯ ಕೆಲವರಿಗೆ ವಿಧಾನಸಭೆಯಲ್ಲಿ ಪ್ರತಿನಿಧಿತ್ವ ಸಿಕ್ಕಲ್ಲಿ ದಲಿತರ ಯಾತನೆಗಳ ಅಂತವಾದಾವು ಅನ್ನುವ ತಪ್ಪು ತಿಳುವಳಿಕೆಗಳಿವೆ. ಇದೆಲ್ಲ ಕಾರ್ಯ

ಸಾಮಾಜಿಕ ಏಳಿಗೆಯದ್ದಾಗಿದೆ. ಕೈ. ಗೋಖಲೆಯವರ 'ಸರ್ವಂಟ್ಸ್ ಆಫ್ ಇಂಡಿಯಾ' ಅಥವಾ ಕೈ.ಲಾಲಾ ಲಾಜಪತರಾಯ್ ಅವರ 'ಸರ್ವಂಟ್ಸ್ ಆಫ್ ಪೀಪಲ್' ಅನ್ನುವ ಸಂಸ್ಥೆಯಂತೆ ದಲಿತರ ಒಂದು ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ಈ ಜವಾಬ್ದಾರಿಯನ್ನು ವಹಿಸಬೇಕು.

## ಸಮಾರೋಪ

೩೬. ಮಾನ್ಯರೆ! ಸಮಯಕ್ಕೂ ಹೆಚ್ಚು ಹೊತ್ತು ಭಾಷಣ ಮಾಡಿ ನಾನು ನಿಮಗೆ ತೊಂದರೆ ಕೊಟ್ಟಿದ್ದೇನೆ ಅನ್ನುವುದಕ್ಕೆ ನನಗೆ ದುಃಖವಿದೆ. ಆದರೆ ಯಾವತ್ತೂ ಸಂಕ್ಷಿಪ್ತತೆ ಅಪೇಕ್ಷಿತವಾಗಿದ್ದರೂ ರಾಜಕಾರಣದ ಬಗ್ಗೆ ಪರಿಚಯವಿಲ್ಲದ ಜನ ಇಲ್ಲಿ ಪ್ರಥಮವಾಗಿ ಸೇರಿದ್ದಾಗಿ ಈ ರೀತಿಯ ಇಂದಿನ ಸಭೆಯಲ್ಲಿ ನಮ್ಮ ಪ್ರಶ್ನೆಗಳ ಬಗ್ಗೆ ಎಲ್ಲ ರೀತಿಯಿಂದಲೂ ಯೋಚಿಸುವುದು ಉಚಿತ ಎಂದು ನನಗನಿಸುತ್ತದೆ. ನಿಮಗೆ ಆದಷ್ಟು ಮಾರ್ಗದರ್ಶನ ಮಾಡಬೇಕು ಅನ್ನುವುದು ನನ್ನ ಉದ್ದೇಶವಾಗಿತ್ತು ಹಾಗಾಗಿ ಉದ್ದದ ಭಾಷಣ ಮಾಡಿದ್ದಕ್ಕೆ ನೀವು ನನ್ನನ್ನು ಕ್ಷಮಿಸುತ್ತೀರಿ ಅಂದುಕೊಳ್ಳುತ್ತೇನೆ. ಇದು ನಮ್ಮ ಕೊನೆಯ ಆಸೆಯಲ್ಲ. ನಮ್ಮ ಭವ್ಯವಾದ ಚಳುವಳಿಯ ಆರಂಭವಷ್ಟೆ ಹಾಗೂ ಅದರ ಮೂಲಕ ನಮ್ಮ ಜನರಿಗೆ ಮುಕ್ತಿ ಸಿಕ್ಕಿ ಈ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿ ಒಂದೇ ಮೌಲ್ಯ– ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಮೌಲ್ಯವಾಗಿ ಪರಿಗಣಿಸಲ್ಪಡಲಿ. ಇಂತಹ ಸಮಾಜರಚನೆಯನ್ನು ನಿರ್ಮಿಸಲು ಈ ಸಭೆ ಕಾರಣವಾಗಲಿ ಅನ್ನುವ ಆಸೆಯನ್ನು ವ್ಯಕ್ತಪಡಿಸುತ್ತೇನೆ.

ನೀವಿಂದು ನನ್ನನ್ನು ಗೌರವಿಸಿದ್ದಕ್ಕೆ ಹಾಗೂ ನನ್ನ ಭಾಷಣ ಕೇಳಿದ್ದಕ್ಕೆ ನಾನೆಲ್ಲರಿಗೂ ಆಭಾರಿಯಾಗಿದ್ದೇನೆ.

## ೩೪.

# ದೇಶದ ಸ್ವಾತಂತ್ರ್ಯಕ್ಕೆ ನನ್ನ ಬೆಂಬಲವಿದೆ

೪ನೆಯ ಅಕ್ಟೋಬರ್ ೧೯೩೦ ರಂದು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ದುಂಡು ಮೇಜಿನ ಪರಿಷತ್ತಿಗಾಗಿ ಇಂಗ್ಲಂಡಿಗೆ ಹೋಗುತ್ತಿರುವುದರಿಂದ ೨ನೆಯ ಅಕ್ಟೋಬರ್ ೧೯೩೦ರಂದು ಮುಂಬಯಿ ಇಲಾಖೆಯ ದಲಿತರ ವತಿಯಿಂದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಸನ್ಮಾನ ಪತ್ರ ಹಾಗೂ ಹಣವನ್ನರ್ಪಿಸುವ ಸಮಾರಂಭ ದಾಮೋದರ ಹಾಲ್‌ನ ದೊಡ್ಡ ಮೈದಾನದಲ್ಲಿ ಸಾಯಂಕಾಲ ೪ ಘಂಟೆಗೆ ಡಾ. ಸೋಲಂಕಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಾರಂಭಕ್ಕೆ ಸುಮಾರು ೬\೭ ಸಾವಿರದಷ್ಟು ಜನಸಮೂಹ ಸೇರಿತ್ತು.

ಅಧ್ಯಕ್ಷರು ಪ್ರಾಸ್ತಾವಿಕ ಭಾಷಣ ಮಾಡಿದ ಮೇಲೆ ಸಮಾರಂಭ ಕಮಿಟಿಯ ಜನರಲ್ ಸೆಕ್ರೆಟರಿ ಶ್ರೀ. ಸೀತಾರಾಮ್ ನಾಮದೇವ್ ಶಿವತರಕರ್ ಅವರು ಸನ್ಮಾನ ಪತ್ರವನ್ನೋದಿ ತೋರಿಸಿ ೩೭೦೦ ರೂಪಾಯಿಗಳಷ್ಟು ಹಣ ಒಟ್ಟುಗೂಡಿದ್ದು ಮರುದಿನ ಸಾಯಂಕಾಲದವರೆಗೆ ಇದು ೫೦೦೦ ರೂಪಾಯಿಗಳಷ್ಟು ಸೇರಬಹುದು ಎಂದು ಭವಿಷ್ಯ ನುಡಿದರು. ಸನ್ಮಾನ ಪತ್ರ ಕೆಳಗಿನಂತಿದೆ.

### ಸನ್ಮಾನ ಪತ್ರ

ಡಾ. ಭೀಮರಾವ್. ರಾಮಜಿ. ಅಂಬೇಡ್ಕರ್, ಎಮ್.ಎ. ಪಿಎಚ್.ಡಿ, ಎಸ್‌ಸಿ, ಬಾರ್–ಎಟ್–ಲಾ, ಎಮ್.ಎಲ್.ಸಿ.

ಪರಮಪ್ರಿಯ ಮಹಾರಾಜರೆ, ಗ್ರೇಟ್ ಬ್ರಿಟನ್ ದೇಶವು ಭಾರತಕ್ಕೆ ಸ್ವಾತಂತ್ರ್ಯ ಕೊಡುವುದರ ಬಗ್ಗೆ ಮಾತುಕತೆ ನಡೆಸಲು ಲಂಡನ್‌ನಲ್ಲಿ ಆಯೋಜಿಸಿರುವ ದುಂಡು ಮೇಜಿನ ಪರಿಷತ್ತಿಗೆ ಹಾಜರಿರಲು ಸರ್ಕಾರದ ಆಮಂತ್ರಣದ ಮೇರೆಗೆ ತಾವು ಹೋಗುತ್ತಿದ್ದೀರಿ. ಇದರಿಂದ ನಮ್ಮ ದಲಿತರು ನಿಮ್ಮ ಬಗ್ಗೆ ಅನಿಸುತ್ತಿರುವ ಪ್ರೀತ್ಯಾದರ ಹಾಗೂ ನಂಬಿಕೆಯನ್ನು ವ್ಯಕ್ತಪಡಿಸುವುದು ನಮ್ಮ ಪವಿತ್ರ ಕರ್ತವ್ಯವಾಗಿದೆ ಎಂದು ನಾವಂದುಕೊಳ್ಳುತ್ತೇವೆ. ತಾವು ಪಡೆದುಕೊಂಡಿರುವ ಪ್ರಶಂಸನೀಯ ಜ್ಞಾನ ಹಾಗೂ ಅನುಭವದ ಸದುಪಯೋಗ ಸ್ವದೇಶದ ಹಾಗೂ ವಿಶೇಷವಾಗಿ ಸ್ವಂತಜನರ ಉದ್ಧಾರ ಮಾಡಲು ಈ ರೀತಿಯಲ್ಲಾಗುತ್ತಿರುವುದರಿಂದ ನಾವು ನಿಮ್ಮನ್ನು ಮನಸಾರೆ ಅಭಿನಂದಿಸುತ್ತೇವೆ.

ವಿದ್ವತ್‌ರತ್ನ ಮಹನೀಯರೆ, ಸಮಾಜಶಾಸ್ತ್ರ, ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ, ಇತ್ಯಾದಿ ಗಹನವಾದ ವಿಷಯಗಳನ್ನು ದೀರ್ಘಕಾಲದವರೆಗೆ ಓದಿಕೊಂಡು ತಾವು ಅದನ್ನು ಯಥೋಚಿತವಾಗಿ ಮನನ ಮಾಡಿಕೊಂಡಿದ್ದೀರಿ. ಈ ಎಲ್ಲ ವಿದ್ಯಾಭ್ಯಾಸವನ್ನು ವ್ಯವಹಾರದಲ್ಲಿ ಉಪಯೋಗಿಸುವ ಪ್ರಸಂಗ ಸ್ವದೇಶದಲ್ಲಿ ಹಾಗೂ ವಿದೇಶದಲ್ಲೂ ತಮಗೆ ದೊರೆತಿದೆ. ನಮ್ಮ ದೇಶದ ಉನ್ನತಿಗಾಗಿ ಏನು ಮಾಡಬೇಕು ಅನ್ನುವುದನ್ನು ನೀವು ನಿರ್ಧರಿಸಿಯಾಗಿದೆ. ಈ ಸಿದ್ಧಾಂತಗಳಿಂದ ಎಲ್ಲವನ್ನೂ ನಿರ್ಭಯದಿಂದ ಹಾಗೂ ನಿರಪೇಕ್ಷ ಬುದ್ಧಿಯಿಂದ ಸಮರ್ಥಿಸುವ ಮನೋಧೈರ್ಯ ನಿಮ್ಮಲ್ಲಿದೆ ಅನ್ನುವ ಅನುಭವ ನಮಗಿದೆ. ಆದರೂ ನೀವು ಮಾಡಹೊರಟಿರುವ

ಕಾರ್ಯದಲ್ಲಿ ನಿಮ್ಮ ಪ್ರಶಂಸನೀಯ ಗುಣಗಳು ಎಲ್ಲರಿಗೂ ಗೊತ್ತಾಗಿ ನೀವು ನಿಜವಾದ ದೇಶಭಕ್ತರು ಹಾಗೂ ಸತ್ಯನಿಷ್ಠರಾಗಿರುವ ಬಗ್ಗೆ ನಿಮ್ಮ ಕೀರ್ತಿಗೊಂದು ಗರಿ ಮೂಡೀತು ಅನ್ನುವ ಭರವಸೆ ನಮಗಿದೆ. ಯಾವುದೇ ಲೋಭಕ್ಕೆ ಒಳಗಾಗಿ ದೇಶದ ಉನ್ನತಿಯ ಬಗೆ ನೀವು ಉದಾಸೀನರಾಗಲಾರಿರಿ ಅನ್ನುವನಂಬಿಕೆ ನಮಗಿದೆ. ನಿಮ್ಮ ಸಂಸ್ಕೃತಿ ಉಚ್ಚ ದರ್ಜೆಯದ್ದಾಗಿರುವುದರಿಂದ ಲೋಭಕ್ಕೊಳಗಾಗುವಂತಹ ಘಟನೆ ನಿಮ್ಮ ಕೈಯಿಂದ ಘಟಿಸಲಾರದು. ದೇಶದ ವಕೀಲಿ ಮಾಡುವ ಸುಯೋಗ ನಿಮಗೆ ಲಭಿಸಿದೆ. ಈ ಲಾಭವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದರಲ್ಲಿ ನೀವು ಯಾವತ್ತೂ ತಪ್ಪಲಾರಿರಿ ಅನ್ನುವ ಭರವಸೆ ನಮಗಿದೆ.

ಮಾನ್ಯರೆ, ನಮ್ಮ ದೇಶದ ಒಂದು ದೊಡ್ಡ ವರ್ಗಕ್ಕೆ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಅನೇಕ ಶತಕಗಳಿಂದ ಅನ್ಯಾಯವಾಗುತ್ತಿದ್ದು ಅದು ಅತ್ಯಂತ ದಯನೀಯ ಪರಿಸ್ಥಿತಿಗೆ ತಲುಪಿದೆ. ಅವರ ಉದ್ಧಾರವಾಗದೆ ನಮ್ಮ ದೇಶ ಉದ್ಧಾರವಾಗಲಾರದು. ಇತ್ತೀಚೆಗೆ ಅನೇಕ ಗಣ್ಯ ವ್ಯಕ್ತಿಗಳ ಮನಸ್ಸಿನಲ್ಲಿ ಈ ವಿಷಯದ ಬಗ್ಗೆ ಸ್ವಲ್ಪ ಸಹಾನುಭೂತಿಯಿದೆ. ಈ ಜನರ ಉದ್ಧಾರಕ್ಕಾಗಿ ಅವರು ತಮ್ಮಿಂದಾದಷ್ಟು ಪ್ರಯತ್ನಿಸುತ್ತಿದ್ದಾರೆ. ಆದರೆ ಈ ಕೆಲಸವನ್ನು ತಾವು ತಮ್ಮ ಕೈಗೆ ತೆಗೆದುಕೊಂಡಂದಿನಿಂದ ಇದಕ್ಕೊಂದು ವಿಶೇಷ ಮಹತ್ವ ಸಿಗುತ್ತಿದ್ದು ಪರಿಣಾಮಕಾರಿಯಾದ ಸ್ವರೂಪ ಕಂಡಿದೆ. ಇನ್ನೂ ಕೆಲವು ವರ್ಷಗಳವರೆಗೆ ಪ್ರಯತ್ನ ಮುಂದುವರೆಸಿದರೆ ಈ ಕೆಲಸದಲ್ಲಿ ಸಾಕಷ್ಟು ಯಶಸ್ಸು ಸಿಗುವ ಸಾಧ್ಯತೆಗಳಿವೆ. ನಿಮ್ಮಂತಹ ಆಸ್ಥೆಯುಳ್ಳ ಹಾಗೂ ಸಮರ್ಥ ಕೈವಾರಿ ಈ ಜನರಿಗೆ ಯಾವತ್ತೂ ಸಿಗಲಾರ. ನೀವು ಮಾಡುತ್ತಿರುವ ಕೆಲಸದಿಂದಾಗಿ ಈ ಜನರಿಂದ ನಿಮಗೆ ದೇವರ ಸ್ಥಾನ ಸಿಗುತ್ತಿದೆ ಹಾಗೂ ಅವರಿಗೆ ನಿಮ್ಮ ಮೇಲೆ ಭಕ್ತಿಯುಂಟಾಗುತ್ತಿದೆ. ಈ ಗೌರವಕ್ಕೆ ಹಾಗೂ ನಂಬಿಕೆಗೆ ನೀವು ಎಲ್ಲ ರೀತಿಯಿಂದಲೂ ಪಾತ್ರರಾಗಿದ್ದೀರಿ. ಅವರ ಒಳ್ಳೆಯದಕ್ಕಾಗಿ ಯಾವ ಆತ್ಮ ಯಜ್ಞವನ್ನು ಬೇಕಾದರೂ ಮಾಡಲು ನೀವು ಯಾವತ್ತೂ ಸಿದ್ಧರಿರುತ್ತೀರಿ ಹಾಗೂ ತಮ್ಮ ಯೋಗ್ಯತೆ ಬಹಳದೊಡ್ಡದಿರುವುದರಿಂದ ನಿಮ್ಮ ಬುದ್ಧಿಮತ್ತೆಯ ಹಾಗೂ ಸ್ವಹಿತಪರದ ಪರಿಣಾಮ ಎಲ್ಲ ಜಾತಿಯವರ ಮನಸ್ಸಿನ ಮೇಲಾಗುತ್ತದೆ. ಇಂತಹ ಯೋಗ್ಯ ಹಾಗೂ ಧೃಡ ನಿರ್ಧಾರವಿರುವಂತಹ ಗಂಡು ಈ ಜನರಿಗೆ ರಾಜಕೀಯ ಹಕ್ಕು ಮರಳಿಸಿಕೊಳ್ಳಲು ಸಹಾಯಕರವಾಗಲಿದ್ದಾನೆ. ಲಂಡನ್ನಿನ ದುಂಡು ಮೇಜಿನ ಪರಿಷತ್ತಿನಲ್ಲಿ ಈ ಜನರ ರಾಜಕೀಯ ಹಕ್ಕುಗಳ ಸಮರ್ಥನೆ ಮಾಡುವ ಕಾರ್ಯ ನಿಮ್ಮಿಂದಾಗಲಿದೆ. ನೀವು ಈ ಜನರ ವಕೀಲಿಯನ್ನು ಉತ್ತಮವಾಗಿ ಮಾಡಿ ಯಶಸ್ಸು ಗಳಿಸುವವರಿದ್ದೀರಿ ಅನ್ನುವ ಭರವಸೆ ನಮಗಿದೆ.

ಹೀನ ದೀನರ ಕೈವಾರಿಗಳೆ, ನೀವು ಕೇವಲ ಲಂಡನ್ನಿನ ಯಾತ್ರೆ ಮುಗಿಸಿ ಮರಳದೆ ದಲಿತರ ಉದ್ಧಾರಕ್ಕಾಗಿ ಬೇಕಾಗುವಂತಹ ಹಣದ ಸಹಾಯ ಪಡೆಯಲು ಅಮೇರಿಕಾ ಮುಂತಾದ ದೇಶಗಳನ್ನು ಸುತ್ತಿ ಅಲ್ಲಿಯ ಮಿತ್ರರ ಸಹಾನುಭೂತಿಯನ್ನು ದಲಿತರೆಡೆ ಹೊರಳಿಸಲು ಪ್ರಯತ್ನಿಸುವವರಿದ್ದೀರಿ ಎಂದು ಕೇಳಿದ್ದೇವೆ. ನಿಮ್ಮ ಉದ್ದೇಶ ಹೊಗಳುವಂಥದ್ದೆ, ನಿಮ್ಮಂತಹ ಕಲಿತ, ಮಹಾನ್ ಹಾಗೂ ಸ್ವಾರ್ಥರಹಿತ ಗಂಡಿಗೆ ಅಮೇರಿಕಾದಂತಹ ಶ್ರೀಮಂತ ದೇಶದಲ್ಲಿ ಸಫಲತೆ ಸಿಕ್ಕೇ ಸಿಗುತ್ತದೆ ಹಾಗೂ ಸ್ವಲ್ಪವಾದರೂ ತಮ್ಮ ಜನರ ಏಳಿಗೆ ಮಾಡಿದ ಸಮಾಧಾನ ಸಿಗಲಿ ಎಂದು ನಾವು ಮನಸಾರೆ ಪ್ರಾರ್ಥಿಸುತ್ತೇವೆ. 'ದುಃಖಿಗಳನ್ನು ಹಾಗೂ ಕಷ್ಟದಲ್ಲಿರುವವರನ್ನು ತಮ್ಮವರೆಂದು ಪರಿಗಣಿಸುವವನನ್ನೇ ಸಾಧು ಅನ್ನಬಹುದು, ಹಾಗೂ ದೇವರನ್ನು ಅವನಲ್ಲೇ ಕಾಣಬೇಕು' ಅನ್ನುವ ಉಕ್ತಿಯಂತೆ ನೀವು ಎಲ್ಲರಿಂದ ಮಾನ್ಯತೆ ಪಡೆದು ಎಲ್ಲರೂ ನಿಮ್ಮನ್ನು ಪೂಜಿಸುವಂತಾಗಿ ನಿಮ್ಮ ಜೀವನ ಸಫಲವಾಗಲಿ.

ಕಡೆಗೆ ನಿಮ್ಮ ಈ ಮಹತ್ವವಾದ ಪ್ರವಾಸ ಸುಖಕರವಾಗಲೆಂದು ಹಾಗೂ ನಿಮ್ಮ ಆರೋಗ್ಯ ಚನ್ನಾಗಿದ್ದು ನೀವು ಮಾಡ ಹೊರಟಿರುವ ಮಹತ್ವವಾದ ಕೆಲಸದಲ್ಲಿ ಯಶಸ್ಸು ಗಳಿಸುವ ಸಾಮರ್ಥ್ಯ ನಿಮಗೆ ಸಿಗಲಿ ಅನ್ನುವುದೇ ನಮ್ಮಾಸೆ. ನೀವು ಕೀರ್ತಿ ಸಂಪಾದಿಸಿ ಸ್ವದೇಶಕ್ಕೆ ಮರಳುವುದನ್ನು ನಾವು ಕಾಯುತ್ತಿರುತ್ತೇವೆ.

ಸನ್ಮಾನ ಪತ್ರವನ್ನು ಓದಿದ ಮೇಲೆ ಪತ್ರದೊಂದಿಗೆ ಹಣದ ಚೀಲವನ್ನು ಅಧ್ಯಕ್ಷರಾದ ಡಾ. ಸೋಲಂಕಿಯವರ. ಕೈಯಿಂದ ಡಾ. ಸಾಹೇಬರಿಗೆ ಅರ್ಪಿಸಲಾಯಿತು. ಇವೆರಡನ್ನೂ ಅವರು ಸ್ವೀಕರಿಸಿದರು.

ನಂತರ ಡಾ. ಬಾಬಾಸಾಹೇಬ್ ಅಂಬೇಡ್ಕರರು ಸನ್ಮಾನ ಪತ್ರಕ್ಕೆ ಉತ್ತರಿಸಲು ಎದ್ದರು, ಆದರೆ ಅವರ ಗಂಟಲುಬ್ಬಿ ಬಂದದ್ದರಿಂದ ೫\೬ ನಿಮಿಷಗಳವರೆಗೆ ಅವರ ಬಾಯಿಯಿಂದ ಮಾತೇ ಹೊರಡಲಿಲ್ಲ. ಕಡೆಗೊಮ್ಮೆ ತಮ್ಮ ಭಾಷಣವನ್ನಾರಂಭಿಸುತ್ತ,

ಅಧ್ಯಕ್ಷರೆ ಹಾಗೂ ಬಂಧು ಭಗಿನಿಯರೆ,

ಇನ್ನು ಮುಂಬರುವ ಆರು ಏಳು ತಿಂಗಳು ನಮ್ಮ ಭೇಟಿ ಸಾಧ್ಯವಿಲ್ಲ ಹಾಗಾಗಿ ಇವತ್ತು ನಾನು ನಿಮಗೇನು ಹೇಳಲಿ ಅನ್ನುವುದೇ ತಿಳಿಯದಾಗಿ ನನ್ನ ಮನಸ್ಸು ತುಂಬಿ ಬರುತ್ತಿದೆ. ಕಳೆದ ಎರಡು ವರ್ಷಗಳಿಂದ ನನ್ನಿಂದಾದ ಅಲ್ಪಕಾರ್ಯಕ್ಕೆ ಸಾವಿರಾರು ಜನ ಸಹಾಯ ಮಾಡದಿದ್ದಿದ್ದರೆ ನನ್ನ ಒಬ್ಬ ನಿಂದೇನೂ ಸಾಧ್ಯವಾಗುತ್ತಿರಲಿಲ್ಲ. ನಾನು ಮಾಡಿರುವ ಕೆಲಸಗಳಲ್ಲಿ ಮುಂಬಯಿ ಕಾಯಿದೆ ಕೌನ್ಸಿಲ್ಲಿನ ಕೆಲಸಗಳಲ್ಲಿ ನನ್ನ ಮಿತ್ರರಾದ ಡಾ. ಸೋಳಂಕಿಯವರು ನನಗೆ ಹೆಚ್ಚು ಸಹಾಯ ಮಾಡಿದ್ದಾರೆ. ೧೯೨೬ರಲ್ಲಿ ಗವರ್ನರ್ ಸಾಹೇಬರು ನನ್ನನ್ನು ಕರೆದು ದಲಿತರ ಪೈಕಿ ಡಾ.ಸೋಳಂಕಿಯವರನ್ನು ಕಾಯಿದೆ ಕೌನ್ಸಿಲ್ಲಿನ ವತಿಯಿಂದ ಆರಿಸಿದರೆ ಅವರಿಗೂ ನಿಮಗೂ ಸರಿಹೋಗುತ್ತದೆಯೆ? ಎಂದು ಕೇಳಿದ್ದರು, ಅದಕ್ಕೆ ನಾನವರಿಗೆ 'ಸೋಳಂಕಿಯವರು ಒಳ್ಳೆ ಕಲಿತ ವ್ಯಕ್ತಿಯಾಗಿರುವುದರಿಂದ ನನಗೂ ಅವರಿಗೂ ಸರಿಹೊಂದುತ್ತದೆ' ಎಂದು ಹೇಳಿದೆ. ನಾನು ಸ್ವಲ್ಪ ಸಿಡುಕು ಸ್ವಭಾವದವನು, ಕೌನ್ಸಿಲ್‌ನಲ್ಲಿ ಡಾ. ಸೋಳಂಕಿಯವರೊಡನೆ ಕೆಲಸ ಮಾಡುವಾಗ ನಾನು ಸಿಡಿಮಿಡಿಗೊಳ್ಳುವಂತಹ ಪ್ರಸಂಗಗಳು ಬಂದಿರಬಹುದು. ಆದರೆ ಡಾ. ಸೋಳಂಕಿಯವರು ಅದ್ಯಾವುದನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೆ ನನಗೆ ತುಂಬು ಮನಸ್ಸಿನಿಂದ ಸಹಾಯ ಮಾಡಿದ್ದಾರೆ. ಹಾಗಾಗಿ ಕೌನ್ಸಿಲ್ಲಿನ ಎಲ್ಲ ಕೆಲಸಗಳ ಶ್ರೇಯಸ್ಸು ಡಾ. ಸೋಳಂಕಿಯವರಿಗೆ ಸಲ್ಲುತ್ತದೆ. ಕೌನ್ಸಿಲ್ಲಿನ ಹೊರಗೆ ಸಮತಾ ಸಂಘ ನನಗೆ ಸಾಕಷ್ಟು ಸಹಾಯ ಮಾಡಿದೆ. ಶ್ರೀ. ದೇವರಾವ್ ನಾಯಿಕರು ನನಗೆ ಮಾಡಿರುವ ಸಹಾಯದಿಂದಾಗಿ ನಾನವರನ್ನು ನನ್ನ ಬಲಗೈ ಎಂದು ಪರಿಗಣಿಸುತ್ತೇನೆ. ನಾವಿಬ್ಬರೂ ಪರಸ್ಪರ ಸಹಾಯದಿಂದ ಮಾಡಿರುವ ಕೆಲಸಗಳಿಂದ ನಮ್ಮಲ್ಲೆಷ್ಟು ಒಗ್ಗಟ್ಟುಂಟಾಗಿದೆಯೆಂದರೆ ಸುಮಾರು ಐದಾರು ತಿಂಗಳು ನಾನು ಈ ದೇಶದಲ್ಲಿಲ್ಲದಾಗ್ಯೂ ಶ್ರೀ ನಾಯಿಕರೇ ಎಲ್ಲ ಕೆಲಸಗಳನ್ನು ಮಾಡಿಯಾರು ಅನ್ನುವ ನಂಬಿಕೆ ನನಗಿದೆ. ಸಮತಾ ಸಂಘದ ನನ್ನ ಇತರ ಸ್ನೇಹಿತರಾದ ಶ್ರೀ. ಪ್ರಧಾನ್, ಕದ್ರೆಕರ್, ಕವಳಿಯವರೆಲ್ಲ ಸಾಕಷ್ಟು ಸಹಾಯ ಮಾಡಿದ್ದಾರೆ. ಹಾಗೆಯೇ ಶ್ರೀಶಂಕರರಾವ್ ಪರಶಾರವರು ಸಾಕಷ್ಟು ಹಣದ ಸಹಾಯ ಮಾಡಿದ್ದಾರೆ. ಶ್ರೀ ಶಂಕರರಾವರಂತಹ ಆಧಾರ ನನಗೆಲ್ಲೂ ಇರಲಿಲ್ಲ. ಸಾರ್ವಜನಿಕ ಕೆಲಸಗಳಲ್ಲಿ ಹಣದ ಅವಶ್ಯಕತೆಯಿರುತ್ತದೆ ಆದರೆ ಮೊದಲಿಗೆ ಸೋಲಾಪೂರಲ್ಲಿ ಬೋರ್ಡಿಂಗೊಂದನ್ನು ಆರಂಭಿಸಲು ನನ್ನಲ್ಲಾಗ ಕೇವಲ ೫೦೦ ರೂಪಾಯಿಗಳಿದ್ದವು. ನನ್ನ ಜೂಯಿಷ್ ಗೆಳೆಯನೊಬ್ಬನಿಗೆ ೧೦೦೦ ರೂಪಾಯಿಯ ಪ್ರಾಮಿಸರಿ ನೋಟ್ ಬರೆದುಕೊಟ್ಟು ಈ ಬೋರ್ಡಿಂಗ್ ಸಂಸ್ಥೆಯನ್ನು ಆರಂಭಿಸಿದ್ದೇನೆ. ಶಂಕರರಾವ್ ಅದರಲ್ಲಿ ನನಗೆ ಸಾಕಷ್ಟು ಸಹಾಯ ಮಾಡಿದ್ದಾರೆ. ಪ್ರೆಸ್ ಪ್ರಾರಂಭಿಸಲು ನನಗವರು ೧೮೦೦ ರೂಪಾಯಿಯ ಹಣ ಸಹಾಯ

ಮಾಡಿದ್ದಾರೆ.

ಇಲ್ಲಿಯವರೆಗೆ ದಲಿತರಿಗಾಗಿ ನಾನು ಮಾಡಿರುವ ಅಲ್ಪಕಾರ್ಯದ ಶ್ರೇಯಸ್ಸು ಬೇರೆಬೇರೆ ಕೆಲಸಗಳಲ್ಲಿ ಸಹಾಯ ಮಾಡಿದ ಅನೇಕರಿಗೆ ಸಲ್ಲುತ್ತದೆ. ನೀವು ಕೊಟ್ಟಿರುವ ಹಣದ ಚೀಲ ಹಾಗೂ ಸನ್ಮಾನ ಪತ್ರವನ್ನು ನಾನು ಸ್ವೀಕರಿಸುತ್ತೇನೆ ಆದರೆ ಚೀಲದಲ್ಲಿರುವ ಹಣವನ್ನು ನನ್ನ ವೈಯಕ್ತಿಕ ಕೆಲಸಗಳಿಗಾಗಿ ಉಪಯೋಗಿಸದೆ ಬಡ ಸಮಾಜದ ಜನರು ಕೊಟ್ಟ ಹಣವನ್ನು ಬಡ ಸಮಾಜದ ಕಲ್ಯಾಣಕ್ಕಾಗಿಯೇ ಉಪಯೋಗವಾಗಬೇಕು. ಅಖಿಲ ಭಾರತೀಯ ದಲಿತ ಕಾಂಗ್ರೆಸ್‌ನ ಮಧ್ಯವರ್ತಿ ಸಂಘಟನೆಯ ಖರ್ಚಿಗಾಗಿ ಮುಂಬಯಿ ಇಲಾಖೆಯಿಂದ ಈ ಹಣವನ್ನು ಚಂದಾ ಸ್ವರೂಪದಲ್ಲಿ ಕೊಡುತ್ತೇನೆಂದು ಮಾತುಕೊಟ್ಟಿದ್ದೇನೆ. ಅದಕ್ಕೆಂದೇ ಈ ಹಣದ ಒಂದು ಭಾಗವನ್ನು ಡಾ.ಸೋಳಂಕಿಯವರಲ್ಲಿ ಇಟ್ಟು ಹೋಗುವವನಿದ್ದೇನೆ. ಬಹಿಷ್ಕೃತ ಕಾಂಗ್ರೆಸ್‌ಗಾಗಿ ಅವರು ಈ ಹಣವನ್ನು ಉಪಯೋಗಿಸಲಿ. ಉಳಿದ ಹಣವನ್ನು ಬೇರೆ ರೀತಿಯಲ್ಲಿ ಉಪಯೋಗಿಸಲಿದ್ದೇನೆ. ಮುಚ್ಚಿಹೋಗಿರುವ ನಮ್ಮ ಬಹಿಷ್ಕೃತ ಭಾರತ ಪತ್ರಿಕೆಯನ್ನು ಮತ್ತೊಮ್ಮೆ ಆರಂಭಿಸುವ ಆಸೆಯಿದೆ ನನಗೆ, ಸದ್ಯ ಸ್ಥಿತಿಯ ಬಗ್ಗೆಯ ಎಲ್ಲ ಲೇಖನಗಳು ಅದರಲ್ಲಿ ಪ್ರಕಟಗೊಳ್ಳುತ್ತವೆ. ಪತ್ರಿಕೆಯ ಹೆಸರನ್ನು ಬದಲಾಯಿಸಬೇಕೆಂದುಕೊಂಡಿದ್ದೇನೆ. ಹೆಸರಿನಿಂದಾಗಿ ಅನೇಕರು ಈ ಪತ್ರಿಕೆಯನ್ನು ಕೊಂಡುಕೊಳ್ಳುವುದಿಲ್ಲ ಹಾಗೂ ನಮ್ಮ ಉದ್ದೇಶವೇನು ಅನ್ನುವುದು ಅವರಿಗರ್ಥವಾಗುವುದಿಲ್ಲ. ಪತ್ರಿಕೆಯ ಹೆಸರು 'ಜನತಾ'ಎಂದಿಟ್ಟು ಅದರ ಸಂಪಾದಕರಾಗಿ ಶ್ರೀ ದೇವರಾವ್ ನಾಯಿಕರನ್ನು ನೇಮಿಸುತ್ತೇನೆ. ಈ ಪತ್ರಿಕೆಗೆ ಚಂದಾದಾರರು, ಸಭಾಸದರನ್ನು ಕೊಡುವ ದಯೆ ತೋರಿ. ಈ ಹಣದ ಸ್ವಲ್ಪ ಭಾಗವನ್ನು ನಾನು ಆರಂಭಿಸಿರುವ ಬೋರ್ಡಿಂಗ್‌ಗೆ ಸಹಾಯವಾಗಿ ಕೊಡಲಿದ್ದೇನೆ. ದುಂಡು ಮೇಜಿನ ಪರಿಷತ್ತಿಗೆ ಹೋಗಿ ಬರುವ ಡಾ. ಅಂಬೇಡ್ಕರ್‌ರ ಖರ್ಚು ಬ್ರಿಟಿಷ್ ಸರ್ಕಾರ ಮಾಡುತ್ತಿರಬೇಕಾದರೆ ಈ ಹಣದ ಅಗತ್ಯವೇನಿದೆ? ಎಂದು ಕೆಲವರಿಗನಿಸಬಹುದು. ನನಗೆ ನಿಮ್ಮ ಸಹಾಯದ ಅಗತ್ಯವಿದ್ದಾಗಲೂ ನಾನು ನಿಮ್ಮ ಸಹಾಯವನ್ನಪೇಕ್ಷಿಸಲಿಲ್ಲ ಅಂದ ಮೇಲೆ ಇಂದು ನನ್ನ ಖಾಸಗಿ ಕೆಲಸಕ್ಕೂ ನಿಮ್ಮ ಸಹಾಯದ ಅಗತ್ಯ ನನಗಿಲ್ಲ. ಅಗತ್ಯವಿದ್ದಾಗ ನಾನಾಗೇ ಕೇಳುವೆ.

ನಾನು ದುಂಡು ಮೇಜಿನ ಪರಿಷತ್ತಿಗೆ ಹೋಗುತ್ತಿದ್ದೇನೆ, ಈ ಪರಿಷತ್ತಿನಿಂದ ದಲಿತರಿಗೆ ಲಾಭವಾಗದಿರದು. ಆದರೆ ಈ ಪರಿಷತ್ತಿಗೆ ಬಹಿಷ್ಕಾರ ಹಾಕಿರುವ ಜನರಿಗೆ ನಾನೊಂದು ಮಾತನ್ನು ಕೇಳಬಯಸುತ್ತೇನೆ, ಎರಡು ಪಕ್ಷಗಳಲ್ಲಿ ಹೋರಾಟವಾಗುತ್ತಿರುವಾಗ ಒಪ್ಪಂದದ ಮಾತುಕತೆಗಳಾದರೆ ತಪ್ಪೇನು? ಇಂದು ಸರ್ಕಾರ ಹಾಗೂ ಕಾಂಗ್ರೆಸ್ಸಿನ ನಡುವೆ ಹೋರಾಟ ನಡೆಯುತ್ತಿದೆ, ಕಾಂಗ್ರೆಸ್ಸಿನ ಚಳುವಳಿಗಳಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಹೀಗೆ ಎರಡೂ ಪಕ್ಷಗಳು ಹಟ ತೊಟ್ಟಿರುವಾಗ ಯಾರಾದರೂ ಮಧ್ಯಸ್ತಿಕೆ ಮಾಡಿರಾಜಿಯ ಮಾರ್ಗ ಕಂಡುಹಿಡಿದು ಜಗಳ ನಿಲ್ಲಿಸಬೇಕಿದೆ. ಈ ರಾಜಿಯ ಮಾರ್ಗ ದುಂಡು ಮೇಜಿನ ಪರಿಷತ್ತಿನ ಮೂಲಕ ಸಿಗಬಹುದು, ಈ ಪರಿಷತ್ತಿನಿಂದೇನು ಆಗದು ಎಂದು ಜನ ಆಡಿಕೊಳ್ಳುತ್ತಿದ್ದರೂ ಈ ಪರಿಷತ್ತಿನಿಂದ ಲಾಭವಾಗಬಹುದೆಂದು ನನಗೆ ಭರವಸೆಯಿದೆ. ಈ ಪರಿಷತ್ತು ಅಪಯಶಸ್ಸು ತರಲಿದೆ ಎಂದನಿಸುವವರಿಗೆ ಒಂದು ಮಾತು ಕೇಳುತ್ತೇನೆ, ಈ ಪರಿಷತ್ತಿಗೆ ಅಪಯಶಸ್ಸು ಹೇಗೆ ಮತ್ತು ಯಾಕೆ ಸಿಗುತ್ತದೆ? ಇತ್ತೀಚೆಗೆ ಹಿಂದೂ, ಮುಸಲ್ಮಾನ ಹಾಗೂ ದಲಿತರಾದಿ ಎಲ್ಲರಿಗೂ ಸ್ವಾತಂತ್ರ್ಯ ಬೇಕಿದೆ. ಈಗಷ್ಟೇ ನಾಗಪೂರಿನಲ್ಲಾದ ಅಖಿಲ ಭಾರತೀಯ ಬಹಿಷ್ಕೃತ ಕಾಂಗ್ರೆಸ್ ಹಾಗೆಂದು ಮಸೂದೆಯೊಂದನ್ನು ಮಂಜೂರು ಮಾಡಿದೆ, ಎಲ್ಲರೂ ಇದಕ್ಕೆ ಧ್ವನಿಗೂಡಿಸಿದ್ದಾರೆ ಆದರೆ 'ಸ್ವಾತಂತ್ರ್ಯಯಾವ ಪದ್ಧತಿಯಲ್ಲಿ ಕೊಡಬೇಕು' ಅನ್ನುವ ಒಂದೇ ವಿಷಯದ ಬಗ್ಗೆ ವಾದವಿದೆ. ಅಲ್ಪಸಂಖ್ಯಾತರ ರಕ್ಷಣೆಯಾಗಿ ಅವರಿಗೆ ಸಾಮಾಜಿಕ, ರಾಜಕೀಯ, ಹಾಗೂ ಧಾರ್ಮಿಕ ಸಮಾನತೆ ಕೊಡ ಮಾಡುವ ಹಾಗೂ ಎಲ್ಲ ಭಾರತೀಯರು ಸ್ವತಂತ್ರವಾಗಿ ಬಾಳುವಂತಹ

ಸ್ವಾತಂತ್ರ್ಯ ಬೇಕಿದೆ. ಇದೆಲ್ಲ ನಿಜವಾದರೂ ಸ್ವಾತಂತ್ರ್ಯದ ಮೂಲಕ ಸಿಗುವಂತಹ ಅಧಿಕಾರಗಳು ಎಲ್ಲರಲ್ಲಿಯೂ ಯೋಗ್ಯವಾಗಿ ಸಮನಾಗಿ ಹಂಚಬೇಕೆ ಇಲ್ಲವೆ ಒಂದು ವಿಶಿಷ್ಟ ಜಾತಿಯ ಜನರ ಕೈಯಲ್ಲೇ ಆ ಅಧಿಕಾರಗಳಿರಬೇಕೆ? ಅನ್ನುವ ವಾದವಿದೆ. ದಲಿತ ಸಮಾಜ, ಹಿಂದುಳಿದ ಜಾತಿ ಹಾಗೂ ಅಲ್ಪಸಂಖ್ಯಾತರನ್ನು ಸಮಾಧಾನಪಡಿಸುವಲ್ಲಿ ಮುಂದುವರೆದ ಹಾಗೂ ಬಹುಸಂಖ್ಯಾತರು ದೊಡ್ಡ ಮನಸ್ಸು ಮಾಡಿದರೆ ನಮ್ಮಲ್ಲಿಯ ಆಂತರಿಕ ವಾದಗಳು ಪರಿಹಾರವಾದಾವು.

ನಮಗೆ ನಿಮಗೆ ಅವಶ್ಯಕವಾಗಿರುವುದನ್ನು ಕೇಳುವುದರ ಜೊತೆಗೆ ಸ್ವಾತಂತ್ರ್ಯದ ಮಸೂದೆ ಎದುರಾದರೆ ನಾನದನ್ನು ಬೆಂಬಲಿಸುತ್ತೇನೆ. ಎಲ್ಲ ರೀತಿಯಿಂದಲೂ ಈ ದೇಶದ ಪ್ರಗತಿಯಾಗಿ ಈ ದೇಶ ಉಳಿದೆಲ್ಲ ದೇಶಗಳಿಗಿಂತ ಮುನ್ನಡೆಯಬೇಕು ಎಂದು ಕಾಂಗ್ರೆಸ್‌ನಂತೆ ನನಗೂ ಅನಿಸುತ್ತದೆ. ದುಂಡು ಮೇಜಿನ ಪರಿಷತ್ತು ಮುಗಿದ ಮೇಲೆ ನನ್ನ ಎರಡನೆಯ ಕೆಲಸವಾದ ಜನ ಜಾಗೃತಿಯನ್ನು ಮಾಡಲಿದ್ದೇನೆ. ಇದೊಂದು ಅತಿ ಮಹತ್ವದ ಕೆಲಸ. ಕಾಂಗ್ರೆಸ್ಸಿನ ಚಳುವಳಿಗಳು ಅಮೇರಿಕ, ಜರ್ಮನಿ ಹೀಗೆ ರಾಷ್ಟ್ರದಾದ್ಯಂತ ನಡೆದಿದೆ ಹಾಗೆಯೇ ನಮ್ಮ ದಲಿತರ ದುಃಖವನ್ನೂ ದೇಶದಾದ್ಯಂತ ಎಲ್ಲ ಜನರ ಗಮನಕ್ಕೆ ತರಲೆಂದು ರಶ್ಯಾ, ಜರ್ಮನಿ, ಅಮೇರಿಕಾ ಹಾಗೂ ಜಪಾನ್‌ನಂತಹ ದೇಶದ ಪ್ರಮುಖ ನಾಯಕರನ್ನು ಭೇಟಿಯಾಗಿ ನಮ್ಮ ದುಃಖಗಳನ್ನು ಅವರೆದುರಿಡಲಿದ್ದೇನೆ. ಸಾಧ್ಯವಾದರೆ ಲೀಗ್ ಆಫ್ ನೇಷನ್ಸ್‌ನೆದುರು ದಲಿತರ ಪ್ರಶ್ನೆಗಳನ್ನು ಮಂಡಿಸಲಿದ್ದೇನೆ. ನಮ್ಮಲ್ಲೇ ಅನೇಕ ಗುಂಪುಗಳಾಗಿವೆ, ನೀವೆಲ್ಲರೂ ಒಗ್ಗಟ್ಟಿನಿಂದಿರಲು ಪ್ರಯತ್ನಿಸಿ ಎಂದಷ್ಟೆ ನಿಮ್ಮಲ್ಲಿ ನಾನು ಮಾಡುವ ವಿನಂತಿ. ಪ್ರತಿಯೊಬ್ಬ ಮನುಷ್ಯ ತಾನು ನೇತಾರನೆಂದು ಹೇಳಿಕೊಂಡು ತಿರುಗುವ ಕೆಟ್ಟ ದೃಶ್ಯವೊಂದು ಕಳೆದ ಮೂರ್ನಾಲ್ಕು ವರ್ಷಗಳಿಂದ ನನ್ನ ಕಣ್ಣಿಗೆ ಬೀಳುತ್ತಿದೆ. ಇದು ಒಳ್ಳೆಯದಲ್ಲ, ಇನ್ನು ಮುಂದಾದರೂ ಇದನ್ನೆಲ್ಲ ನಿಲ್ಲಿಸಿಬಿಡಿ ಎಂದು ಕೂಡ ವಿನಂತಿಸುತ್ತೇನೆ, ನಮ್ಮೆದುರು ಎಷ್ಟೊಂದು ಅಡೆತಡೆಗಳಿವೆ ಹಾಗೂ ಕೆಲಸದ ಸಾಕಷ್ಟು ಒತ್ತಡವಿದೆ. ನಮ್ಮ ಸಮಸ್ಯೆಗಳನ್ನು ಪರಿಹರಿಸಲು ಒಂದು ಜಿಲ್ಲೆ ಇಲ್ಲವೆ ಒಂದು ಇಲಾಖೆ ಏನನ್ನೂ ಮಾಡಲು ಸಾಧ್ಯವಿಲ್ಲ. ಹೀಗಿರುವಾಗ ಅಖಿಲ ಬಹಿಷ್ಕೃತ ಬಂಧುಗಳು ತಮ್ಮ ತಮ್ಮಲ್ಲಿರುವ ಮತಭೇದಗಳನ್ನು ಪಕ್ಕಕ್ಕಿಟ್ಟು ಕೈ ಕೈ ಜೋಡಿಸಿ ಕೆಲಸ ಮಾಡುವುದರಲ್ಲೇ ನಮ್ಮ ಒಳಿತಿದೆ. ನನ್ನ ಹಿಂದೆ ಡಾ. ಸೋಲಂಕಿ ಹಾಗೂ ಶ್ರೀ. ನಾಯಿಕ್‌ರವರು ಹೇಳಿದಂತೆ ಕೇಳಿ ಸಮಾಜಕ್ಕಾಗಿರುವ ಜಾಗೃತಿಯನ್ನು ಹೆಚ್ಚಿಸುವ ಜವಾಬ್ದಾರಿಯನ್ನು ನಿಮಗೆ ವಹಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ' ಅಂದರು.

'ಮೇಲಿನ ಈ ವಿಚಾರಗಳನ್ನು ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಹೇಳಿದರು. ಸಭೆ ಮುಗಿದು ದಲಿತರು ಅಲ್ಲಿಂದ ಹೊರಟ ಮೇಲೆ ಹೊರಗೆ ನಿಂತಿದ್ದ ಕೆಲವರು ಅವರ ಮೇಲೆ ಹಲ್ಲೆ ನಡೆಸಿದರು ಎಂದು ಕೇಳಿಬಂದಿದೆ. ಪರೇಲ್‌ನಲ್ಲಿ ಕಾಂಗ್ರೆಸ್ ಹಾಗೂ ದಲಿತರ ನಡುವೆಯಾದ ಹೊಡೆದಾಟದಲ್ಲಿ ಕಲ್ಲು ಹಾಗೂ ಕೋಲುಗಳನ್ನು ಬಳಸಲಾಗಿತ್ತು. ದಂಗೆಯಲ್ಲಿ ಗಾಯಗಳಾದ ೮ ಜನರಿಗೆ ಹತ್ತಿರದ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ಉಪಚಾರಕ್ಕಾಗಿ ಭರ್ತಿ ಮಾಡಲಾಯಿತು.

# ೩೫.

# ಬ್ರಿಟಿಷ್ ಸರ್ಕಾರ ಈ ದೇಶದಲ್ಲಿರುವ ತನಕ ನಮಗೆ ರಾಜಕೀಯ ಅಧಿಕಾರ ಸಿಗುವುದಿಲ್ಲ

(ಮೊದಲ ದುಂಡು ಮೇಜಿನ ಪರಿಷತ್ತನ್ನು ೧೯೩೦ರಲ್ಲಿ ಲಂಡನ್ನಿನಲ್ಲಿ ಆಯೋಜಿಸಲಾಗಿತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರನ್ನು ಇದಕ್ಕೆ ಆಮಂತ್ರಿಸಿದ್ದರು. ೨೦ನೆಯ ನವಂಬರ್ ೧೯೩೦ ರಂದು ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣ ಅನೇಕ ರೀತಿಯಲ್ಲಿ ಕ್ರಾಂತಿಕಾರಿಯಾಗಿ ಪರಿಣಮಿಸಿದ್ದಲ್ಲದೆ ಇಂಗ್ಲೆಂಡಿನ ಅನೇಕ ವೃತ್ತ ಪತ್ರಿಕೆಗಳ ಗಮನ ಸೆಳೆಯಿತು–ಸಂಪಾದಕರು)

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ,

ಅಧ್ಯಕ್ಷರೆ,

ನಾನು ಹಾಗೂ ನನ್ನ ಸಹೋದ್ಯೋಗಿಗಳಾದ ರಾವಬಹಾದೂರ್ ಶ್ರೀನಿವಾಸನ್ ಅವರು ದಲಿತರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆ. ಹಾಗಾಗಿ ಭಾರತದಲ್ಲಿ ಸಂವಿಧಾನದ ಬದಲಾವಣೆಯ ಸಂಬಂಧವಾಗಿ ಯೋಚಿಸುವುದಾದರೆ ನಾನು ದಲಿತರನ್ನು ಕಣ್ಣೆದುರಿಗಿಟ್ಟುಕೊಂಡು ಭಾಷಣ ಮಾಡಲು ನಿಂತಿದ್ದೇನೆ. ಈ ಜಾತಿಯನ್ನು ಪ್ರತಿನಿಧಿಸುವುದು ನನಗೂ ನನ್ನ ಸಹೋದ್ಯೋಗಿಗೂ ಸನ್ಮಾನದ ವಿಷಯವಾಗಿದೆ. ಇದು ನಾಲ್ಕು ಕೋಟಿ ಮೂವತ್ತು ಲಕ್ಷ ಜನರ ಅಥವಾ ಬ್ರಿಟಿಷ್ ಆಧಿಪತ್ಯದಲ್ಲಿರುವ ೧\೫ರಷ್ಟು ಜನರ ದೃಷ್ಟಿಕೋನವಾಗಿದೆ. ದಲಿತರ ಜಾತಿಯು ಸ್ವತಂತ್ರ ಜಾತಿಯಾಗಿದ್ದು ಸ್ಪಷ್ಟವಾಗಿ ಹೇಳುವುದಾದರೆ ಮುಸಲ್ಮಾನರಿಗಿಂತ ಸಂಪೂರ್ಣವಾಗಿ ಬೇರೆಯದಾಗಿದೆ. ಹಿಂದೂ ಸಮಾಜದಲ್ಲಿ ಅದು ಸೇರಿಕೊಂಡಿದ್ದರೂ ಯಾವುದೇ ದೃಷ್ಟಿಯಿಂದ ಅದಿನ್ನೂ ಹಿಂದೂ ಸಮಾಜದಲ್ಲಿ ಐಕ್ಯವಾಗಿಲ್ಲ. ದಲಿತ ಸಮಾಜದ ತನ್ನ ಸ್ವತಂತ್ರ ಅಸ್ತಿತ್ವವಿದೆ ಅಷ್ಟೇಯಲ್ಲದೆ ಹಿಂದೂಗಳು ದ್ವೇಷಭಾವನೆಯಿಂದ ಅವರ ಸಾಮಾಜಿಕ ದರ್ಜೆಯನ್ನು ನಿರ್ಧರಿಸಿಬಿಟ್ಟಿದ್ದಾರೆ. ಈ ದರ್ಜೆಯು ಹಿಂದೂ ಸಮಾಜದ ಉಳಿದ ಯಾವುದೇ ಜಾತಿಗಿರುವ ದರ್ಜೆಗಿಂತ ಭಿನ್ನವಾಗಿದೆ. ಅದಕ್ಕೆ ಹೊಲದಲ್ಲಿ ಕೆಲಸ ಮಾಡುವ ಆಳು ಹಾಗೂ ಗುಲಾಮನ ಮಧ್ಯದ ಸ್ಥಿತಿ ಪ್ರಾಪ್ತವಾಗಿದೆ. ಈ ಆಳು ಹಾಗೂ ಗುಲಾಮರಿಗೆ ಸ್ಪರ್ಶಿಸುವ ನಿಷೇಧವಿರಲಿಲ್ಲ. ಆದರೆ ದಲಿತರು ಯಾರನ್ನೂ ಯಾವುದನ್ನೂ ಸ್ಪರ್ಶಿಸುವಂತಿಲ್ಲ. ಹಾಗಾಗಿ ಭೂದಾಸ ಹಾಗೂ ಗುಲಾಮರಿಗಿಂತ ಇವರ ಪರಿಸ್ಥಿತಿ ಶೋಚನೀಯವಾಗಿದೆ. ದಲಿತರ ಮೇಲೆ ಗುಲಾಮಗಿರಿ ಹೇರಲ್ಪಟ್ಟು ಅವರ ವ್ಯವಹಾರದಲ್ಲಿ ಮಿತಿಯಿರುವಂತೆ ನೋಡಿಕೊಳ್ಳಲಾಗಿದೆ. ಈ ಅಸ್ಪೃಶ್ಯತೆಯ ಪರಿಣಾಮ ಕೇವಲ ಅವರ ಸಾರ್ವಜನಿಕ ಜೀವನದ ಮೇಲಷ್ಟೇಯಲ್ಲ ಸಮಾನತೆಯ ಅವಕಾಶ ಪಡೆಯುವುದರಿಂದಲೂ ಅವರು ವಂಚಿತರಾಗಿದ್ದಾರೆ. ಮಾನವನ ಜೀವನದ ಆಧಾರವಾಗಿರುವ ಪ್ರಾಥಮಿಕ ಸ್ವರೂಪದ ನಾಗರಿಕ ಹಕ್ಕುಗಳಿಂದಲೂ ಇವರು ವಂಚಿತರಾಗಿದ್ದಾರೆ. ಇಂಗ್ಲಂಡ್ ಇಲ್ಲವೆ ಫ್ರಾನ್ಸ್‌ನ ಸಂಪೂರ್ಣ ಜನಸಂಖ್ಯೆಯಷ್ಟೆ ಇರುವ ಈ ಜನರ ಜೀವನ ಹೋರಾಟದಲ್ಲಿ ಎಷ್ಟೊಂದು

ಭಯಂಕರವಾದ ವಿಘ್ನಗಳಿವೆಯೆಂದರೆ ಇವರ ರಾಜಕೀಯ ಸಮಸ್ಯೆಯನ್ನು ಬಿಡಿಸುವ ದಾರಿಯಲ್ಲಿವು ಪರಿಣಾಮ ಬೀರಲಿವೆ ಅನ್ನುವುದು ಖಚಿತ. ಈ ಪರಿಷತ್ತು ಆದಷ್ಟು ಬೇಗ ಈ ಸಮಸ್ಯೆಯನ್ನು ಬಿಡಿಸುವ ಜವಾಬ್ದಾರಿ ವಹಿಸಿಕೊಳ್ಳಬೇಕೆಂದು ಮನಸಾರೆ ಇಚ್ಛಿಸುತ್ತೇನೆ.

ಈಗ ಸ್ವಲ್ಪದರಲ್ಲಿ ಈ ಸಮಸ್ಯೆಯನ್ನು ತಮ್ಮೆದುರು ಇಡಲು ಪ್ರಯತ್ನಿಸುತ್ತೇನೆ. ಆದಷ್ಟು ಬೇಗ ಈ ಆಡಳಿತಶಾಹಿ (ಅಧಿಕಾರಿಗಳ ಕೇಂದ್ರೀಕೃತ ಆಡಳಿತ) ರದ್ದಾಗಿ ಜನತೆಯಿಂದ ಜನತೆಯ ಹಾಗೂ ಜನತೆಗಾಗಿ ಇರುವ ಪ್ರಜಾಪ್ರಭುತ್ವದ ರಾಜ್ಯ ಸ್ಥಾಪನೆಯಾಗಬೇಕು. ದಲಿತರ ದೃಷ್ಟಿಕೋನದಿಂದಾಗುತ್ತಿರುವ ಈ ನನ್ನ ಮಾತಿನಿಂದ ಕೆಲವರಿಗೆ ಆಶ್ಚರ್ಯವಾಗಬಹುದು ಏಕೆಂದರೆ ದಲಿತರನ್ನು ಬ್ರಿಟಿಷ್ ಸರ್ಕಾರದೊಂದಿಗೆ ಜೋಡಿಸುವ ಎಳೆ ಭಿನ್ನವಾಗಿದೆ. ಪೀಳಿಗೆಗಳಿಂದ ಧರ್ಮಾಂಧ ಹಿಂದೂಗಳಿಂದ ಪೀಡಿಸಲ್ಪಟ್ಟ ಹಿಂದೂಗಳನ್ನು ಸ್ವಲ್ಪವಾದರೂ ಬಿಡಿಸಿದ ಮುಕ್ತಿದಾತರು ಅನ್ನುವ ದೃಷ್ಟಿಯಿಂದ ದಲಿತರು ಬ್ರಿಟಿಷರನ್ನು ಸ್ವಾಗತಿಸಿದ್ದಾರೆ. ಇದೇ ದಲಿತರು ಬ್ರಿಟಿಷರ ಪರವಾಗಿ ಹಿಂದೂ, ಸಿಖ್ ಹಾಗೂ ಮುಸ್ಲಿಂರ ವಿರುದ್ಧ ಹೋರಾಡಿ ಭಾರತದ ಸಾಮಾರ್ಜ್ಯವನ್ನು ಬ್ರಿಟಿಷರಿಗೆ ಗೆದ್ದು ಕೊಟ್ಟಿದ್ದಾರೆ. ಇದರ ಬದಲಿಗೆ ದಲಿತರ ವಿಶ್ವಸ್ಥರಾಗಿ ಅವರನ್ನು ಕಾಪಾಡುವ ಆಶ್ವಾಸನೆಯನ್ನು ಬ್ರಿಟಿಷರು ಕೊಟ್ಟಿದ್ದರು. ಹೀಗೆ ಇವರೀರ್ವರ ನಡುವಿನ ಗಟ್ಟಿ ಸಂಬಂಧವನ್ನು ಗಮನಿಸಿದರೆ ಬ್ರಿಟಿಷ್ ಸರ್ಕಾರದ ಬಗ್ಗೆ ದಲಿತರಲ್ಲಾದ ಪರಿವರ್ತನೆಯನ್ನು ಗಮನಾರ್ಹ ಬದಲಾವಣೆ ಅನ್ನಬಹುದು. ಈ ಮತ ಪರಿವರ್ತನೆಯ ಕಾರಣ ಕಂಡುಹಿಡಿಯುವುದು ಕಷ್ಟವಲ್ಲ. ಕೇವಲ ಬಹುಮತಗಳಿರುವ ಜನರ ಕೈಯಲ್ಲಿ ಭವಿಷ್ಯ ಬಿಟ್ಟುಕೊಡಬೇಕೆನ್ನುವ ಆಸೆಯಿಂದ ನಾವು ಈ ನಿರ್ಧಾರ ತೆಗೆದುಕೊಂಡಿಲ್ಲ. ನಿಜವಾಗಿಯೂ! ಭಾರತದ ಬಹುಸಂಖ್ಯಾಕರು ಹಾಗೂ ನಾನು ಪ್ರತಿನಿಧಿಯಾಗಿರುವ ಅಲ್ಪಸಂಖ್ಯಾಕರ ನಡುವೆ ಯಾವತ್ತೂ ಒಳ್ಳೆಯ ಸಂಬಂಧವಿರಲಿಲ್ಲ. ಈ ನಿರ್ಧಾರವನ್ನು ನಾವು ಸ್ವತಂತ್ರವಾಗಿ ತೆಗೆದುಕೊಂಡಿದ್ದೇವೆ. ನಮ್ಮ ಮೇಲೆರಗಿರುವ ಪರಿಸ್ಥಿತಿಯಿಂದಾಗಿ ವರ್ತಮಾನದ ಸರ್ಕಾರದ ಪರೀಕ್ಷಣೆ ಮಾಡಿದಾಗ ಒಳ್ಳೆಯ ಸರ್ಕಾರಕ್ಕೆ ಅಗತ್ಯವಿರುವಂತಹ ಸಾಕಷ್ಟು ಮೂಲತತ್ವಗಳು ಈ ಶಾಸನ ವ್ಯವಸ್ಥೆಯಲ್ಲಿಲ್ಲ ಅನ್ನುವುದು ಗೊತ್ತಾಯಿತು. ನಮ್ಮ ಈಗಿನ ಪರಿಸ್ಥಿತಿ ಹಾಗೂ ಬ್ರಿಟಿಷರು ಬರುವ ಮುಂಚಿನ ಭಾರತೀಯ ಸಮಾಜದ ತುಲನೆ ಮಾಡಿದಾಗ ನಾವು ಮೊದಲಿದ್ದ ಪರಿಸ್ಥಿಯಿಂದ ಮುನ್ನಡೆಯುವುದನ್ನು ಬಿಟ್ಟು ಅಲ್ಲೇ ಕೊಳೆಯುತ್ತ ಕಾಲಹರಣ ಮಾಡುತ್ತಿದ್ದೇವೆ ಅನ್ನುವುದು ಕಂಡುಬಂತು. ಬ್ರಿಟಿಷರು ಭಾರತಕ್ಕೆ ಬರುವ ಮುನ್ನ ನಾವು ಅಸ್ಪೃಶ್ಯತೆಯಂತಹ ಅಸಹ್ಯಕರ ಸ್ಥಿತಿಯಲ್ಲಿ ದಿನ ಕಳೆಯುತ್ತಿದ್ದೆವು. ಈ ಪರಿಸ್ಥಿತಿಯನ್ನು ಬದಲಿಸಲು ಅವರೇನಾದರೂ ಮಾಡಿದ್ದಾರೆಯೆ? ಬ್ರಿಟಿಷರು ಇಲ್ಲಿಗೆ ಬರುವ ಮುನ್ನ ನಾವು ಹಳ್ಳಿಗಳ ಬಾವಿಗಳಿಂದ ನೀರು ತುಂಬುವಂತಿರಲಿಲ್ಲ. ಬಾವಿಗಳಿಂದ ನೀರು ತುಂಬುವ ಅಧಿಕಾರವನ್ನವರು ನಮಗೆ ಕೊಡಿಸಿದ್ದಾರೆಯೆ? ಬ್ರಿಟಿಷರು ಬರುವ ಮೊದಲು ನಾವು ದೇವಸ್ಥಾನದಲ್ಲಿ ಪ್ರವೇಶಿಸುವಂತಿರಲಿಲ್ಲ. ಈಗ ಪ್ರವೇಶಿಸಲು ನಮಗೆ ಅನುಮತಿ ಇದೆಯೆ? ಬ್ರಿಟಿಷರು ಬರುವ ಮೊದಲು ನಮಗೆ ಪೋಲೀಸ್ ಖಾತೆಯಲ್ಲಿ ಪ್ರವೇಶ ಪಡೆಯುವ ಅನುಮತಿಯಿರಲಿಲ್ಲ. ಈಗ ಇದೆಯೆ? ಬ್ರಿಟಿಷರು ಬರುವ ಮುನ್ನ ನಮಗೆ ಸೈನ್ಯದಲ್ಲಿ ಕೆಲಸ ಸಿಗುತ್ತಿರಲಿಲ್ಲ ಈಗ ಸಿಗುತ್ತಿದೆಯೆ? ಈ ಪ್ರಶ್ನೆಗಳಿಗೆ ಸಕಾರಾತ್ಮಕ ಉತ್ತರವನ್ನು ಯಾರೂ ಕೊಡಲಾರರು. ಅವರು ಬ್ರಿಟಿಷರಾಗಿದ್ದರಿಂದಲೇ ನಮ್ಮನ್ನು ಇಷ್ಟು ವರ್ಷ ಆಳಿದರು. ನಮಗಾಗಿ ಕೆಲವು ಒಳ್ಳೆಯ ಕೆಲಸಗಳನ್ನೂ ಅವರು ಮಾಡಿದ್ದಾರೆ ಅನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮ ಪರಿಸ್ಥಿಯಲ್ಲಿ ಯಾವುದೇ ಬದಲಾವಣೆ ತರಲಿಲ್ಲ. ಅವರಿಗೆ ಮೊದಲಿನಿಂದ ಕಂಡ ಸಮಾಜ ವ್ಯವಸ್ಥೆಯನ್ನೇ ಅವರು ಮುಂದುವರೆಸಿಕೊಂಡು ಹೋದರು. ಇದಕ್ಕೊಂದು ಉದಾಹರಣೆ ಕೊಡುತ್ತೇನೆ. ಚೀನಿ ದರ್ಜಿಯೊಬ್ಬನಿಗೆ ಹೊಸ ಕೋಟನ್ನು

ಮಾಂಗ್‌ಲು ಹಳೆಯ ತೂತು ಬಿದ್ದ ಕೋಟನ್ನು ಅಳತೆಗೆ ಕೊಡಲಾಯಿತು. ಹೊಸ ಕೋಟನ್ನು ಮಾಂಗುವಾಗ ಆತ ಬಹಳ ಅಭಿಮಾನದಿಂದ ಹಳೆಯ ಕೋಟಿಗಿರುವ ತೂತು ಹಾಗೂ ಹರಿದಂತೆಯೆ ಹೊಸ ಕೋಟಿಗೂ ಇಡುತ್ತಾನೆ. ಬ್ರಿಟಿಷರೂ ಹಾಗೆ, ನೂರಾ ಐವತ್ತು ವರ್ಷಗಳವರೆಗೆ ಅವರು ನಮ್ಮನ್ನಾಳಿದ್ದರೂ ನಮ್ಮ ಗಾಯಗಳು ಮಾಯಲಿಲ್ಲ, ನಮ್ಮ ದುಖಃಗಳೂ ಕಡಿಮೆಯಾಗಲಿಲ್ಲ ಹಾಗೂ ಕಡಿಮೆ ಮಾಡುವ ಯಾವ ಉಪಾಯ ಯೋಜನೆಗಳನ್ನೂ ಅವರು ಹಮ್ಮಿಕೊಳ್ಳಲಿಲ್ಲ.

ಬ್ರಿಟಿಷರು ನಮ್ಮ ಬಗ್ಗೆ ಸಹಾನುಭೂತಿ ತೋರಿಸಲಿಲ್ಲವೆಂದೋ ಅಥವಾ ನಮ್ಮ ಪರಿಸ್ಥಿತಿಯ ಬಗ್ಗೆ ಉದಾಸೀನತೆ ತೋರಿಸಿದರೆಂದೋ ನಾವವರನ್ನು ದೂಷಿಸುತ್ತಿಲ್ಲ. ಆದರೆ ನಮ್ಮ ಪ್ರಶ್ನೆಗಳನ್ನು ಬಿಡಿಸುವುದರಲ್ಲಿ ಮಾತ್ರ ಅವರು ಹಿಂದುಳಿದರು ಅನ್ನುವುದು ಮಾತ್ರ ನಿಜ. ಕೇವಲ ಉದಾಸೀನತೆಯ ಪ್ರಶ್ನೆಯಾಗಿದ್ದರೆ ಅದು ತಾತ್ಕಾಲಿಕವಾಗಿರುತ್ತಿತ್ತು. ಹಾಗೂ ಬ್ರಿಟಿಷರ ಬಗ್ಗೆಯಿರುವ ನಮ್ಮ ವಿಚಾರಗಳು ಬದಲಾಗುತ್ತಿರಲಿಲ್ಲ. ಆದರೆ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಇದು ಉದಾಸೀನತೆಯ ಸಮಸ್ಯೆಯಲ್ಲ ಎಂದು ದಲಿತರಿಗನಿಸುತ್ತದೆ. ತಮ್ಮ ಕರ್ತವ್ಯದ ಅರಿವನ್ನೇ ಇಟ್ಟುಕೊಳ್ಳದ ಬ್ರಿಟಿಷರ ಅಕಾರ್ಯಕ್ಷಮತೆಯಿಂದ ಉದ್ಭವಿಸಿರುವ ಸಮಸ್ಯೆಗಳು ಅನ್ನುವುದು ಗಮನಕ್ಕೆ ಬಂತು. ಬ್ರಿಟಿಷ್ ಸರ್ಕಾರದ ಮೇಲೆ ಎರಡು ರೀತಿಯ ಬಂಧನಗಳಿವೆ ಎಂದು ದಲಿತರಿಗನಿಸುತ್ತದೆ. ಮೊದಲನೆಯ ಬಂಧನ ಒಳಗಿನದು, ಇಂದು ಅಧಿಕಾರದಲ್ಲಿರುವವರ ಪಾತ್ರ, ಅವರ ಹಿತಸಂಬಂಧಗಳು, ಹಾಗೂ ಅವರ ಪ್ರೇರಣೆ ಇವುಗಳು ನಮ್ಮೊಂದಿಗೆ ಹೊಂದಿಕೆಯಾಗುವುದಿಲ್ಲ ಹಾಗಾಗಿ ಅವರು ನಮಗೆ ಸಹಾಯ ಮಾಡುವುದಿಲ್ಲ. ಅವರ ಅಧಿಕಾರಕ್ಕಿರುವ ಮತ್ತೊಂದು ಬಂಧನವೆಂದರೆ ಒಳ್ಳೆಯ ಕೆಲಸಕ್ಕೆ ಹೆಜ್ಜೆ ಮುಂದಿಟ್ಟರೆ ಹಿಂದೂ ಸಮಾಜದ ತೀವ್ರ ವಿರೋಧಕ್ಕೆ ಒಳಬೇಕಾಗಬಹುದೇನೋ ಅನ್ನುವ ಭಯ. ಭಾರತೀಯ ಸಮಾಜದ ಹೃದಯವನ್ನೇ ಘಾಸಿಗೊಳಿಸುವಂತಹ ಸಾಮಾಜಿಕ ದೋಷಗಳನ್ನು ತೆಗೆದುಹಾಕುವ ಅವಶ್ಯಕತೆಯನ್ನವರು ಅರಿತಿದ್ದಾರೆ. ಕಳೆದ ಸಾವಿರಾರು ವರ್ಷಗಳಿಂದ ಸಾಮಾಜಿಕ ದೋಷದ ಈ ಹುಳು ದಲಿತರ ಜೀವನವನ್ನು ಭಯಂಕರವಾಗಿ ಕೊರೆಯುತ್ತಿದೆ ಅನ್ನುವುದು ಕೂಡ ಅವರಿಗೆ ಗೊತ್ತು. ಭಾರತದ ಜಮೀನುದಾರ ಸಾಕಷ್ಟು ಜನರನ್ನು ಪೀಡಿಸಿ ಪೀಡಿಸಿ ಸಾಯಿಸುತ್ತಿದ್ದಾನೆ. ಹಾಗೆಯೇ ಬಂಡವಾಲದಾರರು ಕಾರ್ಮಿಕರಿಗೆ ಬದುಕಲು ಅಗತ್ಯವಿರುವಷ್ಟು ಸಂಬಳ ಹಾಗೂ ಕೆಲಸದಲ್ಲಿ ಬೇಕಿರುವ ಸವಲತ್ತುಗಳನ್ನು ಕೊಡುತ್ತಿಲ್ಲ ಅನ್ನುವುದರ ಅರಿವು ಕೂಡ ಭಾರತ ಸರ್ಕಾರಕ್ಕಿದೆ. ಆದರೂ ಈ ದುಷ್ಟ ರೂಢಿಗಳನ್ನು ತೆಗೆದುಹಾಕುವ ಧೈರ್ಯ ಭಾರತ ಸರ್ಕಾರ ಮಾಡಿಲ್ಲ ಅನ್ನುವುದು ದುಃಖದ ಸಂಗತಿ. ಇವುಗಳನ್ನು ತಡೆಗಟ್ಟುವ ಅಧಿಕಾರ ಅವರಿಗಿಲ್ಲವೆಂದು ಅವರು ಸುಮ್ಮನಿದ್ದಾರೆಯೆ? ಇಲ್ಲ, ಹಾಗಲ್ಲ, ಜೀವನದ ನಾಜೂಕು ಭಾಗಗಳಾದ ಸಾಮಾಜಿಕ ಹಾಗೂ ಆರ್ಥಿಕ ವಿಷಯಗಳನ್ನು ಕೆದಕಿ ಅವುಗಳಿಗೆ ಧಕ್ಕೆಯುಂಟಾದರೆ ಅವರಿಗೆ ಬೇಕಿರುವ ಜನ ತೀವ್ರವಾಗಿ ವಿರೋಧಿಸಿಯಾರು ಹಾಗೂ ಅವರೊಡನಿರುವ ತಮ್ಮ ಹಿತ ಸಂಬಂಧ ಕೆಟ್ಟಾವು ಅನ್ನುವ ಭಯ ಬ್ರಿಟಿಷರಿಗಿತ್ತು. ಇಂತಹ ಸರ್ಕಾರದಿಂದ ಯಾರಿಗೆ ಲಾಭವಿದೆ! ಭಾರತದ ಸಾಮಾಜಿಕ ಪರಿಸ್ಥಿತಿ ಸುಧಾರ್ಸಬೇಕು ಅನ್ನುವ ಒಂದೇ ಕಲ್ಯಾಣಕಾರಿ ಅಪೇಕ್ಷೆಯನ್ನು ನಾವು ಅಂಗವಿಕಲವಾಗಿರುವ ಈ ಸರ್ಕಾರದಿಂದ ಅಪೇಕ್ಷಿಸುತ್ತೇವೆ. ದೇಶದ ಸರ್ವಾಂಗೀಣ ವಿಕಾಸಕ್ಕಾಗಿ ತನ್ನನ್ನು ತಾನು ಅರ್ಪಿಸಿಕೊಂಡಿರುವಂತಹ ವ್ಯಕ್ತಿಗಳಿರುವ ಸರ್ಕಾರ ನಮಗೆ ಬೇಕು. ಪ್ರಚಲಿತ ಸಾಮಾಜಿಕ ಹಾಗೂ ಆರ್ಥಿಕ ರೂಢಿಪರಂಪರೆಗಳನ್ನು ಸುಧಾರಿಸುವಾಗ ಜನರ ಆಜ್ಞಾಪಾಲನೆಯ ವೃತ್ತಿ ಯಾವಾಗ ನಷ್ಟವಾಗುತ್ತದೆ ಹಾಗೂ ಬಂಡಾಯವೇಳುವ ಪ್ರವೃತ್ತಿ ಯಾವಾಗ ಜಾಗೃತವಾಗುತ್ತದೆ ಅನ್ನುವ ಪರಿಜ್ಞಾನವಿರುವ ಹಾಗೂ ನಿರ್ಭಯರಾಗಿ ದೇಶದ ಸುಧಾರಣೆಗೆ ಮುಂದೆ ಬರುವ ಸರ್ಕಾರ ನಮಗೆ ಬೇಕು. ಇವುಗಳಿಂದಲೇ

ನ್ಯಾಯಪ್ರಿಯತೆ ಹಾಗೂ ಉಪಯುಕ್ತತೆ ಸಿದ್ಧವಾಗುತ್ತದೆ. ಈ ಎಲ್ಲ ಕರ್ತವ್ಯಗಳನ್ನು ಪೂರೈಸುವುದರಲ್ಲಿ ಬ್ರಿಟಿಷ್ ಸರ್ಕಾರ ಹಿಂದುಳಿದಿದೆ. ಇದು ಕೇವಲ ಜನರ, ಜನರಿಂದ ಹಾಗೂ ಜನರಿಗಾಗಿ ನಡೆಸಲಾಗುವ ಸರ್ಕಾರದಿಂದ ಮಾತ್ರ ಸಾಧ್ಯ.

ದಲಿತರೇ ಅವರ ದೃಷ್ಟಿಕೋನದಿಂದ ಮಂಡಿಸಿದ್ದ ಕೆಲವು ಪ್ರಶ್ನೆಗಳ ಉತ್ತರ ಹೀಗಿದ್ದವು. ಹಾಗಾಗಿ ಸಧ್ಯದ ವೈಶಿಷ್ಟ್ಯಪೂರ್ಣವಾದ ಸಂಕಟಗ್ರಸ್ಥ ಸ್ಥಿತಿಯಲ್ಲಿ ಬದಲಾವಣೆ ತರುವ ದೃಷ್ಟಿಯಿಂದ ನಿಮ್ಮ ಉದ್ದೇಶ ಒಳ್ಳೆಯದಿದ್ದರೂ ಈಗಿನ ಭಾರತದ ನೌಕರಶಾಹೀ ಸರ್ಕಾರ ಸಂಪೂರ್ಣವಾಗಿ ಅಸಮರ್ಥವಾಗಿದೆ. ನಮ್ಮ ದುಃಖಗಳನ್ನು ದೂರ ಮಾಡುವವರು ಯಾರೂ ಇಲ್ಲ ಅನ್ನುವುದು ನಮಗೆ ಗೊತ್ತಿದೆ. ನಮ್ಮ ದುಃಖಗಳನ್ನು ನಾವೇ ದೂರ ಮಾಡಿಕೊಳ್ಳಬಲ್ಲೆವು ಆದರೆ ರಾಜಕೀಯ ಅಧಿಕಾರ ನಮ್ಮ ಕೈಗೆ ಬಂದ ಮೇಲೆ ಮಾತ್ರ ಸಾಧ್ಯ. ಬ್ರಿಟಿಷ್ ಸರ್ಕಾರ ಭಾರತದಲ್ಲಿರುವವರೆಗೆ ರಾಜಕೀಯ ಅಧಿಕಾರದ ಒಂದೆಳೆಯೂ ನಮ್ಮ ಕೈಗೆ ಬರುವುದು ಸಾಧ್ಯವಿಲ್ಲದ ಮಾತು. ಕೇವಲ ಸ್ವಾತಂತ್ರ್ಯದ ಸಂವಿಧಾನದಲ್ಲಿ ಮಾತ್ರ ಆ ಅಧಿಕಾರ ನಮ್ಮಗೆ ಸಿಗುವ ಸಾಧ್ಯತೆಗಳಿವೆ, ಅದಿಲ್ಲದೆ ನಮ್ಮ ಜನರ ಬಿಡುಗಡೆ ಬೇರೆ ಯಾವುದೇ ಮಾರ್ಗದಿಂದ ಸಾಧ್ಯವಿಲ್ಲ.

ಅಧ್ಯಕ್ಷರೆ, ಇನ್ನೊಂದು ವಿಶೇಷವಾದ ವಿಷಯದತ್ತ ನಿಮ್ಮ ಗಮನ ಹರಿಸುತ್ತೇನೆ. ದಲಿತರ ದೃಷ್ಟಿಕೋನವನ್ನು ನಿಮ್ಮೆದುರಿಗಿಡುವಾಗ ಸ್ವಯಂ ಸತ್ತಾತ್ಮಕ ದರ್ಜೆಯ ರಾಜ್ಯ ಅನ್ನುವ ಶಬ್ದವನ್ನು ನಾನಿದುವರೆಗೆ ಉಪಯೋಗಿಸಿಲ್ಲ. ನಾನಿಲ್ಲಿಯವರೆಗೆ ಆ ಶಬ್ದವನ್ನು ಉಪಯೋಗಿಸಿಲ್ಲ ಅಂದಮಾತ್ರಕ್ಕೆ ನನಗೆ ಆ ಶಬ್ದದ ಅರ್ಥ ಗೊತ್ತಿಲ್ಲವೆಂದೋ ಇಲ್ಲವೆ ಭಾರತ ಸ್ವಯಂಸತ್ತಾತ್ಮಕ ದರ್ಜೆಗೇರಲು ದಲಿತರೇ ಒಪ್ಪುತಿಲ್ಲ ಎಂದಾಗುವುದಿಲ್ಲ, ಆದರೆ ಈ ಶಬ್ದದಿಂದ ದಲಿತರ ನಿಲುವು ಸ್ಪಷ್ಟವಾಗುವುದಿಲ್ಲ. ದಲಿತರಿಗಾಗಿ ಇರುವ ಸಂರಕ್ಷಣಾತ್ಮಕ ವ್ಯವಸ್ಥೆಯೊಂದಿಗೆ ಸ್ವಯಂಸತ್ತಾತ್ಮಕ ರಾಜ್ಯವೂ ಬೇಕು. ಆದರೆ ಸ್ವಯಂಸತ್ತಾತ್ಮಕ ದರ್ಜೆಯಿರುವ ಭಾರತದ ರಾಜ್ಯ ಕಾರುಭಾರು ಯಾವ ತತ್ವಗಳನ್ನಾಧರಿಸಿದ್ದಿರುತ್ತದೆ? ರಾಜಕೀಯ ಅಧಿಕಾರದ ಕೇಂದ್ರ ಯಾವುದಾಗಿರುತ್ತದೆ? ಅಧಿಕಾರ ಯಾರ ಕೈಯಲ್ಲಿರುತ್ತದೆ? ಅದರಲ್ಲಿ ದಲಿತರಿರುತ್ತಾರೆಯೆ? ಅನ್ನುವ ಕೆಲವು ವಿಷಯಗಳು ಇತ್ಯರ್ಥವಾಗಬೇಕು. ಈ ಉದ್ದೇಶ ಈಡೇರಲು ಅಗತ್ಯವಿರುವ ಹೊಸ ಸಂವಿಧಾನವಿರದೆ ದಲಿತರ ಕೈಗೆ ರಾಜಕೀಯ ಅಧಿಕಾರದ ಸ್ವಲ್ಪಾಂಶವೂ ಸಿಗಲಾರದು ಎಂದವರಿಗೆ ಅನಿಸುತ್ತದೆ. ಹೊಸ ಸಂವಿಧಾನವನ್ನು ಬರೆಯುವಾಗ ಭಾರತದ ಸಾಮಾಜಿಕ ಜೀವನದ ಕೆಲವು ಕಠೋರ ಸತ್ಯಗಳನ್ನು ಅಲ್ಲಗಳೆಯುವಂತಿಲ್ಲ. ಭಾರತದ ಸಮಾಜ ವಿವಿಧ ಜಾತಿಗಳಿಂದ ಕೂಡಿದ್ದಾಗಿದೆ. ಈ ಸಮಾಜ ರಚನೆಯಲ್ಲಿ ಮೇಲಿನ ಅಂತಸ್ತಿನಲ್ಲಿರುವ ಜನರಿಗೆ ಸನ್ಮಾನ ಹಾಗೂ ಕೆಳ ಅಂತಸ್ತಿನಲ್ಲಿರುವ ಜನರಿಗೆ ಅವಮಾನ ಅನ್ನುವ ಜಾತಿಯ ಶ್ರೇಣಿಯೊಂದು ನಿರ್ಮಾಣಗೊಂಡಿದೆ. ಪ್ರಜಾಪ್ರಭುತ್ವ ಶಾಸನಕ್ಕಾಗಿ ಮುಖ್ಯವಾಗಿ ಬೇಕಿರುವ ಸಮಾನತೆ ಹಾಗೂ ಬಂಧುತ್ವ ಭಾವನೆ ಬೆಳೆಯಲು ಈ ಸಮಾಜ ಪದ್ಧತಿ ಅವಕಾಶ ಕೊಡುವುದಿಲ್ಲ. ಗಮನಿಸಬೇಕಾದಂತಹ ಇನ್ನೊಂದು ಮುಖ್ಯವಾದ ವಿಷಯವೆಂದರೆ ಭಾರತದ ಸಮಾಜದಲ್ಲಿ ಬುದ್ಧಿವಂತ ವರ್ಗಕ್ಕೆ ಹೆಚ್ಚು ಮಹತ್ವ ಕೊಡಲಾಗಿದೆ. ಆದರೆ ಈ ವರ್ಗ ಕೇವಲ ಮೇಲ್ವರ್ಗದಿಂದಲೇ ಬಂದದ್ದಾಗಿದೆ. ಈ ವರ್ಗ ದೇಶದ ಬಗ್ಗೆ ಮಾತನಾಡುತ್ತಿದ್ದರೂ, ರಾಜಕೀಯ ಚಳುವಳೀ ಭಾಗವಹಿಸುತ್ತಿದ್ದರೂ ತನ್ನ ಜಾತಿಯ ಸಂಕುಚಿತ ದೃಷ್ಟಿಕೋನವನ್ನು ತ್ಯಜಿಸಿಲ್ಲ. ಮತ್ತೊಂದು ಭಾಷೆಯಲ್ಲಿ ಹೇಳುವುದಾದರೆ ಸಮಾಜದ ಮಾನಸಿಕತೆ ಹಾಗೂ ರಾಜಕೀಯ ಯಂತ್ರಣೆ ಇವುಗಳಲ್ಲಿ ಪರಸ್ಪರ ಸಂಬಂಧವಿರಬೇಕು ಹಾಗೂ ಈ ನಿಯಂತ್ರಣೆಯು ಸಮಾಜದ ಮಾನಸಿಕತೆಯನ್ನು ಗಮನದಲ್ಲಿಡಬೇಕು ಅನ್ನುವುದು ದಲಿತರ ಅನಿಸಿಕೆ. ಹೀಗಾಗದಿದ್ದರೆ ನೀವು ತಯಾರಿಸುತ್ತಿರುವ ಸಂವಿಧಾನ

ಯೋಜನಾಬದ್ಧ ಹಾಗೂ ನಿಯಮಿತವಾದದ್ದಾಗಿದ್ದರೂ ನಿರುಪಯೋಗಿಯಾಗಿರುವುದರಿಂದ ನೀವು ಸಂವಿಧಾನ ತಯಾರಿಸುತ್ತಿರುವ ಸಮಾಜಕ್ಕಾಗಿ ಅದು ಉಪಯೋಗಕ್ಕೆ ಬರುವುದಿಲ್ಲ.

ನನ್ನ ಭಾಷಣವನ್ನು ಮುಗಿಸುವ ಮೊದಲು ನಾನು ಇನ್ನೊಂದು ಮುಖ್ಯವಾದ ವಿಷಯದತ್ತ ಹೊರಳುತ್ತೇನೆ. ದಲಿತರ ಪ್ರಶ್ನೆ ಒಂದು ಸಾಮಾಜಿಕ ಪ್ರಶ್ನೆಯಾಗಿರುವುದರಿಂದ ಅದನ್ನು ರಾಜಕಾರಣದ ಮಾರ್ಗದಿಂದ ಬಿಡಿಸಲಾಗದು, ಅದರ ಮಾರ್ಗವೆ ಬೇರೆ ಎಂದು ನಮಗೆ ಆಗಾಗ ಹೇಳಲಾಗುತ್ತದೆ. ಈ ವಿಚಾರವನ್ನು ನಾನು ವಿರೋಧಿಸುತ್ತೇನೆ. ದಲಿತರ ಕೈಗೆ ಶಾಸನದ ಅಧಿಕಾರ ಬರದೆ ಅವರ ಪ್ರಶ್ನೆಗಳಿಗೆ ಪರಿಹಾರ ಸಿಗಲಾರದೆಂದು ನನಗನಿಸುತ್ತದೆ. ದಲಿತರ ಪ್ರಶ್ನೆ ರಾಜಕೀಯವೇ ಆಗಿದ್ದು ಅದರ ಪರಿಹಾರ ಕೂಡ ಅದೇ ರೀತಿಯಲ್ಲಾಗಬೇಕು. ಹಾಗಗಿ ಈ ಪ್ರಶ್ನೆಯನ್ನು ಮುಖ್ಯವಾಗಿ ರಾಜಕಾರಣ ಪ್ರಶ್ನೆಯೆಂದೇ ನಾನು ನಿಮ್ಮೆದುರು ಇಡುತ್ತಿದ್ದೇನೆ. ನೀವೆಲ್ಲರೂ ಅದನ್ನು ರಾಜಕೀಯ ಸಮಸ್ಯೆಯೆಂದೇ ಪರಿಗಣಿಸಬೇಕು. ನಮ್ಮ ಮೇಲೆ ಘೋರವಾಗಿ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕವಾಗಿ ಅಧಿಕಾರ ಚಲಾಯಿಸುವ ಜನರಿಗೇ ಇಂದು ಬ್ರಿಟಿಷರಿಂದ ಈ ದೇಶವನ್ನು ವಹಿಸಿಕೊಡುತ್ತಿರುವುದು ನಮಗೆ ತಿಳಿದಿದೆ. ನಿಜ ಹೇಳುವುದಾದರೆ 'ಸ್ವಾತಂತ್ರ್ಯ' ಅನ್ನುವ ಶಬ್ದ ಉಚ್ಚರಿಸುತ್ತಲೆ ನಮಗೆ ಗತಕಾಲದಲ್ಲಿ ನಮ್ಮಮೇಲಾದ ಅತ್ಯಾಚಾರ, ದುರಾಡಳಿತ ಹಾಗೂ ಅನ್ಯಾಯ ನೆನಪಾಗುತ್ತದೆ ಹಾಗೂ ಮುಂಬರುವ ಆಡಳಿತದಲ್ಲೂ ಅದೇ ಮುಂದುವರೆಯಬಹುದು ಅನ್ನುವ ಭಯ ಕಾಡುತ್ತದೆ. ಆದರೂ ಸ್ವಾತಂತ್ರ್ಯ ಸಿಗಬೇಕು ಅನ್ನುವುದನ್ನು ಮಾತ್ರ ನಾವು ಅಲ್ಲಗಳೆಯುವುದಿಲ್ಲ. ನಮ್ಮ ದೇಶಬಾಂಧವರೊಂದಿಗೆ ನಮಗೂ ಮುಂಬರುವ ಸರ್ಕಾರದಲ್ಲಿ ಅಧಿಕಾರದ ಯೋಗ್ಯವಾದ ಪಾಲು ಸಿಗಬಹುದು ಅನ್ನುವ ಒಂದೇ ಒಂದು ಆಸೆಯ ಮೇಲೆ ತಪ್ಪಿಸಲಾಗದಂತಹ ಅಪಾಯವನ್ನು ಎದುರಿಸುವ ಧೈರ್ಯ ತೋರಿಸುತ್ತಿದ್ದೇವೆ. ಸ್ವಾತಂತ್ರ್ಯಕ್ಕೆ ನಾವು ಒಂದೇ ಶರತ್ತಿನ ಮೇಲೆ ಅನುಮತಿ ಕೊಡುತ್ತೇವೆ, ನಮ್ಮ ಸಮಸ್ಯೆಗಳನ್ನು ಸಮಯವೆಂಬ ಗಾಳಿಗೆ ತೂರಿಸಕೂಡದು. ಸಮಯಕ್ಕನುಸಾರವಾಗಿ ಏನಾದರೂ ಚಮತ್ಕಾರವಾದೀತು ಅನ್ನುವ ಭರವಸೆಯ ಮೇಲೆ ನಾವು ಇಷ್ಟು ವರ್ಷ ಕಳೆದದ್ದೇ ನಮಗೀಗ ಭಯ ಹುಟ್ಟಿಸಿದೆ. ಬ್ರಿಟಿಷ್ ಸರ್ಕಾರ ಪ್ರಾಥಮಿಕ ಸರ್ಕಾರಕ್ಕೆ ಯಥೋಚಿತವಾಗಿ ಅಧಿಕಾರಗಳನ್ನು ಕೊಡುವಾಗಲೆಲ್ಲ ದಲಿತರನ್ನು ಕಡೆಗಾಣಿಸಿದೆ. ಮುಂಬರುವ ಸರ್ಕಾರದಲ್ಲಿ ಅವರ ಪಾಲೂ ಇದೆ ಅನ್ನುವುದು ಯಾರ ಮನಸ್ಸಿಗೂ ಬರಲಿಲ್ಲ. ಇನ್ನು ಮುಂದೆ ಯಾರೂ ನಮ್ಮ ತಾಳ್ಮೆಯನ್ನು ಯಾರೂ ಪರೀಕ್ಷಿಸಬೇಡಿ ಅನ್ನುವುದನ್ನು ನನ್ನ ಎಲ್ಲ ಶಕ್ತಿಯನ್ನು ಒಟ್ಟುಗೂಡಿಸಿ ಹೇಳುತ್ತಿದ್ದೇನೆ. ನಮ್ಮ ಸಮಸ್ಯೆಯ ಪರಿಹಾರ ಉಳಿದೆಲ್ಲ ರಾಜಕೀಯ ಪ್ರಶ್ನೆಗಳೊಂದಿಗೆ ಆಗಬೇಕು ಹಾಗೂ ಯಾವುದೇ ಪರಿಸ್ಥಿಯಲ್ಲಿ ನಮ್ಮನ್ನು ಸಹಾನುಭೂತಿ ಹಾಗೂ ದಯೆಯ ತೋರಿದಂತೆ ಮುಂಬರುವ ಅಸ್ಥಿರ ರಾಜಕಾರಣಿಗಳ ಕೈಗೆ ನಮ್ಮನ್ನು ಕೊಡಬಾರದು. ದಲಿತರೇ ಈ ಎಲ್ಲದರ ಮೇಲೆ ಯಾಕಿಷ್ಟು ಒತ್ತು ಕೊಡುತ್ತಿದೆ ಅನ್ನುವುದರ ಕಾರಣಗಳು ಸ್ಪಷ್ಟವಾಗಿವೆ, ಎಲ್ಲರಿಗೂ ಗೊತ್ತಿರುವ ಸಾರ್ವಕಾಲಿಕ ಹಾಗೂ ವ್ಯವಹಾರಿಕ ಸತ್ಯವೆಂದರೆ ಪ್ರಬಲಹೀನ ವ್ಯಕ್ತಿಗಿಂತ ಪ್ರಾಬಲ್ಯವಿರುವ ವ್ಯಕ್ತಿ ಯಾವತ್ತೂ ಪ್ರಬಲವಾಗಿರುತ್ತಾನೆ. ಅಲ್ಲದೆ ಪ್ರಬಲಹೀನದ ಲಾಭಕ್ಕಾಗಿ ಪ್ರಾಬಲ್ಯವನ್ನು ಬಿಟ್ಟಿರುವ ಉದಾಹರಣೆಗಳು ಬಹಳ ಕಡಿಮೆ ಕಾಣುತ್ತವೆ. ಹಾಗಾಗಿ ಈ ನಮ್ಮ ಸಾಮಾಜಿಕ ಸಮಸ್ಯೆಯು ಒಳ್ಳೆಯ ರೀತಿಯಲ್ಲಿ ಪರಿಹಾರ ಕಾಣಬಹುದು ಅನ್ನುವ ಭರವಸೆ ನಾವಿಟ್ಟುಕೊಳ್ಳಲಾರೆವು. ಈ ಸಮಸ್ಯೆಯನ್ನೀಗ ಪರಸ್ಪರ ಅನ್ಯೋನ್ಯತೆಯಿಂದ ಬಿಡಿಸದೆ ನಾವು ಸರಳವಾಗಿ ಅಧಿಕಾರಗಳನ್ನು ಅವರಿಗೆ ಬಿಟ್ಟುಕೊಟ್ಟರೆ ಇಂದು ನಾವು ಅಧಿಕಾರ ಕೊಡುತ್ತಿರುವ ಜನರನ್ನೇ ನಾಳೆ ಅಧಿಕಾರದಿಂದ ಕೆಳಗಿಳಿಸಲು ಮತ್ತೊಂದು ದೊಡ್ಡ ಕ್ರಾಂತಿ ಮಾಡಬೇಕಾದೀತು. ಇಂತಹ ಜನರ ಮರ್ಜಿಯ ಮೇಲೆ ನಮಗೆ ನಮ್ಮ

ಪ್ರಶ್ನೆಯನ್ನು ಬಿಡಿಸುವುದಿಲ್ಲ. ಇಂತಹ ಅತಿ ಅನುಮಾನಗಳ ಬಗ್ಗೆ ನಮ್ಮನ್ನು ನಿಂದಿಸಿದರೂ ಚಿಂತೆಯಿಲ್ಲ, ಅತಿವಿಶ್ವಾಸದಿಂದ ಕೊಟ್ಟ ಭರವಸೆಯಿಂದ ಕೆಟ್ಟುಹೋಗುವುದಕ್ಕಿಂತಲೂ ನಿಂದಿಸಿಕೊಳ್ಳುವುದು ಯಾವತ್ತೂ ಒಳ್ಳೆಯದು! ಹಾಗಾಗಿ ನಮ್ಮ ಪ್ರಶ್ನೆಗಳನ್ನು ಬಿಡಿಸಿಕೊಳ್ಳಲು ಸರ್ಕಾರದಲ್ಲಿ ನಮ್ಮ ಹಕ್ಕುಗಳೂ ಇರಬೇಕು ಅನ್ನುವುದೇ ನ್ಯಾಯ ಹಾಗೂ ಸರಿಯಾದ ಮಾರ್ಗ ಎಂದು ನನಗನಿಸುತ್ತದೆ. ಈ ಅಧಿಕಾರಗಳು ಕೇವಲ ನಮ್ಮ ಕೈಗೇ ಬರಬೇಕು ಎಂದು ಪ್ರಯತ್ನಿಸುತ್ತಿರುವ ಜನರ ಹುಚ್ಚಾಟಿಕೆಯ ಮೇಲೆ ಈ ಪ್ರಶ್ನೆಯನ್ನು ಬಿಟ್ಟರೆ ಯಾವತ್ತೂ ಪರಿಹಾರವಾಗುವುದಿಲ್ಲ.

ಸರ್ಕಾರದಲ್ಲಿ ದಲಿತರ ರಕ್ಷಣೆಗಾಗಿ ಹಾಗೂ ಸುರಕ್ಷೆಯ ದೃಷ್ಟಿಯಿಂದ ಅವರಿಗೆ ಯಾವ ಹೊಂದಾಣಿಕೆಗಳು ಬೇಕಿವೆ ಅನ್ನುವುದನ್ನು ಸಮಯ ಬಂದಾಗ ನಾನು ಪರಿಷತ್ತಿನೆದುರು ಇಡುವವನಿದ್ದೇನೆ. ನಮಗೆ ಉತ್ತರದಾಯಿ ಸರ್ಕಾರ ಬೇಕು ಆದರೆ ಆ ಸರ್ಕಾರದಲ್ಲಿ ಕೇವಲ ನಮ್ಮ ಆಳುವವರೇ ಬದಲಾಗುವುದು ನಮಗೆ ಬೇಡ. ಆವಾಬ್ದಾರಿಯುಳ್ಳ ಶಾಸಕರಾಗಿರಬೇಕು ಎಂದು ನಿಮಗನಿಸುವುದಾದರೆ ಕಾಯಿದೆ ಮಂಡಲವು ಸಂಪೂರ್ಣವಾಗಿ ಪ್ರಾತಿನಿಧಿಕವಾಗಿರಬೇಕು ಅನ್ನುವುದನ್ನಷ್ಟೇ ನಾನಿಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರೆ, ಈ ರೀತಿ ಸ್ಪಷ್ಟವಾಗಿ ಮಾತನಾಡಬೇಕಾಗಿದ್ದಕ್ಕಾಗಿ ನನಗೆ ದುಃಖವಾಗುತ್ತದೆ. ಆದರೆ ನನಗೆ ಬೇರೆ ದಾರಿ ಕಾಣುತ್ತಿಲ್ಲ, ದಲಿತರಿಗೆ ಗೆಳೆಯರು ಉಳಿದಿಲ್ಲ, ತಮ್ಮ ಅಸ್ತಿತ್ವವನ್ನು ಕಾಪಾಡಲು ಸಧ್ಯದ ಸರ್ಕಾರ ಇಲ್ಲಿಯವರೆಗೆ ಕೇವಲ ಕಾರಣಗಳನ್ನು ಕೊಡುತ್ತ ಅವರನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಹಾಗೆಯೇ ದೂರ ಇಡಲೆಂದೇ ಹಿಂದೂಗಳು ಅವರನ್ನು ಹತ್ತಿರಕ್ಕೆ ಸೇರಿಸಿಕೊಂಡಿದ್ದಾರೆ. ಇನ್ನೂ ಹೆಚ್ಚು ಸ್ಪಷ್ಟವಾಗಿ ಹೇಳುವುದಾದರೆ ಹಿಂದೂಗಳು ಇವರನ್ನು ಅಧಿಕಾರದಿಂದ ವಂಚಿತರನ್ನಾಗಿಡ ಬಯಸುತ್ತಾರೆ. ನಮ್ಮ ವಿಶೇಷಾಧಿಕಾರಗಳನ್ನು ಯಾರೂ ಹಂಚಿಕೊಳ್ಳಬಾರದೆಂದು ಮುಸಲ್ಮಾನರು ಇವರ ಸ್ವತಂತ್ರ ಅಸ್ತಿತ್ವವನ್ನು ಒಪ್ಪಿಕೊಳ್ಳುವುದಿಲ್ಲ. ಅಂದರೆ ಶಾಸನವು ದುರ್ಬಲರನ್ನಾಗಿ ಮಾಡಿರುವ, ಹಿಂದೂಗಳು ಮೆಟ್ಟಿಹಾಕಿರುವ, ಹಾಗೂ ಮುಸಲ್ಮಾನರು ಅವಮಾನಿಸಿದಂತಹ ಜಾತಿಯಿದು. ಇಷ್ಟೊಂದು ಅಸಾಹಾಯ ಹಾಗೂ ದುರ್ಭರ ಪರಿಸ್ಥಿತಿಯಲ್ಲಿರುವ ಜಾತಿ ಬೇರೆಲ್ಲೂ ಇರಲಾರದು ಅನ್ನುವ ಭರವಸೆ ನನಗಿದೆ. ಹಾಗೆಂದೆ ನಿಮ್ಮ ಗಮನವನ್ನು ನಾನು ಇತ್ತ ಸೆಳೆಯುತ್ತಿದ್ದೇನೆ.

ಚರ್ಚೆಗೆ ಬಂದಿರುವ ಎರಡನೆಯ ಪ್ರಶ್ನೆಯ ಬಗ್ಗೆ ಮಾತಾಡಲು ನನಗೆ ನಿಜವಾಗಿಯೂ ದುಃಖವಾಗುತ್ತದೆ. ಕಾರಣವಿಲ್ಲದೆಯೇ ಈ ಪ್ರಶ್ನೆಯನ್ನು ಪರಿಷತ್ತಿನ ಈ ಅಧಿವೇಶನದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಇದನ್ನು ಪರಿಷತ್ತಿನ ಒಂದು ಸ್ವತಂತ್ರ ಅಧಿವೇಶನದಲ್ಲಿ ತೆಗೆದುಕೊಳ್ಳಬೇಕಿತ್ತು ಅನ್ನುವಷ್ಟು ಮಹತ್ವವಿದೆ ಈ ಪ್ರಶ್ನೆಗೆ. ಇದು ಸಂಕ್ಷಿಪ್ತವಾಗಿ ಇಲ್ಲವೆ ಅವಸರದಲ್ಲಿ ಮುಗಿಸುವಂತಹ ಪ್ರಶ್ನೆಯಲ್ಲ ಹಾಗೂ ಅದರಿಂದ ಈ ಪ್ರಶ್ನೆಗೆ ನ್ಯಾಯವೂ ಸಿಗಲಿಕ್ಕಿಲ್ಲ. ದಲಿತರ ದೃಷ್ಟಿಯಿಂದ ಇದು ಅಕ್ಕರೆಯ ವಿಷಯವಾಗಿರುವುದರಿಂದ ಅದಕ್ಕೆ ಸಾಕಷ್ಟು ಮಹತ್ವವಿದೆ. ಅಲ್ಪಸಂಖ್ಯಾಕರ ದೃಷ್ಟಿಯಿಂದ ಹೆಜ್ಜೆಗಳನ್ನಿಟ್ಟು ಪ್ರಾಂತದಲ್ಲಿಯ ಬಹುಸಂಖ್ಯಾಕರ ಅವ್ಯವಸ್ಥೆಯಯನ್ನು ನಿಯಂತ್ರಿಸಿ ಅನ್ನುವುದನ್ನಷ್ಟೇ ಅಲ್ಪಸಂಖ್ಯಾಕರ ಪ್ರತಿನಿಧಿಯಾಗಿ ನಾನು ಕೇಂದ್ರ ಶಾಸನದಿಂದ ಅಪೇಕ್ಷಿಸುತ್ತೇನೆ. ಒಬ್ಬ ಭಾರತೀಯನಾಗಿ ರಾಷ್ಟ್ರವಾದಿಗಳ ಬೆಳವಣಿಗೆಯ ಮೇಲೆ ನನಗೆ ನಂಬುಗೆಯಿದೆ ಹಾಗಾಗಿಯೇ ಕೇಂದ್ರೀಯ ಶಾಸನ ಪದ್ಧತಿಯನ್ನು ನಾನು ಗಾಢವಾಗಿ ನಂಬುತ್ತೇನೆ. ಈ ವ್ಯವಸ್ಥೆಯನ್ನು ವಿಭಜಿಸುವ ಯೋಚನೆಯೂ ನನ್ನನ್ನು ಅಸ್ವಸ್ಥನನ್ನಾಗಿ ಮಾಡುತ್ತದೆ. ಈ ಏಕೀಕೃತ ಕೇಂದ್ರ ಶಾಸನ ಪದ್ಧತಿಯಲ್ಲಿ ಭಾರತಕ್ಕೆ ಆಕಾರ ಕೊಡುವಂತಹ ಸೂಪ್ತ ಶಕ್ತಿಯಿದೆ. ಏಕೀಕೃತ ಕೇಂದ್ರಶಾಸನ ಪದ್ಧತಿಯಿಂದ ಭಾರತದಲ್ಲಿ ರಾಷ್ಟ್ರಭಕ್ತಿ ಹೆಚ್ಚಿದೆ ಆದರೆ ಇನ್ನೂ ಸಂಪೂರ್ಣವಾಗಿ ಬೆಳೆದಿಲ್ಲ. ಹಾಗಾಗಿ ಇಂದಿನ ದೇಶವನ್ನು

ನಿರ್ಮಿಸುವಂತಹ ಪ್ರಾಥಮಿಕ ಅವಸ್ಥೆಯಲ್ಲಿ ಈ ಏಕೀಕೃತ ಶಾಸನ ಪದ್ಧತಿಯನ್ನು ತೆಗೆದು ಹಾಕುವುದಕ್ಕೆ ನಾನು ಒಪ್ಪುವುದಿಲ್ಲ. ಏಕೆಂದರೆ ಭಾರತವಿನ್ನೂ ಸಂಪೂರ್ಣವಾಗಿ ಸಂಯೋಜಿತ ರಾಷ್ಟ್ರವಾಗಿಲ್ಲ.

ಹಾಗಾಗಿ ಇಂದು ನಮ್ಮೆದುರಿರುವ ಪ್ರಶ್ನೆ ಕೇವಲ ಗ್ರಾಂಥಿಕವಾಗಿ ಉಳಿದುಬಿಡುತ್ತದೆ. ಪ್ರಾಂತ್ಯ ಸರ್ಕಾರ ಮಧ್ಯವರ್ತಿ ಸರ್ಕಾರದೊಂದಿಗೆ ವಿಸಂಗತವಾಗಿರಲು ಇಷ್ಟಪಡದಿದ್ದರೆ ಸಂಘ ಶಾಸನ ಪದ್ಧತಿಯ ಬಗ್ಗೆಯೂ ನಾನು ಯೋಚಿಸಲು ಸಿದ್ಧನಾಗುವೆ.

ಅಧ್ಯಕ್ಷರೆ, ದಲಿತರ ಪ್ರತಿನಿಧಿಯಾಗಿ ಅವರ ವತಿಯಿಂದ ನಿಮಗೆ ಹೇಳುವುದನ್ನೆಲ್ಲ ಹೇಳಿದ್ದೇನೆ. ಈಗ ನಾವು ಭಾರತೀಯರಾಗಿ ಯಾವ್ಯಾವ ಪರಿಸ್ಥಿಯನ್ನು ಎದುರಿಸುತ್ತೇವೆ ಅನ್ನುವುದರ ಬಗ್ಗೆ ಎರಡು ಮಾತುಗಳನ್ನು ಹೇಳಲು ಅನುಮತಿ ಕೊಡುತ್ತೀರಿ ಎಂದು ನಂಬಿದ್ದೇನೆ. ನಾನು ರಾಷ್ಟ್ರೀಯ ಚಳುವಳಿಯ ಮೂಕ ಪ್ರೇಕ್ಷಕನಾಗಿರದಿದ್ದರು ಇಲ್ಲಿಯವರೆಗೆ ಆ ಪ್ರಶ್ನೆಗಳ ಬಗ್ಗೆ ಮಂಡಿಸಿದ ಗಂಭೀರ ಮತಗಳ ಬಗ್ಗೆ ನಾನು ಇನ್ನೂ ಹೆಚ್ಚು ಒತ್ತು ಕೊಡುವುದಿಲ್ಲ. ನಮ್ಮ ಸಮಸ್ಯೆಗಳನ್ನು ಬಿಡಿಸುವ ದೃಷ್ಟಿಯಿಂದ ನಾವು ಸರಿಯಾದ ಮಾರ್ಗದಲ್ಲಿದ್ದೇವೆಯೇ ಅನ್ನುವುದರ ಬಗ್ಗೆ ನಾನು ಸಾಕಷ್ಟು ಚಿಂತೆಯಲ್ಲಿದ್ದೇನೆ. ಈ ಸಮಸ್ಯೆಗಳ ಉಪಾಯ ಯಾವ ಸ್ವರೂಪದ್ದಾಗಿರುತ್ತದೆ ಅನ್ನುವುದನ್ನು ನಿರ್ಧರಿಸುವುದು ಬ್ರಿಟಿಷ್ ಪ್ರತಿನಿಧಿಗಳ ದೃಷ್ಟಿಕೋನವನ್ನವಲಂಬಿಸಿದೆ. ಈ ಪರಿಸ್ಥಿಯಿಂದ ಹೊರಬರಲು ಶಾಂತಿಯ ಮಾರ್ಗ ಆರಿಸುತ್ತೀರೊ ಇಲ್ಲ ಬಲಪ್ರಯೋಗ ಮಾಡುತ್ತೀರೊ ಅನ್ನುವುದನ್ನು ನೀವೇ ನಿರ್ಧರಿಸಬೇಕು ಅನ್ನುವುದನ್ನಷ್ಟೆ ನಾನವರಿಗೆ ಹೇಳಬಲ್ಲೆ, ಏಕೆಂದರೆ ಯಾವುದೇ ನಿರ್ಧಾರವಾಗಿದ್ದರೂ ಕೊನೆಯ ಜವಾಬ್ದಾರಿ ಅವರದೇ ಆಗಿರುತ್ತದೆ. ನಿಮ್ಮಲ್ಲಿ ಯಾರಿಗಾದರೂ ಬಲಪ್ರಯೋಗ ಮಾಡುವುದರಲ್ಲಿ ನಂಬಿಕೆಯಿದ್ದರೆ ಅವರಿಗೆ ನಾನು ರಾಜಕೀಯ ತತ್ವಜ್ಞಾನದ ಮಹಾನ್ ಶಿಕ್ಷಕನಾದ ಎಡ್‌ಮಂಡ್ ಬರ್ಕ್‌ನ ಒಂದು ಅವಿಸ್ಮರಣೀಯ ಮಾತನ್ನು ನೆನಪಿಸಿಕೊಡುತ್ತೇನೆ. ಅಮೇರಿಕಾ ವಸಾಹತಿನ ಸಮಸ್ಯೆಯ ಬಗ್ಗೆ ಮಾತನಾಡುತ್ತ ಅವರು ಇಂಗ್ಲಿಷ್ ರಾಷ್ಟ್ರವನ್ನುದ್ದೇಶಿಸಿ ಹೀಗೆ ಹೇಳಿದ್ದರು.

'ಕೇವಲ ಬಲಪ್ರಯೋಗ ತಾತ್ಕಾಲಿಕವಾಗಿರುತ್ತದೆ. ಅದರಿಂದ ಸ್ವಲ್ಪ ಕಾಲ ಮಾತ್ರ ರಾಜ್ಯವನ್ನಾಳಬಹುದು, ಒಮ್ಮೆ ಬಲಪ್ರಯೋಗ ಮಾಡಿದರೆ ಮತ್ತೆ ಮತ್ತೆ ಅದರ ಮೊರೆ ಹೋಗಬೇಕಾಗುತ್ತದೆ. ಶಾಶ್ವತವಾಗಿ ಆಳುವ ಆಸೆಯುಳ್ಳವರು ಬಲಪ್ರಯೋಗಿಸಿ ಲಾಭವಿಲ್ಲ'.

ನನ್ನ ಎರಡನೆಯ ಆಕ್ಷೇಪ ಬಲಪ್ರಯೋಗದ ಪರಿಣಾಮದ ಅನಿಶ್ಚಿತತೆಯ ಬಗ್ಗೆಯಿದೆ. ಬಲಪ್ರಯೋಗ ಯಾವಾಗಲೂ ಹೆದರಿಕೆಯನ್ನೇ ಹುಟ್ಟಿಸುತ್ತದೆ ಎಂದೇನಿಲ್ಲ ಹಾಗೂ ಸುಸಜ್ಜಿತ ಸೇನೆಯೆಂದರೆ ಗೆಲುವು ನಮ್ಮದೇ ಎಂದೂ ಅಲ್ಲ. ಇದ್ಯಾವುದರಿಂದಲೂ ಯಶಸ್ಸು ಸಿಗಲಿಲ್ಲ ಅಂದ ಮೇಲೆ ಬೇರೆ ಯಾವುದೇ ದಾರಿ ಉಳಿಯುವುದಿಲ್ಲ. ಮಾತುಕತೆ, ಸಂಧಾನದಲ್ಲಿ ಅಪಯಶಸ್ಸು ಬಂದರೆ ಬಲಪ್ರಯೋಗ ಒಂದೇ ದಾರಿಯುಳಿಯುತ್ತದೆ. ಆದರೆ ಬಲಪ್ರಯೋಗದಲ್ಲೂ ಅಪಯಶಸ್ಸು ಬಂದರೆ ಮಾತುಕತೆ ಇಲ್ಲವೆ ಸಂಧಾನಕ್ಕೆ ಅವಕಾಶವೇ ಉಳಿಯುವುದಿಲ್ಲ. ದಯೆಯ ಬದಲಿಗೆ ಕೆಲವೊಮ್ಮೆ ರಾಜ್ಯ ಇಲ್ಲವೆ ಅಧಿಕಾರ ಪಡೆದುಕೊಳ್ಳಬಹುದು ಆದರೆ ಬಲಪ್ರಯೋಗದಿಂದ ಸೋತ ಹಿಂಸೆಗೆ ಭಿಕ್ಷೆಯಲ್ಲಿ ರಾಜ್ಯ ಇಲ್ಲವೆ ಅಧಿಕಾರ ಎಂದೂ ಸಿಗುವುದಿಲ್ಲ.

ಬಲಪ್ರಯೋಗ ಉಪಯೋಗಿಸುವ ಬಗ್ಗೆ ನನಗಿರುವ ಮತ್ತೊಂದು ಆಕ್ಷೇಪವೆಂದರೆ, ಸಾಕಷ್ಟು ಪ್ರಯತ್ನಿಸಿ ಪಡೆಯುವುದನ್ನು ನೀವು ಹಾಳು ಮಾಡುತ್ತೀರಿ. ನೀವು ಪಡೆದಿರುವುದು ಮೂಲಭೂತ ಸ್ವರೂಪದಲ್ಲಿರುವುದಿಲ್ಲ, ಅವಮೂಲನೆಗೊಂಡ, ಧ್ವಂಸಗೊಂಡ ಹಾಗೂ ನಾಶವಾಗಿರುವ ಸ್ವರೂಪದಲ್ಲಿರುತ್ತದೆ.

ಮೇಲಿನ ಉಪದೇಶವನ್ನು ಕಡೆಗಾಣಿಸಿದ್ದರಿಂದ ಮಹಾನ್ ಅಮೇರಿಕಾ ಖಂಡ ನಿಮ್ಮ ಕೈಯಿಂದ ಜಾರಿತು ಆದರೆ ಮುಂದೊಂದು ದಿನ ಅರಿವಾಗಿ ಅದನ್ನು ಪಾಲಿಸಿದ್ದರಿಂದ ಉಳಿದ ದೇಶಗಳು ನಿಮ್ಮ

ಕೈಯಲ್ಲಿವೆ. ನಿಮ್ಮಲ್ಲಿ ಶಾಂತಿಯುತ ದಾರಿ ಇಷ್ಟಪಡುವವರಿಗೆ ನಾನೊಂದು ಸಲಹೆ ಕೊಡುತ್ತೇನೆ. ಸ್ವಯಂಸತ್ತಾತ್ಮಕ ದೇಶ ಪಡೆಯಲು ಆಗುತ್ತಿರುವ ಈ ಬೌದ್ಧಿಕ ಯುದ್ಧದ ಇತ್ಯರ್ಥವಾಗಿ ಅದರ ಮೇಲೆಯೇ ಅಂತಿಮ ನಿರ್ಧಾರ ಅವಲಂಬಿಸಿದೆ ಎಂದು ಇಲ್ಲಿಯ ಪ್ರತಿನಿಧಿಗಳು ಅಂದುಕೊಂಡಿದ್ದಾರೆ. ಆದರೆ ಇಷ್ಟೊಂದು ಮಹತ್ವವಾದ ಪ್ರಶ್ನೆಯನ್ನು ಕೇವಲ ತರ್ಕದ ಸೂತ್ರದಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದರೆ ದೊಡ್ಡ ತಪ್ಪಾದೀತು. ತರ್ಕಶಾಸ್ತ್ರದೊಂದಿಗೆ ನನಗೆ ವೈರತ್ವವಿಲ್ಲ, ಆದರೆ ಇಲ್ಲಿಯ ವಿದ್ವಾನರು ತಮ್ಮ ಭವಿಷ್ಯವನ್ನು ಎಚ್ಚರಿಕೆಯಿಂದ ಆರಿಸಲಿ ಎಂದಷ್ಟೆ ಬೇಡಿಕೊಳ್ಳುತ್ತೇನೆ. ಇಲ್ಲವಾದರೆ ತಪ್ಪಿಸಿಕೊಳ್ಳಲಾಗದಂತಹ ಸಂಕಟಗಳನ್ನು ಎದುರಿಸಬೇಕಾದೀತು ಅನ್ನುವುದನ್ನವರಿಗೆ ಈಗಲೇ ಹೇಳುತ್ತಿದ್ದೇನೆ. ಡಾ. ಜಾನ್ಸನ್ ಬರ್ಕ್ಲೆ ಅವರ ಎಲ್ಲ ವಿರೋಧಾಭಾಸಗಳನ್ನು ಗಾಳಿಗೆ ತೂರಿಬಿಟ್ಟಂತೆ ತಾರ್ಕಿಕವಾಗಿ ಸೋಲನ್ನುಂಡ ಮೇಲೂ ನೀವು ಸೋಲನ್ನೊಪ್ಪಿಕೊಳ್ಳುತ್ತೀರೋ ಇಲ್ಲ ಮತ್ತೆ ತರ್ಕಗಳನ್ನೊಡ್ಡುತ್ತ ಎಲ್ಲ ಮತಗಳನ್ನು ಅಳಿಸಿಹಾಕುವ ಪ್ರಯತ್ನ ಮಾಡುತ್ತೀರೊ ಅನ್ನುವುದೆಲ್ಲ ನಿಮ್ಮ ಸ್ವಭಾವವನ್ನವಲಂಬಿಸಿದೆ. ದೇಶದ ಸಧ್ಯದ ಮಾನಸಿಕತೆ ಹಾಗೂ ಪ್ರವೃತ್ತಿ ಹೇಗಿದೆಯೆಂದರೆ ಬಹುಸಂಖ್ಯಾಕರಿಗೆ ಇಷ್ಟವಿಲ್ಲದ ಯಾವುದೇ ಸಂವಿಧಾನ ಇಲ್ಲಿರಲಾರದು. ನೀವು ಆರಿಸಿ ನಾವು ಒಪ್ಪುತ್ತೇವೆ ಅನ್ನುವ ಸಮಯ ಹೋಯಿತು, ಮತ್ಯಾವತ್ತೂ ಬರದು ಅನ್ನುವುದನ್ನು ಯಾರೂ ಗಮನಕ್ಕೆ ತೆಗೆದುಕೊಂಡಿಲ್ಲ. ಆದ್ದರಿಂದಲೇ ಸಂವಿಧಾನ ಪ್ರಚಲಿತವಾಗಬೇಕೆಂದರೆ ಅದನ್ನು ತರ್ಕದ ಆಧಾರಕ್ಕಿಂತ ಜನ ಸಮ್ಮತಿಯನ್ನು ಪರೀಕ್ಷಿಸುವುದೇ ಒಳ್ಳೆಯದು.

# ೩೬.

# ಭಾರತದ ಸಂರಕ್ಷಣೆ ವಿಶಿಷ್ಟ ಜಾತಿಗಷ್ಟೇ ಸೀಮಿತವಿರದೆ ಎಲ್ಲಜನತೆಗೆ ಸಂಬಂಧಿಸಿದ್ದಿರಬೇಕು

ದುಂಡು ಮೇಜಿನ ಪರಿಷತ್ತಿನಲ್ಲಿ ದಿನಾಂಕ ೧೬ನೆಯ ಜನವರಿ ೧೯೩೧ರಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾಷಣವಾಯಿತು. ಅವರು ತಮ್ಮ ಭಾಷಣದಲ್ಲಿ,

ಮಹೋದಯರೆ,

ನನ್ನಲ್ಲಿರುವ ಅಹವಾಲಿನ ಎರಡನೆಯ ಉಪವಿಭಾಗದ ನಾಲ್ಕನೆಯ ಪ್ಯಾರಾದಲ್ಲಿ ಸೂಚಿಸಿರುವ ಸಂವಿಧಾನದಲ್ಲಿ ಬದಲಾವಣೆ ಸೂಚಿಸುವಂತಹ ವಿಷಯದ ಕಡೆ ನಾನು ನಿಮ್ಮ ಗಮನ ಹರಿಸುತ್ತೇನೆ. ನನ್ನ ಸೂಚನೆಯ ಪ್ರಕಾರ ಭಾರತದ ಸೈನ್ಯದಲ್ಲಿ ದಲಿತರೊಳಗೊಂಡಂತೆ ಎಲ್ಲ ವರ್ಗಗಳ ಪ್ರಜೆಗಳಿಗೂ ಪ್ರವೇಶ ಸಿಗಬೇಕು. ಸೈನ್ಯದಲ್ಲಿ ಭರ್ತಿಮಾಡಿಕೊಳ್ಳುವಾಗ ಅಭ್ಯರ್ಥಿಗಳಲ್ಲಿ ಕೇವಲ ಅಗತ್ಯವಿದ್ದಷ್ಟೇ ಪಾತ್ರತೆ ಹಾಗೂ ಕಾರ್ಯಕ್ಷಮತೆಯನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ನಾನು ಹೇಳಿರುವ ಈ ಬದಲಾವಣೆಗಳನ್ನು ಕೇವಲ ಕೇಳಿ ಸುಮ್ಮನಾಗದೆ ಈ ಪರಿಷತ್ತು ಅವುಗಳನ್ನು ಕಾರ್ಯ ರೂಪಕ್ಕಿಳಿಸಬೇಕು ಅನ್ನುವುದು ನನ್ನಾಸೆ. ನಾನು ಸೂಚಿಸುತ್ತಿರುವ ಬದಲಾವಣೆ ಸಾಧಾರಣ ಸ್ವರೂಪದ್ದಾಗಿವೆ. ಸೈನ್ಯದಲ್ಲಿ ಅಭ್ಯರ್ಥಿಗಳಿಗೆ ಪ್ರವೇಶ ಕೊಡುವಾಗ ಭಾರತೀಯರಲ್ಲಿ ಇತ್ತೀಚೆಗೆ ಕಾಣಬರುತ್ತಿರುವ ಭೇದಭಾವವನ್ನು ನಷ್ಟಮಾಡುವ ಸಣ್ಣ ಪ್ರಯತ್ನವಿದು. ಮೂಲತಃ ದಲಿತರ ವಿಶಿಷ್ಟ ಹಕ್ಕುಗಳ ಸಂರಕ್ಷಣೆಯಾಗಲಿ ಅನ್ನುವ ದೃಷ್ಟಿಯಿಂದ ನಾನು ಈ ಬದಲಾವಣೆಗೆ ಚಾಲನೆ ಕೊಡುತ್ತಿದ್ದೇನೆ ಅನ್ನುವುದರಲ್ಲಿ ಅನುಮಾನವಿಲ್ಲ ಆದರೆ ಹೀಗೆ ಮಾಡುವಾಗ ಈ ಜನರಿಗಾಗಿ ನಾನೇನು ವಿಶೇಷ ಸವಲತ್ತುಗಳನ್ನು ಕೇಳುತ್ತಿಲ್ಲ. ಭಾರತ ಸರ್ಕಾರ ಕಾನೂನಿ ನಡಿಯಲ್ಲಿ ಸ್ವೀಕರಿಸುವ ತತ್ವಗಳನ್ನು ಜಾರಿಗೆ ತನ್ನಿ ಎಂದಷ್ಟೇ ಹೇಳುತ್ತಿದ್ದೇನೆ. ಭಾರತದ ಕಾನೂನಿನಲ್ಲಿ ಜಾತಿ, ಪಂಥ, ಧರ್ಮ, ಹಾಗೂ ವರ್ಣ ಇಂತಹ ಕಾರಣಗಳಿಂದ ಯಾವುದೇ ಪ್ರಜೆಗಳಿಗೆ ಸಾರ್ವಜನಿಕ ಕೆಲಸಗಳಿಂದ ವಂಚಿತವಾಗಿಡಬಾರದು ಅನ್ನುವಂತಹ ವ್ಯವಸ್ಥೆಯಿದೆ. ಆದ್ದರಿಂದ ಇಂತಹ ಬದಲಾವಣೆಗಳನ್ನು ಸೂಚಿಸುವಾಗ ನಾನು ಯಾವುದೇ ವಿಶೇಷ ಸವಲತ್ತುಗಳನ್ನು ಕೇಳುತ್ತಿದ್ದೇನೆ ಎಂದು ನನಗನಿಸುತ್ತಿಲ್ಲ.

ಮಹೋದಯರೆ, ಈ ಬದಲಾವಣೆ ಸರ್ವಿಸ್ ಕಮಿಟಿಯು ಸ್ವೀಕರಿಸಿದ ಧೋರಣೆಯ ಆಧಾರದ ಮೇಲೆಯೇ ಇದೆ ಅನ್ನುವುದನ್ನು ನಿಮ್ಮೆಲ್ಲರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಪರಿಷತ್ತು ನೇಮಿಸಿರುವ ಸರ್ವಿಸ್ ಕಮಿಟಿಯ ಅಹವಾಲು ನೋಡಿದರೆ ಭಾರತದ ಎಲ್ಲ ಪ್ರಜೆಗಳಿಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೆಲಸಕ್ಕಾಗಿ ಅವಕಾಶ ಸಿಗಲು ಈ ಸಮಿತಿ ಸಾಕಷ್ಟೂ ಪ್ರಯತ್ನಿಸಿದೆ. ಸರ್ಕಾರಿ ಕೆಲಸಗಳಿಂದ ವಂಚಿತರಾಗುವಂತಹ ಬಂಧನಗಳಿಂದ ಮುಕ್ತಗೊಳಿಸಿ ಮೂಲಭೂತ ಹಕ್ಕುಗಳನ್ನಷ್ಟೇ ಈ ಸಮಿತಿ ನಿರ್ಧರಿಸಿಲ್ಲ ಇದಕ್ಕೂ ಒಂದು ಹೆಜ್ಜೆ ಮುಂದಿಟ್ಟು ದಲಿತರು ಹಾಗೂ ಆಂಗ್ಲೋ-ಇಂಡಿಯನ್ನರಂತಹ ವಿಶಿಷ್ಟ ಜಾತಿಗಳಿಗಾಗಿ ಕೆಲವು ಶಿಫಾರಸ್ಸುಗಳನ್ನು ಮಾಡಿದೆ.

ಮಹೋದಯರೆ, ಈ ಬದಲಾವಣೆ ಕೇವಲ ದಲಿತರ ಹಿತಕ್ಕಾಗಿ ಎಂದು ತಿಳಿದುಕೊಳ್ಳಬಾರದು, ಇದು ಭಾರತದ ಎಲ್ಲ ಪ್ರಜೆಗಳ ಎಲ್ಲ ಜಾತಿಯ ಪ್ರಜೆಗಳ ಕಲ್ಯಾಣಕ್ಕಾಗಿ ಈ ಬದಲಾವಣೆ ಸೂಚಿಸುತ್ತಿದ್ದೇನೆ ಎಂದು ನಾನು ವಿನಮ್ರಪೂರ್ವಕವಾಗಿ ನಿಮ್ಮೆಲ್ಲರ ಗಮನಕ್ಕೆ ತರುತ್ತಿದ್ದೇನೆ. ದೇಶದ ಯಾವುದೇ ಕೆಲಸಗಳ ಮೇಲೆ ಒಂದೇ ಜಾತಿಯ ಅಧಿಕಾರ ವಿಡುವ ಅನುಮತಿ ಕೊಡುವುದು ಪ್ರಜೆಗಳ ದೃಷ್ಟಿಯಿಂದ ಅಪಾಯಕರ. ಏಕೆಂದರೆ ಕೆಲವು ವಿಶೇಷ ಜಾತಿಯ ಜನರಿಗೆ ಮಾತ್ರ ಉತ್ತಮ ಹುದ್ದೆಗಳು ಕೊಟ್ಟು ರಕ್ಷಿಸಿದಾಗ ಶ್ರೇಷ್ಠತೆ ಆ ಜಾತಿಯ ಜನರ ತಲೆಯೇರಿ ಕೂತು ಇವರುಗಳು ಉಳಿದ ಪ್ರಜೆಗಳ ಏಳಿಗೆಯ ಅಡ್ಡ ಬರುತ್ತಾರೆ ಅಷ್ಟೇಯಲ್ಲ, ಉಳಿದ ಪ್ರಜೆಗಳು ತಮ್ಮ ಆಶ್ರಯದಲ್ಲಿ ತಮ್ಮ ಜಾತಿಯ ಜನರ ಮೇಲೆ ಅವಲಂಬಿತರಾಗುವಂತೆ ನಡೆದುಕೊಳ್ಳುತ್ತಾರೆ. ಭಾರತಕ್ಕಾಗಿ ನಾವು ಹೇಗೂ ಹೊಸ ಸಂವಿಧಾನವನ್ನು ಬರೆಯುತ್ತಿರುವುದೇ ಆದರೆ ಭಾರತದ ಪ್ರತಿಯೊಬ್ಬ ಪ್ರಜೆಗೂ ಆತನ ಯೋಗ್ಯತೆಗನುಸಾರವಾಗಿ ಸರ್ಕಾರಿ ಕೆಲಸದ ಅನುಮೋದನೆ ಸಿಗುವಂತಹ ಪದ್ಧತಿಯನ್ನು ಜಾರಿಗೆ ತರುವುದು ನಮ್ಮ ಕರ್ತವ್ಯ ಹಾಗೂ ನಾನಿನ್ನು ಮುಂದೆ ಸೂಚಿಸಲಿರುವ ಬದಲಾವಣೆ ಕೇವಲ ಸಮೀತಿಯ ಅಹವಾಲಿನಲ್ಲಿ ಬರೆದಿರುವ ತತ್ವಗಳ ತರ್ಕ ಶುದ್ಧ ಪರಿಣಾಮ ಮಾತ್ರ. ನಾಲ್ಕನೆಯ ವಿಭಾಗದ ಮೊದಲನೆಯ ಉಪವಿಭಾಗವನ್ನು ನಾವು ನೋಡಿದರೆ ನಿಮಗೂ ಅದು ಕಾಣುತ್ತದೆ.

ಹೊಸ ರಾಜ್ಯ ವ್ಯವಸ್ಥೆಯಲ್ಲಿಯ ಭಾರತದ ಭಾವೀ ಸರಕಾರ ಅಂತೆಯೇ ಭಾರತದ ಸಂರಕ್ಷಣೆ ಹೆಚ್ಚೆಚ್ಚು ಪ್ರಮಾಣದಲ್ಲಿ ಭಾರತದ ಜನರಿಗೇ ಸಂಬಂಧಿಸಿದ್ದಿರಬೇಕು ಬ್ರಿಟಿಷ್ ಸರ್ಕಾರಕ್ಕಲ್ಲ ಅನ್ನುವುದೇ ಈ ಉಪಸಮಿತಿಯ ಅನಿಸಿಕೆಯಾಗಿದೆ.

ಮಹೋದಯರೆ ನಾನು ಮೇಲೆ ಹೇಳಿರುವ ವಾಕ್ಯಗಳಲ್ಲಿ ಅರ್ಥವಿರುವುದೇ ಆದರೆ ಭಾರತದ ಸಂರಕ್ಷಣೆ ಹೆಚ್ಚೆಚ್ಚು ಪ್ರಮಾಣದಲ್ಲಿ ಭಾರತದ ಎಲ್ಲ ಜನತೆಗೆ ಸಂಬಂಧಿಸಿದ್ದಿರಬೇಕು. ಕೇವಲ ಒಂದು ವಿಶಿಷ್ಟ ಜಾತಿಗೆ ಮಾತ್ರ ಸಂಬಂಧಿಸಿದ್ದಿರಬಾರದು.

ಹಾಗಾಗಿ ನಾನು ಸಾಕಷ್ಟು ಯೋಚಿಸಿ ಮಂಡಿಸಿರುವ ಈ ಸಂವಿಧಾನ ಬದಲಾವಣೆಯನ್ನು ಈ ಸಮಿತಿಯು ಸ್ವೀಕರಿಸಬೇಕು ಎಂದು ಆಶಿಸುತ್ತೇನೆ.

ನಂತರ ಡಾ. ಬಾಬಾಸಾಹೇಬ್ ಅಂಬೇಡ್ಕರ ಅವರ ಭಾಷಣದ ಮೇಲಾದ ಚರ್ಚೆಯಲ್ಲಿ ಮಿ. ಥಾಮಸ್ ಅವರು 'ಉಪಸಮಿತಿಯು ಸ್ಪಷ್ಟವಾಗಿ ಭಾರತೀಯಕರಣ (Indianisation) ಎಂದು ಹೇಳಿರುವುದರಿಂದ ಬೇರೆಯಾವುದೇ ಬದಲಾವಣೆ ಮಾಡುವ ಅಗತ್ಯವಿಲ್ಲ' ಅಂದಾಗ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು

'ಇಂದು ಭಾರತೀಯಕರಣಕ್ಕೆ ಕೇವಲ ಕೆಲವು ಜಾತಿಗಳ ವರ್ಚಸ್ವ ಅನ್ನುವ ಅರ್ಥ ಮಾತ್ರ ಪ್ರಾಪ್ತವಾಗಿದೆ. ಭಾರತದ ಎಲ್ಲ ಕೆಲಸಗಳ ಮೇಲೆ ಎಲ್ಲ ಜಾತಿಯ ಜನರ ಹಕ್ಕಿರಬೇಕು. ಎಲ್ಲ ಜಾತಿಯ ಜನರಿಗೆ ಕೆಲಸ ಸಿಗುವಂತಾಗಬೇಕು ಅನ್ನುವ ರೀತಿಯಲ್ಲಿ ಭಾರತೀಯಕರಣವಾಗಬೇಕು ಅನ್ನುವುದನ್ನೇ ನಾನು ಹೇಳುವುದು' ಅಂದರು.

## ೩೭.

# ವಿಚಿತ್ರ ದೇಶಭಕ್ತರಲ್ಲಿ ನಾನೊಬ್ಬನಲ್ಲ

ದುಂಡು ಮೇಜಿನ ಪರಿಷತ್ತಿನಲ್ಲಿ ೧೯ ನೆಯಜನವರಿಯಂದು ಡಾ. ಬಾಬಾಸಾಹೇಬ್ ಅಂಬೇಡ್ಕರರ ಭಾಷಣವಾಯಿತು. ತಮ್ಮ ಭಾಷಣದಲ್ಲವರು, ಮಾನ್ಯ ಪ್ರಧಾನಮಂತ್ರಿಗಳೆ, ಒಂದು ದೇಶದ ರಾಜಕೀಯ ಜೀವನವನ್ನು ಸರಿದಾರಿಗೆ ತರಲು ಪ್ರಯತ್ನಿಸುವಾಗ ಎರಡು ಮಹತ್ವವಾದ ಪ್ರಶ್ನೆಗಳು ಕಾಡುತ್ತವೆ. ಹಾಗಾಗಿ ಈ ದುಂಡು ಮೇಜಿನ ಪರಿಷತ್ತಿನಲ್ಲಿ ಈ ಎರಡು ಪ್ರಶ್ನೆಗಳ ಬಗ್ಗೆಯೇ ಹೆಚ್ಚು ಗಮನ ಹರಿಸಬೇಕು. ಮೊದಲನೆಯದು ಜವಾಬ್ದಾರಿಯುತ ಸರ್ಕಾರದ ಬಗ್ಗೆ ಹಾಗೂ ಎರಡನೆಯದು ಪ್ರಾತಿನಿಧಿಕ ಸರ್ಕಾರದ ಬಗ್ಗೆ. ನಮ್ಮ ಪ್ರಾಂತ್ಯದ ಜವಾಬ್ದಾರಿಯುತ ಸರ್ಕಾರದ ಬಗ್ಗೆ ನನಗೆ ಹೆಚ್ಚು ಮಾತನಾಡುವುದಿಲ್ಲ. ನಮ್ಮ ಮತಭೇದಗಳನ್ನು ಲಘುವಾಗಿ ತೆಗೆದುಕೊಂಡು ಮಂಡಳವು ನನ್ನ ಬಗ್ಗೆ ಸಾದರಪಡಿಸಿರುವ ಅಹವಾಲುಗಳನ್ನು ನಾನು ಒಪ್ಪಿಕೊಳ್ಳುತ್ತೇನೆ ಹಾಗೂ ನಾನದರ ಪರವಾಗಿದ್ದೇನೆ. ಆದರೆ ಮಧ್ಯವರ್ತಿಸರ್ಕಾರದ ಬಗ್ಗೆ ನನಗೆ ಅನುಮಾನವಿರುವುದರಿಂದ ನನ್ನ ದೃಷ್ಟಿಕೋನ ಬೇರೆಯದಾಗಿದೆ. ಸಂಘರಾಜ್ಯದ ಉಪಸಮಿತಿಯು ಇಂದಿನ ಆಡಳಿತ ಶಾಸನ ಪದ್ಧತಿಯಲ್ಲಿ ಬದಲಾವಣೆ ತರಲು ಪ್ರಯತ್ನಿಸಿಲ್ಲ ಎಂದರೆ ನಾನು ಪ್ರಾಮಾಣಿಕನಾಗಲಾರೆ. ಆದರೆ ನನ್ನ ಪ್ರಾಮಾಣಿಕ ಅನಿಸಿಕೆಗಳನ್ನು ನಿಮ್ಮಿಂದ ಮುಚ್ಚಿಡುವುದು ಅಪ್ರಾಮಾಣಿಕತನವಾಗಬಹುದು. ಸಮಿತಿ ಸೂಚಿಸಿರುವ ಬದಲಾವಣೆಗಳು ವಾಸ್ತವಿಕವಾಗಿಲ್ಲ, ಅದಕ್ಕೆ ಯಾವುದೇ ಮೂಲಾಧಾರಗಳಿಲ್ಲ ಹಾಗೂ ಅವರಿಗಿರುವ ಜವಾಬ್ದಾರಿಯೂ ನಂಬಲರ್ಹವಾಗಿಲ್ಲ.

'ನಾವು ಸ್ವಾತಂತ್ರ್ಯದ ಬೀಜ ಬಿತ್ತುತ್ತಿದ್ದೇವೆ ಆದರೆ ಮುಂದಿನ ಜವಾಬ್ದಾರಿಯನ್ನು ನೀವೇ ವಹಿಸಿಕೊಳ್ಳಬೇಕು'ಎಂದು ಲಾರ್ಡ್ ಚಾನ್ಸಲರ್ ಅವರು ನಮಗೆ ಹೇಳಿದ್ದಾರೆ. ಮಾನ್ಯರೆ, ಇಂದಿನ ಅತ್ಯಂತ ಮಹತ್ವವಾದ ಪರಿಷತ್ತಿನಲ್ಲಿ ಚಾನ್ಸಲರ್ ಅವರು ಮಾಡಿರುವ ಮಹತ್ಕಾರ್ಯಕ್ಕೆ ನಾವವರಿಗೆ ಆಭಾರಿಗಳಾಗಿದ್ದೇವೆ. ಅವರ ಈ ಕಾರ್ಯಕ್ಕೆ ನಾನವರಿಗೆ ಋಣಿಯಾಗಿದ್ದರೂ ಅವರು ನೆಟ್ಟ ಬೀಜ ಹೆಮ್ಮರವಾಗಿ ಬೆಳೆಯಲಾರದು ಅನಿಸುತ್ತಿದೆ. ಅವರು ಆರಿಸಿರುವ ಬೀಜದಲ್ಲಿ ಸತ್ವವೇ ಇಲ್ಲ ಹಾಗೂ ಅವರು ಬೀಜ ನೆಡುತ್ತಿರುವ ಭೂಮಿ ಆ ಬೀಜವನ್ನು ಮರವಾಗಿಸುವ ಅನುಕೂಲತೆಯಲ್ಲಿಲ್ಲ. ಭಾವೀ ಭಾರತದ ಸಂಘರಾಜ್ಯದ ಸಂವಿಧಾನದ ಬಗ್ಗೆ ನನ್ನ ವಿಚಾರಗಳನ್ನು ನಾನು ಲಾರ್ಡ್ ಚಾನ್ಸಲರ್ ಅವರೆದುರು ಮಂಡಿಸಿದ್ದೇನೆ. ಅವರು ಅಧ್ಯಕ್ಷರಾಗಿರುವ ಸಮಿತಿಯು ಅದರ ಬಗ್ಗೆ ಯೋಚಿಸಿದೆಯೋ ಇಲ್ಲವೊ ಅನ್ನುವುದು ನನಗೆ ಗೊತ್ತಿಲ್ಲ. ಅವರು ಅಧ್ಯಕ್ಷರಾಗಿರುವ ಸಮಿತಿಯ ಅಹವಾಲಿನಲ್ಲಿ ಹಾಗೂ ನನ್ನ ವಿಚಾರಗಳಲ್ಲಿ ಯಾವುದೇ ಪರಾಮರ್ಶೆ ನನಗೆ ಕಂಡಿಲ್ಲ. ನನ್ನ ವಿಚಾರಗಳಲ್ಲೂ ಯಾವುದೇ ಬದಲಾವಣೆಗಳಾಗಿಲ್ಲ ಹಾಗೂ ನನ್ನ ವಿಚಾರಗಳಿಂದ ಬಹುದೂರವಿರುವ ಸಂವಿಧಾನಕ್ಕೆ ನಾನು ಅನುಮತಿ ಕೊಡುವುದು ಸಾಧ್ಯವಿಲ್ಲ. ನಿಜವಾಗಿಯೂ! ಈಗಿನ ವ್ಯವಸ್ಥೆ ಹಾಗೂ ಸಮಿತಿ ಸಾದರಪಡಿಸಿರುವ ಮಿಶ್ರತಳಿಯ ಪದ್ಧತಿ ಇವುಗಳಲ್ಲಿ ಒಂದನ್ನು ಆರಿಸುವ ಪರಿಸ್ಥಿತಿ ನನಗೆ ಬಂದರೆ ನಾನು ಸಧ್ಯದ ಈಗಿರುವ ವ್ಯವಸ್ಥೆಯನ್ನೇ ಆರಿಸುತ್ತೇನೆ. ಆದರೆ ಸಮಿತಿಯ ಅಹವಾಲಿನಲ್ಲಿರುವ ಮಧ್ಯವರ್ತಿ ಸರ್ಕಾರದ ಸಂವಿಧಾನ ಸರ್ ಟಿ.ಬಿ. ಸಪ್ರು ಅವರುಗೆ ಒಪ್ಪಿಗೆಯಿದ್ದರೆ ನಾನು ವಿರೋಧಿಸುವ ಯಾವ

ಕಾರಣವೂ ಇಲ್ಲ. ಅವರು ಪರಿಷತ್ತಿನ ಗೆಳೆಯರೂ ತತ್ವಜ್ಞರೂ ಹಾಗೂ ಮಾರ್ಗದರ್ಶಕರಾಗಿದ್ದಾರೆ. ಹಾಗೆಯೇ ಭಾರತದ ಯುವಕರ ಪ್ರತಿನಿಧಿಗಳಾದ ಶ್ರೀ. ಜಯಕರ್ ಹಾಗೂ ಅಬ್ರಾಹ್ಮಣರ ಬಗ್ಗೆ ಮಾತನಾಡುವ ಶ್ರೀ. ಎ. ಪಿ. ಪಾತ್ರೆಯವರಿಗೆ ಈ ಸಂವಿಧಾನದ ಬಗ್ಗೆ ಸಮಾಧಾನವಿದ್ದರೆ ನಾನೂ ಅದಕ್ಕೆ ವಿರೋಧಿಸುವವನಲ್ಲ. ಈ ಸಂವಿಧಾನಕ್ಕೆ ನಾನು ವಿರೋಧಿಸುವವನೂ ಅಲ್ಲ ಹಾಗೂ ಅದನ್ನು ಒಪ್ಪುವಂತಹವನೂ ಅಲ್ಲ ಅನ್ನುವಂತಹ ಪರಿಸ್ಥಿತಿ ನನ್ನದಾಗಿದೆ. ಹಾಗಾಗಿ ಈ ಸಂವಿಧಾನವನ್ನು ನಡೆಸಲಿಚ್ಛಿಸುವವರಿಗೇ ಈ ಪ್ರಶ್ನೆಯನ್ನು ಬಿಡುತ್ತೇನೆ. ನಾನು ಪ್ರತಿನಿಧಿಯಾಗಿರುವ ಶಾಸನಪದ್ಧತಿಯು ನನಗ್ಯಾವ ಆಜ್ಞೆಯನ್ನೂ ಕೊಟ್ಟಿಲ್ಲವಾದ್ದರಿಂದ ನಾನು ಇಂತಹ ಧೋರಣೆಯನ್ನು ಪಾಲಿಸುವುದೇ ಉತ್ತಮ. ಉತ್ತರದಾಯಿ ಶಾಸನ ಪದ್ಧತಿಯನ್ನು ನಾನು ವಿರೋಧಿಸುವಂತಿಲ್ಲವಾದರೂ ಉತ್ತರದಾಯಿ ಸರ್ಕಾರ ನಿಜವಾದ ಅರ್ಥದಲ್ಲಿ ಪ್ರಾತಿನಿಧಿಕ ಸರ್ಕಾರವಾಗಿರದೆ ನಾನದಕ್ಕೆ ಮಾನ್ಯತೆ ಕೊಡುವಂತಿಲ್ಲ ಅನ್ನುವ ಆಜ್ಞೆ ನನಗಿದೆ. ಪರಿಷತ್ತು ಪ್ರಾತಿನಿಧಿಕ ಸರ್ಕಾರದ ಪ್ರಶ್ನೆಗಳನ್ನು ಯಾವ ರೀತಿ ನಿರ್ವಹಿಸಿದೆ ಹಾಗೂ ಅದಕ್ಕೆ ಎಷ್ಟು ಯಶಸ್ಸು ಸಿಕ್ಕಿದೆ ಅನ್ನುವುದನ್ನು ಗಮನಿಸಿದಾಗ ನನಗೆ ನಿರಾಸೆಯಾಗುತ್ತದೆ. ಮತದಾನದ ಹಕ್ಕು ಹಾಗೂ ಬೇರೆಬೇರೆ ಜಾತಿಗಳಿಗೆ ಕಾಯಿದೆ ಮಂಡಲದಲ್ಲಿ ಸಿಕ್ಕಿರುವ ಪ್ರತಿನಿಧಿತ್ವ ಇವುಗಳು ನಿಜವಾದ ಅರ್ಥದಲ್ಲಿ ಪ್ರಾತಿನಿಧಿಕ ಶಾಸನದ ಆಧಾರಸ್ಥಂಭಗಳು. ನೆಹರು ಸಮಿತಿಯು ಪ್ರೌಢ ಮತದಾನ ಸ್ವೀಕರಿಸಿರುವುದು ಎಲ್ಲರಿಗೂ ಗೊತ್ತಿರುವ ವಿಷಯ ಹಾಗೂ ಈ ಸಮಿತಿ ತಂದಿರುವ ಸಂವಿಧಾನಕ್ಕೆ ಭಾರತದ ಎಲ್ಲ ರಾಜಕೀಯ ಪಕ್ಷಗಳ ಬೆಂಬಲವಿದೆ. ಮತದಾನದ ಹಕ್ಕುಗಳನ್ನು ನಾವೀಗಲೆ ಪಡೆದಾಗಿದೆ ಆದರೆ ಮತಾಧಿಕಾರ ಸಮಿತಿಯ ಬಗ್ಗೆ ನನಗೆ ಭ್ರಮನಿರಸನವಾಗಿದೆ ಅನ್ನುವುದು ಈ ಪರಿಷತ್ತಿಗೆ ಬಂದಾಗಲೇ ಗೊತ್ತಾಯಿತು. ನೆಹರೂರವರ ಅಹವಾಲಿಗೆ ಸಹಿ ಮಾಡಿರುವವರೆಲ್ಲರೂ ಎಷ್ಟರ ಮಟ್ಟಿಗೆ ಒಂದೇ ರೀತಿ ಯೋಚಿಸಿದ್ದಾರೆಂದರೆ ಈ ಅಹವಾಲಿಗೆ ಭಾರತದ ಉದಾರ ಮತವಾದಿಗಳ ಬೆಂಬಲ ಸಿಗುವುದು ಬಹಳ ಕಷ್ಟ. ಇದರಿಂದ ಪ್ರಾಂತಿಕ ಕಾಯಿದೆ ಮಂಡಳದಲ್ಲಿ ಕೇವಲ ೨೫% ಜನರಿಗೆ ಮಾತ್ರ ಮತಾಧಿಕಾರ ಸಿಗಲಿದೆ. ಕೇಂದ್ರದ ಕಾಯಿದೆ ಮಂಡಳಗಳಲ್ಲಿ ಎಷ್ಟು ಜನರಿಗೆ ಮತಾಧಿಕಾರ ಸಿಗಲಿದೆ ಅನ್ನುವುದಿನ್ನೂ ಗೊತ್ತಿಲ್ಲ. ಪ್ರಾಂತ್ಯದ ಸರ್ಕಾರ ಎಷ್ಟರ ಮಟ್ಟಿಗೆ ಪ್ರಾತಿನಿಧಿಕವಾಗುತ್ತಿದೆಯೆಂದರೆ ಮಧ್ಯವರ್ತಿ ಕಾಯಿದೆ ಮಂಡಳವು ಅದಕ್ಕೂ ಹೆಚ್ಚು ಪ್ರಾತಿನಿಧಿಕ ಸ್ವರೂಪದ್ದಾಗುವುದು ಕಷ್ಟ. ಇಂತಹ ಮಿತಿಯಿರುವ ಮತಾಧಿಕಾರದಿಂದ ಭಾರತದ ಭಾವೀ ಸರ್ಕಾರ ಎಲ್ಲ ಜನತೆಗೆ ಸಂಬಂಧಿಸಿರದೆ ಕೇವಲ ವಿಶಿಷ್ಟ ಜಾತಿಗೆ ಸಂಬಂಧಿಸಿದ್ದಿರುತ್ತದೆ.

ಬಹುಸಂಖ್ಯೆ ಹಾಗೂ ಅಲ್ಪಸಂಖ್ಯೆಯಲ್ಲಿರುವ ವಿವಿಧ ಜಾತಿಗಳಲ್ಲಿ ಕಾಯಿದೆ ಮಂಡಳದ ಜಾಗಗಳ ಹಂಚುವಿಕೆಯಲ್ಲಿ ಅಡಚಣೆಯುಂಟಾಗಿದೆ ಅನ್ನುವುದು ನಿಮ್ಮೆಲ್ಲರಿಗೂ ಗೊತ್ತು. ಹಿಂದೊಮ್ಮೆ ಗೊತ್ತಿದ್ದೂ ತೆಗೆದುಕೊಂಡಿರುವ ಅಪಾಯಕರ ನಿರ್ಣಯದಿಂದಲೇ ಈ ಅಡಚಣೆಯುಂಟಾಗಿದೆ ಎಂದು ನನಗನಿಸುತ್ತದೆ. ಭಾರತದ ಪೂರ್ವಾಧಿಕಾರಿಗಳು ಎಲ್ಲರಿಗೂ ಸಮನಾಗಿ ನ್ಯಾಯ ಕೊಡುತ್ತ ಎಲ್ಲರನ್ನೂ ಸಮನಾಗಿ ನಡೆಸಿಕೊಂಡಿದ್ದರೆ ಈ ಸಮಸ್ಯೆಯನ್ನು ಬಿಡಿಸುವುದು ಅಷ್ಟೇನೂ ಕಷ್ಟವಾಗುತ್ತಿರಲಿಲ್ಲ. ತಮಗೆ ಹೆಚ್ಚು ಹತ್ತಿರವಿರುವ ಹಾಗೂ ಲಾಭ ಕೊಡುವ ಜನರಿಗೆ ರಾಜಕೀಯ ಕ್ಷೇತ್ರದಲ್ಲಿ ಸಾಕುಷ್ಟು ಅಧಿಕಾರಗಳನ್ನು ಕೊಟ್ಟು ದಲಿತರಿಗೆ ಮಾತ್ರ ನ್ಯಾಯವಾಗಿ ಸಿಗಬೇಕಿದ್ದ ಹಕ್ಕುಗಳನ್ನು ಅಲ್ಲಗಳೆದರು. ಈ ಎಲ್ಲದರಲ್ಲಿ ದಲಿತರು ಸಾಕಷ್ಟು ನಷ್ಟ ಅನುಭವಿಸಬೇಕಾಯಿತು. ಒಮ್ಮೆ ಆರಂಭವಾದ ತಪ್ಪು ಪದ್ಧತಿಗಳನ್ನು ಹಾಗೇ ಮುಂದುವರೆಸಿಕೊಂಡು ಹೋಗದೆ ಈ ಪರಿಷತ್ತು ಹಳೆಯ ಪದ್ಧತಿಗಳನ್ನು ವಿಶ್ಲೇಷಿಸಿ ದಲಿತರಿಗೆ ಕಾಯಿದೆ ಮಂಡಳದಲ್ಲಿ ಸಿಗಬೇಕಾದ ಜಾಗಗಳನ್ನು ಕೊಟ್ಟಾರು ಅಂದುಕೊಂಡಿದ್ದೆ, ಆದರೆ ಹಾಗಾಗಲಿಲ್ಲ. ಇತರ ಅಲ್ಪ

ಸಂಖ್ಯಾತರ ಬೇಡಿಕೆಗಳನ್ನು ಮೊದಲು ಸ್ವೀಕರಿಸಿ ಅದರ ನಿರ್ದಿಷ್ಟ ಸ್ವರೂಪವನ್ನೂ ನಿರ್ಧರಿಸಿದ್ದಾರೆ. ಕೇವಲ ಹೊಸ ಸರ್ಕಾರದ ಹೆಚ್ಚುವ ಕೆಲಸ ಹಾಗೂ ವ್ಯವಸ್ಥೆಯನುಸಾರವಾಗಿ ಮಾಡಬೇಕಾಗಿರುವ ಕೆಲಸಗಳು ಮಾತ್ರ ಉಳಿದುಕೊಂಡಿವೆ. ಕೆಲವೇ ಕೆಲವು ಹೊಸ ಬದಲಾವಣೆಗಳನ್ನು ಬಿಟ್ಟರೆ ಮೊದಲಿನ ಪದ್ಧತಿಯಲ್ಲಿ ಬೇರೆ ಯಾವುದೇ ಬದಲಾವಣೆಗಳನ್ನು ಮಾಡುವ ಧೈರ್ಯ ತೋರಿಸಿಲ್ಲ. ನಿಜ ಹೇಳುವುದಾದರೆ ದಲಿತರ ಸಮಸ್ಯೆಯೇ ಬೇರೆ. ಈಗೆಲ್ಲೋ ಅವರ ಬೇಡಿಕೆಗಳು ಕೇಳಬರುತ್ತಿವೆ. ಇಂದಿನವರೆಗೆ ಅವರ ಯಾವುದೇ ಬೇಡಿಕೆಗಳಿಗೆ ನ್ಯಾಯ ಸಿಕ್ಕಿಲ್ಲ. ಅವರ ಎಷ್ಟು ಬೇಡಿಕೆಗಳಿಗೆ ಮನ್ನಣೆ ಸಿಗಬಹುದು ಅನ್ನುವುದು ಕೂಡ ಗೊತ್ತಿಲ್ಲ. ಸ್ವಯಂ ರಕ್ಷಣೆಗಾಗಿ ಅಲ್ಲದಿದ್ದರೂ ಸರ್ಕಾರ ತಮ್ಮ ಕೈಯಲ್ಲಿರಲೆಂದು ವ್ಯೂಹರಚಿಸುತ್ತಿರುವ ಹಾಗೂ ಅದಕ್ಕಾಗಿ ಪೈಪೋಟಿ ನಡೆಸುತ್ತಿರುವ ಜನರನ್ನು ಸಂತೋಷಪಡಿಸಲು ಬ್ರಿಟಿಷರು ದಲಿತರ ಅಸಹಯೋಗವನ್ನು ಮುಂದಿಟ್ಟು ಅವರ ಪ್ರತಿನಿಧಿತ್ವವನ್ನು ಬಲಿಕೊಟ್ಟಾರು ಎಂದು ನನಗನಿಸುತ್ತದೆ. ಹೀಗೆ ಮಾಡುವುದು ಅಸಾಧ್ಯವೇನಲ್ಲ.

ಈ ದೃಷ್ಟಿಯಿಂದ ನನ್ನ ವಿಚಾರಗಳನ್ನು ಸ್ಪಷ್ಟವಾಗಿ ನಿಮ್ಮೆದುರಿಗಿಡುವುದು ನನ್ನ ಜವಾಬ್ದಾರಿ. ಮುಂಬರುವ ಸರ್ಕಾರದ ಸಂವಿಧಾನದಲ್ಲಿ ದಲಿತರ ಹಕ್ಕುಗಳನ್ನು ಇನ್ನೂ ನಿರ್ಧರಿಸಿಲ್ಲ ಅನ್ನುವುದರರ್ಥ ಪ್ರಾಂತೀಯ ಸರ್ಕಾರ ಹಾಗೂ ಮಧ್ಯವರ್ತಿ ಸರ್ಕಾರ ದಲಿತರಿಗಾಗಿ ಜವಾಬ್ದಾರಿಯುತ ಸರ್ಕಾರದ ಸಂವಿಧಾನ ಇನ್ನೂ ನಿರ್ಧರಿಸುತ್ತಿರಬೇಕು, ಬ್ರಿಟಿಷ್ ಸರ್ಕಾರ ಅದನ್ನು ಎಲ್ಲರೆದುರು ಇಡುವ ಮುನ್ನ ಮುಂಬರುವ ಸರ್ಕಾರದ ಜವಾಬ್ದಾರಿ ವಹಿಸಿಕೊಳ್ಳುವವರಿಂದ ದಲಿತರ ಹಕ್ಕುಗಳು ಸುರಕ್ಷಿತವಾಗಿರುವಂತೆ ಕೆಲವು ಸ್ಪಷ್ಟ ಕರಾರುಗಳನ್ನು ಮಾಡಿಸಿಕೊಳ್ಳುವುದು ಅಗತ್ಯವಾಗಿದೆ. ಪರಿಸ್ಥಿತಿಯ ಗಾಂಭೀರ್ಯವನ್ನು ಗಮನದಲ್ಲಿಟ್ಟು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಸಮಸ್ಯೆಯನ್ನು ಬಿಡಿಸುವತನಕ ಹಾಗೂ ಸ್ಪಷ್ಟವಾದ ನಿರ್ಧಾರ ತೆಗೆದುಕೊಳ್ಳದೆ ಯಾವುದೇ ವ್ಯವಸ್ಥೆಯನ್ನು ನಾನು ಒಪ್ಪುವುದಿಲ್ಲ ಅನ್ನುವುದನ್ನು ನಾನು ಹೆಚ್ಚು ಒತ್ತುಕೊಟ್ಟು ಹೇಳುತ್ತಿದ್ದೇನೆ. ಇದನ್ನು ನೀವು ಒಪ್ಪದಿದ್ದರೆ ನಾನು ಹಾಗೂ ನನ್ನ ಸಹಪಾಠಿಗಳು ಪರಿಷತ್ತಿನ ಮುಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಿಲ್ಲ ಹಾಗೂ ಪರಿಷತ್ತು ನಡೆಯದಂತೆ ನೋಡಿಕೊಳ್ಳುತ್ತೇವೆ. ಅಧ್ಯಕ್ಷರೆ, ಇದೆಲ್ಲವನ್ನೂ ಹೇಳುತ್ತಿರುವಾಗ ನೀವು ಮೊದಲು ಕೊಟ್ಟಿರುವ ಆಶ್ವಾಸನೆಗಿಂತ ಹೆಚ್ಚಿನದೇನನ್ನೋ ಕೇಳುತ್ತಿದ್ದೇನೆ ಅಂದುಕೊಳ್ಳಬೇಡಿ. ಬ್ರಿಟಿಷ್ ಲೋಕಸಭೆ ಹಾಗೂ ಅದರ ಪರವಾಗಿ ಮಾತನಾಡುವ ಜನ ನಾವು ಯಾವತ್ತೂ ದಲಿತರ ಪರವಗಿದ್ದೇವೆ ಅನ್ನುತ್ತಿರುತ್ತಾರೆ.

ಮಾನವ ಸಂಬಂಧಗಳನ್ನು ಕಾಪಾಡಲು ನಾವು ಯಾವತ್ತೂ ಕಟಿ ಬದ್ಧರಾಗಿರುತ್ತೇವೆ ಅನ್ನುವಂತಹ ಸಂಸ್ಕೃತಿ ಶಿಷ್ಟಾಚಾರದ ಸುಳ್ಳುಗಳಲ್ಲಿ ಇದೂ ಒಂದು ಸುಳ್ಳಲ್ಲ ಅನ್ನುವ ನಂಬಿಕೆ ನನಗಿದೆ. ನಂಬಿಕೆಯನ್ನು ಕಳೆದುಕೊಳ್ಳದಿರುವುದು ಯಾವುದೇ ಸರ್ಕಾರದ ಆದ್ಯ ಕರ್ತವ್ಯವಾಗಿದೆ ಎಂದು ನನಗನಿಸುತ್ತದೆ. ಮಾನ್ಯ ಪ್ರಧಾನ ಮಂತ್ರಿಗಳೆ, ತಮ್ಮ ಶ್ರೇಷ್ಠತೆ ಹಾಗೂ ಉನ್ನತಿಗಾಗಿ ನಮ್ಮ ನಂಬಿಕೆಯನ್ನು ಅವಲಂಬಿಸಿರುವ ಹಾಗೂ ಕನಸಿನಲ್ಲಿಯೂ ನಮ್ಮ ಉನ್ನತಿಯ ಬಗ್ಗೆ ಯೋಚಿಸದಂತಹ ಜನರ ದಯೆ ಹಾಗೂ ಬ್ರಿಟಿಷ್ ಸರ್ಕಾರ ನಮ್ಮನ್ನು ಒಪ್ಪಿಸುವುದಾದರೆ ಬ್ರಿಟಿಷ್ ಸರ್ಕಾರ ನಮ್ಮ ನಂಬಿಕೆಗೆ ದ್ರೋಹ ಬಗೆದಿದೆ ಎಂದು ನಾವು ತಿಳಿದುಕೊಳ್ಳುತ್ತೇವೆ. ನಾನು ಈ ರೀತಿ ಮಾತನಾಡಿದ್ದಕ್ಕೆ ರಾಷ್ಟ್ರವಾದಿ ಹಾಗೂ ದೇಶಭಕ್ತ ಜನ ನನ್ನನ್ನು ಜಾತೀಯವಾದಿ ಅನ್ನಬಹುದು. ಅಂದರೆ ಅನ್ನಲಿ. ನಾನದಕ್ಕೆ ಹೆದರುವವನಲ್ಲ. ಭಾರತ ಒಂದು ವಿಚಿತ್ರವಾದ ದೇಶ, ಇಲ್ಲಿಯ ರಾಷ್ಟ್ರಭಕ್ತರು ಹಾಗೂ ದೇಶಭಕ್ತರು ವಿಚಿತ್ರವಾಗಿದ್ದಾರೆ. ತಮ್ಮ ದೇಶಬಾಂಧವರಿಗೆ ಪ್ರಾಣಿಗಳಿಗೂ ಕಡೆಯಾಗಿ ನಡೆಸಿಕೊಳ್ಳುತ್ತಿದ್ದರೂ ಇವರು ಬಾಯಿ ಮುಚ್ಚಿ ಸುಮ್ಮನಿದ್ದುಬಿಡುತ್ತಾರೆಯೇ ಹೊರತು

ವಿರೋಧಿಸುವುದಿಲ್ಲ. ದಲಿತ ಗಂಡಸರಿಗೆ ಹಾಗೂ ಹೆಂಗಸರಿಗೆ ಯಾವುದೇ ಕಾರಣವಿಲ್ಲದೆ ಕೆಲವು ಹಕ್ಕುಗಳನ್ನು ನಿರಾಕರಿಸಿರುವುದು ಇವರಿಗೆ ಗೊತ್ತಿದ್ದರೂ ಸಹಾಯ ಮಾಡುವ ದೃಷ್ಟಿಯಿಂದ ಇವರ ಸಂವೇದನೆ ಎಚ್ಚೆತ್ತುಕೊಳ್ಳುವುದಿಲ್ಲ. ಮಾನವನಿಗೆ ಹಾಗೂ ಸಮಾಜಕ್ಕೆ ಘಾತಕವಾಗಿರುವಂತಹ ರೂಢಿ ಪರಂಪರೆಗಳ ಬಗ್ಗೆ ಅವರಿಗೆ ಗೊತ್ತಿರುತ್ತದೆ. ಆದರೆ ರೋಸಿಹೋಗುವಂತಹ ಈ ವಿಷಯಗಳ ಬಗ್ಗೆ ಅವನಿಗೆಂದೂ ತಿರಸ್ಕಾರ ಹುಟ್ಟುವುದಿಲ್ಲ. ಅವರಿಗೆ ಹಾಗೂ ಅವರ ಜಾತಿ ಬಾಂಧವರಿಗೆ ಅಧಿಕಾರ ಹಾಗೂ ಹೆಚ್ಚಿನ ಅಧಿಕಾರ ಸಿಗಬೇಕು ಅನ್ನುವುದು ಅವರಘೋಷಣೆಯಾಗಿರುತ್ತದೆ. ನಾನು ಇಂತಹ ದೇಶಭಕ್ತರಲ್ಲಿ ಒಬ್ಬನಲ್ಲ ಅನ್ನುವ ಸಂತೋಷ ನನಗಿದೆ. ಪ್ರಜಾಪ್ರಭುತ್ವವನ್ನು ರಕ್ಷಿಸುವ ಯಾವುದೇ ರೀತಿಯಲ್ಲಿರುವ ಏಕಾಧಿಕಾರದ ಸರ್ಕಾರವನ್ನು ಧ್ವಂಸ ಮಾಡುವ ಜಾತಿಗೆ ನಾನು ಸೇರಿದ್ದೇನೆ. ಒಂದು ವ್ಯಕ್ತಿ ಒಂದು ಮೌಲ್ಯ ಅನ್ನುವುದು ನಮ್ಮ ಉದ್ದೇಶ. ಈ ಉದ್ದೇಶವನ್ನುಜೀವನದ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಕೃತಿಪೂರ್ವಕವಾಗಿ ಈಡೇರಿಸಬೇಕಿದೆ. ಈ ಅತ್ಯುಚ್ಚ ಮೌಲ್ಯಗಳಿಗೆ ದಲಿತರು ಬಾಧ್ಯರಾಗಿದ್ದಾರೆ ಹಾಗಾಗಿ ಪ್ರಾತಿನಿಧಿಕ ಸರ್ಕಾರವು ನಮ್ಮ ಉದ್ದೇಶ ಈಡೇರಿಸುವ ಮಾಧ್ಯಮವಾಗಿದೆ. ಈ ಮೌಲ್ಯಗಳ ಬಗ್ಗೆ ನಮಗಿರುವ ಗೌರವವನ್ನು ಗಮನಿಸಿ ಇವುಗಳನ್ನು ಸಾಕಾರಗೊಳಿಸಲು ಒಂದು ಪ್ರಣಾಳಿಕೆಯನ್ನು ಘೋಷಿಸಬೇಕು ಎಂದು ಒತ್ತಾಯಿಸುತ್ತೇವೆ.

ದಲಿತರ ಬಗ್ಗೆ ನಮಗೆ ಸಂಪೂರ್ಣ ಸಹಾನುಭೂತಿಯಿದೆ ಎಂದು ನೀವು ಆಶ್ವಾಸನೆ ಕೊಡಬಹುದು ಆದರೆ ದುಃಖಿತರಿಗೆ ಇದಕ್ಕಿಂತ ಹೆಚ್ಚಿನದೇನಾದರೂ ನಿಶ್ಚಿತವಾದ ಹಾಗೂ ಹೆಚ್ಚಿನ ವ್ಯವಸ್ಥೆಯೇನಾದರೂ ಬೇಕಿದೆ. ನಾನು ನಿಮ್ಮನ್ನು ಬೆದರಿಸುತ್ತಿದ್ದೇನೆಅನ್ನುವ ಸುಳ್ಳು ಆರೋಪ ನೀವು ನನ್ನ ಮೇಲೆ ಹೊರಿಸಬಹುದು. ಆದರೆ ಸುರಕ್ಷಿತತೆಯ ಭರವಸೆಯ ಬಗ್ಗೆ ನಿಶ್ಚಿಂತರಾಗಿ ನಮ್ಮ ಸರ್ವನಾಶವನ್ನು ನಾವೇ ಮಾಡಿಕೊಳ್ಳುವುದಕ್ಕಿಂತ ಬೇರೆಯವರು ಹೆದರಿ ನಮ್ಮನ್ನು ದ್ವೇಷಿಸುವುದು ಹೆಚ್ಚು ಒಳ್ಳೆಯದು ಅನ್ನುವುದೇ ನನ್ನಲ್ಲಿರುವ ಉತ್ತರ' ಅಂದರು.

# ೩೮.

# ಸ್ವತಂತ್ರ ದೇಶದಲ್ಲಿ ಅಸ್ಪೃಶ್ಯರಿಗೆ ಸಮಾನ ಹಕ್ಕಿನಿಂದ ಬದುಕಲು ಬರಬೇಕು

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಜಾಹೀರು ಸ್ವಾಗತ ಹಾಗೂ ಸನ್ಮಾನ ಮಾಡಬೇಕೆಂದು ಮುಂಬಯಿ ಇಲಾಖೆಯ ದಲಿತ ಸಮಾಜದ ಜನ ನಿರ್ಧರಿಸಿದರು, ಅದರಂತೆ ಆ ಸ್ವಾಗತ ಸಮಾರಂಭವನ್ನು ಭಾನುವಾರ ತಾರೀಖು ೧ನೆಯ ಮಾರ್ಚ್ ೧೯೩೨ರಂದು ಆಯೋಜಿಸಲಾಗಿತ್ತು. ಈ ಜಾಹೀರು ಸಮಾರಂಭಕ್ಕೆ ತಲಾ ಎರಡಾಣೆ ಟಿಕೇಟನ್ನು ಇಟ್ಟು ಇದರಿಂದ ಒಟ್ಟಾಗುವ ಹಣವನ್ನು ನಾಸಿಕ್ ದೇವಸ್ಥಾನ ಪ್ರವೇಶದ ಸತ್ಯಾಗ್ರಹಕ್ಕಾಗಿ ಕೊಡುವುದೆಂದು ನಿರ್ಧರಿಸಲಾಯಿತು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ದಲಿತರಿಗಾಗಿ ಮಾಡಿದ ಕೆಲಸಗಳ ಬಗ್ಗೆ. ಅವರಾಡಲಿರುವ ಮಾತು ಕೇಳಲು ಈ ಜಾಹೀರು ಸಭೆಗೆ ಸುಮಾರು ಹತ್ತು ಸಾವಿರದಷ್ಟು ದಲಿತರು ನೆರೆದಿದ್ದರು. ಪರೇಲ್‌ನ ದಾಮೋದರ್ ಹಾಲ್‌ನ ಹಿಂದಿರುವ ದೊಡ್ಡ ಮೈದಾನ ಜನರಿಂದ ಕಿಕ್ಕಿರಿದು ತುಂಬಿತ್ತು. ಈ ಸಭೆಯ ಅಧ್ಯಕ್ಷ ಸ್ಥಾನವನ್ನು ಡಾ. ಜಿ. ಪಿ. ಸೋಲಂಕಿಯವರು ವಹಿಸಿಕೊಂಡಿದ್ದರು. ಸಭೆಗಾಗಿ ಮುಂಬಯಿ ಇಲಾಖೆಯ ಬೇರೆ ಬೇರೆ ನಗರಗಳಿಂದ ಹಾಗೂ ತಾಲೂಕುಗಳಿಂದ ದಲಿತರ ಪ್ರತಿನಿಧಿಗಳು ಹಾಜರಿದ್ದರು. ಸಾಯಂಕಾಲ ಏಳು ಘಂಟೆಗೆ ಸಮತಾ ಸಂಘದ ಅಧ್ಯಕ್ಷರಾದ ಶ್ರೀ ದೇವರಾವ್ ನಾಯಿಕ್ ಅವರು ತಮ್ಮ ಭಾಷಣದಿಂದ ಸಭೆಯನ್ನಾರಂಭಿಸಿದರು. ಅವರು ಡಾಕ್ಟರರ ಲಂಡನ್ನಿನಲ್ಲಿಯ ಕೆಲಸಗಳ ಬಗ್ಗೆ ಮಾತನಾಡಿ ಡಾ. ಸಾಹೇಬರು ಮಾಡಿರುವ ಸಾಧನೆಯಿಂದ ಅವರಿಗೆ ಕೇವಲ ದಲಿತರ ನಾಯಕರಷ್ಟೇ ಅಲ್ಲ ಸಾಮಾನ್ಯ ಜನತೆಯ ಹಾಗೂ ಮುಸಲ್ಮಾನರ ಬೆಂಬಲವೂ ಸಾಕಷ್ಟಿದೆ. ಮುಂಬರುವ ದಿನಗಳಲ್ಲಿ ಅವರು ಬಹುಜನ ಸಮಾಜದ ಜನಪ್ರಿಯ ನಾಯಕರಾಗುವುದರಲ್ಲಿ ಅನುಮಾನವಿಲ್ಲ. ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ದೃಷ್ಟಿಯಿಂದ ಅವರಿಂದ ಕ್ರಾಂತಿಕಾರಿ ಸೇವೆಯಾಗುತ್ತದೆ ಅನ್ನುವ ನಂಬಿಕೆ ನನಗಿದೆ. ನಿಮ್ಮೆಲ್ಲರ ವತಿಯಿಂದ ಜನತೆಯ ಈ ನಿಜವಾದ ನಾಯಕನನ್ನು ಸ್ವಾಗತಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಸಭೆಯ ಅಧ್ಯಕ್ಷರಾದ ಡಾ. ಸೋಲಂಕಿಯವರು ಸ್ವಲ್ಪದರಲ್ಲಿ ಸ್ವಾಗತ ಭಾಷಣ ಮಾಡಿ ಡಾ. ಅಂಬೇಡ್ಕರ್ ಅವರ ಭಾಷಣ ಕೇಳಲು ಉತ್ಸುಕರಾಗಿದ್ದ ಜನತೆಯ ಆತುರವನ್ನು ಗಮನಿಸಿ ಡಾ. ಸಾಹೇಬರಿಗೆ ಭಾಷಣ ಮಾಡಲು ವಿನಂತಿಸಿದಾಗ ಡಾ. ಅಂಬೇಡ್ಕರ್ ಅವರು ಭಾಷಣ ಮಾಡಲು ಎದ್ದರು. ತಮ್ಮ ಭಾಷಣದಲ್ಲವರು,

ಇಂದು ಸುಮಾರು ಐದು ತಿಂಗಳ ನಂತರ ನನ್ನ ನಿಮ್ಮ ಭೇಟಿಯಾಗುತ್ತಿದೆ. ನಿಮ್ಮೆಲ್ಲರನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತಿದೆ. ನೀವೆಲ್ಲರೂ ನನ್ನನ್ನು ನಂಬಿ ನನ್ನ ಜೊತೆ ಸಹಕರಿಸುತ್ತೀರಿ ಅನ್ನುವುದನ್ನು ನೋಡಿ ನಾನು ಧನ್ಯನಾದೆ ಅನಿಸುತ್ತದೆ ಆದರೆ ಜೊತೆಗೆ ನನ್ನ ಜವಾಬ್ದಾರಿಯೂ ಅಷ್ಟೇ ಹೆಚ್ಚುತ್ತದೆ. ಮನುಷ್ಯನಿಗೆ ತನ್ನೆಲ್ಲ ಕೆಲಸಗಳಿಂದ ಸಮಯ ತೆಗೆಯುವುದು ಬಹಳ ಸುಲಭ ಆದರೆ ನಿಮ್ಮೆಲ್ಲ ದಲಿತರ

ಪ್ರಶ್ನೆಗಳನ್ನು ಬಿಡಿಸುವುದು ನನಗಾಗಿ ಬಹಳ ಕಷ್ಟದ ಕೆಲಸ. ಈ ಕಠಿಣ ಪರಿಸ್ಥಿತಿಯಿಂದ ಹೊರಬರುವ ದಾರಿಯನ್ನು ನಾನೇ ಹುಡುಕಬೇಕಿದೆ. ಇಲ್ಲಿಂದ ದುಂಡು ಮೇಜಿನ ಪರಿಷತ್ತಿಗಾಗಿ ಲಂಡನ್‌ಗೆ ಹೋದ ಮುಸಲ್ಮಾನ, ಸಿಖ್, ಮವಾಳ್‌ಗಳ ಪ್ರತಿನಿಧಿಗಳಿಗೆ ಅವರ ಪಕ್ಷದ ಜನರು ಇಂತಿಷ್ಟು ಕೆಲಸಗಳಾಗಬೇಕು ಎಂದು ಹೇಳಿ ಕಳಿಸಿದ್ದರು. ಆದರೆ ನೀವು ನನ್ನನ್ನು ಬೀಳ್ಕೊಡುವಾಗ ಪರಿಷತ್ತಿನೆದುರು ಏನು ಮಾತಾಡಬೇಕು ಇಲ್ಲವೆ ನಿಮ್ಮ ಯಾವ ಯಾವ ಕೆಲಸಗಳಾಗಬೇಕು ಅನ್ನುವುದರ ಎಲ್ಲ ಜವಾಬ್ದಾರಿಯನ್ನು ನನಗೇ ಬಿಟ್ಟುಕೊಟ್ಟಿದ್ದಿರಿ, ನಿಮ್ಮ ಏಳಿಗೆಯ ಮಾರ್ಗ ಕಂಡುಹಿಡಿಯುವ ಜವಾಬ್ದಾರಿಯನ್ನೂ ನನ್ನ ಮೇಲೆ ಹಾಕಿದಿರಿ. ಈ ಪರಿಷತ್ತಿಗೆ ಹೋದ ಇತರ ಪ್ರತಿನಿಧಿಗಳಿಗೂ ಹಾಗೂ ನನಗೂ ಇದ್ದ ವ್ಯತ್ಯಾಸ ಇದೇ. ಪರಿಷತ್ತಿನಲ್ಲಿ ನಾನು ಮಾತುಕತೆಯಲ್ಲಿ ಕಂಡುಕೊಳ್ಳುವ ಮಾರ್ಗ ನನಗೆ ಸರಿ ಅನಿಸಿದಂತೆ ನಿಮಗೂ ಸರಿ ಅನಿಸಬಹುದೆ? ಅನ್ನುವ ಅನುಮಾನ ನನಗಿತ್ತು. ಆದರೆ ಮಹತ್ಪ್ರಯಾಸದಿಂದ ಕಂಡುಕೊಂಡ ಮಾರ್ಗ ಹಾಗೂ ಅದರ ಯೋಜನೆಯ ಬಗ್ಗೆ ನಿಮಗೇನೂ ಅಭ್ಯಂತರವಿಲ್ಲದಿರುವುದರಿಂದ ನಾನೀಗ ಅದನ್ನು ಸ್ವಲ್ಪದರಲ್ಲೇ ವಿವರಿಸುತ್ತೇನೆ. ನಾನು ರಾ. ಬ. ಶ್ರೀನಿವಾಸನ್ ಅವರ ಸಹಾಯದಿಂದ ಪರಿಷತ್ತಿನೆದುರು ಮಂಡಿಸಿದ ಯೋಜನೆಯಲ್ಲಿ ಒಟ್ಟು ಎಂಟು ಬೇಡಿಕೆಗಳನ್ನು ಮುಂದಿಟ್ಟಿದ್ದೆ. ಸಮಾನ ಹಕ್ಕಿನ ನಾಗರೀಕತ್ವ, ಭಾರತಕೆ ಸ್ವಾತಂತ್ರ್ಯ ಸಿಗಬೇಕೆ? ಬೇಡವೆ? ಸಿಕ್ಕರೂ ಅದು ಹೇಗಿರಬೇಕು? ಸ್ವಾತಂತ್ರ್ಯ ಹೇಗಿದ್ದರೂ ಅದರಲ್ಲಿ ದಲಿತರು ಸಮಾನ ಹಕ್ಕಿನಿಂದ ಬದುಕುವಂತಾಗಬೇಕು. ಆ ಸ್ವತಂತ್ರ ಭಾರತದಲ್ಲಿ ನಮಗೆ ಜಾಗವಿಲ್ಲದಿದ್ದರೆ ಅದು ನೂರಕ್ಕೆ ನೂರರಷ್ಟು ಒಳ್ಳೆಯ ಸ್ವಾತಂತ್ರ್ಯವಾಗಿದ್ದರೂ ನಮಗದು ಬೇಡ. ಹಾಗೆಯೇ ಸ್ವತಂತ್ರ ಭಾರತದ ರಾಜಕೀಯ ಅಧಿಕಾರಗಳು ಮೇಲ್ವರ್ಗದ ಜನರ ಕೈ ಸೇರಲಿವೆ ಅನ್ನುವ ಮಾತು ಸತ್ಯ, ಆ ಅಧಿಕಾರಗಳು ಅವರಕೈ ಸೇರುವ ಮುನ್ನ ನಮ್ಮ ಅಸ್ಪೃಶ್ಯತೆ ತೊಲಗಿದರೆ ಮಾತ್ರ ನಾವು ನಿಮ್ಮ ತತ್ವಗಳನ್ನು ಒಪ್ಪಿಕೊಳ್ಳುತ್ತೇವೆ.

ಕಾಯಿದೆಯಲ್ಲಿ ಅಸ್ಪೃಶ್ಯತೆಯನ್ನು ತೊಲಗಿಸುವ ಕಲಮು ಜಾರಿಗೊಳಿಸಿದರೂ ಎಲ್ಲ ಅಂತಸ್ತಿನ ಜನ ಸಮಾನ ಹಕ್ಕಿನಿಂದ ಬದುಕುವಂತಾಗಬೇಕು ಅನ್ನುವುದನ್ನು ನಿರ್ಧರಿಸುವುದು ಅಗತ್ಯವಿತ್ತು. ದಲಿತರನ್ನು ಯಾರಾದರೂ ಕಾಲಕೆಳಗೆ ತುಳಿಯುಲು ಪ್ರಯತ್ನಿಸಿದರೆ ಅವನು ದೇಶದ ಅಪರಾಧಿ ಎಂದು ಘೋಷಣೆಯಾಗಬೇಕು ಅನ್ನುವ ಬಗ್ಗೆ ಮುಖ್ಯ ಪ್ರಧಾನಿಗಳಾದ ಮಿ. ರಾಮ್ಸೇ ಮ್ಯಾಕ್ ಡೋನಾಲ್ಡ್ ಅವರ ಆಶ್ವಾಸನೆ ಮಾತ್ರ ಸಿಕ್ಕಿದೆ. ಮುಂದಾಗುವ ಕಮಿಟಿಯ ಚರ್ಚೆಯಲ್ಲಿ ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

ಏನೇ ಆದರೂ ಹಾಗೂ ನಮಗೆ ರಾಜಕೀಯ ಅಧಿಕಾರಗಳು ಎಷ್ಟೇ ಸಿಕ್ಕರೂ ಮುಂದಿನ ಕೆಲವು ಯೋಜನೆಗಳಲ್ಲಿ ಕಾಯಿದೆಯ ಇಲ್ಲವೆ ಕಾರ್ಯಕಾರಿ ಮಂಡಳದ ಆಜ್ಞೆಯಿಂದ ಭೇದ ಭಾವ ಮಾಡುವ ಸಾಧ್ಯಗಳಿವೆ ಎಂದು ದಲಿತರಿಗೆ ಭಯವಾಗುತ್ತದೆ ಆದ್ದರಿಂದ ಕಾಯಿದೆ ಮಂಡಳವು ಇಲ್ಲವೆ ಕಾರ್ಯಕಾರಿ ಮಂಡಳವು ಇಂತಹ ದ್ವೇಷಕಾರಕ ಯಾವುದೇ ಭೇದ ಭಾವ ಮಾಡದಂತೆ ಅವರನ್ನು ತಡೆಗಟ್ಟದೆ ಬಹುಸಂಖ್ಯೆ ಜನರ ಅಧಿಕಾರದಡಿ ಬದುಕಲು ಒಪ್ಪುವುದು ದಲಿತರಿಂದ ಸಾಧ್ಯವಿಲ್ಲ. ಮುಂಬರುವ ಕಾಯಿದೆ ಮಂಡಳದಲ್ಲಿ ನಾವು ಅಲ್ಪಸಂಖ್ಯಾಕರಾಗೇ ಉಳಿಯುತ್ತೇವೆ, ನೂರರಲ್ಲಿ ೧೦–೧೫ ಪ್ರತಿನಿಧಿಗಳೆಂದರೆ ತುಂಬ ಕಡಿಮೆ ಪ್ರಮಾಣ. ಹಾಗಾಗಿ ಜಾತಿಜಾತಿಗಳಲ್ಲಿ ಯಾವುದೇ ರೀತಿಯ ಅನ್ಯಾಯ ಮಾಡಿ ಕಾಯಿದೆ ತಯಾರಿಸುವ ಅವಕಾಶ ಇರಕೂಡದು. ಕೇವಲ ಮನುಷ್ಯತ್ವದ ಹಕ್ಕು ಸಿಗುವಂತಾಗಬೇಕು ಅನ್ನುವ ಧೋರಣೆಯನ್ನೇ ಸ್ವೀಕರಿಸಬೇಕು ಅನ್ನುವ ಬೇಡಿಕೆಯನ್ನು ಪರಿಷತ್ತು ಒಪ್ಪಿಕೊಂಡಿದೆ.

ಮತದಾನದ ಬಗೆಗಿನ ಇಂದಿನ ಪರಿಸ್ಥಿತಿ ಸಮಾಧಾನಕಾರಕವಾಗಿಲ್ಲ. ಕೇವಲ ಹಣವಂತರಿಗೆ ಹಾಗೂ ಮಧ್ಯಮ ವರ್ಗದವರಿಗೆ ಮಾತ್ರ ಮತದಾನ ಮಾಡುವ ಹಕ್ಕುಗಳಿವೆ. ಬಡವರು, ಶ್ರಮಜೀವಿಗಳಿಗೆ ತಮ್ಮ

ಯೋಗ್ಯ ಪ್ರತಿನಿಧಿಗಳನ್ನು ಆರಿಸಿ ಕೊಡಲಾಗುತ್ತಿಲ್ಲ. ದೇಶದಲ್ಲಿ ಬಡವರ ಸಂಖ್ಯೆ ನೂರಕ್ಕೆ ತೊಂಭತ್ತರಷ್ಟಿದೆ. ಅವರು ತಮ್ಮ ಜನರ ಪ್ರಶ್ನೆಗಳನ್ನು ಬಿಡಿಸಲು ಸರ್ಕಾರಕ್ಕೆ ಮೊರೆ ಹೋಗಬೇಕಾಗುತ್ತದೆ. ಹಾಗಾಗಿ ಪರಾವಲಂಬಿಗಳಾಗಬೇಕಾಗುತ್ತದೆ. ಮುಂಬರುವ ಸ್ವತಂತ್ರ ದೇಶದಲ್ಲಿ ಈ ಅವಮಾನಕರ ಪರಿಸ್ಥಿತಿ ನಷ್ಟವಾಗಲು ಸಾರ್ವತ್ರಿಕ ಮತದಾನ ಯೋಜನೆಯ ಬೇಡಿಕೆಯನ್ನು ನಾನು ಮುಂದಿಟ್ಟಿದ್ದೇನೆ. ಈ ಪ್ರಶ್ನೆಗಳ ಬಗ್ಗೆ ಸಾಕಷ್ಟು ಮಾರಾಮಾರಿಯಾಯಿತು. ನಾವು ನಾಲ್ಕು ಜನ ಪ್ರತಿನಿಧಿಗಳು ಮಾತ್ರ ಈ ಪ್ರಶ್ನೆಗೆ ಒತ್ತು ಕೊಟ್ಟೆವು ಆದರೆ ಯಾವುದೇ ಲಾಭವಾಗಲಿಲ್ಲ. ದಲಿತರಿಗೆ ಸಂಯುಕ್ತ ಮತದಾನ ಬೇಕೆ ಇಲ್ಲವೆ ಸ್ವತಂತ್ರ ಮತದಾನ ಬೇಕೆ ಅನ್ನುವ ಪ್ರಶ್ನೆ ಕೇಳಿದಾಗ ನಾನು ಒಂದೋ ಸಾರ್ವತ್ರಿಕ ಮತದಾನ ಪದ್ಧತಿ ಇಲ್ಲವಾದರೆ ಮೊದಲ ಹತ್ತು ವರ್ಷ ಸ್ವತಂತ್ರ ಮತದಾನ ಪದ್ಧತಿ ನಂತರ ಸಂಯುಕ್ತ ಮತದಾನ ಪದ್ಧತಿ ಹಾಗೂ ಕಾಯ್ದಿರಿಸಲಾದ ಸ್ಥಾನಗಳನುಸಾರವಾಗಿ ವ್ಯವಸ್ಥೆಯಾಗಬೇಕು ಎಂದು ಸೂಚಿಸಿದ್ದೇನೆ. ಇದರ ಬಗ್ಗೆಯ ಎಲ್ಲ ಜವಾಬ್ದಾರಿಯ ಹಕ್ಕು ಕೇವಲ ಗವರ್ನರ್ ಅವರ ಕೈಯಲ್ಲಿರುತ್ತವೆ.

ಬಹುಸಂಖ್ಯಾಕರು ಕಾಯಿದೆ ಕೌನ್ಸಿಲ್‌ನಲ್ಲಿ ಅಲ್ಪಸಂಖ್ಯಾಕರನ್ನು ಅಸಡ್ಡೆಯಿಂದ ಕಂಡು ಬಜೆಟ್‌ನಲ್ಲಿ ನಮ್ಮ ಬೇಡಿಕೆಗಳನ್ನು ಕಡೆಗಾಣಿಸಿದರೆ ನಾವೇನು ಮಾಡಬೇಕು? ಅನ್ನುವುದರ ಬಗ್ಗೆ ಅಪೀಲ್ ಮಾಡುವ ಅಧಿಕಾರ ಕೊಡಲಾಗಿದೆ. ನಮ್ಮ ನ್ಯಾಯವಾದ ಬೇಡಿಕೆಗಳನ್ನು ಕಡೆಗಾಣಿಸಿದರೆ ಗವರ್ನರ್ ಸಾಹೇಬರಲ್ಲಿಗೆ ಅಪೀಲ್ ಮಾಡುವುದು ಹಾಗೂ ಗವರ್ನರ್ ಕೂಡ ನಮ್ಮ ಮಾತು ಕೇಳದಿದ್ದರೆ ವೈಸ್‌ರಾಯ್ ಅವರಲ್ಲಿ ಅಪೀಲ್ ಮಾಡುವ ಅಧಿಕಾರಗಳನ್ನು ಕೊಡಲಾಗಿದೆ. ಇಷ್ಟೇಯಲ್ಲದೆ ಅಸ್ಪೃಶ್ಯತೆಯ ಪ್ರಶ್ನೆ ಅಖಿಲ ಭಾರತೀಯ ಸ್ವರೂಪದ್ದಾಗಿದೆ ಅದಕ್ಕಾಗಿ ನಿರಂಕುಶ ಸರ್ಕಾರ ಬೇಕು, ಹಾಗಾಗಿ ಕೇಂದ್ರ ಕಾಯಿದೆ ಮಂಡಳದಲ್ಲಿ ಅಸ್ಪೃಶ್ಯರ ವತಿಯಿಂದ ಒಬ್ಬ ದೀವಾನನನ್ನು ನೇಮಿಸಿ ಎಲ್ಲ ರೀತಿಯ ಸಮಸ್ಯೆಗಳನ್ನು ಅವನಿಂದ ಬಿಡಿಸಿಕೊಳ್ಳಬೇಕು. ಆದರೆ ಈ ವಿಷಯದ ಬಗ್ಗೆ ಇನ್ನೂ ಸಮಾಧಾನಕಾರಕ ತೀರ್ಪು ಬಂದಿಲ್ಲ. ಪೊಲೀಸ್ ಹಾಗೂ ಸೇನೆಯಲ್ಲಿ ನಮ್ಮ ಜನರಿಗೆ ಎಲ್ಲ ದರ್ಜೆಯ ಕೆಲಸಗಳು ಸಿಗುವಂತಾಗುವ ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಇನ್ನು ಮುಂದೆ ಈ ಖಾತೆಗಳಲ್ಲಿ ಕೆಲಸಕ್ಕೆ ಅರ್ಜಿ ಬರೆಯುವಾಗ ಜಾತಿಧರ್ಮ ಅನ್ನುವ ಅಡಚಣೆಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ ಅನ್ನುವ ವಿಷಯದಲ್ಲಿ ಎಲ್ಲ ಪ್ರತಿನಿಧಿಗಳ ಬೆಂಬಲ ಸಿಕ್ಕಿದೆ.

ಕಡೆಗೆ ಮೇಲಿನ ಎಲ್ಲ ವಿಷಯಗಳನ್ನು ಗಮನಿಸಿದಾಗ ಭಾರತಕ್ಕೆ ಸಿಗಲಿರುವ ಸ್ವಾತಂತ್ರ್ಯದಲ್ಲಿ ಅಲ್ಪಸಂಖ್ಯಾಕರ ಬೇಡಿಕೆಗಳು ನಿರ್ಧಾರವಾಗದೆ ಯಾವುದೇ ರೀತಿಯ ಹೊಸ ಸಂವಿಧಾನ ವಿಫಲಗೊಳ್ಳಲಿದೆ. ಅದಕ್ಕಾಗಿ ಬಹುಜನ ಸಮಾಜದ ಸಮತೆಯ ಸ್ವರಾಜ್ಯ ಸಿಗಬೇಕು ಅನ್ನುವ ಆಸೆ ನಮಗಿದ್ದರೆ ವಯಸ್ಸಿಗೆ ಬಂದ ಪ್ರತಿಯೊಬ್ಬನಿಗೆ ಮತದಾನ ಮಾಡುವ ಹಕ್ಕು ಸಿಗಲು ಪ್ರಯತ್ನಿಸಬೇಕು ಅನ್ನುವುದು ಅಷ್ಟೆ ನಿಜ! ಈ ಸಾರ್ವತ್ರಿಕ ಮತದಾನದ ಪ್ರಶ್ನೆ ಬಹಳ ಮಹತ್ವದ್ದಾಗಿದೆ. ಹಾಗೂ ಅದಕ್ಕಾಗಿ ಬಡವರ ಬದುಕು ಸುರಕ್ಷಿತವಾಗಿಡದ ಸ್ವಾತಂತ್ರ್ಯ ಅಪಾಯದ ಸ್ವಾತಂತ್ರ್ಯ ಅನ್ನುವುದು ನನ್ನ ಪ್ರಾಮಾಣಿಕ ಅನಿಸಿಕೆ.

ಇದರ ನಂತರ ಮುಂದಿನ ತಿಂಗಳಲ್ಲಿ ನಾಸಿಕ್‌ನ ಕಾಳಾರಾಮ್ ದೇವಸ್ಥಾನ ಪ್ರವೇಶದ ಸತ್ಯಾಗ್ರಹಕ್ಕೆ ತನುಮನಧನದಿಂದ ಸಹಾಯ ಮಾಡಿ ಎಂದು ವಿನಂತಿಸುತ್ತೇನೆ. ನಾನಿಲ್ಲದಿದ್ದಾಗ ಇಲ್ಲಿಯ ಒಟ್ಟು ಪರಿಸ್ಥಿತಿ ಚಿಂತಾಜನಕವಾಗಿದ್ದರೂ ನನ್ನ ಸಹಚರರು, ಗೆಳೆಯರು, ಅಖಿಲ ಭಾರತೀಯ ಬಹಿಷ್ಕೃತ ಸಮಾಜ ಸೇವಾ ಸಂಘ ಹಾಗೂ ಡಾ.ಅಂಬೇಡ್ಕರ ಸೇವಾ ದಲವು ಜವಾಬ್ದಾರಿ ಹೊತ್ತು ಮಾಡಿದ ಕೆಲಸಗಳ ಬಗ್ಗೆ ನಾನವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಡಾ. ಅಂಬೇಡ್ಕರ್ ಅವರ ಭಾಷಣದ ನಂತರ ಅಧ್ಯಕ್ಷರಾದ ಡಾ. ಸೋಲಂಕಿ ಅವರ ಭಾಷಣವಾಯಿತು. ಅವರು ಡಾ. ಸಾಹೇಬರು ಲಂಡನ್ನಿನಲ್ಲಿ ಆಯೋಜಿಸಲಾಗಿದ್ದ ಪರಿಷತ್ತಿನಲ್ಲಿ ದಲಿತರ ವತಿಯಿಂದ ಎಂತಹ ಜವಾಬ್ದಾರಿಯ ಕೆಲಸ ಮಾಡಿದರು ಅನ್ನುವುದರ ಬಗ್ಗೆ ವಿವರಿಸಿದರು. ದುಂಡು ಮೇಜಿನ ಪರಿಷತ್ತಿಗೆ ಹೋಗಿದ್ದ ಇತರ ಪ್ರತಿನಿಧಿಗಳನ್ನು ಭೇಟಿಯಾದರು, ಅದರಲ್ಲವರು ಡಾ. ಸಾಹೇಬರ ಕೆಲಸದ ಬಗ್ಗೆ ವ್ಯಕ್ತಪಡಿಸಿದ ಧನ್ಯತೆಯ ಹಾಗೂ ಸಮಾಧಾನದ ಮಾತುಗಳನ್ನು ಹೇಳಿ ತೋರಿಸಿದರು. ಮಧ್ಯದಲ್ಲಿ ಗುರುವರ್ಯ ಶ್ರೀ. ಕೃಷ್ಣರಾವ್ ಕೇಳುಸ್ಕರ ಅವರ ಸಣ್ಣ ಭಾಷಣವಾಯಿತು. ತಮ್ಮ ಭಾಷಣದಲ್ಲವರು ತಮ್ಮ ಉಜ್ವಲವಾದ ಕನಸೊಂದು ನನಸಾಯಿತೆಂದರು. ಡಾ. ಅಂಬೇಡ್ಕರ್ ಅನ್ನುವ ತೇಜಸ್ಸು ಯೂರೋಪಿನಲ್ಲಿ ಬೆಳಗಿ ಅಲ್ಲಿಯ ಮುತ್ಸದ್ದಿಗಳನ್ನು ಚಕಿತಗೊಳಿಸಿತು. ಅವರ ಮಹತ್ಕಾರ್ಯ ಕೇವಲ ದಲಿತರ ವತಿಯಿಂದಿರದೆ ಅಖಿಲ ಭಾರತದ ವತಿಯಿಂದಿತ್ತು, ದೇವರು ಅವರಿಗೆ ದೀರ್ಘಾಯುಷ್ಯ ಕೊಡಲಿ' ಅಂದರು.

ಕಡೆಗೆ ಶ್ರೀ ಶಿವತರ್ಕರ್ ಅವರು ಅಧ್ಯಕ್ಷರು, ಸಭೆಗೆ ಹಾಜರಿದ್ದ ಗಣ್ಯರು, ದಲಿತ ಬಂಧು ಭಗಿನಿಯರು ಹಾಗೂ ವಿವಿಧ ಸೇವಾದಳದ ಜನರಿಗೆ ಧನ್ಯವಾದ ಹೇಳಿ ನಾಸಿಕ್ ದೇವಸ್ಥಾನ ಪ್ರವೇಶದ ಫಂಡ್‌ಗಾಗಿ ಮುಸಲ್ಮಾನ ಬಂಧುಗಳ ವತಿಯಿಂದ ಮಿ. ಮನಿಯಾರ್ ಅವರು ೧೦೧ ರೂಪಾಯಿಯ ಕೊಡುಗೆ ಕೊಟ್ಟಿರುವುದನ್ನು ಹೇಳಿದರು. ನಂತರ ಡಾ. ಅಂಬೇಡ್ಕರ್ ಸೇವಾದಲದ ಸರ್ವಾಧಿಕಾರಿ ಶ್ರೀ. ಶಂಕರ್ ವಡವಳಕರ್ ಅವರು ಸ್ಫೂರ್ತಿದಾಯಕ ಭಾಷಣ ಮಾಡಿದ ಮೇಲೆ ಡಾ. ಅಂಬೇಡ್ಕರ್ ಅವರನ್ನು ಬೇರೆ ಬೇರೆ ಸಂಸ್ಥೆಗಳಿಂದ ಹಾರ ಹಾಗೂ ಪುಷ್ಪಗುಚ್ಛಗಳನ್ನರ್ಪಿಸಿ ಜಾಹೀರು ಸನ್ಮಾನ ಮಾಡಿ ಈ ಕಾರ್ಯಕ್ರಮವನ್ನು ಮುಗಿಸಿದರು.

## ೩೯.

# ಘನತೆ ಹಾಗೂ ನಿರ್ಧಾರದಿಂದ ಹೋರಾಡಿದರೆ ಮಾತ್ರ ನಮ್ಮ ಚಳುವಳಿಗೆ ಯಶಸ್ಸು ಸಿಗುತ್ತದೆ

ಜುನ್ನರ ತಾಲೂಕಿನ ನಾರಾಯಣಗಾಂವ್‌ನಲ್ಲಿ ದಿ. ೨೩ ಹಾಗೂ ೨೪ನೆಯ ಮೇ ೧೯೩೧ ರಂದು ಪುಣೆ ಜಿಲ್ಲಾ ಬಹಿಷ್ಕೃತ ಪರಿಷತ್ತಿನ ಮೊದಲ ಅಧಿವೇಶನವನ್ನು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಪರಿಷತ್ತಿಗೆ ಪುಣೆ ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಸುಮಾರು ಐದಾರು ಸಾವಿರ ಜನ ಸೇರಿದ್ದರು. ಮುಂಬಯಿಯಿಂದ ಶ್ರೀ. ಸಿ. ನಾ. ಶಿವತರಕರ್, ಶ್ರೀ. ಲೋಟೆಕರ್, ಶಂಕರರಾವ್, ಶ್ರಾವಣ್, ಭೋಸಲೆ, ಶ್ರೀ. ಅಂಬೇಡಕರ್ ಹಾಗೂ ಗಣಪತಬುವಾ ಮತ್ತಿತರರು, ದಲಿತರ ನೇತಾರರು ಹಾಗೂ ಮುನಶಿಶೇಠ, ದೇವಿದಾಸ್, ಶ್ರೀ. ರಾಮಚಂದ್ರ ಅನಾಜಿ, ಪಾ. ಬುಟ್ಟೆ, ಆನರರಿ ರಿಜಿಸ್ಟ್ರಾರ್ ಹಾಗೂ ಪ್ರೆಸಿಡೆಂಟ್ ತಾಲೂಕು ಲೋ ಬೋರ್ಡ್, ಜುನ್ನರ್, ಶ್ರೀ. ದಶರಥ ಪಾಡುರಂಗ ಬನಕರ್, ಮೆ. ಡಿ. ಲೊ. ಬೋರ್ಡ್, ಪುಣೆ, ಶ್ರೀ. ಗಜಾನನ್ ರಾವಜಿ ಪಾ. ಭುಜಬಳ, ವೈಸ್ ಪ್ರೆಸಿಡೆಂಟ್ ತಾ. ಲೋ. ಬೋರ್ಡ್, ಜುನ್ನರ್, ಶ್ರೀ. ಭೀಮಾಜಿ ಗೇನೂಜಿ, ಪಾ. ಖೇಬಡೆ, ಶ್ರೀ. ಡುಂಬರೆ, ಮೆ. ಪಾಟೆ, ಖೈರೆ, ತಾಂಬೆ, ಶಿಂದೆ, ಮಿಸ್ತ್ರಿ, ಭುಜಬಳ ಮತ್ತಿತರರು, ಸ್ಥಳೀಯರು ಹಾಗೂ ಪುಣೆಯ ಸುಭೇದಾರ ಘಾಡಗೆ, ಘೋರಾತ್, ಗಾಯಕವಾಡ್, ಚೌರೆ, ಚಂದನಶಿವೆ, ಘೋಗರೆ, ಮಧಾಳೆ, ರಣಪಿಸೆ ಮತ್ತಿರರು ಪ್ರಮುಖವಾಗಿ ಹಾಜರಿದ್ದರು. ಇವರಲ್ಲದೆ ಮಾದಿಗ ಹಾಗೂ ಚಮ್ಮಾರ ಸಮಾಜದ ಮುಖ್ಯಜನ ಭಾಗವಹಿಸಿದ್ದರು.

ಮೊದಲಿಗೆ ಸ್ವಾಗತಾಧ್ಯಕ್ಷರಾದ ಶ್ರೀ. ದೇವಜಿ ದಗಡೂಜಿ ಡೋಳಸ್‌ರವರು ತಮ್ಮ ಭಾಷಣದಲ್ಲಿ ಎಲ್ಲರೂ ಪರಿಷತ್ತಿಗೆ ಬಂದದ್ದಕ್ಕಾಗಿ ಧನ್ಯವಾದ ಹೇಳಿದರು. ಪರಿಷತ್ತು ಆಯೋಜಿಸಿರುವ ಊರಿನ ಐತಿಹಾಸಿಕ ಮಹತ್ವವನ್ನು ವಿವರಿಸಿ ಬಹಿಷ್ಕೃತ ಸಮಾಜದ ಸಂಘಟನೆ ದೃಢವಾಗಲು ಮೊದಲು ಜಾತಿಭೇದವನ್ನು ತೊಡೆದುಹಾಕುವ ಪ್ರಯತ್ನ ಹಾಗೂ ತಮ್ಮ ಆರ್ಥಿಕ ಸ್ಥಿತಿ ಸುಧಾರಿಸುವ ಪ್ರಯತ್ನಗಳೆರಡನ್ನು ವಿವೇಚಿಸಿ ತಮ್ಮ ಭಾಷಣ ಮುಗಿಸಿದರು. ಸ್ವಾಗತಾಧ್ಯಕ್ಷರ ಭಾಷಣದ ನಂತರ ಪರಿಷತ್ತಿನ ಜನರಲ್ ಸೆಕ್ರೆಟರಿ ಶ್ರೀ ಶಾಂ. ಅ. ಉಪಶಾಮ್ ಅವರು ಪರಿಷತ್ತಿಗೆ ಬಂದಿರುವ ಶುಭಚಿಂತಕರ ಸಂದೇಶವನ್ನು ಓದಿ ತೋರಿಸಿದರು. ರಾ. ಮಾ. ಶಾ. ಗಾಯಕವಾಡ್ ಹಾಗೂ ರಾ. ಕೋ. ರಾ. ಮಾಸ್ತರ್ ಇವರ ಸೂಚನೆಯ ಮೇರೆಗೆ ಡಾ. ಬಾಬಾಸಾಹೇಬ ಅಂಬೇಡ್ಕರ್ ತಮ್ಮ ಅಧ್ಯಕ್ಷ ಸ್ಥಾನ ಸ್ವೀಕರಿಸಿದರು. ತಮ್ಮ ಭಾಷಣದಲ್ಲವರು,

ಇಂದಿನ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ನೀವು ನನಗೆ ವಹಿಸಿದ್ದೀರಿ ಆದರೆ ಅದನ್ನು ಸ್ವೀಕರಿಸುವಾಗ ನನಗೆ ಬಹಳ ಸಂಕೋಚವಾಗುತ್ತಿತ್ತು. ಇಂದು ಈ ಸಭೆಯಲ್ಲಿ ನಮ್ಮ ಪರಮ ಪೂಜ್ಯ ನೇತಾರರಾದ ರಾ. ಕೊಂಡಾಜಿರಾಮಜಿ ಮಾಸ್ತರರು ಹಾಜರಿದ್ದಾರೆ, ಅವರೊಡನೆ ಕೆಲಸ ಮಾಡುವ ಜನರೂ ಕಾಣುತ್ತಿದ್ದಾರೆ, ಅವರಷ್ಟೇಯಲ್ಲದೆ ಇಂದು ಹಾಜರಿಲ್ಲದ ಆದರೆ ನನ್ನೊಡನೆ ಸಾಕಷ್ಟು ವರ್ಷದಲಿತ ವರ್ಗದಲ್ಲಿ ನಿರ್ಧಾರದಿಂದ

ಚಳುವಳಿಯ ಕೆಲಸ ಮಾಡಿರುವ ಜನ ಕೂಡ ಈ ಜಿಲ್ಲೆಯಲ್ಲಿದ್ದಾರೆ. ನನಗಿನ್ನೂ ನೆನಪಿದೆ, ನಾನು ಮರಾಠಿಯ ನಾಲ್ಕನೆಯ ತರಗತಿಯಲ್ಲಿದ್ದೆ. ಆಗ ಪುಣೆಯಲ್ಲಿ ಶ್ರೀ. ಶಿವರಾಮ್ ಜಾನಬಾ ಕಾಂಬಳೆ, ಥೋರಾತ್, ರಾಮಚಂದ್ರರಾವ್ ಕದಮ್ ಮುಂತಾದ ಜನ ದಲಿತರಿಗೆ ಸಂಬಂಧಿಸಿದ ಕೆಲಸ ಮಾಡುತ್ತಿದ್ದಾರೆ ಎಂದು ನನ್ನ ತಂದೆ ಹೇಳುತ್ತಿದ್ದರು. ಅವರಲ್ಲಿ ಶ್ರೀ. ಥೋರಾತ್ ಇಂದು ಇಲ್ಲಿ ಹಾಜರಿದ್ದಾರೆ. ಶ್ರೀ ಕಾಂಬಳೆ ಹಾಗೂ ಕದಮ್ ಅವರಿಗೆ ಇಂದು ಹಾಜರಿರಲು ಸಾಧ್ಯವಾಗಲಿಲ್ಲ. ಇಂತಹ ಹಳೆಯ ಹಾಗೂ ವಯಸ್ಸಾದ ನೇತಾರರಿರುವಾಗ ಇಂದಿನ ಅಧ್ಯಕ್ಷ ಸ್ಥಾನವನ್ನು ಕೇವಲ ನಿಮಗಾಗಿ ನಾನು ಸ್ವೀಕರಿಸಿದೆ. ಇರಲಿ, ಈಗ ಇಂದಿನ ಪರಿಸ್ಥಿಯಲ್ಲಿ ನಾವೇನು ಮಾಡಬೇಕಿದೆ ಅನ್ನುವುದರ ಬಗ್ಗೆ ಮೊದಲು ಯೋಚಿಸೋಣ. ನಾವು ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟರೂ ನಾವೂ ಮನುಷ್ಯರೆ. ಇತರ ಸಮಾಜದಲ್ಲಿರುವ ಜನರಂತೆ ನಾವೂ ಸಮಾನತೆಯಿಂದ ಬದುಕುವಂತಾಗಬೇಕು. ನಾವೂ ಸನ್ಮಾನಕ್ಕೆ ಪಾತ್ರರಾಗಿದ್ದರೂ ಉಳಿದ ಜನರೆಲ್ಲ ನಮ್ಮ ಅಜ್ಞಾನದ ಲಾಭ ಪಡೆದು ನಮ್ಮನ್ನು ಬಹಿಷ್ಕೃತರನ್ನಾಗಿ ಘೋಷಿಸಿದ್ದಾರೆ. ಈ ದೇಶವನ್ನು ವಶಪಡಿಸಿಕೊಳ್ಳಲು ಬ್ರಿಟಿಷರಿಗೆ ಸಹಾಯ ಮಾಡಿದ ವೀರರಲ್ಲಿ ಸಾಕಷ್ಟು ಜನ ದಲಿತರಿದ್ದರು. ಮಾಂಗ್ ಸೈನಿಕರ ಬಲದ ಮೇಲೆ ಬ್ರಿಟಿಷರು ಭಾರತದಲ್ಲಿ ತಮ್ಮ ಸ್ಥಾನ ದೃಢಪಡಿಸಿದರು. ಅದರ ಬದಲಿಗೆ ವಿಜಯ ಚಿಹ್ನೆಯ ದ್ಯೋತಕವಾಗಿ ಬ್ರಿಟಿಷರು ಕೋರೆಗಾಂವ್ ವಿಜಯಸ್ಥಂಭವನ್ನು ಸ್ಥಾಪಿಸಿ ನಮ್ಮ ಸಮಾಜದ ವೀರ ಪುರುಷರ ಸ್ಮೃತಿಯನ್ನು ಜೋಪಾನ ಮಾಡಿದ್ದಾರೆ. ಆ ಕಾಲದಲ್ಲಿ ನಮಗಿದ್ದ ಸ್ಥಾನಮಾನ ಈಗ ಕಣ್ಣಿಗೂಕಾಣುತ್ತಿಲ್ಲ. ಮಾಂಗ್‌ರ ಪರಾಕ್ರಮದಿಂದ ಬ್ರಿಟಿಷರಿಗೆ ಈ ದೇಶ ಸಿಗುವಂತಾಯಿತು. ಆದರೆ ದೇಶದಲ್ಲಿರುವ ಇತರ ಮೇಲ್ಜಾತಿ ಜನರನ್ನು ಸಂತೋಷಪಡಿಸಲು ಹಾಗೂ ಮಾಂಗ್‌ರಾದಿ ದಲಿತ ಸಮಾಜದ ಜನರಿಗೆ ಬೇರೆ ಯಾರೂ ಕೈವಾರಿಗಳಿಲ್ಲದ ಕಾರಣ ಬ್ರಿಟಿಷ್ ಸರ್ಕಾರ ಸೈನ್ಯದಲ್ಲಿರುವ ವರಿಷ್ಠ ಹಾಗೂ ಇತರ ಜಾಗಗಳನ್ನು ಮಾಂಗ್‌ರಿಗೆ ಕೊಡುವುದನ್ನು ನಿಲ್ಲಿಸಿತು. ಇಂದು ಮಾಂಗ್ ಅಧಿಕಾರಿ ಕೈ ಕೆಳಗೆ ಕೆಲಸ ಮಾಡುವುದು ಕಡಿಮೆತನ ಎಂದು ತಿಳಿಯುವ ಮೇಲ್ಜಾತಿಯ ಜನರಿಗೆ ಮುಸಲ್ಮಾನ ಅಧಿಕಾರಿಯ ಕೈಕೆಳಗೆ ಕೆಲಸ ಮಾಡಲು ಏನೂ ಅನಿಸುವುದಿಲ್ಲ. ಇದೇ ವಿಷಯ ಪೊಲೀಸ್ ಖಾತೆಗೂ ಸಂಬಂಧಿಸುತ್ತದೆ. ಆದರೆ ಕಳೆದ ನಾಲ್ಕೈದು ವರ್ಷಗಳ ನಮ್ಮ ಸ್ವಾವಲಂಬನೆ ಚಳುವಳಿಯಿಂದ ಪರಿಸ್ಥಿತಿ ಈಗ ಸ್ವಲ್ಪ ಬದಲಾಗುತ್ತಿದೆ. ಪೊಲೀಸ್ ಖಾತೆಯಲ್ಲಿ ನಮ್ಮ ಸಮಾಜ ಬಾಂಧವರಿಗೆ ಸಾಕಷ್ಟು ಸವಲತ್ತುಗಳು ಸಿಗುತ್ತಿರುವ ನಾಡಿದ್ದು ಬರಲಿರುವ ಸರ್ಕಾರಿ ಪತ್ರದಿಂದ ನಿಮಗೆ ತಿಳಿಯಲಿದೆ. ನಮಗೆ ಇತರ ಸಮಾಜದಲ್ಲಿ ದೊಡ್ಡ ಸ್ಥಾನ ಪಡೆಯಲಿಕ್ಕಿಲ್ಲ, ನಮಗೆ ಕೇವಲ ಮನುಷ್ಯತ್ವ ಪಡೆಯುವುದಿದೆ ಅನ್ನುವುದನ್ನು ಮಾತ್ರ ನೆನಪಿಡಿ. ನಮ್ಮ ಆರ್ಥಿಕ ಪರಿಸ್ಥಿಯನ್ನು ಗಮನಿಸಿದರೆ ಭಾರತದ ಇತರ ಬಡವರು ಅನಿಸಿಕೊಳ್ಳುವ ಜನರಿಗಿಂತ ನಾವು ಬಡವರಿದ್ದೇವೆ. ನಮಗೆ ಬಡತನ ಯಾಕೆ ಬಂತು ಅನ್ನುವುದರ ಬಗ್ಗೆ ಯೋಚಿಸಿದಾಗ ಈ ಅಸ್ಪೃಶ್ಯತೆಯ ರೂಢಿಯೇ ನಮ್ಮ ದುಃಖಕ್ಕೆ ಕಾರಣ ಅನ್ನುವುದು ಕಂಡುಬರುತ್ತದೆ. ಇದಕ್ಕಾಗಿ ನಾವು ಮನುಷ್ಯತ್ವ ಪಡೆಯಲು ಉಪಯೋಗವಾಗಬಹುದಾದಂತಹ ಪ್ರತಿಯೊಂದುದಾರಿಯನ್ನು ನಾವು ಸಂಘಟನೆಯ ಬಲದ ಮೇಲೆ ಹಾಗೂ ನಿರ್ಭೀತಿಯಿಂದ ಉಪಯೋಗಿಸಿಕೊಳ್ಳಬೇಕಿದೆ. ನಾಸಿಕ್, ಪುಣೆಗಳಲ್ಲಿ ಸತ್ಯಾಗ್ರಹದ ಶಸ್ತ್ರವನ್ನುಪಯೋಗಿಸಿ ನಿಮ್ಮ ಹೋರಾಟವನ್ನು ಯಶಸ್ವಿಯಾಗಿಸುವ ಧೈರ್ಯ ಹೊಂದಿರಿ. ಹಾಗೂ ಇಂತಹಘನತೆ ಹಾಗೂ ನಿರ್ಧಾರದಿಂದ ಎಲ್ಲರೂ ಹೋರಾಡಿದರೆ ಮಾತ್ರ ನಮ್ಮ ಚಳುವಳಿಗೆ ಯಶಸ್ಸು ಸಿಗಲು ಹೆಚ್ಚು ಸಮಯ ಬೇಕಾಗಲಿಕ್ಕಿಲ್ಲ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸ್ಫೂರ್ತಿದಾಯಕವಾದ ಭಾಷಣದ ನಂತರ ಪರಿಷತ್ತಿನಲ್ಲಿ ಸ್ಥಳೀಯ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಠರಾವುಗಳು ಪಾಸ್ ಆದವು. ಲಂಡನ್ನಿನಲ್ಲಿ

ಆಯೋಜಿಸಲಾಗಿದ್ದ ಮೊದಲ ದುಂಡು ಮೇಜಿನ ಪರಿಷತ್ತಿನಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ರಾ. ಬ. ಶ್ರೀನಿವಾಸನ್ ಅವರು ದಲಿತರಿಗಾಗಿ ಮಾಡಿದ ಮಹಾನ್ ಕಾರ್ಯಕ್ಕಾಗಿ ಅವರನ್ನು ಅಭಿನಂದಿಸಲಾಯಿತು. ಬೇರೆ ಬೇರೆ ಠರಾವುಗಳ ಮೇಲೆ ಶ್ರೀ. ಶಿವತರಕರ್, ಹರಿಭಾವು ರೋಕಡೇ, ಗಾಯಕವಾಡ್, ಕಾಂಬಳೆ, ದಾರೂಳೆ, ಓಝುರಕರ್, ಝುಲಪಗಾರ್, ಕಾಳೊಖೆ, ವಿಠಲ್ ಉಪಶಾಮ್, ಘೋಗರೆ, ಮಧಾಳೆ, ರಣಪಿಸೆ, ಥೋರಾತ್, ಶಿಶುಪಾಳ್, ಆಮೋಡೀಕರ್, ಧೋತ್ರೆ, ರೋಸರ್, ಚೌರೆ, ಚಂದನಶಿವೆ, ಗಾಯಕವಾಡ್, ಆಡರೆಕರ್ ಇವರುಗಳು ಭಾಷಣ ಮಾಡಿದರು.

## ೪೦.

# ದಲಿತರಲ್ಲಿ ಜಗಳ ಹಚ್ಚುವ ಹಿತಶತ್ರುಗಳ ಆಟವನ್ನು ಗುರುತಿಸಿ

ಮೇ ೨೯ ೧೯೩೧ರಂದು ಡಿಲಾಯಿಟ್‌ರೋಡ್ ಮುಂಬಯಿಯಲ್ಲಿ ಡಾ. ಬಾಬಾಸಾಹೇಬ್ ಅಂಬೇಡಕರ್ ಅವರ ಅಧ್ಯಕ್ಷತೆಯಲ್ಲಿ ದಲಿತರ ಜಾಹೀರು ಸಭೆಯೊಂದು ಸೇರಿತ್ತು. ಸುಮಾರು ಐದರಿಂದ ಆರು ಸಾವಿರಜನ ಸಭೆಗೆ ಸೇರಿದ್ದರು. ಬೇರೆ ಬೇರೆ ಸ್ವಯಂಸೇವಕರ ದಳಗಳು ಒಳ್ಳೆಯ ರೀತಿಯಲ್ಲಿ ಸಭೆಯ ಬಂದೋಬಸ್ತು ಮಾಡಿ ಶಿಸ್ತು ಕಾಪಾಡಿಕೊಂಡಿದ್ದರು. ಸುಮಾರು ಒಂದು ಘಂಟೆಯ ತನಕ ಡಾ. ಅಂಬೇಡ್ಕರ್ ಅವರು ಮಾತನಾಡುತ್ತಿದ್ದರು. ತಮ್ಮ ಭಾಷಣದಲ್ಲವರು,

ಇಂದಿನ ಸಭೆಯಲ್ಲಿ ಯಾವುದೇ ವಿಶೇಷ ಕಾರ್ಯ ಕ್ರಮವಿಲ್ಲವಾದ್ದರಿಂದ ಹಾಗೂ ಸಭೆ ಸೇರುವ ಯಾವುದೇ ಕಾರಣವಿಲ್ಲದಿರುವುದರಿಂದ ನಾನು ಈ ಸಭೆಗೆ ಬರಬಾರದು ಅಂದುಕೊಂಡಿದ್ದೆ ಆದರೆ ಸಭೆಯನ್ನು ಉತ್ಸಾಹದಿಂದ ಆಯೋಜಿಸಿದ ಜನ ನನ್ನನ್ನು ಬಿಡಲೇಯಿಲ್ಲ, ಹಾಗಾಗಿ ಬರಲೇಬೇಕಾಯಿತು. ಇವತ್ತು ಯಾವುದೇ ವಿಶೇಷ ಕಾರ್ಯಕ್ರಮವಿರದಿದ್ದರೂ ಇಷ್ಟೊಂದು ಜನ ಸೇರಬಹುದು ಅಂದುಕೊಂಡಿರಲಿಲ್ಲ. ನಾನಿಂದು ಬರದೇ ಇದ್ದಿದ್ದರೆ ಇಷ್ಟೊಂದು ಜನರಿಗೆ ಬೇಸರವಾಗುತ್ತಿತ್ತು. ನಮ್ಮ ಜನ ಎಷ್ಟು ಜಾಗರೂಕರಾಗಿದ್ದಾರೆ ಅನ್ನುವುದು ಗೊತ್ತಾಗಲು ಇಂತಹ ಸಭೆಗಳು ಸಹಾಯ ಮಾಡುತ್ತವೆ. ಸಭೆಯ ವಿಷಯವೂ ನಿರ್ಧಾರವಾಗಿರಲಿಲ್ಲವಾದ್ದರಿಂದ ನಾನೇನು ಮಾತಾಡಬೇಕು ಅನ್ನುವ ಯೊಚನೆಯಲ್ಲಿದ್ದೆ ಆದರೆ ನೇತಾರರ ಒಗ್ಗಟ್ಟಿಗೆ ಸಂಬಂಧಿಸಿದಂತೆ ಈ ಸಭೆ ತಂದಿರುವ ಮಸೂದೆಗಳ ಬಗ್ಗೆ ಹಾಗೂ ಅದರ ಬಗ್ಗೆ ಇಂದಿನವರೆಗೆ ವಿವಿಧ ನೇತಾರರು ಮಾಡಿರುವ ಭಾಷಣಗಳನ್ನು ಗಮನದಲ್ಲಿಟ್ಟು ನಾನಿಂದು ಯಾವ ವಿಷಯದ ಬಗ್ಗೆ ಮಾತಾಡಿದರೆ ಸಮಯೋಚಿತವಾಗಬಹುದು ಅನ್ನುವುದು ನನಗೆ ಅರ್ಥವಾಯಿತು ಹಾಗೂ ವಿಷಯ ಕೂಡ ಸಿಕ್ಕಿತು. ನಮ್ಮ ದಲಿತ ಸಮಾಜದ ನನ್ನ ಟೀಕಾಕಾರ ಟೀಕೆಗೆ ಎಲ್ಲರೆದುರು ಉತ್ತರ ಕೊಡುವುದೆಂದು ನಿರ್ಧರಿಸಿದ್ದೇನೆ. ಇತರ ಜಾತಿಯ ಹಾಗೂ ಪತ್ರಕರ್ತರ ಟೀಕೆಯನ್ನಿಲ್ಲಿ ನಾನು ಉಲ್ಲೇಖಿಸುತ್ತಿಲ್ಲ. ಅವರ ಟೀಕೆಯ ಸ್ವರೂಪ, ಕಾರಣ ಹಾಗೂ ಉದ್ದೇಶ ನಮ್ಮಲ್ಲಿ ಸಾಕಷ್ಟು ಜನರಿಗೆ ಗೊತ್ತಿದೆ. ಅವರ ಆಕ್ಷೇಪಣೆಗಳಿಗೆ, ಟೀಕೆಗಳಿಗೆ ನಾನು ಆಗಾಗ ಉತ್ತರಕೊಡುತ್ತ ಬಂದಿದ್ದೇನೆ. ಅಗತ್ಯವಿದ್ದರೆ ಇನ್ನು ಮುಂದೆಯೂ ಕೊಡುತ್ತೇನೆ. ಇಂದು ಕೇವಲ ಕೆಲವು ದಲಿತರಿಂದಾಗುತ್ತಿರುವ ಆರೋಪಗಳು ಹಾಗೂ ಅವರಿಗೆ ನನ್ನ ಬಗ್ಗೆಯಿರುವ ಆಕ್ಷೇಪಣೆಗಳು ಎಷ್ಟು ಸುಳ್ಳು ಹಾಗೂ ನಿರಾಧಾರವಾಗಿದೆ ಅನ್ನುವುದನ್ನು ನಿಮಗೆ ಹೇಳಬೇಕಿದೆ. ದಲಿತರು ನನ್ನ ಬಗ್ಗೆ ಎರಡು ಭಿನ್ನರೀತಿಯ ಟೀಕೆಗಳನ್ನು ಮಾಡುತ್ತಾರೆ. ಚಮ್ಮಾರರಾದಿ ದಲಿತರು ಡಾ. ಅಂಬೇಡ್ಕರ್ ಮಾಂಗ್‌ರಾಗಿರುವುದರಿಂದ ದಲಿತರಿಗೆ ಸಿಗುವ ಸವಲತ್ತು ಹಾಗೂ ಲಾಭಗಳನ್ನು ಮಾಂಗ್‌ರಲ್ಲಿ ಹಂಚಲು ಹವಣಿಸುತ್ತಿರುತ್ತಾರೆ, ಚಮ್ಮಾರರಿಗೆ ಅದರಲ್ಲಿಯ ಸ್ವಲ್ಪ ಪಾಲೂ ಸಿಗುವುದಿಲ್ಲ ಅನ್ನುವುದು ಅವರ ಅಂಬೋಣ. ಈ ಆರೋಪ ಎಷ್ಟು ಸುಳ್ಳು ಹಾಗೂ ನಿರಾಧಾರವಾಗಿದೆಯೆಂದರೆ ಇದರತ್ತ ಗಮನ ಹರಿಸುವುದೂ ನನಗೆ ಅಗತ್ಯವೆನಿಸಲಿಲ್ಲ. ನನ್ನೊಂದಿಗೆ ಮತಭೇದಗಳಿರುವ ಜನ ಬೇರೆ ಜಾತಿಯಲ್ಲಿರುವಂತೆ ಚಮ್ಮಾರರಲ್ಲೂ ಇದ್ದಾರೆ ಅನ್ನುವುದು ನನಗೆ ಗೊತ್ತು. ಆದರೆ ಯಾವುದೇ ಪ್ರಾಮಾಣಿಕ ಹಾಗೂ ಜವಾಬ್ದಾರಿಯುಳ್ಳ

ಚಮ್ಮಾರನು ಇಂತಹ ನೀಚ ಹಾಗೂ ಸುಳ್ಳು ಆರೋಪಕ್ಕೆ ಬೆಂಬಲಿಸಬಹುದು ಇಲ್ಲವೆ ಸಮ್ಮತಿಸಬಹುದೆಂದು ನಾನು ಕನಸು ಮನಸಿನಲ್ಲೂ ನೆನಸಿರಲಿಲ್ಲ. ಆದರೆ ರಾಷ್ಟ್ರೀಯ ಪತ್ರಿಕೆಯಲ್ಲಿ ಚಮ್ಮಾರರ ಸಭೆಯ ರಸಭರಿತ ಹಾಳೆಗಳನ್ನು ಓದಿದಾಗ ಚಮ್ಮಾರಂತಹ ಒಳ್ಳೆಯ ಜಾತಿ ಅನಿಸಿಕೊಂಡ ಸಮಾಜದ ನಾಯಕರಿಂದ ಇಂತಹ ನೀಚ ಆರೋಪ ಬಂದಿರುವುದು ಗೊತ್ತಾಯಿತು. ರಾಷ್ಟ್ರೀಯ ಪತ್ರಿಕೆಯ ಈ ಸುದ್ದಿ ನಿಜವಾಗಿದ್ದಲ್ಲಿ ಚಮ್ಮಾರರ ಬಗ್ಗೆ ನನಗೆ ನಿಜವಾಗಿಯೂ ದುಃಖವಾಗುತ್ತದೆ. ನನ್ನ ಮೇಲೆ ಇಂತಹ ಸುಳ್ಳು ಹಾಗೂ ನಿರಾಧಾರವಾದ ಆರೋಪ ಹೊರಿಸಿ ತಮ್ಮ ಅಧಃಪತನವನ್ನವರು ಮಾಡಿಕೊಳ್ಳಬಾರದಿತ್ತು. ನನ್ನನ್ನವರು ಆರೋಪಿಸಲೇ ಬೇಕೆಂದಿದ್ದರೆ ಬೇರೆ ವಿಷಯವೊಂದನ್ನೋ ಇಲ್ಲ ಬೇರೆ ಕಾರಣವನ್ನೋ ಹುಡುಕಬೇಕಿತ್ತು. ಆದರೆ ಸವಲತ್ತಿನ ಎಲ್ಲ ಲಾಭಗಳನ್ನು ನಾನು ಕೇವಲ ಮಾಂಗ್‌ರಿಗೇ ಕೊಡುತ್ತೇನೆ ಹಾಗೂ ಚಮ್ಮಾರರ ಮುಖಕ್ಕೆ ಸುಣ್ಣ ಬಳಿಯುತ್ತೇನೆ ಅನ್ನುವ ಆರೋಪ ಸುಳ್ಳು. ಇದು ಸುಳ್ಳೆನ್ನುವುದನ್ನು ನಾನು ಸಾಬೀತುಪಡಿಸಬಲ್ಲೆ.

ಠಾಣೆ, ಪುಣೆ, ಸೋಲಾಪುರ್, ಸಾತಾರಾನಂತಹ ನನಗೆ ಬಹಳ ಹತ್ತಿರದಿಂದ ಪರಿಚಯವಿರುವ ಹಾಗೂ ಒಳ್ಳೆಯ ಸಂಬಂಧವಿರುವ ಜಿಲ್ಲೆಗಳನ್ನು ತೆಗೆದುಕೊಂಡರೆ ಅಲ್ಲಿಯ ಮುನಿಸಿಪಾಲ್ಟಿ, ಲೋಕಲ್ ಬೋರ್ಡ್‌ನಂತಹ ಸ್ಥಳೀಯ ಸಂಸ್ಥೆಗಳಿಂದ ದಲಿತರ ವತಿಯಿಂದ ಹೋಗುವ ಪ್ರತಿನಿಧಿಗಳ ಜಾತಿಗಳನ್ನು ನೋಡಿಯೂ ನಾನು ಮಾಂಗ್‌ರಿಗೇ ಎಲ್ಲ ಲಾಭಗಳನ್ನು ಕೊಡುತ್ತೇನೆ ಅನ್ನುವ ಆರೋಪ ಸುಳ್ಳು ಹಾಗೂ ದುಷ್ಟತನದಿಂದ ಮಾಡಿರುವಂತಹದ್ದು ಅನ್ನುವುದರ ಬಗ್ಗೆ ಖಾತ್ರಿಯಾದೀತು. ಠಾಣೆ ಜಿಲ್ಲೆಯಲ್ಲಿ ಉಳಿದ ಜಿಲ್ಲೆಗಳಲ್ಲಿರುವಂತೆ ಮಾಂಗ್‌ರ ಸಂಖ್ಯೆ ಹೆಚ್ಚಿದೆ. ಆದರೆ ಅವರಲ್ಲಿ ಯೋಗ್ಯ ಜನರಿದ್ದರೂ ಠಾಣೆ ಮುನಿಸಿಪಾಲ್ಟೀ, ಲೋಕಲ್ ಬೋರ್ಡ್, ಸ್ಕೂಲ್ ಬೋರ್ಡ್‌ಗಳಲ್ಲಿ ಒಬ್ಬನೂ ಮಾಂಗ್ ಪ್ರತಿನಿಧಿಯಿಲ್ಲ. ಎಲ್ಲ ಪ್ರತಿನಿಧಿಗಳು ಚಮ್ಮಾರ ಜಾತಿಯವರಾಗಿದ್ದಾರೆ. ಸೋಲಾಪೂರ ಜಿಲ್ಲೆಯಲ್ಲೂ ಇದೇ ಪರಿಸ್ಥಿತಿಯಿದೆ. ಅಲ್ಲಿಯ ಮುನಿಸಿಪಾಲ್ಟಿ ಶಾಲೆ ಬೋರ್ಡಿನಲ್ಲಿ ಹಾಗೂ ಮುನಿಸಿಪಾಲ್ಟಿಯಲ್ಲಿ ಚಮ್ಮಾರರು ಹಾಗೂ ಚರ್ಮಕಾರರ ಪ್ರತಿನಿಧಿಗಳಿದ್ದಾರೆ. ಮಾಂಗ್‌ರ ಒಬ್ಬ ಪ್ರತಿನಿಧಿಯೂ ಇಲ್ಲ. ಉಳಿದ ಜಾತಿಗಳಿಗಿಂತ ಮಾಂಗ್‌ರ ಸಂಖ್ಯೆ ಹೆಚ್ಚಿದೆ ಹಾಗೂ ಇವರಲ್ಲೇ ಹೆಚ್ಚು ಜಾಗೃತಿಯಾಗಿದೆ. ಪುಣೆ ಮುನಿಸಿಪಾಲ್ಟಿಯಲ್ಲೂ ಇಬ್ಬರು ಚಮ್ಮಾರ ಪ್ರತಿನಿಧಿಗಳಿದ್ದಾರೆ, ಸಾತಾರಾ ಡಿಸ್ಟ್ರಿಕ್ಟ್ ಬೋರ್ಡಿನಲ್ಲೂ ಮಾಂಗ್‌ರ ಒಬ್ಬ ಪ್ರತಿನಿಧಿಯೂ ಇಲ್ಲ. ಧಾರವಾಡ ವಿಜಾಪುರನಂತಹ ಕನ್ನಡ ರಾಜ್ಯದಲ್ಲೂ ಇದೇ ಪರಿಸ್ಥಿತಿಯಿದೆ. ಇದರಂತೆ ಸ್ಥಳೀಯ ದಲಿತರ ಪ್ರತಿನಿಧಿಗಳೆಂದು ಮಾಂಗ್‌ರೇ ತುಂಬಿದ್ದಾರೆ ಅನ್ನುವ ಆರೋಪ ಸುಳ್ಳು ಹಾಗೂ ಆಧಾರವಿಲ್ಲದ್ದು. ಪೊಲೀಸ್ ಖಾತೆಯು ಅಸ್ಪೃಶ್ಯರಿಗಾಗಿ ಮುಚ್ಚಿಹೋಗಿತ್ತು ಕೌನ್ಸಿಲ್‌ಗೆ ಹೋದಾಗ ನಾನು ಮತ್ತು ನನ್ನ ಗೆಳೆಯರಾದ ಡಾ. ಸೋಳಂಕಿಯವರು ಈ ಪ್ರಶ್ನೆಗೆ ಚಾಲನೆ ಕೊಟ್ಟು ಈ ಖಾತೆ ದಲಿತರಿಗಾಗಿಯೂ ಯೂತೆರೆಯುವಂತೆ ಪ್ರಯತ್ನಿಸಿದೆವು. ಇತ್ತೀಚೆಗೆ ನಮ್ಮ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿ ಪೊಲೀಸ್ ಖಾತೆ ದಲಿತರಿಗೂ ತೆರೆಯಲ್ಪಟ್ಟಿದೆ ಅನ್ನುವಂತಹ ಸರ್ಕಾರಿ ಜಾಹೀರು ಮಸೂದೆ ಇತ್ತೀಚೆಗಷ್ಟೇ ಪ್ರಕಟಗೊಂಡಿದೆ. ಅದರಂತೆ ಮೇಲ್ದರ್ಜೆಯ ಪೊಲೀಸ್ ಅಧಿಕಾರಿಯ ಜಾಗಕ್ಕೆ ಮೊದಲ ನೇಮಕಾತಿ ಆಗಿರುವವನು ಚಮ್ಮಾರ ಅಭ್ಯರ್ಥಿಯಾಗಿದ್ದಾನೆ. ಆ ಜಾಗಕ್ಕೆ ನಾನು ಮಾಂಗ್ ಅಭ್ಯರ್ಥಿಯನ್ನು ಸೇರಿಸಬಹುದಿತ್ತು ಆದರೆ ನಾನು ಹಾಗೆ ಮಾಡಲಿಲ್ಲ. ದಲಿತರಲ್ಲಿ ಮಾಂಗ್‌ರದ್ದು ಬಹುಸಂಖ್ಯಾಕ ಜಾತಿಯಾಗಿದೆ, ಚಮ್ಮಾರರಂತಹ ಅಲ್ಪಸಂಖ್ಯಾಕ ಜಾತಿಯ ನಂಬಿಕೆ ಸಂಪಾದಿಸುವುದು ನನ್ನ ಕರ್ತವ್ಯವಾಗಿದೆಯೆಂದು ನಾನಂದುಕೊಳ್ಳುತ್ತೇನೆ ಹಾಗಾಗಿ ಕೆಲವೊಮ್ಮೆ ಮಾಂಗ್‌ರರೋಷಕಟ್ಟಿಕೊಂಡು ಸಿಗುವ ಸವಲತ್ತಿನದೊಡ್ಡ ಭಾಗವನ್ನು ನಾನು ಚಮ್ಮಾರರಾದಿ ದಲಿತರ ಅಲ್ಪಸಂಖ್ಯಾತ ಜಾತಿಗಳಿಗೆ ಸಿಗುವಂತೆ ನೋಡಿಕೊಳ್ಳುತ್ತೇನೆ. ಈ ವಿಷಯದಲ್ಲಿ ನಾನು ಮಾಂಗ್‌ರ ಕಣ್ಣಿಗೆ

ಸುಣ್ಣ ಚಮ್ಮಾರರ ಕಣ್ಣಿಗೆ ಬಣ್ಣ ಹಚ್ಚುತ್ತೇನೆ ಎಂದು ಹೇಳಿ ನನ್ನ ಮೇಲೆ ಟೀಕೆ ಮಾಡುವವರು ನನ್ನ ಮೇಲೆ ಬೇಸರಿಸಿಕೊಳುವ ಅನೇಕ ಮಾಂಗ್‌ರಿದ್ದಾರೆ ಅನ್ನುವುದನ್ನು ನಾನು ಬಲ್ಲೆ. ಇದೊಂದೇ ದೊಡ್ಡ ಆಕ್ಷೇಪಣೆಯನ್ನವರು ನನ್ನ ಮೇಲೆ ಹೊರಿಸಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಸವಲತ್ತಿನ ಎಲ್ಲ ಕೆನೆಯನ್ನು ಮಾಂಗ್‌ರಿಗೇ ತಿನ್ನಿಸುತ್ತೇನೆ. ಚಮ್ಮಾರರಾದಿ ಅಲ್ಪಸಂಖ್ಯಾಕರಿಗೆ ಏನೂ ಕೊಡುವುದಿಲ್ಲ ಅನ್ನುವ ಆರೋಪ ನೀಚತನದ್ದು ಹಾಗೂ ನಿರಾಧಾರವಾದದ್ದು. ಚಮ್ಮಾರರಲ್ಲಿರುವ ಜವಾಬ್ದಾರಿಯುತ ನೇತಾರರು ಇಂತಹ ಆರೋಪ ಹೊರಿಸಿರುವುದರಿಂದ ಮಾಂಗ್ ಜಾತಿಯ ಅನೇಕರು ಸಿಟ್ಟಿಗೆದ್ದಿದ್ದಾರೆ. ಸಿಟ್ಟಿಗೆದ್ದಿರುವ ಜನರಿಗೆ 'ದಯವಿಟ್ಟು ನಿಮ್ಮ ಸಿಟ್ಟನ್ನು ಶಾಂತವಾಗಿಸಿ' ಎಂದು ಕೇಳಿಕೊಳ್ಳುತ್ತೇನೆ. ಮಾಂಗ್ ಬಹುಸಂಖ್ಯಾತರಾಗಿದ್ದಾರೆ. ಯಾರೇನೇ ಅಂದರೂ ಅವರ ಕರ್ತವ್ಯ ನಿಚ್ಚಳವಾಗಿದೆ. ಇತರ ಅಲ್ಪಸಂಖ್ಯಾತರ ಸಮಾಧಾನವಾಗುವಂತೆ ನಮ್ಮ ವರ್ತನೆಯಿರಬೇಕು. ಸುಮ್ಮನೆ ದೋಷಾರೋಪಣೆ ಮಾಡುವ ಜನರಿಗೆ ಇದೇ ವರ್ತನೆಯ ಹಾದಿ ಹಿಡಿದು ನಾವು ಸಮರ್ಪಕವಾದ ಉತ್ತರ ಕೊಡಬಹುದು. ದಲಿತರಲ್ಲಿ ಜಗಳ ಹಚ್ಚಿಟ್ಟು ಮಾಂಗ್‌ರ ವಿರುದ್ಧ ಚಮ್ಮಾರರನ್ನು ಎತ್ತಿಕಟ್ಟಿ ನಾವು ಕೈಗೊಂಡಿರುವ ಕಾರ್ಯವನ್ನು ನಾಶಗೊಳಿಸಿ ಬೆಟ್ಟು ತೋರಿಸಿ ನಮ್ಮನ್ನು ನಗೆಗೀಡು ಮಾಡುವುದೇ ನಮ್ಮ ಹಿತಶತೃಗಳ ಕೆಲಸ. ಅದನ್ನು ನಾವು ಮೆಟ್ಟಿ ನಿಲ್ಲಬೇಕಿದೆ. ಬಹುಸಂಖ್ಯಾಕ ಸಮಾಜಕ್ಕೆ ಸಂಬಂಧಿಸಿರುವುದರಿಂದ ಮಾಂಗ್‌ರ ಮೇಲೆ ಈ ಜವಾಬ್ದಾರಿ ಹೆಚ್ಚಿದೆ ಹಾಗೇ ಈ ಜವಾಬ್ದಾರಿಯನ್ನವರು ವಹಿಸಿಕೊಳ್ಳಲೇ ಬೇಕು ಅನ್ನುವುದನ್ನು ನಾನವರಿಗೆ ಮತ್ತೆ ಮತ್ತೆ ಹೇಳುತ್ತಲೇ ಬಂದಿದ್ದೇನೆ. 'ಚಮ್ಮಾರರ ಈ ಆರೋಪಗಳಿಗೆ ನೀವು ಹಾಗೆಯೇ ಉತ್ತರ ಕೊಡಬಲ್ಲಿರಿ ಹಾಗೂ ಅವರು ನಿಮ್ಮೊಡನೆ ವರ್ತಿಸುವಂತೆ ನೀವೂ ಅವರೊಡನೆ ವರ್ತಿಸಬಹುದು, ಆದರೆ ಇದೆಲ್ಲದರಲ್ಲಿ ನಮ್ಮ ಚಳುವಳಿಗೆ ಯಾವುದೇ ಲಾಭವಿಲ್ಲ. ಔದಾರ್ಯ ಹಾಗೂ ಕ್ಷಮಾಶೀಲತೆಯ ಬೆನ್ನು ನಾವು ಹತ್ತಬೇಕಿದೆ. ಈ ವರ್ತನೆಯೇ ನಮ್ಮ ಕಾರ್ಯಕ್ಕೆ ಹಾಗೂ ಉದ್ದೇಶಕ್ಕೆ ಮೆರಗು ಕೊಡಲಿದೆ.

ಮಾಂಗ್ ಜಾತಿಯ ಕೆಲವು ಜನರು ನಾನು ಕೇವಲ ಸತ್ಯಾಗ್ರಹ ಚಳುವಳಿಗಳನ್ನು ಮಾಡುತ್ತೇನೆ. ಶಿಕ್ಷಣಕ್ಕಾಗಿ ಕೆಲಸ ಮಾಡುತ್ತಿಲ್ಲ ಎಂದು ನನ್ನನ್ನು ಟೀಕಿಸುತ್ತಾರೆ. ಶಿಕ್ಷಣದ ಅರ್ಥವನ್ನು ನನ್ನ ಟೀಕಾಕಾರ ಬಾಂಧವರು ಎಷ್ಟರಮಟ್ಟಿಗೆ ಅರ್ಥಮಾಡಿಕೊಂಡಿದ್ದಾರೆ ಅನ್ನುವುದು ತಿಳಿದರೆ ಅವರ ಅನುಮಾನವನ್ನು ಹೆಚ್ಚು ಸುಲಭವಾಗಿ ಪರಿಹರಿಸಬಹುದಿತ್ತು. ಸತ್ಯಾಗ್ರಹದ ಹಾಗೂ ಮನುಷ್ಯತ್ವ ಮರಳಿ ಪಡೆಯುವ ಚಳುವಳಿಗಳಲ್ಲಿ ಒಳ್ಳೆಯ ಶಿಕ್ಷಣ ಸಿಗಬಹುದು ಅನ್ನುವುದನ್ನವರಿಗೆ ಮನವರಿಕೆ ಮಾಡಿಕೊಡಬಹುದಿತ್ತು. ಆದರೆ ಅವರು ಯಾವುದನ್ನು 'ಶಿಕ್ಷಣ ಅನ್ನುತ್ತಾರೊ ಆ ಶಿಕ್ಷಣ ಕೊಡಿಸುವ ವಿಷಯದಲ್ಲಿ ನನ್ನ ಪ್ರಯತ್ನ ಯಾವುದೇ ಟೀಕಾರರನ ಪ್ರಯತ್ನಕ್ಕಿಂತ ಹೆಚ್ಚಿದೆ ಅನ್ನುವುದನ್ನು ನಾನು ಆಹ್ವಾನಪೂರ್ವಕವಾಗಿ ಹೇಳಬಲ್ಲೆ. ಠಾಣೆ, ಅಹಮದಾಬಾದ್, ಧಾರವಾಡ್‌ಗಳಲ್ಲಿ ನಾನು ಬೋರ್ಡಿಂಗ ನಡೆಸುತ್ತಿದ್ದೇನೆ. ನನ್ನ ಈ ಪ್ರಯತ್ನದಿಂದ ಸುಮಾರು ೭೦ ವಿದ್ಯಾರ್ಥಿಗಳು ಬಿಟ್ಟಿ ಶಿಕ್ಷಣದ ಲಾಭ ಪಡೆಯುತ್ತಿದ್ದಾರೆ. ನನ್ನ ಟೀಕಾಕಾರರು ಈ ನನ್ನ ಕೆಲಸದ ಬಗ್ಗೆ ವಿಚಾರಿಸಿಕೊಳ್ಳಲಿ ಹಾಗೂ ಅವರು ಈ ಕ್ಷೇತ್ರದಲ್ಲಿ ಎಷ್ಟು ಹಣ ಖರ್ಚು ಮಾಡಿದ್ದಾರೆ ಹಾಗೂ ಎಷ್ಟು ಕಷ್ಟಪಟ್ಟಿದ್ದಾರೆ ಅನ್ನುವುದನ್ನು ಜನತೆಗೆ ಹೇಳಲಿ. ತಾವು ಸ್ವತಃ ಯಾವುದೇ ಕೆಲಸ ಮಾಡದೆ ಮತ್ತೊಬ್ಬರು ಹಾಗೆ ಮಾಡಬೇಕಿತ್ತು , ಇಂಥದ್ದು ಮಾಡಬೇಕಿತ್ತು ಎಂದು ಹೇಳುವ ಪೊಳ್ಳುತನ ತೋರಿಸಬಾರದು. ಮೇಲೆ ಹೇಳಿರುವ ಟೀಕಾಕಾರರು ನನಗೆ ಹೆಚ್ಚಾಗಿ ನಾಸಿಕ್ ಜಿಲ್ಲೆಯಲ್ಲಿ ಕಂಡುಬಂದರು. ಅವರ ಟೀಕೆಯಲ್ಲಿ ಸ್ವಲ್ಪವಾದರೂ ಅರ್ಥವಿದೆ ಆದರೆ ಸಾತಾರಾ ಜಿಲ್ಲೆಯ ರಾ. ನಿಕಾಳಜೆಯಂತಹ ಮಾಂಗ್ ಜಾತಿಯ ಜನ ನನ್ನನ್ನು ಟೀಕಿಸುವುದರಲ್ಲಿ ತಲೆಬುಡವಿಲ್ಲ. ಸುಮ್ಮನೆ ವಿರುದ್ಧವಾದದ್ದನ್ನೇನೋ ಮಾಡಿ ಯದ್ವಾತದ್ವಾ ಮಾತಾಡುತ್ತ

ನಾಯಕತ್ವ ಮೆರೆಯುವುದೇ ಇವರ ಜೀವನದ ಉದ್ದೇಶವಾಗಿದೆ. ಇತ್ತೀಚೆಗೆ ಈ ನಿಕಾಳಜೆ ಹಾಗೂ ಅಂತಹ ಕೆಲವು ಜನ ಸಾತಾರಾಜಿಲ್ಲೆಯ ವತಿಯಿಂದ ಮಾಂಗ್‌ರ ಒಂದು ಪರಿಷತ್ತನ್ನು ಆಯೋಜಿಸಿದ್ದರು ಹಾಗೂ ಅದರ ಅಧ್ಯಕ್ಷತೆಯನ್ನು ಪುಣೆಯ ಮುಜುಮದಾರ ಹಾಗೂ ಇನಾಮದಾರ್ ಸಾಹೇಬರಿಗೆ ಕೊಟ್ಟಿದ್ದರು. ಈ ಇನಾಮದಾರ ಸಾಹೇಬರು ಕೇವಲ ಜಾತಿಯಿಂದಷ್ಟೇಯಲ್ಲ ವೃತ್ತಿಯಿಂದ ಕೂಡ ಪೇಶ್ವೆಗಳ ನಿಜವಾದ ವಂಶಜರು. ಪುಣೆಯ ಪರ್ವತಿ ಸತ್ಯಾಗ್ರಹವನ್ನು ವಿರೋಧಿಸುವುದರಲ್ಲಿ ಇವರು ಪ್ರಮುಖರಾಗಿದ್ದರು. ಇಂತಹ ವ್ಯಕ್ತಿಗೆ ಅಧ್ಯಕ್ಷ ಪದಕೊಟ್ಟು ಚಳುವಳಿಯ ಸೂತ್ರಗಳನ್ನು ಇಂತಹ ಹೊರಜಾತಿಯ ವ್ಯಕ್ತಿಯ ಕೈಗೆ ಕೊಟ್ಟು ನಿಕಾಳಜೆಯವರು ಸಾಬೀತುಪಡಿಸಿದ್ದಾದರೂ ಏನನ್ನು? ದಲಿತರ ಚಳುವಳಿಗಳು ಸ್ವಾವಲಂಬನೆ ಹಾಗೂ ಸ್ವಾಭಿಮಾನದ ಬಲದ ಮೇಲೆ ನಡೆಯುತ್ತಿವೆ. ಮುಜುಮದಾರ ಸಾಹೇಬರಂತಹವರನ್ನು ಅಧ್ಯಕ್ಷರನ್ನಾಗಿ ಮಾಡಿ ನಮ್ಮ ಸ್ವಾಭಿಮಾನಕ್ಕೆ ಪೆಟ್ಟು ಕೊಡುವಂತಹ ಕೆಲಸ ನಿಕಾಳಜೆ ಮಾಡಿದ್ದಾರೆ. ಇದಕ್ಕಿಂತ ಸ್ವತಃ ಅವರೆ ಇಲ್ಲದಿದ್ದರೆ ಅವರದೇ ಜಾತಿಯ ಪದವೀಧರನೊಬ್ಬನು ಅಧ್ಯಕ್ಷನಾಗಿದ್ದಿದ್ದರೂ ಜನರಿಗೆ ಇಷ್ಟವಾಗುತ್ತಿತ್ತು. ಆದರೆ ಇನಾಮದಾರ ಸಾಹೇಬರಿಗೆ ಅಧ್ಯಕ್ಷ ಸ್ಥಾನವನ್ನು ಕೊಟ್ಟು ಸಭೆಗೆ ಅವರೂ ಬರಲಿಲ್ಲ ಜನ ಕೂಡ ಹೆಚ್ಚು ಸೇರಲಿಲ್ಲ. ರಾ. ನಿಕಾಳಜೆಯಂತಹ ಜನರೊಂದಿಗೆ ನಾನು ಹೊಂದಿಕೊಳ್ಳುವುದಿಲ್ಲ ಅನ್ನುವ ಆರೋಪ ನನ್ನ ಮೇಲೆ ಹೊರಿಸಲಾಗುತ್ತದೆ, ಆದರೆ ಅವರೊಂದಿಗೆ ಹೊಂದಿಕೊಳ್ಳುವುದಾದರು ಹೇಗೆ? ತಮ್ಮ ತತ್ವಗಳ ಜ್ಞಾನವೇ ಇಲ್ಲದ, ಆ ಜ್ಞಾನವನ್ನು ಪಡೆಯಲೂ ಇಚ್ಛಿಸದ, ಸ್ವಾಭಿಮಾನದ ರುಚಿಯೇ ಇಲ್ಲದಿರುವ, ಕೇವಲ ತಮ್ಮ ಮಹತ್ವ ಹೆಚ್ಚಿಸಲು ಪ್ರಯತ್ನಿಸುವ ಜನರೊಂದಿಗೆ ಹೊಂದಿಕೊಳ್ಳುವುದಾದರೂ ಹೇಗೆ? ಅವರಿಗೆ ತಿಳಿಸಿಹೇಳುವುದಾದರೂ ಹೇಗೆ? ಇಂತಹ ಜನರನ್ನು ನಿಮ್ಮಂತಹ ಸಾಮಾನ್ಯ ಜನರೇ ಸರಿದಾರಿಗೆ ತರಬೇಕು, ನಿಜವಾದ ಹಾಗೂ ಯೋಗ್ಯ ನೇತಾರರ್ಯಾರು? ಹಾಗೂ ಯಾರು ತಮ್ಮ ಒಳ್ಳೆಯದನ್ನು ಬಯಸುತ್ತಾರೆ ಅನ್ನುವುದನ್ನು ಇನ್ನು ಮುಂದೆ ಜನತೆಯೇ ನಿರ್ಧರಿಸಬೇಕು. 'ನನ್ನನ್ನು ನೇತಾರರೆನ್ನಿ'ಅನ್ನುವುದರಿಂದ ಯಾರೂ ನೇತಾರನಾಗುವುದಿಲ್ಲ ಅನ್ನುವುದನ್ನು ನೇತಾರನಾಗ ಬಯಸುವವನಿಗೆ ಗೊತ್ತಿರಬೇಕು' ಅಂದರು.

# ೪೧.

# ಕಠಿಣ ಪರಿಸ್ಥಿತಿಯೊಡನೆ ಹೋರಾಡಿಯೇ ಸಮಾಜದ ಏಳಿಗೆ ಸಾಧ್ಯ

೩೧ನೆಯ ಮೇ ೧೯೩೧ ಚಂದವಡ ತಾಲೂಕಿನ ವಡನೇರನಲ್ಲಾದ ಸಭೆಯಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ನಾಸಿಕ್ ಜಿಲ್ಲೆಯಲ್ಲಿಯ ಯುವಕರಿಗೆ ಕೆಳಗಿನಂತೆ ಸಂದೇಶ ನೀಡಿದರು.

ನಾಸಿಕ್ ಜಿಲ್ಲೆಯ ಯುವಕ ಸಂಘದ ಇಲ್ಲಿಯವರೆಗಿನ ಕೆಲಸಗಳ ಬಗ್ಗೆ ನನಗೆ ಸಮಾಧಾನವಿದೆ. ಜಿಲ್ಲೆಯ ಜಾಗೃತಿಯ ಕೆಲಸವನ್ನಿವರು ಸಾಕಷ್ಟು ಧೈರ್ಯದಿಂದ ಮಾಡಿದ್ದಾರೆ. ಪ್ರತಿಯೊಂದು ಊರಿನಲ್ಲಿಯೂ ಕಠಿಣ ಪರಿಸ್ಥಿತಿಯೊಡನೆ ಹೋರಾಡಿಯೇ ಸಮಾಜದ ಏಳಿಗೆಯ ಮೂಲಕ ಮಾಡಿರುವ ಪ್ರಯತ್ನ ಶ್ಲಾಘನೀಯ. ಊರು ಊರುಗಳಲ್ಲಿ ನಿರ್ಭಯ ಯುವಕರ ಸಂಘವನ್ನು ಸ್ಥಾಪಿಸಿ ಲಾಠಿ, ವ್ಯಾಯಾಮಾದಿಗಳಂತಹ ಶಾರೀರಿಕ ಆಟಗಳನ್ನು ಕಲಿಯುವುದು, ದಿನಪತ್ರಿಕೆಗಳನ್ನು ಓದಿ ಅಜ್ಞಾನಿಗಳಿಗೆ ಪರಿಸ್ಥಿತಿಯ ಅರಿವು ಮೂಡಿಸುವಂತಹ ಕೆಲಸಗಳು ಇನ್ನೂ ವ್ಯಾಪಕವಾಗಿ ನಡೆಯಲಿ, ಆಗ ನಿಮ್ಮ ಹೋರಾಟಕ್ಕೆ ಯಶಸ್ಸು ಸಿಗಲು ತಡವಾಗದು ಹಾಗೂ ತೊಂದರೆಯಾಗದು.

# ೪೨.

# ಅಸ್ಪೃಶ್ಯತೆ ಜಗತ್ತಿನ ಎಲ್ಲ ರೀತಿಯ ಗುಲಾಮಗಿರಿಗಿಂತ ಭಯಂಕರ ಹಾಗೂ ಭೀಷಣವಾದದ್ದು

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಅವರ ಸೆಕ್ರೆಟರಿ ಶ್ರೀ. ಶಿವತರಕರ್ ಅವರು ೨೪ನೆಯ ಜೂನ್ ೧೯೩೧ ರಂದು ಅಹಮದಾಬಾದ್‌ಗೆ ಹೋಗಿದ್ದರು. ಅಲ್ಲಿ ದಲಿತ ವಿದ್ಯಾರ್ಥಿಗಳಿಗಾಗಿ ಕಟ್ಟಿದ್ದ ವಸತಿಗೃಹವನ್ನು ನೋಡಿಕೊಂಡು ಬರುವುದು ಹಾಗೂ ಬೇಕಾದ ವ್ಯವಸ್ಥೆ ಮಾಡಿಬರುವುದು ಅವರ ಉದ್ದೇಶವಾಗಿತ್ತು. ಡಾ. ಅಂಬೇಡ್ಕರ್ ಸಾಹೇಬರು ಬರುವವರಿದ್ದಾರೆ ಅನ್ನುವುದು ಕಡೆಯ ಕ್ಷಣದಲ್ಲಿ ತಿಳಿದರೂ ಅಹಮದಾಬಾದ್‌ನ ದಲಿತರು ತಮ್ಮ ನಾಯಕನ ಸ್ವಾಗತಕ್ಕಾಗಿ ಅದ್ಭುತ ತಯಾರಿ ಮಾಡಿಕೊಂಡಿದ್ದರು. ಸಾವಿರಾರು ದಲಿತರು ಡಾ. ಅಂಬೇಡ್ಕರರ ದರ್ಶನಕ್ಕಾಗಿ ಅಹಮದಾಬಾದ್‌ನಲ್ಲಿ ಹಾಗೂ ಅಹಮದಾಬಾದ್ ಸ್ಟೇಷನ್ನಿನಲ್ಲಿ ಸೇರಿದ್ದರು. ಇಲ್ಲಿಯ ದಲಿತ ಯುವಕರು (Youth League) ಹಾಗೂ ದಲಿತರ ಬೇರೆಬೇರೆ ಸುಮಾರು ಮೂವತ್ತು ಸಂಸ್ಥೆಗಳು ತಮ್ಮ ಸ್ವಯಂ ಸೇವಕರೊಡ ಗೂಡಿ ಒಳ್ಳೆಯ ವ್ಯವಸ್ಥೆ ಮಾಡಿದ್ದರು. ದಲಿತರ ಈ ಸ್ವಯಂ ಸ್ಫೂರ್ತಿ ಹಾಗೂ ಸ್ವಾವಲಂಬನೆಯ ತಯಾರಿ ನೋಡಿ ಸಂತೋಷಪಟ್ಟು ಹೊಗಳುವುದನ್ನು ಬಿಟ್ಟು ಅಲ್ಲಿಯ ಗುಜರಾತ್ ಪ್ರಾವಿಂಶಿಯಲ್ ಕಾಂಗ್ರೆಸ್ ಕಮಿಟಿಯ ಕೆಲವು ಹಿಂದೂಗಳಿಗೆ ಹೊಟ್ಟೆಕಿಚ್ಚಾಯಿತು. ನಮ್ಮ ಗುರಿಯೇನು? ನಮ್ಮ ನಾಯಕರು ನಮಗೇನು ಕಲಿಸಿದ್ದಾರೆ? ಅನ್ನುವುದನ್ನು ಮರೆತು ಕಾಂಗ್ರೆಸಿಗರು ಕೈಯಲ್ಲಿಕಪ್ಪು ಬಾವುಟಗಳನ್ನು ಹಿಡಿದು ಬಾಯಿಯಲ್ಲಿ ಏನೇನೋ ಹೊಲಸು ಹಾಗೂ ಕಾಂಗ್ರೆಸ್‌ಗೆ ಒಪ್ಪದಂತಹ ಶಬ್ದಗಳನ್ನು ಉಚ್ಚರಿಸುತ್ತ ಡಾ. ಅಂಬೇಡ್ಕರ್ ಮೇಲೆ 'ಶೇಮ್' ಶಬ್ದದ ಮಳೆಗರೆಯಲು ಹೋದರು. ಈ ಉನ್ಮತ್ತ ಹಾಗೂ ಅಹಂಕಾರಿ ಗೂಂಡಾಗಳು ದಲಿತರಿಗೆ ಸಿಟ್ಟು ಬರುವಂತಹ ಹಾಗೂ ಅವರಿಗೆ ಅವಮಾನವಾಗುವ ರೀತಿಯಲ್ಲಿ ವರ್ತಿಸುತ್ತ ಗೊಂದಲವನ್ನೆಬ್ಬಿಸಲು ಪ್ರಯತ್ನಿಸಿದರು. ದಲಿತರು ಹಾಗೂ ಅವರ ಸ್ವಯಂಸೇವಕರಿಗೆ ಇವರ ಬಾಯಿ ಮುಚ್ಚಿಸಲು ಹೆಚ್ಚು ಸಮಯಬೇಕಾಗುತ್ತಿರಲಿಲ್ಲ ಆದರೆ ಡಾ. ಅಂಬೇಡ್ಕರ್ ಅವರು ಬರುವ ಸಮಯವಾಗಿತ್ತಾದ್ದರಿಂದ ಅವರೆದುರು ಈ ತಮಾಶೆ ಬೇಡ ಅಂದುಕೊಂಡು ದಲಿತರು ತಮ್ಮ ಶಾಂತತೆ ಹಾಗೂ ಶಿಸ್ತನ್ನು ಕಾಪಾಡಿಕೊಂಡರಾದರೂ ನೂಕು ನುಗ್ಗಲು ಮಾಡಿ ಕಾಂಗ್ರೆಸ್‌ನವರು ಗೊಂದಲವನ್ನೆಬ್ಬಿಸಿದರು. ಸ್ವಲ್ಪ ದಿನಗಳ ಹಿಂದೆಯಷ್ಟೆ ಮೌಲಾನಾ ಶೌಕತ್ ಅಲಿ ಬಂದು ಹೋದಾಗ ಅವರನ್ನು ಧಿಕ್ಕರಿಸುವುದು ಈ ಕೈಲಾಗದವರಿಂದಾಗಲಿಲ್ಲ. ಹೀಗೇನಾದರೂ ಮುಸಲ್ಮಾನರ ಸಭೆಯಲ್ಲಿ ಮಾಡಿದ್ದಿದ್ದರೆ ದಲಿತರಂತೆ ಮುಸಲ್ಮಾನರು ಸುಮ್ಮನೆ ಕೂರುತ್ತಿರಲಿಲ್ಲ, ಸಮಯ ಬಂದರೆ ತಮಗಿಂತ ದೊಡ್ಡ ಗೂಂಡಾಗಳಾಗಿ ನಮ್ಮ ತಲೆಗಳನ್ನೇ ಚೆಂಡಾಡಿಯಾರು ಅನ್ನುವುದು ಕಾಂಗ್ರೆಸ್‌ಗೆ ಗೊತ್ತಿದೆ. ಹಾಗಾಗಿ ಇವರು ಬಡೇ ಭಾಯಿಯನ್ನು ಛೇಡಿಸಲು ಹೋಗಲಿಲ್ಲ. ದಲಿತರು ತಮ್ಮ ಕಾಲ ಕೆಳಗಿನ ಕ್ರಿಮಿಗಳು, ಅವರನ್ನು ಯಾವಾಗ ಬೇಕಾದರೂ ತುಳಿಯಬಹುದು ಅನ್ನುವ ಅಹಂಕಾರ ಅವರಿಗಿತ್ತು. ಹಾಗಾಗಿ ಕಾರಣವಿಲ್ಲದೆಯೇ ತಮ್ಮ ನಾಯಕರನ್ನು ಅವಮಾನಿಸಲು ಮುಂದಾದರು. ದಲಿತ

ಸ್ವಯಂಸೇವಕರು ಪಿತ್ತ ನೆತ್ತಿಗೇರಿಸದೆ ಸುಮ್ಮನಾಗಿದ್ದರಿಂದ ಕಾಂಗ್ರೆಸ್ಸಿನವರ ಈ ಆಟ ಕಾನೂನುಬಾಹಿರವಾಗಲಾರಂಭಿಸಿದಾಗ ಸರ್ಕಾರಿ ಸಿಪಾಯಿಗಳು ಅವರನ್ನು ಅಲ್ಲಿಂದಟ್ಟಬೇಕಾಯಿತು. ಹಾಗಾಗಿ ದಲಿತರು ಹಾಗೂ ಮೇಲ್ಜಾತಿಯವರ ನಡುವೆ ಮಾರಾಮಾರಿಯಾಗಬಹುದಾದ ಘಟನೆ ತಪ್ಪಿತು. ಇದರಿಂದ ಅವಮಾನವಾದದ್ದು ಯಾರಿಗೆ? ಕಾಂಗ್ರೆಸ್ಸಿಗರ ಗೂಂಡಾಗಿರಿಯಿಂದ ಸರ್ಕಾರಿ ಸಿಪಾಯಿಗಳು ಗುಂಡಾಗಿರಿ ಮಾಡುತ್ತಾರೆ ಹಾಗೂ ಗಾಂಧಿ–ಆರ್ಯವಿನ್ ಶಾಂತಿಭಂಗ ಮಾಡುತ್ತಾರೆ ಎಂದು ಹೇಳುವ ಕಾಂಗ್ರೆಸ್ ನಾಯಕರಿಗೆ ಹಾಗೂ ಕಾಂಗ್ರೆಸಿಗರಿಗೆ ಅವಮಾನವಾಗಲಿಲ್ಲವೆ?

ಅಲ್ಲಿಯ ಯುವಕರು ಆಯೋಜಿಸಿದ್ದ ಡಾ.ಅಂಬೇಡ್ಕರರ ಜಾಹೀರು ಸನ್ಮಾನ ಹಾಗೂ ಭಾಷಣದ ಕಾರ್ಯಕ್ರಮವನ್ನು ಹಾಳುಮಾಡುವ ಅವರುದ್ದೇಶವೂ ಸಫಲವಾಗಲಿಲ್ಲ. ಇವರ ಆಟಗೇಡಿತನಕ್ಕೆ ಕಡಿವಾಣ ಹಾಕಲು ಅಪೇಕ್ಷೆಗಿಂತಲೂ ಹೆಚ್ಚು ಜನ ಅವರ ಸನ್ಮಾನ ನೋಡಲು ಹಾಗೂ ಭಾಷಣ ಕೇಳಲು ಹಾಜರಿದ್ದರು. ಕಾಂಗ್ರೆಸ್ ಹಾಗೂ ಗಾಂಧೀಜಿಯವರ ರಾಜಕಾರಣವನ್ನು ಜರಡಿ ಹಿಡಿದು ಅವರಿಗೂ ನಮಗೂ ಯಾಕೆ? ಹಾಗೂ ಎಲ್ಲಿ ಮತಭೇದಗಳಾಗುತ್ತವೆ ಅನ್ನುವುದರ ಬಗ್ಗೆ ಸ್ವಲ್ಪದರಲ್ಲಿ ಹಾಗೂ ವಿಷಯಕ್ಕಂಟಿಕೊಂಡು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮಾತಾಡಿದರು. ದಲಿತ ಯುವಕರನ್ನುದ್ದೇಷಿಸುತ್ತ,

ನಮ್ಮ ಹೋರಾಟ ಎಲ್ಲರೀತಿಯ ಗುಲಾಮಗಿರಿಯ ವಿರೋಧದಲ್ಲಿದೆ. ಅಸ್ಪೃಶ್ಯತೆಯ ಪ್ರಚಲಿತ ಗುಲಾಮಗಿರಿಯು ಜಗತ್ತಿನ ಇತರ ಎಲ್ಲ ಗುಲಾಮಗಿರಿಗಿಂತ ಭಯಂಕರ ಹಾಗೂ ಭೀಷಣವಾಗಿದ್ದು ಅದು ಕೇವಲ ಹಿಂದೂ ಸಮಾಜಕ್ಕೆ ಕಲಂಕವಾಗಿರದೆ ಮನುಷ್ಯತ್ವಕ್ಕಿರುವ ಲಾಂಛನವಾಗಿದೆ. ನಾವು ಹಿಂದೂ ಸಮಾಜದ ಅಭಿನ್ನವಾದ ಘಟವಾಗಿದ್ದೇವೆ ಹಾಗಾಗಿ ಹಿಂದೂಗಳ ಪ್ರತಿಯೊಂದು ಧಾರ್ಮಿಕ ಸಂಸ್ಥೆ ಹಾಗೂ ದೇವಸ್ಥಾನದಲ್ಲಿ ಪ್ರವೇಶಿಸುವ ಹಕ್ಕು ನಮಗಿದೆ. ಇಂದಿನ ನಿಮ್ಮ ಒಟ್ಟು ಧೈರ್ಯ ನೋಡಿ ನನಗೆ ಬಹಳ ಸಮಾಧಾನವಾಗುತ್ತಿದೆ. ನಾನು ಮುಂದೊಂದು ದಿನ ಬರುವಾಗ ನಿಮ್ಮ ಸಿದ್ಧತೆ ಇದಕ್ಕೂ ಹೆಚ್ಚಿರಬೇಕು ಹಾಗೂ ಅಸ್ಪೃಶ್ಯತೆ ನಿವಾರಣೆಯ ನಿಮ್ಮ ಕಾರ್ಯ ಹೆಚ್ಚು ಪರಿಣಾಮಕಾರಿಯಾಗಿರಬೇಕೆಂದು ಆಶಿಸುತ್ತೇನೆ. ಡಾ. ಅಂಬೇಡ್ಕರರ ಈ ಭಾಷಣ ಅಹಮದಾಬಾದ್‌ನ ಪ್ರೇಮಸಾಯಿ ಹಾಲ್‌ನಲ್ಲಾಯಿತು.

# ೪೩.

# ದಲಿತ ಸ್ತ್ರೀಯರು ತಮ್ಮ ಸಂಪೂರ್ಣ ವಿಕಾಸಕ್ಕಾಗಿ ಕಷ್ಟಪಡಬೇಕು

ಡಾ. ಬಾಬಾಸಾಹೇಬ್ ಅಂಬೇಡ್ಕರರು ಅಖಿಲ ದಲಿತ ವರ್ಗದ ಪ್ರತಿನಿಧಿಗಳಾಗಿ ಲಂಡನ್‌ನಲ್ಲಿ ನೇರವೇರುತ್ತಿರುವ ಎರಡನೆಯ ದುಂಡು ಮೇಜಿನ ಪರಿಷತ್ತಿಗಾಗಿ ಶನಿವಾರ ೧೫ ರಂದು ಹೋಗುವವರಿದ್ದರು. ಅದಕ್ಕಾಗಿಯೆಂದೆ ಎಲ್ಲ ದಲಿತ ಬಾಂಧವರಿಂದ ಶುಕ್ರವಾರ ೧೪ನೆಯ ಆಗಸ್ಟ್ ೧೯೩೧ರಂದು ಕೋಟಾದಲ್ಲಿಯ ಸರ್ ಕಾವಸಜೀ ಜಹಾಂಗೀರ ಹಾಲಿನಲ್ಲಿ ಡಾ. ಪಿ. ಜಿ. ಸೋಲಂಕಿ ಅವರ ಅಧ್ಯಕ್ಷತೆಯಲ್ಲಿ ಅಂಬೇಡ್ಕರ್ ಅವರನ್ನು ಬೀಳ್ಕೊಡುವ ಸಮಾರಂಭ ನಡೆಯಿತು. ಶುಕ್ರವಾರ ರಾತ್ರಿ ಎಂಟು ಘಂಟೆಗೆ ಮೊದಲಿಗೆ ಭಗಿನಿಯರಿಂದ ಅವರಿಗೆ ಬೀಳ್ಕೊಡಲಾಯಿತು. ಕಾವಸಜೀ ಹಾಲ್ ಇಂತಹ ಅಸಂಖ್ಯ ದಲಿತ ಮಹಿಳೆಯರಿಂದ ಕಿಕ್ಕಿರಿದು ತುಂಬಿತ್ತು.

ಆ ದಿನ ಕೇವಲ ದಲಿತ ಮಹಿಳೆಯರಷ್ಟೆಯಲ್ಲ. ದಲಿತ ಗಂಡಸರಿಂದಲೂ ಬೀಳ್ಕೊಡಲಾಯಿತು.

(ಇಲ್ಲಿ ದಲಿತ ಭಗಿನಿಯರಿಗಾಗಿ ಅಂಬೇಡ್ಕರ್ ಅವರು ಮಾಡಿದ ಭಾಷಣವನ್ನು ಕೊಡಲಾಗಿದೆ. ದಲಿತ ಬಾಂಧವರಿಗಾಗಿ ಕೋಟಾದ ಭಾಷಣವನ್ನು ಸ್ವತಂತ್ರವಾಗಿ ಬೇರೆಕಡೆ ಪ್ರಕಟಿಸಿದ್ದೇವೆ–ಸಂಪಾದಕರು)

ಡಾ. ಅಂಬೇಡ್ಕರರ ಆರೋಗ್ಯ ಅಷ್ಟೊಂದು ಸುಧಾರಿಸಿರಲಿಲ್ಲ. ಆದರೂ ಅವರು ವೇದಿಕೆಗೆ ಬಂದು ಭಗಿನಿಯರನ್ನುದ್ದೇಶಿಸಿ ಮಾತನಾಡಿದರು. ತಮ್ಮ ಭಾಷಣದಲ್ಲವರು ಭಗಿನಿಯರಿಗೆ ತಮ್ಮ ಸ್ವಾವಲಂಬನೆಯ ಹೋರಾಟವನ್ನು ಮನವರಿಕೆ ಮಾಡಿಕೊಡುತ್ತ,

ಇವತ್ತಿನಿಂದ ನಾವು ನಮ್ಮ ಉನ್ನತಿಗಾಗಿ ನಮ್ಮ ಸ್ವಾತಂತ್ರ್ಯಕ್ಕಾಗಿ ವಿಶೇಷ ಹುಮ್ಮಸ್ಸಿನಿಂದ ಸಂಘಟಿತವಾಗಿ ಕೆಲಸ ಆರಂಭಿಸಬೇಕು. ಮೇಲ್ಜಾತಿ ಹಿಂದೂಜನ ನಮ್ಮ ಕುತ್ತಿಗೆಯ ಸುತ್ತ ಕಟ್ಟಿರುವ ಗುಲಾಮಗಿರಿಯ ಪಾಶವನ್ನು ಕಿತ್ತೊಗೆದು ನಾವು ಸ್ವತಂತ್ರರಾಗಬೇಕಿದೆ. ಮೈಮೇಲಿರುವ ಹಿತ್ತಾಳೆಯ? ಒಡವೆಗಳನ್ನು ಮೊದಲು ತ್ಯಾಗಮಾಡಬೇಕಿದೆ. ಉಡುಗೆತೊಡುಗೆಗಳಲ್ಲೂ ಮೇಲ್ಜಾತಿಯವರಂತೆ ನಾವೂ ಬದಲಾಗಿ ಸ್ವಾವಲಂಬನೆಯಿಂದ ನಾವು ಯಾವ ಕ್ರಾಂತಿಯನ್ನಾದರೂ ತರುವ ಸಾಮರ್ಥ್ಯವಿಟ್ಟುಕೊಂಡಿದ್ದೇವೆ ಅನ್ನುವುದನ್ನು ಜಗತ್ತಿಗೆ ತೋರಿಸಿಕೊಡಬೇಕಿದೆ. ಗಂಡಸರ ಸಹಾಯದಿಂದ ತಮ್ಮ ಕೆಲಸ ದೊಡ್ಡ ಪ್ರಮಾಣದಲ್ಲಾಗಬೇಕು ಅನ್ನುವಷ್ಟರ ಮಟ್ಟಿಗೆ ನೀವು ಕೆಲಸ ಮಾಡಲು ಸಿದ್ಧರಿರಬೇಕು. ಗಂಡಸರಿಗೆ ಅವರ ನಿಜವಾದ ಕರ್ತವ್ಯದ ಬಗ್ಗೆ ಮನವರಿಕೆ ಮಾಡಿಕೊಡುವ ಜವಾಬ್ದಾರಿ ನಿಮ್ಮ ಮೇಲಿದೆ. ಗಂಡಸರನ್ನು ಕೆಟ್ಟ ಚಟಗಳಿಂದ ಹಾಗೂ ಘಾತುಕ ಕೆಲಸಗಳಿಂದ ದೂರವಿಡುವ ಪ್ರಯತ್ನ ನೀವೇ ಮಾಡಬೇಕಾದ್ದು. ಮುಂಬರುವ ಪೀಳಿಗೆಗೆ ಇಂದಿನ ಗುಲಾಮಗಿರಿಯ ಸುಳಿವು ಹತ್ತದಂತೆ ಅಲೌಕಿಕ ಸ್ವಾರ್ಥತ್ಯಾಗದ ಕೆಲಸಗಳನ್ನು ಧೈರ್ಯದಿಂದ ಮಾಡಲು ನೀವು ಸಿದ್ಧರಿದ್ದರೆ ನನ್ನ ಜವಾಬ್ದಾರಿ ತಂತಾನೆ ನಿರ್ವಹಿಸಲ್ಪಡುವ ಪುಣ್ಯ ನಿಮಗೆ ಸಿಗುತ್ತದೆ.

## ೪೪.

# ಹೋರಾಟ ಕಠಿಣವಾಗಿದ್ದರೂ ಅದರ ಜವಾಬ್ದಾರಿ ಮಾತ್ರ ಆತ್ಮೀಯತೆಯಿಂದ ಸ್ವೀಕರಿಸಿ

೧೪ನೆಯ ಆಗಸ್ಟ್ ೧೯೩೧ರಂದು ಮಹಿಳೆಯರ ಸಭೆ ಮುಗಿದ ಮೇಲೆ ರಾತ್ರಿ ಹತ್ತುಘಂಟೆಯ ತನಕ ಪಗಾರೆ ಬಂಧು ಚಾಂದೋರೀಕರ ಇವರ ಸಾಮಾಜಿಕ ಜಲಶಾದ (ಪದ್ಯಗಳ ಮೂಲಕ ಸಾಮಾಜಿಕ ಪರಿಜ್ಞಾನ ಬೆಳೆಸುವಂತಹ ಕಾರ್ಯಕ್ರಮ) ಕಾರ್ಯಕ್ರಮ ನಡೆಯಿತು. ಡಾಕ್ಟರ್ ಸಾಹೇಬರು ನೆರೆದಿದ್ದ ಜಲಶಾದವರಿಗೆ ಅಭಿನಂದನೆ ತಿಳಿಸಿ ಧನ್ಯವಾದಗಳನ್ನರ್ಪಿಸಿ ಅವರಿಗೊಂದು ಚಿನ್ನದ ಪದಕವನ್ನು ತಮ್ಮ ಕೈಯಾರೆ ನೀಡಿದರು.

ಗಂಡಸರನ್ನು ಬೀಳ್ಕೊಡುವಾಗ ಡಾ. ಅಂಬೇಡ್ಕರರು ತುಂಬಾ ಪರಿಣಾಮಕರವಾದ ಭಾಷಣ ಮಾಡಿದರು. ಅಂತಃಕರಣವನ್ನು ಬಡಿದೆಬ್ಬಿಸುವ ಅವರ ಭಾಷಣ ಕೇಳಿ ಎಲ್ಲರ ಮನಸ್ಸು ಮುಂಬರುವ ಹೋರಾಟಕ್ಕಾಗಿ ಸಿದ್ಧವಾಗಿದ್ದು ಕಾಣುತ್ತಿತ್ತು. ಅಧ್ಯಕ್ಷರಾದ ಡಾ. ಸೋಲಂಕಿಯವರು ಲಂಡನ್ನಿಗೆ ಡಾ. ಅಂಬೇಡ್ಕರರು ಹೋಗುತ್ತಿರುವ ಉದ್ದೇಶವನ್ನು ಅವರ ಕಾರ್ಯವನ್ನು ಜನತೆಗೆ ಮನವರಿಕೆ ಮಾಡಿಕೊಟ್ಟ ಮೇಲೆ ಡಾಕ್ಟರ ಸಾಹೇಬರು ಮಾತನಾಡಲು ಎದ್ದರು.

ಇಷ್ಟರವರೆಗೆ ನಮಗೆ ಸಿಕ್ಕಿರುವ ಯಶಸ್ಸಿನಲ್ಲಿ ಡಾ. ಸೋಲಂಕಿಯವರ ಪಾಲು ಸಾಕಷ್ಟಿದೆ ಅನ್ನುವುದನ್ನು ನಾನು ಮರೆಯಲಾರೆ. ನಮ್ಮ ಹೋರಾಟ ಸುಲಭವಾಗಿಲ್ಲ, ಹಾಗೂ ಈ ಹೋರಾಟದಲ್ಲಿ ಯಶಸ್ಸು ಸಿಗುವುದು ಕೂಡ ಅಷ್ಟು ಸುಲಭವಲ್ಲ. ದುಂಡು ಮೇಜಿನ ಪರಿಷತ್ತಿನಲ್ಲಿ ಭಾರತದಾದ್ಯಂತ ಪ್ರತಿಯೊಂದು ಪಕ್ಷದಿಂದ, ಪಂಥದಿಂದ, ಜಾತಿಯಿಂದ ಹೀಗೆ ಒಟ್ಟು ೧೨೫ ಪ್ರತಿನಿಧಿಗಳಿದ್ದಾರೆ. ಈ ಪ್ರತಿನಿಧಿಗಳಲ್ಲಿ ನಮ್ಮ ಸಮಾಜದಿಂದ ಕೇವಲ ಇಬ್ಬರೇ ಪ್ರತಿನಿಧಿಗಳನ್ನು ಆರಿಸಿರುವುದು ಬಹಳ ದುಃಖದ ಸಂಗತಿ. ನಾವಿಬ್ಬರೇ ಪ್ರತಿನಿಧಿಗಳು ಒಂದು ಕಡೆ ಹಾಗೂ ಉಳಿದ ರಾಷ್ಟ್ರಗಳ ಪ್ರತಿನಿಧಿಗಳು ಒಂದು ಕಡೆ ಅನ್ನುವಂತಹ ಪರಿಸ್ಥಿಯಲ್ಲಿ ನಾನು ಹೋಗುತ್ತಿರುವ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಎಷ್ಟರ ಮಟ್ಟಿಗೆ ಯಶಸ್ಸು ಸಿಗುತ್ತದೆಂದು ಇವತ್ತೇ ಹೇಳಲಾರೆ. ಕೇವಲ ಹೆಚ್ಚೆಚ್ಚು ಪ್ರಯತ್ನಿಸುವುದೇ ನನ್ನ ಕರ್ತವ್ಯ ಅನ್ನುವುದಷ್ಟೇ ನನಗೆ ಗೊತ್ತು. ನಿಮ್ಮೆಲ್ಲರ ಅಪಾರ ಪ್ರೀತಿ ನನಗೆ ಕೆಲಸ ಮಾಡುವ ಹುಮ್ಮಸ್ಸು ಕೊಡುತ್ತದೆ. ಈ ಹುಮ್ಮಸ್ಸಿನ ಬಲದ ಮೇಲೆ ನಾನು ನನ್ನ ಕೆಲಸಗಳ ಅಡಿಪಾಯ ಹಾಕಿಕೊಂಡಿದ್ದೇನೆ. ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಸಾಧ್ಯವಾದಷ್ಟು ಯಶಸ್ಸು ಗಳಿಸಲು ಪ್ರಯತ್ನಿಸುತ್ತೇನೆ. ನಾನು ಮರಳಿ ಬರುವುದರೊಳಗೆ ನೀವು ಮಾತ್ರ ನಿಮ್ಮ ಸಂಘಟನೆಯನ್ನು ಬೆಳೆಸುತ್ತ ನನ್ನ ಗೈರುಹಾಜರಿಯಲ್ಲಿ ಡಾ. ಸೋಲಂಕಿಯವರ ನೇತೃತ್ವದಡಿ ಕೆಲಸ ಮಾಡುತ್ತಿರಬೇಕು.

ಎರಡನೆಯ ಮಹತ್ವವಾದ ವಿಷಯ. ಮಹಾತ್ಮ ಗಾಂಧೀಜಿಯವರ ಜೊತೆಯಾದ ನನ್ನ ಮಾತುಕತೆ ನನಗೆ ತುಂಬ ನಿರಾಸೆ ತಂದಿದೆ. ನಮ್ಮ ರಾಜಕೀಯ ಹಕ್ಕುಗಳ ಬಗ್ಗೆ ಇಂದಿನ ಪರಿಸ್ಥಿತಿಯಲ್ಲಿ ಮ. ಗಾಂಧೀಜಿಯವರು ಸಹಾಯ ಮಾಡಲು ಅಸಮರ್ಥರಾಗಿದ್ದಾರೆ. ಎಷ್ಟು ಆತ್ಮೀಯತೆಯಿಂದ ನಮ್ಮೊಂದಿಗೆ

ಕೆಲಸ ಮಾಡಬೇಕೆಂದು ಅವರಿಗೆ ಅನಿಸುತ್ತಿದೆಯೋ ಅಷ್ಟು ಆತ್ಮೀಯತೆಯಿಂದ ಆ ಕೆಲಸ ಅವರಿಂದಾಗುತ್ತಿಲ್ಲ. ಗಾಂಧೀಜಿಯವರ ಜೊತೆಯಾದ ಮಾತುಕತೆಗಳ ವಿವರಣೆಯನ್ನು ಜನತಾ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ ಅದನ್ನೋದಿದರೆ ನಿಮಗರ್ಥವಾಗುತ್ತದೆ. ಇಂತಹ ಕಠಿಣ ಪ್ರಸಂಗದಲ್ಲಿ ನೀವು ನಿಮ್ಮ ಹೋರಾಟವನ್ನು ಹೆಚ್ಚು ದೃಢತೆಯಿಂದ ಹಾಗೂ ನೀಯತ್ತಿನಿಂದ ಮುಂದುವರೆಸಿ. ಕೆಲವೇ ದಿನಗಳಲ್ಲಿ ನಾಸಿಕ್‌ನಲ್ಲಾಗುತ್ತಿರುವ ಕುಂಭಮೇಳದಲ್ಲಿ ಒಂದು ಸತ್ಯಾಗ್ರಹ ನಡೆಯಲಿದೆ. ನೀವೆಲ್ಲ ಹಣದಿಂದಲೋ ಇಲ್ಲ ಜನಬಲದಿಂದಲೋ ಈ ಸತ್ಯಾಗ್ರಹಕ್ಕೆ ಸಹಾಯ ಮಾಡಿ. ದೇವಸ್ಥಾನದ ಪ್ರವೇಶದ ಸತ್ಯಾಗ್ರಹದ ಮೂಲಕ ನಾಸೀಕ ಜಿಲ್ಲೆ ನಮ್ಮ ಮೇಲೊಂದು ದೊಡ್ಡ ಕೆಲಸ ವಹಿಸಿದೆ. ಹಾಗಾಗಿ ನಾವು ಅವರ ಕರೆಗೆ ಓಗೊಟ್ಟು ಹೋರಾಟ ಎಷ್ಟೇ ಕಠಿಣವಾಗಿದ್ದರೂ ಗೆಲ್ಲಿಸುವ ಜವಾಬ್ದಾರಿಯನ್ನು ಆತ್ಮೀಯತೆಯಿಂದ ಸ್ವೀಕರಿಸಿ. ನಾಸಿಕ್‌ನಂತೆ ಪುನೆ ಕೂಡ ಹಿಂದುಳಿದ ಜಿಲ್ಲೆಯಲ್ಲ ಎಂದು ಈಗ ನನಗನಿಸುತ್ತಿದೆ. ಎರಡು ತಿಂಗಳ ಹಿಂದೆ 'ಪುನೆ ಜಿಲ್ಲಾ ಬಹಿಷ್ಕೃತ ಪರಿಷತ್ತು' ಹಮ್ಮಿಕೊಳ್ಳಲಾಗಿತ್ತು. ಅದರ ಒಟ್ಟು ಕೆಲಸಗಳನ್ನು ನೋಡಿ ಶೀಘ್ರದಲ್ಲಿಯೇ ಆ ಜಿಲ್ಲೆಯಲ್ಲೂ ಚಳುವಳಿಗಳು ಆರಂಭವಾಗಲಿವೆ ಅನಿಸುತ್ತಿದೆ. ಈ ಪರಿಷತ್ತನ್ನು ಯಶಸ್ವಿಯಾಗಿಸಿ ಪುನೆ ಜಿಲ್ಲೆಯೂ ಯಾವುದೇ ಜವಾಬ್ದಾರಿಯ ಕೆಲಸಕ್ಕೆ ಸಿದ್ಧವಾಗಿದೆ ಅನ್ನುವುದನ್ನು ಮಿತ್ರರಾದ ಶ್ರೀ. ರೇವಜೀಬುವಾ ಡೋಳಸರವರು ನನ್ನ ಗಮನಕ್ಕೆ ತಂದರು. ಅವರು ತಮ್ಮ ಮಿತ್ರರೊಡ ಗೂಡಿ ಇದೇ ಚಳುವಳಿಯನ್ನು ತಮ್ಮ ಜಿಲ್ಲೆಯಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಹೋಗಲಿ. ಸಮತಾ ದಳದವರ ಶಿಸ್ತಿನ ಬಗ್ಗೆ ನನಗೆ ಅಭಿಮಾನವೆನಿಸುತ್ತದೆ. ಈ ಶಿಸ್ತು ಹಾಗೂ ಕರ್ತವ್ಯ ನಿಷ್ಠೆಯನ್ನು ಯಾವತ್ತೂ ಪಾಲಿಸಿ ತಮ್ಮ ಕಾರ್ಯವನ್ನು ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಗುವ ದೊಡ್ಡ ಸಂಕಲ್ಪಮಾಡಿಕೊಳ್ಳಿ. ನಿಮ್ಮ ಶಿಸ್ತು ಹಾಗೂ ಸಂಘಟನೆಯನ್ನು ಜೊತೆಗಿಟ್ಟುಕೊಂಡು ನನ ಗೈರುಹಾಜರಿಯಲ್ಲಿ ನೀವು ನಿಮ್ಮ ಜವಾಬ್ದಾರಿಯನ್ನು ಸರಿಯಾಗಿ ವಹಿಸಿ ಎಂದು ಭಾಷಣ ಮಾಡಿದರು.

## ೪೫.
# ನನ್ನ ಜನರ ಹಿತಸಂಬಂಧದ ಪ್ರತಿನಿಧಿ ನಾನೇ ಆಗಿದ್ದೇನೆ

ಕಳೆದ ಗುರುವಾರ ಅಂದರೆ ೮ನೆಯ ಅಕ್ಟೋಬರ್ ೧೯೩೧ರ ದಿನ ದುಂಡು ಮೇಜಿನ ಪರಿಷತ್ತಿನ ಇತಿಹಾಸದಲ್ಲಿ ಮಹತ್ವದ ದಿನವಾಗಿತ್ತು. ಅಲ್ಪಸಂಖ್ಯಾತರ ಪ್ರಶ್ನೆಗಳನ್ನು ಬಿಡಿಸಲು ಒಂದು ಕಮಿಟಿಯನ್ನು ಮ. ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿತ್ತು. ಎಂಟೂ ದಿನಗಳು ಸಾಕಷ್ಟು ಚರ್ಚೆಗಳಾಗಿಯೂ ಪ್ರಶ್ನೆಗಳು ಪ್ರಶ್ನೆಗಳಾಗೇ ಉಳಿದುಹೋದವು. ಆ ದಿನ ಈ ಕಮಿಟಿಯ ಕೆಲವು ಸದಸ್ಯರು ಭಾಷಣ ಮಾಡಿದರು. ಅಲ್ಪ ಸಂಖ್ಯಾತರ ಪ್ರಶೆಗಳು ಹಾಗೇ ಉಳಿದುಕೊಂಡವು ಹಾಗೂ ಪಂಜಾಬನಲ್ಲಿಯ ಹಿಂದೂ ಮುಸಲ್ಮಾನ ಸಿಖ್ಖರ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗದೆ ಈ ಕಮಿಟಿ ಅಪಯಶಸ್ಸಿಗೆ ಗುರಿಯಾಯಿತು ಅನ್ನುವುದರ ಬಗ್ಗೆ ಎಲ್ಲರೂ ದುಃಖ ವ್ಯಕ್ತಪಡಿಸಿದರು. ಕಾಂಗ್ರೆಸ್ ವತಿಯಿಂದ ಮಹಾತ್ಮ ಗಾಂಧಿಜೀಯವರು ಅಸ್ಪೃಶ್ಯರ ಬಗೆ ತಳೆದ ಪಕ್ಷಪಾತ ಹಾಗೂ ಅನ್ಯಾಯದ ಧೋರಣೆಯನ್ನು ಸ್ಪಷ್ಟವಾಗಿ ಡಾ.ಅಂಬೇಡ್ಕರರು ವಿರೋಧಿಸಲೇ ಬೇಕಾಯಿತು. ಆದರೆ ಅಂಬೇಡ್ಕರ್ ಅವರು ಗಾಂಧಿಯವರನ್ನು ವಿರೋಧಿಸಿದರು ಅನ್ನುವ ಒಂದೇ ವಿಷಯವನ್ನು ದೊಡ್ಡದು ಮಾಡಿ ಅಂಬೇಡ್ಕರ್ ಅವರ ಬಗ್ಗೆ ನಮ್ಮ ಓದುಗರ ಮನಸ್ಸು ಆದಷ್ಟು ಕೆಡಿಸುವ ಪ್ರಯತ್ನ ಕಾಂಗ್ರೆಸ್, ಹಿಂದೂರಾಷ್ಟ್ರೀಯ ಪತ್ರಕರ್ತರು ಹಾಗೂ ದೇಶಭಕ್ತರ ಧರ್ಮವಾಗಿಬಿಟ್ಟಿದೆ. ಡಾ.ಅಂಬೇಡ್ಕರರು ಗಾಂಧೀಜಿಯವರನ್ನು ವಿರೋಧಿಸಿದರು ನಿಜ, ಅವರು ಯಾಕೆ ವಿರೋಧಿಸಬಾರದಿತ್ತು ಅನ್ನುವುದನ್ನು ನಿರ್ವಿಕಾರವಾಗಿ ಯೋಚಿಸುವ ಔದಾರ್ಯ ಈ ದೇಶಭಕ್ತರಲ್ಲಿರಲಿಲ್ಲ. ಮಹಾತ್ಮ ಗಾಂಧೀಜಿಯವರ ಯೋಜನೆ ಸುಸಂಗತವಾಗಿರಲಿ ಅಸಂಗತವಾಗಿರಲಿ ಅವರನ್ನು ವಿರೋಧಿಸುವುದೆಂದರೆ ಪರಮೇಶ್ವರನನ್ನು ವಿರೋಧಿಸುವಷ್ಟೆ ಮಹಾಪಾಪ. ಸರ್ಕಾರ ಎತ್ತಿ ಕಟ್ಟದೆ ಹೀಗೆ ಮಾಡುವ ಧೈರ್ಯ ಯಾರಲ್ಲೂ ಇಲ್ಲ ಅನ್ನುವ ತಪ್ಪು ಕಲ್ಪನೆಗಳನ್ನು ಮನಸಲ್ಲಿಟ್ಟುಕೊಂಡು ದಿನಾ ತಮ್ಮ ಓದುಗರ ತನಕ ಈ ಕಲ್ಪನೆಗಳನ್ನು ತಲುಪಿಸುತ್ತಿದ್ದಾರೆ. 'ಡಾ ಅಂಬೇಡ್ಕರ ಅವರು ದಲಿತರ ಪ್ರತಿನಿಧಿಗಳು ಇಲ್ಲವೆ ನೇತಾರರಲ್ಲ, ಸರ್ಕಾರ ಅವರನ್ನು ಆರಿಸಿ ಕಳಿಸಿದೆ, ಅಸ್ಪೃಶ್ಯರ ನಿಜವಾದ ನೇತಾರರು ಬೇರೆ ಜನರಿದ್ದಾರೆ. ಅವರು ಕಾಂಗ್ರೆಸ್ಸಿನ ಆಧೀನದಲ್ಲಿದ್ದಾರೆ. ಕಾಂಗ್ರೆಸ್ ಹಾಗೂ ನಾನು ಇವರೇ ಅಸ್ಪೃಶ್ಯಾದಿ ಎಲ್ಲ ಅಲ್ಪ ಸಂಖ್ಯಾಕ ಸಮಾಜದ ಪ್ರತಿನಿಧಿಗಳಾಗಿದ್ದೇವೆ' ಅನ್ನುವ ಬುಡುಬುಡಿಕೆಯನ್ನು ಮ. ಗಾಂಧೀಜಿಯವರು ಮೊದಲಿನಿಂದಲೂ ಬಾರಿಸುತ್ತಿದ್ದರು. ಗುರುವಾರದ ತುಂಬು ಸಭೆಯಲ್ಲೂ ಅವರು ಇದೇ ವಿಷಯಕ್ಕೆ ಹೆಚ್ಚು ಒತ್ತುಕೊಟ್ಟರು. ಆದ್ದರಿಂದ ಅವರ ಈ ಹೇಳಿಕೆಯ ಪೊಳ್ಳುತನವನ್ನು ಎಲ್ಲರೆದುರು ತರುವುದು ಅಗತ್ಯವಾಗಿತ್ತು. ಮುಸಲ್ಮಾನರ ವತಿಯಿಂದ ಸರ್. ಮೊಹಮ್ಮದ್ ಶಫಿಯವರು ಗಾಂಧೀಜಿಯವರ ಈ ಹೇಳಿಕೆಯನ್ನು ಅಲ್ಲಗಳೆದರು. ಹಾಗೂ ಡಾ.ಅಂಬೇಡ್ಕರ್ ಅವರು ಕೂಡ ಗಾಂಧೀಜಿಯವರ ಈ ಹೇಳಿಕೆಯನ್ನು ಒಪ್ಪಿಕೊಳ್ಳಲಿಲ್ಲ. ಯಾರಿಗೂ ತಿಳಿಯದೆ ಸುಮ್ಮನೆ ಚಿವುಟುವವರ ಕೈ ಕಾಣುವುದಿಲ್ಲ ಆದರೆ ಬೊಬ್ಬೆ ಹೊಡೆಯುವವನ ಬಾಯಿ ಮಾತ್ರ ಕಾಣುತ್ತದೆ ಅನ್ನುವಂತೆಯೇ ಆಯಿತು. ಮಹಾತ್ಮ ಗಾಂಧೀಜಿಯವರು ಸತ್ಪುರುಷರು, ಅಲ್ಲದೆ ಅವರು ಅಸ್ಪೃಶ್ಯೋದ್ಧಾರಕರು, ಅವರ ಪ್ರತಿಯೊಂದು ಶಬ್ದವನ್ನೂ ವೇದವಾಕ್ಯವೆಂದು ತಿಳಿಯಬೇಕು, ಅವರು ಯಾವುದೇ ಹೇಳಿಕೆಯನ್ನು ಕೊಟ್ಟರೂ, ಸರಿಯೋ ತಪ್ಪೋ ಯಾವುದೇ ರೀತಿಯ ಧೋರಣೆಯನ್ನು

ಸ್ವೀಕರಿಸಿದರೂ ಜನತೆ ಅದನ್ನು ಒಪ್ಪಿಕೊಳ್ಳಬೇಕು ಅನ್ನುವಂತಹ ಯೋಚನೆಯುಳ್ಳ ಜನರಿಗೆ ಡಾ. ಅಂಬೇಡ್ಕರ್ ಅವರುಈ ಕೆಳಗಿನಂತೆ ಮಾಡಿದ ಭಾಷಣ ಕಹಿಯೆನಿಸಿದರೆ ಆಶ್ಚರ್ಯವಿಲ್ಲ. ಇಲ್ಲಿಯ ಸಣ್ಣ ಪುಟ್ಟ ರಾಷ್ಟ್ರೀಯ ವೃತ್ತ ಪತ್ರಿಕೆಗಳು ಟೆಲಿಗ್ರಾಂನಿಂದ ಬಂದ ಮ.ಗಾಂಧೀಜಿಯವರ ಭಾಷಣಗಳನ್ನು ಪ್ರಕಟಿಸಿದರು ಆದರೆ ಡಾ. ಅಂಬೇಡ್ಕರ್ ಅವರ ಭಾಷಣವನ್ನು ಪ್ರಕಟಿಸದೆ ಜನರ ಮನಸ್ಸನ್ನು ಕಲುಷಿತಗೊಳಿಸುವಂತಹ ಸಾರಂಶವನ್ನಷ್ಟೆ ಪ್ರಕಟಿಸಿ ತಮ್ಮ ಸೇಡು ತೀರಿಸಿಕೊಂಡರು. ಎಂಟು ತಾರೀಖಿನಂದು ಡಾ. ಅಂಬೇಡ್ಕರ್ ಅವರ ಪ್ರಕಟವಾದ ಭಾಷಣದ ಸಾರಾಂಶ ಕೆಳಗಿನಂತಿದೆ. ತಮ್ಮ ಭಾಷಣದಲ್ಲವರು,

'ತಮ್ಮ ಪ್ರಯತ್ನಕ್ಕೆ ಯಶಸ್ಸು ಸಿಗಲಿಲ್ಲ' ಅನ್ನುವ ಭಾವನೆಯಿಂದ ರಾತ್ರಿಯ ವಿಫಲವಾದ ಸಮಾಲೋಚನೆಯಿಂದ ಕಮಿಟಿಯ ಪ್ರತಿನಿಧಿಗಳು ಪರಸ್ಪರರನ್ನು ಬೀಳ್ಕೊಟ್ಟರೂ ಇಂದು ಅದಕ್ಕೆ ಸಂಬಂಧಿಸಿದಂತೆ ಮಾತನಾಡುವಾಗ ವಾದಗ್ರಸ್ತ ವಿಷಯ ಇಲ್ಲವೆ ಮತಭೇದಕ್ಕೆ ಈಡುಮಾಡುವಂತಹ ಭಾಷಣಗಳನ್ನು ಮಾಡಬಾರದು ಅನ್ನುವ ಸಾಧಾರಣ ಪರಸ್ಪರ ಒಪ್ಪಂದವಾಗಿತ್ತು. ಆದರೆ ಗಾಂಧೀಜಿಯವರ ಇವತ್ತಿನ ಭಾಷಣವನ್ನು ಕೇಳಿದಾಗ ಅವರು ಈ ಒಪ್ಪಂದವನ್ನು ಮುರಿದಿದ್ದನ್ನು ನೋಡಿ ಬಹಳ ದುಃಖವಾಯಿತು. ಗಾಂಧೀಜಿಯವರು ಭಾಷಣವನ್ನಾರಂಭಿಸುವಾಗಲೇ ಕಮಿಟಿಯ ಕಾರ್ಯ ಯಶಸ್ವಿಯಾಗಲಿಲ್ಲವೇಕೆ ಅನ್ನುವುದರ ಬಗ್ಗೆ ತಮ್ಮ ಅನಿಸಿಕೆಗಳನ್ನು ಹೇಳುತ್ತ ವಾದಗ್ರಸ್ತ ವಿಷಯವನ್ನಾರಂಭಿಸಿದರು. ಕಮಿಟಿಯ ಕಾರ್ಯಕ್ಕೆ ಅಪಯಶಸ್ಸು ಯಾಕೆ ಬಂತು ಅನ್ನುವುದನ್ನು ಹೇಳುವ ಸಾಕಷ್ಟು ಪುರಾವೆಗಳು ನ್ನನ್ನಲ್ಲೂ ಇವೆ. ಆದರೆ ಅದನ್ನು ಇಲ್ಲಿ ಉಲ್ಲೇಖಿಸುವುದು ಅಪ್ರಾಂಸಗಿಕವಾಗಿರುವುದರಿಂದ ನಾನು ಹಾಗೆ ಮಾಡಲಾರೆ.

ಕಮಿಟಿಯ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಬೇಕೆ ಇಲ್ಲವೆ ಅನ್ನುವ ಸಮಯೋಚಿತ ವಿಷಯದ ಬಗ್ಗೆಯಷ್ಟೆ ಮಾತನಾಡುವುದನ್ನು ಬಿಟ್ಟು ಕಮಿಟಿಯ ಸಭಾಸದರು ಆಯಾ ಸಮಾಜದ ಪ್ರತಿನಿಧಿಗಳಾಗಿದ್ದಾರೆಯೇ ಇಲ್ಲವೆ ಅನ್ನುವ ವಾದಗ್ರಸ್ತ ಹಾಗೂ ಅಪ್ರಾಸಂಗಿಕ ವಿಷಯವನ್ನು ಕೆರೆದು ತೆಗೆದು ಗಾಂಧೀಜಿಯವರು ಬೇರೆಯೇ ವಾದಕ್ಕೆ ಎಡೆಮಾಡಿಕೊಟ್ಟಿದ್ದಾರೆ. ಸರ್ಕಾರ ನಮ್ಮನ್ನು ನೇಮಿಸಿ ಕಳಿಸಿದೆ ಅನ್ನುವುದನ್ನು ನೀವ್ಯಾರೂ ಅಲ್ಲಗಳೆಯಲಾರಿರಿ. ಆದರೆ ನನ್ನ ಬಗ್ಗೆಯೇ ಮಾತಾಡುವುದಿದ್ದರೆ ತಮ್ಮ ಪ್ರತಿನಿಧಿ ಯಾರಾಗಿರಬೇಕು ಅನ್ನುವುದನ್ನು ಆರಿಸುವ ಅವಕಾಶ ದಲಿತರಿಗೆ ಕೊಟ್ಟರೆ ಅವರಾರಿಸುವ ಪ್ರತಿನಿಧಿಗಳಲ್ಲಿ ನನ್ನ ಸ್ಥಾನ ಮೊದಲನೆಯದಾಗಿರುತ್ತದೆ ಅನ್ನುವುದನ್ನು ಆತ್ಮವಿಶ್ವಾಸದಿಂದ ಗಾಂಧೀಜಿಯವರಿಗೆ ಹೇಳುತ್ತೇನೆ. ಗಾಂಧೀಜಿಯವರು ಆರಂಭಿಸಿರುವ ಈ ವಾದಗ್ರಸ್ತ ವಿಷಯಕ್ಕೆ ಉತ್ತರಿಸುತ್ತ ಉಳಿದವರಂತೆಯೇ ಸರ್ಕಾರ ನನ್ನನ್ನು ಆರಿಸಿದ್ದರೂ ನನ್ನನ್ನೇ ನನ್ನ ಜನರ ಹಿತಸಂಬಂಧದ ನಿಜವಾದ ಪ್ರತಿನಿಧಿಯಾಗಿದ್ದೇನೆ ಅನ್ನುವ ವಸ್ತುಸ್ಥಿತಿಯನ್ನವರು ಕಡೆಗಾಣಿಸಬಾರದು ಎಂದಷ್ಟೇ ಹೇಳುತ್ತೇನೆ.

ಕಾಂಗ್ರೆಸ್ ದಲಿತರಿಗಾಗಿ ಅಹೋರಾತ್ರಿ ಕಷ್ಟಪಡುತ್ತಿದೆ, ಹಾಗೂ ನಾನು ಹಾಗೂ ನನ್ನ ದಲಿತ ಪ್ರತಿನಿಧಿಗಳಿಗಿಂತ ಕಾಂಗ್ರೆಸ್‌ನವರಲ್ಲಿ ದಲಿತ ಪ್ರತಿನಿಧಿಗಳು ಹೆಚ್ಚು ಪ್ರಮಾಣದಲ್ಲಿ ಬರಬಹುದೆಂದು ಗಾಂಧೀಜಿಯವರು ಯಾವತ್ತೂ ಪ್ರತಿಪಾದಿಸುತ್ತಿರುತ್ತಾರೆ. ನಾನವರಿಗೆ ಹೇಳುವುದಿಷ್ಟೆ, ಬೇಜವಾಬ್ದಾರಿ ಜನರು ಸುಮಾರು ಸಲ ಸುಳ್ಳು ಹಕ್ಕುಗಳನ್ನು ಹೇಳಿಕೊಂಡು ಬರುವಂತೆ ಇದೂ ಕೂಡ ಸುಳ್ಳು ಹಕ್ಕುಗಳಾಗಿದ್ದು ದಲಿತರ ಹೆಸರಿನಿಂದ ಹೇಳಿಕೊಂಡು ಬಂದಿರುವ ಈ ಹಕ್ಕುಗಳನ್ನು ದಲಿತರೂ ಅಲ್ಲಗಳೆದಿದ್ದರೂ ಅವುಗಳನ್ನೇ ಮತ್ತೆಮತ್ತೆ ಹೇಳಿಕೊಂಡು ಈ ಜನ ಚೇಷ್ಟೆ ಮಾಡುತ್ತಿದ್ದಾರೆ.

ಕಾಂಗ್ರೆಸ್ ಬಗ್ಗೆ ದಲಿತರಿಗಿರುವ ಅಪನಂಬಿಕೆ ವ್ಯಕ್ತಪಡಿಸುವ ಒಂದು ಟೆಲಿಗ್ರಾಂ ನನಗೆ ಇತ್ತೀಚೆಗೆ ಕುಗನ್(ಅಲ್ಮೋರಾ) ದಿಂದ ಅಸ್ಪೃಶ್ಯ ಸಮಾಜ ಸಂಘದ ಅಧ್ಯಕ್ಷರಿಂದ ಬಂದಿದೆ. ನಾನು ಈ ಜಾಗವನ್ನು

ಇದುವರೆಗೂ ನೋಡಿಲ್ಲ ಹಾಗೂ ಟೆಲಿಗ್ರಾಂ ಕಳಿಸುವವನ ಪರಿಚಯವೂ ನನಗಿಲ್ಲ, ಆದರೆ ಆತನ ಹೇಳಿಕೆಯ ಪ್ರಕಾರ ಕಾಂಗ್ರೆಸ್‌ನ ಕೆಲವು ಜನ ದಲಿತರ ಬಗ್ಗೆ ಸಹಾನುಭೂತಿ ತೋರಿಸುತ್ತಿದ್ದರೂ ಬಹುಜನ ದಲಿತ ಸಮಾಜ ಮಾತ್ರ ಕಾಂಗ್ರೆಸ್ಸಿನಲ್ಲಿಲ್ಲ ಅನ್ನುವುದು ಮಾತ್ರ ಖಚಿತ.

ಆದರೆ ಈ ವಿಷಯದ ಬಗ್ಗೆ ಚರ್ಚಿಸುವ ಸಮಯವೂ ಇದಲ್ಲ. ಈಗಿನ ಪ್ರಶ್ನೆಯ ಬಗ್ಗೆಯಷ್ಟೆ ಮಾತಾಡುವುದಾದರೆ ಮೈನಾರಿಟಿ ಕಮಿಟಿಯ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟು ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಕಾರ್ಯ ಮುಂದುವರೆಸಲ್ಪಡಲಿ ಅನ್ನುವ ಮ. ಗಾಂಧೀಜಿಯವರ ಮಸೂದೆಗೆ ಮ. ಶಫಿಯವರಂತೆ ನಾನೂ ವಿರೋಧಿಸುತ್ತೇನೆ. ಈ ಮಹತ್ವವಾದ ಪ್ರಶ್ನೆಯನ್ನು ಬಿಟ್ಟು ಬೇರೊಂದು ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವುದು ನನಗೂ ಇಷ್ಟವಿಲ್ಲ. ಒಂದೋ ಮತ್ತೊಮ್ಮೆ ಪ್ರಯತ್ನಿಸಿ ಅಲ್ಪಸಂಖ್ಯಾತರ ಈ ಪ್ರಶ್ನೆಯನ್ನು ನಿಮ್ಮ ನಿಮ್ಮಲ್ಲೇ ಬಿಡಿಸಿಕೊಂಡು ಏನಾದರೂ ವ್ಯವಸ್ಥೆ ಮಾಡಿಕೊಳ್ಳಿ, ಇದು ಅಸಾಧ್ಯವೆನಿಸಿದರೆ ಈ ವಿಷಯವನ್ನುಇತ್ಯರ್ಥ ಮಾಡುವ ಯೋಜನೆಯೊಂದನ್ನು ಬ್ರಿಟಿಷ್ ಸರ್ಕಾರ ಹಮ್ಮಿಕೊಂಡು ಮುಂದಿನ ಕೆಲಸಕ್ಕೆ ಕೈಹಾಕಲಿ. ಬೇರೊಂದು ರಾಷ್ಟ್ರದ ಜನರೆದುರು ಮಾತ್ರ ಈ ಪ್ರಶ್ನೆಯನ್ನು ಬಿಡಿಸುವ ಕಾರ್ಯ ವಹಿಸುವಂತಿಲ್ಲ. ಏಕೆಂದರೆ ಈ ವಿಷಯದಲ್ಲಿ ಬ್ರಿಟಿಷ್ ಸರ್ಕಾರ ವಹಿಸಿಕೊಳ್ಳಬಹುದಾದಂತಹ ಜವಾಬ್ದಾರಿಯನ್ನು ಬೇರೊಂದು ರಾಷ್ಟ ವಹಿಸಿಕೊಳ್ಳಲಾರದು.

ಬ್ರಿಟಿಷರಿಂದ ಈ ರಾಜ್ಯವನ್ನು ಹಿಂದೂಜನರ ಕೈಗೆ ಅದೂ ವರಿಷ್ಠ ಜಾತಿಯ ಹಿಂದೂಗಳ ಕೈಗೆ ಅಧಿಕಾರ ಕೊಡಮಾಡುವ ರಾಜಕೀಯ ಚಳುವಳಿಯಲ್ಲಿ ದಲಿತ ಸಮಾಜ ಇಂದಿನವರೆಗೆ ಭಾಗವಹಿಸಿಲ್ಲ ಅನ್ನುವುದನ್ನು ಕೂಡ ನಾನಿಂದು ಎಲ್ಲರ ಗಮನಕ್ಕೆ ತರಲಿಚ್ಛಿಸುತ್ತೇನೆ. ಬ್ರಿಟಿಷ್ ಸರ್ಕಾರದ ವಿರುದ್ಧ ದಲಿತರ ಕೆಲವು ದೂರುಗಳಿವೆ. ಅಷ್ಟಕ್ಕೇ ರಾಜಕೀಯ ಬದಲಾವಣೆಗಳಾಗಬೇಕೆಂದು ದಲಿತರೆಂದೂ ಹಟ ಹಿಡಿಯಲಿಲ್ಲ. ಕೇವಲ ರಾಜಕೀಯ ಬದಲಾವಣೆಗಾಗಿ ಅವರು ಉತ್ಸುಕರಾಗಿಲ್ಲ, ಆದರೆ ಕೇವಲ ಇದಕ್ಕಾಗಿಯೇ ಮಾಡುತ್ತಿರುವ ಚಳುವಳಿಯನ್ನು ನಿಲ್ಲಿಸುವುದು ಸರ್ಕಾರಕ್ಕೆ ಸಾಧ್ಯವಿರದಿದ್ದರೆ ಹಾಗೂ ರಾಜಕೀಯ ಅಧಿಕಾರವನ್ನು ವಿಭಾಗಿಸುವುದು ಅಗತ್ಯವಾಗಿದ್ದರೆ ಆ ಅಧಿಕಾರಗಳು ಕೇವಲ ಹಿಂದೂ ಇಲ್ಲವೆ ಮುಸಲ್ಮಾನರಂತಹ ಕೆಲವೇ ಜನರ ಕೈಯಲ್ಲಿ ಕೊಡುವುದಕ್ಕಿಂತ ಆ ಅಧಿಕಾರವನ್ನುಯೋಗ್ಯ ಹಾಗೂ ಅವಶ್ಯಕ ಪ್ರಮಾಣದಲ್ಲಿ ಸರ್ವಸಾಮಾನ್ಯ ಜನತೆ ಹಾಗೂ ದಲಿತರಲ್ಲಿ ವಿಭಾಗಿಸಿ ಸಂರಕ್ಷಣೆಯ ಕೆಲವು ನಿಯಮಗಳನ್ನು ಹಾಕಿಕೊಡುವುದು ಅಗತ್ಯವಾಗಿದೆ. ಈ ಎಲ್ಲ ದೃಷ್ಟಿಯಿಂದ ಯೋಚಿಸಿದಾಗ ಈ ಪ್ರಶ್ನೆಯನ್ನು ಮೊದಲು ಬಿಡಿಸದೆ ಹೊಸ ಸಂವಿಧಾನವನ್ನು ತಯಾರಿಸುವುದರಲ್ಲಿ ನಾವು ಮನಸಾರೆ ಭಾಗವಹಿಸಲು ಹೇಗೆ ಸಾಧ್ಯ?

## ೪೬.

# ದೇಶದ ಒಗ್ಗಟ್ಟಿಗಾಗಿ ಸಂಘಟನೆ ಅಗತ್ಯ

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಲಂಡನ್ನಿನ ತಮ್ಮ ಕೆಲಸವನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಭಾರತಕ್ಕೆ ಮರಳಲಿದ್ದಾರೆ ಅನ್ನುವ ಸಂತೋಷದ ಸುದ್ದಿಯನ್ನು ಕೆಳಗಿನ ಕರಪತ್ರಗಳಿಂದ ಹಂಚಲಾಯಿತು.

ಶುಕ್ರವಾರ ತಾ. ೨೯ನೆಯ ಜನವರಿ ೧೯೨೩ ರಂದು ಬೆಳಿಗ್ಗೆ ೬ ಘಂಟೆಗೆ (ಸ್ಟ್ಯಾ.ಟೈ) ಬೇಲಾರ್ಡ್ ಪಿಯರ ಬಂದರಿಗೆ ಎಲ್ಲರೂ ಹಾಜರಿರಬೇಕು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸ್ವಾಗತ ಸಮಾಂರಂಭದಲ್ಲಿ ಭಾಗವಹಿಸಲಿಚ್ಛಿಸುವ ಜನ, ಸಂಸ್ಥಾನಗಳು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಸ್ವಾಗತ ಕಮಿಟಿಯಲ್ಲಿ ಗುರುವಾರ ಸಾಯಂಕಾಲ ೬ ಘಂಟೆಯ ವರೆಗೆ ತಮ್ಮತಮ್ಮ ಹೆಸರುಗಳನ್ನು ನೊಂದಾಯಿಸಿ ಪಾಸ್ ಪಡೆಯಬೇಕು. ಹೆಸರು ನೋಂದಾಯಿಸುವ ಫ್ಲೀಸ್, ಸಂಘ ಸಂಸ್ಥೆಗಳು ಇಲ್ಲವೆ ಪಂಚರಿಗೆತಲಾ ೫ ರೂಪಾಯಿ ಹಾಗೂ ಉಳಿದವರಿಗೆ ೧ ರೂ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಹಡಗಿನಿಂದ ಇಳಿದ ಮೇಲೆ ಸುಮಾರು ಎಂಟು ಘಂಟೆಗೆ ಬೇಲಾರ್ಡ್ ಪಿಯರ್‌ನ ಸ್ಟೇಶನ್ನಿನ ಹಾಲ್‌ನಲ್ಲಿ ಎಲ್ಲರ ವತಿಯಿಂದ ಅವರ ಸ್ವಾಗತ ಸಮಾರಂಭವನ್ನು ಹಮ್ಮಿಕೊಳ್ಳಲಾಗುವುದು. ಪ್ರತಿಯೊಬ್ಬರು ತಮ್ಮ ಹೂವು ಹಾರಗಳನ್ನು ಡಾಕ್ಟರ್ ಸಾಹೇಬರಿಗೆ ಅರ್ಪಿಸತಕ್ಕದ್ದು.

ಮಧ್ಯಾಹ್ನ ೩ ರಿಂದ ೬ ಘಂಟೆಯತನಕ ಪರೆಲ್ ನಲ್ಲಿಯ ಡಾಕ್ಟರ ಸಾಹೇಬರ ಲೈಬ್ರರಿ ಹಾಲ್‌ನಲ್ಲಿ ಬೇರೆಬೇರೆ ಪ್ರಾಂತ್ಯಗಳಿಂದ ಬಂದಿರುವಂತಹ ನೇತಾರರೊಂದಿಗೆ ವಿಚಾರ ವಿನಿಮಯ ಕಾರ್ಯಕ್ರಮವಿದೆ.

ರಾತ್ರಿ ೭ ರಿಂದ ೧೦ ಘಂಟೆಯವರೆಗೆ ದುಂಡು ಮೇಜಿನ ಪರಿಷತ್ತಿನ ಬಗ್ಗೆ ಡಾ. ಅಂಬೇಡ್ಕರ್ ಅವರು ಜಾಹೀರು ಭಾಷಣ ಮಾಡಲಿದ್ದಾರೆ. ಹಾಗೂ ಇತರ ನೇತಾರರೂ ಭಾಷಣ ಮಾಡಲಿದ್ದಾರೆ.

ಶನಿವಾರ ತಾ. ೩೦ ರಂದು ಬೆಳಿಗ್ಗೆ ೧೧ ರಿಂದ ಮಧ್ಯಾಹ್ನ ೧ ಘಂಟೆಯವರೆಗೆ ಮುಂಬಯಿಯ ಮುಖ್ಯ ನೇತಾರರೊಂದಿಗೆ ವಿಚಾರವಿನಿಮಯವಿದೆ. ನಂತರ ಮಧ್ಯಾಹ್ನ ೨–೧೫ರ ಪಂಜಾಬ್ ಮೇಲಿನಿಂದ ದುಂಡು ಮೇಜು ಪರಿಷತ್ತಿನ ವರ್ಕಿಂಗ್ ಕಮಿಟಿಯ ಕೆಲಸಕ್ಕಾಗಿ ದಿಲ್ಲಿಗೆ ಹೊರಡುವವರಿದ್ದಾರೆ.

ಸ್ವಾಗತ ಕಮಿಟಿಯ ವಿನಂತಿಯ ಮೇರೆಗೆ ಸ್ವಾಗತ ಸಮಾರಂಭದ ಟಿಕೆಟ್ ಪಡೆದಿರುವವರನ್ನು ಸ್ವಾಗತ ಕಮಿಟಿಯಲ್ಲಿ ಸೇರಿಸಿಕೊಳ್ಳಲಾಗುವುದು.

ತಮ್ಮ

ಸೀತಾರಾಮ್, ನಾಮದೇವ್, ಶಿವತರಕರ್

ಸೆಕ್ರೆಟರಿ, ಡಾ. ಅಂಬೇಡ್ಕರ ಸ್ವಾಗತಕಮಿಟಿ, ಮುಂಬಯಿ.

ಇದರಂತೆ ದಲಿತ ಸಮಾಜ ಅವರ ಸ್ವಾಗತದ ತಯಾರಿ ನಡೆಸಿತ್ತು. ಅಖಿಲ ಭಾರತದ ದಲಿತ ಬಾಂಧವರು ಭಾವಿ ದೇಶದ ಸಂವಿಧಾನದ ವಿಷಯವಾಗಿ ದುಂಡು ಮೇಜಿನ ಪರಿಷತ್ತಿನಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರರು ಮಾಡಿದ ಅಮೂಲ್ಯ ಕಾರ್ಯಕ್ಕಾಗಿ ದಲಿತರು ಅವರ ಗುಣಗಾನ ಮಾಡುತ್ತಿದ್ದರು ಆದರೆ

ಪ್ರತ್ಯಕ್ಷವಾಗಿ ಭೇಟಿಯಾಗದೆ, ದರ್ಶನವಾಗದೆ ಅವರ ಪರಾಕ್ರಮಗಳ ಬಗ್ಗೆ ಕೆಲಸಗಳ ಬಗ್ಗೆ ನಮಗೆ ಸರಿಯಾಗಿ ತಿಳಿಯಲಾರದು ಎಂದು ಪ್ರತಿಯೊಬ್ಬರಿಗೂ ಅನಿಸುತ್ತಿತ್ತು. ೨೯ ನೆಯ ಜನವರಿ ೧೯೩೨ರಂದು ಎಸ್. ಎಸ್. ಮುಲ್ತಾನ್ ಬೋಟಿನಿಂದ ಮುಂಬಯಿಗೆ ಬರುತ್ತಿದ್ದೇನೆ ಅನ್ನುವ ಟೆಲೆಗ್ರಾಮ್ ಬಂದಾಗ ದಲಿತ ಸಮಾಜದಲ್ಲಿ ಸಂತೋಷದ ವಾತಾವರಣ ಹಬ್ಬಿತು. ಎಲ್ಲರೂ ಬಹಳ ಆತುರವಾಗಿ ೨೯ನೆಯ ತಾರೀಖಿನ ದಾರಿ ಕಾಯತೊಡಗಿದರು. ಕಡೆಗೂ ಅವರ ಆಗಮನದ ದಿನ ಕಳೆದ ಶುಕ್ರವಾರ ಉದಯಿಸಿತ್ತು.

ಡಾ. ಅಂಬೇಡ್ಕರ್ ಅವರು ಬೆಳಿಗ್ಗೆ ಆರು ಘಂಟೆಗೆ ಬೇಲಾರ್ಡ್ ಪಿಯರ್‌ನ ಮೋಲ್ ಸ್ಟೇಷನ್‌ನಲ್ಲಿ ಹೊರದೇಶದಿಂದ ಬರುವ ಬೋಟಿನಿಂದ ಇಳಿಯುವವರಿದ್ದರು ಹಾಗಾಗಿ ದಲಿತ ಬಂಧು ಭಗಿನಿಯರು ಸಾಕಷ್ಟು ಸಂಖ್ಯೆಯಲ್ಲಿ ಬೆಳ್ಳಂಬೆಳಿಗ್ಗೆ ನಾಲ್ಕುವರೆ–ಐದು ಘಂಟೆಯಿಂದಲೇ ಮೋಲ್ ಸ್ಟೇಷನ್ನಿನಲ್ಲಿ ಸೇರಲು ಆರಂಭಿಸಿದ್ದರು. ಪ್ರತಿಯೊಬ್ಬರ ಮುಖದ ಮೇಲೂ ಸಂತೋಷದ, ಒಂದು ರೀತಿಯ ಸಮಾಧಾನದ ಹಾಗೂ ಆನಂದದ ಭಾವನೆಗಳು ಸ್ಪಷ್ಟವಾಗಿ ಕಾಣಿಸುತ್ತಿದ್ದವು. 'ಡಾ. ಅಂಬೇಡಕರ್ ಕೀ ಜೈ' ಅನ್ನುವ ಜಯಘೋಷಗಳಲ್ಲಿ ಡಾ.ಅಂಬೇಡ್ಕರರ ಬಗ್ಗೆಯಿರುವ ಪ್ರೀತಿ ಹಾಗೂ ಭಕ್ತಿ ಭಾವನೆಗಳು ಪ್ರತಿಯೊಬ್ಬರ ಬಾಯಿಯಿಂದಲೂ ಹೊರಹೊಮ್ಮುತ್ತಿದ್ದವು. ಡಾ. ಅಂಬೇಡ್ಕರರ ದರ್ಶನ ಹೇಗೆ ಮತ್ತು ಯಾವಾಗ ಆಗುತ್ತದೆ ಅನ್ನುವ ಆತುರತೆ ಎಲ್ಲರಲ್ಲಿತ್ತು. ನಾವೆಲ್ಲರೂ ಈಗ ಅಂಬೇಡ್ಕರ ಅವರನ್ನು ನೋಡಲಿದ್ದೇವೆ ಅನ್ನುವ ಉತ್ಸುಕತೆಯಿಂದ ಎಲ್ಲರೂ ಮುಲ್ತಾನ ಹಡಗಿನತ್ತ ತಮ್ಮ ಕಣ್ಣು ನೆಟ್ಟಿದ್ದರು. ಅಷ್ಟರಲ್ಲಿ ಡಾ. ಅಂಬೇಡ್ಕರರು ಡೆಕ್‌ನ ಮೇಲೆ ಬಂದ ಕೂಡಲೆ ಪರಿಸರವೆಲ್ಲ ಅವರ ಜಯಘೋಷದಿಂದ ತುಂಬಿ ಹೋಯಿತು.

ಅಂಬೇಡ್ಕರರ ಸ್ವಾಗತ ಸಂಮಾರಂಭವನ್ನು ಹಮ್ಮಿಕೊಳ್ಳಬೇಕೆಂದು ಮೊದಲೇ ನಿರ್ಧರಿಸಿದಂತೆ ಮೋಲ್ ಸ್ಟೇಷನ್ನಿನ ಒಂದು ದೊಡ್ಡ ಹಾಲನ್ನು ಅದ್ಭುತವಾಗಿ ಸಿಂಗರಿಸಿ ಎತ್ತರದಲ್ಲಿ ಒಂದು ಆಸನವನ್ನಿರಿಸಲಾಗಿತ್ತು. ಡಾ. ಅಂಬೇಡ್ಕರ್ ಬರುವ ಹಡಗಿನಲ್ಲೇ ಮಿ. ಶೌಕತ್‌ಅಲಿಯವರೂ ಬರುವರಿದ್ದರಿಂದ ಮುಸಲ್ಮಾನ ಬಾಂಧವರು ಹಾಗೂ ಖಿಲಾಫ಼ತ್ ಸ್ವಯಂ ಸೇವಕರು ಅವರ ಸ್ವಾಗತದ ತಯಾರಿ ನಡೆಸಿದ್ದರು. ಒಂದೆಡೆ ಮುಸಲ್ಮಾನ ಸಮಾಜದ ಬಾಂಧವರಿಗಾಗಿ ಹಾಗೂ ಮತ್ತೊಂದೆಡೆ ದಲಿತ ಭಾಂಧವರಿಗಾಗಿ ಹೀಗೆ ಆ ಹಾಲನ್ನು ಎರಡು ಭಾಗಗಳಲ್ಲಿ ವಿಭಜಿಸಲಾಗಿತ್ತು. ಡಾ. ಅಂಬೇಡ್ಕರರ ಸ್ವಾಗತಕ್ಕಾಗಿ ದಲಿತರು ಆತುರರಿದ್ದಂತೆ ಮಿ. ಶೌಕತ್‌ಅಲಿಯವರ ಸ್ವಾಗತಕ್ಕಾಗಿ ಮುಸಲ್ಮಾನ ಬಾಂಧವರೂ ಆತುರರಾಗಿದ್ದರು. ಇಬ್ಬರ ಸ್ವಾಗತದ ಸಮಯವೂ ಏಳು ಘಂಟೆ ಎಂದು ನಿರ್ಧಾರವಾಗಿತ್ತು. ಅಲ್ಲಿಯತನಕ ಅವರನ್ನು ಎದುರುಗೊಳ್ಳಲು ದಲಿತರ ಹಾಗೂ ಮುಸಲ್ಮಾನ ನಾಯಕರು ಹಡಗಿಗೆ ಹೋಗಿದ್ದರು. ಸ್ವಾಗತಕ್ಕೂ ಮುನ್ನ ಬೋಟಿನಲ್ಲಿ ಮೇಲಿನ ಡೆಕ್ ಮೇಲೆ ಡಾ.ಅಂಬೇಡ್ಕರ್ ಹಾಗೂ ಶ್ರೀ. ದೇವರಾವ್. ನಾಯಿಕ್, ಭಾಯಿ. ಪ್ರಧಾನ್, ಡಾ. ಪ್ರಧಾನ್, ಶ್ರೀ. ಅಸಯಿಕರ್, ಕದ್ರೆಕರ್, ಗುಪ್ತೆ, ಪ್ರಧಾನ್, ಖಾಂಡಕೆ, ಶಿವತರಕರ್, ರಣಖಾಂಬೆಯವರು ದುಂಡು ಮೇಜಿನ ಪರಿಷತ್ತಿನ ಬಗ್ಗೆ ಸ್ವಲ್ಪ ಚರ್ಚಿಸಿದರು. ನಂತರ ಅಂಬೇಡ್ಕರ ಅವರು ಹಡಗಿನಲ್ಲಿಯ ತನ್ನ ಕೆಲವು ಕೆಲಸಗಳನ್ನು ಮುಗಿಸಿಕೊಂಡು ಮಿ. ಶೌಕತ್‌ಅಲಿಯವರೊಡನೆ ಸ್ವಾಗತಸಮಾರಂಭಕ್ಕಾಗಿ ಹಾಲ್‌ಗೆ ಬಂದರು. ಇಡೀ ಪರಿಸರ ಮತ್ತೊಮ್ಮೆ ಅವರಿಬ್ಬರ ಜಯಘೋಷದಿಂದ ತುಂಬಿಹೋಯಿತು. ಉಭಯ ಪಕ್ಷವೂ ಡಾ. ಅಂಬೇಡ್ಕರ್ ಹಾಗೂ ಮಿ. ಶೌಕತ್ ಅಲಿಯವರಿಗೆ ಸ್ವಾಗತ ಕೋರಿತು ಅಂದರೆ ತಪ್ಪಾಗಲಾರದು. ಲಂಡನ್ನಿನಲ್ಲಾದ ದುಂಡು ಮೇಜಿನ ಪರಿಷತ್ತಿನ ಕಾರ್ಯ ಕಲಾಪಗಳಲ್ಲಿ ಮುಸಲ್ಮಾನರು ಡಾ. ಅಂಬೇಡ್ಕರರಿಗೆ ಮಾಡಿದ ಸಹಾಯವನ್ನು ಸ್ಮರಿಸಿ ದಲಿತರು ಮಿ. ಶೌಕತ್ ಅಲಿಯವರನ್ನು ಹಾಗೆಯೇ ಮುಸಲ್ಮಾನರು

ಡಾ. ಅಂಬೇಡ್ಕರರಿಗೆ ಸ್ವಾಗತಕೋರಿದರು. ಈ ದಲಿತ (ಹಿಂದೂ) ಹಾಗೂ ಮುಸಲ್ಮಾನರ ಸಂಯುಕ್ತ ಸ್ವಾಗತ ಸಮಾರಂಭ ಬಹಳ ಅಪರೂಪದ್ದಾಗಿತ್ತು ಎಂದೇ ಹೇಳಬಹುದು.

ತಮ್ಮ ಸ್ವಾಗತಕ್ಕೆ ಉತ್ತರಿಸುವಾಗ ಮಿ. ಶೌಕತ್ ಅಲಿ 'ಡಾ. ಅಂಬೇಡ್ಕರ್ ಅವರು ನನಗೆ ತಮ್ಮನ ಹಾಗೆ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರತಿಯೊಂದು ಜಾತಿಯ, ಪಂಥದ ಹಾಗೂ ಧರ್ಮದ ಜನ ನಾವೆಲ್ಲ ಬಾಂಧವರು ಎಂದು ಮನಸಾರೆ ಒಪ್ಪಿಕೊಳ್ಳದೆ ನಮಗೆ ಸ್ವಾತಂತ್ರ್ಯ ಸಿಗಲಾರದು. ಮನುಷ್ಯನಿಗೆ ತಾನು ಮಾಡುತ್ತಿರುವ ಕೆಲಸಕ್ಕಾಗಿ ಮೊದಲು ಧೈರ್ಯವಿರಬೇಕು. ಆ ದೃಷ್ಟಿಯಿಂದ ನೋಡಿದರೆ ಡಾ. ಅಂಬೇಡ್ಕರ ಅವರು ದುಂಡು ಮೇಜಿನ ಪರಿಷತ್ತಿನಲ್ಲಿ ದಲಿತರ ಪರವಾಗಿ ಮಾತನಾಡುವಾಗ ತೋರಿಸಿದ ಧೈರ್ಯ ನಿಜವಾಗಿಯೂ ಮೆಚ್ಚುವಂತಹದ್ದು. ಮುಸಲ್ಮಾನ ಸಮಾಜ ಭಾರತದ ಸ್ವಾತಂತ್ರ್ಯಕ್ಕೆ ಸಹಾಯ ಮಾಡುತ್ತಿದೆ. ಇದಕ್ಕಾಗಿ ಎಲ್ಲರೂ ಮುಂದೆ ಬಂದು ತಮ್ಮ ಸಹಾಯಹಸ್ತ ಚಾಚಬೇಕು'ಎಂದರು.

ಮಿ. ಶೌಕತ್ ಅಲಿಯ ಭಾಷಣದ ನಂತರ ಡಾ.ಅಂಬೇಡ್ಕರ್ ಮಾತನಾಡಲು ಎದ್ದಕೂಡಲೇ ಅವರ ಜಯಘೋಷ ಹಾಗೂ ಕಿವಿ ಗಡಚಿಕ್ಕುವ ಚಪ್ಪಾಳೆಯ ಕರತಾಡನದ ಧ್ವನಿ ಕೇಳುತ್ತಲೇ ಇತ್ತು. ಹಾಗೆಯೇ ಹೂವಿನ ಹಾರಗಳ ಮಾಲೆ ಅವರ ಕೊರಳಿಗೆ ಬೀಳುತ್ತಲೇ ಇದ್ದವು. ಎಷ್ಟೋ ಸಲ ಈ ಹಾರಗಳಲ್ಲಿ ಡಾ. ಅಂಬೇಡ್ಕರ್ ಕಾಣೆಯಾಗಿದ್ದರು. ಸ್ವಲ್ಪ ಹೊತ್ತಿನ ನಂತರ ಈ ಜಯಘೋಷ ನಿಂತ ಮೇಲೆ ಡಾ. ಅಂಬೇಡ್ಕರ್ ಮಾತನಾಡಲಾರಂಭಿಸಿದರು. ಮೊದಲಿಗೆ ತಮಗೆ ಕೋರಿದ ಈ ಸ್ವಾಗತಕ್ಕಾಗಿ ಎಲ್ಲರಿಗೂ ಮನಸಾರೆ ಧನ್ಯಾವಾದ ಹೇಳಿ ತಮ್ಮ ಭಾಷಣ ಆರಂಭಿಸಿದರು.

ಇಂದಿನ ಈ ಜನಸಮೂಹ ಒಂದು ದೃಷ್ಟಿಯಿಂದ ಅದ್ಭುತವಾಗಿದೆ ಅಂತ ಹೇಳಬಹುದು. ಇಂದಿನ ವರೆಗೆ ಹಿಂದೂ ಹಾಗೂ ಮುಸಲ್ಮಾನರ ಸ್ವಾಗತ ಸಮಾರಂಭಗಳು ಬೇರೆಬೇರೆಯೇ ಆಗುತ್ತಿದ್ದವು ಹಾಗಾಗಿ ಎರಡೂ ಸಮಾಜದ ಭಿನ್ನತೆಗಳು ಕಣ್ಣಿಗೆ ಕಾಣುವಂತಹದ್ದಿರುತ್ತಿದ್ದವು. ಇಂದು ನಾವೆಲ್ಲರೂ ಇಲ್ಲಿ ಹಿಂದೂಗಳು ಅನ್ನುವ ಭಾವನೆಯಿಂದ ಸೇರಿದ್ದೇವೆ. ದುಂಡು ಮೇಜಿನ ಪರಿಷತ್ತಿನ ಬಗ್ಗೆ ನನಗಿಲ್ಲಿ ಏನೂ ಮಾತನಾಡುವುದಿಲ್ಲ ಆದರೂ ಮುಸಲ್ಮಾನ ಪ್ರತಿನಿಧಿಗಳು ದುಂಡು ಮೇಜಿನ ಪರಿಷತ್ತಿನಲ್ಲಿ ನನಗೆ ಆತ್ಮೀಯತೆಯಿಂದ ಸಹಾಯ ಮಾಡಿದ್ದಾರೆ. ಅವರ ಸಹಾಯ ಸಿಗದಿದ್ದಿದ್ದರೆ ಸುಮಾರು ಸಲ ಉಳಿದೆಲ್ಲ ಪ್ರತಿನಿಧಿಗಳ ಜೊತೆ ನಮ್ಮ ಹಕ್ಕಿಗಾಗಿ ಹೋರಾಡುವುದು ಸಾಧ್ಯವಿರಲಿಲ್ಲ. ದುಂಡು ಮೇಜಿನ ಪರಿಷತ್ತಿನಲ್ಲಿ ಉಳಿದ ಹಿಂದೂ ಪ್ರತಿನಿಧಿಗಳಲ್ಲಿ ದಲಿತರ ಬಗ್ಗೆ ನಿಜ ಹಾಗೂ ಸ್ಪಷ್ಟವಾಗಿ ಮಾತನಾಡಲು ಇರಬೇಕಿದ್ದ ಧೈರ್ಯ ನನಗೆ ಮುಸಲ್ಮಾನ ಪ್ರತಿನಿಧಿಗಳಲ್ಲಿ ಕಂಡುಬಂತು. ಅವರ ಸಹಾಯವನ್ನು ನಾನು ಯಾವತ್ತೂ ಗೌರವದಿಂದ ಕಾಣಬೇಕು. ಭಾರತದ ಒಗ್ಗಟ್ಟಿಗಾಗಿ ನಾವೆಲ್ಲರೂ ಸಂಘಟನೆಯ ಬಲದ ಮೇಲೆ ನಮ್ಮ ಕಾರ್ಯದ ಯೋಜನೆಗಳನ್ನು ಹಮ್ಮಿಕೊಳ್ಳಬೇಕು.

ಈ ಸ್ವಾಗತ ಸಮಾರಂಭವಾಗುವ ಮೊದಲು ಚರ್ಮಕಾರ ಸಮಾಜದ ಮಿ. ಪಿ. ಬಾಳು, ರಾಜಭೋಜ, ಕಾಜರೊಳಕರ್, ಪವಾರ ಇತ್ಯಾದಿ ಜನಡಾ. ಅಂಬೇಡ್ಕರ್ ಅವರನ್ನು ಹಡಗಿನಲ್ಲಿ ಹೋಗಿ ಭೇಟಿಯಾಗಿ ಬಂದರು. ಡಾ. ಅಂಬೇಡ್ಕರ್ ಅವರಿಗೆ ಹೂವಿನ ಹಾರಗಳನ್ನು ಹಾಕಿ ಸನ್ಮಾನ ಮಾಡಿದರು. ಮಿ. ಪಿ. ಬಾಳು ಅವರು ಡಾ. ಅಂಬೇಡ್ಕರ ಅವರ ಸನ್ಮಾನ ಮಾಡುತ್ತ 'ಡಾಕ್ಟರ್ ಸಾಹೇಬರೆ, ನೀವು ನಮ್ಮ ದಲಿತ ಸಮಾಜದ ನಿಜವಾದ ಹಿತಚಿಂತಕರು, ದುಂಡು ಮೇಜಿನ ಪರಿಷತ್ತಿನಲ್ಲಿ ನೀವು ತೋರಿದ ಧೈರ್ಯ ಹಾಗೂ ಸಾಹಸದಿಂದಾಗಿ ನಾವು ಧನ್ಯರಾದೆವು'. ಅಂದರು. ಈ ಸ್ವಾಗತದಿಂದ ಡಾ. ಅಂಬೇಡ್ಕರರಿಗೆ ಬಹಳ ಸಂತೋಷವಾಯಿತು. ಅವರು ಬಂದಿದ್ದ ಜನರಿಗೆ ಧನ್ಯವಾದ ಹೇಳಿದರು. ಅಷ್ಟೇಯಲ್ಲದೆ ಶೇತ್

ಶಂಕರರಾವ್ ಪರಶಾ, ರಾ. ಬ. ಸಿ. ಕೆ. ಭೋಲೆ, ಶೇಠ್ ಮನಿಯಾರ್, ಕೂಡ ಡಾ. ಅಂಬೇಡ್ಕರ ಅವರನ್ನು ಸ್ವಾಗತಿಸಿದರು. ಹಾಗೆಯೇ ದಲಿತ ಸಮಾಜದ ಡಾ. ಸೋಲಂಕಿ, ಎನ್. ಟಿ. ಜಾಧವ್, ಶ್ರೀ. ವನಮಾಳಿ, ಶ್ರೀ. ಸಂಭಾಜಿ. ಗಾಯಕವಾಡ್, ಗೆಡೆಕರ್, ಚಾಂದೋರಕರ್, ಶ್ರೀ. ಶಿವರಾಮ್. ಜಾಧವ್, ಶ್ರೀ. ನೇವರೀಕರ್, ದಿವಾಕರ್. ಪಗಾರೆ ಬಂಧುಗಳು, ಜಾಧವ್, ಶ್ರೀ. ಗಣಪತ್ ಬುವಾ, ಶ್ರೀ. ವರಾಳೆ, ಪುಣೆಯ ಸುಭೇದಾರರಾದ ಘಾಡಗೆ, ನಾಸೀಕಿನ ಶ್ರೀ. ರಣಖಾಂಬೆ, ಗಾಯಕವಾಡ ಕಾಳೆ, ರೋಹಮ್, ಬಾಪೂಸಾಹೇಬ್ ದಾಣೀ, ಶ್ರೀ. ಪತೀತಪಾವನದಾಸ್ ಇವರುಕೂಡ ಹಾಜರಿದ್ದರು.

ಬೇಲಾರ್ಡ್ ಪಿಯರ್‌ನ ಬೆಳಗಿನ ಸ್ವಾಗತ ಸಮಾರಂಭದಲ್ಲಿ ಸಮತಾ ಸೈನಿಕ ದಲ ಸಾಕಷ್ಟು ಕೆಲಸ ಮಾಡಿತು. ದಲದ ಸರ್ವಾಧಿಕಾರಿ ಶ್ರೀ. ವಡವಳಕರ್, ಹಾಗೂ ಸೆಕ್ರೆಟರಿ ಮತ್ತು ಉಪಾಧ್ಯಕ್ಷರಾದ ಶ್ರೀ. ಸಾಳವೆ ಹಾಗೂ ಲೋಟೆಕರ್ ಇವರುಗಳು ತಮ್ಮ ಸೈನಿಕರೊಡನೆ ಸಾಕಷ್ಟು ಕಷ್ಟಪಟ್ಟಿದ್ದರು. ಡಾ. ಅಂಬೇಡ್ಕರ್ ಅವರು ಮಿ. ಶೌಕತ್ ಅಲಿಯವರೊಡನೆ ಮೆರವಣಿಗೆಯಲ್ಲಿ ಹೋಗಬೇಕೆಂಬ ಕಾರ್ಯಕ್ರಮ ಕಡೆಯ ಘಳಿಗೆಯಲ್ಲಿ ನಿರ್ಧರಿಸಲಾಯಿತಾದರೂ ಈ ಮೆರವಣಿಗೆಯ ಕಾರ್ಯಕ್ರಮ ಕೂಡ ಯಾವುದೇ ಕುಂದು ಕೊರತೆಗಳಿಲ್ಲದೆ ಸಾಂಗವಾಗಿ ನಡೆಯಿತು. ಇಬ್ಬರು ನೇತಾರರ ಫೋಟೋಗಳನ್ನು ತೆಗೆಯಲು ಮೋಲ್ ಸ್ಟೇಷನನ್ನಿನಲ್ಲಿ ಸಾಕಷ್ಟು ಛಾಯಾಗ್ರಾಹಕರು ಸೇರಿದ್ದರು. ದಲಿತ ಹಾಗೂ ಮುಸಲ್ಮಾನ ಸಮಾಜಗಳ ಸಂಯುಕ್ತ ಮೆರವಣಿಗೆ ಬೇಲಾರ್ಡ್ ಪಿಯರ್‌ನಿಂದ ಆರಂಭವಾಗಿ ಜಿ. ಪಿ. ಓ ಮಾರ್ಗವಾಗಿ ಮಾರ್ಕೆಟ್, ಅಬ್ದುಲ್ ರೆಹಮಾನ್ ಸ್ಟ್ರೀಟ್, ಪಾಯಧುಣಿ ಮಾರ್ಗವಾಗಿ ಭಾಯಖಳಾ ರೋಡ್‌ನಲ್ಲಿಯ ಖಿಲಾಫ಼ತ್ ಅಫ಼ೀಸಿನ ತನಕ ಮುಂದುವರೆಯಿತು. ಖಿಲಾಫ಼ತ್ ಆಫ಼ೀಸಿನಲ್ಲಿ ಡಾ. ಅಂಬೇಡ್ಕರ್ ಅವರನ್ನು ಗೌರವದಿಂದ ಬರಮಾಡಿಕೊಂಡ ಮೇಲೆ ಡಾ. ಅಂಬೇಡ್ಕರ್ ಅವರು ಮಿ. ಶೌಕತ್‌ಅಲಿಯವರನ್ನು ಬೀಳ್ಕೊಂಡು ಪರೇಲ್‌ಗೆ ಹೋದರು. ಪರೇಲ್‌ತನಕ ಗಾಡಿಯಲ್ಲಿ ಅವರನ್ನು ಮೆರವಣಿಗೆ ಮಾಡಿ ಕರೆದುಕೊಂಡು ಬಂದರು. ಪರೇಲ್‌ನಲ್ಲಿಯ ತನ್ನ ಆಫ಼ೀಸಿನಲ್ಲಿ ಡಾ. ಅಂಬೇಡ್ಕರ್ ಅವರು ಸುಮಾರು ೧೦.೩೦ಕ್ಕೆ ತಲುಪಿದರು.

ಇವರು ತಲುಪುವ ಮೊದಲೇ ದಲಿತರ ಇತರ ಜಾತಿಯ ಜನ ಇವರ ಸ್ವಾಗತಕ್ಕಾಗಿ ಸಜ್ಜಾಗಿ ನಿಂತಿದ್ದರು. ಅವರ ಸ್ವಾಗತವನ್ನು ಸ್ವೀಕರಿಸಿದ ನಂತರ ಸಾಯಂಕಾಲ ಏಳು ಘಂಟೆಯ ತನಕ ಅವರು ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ನೇತಾರರನ್ನು ಭೇಟಿಯಾಗುತ್ತಿದ್ದರು.

## ೪೭.

# ಸ್ವಾಭಿಮಾನ ಹಾಗೂ ಸ್ವಾತಂತ್ರ್ಯದ ದೀಪ ಯಾವತ್ತೂ ಆರಗೊಡಬಾರದು

ಮುಂಬಯಿ ಹಾಗೂ ಮುಂಬಯಿ ಇಲಾಖೆಯ ೧೧೪ ಸಂಸ್ಥೆಗಳ ವತಿಯಿಂದ ನಿರ್ಧರಿಸಿದ್ದ ಪ್ರಕಾರ ಶುಕ್ರವಾರ ೨೯ನೆಯ ಜನವರಿ ೧೯೩೨ರಂದು ಸಾಯಂಕಾಲ ಏಳು ಘಂಟೆಗೆ ದಾಮೋದರ ಹಾಲ್, ಮುಂಬಯಿಯಲ್ಲಿ ಡಾ. ಪಿ. ಜಿ. ಸೋಲಂಕಿಯವರ ಅಧ್ಯಕ್ಷತೆಯಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಸನ್ಮಾನ ಪತ್ರ ಕೊಡುವ ಸಮಾರಂಭವನ್ನು ಆಚರಿಸಲಾಯಿತು. ಮೊದಲಿಗೆ ಚಿಕ್ಕ ಹುಡುಗಿಯರು ಸುಶ್ರಾವ್ಯವಾಗಿ ಸ್ವಾಗತ ಗೀತೆಯನ್ನು ಹಾಡಿದರು. ಸ್ವಾಗತಕ್ಕೆ ಸಾವಿರಾರು ಸಂಖ್ಯೆಯಲ್ಲಿ ಗಂಡಸರು ಹೆಂಗಸರು ಸೇರಿದ್ದರು. ನಂತರ ಅಧ್ಯಕ್ಷರಾದ ಡಾ. ಸೋಲಂಕಿಯವರ ಸೂಚನೆಯ ಮೇರೆಗೆ ಶ್ರೀ. ಎನ್. ಟಿ. ಜಾಧವ್ ಅವರು ಸನ್ಮಾನ ಪತ್ರವನ್ನು ಓದಿ ತೋರಿಸಿದರು. ಈ ಸನ್ಮಾನಪತ್ರದ ಮೇಲೆ ಮುಂಬಯಿ ಹಾಗೂ ಮುಂಬಯಿ ಇಲಾಖೆಯಲ್ಲಿಯ ಒಟ್ಟು ೧೧೪ ಸಂಸ್ಥೆಗಳ ಹಸ್ತಾಕ್ಷರಗಳಿವೆ. ಆ ಸನ್ಮಾನಪತ್ರ ಕೆಳಗಿನಂತಿದೆ.

Dr.B.R.Ambedkar,
M.A.Ph.D., D.Sc., Bar-at-Law., M.L.C.
Deligate, Inadian, Round Table Conference.

Dear Sir,

We the under mentioned Institutions, feel this an occasion of honour and privilege to accord you, our accredited leader, a hearty welcome on behalf of the Depressed Classes of India on your to these shores offer an arduous fight for the recognition of our legitimate rights and status at the second round table conference. You have indeed proved to the hilt of our claim, for equality of status and treatment, and but for the Valliant fight you had put on our behalf, we are afraid; our claims would have been ignored. You have done what all is human possible in safeguarding our rights and we are sure , as a result of your endeavours at London, to stand, in the near future on an equal footing with all other major communities in India.

Allow us to take the opportunity of putting on record that the choice of Government would not have fallen on a better head than yours to represent us the Round Table Conference. Your work coupled with that of Rao Bahaddur Shrinivasan, has been of immense value to our clause by many of your powerful speeches in London and elsewhere, you have proved to the world that Depressed Classes are a vast minority and that without separate representation their interest would never be safe; and the credit goes to you to having proved beyond doubt that many of the so-called Congress leaders,professing sympathy for us are slippery customers'. It is now for you, Sir, to augment your work at the R.T.C by continuing to espouse our cause in your own intimate way in the Franchise Committee which to start work before long. It would be in the fitness of thing to urge upon you not to be content with anything less than equality of status and treatment for your brothern, and we fully trust that you will do your utmost for securing these objects in the Franchise Committee as well and in all other work connected with the building up of the constitution of this country.

Oppressed, tyrannized and exploited as we are by one and all from ages long, we do feel that your advent on the horizon of public life was for us a day to be written in Golden Ink. The new life and spirit which you enthused in us at Mahad, Nasik and other places to achieve our ordinary human rights have awoke us to our rights and claims and have made us give a burial to our inferiority complex. The sense of responsibility and the present outlook of our community which is now out to assert its rights all over the country it will not be an exaggeration to say, is but the fruit of your efforts and guidance, we know the tremendous sacrifice you are making for a community for whom there are but few friends.

It is needless for us to repeat that all our interests, political or otherwise are safe in your hands and we look to you and to you alone as our trusted leader, who would lead us and to political power in this country which alone we are convinced would bring salvation to our oppressed community, we remain.

Yours truly

The Members of

1. Social Equality Army (Bombay Presidency)
2. Friends Union, Pelisle Road
3. Somavanshiya Abhivriddha Seva Mandal

4. Bahishkrit Seva Mandal
5. Maharashtra Balveer Skishan Prasarak Mandal
6. Bahishkrit Hitachintak Seva M/Mandal
7. South Indian Adidravid Mahajan Sabha
8. Mahila Mandal Bombay
9. Mahara Samaj Seva Sangh
10. Satara District Yuvak Sangh
11. Nagar District Bahishkrit Seva Sangh
12. Yuvak Sangh Samajik Jalsa
13. Tramway Company Workshop Depressed Classes Association
14. Navrang Cigarette Company D.Classes
15. Bahishkrit Mahila Seva Mandal
16. Bara Chawl Seva Sangh
17. Ratnagiri District Social Equality League
18. Gujrat D.C. Association
19. Poona District Bahishkrit Association
20. Poona District Dalit Sangh
21. Satara District Social Equality Army
22. Bahishkrit Depressed Classes CC Society
23. Bahishkrit Depressed Classes Navyuvak Sangh
24. Pevalaty Co-operative Mandal
25. Dhobitalao Somvanshiya Mandal
26. Dhobitalao Somvanshiya Mahila Mandal
27. "F" Ward Bahishkrit Seva Mandal Bombay
28. Tata Mills Chawls, Mahae Punch
29. Kopkan Prantik Chamber Parishad
30. Foras Road Cement Chawls Punch
31. Mazgaon Khadda Punch
32. Joonadhor Chawl Punch
33. Batatyachi Chawls Punch
34. Foras Road D.C. Tenaments of Block Nos 1-3
35. Navi Dhar Chawl Punch
36. Somvanshiya Nirashrit Shikshan Vardhak Samaj

37. Solapur District Mahar Seva Sangh
38. Satara District ViteTaluk Punch
39. Bahishkrit Co-op. Society
40. D.C.Tenant of B.D.D. Block No.7
41. Maharashtriya Puratan Mahar Unnati Sangh
42. Satara District D.C. Society
43. Gulabvadi Punch Mandal
44. Bhandara Samaj Sangh
45. Bharatiyatarun Yuvak Sangh Bahishkrit
46. Shree Somavanshiya Mandal
47. Naigao Chawl Nawa Saha Kumfor Punch
48. Bahi Shkrithitavardhak Samaj
49. Pimpri Sayyad Nasik Taluka Jalsa, Kampoo
50. Rohidas Dnyandev Samaj
51. Charmakar Mahila Mandal
52. Charmakar Sudharak Mandal
53. Youngmen's Mahar Association Vinchoor
54. Naigao Social Equality League
55. Bahishkrit Bhajan Samaj Vadala
56. Chandanvadi Maheela Mandal
57. Chandanvadi D. C. Association
58. Solapur Dist. Tal. Karmale Hitvardhak Samaj
59. Satara District Balveer Sainik Dal
60. Thana District D. C. Association
61. Bandra Katwadi Varoode Mandal
62. Nasik Yuvak Sangh
63. Naigao B. D. D. Block Tenants Association
64. B& C. I. Railway D. C. League
65. Nasik District Madhyavarti Mandal
66. Bharatiya Samaj Seva Mandal
67. Madhyavarti Samata Sainik Dal
68. Revangao D. C. League
69. Atpaadee D. C. Society

70. Kulaba District D. C. Association
71. Tramway Co-operative Society Chawal Tenants Assiciation
72. Socila Equality League
73. Jangira Bahishkrita Praja Chirol Mandal
74. Dadar Mahila Mandal
75. Navyuvak Mandal Ahmedabad
76. Dharwar District League
77. Belgaum Distrcit League
78. Karwar District League
79. Meghawal Sudhaarak Mandal
80. Gujarath Dalit Sudharak Mandal
81. Satara District Tarun Seva Mandal
82. Rohidas Tarun Mandal Thana
83. Somvanshiya Sanmargadarshale Sangh Kalyan
84. Thana District Charmakara Aikechhu Mandal, Manikpur
85. Kamathipura 13 Lane Bhajan Samaj
86. The Berar Asprishya Samaj Sudharak Seva Mandal Berar
87. The Supa Pargana, Kshatriya Yuvak Sangh
88. Stara District Vandar Mahar Sangh
89. B. P. T. Bahishkrit Labourers Navyuvak
90. Karnatak Machignar Society
91. Karnatak D. C. Youth Legue
92. D. C. Association Hubali
93. Chitra Bazar, Bori Chawl D. C. League
94. Rohe Taluka Mahar Sangh
95. Kamathipura Stable Street Mahar Association
96. Agripada Mcpl. Chawl D. C. Tenants Association
97. Bandra Chani D. C. League Bhaogra
98. Bandra Palee Bahishkrit Samaj
99. Mahar Military Indian Officer Association
100. Mahimakilla D. C. Association
101. Reteecha Dhakka Puncha Mandal
102. B. I. T. Poibabadi Chawl D. C. Association

103. Panvel Pensioner Mahar Punch
104. Crawn Cigartee Co's D. C. LabourMandal
105. Nana Chawk Mahar Mandal
106. All India Untouchability League Poona
107. Maharashtra Seva Sangh Poona
108. Dakshin Maharashtra Satyaprasarak Mandal Kolhaapur
109 Matang Dnyanodaya Samaj Bombay
110. Asprishyonnati Mandal Nasik Road
111. Temple Entry Satyagraha Mandal Nasik
112. Bahishkrit Hitachintak Seva Sangh Nasik Road
113. Shri. Shahu Chatrapati Boarding Nasik
114. AsprishyaTarun Samaasamaj Chirabazar

ಸನ್ಮಾನಪತ್ರಕ್ಕೆ ಉತ್ತರಿಸುತ್ತ ಡಾ.ಅಂಬೇಡ್ಕರ್ ಅವರು

ನನಗಿಂದು ಸಿಕ್ಕಿರುವ ಸನ್ಮಾನ ಪತ್ರಕ್ಕೆ ನಾನು ಎಷ್ಟು ಯೋಗ್ಯ ಅನ್ನುವ ಅನುಮಾನ ನನಗೆ. ನಮ್ಮ ಹತ್ತಿರವಿರುವವರಿಗೆ ಕಾಣುವ ನಮ್ಮ ದೋಷಗಳು ದೂರದವರಿಗೆ ಕಾಣುವುದಿಲ್ಲ. ಈ ಸನ್ಮಾನ ಪತ್ರದಲ್ಲಿರುವ ಗೌರವಾರ್ಥ ಶಬ್ದಗಳು ದುಂಡು ಮೇಜಿನ ಪರಿಷತ್ತಿನಲ್ಲಿ ನಾನು ಮಾಡಿರುವ ಮಹತ್ಕಾರ್ಯದ ಯಶಸ್ಸು ತೋರಿಸುತ್ತಿವೆ. ಆದರೆ ದುಂಡು ಮೇಜಿನ ಪರಿಷತ್ತಿನ ಯಶಸ್ಸು ನನ್ನದಲ್ಲ ಎಂದು ನನ್ನ ಮನೋ ದೇವತೆ ಹೇಳುತ್ತಿದ್ದಾಳೆ. ಅದರ ಯಶಸ್ಸು ಇಲ್ಲಿ ಸೇರಿರುವ ನನ್ನಎಲ್ಲ ಬಂಧು ಭಗಿನಿಯರದ್ದು. ಯಾವುದೇ ಯಶಸ್ಸು ಆ ಸಮಾಜದ ಇಲ್ಲವೆ ಪಕ್ಷದ ನಾಯಕನ ಸೊತ್ತಲ್ಲ ಅನ್ನುವುದು ನೆನಪಿರಲಿ. ಕೇವಲ ನಾಯಕತ್ವವಿದ್ದರೆ ಪ್ರಯೋಜನವಿಲ್ಲ, ಆತ ಕೈಗೊಂಡ ಕಾರ್ಯ ಮನುಷ್ಯತ್ವದ ಹಕ್ಕಿನ ಕಾರ್ಯವಾಗಿರಬೇಕು ಅಲ್ಲದೆ ಅದು ಸ್ವಾರ್ಥತ್ಯಾಗ ಹಾಗೂ ಶಿಸ್ತಿನ ಮಾರ್ಗದಿಂದ ಕೈಗೊಂಡಿದ್ದಿರಬೇಕು. ದುಂಡು ಮೇಜಿನ ಪರಿಷತ್ತಿನ ಕೆಲಸಕ್ಕಾಗಿ ನಾನು ನಿಮ್ಮೆಲ್ಲರ ವತಿಯಿಂದ ಆಯ್ಕೆಗೊಂಡದ್ದು ನಿಜವಾದರೂ ನೀವು ನಿಮ್ಮ ಕಾರ್ಯದ ಮಹತ್ವವನ್ನರಿತು ನನಗೆ ಒಮ್ಮತದಿಂದ ಹಾಗೂ ಒಗ್ಗಟ್ಟಿನಿಂದ ಬೆಂಬಲ ಕೊಡದಿದ್ದಿದ್ದರೆ ನನಗೆ ಈ ಯಶಸ್ಸು ಸಿಗುತ್ತಿರಲಿಲ್ಲ. ದುಂಡು ಮೇಜಿನ ಪರಿಷತ್ತಿನಿಂದಾಗಿ ಅಖಿಲ ಭಾರತದ ದಲಿತರ ಜಾಗೃತಿಯ ಕಿಡಿ ಹೊತ್ತಿಕೊಂಡಿದೆ. ಈ ಜಾಗೃತಿಯ ಜ್ಯೋತಿ ಉಜ್ವಲವಾಗಿ ಅಲ್ಲಿಯ ರಾಜಕಾರಣಿಗಳಿಗೆ ಹಾಗೂ ಬ್ರಿಟಿಷ್ ಜನರಿಗೆ ಕಾಣಿಸದಿದ್ದಿದ್ದರೆ ಆ ಪರಿಷತ್ತಿನಲ್ಲಿ ನನಗೆ ಯಶಸ್ಸು ಸಿಗುತ್ತಿರಲಿಲ್ಲ. ನಿಮ್ಮ ಅಂತಃಕರಣದಲ್ಲಿ ಪ್ರಜ್ವಲಿಸುತ್ತಿರುವ ಸ್ವಾತಂತ್ರ್ಯದ ದೀಪವನ್ನು ಮತ್ತಷ್ಟು ಬೆಳಗಿಸಲು ಪ್ರಯತ್ನಿಸಿ. ಅದೆಂದೂ ಆರದಂತೆ ನೀವು ಪ್ರತಿಯೊಬ್ಬರೂ ಜಾಗರೂಕತೆಯಿಂದ ಪ್ರಯತ್ನಿಸಬೇಕು.

ಆರುಕೋಟಿ ದಲಿತರು ನಮಗೆ ರಾಜಕೀಯ ಹಕ್ಕು ಬೇಕು ಎಂದು ಮುಂದಿಟ್ಟಿರುವ ಬೇಡಿಕೆ ನಿಜವಾಗಿಯೂ ಅಪೂರ್ವದ್ದಾಗಿದೆ. ನಾಯಕರ ಹಿಂದಿಂದೆ ತಿರುಗುವ ಜನತೆ ಟೊಂಕಕಟ್ಟಿ ಮುಂದೆ ಬಂದರೆ ಯಾವುದೇ ಕೆಲಸದಲ್ಲಿ ಯಶಸ್ಸು ಸಿಕ್ಕೇ ಸಿಗುತ್ತದೆ. ನನ್ನ ಆರು ಕೋಟಿ ದಲಿತರು ಧೈರ್ಯ ತಾಳಿದರೆ ಭಾರತೀಯರಿಗೆ ಸ್ವಾತಂತ್ರ್ಯ ಸಿಗಲು ಎಷ್ಟು ಹೊತ್ತು ಬೇಕಾದೀತು! ನಿಮ್ಮಲ್ಲಿರುವ ಮನುಷ್ಯತ್ವವನ್ನು ಕಳೆದುಕೊಳ್ಳದಿರಿ. ಕೆಲವು ವರ್ಷಗಳ ಹಿಂದೆ ನಮ್ಮ ಪೂರ್ವಜರಿಗೆ ಅಸಾಧ್ಯವೆನಿಸಿರುವಂಥದ್ದು ಈಗ

ಕೇವಲ ಹತ್ತು ವರ್ಷಗಳಲ್ಲೇ ಸಾಧ್ಯವೆನಿಸುವಂತಾಗಿದೆ. ಕಳೆದ ಹತ್ತು ವರ್ಷಗಳಲ್ಲಾದ ಜಾಗೃತಿ ಬಹಳ ಅಪೂರ್ವದ್ದಾಗಿದೆ ಅನ್ನಬಹುದು. ಕೆಲವು ದಿನಗಳ ಹಿಂದೆ ನನ್ನ ಕೆಲಸದಲ್ಲಿ ನನ್ನ ಚಮ್ಮಾರ ಬಾಂಧವರಿಗೆ ನನ್ನ ಮೇಲೆ ನಂಬಿಕೆಯಿರಲಿಲ್ಲ ಅನ್ನುವ ಮಾತು ನನ್ನ ಮನಸ್ಸಿಗೆ ಬಹಳ ನೋವುಂಟುಮಾಡುತ್ತಿತ್ತು. ಆದರೆ ಇಂದು ಬೆಳಿಗ್ಗೆ ನಾನು ಬಂದಿಳಿದ ಹಡಗಿನಲ್ಲಿ ನನ್ನನ್ನು ಸ್ವಾಗತಿಸಲು ಇತರ ಸಮಾಜದ ನೇತಾರರ ಜೊತೆ ಮಿ. ಪಿ. ಬಾಳು, ಶ್ರೀ. ರಾಜಭೋಜ, ಕಾಜರೋಳಕರ ಹಾಗೂ ಪವಾರ ನಂತಹ ಚಮ್ಮಾರ ನೇತಾರರನ್ನು ನೋಡಿ ನನ್ನ ಮನಸ್ಸಿಗೆ ಸಂತೋಷವಾಯಿತು. ಮಾಂಗ್‌ರನ್ನು ನೋಡಿ ಆದ ಸಂತೋಷಕ್ಕಿಂತ ನನ್ನ ಚಮ್ಮಾರ ಬಾಂಧವರ ಪ್ರೀತಿ ನೋಡಿ ನನಗೆ ಸ್ವಲ್ಪ ಹೆಚ್ಚೇ ಸಂತೋಷವಾಯಿತೆನ್ನಬಹುದು. ನಾನೂ ಮನುಷ್ಯನೆ, ಮನುಷ್ಯನಿಂದ ತಪ್ಪುಗಳಾಗುವುದು ಸಹಜ. ಹಾಗಾಗಿ ನಿಮ್ಮ ಕೆಲಸ ಮಾಡುವಾಗ ನನ್ನಿಂದೇನಾದರೂ ತಪ್ಪುಗಳಾಗಿದ್ದಲ್ಲಿ, ಪಕ್ಷಪಾತವಾಗಿದ್ದಲ್ಲಿ ಇದಕ್ಕೆ ಕಾರಣ ಒಂದೇ, ನಮ್ಮ ಅಸ್ಪೃಶ್ಯ ಸಮಾಜ ಎಷ್ಟು ಹಿಂದುಳಿದ ಸ್ಥಿಯಲ್ಲಿದೆಯೆಂದರೆ ಇವರಿಗಾಗಿ ಮಾಡುವ ಕೆಲಸಗಳು ಬೆಟ್ಟದಷ್ಟಿವೆ. ಇಂತಹ ಪರಿಸ್ಥಿಯಲ್ಲಿ ನಾನೊಬ್ಬನೆ ಎಲ್ಲರಿಗೂ ಎಷ್ಟರಮಟ್ಟಿಗೆ ಸಮಾಧಾನಕೊಡಬಲ್ಲೆ? ನಮ್ಮ ಸಮಾಜ ಕಾರ್ಯ ಆಕಾಶಕ್ಕೆ ಏಣಿ ಹಚ್ಚುವಂತಹದ್ದು, ಇರಲಿ. ಆದರೂ ಚಮ್ಮಾರರು ಮಾಡಿದ ಸ್ವಾಗತದಿಂದಾಗಿ ನನಗೆ ಕಲ್ಪನೆಗಿಂತಲೂ ಹೆಚ್ಚು ಸಮಾಧಾನವಾಗಿದೆ. ನಮ್ಮ ಸಾರ್ವಜನಿಕ ಕೆಲಸಗಳಲ್ಲಿ ಅವರ ರಾಜಕೀಯ ಹಕ್ಕುಗಳ ಬಗ್ಗೆ ನಾನವರಿಗೆ ಸಂಪೂರ್ಣವಾಗಿ ಆಶ್ವಾಸನೆ ನೀಡುತ್ತೇನೆ.

ನಾನು ಮಾಂಗ್‌ರ ಜಾತಿಯಲ್ಲಿ ಹುಟ್ಟಿದ್ದರೂ ಮಾಂಗ್‌ರಿಗಾಗಿಯೇ ನಾನು ಎಲ್ಲ ಪ್ರಯತ್ನಗಳನ್ನು ಮಾಡುತ್ತೇನೆ ಎಂದು ತಪ್ಪಿಯೂ ಹೇಳುವುದಿಲ್ಲ. ನನ್ನ ಸಮಾಜಕ್ಕೆ ಏನೂ ಸಿಗದಿದ್ದರೂ ಚಿಂತೆಯಿಲ್ಲ ಆದರೆ ಉಳಿದ ದಲಿತ ಸಮಾಜದವರಿಗಾಗಿ ಮಾತ್ರ ನಾನು ಏನೂ ಮಾಡಲು ಸಿದ್ಧನಿದ್ದೇನೆ. ಆದರೆ ನನಗವರ ಸಂಪೂರ್ಣ ಆತ್ಮೀಯ ಸಹಕಾರ ಬೇಕು. ನನ್ನ ಕಾರ್ಯದಲ್ಲಿ ನಮ್ಮ ಸಮಾಜದ ವಿವಿಧ ಜಾತಿಗಳು ಒಟ್ಟಾದರೆ ಮುಂದಿನ ಎಲ್ಲ ವಿಷಯಗಳನ್ನು, ಪ್ರಶ್ನೆಗಳನ್ನು ಒಮ್ಮತದಿಂದ ಹಾಗೂ ಪ್ರೀತಿಯಿಂದ ಬಿಡಿಸಬಹುದು. ಮಹಾತ್ಮ ಗಾಂಧಿಜಿಯವರ ಮಾತಿನಿಂದ ಸಮಾಧಾನಗೊಳ್ಳದವರು ನನ್ನ ಮಾತಿನಿಂದ ಹೇಗೆ ಸಮಾಧಾನಗೊಂಡಾರು? ಆದರೂ ಪ್ರಯತ್ನವನ್ನಂತೂ ಮಾಡಲೇ ಬೇಕು. ಮಾಂಗ್‌ರಿಂದ ಹಿಡಿದು ಭಂಗಿಗಳ ತನಕ ಎಲ್ಲ ಸಮಾಜದವರೂ ಒಗ್ಗಟ್ಟಾಗಬೇಕಿದೆ ಹಾಗೂ ಈ ಎಲ್ಲ ಸಮಾಜದ ಉನ್ನತಿ ಏಳಿಗೆ ಮಾಡುವುದು ನನ್ನ ಗುರಿ ಎಂದು ನನ್ನ ಅನಿಸಿಕೆ. ಈ ವಿಷಯದ ಬಗ್ಗೆ ಎಲ್ಲರೂ ಎಲ್ಲರ ಬಗ್ಗೆ ತಮ್ಮ ಅಂತಃಕರಣದಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟುಕೊಳ್ಳಬೇಕು. ನನ್ನ ಗೈರು ಹಾಜರಿಯಲ್ಲಿ ಇಲ್ಲಿನ ವರ್ತಮಾನ ಪತ್ರಿಕೆಗಳು ನನ್ನ ಬಗ್ಗೆ ಏನೆಲ್ಲ ಬರೆದು ಗೊಂದಲವನ್ನುಂಟುಮಾಡಿವೆ. ದೇಶಭಕ್ತ ಪತ್ರಕರ್ತರು ನನ್ನನ್ನು ದೇಶದ್ರೋಹಿಯನ್ನಾಗಿ ತೋರಿಸಲು ಸಾಕಷ್ಟು ಪ್ರಯತ್ನಿಸಿದ್ದರೂ ನನ್ನ ಬಂಧುಭಗಿನಿಯರು ಅದನ್ನು ನಂಬದೆ ತಮ್ಮ ಕಾರ್ಯವನ್ನೂ ಇನ್ನೂ ಹೆಚ್ಚು ಆತ್ಮವಿಶ್ವಾಸದಿಂದ ಮುಂದುವರೆಸಿದ್ದು ನೋಡಿ ನಿಜವಾಗಿಯೂ ನಾನು ಧನ್ಯನಾದೆ ಅನಿಸಿದೆ. ದುಂಡು ಮೇಜಿನ ಪರಿಷತ್ತಿನಲ್ಲಿ ಮ. ಗಾಂಧಿಜಿಯವರನ್ನು ನಾನು ವಿರೋಧಿಸಿದೆ ಅಂದಕಾರಣಕ್ಕೆ ನಾನು ದೇಶದ್ರೋಹಿ ಅನಿಸಿರಬಹುದು ಆದರೆ ಈ ಆರೋಪಗಳಿಂದ ನಾನು ಹೆದರುವುದಿಲ್ಲ. ನನ್ನ ಬಾಂಧವರನ್ನು ಗುಲಾಮಗಿರಿಯಿಂದ ಮುಕ್ತಗೊಳಿಸುವಂತಹ ಒಳ್ಳೆಯ ಕೆಲಸದಲ್ಲಿ ಮಹಾತ್ಮ ಎನಿಸಿಕೊಳ್ಳುವ ವ್ಯಕ್ತಿಯಿಂದಲೇ ಹೆಚ್ಚು ವಿರೋಧವಾಗುವಂತಹದ್ದು ಜಗತ್ತಿನ ದೃಷ್ಟಿಯಿಂದ ಎಷ್ಟು ಅನ್ಯಾಯ ಅನ್ನುವುದನ್ನು ಕಲಿತಜನತಾವೇ ನಿರ್ಧರಿಸಲಿ. ನಾನು ಮಾತ್ರ ಸರಿಯಾದ ದಾರಿಯಲ್ಲೇ ನಡೆಯುತ್ತಿದ್ದೇನೆ ಎಂದು ನನ್ನ ಮನಸ್ಸು ಹೇಳುತ್ತಿದೆ ಅಂದ ಮೇಲೆ ಜನರ ಸ್ವಾರ್ಥಭರಿತ ಆರೋಪದ ಬಗ್ಗೆ ನನಗ್ಯಾವ ಪರಿವೆಯೂ ಇಲ್ಲ.

ಇಂದು ನಾನು ರಾಷ್ಟ್ರದ್ರೋಹಿ, ದೇಶದ್ರೋಹಿ ಎಂದು ಹೇಳುವ ಜನರೇ ನಾಳೆ ನಾನು ಮಾಡಿದ ಕೆಲಸವನ್ನು ಕೊಂಡಾಡಲಿದ್ದಾರೆ. ಈ ಬಿರುಗಾಳಿ ಶಾಂತವಾಗಿ ದುಂಡು ಮೇಜಿನ ಪರಿಷತ್ತಿನಲ್ಲಿ ನಾನು ಮಾಡಿರುವ ಕೆಲಸಗಳ ಬಗ್ಗೆ ಶಾಂತವಾಗಿ ಯೋಚಿಸದಾಗ ನನ್ನ ಬಗ್ಗೆ ಅವರ ಯೋಚನೆ ಬದಲಾಗುತ್ತದೆ. ಇಲ್ಲಿಯ ರಾಷ್ಟ್ರೀಯ ಪತ್ರಿಕೆಗಳಲ್ಲಿ ಬರುತ್ತಿದ್ದ ಸುದ್ದಿಗಳು ಹಾಗೂ ದುಂಡು ಮೇಜಿನ ಪರಿಷತ್ತಿನಲ್ಲಿ ನಡೆಯುತ್ತಿದ್ದ ಕೆಲಸ ಕಾರ್ಯಗಳಲ್ಲಿ ಎಷ್ಟು ವ್ಯತ್ಯಾಸವಿದೆ ಅನ್ನುವುದು ಅವರಿಗೆ ಅರ್ಥವಾಗುತ್ತದೆ. ಹಾಗೂ ಹಿಂದೂಗಳ ಮುಂದಿನ ಪೀಳಿಗೆ 'ನಾನು ಒಳ್ಳೆಯ ಕೆಲಸವನ್ನೇ ಮಾಡಿದ್ದೇನೆ' ಅನ್ನುತ್ತಾರೆ ಅನ್ನುವ ನಂಬಿಕೆ ನನಗಿದೆ.

ನನ್ನ ಹಾಗೂ ಮ. ಗಾಂಧಿಯವರ ಮೊದಲನೆಯ ಭೇಟಿ ಹಾಗೂ ಮಾತುಕತೆ ಲಂಡನ್‌ಗೆ ಹೋಗುವ ಮುನ್ನ ಆದದ್ದು ನಿಮಗೆಲ್ಲರಿಗೂ ಗೊತ್ತೇಯಿದೆ. ದುಂಡು ಮೇಜಿನ ಪರಿಷತ್ತಿನ ಕಾರ್ಯಕಲಾಪಗಳ ಸಮಯದಲ್ಲಿ ಮ. ಗಾಂಧಿ ಹಾಗೂ ನನ್ನ ಮಾತುಕತೆ ನಾಲ್ಕೈದು ಘಂಟೆಗಳವರೆಗೆ ನಡೆದಿದೆ. ಆದರೆ ಅವರು ಮಾತ್ರ ಕಡೆಗೆ ಸಿಖ್ ಹಾಗೂ ಮುಸ್ಲಿಮ್ ಸಮಾಜ ಬಿಟ್ಟರೆ ಉಳಿದ್ಯಾವ ಸಮಾಜಕ್ಕೂ ನಾನು ಸ್ವತಂತ್ರ್ಯ ಮತದಾರ ಸಂಘ ಕೊಡಲಾರೆ ಅನ್ನುವುದನ್ನು ಸ್ಪಷ್ಟವಾಗಿ ಹೇಳಿದರು. ಅಲ್ಪಸಂಖ್ಯೆ ಕಮಿಟಿಯ ಮುಸಲ್ಮಾನ ಪ್ರತಿನಿಧಿಗಳು ಹಾಗೂ ನಾನು ಬೇರ್ಪಡುವಂತಾಗಬೇಕು ಹಾಗೂ ಮುಸಲ್ಮಾನರು ನನಗ್ಯಾವ ಸಹಾಯವನ್ನೂ ಮಾಡಬಾರದು ಅನ್ನುವಂತಹ ಭೇದ ನೀತಿಯನ್ನು ಮ. ಗಾಂಧಿಯವರು ಯಾವ ರೀತಿ ಆರಂಭಿಸಿದರು ಅನ್ನುವ ಬಗ್ಗೆ ನನ್ನಲ್ಲಿ ಸಾಕಷ್ಟು ಲಿಖಿತ ಪುರಾವೆಗಳಿವೆ. ಹಾಗಾಗಿ ನನ್ನ ದೃಷ್ಟಿಯಿಂದ ಮ. ಗಾಂಧಿಯವರು ಮಹಾತ್ಮ ಅನ್ನುವ ಬಿರುದಿಗೆ ಎಷ್ಟು ಪಾತ್ರರು? ಅನ್ನುವ ಅನುಮಾನ ನನಗೆ. ಮಹಾತ್ಮ ಗಾಂಧಿಯವರ ಪ್ರಯತ್ನಕ್ಕೆ ಮುಸಲ್ಮಾನರು ಮಸಿ ಬಳಿದಾಗ ಮ. ಗಾಂಧಿಯವರು ಸಿಟ್ಟಿಗೆದ್ದು ಮಾರುಕಟ್ಟೆಯಿಂದ ಕುರಾನ್ ಖರೀದಿಸಿ ಎಚ್. ಎಚ್. ಆಗಾಖಾನ್ ತಂಗಿದ್ದ ಹೋಟೇಲಿಗೆ ಹೋದರು.

ಅದಕ್ಕೆ ಆಗಾಖಾನ್ ಅವರು 'ದಲಿತ ಸಮಾಜ ನಮಗಿಂತ ಸಾಕಷ್ಟು ಹಿಂದುಳಿದ ಸಮಾಜ. ನಮ್ಮ ಹಕ್ಕಿಗಾಗಿ ನಾವು ಹೋರಾಡುತ್ತಿದ್ದೇವೆ ಅಂದ ಮೇಲೆ ಅವರ ಸಂರಕ್ಷಣೆಯ ನ್ಯಾಯವಾದ ಹಕ್ಕಿಗೆ ನಾವು ವಿರೋಧಿಸುವುದಾದರೂ ಹೇಗೆ?' ಎಂದಷ್ಟೆ ಹೇಳಿದಾಗ ಮ. ಗಾಂಧೀಜಿಯವರು ಸುಮ್ಮನೆ ಹಾಗೇ ಹೊರಟುಹೋದರು.

ಮ.ಗಾಂಧಿಯವರನ್ನು ಹೊಗಳುವಂತೆ ನೀವುಗಳು ನನ್ನನ್ನು ಹೊಗಳಿ ದೇವರ ಸ್ಥಾನಕ್ಕೇರಿಸಬೇಡಿ. ಒಬ್ಬರನ್ನು ದೇವರ ಸ್ಥಾನಕ್ಕೇರಿಸಿ ಉಳಿದವರು ಕುರುಡರಂತೆ ಆತನನ್ನು ಹಿಂಬಾಲಿಸುವುದು ನನಗಂತೂ ದುರ್ಬಲತೆಯ ಲಕ್ಷಣವೆನಿಸುತ್ತದೆ. ನೀವು ನಿಮ್ಮ ಸಂಘಟನೆಯನ್ನು ತಯಾರಿಸಿ ಶಿಸ್ತು ಹಾಗೂ ಧೈರ್ಯದ ಮಾರ್ಗದಲ್ಲಿ ಮುನ್ನಡೆಯುತ್ತ ನಿಮ್ಮ ಉನ್ನತಿ ಸಾಧಿಸಿ.

ಡಾ. ಅಂಬೇಡ್ಕರ್ ಅವರ ಭಾಷಣ ಮುಗಿಯುತ್ತಲೆ ಅವರು ನಾಸಿಕ್ ದೇವಸ್ಥಾನ ಪ್ರವೇಶ ಸತ್ಯಾಗ್ರಹದಲ್ಲಿ ಶಿಕ್ಷೆ ಅನುಭವಿಸಿ ಬಿಡುಗಡೆಯಾದ ಸತ್ಯಗ್ರಹಿ ವೀರರಿಗೆ ಹೂವಿನ ಹಾರ ಹಾಕಿ ಗೌರವಿಸಿದರು. ಹಾಗೆಯೇ ಸಾತಾರಾ ಜಿಲ್ಲೆಯ ದಲಿತ ಜಾತಿಯ ಚಿತ್ರಕಲೆಯ ವಿದ್ಯಾರ್ಥಿ ಶ್ರೀ ಸಾವಂತ ಇವರಿಗೆ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ನ ಚಿತ್ರಕಲೆ ಸ್ಪರ್ಧೆಯಲ್ಲಿ ಅತ್ತ್ಯುತ್ತಮ ಚಿತ್ರ ಅನ್ನುವ ಸರ್ಟಿಫಿಕೇಟ್ ಹಾಗೂ ಭಾವನಗರಿನ ಮಹಾರಾಜರು ಕೊಡಮಾಡುವ ಇನ್ನೂರು ರೂಪಾಯಿಯ ಪಾರಿತೋಷಕ ಸಿಕ್ಕಿದ್ದಕ್ಕಾಗಿ ಅಭಿನಂದಿಸಲಾಯಿತು. ಅವನಿಗೆ ನಗರ್ ಜಿಲ್ಲೆಯ ವತಿಯಿಂದ ಒಂದು ಸುವರ್ಣ ಪದಕ ಹಾಗೂ ಹೂವಿನ ಹಾರ ಅರ್ಪಿಸಿ ಗೌರವಿಸಲಾಯಿತು.

ಮಧ್ಯರಾತ್ರಿಯ ತನಕ ಡಾ. ಅಂಬೇಡ್ಕರ್ ಹಾಗೂ ಇತರ ಪ್ರಾಂತ್ಯದ ನೇತಾರರ ನಡುವೆ ಸಾಕಷ್ಟು ವಿಚಾರ ವಿನಿಮಯ ನಡೆಯಿತು.

## ೪೮.

# ಸ್ವಾವಲಂಬನೆಗೆ ವೃತ್ತಪತ್ರಿಕೆಯ ಅಗತ್ಯ

ದ್ವಿತೀಯ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ತೀರ್ಮಾನಿಸಿದಂತೆ ಬ್ರಿಟಿಷ್ ಸಂಸತ್ತು ಆಯ್ಕೆ ಮಾಡಿದ 'ಮತದಾನ ಪರಿಶೀಲನಾ ಸಮಿತಿ' ಅದೇ ತಿಂಗಳ ಮೊದಲನೇ ವಾರ ದೆಹಲಿಯಲ್ಲಿ ಲಾರ್ಡ್ ಲೋಥಿಯನ್ ಅವರ ಅಧ್ಯಕ್ಷತೆಯಲ್ಲಿ ಕಾರ್ಯಚಟುವಟಿಕೆ ಆರಂಭಿಸಿತು. ಮೊದಲನೆಯದಾಗಿ ದೆಹಲಿಯಲ್ಲಿ ಮತದಾನ ಸಮಿತಿಯ ಕೆಲಸದ ಕುರಿತು ಸ್ಪಷ್ಟ ರೂಪುರೇಷೆ ಸಿದ್ಧಪಡಿಸಲಾಯಿತು. ಅದರ ಪ್ರಕಾರ ಹಿಂದುಸ್ತಾನದಲ್ಲಿ ಪ್ರತಿಯೊಂದು ಪ್ರಾಂತ್ಯ ಮತ್ತು ಆಯಾ ಪ್ರಾಂತ್ಯಗಳಲ್ಲಿನ ಗ್ರಾಮಗಳಿಗೂ ಭೇಟಿ ನೀಡಿ ಪರಿಶೀಲಿಸುವುದು ಮತ್ತು ಸಾಕ್ಷಿ ಸಂಗ್ರಹಿಸುವುದಕ್ಕೆ ತೀರ್ಮಾನಿಸಲಾಯಿತು. ಈ ಮತದಾನ ಸಮಿತಿಗೆ ಅಸ್ಪೃಶ್ಯರು ಮತ್ತು ಹಿಂದುಳಿದ ಸಮಾಜದ ವತಿಯಿಂದ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ನೇಮಕ ಮಾಡಲಾಯಿತು. ಹೀಗೆ ತುಳಿತಕ್ಕೊಳಗಾಗಿರುವ ಬಹುಜನರು ಮತ್ತು ಹಿಂದುಳಿದ ವರ್ಗಗಳ ಸಮಾನತೆಯ ಹಕ್ಕಿಗಾಗಿ ಈ ಸಮಿತಿ ಮೂಲಕ ಹೋರಾಡುವ ಧೋರಣೆಯನ್ನು ಡಾ. ಬಿ. ಆರ್. ಅಂಬೇಡ್ಕರ್ ಸ್ವೀಕರಿಸಿದ್ದರು. ದೆಹಲಿಯಿಂದ ಲಖನೌಗೆ ಪ್ರವಾಸ ಬೆಳೆಸಿದ ಮತದಾನ ಸಮಿತಿ ಸದಸ್ಯರು ಸ್ಥಳೀಯ ಮತದಾನ ಸಮಿತಿ ನೆರವಿನಿಂದ ಪರಿಶೀಲಿಸಿದ ಬಳಿಕ ಲಖನೌ ಸಮೀಪದ ಹಳ್ಳಿಗಳಲ್ಲೂ ಪರಿಶೀಲನೆಗೆ ತೆರಳಿದರು.

ಲಖನೌದಲ್ಲಿ ಮತದಾನ ಸಮಿತಿ ಪ್ರವಾಸ ಮಾಡುತ್ತಿದ್ದ ಸಂದರ್ಭದಲ್ಲಿ ದಲಿತರು ಮತ್ತು ಹಿಂದುಳಿದ ವರ್ಗದ ಸಮಾಜದಿಂದ ಡಾ. ಅಂಬೇಡ್ಕರ್ ಅವರಿಗೆ ಸಾರ್ವಜನಿಕ ಸನ್ಮಾನ ನೀಡಲಾಯಿತು. ಈ ಸನ್ಮಾನ ಸ್ವೀಕರಿಸಿದ ಬಳಿಕ ಡಾ. ಬಿ. ಆರ್. ಅಂಬೇಡ್ಕರ್ ಅವರು ಮಾತನಾಡಿದ್ದಿಷ್ಟು:

ಎಲ್ಲ ಬಹಿಷ್ಕೃತ ಸಮಾಜದ ಸರ್ವಾಂಗೀಣ ಉನ್ನತಿಗಾಗಿ ಬಹಿಷ್ಕೃತ ಸಮಾಜ ಸೇವಾ ಸಂಘದ ಕೇಂದ್ರ ಕಚೇರಿ ಸ್ಥಾಪಿಸಬೇಕು ಮತ್ತು ನಮ್ಮ ಈ ಸ್ವಾವಲಂಬನೆಯ ಚಳವಳಿಯ ಪ್ರಚಾರವನ್ನು ಗಮನದಲ್ಲಿ ಇರಿಸಿಕೊಂಡು ಕನಿಷ್ಠ ಪ್ರತಿಯೊಂದು ಪ್ರಾಂತ್ಯದಲ್ಲೂ ನಮ್ಮ ಒಂದು ಪತ್ರಿಕೆಯಾದರೂ ಇರಬೇಕು. ನನ್ನ ಎಲ್ಲ ಸಹೋದರ ಸಹೋದರಿಯರಲ್ಲಿ ಮಾಡಿಕೊಳ್ಳುವ ವಿನಂತಿ ಏನೆಂದರೆ, "ನಮ್ಮ ಸಮಾಜದ ಪ್ರತಿಯೊಬ್ಬರು ತಮ್ಮ ರಾಜಕೀಯ ಹಕ್ಕು ಪಡೆದುಕೊಳ್ಳುವ ನಿಟ್ಟಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಪರಿಶ್ರಮದಿಂದ ಪ್ರಯತ್ನಿಸಬೇಕು. ಇಲ್ಲದಿದ್ದರೆ ಭವಿಷ್ಯದ ರಾಜ್ಯದಲ್ಲಿ ನಮ್ಮ ಪರಿಸ್ಥಿತಿ ಇನ್ನಷ್ಟು ಶೋಚನಿಯವಾಗಲಿದೆ ಎನ್ನುವುದು ಲಕ್ಷ್ಯದಲ್ಲಿರಲಿ" ಎಂದಿದ್ದರು.

---

ಜನತಾ: ಫೆಬ್ರವರಿ ೧೩, ೧೯೩೨

ಭಾಷಣದ ದಿನಾಂಕ ಸ್ಪಷ್ಟಪಡಿಸಿಲ್ಲ– ಸಂಪಾದಕ

## ೪೯.

# ಭೇದನೀತಿ ಪ್ರಯೋಗಕ್ಕೆ ಬಲಿ ಬೀಳದ ನಾನು

ಮುಂಬೈ ಅಸ್ಪೃಶ್ಯ ಸಮಾಜಕ್ಕೆ ಮದ್ರಾಸ್ ಅಸ್ಪೃಶ್ಯ ಸಮಾಜದ ಜನರು ಫೆಬ್ರವರಿ ೨೮, ೧೯೩೭ರಂದು ಬಹಿರಂಗ ಸಭೆಯಲ್ಲಿ ನೀಡಿದ ಅದ್ಭುತ ಮತ್ತು ಆತ್ಮೀಯ ಸ್ವಾಗತದ ಬಗ್ಗೆ ಎಂದಿಗೂ ನಂಬಿಕೆ ಬಾರದು. ಡಾ. ಅಂಬೇಡ್ಕರ್ ಅವರ ಬಗ್ಗೆ ಮುಂಬೈ ಅಸ್ಪೃಶ್ಯ ಸಮಾಜ ಹಲವಾರು ಬಾರಿ ತನ್ನ ವಿಶ್ವಾಸ ವ್ಯಕ್ತಪಡಿಸಿದೆ. ಇಷ್ಟಿದ್ದರೂ ಕೂಡ ಮದ್ರಾಸ್‌ನಲ್ಲಿ ಡಾ. ಅಂಬೇಡ್ಕರ್ ಅವರ ಸ್ವಾಗತ ಪ್ರಸಂಗ ಮದ್ರಾಸ್‌ನಂತಹ ಮಹಾನಗದಲ್ಲಿ ಅಪರೂಪಕ್ಕೊಮ್ಮೆ ನೋಡಲು ಸಿಗುವಂತಹದ್ದು, ಅಂದು ನಡೆದ ಅಸ್ಪೃಶ್ಯರ ಸಭೆಯಲ್ಲಿ ಕನಿಷ್ಠ ಏನಿಲ್ಲವೆಂದರೂ ಹತ್ತು ಸಾವಿರ ಜನರು ಸೇರಿದ್ದರು. ಸಾವಿರಾರು ಜನರಿಗೆ ಕುಳಿತಕೊಳ್ಳಲು ಜಾಗ ಸಿಗದ ಕಾರಣ ಮರಳಬೇಕಾಯಿತು. ಅಸ್ಪೃಶ್ಯರಲ್ಲದೇ ಬ್ರಾಹ್ಮಣೇತರ ಸ್ಪೃಶ್ಯ ಹಿಂದೂಗಳು, ಕ್ರೈಸ್ತರು ಮತ್ತು ಮುಸ್ಲಿಂ ಸಮುದಾಯದವರು ಅಲ್ಲಿ ಸೇರಿದ್ದರು.

ನಗರದ ಅಸ್ಪೃಶ್ಯ ಸಮಾಜದ ಎಲ್ಲ ಜಾತಿಯ ಪ್ರಮುಖರು ಮತ್ತು ಕಾನೂನು ಮಂಡಳಿಯಲ್ಲಿನ ಎಲ್ಲ ಅಸ್ಪೃಶ್ಯ ಪ್ರತಿನಿಧಿಗಳು ಉಪಸ್ಥಿತರಿದ್ದರು ಅಲ್ಲದೇ ಜಸ್ಟಿಸ್ ಮತ್ತು ಮುಸಲ್ಮಾನ್ ಪಕ್ಷದ ಪ್ರಮುಖ ನಾಯಕರುಗಳು ಕೂಡ ಡಾ. ಅಂಬೇಡ್ಕರ್ ಅವರನ್ನು ಸ್ವಾಗತಿಸುವುದಕ್ಕೆ ಆಗಮಿಸಿದ್ದರು.

ಡಿಪ್ರೆಸ್ಡ್ ಕ್ಲಾಸಸ್ ಸರ್ವಿಸ್ ಆರ್ಮಿ (ಶೋಷಿತ ಸಮಾಜ ಸೇವಾ ಸೈನ್ಯ) ಅಧ್ಯಕ್ಷ ಶ್ರೀ ಸುಂದರರಾವ್ ನಾಯ್ಡು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ತುಳಿತಕ್ಕೊಳಗಾದ ಜನರ ನಿಜವಾದ ಪ್ರತಿನಿಧಿ ಡಾ. ಬಿ. ಆರ್. ಅಂಬೇಡ್ಕರ್ ಎಂದು ಸೇರಿದ್ದ ಜನತೆಗೆ ಅಧ್ಯಕ್ಷತೆ ವಹಿಸಿದ್ದ ಸುಂದರರಾವ್ ಪರಿಚಯಿಸಿದರು. ಇದಕ್ಕುತ್ತರವಾಗಿ ಡಾ. ಅಂಬೇಡ್ಕರ್, ಅಸ್ಪೃಶ್ಯರಲ್ಲಿ ಒಡಮೂಡಿರುವ ಏಕರೂಪಿ ಚಿಂತನೆ ಅಪೂರ್ವ, ವಿಲಕ್ಷಣ ಕ್ರಾಂತಿಗೆ ಮುನ್ನುಡಿ ಬರೆದಿದೆ ಮತ್ತು ಅದರೊಳಗಿನ ಮಾನವೀಯತೆ ಮತ್ತು ಸ್ವಾಭಿಮಾನ ಹೇಗೆ ಜಾಗೃತಗೊಂಡಿದೆ ಎನ್ನುವುದನ್ನು ಸಂಕ್ಷಿಪ್ತವಾಗಿ ವರ್ಣಿಸಿದರು.

ಅಧ್ಯಕ್ಷೀಯ ಭಾಷಣದ ಬಳಿಕ ದಲಿತ ಸಮಾಜ ಸೇವಾ ಸೈನ್ಯ, ಮದ್ರಾಸ್ ಪ್ರಾಂತ್ಯ ಶೋಷಿತ ವರ್ಗಗಳ ಒಕ್ಕೂಟ, ದಿ ಪ್ರೆಸಿಡೆನ್ಸಿ ಆದಿ ದ್ರಾವಿಡ ಮಹಾಜನ್ ಸಭಾ, ಆದಿ ಆಂಧ್ರ ಮಹಾಸಭಾ, ಅರುಂಧತ್ಯೇಯ ಮಹಾಸಭಾ, ಕೇರಳ ಶೋಷಿತ ವರ್ಗಗಳ ಸಂಘಟನೆ, ಕಾರ್ಮಿಕ ಒಕ್ಕೂಟ ಅಲ್ಲದೇ ಇನ್ನಿತರ ಸಂಘ ಸಂಸ್ಥೆಗಳ ವತಿಯಿಂದ ಡಾ. ಅಂಬೇಡ್ಕರ್ ಅವರಿಗೆ ಸನ್ಮಾನ ಪತ್ರ ಮತ್ತು ಹೂವಿನ ಹಾರ ಸಮರ್ಪಿಸಲಾಯಿತು.

ಈ ಮೇಲಿನ ಎಲ್ಲ ಸಂಸ್ಥೆಗಳು ಮತ್ತು ಸೇರಿದ ಜನಸಮುದಾಯದಕ್ಕೆ ಅಭಿವಂದನೆ ಸಲ್ಲಿಸುವುದಕ್ಕೆ ಡಾ. ಅಂಬೇಡ್ಕರ್ ಎದ್ದು ನಿಲ್ಲುತ್ತಿದ್ದಂತೆಯೇ, ಜನಸಮುದಾಯದ ಪ್ರಚಂಡ ಕರತಾಡನ ಮೊಳಗಿತು. ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ:

'ಮದ್ರಾಸ್‌ನ ಅಸ್ಪೃಶ್ಯರು ಮತ್ತು ಇತರರು ತೋರಿದ ಪ್ರೀತಿಗೆ ಎಲ್ಲರಿಗೂ ನಾನು ಕೃತಜ್ಞ. ಇಲ್ಲಿಯವರೆಗೆ ಅಸ್ಪೃಶ್ಯ ಸಮಾಜ ತನ್ನ ರಾಜಕೀಯ ಹಕ್ಕಿಗಾಗಿ ಹೋರಾಡುತ್ತಿತ್ತು. ಹಾಗೂ ಅದರ ವಿಲಕ್ಷಣ ಪ್ರಭಾವ ಇತರ ಸಮಾಜದ ಮೇಲೂ ಆಗುತ್ತಿದೆ. ರಾವ್‌ಬಹಾದ್ದೂರ್ ಎಂ.ಸಿ. ರಾಜಾ ಅವರು ಒಮ್ಮಿಂದೊಮ್ಮೆಲೆ ಅಲ್ಲದೇ ಬೇರೆ ಸಕಾರಣಗಳಿಲ್ಲದೇ ಒಗ್ಗಟ್ಟನ್ನು ಮುರಿದು ಹಾಕಿದ ಪರಿಣಾಮ ಮೊದಲೇ ಬಿಕ್ಕಟ್ಟಿನದಾಗಿದ್ದ ಮಾರ್ಗ ಮತ್ತಷ್ಟು ತೊಂದರೆಗೆ ಸಿಲುಕುವಂತಾಗಿದೆ. ಡಾ. ಮುಂಜೆ ಅವರ ಭೇದ ನೀತಿಗೆ ರಾವ್‌ಬಹಾದ್ದೂರ್ ರಾಜಾ ಅವರು ಗಡಿಬಿಡಿಯಲ್ಲಿ ಅಕಾಲಿಕವಾಗಿ ಬಲಿ ಬಿದ್ದದ್ದು ಸೋಜಿಗದ ಸಂಗತಿ. ಒಂದು ವೇಳೆ ರಾವ್‌ಬಹಾದ್ದೂರ್ ರಾಜಾ, ಇನ್ನಷ್ಟು ದಿನಗಳವರೆಗೆ ತಮ್ಮ ಬೇಡಿಕೆಗೆ ಅಂಟಿಕೊಂಡಿದ್ದರೆ ಮತ್ತು ಈ ಮೊದಲೇ ಹೇಳಿದಂತೆ ನಾಗಪುರದಲ್ಲಿ ಅಸ್ಪೃಶ್ಯರ ಸಭೆ ಆಯೋಜಿಸಿ ಅಸ್ಪೃಶ್ಯರ ಶಕ್ತಿ ತೋರ್ಪಡಿಸಿದ್ದರೆ ಅಸ್ಪೃಶ್ಯರಿಗೆ ಇನ್ನಷ್ಟು ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದರೋ ಏನೋ? ಇಂದು ಅವರಿಗೆ ಶ್ವೇತ ಪೋಷಾಕಿನ ವರ್ಗದ ಕೆಲವೇ ನಾಯಕರ ವೈಯಕ್ತಿಕ ಮೆಚ್ಚುಗೆ ಹೊರತುಪಡಿಸಿ ಇನ್ನೇನೂ ಲಭಿಸಿಲ್ಲ. ಡಾ. ಮುಂಜೆ ಜೊತೆಗೆ ಅನೇಕ ಬಾರಿ ನನ್ನದು ಕೂಡ ಮಾತುಕತೆಯಾಗಿದೆ. ನಾನು ಅವರೊಂದಿಗೆ ಒಪ್ಪಂದ ಮಾಡಿಕೊಳ್ಳದಿದ್ದರೂ ನಮ್ಮಿಬ್ಬರ ಮಧ್ಯೆ ವೈಯಕ್ತಿಕ ವಿರೋಧಾಭಾಸಗಳಿಲ್ಲ. ಅಸ್ಪೃಶ್ಯತೆ ಎದುರು ಡಾ. ಮುಂಜೆ ಕೂಡ ನಿಸ್ಸಹಾಯಕರಾಗಿರುವ ಸಂಗತಿ ನನಗೂ ಮತ್ತು ಡಾ. ಮುಂಜೆ ಅವರಿಗೂ ಸ್ಪಷ್ಟವಾಗಿದೆ. ಒಡಕು ಮೂಡಿಸುವಂತಹ ಸುಲಭದ ಕೆಲಸ ಅವರಿಂದ ಆಯಿತು. ಏಕೆಂದರೆ ಅದು ಅವರ ಕೈಯಲ್ಲಿತ್ತು. ಆದರೆ ಸ್ಪೃಶ್ಯರು ಎನ್ನಿಸಿಕೊಂಡವರ ಮಾನಸಿಕ ಪರಿವರ್ತನೆ ಮಾಡುವ ಘನಂದಾರಿ ಕೆಲಸ ಅವರ ಸಾಮರ್ಥ್ಯಕ್ಕೆ ಹೊರತಾಗಿತ್ತು. ಈ ಸಂಗತಿ ನನ್ನ ಅರಿವಿಗೆ ಬಂದ ಬಳಿಕ ಅವರ ಭೇದ ನೀತಿ ಪ್ರಯೋಗ ನನ್ನ ಮೇಲೆ ಆಗದಂತೆ ನೋಡಿಕೊಂಡೆ. ಆದರೆ ರಾವ್‌ಬಹಾದ್ದೂರ್ ರಾಜಾ ಅವರ ಮೇಲೆ ಅತ್ಯಂತ ಸುಲಭವಾಗಿ ತಮ್ಮ ಪ್ರಭಾವ ಬೀರಿ ತಮ್ಮ ಕೆಲಸ ಸಾಧಿಸಿಕೊಂಡರು. ಇಷ್ಟೊಂದು ಸುಲಭವಾಗಿ ರಾವ್‌ಬಹಾದ್ದೂರ್ ರಾಜಾ, ಡಾ. ಮುಂಜೆ ಅವರ ಭೇದ ನೀತಿಗೆ ಆಹಾರವಾಗಬಾರದಿತ್ತು.

ವೈಯಕ್ತಿವಾಗಿ ನಾನು ಸಂಯುಕ್ತ ಮತ ಕ್ಷೇತ್ರ, ಸಾರ್ವತ್ರಿಕ ಮತದಾನದ ಹಕ್ಕು ಮತ್ತು ಅಸ್ಪೃಶ್ಯರಿಗೆ ಮೀಸಲು ಕ್ಷೇತ್ರ ಇರಬೇಕೆನ್ನುವ ಪ್ರಸ್ತಾಪಕ್ಕೆ ಮಾನ್ಯತೆ ನೀಡಿದವನು. ಆದರೆ ಈ ನನ್ನ ದೃಷ್ಟಿಕೋನ ನೋಡುವುದಕ್ಕೆ ರಾಷ್ಟ್ರೀಯ ಮತ್ತು ವ್ಯಾಪಕ ಎನ್ನಿಸಿದರೂ ಅಸ್ಪೃಶ್ಯರಿಗೆ ಇದರಿಂದ ಸ್ವಲ್ಪ ಕೂಡ ಲಾಭವಾಗಲಿಕ್ಕಿಲ್ಲ ಎಂದು ಅನೇಕ ಸಂಘ ಸಂಸ್ಥೆಗಳು ಅಭಿಪ್ರಾಯ ಮಂಡಿಸಿವೆ. ನಾಗಪುರ ಸಂಯುಕ್ತ ಮತದಾರ ಸಂಘಕ್ಕೆ ನಾನು ಮಾನ್ಯತೆ ನೀಡಿದ ಬಳಿಕ ನನ್ನ ಮೇಲೆ ರಾವ್‌ಬಹಾದ್ದೂರ್ ರಾಜಾ ತೋರಿದ ರೋಷ ಇಲ್ಲಿರುವ ಸಾಕಷ್ಟು ಜನರ ಗಮನದಲ್ಲಿರಬೇಕು. ಇತ್ತೀಚಿನ ದಿನಗಳವರೆಗೆ ರಾವ್‌ಬಹಾದ್ದೂರ್ ರಾಜಾ ಮತ್ತು ಇತರ ನಾಯಕರು ಸ್ವತಂತ್ರ ಮತಕ್ಷೇತ್ರದ ಪ್ರಸ್ತಾಪಕ್ಕೆ ಮಾನ್ಯತೆ ನೀಡಬೇಕೆಂದು ನನ್ನ ಹಿಂದೆ ಬಿದ್ದಿದ್ದರು. ಇಂತಹ ಪರಿಸ್ಥಿತಿಯಲ್ಲಿ ನನ್ನ ಇಷ್ಟಾನಿಷ್ಟಗಳನ್ನು ಬದಿಗಿಟ್ಟು ಅಸ್ಪೃಶ್ಯರಿಗೆ ಏನು ಬೇಕೋ ಆ ಪ್ರಸ್ತಾಪಕ್ಕೆ ಮಾನ್ಯತೆ ನೀಡಿದ್ದೇನೆ. ಇದರಲ್ಲಿ ಯಾವ ತಪ್ಪು ಇದೆ? ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ನಾವು ಸಿಲುಕಿಕೊಂಡಿದ್ದ ಪರಿಸ್ಥಿತಿ ಅಲ್ಲದೇ ಅಲ್ಪಸಂಖ್ಯಾತರ ಆ ಒಂದು ಬೇಡಿಕೆಗೆ ಅಸ್ಪೃಶ್ಯರ ಬೆಂಬಲ ನೀಡುವುದು ಅತ್ಯಗತ್ಯವಾಗಿತ್ತು ಎನ್ನುವ ಸಂಪೂರ್ಣ ವಿಚಾರ ರಾವ್‌ಬಹಾದ್ದೂರ ರಾಜಾ ಅವರ ಅರಿವಿಗೆ ಇತ್ತು. ಈ ಬೇಡಿಕೆಗೆ ತಮ್ಮ ಸಮ್ಮತಿ ಮತ್ತು ಸಂತೋಷ ವ್ಯಕ್ತಪಡಿಸಿದ್ದು ನಿನ್ನೆಯವರೆಗೆ ನನ್ನ ಬೆಂಬಲಕ್ಕೆ ನಿಂತಿದ್ದರು. ಆದರೆ ಈಗ, ಅದೇ ಒಪ್ಪಂದ ವಿರೋಧಿಸುವ ಕೆಲಸ ಆಗುತ್ತಿದೆ. ಇದರಲ್ಲಿ ತಪ್ಪು ಯಾರದು ಎನ್ನುವ ತೀರ್ಮಾನವನ್ನು ನೆರೆದಿರುವ ಜನಸಮುದಾಯ ಮಾಡಬೇಕು ಅಲ್ಲದೇ ನಾಯಕರು ಎನ್ನಿಸಿಕೊಂಡವರು ಕೂಡ ಆ ತೀರ್ಮಾನಕ್ಕೆ

ಮಾನ್ಯತೆ ನೀಡಬೇಕಿದೆ.

ಅಸ್ಪೃಶ್ಯರು ಸಂಘಟಿತರಾಗಬೇಕು. ರಾಜಕೀಯ ಅಧಿಕಾರ ತಮ್ಮ ಕೈಗೆ ತೆಗೆದುಕೊಂಡರೆ ಮಾತ್ರ ಅವರ ಅಸ್ಪೃಶ್ಯತೆಯ ನಿರ್ಮೂಲನೆ ಸಾಧ್ಯ. ಆಗಬೇಕಾದ್ದು ಆಗೇ ಆಗುತ್ತದೆ. ನಮ್ಮದೇ ರಕ್ತ ಮಾಂಸದ, ನಮ್ಮ ಸುಖ–ದುಃಖದ ಸ್ವಾನುಭವವಿರುವ ವ್ಯಕ್ತಿಯ ಮೇಲೆ ವಿಶ್ವಾಸ ಇರಿಸಿ. ಇತರರು ನೀಡುವ ಖೊಟ್ಟಿ ಭರವಸೆಗಳು ಕೇವಲ ಕೇಳಲು ಕರ್ಣ ಮಾಧುರ್ಯದ ತತ್ವಗಳಂತಿರುತ್ತವೆ. ರಾಜಕೀಯ ಅಧಿಕಾರ ಕೈಗೆ ತೆಗೆದುಕೊಳ್ಳುವುದಕ್ಕೆ ಒಗ್ಗಟ್ಟು ಸ್ವಾವಲಂಬನೆ ಮತ್ತು ಸ್ವಶಕ್ತಿ ಮತ್ತು ಸ್ವಸಂಘಟನೆಯ ಶಕ್ತಿಯ ಮೇಲೆ ವಿಶ್ವಾಸ ಇಟ್ಟು ಕೆಲಸ ಮಾಡಿದ್ದೇ ಆದಲ್ಲಿ ನಿಮ್ಮನ್ನು ಇಂದು ತುಚ್ಛವಾಗಿ ವ್ಯಾಖ್ಯಾನಿಸುವ ಮತ್ತು ತಮ್ಮಿಷ್ಟದಂತೆ ಬಗ್ಗಿಸುವವರು ನಿಮ್ಮ ಕಾಲಿನಡಿ ನಾಳೆ ಸಾಷ್ಟಾಂಗ ನಮಸ್ಕಾರ ಮಾಡಲು ಆರಂಭಿಸುತ್ತಾರೆ. ನಿಮ್ಮ ಸ್ನೇಹ ಸಂಪಾದಿಸುವುದಕ್ಕಾಗಿ ನೀವು ಇಷ್ಟಪಟ್ಟದ್ದನ್ನೇ ಅವರು ಮಾಡಲು ಸಿದ್ಧರಾಗುತ್ತಾರೆ.

ಅಧ್ಯಕ್ಷತೆ ವಹಿಸಿದ್ದ ಸುಂದರರಾವ್ ನಾಯಡು ಮತ್ತಿತರ ಮುಖ್ಯ ಅತಿಥಿಗಳಿಗೆ ಸ್ವಾಮಿ ಸಹಜಾನಂದ ಅವರು ವಂದನೆ ಸಲ್ಲಿಸಿದ ಬಳಿಕ ಸಭೆ ಮುಕ್ತಾಯಗೊಂಡಿತು.

---

ಜನತಾ: ಮಾರ್ಚ್ ೫, ೧೯೩೨

# ೫೦.

# ಕಂಡವರ ಕುತಂತ್ರಕ್ಕೆ ನಾವು ಬಲಿಯಾಗಬಾರದು

ಭಾರತೀಯ ದುಂಡು ಮೇಜು ಪರಿಷತ್ತಿನ ಮತದಾನ ಸಮಿತಿಯ ವಿಶೇಷ ರೈಲು ಭಾನುವಾರ ದಿನಾಂಕ ಮಾರ್ಚ್ ೬, ೧೯೩೨ರಂದು ಸೊಲ್ಲಾಪುರಕ್ಕೆ ಬೆಳಗಿನ ೫ಕ್ಕೆ ತಲುಪಿತು. ಇದೇ ರೈಲಿನಲ್ಲಿ ಡಾ. ಅಂಬೇಡ್ಕರ್ ಆಗಮಿಸುವವರಿದ್ದ ಕಾರಣ ನಗರದ ಎಲ್ಲ ಬಹಿಷ್ಕೃತ ಸಮಾಜದ ಜನರು ಮಧ್ಯರಾತ್ರಿ ಎರಡು ಗಂಟೆ ಹೊತ್ತಿನಲ್ಲಿ ಮೆರವಣಿಗೆಯಲ್ಲಿ ಸ್ಟೇಷನ್ ತಲುಪಿದ್ದರು. ಜನರ ದಟ್ಟಣೆ ಕಾರಣ ರೈಲ್ವೆ ಅಧಿಕಾರಿಗಳು ಅಸ್ಪೃಶ್ಯರ ಪೈಕಿ ಆಯ್ದ ೫೦ ಜನರು ಮತ್ತು ಕೆಲವೇ ಮೇಲ್ಜಾತಿಯ ಜನರನ್ನು ರೈಲ್ವೆ ಪ್ಲಾಟ್ ಫಾರ್ಮ್ ಮೇಲೆ ಹೋಗುವುದಕ್ಕೆ ಅನುಮತಿ ನೀಡಿದ್ದರು. ಇದರಲ್ಲಿ ಬೆಂಚ್ ಮ್ಯಾಜಿಸ್ಟ್ರೇಟ್ ಶ್ರೀಯುತ ಪಾಪಾಸಾಹೇಬ್, ನಗರ ಪಾಲಿಕೆ ಸದಸ್ಯರಾದ ಧರ್ಮಾಜಿ ಖರಟಮಲ್, ಮೋಹನದಾಸ್ ಬಾಬರೆ, ರಾ, ಜಿನ್ನಪ್ಪ ಮೇದಾಳೆ, ತೋರಣೆ ಮಾಸ್ತರ್, ರಾವ್‌ಬಹಾದ್ದೂರ್ ಡಾ. ಮುಳೆ, ಎಂ.ಎಲ್.ಸಿ ಡಾ. ವೈಶಂಪಾಯನ, ನ್ಯಾಯವಾದಿ ಶ್ರೀ ಪ್ರಧಾನ್ ಸೇರಿದಂತೆ ಇನ್ನಿತರ ಸ್ಪೃಶ್ಯ ಮತ್ತು ಅಸ್ಪೃಶ್ಯರು ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಭೇಟಿಯಾಗಿ ಹಾರ, ಹೂಗುಚ್ಛ ಅರ್ಪಿಸಿದರು. ಸ್ಟೇಷನ್ ಹೊರಗೆ ನೆರೆದಿದ್ದ ಸಾವಿರಾರು ಜನಸಮುದಾಯದ ಆಗ್ರಹಕ್ಕೆ ಮಣಿದು ಡಾ. ಅಂಬೇಡ್ಕರ್ ಹೊರಗೆ ಬಂದರು. ಡಾ. ಅಂಬೇಡ್ಕರ್ ಅವರ ಜಯಕಾರದಿಂದ ಇಡೀ ವಾತಾವರಣ ಕೆಲಕಾಲ ಮೊಳಗಿತು.

ಶ್ರೀಯುತ ಪಾಪಾಸಾಹೇಬ್ ಬೇಲಪವಾರ್ ಅವರು ಡಾ. ಅಂಬೇಡ್ಕರ್ ಅವರ ವಿದೇಶ ಮತ್ತು ಭಾರತದಲ್ಲಿ ಮಾಡಿದ ಕೆಲಸಗಳ ಬಗ್ಗೆ ಗೌರವದ ಮಾತುಗಳನ್ನಾಡಿದರಲ್ಲದೇ ಡಾ. ಅಂಬೇಡ್ಕರ್ ಅವರ ಪ್ರಯತ್ನದ ವಿನಃ ಅಸ್ಪೃಶ್ಯರ ಉದ್ಧಾರ ಸಾಧ್ಯವಿಲ್ಲ ಎಂದು ಹೇಳಿದರು. ಇದೇ ವೇಳೆ ರಾವ್‌ಬಹಾದ್ದೂರ್ ಡಾ. ಮುಳೆ ಅವರ ಕುರಿತು ಮಾತುಗಳನ್ನು ಆಡಲಾಯಿತು. ಇದಕ್ಕುತ್ತರವಾಗಿ ಡಾ. ಬಿ.ಆರ್. ಅಂಬೇಡ್ಕರ್ ಹೇಳಿದ್ದಿಷ್ಟು:

'ಸೊಲ್ಲಾಪುರದ ಮಹಾರ್, ಮಾಂಗ, ಢೋರ, ಚಮ್ಮಾರ, ಭಂಗಿ ಸಮಾಜಗಳನ್ನು ಒಗ್ಗೂಡಿಸಬೇಕಿದೆ ಮತ್ತು ಈ ಒಗ್ಗಟ್ಟು ಕಂಡವರ ಮಾತಿಗೆ ಬಲಿಯಾಗದಂತೆ ನೋಡಿಕೊಳ್ಳಬೇಕಿದೆ. ನಮ್ಮಲ್ಲಿನ ಒಡಕಿನ ಲಾಭ ಉಚ್ಚರು ಎನ್ನಿಸಿಕೊಂಡವರಿಗೆ ಆಗುತ್ತದೆ ಎನ್ನುವುದನ್ನು ಮರೆಯಬಾರದು.'

ಸಮಯಾಭಾವದ ಕಾರಣ ಡಾ. ಅಂಬೇಡ್ಕರ್ ಕೆಲವೇ ಮಾತುಗಳನ್ನು ಆಡಿ ಹಿಂದಿರುಗಬೇಕಾಯಿತು.

---

ಜನತಾ: ಮಾರ್ಚ್ ೧೨, ೧೯೩೨

## ೫೧.

# ಅಸ್ಪೃಶ್ಯ ಸಮಾಜದ ಕೈಗೆ ರಾಜಕೀಯ ಅಧಿಕಾರ ಬೇಕೇ ಬೇಕು

ಕಾಮಟಿಯಲ್ಲಿ ಆಯೋಜಿಸಿದ್ದ ಅಖಿಲ ಭಾರತೀಯ ದಲಿತ ವರ್ಗಗಳ ಕಾಂಗ್ರೆಸ್ ಸಮಾವೇಶದ ಮಹತ್ವ ತೋರ್ಪಡಿಸುವ ನಿಟ್ಟಿನಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಡಾ. ಹರದಾಸ ಎನ್.ಎಲ್. ಪತ್ರವೊಂದನ್ನು ಹೊರತಂದಿದ್ದರು. ಅದು ಹೀಗಿತ್ತು.

As you are aware, the second session of the All-India Depressed Classes Congress will be held on the 24th and 25th April next at Kamtee.

The importance of this session is immense. The session will concern itself with the following two issues:-

1. The minorities pact to the second Round table confernce and to which the representative of depressed classes were a party.

2. The foundation of a new central organisation to work and speak in the name of the Depressed Classes of India.

The minorities pact embodies the political rights of the depressed classes under new constitution. It was not accepted by the representative of the Majority community at the Round Table conference. The Depressed classes however had given the Minorities pact their full support. Of late however certain Associations presuming to speak on the name of the depressed classes of India have been won over by the Hindu Mahasabha and have therefore repudiated the Minorties pact. It is therefore absolutely essential that the representative of the depressed classes should meet and apply their best mind to the provision contained in the Minorities pact and give their considered opinion on the same. The delegates who represented the depressed classes at the Round table conference, Dr. B.R. Ambedkar and Rao Bahadur R. Srinivasan will attend the session and explain the circumstances and the provisions regarding the Minorities pact.

It is also proposed to invite Rao Bahadur M.C. Rajaha and Mr. G.A.Gavai to attend the session so that they may also have opportunity of being heard before any resolution regarding the Minorities pact, is passed.

The second purpose for which this session is called, is equally important. There

is no necessity to dilate upon it, for as you know what attempts are being made to misrepresent the public opinion of the depressed classes in matters political. It is not possible to put a stop to these machinisation unless a Central Organization is brought into being and made principal organ of the depressed classes.

The necesstiy of holding this session has been emphasized by the tactics adopted by the so called All-India Depressed classes Association. It was published in the news papers that a meeting of the working committee of this association was held at Delhi on the 21st and 22nd of February last to consider the question of Joint or Separate electorates and the number of seats proposed for the depressed classes under the new constitution and no decision was arrived at Nagpur to consider the question. It was hoped that a Leaders conferenece would be called before any definate step was taken, but for reasons known to themselves, the All-India Depressed Classes Association has abandoned the idea of calling such a conference. Under these circumstances it has been mere necessity to mobilize the public opinion of the depreessed classes so that not only such tactics may be defeated before they do the mischief they are intendd to cause and secondly to allow public opinions of their own on these vital issues.

I therefore hope that in view of the importance of this session, you will make it convenient to attend the same.

Your's faithfully
Hardas L.N.
President, Reception Committee.

ಕಾಮಟಿಯಲ್ಲಿ ಮೇ ದಿನಾಂಕ ೭ ಮತ್ತು ೮, ೧೯೩೨ರಂದು ಜರುಗಿದ ಅಖಿಲ ಭಾರತೀಯ ದಲಿತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸುವ ಜನರಲ್ಲಿ ಉತ್ಸಾಹ ಮೇರೆ ಮೀರಿತ್ತು. ಮೇ ೬, ೧೯೩೨ರಂದು ಡಾ. ಅಂಬೇಡ್ಕರ್ ಅವರು ಮುಂಬೈನಿಂದ ನಾಗಪೂರಕ್ಕೆ ನಾಗಪೂರ್ ಮೇಲ್ ಮುಖಾಂತರ ಆಗಮಿಸಲಿದ್ದಾರೆ ಎಂದು ಮುಂಚಿತವಾಗಿ ಪ್ರಚಾರ ಮಾಡಲಾಗಿತ್ತು. ಅದೇ ರೀತಿ ಕಾಂಗ್ರೆಸ್ ಅಧ್ಯಕ್ಷ ರಾವ್ ಸಾಹೇಬ್ ಮುನಿಸ್ವಾಮಿ ಪಿಳ್ಳೈ ಮತ್ತು ಮದ್ರಾಸ್‌ನಿಂದ ಇನ್ನಿತರ ಪ್ರತಿನಿಧಿಗಳು ಶನಿವಾರ ಬೆಳಗ್ಗೆ ಆಗಮಿಸಲಿದ್ದಾರೆ ಎಂದು ಪ್ರಚಾರ ಮಾಡಲಾಗಿತ್ತು. ಶುಕ್ರವಾರ ೫–೪೫ಕ್ಕೆ ನಾಗಪೂರ್ ಮೇಲ್‌ನಿಂದ ಹೊರಟ ಡಾ. ಅಂಬೇಡ್ಕರ್ ಮತ್ತು ಮುಂಬೈನ ಇನ್ನಿತರ ಪ್ರತಿನಿಧಿಗಳಿಗೆ ಬೋರಿಬಂದರ್‌ನಲ್ಲಿ ಬೀಳ್ಕೋಡಲಾಯಿತು. ಮಾರ್ಗಮಧ್ಯೆ ಬರುವ ಪ್ರಮುಖ ಸ್ಟೇಷನ್‌ಗಳಲ್ಲಿ ನಾಗಪೂರ್ ಮೇಲ್ ನಿಲ್ಲುತ್ತಿತ್ತು. ಬೋರಿಬಂದರ್ ಬಿಟ್ಟ ನಾಗಪೂರ್ ಮೇಲ್ ಕಲ್ಯಾಣ್ ಸ್ಟೇಷನ್ ತಲುಪುತ್ತಿದ್ದಂತೆಯೇ ಡಾ. ಅಂಬೇಡ್ಕರ್‌ಗೆ ಜೈ ಎಂಬ ಉದ್ಘೋಷ ನಾಲ್ಕು ದಿಕ್ಕಿನಿಂದ ಮೊಳಗಿತು. ಡಾ. ಅಂಬೇಡ್ಕರ್ ಅವರಿಗೆ ಹೂಗುಚ್ಛ ಅರ್ಪಿಸಿದ ಹಿತೈಷಿಗಳು ತಮ್ಮ ಕಾರ್ಯದಲ್ಲಿ ಯಶಸ್ವಿಯಾಗಲಿ ಎಂದು ಹಾರೈಸಿದರು. ಇದೇ ರೀತಿಯ ಬೀಳ್ಕೊಡುಗೆ ಮತ್ತು ಹಾರೈಕೆ

ಕಸಾರಾ, ಇಗತಪುರಿ, ದೇವಳಾಲಿ, ನಾಸಿಕ್, ಮನ್ಮಾಡ್, ಚಾಳಿಸಗಾಂವ, ಮೂರ್ತಿಜಾಪುರ, ಅಕೋಲಾ, ಬಡನೇರಾ, ಧಾಮನಗಾಂವ ಸೇರಿದಂತೆ ಇನ್ನಿತರ ಸ್ಟೇಷನ್‌ಗಳಲ್ಲಿ ಡಾ. ಅಂಬೇಡ್ಕರ್ ಅವರಿಗೆ ದೊರಕಿತು. ದಿನಾಂಕ ೭ ಮೇ ೧೯೩೨ರಂದು ೯ ಗಂಟೆಗೆ ನಾಗಪೂರ್ ರೈಲ್ವೆ ನಿಲ್ದಾಣವನ್ನು ನಾಗಪೂರ್ ಮೇಲ್ ಪ್ರವೇಶಿಸುತ್ತಿದ್ದಂತೆಯೆ ಡಾ. ಅಂಬೇಡ್ಕರ್‌ಗೆ ಜಯವಾಗಲಿ, ಬಾಬಾಸಾಹೇಬ್ ಅಂಬೇಡ್ಕರ್‌ಗೆ ಜಯವಾಗಲಿ ಎಂಬ ಉದ್ಘೋಷ ನಾಲ್ಕು ದಿಕ್ಕಿನಿಂದ ಮೊಳಗುತ್ತಿತ್ತು. ಕನಿಷ್ಠ ಏನಿಲ್ಲವೆಂದರೂ ಸುಮಾರು ೫ ಸಾವಿರ ಜನರು ರೈಲ್ವೆ ಪ್ಲಾಟ್‌ಫಾರ್ಮ್ ಮೇಲೆ ಅಂಬೇಡ್ಕರ್ ಸ್ವಾಗತಕ್ಕಾಗಿ ಚಾತಕ ಪಕ್ಷಿಯಂತೆ ಕಾಯ್ದು ಕುಳಿತಿದ್ದರು. ರೈಲಿನ ಬೋಗಿಯಿಂದ ಡಾ. ಅಂಬೇಡ್ಕರ್ ಅವರು ಇಳಿದ ಕೂಡಲೇ ವಿಧಾನಪರಿಷತ್ ಸದಸ್ಯ ಶ್ರೀ ತುಳಸಿರಾಮ್ ಸಾಖರೆ ಅವರ ಹೃತ್ಪೂರ್ವಕ ಸ್ವಾಗತಕ್ಕೆ ಹಿಮ್ಮೇಳ ಎನ್ನುವಂತೆ ಸಮತಾ ಸೈನಿಕ ದಳದ ಬ್ಯಾಂಡ್‌ನ ಸುಸ್ವರ ನಿನಾದ ಪರಿಸರದಲ್ಲಿ ಲೀನವಾಗತೊಡಗಿತು. ಜನ ದಟ್ಟಣೆ ನಿಯಂತ್ರಿಸುವುದಕ್ಕೆ ನಿಯೋಜಿಸಲ್ಪಟ್ಟಿದ್ದ ನಗರ ನ್ಯಾಯಾಧೀಶ, ಪೊಲೀಸ್ ವರಿಷ್ಠ ಸೇರಿದಂತೆ ಇತರ ಪೊಲೀಸ್ ಅಧಿಕಾರಿಗಳಿಗೆ ಬಂದೋಬಸ್ತ್ ಏರ್ಪಡಿಸುವಲ್ಲಿ ಸಾಕು ಸಾಕಾಯಿತು.

ರೈಲ್ವೆ ನಿಲ್ದಾಣದಿಂದ ಹೊರ ಬಂದ ಮುಖ್ಯ ಅತಿಥಿಗಳಿಗೆ ಸಮತಾ ಸೈನಿಕ ದಳದ ಒಂದು ಸಾವಿರ ಕಾರ್ಯಕರ್ತರಿಂದ ಗೌರವ ವಂದನೆ ಸಲ್ಲಿಸಲಾಯಿತು. ಸ್ಟೇಷನ್ ಕಾಂಪೌಂಡ್‌ನಲ್ಲಿದ್ದ ಜನರು ಮತ್ತು ಹೊರಗೆ ನಿಂತಿದ್ದ ಸುಮಾರು ಹತ್ತು ಹದಿನೈದು ಸಾವಿರ ಜನರ ಬಾಯಲ್ಲಿ ಒಂದೇ ಸಮನೆ ಡಾ. ಅಂಬೇಡ್ಕರ್ ಅವರಿಗೆ ಜಯವಾಗಲಿ ಉದ್ಘೋಷ ಹೊರಬೀಳುತ್ತಿತ್ತು. ಅಂದು ನಾಗಪೂರ್‌ನ ಎಲ್ಲ ಗಿರಣಿಯ ಕಾರ್ಮಿಕರು ಡಾ. ಅಂಬೇಡ್ಕರ್ ಅವರ ಸ್ವಾಗತಕ್ಕೆ ಆಗಮಿಸಿದ್ದ ಹಿನ್ನೆಲೆಯಲ್ಲಿ ಮುಚ್ಚಿದ್ದವು. ಒಂದು ಗಿರಣಿಗೆ ಮಾತ್ರ ಹಿಂದೂ ಮತ್ತು ಕೆಲವು ಮುಸಲ್ಮಾನ ಕಾರ್ಮಿಕರು ಹೋಗಿದ್ದರು.

ಈ ಕಾಂಪೌಂಡ್‌ನಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಎಲ್ಲರೂ ನೋಡಲಿ ಎನ್ನುವ ಉದ್ದೇಶದಿಂದ ಚಿಕ್ಕದಾದ ವೇದಿಕೆ ನಿರ್ಮಿಸಲಾಗಿತ್ತು. ಗೌರವ ವಂದನೆ ಸ್ವೀಕರಿಸುತ್ತಿದ್ದಂತೆಯೇ ಡಾ. ಅಂಬೇಡ್ಕರ್ ಅವರು ವೇದಿಕೆಯ ಮೇಲೆ ಆಸೀನರಾದರು. ಇವರಿಗಿಂತ ಮುಂಚಿತವಾಗಿ ಆಗಮಿಸಿದ್ದ ಸಮಾವೇಶದ ಅಧ್ಯಕ್ಷ ರಾವ್‌ಬಹಾದ್ದೂರ್ ಶ್ರೀನಿವಾಸನ್ ಕೂಡ ಆಸೀನರಾದ ಬಳಿಕ ಮೂವರು ಅತಿಥಿಗಳಿಗೆ ಜನರಿಂದ ಹೂಗುಚ್ಛ ನೀಡಿ ಸನ್ಮಾನಿಸಲಾಯಿತು. ಇದಾದ ಬಳಿಕ ಅಧ್ಯಕ್ಷ ಶ್ರೀನಿವಾಸನ್ ಮತ್ತು ಡಾ. ಅಂಬೇಡ್ಕರ್ ಅವರ ಮೆರವಣಿಗೆ ನಡೆಯಲಿದೆ ಎಂದು ಘೋಷಿಸಿದ ಮೇಲೆ ಜನರ ಉತ್ಸಾಹ ಮತ್ತಷ್ಟು ಮೇರೆ ಮೀರಿತು. ನಾನಾ ತೆರನಾದ ಹೂಗಳಿಂದ ಅಲಂಕೃತ ವಾಹನದಲ್ಲಿ ಡಾ.ಅಂಬೇಡ್ಕರ್, ಮುನಿಸ್ವಾಮಿ ಪಿಳ್ಳೆ ಮತ್ತು ಶ್ರೀನಿವಾಸನ್ ಅವರನ್ನು ಕೂರಿಸಲಾಯಿತು. ಇತರ ಅತಿಥಿಗಳ ಮೆರವಣಿಗೆಗೆ ಬೇರೆ ವಾಹನದ ವ್ಯವಸ್ಥೆ ಮಾಡಲಾಗಿತ್ತು. ಸರಿಯಾಗಿ ೯.೪೫ಕ್ಕೆ ಮೆರವಣಿಗೆ ಆರಂಭವಾಯಿತು. ೧೦ರಿಂದ ೧೫ ಸಾವಿರ ಜನರ ಪ್ರಚಂಡ ಜನಸ್ತೋಮ ಅಂಬೇಡ್ಕರ್‌ಗೆ ಜಯವಾಗಲಿ ಎಂದು ಘೋಷಿಸುತ್ತಿತ್ತು. ಮೇಲೇರುತ್ತಿದ್ದ ಬಿಸಿಲಿನ ತಾಪಕ್ಕೆ ಜನರ ಗಮನವೇ ಇರಲಿಲ್ಲ. ಇಂದೋರಾ, ಗಡ್ಡಿಗುದಾಮದ ಬಳಿ ಮೆರವಣಿಗೆ ಬರುತ್ತಿದ್ದಂತೆಯೇ ಸರಿಸುಮಾರು ೫೦೦ ಮಹಿಳೆಯರ ಗುಂಪು ಅಂಬೇಡ್ಕರ್ ಅವರಿಗೆ ಹಾರ ಹಾಕುವುದಕ್ಕೆ ಮುಂದೆ ಬಂದಿತು. ಅನೇಕ ಬಾರಿ ಮೆರವಣಿಗೆ ನಿಲ್ಲುತ್ತಿತ್ತು ಮತ್ತು ಮತ್ತೆ ಮುಂದುವರಿಯುತ್ತಿತ್ತು. ಮಾಂಡವಾ ಹತ್ತಿರ ಮೆರವಣಿಗೆ ಬರುತ್ತಿದ್ದಂತೆಯೇ ಶ್ರೀ ಸಾಖರೆ ಅವರು, ಅಧಿವೇಶನ ಸಂಜೆ ೫ಕ್ಕೆ ಆರಂಭವಾಗುವುದರಿಂದ ಎಲ್ಲರೂ ಭೋಜನ ಇತ್ಯಾದಿಗಳನ್ನು ಪೂರೈಸಿಕೊಳ್ಳಬೇಕು ಎಂದು ಜನರಲ್ಲಿ ವಿನಂತಿಸಿದರು. ಜನರಿಗೆ ಬಿಸಿಲಿನ ತಾಪ ಆಗಬಾರದು ಎನ್ನುವ ಉದ್ದೇಶದಿಂದ ರೈಲ್ವೆ ನಿಲ್ದಾಣದಿಂದ ಹೊರಟ ಮೆರವಣಿಗೆಯನ್ನು

ಇಂದೋರಾ ಬಳಿ ಸಮಾಪ್ತಿಗೊಳಿಸಿದ ಬಳಿಕ ಅತಿಥಿಗಳ ವಾಹನಗಳು ಕಾಮಟಿಯತ್ತ ತೆರಳಿದವು. ನಾಗಪೂರದಿಂದ ಕೇವಲ ೧೦ ಮೈಲು ದೂರದಲ್ಲಿದ್ದ ಕಾಮಟಿಯಲ್ಲೂ ಕೂಡ ಸ್ವಾಗತ ಕೋರಲಾಯಿತು. ಅಧಿವೇಶನದ ಮಂಟಪದವರೆಗೆ ಜರುಗಿದ ಮೆರವಣಿಗೆಯಲ್ಲೂ ಬ್ಯಾಂಡ್, ಅಂಬೇಡ್ಕರ್ ಜಯಘೋಷದೊಂದಿಗೆ ಸಾವಿರಾರು ಜನರು ಪಾಲ್ಗೊಂಡಿದ್ದರು.

ಪಂಜಾಬ್, ಸಂಯುಕ್ತ ಪ್ರಾಂತ್ಯ, ಬಂಗಾಲ, ಬಿಹಾರ, ಒರಿಸ್ಸಾ, ಮುಂಬೈ ಹಾಗೂ ಇತರ ಸ್ಥಳಗಳಿಂದ ಆಗಮಿಸಿದ್ದ ಪ್ರತಿನಿಧಿಗಳು ಶುಕ್ರವಾರವೇ ಕಾಮಟಿ ತಲುಪಿದ್ದರು.

ಸಾಕಷ್ಟು ವಿಶಾಲವಾಗಿದ್ದ ಮತ್ತು ಹೂವುಗಳಿಂದ ಅಲಂಕೃತಗೊಂಡಿದ್ದ ಮಂಟಪದಲ್ಲಿ ಸುಮಾರು ೧೫ ಸಾವಿರಕ್ಕೂ ಹೆಚ್ಚು ಜನರು ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಅಧ್ಯಕ್ಷ ಮತ್ತು ಇತರ ನಾಯಕರಿಗಾಗಿ ಅತ್ಯುತ್ತಮ, ಸುಂದರ ವೇದಿಕೆ ನಿರ್ಮಿಸಿ ಕುರ್ಚಿ, ಟೀಪಾಯಿಗಳನ್ನು ಇರಿಸಲಾಗಿತ್ತು. ಮಂಟಪಕ್ಕೆ ಹೋಗುವುದಕ್ಕಾಗಿ ಒಂದು ಮುಖ್ಯ ಮತ್ತು ಇತರ ಮೂರು ಬಾಗಿಲುಗಳ ವ್ಯವಸ್ಥೆ ಮಾಡಲಾಗಿತ್ತು. ಹತ್ತಿರದಲ್ಲಿಯೇ ಪ್ರತಿನಿಧಿಗಳಿಗೆ ಟಿಕೇಟು ವಿತರಿಸುವ ವ್ಯವಸ್ಥೆ ಮಾಡಲಾಗಿತ್ತು. ಸ್ವಲ್ಪ ದೂರದ ಅಂತರದಲ್ಲಿ ವ್ಯಾಪಾರಸ್ಥರಿಗೂ ಮಳಿಗೆ ಹಾಕುವುದಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಸರಿಯಾಗಿ ೬ಕ್ಕೆ ಸಭೆ ಆರಂಭವಾಯಿತು. ವೇದಿಕೆಯ ಮೇಲೆ ಪ್ರತಿಯೊಂದು ಪ್ರಾಂತ್ಯದ ಪ್ರಮುಖ ನಾಯಕರಿಗೆ ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈ ಪ್ರಮುಖರಲ್ಲಿ ಬಂಗಾಲದ ಶ್ರೀ ಮಲಿಕ್, ದುಸಿಯಾ, ವಿಶ್ವಾಸ, ಉತ್ತರಪ್ರದೇಶದ ಸ್ವಾಮಿ ಅಚ್ಚುತಾನಂದ, ರಾಮ್ ಸಹಾಯ್, ಬಲದೇವ ಪ್ರಸಾದ, ಜಯಸ್ವಾಲ್, ಶಾಮಲಾಲ್, ಭಕ್ತಾವರಲಾಲ್, ಪಂಜಾಬ್‌ನಿಂದ ಶ್ರೀ ಹಂಸರಾಜ್, ಹರಿರಾಮ್, ಜಲಂಧರ್‌ನಿಂದ ಗುರುಹಂತಾಸಿಂಗ್, ಬಿಹಾರ್‌ನಿಂದ ಶ್ರೀ ಶ್ರೀಧರ್ ರಾಸಮಲ್, ಪುಣೆಯಿಂದ ಸುಭೇದಾರ್ ಘಾಡಗೆ, ನಾಸಿಕ್‌ನ ಪತೀತಪಾವನದಾಸ್, ಮದ್ರಾಸ್‌ನ ಶ್ರೀ ಕ್ಯಾನನ್ ಮತ್ತು ರಾವ್‌ಬಹಾದ್ದೂರ್ ಶ್ರೀನಿವಾಸನ್, ಮುಂಬೈನ ಡಾ. ಅಂಬೇಡ್ಕರ್, ಶಿವತರಕರ್, ಖೋಲವಾಡಿಕರ್, ವನಮಾಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸರಿಯಾಗಿ ೬ ಗಂಟೆ ಆಗುತ್ತಿದ್ದಂತೆಯೇ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಹರದಾಸ್ ಭಾಷಣಕ್ಕೆ ಎದ್ದು ನಿಂತರು. ಸ್ವಾಗತ ಸಮಿತಿ ಅಧ್ಯಕ್ಷರ ಭಾಷಣದ ಬಳಿಕ ಸಭೆಯ ಅಧ್ಯಕ್ಷೀಯ ಭಾಷಣ ಕೂಡ ಪೂರ್ಣಗೊಂಡಿತು. ಬಳಿಕ ವಿವಿಧ ಸ್ಥಳಗಳಿಂದ ಬಂದಿದ್ದ ಪತ್ರಗಳು ಮತ್ತು ಟೆಲಿಗ್ರಾಫಿಕ್ ಸಂದೇಶಗಳನ್ನು ಸಮಿತಿಯ ಕಾರ್ಯದರ್ಶಿ ಸಭಿಕರ ಎದುರು ವಾಚನ ಮಾಡಿದರು. ಅವುಗಳ ಪೈಕಿ ಕೇವಲ ಒಂದು ಸಂದೇಶ ಹೊರತುಪಡಿಸಿ ಇನ್ನುಳಿದ ಎಲ್ಲ ಪತ್ರಗಳು ಮತ್ತು ಸಂದೇಶಗಳಲ್ಲಿ ಸ್ವತಂತ್ರ ಮತಕ್ಷೇತ್ರಕ್ಕೆ ಬೆಂಬಲ, ರಾಜಾ–ಮುಂಜೆ ನಡುವೆ ಏರ್ಪಟ್ಟ ಒಪ್ಪಂದದ ತಿರಸ್ಕಾರ, ರಾವ್‌ಬಹಾದ್ದೂರ್ ಶ್ರೀನಿವಾಸನ್ ಮತ್ತು ಡಾ. ಅಂಬೇಡ್ಕರ್ ಅವರ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ ಅಂಶಗಳಿದ್ದವು. ಈ ಎಲ್ಲ ಪತ್ರ ವ್ಯವಹಾರ ಮತ್ತು ಸಂದೇಶಗಳನ್ನು ವಿವರಿಸುವುದು ಸ್ಥಳಾಭಾವದ ಕಾರಣ ಅಸಾಧ್ಯದ ಸಂಗತಿಯಾಗಿರುವ ಹಿನ್ನೆಲೆಯಲ್ಲಿ ಅವುಗಳ ಪೈಕಿ ಮುಂಬೈ ಪ್ರೆಸಿಡೆನ್ಸಿಯ ಭಾಗವಾಗಿದ್ದ ಧಾರವಾಡ ಜಿಲ್ಲೆಯ ಮದಗ ಗ್ರಾಮದ ಮುನ್ಸಿಪಲ್ ಸ್ಕೂಲ್ ಸದಸ್ಯ ನೀಲಪ್ಪ ಯಲ್ಲಪ್ಪ ಬೆಳವಡಿ ಹಾಗೂ ಕಿರಾಣಿ ವ್ಯಾಪಾರಿ ಬಸಪ್ಪ ನಾಗಪ್ಪ ಘೋಡಕೆ ಅವರುಗಳು ಸ್ವಾಗತ ಸಮಿತಿ ಅಧ್ಯಕ್ಷರಿಗೆ ಬರೆದ ಪತ್ರವನ್ನು ನೀಡುತ್ತಿದ್ದೇವೆ.

**'ಸಪ್ರೇಮ ನಮಸ್ಕಾರಗಳು,**

ನಿಮ್ಮ ಅಧಿವೇಶನಕ್ಕೆ ಸಂಬಂಧಿಸಿದ ಮಜಕೂರನ್ನು ಜನತಾ ಪತ್ರಿಕೆಯಲ್ಲಿ ನೋಡಿದ್ದೇವೆ. ಕೆಲವೊಂದು ಸಮಸ್ಯೆಗಳ ಕಾರಣ ಸಭೆಗೆ ಬರಲಿಕ್ಕೆ ಆಗುವುದಿಲ್ಲ. ನಮ್ಮ ಈ ಭಾಗದ ಅಸ್ಪೃಶ್ಯ ಜನರು ಡಾ. ಅಂಬೇಡ್ಕರ್

ಅವರು ಮಂಡಿಸುವ ಸ್ವತಂತ್ರ ಮತದಾರ ಕ್ಷೇತ್ರದ ಗೊತ್ತುವಳಿಗೆ ಸಂಪೂರ್ಣ ಬೆಂಬಲ ನೀಡುತ್ತಿದ್ದಾರೆ. ಅಂಬೇಡ್ಕರರೇ ನಮ್ಮ ಅಸ್ಪೃಶ್ಯ ಸಮಾಜದ ನಿಜವಾದ ನಾಯಕರಾಗಿದ್ದಾರೆ. ಮುಂಜೆ ಮತ್ತು ರಾವ್‌ಬಹಾದ್ದೂರ್ ರಾಜಾ ಅವರ ಒಪ್ಪಂದಕ್ಕೆ ನಮ್ಮ ಕರ್ನಾಟಕದ ಜನರ ಬೆಂಬಲವಿಲ್ಲ. ರಾವ್‌ಬಹಾದ್ದೂರ್ ರಾಜಾ ಮತ್ತು ಗವಯಿ ಅತ್ಯಂತ ಸಂದಿಗ್ಧ ಸಮಯದಲ್ಲಿ ಸ್ವತಂತ್ರ ಮತದಾರ ಕ್ಷೇತ್ರಕ್ಕೆ ವಿರೋಧ ವ್ಯಕ್ತಪಡಿಸಿದ ಕಾರಣ ಈ ಭಾಗದ ಜನರು ಅವರನ್ನು ಧಿಕ್ಕರಿಸಿದ್ದಾರೆ. ಈ ನಮ್ಮ ಪತ್ರವನ್ನು ಸಭೆಯಲ್ಲಿ ಓದಿ ತಿಳಿಸಬೇಕು ಎಂದು ತಮ್ಮಲ್ಲಿ ವಿನಂತಿ.'

ಮುಂಬೈನಲ್ಲಿರುವ ರೋಹಿದಾಸ್ ಜ್ಞಾನದೇವ ಸಮಾಜ ಸಂಸ್ಥೆಯು ಶ್ರೀ ವನಮಾಳಿ ಅವರನ್ನು ತಮ್ಮ ಪ್ರತಿನಿಧಿಯಾಗಿ ಕಳುಹಿದ್ದರು. ಅವರೊಂದಿಗೆ ಕಳುಹಿಸಿದ ಸಂದೇಶದಲ್ಲಿ ಸಂಸ್ಥೆಯು ಸ್ವತಂತ್ರ ಮತದಾರ ಕ್ಷೇತ್ರ ಅಸ್ಪೃಶ್ಯರಿಗೆ ಬೇಕು ಎಂದು ಒತ್ತಾಯಿಸಿದ್ದರು.

ವನಮಾಳಿ ಮತ್ತು ನೀಲಪ್ಪ ಯಲ್ಲಪ್ಪ ಬೆಳವಡಿ ಜಾತಿಯಿಂದ ಚಮ್ಮಾರರಾಗಿದ್ದರೆ ಬಸಪ್ಪ ನಾಗಪ್ಪ ಘೋಡಕೆ ಜಾತಿಯಿಂದ ಡೋಹರ್ ಆಗಿದ್ದರು. ಈ ವಿಚಾರಗಳನ್ನು ಗಮನದಲ್ಲಿರಿಸಿಕೊಂಡಲ್ಲಿ ಡಾ. ಅಂಬೇಡ್ಕರ್ ಅವರ ಮೇಲೆ ಕೇವಲ ಮಹಾರ್ ಜಾತಿಯವರು ವಿಶ್ವಾಸವಿರಿಸಿದ್ದಾರೆ ಮತ್ತು ಸ್ವತಂತ್ರ ಮತಕ್ಷೇತ್ರ ಕೇವಲ ಮಹಾರ್‌ರಿಗೆ ಮಾತ್ರ ಬೇಕು ವಿನಃ ಸ್ವತಂತ್ರ ಮತಕ್ಷೇತ್ರಕ್ಕೆ ಚಮ್ಮಾರರು, ಡೋಹರರ ವಿರೋಧವಿದೆ ಎಂದು ಹೇಳುವ ಸಂಗತಿ ಸುಳ್ಳು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಉಲ್ಲೇಖಿಸಲೇಬೇಕಾದಂತಹ ಇನ್ನೊಂದು ಪತ್ರ ಎಂದರೆ ಆಸ್ಸಾಂ ಪ್ರಾಂತ್ಯದ ಅಸ್ಪೃಶ್ಯ ನಾಯಕ ಬಾಬು ಸೇನಾಧರದಾಸ್ ಸೇನಾಪತಿ ಅವರದ್ದು. ಅವರು ರಾವ್‌ಬಹಾದ್ದೂರ್ ಎಂ.ಸಿ. ರಾಜಾ ಅವರಿಗೆ ಡಾ. ಅಂಬೇಡ್ಕರ್ ಒಂದು ಪತ್ರವನ್ನು ಬರೆದಿದ್ದರು ಮತ್ತು ಅದನ್ನು ಡಾ. ಅಂಬೇಡ್ಕರ್‌ರ ವಿಳಾಸಕ್ಕೆ ಕಳುಹಿಸಿಕೊಟ್ಟಿದ್ದರು.

ಸಮಾವೇಶಕ್ಕೆ ಕೊಲ್ಕತ್ತಾದ ಅಖಿಲ ಭಾರತೀಯ ಬೌದ್ಧ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಕಳುಹಿಸಿದ್ದ ಪತ್ರದಲ್ಲಿ ಸಮಾವೇಶಕ್ಕೆ ಶುಭ ಹಾರೈಸುವುದರ ಜೊತೆಗೆ ಎಲ್ಲ ಅಸ್ಪೃಶ್ಯ ವರ್ಗಗಳು ಬೌದ್ಧ ಧರ್ಮ ಸ್ವೀಕರಿಸಬೇಕು ಎಂದು ಸೂಚಿಸಲಾಗಿತ್ತು.

ಬಳಿಕ ವಿಷಯ ನಿಯಾಮಕ ಸಮಿತಿಯ ಆಯ್ಕೆ ಕುರಿತು ಚಿಂತನೆ ಮಾಡಲಾಯಿತು. ರಾತ್ರಿ ೧೧ಕ್ಕೆ ಆರಂಭವಾದ ವಿಷಯ ನಿಯಾಮಕ ಸಮಿತಿಯ ಸಭೆ ಆರಂಭವಾಗಿ ರಾತ್ರಿ ೩ ಗಂಟೆಯವರೆಗೆ ಜರುಗಿತು. ವಿಷಯ ನಿಯಾಮಕ ಸಮಿತಿಯಲ್ಲಿದ್ದ ಜನರು ಕೇಳಿದ ಎಲ್ಲ ಪ್ರಶ್ನೆಗಳಿಗೆ ಡಾ. ಅಂಬೇಡ್ಕರ್ ಅವರು ಸ್ಪಷ್ಟ ಉತ್ತರ ನೀಡಿ ಎಲ್ಲರನ್ನೂ ತೃಪ್ತಗೊಳಿಸಿದರು.

### ಎರಡನೇ ದಿನದ ಕಾರ್ಯಕ್ರಮ

ಎರಡನೇ ದಿನ ಬೆಳಗ್ಗೆ ೯ಕ್ಕೆ ಮತ್ತೇ ಅಧಿವೇಶನ ಆರಂಭವಾಯಿತು. ಎರಡನೇ ದಿನ ಕೂಡ ಮೊದಲನೇ ದಿನ ಇದ್ದಷ್ಟೇ ಜನರು ಸಮಾವೇಶದಲ್ಲಿದ್ದರು. ಆರಂಭದಲ್ಲಿಯೇ ಸಮಾವೇಶಕ್ಕೆ ಶುಭಕೋರುವ ತಂತಿ ಬಂದಿರುವ ಸಂಗತಿಯನ್ನು ಸಮಾವೇಶದ ಅಧ್ಯಕ್ಷರು ಹೇಳಿದರು. ಇದಾದ ಬಳಿಕ ಸಮಾವೇಶದ ಬಹಿರಂಗ ಅಧಿವೇಶನದಲ್ಲಿ ಕೆಳಗೆ ವಿವರಿಸಿದ ಸಂಗತಿಗಳನ್ನು ಗೊತ್ತುವಳಿಗಳ ಮೂಲಕ ಪಾಸು ಮಾಡಲಾಯಿತು.

ಸಮಾವೇಶದಲ್ಲಿ ಪಾಸಾದ ಗೊತ್ತುವಳಿಗಳು

**೧ನೇ** ಗೊತ್ತುವಳಿ: ಈ ಸಮಾವೇಶವು ಸಾರ್ವಭೌಮ ಚಕ್ರಾಧಿಪತ್ಯಕ್ಕೆ ತನ್ನ ರಾಜನಿಷ್ಠೆ ವ್ಯಕ್ತಪಡಿಸುತ್ತದೆ.

**೨ನೇ** ಗೊತ್ತುವಳಿ: ಈ ಸಮಾವೇಶವು ಯಾವುದೇ ರೀತಿಯ ಚಳವಳಿ ಇಲ್ಲವೇ ಕಾಯ್ದೆ ಭಂಗ

ಚಳವಳಿಯನ್ನು ವಿರೋಧಿಸುತ್ತದೆ ಮತ್ತು ಇಂತಹ ಚಳವಳಿಗಳಿಗೆ ತಡೆಯೊಡ್ಡುವುದಕ್ಕೆ ಸರ್ಕಾರ ಪ್ರಯತ್ನಿಸಬೇಕು ಎಂದು ಸರ್ಕಾರಕ್ಕೆ ಸೂಚಿಸುತ್ತದೆ.

**೩ನೇ** ಗೊತ್ತುವಳಿ: ಬಂಗಾಲ ಪ್ರಾಂತ್ಯದ ಮಿಡ್ನಾಪುರ ಜಿಲ್ಲಾ ನ್ಯಾಯಾಧೀಶ ಶ್ರೀ ಡಗ್ಲಾಸ್ ಐಸಿಎಸ್ ಅವರ ಅಮಾನುಷ ಹತ್ಯೆಯ ಘಟನೆಯನ್ನು ಈ ಸಮಾವೇಶ ಖಂಡಿಸುತ್ತದೆ. ಅಲ್ಲದೇ ಡಗ್ಲಾಸ್ ಅವರ ಕುಟುಂಬಕ್ಕೆ ತನ್ನ ಸಹಾನುಭೂತಿ ವ್ಯಕ್ತಪಡಿಸುತ್ತದೆ.

**೪ನೇ** ಗೊತ್ತುವಳಿ: ನೂತನ ಸಂವಿಧಾನದಲ್ಲಿ ಅಸ್ಪೃಶ್ಯರ ಹಿತಾಸಕ್ತಿಯನ್ನು ಸಂಪೂರ್ಣವಾಗಿ ರಕ್ಷಿಸುತ್ತೇವೆಂದು ಹೇಳಿದ ಸೆಕ್ರೆಟರಿ ಆಫ್ ಸ್ಟೇಟ್ ಅವರಿಗೆ ಈ ಅಧಿವೇಶನವು ಕೃತಜ್ಞತೆ ಹೇಳುತ್ತದೆ. ಆದರೆ ಸರ್ಕಾರದೊಂದಿಗೆ ಸಹಕರಿಸುವ ಪಕ್ಷಗಳನ್ನು ನಿರ್ಲಕ್ಷಿಸುವ ಮತ್ತು ಸರ್ಕಾರದೊಂದಿಗೆ ಅಸಹಕಾರ ಮನೋಭಾವನೆ ತಾಳುವ ಪಕ್ಷಗಳ ಮಾತಿಗೆ ಕಟ್ಟುಬೀಳುವ ಸರ್ಕಾರದ ಧೋರಣೆಯ ಬಗ್ಗೆ ಈ ಅಧಿವೇಶನವು ಅಸಮಾಧಾನ ವ್ಯಕ್ತಪಡಿಸುತ್ತದೆ.

ಗೊತ್ತುವಳಿ ಮಂಡಿಸಿದವರು– ಶ್ರೀ ವಿಶ್ವಾಸ (ಬಂಗಾಲ)

ಅನುಮೋದನೆ– ಶ್ರೀ ಬಲದೇವ ಪ್ರಸಾದ (ಸಂಯುಕ್ತ ಪ್ರಾಂತ್ಯ)

ಗೊತ್ತುವಳಿಯನ್ನು ಸರ್ವಾನುಮತದಿಂದ ಪಾಸು ಮಾಡಲಾಯಿತು.

**೫ನೇ** ಗೊತ್ತುವಳಿ: (ಅ) ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ರೂಪಿಸಿದ ನಿಯಮಾವಳಿಗಳಿಗೆ ಈ ಅಧಿವೇಶನವು ತನ್ನ ಸಮ್ಮತಿ ಸೂಚಿಸುತ್ತದೆ.

(ಬ)– ಈ ಅಧಿವೇಶನದ ಮುಖಾಂತರ ಸಾರ್ವಭೌಮ ಸರ್ಕಾರಕ್ಕೆ ತಿಳಿಸುವುದು ಏನೆಂದರೆ, ಅಲ್ಪಸಂಖ್ಯಾತರಿಗಾಗಿ ರೂಪಿಸಿದ ನಿಯಮಾವಳಿಗಳಲ್ಲಿ ಅಸ್ಪೃಶ್ಯರ ಹಕ್ಕುಗಳು ಎಂದು ತೋರಿಸಲ್ಪಟ್ಟಿರುವ ಹಕ್ಕುಗಳು ಗರಿಷ್ಠ ಹಕ್ಕುಗಳಲ್ಲ ಬದಲಿಗೆ ಅವು ಕನಿಷ್ಠ ಹಕ್ಕುಗಳು ಆಗಿವೆ. ಅವುಗಳ ಪೈಕಿ ಯಾವುದನ್ನು ತೆಗೆದುಹಾಕುವ ಅಥವಾ ಮಾರ್ಪಡಿಸುವ ಅಥವಾ ಬದಲಿಸುವ ವಿಚಾರಕ್ಕೆ ಈ ಅಧಿವೇಶನ ಸಮ್ಮತಿ ಸೂಚಿಸುವುದಿಲ್ಲ. ಒಂದು ವೇಳೆ ಅವುಗಳಲ್ಲಿ ತಿದ್ದುಪಡಿ ಇಲ್ಲವೇ ಮಾರ್ಪಡಿಸುವುದನ್ನು ಮಾಡಿದಲ್ಲಿ ಅಸ್ಪೃಶ್ಯ ವರ್ಗದ ಸದ್ಯದ ರಾಜಕೀಯ ಧೋರಣೆಯಲ್ಲಿ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಈ ಸಮಾವೇಶ ಕಾಯ್ದಿರಿಸಿಕೊಂಡಿದೆ.

(ಕ)– ಈ ಸಮಾವೇಶವು ಸಾರ್ವಭೌಮ ಸರ್ಕಾರಕ್ಕೆ ಸ್ಪಷ್ಟಪಡಿಸಲು ಇಚ್ಛಿಸುವ ಸಂಗತಿ ಏನೆಂದರೆ, ಅಲ್ಪಸಂಖ್ಯಾತರಿಗಾಗಿ ರೂಪಿಸಿರುವ ನಿಯಮಾವಳಿಗಳಲ್ಲಿ ಅಸ್ಪೃಶ್ಯ ವರ್ಗದ ಸ್ವತಂತ್ರ ಮತಕ್ಷೇತ್ರಗಳನ್ನು ಮುಂದಿನ ೨೦ ವರ್ಷಗಳ ಬಳಿಕ ಸಾಮಾನ್ಯ ಕ್ಷೇತ್ರ ಎಂದು ಪರಿಗಣಿಸಲ್ಪಡುವ ಕಲಂ ಇದೆ. ಇದನ್ನು ಜಾರಿಗೊಗೊಳಿಸುವುದಕ್ಕಾಗಿ ತಲೆ ಎಣಿಕೆ ಮತದಾನ ಪದ್ಧತಿಯ ಶರತ್ತು ಹಾಕಲಾಗಿದೆ. ಅಲ್ಪಸಂಖ್ಯಾತರ ಒಪ್ಪಂದದಲ್ಲಿ ಎಷ್ಟು ಕ್ಷೇತ್ರಗಳನ್ನು ಅವರಿಗೆ ನೀಡಬೇಕೊ ಅಷ್ಟು ಅವರಿಗೆ ಕೊಡಬೇಕು.

(ಡ)– ಅಸ್ಪೃಶ್ಯರ ಪ್ರಾತಿನಿಧಿತ್ವ ಕಡಿಮೆಗೊಳಿಸುವ ಉದ್ದೇಶದಿಂದ ಅಸ್ಪೃಶ್ಯರ ಜನಸಂಖ್ಯೆಯನ್ನು ಕಡಿಮೆ ತೋರಿಸುವ ಹಿಂದೂಗಳ ಕ್ರಮವನ್ನು ಈ ಸಮಾವೇಶ ಖಂಡಿಸುತ್ತದೆ. ಹಿಂದೂಗಳು ನೀಡಿರುವ ಜನಸಂಖ್ಯೆ ಅಪ್ಪಟ ಸುಳ್ಳು ಎಂದು ಸರ್ಕಾರಕ್ಕೆ ಸ್ಪಷ್ಟಪಡಿಸುತ್ತದೆ.

(ಇ)– ಸ್ವತಂತ್ರ ಪ್ರಾತಿನಿಧಿತ್ವದ ಹಕ್ಕು ಅಸ್ಪೃಶ್ಯ ವರ್ಗಕ್ಕೆ ತನ್ನ ಆತ್ಮ ಸಂರಕ್ಷಣೆಗೆ ಇರುವ ನೈಸರ್ಗಿಕ ಹಕ್ಕು ಆಗಿದೆ. ಅದು ತಾತ್ಕಾಲಿಕ ಸ್ವರೂಪದಲ್ಲಿಬಾರದು. ಈ ಕಾರಣಕ್ಕಾಗಿ ಲೋಥಿಯನ್ ಕಮಿಟಿ ಎದುರು ರಾವ್‌ಬಹಾದ್ದೂರ್ ರಾಜಾ ಅವರು ಸಾಕ್ಷ್ಯ ನುಡಿಯುವ ಸಂದರ್ಭದಲ್ಲಿ ಅಸ್ಪೃಶ್ಯರಿಗೆ ಕೇವಲ ಕೆಲಕಾಲದವರೆಗೆ

ಮಾತ್ರ ಸ್ವತಂತ್ರ ಪ್ರಾತಿನಿಧಿತ್ವದ ಹಕ್ಕನ್ನು ನೀಡಬೇಕೆಂಬ ಪ್ರಸ್ತಾವನೆಯನ್ನು ಈ ಅಧಿವೇಶನವು ಸ್ಪಷ್ಟವಾಗಿ ನಿರಾಕರಿಸುತ್ತದೆ.

ರಕ್ಷಿಸುತ್ತೇವೆಂದು ಹೇಳಿದ ಸೆಕ್ರೆಟರಿ ಆಫ್ ಸ್ಟೇಟ್ ಅವರಿಗೆ ಈ ಅಧಿವೇಶನ ಕೃತಜ್ಞತೆಗಳನ್ನು ಹೇಳುತ್ತದೆ.

ಮಂಡನೆ– ಶ್ರೀ ಎಂ. ಬಿ. ಮಲ್ಲಿಕ್ (ಬಂಗಾಲ)

ಮಂಡನೆ– ಶ್ರೀ ಎನ್.ಸಿ. ಘುಸಿಯಾ (ಬಂಗಾಲ)

ಅನುಮೋದನೆ– ರಾಮಸಹಾಯಿ (ಉತ್ತರ ಪ್ರದೇಶ)

ಅನುಮೋದನೆ– ಶ್ರೀ ಸಾಖರೆ (ಕೇಂದ್ರ ಪ್ರಾಂತ್ಯ)

ಅನುಮೋದನೆ– ಶ್ರೀ ಹಂಸರಾಜ (ಪಂಜಾಬ್)

ಅನುಮೋದನೆ– ಶ್ರೀ ಗಾಡೇಕರ್ (ಮುಂಬೈ)

ಅನುಮೋದನೆ– ಶ್ರೀ ಕಣ್ಣನ್ (ಮದ್ರಾಸ್)

ಬೆಂಬಲ–ಮಹಾತ್ಮಾ ಕಾಲಿಚರಣ್ ನಂದಾಗವಳಿ (ಕೇಂದ್ರ ಪ್ರಾಂತ್ಯ)

ಬೆಂಬಲ– ಸ್ವಾಮಿ ಅಚ್ಯುತಾನಂದ (ಉತ್ತರ ಪ್ರದೇಶ)

ಬೆಂಬಲ–ಶ್ರೀಮತಿ ಅಂಜನಿಬಾಯಿ (ಕೇಂದ್ರ ಪ್ರಾಂತ್ಯ)

ಶ್ರೀ ಖಾಂಡೇಕರ್ (ಕೇಂದ್ರ ಪ್ರಾಂತ್ಯ), ಶ್ರೀ ಜಾಟವ್ (ದೆಹಲಿ) ಈ ಇಬ್ಬರು ಗೊತ್ತುವಳಿಯನ್ನು ವಿರೋಧಿಸಿದರೆ ಇನ್ನುಳಿದವರು ಸರ್ವಾನುಮತದಿಂದ ಈ ಗೊತ್ತುವಳಿಯನ್ನು ಪಾಸು ಮಾಡಿದರು.

**೬ನೇ** ಗೊತ್ತುವಳಿ: ರಾಜಾ–ಮುಂಜೆ ನಡುವೆ ಏರ್ಪಟ್ಟ ಒಪ್ಪಂದ ಅಸ್ಪೃಶ್ಯ ವರ್ಗದ ರಾಜಕೀಯ ಹಿತಾಸಕ್ತಿಗೆ ಧಕ್ಕೆ ತರುವಂತಹದ್ದಾಗಿರುವ ಕಾರಣ ಈ ಅಧಿವೇಶನವು ಆ ಒಪ್ಪಂದನ್ನು ನಿರಾಕರಿಸುವುದರ ಜೊತೆಗೆ ಅದು ಅಸ್ಪೃಶ್ಯ ವರ್ಗಗಳಿಗೆ ಬಂಧನಕಾರಕವಲ್ಲ ಎಂದು ಸ್ಪಷ್ಟಪಡಿಸುತ್ತದೆ.

ಮಂಡನೆ–ಪಿ. ಬಿ. ಮಲಿಕ್ (ಬಂಗಾಲ)

ಅನುಮೋದನೆ–ಸ್ವಾಮಿ ಅಚ್ಯುತಾನಂದ (ಸಂಯುಕ್ತ ಪ್ರಾಂತ್ಯ)

ಬೆಂಬಲ– ಬಲದೇವ ಪ್ರಸಾದ (ಸಂಯುಕ್ತ ಪ್ರಾಂತ್ಯ) ಬಿಹಾಡೆ (ಮಧ್ಯ ಪ್ರಾಂತ್ಯ),

ಶ್ರೀ ಖಾಂಡೇಕರ್ (ಕೇಂದ್ರ ಪ್ರಾಂತ್ಯ) ಮತ್ತು ಜಾಟವ್ (ದೆಹಲಿ) ಈ ಇಬ್ಬರು ಗೊತ್ತುವಳಿಯನ್ನು ವಿರೋಧಿಸಿದರೆ ಇನ್ನುಳಿದವರು ಸರ್ವಾನುಮತದಿಂದ ಗೊತ್ತುವಳಿಯನ್ನು ಅಂಗೀಕರಿಸಿದರು.

**೭ನೇ** ಗೊತ್ತುವಳಿ: ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಅಸ್ಪೃಶ್ಯ ವರ್ಗಕ್ಕೆ ನೀಡಿದ ಒಂದಿಷ್ಟು ಪ್ರಾತಿನಿಧಿತ್ವಕ್ಕಾಗಿ ಈ ಸಮಾವೇಶ ತನ್ನ ಮೆಚ್ಚುಗೆ ವ್ಯಕ್ತಪಡಿಸುವುದರ ಜೊತೆಗೆ ಮುಂಬರುವ ದುಂಡು ಮೇಜಿನ ಪರಿಷತ್ ಸಭೆಯಲ್ಲಿ ಅಸ್ಪೃಶ್ಯರಿಗೆ ಇನ್ನಷ್ಟು ಹೆಚ್ಚು ಪ್ರಾತಿನಿಧಿತ್ವದ ಅವಕಾಶ ನೀಡಬೇಕು ಎಂದು ಸರ್ಕಾರಕ್ಕೆ ಆಗ್ರಹಿಸುತ್ತದೆ.

ಮಂಡನೆ– ದುಲೋರಲಾಲ್ (ಮಧ್ಯ ಪ್ರಾಂತ್ಯ)

ಅನುಮೋದನೆ–ಸುಭೇದಾರ ಘಾಟಗೆ (ಮುಂಬೈ)

ಬೆಂಬಲ– ಪಾಟೀಲ (ಸಂಯುಕ್ತ ಪ್ರಾಂತ್ಯ)

ಸರ್ವಾನುಮತದಿಂದ ಗೊತ್ತುವಳಿಯನ್ನು ಪಾಸು ಮಾಡಲಾಯಿತು.

**೮ನೇ** ಗೊತ್ತುವಳಿ: ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಡಾ. ಅಂಬೇಡ್ಕರ್ ಮತ್ತು ಶ್ರೀನಿವಾಸನ್

ಅವರು ಮಾಡಿರುವ ಕಾರ್ಯದ ಬಗ್ಗೆ ಈ ಸಮಾವೇಶವು ತನ್ನ ಕೃತಜ್ಞತೆ ಸಲ್ಲಿಸುತ್ತದೆ. ಅಲ್ಲದೇ ಇಡೀ ಅಸ್ಪೃಶ್ಯ ವರ್ಗವು ಅವರಿಬ್ಬರ ಮೇಲೆ ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.

ಸಮಾವೇಶದ ಅಧ್ಯಕರೇ ಈ ಗೊತ್ತುವಳಿಯನ್ನು ಮಂಡಿಸಿದರು. ಈ ಗೊತ್ತುವಳಿಯು ಸರ್ವಾನುಮತದಿಂದ ಪಾಸು ಮಾಡಲ್ಪಟ್ಟಿತು.

**೯ನೇ** ಗೊತ್ತುವಳಿ: ಪಂಜಾಬ್‌ನ ಕಾನೂನು ಮಂಡಳಿಯಲ್ಲಿ ಅಸ್ಪೃಶ್ಯ ವರ್ಗಕ್ಕೆ ಒಂದೇ ಒಂದಾದ ಪ್ರಾತಿನಿಧಿತ್ವವನ್ನು ನೀಡದಿರುವುದಕ್ಕೆ ಈ ಸಮಾವೇಶವು ತನ್ನ ಅಸಮಾಧಾನ ವ್ಯಕ್ತಪಡಿಸುವುದರ ಜೊತೆಗೆ ಬರುವ ದಿನಗಳಲ್ಲಿ ಅಸ್ಪೃಶ್ಯ ಪ್ರತಿನಿಧಿಯನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಆಗ್ರಹಪೂರ್ವಕವಾಗಿ ವಿನಂತಿಸುತ್ತದೆ.

**೧೦ನೇ** ಗೊತ್ತುವಳಿ: ಸಿದ್ಧಪಡಿಸಲಾಗುತ್ತಿರುವ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಈ ಕೆಳಗೆ ನಮೂದಿಸಿದ ಮೂಲಭೂತ ಹಕ್ಕುಗಳನ್ನು ಸೇರ್ಪಡೆ ಮಾಡಬೇಕು.

(ಅ) ಸ್ಥಳೀಯ ಸಂಸ್ಥೆಗಳಲ್ಲಿ ಅಸ್ಪೃಶ್ಯರ ಜನಸಂಖ್ಯೆಗೆ ಅನುಗುಣವಾಗಿ ಸ್ವತಂತ್ರ ಮತಕ್ಷೇತ್ರದ ಮುಖಾಂತರ ಅವರಿಗೆ ಪ್ರಾತಿನಿಧಿತ್ವ ನೀಡಬೇಕು.

(ಬ) ಅಸ್ಪೃಶ್ಯರಿಗೆ ಗುಣಮಟ್ಟದ ಶಿಕ್ಷಣ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಒಂದಿಷ್ಟು ಅನುದಾನವನ್ನು ಕೆಲವು ವರ್ಷ ಒದಗಿಸುವ ಹೊಣೆಗಾರಿಕೆ ನಿರ್ವಹಿಸಬೇಕು.

ಮಂಡನೆ– ಶಾಮಲಾಲ್ (ಮಧ್ಯ ಪ್ರಾಂತ್ಯ)

ಅನುಮೋದನೆ–ವನಮಾಳಿ (ಮುಂಬೈ)

ಬೆಂಬಲ– ಬಾರಸೆ (ಸಂಯುಕ್ತ ಪ್ರಾಂತ್ಯ)

ಬೆಂಬಲ– ಮೇಢೆ (ಮುಂಬೈ)

ಸರ್ವಾನುಮತದಿಂದ ಗೊತ್ತುವಳಿಯನ್ನು ಪಾಸು ಮಾಡಲಾಯಿತು.

**೧೧ನೇ** ಗೊತ್ತುವಳಿ: ಅಖಿಲ ಭಾರತೀಯ ಶೋಷಿತ ವರ್ಗಗಳ ಒಕ್ಕೂಟದ ಹೆಸರಿನಲ್ಲಿ ಎಲ್ಲ ಅಸ್ಪೃಶ್ಯ ವರ್ಗಗಳ ಕೇಂದ್ರ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಈ ಸಮಾವೇಶವು ತನ್ನ ಒಪ್ಪಿಗೆ ಸೂಚಿಸುತ್ತದೆ. ಈ ಕೇಂದ್ರ ಸಂಸ್ಥೆಯನ್ನು ಮುನ್ನಡೆಸುವ ಉದ್ದೇಶದಿಂದ ರಚಿಸಿರುವ ತಾತ್ಕಾಲಿಕ ಕಮಿಟಿಗೆ ತನ್ನ ಸಮ್ಮತಿಯನ್ನು ಈ ಸಮಾವೇಶ ನೀಡುತ್ತದೆ.

**೧೨ನೇ** ಗೊತ್ತುವಳಿ: ಈ ಸಮಾವೇಶವು ನಾಸಿಕ್ ಸತ್ಯಾಗ್ರಹಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತದೆ.

ಸಮಾವೇಶದ ಅಧ್ಯಕ್ಷರು ತಮ್ಮ ಅಧ್ಯಕ್ಷ ಪದವಿಯಿಂದ ಮಂಡಿಸಿದ ೧೧ ಮತ್ತು ೧೨ನೇ ಗೊತ್ತುವಳಿಗಳನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು.

ಸಮಾವೇಶದ ಗೊತ್ತುವಳಿಗಳ ಕುರಿತು ಶ್ರೀ ಮಲಿಕ್, ರಾಮಸಹಾಯ್, ನಂದಾಗವಳಿ ಮತ್ತು ಸಾಖರೆ ಅವರಿಂದ ಅತ್ಯಂತ ಪರಿಣಾಮಕಾರಿ ಭಾಷಣಗಳು ಮೂಡಿಬಂದವು. ಎಲ್ಲ ನಿರ್ಣಯಗಳನ್ನು ಪಾಸು ಮಾಡಿದ ಬಳಿಕ ಡಾ. ಅಂಬೇಡ್ಕರ್ ಅವರು ಕನಿಷ್ಠ ಒಂದೆರಡು ಶಬ್ದಗಳನ್ನಾದರೂ ಮಾತನಾಡಬೇಕು ಎಂದು ಸಭಿಕರ ಒತ್ತಾಯಕ್ಕೆ ಮಣಿದು ಸುಮಾರು ೧–೩೦ ಗಂಟೆಗೆ ಮಾತಿಗೆ ನಿಂತರು.

ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ ಹೇಳಿದ್ದಿಷ್ಟು: ಅಸ್ಪೃಶ್ಯರ ಕೈಗೆ ರಾಜಕೀಯ ಅಧಿಕಾರ ಅತ್ಯಂತ ಅವಶ್ಯಕವಾಗಿದ್ದು, ಈ ನಿಟ್ಟಿನಲ್ಲಿ ಎಲ್ಲ ಅಸ್ಪೃಶ್ಯರು ಸಂಘಟಿತರಾಗಬೇಕು. ಎಲ್ಲಿಯವರೆಗೆ ಈ ದೇಶದ ರಾಜಕೀಯದ ಮೇಲೆ ಅಸ್ಪೃಶ್ಯರು ಹಿಡಿತ ಸಾಧಿಸಲಿಕ್ಕೆ ಆಗುವುದಿಲ್ಲವೋ ಅಲ್ಲಿಯವರೆಗೆ ಅಸ್ಪೃಶ್ಯತೆ

ನಿರ್ಮೂಲನೆಯಾಗುವುದು ಅಸಾಧ್ಯದ ಮಾತು. ಇದಾದ ಬಳಿಕ ರಾವ್‌ಬಹಾದ್ದೂರ್ ಶ್ರೀನಿವಾಸನ್ ಕೂಡ ಮಾತನಾಡಿದರು.

ಅಂತಿಮವಾಗಿ ಅಖಿಲ ಭಾರತೀಯ ಶೋಷಿತ ವರ್ಗಗಳ ಒಕ್ಕೂಟದ ಮುಂದಿನ ಅಧಿವೇಶನವನ್ನು ಬಂಗಾಲ್ ಪ್ರಾಂತ್ಯದಲ್ಲಿ ಆಯೋಜಿಸಬೇಕೆಂದು ಶ್ರೀ ಮಲಿಕ್ ಆಹ್ವಾನ ನೀಡಿದರು. ಸಮಾರೋಪ ಸಮಾರಂಭದ ಅಧ್ಯಕ್ಷೀಯ ಭಾಷಣ, ವಂದನಾರ್ಪಣೆ ಪೂರ್ಣಗೊಂಡ ಬಳಿಕ ಸ್ವಾಗತ ಸಮಿತಿ ಮಾಡಿದ್ದ ಅಚ್ಚುಕಟ್ಟು ವ್ಯವಸ್ಥೆಗೆ ಅಭಿನಂದನೆ ಸಲ್ಲಿಸಲಾಯಿತು. ಡಾ. ಅಂಬೇಡ್ಕರ್‌ಗೆ ಜಯವಾಗಲಿಯೆಂಬ ಉದ್ಘೋಷದೊಂದಿಗೆ ಅಧಿವೇಶನ ಪೂರ್ಣಗೊಂಡಿತು.

---

ಜನತಾ: ಏಪ್ರಿಲ್ ೯ ಮತ್ತು ಮೇ ೧೪, ೧೯೩೨

## ೫೨.

# ಸ್ವಾವಲಂಬನೆಯೊಂದೇ ಅಸ್ಪೃಶ್ಯರಿಗೆ ಪರ್ಯಾಯ

ಮೇ ೧೯೩೨ರಂದು ಸೊಲ್ಲಾಪುರದ ಅಸ್ಪೃಶ್ಯರು ಡಾ. ಅಂಬೇಡ್ಕರ್ ಅವರ ಸನ್ಮಾನ ಸಮಾರಂಭನ್ನು ಆಯೋಜಿಸಿದ್ದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಆನರರಿ ಬೆಂಚ್ ಮ್ಯಾಜಿಸ್ಟ್ರೇಟ್ ಶ್ರೀಯುತ ಪಾಪಯ್ಯ ಬಾಬಾಜಿ ಬೇಲಪವಾರ್ ಅವರು ವಹಿಸಿದ್ದರು. ಈ ಸಮಾರಂಭದಲ್ಲಿ ಮಹಾರ್, ಮಾಂಗ್, ಚಮ್ಮಾರ ಮತ್ತು ಭಂಗಿ ಸಮಾಜದವರು ಸೇರಿದಂತೆ ಇನ್ನಿತರ ಸಮಾಜದವರು ಸೇರಿದ್ದರು. ಸಮಾರಂಭಕ್ಕೆ ಮುನ್ಸಿಪಲ್ ಕೌನ್ಸಿಲರ್ ಧರ್ಮಾಜಿ ನರಸು ಖರಟಮಲ್, ಮೋಹನದಾಸ್ ಅನ್ನಾಬಾ ಬಾಬರೆ, ವಿಶ್ರಾಮ್ ಜೀನಾ, ಭಂಗಿ, ಪಂಢರಿ ಸಖಾರಾಮ್ ಬಂದಸೋಡೆ, ಸಿದ್ರಾಮ್, ಬಾಬುರಾವ್ ಜಾಧವ, ದತ್ತು ತಾತ್ಯಾ ಸರ್ವಗೋಡ, ನಾಮದೇವ ಬುಧಾಜಿ ಬಂದಸೋಡೆ ಸೇರಿದಂತೆ ಇತರ ಜಾತಿಯ ಪ್ರಮುಖ ನಾಯಕರು ಉಪಸ್ಥಿತರಿದ್ದರು.

"ಇನ್ನು ಮುಂದೆ ಅಸ್ಪೃಶ್ಯರು ತಮ್ಮ ಸ್ವಂತ ಕಾಲುಗಳ ಮೇಲೆ ನಿಂತು ಸರ್ವಾಂಗೀಣ ಅಭಿವೃದ್ಧಿಗೆ ಪಣತೊಡಬೇಕು. ಹಿಂದೂ ಸಮಾಜದ ಮಡಿ ಮೈಲಿಗೆಯಿಂದಾಗಿ ಹಿಂದೂ ನಾಮಕರಣಗಳಿಂದ ಅಸ್ಪೃಶ್ಯತೆಯು ಎಂದಿಗೂ ನಿರ್ಮೂಲನೆಯಾಗದು. ಇದಕ್ಕೆ ತದ್ವಿರುದ್ಧವಾಗಿ ಸ್ವಾವಲಂಬನೆಯ ಮಂತ್ರ ಮತ್ತು ಪರಿಶ್ರಮದಿಂದ ಮಾತ್ರ ಅಸ್ಪೃಶ್ಯತೆ ನಿರ್ಮೂಲನೆಯಾಗಲು ಸಾಧ್ಯ ಎಂಬ ಆಶಾದಾಯಕ, ಸ್ಫೂರ್ತಿದಾಯಕ ಮಾತುಗಳನ್ನು ಡಾ. ಅಂಬೇಡ್ಕರ್ ಈ ಸಂದರ್ಭದಲ್ಲಿ ಉಚ್ಚರಿಸಿದರು.

ಭಾಷಣದ ದಿನಾಂಕ ಸ್ಪಷ್ಟಪಡಿಸಿಲ್ಲ– ಸಂಪಾದಕ.

---

ಜನತಾ: ಜೂನ್ ೨೫, ೧೯೩೨

## ೫೩.

# ದೇವ ದರ್ಶನ ಇಲ್ಲದಿದ್ದರೆ ಯಾರೂ ಸಾಯುವುದಿಲ್ಲ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ನಿಪ್ಪಾಣಿಯಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಸನ್ಮಾನ ಮತ್ತು ದೇಣಿಗೆ ಅರ್ಪಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮೇ ೨೩, ೧೯೩೭ರಂದು ಡಾ. ಅಂಬೇಡ್ಕರರು ಕೊಲ್ಹಾಪುರದಿಂದ ಹೊರಟರು. ಮಾರ್ಗ ಮಧ್ಯೆ ಬರುವ ಕ. ಕಾಗಲ್, ಜ. ಕಾಗಲ್ ಗ್ರಾಮದ ಅಸ್ಪೃಶ್ಯರು ಮಹಾರವಾಡೆಯಲ್ಲಿ ತಾಂಬೂಲ ಸಮರ್ಪಣೆ ಕಾರ್ಯಕ್ರಮವನ್ನು ಇರಿಸಿಕೊಂಡಿದ್ದರು. ಸುಮಾರು ೩.೩೦ ಗಂಟೆಯ ಹೊತ್ತಿಗೆ ಕಾಗಲ್ ಜಹಗಿರಿಯ ಅಂದಾಜು ೫–೬ ಸಾವಿರ ಅಸ್ಪೃಶ್ಯರು ಗ್ರಾಮದಿಂದ ಸುಮಾರು ೩–೪ ಫರ್ಲಾಂಗ್ ದೂರದಲ್ಲಿ ಡಾ. ಅಂಬೇಡ್ಕರ್‌ರನ್ನು ಸ್ವಾಗತಿಸಲು ಸೇರಿದ್ದರು. ಡಾ. ಬಾಬಾಸಾಹೇಬ ಅವರ ವಾಹನ ಬರುತ್ತಿದ್ದಂತೆಯೇ ಮುಗಿಲು ಮುಟ್ಟುವ ಜಯಘೋಷ, ವಾದ್ಯ ಮೇಳಗಳಿಂದ ವಾತಾವರಣ ದುಮದುಮಿಸತೊಡಗಿತು. ಲಾಠಿ ಹಿಡಿದ ಸಾವಿರಾರು ಕಾರ್ಯಕರ್ತರು ಅಂಬೇಡ್ಕರ್ ಕುಳಿತಿದ್ದ ವಾಹನಕ್ಕೆ ಬೆಂಗಾವಲು ನೀಡಿ ಅಂಬೇಡ್ಕರ್‌ಗೆ ಜಯವಾಗಲಿ ಎಂದು ಜಯಘೋಷ ಹಾಕುತ್ತಿತ್ತು. ಇನ್ನೊಂದಿಷ್ಟು ಸ್ವಯಂಸೇವಕರು ಮಾನವ ಸರಪಳಿ ನಿರ್ಮಿಸಿ ಅಂಬೇಡ್ಕರ್ ಅವರ ವಾಹನಕ್ಕೆ ದಾರಿ ಮಾಡಿಕೊಡುತ್ತಿದ್ದರು. ಸಮಾರಂಭದ ಸ್ಥಳದಲ್ಲಿ ಸೇರಿದ್ದ ಸ್ತ್ರೀ–ಪುರುಷರಿಂದ ಡಾ. ಅಂಬೇಡ್ಕರ್ ಅವರಿಗೆ ಜಯವಾಗಲಿ ಉದ್ಘೋಷ ಇನ್ನಷ್ಟು ಜೋರು ಪಡೆಯಿತು. ಸಮಯಾಭಾವವಿದ್ದರೂ ಶ್ರೀ ಭೀಮರಾವ್ ಸಂತಾಜಿ ಕಾಂಬಳೆ ಮಾಸ್ತರ್ ಅವರು ಡಾ. ಅಂಬೇಡ್ಕರ್ ಅವರನ್ನು ಸನ್ಮಾನಿಸಿ ಅವರ ಬಗ್ಗೆ ಗೌರವಪರವಾದ ಒಂದೆರಡು ಮಾತುಗಳನ್ನು ಹೇಳಿದರು.

ನಿಪ್ಪಾಣಿಯ ಕಾರ್ಯಕ್ರಮವು ಕರ್ನಾಟಕದ ಬಹಿಷ್ಕೃತ ಸಮಾಜದ ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಿ.ಎ. ಲಠ್ಠೆ, ಎಂ.ಎ., ಎಲ್‌ಎಲ್.ಬಿ, ವಹಿಸಿದ್ದರು. ಈ ಸಮಾರಂಭಕ್ಕೆ ಬೆಳಗಾವಿ, ಧಾರವಾಡ, ಕೊಲ್ಹಾಪುರ ಮತ್ತು ಸಾಂಗಲಿ ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಸುಮಾರು ೭–೮ ಸಾವಿರ ಜನರು ಆಗಮಿಸಿದ್ದರು. ಕೊಲ್ಹಾಪುರ ರಸ್ತೆಯಿಂದ ಸಭಾ ಮಂಟಪದವರೆಗೆ ಮೆರವಣಿಗೆಯಲ್ಲಿ ಡಾ. ಅಂಬೇಡ್ಕರ್ ಅವರನ್ನು ಕರೆತಂದ ಬಳಿಕ ಕಾರ್ಯಕ್ರಮ ಆರಂಭವಾಯಿತು. ಪುಣೆಯ ನ್ಯಾಯವಾದಿ ಶ್ರೀ ಬಾಗಡೆ, ಸಾತಾರಾದ ಭಾವುರಾವ್ ಪಾಟೀಲ, ಕೊಲ್ಹಾಪುರದ ದತ್ತೋಬಾ ಪೋವಾರ್, ಕೊಲ್ಹಾಪುರದ ನ್ಯಾಯವಾದಿ ಗಣೇಶಾಚಾರ್ಯ ಮಲಗೌಡ ಪಾಟೀಲ ಬೇನಾಡಿಕರ್ ಸೇರಿದಂತೆ ಇತರರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಸ್ವಾಗತ ಗೀತೆ ಬಳಿಕ ಶ್ರೀ ಮಾರುತಿರಾವ್ ರಾವ್ ಅವರು ಸಮಾರಂಭದ ಅಧ್ಯಕ್ಷರ ಬಗೆಗಿನ ಸೂಚನೆಯನ್ನು ತಂದರು. ಈ ಸೂಚನೆಗೆ ಬೆಳಗಾವಿಯ ರಾವ್‌ಸಾಹೇಬ್ ಪಾಪಣ್ಣ ಅನುಮೋದನೆ ನೀಡಿದ ಬಳಿಕ ದಿ.ಬ. ಲಠ್ಠೆ ಅವರು ಪ್ರಚಂಡ ಕರತಾಡನದ ಮಧ್ಯೆ ಸಭೆಯ ಅಧ್ಯಕ್ಷತೆ ಸ್ವೀಕರಿಸಿದರು. ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಿಷ್ಟು:

"ದಿ.ಬ. ಲಠ್ಠೆ ಸಾಹೇಬರೇ ಮತ್ತು ಸದ್ಗೃಹಸ್ಥರೆ,

ತಾವುಗಳು ನನ್ನನ್ನು ಈ ಸ್ಥಳಕ್ಕೆ ಬರುವಂತಹ ಯೋಗಾಯೋಗ ಕಲ್ಪಿಸಿದ್ದಕ್ಕೆ ನಾನು ನಿಮಗೆ ಕೃತಜ್ಞನಾಗಿದ್ದೇನೆ.

ಇಂದು ಭಾರತದಲ್ಲಿ ದೇಶದ್ರೋಹಿ, ದೇಶ ಒಡೆಯುವ, ಹಿಂದೂ ಧರ್ಮದ ದ್ರೋಹಿ ಮತ್ತು ಹಿಂದೂ-ಹಿಂದೂಗಳಲ್ಲಿ ಭೇದ ಹುಟ್ಟಿಸುವ ಕೆಲಸ ಯಾರಾದರೂ ಮಾಡುತ್ತಾರೆಂದರೆ ಅಥವಾ ದೇಶದ ಅತಿ ದೊಡ್ಡ ಶತ್ರು ಎಂದು ಯಾರಿಗಾದರೂ ಅನ್ನುತ್ತಿದ್ದರೆ ಅದು ನಾನು. ಆದರೆ ಈ ಪ್ರಕ್ಷುಬ್ಧ ವಾತಾವರಣ ತಿಳಿಗೊಂಡ ಬಳಿಕ, ದುಂಡು ಮೇಜಿನ ಪರಿಷತ್ತಿನ ಕೆಲಸ ಕಾರ್ಯಗಳನ್ನು ನನ್ನ ವಿರೋಧಿಗಳು ಅನ್ನಿಸಿಕೊಂಡವರು ಸೂಕ್ಷ್ಮವಾಗಿ ಗಮನಿಸಿದರೆ ಡಾ. ಅಂಬೇಡ್ಕರ್ ಈ ದೇಶಕ್ಕಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ ಎಂದು ಒಪ್ಪಲೇಬೇಕಾಗುತ್ತದೆ. ಈಗಿನ ಕಲುಷಿತ ವಾತಾವರಣ ಬದಲಾದ ಬಳಿಕವೂ ಒಪ್ಪಿಕೊಳ್ಳದಿದ್ದರೆ ಅವರಿಗೆ ನಾನು ಕವಡೆ ಕಾಸಿನ ಕಿಮ್ಮತ್ತು ಕೂಡ ನೀಡಲಾರೆ. ನನ್ನ ಕೆಲಸದ ಮೇಲೆ ನನ್ನ ದಲಿತ ಸಮಾಜ ನಂಬಿಕೆ ಇರಿಸಿರುವುದೇ ನನ್ನ ಪಾಲಿಗೆ ಅತಿ ದೊಡ್ಡ ಸಂಗತಿ. ಯಾವ ಸಮಾಜದಲ್ಲಿ ನಾನು ಹುಟ್ಟಿದ್ದೇನೋ, ಯಾವ ಜನರೊಂದಿಗೆ ಯಾರೊಂದಿಗೆ, ನಾನು ವ್ಯವಹರಿಸುತ್ತೇನೋ ಮತ್ತು ಯಾರಿಗಾಗಿ ನಾನು ಸಾಯಲಿರುವೆನೋ ಅವರಿಗಾಗಿ ನಾನು ಕೆಲಸ ಮಾಡುತ್ತಿದ್ದೇನೆ. ನನಗೆ ನನ್ನ ಸಮಾಜದ ಕೆಲಸ ಮಾಡಬೇಕಿದೆ. ನನ್ನನ್ನು ಟೀಕಿಸುವವರ ಬಗ್ಗೆ ನನಗೆ ಯಾವುದೇ ಚಿಂತೆ ಇಲ್ಲ. ದೇಶಕ್ಕಾಗಿ ನಾನು ಏನೂ ಮಾಡುತ್ತಿಲ್ಲ ಎಂಬ ಆರೋಪ ನನ್ನ ಮೇಲಿದೆ. ಕಳೆದ ನೂರು ವರ್ಷಗಳಿಂದ ಸುಧಾರಕರೆನ್ನಿಸಿಕೊಂಡವರು ರಾಷ್ಟ್ರದ ಹೆಸರಿನಲ್ಲಿ ತಮ್ಮ ಜಾತಿಯ ಜನರ ಹೊಟ್ಟೆ ತುಂಬಿಸುವುದಕ್ಕೆ ಏನೆಲ್ಲ ಮಾಡಿದ್ದಾರೆ? ಅಂತಹ ಜನರು ನನ್ನ ಸಮಾಜಕ್ಕಾಗಿ ಏನೂ ಮಾಡಿಲ್ಲ. ಹೀಗಿದ್ದ ಮೇಲೆ ಅವರು ನನ್ನಿಂದ ರಾಷ್ಟ್ರ ನಿರ್ಮಾಣದ ಕಾರ್ಯವನ್ನು ಅದೇಕೆ ಅಪೇಕ್ಷಿಸುತ್ತಿದ್ದಾರೆ. ನನಗೆ ನನ್ನ ಸಮಾಜದ ಕೆಲಸ ಮಾಡಬೇಕಿದೆ.

ಮಹಾಡ್, ನಾಸಿಕ್ ಮತ್ತು ಇನ್ನಿತರ ಸ್ಥಳಗಳಲ್ಲಿನ ಸತ್ಯಾಗ್ರಹಗಳಿಂದ ನನಗೆ ಒಂದು ವಿಷಯ ಖಾತ್ರಿಯಾಗಿದೆ. ಹಿಂದೂ ಜನರ ಹೃದಯದಲ್ಲಿನ ಅಂತಃಕರಣ ಕಲ್ಲು ಇಟ್ಟಿಗೆಗಳಂತೆ ನಿರ್ಜೀವವಾಗಿದೆ. ಅವರಿಗೆ ಮನುಷ್ಯರನ್ನು ಮನುಷ್ಯರನ್ನಾಗಿ ನೋಡುವ ಮತ್ತು ಇತರರಿಗೆ ಅವರ ಹಕ್ಕುಗಳನ್ನು ನೀಡುವ ಗುಣಗಳಿಲ್ಲ. ಕಲ್ಲಿನ ಗೋಡೆಗೆ ತಲೆ ಜಜ್ಜಿಕೊಂಡು ನಮ್ಮ ಕಪಾಳಕ್ಕೆ ನಾವೇ ಹೊಡೆದುಕೊಂಡರೂ ಕೊನೆಗೆ ರಕ್ತವೇ ಬರುತ್ತದೆ ವಿನಃ ಆ ಗೋಡೆಯಲ್ಲಿನ ಕಠೋರತೆ ನಾಶವಾಗದು. ಅದೇ ರೀತಿ ಹಿಂದೂಗಳ ಅಂತಃಕರಣ ಕಠೋರತೆಯಿಂದ ಕೂಡಿದೆ. ಈ ವಿಷಯದಲ್ಲಿ ನನ್ನಲ್ಲಿ ಆಗಿರುವ ಮನಃಪರಿವರ್ತನೆ ಏನೆಂದರೆ ಹಿಂದೂಗಳ ದೇವಸ್ಥಾನದಲ್ಲಿರುವ ದೇವರ ದರ್ಶನ ನಮಗೆ ಆಗಿಲ್ಲವೆಂದರೆ ನಾವೇನೂ ಸತ್ತು ಹೋಗಿಲ್ಲ. ಅಲ್ಲದೇ ಹಿಂದೂಗಳ ದೇವಸ್ಥಾನ ಪ್ರವೇಶಿಸುವ ನಾಯಿ, ಹಂದಿ, ಕತ್ತೆ ಇತ್ಯಾದಿ ಪ್ರಾಣಿಗಳು ಮನುಷ್ಯರಾಗಿಯೇನೂ ಪರಿವರ್ತನೆಯಾಗಿಲ್ಲ. ಅವರು ನಮ್ಮನ್ನು ಮುಟ್ಟಿಸಿಕೊಳ್ಳಲು ಹಿಂಜರಿದರೆ ನಾವು ಕೂಡ ಅವರನ್ನು ಮುಟ್ಟಿಸಿಕೊಳ್ಳುವುದಿಲ್ಲ.

ಇನ್ನು ಮುಂದೆ ನಾವು ಸರ್ಕಾರಿ ಅಮಲ್ದಾರರಿಗೆ ಟೆಂಟು ಹೊಡೆಯುವ ಅಥವಾ ಕಸಗೂಡಿಸುವ ಕೆಲಸ ಮಾಡುವುದಿಲ್ಲ. ಇತರರಂತೆ ನಾವೂ ರಾಜಕೀಯ ಅಧಿಕಾರ ಹಿಡಿದು ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇವೆ. ಇನ್ನು ಮುಂದೆ ನಾವು ಯಾರದೇ ಗುಲಾಮರಾಗಿ ಇರಲಾರೆವು ಇದು ನಮ್ಮ ದೃಢ ನಿಶ್ಚಯ. ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣ ಪೂರ್ಣಗೊಳಿಸುತ್ತಿದ್ದಂತೆಯೇ ೭-೮ ಸಾವಿರ ಜನರಿದ್ದ ಸಭೆ ಮುಕ್ತಾಯಗೊಂಡಿತು.

ಜನತಾ: ಜೂನ್ ೨೫, ೧೯೩೨

# ೫೪.

# ರಾಜಕೀಯ ಅಧಿಕಾರಕ್ಕಾಗಿ ಇಂದಿನ ನಮ್ಮ ಹೋರಾಟ

ಮುಂಬೈನ ವಡಾಳಾದ ಸಮಸ್ತ ಸಂಘದ ವಿನಂತಿಯ ಆಗ್ರಹಕ್ಕೆ ಮಣಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ವಡಾಳಾದಲ್ಲಿ ಸೋಮವಾರ ಸೆಪ್ಟಂಬರ್ ೫, ೧೯೩೨ರಂದು ರಾತ್ರಿ ೯ಕ್ಕೆ ವೈಎಂಸಿಎ ಮಂಟಪದಲ್ಲಿ ಆಯೋಜಿಸಿದ್ದ ಸಭೆಗೆ ಆಗಮಿಸಿದರು. ಮಳೆ ಬರುವ ಲಕ್ಷಣವಿದ್ದರೂ ಸುಮಾರು ೩ ಸಾವಿರ ಸ್ತ್ರೀ ಪುರುಷರು ಸಭೆಯಲ್ಲಿ ಉಪಸ್ಥಿತರಿದ್ದರು. ಸರಿಯಾಗಿ ೯ ಗಂಟೆ ಆಗುತ್ತಿದ್ದಂತೆಯೇ ಡಾ. ಅಂಬೇಡ್ಕರ್ ಆಗಮಿಸಿದರು. ತಾನಾಜಿ ಬಾಲವೀರರಿಂದ ಗೌರವ ವಂದನೆ ಸಲ್ಲಿಸಲಾಯಿತು. ವಡಾಳಾದಲ್ಲಿನ ಗೆಂದಾಜಿ ಗಾಯಕವಾಡ ಅವರ ಸ್ಕೌಟ್ ಕಾರ್ಯಕರ್ತರು ಸಭೆಯ ವ್ಯವಸ್ಥೆ ಮಾಡಿದ್ದರು.

ಬಾಲವೀರರಿಂದ ಸ್ವಾಗತ ಗೀತೆ ನಡೆಯಿತು. ಸ್ಥಳೀಯ ಸಂಘದ ಪರವಾಗಿ ಶ್ರೀ ಮೊಗಲ್ ಮಾರುತಿ ಗಾಯಕವಾಡ ಅವರು ಡಾ. ಅಂಬೇಡ್ಕರ್ ಅವರಿಗೆ ಮಾತನಾಡಲು ಕೇಳಿಕೊಂಡರು.

ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ ಹೇಳಿದ್ದು:

ಗಣೇಶೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ನನಗೆ ಹೇಳಿದಾಗ ನನಗೆ ಒಂದಿಷ್ಟು ಕೋಪ ಬಂದಿದ್ದು ಸಹಜ. ಹೀಗಾಗಿ ಗಣಪತಿ ಮೂರ್ತಿಯ ಕುರಿತು ಒಂದಿಷ್ಟು ಮಾತನಾಡುವ ಉದ್ದೇಶ ಇರಿಸಿಕೊಂಡೇ ಇಲ್ಲಿಗೆ ಬಂದಿದ್ದೆ. ಆದರೆ ನನಗೆ ಇಲ್ಲಿ ಯಾವುದೇ ಗಣಪತಿ ಮೂರ್ತಿ ಕಾಣಿಸದ ಕಾರಣ ಆ ಕುರಿತು ನಾನು ಈಗ ಏನೂ ಮಾತನಾಡುವುದಿಲ್ಲ. ಈ ಹಿಂದೂ ಧರ್ಮ ನಮ್ಮನ್ನು ಎಷ್ಟು ಪೀಡಿಸಿದೆ ಎಂದರೆ, ದೇಹದಲ್ಲಿ ಖಾಯಂ ವಾಸಿಯಾಗಿರುವ ರೋಗ ಕೂಡ ಅಷ್ಟು ಪೀಡಿಸಲಿಕ್ಕಿಲ್ಲ. ಹಿಂದೂ ಧರ್ಮಕ್ಕೆ ಅಂಟಿಕೊಂಡೇ ಇರಿ ಎಂದು ನಾನು ನಿಮಗೆ ಹೇಳುವುದಿಲ್ಲ. ಯಾವ ಹಿಂದೂ ಧರ್ಮದಲ್ಲಿ ನಾವು ೨ ಸಾವಿರ ವರ್ಷಗಳಿಂದ ಇದ್ದೇವೆಯೋ. ಯಾವ ಧರ್ಮದ ರಕ್ಷಣೆಗಾಗಿ ನಮ್ಮ ಇಡೀ ಆಯುಷ್ಯ ಗತಿಸಿದೆಯೋ ಅದೇ ಹಿಂದೂ ಧರ್ಮದಲ್ಲಿ ನಮ್ಮನ್ನು ನಿಕೃಷ್ಟವಾಗಿ ಕಾಣಲಾಗುತ್ತದೆ. ಕೆಲವು ದಿನಗಳ ಹಿಂದೆಯಷ್ಟೆ ನನಗೆ ಕಾಶಿ ಬ್ರಾಹ್ಮಣರಿಂದ ಪತ್ರ ಬಂದಿತ್ತು. ಆ ಪತ್ರದಲ್ಲಿ 'ನಾವು ನಿಮಗಾಗಿ ಕಾಶಿ ವಿಶ್ವೇಶ್ವರ ದೇವಸ್ಥಾನದ ಬಾಗಿಲು ತೆರೆಯುತ್ತೇವೆ' ಎಂದು ಬರೆಯಲಾಗಿತ್ತು. ಆದರೆ ನಮಗೆ ಕಲ್ಲಿನ ಗುಡಿಯ ಅಗತ್ಯವಿಲ್ಲ. ನಾವು ಆರಂಭಿಸಿರುವ ಯುದ್ಧ ಕೇವಲ ದೇವಸ್ಥಾನಗಳನ್ನು ತೆರೆಸುವುದಕ್ಕೆ ಮಾತ್ರ ಸಿಮೀತವಾಗಿಲ್ಲ. ಅಥವಾ ಪಾಚಿಗಟ್ಟಿದ ಕೆರೆಯ ನೀರನ್ನು ಕುಡಿಯುವುದಕ್ಕೆ ಸೀಮಿತವಾಗಿಲ್ಲ. ನಮಗೆ ಬ್ರಾಹ್ಮಣರ ಮನೆಗೆ ಹೋಗುವ ಅಥವಾ ಅವರ ಜೊತೆಗೆ ಸಹಭೋಜನ ಮಾಡುವ ಹುಕಾಹುಕಿ ಇಲ್ಲ. ನಾವು ಅಸ್ಪೃಶ್ಯರಿಗೆ ಬ್ರಾಹ್ಮಣ ಹುಡುಗಿಯರು ಬೇಕಾಗಿಲ್ಲ. ನಮ್ಮ ಸಮಾಜದಲ್ಲಿ ಹುಡುಗಿಯರು ಇಲ್ಲವೇ? ನಾವೇಕೆ ಬ್ರಾಹ್ಮಣ ಹುಡುಗಿಯರನ್ನು ಅಪೇಕ್ಷಿಸಬೇಕು? ನಮ್ಮ ಸಮಾಜದ ಸ್ತ್ರೀಯರಿಗೆ ಸಂತಾನ ಭಾಗ್ಯ ಇಲ್ಲ ಎಂದೋ ಅಥವಾ ಅವರು ಹಡೆಯುವ ಮಕ್ಕಳಿಗೆ ಇಂದ್ರಿಯ ಇರುವುದಿಲ್ಲವೆಂದೋ, ನಾವು ಬ್ರಾಹ್ಮಣ ಹುಡುಗಿಯರನ್ನು ಬಯಸಬೇಕು? ಈ ರೀತಿ ಏನೂ ಇಲ್ಲ. ನಮ್ಮದು ಏನಿದ್ದರೂ ರಾಜಕೀಯ ಅಧಿಕಾರಕ್ಕಾಗಿ ನಡೆಯುವ

ಹೋರಾಟ. ಒಂದು ವೇಳೆ ಹಿಂದೂ ಧರ್ಮಕ್ಕೆ ನಾವು ಅಂಟಿಕೊಂಡಿದ್ದೇ ಆದಲ್ಲಿ ನರಕದಂತಹ ಕಷ್ಟಕ್ಕೆ ನಾವು ಈಡಾಗಬೇಕಾಗುತ್ತದೆ. ಈ ಕಾರಣಕ್ಕಾಗಿ ನನ್ನಂತಹ ವ್ಯಕ್ತಿಗೂ ಕೂಡ ಹಿಂದೂ ಧರ್ಮದ ಬಗ್ಗೆ ವಾಕರಿಕೆ ಬರುವಂತೆ ಆಗಿದೆ. ಇಷ್ಟೇ ಅಲ್ಲ ಧರ್ಮಾಂತರ ಮಾಡುವುದಕ್ಕೆ ಮನಸ್ಸು ಪ್ರೇರೇಪಿಸುತ್ತದೆ. ಆದರೆ ನಾನೇಕೆ ಆ ರೀತಿ ಮಾಡುವುದಿಲ್ಲ. ಈ ನರಕದಲ್ಲಿಯೇ ಏಕೆ ಇರುತ್ತೇನೆಂದು ಕೇಳಿದರೆ ನನಗೆ ನಿಮ್ಮೆಲ್ಲರನ್ನು ಬಿಟ್ಟುಹೋಗುವುದಕ್ಕೆ ಸಾಧ್ಯವಿಲ್ಲ. ನಾನು ಎಲ್ಲಿಯೇ ಹೋಗಲಿ ಅಲ್ಲಿ ಧೈರ್ಯದಿಂದ ಬದುಕಬಲ್ಲೆ. ಆದರೆ ನಾನು ನಿಮ್ಮ ನಡುವೆ ಏಕೆ ಇದ್ದೇನೆಂದರೆ ನನಗೆ ನಿಮ್ಮನ್ನು ಬಿಟ್ಟು ಹೋಗುವುದು ಬೇಕಾಗಿಲ್ಲ. ನಾನು ಕೈಗೆತ್ತಿಕೊಂಡಿರುವ ಈ ಕೆಲಸವನ್ನು ಮುಗಿಸಬೇಕಾಗಿದೆ. ನಾನು ನಿಮಗೆ ಹೇಳುವುದು ಇಷ್ಟೇ, ಈ ಧರ್ಮದ ಗೋಜಲಿನಲ್ಲಿ ಬೀಳಬೇಡಿ. ಹಿಂದೆ ೨ ಸಾವಿರ ವರ್ಷಗಳವರೆಗೆ ಹಿಂದೂಗಳ ರಾಜ್ಯಾಡಳಿತವಿತ್ತು. ೧೫೦ ವರ್ಷಗಳಿಂದ ಬ್ರಿಟಿಷರು ನಮ್ಮನ್ನು ಆಳುತ್ತಿದ್ದಾರೆ. ಇದೀಗ ಭವಿಷ್ಯದಲ್ಲಿ ಅಸ್ತಿತ್ವ ಪಡೆಯಲಿರುವ ಸ್ವರಾಜ್‌ದಲ್ಲಿ ಕೇವಲ ಏಕೈಕ ಹಿಂದೂವಿನ ಅಧಿಕಾರ ನಡೆಯದು. ನೀವು ಅಸ್ಪೃಶ್ಯರು ಹಿಂದೂಗಳ ಸಹಮತದೊಂದಿಗೆ ಆ ರಾಜ್ಯಾಡಳಿತ ನಡೆಸಬೇಕಾಗುತ್ತದೆ.

ಪ್ರತಿಯೊಂದು ಸಮಾಜಕ್ಕೆ ತನ್ನದೇ ಆದ ಶಕ್ತಿ ಸಾಮರ್ಥ್ಯ ಇರುತ್ತದೆ. ಕೆಲವು ಸಮಾಜದ ಕೈಯಲ್ಲಿ ಆರ್ಥಿಕ ಸಾಮರ್ಥ್ಯವಿರುತ್ತದೆ. ಉದಾಹರಣೆಗೆ ಪಾರ್ಸಿ ಸಮಾಜ ನೋಡಿ, ಇಲ್ಲಿ ಕುಳಿತಿರುವ ಜನರಿಗಿಂತ ಅವರ ಜನಸಂಖ್ಯೆ ಕಡಿಮೆ ಇರಬೇಕು. ಆದರೆ ಅವರಲ್ಲಿ ಆರ್ಥಿಕ ಸಾಮರ್ಥ್ಯವಿದೆ. ನಮ್ಮ ಸಮಾಜದ ಜನರು ಅವರ ಬಳಿ ದುಡಿಯಲು ಹೋಗುತ್ತಾರೆ. ಬ್ರಾಹ್ಮಣ ಸಮಾಜದಲ್ಲಿ ಆರ್ಥಿಕ ಸಾಮರ್ಥ್ಯ ಇರಲಿಕ್ಕಿಲ್ಲ. ಆದರೆ ಅವರ ಬಳಿ ಧಾರ್ಮಿಕ ಅಧಿಕಾರ ಇದೆ. ಸಮಾಜದ ಕೈಗೆ ರಾಜಕೀಯ ಅಧಿಕಾರ ಇರಬೇಕು ಎನ್ನುವುದು ಎಲ್ಲರ ಸದಿಚ್ಛೆ. ಇಂತಹ ರಾಜಕೀಯ ಅಧಿಕಾರವನ್ನು ಪಡೆಯಲೋಸುಗ ನಾನು ದುಂಡು ಮೇಜಿನ ಪರಿಷತ್ ಸಭೆಗೆ ಹೋಗಿದ್ದೆ ಮತ್ತು ಆ ರೀತಿ ಹೋಗಿದ್ದಕ್ಕೆ ತನ್ನಿಂತಾನೆ ನಮಗೆ ಲಾಭ ಲಭಿಸಿದೆ. ಆ ವಿಚಾರವನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳುತ್ತೇನೆ.

ದುಂಡು ಮೇಜಿನ ಪರಿಷತ್ ಸಭೆಗೆ ಹೋಗಿದ್ದ ನಾನು ಅಸ್ಪೃಶ್ಯರಿಗಾಗಿ ೧೦ ಪ್ರಾತಿನಿಧಿಕ ಸ್ಥಾನಗಳನ್ನು ಪಡೆಯುವಲ್ಲಿ ಯಶಸ್ವಿಯಾದೆ. ನನ್ನ ವಿರುದ್ಧ ಟೀಕೆ ಮಾಡುವವರು ಡಾ. ಅಂಬೇಡ್ಕರ್ ಅವರು ದುಂಡು ಮೇಜಿನ ಪರಿಷತ್ತಿನ ಸಭೆಗೆ ಹೋಗಿ ಏನು ಮಾಡಿದರು? ಎಂದು ಕೇಳುತ್ತಾರೆ. ಆದರೆ ಅದೇ ಜನರು ಒಂದು ವೇಳೆ ಇಲ್ಲಿ ಉಪಸ್ಥಿತರಿದ್ದಿದ್ದರೆ ಅವರಿಗೆ ಖಂಡಿತವಾಗಿ ನಾನು ಪಡೆದುಕೊಂಡಿರುವ ಸೌಲಭ್ಯ ಬೇರೆ ಇನ್ನಾವುದೇ ಸಮಾಜಕ್ಕೆ ಲಭಿಸಿಲ್ಲ ಎಂದು ಮನದಟ್ಟು ಮಾಡಿಕೊಡುತ್ತಿದ್ದೆ. ಒಂದು ವೇಳೆ ಕೋಳಿ ಎದುರು ಮುತ್ತುಗಳನ್ನು ಹಾಕಿದರೂ ಕೂಡ ಅದು ಜೋಳ ಎಂದು ಭಾವಿಸಿಕೊಳ್ಳುತ್ತದೆ ಹೊರತು ಆ ಮುತ್ತಿನ ಮೌಲ್ಯವನ್ನು ಅರಿಯುವ ಕೆಲಸ ಮಾಡುವುದಿಲ್ಲ. ಅದಕ್ಕೆ ಆ ಮುತ್ತು ಜೋಳದ ಕಾಳಿಗಿಂತ ಹೆಚ್ಚಿಗೆ ಏನೂ ಅಲ್ಲವಾಗುತ್ತದೆ ಅಷ್ಟೇ.

ಈ ಹತ್ತು ಸ್ಥಾನಗಳು ಲಭಿಸಿದ ಕಾರಣ ನಮ್ಮ ಸಮಾಜದ ಕೈಗೆ ಸಾಕಷ್ಟು ಅಧಿಕಾರ ಲಭಿಸಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಇದೀಗ ಲಭಿಸುವ ಸ್ವರಾಜ್‌ದಲ್ಲಿ ನೀವು ಆಯ್ಕೆ ಮಾಡುವ ಜನಪ್ರತಿನಿಧಿಗಳು ನಿಮ್ಮ ಸಲಹೆಗೆ ಅನುಸಾರವಾಗಿ ಅಧಿಕಾರ ನಡೆಸುತ್ತಾರೆ. ನಿಮ್ಮ ಅಭಿಪ್ರಾಯದಂತೆ ಆಡಳಿತ ನಡೆಯುತ್ತದೆ. ಇದೀಗ ನಮಗೆ ಲಭಿಸಿರುವ ಸೌಲಭ್ಯ ಸಾಕಷ್ಟು ಎನ್ನುವುದು ನನ್ನ ಭಾವನೆ. ನಿಮಗಾಗಿ ಕನಿಷ್ಠ ೧೦ ಸ್ಥಾನಗಳಾದರೂ ಮೀಸಲಿರುತ್ತವೆ. ಇದಕ್ಕೆ ಹೊರತಾಗಿ ಅಹ್ಮದಾಬಾದ್ ನಂತಹ ಸ್ಥಳಗಳಲ್ಲಿ ಶೇ. ೮೦–೯೦ರಷ್ಟು ಕಾರ್ಮಿಕರಿರುವ ಇಂತಹ ಸ್ಥಳಗಳಿಂದ ೨–೩ ಸ್ಥಾನಗಳು ಅಸ್ಪೃಶ್ಯರಿಗೆ ಲಭಿಸುತ್ತವೆ. ಇದಲ್ಲದೇ

ಮುಂಬೈನಂತಹ ನಗರದ ಅಸ್ಪೃಶ್ಯರ ವಸತಿ ಪ್ರದೇಶಗಳಿಂದ ೧-೨ ಸ್ಥಾನಗಳು ಲಭಿಸುತ್ತವೆ. ಇದಕ್ಕೆ ಹೊರತಾಗಿ ನಾಸಿಕ್ ಜಿಲ್ಲೆ, ಪುಣೆಯಂತಹ ಸ್ವತಂತ್ರ ಮತಕ್ಷೇತ್ರದಿಂದ ಕೂಡ ನಾವು ಆಯ್ಕೆ ಮಾಡಿದ ಶೇ. ೯೦ರಷ್ಟು ಸ್ಥಾನಗಳು ನಮ್ಮ ಮುಷ್ಠಿಯಲ್ಲಿರುತ್ತವೆ.

ಮುಂಬೈ ಕೌನ್ಸಿಲ್‌ನಲ್ಲಿ ೨೦೦ ಸ್ಥಾನಗಳಿದ್ದು ಅದರ ಪೈಕಿ ೯೭ ಹಿಂದೂಗಳಿಗೆ, ೬೩ ಮುಸಲ್ಮಾನರಿಗೆ ೧೦ ಸ್ಥಾನಗಳು ಅಸ್ಪೃಶ್ಯರಿಗೆ ಮೀಸಲಾಗಿದ್ದರೆ ಯಾವುದೇ ಒಂದೇ ಜಾತಿಯು ಅಧಿಕಾರವನ್ನು ಹಿಡಿಯಲು ಸಾಧ್ಯವಿಲ್ಲ. ಏಕೆಂದರೆ ಕೌನ್ಸಿಲ್ ಆಡಳಿತ ನಡೆಯುವುದು ಬಹುಮತದ ಆಧಾರದ ಮೇಲೆ. ಯಾವುದೇ ಒಂದು ಪಕ್ಷಕ್ಕೆ ಬಹುಮತ ಇರಬೇಕೆಂದರೆ ೧೧೫ ಮತಗಳು ಒಂದು ಪಕ್ಷದಲ್ಲಿರಬೇಕು. ಹೀಗಾಗಿ ಕೇವಲ ೯೭ ಮತಗಳ ಹಿಂದೂಗಳಿಗೂ ಬಹುಮತ ಸಿಗುವುದಿಲ್ಲ. ಅದೇ ರೀತಿ ೬೩ ಮತಗಳ ಆಧಾರವಿರುವ ಮುಸಲ್ಮಾನರಿಗೂ ಅಧಿಕಾರ ನಡೆಸಲು ಸಾಧ್ಯವಾಗುವುದಿಲ್ಲ. ಬಹುಮತ ಬೇಕೆಂದರೆ ಅವರಿಗೆ ಅಸ್ಪೃಶ್ಯರ ಮತಗಳು ಅತ್ಯಗತ್ಯ. ಈ ರೀತಿಯ ಬಹುದೊಡ್ಡ ಅಧಿಕಾರ ನಮ್ಮ ಕೈಗೆ ಸಿಕ್ಕಿದೆ. ನಾವು ಯಾವ ಪಕ್ಷದ ಪರವಾಗಿ ಮತ ಚಲಾಯಿಸುತ್ತೇವೆಯೋ ಆ ಪಕ್ಷದ ತಕ್ಕಡಿಯ ಭಾರ ಹೆಚ್ಚಿ ಕೆಳಗೆ ಬಂದರೆ ವಿರೋಧ ಪಕ್ಷದ ತಕ್ಕಡಿ ನೇತಾಡಬೇಕಾಗುತ್ತದೆ. ಇಂತಹ ಅಧಿಕಾರ ನಮ್ಮ ಕೈಗೆ ಬಂದರೂ ಕೂಡ ನನಗೆ ಒಂದು ರೀತಿಯ ಆತಂಕ. ಅದು ಏನೆಂದರೆ ನಿಮ್ಮಲ್ಲಿರುವ ಮತದಾನ ಜಾಗೃತಿ ಎಷ್ಟು ಇದೆ ಎನ್ನುವುದು ಈಗ ನಮಗೆ ಲಭಿಸಿರುವ ಕೇವಲ ಹತ್ತು ಸ್ಥಾನಗಳಿಂದ ನಾವು ಆಯ್ಕೆ ಮಾಡುವ ಆ ಜನರು ತಮಗೆ ತೋಚಿದ್ದನ್ನು ಮಾಡಲು ಸಮರ್ಥರಾಗಿರುತ್ತಾರೆ. ಅವರು ಇಲ್ಲಿಯ ಮುಂಬೈ ನಗರವನ್ನು ಅಲ್ಲಿಗೆ ಸ್ಥಳಾಂತರಿಸಬಹುದು ಅಥವಾ ಏನೆಲ್ಲವನ್ನೂ ಮಾಡಬಹುದು. ಇಷ್ಟು ದಿನಗಳವರೆಗೆ ಒಂದು ಸಣ್ಣ ಕೆಲಸ ಮಾಡಿಸಿಕೊಳ್ಳುವುದೆಂದರೆ ಕಲೆಕ್ಟರ್ ಇಲ್ಲವೇ ಮಾಮಲೇದಾರ ಬಳಿ ಸಾಕಷ್ಟು ಬಾರಿ ಹೋಗಬೇಕಾಗುತ್ತಿತ್ತು. ಇಂತಹದ್ದೇ ಹಿರಿಯ ಅಧಿಕಾರಿಗಳ ಗಡ್ಡ ಕೂಡ ಹಿಡಿಯುವಂತಹ ಪರಿಸ್ಥಿತಿ ಇತ್ತು. ಇಷ್ಟೇ ಏಕೆ? ಒಂದು ಅತ್ಯಗತ್ಯ ಕೆಲಸ ಆಗಬೇಕೆಂದರೆ ಕೇವಲ ೭ ರೂ. ಸಂಬಳ ಪಡೆಯುವ ಸಿಪಾಯಿಗೂ ಕೂಡ ನನ್ನಂತಹ ವ್ಯಕ್ತಿ ಹವಾಲ್ದಾರ್ ಸಾಹೇಬ ಎಂದು ಸಲಾಮ ಹಾಕಬೇಕಾಗುತ್ತಿತ್ತು. ಆದರೆ ಇನ್ನು ಮುಂದೆ ಅಂತಹ ಪರಿಸ್ಥಿತಿ ಬರುವುದಿಲ್ಲ. ಇನ್ನು ಮುಂದೆ ಎಲ್ಲ ಕೆಲಸಗಳು ಕಾಯ್ದೆ ಪ್ರಕಾರ ನಡೆಯಲಿವೆ. ನಮ್ಮವರ ಪೈಕಿ ಕೆಲವರಾದರೂ ಕಲೆಕ್ಟರ್ ಆಗಬಹುದು. ಶೇ. ೨೦ ಮಾಮಲೇದಾರ, ಶೇ. ೨೦ ಕುಲಕರ್ಣಿ, ಶೇ. ೨೦ ಸಿಪಾಯಿಗಳಾಗಿ ಅಸ್ಪೃಶ್ಯರು ಕೆಲಸ ಮಾಡಬಹುದು. ಈ ರೀತಿ ಮಾಡುವುದಕ್ಕೆ ನಮಗೆ ಇನ್ನು ಮುಂದೆ ಬೇರೆಯವರ ಗಡ್ಡ ಹಿಡಿಯಬೇಕಾದ ಪರಿಸ್ಥಿತಿ ಉದ್ಭವಿಸುವುದಿಲ್ಲ. ಆದರೆ ಈ ಎಲ್ಲ ಸಂಗತಿಗಳು ನಮ್ಮವರ ಶೀಲ, ಚಾರಿತ್ರ್ಯ ಹೇಗೆ ನಿರ್ಮಾಣವಾಗಲಿದೆ ಎನ್ನುವುದನ್ನು ಅವಲಂಬಿಸಿದೆ.

ಏಕೆಂದರೆ ನಮ್ಮಲ್ಲಿನ ಕೆಲವರು ಎರಡು ಪೈಸೆಯ ಪುಟಾಣಿಗೋ ಇಲ್ಲವೇ ಒಂದು ದಮಡಿಯ ಅವಲಕ್ಕಿಗೋ ತಮ್ಮ ಮತವನ್ನು ಮಾರುವ ಸಂಗತಿ ನನ್ನ ಅನುಭವಕ್ಕೆ ಬಂದಿದೆ. ಕಳೆದ ಮಾರ್ಚ್‌ನಲ್ಲಿ ಅಸ್ಪೃಶ್ಯರ ಸಭೆ ಕರೆದಿದ್ದ ನಾಯಕರೊಬ್ಬರು ಅಸ್ಪೃಶ್ಯರಿಗಾಗಿ ಸ್ವತಂತ್ರ ಮತಕ್ಷೇತ್ರದ ಬೇಡಿಕೆ ಮಂಡಿಸಿದ್ದರು. ಕೊನೆಗೆ ಅದೇ ನಾಯಕರು ಆಮಿಷಕ್ಕೆ ಬಿದ್ದು ತನ್ನ ಮತ ಬದಲಿಸಿದ್ದು ಅಲ್ಲದೇ ಮತದಾರ ಕಮಿಟಿ ಎದುರು ಅಸ್ಪೃಶ್ಯರಿಗಾಗಿ ಸಂಯುಕ್ತ ಮತಕ್ಷೇತ್ರದ ಬೇಡಿಕೆ ಮಂಡಿಸಿದ್ದರು. ಇಂತಹ ನಮ್ಮ ನಾಯಕರು ತಮ್ಮನ್ನು ತಾವೇ ಮಾರಿಕೊಂಡರೆ ನಮ್ಮ ಕೈಗೆ ಬಂದಿರುವ ಅಧಿಕಾರ ಯಾವ ಉಪಯೋಗಕ್ಕೆ? ಕೆಲವು ದಿನಗಳ ಹಿಂದೆ ನನ್ನೊಂದಿಗೆ ಕೆಲಸ ಮಾಡುತ್ತಿದ್ದ ಸಾತಾರ ಜಿಲ್ಲೆಯ ಘೋಲಪ್ ಎಂಬ ಹೆಸರಿನ ಹುಡುಗ ನನ್ನ ವಿರುದ್ಧವಿದ್ದ ಅದಕ್ಕೆ ಕಾರಣ ಜಾತಿಯಿಂದ ಚಮ್ಮಾರರಾಗಿರುವ ಶಿವತರಕರ್ ಮಾಸ್ತರ್‌ರನ್ನು

ನಾನು ಹತ್ತಿರ ಕೂರಿಸಿಕೊಂಡೆನೆಂದು. ಸಾತಾರಾದ ಈ ಮಹಾರನಿಗೆ ಶಿವತರಕರ್ ಚಮ್ಮಾರ ಎನ್ನುವುದು ಲಕ್ಷ್ಯಕ್ಕೆ ಬರುತ್ತದೆ. ಆದರೆ ಅದೇ ವ್ಯಕ್ತಿ ದೇವರುಖಕರ್ ಎಂಬ ಚಮ್ಮಾರನ ಆಶ್ರಯದಲ್ಲಿದ್ದುಕೊಂಡು ಹೊರತರುವ ವರ್ತಮಾನ ಪತ್ರಿಕೆಯಲ್ಲಿ ನನ್ನ ವಿರುದ್ಧ ಬಯ್ಗುಳಗಳ ಸುರಿಮಳೆಯಾಗುತ್ತದೆ. ದೇವರುಖಕರ್ ಮಹಾರ್ ಸಮಾಜದ ವಿರುದ್ಧ ಹೇಗೆ ಬೇಕೋ ಹಾಗೆ ಬರೆದು ಮಹಾರ್ ಸಮಾಜದ ಮಾನವನ್ನು ಬೀದಿಗೆ ತರುವ ಕೆಲಸ ಮಾಡಿದ್ದಾರೆ. ಬೇರೆ ಸಮಾಜದವರಿಂದ ಯಾವಾಗಲೂ ಬೈಯಿಸಿಕೊಂಡಿರುವ ನನಗೆ ನಮ್ಮವರೇ ಆಗಿರುವ ಒಬ್ಬ ಮಹಾರ್ ಬಯ್ಯುತ್ತಾನೆ ಎಂದರೆ ನನಗೆ ಏನೂ ಅನ್ನಿಸುವುದಿಲ್ಲ.

ಆದರೆ ನನಗೆ ಇರುವ ಸಂಶಯ ಎಂದರೆ ನಿಮಗೆ ಲಭಿಸಿರುವ ಈ ಹಕ್ಕಿನ ಸದುಪಯೋಗ ಮಾಡಿಕೊಳ್ಳುತ್ತಿರೋ, ಇಲ್ಲವೋ ಎನ್ನುವುದು. ನಾನು ನಡೆಸುತ್ತಿರುವ ಈ ಚಳವಳಿ ಕೆಲವೊಂದು ತತ್ವಗಳನ್ನು ಆಧರಿಸಿ ನಡೆಯುತ್ತಿದೆ. ನಮ್ಮ ನಾಯಕರ ಈ ರೀತಿಯ ನೈತಿಕ ಮೌಲ್ಯ ನೋಡಿ ನನಗೆ ವಿಷಾದ ಎನ್ನಿಸುತ್ತದೆ. ನಿಮ್ಮಲ್ಲಿ ನನ್ನ ವಿನಂತಿ ಇಷ್ಟೇ: ನೀವು ಸ್ವಾಭಿಮಾನಿಗಳಾಗಬೇಕು. ನಿಮ್ಮ ನಾಯಕರು ಯಾರು ಎನ್ನುವುದನ್ನು ಮೊದಲು ನಿರ್ಧರಿಸಿಕೊಳ್ಳಿ, ನಾಯಕ ಹೇಳಿದಂತೆ ನಡೆದುಕೊಳ್ಳಿ. ನಿಮ್ಮ ಮತಗಳನ್ನು ಮಾರಿಕೊಳ್ಳಬೇಡಿ. ಇಲ್ಲದಿದ್ದರೆ ಯಾರೋ ಬಂದು ಒಂದೆರಡು ರೂಪಾಯಿ ನೀಡಿ ನಿಮ್ಮ ಮತ ಕಸಿದುಕೊಳ್ಳಬಹುದು. ಮತದಾನದಲ್ಲೂ ಕೂಡ ನಮಗೆ ಸಾಕಷ್ಟು ಸೌಲಭ್ಯಗಳು ಲಭಿಸಿವೆ. ಇಂತಹ ಸೌಲಭ್ಯಗಳು ಬೇರೆ ಯಾವುದೇ ಸಮಾಜಕ್ಕೂ ಲಭಿಸಿಲ್ಲ. ಇತರ ಸಮಾಜದ ವ್ಯಕ್ತಿ ಮತದಾನದ ಹಕ್ಕು ಪಡೆಯಬೇಕಾದರೆ ಕನಿಷ್ಠ ನಾಲ್ಕನೇ ಇಯತ್ತೆವರೆಗಾದರೂ ಶಿಕ್ಷಣ ಪಡೆದಿರಬೇಕು. ಆದರೆ ಇಂತಹ ಪರಿಸ್ಥಿತಿ ನಮಗೆ ಇಲ್ಲ. ಕೇವಲ ನಿಮಗೆ ಸಹಿ ಮಾಡುವುದಕ್ಕೆ ಬಂದರೆ ಸಾಕು. ನೀವು ಕೇವಲ ರಾಮ್ಯಾ ಪಾಂಡ್ಯಾ ಎಂದು ಬರೆದರೂ ನಿಮಗೆ ಮತದಾನದ ಹಕ್ಕು ಲಭಿಸುತ್ತದೆ. ಈ ಸೌಲಭ್ಯ ಇತರ ಸಮಾಜದವರಿಗೆ ಲಭಿಸಿಲ್ಲ. ಇದು ಕೇವಲ ಅಸ್ಪೃಶ್ಯರಿಗೆ ಮಾತ್ರ ದೊರಕಿರುವ ಸೌಲಭ್ಯ. ಈ ಕಾರಣಕ್ಕೆ ನಾನು ವಿನಂತಿಸಿಕೊಳ್ಳುತ್ತೇನೆ. ಪ್ರತಿಯೊಬ್ಬರೂ ರಾತ್ರಿ ಶಾಲೆಗೆ ಹೋಗಿ ಕನಿಷ್ಠ ಸಹಿ ಮಾಡಲಿಕ್ಕೆ ಬರುವಷ್ಟಾದರೂ ಶಿಕ್ಷಣ ಪಡೆದುಕೊಳ್ಳುವುದು ಅತ್ಯಗತ್ಯವಾಗಿದೆ. ಈ ರೀತಿ ಮಾಡಿದರೆ ಮಾತ್ರ ನಿಮ್ಮ ಹೆಸರು ಮತದಾರ ಪಟ್ಟಿಯಲ್ಲಿ ನೋಂದಣಿ ಆಗುತ್ತದೆ.

---

ಜನತಾ: ಸೆಪ್ಟೆಂಬರ್ ೧೦, ೧೯೩೭

೫೫.

# ಅಸ್ಪೃಶ್ಯ ಸಮಾಜಕ್ಕೆ ಶಿಕ್ಷಣ ಅನಿವಾರ್ಯ

ಮುಂಬೈನ ಪರಳನಲ್ಲಿರುವ ದಾಮೋದರ್ ಹಾಲ್‌ನಲ್ಲಿ ಶನಿವಾರ ಸೆಪ್ಟಂಬರ್ ೧೦, ೧೯೩೨ರಂದು ರಾತ್ರಿ ಮಹಾರ್ ಬಾಲವೀರ ಸಂಸ್ಥೆಯ ವತಿಯಿಂದ ಜರುಗಿದ ಸಭೆಯಲ್ಲಿ ಡಾ. ಅಂಬೇಡ್ಕರ್ ಅವರು ಭಾಷಣವನ್ನು ಮಾಡಿದರು.

ದಾಮೋದರ್ ಹಾಲ್ ಪುರುಷರು–ಮಹಿಳೆಯರು, ಆಬಾಲ ವೃದ್ಧರಿಂದ ತುಂಬಿ ತುಳುಕುತ್ತಿತ್ತು. ಒಳಗೆ ಪ್ರವೇಶಿಸುವುದಕ್ಕೆ ಸಾಧ್ಯವಿಲ್ಲದೇ ನೂರಾರು ಜನರು ಡಾ. ಅಂಬೇಡ್ಕರ್ ಅವರನ್ನು ನೋಡಲಿಕ್ಕೆ ಆಗದಿದ್ದರೂ ಕನಿಷ್ಠ ಅವರ ಮಾತುಗಳನ್ನಾದರೂ ಕೇಳೋಣ ಎಂದು ಹೊರಗೆ ಜಮಾಯಿಸಿದ್ದರು. ಸಭೆಯ ವರದಿ ಮಾಡುವುದಕ್ಕೆ ಆಗಮಿಸಿದ್ದ ಪತ್ರಕರ್ತರೂ ಅತಿ ಕಷ್ಟದಿಂದ ಒಳಗೆ ಹೋಗಬೇಕಾಯಿತು.

ಪ್ರಚಂಡ ಕರತಾಡನದೊಂದಿಗೆ ಡಾ. ಅಂಬೇಡ್ಕರ್ ಮಾತಿಗೆ ನಿಂತರು. ಡಾ. ಅಂಬೇಡ್ಕರ್ ಅವರ ಮಾತು ಆರಂಭವಾಗುತ್ತಿದ್ದಂತೆಯೇ ಕರತಾಡನ ನಿಶ್ಶಬ್ದವಾಗಿ ಎಲ್ಲೆಡೆ ಮೌನದ ಸಾಮ್ರಾಜ್ಯ ಹರಡಿಕೊಳ್ಳಲಾರಂಭಿಸಿತು. ಸಭೆಯು ಡಾ. ಅಂಬೇಡ್ಕರ್ ಅವರ ಮಾತುಗಳನ್ನು ನಿಶ್ಶಬ್ದವಾಗಿ ಕೇಳಲಾರಂಭಿಸಿತು.

ಮೊದಲಿಗೆ ಸಂಘದ ಪದಾಧಿಕಾರಿಗಳಿಗೆ ಮತ್ತು ಸಂಘದ ಮುಖಾಂತರ ನಡೆಯುತ್ತಿರುವ ಶೈಕ್ಷಣಿಕ ಪ್ರಸಾರ ಕಾರ್ಯಕ್ಕೆ ಡಾ. ಅಂಬೇಡ್ಕರ್ ಅವರ ಶ್ಲಾಘನೆಯ ಮಾತುಗಳು ಅವರ ಮುಂದಿನ ಮಾತುಗಳಿಗೆ ಮುನ್ನುಡಿ ಬರೆದವು. ಶೈಕ್ಷಣಿಕ ಪ್ರಸಾರಕ್ಕೆ ಸಂಬಂಧಿಸಿದಂತೆ ಸಂಸ್ಥೆ ಸಲ್ಲಿಸಿದ ಖರ್ಚು ವೆಚ್ಚದ ವಿವರವನ್ನು ತಮ್ಮ ಮಾತಿನಲ್ಲಿ ಉಲ್ಲೇಖಿಸುತ್ತ ಅವರು, ನನ್ನ ಸನ್ಮಾನಕ್ಕಾಗಿ ಹೂವಿನ ಹಾರ, ಹೂಗುಚ್ಛ ತಂದಿದ್ದು ಸರಿಯಲ್ಲ. ಇದೇ ಹಣವನ್ನು ಸಂಸ್ಥೆ ತನ್ನ ಶೈಕ್ಷಣಿಕ ಉದ್ದೇಶಕ್ಕೆ ಬಳಸಿಕೊಂಡಿದ್ದರೆ ಅದು ಇನ್ನಷ್ಟು ಉತ್ತಮ ಆಗುತ್ತಿತ್ತೆಂದು ಹೇಳಿದರು. ಸನ್ಮಾನದ ಖರ್ಚು ಸಂಸ್ಥೆಗೆ ಹೊರೆಯಾಗಬಾರದು ಎಂದು ೨೫ ರೂಪಾಯಿಗಳ ದೇಣಿಗೆ ನೀಡುತ್ತೇನೆ ಎಂದೂ ಹೇಳಿದರು.

ಇಂದು ಅಸ್ಪೃಶ್ಯ ಸಮಾಜಕ್ಕೆ ಅತ್ಯಗತ್ಯ ಮತ್ತು ಅನಿವಾರ್ಯವಾಗಿರುವ ಸಂಗತಿಯೆಂದರೆ ಅದು ಶಿಕ್ಷಣ ಪ್ರಸಾರ. ಸಮಾಜದ ಪ್ರತಿಯೊಬ್ಬ ವ್ಯಕ್ತಿ, ಪ್ರತಿಯೊಂದು ಸಂಸ್ಥೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಮ್ಮ ಯುವ ಜನಾಂಗದ ಮುಂದಿನ ಹೆಜ್ಜೆ ಮತ್ತು ಇಂದಿನ ಅವರ ಮನಸ್ಥಿತಿ ಏನು ಎನ್ನುವ ಪ್ರಶ್ನೆಯತ್ತ ನಾವು ಚಿಂತನೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ಸಾಗುವ ದಿಕ್ಕನ್ನು ನಾವು ನಿರ್ಧರಿಸಬೇಕಿದೆ. ನಾನೇ ಸ್ವತಃ ಈ ಕೆಲಸ ಕೈಗೆತ್ತಿಕೊಂಡು ಆ ನಿಟ್ಟಿನಲ್ಲಿ ಕೆಲಸ ಆರಂಭಿಸಿದ್ದು, ಇದಕ್ಕೆ ಪೂರಕವಾಗಿ ಈಗಾಗಲೇ ೩ ಬೋರ್ಡಿಂಗ್‌ಗಳು ಅಸ್ತಿತ್ವಕ್ಕೆ ಬಂದಿವೆ. ಮಹಾರಾಷ್ಟ್ರದ ಮಕ್ಕಳಿಗಾಗಿ ಠಾಣೆಯಲ್ಲಿ ಬೋರ್ಡಿಂಗ್, ಕರ್ನಾಟಕದ ಮಕ್ಕಳಿಗಾಗಿ ಧಾರವಾಡದಲ್ಲಿ ಬೋರ್ಡಿಂಗ್ ಮತ್ತು ಗುಜರಾತ್‌ದ ಮಕ್ಕಳಿಗಾಗಿ ಅಹ್ಮದಾಬಾದ್‌ನಲ್ಲಿ ಸ್ಥಾಪಿಸಿರುವ ಹಾಸ್ಟೆಲ್, ಈ ಮೂರು ಬೋರ್ಡಿಂಗ್‌ಗಳಲ್ಲಿ ಇಂದು ಏನಿಲ್ಲವೆಂದರೂ ೧೦೦ ಮಕ್ಕಳಿಗೆ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಈ ವಿಚಾರಕ್ಕೆ ಸಂಬಂಧಿಸಿದಂತೆ ಸಭಿಕರಿಗೆ ಮತ್ತಷ್ಟು ಸ್ಪಷ್ಟ ಅರಿವು ನೀಡುವುದಕ್ಕೆ ಡಾ. ಅಂಬೇಡ್ಕರ್

ಹೇಳಿದ ವಿಚಾರವಿಷ್ಟು:

ಈ ದೇಶದಲ್ಲಿ ಶತಶತಮಾನಗಳಿಂದ ಅನೂಚಾನವಾಗಿ ಬೆಳೆದು ಬಂದಿರುವ ಉಚ್ಚ ನೀಚ ಭೇದ ನೀತಿ ಗಟ್ಟಿಯಾಗಲು ಜಾತಿ ವ್ಯವಸ್ಥೆಯು ಕಾರಣವಾಗಿದ್ದರೂ ಅದು ಚಿರಸ್ಥಾಯಿಯಾಗಿ ನಿಲ್ಲಲು ಜಾತಿ ಜಾತಿಗಳ ಗುಣವೈಶಿಷ್ಟ್ಯಗಳು ಕಾರಣವಾಗಿವೆ. ಕೆಲವೇ ನಿರ್ಧಾರಿತ ಜಾತಿಗಳ ಶ್ರೇಷ್ಠತೆ ಇನ್ನಿತರ ಜಾತಿಯೊಳಗಿನ ಜ್ಞಾನದ ಅಭಾವದಿಂದಾಗಿ ಈ ಭೇದಭಾವ ಸ್ಥಿರವಾಗುವಂತಹ ಸ್ಥಿತಿ ನಿರ್ಮಿಸಿತು. ಸರ್ಕಾರಿ ದರ್ಬಾರದಲ್ಲಿನ ಉನ್ನತ ಹುದ್ದೆಗಳು ವಿಶೇಷತಃ ಜನರ ಮೇಲೆ ಅಧಿಕಾರ ಚಲಾಯಿಸುವಂತಹ ಮಾಮಲ್ದಾರಿ ಇಲ್ಲವೇ ಪೊಲೀಸ್ ಅಧಿಕಾರಿ ಹುದ್ದೆಗಳು ಇಲ್ಲಿಯವರೆಗೆ ಅಸ್ಪೃಶ್ಯ ಸಮಾಜದಿಂದ ದೂರ ಉಳಿದಿವೆ. ಇಂತಹ ಕಾರಣಗಳಿಂದಾಗಿ ಈ ಸಮಾಜಕ್ಕೆ ಅವಮಾನ ಆಗುತ್ತಿರುವುದರ ಜೊತೆಗೆ ಈ ಸಮಾಜವನ್ನು ನೋಡುವ ಇತರ ಜಾತಿಯವರ ದೃಷ್ಟಿಕೋನ ಕೂಡ ಭಿನ್ನವಾಗಿರುತ್ತದೆ. ಈ ಸಂಕುಚಿತ ದೃಷ್ಟಿಕೋನ ಬದಲಿಸಿ ನಮ್ಮ ಸಮಾಜದ ಬಗ್ಗೆ ಬೇರೆಯವರ ಮನದಲ್ಲಿ ತುಂಬಿರುವ ಅಸಮಾನತೆಯ ಮನೋಭಾವ ಅಳಿಸುವುದಕ್ಕೆ ಇರುವ ರಾಮಬಾಣ ಎಂದರೆ ಅಧಿಕಾರದ ಹುದ್ದೆಗಳನ್ನು ಅಲಂಕರಿಸುವುದು. ಪ್ರತ್ಯಕ್ಷ ಉದಾಹರಣೆ ಎಂದರೆ, ಡೆಪ್ಯುಟಿ ಕಲೆಕ್ಟರ್ ಆಗಿರುವ ಯುವಕನೊಬ್ಬ ಯಾವ ಜಿಲ್ಲೆಗಳಿಗೆ ಹೋಗುತ್ತಾನೋ ಅಲ್ಲಿಯ ಅಸ್ಪೃಶ್ಯ ಸಮಾಜವು ತಮ್ಮ ತಲೆಯ ಮೇಲೆ ಅಭಯ ಹಸ್ತ ಇದೆ ಎಂದು ಭಾವಿಸುತ್ತದೆ. ಅಸ್ಪೃಶ್ಯ ಸಮಾಜವನ್ನು ಕೀಳಾಗಿ ನೋಡುವ ಇತರ ಸಮಾಜದ ಮನೋಭಾವ ಕೂಡ ಕಡಿಮೆಯಾಗುತ್ತದೆ. ಈ ರೀತಿ ಅನೇಕ ಅಸ್ಪೃಶ್ಯ ಯುವಕರು ಅಧಿಕಾರ ಕೇಂದ್ರಗಳಲ್ಲಿ ಸ್ಥಾಪಿತರಾದರೆ ಇಂದಿನ ಪರಿಸ್ಥಿತಿ ಬದಲಿಸದೇ ಇರಲಾರರು.

ಒಂದು ವೇಳೆ ಈಗ ಹೇಳಿದ ಈ ಯುವಕ, ಉನ್ನತ ಶಿಕ್ಷಣ ಪಡೆದು ತನ್ನ ಸಾಮರ್ಥ್ಯ ಸಾಬೀತುಪಡಿಸದೇ ಇದ್ದಲ್ಲಿ ಸಮಾಜಕ್ಕೆ ಲಾಭವಾಗುತ್ತಿರಲಿಲ್ಲ. ಪರಿಶ್ರಮದಿಂದ ಉನ್ನತ ಶಿಕ್ಷಣ ಪಡೆಯದಿದ್ದರೆ ಇಂದು ಲಭಿಸಿರುವ ಸೌಲಭ್ಯಗಳು ಲಭಿಸುತ್ತಿದ್ದಾವೆಯೇ? ತನ್ನ ವೈಯಕ್ತಿಕ ಸಾಮರ್ಥ್ಯ ವೃದ್ಧಿಗಾಗಿ ಮತ್ತು ತನ್ನ ಸಮಾಜದ ಯೋಗ್ಯತೆಯನ್ನು ಎತ್ತರಕ್ಕೇರಿಸುವ ಮಾರ್ಗ ಕೇವಲ ಶಿಕ್ಷಣವನ್ನು ಅವಲಂಬಿಸಿದೆ. ಇಂದು ಕಾನೂನಿನ ಮುಖಾಂತರ ನಮ್ಮ ಸಮಾಜಕ್ಕೆ ಮೀಸಲಾತಿ ಪಡೆಯುವಲ್ಲಿ ಯಶಸ್ವಿಯಾಗಿದ್ದೇವೆ. ಆದರೆ ನಾವು ಆಯಾ ಹುದ್ದೆಗಳಿಗೆ ಸೂಕ್ತವಾಗಿರುವ ಶಿಕ್ಷಣ ಪಡೆಯದೇ ಇದ್ದಲ್ಲಿ ನಮ್ಮ ಬೇಡಿಕೆ ನಿಷ್ಫಲವಾಗುತ್ತದೆ. ನಮ್ಮ ದೌರ್ಬಲ್ಯದ ಕಾರಣ ನಮಗೆ ಲಭಿಸಿರುವ ಸ್ಥಾನಗಳು ಬೇರೆಯವರ ಪಾಲಾಗಬಹುದು. ದುಂಡು ಮೇಜಿನ ಪರಿಷತ್ತೇಯಿರಲಿ ಅಥವಾ ಕಾನೂನು ಮಂಡಳಿಯೇ ಇರಲಿ ಅಸ್ಪೃಶ್ಯ ಸಮಾಜಕ್ಕಾಗಿ ನಾನು ಮೀಸಲಾತಿ ಬೇಡಿಕೆ ಮಂಡಿಸುವ ಸಂದರ್ಭದಲ್ಲಿ ಈ ಪ್ರಶ್ನೆ ಕಾಡುತ್ತಲೇ ಇತ್ತು. ಅಸ್ಪೃಶ್ಯರಲ್ಲಿ ಹೆಚ್ಚುತ್ತಿರುವ ಮಹಾತ್ವಾಕಾಂಕ್ಷೆ ಮತ್ತು ಜ್ಞಾನ ಲಾಲಸೆಯಿಂದಾಗಿ ನನಗೆ ಧೈರ್ಯ ಬಂದಿತು. ಹಿಂದಿನ ದಿನಗಳಿಗೆ ಹೋಲಿಸಿದರೆ ಇಂದು ಅಸ್ಪೃಶ್ಯರಿಗೆ ಲಭಿಸಿರುವ ಶಿಕ್ಷಣ ಸೌಲಭ್ಯ ಮತ್ತು ಪರಿಸ್ಥಿತಿಯಲ್ಲಿ ಆಗಿರುವ ಬದಲಾವಣೆ ಒಂದು ರೀತಿಯ ಉತ್ತೇಜನ ನೀಡುತ್ತದೆ.

ಇದೇ ಸಂದರ್ಭದಲ್ಲಿ ಅವರು ತಮ್ಮ ಜೀವನದಲ್ಲಿ ನಡೆದ ಒಂದು ಘಟನೆಯನ್ನು ವಿವರಿಸಿದರು. ಇಂಗ್ಲಿಷ್ ಅಧ್ಯಯನಕ್ಕಾಗಿ ಅವರು ಮುಂಬೈಗೆ ಬಂದಿಳಿದ ಸಂದರ್ಭದಲ್ಲಿ ನಡೆದ ಘಟನೆ ಇದು. ೮ ಅಡಿ ಅಗಲ ೧೦ ಅಡಿ ಉದ್ದದ ಮುಂಬೈನ ಗಲ್ಲಿಯೊಂದರ ಮನೆಯಲ್ಲಿ ೮–೧೦ ಜನರೊಂದಿಗೆ ವಾಸ್ತವ್ಯ ಮಾಡಬೇಕಾದ ಪರಿಸ್ಥಿತಿ. ಕೊಠಡಿಯ ಒಂದು ಪಕ್ಕ ಗಟಾರು, ಅದರ ಪಕ್ಕದಲ್ಲಿ ಒಲೆ, ತಲೆಗೆ ಬಡಿಯುವ ಕಟ್ಟಿಗೆ ಭಾವಣಿ, ಸದಾಕಾಲ ಹೊಗೆ ತುಂಬಿರುತ್ತಿದ್ದ ಕೊಠಡಿಯಲ್ಲಿ ಅಷ್ಟೊಂದು ಜನರು, ನಾನಾ ರೀತಿಯ

ಉದ್ಯೋಗ– ದಂಧೆ ಮಾಡುವವರು. ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕೆ ಅನುಕೂಲಕರ ವಾತಾವರಣ ಇಲ್ಲದಂತಹ ಕೆಟ್ಟ ಪರಿಸ್ಥಿತಿಯಲ್ಲಿ ವಿವಿಧ ರೀತಿಯ ಪರೀಕ್ಷೆಗಳಿಗೆ ವಿದ್ಯಾರ್ಥಿಯೊಬ್ಬ ಹೇಗೆ ಸಿದ್ಧನಾಗಲು ಸಾಧ್ಯ? ಇಂತಹ ಮನಕಲಕುವ ನೆನಪನ್ನು ಮೆಲುಕು ಹಾಕಿದ ಅವರು, ಇಂದಿನ ವಿದ್ಯಾರ್ಥಿಗಳಿಗೆ ಅಂತಹ ಪರಿಸ್ಥಿತಿ ಇಲ್ಲ. ವಿವಿಧ ಶಿಷ್ಯವೇತನಗಳಿವೆ. ವಸತಿ ಸೌಲಭ್ಯ ಇದೆ. ಶೈಕ್ಷಣಿಕ ಸಹವಾಸ ಇರುವ ಕಾರಣ ವ್ಯಾಸಂಗ ಮತ್ತಷ್ಟು ಅನುಕೂಲಕರವಾಗಿದೆ. ಹೀಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯು ಸುಸಂದರ್ಭಗಳ ಉಪಯೋಗವನ್ನು ಪಡೆದುಕೊಂಡು ಸಮಾಜದ ಸಾಮರ್ಥ್ಯವನ್ನು ಹೆಚ್ಚಿಸುವ ಕರ್ತವ್ಯದಲ್ಲಿ ನಿರತರಾಗಬೇಕು. ವಿದ್ಯಾರ್ಥಿ ದೆಸೆಯಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಜ್ಞಾನಾರ್ಜನೆಯೊಂದೇ ಅವರ ಧ್ಯೇಯವಾಗಬೇಕು. ವಿದ್ಯಾರ್ಥಿ ದೆಸೆ ಮರಳಿ ಬರಲಾರದು. ಈ ಅವಧಿಯಲ್ಲಿ ಜ್ಞಾನ ಸಂಪಾದನೆಗಾಗಿ ಅವರ ಪ್ರಯತ್ನಶೀಲತೆ ಪರಮಾವಧಿ ತಲುಪಬೇಕು.

ಸಮಾಜಸೇವೆಗಾಗಿ ಮುಂದಿನ ಜೀವನದಲ್ಲಿ ಸಾಕಷ್ಟು ಅವಕಾಶ ಇದ್ದೇ ಇದೆ. ಪರಿಪೂರ್ಣ ಜ್ಞಾನ ಪಡೆದು ನಾನಾ ರೀತಿಯ ಅಧಿಕಾರ ಸಂಪಾದನೆಯ ನಂತರ ಸಮಾಜದ ಹಿತರಕ್ಷಣೆ ಮಾಡುವುದಕ್ಕೆ ಸಾಧ್ಯವಾಗಬಹುದು. ಈ ಅಂಶವನ್ನು ಗಮನದಲ್ಲಿರಿಸಿಕೊಂಡರೆ ಶಿಕ್ಷಣ ಪಡೆಯುವುದೇ ನಿಮ್ಮ ಇಂದಿನ ಉದ್ದೇಶವಾಗಬೇಕು ಎಂದು ಕಳಕಳಿಯಿಂದ ಹೇಳಿದರು. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುವುದಕ್ಕೆ ತಮಗೆ ಅವಕಾಶ ನೀಡಿದ ಸಂಸ್ಥೆಗೆ ಡಾ. ಅಂಬೇಡ್ಕರ್ ಕೃತಜ್ಞತೆ ಸಲ್ಲಿಸಿ ಸಂಸ್ಥೆ ತನ್ನ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಯಶಸ್ವಿಯಾಗಲಿ ಎಂದು ಹಾರೈಸಿದರು. ಇದಾದ ಬಳಿಕ ಶ್ರೀ ಡಿ. ವಿ. ಪ್ರಧಾನ್ ಅವರು ತಮ್ಮ ಭಾಷಣದಲ್ಲಿ ಸಂಸ್ಥೆಯ ಸದಸ್ಯರು ಶಿಕ್ಷಣ ಪ್ರಸಾರದಲ್ಲಿ ತೋರುತ್ತಿರುವ ಆಸಕ್ತಿಗೆ ಅಭಿನಂದನೆ ಸಲ್ಲಿಸುವುದರ ಜೊತೆಗೆ ವರ್ತಮಾನ ಪತ್ರಿಕೆಗಳು ಯಾವ ರೀತಿ ಜನರಿಗೆ ಶಿಕ್ಷಣ ಒದಗಿಸುವ ಕೆಲಸ ಮಾಡುತ್ತಿವೆ ಎನ್ನುವುದನ್ನು ವಿವರಿಸಿದರು. ಅಸ್ಪೃಶ್ಯ ಸಮಾಜದ ಮುಖಪತ್ರಿಕೆಯಾಗಿ ಕೆಲಸ ಮಾಡುತ್ತಿರುವ 'ಜನತಾಪತ್ರ' ವನ್ನು ಅಸ್ಪೃಶ್ಯರು ಯಾವ ರೀತಿ ಓದಿ ಅರ್ಥೈಸಿಕೊಳ್ಳಬೇಕೆನ್ನುವುದನ್ನು ವಿವರಿಸಿ ಆ ಪತ್ರಿಕೆಯ ಪ್ರಸಾರ ಎಂದರೆ ಲೋಕ ಶಿಕ್ಷಣದ ಪ್ರಸಾರವಿದ್ದಂತೆ ಇದಕ್ಕಾಗಿ ಜನತಾ ಪತ್ರದ ಪ್ರಸಾರದ ಸಂಖ್ಯೆ ಹೆಚ್ಚಿಸಬೇಕಿದೆ ಎಂದರು. ಡಾ. ಅಂಬೇಡ್ಕರ್ ಮತ್ತು ಇತರ ಆಮಂತ್ರಿತ ಗಣ್ಯರಿಗೆ ಸಂಸ್ಥೆಯ ಕಾರ್ಯದರ್ಶಿ ವಂದನಾರ್ಪಣೆ ಸಲ್ಲಿಸಿದರು. ಬಾಲಕಿಯರ ಸಂಗೀತದೊಂದಿಗೆ ಅಂಬೇಡ್ಕರ್ ಅವರಿಗೆ ಪುಷ್ಪಗುಚ್ಛ ನೀಡಿ ಸನ್ಮಾನಿಸಲಾಯಿತು.

---

ಜನತಾ: ಸೆಪ್ಟಂಬರ್ ೧೨, ೧೯೩೨

# ೫೬.

# ನನ್ನ ಜನರ ಹೋರಾಟ ಹಾಗೂ ನ್ಯಾಯಯುತ ಹಕ್ಕುಗಳಿಗಾಗಿ ರಸ್ತೆಯ ಮೇಲಿನ ದೀಪದ ಕಂಬಕ್ಕೆ ನೇಣು ಹಾಕಿದರೂ ನಾನು ಬೆದರಲಾರೆ

ಭಾರತದ ಮುಂಬರುವ ಸಂವಿಧಾನದಲ್ಲಿ ಅಲ್ಪಸಂಖ್ಯಾತ ಸಮಾಜಕ್ಕೆ ಯಾವ ಸ್ಥಾನಮಾನ ನೀಡಬೇಕು ಎನ್ನುವುದನ್ನು ನಿರ್ಧರಿಸುವುದಕ್ಕಾಗಿ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಅಲ್ಪಸಂಖ್ಯಾತ ವರ್ಗದ ಉಪಸಮಿತಿಯ ನೇಮಕ ಮಾಡಲಾಗಿತ್ತು.

ಅಲ್ಪಸಂಖ್ಯಾತರ ಪ್ರಶ್ನೆಗೆ ಸಂಬಂಧಿಸಿದಂತೆ ಯಾವ ನಿರ್ಣಯ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಎಲ್ಲ ಅಲ್ಪಸಂಖ್ಯಾತರ ಪ್ರತಿನಿಧಿಗಳು–ಮುಸಲ್ಮಾನ, ಅಸ್ಪೃಶ್ಯರು, ಯೂರೋಪಿಯನ್ನರು, ಕ್ರೈಸ್ತರು ಮತ್ತು ಆಂಗ್ಲೋ–ಇಂಡಿಯನ್ ಸೇರಿದಂತೆ ಇತರರು ತಮ್ಮತಮ್ಮೊಳಗೆ ವಿಚಾರ ವಿನಿಮಯ ಮಾಡಿ ಸರ್ವಾನುಮತದಿಂದ ಈ ಕೆಳಗೆ ವಿವರಿಸಿದಂತೆ ಪ್ರಸ್ತಾವನೆಯನ್ನು ಸಿದ್ಧಪಡಿಸಿದ್ದರು. ಈ ಪ್ರಸ್ತಾವನೆಯಲ್ಲಿ ಒಟ್ಟು ೧೧ ಬೇಡಿಕೆಗಳನ್ನು ಪಟ್ಟಿ ಮಾಡಲಾಗಿತ್ತು. ಅದರನ್ವಯ ಪ್ರಾಂತೀಯ ಗಣತಿ ಪ್ರತಿನಿಧಿಗಳ ಸಂಖ್ಯೆಯನ್ನು ತೀರ್ಮಾನಿಸಲಾಯಿತು.

**ಅಲ್ಪಸಂಖ್ಯಾತ ವರ್ಗದ ಸಾಮಾನ್ಯ ಬೇಡಿಕೆಗಳು**

(೧) ಯಾವುದೇ ವ್ಯಕ್ತಿಗೆ ನೌಕರಿ ಪಡೆಯುವುದಕ್ಕೆ, ವ್ಯಾಪಾರ ಆರಂಭಿಸುವುದಕ್ಕೆ, ನಾಗರಿಕತ್ವದ ಹಕ್ಕು ಪಡೆಯುವ ವಿಚಾರದಲ್ಲಿ ಜಾತಿ, ಧರ್ಮ, ಪಂಥಗಳು ಅಡ್ಡ ಬರಕೂಡದು.

(೨) ಜಾತಿಗೆ ಸಂಬಂಧಿಸಿದಂತೆ ಯಾವುದೇ ಕಾನೂನು ಮಾಡುವುದಿದ್ದಲ್ಲಿ ಕಾನೂನು ಮಂಡಳಿ, ಮೇಲೆ ವಿಧಿಸುವ ನಿಯಂತ್ರಣದ ವಿಷಯವನ್ನು ಸಂವಿಧಾನದಲ್ಲಿ ಉಲ್ಲೇಖಿಸಬೇಕು.

(೩) ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯ ಇರಬೇಕು ಮತ್ತು ಧರ್ಮಾಂತರದಿಂದಾಗಿ ನಾಗರಿಕತ್ವ ಹಕ್ಕಿನ ಮೇಲೆ ಯಾವುದೇ ರೀತಿಯ ಅಡ್ಡ ಪರಿಣಾಮವಾಗಕೂಡದು.

(೪) ಪ್ರತಿಯೊಂದು ಜಾತಿಗೆ ತನ್ನ ಜಾತಿಯ ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿನ ವೆಚ್ಚದ ಮೇಲೆ ನಿಯಂತ್ರಣ ಇರಿಸುವ ಮತ್ತು ಇಂತಹ ಸಂಸ್ಥೆಗಳಲ್ಲಿನ ಧಾರ್ಮಿಕ ವಿಧಾನಗಳನ್ನು ಕೈಗೊಳ್ಳಲು ಅಧಿಕಾರ ಇರಬೇಕು.

(೫) ಧರ್ಮ, ಸಂಸ್ಕೃತಿ, ವ್ಯಕ್ತಿ ವಿಷಯ ಕಾಯ್ದೆ, ಶಿಕ್ಷಣ ಪ್ರಸಾರ, ಭಾಷಾ ಬೆಳವಣಿಗೆ ಮತ್ತು ಧರ್ಮಾಧಾರಿತ ಸಂಸ್ಥೆಗಳ ಪ್ರಸಾರಕ್ಕೆ ಸಂಬಂಧಿಸಿದಂತೆ ಎಲ್ಲ ಅಲ್ಪಸಂಖ್ಯಾತ ಜಾತಿಗಳಿಗೆ ಸಂರಕ್ಷಣೆ ನೀಡುವ ಬಗ್ಗೆ ಸಂವಿಧಾನದಲ್ಲಿ ಉಲ್ಲೇಖಿಸಬೇಕು ಮತ್ತು ಸರ್ಕಾರ, ಸ್ಥಳೀಯ ಸ್ವರಾಜ್ ಸಂಸ್ಥೆಗಳಿಗೆ ದೊರೆಯುವ ಅನುದಾನದ ಸೂಕ್ತ ಹಂಚಿಕೆಯಾಗಬೇಕು.

(೬) ಪ್ರತಿಯೊಂದು ಜಾತಿಗೂ ನಾಗರಿಕ ಹಕ್ಕು ಇರಬೇಕು.

(೭) ಎಲ್ಲ ಮಂತ್ರಿಮಂಡಳಗಳಲ್ಲಿ ಮುಸಲ್ಮಾನ ಮತ್ತು ಇತರ ಅಲ್ಪಸಂಖ್ಯಾತ ಜಾತಿಯ ಜನರನ್ನು ಎಷ್ಟು ಸಾಧ್ಯವೋ ಅಷ್ಟು ಜನರನ್ನು ಸೇರ್ಪಡೆ ಮಾಡುವ ಪರಿಪಾಠ ಬೆಳೆಯಬೇಕು.

(೮) ಅಲ್ಪಸಂಖ್ಯಾತ ಜಾತಿಯ ಹಿತರಕ್ಷಣೆ ಮತ್ತು ಉನ್ನತಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳಲ್ಲಿ ಪ್ರತ್ಯೇಕ ಇಲಾಖೆಗಳನ್ನು ತೆರೆಯಬೇಕು.

## ಸ್ವತಂತ್ರ ಮತಕ್ಷೇತ್ರಕ್ಕಾಗಿ ಹಕ್ಕು

(೯) ಸದ್ಯ ಅಸ್ತಿತ್ವದಲ್ಲಿ ಇರುವ ಕಾನೂನು ಮಂಡಳಿಯಲ್ಲಿ ಪ್ರಾತಿನಿಧಿತ್ವದ ಹಕ್ಕು ಪಡೆದಿರುವ ಅಲ್ಪಸಂಖ್ಯಾತ ವರ್ಗಗಳಿಗಾಗಿ ಪ್ರತಿಯೊಂದು ಕಾನೂನು ಮಂಡಳಿಯಲ್ಲಿ ಸ್ವತಂತ್ರ ಮತಕ್ಷೇತ್ರ ಇರಬೇಕು ಮತ್ತು ಇದರೊಂದಿಗೆ ಸೇರಿಸಲ್ಪಟ್ಟಿರುವ ಅನುಬಂಧದಲ್ಲಿ ತೋರಿಸಿರುವಂತೆ ಪ್ರಾತಿನಿಧಿತ್ವ ಲಭಿಸಬೇಕು. ಆದರೆ ಇದಕ್ಕಾಗಿ ಬಹುಸಂಖ್ಯಾತ ಜಾತಿಯನ್ನು ಬೇರೆ ಜಾತಿಗಿಂತ ಅಲ್ಪಸಂಖ್ಯಾತ ಜಾತಿಗಳಿಗೆ ಹೋಲಿಕೆ ಮಾಡಬಾರದು.

(೧೦)ಕೇಂದ್ರ ಮತ್ತು ಪ್ರಾಂತೀಯ ಲೋಕಸೇವಾ ಆಯೋಗ ಸ್ಥಾಪಿಸಿ ವಿವಿಧ ಇಲಾಖೆಗಳಿಗೆ ಸಿಬ್ಬಂದಿ ನೇಮಕ ಮಾಡುವ ಸಂದರ್ಭದಲ್ಲಿ ವಿವಿಧ ಜಾತಿಯ ಅರ್ಹ ಮತ್ತು ಕೆಲಸ ಮಾಡುವವರನ್ನು ಸೂಕ್ತ ಪ್ರಮಾಣದಲ್ಲಿ ನೇಮಕ ಮಾಡಬೇಕು. ಈ ನಿಯಮ ಪಾಲನೆಯಾಗುವ ನಿಟ್ಟಿನಲ್ಲಿ ಗವರ್ನರ್ ಜನರಲ್ ಮತ್ತು ಗವರ್ನರ್ ಅವರು ಕಾಲಕಾಲಕ್ಕೆ ಆಯೋಗದ ಕಾರ್ಯಕಲಾಪಗಳನ್ನು ಪರಿಶೀಲಿಸಬೇಕು.

(೧೧) ಒಂದು ಜಾತಿಯ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಗೆ ಸಂಬಂಧಿಸಿದ ಮಸೂದೆಗೆ ಕಾನೂನು ಮಂಡಳಿಯಲ್ಲಿ ಆ ಜಾತಿಯ ಎರಡು ಮೂರಾಂಶದಷ್ಟು ಸದಸ್ಯರ ವಿರೋಧವಿದ್ದರೆ ಅಂತಹ ಮಸೂದೆಯ ಚರ್ಚೆ ಇಲ್ಲವೇ ಪರಿಶೀಲನೆಯನ್ನು ಕೈಬಿಡಬೇಕು.

## ವಿವಿಧ ಜಾತಿಗಳಿಗೆ ಲಭಿಸುವ ಪ್ರತಿನಿಧಿಗಳ ಸಂಖ್ಯೆ

ಭಾರತದಲ್ಲಿನ ಹಿರಿಯ ಮತ್ತು ಕಿರಿಯ ಕಾನೂನು ಮಂಡಳಿಗಳಲ್ಲಿ ವಿವಿಧ ಜಾತಿಯ ಎಷ್ಟೆಷ್ಟು ಪ್ರತಿನಿಧಿಗಳು ಇರಬೇಕು ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಅನುಬಂಧದಂತೆ ಸ್ಪಷ್ಟಪಡಿಸಲಾಗಿತ್ತು.[೧]

---

೧. ಅಂಬೇಡ್ಕರ್–ಗಾಂಧಿ: ಮೂರು ಸಂದರ್ಶನಗಳು: ರತ್ನಾಕರ ಗಣವೀರ, ಪುಟ: ೧೯–೨೧.

## ಅನುಬಂಧ

### ಪ್ರಾಂತೀಯ ಕಾನೂನು ಮಂಡಳಿಯಲ್ಲಿನ ಪ್ರಾತಿನಿಧಿತ್ವ

ಕಂಸಿನಲ್ಲಿರುವ ಸಂಖ್ಯೆ= 1931 ರ ಜನಸಂಖ್ಯೆಯ ಆಧಾರ ಮತ್ತು ಸೈಮನ್ ವರದಿಯನ್ವಯ ದಲಿತರ ಶೇಕಡಾವಾರು ಪ್ರಮಾಣ

| | ಕಾನೂನು ಮಂಡಳಿಯ ಸಂಖ್ಯಾಬಲ | ಹಿಂದು | | | ಮುಸ್ಲಿಂ | ಕ್ರೈಸ್ತ | ಸಿಖ್ | ಆಂಗ್ಲೋ ಇಂಡಿಯನ್ | ಇತರ ಜಾತಿ | ಯುರೋಪಿಯನ್ |
|---|---|---|---|---|---|---|---|---|---|---|
| | | ಜಾತಿ | ದಲಿತ | ಒಟ್ಟು | | | | | | |
| ಕೇಂದ್ರ ಮತ್ತು ಅಖಿಲ ಭಾರತ (1931) | | (47.5) | (19) | (66.5) | (21.5) | | | | | |
| ಮೇಲ್ಮನೆ | 200 | 101 | 20 | 121 | 67 | 1 | 6 | 1 | .... | 4 |
| ಕೆಳಮನೆ | 300 | 123 | 45 | 168 | 100 | 7 | 10 | 3 | .... | 12 |
| | | (48.9) | (13.4) | (62.3) | (34.8) | | | | | |
| ಆಸ್ಸಾಂ | 100 | 38 | 13 | 51 | 35 | 3 | .... | 1 | .... | 10 |
| | | (18.3) | (24.7) | (43) | (54.9) | | | | | |
| ಬಂಗಾಲ | 200 | 38 | 35 | 73 | 102 | 2 | .... | 3 | .... | 20 |
| | | (67.8) | (14.5) | (82.3) | (11.3) | | | | | |
| ಬಿಹಾರ್ ಮತ್ತು ಒರಿಸ್ಸಾ | 100 | 51 | 14 | 65 | 25 | 1 | .... | 1 | 3 | 5 |
| | | (68) | (8) | (76) | (20) | | | | | |
| ಮುಂಬೈ | 200 | 88 | 28 | 116 | 66 | 2 | .... | 3 | .... | 13 |
| On Sind being separated by weightage of Musalmans in Bombay to be on the same footing as to the Hindus in the N.W.F.P | | | | | | | | | | |
| | | (63.1) | (23.7) | 86.8) | (44) | | | | | |
| ಮಧ್ಯ ಪ್ರಾಂತ ಮತ್ತು ವಹ್ರಾಡ್ | 100 | 58 | 20 | 78 | 15 | 1 | ... | 2 | 2 | 2 |
| | | (71.3) | (15.4) | (86.7) | (7.1) | (3.7) | | | | |
| ಮದ್ರಾಸ್ | 200 | 102 | 40 | 142 | 30 | 14 | ... | 4 | 2 | 8 |
| | | (15.1) | (13.5) | (28.6) | (56.5) | | (13 ) | | | |
| ಪಂಜಾಬ್ | 100 | 14 | 10 | 24 | 51 | 1.5 | 20 | 1.5 | .... | 2 |
| | | (58.1) | (26.4) | (84.5) | (14.8) | | | | | |
| ಉತ್ತರ ಪ್ರದೇಶ | 100 | 44 | 20 | 64 | 30 | 1 | ... | 2 | ... | 3 |

Sind and N.W.F.P:- Weightage similar to that enjoyed by the musalmans in the provinces in which they constitute a minority of the population, shall be given to the Hindu minority in Sind and to the Hindu and Sikh minorities in the N.W.F.P[2]

ಈ ಮನವಿಗೆ :– (೧) ಹೀಜ್ ಹೈನೆಸ್ ಆಗಾಖಾನ್ (ಮುಸ್ಲಿಂ)
(೨) ಡಾ.ಅಂಬೇಡ್ಕರ್ (ದಲಿತ ವರ್ಗ)
(೩) ರಾವ್ ಬಹಾದ್ದೂರ್ ಪನ್ನೀರ್ ಸೆಲ್ವಂ (ಭಾರತೀಯ ಕ್ರಿಶ್ಚಿಯನ್)
(೪) ಸರ್ ಹೆನ್ರಿ ಗಿಡನೆ (ಆಂಗ್ಲೋ ಇಂಡಿಯನ್)

---

೨. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರವಣಿಗೆಗಳು ಮತ್ತು ಭಾಷಣಗಳು, ಸಂಪುಟ–೨, ಪು–೬೬೭–೬೮.

(೫). ಸರ್ ಹಬರ್ಟ್ ಕರರ್ (ಯೂರೋಪಿಯನ್) ಇವರುಗಳು ಸಹಿ ಮಾಡುವ ಮೂಲಕ ತಮ್ಮ ಸಮ್ಮತಿ ಸೂಚಿಸಿದ್ದರು.[೧]

ಈ ಮನವಿ ಅಲ್ಲದೇ ಅಸ್ಪೃಶ್ಯರಿಗೆ ವಿಶೇಷ ಪ್ರಾತಿನಿಧಿತ್ವ ನೀಡುವುದಕ್ಕಾಗಿ ಒಂದು ಸ್ವತಂತ್ರ ಮನವಿಯನ್ನು ಸ್ವತಃ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ರಾವ್ ಬಹಾದ್ದೂರ್ ಆರ್. ಶ್ರೀನಿವಾಸನ್ ಅವರು ಸಹಿ ಮಾಡಿ ಸಮಿತಿಗೆ ಸಲ್ಲಿಸಿದ್ದರು.[೨]

ಅಸ್ಪೃಶ್ಯರ ಬೇಡಿಕೆಗೆ ಸಂಬಂಧಿಸಿದಂತೆ ಮಹಾತ್ಮ ಗಾಂಧೀಜಿ ಅವರ ನಿಲುವು ಸ್ಪಷ್ಟಪಡಿಸುವ ನಿಟ್ಟಿನಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ನವೆಂಬರ್ ೧೩, ೧೯೩೧ರಂದು ಲಂಡನ್‌ದಿಂದ ಜನರಿಗೆ ಬರೆದ ಪತ್ರದಲ್ಲಿ ಈ ರೀತಿ ಸ್ಪಷ್ಟಪಡಿಸಲಾಗಿತ್ತು.

"ನನ್ನ ವಿರುದ್ಧ ಭಾರತದಲ್ಲಿ 'ರಾಷ್ಟ್ರೀಯ' ದಿನಪತ್ರಿಕೆಗಳ ಮುಖಾಂತರ ನನ್ನನ್ನು ನಿಂದಿಸುವ ಮತ್ತು ನನ್ನ ಬಗ್ಗೆ ತಪ್ಪು ಕಲ್ಪನೆಯನ್ನು ಹುಟ್ಟು ಹಾಕುವ ಕೆಲಸ ನಡೆಯುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಸಾಕಷ್ಟು ದಿನಪತ್ರಿಕೆಗಳು ನನ್ನ ಕಡೆಗೆ ಬಂದಿದ್ದು ಅವುಗಳ ಪೈಕಿ ಕೆಲವುಗಳನ್ನು ನಾನು ಓದಿದ್ದೇನೆ. ಸತ್ಯದ ಪಕ್ಷಪಾತಿ ಮತ್ತು ಅಹಿಂಸೆಯನ್ನು ತಮ್ಮದಾಗಿಸಿಕೊಂಡಿದ್ದೇವೆ ಎಂದು ಹೇಳಿಕೊಳ್ಳುವ ಈ ಜನರ ಸತ್ಯದ ಮೇಲಿನ ಪ್ರೀತಿ ಖೊಟ್ಟಿ ಮತ್ತು ಸುಳ್ಳು ಆಗಿದೆ. ಇಂತಹ ಖೊಟ್ಟಿ ವಿಶ್ವಾಸವನ್ನು ನಾನು ಎಂದಿಗೂ ನೋಡಿರಲಿಲ್ಲ. ಹೀಗಾಗಿ ಅವುಗಳಲ್ಲಿ ಸತ್ಯ ಮತ್ತು ಸುಳ್ಳು ಯಾವುದು ಎನ್ನುವುದನ್ನು ಪರೀಕ್ಷಿಸದೇ ಬರೆದಿರುವ ಲೇಖನಗಳನ್ನು ಓದಿ ನನಗೆ ಆಶ್ಚರ್ಯವಾಗದೇ ನಿರಾಸೆ ಮಡುಗಟ್ಟಿದೆ.

ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರ ಲಭಿಸಬಾರದು ಮತ್ತು ಅಸ್ಪೃಶ್ಯರನ್ನು ಪ್ರತಿನಿಧಿಸುವ ವ್ಯಕ್ತಿ ಕೂಡ ಇರಬಾರದು ಎನ್ನುವುದು ಗಾಂಧೀಜಿ ಅವರ ಒತ್ತಾಸೆಯಾಗಿದೆ. ಅಸ್ಪೃಶ್ಯರು ಹಿಂದೂಗಳಾಗಿದ್ದು ಅವರಿಗಾಗಿ ಮೀಸಲು ಕ್ಷೇತ್ರ ಸೇರಿದಂತೆ ಇತರ ಸಂವಿಧಾನಾತ್ಮಕ ಸೌಲಭ್ಯಗಳನ್ನು ನೀಡಬೇಕಾದ ಅಗತ್ಯವಿಲ್ಲ ಎನ್ನುವುದು ಗಾಂಧೀಜಿ ದೃಷ್ಟಿಕೋನವಾಗಿದೆ. ನನ್ನ ತಲೆ ಹೋದರೂ ಚಿಂತೆ ಇಲ್ಲ. ಹಿಂದೂಗಳಿಂದ ಸ್ವತಂತ್ರವಾಗುತ್ತೇವೆನ್ನುವ ಅಸ್ಪೃಶ್ಯರ ಹಕ್ಕಿನ ಒತ್ತಾಯಕ್ಕೆ ನಾನು ಏನನ್ನೂ ಕೊಡುವುದಿಲ್ಲ ಎನ್ನುವಷ್ಟರ ಮಟ್ಟಿಗೆ ಅಸ್ಪೃಶ್ಯರನ್ನು ವಿರೋಧಿಸುವ ಹಂತಕ್ಕೆ ಗಾಂಧೀಜಿ ತಲುಪಿದ್ದಾರೆ; ಮತ್ತು ಇಂತಹ ಕ್ರಮ ಅಸ್ಪೃಶ್ಯರ ಪಾಲಿಗೆ ಆತ್ಮಹತ್ಯಾಕಾರಿ ಎಂದು ಮುಲಾಮು ಹಚ್ಚುವ ಮೂಲಕ ತಮ್ಮ ಕೆಲಸಕ್ಕೆ ಸಮರ್ಥನೆ ಒದಗಿಸಿಕೊಳ್ಳುತ್ತಿದ್ದಾರೆ. ಗಾಂಧೀಜಿ ವಿರೋಧವನ್ನು ಸರಿಯಾಗಿ ಅವಲೋಕಿಸಿದರೆ ಇಂದು ನನ್ನ ವಿರುದ್ಧ ಮಾತನಾಡುವ ನಾಲ್ಕಾರು ಅಸ್ಪೃಶ್ಯ ನಾಯಕರು ಕೂಡ ನನ್ನ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಗಾಂಧೀಜಿ ತಮ್ಮ ಮನಸ್ಸಿಗೆ ಏನು ತೋಚುತ್ತದೋ ಅದನ್ನು ಮಂಡಿಸಿ ಖುಷಿಪಡಬಹುದು. ಆದರೆ ಅಸ್ಪೃಶ್ಯರ ಹಿತ ಯಾವುದರಲ್ಲಿ ಇದೆ ಎನ್ನುವುದು ನನ್ನಂತಹ ಅಸ್ಪೃಶ್ಯನಿಗೆ ಅವರಂತಹ ಸ್ಪೃಶ್ಯರಿಗಿಂತ ಚೆನ್ನಾಗಿ ಗೊತ್ತು ಮತ್ತು ಅಸ್ಪೃಶ್ಯರ ಪರವಾಗಿ ಮಾತನಾಡುವ ನಾನು ಎಲ್ಲ ಸ್ವಾಭಿಮಾನಿ ಅಸ್ಪೃಶ್ಯರ ಪರವಾಗಿ ಮಾತನಾಡುತ್ತಿದ್ದೇನೆ ಎನ್ನುವ ವಿಶ್ವಾಸ ನನಗೆ ಇದೆ.[೩]

"ಅಲ್ಪಸಂಖ್ಯಾತರ ಪ್ರಶ್ನೆಗೆ ಸಂಬಂಧಿಸಿದಂತೆ ಏಕಾಭಿಪ್ರಾಯ ಮೂಡುತ್ತಿಲ್ಲ ಎನ್ನುವುದು

---

೧. ಡಾ. ಬಾಬಾಸಾಹೇಬ ಅಂಬೇಡ್ಕರ್ ರೈಟಿಂಗ್ ಆ್ಯಂಡ್ ಸ್ಪೀಚೀಸ್ ಖಂಡ ೨, ಪುಟ ೬೬೬

೨. ಡಾ. ಬಾಬಾಸಾಹೇಬ ಅಂಬೇಡ್ಕರ್ ರೈಟಿಂಗ್ ಆ್ಯಂಡ್ ಸ್ಪೀಚೀಸ್ ಖಂಡ ೨, ಪುಟ ೬೪೯

೩. ಜನತಾ: ಡಿಸೆಂಬರ್ ೫, ೧೯೩೧

ಗೊತ್ತಾಗುತ್ತಿದ್ದಂತೆಯೇ ಬ್ರಿಟಿಷ್ ಪ್ರಧಾನಿ ಮ್ಯಾಕ್‌ಡೊನಾಲ್ಡ್ ಅವರು ಅಲ್ಪಸಂಖ್ಯಾತರ ಪ್ರಶ್ನೆಗೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಳ್ಳುವುದಕ್ಕಾಗಿ ಪ್ರಧಾನ ಮಂತ್ರಿಯವರ ನೇತೃತ್ವದಲ್ಲಿ ಸಮಿತಿಯನ್ನು ನಿಯೋಜಿಸಿ ಈ ಸಮಿತಿಯ ಸದಸ್ಯರು ಪ್ರಧಾನಮಂತ್ರಿ ತೆಗೆದುಕೊಳ್ಳುವ ತೀರ್ಪನ್ನು ಸ್ವೀಕರಿಸಿ ಅವರ ಆಯ್ಕೆಗೆ ಮಾನ್ಯತೆ ನೀಡಲಿ ಎಂಬ ಆಶಯದಿಂದ ಲಿಖಿತ ಮನವಿಯನ್ನು ಸಲ್ಲಿಸಬೇಕು ಎಂದು ಸೂಚನೆ ನೀಡಿದರು. ಪ್ರಧಾನ ಮಂತ್ರಿ ಈ ತೀರ್ಮಾನ ತೆಗೆದುಕೊಳ್ಳಲಿ ಎನ್ನುವ ಉದ್ದೇಶದಿಂದ ಮಾಡಿದ್ದ ಆ ಮನವಿಗೆ ಇತರ ಸದಸ್ಯರು ಸಹಿ ಮಾಡಿದಂತೆ ಗಾಂಧೀಜಿ ಕೂಡ ಸಹಿ ಮಾಡಿದ್ದರು. ಆದರೆ ಡಾ. ಅಂಬೇಡ್ಕರ್ ಅವರಿಗೆ ತಮ್ಮ ನ್ಯಾಯಯುತ ಬೇಡಿಕೆಯ ಮೇಲೆ ಎಷ್ಟು ವಿಶ್ವಾಸ ಇತ್ತೆಂದರೆ ಅವರು ಈ ಮನವಿಗೆ ಸಹಿ ಮಾಡಲೇ ಇಲ್ಲ. ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಈ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಸ್ಪಷ್ಟೀಕರಣ ನೀಡಿದರು.[೪]

### ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಾರ್ವಜನಿಕ ಸ್ಪಷ್ಟೀಕರಣ

ಊಹಿಸಿದಂತೆ ಖಾಸಗಿ ಅಲ್ಪಸಂಖ್ಯಾತ ಉಪಸಮಿತಿಯ ಪ್ರಯತ್ನ ಅಯಶಸ್ವಿಯಾದ ಕಾರಣ ಅಲ್ಪಸಂಖ್ಯಾತರೊಂದಿಗೆ ನಿಕಟ ಸಂಬಂಧ ಇರಿಸಿಕೊಂಡಿರುವ ಪಕ್ಷದಿಂದ ಕೂಡ ಈ ಪ್ರಶ್ನೆಯನ್ನು ಪರಿಹರಿಸುವುದು ಅಸಾಧ್ಯವೆಂದೂ ಪ್ರತಿಯೊಬ್ಬರೂ ಭಾವಿಸಿದ್ದಾರೆ. ವೈಫಲ್ಯಕ್ಕೆ ಕಾರಣವಾಗಿರುವ ಅಂಶ ಪತ್ತೆಹಚ್ಚುವಲ್ಲಿ ನಿರತರಾಗಿದ್ದ ಸಾಕಷ್ಟು ಜನರು ದಣಿದಿದ್ದಾರೆ. ಕಳೆದ ಗುರುವಾರ ಜರುಗಿದ ಕಮಿಟಿ ಸಭೆಯಲ್ಲಿನ ಭಾಷಣಕ್ಕೆ ತಿದ್ದುಪಡಿಯಾಗುವುದಕ್ಕೆ ನನ್ನ ಪ್ರಕಾರ ಯಾವ ವಿಷಯ ಅಡ್ಡ ಬಂದಿದೆ ಎನ್ನುವುದನ್ನು ಗಾಂಧೀಜಿ ಸ್ಪಷ್ಟಪಡಿಸಿದ್ದರು. ಅಲ್ಪಸಂಖ್ಯಾತ ಪ್ರತಿನಿಧಿಗಳು ಮತ್ತು ಸ್ವತಃ ಪ್ರಧಾನ ಮಂತ್ರಿ ಅವರು ಗಾಂಧೀಜಿ ಅವರ ವಿಚಾರ ಸರಣಿಗೆ ಪರಿಣಾಮಕಾರಿ ಉತ್ತರ ನೀಡಿದರು. ಗಾಂಧೀಜಿ ಅವರು ನೀಡಿದ ಕಾರಣಗಳನ್ನು ನಿರಾಕರಣೆ ಮಾಡುವುದರೊಂದಿಗೆ ಇತರ ವಿಷಯಗಳಲ್ಲೂ ತರುವ ತಿದ್ದುಪಡಿ ಮತ್ತು ಇದಕ್ಕಿಂತ ಮೇಲಾಗಿ ಕೆಲವೊಂದು ವಿಶಿಷ್ಟ ಜಾತಿಗಳ ಕುರಿತು ಗಾಂಧೀಜಿ ಅವರ ಕಲುಷಿತ ಬುದ್ಧಿ ಮತ್ತು ಜಾತಿ–ಜಾತಿಗಳ ನಡುವೆ ವೈರತ್ವ ಹುಟ್ಟಿಸುವ ಪ್ರವೃತ್ತಿಯೇ ಘಾತಕಕಾರಿ ಸಂಗತಿಯಾಗಿ ಪರಿಣಮಿಸಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಅದರಲ್ಲೂ ವಿಶೇಷವಾಗಿ ಅವರದ್ದೇ ಅಧ್ಯಕ್ಷತೆಯಲ್ಲಿ ನಡೆದ ಖಾಸಗಿ ಸಮಿತಿ ಸಭೆಯಲ್ಲಿ ಗಾಂಧಿ ಅವರು ದಲಿತ ವರ್ಗಗಳ ಕುರಿತು ತೋರಿದ ಧೋರಣೆಯನ್ನು ಜನರು ಸೂಕ್ಷ್ಮವಾಗಿ ಗಮನಿಸಬೇಕು ಎನ್ನುವುದು ನನ್ನ ಅಭಿಪ್ರಾಯ.

ಅಲ್ಪಸಂಖ್ಯಾತರಾಗಿ ನಾವು ಎರಡು ಬೇಡಿಕೆ ಮಂಡಿಸುತ್ತಿದ್ದೇವೆ. ಜೀವಿಸುವ ಹಕ್ಕು ಮತ್ತು ಆಸ್ತಿಯ ಸಂರಕ್ಷಣೆಗಾಗಿ ನಮಗೆ "ಮೂಲಭೂತ ಹಕ್ಕು" ನೀಡಬೇಕು. ಇದರೊಟ್ಟಿಗೆ ಅಸ್ಪೃಶ್ಯತೆ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಭರವಸೆ ನೀಡುವುದು ನಮ್ಮ ಮೊದಲನೇ ಬೇಡಿಕೆಯಾಗಿದ್ದು, ಎರಡನೇ ಬೇಡಿಕೆ ಎಂದರೆ ಕಾನೂನು ಮಂಡಳಿಯಿಂದ ವಿರೋಧವಾಗಬಾರದೆಂದು ನಮ್ಮ ಹಕ್ಕುಗಳ ಬಗ್ಗೆ ಕಾನೂನು ಮಂಡಳಿಯಲ್ಲಿ ಪ್ರಾತಿನಿಧಿತ್ವ ಕೇಳುತ್ತಿದ್ದೇವೆ. ಎರಡನೆಯದ್ದು ಎಂದರೆ ಚಿಕ್ಕಪುಟ್ಟ ಅಲ್ಪಸಂಖ್ಯಾತರ ಬೇಡಿಕೆಗಳು ಈ ಸ್ವರೂಪದಲ್ಲಿ ಇದ್ದು, ಮುಸಲ್ಮಾನ ಮತ್ತು ಸಿಖ್ ಈ ಎರಡೂ ಜಾತಿಗಳಿಗೆ ಸಂಬಂಧಿಸಿದ ಬೇಡಿಕೆಗಳಿಗೆ ಗಾಂಧೀಜಿ ತಮ್ಮ ಒಪ್ಪಿಗೆ ಸೂಚಿಸಿದ್ದರೆ, ವಿಶೇಷವಾಗಿ ಅಸ್ಪೃಶ್ಯರಿಗೆ ಪ್ರಾತಿನಿಧಿತ್ವ ನೀಡುವುದನ್ನು

---

4. Dr. Ambedkar: Life and Mission; Dhanjay Keer, Reprinted 1981, pp 190.

ನಿರಾಕರಿಸುತ್ತಿದ್ದಾರೆ. ನಿಮಗೆ ನೀಡಲಾಗುತ್ತಿರುವ ಮೂಲಭೂತ ಹಕ್ಕುಗಳಿಂದ ನೀವು ತೃಪ್ತರಾಗಬೇಕು ಎಂದು ಗಾಂಧೀಜಿ ನಮಗೆ ಹೇಳುತ್ತಿದ್ದಾರೆ. ಆದರೆ ಪ್ರಾತಿನಿಧಿತ್ವಕ್ಕೆ ಸಂಬಂಧಿಸಿದಂತೆ ಸಿಖ್, ಮುಸಲ್ಮಾನರು ಮತ್ತು ಅಸ್ಪೃಶ್ಯರ ಮಧ್ಯೆ ಏಕೆ ಪಂಕ್ತಿಭೇದ ಮಾಡಲಾಗುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಬಹಿರಂಗವಾಗಿ ತೋರ್ಪಡಿಸಿದ ಈ ಪಕ್ಷಪಾತ ನೀತಿಯಿಂದ ಗಾಂಧೀಜಿ ಕೂಡ ನಾಚಿಕೆ ಪಟ್ಟುಕೊಂಡಿರಬೇಕು. ಇದೇ ಕಾರಣಕ್ಕೆ ಅವರು ಅಸ್ಪೃಶ್ಯರಿಗೆ ವಯಸ್ಕ ಮತಾಧಿಕಾರ ನೀಡುವ ಮೂಲಕ ಬೀದಿಗೆ ಬಿದ್ದ ಮರ್ಯಾದೆಯ ಮೇಲೆ ಬಟ್ಟೆ ಹೊದಿಸುವ ಪ್ರಯತ್ನ ಮಾಡುತ್ತಿರಬೇಕು. ಮೂಲದಲ್ಲಿ ಸ್ಪಷ್ಟವಾಗಿ ಈ ಭೇದ–ವಿಭೇದದ ಧೋರಣೆ ವಾಸನೆ ಇದ್ದು, ಅದು ಕೇವಲ ವಯಸ್ಕ ಮತಾಧಿಕಾರ ನೀಡುವುದರಿಂದ ಕಡಿಮೆಯಾಗದು. ಏಕೆಂದರೆ ನಾವು ಬೇಡುವ ಮತದಾನ ಪದ್ಧತಿ ಕೇವಲ ಅಸ್ಪೃಶ್ಯರಿಗೆ ಮಾತ್ರ ಅಲ್ಲ ಎಲ್ಲರಿಗೂ ಲಭಿಸುವಂತಹದ್ದು. ವಯಸ್ಕ ಮತದಾನ ಪದ್ಧತಿ ಎಲ್ಲಿಯವರೆಗೆ ಜಾರಿಯಲ್ಲಿ ಇರುತ್ತದೋ ಅಲ್ಲಿಯವರೆಗೆ ಅಸ್ಪೃಶ್ಯರ ಸ್ಥಿತಿಗತಿಯಲ್ಲಿ ಯಾವುದೇ ಬದಲಾವಣೆ ಆಗದು. ಸದ್ಯದ ಮತದಾರ ಪ್ರಮಾಣಕ್ಕೆ ಹೋಲಿಸಿದರೆ ಅವರು ಅಲ್ಪಸಂಖ್ಯಾತರಾಗಿಯೇ ಉಳಿಯಲಿದ್ದಾರೆ. ಇದಲ್ಲದೇ ಉದ್ಭವಿಸುವ ಇನ್ನೊಂದು ಪ್ರಶ್ನೆ ಎಂದರೆ, ಅಸ್ಪೃಶ್ಯರ ಹಕ್ಕುಗಳು ವಯಸ್ಕ ಮತದಾನದಿಂದ ಸಂರಕ್ಷಣೆಯಾಗುವಂತಿದ್ದರೆ, ಸಿಖ್ ಮತ್ತು ಮುಸಲ್ಮಾನರ ಹಕ್ಕುಗಳನ್ನು ಕೂಡ ಅದೇ ಕಾರಣದಿಂದ ಏಕೆ ಸಂರಕ್ಷಣೆಯಾಗುವುದಿಲ್ಲ? ಸಿಖ್ ಮತ್ತು ಮುಸಲ್ಮಾನರಲ್ಲಿ ಆರ್ಥಿಕವಾಗಿ ಸಮರ್ಥರಿದ್ದಾರೆ ಅವರಲ್ಲಿ ಸಂಘಟನಾ ಶಕ್ತಿ ಇದೆ ಅಲ್ಲದೇ ನಾಗರಿಕತ್ವ ಹಕ್ಕನ್ನು ಅವರು ಪೂರ್ಣಪ್ರಮಾಣದಲ್ಲಿ ಪಡೆದು ಅನುಭವಿಸುತ್ತಿದ್ದಾರೆ. ಆದರೆ ಅಸ್ಪೃಶ್ಯರ ಸ್ಥಿತಿಗತಿ ಇದಕ್ಕೆ ತದ್ವಿರುದ್ಧ, ಆರ್ಥಿಕವಾಗಿ ಅವರ ಸ್ಥಿತಿ ಅತ್ಯಂತ ಕೆಳಮಟ್ಟದ್ದು, ಸಂಘಟನೆಯಂತೂ ಮೊದಲೇ ಇಲ್ಲ. ಅಲ್ಲದೇ ಸಾಮಾನ್ಯ ನಾಗರಿಕನ ಹಕ್ಕುಗಳು ಅವರಿಗೆ ಲಭಿಸುವುದಿಲ್ಲ ಜೊತೆಗೆ ಇತರ ಸಮಾಜದ ಕಠೋರ ವರ್ತನೆಯನ್ನು ಅವರು ಅನುಭವಿಸಬೇಕಾಗುತ್ತದೆ. ಯಾವುದೇ ನ್ಯಾಯ ಬುದ್ಧಿಯ ವ್ಯಕ್ತಿ ತನ್ನ ಎದುರು ವಿವಿಧ ಜಾತಿಗಳಿಂದ ಮಂಡಿಸಲ್ಪಡುವ ಬೇಡಿಕೆಗಳನ್ನು ಸಮಾನ ಮನಸ್ಕನಾಗಿ ವಿಚಾರ ಮಾಡಿದರೆ ಇನ್ನಿತರ ಅಲ್ಪಸಂಖ್ಯಾತರಲ್ಲಿಯೂ ಅಸ್ಪೃಶ್ಯರ ಹಕ್ಕುಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಆ ವ್ಯಕ್ತಿ ತನ್ನ ಅಭಿಪ್ರಾಯ ಮಂಡಿಸಬಹುದು. ಮಹಾತ್ಮ ಗಾಂಧಿ ಈ ವಿಚಾರ ಒಪ್ಪುವುದಿಲ್ಲ. ಏಕೆಂದರೆ ಅವರಿಗೆ ಈ ಸತ್ಯ ಮತ್ತು ನ್ಯಾಯಪರತೆ ಮನದಟ್ಟು ಆಗುವುದಿಲ್ಲ. ಅಲ್ಪಸಂಖ್ಯಾತರ ಬೇಡಿಕೆಗಳಿಗೆ ಮನ್ನಣೆ ನೀಡದಿದ್ದ ಪಕ್ಷದಲ್ಲಿ ಸಿಖ್ಖರು ಮತ್ತು ಮುಸಲ್ಮಾನರು ಯಾವ ಮಟ್ಟದಲ್ಲಿ ದೆಹಲಿ ಮೇಲೆ ಸವಾರಿ ಮಾಡುತ್ತಾರೋ ಅಂತಹ ಸವಾರಿ ಅಥವಾ ಒತ್ತಡ ತರುವ ಕೆಲಸ ಅಸ್ಪೃಶ್ಯರಿಂದ ಆಗುವುದಿಲ್ಲ ಎಂದು ಮಹಾತ್ಮ ಗಾಂಧಿ ತಾವೇ ಕಲ್ಪಿಸಿಕೊಂಡಿರುವ ಭ್ರಮೆಯಲ್ಲಿದ್ದುಕೊಂಡು ಅದೇ ಭ್ರಮೆಯಲ್ಲಿ ಅಸ್ಪೃಶ್ಯರ ಬೇಡಿಕೆಗಳನ್ನು ತಿರಸ್ಕರಿಸುವ ಧೈರ್ಯ ತೋರಿದ್ದಾರೆ. ಗಾಂಧೀಜಿ ಅವರ ರಾಷ್ಟ್ರೀಯತೆ, ಉಚ್ಚವರ್ಗದ ಹಿಂದೂಗಳ ಬಗ್ಗೆ ಇರುವ ಸ್ವಜಾತಿ ಪ್ರೀತಿಯ ಭಾವನೆಗಳು ಗೌಪ್ಯವಾಗಿ ಉಳಿದಿಲ್ಲ. ಮುಸಲ್ಮಾನ ಮತ್ತು ಸಿಖ್ಖರು ತಮ್ಮ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಸ್ಥಾನಗಳನ್ನು ಕಬಳಿಸಿದ ಬಳಿಕ ಇನ್ನುಳಿದ ಸ್ಥಾನಗಳನ್ನು ಉನ್ನತ ಹಿಂದೂ ವರ್ಗಗಳಿಗೆ ಮೀಸಲು ಇರಿಸುವ ಇರಾದೆ ಗಾಂಧೀಜಿ ಅವರಲ್ಲಿರುವ ಕಾರಣ ವಯಸ್ಕ ಮತದಾನ ಪದ್ಧತಿ ಸ್ವೀಕರಿಸುವುದಕ್ಕೆ ಸೂಚಿಸಿರುವ ಒಪ್ಪಿಗೆಯಲ್ಲಿ ಯಾವುದೇ ವಿಶೇಷವಿಲ್ಲ. ಒಂದು ವೇಳೆ ರಾಜಕೀಯ ಹಕ್ಕನ್ನು ಅನುಭವಿಸಬೇಕಾದಲ್ಲಿ ಮೀಸಲು ಪ್ರಾತಿನಿಧಿತ್ವ ಒಂದೇ ಅತ್ಯಂತ ಸರಳ ಮತ್ತು ನಿಶ್ಚಿತ ಉಪಾಯವಾಗಿದೆ. ವಯಸ್ಕ ಮತದಾನ ಪದ್ಧತಿ ಖೊಟ್ಟಿಭರವಸೆ ಮತ್ತು ಅಸ್ಪೃಶ್ಯರ ಪ್ರಗತಿಗೆ ಅಡ್ಡಿಯುಂಟು ಮಾಡುವ ತಂತ್ರವಾಗಿದ್ದು, ವಯಸ್ಕ ಮತದಾನ ಪದ್ಧತಿಯಲ್ಲಿನ ಲೋಪದೋಷಗಳು ಉಚ್ಚವರ್ಗದ

ಹಿಂದೂಗಳ ಪಾಲಿಗೆ ಲಾಭದಾಯಕವಾಗುವ ವಿಷಯ ಗಾಂಧೀಜಿ ಗಮನಕ್ಕೆ ಬಾರದೇ ಇರಲಿಕ್ಕಿಲ್ಲ. ಅಸ್ಪೃಶ್ಯರ ಕುರಿತ ತಮ್ಮ ಈ ಧೋರಣೆಯನ್ನು ಭಾರತದಲ್ಲಿದ್ದಾಗ ಸ್ಪಷ್ಟಪಡಿಸಿದ್ದರೆ ಅತ್ಯುತ್ತಮವಾಗುತ್ತಿತ್ತು. ಸ್ವತಂತ್ರ ಪ್ರಾತಿನಿಧಿತ್ವದ ಬೇಡಿಕೆಗೆ ತಮ್ಮ ವಿರೋಧ ಇದೆ ಎನ್ನುವ ಸಂಶಯ ಅಸ್ಪೃಶ್ಯರಿಗೆ ಬಾರದಂತೆ ಎಚ್ಚರ ವಹಿಸಿರುವುದು ಇನ್ನೂ ದುರ್ದೈವದ ಸಂಗತಿ. ಅಸ್ಪೃಶ್ಯರು ತಮ್ಮ ಬೇಡಿಕೆ ಮಂಡಿಸುವ ವೇಳೆ ನಾನು ಊರಿನಲ್ಲಿ ಇರಲಿಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಅಸ್ಪೃಶ್ಯರ ಬಗ್ಗೆ ತಮಗಿರುವ ಅಂತಃಕರಣವನ್ನು ಅವರು ಆ ಸಂದರ್ಭದಲ್ಲಿಯೇ ತೋರ್ಪಡಿಸಿದ್ದರೆ ಅವರ ಕೀರ್ತಿಗೆ ಇನ್ನಷ್ಟು ಮೆರಗು ಬರುತ್ತಿತ್ತು. ಒಂದು ವೇಳೆ ಗಾಂಧೀಜಿ ಅವರು ಈ ಸರಳ ಮಾರ್ಗ ಅನುಸರಿಸಿದ್ದರೆ ನಮ್ಮ ಬೇಡಿಕೆಗೆ ಕಾಂಗ್ರೆಸ್ಸಿನ ಸಮ್ಮತಿ ಪಡೆಯುವುದಕ್ಕೆ ಅಷ್ಟಿಷ್ಟು ಪ್ರಯತ್ನ ಮಾಡುತ್ತಿದ್ದರು.

ಇನ್ನೊಂದು ಆಶ್ಚರ್ಯಕರ ಘಟನೆಯತ್ತ ಜನರ ಲಕ್ಷ್ಯ ಸೆಳೆಯಬೇಕಾದ ಅನಿವಾರ್ಯತೆ ಇದೆ. ಯಾವ ರೀತಿ ಮುಸಲ್ಮಾನ–ಸಿಖ್ಖರ ಸ್ವತಂತ್ರ ಪ್ರಾತಿನಿಧಿತ್ವ ಬೇಡಿಕೆ ಪರಿಶೀಲಿಸುವ ಕಾಂಗ್ರೆಸ್ಸಿನ ಉದ್ದೇಶವಿತ್ತೋ ಅದೇ ರೀತಿ ಈ ಬೇಡಿಕೆಗೆ ಮಾನ್ಯತೆ ನೀಡುವುದಕ್ಕಾಗಿ ಕಾಂಗ್ರೆಸ್ ತನ್ನದೇ ಆದ ಲೆಕ್ಕಾಚಾರವನ್ನು ಮಾಡಿಕೊಂಡು ಬಂದಿತ್ತು. ಅಲ್ಪಸಂಖ್ಯಾತರ ಖಾಸಗಿ ಕಮಿಟಿ ಅಧ್ಯಕ್ಷರಾಗಿ ಮತ್ತು ಕಾಂಗ್ರೆಸ್ ಪ್ರತಿನಿಧಿಯಾಗಿ ಎರಡೂ ಹುದ್ದೆಗಳಲ್ಲಿದ್ದ ಅವರಿಗೆ ಮುಸಲ್ಮಾನರೊಂದಿಗೆ ಸಂಧಾನ ಮಾಡಿಕೊಳ್ಳುವ ಕೆಲಸವನ್ನು ಗಾಂಧೀಜಿ ಅವರಿಗೆ ವಹಿಸಲಾಗಿತ್ತು. ನನ್ನ ಪ್ರಯತ್ನ ಫಲ ನೀಡುತ್ತಿಲ್ಲ ಎಂದು ಅವರು ಪ್ರತಿದಿನ ಕಮಿಟಿಯ ಸದಸ್ಯರಿಗೆ ವಿವರಿಸುತ್ತಿದ್ದರು. ಆದರೆ ವೈಫಲ್ಯದ ಕಾರಣಗಳನ್ನು ಅವರು ಸ್ಪಷ್ಟಪಡಿಸದ ಕಾರಣ, ಮುಸಲ್ಮಾನರು ೧೪ ಬೇಡಿಕೆಗಳಿಗೆ ಗಟ್ಟಿಯಾಗಿ ಅಂಟಿಕೊಂಡಿದ್ದು ಅಲ್ಲದೇ ಕಾಂಗ್ರೆಸ್ ಧೋರಣೆಯತ್ತ ಮಹಾತ್ಮ ಗಾಂಧೀಜಿ ಅಂಟಿಕೊಂಡಿದ್ದರಿಂದ ಸಂಧಾನ ಏರ್ಪಡುವುದು ಸಾಧ್ಯವಾಗಲಿಲ್ಲ ಎಂದು ಸದಸ್ಯರು ತಿಳಿದುಕೊಂಡಿದ್ದರು. ಮುಸ್ಲಿಂರ ೧೪ ಬೇಡಿಕೆಗಳಿಗೆ ಗಾಂಧೀಜಿ ಕೂಡ ಮಾನ್ಯತೆ ನೀಡಿದ್ದು ಅಲ್ಲದೇ ಮತಕ್ಷೇತ್ರ ಸಂಯುಕ್ತವಾಗಿರಬೇಕೋ ಅಥವಾ ಸ್ವತಂತ್ರ ಮತಕ್ಷೇತ್ರವಾಗಿರಬೇಕೋ ಎನ್ನುವ ಪ್ರಶ್ನೆಯನ್ನು ಮುಸಲ್ಮಾನರಲ್ಲಿ ಮತಾಭಿಪ್ರಾಯದ ಮುಖಾಂತರ ಪರಿಹರಿಸಬೇಕು ಎಂದು ಸೂಚಿಸಿರುವ ವಿಚಾರಗಳು ಸೇರಿದಂತೆ ಇನ್ನಿತರ ಸಂಗತಿಗಳು ಈಗ ಬಹಿರಂಗವಾಗಿವೆ. ಕಾಂಗ್ರೆಸ್ಸಿನ ರಾಜಕೀಯ ಬೇಡಿಕೆಗಳಿಗೆ ಮುಸಲ್ಮಾನರು ಸಂಪೂರ್ಣ ಸಮ್ಮತಿ ನೀಡಬೇಕು ಮತ್ತು ಇತರ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಸ್ತಕ್ಷೇಪ ಮಾಡಬಾರದು ಎಂದು ಮಹಾತ್ಮ ಗಾಂಧಿ ಷರತ್ತು ಹಾಕಿದ್ದರು. ಈ ಷರತ್ತಿನ ಕಾರಣವೇ ಒಪ್ಪಂದ ಮುರಿದುಬಿತ್ತು.

ಮುಸಲ್ಮಾನರೊಂದಿಗೆ ಒಪ್ಪಂದದ ಕುರಿತು ಮಾತುಕತೆ ನಡೆಸುವ ಸಂದರ್ಭದಲ್ಲಿ ಗಾಂಧೀಜಿ ಕಾಂಗ್ರೆಸ್ಸಿನ ಪ್ರಣಾಳಿಕೆಯನ್ನು ತಮ್ಮಿಷ್ಟದಂತೆ ಬದಲಿಸಬಹುದು, ಅಥವಾ ಅದನ್ನು ಗಾಳಿಗೆ ತೂರಬಹುದು. ಆದರೆ ಅಸ್ಪೃಶ್ಯರು ಇಲ್ಲವೇ ಇತರ ಅಲ್ಪಸಂಖ್ಯಾತರೊಂದಿಗೆ ಒಪ್ಪಂದ ಮಾಡಿಕೊಳ್ಳುವುದಕ್ಕೆ ಹೊರಡುತ್ತಿದ್ದಂತೆಯೇ ಅದೇ ಪ್ರಣಾಳಿಕೆಯನ್ನು ಅವರ ಮುಖದ ಮೇಲೆ ಎಸೆಯಬೇಕೆನ್ನುವಂತಹ ಈ ಎಲ್ಲ ಸಂಗತಿಗಳು ಆಕ್ರೋಶಕ್ಕೆ ಕಾರಣವಾಗುವಂತಹುಗಳು, ಆದರೆ ಈ ಆಕ್ರೋಶಕ್ಕೆ ಮಾರ್ಗ ಕಂಡುಕೊಳ್ಳುವುದಕ್ಕಾಗಿ ತಮ್ಮ ವೃತ್ತಪತ್ರಿಕೆಯಲ್ಲಿ ನನ್ನ ಈ ಪತ್ರಕ್ಕೆ ಸ್ಥಳಾವಕಾಶ ನೀಡಿರಿ ಎಂದು ನಾವು ಹೇಳುತ್ತಿಲ್ಲ. ಆದರೆ ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರ ದೊರೆಯಲಿ ಎನ್ನುವ ಉದ್ದೇಶದಿಂದ ನಾವು ನಡೆಸಿರುವ ಪ್ರಯತ್ನಕ್ಕೆ ಗಾಂಧೀಜಿ ಅಡೆತಡೆ ಒಡ್ಡುವುದಕ್ಕೆ ಯಾವ ಯಾವ ಮಾರ್ಗಗಳನ್ನು ಅವಲಂಬಿಸುತ್ತಿದ್ದಾರೆ ಎನ್ನುವುದು ಎಲ್ಲರಿಗೂ ತಿಳಿಯಲಿ ಎನ್ನುವ ಉದ್ದೇಶದಿಂದ ಈ ಪತ್ರಕ್ಕೆ ನಿಮ್ಮ ಪತ್ರಿಕೆಯೇ ಪ್ರಚಾರ ನೀಡಬೇಕು ಎಂದು ನಮ್ಮ

ವಿನಂತಿ. ಈ ರೀತಿ ಮಾಡುತ್ತಿರುವುದು ನಮಗೂ ದುಃಖದ ಸಂಗತಿ. ಆದರೆ ಅಸ್ಪೃಶ್ಯರ ಹಕ್ಕುಗಳಿಗೆ ಆಗುತ್ತಿರುವ ಧಕ್ಕೆಯನ್ನು ತಡೆಯುವುದಕ್ಕಾಗಿ ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ ಅಸ್ಪೃಶ್ಯರ ಪ್ರತಿನಿಧಿಯಾಗಿ ನಾವು ನಮ್ಮ ಕರ್ತವ್ಯ ನಿರ್ವಹಿಸುವಲ್ಲಿ ತಪ್ಪಿದ್ದೇವೆಂದು ಆಗುತ್ತದೆ.

ಅಲ್ಪಸಂಖ್ಯಾತರ ಉಪಸಮಿತಿಯ ಖಾಸಗಿ ಕಮಿಟಿಯ ಕೆಲಸಕ್ಕೆ ಚಾಲನೆ ಸಿಗಬೇಕೆಂದು ಉಪಸಮಿತಿಯನ್ನು ಅಮಾನತ್ತಿನಲ್ಲಿ ಇಡಬೇಕು ಎಂದು ಗಾಂಧೀಜಿ ಅವರು ತಂದಿದ್ದ ಠರಾವಿಗೆ ಅಸ್ಪೃಶ್ಯರ ಪರವಾಗಿ ಆಕ್ಷೇಪ ವ್ಯಕ್ತಪಡಿಸಿದ್ದೆವು. ನಮಗೆ ಸಂಬಂಧಿಸಿದ ವಿಚಾರದಲ್ಲಿ ಕಾಂಗ್ರೆಸ್ಸಿನ ಧೋರಣೆ ಏನೆಂದು ಗೊತ್ತಿದ್ದ ಕಾರಣ ಖಾಸಗಿ ಸಮಿತಿಯಲ್ಲಿ ನಾವು ಪಾಲ್ಗೊಂಡಿದ್ದರೂ ಯಾವುದೇ ತೀರ್ಮಾನ ಹೊರಬೀಳುವುದಿಲ್ಲವೆಂದು ಅರಿತೇ ನಾವು ವಿರೋಧಿಸಬೇಕಾಯಿತು. ಆದರೆ ಇತರ ಅಲ್ಪಸಂಖ್ಯಾತರು ಅಸ್ಪೃಶ್ಯರ ಬೇಡಿಕೆಗಳಿಗೆ ಮಾನ್ಯತೆ ನೀಡಿದರೆ ಅದಕ್ಕೆ ಮಾನ್ಯತೆ ನೀಡುವ ಪ್ರಣಾಳಿಕೆ ನನ್ನ ಬಳಿ ಇದೆ ಎಂದು ಗಾಂಧೀಜಿ ಭರವಸೆ ನೀಡಿದ ಬಳಿಕ ಸಮಿತಿಯ ಕಾರ್ಯಕಲಾಪಗಳಲ್ಲಿ ಪಾಲ್ಗೊಳ್ಳುವುದಕ್ಕೆ ಸಮ್ಮತಿ ನೀಡಿದ್ದೆವು. ಆದರೆ ಕಮಿಟಿಯಲ್ಲಿ ಮಾತ್ರ ನಮ್ಮ ಬೇಡಿಕೆಗಳಿಗೆ ಸಂಬಂಧಿಸಿದಂತೆ ಗಾಂಧೀಜಿ ತಾವು ಬಳಸಿದ ಪ್ರತಿಯೊಂದು ಶಬ್ದಗಳಲ್ಲಿ ವಿರೋಧ ವ್ಯಕ್ತಪಡಿಸಿದ್ದರು. ಅವರ ಈ ವಿರೋಧವನ್ನು ಈ ಹಂತದವರೆಗೆ ಒಯ್ಯುತ್ತಾರೆ ಎಂಬ ಶಂಕೆ ನಮ್ಮಲ್ಲಿ ಇರಲಿಲ್ಲ. ನಿಮ್ಮ ಹದಿನಾಲ್ಕು ವಿಷಯಗಳಿಗೆ ಮಾನ್ಯತೆ ನೀಡಬೇಕಾದರೆ ಅಸ್ಪೃಶ್ಯರು ಮತ್ತು ಇತರ ಅಲ್ಪಸಂಖ್ಯಾತರನ್ನು ವಿರೋಧಿಸಿ ಎಂದು ಮುಸ್ಲಿಂ ಸ್ನೇಹಿತರ ಎದುರು ಷರತ್ತು ವಿಧಿಸಿದ್ದರು ಎಂಬ ಖಾತ್ರಿದಾಯಕ ವಿಷಯ ನಮಗೆ ತಿಳಿದುಬಂದಿತ್ತು. ಅಸ್ಪೃಶ್ಯರೊಂದಿಗೆ ಗಾಂಧೀಜಿ ಎಂದಿಗೂ ಸ್ನೇಹಪರವಾಗಿರಲಿಲ್ಲ ಆದರೆ ಅವರಲ್ಲಿ ಪ್ರಾಮಾಣಿಕ ಶತ್ರುತ್ವ ಕೂಡ ಕಾಣಸಿಗಲಿಲ್ಲ. ಅಸ್ಪೃಶ್ಯರ ಬೇಡಿಕೆಗಳಿಗೆ ಇತರ ಅಲ್ಪಸಂಖ್ಯಾತರ ಸಮಾಜದವರು ಮಾನ್ಯತೆ ನೀಡಿದರೆ ನಾನೂ ಕೂಡ ಅದಕ್ಕೆ ಮಾನ್ಯತೆ ನೀಡುತ್ತೇನೆ ಎಂದು ಬಹಿರಂಗವಾಗಿ ಹೇಳುವುದು ಆಮೇಲೆ ಪ್ರತ್ಯೇಕವಾಗಿ ಇತರ ಸಮಾಜಗಳ ಬಳಿ ಅಸ್ಪೃಶ್ಯರ ಬೇಡಿಕೆಗಳಿಗೆ ಸಮ್ಮತಿ ಸೂಚಿಸಬೇಡಿ ಎಂದು ಅವರೊಂದಿಗೆ ಮಾತುಕತೆಯ ಮೂಲಕ ಆಮಿಷ ಒಡ್ಡುವುದನ್ನು ಮಾಡಿದರು. ಇಂತಹದ್ದೊಂದು ಕೇವಲ ಮಹಾತ್ಮನಂತಹವರಿಗೆ ಮತ್ತು ದುರಾಗ್ರಹ ಪೀಡಿತ ಅಸ್ಪೃಶ್ಯ ವಿರೋಧಿಗೆ ಮಾತ್ರ ಶೋಭಿಸಬಲ್ಲುದು. ಗಾಂಧೀಜಿಯ ಈ ಧೋರಣೆಯಿಂದ ನಾವಂತೂ ನಿರಾಸೆಯಾಗಿಲ್ಲ ಏಕೆಂದರೆ ನಮ್ಮ ಬೇಡಿಕೆಗಳು ನ್ಯಾಯಯುತವಾಗಿವೆ ಮತ್ತು ಸಪ್ರು ಮತ್ತು ಪೇಟ್ರೋನಂತಹ ವ್ಯಕ್ತಿಗಳಲ್ಲಿನ ನ್ಯಾಯಪರತೆ ಬಗ್ಗೆ ನಮಗೆ ವಿಶ್ವಾಸ ಇದೆ.[೧]

ಪ್ರಧಾನಮಂತ್ರಿ ಅವರು ತೆಗೆದುಕೊಳ್ಳುವ ತೀರ್ಮಾನಕ್ಕೆ ಮಾನ್ಯತೆ ನೀಡುತ್ತೇನೆ ಎಂದು ಗಾಂಧೀಜಿ ತಮ್ಮ ಸಮ್ಮತಿ ಸೂಚಿಸಿದ್ದರು. ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳದ ಕಾರಣ ಡಿಸೆಂಬರ್ ೧, ೧೯೩೧ರಂದು ಅವರ ಸಮ್ಮತಿಗೆ ಏನೂ ಅರ್ಥ ಉಳಿಯಲಿಲ್ಲ. ಹೀಗಿದ್ದರೂ ಕೂಡ ಅಸ್ಪೃಶ್ಯರ ಬೇಡಿಕೆಗಳಿಗೆ ಮಾನ್ಯತೆ ನೀಡಲೇಬಾರದು ಎನ್ನುವ ಉದ್ದೇಶದಿಂದ ಗಾಂಧೀಜಿ ಅವರು ಭಾರತದ ಸ್ಟೇಟ್ ಸೆಕ್ರೆಟರಿ ಸರ್ ಸ್ಯಾಮುಯೆಲ್ ಹೋಅರ್ ಅವರೊಂದಿಗೆ ಪತ್ರ ವ್ಯವಹಾರ ಮಾಡಿದ್ದರು.

### ಹೋಅರ್ ಅವರಿಗೆ ಗಾಂಧೀಜಿ ಬರೆದ ಪತ್ರ

ಯರವಾಡಾ ಜೈಲಿನಿಂದ ಮಾರ್ಚ್ ೧೧, ೧೯೩೨ರಂದು ಸರ್ ಸ್ಯಾಮುಯೆಲ್ ಹೋಅರ್ ಅವರಿಗೆ ಈ ಪತ್ರ ಬರೆದಿದ್ದರು.

---

೧. ಜನತಾ: ನವೆಂಬರ್ ೧೪, ೧೯೩೧

"ಆತ್ಮೀಯ ಸರ್ ಸ್ಯಾಮುಯೆಲ್

ಅಲ್ಪಸಂಖ್ಯಾತರಿಗೆ ನೀಡಬೇಕಿರುವ ಹಕ್ಕುಗಳ ಬೇಡಿಕೆಯನ್ನು ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಮಂಡಿಸಿರುವುದು ತಮಗೆ ನೆನಪಿರಬೇಕು. ಈ ಸಂದರ್ಭದಲ್ಲಿ ನಾನು ಮಾಡಿದ ಭಾಷಣದ ಕೊನೆಯಲ್ಲಿ ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರವನ್ನು ನೀಡುವುದಕ್ಕೆ ನನ್ನ ಜೀವ ಹೋಗುವವರೆಗೆ ವಿರೋಧಿಸುತ್ತೇನೆ ಎಂದು ಹೇಳಿದ್ದೆ. ವಾದ ವಿವಾದದ ಭರಾಟೆಯಲ್ಲಿ ಅಥವಾ ಮಾತಿನ ಲಹರಿಯಲ್ಲಿ ನಾನು ಈ ಮಾತು ಹೇಳಿಲ್ಲ. ಈ ಹೇಳಿಕೆಯನ್ನು ನಾನು ಗಾಂಭೀರ್ಯದಿಂದ ಮತ್ತು ನನ್ನ ಚಿಂತನಾಶೈಲಿಗೆ ನಿದರ್ಶನ ಎಂದು ಅರಿತುಕೊಂಡು ಹೇಳಿದ್ದೆ. ಈ ಹೇಳಿಕೆಯನ್ನು ನಾನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಭಾರತಕ್ಕೆ ಮರಳಿದ ಬಳಿಕ ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರ ನೀಡುವುದನ್ನು ವಿರೋಧಿಸುವುದಕ್ಕೆ ಜನಮತ ಸಿದ್ಧಪಡಿಸುವುದು ನನ್ನ ಇಚ್ಛೆಯಾಗಿತ್ತು. ಆದರೆ ಆ ರೀತಿ ನಡೆಯಲೇ ಇಲ್ಲ. ಅಲ್ಪಸಂಖ್ಯಾತರ ಸ್ವತಂತ್ರ ಮತಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರದಲ್ಲಿ ಬ್ರಿಟಿಷ್ ಸರ್ಕಾರ ಶೀಘ್ರವೇ ತನ್ನ ತೀರ್ಮಾನ ಪ್ರಕಟಿಸಲಿದೆ ಎನ್ನುವ ಸಂಗತಿ ನನಗೆ ಓದುವುದಕ್ಕೆ ಅನುಮತಿಸಿದ ವರ್ತಮಾನ ಪತ್ರಿಕೆಗಳಿಂದ ತಿಳಿದುಬಂದಿದೆ. ಒಂದು ವೇಳೆ ಈ ತೀರ್ಮಾನದ ಮುಖಾಂತರ ಸ್ವತಂತ್ರ ಮತಕ್ಷೇತ್ರ ಸ್ಥಾಪಿಸಿದ್ದೇ ಆದಲ್ಲಿ ಮತ್ತು ಆ ತೀರ್ಮಾನ ಪ್ರಕಟಗೊಂಡ ಬಳಿಕ ನಾನು ಯಾವ ನಿರ್ಧಾರಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನಾನು ಮೊದಲು ವಿಚಾರ ಮಾಡಬೇಕಿದೆ. ಆದರೆ ಈಗ ಅನ್ನಿಸಿರುವುದು ಏನೆಂದರೆ ನನ್ನ ನಿರ್ಧಾರವನ್ನು ಸರ್ಕಾರಕ್ಕೆ ಮುಂಚಿತವಾಗಿ ತಿಳಿಸಿ ಆ ನನ್ನ ಪ್ರತಿಜ್ಞೆಯನ್ನು ಕೃತಿಯಲ್ಲಿ ತರುವುದು ಸರಿಯಾಗಲಿಕ್ಕಿಲ್ಲ. ಅಲ್ಲದೇ ನನ್ನ ಹೇಳಿಕೆಯ ಕುರಿತಂತೆ ನನಗೆ ಇರುವ ಪ್ರಾಮುಖ್ಯತೆ ಬೇರೆಯವರಿಗೆ ಅದು ಪ್ರಮುಖವಾಗಲಿಕ್ಕಿಲ್ಲ ಎನ್ನುವುದು ಸಹಜ.

### ನಾನೇಕೆ ಸ್ವತಂತ್ರ ಮತಕ್ಷೇತ್ರದ ವಿರೋಧಿ?

ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರ ಇರಬೇಕು ಎನ್ನುವ ಪ್ರಸ್ತಾಪಕ್ಕೆ ನನ್ನ ವಿರೋಧ ಏಕೆ ಎನ್ನುವುದನ್ನು ಇಲ್ಲಿ ಮರುಪರಿಶೀಲಿಸುವುದಕ್ಕಾಗಿ ಮತ್ತೇ ಹೇಳುವ ಅಗತ್ಯವಿಲ್ಲ. ನನಗೆ ನಾನೇ ಒಬ್ಬ ಅಸ್ಪೃಶ್ಯ ಎಂದು ಭಾವಿಸುತ್ತೇನೆ. ಬೇರೆಯವರ ವಿಚಾರವಾಗಲಿ ಅಥವಾ ಅವರ ಅಭಿಪ್ರಾಯಗಳು ಬೇರೆನೇ ಇರಬಹುದು. ಕಾನೂನು ಮಂಡಳಿಯಲ್ಲಿ ಅವರ ಪ್ರತಿನಿಧಿ ಇರಬೇಕು ಎನ್ನುವುದಕ್ಕೆ ನನ್ನ ವಿರೋಧವಿಲ್ಲ. ಬೇರೆ ವರ್ಗದವರ ಮತಾಧಿಕಾರವನ್ನು ಎಷ್ಟು ಬೇಕಾದರೂ ಕಡಿಮೆ ಮಾಡಿದರೂ ನನಗೆ ಚಿಂತೆ ಇಲ್ಲ. ಆದರೆ ಮತದಾನಕ್ಕಾಗಿ ಶಿಕ್ಷಣ, ಚರಾಸ್ತಿ ಇತ್ಯಾದಿಗಳು ಅತ್ಯಗತ್ಯ ಎನ್ನುವ ಷರತ್ತನ್ನು ಅಸ್ಪೃಶ್ಯರಿಗೆ ಅನ್ವಯ ಆಗಬಾರದು, ಅವರಲ್ಲಿನ ಪ್ರತಿಯೊಬ್ಬ ಪುರುಷ–ಮಹಿಳೆಯರ ಹೆಸರುಗಳು ಮತದಾರ ಪಟ್ಟಿಯಲ್ಲಿ ಸೇರಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ಆದರೆ ಅವರಿಗೆ ಕೇವಲ ರಾಜಕಾರಣವನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಪ್ರತ್ಯೇಕ ಮತಕ್ಷೇತ್ರವನ್ನು ನೀಡಿದರೆ ಅಸ್ಪೃಶ್ಯರಿಗೆ ಭರಿಸಲಾಗದಷ್ಟು ಹಾನಿಯಾಗುತ್ತದೆ ಎನ್ನುವುದನ್ನು ಸರಿಯಾಗಿ ಅರ್ಥೈಸಿಕೊಳ್ಳುವುದಕ್ಕೆ ಸ್ಪೃಶ್ಯ ಹಿಂದೂ ಸಮಾಜದೊಂದಿಗೆ ಅಸ್ಪೃಶ್ಯ ಸಮಾಜ ಯಾವ ರೀತಿ ಸಮ್ಮಿಳಿತವಾಗಿದೆ ಮತ್ತು ಯಾವ ಪ್ರಮಾಣದಲ್ಲಿ ಸ್ಪೃಶ್ಯ ಹಿಂದೂ ಸಮಾಜವನ್ನು ಅವಲಂಬಿಸಿದೆ ಎನ್ನುವುದರ ಸ್ಪಷ್ಟ ಕಲ್ಪನೆ ಅತ್ಯಗತ್ಯವಾಗಿದೆ. ಹಿಂದೂ ಸಮಾಜಕ್ಕೆ ಸಂಬಂಧಿಸಿದಂತೆ ಮಾತನಾಡಬೇಕೆಂದರೆ ಸ್ವತಂತ್ರ ಮತಕ್ಷೇತ್ರದಿಂದ ಆ ಸಮಾಜವನ್ನು ಜೀವಂತವಿದ್ದಾಗಲೇ ಛಿದ್ರಛಿದ್ರ ಮಾಡಿದಂತೆ ಆಗುತ್ತದೆ ಮತ್ತು ಇದರಿಂದ ಒಟ್ಟು ಹಿಂದೂಗಳಲ್ಲಿ ಒಡಕುಂಟಾಗುತ್ತದೆ.

ನನ್ನ ದೃಷ್ಟಿಯಲ್ಲಿ ದಲಿತ ಜನರ ಸಮಸ್ಯೆಗಳು ನೈತಿಕ ಹಾಗೂ ಧಾರ್ಮಿಕ ನೆಲೆಯಲ್ಲಿವೆ. ಈ ಸಮಸ್ಯೆಗಳನ್ನು ರಾಜಕಾರಣಕ್ಕೆ ಜೋಡಿಸುವುದು ಸರಿಯಲ್ಲ. ನೈತಿಕ ಹಾಗೂ ಧಾರ್ಮಿಕ ಮಹತ್ವದ

ಎದುರು ರಾಜಕಾರಣಕ್ಕೆ ಕವಡೆ ಕಾಸಿನ ಬೆಲೆಯೂ ಇಲ್ಲ.

**ಆಮರಣ ಉಪವಾಸ ಸತ್ಯಾಗ್ರಹಕ್ಕೆ ಸಿದ್ಧ**

ನಾನು ಚಿಕ್ಕವನಿದ್ದಾಗಿನಿಂದ ಈ ವರ್ಗದ ಶೋಚನೀಯ ಸ್ಥಿತಿಗತಿ ನೋಡಿ ಕನಿಕರ ಪಟ್ಟಿದ್ದೆ ಅನೇಕ ಬಾರಿ ಪ್ರಾಣಾರ್ಪಣೆ ಮಾಡುವುದಕ್ಕೆ ಸಿದ್ಧನಾಗಿದ್ದೆ ಎನ್ನುವ ವಿಷಯ ತಮ್ಮ ಗಮನಕ್ಕೆ ಬಂದರೆ ಮಾತ್ರ ಅಸ್ಪೃಶ್ಯರ ವಿಷಯದಲ್ಲಿ ನನ್ನ ಭಾವನೆಗಳು ಏನು ಅನ್ನುವುದು ಅರ್ಥವಾದೀತು. ಈ ವಿಷಯವನ್ನು ಹೆಮ್ಮೆಯಿಂದ ಹೇಳುತ್ತೇನೆ ಎನ್ನುವುದು ಅಲ್ಲ. ಶತಶತಮಾನಗಳಿಂದ ಹಿಂದೂ ಸಮಾಜದ ಕೈಯಲ್ಲಿ ಈ ಅಸ್ಪೃಶ್ಯ ವರ್ಗ ಯಾವ ರೀತಿಯ ಅಪಮಾನ ಅನುಭವಿಸಿದೆ ಎಂದರೆ ಇದನ್ನು ಸರಿಪಡಿಸುವುದಕ್ಕೆ ಇನ್ನು ಮುಂದೆ ಹಿಂದೂ ಸಮಾಜ ಯಾವುದೇ ಪ್ರಾಯಶ್ಚಿತ ಕರ್ಮ ಮಾಡಿಕೊಂಡರೂ ಮಾಡಿದ ಅಪಮಾನಗಳನ್ನು ತೊಡೆದುಹಾಕಲಾರದು. ಆದರೆ ಸ್ವತಂತ್ರ ಮತಕ್ಷೇತ್ರ ನಿರ್ಮಿಸುವುದರಿಂದ ಮರಣಪ್ರಾಯವಾಗಿದ್ದಂತಹ ಅಪಮಾನದ ಸ್ಥಿತಿಗತಿಯಲ್ಲಿ ಯಾವುದೇ ಸುಧಾರಣೆ ಆಗದು ಮತ್ತು ಅದೇ ರೀತಿ ಈ ವಿಷಯದಲ್ಲಿ ಹಿಂದೂ ಸಮಾಜ ಮಾಡಿದ ಅಪಕಾರಗಳಿಗೆ ಪರಿಹಾರವನ್ನಂತೂ ಒದಗಿಸಲಾರವು. ಈ ಕಾರಣಕ್ಕಾಗಿ ಬ್ರಿಟಿಷ್ ಸರ್ಕಾರಕ್ಕೆ ನನ್ನ ಕಳಕಳಿಯ ವಿನಂತಿ ಏನೆಂದರೆ ಒಂದು ವೇಳೆ ಅಸ್ಪೃಶ್ಯರ ಸಲುವಾಗಿ ಸ್ವತಂತ್ರ ಮತಕ್ಷೇತ್ರ ಸ್ಥಾಪಿಸುವುದಕ್ಕೆ ಅನುವು ಮಾಡಿಕೊಟ್ಟಲ್ಲಿ ಅದರ ವಿರುದ್ಧ ನಾನು ಆಮರಣ ಉಪವಾಸ ಸತ್ಯಾಗ್ರಹಕ್ಕೆ ಕುಳಿತುಕೊಳ್ಳಬೇಕಾಗುತ್ತದೆ.

ಜೈಲಿನಲ್ಲಿ ಕೈದಿಯಾಗಿದ್ದುಕೊಂಡು ಇಂತಹ ಮಾತುಗಳನ್ನು ಆಡುತ್ತಿದ್ದರೆ ಅದು ಸರ್ಕಾರವನ್ನು ಒತ್ತಡಕ್ಕೆ ಸಿಲುಕಿಸುವುದರಿಂದ ಅದರ ಕಾರ್ಯಕಲಾಪಗಳಲ್ಲಿ ಅಡೆತಡೆ ತಂದಂತೆ ಆಗುತ್ತದೆ ಎನ್ನುವುದು ನನಗೆ ಅರ್ಥವಾಗುತ್ತದೆ. ಇದು ನನಗೆ ದುಃಖ ತರುವ ಸಂಗತಿ. ಅಲ್ಲದೇ ರಾಜಕೀಯ ಕ್ಷೇತ್ರದಲ್ಲಿ ನನಗೆ ಇರುವ ಉನ್ನತ ಸ್ಥಾನಮಾನವನ್ನು ಗಮನದಲ್ಲಿರಿಸಿಕೊಂಡೂ ಉಪವಾಸ ಸತ್ಯಾಗ್ರಹದ ಮಾತುಗಳನ್ನು ಆಡುವುದು ಎಂದರೆ ಇದು ನನ್ನ ಹುಚ್ಚುತನದ ಪರಮಾವಧಿ ಎಂದು ಅನೇಕರಿಗೆ ಅನ್ನಿಸದೇ ಇರಲಾರದು. ಈ ರೀತಿ ಮಾಡುವುದು ಅನುಚಿತ ಎಂದು ಅವರು ಅನಿಸಿಕೆ ವ್ಯಕ್ತಪಡಿಸಬಹುದು. ಉಪವಾಸ ಸತ್ಯಾಗ್ರಹ ಮಾಡುವ ನನ್ನ ತೀರ್ಮಾನ, ನನ್ನ ಪದ್ಧತಿಯಲ್ಲಿ ಕೂಡ ಒಂದು ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ನಾನೊಬ್ಬ ಅತ್ಯುತ್ತಮ ಬುದ್ಧಿಮತ್ತೆ ಇರುವ ವ್ಯಕ್ತಿ ಎಂಬ ಖ್ಯಾತಿ ನನಗೆ ಇದ್ದರೂ ಅಂತಹ ಖ್ಯಾತಿಯನ್ನು ಕಳೆದುಕೊಂಡರೂ ಚಿಂತೆ ಇಲ್ಲ. ಇದೀಗ ಈ ನನ್ನ ದೃಷ್ಟಿಕೋನ, ಅಭಿಪ್ರಾಯವನ್ನು ಗಮನದಲ್ಲಿ ಇರಿಸಿಕೊಂಡು ಜೈಲಿನಿಂದ ಬಿಡುಗಡೆ ಮಾಡಿದರೂ ಉಪವಾಸ ಸತ್ಯಾಗ್ರಹದ ಪ್ರತಿಜ್ಞೆ ಹಿಂದೆಗೆದುಕೊಳ್ಳಲಾರೆ. ಅಸ್ಪೃಶ್ಯರಿಗಾಗಿ ಸ್ವತಂತ್ರ ಮತಕ್ಷೇತ್ರ ಸ್ಥಾಪಿಸುವುದಕ್ಕೆ ಸರ್ಕಾರ ಇನ್ನೂ ತೀರ್ಮಾನಿಸದ ಕಾರಣ ಅಂತಹ ಮತಕ್ಷೇತ್ರ ಅಸ್ತಿತ್ವಕ್ಕೆ ಬಾರದು ಮತ್ತು ನನಗೆ ಈಗಿರುವ ಆತಂಕ ಸುಳ್ಳು ಎನ್ನುವುದು ನನ್ನ ಆಶಾಭಾವನೆಯಾಗಿದೆ.

ನಿಮ್ಮೊಂದಿಗೆ ನಾನು ಆರಂಭಿಸಿರುವ ಈ ಪತ್ರವ್ಯವಹಾರವನ್ನು ನಾನಂತೂ ಗೌಪ್ಯವಾಗಿ ಇರಿಸಿದ್ದೇನೆ ಎಂದು ನಾನು ಪ್ರತ್ಯೇಕವಾಗಿ ಸ್ಪಷ್ಟಪಡಿಸಬೇಕಾದ ಅಗತ್ಯವಿಲ್ಲ. ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಮಹಾದೇವ ದೇಸಾಯಿ ಅವರು ನನ್ನೊಂದಿಗೆ ಇರುವುದಕ್ಕೆ ಮಾತ್ರ ಇಲ್ಲಿಗೆ ಆಗಮಿಸಿದ್ದು ಅವರಿಗೆ ಮಾತ್ರ ಈ ಪತ್ರ ವ್ಯವಹಾರದ ಮಾಹಿತಿ ಇದೆ. ನೀವು ಹೇಳಿದ ಪ್ರಕಾರ ಆಯಾ ಸಮಯದಲ್ಲಿ ಮಾತ್ರ ಈ ಪತ್ರಗಳನ್ನು ಉಪಯೋಗಿಸುತ್ತೇನೆ.

**ಇಂತಿ ನಿಮ್ಮ**

**(ಸಹಿ) ಎಂ.ಕೆ. ಗಾಂಧಿ**[೧].

ಸರ್ ಸ್ಯಾಮುಯೆಲ್ ಹೋಅರ್ ಅವರು ಏಪ್ರಿಲ್ ೧೩, ೧೯೩೨ರಂದು ಗಾಂಧೀಜಿ ಅವರ ಪತ್ರಕ್ಕೆ ಈ ರೀತಿ ಉತ್ತರಿಸಿದ್ದಾರೆ.

**ಆತ್ಮೀಯ ಶ್ರೀ ಗಾಂಧಿ ಅವರಿಗೆ,**

ಮಾರ್ಚ್ ೧೧ರಂದು ತಾವು ಬರೆದಿರುವ ಪತ್ರಕ್ಕೆ ಉತ್ತರವಾಗಿ ನಾನು ಈ ಪತ್ರ ಬರೆಯುತ್ತಿದ್ದೇನೆ. ಮೊಟ್ಟಮೊದಲು ನನ್ನ ಅನಿಸಿಕೆ ಏನೆಂದರೆ, ಅಸ್ಪೃಶ್ಯರಿಗಾಗಿ ಸ್ವತಂತ್ರ ಮತಕ್ಷೇತ್ರ ಹುಟ್ಟು ಹಾಕುವ ಸಂಬಂಧ ನಿಮ್ಮ ಉತ್ಕಟ ಭಾವನೆಗಳ ಬಗ್ಗೆ ನನಗೆ ಪೂರ್ಣ ಅರಿವು ಇದೆ. ಇದೀಗ ನಾನು ಹೇಳುವುದು ಇಷ್ಟೇ, ಈ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲ ವಿಚಾರ, ಅನಿಸಿಕೆಗಳನ್ನು ನಿರ್ಣಯ ತೆಗೆದುಕೊಳ್ಳುವ ಸಂದರ್ಭದಲ್ಲಿ ಗಣನೆಗೆ ತೆಗೆದುಕೊಳ್ಳಲಾಗುವುದು. ನಿಮಗೆ ಗೊತ್ತಿರುವಂತೆ ಲಾರ್ಡ್ ಲೋಥಿಯನ್ ಅಧ್ಯಕ್ಷತೆಯಲ್ಲಿ ನೇಮಕವಾಗಿರುವ ಕಮಿಟಿ ಇನ್ನೂ ತನ್ನ ಪ್ರವಾಸ ಪೂರ್ಣಗೊಳಿಸಿಲ್ಲ. ಹೀಗಾಗಿ ಕಮೀಟಿ ಮಾಡಿರುವ ಶಿಫಾರಸುಗಳು ಇನ್ನೂ ನಮ್ಮ ಕೈಸೇರುವುದಕ್ಕೆ ಕೆಲವು ವಾರಗಳಾದರೂ ಬೇಕಾಗುತ್ತದೆ. ಈ ಶಿಫಾರಸುಗಳು ನಮ್ಮ ಕೈಸೇರಿದ ಬಳಿಕ ಆ ಶಿಫಾರಸುಗಳ ಬಗ್ಗೆ ನಾವು ಗಂಭೀರವಾಗಿ ವಿಚಾರ ಮಾಡಬೇಕಿದೆ. ಮತ್ತು ಈ ಸಂದರ್ಭದಲ್ಲಿ ನೀವು ಅಥವಾ ನಿಮ್ಮಂತಹ ಅನೇಕರ ಅಭಿಪ್ರಾಯಗಳ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡದೇ ಯಾವುದೇ ತೀರ್ಮಾನ ತೆಗೆದುಕೊಳ್ಳುವುದಿಲ್ಲ. ಒಂದು ವೇಳೆ ತಾವು ನನ್ನ ಸ್ಥಾನದಲ್ಲಿ ಇದ್ದರೆ ನಾನು ಅನುಸರಿಸುತ್ತಿರುವ ಮಾರ್ಗವನ್ನು ತಾವು ಕೂಡ ಅನುಸರಿಸುತ್ತಿದ್ದೀರಿ ಎನ್ನುವುದು ನನಗೆ ಖಾತ್ರಿಯಾಗಿದೆ. ಕಮೀಟಿಯ ಶಿಫಾರಸುಗಳನ್ನು ಎದುರು ನೋಡುವುದು ಅತ್ಯಗತ್ಯ ಎಂದು ತಮಗೂ ಅನ್ನಿಸುತ್ತಿತ್ತು. ಆ ಶಿಫಾರಸುಗಳ ಬಗ್ಗೆ ತಾವು ಪೂರ್ಣ ವಿಚಾರ ಮಾಡುತ್ತಿದ್ದೀರಿ ಮತ್ತು ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳುವ ಮೊದಲು ವಾದವಿವಾದಲ್ಲಿ ಇರುವ ಉಭಯ ಪಕ್ಷಗಳ ಅನಿಸಿಕೆಗಳನ್ನು ತಾವು ಪರಗಣಿಸುತ್ತಿದ್ದೀರಿ ಎಂದು ನಾನು ಭಾವಿಸುತ್ತೇನೆ. ಇದಕ್ಕಿಂತ ಹೆಚ್ಚಿಗೆ ನಾನು ಏನೂ ಬರೆಯಲಿಕ್ಕೆ ಹೋಗುವುದಿಲ್ಲ. ಮತ್ತು ಇದಕ್ಕಿಂತ ಹೆಚ್ಚಿಗೆ ನನ್ನಿಂದ ನೀವು ಅಪೇಕ್ಷಿಸಿದ್ದೀರಿ ಎಂದು ನನಗೆ ಅನ್ನಿಸುವುದಿಲ್ಲ.

**ಇಂತಿ ತಮ್ಮ**

**(ಸಹಿ) ಸ್ಯಾಮುಯೆಲ್ ಹೋಅರ್**

ಯಾವುದೇ ತೀರ್ಮಾನ ತೆಗೆದುಕೊಳ್ಳದೇ ಎರಡನೇ ದುಂಡು ಮೇಜಿನ ಪರಿಷತ್ತಿನ ಸಭೆ ಡಿಸೆಂಬರ್ ೧, ೧೯೩೧ರಂದು ಮುಕ್ತಾಯವಾಗಿತ್ತು. ಕೊನೆಗೆ ಎಂಟು ತಿಂಗಳ ಬಳಿಕ ಸ್ವತಃ ಬ್ರಿಟಿಷ್ ಸರ್ಕಾರ ಆಗಸ್ಟ್ ೧೭, ೧೯೩೨ರಂದು ಜಾತಿ ಪ್ರಾತಿನಿಧಿತ್ವ (Communal Award) ಪ್ರಕಟಿಸಿತು.

ಬುಧವಾರ ಆಗಸ್ಟ್ ೧೭, ೧೯೩೨ರಂದು ಬ್ರಿಟಿಷ್ ಸರ್ಕಾರದ ಪರವಾಗಿ ಪ್ರಧಾನ ಮಂತ್ರಿ ರಾಮ್ಸೆ ಮ್ಯಾಕ್ ಡೋನಾಲ್ಡ್ ಅವರು ಜಾತಿ ಪ್ರಾತಿನಿಧಿತ್ವ (Communal Award) ತೀರ್ಮಾನವನ್ನು ಭಾರತ ಮತ್ತು ಇಂಗ್ಲೆಂಡ್‌ನಲ್ಲಿ ಏಕಕಾಲಕ್ಕೆ ಪ್ರಕಟಿಸಿದರು. ಈ ತೀರ್ಮಾನದಲ್ಲಿ ಪ್ರಾಂತೀಯ ಕಾನೂನು ಮಂಡಳಿಯಲ್ಲಿ ಇರಬೇಕಾದ ಪ್ರತಿಯೊಂದು ಸಮಾಜದ ಪ್ರತಿನಿಧಿಗಳು ಯಾವ ಪ್ರಮಾಣದಲ್ಲಿರಬೇಕು ಮತ್ತು ಯಾರಿಗೆ ಸಂರಕ್ಷಣೆಯ ಅಗತ್ಯವಿದೆ ಎನ್ನುವುದನ್ನು ಪ್ರಸ್ತಾಪಿಸಲಾಗಿತ್ತು. ಒಪ್ಪಂದದ ಪ್ರಕಾರ (೧) ಮುಸಲ್ಮಾನ

---

೧. ಡಾ. ಭೀ. ರಾ. ಅಂಬೇಡ್ಕರ್ ಚರಿತ್ರ: ಚಾಂ. ಖೈರಮೋಡೆ, ಖಂಡ ೫, ಪುಟ ೧೭–೨೦.

(೨) ಸಿಖ್, (೩) ಭಾರತೀಯ ಕ್ರಿಶ್ಚಿಯನ್ನರು, (೪) ಆಂಗ್ಲೋ ಇಂಡಿಯನ್ ಮತ್ತು (೫) ಯುರೋಪಿಯನ್ನರಿಗೆ ಸ್ವತಂತ್ರ ಮತಕ್ಷೇತ್ರ ನೀಡಲಾಗಿತ್ತು. ಮಹಿಳೆಯರಿಗೂ ಸ್ವತಂತ್ರ ಮತಕ್ಷೇತ್ರಗಳಿದ್ದವು. ಅಸ್ಪೃಶ್ಯ ಮತದಾರರಿಗಾಗಿ ಸ್ವತಂತ್ರ ಮತಕ್ಷೇತ್ರ ಕಾಯ್ದಿರಿಸಲಾಗಿತ್ತು. ಇದು ಅಲ್ಲದೇ ಸಾಮಾನ್ಯ ಮತಕ್ಷೇತ್ರಗಳಲ್ಲೂ ಕೂಡ ಮತ ನೀಡುವ ಅಧಿಕಾರವನ್ನು ಅಸ್ಪೃಶ್ಯರಿಗೆ ನೀಡಲಾಗಿತ್ತು.

## ನಿರ್ಣಯದಲ್ಲಿನ ಕಲಮುಗಳು

(೧) ಕಳೆದ ಡಿಸೆಂಬರ್ ಮೊದಲನೇ ತಾರೀಖಿನಂದು ಜರುಗಿದ ಎರಡನೇ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಪ್ರಧಾನ ಮಂತ್ರಿ ಅವರು ಭಾರತದಲ್ಲಿರುವ ಎಲ್ಲ ಪಕ್ಷಗಳು ಜಾತಿ ಪ್ರಾತಿನಿಧಿತ್ವಕ್ಕೆ ಸಂಬಂಧಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಏಕಾಭಿಪ್ರಾಯಕ್ಕೆ ಬಾರದೇ ಹೋದಲ್ಲಿ ಭಾರತದಲ್ಲಿ ಸಾಂವಿಧಾನಿಕ ಬೆಳವಣಿಗೆಗೆ ಜಾತಿ ಪ್ರಾತಿನಿಧಿತ್ವ ಅಡ್ಡಿಯಾಗದಂತೆ ಒಂದು ರೀತಿಯ ತಾತ್ಕಾಲಿಕ ಯೋಜನೆಯನ್ನು ಜಾರಿಗೆ ತರುವ ಮೂಲಕ ಅಡ್ಡಿಯನ್ನು ಪರಿಹರಿಸುವುದಕ್ಕೆ ಬ್ರಿಟಿಷ್ ಸಾಮ್ರಾಜ್ಯ ಸರ್ಕಾರ ನಿಶ್ಚಯಿಸಿದೆ. ಪ್ರಧಾನ ಮಂತ್ರಿ ಅವರ ಈ ಘೋಷಣೆಗೆ ಸಂಸತ್ತಿನ ಎರಡೂ ಸಭೆಗಳು ತಕ್ಷಣ ತಮ್ಮ ಬೆಂಬಲ ವ್ಯಕ್ತಪಡಿಸಿದ್ದವು.

(೨) ಕಳೆದ ಮಾರ್ಚ್ ೧೯ರಂದು ಜಾತಿ ವಿಷಯದ ಬಗ್ಗೆ ಏಕಾಭಿಪ್ರಾಯ ಮೂಡದ ಕಾರಣ ನೂತನ ಸಂವಿಧಾನ ರಚನೆಯ ವಿಷಯದಲ್ಲಿ ಅಡ್ಡಿಯಾಗುತ್ತಿರುವುದು ಸರ್ಕಾರಕ್ಕೆ ಸ್ಪಷ್ಟವಾಗಿದೆ. ನೂತನ ಸಂವಿಧಾನ ರಚನೆಯಲ್ಲಿ ಕನಿಷ್ಠ ಅಲ್ಪಸಂಖ್ಯಾತರ ಸ್ಥಾನಮಾನದ ಪ್ರಶ್ನೆ ಪರಿಹಾರವಾಗುವವರೆಗೆ ಸಂವಿಧಾನ ರಚನೆಯ ಮುಂದಿನ ಕೆಲಸದಲ್ಲಿ ಪ್ರಗತಿ ಕಾಣಿಸದು ಎನ್ನುವುದು ಸರ್ಕಾರಕ್ಕೆ ಸ್ಪಷ್ಟವಾಗಿದೆ.

(೩) ಈ ಕಾರಣಕ್ಕಾಗಿ ಸಾಮ್ರಾಜ್ಯ ಸರ್ಕಾರವು ಪ್ರಸ್ತಾಪಿಸಿರುವ ಈ ಯೋಜನೆಯ ಪ್ರಕಾರ ಸಂಸತ್ತಿನ ಎದುರು ಸಂವಿಧಾನ ರಚನೆಗೆ ಸಂಬಂಧಿಸಿದ ಮಂಡಿಸುವ ಪ್ರಸ್ತಾವನೆಯಲ್ಲಿ ಈ ವಿಷಯವನ್ನು ಸೇರ್ಪಡಿಸುವುದಕ್ಕೆ ತೀರ್ಮಾನಿಸಿದೆ. ಈ ಪ್ರಸ್ತಾವನೆಯು ಕೇವಲ ಪ್ರಾಂತೀಯ ಕಾನೂನು ಮಂಡಳಿಯಲ್ಲಿನ ಬ್ರಿಟಿಷ್ ಭಾರತದಲ್ಲಿನ ಜಾತಿಯ ಪ್ರತಿನಿಧಿಗಳನ್ನು ತೆಗೆದುಕೊಳ್ಳುವ ವಿಷಯಕ್ಕೆ ಮಾತ್ರ ಸೀಮಿತವಾಗಿದೆ. ಕೇಂದ್ರ ಕಾನೂನು ಮಂಡಳಿಯಲ್ಲಿನ ಪ್ರತಿನಿಧಿಗಳಿಗೆ ಸಂಬಂಧಿಸಿದ ವಿಚಾರವನ್ನು ಮುಂದೂಡಿರುವುದಕ್ಕೆ ಕಾರಣವನ್ನು ಕಲಂ ೨೦ರಲ್ಲಿ ನೀಡಲಾಗಿದೆ. ಈ ಯೋಜನೆಯ ಸ್ವರೂಪವನ್ನು ಸೀಮಿತಗೊಳಿಸಿದ ಮಾತ್ರಕ್ಕೆ ಇತರ ಪ್ರಶ್ನೆಗಳನ್ನು ಪರಿಹರಿಸುವಲ್ಲಿ ವಿಫಲವಾಗಿದೆ ಎಂದು ಅರ್ಥವಲ್ಲ. ಪ್ರಾತಿನಿಧಿತ್ವದ ಪ್ರಮಾಣ ಮತ್ತು ವಿಧಾನದಂತಹ ಪ್ರಮುಖ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ತೀರ್ಮಾನಗಳನ್ನು ತೆಗೆದುಕೊಂಡ ಬಳಿಕ ಇದೀಗ ಚಿಂತನೆ ಮಾಡದಿರುವ ಪ್ರಶ್ನೆಗಳಿಗೆ ಸಂಬಂಧಿಸಿದ ಜಾತಿಗಳ ಮಧ್ಯೆ ಪರಸ್ಪರರಲ್ಲಿ ಸಂಧಾನ ಸೂತ್ರದಿಂದ ಮಾರ್ಗ ಕಂಡುಕೊಳ್ಳುವ ಸಾಧ್ಯತೆ ಇದೆ ಎಂಬ ಆಶಾಭಾವ ಇದೆ.

(೪) ಈ ವಿಷಯದಲ್ಲಿ ಸಾಮ್ರಾಜ್ಯ ಸರ್ಕಾರ ತನ್ನ ವಿಚಾರ ಸ್ಪಷ್ಟಪಡಿಸುವುದು ಏನೆಂದರೆ, ಸರ್ಕಾರ ಈಗ ನೀಡಿರುವ ಆಯ್ಕೆಯಲ್ಲಿನ ಬದಲಾವಣೆಗೆ ಸರ್ವಪಕ್ಷಗಳು ಬೆಂಬಲ ನೀಡದಿದ್ದರೆ ಅಂತಹ ವಿಚಾರಗಳನ್ನು ಪರಿಗಣಿಸುವುದಿಲ್ಲ. ಆದರೆ ಭಾರತ ಸರ್ಕಾರದ ನೂತನ ಮಸೂದೆ

ಪಾಸು ಮಾಡುವ ಮುನ್ನ ಒಂದು ವೇಳೆ ದೇಶದ ವಿವಿಧ ಜಾತಿಗಳು ಒಂದು ಪ್ರಾಂತ್ಯಕ್ಕಾಗಿ ಇಲ್ಲವೇ ಅಖಿಲ ಬ್ರಿಟಿಷ್ ಭಾರತಕ್ಕಾಗಿ ಪ್ರತ್ಯೇಕ ಯೋಜನೆಯನ್ನು ಏಕಾಭಿಪ್ರಾಯದಿಂದ ಮಂಡಿಸಿ ಸಲ್ಲಿಸಿದರೆ ಪ್ರಸ್ತಾಪಿತ ಸರ್ಕಾರದ ಯೋಜನೆಯ ಬದಲಿಗೆ ಆ ಯೋಜನೆಗೆ ಮಾನ್ಯತೆ ನೀಡಬೇಕು ಎಂದು ಸಂಸತ್ತಿಗೆ ಶಿಫಾರಸು ಮಾಡುವುದಕ್ಕೆ ಸರ್ಕಾರಕ್ಕೆ ಸಂತೋಷವಾಗುತ್ತದೆ.

(೫) ಗವರ್ನರ್ ಇರುವ ಪ್ರಾಂತ್ಯದಲ್ಲಿನ ಕಾನೂನು ಮಂಡಳಿ ಮತ್ತು ಮೇಲ್ಮನೆ ಇರುವಲ್ಲಿ ಕೆಳಮನೆಯಲ್ಲಿ ಎಷ್ಟು ಯಾವ ಪ್ರಮಾಣದಲ್ಲಿ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು ಎನ್ನುವುದನ್ನು ಕಲಂ ೨೪ರಲ್ಲಿ ಸ್ಪಷ್ಟಪಡಿಸಲಾಗಿದೆ.

**೧೦ ವರ್ಷಗಳ ಬಳಿಕ ಮರುಪರಿಶೀಲನೆ**

(೬) ಮುಸ್ಲಿಂರು, ಯೂರೋಪಿಯನ್ನರು ಮತ್ತು ಸಿಖ್ ಇತ್ಯಾದಿ ಮತಕ್ಷೇತ್ರಗಳಿಗೆ ನೀಡಿರುವ ಸ್ಥಾನಗಳು ಪ್ರಾಂತ್ಯಗಳಲ್ಲಿನ ಸ್ವತಂತ್ರ ಮತಕ್ಷೇತ್ರಗಳಿಂದ ಆಯ್ಕೆಯಾಗುವರು. ಚುನಾವಣೆಗೆ ಸಂಬಂಧಿಸಿದಂತೆ ಮಾಡಿದ ಮತ್ತು ಕೆಳಗೆ ವಿವರಿಸಿರುವ ವ್ಯವಸ್ಥೆಯು ೧೦ ವರ್ಷಗಳ ಬಳಿಕ ಆ ಜಾತಿಯ ಸಮ್ಮತಿಯ ಮೇರೆಗೆ ಮರುಪರಿಶೀಲನೆ ಮಾಡಿ ಸಂವಿಧಾನಕ್ಕೆ ತಿದ್ದುಪಡಿ ತರುವುದಕ್ಕೆ ಸೂಕ್ತ ಮಾರ್ಗ ಕಂಡುಕೊಳ್ಳಲಾಗುವುದು.

(೭) ಮುಸಲ್ಮಾನ, ಸಿಖ್, ಹಿಂದಿ ಕ್ರೈಸ್ತರು (ಕಲಂ ೧೦) ಆಂಗ್ಲೋ ಇಂಡಿಯನ್ (ಕಲಂ ೧೧) ಇಲ್ಲವೇ ಯೂರೋಪಿಯನ್ ಮತ ಕ್ಷೇತ್ರಗಳಲ್ಲಿ ಯಾವ ಮತದಾರರು ಇಲ್ಲವೋ ಅಂತಹ ಅರ್ಹ ಮತದಾರರು ಸಾಮಾನ್ಯ ಮತಕ್ಷೇತ್ರದಲ್ಲಿ ಮತ ಹಾಕಬಹುದು.

**ಮರಾಠರಿಗಾಗಿ ೭ ಸ್ಥಾನ.**

(೮) ಮುಂಬೈ ಪ್ರಾಂತ್ಯದಲ್ಲಿ ಒಂದಕ್ಕಿಂತ ಹೆಚ್ಚು ಸದಸ್ಯರು ಆಯ್ಕೆಯಾಗುವ ಕ್ಷೇತ್ರಗಳ ಪೈಕಿ ಮರಾಠರಿಗಾಗಿ ಏಳು ಕ್ಷೇತ್ರಗಳನ್ನು ಕಾಯ್ದಿರಿಸಲಾಗುವುದು.

**ಅಸ್ಪೃಶ್ಯರಿಗಾಗಿ ವ್ಯವಸ್ಥೆ**

(೯) ಅಸ್ಪೃಶ್ಯ ವರ್ಗದಲ್ಲಿನ ಅರ್ಹ ಮತದಾರರು ಸಾಮಾನ್ಯ ಮತಕ್ಷೇತ್ರದಿಂದ ಮತದಾನ ಮಾಡುವರು. ಈ ವಿಧಾನದಿಂದ ಬಹಿಷ್ಕೃತ ಸಮಾಜಕ್ಕೆ ಸಾಕಷ್ಟು ಕಾಲಾವಧಿಯವರೆಗೆ ಕಾನೂನು ಮಂಡಳಿಯಲ್ಲಿ ಅಗತ್ಯ ಪ್ರತಿನಿಧಿಗಳು ಸಿಗದ ಕಾರಣ ಕಲಂ ೨೪ರಲ್ಲಿ ವಿವರಿಸಿದಂತೆ ಅವರಿಗೆ ಸಾಮಾನ್ಯ ಮತಕ್ಷೇತ್ರಗಳಲ್ಲಿಯೂ ಕೂಡ ಕೆಲವೊಂದು ವಿಶೇಷ ಸ್ಥಾನಗಳನ್ನು ನೀಡಲಾಗುತ್ತದೆ. ಈ ಸ್ಥಾನಗಳಿಗೆ ಕೇವಲ ಬಹಿಷ್ಕೃತ ವರ್ಗಗಳ ಅರ್ಹ ಮತದಾರರಿಂದ ಮತಗಳಿಂದ ನಡೆಯಲಿದೆ. ಅಲ್ಲದೇ ಈ ಮತದಾರರು ಸಾಮಾನ್ಯ ಮತಕ್ಷೇತ್ರದಿಂದ ಮತ ನೀಡಬಹುದಾಗಿದೆ. ಬಹಿಷ್ಕೃತ ವರ್ಗಗಳ ಸಂಖ್ಯೆ ಹೆಚ್ಚಿಗೆ ಇರುವ ಮತಕ್ಷೇತ್ರಗಳಲ್ಲಿ ಬಹಿಷ್ಕೃತ ವರ್ಗದವರ ಮತಕ್ಷೇತ್ರಗಳನ್ನು ನಿರ್ಮಿಸಬೇಕು. ಮದ್ರಾಸ್ ಪ್ರಾಂತ್ಯ ಹೊರತು ಪಡಿಸಿ ಇನ್ನುಳಿದ ಪ್ರಾಂತ್ಯಗಳಲ್ಲಿ ಇಂತಹ ಮತಕ್ಷೇತ್ರಗಳು ಇಡೀ ಪ್ರಾಂತ್ಯದಲ್ಲಿ ಇರಕೂಡದು ಎಂಬ ಇರಾದೆ ಇತ್ತು.

ಬಂಗಾಲದಲ್ಲಿ ಕೆಲವೊಂದು ಸಾಮಾನ್ಯ ಮತಕ್ಷೇತ್ರಗಳಲ್ಲಿ ಬಹುಸಂಖ್ಯಾತ ಮತದಾರರು ಬಹಿಷ್ಕೃತ ವರ್ಗದ ಮತದಾರರು ಇರಬಹುದು ಎಂದು ಅಂದಾಜಿಸಲಾಗಿದೆ. ಹೀಗಾಗಿ

ಮುಂದಿನ ಪರಿಶೀಲನೆ ಆಗುವವರೆಗೆ ಆ ಪ್ರಾಂತ್ಯದಲ್ಲಿ ಬಹಿಷ್ಕೃತ ಸಮಾಜದ ಮತಕ್ಷೇತ್ರಗಳಿಂದ ಎಷ್ಟು ಸದಸ್ಯರು ಆಯ್ಕೆಯಾಗಬೇಕು ಎನ್ನುವುದು ತೀರ್ಮಾನವಾಗಿಲ್ಲ. ಆದ್ದರಿಂದ ಬಂಗಾಲ ಕಾನೂನು ಮಂಡಳಿಯಲ್ಲಿ ಬಹಿಷ್ಕೃತ ಸಮಾಜದ ಕನಿಷ್ಠ ಹತ್ತಕ್ಕಿಂತಲೂ ಕಡಿಮೆ ಪ್ರತಿನಿಧಿ ಇರಕೂಡದು.

ಅರ್ಹ ಮತದಾರರ ಪೈಕಿ ಬಹಿಷ್ಕೃತ ಸಮಾಜದ ವಿಶೇಷ ಮತಕ್ಷೇತ್ರಗಳಿಂದ ಮತ ನೀಡುವ ಅರ್ಹತೆ ಯಾರಿಗೆ ಇದೆ ಎನ್ನುವುದನ್ನು ಇನ್ನೂ ತೀರ್ಮಾನಿಸಿಲ್ಲ. ಆದರೆ ಈ ವಿಚಾರದಲ್ಲಿ ಮತದಾನ ಸಮಿತಿ ಸ್ಪಷ್ಟಪಡಿಸಿರುವ ಅಂಶಗಳನ್ನು ಅನುಸರಿಸಲಾಗುವುದು. ಆದರೆ ಉತ್ತರ ಭಾರತದ ಕೆಲವೊಂದು ಸ್ಥಳಗಳಲ್ಲಿನ ಅಸ್ಪೃಶ್ಯತೆಯ ಲಕ್ಷಣಗಳನ್ನು ಸಮ್ಮತಿಸುವುದು ಅಯೋಗ್ಯವಾಗಿರುವ ಕಾರಣ ಅವುಗಳಲ್ಲಿ ಬದಲಾವಣೆ ಮಾಡುವುದು ಅತ್ಯಗತ್ಯವಾಗಬಹುದು.

ಬಹಿಷ್ಕೃತ ಸಮಾಜದ ಈ ವಿಶೇಷ ಮತಕ್ಷೇತ್ರಗಳು ಸೀಮಿತ ಕಾಲಾವಧಿಗಿಂತ ಹೆಚ್ಚು ವರ್ಷ ಅಗತ್ಯ ಎಂದು ಸರ್ಕಾರ ಭಾವಿಸುವುದಿಲ್ಲ. ಹೀಗಾಗಿ ಒಂದು ವೇಳೆ ಈ ಮೊದಲೇ ರದ್ದು ಆಗದೇ ಇದ್ದಿದ್ದರೆ ಮುಂದಿನ ೨೦ ವರ್ಷಗಳ ಬಳಿಕ ರದ್ದು ಆಗಬೇಕು.

(೧೦) ಸ್ವತಂತ್ರ ಮತಕ್ಷೇತ್ರಗಳಲ್ಲಿ ಹಿಂದಿ ಕ್ರಿಶ್ಚಿಯನ್ನರು ಮತದಾನ ಮಾಡುವರು. ಆದರೆ ಪ್ರಾಂತ್ಯದಲ್ಲಿನ ಒಂದು ಇಲ್ಲವೇ ಎರಡು ಸ್ಥಳಗಳಲ್ಲಿ ಮಾತ್ರ ಹಿಂದಿ–ಕ್ರಿಶ್ಚಿಯನ್ ಸ್ವತಂತ್ರ ಮತಕ್ಷೇತ್ರಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ ಎಂದು ಅನ್ನಿಸುತ್ತದೆ. ಈ ಭಾಗದ ಹಿಂದಿ ಕ್ರಿಶ್ಚಿಯನ್ ಮತದಾರರು ಸಾಮಾನ್ಯ ಮತಕ್ಷೇತ್ರದಲ್ಲಿ ಮತ ಚಲಾಯಿಸಲಾರರು. ಆದರೆ ಬಾಹ್ಯ ಹಿಂದಿ ಕ್ರಿಶ್ಚಿಯನ್ ಮತದಾರರು ಸಾಮಾನ್ಯ ಮತಕ್ಷೇತ್ರಗಳಿಂದ ಮತ ನೀಡುತ್ತಾರೆ. ಬಿಹಾರ, ಒರಿಸ್ಸಾ ಪ್ರಾಂತ್ಯದ ಬಹುತೇಕ ಹಿಂದಿ ಕ್ರಿಶ್ಚಿಯನ್ನರು ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿರುವ ಕಾರಣ ಅವರಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು.

(೧೧) ಆಂಗ್ಲೋ–ಇಂಡಿಯನ್ ಮತದಾರರು ಸ್ವತಂತ್ರ ಮತಕ್ಷೇತ್ರಗಳಿಂದ ಮತದಾನ ಮಾಡುವರು. ಅವರಿಗಾಗಿ ಎಲ್ಲ ಪ್ರಾಂತ್ಯಗಳನ್ನು ಸೇರಿಸುವ ವಿಚಾರ ಗಮನದಲ್ಲಿ ಇರಿಸಿಕೊಂಡು ಅಂಚೆ ಮೂಲಕ ಮತದಾನ ಮಾಡುವುದಕ್ಕೂ ವ್ಯವಸ್ಥೆ ಮಾಡಲಾಗಿದೆ. ಆದರೆ ಈ ವಿಚಾರದ ಅನುಷ್ಠಾನ ಸಂಬಂಧಿ ತೊಂದರೆಗಳಿರುವ ಕಾರಣ ಇದಕ್ಕೆ ಸಂಬಂಧಿಸಿದಂತೆ ಇನ್ನೂ ನಿಶ್ಚಿತ ತೀರ್ಮಾನವಾಗಿಲ್ಲ.

(೧೨) ಹಿಂದುಳಿದ ಪ್ರದೇಶಗಳಿಗೆ ನೀಡಬೇಕಾದ ಸ್ಥಾನಗಳಿಗೆ ಸಂಬಂಧಿಸಿದಂತೆ ಇನ್ನೂ ವಿಚಾರ ವಿನಿಮಯ ನಡೆಯುತ್ತಿರುವ ಕಾರಣ ಈ ವಿಭಾಗಕ್ಕೆ ಈಗ ನೀಡಿರುವ ಸ್ಥಾನಗಳನ್ನು ತಾತ್ಕಾಲಿಕ ಎಂದು ಭಾವಿಸಬೇಕು.

## ಸ್ತ್ರೀ ಪ್ರಾತಿನಿಧ್ಯ

(೧೩) ಕಾನೂನು ಮಂಡಳಿಯಲ್ಲಿ ನಿಶ್ಚಿತವಾಗಿ ಸ್ತ್ರೀಯರಿಗೆ ಸ್ವಲ್ಪವಾದರೂ ಪ್ರಾತಿನಿಧಿತ್ವ ಇರಬೇಕು ಎನ್ನುವ ವಿಷಯಕ್ಕೆ ಸಾಮ್ರಾಜ್ಯವಾದಿ ಸರ್ಕಾರ ಮಹತ್ವ ನೀಡುವ ಕಾರಣ ಸ್ತ್ರೀಯರಿಗೆ ಒಂದಿಷ್ಟು ಸ್ಥಾನಗಳನ್ನು ಮೀಸಲು ಇರಿಸದೇ ಈ ಸಂಗತಿ ಸಾಧ್ಯವಾಗಲಿಕ್ಕಿಲ್ಲ ಎನ್ನುವುದು

ಮನದಟ್ಟಾಗಿದೆ. ಆದ್ದರಿಂದ ಸ್ತ್ರೀ ಪ್ರತಿನಿಧಿಗಳು ಕೇವಲ ಒಂದೇ ಜಾತಿಯಿಂದ ಬರಬಾರದು. ಆದರೆ ಈ ಆತಂಕ ದೂರಮಾಡಿಸುವ ನಿಟ್ಟಿನಲ್ಲಿ ಸರ್ಕಾರ ಇಲ್ಲಿಯವರೆಗೆ ಯಾವುದೇ ಪರಿಹಾರ ಮಾರ್ಗೋಪಾಯ ಕಂಡುಕೊಂಡಿಲ್ಲ.

### ಕಾರ್ಮಿಕ ಪ್ರತಿನಿಧಿ

(೧೪) ಕಾರ್ಮಿಕ ವರ್ಗದ ಪ್ರತಿನಿಧಿಯನ್ನು ಜಾತಿ ವೈಶಿಷ್ಟ್ಯವಿಲ್ಲದ ಮತಕ್ಷೇತ್ರದಿಂದ ಆಯ್ಕೆ ಮಾಡಲಾಗುವುದು. ಆಯ್ಕೆ ವಿಧಾನ ಇನ್ನೂ ನಿಶ್ಚಿತವಾಗಬೇಕಿದೆ. ಆದರೆ ಕೆಲವೊಂದು ಸ್ಥಳಗಳಲ್ಲಿ ಕಾರ್ಮಿಕ ಪ್ರತಿನಿಧಿಗಳು ಕಾರ್ಮಿಕ ಒಕ್ಕೂಟದಿಂದ ಆಯ್ಕೆಯಾದರೆ ಮತ್ತೇ ಕೆಲವು ಸ್ಥಳಗಳಲ್ಲಿ ಮತದಾರ ಸಮಿತಿ ಶಿಫಾರಸು ಮಾಡಿದ ವಿಶೇಷ ಮತಕ್ಷೇತ್ರಗಳಿಂದ ಆಯ್ಕೆಯಾಗಲಿದ್ದಾರೆ.

(೧೫) ವ್ಯಾಪಾರ, ಉದ್ಯೋಗ, ದಂಧೆ, ಗಣಿ ಮತ್ತು ಕೊಳಚೆ ಪ್ರದೇಶಗಳಿಗೆ ನೀಡಿರುವ ವಿಶೇಷ ಸ್ಥಾನಗಳಿಗೆ ನಡೆಯುವ ಚುಣಾವಣೆಯನ್ನು ಚೇಂಬರ್ ಆಫ್ ಕಾಮರ್ಸ್ ಮತ್ತು ಇತರ ಸಂಸ್ಥೆಗಳ ಮುಖಾಂತರ ನಡೆಸಲಾಗುವುದು. ಆದರೆ ಇದಕ್ಕೆ ಸಂಬಂಧಿಸಿದಂತೆ ವಿಚಾರ ವಿನಿಮಯ ಇನ್ನೂ ನಡೆಯುತ್ತಿದೆ.

(೧೬) ಜಮೀನ್ದಾರರಿಗೆ ನೀಡಿರುವ ವಿಶೇಷ ಸ್ಥಾನಗಳಿಗೆ ಆಯ್ಕೆಯು ಜಮೀನ್ದುದಾರರ ವಿಶೇಷ ಮತಕ್ಷೇತ್ರಗಳಿಂದ ನಡೆಯಲಿದೆ.

(೧೭) ವಿಶ್ವವಿದ್ಯಾಲಯದ ಸ್ಥಾನಗಳ ಆಯ್ಕೆ ಪದ್ಧತಿ ಕುರಿತು ಇನ್ನೂ ವಿಚಾರ ವಿನಿಮಯ ನಡೆಯುತ್ತಿದೆ.

### ಮಾರ್ಪಡಿಸುವ ಹಕ್ಕು

(೧೮) ಮೇಲಿನ ಸಂಗತಿಗಳ ಬಗ್ಗೆ ಚಿಂತನೆ ಮಾಡುವ ಸಂದರ್ಭದಲ್ಲಿ ಸಣ್ಣಪುಟ್ಟ ವಿಷಯಗಳ ಬಗ್ಗೆ ಚಿಂತನೆ ಮಾಡದಿರುವುದು ಸರ್ಕಾರಕ್ಕೆ ಅಸಾಧ್ಯದ ಮಾತಾಗಿದೆ. ಹೀಗಾಗಿ ಇಲ್ಲಿಯವರೆಗೆ ಮತಕ್ಷೇತ್ರಗಳ ಸೀಮಿತತೆ ನಿರ್ಧರಿಸಬೇಕಾದ ಪ್ರಶ್ನೆ ಹಾಗೆಯೇ ಉಳಿದಿರುವುದರಿಂದ ಭಾರತದಲ್ಲಿ ಎಷ್ಟು ಸಾಧ್ಯವೋ ಅಷ್ಟು ಬೇಗ ಈ ವಿಚಾರ ಕೈಗೆತ್ತಿಕೊಳ್ಳಬೇಕು.

ಕೆಲವೊಂದು ವಿಚಾರಗಳಲ್ಲಿ ಮತಕ್ಷೇತ್ರಗಳಿಗೆ ಅನುಕೂಲವಾಗಲೆಂದು ಸ್ಥಾನಗಳಲ್ಲಿ ಮಾರ್ಪಾಡು ಮಾಡುವುದು ಅಗತ್ಯ ಎನ್ನುವುದು ಮನದಟ್ಟಾದರೆ, ಆ ರೀತಿ ಮಾಡುವ ಹಕ್ಕನ್ನು ಸರ್ಕಾರ ತನ್ನ ಬಳಿ ಇರಿಸಿಕೊಂಡಿದೆ. ಆದರೆ ಈ ರೀತಿಯ ಮಾರ್ಪಾಡು ಮಾಡುವ ವೇಳೆ ಜಾತಿ ಸಮತೋಲನ ಹಾಳಾಗದಂತೆ ಎಚ್ಚರಿಕೆ ವಹಿಸಲಾಗುವುದು. ಬಂಗಾಲ ಮತ್ತು ಪಂಜಾಬ್‌ಗೆ ಸಂಬಂಧಿಸಿದ ವಿಚಾರದಲ್ಲಿ ಯಾವುದೇ ಮಾರ್ಪಾಡು ಮಾಡಲಾಗುವುದಿಲ್ಲ.

### ಎರಡನೇ ಚೇಂಬರ್‌ನ ಚಿಂತನೆ

೧೯) ಪ್ರಾಂತೀಯ ಕಾನೂನು ಮಂಡಳಿಯಲ್ಲಿ ಎರಡನೇ ಚೇಂಬರ್ ಇರಬೇಕೋ ಅಥವಾ ಬೇಡವೋ ಎಂಬ ಪ್ರಶ್ನೆಯ ಕುರಿತು ಇಲ್ಲಿಯವರೆಗೆ ಒಂದಿಷ್ಟು ಚರ್ಚೆಯಾಗಿದೆ. ಯಾವ ಪ್ರಾಂತ್ಯಗಳಿಗೆ ಎರಡನೇ ಚೆಂಬರ್ ಅಗತ್ಯವಿದೆ ಎನ್ನುವುದರ ಬಗ್ಗೆ ಇನ್ನೂ ಚಿಂತನೆ ಮಾಡಬೇಕಿದೆ.

ಒಂದು ವೇಳೆ ಮೇಲ್ಮನೆಯನ್ನು ಸ್ಥಾಪಿಸಿದರೂ ಕೂಡ ಕೆಳಮನೆಯಲ್ಲಿ ಇರುವ ಜಾತಿ ಪ್ರಮಾಣದಲ್ಲಿ ಯಾವುದೇ ಮಾರ್ಪಾಡು ಆಗಕೂಡದು ಎನ್ನುವುದು ಸರ್ಕಾರದ ಅಭಿಪ್ರಾಯ.

## ಕೇಂದ್ರ ಕಾನೂನು ಮಂಡಳಿ

(೨೦) ಕೇಂದ್ರ ಕಾನೂನು ಮಂಡಳಿ ರಚನೆಗೆ ಸಂಬಂಧಿಸಿದಂತೆ ಚಿಂತನೆ ಮಾಡುವ ಸಂದರ್ಭದಲ್ಲಿ ಸಂಸ್ಥಾನಗಳು ಮತ್ತು ಇತರ ಪ್ರಶ್ನೆಗಳು ಉದ್ಭವಿಸುವ ಕಾರಣ ಸದ್ಯ ಆ ಕುರಿತು ಚಿಂತನೆ ಮಾಡುವ ಇರಾದೆ ಸರ್ಕಾರಕ್ಕೆ ಇಲ್ಲ. ಆದರೆ ಭವಿಷ್ಯದಲ್ಲಿ ಚಿಂತನೆ ಮಾಡುವುದಾದರೆ ಆ ಸಂದರ್ಭದಲ್ಲಿ ಎಲ್ಲ ಜಾತಿಗಳಿಗೂ ಸೂಕ್ತ ಪ್ರಾತಿನಿಧ್ಯ ದೊರೆಯವಂತೆ ಎಚ್ಚರಿಕೆ ವಹಿಸಲಾಗುವುದು.

(೨೧) ಸಿಂಧ್ ಪ್ರಾಂತ್ಯ ಸ್ವತಂತ್ರವಾಗಿರಬೇಕು ಎನ್ನುವುದಕ್ಕೆ ಸರ್ಕಾರ ತಾತ್ವಿಕ ಸಮ್ಮತಿ ನೀಡಿದೆ. ಆದರೆ ಅದರ ಆರ್ಥಿಕ ಸಾಮರ್ಥ್ಯದ ಕುರಿತು ಇನ್ನೂ ಚಿಂತನೆ ಮಾಡಬೇಕಿರುವ ಕಾರಣ ಕಾನೂನು ಮಂಡಳಿಯಲ್ಲಿ ಸದಸ್ಯರ ಸಂಖ್ಯೆ ನೀಡುವ ಸಂದರ್ಭದಲ್ಲಿ ಮುಂಬೈ ಮತ್ತು ಸಿಂಧ್ ಪ್ರಾಂತ್ಯದ ವಿವಿಧ ಸಂಖ್ಯೆಗಳನ್ನು ನೀಡಲಾಗಿದೆ. ಅದರಂತೆ ಸಿಂಧ್ ಸೇರಿದಂತೆ ಮುಂಬೈ ಪ್ರಾಂತ್ಯದ ಸಂಖ್ಯೆ ಕೂಡ ನೀಡಲಾಗಿದೆ.

(೨೨) ಬಿಹಾರ ಮತ್ತು ಒರಿಸ್ಸಾದ ಸಂಖ್ಯೆಗಳು ಸದ್ಯ ಆ ಪ್ರಾಂತ್ಯಗಳದ್ದೇ ಆಗಿರುವ ಕಾರಣ ಸದ್ಯ ಒರಿಸ್ಸಾ ಸ್ವತಂತ್ರಗೊಳಿಸುವ ಚಿಂತನೆ ನಡೆದಿದೆ.

(೨೩) ಕಲಂ ೨೪ರಲ್ಲಿ ಮಧ್ಯ ಮತ್ತು ವಹ್ರಾಡ್ ಪ್ರಾಂತ್ಯದ ಸಂಖ್ಯೆಯನ್ನು ಸೇರಿಸಿ ನೀಡಲಾಗಿದ್ದು, ಇದು ವಹ್ರಾಡದ ಭವಿಷ್ಯದ ಸಂವಿಧಾನಕ್ಕೆ ಸಂಬಂಧಿಸಿದಂತೆ ಯಾವುದೇ ನಿಶ್ಚಿತ ಧೋರಣೆ ಎಂದೇನೂ ಅಲ್ಲ.

## ವಿವಿಧ ಪ್ರಾಂತ್ಯಗಳಲ್ಲಿನ ಸ್ಥಾನ ಹಂಚಿಕೆ

(೨೫) ಪ್ರಾಂತೀಯ ಕಾನೂನು ಮಂಡಳಿಗಳಿಗಾಗಿ ಸಭೆಯಲ್ಲಿ ಕೆಳಗೆ ನೀಡಿರುವ ಪ್ರಮಾಣದಂತೆ ಹಂಚಿಕೆ ಮಾಡಲಾಗುವುದು

| ವಿವಿಧ ವರ್ಗ (೧) | ಮದ್ರಾಸ್ ಪ್ರಾಂತ್ಯ (೨) | ಮುಂಬೈ ಸಿಂಧ್ ಸೇರಿ (೩) | ಬಂಗಾಲ ಪ್ರಾಂತ (೪) | ಸಂಯುಕ್ತ ಪ್ರಾಂತ (೫) | ಪಂಜಾಬ್ ಪ್ರಾಂತ (೬) |
|---|---|---|---|---|---|
| ೧. ಸಾಮಾನ್ಯ | ೧೨೮ | ೯೨ | ೭೮ | ೧೨೮ | ೪೨ |
| ಮಹಿಳಾ ಪ್ರತಿನಿಧಿ | ೬ | ೫ | ೨ | ೪ | ೦೧ |
| ೨. ಅಸ್ಪೃಶ್ಯ | ೧೮ | ೧೦ | ... | ೧೨ | ... |
| ೩. ಹಿಂದುಳಿದವರು | ೧ | ೧ | ... | | |
| ೪. ಮುಸ್ಲಿಂ | ೨೦ | ೬೨ | ೧೧೭ | ೬೪ | ೮೪ |
| ಮಹಿಳಾ ಪ್ರತಿನಿಧಿ | ೧ | ೧ | ೨ | ೨ | ೨ |
| ೫. ಹಿಂದೀ ಕ್ರೈಸ್ತ | ೮ | ೩ | ೨ | ೨ | ೨ |

| | | | | | |
|---|---|---|---|---|---|
| ಮಹಿಳಾ ಪ್ರತಿನಿಧಿ | ೧ | ... | ... | ... | ... |
| ೬. ಆಂಗ್ಲೋ ಇಂಡಿಯನ್ | ೨ | ೧ | ೩ | ೧ | ೧ |
| ಮಹಿಳಾ ಪ್ರತಿನಿಧಿ | .. | ೧ | ೧ | ... | ... |
| ೭. ಯೂರೋಪಿಯನ್ | ೩ | ೪ | ೧೧ | ೨ | ೧ |
| ೮. ವ್ಯಾಪಾರಿ ಇತರೆ | ೬ | ೮ | ೧೯ | ೩ | ೧ |
| ೯. ಜಮೀನ್ದಾರರು | ೬ | ೩ | ೫ | ೬ | ೫ |
| ೧೦. ವಿಶ್ವವಿದ್ಯಾಲಯ | ೧ | ೧ | ೨ | ೧ | ೧ |
| ೧೧. ಕಾರ್ಮಿಕರು | ೬ | ೮ | ೮ | ೩ | ೩ |
| ೧೨. ಸಿಖ್ | ... ... | ... | ... ... | ... | ೩೧ |
| ಮಹಿಳಾ ಪ್ರತಿನಿಧಿ | ... ... | ... | ... ... | ... | ೧ |
| ಒಟ್ಟು | ೨೦೭ | ೨೦೦ | ೨೫೦ | ೨೨೩ | ೧೭೫ |

| **ವಿವಿಧ ವರ್ಗ** | **ಬಿಹಾರ ಒರಿಸ್ಸಾ** | **ಮಧ್ಯ ಪ್ರಾಂತ್ಯ ವಹ್ರಾಡ್** | **ಅಸ್ಸಾಂ ಪ್ರಾಂತ್ಯ** | **ನಾರ್ಥ್‌ವೆಸ್ಟ್ ಫ್ರಾಂಟಿಯರ್** |
|---|---|---|---|---|
| ೧. ಸಾಮಾನ್ಯ | ೧೬ | ೭೪ | ೪೩ | ೯ |
| ಮಹಿಳಾ ಪ್ರತಿನಿಧಿ | ೩ | ೩ | ೧ | ... |
| ೨. ಅಸ್ಪೃಶ್ಯ | ೭ | ೧೦ | ೪ | .... |
| ೩. ಹಿಂದುಳಿದವರು | ೮ | ೧ | ೯ | ... |
| ೪. ಮುಸ್ಲಿಂ | ೪೧ | ೧೪ | ೩೪ | ೩೬ |
| ಮಹಿಳಾ ಪ್ರತಿನಿಧಿ | ೧ | ... | ... | ... |
| ೫. ಹಿಂದೀ ಕ್ರಿಶ್ಚನ್ | ೨ | ... | ೧ | ... |
| ಮಹಿಳಾ ಪ್ರತಿನಿದಿ | ... | ... | ... | ... |
| ೬. ಆಂಗ್ಲೋ–ಇಂಡಿಯನ್ | ೧ | ೧ | ... | .... |
| ಮಹಿಳಾ ಪ್ರತಿನಿಧಿ | ... | .... | ... | ... |
| ೭ ಯೂರೋಪಿಯನ್ | ೨ | ೧ | ೧ | ... |
| ೮. ವ್ಯಾಪಾರಿ ಇತರೆ | ೪ | ೨ | ೧೧ | .... |
| ೯. ಜಮೀನ್ದಾರರು | ೫ | ೩ | ... | ೨ |
| ೧೦. ವಿಶ್ವವಿದ್ಯಾಲಯ | ೧ | ೧ | ... | .... |
| ೧೧. ಕಾರ್ಮಿಕ | ೪ | ೨ | ೪ | .... |
| ೧೨. ಸಿಖ್ | .... | ... | ... | ೩ |
| ಮಹಿಳಾ ಪ್ರತಿನಿಧಿ | .... | ... | ... | .... |
| **ಒಟ್ಟು** | **೧೭೫** | **೧೧೨** | **೧೦೮** | **೫೦** |

ಬಂಗಾಲ ಪ್ರಾಂತ್ಯದಲ್ಲಿ ಅಸ್ಪೃಶ್ಯ ಪ್ರತಿನಿಧಿಗಳ ಸಂಖ್ಯೆಯನ್ನು ಇನ್ನು ಮುಂದೆ ತಿಳಿಸಲಾಗುವುದು. ಯಾವ ಯಾವ ಪ್ರಾಂತ್ಯಗಳಿಗೆ ಗರಿಷ್ಠ ಸ್ವತಂತ್ರ ಮತಕ್ಷೇತ್ರಗಳನ್ನು ನೀಡಲಾಗುವುದೋ ಅವುಗಳ ಹೆಸರುಗಳನ್ನು ಜಾತಿ ವಿಷಯದ ಪ್ರಶ್ನೆಯ ತೀರ್ಮಾನದಲ್ಲಿ ನೀಡಲಾಗಿಲ್ಲ. ಆದರೆ ಆ ಪ್ರಾಂತ್ಯಗಳ ಹೆಸರುಗಳನ್ನು ಶೀಘ್ರವೇ ಪ್ರಕಟಿಸಲಾಗುವುದು. ಯಾವ ಪ್ರಾಂತ್ಯಗಳಲ್ಲಿ ಅಸ್ಪೃಶ್ಯ ವರ್ಗದ ಜನಸಂಖ್ಯೆ ಸಾಕಷ್ಟು ಸಂಖ್ಯೆಯಲ್ಲಿ ಇದೆಯೋ ಆ ಪ್ರಾಂತ್ಯಗಳಿಗೆ ಸ್ವತಂತ್ರ ಮತಕ್ಷೇತ್ರಗಳನ್ನು ನೀಡಲಾಗುವುದು.[೧]

ಈ ನಿರ್ಣಯವನ್ನು ಪ್ರಕಟಿಸಿದ ನಂತರ ಪ್ರಧಾನಮಂತ್ರಿ ರಾಮ್ಸೆ ಮ್ಯಾಕ್‌ಡೊನಾಲ್ಡ್ ಈ ಕೆಳಗಿನಂತೆ ಹೇಳಿಕೆಯನ್ನು ನೀಡಿದ್ದರು: ಬ್ರಿಟಿಷ್ ಸರ್ಕಾರದ ವತಿಯಿಂದ ನಾನೀಗ ಭಾರತದಲ್ಲಿನ ಜಾತಿವಿಷಯಕ್ಕೆ ಸಂಬಂಧಿಸಿದಂತೆ ನಿರ್ಣಯವನ್ನು ಪ್ರಕಟಿಸುತ್ತಿದ್ದೇನೆ.

ಭಾರತದಲ್ಲಿನ ಜಾತಿ ವಿಷಯಕ್ಕೆ ಸಂಬಂಧಿಸಿದಂತೆ ಹಸ್ತಕ್ಷೇಪ ಮಾಡುವುದು ನಮಗೆ ಯಾವುದೇ ಅಗತ್ಯವಿಲ್ಲ. ಕಳೆದ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ನೀವುಗಳೇ ಈ ಸಮಸ್ಯೆಯನ್ನು ಪರಸ್ಪರ ಮಾತುಕತೆ ಮೂಲಕ ಪರಿಹರಿಸಿಕೊಳ್ಳಿ ಎಂದು ಹೇಳಿದ್ದೆವು. ಈ ಜಾತಿಯ ವಿಷಯಕ್ಕೆ ಸಂಬಂಧಿಸಿದಂತೆ ನಾವು ಯಾವುದೇ ತೀರ್ಮಾನ ತೆಗೆದುಕೊಂಡರೂ ಕೂಡ ಪ್ರತಿಯೊಂದು ಜಾತಿಗೂ ತಮ್ಮ ಬೇಡಿಕೆ ಈಡೇರಲಿಲ್ಲ ಎಂಬ ಕಿರಿಕಿರಿ ಉಳಿಯುತ್ತದೆ ಎನ್ನುವುದು ನಮಗೆ ಮನದಟ್ಟಾಗಿದೆ. ಆದರೂ ಕೂಡ ಭಾರತದ ರಾಜಕೀಯ ವ್ಯವಸ್ಥೆ ಸುಲಲಿತವಾಗಿ ಯಶಸ್ವಿಯಾಗುವಂತೆ ಮಾಡುವ ನಿಟ್ಟಿನಲ್ಲಿ ಪ್ರತಿಯೊಂದು ಸಮಾಜ ಸ್ವೀಕಾರಾರ್ಹ ಮಾರ್ಗ ಅನುಸರಿಸಿ ಒಗ್ಗಟ್ಟಿನಿಂದ ನೂತನ ಸಂವಿಧಾನ ರಚನೆಯನ್ನು ಜಾರಿಗೆ ತರುವುದು ಅತ್ಯಗತ್ಯವಾಗಿದೆ. ಇಂತಹದ್ದೊಂದು ಉನ್ನತ ಧ್ಯೇಯಾದರ್ಶದ ಅರಿವಿನಿಂದ ಮಾತ್ರ ಬ್ರಿಟಿಷ್ ರಾಷ್ಟ್ರದ ವಸಾಹತು ಸಂವಿಧಾನದಲ್ಲಿ ಭಾರತಕ್ಕೆ ನೂತನ ಸ್ಥಾನ ಲಭಿಸುತ್ತದೆ.

ನಮ್ಮ ಕರ್ತವ್ಯ ಸ್ಪಷ್ಟವಾಗಿದೆ. ಜಾತಿ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜ–ಸಮಾಜಗಳ ಮಧ್ಯೆ ಏಕಾಭಿಪ್ರಾಯ ಮೂಡದೇ ಅದಕ್ಕೆ ತದ್ವಿರುದ್ಧವಾಗಿ ನೂತನ ಸಂವಿಧಾನ ರಚನೆಗೆ ಅಡ್ಡಿ ನಿರ್ಮಾಣವಾಗುವ ಆತಂಕ ಸರ್ಕಾರಕ್ಕೆ ಉಂಟಾದಲ್ಲಿ ಸರ್ಕಾರ ಕಠಿಣ ಕ್ರಮ ಅನುಸರಿಸಿ ಕಾರ್ಯ ಪೂರ್ಣಗೊಳಿಸಬೇಕಾಗುತ್ತದೆ. ಈ ಕಾರಣಕ್ಕಾಗಿ ನಾವು ಈ ಮೊದಲೇ ಮಾತು ನೀಡಿದಂತೆ ಮತ್ತು ಕಳೆದ ಎರಡು ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಭಾರತದ ವಿವಿಧ ಜಾತಿಯ ಪ್ರತಿನಿಧಿಗಳು ಮಾಡಿದ ವಿನಂತಿ ಮೇರೆಗೆ ಮತ್ತು ಈ ಮೊದಲೇ ಸ್ಪಷ್ಟಪಡಿಸಿದಂತೆ ಭಾರತದ ಪ್ರಾಂತೀಯ ಕಾನೂನು ಮಂಡಳಿಗಳಲ್ಲಿ ವಿವಿಧ ಜಾತಿಯ ಪ್ರತಿನಿಧಿಗಳ ಪ್ರಮಾಣ ಎಷ್ಟಿರಬೇಕೆನ್ನುವುದನ್ನು ಬ್ರಿಟಿಷ್ ಸರ್ಕಾರ ಈ ಮೂಲಕ ಪ್ರಕಟಿಸುತ್ತದೆ. ನೂತನ ಸಂವಿಧಾನ ರಚನೆಯ ಮಸೂದೆಯನ್ನು ಸಂಸತ್ತಿಗೆ ಸಲ್ಲಿಸುವ ಮುನ್ನ ನಾವು ಪ್ರಕಟಿಸಿದ ತೀರ್ಮಾನವನ್ನು ಪ್ರತಿಯೊಂದು ಸಮಾಜ ಕೂಲಂಕಷವಾಗಿ ಪರಿಶೀಲಿಸಿ ನಮಗೆ ತಮ್ಮ ಸೂಕ್ತ ನಿರ್ಣಯ ಸಲ್ಲಿಸಬೇಕು.

ನಾವು ಸಿದ್ಧಪಡಿಸಿರುವ ಪ್ರಸ್ತಾವನೆಗೆ ಕಾಯ್ದೆ ಸ್ವರೂಪ ನೀಡುವುದಕ್ಕಾಗಿ ಸಂಸತ್ತಿನ ಎದುರು ಮಂಡಿಸುವ ಮುನ್ನ ಒಂದು ವೇಳೆ ಎಲ್ಲ ಭಾರತೀಯ ಪ್ರತಿನಿಧಿಗಳು ಸಹಮತದಿಂದ ಇನ್ನೊಂದು ಪ್ರಸ್ತಾವನೆಯನ್ನು ತಯಾರಿಸಿದ್ದರಾದರೆ ಅದರಿಂದ ಸರ್ಕಾರಕ್ಕೆ ಸಂತೋಷವಾಗುತ್ತದೆ. ಆದರೆ ಹಿಂದಿನ ಅನುಭವಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಈ ವಿಚಾರದಲ್ಲಿ ಯಾವುದೇ ಮಾತುಕತೆಯಾಗಲಿ ಅಥವಾ ಸಂಧಾನ ಫಲಪ್ರದವಾಗುವ ಸಾಧ್ಯತೆ ಇಲ್ಲ. ಹೀಗಾಗಿ ಭಾರತೀಯ ನಾಯಕರು ಒಂದು ವೇಳೆ ನೂತನ

---

೧. ಜನತಾ: ಆಗಸ್ಟ್ ೨೭, ೧೯೩೨

ಪ್ರಸ್ತಾವನೆ ಸಿದ್ಧಪಡಿಸುವುದಕ್ಕೆ ಆರಂಭಿಸುವ ಮಾತುಕತೆಯಲ್ಲಿ ಸರ್ಕಾರ ಪಾಲ್ಗೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ವೇಳೆ ಭಾರತೀಯ ನಾಯಕರು ತಮ್ಮ ತಮ್ಮೊಳಗಿನ ವೈಯಕ್ತಿಕ ಹಿತಾಸಕ್ತಿಗಳನ್ನು ಕಡೆಗಣಿಸಿ ಎಲ್ಲರ ಹಿತದೃಷ್ಟಿಯಿಂದ ಇಂತಹದ್ದೊಂದು ಪ್ರಸ್ತಾವನೆಯನ್ನು ನಮ್ಮ ಎದುರು ಮಂಡಿಸಿದಲ್ಲಿ ನಮ್ಮ ಪ್ರಸ್ತಾವನೆಯನ್ನು ಮರಳಿ ಹಿಂಪಡೆಯುವ ಮತ್ತು ನೂತನ ಪ್ರಸ್ತಾವನೆಯನ್ನು ಸ್ವೀಕರಿಸಲು ಸರ್ಕಾರಕ್ಕೆ ಅತೀವ ಸಂತೋಷದಿಂದ ಒಪ್ಪಿಗೆ ಸೂಚಿಸುತ್ತದೆ. ಒಂದು ವೇಳೆ ವಿಶಿಷ್ಟ ಪ್ರಾಂತ್ಯವೊಂದು ಎಲ್ಲರ ಸಹಮತದ ಮೇರೆಗೆ ನೂತನ ಪ್ರಸ್ತಾವನೆ ಸಿದ್ಧಪಡಿಸಿದರೆ ಆ ಪ್ರಾಂತ್ಯಕ್ಕೆ ಮಾತ್ರ ನಮ್ಮ ಪ್ರಸ್ತಾವನೆ ರದ್ದುಗೊಳಿಸಿ ಸಹಮತದ ಪ್ರಸ್ತಾವನೆ ಜಾರಿಗೊಳಿಸಲಾಗುವುದು.

ಸರ್ಕಾರದ ಇಂದಿನ ತೀರ್ಮಾನದಲ್ಲಿ ಲೋಪದೋಷಗಳನ್ನು ಎತ್ತಿ ತೋರಿಸುವ ಮುನ್ನ ಯಾವ ಪರಿಸ್ಥಿತಿಯಲ್ಲಿ ಸರ್ಕಾರ ಇಂತಹ ತೀರ್ಮಾನಕ್ಕೆ ಬರಬೇಕಾಯಿತು ಎನ್ನುವುದರ ಬಗ್ಗೆ ವಿಚಾರ ಮಾಡುವುದು ಅತ್ಯಗತ್ಯವಾಗಿದೆ. ಹಿತಾಸಕ್ತಿಗಳ ರಕ್ಷಣೆಗಾಗಿ ಅಲ್ಪಸಂಖ್ಯಾತ ವರ್ಗಕ್ಕೆ ಸ್ವತಂತ್ರ ಮತಕ್ಷೇತ್ರ ಅತ್ಯಗತ್ಯ ಎನ್ನುವುದು ಹಲವಾರು ವರ್ಷಗಳಿಂದ ವ್ಯಕ್ತವಾಗುತ್ತಿದೆ ಎನ್ನುವ ವಿಚಾರವನ್ನು ಮೊದಲು ಗಮನಿಸಬೇಕಾಗುತ್ತದೆ. ಹೀಗಾಗಿ ಸಿದ್ಧಪಡಿಸಿರುವ ಕಾನೂನುಬದ್ಧ ಮತ್ತು ಪ್ರಗತಿಪರ ಪ್ರಸ್ತಾವನೆಗಳ ಪೈಕಿ ಇದರಲ್ಲಿ ಪ್ರತ್ಯೇಕಿಸಲ್ಪಟ್ಟ ಸ್ವತಂತ್ರ ಮತಕ್ಷೇತ್ರವನ್ನು ಸೃಷ್ಟಿಸಲಾಗಿದೆ. ಎಲ್ಲ ಕಡೆ ಒಂದೇ ರೀತಿಯ ಮತಕ್ಷೇತ್ರಗಳು ಇರಬೇಕು ಎಂದು ಸರ್ಕಾರಕ್ಕೆ ಸಾಕಷ್ಟು ಇಚ್ಛೆ ಇದ್ದರೂ ಸ್ವತಂತ್ರ ಮತಕ್ಷೇತ್ರ ಮತ್ತು ಸಂರಕ್ಷಣೆಯ ನಿಯಮಾವಳಿಗಳು ಬೇಕು ಎನ್ನುವುದನ್ನು ಸರ್ಕಾರ ನೋಡಿಯೂ ನೋಡದಂತೆ ಇರಲು ಸಾಧ್ಯವಿಲ್ಲ. ಅಲ್ಪಸಂಖ್ಯಾತ ಸಮಾಜಕ್ಕೆ ಇದರ ಅಗತ್ಯ ಏಕೆ ಎನ್ನುವುದರ ಕುರಿತು ಚರ್ಚಿಸುವುದರಿಂದ ಯಾವುದೇ ಲಾಭವಿಲ್ಲ. ಗತಕಾಲಕ್ಕಿಂತ ಭವಿಷ್ಯದ ಕುರಿತು ಚಿಂತನೆ ಮಾಡುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ. ಭಾರತದಲ್ಲಿನ ಎಲ್ಲ ಚಿಕ್ಕಪುಟ್ಟ ಜಾತಿಗಳು ಏಕ ಮನಸ್ಸಿನಿಂದ ಮತ್ತು ವಿಶ್ವಾಸದಿಂದ ಕಾರ್ಯೋನ್ಮುಖರಾಗಲಿದ್ದಾರೆ ಮತ್ತು ಸಂರಕ್ಷಣೆಯು ಬೇಕು ಎನ್ನುವ ಭಾವನೆ ಯಾರಿಗೂ ಬಾರದು ಎಂದು ಭವಿಷ್ಯತ್ತಿನ ದಿನಗಳನ್ನು ನಾನು ನಿರೀಕ್ಷಿಸುತ್ತಿದ್ದೇನೆ. ಆದರೆ ಸದ್ಯದ ಇಂದಿನ ಪರಿಸ್ಥಿತಿಯನ್ನು ಗಮನದಲ್ಲಿ ಇರಿಸಿಕೊಂಡು ಅದಕ್ಕೆ ತಕ್ಕಂತೆ ಅಪವಾದ ಎನ್ನಿಸುವಂತಹ ಈ ಪ್ರಸ್ತಾವನೆಯನ್ನು ಪ್ರಸ್ತಾಪ ಮಾಡುವುದು ಸರ್ಕಾರದ ಭಾಗವಾಗಿತ್ತು.

ಈ ನಿರ್ಣಯದ ವೈಶಿಷ್ಟ್ಯಗಳಲ್ಲಿ ಎರಡು ಮಹತ್ವದ ಪ್ರಶ್ನೆಗಳ ಬಗ್ಗೆ ಉಲ್ಲೇಖಿಸುವುದು ನನಗೆ ಅಗತ್ಯವೆಂದು ನನಗೆ ಅನ್ನಿಸುತ್ತದೆ. ಒಂದು ಪ್ರಶ್ನೆ ಅಸ್ಪೃಶ್ಯ ಸಮಾಜಕ್ಕೆ ಸಂಬಂಧಿಸಿದ್ದು ಮತ್ತು ಇನ್ನೊಂದು ಮಹಿಳೆಯರಿಗೆ ಸಂಬಂಧಿಸಿದ್ದು ಆಗಿದೆ. ಈ ಎರಡು ವರ್ಗಗಳಿಗಾಗಿ ಯಾವುದೇ ಪ್ರಸ್ತಾವನೆಯಲ್ಲಿ ವಿಶೇಷ ಉಲ್ಲೇಖ ಮಾಡಲಾಗುವುದಿಲ್ಲವೋ ಅಂತಹ ಪ್ರಸ್ತಾವನೆ ಸರ್ಕಾರಕ್ಕೆ ಮಾನ್ಯವಾಗುವುದಿಲ್ಲ. ಅಸ್ಪೃಶ್ಯರಿಗೆ ಸಂಬಂಧಿಸಿದಂತೆ ವಿಚಾರ ಮಾಡುವ ಸಂದರ್ಭದಲ್ಲಿ ಎರಡು ವಿಷಯಗಳ ಬಗ್ಗೆ ನಾವು ಸಾಕಷ್ಟು ಗಮನ ಹರಿಸಿದ್ದೇವೆ. ಯಾವ ಪ್ರದೇಶದಲ್ಲಿ ಅಸ್ಪೃಶ್ಯರ ವಸತಿ ಪ್ರದೇಶಗಳು ಹೆಚ್ಚಿನ ಸಂಖ್ಯೆಯಲ್ಲಿ ಇವೆಯೋ ಆ ಪ್ರಾಂತ್ಯದಲ್ಲಿ ಅಥವಾ ಆ ಪ್ರದೇಶದಲ್ಲಿರುವವರ ವಿಶ್ವಾಸಗಳಿಸಿಕೊಂಡಿರುವ ಮತ್ತು ಅವರ ಪೈಕಿ ಅವರು ಇಚ್ಛಿಸುವ ಪ್ರತಿನಿಧಿಯನ್ನು ಆಯ್ಕೆ ಮಾಡುವ ಅವಕಾಶವನ್ನು ಅಸ್ಪೃಶ್ಯ ಸಮಾಜಕ್ಕೆ ನೀಡುವ ವಿಚಾರ ಮತ್ತು ಇದನ್ನು ಕಾರ್ಯರೂಪಕ್ಕೆ ಇಳಿಸುವ ಸಂದರ್ಭದಲ್ಲಿ ಇಲ್ಲಿಯವರೆಗೆ ಪ್ರತ್ಯೇಕವಾಗಿ ವಾಸಿಸುತ್ತಿರುವಂತೆ ಅವರಿಗೆ ಅದೇ ರೀತಿಯ ಮತದಾನ ಪದ್ಧತಿ ನೀಡದಿರುವುದು ಎರಡನೇ ವಿಚಾರವಾಗಿದೆ. ಈ ಎರಡು ವಿಷಯಗಳನ್ನು ಅನುಸರಿಸಿ ಅಸ್ಪೃಶ್ಯ ಸಮಾಜದಲ್ಲಿನ ಮತದಾರರು ಹಿಂದೂಗಳ ಸಂಯುಕ್ತ ಮತ ಕ್ಷೇತ್ರದಲ್ಲಿ ಮತದಾನ ಮಾಡುವುದು ಮತ್ತು ತಮ್ಮಿಷ್ಟದ ಪ್ರತಿನಿಧಿಯನ್ನು ಆಯ್ಕೆ ಮಾಡುವಂತಹ ವ್ಯವಸ್ಥೆ

ಮಾಡಲಾಗಿದೆ. ಈ ಕಾರಣಕ್ಕಾಗಿ ಅಸ್ಪೃಶ್ಯ ಸಮಾಜವನ್ನು ಹೀಯಾಳಿಸುವುದು ಸ್ಪೃಶ್ಯ ವರ್ಗದ ಉಮೇದುವಾರನಿಗೆ ಸಾಧ್ಯವಾಗಲಿಕ್ಕಿಲ್ಲ ಮತ್ತು ಅಸ್ಪೃಶ್ಯ ಸಮಾಜದ ಒಲವು ಗಿಟ್ಟಿಸಿಕೊಳ್ಳುವುದಕ್ಕೆ ತಾವೇ ಸ್ವತಃ ಬದಲಾಗುವಂತಹ ಪ್ರವೃತ್ತಿ ಬೆಳೆಯುತ್ತದೆ. ಇದಲ್ಲದೇ ಮುಂದಿನ ಇಪ್ಪತ್ತು ವರ್ಷಗಳವರೆಗೆ ಅವರಿಗೆ ಇನ್ನೊಂದು ವಿಶೇಷ ಸೌಲಭ್ಯ ನೀಡಲಾಗಿದ್ದು, ಅಸ್ಪೃಶ್ಯರಿಗೆ ಮೀಸಲಾಗಿರುವ ಸ್ವತಂತ್ರ ಮತಕ್ಷೇತ್ರಗಳನ್ನು ಸ್ಥಾಪಿಸುವ ಮೂಲಕ ಅವರು ತಮ್ಮ ಸ್ವಂತದ ಪ್ರತಿನಿಧಿಯನ್ನು ಆಯ್ಕೆ ಮಾಡಬಹುದಾಗಿದೆ. ಈ ಪ್ರಸ್ತಾವನೆಯಿಂದ ಅಸ್ಪೃಶ್ಯ ಸಮಾಜದಲ್ಲಿನ ಕೆಲವು ಮತದಾರರಿಗೆ ಎರಡು ಮತಾಧಿಕಾರ ಲಭಿಸುತ್ತದೆ. ಈ ಸೌಲಭ್ಯ ಅಪೂರ್ವವಾದದ್ದಾದರೂ ಅಸ್ಪೃಶ್ಯ ಸಮಾಜದ ಸ್ಥಿತಿಗತಿ ಮತ್ತು ಆ ವರ್ಗದೊಂದಿಗೆ ಇತರ ಸಮಾಜದ ವರ್ತನೆ ಇತ್ಯಾದಿ ಸಂಗತಿಗಳನ್ನು ಗಮನದಲ್ಲಿ ಇರಿಸಿಕೊಂಡು ಇಂತಹ ಸೌಲಭ್ಯವನ್ನು ಅಸ್ಪೃಶ್ಯ ವರ್ಗಕ್ಕೆ ನೀಡುವುದು ಅವರ ಅಭಿವೃದ್ಧಿಯ ಉದ್ದೇಶದಿಂದ ಅತ್ಯಗತ್ಯವಾಗಿದೆ.

ಮಹಿಳಾ ಮತಾಧಿಕಾರಕ್ಕೆ ಸಂಬಂಧಿಸಿದಂತೆ ಚಿಂತನೆ ಮಾಡುವ ಸಂದರ್ಭದಲ್ಲಿ ಆಧುನಿಕ ಕಾಲಘಟ್ಟದಲ್ಲಿ ಒಂದು ವಿಷಯವನ್ನು ಅರ್ಥೈಸಿಕೊಳ್ಳುವಲ್ಲಿ ಎಲ್ಲರೂ ವಿಫಲರಾಗಿದ್ದಾರೆ. ಹಿಂದಿ ಮಹಿಳೆಯರ ಚಳವಳಿಯು ಹಿಂದಿ ರಾಷ್ಟ್ರದ ಪ್ರಗತಿಗೆ ಅತ್ಯಂತ ಪ್ರಮುಖ ಅಂಶವಾಗಿದ್ದು, ಸುಶಿಕ್ಷಿತ ಮತ್ತು ಪ್ರಭಾವಶಾಲಿ ನಾಗರಿಕರಾಗಿ ಭಾರತದಲ್ಲಿ ಮಹಿಳಾ ವರ್ಗ ಹಿಂದಿ ರಾಷ್ಟ್ರದ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗದೇ ಇದ್ದರೆ ಅಂತಹ ರಾಷ್ಟ್ರಕ್ಕೆ ದೊರೆಯಬೇಕಾಗಿರುವ ಸ್ಥಾನಮಾನ ಲಭಿಸುವುದಿಲ್ಲ. ಮಹಿಳೆಯರಿಗೆ ಮತಾಧಿಕಾರ ನೀಡುವ ಸಂದರ್ಭದಲ್ಲಿ ಜಾತಿ ವೈಶಿಷ್ಟ್ಯ ಧೋರಣೆ ಅನುಸರಿಸುವುದು ಅನೇಕರಿಗೆ ರುಚಿಸದು. ಆದರೆ ಮಹಿಳೆಯರಿಗೆ ಮೀಸಲು ಸ್ಥಾನಗಳನ್ನು ಇರಿಸುವುದು ಮತ್ತು ಸ್ಥಾನಗಳನ್ನು ಎಲ್ಲ ಸಮಾಜಗಳಿಗೆ ಏಕರೂಪವಾಗಿ ಹಂಚಿಕೆ ಮಾಡುವ ವಿಚಾರ ಒಂದು ಅಗತ್ಯ ಅನ್ನಿಸಿದರೆ ಆ ರೀತಿ ಮಾಡದೇ ಬೇರೆ ಗತ್ಯಂತರವಿಲ್ಲ.

ಇಷ್ಟು ಸ್ಪಷ್ಟಪಡಿಸಿದ ಬಳಿಕ ವಿವಿಧ ಜಾತಿಗಳ ಪರಸ್ಪರ ವಿರೋಧಿ ಬೇಡಿಕೆಗಳನ್ನು ಮತ್ತು ಹಕ್ಕುಗಳನ್ನು ಮಂಡಿಸಿರುವ ಎಲ್ಲ ಹಿಂದೂ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ, ಎಲ್ಲರ ಎಲ್ಲ ಬೇಡಿಕೆಗಳನ್ನು ಪೂರೈಸುವ ಸಾಮರ್ಥ್ಯ ಈ ಪ್ರಸ್ತಾವನೆಯಲ್ಲಿ ಇರಲಿಕ್ಕಿಲ್ಲ ಮತ್ತು ಈ ದೃಷ್ಟಿಯಲ್ಲಿ ಇದು ಅಪೂರ್ಣ ಎಂದು ಎನ್ನಿಸಿದರೂ ಭಾರತದ ರಾಜಕೀಯ ಪ್ರಗತಿಯ ಹಾದಿಯನ್ನು ಮುಕ್ತಗೊಳಿಸುವ ನಿಟ್ಟಿನಲ್ಲಿ ಎಲ್ಲರೂ ಇದನ್ನು ಸ್ವೀಕರಿಸಬೇಕು ಎನ್ನುವುದು ನನ್ನ ವಿನಂತಿ. ಈ ಪ್ರಸ್ತಾವನೆಗೆ ಹೆಸರಿಟ್ಟು ಅದನ್ನು ಪದೇ ಪದೇ ಧಿಕ್ಕರಿಸುವವರಿಗೆ ಇದಕ್ಕಿಂತ ಉತ್ತಮವಾದ ಪ್ರಸ್ತಾವನೆಯನ್ನು ಅವರು ಸಿದ್ಧಪಡಿಸಲು ಸಾಧ್ಯವಾಗಲಿಲ್ಲವೆಂಬ ವಸ್ತುಸ್ಥಿತಿ ದಯವಿಟ್ಟು ಮರೆಯಬಾರದು. ಅಂತಿಮವಾಗಿ ಹಿಂದಿ ಜನರಿಗೆ ಈ ಸಮಸ್ಯೆಯನ್ನು ಸಮಾಧಾನದಿಂದ ಮತ್ತು ಶಾಶ್ವತವಾಗಿ ಪರಿಹರಿಸಲು ಸಾಧ್ಯವಿದೆ. ನಮ್ಮ ಈ ಪ್ರಸ್ತಾವನೆಯಿಂದ ತಾತ್ಕಾಲಿಕವಾಗಿಯಾದರೂ ತೊಂದರೆ ಪರಿಹಾರವಾಗಿ ಪ್ರಗತಿಯ ಮುಂದಿನ ಹಾದಿ ಮುಕ್ತವಾಗಿದೆ ಅದು ದೊಡ್ಡ ಕೆಲಸ ಎಂದು ನಾವು ಭಾವಿಸುತ್ತೇವೆ ಅಲ್ಲದೇ ಈ ತೀರ್ಮಾನಕ್ಕೆ ಸಂಬಂಧಿಸಿದಂತೆ ಇಷ್ಟೇ ನಮ್ಮ ಅಪೇಕ್ಷೆ ಆಗಿದೆ. ಇಂತಹ ಮಹತ್ವದ ಸಮಸ್ಯೆಗಳಂತೆ ಇನ್ನೂ ಅನೇಕ ಸಮಸ್ಯೆಗಳಿದ್ದು, ಈ ಸಮಸ್ಯೆಯು ಬಗೆಹರಿದ ನಂತರ ಇದೇ ರೀತಿ ಪರಿಹಾರಗೊಳ್ಳುವ ಇನ್ನೊಂದು ಸಮಸ್ಯೆಯತ್ತ ಹಿಂದಿ ನಾಯಕರು ತಮ್ಮ ಗಮನ ಕೇಂದ್ರೀಕರಿಸಿಕೊಂಡು ರಾಜಕೀಯ ಪ್ರಜ್ಞೆ ಬೆಳೆಯುವ ನಿಟ್ಟಿನಲ್ಲಿ ಇನ್ನೊಂದು ಹೆಜ್ಜೆ ಮುಂದಿರಿಸಬೇಕು ಎನ್ನುವುದು ನಮ್ಮ ಇಚ್ಛೆ. ಜಾತಿ ಜಾತಿಗಳ ಮಧ್ಯೆ ಸೌಹಾರ್ದ ಸಂಬಂಧ ಬೆಳೆದು ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡದೇ ಇದ್ದರೆ ಹಿಂದಿ ರಾಷ್ಟ್ರದ ಪ್ರಗತಿಯ ಹೆಜ್ಜೆಗಳು ಮುಂದೆ ಸಾಗಲಾರವು ಎನ್ನುವ ವಿಚಾರವನ್ನು ಗಮನದಲ್ಲಿ ಇರಿಸಿಕೊಂಡು ಈ ಮಹತ್ವದ ಸಂದರ್ಭದಲ್ಲಿ ನಾಯಕರು ಎನ್ನಿಸಿಕೊಂಡವರು ತಮ್ಮ ಧೋರಣೆಗೆ ಸ್ಪಷ್ಟ ರೂಪ ನೀಡಲಿದ್ದಾರೆ

ಎನ್ನುವುದು ನಮ್ಮ ಆಶಯ.[೧]

## ಅಸ್ಪೃಶ್ಯ ಸಮಾಜದ ಪಾಲಿಗೆ ಈ ನಿರ್ಣಯ ಅಪೂರ್ಣ, ಅತೃಪ್ತ ಮತ್ತು ಅನ್ಯಾಯಕಾರಕವಾದುದು

ಕಳೆದ ದಿನಾಂಕ ೧೭ರಂದು ಶ್ರೀ ರಾಮ್ಸೆ ಮ್ಯಾಕ್‌ಡೊನಾಲ್ಡ್ ಅವರು ಹಿಂದೂ, ಮುಸಲ್ಮಾನ್, ಸಿಖ್, ಕ್ರೈಸ್ತ, ಅಸ್ಪೃಶ್ಯ ಇತ್ಯಾದಿ ಸಮಾಜಗಳಿಗೆ ಸಂಬಂಧಿಸಿದಂತೆ ಪ್ರಕಟಿಸಿದ ತೀರ್ಮಾನಕ್ಕೆ ಸಂಬಂಧಿಸಿದಂತೆ ಡಾ. ಅಂಬೇಡ್ಕರ್ ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿದರು:

ಪ್ರಧಾನ ಮಂತ್ರಿ ಮ್ಯಾಕ್ ಡೊನಾಲ್ಡ್ ಅವರು ಜಾತಿ ವಿಷಯಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳುವ ತೀರ್ಮಾನವು ಎಲ್ಲರನ್ನು ಸಂತೃಪ್ತಪಡಿಸಲಿದೆ ಎನ್ನುವ ಅಪೇಕ್ಷೆಯನ್ನು ಯಾರೂ ವ್ಯಕ್ತಪಡಿಸಿರಲಿಲ್ಲ. ಈ ಕಾರಣಕ್ಕಾಗಿ ಅಸ್ಪೃಶ್ಯ ಸಮಾಜದ ವತಿಯಿಂದ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ನನ್ನ ಸಹಮಿತ್ರ ರಾವ್ ಬಹಾದ್ದೂರ್ ಶ್ರೀನಿವಾಸನ್ ಅವರೊಂದಿಗೆ ಅಸ್ಪೃಶ್ಯ ಸಮಾಜದ ರಾಜಕೀಯ ಹಕ್ಕುಗಳಿಗಾಗಿ ಮಂಡಿಸಿದ್ದ ಬೇಡಿಕೆಗಳು ಯಥಾವತ್ ಲಭಿಸುತ್ತವೆ ಎನ್ನುವ ಆಶಯ ಕೂಡ ನಮ್ಮಲ್ಲಿ ಇರಲಿಲ್ಲ ಬದಲಿಗೆ ನಮ್ಮ ಬೇಡಿಕೆಗಳಲ್ಲಿ ಸ್ವಲ್ಪಮಟ್ಟಿಗೆ ಮಾರ್ಪಾಡು ಆಗಬಹುದು ಎನ್ನುವುದು ನಮ್ಮ ಅನಿಸಿಕೆಯಾಗಿತ್ತು. ಆದರೆ ತೀರ್ಮಾನ ಪರಿಶೀಲಿಸಿದ ಬಳಿಕ ಅದರಲ್ಲಿ ಅತ್ಯಂತ ನಿರ್ದಯದಿಂದ ಕೆಲವೊಂದು ಬೇಡಿಕೆಗಳನ್ನು ಅಳಿಸಿಹಾಕಲಾಗಿದೆ ಎನ್ನಿಸುತ್ತದೆ. ಪ್ರಾಂತೀಯ ಕಾನೂನು ಮಂಡಳಿಯಲ್ಲಿ ನಮಗೆ ಲಭಿಸಿರುವ ಸ್ಥಾನಗಳು ಅಪೂರ್ಣವಾಗಿರುವ ಕಾರಣ ಕಾನೂನು ಮಂಡಳಿಯಲ್ಲಿ ಅಸ್ಪೃಶ್ಯರ ಪ್ರತಿನಿಧಿಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಾಣಿಸಿಕೊಳ್ಳಬೇಕಾಗುತ್ತದೆ. ಯಾವ ಪ್ರಮಾಣದಲ್ಲಿ ಅವರ ಪ್ರಭಾವ ಅಲ್ಲಿ ಇರಬೇಕಾಗಿತ್ತೋ ಅಷ್ಟು ಇರುವುದಿಲ್ಲ. ಅಂದರೆ ಅಸ್ಪೃಶ್ಯರಿಗೆ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಕನಿಷ್ಠ ಎಷ್ಟು ಸ್ಥಾನಗಳು ಲಭಿಸಬೇಕಿತ್ತೋ ಅಷ್ಟು ಸ್ಥಾನಗಳು ಕೂಡ ಈ ತೀರ್ಮಾನದಿಂದ ಲಭಿಸಿಲ್ಲ. ಹೀಗಾಗಿ ಈ ತೀರ್ಮಾನ ಅಸ್ಪೃಶ್ಯರ ದೃಷ್ಟಿಯಲ್ಲಿ ಅಪೂರ್ಣ, ಅಸಮಾಧಾನಕರ ಮತ್ತು ಅನ್ಯಾಯದಿಂದ ಕೂಡಿದ್ದಾಗಿದೆ ಎಂದು ಅರ್ಥೈಸಬೇಕಾಗುತ್ತದೆ.

ಅಸ್ಪೃಶ್ಯರಿಗೆ ಸಂಬಂಧಿಸಿದಂತೆ ಈ ವೈಷಮ್ಯ ಮತ್ತು ಪಕ್ಷಪಾತತನವನನ್ನು ಈ ತೀರ್ಮಾನದ ಹೆಜ್ಜೆ ಹೆಜ್ಜೆಯಲ್ಲೂ ವ್ಯಕ್ತವಾಗಿರುವುದನ್ನು ಯಾರೂ ಸಮರ್ಥಿಸಲಾರರು. ಇಂತಹ ಅನ್ಯಾಯ ಆಗಲೇಬಾರದಾಗಿತ್ತು ಮತ್ತು ಈ ಪಕ್ಷಪಾತದೊಳಗೆ ಇನ್ನೊಂದು ಪಕ್ಷಪಾತ ಎನ್ನುವಂತೆ ಪಂಜಾಬ್ ವಿಷಯ ಕಳಶಪ್ರಾಯವಾಗಿದೆ. ಇತರ ಪ್ರಾಂತ್ಯದ ಅಸ್ಪೃಶ್ಯರಿಗೆ ಅಪೂರ್ಣ ಅನ್ನಿಸಬಹುದಾದರೂ ಕೆಲವೊಂದು ಸ್ವತಂತ್ರ ಮತಕ್ಷೇತ್ರಗಳು ಲಭಿಸಿವೆ. ಆದರೆ ಪಂಜಾಬ್‌ದಲ್ಲಿನ ಅಸ್ಪೃಶ್ಯ ಸಮಾಜಕ್ಕೆ ಸ್ವತಂತ್ರ ರಾಜಕೀಯ ಹಕ್ಕು ಮತ್ತು ಪ್ರಾತಿನಿಧಿತ್ವ ಎಳ್ಳು ಕಾಳಿನಷ್ಟು ಲಭಿಸಿಲ್ಲ. ಇದು ನನಗೆ ಪಂಜಾಬ್‌ದಿಂದ ಲಭಿಸಿರುವ ಸ್ಪಷ್ಟ ಮಾಹಿತಿಯಾಗಿದ್ದು, ಅದನ್ನು ನೋಡಿದ ಮೇಲೆ ಉತ್ತರ ಭಾರತದಲ್ಲಿನ ಎರಡು ಇನ್ನಿತರ ಪ್ರಾಂತ್ಯಗಳಿಗೆ ಹೋಲಿಸಿದರೆ ಪಂಜಾಬ್ ದಲ್ಲಿನ ಅಸ್ಪೃಶ್ಯ ಸಮಾಜದ ಸ್ಥಿತಿಗತಿ ಅತ್ಯಂತ ಹೀನಾಯವಾಗಿದೆ. ಪಂಜಾಬ್‌ದ ಅಸ್ಪೃಶ್ಯ ಸಮಾಜವು ಅಮಾನವೀಯ ಸಾಮಾಜಿಕ ಅಪರಾಧ ಮತ್ತು ಅನ್ಯಾಯದಡಿ ನರಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಪಂಜಾಬದ ಅಸ್ಪೃಶ್ಯ ಸಮಾಜಕ್ಕೆ ತನ್ನ ಹಿತರಕ್ಷಣೆಗಾಗಿ ಮತ್ತು ಬೆಳವಣಿಗೆಗಾಗಿ ಸ್ವತಂತ್ರ ಮತಕ್ಷೇತ್ರ ಮತ್ತು

---

೧. ಜನತಾ: ಆಗಸ್ಟ್ ೨೭, ೧೯೩೨

ಮೀಸಲು ಸ್ಥಾನ ಸೇರಿದಂತೆ ವಿಶೇಷ ಅಗತ್ಯವಿದೆ.

ಇಂತಹ ವಸ್ತು ಸ್ಥಿತಿ ಮಧ್ಯೆಯೂ ಬ್ರಿಟಿಷ್ ಸರ್ಕಾರ ಪಂಜಾಬ್‌ನ ಅಸ್ಪೃಶ್ಯ ಸಮಾಜಕ್ಕಾಗಿ ಯಾವುದೇ ಸೌಲಭ್ಯ ನೀಡದಿರುವುದಕ್ಕೆ ಕಾರಣ ತಿಳಿಯುತ್ತಿಲ್ಲ. ನನ್ನ ಪ್ರಕಾರ ಈ ಅನ್ಯಾಯಕ್ಕೆ ಕಾರಣ ಪಂಜಾಬ್‌ದಲ್ಲಿನ ಇತರ ಸಮಾಜದ ಒತ್ತಡ ಮತ್ತು ಅಸ್ಪೃಶ್ಯರ ಅಸಹಾಯಕ ಬಡತನದ ಪರಿಸ್ಥಿತಿ. ಪಂಜಾಬದಲ್ಲಿನ ಇತರ ಪ್ರಬಲ ಸಮಾಜದ ಗಲಾಟೆಗೆ ಹೆದರಿ ಮತ್ತವರನ್ನು ಸಂತೃಪ್ತಗೊಳಿಸುವುದಕ್ಕೆ ಮತ್ತವರಿಗೆ ಸುಖಕರ ಹಾದಿಯನ್ನು ಮಾಡಿಕೊಡುವುದಕ್ಕಾಗಿ ಶತಶತಮಾನಗಳಿಂದ ಮೋಸಕ್ಕೆ ಒಳಗಾದಂತಹ ಅಸ್ಪೃಶ್ಯ ಸಮಾಜಕ್ಕೆ ಅತ್ಯಗತ್ಯವಾಗಿ ನ್ಯಾಯಯುತವಾಗಿ ಲಭಿಸಬೇಕಿರುವುದನ್ನು ಬೇರೆ ಸಮಾಜಗಳಿಗೆ ಸರ್ಕಾರ ನೀಡಿದೆ.

ಈ ರೀತಿಯ ಅನ್ಯಾಯ ಮತ್ತು ಪಕ್ಷಪಾತ ಈ ತೀರ್ಮಾನದಲ್ಲಿ ಇರುವ ಕಾರಣ ಅದರ ಬಗ್ಗೆ ಚರ್ಚಿಸುವುದಕ್ಕಾಗಿ ಅಖಿಲ ಭಾರತೀಯ ಶೋಷಿತ ವರ್ಗಗಳ ಒಕ್ಕೂಟದ ಸಭೆ ಶೀಘ್ರದಲ್ಲಿ ಸೇರಲಿದ್ದು, ಆ ಸಭೆಯಲ್ಲಿ ಈ ನಿರ್ಣಯಕ್ಕೆ ಅಸ್ಪೃಶ್ಯ ಸಮಾಜದ ಬೆಂಬಲ ಲಭಿಸುತ್ತದೆ ಎಂದು ನನಗೆ ಏನೂ ಅನ್ನಿಸುವುದಿಲ್ಲ.[೧]

ಈ ಐತೀರ್ಪು ಪ್ರಕಟವಾಗುತ್ತಲೇ ಅದನ್ನು ವಿರೋಧಿಸಿ ಮಹಾತ್ಮಾ ಗಾಂಧೀಜಿ ಅವರು ತಕ್ಷಣ ಆಮರಣ ಉಪವಾಸ ಸತ್ಯಾಗ್ರಹ ಘೋಷಣೆ ಮಾಡಿ ತಮ್ಮ ಉಪವಾಸ ಸತ್ಯಾಗ್ರಹದ ತೀರ್ಮಾನವನ್ನು ಪ್ರಧಾನಮಂತ್ರಿ ಜೆ. ರಾಮ್ಸೆ ಮ್ಯಾಕ್ ಡೋನಾಲ್ಡ್ ಅವರಿಗೆ ಆಗಸ್ಟ್ ೧೮, ೧೯೩೨ರಂದು ಪತ್ರ ಮುಖೇನ ಮಾಹಿತಿ ನೀಡಿದರು.

## ಪ್ರಧಾನ ಮಂತ್ರಿಗೆ ಮಹಾತ್ಮ ಗಾಂಧಿ ಅವರ ಪತ್ರ

ಯರವಡಾ ಕೇಂದ್ರ ಕಾರಾಗೃಹ
ಆಗಸ್ಟ್ ೧೮, ೧೯೩೨

ಆತ್ಮೀಯ ಮಿತ್ರರಿಗೆ

ಅಸ್ಪೃಶ್ಯ ವರ್ಗದವರ ಪ್ರಾತಿನಿಧಿತ್ವಕ್ಕೆ ಸಂಬಂಧಿಸಿದಂತೆ ನಾನು ಸರ್ ಸ್ಯಾಮುಯೆಲ್ ಹೋಅರ್ ಅವರಿಗೆ ದಿನಾಂಕ ಮಾರ್ಚ್ ೧೧ರಂದು ಬರೆದಿದ್ದ ಪತ್ರವನ್ನು ತಾವು ತಮ್ಮ ಸಚಿವ ಸಂಪುಟದಲ್ಲಿ ಚರ್ಚಿಸಿದ್ದೀರಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಪತ್ರವನ್ನು ಕೂಡ ಆ ಪತ್ರದ ಮುಂದುವರಿದ ಭಾಗ ಎಂದು ತಿಳಿದುಕೊಳ್ಳಬೇಕು.

ಅಲ್ಪಸಂಖ್ಯಾತರ ಪ್ರಾತಿನಿಧಿತ್ವಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ಸರ್ಕಾರ ತೆಗೆದುಕೊಂಡಿರುವ ತೀರ್ಮಾನವನ್ನು ನಾನು ಓದಿ ಅದರಲ್ಲಿನ ವಿಷಯವನ್ನು ಅಭ್ಯಸಿಸಿದೆ. ಸರ್ ಹೋಅರ್ ಅವರಿಗೆ ನಾನು ಬರೆದಿರುವ ಪತ್ರ ಮತ್ತು ನವೆಂಬರ್ ೧೩, ೧೯೩೨ರಂದು ಸೇಂಟ್ ಜೇಮ್ಸ್ ಅರಮನೆಯಲ್ಲಿ ಜರುಗಿದ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ನಾನು ಪ್ರಕಟಿಸಿದ ಧೋರಣೆಗೆ ಅನುಗುಣವಾಗಿ ನೀವು ಕೈಗೊಂಡಿರುವ ನಿರ್ಣಯವನ್ನು ಸಾಯುವವರೆಗೂ ವಿರೋಧಿಸಬೇಕಾಗುತ್ತದೆ. ಪ್ರಾಣತ್ಯಾಗ ಮಾಡುವುದಕ್ಕೆ ಇರುವ ಒಂದೇ ಮಾರ್ಗ ಎಂದರೆ ಅದು ಉಪವಾಸದ ಮೂಲಕ ಪ್ರಾಣತ್ಯಾಗ ಮಾಡುವುದು. ಉಪ್ಪು ಇಲ್ಲವೇ ಸೋಡಾ

---

೧. ಜನತಾ: ಆಗಸ್ಟ್ ೨೭, ೧೯೩೨

ಸೇವನೆ ಇಲ್ಲವೇ ಕೇವಲ ನೀರು ಕುಡಿದು ಉಪವಾಸ ಮಾಡಿ ಮರಣವನ್ನು ಸ್ವೀಕರಿಸುವ ನನ್ನ ನಿಶ್ಚಯವನ್ನು ಈ ಮೂಲಕ ಪ್ರಕಟಿಸುತ್ತಿದ್ದೇನೆ. ಈ ಆಮರಣ ಉಪವಾಸದ ವೇಳೆ ಬ್ರಿಟಿಷ್ ಸರ್ಕಾರ ಸ್ವಯಂ ಪ್ರೇರಣೆಯಿಂದಾಗಲಿ ಅಥವಾ ಜನರ ಒತ್ತಡಕ್ಕೆ ಒಳಗಾಗಿ ತನ್ನ ನಿರ್ಣಯವನ್ನು ಮರುಪರಿಶೀಲಿಸಿ ಜಾತಿವಾರು ಮತಕ್ಷೇತ್ರದ ಪ್ರಸ್ತಾವನೆಯನ್ನು ಹಿಂಪಡೆದುಕೊಂಡಲ್ಲಿ ನನ್ನ ಉಪವಾಸ ಸತ್ಯಾಗ್ರಹ ನಿಲ್ಲುತ್ತದೆ. ಅಸ್ಪೃಶ್ಯರ ಪ್ರತಿನಿಧಿಗಳು ಸಾಮಾನ್ಯ ಮತಕ್ಷೇತ್ರದಿಂದ ಆಯ್ಕೆಯಾಗಬೇಕು ಮತ್ತು ಎಲ್ಲರಿಗೂ ಸಮಾನ ಅಧಿಕಾರ ಲಭಿಸಬೇಕು. ಈ ರೀತಿಯಾಗಿ ಜಾತಿವಾರು ತೀರ್ಮಾನವನ್ನು ಸರ್ಕಾರ ಹಿಂದೆ ಪಡೆಯದಿದ್ದಲ್ಲಿ ಸೆಪ್ಟಂಬರ್ ೨೦ರಿಂದ ನನ್ನ ಉಪವಾಸ ಸತ್ಯಾಗ್ರಹ ಆರಂಭವಾಗುತ್ತದೆ.

ಈ ನನ್ನ ಪತ್ರವನ್ನು ತಂತಿಯ ಮೂಲಕ ಕಳುಹಿಸಬೇಕೆಂದು ನಾನು ಇಲ್ಲಿನ ಅಧಿಕಾರಿಗಳಿಗೆ ಹೇಳಿರುವುದಕ್ಕೆ ಕಾರಣ ಏನೆಂದರೆ ಈ ಮೂಲಕವಾದರೂ ತಮಗೆ ಸಮಸ್ಯೆಯನ್ನು ಬಗೆಹರಿಸಲು ಸಾಕಷ್ಟು ಸಮಯವು ಸಿಗಲಿ ಎನ್ನುವುದು ನನ್ನ ಉದ್ದೇಶ. ಈ ಪತ್ರ ಅಂಚೆಯ ಮೂಲಕ ವಿಳಂಬವಾಗಿ ತಮ್ಮ ಕೈ ಸೇರಿದರೂ ತಮಗೆ ನಾನು ಸಾಕಷ್ಟು ಸಮಯ ನೀಡುತ್ತಿದ್ದೇನೆ. ಈ ಪತ್ರ ಮತ್ತು ಮೇಲ್ಕಾಣಿಸಿದ ಹೋಅರ್ ಅವರಿಗೆ ಬರೆದಿರುವ ಪತ್ರಗಳನ್ನು ಎಷ್ಟು ಸಾಧ್ಯವೋ ಅಷ್ಟು ಬೇಗ ಪ್ರಕಟಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ಕಾರಾಗೃಹದ ನಿಯಮಗಳನ್ನು ನಿಷ್ಠೆಯಿಂದ ಪಾಲಿಸುವ ನಿಟ್ಟಿನಲ್ಲಿ ಈ ಎರಡೂ ಪತ್ರಗಳಲ್ಲಿನ ಮಾಹಿತಿಯನ್ನು ಸರ್ದಾರ್ ವಲ್ಲಭಭಾಯ್ ಪಟೇಲ್ ಮತ್ತು ಶ್ರೀ ಮಹಾದೇವ ದೇಸಾಯಿ ಅವರನ್ನು ಬಿಟ್ಟು ಬೇರೆಯವರಿಗೆ ತಿಳಿಸಿಲ್ಲ. ಆದರೆ ಈ ಪತ್ರದ ಪರಿಣಾಮ ಜನರ ಮೇಲಾಗಲಿ ಎನ್ನುವುದು ನನ್ನ ಉದ್ದೇಶವಾಗಿದ್ದು, ಪತ್ರಿಕೆಗಳಲ್ಲಿ ಪ್ರಕಟಿಸುವುದಕ್ಕಾಗಿ ನಾನು ನಿಮ್ಮೆದುರು ಬೇಡಿಕೆಯನ್ನು ಮಂಡಿಸಿದ್ದೇನೆ.

ನಾನು ತೆಗೆದುಕೊಂಡಿರುವ ಉಪವಾಸ ಸತ್ಯಾಗ್ರಹ ತೀರ್ಮಾನದಿಂದ ನನಗೂ ಕೂಡ ದುಃಖವಾಗುತ್ತದೆ. ಆದರೆ ಓರ್ವ ಧಾರ್ಮಿಕ ಸ್ವಭಾವದ ವ್ಯಕ್ತಿಯಾಗಿರುವ ಕಾರಣ ನನಗೆ ಬೇರೆ ಮಾರ್ಗ ತೋಚುತ್ತಿಲ್ಲ. ಹೋಅರ್ ಅವರಿಗೆ ಬರೆದಿರುವ ಪತ್ರದಲ್ಲಿ ನಾನು ಹೇಳಿದ್ದು ಏನೆಂದರೆ ಸರ್ಕಾರ ನನ್ನನ್ನು ಬಂಧಮುಕ್ತ ಮಾಡುವುದಕ್ಕೆ ತೀರ್ಮಾನಿಸಿದರೂ ನನ್ನ ಉಪವಾಸ ಸತ್ಯಾಗ್ರಹ ಮುಂದುವರಿಯಲಿದೆ. ಏಕೆಂದರೆ ಸರ್ಕಾರದ ಜಾತಿವಾರು ತೀರ್ಮಾನಕ್ಕೆ ಪ್ರತಿಯಾಗಿ ಬೇರೆ ಇನ್ನಾವುದೇ ವಿಧಾನದಿಂದ ವಿರೋಧಿಸುವುದು ಸಾಧ್ಯವಿಲ್ಲ ಎನ್ನುವುದು ನನಗೆ ಮನದಟ್ಟಾಗಿದೆ. ನನಗೆ ಸನ್ಮಾನದ ಬಂಧನ ಮುಕ್ತಿ ಬೇಕಾಗಿದೆ. ಇದನ್ನು ಬೇರೆ ಮಾರ್ಗದಿಂದ ಸಾಧ್ಯವಾಗಿಸಿಕೊಳ್ಳುವುದಕ್ಕೆ ನನಗೆ ಎಳ್ಳು ಕಾಳಿನಷ್ಟು ಕೂಡ ಇಷ್ಟ ಇಲ್ಲ.

ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರ ನೀಡುವುದು ಅವರಿಗೂ ಮತ್ತು ಹಿಂದೂಗಳಿಗೆ ಇಬ್ಬರಿಗೂ ಮಾರಕವಾಗಿದೆ ಎಂಬ ನನ್ನ ತಿಳುವಳಿಕೆ ತಪ್ಪು ಎನ್ನಿಸಬಹುದು ಮತ್ತು ನನ್ನ ಅಭಿಪ್ರಾಯ ವಿಕೃತಿಯ ಕ್ರಮ ಅನ್ನಿಸಬಹುದು. ಒಂದು ವೇಳೆ ಅದೇ ನಿಜವಾಗಿದ್ದರೆ ನಾನು ಇತರ ವಿಷಯಗಳಲ್ಲೂ ಕೂಡ ತಪ್ಪು ಹೆಜ್ಜೆ ಇರಿಸಿದ್ದೇನೆ ಎನ್ನುವುದು ದೃಢವಾಗುತ್ತದೆ.

ಈ ರೀತಿ ಆಗಿದ್ದೇ ಆದರೆ ಅನ್ನತ್ಯಾಗದಿಂದ ಪ್ರಾಣತ್ಯಾಗ ಮಾಡುವುದು ತಪ್ಪು ಪ್ರಾಯಶ್ಚಿತ್ತವಾಗಬಹುದು ಮತ್ತು ಈ ಮೂಲಕ ನನ್ನ ಮೇಲೆ ಮುಗ್ಧತೆಯಿಂದ ವಿಶ್ವಾಸ ಇರಿಸಿದ ಅಸಂಖ್ಯ ಮಹಿಳೆಯರು ಮತ್ತು ಪುರುಷರ ಮೇಲೆ ಭಾರವನ್ನು ಹೇರಿದಂತಾಗುತ್ತದೆ. ಒಂದು ವೇಳೆ ನನ್ನ ಮನಸ್ಸು ಶುದ್ಧವಾಗಿದ್ದರೆ ಮತ್ತು ನನ್ನ ಮನಸ್ಸು ಶುದ್ಧ ಎನ್ನುವುದರಲ್ಲಿ ನನಗೆ ಎಳ್ಳುಕಾಳಿನಷ್ಟು ಸಂಶಯವಿಲ್ಲ.

ನಾನು ತೀರ್ಮಾನಿಸಿರುವ ಈ ಕಾರ್ಯ ನನ್ನ ಜೀವನವನ್ನು ಸಾರ್ಥಕಗೊಳಿಸಲಿದೆ. ಕಳೆದ ಇಪ್ಪತ್ತೈದು ವರ್ಷಗಳಿಂದ ಅದೇ ಜೀವನದ ಮಾರ್ಗವೆಂದು ಅನುಸರಿಸಿ ಸಾಗುತ್ತಿದ್ದೇನೆ ಮತ್ತು ಅದರಲ್ಲಿ ನನಗೆ

ಸಾಕಷ್ಟು ಯಶಸ್ಸು ಲಭಿಸಿದೆ ಎಂಬುದನ್ನು ಇಲ್ಲಿ ಹೇಳಬಯಸುತ್ತೇನೆ.

**ಇಂತಿ ತಮ್ಮ ವಿಶ್ವಾಸಿ ಮಿತ್ರ**
**(ಸಹಿ) ಎಂ. ಕೆ. ಗಾಂಧಿ**[೧]

## ಪ್ರಧಾನಿ ಅವರ ಪ್ರತ್ಯುತ್ತರ

೧೦, ಡೌನಿಂಗ್ ಸ್ಟ್ರೀಟ್,
ಸೆಪ್ಟಂಬರ್ ೮, ೧೯೩೨

ಪ್ರೀತಿಯ ಶ್ರೀ. ಗಾಂಧಿ

ನಿಮ್ಮ ಪತ್ರ ತಲುಪಿತು ಮತ್ತು ವಿಸ್ಮಯದ ಜೊತೆಗೆ ಅತೀವ ಖೇದವೂ ಉಂಟಾಯಿತು. ಅಸ್ಪೃಶ್ಯರಿಗೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಂಡಿರುವ ನಿರ್ಣಯದಲ್ಲಿ ನಿಜವಾಗಿಯೂ ಯಾವ ಅರ್ಥ ಬರುತ್ತದೋ ಅದಕ್ಕೆ ವ್ಯತಿರಿಕ್ತವಾಗಿ ತಮಗೆ ಆಗಿರುವ ತಪ್ಪು ತಿಳುವಳಿಕೆಯಿಂದಾಗಿ ತಾವು ಈ ಪತ್ರ ಬರೆದಿದ್ದೀರಿ. ಹಿಂದೂ ಸಮಾಜದಿಂದ ಅಸ್ಪೃಶ್ಯರನ್ನು ಶಾಶ್ವತವಾಗಿ ಪ್ರತ್ಯೇಕಿಸುವುದನ್ನು ತಾವು ಮೊದಲಿನಿಂದಲೂ ಕಟುವಾಗಿ ವಿರೋಧಿಸುತ್ತಿದ್ದೀರಿ ಎನ್ನುವುದು ನಮ್ಮ ಗಮನದಲ್ಲಿದೆ. ನೀವು ನಿಮ್ಮ ಅಭಿಪ್ರಾಯವನ್ನು ಅಲ್ಪಸಂಖ್ಯಾತ ಸಮಿತಿ ಮತ್ತು ಮಾರ್ಚ್ ೧೧ರಂದು ಹೋಅರ್ ಅವರಿಗೆ ಬರೆದಿರುವ ಪತ್ರದಲ್ಲಿ ಸ್ಪಷ್ಟವಾಗಿ ಮಂಡಿಸಿದ್ದೀರಿ. ಅದೇ ರೀತಿ ತಮಗೆ ಹಿಂದೂ ಸಮಾಜದ ಬಹುಸಂಖ್ಯಾತರ ಬೆಂಬಲ ಇದೆ ಎನ್ನುವುದು ಕೂಡ ನಮಗೆ ಗೊತ್ತಿರುವ ವಿಚಾರ. ಈ ಕಾರಣಕ್ಕಾಗಿ ಅಸ್ಪೃಶ್ಯರ ಪ್ರಾತಿನಿಧಿತ್ವದ ಹಕ್ಕು ನೀಡುವ ಕುರಿತು ಚಿಂತನೆ ಮಾಡುವ ಸಂದರ್ಭದಲ್ಲಿ ನಾವು ತಮ್ಮ ಅಭಿಪ್ರಾಯವನ್ನು ಅತ್ಯಂತ ಕಾಳಜಿಯಿಂದ ಕೇಳಿದ್ದೇವೆ.

ಅಸ್ಪೃಶ್ಯರ ಸಂಘ–ಸಂಸ್ಥೆಗಳಿಂದ ನಮಗೆ ಅಸಂಖ್ಯಾತ ಅರ್ಜಿಗಳು ಬಂದಿವೆ. ಅವರ ಎಲ್ಲ ಸಮಸ್ಯೆಗಳ ಬಗ್ಗೆ ನಾವು ಚಿಂತನೆ ಮಾಡಿದ್ದೇವೆ. ಕಾನೂನು ಮಂಡಳಿಯಲ್ಲಿ ಸೂಕ್ತ ಪ್ರಮಾಣದಲ್ಲಿ ಅಸ್ಪೃಶ್ಯರಿಗೆ ಲಭಿಸಬೇಕಿರುವ ಪ್ರಾತಿನಿಧಿತ್ವದ ಹಕ್ಕನ್ನು ರಕ್ಷಿಸುವುದು ನಮ್ಮ ಕರ್ತವ್ಯ ಆಗಿದೆ ಎಂದು ನಮಗೆ ಅನ್ನಿಸುತ್ತದೆ. ಇದರೊಟ್ಟಿಗೆ ಅಸ್ಪೃಶ್ಯ ಸಮಾಜವನ್ನು ಹಿಂದೂ ಸಮಾಜದಿಂದ ಒಡೆಯುವಂತಹ ಯಾವುದೇ ಕೆಲಸವು ನಮ್ಮಿಂದ ಆಗದಂತೆ ನಾವು ಎಚ್ಚರಿಕೆ ವಹಿಸಿದ್ದೇವೆ. ಕಾನೂನು ಮಂಡಳಿಯಲ್ಲಿ ಅವರಿಗೆ ಪ್ರಾತಿನಿಧಿತ್ವ ಬೇಕೆಂದು ತಾವೇ ಮಾರ್ಚ್ ೧೧ರಂದು ಬರೆದಿರುವ ಪತ್ರದಲ್ಲಿ ಸ್ಪಷ್ಟಪಡಿಸಿದ್ದೀರಿ.

**ಮತದಾನದಲ್ಲಿ ಸಮಾನತೆ**

ಸರ್ಕಾರದ ಪ್ರಸ್ತಾವನೆಯಂತೆ ಹಿಂದುಳಿದ ವರ್ಗ (ಡಿಪ್ರೆಸ್ಡ್ ಕ್ಲಾಸಸ್) ಹಿಂದೂ ಧರ್ಮದ ಒಂದು ಭಾಗವಾಗಿ ಅವರು ಹಿಂದೂ ಮತದಾರ ಕ್ಷೇತ್ರದಲ್ಲಿ ಸಮಾನತೆಯ ಆಧಾರದ ಮೇಲೆ ಮತ ನೀಡಲಿದ್ದಾರೆ. ಇದಲ್ಲದೇ ಮೊದಲು ಇಪ್ಪತ್ತು ವರ್ಷ ಹಿಂದೂ ಧರ್ಮದ ಒಂದು ಭಾಗವಾಗಿದ್ದರೂ ಅವರು ಸ್ವತಂತ್ರ

---

೧. ಡಾ. ಭೀ. ರಾ. ಅಂಬೇಡ್ಕರ್ ಚರಿತ್ರ: ಚಾಂ.ಭಂ, ಖೈರಮೋಡೆ, ಖಂಡ ೫, ಪುಟ ೨೨–೨೩.

ಮತಕ್ಷೇತ್ರಗಳಿಂದಾಗಿ ತಮ್ಮ ಹಕ್ಕು ಮತ್ತು ಹಿತಾಸಕ್ತಿಗಳ ಸಂರಕ್ಷಣೆ ಮಾಡಿಕೊಳ್ಳಬಹುದು. ಸದ್ಯದ ವಸ್ತುಸ್ಥಿತಿ ನೋಡಿದರೆ ಆ ವರ್ಗಕ್ಕೆ ಸ್ವತಂತ್ರ ಮತಕ್ಷೇತ್ರ ಇರುವುದು ಅತ್ಯಗತ್ಯವಾಗಿದೆ. ಯಾವ ಸ್ಥಳಗಳನ್ನು ಹಿಂದುಳಿದ ವರ್ಗಗಳಿಗಾಗಿ ಸ್ವತಂತ್ರ ಮತಕ್ಷೇತ್ರಗಳು ಎಂದು ಘೋಷಿಸಲಾಗುವುದೋ ಅಂತಹ ಸಾಮಾನ್ಯ ಹಿಂದೂ ಮತಕ್ಷೇತ್ರಗಳಲ್ಲಿ ಮತದಾನ ಮಾಡುವ ಅವರ ಹಕ್ಕನ್ನು ಕಸಿದುಕೊಳ್ಳಲಾಗುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಹಿಂದೂ ಸಮಾಜದಲ್ಲಿ ಅವರ ಸ್ಥಾನ ಅಚಲವಾಗಿರಲಿ ಎನ್ನುವ ಉದ್ದೇಶದಿಂದ ಹಿಂದುಳಿದ ವರ್ಗಗಳ ಮತದಾರರಿಗೆ ಎರಡು ಬಾರಿ ಮತದಾನದ ಹಕ್ಕು ನೀಡಲಾಗಿದೆ. ಇದಲ್ಲದೇ ಎಲ್ಲ ಹಿಂದುಳಿದ ವರ್ಗಗಳನ್ನು ಸಾಮಾನ್ಯ ಕ್ಷೇತ್ರಗಳು ಅಂದರೆ ಹಿಂದೂ ಮತಕ್ಷೇತ್ರಗಳಲ್ಲಿ ಸೇರಿಸಿರುವುದರಿಂದ ಸ್ಪೃಶ್ಯ ಹಿಂದೂ ಅಭ್ಯರ್ಥಿಗಳು ಅಸ್ಪೃಶ್ಯರ ಬಳಿ ಮತ ಯಾಚನೆ ಮಾಡಲೇಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದೇ ರೀತಿ ಅಸ್ಪೃಶ್ಯ ಅಭ್ಯರ್ಥಿಗಳು ಸ್ಪೃಶ್ಯ ಹಿಂದೂ ಸಮಾಜದ ಎದುರು ಮತ ಯಾಚಿಸಲೇಬೇಕಾದಂತಹ ಸ್ಥಿತಿ ಉದ್ಭವಿಸುವ ಮೂಲಕ ಹಿಂದೂ ಸಮಾಜದಲ್ಲಿ ಏಕತೆ ನಿರ್ಮಾಣವಾಗುತ್ತದೆ.

ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದ ಆರಂಭ ಕಾಲದಲ್ಲಿನ ಗೊಂದಲಗಳಿಗೆ ಕೊನೆ ಹೇಳುವ ಉದ್ದೇಶದಿಂದ ಹಿಂದುಳಿದ ವರ್ಗಗಳಿಗೆ ವಿಭಕ್ತ ಮತಕ್ಷೇತ್ರ ನೀಡಲಾಗಿದೆ. ಈ ವಿಶಿಷ್ಟ ಧ್ಯೇಯದ ವಿರುದ್ಧ ತೆಗೆದುಕೊಳ್ಳುವ ತೀರ್ಮಾನಕ್ಕೆ ಪ್ರತ್ಯುತ್ತರ ನೀಡುವುದಕ್ಕಾಗಿ ಏಳು ಪ್ರಾಂತ್ಯಗಳಲ್ಲಿ ಒಂಭತ್ತು ಸ್ವತಂತ್ರ ಅಭ್ಯರ್ಥಿಗಳು ಆಯ್ಕೆಯಾಗುವ ಅಗತ್ಯವಿದೆ.

ಇದರ ಪರಿಣಾಮವಾಗಿ ಹಿಂದುಳಿದ ವರ್ಗ ಬೇರೆಯವರ ದಾಕ್ಷಿಣ್ಯದಲ್ಲಿ ಇರಬೇಕಾದ ಪ್ರಸಂಗ ಉದ್ಭವಿಸುವುದಿಲ್ಲ. ಸದ್ಯದ ಮಟ್ಟಿಗೆ ಹೇಳುವುದೇನೆಂದರೆ ಮೀಸಲು ಸ್ಥಾನ ಕಲ್ಪಿಸಿ ಅದಕ್ಕೆ ಪ್ರತಿನಿಧಿಯನ್ನು ಆಯ್ಕೆ ಮಾಡುವ ವಿಚಾರ ಕೂಡ ನಾವು ಮಾಡಿಲ್ಲ. ಮುಸಲ್ಮಾನರಿಗೆ ನೀಡಿರುವ ಜಾತಿವಾರು ಸ್ವತಂತ್ರ ಮತಕ್ಷೇತ್ರಗಳಿಗೆ ಹೋಲಿಸಿದರೆ ಅಸ್ಪೃಶ್ಯರಿಗೆ ನೀಡಿರುವ  ಸ್ವತಂತ್ರ ಮತಕ್ಷೇತ್ರಗಳಿಂದ ಅವರಿಗೆ ಲಾಭವಿದೆ. ಸಾಮಾನ್ಯ ಮತಕ್ಷೇತ್ರಗಳಲ್ಲಿ ಮುಸಲ್ಮಾನರಿಗೆ ಮತದಾನದ ಹಕ್ಕು ನಿರಾಕರಿಸುವುದರ ಜೊತೆಗೆ ಆ ಕ್ಷೇತ್ರಗಳಿಂದ ಅವರು ಸ್ಪರ್ಧಿಸುವುದಕ್ಕೂ ಅವಕಾಶ ಇಲ್ಲ. ಆದರೆ ಸಾಮಾನ್ಯ ಮತಕ್ಷೇತ್ರಗಳಲ್ಲಿ ಅಸ್ಪೃಶ್ಯರಿಗೆ ಮತದಾನದ ಹಕ್ಕು ನೀಡುವುದರ ಜೊತೆಗೆ ಆ ಕ್ಷೇತ್ರಗಳಿಂದ ಸ್ಪರ್ಧಿಸುವುದಕ್ಕೂ ಅವಕಾಶ ಕಲ್ಪಿಸಲಾಗಿದೆ. ಸ್ವತಂತ್ರ ಮತಕ್ಷೇತ್ರಗಳೆಂದು ಮುಸಲ್ಮಾನರಿಗೆ ನೀಡಲಾಗಿರುವ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸುವ ಆಶಯವಂತೂ ಇಲ್ಲ. ಆದರೆ ಎಲ್ಲ ಪ್ರಾಂತ್ಯಗಳಲ್ಲೂ ಅವರಿಗೆ ತಮ್ಮ ಜನಸಂಖ್ಯೆಯ ಪ್ರಮಾಣಕ್ಕಿಂತ ಹೆಚ್ಚಿನ ಪ್ರಾತಿನಿಧಿತ್ವ ಲಭಿಸಿದೆ. ಆದರೆ ಅಸ್ಪೃಶ್ಯರ ವಿಚಾರದಲ್ಲಿ ಮಾತ್ರ ಉದ್ದೇಶಪೂರ್ವಕವಾಗಿ ಅವರ ಜನಸಂಖ್ಯೆಯ ಪ್ರಮಾಣಕ್ಕಿಂತ ಕಡಿಮೆ ಪ್ರಾತಿನಿಧಿತ್ವ ನೀಡಲಾಗಿದೆ. ಕೇವಲ ಅಸ್ಪೃಶ್ಯರಿಂದ ಆಯ್ಕೆಯಾದವರಾದರೂ  ಒಂದಿಷ್ಟು ಪ್ರತಿನಿಧಿಗಳು ಕಾನೂನು ಮಂಡಳಿಯಲ್ಲಿ ಇರಬೇಕು ಎನ್ನುವುದು ಈ ತೀರ್ಮಾನದ ಉದ್ದೇಶ.

ತಮ್ಮ ಪತ್ರದ ಒಕ್ಕಣೆ ನೋಡಿದ ಮೇಲೆ ನನಗೆ ಅನ್ನಿಸಿದ್ದು ಏನೆಂದರೆ, ಸರ್ಕಾರದ ಪ್ರಸ್ತಾವನೆಯಿಂದ ನಿಕೃಷ್ಟ ಸ್ಥಿತಿಗೆ ತಲುಪಿರುವ ಅಸ್ಪೃಶ್ಯರಿಗೆ ತಮ್ಮ ಪರವಾಗಿ ಮಾತನಾಡುವ ಪ್ರತಿನಿಧಿಯಿಂದ ಲಭಿಸುವ ಲಾಭ ಅವರಿಗೆ ಲಭಿಸಬಾರದು ಮತ್ತು ಇದನ್ನು ಸಾಧಿಸುವ ನಿಟ್ಟಿನಲ್ಲಿ ತಾವು ಉಪವಾಸ ಸತ್ಯಾಗ್ರಹದಂತಹ ಭಯಂಕರ ಅಸ್ತ್ರ ಪ್ರಯೋಗಿಸಲು ಸಿದ್ಧವಾಗಿದ್ದೀರಿ. ತಮ್ಮ ಉಪವಾಸ ಸತ್ಯಾಗ್ರಹವು ಅಸ್ಪೃಶ್ಯರಿಗೆ ಸಂಯುಕ್ತ ಮತಕ್ಷೇತ್ರದಲ್ಲಿಯೇ ಸ್ಥಾನ ಲಭಿಸಬೇಕೆಂಬ ಕಂಡು ಕೇಳರಿಯದಂತಹ ಕಾರಣಗಳನ್ನು ನೀಡಲಾಗುತ್ತಿದೆ. ಅದೇ ರೀತಿ ಹಿಂದೂ ಸಮಾಜದಲ್ಲಿ ಏಕತೆ ಇರಬೇಕು ಎನ್ನುವ ತಮ್ಮ ನಿಶ್ಚಯದಲ್ಲಿ ಕೂಡ ಮೋಸ ಇದೆ. ಏಕೆಂದರೆ ಸರ್ಕಾರದ ಪ್ರಸ್ತಾವನೆಯಲ್ಲಿ ಮಾಡಿರುವ ವ್ಯವಸ್ಥೆ ಸೇರಿದಂತೆ ಇನ್ನಿತರ ಎಲ್ಲ ವಿಷಯಗಳನ್ನು

ಗಣನೆಗೆ ತೆಗೆದುಕೊಳ್ಳದೇ ತಾವು ಉಪವಾಸ ಸತ್ಯಾಗ್ರಹದಂತಹ ಪ್ರಬಲ ಅಸ್ತ್ರ ಉಪಯೋಗಿಸುವುದಕ್ಕೆ ನಿರ್ಧರಿಸಿದ್ದೀರಿ. ಜಾತಿವಾರು ನಿರ್ಣಯದ ಬಗ್ಗೆ ಚಿಂತನೆ ಮಾಡದೇ ಎಲ್ಲ ಹಿಂದಿ ನಾಯಕರು ಬ್ರಿಟಿಷ್ ಸರ್ಕಾರದ ಕೈಕಾಲು ಹಿಡಿದು ವಿನಂತಿ ಮಾಡಿದ ನಂತರವೇ, ಅದೂ ಕೂಡ ಬ್ರಿಟಿಷ್ ಸರ್ಕಾರದ ಮನಸ್ಸಿನಲ್ಲಿ ಇರದಿದ್ದರೂ ಅಲ್ಪಸಂಖ್ಯಾತರ ಸಮಸ್ಯೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ನಾವು ತೀರ್ಮಾನಿಸಿದ್ದೆವು. ಇದೀಗ ಆ ತೀರ್ಮಾನವನ್ನು ಕೇವಲ ಒಂದು ಕರಾರಿನ ಮೇಲೆ ಬದಲಾಯಿಸಬಹುದಾಗಿದೆ. ಆ ಕರಾರೆಂದರೆ ಎಲ್ಲ ಜಾತಿಗಳು ಸಹಮತದಿಂದ ಒಂದು ಪ್ರಸ್ತಾವನೆಯನ್ನು ಸಿದ್ಧಪಡಿಸಿದರೆ ಸರ್ಕಾರ ಅದಕ್ಕೆ ಮಾನ್ಯತೆ ನೀಡಲು ಬದ್ಧವಾಗಿದೆ.

ಸರ್ ಸ್ಯಾಮುಯೆಲ್ ಹೋಅರ್ ಅವರಿಗೆ ಬರೆದಿರುವ ಪತ್ರ ಸೇರಿದಂತೆ ಎಲ್ಲ ಪತ್ರ ವ್ಯವಹಾರಗಳು ಪ್ರಕಟವಾಗಬೇಕು ಎನ್ನುವುದು ತಮ್ಮ ಸದಿಚ್ಛೆ. ಇದಕ್ಕನುಗುಣವಾಗಿ ಅವುಗಳನ್ನು ಪ್ರಕಟಿಸುವುದಕ್ಕೆ ನನ್ನ ಸಮ್ಮತಿ ಇದೆ. ಅಂತಿಮವಾಗಿ ತಮ್ಮಲ್ಲಿ ನಾನು ವಿನಂತಿಸಿಕೊಳ್ಳುವುದು ಏನೆಂದರೆ ಸರ್ಕಾರದ ತೀರ್ಮಾನಕ್ಕೆ ಸಂಬಂಧಿಸಿದಂತೆ ತಾವು ಇನ್ನೊಮ್ಮೆ ಸಮಗ್ರವಾಗಿ ಚಿಂತನೆ ಮಾಡಿ ತಾವು ತೀರ್ಮಾನಿಸಿರುವ ಉಪವಾಸ ಸತ್ಯಾಗ್ರಹದ ಉಪಯುಕ್ತತೆಯ ಬಗ್ಗೆ ಚಿಂತನೆ ಮಾಡಿ.

**ಇಂತಿ ತಮ್ಮ**

**(ಸಹಿ) ಜೆ. ರಾಮ್ಸೆ ಮ್ಯಾಕ್ ಡೊನಾಲ್ಡ್**[೧]

## ಮಹಾತ್ಮ ಗಾಂಧೀ ಉಪವಾಸ ಸತ್ಯಾಗ್ರಹ ಪ್ರತಿಜ್ಞೆ

ಶ್ರೀ ರಾಮ್ಸೆ ಮ್ಯಾಕ್ ಡೊನಾಲ್ಡ್ ಅವರ ಪತ್ರಕ್ಕೆ ಮಹಾತ್ಮಾ ಗಾಂಧೀ ಅವರು ಸೆಪ್ಟಂಬರ್ ೯, ೧೯೩೨ರಂದು ಈ ಕೆಳಗಿನ ಆಶಯದಂತೆ ಪತ್ರ ಬರೆದರು.

"ತಾವು ಕಳುಹಿಸಿದ ಸ್ಪಷ್ಟ ಮತ್ತು ಸವಿಸ್ತಾರ ಪತ್ರಕ್ಕೆ ನಾನು ಆಭಾರಿಯಾಗಿದ್ದೇನೆ. ನನ್ನ ಮನಸ್ಸಿನಲ್ಲಿ ಇರದಿರುವ ಸಂಗತಿಯನ್ನು ತಾವು ಅರ್ಥೈಸಿಕೊಂಡಿರುವುದಕ್ಕೆ ನನಗೆ ಖೇದ ಎನ್ನಿಸುತ್ತದೆ. ಹಿಂದುಳಿದ ವರ್ಗಗಳ ಹಿತಾಸಕ್ತಿಯನ್ನು ಬಲಿ ನೀಡುವುದಕ್ಕೆ ಹೊರಟಿದ್ದೇನೆ ಎಂದು ತಾವು ನನ್ನ ವಿರುದ್ಧ ಆರೋಪ ಮಾಡಿದ್ದೀರಿ. ಈ ಆರೋಪಕ್ಕೆ ಅತ್ಯಂತ ಸರಳ ಉತ್ತರ ಎಂದರೆ ನನ್ನ ಈ ಉಪವಾಸ ಸತ್ಯಾಗ್ರಹ ವ್ರತ. ಅಸ್ಪೃಶ್ಯ ಮತದಾರರಿಗೆ ನೀಡಿರುವ ಎರಡು ಬಾರಿಯ ಮತದಾನದ ಹಕ್ಕಿನಿಂದ ಹಿಂದೂ ಸಮಾಜದಲ್ಲಿ ನಿರ್ಮಾಣವಾಗುವ ಕಂದಕವನ್ನು ತೊಡೆದುಹಾಕಲು ಸಾಧ್ಯವಿಲ್ಲ. ಅಸ್ಪೃಶ್ಯರಿಗೆ ವಿಭಕ್ತ ಮತಕ್ಷೇತ್ರ ನೀಡಿದ ಮಾತ್ರಕ್ಕೆ ಖಂಡಿತವಾಗಿ ಅವರಿಗೆ ಅಸ್ಪೃಶ್ಯರಿಗೆ ಅಗತ್ಯಕ್ಕಿಂತ ಹೆಚ್ಚು ಪ್ರಾತಿನಿಧಿತ್ವ ನೀಡುವುದನ್ನು ನಾನು ವಿರೋಧಿಸಿಲ್ಲ. ಹಿಂದೂ ಸಮಾಜದಿಂದ ಅಸ್ಪೃಶ್ಯರನ್ನು ಕಾಯ್ದೆ ಮುಖಾಂತರ ಒಡೆದು ದೂರ ಮಾಡುವ ವಿಚಾರ ನನಗೆ ಮುಳ್ಳಿನಂತೆ ಚುಚ್ಚುತ್ತಿದೆ. ಸರ್ಕಾರದ ಈ ಪ್ರಸ್ತಾವನೆಯಿಂದಾಗಿ ಇಲ್ಲಿಯವರೆಗೆ ಅಸ್ಪಶ್ಯರ ಉದ್ಧಾರಕ್ಕೆ ಸ್ವಾರ್ಥತ್ಯಾಗದಿಂದ ಶ್ರಮಿಸಿದ ಅನೇಕ ಮಹಾಪುರುಷರ ಪ್ರಯತ್ನದ ಮೇಲೆ ನೀರು ಹಾಕಿದಂತಾಗುತ್ತದೆ. ಈ ಕಾರಣಕ್ಕಾಗಿಯೇ ನಾನು ಉಪವಾಸ ಸತ್ಯಾಗ್ರಹ ಕೈಗೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ನನ್ನ ಈ ಉಪವಾಸ ಸತ್ಯಾಗ್ರಹದಲ್ಲಿ ನಾನು ಕೇವಲ ಅಸ್ಪೃಶ್ಯರ ಪ್ರಶ್ನೆಯನ್ನು ಮಾತ್ರ ಕೈಗೆತ್ತಿಕೊಂಡಿದ್ದು, ತಮ್ಮ ಪ್ರಸ್ತಾವನೆಯಲ್ಲಿನ ಇತರ ವಿಚಾರಗಳಿಗೆ ನನ್ನ

---

೧. ಡಾ. ಭೀ.ರಾ. ಅಂಬೇಡ್ಕರ್ ಚರಿತ್ರ: ಚಾಂ, ಭಂ. ಖೈರಮೋಡೆ; ಖಂಡ ೫, ಪುಟ: ೨೩–೨೫.

ಸಹಮತ ಇದೆ ಎಂದರ್ಥವಲ್ಲ. ನನ್ನ ಪ್ರಕಾರ ಈ ಪ್ರಸ್ತಾವನೆಯಲ್ಲಿನ ಇತರ ಸಂಗತಿಗಳಲ್ಲೂ ಸಾಕಷ್ಟು ಲೋಪದೋಷಗಳು ಇವೆ.

**ಇಂತಿ ತಮ್ಮ ಮಿತ್ರಾಕಾಂಕ್ಷಿ**
**(ಸಹಿ) ಎಂ. ಕೆ. ಗಾಂಧಿ"**[೧]

ಗಾಂಧೀಜಿ ಅವರ ಆಮರಣ ಸತ್ಯಾಗ್ರಹದ ಪ್ರತಿಜ್ಞೆಯ ಕುರಿತು ತಮ್ಮ ಅನಿಸಿಕೆ ಏನು ಎಂದು ಪತ್ರಕರ್ತರು ಡಾ. ಅಂಬೇಡ್ಕರ್ ಅವರನ್ನು ಕೇಳಿದ ಸಂದರ್ಭದಲ್ಲಿ ಉತ್ತರಿಸಿದ ಅವರು:

ಉಪವಾಸದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಗಾಂಧೀಜಿ ಅವರು ಹಾಕಿರುವ ಬೆದರಿಕೆಯು ಸರಳ ಮತ್ತು ಪ್ರಾಮಾಣಿಕ ಯುದ್ಧವಾಗಿರದೇ ಅದು ರಾಜಕಾರಣದಲ್ಲಿನ ನುಣುಚಿಕೊಳ್ಳುವ ತಂತ್ರವಾಗಿದೆ. ತಮ್ಮ ಪ್ರತಿಸ್ಪರ್ಧಿಗಳೊಂದಿಗೆ ವಿಚಾರ ವಿನಿಮಯ ಮಾಡುವುದಾಗಲಿ ಅಥವಾ ಅವರ ಮನಸ್ಸು ಒಲಿಸಿಕೊಳ್ಳುವ ನಿಟ್ಟಿನಲ್ಲಿ ಇದು ಸರಿಯಾದ ವಿಧಾನವಂತೂ ಅಲ್ಲ ಅಲ್ಲದೇ ಇದರಲ್ಲಿ ಪ್ರಾಮಾಣಿಕತೆಯಂತೂ ಇಲ್ಲ. ಈ ಕಾರಣಕ್ಕಾಗಿ ಗಾಂಧೀಜಿ ಅವರ ಈ ತಂತ್ರ ಮಹತ್ವದ್ದು ಎಂದು ನಾನು ಭಾವಿಸುವುದಿಲ್ಲ. ಮತ್ತು ಗಾಂಧೀಜಿ ಅವರ ಇಚ್ಛೆಯಂತೆ ಅಥವಾ ಅವರಿಗೆ ಅನುಕೂಲವಾಗುವಂತಹ ಪರಿಣಾಮವನ್ನು ನನ್ನ ಮೇಲಂತೂ ಆಗಲಿಕ್ಕೆ ಸಾಧ್ಯವಿಲ್ಲ. ನನ್ನ ತೀರ್ಮಾನವಂತೂ ಗಟ್ಟಿಯಾಗಿದೆ. ಹಿಂದೂಗಳ ಸ್ವಾರ್ಥಕ್ಕಾಗಿ ತಮ್ಮ ಪ್ರಾಣವನ್ನು ಗಾಂಧೀಜಿ ಪಣಕ್ಕೆ ಇಟ್ಟು ಅಸ್ಪೃಶ್ಯರ ವಿರುದ್ಧ ಯುದ್ಧ ಮಾಡುವುದೇ ಆಗಿದ್ದಲ್ಲಿ, ಅಸ್ಪೃಶ್ಯ ಸಮಾಜ ಕೂಡ ತನ್ನ ಹಕ್ಕು ಮತ್ತು ಸಂರಕ್ಷಣೆಗಾಗಿ ಬಲಿದಾನಕ್ಕೆ ಸಿದ್ಧವಾಗುವುದು ಅನಿವಾರ್ಯವಾಗುತ್ತದೆ.

## ಗಾಂಧೀಜಿ ತಮ್ಮ ಹೇಳಿಕೆ ಸ್ಪಷ್ಟವಾಗಿ ಮಂಡಿಸಲಿ

ಗಾಂಧೀಜಿ ಅವರ ಒತ್ತಾಯದ ಕುರಿತು ತಾವು ವಿಚಾರ ಮಾಡುವುದೇ ಇಲ್ಲವೇ ಎಂದು ಕೇಳಿದ ಪ್ರಶ್ನೆಗೆ ಡಾ. ಅಂಬೇಡ್ಕರ್ ಹೇಳಿದ್ದಿಷ್ಟು: ಗಾಂಧೀಜಿ ಅವರು ಯಾವ ಕಾರಣಕ್ಕಾಗಿ ತಮ್ಮ ಪ್ರಾಣತ್ಯಾಗಕ್ಕಾಗಿ ಸಿದ್ಧವಾಗಿದ್ದಾರೆ ಎನ್ನುವುದು ಅವರು ತಾವು ಮಾಡಿದ ಪತ್ರ ವ್ಯವಹಾರಗಳನ್ನು ಪ್ರಕಟಿಸುವ ಮೂಲಕ ಸ್ಪಷ್ಟವಾಗುವುದಿಲ್ಲ. ಅಸ್ಪೃಶ್ಯರಿಂದ ಅವರು ಏನು ಅಪೇಕ್ಷಿಸುತ್ತಿದ್ದಾರೆ ಮತ್ತು ಹಿಂದೂ ಸಮಾಜದಿಂದ ಅಸ್ಪೃಶ್ಯರಿಗೆ ಯಾವ ಹಕ್ಕುಗಳನ್ನು ನೀಡುವುದಕ್ಕೆ ಗಾಂಧೀಜಿ ಅವರು ಸಿದ್ಧವಾಗಿದ್ದಾರೆ ಮತ್ತು ಗಾಂಧೀಜಿ ಅವರು ನೀಡುವ ಈ ಕಾಣಿಕೆಗೆ ಆ ಹಿಂದೂ ಸಮಾಜ ಎಷ್ಟರಮಟ್ಟಿಗೆ ಸಿದ್ಧವಾಗಿದೆ ಎನ್ನುವುದನ್ನು ಸ್ಪಷ್ಟವಾಗಿ ಖಾತ್ರಿಪಡಿಸುವವರೆಗೆ ಈ ವಿಚಾರದಲ್ಲಿ ನಿಶ್ಚಿತವಾಗಿ ಹೇಳುವಂತಹದ್ದು ಏನೂ ಇಲ್ಲ.[೨]

ಗಾಂಧೀಜಿ ಅವರು ತಮ್ಮ ಆಮರಣ ಉಪವಾಸ ಸತ್ಯಾಗ್ರಹದ ವಿಷಯದ ಬಗ್ಗೆ ೧೫-೯-೧೯೩೨ರಂದು ಸರ್ಕಾರಕ್ಕೆ ಪತ್ರ ಬರೆದರು. ಅದು ಸೆಪ್ಟಂಬರ್ ೨೧ರಂದು ಪತ್ರಿಕೆಗಳಲ್ಲಿ ಪ್ರಕಟವಾಯಿತು. 'ನನ್ನ ಉಪವಾಸ ಕೇವಲ ಅಸ್ಪೃಶ್ಯರ ರಾಜಕೀಯ ಹಕ್ಕುಗಳಿಗೆ ಮಾತ್ರ ಸಂಬಂಧಿಸಿದ್ದು ಆಗಿದೆ. ಮೊದಲಿನಿಂದಲೂ ಅಸ್ಪೃಶ್ಯ ವರ್ಗಗಳ ಸಮಸ್ಯೆ ಧಾರ್ಮಿಕ ಸ್ವರೂಪದ್ದು ಆಗಿದೆ. ನನ್ನ ಜೀವನವನ್ನು ಈ ಸಮಸ್ಯೆ ಮೇಲೆ ಕೇಂದ್ರೀಕರಿಸಿರುವ ಕಾರಣ ಇದು ನನ್ನ ವೈಯಕ್ತಿಕ ಸಮಸ್ಯೆ ಎಂದು ಭಾವಿಸುತ್ತೇನೆ. ಇದು ನನ್ನ ಪರಮಪವಿತ್ರ ಕರ್ತವ್ಯ ಆಗಿರುವ ಕಾರಣ ಇದರಿಂದ ನಾನು ನುಣುಚಿಕೊಳ್ಳುವುದಿಲ್ಲ' ಎಂದು ಅವರು ತಮ್ಮ ಪತ್ರದಲ್ಲಿ ಸ್ಪಷ್ಟಪಡಿಸಿದ್ದರು.

---

೧. ಡಾ. ಭೀ.ರಾ. ಅಂಬೇಡ್ಕರ್ ಚರಿತ್ರ: ಚಾಂ, ಭಂ. ಖೈರಮೋಡೆ; ಖಂಡ ೫, ಪುಟ: ೨೫-೨೬.

"My fast has a narrow application. The Depressed classes question being predominently a religious matter, I regard it as specially my own by reason of life-long concentration on it. It is sacred personal trust which I may not shirk".[3]

ಗಾಂಧೀಜಿ ಅವರು ಕೈಗೆತ್ತಿಕೊಂಡಿರುವ ಉಪವಾಸ ಸತ್ಯಾಗ್ರಹಕ್ಕೆ ವಿರುದ್ಧ ತಮ್ಮ ಪಾತ್ರ ಏನು ಎನ್ನುವುದನ್ನು ಸ್ಪಷ್ಟಪಡಿಸುವ ನಿಟ್ಟಿನಲ್ಲಿ ಡಾ. ಅಂಬೇಡ್ಕರ್ ಅವರು ಒಂದು ಪ್ರಕಟಣೆಯನ್ನು ಹೊರಡಿಸಿದರು.

## ಡಾ. ಅಂಬೇಡ್ಕರ್ ಅವರ ಸಾರ್ವಜನಿಕ ಪ್ರಕಟಣೆ

ಸರ್ವ ಪಕ್ಷೀಯ ನಾಯಕರ ಸಭೆಯ ದಿನ ಅಂದರೆ ಸೋಮವಾರ ೧೯ ಸೆಪ್ಟಂಬರ್, ೧೯೩೨ರಂದು ಬಾಬಾಸಾಹೇಬ್ ಅಂಬೇಡ್ಕರ್ ಅವರು, ಮಹಾತ್ಮ ಗಾಂಧಿ ಅವರ ಆಮರಣ ಉಪವಾಸಕ್ಕೆ ಸಂಬಂಧಿಸಿದಂತೆ ತಮ್ಮ ಧೋರಣೆಯನ್ನು ಸ್ಪಷ್ಟಪಡಿಸುವ ನಿಟ್ಟಿನಲ್ಲಿ ಮತ್ತು ಗಾಂಧೀಜಿ ಅವರ ಉಪವಾಸ ಅಸ್ಪೃಶ್ಯರ ಹಕ್ಕುಗಳು ಮತ್ತು ಹಿತಾಸಕ್ತಿಗೆ ಹೇಗೆ ವಿರುದ್ಧವಾಗಿದೆ ಎನ್ನುವುದನ್ನು ತೋರ್ಪಡಿಸಲು ಒಂದು ಪತ್ರವನ್ನು ಸಾರ್ವಜನಿಕವಾಗಿ ಪ್ರಕಟಿಸಿದರು. ಇಂಗ್ಲಿಷ್‌ನಲ್ಲಿರುವ ಆ ಪತ್ರದ ಕನ್ನಡ ಅನುವಾದ.

ಬ್ರಿಟಿಷ್ ಸರ್ಕಾರ ಸ್ವಯಂ ಪ್ರೇರಣೆಯಿಂದ ಅಥವಾ ಜನರ ಹಕ್ಕೊತ್ತಾಯಕ್ಕೆ ಮಣಿದು ಅನಿವಾರ್ಯವಾಗಿ ಅಸ್ಪೃಶ್ಯ ಸಮಾಜಕ್ಕಾಗಿ ನೀಡಿರುವ ಸ್ವತಂತ್ರ ಮತಕ್ಷೇತ್ರದ ಹಕ್ಕನ್ನು ರದ್ದುಗೊಳಿಸದಿದ್ದರೆ ಉಪವಾಸ ವ್ರತ ಕೈಗೊಂಡು ಪ್ರಾಣ ತ್ಯಾಗ ಮಾಡುತ್ತೇನೆ ಎಂದು ಗಾಂಧೀಜಿ ಅವರು ಮಾಡಿರುವ ಪ್ರತಿಜ್ಞೆ ಕೇಳಿ ನನಗೆ ನಿಜವಾಗಿಯೂ ಆಶ್ಚರ್ಯವಾಯಿತು. ಮಹಾತ್ಮ ಗಾಂಧಿ ಅವರು ತಾವು ಮಾಡಿರುವ ಆತ್ಮಹತ್ಯೆಯ ಸಂಕಲ್ಪದಿಂದಾಗಿ ನನ್ನನ್ನು ಎಂತಹ ಬಿಕ್ಕಟ್ಟಿನ ಮತ್ತು ವಿಪರೀತ ಪರಿಸ್ಥಿತಿಯಲ್ಲಿ ತಂದು ನಿಲ್ಲಿಸಿದ್ದಾರೆ ಎಂದರೆ ಎಂತಹ ಘೋರ ಅನಾಹುತಕಾರಿ ಜವಾಬ್ದಾರಿಯನ್ನು ನನ್ನ ಮೇಲೆ ಹೇರಿದ್ದಾರೆಂದರೆ ಯಾರು ಬೇಕಾದವರೂ ಊಹಿಸಬಹುದಾಗಿದೆ.

ಜಾತಿವಾರು ಸಮಸ್ಯೆಯು ಇನ್ನಿತರ ಸಮಸ್ಯೆಗಳಿಗೆ ಹೋಲಿಸಿದರೆ ನಗಣ್ಯವಾದುದು ಎಂದು ಗಾಂಧೀಜಿ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಪ್ರತಿಪಾದಿಸಿದ್ದರು. ಅವರ ಅನಿಸಿಕೆಯಲ್ಲಿ ನಗಣ್ಯವಾಗಿರುವ ಸಂಗತಿಗೆ ಅವರು ತಮ್ಮ ಜೀವವನ್ನು ಏಕೆ ಪಣಕ್ಕೆ ಒಡ್ಡುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅವರ ದೃಷ್ಟಿಕೋನದಂತೆ ನೋಡುವುದೇ ಆಗಿದ್ದಲ್ಲಿ ಜಾತಿವಾರು ಸಮಸ್ಯೆಯನ್ನು ಗ್ರಾಂಥಿಕ ಸ್ವರೂಪದಲ್ಲಿರುವ ಭಾರತೀಯ ಸಂವಿಧಾನಕ್ಕೆ ಸೇರಿಸುವ ಅನುಬಂಧ ಮಾತ್ರ ಆಗಿರುತ್ತದೆ ಎಂದು ಅರ್ಥೈಸಬೇಕಾಗುತ್ತದೆ ಜಾತಿವಾರು ಸಮಸ್ಯೆಯನ್ನು ಆ ಗ್ರಂಥದ ಪ್ರಮುಖ ಇಲ್ಲವೇ ಮಹತ್ವದ ಭಾಗ ಎಂದು ಪರಿಗಣಿಸಲಾಗುವುದಿಲ್ಲ. ಭಾರತಕ್ಕೆ ಪೂರ್ಣ ರಾಜಕೀಯ ಸ್ವಾತಂತ್ರ್ಯ ಲಭಿಸಬೇಕು ಎನ್ನುವ ವಿಷಯಕ್ಕೆ ಗಾಂಧೀಜಿ ಅವರು ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಸಾಕಷ್ಟು ಒತ್ತಡ ತಂದಿದ್ದರು ಅಲ್ಲದೇ ಆಗ್ರಹಿಸಿದ್ದರು. ಇಂತಹದ್ದೆ ರಾಜಕೀಯ ಸ್ವಾತಂತ್ರ್ಯದಂತಹ ಬೃಹತ್ ಸಮಸ್ಯೆಯ ಪರಿಹಾರಕ್ಕೆ ಗಾಂಧೀಜಿ ತಮ್ಮ ಪ್ರಾಣ ಪಣಕ್ಕೆ ಇರಿಸಿದ್ದರೆ ಅದು ಸರಿ ಎನ್ನಬಹುದಾಗಿತ್ತು. ಅವರ ಅಭಿಪ್ರಾಯದಂತೆ ರಾಜಕೀಯ ಸ್ವಾತಂತ್ರ್ಯದಂತಹ ಅನೇಕ ಬೃಹದಾಕಾರದ ಸಮಸ್ಯೆಗಳನ್ನು ಬದಿಗಿರಿಸಿ ಅಸ್ಪೃಶ್ಯರ ಮತದಾನದಂತಹ ಒಂದು ಪ್ರಶ್ನೆಯನ್ನು ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಿಕೊಳ್ಳುವುದು ಮತ್ತು ಆ ಕಾರಣ ಮುಂದಿರಿಸಿಕೊಂಡು ತಮ್ಮ ಪ್ರಾಣವನ್ನು ಪಣಕ್ಕೆ ಇರಿಸುವಂತಹ

---

೩. ಡಾ. ಭೀ.ರಾ. ಅಂಬೇಡ್ಕರ್ ಚರಿತ್ರ: ಚಾಂ, ಭಂ. ಖೈರಮೋಡೆ; ಖಂಡ ೫, ಪುಟ: ೨೬.

ಗಾಂಧೀಜಿ ಅವರ ಕೃತ್ಯ ಕ್ರೋಧಾಶ್ಚರ್ಯದ ಒಂದು ಉದ್ವೇಗ ಮತ್ತು ವಿಷಾದಕರ ವಿಧಾನವಾಗಿದೆ. ಸ್ವತಂತ್ರ ಮತಕ್ಷೇತ್ರಗಳು ಕೇವಲ ಅಸ್ಪೃಶ್ಯರಿಗೆ ಮಾತ್ರ ಲಭಿಸಿವೆ ಎಂತಲೂ ಅಲ್ಲ. ಭಾರತೀಯ ಕ್ರೈಸ್ತರು, ಆಂಗ್ಲೋ–ಇಂಡಿಯನ್ ಸೇರಿದಂತೆ ಮುಸ್ಲಿಂ ಮತ್ತು ಸಿಖ್ ರಿಗೂ ಸ್ವತಂತ್ರ ಮತಕ್ಷೇತ್ರಗಳು ಲಭಿಸಿವೆ. ಇದಷ್ಟೇ ಅಲ್ಲ ಜಮೀನ್ದಾರ, ಕಾರ್ಮಿಕ ವರ್ಗ ಮತ್ತು ವ್ಯಾಪಾರಿ ವರ್ಗಕ್ಕೂ ಕೂಡ ವಿಶೇಷ ಇಲ್ಲವೇ ಸ್ವತಂತ್ರ ಮತಕ್ಷೇತ್ರಗಳನ್ನು ಪ್ರಸ್ತಾಪಿಸಲಾಗಿದೆ. ಪ್ರಸ್ತಾವನೆ ಮಂಡಿಸುವ ಸಮಯದಲ್ಲಿ ಅವರು ಕೇವಲ ಮುಸ್ಲಿಂ ಮತ್ತು ಸಿಖ್‌ರಿಗೆ ನೀಡುವ ಸ್ವತಂತ್ರ ಮತಕ್ಷೇತ್ರಗಳನ್ನು ಹೊರತು ಪಡಿಸಿ ಉಳಿದವರಿಗೆ ನೀಡುವ ಸ್ವತಂತ್ರ ಮತಕ್ಷೇತ್ರಗಳ ಪ್ರಸ್ತಾವನೆಯನ್ನು ಆಕ್ಷೇಪಿಸಿದ್ದರು ಅಲ್ಲದೇ ಅದಕ್ಕೆ ತಮ್ಮ ವಿರೋಧ ಕೂಡ ವ್ಯಕ್ತಪಡಿಸಿದ್ದರು. ಆದರೆ ಇದೀಗ ಮುಸ್ಲಿಂ ಮತ್ತು ಸಿಖ್ಖರಿಗೆ ಅಷ್ಟೇ ಅಲ್ಲದೇ ಅಸ್ಪೃಶ್ಯರೊಂದಿಗೆ ಜಮೀನ್ದುದಾರರು, ವ್ಯಾಪಾರಿ, ಆಂಗ್ಲೋ–ಇಂಡಿಯನ್ ಮತ್ತು ಕ್ರೈಸ್ತರಿಗೂ ಕೂಡ ಸ್ವತಂತ್ರ ಮತಕ್ಷೇತ್ರಗಳನ್ನು ನೀಡಲಾಗಿದೆ. ಒಂದು ವೇಳೆ ಗಾಂಧೀಜಿಯವರಿಗೆ ವಿರೋಧ ವ್ಯಕ್ತಪಡಿಸುವುದೇಯಾಗಿದ್ದರೆ ಕನಿಷ್ಠ ಈ ಎಲ್ಲ ಸ್ವತಂತ್ರ ಮತಕ್ಷೇತ್ರಗಳ ಪ್ರಸ್ತಾವನೆಯನ್ನು ವಿರೋಧಿಸಬೇಕಿತ್ತು. ಆದರೆ ಅವರು ಎಲ್ಲರನ್ನೂ ಬಿಟ್ಟು ಕೇವಲ ಅಸ್ಪೃಶ್ಯರಿಗೆ ಲಭಿಸಿರುವ ಸೌಲಭ್ಯ ಮತ್ತು ಸೌಕರ್ಯಗಳನ್ನು ಕಾರಣ ಮಾಡಿಕೊಂಡು ಈ ಪ್ರಸ್ತಾವನೆ ವಿರೋಧಿಸಿ ತಮ್ಮ ಪ್ರಾಣವನ್ನು ಪಣಕ್ಕೆ ಹಚ್ಚುವಂತಹ ಗಟ್ಟಿ ನಿರ್ಧಾರ ತಳೆದಿದ್ದಾರೆ.

ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರಗಳನ್ನು ನೀಡುವುದರಿಂದ ದೊಡ್ಡ ಅನರ್ಥಕ್ಕೆ ಕಾರಣವಾಗುತ್ತದೆ ಎಂದು ಗಾಂಧೀಜಿ ಬೆಳಸಿಕೊಂಡಿರುವ ಆತಂಕ ಒಂದು ದೊಡ್ಡ ಭ್ರಮೆ. ಮುಸ್ಲಿಂರಿಗೆ ಮತ್ತು ಸಿಖ್ಖರಿಗೆ ನೀಡುವ ಸ್ವತಂತ್ರ ಮತಕ್ಷೇತ್ರಗಳಿಂದ ದೇಶದ ವಿಭಜನೆ ಆಗುವುದಿಲ್ಲವೆಂದು ಗಾಂಧೀಜಿ ಅವರಿಗೆ ಅನ್ನಿಸುವುದಿಲ್ಲ ಆದರೆ ಅಸ್ಪೃಶ್ಯರಿಗೆ ಲಭಿಸುವ ಸ್ವತಂತ್ರ ಮತಕ್ಷೇತ್ರಗಳಿಂದ ಹಿಂದೂ ಸಮಾಜ ವಿಘಟಿತಗೊಳ್ಳುತ್ತದೆ ಎಂದು ಹೇಳಿ ಪ್ರಾಣ ಹೋಗುವವರೆಗೆ ಈ ಪ್ರಸ್ತಾವನೆಗೆ ವಿರೋಧ ವ್ಯಕ್ತಪಡಿಸುವುದು ಗಾಂಧೀಜಿ ಅವರಿಗೆ ಹೇಗೆ ನ್ಯಾಯ ಮತ್ತು ಸುಸಂಗತ ಅನ್ನಿಸಿತು? ಅಸ್ಪೃಶ್ಯ ಸಮಾಜದೊಂದಿಗೆ ಇತರ ಸಮಾಜ ಮತ್ತು ವರ್ಗಗಳಿಗೂ ಸ್ವತಂತ್ರ ಮತಕ್ಷೇತ್ರಗಳು ಲಭಿಸಿದ್ದು ಅದರ ವಿರುದ್ಧ ಗಾಂಧೀಜಿ ಅವರ ಸದ್ವಿವೇಕ ಬುದ್ಧಿ ಜಾಗೃತವಾಗುವುದಿಲ್ಲ. ಆದರೆ ಕೇವಲ ಒಬ್ಬ ಅಸ್ಪೃಶ್ಯನಿಗೆ ಲಭಿಸಿದ ಸೌಲಭ್ಯಕ್ಕೆ ಮಾತ್ರ ಅವರ ಸದ್ವಿವೇಕದ ಬುದ್ಧಿಯು ಜಾಗ್ರತಗೊಂಡು ಪ್ರಾಣವನ್ನು ಪಣಕ್ಕಿಟ್ಟು ಯುದ್ಧಕ್ಕೆ ಕರೆ ನೀಡುವಂತಹ ಈ ನ್ಯಾಯ ನಿಷ್ಠುರತೆಗೆ ಏನು ಹೇಳಬೇಕು?

ಭವಿಷ್ಯದ ಸ್ವರಾಜ್‌ದಲ್ಲಿ ಬಹುಸಂಖ್ಯಾತ ವರ್ಗದ ಅನ್ಯಾಯಗಳಿಂದ ಅಲ್ಪಸಂಖ್ಯಾತ ಸಮಾಜವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ನೀಡಲಾಗುತ್ತಿರುವ ರಾಜಕೀಯ ಹಕ್ಕುಗಳ ವಿಶೇಷ ಸೌಲಭ್ಯ, ಒಂದು ವೇಳೆ ಎಲ್ಲ ಸಮಾಜಗಳಿಗಿಂತ ಮೊದಲು ಮತ್ತು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗಬೇಕು ಎಂದಿದ್ದರೆ ಅದು ಅಸ್ಪೃಶ್ಯ ಸಮಾಜಕ್ಕೆ ಮಾತ್ರ ಎನ್ನುವ ವಿಚಾರ ಯಾವುದೇ ಚಿಂತನಾಶೀಲ ವ್ಯಕ್ತಿಗೆ ಮನದಟ್ಟಾಗುವುದರಲ್ಲಿ ಸಂಶಯವಿಲ್ಲ ಎನ್ನುವುದು ನನಗೆ ಖಾತ್ರಿಯಾಗಿದೆ. ಸದ್ಯದ ಅಸ್ಪೃಶ್ಯ ವರ್ಗದ ಸ್ಥಿತಿಗತಿ ಹೇಗಿದೆ ಎಂದರೆ, ಜೀವನದಲ್ಲಿ ಎಲ್ಲ ದಿಕ್ಕುಗಳಿಂದ ಶೋಷಣೆಯನ್ನೇ ಎದುರಿಸುತ್ತಿರುವ ಅಸ್ಪೃಶ್ಯ ವರ್ಗಕ್ಕೆ ಅಸ್ತಿತ್ವ ಕಾಪಾಡಿಕೊಳ್ಳುವಷ್ಟು ಕೂಡ ತ್ರಾಣ ಉಳಿದಿಲ್ಲ. ಯಾವ ಧರ್ಮದಡಿ ಆಶ್ರಯ ಪಡೆದಿದ್ದಾರೋ ಅದೇ ಧರ್ಮದ ಹೆಸರಿನಲ್ಲಿ ಅವರನ್ನು ಎಲ್ಲ ಕಡೆಯಿಂದ ಬಂಧಿಸಲಾಗಿದೆ. ಯಾವ ಧರ್ಮ ಅವರನ್ನು ಗೌರವದಿಂದ ನೋಡಬೇಕಿತ್ತೋ ಆ ಧರ್ಮ ಅವರನ್ನು ಹೇವರಿಕೆ ತರುವಂತಹ ಸ್ಥಿತಿಯಲ್ಲಿ ತಂದಿರಿಸಿದೆ. ಅದೇ ಧರ್ಮ ಅವರನ್ನು ಕಳಂಕಿತಗೊಳಿಸಿದೆ ಮತ್ತು ನಿರ್ವೀರ್ಯಗೊಳಿಸಿದೆ. ನಿತ್ಯ ಜೀವನದ ಸರಳ ವ್ಯವಹಾರಗಳಲ್ಲೂ ಗೌರವದಿಂದ ಪಾಲ್ಗೊಳ್ಳುವ ಯೋಗ್ಯತೆಯನ್ನು ಈ ಧರ್ಮ ಅಸ್ಪೃಶ್ಯ ಸಮಾಜದ ವ್ಯಕ್ತಿಯಿಂದ ಕಸಿದುಕೊಂಡಿದೆ. ಬದುಕುವುದಕ್ಕೆ

ಬೇಕಾಗುವ ತುಂಡು ರೊಟ್ಟಿಗಾಗಿಯೂ ಅವರು ಉಚ್ಚವರ್ಗದ ಹಿಂದೂಗಳನ್ನು ಅವಲಂಬಿಸಬೇಕಿದೆ. ಸ್ವಾಭಿಮಾನದಿಂದ, ಸ್ವಾತಂತ್ರ್ಯದಿಂದ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ಒಂದೇ ಒಂದು ಮಾರ್ಗ ಅಸ್ಪೃಶ್ಯರಿಗೆ ಲಭಿಸಿಲ್ಲ. ಈ ಗುಲಾಮಗಿರಿಯಿಂದ ಮುಕ್ತವಾಗುವುದಕ್ಕೆ ಅವರಿಗೆ ಎಂದಿಗೂ ಅವಕಾಶ ಲಭಿಸಲೇಬಾರದು ಎನ್ನುವ ಕಾರಣಕ್ಕೆ ಸ್ವಾವಲಂಬನೆಯ, ಆತ್ಮೋದ್ಧಾರಕ್ಕೆ ಇರುವ ಎಲ್ಲ ಮಾರ್ಗಗಳನ್ನು ತಡೆಹಿಡಿಯುವ ಪ್ರಯತ್ನ ಬುದ್ಧಿಪೂರ್ವಕವಾಗಿ ನಡೆಯುತ್ತಿದೆ. ಸ್ಪೃಶ್ಯ ಹಿಂದೂಗಳಲ್ಲಿ ಸಾಕಷ್ಟು ಜಾತಿಭೇದಗಳಿದ್ದರೂ ಕೂಡ ಅಸ್ಪೃಶ್ಯರು ತಲೆ ಎತ್ತಿ ನಿಲ್ಲುವಂತಹ ಸಣ್ಣ ಮಾಡುವಂತಹ ಸಣ್ಣ ಪ್ರಯತ್ನದ ಮೇಲೆ ಗದಾ ಪ್ರಹಾರ ಮಾಡುವ ಉದ್ದೇಶದಿಂದ ಮತ್ತು ಅವರನ್ನು ನಾನಾ ರೀತಿಯ ಶೋಷಣೆಗೆ ಒಳಪಡಿಸುವ ಉದ್ದೇಶದಿಂದ ಈ ಎಲ್ಲ ಸ್ಪೃಶ್ಯ ಹಿಂದೂ ಸಮಾಜ ನಿರ್ದಯದಿಂದ ಒಗ್ಗಟ್ಟಾಗುತ್ತದೆ ಎನ್ನುವುದರಲ್ಲಿ ಸ್ವಲ್ಪವೂ ಅತಿಶಯೋಕ್ತಿ ಇಲ್ಲ.

ಇಂತಹ ಪರಿಸ್ಥಿತಿಯಲ್ಲಿ ಎಲ್ಲರಿಗಿಂತ ಅತೀ ಹೆಚ್ಚು ನರಳಿದ, ಸ್ಪೃಶ್ಯ ಹಿಂದೂ ಸಮಾಜದ ಶೋಷಣೆಯಿಂದ ಎಲ್ಲವನ್ನೂ ಕಳೆದುಕೊಂಡ ಅಸ್ಪೃಶ್ಯ ಸಮಾಜದ ಆತ್ಮರಕ್ಷಣೆಗಾಗಿ ಮತ್ತು ಜೀವನದ ಹೋರಾಟದಲ್ಲಿ ಭರವಸೆ ಕಳೆದುಕೊಳ್ಳದಂತೆ ಕೈಹಿಡಿಯುವ ಉದ್ದೇಶದಿಂದಲಾದರೂ ಅಸ್ಪೃಶ್ಯ ಸಮಾಜಕ್ಕೆ ರಾಜಕೀಯ ಅಧಿಕಾರದಲ್ಲಿ ನಿಶ್ಚಿತವಾಗಿ ಪಾಲು ನೀಡಲೇಬೇಕು ಎನ್ನುವ ನಿಟ್ಟಿನಲ್ಲಿ ವೈಚಾರಿಕ ಹಿನ್ನೆಲೆಯ ಮತ್ತು ನ್ಯಾಯಪರ ವ್ಯಕ್ತಿಗಳು ಪ್ರಯತ್ನ ಮಾಡಬೇಕಿದೆ.

ಅಸ್ಪೃಶ್ಯ ಸಮಾಜದ ನಿಜವಾದ ಹಿತಚಿಂತಕ ಆ ಸಮಾಜಕ್ಕೆ ಎಷ್ಟು ಸಾಧ್ಯವೋ ಅಷ್ಟು ರಾಜಕೀಯ ಅಧಿಕಾರ ಸಿಗುವ ನಿಟ್ಟಿನಲ್ಲಿ ಜೀವ ಸವೆಸುತ್ತಾನೆ ಎನ್ನುವುದು ನನ್ನ ಅಪೇಕ್ಷೆ ಇತ್ತು. ಆದರೆ ಗಾಂಧೀಜಿ ಅವರ ವೈಚಾರಿಕ ಚಿಂತನೆ ನೋಡಿದರೆ ಅದು ವಿಲಕ್ಷಣವಾಗಿ ಗೋಚರಿಸುತ್ತಿದೆ. ಇದೇ ಕಾರಣಕ್ಕೆ ಅವರ ವಿಚಿತ್ರ ಚಿಂತನಾ ಶೈಲಿಯ ಅರ್ಥ ನನಗಾಗಲಿಲ್ಲ. ಅಸ್ಪೃಶ್ಯ ಸಮಾಜದ ಕೈಗೆ ರಾಜಕೀಯ ಅಧಿಕಾರ ನೀಡುವ ನಿಟ್ಟಿನಲ್ಲಿ ಗಾಂಧೀಜಿ ಸ್ವಲ್ಪ ಕೂಡ ಪ್ರಯತ್ನ ಮಾಡಲಿಲ್ಲ. ಅದಕ್ಕೆ ವಿರುದ್ಧವಾಗಿ ಬ್ರಿಟಿಷ್ ಸರ್ಕಾರ ಮಾಡಿರುವ ಜಾತಿವಾರು ಪ್ರಾತಿನಿಧಿತ್ವ ನಿರ್ಣಯದಿಂದ ಒಂದಿಷ್ಟು ರಾಜಕೀಯ ಅಧಿಕಾರ ಭವಿಷ್ಯದ ಸಂವಿಧಾನದಲ್ಲಿ ಲಭಿಸಲಿದೆಯೋ ಅದನ್ನು ಕೂಡ ಕಸಿದುಕೊಳ್ಳುವ ನಿಟ್ಟಿನಲ್ಲಿ ಪ್ರಾಣವನ್ನು ಪಣಕ್ಕೆ ಇಟ್ಟು ವಿರೋಧಿಸುತ್ತಿದ್ದಾರೆ. ಅಸ್ಪೃಶ್ಯ ಸಮಾಜಕ್ಕೆ ರಾಜಕೀಯ ಅಧಿಕಾರದಲ್ಲಿ ಕಿಂಚಿತ್ ಪಾಲು ಕೂಡ ಲಭಿಸಬಾರದು ಮತ್ತು ರಾಜಕೀಯ ಕ್ಷೇತ್ರದಲ್ಲಿ ಅವರ ಅಸ್ತಿತ್ವ ಎಲ್ಲಿಯೂ ಕಾಣಸಿಗಕೂಡದು ಎನ್ನುವ ಏಕೈಕ ಉದ್ದೇಶದಿಂದ ಗಾಂಧೀಜಿ ಅವರು ನಡೆಸಿರುವ ಈ ಪ್ರಯತ್ನ ಮೊದಲನೆಯದ್ದೇನಲ್ಲ. ಅಲ್ಪಸಂಖ್ಯಾತರ ಒಪ್ಪಂದ ಅಸ್ತಿತ್ವಕ್ಕೆ ಬರುವ ಮೊದಲೇ ಅಸ್ಪೃಶ್ಯರ ಕೈಗೆ ರಾಜಕೀಯ ಅಧಿಕಾರ ಹೋಗಬಾರದು ಎಂದು ಮುಸ್ಲಿಂರೊಂದಿಗೆ ಗಾಂಧೀಜಿ ಕೈಜೋಡಿಸಿ ಆ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನ ಮಾಡಿದ್ದರು. ಅಸ್ಪೃಶ್ಯರ ರಾಜಕೀಯ ಹಕ್ಕುಗಳ ಬೇಡಿಕೆಗಳನ್ನು ನೀವು ವಿರೋಧಿಸಿದ್ದೇ ಆದಲ್ಲಿ ನಾನು ನಿಮ್ಮೊಂದಿಗೆ ಕೈಜೋಡಿಸಿ ನಿಮ್ಮ ಹದಿನಾಲ್ಕಕ್ಕೂ ಹದಿನಾಲ್ಕು ಬೇಡಿಕೆಗಳಿಗೆ ಮಾನ್ಯತೆ ನೀಡುತ್ತೇನೆಂಬ ತಂತ್ರಗಾರಿಕೆ ಹೆಣೆದಿದ್ದರು. ಆದರೆ ಮುಸ್ಲಿಂ ನಾಯಕರು ಗಾಂಧೀಜಿ ಅವರ ಕೃಷ್ಣ ಕಾರಸ್ಥಾನ ತಂತ್ರಕ್ಕೆ ಬೆಂಬಲ ನೀಡದ ಕಾರಣ ಅವರ ಈ ಪ್ರಯತ್ನ ವಿಫಲವಾಗಿತ್ತು. ಒಂದು ವೇಳೆ ಮುಸ್ಲಿಂರು ಗಾಂಧೀಜಿ ಮಾತಿಗೆ ಮರುಳಾಗಿದ್ದರೆ ಎರಡನೇ ಬಾರಿ ಅಸ್ಪೃಶ್ಯರ ಉಸಿರು ಕಟ್ಟಿಸುವ ಕೆಲಸ ಆಗುತ್ತಿತ್ತು. ಗಾಂಧೀಜಿ ಮತ್ತು ಮುಸ್ಲಿಂ ವಿರೋಧಿಗಳ ಮಧ್ಯೆ ಅಸ್ಪೃಶ್ಯ ಸಮಾಜ ಅಡಕತ್ತರಿಯಂತೆ ಸಿಲುಕಿ ನರಳಬೇಕಾಗುತ್ತಿತ್ತು. ಆದರೆ ಮುಸ್ಲಿಂ ಪ್ರತಿನಿಧಿಗಳು ಗಾಂಧೀಜಿ ಜೊತೆಗೆ ಕೈಜೋಡಿಸುವುದಕ್ಕೆ ಸ್ಪಷ್ಟವಾಗಿ ನಿರಾಕರಿಸಿದ್ದರಿಂದ ಸಮಾಜದ ಮೇಲೆ ಆಗುತ್ತಿದ್ದ ದುರ್ಭರ ಘಳಿಗೆ ತಪ್ಪಿತು.

ಜಾತಿವಾರು ವಿಷಯಕ್ಕೆ ಗಾಂಧೀಜಿಯ ವಿರೋಧ ಏಕೆ ಇದೆ ಎನ್ನುವ ಮೂಲ ಸಂಗತಿ ಇಂದಿಗೂ ನನಗೆ ಅರ್ಥವಾಗಿಲ್ಲ. ಈ ನಿರ್ಣಯದಿಂದಾಗಿ ಅಸ್ಪೃಶ್ಯರು ಹಿಂದೂ ಸಮಾಜದಿಂದ ಒಡೆದುಹೋಗುತ್ತಾರೆ ಎಂದು ಗಾಂಧೀಜಿ ಹೇಳುತ್ತಾರೆ. ಆದರೆ ಡಾ. ಮುಂಜೆ ಮಾತ್ರ ಹೀಗೆ ಹೇಳುವುದೇ ಇಲ್ಲ. ಡಾ.ಮುಂಜೆ ಕಟ್ಟಾ ಹಿಂದುತ್ವವಾದಿ ಮತ್ತು ಹಿಂದೂಗಳ ಹಿತಾಸಕ್ತಿಯ ಸಂರಕ್ಷಣೆಯಲ್ಲಿ ಬಹುದೊಡ್ಡ ಅಸ್ತ್ರ ಎಂದು ಹೇಳಲಾಗುತ್ತದೆ. ವಿದೇಶದಿಂದ ಮರಳಿದ ಬಳಿಕ ಡಾ. ಮುಂಜೆ ಮಾಡಿದ ತಮ್ಮ ಎಲ್ಲ ಭಾಷಣಗಳಲ್ಲಿ ಬ್ರಿಟಿಷ್ ಸರ್ಕಾರ ಪ್ರಕಟಿಸಿರುವ ಜಾತಿವಾರು ಪ್ರಾತಿನಿಧಿತ್ವದ ನಿರ್ಣಯದಿಂದಾಗಿ ಅಸ್ಪೃಶ್ಯ ಸಮಾಜ ಹಿಂದೂ ಸಮಾಜದೊಂದಿಗೆ ಇರುವ ಕೊಂಡಿ ಕಡಿದುಕೊಂಡಿಲ್ಲ ಮತ್ತು ಅಸ್ಪೃಶ್ಯರು ಹಿಂದೂ ಸಮಾಜದಿಂದ ಎಂದಿಗೂ ವಿಘಟಿತಗೊಳ್ಳುವುದಿಲ್ಲವೆಂದು ಹೇಳಿದ್ದರು. ಬ್ರಿಟಿಷ್ ಸರ್ಕಾರ ಕೊಟ್ಟ ಈ ನಿರ್ಣಯವು ತಮ್ಮಂತಹವರ ಪ್ರಯತ್ನದಿಂದ ಆಗಿದೆಯೆಂದೂ ಅವರು ಬಡಾಯಿ ಕೊಚ್ಚಿಕೊಂಡಿದ್ದರು. ರಾಜಕೀಯ ದೃಷ್ಟಿಯಿಂದ ಅಸ್ಪೃಶ್ಯ ಸಮಾಜವನ್ನು ಹಿಂದೂ ಸಮಾಜದಿಂದ ಒಡೆಯುವ ಡಾ. ಅಂಬೇಡ್ಕರ್ ಪ್ರಯತ್ನ ಬ್ರಿಟಿಷ್ ಸರ್ಕಾರದ ಈ ಪ್ರಸ್ತಾವನೆಯಿಂದ ವಿಫಲವಾಗಿದೆಯೆಂದೂ ಡಾ.ಮುಂಜೆ ಹೇಳಿದ್ದಾರೆ. ಡಾ. ಮುಂಜೆ ಅವರು ಹೇಳುವಂತೆ ಈ ಎಲ್ಲ ಬೆಳವಣಿಗೆಗಳ ಶ್ರೇಯಸ್ಸು ಅವರಿಗೆ ಲಭಿಸದಿದ್ದರೂ ಅವರ ಹೇಳಿಕೆಯಲ್ಲಿ ತಥ್ಯವಿಲ್ಲದೇ ಇಲ್ಲ. ಡಾ. ಮುಂಜೆ ಅವರಂತೆ ನನಗೂ ಕೂಡ ಬ್ರಿಟಿಷ್ ಸರ್ಕಾರದ ಈ ಪ್ರಸ್ತಾವನೆಯ ಫಲವಾಗಿ ರಾಜಕೀಯವಾಗಿ ಅಸ್ಪೃಶ್ಯರು ಮತ್ತು ಹಿಂದೂ ಸಮಾಜದ ಮಧ್ಯೆ ಕಂದಕ ನಿರ್ಮಾಣವಾಗುವುದಿಲ್ಲವೆಂದು ಅನ್ನಿಸುತ್ತದೆ. ವಸ್ತುಸ್ಥಿತಿ ಹೀಗಿರುವಾಗ ಅಸ್ಪೃಶ್ಯರು ಹಿಂದು ಸಮಾಜದಿಂದ ದೂರಾಗುತ್ತಾರೆ ಎನ್ನುವ ಗಾಂಧೀಜಿ ಅವರ ಆತಂಕ ನಿರಾಧಾರವಾಗಿದೆ. ಡಾ. ಮುಂಜೆ ಅವರಂತಹ ಕಟ್ಟಾ ಹಿಂದುತ್ವವಾದಿಗಳಿಗೆ ಇಲ್ಲದ ಆತಂಕ ಗಾಂಧೀಜಿ ಅವರಂತಹ ರಾಷ್ಟ್ರೀಯವಾದಿ ನಾಯಕರುಗಳ ದೃಷ್ಟಿಕೋನದಲ್ಲೂ ಕಾಣಿಸಿಕೊಂಡು ಈ ವಿಷಯದಲ್ಲಿ ಹಿಂದೂ ಹಿತಾಸಕ್ತಿ ರಕ್ಷಣೆಗೆ ಅವರು ತಮ್ಮ ಪ್ರಾಣ ಪಣಕ್ಕಿಡುವುದಕ್ಕೆ ಉದ್ಯುಕ್ತವಾಗಿರುವುದು ಒಂದು ಚಿದಂಬರ ರಹಸ್ಯವಾಗಿದೆ ಎಂದೇ ಅರ್ಥೈಸಬೇಕಾಗುತ್ತದೆ. ಡಾ. ಮುಂಜೆ ಅವರಂತಹವರಿಗೆ ಈ ಪ್ರಸ್ತಾವನೆಯಲ್ಲಿ ಪ್ರತ್ಯೇಕತೆಯ ಭೂತ ಕಾಣಿಸುವುದಿಲ್ಲವೆಂದ ಮೇಲೆ ಗಾಂಧೀಜಿ ಅವರಂತೂ ಸಂಶಯಪಡುವ ಅಗತ್ಯವಿರಲಿಲ್ಲ.

ಬ್ರಿಟಿಷ್ ಸರ್ಕಾರದ ಪರವಾಗಿ ಪ್ರಧಾನಿ ರಾಮ್ಸೆ ಮ್ಯಾಕ್ ಡೊನಾಲ್ಡ್ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಅಸ್ಪೃಶ್ಯರಿಗಾಗಿ ರೂಪಿಸಿರುವ ಯೋಜನೆಯಲ್ಲಿ ಹಿಂದೂಗಳನ್ನು ಸಂತೃಪ್ತಪಡಿಸುವಂತಿದೆ ಎನ್ನುವುದು ನನ್ನ ಅನಿಸಿಕೆ. ಸಂಯುಕ್ತ ಮತಕ್ಷೇತ್ರಕ್ಕೆ ಮಾನ್ಯತೆ ನೀಡುವಂತಹ ನಾಯಕರುಗಳಾದ ರಾವ್‌ಬಹಾದ್ದೂರ್ ರಾಜಾ, ಗವಯಿ ಮತ್ತು ಪಿ. ಬಾಳು ಅವರುಗಳೂ ಕೂಡ ಈ ನಿರ್ಣಯದಿಂದಾಗಿ ಮುಖ ಮುಚ್ಚಿಕೊಳ್ಳಬೇಕಾಗಿದ್ದಿಲ್ಲ. ಹೀಗಿದ್ದರೂ ಕೂಡ ಅಸೆಂಬ್ಲಿಯಲ್ಲಿ ರಾವ್‌ಬಹಾದ್ದೂರ್ ರಾಜಾ ಅವರು ತಮ್ಮ ಭಾಷಣದುದ್ದಕ್ಕೂ ಮಾಡಿದ ಗಲಾಟೆ ಮತ್ತು ಕಿರಿಕಿರಿ ನೋಡುವಂತೆಯೂ ಮತ್ತು ಕೇಳಿಸಿಕೊಳ್ಳುವಂತೆಯೂ ಇತ್ತು. ನಿನ್ನೆ ಮೊನ್ನೆಯವರೆಗೆ ಸ್ವತಂತ್ರ ಮತಕ್ಷೇತ್ರಕ್ಕಾಗಿ ಹೋರಾಡಿದ, ಹಿಂದೂಗಳ ಜಾತಿ ಭೇದ ಶೋಷಣೆಯ ಕಟ್ಟಾ ವಿರೋಧಿಯಾಗಿದ್ದ ರಾವ್‌ಬಹಾದ್ದೂರ್ ಅವರ ಹೃದಯದಲ್ಲಿ ಸಂಯುಕ್ತ ಮತಕ್ಷೇತ್ರ ಮತ್ತು ಹಿಂದೂಗಳ ಬಗ್ಗೆ ಅದಮ್ಯವಾಗಿ ಹುಟ್ಟಿದ ಪ್ರೇಮ ನೋಡಿದ ಮೇಲೆ ಇದು ನಾಟಕವೆಂದೂ ಯಾರಿಗೆ ಅನ್ನಿಸುವುದಿಲ್ಲ? ರಾವ್‌ಬಹಾದ್ದೂರ್ ಅವರಲ್ಲಿ ಈ ಆಕಸ್ಮಿಕ ಪ್ರೀತಿಯ ಮೂಲ ಎಲ್ಲಿದೆ ಎಂದರೆ, ದುಂಡು ಮೇಜಿನ ಪರಿಷತ್ತಿನಲ್ಲಿ ಸ್ಥಾನ ಸಿಗದಿರುವುದು ಮತ್ತು ಕಳೆದುಕೊಂಡಿರುವ ಪ್ರಸಿದ್ಧಿಯನ್ನು ಮರುಗಳಿಸುವ ನಿಟ್ಟಿನಲ್ಲಿ ನಡೆದಿರುವ ಸ್ವಾಭಾವಿಕ ಪ್ರಯತ್ನದಲ್ಲಿದೆ. ಅವರ ಈ ಅದಮ್ಯ ಪ್ರೀತಿಯಲ್ಲಿ ಪ್ರಾಮಾಣಿಕ ಹೃದಯ

ಪರಿವರ್ತನೆಯ ಅಂಶ ಯಾವ ಮಟ್ಟದಲ್ಲಿದೆ ಎನ್ನುವುದನ್ನು ಸದ್ಯಕ್ಕೆ ನಾನು ಪರೀಕ್ಷಿಸಲು ಹೋಗುವುದಿಲ್ಲ.

ಸರ್ಕಾರದ ಜಾತಿವಾರು ಪ್ರಾತಿನಿಧಿತ್ವ ನಿರ್ಣಯ ವಿರುದ್ಧ ರಾವ್‌ಬಹಾದ್ದೂರ್ ರಾಜಾ ಅವರು ಇದೀಗ ಆರಂಭಿಸಿರುವ ವಿರೋಧದಲ್ಲಿ ಎರಡು ಪ್ರಮುಖ ವಿಷಯಗಳ ಮೇಲೆ ತಮ್ಮ ಗಮನ ಕೇಂದ್ರೀಕರಿಸಿದ್ದಾರೆ. ಈ ನಿರ್ಣಯದಲ್ಲಿ ಅಸ್ಪೃಶ್ಯರಿಗೆ ಅವರ ಸಂಖ್ಯೆಗಿಂತ ಕಡಿಮೆ ಪ್ರಮಾಣದಲ್ಲಿ ಸ್ಥಾನಗಳು ಲಭಿಸಿವೆಯೆಂಬುದು ಅವರ ಮೊದಲ ಆಕ್ಷೇಪವಾಗಿದ್ದರೆ, ಈ ನಿರ್ಣಯದಿಂದ ಅಸ್ಪೃಶ್ಯ ಸಮಾಜ ಒಡೆದು ಹೋಗಿದೆ ಎನ್ನುವ ವಿಷಾದಕರ ಸಂಗತಿ ಅವರ ಎರಡನೇ ಆಕ್ಷೇಪವಾಗಿದೆ. ಈ ನಿರ್ಣಯದಿಂದಾಗಿ ಅಸ್ಪೃಶ್ಯರಿಗೆ ಅವರ ಜನಸಂಖ್ಯೆಗಿಂತ ಕಡಿಮೆ ಪ್ರಮಾಣದಲ್ಲಿ ಸ್ಥಾನಗಳು ಲಭಿಸಿವೆ ಎನ್ನುವ ರಾವ್‌ಬಹಾದ್ದೂರ್ ಅವರ ಆಕ್ಷೇಪಕ್ಕೆ ನನ್ನ ಸಹಮತ ಇದೆ. ಆದರೆ ಕಡಿಮೆ ಸ್ಥಾನ ಲಭಿಸುವುದಕ್ಕೆ ದುಂಡು ಮೇಜಿನ ಪರಿಷತ್ತಿನ ಸಭೆಗೆ ಹೋಗಿದ್ದ ನಾವು ಇಬ್ಬರೂ ಕಾರಣವಾಗಿದ್ದು, ಅಸ್ಪೃಶ್ಯರ ಹಿತಾಸಕ್ತಿಗೆ ದ್ರೋಹ ಬಗೆದಿದ್ದೇವೆ ಎಂದು ರಾವ್‌ಬಹಾದ್ದೂರ್ ಆರೋಪ ಮಾಡುವ ಮೊದಲು ತಾವು ಕೇಂದ್ರ ಸಮಿತಿಯಲ್ಲಿದ್ದ ವೇಳೆ ಯಾವ ಸಾಧನೆ ಮಾಡಿದ್ದಾರೆ ಎನ್ನುವುದನ್ನು ವಿಚಾರ ಮಾಡುವುದು ಒಳಿತು. ಆ ಕಮೀಟಿಯ ವರದಿಯಲ್ಲಿ ಮದ್ರಾಸ್‌ಗೆ ಹಂಚಿಕೆಯಾದ ೧೫೦ ಸ್ಥಾನಗಳ ಪೈಕಿ ಕೇವಲ ೧೦, ಮುಂಬೈನ ೧೧೪ರ ಪೈಕಿ ೮, ಬಂಗಾಲದಲ್ಲಿ ೨೦೦ರ ಪೈಕಿ ೮ ಉತ್ತರಪ್ರದೇಶದ ೧೮೨ ಸ್ಥಾನಗಳ ಪೈಕಿ ಅಸ್ಪೃಶ್ಯರಿಗೆ ಲಭಿಸಿದ್ದು ೬, ಪಂಜಾಬ್‌ನ ೧೫೦ರ ಪೈಕಿ ೬, ಬಿಹಾರ ಒರಿಸ್ಸಾದಲ್ಲಿ ೧೫೦ರ ಪೈಕಿ ಕೇವಲ ೬, ಮಧ್ಯ ಮತ್ತು ವಹ್ರಾಡ್‌ನ ೧೨೫ರ ಪೈಕಿ ಕೇವಲ ೮ ಮತ್ತು ಆಸ್ಸಾಂನಲ್ಲಿ ಅಸ್ಪೃಶ್ಯ ಮತ್ತು ಹಿಂದುಳಿದ ವರ್ಗದ ಕಾಡು ಜಾತಿ ಸಮುದಾಯಕ್ಕೆ ೧೫ ಸ್ಥಾನಗಳ ಪೈಕಿ ಕೇವಲ ೯ ಸ್ಥಾನಗಳನ್ನು ಹಂಚಿಕೆ ಮಾಡಲಾಗಿತ್ತು. ಅಸ್ಪೃಶ್ಯರ ಜನಸಂಖ್ಯೆಗೆ ಹೋಲಿಸಿದರೆ ಈ ಹಂಚಿಕೆ ಅಪೂರ್ಣ ಎನ್ನುವುದಂತೂ ಸತ್ಯ. ರಾವ್ ಬಹಾದ್ದೂರ್ ರಾಜಾ ಅವರು ಇದೇ ಸಮಿತಿಯ ಸದಸ್ಯರಾಗಿದ್ದವರು. ಸರ್ಕಾರದ ಜಾತಿವಾರು ಪ್ರಾತಿನಿಧಿತ್ವದ ತೀರ್ಮಾನದಲ್ಲಿ ಅಸ್ಪೃಶ್ಯರಿಗೆ ಕಡಿಮೆ ಸ್ಥಾನಗಳು ಲಭಿಸಿರುವ ದೋಷವನ್ನು ನಮ್ಮ ಮುಖಕ್ಕೆ ಮೆತ್ತುವ ಮೊದಲು ತಾವು ಸ್ವತಃ ಕೇಂದ್ರ ಸಮಿತಿ ಸದಸ್ಯರಾಗಿದ್ದುಕೊಂಡು ಅನ್ಯಾಯದ ವಿರುದ್ಧ ಧ್ವನಿ ಎತ್ತದೇ ಅಷ್ಟೊಂದು ಪ್ರಮಾಣದಲ್ಲಿ ಕಡಿಮೆಯಾಗುವುದಕ್ಕೆ ಹೇಗೆ ಅವಕಾಶ ಮಾಡಿಕೊಟ್ಟಿದ್ದೀರಿ? ಆಗಲೇ ಏಕೆ ಆಕಾಶ ಭೂಮಿ ಒಂದು ಮಾಡುವಂತೆ ಹಠ ಹಿಡಿಯಲಿಲ್ಲ? ಇದಕ್ಕೆ ರಾವ್‌ಬಹಾದ್ದೂರ್ ಅವರಲ್ಲಿ ತೃಪ್ತಿಪಡಿಸುವಂತಹ ಯಾವುದೇ ಸ್ಪಷ್ಟೀಕರಣ ಇಲ್ಲ. ಅಸ್ಪೃಶ್ಯರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳು ಲಭಿಸಬೇಕು ಇದು ಅವರ ಜನ್ಮಸಿದ್ಧ ಹಕ್ಕು, ತನ್ನ ಆತ್ಮರಕ್ಷಣೆಗಾಗಿ ಅಷ್ಟನ್ನೂ ಪಡೆದುಕೊಳ್ಳುವುದು ಅತ್ಯಗತ್ಯ ಎಂದು ರಾವ್ ಬಹಾದ್ದೂರ್ ಭಾವಿಸಿದ್ದರೆ, ಅಸ್ಪೃಶ್ಯರಿಗೆ ಇಷ್ಟು ಸ್ಥಾನಗಳು ಬೇಕೇ ಬೇಕು ಎಂಬ ಬೇಡಿಕೆಗೆ ಅಂತಿಮರೂಪ ನೀಡುವುದಕ್ಕೆ ಅವರಿಗೆ ದೊರೆತಿದ್ದ ಕೇಂದ್ರ ಸಮಿತಿ ಸದಸ್ಯತ್ವದ ಪ್ರಯೋಜನವನ್ನು ಅವರು ಏಕೆ ಮಾಡಿಕೊಳ್ಳಲಿಲ್ಲ?

ನನ್ನ ಪ್ರಕಾರ ಸರ್ಕಾರದ ತೀರ್ಮಾನದಿಂದಾಗಿ ಅಸ್ಪೃಶ್ಯ ಸಮಾಜ ಹಿಂದೂ ಸಮಾಜದಿಂದ ಒಡೆದುಹೋಗಿದೆ ಎನ್ನುವ ರಾವ್‌ಬಹಾದ್ದೂರ್ ರಾಜಾ ಅವರ ಆಕ್ಷೇಪ ಅರ್ಥವೇ ಇಲ್ಲದ್ದು. (ಹಾಗೇ ನೋಡಿದರೆ ಡಾ. ಮುಂಜೆ ಹಾಗೆ ಭಾವಿಸುವುದಿಲ್ಲ). ಹಿಂದೂಗಳ ದೃಷ್ಟಿಕೋನದಲ್ಲಿ ಆಮೂಲಾಗ್ರ ಬದಲಾವಣೆ ಆಗಿದೆ. ಅದರಲ್ಲೂ ಅಸ್ಪೃಶ್ಯರ ವಿಷಯಕ್ಕೆ ಸಂಬಂಧಿಸಿದಂತೆ ಕೇವಲ ಆರೇಳು ತಿಂಗಳುಗಳಲ್ಲಿ (ಡಾ. ಮುಂಜೆ ಅವರನ್ನು ಭೇಟಿಯಾದ ಬಳಿಕ) ಹಿಂದೂಗಳ ಮನಸ್ಥಿತಿಯಲ್ಲಿ ವಿಲಕ್ಷಣ ಮನಪರಿವರ್ತನೆಯಾಗಿದೆ ಎಂದು ರಾವ್‌ಬಹಾದ್ದೂರ್ ರಾಜಾ ಎಲ್ಲೆಡೆ ಹೇಳಿಕೊಂಡು ತಿರುಗುತ್ತಿದ್ದಾರೆ. ಈ ಹೊಸ ಹೇಳಿಕೆಯ ಮೇಲೆ ಯಾವ ಅಸ್ಪೃಶ್ಯ ಜನರ ವಿಶ್ವಾಸ ಇಲ್ಲವೋ ಅಥವಾ ಯಾರು ಸ್ವತಂತ್ರ

ಮತಕ್ಷೇತ್ರಗಳಿಗೆ ಬೇಡಿಕೆ ಮಂಡಿಸುತ್ತಿದ್ದಾರೋ ಅವರಿಗೆ ಮನದಟ್ಟು ಮಾಡಿಕೊಡುವುದಕ್ಕಾದರೂ ರಾವ್‌ಬಹಾದ್ದೂರ್ ರಾಜಾ ಅವರಂತಹ ವ್ಯಕ್ತಿಗಳು ಸಂಯುಕ್ತ ಮತದಾರ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾಗಬೇಕು. ಈ ಮೂಲಕ ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರಗಳ ಅವಶ್ಯಕತೆ ಇಲ್ಲ ಎಂದು ಸಿದ್ಧ ಮಾಡಿ ತೋರಿಸುವ ಅವಕಾಶ ಕಳೆದುಕೊಳ್ಳಲೇಬಾರದು. ಅಸ್ಪೃಶ್ಯರ ಬಗ್ಗೆ ನಮ್ಮಲ್ಲಿ ಕಳಕಳಿ, ಪ್ರೀತಿ ಇದೆ ಎಂದು ಹೇಳಿಕೊಳ್ಳುವ ಹಿಂದೂಗಳು ರಾವ್‌ಬಹಾದ್ದೂರ್ ಅವರಂತಹವರನ್ನು ಆಯ್ಕೆ ಮಾಡುವ ಮೂಲಕ ತಮ್ಮ ಮನಸ್ಸಿನಲ್ಲಿ ತುಂಬಿರುವ ಸತ್ಯವನ್ನು ಮನದಟ್ಟು ಮಾಡಿಕೊಡುವುದಕ್ಕೆ ಈ ನಿರ್ಣಯ ಅವಕಾಶ ಮಾಡಿಕೊಟ್ಟಿದೆ.

ಸರ್ಕಾರದ ಈ ತೀರ್ಮಾನ ಕೆಲವೊಂದು ಸಂಗತಿಗಳಲ್ಲಿ ಅಪೂರ್ಣವಾಗಿದ್ದರೂ ಕೂಡ ಯಾರಿಗೆ ಸ್ವತಂತ್ರ ಮತಕ್ಷೇತ್ರ ಬೇಕಿತ್ತೋ ಅಂತಹವರನ್ನು ಈ ನಿರ್ಣಯದ ಮೂಲಕ ಸಮಾಧಾನಪಡಿಸಲಾಗಿದೆ. ಈ ದೃಷ್ಟಿಯಿಂದ ನೋಡಿದಲ್ಲಿ ಅಥವಾ ಅಸ್ಪೃಶ್ಯ ಸಮಾಜಕ್ಕಷ್ಟೇ ಸಿಮೀತಗೊಳಿಸಿ ಹೇಳುವುದೇ ಆದರೆ ಈ ನಿರ್ಣಯ ಒಂದು ರೀತಿಯಲ್ಲಿ ಸಂಧಾನ ಸ್ವರೂಪದ್ದು ಆಗಿದ್ದು, ಎರಡು ಪಕ್ಷಗಳು ಇದಕ್ಕೆ ಒಪ್ಪಿಗೆ ಸೂಚಿಸಲು ಉದ್ಯುಕ್ತವಾಗಿವೆ.

ಗಾಂಧೀಜಿ ಅವರ ಬಗ್ಗೆ ಮಾತನಾಡಬೇಕೆಂದರೆ ಅವರಿಗೆ ಏನು ಬೇಕು ಎನ್ನುವುದೇ ಸ್ಪಷ್ಟವಾಗಿ ತಿಳಿಯುತ್ತಿಲ್ಲ. ಗಾಂಧೀಜಿ ಅವರು ಸ್ವತಂತ್ರ ಮತಕ್ಷೇತ್ರ ಪರಿಕಲ್ಪನೆಗೆ ವಿರುದ್ಧವಾಗಿದ್ದರೂ ಸಂಯುಕ್ತ ಮತಕ್ಷೇತ್ರ ಮತ್ತು ಮೀಸಲಾತಿಗೆ ವಿರುದ್ಧವಿಲ್ಲ ಎನ್ನಲಾಗುತ್ತಿದೆ. ಆದರೆ ಅದೀಗ ಜಾಣ ಮರೆವು ಆಗಿದೆ. ಇಂದು ಅವರ ಅಭಿಪ್ರಾಯ ಬದಲಾಗಿರಬಹುದು. ಆದರೆ ಲಂಡನ್‌ನಲ್ಲಿ ಹಿಂದೂಗಳಿಗಿಂತ ಅಸ್ಪೃಶ್ಯರಿಗೆ ಪ್ರತ್ಯೇಕ ರಾಜಕೀಯ ಇಲ್ಲವೇ ಯಾವುದೇ ಸ್ವತಂತ್ರ ಅಸ್ತಿತ್ವ ಕಲ್ಪಿಸುವಂತಹ ಯಾವುದೇ ಯೋಜನೆ ನನಗೆ ಇಷ್ಟವಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರು. ಅಸ್ಪೃಶ್ಯರಿಗೆ ಕೇವಲ ಸ್ವತಂತ್ರ ಮತಕ್ಷೇತ್ರ ಅಷ್ಟೇ ಅಲ್ಲ ಸಂಯುಕ್ತ ಮತಕ್ಷೇತ್ರಗಳಲ್ಲಿ ಸ್ಥಾನಗಳನ್ನು ಮೀಸಲು ಇಡುವುದನ್ನು ನಾನು ಜೀವ ಇರುವವರೆಗೆ ವಿರೋಧಿಸುತ್ತೇನೆ ಎಂದು ಲಂಡನ್‌ನಲ್ಲಿ ಪ್ರಕಟಿಸಿದ್ದರು. ಸಾರ್ವತ್ರಿಕ ಮತಾಧಿಕಾರ ಮತ್ತು ಸಾಮಾನ್ಯ ಚುನಾವಣೆಗಳಲ್ಲಿ ಅಸ್ಪೃಶ್ಯರಿಗೆ ಮತಾಧಿಕಾರ ನೀಡುವುದು ಮತ್ತವರ ಹಿತಾಸಕ್ತಿಗಳ ಸಂರಕ್ಷಿಸುವ ನಿಟ್ಟಿನಲ್ಲಿ ಯಾವುದೇ ಕಾನೂನುಬದ್ಧ ಸೌಲಭ್ಯ ಕಲ್ಪಿಸುವುದಕ್ಕೆ ಗಾಂಧೀಜಿ ಸಿದ್ಧವಾಗಿರಲಿಲ್ಲ. ಆರಂಭದಲ್ಲಿ ಇಂತಹ ಧೋರಣೆ ತಳೆದಿದ್ದ ಗಾಂಧೀಜಿ, ನನ್ನೊಂದಿಗೆ ಮಾತುಕತೆ ಆರಂಭಿಸಿದ ಮೇಲೆ ನನ್ನನ್ನು ಸಮಾಧಾನ ಪಡಿಸುವುದಕ್ಕಾಗಿ ಅಂತಿಮವಾಗಿ ಒಂದು ಯೋಜನೆ ಸಿದ್ಧಪಡಿಸಿದರು. ಅವರ ಈ ಯೋಜನೆ ಅರ್ಥಹೀನವಾಗಿದ್ದಂತೂ ಸತ್ಯ ಆದರೆ ಅದಕ್ಕೂ ಕಾಯ್ದೆ ಬೆಂಬಲ ಇಲ್ಲವೇ ಕಾನೂನುಬದ್ಧಗೊಳಿಸುವುದಕ್ಕೆ ಗಾಂಧೀಜಿ ಸಿದ್ಧವಾಗಿರಲಿಲ್ಲ.

ಅಸ್ಪೃಶ್ಯ ವರ್ಗದ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಬೇಕು. ಉಚ್ಚವರ್ಗದ ಇನ್ನೊಬ್ಬ ಅಭ್ಯರ್ಥಿಯೂ ಅದೇ ಮತಕ್ಷೇತ್ರದಲ್ಲಿ ಸ್ಪರ್ಧಿಸುವರು. ನಂತರ ನಡೆಯುವ ಚುನಾವಣೆಯಲ್ಲಿ ಅಸ್ಪೃಶ್ಯ ವರ್ಗದ ಅಭ್ಯರ್ಥಿ ಆಯ್ಕೆಯಾಗದೇ ಇದ್ದಲ್ಲಿ ಆ ಚುನಾವಣೆಯ ತೀರ್ಪಿನ ವಿರುದ್ಧ ಅರ್ಜಿ ಸಲ್ಲಿಸಬಹುದು. ಈ ಅರ್ಜಿಗೆ ಅನುಗುಣವಾಗಿ ಕೇವಲ ಅಸ್ಪೃಶ್ಯ ವರ್ಗದ ವ್ಯಕ್ತಿಯಾದ ಕಾರಣಕ್ಕೆ ಆಯ್ಕೆಯಾಗಿಲ್ಲ ಎಂದು ಒಂದು ನ್ಯಾಯಾಧೀಶರು ತೀರ್ಪು ನೀಡಿದರೆ ಆಯ್ಕೆಯಾಗಿರುವ ಅಂತಹ ಉಚ್ಚವರ್ಗದ ಉಮೇದುವಾರ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡುವಂತಹ ವ್ಯವಸ್ಥೆ ಮಾಡುತ್ತೇನೆ ಎಂದು ಗಾಂಧೀಜಿ ಹೇಳಿದ್ದರು. ಇಷ್ಟೆಲ್ಲ ಆದ ಬಳಿಕ ಮತ್ತೆ ಅಸ್ಪೃಶ್ಯ ವರ್ಗದ ಅಭ್ಯರ್ಥಿ ಎರಡನೇ ಬಾರಿ ಚುನಾವಣೆಗೆ ಸ್ಪರ್ಧಿಸಿ ಮತ್ತೆ ಪರಾಭವಗೊಂಡಲ್ಲಿ ಮತ್ತೆ ತೀರ್ಪಿನ ವಿರುದ್ಧ ಅರ್ಜಿ ಸಲ್ಲಿಸುವುದು, ನ್ಯಾಯಾಧೀಶರು ನೀಡುವ ತೀರ್ಪಿನ ಆಧಾರದ ಮೇಲೆ

ಮತ್ತೊಂದು ಬಾರಿ ಚುನಾವಣೆಗೆ ನಿಲ್ಲುವುದು ಗಾಂಧೀಜಿ ಯೋಜನೆಯಾಗಿತ್ತು. ಮತ್ತೆ ಮತ್ತೆ ಪರಾಭವ ಅನುಭವಿಸುವುದು, ಮತ್ತೆ ಮತ್ತೆ ಚುನಾವಣೆಗೆ ನಿಲ್ಲುವಂತಹ ಮಕ್ಕಳಾಟದಂತಹ ಈ ಯೋಜನೆಯನ್ನು ಗಾಂಧೀಜಿ ಪ್ರಸ್ತಾಪಿಸಿದ್ದರು. ಸಂಯುಕ್ತ ಸಂಘ ಮತ್ತು ಮೀಸಲಾತಿ ಸ್ಥಾನಗಳ ಯೋಜನೆಯನ್ನು ಅಸ್ಪೃಶ್ಯರು ಸ್ವೀಕರಿಸಿದರೆ ಗಾಂಧೀಜಿ ಅವರ ಸದ್ವಿವೇಕ ಸಮಾಧಾನಗೊಳ್ಳುತ್ತದೆ ಎಂದು ಸಾಕಷ್ಟು ಜನರಿಗೆ ಆಗಿರುವ ಮನವರಿಕೆ ಹೇಗೆ ನಿರಾಧಾರ ಎನ್ನುವುದು ಎಲ್ಲರ ಗಮನಕ್ಕೆ ಬರಲಿ ಎನ್ನುವ ಉದ್ದೇಶದಿಂದ ಗಾಂಧೀಜಿ ಅವರ ಈ ಯೋಜನೆಯನ್ನು ಇಂದು ಬಹಿರಂಗಪಡಿಸಬೇಕಾಯಿತು. ಒಂದು ವೇಳೆ ಗಾಂಧೀಜಿ ಅವರು ಹೊಸ ಯೋಜನೆ ಸಿದ್ಧಪಡಿಸಿದ್ದಲ್ಲಿ ಆ ಯೋಜನೆಯನ್ನು ಮೊದಲು ಪ್ರಸ್ತಾಪಿಸಲಿಯೆಂದು ನಾನು ಒತ್ತಾಯಿಸುತ್ತಿದ್ದೇನೆ. ಗಾಂಧೀಜಿ ಅವರ ಹಳೆಯ ಹೇಳಿಕೆಗಳು ಮತ್ತು ಹಳೇ ಯೋಜನೆಗಳು ಏನು ಎನ್ನುವುದು ನನಗೆ ಗೊತ್ತಿದೆ ಮತ್ತು ಅವುಗಳಿಗೆ ಯಾವ ರೀತಿ ಪ್ರತ್ಯುತ್ತರ ನೀಡಬೇಕಾಗಿತ್ತೋ ಅದನ್ನು ಕೂಡ ನೀಡಿಯಾಗಿದೆ. ಹಳೇ ಸಂಗತಿಗಳ ಬಗ್ಗೆ ವಿನಾಕಾರಣ ಚರ್ಚಿಸಿ ಕುಳಿತುಕೊಳ್ಳುವುದರಲ್ಲಿ ಅರ್ಥವಿಲ್ಲದ ಕಾರಣ ಗಾಂಧೀಜಿ ಅವರದ್ದು ಏನಾದರೂ ಹೊಸ ಹೇಳಿಕೆಗಳಿದ್ದರೆ ಅದನ್ನು ಮೊದಲು ಪ್ರಸ್ತಾಪಿಸಲಿ ಎನ್ನುವುದು ನನ್ನ ಒತ್ತಾಯ.

ಗಾಂಧೀಜಿ ಅಥವಾ ಕಾಂಗ್ರೆಸ್‌ಗೆ ಯಾವುದು ಯೋಗ್ಯ ಮತ್ತು ನ್ಯಾಯವಾಗಿ ಕಾಣುತ್ತದೋ ಅದೇ ಅಸ್ಪೃಶ್ಯ ಸಮಾಜಕ್ಕೂ ಯೋಗ್ಯವೆಂಬ ನಂಬುಗೆಯನ್ನು ನಾನು ಸ್ವೀಕರಿಸುವುದಕ್ಕೆ ಸಾಧ್ಯವಿಲ್ಲ ಎಂದು ಮೊದಲೇ ಹೇಳಿಬಿಡುತ್ತೇನೆ. ನನ್ನ ಅಸ್ಪೃಶ್ಯ ಬಂಧುಗಳ ಹಿತಾಸಕ್ತಿ ರಕ್ಷಣೆಯಂತಹ ಮಹತ್ವದ ಮತ್ತು ಕಳಕಳಿಯ ಸಮಸ್ಯೆಗೆ ಕೇವಲ ಬಾಯಿಮಾತಿನ ಭರವಸೆ ಇಲ್ಲವೇ ಕಾಗದದ ಮೇಲಿನ ಒಪ್ಪಂದದ ಮೇಲೆ ವಿಶ್ವಾಸ ಇರಿಸುವುದಕ್ಕೆ ನನಗೆ ಸಾಧ್ಯವಿಲ್ಲ. ಗಾಂಧೀಜಿ ಅವರು ಮಹಾತ್ಮ ಇರಬಹುದು ಆದರೆ ಅಮರರಂತೂ ಅಲ್ಲ. ಕಾಂಗ್ರೆಸ್ ಕೂಡ ಮೇಲ್ವರ್ಗದವರ ವೈಭವಕ್ಕಾಗಿ ದೀನ ದಲಿತರನ್ನು ತನ್ನ ಕಾಲಡಿ ತುಳಿಯುವ ಮತ್ತು ತನ್ನ ಆಡಳಿತದ ಕೆಳಗೆ ಇರಿಸುವಂತಹ ಕೆಟ್ಟ ಸಂಸ್ಥೆಯಲ್ಲ ಎಂದು ಒಂದು ವೇಳೆ ಒಪ್ಪಿಕೊಂಡರೂ ಕೂಡ ಅದರ ಶ್ರೇಷ್ಠತೆ ಮತ್ತು ಪ್ರಭಾವ ಶಾಶ್ವತವಾಗಿ ಉಳಿಯಲಾರದು. ಅಸ್ಪೃಶ್ಯತೆ ನಿರ್ಮೂಲನೆಯಾಗಬೇಕು, ಅಸ್ಪೃಶ್ಯ ಜನರನ್ನು ಹಿಂದೂ ಸಮಾಜ ತನ್ನ ಮಡಿಲಲ್ಲಿ ಸೇರಿಸಿಕೊಳ್ಳಬೇಕು ಎಂದು ಅವಿಶ್ರಾಂತವಾಗಿ ಪ್ರಯತ್ನಿಸಿದ ಅನೇಕ ಮಹಾತ್ಮರು ಈ ಭೂಮಿಯಲ್ಲಿ ಜನ್ಮ ತಾಳಿದ್ದಾರೆ. ಆದರೆ ಅವರ ಪೈಕಿ ಯಾರೊಬ್ಬರಿಗೂ ಯಶಸ್ಸಂತೂ ಸಿಕ್ಕಿಲ್ಲ. ಅನೇಕ ಮಹಾತ್ಮರು ಅವತರಿಸಿ ನಿರ್ಗಮಿಸಿದ್ದಾರೆ ಆದರೆ ಅಸ್ಪೃಶ್ಯರು ಮಾತ್ರ ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ.

ಹಿಂದೂ ಸುಧಾರಕರ ಸುಧಾರಣಾ ನೀತಿ ಯಾವ ರೀತಿ ಗೋಸುಂಬೆಯಂತಹದ್ದಿದೆ ಮತ್ತು ಅವುಗಳ ಮೇಲೆ ವಿಶ್ವಾಸ ಇರಿಸುವುದೆಂದರೆ ಆತ್ಮಹತ್ಯಾಕಾರಿ ಎನ್ನುವುದು ನನಗೆ ಮಹಾಡ್ ಮತ್ತು ನಾಸಿಕ್‌ನಲ್ಲಿ ನಡೆದ ಘಟನೆಗಳ ಬಳಿಕ ಪ್ರತ್ಯಕ್ಷ ಅನುಭವ ಆಗಿದೆ. ಪರಿಸ್ಥಿತಿ ಹೀಗಿರುವಾಗ ಹಿಂದೂಗಳೇ ಆಗಿರಬಹುದಾದಂತಹ ನಿಷ್ಪಕ್ಷಪಾತಿ ವೈಚಾರಿಕ ಹಿತಚಿಂತಕರು ಕೂಡ ಇಂತಹ ಆತ್ಮಹತ್ಯಾಕಾರಿ ಸುಧಾರಕರ ಕೈಗೆ ಅಸ್ಪೃಶ್ಯರ ಭವಿಷ್ಯವನ್ನು ನಿರ್ದಾಕ್ಷಿಣ್ಯವಾಗಿ ಒಪ್ಪಿಸುವಂತಹ ಸಲಹೆಯನ್ನಂತೂ ಎಂದಿಗೂ ನೀಡಲಾರರು. ತಮ್ಮ ಜಾತಿಯವರ ಮನಸ್ಸು ನೋಯಿಸಬಾರದು ಇಲ್ಲವೇ ಅವರ ಶೋಷಣೆಯಾಗಬಾರದು ಎಂದು ಈ ಸುಧಾರಕರು ಸರಿಯಾದ ಸಮಯದಲ್ಲಿ ತಮ್ಮ ತತ್ವಾದರ್ಶಗಳಿಗೆ ಎಳ್ಳುನೀರು ಬಿಡುವವರಾಗಿರುವುದರಿಂದ ಇಂತಹವರಿಂದ ಅಸ್ಪೃಶ್ಯರಿಗೆ ಎಳ್ಳಷ್ಟು ಉಪಯೋಗವಿಲ್ಲ.

ವಾಸ್ತವಿಕ ಸ್ಥಿತಿ ಹೀಗಿರುವಾಗ ನನ್ನ ಜನರ ಹಿತಾಸಕ್ತಿಗಳ ಸಂರಕ್ಷಣೆಗೆ ಕಾಯ್ದೆ ಪ್ರಕಾರ

ವ್ಯವಸ್ಥೆಯಾಗಬೇಕೆಂದು ನಾನು ಆಗ್ರಹಿಸುವುದು ಸಹಜ. ಸದ್ಯದ ಜಾತಿವಾರು ಪ್ರಾತಿನಿಧಿತ್ವ ಬದಲಾಗಬೇಕು ಎನ್ನುವುದು ಗಾಂಧೀಜಿಯವರ ಒತ್ತಾಯವಾಗಿದ್ದರೆ, ಬೇರೆ ಇನ್ನೊಂದು ಪರ್ಯಾಯ ಯೋಜನೆಯನ್ನು ಅವರು ಪ್ರಸ್ತುತಪಡಿಸಬೇಕಾಗುತ್ತದೆ. ಅಸ್ಪೃಶ್ಯರಿಗೆ ಇಂದು ಏನು ಲಭಿಸಿದೆಯೋ ಅದಕ್ಕಿಂತ ಹೆಚ್ಚು ಸೌಲಭ್ಯ ತಾವು ಪ್ರಸ್ತಾಪಿಸುವ ಯೋಜನೆಯಲ್ಲಿದೆ ಮತ್ತು ಅವರ ಹಿತಾಸಕ್ತಿಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಎಲ್ಲ ರೀತಿಯ ಕಾನೂನು ಕ್ರಮಗಳನ್ನು ಜಾರಿಗೊಳಿಸಲಾಗುವುದು ಎನ್ನುವುದನ್ನು ಗಾಂಧೀಜಿ ಸಾಬೀತುಪಡಿಸಬೇಕಾಗುತ್ತದೆ. ನನ್ನ ಅನಿಸಿಕೆ ಪ್ರಕಾರ ಗಾಂಧೀಜಿ ಅವರು ಹಿಡಿದಿರುವ ಉಪವಾಸದ ತಮ್ಮ ನಿರ್ಧಾರವನ್ನು ಕೈಬಿಡುತ್ತಾರೆ ಎನಿಸುತ್ತಿದೆ. ಸ್ವತಂತ್ರ ಮತಕ್ಷೇತ್ರದಿಂದ ಹಿಂದೂ ಸಮಾಜಕ್ಕೆ ಅಹಿತ ಮಾಡಬೇಕು ಎನ್ನುವುದು ನಮ್ಮ ಉದ್ದೇಶವಲ್ಲ ಬದಲಿಗೆ ನಮ್ಮ ಭವಿಷ್ಯ ನಮ್ಮ ಕೈಯಲ್ಲಿ ಇರಬೇಕು. ಸ್ಪೃಶ್ಯ ಹಿಂದೂಗಳ ಖುಷಿ ಮತ್ತು ಅವರ ಮನಸ್ಥಿತಿಯನ್ನೇ ನಮ್ಮ ಇಡೀ ಜೀವನದ ಭವಿಷ್ಯ ಅವಲಂಬಿಸಕೂಡದು ಎನ್ನುವ ಒಂದೇ ಉದ್ದೇಶದಿಂದ ನಾವು ಈ ಬೇಡಿಕೆ ಇಟ್ಟಿದ್ದೇವೆ. ತಪ್ಪು ಮಾಡುವುದು ಮತ್ತು ಪಾಪ ಮಾಡುವುದು ನಮ್ಮ ಅಧಿಕಾರ ಎಂದು ಗಾಂಧೀಜಿ ಬ್ರಿಟಿಷ್ ಸರ್ಕಾರವನ್ನು ಉದ್ದೇಶಿಸಿ ಹೇಳುತ್ತಾರೆಂದ ಮೇಲೆ ನಮಗೂ ಅಂತಹ ಅಧಿಕಾರ ಇದ್ದೇ ಇದೆ ಮತ್ತು ಅಂತಹ ಅಧಿಕಾರ ನಮ್ಮಲ್ಲೂ ಇರಲೇಬೇಕಾಗುತ್ತದೆ ಎನ್ನುವುದನ್ನು ಗಾಂಧೀಜಿ ಅವರಿಗೆ ಹೇಳುವುದಕ್ಕೆ ಇಚ್ಛಿಸುತ್ತೇವೆ ಅಲ್ಲದೇ ನಮ್ಮ ಅಧಿಕಾರವನ್ನು ಕಸಿದುಕೊಳ್ಳುವ ಪ್ರಯತ್ನವನ್ನು ಗಾಂಧೀಜಿ ಮಾಡಲಿಕ್ಕಿಲ್ಲ ಎಂದು ಅಪೇಕ್ಷಿಸುತ್ತೇವೆ.

ಉಪವಾಸ ಸತ್ಯಾಗ್ರಹ ಮೂಲಕ ಪ್ರಾಣ ಸಮರ್ಪಣೆ ಮಾಡುವಂತಹ ಭೀಷಣ ಪ್ರತಿಜ್ಞೆಯನ್ನು ಬೇರೆ ಇನ್ನಾವುದೇ ಶ್ರೇಷ್ಠ ಕೆಲಸಕ್ಕೆ ಅವರು ಕಾಯ್ದಿರಿಸಬೇಕಾಗಿತ್ತು. ಹಿಂದೂ–ಮುಸ್ಲಿಂ, ಸ್ಪೃಶ್ಯ– ಅಸ್ಪೃಶ್ಯ ವರ್ಗಗಳ ನಡುವೆ ಗಲಭೆ, ರಕ್ತಪಾತ ನಿಲ್ಲಿಸುವುದಕ್ಕಾಗಿ ಒಂದು ವೇಳೆ ಗಾಂಧೀಜಿ ಇಂತಹ ಘೋರ ಪ್ರತಿಜ್ಞೆ ಮಾಡಿದ್ದರೆ ಅದು ಸ್ವಾಭಾವಿಕ ಮತ್ತು ಸಹಜ ಎಂದು ಭಾವಿಸುತ್ತಿದ್ದೆ. ಇಂದಿನ ಈ ಪ್ರತಿಜ್ಞೆಯಿಂದ ಅಸ್ಪೃಶ್ಯ ಸಮಾಜಕ್ಕೆ ಒಳಿತಾಗುತ್ತದೆ ಅಥವಾ ಅವರ ನೋವು ಕಡಿಮೆಯಾಗುತ್ತದೆ ಎನ್ನುವುದಂತೂ ಇಲ್ಲ. ಗಾಂಧೀಜಿ ಅವರಿಗೆ ತಮ್ಮ ಕೃತ್ಯದ ಪರಿಣಾಮದ ಅರಿವು ಇದೆಯೋ ಇಲ್ಲವೋ ಗೊತ್ತಿಲ್ಲ ಆದರೆ ಅಂತಿಮವಾಗಿ ಅದರ ಪರಿಣಾಮ ಅತ್ಯಾಚಾರದಲ್ಲಿ ಪರ್ಯಾವಸಾನವಾಗಲಿದೆ. ಇಡೀ ದೇಶಾದ್ಯಂತ ಹಿಂದೂ ಅನುಯಾಯಿಗಳು ಅಥವಾ ಅಭಿಮಾನಿಗಳು ನಿರಂತರವಾಗಿ ಅಸ್ಪೃಶ್ಯರನ್ನು ಶೋಷಿಸಲಿದ್ದಾರೆ. ಇಂತಹ ಶೋಷಣೆಗೆ ಒಳಗಾದ ಅಸ್ಪೃಶ್ಯ ಸಮಾಜ ಹಿಂದೂ ಸಮಾಜಕ್ಕೆ ಅಂಟಿಕೊಂಡು ಇರುವುದರ ಬದಲು ಅದರಿಂದ ದೂರಾಗುವ ಪ್ರಯತ್ನ ಮಾಡಿಯೇ ಮಾಡುತ್ತದೆ. ಒಂದು ವೇಳೆ ಗಾಂಧೀಜಿ ಅವರು ನಿಮಗೆ ಹಿಂದೂ ಸಮಾಜ ಬೇಕೋ ಅಥವಾ ರಾಜಕೀಯ ಅಧಿಕಾರ ಬೇಕೋ ಎಂದು ಅಸ್ಪೃಶ್ಯರನ್ನು ಕೇಳಿದ್ದೇ ಆದಲ್ಲಿ, ಹಿಂದೂ ಸಮಾಜಕ್ಕಿಂತ ರಾಜಕೀಯ ಅಧಿಕಾರವೇ ನಮಗೆ ಮಹತ್ವದ್ದಾಗಿದೆ ಎಂದು ಅವರು ನಿಸ್ಸಂಶಯವಾಗಿ, ಸ್ಪಷ್ಟ ಉತ್ತರವನ್ನು ನೀಡಿಯಾರು. ಈ ಎಲ್ಲ ವಿಚಾರಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮತ್ತು ಅವುಗಳ ಪರಿಣಾಮವನ್ನು ಗಮನದಲ್ಲಿರಿಸಿಕೊಂಡು ಒಂದು ವೇಳೆ ಗಾಂಧೀಜಿ ಅವರು ಶಾಂತಚಿತ್ತರಾಗಿ ವಿಚಾರ ಮಾಡಿದರೆ ಇಂತಹ ತಂತ್ರಗಳಿಂದ ಆಗುವ ತಮ್ಮ ಜೈಕಾರ ಮತ್ತು ತಮ್ಮ ಪ್ರತಿಜ್ಞೆಯ ವಿಜಯಕ್ಕಾಗಿ ಅಥವಾ ಅದನ್ನು ಪಡೆಯುವುದಕ್ಕೆ ತೆರಬೇಕಾದ ಮೌಲ್ಯಕ್ಕೆ ಈ ಸತ್ಯಾಗ್ರಹ ಅರ್ಹವಾಗಿದೆಯೇ ಎಂದು ಗಾಂಧೀಜಿ ಅವರಿಗೂ ಕೂಡ ಅನ್ನಿಸುವುದಿಲ್ಲ ಎನ್ನುವುದರ ಬಗ್ಗೆ ನನಗೂ ಸಂಶಯ ಇದೆ. ಚಿಂತನೆಗಿಂತ ಚಿಂತೆ ಮಾಡಬೇಕಾದ ವಿಷಯ ಎಂದರೆ ಗಾಂಧೀಜಿ ಅವರು ತಮ್ಮ ಕೃತ್ಯದಿಂದಾಗಿ ಹಿಂದೂಗಳಲ್ಲಿನ ಕೊಳೆತ ವಿಕಾರ ಮನಸ್ಥಿತಿಯ ಮುಖವಾಡ ತೆಗೆದು ತೋರಿಸಿದ್ದಾರೆ. ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಿನ ದ್ವೇಷ

ಮನೋಭಾವ ಗಾಂಧೀಜಿ ಅವರ ಈ ಕೃತ್ಯದ ಪರಿಣಾಮ ನಶಿಸಿ ಹೋಗುವ ಬದಲು ಇನ್ನಷ್ಟು ಬೆಳೆಯಲಿದೆ. ಎರಡು ಸಮಾಜಗಳ ನಡುವಿನ ಕಂದಕದ ಅಂತರ ಕಡಿಮೆಯಾಗುವುದರ ಬದಲು ಇನ್ನೂ ಹೆಚ್ಚಾಗಲಿದೆ. ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಅಸ್ಪೃಶ್ಯರಿಗೆ ಸಂಬಂಧಿಸಿದಂತೆ ಗಾಂಧೀಜಿ ಅವರು ತಳೆದ ಧೋರಣೆ ವಿರೋಧಿಸಿದ ಕಾರಣಕ್ಕೆ ದೇಶದೆಲ್ಲೆಡೆ ನನ್ನ ವಿರುದ್ಧ ಒಂದೇ ಗುಲ್ಲು ಎದ್ದಿತು. ರಾಷ್ಟ್ರೀಯವಾದಿಗಳು ಎಂದು ಹೇಳಿಕೊಳ್ಳುವ ದೇಶದ ಉನ್ನತವರ್ಗದ ಪತ್ರಕರ್ತರು ಮತ್ತು ದೇಶಾಭಿಮಾನಿಗಳು ನನಗೆ ದೇಶದ್ರೋಹಿ ಸೇರಿದಂತೆ ಇನ್ನಿತರ ಹೀನ ಶಬ್ದಗಳಿಂದ ಬೈದರು. ನನ್ನ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ತಪ್ಪು ಗ್ರಹಿಕೆ ಹುಟ್ಟಿಸುವುದಕ್ಕೆ ವೀಳ್ಯ ಸ್ವೀಕರಿಸಿದವರಂತೆ ನಡೆದುಕೊಂಡರು. ಇಡೀ ಅಸ್ಪೃಶ್ಯ ಸಮಾಜವೇ ನನ್ನ ವಿರುದ್ಧ ಇದೆ ಎನ್ನುವ ಭ್ರಮೆ ಹುಟ್ಟಿಸುವ ನಿಟ್ಟಿನಲ್ಲಿ ಸ್ಪೃಶ್ಯ ವರ್ಗದ ಹಿಂದೂ ಸುಧಾರಕರು ನಾನಾ ರೀತಿಯ ಖೊಟ್ಟಿ ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಿ ನಡೆಯದೇ ಇದ್ದ ಬೃಹತ್ ಸಭೆಗಳ ವರದಿ ಸಿದ್ಧಪಡಿಸಿ ಅವುಗಳನ್ನು ರಾಷ್ಟ್ರೀಯ ಮಾಧ್ಯಮಗಳಲ್ಲಿ ಪ್ರಕಟಿಸುವಂತಹ ಹುನ್ನಾರ ನಡೆಯಿತು. ನನ್ನ ಪರವಾಗಿ ಬರುವ ತಂತಿ ಮತ್ತು ಪತ್ರಗಳನ್ನು ಹತ್ತಿಕ್ಕುವ ಇಲ್ಲವೇ ಪ್ರಕಟಿಸದೇ ಇರುವಂತಹ ಕೆಲಸವನ್ನು ರಾಷ್ಟ್ರೀಯ ಮಾಧ್ಯಮಗಳು ವ್ಯವಸ್ಥಿತವಾಗಿ ಮಾಡಿದವು.

ಅಸ್ಪೃಶ್ಯ ವರ್ಗದ ಕೆಲವರಿಗೆ 'ಸಿಲ್ವರ್ ಬುಲೇಟ್' (ಹಣದ ಆಮಿಷ) ತೋರಿಸಿ ನನ್ನ ವಿರುದ್ಧ ಧ್ವನಿ ಎತ್ತುವುದಕ್ಕೆ ತಯಾರು ಮಾಡಲಾಯಿತು. ಕೆಲವೊಂದು ಸ್ಥಳಗಳಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯರ ಮಧ್ಯೆ ಗಲಾಟೆಯಾಗಿ ಒಂದಿಷ್ಟು ರಕ್ತಪಾತ ಆಯಿತು. ಈ ರೀತಿಯ ಕೆಟ್ಟ ಮತ್ತು ಅನರ್ಥಕಾರಿ ಘಟನೆಗಳು ಮುಂದೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನಡೆಯಬಾರದು ಎನ್ನುವುದು ಗಾಂಧೀಜಿ ಅವರ ಆಶಯವಾಗಿದ್ದರೆ ದಯವಿಟ್ಟು ಈ ಎಲ್ಲ ವಿಚಾರಗಳ ಬಗ್ಗೆ ಶಾಂತಚಿತ್ತರಾಗಿ ಮರುಚಿಂತನೆ ಮಾಡಿ ಭವಿಷ್ಯದಲ್ಲಿ ಬೆಳೆಯಬಹುದಾದ ಅನರ್ಥ ಪರಂಪರೆಗೆ ಇತಿಶ್ರೀ ಹೇಳಬೇಕು. ತಮ್ಮ ಸತ್ಯಾಗ್ರಹದಿಂದ ಪರಿಣಾಮ ಆಗಬಾರದು ಎಂದು ಅವರು ಎಷ್ಟೇ ಇಚ್ಛಿಸಿದರೂ ಕೂಡ ಅದು ಸಾಧ್ಯವಾಗುವುದಿಲ್ಲ. ದಿನ ಕಳೆದ ಮೇಲೆ ಹೇಗೆ ರಾತ್ರಿಯಾಗುವುದು ಸ್ವಯಂಸಿದ್ಧ ತತ್ವ ಇದೆಯೋ ಅದೇ ರೀತಿ ಗಾಂಧೀಜಿ ಅವರ ಈ ಪ್ರತಿಜ್ಞೆಯ ಪರ್ಯಾವಸಾನ ಅತ್ಯಾಚಾರ ಸೇರಿದಂತೆ ಇನ್ನಿತರ ಅನರ್ಥಗಳಲ್ಲಿ ಅಂತ್ಯಗೊಳ್ಳುವುದು ಶತಃಸಿದ್ಧ. ಅಂತಿಮವಾಗಿ ಎಲ್ಲ ಜನರ ಗಮನಕ್ಕೆ ಇರಲಿ ಎನ್ನುವ ಉದ್ದೇಶದಿಂದ ಒಂದು ಪ್ರಮುಖ ಸಂಗತಿಯನ್ನು ಹೇಳಲು ಇಚ್ಛಿಸುತ್ತೇನೆ. ಈ ವಿಷಯದಲ್ಲಿ ನನಗೆ ಮನಸ್ಸಿಲ್ಲದಿದ್ದರೂ ಕೂಡ ಕೇವಲ ಗಾಂಧೀಜಿ ಅವರಿಗಾಗಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಅವರು ಪ್ರಸ್ತಾಪಿಸುವ ಯಾವುದೇ ಹೊಸ ಯೋಜನೆ ಕುರಿತು ಚಿಂತನೆ ಮಾಡುವುದಕ್ಕೆ ನಾನು ಸಿದ್ಧ. ಗಾಂಧೀಜಿ ಅವರ ಪ್ರಾಣ ಮತ್ತು ನನ್ನ ಜನರ ಹಕ್ಕುಗಳ ಪೈಕಿ ಕೇವಲ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವಂತಹ ಇಕ್ಕಟ್ಟಿನ ಪರಿಸ್ಥಿತಿಯನ್ನು ಗಾಂಧೀಜಿ ನನಗೆ ತರುವುದಿಲ್ಲ ಎನ್ನುವುದು ನನ್ನ ಆಶಯ. ಒಂದು ವೇಳೆ ಅಂತಹ ಪ್ರಸಂಗ ಎದುರಾಗಿದ್ದೇ ಆದಲ್ಲಿ ನಾನು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತೇನೆ ಎನ್ನುವುದನ್ನು ಸ್ಪಷ್ಟಪಡಿಸುವ ಅಗತ್ಯವಿಲ್ಲ. ಏನೇ ಆದರೂ ಕೂಡ ಸ್ಪೃಶ್ಯ ಹಿಂದೂಗಳ ಕೈಯಲ್ಲಿ ನನ್ನ ಜನರ ಭವಿಷ್ಯ ಒಪ್ಪಿಸುವುದಕ್ಕೆ ಎಂದೆಂದಿಗೂ ನನ್ನ ಸಮ್ಮತಿ ನೀಡಲಾರೆ.[೧]

ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರ ಲಭಿಸಿದ್ದೇ ಆದಲ್ಲಿ ನನ್ನ ಪ್ರಾಣ ಪಣಕ್ಕೆ ಇಡಬೇಕಾಗುತ್ತದೆ ಎಂದು ಗಾಂಧೀಜಿ ಮಾಡಿದ್ದ ಘೋಷಣೆಯನ್ನು ಸೆಪ್ಟಂಬರ್ ೨೦, ೧೯೩೨ರಿಂದ ಅನುಷ್ಠಾನ ಮಾಡುವುದಕ್ಕೆ

---

೧. ಜನತಾ: ೨೪ ಸೆಪ್ಟೆಂಬರ್ ೧೯೩೨ ಭೀ.ರಾ.

ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ದೇಶದ ಪ್ರಮುಖ ಹಿಂದೂ ನಾಯಕರ ತುರ್ತು ಸಭೆಯನ್ನು ಸೆಪ್ಟಂಬರ್ ೧೯, ೧೯೩೨ರಂದು ಆಯೋಜಿಸುವುದಕ್ಕೆ ತೀರ್ಮಾನಿಸಲಾಗಿತ್ತು. ಭಾರತದ ಸರ್ವಶ್ರೇಷ್ಠ ನಾಯಕರಲ್ಲಿ ಒಬ್ಬರಾಗಿರುವ ಮಹಾತ್ಮ ಗಾಂಧೀಜಿ ಅವರಂತಹವರು ತಮ್ಮ ಪ್ರಾಣ ಪಣಕ್ಕೆ ಇಡುವ ವಿಚಾರ ತಿಳಿದು ಪಂಡಿತ ಮದನ್ ಮೋಹನ್ ಮಾಳವೀಯ ಅವರು ಬನಾರಸ್‌ನಿಂದ ಮುಂಬೈಗೆ ಆಗಮಿಸಿದರು. ಡಾ. ರಾಜೇಂದ್ರಪ್ರಸಾದ್, ಸಿ. ರಾಘವಾಚಾರ್ಯ, ಪಂಡಿತ ಕುಂಜರು, ಡಾ. ಮುಂಜೆ, ಟಿ. ಪ್ರಕಾಶಂ, ಡಾ. ಚೌಥಿರಾಮ್, ಸ್ವಾಮಿ ಸತ್ಯಾನಂದ ಮತ್ತು ಅಂಬೇಡ್ಕರ್ ಸೇರಿದಂತೆ ವಿವಿಧ ಪ್ರಾಂತ್ಯದ ಪ್ರತಿನಿಧಿಗಳು ಉಪಸ್ಥಿತರಿದ್ದರು. ಅಸ್ಪೃಶ್ಯ ಸಮಾಜದಿಂದ ರಾವ್‌ಬಹಾದ್ದೂರ್ ಎಂ.ಸಿ. ರಾಜಾ, ಗವಯಿ, ಶ್ರೀ ಶಿವರಾಜ, ಶ್ರೀ ಜಗನ್ನಾಥಮ್, ಶ್ರೀ ಧರ್ಮಲಿಂಗಮ್, ಶ್ರೀ. ಮಂಡಲ್ ಸೇರಿದಂತೆ ಇತರ ಪ್ರಾಂತ್ಯದ ಪ್ರತಿನಿಧಿಗಳು ಆಗಮಿಸಿದ್ದರು. ಮುಂಬೈ ಪ್ರಾಂತ್ಯದಿಂದ ಸರ್ ಚುನ್ನಿಲಾಲ್, ಡಾ. ಅಂಬೇಡ್ಕರ್, ಡಾ. ಸೋಳಂಕಿ, ಹೀರಾಚಂದ್ ವಾಲಚಂದ್, ಸರ್ ಸೆಟಲ್ವಾಡ್, ಸರ್ ಮಾಡಗಾಂವಕರ್, ಸರ್ ಪುರುಷೋತ್ತಮದಾಸ್, ಶ್ರೀ ದೇವಧರ್, ಶ್ರೀ. ನಟರಾಜನ್, ರಾವ್‌ಬಹಾದ್ದೂರ್ ವೈದ್ಯ, ಡಾ. ದೇಶಮುಖ್, ದಳವಿ, ಸುಬೇದಾರ್, ಶೇಟ್ ಬಿರ್ಲಾ, ಶ್ರೀ. ಕರಂದಿಕರ್, ಸಾವರಕರ್, ಶಿವತರಕರ್, ಪಿ. ಬಾಳು ಸೇರಿದಂತೆ ಇತರ ಸದಸ್ಯರು ಇದ್ದರು. ಮಹಿಳೆಯರ ಪರವಾಗಿ ಶ್ರೀಮತಿ ಕಮಲಾ ನೆಹರು, ಪೇರನಿ ಕ್ಯಾಪ್ಟನ್, ಮೋಶೋನ್ ಕ್ಯಾಪ್ಟನ್, ಸೌ. ಅವಂತಿಕಾಬಾಯಿ ಗೋಖಲೆ, ಶ್ರೀಮತಿ ಅನ್ನಪೂರ್ಣಾಬಾಯಿ ದೇಶಮುಖ್, ರತನ್ ಬೇನ್ ಮೆಹತಾ ಮತ್ತು ಕುಮಾರಿ ನಟರಾಜನ್ ಸೇರಿದಂತೆ ಇತರರು ಇದ್ದರು.

ಇಂಡಿಯನ್ ಮರ್ಚಂಟ್ಸ್ ಹಾಲ್‌ನಲ್ಲಿ ಸಭೆ ನಡೆಸುವುದಕ್ಕೆ ತೀರ್ಮಾನಿಸಲಾಗಿತ್ತು. ಇದೇ ಸಭೆಯ ಮೇಲೆ ಮಹಾತ್ಮ ಗಾಂಧಿ ಅವರ ಜೀವದ ಪ್ರಶ್ನೆ ಅವಲಂಬಿಸಿದ್ದ ಹಿನ್ನೆಲೆಯಲ್ಲಿ ಸಭೆಯಲ್ಲಿ ಒಂದು ರೀತಿಯ ಗಂಭೀರ ವಾತಾವರಣ ನಿರ್ಮಾಣವಾಗಿತ್ತು. ಇಡೀ ಸಭೆಯ ದೃಷ್ಟಿ ಡಾ. ಅಂಬೇಡ್ಕರ್ ತಳೆಯುವ ಧೋರಣೆಯನ್ನು ಅವಲಂಬಿಸಿತ್ತು. ಡಾ. ಅಂಬೇಡ್ಕರ್ ಅವರು ಖಂಡಿತವಾಗಿ ಉಪಸ್ಥಿತರಿರಲಿದ್ದಾರೆ ಎಂಬ ಸಂಗತಿ ಖಾತ್ರಿಯಾಗುತ್ತಿದ್ದಂತೆಯೇ ಸಭೆಯ ಆಯೋಜಕರಿಗೂ ಮತ್ತು ಸಭೆಯಲ್ಲಿದ್ದ ಇತರ ನಾಯಕರಲ್ಲಿ ನಿರಾಳ ಭಾವ ಮನೆ ಮಾಡಿತ್ತು.

ಎಲ್ಲ ಪಕ್ಷಗಳ ನಾಯಕರ ಮನಸ್ಸಿನಲ್ಲಿ ಕೋಲಾಹಲವೇ ಮೂಡಿದೆ ಎನ್ನುವಂತೆ ಭಾಸವಾಗುತ್ತಿತ್ತು. ಯಾರು ಏನು ಮಾತನಾಡುತ್ತಾರೋ ಅಥವಾ ಸಭೆಯ ಉದ್ದೇಶವನ್ನು ಗಮನದಲ್ಲಿರಿಸಿಕೊಂಡು ಯಾವ ರೀತಿಯ ಸಂಧಾನ ಮಾಡುವ ಸಾಧ್ಯತೆಯ ಕುರಿತು ಎಲ್ಲರ ಲಕ್ಷ್ಯ ಕೇಂದ್ರೀಕೃತವಾಗಿತ್ತು. ಸಭೆಯ ಕಾರ್ಯಕ್ರಮಗಳಿಗೆ ಅನುಕೂಲಕರವಾಗಲಿ ಎನ್ನುವ ಉದ್ದೇಶದಿಂದ ಡಾ. ಅಂಬೇಡ್ಕರ್ ಅವರು ತಮ್ಮ ಸ್ಪಷ್ಟ ಮತ್ತು ನಿರ್ಭಿಡ ಹೇಳಿಕೆಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಡಾ. ಅಂಬೇಡ್ಕರ್‌ರ "ಈ ಹೇಳಿಕೆಗಳು" ಸೇರಿದ್ದ ನಾಯಕರು ತಮ್ಮ ಮುಂದಿನ ಕಾರ್ಯಕಲಾಪಗಳಿಗೆ ರೂಪುರೇಷೆ ನೀಡುವುದಕ್ಕೆ ಮತ್ತು ಚಿಂತನೆ ಮಾಡುವುದಕ್ಕೆ ಸುಲಭವಾಗಿತ್ತು.

ಸಭೆ ಆರಂಭವಾಗುತ್ತಿದ್ದಂತೆಯೇ ಶ್ರೀ ಹೀರಾಚಂದ ವಾಲಚಂದ್ ಅವರು ಸಭೆಯ ರೂಪುರೇಷೆಗಳನ್ನು ಹೇಳಿ ಪಂಡಿತ ಮದನ್ ಮೋಹನ್ ಮಾಳವೀಯ ಅವರಿಗೆ ಅಧ್ಯಕ್ಷತೆ ಸ್ವೀಕರಿಸುವಂತೆ ವಿನಂತಿಸಿಕೊಂಡರು. ಪಂಡೀತಜೀ ಅವರ ಮುಖದ ಮೇಲೆ ಗಾಂಭೀರ್ಯತೆಯ ನೆರಳು ಪಸರಿಸಿತ್ತು ಒಂದು ರೀತಿಯಲ್ಲಿ ಸಭೆಯಲ್ಲಿ ಚರ್ಚಿಸಲ್ಪಡುವ ವಿಷಯದ ಗಾಂಭೀರ್ಯತೆ ಅವರ ಮುಖಕ್ಕೆ ತನ್ನ ಸ್ಥಾನ ವರ್ಗಾಯಿಸಿಕೊಂಡಿದೆಯೋ ಏನೋ ಎಂಬಂತೆ ಭಾಸವಾಗುತ್ತಿತ್ತು. ಪಂಡಿತಜೀ ತಮ್ಮ ಭಾಷಣದಲ್ಲಿ ಎಲ್ಲ

ನಾಯಕರು ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯ ಮಧ್ಯೆ ಅತ್ಯಂತ ಸರಳವಾಗಿರುವ ಸಂಧಾನ ಮಾರ್ಗ ಕಂಡುಕೊಳ್ಳಬೇಕಾದ ಅವಶ್ಯಕತೆ ಇದೆಯೆಂದು ಹೇಳಿ ತಮ್ಮ ಮಾತಿಗೆ ವಿರಾಮ ನೀಡಿದರು. ಮಹಾತ್ಮ ಗಾಂಧೀಜಿ ಅವರ ಜೀವ ಉಳಿಸುವ ಏಕಮಾತ್ರ ಉದ್ದೇಶವನ್ನು ಇರಿಸಿಕೊಂಡು ಉಭಯಪಕ್ಷಗಳೂ ಸಮ್ಮತಿಸುವಂತಹ ಯೋಜನೆ ಪ್ರಸ್ತಾಪಿಸಿ ಎಂದು ಅವರು ಹೇಳಿದರು.

ಪಂಡೀತಜೀ ಅವರ ವಿನಂತಿಯ ಮೇರೆಗೆ ಮೊದಲು ಡಾ. ಅಂಬೇಡ್ಕರ್ ಅವರು ಮಾತಿಗೆ ನಿಂತರು. ಅವರು ತಮ್ಮ ಪ್ರಾಮಾಣಿಕ ಅನಿಸಿಕೆಯನ್ನು ಯಾವುದೇ ಹಂಗಿನ ಲಗಾಮಿಲ್ಲದೇ ಸಭೆಯ ಮುಂದಿರಿಸಿದರು. ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ಈ ರೀತಿ ಮಂಡಿಸಿದರು:

'ಈ ಸಭೆಯ ಕಾರ್ಯಕ್ರಮದ ಸ್ವರೂಪ ನೋಡಿದರೆ ಇಂತಹ ಸಭೆಯ ಪ್ರಯೋಜನ ಆಗುತ್ತದೆ ಎಂದು ನಾನು ಭಾವಿಸುಸುವುದಿಲ್ಲ. ನಮ್ಮ ಬೇಡಿಕೆಗಳನ್ನು ವಿರೋಧಿಸಿ ಮಹಾತ್ಮ ಗಾಂಧೀಜಿ ಅವರು ತಮ್ಮ ಪ್ರಾಣ ಪಣಕ್ಕಿರಿಸಿದ್ದಾರೆ. ಮಹಾತ್ಮ ಗಾಂಧೀಜಿ ಅವರಂತಹ ಮೌಲಿಕ ಜೀವ ಉಳಿಯಬೇಕು ಎಂದು ಎಲ್ಲರಿಗೂ ಅನ್ನಿಸುವುದು ಸಹಜ, ಆದರೆ ತಮ್ಮ ಪ್ರಾಣವನ್ನು ಪಣಕ್ಕೆ ಇರಿಸುವ ಮೊದಲು ಗಾಂಧೀಜಿ ಅವರು ಇನ್ನೊಂದು ಸ್ಪಷ್ಟ ಯೋಜನೆಯನ್ನು ಜನತೆಯ ಎದುರು ಇರಿಸಬೇಕಾಗಿತ್ತು. ಇಂದಿನ ಪರಿಸ್ಥಿತಿಯ ಕುರಿತು ಸಮಗ್ರ ಚಿಂತನೆ ಮಾಡಿದಲ್ಲಿ ನನಗೆ ಅನ್ನಿಸುವುದು ಏನೆಂದರೆ ಮಹಾತ್ಮ ಗಾಂಧೀಜಿ ಅವರ ಹೊಸ ಯೋಜನೆಯನ್ನು ಹೊರತುಪಡಿಸಿ ಬೇರೆ ಇನ್ನಾವುದೇ ಪ್ರಕಾರದ ಸಂಧಾನ ಮಾರ್ಗ ಇದೆಯೆಂದು ನನಗೆ ಅನ್ನಿಸುವುದಿಲ್ಲ.

ಈ ಸಭೆಯಲ್ಲಿ ಎಷ್ಟೇ ಜೊಳ್ಳು ಕುಟ್ಟಿದರೂ ಮಹಾತ್ಮ ಗಾಂಧೀಜಿ ಅವರ ಅನಿಸಿಕೆ ಏನು ಅನ್ನುವುದು ಎಲ್ಲರಿಗೂ ತಿಳಿಯದೇ ನನಗಂತೂ ಪರಿಹಾರ ಮಾರ್ಗ ಕಾಣಿಸುತ್ತಿಲ್ಲ. ಇಲ್ಲಿರುವ ಎಲ್ಲರಿಗೂ ಒಂದು ವಿಷಯವನ್ನು ಘಂಟಾಘೋಷವಾಗಿ ಹೇಳುತ್ತೇನೆ. ಈ ಸಭೆಯ ಆಯೋಜಕರು ಅಥವಾ ಇಲ್ಲಿನ ನಾಯಕರು ಪ್ರಸ್ತಾಪಿಸುವ ಯಾವ ಯೋಜನೆಗೂ ನಾನು ಕಟ್ಟುಬಿದ್ದಿಲ್ಲ. ನನಗೆ ಕೇವಲ ಮಹಾತ್ಮ ಗಾಂಧಿ ಅವರ ಅನಿಸಿಕೆ ಬೇಕು. ಅವರ ಯೋಜನೆ ಏನು ಅನ್ನುವುದು ತಿಳಿಯದೇ ನಾನು ಹೇಗೆ ಉತ್ತರಿಸಲಿ? ಅವರ ಅನಿಸಿಕೆ ಏನು ಅನ್ನುವುದನ್ನು ತಿಳಿಸಿದ ಬಳಿಕವೇ ನಾನು ವಿಚಾರ ಮಾಡುತ್ತೇನೆ.'

ಅದೇ ರೀತಿ ಇಲ್ಲಿರುವ ಸ್ಪೃಶ್ಯ ಸಮಾಜದ ಮುಖಂಡರ ಪೈಕಿ ಯಾರೇ ಆದರೂ ಸರಿ ಗಾಂಧೀಜಿ ಅವರ ಪ್ರತಿನಿಧಿಯಾಗಿ ಅವರ ಅಭಿಪ್ರಾಯ ಏನು ಅನ್ನುವುದನ್ನು ನನ್ನ ಮುಂದೆ ಇರಿಸಿದರೆ ವಿಚಾರ ಮಾಡುತ್ತೇನೆ. ಆದರೆ ಅಸ್ಪೃಶ್ಯ ಸಮಾಜದ ನಾಯಕರ ಮುಖಾಂತರ ಪ್ರಸ್ತಾಪಿಸುವ ಅವರ ಯೋಜನೆ ನನ್ನ ಪಾಲಿಗೆ ಸ್ವೀಕಾರಾರ್ಹವಲ್ಲ. ಮಹಾತ್ಮ ಗಾಂಧೀಜಿ ಅವರ ಪ್ರಾಣ ಉಳಿಸುವುದಕ್ಕಾಗಿ ನನ್ನ ಬಂಧುಗಳ ನ್ಯಾಯಯುತ ಹಕ್ಕುಗಳ ಹೋರಾಟಕ್ಕೆ ತಿಲಾಂಜಲಿ ನೀಡುವುದಕ್ಕೆ ನಾನು ತಯಾರಾಗಲಾರೆ.

ಡಾ. ಅಂಬೇಡ್ಕರ್ ಅವರ ಭಾಷಣ ಸಾಕಷ್ಟು ಪರಿಣಾಮಕಾರಿ ಮತ್ತು ಪ್ರಭಾವಿಯಾಗಿತ್ತು. ಅವರ ಭಾಷಣದ ಬಳಿಕ ರಾವ್‌ಬಹಾದ್ದೂರ್ ರಾಜಾ ಕೂಡ ತಮ್ಮ ಭಾಷಣದಲ್ಲಿ ಮಹಾತ್ಮ ಗಾಂಧೀಜಿ ಅವರ ನೂತನ ಯೋಜನೆ ಏನು ಎನ್ನುವುದನ್ನು ತಿಳಿಯದ ಹೊರತು ತಮ್ಮ ಅಭಿಪ್ರಾಯ ಸ್ಪಷ್ಟಪಡಿಸುವುದಕ್ಕೆ ಸಾಧ್ಯವಿಲ್ಲ ಎಂದರು. ಪಿ. ಬಾಳು ಅವರಲ್ಲಿ ಸ್ವಾಭಿಮಾನದ ಕೊರತೆ ಈ ಪ್ರಮಾಣದಲ್ಲಿದೆ ಎಂದು ಎಂದಿಗೂ ನಾವು ಭಾವಿಸಿರಲಿಲ್ಲ. ಸ್ಪೃಶ್ಯ ಹಿಂದೂಗಳ ಎದುರು ಅವರು ತೋರಿದ ನಮ್ರತೆ ತನ್ನ ಪರಿಮಿತಿ ಮೀರಿ ಮಾಡಿದ ಭಾಷಣ ಕಳಾಹೀನವಾಗಿತ್ತು. ಆದರೆ ಅವರು ತಾವು ಬಾರಿಸಿರುವುದು ಬೌಂಡರಿ ಎಂದುಕೊಂಡಿದ್ದರು. ಮದ್ರಾಸ್‌ನ ಶಿವರಾಜ್, ಶ್ರೀ ನಟರಾಜನ್, ಶ್ರೀ ದಳವಿ, ಶ್ರೀ ಮಂಡಲ್, ಶ್ರೀ. ಕರಂದಿಕರ್, ಡಾ. ಮುಂಜೆ,

ಶ್ರೀಮತಿ ಗೋಖಲೆ ಪಂಡಿತ ಕುಂಜರು ಸೇರಿದಂತೆ ಇತರ ನಾಯಕರು ಭಾಷಣ ಮಾಡಿದರು. ಮುಂಬೈನ ನಾಯಕರ ಒಂದು ನಿಯೋಗ ಪುಣೆಯಲ್ಲಿ ಗಾಂಧೀಜಿ ಅವರನ್ನು ಭೇಟಿಯಾಗುವುದಕ್ಕೆ ಮತ್ತು ಅವರ ಅಭಿಪ್ರಾಯವನ್ನು ಹಿಂದೂ ನಾಯಕರ ಸಭೆಯಲ್ಲಿ ತಿಳಿಸುವುದಕ್ಕಾಗಿ ಹೋಗಿತ್ತು. ಅವರ ಆಗಮನದ ಬಳಿಕ ಮಹಾತ್ಮ ಗಾಂಧೀಜಿ ಅವರಿಂದ ಲಭಿಸುವ ಸಂದೇಶವನ್ನು ಆಧರಿಸಿ ಮುಂದಿನ ಕಾರ್ಯಕ್ರಮ ಸಿದ್ಧಪಡಿಸುವುದೆಂದು ತೀರ್ಮಾನಿಸಿ ಎರಡನೇ ದಿನದ ಮಟ್ಟಿಗೆ ಸಭೆಯನ್ನು ಬರ್ಖಾಸ್ತುಗೊಳಿಸಲಾಯಿತು.

ಸೋಮವಾರ ಮೊದಲನೇ ಬೈಠಕ್ ಪೂರ್ಣಗೊಂಡ ಬಳಿಕ ಪುಣೆಗೆ ಹೋಗಿದ್ದ ನಿಯೋಗ ರಾತ್ರಿ ಮರಳಿತು. ಈ ನಿಯೋಗದಲ್ಲಿದ್ದ ತೇಜಬಹಾದ್ದೂರ್ ಸಪ್ರು, ಬ್ಯಾ. ಜಯಕರ್, ಸಿ. ರಾಘವಾಚಾರ್ಯ, ಶ್ರೀ ಬಿರ್ಲಾ ಅವರು ನಿಯೋಗದೊಂದಿಗೆ ರಾತ್ರಿ ೧೨ರವರೆಗೆ ಬಿರ್ಲಾ ಹಾಲ್‌ನಲ್ಲಿ ಮಾತುಕತೆ ನಡೆಸಿದ್ದರು. ಈ ಸಭೆಯಲ್ಲಿ ಮಹಾತ್ಮಾ ಗಾಂಧೀಜಿ ಅವರ ನೂತನ ಯೋಜನೆಯ ಕುರಿತು ಚರ್ಚಿಸಲಾಯಿತು.[೧]

"ಮಂಗಳವಾರ ಸೆಪ್ಟಂಬರ್ ೧೯೩೨ರ ಮಧ್ಯಾಹ್ನ ಹನ್ನೆರಡಕ್ಕೆ ಗಾಂಧೀಜಿ ತಮ್ಮ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಸತ್ಯಾಗ್ರಹ ಸ್ಥಳದಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ತಮ್ಮ ಉಪವಾಸ ಸತ್ಯಾಗ್ರಹ ಏಕೆ ಎಂದು ಸ್ಪಷ್ಟಪಡಿಸಿದರು. ಆ ವರದಿ ಟೈಮ್ಸ್ ಆಫ್ ಇಂಡಿಯಾದ ಸೆಪ್ಟಂಬರ್ ೨೧ರ ಸಂಚಿಕೆಯಲ್ಲಿ ಪ್ರಕಟವಾಯಿತು. ನನ್ನ ಉಪವಾಸ ಸತ್ಯಾಗ್ರಹ ಮಾನವೀಯ ಧರ್ಮದ ಸಂರಕ್ಷಣೆಗೆ (A Fight for Humanity) ನಡೆಯುತ್ತಿರುವ ಹೋರಾಟವೆಂದೂ, ನನ್ನ ಉಪವಾಸ ಸತ್ಯಾಗ್ರಹ ಕೇವಲ ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರ ನೀಡಬಾರದು ಎನ್ನುವುದಕ್ಕಷ್ಟೇ ಸಿಮೀತವಾಗಿದೆ ವಿನಃ ಅಸ್ಪೃಶ್ಯರಿಗೆ ಕಾನೂನಾತ್ಮಕ ಮೀಸಲಾತಿ ಸ್ಥಾನಗಳನ್ನು ನೀಡುವುದರ ವಿರುದ್ಧ ಅಲ್ಲ ಎಂದು ಗಾಂಧೀಜಿ ಸ್ಪಷ್ಟಪಡಿಸಿದ್ದರು.

(My fast is only against separate electorates and not against the statutory reservation of seats)[1]

"ಮಾತುಕತೆ ನಡೆಸುವುದಕ್ಕಾಗಿ ಸರ್ ತೇಜಬಹಾದ್ದೂರ್ ಸಪ್ರು, ಬ್ಯಾ. ಜಯಕರ್, ಪಂಡಿತ ಮದನ್ ಮೋಹನ ಮಾಳವೀಯ, ಮಥುರಾದಾಸ್ ವಸನಜೀ ಅವರನ್ನು ಸ್ಪೃಶ್ಯ ವರ್ಗದ ಪ್ರತಿನಿಧಿಗಳೆಂದು ಸಮಿತಿಗೆ ನೇಮಕ ಮಾಡಲಾಯಿತು. ಅದೇ ದಿನ ಬೆಳಗ್ಗೆ ಹತ್ತು ಗಂಟೆಗೆ ಡಾ. ಅಂಬೇಡ್ಕರ್ ಅವರನ್ನು ಬಿರ್ಲಾ ಹೌಸ್‌ಗೆ ಬರುವಂತೆ ಬ್ಯಾ. ಜಯಕರ್ ನೀಡಿದ ಆಹ್ವಾನ ಸ್ವೀಕರಿಸಿ ಡಾ. ಅಂಬೇಡ್ಕರ್ ತಮ್ಮೊಂದಿಗೆ ಡಾ, ಸೋಳಂಕಿ ಅವರನ್ನು ಕರೆದುಕೊಂಡು ಹೋದರು. ಬಿರ್ಲಾ ಹೌಸ್‌ನಲ್ಲಿ ಬ್ಯಾ. ಜಯಕರ್, ತೇಜಬಹಾದ್ದೂರ್ ಸಪ್ರು, ಪಂಡಿತ ಮದನ್ ಮೋಹನ್ ಮಾಳವೀಯ ಅವರೊಂದಿಗೆ ಮಹಾತ್ಮ ಗಾಂಧೀಜಿ ಅವರ ಹೊಸ ಯೋಜನೆಯ ಕುರಿತು ಚರ್ಚಿಸಲಾಯಿತು. ಈ ಹೊಸ ಯೋಜನೆಯ ಆಧಾರದ ಮೇಲೆ ಕೇವಲ ಸಂಧಾನ ಎಂದು ತಾತ್ಕಾಲಿಕ ಯೋಜನೆಯನ್ನು ಅಂತಿಮಗೊಳಿಸಲಾಯಿತು.

ಮಧ್ಯಾಹ್ನ ಸರಿಯಾಗಿ ಹನ್ನೆರಡು ಗಂಟೆಗೆ ಎರಡನೇ ದಿನದ ಕಾರ್ಯಕ್ರಮ ಆರಂಭವಾಯಿತು. ಆದರೆ ವಿಶೇಷವಾಗಿ ಯಾವುದೇ ಚರ್ಚೆ ಕೈಗೆತ್ತಿಕೊಳ್ಳದೇ ಕೇವಲ ಒಂದು ಚಿಕ್ಕ ಸಮಿತಿ ನೇಮಕ ಮಾಡಲಾಯಿತು. ಪುಣೆಗೆ ಹೋಗಿದ್ದ ನಿಯೋಗದಲ್ಲಿ ಸರ್ ಚುನಿಲಾಲ್ ಮೆಥಾ ಅವರು ಮಹಾತ್ಮ ಗಾಂಧೀಜಿ ಅವರ ನೂತನ ಸಂಧಾನ ಸ್ವರೂಪದ ತೀರ್ಮಾನವನ್ನು ಸಭೆಯ ಮುಂದಿರಿಸಿದರು.

ಅಂದಿನ ಬೈಠಕ್‌ನಲ್ಲಿ ಸರ್ ತೇಜಬಹಾದ್ದೂರ್ ಸಪ್ರು, ಬ್ಯಾ. ಜಯಕರ್ ಸೇರಿದಂತೆ ಇತರರು

---

೨. ಅಂಬೇಡ್ಕರ್ ಚರಿತ್ರ: ಚಾಂ. ಭ. ಖೈರಮೋಡೆ ಖಂಡ ೫, ಪು: ೪೨.

ಇದ್ದರು. ಅಧ್ಯಕ್ಷತೆ ವಹಿಸಿದ್ದ ಮಾಳವೀಯ ಅವರು, ಸಭೆ ಆರಂಭಿಸುವ ಮೊದಲು ಸಭೆಯ ಕಾರ್ಯಕಲಾಪಗಳನ್ನು ಎಷ್ಟು ಸಾಧ್ಯವೋ ಅಷ್ಟು ಬೇಗ ಪೂರ್ಣಗೊಳಿಸಬೇಕು ಮತ್ತು ವಿನಾಕಾರಣ ಯಾವುದನ್ನು ಹೆಚ್ಚಿಗೆ ಚರ್ಚಿಸದೇ ಮುಂದಿನ ಕೆಲಸ ಕಾರ್ಯಗಳಿಗಾಗಿ ಚಿಕ್ಕ ಸಮಿತಿ ನೇಮಕ ಮಾಡಿ ಸಭೆ ಮುಕ್ತಾಯಗೊಳಿಸುವ ಅಗತ್ಯತೆ ಕುರಿತು ಹೇಳಿದರು. ಇದಾದ ಬಳಿಕ ಸರ್ ಚುನಿಲಾಲ್ ಅವರು ಮಹಾತ್ಮ ಗಾಂಧೀಜಿ ಅವರ ಹೇಳಿಕೆ ಮಂಡಿಸಿದರು.

೧. ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರಗಳನ್ನು ನೀಡುವುದಕ್ಕೆ ಮಹಾತ್ಮ ಗಾಂಧೀಜಿ ವಿರುದ್ಧವಾಗಿದ್ದಾರೆ.

೨. ಅದೇ ರೀತಿ ಸಂಯುಕ್ತ ಮತಕ್ಷೇತ್ರ ಮತ್ತು ಮೀಸಲಾತಿ ಸ್ಥಾನಗಳ ಯೋಜನೆಗೂ ಅವರ ಸಹಮತವಿಲ್ಲ. ಆದರೂ ಕೂಡ ಮುಂಬೈನಲ್ಲಿ ಸೇರಿರುವ ಅಖಿಲ ಭಾರತೀಯ ಹಿಂದೂ ಪರಿಷದ್‌ನಲ್ಲಿ ಮೀಸಲು ಸ್ಥಾನಗಳ ಕುರಿತು ಗೊತ್ತುವಳಿ ತೆಗೆದುಕೊಂಡರೆ ಅದಕ್ಕೆ ನನ್ನ ಆಕ್ಷೇಪವಿಲ್ಲ ಆದರೆ ಅದಕ್ಕೆ ಮಾನ್ಯತೆ ಇದೆ ಎಂದು ಹೇಳಲಿಕ್ಕಾಗುವುದಿಲ್ಲ. ಒಂದು ವೇಳೆ ಒಪ್ಪಂದ ಏರ್ಪಟ್ಟರೆ ಅದಕ್ಕೆ ನಾನು ಬೇಕಿದ್ದರೆ ಒಪ್ಪಿಗೆ ನೀಡಬಹುದು. ಏತನ್ಮಧ್ಯೆ ಸರ್ ಚುನಿಲಾಲ್ ಅವರು ಮೀಸಲು ಸ್ಥಾನಗಳ ಕುರಿತು ಸಮಾಧಾನಕರ ಸ್ಪಷ್ಟೀಕರಣ ನೀಡದ ಕಾರಣ ಸರ್ ಸೆಟಲ್ವಾಡ್ ಅವರು ಸ್ಪಷ್ಟೀಕರಣ ನೀಡಬೇಕಾಯಿತು.

ಮಹಾತ್ಮ ಗಾಂಧೀಜಿ ಅವರ ಹೇಳಿಕೆಯ ಬಳಿಕ ಡಾ. ಅಂಬೇಡ್ಕರ್ ಅವರು ಮಾತನಾಡಲು ಎದ್ದು ನಿಂತರು. ಅವರ ಇಂದಿನ ಭಾಷಣ ಅತ್ಯಂತ ಪರಿಣಾಮಕಾರಿ ಮತ್ತು ಹೃದಯಸ್ಪರ್ಶಿಯಾಗಿತ್ತು.

ಇಂದಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಎಲ್ಲರಿಗಿಂತ ನನ್ನ ಪರಿಸ್ಥಿತಿ ವಿಚಿತ್ರವಾಗಿದೆ. ಶಾಂತಿ ಸೌಹಾರ್ದದ ಈ ಎಲ್ಲ ಮಾತುಕತೆಗಳ ಮಧ್ಯೆ ಕೇವಲ ದುರ್ದೈವದಿಂದಾಗಿ ನನ್ನ ಜನರ ನ್ಯಾಯಯುತ ಹಕ್ಕುಗಳಿಗಾಗಿ ನಾನು ಖಳನಾಯಕನ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕಿದೆ. ನನ್ನ ಜನರ ನ್ಯಾಯಯುತ ಕೆಲಸದಲ್ಲಿ ಎಷ್ಟೇ ಕಷ್ಟ ಬಂದರೂ ಮತ್ತು ಹತ್ತಿರದ ರಸ್ತೆ ಬದಿಯಲ್ಲಿರುವ ದೀಪದ ಕಂಬಕ್ಕೆ ನನ್ನನ್ನು ನೇಣಿಗೆ ಏರಿಸಿದ್ದರೂ ನಾನು ಧೃತಿಗೆಡಲಾರೆ. ಇಂದು ಎದುರಾಗಿರುವ ಈ ಸಮಸ್ಯೆಯನ್ನು ಕೇವಲ ಭಾವಾವೇಶಕ್ಕೆ ಒಳಗಾಗಿ ಪರಿಹರಿಸಲು ಸಾಧ್ಯವಿಲ್ಲ ಇಂದಿನ ಸಭೆಯು ಗುಲಾಮಗಿರಿಗೆ ಸಿಲುಕಿ ನರಳುತ್ತಿರುವ ಅಸಂಖ್ಯಾತ ಸಮಾಜ ಬಾಂಧವರಿಗೆ ನ್ಯಾಯಯುತ ಹಕ್ಕುಗಳನ್ನು ಕಾನೂನು ಪ್ರಕಾರ ನೀಡುವ ಕುರಿತದ್ದಾಗಿದೆ. ಇಲ್ಲಿ ಕೇವಲ ಸದ್ವಿವೇಕದ ಬುದ್ಧಿಯಿಂದ ವಿಚಾರ ಮಾಡಿದರೆ ನಡೆಯುವುದಿಲ್ಲ. ಮಹಾತ್ಮ ಗಾಂಧೀಜಿ ಅವರ ಯೋಜನೆ ಕುರಿತು ಚಿಂತನೆಗೆ ಒಂದಿಷ್ಟು ಕಾಲಾವಕಾಶ ಬೇಕು. ಪರಿಷದ್ ಗೊತ್ತುವಳಿ ಪಾಸು ಮಾಡಿ ಗಾಂಧೀಜಿ ಅವರಿಗೆ ೧೦–೧೨ ದಿನ ಉಪವಾಸ ಸತ್ಯಾಗ್ರಹ ನಿಲ್ಲಿಸುವಂತೆ ವಿನಂತಿಸಬೇಕು. ಆದರೆ ಈ ವಿಚಾರ ಅಸಾಧ್ಯ ಎಂದು ಅಧ್ಯಕ್ಷತೆ ವಹಿಸಿರುವ ಮಾಳವೀಯ ಸ್ಪಷ್ಟಪಡಿಸಿದರು. ನಾವು ಕೂಡ ಸ್ವತಂತ್ರ ಮತಕ್ಷೇತ್ರಗಳನ್ನು ಬಿಟ್ಟುಕೊಡುವುದಕ್ಕೆ ಸಿದ್ಧವಿಲ್ಲವೆಂದು ಅಂಬೇಡ್ಕರ್ ಹೇಳಿದರು. ಯಾವುದಾದರೂ ಒಂದು ರೂಪದಲ್ಲಿ ಸ್ವತಂತ್ರ ಮತಕ್ಷೇತ್ರಗಳು ಇಲ್ಲದೇ ಹೋದಲ್ಲಿ ಮಾತುಕತೆ ಫಲಪ್ರದವಾಗುವುದು ಅಸಾಧ್ಯದ ಸಂಗತಿ ಎಂದು ಎಲ್ಲರಿಗೂ ಮನದಟ್ಟಾಯಿತು. ಇದರಿಂದಾಗಿ ಸೈಮನ್ ಕಮಿಷನ್ ಸದಸ್ಯ ಮೇಜರ್ ಅಟ್ಲೇ, ಸೈಮನ್ ಕಮಿಷನ್‌ನ ವರದಿಗೆ ಸೇರಿಸಿದ್ದ ತಮ್ಮ ಅನಿಸಿಕೆಯಲ್ಲಿ ಮುಸ್ಲಿಂರಿಗೆ ಸ್ವತಂತ್ರ ಮತಕ್ಷೇತ್ರ ಪರಿಕಲ್ಪನೆ ತೊಡೆದುಹಾಕುವುದಕ್ಕಾಗಿ ರೂಪಿಸಿದ್ದ ಪ್ರಾಥಮಿಕ ಚುನಾವಣಾ ಪದ್ಧತಿ ಯೋಜನೆಗೆ ಮಾನ್ಯತೆ ನೀಡಲಾಯಿತು. ಇದಾದ ಬಳಿಕ ಸ್ವತಂತ್ರ ಮತಕ್ಷೇತ್ರ ಬಿಟ್ಟುಕೊಟ್ಟ ಕಾರಣಕ್ಕಾಗಿ ಅಸ್ಪೃಶ್ಯ ವರ್ಗಕ್ಕೆ ಆಗುವ ನಷ್ಟ ಪರಿಹಾರಕ್ಕಾಗಿ ಜಾತಿ ಪ್ರಾತಿನಿಧಿತ್ವ (Communual Award)ಗಿಂತ ಹೆಚ್ಚಿನ ಸೌಲಭ್ಯ ನೀಡಿದರೆ ಮಾತ್ರ ನಾವು ಮಾತುಕತೆಗೆ

ಸಿದ್ಧ ಎಂದು ಡಾ. ಅಂಬೇಡ್ಕರ್ ಅವರು ಸದಸ್ಯರಿಗೆ ಹೇಳಿದ ಬಳಿಕ ಕಮಿಟಿ ಕೂಡ ಆ ವಿಚಾರದ ಕುರಿತು ಚಿಂತನೆ ಮಾಡಲಾಗುವುದು ಎಂದು ವಚನ ನೀಡಿತು.

ಚರ್ಚೆಯನ್ನು ತ್ವರಿತಗೊಳಿಸುವ ನಿಟ್ಟಿನಲ್ಲಿ ಮಾಳವೀಯ ಅವರು ಒಂದು ಚಿಕ್ಕ ಸಮಿತಿಯನ್ನು ನೇಮಿಸಿದರು. ಈ ಕಮೀಟಿಯಲ್ಲಿ ಸರ್ ತೇಜಬಹಾದ್ದೂರ್ ಸಪ್ರು, ಬ್ಯಾ. ಜಯಕರ್, ಪಂಡಿತ ಮದನ್ ಮೋಹನ್ ಮಾಳವೀಯ, ಮಥುರಾದಾಸ್ ವಸನಜೀ ಮತ್ತು ಡಾ. ಅಂಬೇಡ್ಕರ್ ಇದ್ದರು.

ಡಾ. ಅಂಬೇಡ್ಕರ್ ಅವರು ತಮ್ಮ ಎಲ್ಲ ಯೋಜನೆಗಳನ್ನು ಲಿಖಿತವಾಗಿ ಬರೆದು ತರಬೇಕು ಮತ್ತು ರಾತ್ರಿ ಒಂಭತ್ತಕ್ಕೆ ಮತ್ತೇ ಬಿರ್ಲಾ ಹಾಲ್‌ನಲ್ಲಿ ಕಮಿಟಿಯ ಸಭೆ ಪುನಃ ಸೇರುವುದಕ್ಕೆ ತೀರ್ಮಾನಿಸಿತು. ಡಾ. ಅಂಬೇಡ್ಕರ್ ಅವರ ಯೋಜನೆಗೆ ಇಷ್ಟವಾದರೆ ಬುಧವಾರ ಬೆಳಗ್ಗೆ ಡಾ. ಅಂಬೇಡ್ಕರ್ ಮತ್ತು ಕಮಿಟಿಯ ಇತರ ಸದಸ್ಯರು ಪುಣೆಗೆ ಹೋಗಿ ಮಹಾತ್ಮ ಗಾಂಧೀಜಿ ಅವರ ಎದುರು ಯೋಜನೆ ಪ್ರಸ್ತಾಪಿಸುವುದು ಎಂದು ತೀರ್ಮಾನಿಸಲಾಯಿತು. ಏತನ್ಮಧ್ಯೆ ಕಮೀಟಿಯ ಸದಸ್ಯರು ಡಾ. ಅಂಬೇಡ್ಕರ್ ಅವರನ್ನು ತಮ್ಮೊಂದಿಗೆ ಪುಣೆಗೆ ಕರೆದುಕೊಂಡು ಹೋಗುವುದು ಬೇಡ, ಮೊದಲು ನಾವು ಹೋಗಿ ಮಹಾತ್ಮ ಗಾಂಧೀಜಿ ಅವರೊಂದಿಗೆ ಮಾತುಕತೆ ನಡೆಸುವುದು ಮತ್ತು ಮಹಾತ್ಮ ಗಾಂಧೀಜಿ ತಮ್ಮ ಇಚ್ಛೆ ವ್ಯಕ್ತಪಡಿಸಿದರೆ ಡಾ. ಅಂಬೇಡ್ಕರ್ ಅವರನ್ನು ಆನಂತರ ಕರೆಸಿಕೊಳ್ಳುವುದು ಎಂದು ಮಧ್ಯರಾತ್ರಿ ನಡೆದ ಸಭೆಯಲ್ಲಿ ಮಹತ್ವದ ಮಾರ್ಪಾಡು ಮಾಡಲಾಯಿತು.

ರಾತ್ರಿ ಕಮಿಟಿಯು ವಿಚಾರ ವಿನಿಮಯ ಮಾಡಿದ ಬಳಿಕ ಡಾ. ಅಂಬೇಡ್ಕರ್ ಅವರು ಯೋಜನೆಯೊಂದನ್ನು ಸಿದ್ಧಪಡಿಸಿದರು. ರಾತ್ರಿ ೧೦ ಗಂಟೆಗೆ ಡಾ. ಸೋಳಂಕಿ ಮತ್ತು ಅಂಬೇಡ್ಕರ್ ಅವರು ಬಿರ್ಲಾಹೌಸ್‌ಗೆ ಹೋಗಿ ಅಲ್ಲಿ ತಮ್ಮ ಯೋಜನೆಯನ್ನು ಸಮಿತಿ ಎದುರು ಮಂಡಿಸಿದರು. ಈ ಯೋಜನೆಗೆ ಸಮಿತಿ ತನ್ನ ಒಪ್ಪಿಗೆ ಸೂಚಿಸಿತು.

## ಡಾ. ಅಂಬೇಡ್ಕರ್ ಅವರ ಹೊಸ ಯೋಜನೆ
## ಮೊದಲನೇ ಭಾಗ

ಮಹಾತ್ಮ ಗಾಂಧೀಜಿ ಅವರ ತೀರ್ಮಾನ ಗಟ್ಟಿ ಎಂದು ತಿಳಿದ ಬಳಿಕ ಡಾ. ಅಂಬೇಡ್ಕರ್ ಅವರು, ಸರ್ ತೇಜಬಹಾದ್ದೂರ್ ಸಪ್ರು, ಜಯಕರ್ ಮತ್ತು ಮಾಳವೀಯ ಅವರ ಸಹಮತದ ಮೇರೆಗೆ ಹೊಸ ಯೋಜನೆಯೊಂದನ್ನು ಸಿದ್ಧಪಡಿಸಿದರು. ಈ ಯೋಜನೆಯಲ್ಲಿ ಪ್ರಾಥಮಿಕ ಚುನಾವಣೆ ಮತ್ತು ಸಂಯುಕ್ತ ಮತಕ್ಷೇತ್ರಗಳಲ್ಲಿನ ಮೀಸಲು ಸ್ಥಾನಗಳಿಗೆ ನೇರ ಚುನಾವಣೆ ನಡೆಸುವುದು ಎಂದು ಆಗಿತ್ತು. ಸ್ವತಂತ್ರ ಮತಕ್ಷೇತ್ರಗಳನ್ನು ಮೃದು ಮತಕ್ಷೇತ್ರಗಳು ಎಂದು ಹೆಸರಿಸಲಾಗಿತ್ತು. ಈ ಯೋಜನೆಯ ಪ್ರಕಾರ ಅಸ್ಪೃಶ್ಯರಿಗೆ ಈ ರೀತಿ ಮೀಸಲು ಸ್ಥಾನಗಳನ್ನು ನೀಡಲಾಯಿತು.

**ಕಾನೂನು ಮಂಡಳಿಯಲ್ಲಿನ ಸ್ಥಾನಗಳು**

| ಪ್ರಾಂತ್ಯ (೧) | ನೂತನ ಸ್ಥಾನಗಳು (೨) | ಒಟ್ಟು ಸ್ಥಾನಗಳು (೩) | ಅವಾರ್ಡಿನಂತೆ (೪) |
|---|---|---|---|
| ಮದ್ರಾಸ್ ... ... | ೩೦ | ೨೧೫ | ೧೮ |
| ಮುಂಬೈ.......... | ೧೬ | ೨೦೦ | ೧೦ |
| ಬಂಗಾಲ......... | ೫೦ | ೨೫೦ | ೧೦ |

| | | | |
|---|---|---|---|
| ಪಂಜಾಬ್ | ೧೦ | ೧೭೫ | ೯ |
| ಸಂ.ಪ್ರಾಂತ್ಯ | ೪೦ | ೨೨೮ | ೧೨ |
| ಬಿಹಾರ, ಒರಿಸ್ಸಾ | ೨೦ | ೧೭೫ | ೭ |
| ಮಧ್ಯ ಪ್ರಾಂತ್ಯ | ೨೦ | ೧೧೨ | ೧೦ |
| ಅಸ್ಸಾಂ | ೧೧ | ೧೦೮ | ೪ |

ಹೊಸ ಯೋಜನೆಯ ಪ್ರಕಾರ ಅಸ್ಪೃಶ್ಯರಿಗೆ ಒಟ್ಟಾರೆ ೧೯೭ ಸ್ಥಾನಗಳು ಲಭಿಸಲಿವೆ, ಮೊದಲಿನ ಹತ್ತು ವರ್ಷಗಳ ಅವಧಿಗೆ ಅಸ್ಪೃಶ್ಯ ಮತಕ್ಷೇತ್ರಗಳಲ್ಲಿ ನಡೆಯುವ ಪ್ರಾಥಮಿಕ ಚುನಾವಣೆಯಲ್ಲಿ ಅಸ್ಪೃಶ್ಯ ಅಭ್ಯರ್ಥಿಗಳು ಸ್ಪರ್ಧಿಸುತ್ತಾರೆ. ಈ ಪ್ರಾಥಮಿಕ ಚುನಾವಣೆಯಲ್ಲಿ ಆಯ್ಕೆಯಾಗುವ ಮೊದಲಿನ ಎರಡು ಸ್ಥಾನಗಳನ್ನು ಪಡೆದ ಅಭ್ಯರ್ಥಿಗಳು ಸಾರ್ವತ್ರಿಕ ಚುನಾವಣೆಗೆ ಸ್ಪರ್ಧಿಸುವರು. ಹತ್ತು ವರ್ಷಗಳ ಬಳಿಕ ಈ ಪ್ರಾಥಮಿಕ ಚುನಾವಣೆ ರದ್ದುಗೊಳಿಸಲಾಗುವುದು. ಇದೇ ರೀತಿ ಎಲ್ಲ ಸಂಯುಕ್ತ ಮತಕ್ಷೇತ್ರಗಳು ಮತ್ತು ಮೀಸಲು ಸ್ಥಾನಗಳಿಗೆ ಈ ಪದ್ಧತಿಯ ಚುನಾವಣೆ ನಡೆಸಲಾಗುವುದು.

ಈ ಯೋಜನೆಯನ್ನು ಮುಂದಿನ ೨೦ ವರ್ಷ ಗಮನದಲ್ಲಿ ಇರಿಸಿಕೊಂಡು ಅಸ್ಪೃಶ್ಯರ ಮತ ಪ್ರಮಾಣಕ್ಕೆ ಅನುಗುಣವಾಗಿ ಇದರ ಮುಂದಿನ ಪ್ರಾತಿನಿಧಿತ್ವಕ್ಕೆ ಯಾವ ಷರತ್ತು ಮತ್ತು ಧೋರಣೆ ಇರಬೇಕು ಎನ್ನುವುದನ್ನು ತೀರ್ಮಾನಿಸಲಾಗುವುದು. ಅಸ್ಪೃಶ್ಯ ವರ್ಗದ ಪ್ರತಿಯೊಬ್ಬ ವಯಸ್ಕನಿಗೂ ಮತದಾನ ಹಕ್ಕು ನೀಡಲಾಗುವುದು.

ಪ್ರಾಂತೀಯ ಮತ್ತು ಕೇಂದ್ರ ಕಾನೂನು ಮಂಡಳಿಯಲ್ಲಿನ ಪ್ರತಿನಿಧಿಗಳು ಜನಸಂಖ್ಯೆಗೆ ಅನುಗುಣವಾಗಿ ಇರಬೇಕು.

**ಎರಡನೇ ಭಾಗ**

ಎಲ್ಲ ಪ್ರಾಂತದ ಅಸ್ಪೃಶ್ಯ ವರ್ಗಕ್ಕೆ ಮುನ್ಸಿಪಾಲಿಟಿ, ಲೋಕಲ್ ಬೋರ್ಡ್, ಪಂಚಾಯಿತಿ, ಸ್ಕೂಲ್ ಬೋರ್ಡ್ ಮತ್ತು ಇತರ ಸ್ಥಳೀಯ ಸಂಸ್ಥೆಗಳಲ್ಲಿ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಪ್ರಾತಿನಿಧಿತ್ವ ನೀಡಬೇಕು. ಸ್ಥಳೀಯ, ಮಧ್ಯವರ್ತಿ ಮತ್ತು ಉಚ್ಚ ಸಂಸ್ಥೆಗಳಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಶಿಕ್ಷಣದ ದರ್ಜೆಗೆ ಅನುಸಾರವಾಗಿ ಅಸ್ಪೃಶ್ಯ ವರ್ಗದ ಅಭ್ಯರ್ಥಿಗಳಿಗೆ ನೌಕರಿಗಳು ಸಿಗಬೇಕು.

ಬಹಿಷ್ಕೃತ ವರ್ಗದಲ್ಲಿ ಶಿಕ್ಷಣ ಪ್ರಸಾರ ಮಾಡುವ ಉದ್ದೇಶದಿಂದ ಪ್ರತಿಯೊಂದು ಪ್ರಾಂತ್ಯದಿಂದ ಶಿಕ್ಷಣಕ್ಕಾಗಿ ನೀಡುವ ಸರ್ಕಾರಿ ಅನುದಾನವನ್ನು ಅಸ್ಪೃಶ್ಯರ ಜನಸಂಖ್ಯೆಗೆ ಅನುಗುಣವಾಗಿ ಮೊತ್ತದಲ್ಲಿ ಹಂಚಿಕೆಯಾಗಬೇಕು.

ಕೆನಡಾ ವಸಾಹತಿನಲ್ಲಿರುವಂತೆ (Constitution of Canada) ಅದೇ ರೀತಿಯಂತೆ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದಂತಹ ವಿಚಾರಗಳಲ್ಲಿ ಅಸ್ಪೃಶ್ಯರಿಗೆ ನ್ಯಾಯ ದೊರೆಯದಿದ್ದಲ್ಲಿ ಅವರು ಗವರ್ನರ್ ಇಲ್ಲವೇ ವೈಸರಾಯ್ ಅವರಿಗೆ ಅರ್ಜಿ ಸಲ್ಲಿಸಿ ನ್ಯಾಯಯುತ ಹಕ್ಕು ಪಡೆಯುವ ಯೋಜನೆಯನ್ನು ನೂತನ ಸಂವಿಧಾನದಲ್ಲಿ ಕಲ್ಪಿಸಲಾಗುವುದು.

## ಗಾಂಧಿ–ಅಂಬೇಡ್ಕರ್ ಭೇಟಿ

ಡಾ. ಅಂಬೇಡ್ಕರ್ ಮತ್ತು ಡಾ. ಸೋಳಂಕಿ ರಾತ್ರಿ ತಮ್ಮ ಯೋಜನೆಯನ್ನು ಬಿರ್ಲಾ ಹೌಸ್‌ನಲ್ಲಿದ್ದ ಕಮಿಟಿಯ ಸದಸ್ಯರಿಗೆ ಸಲ್ಲಿಸಿದರು. ಇದಕ್ಕುತ್ತರವಾಗಿ ಕಮಿಟಿ ಸದಸ್ಯರು ನೀವು ಸಲ್ಲಿಸಿರುವ ಈ ಯೋಜನೆಯನ್ನು ತಕ್ಷಣ ತೆಗೆದುಕೊಂಡು ಹೋಗಿ ಮಹಾತ್ಮ ಗಾಂಧೀಜಿ ಅವರ ಅವಗಾಹನೆಗೆ ತರಲಾಗುವುದು. ಒಂದು ವೇಳೆ ಮಹಾತ್ಮ ಗಾಂಧೀಜಿ ತಮ್ಮನ್ನು ಭೇಟಿ ಮಾಡುವ ಇಚ್ಛೆ ವ್ಯಕ್ತಪಡಿಸಿದರೆ ಮಾತ್ರ ನಿಮ್ಮನ್ನು ಕರೆಸಿಕೊಳ್ಳುತ್ತೇವೆ ಎಂದು ಹೇಳಿ ರಾತ್ರಿಯ ಕೊನೆಯ ಗಾಡಿಯಲ್ಲಿ ಪುಣೆಯತ್ತ ಪ್ರಯಾಣ ಬೆಳೆಸಿದರು. ಪುಣೆಯಿಂದ ಬಂದಿದ್ದ ಕಮಿಟಿ ಸದಸ್ಯರನ್ನು ಬುಧವಾರ ಬೆಳಗ್ಗೆ ಭೇಟಿಯಾದ ಮಹಾತ್ಮ ಗಾಂಧೀಜಿ ಅವರು ಡಾ. ಅಂಬೇಡ್ಕರ್ ಅವರ ನೇರ ಭೇಟಿ ಮತ್ತು ಮಾತುಕತೆಗೆ ತಮ್ಮ ಇಂಗಿತ ವ್ಯಕ್ತಪಡಿಸಿದರು. ಗಾಂಧೀಜಿ ಅವರ ಇಚ್ಛೆಗೆ ಅನುಗುಣವಾಗಿ ಬಿರ್ಲಾ ಹೌಸ್‌ನಲ್ಲಿದ್ದ ಡಾ. ಅಂಬೇಡ್ಕರ್ ಅವರನ್ನು ಫೋನ್ ಮುಖಾಂತರ ಸಂಪರ್ಕಿಸಿ ಗಾಂಧೀಜಿ ಅವರು ತಕ್ಷಣ ನಿಮ್ಮನ್ನು ಭೇಟಿಯಾಗುವುದಕ್ಕೆ ಇಂಗಿತ ವ್ಯಕ್ತಪಡಿಸಿದ್ದಾರೆ ಎಂದು ಮಾಹಿತಿ ನೀಡಲಾಯಿತು. ಗಾಂಧೀಜಿ ಅವರನ್ನು ಭೇಟಿಯಾಗುವುದಕ್ಕೆ ಗುರುವಾರ ಪುಣೆಗೆ ಬರುತ್ತೇನೆ ಎಂದು ಅಂಬೇಡ್ಕರ್ ಉತ್ತರಿಸಿದರು. ಇದರೊಟ್ಟಿಗೆ ನಾನು ಯಾವುದೇ ಸ್ಪೃಶ್ಯ ನಾಯಕರೊಂದಿಗೆ ಮಾತುಕತೆಗೆ ಸಿದ್ಧನಿಲ್ಲ ಕೇವಲ ಮಹಾತ್ಮ ಗಾಂಧಿ ಅವರೊಂದಿಗೆ ಮಾತ್ರ ನನ್ನ ಮಾತುಕತೆ ಎಂದು ಅಂಬೇಡ್ಕರ್ ಸ್ಪಷ್ಟವಾಗಿ ಹೇಳಿದರು.ಈ ಮೊದಲೇ ನಿರ್ಧರಿಸಿದಂತೆ ಡಾ. ಅಂಬೇಡ್ಕರ್ ಮತ್ತು ಡಾ. ಸೋಳಂಕಿ ರಾತ್ರಿ ಹನ್ನೆರಡರ ಗಾಡಿಗೆ ಪುಣೆಯತ್ತ ಹೊರಟರು.

ಡಾ. ಅಂಬೇಡ್ಕರ್ ಅವರು ಭಾರತದ ಎಲ್ಲ ಪ್ರಾಂತ್ಯಗಳಲ್ಲಿರುವ ಅಸ್ಪೃಶ್ಯ ನಾಯಕರಿಗೆ ತುರ್ತು ತಂತಿ ಸಂದೇಶ ಕಳುಹಿ ಅವರಿಗೆ ಬರಲು ತಿಳಿಸಿದರು. ಅದಕ್ಕನುಗುಣವಾಗಿ ಮದ್ರಾಸ್‌ನ ಹಿರಿಯ ಅಸ್ಪೃಶ್ಯ ಮುಖಂಡ ರಾವ್ ಬಹಾದ್ದೂರ್ ಶ್ರೀನಿವಾಸನ್ ಅವರು ಮುಂಬೈಗೆ ಆಗಮಿಸಿ ಅನಂತರ ಮದ್ರಾಸ್ ಮೇಲ್‌ನಿಂದ ಪುಣೆಗೆ ಹೋದರು. ಅವರೊಂದಿಗೆ ಶ್ರೀ ಶಿವತರಕರ್ ಕೂಡ ಪುಣೆಗೆ ಪ್ರಯಾಣ ಬೆಳೆಸಿದರು.

ಪುಣೆ ಒಪ್ಪಂದಕ್ಕೆ ಸಂಬಂಧಿಸಿದಂತೆ ಮಾತುಕತೆ ಆರಂಭವಾಗುತ್ತಿದ್ದಂತೆಯೇ ಡಾ. ಅಂಬೇಡ್ಕರ್ ಧೋರಣೆ ವಿರೋಧಿಸಿ ಇಡೀ ದೇಶದಾದ್ಯಂತ ಅವರ ವಿರುದ್ಧ ನಿರ್ಮಾಣಗೊಂಡ ಕಲುಷಿತ ವಾತಾವರಣ ಪರಿಣಾಮವಾಗಿ ಡಾ. ಅಂಬೇಡ್ಕರ್ ಅವರಿಗೆ ಜೀವ ಬೆದರಿಕೆ ಪತ್ರಗಳು ಬರಲಾರಂಭಿಸಿದವು. ಅವುಗಳ ಪೈಕಿ ಒಂದು ಪತ್ರ ಗುಜರಾತ್‌ನಿಂದ ಬಂದಿದ್ದು ಆ ಪತ್ರವನ್ನು ೧/೧೦/೧೯೩೨ರ ಜನತಾ ಪತ್ರಿಕೆಯ ಪುಟ ೩ರಲ್ಲಿ ಪ್ರಕಟಿಸಲಾಗಿತ್ತು.

## ಡಾ. ಅಂಬೇಡ್ಕರ್‌ಗೆ ಜೀವ ಬೆದರಿಕೆ ಪತ್ರ

डा. अंबेडकर,

जो तमो दिवस ४ मां महात्मा गांधीनी मागणी मंजूर करेशो नही तो तमारी जान लोंवमां आवशे. माटे जो तमारु जीवन तमोने वहालुं होय तो महातमा गांधीजीनी मंजूर करीने ते ओने उपवास मांथर जलदी छोडावो. आ चेतावणी छेल्ली छे हवे जुदी तक्रार छोडी देशो नही तो तमारी खून करवामां आवशे

ली. हरिभाई के. भट
B.P.E.E ना एक मेंबर अने वर्कर

ಪುಣೆಯಲ್ಲಿಯ ಕೆಲ ಸ್ಪೃಶ್ಯವರ್ಗದ ಯುವಕರು ಡಾ. ಅಂಬೇಡ್ಕರ್‌ರನ್ನು ಕೊಲೆ ಮಾಡುವ ಒಂದು ರಹಸ್ಯ ಸಂಚನ್ನು ರೂಪಿಸಿದ್ದರು. ಈ ಘಟನೆಯ ವರದಿ ೨೪–೯–೧೯೩೨ರ 'ಜನತಾ' ಪತ್ರಿಕೆಯಲ್ಲಿ (ಪುಟ ೮) ಪ್ರಕಟವಾಗಿತ್ತು. ಅದು ಈ ರೀತಿ:

## ಡಾ. ಅಂಬೇಡ್ಕರ್ ಮೇಲೆ ಪ್ರಾಣ ಸಂಕಟ

### ಪುಣೆ ವಿದ್ಯಾರ್ಥಿಗಳ ರಹಸ್ಯ ಸಭೆ: ಕೊಲೆ ಬೆದರಿಕೆ
**ಪುಣೆ ದಿ. ೨೩–೯–೧೯೩೨ ರಾತ್ರಿ ೮ ಗಂಟೆ**
**('ಜನತಾ' ದ ವಿಶೇಷ ವರದಿಗಾರ ಕಳುಹಿಸಿದ ವರದಿ)**

ಎರಡು ದಿನಗಳು ಉರುಳಿದವು; ಒಂದೇ ಸಮನೆ ಮಾತುಕತೆಗಳು ನಡೆದಿವೆ. ಡಾ.ಅಂಬೇಡ್ಕರ್ ಅವರನ್ನು ಹತ್ತಿಕ್ಕುವ ನಿಟ್ಟಿನಲ್ಲಿ ನಾನಾ ಪ್ರಯತ್ನಗಳು ನಡೆದಿವೆ. ಗವರ್ನರ್ ಮೇಲೆ ಗುಂಡು ಹಾರಿಸಿದ ಗೋಗಟೆ ಪಂಥದ ಕೆಲವು ಪುಣೆ ಮೂಲದ ವಿದ್ಯಾರ್ಥಿಗಳಿಂದ ರಹಸ್ಯ ಹುನ್ನಾರ ನಡೆಯುತ್ತಿದೆ ಎನ್ನುವ ಸುದ್ದಿ ಪ್ರಕಟವಾಗಿದೆ. ಡಾ. ಅಂಬೇಡ್ಕರ್ ಅವರನ್ನು ಇಲ್ಲವಾಗಿಸಿದರೆ ಎಲ್ಲ ಗೊಂದಲಕ್ಕೂ ತೆರೆ ಬೀಳುತ್ತದೆ ಮತ್ತು ಮಹಾತ್ಮ ಗಾಂಧೀಜಿ ಅವರ ಜೀವ ಕೂಡ ಉಳಿಯುತ್ತದೆ ಎನ್ನುವ ಸೂಚನೆಗಳು ಲಭಿಸುತ್ತಿವೆ. ಈ ವಿಚಾರವನ್ನು ಡಾ. ಅಂಬೇಡ್ಕರ್ ಗಮನಕ್ಕೆ ತಂದಾಗ ಅಂತಹ ಪುಕ್ಕಲು ಸಾವಿಗೆ ನಾನು ಹೆದರುವವನಲ್ಲ ಎನ್ನುವ ಅರ್ಥದಲ್ಲಿ ಅವರು ಹಾಸ್ಯ ಮಾಡಿದರು. ಆದರೆ ಅಲ್ಲಿನ ಅಸ್ಪೃಶ್ಯ ಸಮಾಜಕ್ಕೆ ಮಾತ್ರ ಡಾ. ಅಂಬೇಡ್ಕರ್ ಸಾಹೇಬರ ಸುರಕ್ಷತೆಯ ಕುರಿತು ಸದಾ ಕಳವಳ. ಡಾ. ಅಂಬೇಡ್ಕರ್‌ರ ಒಂದು ಕೂದಲಿಗೂ ಧಕ್ಕೆಯಾದರೆ ಭಯಂಕರ ಪರಿಣಾಮ ಮೈ ಮೇಲೆ ಎಳೆದುಕೊಳ್ಳಬೇಕಾಗುತ್ತದೆ ಎಂದು ಅಸ್ಪೃಶ್ಯ ಸಮಾಜ ಎಚ್ಚರಿಸಿದೆ. ಅವರ ಒಂದು ಹನಿ ರಕ್ತಕ್ಕಾಗಿ ಸಾವಿರಾರು ಅಸ್ಪೃಶ್ಯ ಯುವಕರು ಬಲಿದಾನಕ್ಕೆ ಸಿದ್ಧವಾಗಿದ್ದಾರೆ. ಗಾಂಧೀಜಿ ಅವರ ಈ ಭಯಂಕರ ಪ್ರತಿಜ್ಞೆಯ ಅಂತ್ಯ ಇಂತಹ ಅನರ್ಥಗಳಿಗೆ ದಾರಿ ಮಾಡಿಕೊಡಬಾರದು ಎನ್ನುವುದು ಎಲ್ಲರ ಆಶಯವಾಗಿದೆ.

ಗುರುವಾರ ದಿ. ೨೨ ಸೆಪ್ಟಂಬರ್ ೧೯೩೨ರಂದು ಬೆಳಗ್ಗೆ ೯ಕ್ಕೆ ನ್ಯಾಷನಲ್ ಹೋಟೆಲ್‌ನಲ್ಲಿ ಸರ್ ತೇಜಬಹಾದ್ದೂರ್ ಸಪ್ರು ಮತ್ತು ಬ್ಯಾ. ಜಯಕರ್ ಇಬ್ಬರೂ ಸೇರಿ ಡಾ. ಅಂಬೇಡ್ಕರ್ ಅವರನ್ನು ಭೇಟಿಯಾದರು. ಸುಮಾರು ೧೨–೩೦ರವರೆಗೆ ಪರಸ್ಪರರ ಮಧ್ಯೆ ಮಾತುಕತೆಯಾಯಿತು.

ಮಾತುಕತೆಯಲ್ಲಿ ಡಾ. ಅಂಬೇಡ್ಕರ್ ಪ್ರಸ್ತುತಪಡಿಸಿದ ಯೋಜನೆಯಲ್ಲಿ ಸ್ವತಂತ್ರ ಮತಕ್ಷೇತ್ರ ಕೈಬಿಡಲಾಗಿದ್ದರೂ ಪ್ರಸ್ತಾಪಿಸಿದ ಪ್ರಾಥಮಿಕ ಚುನಾವಣೆಯ ಪರಿಕಲ್ಪನೆಯಲ್ಲಿ ಸ್ವತಂತ್ರ ಮತಕ್ಷೇತ್ರದ ದುರ್ವಾಸನೆ ಇದೆ ಎನ್ನುವ ಕಾರಣಕ್ಕೆ ಮಹಾತ್ಮ ಗಾಂಧಿ ಅದಕ್ಕೆ ಒಪ್ಪಿಗೆ ನೀಡುತ್ತಿಲ್ಲವೆಂಬ ಅಂಶ ಪ್ರಸ್ತಾಪಿತವಾಯಿತು. ಇದಲ್ಲದೇ ಸ್ವತಂತ್ರ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಗಳ ಮಧ್ಯೆ ನಡೆಯುವ ಮಾತುಕತೆ ಫಲಪ್ರದವಾದರೆ ಪ್ರಧಾನಿ ರಾಮ್ಸೆ ಮ್ಯಾಕ್‌ಡೊನಾಲ್ಡ್ ಅವರಿಗೆ ತಂತಿ ಸಂದೇಶದ ಮೂಲಕ ಸ್ವತಂತ್ರ

ಮತಕ್ಷೇತ್ರ ಪ್ರಸ್ತಾಪ ರದ್ದು ಮಾಡುವಂತೆ ಹೇಳುವುದು, ಮತ್ತು ಅಸ್ಪೃಶ್ಯರ ಬೇಡಿಕೆಗಳ ಬಗ್ಗೆ ಭವಿಷ್ಯದಲ್ಲಿ ವಿಚಾರ ಮಾಡಲಾಗುವುದು. ಏಕೆಂದರೆ ಮಾತುಕತೆ, ವಿಚಾರ ವಿನಿಮಯಕ್ಕೆ ಕಾಲಾವಕಾಶದ ಅಗತ್ಯವಿದ್ದು ಅಲ್ಲಿಯವರೆಗೆ ಮಹಾತ್ಮ ಗಾಂಧಿ ಅವರು ತಮ್ಮ ಉಪವಾಸ ಮುಂದುವರಿಸಿದರೆ ಅವರ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇದೆ ಎಂದು ಸ್ಪಷ್ಟಪಡಿಸಲಾಯಿತು. ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಅತ್ಯಂತ ಸ್ಪಷ್ಟವಾಗಿ ನಮ್ಮ ಪಾಲಿನ ಎಲ್ಲ ಬೇಡಿಕೆಗಳ ಬಗ್ಗೆ ತಕ್ಷಣ ಚರ್ಚೆಯಾಗಿ ಅದರಿಂದ ನಮಗೆ ಏನು ಲಭಿಸುತ್ತದೆ ಎನ್ನುವುದು ಸ್ಪಷವಾಗದ ಹೊರತು ಅಸ್ಪೃಶ್ಯರಿಗೆ ಲಭಿಸಿರುವ ಸ್ವತಂತ್ರ ಮತಕ್ಷೇತ್ರದ ಹಕ್ಕು ಬಿಟ್ಟುಕೊಡುವುದಕ್ಕೆ ನಾನು ಸಿದ್ಧನಿಲ್ಲ. ಕೈಯಲ್ಲಿರುವುದನ್ನು ಕಳೆದುಕೊಂಡು, ಓಡಿ ಹೋಗುವುದರ ಬೆನ್ನು ಹತ್ತುವಲ್ಲಿ ಯಾವುದೇ ಅರ್ಥ ಇಲ್ಲ. ಅದೇ ರೀತಿ ಮಹಾತ್ಮ ಗಾಂಧೀಜಿ ಅವರು ಕನಿಷ್ಠ ಪ್ರಾಥಮಿಕ ಚುನಾವಣೆಯ ಯೋಜನೆಗೆ ಮಾನ್ಯತೆ ನೀಡದ ಹೊರತು ಮಾತುಕತೆಗೆ ಸಿದ್ಧವಿಲ್ಲ ಎಂದು ಸ್ಪಷ್ಟಪಡಿಸಿದರು. ಚರ್ಚೆಯ ಮೊದಲನೇ ಹಂತದಲ್ಲಂತೂ ಸಂಧಾನದ ಆಶಯದ ಚಿಹ್ನೆಗಳಂತೂ ಕಾಣಿಸಲೇ ಇಲ್ಲ. ಇಷ್ಟಾದ ಬಳಿಕ ಡಾ. ಸಪ್ರು ಮತ್ತು ಬ್ಯಾ. ಜಯಕರ್ ಅವರು ನಿಮ್ಮ ಅಭಿಪ್ರಾಯವನ್ನು ಕಮಿಟಿಯ ಸದಸ್ಯರ ಎದುರು ಇರಿಸುತ್ತೇವೆ ಮತ್ತು ಎಲ್ಲರ ಅನುಮತಿಯ ಮೇರೆಗೆ ನಿಮ್ಮ ಮತ್ತು ಮಹಾತ್ಮ ಗಾಂಧಿ ಮಧ್ಯೆ ಭೇಟಿ ಆಗಬೇಕು ಎಂದು ತೀರ್ಮಾನವಾದಲ್ಲಿ ನಿಮಗೆ ತಿಳಿಸಲಾಗುವುದು ಎಂದು ಹೇಳಿ ಹೊರಟರು.

ನಾಲ್ಕು ಗಂಟೆ ಮಹಾತ್ಮ ಗಾಂಧೀಜಿ ಅವರ ಭೇಟಿ ಎಂದು ತೀರ್ಮಾನಿಸಲಾಗಿತ್ತು. ಮಹಾತ್ಮ ಗಾಂಧೀಜಿ ಅವರಿಗೆ ದಣಿವಾಗಿರುವ ಕಾರಣ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿರುವುದರಿಂದ ಇನ್ನೊಂದಿಷ್ಟು ತಡವಾಗಿ ಬನ್ನಿ ಎಂದು ಯರವಾಡಾ ಜೈಲಿನಿಂದ ಸಂದೇಶ ಬಂತು. ಕಮಿಟಿ ಸದಸ್ಯರು ಯರವಾಡಾ ಕಾರಾಗೃಹಕ್ಕೆ ಒಂದು ಗಂಟೆ ತಡವಾಗಿ ಅಂದರೆ ಸಂಜೆ ೫ರ ಸುಮಾರಿಗೆ ಗಾಂಧಿ ಭೇಟಿಗೆ ಹೊರಟರು. ಮಾವಿನ ಮರದ ಕೆಳಗೆ ಹಾಕಿದ್ದ ಮಂಚದ ಮೇಲೆ ಮಹಾತ್ಮ ಗಾಂಧೀಜಿ ಮಲಗಿದ್ದರು. ಅವರ ಬಳಿ ಕುಳಿತಿದ್ದವರಲ್ಲಿ ಗಾಂಧೀಜಿ ಅವರ ಶಿಷ್ಯಂದಿರಾದ ಮಹಾದೇವ ದೇಸಾಯಿ, ಸರೋಜಿನಿ ನಾಯ್ಡು, ವಲ್ಲಭಬಾಯ್ ಪಟೇಲ್, ರಾಜಗೋಪಾಲಾಚಾರಿ, ಬಿರ್ಲಾ ಮತ್ತು ಸರ್ ಚುನಿಲಾಲ್ ಮೇಥಾ ಇದ್ದರು.

ಸರ್ ತೇಜಬಹಾದ್ದೂರ್ ಸಪ್ರು ಅವರು ನ್ಯಾಷನಲ್ ಹೋಟೆಲ್‌ನಲ್ಲಿ ನಡೆದ ಮಾತುಕತೆಯ ಸಾರಾಂಶವನ್ನು ಗಾಂಧೀಜಿಗೆ ಹೇಳಿದ ಬಳಿಕ ಡಾ. ಅಂಬೇಡ್ಕರ್ ಅವರು ತಾವು ಏನು ಹೇಳಬೇಕೆಂದುಕೊಂಡಿದ್ದಾರೋ ಅದನ್ನು ಅವರೇ ಸ್ವತಃ ಹೇಳಲಿದ್ದಾರೆ ಎಂದು ಪ್ರಸ್ತಾಪಿಸಿದರು. ಇದಾದ ಬಳಕ ಡಾ. ಅಂಬೇಡ್ಕರ್ ಅವರು ಸುಮಾರು ಒಂದೂವರೆ ಗಂಟೆ ಮಾಡಿದ ಭಾಷಣದಲ್ಲಿ ಹೊಸ ಯೋಜನೆ ಮತ್ತು ಜಾತಿ ಪ್ರಾತಿನಿಧಿತ್ವ (Communual Award)ದಲ್ಲಿನ ಗುಣಾವಗುಣಗಳನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚಿದರು. ಈ ವಾದ ವಿವಾದದ ಫಲಶ್ರುತಿ ಎನ್ನುವಂತೆ ಪ್ರಾಥಮಿಕ ಚುನಾವಣೆ ವಿಧಾನಕ್ಕೆ ಮಹಾತ್ಮ ಗಾಂಧಿ ವಿರೋಧಿಸುತ್ತಾರೆ ಎಂದು ಎಲ್ಲರ ಭಾವನೆಗೆ ವಿರುದ್ಧವಾಗಿ ಗಾಂಧೀಜಿ ಸ್ಪಷ್ಟ ಮಾತುಗಳಲ್ಲಿ ಸ್ವತಂತ್ರ ಮತಕ್ಷೇತ್ರದಲ್ಲಿರುವ ಒಳ್ಳೆಯ ಅಂಶಗಳನ್ನು ಸ್ವೀಕರಿಸಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು. ಒಂದಿಷ್ಟು ಸ್ಥಾನಗಳಿಗೆ ಬದಲಿಗೆ ಕೌನ್ಸಿಲ್‌ನಲ್ಲಿ ನಿಮಗೆ ಸಿಗಬೇಕಾಗಿರುವ ಎಲ್ಲ ಸ್ಥಾನಗಳಿಗೂ ಎಲ್ಲದಕ್ಕೂ ನಿಮ್ಮ ಯೋಜನೆಯನ್ನು ಅನ್ವಯಿಸಿ ಎಂದು ಶಿಫಾರಸು ಮಾಡಿದರು. ಇಷ್ಟು ನಡೆದ ಬಳಿಕ ಮೊದಲನೇ ದಿನದ ಮಾತುಕತೆ ಪೂರ್ಣಗೊಂಡಿತು.

ಪ್ರಾಥಮಿಕ ಚುನಾವಣೆ ಪದ್ಧತಿಗೆ ಮಹಾತ್ಮ ಗಾಂಧೀಜಿ ಅವರಿಂದ ಲಭಿಸಿದ ಸಮ್ಮತಿಯ ಪರಿಣಾಮವಾಗಿ ಮಧ್ಯಾಹ್ನದವರೆಗೆ ಎಲ್ಲೆಡೆ ಕಾಣಿಸಿಕೊಂಡಿದ್ದ ನಿರಾಸೆಯ ಮೋಡ ತಿಳಿಯಾಗಿ ಭರವಸೆಯ ಬೆಳಕು

ಕಾಣಿಸಿಕೊಳ್ಳಲಾರಂಭಿಸಿತು.

ಶುಕ್ರವಾರ ಬೆಳಗ್ಗೆ ಪುಣೆಯಲ್ಲಿ ಸೇಠ್ ಶಿವಲಾಲ್ ಮೋತಿಲಾಲ್ ಅವರ ನಿವಾಸದಲ್ಲಿ ಡಾ. ಅಂಬೇಡ್ಕರ್ ಅವರ ಇನ್ನುಳಿದ ಬೇಡಿಕೆಗಳ ಬಗ್ಗೆ ಚರ್ಚಿಸುವುದಾಗಿ ತೀರ್ಮಾನಿಸಲಾಯಿತು. ಮಾತುಕತೆಯಲ್ಲಿ ಇದ್ದ ನಾಲ್ಕು ಪ್ರಶ್ನೆಗಳು ಎಂದರೆ (೧) ಪ್ರಾಥಮಿಕ ಚುನಾವಣೆಯ ಪ್ಯಾನೆಲ್‌ನಲ್ಲಿ ಎಷ್ಟು ಜನರು ಇರಬೇಕು? (೨) ಕೇಂದ್ರ ಕಾನೂನು ಮಂಡಳಿಯಲ್ಲಿ ಅಸ್ಪೃಶ್ಯ ವರ್ಗದ ಪ್ರತಿನಿಧಿಗಳ ಸಂಖ್ಯೆ ಎಷ್ಟಿರಬೇಕು? (೩) ಪ್ರಾಂತೀಯ ಕಾನೂನು ಮಂಡಳಿಯಲ್ಲಿ ಅಸ್ಪೃಶ್ಯರಿಗೆ ಎಷ್ಟು ಸ್ಥಾನಗಳನ್ನು ನೀಡಬೇಕು? (೪)ಮೀಸಲಾತಿ ಸ್ಥಾನ ಎಷ್ಟು ದಿನ ಇರಬೇಕು? ಮತ್ತು ಅದನ್ನು ತೆಗೆದುಹಾಕುವುದಿದ್ದರೆ ಯಾವ ಷರತ್ತಿನ ಮೇಲೆ ತೆಗೆಯುವುದು ಸೇರಿದಂತೆ ಇತರ ಪ್ರಶ್ನೆಗಳು ಇದ್ದವು.

**ಶುಕ್ರವಾರ, ಸೆಪ್ಟಂಬರ್ ೨೩, ೧೯೩೨**

ಮೇಲಿನ ವಿಷಯಗಳ ಕುರಿತು ಚರ್ಚಿಸುವ ನಿಟ್ಟಿನಲ್ಲಿ ಪುಣೆಯ ರಾಜಾ ಬಹಾದ್ದೂರ್ ಶಿವಲಾಲ್ ಮೋತಿಲಾಲ್ ಅವರ ನಿವಾಸದಲ್ಲಿ ಶುಕ್ರವಾರ ಬೆಳಗ್ಗೆ ಒಂಭತ್ತು ಗಂಟೆಗೆ ಕಮಿಟಿಯ ಸಭೆ ಸೇರಿತು. ಮೊದಲನೆಯದಾಗಿ ಪ್ರಾಥಮಿಕ ಚುನಾವಣೆಯಲ್ಲಿ ಸ್ಪರ್ಧಿಸಿದ ಎಷ್ಟು ಅಭ್ಯರ್ಥಿಗಳಿಗೆ ಅಂತಿಮ ಚುನಾವಣೆಯಲ್ಲಿ ಸ್ಪರ್ಧಿಸುವ ಅಧಿಕಾರ ಇರಬೇಕು ಎನ್ನುವುದರ ಕುರಿತು ಚರ್ಚೆ ನಡೆಯಿತು.

ಕಮಿಟಿಯಲ್ಲಿನ ಹಿಂದೂ ಸದಸ್ಯರು ಪ್ರಾಥಮಿಕ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳ ಪೈಕಿ ಕನಿಷ್ಠ ಆರು-ಏಳು ಅಭ್ಯರ್ಥಿಗಳಿಗಾದರೂ ಅಂತಿಮ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಎಂದು ಆಗ್ರಹಿಸಿದ್ದರೆ ಡಾ. ಅಂಬೇಡ್ಕರ್ ಅವರು ಮೂರಕ್ಕಿಂತ ಜಾಸ್ತಿ ಇರಕೂಡದು ಎಂದು ಹೇಳಿದರು. ಅಂತಿಮವಾಗಿ ಸಾಕಷ್ಟು ವಾದ ವಿವಾದ, ಚರ್ಚೆಯ ಬಳಿಕ ಉಭಯ ಪಕ್ಷಗಳು ನಾಲ್ಕು ಸ್ಥಾನಗಳಿಗೆ ಸಮ್ಮತಿ ನೀಡಿದ ನಂತರ ಈ ಪ್ರಶ್ನೆ ಪರಿಹಾರವಾಯಿತು. ಇದಾದ ಬಳಿಕ ಕೇಂದ್ರ ಸಮಿತಿಯಲ್ಲಿ ಅಸ್ಪೃಶ್ಯರ ಪ್ರತಿನಿಧಿಗಳ ಸಂಖ್ಯೆ ಎಷ್ಟಿರಬೇಕು ಎಂಬ ಪ್ರಶ್ನೆ ಕೈಗೆತ್ತಿಕೊಳ್ಳಲಾಯಿತು. ಇದಕ್ಕೂ ಮುನ್ನ ಜನಸಂಖ್ಯೆಯ ಪ್ರಮಾಣ ಎಂದರೆ ಎಲ್ಲ ಜನಸಂಖ್ಯೆಯೋ ಅಥವಾ ಕೇವಲ ಹಿಂದೂಗಳ ಸಂಖ್ಯೆಯೋ ಎನ್ನುವುದರ ಕುರಿತು ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ಅಸ್ಪೃಶ್ಯರಿಗೆ ಪ್ರಾತಿನಿಧಿತ್ವದ ಸ್ಥಾನಗಳನ್ನು ಹಂಚಿಕೆ ಮಾಡುವ ವೇಳೆ ಹಿಂದೂಗಳ ಜನಸಂಖ್ಯೆ ಮತ್ತು ಅವರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಪ್ರಾತಿನಿಧಿತ್ವದ ಸ್ಥಾನಗಳನ್ನು ಹಂಚಿಕೆ ಮಾಡಬೇಕು ಎನ್ನುವುದು ಕಮಿಟಿಯಲ್ಲಿನ ಹಿಂದೂ ಸದಸ್ಯರ ಆಗ್ರಹವಾಗಿತ್ತು. ಒಟ್ಟು ಜನಸಂಖ್ಯೆಯ ಪ್ರಮಾಣದಲ್ಲಿನ ಅಸ್ಪೃಶ್ಯರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಪ್ರಾತಿನಿಧಿತ್ವ ಲಭಿಸಬೇಕು ಎನ್ನುವುದು ಡಾ. ಅಂಬೇಡ್ಕರ್ ವಾದವಾಗಿತ್ತು. ರಾಜಾ- ಮುಂಜೆ ಒಪ್ಪಂದದಲ್ಲಿ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಅಸ್ಪೃಶ್ಯರಿಗೆ ಪ್ರಾತಿನಿಧಿತ್ವ ನೀಡುವುದಕ್ಕೆ ಒಪ್ಪಿಗೆ ಸೂಚಿಸಲಾಗಿತ್ತು. ಅದರ ಪ್ರಕಾರ ನೀವು ಈಗ ನಿಮ್ಮ ವಚನ ಪಾಲಿಸಬೇಕಾಗುತ್ತದೆ. ರಾಜಾ-ಮುಂಜೆ ಒಪ್ಪಂದದಡಿ ಜನಸಂಖ್ಯೆ ಪ್ರಮಾಣಕ್ಕೆ ಅನುಗುಣವಾಗಿ ಅಸ್ಪೃಶ್ಯರಿಗೆ ಇನ್ನೂ ಅಧಿಕ ಪ್ರಾತಿನಿಧಿತ್ವ ಲಭಿಸುತ್ತದೆ ಎಂದು ನಮ್ಮ ಜನರಲ್ಲಿ ತಪ್ಪು ತಿಳುವಳಿಕೆ ಮೂಡಿಸಿ ನಮ್ಮಲ್ಲಿನ ಕೆಲವು ಜನರನ್ನು ನೀವು ಸಂಯುಕ್ತ ಮತಕ್ಷೇತ್ರಗಳ ಪರವಾಗಿ ತಿರುಗಿಸಿಕೊಂಡಿದ್ದೀರಿ. ಈಗ ನೀವು ನೀಡಿರುವ ವಚನವನ್ನು ಪಾಲಿಸಲೇಬೇಕಾದ ಕರ್ತವ್ಯ ಎದುರಾಗಿದೆ ಎಂಬ ವಾದವನ್ನು ಡಾ. ಅಂಬೇಡ್ಕರ್ ಮಂಡಿಸಿದರು. ಡಾ. ಅಂಬೇಡ್ಕರ್ ಅವರು ತಮ್ಮ ವಿಷಯ ಮಂಡಿಸಿದ ಬಳಿಕ ರಾಜಾ- ಮುಂಜೆ ಒಪ್ಪಂದದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧಿತ್ವ ನೀಡುವುದು ತೀರ್ಮಾನವಾಗಿರುವುದು ನಿಜ.

ಆದರೆ ಅದರಲ್ಲಿ ಜನಸಂಖ್ಯೆಯ ಪ್ರಮಾಣ ಎಂದರೆ ಕೇವಲ ಹಿಂದೂ ಜನಸಂಖ್ಯೆ ವಿನಃ ಒಟ್ಟು ಜನಸಂಖ್ಯೆಯಲ್ಲ ಎಂದು ಡಾ. ಅಂಬೇಡ್ಕರ್ ಅವರಿಗೆ ಮಾಹಿತಿ ನೀಡಲಾಯಿತು. ಸಭೆಯಲ್ಲಿ ಡಾ. ಮುಂಜೆ ಇರಲಿಲ್ಲ. ರಾವ್‌ಬಹಾದ್ದೂರ್ ರಾಜಾ ಅವರು ಸಭೆಗೆ ಬಂದಿರಲಿಲ್ಲ. ಹೀಗಾಗಿ ಒಪ್ಪಂದದ ಅರ್ಥವನ್ನು ಇಬ್ಬರೂ ಯಾವ ರೀತಿ ಮಾಡಿದ್ದಾರೆ ಎಂದು ನಿಶ್ಚಿತವಾಗಿ ಹೇಳಲು ಸಾಧ್ಯವಿರಲಿಲ್ಲ. ಆದಾಗ್ಯೂ ಕೂಡ ಶ್ರೀ. ರಾಜಾ ಅವರು ಪದೇ ಪದೇ ಹೊರಡಿಸಿದ ಜನಸಂಖ್ಯೆಯ ಕೋಷ್ಟಕವನ್ನು ಆಧಾರವಾಗಿರಿಸಿಕೊಂಡು ಹೇಳಬೇಕೆಂದರೆ ಒಟ್ಟು ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಪ್ರಾತಿನಿಧಿತ್ವ ಸಿಗಬೇಕು ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ ಎಂದು ಡಾ. ಅಂಬೇಡ್ಕರ್ ಹೇಳಿದರು. ಇದಕ್ಕೆ ಉತ್ತರವಾಗಿ ಕೆಲವು ದಿನಗಳ ಹಿಂದೆಯಷ್ಟೇ ಶ್ರೀ. ರಾಜಾ ಅವರೊಂದಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಮಾತುಕತೆ ವೇಳೆ ಡಾ. ಮುಂಜೆ ಅವರೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಜನಸಂಖ್ಯೆ ಪ್ರಮಾಣ ಎಂದರೆ ಹಿಂದೂಗಳ ಪ್ರಮಾಣ ಎಂದು ಅರ್ಥೈಸಲಾಗಿತ್ತು ಎಂದು ಕಮಿಟಿಯಲ್ಲಿ ಹೇಳಲಾಯಿತು. ರಾವ್‌ಬಹಾದ್ದೂರ್ ರಾಜಾ ಮತ್ತು ಅವರ ಪಕ್ಷದವರು ಯಾವ ಮಟ್ಟಿಗೆ ಪರಾಧೀನರಾಗಿದ್ದರು ಎನ್ನುವುದು ಈ ಒಂದು ಸಂಗತಿಯಿಂದ ವೇದ್ಯವಾಗುತ್ತದೆ. ಹಿಂದೂಗಳೊಂದಿಗೆ ಕೈಜೋಡಿಸುವುದಕ್ಕಾಗಿ ಅಸ್ಪೃಶ್ಯರ ರಾಜಕೀಯ ಹಕ್ಕುಗಳಿಗೆ ತಿಲಾಂಜಲಿ ಇರಿಸಿದರೂ ಸರಿ ಎನ್ನುವಂತಹ ಭಾವನೆಯಿಂದ ಉತ್ತೇಜಿತರಾಗಿದ್ದರು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಜನಸಂಖ್ಯೆ ಪ್ರಮಾಣಕ್ಕೆ ಸಂಬಂಧಿಸಿದಂತೆ ರಾಜಾ ಅವರು ನೀಡುತ್ತಿರುವ ಸಮರ್ಥನೆ ಮೋಸದ್ದು ಎನ್ನುವುದರಲ್ಲಿ ಸಂಶಯವೇ ಇರಲಿಲ್ಲ. ಅಂತಿಮವಾಗಿ ಇದು ಮೋಸ ಎನ್ನುವುದನ್ನು ಸಿದ್ಧಪಡಿಸುವುದಕ್ಕೆ ಅಂಬೇಡ್ಕರ್ ಅವರಿಗೆ ಬಹಳ ಸಮಯ ಬೇಕಾಗಲಿಲ್ಲ. ಅಂತಿಮವಾಗಿ ಸಾಮಾನ್ಯ ಸ್ಥಾನಗಳ ಪೈಕಿ ಶೇ. ೧೮ ಸ್ಥಾನಗಳನ್ನು ಕೇಂದ್ರ ಕಾನೂನು ಸಮಿತಿಯಲ್ಲಿ ಮೀಸಲು ಇಡಲಾಗುವುದು ಎಂದು ತೀರ್ಮಾನಿಸಿ ಸಮಸ್ಯೆ ಪರಿಹರಿಸಲಾಯಿತು. ಇದಾದ ಬಳಿಕ ಅಸ್ಪೃಶ್ಯರ ಸಂಯುಕ್ತ ಮತಕ್ಷೇತ್ರಗಳು ಮತ್ತು ಮೀಸಲು ಸ್ಥಾನಗಳನ್ನು ಎಷ್ಟು ಅವಧಿಯವರೆಗೆ ಇಡುವುದು ಮತ್ತು ಅವುಗಳನ್ನು ಯಾವ ಷರತ್ತಿನ ಮೇಲೆ ರದ್ದುಗೊಳಿಸುವ ಬಗ್ಗೆ ಚರ್ಚೆ ಕೈಗೆತ್ತಿಕೊಳ್ಳಲಾಯಿತು. ಈ ಪ್ರಶ್ನೆಯ ಕುರಿತು ಅನಪೇಕ್ಷಿತ ರೀತಿಯಲ್ಲಿ ಗಲಾಟೆ ಆರಂಭವಾಯಿತು. ಹಿಂದೂ ನಾಯಕರು ಈ ಸೌಲಭ್ಯ ಹತ್ತು ವರ್ಷಗಳ ತಾನೇ ತಾನಾಗಿ ಇಲ್ಲವಾಗಬೇಕು ಎಂದು ಹೇಳಿದರೆ, ಡಾ. ಅಂಬೇಡ್ಕರ್ ಮಾತ್ರ ಈ ವ್ಯವಸ್ಥೆ ಕನಿಷ್ಠ ೧೫ ವರ್ಷ ಇರಬೇಕು ಮತ್ತು ಈ ಅವಧಿ ಪೂರ್ಣಗೊಂಡ ಬಳಿಕ ಅದನ್ನು ರದ್ದುಗೊಳಿಸಬೇಕಿದ್ದರೆ ಅಸ್ಪೃಶ್ಯ ವರ್ಗದ ಮತದಾರರ ಮತ ಪಡೆದು ಅವರು ಬಹುಮತದಿಂದ ನಮಗೆ ಬೇಡ ಎಂದು ಹೇಳಿದರೆ ಮಾತ್ರ ಮೀಸಲಾತಿ ರದ್ದಾಗಬೇಕು ಇಲ್ಲದಿದ್ದರೆ ಮೊದಲಿನಂತೆ ಮುಂದುವರಿಸಬೇಕು ಎಂದು ಹೇಳಿದರು. ಮಧ್ಯಾಹ್ನ ೨ರಿಂದ ರಾತ್ರಿ ೯–೩೦ರವರೆಗೆ ಬಿರುಸಿನಿಂದ ಯುದ್ಧಕ್ಕೆ ನಿಂತವರಂತೆ ನಡೆದ ವಾದ ವಿವಾದದಲ್ಲಿ ಉಭಯ ಪಕ್ಷಗಳು ಹಿಂದೆ ಸರಿಯುವುದಕ್ಕೆ ಸಿದ್ಧವಾಗದ ಕಾರಣ ಎಲ್ಲಿ ಸಂಧಾನ ಮುರಿದುಬೀಳುತ್ತದೋ ಎಂಬ ಆತಂಕ ನಿರ್ಮಾಣವಾಗಿತ್ತು. ಕೊನೆಗೆ ಈ ಸಮಸ್ಯೆಯ ಪರಿಹಾರಕ್ಕೆ ಮಹಾತ್ಮ ಗಾಂಧೀಜಿ ಅವರ ಎದುರು ಪ್ರಸ್ತಾಪಿಸುವುದು ಮತ್ತು ಅವರು ಏನು ಹೇಳುತ್ತಾರೋ ಅದನ್ನು ಕೇಳುವುದು ಎಂದು ತೀರ್ಮಾನವಾಯಿತು. ರಾತ್ರಿ ೯–೩೦ರ ಸುಮಾರಿಗೆ ಎಲ್ಲರೂ ಯರವಾಡ ಕೇಂದ್ರ ಕಾರಾಗೃಹಕ್ಕೆ ಆಗಮಿಸಿದರು. ಮೊದಲು ಡಾ. ಅಂಬೇಡ್ಕರ್ ಅವರು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಹಿಂದೂಗಳ ವತಿಯಿಂದ ಪಂಡಿತ ಮದನ್ ಮೋಹನ್ ಮಾಳವೀಯ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಎರಡೂ ಪಕ್ಷಗಳ ಹೇಳಿಕೆಯನ್ನು ಪರಾಮರ್ಶಿಸಿದ ಮಹಾತ್ಮ ಗಾಂಧೀಜಿ, ಡಾ. ಅಂಬೇಡ್ಕರ್ ಪರವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಗಾಂಧೀಜಿ ಅಭಿಪ್ರಾಯದ ಪರಿಣಾಮ

ವಾದ ವಿವಾದದ ಒಂದು ವಿಷಯ ಪರಿಹಾರಗೊಂಡಿತು. ರಾತ್ರಿ ಸುಮಾರು ೧೧-೩೦ ಹೊತ್ತಿಗೆ ಮತ್ತೇ ಶಿವಲಾಲ್ ಮೋತಿಲಾಲ್ ಅವರ ನಿವಾಸಕ್ಕೆ ಆಗಮಿಸಿ ಇನ್ನುಳಿದ ಪ್ರಶ್ನೆಗಳ ಬಗ್ಗೆ ಮರುದಿನ ವಿಚಾರ ಮಾಡುವುದು ಎಂದು ತೀರ್ಮಾನಿಸಿ ಸಭೆಯ ಕಾರ್ಯಕಲಾಪಗಳನ್ನು ರಾತ್ರಿ ಸುಮಾರು ೧೨-೩೦ರ ಹೊತ್ತಿಗೆ ಬರ್ಖಾಸ್ತುಗೊಳಿಸಲಾಯಿತು.

### ಶನಿವಾರ ಸೆಪ್ಟಂಬರ್ ೨೪, ೧೯೩೨

ಈಗಾಗಲೇ ತೀರ್ಮಾನಿಸಿದಂತೆ ಎರಡನೇ ದಿನ ಮುಂಜಾನೆ ೮-೩೦ಕ್ಕೆ ಮತ್ತೆ ಸಭೆಯ ಕಾರ್ಯಕಲಾಪ ಆರಂಭವಾದವು. ವಾದ ವಿವಾದಕ್ಕೆ ಎಡೆ ಮಾಡಿಕೊಡುವಂತಹ ಎಲ್ಲ ಪ್ರಶ್ನೆಗಳು ಪರಿಹಾರವಾಗಿದ್ದ ಕಾರಣ ಸಭೆ ಶೀಘ್ರ ಮುಕ್ತಾಯಗೊಂಡು ಒಪ್ಪಂದ ಏರ್ಪಡುತ್ತದೆ ಎಂದು ಎಲ್ಲರೂ ಭಾವಿಸಿದ್ದರು.

ಆದರೆ ಸಭೆ ಆರಂಭವಾಗುತ್ತಿದ್ದಂತೆಯೇ ವಾದ ವಿವಾದ ತೀವ್ರ ಸ್ವರೂಪ ಪಡೆಯಲು ಆರಂಭಿಸಿತು. ಹಿಂದಿನ ಎಲ್ಲ ಪ್ರಶ್ನೆಗಳು ಮತ್ತೇ ಜೀವ ಪಡೆದುಕೊಳ್ಳುವಂತಾಯಿತು. ಒಂದು ವೇಳೆ ಅಸ್ಪೃಶ್ಯರು ಮೀಸಲಾತಿಯ ಈ ಸೌಲಭ್ಯ ಹಿಂಪಡೆಯುವುದರ ವಿರುದ್ಧ ತೀರ್ಪು ನೀಡಿದರೆ ಮುಂದಿನ ಐದು ವರ್ಷಗಳವರೆಗೆ ಈ ಸೌಲಭ್ಯ ಮುಂದುವರಿಸಬೇಕು ಮತ್ತು ಮುಂದಿನ ಐದು ವರ್ಷ ಇಲ್ಲವೇ ಹತ್ತು ವರ್ಷಗಳ ನಂತರ ಈ ಸೌಲಭ್ಯ ತನ್ನಿಂತಾನೇ ರದ್ದು ಆಗಬೇಕು ಎಂದು ಹಿಂದೂ ನಾಯಕರು ಹಠ ಹಿಡಿದರು. ಇದಕ್ಕೆ ಡಾ. ಅಂಬೇಡ್ಕರ್ ಅವರು ಮೊದಲು ಹತ್ತು ವರ್ಷಗಳ ಬಳಿಕ ಸ್ವಯಂ ನಿರ್ಣಯದ ನಿರ್ಧಾರ ತೆಗೆದುಕೊಳ್ಳೋಣವೆಂದರು. ಐದು ವರ್ಷಗಳ ಬಳಿಕ ಸ್ವಯಂ ನಿರ್ಣಯದ ವಿಷಯಕ್ಕೆ ಒಪ್ಪಿಗೆ ಸೂಚಿಸಲು ಅವರು ನಿರಾಕರಿಸಿದರು. ಅಲ್ಲದೇ ಕೆಲವು ವರ್ಷಗಳ ಬಳಿಕ ಅಸ್ಪೃಶ್ಯರ ಸ್ವಯಂ ನಿರ್ಣಯದ ಹೊರತಾಗಿಯೂ ಸಹಜವಾಗಿ ರದ್ದುಗೊಳಿಸುವ ವಿಧಾನಕ್ಕೂ ಅವರು ಪ್ರಬಲ ಪ್ರತಿರೋಧ ವ್ಯಕ್ತಪಡಿಸಿದರು. ಯಾವಾಗ ಬೇಕಾದರೂ ರದ್ದು ಮಾಡುವುದು ಇದ್ದಲ್ಲಿ ಅಸ್ಪೃಶ್ಯ ಜನರ ಸ್ವಯಂ ನಿರ್ಣಯ ಗಣನೆಗೆ ತೆಗೆದುಕೊಳ್ಳದೇ ಅದನ್ನು ತೆಗೆದುಹಾಕಲಾಗದು. ಇಲ್ಲಿ ನೋಡಿದರೆ ಎಲ್ಲರ ಬುದ್ಧಿಗೂ ಮಂಕು ಬಡಿದಿರುವುದರಿಂದ ಸಾಮರಸ್ಯ ಮೂಡುವುದು ಸಾಧ್ಯವಿಲ್ಲ ಎಂದು ಎಲ್ಲರಿಗೂ ಭಾಸವಾಗುತ್ತಿದೆ. ಮಹಾತ್ಮ ಗಾಂಧೀಜಿ ಅವರನ್ನು ಇನ್ನೊಂದು ಬಾರಿ ಭೇಟಿಯಾಗಿ ಅವರ ಅನಿಸಿಕೆ ಏನು ಎಂದು ತಿಳಿಯುವುದು ನನ್ನ ಇಚ್ಛೆಯಾಗಿದೆ ಎಂದು ಅಂಬೇಡ್ಕರ್ ಹೇಳಿದರು. ಅಂಬೇಡ್ಕರ್ ಇಚ್ಛೆಯಂತೆ ಬಿರ್ಲಾ, ರಾಜಗೋಪಾಲಾಚಾರಿ ಮತ್ತು ಡಾ. ಅಂಬೇಡ್ಕರ್ ಅವರು ರಾತ್ರಿ ಸುಮಾರು ಹನ್ನೊಂದು ಗಂಟೆಗೆ ಯರವಾಡಾದಲ್ಲಿನ ಕಾರಾಗೃಹಕ್ಕೆ ಗಾಂಧೀಜಿ ಅವರನ್ನು ಭೇಟಿಯಾಗುವುದಕ್ಕೆ ತೆರಳಿದರು. ಡಾ. ಅಂಬೇಡ್ಕರ್ ಅವರು ಗಾಂಧೀಜಿ ಎದುರು ತಮ್ಮ ಅಭಿಪ್ರಾಯ ಮಂಡಿಸಿದ ಬಳಿಕ ಗಾಂಧೀಜಿ, ಅಸ್ಪೃಶ್ಯರಿಗೆ ನೀಡಿರುವ ರಾಜಕೀಯ ಸೌಲಭ್ಯವನ್ನು ಅವರ ತೀರ್ಮಾನವಿಲ್ಲದೇ ಕಿತ್ತುಕೊಳ್ಳಬಾರದು ಎನ್ನುವ ನಿಮ್ಮ ಬೇಡಿಕೆಗೆ ನನ್ನ ಪೂರ್ಣ ಸಹಮತ ಇದೆ. ಆದರೆ ಮೊದಲನೇ ಸ್ವಯಂ ನಿರ್ಣಯವನ್ನು ಐದು ವರ್ಷ ನಂತರ ತೆಗೆದುಕೊಳ್ಳಿ ಎಂದು ಮಾತ್ರ ತಮಗೆ ನಾನು ಹೇಳಬಲ್ಲೆ. ನನ್ನ ಜೀವ ನಿಮ್ಮ ಕೈಯಲ್ಲಿದೆ. ಎಲ್ಲ ವಿಚಾರಗಳಲ್ಲಿ ನಿಮ್ಮ ಹೇಳಿಕೆಗಳಿಗೆ ನಾನು ಒಪ್ಪಿಗೆ ನೀಡಿದ್ದೇನೆ. ಈ ಒಂದು ವಿಚಾರದಲ್ಲಿ ನನ್ನ ಮಾತು ಕೇಳುವುದಿಲ್ಲವೇ? ಎಂದು ಕೇಳಿದರು. ಇದಾದ ಬಳಿಕ ಡಾ. ಅಂಬೇಡ್ಕರ್ ಸೇರಿದಂತೆ ಇತರರು ಮತ್ತೆ ಶಿವಲಾಲ್ ಮೋತಿಲಾಲ್ ಅವರ ನಿವಾಸಕ್ಕೆ ಆಗಮಿಸಿ ನಡೆದ ಸಂಗತಿಯನ್ನು ಕಮಿಟಿಯ ಸದಸ್ಯರಿಗೆ ವಿವರಿಸಿದರು. ಕೊನೆಗೆ ಡಾ. ಅಂಬೇಡ್ಕರ್ ಅವರು ಮಹಾತ್ಮ ಗಾಂಧೀಜಿ ಅವರ ಅನಿಸಿಕೆಯ ಬಗ್ಗೆ ವಿಚಾರ ಮಾಡಿದ್ದೇನೆ. ಹತ್ತು ವರ್ಷಕ್ಕಿಂತ ಮೊದಲೇ

ಸ್ವಯಂ ನಿರ್ಣಯ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿಲ್ಲ ಎಂದು ಹೇಳಿದ ಪರಿಣಾಮ ಮತ್ತೆ ಸಂಧಾನ ಮಾತುಕತೆಯಲ್ಲಿ ವಾದಕ್ಕೆ ವಾದ ಬೆಳೆದು ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಯಿತು. ಸುಮಾರು ಒಂದು–ಒಂದೂವರೆ ಗಂಟೆ ವಾದ–ವಿವಾದ, ಚರ್ಚೆ ನಡೆದು ಕೊನೆಗೆ ನೀಡಿರುವ ಸೌಲಭ್ಯ ಯಾವಾಗ ರದ್ದು ಆಗಬೇಕು ಎನ್ನುವುದಕ್ಕೆ ಕಾಲಾವಧಿ ಹಾಕುವುದು ಬೇಡ. ಉಭಯ ಪಕ್ಷಗಳ ಸಮ್ಮತಿಯ ಮೇಲೆ ಪರ್ಯಾಯ ಯೋಜನೆ ಸಿದ್ಧವಾಗುವವರೆಗೆ ನೀಡಿರುವ ಸೌಲಭ್ಯ ಆತಂಕವಿಲ್ಲದೇ ಮುಂದುವರಿಯಬೇಕು ಎಂದು ತೀರ್ಮಾನಿಸಿ ಕೊನೆಗೆ ಎರಡೂ ಪಕ್ಷಗಳ ಒಪ್ಪಿಗೆಯಿಂದ ವಾದ ಅಂತ್ಯಗೊಂಡಿತು. ಇದರ ನಂತರ ಪ್ರಾಂತೀಯ ಕಾನೂನು ಮಂಡಳಿಯಲ್ಲಿ ಅಸ್ಪೃಶ್ಯರಿಗೆ ಎಷ್ಟು ಸ್ಥಾನಗಳನ್ನು ನೀಡಬೇಕು ಎನ್ನುವುದು ಮಾತ್ರ ಬಾಕಿ ಉಳಿದಿತ್ತು. ಡಾ. ಅಂಬೇಡ್ಕರ್ ಅವರು ತಮ್ಮ ಹೊಸ ಯೋಜನೆಯಲ್ಲಿ ೧೯೭ ಸ್ಥಾನಗಳನ್ನು ಕೇಳಿದ್ದರು. ೧೨೩ ಸ್ಥಾನಗಳನ್ನು ನೀಡುವುದಕ್ಕೆ ಹಿಂದೂ ಜನರು ಬದ್ಧರಾಗಿದ್ದರು. ಕೊನೆಗೆ ಕೊಡು ತೆಗೆದುಕೊಳ್ಳುವ ಚರ್ಚೆಯಾಗಿ ೧೪೮ ಸ್ಥಾನಗಳಿಗೆ ಎರಡೂ ಪಕ್ಷಗಳು ಸಮ್ಮತಿಸಿದವು.

ಡಾ. ಅಂಬೇಡ್ಕರ್ ಅವರು ತಮ್ಮ ಯೋಜನೆಯ ಎರಡನೇ ಭಾಗದಲ್ಲಿ ಇರಿಸಿದ್ದ ಬೇಡಿಕೆಗಳ ಕುರಿತು ಚರ್ಚೆ ಆರಂಭವಾಯಿತು. ಯಾವ ನಿರ್ದಿಷ್ಟ ಭಾಷೆಯಲ್ಲಿ ಬರೆಯಲಾಗಿದೆಯೋ ಆ ನಿರ್ದಿಷ್ಟ ಭಾಷೆಗೆ ಇಂದು ನಮಗೆ ಒಪ್ಪಿಗೆ ಸೂಚಿಸಲು ಸಾಧ್ಯವಿಲ್ಲ. ಆದರೆ ಅದರಲ್ಲಿರುವ ಬೇಡಿಕೆಯಲ್ಲಿ ಮೂಲ ತತ್ವಗಳಿಗೆ ನಮ್ಮ ಒಪ್ಪಿಗೆಯನ್ನು ಸಾಬೀತುಪಡಿಸುವುದಕ್ಕಾಗಿ ಮಸೂದೆ ಸಿದ್ಧಪಡಿಸಿ ಅದನ್ನು ಒಪ್ಪಂದದಲ್ಲಿ ಸೇರಿಸುವುದಕ್ಕೆ ನಾವು ಸಿದ್ಧವಾಗಿದ್ದೇವೆ ಎಂದು ಹಿಂದೂ ನಾಯಕರ ಪರವಾಗಿ ಸ್ಪಷ್ಟಪಡಿಸಲಾಯಿತು. ಡಾ. ಅಂಬೇಡ್ಕರ್ ಕೂಡ ಸದ್ಯದ ಮಟ್ಟಿಗೆ ನಾವು ಇಷ್ಟಕ್ಕೆ ತೃಪ್ತರು ಎಂದು ಹೇಳಿದ್ದರಿಂದ ಈ ಪ್ರಶ್ನೆ ಕೂಡ ಪರಿಹಾರವಾಯಿತು. ಇಷ್ಟೆಲ್ಲ ಆಗುವ ಹೊತ್ತಿಗೆ ಮಧ್ಯಾಹ್ನ ಎರಡು ಗಂಟೆಯಾದ ಮೇಲೆ ಸದಸ್ಯರು ಒಪ್ಪಂದ ಮಸೂದೆ ಪತ್ರ ಸಿದ್ಧಪಡಿಸುವುದಕ್ಕೆ ಕುಳಿತು ನಾಲ್ಕು ಗಂಟೆಯ ಹೊತ್ತಿಗೆ ಮಸೂದೆ ಪತ್ರ ಸಿದ್ಧವಾಯಿತು.

ಇದಾದ ಮೇಲೆ ಒಪ್ಪಂದ ಪತ್ರದ ಮೇಲೆ ಯಾರು ಯಾರು ಸಹಿ ಮಾಡಬೇಕು ಎನ್ನುವುದರ ಕುರಿತು ಚರ್ಚೆ ಶುರುವಾಗಿ ಮದ್ರಾಸ್‌ನಿಂದ ಆಗಮಿಸಿದ್ದ ಎಲ್ಲ ಅಸ್ಪೃಶ್ಯ ನಾಯಕರು ರಾವ್‌ಬಹಾದ್ದೂರ್ ರಾಜಾ ಮತ್ತವರ ಶಿಷ್ಯರು ಒಪ್ಪಂದಕ್ಕೆ ಸಹಿ ಮಾಡಿದರೆ ನಾವು ಸಹಿ ಮಾಡುವುದಿಲ್ಲ ಎಂದು ಹಟ ಹಿಡಿದರು. ಅಲ್ಲದೇ, ರಾಜಾ ಸಹಿ ಮಾಡಿದ ಒಪ್ಪಂದಕ್ಕೆ ಡಾ. ಅಂಬೇಡ್ಕರ್ ಅವರು ಕೂಡ ಸಹಿ ಮಾಡುವುದಕ್ಕೆ ನಾವು ಅವಕಾಶ ಮಾಡಿಕೊಡುವುದಿಲ್ಲ ಎಂದು ವಾದಿಸಿದರು. ಇದರಿಂದಾಗಿ ಡಾ. ಅಂಬೇಡ್ಕರ್ ಮತ್ತವರ ಸಂಗಡಿಗರು ಸಹಿ ಮಾಡಿದ ಮೇಲೆ ಒಪ್ಪಂದ ಪತ್ರ ಸಿದ್ಧವಾಯಿತು. ಇದು ಎಲ್ಲ ನಡೆದ ಬಳಿಕ ಹಿಂದೂ ನಾಯಕರು ಡಾ. ಅಂಬೇಡ್ಕರ್ ಅವರಿಗೆ ರಾವ್‌ಬಹಾದ್ದೂರ್ ರಾಜಾ ಮತ್ತವರ ಸಂಗಡಿಗರು ಒಪ್ಪಂದ ಪತ್ರಕ್ಕೆ ಸಹಿ ಮಾಡುವುದಕ್ಕೆ ಏನಾದರೂ ಮಾಡಿ ಎಂದು ವಿನಂತಿಸಿಕೊಂಡರು. ಗತ್ಯಂತರವಿಲ್ಲದೇ ಎಲ್ಲರೂ ಸಹಿ ಮಾಡಿದ ಬಳಿಕ ಅಸ್ಪೃಶ್ಯ ವರ್ಗದ ಒಬ್ಬ ವ್ಯಕ್ತಿಯಾಗಿ ಅವರು ಸಹಿ ಮಾಡಲಿ. ಆದರೆ ಅವರು ಅಸ್ಪೃಶ್ಯ ವರ್ಗದ ಪಕ್ಷವೊಂದರ ನಾಯಕರಾಗಿ ಸಹಿ ಮಾಡುವಂತಿಲ್ಲ ಎಂದು ತೀರ್ಮಾನವಾಯಿತು. ತೀರ್ಮಾನಕ್ಕೆ ಅನುಗುಣವಾಗಿ ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿ ಬಂಗ್ಲೆಯಲ್ಲಿ ಠಿಕಾಣಿ ಹೂಡಿದ್ದ ರಾಜಾ–ಗವಯಿ ಸೇರಿದಂತೆ ಇತರರನ್ನು ಫೋನ್ ಮುಖಾಂತರ ಸಂಪರ್ಕಿಸಿ ಕರೆಸಿಕೊಂಡು ಎಲ್ಲರೂ ಸಹಿ ಮಾಡಿದ ಬಳಿಕ ಸಹಿ ಮಾಡುವುದಕ್ಕೆ ಪರವಾನಗಿ ನೀಡಲಾಯಿತು.

ಇಲ್ಲಿಯೂ ಎಲ್ಲರಿಗೂ ಅಚ್ಚರಿಯಾಗುವಂತೆ ಎಲ್ಲರಿಗಿಂತ ಅನಂತರ ಬಂದಿದ್ದರೂ ಮತ್ತು ಮೇಲಿನ

ಜಾಗದಲ್ಲಿ ಸ್ಥಳಾವಕಾಶ ಇಲ್ಲದಿದ್ದರೂ ಕೂಡ ರಾವ್‌ಬಹಾದ್ದೂರ್ ರಾಜಾ ಅವರು ಸಪ್ರು ಮತ್ತು ಬ್ಯಾ. ಜಯಕರ್ ಅವರು ಮಾಡಿದ ಸಹಿಯ ನಡುವೆ ತಮ್ಮ ಹಸ್ತಾಕ್ಷರ ಹಾಕುವ ಚಾಲಾಕಿತನ ತೋರಿಸಿಯೇ ಬಿಟ್ಟರು. ಎಲ್ಲರೂ ಸಹಿ ಮಾಡಿ ಒಪ್ಪಂದ ಪತ್ರ ಸಿದ್ಧಪಡಿಸಿದ ಬಳಿಕ ಪಂಡಿತ ಮದನ್ ಮೋಹನ್ ಮಾಳವೀಯ ಮತ್ತು ಅಂಬೇಡ್ಕರ್ ಅವರ ಹಸ್ತಾಕ್ಷರವಿರುವ ಒಪ್ಪಂದ ಏರ್ಪಟ್ಟ ತಂತಿ ಸಂದೇಶವನ್ನು ವಿದೇಶಾಂಗ ವ್ಯವಹಾರಗಳ ಪ್ರಧಾನ ಕಾರ್ಯದರ್ಶಿ, ವೈಸರಾಯ್‌ಗೆ ಕಳುಹಿಸಿ ಒಪ್ಪಂದಕ್ಕೆ ತಮ್ಮ ಒಪ್ಪಿಗೆ ಸೂಚಿಸಲಾಯಿತು. ಇಷ್ಟಾದ ಬಳಿಕ ಒಪ್ಪಂದದ ಅಸಲು ಪ್ರತಿಯ ನಕಲು ಪ್ರತಿಯನ್ನು ಮುಂಬೈ ಸರ್ಕಾರದ ಗೃಹ ಕಾರ್ಯದರ್ಶಿ ಶ್ರೀ. ಕ್ಲೀ ಅವರಿಗೆ ಡಾ. ಅಂಬೇಡ್ಕರ್, ಡಾ. ತೇಜಬಹಾದ್ದೂರ್ ಸಪ್ರು, ಬ್ಯಾ. ಜಯಕರ್ ಮತ್ತು ಚುನಿಲಾಲ್ ಮೇಥಾ ಅವರು ಸಂಜೆ ಏಳು ಗಂಟೆಯ ಹೊತ್ತಿಗೆ ಸಲ್ಲಿಸಿ ಸರ್ಕಾರಿ ನಿಯಮಾವಳಿಗೆ ಅನುಸಾರವಾಗಿ ಪ್ರಧಾನ ಮಂತ್ರಿ ಅವರಿಗೆ ಕಳುಹಿಸುವಂತೆ ವಿನಂತಿಸಿಕೊಂಡರು. ಅಲ್ಲಿಂದ ಎಲ್ಲರೂ ನೇರವಾಗಿ ಯರವಾಡಾ ಜೈಲಿನಲ್ಲಿದ್ದ ಮಹಾತ್ಮ ಗಾಂಧಿ ಅವರನ್ನು ಭೇಟಿಯಾಗಲು ತೆರಳಿದರು; ಗಾಂಧೀಜಿ ತಮ್ಮನ್ನು ಭೇಟಿಯಾದ ಸದಸ್ಯರನ್ನು ಉದ್ದೇಶಿಸಿ ಒಪ್ಪಂದಕ್ಕೆ ತಮ್ಮ ಸಮಾಧಾನ ವ್ಯಕ್ತಪಡಿಸಿದ್ದು ಅಲ್ಲದೇ ಮಾತುಕತೆ ಫಲಪ್ರದಗೊಳಿಸಿದ್ದಕ್ಕೆ ಡಾ. ಅಂಬೇಡ್ಕರ್ ಸೇರಿದಂತೆ ಇತರ ನಾಯಕರಿಗೆ ಅಭಿವಂದನೆ ಸಲ್ಲಿಸಿದರು.

ಹೊಸ ಒಪ್ಪಂದದಲ್ಲಿನ ಕಲಮುಗಳು

(೧) ಅಸ್ಪೃಸ್ಯರಿಗೆ ಸಾಮಾನ್ಯ ಮತಕ್ಷೇತ್ರದ ಎಲ್ಲ ಪ್ರಾಂತ್ಯಗಳನ್ನು ಸೇರಿಸಿ ಜನಸಂಖ್ಯೆ ಪ್ರಮಾಣದಲ್ಲಿ ೧೪೮ ಮೀಸಲು ಸ್ಥಾನವನ್ನು ಸೂಚಿಸಿದ ಪ್ರಮಾಣದಂತೆ ನೀಡಬೇಕು.

| ಪ್ರಾಂತ್ಯ | ಅಸ್ಪೃಶ್ಯರ ಸ್ಥಾನಗಳು | ಕಾನೂನು ಮಂಡಳಿಯಲ್ಲಿ ಹಿಂದೂಗಳ ಸ್ಥಾನ |
|---|---|---|
| (೧) | (೨) | (೩) |
| ಬಂಗಾಲ | ೩೦ | ೮೦ |
| ಸಿಂಧ್ ಸೇರಿ ಮುಂಬೈ | ೧೫ | ೧೦೮ |
| ಬಿಹಾರ್ ಮತ್ತು ಒರಿಸ್ಸಾ | ೧೮ | ೧೧೪ |
| ಮದ್ರಾಸ್... | ೩೦ | ೧೫೩ |
| ಪಂಜಾಬ್ | ೮ | ೪೩ |
| ಮಧ್ಯ ಪ್ರಾಂತ್ಯ ಮತ್ತು ವಹ್ರಾಡ್ | ೨೦ | ೮೮ |
| ಅಸ್ಸಾಂ | ೭ | ೫೭ |
| ಸಂಯುಕ್ತ ಪ್ರಾಂತ್ಯ | ೨೦ | ೧೪೪ |
| | **೧೪೮** | **೭೮೭** |

ಈ ರೀತಿಯಾಗಿ ರಾಜೀ ಸಮನ್ವಯದಿಂದ ಅಸ್ಪೃಶ್ಯರಿಗೆ ಹಿಂದೂಗಳ ಒಟ್ಟು ೭೮೭ ಸ್ಥಾನಗಳ ಪೈಕಿ ೧೪೮ ಸ್ಥಾನಗಳನ್ನು ಬಿಟ್ಟುಕೊಡಲಾಯಿತು.

(೨) ಈ ಎಲ್ಲ ಮೀಸಲು ಸ್ಥಾನಗಳಿಗಾಗಿ ಅಸ್ಪೃಶ್ಯ ಪ್ರತಿನಿಧಿಗಳ ಆಯ್ಕೆಗಾಗಿ ನಡೆಯುವ ಪ್ರಾಥಮಿಕ ಚುನಾವಣೆಯಲ್ಲಿ ಕೇವಲ ಅಸ್ಪೃಶ್ಯ ವರ್ಗದ ಮತದಾರರು ಪ್ರತಿಯೊಂದು ಸ್ಥಾನಕ್ಕೆ ೪

ಅಭ್ಯರ್ಥಿಗಳನ್ನು ಆಯ್ಕೆ ಮಾಡುವರು. ಈ ರೀತಿ ಆಯ್ಕೆಯಾದ ನಾಲ್ವರು ಅಭ್ಯರ್ಥಿಗಳ ಪ್ಯಾನೆಲ್‌ನಿಂದ ಆಯ್ಕೆಯಾಗುವ ಒಬ್ಬ ಪ್ರತಿನಿಧಿಯನ್ನು ಎಲ್ಲ ಸ್ಪೃಶ್ಯ ಮತ್ತು ಅಸ್ಪೃಶ್ಯ ಮತದಾರರು ಆಯ್ಕೆ ಮಾಡಬೇಕು. ಪ್ರಾಥಮಿಕ ಚುನಾವಣೆಯಲ್ಲಿ ಪ್ರತಿಯೊಬ್ಬ ಅಸ್ಪೃಶ್ಯನಿಗೆ ಮತಾಧಿಕಾರವಿರುತ್ತದೆ.

(೩) ಕೇಂದ್ರ ಕಾನೂನು ಮಂಡಳಿಯಲ್ಲಿನ ಅಸ್ಪೃಶ್ಯ ಪ್ರತಿನಿಧಿಗಳನ್ನು ಸಾಮಾನ್ಯ ಮತಕ್ಷೇತ್ರದಲ್ಲಿನ ಮೀಸಲು ಸ್ಥಾನಗಳಿಗೆ ಪ್ಯಾನೆಲ್ ಮುಖಾಂತರ ಆಯ್ಕೆ ಮಾಡಬೇಕು.

(೪) ಕೇಂದ್ರ ಕಾನೂನು ಮಂಡಳಿಯಲ್ಲಿ ಬ್ರಿಟಿಷ್ ಭಾರತದಲ್ಲಿನ ಅಸ್ಪೃಶ್ಯರಿಗೆ ಹಿಂದೂಗಳ ಒಟ್ಟು ಸ್ಥಾನಗಳ ಪೈಕಿ ಶೇ. ೧೮ರಷ್ಟನ್ನು ಮೀಸಲು ಇರಿಸಬೇಕು.

(೫) ಅಸ್ಪೃಶ್ಯ ಅಭ್ಯರ್ಥಿಗಳ ಪ್ಯಾನೆಲ್ ಪದ್ಧತಿ ಕೇವಲ ೧೦ ವರ್ಷ ಮಾತ್ರ ಜಾರಿಯಲ್ಲಿರಬೇಕು. ಆದರೆ ಅದಕ್ಕೂ ಮೊದಲು ಎಲ್ಲ ಜಾತಿಯವರು ಏಕಮತದಿಂದ ಅದನ್ನು ರದ್ದುಗೊಳಿಸುವಂತೆ ತೀರ್ಮಾನಿಸಿದರೆ ಆ ರೀತಿ ಮಾಡುವುದಕ್ಕೆ ಅಭ್ಯಂತರವಿಲ್ಲ.

(೬) ಮೀಸಲು ಕ್ಷೇತ್ರಗಳ ತತ್ವ ಎಲ್ಲ ಜಾತಿಗಳಲ್ಲಿ ಎಕಮತ ಮೂಡಿ ರದ್ದು ಆಗುವವರೆಗೆ ಜಾರಿಯಲ್ಲಿರಬೇಕು.

(೭) ಪ್ರಾಂತೀಯ ಮತ್ತು ಕೇಂದ್ರೀಯ ಕಾನೂನು ಮಂಡಳಿಯಲ್ಲಿ ಅಸ್ಪೃಶ್ಯರಿಗೆ ಮತಾಧಿಕಾರ ಲೋಥಿಯನ್ ಕಮಿಟಿಯ ಶಿಫಾರಸುಗಳಿಗೆ ಅನುಗುಣವಾಗಿ ಇರಬೇಕು.

(೮) ಸ್ಥಾನಿಕ ಸಂಸ್ಥಾನಗಳಲ್ಲಿ ಚುನಾವಣೆ ಇಲ್ಲವೇ ಸರ್ಕಾರಿ ನೌಕರಿಗಳ ನೇಮಕಾತಿಯ ವಿಚಾರದಲ್ಲಿ ಅಸ್ಪೃಶ್ಯರಿಗೆ ಸೂಕ್ತ ಪ್ರಮಾಣದಲ್ಲಿ ಜಾಗ ನೀಡಬೇಕು.

(೯) ಅಸ್ಪೃಶ್ಯರ ಶಿಕ್ಷಣಕ್ಕಾಗಿ ಪ್ರಾಂತೀಯ ಸರ್ಕಾರಗಳ ಬಜೆಟ್‌ನಲ್ಲಿ ಸೂಕ್ತ ಪ್ರಮಾಣದ ವ್ಯವಸ್ಥೆ ಮಾಡಬೇಕು.[೧]

ಈ ಒಪ್ಪಂದಕ್ಕೆ ಸೆಪ್ಟಂಬರ್ ೨೩ರಂದು ೨೩ ಮುಖಂಡರು ಸಹಿ ಹಾಕಿದರು ಮತ್ತು ದಿನಾಂಕ ೨೫ರಂದು ಮತ್ತೆ ೧೮ ಜನರು ಸಹಿ ಹಾಕಿದರು.

ಪುಣೆ ಒಪ್ಪಂದಕ್ಕೆ ಸಹಿ ಹಾಕಿದವರ ಹೆಸರುಗಳು

| | |
|---|---|
| (1) Madan Mohan Malaviya | (12) B.S. Kamat |
| (2) Tej Bahaddur Sapru | (13) G.K. Deodhar |
| (3) M.R. Jayakar | (14) A.V. Thakkar |
| (4) B.R. Ambedkar | (15) R.R. Bakale |
| (5) Shrinivasan | (16) P.G. Solanki |
| (6) M.C. Rajah | (17) P. Baloo |
| (7) C.V. Mehta | (18) Govind Malaviya |
| (೮) C. Rajagopalachari | (19) Devdas Gandhi |
| (9) Rajendra Prasad | (20) Biswas |
| (10) G.D. Birla | (21) P.N. Rajbhoj |
| (11) Rameshwar Das Birla | (22) Gavai G.A. |

23) Shankarlal Bankar

The following signatures were added in Bombay at the final sitting of the Hindu Conference on September 25:

(1) Lallubhai Samaldas
(2) Hansa Mehta
(3) K. Natarajan
(4) Kamakoti Natarajan
(5) Purushottamadas Thakurdas
(6) Mathradas Vasanji
(7) Walchand Hirachand
(8) H.N. Kunzru
(9) K.G. Limaye
(10) P. Kodandarao
(11) N.V. Gadgil
(12) Manu Subedar
(13) Avantikabai Gokhale
(14) K.J. Chitalia
(15) Radhakant Malaviya
(16) A.R. Bhatt
(17) Colam
(18) Pradhan

ಪ್ರಧಾನಿ ರಾಮ್ಸೆ ಮ್ಯಾಕ್ ಡೊನಾಲ್ಡ್ ಅವರ ಚಿಕ್ಕಮ್ಮ ಸಸೆಕ್ಸ್ ಪ್ರಾಂತ್ಯದ ಆರ್. ಡಿಗಾಲೆ ಎಂಬ ಊರಿನಲ್ಲಿ ತೀರಿಕೊಂಡಿದ್ದರಿಂದ ಪ್ರಧಾನಿ ಸೆ.೨೪ರಂದು ಆರ್.ಡಿಗಾಲೆ ಊರಿಗೆ ಹೊರಟು ನಿಂತಿದ್ದರು. ಆದರೆ ಭಾರತದಿಂದ ಬಂದಿದ್ದ ತಂತಿ ಸಂದೇಶವನ್ನು ನೋಡಿದ ಬಳಿಕ ಅಂತಿಮ ಯಾತ್ರೆಗೆ ಹೋಗುವುದನ್ನು ಬಿಟ್ಟು ಪುಣೆ ಒಪ್ಪಂದದ ಕುರಿತು ಎರಡು ದಿನ ಚರ್ಚಿಸಿ ಒಪ್ಪಂದಕ್ಕೆ ಸಚಿವ ಸಂಪುಟ ನೀಡಿದ ಒಪ್ಪಿಗೆಯನ್ನು ವೈಸ್‌ರಾಯ್‌ಗೆ ತಂತಿ ಸಂದೇಶದ ಮುಖಾಂತರ ಕಳುಹಿಸಿದರು. ದಿನಾಂಕ ೨೬ರಂದು ಭಾರತ ಸರ್ಕಾರದ ಗೃಹ ಕಾರ್ಯದರ್ಶಿ ಶ್ರೀ. ಹೇಗ್ ಅವರು ಕೇಂದ್ರ ಕಾನೂನು ಮಂಡಳಿಯಲ್ಲಿ ಭಾಷಣ ಮಾಡುತ್ತ ಒಪ್ಪಂದಕ್ಕೆ ಸರ್ಕಾರ ತನ್ನ ಒಪ್ಪಿಗೆ ಸೂಚಿಸಿದೆ ಎಂದು ಪ್ರಕಟಿಸಿದರು.

ಒಪ್ಪಂದಕ್ಕೆ ಸರ್ಕಾರದ ಸಮ್ಮತಿ ದೊರೆತ ಪತ್ರವನ್ನು ಸ್ವೀಕರಿಸಿದ ಬಳಿಕ ಇನ್ಸ್‌ಪೆಕ್ಟರ್ ಜನರಲ್ ಡಾಯಲ್ ಅವರಿಗೆ ನೀಡಲಾಯಿತು. ಅವರು ಗಾಂಧೀಜಿ ಸೇರಿದಂತೆ ಮತ್ತಿತರ ನಾಯಕರನ್ನು ಮಂಗಳವಾರ ದಿ. ೨೭ರಂದು ಬೆಳಗಿನ ಜಾವ ನಾಲ್ಕು ಗಂಟೆ ಹೊತ್ತಿಗೆ ಯರವಾಡಾ ಜೈಲಿನಲ್ಲಿ ಭೇಟಿಯಾದರು. ಗಾಂಧೀಜಿ ತಮ್ಮ ಉಪವಾಸ ಕೈಬಿಡಬೇಕು ಎನ್ನುವುದು ಎಲ್ಲರ ಸದಿಚ್ಛೆಯಾಗಿತ್ತು. ಆದರೆ ಗಾಂಧೀಜಿ ಮಾತ್ರ ಸರ್ಕಾರದ ಈ ಸಮ್ಮತಿಗೆ ಅಸ್ಪೃಶ್ಯ ನಾಯಕರು ತಮ್ಮ ಸಮ್ಮತಿ ಸೂಚಿಸಬೇಕು ಎಂದು ಹೇಳಿದರು. ಆದರೆ ಎಲ್ಲ ನಾಯಕರು ಆಗಲೇ ಮುಂಬೈಗೆ ಹೋಗಿದ್ದರಿಂದ ಮತ್ತೆ ಸಭೆ ಆಯೋಜಿಸುವುದಕ್ಕೆ ಇನ್ನೂ ಎರಡು ದಿನ ಆದರೂ ಬೇಕಾಗಬಹುದು. ಈ ಒಪ್ಪಂದಕ್ಕೆ ಈಗಾಗಲೇ ಅವರು ತಮ್ಮ ಒಪ್ಪಿಗೆ ಸೂಚಿಸಿಯಾಗಿದೆ ಹೀಗಾಗಿ ಮತ್ತೆ ಈ ವಿಷಯವನ್ನು ಚರ್ಚಿಸುವ ಅಗತ್ಯವಿಲ್ಲ ಎಂದು ಪಂಡಿತ ಹೃದಯನಾಥ ಕುಂಝುರು ವ್ಯಕ್ತಪಡಿಸಿದ ಅನಿಸಿಕೆಗೆ ರಾಜಗೋಪಾಲಾಚಾರಿ ಸಹಮತ ವ್ಯಕ್ತಪಡಿಸಿದ ಬಳಿಕವೇ ಗಾಂಧೀಜಿ ಉಪವಾಸ ಕೈಬಿಡುವುದಕ್ಕೆ ಸಿದ್ಧರಾದರು. ಕರ್ನಲ್ ಡಾಯಲ್ ಅವರು ಕಸ್ತೂರಬಾ ಗಾಂಧಿ ಅವರ ಕೈಯಿಂದ ಹಣ್ಣಿನ ರಸ ಕುಡಿದು ಉಪವಾಸ ಬಿಡಿ ಎಂದು ವಿನಂತಿಸಿಕೊಂಡರು. ಗಾಂಧೀಜಿ ಸುತ್ತ ನೀರು ಸಿಂಪಡಿಸಲಾಯಿತು. ರವೀಂದ್ರನಾಥ ಟಾಗೋರ್ ಅವರು ತಮ್ಮ ಗೀತಾಂಜಲಿಯಲ್ಲಿನ ಗೀತೆಯೊಂದನ್ನು ಹೇಳಿದರು. ಯಾರೋ

ಒಬ್ಬರು ಭಗವದ್ಗೀತೆಯಲ್ಲಿನ ಶ್ಲೋಕ ಪಠಿಸಿದರು. ಅಲ್ಲಿ ನೆರೆದಿದ್ದ ಸುಮಾರು ೨೦೦ಕ್ಕೂ ಹೆಚ್ಚು ಜನರು ಸಂತ ನರಸಿ ಮೆಹತಾ ಅವರ ಮತ್ತು ಗಾಂಧೀಜಿಯ ಅತ್ಯಂತ ಪ್ರೀತಿಯ ಭಜನ್ ವೈಷ್ಣವ ಜನ್ ತೋ ತೇನೆ ಕಹಿಯೇ ಹಾಡಿದರು. ಅಂತಿಮವಾಗಿ ಕಸ್ತೂರಬಾ ಅವರು ನೀಡಿದ ಕಿತ್ತಳೆ ಹಣ್ಣಿನ ರಸ ಸೇವಿಸುವ ಮೂಲಕ ಗಾಂಧೀಜಿ ತಮ್ಮ ಉಪವಾಸ ಸತ್ಯಾಗ್ರಹ ಅಂತ್ಯಗೊಳಿಸಿದರು.[೧]

---

೧. ಜನತಾ: ಅಕ್ಟೋಬರ್ ೧, ೧೯೩೨

## ೫೭.

# ಪುಣೆ ಒಪ್ಪಂದಕ್ಕೆ ಸ್ಪೃಶ್ಯ ಬಂಧುಗಳ ಬದ್ಧತೆ ಇರಲಿ

ಪುಣೆಯಲ್ಲಿ ಮಹಾತ್ಮ ಗಾಂಧಿ ಮತ್ತು ಅಂಬೇಡ್ಕರ್ ಮಧ್ಯೆ ಸಂಧಾನ ಏರ್ಪಟ್ಟು ಒಂದು ಹೊಸ ಒಪ್ಪಂದ ಆಯಿತು. ಎಲ್ಲ ಹಿಂದೂ ಅಸ್ಪೃಶ್ಯ ನಾಯಕರಿಗೆ ಒಪ್ಪಂದದಲ್ಲಿನ ಅಂಶಗಳು ಮೆಚ್ಚುಗೆಯಾದ ಕಾರಣ ಕಳೆದ ಶನಿವಾರ ಅವರೆಲ್ಲರೂ ಸಹಿ ಮಾಡಿ ತಮ್ಮ ಒಪ್ಪಿಗೆ ನೀಡಿದ್ದರು. ಈ ಒಪ್ಪಂದಕ್ಕೆ ಎಲ್ಲರ ಸಮ್ಮತಿ ದೊರೆತ ಬಳಿಕ ರವಿವಾರ ಸೆಪ್ಟಂಬರ್ ೨೫ರಂದು ಮುಂಬೈನ ಇಂಡಿಯನ್ ಮರ್ಚಂಟ್ಸ್ ಅಸೋಸಿಯೇಷನ್‌ನ ಹಾಲ್‌ನಲ್ಲಿ ಎಲ್ಲ ಹಿಂದೂ ನಾಯಕರು ಪಂಡಿತ ಮದನ್ ಮೋಹನ್ ಮಾಳವೀಯವರ ಅಧ್ಯಕ್ಷತೆಯಲ್ಲಿ ಮತ್ತೆ ಸಭೆ ಸೇರಿ ಒಪ್ಪಂದವನ್ನು ಸರ್ವಾನುಮತದಿಂದ ಅಂಗೀಕರಿಸಿದರು.

ಅಧ್ಯಕ್ಷತೆ ವಹಿಸಿದ್ದ ಪಂಡಿತ ಮದನ್ ಮೋಹನ್ ಮಾಳವೀಯ ಅವರು, ರಾಜೀ ಸಂಧಾನಕ್ಕಾಗಿ ಕಳಕಳಿಯಿಂದ ಪ್ರಯತ್ನಿಸಿದ ಎಲ್ಲ ನಾಯಕರಿಗೆ ಅಂತಃಕರಣದಿಂದ ಕೃತಜ್ಞತೆ ಸಲ್ಲಿಸಿದರು. ಅವರ ನೆರವಿಲ್ಲದೇ ಈ ರಾಜೀ ಸಂಧಾನ ಸಾಧ್ಯವಾಗುತ್ತಿರಲಿಲ್ಲವೆಂದೂ ಹೇಳಿದರು. ಒಪ್ಪಂದದಲ್ಲಿನ ನಿಬಂಧನೆಗಳ ಕುರಿತು ಮಾತನಾಡಿದ ಅವರು, ಅವುಗಳನ್ನು ಜಾರಿಗೆ ತಂದು ಒಪ್ಪಂದಕ್ಕೆ ಸ್ಪೃಶ್ಯ ಹಿಂದೂಗಳ ಬದ್ಧತೆ ಏನು ಎನ್ನುವುದನ್ನು ತೋರ್ಪಡಿಸಬೇಕಾಗಿದೆ ಎಂದು ಹೇಳಿದರು.

### ಇಪ್ಪತ್ತೈದು ಲಕ್ಷದ ನಿಧಿ

ಅಸ್ಪೃಶ್ಯತೆಯ ನಿರ್ಮೂಲನೆಗೆ ಮುಖ್ಯವಾಗಿ ಹಣದ ಅಗತ್ಯವಿದ್ದು, ಇಡೀ ದೇಶಾದ್ಯಂತ ಜಾಗೃತಿ ಮೂಡಿಸುವ ಕೆಲಸ ಹಣಬಲವಿಲ್ಲದೇ ವ್ಯರ್ಥವಾಗುತ್ತದೆ. ಈ ಕೆಲಸಕ್ಕಾಗಿ ರಚಿಸಲ್ಪಡುವ ಒಂದು ಚಿಕ್ಕ ಸಮಿತಿಯ ಮುಖಾಂತರ ಕನಿಷ್ಠ ೨೫ ಲಕ್ಷ ರೂಪಾಯಿಗಳ ನಿಧಿ ಸಂಗ್ರಹಿಸಿ ಮುಂದಿನ ಮೂರು–ನಾಲ್ಕು ತಿಂಗಳು ಅಸ್ಪೃಶ್ಯತೆ ನಿರ್ಮೂಲನೆಯ ಕೆಲಸ ಕೈಗೆತ್ತಿಕೊಂಡು ಹಿಂದೂ ಧರ್ಮದ ಶ್ರೇಷ್ಠತೆ ಬೆಳೆಸುವ, ನಮ್ಮ ದಲಿತ ಬಂಧುಗಳಿಗೆ ಸಮಾನತೆ ಹಕ್ಕು ನೀಡುವ ಮತ್ತು ತಮ್ಮ ಅಂತಃಕರಣ ಶುದ್ಧಗೊಳಿಸುವ ಮೂಲಕ ಉಚ್ಚ– ನೀಚ ಭಾವ ತೊಡೆದುಹಾಕುವಂತಹ ಕೆಲಸಗಳು ತಕ್ಷಣದಿಂದ ಆಗಬೇಕಿದೆಯೆಂದೂ ಹೇಳಿದ ಅವರು, ಹಿಂದೂ ಸಮಾಜದಲ್ಲಿ ಬೇರು ಬಿಟ್ಟಿರುವ ಅಸ್ಪೃಶ್ಯತೆ ನಿರ್ಮೂಲನೆಗಾಗಿ ಗಾಂಧೀಜಿ ತಮ್ಮ ಪ್ರಾಣವನ್ನು ಪಣಕ್ಕೆ ಇರಿಸಿದ್ದನ್ನು ಗಮನದಲ್ಲಿ ಇರಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಹೇಳಿದರು.

ಪಂಡಿತಜೀ ಅವರ ಹೃದಯಸ್ಪರ್ಶಿ ಭಾಷಣದ ಬಳಿಕ ಪುಣೆ ಒಪ್ಪಂದಕ್ಕೆ ಒಪ್ಪಿಗೆ ಸೂಚಿಸುವ ಪ್ರಮುಖ ಗೊತ್ತುವಳಿಯನ್ನು ಮಥುರಾದಾಸ್ ವಜನಜೀ ಖಿಮಜಿ ಮಂಡಿಸಿದರು. ಈ ಸಂದರ್ಭದಲ್ಲಿ ಪುಣೆ ಒಪ್ಪಂದಕ್ಕೆ ಬ್ರಿಟಿಷ್ ಸರ್ಕಾರ ತನ್ನ ಸಮ್ಮತಿ ನೀಡುವುದಕ್ಕೆ ಯಾವುದೇ ತೊಂದರೆ ಇಲ್ಲದಿರುವುದರಿಂದ

---

೧. ಡಾ. ಭೀ.ರಾ. ಅಂಬೇಡ್ಕರ್ ಚರಿತ್ರ: ಚಾಂ.ಭಂ. ಖೈರಮೋಡೆ: ಖಂಡ ೫, ಪುಟ: ೫೬, ೫೭, ೬೧.

ಮಹಾತ್ಮ ಗಾಂಧೀಜಿ ಅವರ ವಿಷಮಿಸಿದ ಆರೋಗ್ಯ ಸ್ಥಿತಿ ಪರಿಗಣಿಸಿ ಬ್ರಿಟಿಷ್ ಸರ್ಕಾರ ಒಪ್ಪಂದಕ್ಕೆ ತನ್ನ ಒಪ್ಪಿಗೆ ಇದೆ ಎಂದು ತಂತಿ ಸಂದೇಶ ಕಳುಹಿಸಬೇಕಾಯಿತು ಎಂದು ಹೇಳಿದರು.

ಗೊತ್ತುವಳಿಗೆ ಅನುಮೋದನೆ ನೀಡುವುದಕ್ಕೆ ಸಂಬಂಧಿಸಿದಂತೆ ಡಾ. ತೇಜಬಹಾದ್ದೂರ್ ಸಪ್ರು, ಈ ಒಟ್ಟು ಒಪ್ಪಂದ ಏರ್ಪಟ್ಟಿದ್ದು ಪಂಡಿತ ಮದನ್ ಮೋಹನ್ ಮಾಳವೀಯ ಅವರ ಅಧ್ಯಕ್ಷತೆಯಲ್ಲಿ ಎನ್ನುವುದು ಗಮನಿಸಬೇಕಾಗಿರುವ ಮುಖ್ಯ ಸಂಗತಿಯಾಗಿದ್ದು, ಪಂಡಿತಜೀ ಅವರು ಬದಲಾದ ಕಾಲಕ್ಕೆ ಅನುಗುಣವಾಗಿ ತಮ್ಮ ಧರ್ಮನಿಷ್ಠೆಯನ್ನು ಬದಿಗಿರಿಸುವುದಕ್ಕೆ ತೋರಿದ ಮಾನಸಿಕ ಸ್ಥೈರ್ಯವನ್ನು ಎಷ್ಟು ಶ್ಲಾಘಿಸಿದರೂ ಸಾಲದು. ನಾವೆಲ್ಲರೂ ಇಂದು ಇಂತಹ ಗಟ್ಟಿಯಾದ ಧೋರಣೆ ಸ್ವೀಕರಿಸಲೇಬೇಕು. ಅದೇ ರೀತಿ ಈ ರಾಜೀ ಸಂಧಾನದ ಯಶಸ್ಸಿನ ಶ್ರೇಯಸ್ಸನ್ನು ಡಾ. ಅಂಬೇಡ್ಕರ್ ಅವರಿಗೂ ನೀಡಬೇಕಾಗುತ್ತದೆ. ತಮ್ಮ ಸಮಾಜದ ಹಕ್ಕುಗಳನ್ನು ಪಡೆಯುವ ನಿಟ್ಟಿನಲ್ಲಿ ಅವರು ತೋರಿದ ಹೋರಾಟ ಮನೋಭಾವ ಮತ್ತು ಧಾರ್ಷ್ಟ್ಯತೆ ಅಭಿನಂದನೀಯ. ಅವರ ಧಾರ್ಷ್ಟ್ಯ ನೋಡಿದರೆ ಅವರು ಕೇವಲ ಅಸ್ಪೃಶ್ಯರ ನಾಯಕರಾಗಿ ಅಷ್ಟೇ ಅಲ್ಲದೇ ಇಡೀ ಭಾರತದ ನಿಜವಾದ ನಿರ್ಭೀತಿಯ ನಾಯಕರಾಗಿ ಹೊರ ಹೊಮ್ಮಲಿದ್ದಾರೆ ಎಂದು ಆಶಯ ವ್ಯಕ್ತಪಡಿಸಿದರು. ಬ್ರಿಟಿಷ್ ಸರ್ಕಾರದ ಜಾತಿ ಪ್ರಾತಿನಿಧಿತ್ವಕ್ಕಿಂತ ಈ ಹೊಸ ಒಪ್ಪಂದದಲ್ಲಿ ಅಸ್ಪೃಶ್ಯರಿಗೆ ಇನ್ನೂ ಹೆಚ್ಚು ಲಾಭವಾಗಿದೆ. ಹೀಗಾಗಿ ನಾವು ಅಂಗೀಕರಿಸಿದ ಈ ಒಪ್ಪಂದಕ್ಕೆ ಎಲ್ಲರೂ ಬದ್ಧರಾಗಿ ಯಶಸ್ವಿಯಾಗುವ ನಿಟ್ಟಿನಲ್ಲಿ ಯತ್ನಿಸಬೇಕಿದೆ ಎಂದು ಹೇಳಿದರು.

ಚಪ್ಪಾಳೆಯ ಸ್ವಾಗತದೊಂದಿಗೆ ಡಾ. ಅಂಬೇಡ್ಕರ್ ಅವರು ಭಾಷಣಕ್ಕೆ ನಿಂತರು. ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ ಹೇಳಿದ್ದಿಷ್ಟು:

ಕೆಲವು ದಿನಗಳ ಹಿಂದೆಯಷ್ಟೆ ನಾನು ಎದುರಿಸಿದ ಬಿಕ್ಕಟ್ಟಿನ ಪರಿಸ್ಥಿತಿ ಮತ್ತು ಇಂದಿನ ಸಂತಸದ ಸಮಯ ಎರಡೂ ನೋಡಿದರೆ ಇದೊಂದು ಕನಸು ಎನ್ನುವಂತೆ ಭಾಸವಾಗುತ್ತಿದೆ. ಒಂದು ಕಡೆ ನನಗೆ ಮಹಾತ್ಮ ಗಾಂಧೀಜಿ ಅವರ ಜೀವ ಉಳಿಸಬೇಕಿತ್ತು ಇನ್ನೊಂದು ಕಡೆ ನನ್ನ ಸಮಾಜದ ಬಂಧುಗಳ ನ್ಯಾಯಯುತ ಹಕ್ಕುಗಳಿಗೆ ಜೀವ ಸವೆಸಬೇಕಿತ್ತು. ಎರಡೂ ಕಡೆಯಿಂದ ಒತ್ತರಿಸಿ ನಿಂತುಕೊಂಡಿದ್ದ ಈ ಪರಿಸ್ಥಿತಿ ಸುಲಭವಾಗಿ ಪರಿಹಾರವಾಗುವ ಶಂಕೆ ನನಗಂತೂ ಇರಲಿಲ್ಲ. ಒಟ್ಟಾರೆ ಈ ಭಯಂಕರ ಮತ್ತು ಜವಾಬ್ದಾರಿಯ ಪರಿಸ್ಥಿತಿ ಅರ್ಥ ಮಾಡಿಕೊಂಡ ಹಿಂದೂ ನಾಯಕರು ತಳೆದ ಸಹಕಾರ ಮನೋಭಾವದ ಪರಿಣಾಮವಾಗಿ ಈ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಪಾರಾಗುವುದಕ್ಕೆ ಕಾಣಿಸಿಕೊಂಡ ಮಾರ್ಗದಿಂದ ನನಗೆ ಅತೀವ ಆನಂದವಾಗುತ್ತಿದೆ. ಈ ಯುದ್ಧ ಸ್ವರೂಪಿ ಮಾತುಕತೆ ಯಶಸ್ವಿಯಾಗುವುದಕ್ಕೆ ಮಹಾತ್ಮ ಗಾಂಧೀಜಿ ಕಾರಣೀಭೂತರು. ನನ್ನ ಎಲ್ಲ ಬೇಡಿಕೆಗಳಿಗೆ ಮಹಾತ್ಮ ಗಾಂಧೀಜಿ ಸಮ್ಮತಿ ಸೂಚಿಸಿದ್ದಲ್ಲದೇ ಅಭಿನಂದನೆ ಸಲ್ಲಿಸಿದ್ದು ನನಗೆ ಆಶ್ಚರ್ಯ ಮೂಡಿಸಿದೆ. ಮಹಾತ್ಮ ಗಾಂಧೀಜಿ ಅವರು ಯಾವ ರೀತಿ ಈ ರಾಜೀ ಸಂಧಾನಕ್ಕೆ ಸಮ್ಮತಿ ನೀಡಿದರೋ ಅದೇ ರೀತಿ ಎರಡನೇ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಒಪ್ಪಿಗೆ ಸೂಚಿಸಿದ್ದರೆ ಈ ಬಿಕ್ಕಟ್ಟಿನ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ. ಇರಲಿ.. ಈ ಒಪ್ಪಂದಕ್ಕೆ ಒಪ್ಪಿಗೆ ನೀಡುವುದಕ್ಕೆ ನನಗೆ ಸಂತಸವಾಗುತ್ತದೆ. ಈ ಒಪ್ಪಂದದಲ್ಲಿನ ಕರಾರುಗಳಿಗೆ ಅನುಗುಣವಾಗಿ ನನ್ನ ಸ್ಪೃಶ್ಯ ಬಂಧುಗಳು ಕೃತಿಯಲ್ಲೂ ತೋರ್ಪಡಿಸಿದರೆ ನನಗೆ ಮತ್ತು ನನ್ನ ಅಸ್ಪೃಶ್ಯ ಸಮಾಜಕ್ಕೆ ಅತೀವ ಆನಂದವಾಗುತ್ತದೆ. ಈ ಒಪ್ಪಂದದ ಯಶಸ್ಸಿನ ಶ್ರೇಯಸ್ಸು ಗಾಂಧೀಜಿ ಅವರಷ್ಟೇ ಅಲ್ಲದೇ ಸರ್ ತೇಜ್ ಬಹಾದ್ದೂರ್ ಸಪ್ರು, ಪಂಡಿತ ಮದನ್ ಮೋಹನ್ ಮಾಳವೀಯ ಮತ್ತು ಸಿ. ರಾಜಗೋಪಾಲಾಚಾರಿ ಅವರಿಗೂ ಸಲ್ಲಿಸದೇ ಇರಲಿಕ್ಕಾಗುವುದಿಲ್ಲ.

# ೫೮.

# ದೇವ ದರ್ಶನದಿಂದ ನಿಮ್ಮ ಉದ್ಧಾರವಾಗುವುದಿಲ್ಲ

ಪುಣೆಯಲ್ಲಿ ಮಾಡಿಕೊಂಡ ಒಪ್ಪಂದದ ಬಳಿಕ ಮುಂಬೈನ ಇಡೀ ಅಸ್ಪೃಶ್ಯ ಸಮಾಜವು ಡಾ. ಬಾಬಾಸಾಹೇಬ್ ಅವರ ಭಾಷಣ ಕೇಳಲು ಯಾವಾಗ ಅವಕಾಶ ಲಭಿಸುತ್ತದೆ ಎಂದು ಉತ್ಸುಕವಾಗಿತ್ತು. ವರಳಿಯಲ್ಲಿನ ಶ್ರೀ ಸಾವಂತ ಸೇರಿದಂತೆ ಇನ್ನಿತರ ಯುವ ಮಿತ್ರರು ಸೆಪ್ಟೆಂಬರ್ ೨೮, ೧೯೩೨ರಂದು ರಾತ್ರಿ ೧೦ ಗಂಟೆಗೆ ಒಂದು ಸಭೆ ಆಯೋಜಿಸಿದರು. ಬಿ.ಡಿ.ಡಿ ಚಾಳ್ ಹತ್ತಿರದ ಮೈದಾನದ ಬಳಿ ಆಯೋಜಿಸಿದ್ದ ಈ ಸಾರ್ವಜನಿಕ ಸಭೆಗೆ ಡಾ. ಅಂಬೇಡ್ಕರ್, ದೇವರಾಯ ನಾಯಿಕ ಸೇರಿದಂತೆ ಇನ್ನಿತರರು ಆಗಮಿಸುತ್ತಿದ್ದಂತೆಯೇ ಸಭೆಯ ಕಲಾಪ ಆರಂಭವಾಯಿತು. ಸಭೆಯ ಅಧ್ಯಕ್ಷತೆ ವಹಿಸಿಕೊಂಡ ದೇವರಾಯ ನಾಯಿಕ ತಮ್ಮ ಪ್ರಾಸ್ತಾವಿಕದಲ್ಲಿ

'ಮಹಾತ್ಮ ಗಾಂಧೀಜಿ ಅವರ ಘೋರ ಪ್ರತಿಜ್ಞೆಯ ಪರಿಣಾಮವಾಗಿ ಇಡೀ ಭಾರತ ಅಲುಗಾಡಿ ಹೋಗಿತ್ತು. ಈ ಪ್ರತಿಜ್ಞೆಯ ಸ್ವರೂಪ ಎಷ್ಟು ಭಯಂಕರವಾಗಿತ್ತೆಂದರೆ, ಡಾ. ಅಂಬೇಡ್ಕರ್ ಅವರು ಮಹಾತ್ಮ ಗಾಂಧೀಜಿ ಅವರ ಅಭಿಪ್ರಾಯಕ್ಕೆ ತಲೆಬಾಗದಿದ್ದರೆ ಗಾಂಧೀಜಿ ಜೀವ ಸುರಕ್ಷಿತವಾಗಿ ಉಳಿಯುತ್ತಿರಲಿಲ್ಲ ಒಂದು ವೇಳೆ ಕರಾರಿಗೆ ಸಮ್ಮತಿಸಿದರೆ ಇಷ್ಟೊಂದು ಪರಿಶ್ರಮದಿಂದ ಅಸ್ಪೃಶ್ಯರಿಗೆ ಲಭಿಸಿದ ಸ್ವಸಂರಕ್ಷಣೆಯ ಹಕ್ಕುಗಳಿಗೆ ತಿಲಾಂಜಲಿ ನೀಡಬೇಕಾಗಿತ್ತು. ಸಮ್ಮತಿ ಸೂಚಿಸದಿದ್ದರೆ ಮಹಾತ್ಮ ಗಾಂಧೀಜಿ ಜೀವ ಕಳೆದುಕೊಳ್ಳುವುದಕ್ಕೆ ಕಾರಣೀಭೂತರಾಗಬೇಕಾಗಿತ್ತು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಇಡೀ ಅಸ್ಪೃಶ್ಯ ಸಮಾಜ ಅದರಲ್ಲೂ ವಿಶೇಷವಾಗಿ ಡಾ. ಅಂಬೇಡ್ಕರ್ ಸಿಕ್ಕಿ ಹಾಕಿಕೊಂಡಿದ್ದರು. ಆದರೆ ಅಸ್ಪೃಶ್ಯರ ಸುದೈವದಿಂದ ಈ ಕ್ಲಿಷ್ಟ ಪರಿಸ್ಥಿತಿ ಸುಖಕರವಾಗಿ ಎರಡೂ ಸಮಸ್ಯೆಗಳು ಏಕಕಾಲಕ್ಕೆ ಪರಿಹರಿಸಲ್ಪಟ್ಟವು. ಕ್ಲಿಷ್ಟಕರ ಪರಿಸ್ಥಿತಿ ಪರಿಹಾರವಾಗುವುದು ಎಂದರೆ ಅಸ್ಪೃಶ್ಯರ ಪಾಲಿಗೆ ಇದು ಶುಭ ಸಂಕೇತ. ಇತಿಹಾಸದಲ್ಲಿ ಅಸ್ಪೃಶ್ಯರಿಗೆ ಎಂದೂ ಲಭಿಸದಂತಹ ಹಕ್ಕುಗಳು ದೊರೆತಿರುವುದು ನಿಜ. ಆದರೆ ಹಿಂದೂ ಸಮಾಜದಲ್ಲಿ ಇಂದು ಬೇರೂರಿರುವ ಅಸ್ಪೃಶ್ಯತೆ ನಿರ್ಮೂಲನೆಯಾಗಿ ಈ ಹಕ್ಕುಗಳು ಸಾರ್ಥಕಗೊಳ್ಳಬೇಕು. ಹಿಂದೂ ಸಮಾಜದಲ್ಲಿನ ವಿಷಮತೆಗೆ ಸೆಡ್ಡು ಹೊಡೆದು ಸಂಪೂರ್ಣ ಸಮಾನತೆಯಿಂದ ತನ್ನ ಕಾಲುಗಳ ಮೇಲೆ ತಾನು ನಿಲ್ಲುವವರೆಗೆ ವಿಶ್ರಮಿಸುವುದಿಲ್ಲ ಎಂದು ಅಸ್ಪೃಶ್ಯ ಸಮಾಜ ಹಿಂದೂ ಸಮಾಜಕ್ಕೆ ತಿಳಿಸಿಕೊಡುವುದಕ್ಕೆ ಕಾರ್ಯಪ್ರವೃತ್ತ ಆಗಬೇಕಿದೆ' ಎಂದು ಹೇಳಿದರು. ತಮ್ಮ ಭಾಷಣಕ್ಕೆ ವಿರಾಮ ನೀಡುವ ಮುನ್ನ ದೇವರಾಯ ನಾಯಿಕ ಅವರು, ಇಂದಿನಿಂದ ನಾಲ್ಕು ತಿಂಗಳೊಳಗೆ ಜನತಾ ಪತ್ರಕ್ಕೆ ಐದು ಸಾವಿರ ಚಂದಾದಾರರನ್ನು ಮಾಡದ ಹೊರತು ಪತ್ರಿಕೆಯ ಸಂಪಾದಕ ಹುದ್ದೆ ಸ್ವೀಕರಿಸುವುದಿಲ್ಲ ಎಂದು ಪ್ರತಿಜ್ಞೆಗೈದರು.

ದೇವರಾಯ ನಾಯಿಕ ಅವರ ಭಾಷಣದ ಬಳಿಕ ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ಜನರ ಕರತಾಡನದೊಂದಿಗೆ ಡಾ. ಅಂಬೇಡ್ಕರ್ ಭಾಷಣಕ್ಕೆ ನಿಂತರು.

'ಎಂಟು ದಿನಗಳ ಹಿಂದೆ ಅಸ್ಪೃಶ್ಯ ಸಮಾಜದ ಮೇಲೆ ಎಂತಹ ಸಂಕಟ ಬಂದೆರಗಿತ್ತು ಎನ್ನುವುದನ್ನು ಅಧ್ಯಕ್ಷತೆ ವಹಿಸಿರುವ ದೇವರಾಯ ನಾಯಿಕ ಸ್ಪಷ್ಟಪಡಿಸಿದ್ದಾರೆ. ಈ ಸಂಕಟದಿಂದ ಅಸ್ಪೃಶ್ಯ ಸಮಾಜ

ಹೊರಗೆ ಬರುವುದರ ಜೊತೆಗೆ ಈ ಸಂಕಟಕ್ಕೆ ಸಿಲುಕಿ ಶಕ್ತಿಹೀನವಾಗುವ ಬದಲು ಮತ್ತಷ್ಟು ಶಕ್ತಿ ಸಂಚಯಿಸಿಕೊಂಡಿದೆ.

ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಅಸ್ಪೃಶ್ಯರ ಕೆಲವು ಬೇಡಿಕೆಗಳನ್ನು ಮಂಡಿಸಿದ್ದೆ. ಅವುಗಳು ನ್ಯಾಯಬದ್ಧವಾಗಿದ್ದವು ಕೂಡ. ಎರಡನೇ ಅಧಿವೇಶನದ ಸಂದರ್ಭದಲ್ಲಿ ಅಸ್ಪೃಶ್ಯರ ಬೇಡಿಕೆಗಳ ವಿಚಾರ ಪ್ರಸ್ತುತಪಡಿಸಿದಾಗ ಮಹಾತ್ಮ ಗಾಂಧಿ ಸೇರಿದಂತೆ ಎಲ್ಲ ಹಿಂದೂ ಮುಖಂಡರು ಪ್ರಬಲ ವಿರೋಧ ವ್ಯಕ್ತಪಡಿಸಿದ್ದರಿಂದ ಅಸ್ಪೃಶ್ಯರ ಸಂರಕ್ಷಣೆಯ ಒಂದಿಷ್ಟು ಸೌಲಭ್ಯಗಳು ಸಿಗಬಹುದು ಎಂದು ಯಾವುದೇ ಭರವಸೆ ಇರಲಿಲ್ಲ. ಎಲ್ಲರ ಕಾಲ್ತುಳಿತಕ್ಕೆ ಸಿಲುಕಿ ನರಳಿದ, ಆರ್ಥಿಕವಾಗಿ ಹೀನಾಯವಾಗಿರುವ, ಧಾರ್ಮಿಕವಾಗಿ ಕಡೆಗಣಿಸಲ್ಪಟ್ಟ, ಸಾಮಾಜಿಕವಾಗಿ ಕಸಕ್ಕಿಂತ ಕೀಳಾಗಿ ಮತ್ತು ರಾಜಕೀಯದಲ್ಲಿ ನಿರ್ಮಾಲ್ಯವಾಗಿದ್ದಂತಹ ಸಮಾಜಕ್ಕೆ ಯಾವುದೇ ಸೌಲಭ್ಯಗಳನ್ನು ನೀಡುವುದಕ್ಕೆ ಹಿಂದೂ ಸಮಾಜ ಸಿದ್ಧವಿಲ್ಲ ಎಂದ ಮೇಲೆ ಭವಿಷ್ಯದ ಸ್ವರಾಜ್‌ದಲ್ಲಿ ಅಂದರೆ ಆ ರಾಜ್ಯಾಡಳಿತದ ಅಧಿಕಾರ ಹಿಂದೂಗಳ ಕೈಗೆ ಸಿಕ್ಕ ಮೇಲೆ ಈ ದುರ್ಬಲ ಅಸ್ಪೃಶ್ಯ ಸಮಾಜದ ಸ್ಥಿತಿಗತಿ ಏನಾಗಬೇಡ? ಇಂತಹ ದೊಡ್ಡ ಸಂಶಯ ನನಗೆ ಕಾಡಲಾರಂಭಿಸಿತು. ಇದೇ ಕಾರಣಕ್ಕೆ ಭವಿಷ್ಯದ ಸ್ವರಾಜ್‌ದಲ್ಲಿ ಅಸ್ಪೃಶ್ಯರಿಗೆ ಅತ್ಯಗತ್ಯವಾಗಿರುವ ಸೌಲಭ್ಯಗಳು ಲಭಿಸದೇ ಇದ್ದರೆ ಅಂತಹ ಸ್ವರಾಜ್‌ಕ್ಕೆ ಅಸ್ಪೃಶ್ಯ ಸಮಾಜ ಎಂದಿಗೂ ತನ್ನ ಸಹಮತ ವ್ಯಕ್ತಪಡಿಸದು ಎಂದು ಅಂದೇ ನನ್ನ ಅಭಿಪ್ರಾಯ ಸ್ಪಷ್ಟಪಡಿಸಿದ್ದೆ. ಎರಡನೇ ಅಧಿವೇಶನದಲ್ಲಿ ಅಸ್ಪೃಶ್ಯರ ಬೇಡಿಕೆಗಳನ್ನು ಮಂಡಿಸಿ ಅವುಗಳಿಗೆ ಪ್ರಧಾನಿಯ ಹಸ್ತಾಕ್ಷರ ಕೂಡ ಆಗಿತ್ತು. ಆದರೂ ಕೂಡ ಪ್ರಧಾನಮಂತ್ರಿ ಪ್ರಕಟಿಸಿದ ಯೋಜನೆಯಲ್ಲಿ ನಾನು ಮಂಡಿಸಿದ ಬೇಡಿಕೆಗಳಿಗೆ ಅನುಗುಣವಾಗಿ ಇರಲಿಲ್ಲ ಆದರೂ ಅದರಲ್ಲಿ ನನಗೆ ಸಮಾಧಾನ ಇತ್ತು. ಹೀಗಾಗಿ ಮುಂದಿನ ಯೋಜನೆ ಕುರಿತು ಚಿಂತನೆ ಮಾಡುತ್ತಿದ್ದೆ. ಕಷ್ಟ ಎದುರಿಸಿದರೂ ಅಸ್ಪೃಶ್ಯ ಸಮಾಜಕ್ಕಾಗಿ ನನ್ನಿಂದ ಒಂದಿಷ್ಟು ಕೆಲಸ ಆಯಿತು ಎಂದು ಭಾವಿಸಿದ್ದೆ. ಸಂತಸದಿಂದ ಜೀವ ನಿರುಮ್ಮಳವಾಗಿತ್ತು. ಹೆಚ್ಚಿಗೆ ಏಕೆ ಹಿಂಸ್ರಪಶುವಿನ ದವಡೆಗೆ ಸಿಲುಕಿ ಜೀವ ಉಳಿಸಿಕೊಳ್ಳುವುದಕ್ಕೆ ಓಡಿ ನಿಶ್ಚಿಂತೆಯಿಂದ ಇದ್ದ ಜಿಂಕೆಯ ಮನಸ್ಥಿತಿಯಲ್ಲಿದ್ದೆ, ಇಷ್ಟರಲ್ಲಿ ಗಾಂಧೀಜಿ ಅವರು ಘೋರ ಪ್ರತಿಜ್ಞೆ ಕಿವಿಗೆ ಬಿತ್ತು. ಅಸ್ಪೃಶ್ಯರ ಸುದೈವ ಏನೋ ಅಸ್ಪೃಶ್ಯರ ಬೇಡಿಕೆಗಳಿಗೆ ಮಹಾತ್ಮ ಗಾಂಧಿ ವಿರೋಧವಾಗಿರಲಿಲ್ಲ. ಅವರಿಂದಾಗಿ ನನಗೂ ಸಾಕಷ್ಟು ಉಪಯೋಗವಾಯಿತು ಅಲ್ಲದೇ ಹಿಂದೂ ನಾಯಕರೊಂದಿಗೆ ಏರ್ಪಟ್ಟ ಒಪ್ಪಂದದಿಂದಾಗಿ ಅಸ್ಪೃಶ್ಯರಿಗೆ ಲಾಭವೇ ಆಯಿತು. ಒಂದು ಸ್ಥಾನ ಕೂಡ ಲಭಿಸದಂತಹ ಪಂಜಾಬ್‌ನಲ್ಲಿ ಎಂಟು ಸ್ಥಾನಗಳು ಸಿಗುವುದರ ಜೊತೆಗೆ ಬೇರೆ ಪ್ರಾಂತ್ಯಗಳಲ್ಲೂ ಇನ್ನೂ ಹೆಚ್ಚಿನ ಸ್ಥಾನಗಳು ಲಭಿಸಿದವು. ಎರಡನೇ ಲಾಭ ಎಂದರೆ ಕೇಂದ್ರ ಕಾನೂನು ಮಂಡಳಿಯಲ್ಲಿ ಅಸ್ಪೃಶ್ಯರಿಗೆ ೧೮ ಸ್ಥಾನಗಳನ್ನು ನೀಡುವುದಕ್ಕೆ ತೀರ್ಮಾನಿಸಲಾಯಿತು. ಅಂದ ಹಾಗೆ ಪ್ರಧಾನ ಮಂತ್ರಿ ಅವರ ಪ್ರಸ್ತಾವನೆಯಲ್ಲಿ ಈ ವಿಷಯದ ಉಲ್ಲೇಖವಿರಲಿಲ್ಲ. ಅಸ್ಪೃಶ್ಯರಿಗೆ ಅತ್ಯಂತ ಹಾನಿಕಾರಕ ಮತ್ತು ದ್ರೋಹ ಬಗೆಯುವ ರೀತಿಯಲ್ಲಿ ಎಲ್ಲ ಸೌಲಭ್ಯಗಳು ೨೦ ವರ್ಷಗಳ ಬಳಿಕ ರದ್ದುಗೊಳ್ಳುತ್ತವೆ ಎಂದು ಹೇಳಲಾಗಿತ್ತು. ಆದರೆ ಕೇವಲ ೨೦ ವರ್ಷಗಳ ಅವಧಿಯಲ್ಲಿ ಜಗತ್ತು ಬದಲಾಗುತ್ತಿದ್ದಿಲ್ಲ. ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದ ಶೋಷಣೆ ಕೇವಲ ೨೦ ವರ್ಷಗಳಲ್ಲಿ ಇಲ್ಲವಾಗುತ್ತದೆ ಎನ್ನುವುದು ಬರೀ ಕಲ್ಪನೆ. ಇಡೀ ಹಿಂದೂ ಸಮಾಜದ ದೃಷ್ಟಿಕೋನ ಬದಲಾಗದ ಹೊರತು ನೀಡಿರುವ ಸೌಲಭ್ಯ ಕಿತ್ತುಕೊಳ್ಳುವುದು ಎಂದರೆ ಬೆಳೆಯುತ್ತಿರುವ ಗಿಡಕ್ಕೆ ಕೊಡಲಿ ಏಟು ಹಾಕಿದಂತೆ. ಆದರೆ ಹೊಸ ಒಪ್ಪಂದದಲ್ಲಿ ಇದನ್ನು ಬದಲಿಸಿ ಹಿಂದೂ ಮತ್ತು ಅಸ್ಪೃಶ್ಯ ಸಮಾಜದ ಪರಸ್ಪರ ಸಹಮತದ ಮೇರೆಗೆ ಈ ಸೌಲಭ್ಯ ರದ್ದುಗೊಳಿಸಲಾಗುವುದು. ಹಿಂದೂ

ಸಮಾಜವು ತನ್ನ ಕಾರ್ಯದಿಂದ ಅಸ್ಪೃಶ್ಯ ಸಮಾಜದ ವಿಶ್ವಾಸ ಗಳಿಸಿಕೊಂಡಿದ್ದೆಯಾದರೆ ಅಸ್ಪೃಶ್ಯರು ತಾವಾಗಿಯೇ ಈ ಸೌಲಭ್ಯ ಬಿಟ್ಟುಕೊಡುತ್ತಾರೆ ಇಲ್ಲದಿದ್ದರೆ ಈ ವ್ಯವಸ್ಥೆ ಮುಂದುವರಿಯುತ್ತದೆ. ಆದರೆ ಲಭಿಸಿರುವ ಸೌಲಭ್ಯದ ಲಾಭವನ್ನು ನೀವು ಸರಿಯಾಗಿ ಮಾಡಿಕೊಳ್ಳದೇ ಇದ್ದಲ್ಲಿ ಕುರುಡನ ಎದುರು ಮುತ್ತು ರತ್ನ ಇರಿಸಿದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಿಮಗೆ ಲಭಿಸಿರುವ ಅಧಿಕಾರದ ಕಲ್ಪನೆ ಬರಬೇಕೆಂದರೆ ಭವಿಷ್ಯದ ಮುಂಬೈ ಪ್ರಾಂತ್ಯದ ಕಾನೂನು ಮಂಡಳಿಯ ಕಲ್ಪನೆ ಮಾಡಿಕೊಳ್ಳಿ. ೨೦೦ ಸ್ಥಾನಗಳಿರುವ ಮುಂಬೈ ಪ್ರಾಂತ್ಯದಲ್ಲಿ ಅಧಿಕಾರಕ್ಕೆ ಬರಬೇಕೆಂದರೆ ಕನಿಷ್ಠ ೧೧೫ ಸ್ಥಾನಗಳು ಅತ್ಯಗತ್ಯ. ಈ ಪ್ರಾಂತ್ಯದಲ್ಲಿ ಹಿಂದೂಗಳಿಗೆ ಅತಿ ಹೆಚ್ಚು ಎಂದರೆ ಸರಿಸುಮಾರು ೧೦೦ ಸ್ಥಾನಗಳು ಹಂಚಿಕೆಯಾಗಿವೆ. ನೂರು ಸ್ಥಾನಗಳನ್ನು ಹೊಂದಿರುವ ಹಿಂದೂಗಳಿಗೆ ನಿಮ್ಮ ೧೫ ಸ್ಥಾನಗಳಿಲ್ಲದೇ ಅಧಿಕಾರ ನಡೆಸುವುದು ಅಸಾಧ್ಯ. ಮುಸ್ಲಿಂ ಸೇರಿದಂತೆ ಇತರ ಸಣ್ಣ ಪುಟ್ಟ ಗುಂಪುಗಳ ಬಗ್ಗೆ ಮಾತನಾಡುವುದೇ ಬೇಡ. ನಿಮ್ಮ ಕೈಗೆ ಸಿಕ್ಕಿರುವ ಈ ಅಲೌಕಿಕ ಅಧಿಕಾರವನ್ನು ನಿಮ್ಮ ಆರ್ಥಿಕ ಸಾಮರ್ಥ್ಯ ವೃದ್ಧಿಗಾಗಿ ಉಪಯೋಗಿಸಿ. ನಿಮಗೆ ಇನ್ನೊಂದು ಮಹತ್ವದ ಸೂಚನೆ ನೀಡುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ ಅಲ್ಲಲ್ಲಿ ನಿಮಗೆ ದೇವಸ್ಥಾನದ ಬಾಗಿಲು ತೆರೆಯುವ ಪ್ರಯತ್ನ ನಡೆಯುತ್ತಿದೆ. ಈ ಪ್ರಯತ್ನ ಶುದ್ಧ ಕುತಂತ್ರ ಎನ್ನುವುದರಲ್ಲಿ ಎರಡು ಮಾತಿಲ್ಲ. ದೇವಾಲಯಕ್ಕೆ ಹೋಗುವುದಕ್ಕೆ ಅವಕಾಶ ಸಿಕ್ಕಿತು ಎಂದ ಮಾತ್ರಕ್ಕೆ ನಿಮ್ಮ ಉದ್ಧಾರ ಆಗುವುದಿಲ್ಲ ಎನ್ನುವುದನ್ನು ಮರೆಯಬೇಡಿ. ದೇವಾಲಯ ಮತ್ತು ಮೂರ್ತಿಯ ಆಧ್ಯಾತ್ಮಿಕ ಭಾವನೆಗಳ ಚೆಲ್ಲಾಟಕ್ಕಿಂತ ಹೊಟ್ಟೆಗೆ ಹಿಟ್ಟು ಹೇಗೆ ಹಾಕುವುದು ಎನ್ನುವುದರ ಬಗ್ಗೆ ಮೊದಲು ವಿಚಾರ ಮಾಡಬೇಕಿದೆ. ತಿನ್ನುವುದಕ್ಕೆ ಸಾಕಷ್ಟು ಅನ್ನ ಇಲ್ಲ. ಮೈಮೇಲೆ ಬಟ್ಟೆ ಇಲ್ಲ. ಶಿಕ್ಷಣದ ಸೌಲಭ್ಯ ಇಲ್ಲ. ಚಿಕಿತ್ಸೆ, ಔಷಧಕ್ಕೆ ಹಣದ ಕೊರತೆಯಂತಹ ದೀನ ಸ್ಥಿತಿಯಲ್ಲಿ ನಮ್ಮ ಸಮಾಜ ಸಿಲುಕಿಕೊಂಡಿದೆ. ಈ ಪರಿಸ್ಥಿತಿ ಬದಲಾಗಿ ಜೀವನಕ್ಕೆ ಬೇಕಾಗಿರುವ ಸುಖ ಅನುಭವಿಸುವ ನಿಟ್ಟಿನಲ್ಲಿ ನಿಮ್ಮ ಚಿಂತನೆ ಬದಲಾಗಬೇಕಿದೆ. ಇಂದಿನ ನಮ್ಮ ಈ ದೀನ ಸ್ಥಿತಿ ದೈವ ದುರ್ವಿಲಾಸದ ಫಲ ಎನ್ನುವಂತಹ ಹುಚ್ಚು, ಆತ್ಮವಂಚನೆಯ ಕಲ್ಪನೆ ಓದ್ದೋಡಿಸಿ. ನನಗಂತೂ ಖಾತ್ರಿ ಇದೆ ಇಂತಹ ಮುಗ್ಧ ಕಲ್ಪನೆಗಳಿಗೆ ಅವಕಾಶ ನೀಡದೇ ನಮ್ಮ ಸಮಾಜದ ಪ್ರತಿಯೊಬ್ಬ ವ್ಯಕ್ತಿ ರಾಜಕೀಯದಲ್ಲಿ ಗುರುತಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದರೆ ನಮ್ಮ ಸಮಾಜದ ದೀನ ಸ್ಥಿತಿ ದೂರವಾಗುವುದರಲ್ಲಿ ಸಂಶಯವಿಲ್ಲ. ನೀವು ಆಯ್ಕೆ ಮಾಡುವ ಮುಖಂಡ, ನೀವು ವಿಶ್ವಾಸ ಇರಿಸುವ ಮುಖಂಡ ನಿಮ್ಮ ನಿಜವಾದ ಮಾರ್ಗದರ್ಶಕನಾಗಬಲ್ಲ. ನಿಮ್ಮ ಹಿತ ಮತ್ತು ಅವರ ಹಿತ ಒಂದೇ ಆಗಿರಬೇಕು. ಸ್ವಾರ್ಥವಿಲ್ಲದ ವ್ಯಕ್ತಿಯನ್ನು ಆಯ್ಕೆ ಮಾಡಿ. ಬೇರೆ ಪಕ್ಷದವರ ಎಂಜಲು ನೀರು ಕುಡಿಯುವ ಇಲ್ಲವೇ ಅವರ ಬಾಡಿಗೆ ಕೆಲಸ ಮಾಡುವ ಜನರು ನಿಮ್ಮ ಏಕತೆಯನ್ನು ಒಡೆದು ದಿಕ್ಕು ತಪ್ಪಿಸಿ ದ್ರೋಹ ಬಗೆಯದೇ ಇರಲಾರರು. ಇಂತಹ ನಾಮಕಾವಾಸ್ತೆ ಮುಖಂಡರಿಂದ ದೂರ ಇರುವುದು ಒಳಿತು.

ಇನ್ನೂ ನಮಗೆ ಸಾಕಷ್ಟು ಕೆಲಸ ಮಾಡಬೇಕಾಗಿದ್ದು, ಮೊದಲನೆಯದಾಗಿ ನಮ್ಮ ಬಳಿ ಗಟ್ಟಿ ಸಂಘಟನೆ ಇಲ್ಲ. ಎಲ್ಲ ಚಳವಳಿಗಳಿಗೂ ಮಾರ್ಗದರ್ಶನ ನೀಡುವುದಕ್ಕೆ ಕೇಂದ್ರ ಮಾರ್ಗದರ್ಶಕ ಮಂಡಳಿ ಇಲ್ಲ. ಸಮಾಜದ ಕೆಲಸ ಮಾಡುವುದಕ್ಕೆ ಕಾರ್ಯಕರ್ತರಿಲ್ಲ. ಈ ಎಲ್ಲ ತೊಂದರೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸುಮಾರು ಎರಡು ಲಕ್ಷ ರೂಪಾಯಿ ನಿಧಿ ಸಂಗ್ರಹಿಸಬೇಕಿದೆ. ಎಲ್ಲ ವಯಸ್ಕ ಮಹಿಳೆಯರು ಮತ್ತು ಪುರುಷರು ವಂತಿಗೆ ನೀಡಿದರೆ ನಿಧಿ ಸಂಗ್ರಹ ಕಷ್ಟಕರವಾಗುವುದಿಲ್ಲ. ಒಂದು ವೇಳೆ ನೀವು ಇಚ್ಛಿಸಿದರೆ ಕೇವಲ ಮುಂಬೈವೊಂದರಲ್ಲಿಯೇ ನಿಧಿ ಸಂಗ್ರಹಿಸಬಹುದು ಅಲ್ಲದೇ ಎಲ್ಲರೂ ಈ ಕೆಲಸಕ್ಕಾಗಿ ಟೊಂಕ ಕಟ್ಟಿ ನಿಲ್ಲುತ್ತೀರಿ ಎಂದು ಭಾವಿಸಿದ್ದೇನೆ. ಅದೇ ರೀತಿ ನಮ್ಮ ಮುಖಪತ್ರವಾಗಿರುವ ಜನತಾದ

ಪ್ರಸರಣ ಹೆಚ್ಚಾಗಬೇಕಿದ್ದು, ಈ ಪತ್ರದ ಮುಖಾಂತರ ಜನರನ್ನು ಉತ್ತೇಜಿತಗೊಳಿಸಬಹುದು.'

ಈ ರೀತಿ ಸುಮಾರು ಒಂದೂವರೆ ಗಂಟೆ ಡಾ. ಅಂಬೇಡ್ಕರ್ ಮಾತನಾಡಿದರು. ಅವರ ಪ್ರತಿಯೊಂದು ಮಾತುಗಳನ್ನು ಸೇರಿದ್ದ ಅಪಾರ ಜನಸ್ತೋಮ ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿತ್ತು. ಕಾರ್ಯಕ್ರಮದ ಅಂತಿಮ ಘಟ್ಟದಲ್ಲಿ ಡಾ. ಅಂಬೇಡ್ಕರ್ ಮತ್ತು ಅಧ್ಯಕ್ಷತೆ ವಹಿಸಿದ್ದ ದೇವರಾಯ ನಾಯಿಕರವರಿಗೆ ವಂದನೆ ಸಲ್ಲಿಸಲಾಯಿತು. ಈ ಸಾರ್ವಜನಿಕ ಸಭೆ ಮಧ್ಯರಾತ್ರಿ ಸುಮಾರು ೧೨ ಗಂಟೆಯವರೆಗೆ ಜರುಗಿತು.

---

೧. ಜನತಾ: ಅಕ್ಟೋಬರ್ ೮, ೧೯೩೨.

## ೫೯.

# ಮುಗ್ಧ ಕಲ್ಪನೆಯಿಂದಾಗಿ ಇಹಲೋಕದ ಜೀವನವೂ ಕಷ್ಟಕರವಾಗಿದೆ

ಬೇಲಾಸಿಸ್ ರೋಡ್ ಇಂಪ್ರೂವ್‌ಮೆಂಟ್ ಟ್ರಸ್ಟ್ ಹತ್ತಿರದ ವಠಾರಕ್ಕೆ ಹೊಂದಿಕೊಂಡಂತಿರುವ ಮೈದಾನ ಭಾನುವಾರ ಅಕ್ಟೋಬರ್ ೮,[೧] ೧೯೩೨ರ ರಾತ್ರಿ ೧೦–೩೦ರ ಹೊತ್ತಿಗೆ ಸಾವಿರಾರು ಮಹಿಳೆ–ಪುರುಷರಿಂದ ತುಂಬಿಹೋಗಿತ್ತು. ಸೋಷಿಯಲ್ ಸರ್ವಿಸ್ ಲೀಗ್‌ನ ಪ್ರಮುಖ ಕಾರ್ಯಕರ್ತ ಶ್ರೀ. ಬಾಪುಸಾಹೇಬ ಸಹಸ್ರಬುದ್ಧೆ ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳುವುದಕ್ಕೆ ನೀಡಿದ ಗೌರವಾದರಕ್ಕೆ ಪ್ರತಿಯಾಗಿ ಅವರು, ಸಭೆಗೆ ಕೃತಜ್ಞತೆ ಸಲ್ಲಿಸಿ, ಡಾ. ಅಂಬೇಡ್ಕರ್ ಅವರು ತಮ್ಮ ವಿದ್ವತ್ತು, ಅಚಲ ಮನೋಧೈರ್ಯ ಮತ್ತು ಅದ್ವಿತೀಯ ಪರಾಕ್ರಮದಿಂದ ಇಡೀ ಜಗತ್ತಿನಲ್ಲಿ ಪ್ರಸಿದ್ಧರಾಗಿದ್ದಾರೆ. ಅಂತಹ ವ್ಯಕ್ತಿ ನೀಡುವ ಉಪನ್ಯಾಸ ಕಾರ್ಯಕ್ರಮಕ್ಕೆ ನನ್ನಂತಹ ಸರಳ ಸಮಾಜಸೇವಕನಿಗೆ ಅಧ್ಯಕ್ಷತೆ ವಹಿಸಿಕೊಳ್ಳುವುದು ಸರಿಯಾಗುವುದಿಲ್ಲ ಎನ್ನಿಸುತ್ತದೆ. ಆದರೆ ಕಲ್ಲನ್ನು ದೇವರಾಗಿ ಪರಿವರ್ತಿಸುವುದು ಹಿಂದೂಗಳ ಸ್ವಭಾವ. ಆ ಸ್ವಭಾವಕ್ಕೆ ತಾವು ಹೊರತಾಗಿಲ್ಲ ಎಂದು ಇನ್ನಷ್ಟು ಮಾತುಗಳನ್ನು ಆಡಿ ತಮ್ಮ ಮಾತಿಗೆ ವಿರಾಮ ನೀಡಿದರು.

ಪುಣೆ ಒಪ್ಪಂದ ಬೆಂಬಲಿಸಿ ನಿರ್ಣಯ ಪಾಸು ಮಾಡುವುದು ಈ ಸಭೆಯ ಮುಖ್ಯ ಉದ್ದೇಶವಾಗಿತ್ತು. ಪುಣೆ ಒಪ್ಪಂದಕ್ಕೆ ಸಹಿ ಹಾಕಿದ್ದ ಶಿವತರಕರ್ ಅವರಿಗೆ ಸಭೆಯ ಎದುರು ನಿರ್ಣಯ ಮಂಡಿಸುವುದಕ್ಕೆ ಸೂಚಿಸಲಾಯಿತು. ಡಾ. ಅಂಬೇಡ್ಕರ್ ಮತ್ತು ಹಿಂದೂ ನಾಯಕರ ಮಧ್ಯೆ ಮಾತುಕತೆ ನಡೆಯುತ್ತಿದ್ದ ವೇಳೆ ಶಿವತರಕರ್ ಅವರೂ ಪುಣೆಯಲ್ಲಿದ್ದರು. ಒಪ್ಪಂದದ ಬಗ್ಗೆ ಅತ್ಯುತ್ತಮ ಭಾಷಣ ಮಾಡಿದರು. ಇದಾದ ಬಳಿಕ ರಾ.ಬ. ಬೋಲೆ ಅವರಿಗೆ ಸಂಬಂಧಿಸಿದ ಮಸೂದೆ ಬೆಂಬಲಿಸುವ ನಿರ್ಣಯವನ್ನು ವನಮಾಳಿ ಮಂಡಿಸಿದರು. ಮುಂಬೈನ ಮುನ್ಸಿಪಲ್ ಕಾರ್ಪೋರೇಷನ್ ನಡೆಸುವ ಶಾಲಾ ಆಡಳಿತ ಮಂಡಳಿಯಲ್ಲಿ ಅಸ್ಪೃಶ್ಯ ಪ್ರತಿನಿಧಿ ಬೇಕು ಎನ್ನುವುದನ್ನು ಅವರು ತಮ್ಮ ಭಾಷಣದಲ್ಲಿ ಹೇಳಿದರು. ಈ ನಿರ್ಣಯಕ್ಕೂ ಸಭೆಯಲ್ಲಿ ಬೆಂಬಲ ವ್ಯಕ್ತವಾದ ಹಿನ್ನೆಲೆಯಲ್ಲಿ ಅದು ಕೂಡ ಅಂಗೀಕಾರವಾಯಿತು.

ಆತುರ ಮತ್ತು ಉತ್ಸುಕತೆಯಿಂದ ಯಾವ ಘಳಿಗೆಗಾಗಿ ಕಾಯುತ್ತಿದ್ದರೋ ಆ ಘಳಿಗೆ ಪ್ರೇಕ್ಷಕರಿಗೆ ಬಂದಿತು. ಡಾ. ಅಂಬೇಡ್ಕರ್ ಭಾಷಣಕ್ಕೆ ಎದ್ದು ನಿಲ್ಲುತ್ತಿದ್ದಂತೆಯೇ ಸಾವಿರಾರು ಪ್ರೇಕ್ಷಕರ ಕರತಾಡನ ಅವರಿಗೆ ಸ್ವಾಗತ ಕೋರಿತು.

ಡಾ. ಅಂಬೇಡ್ಕರ್‌ರವರ ಭಾಷಣದಲ್ಲಿ ನಾಟಕೀಯ ಹಾವಭಾವಗಳಿರಲಿಲ್ಲ ಆದರೂ ಉಚ್ಚರಿಸಿದ ಪ್ರತಿಯೊಂದು ಮಾತು ಚಿತ್ತಾಕರ್ಷಕವಾಗಿದ್ದವು. ವಿಚಾರ ಮಂಡನೆಯಲ್ಲಿ ಡಾಂಭಿಕ ಶಬ್ದಗಳ ಭಂಡಾರ ಇರಲಿಲ್ಲ. ಪ್ರತಿಯೊಂದು ವಿಚಾರ ಸರಣಿ ಸರಳ ಶಬ್ದಗಳಲ್ಲಿ ಹಿಡಿದಿಡಲ್ಪಟ್ಟಿತ್ತು.ಆಬಾಲ ವೃದ್ಧರಿಂದ ಹಿಡಿದು ಹಳ್ಳಿಯ ಮುಗ್ಧನಲ್ಲೂ ಸ್ಪಷ್ಟ ಅರಿವು ಮೂಡಿಸುವಂತಿದ್ದವು ಆ ಮಾತುಗಳು. ಇಷ್ಟೇ ಅಲ್ಲ ಶ್ರೇಷ್ಠ ಕಾನೂನು

---

೧. ಅಕ್ಟೋಬರ್ ೯, ೧೯೩೨ ಇರಬೇಕು – ಸಂಪಾದಕ.

ಪಂಡಿತ ಯಾವ ರೀತಿ ಪ್ರತಿಯೊಂದು ಶಬ್ದ, ವಿಚಾರಗಳನ್ನು ಮಂಡಿಸುತ್ತಾನೋ ಅದೇ ರೀತಿ ಡಾ. ಅಂಬೇಡ್ಕರ್ ತಮ್ಮ ವಿಚಾರ ಸರಣಿಯನ್ನು ಸಭಿಕರ ಎದುರು ಇರಿಸುತ್ತಿದ್ದರು. ಕೊಲೆ ಆಪಾದನೆಗೆ ನೇಣುಗಂಬ ಏರುವ ಆರೋಪಿಯೊಬ್ಬನ ಪರ ಕುಶಾಗ್ರಮತಿಯ ನ್ಯಾಯವಾದಿ ಮಂಡಿಸುವ ವಾದದಂತೆ ಡಾ.ಅಂಬೇಡ್ಕರ್ ಮಂಡಿಸುತ್ತಿದ್ದ ವಿಚಾರ ಸರಣಿ ಎಂತಹ ಮುಗ್ಧ ಶ್ರೋತೃವಿಗೂ ಅರ್ಥವಾಗುವಂತಿತ್ತು. ಅವರು ತಮ್ಮ ಭಾಷಣದಲ್ಲಿ ಹೇಳಿದ್ದಿಷ್ಟು:

'ಸಾವಿನ ನಂತರದ ಮೋಕ್ಷಕ್ಕಾಗಿ ಪರಿತಪಿಸುವ ಇಲ್ಲವೇ ನಂದನವನದಂತಹ ಕಾಲ್ಪನಿಕ ಸ್ವರ್ಗದತ್ತ ದೃಷ್ಟಿ ನೆಟ್ಟು ಕುಳಿತುಕೊಳ್ಳುವುದು ಆತ್ಮವಂಚನೆಯಾಗುತ್ತದೆ. ಇಹಲೋಕದಲ್ಲಿನ ಕಠಿಣ ಬದುಕು ಇಂತಹ ಹುಚ್ಚು ಕಲ್ಪನೆಯಿಂದಾಗಿ ಇನ್ನಷ್ಟು ದುಸ್ತರವಾಗಿದೆ. ಸ್ವಶಕ್ತಿಯ ಮೇಲೆ ಆಹಾರ ಸಂಪಾದನೆ, ಜ್ಞಾನಾರ್ಜನೆಯ ಸಾಧನ ಪಡೆಯುವಲ್ಲಿನ ವೈಫಲ್ಯತೆ ಮತ್ತು ಜೀವನವನ್ನು ಇನ್ನಷ್ಟು ಸುಖಮಯಗೊಳಿಸುವ ಸಂಗತಿಗಳಿಂದ ಬಹುಜನ ಸಮಾಜ ವಿಮುಖವಾಗಿರುವ ಕಾರಣ ಇಡೀ ದೇಶದ ಅಭಿವೃದ್ಧಿ ಕುಂಠಿತಗೊಂಡಿದೆ ಎನ್ನುವುದು ನಿತ್ಯ ಜೀವನದ ಜಂಜಾಟಗಳಿಂದ ಸಾಬೀತು ಆಗಿದೆ. ಕೊರಳಲ್ಲಿನ ತುಳಸಿ ಮಾಲೆ ನಿಮ್ಮನ್ನು ಮಾರವಾಡಿಯ ಅಡಕತ್ತರಿಯಿಂದ ಬಿಡುಗಡೆಯಾಗುವುದಕ್ಕೆ ನೆರವಾಗುವುದಿಲ್ಲ ಇಲ್ಲವೇ ನೀವು ರಾಮನಾಮ ಜಪಿಸುತ್ತೀರಿ ಎನ್ನುವ ಕಾರಣಕ್ಕೆ ಮನೆ ಮಾಲೀಕ ಬಾಡಿಗೆಯಲ್ಲಿ ರಿಯಾಯಿತಿ ನೀಡಲಾರ. ಪಂಢರಪುರದ ವಿಠಲನ ವಾರಕರಿವರೆಂದ ಮಾತ್ರಕ್ಕೆ ನಿಮ್ಮ ಯಜಮಾನ ವೇತನ ಹೆಚ್ಚಿಸುವುದಿಲ್ಲ. ಸಮಾಜದ ಬಹುಮುಖ್ಯ ಘಟಕ ಇಂತಹ ಮೂಢ ಕಲ್ಪನೆಯಲ್ಲಿ ಮುಳುಗಿರುವುದರಿಂದ ಕೆಲವೇ ಸ್ವಾರ್ಥಿಗಳು ತಮ್ಮ ಕೆಲಸ ಸಾಧಿಸಿಕೊಳ್ಳುವುದಕ್ಕೆ ನಿಮ್ಮ ಮುಗ್ಧತೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಅಂತಹ ವ್ಯಕ್ತಿಗಳು ರೂಪಿಸುವ ತಂತ್ರಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಎಚ್ಚರದಿಂದ ಇರಬೇಕಾಗುತ್ತದೆ. ಇಂದಿನ ನಮ್ಮ ಸ್ಥಿತಿ ಬದಲಿಸಿಕೊಳ್ಳುವುದಕ್ಕೆ ಲಭಿಸಿರುವ ರಾಜಕೀಯ ಅಧಿಕಾರ ನಿರ್ಲಕ್ಷಿಸಿದಲ್ಲಿ, ಅಥವಾ ಈಗ ಸಿಕ್ಕಿರುವ ರಾಜಕೀಯ ಅಧಿಕಾರದ ಸೂಕ್ತ ಉಪಯೋಗವಾಗದಿದ್ದಲ್ಲಿ ನಿಮ್ಮಗಳ ದುಸ್ಥಿತಿ ಹಾಗೇ ಮುಂದುವರಿಯುವುದರಲ್ಲಿ ಸಂಶಯವಿಲ್ಲ. ಇಂದು ಜಾಗೃತಿಯತ್ತ ಹೆಜ್ಜೆ ಹಾಕುತ್ತಿರುವ ನಾವು ವಿರಮಿಸುವ ಕಾರಣವಿಲ್ಲ. ಯಾವ ಗುಲಾಮಗಿರಿಯ ನಿರ್ಮೂಲನೆಗೆ ನಾವು ಹೋರಾಟ ಮಾಡಿದ್ದೇವೆಯೋ ಅಂತಹ ಗುಲಾಮಗಿರಿಯ ಟೋಪಿ ಮತ್ತೆ ನಮ್ಮ ತಲೆಯ ಮೇಲೆ ಇರಬಾರದು ಅಲ್ಲವೇ?

ಇಂದಿನವರೆಗೆ ವೈಷ್ಣವ ಪಂಥದ ಸಂತರು ನಿಮ್ಮನ್ನು ಸಮಾನತೆಯ ಮೆಟ್ಟಿಲು ಮೇಲೆ ತರುವ ಕೆಲಸ ಮಾಡಿದ್ದಾರೆ. ಆದರೆ ಅವರ ಪ್ರವಚನ ಕೇವಲ ಆಧ್ಯಾತ್ಮಿಕ ಸ್ವರೂಪದ್ದು ಅಲ್ಲದೇ ಅವರು ಸ್ವತಃ ಐಹಿಕ ಸುಖ ಸಂತೋಷಗಳಿಂದ ದೂರ ಇರುವ ಕಾರಣ ಅವರು ತಮ್ಮ ಸಮುದಾಯದ ಶ್ರೇಷ್ಠತೆ ಹೆಚ್ಚಿಸಿಕೊಂಡಿಲ್ಲ. ಅವರ ಪ್ರವಚನಗಳಿಂದ ನಿಮ್ಮ ಗುಲಾಮಗಿರಿಯಲ್ಲಿ ಏನೇನೂ ಬದಲಾಗಿಲ್ಲ. ಭಾರತದ ಬಹುಜನ ಸಮಾಜ ರಾಜಕಾರಣದಿಂದ ದೂರ ಇದ್ದಿದ್ದಕ್ಕೆ ದೇಶ ಇಂದು ಇಂತಹದ್ದೊಂದು ಪರಿಸ್ಥಿತಿಯಲ್ಲಿ ನರಳಬೇಕಾಗಿದೆ. ಆದಾಗ್ಯೂ ಈ ತಪ್ಪನ್ನು ಮತ್ತೆ ಪುನರಾವರ್ತಿಸದೇ ಎಚ್ಚರಿಕೆಯಿಂದ ಮುಂದಿನ ಹೆಜ್ಜೆ ಇರಿಸಬೇಕಿದೆ. ಶಿಕ್ಷಣ ಮತ್ತು ಅಸ್ಪೃಶ್ಯರ ಉನ್ನತಿಯಲ್ಲಿ ಸಂಬಂಧ ಹೇಗಿದೆ ಎಂದರೆ ಮುಂಬೈನಲ್ಲಿ ಸುಮಾರು ಎರಡು ಲಕ್ಷ ಅಸ್ಪೃಶ್ಯರಿದ್ದಾರೆ. ಮುಂಬೈ ಮಹಾನಗರದಲ್ಲಿನ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ಮಹಾನಗರ ಪಾಲಿಕೆಯ ಸ್ಕೂಲ್ ಕಮಿಟಿ ನೋಡುತ್ತದೆ. ಈ ಕಮಿಟಿಗೆ ಪ್ರತಿ ವರ್ಷ ಸರಿಸುಮಾರು ೩೦–೩೨ ಲಕ್ಷ ರೂಪಾಯಿ ಅನುದಾನ ಲಭಿಸುತ್ತದೆ. ಇಷ್ಟು ಮೊತ್ತದ ಅನುದಾನದಲ್ಲಿ ಅಸ್ಪೃಶ್ಯರಿಗಾಗಿ ಎಷ್ಟು ಖರ್ಚಾಗುತ್ತಿದೆ? ವಿವಿಧ ಶಾಲೆಗಳಿಗೆ ನೇಮಕವಾಗುವ ಶಿಕ್ಷಕರಲ್ಲಿ ಅಸ್ಪೃಶ್ಯರಿಗೆ ಸೌಲಭ್ಯ ನೀಡಲಾಗಿದೆಯೋ ಇಲ್ಲವೋ ಸೇರಿದಂತೆ

ಅಸ್ಪೃಶ್ಯರ ಹಿತಾಸಕ್ತಿಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳಿವೆ. ಇಂತಹ ವಿಷಯಗಳ ಅನುಷ್ಠಾನ ಯಾವ ರೀತಿ ಆಗುತ್ತಿದೆ ಎನ್ನುವುದನ್ನು ನೋಡುವುದಕ್ಕೆ ಕಮಿಟಿಯಲ್ಲಿ ಕನಿಷ್ಠ ಒಬ್ಬ ಅಸ್ಪೃಶ್ಯ ಪ್ರತಿನಿಧಿಯ ಅವಶ್ಯಕತೆ ಇದೆ. ಇಂತಹ ಸಣ್ಣ ಬೇಡಿಕೆಗಳಿಗೂ ಬೇರೆಯವರಿಂದ ಏಕೆ ವಿರೋಧ ವ್ಯಕ್ತವಾಗುತ್ತಿದೆ ಎನ್ನುವುದು ಅರ್ಥವಾಗುತ್ತಿಲ್ಲ. ಕೆಲವು ದಿನಗಳ ಹಿಂದೆ ಕಾನೂನು ಮಂಡಳಿ ಎಂದು ಪ್ರಸ್ತಾಪಿಸಿರುವ ಗ್ರಾಮ ಪಂಚಾಯಿತಿ ಮಸೂದೆಯಲ್ಲಿ ಚಿಕ್ಕಪುಟ್ಟ ಕ್ರಿಮಿನಲ್ ಮತ್ತು ಸಿವಿಲ್ ಮೊಕದ್ದಮೆಗಳ ವಿಚಾರಣೆ ಮತ್ತು ನ್ಯಾಯದಾನ ನೀಡುವುದಕ್ಕೆ ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ನೀಡುವ ಕುರಿತು ಪ್ರಸ್ತಾಪಿಸಲಾಗಿದೆ. ಜನಮತದಿಂದ ಆಯ್ಕೆಯಾಗುವಂತಹ ಈ ಪಂಚಾಯಿತಿ ಸದಸ್ಯರ ನಿಷ್ಪಕ್ಷಪಾತ ಧೋರಣೆ ಬಗ್ಗೆ ನನಗೆ ಸಂಶಯ ಇದೆ. ಏಕೆಂದರೆ ಪ್ರತಿಯೊಂದು ಹಳ್ಳಿಯಲ್ಲಿರುವ ಅಸ್ಪೃಶ್ಯರು ಮತ್ತು ಅಲ್ಪಸಂಖ್ಯಾತರು ಬಡತನದ ಕರಿನೆರಳು ಮತ್ತು ಪರಾವಲಂಬಿಯಾಗಿ ಬದುಕುತ್ತಿದ್ದಾರೆ. ಗ್ರಾಮ ಪಂಚಾಯಿತಿ ಸಂವಿಧಾನದಲ್ಲಿ ಅಸ್ಪೃಶ್ಯರಿಗೆ ಸ್ವಸಂರಕ್ಷಣೆಯ ನಿಯಮಗಳಿರದೇ ಈ ಬಡ ಸಮಾಜಕ್ಕೆ ಯಾವುದೇ ಪ್ರಯೋಜನವಾಗುವುದಿಲ್ಲ. ಈಗಾಗಲೇ ವರಳಿಯಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಪ್ರಕಟಿಸಿದಂತೆ ಸಂಘಟನೆ ಕಾರ್ಯ ಕೈಗೆತ್ತಿಕೊಳ್ಳುವುದಕ್ಕೆ ಕೇಂದ್ರೀಕೃತ ಸಂಘಟನೆಯ ಸ್ಥಾಪನೆಯ ಅಗತ್ಯವಿದೆ. ಎಲ್ಲೋ ಒಂದು ಕಡೆ ಅಸ್ಪೃಶ್ಯರ ಮೇಲೆ ಮರಾಠಿಗರು ಹಲ್ಲೆ ಮಾಡಿದರು. ಇಲ್ಲವೇ ಅವರ ಮಕ್ಕಳಿಗೆ ತೊಂದರೆ ಮಾಡಿದರು. ಇಲ್ಲವೇ ಅವರ ವತನದಾರಿ ಜಪ್ತಿ ಮಾಡಿಕೊಳ್ಳಲಾಯಿತು ಇಂತಹ ಅನೇಕ ದೂರುಗಳಿವೆ. ಒಂದು ಹಳ್ಳಿಯಲ್ಲಿ ಇಂತಹದ್ದೆ ಒಂದು ಕಾರಣಕ್ಕೆ ಮಹಾರ್‌ರಿಗೆ ವಹಿಸಿದ್ದ ಸರ್ಕಾರಿ ಕೆಲಸದ ಜವಾಬ್ದಾರಿಯನ್ನು ಮಾಮಲೇದಾರ ಕಿತ್ತುಕೊಂಡ. ಮಹಾರ್‌ರು ಸರ್ಕಾರಿ ಕೆಲಸ ಮಾಡುತ್ತಿಲ್ಲ ಎಂದು ಅಧಿಕಾರಿ ಸುಳ್ಳು ದೂರನ್ನು ಹಿರಿಯ ಅಧಿಕಾರಿಗಳಲ್ಲಿ ಮಾಡಿದ್ದ. ಆದರೆ ಮಹಾರ್‌ರು ಎಂದಿಗೂ ಸರ್ಕಾರದ ಕೆಲಸ ಮಾಡುವುದಕ್ಕೆ ನಿರಾಕರಿಸಿರಲಿಲ್ಲ. ಮಹಾರ್‌ರು ಕೂಡ ಸರಿಯಾಗಿ ಉತ್ತರ ನೀಡಿದ್ದರೂ ಮಾಮಲೇದಾರ ಅದಕ್ಕೆ ವಿರುದ್ಧವಾಗಿ ಲಿಖಿತ ಉತ್ತರ ಬರೆದು ವತನದಾರಿ ಜಪ್ತಿಗೆ ಶಿಫಾರಸು ಮಾಡಿದ್ದ. ಹಿರಿಯ ಅಧಿಕಾರಿಗಳದ್ದು ಇದೇ ಹಣೆಬರಹ. ಮಹಾರ್‌ರ ಹೇಳಿಕೆ ಕೇಳಿಸಿಕೊಳ್ಳುವವರು ಯಾರೂ ಇಲ್ಲ ಅಂತಿಮವಾಗಿ ಕೆಲವು ವರ್ಷಗಳ ಮಟ್ಟಿಗೆ ಜಪ್ತಿ ಆಯಿತು. ಇದರಿಂದಾಗಿ ಮಹಾರ್‌ರು ಸಾವಿರಾರು ರೂಪಾಯಿ ನಷ್ಟ ಅನುಭವಿಸಬೇಕಾಯಿತು. ಇಂತಹ ದೂರುಗಳು ಬಂದ ಬಳಿಕ ಒಬ್ಬ ವಕೀಲನನ್ನು ಅಲ್ಲಿಗೆ ಕಳುಹಿಸಿಕೊಡಬೇಕು. ಇನ್ನಷ್ಟು ವಿಚಾರಣೆ ನಡೆಯಬೇಕೆಂದರೆ ಹಣ ಬೇಕು. ಹಣದ ಕೊರತೆಯಿಂದಾಗಿ ಇದು ಅಸಾಧ್ಯದ ಸಂಗತಿಯಾಗಿ ಪರಿಣಮಿಸಿದೆ. ಇಂತಹ ಕೆಲಸಗಳಿಗಾಗಿ ನಿಧಿ ಕ್ರೋಡೀಕರಿಸದೇ ಗತ್ಯಂತರವಿಲ್ಲ. ಈ ರೀತಿ ಅನ್ಯಾಯ ನಡೆಯುತ್ತಿದ್ದರೆ ಪರಿಸ್ಥಿತಿ ನೆಟ್ಟಗೆ ಇರುವುದಿಲ್ಲ ಎನ್ನುವ ಸಂದೇಶ ಸರ್ಕಾರಿ ಮಾಮಲೇದಾರರಿಗೆ ಮುಟ್ಟುವಂತಾಗಬೇಕು.

ಅಂಬೇಡ್ಕರ್ ಭಾಷಣ ಪೂರ್ಣಗೊಂಡ ಬಳಿಕ ಆಗಮಿಸಿದ ಶ್ರೀ. ಮನಿಯಾರ್ ಅವರನ್ನು ಎರಡು ಮಾತುಗಳನ್ನು ಆಡುವಂತೆ ಕೇಳಿಕೊಳ್ಳಲಾಯಿತು. ಇದಕ್ಕೆ ಪ್ರತಿಯಾಗಿ ಶ್ರೀ. ಮನಿಯಾರ್ ಅವರು ಪುಣೆ ಒಪ್ಪಂದಕ್ಕೆ ತಮ್ಮ ಸಂತಸ ವ್ಯಕ್ತಪಡಿಸಿದರಲ್ಲದೇ ಡಾ. ಅಂಬೇಡ್ಕರ್ ಅವರ ಕರ್ತೃತ್ವಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು.

## ೬೦.

# ಮುಂದುವರಿದವರು ಸ್ಪೃಶ್ಯಾಸ್ಪೃಶ್ಯತೆ ನಿರ್ಮೂಲನೆಗೆ ಮುಂದಾಗಲಿ

ಮಹಾರ್ ಸೇವಾ ಸಂಘ (ರಾಜಾಪುರ-ಗೋವಾ ಗಡಿ)ದ ವತಿಯಿಂದ ಅಕ್ಟೋಬರ್ ೨೨, ೧೯೩೨ರಂದು ಸಂಜೆ ೭ಕ್ಕೆ ಸಾವಂತವಾಡಿ ಜೈಲಿನ ಬಳಿ ಇರುವ ಮಹಾರವಾಡೆಯಲ್ಲಿ ಅಸ್ಪೃಶ್ಯರಿಂದ ಡಾ. ಅಂಬೇಡ್ಕರ್ ಅವರ ಅಭಿನಂದನೆ ಸಮಾರಂಭ ಏರ್ಪಡಿಸಲಾಗಿತ್ತು.

ಆ ದಿನವಂತೂ ಮುಗಿಲು ಹರಿಯುವಂತೆ ಮಳೆ ಸುರಿಯುತ್ತಿತ್ತು. ಸಭೆಯಲ್ಲಿ ಸುಮಾರು ಸಾವಿರ ಸ್ಪೃಶ್ಯರು ಮತ್ತು ಎರಡು ಸಾವಿರ ಅಸ್ಪೃಶ್ಯರು ಉಪಸ್ಥಿತರಿದ್ದರು. ಬಾಬಾಸಾಹೇಬ ಘೋರ್ಪಡೆ ಅವರ ಹೆಸರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ಶಿವರಾಮ್ ನಾರಾಯಣ ವಾಲವಾಲಕರ್ ವಿನಂತಿಸಿಕೊಂಡರು. ವಾಲವಾಲಕರ್ ವಿನಂತಿಯನ್ನು ಗಣಪತರಾವ್ ಜಾಧವ್ ಅನುಮೋದಿಸಿದರು. ಬಾಬಾಸಾಹೇಬ್ ಘೋರ್ಪಡೆ ಅವರು ಅಧ್ಯಕ್ಷತೆ ವಹಿಸಿಕೊಂಡ ಬಳಿಕ ಡಾ. ಅಂಬೇಡ್ಕರ್ ಅವರನ್ನು ಸಭೆಗೆ ಪರಿಚಯಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡುವಂತೆ ವಿನಂತಿಸಿಕೊಳ್ಳಲಾಯಿತು. ಕರತಾಡನದೊಂದಿಗೆ ಡಾ. ಅಂಬೇಡ್ಕರ್ ಮಾತಿಗೆ ನಿಂತರು.

ಒಂದು ಕ್ಷಣ ಆಕಾಶದತ್ತ ಮುಖ ಮಾಡಿದ ಡಾ. ಅಂಬೇಡ್ಕರ್, 'ಮೇಘರಾಜಾ ಕೇವಲ ಹತ್ತು ನಿಮಿಷ ಅವಕಾಶ ಕೊಡು' ಎಂದು ಹೇಳಿ ಕೇವಲ ಹತ್ತು ನಿಮಿಷದ ಅವಧಿಯಲ್ಲಿ ಅತ್ಯಂತ ಪರಿಣಾಮಕಾರಿ ಮಾತುಗಳನ್ನು ಆಡಿದರು. ಅಸ್ಪೃಶ್ಯ ಬಂಧುಗಳು ತಮ್ಮ ಸ್ವಸಾಮರ್ಥ್ಯ ಅವಲಂಬಿಸಿ ಉನ್ನತಿಯ ಮಾರ್ಗದಲ್ಲಿ ಸಾಗಬೇಕು ಎಂದು ಕಳಕಳಿಯ ವಿನಂತಿ ಮಾಡಿಕೊಂಡರು. ಅದೇ ರೀತಿ ಮುಂದುವರಿದವರು ಬಹುಸಂಖ್ಯಾತ ಹಿಂದುಳಿದವರ ಮೇಲೆ ಮತ್ತು ಅಸ್ಪೃಶ್ಯರ ಮೇಲೆ ಯಾವ ರೀತಿಯ ಅಪರಾಧಗಳನ್ನು ಎಸಗುತ್ತಿದ್ದಾರೆ ಎಂದು ವಿವರಿಸಿದರು. ಕನಿಷ್ಠ ಸ್ವಾರ್ಥ ಲಾಲಸೆಗಾಗಿ ಮತ್ತು ಆತ್ಮಸಂರಕ್ಷಣೆಯ ಉದ್ದೇಶದಿಂದಲಾದರೂ ಸ್ಪೃಶ್ಯ- ಅಸ್ಪೃಶ್ಯ ಭೇದ ನೀತಿ ಕೈಬಿಡಬೇಕು. ಇಲ್ಲದೇ ಹೋದಲ್ಲಿ ಹಿಂದೂ ಸಮಾಜ ತನ್ನ ಅಪರಾಧಗಳಿಗೆ ತಾನೇ ಶಿಕ್ಷೆ ಅನುಭವಿಸಬೇಕಾದಂತಹ ಪರಿಸ್ಥಿತಿಯಲ್ಲಿ ಸಿಲುಕಿಕೊಳ್ಳಬೇಕಾಗುತ್ತದೆ ಎಂಬ ಆಶಯದ ಮಾತುಗಳನ್ನಾಡಿದರು. ಕೇವಲ ಹತ್ತು ನಿಮಿಷಗಳಲ್ಲಿ ಡಾ. ಅಂಬೇಡ್ಕರ್ ತಮ್ಮ ಭಾಷಣ ಪೂರ್ಣಗೊಳಿಸಿ ವೇದಿಕೆಯಿಂದ ಕೆಳಗೆ ಇಳಿಯುತ್ತಿದ್ದಂತೆಯೇ ಶುರುವಾದ ಮಳೆ ಐದು ನಿಮಿಷಗಳ ಕಾಲ ಎಡೆಬಿಡದೇ ಸುರಿಯಿತು.

ಶ್ರೀ. ಬಿ. ಎಸ್. ಜಾಧವ, ತ್ರಿಂಬಕಕರ್ ಅವರ; 'ಪ್ರಕೃತಿಯ ಮೇಲೆ ಹಿಡಿತ' ಶೀರ್ಷಿಕೆಯಡಿ ಮೇ ೧. ೧೯೫೪ರಂದು 'ಜನತಾ' ಪತ್ರಿಕೆಯಲ್ಲಿ ಪ್ರಕಟಿತ ವರದಿ ಓದಿ ಸುಮಾರು ೨೦ ವರ್ಷಗಳ ಹಿಂದೆ ನಡೆದಿರುವ ಈ ಘಟನೆಯನ್ನು ಉದ್ದೇಶಪೂರ್ವಕವಾಗಿ ಇಲ್ಲಿ ಉಲ್ಲೇಖಿಸಲಾಗಿದೆ.

---

ಜನತಾ: ನವಂಬರ್ ೫, ೧೯೩೨

# ೬೧.

# ಕುಲಕಸುಬು ಬಿಡಿ ಶಿಕ್ಷಣದ ಕೆಚ್ಚಲು ಹಿಡಿಯಿರಿ

ಶುಕ್ರವಾರ ಅಕ್ಟೋಬರ್ ೨೮, ೧೯೩೨ರಂದು ಮುಂಬೈನ ಅಪೋಲೋ ಬಂದರ್ ಬಳಿ ಇರುವ ಸರ್ ಕಾವಸಜೀ ಜಹಾಂಗೀರ್ ಹಾಲ್‌ನಲ್ಲಿ ಅಸ್ಪೃಶ್ಯ ವರ್ಗದ ನೇತಾರ ಡಾ. ಪಿ. ಜಿ. ಸೋಳಂಕಿ ಅವರ ಅಧ್ಯಕ್ಷತೆಯಲ್ಲಿ ಭಾರತದ ದಲಿತ ವರ್ಗದ ನಾಯಕ ಡಾ. ಅಂಬೇಡ್ಕರ್ ಅವರನ್ನು ಋಷಿ ಸಮಾಜದ ವತಿಯಿಂದ ಸನ್ಮಾನಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸನ್ಮಾನ ಸ್ವೀಕರಿಸಿದ ಡಾ. ಅಂಬೇಡ್ಕರ್ ಹೇಳಿದ್ದಿಷ್ಟು:

'ನನಗಂತೂ ಹೃದಯ ತುಂಬಿ ಬಂದಿದೆ. ಈ ಮಾನಪತ್ರ ಕೇವಲ ನನಗೆ ಮಾತ್ರ ನೀಡಲಾಗುತ್ತಿದೆ. ಆಗುತ್ತಿರುವ ಯಾವುದೇ ಅಸ್ಪೃಶ್ಯ ವರ್ಗದ ಕೆಲಸಗಳು ಕೇವಲ ನನ್ನಿಂದ ಮಾತ್ರ ಆಗುತ್ತಿವೆ ಎನ್ನುವುದು ಶುದ್ಧ ಸುಳ್ಳು. ಯಾವ ಕೆಲಸಕ್ಕಾಗಿ ನನಗೆ ನೀವು ನೀಡುತ್ತಿರುವ ಶ್ರೇಯಸ್ಸಿಗಿಂತ ಹೆಚ್ಚಿನ ಶ್ರೇಯಸ್ಸನ್ನು ಡಾ. ಸೋಳಂಕಿ ಮತ್ತು ನನ್ನೊಂದಿಗೆ ಕೆಲಸ ಮಾಡುತ್ತಿರುವ ಇತರರಿಗೂ ನೀಡಬೇಕಾಗುತ್ತದೆ. ಡಾ. ಸೋಳಂಕಿ ನನ್ನೊಂದಿಗೆ ಸೇರಿಕೊಂಡು ಕೆಲಸ ಮಾಡುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ಕೌನ್ಸಿಲ್‌ನಲ್ಲಿ ನಾನು ಯಾವುದೇ ಕೆಲಸ ಮಾಡಿಲ್ಲ. ಆದರೆ ಡಾ. ಸೋಳಂಕಿ ಮಾತ್ರ ಅಸ್ಪೃಶ್ಯರ ಮಹತ್ವದ ಕೆಲಸಗಳನ್ನು ಮಾಡಿದ್ದಾರೆ. ಪುಣೆಯಲ್ಲಿ ಹಿಂದೂ ನಾಯಕರೊಂದಿಗೆ ಮಾತುಕತೆ ನಡೆಯುತ್ತಿದ್ದ ವೇಳೆ ಡಾ. ಸೋಳಂಕಿ ನನ್ನ ಬೆನ್ನಿಗೆ ನಿಂತು ಕೆಲಸ ಮಾಡಿದ್ದಾರೆ. ಅವರು ತಮಗೆ ದೊರೆಯಬೇಕಾದ ಸನ್ಮಾನ ಸ್ವೀಕರಿಸದೇ ನನಗೆ ನೀಡಬೇಕು ಎಂದು ಹೇಳಿರುವುದು ಅವರ ಔದಾರ್ಯಕ್ಕೆ ಹಿಡಿದ ಕನ್ನಡಿ. ಅಂತಿಮವಾಗಿ ನಾನು ನಿಮಗೆ ಹೇಳುವುದು ಇಷ್ಟೇ. ಪುಣೆ ಒಪ್ಪಂದದಲ್ಲಿ ನಮಗೆ ಲಭಿಸಿರುವ ಸೌಲಭ್ಯಗಳ ಪ್ರಯೋಜನವನ್ನು ನಮ್ಮ ಜನರು ಯಾವ ರೀತಿಯಲ್ಲಿ ಪಡೆಯಲಿದ್ದಾರೆ ಎನ್ನುವುದು ನನಗೆ ತಿಳಿಯುತ್ತಿಲ್ಲ. ಸಂಸಾರದ ಜಂಜಾಟದಲ್ಲಿ ಮನುಷ್ಯನಿಗೆ ಬರುವ ಸುಖ–ದುಃಖಗಳನ್ನು ದೈವೇಚ್ಛೆಯಂತೆ ಅನುಭವಿಸಲೇಬೇಕು. ನಮ್ಮ ದಾರಿದ್ರ್ಯ ನಮ್ಮ ಪಾಲಿಗೆ ಬಂದದ್ದು ಎಂದು ಭಾವಿಸುವವರು ಇದ್ದಾರೆ. ಈ ಕಾರಣಕ್ಕೆ ನಾನು ಹೇಳುವುದು ಎಂದರೆ ನಮ್ಮನ್ನು ನಾವೇ ಕೀಳರಿಮೆಯಿಂದ ನೋಡಿಕೊಳ್ಳಲೇಬಾರದು. ಇದೀಗ ರಾಜಕಾರಣದಲ್ಲಿ ಆಗಿರುವ ಬೃಹತ್ ಬದಲಾವಣೆಗೆ ಉನ್ನತ ವರ್ಗದ ಹಿಂದೂಗಳು ಯಾವುದೇ ಬೆಲೆ ನೀಡುವುದಿಲ್ಲ. ಅವರು ಈ ದೇಶದ ಆಡಳಿತ ಚುಕ್ಕಾಣಿ ಹಿಡಿಯುವವರು ಎಂದು ಭಾವಿಸಿದ್ದಾರೆ. ಆದರೆ ಇನ್ನು ಮುಂದೆ ಮತ್ತೆ ಯಾವುದೇ ಕಾರಣಕ್ಕೂ ಹಿಂದೂಗಳ ದಾಸ್ಯಕ್ಕೆ ಒಳಗಾಗುವಂತಹ ಪ್ರಸಂಗ ಉದ್ಭವಿಸದು ಅದಕ್ಕೆ ಕಾರಣ ಇಷ್ಟೇ. ಯಾವುದೇ ಕಾನೂನು ಅಸ್ಪೃಶ್ಯರ ಒಪ್ಪಿಗೆ ಇದ್ದರೆ ಮಾತ್ರ ಜಾರಿಗೆ ಬರಬೇಕಾದಂತಹ ಸಾಮಾಜಿಕ ಕ್ರಾಂತಿ ಘಟಿಸಿದೆ. ಅಸ್ಪೃಶ್ಯರಿಗೆ ಇಂದು ಲಭಿಸಿರುವ ಹಕ್ಕುಗಳನ್ನು ಕಿತ್ತುಕೊಳ್ಳುವ ಪ್ರಯತ್ನ ಉನ್ನತ ಹಿಂದೂ ವರ್ಗದಿಂದ ನಡೆಯಲಿದೆ. ಸಮಾನತೆಯ ತತ್ವದ ಮೇಲೆ ಗಾಂಧೀಜಿ ಅವರೊಂದಿಗೆ ಆಗಿರುವ ಈ ಒಪ್ಪಂದ ಹಿಂದೂಗಳಿಗೆ ಇಷ್ಟವಾಗಿಲ್ಲ ಎನ್ನುವುದನ್ನು ಗುರುತಿಸಿದ್ದೇನೆ. ಮಹಾತ್ಮ ಗಾಂಧೀಜಿ ಅವರು ಉಪವಾಸ ಸತ್ಯಾಗ್ರಹಕ್ಕೆ ಕುಳಿತಿದ್ದರಿಂದ ಅವರನ್ನು ಉಳಿಸಿಕೊಳ್ಳುವ ಏಕೈಕ ಉದ್ದೇಶದಿಂದ ಹಿಂದೂಗಳು

ಈ ಒಪ್ಪಂದ ಮಾಡಿಕೊಂಡಿದ್ದಾರೆ. ಆದಾಗ್ಯೂ ಕೂಡ ಅವರು ನಮ್ಮ ಕೈಗೆ ಬಂದಿರುವ ಅಧಿಕಾರ ಕಿತ್ತುಕೊಳ್ಳುವುದಕ್ಕೆ ಪ್ರಯತ್ನಿಸಲಿದ್ದಾರೆ ಎಂಬ ಸಂಶಯದ ಜೊತೆಗೆ ನೀವುಗಳು ನಿಮ್ಮ ಕೈಗೆ ಸಿಕ್ಕಿರುವ ಅಧಿಕಾರ ಕಳೆದುಕೊಳ್ಳುವುದಿಲ್ಲ ಎಂಬ ಭರವಸೆಯೂ ಇದೆ.

ಇನ್ನೊಂದು ಮಹತ್ವದ ಸಂಗತಿ ನಾನಿಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ಸಹಭೋಜನ ಆಗಲಿ ಅಥವಾ ಮಂದಿರ ಪ್ರವೇಶಕ್ಕೆ ನಾನು ವಿರುದ್ಧವಾಗಿಲ್ಲ. ಆದರೆ ಇಂತಹ ಕ್ರಮಗಳಿಂದ ನಮಗೆ ರಾಜಕೀಯ ಅಧಿಕಾರ ಲಭಿಸದು. ನಮಗೆ ಸಂಸಾರ ನಡೆಸುವ ಅವಶ್ಯಕತೆ ಇದೆ. ತಿನ್ನಲು ಅನ್ನ, ಧರಿಸಲು ಬಟ್ಟೆ, ಇರುವುದಕ್ಕೆ ನೆಮ್ಮದಿಯ ಸೂರು ಬೇಕಿದೆ. ಯಾವ ರೀತಿ ಉನ್ನತ ವರ್ಗದ ಹಿಂದೂಗಳು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡುತ್ತಾರೋ ಅಂತಹದ್ದೇ ಶಿಕ್ಷಣವನ್ನು ನಮ್ಮ ಮಕ್ಕಳಿಗೆ ನೀಡುವುದು ಅತ್ಯಗತ್ಯವಾಗಿದೆ ಮತ್ತು ಅದೇ ರೀತಿ ಸರ್ಕಾರದ ಎಲ್ಲ ಹುದ್ದೆಗಳಲ್ಲೂ ಸೇರಿಕೊಳ್ಳುವಂತಹ ಕೆಲಸ ನಾವು ಮಾಡಿದರೆ ಮಾತ್ರ ಉದ್ಧಾರವಾಗುತ್ತೇವೆ.

ಕೊನೆಗೆ ಋಷಿ ಮಂಡಳಿಗೆ ನನ್ನ ಪ್ರೀತಿಪೂರ್ವಕ ಸೂಚನೆ ಎಂದರೆ, ಅಸ್ಪೃಶ್ಯ ವರ್ಗದಲ್ಲೂ ಇರುವ ಜಾತಿ ವ್ಯವಸ್ಥೆ ನಿರ್ಮೂಲನೆಯ ನಿಟ್ಟಿನಲ್ಲಿ ಪ್ರಯತ್ನಿಸಬೇಕಿದೆ. ಅಸ್ಪೃಶ್ಯ ವರ್ಗವನ್ನು ಸಾಮಾಜಿಕವಾಗಿ ಸುಧಾರಿಸುವ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಬೇಕಿದೆ. ಮನೆಯ ಅಡಿಪಾಯ ಗಟ್ಟಿ ಇದ್ದಷ್ಟು ಕಟ್ಟಡ ಹೇಗೆ ಹೆಚ್ಚು ಬಾಳಿಕೆ ಬರುತ್ತದೋ ಅದೇ ರೀತಿ ಋಷಿ ಸಮಾಜ ಅಸ್ಪೃಶ್ಯ ವರ್ಗದ ಅಡಿಪಾಯ ಆಗಿದ್ದು. ಈ ಕಾರಣಕ್ಕಾಗಿ ಅದರ ಸಾಮಾಜಿಕ ಕಾರ್ಯಗಳು ಅಸ್ಪೃಶ್ಯರಿಗೆ ಆದರ್ಶವಾಗಬೇಕು. ನಾವು ಯಾವುದೇ ಜಾತಿಗಿಂತ ನೀಚವೂ ಅಲ್ಲ ಉಚ್ಚ ಎಂದೂ ಭಾವಿಸುವುದಿಲ್ಲ ಎಂದು ಋಷಿ ಸಮಾಜ ಪ್ರಕಟಿಸಿದ್ದೇ ಆದಲ್ಲಿ ಅಸ್ಪೃಶ್ಯ ವರ್ಗದಲ್ಲಿನ ಸಾಮಾಜಿಕ ಸುಧಾರಣೆಗೆ ವೇಗ ಬರುತ್ತದೆ. ಇನ್ನೊಂದು ವಿಷಯ ಎಂದರೆ ಉಚ್ಚವರ್ಗದ ಜನರು ನಮ್ಮಲ್ಲಿ ಭಂಗಿಯ ಕೆಲಸ ವಂಶಪಾರ್ಯಂಪರ ಎಂದು ಬೆಳೆಸಿರುವ ಭಾವನೆ ಈಗ ನಮ್ಮ ಮನೋವೃತ್ತಿಯಾಗಿಬಿಟ್ಟಿದೆ. ಇಂತಹ ಮನೋಭಾವ ನಮ್ಮಲ್ಲಿ ಬೆಳೆಯಲು ನಮ್ಮ ಆರ್ಥಿಕ ಸ್ಥಿತಿಗತಿ ಕಾರಣ ಅಷ್ಟೇ. ಭಂಗಿ ಕೆಲಸ ಮಾಡುತ್ತಿರುವ ನಮ್ಮ ಜನರು ಇದನ್ನು ಕುಲಕಸುಬನ್ನಾಗಿಸುವ ಧೋರಣೆ ಕೈಬಿಟ್ಟು, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದಕ್ಕೆ ಆದ್ಯತೆ ನೀಡಬೇಕು.

ಅಸ್ಪೃಶ್ಯತೆ ಬೇರುಸಮೇತ ನಿರ್ನಾಮವಾದರೆ ಮಾತ್ರ ನಮ್ಮ ಸ್ಥಿತಿಗತಿಯಲ್ಲಿ ಒಂದಿಷ್ಟು ಬದಲಾವಣೆ ಆಗುತ್ತದೆ ಆದರೂ ಕೂಡ ಉಚ್ಚ ವರ್ಗದ ಹಿಂದೂಗಳ ಮಾತಿಗೆ ಮಣೆ ಹಾಕುವುದನ್ನು ಬಿಟ್ಟು ನಮ್ಮ ಉದ್ಧಾರಕ್ಕೆ ನಾವೇ ಶ್ರಮಿಸಬೇಕು. ಇಂದು ನೀವು ನನಗೆ ಸನ್ಮಾನ ಮಾಡಿ ಗೌರವ ತೋರಿದ್ದೀರಿ ಅದಕ್ಕೆ ನಾನು ಕೃತಜ್ಞ ಎಂದು ಹೇಳಿ ಮಾತಿಗೆ ವಿರಾಮ ನೀಡುತ್ತೇನೆ.'

---

ಜನತಾ: ನವೆಂಬರ್ ೫, ೧೯೩೨

# ೬೨.

# ನಮ್ಮಲ್ಲಿನ ಭೇದವೂ ಇಲ್ಲವಾಗಬೇಕು

ಶುಕ್ರವಾರ ನವೆಂಬರ್ ೪, ೧೯೩೨ರಂದು ರಾತ್ರಿ ೯ ಗಂಟೆಗೆ ಬಾಲಪಾಖಡಿಯಲ್ಲಿ ಗುಜರಾತಿ ಮಘವಾಳ್ ಮತ್ತು ಇತರ ಅಸ್ಪೃಶ್ಯ ವರ್ಗದವರ ಸಾರ್ವಜನಿಕ ಸಭೆ ಆಯೋಜಿಸಲಾಗಿತ್ತು. ಈ ಸಭೆಯ ವೇದಿಕೆಯ ಎರಡೂ ಬದಿಗೆ ಗಾಂಧಿ–ಅಂಬೇಡ್ಕರ್ ಒಪ್ಪಂದ ಅಜರಾಮರವಾಗಲಿ, ಡಾ. ಅಂಬೇಡ್ಕರ್ ಮಾತ್ರ ಇಡೀ ಅಸ್ಪೃಶ್ಯ ಸಮಾಜದ ನಿಜ ನಾಯಕ, ಅಸ್ಪೃಶ್ಯರ ಉದ್ಧಾರಕ್ಕಾಗಿ ಡಾ.ಅಂಬೇಡ್ಕರ್‌ಗೆ ದೇವರು ದೀರ್ಘಾಯುಷ್ಯ ನೀಡಲಿ ಇತ್ಯಾದಿ ಭಿತ್ತಿ ಪಟಗಳನ್ನು ಹಾಕಲಾಗಿತ್ತು.

ಸರಿಯಾಗಿ ಒಂಭತ್ತು ಗಂಟೆಗೆ ಡಾ. ಅಂಬೇಡ್ಕರ್, ಡಾ. ಸೋಳಂಕಿ, ಶಿವತರಕರ್, ಗೋವಿಂದ ಚವ್ಹಾಣ, ಸುಭೇದಾರ್ ಸವಾದಕರ್, ಫಣಸೆ, ಚಿತ್ರೆ ಸಹೋದರರು ವೇದಿಕೆಗೆ ಆಗಮಿಸಿದರು. ಸುಮಾರು ಐದು ನಿಮಿಷಗಳವರೆಗೆ ಡಾ. ಅಂಬೇಡ್ಕರ್ ಜಿಂದಾಬಾದ್ ಘೋಷಣೆ ಎಲ್ಲೆಡೆಯಿಂದ ಮೊಳಗಿತು. ಶ್ರೀಯುತ ಭಾಣಜಿ ರಾಠೋಡ್ ಅವರು ಡಾ. ಸೋಳಂಕಿ ಅವರಲ್ಲಿ ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳುವಂತೆ ಮಾಡಿದ ಮನವಿಗೆ ಶಿವರಾಮ್ ಚೌಹಾಣ್ ಅನುಮೋದಿಸಿದ ಮೇಲೆ ಡಾ. ಸೋಳಂಕಿ ಪ್ರಚಂಡ ಕರತಾಡನದ ಮಧ್ಯೆ ಸಭೆಯ ಅಧ್ಯಕ್ಷತೆ ವಹಿಸಿದರು. ಇದಾದ ಬಳಿಕ ಶೋಷಿತ ವರ್ಗಗಳ ಕಲ್ಯಾಣ ಸಮಿತಿಯ ಪ್ರಮುಖ ಲಕ್ಷ್ಮಣ ಅವರು, ಡಾ. ಅಂಬೇಡ್ಕರ್ ಅವರಿಗೆ ನೀಡಲಿರುವ ಸನ್ಮಾನಪತ್ರ ಓದಿದರು. ಸನ್ಮಾನಕ್ಕುತ್ತರವಾಗಿ ಡಾ. ಅಂಬೇಡ್ಕರ್ ಹೇಳಿದ್ದಿಷ್ಟು...

ಬಂಧುಗಳೇ ಭಗಿನಿಯರೆ,

ನೀವು ನನಗೆ ನೀಡಿರುವ ಸನ್ಮಾನ ಪತ್ರ, ಬೇರೆ ಸ್ಥಳಗಳಲ್ಲಿ ದೊರೆತಿರುವ ಸನ್ಮಾನಪತ್ರಕ್ಕಿಂತ ಶ್ರೇಷ್ಠ ಎಂದು ಭಾವಿಸುತ್ತೇನೆ. ಇದಕ್ಕಾಗಿ ನಾನು ನಿಮಗೆ ಕೃತಜ್ಞ. ಈ ವಠಾರದಲ್ಲಿ ವಾಸಿಸುವ ನೀವು ಮುನ್ಸಿಪಾಲಿಟಿಯಲ್ಲಿ ಕೆಲಸ ಮಾಡುವವರು. ಈ ಜಾಗದಲ್ಲಿ ಖಾದಿ ಭಕ್ತರು, ಕಾಂಗ್ರೆಸ್ ಅಭಿಮಾನಿಗಳು ಎಂದು ಹೇಳಿಕೊಳ್ಳುವವರು ಕಾಂಗ್ರೆಸ್‌ನಿಂದ ಮಾತ್ರ ನಿಮ್ಮ ಉದ್ಧಾರ, ಕಾಂಗ್ರೆಸ್‌ಗೆ ನೆರವಾಗಿ ಎಂದು ಉಪದೇಶ ಮಾಡಿದ್ದಿರಬಹುದು. ಆದರೆ ಅದೇ ಖಾದಿ ಭಕ್ತರು ಮುನ್ಸಿಪಾಲಿಟಿಯ ಕಾರ್ಪೊರೇಷನ್‌ನಲ್ಲಿ ಕುಳಿತಿದ್ದಾರೆ. ಆ ಜಾಗದಲ್ಲಿ ಕುಳಿತಿರುವ ಅವರುಗಳು ನಿಮಗಾಗಿ ಏನು ಮಾಡಿದ್ದಾರೆ ಎನ್ನುವುದನ್ನು ವಿಚಾರ ಮಾಡಿ. ಐದು ರೂಪಾಯಿ ಶುಲ್ಕ ಪಾವತಿಸುವವರಿಗೆ ಮತಾಧಿಕಾರ ಎಂದು ಕಾಲಕಾಲಕ್ಕೆ ಮಾಡಿದ ಆ ಎಲ್ಲ ಗೊತ್ತುವಳಿಗಳನ್ನು ದೀನ ದಲಿತರ ಉದ್ಧಾರಕರು ಎಂದು ಹೇಳಿಕೊಳ್ಳುವವರು ಆದರೆ ಶ್ರೀಮಂತರತ್ತ ಒಲವು ಇರಿಸಿಕೊಂಡಿರುವವರು ಎಂದರೆ ಈ ಖಾದಿ ಭಕ್ತ ಕಾಂಗ್ರೆಸ್‌ವಾದಿಗಳು. ನೀವು ವಾಸವಿರುವ ಮನೆಯನ್ನು ಸುಧಾರಿಸದ, ನಿಮಗೆ ಸಿಗುವ ಅರೆಬರೆ ವೇತನ ಹೆಚ್ಚಿಸುವುದಕ್ಕೆ ಈ ಜನರು ಎಂದಿಗೂ ಪ್ರಯತ್ನಿಸಿಲ್ಲ. ಒಂದು ವೇಳೆ ನೀವು ನಿಮ್ಮ ಕೆಲಸ ನಾಲ್ಕು ದಿನ ಸ್ಥಗಿತಗೊಳಿಸಿದರೆ ಇಡೀ ನಗರ ಗಬ್ಬೆದ್ದು ನಾರುತ್ತದೆ ಅಲ್ಲದೇ ರೋಗ ರುಜಿನಗಳು ಹರಡಲು ಆರಂಭಿಸುತ್ತವೆ. ಆದರೆ ಇಂತಹ ಪರೋಪಕಾರಿ ಕೆಲಸಕ್ಕೆ ಸಿಗುತ್ತಿರುವ ಪ್ರತಿಫಲ ಆದರೂ

ಏನು? ಹೀಗಿದ್ದರೂ ನಮ್ಮವರೇ ಆದ ಹಿಂದೂ ಜನರು ನಮ್ಮನ್ನು ದಾಸ್ಯದ ಶೂಲಕ್ಕೆ ಸಿಲುಕಿಸಿದ್ದಾರೆ. ನಮಗೆ ಸ್ವತಂತ್ರ ಮತಕ್ಷೇತ್ರ ಲಭಿಸಿದವು ಎಂದ ಕಾರಣಕ್ಕೆ ನನ್ನ ಮಿತ್ರ ಮಹಾತ್ಮ ಗಾಂಧೀಜಿ ಉಪವಾಸ ಆರಂಭಿಸಿದ ಪರಿಣಾಮವಾಗಿ ಇಂದು ಈ ಜನರು ಗಾಂಧೀಜಿ ಅವರಿಗಾಗಿ ಗುಡಿಯ ಬಾಗಿಲುಗಳನ್ನು ತೆರೆಯುತ್ತಿದ್ದಾರೆ. ಗುಪ್ತಗಾಮಿನಿಯಂತೆ ಹರಿಯುತ್ತಿರುವ ಈ ಚಳವಳಿ ನಮ್ಮನ್ನು ಬದಿಗೆ ಸರಿಸಿಬಿಡುತ್ತದೆ ಎಂದುಕೊಂಡು ಈ ಜನರು ಹೆದರಿದ್ದಾರೆ. ನಿಮ್ಮ ಸಾಮಾಜಿಕ ಸ್ಥಾನಮಾನ ಸಮಾನತೆಯ ತತ್ವದ ಮೇಲೆ ನಿಂತಿರಬೇಕು. ನಿಮ್ಮ ಆರ್ಥಿಕ ದಾಸ್ಯ ಇಲ್ಲವಾಗಿಸುವ ನಿಟ್ಟಿನಲ್ಲಿ ನೀವು ಸ್ವಾವಲಂಬಿಗಳಾಗಿ ಸಂಘಟಿತರಾಗಬೇಕು. ತಮ್ಮ ಚಾರಿತ್ರ್ಯ ಮಾರಿಕೊಂಡ ಅನೇಕ ನಾಯಕರು ನಿಮ್ಮ ಬಳಿ ಬಂದೇ ಬರುತ್ತಾರೆ ಅಂತಹ ವ್ಯಕ್ತಿಗಳ ಬಗ್ಗೆ ಎಚ್ಚರವಾಗಿದ್ದುಕೊಂಡು ನಿಮ್ಮ ಮನಸ್ಸಿಗೆ ತೋಚಿದ್ದು ಮಾಡಿ. ಕೊನೆಯದಾಗಿ ಹೇಳುವುದು ಇಷ್ಟೇ, ಹಿಂದೂಗಳಲ್ಲಿ ಜಾತಿ ತಾರತಮ್ಯ ತೊಡೆದುಹಾಕುವ ರೀತಿಯಲ್ಲೇ ನಮಲ್ಲಿನ ಭೇದಭಾವ ಕೂಡ ತೊಡೆದು ಹಾಕುವ ಕೆಲಸ ಆಗಬೇಕಿದೆ. ಇರಲಿ. ನೀವು ನನಗೆ ಮಾನಪತ್ರ ನೀಡಿ ಗೌರವಿಸಿದ್ದೀರಿ. ಅದಕ್ಕೆ ನಾನು ಋಣಿಯಾಗಿದ್ದೇನೆ.

## ೬೩.

# ಏಕತೆ ಇದ್ದರೆ ಭವಿಷ್ಯದ ರಾಜಕಾರಣವೇ ದಾಸ್ಯ ಇಲ್ಲವಾಗಿಸುತ್ತದೆ

ಮೂರನೇ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕೆ ತೆರಳಲಿದ್ದ ಡಾ. ಅಂಬೇಡ್ಕರ್ ಅವರನ್ನು ಬೀಳ್ಕೊಡುವ ಉದ್ದೇಶದಿಂದ ಶ್ರೀ ಗಜೋಬಾ ದುಧವಲೆ ಅವರು ಶುಕ್ರವಾರ ನವೆಂಬರ್ ೪, ೧೯೩೨ರ ರಾತ್ರಿ ಮರಾಠಿ ಭಾಷಿಕ ಅಸ್ಪೃಶ್ಯರ ಸಭೆಯನ್ನು ಬಾಲಪಾಖಡಿಯಲ್ಲಿ ಆಯೋಜಿಸಿದ್ದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಗುಜರಾತಿ ಬಂಧುಗಳ ಸಭೆಯಲ್ಲಿ ಪಾಲ್ಗೊಂಡಿದ್ದ ಕಾರಣ ರಾಮಚಂದ್ರ ಅಡಾಂಗಳೆ ಅವರು ಜನರ ಮನರಂಜಿಸುವುದಕ್ಕಾಗಿ ದುಂಡು ಮೇಜಿನ ಪರಿಷತ್ತಿನ ಸಭೆಯ ಬಗ್ಗೆ ಹಾಡು ಕಟ್ಟಿ ಹೇಳುತ್ತಿದ್ದರು. ಗುಜರಾತಿ ಬಂಧುಗಳ ಸಭೆ ಮುಗಿಸಿದ ಡಾ.ಅಂಬೇಡ್ಕರ್ ಮತ್ತು ಅವರ ಸಂಗಡಿಗರಾದ ಡಾ. ಸೋಳಂಕಿ, ಶಿವತರಕರ್, ಚಿತ್ರೆ, ಫಣಸೆ, ಝುಕೇರಿಯಾ, ಮನಿಯಾರ್, ಉಪಶಾಮ್, ರೇವಜಿ ಡೋಳಸ್, ಮಡಕೆ ಬುವಾ, ಗಾಯಕವಾಡ್ ಸೇರಿದಂತೆ ಇನ್ನಿತರರು ರಾತ್ರಿ ಹನ್ನೊಂದು ಗಂಟೆಗೆ ಆಗಮಿಸಿದರು. ಒಂದಿಷ್ಟು ಹೊತ್ತು ಅವರು ಹಾಡುಗಳನ್ನು ಕೇಳಿ ಖುಷಿಪಟ್ಟರು. ಅಧ್ಯಕ್ಷತೆ ವಹಿಸಿದ್ದ ಡಾ. ಸೋಳಂಕಿ, ಬಂಧು, ಭಗಿನಿಯರೇ, ನೀವು ಡಾ. ಅಂಬೇಡ್ಕರ್ ಅವರ ಮಾತುಗಳನ್ನು ಕೇಳುವುದಕ್ಕೆ ಕಾತುರರಾಗಿದ್ದೀರಿ ಎನ್ನುವುದು ತಮ್ಮ ಮುಖಚರ್ಯೆಯಿಂದ ಅರ್ಥವಾಗುತ್ತದೆ. ಹೀಗಾಗಿ ನನ್ನ ಮಾತಿಗೆ ವಿರಾಮ ಹೇಳಿ ಡಾ. ಅಂಬೇಡ್ಕರ್ ಅವರು ಸಂದೇಶ ನೀಡಬೇಕು ಎಂದು ವಿನಂತಿಸಿಕೊಳ್ಳುತ್ತೇನೆ ಎಂದರು. ಭಾರಿ ಚಪ್ಪಾಳೆಯೊಂದಿಗೆ ಡಾ. ಅಂಬೇಡ್ಕರ್ ಭಾಷಣಕ್ಕೆ ನಿಂತರು.

ಬಂಧು, ಭಗಿನಿಯರೇ,

ಇಂದು ನಮಗೆ ಲಭಿಸಿರುವ ರಾಜಕೀಯ ಹಕ್ಕು ನಮ್ಮ ಸಂಘ ಶಕ್ತಿಯ ಫಲ. ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ನನ್ನ ಮತ್ತು ಗಾಂಧೀಜಿ ಮಧ್ಯೆ ತೀವ್ರ ಮತಭೇದ ನಿರ್ಮಾಣವಾಯಿತು. ಮಹಾತ್ಮ ಗಾಂಧೀಜಿ ಅವರ ಬಾಲ ಹಿಡಿದು ಒಡಾಡುವ ಕೆಲವು ಜನರು ಡಾ. ಅಂಬೇಡ್ಕರ್ ಅಂದರೆ ಮಹಾರ್ ಜಾತಿಯ ಒಬ್ಬ ಹುಡುಗ, ಅವನ ಹಿಂದೆ ಆತನ ಕಚೇರಿಯ ನಾಲ್ಕಾರು ಜನರನ್ನು ಹೊರತುಪಡಿಸಿ ಬೇರೆ ಯಾರೂ ಇಲ್ಲ ಎಂದು ಗಾಂಧೀಜಿಯವರಲ್ಲಿ ತಪ್ಪು ತಿಳುವಳಿಕೆ ಮೂಡಿಸಿದ್ದರು. ಆದರೆ ಮಹಾತ್ಮ ಗಾಂಧೀಜಿ ಅವರು ದುಂಡು ಮೇಜಿನ ಪರಿಷತ್ತಿನ ಸಭೆ ಬಳಿಕ ಮುಂಬೈನ ಬೇಲಾರ್ಡ್ ಪಿಯರ್ ಬಂದರಿನಲ್ಲಿ ಇಳಿದ ಕೂಡಲೇ ಅವರಿಗೆ ೨೦ ಸಾವಿರ ಅಸ್ಪೃಶ್ಯ ಬಂಧುಗಳು ಕಪ್ಪು ಬಾವುಟ ತೋರಿಸಿ ಸ್ವಾಗತಿಸಿದ ಬಳಿಕವೇ ಅವರ ಕಣ್ಣುಗಳು ತೆರೆದವು. ಆಗ ಗಾಂಧೀಜಿ ಅವರು ವಿದೇಶದಲ್ಲಿ ನನ್ನ ಅನುಯಾಯಿಗಳೇ ನನ್ನ ದಿಕ್ಕು ತಪ್ಪಿಸಿದರು. ಡಾ. ಅಂಬೇಡ್ಕರ್ ಅವರ ಬೆನ್ನ ಹಿಂದೆ ಅಸ್ಪೃಶ್ಯರ ಪ್ರಚಂಡ ಜನ ಸಮುದಾಯ ಇದೆಯೆಂದು ತಿಳಿಸಿದ್ದರೆ ನಾನು ಅವರ ಬೇಡಿಕೆಗಳಿಗೆ ಇಲ್ಲ ಎನ್ನುತ್ತಿರಲಿಲ್ಲ. ನನ್ನ ಮಿತ್ರರು ಮತ್ತು ಅನುಯಾಯಿಗಳು ಕೆಲವು ಕಳಾಹೀನ ಮುಖಗಳಿಗೆ ನದಿಯಲ್ಲಿನ ಕಲ್ಲುಗಳಿಗೆ ಕುಂಕುಮ ಬಳಿದಂತೆ ಬಣ್ಣ ಬಳಿದು ಅವರೇ ಅಸ್ಪೃಶ್ಯರ ನಾಯಕರೆಂದು ಹೇಳಿ ನನಗೆ ಮೋಸ ಮಾಡಿದರು.

ಅಸ್ಪೃಶ್ಯರ ನಿಜ ನಾಯಕ ಯಾರು ಎಂದು ಗುರುತಿಸುವುದಕ್ಕೆ ನನಗೆ ಅವಕಾಶವನ್ನೇ ನೀಡಲಿಲ್ಲವೆಂದು ಹೇಳಿದರು. ಅದೇನೇ ಇರಲಿ. ತೆರಳುವ ಮುನ್ನ ಒಂದೆರಡು ಪ್ರೀತಿಯ ಮಾತುಗಳು: ನಿಮ್ಮ ಏಕತೆ ಸದಾಕಾಲ ಹೀಗೇ ಇರಲಿ, ಒಡೆಯುವುದಕ್ಕೆ ಅವಕಾಶ ನೀಡಬೇಡಿ, ಜಾತಿಭೇದ, ವರ್ಗಭೇದ, ಜಿಲ್ಲಾ ಭೇದಗಳನ್ನು ಹೆಚ್ಚಿಸಬೇಡಿ. ನನ್ನ ಬದಲಿಗೆ ಡಾ. ಸೋಳಂಕಿ ಮತ್ತು ನನ್ನ ಕಚೇರಿಯಲ್ಲಿ ಕೆಲಸ ಮಾಡುವವರೊಂದಿಗೆ ನಿಮ್ಮ ಸಂಪರ್ಕವಿರಲಿ. ಬೇರೆಯವರ ಮಾತು ಕೇಳಿ ಧಾವಂತಕ್ಕೆ ಬೀಳಬೇಡಿ. ನನ್ನೊಂದಿಗೆ ಕೆಲಸ ಮಾಡುವ ಸಹೋದ್ಯೋಗಿಗಳ ವಿರುದ್ಧ ಜನಾಭಿಪ್ರಾಯ ಹುಟ್ಟು ಹಾಕುವ ಕೆಟ್ಟ ಕೆಲಸವನ್ನು ಕೆಲ ಪಟ್ಟಭದ್ರ ಹಿತಾಸಕ್ತಿಗಳು ಕೈಗೆತ್ತಿಕೊಂಡಿದ್ದಾರೆ. ಆದಾಗ್ಯೂ ಕೂಡ ಮನಸ್ಸಿನ ವಿಕಾರಗಳಿಗೆ ಅವಕಾಶ ನೀಡಬೇಡಿ. ನಾನು ಬರುವವರೆಗೆ ಒಗ್ಗಟ್ಟಿರಲಿ. ಒಗ್ಗಟ್ಟಿನಿಂದ ಉಳಿದರೆ ಮಾತ್ರ ಭವಿಷ್ಯದ ರಾಜಕಾರಣ ನಮ್ಮನ್ನು ದಾಸ್ಯತ್ವದಿಂದ ಮುಕ್ತಿಗೊಳಿಸುವ ಸದಿಚ್ಛೆ ಫಲ ನೀಡಬಲ್ಲುದು. ಅದೇ ರೀತಿ ನಾನು ಹೊರಡಿಸಿರುವ ಮನವಿ ಪತ್ರದ ಅನುಸಾರವಾಗಿ ಎಲ್ಲರೂ ಬೋರ್ಡಿಂಗ್ ನಿಧಿಗೆ ಸಾಧ್ಯವಿದ್ದಷ್ಟು ದೇಣಿಗೆ ನೀಡಿ ಎಂದು ಹೇಳಿದರು. ಡಾ. ಅಂಬೇಡ್ಕರ್ ಅವರಿಗೆ ಪುಷ್ಪಹಾರ ಸಲ್ಲಿಸಿದ ಬಳಿಕ ಸಭೆ ಮುಕ್ತಾಯವಾಯಿತು.

---

ಜನತಾ: ನವೆಂಬರ್ ೧೯, ೧೯೩೨

# ೬೪.

# ದೇವರ ಮೇಲೆ ನಂಬಿಕೆ ಇಟ್ಟು ಬದುಕಬೇಡಿ ಬದುಕುವುದಾದರೆ ಗಟ್ಟಿತನದ ಮೇಲೆ ಬದುಕಿ

ಶನಿವಾರ ಫೆಬ್ರವರಿ ೧೮, ೧೯೩೩ರಂದು ಠಾಣೆ ಜಿಲ್ಲೆಯ ಕಸಾರಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ಸಭೆ ಆಯೋಜಿಸಲಾಗಿತ್ತು. ರಾತ್ರಿ ೮ ಗಂಟೆ ಹೊತ್ತಿಗೆ ಡಾ.ಅಂಬೇಡ್ಕರ್ ಅವರು ಮುಂಬೈನಿಂದ ವಾಹನದಲ್ಲಿ ಕಸಾರಿಗೆ ಬಂದಿಳಿದರು. ಅವರೊಂದಿಗೆ ಶ್ರೀಯುತ ಶಿವತರಕರ್, ದಿವಾಕರ್ ಪಗಾರೆ ಮತ್ತು ಗಣಪತಬುವಾ ಜಾಧವ ಇದ್ದರು. ಡಾ. ಅಂಬೇಡ್ಕರ್ ಅವರನ್ನು ಸ್ವಾಗತಿಸುವುದಕ್ಕಾಗಿ ಕಲ್ಯಾಣದಲ್ಲಿ ಸಮತಾ ಸೈನಿಕ ದಳದ ಕಾರ್ಯಕರ್ತರು ಮತ್ತು ಸುತ್ತಲಿನ ಅಸ್ಪೃಶ್ಯ ಪ್ರತಿನಿಧಿಗಳು ಆಗಮಿಸಿದ್ದರು. ನಾಸಿಕ್‌ನಿಂದ ಶ್ರೀ. ಭಾವುರಾವ್ ಗಾಯಕವಾಡ್, ಕೆ. ಬಿ. ಜಾಧವ ಮತ್ತು ಲಿಂಬಾಜಿರಾವ್ ಭಾಲೇರಾವ್ ಮತ್ತು ರೋಖಡೆ ಆಗಮಿಸಿದ್ದರು.

ಡಾ. ಅಂಬೇಡ್ಕರ್ ಅವರನ್ನು ಸಭೆಯ ವೇದಿಕೆಗೆ ಮೆರವಣಿಗೆಯಲ್ಲಿ ಕರೆತಂದ ಬಳಿಕ ಸಭೆಯ ಕಲಾಪಗಳಿಗೆ ಚಾಲನೆ ದೊರೆಯಿತು. ಮೊದಲಿಗೆ ಸಭೆಯ ಸ್ವಾಗತಾಧ್ಯಕ್ಷ ಶಂಕರಾನಂದ ಬರ್ವೆ ಎಲ್ಲರನ್ನು ಸ್ವಾಗತಿಸಿ, ಡಾ.ಅಂಬೇಡ್ಕರ್ ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳುವಂತೆ ಮಾಡಿದ ವಿನಂತಿಗೆ ರೋಖಡೆ ಅನುಮೋದಿಸಿದರು. ಭಾರಿ ಕರತಾಡನದೊಂದಿಗೆ ಡಾ. ಬಾಬಾಸಾಹೇಬ ಅಂಬೇಡ್ಕರ್ ಸಭೆಯ ಅಧ್ಯಕ್ಷತೆ ವಹಿಸಿಕೊಂಡರು.

ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ ಹೇಳಿದ್ದು ಈ ಮಾತುಗಳನ್ನು:

ಠಾಣೆ ಜಿಲ್ಲೆಗೆ ನಾನು ಈ ಮೊದಲು ಬಂದವನಲ್ಲ ಹೀಗಾಗಿ ತಮ್ಮೊಂದಿಗೆ ನನಗೆ ಅಷ್ಟು ಪರಿಚಯ ಸಾಧ್ಯವಾಗಿಲ್ಲ. ನನ್ನ ಈ ಭೇಟಿಗೆ ಕಾರಣರಾದ ಮಹಾಂತ ಶಂಕರದಾಸ್ ಬುವಾ ಮತ್ತು ಠಾಣಾ ಜಿಲ್ಲೆಯ ಎಲ್ಲ ಪ್ರತಿನಿಧಿಗಳಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಈ ಸಂದರ್ಭದಲ್ಲಿ ಕೆಲವೇ ಮಾತುಗಳು ಆದರೆ ಮಹತ್ವದ ಸೂಚನೆಗಳ ಬಗ್ಗೆ ಹೇಳಬೇಕಾಗಿರುವ ಕಾರಣ ನೀವು ಅವುಗಳನ್ನು ಗಮನ ಇಟ್ಟು ಕೇಳಿಸಿಕೊಳ್ಳುತ್ತೀರಿ ಎಂಬ ಭರವಸೆ ಇದೆ. ಇಂದು ನಿಮಗೆ ಏನು ಲಭಿಸಿದೆಯೋ ಅದರ ಬಗ್ಗೆ ಒಂದಿಷ್ಟು ವಿಚಾರ ಮಾಡಿದರೆ ನಿರುಮ್ಮಳ ಭಾವ ನಿಮ್ಮಲ್ಲಿ ಮೂಡಬಹುದು. ಮಹಾತ್ಮ ಗಾಂಧೀಜಿ ಮತ್ತು ಹಿಂದೂ ಸನಾತನಿ ಜನರೊಂದಿಗೆ ಅಸ್ಪೃಶ್ಯತೆ ನಿರ್ಮೂಲನೆ ಸಂಬಂಧ ಕಳೆದ ಎಂಟು ಹತ್ತು ದಿನಗಳಿಂದ ಮಾತುಕತೆ ಮಾಡುತ್ತಿದ್ದೇನೆ. ಅಸ್ಪೃಶ್ಯತೆ ನಿರ್ಮೂಲನೆಗಾಗಿ ಮಹಾತ್ಮ ಗಾಂಧೀಜಿ ಅವರು ಮಂದಿರಗಳ ದ್ವಾರ ತೆರೆಯುವ ಮತ್ತು ಅಸ್ಪೃಶ್ಯತೆಯನ್ನು ತೊಳೆದುಹಾಕುವ ಚಳವಳಿ ಕೈಗೆತ್ತಿಕೊಂಡಿದ್ದಾರೆ. ಈ ವಿಷಯದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದು ಒಂದೇ ಮಾತು ಅಸ್ಪೃಶ್ಯತೆ ನಿವಾರಣೆಗೆ ಮಂದಿರ ಪ್ರವೇಶಿಸುವುದು ಅನಿವಾರ್ಯ ಅಲ್ಲ. ನಮಗೆ ಹಿಂದೂ ಧರ್ಮದಲ್ಲಿ ಸಮಾನತೆ ಲಭಿಸಿ ಚಾತುರ್ವರ್ಣ್ಯ ವ್ಯವಸ್ಥೆ ತೊಲಗಿದರೆ ಮಾತ್ರ ನಾವು ಹಿಂದೂ ಧರ್ಮಕ್ಕೆ ಮಾನ್ಯತೆ ನೀಡುವುದಕ್ಕೆ ಸಿದ್ಧ.

ಮಹಾತ್ಮ ಗಾಂಧೀಜಿ ಅವರೊಂದಿಗೆ ನನ್ನ ಅಭಿಪ್ರಾಯಭೇದ ಇದ್ದೇ ಇದೆ. ಅವರು ಮಂದಿರದ ದ್ವಾರ ತೆರೆಯುವುದಕ್ಕೆ ಸಿದ್ಧವಿಲ್ಲ. ಚಾತುರ್ವರ್ಣ್ಯ ವ್ಯವಸ್ಥೆಗೆ ಕೊಡಲಿ ಏಟು ಕೊಡುವುದಕ್ಕೆ ತಯಾರಿಲ್ಲ. ನಮ್ಮ ನೆರಳಿನಡಿ ಬದುಕುವುದಕ್ಕೆ ಅವರು ಸಿದ್ಧವಿಲ್ಲ. ನಮ್ಮ ಉನ್ನತಿ ಮಾರ್ಗ ಇದೀಗ ಆರಂಭವಾಗಿದೆ. ಪೊಲೀಸ್ ಇಲಾಖೆಯಲ್ಲಿ ನಮ್ಮ ಜನರು ಇರಲಿಕ್ಕಿಲ್ಲ. ಆದರೆ ಇಂದು ಮೆಟ್ರಿಕ್ ಪಾಸಾದ ಅನೇಕ ಅಸ್ಪೃಶ್ಯ ಯುವಕರು ಪೊಲೀಸ್ ತರಬೇತಿ ಪಡೆಯುತ್ತಿದ್ದಾರೆ. ನಮ್ಮ ಕೈಕೆಳಗೆ ಸ್ಪೃಶ್ಯ ವರ್ಗ ಕೆಲಸ ಮಾಡಬೇಕಾದರೆ ನಮ್ಮಲ್ಲಿ ಇನ್ನೂ ಹೆಚ್ಚು ಅಧಿಕಾರಿ ವರ್ಗ ಬೆಳೆದು ಸಮಾಜದ ಸ್ಥಾನಮಾನ ಎತ್ತರಿಸಬೇಕು. ಇಂದು ಕೆಲವೇ ಕೆಲವು ಜನರು ಡೆಪ್ಯೂಟಿ ಕಲೆಕ್ಟರ್, ಮಾಮಲೇದಾರ ಅಥವಾ ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದಿರಬಹುದು. ಆದರೆ ಮುಂದಿನ ದಿನಗಳಲ್ಲಿ ಈ ಸಂಖ್ಯೆ ಹೆಚ್ಚಾಗಲಿದೆ. ನಮ್ಮ ಸಮಾಜದ ಜನರು ಅಧಿಕಾರಿಗಳಾದರೆ ಮಾತ್ರ ನಮ್ಮ ಮೇಲಿನ ಶೋಷಣೆ ತಗ್ಗುತ್ತದೆ. ಇಂದು ನಮಗೆ ದೊರೆತಿರುವ ರಾಜಕೀಯ ಹಕ್ಕುಗಳು ಕುರುಡನ ಹಾದಿಯಲ್ಲಿ ಬಿದ್ದಿರುವ ಮುತ್ತು ರತ್ನಗಳಂತೆ ಆಗಬಾರದು. ಕುರುಡನಿಗೆ ಯಾವುದು ಮುತ್ತು–ರತ್ನ ಎನ್ನುವುದು ತಿಳಿಯುವುದು ಇಲ್ಲವೋ ಅಂತಹದ್ದೆ ಪರಿಸ್ಥಿತಿ ನಮ್ಮದು ಆಗಬಾರದು. ಈ ದೇಶದಲ್ಲಿ ಎಂದೂ ನಡೆಯದಂತಹ ಘಟನೆ ರಾಜಕೀಯ ಕ್ಷೇತ್ರದಲ್ಲಿ ಸಂಭವಿಸಿದೆ. ಈ ದೇಶದಲ್ಲಿ ಕೆಳಗಿನವರು ಬೀಸಿದ ಹಿಟ್ಟಿಗೆ ಮೇಲಿನವರ ವಾರಸುತನದ ಪರಿಸ್ಥಿತಿ ಇದೆ. ಪರಕೀಯ ಬ್ರಿಟಿಷರ ಆಡಳಿತ ಈ ದೇಶದಲ್ಲಿದ್ದರೂ ಕ್ರಾಂತಿ ಒಡಮೂಡಲಿಲ್ಲ. ಆಡಳಿತ ನಡೆಸುವುದಕ್ಕಾಗಿ ಅವರಿಗೆ ಉಚ್ಚವರ್ಗದ ನೆರವು ಪಡೆಯಲೇಬೇಕಾಗುತ್ತದೆ. ಉಚ್ಚವರ್ಗದ ಮಾತುಗಳ ಮೇಲೆ ನಡೆಯುವ ಈ ಸರ್ಕಾರದಿಂದ ನಮ್ಮ ಪರಿಸ್ಥಿತಿಯಂತೂ ಬದಲಾಗಿಲ್ಲ. ಆದರೆ ಭವಿಷ್ಯದ ಸರ್ಕಾರದಲ್ಲಿ ನಮ್ಮದೇ ಆಡಳಿತ ನಡೆದು ಉಚ್ಚ–ನೀಚ ಭೇದ ಅಂತ್ಯವಾಗಲಿದೆ.

ನಾವೇ ಕಾನೂನು ಮಾಡುವಾ. ಕಾನೂನು ಮಂಡಳಿಯಲ್ಲಿ ಇರುವ ನಮ್ಮ ಪ್ರತಿನಿಧಿಗಳ ಸಲಹೆ ಮೇರೆಗೆ ಇಡೀ ದೇಶಕ್ಕೆ ಆ ಕಾನೂನು ಅನ್ವಯವಾಗಲಿದೆ. ಹಳ್ಳಿಯಲ್ಲಿನ ಚಾವಡಿಗೆ ಮಹಾರ್ ಪ್ರವೇಶಿಸುವಂತಿಲ್ಲ. ಆದರೆ ಅದೇ ಮಹಾರ್ ಶಾಸಕಾಂಗ ಸಭೆಯಲ್ಲಿ ಕುಳಿತುಕೊಂಡ ಮೇಲೆ ಸ್ಪೃಶ್ಯರಿಗೆ ಅಸ್ಪೃಶ್ಯರನ್ನು ಸಮಾನತೆಯಿಂದ ಕಾಣಲೇಬೇಕಾದ ಪರಿಸ್ಥಿತಿ ಉದ್ಭವಿಸುತ್ತದೆ. ಆದರೆ ನನಗಿರುವ ಸಂಶಯ ಒಂದೇ, ನಿಮಗೆ ಬಂದಿರುವ ಶಕ್ತಿಯ ಸದುಪಯೋಗ ಮಾಡಿಕೊಳ್ಳುತ್ತೀರೋ ಅಥವಾ ಇಲ್ಲವೋ? ನಿಮ್ಮ ನಡುವೆ ತಾರತಮ್ಯ ಬರಲೇಬಾರದು ಕೇವಲ ಏಕತೆಯೊಂದೇ ನಿಮ್ಮ ಮಂತ್ರವಾಗಿರಲಿ. ಭಿನ್ನಾಭಿಪ್ರಾಯ ತೊಡೆದು ಹಾಕಿ. ನಮ್ಮ ದುರ್ದೈವ ಎಂದರೆ ನಮ್ಮಲ್ಲಿ ಭಿನ್ನಾಭಿಪ್ರಾಯದ ಚಟ ಬೆಳೆದು ಎಲ್ಲೆಡೆ ಜಗಳ ಶುರುವಾಗಿಬಿಟ್ಟಿದೆ. ಇದರ ಸ್ಪಷ್ಟ ಉದಾಹರಣೆ ಎಂದರೆ ನಾಸಿಕ್ ಮತ್ತು ಕೊಂಕಣದ ಜಿಲ್ಲೆಗಳಲ್ಲಿ ಸಂಘಟನೆ ನಾಶವಾಗುತ್ತಿದೆ. ಈ ಎರಡೂ ಜಿಲ್ಲೆಗಳು ಒಂದಕ್ಕೊಂದು ಹೊಂದಿಕೊಂಡಿವೆ. ಕೊಂಕಣ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಈ ಹಿಂದೆ ನಡೆದ ಬೃಹತ್ ಸತ್ಯಾಗ್ರಹಗಳು ನಡೆಯದೇ ಹೋಗಿದ್ದರೆ ಇಂದು ನಮಗೆ ಸಿಕ್ಕಿರುವ ರಾಜಕೀಯ ಅಧಿಕಾರ ಲಭಿಸುತ್ತಿರಲಿಲ್ಲ. ನಾಸಿಕ್ ಸತ್ಯಾಗ್ರಹ ಎಷ್ಟು ಪ್ರಖರವಾಗಿತ್ತು ಎಂದರೆ ನಾನು ಇಂಗ್ಲೆಂಡ್‌ನಲ್ಲಿದ್ದ ವೇಳೆ ಅಲ್ಲಿನ ಲಂಡನ್ ಟೈಮ್ಸ್ ನಿತ್ಯ ಪ್ರಕಟಿಸುತ್ತಿದ್ದ ಆ ಸುದ್ದಿಯನ್ನು ಓದಿದ ಇಂಗ್ಲಿಷರು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು.

ನಾಸಿಕ್ ಜಿಲ್ಲೆಯ ಜನರು ತಮ್ಮ ಸ್ವಶಕ್ತಿಯ ಮೇಲೆ ಇಂತಹ ಕೆಲಸ ಮಾಡಿದ್ದರು. ಆದರೆ ಈಗ ಅದೇ ನಾಸಿಕ್ ಜಿಲ್ಲೆ ಸಂಘಟನೆಯ ವಿಚಾರದಲ್ಲಿ ಹಿಂದಡಿ ಇಡುತ್ತಿರುವುದನ್ನು ಹೇಳಲು ನನಗೆ ವಿಷಾದವಾಗುತ್ತಿದೆ. ಅಲ್ಲಿನ ಜನರಂತೂ ಇದೀಗ ಸಾಮಾಜಿಕ ಕಾರ್ಯಗಳತ್ತ ಸನ್ಯಾಸ ಸ್ವೀಕರಿಸಿದ್ದೇವೆಯೋ ಎನ್ನುವಂತೆ ವರ್ತಿಸುತ್ತಿದ್ದಾರೆ. ಕಾರಣ ಕೇಳಿದರೆ ವೈಯಕ್ತಿಕ ದ್ವೇಷವೇ ಉತ್ತರವಾಗುತ್ತಿದೆ. ಇದಕ್ಕೆ ಉದಾಹರಣೆಯಾಗಿ

ಈಗತ್‌ಪುರಿ ಘಟನೆಯೊಂದು ಸಾಕು. ಈಗತ್‌ಪುರಿಯಲ್ಲಿ ಆಯೋಜಿಸಿದ್ದ ಅಸ್ಪೃಶ್ಯರ ಸಭೆಯ ಅಧ್ಯಕ್ಷತೆ ಯಾರು ವಹಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ವಾದ ವಿವಾದ ಬೆಳೆಯಿತು. ಅಂತಿಮವಾಗಿ ಕಂಬಕ್ಕೆ ಅಧ್ಯಕ್ಷತೆಯ ಗೌರವ ನೀಡಿ ಸಭೆ ನಡೆಸಬೇಕಾಯಿತು. ಅಧ್ಯಕ್ಷ ಯಾರಾಗಬೇಕು. ಕಾರ್ಯದರ್ಶಿ ಯಾರು ಆಗಬೇಕು. ಖಜಾಂಚಿ ಯಾರಾದರೆ ಒಳ್ಳೆಯದು ಇಂತಹದ್ದೇ ವಿಚಾರಗಳನ್ನು ಮುಂದಿರಿಸಿಕೊಂಡು ಪರಸ್ಪರರು ವೈಯಕ್ತಿಕ ದ್ವೇಷ ಬೆಳೆಸಿಕೊಳ್ಳುತ್ತಿದ್ದಾರೆ. ಒಂದು ವೇಳೆ ಇದೇ ಪರಿಸ್ಥಿತಿ ಮುಂದುವರಿದಿದ್ದೆ ಆದಲ್ಲಿ ಕಷ್ಟಪಟ್ಟು ನಾವು ಸಂಪಾದಿಸಿದ ಅಧಿಕಾರ ನಿರುಪಯುಕ್ತವಾಗುತ್ತದೆ. ನಿಸ್ವಾರ್ಥದಿಂದ ಕೆಲಸ ಮಾಡುವ ಪ್ರತಿನಿಧಿಯೊಬ್ಬ ನಾಸಿಕ್‌ನಲ್ಲಿ ಇದ್ದಾನೆ ಎಂದಾದರೆ ಅಂತಹ ವ್ಯಕ್ತಿಗಾಗಿ ಕೆಲಸ ಮಾಡಿ. ಜಾಣರು ಯಾರು, ಹುಚ್ಚರು ಯಾರು ವಿಚಾರ ಮಾಡಿ. ಗೌರವ, ಮಾನ-ಸನ್ಮಾನಗಳಿಗೆ ಹಪಹಪಿಸುತ್ತಿರುವ ಮೂರ್ಖರ ಮಾತಿಗೆ ಕಿವಿಗೊಡಬೇಡಿ. ಯಾರು ಬೇಕಾದರೂ ದೀಪ ಹಚ್ಚುವ ಕೆಲಸ ಮಾಡಲಿ. ಆದರೆ ನಮ್ಮೊಳಗಿನ ಭಿನ್ನಮತಕ್ಕೆ ಆಸ್ಪದ ಕೊಡಬೇಡಿ. ನಿಮ್ಮ ಸಮಸ್ಯೆಗಳ ಪರಿಹಾರ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಿ. ಸಭೆಯಲ್ಲಿನ ನಿರ್ಣಯಗಳತ್ತ ನಿರ್ಲಕ್ಷ್ಯ ಬೇಡ. ನಿರ್ಣಯ ಸೂಕ್ತ ಅಲ್ಲ ಎಂದು ಬಡಬಡಿಸುವ ಬದಲು ಅದನ್ನು ಸರಿಪಡಿಸುವ ಕೆಲಸ ಮಾಡಿ. ನಿಮ್ಮ ಮನೆಯವರೆಗೆ ಯಾರಾದರೂ ಬಂದು ಪರಿಸ್ಥಿತಿ ಏನು ಎಂದು ಹೇಳಲಿಕ್ಕಾಗುವುದಿಲ್ಲ. ಮಾಹಿತಿಗಾಗಿ "ಜನತಾ" ಪತ್ರಿಕೆ ಓದಿ. ಇನ್ನೊಂದು ವಿಷಯ ಎಂದರೆ ಪುಣೆಯಲ್ಲಿ ಮಾಡಿಕೊಂಡ ಪುಣೆ ಒಪ್ಪಂದ ಹಿಂದೂಗಳಿಗೆ ಇಷ್ಟವಿಲ್ಲ. ನಿಜವಾಗಿ ಹೇಳಬೇಕು ಎಂದರೆ ಹಿಂದೂ ಧರ್ಮವನ್ನು ನಾವು ರಕ್ಷಿಸಬಹುದು. ಆದರೆ ಹಿಂದೂಗಳು ಹೇಗಿದ್ದಾರೆ ಎಂದರೆ, ಪುಣೆ ಒಪ್ಪಂದದ ಲಾಭ ನಮಗೆ ಆಗಬಾರದು ಎನ್ನುವ ಕಾರಣಕ್ಕೆ ಭವಿಷ್ಯದಲ್ಲಿ ಹಿಂದೂ ಮತ್ತು ಮುಸ್ಲಿಂರು ಕೌನ್ಸಿಲ್‌ನಲ್ಲಿ ಒಂದಾಗಿ ನಮ್ಮನ್ನು ಮೂಲೆಗುಂಪು ಮಾಡಬಹುದು. ಭಿನ್ನಾಭಿಪ್ರಾಯ ಏನೇ ಇದ್ದರೂ ನಮ್ಮ ಪಾಲಿನ ಅಧಿಕಾರ ನಮಗೆ ಲಭಿಸಲೇಬೇಕು. ಮಹಾಭಾರತದ ಕೌರವ-ಪಾಂಡವ ಯುದ್ಧದಲ್ಲಿ ಭೀಷ್ಮಾಚಾರ್ಯರು ನಿಜವಾಗಿ ಪಾಂಡವರ ಪಕ್ಷಪಾತಿ. ಆದರೆ ಕೌರವನ ಆಶ್ರಯದಲ್ಲಿದ್ದ ಕಾರಣ ಅವರ ಪರವಾಗಿಯೇ ನಿಲ್ಲಬೇಕಾಯಿತು. ಇದರರ್ಥ ಇಷ್ಟೇ "ಅರ್ಥಸ್ಯ ಪುರುಷೋ ದಾಸಃ" ಇಂತಹ ಸ್ಥಿತಿ ನಿಮಗೆ ಬಾರದಂತೆ ನೋಡಿಕೊಳ್ಳಿ. ಜನರ ತಂತ್ರ ಗುರುತಿಸಿ ಅದಕ್ಕೆ ತಕ್ಕಂತೆ ನಿಮ್ಮ ಪ್ರತಿತಂತ್ರವಿರಲಿ. ಪರಮೇಶ್ವರನೇ ನಮ್ಮನ್ನು ಅಸ್ಪೃಶ್ಯರನ್ನಾಗಿ ಹುಟ್ಟಿಸಿದ್ದಾನೆ. ಇದೆಲ್ಲ ದೈವೇಚ್ಛೆ ಎನ್ನುವಂತಹ ಭಾವನೆಗಳಿಗೆ ಆಸ್ಪದ ನೀಡಬೇಡಿ. ಸದ್ಯದ ಮಟ್ಟಿಗೆ ನೀವು ಪರಮೇಶ್ವರನ ಕುರಿತು ಚಿಂತನೆ ಮಾಡಬೇಡಿ. ನಮ್ಮ ಇಂದಿನ ದುಸ್ಥಿತಿಗೆ ಕಾರಣ ಇತರರ ಸ್ವಾರ್ಥ ಸಾಧನೆಯಿಂದಾಗಿ ನಮಗೆ ಆಗಿರುವ ಹಾನಿ ವಿನಃ ಅದು ಹಿಂದಿನ ಜನ್ಮದ ಪಾಪಕರ್ಮದ ಫಲವಲ್ಲ. ಮಹಾರ್‌ನಿಗೆ ಜಮೀನು ಇಲ್ಲ ಎಂದರೆ ಅದಕ್ಕೆ ಕಾರಣ ಬೇರೆಯವರು ಅವನ ಜಮೀನು ಕಿತ್ತುಕೊಂಡಿದ್ದು. ಬೇರೆಯವರು ಉದ್ಯೋಗ ಕಿತ್ತುಕೊಂಡಿದ್ದಕ್ಕೆ ಇಂದು ಅಸ್ಪೃಶ್ಯನಿಗೆ ಉದ್ಯೋಗವಿಲ್ಲದಂತಾಗಿದೆ. ಇಂತಹ ದುಷ್ಕೃತ್ಯಗಳನ್ನು ಸುಧಾರಿಸುವ ಸಾಮರ್ಥ್ಯ ನಮ್ಮ ಸಾಮರ್ಥ್ಯಕ್ಕೆ ಮಿಗಿಲಾದುದು ಅಂತೂ ಅಲ್ಲ. ಇದಕ್ಕೆ ಉದಾಹರಣೆ ನೀಡಬೇಕೆಂದರೆ ರೈಲ್ವೆಯ ಆಡಳಿತವು ವೈಸ್‌ರಾಯ್ ಅವರ ಕಾನೂನು ಮಂಡಳಿಯ ಮುಖಾಂತರ ನಡೆಯುತ್ತದೆ. ರೈಲ್ವೆಯಲ್ಲಿ ಕಾರ್ಮಿಕರ ಸಂಖ್ಯೆ ಕಡಿತ ಮಾಡಬೇಕು ಎಂದು ತೀರ್ಮಾನವಾದ ಕೂಡಲೇ ಮೊಟ್ಟ ಮೊದಲಿಗೆ ಅಸ್ಪೃಶ್ಯ ಕಾರ್ಮಿಕರ ಮೇಲೆ ಗದಾಪ್ರಹಾರ ಮಾಡಲಾಗುತ್ತದೆ ವಿನಃ ಇತರ ವರ್ಗದ ಕಾರ್ಮಿಕರ ಮೇಲೆ ಗದಾಪ್ರಹಾರವಾಗುವುದಿಲ್ಲ ಏಕೆಂದರೆ ಇತರ ಜಾತಿಯ ಮತ್ತು ಧರ್ಮದ ಕಾರ್ಮಿಕರ ಪ್ರತಿನಿಧಿಗಳು ಕೌನ್ಸಿಲ್‌ನಲ್ಲಿ ಇದ್ದಾರೆ. ಆದರೆ ನಮ್ಮ ವರ್ಗದ ಏಕೈಕ ಪ್ರತಿನಿಧಿ ಇದ್ದಾರೆ. ಆದರೆ ಅವರು ತಮ್ಮ ವರ್ಗದ ಪರವಾಗಿ ಏನೂ ಮಾತನಾಡುವುದೇ ಇಲ್ಲ. ಆದರೆ ಇನ್ನುಮುಂದೆ ವೈಸ್‌ರಾಯ್

ಅವರ ಕಾನೂನು ಮಂಡಳಿಗೆ ಶೇ. ೧೮ರಷ್ಟು ಪ್ರತಿನಿಧಿಗಳು ನಮ್ಮ ವರ್ಗದಿಂದ ಆಯ್ಕೆಯಾಗಲಿದ್ದಾರೆ. ಪ್ರತಿನಿಧಿಗಳ ಆಯ್ಕೆ ಸಂದರ್ಭದಲ್ಲಿ ನೀವು ಎಚ್ಚರದಿಂದ ಇದ್ದು, ಕೆಲಸ ಮಾಡುವ ವ್ಯಕ್ತಿಗಳನ್ನೇ ಆಯ್ಕೆ ಮಾಡಬೇಕಾಗುತ್ತದೆ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ದೇವರ ಮೇಲೆ ನಂಬಿಕೆ ಇರಿಸಿ ಕೆಲಸ ಮಾಡಬೇಡಿ. ನಿಮಗೆ ಏನಾದರೂ ಮಾಡುವುದು ಇದ್ದಲ್ಲಿ ಅದನ್ನು ಮಾನಸಿಕ ಸಾಮರ್ಥ್ಯದ ಮೇಲೆ ಮಾಡಿ. ಇಲ್ಲಿಯವರೆಗೆ ತಾವು ಶಾಂತಚಿತ್ತದಿಂದ ನನ್ನ ಭಾಷಣ ಕೇಳಿದ್ದೀರಿ. ಅಲ್ಲದೇ ಈ ಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿದ್ದಕ್ಕೆ ನಾನು ತಮ್ಮೆಲ್ಲರಿಗೂ ಆಭಾರಿಯಾಗಿದ್ದೇನೆ.

---

ಜನತಾ: ಫೆಬ್ರವರಿ ೨೫, ೧೯೩೩

## ೬೫.

# ಕೋಕಣಸ್ಥ-ದೇಶಸ್ಥ ಭೇದಕ್ಕೆ ನನ್ನ ಸಹಮತವಿಲ್ಲ

ಡಾ, ಅಂಬೇಡ್ಕರ್ ಅವರನ್ನು ಸನ್ಮಾನಿಸುವ ಉದ್ದೇಶದಿಂದ ಭಾನುವಾರ ಫೆಬ್ರವರಿ ೧೯, ೧೯೩೩ರಂದು ಶ್ರೀ ದೇವರಾಯ ನಾಯಿಕ ಅವರ ಅಧ್ಯಕ್ಷತೆಯಲ್ಲಿ ಮುಂಬೈನ ವಾಂದ್ರೆಯ ದಾಂಡಾರೋಡ್ ನಲ್ಲಿ ಅಸ್ಪೃಶ್ಯ ವರ್ಗದ ಸಭೆ ಆಯೋಜಿಸಲಾಗಿತ್ತು. ಇದೇ ಸನ್ಮಾನ ಸಮಾರಂಭದಲ್ಲಿ ಅವರಿಗೆ ಪುಷ್ಪಗುಚ್ಛ ಇರಿಸುವುದಕ್ಕಾಗಿ ಬೆಳ್ಳಿ ಪಾತ್ರೆ ಕೂಡ ನೀಡಲು ನಿರ್ಧರಿಸಲಾಗಿತ್ತು. ವಾಂದ್ರೆಯ ಮಹಿಳೆಯರು ಮತ್ತು ಪುರುಷರು ಸಭೆಯಲ್ಲಿ ಉಪಸ್ಥಿತರಿದ್ದರು. ಈ ಸಭೆಯಲ್ಲಿ ಡಾ. ಬಾಬಾಸಾಹೇಬ ಮಾಡಿದ ಭಾಷಣ ಅಂತರ್ಮುಖಿಯಾಗಿತ್ತು. ಸಮಾಜದ ಕೆಲವು ವ್ಯಕ್ತಿಗಳು ಒಂದಷ್ಟು ಯುವಕರನ್ನು ಬೆನ್ನಿಗೆ ಕಟ್ಟಿಕೊಂಡು ಮಾಡುತ್ತಿರುವ ಕೆಟ್ಟ ಕೆಲಸಗಳಿಂದಾಗಿ ಅವರ ಹೆಸರುಗಳನ್ನು ಅವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಲೇಬೇಕಾಗಿತ್ತು.

ಠಾಣೆಯಲ್ಲಿನ ಬೋರ್ಡಿಂಗ್ ಮತ್ತು ಸಮತಾ ಸೈನಿಕ ದಳದ ಗುಂಪಿನ ಮಧ್ಯೆ ಉದ್ಭವಿಸಿರುವ ತಪ್ಪುಗ್ರಹಿಕೆ ಸಮಾಜ ಒಡೆಯುವ ಕೆಟ್ಟ ಬೀಜ ಬಿತ್ತುತ್ತಿದೆ. ಈ ಗುಂಪು ಆ ಗುಂಪು ಮತ್ತಾವುದೋ ಗುಂಪಲ್ಲ ಬದಲಿಗೆ ಇದು ನಮ್ಮ ಸಮಾಜದ್ದೆ ಭಾಗವಾಗಿರುವ ಒಂದು ಗುಂಪು. ವಯಸ್ಸಿನಲ್ಲಿ ಹಿರಿಯರು ಎನ್ನುವ ಕಾರಣಕ್ಕೆ ನಾನು ಅವರಿಗೆ ಗೌರವ ನೀಡುತ್ತಿದ್ದೆ. ಆದರೆ ಅವರು ಮಾತ್ರ ತಮ್ಮ ಬುದ್ಧಿ ಮತ್ತು ಅನುಭವಕ್ಕೆ ಹೊಲಸು ಮೆತ್ತಿಕೊಂಡಿದ್ದಾರೆ. ಶ್ರೀ. ಸಂಭಾಜಿ ಗಾಯಕವಾಡ್, ಗೋವಿಂದ ರಾಮಜಿ ಅಡ್ರೇಕರ್ ಮತ್ತು ಶಿವರಾಮ ಗೋಪಾಳ ಜಾಧವ ಅವರ ಈ ಗುಂಪು ನಾಯಕತ್ವಕ್ಕೆ ವಿರುದ್ಧ ನಿಂತಿದ್ದಾರೆ. ವಯಸ್ಸಿಗೆ ತಕ್ಕಂತೆ ಪಕ್ವವಾಗಬೇಕಿದ್ದ ಅವರ ಬುದ್ಧಿ ಅದಕ್ಕೆ ವಿರುದ್ಧವಾಗಿ ಅಪಕ್ವತೆಯತ್ತ ಸಾಗುತ್ತಿದೆ. ಆಶ್ಚರ್ಯ ಎಂದರೆ ಯುವಕರು ಕೂಡ ಇಂತಹ ವ್ಯಕ್ತಿಗಳ ಮಾತಿಗೆ ಮರುಳಾಗಿ ತಮ್ಮ ಶಕ್ತಿ, ಸಾಮರ್ಥ್ಯ ಮತ್ತು ಸಮಯ ಹಾಳು ಮಾಡಿಕೊಳ್ಳುತ್ತಿದೆ. ಕನಿಷ್ಠ ಈ ಯುವಕರಾದರೂ ವಿಚಾರ ಮಾಡಿ ತಮ್ಮೆಲ್ಲ ಶಕ್ತಿಯನ್ನು ಸಮಾಜ ಸಂಘಟನೆಗೆ ಬಳಸಬೇಕು ಎನ್ನುವುದು ನನ್ನ ಆಶಯ. ಈ ಜನರ ಇಂದಿನ ಕೆಲಸವೆಂದರೆ ನನ್ನ ಅನುಪಸ್ಥಿತಿಯ ಲಾಭ ಪಡೆದು ಸಾಮಾಜಿಕ ಕೆಲಸ ಹಾಳು ಮಾಡುವುದು ಆಗಿದೆ.

ಅವರ ಆಕ್ಷೇಪಣೆಗಳು ನನ್ನ ಕಿವಿಗೆ ಬಿದ್ದಿವೆ. ಅವುಗಳಲ್ಲಿನ ಒಂದಿಷ್ಟು ಹೀಗಿವೆ.

೧. ಠಾಣೆ ಬೋರ್ಡಿಂಗ್‌ನಲ್ಲಿ ಕೋಕಣಸ್ಥ ಮಕ್ಕಳಿಗೆ ಪ್ರವೇಶ ಲಭಿಸುತ್ತಿಲ್ಲ.

೨. ಈ ಬೋರ್ಡಿಂಗ್‌ಗೆ ಶ್ರೀ ಶಿವರಾಮ ಗೋಪಾಳ ಜಾಧವ ಅವರನ್ನು ಸೂಪರಿಂಟೆಂಡೆಂಟ್ ಎಂದು ನೇಮಿಸಬೇಕು.

೩. ಸುಭೇದಾರ ಸಾವದಕರ್ ಅವರನ್ನು ಸೇನಾ ದಳದ ಸರ್ವಾಧಿಕಾರಿ ಎಂದು ಏಕೆ ನೇಮಿಸಲಾಗಿದೆ?

೪. ನಿಮ್ಮ ಚಳವಳಿಯಲ್ಲಿ ಇತರ ಜಾತಿಯವರ ಪ್ರವೇಶ ಏಕೆ?

ಯಾವುದೇ ಸಾಧಾರಣ ವ್ಯಕ್ತಿಗೂ ಕೂಡ ಈ ಆಕ್ಷೇಪಗಳು ಕ್ಷುಲ್ಲಕವಾಗಿದ್ದು ಅವುಗಳನ್ನು ಸಾರ್ವಜನಿಕ ಸಭೆಯಲ್ಲಿ ಉಲ್ಲೇಖಿಸುವುದು ದುರ್ದೈವದ ಸಂಗತಿ ಎಂದು ಭಾಸವಾಗುತ್ತದೆ. ಆದರೆ ಕೆಲವೊಮ್ಮೆ ಇಂತಹ ಸಣ್ಣ ವಿಚಾರಗಳು ಮಹತ್ವ ಪಡೆಯುತ್ತವೆ.

ಮೊದಲನೇ ಆಕ್ಷೇಪ ನಿರಾಧಾರವಾಗಿದ್ದು ಅದರಲ್ಲಿ ಸತ್ಯದ ಲವಲೇಶವೂ ಇಲ್ಲ. ಕೋಕಣಸ್ಥರನ್ನು ದೂರ ಇಡುವುದಕ್ಕೆ ನನ್ನಲ್ಲಿ ಸಕಾರಣವೇ ಇಲ್ಲ. ನಾನೇ ಸ್ವತಃ ಕೋಂಕಣ ಪ್ರದೇಶದವನಾಗಿದ್ದರೂ ನಾನು ಎಂದಿಗೂ ಕೊಂಕಣಸ್ಥ–ದೇಶಸ್ಥ ಎಂದು ಭೇದಭಾವ ಮಾಡಿಲ್ಲ. ಇಷ್ಟು ಮಾತ್ರ ನಿಜ, ಶಿಕ್ಷಣ ಪ್ರಸಾರದ ದೃಷ್ಟಿಯಲ್ಲಿ ಕೊಂಕಣ ಪ್ರದೇಶದ ಮಹಾರ್‌ರು ಸಾಕಷ್ಟು ಹಿಂದುಳಿದಿದ್ದು ಅವರು ಶಿಕ್ಷಣಕ್ಕೆ ಆದ್ಯತೆ ನೀಡುವುದು ನಗಣ್ಯ. ಎರಡನೇ ಆಕ್ಷೇಪದ ಬಗ್ಗೆ ಇಷ್ಟು ಮಾತ್ರ ಹೇಳಬೇಕಾಗುತ್ತಿದೆ. ಮೊದಲು ಜಾಧವಜೀ ತಮ್ಮ ಯೋಗ್ಯತೆ ಅರಿತುಕೊಳ್ಳಬೇಕು. ಶ್ರೀ. ಜಾಧವ ಅವರು ತಮ್ಮ ಯೋಗ್ಯತೆ ಸಾಬೀತುಪಡಿಸಿದ್ದರೆ ಅವರನ್ನು ದೂರ ಸರಿಸುವುದಕ್ಕೆ ಕಾರಣವೇ ಇರುತ್ತಿರಲಿಲ್ಲ. ವಿದ್ಯಾರ್ಥಿಗಳ ವಸತಿ ಗೃಹ ಎಂದರೆ ಅಂಗಡಿಯಂತೆ ನಡೆಸಲು ಸಾಧ್ಯವಿಲ್ಲ. ಸೂಪರಿಂಟೆಂಡೆಂಟ್ ಆದವರು ತಮ್ಮ ಆದರ್ಶ ಆಚರಣೆಗಳಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು ಬೆಳೆಸಬೇಕು ವಿನಃ ಬರೀ ಆದೇಶ ನೀಡುವುದಷ್ಟೇ ಅಲ್ಲ. ಇಂತಹ ಕೆಲಸ ಜಾಧವ ಅವರಿಂದ ಆಗುತ್ತಿಲ್ಲ ಎಂದು ಮನವರಿಕೆಯಾದ ಬಳಿಕವಷ್ಟೇ ಸಂಸ್ಥೆಯ ಹಿತದೃಷ್ಟಿ ಗಮನದಲ್ಲಿ ಇರಿಸಿಕೊಂಡು ಅವರನ್ನು ದೂರ ಮಾಡದೇ ಗತ್ಯಂತರವಿರಲಿಲ್ಲ. ಮತ್ತು ಈ ಸಂಸ್ಥೆಗೆ ಸರ್ಕಾರದ ಅನುದಾನ ಲಭಿಸುತ್ತದೆ ಎಂದ ಮೇಲೆ ವ್ಯವಸ್ಥಿತವಾಗಿ ನಡೆಸಲಿಕ್ಕೆ ಆಗದಿದ್ದರೆ ಸರ್ಕಾರಕ್ಕೆ ಉತ್ತರಿಸಬೇಕಾಗುತ್ತದೆ. ಇನ್ನು ಮುಂದೆ ಠಾಣೆ ಮತ್ತು ಮಹಾಡ್‌ನಲ್ಲಿ ವಸತಿಗೃಹಗಳು ಒಂದೇ ಆಡಳಿತ ಮಂಡಳಿಯ ವತಿಯಿಂದ ನಡೆಯಲಿದ್ದು, ಸುಭೇದಾರ್ ಸಾವದಕರ್ ಚೇರ್‌ಮನ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ.

ಮೂರನೇ ಆಕ್ಷೇಪಕ್ಕೆ ನನ್ನ ಉತ್ತರ ಹೀಗಿದೆ. ಸಮತಾ ಸೈನಿಕ ದಳವನ್ನು ಒಂದೇ ಸೂತ್ರದಡಿ ತಕ್ಷಣ ತರದಿದ್ದರೆ ಅದರಲ್ಲಿಯೂ ಶಿಸ್ತು ಬೆಳೆಯುವುದಿಲ್ಲ. ನಾಲ್ಕನೇ ಆಕ್ಷೇಪಕ್ಕೆ ಪ್ರತಿಯಾಗಿ ಹೇಳುವುದು ಇಷ್ಟೇ. ನಮ್ಮ ಚಳವಳಿಯಲ್ಲಿ ಬ್ರಾಹ್ಮಣ, ಕಾಯಸ್ಥ, ಭಂಡಾರಿ ಇತರ ಜಾತಿಯ ಜನರು ಏಕೆಂದು ಆಕ್ಷೇಪಿಸಿದ್ದಾರೆ. ಈ ಆಕ್ಷೇಪಕ್ಕೆ ನನ್ನದು ಅತ್ಯಂತ ಸರಳ ಉತ್ತರ ಹೀಗಿದೆ. ಒಂದು ವೇಳೆ ಅನಾರೋಗ್ಯದಿಂದ ಬಳಲುತ್ತಿರುವ ನೀವು ಹೋಗುವ ವೈದ್ಯ ಮಹಾರ್ ಜಾತಿಗೆ ಸೇರಿದವನಲ್ಲವೆಂಬ ಕಾರಣಕ್ಕೆ ಆತನಿಂದ ನೀವು ದೂರವಾಗುತ್ತೀರಾ? ಸ್ಥಿತಿ ಹೀಗಿದ್ದ ಮೇಲೆ ನಿಮಗೇಕೆ ಸಂಶಯ? ಇಂದಿನ ಸಂದರ್ಭದಲ್ಲಿ ಕಟು ಶಬ್ದಗಳನ್ನು ಬಳಸುವುದಕ್ಕೆ ಬೇಸರವಾಗುತ್ತದೆ. ಆದರೆ ಕರ್ತವ್ಯ ಕೂಡ ಅಷ್ಟೇ ಕಟುವಾಗಿರುವ ಕಾರಣ ಕಟುಶಬ್ದದ ಬಳಕೆ ಅನಿವಾರ್ಯ. ಇಂತಹ ಪ್ರಸಂಗ ಮತ್ತೆ ಉದ್ಭವಿಸದಂತೆ ನೋಡಿಕೊಳ್ಳುವುದು ನಿಮ್ಮ ಕೈಯಲ್ಲಿದೆ ಎಂದು ಹೇಳಿ ಡಾ. ಬಾಬಾಸಾಹೇಬ ತಮ್ಮ ಭಾಷಣ ಪೂರ್ಣಗೊಳಿಸಿದರು.

ಅಧ್ಯಕ್ಷತೆ ವಹಿಸಿದ್ದ ದೇವರಾಯ ನಾಯಿಕ ಸಮಾರೋಪ ಭಾಷಣದಲ್ಲಿ ಅಲ್ಲಿ ಇಲ್ಲಿ ತಪ್ಪು ಕಲ್ಪನೆಗಳು ಬೆಳೆಯುವುದಕ್ಕೆ ಕಾರಣೀಕರ್ತರಾಗುತ್ತಿರುವ ವ್ಯಕ್ತಿಗಳ ಕೈ ಹಿಡಿದು ಡಾ. ಅಂಬೇಡ್ಕರ್ ಬಳಿ ತೆಗೆದುಕೊಂಡು ಹೋದರೆ ಅಂತಹ ವ್ಯಕ್ತಿಗಳು ಮೂಡಿಸಿರುವ ತಪ್ಪು ಕಲ್ಪನೆ ದೂರ ಆಗುತ್ತದೆ ಎಂದು ಹೇಳಿದರು.

ಸಭೆಯಲ್ಲಿ ಸುಭೇದಾರ ಸಾವದಕರ್, ಶ್ರೀ. ಉಪಶಾಮ, ಡಿ. ವಿ. ಪ್ರಧಾನ್, ಕಮಲಾಕಾಂತ ಚಿತ್ರೆ, ಶಿವತರಕರ್ ಮಾಸ್ತರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

---

ಜನತಾ: ಫೆಬ್ರವರಿ ೨೫, ೧೯೩೩

## ೬೬.
# ಜನರ ಧಾರ್ಮಿಕ ಮುಗ್ಧತೆಯ ಲಾಭ ಪಡೆಯುವವರಿಂದ ಎಚ್ಚರ ಇರಲಿ

ಮುಂಬೈನ ವಾಡಿ ಬಂದರ್ ಹತ್ತಿರದ ಜಿಐಪಿ ರೈಲ್ವೆ ಚಾಳ್ ಬಳಿ ಶನಿವಾರ ಮಾರ್ಚ್ ೪, ೧೯೩೩ ರಾತ್ರಿ ೯ ಗಂಟೆಗೆ ಆರ್. ಡಿ. ಕವಳಿ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಅಸ್ಪೃಶ್ಯ ವರ್ಗದ ಬಹಿರಂಗ ಸಭೆಯಲ್ಲಿ ದಲಿತ ವರ್ಗದ ನಾಯಕ ಡಾ. ಅಂಬೇಡ್ಕರ್ ಅವರಿಗೆ ಮಾನಪತ್ರ ನೀಡಿ ಸನ್ಮಾನಿಸಲಾಯಿತು. ಈ ಸಭೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಪುರುಷರು ಸೇರಿದ್ದರು. ಶ್ರೀ ಶಿವತರಕರ್, ಶ್ರೀ. ದೇವರಾಯ ನಾಯಿಕ, ಸಹಸ್ರಬುದ್ಧೆ, ದಿವಾಕರ್ ಪಗಾರೆ, ಶಾ. ಉಪಶಾಮ, ಕಮಲಾಕಾಂತ ಚಿತ್ರೆ, ಮೇಷರಾಮ್ ಸೇರಿದಂತೆ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಭೆಯ ಅಧ್ಯಕ್ಷತೆಯ ಕುರಿತು ಶ್ರೀ. ಪುಂಜಾಂಜಿ ಜಾಧವ ಮಂಡಿಸಿದ ನಿರ್ಣಯವನ್ನು ಶ್ರೀ. ಕರಡಕ ಅನುಮೋದನೆ ನೀಡಿದರು. ಶ್ರೀ. ಆರ್. ಡಿ. ಕವಳಿ ಅವರು ಸಭೆಯ ಅಧ್ಯಕ್ಷತೆ ವಹಿಸಿಕೊಂಡ ಬಳಿಕ ಡಾ. ಅಂಬೇಡ್ಕರ್ ಅವರಿಗೆ ನೀಡುವ ಮಾನಪತ್ರವನ್ನು ಶ್ರೀ. ದಿವಾಕರ್ ಪಗಾರೆ ಸಭೆಗೆ ಓದಿ ಹೇಳಿದರು. ಈ ಮಾನಪತ್ರದ ಮೇಲೆ ಸುಮಾರು ೮೫ ಹಿತೈಷಿಗಳ ಹೆಸರುಗಳನ್ನು ನಮೂದಿಸಲಾಗಿತ್ತು. ಮಾನಪತ್ರ ಹೀಗಿತ್ತು.

ಜಾತಿಭೇದ ವಿಧ್ವಂಸಕ, ಸಾಮಾಜಿಕ ಕ್ರಾಂತಿಯ ಹರಿಕಾರ, ಮಾರ್ಗದರ್ಶಕ ಮೂಕ ನಾಯಕ

ಡಾ. ಭೀಮರಾವ್ ರಾಮಜಿ ಅಂಬೇಡ್ಕರ್

ಎಂ.ಎ., ಪಿಎಚ್., ಡಿ. ಡಿಎಸ್ಸಿ, ಬ್ಯಾರಿಸ್ಟರ್ ಆಫ್ ಲಾ

ಎಂ.ಎಲ್.ಸಿ., ಜೆ.ಪಿ., ಮುಂಬೈ

ಪರಮ ಪ್ರಿಯ ಡಾ. ಬಾಬಾಸಾಹೇಬ! ಮುಂಬೈನ ಸ್ಯಾಂಡರ್ಟ್ ರೋಡ್, ವಾಡಿ ಬಂದರ್ ಹತ್ತಿರದ ಜಿಐಪಿ ರೈಲ್ವೆ ಚಾಳ್‌ನ ನಾಸಿಕ್ ಜಿಲ್ಲೆಯ ಅಸ್ಪೃಶ್ಯರು ಎಂದು ಕರೆಸಿಕೊಳ್ಳುವ ತಮ್ಮ ಎಲ್ಲ ಆಜ್ಞಾಧಾರಕರು ಮತ್ತು ಅನುಯಾಯಿಗಳ ಸಪ್ರೇಮ ಅಭಿವಂದನೆಗಳು.

ನಿಮ್ಮ ಪ್ರತಿಯೊಂದು ಕ್ಷಣ ಅಮೂಲ್ಯವಾದುದ್ದು ಆದರೂ ತಾವು ನಮ್ಮಂತಹ ಬಡವರ ಇಚ್ಛೆ ಮನ್ನಿಸಿ ಇಲ್ಲಿಗೆ ದಯಮಾಡಿಸುವ ಕೃಪೆ ತೋರಿದ್ದಕ್ಕೆ ನಮ್ಮಲ್ಲಿ ಧನ್ಯತಾ ಭಾವ ಮೂಡುತ್ತಿದೆ.

ತಾವು ಶ್ರೇಷ್ಠ ಗುಣವಂತರಾಗಿದ್ದೀರಿ ಮತ್ತು ಅದೇ ರೀತಿ ಧೈರ್ಯಶಾಲಿಗಳಿದ್ದೀರಿ. ಅಪರಿಮಿತ ಬುದ್ಧಿಶಕ್ತಿ ಮತ್ತು ಶೌರ್ಯ ತಮ್ಮಲ್ಲಿದೆ. ಅದಕ್ಕೆ ಸಾಕ್ಷಿ ಒದಗಿಸುವಂತಹ ಅನೇಕ ಸಣ್ಣ ಪುಟ್ಟ ಪ್ರಸಂಗಗಳನ್ನು ಇಲ್ಲಿಯವರೆಗೆ ತಮ್ಮ ಜೀವಿತಾವಧಿಯಲ್ಲಿ ಎದುರಿಸಿದ್ದೀರಿ. ತಮ್ಮ ಯಶಸ್ವಿ ವಿದ್ಯಾರ್ಥಿ ಜೀವನ, ನಾಸಿಕ್ ಮತ್ತು ಮಹಾಡ್ ಸತ್ಯಾಗ್ರಹದ ನೇತೃತ್ವ, ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಸಮಾಜದ ಹಿತಕ್ಕಾಗಿ ಮಾಡಿದ ಕೆಲಸ, ಪುಣೆ ಒಪ್ಪಂದದ ವೇಳೆ ಪ್ರಕಟಗೊಂಡ ತಮ್ಮ ಆತ್ಮವಿಶ್ವಾಸ ಮತ್ತು ಅಪರಿಮಿತ ಬುದ್ಧಿಶಕ್ತಿ ಮತ್ತು ಅಪರಿಮಿತ ಧೈರ್ಯಕ್ಕೆ ಸಾಕ್ಷ್ಯ ಒದಗಿಸಿದ ವಿವಿಧ ಪ್ರಸಂಗಗಳ ಪೈಕಿ ವಿಶಿಷ್ಟ ಎನ್ನಿಸುವಂತಹಗಳನ್ನು ಮಾತ್ರ ಇಲ್ಲಿ

---

ಜನತಾ: ಫೆಬ್ರವರಿ ೨೫, ೧೯೩೩

ಉಲ್ಲೇಖಿಸಲಾಗಿದೆ. ಯಶಸ್ವಿ ವಿದ್ಯಾರ್ಥಿಯಾಗಿ, ಮುತ್ಸದ್ದಿಯಾಗಿ, ನಿರ್ಭೀತ ನಾಯಕನಾಗಿ ತಮ್ಮ ಕೀರ್ತಿ ದಿಗಂತದುದ್ದಕ್ಕೂ ಹರಡಿದೆ. ಸಮಯ ಉರುಳಿದಂತೆ ತಮ್ಮ ಈ ಕೀರ್ತಿ ದೀಪ ಇನ್ನಷ್ಟು ಪ್ರಜ್ವಲಗೊಳ್ಳುವುದು ನಿಶ್ಚಿತ.

ಸ್ವಾಮಿ, ತಾವು ನಮ್ಮ ಬಾಳಿನ ದಾರಿಗೆ ಬೆಳಕು ನೀಡಿದವರು. ನಮ್ಮ ಹೃದಯಗಳಲ್ಲಿ ಚೈತನ್ಯದ ದೀಪ ಬೆಳಗಿದವರು. ಶತಶತಮಾನಗಳ ಅಜ್ಞಾನದ ಅಂಧಕಾರ ತೊಲಗಿಸಿ ಬೆಳಕು ನೀಡಿದ, ಹಿಂದೆ ನಮಗೆ ಯಾರೂ ನೀಡದ ಜ್ಞಾನದೃಷ್ಟಿ ಕಲ್ಪಿಸಿದವರು, ಜಗತ್ತಿನ ದೃಷ್ಟಿಯಲ್ಲಿ ಮಾತ್ರ ಅಷ್ಟೇ ಏಕೆ ನಮ್ಮ ದೃಷ್ಟಿಯಲ್ಲೂ ನಮ್ಮ ಮೌಲ್ಯ ಅಧಿಕಗೊಳಿಸಿದ್ದೀರಿ. ನಮ್ಮ ಸ್ವಾಭಿಮಾನ ಬಡಿದೆಬ್ಬಿಸಿದ್ದೀರಿ. ಆತ್ಮಗೌರವ ಮತ್ತದರ ಮಹತ್ವದ ಅರಿವು ಮಾಡಿಕೊಟ್ಟಿದ್ದೀರಿ.

ನೀವೇ ನಮ್ಮ ಮುಖಂಡರು, ನೀವೇ ನಮ್ಮ ಮಾರ್ಗದರ್ಶಕರು, ನೀವೇ ನಮ್ಮ ಸನ್ಮಿತ್ರ ಅಷ್ಟೇ ಏಕೆ ನೀವೇ ನಮ್ಮ ಸರ್ವಸ್ವ, ನಮ್ಮ ದೇವರು ನಮ್ಮ ಧರ್ಮ. ನಮ್ಮ ರಾಜಕಾರಣ ಮತ್ತು ಸಾಮಾಜೀಕರಣ ತಮ್ಮ ಮಾತುಗಳು ಮತ್ತು ಧೋರಣೆಗೆ ಅನುಗುಣವಾಗಿ ಇವೆ.

ಸ್ವಾಮಿ, ನಾವು ಬಡವರಾಗಿದ್ದರೂ ಕೂಡ ನಿಮ್ಮ ಬಗ್ಗೆ ನಮ್ಮದು ನಿಸ್ಪೃಹ ಪ್ರೀತಿ. ನಿಮ್ಮ ಬಗ್ಗೆ ನಿಷ್ಠೆ ಮತ್ತು ನಿಮ್ಮ ಮೇಲಿನ ನಮ್ಮ ವಿಶ್ವಾಸ ಅಚಲವಾಗಿದೆ. ಈ ಸಾಮರ್ಥ್ಯದ ಮೇಲೆ ನಾವು ತಾವು ಸೂಚಿಸುವ ಮಾರ್ಗ ಎಷ್ಟೇ ಕಷ್ಟಕರವಾಗಿದ್ದರೂ ಅಂತಃಕರಣ ಮತ್ತು ಪರಿಶ್ರಮದಿಂದ ಸಾಗುವುದಕ್ಕೆ ಸಿದ್ಧ ಎಂದು ಈ ಸಂದರ್ಭದಲ್ಲಿ ತಮಗೆ ಆಶ್ವಾಸನೆ ನೀಡುತ್ತಿದ್ದೇವೆ. ನಮ್ಮ ನಿಷ್ಠೆ, ಕೃತಜ್ಞತೆ ಮತ್ತು ಸಮಸ್ತ ಜನರ ಪರವಾಗಿ ತಮಗೆ ನೀಡಿದ ವಚನ ಮತ್ತು ಇಂದಿನ ಸುದಿನದಂದು ಒಂದು ಸಣ್ಣ ಸ್ಮರಣಿಕೆಗೆ ಸಾಕ್ಷಿಯಾಗಿ ಹೂವು ಅಲ್ಲದಿದ್ದರೂ ಹೂವಿನ ದಳದಂತೆ ಈ ಮಾನಪತ್ರವನ್ನು ತಮ್ಮ ಚರಣಕ್ಕೆ ಇಂದು ಸಮರ್ಪಿಸುತ್ತಿದ್ದು ಅದನ್ನು ಸ್ವೀಕರಿಸಿ ನಮ್ಮನ್ನು ಕೃತಾರ್ಥರನ್ನಾಗಿಸಬೇಕು.[೧]

ಬಳಿಕ ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಆರ್. ಡಿ. ಕವಳಿ ಅವರಿಂದ ಡಾ. ಅಂಬೇಡ್ಕರ್ ಅವರಿಗೆ ಮಾನಪತ್ರ, ಬೆಳ್ಳಿಯ ಕಪ್ಪು ಬಟ್ಟಲು ಮತ್ತು ಪುಷ್ಪಗುಚ್ಛ ಹಾರ ನೀಡಿ ಸನ್ಮಾನಿಸಲಾಯಿತು.

ಸನ್ಮಾನಕ್ಕೆ ಉತ್ತರವಾಗಿ ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ ಈ ಮಾತುಗಳನ್ನು ಹೇಳಿದರು.

ಈ ಮಾನಪತ್ರದಲ್ಲಿ ನನ್ನ ಬಗ್ಗೆ ಏನೇನು ಬರೆದಿದೆಯೋ ಅದು ಎಷ್ಟು ನಿಜ ಎಂದು ಹೇಳುವುದು ಕಷ್ಟ. ಆದರೆ ಇಷ್ಟು ಮಾತ್ರ ನಿಜ. ಸ್ತುತಿಸುವುದಕ್ಕಾಗಿ ಬಳಸಿದ ಅಲಂಕಾರಿಕ ಭಾಷೆ ನಿಮ್ಮಂತೆಯೇ ಇರುವ ವ್ಯಕ್ತಿಯನ್ನು ಗುಣಾತೀತ ಈಶ್ವರನನ್ನಾಗಿ ಮಾಡಿದ್ದೀರಿ. ನಿಜವಾಗಿಯೂ ಹೇಳಬೇಕೆಂದರೆ ಈ ನಿಮ್ಮ ಗುಣ ನಿಮ್ಮ ಹಿತಾಸಕ್ತಿಗೆ ಕೆಡುಕು ಮಾಡಬಲ್ಲುದು. ಇತರರನ್ನು ಈಶ್ವರನನ್ನಾಗಿ ಮಾಡಿ ನಿಮ್ಮ ಉದ್ಧಾರದ ಭಾರವನ್ನು ಆತನ ಮೇಲೆ ಹೇರುವ ಈ ಭಾವನೆ ನಿಮ್ಮನ್ನು ಕರ್ತವ್ಯದಿಂದ ವಿಮುಖನನ್ನಾಗಿಸುತ್ತದೆ. ಇಂತಹ ಭಾವನೆಗಳಿಗೆ ತಾವು ಅಂಟಿಕೊಂಡು ಕುಳಿತರೆ ಪ್ರವಾಹದೊಂದಿಗೆ ತೇಲುವ ಕಟ್ಟಿಗೆಯಾಗಿ ನಿಮ್ಮಲ್ಲಿರುವ ಶಕ್ತಿ ನಿರುಪಯುಕ್ತವಾಗುತ್ತದೆ. ಇಲ್ಲಿಯವರೆಗೆ ತಾವು ಇಂತಹ ಭಾವನೆಗಳಿಗೆ ಎಡೆ ಮಾಡಿಕೊಟ್ಟಿದ್ದರಿಂದಲೇ ಆ ಭಾವನೆ ನಿಮ್ಮ ಸಮೂಹ ನಾಶಕ್ಕೆ ಕಾರಣೀಭೂತವಾಗಿದೆ. ಇದಕ್ಕೂ ಸ್ಪಷ್ಟವಾಗಿ ಹೇಳಬೇಕೆಂದರೆ ಈ ರೀತಿಯ ಭಾವನೆ ನಿಮ್ಮದು ಅಷ್ಟೇ ಏಕೆ ಇಡೀ ಹಿಂದೂ ಧರ್ಮವನ್ನು ನಾಶಗೊಳಿಸಿದೆ. ನಮ್ಮ ಈ ಭಾರತದ ಇಂದಿನ ಹೀನಸ್ಥಿತಿಗೆ ಏನಾದರೂ ಕಾರಣ ಇದ್ದರೆ ಅದು ದೇವರು ಮಾತ್ರ.

---

೧. ಡಾ. ಅಂಬೇಡ್ಕರ್ ಯಾನಾ ಸಮರ್ಪಿತ ಮಾನಪತ್ರ: ಸಂ: ಶಂಕರರಾವ್ ಹಾತೋಲೆ: ಪುಟ ೧೨–೧೩.

ಬೇರೆ ದೇಶಗಳಲ್ಲಿನ ಜನರು ಏನಾದರೂ ಬಿಕ್ಕಟ್ಟು ಎದುರಾದರೆ ಅಥವಾ ಇಡೀ ಸಮಾಜ ಸಂಕಷ್ಟಕ್ಕೆ ಸಿಲುಕಿದರೆ ಎಲ್ಲರೂ ಒಗ್ಗಟ್ಟಾಗಿ ತಮ್ಮ ಸಾಮರ್ಥ್ಯ ಒಟ್ಟುಗೂಡಿಸಿ ತಮ್ಮ ಉದ್ಧಾರದ ಮಾರ್ಗ ಕಂಡುಕೊಳ್ಳುತ್ತಾರೆ. ಆದರೆ ನಮ್ಮ ಧರ್ಮ ನಮ್ಮಲ್ಲಿ ಎಂತಹ ಭ್ರಮೆ ಹುಟ್ಟಿಸಿದೆ ಎಂದರೆ ಮನುಷ್ಯರಿಂದ ಏನೂ ಸಾಧ್ಯವಿಲ್ಲ. ದೊಡ್ಡ ಸಂಕಟಕ್ಕೆ ಸಮಾಜ ಸಿಲುಕಿದರೆ ಇಲ್ಲವೇ ಸಮಾಜದ ಪ್ರಗತಿ ಕುಂಠಿತವಾದರೆ ದೇವರು ಅವತಾರ ತಾಳಿ ನಮ್ಮ ಸಂಕಟ ಪರಿಹಾರ ಮಾಡುತ್ತಾನೆ ಎಂದು ಭಾವಿಸುತ್ತಾರೆ. ಕಷ್ಟ ಎದುರಿಸುವ ಬದಲು ಎಲ್ಲರೂ ಈಶ್ವರನ ಅವತಾರದ ಹಾದಿ ಕಾಯುತ್ತ ಕುಳಿತುಕೊಳ್ಳುತ್ತಾರೆ.

ನಮ್ಮ ಹಿಂದೂ ಧರ್ಮ ಪುರಾತನವಾದುದು. ಗ್ರೀಕ್, ರೋಮ್ ಇತ್ಯಾದಿ ಪುರಾತನ ಮತ್ತು ಪ್ರಸಿದ್ಧ ರಾಷ್ಟ್ರಗಳು ತಮ್ಮ ಅಸ್ತಿತ್ವ ಕಳೆದುಕೊಂಡವು. ಆದರೆ ಹಿಂದೂ ಸಮಾಜ ಇಂದಿಗೂ ಜೀವಂತವಾಗಿದೆ ಎಂದು ಹಿಂದೂಗಳು ಹೆಮ್ಮೆಪಡುತ್ತಾರೆ. ಆದರೆ ಕೇವಲ ಬದುಕುವುದರಿಂದ ಕವಡೆ ಕಾಸಿನ ಕಿಮ್ಮತ್ತು ಲಭಿಸದು. ಮನುಷ್ಯನಾದವನು ಮಾನ ಮರ್ಯಾದೆಯಿಂದ ಬದುಕುತ್ತಾನೋ ಇಲ್ಲವೋ ಎನ್ನುವುದು ಮಹತ್ವದ್ದಾಗಿದೆ. ಈ ದೃಷ್ಟಿಯಿಂದ ನೋಡಿದರೆ ಹಿಂದೂ ಧರ್ಮ ಜೀವಂತವಾಗಿ ಇದ್ದರೂ ಯಾವ ಸಾಧನೆ ಮಾಡಿದೆ? ನಿರ್ಲಜ್ಜದಿಂದ ಬೇರೆಯವರ ದಾಸ್ಯ ಸ್ವೀಕರಿಸುವುದನ್ನು ಬಿಟ್ಟು ಇನ್ನೇನು ಮಾಡಿದೆ? ಶೌರ್ಯದಿಂದ ಎರಡು ದಿನ ಬದುಕುವುದು ಬೇರೆಯವರ ಗುಲಾಮನಾಗಿ ೧೦೦ ವರ್ಷ ಬದುಕುವುದಕ್ಕಿಂತ ಎಷ್ಟೋ ಪಾಲಿಗೆ ಶ್ರೇಷ್ಠವಾದುದು. ಇಬ್ಬರ ನಡುವಿನ ಯುದ್ಧದಲ್ಲಿ ಒಬ್ಬ ಪಲಾಯನ ಮಾಡಿಯೂ ಬದುಕುತ್ತಾನೆ. ಆದರೆ ಇನ್ನೊಬ್ಬ ವಿರೋಧಿಗಳನ್ನು ಬಗ್ಗುಬಡಿದು ಬದುಕುತ್ತಾನೆ. ಪಲಾಯನ ಮಾಡಿ ಇಲ್ಲವೇ ವಿರೋಧಿಯ ವರ್ಚಸ್ಸಿಗೆ ಶರಣಾಗಿ ಬದುಕುವ ವ್ಯಕ್ತಿಗೆ ಏನು ಸಿಗುತ್ತದೆ? ಇನ್ನೊಬ್ಬರ ದಾಸ್ಯದಲ್ಲಿ ತನ್ನತನ ಕಳೆದುಕೊಳ್ಳುವುದರ ಜೊತೆಗೆ ದಾಸ್ಯ ಸಂತತಿಯ ವೃದ್ಧಿ, ನಪುಂಸಕತ್ವ ಪಸರಿಸಲು ಕಾರಣನಾಗುತ್ತಾನೆ. ಇಂತಹ ಹೀನ ಬದುಕಿಗಿಂತ ಸಾಯುವುದು ಏಕೆ ಕಷ್ಟ? ಇದೀಗ ಹಿಂದೂ ಸಮಾಜ ಇಲ್ಲಿಯವರೆಗೆ ಬೇರೆಯವರ ದಾಸ್ಯದಲ್ಲಿ ಇಲ್ಲವೇ ಗುಲಾಮನಾಗಿ ಏಕೆ ಉಳಿದಿದೆ ಎಂದು ವಿಚಾರ ಮಾಡಿದರೆ ಅದು ತನ್ನ ಉದ್ಧಾರಕ್ಕಾಗಿ ಈಶ್ವರನ ಹಾದಿ ಕಾಯುತ್ತ ಕುಳಿತಿರುವುದೇ ವಿನಃ ಮತ್ತೇನು ಅಲ್ಲ ಎನ್ನುವುದು ನನ್ನ ದೃಢ ನಂಬಿಕೆ.

ಈ ಜಗತ್ತಿನಲ್ಲಿ ಈಶ್ವರನಿದ್ದಾನೋ ಅಥವಾ ಇಲ್ಲವೋ ಎಂದು ನೀವು ಚಿಂತನೆ ಮಾಡುವ ಅಗತ್ಯವೇ ಇಲ್ಲ. ಈ ಜಗತ್ತಿನಲ್ಲಿ ಪ್ರತಿ ಕ್ಷಣ ನಡೆಯುವ ಕ್ರಿಯೆಗಳು ಮನುಷ್ಯನಿಂದಲೇ ನಡೆಯುತ್ತವೆ ಎನ್ನುವುದು ಶತಃಸಿದ್ಧ ವಿಚಾರ. ಕೆಲವೇ ಕೆಲವು ಸುಶಿಕ್ಷಿತ ಸ್ವಾರ್ಥಿಗಳು ಸಾವಿರಾರು ಜನರ ಎದುರು ಭಗವಂತನ ಖೊಟ್ಟಿ ಕಲ್ಪನೆಯಿಂದ ಅವರನ್ನು ಅಂಧಃಕಾರದಲ್ಲಿ ಇರಿಸಿ ಜನರ ಮುಗ್ಧ ಧಾರ್ಮಿಕ ಭಾವನೆಗಳ ಲಾಭ ಪಡೆದು ತಮ್ಮ ಸ್ವಹಿತ ಸಾಧಿಸಿಕೊಳ್ಳುತ್ತಿದ್ದಾರೆ. ಇಂತಹ ಭಾವನೆಗಳು ನಿಮ್ಮ ಸಂಘಶಕ್ತಿ ನಾಶ ಮಾಡುತ್ತವೆ ಮತ್ತು ಕುರಿಗಳಂತೆ ನೀವು ಅವರನ್ನು ಬೆನ್ನು ಹತ್ತುವುದರಿಂದ ನಿಮ್ಮನ್ನು ಮೋಸಗೊಳಿಸುವ ಅವರ ಮಾರ್ಗ ಸರಳವಾಗುತ್ತದೆ. ಇಂದಿನ ನಮ್ಮ ಅವಸ್ಥೆಯಿಂದ ಪಾರಾಗಬೇಕಾದರೆ, ಉದ್ಧಾರ ಆಗಬೇಕು ಎನ್ನುವುದು ಮನದಲ್ಲಿದ್ದರೆ ಯಾವುದೇ ಕಾರಣಕ್ಕೂ ಇಂತಹ ಕಲ್ಪನೆಗಳಿಗೆ ಆಸ್ಪದ ಇರಲೇಬಾರದು. ನೀವು ಎಲ್ಲ ಮಹಿಳೆಯರು–ಪುರುಷರ ನಮ್ಮ ಉದ್ಧಾರಕ್ಕೆ ಬೇರೆ ಯಾರೂ ಬರುವುದಿಲ್ಲ ಅಥವಾ ನಾನೂ ಕೂಡ ಬರುವುದಿಲ್ಲ ಎಂದು ಒಂದು ವೇಳೆ ನಿಮ್ಮ ಮನಸ್ಸಿನಲ್ಲಿ ಗಟ್ಟಿಯಾದರೆ ಮಾತ್ರ ನಿಮ್ಮ ಉದ್ಧಾರ ನೀವೇ ಮಾಡಿಕೊಳ್ಳುವಲ್ಲಿ ಸಮರ್ಥರಾಗಬಲ್ಲಿರಿ. ಇಂದು ನಮ್ಮ ಚಳವಳಿಯ ಗಾಳಿ ನಾಲ್ಕು ದಿಕ್ಕಿಗೂ ಪಸರಿಸಿದೆ ಎಂದು ಹೇಳುವುದಕ್ಕೆ ನನಗೆ ಸಂತಸವಾಗುತ್ತದೆ. ಆದರೂ ಈ ಜಾಗೃತಿಯ ಬಳಿಕವೂ ನಾನು ತಮ್ಮ

ಅವಗಾಹನೆಗೆ ಒಂದು ಮುಖ್ಯ ವಿಚಾರ ತರಲು ಬಯಸುತ್ತೇನೆ. ನಮ್ಮ ಇಡೀ ಭವಿಷ್ಯವು ರಾಜಕಾರಣದ ಮೇಲೆ ನಿಂತಿದೆ ವಿನಃ ಬೇರೆ ಯಾವುದರ ಮೇಲೂ ಅಲ್ಲ. ಪಂಡರಪುರ, ತ್ರ್ಯಂಬಕೇಶ್ವರ, ಕಾಶಿ, ಹರಿದ್ವಾರ ಇತ್ಯಾದಿಗಳ ಕ್ಷೇತ್ರ ದರ್ಶನದಿಂದಾಗಲಿ ಅಥವಾ ಶನಿ ಮಹಾತ್ಮೆ, ಶಿವಲೀಲಾಮೃತ ಅಥವಾ ಗುರುಚರಿತ್ರೆಯಂತಹ ಗ್ರಂಥಗಳ ಪಾರಾಯಣದಿಂದಾಗಲಿ ಇಲ್ಲವೇ ಏಕಾದಶಿ, ಸೋಮವಾರ ಇತ್ಯಾದಿ ದಿನಗಳಂದು ಮಾಡುವ ಉಪವಾಸದಿಂದಾಗಲಿ ನಿಮ್ಮ ಉದ್ಧಾರವಂತೂ ಆಗುವುದಿಲ್ಲ. ನಿಮ್ಮ ಪೂರ್ವಜರು ಸಾವಿರಾರು ವರ್ಷಗಳಿಂದ ಇವುಗಳನ್ನು ಮಾಡಿಕೊಂಡು ಬಂದಿದ್ದಾರೆ ಆದರೂ ನಿಮ್ಮ ಸ್ಥಿತಿಯಲ್ಲಿ ಒಂದಂಶವಾದರೂ ಬದಲಾಗಿದೆಯೇ? ನಿಮ್ಮ ಮೈಮೇಲೆ ಹಳೆಯ ಹರಿದ ಬಟ್ಟೆಗಳು, ಹೊಟ್ಟೆಗೆ ಅರೆಬೆಂದ ಅರ್ಧ ರೊಟ್ಟಿಯ ತುಂಡು, ದನದ ಕೊಟ್ಟಿಗೆಗಿಂತಲೂ ಗಲೀಜಾಗಿರುವ ಸ್ಥಳದಲ್ಲಿ ನಿಮ್ಮ ವಾಸ, ಕೋಳಿಗಳ ಹಾಗೇ ರೋಗ ರುಜಿನಗಳಿಗೆ ಬಲಿಯಾಗುವ ನಿಮ್ಮ ನಿಶ್ಶಕ್ತತೆ ಇಂತಹ ದುಸ್ಸಹನೀಯ ಪರಿಸ್ಥಿತಿ ಇಲ್ಲಿಯವರೆಗೆ ಏಕೆ ಬದಲಾಗಿಲ್ಲ? ನಾವು ತೆಗೆದುಕೊಳ್ಳುವ ಒಂದು ಔಷಧದಿಂದ ರೋಗ ಗುಣಮುಖವಾಗದಿದ್ದರೆ ನಾವು ಔಷಧ ಬದಲಿಸಬೇಕಲ್ಲವೆ? ವೈದ್ಯರನ್ನು ಬದಲಿಸುವುದು ಬೇಡವೆ? ಇಲ್ಲಿಯವರೆಗಿನ ನಿಮ್ಮ ಕ್ಷೇತ್ರದರ್ಶನಗಳು ನಿಮ್ಮ ಕೆಲಸಕ್ಕೆ ಬಂದಿಲ್ಲ. ನಿಮ್ಮ ಉಪವಾಸಗಳು ನಿಮ್ಮ ಜೀವನದ ಉಪವಾಸಕ್ಕೆ ಅಂತ್ಯ ಹೇಳುವುದಕ್ಕೆ ಸಮರ್ಥವಾಗಿಲ್ಲ. ನಿಮ್ಮ ಸ್ಥಿತಿಯಲ್ಲಿ ಪಲ್ಲಟವಾಗಬೇಕಿದ್ದರೆ ನಿಮ್ಮ ಉದ್ಧಾರ ಮಾಡಿಕೊಳ್ಳುವುದಕ್ಕೆ ಇರುವ ಒಂದೇ ಉಪಾಯ ಎಂದರೆ ಅದು ರಾಜಕಾರಣ–ಕಾಯ್ದೆ ಮಾಡುವ ಸಾಮರ್ಥ್ಯ. ಹೊಟ್ಟೆ ತುಂಬ ತಿನ್ನಲು ನಿಮಗೆ ಅನ್ನ ಇಲ್ಲ. ಇಕ್ಕಟ್ಟಿನ ಸಣ್ಣ ಕೊಠಡಿಯಲ್ಲಿ ಇರಬೇಕಾಗುತ್ತದೆ. ಹಣ ಸಂಪಾದನೆಗೆ ಸಾಧನಗಳಿಲ್ಲ ಮತ್ತು ನಿರುದ್ಯೋಗಿಯಾಗಿರಬೇಕಾಗುತ್ತದೆ. ಇದಕ್ಕೆ ದೇವರು, ದೈವ ಕಾರಣವೇ? ಈ ಎರಡೂ ಕಾರಣ ಅಲ್ಲ. ಅನ್ನ, ವಸ್ತ್ರ, ವಸತಿ ಮತ್ತು ಶಿಕ್ಷಣ ನೀಡುವುದು ಈ ದೇಶವನ್ನು ಆಳುವ ಸರ್ಕಾರದ ಕೆಲಸ. ಇನ್ನು ಮುಂದೆ ದೇಶದ ಆಡಳಿತ ವ್ಯವಸ್ಥೆ ನಿಮ್ಮ ಅಧಿಕಾರದ ಮೇಲೆ ನಡೆಯಲಿದೆ. ಕಾನೂನು ಮಾಡುವ ಶಕ್ತಿ ನಿಮ್ಮ ಕೈಯಲ್ಲಿದೆ. ಸಂಸಾರ ಸುಖ ಅನುಭವಿಸುವುದಕ್ಕೆ ಅಗತ್ಯವಾಗಿರುವ ಕಾನೂನುಗಳನ್ನು ನೀವು ಮಾಡಿಕೊಳ್ಳಬೇಕಿದೆ. ಇಲ್ಲಿನ ರೈಲ್ವೆ ಕಾಲನಿಯಲ್ಲಿ ಪ್ರತಿಯೊಂದು ಕುಟುಂಬಕ್ಕೆ ವಾಸಿಸಲು ಒಂದೇ ಕೊಠಡಿ ಸಿಗುತ್ತಿದೆ. ಆದರೆ ಕಾನೂನು ಮುಖಾಂತರ ನಿಮಗೆ ೨ ಕೊಠಡಿಯ ಮನೆಯೂ ಸಿಗಬಹುದು.

ನಿಮ್ಮ ಮಕ್ಕಳಿಗೆ ಶಿಕ್ಷಣ ನೀಡುವುದಕ್ಕೆ ನಿಮ್ಮಲ್ಲಿ ಹಣ ಇಲ್ಲ ಆದರೆ ಕಾನೂನು ಜಾರಿಯಾದರೆ ನಿಮ್ಮ ಮಕ್ಕಳಿಗೆ ಶಿಕ್ಷಣದ ಎಲ್ಲ ಸೌಲಭ್ಯ ಲಭಿಸುತ್ತದೆ. ನಿಮ್ಮಲ್ಲಿ ಸಾಕಷ್ಟು ಜನರು ನಿರುದ್ಯೋಗಿಗಳು ಇರಬಹುದು. ಎಲ್ಲರಿಗೂ ಉದ್ಯೋಗ ನೀಡುವ ಅಥವಾ ನಿರುದ್ಯೋಗ ಭತ್ಯೆ ನೀಡಿ ಪೋಷಿಸುವ ಜವಾಬ್ದಾರಿ ಸರ್ಕಾರದ ಕರ್ತವ್ಯ. ಈ ರೀತಿಯ ಕಾನೂನು ಜಾರಿಯಾದರೆ ಉದ್ಯೋಗವಿಲ್ಲದೇ ಉಪವಾಸ ಸಾಯುವ ಪರಿಸ್ಥಿತಿ ನಿಮಗೆ ಬರುವುದಿಲ್ಲ.

ಶ್ರೀಮಂತ ಜನರು ಅನಾರೋಗ್ಯಪೀಡಿತರಾದರೆ ಹಣ ಖರ್ಚು ಮಾಡಿ ಔಷಧೋಪಚಾರ ಮಾಡಿಸಿಕೊಂಡು ಗುಣವಾಗುತ್ತಾರೆ. ಆದರೆ ಬಡವರ ಅನಾರೋಗ್ಯ ಕಾನೂನಿಂದಲೇ ಗುಣಮುಖವಾಗಬೇಕು. ಇದರರ್ಥ ಇಷ್ಟೇ. ಎಲ್ಲ ಸಂಸಾರ ಸುಖದ ಮೂಲ ಕಾನೂನು. ಹೀಗಾಗಿ ನಾವೆಲ್ಲರೂ ಕಾನೂನು ಮಾಡುವ ಶಕ್ತಿ ಮೈಗೂಡಿಸಿಕೊಳ್ಳಬೇಕಿದೆ. ಇಲ್ಲಿಯವರೆಗಿನ ನಮ್ಮ ಜಪ, ತಪ ಮತ್ತು ಅರ್ಚನೆಯ ಮೇಲೆ ಇರಿಸಿದ್ದ ಗಮನ ಇನ್ನು ಮುಂದೆ ರಾಜಕಾರಣದತ್ತ ವಾಲಬೇಕಿದೆ. ನಾನು ಇದೇ ವಿಚಾರ ಇಂದು ತಮಗೆ ಮುಖ್ಯವಾಗಿ ಹೇಳಬೇಕಾಗಿತ್ತು ಮತ್ತು ಅದನ್ನು ಸ್ಪಷ್ಟವಾಗಿ ಹೇಳಿದ್ದೇನೆ.

ನಮಗೆ ಸ್ವರಾಜ್ ನೀಡದೇ ಇದ್ದಲ್ಲಿ ಸರ್ಕಾರ ನಡೆಸಲು ನೆರವು ನೀಡುವುದಿಲ್ಲ ಎಂದು ಕೆಲವು ದಿನಗಳ ಹಿಂದೆ ಕಾಂಗ್ರೆಸ್ ಮತ್ತು ಉನ್ನತ ವರ್ಗದ ಹಿಂದೂಗಳು ಹೇಳುತ್ತಿದ್ದರು. ಆದರೆ ಇಂದು ಬೇರೆ ಅರ್ಥದ

ಮಾತುಗಳನ್ನು ಆಡುತ್ತಿದ್ದಾರೆ.

ನಿನ್ನೆಯಷ್ಟೆ ಕಾನೂನುಭಂಗ ಚಳವಳಿಯಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿದ್ದ ಕಾಂಗ್ರೆಸ್ಸಿನ ಓರ್ವ ನಾಯಕರು ಸರ್ಕಾರದ ಕ್ಷಮೆ ಕೇಳಿ ಹೊರಗೆ ಬಂದರು. ಈಗ ಅವರು ಮಹಾತ್ಮ ಗಾಂಧೀಜಿ ಅವರ ಕಾನೂನುಭಂಗ ಚಳವಳಿ ಸರಿಯಿಲ್ಲ. ಇನ್ನು ಮುಂದೆ ನಾನು ಯಾವುದೇ ಚಳವಳಿಯಲ್ಲಿ ಪಾಲ್ಗೊಳ್ಳುವುದಿಲ್ಲ ಎನ್ನುತ್ತಿದ್ದಾರೆ. ಇದಕ್ಕೂ ಮೊದಲು ಮಹಾತ್ಮ ಗಾಂಧೀಜಿ ಅವರ ಪಟ್ಟಶಿಷ್ಯ ಶ್ರೀ. ರಾಜಗೋಪಾಲಾಚಾರಿ ಅವರು ನೂತನ ಸುಧಾರಣೆಗಳನ್ನು ಜಾರಿಗೆ ತಂದರೆ ಮಾತ್ರ ಕಾಂಗ್ರೆಸ್ ಸಾಧ್ಯವಿದ್ದಷ್ಟು ಮಟ್ಟಿಗೆ ಅವುಗಳನ್ನು ಸ್ವೀಕರಿಸಬಹುದು ಎನ್ನುತ್ತಿದ್ದಾರೆ. ಕೇಸರಿಯ ಶ್ರೀ. ಕೇಳಕರ್ ಪ್ರಕಾರ ಹೊಸದಾಗಿ ಜಾರಿಯಾಗುವ ಸುಧಾರಣೆಗಳು ಅಪೂರ್ಣವಾಗಿದ್ದರೂ ಅವುಗಳಿಗೆ ಮಾನ್ಯತೆ ನೀಡಲು ನಾವು ಬದ್ಧರಾಗಿದ್ದೇವೆ ಎಂದು ಹೇಳುತ್ತಿದ್ದಾರೆ. ಇದರ ಸಾರಾಂಶ ಇಷ್ಟೇ. ಈ ಜನರು ತಾವು ಆಡಿದ ಹಿಂದಿನ ಮಾತುಗಳನ್ನು ಬದಲಿಸುತ್ತಿದ್ದಾರೆ. ಇವರ ಈ ಅಭಿಪ್ರಾಯ ಏಕೆ ಬದಲಾಯಿತು. ಈ ಪ್ರಶ್ನೆಗೆ ಉತ್ತರ ಅತ್ಯಂತ ಸರಳವಾಗಿದೆ. ಬಹಿಷ್ಕಾರದ ಘೋಷಣೆ ಕೂಗುವ ಈ ಜನರಿಗೆ ಈಗ ಕಾಂಗ್ರೆಸ್ ಇನ್ನು ಮುಂದೆಯೂ ಬಹಿಷ್ಕಾರ ಮುಂದುವರಿಸಿದ್ದೇಯಾದರೆ ಮುಂದೆ ಕೈಗೆ ಸಿಗುವ ಅಧಿಕಾರ ಬೇರೆ ಸಮಾಜದ ತೆಕ್ಕೆಗೆ ಹೋಗಬಹುದೆನ್ನುವ ಆತಂಕದಿಂದ ಬೇಡವಾಗಿರುವ ಸುಧಾರಣೆಗಳನ್ನು ಒಪ್ಪಿಕೊಳ್ಳಲು ಸಿದ್ಧರಾಗಿದ್ದಾರೆ. ಇದರರ್ಥ ಇಷ್ಟೇ ಬಹಿಷ್ಕಾರ ಹಾಕುತ್ತಿದ್ದ ಜನರು ತಮ್ಮ ಸ್ವಹಿತಾಸಕ್ತಿ ರಕ್ಷಿಸಿಕೊಳ್ಳುವಲ್ಲಿ ಸಮರ್ಥರಾಗಿದ್ದಾರೆ.

ಇನ್ನು ಮುಂದೆ ಭಾರತದಲ್ಲಿ ನಡೆಯುವ ಯಾವುದೇ ಹೋರಾಟವು ಬ್ರಿಟಿಷರು ಮತ್ತು ಭಾರತೀಯರ ನಡುವೆ ನಡೆಯುವುದಿಲ್ಲ. ಈ ಹೋರಾಟ ಏನಿದ್ದರೂ ಭಾರತದಲ್ಲಿನ ಮುಂದುವರಿದ ಮತ್ತು ಹಿಂದುಳಿದವರ ಮಧ್ಯೆ ನಡೆಯಲಿದೆ. ಬಹುಸಂಖ್ಯಾತ ಹಿಂದುಳಿದ ವರ್ಗಕ್ಕೆ ಇದು ಚಿಂತೆಯ ವಿಷಯ. ಬಹುಶಃ ನೀವು ಅಂದುಕೊಂಡಿರಬಹುದು. ಆದರೆ ಬಹುಸಂಖ್ಯೆಯೊಂದರಿಂದಲೇ ಎಲ್ಲವೂ ನಡೆಯದು. ಅದು ಜಾಗೃತ, ಸುಶಿಕ್ಷಿತ ಮತ್ತು ಸ್ವಾಭಿಮಾನಿಯಾಗಿದ್ದರೆ ಮಾತ್ರ ಅದರ ಸಾಮರ್ಥ್ಯ ವೃದ್ಧಿಯಾಗುತ್ತದೆ. ಇಲ್ಲದಿದ್ದರೆ ಗಿರಣಿಯ ನಾಯಕನೋ ಅಥವಾ ಶ್ರೀಮಂತ ವ್ಯಕ್ತಿ ತೋರಿಸುವ ಆಮಿಷಕ್ಕೆ ಬಲಿ ಬಿದ್ದು ನಿಮ್ಮ ಮತಗಳನ್ನು ಮಾರಿಕೊಂಡರೆ ನಿಮ್ಮ ಸಮಾಜದ ಬಹುಸಂಖ್ಯಾತದ ವೈಶಿಷ್ಟ್ಯ ಇದ್ದೂ ಇಲ್ಲವಾಗುತ್ತದೆ. ನಮ್ಮ ಸಮಾಜದ ವ್ಯಕ್ತಿಗಳನ್ನು ಹೊರತುಪಡಿಸಿ ಪರಕೀಯ ವ್ಯಕ್ತಿ ನಿಮ್ಮ ಸಮಾಜಕ್ಕೆ ಕಲ್ಯಾಣ ಮಾಡುವುದಿಲ್ಲ. ನಮ್ಮ ಸಮಾಜಕ್ಕೊಂದು ವೈಶಿಷ್ಟ್ಯವಿದೆ. ಆ ಭಾವನೆ ನಮ್ಮಲ್ಲಿ ಸದಾಕಾಲ ಜಾಗೃತವಾಗಿರಬೇಕು. ಅದೇ ರೀತಿ ನಮಲ್ಲಿನ ಭೇದ ತೊಡೆದು ಹಾಕಿ ಸಂಘಟಿತರಾಗಿ ಆಗುಹೋಗುಗಳ ಕುರಿತು ಜ್ಞಾನ ಬೆಳೆಸಿಕೊಳ್ಳಬೇಕಿದೆ. ಜನತಾ ಪತ್ರಿಕೆಗೆ ಚಂದಾದಾರರಾಗುವ ಮೂಲಕ ಆಗು ಹೋಗುವ ಘಟನೆಗಳ ಬಗ್ಗೆ ಜ್ಞಾನ ಪಡೆದುಕೊಳ್ಳಬೇಕು. ಏಕೆಂದರೆ ಪರಿಸ್ಥಿತಿಯ ಆಗುಹೋಗುಗಳ ಅರಿವಿಲ್ಲದೇ ಯಾವುದೇ ಸೌಲಭ್ಯ ಪಡೆದುಕೊಳ್ಳಲಿಕ್ಕಾಗುವುದಿಲ್ಲ.

ಕೊನೆಯದಾಗಿ ಸಮತಾ ಸೈನಿಕ ದಳದ ಸ್ವಯಂಸೇವಕರ ಕುರಿತು ಒಂದಿಷ್ಟು ಹೇಳುವುದಿದೆ. ಮೈಮೇಲೆ ಕೇವಲ ಖಾಕಿ ಬಟ್ಟೆ ಹಾಕಿಕೊಂಡ ತಕ್ಷಣ ಯಾರೂ ಸ್ವಯಂ ಸೇವಕರಾಗುವುದಿಲ್ಲ. ನಮ್ಮ ಸಮಾಜದ ಮಧ್ಯೆ ಜ್ಞಾನ ಬೆಳೆಸುವುದು ಸ್ವಯಂ ಸೇವಕರ ಮುಖ್ಯ ಕರ್ತವ್ಯ. ಅಶಿಕ್ಷಿತ ಜನರಿಗೆ ಜನತಾ ಪತ್ರ ಓದಿ ಅದರಲ್ಲಿ ಪ್ರಕಟವಾಗಿರುವ ವಿಷಯ ತಿಳಿಸಿ ಹೇಳುವುದು ಅವರ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಅವರು ತಮ್ಮ ಕರ್ತವ್ಯ ನಿರ್ವಹಿಸುತ್ತಾರೆ ಎಂಬ ಆಶಯ ನನಗೆ ಇದೆ. ಎಲ್ಲರಿಗೂ ಇನ್ನೊಮ್ಮೆ ಕೃತಜ್ಞತೆ ಸಲ್ಲಿಸಿ ನನ್ನ ಮಾತಿಗೆ ವಿರಾಮ ನೀಡುತ್ತೇನೆ.

---

ಜನತಾ: ಮಾರ್ಚ್ ೧೧, ೧೯೩೩

# ೬೭.

# ವಿದ್ಯಾರ್ಥಿ ದೆಸೆಯಲ್ಲಿಯೇ ಸ್ವಯಂ ಅರ್ಹತೆ ಬೆಳೆಸಿಕೊಳ್ಳಿ

ಭಾನುವಾರ ಏಪ್ರಿಲ್ ೨, ೧೯೩೩ರಂದು ಬೆಳಗ್ಗೆ ಹತ್ತು ಗಂಟೆಗೆ ಮುಂಬೈ–ಠಾಣೆ ರಸ್ತೆಗೆ ಹೊಂದಿಕೊಂಡಂತೆ ಇರುವ ಆಗಾಖಾನ್ ಬಂಗಲೆಯಲ್ಲಿರುವ ದಲಿತ–ವಿದ್ಯಾರ್ಥಿಗಳ ಆಶ್ರಮದ ಪರಿಶೀಲನೆಗೆ ದಲಿತ ನಾಯಕ ಡಾ. ಅಂಬೇಡ್ಕರ್ ಅವರು ಆಗಮಿಸುವವರಿದ್ದರು.

ಅವರನ್ನು ಆಶ್ರಮಕ್ಕೆ ಬರಮಾಡಿಕೊಳ್ಳುವುದಕ್ಕೆ ಆಶ್ರಮದ ಸೂಪರಿಂಟೆಂಡೆಂಟ್ ಶ್ರೀ. ಚಾಂದೋರಕರ್ ಮತ್ತು ಠಾಣೆಯ ಸಾಮಾಜಿಕ ಸಮತಾ ಸೇವಾ ಸಂಘದ ಖಜಾಂಚಿ ಶ್ರೀ. ಮಾರುತಿರಾವ್ ಸಾಬಾಜಿ ಗಾಯಕವಾಡ ರೈಲ್ವೆ ನಿಲ್ದಾಣಕ್ಕೆ ಹೋಗಿದ್ದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರೊಂದಿಗೆ ಅವರ ಪ್ರಧಾನ ಕಾರ್ಯದರ್ಶಿ ಶ್ರೀ. ಶಿವತರಕರ್ ಮತ್ತು ಮುಂಬೈನ ಬಾಪುಸಾಹೇಬ ಸಹಸ್ರಬುದ್ಧೆ, ಕಮಲಕಾಂತ ಚಿತ್ರೆ, ಜಾಧವ, ಗಾಯಕವಾಡ, ಮಡಕೆ ಬುವಾ ಸೇರಿದಂತೆ ಇನ್ನಿತರ ಮುಖಂಡರು ಆಗಮಿಸಿದ್ದರು. ಡಾ. ಅಂಬೇಡ್ಕರ್ ಅವರು ಆಗಮಿಸುವ ಎಷ್ಟೋ ಗಂಟೆ ಮೊದಲು ಅಸ್ಪೃಶ್ಯರ ಉದ್ಧಾರಕ್ಕೆ ಶ್ರಮಿಸುವ ಸ್ಪೃಶ್ಯ ಸಮಾಜದ ಅನೇಕ ಸದ್ಗೃಹಸ್ಥರು ಸೇರಿದ್ದರು. ಅವರಲ್ಲಿ ಪ್ರಮುಖರಾದವರು ಎಂದರೆ ಶ್ರೀ. ಎಂ. ಎಸ್. ರಾಂಗನೇಕರ್ ಸಾಹೇಬ, ಎಲ್. ರಾಡ್ರಿಕ್ಸ್ ಸಾಹೇಬ್, ಆರ್. ಎಲ್. ರೇಡೆಸಾಹೇಬ್, ನಾಖವಾ, ಗಟನೇಸಾಹೇಬ್, ಕೇಸಕರ್ ಸಾಹೇಬ್, ಕೋತವಾಲಸಾಹೇಬ್, ಮಾಧವರಾವ್ ಕಾಳದಾತೆ, ಪದ್ಮನಾಭಶಾಸ್ತ್ರಿ ಪಾಲಯೆ ಸೇರಿದಂತೆ ಇತರ ಹಿತ ಚಿಂತಕರಿದ್ದರು. ದಲಿತ ಸಮಾಜದ ಹಿರಿ–ಕಿರಿಯ ಮಹಿಳೆಯರು–ಪುರುಷರು ಸೇರಿದ್ದರು. ಸ್ಥಳೀಯ ಗಿರಣಿ, ಕಾರ್ಖಾನೆಗಳಲ್ಲಿ ಕೆಲಸ ನಡೆಯುತ್ತಿದ್ದರೂ ಅಲ್ಲಲ್ಲಿ ಜನರು ಸೇರಿ ಡಾ. ಅಂಬೇಡ್ಕರ್ ಆಗಮನ ನಿರೀಕ್ಷಿಸುತ್ತಿದ್ದರು.

ಡಾ. ಅಂಬೇಡ್ಕರ್ ಅವರು ಬಂದಿಳಿಯುತ್ತಿದ್ದಂತೆಯೇ ಜಯ ಘೋಷದೊಂದಿಗೆ ಅವರನ್ನು ಸ್ವಾಗತಿಸಲಾಯಿತು. ಸಾಮಾಜಿಕ ಸಮತಾ ಸೇವಾ ಸಂಘ, ಆಶ್ರಮದ ವಿದ್ಯಾರ್ಥಿ ವರ್ಗ ಮತ್ತು ಅಖಿಲ ಭಾರತೀಯ ದಲಿತ ಸೇವಕ ಸಂಘದ (ಠಾಣೆ ಶಾಖೆ) ಅಧ್ಯಕ್ಷ ಮತ್ತು ಕಾರ್ಯಕರ್ತರಿಂದ ಅಂಬೇಡ್ಕರ್ ಅವರನ್ನು ಸ್ವಾಗತಿಸಲಾಯಿತು. ಶ್ರೀ ಗಣಪತರಾವ್ ಗೋವಿಂದ್ ರೋಖಡೆ ಅವರು ಸಭೆಯ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಎರಡು ಮಾತು ಹೇಳಬೇಕು ಎಂದು ಡಾ. ಅಂಬೇಡ್ಕರ್ ಅವರಲ್ಲಿ ವಿನಂತಿಸಿದರು.

ಅಧ್ಯಕ್ಷತೆ ವಹಿಸಿಕೊಂಡ ಡಾ. ಅಂಬೇಡ್ಕರ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ತಮ್ಮ ಭಾಷಣದಲ್ಲಿ, ಈ ವಿದ್ಯಾರ್ಥಿ ಆಶ್ರಮವನ್ನು ನಾವು ಮೊದಲು ಪನವೆಲ್‌ನಲ್ಲಿ ಸ್ಥಾಪಿಸಿದ್ದೆವು. ಅಲ್ಲಿನ ಸ್ಪೃಶ್ಯ ಸಮಾಜದವರು ಆಶ್ರಮಕ್ಕೆ ಜಾಗ ನೀಡದ ಕಾರಣ ಓರ್ವ ಯಹೂದಿಯ ಮನೆಯಲ್ಲಿ ಆಶ್ರಮ ಸ್ಥಾಪಿಸಬೇಕಾಯಿತು. ಆದರೆ ಮುಂದೆ ಆ ವ್ಯಕ್ತಿ ತೊಂದರೆ ನೀಡುವುದರ ಜೊತೆಗೆ ಮನೆ ಬಾಡಿಗೆ ಹೆಚ್ಚಿಸಲಾಗುವುದು ಎಂದು ಹೇಳಿದ್ದರಿಂದ ಅಲ್ಲಿಂದ ಆಶ್ರಮವನ್ನು ಠಾಣೆಗೆ ಸ್ಥಳಾಂತರಿಸಬೇಕಾಯಿತು. ಆಗಾಖಾನ್ ಬಂಗಲೆಯನ್ನು ನಮ್ಮ ಹೆಸರಿಗೆ

ವರ್ಗಾಯಿಸುವವರೆಗೆ ಆಶ್ರಮದ ಜಾಗಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಮಸ್ಯೆಯಾಯಿತು. ಇದೀಗ ಈ ಜಾಗ ಲಭಿಸಿದ ಮೇಲೆ ಹೆಚ್ಚು ಕಡಿಮೆ ಈ ಸಮಸ್ಯೆಯಂತೂ ಪರಿಹಾರವಾಗಿದೆ. ನನ್ನ ವಿದ್ಯಾರ್ಥಿ ಬಂಧುಗಳಿಗೆ ಹೇಳುವುದು ಇಷ್ಟೇ. ಇದೀಗ ನಿಮಗೆ ಲಭಿಸಿರುವ ವ್ಯವಸ್ಥೆ ಅಂದರೆ ಆಗಾಖಾನ್ ಬಂಗಲೆ, ಸರ್ಕಾರಿ ಅನುದಾನ ಮತ್ತು ಸೂಪರಿಂಟೆಂಡೆಂಟ್ ಚಾಂದೋರಕರ್ ಮತ್ತು ಇತರ ಸಹೋದ್ಯೋಗಿಗಳು ನಿರಂತರವಾಗಿ ಮಾಡುವ ನೆರವು ನಿಮಗೆ ಸಾಕಷ್ಟು ಸೌಲಭ್ಯ ಒದಗಿಸಿದೆ. ಇಷ್ಟೆಲ್ಲ ಸೌಲಭ್ಯಗಳು ತಮಗೆ ಲಭಿಸಿಯೂ ಒಂದು ವೇಳೆ ತಾವು ಒಂದು ಅಂಕದಿಂದ ಅನುತ್ತೀರ್ಣರಾದರೂ ಸಂಸ್ಥೆಯ ಮೇಲೆ ಅನರ್ಹದ ಮುದ್ರೆಯೊತ್ತಿದಂತಾಗಿ ಸರ್ಕಾರ ಅನುದಾನ ಹಿಂದೆಗೆದುಕೊಳ್ಳುತ್ತದೆ. ಹೊಸ ಹಕ್ಕುಗಳು, ದೊಡ್ಡ ಹುದ್ದೆ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಪಡೆಯಬೇಕಾದರೆ ಸ್ವಅರ್ಹತೆ ಗಳಿಸಿಕೊಳ್ಳಬೇಕಾಗುತ್ತದೆ. ಈ ಅರ್ಹತೆಯನ್ನು ವಿದ್ಯಾರ್ಥಿ ದೆಸೆಯಲ್ಲಿ ಗಳಿಸಿಕೊಳ್ಳಬೇಕಾಗುತ್ತದೆ. ಸ್ಪಷ್ಟಪಡಿಸಬೇಕಾಗಿರುವ ಇನ್ನೊಂದು ಪ್ರಮುಖ ವಿಷಯ ಎಂದರೆ, ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳು ಚಳವಳಿಗಳಲ್ಲಿ ಪಾಲ್ಗೊಳ್ಳುವುದು ತಪ್ಪು. ಮೂರನೆಯ ಸಂಗತಿ ಎಂದರೆ ಸ್ವಾವಲಂಬನೆ. ಇಲ್ಲಿ ನಿಮಗೆ ಹಣದ ಅನುಕೂಲವಾಗಲಿ ಎಂದು ಸುತ್ತಲಿನ ಹಳ್ಳಿಗಳ ಶ್ರೀಮಂತರನ್ನು ನಾವು ಕರೆಸುತ್ತೇವೆ. ಆದರೆ ಮಹತ್ವದ ಸಂಗತಿ ಎಂದರೆ ಏನಾದರೂ ಆಗಲಿ ನಾವು ಮುಂದುವರಿಯುತ್ತೇವೆ ಎನ್ನುವ ನಿಶ್ಚಯ ನಮ್ಮಲ್ಲಿ ಬೆಳೆಯಬೇಕು. ನಿತ್ಯಜೀವನದಲ್ಲಿ ಆ ನಿಶ್ಚಯ ಅನುಷ್ಠಾನವಾದರೆ ಮಾತ್ರ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ. ಇಷ್ಟು ಹೇಳಿ ನನ್ನ ಮಾತುಗಳನ್ನು ಪೂರ್ಣಗೊಳಿಸುತ್ತೇನೆ.

---

ಜನತಾ : ಏಪ್ರಿಲ್, ೨೨ ೧೯೩೩

## ೬೮.

# ಖೊಟ್ಟಿ, ಸ್ವಘೋಷಿತ ಮುಖಂಡರ ಬಗ್ಗೆ ಎಚ್ಚರವಿರಲಿ

ಏಪ್ರಿಲ್ ೮, ೧೯೩೩ ರಾತ್ರಿ ಮುಂಬೈನ ಬಿಐಟಿ ಚಾಳ್ ನಲ್ಲಿ ಸುಭೇದಾರ್ ವಿ. ಗಂ. ಸವಾದಕರ್ ಅಧ್ಯಕ್ಷತೆಯಲ್ಲಿ ಅಲ್ಲಿನ ಬಹಿಷ್ಕೃತ ಸಮಾಜದ ಜನರ ವತಿಯಿಂದ ದಲಿತೋದ್ಧಾರಕ ಡಾ. ಅಂಬೇಡ್ಕರ್ ಅವರಿಗೆ ಮಾನಪತ್ರ ನೀಡುವ ಬೃಹತ್  ಸಮಾರಂಭ ಜರುಗಿತು. ಬಹಿಷ್ಕೃತ ಸಮಾಜದ ಮಹಿಳೆಯರು, ಪುರುಷರಿಂದ ಜಾಗ ತುಂಬಿ ತುಳುಕುತ್ತಿತ್ತು. ನಿಗದಿತ ಸ್ಥಳದಲ್ಲಿ ಜಾಗ ಸಿಗದೇ ಕೆಲವರು ಕಾಂಪೌಂಡ್ ಗೋಡೆಯಾಚೆ ಕೂಡ ನಿಂತಿದ್ದರು. ಸಮಾರಂಭ ಆರಂಭದ ಸೂಚನೆಯಾಗಿ ಶ್ರೀ ಧೋತ್ರೆ ಅವರು ಅಧ್ಯಕ್ಷರ ಹೆಸರು ಸೂಚಿಸಿದರು. ಶ್ರೀ ತಾಂಬೆಶಾಸ್ತ್ರಿ ಅವರು ಅದಕ್ಕೆ ಅನುಮೋದನೆ ನೀಡಿದ ಬಳಿಕ ಸವಾದಕರ್ ಅಧ್ಯಕ್ಷರ ಸ್ಥಾನ ಅಲಂಕರಿಸಿದರು.

ಪ್ರಾಸ್ತಾವಿಕ ಮಾತನಾಡಿದ ಅವರು, ಸಮಾರಂಭದ ಅಧ್ಯಕ್ಷತೆ ವಹಿಸಿಕೊಳ್ಳುವುದಕ್ಕೆ ಅವಕಾಶ ನೀಡಿದ ಜನರಿಗೆ ತಮ್ಮ ಕೃತಜ್ಞತೆ ಸಲ್ಲಿಸಿದರು. ನಮ್ಮ ಸಮಾಜಕ್ಕೆ ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳನ್ನು ಒದಗಿಸಿಕೊಟ್ಟ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಮಾನಪತ್ರ ನೀಡುವುದು ನಮ್ಮ ಧರ್ಮ, ಕೇವಲ ಮಾನಪತ್ರ ನೀಡಿ ಅವರ ಋಣದಿಂದ ನಾವು ಮುಕ್ತವಾಗಲು ಸಾಧ್ಯವೇ ಇಲ್ಲ. ಅವರು ಕೈಗೆತ್ತಿಕೊಂಡಿರುವ ಕೆಲಸವನ್ನು ವ್ಯವಸ್ಥಿತವಾಗಿ ಪೂರ್ಣಗೊಳಿಸುವುದು ನಮ್ಮ ಕರ್ತವ್ಯವಾಗಿದೆ. ವಿಘ್ನ ಸಂತೋಷಿಗಳಂತೂ ಎಲ್ಲ ಸಮಾಜದಲ್ಲಿ ಇದ್ದೇ ಇರುತ್ತಾರೆ ಎನ್ನುವುದು ನಮ್ಮ ಅರಿವಿಗೆ ಬಾರದೇ ಇರುವ ಸಂಗತಿ ಏನಲ್ಲ. ಅಂತಹ ಸಂದರ್ಭದಲ್ಲಿ ನಾವು ಅಂತಹ ವ್ಯಕ್ತಿಗಳ ಬಗ್ಗೆ ಎಚ್ಚರದಿಂದ ಇರಬೇಕಾಗುತ್ತದೆ ಅಲ್ಲದೇ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲೂ ನಾವು ನಮ್ಮ ಸಂಘಟನೆ ಬಲಪಡಿಸಬೇಕಿದೆ ಎಂದು ಹೇಳಿದರು.

ಅಧ್ಯಕ್ಷರ ಪ್ರಾಸ್ತಾವಿಕದ ಬಳಿಕ ಶ್ರೀ ಆಬಾಜಿ ಆನಂದರಾವ್ ಖರಾತ್ ಅವರು ಡಾ. ಅಂಬೇಡ್ಕರ್ ಅವರಿಗೆ ನೀಡುತ್ತಿರುವ ಮಾನಪತ್ರ ಓದಿ ಹೇಳಿದರು. ಡಾ. ಅಂಬೇಡ್ಕರ್ ಅವರಿಗೆ ಮಾನಪತ್ರದ ಜೊತೆಗೆ ಬೆಳ್ಳಿ ಪಾತ್ರೆ ಕೂಡ ನೀಡಲಾಯಿತು. ಪುಷ್ಪಹಾರ ಸಮರ್ಪಣೆಯ ಬಳಿಕ ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಸಭಿಕರನ್ನು ಉದ್ದೇಶಿಸಿ ಮಾತನಾಡಿದ್ದು ಹೀಗೆ:

ಅಧ್ಯಕ್ಷರೆ, ಪ್ರೀತಿಯ ಸಹೋದರಿಯರೇ ಮತ್ತು ಸಹೋದರರೇ,

ಇಲ್ಲಿನ ನಿವಾಸಿಗಳು ನನಗೆ ನೀಡಿರುವ ಮಾನಪತ್ರಕ್ಕೆ ಪ್ರತಿಯಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ಕಳೆದ ಜನವರಿಯಿಂದ ಈಚೆಗೆ ವಿಶೇಷವಾಗಿ ವಿದೇಶದಿಂದ ಮರಳಿದ ಬಳಿಕ ನನಗೆ ಮಾನಪತ್ರ ನೀಡುವ ದೊಡ್ಡ ಸಂಪ್ರದಾಯವೇ ಬೆಳೆಯುತ್ತಿದೆ. ಇದನ್ನು ಸ್ಥಗಿತಗೊಳಿಸಬೇಕು. ಕನಿಷ್ಠ ಇದಕ್ಕೆ ತಡೆಯಾದರೂ ಹಾಕಬೇಕೆಂದು ಅನೇಕ ಬಾರಿ ಮನಸ್ಸಿನಲ್ಲಿ ತಂದುಕೊಂಡದ್ದಿದೆ.  ಆದರೆ ಜನರ ಉತ್ಸಾಹದ ಎದುರು ಇದಕ್ಕೆ ಪರಿಹಾರ ಇಲ್ಲ ಎಂದು ಸುಮ್ಮನಾಗಿದ್ದೇನೆ. ಈ ಮಾನಪತ್ರವನ್ನು ಕೂಡ ಇಂದು ನಾನು ಅದೇ ಮನಸ್ಥಿತಿಯಲ್ಲಿ ಸ್ವೀಕರಿಸುತ್ತಿದ್ದೇನೆ.

ಈ ಮಾನಪತ್ರದ ಕುರಿತು ನನಗೆ ಒಂದಿಷ್ಟು ಹೇಳಬೇಕಿದೆ. ಇಲ್ಲಿಯವರೆಗೆ ನನಗೆ ನೀಡಿರುವ ಮಾನಪತ್ರಗಳಿಗಿಂತ ಇದು ಭಿನ್ನವಾಗಿದೆ. ಈ ಮಾನಪತ್ರಕ್ಕೆ ವಿಶೇಷವಾದ ಪ್ರಚಾರವೂ ಸಿಕ್ಕಿದೆ. ಇದಕ್ಕೂ ಮುನ್ನ ನೀಡಿದ ಮಾನಪತ್ರಗಳ ಬಗ್ಗೆ ಯಾವ ಸುದ್ದಿಯೂ ಬರುತ್ತಿರಲಿಲ್ಲ. ಆದರೆ ಈ ಮಾನಪತ್ರದ ವಿಶೇಷ ಎಂದರೆ ಲೋಕಮಾನ್ಯ ಮತ್ತು ಪ್ರಭಾತದಂತಹ ಪತ್ರಿಕೆಗಳಲ್ಲೂ ಮಾನಪತ್ರ ನೀಡುವ ಕುರಿತು ಸುದ್ದಿ ಪ್ರಕಟವಾಯಿತು.

ನಾನು ಈ ಸಭೆಗೆ ಬರುತ್ತಿದ್ದಾಗ ಯಾರೋ ಕೆಲವರು 'ಸವಾದಕರ್ ಬಾಯ್ಕಾಟ್' ಎಂದು ರಸ್ತೆ ಬದಿ ಭಿತ್ತಿಪತ್ರ ಅಂಟಿಸಲಾಗಿದ್ದು, ಇದನ್ನು ತಪ್ಪಿಸುವುದಕ್ಕಾಗಿ ಬೇರೆ ರಸ್ತೆಯಿಂದ ಹೋಗಿ ಎಂದು ಹೇಳಿದರು. ಆದರೆ ನಾನಂತೂ ಆ ಭಿತ್ತಿಪತ್ರ ನೋಡಿಯೇ ಮುಂದೆ ಹೋಗೋಣ ಎಂದು ಹೇಳಿದೆ. ಭಿತ್ತಿ ಪತ್ರ ಹಚ್ಚಿದವನಿಗೆ ಧೈರ್ಯ ಸಾಲದ ಕಾರಣ ಆತ ನನ್ನ ಹೆಸರಿನ ಬಹಿಷ್ಕಾರದ ಭಿತ್ತಿಪತ್ರ ಅಂಟಿಸಿರಲಿಲ್ಲವೆಂದು ತೋರುತ್ತದೆ. ಈ ನಾಲ್ಕು ಚಾಳಿನಲ್ಲಿ ಮುಖಂಡರ ಒಂದು ದೊಡ್ಡ ಸಂಖ್ಯೆ ಇದೆ ಎನ್ನುವುದು ನನಗೆ ಗೊತ್ತು. ಮುಂಬೈನಲ್ಲಿ ಯಾರಿಗಾದರೂ ಮುಖಂಡರನ್ನು ಹುಡುಕಬೇಕಾಗಿದ್ದರೆ ಈ ಚೌಕ್‌ಗೆ ಬರಬೇಕು. ಇಲ್ಲಿಯವರೆಗೆ ಈ ಮುಖಂಡರು ಏನಾದರೂ ತಂತ್ರ, ಕಿತಾಪತಿ ಕೆಲಸ ಮಾಡಿ ಚಳವಳಿಗೆ ತೊಂದರೆ ನೀಡುತ್ತಲೇ ಬಂದಿದ್ದಾರೆ. ಒಂದು ಬಾರಿಯಂತೂ ಒಬ್ಬ ಮುಖಂಡ, ಡಾ. ಅಂಬೇಡ್ಕರ್ ಅವರು ಮಹಾರ್ ಅವರಿಗಿಂತ ಚಮ್ಮಾರರನ್ನು ಹತ್ತಿರ ಸೇರಿಸಿಕೊಂಡು ಮಹಾರ್ ಜಾತಿಗೆ ದ್ರೋಹ ಬಗೆಯುತ್ತಿದ್ದಾರೆ ಎಂದು ಹೇಳುತ್ತಿದ್ದರು. ಆದರೆ ವಸ್ತುಸ್ಥಿತಿ ಹೇಗಿದೆ ಎಂದರೆ ಇದೇ ಜನರು ಮಹಾರ್ ಜಾತಿಯನ್ನು ನಿಂದಿಸುವ ದೇವರುಖಕರ್‌ನೆಂಬ ಚಮ್ಮಾರರೊಂದಿಗೆ ಕೈಜೋಡಿಸುತ್ತಾರೆ.

ಒಂದು ಬಾರಿ ಶ್ರೀ. ಶಿವತರಕರ್ ಮಾಸ್ತರ್ ಅವರು ತಮ್ಮ ಮನೆಯಲ್ಲಿ ಸಹಭೋಜನ ಮಾಡಿಸಿದರು. ಆ ಸಹಭೋಜನದಲ್ಲಿ ನಾನು ಸೇರಿದಂತೆ ಇತರ ಮಹಾರ್ ಮುಖಂಡರು ಇದ್ದರು. ಸಹಭೋಜನಕ್ಕೆ ಸಂಬಂಧಿಸಿದಂತೆ ದೇವರುಖಕರ್, ಶಿವತರಕರ್ ಮಹಾರ್ ಜೊತೆ ಕುಳಿತು ಭೋಜನ ಮಾಡಿದ್ದು ಅವರನ್ನು ಬಹಿಷ್ಕರಿಸಿ ಎಂದು ಭಿತ್ತಿಪತ್ರ ಹೊರಡಿಸಿದ್ದರು. ಈ ದೇವರುಖಕರ್ ಸಾಕಷ್ಟು ಬಾರಿ ಮಹಾರ್ ಜನರನ್ನು ಬೈದಿದ್ದಾರೆ. ಯಾವ ವ್ಯಕ್ತಿ ಮಹಾರ್ ಜಾತಿಯ ಮಾನ ಹರಾಜಿಗೆ ಹಾಕಿದ್ದಾನೋ ಅಂತಹ ವ್ಯಕ್ತಿಯೊಂದಿಗೆ ಈ ಜನರು ಕೈಜೋಡಿಸುತ್ತಾರೆ. ಈ ನಾಯಕರ ಇನ್ನೊಂದು ಹೇಳಿಕೆ ಏನೆಂದರೆ ಡಾ. ಅಂಬೇಡ್ಕರ್ ಅವರು ಕೊಕಣಸ್ಥ ಆಗಿರುವ ಕಾರಣ ದೇಶಸ್ಥರನ್ನು ಸಮೀಪ ತೆಗೆದುಕೊಳ್ಳುತ್ತಾರೆ ಆದರೆ ಕೋಕಣಸ್ಥರನ್ನು ದೂರ ಇಟ್ಟಿದ್ದಾರೆ. ದೇಶಸ್ಥ ಮತ್ತು ಕೋಕಣಸ್ಥ ವಾದ ವಿವಾದ ಎಷ್ಟು ಜೋರಾಗಿತ್ತು ಎಂದರೆ ಇಬ್ಬರ ಮಧ್ಯೆ ದೊಡ್ಡ ಹೊಡೆದಾಟ ಆಗುತ್ತಿತ್ತು. ಆದರೆ ಅದೇ ಜನರು ದೇಶಸ್ಥರೊಂದಿಗೆ ರಾಜೀ ಸಂಧಾನ ಮಾಡಿಕೊಂಡು ಸುಮಾರು ೧೧೯ ಮುಖಂಡರ ಸಭೆ ಮಾಡಿದರು. ಆದರೆ ಈ ಸಭೆಯಿಂದ ಸವಾದಕರ್ ಅವರನ್ನು ಏಕೆ ಹೊರಗಿಟ್ಟರು? ಇದು ನಮಗೆ ಅರ್ಥವಾಗುತ್ತಿಲ್ಲ. ಸವಾದಕರ್ ಕೂಡ ಪಕ್ಕಾ ಕೋಕಣಸ್ಥರೇ ಅಲ್ಲವೇ? ಹೇಳುವುದು ಏನೆಂದರೆ ಇಂತಹ ವಾದಗಳಲ್ಲಿ ಯಾವುದೇ ಅರ್ಥವೂ ಇಲ್ಲ ತತ್ವವೂ ಇಲ್ಲ. ತಾತ್ವಿಕ ನಿಲುವಿನ ಹೊರತಾಗಿ ವಿರೋಧಿಸಿದ್ದರೆ ಅದರಲ್ಲಿ ಖಂಡಿತವಾಗಿ ಒಂದಿಷ್ಟಾದರೂ ಸ್ವಾರ್ಥಪರತೆ ಇರಲೇಬೇಕಾಗುತ್ತದೆಯೆಂದು ಹೇಳಬೇಕಾಗುತ್ತದೆ.

ಎಲ್ಲ ನಾಯಕರನ್ನು ಏಕೆ ಒಂದು ಮಾಡುವುದಿಲ್ಲ ಎಂಬ ಇನ್ನೊಂದು ಪ್ರಶ್ನೆ ಇದೆ. ಆದರೆ ಎಲ್ಲಿ ವೈಯಕ್ತಿಕ ಜಗಳ, ದ್ವೇಷ ಇದೆಯೋ ಅಲ್ಲಿ ಯಾರಿಗೆ ಏನು ಮಾಡಲು ಸಾಧ್ಯ? ತಾತ್ವಿಕ ನಿಲುವು ಇದ್ದರೆ ಅದು ಬೇರೆ ಮಾತು. ಮಹಾತ್ಮ ಗಾಂಧೀಜಿ ಅವರು ಮಂದಿರ ಪ್ರವೇಶದ ಕುರಿತು ನನ್ನ ಅಭಿಪ್ರಾಯ

ಕೇಳಿದ್ದರೆ, ನಾನು ಮಂದಿರ ಪ್ರವೇಶದಿಂದ ಅಸ್ಪೃಶ್ಯತೆ ನಿವಾರಣೆಯಾಗುವಂತಿದ್ದರೆ ಖಂಡಿತವಾಗಿ ಅದು ನನಗೆ ಬೇಕು. ಆ ರೀತಿ ಆಗದೇ ಇದ್ದಲ್ಲಿ ಮಂದಿರ ಪ್ರವೇಶ ನನಗೆ ಬೇಕಿಲ್ಲ ಎಂದು ಹೇಳುತ್ತಿದ್ದೆ. ಈ ವಾದದಲ್ಲಿ ತಾತ್ವಿಕ ನಿಲುವು ಇದೆ. ಆದರೆ ಈ ಮುಖಂಡರ ಜಗಳದಲ್ಲಿ ಅಂತಹದ್ದು ಯಾವುದೇ ಇಲ್ಲ. ಒಂದು ವೇಳೆ ಅಂತಹ ತಾತ್ವಿಕ ಭಿನ್ನಾಭಿಪ್ರಾಯ ಏನಾದರೂ ಇದ್ದಿದ್ದರೆ ಅದು ನನಗೆ ಸಂತಸ ತರುವ ಸಂಗತಿ. ತನ್ನಷ್ಟಕ್ಕೆ ತಾನೇ ಸ್ವತಂತ್ರವಾಗಿ ಇರುವುದಕ್ಕೆ ವ್ಯಕ್ತಿಗೆ ಕನಿಷ್ಠ ಒಂದು ಉದ್ಯೋಗವಾದರೂ ಬೇಕು ಇಲ್ಲವೇ ಪಿತ್ರಾರ್ಜಿತ ಆಸ್ತಿ ಇರಬೇಕು. ಇದು ಯಾವುದು ಇಲ್ಲದಿದ್ದರೆ ಕಳ್ಳತನ, ಭಿಕ್ಷೆ ಬೇಡಿ ಇಲ್ಲವೇ ಬೇರೆಯವರಿಗೆ ಡೊಗ್ಗು ಸಲಾಮು ಹಾಕಿ ಹೊಟ್ಟೆ ತುಂಬಿಸಿಕೊಳ್ಳಬೇಕಾಗುತ್ತದೆ. ನಮ್ಮಲ್ಲಂತೂ ಸಾಕಷ್ಟು ಜನರಿಗೆ ಉದ್ಯೋಗವಿಲ್ಲ. ಬೇರೆ ಸಮಾಜದ ಹತ್ತಿರ ಸಾಕಷ್ಟು ದುಡ್ಡು ಇದೆ. ಮುಂಬರುವ ಚುನಾವಣೆಯಲ್ಲಿ ಬೇರೆ ಸಮಾಜದ ಜನರು ಹಣ ನೀಡಿ ನಿಮ್ಮ ಮತ ಖರೀದಿಸುವ ಪ್ರಯತ್ನ ಮಾಡಬಹುದು. ನಮ್ಮಲ್ಲಿನ ನಿರುದ್ಯೋಗಿ, ಸ್ವಾಭಿಮಾನಹೀನ ಮುಖಂಡರು ಅಂತಹವರಿಗೆ ನೆರವಾಗಲೂಬಹುದು. ಈ ಕಾರಣಕ್ಕೆ ನಾವು ಇಂತಹ ವಿಚಾರಗಳಲ್ಲಿ ಎಚ್ಚರ ವಹಿಸಿದಷ್ಟು ಒಳ್ಳೆಯದು. ಈ ವಿಚಾರದಲ್ಲಿ ಖೊಟ್ಟಿ ಮತ್ತು ಸ್ವಘೋಷಿತ ಮುಖಂಡರ ಬಗ್ಗೆ ಎಚ್ಚರ ಇರಲಿ.

ನಾನು ಇದೇ ತಿಂಗಳು ೨೨ನೇ ತಾರೀಖಿನಂದು ವಿದೇಶಕ್ಕೆ ತೆರಳುತ್ತಿದ್ದೇನೆ. ನಾನು ಇಲ್ಲಿಂದ ತೆರಳಿದ ಬಳಿಕ ಈ ಜನರು ನಿಮ್ಮ ತಲೆ ತುಂಬಬಹುದು. ನೀವು ಯಾವುದೇ ವಿಚಾರಕ್ಕೆ ತಲೆ ಕೆಡಿಸಿಕೊಳ್ಳದೇ ಒಗ್ಗಟ್ಟಿನಿಂದ ಇರುತ್ತೀರಿ ಎಂದು ಆಶಿಸುತ್ತೇನೆ. ಇಂತಹ ಒಂದು ಸಂದರ್ಭ ಒದಗಿಸಿಕೊಟ್ಟಿದ್ದಕ್ಕೆ ನಾನು ಇನ್ನೊಮ್ಮೆ ನಿಮಗೆ ಆಭಾರಿಯಾಗಿದ್ದೇನೆ.

---

ಜನತಾ: ಏಪ್ರಿಲ್ ೨೯, ೧೯೩೩.

# ೬೯.

# ನಿಮ್ಮ ಜವಾಬ್ದಾರಿಯನ್ನು ನೀವೇ ಗುರುತಿಸಬೇಕು

ಈ ಮೊದಲೇ ನಿರ್ಧರಿಸಿದಂತೆ ಅಹ್ಮದನಗರ ಜಿಲ್ಲೆಯ ವತಿಯಿಂದ ಡಾ. ಅಂಬೇಡ್ಕರ್ ಮತ್ತು ಡಾ. ಸೋಳಂಕಿ ಅವರಿಗೆ ಮಾನಪತ್ರ ಸಮರ್ಪಣೆ ಮತ್ತು ಪ್ರೊ. ರಾವ್ ಅವರ ಸನ್ಮಾನ ಕಾರ್ಯಕ್ರಮವನ್ನು ಏಪ್ರಿಲ್ ೧೨ ಮತ್ತು ೧೩ರಂದು ಮುಂಬೈನ ದಾಮೋದರ್ ಹಾಲ್‌ನ ಹಿಂಭಾಗದಲ್ಲಿ ಅದ್ದೂರಿಯಾಗಿ ಜರುಗಿತು.

ಮೊದಲನೇ ದಿನ ಡಾ. ಸೋಳಂಕಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಡಾ. ಅಂಬೇಡ್ಕರ್ ಅವರಿಗೆ ಮಾನಪತ್ರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಆರಂಭದ ಮೊದಲಿಗೆ ಶ್ರೀ. ಆರ್. ಎಚ್. ಆಡಾಂಗಳೆ ಅವರು ಅಧ್ಯಕ್ಷ ಸ್ಥಾನಕ್ಕೆ ಡಾ. ಸೋಳಂಕಿ ಅವರ ಹೆಸರನ್ನು ಸೂ. ತಾ. ರೂಪವತೆ ಅನುಮೋದಿಸಿದ ಬಳಿಕ ಡಾ. ಸೋಳಂಕಿ ಅಧ್ಯಕ್ಷ ಸ್ಥಾನ ಸ್ವೀಕರಿಸಿದರು.

ಡಾ. ಸೋಳಂಕಿ ತಮ್ಮ ಪ್ರಾಸ್ತಾವಿಕದಲ್ಲಿ ಡಾ. ಅಂಬೇಡ್ಕರ್ ಅವರನ್ನು ಸನ್ಮಾನಿಸುವುದು ಎಂದರೆ ನಮ್ಮ ನಿಮ್ಮೆಲ್ಲರ ಸನ್ಮಾನ ಮಾಡಿದಂತೆ ಎಂದು ಹೇಳಿದರು. ಬಳಿಕ ಶ್ರೀ. ರೋಹಮ್ ಅವರು ಮಾನಪತ್ರ ಓದಿದ ಬಳಿಕ ಅದನ್ನು ಬೆಳ್ಳಿಯ ಪಾತ್ರೆಯಲ್ಲಿ ಇರಿಸಿ ಡಾ. ಅಂಬೇಡ್ಕರ್ ಅವರಿಗೆ ಹಸ್ತಾಂತರಿಸಲಾಯಿತು.

ಮಾನಪತ್ರಕ್ಕೆ ಪ್ರತ್ಯುತ್ತರವಾಗಿ ಡಾ. ಅಂಬೇಡ್ಕರ್ ತಮ್ಮ ಭಾಷಣವನ್ನು ಮಾಡಿದರು.

ಇಂದಿನ ಸನ್ಮಾನ ಸಮಾರಂಭ ಅಹ್ಮದ ನಗರ ಜಿಲ್ಲೆಯ ಸಮಿತಿಯಿಂದ ನಡೆಯುತ್ತಿದೆ. ಅವರಿಗಾಗಿ ನಾನು ಯಾವುದೇ ವಿಶೇಷ ಕೆಲಸ ಮಾಡದಿದ್ದರೂ ಕೇವಲ ನನ್ನ ಮೇಲಿನ ಪ್ರೀತಿ, ಅಭಿಮಾನದಿಂದ ಈ ಸಮಾರಂಭ ನಡೆಯುತ್ತಿದ್ದು ಅದಕ್ಕಾಗಿ ನಾನು ಸಮಿತಿಯ ಸದಸ್ಯರಿಗೆ ಆಭಾರಿಯಾಗಿದ್ದೇನೆ. ಇತರ ಜಿಲ್ಲೆಗಳಿಗೆ ಹೋಲಿಸಿದರೆ ಅಹ್ಮದನಗರ ಜಿಲ್ಲೆ ಸ್ವಲ್ಪ ಹಿಂದುಳಿದ ಜಿಲ್ಲೆ ಎನ್ನಬಹುದು. ಈ ಜಿಲ್ಲೆಯಲ್ಲಿನ ಸಾಮಾಜಿಕ ಪರಿಸ್ಥಿತಿ ಚೆನ್ನಾಗಿಲ್ಲವೆಂದು ನನಗೆ ಗೊತ್ತು. ಜಿಲ್ಲೆಯ ಮಹಾರ್ ಜಾತಿಯ ಜನರು ಕ್ರೈಸ್ತ ಧರ್ಮ ಸ್ವೀಕರಿಸಿದ ಪರಿಣಾಮ ಇಲ್ಲಿ ಎರಡು ಪಂಥಗಳಾಗಿವೆ. ಪರಿಸ್ಥಿತಿ ಹೀಗಿದ್ದರೂ ಆ ಜಿಲ್ಲೆಯತ್ತ ಗಮನ ಹರಿಸಲು ನನ್ನಿಂದ ಸಾಧ್ಯವಾಗದೆ ಇದ್ದುದಕ್ಕೆ ನನಗೆ ವಿಷಾದವೆನಿಸುತ್ತದೆ. ಸದ್ಯಕ್ಕೆ ನನ್ನಲ್ಲಿ ಹೊಸತನ್ನು ಹೇಳುವುದಕ್ಕೆ ಏನೂ ಉಳಿದಿಲ್ಲ. ಆದರೂ ಕೂಡ ಈ ಆಸನದ ಮೇಲೆ ಕುಳಿತ ಬಳಿಕ ಮನಸ್ಸಿನಲ್ಲಿ ವಿಷಾದ ಏಳುತ್ತದೆ. ಬಹುಶಃ ಇಲ್ಲಿ ಸೇರಿರುವ ಜನರಲ್ಲಿ ತಾವು ಕೂಡ ಮುಖಂಡರಾಗಿದ್ದರೆ ಎಷ್ಟು ಚೆನ್ನಾಗಿತ್ತೆಂಬ ಭಾವನೆ ಬರಬಹುದು. ಡಾ. ಅಂಬೇಡ್ಕರ್ ಅವರ ಹೆಸರು ಒಳ್ಳೆಯ ಮತ್ತು ಕೆಟ್ಟ ಕಾರಣಗಳಿಗಾಗಿ ಪತ್ರಿಕೆಯಲ್ಲಿ ಓದುವುದಕ್ಕೆ ಸಿಗುತ್ತದೆ. ಯಾರಾದರೂ ನನ್ನ ಸ್ಥಾನಕ್ಕೆ ಬಂದಿದ್ದೇ ಆದಲ್ಲಿ ನಾನೇ ಭಾಗ್ಯವಂತ ಎಂದು ಭಾವಿಸುತ್ತೇನೆ. ನನ್ನ ಕೊರಳಿಗೆ ಮಾಲೆ ಹಾಕುವವರಿಗೆ ಸಂತಸವಾಗುತ್ತಿರಬಹುದು ಆದರೆ ಅದಕ್ಕೆ ತದ್ವಿರುದ್ಧ ಸ್ಥಿತಿ ನನ್ನದಾಗಿದೆ. ನೀವು ಮಾಡಿರುವ ನನ್ನ ಸ್ತುತಿಯಿಂದಾಗಿ ನನ್ನ ಜವಾಬ್ದಾರಿ ಇನ್ನಷ್ಟು ಅಧಿಕವಾಗಿದೆ. ಸಾಮಾಜಿಕ ಸೇವೆಯ ಕೆಲಸ ಕೈಗೆತ್ತಿಕೊಳ್ಳದೇ ನಾನೊಬ್ಬನೆ ಏಕಾಂಗಿಯಾಗಿ ಇರುತ್ತಿದ್ದರೆ

ಎಷ್ಟೋ ಒಳ್ಳೆಯದಾಗುತ್ತಿತ್ತು ಎಂದು ಹಲವಾರು ಸಲ ನಾನು ಭಾವಿಸಿದ್ದುದು ಇದೆ. ನನ್ನ ಇಡೀ ಆಯುಷ್ಯ ವಿದ್ಯಾರ್ಥಿದೆಸೆಯಲ್ಲಿ ಮುಗಿಯಲಿ ಎನ್ನುವುದು ನನ್ನ ಇಚ್ಛೆಯಾಗಿತ್ತು. ಇದೇ ಕಾರಣಕ್ಕಾಗಿಯೇ ನಾನು ಅನೇಕ ಗ್ರಂಥಗಳನ್ನು ಖರೀದಿಸಿದೆ. ಕೆಲವೊಮ್ಮೆ ಪ್ರೊಫೆಸರ್ ನೌಕರಿ ಹಿಡಿದು ಪುಸ್ತಕ ಓದುವ ಸುಖದಲ್ಲಿ ಮುಳುಗಬೇಕು ಎಂದು ಅನ್ನಿಸುತ್ತಿತ್ತು. ಆದರೆ ಸುದೈವವೋ ದುರ್ದೈವವೋ ನನಗೆ ಅಸ್ಪೃಶ್ಯರ ಚಳವಳಿಯಲ್ಲಿ ಪಾಲ್ಗೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಆದರೆ ಈಗ ಇಲ್ಲಿಂದ ಹಿಂದೆಗೆಯುವುದು ಎಂದರೆ ಹೆದರಿಕೆಯಾಗುತ್ತದೆ. ಅಸ್ಪೃಶ್ಯ ಸಮಾಜದ ಜವಾಬ್ದಾರಿ ಅಷ್ಟು ಸರಳದ್ದಲ್ಲ. ಕೇವಲ ಸ್ತುತಿ ಮತ್ತು ಸಭೆಗಳಿಂದ ಕೆಲಸ ಆಗುತ್ತದೆಂದು ನಾನು ಭಾವಿಸಿಲ್ಲ. ಒಂದು ವೇಳೆ ಆ ರೀತಿಯಲ್ಲಿ ಆಗುವಂತಿದ್ದರೆ ಇದಕ್ಕೂ ಮೊದಲೇ ಎಲ್ಲವೂ ಘಟಿಸಿಬಿಡುತ್ತಿದ್ದವು. ನಿತ್ಯ ನನಗೆ ೨೫–೩೦ ಪತ್ರಗಳು ಬರುತ್ತವೆ. ಅವುಗಳನ್ನು ಓದಿದ ಮೇಲೆ ಹೃದಯ ಹಿಂಡಿದಂತಾಗುತ್ತದೆ. ಇಂತಹ ಕೆಲಸಗಳಲ್ಲಿ ನಿತ್ಯ ಗಮನ ಹರಿಸುವಂತಹ ವ್ಯಕ್ತಿಗಳು ಬೇಕು. ನನ್ನ ದುರ್ಗುಣ ಎನ್ನಿ. ಇಲ್ಲವೇ ನಿಮ್ಮ ದುರ್ದೈವ ಎನ್ನಿ ನಿಮ್ಮಲ್ಲಿಯೇ ಇರುವ ಕೆಲ ವ್ಯಕ್ತಿಗಳು ನನ್ನೊಂದಿಗೆ ಕೆಲಸ ಮಾಡುವುದಕ್ಕೆ ಸಿದ್ಧರಿಲ್ಲ. ಕೇವಲ ಕೆಲಸ ಮಾಡುವುದಕ್ಕೆ ವ್ಯಕ್ತಿಗಳ ಕೊರತೆ ಇದೆ ಎಂದು ಭಾವಿಸಬೇಡಿ. ಇದರೊಟ್ಟಿಗೆ ಹಣದ ಅಡಚಣೆ ಕೂಡ ಸಾಕಷ್ಟು ಇದೆ. ನನ್ನ ಬಳಿ ಬರುವವರು ಕೈ ಬೀಸುತ್ತ ಬರುತ್ತಾರೆ. ಹಣ ಇಲ್ಲ. ವ್ಯಕ್ತಿಗಳಿಲ್ಲ. ಬುದ್ಧಿ ಇಲ್ಲ ಎಂದ ಮೇಲೆ ಸಮಾಜದ ಕೆಲಸ ಮಾಡುವುದು ದೊಡ್ಡ ಸವಾಲು ಆಗಿ ಪರಿಣಮಿಸಿದೆ. ಡಾ. ಸೋಳಂಕಿ ಅವರು ನನ್ನನ್ನು ಈ ಜವಾಬ್ದಾರಿಯಿಂದ ಮುಕ್ತಿ ನೀಡಬೇಕು. ಬೇರೆ ಸಮಾಜದಲ್ಲಿನ ಜನರು ೫೦ ವರ್ಷಗಳು ಪೂರ್ಣಗೊಂಡ ಬಳಿಕ ಅಂದರೆ ಚತುರ್ಥಾಶ್ರಮದಲ್ಲಿ ಸಮಾಜ ಸೇವೆಗೆ ನಿಲ್ಲುತ್ತಾರೆ. ಆದರೆ ನನಗಂತೂ ನನ್ನ ೨೫ನೇ ವಯಸ್ಸಿನಲ್ಲಿ ಸಮಾಜದ ಕೆಲಸಕ್ಕಾಗಿ ನಿಲ್ಲಬೇಕಾಗಿ ಬಂದಿತು. ಇದೀಗ ನಮ್ಮ ಸಮಾಜದ ಕೈಗೆ ರಾಜಕೀಯ ಅಧಿಕಾರ ಲಭಿಸಿದೆ. ಸುಶಿಕ್ಷಿತ ವ್ಯಕ್ತಿಗಳು ಸಮಾಜದಲ್ಲಿ ಸಿದ್ಧವಾಗುತ್ತಿದ್ದಾರೆ. ಒಂದು ವೇಳೆ ಇನ್ನೂ ಒಂದಿಷ್ಟು ವರ್ಷಗಳು ನನ್ನ ಆಯುಷ್ಯದಲ್ಲಿ ಉಳಿದಿದ್ದರೆ ಅವುಗಳನ್ನು ನನ್ನ ವೈಯಕ್ತಿಕ ಹಿತ ಸಾಧಿಸಿಕೊಳ್ಳಲು ಬಳಸಿಕೊಳ್ಳಬಹುದು. ನೀವು ನಿಮ್ಮ ಸ್ವಂತ ಕಾಲುಗಳ ಮೇಲೆ ನಿಂತುಕೊಳ್ಳಿ, ನನ್ನ ಮತ್ತು ಡಾ. ಸೋಳಂಕಿ ವಿರುದ್ಧ ವೈಷಮ್ಯ ಯಾರಿಗಾದರೂ ಇದ್ದರೆ ಹಾಗೆಂದು ಹೇಳಲಿ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಾವು ಇನ್ನು ಮೇಲೆ ಯಾವುದೇ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇವೆ. ಸಾರ್ವಜನಿಕ ಕೆಲಸ ಕಾರ್ಯಗಳಿಗೆ ನೀವೇ ಸಂಪನ್ಮೂಲ ಕ್ರೋಡೀಕರಿಸಿಕೊಳ್ಳಬೇಕು.

ಕಾಂಗ್ರೆಸ್ ತನ್ನ ಚಳವಳಿಗಾಗಿ ಸುಮಾರು ೨ ಕೋಟಿಗಿಂತ ಹೆಚ್ಚು ಹಣ ಖರ್ಚು ಮಾಡಿರಬಹುದು. ಮುಸ್ಲಿಂರು ತಮ್ಮ ಚಳವಳಿಗಾಗಿ ಅಷ್ಟೇ ಇಲ್ಲವೇ ಅದಕ್ಕಿಂತ ಹೆಚ್ಚು ಖರ್ಚು ಮಾಡಿರಬಹುದು. ಆದರೆ ನಮ್ಮ ಜನರು ತಮ್ಮ ಚಳವಳಿಗಾಗಿ ಎಷ್ಟು ಖರ್ಚು ಮಾಡಿದ್ದಿರಬಹುದು? ಹೆಚ್ಚೆಂದರೆ ಎರಡರಿಂದ ಮೂರು ಸಾವಿರ ರೂಪಾಯಿ ಮಾತ್ರ! ಇನ್ನು ಮುಂದೆ ನೀವೇ ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಬಹಳ ದಿನಗಳಿಂದ ನನ್ನ ಹೃದಯದಲ್ಲಿ ಕೊರೆಯುತ್ತಿದ್ದ ಮಾತುಗಳನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಇದೆಲ್ಲವನ್ನು ತಾವು ಕೇಳಿಸಿಕೊಂಡಿದ್ದಕ್ಕೆ ತಮ್ಮೆಲ್ಲರಿಗೂ ಕೃತಜ್ಞತೆ ಸಲ್ಲಿಸಿ ನನ್ನ ಮಾತಿಗೆ ವಿರಾಮ ನೀಡುತ್ತೇನೆ.

---

ಜನತಾ: ಏಪ್ರಿಲ್ ೨೨, ೧೯೩೩

# ೭೦.

# ಜಾತಿಭೇದ ನಿರ್ಮೂಲನೆಯಾಗದೇ ಉನ್ನತಿಯ ಮಾರ್ಗ ಸಾಧ್ಯವಿಲ್ಲ

ಮುಂಬೈನ ಕೋಕಣ ಪಂಚಮಹಾಲ್ (ರಾಜಾಪೂರದಿಂದ ಗೋವಾ ಸರಹದ್ದು) ಮಹಾರ್ ಸೇವಾ ಸಂಘದ ವತಿಯಿಂದ ಏಪ್ರಿಲ್ ೧೬, ೧೯೩೩ರಂದು ಮಾಜಗಾವ ಬೋಗದ್ಯಾಚಿ ವಾಡಿ ಹತ್ತಿರದ ಸಿಮೆಂಟ್ ಚಾಳ್‌ನಲ್ಲಿ ಆಯೋಜಿಸಿದ್ದ ಬೃಹತ್ ಸಹಭೋಜನ ಸಮಾರಂಭ ಅತ್ಯುತ್ಸಾಹದಿಂದ ಜರುಗಿತು. ಈ ಸಹಭೋಜನ ಕಾರ್ಯಕ್ರಮದಲ್ಲಿ ಅಸ್ಪೃಶ್ಯ ಮುಖಂಡ ಡಾ. ಬಿ.ಆರ್. ಅಂಬೇಡ್ಕರ್, ಸುಭೇದಾರ ಸವಾದಕರ್, ನಾಮದೇವ ಬುವಾ ಯೆರಲೇಕರ್, ಡೋಳಸ್, ದುಧವಡೆ, ರಾಮಭಾವು ಸೋನವನೆ, ಉಪಶಾಮ ಬನಸೋಡೆ, ರಾ.ಗಾ. ಭಾಗತಕರ್, ಸು. ಅ. ಲ. ಶಿರಾವಲೆ, ಶಿ. ಗೋ. ಹಾಟೆ, ಗೋ. ಗ. ವರಘರಕರ್ ಮತ್ತು ಕವಳಿ ಸೇರಿದಂತೆ ಇತರರು ಇದ್ದರು.

ಈ ಸಂದರ್ಭದಲ್ಲಿ ಸಹಭೋಜನದ ಕುರಿತು ಮಾತನಾಡಿದ ಶಿ. ನಾ. ಬಾಲವಾಲಕರ್, ಕೊಂಕಣ ಪ್ರದೇಶದ ಮಹಾರ್ ಜಾತಿಯಲ್ಲಿ ಬೇಲೆ ಮಹಾರ್, ಪಾನ್ ಮಹಾರ್ ಇತ್ಯಾದಿ ಜಾತಿಭೇದಗಳಿದ್ದು, ಈ ಕುರಿತು ಡಾ. ಅಂಬೇಡ್ಕರ್ ಅವರು ಒಂದೆರಡು ಮಾತುಗಳನ್ನು ಹೇಳಬೇಕು ಎಂದು ವಿನಂತಿಸಿದರು. ಶ್ರೀ. ನಾಮದೇವ ಬುವಾ ಅವರು, ಎಷ್ಟೋ ಶತಮಾನಗಳ ಹಿಂದೆ ತಮ್ಮೊಳಗೆ ಜಗಳ ಮಾಡಿಕೊಂಡ ಪರಿಣಾಮವಾಗಿ ಈ ಭೇದ ನಿರ್ಮಾಣವಾಗಿರಬೇಕು. ನಾವೆಲ್ಲರೂ ಈಶ್ವರನ ಮಕ್ಕಳಾಗಿದ್ದು, ಈ ಭೇದ ನಿರ್ನಾಮ ಮಾಡಬೇಕಾದ ಅಗತ್ಯವಿದೆ ಎಂದು ಹೇಳಿದ ಮಾತಿಗೆ ಗ. ಧು. ಜಾಧವ, ಕಾ. ಕಾ. ಪೋಯಿಪಕರ್ ಸೇರಿದಂತೆ ಇತರರು ತಮ್ಮ ಸಮ್ಮತಿ ಸೂಚಿಸಿದರು.

ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ...

ನಾಲ್ಕೈದು ದಿನಗಳಲ್ಲಿ ನಾನು ವಿದೇಶಕ್ಕೆ ತೆರಳಬೇಕಾಗಿರುವುದರಿಂದ ಸಾಕಷ್ಟು ಮಹತ್ವದ ಕೆಲಸಗಳಿದ್ದವು. ಆದರೆ ಇಂದಿನ ಸಹಭೋಜನ ಕಾರ್ಯಕ್ರಮ ಮಹತ್ವದ್ದು ಎಂದು ಭಾವಿಸಿ ಉದ್ದೇಶಪೂರ್ವಕವಾಗಿ ಈ ಸಹಭೋಜನಕ್ಕೆ ನಾನು ಬಂದಿದ್ದೇನೆ. ಮಹಾರ ಸಮಾಜದ ಅತ್ಯಂತ ಶ್ರೇಷ್ಠ ಸಂಗತಿ ಎಂದರೆ ಮಹಾರ ಸಮಾಜ ಕೂಡ ಮುಸ್ಲಿಂ ಸಮಾಜದಂತೆ ಜಾತಿಭೇದ ಮಾಡುವ ಸಮಾಜವಲ್ಲ. ಎಲ್ಲ ಪ್ರಾಂತಗಳಲ್ಲೂ ಮಹಾರ್ ಜಾತಿಯವರು ಸಹಭೋಜನ ಮಾಡುವುದನ್ನು ಮುಂಬೈನ ಸುತ್ತಮುತ್ತಲಿನ ಪ್ರದೇಶದಲ್ಲಿ ನೋಡಿದ್ದೇನೆ. ಆದರೆ ಕೊಂಕಣ ಪ್ರದೇಶದಲ್ಲಿ ಮಾತ್ರ ಬೇಲ್ ಮಹಾರ್ ಮತ್ತು ಪಾನ್ ಮಹಾರ್ ಜಾತಿಗಳು ಅಸ್ತಿತ್ವದಲ್ಲಿವೆ. ಯಾವ ಕಾರಣಕ್ಕೆ ಮಹಾರ್ ಜಾತಿಯಲ್ಲಿ ಈ ಎರಡು ಜಾತಿಗಳು ಹುಟ್ಟಿದವು ಎನ್ನುವುದಕ್ಕೆ ಯಾರೂ ಸಕಾರಣ ನೀಡುತ್ತಿಲ್ಲ. ಜಾತಿಭೇದ ಹೋಗಿ ಎರಡೂ ಜಾತಿಗಳ ನಡುವೆ ವೈವಾಹಿಕ ಸಂಬಂಧ ಮತ್ತು ಸಹಭೋಜನ ಏಕೆ ನಡೆಯಬಾರದು? ಪೂರ್ವಿಕರು ಮಾಡಿದ ಸಂಪ್ರದಾಯ ಎಂದು ಯಾರು ಬೇಕಾದವರು ಹೇಳಬಹುದು. ಆದರೆ ಹಿಂದಿನ ಕಾಲದಿಂದ ಅನುಸರಿಸುತ್ತ ಬಂದಿರುವ ಸಂಪ್ರದಾಯವನ್ನು ಮುಂದುವರಿಸಬೇಕಾದಲ್ಲಿ ಅವರಂತೆ ನಾವು ಕೂಡ ಹೀನ ಬದುಕನ್ನು ಬದುಕಬೇಕಾಗುತ್ತದೆಂದು ವಿಚಾರ ಮಾಡಿ. ಅವರ ಪರಿಸ್ಥಿತಿ ಏನಿತ್ತು ಎನ್ನುವುದರ ಅರಿವು ನಮಗಿದೆ. ಅವರನ್ನು ಅಜ್ಞಾನದ ಅಂಧಕಾರದಲ್ಲಿ

ಇರಿಸಲಾಗಿತ್ತು. ಅವರು ದಾಸ್ಯಕ್ಕೆ ಸಿಲುಕಿದ್ದರು. ಅವರಿಗೆ ಧಾರ್ಮಿಕ, ಸಾಮಾಜಿಕ ಸಾಮರ್ಥ್ಯವಂತೂ ಇರಲಿಲ್ಲ. ಆರ್ಥಿಕ ಸಾಮರ್ಥ್ಯವಂತೂ ಇರಲೇ ಇಲ್ಲ. ಪೂರ್ವಿಕರ ತಪ್ಪಿನಿಂದಾಗಿ ಇಂದು ನಾವು ದುಃಖ ಅನುಭವಿಸಬೇಕಾಗಿದೆ. ಈ ಕಷ್ಟ ಪರಿಹಾರವಾಗಿ ನಮ್ಮ ಮಕ್ಕಳಿಗೆ ಸುಖ ಸಂತೋಷ ಲಭಿಸಬೇಕಾದರೆ ನಮ್ಮ ಹಿರಿಯರು ಮಾಡಿದ ತಪ್ಪುಗಳನ್ನು ಸರಿಪಡಿಸಲೇಬೇಕು. ಈ ವಿಚಾರದಲ್ಲಿ ಹಿರಿಯರಿಗಿಂತ ತರುಣರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಈ ಜವಾಬ್ದಾರಿಯನ್ನು ನಮ್ಮ ಯುವಕರು ನಿರ್ವಹಿಸುತ್ತಾರೆ ಎಂಬ ಆಶಯ ನನಗೆ ಇದೆ. ನಮ್ಮೊಳಗಿನ ಭೇದದ ಪರಿಣಾಮ ಇಲ್ಲಿಯವರೆಗೆ ರತ್ನಾಗಿರಿ ಜಿಲ್ಲೆಯಲ್ಲಿ ವಿದ್ಯಾರ್ಥಿ ವಸತಿಗೃಹ ಸ್ಥಾಪಿಸಲು ಸಾಧ್ಯವಾಗಿಲ್ಲ. ಇದೇ ಅನುಭವ ಚಳವಳಿಗಳ ಸಂಘಟನೆಯಲ್ಲೂ ಆಗುತ್ತಿದೆ. ಉದಾಹರಣೆಗೆ ಒಂದು ಗ್ರಾಮದಲ್ಲಿ ಬೇಲ್ ಮಹಾರ್ ಮತ್ತು ಪಾನ್ ಮಹಾರ್ ಇದ್ದಾರೆ ಎಂದಿಟ್ಟುಕೊಳ್ಳಿ. ಒಬ್ಬ ಸತ್ತ ಪ್ರಾಣಿಯ ಮಾಂಸ ತಿಂದರೆ ಇನ್ನೊಬ್ಬ ತಿನ್ನುವುದಿಲ್ಲ. ಈ ತಿನ್ನುವ, ತಿನ್ನದಿರುವ ವ್ಯಕ್ತಿಗಳ ಮೇಲೆ ಗ್ರಾಮದ ಇತರ ಜಾತಿಯವರ ಪ್ರಾಬಲ್ಯ ಹೆಚ್ಚಾಗುತ್ತದೆ. ಒಂದು ವೇಳೆ ಅವರಿಬ್ಬರ ಮಧ್ಯೆ ಭೇದ ಇಲ್ಲದಿದ್ದರೆ ಇತರ ಜಾತಿಯವರ ಪ್ರಾಬಲ್ಯ ಬೆಳೆಯುತ್ತಲೇ ಇರಲಿಲ್ಲ. ನಮ್ಮ ಪ್ರಗತಿಗಾಗಿ ನಾವು ಜಾತಿಭೇದ ತೊಡೆದುಹಾಕಲೇಬೇಕು.

ನಮ್ಮಲ್ಲಿನ ಜಾತಿಭೇದದ ಹೊಲಸು ತೆಗೆದುಹಾಕದೇ ಬೇರೆಯವರಿಗೆ ಈ ರೀತಿ ಮಾಡಿ ಎಂದು ನಾವು ಹೇಳಲಿಕ್ಕಾಗುವುದಿಲ್ಲ. ಜಾತಿಭೇದ ತೊಡೆದುಹಾಕುವ ನಿಟ್ಟಿನಲ್ಲಿ ನಮ್ಮ ಜನರು ಕಠಿಣ ಪರಿಶ್ರಮ ಪಡುತ್ತಿರುವುದು ನನಗೆ ಸಂತಸ ತಂದಿದೆ. ಕೆಲವೇ ದಿನಗಳಲ್ಲಿ ಈ ಭೇದ ಹೋಗುತ್ತದೆ ಎಂದು ನಾನು ಆಶಿಸುತ್ತೇನೆ. ಇಂದು ಆಯೋಜಿಸಿರುವ ಕಾರ್ಯಕ್ರಮಕ್ಕೆ ಪ್ರತಿಯಾಗಿ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

---

ಜನತಾ: ಏಪ್ರಿಲ್ ೨೨, ೧೯೩೩

# ೭೧.

# ಕೂಪ ಮಂಡೂಕ ಬುದ್ಧಿ ಬಿಡಿ, ಸಮಾಜ ಸೇವೆಗೆ ಹಣ ನೀಡಿ

ಏಪ್ರಿಲ್ ೨೨, ೧೯೩೩ರಂದು ವಿಧಾನ ಪರಿಷತ್ ಸದಸ್ಯ ರಾವ್ ಬಹಾದ್ದೂರ್ ಎಸ್. ಕೆ. ಬೋಲೆ ಅವರ ಅಧ್ಯಕ್ಷತೆಯಲ್ಲಿ ಜಿಐಪಿ ರೈಲ್ವೆ ಪೋರ್ಟರ್ ಚಾಳ್ ಹತ್ತಿರ, ಕುರ್ಲಾ ಅಸ್ಪೃಶ್ಯ ಸಮಾಜದ ವತಿಯಿಂದ ಡಾ. ಅಂಬೇಡ್ಕರ್ ಅವರಿಗೆ ಮಾನಪತ್ರ ಮತ್ತು ೮೦ ರೂಪಾಯಿ ದೇಣಿಗೆ ನೀಡುವ ಕಾರ್ಯಕ್ರಮ ಜರುಗಿತು.

ಡಾ. ಬಾಬಾಸಾಹೇಬ್ ಅವರನ್ನು ಕುರ್ಲಾದಿಂದ ಡಾ. ಅಂಬೇಡ್ಕರ್ ರಸ್ತೆ, ಜುಮ್ಮಾ ಮಸೀದಿ, ಶಿವಾಜಿ ರೋಡ್‌ನಲ್ಲಿ ಮೆರವಣಿಗೆಯಲ್ಲಿ ವೇದಿಕೆಗೆ ಕರೆದುಕೊಂಡು ಬರಬೇಕೆಂದು ಈ ಮೊದಲು ನಿರ್ಧರಿಸಲಾಗಿತ್ತು. ಮೆರವಣಿಗೆಯ ಕಾರಣ ಜನರು ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದರು. ಆದರೆ ಸಮಯಾಭಾವದ ಕಾರಣ ಮೆರವಣಿಗೆಯನ್ನು ರದ್ದುಗೊಳಿಸಲಾಯಿತು. ಇದರಿಂದ ಜನರಲ್ಲಿ ನಿರಾಸೆ ಮೂಡಿದರೂ ಮುಖ್ಯ ಕಾರ್ಯಕ್ರಮವು ಅತ್ಯಂತ ಉತ್ಸಾಹದಿಂದ ಜರುಗಿತು.

ಸಂಪ್ರದಾಯದಂತೆ ರಾವ್‌ಬಹಾದ್ದೂರ್ ಬೋಲೆ ಅಧ್ಯಕ್ಷತೆ ವಹಿಸಿಕೊಂಡ ಬಳಿಕ ಶ್ರೀ. ಕರ್ಡಕ್ ಅವರು ಮಾನಪತ್ರ ಓದಿದರು. ಡಾ. ಅಂಬೇಡ್ಕರ್ ಅವರಿಗೆ ಅಧ್ಯಕ್ಷರ ಹಸ್ತದಿಂದ ಮಾನಪತ್ರ ಮತ್ತು ೮೦ ರೂಪಾಯಿ ದೇಣಿಗೆ ನೀಡಲಾಯಿತು.

ಸನ್ಮಾನ ಸ್ವೀಕರಿಸಿದ ಬಳಿಕ ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಿಷ್ಟು:

ಎರಡನೇ ಬಾರಿ ಕುರ್ಲಾಕ್ಕೆ ಬರುತ್ತಿರುವ ನನಗೆ ಇಲ್ಲಿ ಸೇರಿರುವ ಜನಸ್ತೋಮ ನೋಡಿದ ಬಳಿಕ ಐದು-ಆರು ವರ್ಷಗಳ ಹಿಂದಿನ ಘಟನೆ ನೆನಪಿಗೆ ಬರುತ್ತಿದೆ.

ಐದಾರು ವರ್ಷಗಳ ಹಿಂದೆ ಇಲ್ಲಿ ನಡೆದ ಒಂದು ಸಮಾರಂಭದ ಅಧ್ಯಕ್ಷತೆ ವಹಿಸಿಕೊಳ್ಳಬೇಕೆಂದು ಇಲ್ಲಿನ ನಿವಾಸಿಗಳು ನನಗೆ ವಿನಂತಿಸಿಕೊಂಡಿದ್ದರು. ಅದು ಮಳೆಗಾಲದ ದಿನವಾಗಿದ್ದರೂ ಕೂಡ ನಿಗದಿತ ಸಮಯಕ್ಕೆ ನಾನು ಆಗಮಿಸಿದ್ದೆ. ಆದರೆ ಆಶ್ಚರ್ಯದ ಸಂಗತಿ ಎಂದರೆ ಸಭೆಯ ಸ್ಥಳದಲ್ಲಿ ಯಾರೊಬ್ಬರೂ ಇರಲಿಲ್ಲ. ಉಳಿದ ಸ್ಥಳಗಳಲ್ಲಿ ನಡೆಯುವ ನನ್ನ ಸಭೆಗೆ ಅಪಾರ ಸಂಖ್ಯೆಯಲ್ಲಿ ಜನ ಸೇರುತ್ತಾರೆ. ಆದರೆ ಇಲ್ಲೇಕೆ ಹೀಗಾಯಿತು ಎಂದು ಆಶ್ಚರ್ಯ ಆಯಿತು. ಈ ಬಗ್ಗೆ ಪರಿಶೀಲಿಸಿದಾಗ ಇಲ್ಲಿ ನಡೆಯುವ ಸಮಾರಂಭದ ಆಮಂತ್ರಣ ಪತ್ರವನ್ನು ಕೇವಲ ನಾಸಿಕ್ ಜಿಲ್ಲೆಯವರು ಹೊರಡಿಸಿದ್ದರು. ಅಹ್ಮದನಗರ, ಸಾತಾರಾ ಸೇರಿದಂತೆ ಇತರ ಜಿಲ್ಲೆಗಳಲ್ಲಿನ ವ್ಯಕ್ತಿಗಳ ಹೆಸರು ಅಲ್ಲಿ ಇರದ ಕಾರಣ ಹೀಗಾಯಿತು ಎಂದು ಸ್ಪಷ್ಟವಾಯಿತು. ಈ ಸಮಾರಂಭಕ್ಕೆ ಆಹ್ವಾನ ನೀಡುವುದಕ್ಕೆ ಇಲ್ಲಿನ ಜನರು ಆಗಮಿಸಿದ್ದ ವೇಳೆ ಎಲ್ಲರೂ ಸೇರಿ ಕಾರ್ಯಕ್ರಮ ಮಾಡುತ್ತಿದ್ದರೆ ಮಾತ್ರ ನಾನು ಬರುವೆ ಇಲ್ಲದಿದ್ದರೆ ಇಲ್ಲ ಎಂದು ಹೇಳಿದ್ದೆ. ಈ ಮಾತಿಗೆ ಅವರು ನೀಡಿದ ಒಪ್ಪಿಗೆಯಂತೆ ಕಾರ್ಯಕ್ರಮ ಆಯೋಜಿಸಿರುವುದು ನನಗೆ ಸಂತಸ ತಂದಿದೆ. ಎಲ್ಲರೂ ಸೇರಿ ಕಾರ್ಯಕ್ರಮ ಮಾಡುತ್ತಿರುವುದಕ್ಕೆ ಅವರನ್ನು ಅಭಿನಂದಿಸುವೆ. ಇಂದು ಎಲ್ಲರೂ ಒಗ್ಗಟ್ಟಿನಿಂದ ಇರುವುದು ಅತ್ಯಗತ್ಯವಾಗಿದೆ. ಒಬ್ಬನ ದುಃಖ ಎಲ್ಲರ ದುಃಖ ಎನ್ನುವ ಮನೋಭಾವ ಎಲ್ಲರಲ್ಲೂ

ಬೆಳೆಯಬೇಕಿದೆ. ಕೇವಲ ತಮ್ಮ ಸ್ವಾರ್ಥ ನೋಡುವ ಅಥವಾ ಕೂಪಮಂಡೂಕ ಮನೋಭಾವ ಬಿಟ್ಟುಬಿಡಿ. ನೀವೆಲ್ಲರೂ ಒಗ್ಗಟ್ಟಾಗಿರುವುದನ್ನು ನೋಡಿ ನನಗೆ ಅತ್ಯಂತ ಸಂತೋಷವಾಗಿದೆ. ಮಾನಪತ್ರ ನೀಡುವ ಮೂಲಕ ನೀವು ನನ್ನನ್ನು ಗೌರವಿಸಿದ್ದಕ್ಕೆ ಆಭಾರಿಯಾಗಿದ್ದೇನೆ.

ನೀವು ನೀಡಿರುವ ಹಣವನ್ನು ನನ್ನ ವೈಯಕ್ತಿಕ ಕಾರಣಕ್ಕೆ ಖರ್ಚು ಮಾಡುವುದಿಲ್ಲ. ಇದಕ್ಕೂ ಮೊದಲು ನನಗೆ ಸಾಕಷ್ಟು ಹಣ ಬಂದಿದ್ದರೂ ಅದರಲ್ಲಿನ ಒಂದು ಪೈಸೆಯನ್ನು ಕೂಡ ನನ್ನ ವೈಯಕ್ತಿಕ ಸುಖಕ್ಕಾಗಿ ಖರ್ಚು ಮಾಡಿದವನಲ್ಲ. ಬಂದಿರುವ ಎಲ್ಲ ಹಣವನ್ನು ನಾನು ಸಾಮಾಜಿಕ ಕೆಲಸಕ್ಕೆ ಇರಿಸಿದ್ದೇನೆ. ಅದೇ ರೀತಿ ಇದೀಗ ನೀವು ನೀಡಿರುವ ಹಣ ಕೂಡ ಸಾಮಾಜಿಕ ಕೆಲಸಕ್ಕೆ ವಿನಿಯೋಗವಾಗಲಿದೆ. ಇಲ್ಲಿ ಕನಿಷ್ಠ ಏನಿಲ್ಲವೆಂದರೂ ಸುಮಾರು ಐದಾರು ಸಾವಿರ ಜನರಾದರೂ ಸೇರಿರಬಹುದು. ಇಷ್ಟು ದೊಡ್ಡ ಜನಸ್ತೋಮದಿಂದ ಸಾಮಾಜಿಕ ಕೆಲಸಕ್ಕೆ ಕೇವಲ ೮೦ ರೂಪಾಯಿ ಸಂಗ್ರಹವಾಗುವುದು ನಾಚಿಕೆಗೇಡಿತನದ ಸಂಗತಿ. ಹಣವಿಲ್ಲದೆ ಸಮಾಜ ಸೇವಾ ಕಾರ್ಯಗಳು ನಡೆಯುವುದಿಲ್ಲ. ಬೆರಳೆಣಿಕೆಯಷ್ಟು ಜನರು ನಿಸ್ವಾರ್ಥದಿಂದ ಸಮಾಜ ಸೇವೆಯಲ್ಲಿ ತೊಡಗಬಹುದು. ಆದರೆ ಎಲ್ಲರೂ ಹಣದಾಸೆ ಬಿಟ್ಟು ಕೆಲಸ ಮಾಡಲಿಕ್ಕಾಗುವುದಿಲ್ಲವಲ್ಲ. ನಮ್ಮ ಪತ್ರಿಕೆ 'ಜನತಾ'ದಲ್ಲಿ ಕೆಲವರು ಪುಕ್ಕಟೆಯಾಗಿ ಲೇಖನಗಳನ್ನು ಬರೆಯುತ್ತಾರೆ. ಉಳಿದ ಕಡೆ ಇಂತಹ ಕೆಲಸಗಳಿಗಾಗಿ ಪ್ರತಿ ತಿಂಗಳು ೧೦೦–೨೦೦ ರೂಪಾಯಿ ಖರ್ಚು ಆಗುತ್ತದೆ. ಆದರೆ ಕಳೆದ ಐದಾರು ವರ್ಷಗಳಿಂದ ಈ ಜನರು ಫಲಾಪೇಕ್ಷೆ ಇಲ್ಲದೇ ಲೇಖನ ಬರೆಯುವುದು ಸೇರಿದಂತೆ ಇತರ ಕೆಲಸಗಳನ್ನು ಮಾಡುತ್ತಿದ್ದಾರೆ. ಇಂತಹದ್ದೆ ಇನ್ನೊಂದು ವಿಚಾರ ಎಂದರೆ ಭಾರತ್ ಭೂಷಣ್ ಪ್ರೆಸ್‌ನದ್ದು. ಆ ಮುದ್ರಣಾಲಯದಲ್ಲಿನ ವ್ಯವಸ್ಥಾಪಕ ಮತ್ತು ಇತರ ಸಿಬ್ಬಂದಿಗೆ ಅತ್ಯಂತ ಕಡಿಮೆ ವೇತನ ನೀಡಲಾಗುತ್ತಿದೆ. ಇವರು ನಿಸ್ವಾರ್ಥದಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಯಾವಾಗಲೂ ಇದು ಸಾಧ್ಯವಿಲ್ಲದ ವಿಚಾರ ಆದ್ದರಿಂದ ನೀವು ಹಣ ನೀಡಿದಷ್ಟು ಒಳ್ಳೆಯದು.

---

ಜನತಾ: ಏಪ್ರಿಲ್ ೨೯, ೧೯೩೩

# ೭೨.

# ಈ ದೇಶದ ಬ್ರಿಟಿಷ್ ಸರ್ಕಾರ ನಿಷ್ಕ್ರಿಯ

ಈ ಮೊದಲೇ ಪ್ರಕಟಿಸಿದಂತೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಪುಣೆ, ನಾಸಿಕ ಜಿಲ್ಲೆ ಸೇರಿದಂತೆ ಇನ್ನಿತರ ಜಿಲ್ಲೆಗಳ ಸಮಾಜದ ಜನರ ವತಿಯಿಂದ ಆಯೋಜಿಸಿದ್ದ ಮಾನಪತ್ರ ಸನ್ಮಾನ ಮತ್ತು ದೇಣಿಗೆ ಸಮಾರಂಭ ಅತ್ಯಂತ ಸಡಗರ ಸಂಭ್ರಮ ಮತ್ತು ಅದ್ದೂರಿಯಿಂದ ಜರುಗಿದವು. ಮುಂಬೈನ ದಾಮೋದರ್ ಹಾಲ್‌ನ ಹಿಂದಿನ ಜಾಗದಲ್ಲಿ ಭವ್ಯ ಆಸನಗಳನ್ನು ಇರಿಸಿ ವೇದಿಕೆಯನ್ನು ರಾಜ ದರ್ಬಾರದಂತೆ ಶೃಂಗರಿಸಲಾಗಿತ್ತು. ಈ ಸಮಾರಂಭಕ್ಕೆ ಪರ ಊರಿನಿಂದ ಜನರು ಆಗಮಿಸಿದ್ದರು. ಸರಿಸುಮಾರು ೮–೧೦ ಸಾವಿರ ಜನರ ಉಪಸ್ಥಿತಿ ಸಭೆಯಲ್ಲಿತ್ತು. ವೇದಿಕೆಯ ಮೇಲೆ ಡಾ. ಬಿ. ಆರ್. ಅಂಬೇಡ್ಕರ್, ಅಧ್ಯಕ್ಷ ರಾವ್‌ಬಹಾದ್ದೂರ್ ಬೋಲೆ ಮತ್ತು ಡಾ. ಸೋಳಂಕಿ ಆಸೀನರಾಗಿದ್ದರು. ಅವರೊಂದಿಗೆ ಶ್ರೀ. ಸಹಸ್ರಬುದ್ಧೆ, ದೇವರಾಯ ನಾಯಿಕ, ಭಾಯಿ ಪ್ರಧಾನ್, ಡಾ. ಪ್ರಧಾನ್, ಶ್ರೀಮತಿ ಸರಳಾಬಾಯಿ ಪ್ರಧಾನ್, ಪ್ರೊ. ಕಂಗಲೆ, ಶ್ರೀಮತಿ ಗೀತಾಬಾಯಿ ಕಂಗಲೆ, ಅಸವೇಕರ್, ಕವಳಿ, ಕಾಂಡಕೆ, ಭಾಯಿ ಚಿತ್ರೆ, ಕಮಲಾಕಾಂತ ಚಿತ್ರೆ, ರಣಖಾಂಬೆ, ಭಾವುರಾವ್ ಗಾಯಕವಾಡ್, ದಾನಿ, ಕಾಳೆ ಮತ್ತು ಜಾಧವ ಸೇರಿದಂತೆ ಇನ್ನಿತರರು ಇದ್ದರು. ಸಮಾರಂಭದ ನಿರ್ವಹಣೆಗಾಗಿ ಮಾಹಿಮ್ ಚಾಳ್, ನಾಯಗಾವ್, ಡಿಲಾಯಿಲ್ ರಸ್ತೆ, ಸೈತಾನ್ ಚೌಕಿ, ಫತ್ತರಬಂದರ್, ಕರಿರೋಡ್, ವಾಡಿಯಾ ಹಾಸ್ಪಿಟಲ್, ಸ್ಯಾಂಡಹರ್ಟ್ ರೋಡ್, ಕೋಳಿವಾಡಾ, ಕ್ಲಾರ್ಕ್ ರೋಡ್, ಅರ್ಥರ್ ರೋಡ್, ವಡಾಳಾ, ಶಿವ, ಮಾತುಂಗಾ ಇತ್ಯಾದಿ ಸ್ಥಳಗಳಿಂದ ಸುಮಾರು ೫೦೦ಕ್ಕೂ ಹೆಚ್ಚು ಸಮತಾ ಸೈನಿಕದಳ ಸ್ವಯಂಸೇವಕರು ನಿಯೋಜಿಸಲ್ಪಟ್ಟಿದ್ದರು.

ದಿವಾಕರ್ ನೇವಾಜಿ ಪಗರೆ ಅವರು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದ ಶ್ರೀ. ಎಸ್. ಕೆ. ಬೋಲೆ ಅವರ ಹೆಸರನ್ನು ಶ್ರೀ. ಶಂಕರರಾವ್ ಲಿಂಬಾಜಿ ಓಝುರಕರ್ ಅನುಮೋದಿಸಿದರು. ವಿಧಾನ ಪರಿಷತ್ ಸದಸ್ಯ ಎಸ್. ಕೆ. ಬೋಲೆ ಅಧ್ಯಕ್ಷ ಸ್ಥಾನ ಅಲಂಕರಿಸಿ ತಮ್ಮ ಪ್ರಾಸ್ತಾವಿಕದಲ್ಲಿ ಸೇರಿರುವ ಜನಸ್ತೋಮ ನೋಡಿದ ಮೇಲೆ ನಿಮ್ಮಲ್ಲಿ ಆಗಿರುವ ಜಾಗೃತಿ ನೋಡಿ ಸಂತಸವಾಗುತ್ತಿದೆ. ನಿಮ್ಮನ್ನು ದೀರ್ಘ ನಿದ್ರೆಯಿಂದ ಬಡಿದೆಬ್ಬಿಸಿದ ಶ್ರೇಯಸ್ಸು ಡಾ. ಅಂಬೇಡ್ಕರ್ ಅವರಿಗೆ ಸಲ್ಲಬೇಕು ಎಂದು ಹೇಳಿದರು.

ಡಾ. ಅಂಬೇಡ್ಕರ್ ಅವರು ನಮ್ಮ ಸಮಾಜದಲ್ಲಿ ಜನ್ಮ ತಾಳಿದ್ದು ನಮ್ಮ ಸಮಾಜದ ಭಾಗ್ಯ. ಜಗತ್ತಿನ ಯಾವುದೇ ಭಾಗದಲ್ಲಿ ಮುಖಂಡರಾಗುವ ಅರ್ಹತೆ ಅವರಿಗೆ ಇದೆ. ಕೇವಲ ಅವರ ಗ್ರಂಥಾಲಯ ನೋಡಿದರೆ ಅವರ ಓದು ಯಾವ ಪ್ರಮಾಣದ್ದು ಎನ್ನುವುದನ್ನು ಕಲ್ಪನೆ ಮಾಡಿಕೊಳ್ಳಬಹುದು. ದುಂಡು ಮೇಜಿನ ಪರಿಷತ್ತಿನ ಸಭೆಯ ವೇಳೆ ಸಂವಿಧಾನಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಅವರು ತಮ್ಮ ಸ್ವಂತ ಖರ್ಚಿನಿಂದ ಖರೀದಿಸಿದ್ದಾರೆ. ಕೆಲವರು ಅವರದ್ದು ಜಾತಿವಾದಿ ದೃಷ್ಟಿಕೋನ ಎಂದು ಮಾಡುವ ಆರೋಪ ಶುದ್ಧ ಸುಳ್ಳು ಎನ್ನುವುದು ಸೈಮನ್ ಕಮಿಷನ್‌ಗೆ ಸಲ್ಲಿಸಿದ ವರದಿಯಲ್ಲಿ ಸ್ಪಷ್ಟವಾಗಿದೆ. ರಾಷ್ಟ್ರವಾದಿ ಚಿಂತಕರು ಕೂಡ ಆ ಸಂದರ್ಭದಲ್ಲಿ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ನಿಗರ್ವಿಯಾಗಿರುವ ಅಂಬೇಡ್ಕರ್ ಅವರಿಗೆ ಸರ್ಕಾರ ಜೆ. ಪಿ. ಪದವಿ ನೀಡುವುದಕ್ಕೆ ಮುಂದೆ ಬಂದರೂ ಅವರು ಅದನ್ನು

ತಿರಸ್ಕರಿಸಿದ್ದರು. ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿನ ಭಾಷಣ ಅವರ ನಿಸ್ಪೃಹತೆಗೆ ಸಾಕ್ಷಿಯಾಗಿದ್ದರೆ, ಮುಂಬೈ ಕೌನ್ಸಿಲ್‌ನಲ್ಲಿ ಅವರಂತಹ ಶ್ರೇಷ್ಠ ವಾಕ್ಪಟು ಸಿಗುವುದು ಅತ್ಯಂತ ವಿರಳ. ಮೂರೂ ದುಂಡು ಮೇಜಿನ ಪರಿಷತ್‌ಗೆ ಮತ್ತು ಈಗಿನ ಜಂಟಿ ಸಂಸದೀಯ ಸಮಿತಿಗೆ ಯಾವ ಪ್ರಯತ್ನ ಮಾಡದಿದ್ದರೂ ಅವರನ್ನು ಸೇರಿಸಿಕೊಳ್ಳುತ್ತಿರುವುದನ್ನು ಗಮನಿಸಿದರೆ ಅವರ ಅರ್ಹತೆ ಏನು ಎನ್ನುವುದು ಮನದಟ್ಟಾಗುತ್ತದೆ. ಇನ್ನೂ ಮುಂದೆಯೂ ಕೂಡ ಅವರ ಕಾರ್ಯಕ್ಷೇತ್ರವನ್ನು ಅರ್ಹತೆಯ ಆಧಾರದ ಮೇಲೆ ವಿಸ್ತರಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಾರೆ ಎನ್ನುವುದರಲ್ಲಿ ನನಗೆ ಸಂಶಯ ಇಲ್ಲ ಎಂದರು.

ನಾಸಿಕ ಜಿಲ್ಲೆಯ ವತಿಯಿಂದ ಶ್ರೀ. ಪಿ. ಎಲ್. ಲೋಖಂಡೆ, ಓದಿದ ಮಾನಪತ್ರವನ್ನು ಬೆಳ್ಳಿಯ ಪಾತ್ರೆಯಲ್ಲಿರಿಸಿ ಅಧ್ಯಕ್ಷರ ಮುಖಾಂತರ ಡಾ. ಅಂಬೇಡ್ಕರ್ ಅವರಿಗೆ ೫೦೧ ರೂಪಾಯಿ ದೇಣಿಗೆಯೊಂದಿಗೆ ಸಮರ್ಪಿಸಲಾಯಿತು. ಇದರ ಬಳಿಕ ಪುಣೆ ಜಿಲ್ಲೆಯ ವತಿಯಿಂದ ಹರಿಭಾವು ಹನುಮಂತ ರೋಖಡೆ ಅವರು ಚಿನ್ನದ ಕಟ್ಟು ಹಾಕಿದ ಮಾನಪತ್ರ ಓದಿ ಅಧ್ಯಕ್ಷರ ಮುಖಾಂತರ ಹಸ್ತಾಂತರಿಸಿದರು.

ಪುಣೆ ಜಿಲ್ಲೆ ವತಿಯಿಂದ ಕಾಣಿಕೆ ನೀಡುವ ಸಂದರ್ಭದಲ್ಲಿ ಶ್ರೀ. ಶಾಂತಾರಾಮ್ ಅನಾಜಿ ಉಪಶಾಮ್, ಡಾ. ಅಂಬೇಡ್ಕರ್ ಅವರಿಗೆ ತಮ್ಮ ಕೆಲಸದಲ್ಲಿ ಅನುಕೂಲವಾಗಲಿ ಎಂದು ೩೦೦ ರೂಪಾಯಿ ಮೌಲ್ಯದ ಟೈಪ್‌ರೈಟರ್ ಅನ್ನು ನೀಡಲಾಗಿತ್ತು. ಇಂದು ಮತ್ತೆ ೨೦೦ ರೂಪಾಯಿಗಳನ್ನು ನೀಡಲಾಗುತ್ತಿದೆ ಎಂದು ಹೇಳಿ ಅಧ್ಯಕ್ಷರ ಮುಖಾಂತರ ಡಾ. ಅಂಬೇಡ್ಕರ್ ಅವರಿಗೆ ಹಸ್ತಾಂತರಿಸಲಾಗುತ್ತಿದೆ ಎಂದು ಹೇಳಿದರು. ಬಳಿಕ ನಾಯಗಾವ ಚಾಳ್ ವಾಸಿಗಳಿಂದ ೧೯ ರೂಪಾಯಿ ನೀಡಿದ ಶ್ರೀ. ವಿಠಲ ತಾನಾಜಿ ಸಾಕರೆ, ಸಮಯಾಭಾವದ ಕಾರಣ ಹೆಚ್ಚು ಕಾರ್ಯಕ್ರಮ ಆಯೋಜಿಸಲು ಸಾಧ್ಯವಾಗಿಲ್ಲ. ಹೀಗಾಗಿ ಡಾ. ಅಂಬೇಡ್ಕರ್ ಅವರು ನಮ್ಮ ಅಲ್ಪಕಾಣಿಕೆ ಸ್ವೀಕರಿಸಬೇಕು ಎಂದು ವಿನಂತಿಸಿದರು. ಟ್ರಾಮ್ ಕಂಪನಿ ಚಾಳ್‌ನ ಪಂಚರಿಂದ ಡಾ.ಅಂಬೇಡ್ಕರ್ ಆವರಿಗೆ ೫೦ ರೂಪಾಯಿ ನೀಡಲಾಯಿತು. ಬೋರ್ ಸಂಸ್ಥಾನದ ಕೆಲವರು ೧೭ ರೂಪಾಯಿ ದೇಣಿಗೆ ನೀಡಿದರು.

ಸಮತಾ ಸೈನಿಕ ದಳದ ವತಿಯಿಂದ ಡಾ. ಅಂಬೇಡ್ಕರ್ ಅವರಿಗೆ ಹಾರ ಸಮರ್ಪಿಸಿದ ಶ್ರೀ. ಸಾಳವಿ ಅವರು ಅಂಬೇಡ್ಕರ್‌ರು ಸಮತಾ ಸೈನಿಕ ದಳದ ಸೈನಿಕರನ್ನು ಮಿಲಿಟರಿಗೆ ಸೇರಿಸುವ ಪ್ರಯತ್ನವನ್ನು ಮಾಡಬೇಕೆಂದು ವಿನಂತಿಸಿಕೊಂಡರು.

ಸನ್ಮಾನಕ್ಕುತ್ತರವಾಗಿ ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ...

ಅಧ್ಯಕ್ಷರೆ, ಆತ್ಮೀಯ ಬಂಧು ಮತ್ತು ಭಗಿನಿಯರೆ,

ಈ ಕಾರ್ಯಕ್ರಮ ತಾವೆಲ್ಲರೂ ಒಂದೇ ಸ್ಥಳದಲ್ಲಿ ಸೇರಿರುವುದು ನನಗೆ ತುಂಬ ಸಮಾಧಾನ ತಂದಿದೆ. ಒಂದು ವೇಳೆ ಈ ಮೊದಲೇ ತೀರ್ಮಾನಿಸಿದಂತೆ ವಿವಿಧ ಜಿಲ್ಲೆಯ ಜನರು ವಿವಿಧ ಸ್ಥಳಗಳಲ್ಲಿ ಕಾರ್ಯಕ್ರಮ ಮಾಡುವುದನ್ನು ತೀರ್ಮಾನಿಸಿದ್ದರೆ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ನನಗೆ ಅಸಾಧ್ಯದ ಮಾತು ಆಗಿತ್ತು. ಇಷ್ಟೊಂದು ಜನಸ್ತೋಮ ಇಲ್ಲಿ ಸೇರುವಂತಹ ಪ್ರಸಂಗ ಉದ್ಭವಿಸುತ್ತಿರಲಿಲ್ಲ. ಇನ್ನೊಂದು ವಿಷಯ ಎಂದರೆ ನಾಳೆ ತಾವೆಲ್ಲರೂ ಬಂದರಿಗೆ ಆಗಮಿಸಿ ಬೀಳ್ಕೊಡುವುದು ಬೇಡ. ಏಕೆಂದರೆ ನಾನು ಇಲ್ಲಿಯೇ ತಮ್ಮ ಹಾರೈಕೆ ಸ್ವೀಕರಿಸಿ ತೆರಳುತ್ತೇನೆ. ಬೀಳ್ಕೊಡುವ ಸಂದರ್ಭದಲ್ಲಿ ತಾವು ಮಾಡುವ ಗದ್ದಲ, ಜಯಕಾರದಿಂದ ನನಗೆ ಸಾಕಷ್ಟು ಗೊಂದಲ ಆಗುತ್ತದೆ. ನನ್ನೊಂದಿಗೆ ಹಡಗಿನಲ್ಲಿ ಪ್ರಯಾಣಿಸುವ ಇತರ ಪ್ರತಿನಿಧಿಗಳಿಗೂ ಸಂಕೋಚ ಆಗಬಹುದು. ಕೆಲವು ಪ್ರತಿನಿಧಿಗಳನ್ನು ಬೀಳ್ಕೊಡುವುದಕ್ಕೆ ನಾಲ್ಕು ಜನರೂ ಕೂಡ ಆಗಮಿಸಿರುವುದಿಲ್ಲ. ಆದರೆ ನಾನು ಮಾತ್ರ ಅದಕ್ಕೆ ಅಪವಾದ. ಏಕೆಂದರೆ ನನ್ನ

ಬೀಳ್ಕೊಡುಗೆ ಸಂದರ್ಭದಲ್ಲಿ ಇರುವೆಗೂ ಜಾಗ ಸಿಗದಷ್ಟು ಜನರು ಬಂದರಿಗೆ ಆಗಮಿಸುತ್ತಾರೆ. ಬಡವರು ತಮ್ಮ ನಿತ್ಯ ಕೂಲಿ ಕೆಲಸ ಬಿಟ್ಟು ನನ್ನನ್ನು ಬೀಳ್ಕೊಡುವುದಕ್ಕೆ ಬರುವುದು ನನಗಂತೂ ಸರಿ ಎನಿಸುವುದಿಲ್ಲ. ನಾಳೆ ನೀವು ಯಾರೂ ಬಂದರಿಗೆ ಬಂದು ನನ್ನನ್ನು ಬೀಳ್ಕೊಡುವ ಅಗತ್ಯವಿಲ್ಲ. ಯಾವುದಾದರೂ ವಿಚಾರ ಪ್ರಸ್ತಾಪ ಮಾಡುವುದು ಇದ್ದರೆ ಇಲ್ಲಿಯೇ ಮಾಡಿ. ಮಾನಪತ್ರ ನೀಡಿರುವ ವಿವಿಧ ಜಿಲ್ಲೆಗಳ ಸಂಸ್ಥೆಯ ಪದಾಧಿಕಾರಿಗಳಿಗೆ ನಾನು ಆಭಾರಿಯಾಗಿದ್ದೇನೆ.

ಕಳೆದ ವಾರ ನಾನು ಅಹ್ಮದನಗರ ಜಿಲ್ಲೆಯಲ್ಲಿ ಮಾಡಿದ ಭಾಷಣ ಇಷ್ಟು ತೀವ್ರತೆಯಲ್ಲಿ ಪರಿಣಾಮ ಬೀರುತ್ತದೆ ಎಂದು ನಾನು ಭಾವಿಸಿರಲಿಲ್ಲ. ಆದರೆ ನಿಮ್ಮೆಲ್ಲರಿಗೂ ಸಾಮಾಜಿಕ ಕೆಲಸಗಳ ಕುರಿತು ಅರಿವು ಮೂಡಿದ್ದರಿಂದ ಸಾಮಾಜಿಕ ಕೆಲಸ ಕಾರ್ಯಗಳಿಗೆ ಮತ್ತಷ್ಟು ವೇಗ ಬರಲಿದೆ. ಇಷ್ಟೊಂದು ಕಡಿಮೆ ಅವಧಿಯಲ್ಲಿ ಮಾಡಿದ ಹಣ ಸಂಗ್ರಹಕ್ಕೆ ನಾನು ನಿಮ್ಮೆಲ್ಲರಿಗೆ ಆಭಾರಿಯಾಗಿದ್ದೇನೆ.

ಹಿಂದೆ ಮತ್ತು ಈಗ ನನಗೆ ಲಭಿಸಿರುವ ನಿಧಿಯನ್ನು ಸಾಮಾಜಿಕ ಕಾರ್ಯಗಳಿಗೆ ಉಪಯೋಗಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಿದ್ದೇನೆ. ಇದರ ಪ್ರಕಾರ ಸಮಾಜದ ಎಲ್ಲ ಜನರಿಗೆ ಜ್ಞಾನ ಲಭಿಸುವಂತಹ ಯೋಜನೆ ಮಾಡಬೇಕು ಎಂದು ಅನೇಕ ದಿನಗಳಿಂದ ವಿಚಾರ ಮಾಡುತ್ತಿದ್ದೆ. ಮಕ್ಕಳಿಗೆ ಉತ್ತಮ ಶಿಕ್ಷಣ ಲಭಿಸಬೇಕು. ಅದೇ ಪ್ರಕಾರ ವಯಸ್ಕ ಸ್ತ್ರೀ–ಪುರುಷರಿಗೆ ಅತ್ಯುತ್ತಮ ಸುಧಾರಣೆಗಳಿಗೆ ಕಾರಣೀಭೂತರಾಗುವಂತಹ ಜ್ಞಾನ ಅವರಿಗೆ ನೀಡುವುದು ಅತ್ಯಗತ್ಯವಾಗಿದೆ. ಇಂತಹ ಜ್ಞಾನ ನೀಡುವ ನಾಲ್ಕಾಣೆ ಮೌಲ್ಯದ ಪುಸ್ತಕ ಹೊರತರುವ ಸಂಸ್ಥೆ ಸ್ಥಾಪಿಸುವ ಉದ್ದೇಶ ನನ್ನಲ್ಲಿದ್ದು, ಇದಕ್ಕಾಗಿ ಇಲ್ಲಿಯವರೆಗೆ ದೊರೆತ ಹಣ ಉಪಯೋಗಿಸಲಾಗುವುದು ಎಂದು ಹೇಳಿದರು.

ದುಂಡು ಮೇಜಿನ ಪರಿಷತ್ತಿನ ವಿಷಯ ಈಗ ಹಳೆಯದಾಗಿರುವ ಕಾರಣ ಅದರ ಬಗ್ಗೆ ವಿಶೇಷ ಸಂಗತಿಗಳನ್ನು ಇಲ್ಲಿ ಉಲ್ಲೇಖಿಸುವ ಅಗತ್ಯ ಇಲ್ಲ ಎಂದು ಭಾವಿಸುತ್ತೇನೆ. ದುಂಡು ಮೇಜಿನ ಪರಿಷತ್ತಿನ ಮೂರು ಸಭೆಗಳು ಮುಗಿದು ಈಗ ಕೊನೆಯ ನಾಲ್ಕನೇ ಸಭೆ ನಡೆಯಲಿದ್ದು, ಈ ಕಾರಣಕ್ಕೆ ಯಾವುದೇ ಹೇಳಿಕೆ ನೀಡುವುದು ನನಗೆ ಇಷ್ಟವಿಲ್ಲ. ಒಂದು ವಿಷಯವಂತೂ ನಿಜ. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಅಸ್ಪೃಶ್ಯರ ಕೆಲಸ ನನ್ನ ಕೊರಳಿಗೆ ಸುತ್ತಿ ಹಾಕಿಕೊಂಡಿತ್ತು. ಬಹುಶಃ ಅದಿರದೇ ಹೋಗಿದ್ದರೆ ನನ್ನ ರಾಜಕಾರಣ ಬೇರೆಯದ್ದೇ ಆಗಿರುತ್ತಿತ್ತು. ಅಸ್ಪೃಶ್ಯರಿಗೆ ನೀಡಬೇಕಿರುವ ಹಕ್ಕುಗಳಿಗಾಗಿ ಬ್ರಿಟಿಷರೊಂದಿಗೆ ವಾದಕ್ಕೆ ಇಳಿದಿದ್ದರೆ ಗಾಂಧೀಜಿ ಅವರಿಂದ ನನಗೆ ಲಾಭವಾಗುತ್ತಿರಲಿಲ್ಲ. ಗಾಂಧೀಜಿ ಅವರೊಂದಿಗೆ ಕೈಜೋಡಿಸಿದ್ದರೆ ಬ್ರಿಟಿಷರು ಅಸ್ಪೃಶ್ಯರನ್ನು ಕೈಬಿಡುವಂತಹ ಆತಂಕದ ಪರಿಸ್ಥಿತಿ ಎದುರಿಸುತ್ತಿದ್ದ ಕಾರಣ ರಾಷ್ಟ್ರರಾಜಕಾರಣದತ್ತ ಗಮನ ಕೇಂದ್ರೀಕರಿಸಲು ಚಿಂತನೆ ಮಾಡುತ್ತಿದ್ದೆ. ಭಾರತದಲ್ಲಿ ಎಂತಹದ್ದೆ ಸ್ವರಾಜ್ ಬರಲಿ ಅದರಿಂದ ಅಸ್ಪೃಶ್ಯರಿಗೆ ಲಾಭವಾಗಲಿದೆ ಎಂದು ನನಗೆ ಆತ್ಮವಿಶ್ವಾಸ ಮೂಡಿದೆ. ಈ ವಿಚಾರದಲ್ಲಿ ಬಾಕಿ ಉಳಿದಿರುವ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೆ ಪ್ರಯತ್ನಿಸುತ್ತೇನೆ. ಕೇವಲ ಅಸ್ಪೃಶ್ಯರ ಕೆಲಸಗಳ ಮೇಲೆ ಇನ್ನು ಹೆಚ್ಚಿನ ಗಮನ ನೀಡುವ ಅಗತ್ಯ ಇಲ್ಲವೆಂದು ಭಾವಿಸುತ್ತೇನೆ.

ಅಸ್ಪೃಶ್ಯರಿಗೆ ಕೇವಲ ರಾಜಕೀಯ ಅಧಿಕಾರ ಲಭಿಸಿದರೂ ಉಪಯೋಗವಿಲ್ಲ. ಅದು ಕೈಯಲ್ಲಿದ್ದೂ ಆಡಳಿತ ಬ್ರಿಟಿಷರ ಕೈಯಲ್ಲಿದ್ದರೆ ೧೫–೨೦ ಇಲ್ಲವೇ ೨೫ ಸ್ಥಾನಗಳ ಪ್ರಾತಿನಿಧಿತ್ವ ಲಭಿಸಿದರೂ ಯಾವುದೇ ಪ್ರಯೋಜನವಾಗುವುದಿಲ್ಲ. ಪಂಕ್ತಿ ಭೋಜನದಲ್ಲಿ ಕುಳಿತುಕೊಳ್ಳುವ ಹಕ್ಕು ದೊರೆತ ಮೇಲೆ ನಮಗೆ ತೃಪ್ತಿಯಾಗುವಷ್ಟು ಅನ್ನ ಲಭಿಸುತ್ತದೋ ಇಲ್ಲವೋ ಎನ್ನುವುದರತ್ತ ಗಮನ ಹರಿಸಬೇಕಾಗುತ್ತದೆ. ಅದೇ ರೀತಿ ಬ್ರಿಟಿಷ್ ಸರ್ಕಾರದಿಂದ ಈ ದೇಶಕ್ಕೆ ವಿಶೇಷ ಸೌಲಭ್ಯಗಳು ದೊರೆಯುವಂತೆ ಮಾಡುವ ನಿಟ್ಟಿನಲ್ಲಿ

ನಾನು ವಾದ ಮಂಡಿಸಲಿದ್ದೇನೆ. ವಿದೇಶಗಳಿಗೆ ಭೇಟಿ ನೀಡಿ ಮರಳುವ ನಮ್ಮ ಜನರು, ನಮ್ಮ ದೇಶದಲ್ಲಿರುವ ಬಡತನ, ಇಲ್ಲಿನ ಅನಾರೋಗ್ಯ ಪೀಡಿತ ಜನರನ್ನು ನೋಡಿ ಕಂಗಾಲಾಗುತ್ತಾರೆ. ಇಷ್ಟೊಂದು ಅಗಾಧ ಪ್ರಮಾಣದಲ್ಲಿ ಬಡ ಜನತೆ ಇದ್ದರೂ ಅದನ್ನು ಬಗೆಹರಿಸಲು ಇಲ್ಲಿ ಒಂದೇ ಒಂದು ವ್ಯವಸ್ಥೆ ಇಲ್ಲ. ಇದನ್ನೆಲ್ಲ ನೋಡಿದರೆ ಇಂಗ್ಲೆಂಡ್‌ನಲ್ಲಿ ಸಾಕಷ್ಟು ಸೌಲಭ್ಯಗಳಿವೆ. ಆರ್ಥಿಕ ಸಾಮರ್ಥ್ಯವಿಲ್ಲದ ಬಡ ರೋಗಿಗಳಿಗೆ ಅಲ್ಲಿ ಸರ್ಕಾರವೇ ವೈದ್ಯಕೀಯ ಸೇವೆ ನೀಡುತ್ತದೆ. ಒಂದು ವೇಳೆ ವ್ಯಕ್ತಿಯೊಬ್ಬ ನಿರುದ್ಯೋಗಿಯಾದರೆ ಅಂತಹ ವ್ಯಕ್ತಿಗೆ ಉದ್ಯೋಗ ಲಭಿಸುವವರೆಗೆ ನಿರುದ್ಯೋಗ ವೇತನ ನೀಡುತ್ತದೆ.

ಅರವತ್ತು ವಯಸ್ಸಿಗಿಂತ ಹೆಚ್ಚಿನ ನಿರ್ಗತಿಕ ವೃದ್ಧರಿಗೆ ಸರ್ಕಾರ ವೃದ್ಯಾಪ್ಯ ವೇತನ ನೀಡುತ್ತದೆ. ಬಡವರಿಂದ ಅಧಿಕ ಬಾಡಿಗೆ ವಸೂಲಿ ಮಾಡುವುದಕ್ಕೆ ಸರ್ಕಾರ ನಿರ್ಬಂಧ ವಿಧಿಸಿದ್ದಲ್ಲದೇ ಸರ್ಕಾರದಿಂದಲೇ ಮನೆ ಮಾಲೀಕನಿಗೆ ಸರ್ಕಾರಿ ಅನುದಾನ ನೀಡಿ ಮನೆ ಬಾಡಿಗೆ ಹೆಚ್ಚಿಸದಂತೆ ಷರತ್ತು ಹಾಕುತ್ತದೆ.

ಇಂಗ್ಲೆಂಡ್‌ನಲ್ಲಿ ಪ್ರಾಥಮಿಕ ಶಿಕ್ಷಣ ಉಚಿತ ಮತ್ತು ಕಡ್ಡಾಯಗೊಳಿಸಲಾಗಿರುವುದರ ಜೊತೆಗೆ ಉಚಿತ ಕಾಲೇಜು ಶಿಕ್ಷಣ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಬ್ರಿಟಿಷ್ ಸರ್ಕಾರ ಈ ದೇಶದಲ್ಲಿ ಇಂತಹ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ.

ಮುಂಬೈನ ಗಿರಣಿ ಮಾಲೀಕರು ಕಾರ್ಮಿಕರ ವೇತನ ಕಡಿಮೆಗೊಳಿಸಿ ತೊಂದರೆ ನೀಡುತ್ತಿರುವುದರಿಂದ ಕಾರ್ಮಿಕರು ಮುಷ್ಕರಕ್ಕೆ ಇಳಿಯುತ್ತಿದ್ದಾರೆ. ಆದರೆ ಸರ್ಕಾರ ಇತ್ತ ಗಮನ ಹರಿಸುತ್ತಿಲ್ಲ. ಇಂಗ್ಲೆಂಡ್, ಜರ್ಮನಿಯಲ್ಲಿ ಇಂತಹ ಮುಷ್ಕರ ಆರಂಭವಾಗಿದ್ದರೆ ಅಲ್ಲಿನ ಸರ್ಕಾರ ಮೌನಕ್ಕೆ ಶರಣಾಗುತ್ತಿರಲಿಲ್ಲ.

ಶಾಂತಿ ಸೌಹಾರ್ದತೆ ಕಾಪಾಡುವುದಷ್ಟೆ ನಮ್ಮ ಕರ್ತವ್ಯವೆಂದು ಇಲ್ಲಿನ ಸರ್ಕಾರ ಭಾವಿಸಿರುವ ಕಾರಣ ಇಲ್ಲಿನ ಜನರಿಗೆ ಯಾವುದೇ ಸುಖ ಸೌಲಭ್ಯಗಳು ದೊರೆಯುವುದು ಸಾಧ್ಯವಿಲ್ಲ. ದೇಶಕ್ಕಾಗಿ ಹಾಗೂ ನಿಮಗಾಗಿಯಾದರೂ ಇಲ್ಲಿನ ಜನರ ಕೈಗೆ ಅಧಿಕಾರ ಸಿಗುವುದು ಅತ್ಯಗತ್ಯವಾಗಿರುವ ಕಾರಣ ಬ್ರಿಟಿಷ್ ಸರ್ಕಾರದ ಹಿಡಿತದಿಂದ ಅಧಿಕಾರ ಕಿತ್ತುಕೊಳ್ಳುವುದಕ್ಕೆ ಯತ್ನಿಸುತ್ತೇನೆ. ನನಗೆ ನೀಡಿರುವ ಒಂದು ಮಾನಪತ್ರದಲ್ಲಿ ಸುಧಾಮನ ಅವಲಕ್ಕಿಯಂತೆ ನಮ್ಮ ಚಿಕ್ಕ ಕಾಣಿಕೆ ಸ್ವೀಕರಿಸಿ ಎಂದು ಹೇಳಲಾಗಿದೆ. ಆದರೆ ಸುಧಾಮನ ಅವಲಕ್ಕಿಯಿಂದ ಏನೂ ಆಗದು. ಸ್ವರ್ಗದಲ್ಲಿ ನಿಮಗೆ ಉತ್ತಮ ಸ್ಥಾನ ಲಭಿಸಲಿ ಎಂದು ನಾನು ಪ್ರಯತ್ನಿಸುವುದೂ ಇಲ್ಲ ಮತ್ತು ಅದು ನನ್ನ ಕೆಲಸವೂ ಅಲ್ಲ. ಈ ಲೌಕಿಕ ಜಗತ್ತಿನಲ್ಲಿ ನಿಮ್ಮ ಕಷ್ಟ ಪರಿಹಾರ ಆಗಿ ನಿಮಗೆ ಸುಖ ಶಾಂತಿ ಲಭಿಸಬೇಕು ಎನ್ನುವುದರತ್ತ ಮಾತ್ರ ನನ್ನ ಪ್ರಯತ್ನ. ಇದಕ್ಕೆ ಹಣ ಬೇಕಾಗುತ್ತದೆ. ಅದನ್ನು ನಿಮ್ಮಿಂದ ಪಡೆದುಕೊಳ್ಳುತ್ತೇನೆ ಮತ್ತು ನೀವು ನನಗೆ ಕೊಡಲೇಬೇಕಾಗುತ್ತದೆ.

---

ಜನತಾ: ಏಪ್ರಿಲ್ ೨೯, ೧೯೩೩

# ೭೩.

# ಅನ್ನ, ಶಿಕ್ಷಣ ಮತ್ತು ಅಧಿಕಾರಕ್ಕಾಗಿ ಬುದ್ಧಿಯ ಬಳಕೆಯಾಗಲಿ

[ಸೋಪಾರೆ (ವಸಾಯಿ)ಯಲ್ಲಿ ಮಾಡಿದ ಭಾಷಣ]

ಸನ್ಮಾನ್ಯ ಅಧ್ಯಕ್ಷರೆ, ಆತ್ಮೀಯ ಬಂಧು, ಭಗಿನಿಯರೇ,

ಶ್ರೀ ವನಮಾಳಿ ಅವರು ಹೇಳಿದಂತೆ ಈ ಸಭೆ ಮೊದಲೇ ನಡೆಯಬೇಕಿತ್ತು. ಆದರೆ ನಾನು ಮೂರನೇ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಪಾಲ್ಗೊಳ್ಳಲು ವಿದೇಶಕ್ಕೆ ಹೋಗಿದ್ದರಿಂದ ಇದೀಗ ಈ ಸಭೆಯನ್ನು ಆಯೋಜಿಸಲಾಗಿದೆ. ಇಲ್ಲಿನ ಚೇವ ಚಮ್ಮಾರ ಜನರು ಈ ಸಭೆಯನ್ನು ಆಯೋಜಿಸಿ ಈ ಭಾಗದ ಅಸ್ಪೃಶ್ಯರೊಂದಿಗೆ ಮಾತನಾಡುವ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಮೊದಲನೇ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕೆ ನಾನು ಲಂಡನ್‌ಗೆ ಹೋಗಿದ್ದ ವೇಳೆ ನನ್ನದು ದಯನೀಯ ಸ್ಥಿತಿಯಾಗಿತ್ತು. ಆ ಸಭೆಯಲ್ಲಿ ಹಿಂದೂ–ಮುಸ್ಲಿಂ ಸದಸ್ಯರ ಮಧ್ಯೆ ಭಿನ್ನಾಭಿಪ್ರಾಯ ಒಡಮೂಡಿದ್ದರಿಂದ ಅಸ್ಪೃಶ್ಯರ ವಾದ ಮಂಡಿಸಲು ಪ್ರಯಾಸಪಡಬೇಕಾಯಿತು. ಕೊನೆಯವರೆಗೂ ನಮ್ಮಲ್ಲಿ ಏಕಾಭಿಪ್ರಾಯ ಮೂಡದ ಕಾರಣ ಮೊದಲನೇ ವರ್ಷ ವಿನಾಕಾರಣ ವ್ಯರ್ಥವಾಯಿತು ಎಂದು ನಮ್ಮೆಲ್ಲರ ಭಾವನೆಯಾಗಿತ್ತು. ಇದರ ಜೊತೆಗೆ ಕಾಂಗ್ರೆಸ್ ಮತ್ತು ಅದರ ಸರ್ವಾಧಿಕಾರಿ ಮಹಾತ್ಮ ಗಾಂಧೀಜಿ ಅವರು ದುಂಡು ಮೇಜಿನ ಪರಿಷತ್ ಬಗ್ಗೆ ನಿರ್ಲಿಪ್ತರಾಗಿದ್ದರು. ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಮಹಾತ್ಮ ಗಾಂಧೀಜಿ ಮತ್ತು ಅವರ ಸಂಗಡಿಗರು ಪಾಲ್ಗೊಂಡಿದ್ದರಿಂದ ಅದಕ್ಕೆ ಮಹತ್ವ ಲಭಿಸಿತು. ಎರಡನೇ ಪರಿಷತ್ತಿನಲ್ಲಿ ಒಂದಿಷ್ಟು ಕೆಲಸ ಆಗಬಹುದು ಎಂದು ಎಲ್ಲ ಹಿಂದಿ ಮುಖಂಡರು ಆಶಯ ವ್ಯಕ್ತಪಡಿಸಿದ್ದರು. ಆದರೆ ಕೊನೆಗೆ ಅದೂ ಕೂಡ ವಿಫಲ ಆಯಿತು. ಅಂದಿನ ದುಂಡು ಮೇಜಿನ ಸಭೆಯಲ್ಲಿ ಎಲ್ಲ ಹಿಂದಿ ಸದಸ್ಯರು ಯಾವ ಪರಿ ಗೊಂದಲ ಹುಟ್ಟು ಹಾಕಿದರೆಂದರೆ ಒಂದೇ ಒಂದು ಪ್ರಶ್ನೆ ಕೂಡ ಪರಿಹಾರ ಕಾಣಲಿಲ್ಲ. ಈ ರೀತಿಯಾಗುವುದಕ್ಕೆ ಅಂದು ಒಬ್ಬರೇ ಒಬ್ಬರು ಕಾರಣರಾಗಿದ್ದರು. ಅದು ಮಹಾತ್ಮ ಗಾಂಧೀಜಿ. ಒಂದು ಕಡೆ ಮುಸ್ಲಿಂರು ಇನ್ನೊಂದು ಕಡೆ ಸ್ಪೃಶ್ಯ ಹಿಂದೂಗಳು ಮಧ್ಯೆ ಅಸ್ಪೃಶ್ಯ ಸೇರಿದಂತೆ ಇತರ ವರ್ಗಗಳ ಪ್ರತಿನಿಧಿಯಾಗಿದ್ದ ನಾನು ಎನ್ನುವಂತಹ ವಿಚಿತ್ರ ಪರಿಸ್ಥಿತಿ ನಿರ್ಮಾಣದಿಂದ ನನ್ನ ಮನಸ್ಸಿನಲ್ಲಿ ಗೊಂದಲದ ಜಗತ್ತೇ ನಿರ್ಮಾಣವಾಗಿತ್ತು. ಅಸ್ಪೃಶ್ಯರಿಗೆ ಸಂಬಂಧಿಸಿದಂತೆ ಮಹಾತ್ಮ ಗಾಂಧೀಜಿ ಏನಾದರೂ ಪ್ರಸ್ತಾಪಿಸಬಹುದು ಎನ್ನುವ ಆಶಯ ನನಗಂತೂ ಇರಲಿಲ್ಲ. ಏಕಂದರೆ ಎರಡನೇ ದುಂಡು ಮೇಜಿನ ಸಭೆಯಲ್ಲಿ ಪಾಲ್ಗೊಳ್ಳಲು ತೆರಳುವ ಮುನ್ನ ಅವರೊಂದಿಗೆ ನಡೆದ ಭೇಟಿ ವೇಳೆ ಈ ಸಂಗತಿ ನನಗೆ ಮನದಟ್ಟಾಗಿತ್ತು.

ಅಸ್ಪೃಶ್ಯರಿಗಾಗಿ ನಾನು ಮಂಡಿಸುವ ಯೋಜನೆಗೆ ಮಹಾತ್ಮ ಗಾಂಧೀಜಿ ತಮ್ಮ ವಿರೋಧ ವ್ಯಕ್ತಪಡಿಸಲಾರರು ಎಂದು ನಾನು ಭಾವಿಸಿದ್ದೆ. ಆದರೆ ಸಭೆಯಲ್ಲಿ ಎಲ್ಲವೂ ತದ್ವಿರುದ್ಧವಾಯಿತು. 'ಬೇರೆಯವರ ಮನಸ್ಸಿಗೆ ಇಷ್ಟವಾಗುವ ಅಸ್ಪೃಶ್ಯರ ಯೋಜನೆಗೆ ನನ್ನ ವಿರೋಧ ಇಲ್ಲ' ಎಂದು ಭಾರತದಲ್ಲಿ ಮಹಾತ್ಮ

ಗಾಂಧೀಜಿ ಸ್ಪಷ್ಟಪಡಿಸಿದ್ದರು. ಅಲ್ಲದೇ ವಚನ ನೀಡುವಷ್ಟರ ಮಟ್ಟಿಗೆ ಹೋಗಿದ್ದರು. ಆದರೆ ಅದೇ ಮಹಾತ್ಮ ಗಾಂಧೀಜಿ ಸಿಖ್ ಮತ್ತು ಮುಸ್ಲಿಂರ ವಿಚಾರದಲ್ಲಿ ಬಿಳಿ ಕಾಗದದ ಮೇಲೆ ಸಹಿ ಮಾಡಿಕೊಟ್ಟಂತೆ ತಮ್ಮ ಸಮ್ಮತಿ ಸೂಚಿಸಿದರೆ, ಅಸ್ಪೃಶ್ಯರಿಗೆ ಸೂಜಿ ಮೊನೆಯಷ್ಟು ಹಕ್ಕು ನೀಡುವುದಕ್ಕೆ ಸಿದ್ಧವಿಲ್ಲ ಎಂದು ಹೇಳಿಬಿಟ್ಟರು. ಮಹಾತ್ಮ ಗಾಂಧೀಜಿ ಅವರ ಈ ಪ್ರತಿಜ್ಞೆಯ ಫಲ ಎನ್ನುವಂತೆ ನಮ್ಮ ಸಮಾಜದ ಹಿತರಕ್ಷಣೆಗಾಗಿ ನಾನು ಅನಿವಾರ್ಯವಾಗಿ ಅಲ್ಪಸಂಖ್ಯಾತರ ಗುಂಪಿನೊಂದಿಗೆ ಗುರುತಿಸಿಕೊಳ್ಳಬೇಕಾಯಿತು. ಮಹಾತ್ಮ ಗಾಂಧೀಜಿ ಅಂದು ಒಂದು ಮಾತು ಹೇಳಿದ್ದರು. 'ಸ್ಪೃಶ್ಯ ಮತ್ತು ಅಸ್ಪೃಶ್ಯ ವರ್ಗಕ್ಕೆ ನಾನೇ ಪ್ರತಿನಿಧಿಯಾಗಿದ್ದು, ಅವರ ಹಿತ ಯಾವುದರಲ್ಲಿ ಇದೆ ಎನ್ನುವ ಸ್ಪಷ್ಟ ಅರಿವು ನನಗೆ ಇದೆ. ಡಾ. ಅಂಬೇಡ್ಕರ್ ಅವರ ಬೆಂಬಲಕ್ಕೆ ಅಸ್ಪೃಶ್ಯ ಸಮಾಜ ಇಲ್ಲವೇ ಇಲ್ಲ. ಅಸ್ಪೃಶ್ಯ ವರ್ಗಕ್ಕಾಗಿ ಅವರು ಸಿದ್ಧಪಡಿಸಿದ ಅಭಿಪ್ರಾಯ ಮತ್ತು ಯೋಜನೆ ಇದು ಅವರ ಸ್ವಂತದ್ದು. ಅಸ್ಪೃಶ್ಯ ವರ್ಗದೊಂದಿಗೆ ಅವರ ಸಂಬಂಧವೇ ಇಲ್ಲ' ಎಂದು ಹೇಳಿದ್ದರು. ಗಾಂಧೀಜಿ ಅವರ ಈ ಹೇಳಿಕೆಗೆ ಅಂದಿನ ಭಾರತದಲ್ಲಿ ಸಾಕಷ್ಟು ಆಧಾರಗಳಿದ್ದವು. ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾದ ಕಾರ್ಯಕರ್ತರಿಂದ ಅಸ್ಪೃಶ್ಯರಲ್ಲಿ ಒಡಕು ಮೂಡಿಸುವ ಪ್ರಯತ್ನ ನಡೆದೇ ಇದ್ದ ಕಾರಣ ಚಮ್ಮಾರ ಜಾತಿಯಲ್ಲಿನ ಕೆಲ ಒಳಜಾತಿಗಳು ನನ್ನ ವಿರುದ್ಧವಾಗಿದ್ದವು. ಆ ವಿರೋಧಕ್ಕೆ ತಕ್ಕಂತೆ ಖೊಟ್ಟಿ ಸಭೆಗಳು, ಖೊಟ್ಟಿ ತಂತಿ ಸಂದೇಶಗಳು ಇಡೀ ವರ್ಷ ಮಳೆಯಂತೆ ಸುರಿದವು. ಇದೇ ಸಂದರ್ಭದಲ್ಲಿ ಚಮ್ಮಾರ ಜಾತಿಗಳು ಮಾಡಿರುವ ವಿರೋಧ ತಪ್ಪು ಎನ್ನುವುದು ಶ್ರೀ. ವನಮಾಳಿ ಮತ್ತು ಚಾಂದೋರಕರ್ ಅವರಂತಹ ವ್ಯಕ್ತಿಗಳಿಗೆ ಮನದಟ್ಟಾಗಿ ನನ್ನನ್ನು ವಿರೋಧಿಸುವುದರಿಂದ ಚಮ್ಮಾರ ಜಾತಿಗೆ ಒಳ್ಳೆಯದು ಆಗುವುದಿಲ್ಲ ಎಂದು ಗೊತ್ತಾದ್ದರಿಂದ ನನ್ನ ಬೇಡಿಕೆಗಳನ್ನು ಬೆಂಬಲಿಸಿ ಅನೇಕ ಪತ್ರಗಳು ಮತ್ತು ಸಂದೇಶಗಳು ನನ್ನ ಕೈಸೇರಿದವು. ಅವುಗಳ ಪೈಕಿ ಚೇವ ಚಮ್ಮಾರ ಸಮಾಜದಿಂದ ಶ್ರೀ ವನಮಾಳಿ ಮತ್ತು ಚಾಂದೋರಕರ್ ಕಳುಹಿಸಿದ ಆ ತಂತಿ ಸಂದೇಶವನ್ನು ನಾನು ಮರೆಯಲು ಸಾಧ್ಯವಿಲ್ಲ.

ಎರಡನೇ ದುಂಡು ಮೇಜಿನ ಪರಿಷತ್ತಿನ ಸಭೆಯ ಬಳಿಕ ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ತನ್ನ ತೀರ್ಮಾನವನ್ನು ಸರ್ಕಾರ ಬೇಗನೆ ಪ್ರಕಟಿಸಿತು. ಅದರಲ್ಲಿ ಅಸ್ಪೃಶ್ಯರಿಗೆ ಸ್ವತಂತ್ರ ಮತಕ್ಷೇತ್ರಗಳನ್ನು ನೀಡಿ ಸ್ವರಾಜ್‌ದಲ್ಲಿ ಅವರ ಸ್ವಾತಂತ್ರ್ಯಕ್ಕೆ ಮಾನ್ಯತೆ ನೀಡಲಾಗಿತ್ತು. ಸರ್ಕಾರ ತನ್ನ ತೀರ್ಮಾನ ಪ್ರಕಟಿಸಿದ ಬಳಿಕ ಗಾಂಧೀಜಿ ಪ್ರತಿಜ್ಞೆಗೆ ಅನುಗುಣವಾಗಿ ಉಪವಾಸ ಸತ್ಯಾಗ್ರಹಕ್ಕೆ ಕುಳಿತಿದ್ದರ ಪರಿಣಾಮವಾಗಿ ಪುಣೆ ಒಪ್ಪಂದ ಏರ್ಪಟ್ಟಿತು. ಆ ಒಪ್ಪಂದದ ಪ್ರಕಾರ ನಮಗೆ ಲಭಿಸಿರುವ ರಾಜಕೀಯ ಮಹತ್ವ ಮತ್ತು ಹಕ್ಕುಗಳ ಪಾಲನೆ ಮಾಡುವುದು ಈಗ ನಿಮ್ಮ ಕರ್ತವ್ಯವಾಗಿದೆ. ತಮ್ಮ ಜಾತಿಯ ಮುಖಂಡ ಯಾವ ರೀತಿ ಮಾರ್ಗದರ್ಶನ ನೀಡುತ್ತಾನೆ ಆ ರೀತಿ ನಡೆಯುವುದು ಹಿಂದೂ ಧರ್ಮೀಯರ ಗುಣ. ಅದೇ ರೀತಿ ನೀವು ಕೂಡ ನಿಮ್ಮ ಮುಖಂಡರ ಮೇಲೆ ನಂಬಿಕೆ ಇಡಿ. ಹಿಂದೂ ಜನರಾಗಲಿ ಅಥವಾ ಅವರ ಮುಖಂಡರಾಗಲಿ ಇಲ್ಲವೇ ಯುವಕರಾಗಲಿ ನಿಮಗಾಗಿ ಏನಾದರೆಂದು ನಾನು ಭಾವಿಸುವುದಿಲ್ಲ. ನಿಮ್ಮನ್ನು ದೇವಸ್ಥಾನಗಳಿಗೆ ಇವರು ಕರೆದುಕೊಂಡು ಹೋಗುವುದು ಅಥವಾ ತಮ್ಮ ಕೆರೆ–ಬಾವಿಗಳಿಂದ ಕುಡಿಯುವುದಕ್ಕೆ ನೀರು ಕೊಡುತ್ತಾರೆ ಎನ್ನುವುದು ಶುದ್ಧ ಮೋಸದ ವಿಚಾರ. ಸನಾತನಿಗಳ ಮರ್ಜಿ ಹಿಡಿದು ಅಸ್ಪೃಶ್ಯತೆ ನಿರ್ಮೂಲನೆ ಮಾಡುತ್ತಿರುವ ಇವರಿಗೆ ಭಾರತದ ಭೌಗೋಲಿಕ ನಕಾಶೆಯತ್ತ ದೃಷ್ಟಿ ಕೂಡ ಹೋಗಿಲ್ಲ. ಒಂದು ವೇಳೆ ಇವರು ನಕಾಶೆ ನೋಡಿದರೆ ನಮ್ಮ ದೃಷ್ಟಿಕ್ಷೇಪ ಕೇವಲ ವಿಂಧ್ಯಾದ್ರಿವರೆಗೆ ಮಾತ್ರ ಸಿಮೀತವಾಗಿದೆ ಎನ್ನುವುದು ಅರ್ಥವಾಗುತ್ತದೆ.

ಹಿಂದೂ ಸಮಾಜ ಮತ್ತು ಧರ್ಮದ ಬಗ್ಗೆ ನನಗೆ ಚಿಂತೆ ಇಲ್ಲ. ಅಸ್ಪೃಶ್ಯ ಸಮಾಜದಲ್ಲಿ ನಾನು ಹುಟ್ಟಿದ್ದೇನೆ ಮತ್ತು ಆ ಸಮಾಜದ ಹಿತಾಸಕ್ತಿಯ ರಕ್ಷಣೆ ಮಾತ್ರ ನನಗೆ ಮುಖ್ಯವಾಗಿದ್ದು, ನಾನೀಗ ಅದನ್ನೇ

ಮಾಡುತ್ತಿದ್ದೇನೆ. ಧರ್ಮ ಮತ್ತು ಸಾಮಾಜಿಕ ವಿಷಯಗಳನ್ನು ದೂರ ಇರಿಸಿ, ಅನ್ನ, ಶಿಕ್ಷಣ ಮತ್ತು ರಾಜಕೀಯ ಅಧಿಕಾರ ಪಡೆಯುವ ನಿಟ್ಟಿನಲ್ಲಿ ನಿಮ್ಮ ಬುದ್ಧಿಮತ್ತೆ ಖರ್ಚಾಗಲಿ. ಕೆಲವು ದಿನಗಳ ಹಿಂದೆ ಇಲ್ಲಿನ ಸಾರ್ವಜನಿಕ ಬಾವಿ, ಶಾಲೆಗಳಲ್ಲಿ ಪ್ರವೇಶ ಪಡೆಯುವುದಕ್ಕೆ ವಿನಂತಿಯ ಭಿತ್ತಿ ಪತ್ರ ಅಂಟಿಸುವ ನಿರ್ಣಯ ತೆಗೆದುಕೊಳ್ಳಲಾಗಿತ್ತು. ನನ್ನ ಪ್ರಕಾರ ವಿನಂತಿಗೆ ಅರ್ಥವೇ ಇಲ್ಲ. ಮುನ್ಸಿಪಾಲಿಟಿಯಲ್ಲಿ ಮತ್ತು ಲೋಕಲ್ ಬೋರ್ಡ್‌ಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನಿಮ್ಮ ನಿಜವಾದ ಪ್ರತಿನಿಧಿಗಳು ವಾದ ಮಾಡಿದ್ದೇ ಆದಲ್ಲಿ ಹಿಂದೂಗಳಿಗೆ ಬಾವಿ, ಶಾಲೆಗಳನ್ನು ನಮಗೆ ಮುಕ್ತಗೊಳಿಸಲೇಬೇಕಾಗುತ್ತದೆ. ಕನಿಷ್ಠ ಇದಕ್ಕಾಗಿಯಾದರೂ ನೀವು ಇಂತಹ ಪ್ರತಿನಿಧಿಗಳನ್ನು ತಯಾರು ಮಾಡುವ ಇಲ್ಲವೇ ಆಯ್ಕೆ ಮಾಡುವತ್ತ ಗಮನ ಹರಿಸಿ.

ಮಹಾತ್ಮ ಗಾಂಧೀಜಿ ಅವರಂತೂ ಅಸ್ಪೃಶ್ಯರಿಗಾಗಿ ದೇವಸ್ಥಾನಗಳನ್ನು ಮುಕ್ತಗೊಳಿಸುವ ಉಪಾಯ ಶೋಧಿಸುವುದರಲ್ಲಿ ತಲ್ಲೀನರಾಗಿದ್ದಾರೆ. ಹಿಂದೂಗಳು ದೇವಸ್ಥಾನ ಮುಕ್ತಗೊಳಿಸುತ್ತಾರೋ ಅಥವಾ ದೇವಸ್ಥಾನಗಳಿಗೆ ಬೀಗ ಜಡಿಯುತ್ತಾರೋ ಅದು ನನಗೆ ಗೊತ್ತಿಲ್ಲ. ಆದರೆ ಹಿಂದೂ ಯುವಕರು ಜರ್ಮನಿಯ ರಾಜಕಾರಣ ಅಧ್ಯಯನ ಮಾಡಿದರೆ ಅಲ್ಲಿನ ನಾಝಿ ಪಕ್ಷ ಕಮ್ಯೂನಿಸ್ಟರ ವಿರುದ್ಧ ಹೋರಾಡುತ್ತಿರುವ ವಿಚಾರ ಅರಿವಿಗೆ ಬರುತ್ತದೆ. ಒಂದೇ ದೇಶದ ಜನರು ನ್ಯಾಯಕ್ಕಾಗಿ ರಕ್ತಪಾತ ಮಾಡುತ್ತಿದ್ದಾರೆ. ೧೮೬೩ರಲ್ಲಿ ಅಮೆರಿಕದಲ್ಲಿ ನಿಗ್ರೋಗಳನ್ನು ಗುಲಾಮಗಿರಿಯಿಂದ ಮುಕ್ತ ಮಾಡುವುದಕ್ಕಾಗಿ ಉತ್ತರ ಮತ್ತು ದಕ್ಷಿಣದ ಬಿಳಿಯರು ಪರಸ್ಪರ ಬಡಿದಾಡಿಕೊಂಡಿರುವ ವಿಚಾರ ಈ ಹಿಂದಿ ತರುಣರಿಗೆ ಅರ್ಥವಾಗುವುದಿಲ್ಲ. ಅಸ್ಪೃಶ್ಯತೆಯ ನಿರ್ಮೂಲನೆಗಾಗಿ ನಾಲ್ಕಾರು ಹಿಂದೂ ಯುವಕರು ನಾಲ್ಕೈದು ಸನಾತನಿಗಳ ತಲೆ ತೆಗೆದುಹಾಕಿದ್ದರೆ ಒಂದಿಷ್ಟು ರಕ್ತ ಹರಿಸಿದ್ದರೆ ಏನಾದರೂ ಅವಘಡ ಆಗುತ್ತಿತ್ತೆ? ಆದರೆ ಇಲ್ಲಿನವರಿಗೆ ನಿಜವಾಗಿಯೂ ಅಸ್ಪೃಶ್ಯತೆ ನಿರ್ಮೂಲನೆಯಾಗುವುದು ಬೇಕಿಲ್ಲ. ಇರಲಿ... ಹಿಂದೂ ಧರ್ಮ ಮತ್ತು ಆ ಸಮಾಜಕ್ಕೆ ಏನು ಬೇಕಾದರೂ ಆಗಲಿ. ಅಸ್ಪೃಶ್ಯತೆ ನಿವಾರಣೆಯಾಗಲಿ ಅಥವಾ ಮೊದಲಿನಂತೆ ಅದು ಮುಂದುವರಿಯಲಿ ಅದರ ಬಗ್ಗೆ ನೀವು ಚಿಂತೆ ಮಾಡುವ ಅಗತ್ಯವಿಲ್ಲ. ನಮ್ಮೊಳಗಿನ ಮಹಾರ್–ಚಮ್ಮಾರ ಭೇದ ತೊಲಗಿಸಿ ಸಂಘಟಿತರಾಗಿ ಮತ್ತು ರಾಜಕೀಯ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ನಿಮ್ಮ ತನು–ಮನ–ಧನ ಸಮರ್ಪಣೆಯಾಗಲಿ ಎಂದು ಹೇಳಿ ನನ್ನ ಮಾತಿಗೆ ವಿರಾಮ ನೀಡುತ್ತೇನೆ.

---

ಜನತಾ: ಏಪ್ರಿಲ್, ೨೯ ೧೯೩೩
ಭಾಷಣದ ದಿನಾಂಕ ನಮೂದಿಸಲಾಗಿಲ್ಲ –ಸಂಪಾದಕ

# ೭೪.

# ಹಿಂದೂ ಸಮಾಜದ ಶಕ್ತಿ ಸಾಮರ್ಥ್ಯಗಳು ಸಾಮಾಜಿಕ ಸುಧಾರಣೆಗಾಗಿ ಪ್ರಾಮಾಣಿಕವಾಗಿ ಬಳಕೆಯಾಗಲಿ

ಡಾ. ಅಂಬೇಡ್ಕರ್ ಅವರು ಅಸ್ಪೃಶ್ಯ ಸಮಾಜದ ನಿಜವಾದ ಪ್ರತಿನಿಧಿಯಲ್ಲ ಎನ್ನುವ ಹಿಂದೂ ಮುಖಂಡರಿಗೆ ಅವರ ಸಹಕಾರವಿಲ್ಲದೇ ಯಾವುದೇ ರೀತಿಯ ವಿಧಾಯಕ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲದ ಕಾರಣ ಇದೇ ತಿಂಗಳ ಮೊದಲನೇ ವಾರದಲ್ಲಿ ವಿದೇಶಕ್ಕೆ ಕಳುಹಿಸಬೇಕಿದ್ದ ಶ್ವೇತಪತ್ರದ ಕುರಿತು ವಿಚಾರ ವಿನಿಮಯ ಮಾಡಿ ಆ ಶ್ವೇತಪತ್ರದಲ್ಲಿಯ ಜೊಳ್ಳುತನವನ್ನು ಬ್ರಿಟಿಷ್ ನಾಗರಿಕರ ಗಮನಕ್ಕೆ ತರುವ ಉದ್ದೇಶದಿಂದ ಹಿಂದೂ ನಾಯಕರ ಸಭೆ ಸೇರಿತ್ತು. ಈ ಸಭೆಯಲ್ಲಿ ಡಾ. ಗೌರ್, ಡಾ. ಅಂಬೇಡ್ಕರ್, ಡಾ. ಮುಂಜೆ, ಸಚ್ಚಿದಾನಂದ ಸಿಂಹ ಮತ್ತು ಪಂಡಿತ ನಾನಕ್ ಚಂದ್ ಸೇರಿದಂತೆ ಇತರರು ಇದ್ದರು. ಎಲ್ಲರ ಭಾಷಣವನ್ನು ಗಮನವಿಟ್ಟು ಕೇಳಿದ ಡಾ. ಅಂಬೇಡ್ಕರ್ ಕೊನೆಯವರಾಗಿ ಮಾತಿಗೆ ನಿಂತರು.

ಡಾ. ಅಂಬೇಡ್ಕರ್ ಅವರು ಭಾಷಣಕ್ಕೆ ನಿಲ್ಲುತ್ತಿದ್ದಂತೆಯೇ ಅವರು ಏನು ಹೇಳುತ್ತಾರೋ ಎಂದು ಎಲ್ಲ ನಾಯಕರ ಗಮನ ಅವರತ್ತ ಕೇಂದ್ರೀಕೃತವಾಗಿತ್ತು. ಡಾ. ಮುಂಜೆ ಅವರಂತೂ ಅಂಬೇಡ್ಕರ್ ಅವರನ್ನು ತಮ್ಮ ಪಕ್ಷದಲ್ಲಿ ಸೇರಿಸಿಕೊಳ್ಳುವುದಕ್ಕೆ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದರು. ಡಾ. ಅಂಬೇಡ್ಕರ್ ಮಾಡಿದ ಭಾಷಣದ ಮತಿಥಾರ್ಥ ಹೀಗಿದೆ:

ಭಾರತದಲ್ಲಿ ಅಸ್ತಿತ್ವದಲ್ಲಿರುವ ಅಸ್ಪೃಶ್ಯ ವರ್ಗ ತನ್ನ ಸರ್ವಾಂಗೀಣ ಉನ್ನತಿಗಾಗಿ ಸ್ವತಂತ್ರ ಮತಕ್ಷೇತ್ರ ಬೇಡಿಕೆ ಇರಿಸುವುದಕ್ಕೆ ಇಡೀ ಹಿಂದೂ ಸಮಾಜವೇ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಇಂದಿನ ಹಿಂದೂ ಸಮಾಜದ ಸ್ಥಿತಿಗತಿಯನ್ನು ಒಟ್ಟಾರೆ ಸೂಕ್ಷ್ಮವಾಗಿ ಅವಲೋಕನ ಮಾಡಿದ್ದೇ ಆದಲ್ಲಿ, ಸಂಯುಕ್ತ ಮತ ಕ್ಷೇತ್ರಗಳ ಮುಖಾಂತರ ಅಸ್ಪೃಶ್ಯರಿಗೆ ತಮ್ಮ ಉನ್ನತಿಯ ಸ್ವಾತಂತ್ರ್ಯ ಪಡೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಇಷ್ಟೆಲ್ಲ ವೈರುಧ್ಯಗಳನ್ನು ತೆರೆದ ಕಣ್ಣಿನಿಂದ ನೋಡಿದ ವ್ಯಕ್ತಿಗೆ, ಜಾಗೃತಗೊಂಡ ಸ್ವಾಭಿಮಾನಿಗೆ ಮತ್ತು ಸ್ವಾವಲಂಬನೆಯ ಮಹತ್ವ ತಿಳಿದವನಿಗೆ ಸ್ವತಂತ್ರ ಮತಕ್ಷೇತ್ರದ ಬೇಡಿಕೆ ಇರಿಸದೇ ಗತ್ಯಂತರವಿರಲಿಲ್ಲ. ಹಿಂದೂ ನಾಯಕರು ತಮ್ಮ ಸ್ವಾರ್ಥವೊಂದನ್ನು ಹೊರತುಪಡಿಸಿ ಅಸ್ಪೃಶ್ಯ ಸಮಾಜವನ್ನು ಎಂದಿಗೂ ವಿಶ್ವಾಸಕ್ಕೆ ತೆಗೆದುಕೊಂಡಿದ್ದೇ ಇಲ್ಲ. ಮುಸ್ಲಿಂರ ರಾಜಕೀಯ ಹಕ್ಕುಗಳ ಪ್ರಶ್ನೆ ಉದ್ಭವಿಸುತ್ತಿದ್ದಂತೆಯೇ ಸ್ಪೃಶ್ಯ ಹಿಂದೂಗಳು ಮೌನಕ್ಕೆ ಶರಣಾಗುತ್ತಾರೆ ಆದರೆ ಅದೇ ಅಸ್ಪೃಶ್ಯರ ಹಕ್ಕುಗಳ ವಿಚಾರ ಬಂದರೆ ಯುದ್ಧಕ್ಕೆ ಸಿದ್ಧರಾದಂತೆ ಎದ್ದು ನಿಲ್ಲುತ್ತಾರೆ. ಹಿಂದೂ ನಾಯಕರಲ್ಲಿ ನನ್ನ ವಿನಂತಿ ಇಷ್ಟೇ... ಹಿಂದೂ ಸಮಾಜ ತನ್ನ ಕೃತಿಯಿಂದ ಅಸ್ಪೃಶ್ಯ ಸಮಾಜದ ವಿಶ್ವಾಸ ಗಳಿಸಿಕೊಳ್ಳಬೇಕೇ ವಿನಃ ಮುಸ್ಲಿಂರೊಂದಿಗೆ ವಿನಾಕಾರಣ ಜಗಳಕ್ಕೆ ನಿಂತು ತನ್ನ ಶಕ್ತಿ ಸಾಮರ್ಥ್ಯ ಹಾಳು ಮಾಡಿಕೊಳ್ಳಬಾರದು. ಹಿಂದೂ ಸಮಾಜ ತನ್ನ ಎಲ್ಲ ಶಕ್ತಿ ಸಾಮರ್ಥ್ಯವನ್ನು ಸಾಮಾಜಿಕ ಸುಧಾರಣೆಗೆ ಪ್ರಾಮಾಣಿಕವಾಗಿ ವ್ಯಯಿಸುವಂತಹ ಕಾರ್ಯಕ್ರಮ ರೂಪಿಸಿದರೆ ಮಾತ್ರ ಅಸ್ಪೃಶ್ಯ ಸಮಾಜಕ್ಕೆ ಹಿಂದೂ ಸಮಾಜದೊಂದಿಗೆ ಸೇರಿ ಕೆಲಸ ಮಾಡಲು ಉತ್ಸಾಹ ಬರುತ್ತದೆ.

ಡಾ. ಅಂಬೇಡ್ಕರ್ ಅವರ ಭಾಷಣದ ಬಳಿಕ ಡಾ. ಮುಂಜೆ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಅಂಬೇಡ್ಕರ್‌ರವರು ಹಿಂದೂ ಮಹಾಸಭೆಯ ಅಧ್ಯಕ್ಷರಾಗಬೇಕೆಂದು ವಿನಂತಿಸಿದರು. ಆದರೆ ಡಾ. ಅಂಬೇಡ್ಕರ್ ಇಂತಹ ಆಮಿಷಗಳಿಗೆ ಬಲಿ ಬೀಳುವ ವ್ಯಕ್ತಿಯಲ್ಲ ಎನ್ನುವ ಸಂಗತಿ ಡಾ. ಮುಂಜೆ ಅವರಿಗೂ ಗೊತ್ತಿತ್ತು. ಮಹಾತ್ಮ ಗಾಂಧಿ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಸಂದರ್ಭದಲ್ಲಿಯೂ ಅಂಬೇಡ್ಕರ್‌ರು ತಮ್ಮ ಸ್ವಹಿತಾಸಕ್ತಿ, ಮಾನ–ಅಪಮಾನಕ್ಕೆ ಮಹತ್ವ ನೀಡಿದವರಲ್ಲ. ತಮ್ಮ ಸಮಾಜಕ್ಕೆ ಯಾವುದರಿಂದ ಒಳ್ಳೆಯದಾಗುತ್ತೋ ಅದನ್ನೇ ಡಾ. ಅಂಬೇಡ್ಕರ್ ಇಲ್ಲಿಯವರೆಗೆ ಮಾಡುತ್ತ ಬಂದಿದ್ದಾರೆ ಎನ್ನುವ ವಿಚಾರ ಹಿಂದೂ ಮಹಾಸಭೆಯವರು ಗಮನಿಸುವುದು ಒಳಿತು.

---

ಜನತಾ: ಜುಲೈ ೧೫, ೧೯೯೩
ಭಾಷಣದ ಸ್ಥಳ ಮತ್ತು ದಿನಾಂಕ ನಮೂದಿಸಿಲ್ಲ –ಸಂಪಾದಕ.

## ೭೫.

# ಗುಲಾಮನೆಂಬ ಅವಮಾನವನ್ನು ಅದೆಷ್ಟು ದಿನ ಸಹಿಸುವಿರಿ?

ಶನಿವಾರ ಸೆಪ್ಟಂಬರ್ ೨೯, ೧೯೩೪ರ ರಾತ್ರಿ ಮುಂಬೈನ ಪರಳ್‌ನ ಪೋಯಬಾವಡಿ ಹತ್ತಿರದ ಕಾರ್ಮಿಕರ ಮೈದಾನದಲ್ಲಿ ಪುಣೆ ಒಪ್ಪಂದದ ಸ್ಮರಣಾರ್ಥ ಒಂದು ಬೃಹತ್ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಅಸ್ಪೃಶ್ಯ  ಸಮಾಜದ ಸುಮಾರು ಹತ್ತು ಸಾವಿರಕ್ಕಿಂತ ಹೆಚ್ಚು ಜನರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಅಧ್ಯಕ್ಷತೆ ವಹಿಸಿದ್ದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಮಾಜದ ಜನರಲ್ಲಿ ಉತ್ಸಾಹ ತುಂಬುವ ಭಾಷಣ ಮಾಡಿದರು.

ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ ಹೇಳಿದ್ದು:

ಸುಮಾರು ಎರಡು ಸಾವಿರ ವರ್ಷಗಳಿಂದ ಅಸ್ಪೃಶ್ಯ ಸಮಾಜವನ್ನು ಈ ದೇಶದ ಸಾಮಾಜಿಕ ವ್ಯವಸ್ಥೆಯ ಅವಿಭಾಜ್ಯ ಅಂಗವೆಂದು ಯಾವ ಕಾಲಕ್ಕೂ ಪರಿಗಣಿಸಿರಲಿಲ್ಲ. ರಾಜಕೀಯ ಅಥವಾ ಸಾಮಾಜಿಕ ಕೆಲಸಗಳು ನಡೆಯಬೇಕಿದ್ದರೆ ಅಂತಹ ಕೆಲಸಗಳ ಕುರಿತು ವಿಚಾರ ಮಾಡುವ ಅವಕಾಶ ಅಸ್ಪೃಶ್ಯ ಸಮಾಜಕ್ಕೆ ಯಾವ ಕಾಲಕ್ಕೂ ದಕ್ಕಿರಲಿಲ್ಲ. ಕೇವಲ ಮಹಾರಾಷ್ಟ್ರದ ರಾಜಕಾರಣ ಮಾತ್ರ ನೋಡಬೇಕಾದರೆ ಬ್ರಾಹ್ಮಣರು, ಕಾಯಸ್ಥರು, ಮರಾಠರು ಸೇರಿದಂತೆ ಕೆಲವೇ ಜಾತಿಗಳು ಈ ಕುರಿತು ವಿಚಾರ ಮಾಡುವ ಅಧಿಕಾರ ಪಡೆದುಕೊಂಡಿವೆ ಏನೋ ಎಂಬ ವಾತಾವರಣ ಇತ್ತು.

ಇಂತಹ ಸಂದರ್ಭದಲ್ಲಿ ಮಹಾರ್ ಕೆಲಸ ಎಂದರೆ ಕೇವಲ ವರದಿ ಸಲ್ಲಿಸುವುದು ಅಥವಾ ಗುಪ್ತಚಾರಕ್ಕಿಂತ ಮೇಲಿನ ದರ್ಜೆಯ ಕೆಲಸವೆಂದು ಎಂದಿಗೂ ಇರಲಿಲ್ಲ. ಬೇರೆ ಜಾತಿಯವರ ಆಮಂತ್ರಣ ಪತ್ರಿಕೆಗಳನ್ನು ತಲುಪಿಸುವುದು, ಹೆಚ್ಚೆಂದರೆ ಬಾಗಿಲ ಬಳಿ ಕುಳಿತು ಒಳಗೆ ನಡೆಯುವ ವಿಚಾರಗಳನ್ನು ಕಿವಿಗೆ ಹಾಕಿಕೊಳ್ಳುವುದು ಆಗಿತ್ತು. ಒಳಗೆ ನಡೆಯುತ್ತಿರುವದೇನು ಎನ್ನುವುದರ ಗಂಧಗಾಳಿಯೂ ಅವರಿಗೆ ತಲುಪದಂತಹ ಪರಿಸ್ಥಿತಿ ಇತ್ತು.

ಅಸ್ಪೃಶ್ಯ ಸಮಾಜಕ್ಕೂ ಜೀವವಿದ್ದು, ಅವರಿಗೂ ಕೂಡ ಇತರ ಮಾನವ ಜಾತಿಯಷ್ಟೆ ಸೌಲಭ್ಯಗಳ ಅವಶ್ಯಕತೆ ಇದೆ; ಮನುಷ್ಯನಾದವನಿಗೆ ಯಾವ ರೀತಿ ಸುಖ–ದುಃಖದ ಭಾವನೆಗಳಿವೆಯೋ ಅದೇ ರೀತಿ ಆ ಸಮಾಜಕ್ಕೂ ಕೂಡ ಭಾವನೆ ಇದೆ ಎನ್ನುವ ಕಲ್ಪನೆ ಸ್ಪೃಶ್ಯ ಸಮಾಜದ ಹೃದಯಕ್ಕೆ ಎಂದೂ ತಾಗಲೇ ಇಲ್ಲ. ಈ ಕಾರಣಕ್ಕಾಗಿ ದೇಶದಲ್ಲಿ ನಡೆದ ಸಾಮಾಜಿಕ ಮತ್ತು ರಾಜಕೀಯ ಘಟನಾವಳಿಗಳ ವಾಸನೆ ಅಸ್ಪೃಶ್ಯ ಸಮಾಜಕ್ಕೆ ಗೊತ್ತಾಗಲೇ ಇಲ್ಲ. ಜಗತ್ತಿನ ಯಾವುದೇ ದೇಶದಲ್ಲಿ ಕಾಣದಂತಹ ವಿಪರೀತ ಪದ್ಧತಿ ಕೇವಲ ಹಿಂದೂಸ್ತಾನದಲ್ಲಿ ಎಷ್ಟೋ ಶತಶತಮಾನಗಳಿಂದ ಗಟ್ಟಿಯಾಗಿ ಬೇರೂರಿದೆ. ಆ ಕಾಲದ ಸಮಾಜಶಾಸ್ತ್ರಜ್ಞರಾಗಲಿ, ರಾಜನೀತಿಜ್ಞರಾಗಲಿ ಅಥವಾ ತತ್ವಜ್ಞಾನಿಗಳು ಕೂಡ ಇಂತಹ ಸಮಾಜಘಾತಕ ವಿಚಾರ ಸರಣಿಗೆ ತಡೆ ಹಾಕಿ ನೂತನ ವೈಚಾರಿಕ ಪರಂಪರೆ ಹುಟ್ಟು ಹಾಕುವ ಪ್ರಯತ್ನ ಎಂದಿಗೂ ಮಾಡಲೇ ಇಲ್ಲ. ಇದೆಲ್ಲದರ ಅನಿಷ್ಠ ಪರಿಣಾಮ ಅಸ್ಪೃಶ್ಯ ಸಮಾಜದ ಮೇಲೆ ಆಗಿ ಅವರ ಜೀವನ ಕಷ್ಟಮಯ, ಸ್ವಾಭಿಮಾನ ಶೂನ್ಯ ಮತ್ತು ನಿರುಪಯುಕ್ತ ಆಗುವುದರ ಜೊತೆಗೆ ಅದರ ಕಹಿಫಲವನ್ನು ಇಡೀ

ದೇಶ ವಿಶೇಷವಾಗಿ ಹಿಂದೂ ಸಮಾಜ ಉಣ್ಣಬೇಕಾದ ಪರಿಸ್ಥಿತಿ ಬಂದಿದೆ. ಈಗ ಮನು ತಿರುಗಿ ಬಿದ್ದಿದ್ದಾನೆ. ೧೯೩೦ರ ದುಂಡುಮೇಜಿನ ಪರಿಷತ್ತಿನ ಸಭೆಯಲ್ಲಿ ಅಸ್ಪೃಶ್ಯ ಸಮಾಜದ ಪ್ರತಿನಿಧಿಗಳ ಉಪಸ್ಥಿತಿ ಬೇಕೆಂದು ಹಿಂದೂಸ್ತಾನದ ಆಡಳಿತಗಾರರಿಂದ ಬಂದ ಆಮಂತ್ರಣ ಬದಲಾಗುತ್ತಿರುವ ಕಾಲದ ಆರಂಭಿಕ ಸೂಚನೆ ಎಂದು ನಾನು ಭಾವಿಸುತ್ತೇನೆ. ಪ್ರಾಚೀನ ಭಾರತೀಯ ಹಿಂದೂ ಸಮಾಜದಲ್ಲಿ ನಡೆಯದ, ಮೊಗಲ್ ಸಾಮ್ರಾಜ್ಯದಲ್ಲಿ ಸಂಭವಿಸದ ಮತ್ತು ಮರಾಠರ ಹಿಂದವಿ ಸ್ವರಾಜ್‌ದಲ್ಲೂ ಕಾಣಿಸಿಕೊಳ್ಳದಂತಹ ಕ್ರಾಂತಿ ೨೦ನೇ ಶತಮಾನದಲ್ಲಿ ಸಂಭವಿಸಿದೆ.

ಭಾರತದ ಭಾವಿ ರಾಜ್ಯವ್ಯವಸ್ಥೆ ಕುರಿತು ವಿವಿಧ ಸಮಾಜಗಳೊಂದಿಗೆ ವಿಚಾರ ವಿನಿಮಯ ಮಾಡುವ ಸಂದರ್ಭದಲ್ಲಿ ಅಸ್ಪೃಶ್ಯ ಸಮಾಜವನ್ನು ದೂರ ಇರಿಸುವುದೆಂದರೆ ಆ ವಿಚಾರ ವಿನಿಮಯ ಅಪೂರ್ಣ ಎಂದೇ ಅರ್ಥೈಸಬೇಕಾಗುತ್ತದೆ. ಅಸ್ಪೃಶ್ಯ ಸಮಾಜದ ಅಭಿಪ್ರಾಯ ಪರಿಶೀಲಿಸಿ ಅವರ ಆಕಾಂಕ್ಷೆಗಳನ್ನು ಅದರಲ್ಲಿ ಸೇರಿಸದೇ ತೆಗೆದುಕೊಳ್ಳುವ ತೀರ್ಮಾನ ಅಪೂರ್ಣ ಎಂಬ ಅಭಿಪ್ರಾಯಕ್ಕೆ ಆಡಳಿತಗಾರರು ಬಂದಿದ್ದಾರೆ. ಇಷ್ಟೇ ಅಲ್ಲ ಇಂತಹ ನಿರ್ಣಯದಿಂದ ಸ್ಥಾಪಿತಗೊಳ್ಳುವ ರಾಜ್ಯವ್ಯವಸ್ಥೆಗೆ ನಿಜವಾದ ಪ್ರಜಾಪ್ರಭುತ್ವದ ಸ್ವರೂಪ ದಕ್ಕದು ಎನ್ನುವ ಅರಿವು ಬ್ರಿಟಿಷ್ ಆಡಳಿತಗಾರರಲ್ಲಿ ಆಗಿದ್ದರಿಂದಲೇ ಅವರು ಅಸ್ಪೃಶ್ಯ ಪ್ರತಿನಿಧಿಗೆ ದುಂಡುಮೇಜಿನ ಪರಿಷತ್ತಿನ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕೆ ಆಹ್ವಾನ ನೀಡಿದರು. ಈ ಆಮಂತ್ರಣ ಮುಖಾಂತರ ಅಸ್ಪೃಶ್ಯ ಪ್ರತಿನಿಧಿಗಳಿಗೆ ತಮ್ಮ ಇತಿಹಾಸದಲ್ಲಿ ತಿಳಿಯದೇ ಇದ್ದಂತಹ ಸಮಾನತೆಯ ಗೌರವ ಮತ್ತು ಉಚ್ಚ ವರ್ಗ ಎಂದು ಕರೆಸಿಕೊಳ್ಳುವ ಇತರರಿಂದ ಮರ್ಯಾದೆ ಲಭಿಸಿತು. ಇಡೀ ದೇಶದ ಹಿತಾಸಕ್ತಿ ಅಸ್ಪೃಶ್ಯ ಸಮಾಜದ ಹಿತಾಸಕ್ತಿಯೊಂದಿಗೆ ಬೆಸೆದುಕೊಂಡಿದ್ದು, ಅವರಿಗೆ ತಮ್ಮ ಹಕ್ಕುಗಳ ರಕ್ಷಣೆಗೆ ಅವಕಾಶ ನೀಡದಿದ್ದರೆ ದೇಶದ ಪ್ರಗತಿ ಅಸಾಧ್ಯ ಎನ್ನುವ ಅರಿವನ್ನು ಎಲ್ಲ ಸಮಾಜಗಳಿಗೂ ಮಾಡಿಕೊಡಲಾಯಿತು ಮತ್ತು ಅಸ್ಪೃಶ್ಯ ಪ್ರತಿನಿಧಿಗಳು ಇತರರ ಜೊತೆ ಸೇರಿ ದೇಶದ ಭವಿಷ್ಯ ನಿರ್ಧರಿಸುವ ಅವಕಾಶ ಲಭಿಸಿತು. ತಿರುಗಿಬಿದ್ದಿರುವ ಮನುವಿನ ಗಟ್ಟಿ ಹೆಜ್ಜೆಯ ಮೇಲೆ ನಿಮ್ಮ ಪ್ರತಿನಿಧಿಗಳು ತಮ್ಮ ಭವಿಷ್ಯ ಉಜ್ವಲಗೊಳಿಸುವ ಇತಿಹಾಸಕ್ಕೆ ಚಾಲನೆ ನೀಡಿದ್ದಾರೆ. ನೂತನ ಇತಿಹಾಸಕ್ಕೆ ಚಾಲನೆ ನೀಡುವ ಕೆಲಸ ಅವರಿಗೆ ಸುಲಭವಾಗಿರಲಿಲ್ಲ. ತನ್ನ ಸಮಾಜದ ಹಕ್ಕುಗಳನ್ನು ಸ್ಥಾಪಿಸುವುದಕ್ಕಾಗಿ ಬೇರೆ ಸಮಾಜದೊಂದಿಗೆ ಮಾತಿನ ಯುದ್ಧಕ್ಕೆ ಇಳಿಯಬೇಕಾದ ಪ್ರಸಂಗ ಉದ್ಭವಿಸಿತು.

ಎರಡನೇ ದುಂಡು ಮೇಜಿನ ಪರಿಷತ್ತಿನ ಸಭೆಗೆ ಮೊದಲು ಜಾತಿಜಾತಿಗಳ ಮಧ್ಯೆ ಜಗಳ ಆರಂಭವಾದ ಕಾರಣ ಎಲ್ಲರೂ ಹತಾಶರಾಗಿದ್ದರು. ನಾವೆಲ್ಲರೂ ಮಹಾತ್ಮ ಗಾಂಧೀಜಿ ಬರುವ ಹಾದಿ ಎದುರು ನೋಡುತ್ತಿದ್ದೆವು. ಮಹಾತ್ಮ ಗಾಂಧೀಜಿ ಪಕ್ಷಾತೀತರು ಎಂದು ಗುರುತಿಸಿಕೊಂಡಿದ್ದರಿಂದ ಈ ಜಗಳ ಪರಿಹರಿಸುತ್ತಾರೆಂದು ಎಲ್ಲರೂ ಭಾವಿಸಿದ್ದರು. ನಾನೂ ಸ್ವತಃ ಅವರಿಂದ ನಮಗೆ ನ್ಯಾಯಯುತ ಹಕ್ಕುಗಳಿಗೆ ಸಮ್ಮತಿ ಸಿಗುತ್ತದೆ ಮತ್ತು ಭವಿಷ್ಯದ ಭಾರತದ ಆಡಳಿತದಲ್ಲಿ ರೀತಿ ರಿವಾಜಿನಂತೆ ಪಾಲು ಸಿಗಲಿದೆ ಎಂಬ ಅಪೇಕ್ಷೆ ಕೂಡ ಇರಿಸಿದ್ದೆ. ಯಾರಿಗೋ ಒಂದು ಎಲೆ ಸಿಗಬಹುದು. ಇನ್ನಾರಿಗೋ ಎರಡು ಸಿಗಬಹುದು, ನನ್ನ ಸಮಾಜಕ್ಕೆ ಕನಿಷ್ಠ ಒಂದು ದ್ರೋಣವಾದರೂ ಸಿಗುತ್ತದೆ ಎಂದು ಆಶಿಸಿದ್ದೆ. ಆದರೆ ಅದು ಪೊಳ್ಳು ಎನ್ನುವುದು ಬಳಿಕ ಅರ್ಥವಾಯಿತು.

'ಮುಸ್ಲಿಂರಿಗೆ ಏನು ಬೇಕೋ ಅದನ್ನು ನೀಡುತ್ತೇನೆ. ಕ್ರೈಸ್ತ ಸಮಾಜಕ್ಕೂ ಖಂಡಿತ ನೀಡುತ್ತೇನೆ. ಯೂರೋಪಿಯನ್ ಇಲ್ಲವೇ ಆಂಗ್ಲೋ–ಇಂಡಿಯನ್ನರ ಹಕ್ಕುಗಳಿಗೆ ನನ್ನ ಮಾನ್ಯತೆ ಇದೆ. ಸಿಖ್ಖರ ಬೇಡಿಕೆಗಳಿಗೆ ನನ್ನ ಒಪ್ಪಿಗೆ ಇದೆ. ಆದರೆ ಅಸ್ಪೃಶ್ಯ ಸಮಾಜದ ಹಕ್ಕುಗಳಿಗೆ ಒಂದು ಕಡ್ಡಿ ತುಕಡಿಯಷ್ಟು

ಮಾನ್ಯತೆ ನೀಡಲಾರೆ' ಎಂದು ಮಹಾತ್ಮ ಗಾಂಧೀಜಿ ಸ್ಪಷ್ಟವಾಗಿ ಹೇಳಿದ್ದರಿಂದ ನಾನು ವಿಸ್ಮಿತನಾಗಬೇಕಾಯಿತು. ಮಹಾತ್ಮ ಗಾಂಧಿ ಅವರ ಈ ಕೃತ್ಯ ನನಗೆ ಮಹಾಭಾರತದ ಒಂದು ಪ್ರಮುಖ ಘಟನೆಯನ್ನು ನೆನಪಿಸಿದೆ. ಕೌರವ–ಪಾಂಡವರ ವೈಷಮ್ಯ ವಿಕೋಪಕ್ಕೆ ಹೋಗಬಾರದು ಮತ್ತು ಅದನ್ನು ತಡೆಯಬೇಕು ಎನ್ನುವ ಉದ್ದೇಶದಿಂದ ಕೃಷ್ಣ, ದುರ್ಯೋಧನನ ಬಳಿಗೆ ಒಪ್ಪಂದಕ್ಕಾಗಿ ಹೋಗಿದ್ದು ತಮ್ಮೆಲ್ಲರಿಗೂ ಗೊತ್ತಿರುವ ಸಂಗತಿ. ಈ ಸಂದರ್ಭದಲ್ಲಿ ದುರ್ಯೋಧನ, ಪಂಚ ಪಾಂಡವರಿಗೆ ಅರ್ಧ ರಾಜ್ಯ ಏನು? ಐದು ಗ್ರಾಮಗಳನ್ನು ಕೂಡ ನೀಡಲು ನಾನು ಸಿದ್ಧನಿಲ್ಲ. ಇಷ್ಟೇ ಅಲ್ಲ ಸೂಜಿಯ ಮೊನೆಯಷ್ಟು ಕೂಡ ಜಮೀನು ನೀಡುವುದಕ್ಕೆ ಸಿದ್ಧನಿಲ್ಲ ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದ. ಇದೇ ರೀತಿಯ ಉತ್ತರ ನನಗೆ ಗಾಂಧೀಜಿ ಅವರಿಂದ ಸಿಕ್ಕಿತು. ಇದರ ನಂತರ ಇತಿಹಾಸದ ಘಟನಾವಳಿಗಳು ತಮ್ಮೆಲ್ಲರಿಗೂ ಗೊತ್ತಿರುವ ಸಂಗತಿ.

ಅಸ್ಪೃಶ್ಯರ ನ್ಯಾಯಯುತ ಹಕ್ಕುಗಳಿಗೆ ಬ್ರಿಟಿಷ್ ಸರ್ಕಾರ ಮಾನ್ಯತೆ ನೀಡಿ ಆ ಹಕ್ಕುಗಳಿಗೆ ಜಾತಿ ಪ್ರಾತಿನಿಧಿತ್ವದ ಆಧಾರ ನೀಡಿದರು. ಸರ್ಕಾರದ ಈ ಜಾತಿಪ್ರಾತಿನಿಧಿತ್ವದ ತೀರ್ಮಾನ ಪ್ರಕಟವಾಗುತ್ತಿದ್ದಂತೆಯೇ ಮಾಡಿದ ಪಾಪಕ್ಕೆ ಪರಿಹಾರವಾಗೆನ್ನಿ, ಮನಸ್ಸಿನ ಕ್ಷೋಭೆ ಹೊರಹಾಕಿ ಶಾಂತವಾಗುವುದಕ್ಕೆ ಎನ್ನಿ ಅಥವಾ ತಮ್ಮ ತಪ್ಪು ತಿಳುವಳಿಕೆಯಿಂದ ಮಾಡಿದ ಅನ್ಯಾಯಕ್ಕೆ ಪರಿಮಾರ್ಜನಗೊಳಿಸುವುದಕ್ಕೆನ್ನಿ ಮಹಾತ್ಮ ಪ್ರಾಣಾಂತಿಕ ಉಪವಾಸ ಸತ್ಯಾಗ್ರಹ ಆರಂಭಿಸಿದರು ಮತ್ತು ಅವರ ಉಪವಾಸ ಅಂತಿಮವಾಗಿ ಪುಣೆ ಒಪ್ಪಂದದಿಂದ ಮುಕ್ತಾಯವಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಒಪ್ಪಂದದ ಸ್ಮರಣೆ ಜಾಗೃತವಾಗಿರಲಿ ಎನ್ನುವ ಉದ್ದೇಶದಿಂದ ನಾವು ಇಲ್ಲಿ ಸೇರಿದ್ದೇವೆ.

ಈ ಒಪ್ಪಂದದ ಭವಿತವ್ಯದ ಕುರಿತು ಕೆಲವು ಜನರು ನಿರಾಧಾರವಾಗಿ ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಜಾತಿ ಪ್ರಾತಿನಿಧಿತ್ವಕ್ಕೆ ಹಲವಾರು ದಿಕ್ಕಿನಿಂದ ವಿರೋಧ ವ್ಯಕ್ತವಾಗುತ್ತಿರುವುದರಿಂದ ಸರ್ಕಾರ ಅದನ್ನು ಹಿಂಪಡೆಯುವ ತೀರ್ಮಾನ ತೆಗೆದುಕೊಳ್ಳಬಹುದೆಂಬ ಎಂಬ ಸಂಶಯ ಹಲವರಲ್ಲಿದೆ. ನಾನು ಇಲ್ಲಿ ಸ್ಪಷ್ಟವಾಗಿ ಒಂದು ಮಾತು ಹೇಳುತ್ತೇನೆ. ಈ ಸಂಶಯ, ಆತಂಕ ನಿರಾಧಾರವಾದುದು. ಪುಣೆ ಒಪ್ಪಂದದ ಕುರಿತು ಆತಂಕಪಡುವ ಅಗತ್ಯವೇ ಇಲ್ಲ. ಶ್ವೇತಪತ್ರ ತಿರಸ್ಕರಿಸುವುದರಿಂದ ಜಾತಿ ಪ್ರಾತಿನಿಧಿತ್ವ ತಾನೇ ತಾನಾಗಿ ರದ್ದಾಗುತ್ತದೆಂದು ರಾಷ್ಟ್ರೀಯ ಸಭೆ ಪ್ರಕಟಿಸಿದೆ. ಈ ವಾದದಲ್ಲಿ ನಾವು ಸೇರುವುದಕ್ಕೆ ಸಕಾರಣಗಳೇ ಇಲ್ಲ. ಜಾತಿ ಪ್ರಾತಿನಿಧಿತ್ವ ನಿರ್ಣಯ ರದ್ದಾದ ರೀತಿಯಲ್ಲಿ ಪುಣೆ ಒಪ್ಪಂದ ಕೂಡ ರದ್ದಾಗಬಹುದು ಎನ್ನುವ ಆತಂಕ ಬಹುಶಃ ತಮ್ಮನ್ನು ಕಾಡುತ್ತಿರಬಹುದು. ಆದರೆ ತಾರ್ಕಿಕವಾಗಿ ಇಲ್ಲವೇ ಕಾಯ್ದೆ ದೃಷ್ಟಿಯಲ್ಲಿ ಇಂತಹ ಆತಂಕಕ್ಕೆ ಅವಕಾಶ ಇಲ್ಲವೇ ಇಲ್ಲ. ಅದು ಹೇಗಿದೆ ಎಂದರೆ ಬ್ರಿಟಿಷ್ ಸರ್ಕಾರದ ಜಾತಿ ಪ್ರಾತಿನಿಧಿತ್ವ ಆದೇಶದ ಐದನೇ ಕಲಮಿನಲ್ಲಿ ಜಾತಿ–ಜಾತಿಗಳ ಮಧ್ಯೆ ಸೌಹಾರ್ದದಿಂದ ವಾದ ಅಂತ್ಯಗೊಳ್ಳದ ಕಾರಣ ಸರ್ಕಾರಕ್ಕೆ ಈ ಜಾತಿ ಪ್ರಾತಿನಿಧಿತ್ವ ತೀರ್ಮಾನ ತೆಗೆದುಕೊಳ್ಳಬೇಕಾಯಿತೆಂದು ಹೇಳಿದೆ. ಅಂದರೆ ಈ ವಿವಾದ ಸೌಹಾರ್ದದಿಂದ ಪರಿಹಾರವಾಗಿದ್ದರೆ ಸರ್ಕಾರಕ್ಕೆ ಈ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆ ಇರಲಿಲ್ಲ. ಇನ್ನು ಮುಂದೆ ಭಾರತದಲ್ಲಿ ಯಾವುದೇ ಜಾತಿಗಳ ಮಧ್ಯೆ ಪರಸ್ಪರ ತಿಳುವಳಿಕೆಯಿಂದ ರಾಜೀ ಸಂಧಾನವಾದರೆ ಅದಕ್ಕೆ ಸರ್ಕಾರ ಖಂಡಿತವಾಗಿ ಒಪ್ಪಿಗೆ ನೀಡಲಿದೆ ಎಂದು ಹೇಳಲಾಗಿತ್ತು. ಪುಣೆ ಒಪ್ಪಂದ ಕೂಡ ಇದೇ ರೀತಿಯ ರಾಜೀ ಸಂಧಾನದ ಒಪ್ಪಂದವಾಗಿದ್ದು ಅದಕ್ಕೆ ಸರ್ಕಾರದ ತತ್ವಶಃ ಒಪ್ಪಿಗೆ ಇದೆ. ಜಾತಿ ಪ್ರಾತಿನಿಧಿತ್ವದಲ್ಲಿ ಕೇವಲ ಪ್ರಾಂತೀಯ ಕೌನ್ಸಿಲ್‌ನಲ್ಲಿ ಸ್ಥಾನಗಳ ಹಂಚಿಕೆ ಇದೆಯೇ ವಿನಃ ಕೇಂದ್ರ ಕೌನ್ಸಿಲ್‌ನಲ್ಲಿನ ಸ್ಥಾನಗಳ ಉಲ್ಲೇಖವಿಲ್ಲ. ಪುಣೆ ಒಪ್ಪಂದದಲ್ಲಿ ಈ ಎರಡೂ ಕೌನ್ಸಿಲ್‌ನ ಸ್ಥಾನಗಳ ಹಂಚಿಕೆಯಾಗಿದೆ. ಯಾವಾಗ ಸರ್ಕಾರ ಪುಣೆ ಒಪ್ಪಂದಕ್ಕೆ ತನ್ನ ಒಪ್ಪಿಗೆ ಸೂಚಿಸಿತೋ ಅದೇ ಸಂದರ್ಭದಲ್ಲಿ ಜಾತಿ ಪ್ರಾತಿನಿಧಿತ್ವದಲ್ಲಿನ

ಪ್ರಾಂತೀಯ ಕೌನ್ಸಿಲ್‌ನ ಜಾಗಗಳ ಹಂಚಿಕೆಯನ್ನು ಬದಲಿಸಿ ಪುಣೆ ಒಪ್ಪಂದದಲ್ಲಿ ಸ್ಪಷ್ಟಪಡಿಸಿರುವಂತೆ ಹಂಚಿಕೆಯಾಗಿರುವ ಸ್ಥಾನಗಳನ್ನು ಗ್ರಾಹ್ಯವಾಗಿಸಿದೆ. ಕೇಂದ್ರೀಯ ಕೌನ್ಸಿಲ್‌ನಲ್ಲೂ ಪುಣೆ ಒಪ್ಪಂದ ಅನುಸರಿಸಿ ಆ ತತ್ವಕ್ಕೆ ಅನುಗುಣವಾಗಿ ಹೊರಡಿಸಿದ ಶ್ವೇತಪತ್ರದಲ್ಲಿ ಪುಣೆ ಒಪ್ಪಂದದಲ್ಲಿ ಪ್ರಮಾಣಕ್ಕೆ ಅನುಗುಣವಾಗಿ ಕೇಂದ್ರೀಯ ಕೌನ್ಸಿಲ್ ನಲ್ಲಿ ಸ್ಥಾನಗಳ ಪ್ರಮಾಣ ನಿರ್ಧರಿಸಿದೆ. ಅಂದರೆ ಪುಣೆ ಒಪ್ಪಂದದನ್ವಯ ಹಿಂದೂ ಮತ್ತು ಅಸ್ಪೃಶ್ಯರ ಮಧ್ಯೆ ಆಗಿರುವ ರಾಜೀ ಸಂಧಾನದ ತತ್ವ ಸರ್ಕಾರದ ಐದನೇ ಕಲಮಿಗೆ ಅನುಗುಣವಾಗಿ ಇರುವುದರಿಂದ ತನ್ನ ಮಾನ್ಯತೆ ಮುದ್ರೆಯೊತ್ತಿದೆ. ಈ ಒಪ್ಪಂದದಲ್ಲಿ ಯಾವುದೇ ಬದಲಾವಣೆ ಮಾಡುವುದಕ್ಕೆ ಸರ್ಕಾರಕ್ಕಾಗಲಿ ಅಥವಾ ಹಿಂದೂಗಳಿಗಾಗಲಿ ಸಾಧ್ಯವಿಲ್ಲ, ಇದನ್ನು ಕೇವಲ ಹಿಂದೂಗಳು ಮತ್ತು ಅಸ್ಪೃಶ್ಯರು ಮಾತ್ರ ಪರಸ್ಪರ ಚರ್ಚೆ ಮಾತುಕತೆಯಿಂದ ಬದಲಿಸಲು ಸಾಧ್ಯ ವಿನಃ ಬೇರೆ ಇನ್ನಾವುದೇ ಮಾರ್ಗದಿಂದ ಮಾರ್ಪಾಡು ಸಾಧ್ಯವಿಲ್ಲ ಆದ್ದರಿಂದ ನೀವು ಎಲ್ಲರೂ ನಿಶ್ಚಿಂತೆಯಿಂದ ಇರುವುದಕ್ಕೆ ಯಾವುದೇ ತೊಂದರೆ ಇಲ್ಲ.

ಯಾವುದೇ ಒಂದು ಪಕ್ಷ ಕಷ್ಟದಲ್ಲಿದ್ದ ವೇಳೆ, ಎರಡು ಪಕ್ಷಗಳು ಮಾಡಿಕೊಳ್ಳುವ ಒಪ್ಪಂದ ಪಾಲನೆಗೆ ಅರ್ಹವಾದುದ್ದಲ್ಲ ಎಂದು ಹಿಂದೂಗಳು ವರಾತ ತೆಗೆದರೂ ತೆಗೆಯಬಹುದು. ಮಹಾತ್ಮ ಗಾಂಧೀಜಿ ತಮ್ಮ ಪ್ರಾಣ ಪಣಕ್ಕೆ ಒಡ್ಡಿದ ಕಾರಣ ಈ ಪರಿಸ್ಥಿತಿ ನಿರ್ಮಾಣವಾಗಿ ಅವರ ಪ್ರಾಣ ಉಳಿಸುವ ಜವಾಬ್ದಾರಿ ನಾನು ಹೊರಬೇಕಾಯಿತು. ಆ ಸಮಯದಲ್ಲಿ ಇಡೀ ಹಿಂದೂ ಸಮಾಜ ನನ್ನ ಮೇಲೆ ಸಿಟ್ಟಾಗಿತ್ತು. ನಾನು ಮೆತ್ತಗಾಗಬೇಕು ಮತ್ತು ಹೇಗಾದರೂ ಮಾಡಿ ಒಪ್ಪಂದ ಮಾಡಿಕೊಳ್ಳಲೇಬೇಕು ಎಂದು ನಾಲ್ಕೂ ದಿಕ್ಕಿನಿಂದ ನನ್ನನ್ನು ಪೇಚಿಗೆ ಸಿಲುಕಿಸಿದ್ದರು. ದೇಶದ ಎಷ್ಟೋ ಯುವಕರು ನನ್ನ ಜೀವ ತೆಗೆಯುವುದಕ್ಕೆ ಸಿದ್ಧರಾಗಿದ್ದರು. ಬಂಗಾಲದಲ್ಲಿಯ ಭಯೋತ್ಪಾದಕ ಯುವಕರಿಂದ ನನಗೆ ಬೆದರಿಕೆ ಪತ್ರಗಳು ಬರುತ್ತಿದ್ದವು. ಮಹಾತ್ಮ ಗಾಂಧೀಜಿ ಅವರ ಜೀವಕ್ಕೆ ಯಾವುದೇ ರೀತಿಯಲ್ಲಿ ಅಪಾಯವಾಗಿದ್ದರೂ ಅದಕ್ಕೆ ನನ್ನನ್ನು ಜವಾಬ್ದಾರನನ್ನಾಗಿಸಿ ನನ್ನ ಜೀವ ಆಪತ್ತಿನಲ್ಲಿ ಸಿಲುಕುವುದಂತೂ ಇದ್ದೇ ಇತ್ತು. ಇದರ ಜೊತೆಗೆ ಅಸಹಾಯ ಅಸ್ಪೃಶ್ಯ ಸಮಾಜವೂ ಸವರ್ಣೀಯ ಹಿಂದೂ ಸಮಾಜದ ದ್ವೇಷಕ್ಕೆ ಬಲಿಯಾಗುವ ಭೀಕರ ಚಿತ್ರ ಕೂಡ ನನ್ನ ಕಣ್ಣೆದುರು ಇತ್ತು. ಇಂತಹ ಸ್ಥಿತಿಯಲ್ಲಿ ಪ್ರತಿಪಕ್ಷದೊಂದಿಗೆ ಮಾತುಕತೆ ಮಾಡಿ ಒಪ್ಪಂದಕ್ಕೆ ನಾನು ಸಹಿ ಹಾಕಬೇಕಾಯಿತು. ಪರಿಸ್ಥಿತಿ ಹೀಗಿರುವಾಗ ಸಂಕಟದಲ್ಲಿದ್ದುದು ನಾನು ಹೀಗಾಗಿ ಒಪ್ಪಂದಕ್ಕೆ ಸಹಿ ಹಾಕಬೇಕಾಯಿತು.

ಪುಣೆ ಒಪ್ಪಂದದಲ್ಲಿನ ಎಲ್ಲ ವಿಚಾರಗಳು ನನ್ನ ಅಭಿಪ್ರಾಯದಂತೆ ನಡೆಯಲಿಲ್ಲ. ಪುಣೆ ಒಪ್ಪಂದದ ವಿಚಾರದಲ್ಲಿ ನನ್ನದು ಪ್ರಾಮಾಣಿಕ ನಿಲುವು. ಪುಣೆ ಒಪ್ಪಂದ ಅಭೇದ್ಯವಾಗಿರಿಸುವುದಕ್ಕೆ ಅಸ್ಪೃಶ್ಯ ಸಮಾಜ ಸಿದ್ಧವಾಗಿದ್ದರೂ ಉನ್ನತ ಹಿಂದೂ ಸಮಾಜ ಅದೇ ರೀತಿಯ ವರ್ತನೆ ತೋರ್ಪಡಿಸುತ್ತದೆ ಎನ್ನುವುದರಲ್ಲಿ ನನಗೆ ಸಂಶಯ. ಹಿಂದೂ ಸಮಾಜದ ಅನೇಕ ಜವಾಬ್ದಾರಿಯುತ ನಾಯಕರು ಮತ್ತು ಸಂಸ್ಥೆಗಳ ಮಾತುಗಳನ್ನು ಕೇಳಿದರೆ ಹಿಂದೂ ಸಮಾಜವು ಪುಣೆ ಒಪ್ಪಂದಕ್ಕೆ ಪ್ರಾಮಾಣಿಕವಾಗಿ ಬದ್ಧವಾಗಿರುತ್ತದೆ ಅಥವಾ ಇಲ್ಲವೆನ್ನುವುದು ಪ್ರಬಲ ಸಂಶಯಕ್ಕೆ ಕಾರಣವಾದಂತೆ ಕಾಣಿಸುತ್ತದೆ. ಆದ್ದರಿಂದ ತಾವೆಲ್ಲರೂ ಅತ್ಯಂತ ಎಚ್ಚರಿಕೆಯಿಂದ ನಿಮಗೆ ಲಭಿಸಿರುವ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಬೇಕು.

ಇಂದಿನ ಕೆಲವು ಭಾಷಣಕಾರರು ಪುಣೆ ಒಪ್ಪಂದವನ್ನು ಗಾಂಧಿ–ಅಂಬೇಡ್ಕರ್ ಒಪ್ಪಂದ ಎಂದು ಸಂಬೋಧಿಸಿರುವುದು ತಪ್ಪು. ಈ ಒಪ್ಪಂದದ ಮೇಲೆ ಗಾಂಧೀಜಿ ಅವರ ಹಸ್ತಾಕ್ಷರವಿಲ್ಲ. ಮಹಾತ್ಮ ಗಾಂಧಿ ಅವರನ್ನು ಹಿಂದೂ ನಾಯಕ ಎಂದು ಪರಿಗಣಿಸಲ್ಪಡುವುದಿಲ್ಲ. ಹಿಂದೂ ಸಮಾಜದ ನಿಜವಾದ ನಾಯಕ

ಎಂದರೆ ಪಂಡಿತ ಮದನ್ ಮೋಹನ್ ಮಾಳವೀಯ. ಅವರ ನೇತೃತ್ವದಲ್ಲಿ ಅಖಿಲ ಭಾರತೀಯ ಹಿಂದೂ ಸಮಾಜವು ಎಲ್ಲ ಮಾತುಕತೆಗಳನ್ನು ಮಾಡಿದೆ. ಒಪ್ಪಂದಕ್ಕೆ ಮೊದಲನೇ ಸಹಿ ಅವರದ್ದೆ ಆಗಿದೆ. ಎಲ್ಲರೂ ಮಾನ್ಯ ಮಾಡುವ ನಾಯಕರ ಮಾತಿಗೆ ಹಿಂದೂ ಸಮಾಜ ಬದ್ಧತೆ ತೋರಿಸದಿದ್ದರೆ ಅಂತಹ ಕೃತಘ್ನ, ನಿರ್ಲಜ್ಜ ಸಮಾಜ ಬೇರೆ ಯಾವುದು ಇಲ್ಲ ಎಂದು ಹೇಳಲೇಬೇಕಾಗುತ್ತದೆ. ಹಿಂದೂ ನಾಯಕರು ತಮ್ಮ ಮಾತುಗಳಿಗೆ ಬದ್ಧರಾಗಿರುತ್ತಾರೆ ಎಂದು ಆಶಿಸುತ್ತೇನೆ.

ಅಸ್ಪೃಶ್ಯ ಸಮಾಜವು ತಾನು ನೀಡಿದ ಮಾತಿಗೆ ಬದ್ಧವಾಗಿದೆ ಎಂದು ಬಹಿರಂಗವಾಗಿ ಹೇಳುವುದಕ್ಕೆ ನೀವು ಇಲ್ಲಿ ಸೇರಿದ್ದೀರಿ ಎಂದು ನಾನು ಭಾವಿಸುತ್ತೇನೆ. ಆದರೆ ನಾನು ಇಲ್ಲಿ ಒಂದು ಮಾತು ಹೇಳಲು ಇಚ್ಛಿಸುತ್ತೇನೆ. ಕಳೆದ ವರ್ಷದಿಂದ ಪುಣೆ–ಒಪ್ಪಂದ ದಿನ ಆಚರಿಸುವ ವ್ರತ ಕೈಗೆತ್ತಿಕೊಂಡಿದ್ದೀರಿ. ಆದರೆ ಅದನ್ನು ತಾವು ವ್ರತ ಎಂದು ಭಾವಿಸಿದರೆ ಸಾಲದು. ಇತರ ವಾರ್ಷಿಕೋತ್ಸವಗಳಂತೆ ಅದನ್ನು ಆಚರಿಸಿ ಕೃತಾರ್ಥರಾಗುವುದು ಎಂದು ತಿಳಿಯುವಷ್ಟು ಹೀನ ದರ್ಜೆಯ ದಿನವಲ್ಲ ಇದು. ಅಸ್ಪೃಶ್ಯರ ವಿಚಾರದಲ್ಲಿ ಪುಣೆ ಒಪ್ಪಂದ ಚಿರಸ್ಮರಣೀಯ ದಿನ. ಈ ಒಪ್ಪಂದದ ಪರಿಣಾಮವಾಗಿ ಹಿಂದೂ ಸಮಾಜ ನಮ್ಮ ರಾಜಕೀಯ ಅಸ್ತಿತ್ವ ಸ್ವೀಕರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಹೀಗಾಗಿ ಇದು ತಮ್ಮ ಪಾಲಿಗೆ ರಾಜಕೀಯ ದಿನ ಎಂದು ಭಾವಿಸಬೇಕಾಗುತ್ತದೆ. ಪುಣೆ ಒಪ್ಪಂದದಿಂದ ನಮಗೆ ಲಭಿಸಿರುವ ರಾಜಕೀಯ ಅಧಿಕಾರವನ್ನು ನಾವು ಸಮರ್ಪಕವಾಗಿ ಬಳಸಿಕೊಳ್ಳುತ್ತೀರೋ ಇಲ್ಲವೋ ಎಂದು ನೋಡುವುದಕ್ಕೆ ನಾವು ಈ ದಿನ ಇಲ್ಲಿ ಸೇರಬೇಕು.

ಮುಂಬೈ ಪ್ರಾಂತದಲ್ಲಿನ ನಮ್ಮ ೧೫ ಸ್ಥಾನಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ನಮ್ಮ ಸಮಾಜದ ನಿಜವಾದ ಪ್ರತಿನಿಧಿಗಳೋ ಅಲ್ಲವೋ ಎನ್ನುವುದನ್ನು ನೋಡಿ ಆಯ್ಕೆ ಮಾಡಬೇಕಿದೆ. ಈ ೧೫ ಅಭ್ಯರ್ಥಿಗಳ ಪೈಕಿ ಒಂದು ವೇಳೆ ೫ ಬಂಡವಾಳಶಾಹಿಗಳ ಪಾಲಾದರೆ, ಐವರು ಅಭ್ಯರ್ಥಿಗಳು, ಹಿಂದೂ ಸಮಾಜದ ಕೈಗೊಂಬೆಯಾದರೆ ಇನ್ನುಳಿದ ಐವರು ಅಭ್ಯರ್ಥಿಗಳಿಂದ ಏನು ಉಪಯೋಗವಾಗಬಲ್ಲುದು? ಈ ಕಾರಣಕ್ಕಾಗಿ ಈ ಎಲ್ಲ ೧೫ ಅಭ್ಯರ್ಥಿಗಳ ಬಗ್ಗೆ ಎಚ್ಚರದಿಂದ ಇದ್ದರೆ ಮಾತ್ರ ಲಭಿಸಿರುವ ರಾಜಕೀಯ ಹಕ್ಕುಗಳ ಲಾಭ ನಮಗೆ ದೊರೆತು ಅಸ್ಪೃಶ್ಯ ಸಮಾಜ ಮುಂದುವರಿಯುತ್ತದೆ.

ಮುಂದಿನ ದಿನಗಳಲ್ಲಿ ನಮ್ಮಲ್ಲಿ ಕರ್ತವ್ಯಪ್ರಜ್ಞೆ ಬೆಳೆಯಬೇಕಿದೆ. ಅಪ್ಪನ ಹೆಸರಿನಲ್ಲಿ ಖರ್ಚು ಮಾಡುವುದನ್ನು ಬಿಟ್ಟು ಸ್ವತಃ ಏನಾದರೂ ಮಾಡಿಯೇ ತೋರಿಸುವ ಮಹಾತ್ವಾಕಾಂಕ್ಷೆ ಬೆಳೆಸಿಕೊಳ್ಳಬೇಕು. ಈ ಮಾತಿಗೆ ಪೂರಕವಾಗಿ ಒಂದು ಸಣ್ಣ ಕತೆ ಇದೆ. ಇದು ಒಬ್ಬ ಸುಭೇದಾರನ ಮಗನ ಕತೆಯಾಗಿದ್ದು ಕೇಳುವಂತಹದ್ದು. ಈ ವ್ಯಕ್ತಿಯ ಅಹಂ ಹೇಗಿತ್ತು ಎಂದರೆ ಅಪ್ಪನಂತೆ ತನಗೂ ಕೂಡ ಜನರು ಸುಭೇದಾರ ಎಂದು ಕರೆಯಬೇಕೆಂದು ತನ್ನ ಕೊಠಡಿಯ ಹೊರಗಿನ ನಾಮಫಲಕದಲ್ಲಿ ತನ್ನ ಹೆಸರಿನ ಮುಂದೆ ಸುಭೇದಾರ ಪದವಿ ಹಾಕಿ ಬರೆಸಿದ್ದ. ಯಾರಾದರೂ ಸುಭೇದಾರ ಎಂದು ಕರೆದರೆ ಮಾತ್ರ ಅವನು ಅಲ್ಲಿಗೆ ಹೋಗುವ ವರ್ತನೆ ರೂಢಿಸಿಕೊಂಡಿದ್ದ. ಮಿಲಿಟರಿಯಲ್ಲಿ ಬಳಕೆಯಾಗುವ ಈ ಪದವಿ ಆ ವ್ಯಕ್ತಿಯ ತಂದೆ ಗಳಿಸಿದ್ದರೇ ವಿನಃ ಇವನಲ್ಲ ಎಂದು ಜನರಿಗೆ ಗೊತ್ತಾದ ಬಳಿಕ ಆತನನ್ನು ಸುಭೇದಾರ ಎಂದು ಕರೆಯುವುದನ್ನು ಬಿಟ್ಟರು. ಅದರೆ ಈ ವ್ಯಕ್ತಿ ಯಾವುದೇ ರೀತಿಯಲ್ಲಿ ತನ್ನ ಯೋಗ್ಯತೆ ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡದೇ ತನ್ನ ಮೂರ್ಖತನ ಪ್ರದರ್ಶನದಿಂದ ಜನರ ಅಪಹಾಸ್ಯಕ್ಕೆ ಪಾತ್ರನಾಗಿದ್ದ. ಇದರ ಮತಿತಾರ್ಥ ಇಷ್ಟೇ ಹಿಂದಿನ ಕಾಲದ ನಮ್ಮ ಶ್ರೇಷ್ಠತ್ವದ ಮೇಲೆ ಹೆಮ್ಮೆಪಡುವುದು ವ್ಯರ್ಥ. ಶ್ರೇಷ್ಠ ವ್ಯಕ್ತಿಯಾಗಲು ತಾನೇ ಸ್ವತಃ ಪ್ರಯತ್ನಶೀಲನಾಗಬೇಕು. ಅಪ್ಪನ ಖ್ಯಾತಿ ಮಗನ ಕೆಲಸಕ್ಕೆ ಉಪಯೋಗಕ್ಕೆ ಬಾರದು ಮತ್ತು ಇಂತಹ

ಯೋಗ್ಯತೆ ಸಂಪಾದನೆಗೆ ಶಿಕ್ಷಣ ಪಡೆಯದೇ ಬೇರೆ ಉಪಾಯವಿಲ್ಲ.

ನಿಮ್ಮಲ್ಲಿ ಶಿಕ್ಷಣದ ಕೊರತೆ ಇದ್ದರೆ ನಿಮಗೆ ಸರ್ಕಾರದ ಉನ್ನತ ಹುದ್ದೆಗಳು ಹೇಗೆ ಲಭಿಸಲು ಸಾಧ್ಯ? ಇತ್ತೀಚೆಗಷ್ಟೇ ಸರ್ಕಾರ ತನ್ನ ಪ್ರಕಟಣೆಯಲ್ಲಿ ಮುಸ್ಲಿಂರಿಗಾಗಿ ವಿವಿಧ ಇಲಾಖೆಯಲ್ಲಿ ಹುದ್ದೆಗಳನ್ನು ಮೀಸಲು ಇರಿಸುವ ಕುರಿತು ಪ್ರಕಟಿಸಿದೆ. ಆ ಹುದ್ದೆಗಳಿಗೆ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡುವುದಕ್ಕೆ ಮುಸ್ಲಿಂ ಸಮಾಜದಲ್ಲಿ ಅವಕಾಶ ಇದೆ. ಅಸ್ಪೃಶ್ಯ ಸಮಾಜಕ್ಕೂ ಇಂತಹ ಮೀಸಲಾತಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಸಿದ್ಧವಾಗಿದ್ದರೂ ಕೂಡ ಆ ಹುದ್ದೆಗಳಿಗೆ ನೇಮಕ ಮಾಡುವುದಕ್ಕೆ ನಮ್ಮಲ್ಲಿ ಅರ್ಹ ವ್ಯಕ್ತಿಗಳಿಲ್ಲ. ನಿಮ್ಮ ಜನಸಂಖ್ಯೆ ಸಾಕಷ್ಟಿದ್ದರೂ ಸುಶಿಕ್ಷಿತರ ಸಂಖ್ಯೆ ತೀರ ಕಡಿಮೆ ಇರುವ ಕಾರಣ ಅಂತಹ ವ್ಯವಸ್ಥೆ ಕಲ್ಪಿಸಲು ಸಾಧ್ಯವಿಲ್ಲ ಎಂದು ಸರ್ಕಾರ ಪ್ರಶ್ನಿಸಿದರೆ ನಾವು ಏನು ಹೇಳಬೇಕು? ಆದರೂ ಉನ್ನತ ಹುದ್ದೆಗಳನ್ನು ಪಡೆದು ಸಮಾಜದಲ್ಲಿ ತಮ್ಮ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವ ಮನಸ್ಸಿದ್ದರೆ ನಮ್ಮ ಮಕ್ಕಳಿಗೆ ಸೂಕ್ತ ಶಿಕ್ಷಣ ನೀಡುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವೇಯಾಗಿದೆ.

ಶಿಕ್ಷಣದ ಜೊತೆಗೆ ದೇಶದಲ್ಲಿ ನಡೆಯುತ್ತಿರುವ ಘಟನೆಗಳ ಕುರಿತು ಶಿಕ್ಷಣ ಪಡೆಯುವುದು ಕೂಡ ಅಷ್ಟೇ ಮಹತ್ವದ್ದಾಗಿದೆ. ಸದ್ಯ ನಮ್ಮ ಸ್ಥಿತಿ ಸಂಕ್ರಮಣದ ಸ್ಥಿತಿಯಲ್ಲಿದೆ. ಪ್ರಾಚೀನ ಮನುವಿನಿಂದ ಹೊರಬಂದಿರುವ ಅಸ್ಪೃಶ್ಯ ಸಮಾಜ ಹೊಸ ಮನುವಿನತ್ತ ಹೆಜ್ಜೆ ಹಾಕುತ್ತಿರುವ ಇಂತಹ ಮಹತ್ವದ ಘಟ್ಟದಲ್ಲಿ ನೀವು ಕಣ್ಣಿಗೆ ಎಣ್ಣೆ ಹಾಕಿಕೊಂಡು ಜಾಗೃತರಾಗಿ ಉಳಿಯಬೇಕಿದೆ. ಬೇರೆ ಬೇರೆ ಸ್ಥಳಗಳಲ್ಲಿ ಏನು ನಡೆಯುತ್ತಿದೆ. ನಮ್ಮ ಉನ್ನತಿಯ ಮಾರ್ಗದಲ್ಲಿ ಇಲ್ಲವೇ ನಾವು ಹಾಕಿಕೊಂಡ ಉನ್ನತಿಯ ಮಾರ್ಗದಲ್ಲಿ ಇರುವ ಅಡೆತಡೆಗಳು ಏನು? ನಮ್ಮ ಸಮಾಜದೊಳಗಣ ವಿರೋಧಿಗಳ ತಂತ್ರ ಏನು? ನಾಸಿಕ್, ನಾಗಪೂರ್ ಮತ್ತು ಕೊಂಕಣ ಪ್ರದೇಶದಲ್ಲಿ ಏನು ನಡೆದಿದೆ ಎಂಬಿತ್ಯಾದಿ ಸಂಗತಿಗಳ ಬಗ್ಗೆ ನಮಗೆ ಅರಿವು ಮೂಡಿ ಎಲ್ಲರಲ್ಲೂ ಒಂದೇ ರೀತಿಯ ಸಂವೇದನೆ ಮೂಡಿ ಅದಕ್ಕನುಗುಣವಾಗಿ ಉಪಾಯ ಯೋಜನೆ ರೂಪಿಸಬೇಕಿದೆ. ಇಷ್ಟೆಲ್ಲ ಅರಿವು ಮೂಡಿಸುವುದಕ್ಕೆ ನಮ್ಮ ಸಮಾಜದ್ದೇ ಆಗಿರುವ ನಿರ್ಭೀತ, ಸ್ವತಂತ್ರ ಪ್ರವೃತ್ತಿಯ ಸ್ವಾವಲಂಬಿ ವೃತ್ತಪತ್ರಿಕೆ ಇಲ್ಲದೇ ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ತಮ್ಮ ಗಮನ ಕೇಂದ್ರೀಕರಿಸಿ ಪತ್ರಿಕೆಯನ್ನು ಜೀವಂತ ಇರಿಸುವುದು ಪರಮ ಪವಿತ್ರ ಕರ್ತವ್ಯ ಎಂದು ಭಾವಿಸಿ ಅದರಂತೆ ನಡೆಯಬೇಕಿದೆ. ಮತ್ತು ಶೈಕ್ಷಣಿಕ ಕಾರ್ಯದಲ್ಲಿ ನಾವು ಒಂದು ಪ್ರಮುಖ ಸಂಗತಿಯತ್ತ ಗಮನ ಹರಿಸಬೇಕಿದ್ದು ಅದು ಏನೆಂದರೆ ಶಿಕ್ಷಣದಲ್ಲಿ ಪರಾವಲಂಬನೆ ಎಂದಿಗೂ ಫಲ ನೀಡದು.

ಅಸ್ಪೃಶ್ಯ ಸಮಾಜದ ಬಾಲಕ ಬಾಲಕಿಯರಿಗೆ ಶಿಷ್ಯ ವೇತನ ನೀಡುವ ಕುರಿತು ಅಲ್ಲಲ್ಲಿ ಘೋಷಣೆಗಳು ಕೇಳಿಬರುತ್ತಿವೆ. ಸ್ಪೃಶ್ಯ ವರ್ಗದಿಂದ ಹರಿಯುವ ಹಣದ ಪ್ರವಾಹ ದಾಸ್ಯ ಮನೋಭಾವ ಬೆಳೆಸದೇ ಇರದು. ಶಿಷ್ಯವೇತನ ಸ್ವೀಕರಿಸುವ ಅರೆಬೆಂದ ಹೃದಯದ ಮಕ್ಕಳು ಅಂತಿಮವಾಗಿ ಶಿಷ್ಯ ವೇತನ ನೀಡುವ ವರ್ಗದ ದಾಸರಾಗಿಬಿಡುತ್ತಾರೆ. ಮನುಷ್ಯ ಹಣದ ದಾಸನಾಗುತ್ತಾನೆ. ಮಹಾಭಾರತದಲ್ಲಿನ ಈ ಘಟನೆ ಉದಾಹರಣೆಯಾಗಿ ತೆಗೆದುಕೊಳ್ಳುವಾ. ಭೀಷ್ಮಾಚಾರ್ಯರು ಸತ್ಯನಿಷ್ಠೆಯ ಪುರುಷರಾಗಿದ್ದವರು. ಕೌರವರ ಪಕ್ಷ ನ್ಯಾಯವಾದುದ್ದಲ್ಲ. ಪಾಂಡವರ ಬೇಡಿಕೆಗಳು ನ್ಯಾಯಯುತವಾಗಿದ್ದರೂ ಕೂಡ ಪಾಂಡವರ ವನವಾಸ ಕಾಲದಲ್ಲಿ ಕೌರವರ ಆಶ್ರಯದಲ್ಲಿ ಉಳಿದು ಅವರ ಅನ್ನ ತಿಂದ ಕಾರಣಕ್ಕೆ ಭೀಷ್ಮಾಚಾರ್ಯರಿಗೆ ಕೌರವರ ಪಕ್ಷ ಬಿಡಲಿಕ್ಕಾಗದೇ ಪಾಂಡವರ ನಾಶಕ್ಕಾಗಿ ಸಿದ್ಧರಾಗಬೇಕಾಯಿತು.

ಲಾರ್ಡ್ ಲೋಥಿಯನ್ ಅಧ್ಯಕ್ಷತೆಯಲ್ಲಿ ಮತದಾನ ಸಮಿತಿ ಕಾರ್ಯ ನಿರ್ವಹಿಸುತ್ತಿದ್ದ ವೇಳೆ ನಾವು ಪಂಜಾಬ್‌ಗೆ ಹೋಗಬೇಕಾಯಿತು. ಅಸ್ಪೃಶ್ಯ ಸಮಾಜದಿಂದ ಸಾಕ್ಷಿ ನೀಡುವುದಕ್ಕಾಗಿ ಒಂದಿಷ್ಟು ಸುಶಿಕ್ಷಿತರು

ಪಂಜಾಬ್‌ನಲ್ಲಿ ಇದ್ದಾರೆಯೇ ಎಂದು ವಿಚಾರಿಸಿದೆ. ಆಗ ಅಲ್ಲಿ ಕಾಲೇಜು ಶಿಕ್ಷಣ ಪಡೆಯುತ್ತಿದ್ದ ಕೆಲವು ಮಕ್ಕಳು ಸಿಕ್ಕರು. ಆ ಮಕ್ಕಳು ಆರ್ಯ ಸಮಾಜದಿಂದ ನಡೆಯುತ್ತಿರುವ ವಸತಿಗೃಹದಲ್ಲಿ ಇದ್ದುಕೊಂಡು ಆರ್ಯ ಸಮಾಜದ ವೆಚ್ಚದಲ್ಲಿ ತಮ್ಮ ಕಾಲೇಜು ಶಿಕ್ಷಣ ಮುಂದುವರಿಸುತ್ತಿದ್ದರು. ಆರ್ಯ ಸಮಾಜ ಹೇಳಿದ ಪ್ರಕಾರ ನೀವು ಸಾಕ್ಷಿ ನೀಡದಿದ್ದರೆ ನಿಮ್ಮನ್ನು ವಸತಿ ಗೃಹದಿಂದ ಹೊರ ಹಾಕಲಾಗುವುದು ಅಲ್ಲದೇ ಶಿಕ್ಷಣಕ್ಕಾಗಿ ನಿಮಗೆ ನೀಡುತ್ತಿರುವ ನೆರವು ಕೂಡ ಸ್ಥಗಿತಗೊಳಿಸಲಾಗುವುದು ಎಂದು ಸಮಾಜದಿಂದ ಅವರಿಗೆ ಎಚ್ಚರಿಕೆ ಬಂದಿತ್ತು. ಇಂತಹ ಬೆದರಿಕೆಗಳ ಕಾರಣ ಅವರ ಹೃದಯದ ಮಾತುಗಳನ್ನು ಕಮಿಟಿಯ ವರದಿಯಲ್ಲಿ ಸೇರ್ಪಡೆ ಮಾಡಲು ನನಗೆ ಸಾಧ್ಯವಾಗಲಿಲ್ಲ. ಯಾವ ವ್ಯಕ್ತಿಯಿಂದ ನಮ್ಮ ಹಕ್ಕುಗಳು ಕಸಿಯಲ್ಪಟ್ಟಿವೆಯೋ ಅಂತಹ ವ್ಯಕ್ತಿಗಳಿಂದ ಹಕ್ಕುಗಳ ಮರುಸಂಪಾದನೆಗೆ ಲಭಿಸುವ ನೆರವು ಕೂಡ ಘಾತಕಕಾರಿಯಾಗಿ ಪರಿಣಮಿಸಬಲ್ಲುದು.

ಕೊನೆಗೆ ಅತ್ಯಂತ ಮಹತ್ವದ ವಿಚಾರ ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಅಸ್ಪೃಶ್ಯತೆ ನಿರ್ಮೂಲನೆಗೆ ಸಂಬಂಧಿಸಿದಂತೆ ಮಹಾತ್ಮ ಗಾಂಧೀಜಿ ಮತ್ತು ನಾನು ಮಾತುಕತೆ ನಡೆಸುತ್ತಿದ್ದ ವೇಳೆ, ಗಾಂಧೀಜಿ ಅವರು, ಅಸ್ಪೃಶ್ಯತೆ ಎನ್ನುವುದು ಹಿಂದೂ ಸಮಾಜದಲ್ಲಿ ಎಷ್ಟೋ ಶತಶತಮಾನಗಳಿಂದ ಗಟ್ಟಿಯಾಗಿ ಬೇರು ಬಿಟ್ಟಿದ್ದು ಒಂದೇ ಹೊಡೆತಕ್ಕೆ ಅದರ ನಿರ್ಮೂಲನೆಯಂತೂ ಸಾಧ್ಯವಿಲ್ಲ. ಅದ್ದರಿಂದ ಹಿಂದೂ ಸಮಾಜಕ್ಕೆ ಒಂದು ಅವಕಾಶ ನೀಡಿ. ಶತಶತಮಾನಗಳಿಂದ ನಡೆದುಕೊಂಡು ಬಂದ ಸಂಪ್ರದಾಯ ಒಂದು ಕ್ಷಣದಲ್ಲಿ ಇಲ್ಲವಾಗುವುದು ಸಾಧ್ಯವಾಗದ ಸಂಗತಿ ಎಂದು ಹೇಳಿದ್ದರು. ಅಸ್ಪೃಶ್ಯತೆಯ ನಿರ್ಮೂಲನೆಗೆ ನಿರಂತರ ಪ್ರಯತ್ನ ಅತ್ಯಗತ್ಯ ಎನ್ನುವುದಕ್ಕೆ ನನ್ನ ಸಮ್ಮತಿಯೂ ಇದೆ. ಆದರೆ ಅಸ್ಪೃಶ್ಯತೆ ನಿರ್ಮೂಲನೆಯ ಅರ್ಥ ಏನು ಅನ್ನುವುದು ನಮಗೆ ಅರಿವಾಗಬೇಕಿದೆ. ಮಹಾತ್ಮ ಗಾಂಧೀಜಿ ಅವರಂತೂ ಅಸ್ಪೃಶ್ಯರನ್ನು ಮಂದಿರಗಳಿಗೆ ಪ್ರವೇಶದ ಚಳವಳಿ ಆರಂಭಿಸಿ, ಹಿಂದೂಗಳ ಪಾಲಿಗೆ ಅತ್ಯಂತ ಪವಿತ್ರವಾಗಿರುವ ದೇವಸ್ಥಾನಗಳಲ್ಲಿ ಅಸ್ಪೃಶ್ಯರ ಪ್ರವೇಶದಿಂದ ಅಸ್ಪೃಶ್ಯತೆ ನಿರ್ಮೂಲನೆಯಾಗುತ್ತದೆ ಮತ್ತು ದೇವಸ್ಥಾನಗಳಿಗಿಂತ ಕಡಿಮೆ ದರ್ಜೆಯಲ್ಲಿರುವ ಶಾಲೆ, ಬಾವಿಗಳು ಅಸ್ಪೃಶ್ಯರಿಗೆ ತನ್ನಿಂತಾನೇ ಮುಕ್ತವಾಗುತ್ತವೆ ಎಂದು ನಂಬಿದ್ದಾರೆ. ಅವರ ದೃಷ್ಟಿಯಲ್ಲಿ ಮಂದಿರ ಪ್ರವೇಶ ಅಸ್ಪೃಶ್ಯತೆ ನಿವಾರಣೆಯಲ್ಲಿ ಮೊದಲನೆ ಮತ್ತು ಕೊನೆಯ ಹೆಜ್ಜೆಯಾಗಬೇಕು. ಆದರೆ ಈ ವಿಚಾರ ಸರಣಿಗೆ ನನಗೆ ಒಪ್ಪಿಗೆ ಇಲ್ಲ. ನನ್ನ ಅಭಿಪ್ರಾಯ ಎಂದರೆ ಅಸ್ಪೃಶ್ಯತೆ ನಿಂತಿರುವುದು ಚಾತುರ್ವರ್ಣ್ಯದ ಆಧಾರದ ಮೇಲೆ, ಹಿಂದೂ ಧರ್ಮದಲ್ಲಿ ಜಾತಿ ಭೇದ ಆ ಚಾತುರ್ವರ್ಣ್ಯದ ಪ್ರತಿರೂಪದಂತಿದೆ. ಹಿಂದೂ ಸಮಾಜವನ್ನು ಗಟ್ಟಿಯಾಗಿ ಹಿಡಿದುಕೊಂಡಿರುವ ಈ ಕಲ್ಪನೆಗೆ ಸೆಡ್ಡುಹೊಡೆದು ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಬುದ್ಧಿಶಕ್ತಿಯ ವಿಕಾಸಕ್ಕೆ ಅವಕಾಶ ಮಾಡಿಕೊಡದಿದ್ದರೆ ಇಲ್ಲವೇ ಜಾತಿಭೇದದ ಕಲ್ಪನೆಯನ್ನು ತತ್ವಶಃ ವಿರೋಧಿಸದಿದ್ದರೆ ಹಿಂದೂ ಸಮಾಜದ ಪ್ರಗತಿಯಾಗಲಾರದು. ಹಿಂದೂ ಸಮಾಜದ ರಚನೆಯಲ್ಲಿ ಮೇಲ್ನೋಟಕ್ಕೆ ಕಾಣುವ ಅಸ್ಪೃಶ್ಯತೆ ಕೇವಲ ಬಾಹ್ಯ ಸ್ವರೂಪದಲ್ಲಿ ಕಾಣುವಂತಹದ್ದು, ವಾಸ್ತವಿಕವಾಗಿ ಅದು ಅದರ ಸಮಾಜ ರಚನಾ ವ್ಯವಸ್ಥೆಯ ಕಲ್ಪನೆಯಲ್ಲಿಯೇ ಅಡಗಿದೆ. ಅಸ್ಪೃಶ್ಯತೆಯನ್ನು ಬೇರುಸಮೇತ ಕಿತ್ತುಹಾಕುವ ವಿಚಾರ ಇಂದಿನ ಸಮಾಜ ಸುಧಾರಕರಲ್ಲಿ ಇದ್ದರೆ ಜಾತಿಭೇದದ ಮೂಲ ಕಿತ್ತುಹಾಕಬೇಕಾಗುತ್ತದೆ. ಇದು ಅತ್ಯಂತ ಕಠಿಣ ಕೆಲಸ ಮತ್ತು ಜಾತಿಭೇದ ನಿರ್ಮೂಲನೆಗೆ ಸಮಯ ಹಿಡಿಯುತ್ತದೆ ಎಂದು ಅರ್ಥಮಾಡಿಕೊಳ್ಳದಷ್ಟು ನಾನು ಹೆಡ್ಡನಲ್ಲ. ನಾನು ಹೇಳುವುದು ಇಷ್ಟೇ. ಈ ವಿಚಾರವನ್ನು ಧ್ಯೇಯವಾಗಿರಿಸಿಕೊಳ್ಳಿ ಇಲ್ಲವೇ ಜೀವನದ ತಾತ್ವಿಕತೆಯಾಗಿರಿಸಿಕೊಂಡು ಕಾರ್ಯ ಮಾಡಿ ಅದಕ್ಕೆ ನನ್ನ ಅಭ್ಯಂತರವಿಲ್ಲ. ಅದು ಬೇರೆ ಬೇರೆ ಸ್ಥಳಗಳಲ್ಲಿ, ವಿವಿಧ ಸಮಾಜಗಳಲ್ಲಿ ಅದು ಭಿನ್ನವಾಗಿರಬಹುದು.

ಆದರೆ ವಿಷಾದಕರ ಸಂಗತಿ ಇಂತಹ ತಾತ್ವಿಕ ನಿಲುವಿಗೆ ಹಿಂದೂ ಸಮಾಜದ ಮಾನ್ಯತೆ ಇಲ್ಲವೇ ಇಲ್ಲ. ಹಿಂದೂ ಧರ್ಮದಲ್ಲಿ ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿದ್ದು ತನ್ನ ಮೇಲೆ ಆಗುತ್ತಿರುವ ಅಪರಾಧಗಳಿಂದ ಮುಕ್ತಿ ಪಡೆಯುವ ನಿಟ್ಟಿನಲ್ಲಿ ತನಗೆ ಏನು ಬೇಕು ಎನ್ನುವ ನ್ಯಾಯಯುತ ಸ್ವಯಂ ತೀರ್ಮಾನದ ಹಕ್ಕು ಅಸ್ಪೃಶ್ಯ ಸಮಾಜಕ್ಕೆ ಇರಬೇಕು. ಆದರೆ ಹಿಂದೂ ಸಮಾಜ ಈ ಸರಳ ವಿಚಾರಕ್ಕೂ ಒಪ್ಪಿಗೆ ನೀಡಲು ಸಿದ್ಧವಿಲ್ಲ. ಇಲ್ಲಿಯವರೆಗೆ ಅಸ್ಪೃಶ್ಯ ಸಮಾಜವನ್ನು ಗುಲಾಮಗಿರಿಯಲ್ಲಿ ಇರಿಸಿದ್ದ ಹಿಂದೂ ಸಮಾಜ ಭವಿಷ್ಯದಲ್ಲೂ ಆ ಸಮಾಜ ಯಾವ ಸ್ಥಿತಿಯಲ್ಲಿ ಇರಬೇಕು ಎನ್ನುವ ತೀರ್ಮಾನವನ್ನು ಕೂಡ ತನ್ನ ಕೈಯಲ್ಲಿ ಇರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ರಾಜಕೀಯ ಕ್ಷೇತ್ರದಲ್ಲಿ ಸ್ವಾಯತ್ತ ಅಧಿಕಾರ ಅಂದರೆ ವಸಾಹತು ಸ್ವರಾಜ್ ಕಲ್ಪನೆ ಮುಖಾಂತರ ಭಾರತೀಯರು ಹಂತ ಹಂತವಾಗಿ ರಾಜಕೀಯ ಅಧಿಕಾರ ಪಡೆದುಕೊಳ್ಳುತ್ತಿದ್ದಾರೆ. ಅದೇ ರೀತಿ ಅಸ್ಪೃಶ್ಯ ಸಮಾಜ ಕೂಡ ತನ್ನ ಧ್ಯೇಯ ಮುಂದಿರಿಸಿಕೊಂಡು ಅದನ್ನು ಹಂತ ಹಂತವಾಗಿ ತಲುಪುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ ಎಂದು ನಾನು ಹೇಳುತ್ತೇನೆ. ಬ್ರಿಟಿಷ್ ಸರ್ಕಾರ ಭಾರತಕ್ಕೆ ಸ್ವಾಯತ್ತತೆ ನೀಡಿ ತನ್ನೊಂದಿಗೆ ಸರಿಸಮನಾಗಿ ನೋಡುವುದು ತನ್ನ ಧ್ಯೇಯ ಎಂದು ಸ್ಪಷ್ಟಪಡಿಸಿದೆ. ಆದರೆ ಹಿಂದೂ ಸಮಾಜ ಮಾತ್ರ ಇಂತಹ ಸಣ್ಣ ವಿಚಾರಕ್ಕೂ ತನ್ನ ಹೃದಯ ವೈಶಾಲ್ಯತೆ ಮೆರೆಯುತ್ತಿಲ್ಲ ಇಷ್ಟೇ ಅಲ್ಲ ಅಸ್ಪೃಶ್ಯ ಸಮಾಜದ ಮನೋ ಇಂಗಿತ ಏನು ಎಂದು ಕೇಳಿಸಿಕೊಳ್ಳುವುದಕ್ಕೂ ಸಿದ್ಧವಿಲ್ಲ.

ಮಹಾತ್ಮ ಗಾಂಧೀಜಿ ಅವರು ಉಪವಾಸ ಸತ್ಯಾಗ್ರಹದ ಬಳಿಕ ಕೇಂದ್ರ ಕಾನೂನು ಕೌನ್ಸಿಲ್‌ನಲ್ಲಿ ಓರ್ವ ಹಿಂದೂ ಮಂದಿರ ಪ್ರವೇಶ ಮಸೂದೆ ಪ್ರಸ್ತಾಪಿಸಿದ್ದರು. ಮಹಾತ್ಮ ಗಾಂಧೀಜಿ ಅವರ ಉಪವಾಸ ಸತ್ಯಾಗ್ರಹದ ಬಳಿಕ ಅಸ್ಪೃಶ್ಯರ ಬಗ್ಗೆ ಹಿಂದೂ ಸಮಾಜದಲ್ಲಿ ಪ್ರೀತಿ ಉಕ್ಕಿ ಹರಿಯುತ್ತಿದೆ ಏನೋ ಎನ್ನುವಂತೆ ಅಲ್ಲಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಚರ್ಚೆ ನಡೆಯುತ್ತಿದ್ದವು. ಮಂದಿರ ಪ್ರವೇಶ ಮಸೂದೆ ಅವಿರೋಧವಾಗಿ ಪಾಸು ಆಗಲಿದೆ ಎಂದು ಬಡಾಯಿ ಕೊಚ್ಚಿಕೊಳ್ಳಲಾಗುತ್ತಿತ್ತು. ಉನ್ನತಿಗೆ ಅನುಕೂಲವಾಗುವಂತಹ ಯಾವುದೇ ಸಂಗತಿಗಳು ಮಸೂದೆಯಲ್ಲಿ ಇಲ್ಲ ಎಂಬ ಕಾರಣಕ್ಕೆ ಅಸ್ಪೃಶ್ಯ ಸಮಾಜ ಕೂಡ ಮಸೂದೆಯ ಬಗ್ಗೆ ನಿರ್ಲಕ್ಷ್ಯದಿಂದ ಇತ್ತು. ಹಿಂದೂಗಳ ದೇವಸ್ಥಾನ ಮತ್ತು ಅವುಗಳಲ್ಲಿ ಅಸ್ಪೃಶ್ಯರ ಪ್ರವೇಶಕ್ಕೆ ಸಂಬಂಧಿಸಿದಂತೆ ಈ ಮಸೂದೆ ಇದ್ದ ಕಾರಣ ಅಸ್ಪೃಶ್ಯ ಸಮಾಜದಲ್ಲಿ ಯಾವುದೇ ಗೊಂದಲ ಹುಟ್ಟುವುದಕ್ಕೆ ಕಾರಣಗಳು ಇರಲಿಲ್ಲ. ಇದೇ ಕಾರಣಕ್ಕೆ ಕಾನೂನು ಮಂಡಳಿಯ ಎದುರು ಪ್ರಸ್ತಾಪವಾದ ಈ ಮಸೂದೆ ಬಿದ್ದ ಬಳಿಕವೂ ಅದರ ಬಗ್ಗೆ ಚಿಂತೆ ಮಾಡಲಿಲ್ಲ. ಒಂದು ವೇಳೆ ಮಸೂದೆ ಪಾಸಾಗಿದ್ದರೂ ಅಸ್ಪೃಶ್ಯ ಸಮಾಜದಲ್ಲಿ ಸಂತಸದ ಬುಗ್ಗೆ ಪುಟಿಯುತ್ತಿರಲಿಲ್ಲ ಮತ್ತು ಅದನ್ನು ಹಿಂದೆ ಪಡೆದದ್ದಕ್ಕೂ ಅವರಲ್ಲಿ ಖಿನ್ನತೆ ಮನೆ ಮಾಡಲಿಲ್ಲ. ನಿಮ್ಮ ದೇವಸ್ಥಾನ ನೀವು ನೋಡಿಕೊಳ್ಳಿ. ದೇವಾಲಯದಂತಹ ಧಾರ್ಮಿಕ ಸ್ಥಳಗಳನ್ನು ಅಸ್ಪೃಶ್ಯರಿಗೆ ಮುಕ್ತಗೊಳಿಸಿ ಅವರ ವಿಶ್ವಾಸ, ಪ್ರೀತಿ ಸಂಪಾದಿಸುವುದು ಇಲ್ಲವೇ ಅವುಗಳನ್ನು ಮುಚ್ಚಿ ಅಸ್ಪೃಶ್ಯರ ವೈರತ್ವ ಕಟ್ಟಿಕೊಳ್ಳುವ ಕೆಲಸ ಹಿಂದೂ ಸಮಾಜದ್ದೇ ವಿನಃ ನಮ್ಮದಲ್ಲ. ಇಷ್ಟರ ಮಟ್ಟಿಗೆಯೂ ಜಾಣತನ ತೋರದಿದ್ದರೆ ಅದು ಎಂತಹ ಹಿಂದೂ ಧರ್ಮ! ಕೊನೆಗೆ ಏನು ಆಗಬೇಕಾಗಿತ್ತೋ ಅದೇ ಆಯಿತು. ಮಸೂದೆಯ ಪರವಾಗಿ ಬಹುಮತ ವ್ಯಕ್ತವಾಗದ ಕಾರಣ ಬಿದ್ದುಹೋಯಿತು. ಮಸೂದೆಗೆ ಕಾರಣೀಭೂತರಾಗಿದ್ದ ವ್ಯಕ್ತಿ ಕೂಡ ವಾದ ವಿವಾದಗಳಿಗೆ ಹಿಂಜರಿದು ಪ್ರಸ್ತಾಪ ಮಾಡಲಿಲ್ಲ. ಕೊನೆಗೆ ಮಸೂದೆ ಕಸದ ಬುಟ್ಟಿ ಸೇರಿತು. ಹಿಂದೂ ಸಮಾಜ ತನ್ನ ಹೃದಯ ತೆರೆಯುವುದಕ್ಕೆ ಪೂರ್ಣ ಅವಕಾಶವನ್ನು ನಾವು ನೀಡಿ ತಾಟಸ್ಥ್ಯ ಮನೋಭಾವ ತಳೆದಿದ್ದೇವೆ.

ಈ ಮಸೂದೆಯ ಸಾವಿನಿಂದಲೂ ನಾವು ಪಾಠ ಕಲಿಯಬೇಕಿದ್ದು, ಹಿಂದೂ ಸಮಾಜದ ಮನೋಭಾವ

ಏನು ಅನ್ನುವುದು ನಮಗೆ ಅರ್ಥವಾಗಿದೆ. ಅದು ಅಸ್ಪೃಶ್ಯ ಸಮಾಜ ತನ್ನ ಅವಿಭಾಜ್ಯ ಅಂಗ ಎಂದು ಒಪ್ಪಿಕೊಳ್ಳುವುದಕ್ಕೆ ಸಿದ್ಧವಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಈ ರೀತಿ ಹಿಂದೂಗಳು ನಿಮ್ಮನ್ನು ಒದ್ದು ಹೊರ ಹಾಕಿದರೆ ಎಷ್ಟು ದಿನ ನೀವು ಹಿಂದೂ ಸಮಾಜದ ಮರ್ಜಿ ಕಾಯುತ್ತ ಕುಳಿತಿರುತ್ತೀರಿ? ಅಸ್ಪೃಶ್ಯರು ಹಿಂದೂ ಸಮಾಜದ ಅವಿಭಾಜ್ಯ ಅಂಗ ಎಂದು ಒಪ್ಪಿಕೊಳ್ಳುವುದಕ್ಕೆ ಯಾರೂ ಸಿದ್ಧರಿಲ್ಲ. ಕಾಲಿಗೆ ಹಾಕಿಕೊಳ್ಳುವ ಚಪ್ಪಲಿಗಳನ್ನು ಎಷ್ಟು ಅಗತ್ಯವೋ ಅಷ್ಟು ಉಪಯೋಗಿಸಿಕೊಳ್ಳುವ ಮನುಷ್ಯ ಅವುಗಳನ್ನು ಹೇಗೆ ಮನೆಯ ಹೊರಗೆ ಬಿಡುತ್ತಾನೋ ಅಥವಾ ಅಗತ್ಯವಿಲ್ಲದಿದ್ದರೆ ಹೇಗೆ ಬೀಸಾಕುತ್ತಾನೋ ಅದೇ ರೀತಿ ಇಂದು ಹಿಂದೂಗಳು ನಿಮ್ಮನ್ನು ಕಾಲಿನ ಚಪ್ಪಲಿಗಿಂತ ಹೆಚ್ಚು ಉಪಯುಕ್ತರಲ್ಲ ಎಂದು ಭಾವಿಸಿದ್ದಾರೆ. ನೀವು ಗುಲಾಮರಾಗಿಯೇ ಇರಬೇಕು ಎನ್ನುವುದು ಅವರ ಆಶಯ. ಈ ರೀತಿಯ ಅಪಮಾನವನ್ನು ನೀವು ಎಷ್ಟು ದಿನ ಅನುಭವಿಸಲು ಸಾಧ್ಯ? ಇನ್ನೊಬ್ಬರ ಗುಲಾಮರಾಗಿ ಎಷ್ಟು ದಿನ ಇರಬಲ್ಲಿರಿ? ಇಂದಿನ ಪರಿಸ್ಥಿತಿಯಲ್ಲಿ ನಿಮ್ಮ ಸ್ವಾಭಿಮಾನದ ರಕ್ಷಣೆಯಾಗುತ್ತಿದೆಯೇ? ಸ್ವಾಭಿಮಾನಶೂನ್ಯ ವ್ಯಕ್ತಿ ಎಂದಿಗಾದರೂ ದೇಶ ಅಥವಾ ತನ್ನ ಸ್ವಂತದ ಉನ್ನತಿ ಮಾಡಿಕೊಳ್ಳಬಲ್ಲನೆ? ಈ ಎಲ್ಲ ಪ್ರಶ್ನೆಗಳನ್ನು ನನಗೆ ನಾನೇ ಕೇಳಿಕೊಂಡರೆ ಹಿಂದೂ ಎಂದು ಹೇಳಿಕೊಳ್ಳುವುದಕ್ಕೆ ಆಗುವ ವೇದನೆ ಹೇಳಲಿಕ್ಕಾಗುವುದಿಲ್ಲ.

ಕಳೆದ ಎರಡು ವರ್ಷಗಳಿಂದ ಈ ಪ್ರಶ್ನೆಗಳ ಬಗ್ಗೆ ಮುಕ್ತವಾಗಿ ಚಿಂತನೆ ಮಾಡಿದ್ದೇನೆ. ನನ್ನ ಸ್ವಾಭಿಮಾನ ಜಾಗೃತವಾಗಿಟ್ಟುಕೊಂಡು ಸಮಾನತೆಯ ವಾತಾವರಣದಲ್ಲಿ ಬದುಕಬೇಕಾದರೆ ನಾನು ಹಿಂದೂ ಎಂದು ಹೇಳಿಕೊಳ್ಳಲಿಕ್ಕಾಗುವುದಿಲ್ಲ. ನಾನು ಹಿಂದೂ ಅಲ್ಲದಿದ್ದರೆ ನನಗೆ ನಾನೇ ಸ್ವತಃ ಕ್ರೈಸ್ತ, ಮುಸ್ಲಿಂ ಇಲ್ಲವೇ ಬೌದ್ಧ ಧರ್ಮೀಯ ಎಂದುಕೊಳ್ಳಬಲ್ಲೆ. ಅದನ್ನು ನಾನೀಗ ಸ್ಪಷ್ಟಪಡಿಸುವುದಿಲ್ಲ. ಇಲ್ಲಿಯವರೆಗೆ ನಾನು ಹಿಂದೂ ಆಗಿ ಉಳಿದಿದ್ದು, ಅವರೊಂದಿಗೆ ಇದ್ದುದು ಕೇವಲ ನಿಮಗಾಗಿ ಮಾತ್ರ. ನಿಮ್ಮನ್ನು ಬಿಟ್ಟುಹೋಗುವುದು ಎಂದರೆ ನಿಮ್ಮನ್ನು ಅಂಧಕಾರದಲ್ಲಿ ಇರಿಸಿದಂತೆ ಎಂದು ತಿಳಿದುಕೊಂಡೇ ನಾನು ಇಲ್ಲಿಯವರೆಗೆ ನಿಮ್ಮೊಂದಿಗೆ ಇದ್ದೇನೆ. ಆದರೆ ಇನ್ನು ಮುಂದೆ ಏನಾದರೂ ಮಾಡುವುದು ಇದ್ದರೆ ಜಾಣತನದಿಂದ ಎಲ್ಲರೂ ಒಟ್ಟಿಗೆ ಸೇರಿ ಮಾಡೋಣ. ಪ್ರಪಾತದ ಮೇಲಿನಿಂದ ಬೀಳಬೇಕಾದರೂ ಎಲ್ಲರೂ ಸೇರಿ ಬೀಳೋಣ. ಆದರೆ ಸದ್ಯ ನಿಮ್ಮ ಮನಸ್ಸಿನಲ್ಲಿ ಹಿಂದೂಗಳ ವರ್ತನೆ ಯಾವ ರೀತಿ ಇದೆ ಎನ್ನುವುದನ್ನು ನೆನಪಿನಲ್ಲಿ ಇಟ್ಟುಕೊಳ್ಳಿ.

ಅಂತಿಮವಾಗಿ ತಾವೆಲ್ಲರೂ ನನಗೆ ನನ್ನ ಹೃದಯದ ಮಾತುಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

---

ಜನತಾ: ಅಕ್ಟೋಬರ್ ೨೦, ೧೯೩೪.

## ೭೬.

# ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹಣ ಖರ್ಚಾದರೆ ಒಳಿತು

ಮುಂಬೈನ ಮೋಟಾರ್ ಡ್ರೈವರ್ ಅಸ್ಪೃಶ್ಯ ಸೇವಾ ಸಂಘದ ಪ್ರಥಮ ವಾರ್ಷಿಕೋತ್ಸವ ನಿಮಿತ್ತ ಶನಿವಾರ ಸೆಪ್ಟಂಬರ್ ೩೦,[1] ೧೯೩೪ರಂದು ಮುಂಬೈನ ಪರಳನಲ್ಲಿರುವ ದಾಮೋದರ್ ಹಾಲ್‌ನಲ್ಲಿ ಡಾ. ಪಿ. ಜಿ. ಸೋಳಂಕಿ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಸಭೆ ಜರುಗಿತು. ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್, ರಾ.ಬ. ಗೋಲೆ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸ್ವಾಗತಗೀತೆ ಮತ್ತು ಅಧ್ಯಕ್ಷರ ಆಯ್ಕೆ ಬಳಿಕ ಸಂಘದ ಅಧ್ಯಕ್ಷ ಮಾರುತಿರಾವ್ ಧಮರೆ ವರದಿ ವಾಚನ ಮಾಡಿ ಸಂಘದ ಕುರಿತು ಮಾತನಾಡಿದರು. ರಾ. ಬ. ಗೋಲೆ ಅವರ ಭಾಷಣದ ಬಳಿಕ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಒಂದೆರಡು ಮಾತುಗಳನ್ನು ಆಡುವಂತೆ ಅಧ್ಯಕ್ಷರು ವಿನಂತಿಸಿದರು.

ಡಾ. ಅಂಬೇಡ್ಕರ್ ಅವರು ಸಂಘದ ಕಾರ್ಯ ಚಟುವಟಿಕೆಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ, ಸಂಘದ ಅವಶ್ಯಕತೆ ಕುರಿತು ವಿಸ್ತೃತವಾಗಿ ಮಾತನಾಡುತ್ತ, ಚಾಲಕರನ್ನು ಉದ್ದೇಶಿಸಿ ನೀವು ವೆಚ್ಚ ಮಾಡುವ ಹಣ ವಿನಾಕಾರಣ ವೆಚ್ಚವಾಗಬಾರದು. ನಿಮ್ಮ ಕುಟುಂಬದ ಪೋಷಣೆ, ಸಮಾಜ ಸೇವೆಗೆ ವಿಶೇಷವಾಗಿ ಬಡ ಮಕ್ಕಳ ಶಿಕ್ಷಣಕ್ಕಾಗಿ ಖರ್ಚು ಮಾಡುವುದು ಉತ್ತಮ. ಅದೇ ರೀತಿ ಅನೀತಿ ಮತ್ತು ದುರ್ವ್ಯಸನಗಳಿಗೆ ಬಲಿಯಾಗದೇ ಗಳಿಸಿದ ಹಣ ಹಾಳಾಗದಂತೆ ಎಚ್ಚರ ವಹಿಸಬೇಕು. ಸಂಘಟನೆ ಹೊರತುಪಡಿಸಿ ಸಾಮಾಜಿಕ ಸೇವೆ ಮಾಡುವಂತಹ ಕೆಲಸದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲ. ಅಜ್ಜ ಮುತ್ತಜ್ಜರ ಹೆಸರಿನ ಬಲದ ಮೇಲೆ ನಮ್ಮನ್ನು ನಾವೇ ಮಾರಾಟದ ಸರಕು ಮಾಡಿಕೊಳ್ಳುವುದರಲ್ಲಿಯೂ ಅರ್ಥವಿಲ್ಲ. ನನ್ನ ಸಮಾಜ ಬಾಂಧವರು ತಮ್ಮ ಉದ್ಯೋಗದಿಂದ ಗಳಿಸಿದ ಹಣವನ್ನು ಸದುಪಯೋಗವಾಗುವ ರೀತಿಯಲ್ಲಿ ಕೆಲಸ ಮಾಡುತ್ತಾರೆ ಎಂದು ಆಶಿಸುತ್ತೇನೆ ಎಂದು ಹೇಳಿದರು.

ಡಾ. ಅಂಬೇಡ್ಕರ್ ಅವರ ಭಾಷಣದ ಬಳಿಕ ಇನ್ನಿತರ ಅತಿಥಿಗಳು ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ಸೋಳಂಕಿ ಪರಿಣಾಮಕಾರಿಯಾದ ನಾಲ್ಕು ಮಾತುಗಳನ್ನು ಹೇಳಿದರು. ಇದಾದ ಬಳಿಕ ಕಲೆಯಲ್ಲಿ ಅಪೂರ್ವ ಕೌಶಲ್ಯ ಮೆರೆದ ಗಂಗಾರಾಮ ರಘುನಾಥ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದ ಸಾಭಾಜಿ ಮಿರಕೆ ಅವರನ್ನು ಡಾ. ಅಂಬೇಡ್ಕರ್ ಅವರು ಬೆಳ್ಳಿಯ ಪದಕ ಮತ್ತು ಪುಷ್ಪಹಾರ ನೀಡಿ ಸನ್ಮಾನಿಸಿದರು. ಈ ಸಮಾರಂಭದಲ್ಲಿ ಶ್ರೀ ಬಾಪುಸಾಹೇಬ ಸಹಸ್ರಬುದ್ಧೆ, ಶಿವತರಕರ್, ಉಪಶಾಮ, ಭಾತನಕರ್ ಸೇರಿದಂತೆ ಇತರರು ಮಾತನಾಡಿದರು. ಕೊನೆಗೆ ವಂದನಾರ್ಪಣೆ ಮತ್ತು ಆಯ್ದ ಅತಿಥಿಗಳಿಗೆ ಅಲ್ಪೋಪಹಾರ ನೀಡಿದ ಬಳಿಕ ಕಾರ್ಯಕ್ರಮ ಮುಕ್ತಾಯವಾಯಿತು.

---

ಜನತಾ: ಅಕ್ಟೋಬರ್ ೨೦, ೧೯೩೪

# ೭೭.

# ಅಸ್ಪೃಶ್ಯ ಹಿಂದೂ ಆಗಿ ಜನಿಸಿದ್ದರೂ ಹಿಂದೂ ಆಗಿ ನಾನು ಸಾಯಲಾರೆ

ಶನಿವಾರ ಅಕ್ಟೋಬರ್ ೧೨, ೧೯೩೫ರಂದು ನಾಸಿಕ್‌ಗೆ ಆಗಮಿಸಿದ ಡಾ. ಅಂಬೇಡ್ಕರ್ ಅವರನ್ನು ಅತ್ಯಂತ ಸಡಗರ ಸಂಭ್ರಮದಿಂದ ರೈಲ್ವೆ ಸ್ಟೇಷನ್‌ದಿಂದ ಊರಿನವರೆಗೆ ಮೆರವಣಿಗೆಯಲ್ಲಿ ಕರೆತರಲಾಯಿತು. ವಿದಗಾಂವ, ನಾಸಿಕ್ ರೋಡ್ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಡಾ. ಅಂಬೇಡ್ಕರ್ ಅವರನ್ನು ಸತ್ಕರಿಸಲಾಯಿತು. ನಾಸಿಕ್ ರಸ್ತೆ ಬಳಿ ತಗಡಿನಿಂದ ಮಾಡಿದ್ದ ಶೆಡ್‌ನಲ್ಲಿ ಅವರ ಹೆಸರಿನಲ್ಲಿ ಒಂದು ಗ್ರಂಥಾಲಯವನ್ನು ಆರಂಭಿಸಲಾಗಿತ್ತು. ಆ ಗ್ರಂಥಾಲಯವನ್ನು ಉದ್ಘಾಟಿಸಿದ ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ:

ನೀವು ಸ್ವಾವಲಂಬಿಗಳಾಗಬೇಕು. ಸ್ವಂತ ಕಾಲುಗಳ ಮೇಲೆ ನಿಂತು ನಿಮ್ಮ ಪ್ರಗತಿಯ ಮಾರ್ಗ ಕಂಡುಕೊಳ್ಳಿ. ಒಂದು ವೇಳೆ ನನಗೆ ಏನಾದರೂ ಒಳ್ಳೆಯದ್ದು ಅಥವಾ ಕೆಟ್ಟದ್ದಾದರೆ ಈ ಚಳವಳಿಯನ್ನು ಮುಂದುವರಿಸಲು ನಾಯಕರು ಸಿದ್ಧವಾಗಬೇಕಿದೆ ಎಂದು ಹೇಳಿದರು. ಅದೇ ದಿನ ರಾತ್ರಿ ೯ಕ್ಕೆ ರವಿವಾರ ಪೇಠ, ಹೀರಾಲಾಲ್ ಗಲ್ಲಿಯಲ್ಲಿ ಆಯೋಜಿಸಿದ್ದ ಸಹಭೋಜನದಲ್ಲಿ ಕಾಂಗ್ರೆಸ್ಸಿನ ದೇಶಪಾಂಡೆ ಎಂಬ ವ್ಯಕ್ತಿ ಮಾತ್ರ ಪಾಲ್ಗೊಂಡಿದ್ದರು. ಮರುದಿನ ಭಾನುವಾರ ದಿನಾಂಕ ೧೩ರಂದು ನಾಸಿಕ್‌ನಿಂದ ವಿಂಚೂರ್‌ಗೆ ತೆರಳಿದರು. ಮಾರ್ಗಮಧ್ಯದ ಗ್ರಾಮಗಳಲ್ಲಿ ಅವರಿಗೆ ಅನೇಕ ಗ್ರಾಮಸ್ಥರು ಪುಷ್ಪಹಾರ ಅರ್ಪಿಸಿ ತಮ್ಮ ಗೌರವಾದರ ವ್ಯಕ್ತಪಡಿಸಿದರು. ವಿಂಚೂರ್‌ನಲ್ಲಿ ಡಾ. ಅಂಬೇಡ್ಕರ್ ಅವರಿಗೆ ಸ್ಪೃಶ್ಯ ವರ್ಗದಿಂದ ಚಹಾ ಪಾರ್ಟಿ ನೀಡಲಾಯಿತು. ಬೆಳಗ್ಗೆ ಯವಲೆಯಲ್ಲಿ ಮುನ್ಸಿಪಾಲಿಟಿಯಿಂದ ನೀಡಿದ ಮಾನಪತ್ರ ಸ್ವೀಕರಿಸಿ ಮಾನಪತ್ರಕ್ಕೆ ಉತ್ತರವಾಗಿ ಮಾತನಾಡಿದ ಅವರು, ಇಷ್ಟೆಲ್ಲ ಚಳುವಳಿ ಮಾಡಿದರೂ ಸ್ಪೃಶ್ಯ ವರ್ಗದ ದೃಷ್ಟಿಕೋನ ಬದಲಾಗಿ ಅವರು ನಮ್ಮೊಂದಿಗೆ ಸೌಹಾರ್ದದಿಂದ ವರ್ತಿಸುವುದಕ್ಕೆ ಸಿದ್ಧವಾಗುತ್ತಾರೆಂಬ ನಂಬಿಕೆ ಬರುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ನಾವು ಹಿಂದೂಗಳಿಂದ ದೂರ ಇದ್ದು ನಮ್ಮ ಪ್ರಗತಿಗೆ ನಾವು ಹೋರಾಟ ಮುಂದುವರಿಸೋಣ ಎಂದರು.

ಅಕ್ಟೋಬರ್ ೧೩, ೧೯೩೫ರಂದು ಯವಲೆ (ನಾಸಿಕ್)ನಲ್ಲಿ ಆಯೋಜಿಸಿದ್ದ ಮುಂಬೈ ಭಾಗದ ದಲಿತ ವರ್ಗದ ಸಮಾವೇಶ ರಾತ್ರಿ ೧೦ಕ್ಕೆ ಆರಂಭವಾಯಿತು. ಶ್ರೀ. ಅಮೃತರಾವ್ ರಣಖಂಬೆ ಸಮಾವೇಶದ ಸ್ವಾಗತಾಧ್ಯಕ್ಷರಾಗಿದ್ದರು. ಸುಮಾರು ೧೦ ಸಾವಿರಕ್ಕೂ ಹೆಚ್ಚು ಜನರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಸ್ವಾಗತಾಧ್ಯಕ್ಷರ ಭಾಷಣದ ಬಳಿಕ ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಅಸ್ಪೃಶ್ಯರು ಧರ್ಮಾಂತರಕ್ಕೆ ಸಿದ್ಧರಾಗಬೇಕು ಎಂದು ಕರೆ ನೀಡಿದರು.[೧]

---

೧. ೨೯ ಸೆಪ್ಟೆಂಬರ್ ೧೯೩೪ ಇರಬಹುದು –ಸಂಪಾದಕ.

ದಲಿತ ವರ್ಗದ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ಅಂಬೇಡ್ಕರ್, ಸವರ್ಣೀಯ ಹಿಂದೂಗಳ ಕಪಿಮುಷ್ಠಿಯಿಂದ ಪಾರಾಗಿ ಮುಕ್ತಿ ಪಡೆಯಬೇಕಾದರೆ ಅಸ್ಪೃಶ್ಯರು ಧರ್ಮಾಂತರದ ಮಾರ್ಗ ಅನುಸರಿಸಬೇಕು ಎಂದು ಹೇಳಿದ ವಿಚಾರ ಪ್ರತಿಯೊಬ್ಬ ಹಿಂದೂಗಳ ಅಂತಃಕರಣದಲ್ಲಿ ಕೋಲಾಹಲವನ್ನು ಸೃಷ್ಟಿಸದೇ ಇರದು. ಧರ್ಮಾಂತರದ ವಿಚಾರ ಕೇವಲ ಸಮಾವೇಶದ ಅಧ್ಯಕ್ಷರ ಭಾಷಣವಾಗಿ ಉಳಿಯದೇ, ಹಿಂದೂ ಧರ್ಮದಲ್ಲಿನ ಎಲ್ಲ ಅಸ್ಪೃಶ್ಯ ವರ್ಗಗಳು ಹಿಂದು ಧರ್ಮ ತ್ಯಜಿಸಿ ಸಮಾನತೆಯ ಹಕ್ಕು ನೀಡುವ ಯಾವುದೇ ಧರ್ಮ ಸ್ವೀಕರಿಸಬಹುದೆಂಬ ಸರ್ವಾನುಮತದ ತೀರ್ಮಾನ ಕೈಗೊಂಡಿತು. ಹಿಂದೂ ಧರ್ಮದಲ್ಲಿನ ಅನ್ಯಾಯದ ಪರಮಾವಧಿಯಿಂದಾಗಿ ಡಾ. ಅಂಬೇಡ್ಕರ್ ಅವರಂತಹ ವ್ಯಕ್ತಿ ಕೂಡ ಧರ್ಮಾಂತರಕ್ಕೆ ಸಿದ್ಧವಾಗಿದ್ದಾರೆ ಎಂದ ಮೇಲೆ ಸನಾತನಿಗಳು ಎಂದು ಕರೆಸಿಕೊಳ್ಳುವ ವ್ಯಕ್ತಿಗಳ ಮಾನವೀಯತೆಗೆ ಅಡರಿದ ಪಾತಕ ಮನಸ್ಥಿತಿಯ ಪರಾಮರ್ಶೆಯ ಅಗತ್ಯವಿದೆ. ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಹಿಂದೂ ಧರ್ಮದಲ್ಲಿ ತಮ್ಮನ್ನು ಎಷ್ಟು ಅಮಾನುಷವಾಗಿ ಶೋಷಿಸಲಾಗುತ್ತಿದೆ. ಈ ಶೋಷಣೆಯಿಂದ ಮುಕ್ತಿ ಪಡೆಯುವ ನಿಟ್ಟಿನಲ್ಲಿ ಇಲ್ಲಿಯವರೆಗೆ ತಾವು ಮಾಡಿದ ಪ್ರಯತ್ನ ಸವರ್ಣೀಯರ ಅಸಹಿಷ್ಣುತೆಯಿಂದಾಗಿ ಹೇಗೆ ವಿಫಲವಾಗುತ್ತಿದೆ ಎನ್ನುವ ವಿಚಾರವನ್ನು ಧರ್ಮಾಂತರದ ತೀರ್ಮಾನ ಪ್ರಕಟಿಸುವ ಮುನ್ನ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದರು.

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ವಿಚಾರದಲ್ಲಿ ಅಸ್ಪೃಶ್ಯರನ್ನು ಹತ್ತಿಕ್ಕಲಾಗುತ್ತಿದೆ. ಹಿಂದೂ ಧರ್ಮದ ಶೋಷಣೆಯಲ್ಲಿ ಮನುಷ್ಯತ್ವದ ಸರಳ ಹಕ್ಕುಗಳನ್ನು ಪಡೆದುಕೊಳ್ಳುವುದು ಅಸಾಧ್ಯದ ಮಾತಾಗಿರುವ ಕಾರಣ ಇಲ್ಲಿಯವರೆಗೆ ಇತರರಿಗಾಗಿ ಮಾಡಿದ ಸ್ವಾರ್ಥತ್ಯಾಗಕ್ಕೆ ಬೆಲೆ ಇಲ್ಲದಂತಾಗಿದೆ. ಕಳೆದ ಐದು ವರ್ಷಗಳಿಂದ ನಾಸಿಕ್‌ನ ಕಾಳಾರಾಮನ ದೇವಸ್ಥಾನ ಪ್ರವೇಶಿಸಿ ಈ ಮೂಲಕ ಹಿಂದೂ ಸಮಾಜದಲ್ಲಿ ನಮ್ಮ ಹಕ್ಕುಗಳನ್ನು ಪ್ರತಿಷ್ಠಾಪಿಸಿ ನಮ್ಮ ದರ್ಜೆಗೆ ಮಾನ್ಯತೆ ಪಡೆಯುವುದಕ್ಕೆ ಅವರು ಮಾಡಿದ ಪ್ರಯತ್ನ, ಅದೇ ರೀತಿ ಸತ್ಯಾಗ್ರಹದಿಂದ ಸವರ್ಣೀಯರ ಮನವೊಲಿಸುವುದಕ್ಕೆ ಮಾಡಿದ ವಿಫಲ ಯತ್ನಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಿದ ಡಾ. ಅಂಬೇಡ್ಕರ್ ತಮ್ಮ ಮಾತಿನಲ್ಲಿ:

ಅತಿ ಸಾಮಾನ್ಯ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಸ್ಪೃಶ್ಯ ಎಂದು ಪರಿಗಣಿಸಲ್ಪಟ್ಟಿರುವ ಹಿಂದೂ ಜನರ ಮನವೊಲಿಸುವುದಕ್ಕೆ ವ್ಯರ್ಥ ಪ್ರಯತ್ನದಲ್ಲಿ ನಾವು ಸಂಗ್ರಹಿಸಿದ ಒಂದಿಷ್ಟು ದ್ರವ್ಯ ಕೂಡ ವೆಚ್ಚವಾಗಿಹೋಗಿದೆ. ಅವರಿಂದ ಆಗಿರುವ ಕಲ್ಪನೆಗೂ ಬಾರದ ಅವಮಾನ ಸಹಿಸಿಕೊಂಡಿದ್ದೇವೆ. ಆದರೆ ಈ ಎಲ್ಲ ಸ್ವಾರ್ಥತ್ಯಾಗಗಳ ಪರಿಣಾಮ ಮಾತ್ರ ಶೂನ್ಯ ಸಂಪಾದನೆಯಾಗಿದ್ದು ವಿಷಾದಕರ ಸಂಗತಿ. ಇಲ್ಲಿಯವರೆಗೆ ಮೌನಕ್ಕೆ ಶರಣಾಗಿ ನಿರಂತರವಾಗಿ ಇಂದಿನ ನಮ್ಮ ಪರಿಸ್ಥಿತಿ ಸಹಿಸಿಕೊಂಡಿದ್ದರೂ ಅದರ ಪರಿಣಾಮ ಹಿಂದೂಗಳ ಮೇಲೆ ಒಂದಿಷ್ಟೂ ಆಗಿಲ್ಲ. ಒಂದು ವೇಳೆ ನಾವು ಬೇರೆ ಧರ್ಮದ ಅನುಯಾಯಿಗಳಾಗಿ ನಮ್ಮ ಹೊಟ್ಟೆ ಪಾಡಿಗಾಗಿ ಉದ್ಯೋಗ ವ್ಯವಹಾರ ಮಾಡುತ್ತಿದ್ದರೆ ಈ ಹಿಂದೂಗಳು ನಮ್ಮನ್ನು ಅಪಮಾನದಿಂದ ನಡೆಸಿಕೊಳ್ಳುವ ಕಿಂಚಿತ್ ಧೈರ್ಯ ತೋರಿಸುತ್ತಿದ್ದರೆ? ಹಿಂದೂ ಧರ್ಮದಲ್ಲಿ ನಮಗೆ ತಗುಲಿದ ಈ ಕಳಂಕವೇ ನಮ್ಮ ಪ್ರಗತಿಯ ಮಾರ್ಗಕ್ಕೆ ಅಡ್ಡವಾಗಿ ನಿಂತಿದೆ. ನಮ್ಮ ಎಲ್ಲ ಮಾನಾಪಮಾನಗಳಿಗೆ, ನಮ್ಮ ವಿಚಾರಗಳಲ್ಲಿ ಸವರ್ಣೀಯರು ತೋರುವ ತುಚ್ಛ ಭಾವನೆಗಳಿಗೆ ಇದೇ ಕಾರಣ. ಧರ್ಮದ ಮುದ್ರೆ ಒತ್ತಿಕೊಂಡು ಇಲ್ಲಿ ಕುಳಿತುಕೊಳ್ಳುವುದರಲ್ಲಿ ಯಾವ ಪುರುಷಾರ್ಥ ಇದೆ? ಅಂತಹ ಹಿಂದೂ ಧರ್ಮದ ಕಳಶವಾಗಿ ನಾವು ಏಕೆ ನಮ್ಮ ಜೀವನ ಕಳೆದುಕೊಳ್ಳಬೇಕು? ಇಂತಹ ಸ್ಥಿತಿಯಲ್ಲಿ ಇರುವುದಕ್ಕಿಂತ ಈ ಧರ್ಮದಿಂದ ಹೊರಬಿದ್ದು ಇನ್ನೊಂದು ಧರ್ಮದಲ್ಲಿ ಪ್ರವೇಶಿಸಿದರೆ

ಅಪಮಾನದ ಪ್ರಸಂಗ ಉದ್ಭವಿಸುವುದಿಲ್ಲ. ಕನಿಷ್ಠ ನಮ್ಮೊಂದಿಗೆ ಈ ಜನರು ತುಚ್ಛವಾಗಿ ನಡೆದುಕೊಳ್ಳುವುದಿಲ್ಲ. ಅಂತಹ ಧರ್ಮ ನಾವೇಕೆ ಸ್ವೀಕರಿಸಬಾರದು?

ಅಸ್ಪೃಶ್ಯರು ಹಿಂದೂ ಧರ್ಮ ತ್ಯಜಿಸಿದ ಬಳಿಕ ಯಾವ ಧರ್ಮ ಸ್ವೀಕರಿಸಬೇಕು ಎನ್ನುವುದು ಅವರ ವೈಯಕ್ತಿಕ ಅಭಿಪ್ರಾಯವಾಗಿದ್ದು ಸಮಾನತೆಯ ಹಕ್ಕು ಇರುವಂತಹ ಧರ್ಮವನ್ನು ಅವರು ಸ್ವೀಕರಿಸಬೇಕು.

ದುರ್ದೈವದಿಂದ ನಾನು ಕಲಂಕಿತ ಅಸ್ಪೃಶ್ಯ ಹಿಂದೂ ಆಗಿ ಹುಟ್ಟಿ ಬಂದಿದ್ದೇನೆ. ಹುಟ್ಟು ನನ್ನ ಕೈಯಲ್ಲಿ ಇರದ ಸಂಗತಿ. ಆದರೆ ತುಚ್ಛ ದರ್ಜೆ ನಿರಾಕರಿಸಿ ನನ್ನ ಸ್ಥಿತಿಗತಿ ಸುಧಾರಿಸುವ ಸಾಮರ್ಥ್ಯ ನನ್ನಲ್ಲಿದ್ದು ಆ ನಿಟ್ಟಿನಲ್ಲಿ ನಾನು ಪ್ರಯತ್ನ ಮಾಡಿಯೇ ಮಾಡುತ್ತೇನೆ. ಈ ವಿಚಾರದಲ್ಲಿ ಸಂಶಯ ಬೇಡವೇ ಬೇಡ. ಒಂದು ಮಾತು ನಾನಿಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಹಿಂದೂ ಅನ್ನಿಸಿಕೊಂಡು ನಾನು ಸಾಯುವುದಿಲ್ಲ.

ಹಿಂದೂ ಧರ್ಮದಲ್ಲಿ ಸಮಾನತೆಯ ಸ್ಥಾನಮಾನ ಪಡೆದುಕೊಳ್ಳುವುದಕ್ಕೆ ಸತ್ಯಾಗ್ರಹ ಮಾರ್ಗ ಅನುಸರಿಸಿದರೆ ನಡೆಯುವುದಿಲ್ಲ. ಈಗ ಅಂತಹ ಮಾರ್ಗದ ಅಗತ್ಯವೂ ಇಲ್ಲ. ನಮ್ಮ ಸಮಾಜ ಹಿಂದೂ ಧರ್ಮದಿಂದ ಪ್ರತ್ಯೇಕ ಮತ್ತು ಸ್ವತಂತ್ರ ಎಂದು ಭಾವಿಸಬೇಕಾಗುತ್ತದೆ. ಇನ್ನು ಮುಂದೆಯೂ ನಾವು ನಾಗರಿಕತ್ವದ ಮತ್ತು ರಾಜಕೀಯ ಹಕ್ಕುಗಳನ್ನು ಪಡೆಯುವ ನಿಟ್ಟಿನಲ್ಲಿ ನಮ್ಮ ಹೋರಾಟ ಮುಂದುವರಿಸಲೇಬೇಕಾಗುತ್ತದೆ. ಆದ್ದರಿಂದ ನಮ್ಮಲ್ಲಿನ ಮತಭೇದ, ಅಂತಃಕಲಹ ಮರೆತು ಒಗ್ಗಟ್ಟಿನಿಂದ ಸಂಘಟಿತರಾಗಿ ನಮ್ಮ ಧ್ಯೇಯದತ್ತ ಸಾಗುವ ಪ್ರಯತ್ನ ಮಾಡಬೇಕಿದೆ.

ನೂತನ ಸಂವಿಧಾನದಲ್ಲಿ ದಲಿತ ವರ್ಗ ತನ್ನ ಹಕ್ಕುಗಳನ್ನು ಪ್ರಬಲವಾಗಿ ಮಂಡಿಸುವುದಕ್ಕೆ ನಿಜವಾದ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಿದೆ. ಹಿಂದೂ ಧರ್ಮದ ಸಂಕೋಲೆಗಳನ್ನು ಮುರಿದು ಸ್ವತಂತ್ರವಾಗಿ ನಿಮ್ಮ ಕರ್ತವ್ಯ ಏನು ಅನ್ನುವುದನ್ನು ಮನಸ್ವಿ ಅರಿತುಕೊಂಡು ದಲಿತ ವರ್ಗ ಜಾಗೃತವಾಗಿದೆ ಎಂದು ಜಗತ್ತಿಗೆ ತೋರಿಸಿಕೊಡಬೇಕು ಎನ್ನುವುದೇ ನನ್ನ ವಿನಂತಿ. [೧]

ಸಮಾವೇಶದಲ್ಲಿ ಮಾಡಿದ ಈ ಭಾಷಣಕ್ಕೆ ಬೆಂಬಲ ನೀಡುವಂತೆ ಡಾ. ಅಂಬೇಡ್ಕರ್ ಅವರು ಮಂಡಿಸಿದ ನಿರ್ಣಯವನ್ನು ಸಮಾವೇಶದಲ್ಲಿ ಪಾಸು ಮಾಡಲಾಯಿತು.

### ಯವಲೆ ಸಮಾವೇಶದ ನಿರ್ಣಯ

ಅಸ್ಪೃಶ್ಯ ಎಂದು ಕರೆಸಿಕೊಳ್ಳುವ ವರ್ಗ ಮತ್ತು ಸ್ಪೃಶ್ಯ ಎಂದು ಕರೆಸಿಕೊಳ್ಳುವ ವರ್ಗದ ಮಧ್ಯೆ ಸಮಾನತೆ ನಿರ್ಮಿಸಿ ಸಂಘಟಿಸುವ ಉದ್ದೇಶದಿಂದ ತನ್ನಲ್ಲಿ ಅಷ್ಟೊಂದು ಸಾಮರ್ಥ್ಯ ಇಲ್ಲದಿದ್ದರೂ ಮನುಷ್ಯರ ಮತ್ತು ದ್ರವ್ಯದ ಅಪರಿಮಿತ ಹಾನಿ ಅನುಭವಿಸಿದ ಮುಂಬೈ ಪ್ರದೇಶದ ಅಸ್ಪೃಶ್ಯ ವರ್ಗ ಮಹಾಡ್‌ನಲ್ಲಿ ಚವ್‌ದಾರ್ ಕೆರೆ ಮತ್ತು ನಾಸಿಕ್‌ನಲ್ಲಿರುವ ಕಾಳಾರಾಮ್ ಮಂದಿರದಲ್ಲಿ ಸತ್ಯಾಗ್ರಹ ನಡೆಸಿತು. ಕಾಳಾರಾಮ್ ದೇವಸ್ಥಾನದಲ್ಲಿಯಂತೂ ಕಳೆದ ಆರು ವರ್ಷಗಳಿಂದ ಸತ್ಯಾಗ್ರಹ ನಡೆಸಿದರೂ ಸ್ಪೃಶ್ಯ ವರ್ಗ ಎನ್ನಿಸಿಕೊಂಡಿರುವ ಹಿಂದೂಗಳ ಮನಪರಿವರ್ತನೆ ಆಗಲಿಲ್ಲ. ಇಷ್ಟೇ ಅಲ್ಲ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವೆ ಆಗುವ ಸಂಘಟನೆ ಮತ್ತು ಅದರಿಂದ ವೃದ್ಧಿಸುವ ಹಿಂದೂ ಸಮಾಜದ ಸಾಮರ್ಥ್ಯಕ್ಕೆ ಕವಡೆ ಕಾಸಿನ ಕಿಮ್ಮತ್ತು ಕೂಡ ನೀಡಲಾಗುವುದಿಲ್ಲ ಎಂದು ಸ್ಪೃಶ್ಯ ಹಿಂದೂ ವರ್ಗ ತನ್ನ ವರ್ತನೆ ಮೂಲಕ ಸಾಬೀತುಪಡಿಸಿದೆ. ಈ ಕಾರಣಕ್ಕೆ ಅಸ್ಪೃಶ್ಯರ ಈ ಸಮಾವೇಶದಲ್ಲಿ ಹಿಂದೂಗಳ ಮನಸ್ಸು ಒಲಿಸಿಕೊಳ್ಳುವ

---

೧. ವಿವಿಧ ವೃತ್ತ: ಅಕ್ಟೋಬರ್ ೨೦, ೧೯೩೫.

ಯಾವುದೇ ಪ್ರಯತ್ನಗಳು ಫಲ ನೀಡದ ಕಾರಣ ಈ ನಿಟ್ಟಿನಲ್ಲಿ ಅಸ್ಪೃಶ್ಯ ವರ್ಗ ಇನ್ನು ಮುಂದೆ ಯಾವುದೇ ಕಾರಣಕ್ಕೂ ತನ್ನ ಸಾಮರ್ಥ್ಯ ವ್ಯರ್ಥ ಮಾಡಿಕೊಳ್ಳದೇ, ಇಲ್ಲಿಗೇ ಈ ಸತ್ಯಾಗ್ರಹ ಸ್ಥಗಿತಗೊಳಿಸಬೇಕು. ಸ್ಪೃಶ್ಯ ಎನ್ನಿಸಿಕೊಂಡ ವರ್ಗದಿಂದ ನಮ್ಮ ಸಮಾಜ ಸ್ವತಂತ್ರವಾಗಿದ್ದು, ಭಾರತದಲ್ಲಿನ ಇತರ ಸಮಾಜಗಳು ನಮ್ಮ ಸಮಾಜಕ್ಕೆ ಮರ್ಯಾದೆ ಮತ್ತು ಸಮಾನತೆ ನೀಡುವ ದಿಸೆಯಲ್ಲಿ ಇಡೀ ಅಸ್ಪೃಶ್ಯ ಸಮಾಜ ಒಗ್ಗಟ್ಟಿನಿಂದ ಮುಂದಿನ ಯೋಜನೆ ರೂಪಿಸಬೇಕು ಎಂದು ಸಮಾವೇಶ ತೀರ್ಮಾನಕ್ಕೆ ಬಂದಿದೆ.[೨]

ಡಾ. ಅಂಬೇಡ್ಕರ್ ಅವರ ವಿಷಯಾಧಾರಿತ ಭಾಷಣ ಮತ್ತು ಅದಕ್ಕೆ ಅನುಗುಣವಾಗಿ ಸಮಾವೇಶದಲ್ಲಿ ಮಂಡಿಸಿದ ನಿರ್ಣಯ ಪ್ರೇಕ್ಷಕ ವರ್ಗದಲ್ಲಿನ ಯುವಕರಿಗೆ ಸಂತಸ ತಂದಿತು. ಧಾರ್ಮಿಕವಾಗಿ ಮುಗ್ಧತೆಯ ಪ್ರತಿರೂಪವಾಗಿದ್ದ ಮಹಿಳೆಯರು ಮತ್ತು ವೃದ್ಧರಿಗೆ ಈ ನಿರ್ಣಯ ಅಚ್ಚರಿ ತಂದಿತು. ಡಾ. ಅಂಬೇಡ್ಕರ್ ಅವರ ಒಡಲಾಳದಿಂದ ಮೂಡಿ ಬಂದ ಮಾತುಗಳನ್ನು ಕೇಳಿ ಅವರು ಕೂಡ ನಿರ್ಣಯಕ್ಕೆ ತಮ್ಮ ಸಮ್ಮತಿ ಸೂಚಿಸಿದರು. ಅಸ್ಪೃಶ್ಯರನ್ನು ಹಿಂದೂಗಳು ಹೀನಾಯವಾಗಿ ಶೋಷಿಸುತ್ತಾರೆ. ಅವರು ಬೇರೆ ಧರ್ಮ ಸ್ವೀಕರಿಸಿದರೆ ಶೋಷಣೆಯಿಂದ ಮುಕ್ತವಾಗಿ ಸ್ವಂತ ಪರಿಶ್ರಮದ ಮೇಲೆ ತಮ್ಮ ಉಪಜೀವನ ನಡೆಸುವುದಕ್ಕೆ ಸಮರ್ಥರಾಗುತ್ತಾರೆ. ಈ ವಿಷಯದ ಕುರಿತು ಸುಮಾರು ಒಂದು ಗಂಟೆ ಕಾಲ ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣವನ್ನು ಇಡೀ ಪ್ರೇಕ್ಷಕವರ್ಗ ಶಾಂತಚಿತ್ತದಿಂದ ಕೇಳಿಸಿಕೊಂಡು ಕೊನೆಗೆ ಸಮಾವೇಶದ ನಿರ್ಣಯಕ್ಕೆ ಚಪ್ಪಾಳೆಯ ಮೂಲಕ ಬೆಂಬಲ ಸೂಚಿಸಿತು.

ಡಾ. ಅಂಬೇಡ್ಕರ್ ಮತ್ತು ಅವರ ಸಹೋದ್ಯೋಗಿಗಳು ಯವಲೆಯಿಂದ ನಾಸಿಕ್‌ಗೆ ಮರಳಿ ಅಕ್ಟೋಬರ್ ೧೫ ಮತ್ತು ೧೬, ೧೯೩೫ರಂದು ಭಂಗಿ ಸಮಾಜದವರು ಏರ್ಪಡಿಸಿದ್ದ ಚಹಾ ಮತ್ತು ಭೋಜನ ಕೂಟದಲ್ಲಿ ಪಾಲ್ಗೊಂಡರು. ಡಾ. ಅಂಬೇಡ್ಕರ್ ಮತ್ತು ಅವರ ಮಿತ್ರರು ತಮ್ಮೊಂದಿಗೆ ಭೋಜನ ಮಾಡುತ್ತಿರುವುದನ್ನು ನೋಡಿ ಭಂಗಿ (ಮೇಘವಾಲ) ಸಮಾಜದ ಜನರಲ್ಲಿ ಉತ್ಸಾಹ ಮತ್ತು ಸಂತೋಷ ಏಕಕಾಲಕ್ಕೆ ಪುಟಿದೆದ್ದಿತು.

---

೨. ಜನತಾ: ಫೆಬ್ರವರಿ ೧೫, ೧೯೩೬

## ೭೮.

## ಮಾನವೀಯತೆ ಇಲ್ಲದ ಧರ್ಮ ಎಂತಹದ್ದು?

ನಿರ್ಭಿಡವಾದಿಗಳ ಜೀವನದಲ್ಲಿನ ಅತ್ಯಂತ ಭಾಗ್ಯೋದಯ ದಿನ ಎಂದರೆ ಅದು ಭಾನುವಾರ ಡಿಸೆಂಬರ್ ೮, ೧೯೩೫. ಅಂದು ರಾತ್ರಿ ಮುಂಬೈನ ಫೆರಸ್ ರಸ್ತೆ ಹತ್ತಿರದ ಹಳೆ ಡೋರ್ ಚಾಳ್, ಜಯರಾಮಬಾಯಿ ಸ್ಟ್ರೀಟ್ ನಲ್ಲಿ ಮಹತ್ವದ ಸಭೆಯೊಂದನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಧರ್ಮಾಂತರ ಪರಿಕಲ್ಪನೆಯ ಹರಿಕಾರ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಧರ್ಮಾಂತರದ ಕುರಿತು ಮಾತನಾಡಲಿದ್ದಾರೆ ಎಂದು ಪ್ರಕಟಿಸಲಾಗಿತ್ತು. ಈ ಭಾಷಣದ ಹಿನ್ನೆಲೆಯಲ್ಲಿ ಈ ಸಭೆಗೆ ಎಲ್ಲಿಲ್ಲದ ಮಹತ್ವ ಬಂದಿತ್ತು ಎಂದು ಹೇಳುವುದು ಅನಗತ್ಯ ಸಂಗತಿ. ಈ ಸಭೆಯಲ್ಲಿ ಉಪಸ್ಥಿತರಿದ್ದು ನಮ್ಮ ಅಭಿಪ್ರಾಯವನ್ನು ಹತ್ತು ಸಾವಿರಕ್ಕೂ ಹೆಚ್ಚು ಜನರ ಎದುರು ಮಂಡಿಸುವ ಅವಕಾಶ ಲಭಿಸಿದ್ದು ಒಂದು ಅಪೂರ್ವ ಅವಕಾಶ ಎಂದೇ ನಾವು ಭಾವಿಸಿರುವ ಹಿನ್ನೆಲೆಯಲ್ಲಿ ಆ ಭಾನುವಾರಕ್ಕೆ ಅಗ್ರಪೂಜೆಯ ಮಾನ್ಯತೆ ನೀಡಿದ್ದೇವೆ. ಸ್ಪೃಶ್ಯ ಸಮಾಜದ ಸುಧಾರಕರ ವತಿಯಿಂದ ಅಸ್ಪೃಶ್ಯ ಸಮಾಜದ ಧರ್ಮಾಂತರ ಘೋಷಣೆಯ ಕುರಿತ ಅಭಿಪ್ರಾಯ ವ್ಯಕ್ತಪಡಿಸಲು ಲಭಿಸಿದ ಅವಕಾಶ ಇದಾಗಿತ್ತು.

ಭಾನುವಾರ ರಾತ್ರಿಯ ಸಭೆಯನ್ನು ಶ್ರೀ ಸೋಮವಂಶೀಯ ಗುರುದತ್ತ ಪ್ರಾಸಾದಿಕ ಭಜನ್ ಸಮಾಜದ ವತಿಯಿಂದ ೨೧ನೇ ದತ್ತ ಜಯಂತ್ಯುತ್ಸವ ನಿಮಿತ್ತ ಆಯೋಜಿಸಲಾಗಿತ್ತು. ಕಳೆದ ೨೦ಕ್ಕೂ ಹೆಚ್ಚು ವರ್ಷಗಳಿಂದ ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದ್ದ ಈ ಉತ್ಸವದಲ್ಲಿ ಸಾವಿರಾರು ಅಸ್ಪೃಶ್ಯರು ಪಾಲ್ಗೊಳ್ಳುತ್ತಿದ್ದರು. ಈ ಉತ್ಸವಕ್ಕೆ ಚಾಲನೆ ನೀಡಿದ್ದು ದಿ. ಮಾಧವರಾವ್ ಮೋರೆ. ಇತ್ತೀಚಿನ ಆಡಳಿತ ಮಂಡಳಿಯಲ್ಲಿ ಶ್ರೀ ಬಾಳಾಜಿ ಸೂಡಕಾಜಿ ಮೋರೆ, ಶಂಕರರಾವ್ ಆಡೆಜಾಧವ, ಮಾಧವರಾವ್ ಪಾರಧೆ, ಗಂಗಾರಾಮಪಂತ್ ಮುಕಾದಮ್ ಮತ್ತು ರೇವಜಿಬುವಾ ಡೋಳಸ್ ಪ್ರಮುಖರಾಗಿದ್ದರು. ಈ ಬಾರಿ ಕೂಡ ಆಡಳಿತ ಮಂಡಳಿಯಿಂದ ಉತ್ಸವ ಅತ್ಯಂತ ಸಡಗರ, ಸಂಭ್ರಮದಿಂದ ಆಯೋಜಿಸಲಾಗಿತ್ತು. ಅವರ ಪ್ರಖರ ಧರ್ಮಬುದ್ಧಿಗೆ ಮತ್ತು ಅವರ ನೂರಾರು ಸಹಕಾರಿಗಳಿಗೆ ಸ್ಪೃಶ್ಯ ಹಿಂದೂ ಸಮಾಜದಿಂದ ಮನಃಪೂರ್ವಕವಾಗಿ ಅಭಿನಂದನೆ ಸಲ್ಲಿಸುತ್ತೇವೆ.

ಈ ಬಾರಿಯ ದತ್ತ ಜಯಂತಿ ಉತ್ಸವವನ್ನು ನಾಲ್ಕು ದಿನಗಳವರೆಗೆ ಆಯೋಜಿಸಲಾಗಿತ್ತು. ಶನಿವಾರ ದಿನಾಂಕ ೭ರಂದು ಶ್ರೀಯುತ ಕಿಸನ್ ದೇವಿದಾಸ್ ಬೋವಾ (ಕಾಮಾಟಿಪುರ ೧೩ನೇ ಗಲ್ಲಿ), ರಾಮಜಿ ರಾವಜಿ ಬೋರಕರ್ (ತಾಡವಾಡಿ), ರಾಮಜಿ ಧೋಂಡುಜಿ ಭಾಲೇರಾವ್ (ಔಚಿತ್ಯವಾಡಾ), ರಾಮಚಂದ್ರ ಸಾದುಜಿ ರಣದಿವೆ (ಬಟಾಟಿ ಚಾಳ್) ಅವರಂತಹ ಪ್ರಸಿದ್ಧ ಭಜನಕಾರರಿಂದ ಭಜನೆಗಳು ಜರುಗಿದವು.

ಎರಡನೇ ದಿನ ನಾವು ಯಾವ ಸಭೆಯನ್ನು ವರ್ಣಿಸುವುದಕ್ಕಾಗಿ ಈ ಲೇಖನ ಬರೆಯುತ್ತಿದ್ದೇವೆಯೋ ~~ಆ ಸಾರ್ವ~~ಜನಿಕ ಸಭೆ ಜರುಗಿತು. ಮೂರನೇ ದಿನ ಪಲ್ಲಕ್ಕಿ ಮೆರವಣಿಗೆ ಮತ್ತು ಭೋಜನ ಕಾರ್ಯಕ್ರಮ ಜರುಗಿದವು. ಈ ಉತ್ಸವಕ್ಕಾಗಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು ಮತ್ತು ಅಸ್ಪೃಶ್ಯ ಸಮಾಜ ಸಂಭ್ರಮದಿಂದ ಬೀಗುತ್ತಿತ್ತು. ಇಂತಹ ಉತ್ಸವದಲ್ಲಿನ ಒಂದು ಮಹತ್ವದ ಸಭೆಯಲ್ಲಿ ಪಾಲ್ಗೊಂಡು

ಮಾತನಾಡುವ ಅವಕಾಶ ನಮಗೆ ಲಭಿಸಿರುವುದು ನಮ್ಮ ಭಾಗ್ಯವಲ್ಲದೇ ಮತ್ತೇನು ಅನ್ನಬೇಕು?

ಈ ಸಭೆಯಲ್ಲಿ ಉಪಸ್ಥಿತರಿರುವುದಕ್ಕಾಗಿ ನಾವು ಕಳೆದ ಭಾನುವಾರ ರಾತ್ರಿ ಸುಮಾರು ೯ ಗಂಟೆ ಹೊತ್ತಿಗೆ ಸಭೆ ನಡೆಯುತ್ತಿದ್ದ ಸ್ಥಳಕ್ಕೆ ಹೋದೆವು. ಒಂದು ಚಿಕ್ಕ ದೇವಸ್ಥಾನದ ಎದುರಿನ ಜಾಗದಲ್ಲಿ ಸಭೆಯ ವೇದಿಕೆ ಶೃಂಗರಿಸಲಾಗಿತ್ತು. ಎದುರಿನ ಜಾಗವನ್ನು ಸಾರ್ವಜನಿಕರಿಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ದೇವಸ್ಥಾನದ ಗುಮ್ಮಟದ ಮೇಲೆ ಹಾಕಿದ್ದ ಬಟ್ಟೆಯ ಮೇಲೆ ದೊಡ್ಡಕ್ಷರಗಳಲ್ಲಿ ದತ್ತ ಜಯಂತ್ಯುತ್ಸವ ವ್ಯವಸ್ಥಾಪಕ–ರೇವಜಿಬೋವಾ ಡೋಳಸ್ ಎಂದು ಬರೆಯಲಾಗಿತ್ತು. ದೇವಸ್ಥಾನದ ಎದುರಿನ ರಸ್ತೆಯನ್ನು ಧ್ವಜ, ಪತಾಕೆ, ಬಾವುಟ ಮತ್ತು ಬಣ್ಣದ ಕಾಗದಗಳಿಂದ ಶೃಂಗರಿಸಲಾಗಿತ್ತು. ಪ್ರೇಕ್ಷಕರು ಕುಳಿತುಕೊಳ್ಳುವುದಕ್ಕೆ ರಸ್ತೆ ಮೇಲೆ ಮಾಡಿದ್ದ ವ್ಯವಸ್ಥೆಯ ಎಡಭಾಗದಲ್ಲಿ ಮಹಿಳೆಯರು ಕುಳಿತಿದ್ದರು. ದೇವಸ್ಥಾನದ ಎದುರು ಹಾಕಿದ್ದ ವಿಶಾಲ ವೇದಿಕೆಯ ಮೇಲೆ ಸತರಂಜಿ ಮತ್ತು ಕೆಂಪುಗಂಬಳಿ ಹಾಸಲಾಗಿತ್ತು. ವೇದಿಕೆಯ ಮಧ್ಯಭಾಗದಲ್ಲಿ ಇರಿಸಿದ್ದ ಚಚ್ಚೌಕದ ಮೇಜು ಮತ್ತು ಅದರ ಹಿಂದೆ ಮೆತ್ತನೆಯ ದರ್ಬಾರಿ ಆಸನಗಳನ್ನು ಹಾಕಲಾಗಿತ್ತು. ವೇದಿಕೆಯ ಮೇಲಿನ ಇತರ ಅತಿಥಿಗಳಿಗಾಗಿ ಹಸಿರು ಬಣ್ಣದ ಸೋಫಾ ಹಾಕಿದ್ದು, ಒಂದಿಷ್ಟು ಕುರ್ಚಿಗಳನ್ನು ಇರಿಸಲಾಗಿತ್ತು. ನಾವು ಹೋಗಿದ್ದ ವೇಳೆ ಸಭೆಯಲ್ಲಿ ಸುಮಾರು ೫ ಸಾವಿರ ಪ್ರೇಕ್ಷಕರಿದ್ದರು, ಪ್ರೇಕ್ಷಕರಲ್ಲಿ ಅಸ್ಪೃಶ್ಯರ ಸಂಖ್ಯೆ ವಿಶೇಷವಾಗಿದ್ದರೂ ಐವತ್ತಕ್ಕೂ ಹೆಚ್ಚು ಮುಸ್ಲಿಂರು. ಐದು–ಹತ್ತು ಕ್ರೈಸ್ತರು ಮತ್ತು ಓರ್ವ ವೃದ್ಧ ಪಾರ್ಸಿ ಸೇರಿದಂತೆ ಅನ್ಯಧರ್ಮೀಯರು ಅಲ್ಲಿದ್ದರು. ಓರ್ವ ಹಿರಿಯ ಗೃಹಸ್ಥ ನಮ್ಮನ್ನು ಅತ್ಯಂತ ಪ್ರೀತಿ ಆದರಗಳಿಂದ ವೇದಿಕೆಗೆ ಕರೆದುಕೊಂಡು ಹೋದರು. ನಮ್ಮ ಪಕ್ಕದಲ್ಲಿ ಶ್ರೀ. ಆಡಂಗಾಳೆ ಮತ್ತು ವಡವಲಕರ್ ಆಸೀನರಾಗಿದ್ದರಿಂದ ಮಾತುಕತೆ ರಂಗೇರಿತು. ಇತ್ತೀಚೆಗಷ್ಟೇ ಈ ಅಸ್ಪೃಶ್ಯ ಸಮಾಜದ ಬಂಧುಗಳು ನಮ್ಮ ಸ್ನೇಹಿತರಾಗಿದ್ದವರು. ಡಾ. ಅಂಬೇಡ್ಕರ್ ಮತ್ತವರ ಸಂಗಡಿಗರನ್ನು ಕರೆತರುವುದಕ್ಕೆ ರೇವಾಜಿ ಬೋವೆ ಹೋಗಿದ್ದರು. ಈ ಮಧ್ಯಂತರದ ಸಮಯದಲ್ಲಿ ಮನರಂಜನೆಯ ಕಾರ್ಯಕ್ರಮಗಳು ನಡೆಯುತ್ತಿದ್ದವು. ಒಬ್ಬ ಬಾಲಕ ತನ್ನ ಸುಮಧುರ ಕಂಠದಲ್ಲಿ ಹಾಡು ಹೇಳಿದ ಬಳಿಕ ಶ್ರೀ. ಫಾಳಕೆ ಪೋವಾಡಾ ಹಾಡಿ ತೋರಿಸಿದರು. ಇದಾದ ಮೇಲೆ ಜಲಸಾದ ಕೆಲವು ಹಾಡುಗಳನ್ನು ಹಾಡಲಾಯಿತು. ಈ ರೀತಿ ವಿವಿಧ ಕಾರ್ಯಕ್ರಮಗಳು ನಡೆಯುತ್ತಿದ್ದರೂ ಎಲ್ಲರ ಗಮನ ಡಾ. ಅಂಬೇಡ್ಕರ್ ಅವರ ಆಗಮನದತ್ತ ಇತ್ತು. ಪ್ರೇಕ್ಷಕರ ಸಂಖ್ಯೆ ಕ್ಷಣ ಕ್ಷಣಕ್ಕೂ ಹೆಚ್ಚಾಗಿ ಹತ್ತು ಸಾವಿರಕ್ಕೆ ತಲುಪಿತು.

ಸುಮಾರು ಹತ್ತೂಕಾಲಿಗೆ ಡಾ. ಅಂಬೇಡ್ಕರ್ ಮತ್ತವರ ಸಂಗಡಿಗರ ವಾಹನ ವೇದಿಕೆಯ ಬಳಿಗೆ ಆಗಮಿಸಿತು. ಡಾ. ಅಂಬೇಡ್ಕರ್ ಅವರು ತಮ್ಮ ಸಂಗಡಿಗರೊಂದಿಗೆ ವಾಹನದಿಂದ ಇಳಿದು ಪ್ರೇಕ್ಷಕರ ಕರತಾಡನದೊಂದಿಗೆ ನೇರವಾಗಿ ವೇದಿಕೆಯಲ್ಲಿ ತಮಗಾಗಿ ಇರಿಸಿದ್ದ ಆಸನದಲ್ಲಿ ವಿರಾಜಮಾನರಾದರು. ಕಿರೀಟ ಧರಿಸಿದ ಮಹಾರಾಜನನ್ನು ಸ್ವಾಗತಿಸುವ ರೀತಿಯಲ್ಲಿ ಡಾ. ಅಂಬೇಡ್ಕರ್ ಅವರನ್ನು ಪ್ರೇಕ್ಷಕರು ಸ್ವಾಗತಿಸಿದರು. ಅವರ ಪಕ್ಕದಲ್ಲಿ ಸಭೆಯ ನಿಯೋಜಿತ ಅಧ್ಯಕ್ಷ ಶ್ರೀ. ದೇವರಾಯ ನಾಯಿಕ ಕುಳಿತಿದ್ದರು. ಡಾ. ಅಂಬೇಡ್ಕರ್ ಅವರೊಂದಿಗೆ ಆಗಮಿಸಿದ್ದ ಪ್ರಿ. ದೊಂದೆ, ಸುರಬಾ ಟಿಪ್ನಿಸ್, ಬಾಪುಸಾಹೇಬ ಸಹಸ್ರಬುದ್ಧೆ ಸೇರಿದಂತೆ ಇತರ ಅತಿಥಿಗಳು ಅಕ್ಕಪಕ್ಕದ ಸೋಫಾಗಳಲ್ಲಿ ಆಸೀನರಾದರು. ಅಸ್ಪೃಶ್ಯ ಸಮಾಜದ ಇನ್ನೋರ್ವ ಹಿರಿಯ ನಾಯಕ ಡಾ. ಸೋಳಂಕಿ ಅವರನ್ನು ಕರೆತರುವುದಕ್ಕೆ ವಾಹನ ಹೋಗಿದ್ದ ಕಾರಣ ಅವರು ಬರುವವರೆಗೆ ಜಲಸಾ ಮುಂದುವರಿಸಲಾಯಿತು. ಕೆಲವೇ ಕ್ಷಣಗಳ ಅಂತರದಲ್ಲಿ ಆಗಮಿಸಿದ ಡಾ. ಸೋಳಂಕಿ ಅವರನ್ನು ಪ್ರೇಕ್ಷಕರು ತಮ್ಮ ಚಪ್ಪಾಳೆಯಿಂದ ಸ್ವಾಗತಿಸಿದರು. ಡಾ. ಅಂಬೇಡ್ಕರ್ ಪಕ್ಕದ ಆಸೀನದಲ್ಲಿ ಡಾ. ಸೋಳಂಕಿ ಆಸೀನರಾದ ಬಳಿಕ ಸಭೆಯ ಕಾರ್ಯಕ್ರಮಕ್ಕೆ ಶ್ರೀ. ರೇವಜಿ ಬೋವಾ

ಚಾಲನೆ ನೀಡಿದರು. ಅಧ್ಯಕ್ಷರ ಸೂಚನೆ ಅನುಮೋದನೆ ಬಳಿಕ ದೇವರಾಯ ನಾಯಿಕ ಅವರು ಒಂದೆರಡು ಮಾತುಗಳನ್ನು ಆಡಿದ ಬಳಿಕ ಸುರಭಾ ಟಿಪ್ನಿಸ್ ಭಾಷಣ ಮಾಡಿದರು.

ಇದಾದ ಬಳಿಕ ಡಾ. ಅಂಬೇಡ್ಕರ್ ಅವರು ಮಾತನಾಡಬೇಕು ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ದೇವರಾಯ ನಾಯಿಕ ವಿನಂತಿಸಿದರು. ಅತ್ಯಂತ ಸರಳ ವೇಷ ಭೂಷಣ ಧರಿಸಿದ್ದ ಡಾ. ಅಂಬೇಡ್ಕರ್ ಅವರು ಕೈಯಲ್ಲೊಂದು ಸಣ್ಣ ಕೋಲು ಹಿಡಿದು ಭಾಷಣಕ್ಕೆ ನಿಂತರು. ಅವರು ತಮ್ಮ ಭಾಷಣದಲ್ಲಿ:
ಅಧ್ಯಕ್ಷರೆ ಮತ್ತು ಬಂಧುಗಳೇ, ಭಗೀನಿಯರೇ,

ಮೊದಲು ನನಗೆ ಎರಡು ವಿಚಾರಗಳನ್ನು ಇಲ್ಲಿ ಸ್ಪಷ್ಟಪಡಿಸಬೇಕಿದೆ. ಕಳೆದ ವರ್ಷದ ಉತ್ಸವಕ್ಕೆ ನಾನು ಆಗಮಿಸಿರಲಿಲ್ಲ. ಈ ವರ್ಷ ಕೂಡ ದತ್ತ ಜಯಂತಿಯಂತಹ ಉತ್ಸವದಲ್ಲಿ ಭಾಷಣ ಮಾಡುವುದು ಸರಿಯಲ್ಲ ಎನ್ನಿಸಿತ್ತು. ಆದರೂ ರೇವಜಿ ಬುವಾ ಅವರು ಇದು ಕೊನೆಯ ಉತ್ಸವ ಎಂದು ಆಶ್ವಾಸನೆ ನೀಡಿದ ಕಾರಣ ನಾನು ಬರಬೇಕಾಯಿತು. ಈ ಸ್ಥಳದಲ್ಲಿ ಧರ್ಮಾಂತರದಂತಹ ವಿಚಾರಗಳನ್ನು ಪ್ರಸ್ತಾಪಿಸುವುದು ಸರಿಯಲ್ಲ. ಆದರೆ ನನಗೆ ಒಂದೆರಡು ವಿಷಯಗಳನ್ನಾದರೂ ಇಲ್ಲಿ ಸ್ಪಷ್ಟಪಡಿಸಬೇಕಿದೆ.

ಧರ್ಮಾಂತರ ನನ್ನ ನಿರ್ಧಾರ ಅಚಲವಾದುದು. ನಾನು ಧರ್ಮಾಂತರ ಮಾಡಿಯೇ ತೀರುತ್ತೇನೆ. ಆದರೆ ಈ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ತಿಳಿದುಕೊಳ್ಳುವುದಕ್ಕಾಗಿ ಸ್ವಲ್ಪ ತಡೆದಿದ್ದೇನೆ. ನೀವು ಎಲ್ಲ ಏಳು ಕೋಟಿಗೂ ಏಳು ಕೋಟಿ ಜನರು ಧರ್ಮಾಂತರ ಮಾಡಬೇಕೆನ್ನುವುದು ನನ್ನ ಇಚ್ಛೆ ಒಬ್ಬೇ ಒಬ್ಬ ವ್ಯಕ್ತಿ ಕೂಡ ಹಿಂದೆ ಉಳಿಯಕೂಡದು. ಏಳು ಕೋಟಿ ಜನರು ಒಂದೇ ಗುಂಪಾಗಿ ಧರ್ಮಾಂತರ ಮಾಡಬೇಕು. ನಿಮ್ಮಲ್ಲಿ ಒಂದಿಷ್ಟು ಜನರು ಮಾತ್ರ ನನ್ನೊಂದಿಗೆ ಧರ್ಮಾಂತರ ಮಾಡಿದರೆ ನಿಮ್ಮ ಹಿತರಕ್ಷಣೆ ನನ್ನಿಂದ ಸಾಧ್ಯವಿಲ್ಲ. ನೀವೆಲ್ಲರೂ ಒಂದೇ ಸಮಯದಲ್ಲಿ ಧರ್ಮಾಂತರ ಮಾಡಿದರೆ ನಿಮಗಾಗಿ ಒಂದಿಷ್ಟು ಒಳ್ಳೆಯ ಕೆಲಸಗಳನ್ನು ಮಾಡಲಿಕ್ಕೆ ನನ್ನಿಂದ ಸಾಧ್ಯವಾಗಬಹುದು. ಎಲ್ಲರದ್ದೂ ಒಂದೇ ತೀರ್ಮಾನ ಆಗಬೇಕು. ಅದಕ್ಕೆ ಸಮಯ ಬೇಕು. ಅದು ನನಗೆ ಗೊತ್ತು. ಅಲ್ಲಿಯವರೆಗೆ ನಾನು ನಿಮಗಾಗಿ ಕಾಯುವುದಕ್ಕೆ ಸಿದ್ಧ. ಆದರೆ ಈ ಸಮಯಾವಕಾಶ ಕೇವಲ ಅಸ್ಪೃಶ್ಯರಿಗೆ ನೀಡಲಾಗಿದೆ ವಿನಃ ಸ್ಪೃಶ್ಯ ಹಿಂದೂಗಳಿಗೆ ಅಲ್ಲ. ಎಲ್ಲರೂ ನನ್ನನ್ನು ಕೇಳುತ್ತಾರೆ, ನಿಮ್ಮನ್ನು ಯಾರೂ ಪ್ರಶ್ನಿಸುವುದಿಲ್ಲ. ಎಲ್ಲರಿಗೂ ನಾನು ಉತ್ತರಿಸಬೇಕಾಗುತ್ತದೆ, ಮಾತನಾಡಬೇಕಾಗುತ್ತದೆ. ಆದರೆ ಇದರರ್ಥ ನಾನು ಧರ್ಮಾಂತರ ಮಾಡುವುದಿಲ್ಲ ಎಂದಲ್ಲ. ನನ್ನ ತೀರ್ಮಾನ ಗಟ್ಟಿಯಾಗಿದೆ ಆದರೆ ನಿಮ್ಮ ತೀರ್ಮಾನ ಅರಿಯಬೇಕಾಗಿದೆ. ಹಿಂದೂ ಧರ್ಮ, ಧರ್ಮವಲ್ಲ ಅದು ಮಹಾರೋಗ. (ನಾವು ಕುಳಿತ ಕಡೆ ತಿರುಗಿ) ಈ ರೋಗ ಹಿಂದೂಗಳಿಗೆ ತಗುಲಿದೆ ವಿನಃ ನಮಗಲ್ಲ. ಆ ರೋಗದ ಸೋಂಕು ನಮ್ಮನ್ನು ಬಾಧಿಸುತ್ತಿದೆ. ಸೋಂಕು ರೋಗ ತಗುಲಿದ ವ್ಯಕ್ತಿಯನ್ನು ಯಾವ ರೀತಿ ಪ್ರತ್ಯೇಕವಾಗಿ ಇರಿಸಬೇಕೋ ಅದೇ ರೀತಿ ಹಿಂದೂಗಳಿಂದ ನಾವು ದೂರ ಆಗಬೇಕಿದೆ. ರೋಗ ತಗುಲಿರುವುದು ಹಿಂದೂಗಳಿಗೆ ವಿನಃ ನಮಗಲ್ಲ. ನಾವು ಅಸ್ಪೃಶ್ಯರು ಯಾವ ಪಾಪವನ್ನೂ ಮಾಡಿಲ್ಲ. ಪಾಪ ಮಾಡಿದ್ದು ಈ ಸ್ಪೃಶ್ಯರು ಅದರ ಫಲ ಮಾತ್ರ ನಾವು ಅನುಭವಿಸಬೇಕಾಗಿರುವುದರಿಂದ ನಾವೇ ಅವರಿಂದ ದೂರ ಆಗಬೇಕಿದೆ. ಒಂದು ವೇಳೆ ಹಿಂದೂಗಳಿಗೂ ಈ ರೋಗದಿಂದ ಮುಕ್ತಿ ಪಡೆಯಬೇಕಿದ್ದರೆ ಅವರು ಕೂಡ ನಮ್ಮೊಂದಿಗೆ ಬರಬಹುದು.

ಹಿಂದೂ ಧರ್ಮ ಇಂದು ಧರ್ಮವಾಗಿ ಉಳಿದಿಲ್ಲ. ಅದು ಒಂದು ಧರ್ಮವೆಂದು ಎಂದು ಯಾರು ಬೇಕಾದರೂ ನನಗೆ ಸಿದ್ಧ ಮಾಡಿ ತೋರಿಸಲಿ. ಹಿಂದೂ ಧರ್ಮ ವಿಷವಿದ್ದಂತೆ, ವಿಷ ಎಂದಿಗೂ ಅಮೃತವಾಗಿ ಪರಿವರ್ತಿತವಾಗಲಾರದು. ಈ ಧರ್ಮದಲ್ಲಿನ ಜನರು ಅಸ್ಪೃಶ್ಯರನ್ನು ಕನಿಷ್ಠ ಮನುಷ್ಯರಂತೆ

ನೋಡಲಿಲ್ಲವೋ ಅಂತಹದ್ದಕ್ಕೆ ಧರ್ಮ ಎಂದು ಹೇಗೆ ಹೇಳುವುದು? ವಿಷವನ್ನು ಅಮೃತವನ್ನಾಗಿಸುವ ಉಪಾಯ ಯಾರಿಗಾದರೂ ಗೊತ್ತಿದ್ದರೆ ಅವರು ನನಗೆ ತಿಳಿಸಲಿ. ವಿಷ, ಅಮೃತವಾಗಿ ಪರಿವರ್ತನೆಯಾಗಲು ಸಾಧ್ಯವೇ ಇಲ್ಲ. ಅಡಿಗೆಯಲ್ಲಿ ಉಪ್ಪು ಹೆಚ್ಚಾದರೆ ಅದನ್ನು ಕಡಿಮೆ ಮಾಡಬಹುದು. ಹುಳಿಯಾದರೆ ಅದನ್ನು ಸಿಹಿ ಮಾಡಬಹುದು ಆದರೆ ವಿಷವನ್ನು ಅಮೃತವಾಗಿಸುವುದು ಸಾಧ್ಯವೇ ಇಲ್ಲ. ನಾನೇ ಸ್ವತಃ ಅಡುಗೆ ಮಾಡುವುದನ್ನು ಕಲಿತಿದ್ದೇನೆ. ಯಾವುದೇ ಗೃಹಿಣಿಗಿಂತ ಚೆನ್ನಾಗಿ ನಾನು ಅಡುಗೆ ಮಾಡಬಲ್ಲೆ. ಬಹುಶಃ ನಿಮಗೆ ಗೊತ್ತಿಲ್ಲದಿರಬಹುದು ಒಂದು ವೇಳೆ ಯಾವುದೇ ಉದ್ಯೋಗ ಕೈಗೆ ಹತ್ತದಿದ್ದರೆ ಕನಿಷ್ಠ ಅಡುಗೆಯವನಾಗಿ ಕೆಲಸ ಮಾಡುವಾ ಎಂದು ಕಲಿತಿದ್ದೆ. ಒಂದು ವೇಳೆ ಅಡುಗೆಯಲ್ಲಿ ಉಪ್ಪು ಹೆಚ್ಚಾದರೆ ಅದನ್ನು ಕಡಿಮೆ ಮಾಡುವ ತಂತ್ರ ಮಹಿಳೆಯರಿಗೆ ಗೊತ್ತಿರಲಿಕ್ಕಿಲ್ಲ. ಆದರೆ ಅಂತಹ ತಂತ್ರ ನನಗೆ ಗೊತ್ತಿದೆ. ಉಪ್ಪಾದ ಅಡುಗೆ ಕುದಿಯಲು ಇಟ್ಟು ಅದರಲ್ಲಿ ಒಂದು ತುಂಡು ಕಾಗದ ಹಾಕಿದರೆ ಉಪ್ಪಿನಂಶ ಕಡಿಮೆಯಾಗುತ್ತದೆ. ಈ ಮಾತಿನ ತಾತ್ಪರ್ಯ ಇಷ್ಟೇ. ಎಲ್ಲವನ್ನೂ ಬೇಕಾದ ಹಾಗೆ ಬದಲಿಸಬಹುದು ಆದರೆ ವಿಷ ಮಾತ್ರ ಅಮೃತವಾಗಲಾರದು.

ಕೆಲವೇ ದಿನಗಳ ಹಿಂದೆಯಷ್ಟೆ ನನಗೆ ಗುಜರಾತ್‌ನಿಂದ ಒಂದು ಪತ್ರ ಬಂದಿತ್ತು. ಆ ಪತ್ರದಲ್ಲಿನ ಸಾರಾಂಶ ಕೇಳಿದ ಬಳಿಕ ಹಿಂದೂ ಧರ್ಮ ಒಂದು ವಿಷ ಎನ್ನುವುದು ನಿಮಗೆ ಮನದಟ್ಟಾಗುತ್ತದೆ. ಗುಜರಾತ್‌ನ ಒಂದು ಹಳ್ಳಿಯಲ್ಲಿರುವ ಜೈನ ವಿದ್ಯಾರ್ಥಿ ವಸತಿ ಗೃಹದಲ್ಲಿ ಸುಮಾರು ೨೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಆ ವಸತಿ ಗೃಹಕ್ಕೆ ಓರ್ವ ವೃದ್ಧ ಸೂಪರಿಂಟೆಂಡೆಂಟ್ ಎಂದು ಕಾರ್ಯ ನಿರ್ವಹಿಸುತ್ತಿದ್ದ. ಅದೇ ವಸತಿ ಗೃಹದ ಆವರಣದಲ್ಲಿ ಕೆಲಸ ಮಾಡುತ್ತಿದ್ದ ಅಸ್ಪೃಶ್ಯ ದಂಪತಿಗೆ ಸುಮಾರು ಮೂರು–ನಾಲ್ಕು ವರ್ಷದ ಮಗ ಇದ್ದ. ಕೆಲಸಕ್ಕೆ ಹೋಗುವ ವೇಳೆ ಮಗನನ್ನು ಬೆನ್ನಿಗೆ ಕಟ್ಟಿಕೊಂಡು ಹೋಗುತ್ತಿದ್ದರು. ಆದರೆ ಒಂದು ದಿನ ಆ ಮಗುವನ್ನು ಆಡುವುದಕ್ಕೆ ಬಿಟ್ಟು ದಂಪತಿ ಬೇರೆ ಎಲ್ಲೋ ಕೆಲಸಕ್ಕೆ ಹೋಗಿದ್ದರು. ಮಗು ಆಡುತ್ತ ಆಡುತ್ತ ಬೋರ್ಡಿಂಗ್ ಬಾಗಿಲ ಬಳಿ ಇದ್ದ ಚಿಕ್ಕ ನೀರಿನ ತೊಟ್ಟಿ ಬಳಿ ಬಂದಿತು. ಈ ನೀರಿನ ತೊಟ್ಟಿ ಕೂಡ ಅಷ್ಟೇನು ದೊಡ್ಡದಿರಲಿಲ್ಲ. ನಾಲ್ಕೈದು ಅಡಿ ಆಳ ಮತ್ತು ಎರಡೂವರೆ ಅಡಿ ಅಗಲದ ಈ ತೊಟ್ಟಿಯ ಮೇಲೆ ನಿಂತಿದ್ದ ಮಗು ಆಯತಪ್ಪಿ ಕೆಳಗೆ ತೊಟ್ಟಿಗೆ ಬಿತ್ತು. ಮಗು ಬಿದ್ದಿರುವುದನ್ನು ಆ ವೃದ್ಧ ಸೂಪರಿಂಟೆಂಡೆಂಟ್ ಮತ್ತು ೨೦ ವಿದ್ಯಾರ್ಥಿಗಳು ನೋಡಿದರೂ ಮಗುವನ್ನು ತೊಟ್ಟಿಯಿಂದ ಎತ್ತಿ ರಕ್ಷಿಸಲಿಲ್ಲ. ಮಗು ಬಿದ್ದಿದ್ದನ್ನು ಮಕ್ಕಳು ಮಗುವಿನ ತಂದೆ ತಾಯಿಗೆ ತಿಳಿಸಿದರು. ತಂದೆ ತಾಯಿ ಬಿದ್ದ ಮಗುವನ್ನೆತ್ತಿಕೊಂಡಿದ್ದು ಆಸ್ಪತ್ರೆಗೆ ಧಾವಿಸಿದರು. ಮಗುವನ್ನು ಪರೀಕ್ಷಿಸಿದ ವೈದ್ಯ, ಎರಡು ಗಂಟೆ ಮೊದಲೇ ಮಗು ಮೃತಪಟ್ಟಿದೆ ಎಂದು ಹೇಳಿದ. ಈಗ ಉದ್ಭವಿಸಿರುವ ಪ್ರಶ್ನೆ ಎಂದರೆ ಆ ಇಪ್ಪತ್ತು ಮಕ್ಕಳು ಮತ್ತು ಆ ವೃದ್ಧ ಮಗುವನ್ನು ಏಕೆ ರಕ್ಷಿಸಲಿಲ್ಲ? ಈ ಪ್ರಶ್ನೆಗೆ ಉತ್ತರ ಅತ್ಯಂತ ಸರಳ, ಆ ಮಗು ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದ್ದು ಕಾರಣ. ಹಿಂದೂ ಧರ್ಮ ಅಂದರೆ ಇಂತಹದ್ದು, ಅಂತಹವರಿಂದ ಮಾನವೀಯತೆ ಅಪೇಕ್ಷಿಸುವುದು ವ್ಯರ್ಥ. ಹಿಂದೂ ಸಮಾಜದಿಂದ ಅಸ್ಪೃಶ್ಯರಿಗೆ ಎಂದಿಗೂ ನ್ಯಾಯ ಸಿಗಲಿಕ್ಕಿಲ್ಲ. ರಕ್ತದಾಹಿ ರೋಗ ಅಂಟಿಸಿಕೊಂಡಿರುವ ಹಿಂದೂ ಧರ್ಮದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕೆ ಉಳಿದಿರುವ ಏಕೈಕ ಉಪಾಯ ಎಂದರೆ ಧರ್ಮಾಂತರ. ಕೆಲವೇ ದಿನಗಳ ಹಿಂದೆಯಷ್ಟೇ ನಾಸಿಕ್ ಜಿಲ್ಲೆಯಲ್ಲಿ ನಡೆದ ಘಟನೆಯ ಕುರಿತ ವರದಿ ಓದಿರಬಹುದು. ಇಬ್ಬರು ಮಹಾರ್ ಮಹಿಳೆಯರ ಹತ್ತಿರ ಎರಡು ಹುಲ್ಲಿನ ಹೊರೆ ಇದ್ದವು. ಧರ್ಮಾಂತರದ ಘೋಷಣೆಯಿಂದ ಆಕ್ರೋಶಗೊಂಡಿರುವ ಮರಾಠರು ಆ ಮಹಿಳೆಯರು ಮರಾಠರ ಹೊಲಗಳಿಂದ ಹುಲ್ಲು ತಂದಿದ್ದಾರೆಂದು ಎಂದು ಆರೋಪಿಸಿದರು. ಆ

ಮಹಿಳೆಯರು ಸಾಕಷ್ಟು ಬಾರಿ ವಿನಂತಿಸಿದರೂ ಮರಾಠರು ಅವರ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೇ ಹಲ್ಲೆ ಮಾಡಿದರು. ಅಲ್ಲದೇ ಮಹಾರ್‌ರ ಹೊಲಗಳಿಗೆ ತಮ್ಮ ಜಾನುವಾರುಗಳನ್ನು ನುಗ್ಗಿಸಿ ಇಡೀ ಪೈರು ಹಾಳು ಮಾಡಿದರು.

ಅಸ್ಪೃಶ್ಯ ಸಮಾಜದತ್ತ ಸ್ಪೃಶ್ಯ ಸಮಾಜದ ವರ್ತನೆ ಹೀಗಿರುವುದರಿಂದಲೇ ಹಿಂದೂ ಧರ್ಮ ನರಕವಾಗಿಬಿಟ್ಟಿದೆ. ಧರ್ಮಾಂತರದ ವಿಚಾರದಲ್ಲಿ ನೀವು ಯಾವ ತೀರ್ಮಾನ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ನೋಡುವುದಕ್ಕೆ ನಾನಿಲ್ಲಿ ನಿಂತಿದ್ದೇನೆ. ನನಗೆ ನಿಮ್ಮ ನಾಯಕತ್ವ ಆಗಲಿ ಅಥವಾ ಇನ್ನಾವುದೇ ಅಪೇಕ್ಷೆ ಇಲ್ಲ. ನನ್ನ ಅಭಿವೃದ್ಧಿ ನನ್ನ ಕೈಯಲ್ಲಿ ಇದೆ. ಧರ್ಮಾಂತರ ಮಾಡುವುದು ಇದ್ದರೆ ಎಲ್ಲರೂ ನನ್ನೊಂದಿಗೆ ಬನ್ನಿ. ಇನ್ನೊಂದೆರಡು ತಿಂಗಳುಗಳಲ್ಲಿ ಮುಂಬೈ ಪ್ರದೇಶದ ಮಹಾರ್ ಸಮಾವೇಶ ನಡೆಯಲಿದ್ದು, ಅದರ ತೀರ್ಮಾನದ ಬಳಿಕ ಇತರ ಜಾತಿಯ ಸಮಾವೇಶಗಳನ್ನು ನಡೆಸಲಾಗುವುದು ಮತ್ತು ಅಂತಿಮವಾಗಿ ಭಾರತದ ಎಲ್ಲ ಅಸ್ಪೃಶ್ಯರ ಸಮಾವೇಶ ನಡೆಸಿ ಅಂತಿಮ ನಿರ್ಣಯ ತೆಗೆದುಕೊಳ್ಳಲಾಗುತ್ತದೆ. ಇದಕ್ಕೆ ಸಮಯವಂತೂ ಬೇಕೇ ಬೇಕು. ಸಾಕಷ್ಟು ಸಮಯವನ್ನು ನಾನು ನಿಮಗೆ ನೀಡುತ್ತಿದ್ದೇನೆ. ಅಷ್ಟರೊಳಗೆ ನಿಮ್ಮ ತೀರ್ಮಾನ ಆಗಲಿ.

ಧರ್ಮಾಂತರ ಎಂದರೆ ಹೇಗೆ ಏನು ಮಾಡುವುದು ಎಂದು ಈಗ ಹೇಳುವುದರಲ್ಲಿ ಅರ್ಥವಿಲ್ಲ. ನೀವು ಈಗ ಇರುವ ಮನೆಯನ್ನು ಶಾಶ್ವತವಾಗಿ ತೊರೆಯುತ್ತಿದ್ದೀರೆಂದು ನಿಶ್ಚಯಿಸಿಕೊಂಡರೆ ಮುಂದೆ ನೀವು ಯಾವ ಮಾರ್ಗ ಅನುಸರಿಸಬೇಕು ಎನ್ನುವುದನ್ನು ತಿಳಿಸುತ್ತೇನೆ. ನೀವು ಹಿಂದೂ ಧರ್ಮದಲ್ಲಿ ಇರುವ ಕಾರಣ ನಿಮಲ್ಲಿ ಬುದ್ಧಿ ಇಲ್ಲ. ನಾಚಿಕೆ ಇಲ್ಲ, ಮಾನ ಮರ್ಯಾದೆ ಇಲ್ಲ. ಈ ಕಾರಣಕ್ಕಾಗಿಯೇ ನಿಮಲ್ಲಿ ಮನುಷ್ಯತ್ವ ಇಲ್ಲ. ಇಷ್ಟು ಹೇಳಿ ನನ್ನ ಭಾಷಣ ಪೂರ್ಣಗೊಳಿಸುತ್ತೇನೆ.

ಇಷ್ಟು ಹೇಳಿ ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣವನ್ನು ಏಕಾಏಕಿ ನಿಲ್ಲಿಸಿ ತಮ್ಮ ಸ್ವಸ್ಥಾನಕ್ಕೆ ಮರಳಿ ಆಸೀನರಾದರು. ಭಾಷಣ ಪೂರ್ಣಗೊಳಿಸುವ ಮುನ್ನ ಅವರ ಮುಖ ಗಂಭೀರ ಮತ್ತು ಆಕ್ರೋಶದಿಂದ ಕೆಂಪಾಗಿತ್ತು. ಅವರು ಯಾವ ಪರಿ ಭಾವಾವೇಶಕ್ಕೆ ಒಳಗಾಗಿದ್ದರೆಂದರೆ ಅವರ ಬಾಯಿಯಿಂದ ಇನ್ನು ಶಬ್ದಗಳು ಹೊರಡುವುದು ಅಸಾಧ್ಯ ಎನ್ನುವಂತಾಗಿ ತಮ್ಮ ಮಾತುಗಳನ್ನು ಮುಗಿಸಿದ್ದರು. ಆದರೆ ಪ್ರೇಕ್ಷಕರ ಮೇಲೆ ಅವರ ಮಾತುಗಳ ಪರಿಣಾಮ ಭಯಂಕರವಾಗಿತ್ತು. ಅವರ ಮಾತಿನ ಶೈಲಿ ಅತ್ಯಂತ ಸರಳ ಮತ್ತು ಸ್ಪಷ್ಟವಾಗಿತ್ತು. ಅವರ ಮಾತುಗಳಲ್ಲಿನ ಕಾಠಿಣ್ಯತೆ ಪ್ರೇಕ್ಷಕರ ಅಂತಃಕರಣ ಸಿಗಿದು ಹಾಕಿತ್ತು. ಮಧ್ಯಮ ಸ್ವರದಲ್ಲಿದ್ದ ಅವರ ಭಾಷಣದಲ್ಲಿ ಏರಿಳಿತವಿರಲಿಲ್ಲ. ಅಲಂಕಾರಿಕ ಭಾಷೆಯ ನಾಟಕೀಯತೆಯೂ ಇರಲಿಲ್ಲ. ಚಿಕ್ಕ ಚೊಕ್ಕ ವಾಕ್ಯಗಳು ಸ್ಪಷ್ಟವಾಗಿದ್ದವು. ಈ ಭಾಷಣ ಮುಗಿದ ಕೂಡಲೇ ಸಭೆ ಸ್ವಲ್ಪ ಹೊತ್ತಿನಲ್ಲಿ ಮುಕ್ತಾಯವಾಯಿತು. ಅಂಬೇಡ್ಕರ್ ಅವರ ಭಾಷಣ ಪ್ರೇಕ್ಷಕರ ಮೇಲೆ ಪ್ರಭಾವವನ್ನು ಬೀರಬೇಕೆಂದು ಅಧ್ಯಕ್ಷರು ಹೇಳಿ ಡಾ.ಅಂಬೇಡ್ಕರ್ ಅವರ ಬಗ್ಗೆ ಗೌರವಾದರ ತೋರಿ ಸಭೆ ಮುಕ್ತಾಯಗೊಳಿಸಿದರು. ಕೊನೆಗೆ ಕೇವಲ ಪುಷ್ಪಗುಚ್ಛ ಹಾರ ಸಮರ್ಪಣೆಯಾಯಿತು. ಡಾ. ಅಂಬೇಡ್ಕರ್, ಡಾ. ಸೋಳಂಕಿ ಮತ್ತು ದೇವರಾಯ ನಾಯಿಕ ಅವರ ಕೊರಳಿಗೆ ಐವತ್ತಕ್ಕೂ ಹೆಚ್ಚು ಪುಷ್ಪಹಾರ ಸಮರ್ಪಣೆಯಾಯಿತು. ಸಮಾರಂಭ ಮುಗಿದ ಕೂಡಲೇ ಜನರು ಡಾ. ಅಂಬೇಡ್ಕರ್ ಹೆಸರಿನಲ್ಲಿ ಜಯಘೋಷ ಹಾಕುತ್ತ ತೆರಳಿದರೆ ಡಾ. ಅಂಬೇಡ್ಕರ್ ಸೇರಿದಂತೆ ಅವರ ಸಂಗಡಿಗರು ಜನ ದಟ್ಟಣೆಯಲ್ಲಿ ತಮ್ಮ ವಾಹನಗಳತ್ತ ತೆರಳಿದರು.

---

ನಿರ್ಭೀಡ: ಡಿಸೆಂಬರ್ ೧೫, ೧೯೩೫

## ೭೯.

# ಧರ್ಮಾಂತರದಿಂದ ಅಲ್ಪಸಂಖ್ಯಾತರ ಕಲ್ಯಾಣ

ಯವಲಾದಲ್ಲಿ ಜರುಗಿದ ಅಸ್ಪೃಶ್ಯ ವರ್ಗದ ಸಮಾವೇಶದಲ್ಲಿ ಧರ್ಮಾಂತರ ಕುರಿತು ಡಾ. ಅಂಬೇಡ್ಕರ್ ಅವರು ಮಾಡಿದ ಘೋಷಣೆಯಿಂದ ಇಡೀ ಭಾರತದಲ್ಲಿ ದೊಡ್ಡ ಪ್ರಮಾಣದ ವಾದ ವಿವಾದವೇ ಹುಟ್ಟಿಕೊಂಡಿತ್ತು. ಈ ಘೋಷಣೆಯಿಂದ ಇಡೀ ಸ್ಪೃಶ್ಯ ಹಿಂದೂ ಸಮಾಜ ಹೆದರಿಕೊಂಡು ಕುಳಿತಿತ್ತು. ಅಸ್ಪೃಶ್ಯ ಹಿಂದೂಗಳಿಂದ ಅವರ ಘೋಷಣೆಗೆ ದಶ ದಿಕ್ಕುಗಳಿಂದ ಬೆಂಬಲ ವ್ಯಕ್ತವಾಗಲು ಆರಂಭವಾಯಿತು. ಈ ಘೋಷಣೆಗೆ ಮಹಾರಾಷ್ಟ್ರದ ಬೆಂಬಲ ಘೋಷಿಸುವ ಉದ್ದೇಶದಿಂದ ಜನವರಿ ೧೧ ಮತ್ತು ೧೨, ೧೯೩೬ರಂದು ಪುಣೆಯ ಅಹಿಲ್ಯಾಶ್ರಮದಲ್ಲಿ ಅಖಿಲ ಮಹಾರಾಷ್ಟ್ರ ಅಸ್ಪೃಶ್ಯ ಯುವಕರ ಸಮಾವೇಶ ಆಯೋಜಿಸಲಾಗಿತ್ತು. ಈ ಸಮಾವೇಶದ ಅಧ್ಯಕ್ಷತೆಯನ್ನು ಮದ್ರಾಸ್‌ನ ಮುಖಂಡ ಪ್ರೊ. ಶಿವರಾಜ ವಹಿಸಿಕೊಂಡಿದ್ದರು. ಸಮಾವೇಶಕ್ಕೆ ಮುನ್ನ ಅಧ್ಯಕ್ಷರನ್ನು ಪುಣೆಯ ಕ್ಯಾಂಪ್‌ನಿಂದ ಭಾರಿ ಮೆರವಣಿಗೆಯಲ್ಲಿ ವೇದಿಕೆಗೆ ಕರೆತರಲಾಗಿತ್ತು. ಸಂಜೆ ೫.೩೦ಕ್ಕೆ ಸಮಾವೇಶ ಆರಂಭವಾಯಿತು. ಸಮಾವೇಶದಲ್ಲಿ ಸುಮಾರು ೧೦ ಸಾವಿರ ಜನರು ಸೇರಿದ್ದರು. ಇದರಲ್ಲಿ ಕೆಲವು ಸ್ಪೃಶ್ಯ ಹಿಂದೂಗಳು, ಮುಸ್ಲಿಂ ಮತ್ತು ಸಿಖ್ಖರು ಕೂಡ ಇದ್ದರು. ಉಪಸ್ಥಿತರಿದ್ದ ಅತಿಥಿಗಳ ಪೈಕಿ ಗೋವಿಂದರಾವ್ ಮಡಗಾಂವಕರ್, ತ್ರಿಭುವನ್ ಸೇಠ್ ಕಿರಾಡ್, ಶ್ರೀ ಭಾವುರಾವ್ ಪಾಟೀಲ, ಶ್ರೀ. ಶಾಂತಾರಾಮ ಪೋತ್ನಿಸ್, ಶ್ರೀ. ಅಶ್ರಫ್ ಅಲಿ, ಮೀರ್ ಮುನ್ಸಿ, ಭಾಲದಾರ್, ಆರ್.ಬಿ. ಭಾಗವತ್, ಡಾ. ಅಣ್ಣಾಸಾಹೇಬ ನವಲೆ, ಸರ್ದಾರ್ ದರ್ಬಾರ್ ಸಿಂಗ್, ಸುಭೇದಾರ ಘಾಟಗೆ, ಸುಭೇದಾರ ದುತ್ರೆ, ಮಹಾಡ್‌ನ ಶ್ರೀ. ಸುರೇಂದ್ರನಾಥ ಟಿಪ್ನಿಸ್, ಶ್ರೀ. ಅ. ವಿ. ಚಿತ್ರೆ, ಶ್ರೀ. ಸೀತಾರಾಮ ಲಾಂಡಗೆ, ಅಮೃತಸರ್‌ನ ಸರ್ದಾರ ಗುರುಮುಖಸಿಂಗ್, ತುಳಸಿ ಸಿಂಗ್, ಅಗ್ರವಾಲ್, ನಾರಾಯಣಸಿಂಗ್, ಇಂದ್ರಸಿಂಗ್, ಸರ್ದಾರ ತೇಜೋಸಿಂಗ್, ಸರ್ದಾರ್ ಸುಬೇರ್ ಸಿಂಗ್, ಎಸ್. ಎಸ್. ಜಗತಾಪ್, ಜೆ.ಟಿ. ಅಲ್ವಾರ್, ಶ್ರೀ. ಸಸಾನೆ, ಶ್ರೀ. ತಾತ್ಯಾ ಶಿಂಧೆ ಸೇರಿದಂತೆ ಇತರರು ಅಲ್ಲದೇ ಪರ ಊರಿನಿಂದ ಆಗಮಿಸಿದ್ದ ಪ್ರತಿನಿಧಿಗಳು ಇದ್ದರು.

ದಲಿತ ವರ್ಗದ ಪ್ರಮುಖ ಮುಖಂಡ ಡಾ. ಬಿ. ಆರ್. ಅಂಬೇಡ್ಕರ್ ಅವರು ಸಮಾವೇಶಕ್ಕೆ ಸ್ವಲ್ಪ ತಡವಾಗಿ ಆಗಮಿಸಿದ ಕಾರಣಕ್ಕೆ ಆರಂಭದಲ್ಲಿಯೇ ಜನರಲ್ಲಿ ನಿರಾಸೆ ಮೂಡಿದ್ದು ಸ್ಪಷ್ಟವಾಗಿತ್ತು. ವೇದಿಕೆಯಲ್ಲಿ ಅಧ್ಯಕ್ಷರ ಆಸನ ಪಕ್ಕದ ಇನ್ನೊಂದು ಆಸನದ ಮೇಲೆ ಡಾ. ಅಂಬೇಡ್ಕರ್ ಅವರ ಭಾವಚಿತ್ರವನ್ನು ಪುಷ್ಪಹಾರ ಹಾಕಿ ಇರಿಸಲಾಗಿತ್ತು.

ಮಹಾರಾಷ್ಟ್ರ ತರುಣ ಅಸ್ಪೃಶ್ಯ ಸಮಾವೇಶದ ಅಧ್ಯಕ್ಷ ಡಾ. ಸೋಳಂಕಿ ಅವರ ಭಾಷಣದ ಬಳಿಕ ದಲಿತ ವರ್ಗದ ಹೆಮ್ಮೆಯ ನಾಯಕ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾಷಣಕ್ಕೆ ನಿಂತರು. ಸುಮಾರು ಐದು ನಿಮಿಷಗಳ ಕಾಲ ಪ್ರೇಕ್ಷಕರ ಕರತಾಡನ, ಅಂಬೇಡ್ಕರ್ ಅವರ ಜಯಕಾರದ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು. ಜನರ ಹರ್ಷೋದ್ಗಾರಕ್ಕೆ ಕಾರ್ಯಕರ್ತರು ತಡೆ ಹಾಕುವ ವಿಫಲ ಯತ್ನ ಮಾಡಿದರಾದರೂ ಯಶಸ್ವಿಯಾಗಲಿಲ್ಲ. ಐದು ನಿಮಿಷಗಳ ಬಳಿಕ ಕರತಾಡನದ ಸದ್ದು ಅಡಗಿ ಎಲ್ಲೆಡೆ ಮೌನ ತನ್ನ ಸಾಮ್ರಾಜ್ಯ ವಿಸ್ತರಿಸಿತು. ಆಗ ಡಾ. ಅಂಬೇಡ್ಕರ್ ತಮ್ಮ ಭಾಷಣ ಆರಂಭಿಸಿದರು.

ಅಧ್ಯಕ್ಷರೆ, ನನ್ನ ಬಂಧುಗಳೇ ಮತ್ತು ಭಗಿನಿಯರೆ,

ಇಂದು ಈ ಸ್ಥಳದಲ್ಲಿ ಮಾತನಾಡುವ ವ್ಯಕ್ತಿಗಳು ತಮ್ಮ ಜಾತಿ ಹೇಳಿ ಮಾತನಾಡಬೇಕು ಎಂದು ಅಧ್ಯಕ್ಷರು ಕಟ್ಟಪ್ಪಣೆ ಹೊರಡಿಸಿದ್ದಾರೆ. ನನ್ನ ಈ ಕಪ್ಪು ದಾರದ (ಗಡಿಯಾರದ ಕಪ್ಪು ಪಟ್ಟಿ ತೋರಿಸುತ್ತ) ಮೇಲೆ ನನ್ನ ಜಾತಿ ಯಾವುದು ಎಂದು ತಮಗೆ ಗೊತ್ತಾಗಿರಬಹುದು ಎಂದು ಭಾವಿಸುತ್ತೇನೆ. ಇಂದಿನ ಸಮಾವೇಶದಲ್ಲಿ ಬೇರೆ ವಿಷಯದ ಬಗ್ಗೆ ಮಾತನಾಡುವ ಅಗತ್ಯವಿದೆಂದು ನಾನು ಭಾವಿಸುವುದಿಲ್ಲ. ಈ ಸಮಾವೇಶ ನಡೆಸುವುದು ಎಂದು ತೀರ್ಮಾನವಾದಾಗ ಇಲ್ಲಿನ ಯುವಕರು ಈ ಸಮಾವೇಶದ ಅಧ್ಯಕ್ಷತೆಯನ್ನು ನಾನು ವಹಿಸಿಕೊಳ್ಳಬೇಕು ಎಂದು ಹೇಳಿದ್ದರು. ನಾನು ತರುಣ ಎಂದು ಗುರುತಿಸಿಕೊಳ್ಳುವುದಿಲ್ಲವಾದ ಕಾರಣ ಸಮಾವೇಶದ ಅಧ್ಯಕ್ಷತೆಯ ಗೌರವವನ್ನು ನಿರಾಕರಿಸಿದ್ದೆ. ಇಂದಿನ ಸಮಾವೇಶದ ಅಧ್ಯಕ್ಷರಾಗಿರುವ ಪ್ರೊ. ಶಿವರಾಜ್ ಅವರಿಗೆ ನಾನು ಆಭಾರಿಯಾಗಿದ್ದೇನೆ. ಪ್ರೊ. ಶಿವರಾಜ್ ಅವರಿಗೆ ತಮ್ಮ ಕಾಲೇಜಿನ ಅನೇಕ ಕೆಲಸದ ಒತ್ತಡಗಳಿದ್ದರೂ ಅವರು ಇಲ್ಲಿಗೆ ಆಗಮಿಸಿ ಸಮಾವೇಶದ ಅಧ್ಯಕ್ಷತೆ ವಹಿಸಿ ಯಶಸ್ವಿಗೊಳಿಸಿದ್ದಾರೆ. ಈ ದೇಶದಲ್ಲಿ ಯಾವ ಪ್ರಮಾಣದಲ್ಲಿ ಜಾತಿಭೇದ ಇದೆಯೋ ಅದೇ ಪ್ರಮಾಣದಲ್ಲಿ ಪ್ರಾಂತಭೇದ ಕೂಡ ಇದೆ. ನಮ್ಮ ಉನ್ನತಿಗಾಗಿ ಈ ದೇಶದ ಎಲ್ಲ ಪ್ರಾಂತಗಳ ಅಸ್ಪೃಶ್ಯರು ಸಂಘಟಿತರಾಗಬೇಕಾದ ಅಗತ್ಯವಿದೆ. ಆದರೆ ಪ್ರಾಂತ ಪ್ರಾಂತಗಳಲ್ಲಿ ಭಾಷಾ ವೈವಿಧ್ಯತೆ ಅಸ್ಪೃಶ್ಯ ಸಂಘಟನೆಗೆ ಕಂಟಕವಾಗಿ ಪರಿಣಮಿಸಿದೆ. ಈ ದೃಷ್ಟಿಯಿಂದ ನೋಡಿದಲ್ಲಿ ಮುಂಬೈ ಪ್ರದೇಶದ ಮತ್ತು ಮಹಾರಾಷ್ಟ್ರದ ದಲಿತ ಸಮಾಜ, ಮದ್ರದೇಶಿಯ ಅಸ್ಪೃಶ್ಯ ಮುಖಂಡನಿಗೆ ಈ ಸಮಾವೇಶದ ಅಧ್ಯಕ್ಷ ಸ್ಥಾನ ನೀಡಿರುವುದು ಸಂಘಟನೆಯ ದೃಷ್ಟಿಯಲ್ಲಿ ಅತ್ಯುತ್ತಮ ಬೆಳವಣಿಗೆ ಎಂದು ಹೇಳಬಹುದು. ಇನ್ನು ಮುಂದೆಯೂ ನಮ್ಮ ತರುಣರು, ವೃದ್ಧರು ಎಲ್ಲ ಕಡೆ ಈ ರೀತಿ ಸಂಘಟನೆ ಮಾಡಿ ಅಸ್ಪೃಶ್ಯ ಸಮಾಜದಲ್ಲಿ ಪ್ರೇಮ ಮತ್ತು ಸಹಕಾರ ಭಾವನೆ ಬೆಳೆಸಬೇಕು.

ಇದೀಗ ಆರಂಭವಾಗಿರುವ ನಮ್ಮ ಚಳವಳಿ ಅಂದರೆ ಅಸ್ಪೃಶ್ಯರ ಚಳವಳಿ ಗಾರುಡಿಗನ ತಮಾಷೆ ಅಥವಾ One man show ಎಂದು ಕೆಲವರು ಕರೆಯುತ್ತಿದ್ದಾರೆ. ಒಬ್ಬ ವ್ಯಕ್ತಿ ಆರಂಭಿಸಿದ ಚಳವಳಿ ಯಶಸ್ಸಿನ ತುದಿ ಮುಟ್ಟುವುದಿಲ್ಲ. ನಮ್ಮ ಚಳವಳಿ ಯಶಸ್ವಿಯಾಗಬೇಕಾದರೆ ಏಕ ವ್ಯಕ್ತಿಯ ದೊಂಬರಾಟ ಆಗಬಾರದು. ಅತನಿಗೆ ಇನ್ನಿತರ ಸಂಗಡಿಗರ ಅಗತ್ಯವಿರುತ್ತದೆ. ಈ ಆಟ ಆಡುವ ವೇಳೆ ಒಬ್ಬ ಗಾರುಡಿಗ ಕೆಳಗೆ ಬಿದ್ದು ಸತ್ತರೆ ಆತನ ಜಾಗದಲ್ಲಿ ಡೋಲಕ್ ತೆಗೆದುಕೊಂಡು ಇನ್ನೊಬ್ಬ ವ್ಯಕ್ತಿ ದೊಂಬರಾಟ ಮುಂದುವರಿಸಬೇಕಾಗುತ್ತದೆ. ಇಲ್ಲಿಯವರೆಗೆ ನನಗೆ ಈ ವಿಚಾರದಲ್ಲಿ ಆತಂಕ ಇತ್ತು. ಆದರೆ ಇಂದಿನ ಸಮಾವೇಶ ನೋಡಿದ ಬಳಿಕ ನನ್ನ ಮನಸ್ಸಿನ ಆತಂಕ ದೂರವಾಗಿದೆ. ನನ್ನ ನಂತರ ನನ್ನ ಕೆಲಸ ಮುಂದುವರಿಸುವುದಕ್ಕೆ ಪುಣೆಯಲ್ಲಿನ ಅನೇಕ ಯುವಕರು ಮುಂದೆ ಬರುತ್ತಾರೆ. ಇದಕ್ಕಾಗಿ ಅವರಿಗೆ ನನ್ನ ವಂದನೆಗಳು.

ಈ ಸಂದರ್ಭದಲ್ಲಿ ಇದಕ್ಕಿಂತ ಹೆಚ್ಚಿನ ವಿಶೇಷ ಸಂಗತಿ ಮಾತನಾಡುವ ಅಗತ್ಯವಿಲ್ಲ ಎಂದು ಭಾವಿಸುತ್ತೇನೆ. ಆದಾಗ್ಯೂ ಯಾವ ಮುಖ್ಯ ವಿಷಯದ ಕುರಿತು ಇಲ್ಲಿ ಚರ್ಚೆಯಾಯಿತೋ ಆ ವಿಷಯದ ಕುರಿತು ನಾನು ಮಾತನಾಡದೇ ಇದ್ದರೆ ತಮಗೆ ನಿರಾಸೆ ಆಗಬಹುದು. ಹೀಗಾಗಿ ನಾನು ಪ್ರಕಟಿಸಿದ ಧರ್ಮಾಂತರದ ಕುರಿತು ಒಂದಿಷ್ಟು ಮಾತನಾಡುತ್ತೇನೆ.

ನನ್ನ ಧರ್ಮಾಂತರ ಪ್ರಕಟಣೆ ಬಳಿಕ ಅನೇಕ ಜನರು ನನ್ನ ಬಳಿ ಬಂದು ಊಹಾಪೋಹದ ಮಾತುಗಳನ್ನು ಆಡುತ್ತಾರೆ. ಆ ಟೀಕಾಕಾರ ಮಂಡಳಿಯಲ್ಲಿ ಎರಡು ಪ್ರಕಾರಗಳಿವೆ. ಒಂದು ವಿಧದ ಜನರ ಅನಿಸಿಕೆ ಏನೆಂದರೆ ಅಸ್ಪೃಶ್ಯರ ಹಿತದೃಷ್ಟಿ ಗಮನದಲ್ಲಿ ಇರಿಸಿಕೊಂಡು ಇರುವ ಶರತ್ತುಗಳನ್ನು ಮೊದಲು

ಹಿಂದೂಗಳ ಎದುರು ಪ್ರಸ್ತಾಪಿಸಿ ಒಂದು ವೇಳೆ ಆ ಶರತ್ತುಗಳಿಗೆ ಸ್ಪೃಶ್ಯ ಹಿಂದೂಗಳು ಒಪ್ಪದಿದ್ದರೆ ಧರ್ಮಾಂತರಕ್ಕೆ ಹೋಗಬಹುದು ಎಂದು ಹೇಳುತ್ತಿದ್ದಾರೆ. ಇನ್ನೊಂದು ಗುಂಪು ಹೇಳುವುದು ಏನೆಂದರೆ ಅಸ್ಪೃಶ್ಯರ ಧರ್ಮಾಂತರದಿಂದ ಯಾವುದೇ ಲಾಭವಾಗುವುದಿಲ್ಲ. ಹೀಗಾಗಿ ಧರ್ಮಾಂತರ ಬೇಡ ಅನ್ನುತ್ತಿದ್ದಾರೆ.

ಧರ್ಮಾಂತರದಿಂದ ಲಾಭ ಆಗುತ್ತದೋ ಅಥವಾ ಇಲ್ಲವೋ ಅಥವಾ ಯಾವ ಪ್ರಮಾಣದಲ್ಲಿ ಅಸ್ಪೃಶ್ಯರಿಗೆ ಲಾಭವಾಗುತ್ತದೆ ಎನ್ನುವ ಕುರಿತು ಇಲ್ಲಿ ವಾದ ವಿವಾದ, ಚರ್ಚೆ ಮಾಡುವುದಕ್ಕೆ ಇದು ಸರಿಯಾದ ಸ್ಥಳವೂ ಅಲ್ಲ ಮತ್ತು ಸಮಯವೂ ಇಲ್ಲ. ಯಹೂದಿಗಳನ್ನು ಉದ್ದೇಶಿಸಿ ತಾನು ಸ್ಥಾಪಿಸಿದ ನೂತನ ಧರ್ಮದ ಕುರಿತು ಏಸು ಕ್ರಿಸ್ತ, "Be unto me, little children and I will save you from sin" (ಚಿಕ್ಕ ಮಕ್ಕಳು ಯಾವ ರೀತಿ ತನ್ನ ತಂದೆ ತಾಯಿಗಳ ಮೇಲೆ ವಿಶ್ವಾಸ ಇರಿಸುತ್ತಾರೋ ಅದೇ ರೀತಿ ನೀವು ನನ್ನ ಮೇಲೆ ವಿಶ್ವಾಸ ಇಡಿ ಮತ್ತು ನಾನು ಹೇಳಿದ ಧರ್ಮ ಪಾಲಿಸಿ) ಎಂದು ಹೇಳಿದ್ದ. ಅದೇ ರೀತಿ ಏಸು ಕ್ರಿಸ್ತನಂತೆ ನಾನು ಇಂದು ಹೇಳುವುದು ಇಷ್ಟೇ "ನನ್ನ ಮೇಲೆ ನಂಬಿಕೆ ಇಟ್ಟಿದ್ದೆಯಾದರೆ ಈ ಧರ್ಮಾಂತರದಿಂದ ನಿಮಗೆ ಲಾಭವೇ ಆಗುತ್ತದೆ. ಇಷ್ಟು ಹೇಳಿ ನಾನು ಇಲ್ಲಿಂದ ಹೋಗಬಹುದು. ಈ ವಿಷಯದಲ್ಲಿ ನಿಮಲ್ಲಿರುವ ಸಂಶಯಗಳನ್ನು ನಿವಾರಿಸುತ್ತೇನೆ. ಆದರೆ ಇಂದು ಸಮಯ ಇಲ್ಲದ ಕಾರಣ ಅಂದು ಯಹೂದಿಗಳಿಗೆ ಏಸು ಹೇಳಿದ ವಿಚಾರ ಹೇಳಿ ನನ್ನ ಮಾತಿಗೆ ವಿರಾಮ ನೀಡುತ್ತೇನೆ.

ಹಿಂದೂ ಧರ್ಮದಲ್ಲಿಯೇ ಇದ್ದುಕೊಂಡು ಸ್ವಾಭಿಮಾನದ ಜೀವನ ನಡೆಸುವುದಕ್ಕೆ ಬೇಕಾಗಿರುವ ಶರತ್ತುಗಳನ್ನು ಸ್ಪೃಶ್ಯ ಹಿಂದೂಗಳ ಎದುರು ಪ್ರಸ್ತಾಪಿಸಿ ಮತ್ತು ಆ ಶರತ್ತುಗಳನ್ನು ಸ್ಪೃಶ್ಯ ಹಿಂದೂಗಳು ಪಾಲಿಸುತ್ತಾರೋ ಅಥವಾ ಇಲ್ಲವೋ ನೋಡಿ ಎಂದು ಕೆಲವರು ನನಗೆ ಹೇಳುತ್ತಿದ್ದಾರೆ. ಅಂತಹ ಜನರಿಗೆ ನಾನು ಹೇಳುವುದು ಇಷ್ಟೇ, ನಾನು ವಿಧಿಸುವ ಆ ಶರತ್ತನ್ನು ಸ್ಪೃಶ್ಯ ಹಿಂದೂಗಳಿಂದ ಎಂದಿಗೂ ಪೂರ್ಣಗೊಳಿಸಲು ಸಾಧ್ಯವಿಲ್ಲ ಎನ್ನುವುದು ನನಗೆ ನೂರಕ್ಕೆ ನೂರರಷ್ಟು ಖಾತ್ರಿ ಇದೆ. ನನ್ನ ಶರತ್ತು ಹಣದ್ದಲ್ಲ ಅಥವಾ ರೊಟ್ಟಿಯದ್ದು ಅಲ್ಲ. ನನ್ನ ಶರತ್ತು ಅದಕ್ಕಿಂತ ದೊಡ್ಡದಿದೆ. ಆ ಶರತ್ತು ಏನು ಎನ್ನುವುದು ಕೇಳುವುದಿದ್ದರೆ ಮತ್ತು ಅದನ್ನು ಪೂರ್ಣಗೊಳಿಸುವುದಕ್ಕೆ ಅವರು ಸಿದ್ಧರಿದ್ದರೆ ನನ್ನ ಬಳಿ ಬರಬಹುದು. ಆದರೆ ಈ ಶರತ್ತು ಪೂರೈಸಲು ಸ್ಪೃಶ್ಯ ಹಿಂದೂಗಳಿಂದ ಆಗುವುದಿಲ್ಲ ಎನ್ನುವುದರಲ್ಲಿ ನನಗೆ ಸಂಶಯವೇ ಇಲ್ಲ.

ಜಗತ್ತಿನ ಪ್ರತಿಯೊಂದು ಸಮಾಜದ ಭವಿಷ್ಯ ಅದರ ಸುಶಿಕ್ಷಿತ ಜನರನ್ನು ಅವಲಂಬಿಸಿರುತ್ತದೆ. ಇಲ್ಲಿಯವರೆಗೆ ನೀವು ಚಳವಳಿಗಾಗಿ ರಸ್ತೆಗೆ ಇಳಿದಿಲ್ಲ ಅದಕ್ಕೆ ಕಾರಣ ನಿಮ್ಮಲ್ಲಿನ ಅನಕ್ಷರತೆ. ಶಿಕ್ಷಣದಿಂದ ಮನುಷ್ಯನಿಗೆ ಮತ್ತು ಸಮಾಜಕ್ಕೆ ದೃಷ್ಟಿಕೋನ ಲಭಿಸುತ್ತದೆ. ಈ ದೃಷ್ಟಿಯಿಂದ ನೋಡಿದರೆ ಹಿಂದೂ ಸಮಾಜದಲ್ಲಿ ಅಂತಹ ದೃಷ್ಟಿಕೋನ ಯಾರಿಗಾದರೂ ಇದೆ ಎಂದರೆ ಅದು ಬ್ರಾಹ್ಮಣ ಸಮಾಜಕ್ಕೆ ಮಾತ್ರ ಇದೆ ಎನ್ನುವುದನ್ನು ತಿರಸ್ಕರಿಸಲಿಕ್ಕಾಗದು. ಬ್ರಾಹ್ಮಣೇತರ ಮರಾಠಾ ಸೇರಿದಂತೆ ಇತರ ಸಮಾಜಗಳಿಗೆ ಅಂತಹ ದೃಷ್ಟಿಕೋನ ಇಲ್ಲ. ಈ ವಿಚಾರದಲ್ಲಿ ಬ್ರಾಹ್ಮಣರ ಮೇಲೆ ಅತಿದೊಡ್ಡ ಜವಾಬ್ದಾರಿ ಇದೆ. ಆದರೆ ಬ್ರಾಹ್ಮಣ ಜಾತಿಯ ವೃತ್ತಿ ಹೇಗಿದೆ ಎಂದರೆ, ಅದನ್ನು ನೀವು ಸರಿಯಾಗಿ ಗುರುತಿಸಿಲ್ಲ. ಬ್ರಾಹ್ಮಣರ ಎದುರು ನೀವು ಯಾವುದೇ ಪ್ರಶ್ನೆ ಇರಿಸಿ ಮತ್ತು ಎಲ್ಲ ಸಮಾಜಗಳಿಗೆ ಕಲ್ಯಾಣವಾಗುವಂತಹ ಪರಿಹಾರ ಸೂಚಿಸಿ ಎಂದು ಕೇಳಿಕೊಳ್ಳಿ. ಒಂದು ವೇಳೆ ಈ ಪರಿಹಾರ ಬ್ರಾಹ್ಮಣರ ವರ್ಚಸ್ಸಿಗೆ ಕುಂದು ತರುವುದಿಲ್ಲ ಎನ್ನುವುದು ಖಾತ್ರಿಯಾದರೆ ತಕ್ಷಣ ಅದಕ್ಕೆ ಅವರು ಮನ್ನಣೆ ನೀಡುತ್ತಾರೆ. ಒಂದು ವೇಳೆ ನೀವು ಸೂಚಿಸಿದ ಪರಿಹಾರ ಮಾರ್ಗ ಬ್ರಾಹ್ಮಣರ ವರ್ಚಸ್ಸಿಗೆ ಒಂದಿಷ್ಟು ಧಕ್ಕೆಯಾಗುವಂತಹ ಅಂಶಗಳಿದ್ದರೂ ಮತ್ತು ಅದರಿಂದ

ದೇಶಕ್ಕೆ ಸಾಕಷ್ಟು ಲಾಭವಾಗುವಂತಿದ್ದರೂ ಆ ಪರಿಹಾರ ಮಾರ್ಗವನ್ನು ಬ್ರಾಹ್ಮಣರು ಎಂದಿಗೂ ಒಪ್ಪಿಕೊಳ್ಳುವುದಿಲ್ಲ. ಇಂತಹ ಸಂದರ್ಭದಲ್ಲಿ ಅವರು ನಮ್ಮ ಶರತ್ತನ್ನು ಒಪ್ಪಿಕೊಳ್ಳುವುದಕ್ಕೆ ಮುಂದೆ ಬರುತ್ತಾರೆ ಎಂಬ ಆಶಯ ಇರಿಸಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ.

ಯಾವುದೇ ವಸ್ತು ಸಿಗಬೇಕಾದರೆ ಅದಕ್ಕೆ ನೀವು ಏನಾದರೂ ಕೊಡಲೇಬೇಕು. ಅದೇ ರೀತಿ ಸ್ಪೃಶ್ಯ ಮತ್ತು ಬ್ರಾಹ್ಮಣ ಸಮಾಜ ನಿಮಗಾಗಿ ಏನಾದರೂ ಮಾಡುವ ಮುನ್ನ ನೀವು ಅವರಿಗಾಗಿ ಏನಾದರೂ ಪ್ರತಿಫಲ ನೀಡಬೇಕಾಗುತ್ತದೆ. ಆದರೆ ಏನು ನೀಡಬೇಕಾಗುತ್ತದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯಾ? ಆ ಸಂಗತಿ ಏನೆಂದು ಅರ್ಥವಾಗಬೇಕಾದರೆ ನಿವಾಪಸೂಕ್ತದಲ್ಲಿ ಭಗವಾನ್ ಬುದ್ಧ ಹೇಳಿದ ಸಂಗತಿಯನ್ನು ನಾನಿಲ್ಲಿ ಹೇಳುತ್ತೇನೆ. ಶ್ರಾವಸ್ತಿಯ ಅನಾಥ ಪಿಂಡಿಕಾಶ್ರಮದಲ್ಲಿದ್ದ ವೇಳೆ ಭಿಕ್ಷುಗಳನ್ನು ಉದ್ದೇಶಿಸಿ ಭಗವಾನ್ ಬುದ್ಧ ಹೇಳುತ್ತಾರೆ, ಭಿಕ್ಷುಗಳೇ, ರಾಜನು ತನ್ನ ಮೀಸಲು ಅರಣ್ಯದಲ್ಲಿ ಜಿಂಕೆ, ಮೊಲ ಸೇರಿದಂತೆ ಪ್ರಾಣಿಗಳನ್ನು ಸಾಕುತ್ತಾನೆ. ಅವುಗಳನ್ನು ಸರಿಯಾಗಿ ಲಾಲನೆ ಪಾಲನೆ ಮಾಡುತ್ತಾನೆ. ಆದರೆ ಇಷ್ಟೆಲ್ಲ ಯಾವ ಕಾರಣಕ್ಕೆ? ಅವುಗಳನ್ನು ಕೊಲ್ಲುವುದಕ್ಕಾಗಿ, ತನ್ನ ಬೇಟೆಯ ಹಸಿವು ಹಿಂಗಿಸಿಕೊಳ್ಳುವುದಕ್ಕೆ. ಅದೇ ರೀತಿ ಸ್ಪೃಶ್ಯ ಹಿಂದೂಗಳು ಅಥವಾ ಬ್ರಾಹ್ಮಣರು ಒಂದು ವೇಳೆ ನಿಮಗೆ ಒಂದಿಷ್ಟು ಸೌಲಭ್ಯ ನೀಡಿ ತಮ್ಮ ಧರ್ಮದಲ್ಲಿ ಇರಿಸಿಕೊಳ್ಳುವುದಕ್ಕೆ ನೋಡುತ್ತಾರೆ. ಅದು ನಿಮ್ಮ ಕಲ್ಯಾಣಕ್ಕಾಗಿ ಅಲ್ಲ ಬದಲಿಗೆ ಶಾಶ್ವತವಾಗಿ ನಿಮ್ಮನ್ನು ದಾಸ್ಯದಲ್ಲಿ ಸಿಲುಕಿಸುವುದಕ್ಕಾಗಿ ಎನ್ನುವುದು ಗಮನದಲ್ಲಿರಲಿ.

ಮಹಾತ್ಮ ಗಾಂಧೀಜಿ ಅವರು ಅಸ್ಪೃಶ್ಯರಿಗಾಗಿ ೯ ಲಕ್ಷ ರೂಪಾಯಿಗಳ ನಿಧಿ ಸಂಗ್ರಹಿಸಿದ್ದಾರೆ. ಅದು ನಿಮ್ಮ ನಿಜವಾದ ಹಿತ ರಕ್ಷಣೆಗಾಗಿ ಅಲ್ಲ. ನೀವು ಕಾಂಗ್ರೆಸ್ ಬಿಟ್ಟು ಹೋಗಬಾರದು ಮತ್ತು ಕಾಂಗ್ರೆಸ್ಸಿನ ಪ್ರಭಾವ ಶಾಶ್ವತವಾಗಿರಲಿ ಎಂದು ಅವರು ಹಾಕುವ ದಯೆಯ ತುಂಡು ಇದು. ಚೂರು ರೊಟ್ಟಿ ತಿಂದು ಸ್ಪೃಶ್ಯರ ಬಾಗಿಲು ಕಾಯುತ್ತ ಶಾಶ್ವತವಾಗಿ ಗುಲಾಮನಾಗಿ ಬಿದ್ದಿರಲಿ ಎಂದು ಸ್ಪೃಶ್ಯ ಹಿಂದೂಗಳು ಈ ಎಲ್ಲ ಕೆಲಸ ಆರಂಭಿಸಿದ್ದಾರೆ. ಅಂತಹ ಎಲ್ಲ ವ್ಯಕ್ತಿಗಳಿಗೆ ನಾನು ಹೇಳುವ ಸ್ಪಷ್ಟ ಮಾತು ಏನೆಂದರೆ... ಸ್ಪೃಶ್ಯ ಹಿಂದೂಗಳು ನನ್ನ ಎದುರು ಸಾಕ್ಷಾತ್ ಪರಮೇಶ್ವರನನ್ನು ತಂದು ನಿಲ್ಲಿಸಿದರೂ ನಾನು ಹಿಂದೂ ಧರ್ಮದಿಂದ ಹೋಗುವುದು ಶತಃಸಿದ್ಧ. ಇನ್ನು ಮುಂದೆ ಸ್ಪೃಶ್ಯ ಹಿಂದೂಗಳು ಅಸ್ಪೃಶ್ಯ ಸಮಾಜಕ್ಕಾಗಿ ಯಾವುದೇ ಕೆಲಸ ಮಾಡಿದರೂ ನಾನು ಈ ಧರ್ಮ ಬಿಟ್ಟು ಹೋಗಿಯೇ ಹೋಗುತ್ತೇನೆ. ಏನೇ ಮಾಡಿದರೂ ನಾನು ಹೋಗಿಯೇ ಹೋಗುತ್ತೇನೆ.

ಇದೀಗ ಈ ಧರ್ಮಾಂತರ ಒಬ್ಬರೋ ಇಬ್ಬರೋ ಮಾಡುವುದಲ್ಲ. ಒಂದೇ ಬಾರಿಗೆ ಎಲ್ಲ ಅಸ್ಪೃಶ್ಯ ಸಮಾಜ ಸೇರಿ ಮಾಡಬೇಕಿದೆ. ನಾವು ಧರ್ಮಾಂತರ ಮಾಡಿದ ಬಳಿಕ ನಮ್ಮ ಎದುರು ಸ್ವರ್ಗವೇ ಇಳಿದು ಬರುತ್ತದೆ ಅಥವಾ ಅಮೃತದ ವರ್ಷಧಾರೆಯಾಗುತ್ತದೆ ಎಂದು ನಾನು ಎಂದಿಗೂ ಹೇಳುವುದಿಲ್ಲ. ನಾವು ಮುಸ್ಲಿಂ, ಕ್ರೈಸ್ತ ಇಲ್ಲವೇ ಸಿಖ್ಖರಾದರೂ ನಮ್ಮ ಭವಿಷ್ಯಕ್ಕಾಗಿ ನಾವು ಹೋರಾಡಲೇಬೇಕಾಗುತ್ತದೆ ಎನ್ನುವುದರ ಅರಿವು ಇದೆ. ನಾಳೆ ನಾವೆಲ್ಲರೂ ಮುಸ್ಲಿಂರಾದ ಬಳಿಕ ಎಲ್ಲರೂ ನವಾಬ್ ಆಗಲಿಕ್ಕೆ ಸಾಧ್ಯವಿಲ್ಲ. ಇಲ್ಲವೇ ಕ್ರಿಶ್ಚಿಯನ್ ಆದರೆ ಪೋಪ್ ಆಗುವುದಿಲ್ಲ. ನಾವು ಎಲ್ಲಿ ಹೋದರೂ ಹೋರಾಡಲೇಬೇಕು. ಅಂತಹ ಸಂದರ್ಭದ ಹೋರಾಟಕ್ಕೆ ನಾವು ನಮ್ಮ ಸಂಘಶಕ್ತಿ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ವೈಯಕ್ತಿಕ ಲಾಭಕ್ಕಾಗಿ ನಾವು ಕಳ್ಳತನದಿಂದ ಧರ್ಮಾಂತರ ಮಾಡದೆ ಹೋರಾಡುವ ನಿಶ್ಚಯದೊಂದಿಗೆ ಧರ್ಮಾಂತರ ಮಾಡಬೇಕಾಗಿದೆ. ನಾಳೆ ನಾವು ಮುಸ್ಲಿಂ ಇಲ್ಲವೇ ಕ್ರೈಸ್ತರಾದ ಬಳಿಕ ಅವರು ನಮಗೆ ಮಹಾರ್ ಕ್ರೈಸ್ತರು ಎಂದು ನಾಮಕರಣ ಮಾಡಿ ಪ್ರತ್ಯೇಕ ಚರ್ಚ್‌ಗೆ ಹೋಗುವಂತೆ ಹೇಳಲು ಆರಂಭಿಸಿದರೆ ಅಂತಹ ಚರ್ಚ್‌ಗಳಿಗೆ ಬೆಂಕಿ

ಹಾಕಬೇಕಾಗುತ್ತದೆ. ನಾನು ಸಾದಾ ಸೀದಾ ವ್ಯಕ್ತಿಯಲ್ಲ. ನಾನು ಎಲ್ಲಿಯೇ ಹೋದರೂ ಮುಳ್ಳಿನಂತೆ ಚುಚ್ಚುತ್ತಲೇ ಇರುತ್ತೇನೆ. ಆದ್ದರಿಂದ ನಿಮಗೆ ಪದೇ ಪದೆ ಹೇಳುತ್ತಿದ್ದೇನೆ. ಧರ್ಮಾಂತರದ ಗಟ್ಟಿ ತೀರ್ಮಾನ ಆಗಿದ್ದರೆ ಒಬ್ಬರೇ ಇಬ್ಬರೇ ಹೋಗಿ ಸಿಕ್ಕಿ ಹಾಕಿಕೊಳ್ಳಬೇಡಿ. ಇಂದೇ ಯಾರೂ ಕ್ರೈಸ್ತ ಅಥವಾ ಮುಸ್ಲಿಂ ಆಗಬೇಡಿ. ನನ್ನ ಈ ಘೋಷಣೆಯ ಪರಿಣಾಮದಿಂದಾಗಿ ಸಾಕಷ್ಟು ಜನರಲ್ಲಿ ಆಸೆ ಮೊಳಕೆಯೊಡೆಯುತ್ತಿರುವುದನ್ನು ನಾನು ಗುರುತಿಸಿದ್ದೇನೆ.

ಇದೀಗ ನನ್ನ ಮಹಾರ್ ಬಂಧುಗಳ ಬಗ್ಗೆ ಒಂದಿಷ್ಟು ಹೇಳುವುದಿದೆ. ಆತ್ಮೀಯರೆ ಇನ್ನು ಮುಂದಾದರೂ ನೀವು ಜಾತಿಭೇದ ಉಳಿಸಿಕೊಂಡು ಬರಬೇಡಿ. ಮಹಾರ್‌ರಿಗೆ ಬ್ರಾಹ್ಮಣರ ವರ್ಚಸ್ಸು ಸಹನವಾಗುವುದಿಲ್ಲ. ಅದೇ ರೀತಿ ಅಸ್ಪೃಶ್ಯ ಸಮಾಜದಲ್ಲಿನ ಅಲ್ಪಸಂಖ್ಯಾತ ಮಾಂಗ್, ಭಂಗಿ ಸೇರಿದಂತೆ ಇತರ ಜಾತಿಗಳಿಗೂ ಮಹಾರ್‌ರ ವರ್ಚಸ್ಸು ಬೇಡವಾಗಿದೆ. ಅವರ ಬೇಡಿಕೆ ಸರಳವಾಗಿದೆ. ನಾನು ಸ್ವತಃ ಮಹಾರ್ ಜಾತಿಯಲ್ಲಿ ಹುಟ್ಟಿದ್ದರೂ ನನಗೆ ನನ್ನ ಜಾತಿ ಬಗ್ಗೆ ವಿಶೇಷವಾದ ಅಭಿಮಾನ ಇಲ್ಲ. ನಾನು ಆ ಜಾತಿಯಲ್ಲಿ ಹುಟ್ಟಿದ್ದೇನೆ ಇದಕ್ಕಾಗಿ ನನ್ನ ಶಿಕ್ಷಣ, ನನ್ನ ಜ್ಞಾನದ ಲಾಭ ನನ್ನ ಅನಕ್ಷರಸ್ಥ ಬಂಧುಗಳಿಗೆ ಲಭಿಸಲಿ ಎನ್ನುವ ಉದ್ದೇಶದಿಂದ ಆ ಜಾತಿಯ ಮುಖಾಂತರ ಕೆಲಸ ಆರಂಭಿಸಿದ್ದೇನೆ.

ಮಹಾರಾಷ್ಟ್ರದಲ್ಲಿಯಂತೂ ಮಹಾರ್‌ರ ಸಂಖ್ಯೆ ಅಧಿಕವಾಗಿದೆ. ಯಾವ ರೀತಿ ಅಲ್ಪಸಂಖ್ಯಾತರ ಶೋಷಣೆ ನಡೆಯುತ್ತಿದೆಯೋ ಅಂತಹದ್ದೇ ಶೋಷಣೆ ನಮ್ಮ ಮಾಂಗ್ ಮತ್ತು ಭಂಗಿಗಳು ಅನುಭವಿಸುತ್ತಿದ್ದಾರೆ. ಇದನ್ನು ಗಮನದಲ್ಲಿ ಇರಿಸಿಕೊಂಡು ಅಸ್ಪೃಶ್ಯರಲ್ಲಿನ ಉಚ್ಚ–ನೀಚ ಭೇದ ತಕ್ಷಣದಿಂದಲೇ ಇಲ್ಲವಾಗಬೇಕು. ಮಹಾರ್‌ರು ನಿಮ್ಮನ್ನು ಸಮಾನತೆಯ ಭಾವನೆಯಿಂದ ನೋಡದಿದ್ದರೆ ನಿಮ್ಮ ಪರವಾಗಿ ನಾನು ಮಹಾರ್‌ರ ಜೊತೆ ಹೋರಾಟಕ್ಕೆ ಇಳಿಯುತ್ತೇನೆ ಇದು ಮಾಂಗ್ ಮತ್ತು ಭಂಗಿ ಸಮಾಜ ಬಂಧುಗಳಿಗೆ ನಾನು ನೀಡುವ ವಚನ.

ಧರ್ಮಾಂತರಕ್ಕೆ ಅನೇಕ ಕಾರಣಗಳಿವೆ. ಅದರಲ್ಲಿ ಪ್ರಮುಖವಾದುದು ಹಿಂದೂ ಧರ್ಮದಲ್ಲಿನ ಜಾತಿಭೇದ. ಸ್ಪೃಶ್ಯ ಸಮಾಜದ ಹಿಂದೂಗಳು ಮೊದಲಿನಿಂದಲೂ ಹೇಳುತ್ತಿರುವುದು ಒಂದೇ ವಿಚಾರ. ಮೊದಲು ಅಸ್ಪೃಶ್ಯರಲ್ಲಿನ ಜಾತಿಭೇದ ತೆಗೆದು ಹಾಕಿ ಬಳಿಕ ನಮಗೆ ಜಾತಿ ಭೇದ ನಿರ್ಮೂಲನೆ ಮಾಡಲು ಹೇಳಿ ಎನ್ನುತ್ತಿದ್ದಾರೆ. ಆದರೆ ಅವರಿಗೆ ನಾನು ಹೇಳುವುದು ಇಷ್ಟೆ. ಎಲ್ಲಿಯವರೆಗೆ ನಾವು ನಿಮ್ಮ ಧರ್ಮದಲ್ಲಿ ಇದ್ದೇವೆಯೋ ಅಲ್ಲಿಯವರೆಗೆ ನಮಗೆ ನಮ್ಮಲ್ಲಿನ ಜಾತಿಭೇದ ತೊಲಗಿಸಲು ಸಾಧ್ಯವಿಲ್ಲ. ನಿಮ್ಮ ಹಿಂದೂ ಧರ್ಮದ ಜಾತಿಭೇದದ ಚೌಕಟ್ಟಿನಲ್ಲಿ ಇದ್ದುಕೊಂಡು ನಮಗೆ ನಾವೇ ಸುಧಾರಣೆ ತಂದುಕೊಳ್ಳಲು ಸಾಧ್ಯವಿಲ್ಲ. ಈ ಕಾರಣಕ್ಕಾಗಿಯೇ ಧರ್ಮಾಂತರದಿಂದ ಈ ಜಾತಿ ಉಚ್ಚಾಟನೆ ನಮಗೆ ಸುಲಭವಾಗುತ್ತದೆ ಎನ್ನುವುದು ನನ್ನ ಅನಿಸಿಕೆ. ಒಂದು ವೇಳೆ ಒಬ್ಬ ಮಹಾರ್‌ನಿಗೆ ಮಾಂಗ್ ಜಾತಿಯ ಹುಡುಗಿಯನ್ನು ವಿವಾಹ ಆಗು ಎಂದರೆ ಆತ ತಕ್ಷಣ ಸ್ಪೃಶ್ಯರತ್ತ ಬೊಟ್ಟು ಮಾಡಿ ಅವರು ಹಾಗೆ ಮಾಡುವುದಿಲ್ಲ ಎಂದು ಹೇಳುತ್ತಾನೆ. ಒಂದು ವೇಳೆ ನಾವು ಈ ಸ್ಪೃಶ್ಯ–ಅಸ್ಪೃಶ್ಯ ಭೇದಭಾವದ ಈ ಕಂದಕದಿಂದ ಹೊರಗೆ ಬಂದರೆ ಆತನಿಗೆ ಆ ರೀತಿ ಹೇಳಲಿಕ್ಕಾವುದಿಲ್ಲ.

ಧರ್ಮಾಂತರದಿಂದ ಮಹಾರ್‌ರಿಗಿಂತ ಅಲ್ಪಸಂಖ್ಯಾತರಾಗಿರುವ ಭಂಗಿ ಮತ್ತು ಮಾಂಗ್ ಸಮಾಜಕ್ಕೆ ಹೆಚ್ಚಿನ ಲಾಭವಾಗುತ್ತದೆ. ಅವರೆಲ್ಲರೂ ಮಹಾರ್ ಜಾತಿಯ ಆಧಾರದ ಮೇಲೆ ನಿಲ್ಲುತ್ತಾರೆ. ಆದ ಕಾರಣ ಈ ಧರ್ಮಾಂತರ ವಿಷಯಕ್ಕೆ ಅವರು ಹೆಚ್ಚಿನ ಬೆಂಬಲ ನೀಡಿದರೆ ಅದರಿಂದ ಅವರಿಗೇ ಹೆಚ್ಚಿನ ಲಾಭವಾಗುತ್ತದೆ. ಜಾತಿಭೇದ ನಿರ್ಮೂಲನೆ ಸ್ವರಾಜ್ ಸಂಪಾದನೆಗಿಂತ ಹೆಚ್ಚಿನ ಮಹತ್ವದ ಕರ್ತವ್ಯವಾಗಿದೆ. ಭಾರತದಲ್ಲಿನ

ಜಾತಿಭೇದ ಯಾವಾಗ ನಿರ್ಮೂಲನೆ ಆಗುತ್ತದೋ ಆಗಲಿ. ಆದರೆ ಅಸ್ಪೃಶ್ಯ ಸಮಾಜದಲ್ಲಿನ ಜಾತಿಭೇದ ನಿರ್ಮೂಲನೆಗೆ ನಾನು ಕಾರಣನಾದರೆ ನಾನೇ ಅದೃಷ್ಟವಂತ ಎಂದು ಭಾವಿಸುತ್ತೇನೆ.

ಇಲ್ಲಿಯವರೆಗೆ ತಾವು ನನ್ನ ಬಗ್ಗೆ ತೋರಿದ ವಿಶ್ವಾಸಕ್ಕೆ ನಾನು ನಿಮಗೆ ಕೃತಜ್ಞನಾಗಿದ್ದೇನೆ. ಇದರೊಟ್ಟಿಗೆ ನನ್ನ ತಲೆಯ ಮೇಲೆ ಜವಾಬ್ದಾರಿ ದಿನಂಪ್ರತಿ ಹೆಚ್ಚಾಗುತ್ತಿರುವ ಅರಿವು ನನಗೆ ಇದೆ. ೭ ಕೋಟಿ ಜನರ ಜವಾಬ್ದಾರಿ ನನ್ನ ಮೇಲೆ ಇದೆ. ಒಂದು ವೇಳೆ ನನ್ನಿಂದ ಏನಾದರೂ ತಪ್ಪುಗಳು ಆಗಿದ್ದಾದರೆ ಇಷ್ಟೊಂದು ದೊಡ್ಡ ಸಮಾಜಕ್ಕೆ ಹಾನಿಯಾಗುತ್ತದೆ ಎಂದು ಹಗಲಿರುಳು ವಿಚಾರ ಮಾಡಬೇಕಾಗುತ್ತದೆ. ನನ್ನ ಧರ್ಮಾಂತರ ಘೋಷಣೆಯನ್ನು ಕೆಲವರು ಮೂರ್ಖ ನಿರ್ಧಾರ ಅಥವಾ ದೆವ್ವದ ಸವಾರಿ ಎಂದು ಕರೆಯುತ್ತಾರೆ. ಆದರೆ ಧರ್ಮಾಂತರದಿಂದ ನನಗೆ ಒಂದಿಷ್ಟೂ ಲಾಭವಿಲ್ಲ ಬದಲಿಗೆ ನಷ್ಟವೇ ಇದೆ. ಲೌಕಿಕದ ಇಲ್ಲವೇ ವ್ಯವಹಾರಗಳನ್ನು ಅತ್ಯಂತ ಸುಲಭವಾಗಿ ಮಾಡಿಕೊಳ್ಳುವ ಸಾಮರ್ಥ್ಯ ನನ್ನಲ್ಲಿದೆ. ಇದು ನನ್ನ ಗರ್ವದ ಮಾತಲ್ಲ. ಅದು ಆತ್ಮವಿಶ್ವಾಸದಿಂದ ಹೇಳುವ ಮಾತು. ಧರ್ಮಾಂತರದಲ್ಲಿ ವ್ಯಕ್ತಿಯಾಗಿ ನನ್ನ ಹಿತದೃಷ್ಟಿ ಅತ್ಯಂತ ಅಲ್ಪದ್ದು, ಮಹಾರ್‌ನಾಗಿ ಶಿಕ್ಷಣ ಪಡೆದ ನಾನು ಬ್ಯಾರಿಸ್ಟರ್‌ನಾಗಿ ಮಾನ ಸನ್ಮಾನ ಗಳಿಸಿದ್ದೇನೆ. ಈ ಮಾನ ಸನ್ಮಾನ ನಾನು ಕ್ರೈಸ್ತನಾಗಿ ಇಲ್ಲವೇ ಮುಸ್ಲಿಂ ಆಗಿ ಕಳೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಆ ಸಮಾಜದಲ್ಲಿ ನನ್ನಂತೆ ಕಲಿತವರು ಅನೇಕ ಜನರಿದ್ದು ಅವರಲ್ಲಿ ನಾನೂ ಒಬ್ಬನಾಗುತ್ತೇನೆ ಅಷ್ಟೇ. ಇಂತಹ ಸಂದರ್ಭದಲ್ಲಿ ನನ್ನ ವೈಯಕ್ತಿಕ ಲಾಭ ಏನೂ ಇಲ್ಲವಾಗುತ್ತದೆ. ಆದರೆ ಯಾರು ನನ್ನ ಮೇಲಿನ ನಂಬಿಕೆಯಿಂದ ಜವಾಬ್ದಾರಿ ಹೊರಿಸಿದ್ದಾರೋ ಅವರನ್ನು ನರಕದಲ್ಲಿ ಇರಿಸಿ ನನ್ನ ದೊಡ್ಡತನ ತೋರಿಸುವ ಅಗತ್ಯತೆ ನನಗೆ ಇಲ್ಲ. ಅವರ ಉದ್ಧಾರಕ್ಕಾಗಿ ನನ್ನ ಸ್ವಾರ್ಥಕ್ಕೆ ಎಳ್ಳು ನೀರು ಬಿಡಲು ನಾನು ಸಿದ್ಧನಾಗಿದ್ದೇನೆ.

ನಮ್ಮ ಚಳವಳಿಗೊಂದು ಗಟ್ಟಿಯಾದ ಆಧಾರ ಇದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಇಲ್ಲದಿದ್ದರೆ ಪರಸ್ಪರ ವಿರುದ್ಧವಾಗಿರುವ ಎರಡು ಪಕ್ಷಗಳಿಂದ ಒಂದು ಕೋಟಿ ರೂಪಾಯಿ ನೀಡುವ ಮಾತು ಕೇಳಿಬರುತ್ತಿರಲಿಲ್ಲ. ನಮ್ಮ ಚಳವಳಿಯ ಬೇರು ಗಟ್ಟಿಯಾಗಿದೆ.

ಇಂದಿನ ಸಮಯ ಅತ್ಯಂತ ತುರ್ತಿನದ್ದು. ಇಂಗ್ಲಿಷ್‌ನಲ್ಲಿ ಅದಕ್ಕೆ Now or never ಎಂದು ಹೇಳುವ ಸಮಯ ಇದೀಗ ಬಂದಿದೆ. ಇಂತಹ ಸಮಯದಲ್ಲಿ ಮೌನಕ್ಕೆ ಶರಣಾಗಬೇಡಿ. ಅದೃಷ್ಟ ಮತ್ತು ಸಮಯ ಎರಡೂ ಏಕಕಾಲಕ್ಕೆ ಬಂದರೆ ಮಾತ್ರ ಕೆಲಸ ಯಶಸ್ವಿಯಾಗುತ್ತದೆ. ಅಂತಹ ಸಮಯ ಬಂದ ಸಂದರ್ಭದಲ್ಲಿ ನಿಮ್ಮ ನಿರ್ಧಾರ ಶಾಶ್ವತಗೊಳಿಸಿ.

ಇವತ್ತಿನ ದಿನವೇ ಚಿಟಿಕೆ ಬಾರಿಸುವುದರೊಳಗೆ ಇಡೀ ಅಸ್ಪೃಶ್ಯ ಸಮಾಜ ಧರ್ಮಾಂತರವಾಗಿ ಬೇರೆ ಧರ್ಮದಲ್ಲಿ ವಿಲೀನವಾಗಿಬಿಡುತ್ತದೆ ಎಂದು ಅಂದುಕೊಳ್ಳುವಷ್ಟು ನಾನೇನು ಹುಚ್ಚನಲ್ಲ. ಅಂತಹ ಸಂದರ್ಭದಲ್ಲಿ ಅವರು ನನಗೆ ನಿಂತುಕೊಳ್ಳಿ ಎಂದು ಹೇಳಬಹುದು. ಆದರೆ ಅಂತಹವರಿಗೆ ನಾನು ಹೇಳುವುದು ಇಷ್ಟೇ ಹತ್ತು–ಇಪ್ಪತ್ತು ವರ್ಷಗಳ ಬಳಿಕ ಏನಾಗಬೇಕೋ ಅದನ್ನು ನಾವು ಈಗ ಆರಂಭಿಸಬೇಕಿದೆ. ಕಾಲಾನಂತರದಲ್ಲಿ ಎಲ್ಲವೂ ತಾನಾಗಿಯೇ ಘಟಿಸುತ್ತದೆ ಎಂದು ಕುಳಿತುಕೊಳ್ಳುವುದರಲ್ಲಿ ಅರ್ಥ ಇಲ್ಲ. ತಾನಾಗಿಯೇ ಏನೂ ಘಟಿಸುವುದಿಲ್ಲ. ಇಪ್ಪತ್ತು ವರ್ಷಗಳ ನಂತರ ಮಾಗುವ ಹಣ್ಣು ಇಂದು ಕಾಣಿಸುತ್ತಿದೆ ಎಂದರೆ ಇಂದು ಬೀಜವಾದರೂ ಬಿತ್ತಬೇಕಾಗುತ್ತದೆ. ಬೀಜ ಬಿತ್ತದೆ ಇದ್ದರೆ ಗಿಡವೂ ಇಲ್ಲ. ಫಲವಂತೂ ಮೊದಲೇ ಇಲ್ಲ. ಅಂತಹ ಸಮಯದಲ್ಲಿ ಯಾರಾದರೂ ನಿಲ್ಲು ಎಂದು ಕೂಗಿದರೆ ಆ ವ್ಯಕ್ತಿ ನಮ್ಮ ಮಿತ್ರನಾಗಿರುವುದಿಲ್ಲ ಬದಲಿಗೆ ವೈರಿಯಾಗಿರುತ್ತಾನೆ ಎಂದು ತಿಳಿದುಕೊಂಡು ನಮ್ಮ ತೀರ್ಮಾನಕ್ಕೆ ಅನುಗುಣವಾಗಿ ಸಂಘಟನೆಯ ಕೆಲಸಕ್ಕೆ ಮುಂದಾಗಿ.

---

ಜನತಾ: ಫೆಬ್ರವರಿ ೮ ಮತ್ತು ೧೫, ೧೯೩೫.

## ೮೦.

# ಸಂಘಟಿತ ದೃಢ ನಿಶ್ಚಯದಿಂದ ಮುನ್ನಡೆಯಬೇಕಿದೆ

ಮಂಗಳವಾರ ಫೆಬ್ರವರಿ ೧೧, ೧೯೩೬ರಂದು ಅಹ್ಮದನಗರದಲ್ಲಿ ಡಾ.ಅಂಬೇಡ್ಕರ್ ಅವರನ್ನು ಸ್ವಾಗತಿಸುವುದಕ್ಕೆ ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು. ಸಭೆಯಲ್ಲಿ ಸುಮಾರು ೫ ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು. ನಗರದ ಕೆಲವು ಪ್ರಮುಖರು ಸಭೆಯಲ್ಲಿ ಉಪಸ್ಥಿತರಿದ್ದರು. ಮೊದಲು ಸ್ಥಳೀಯ ದಲಿತ ನಾಯಕರು ತಮ್ಮ ಭಾಷಣದಲ್ಲಿ ಡಾ. ಅಂಬೇಡ್ಕರ್ ಅವರ ನಾಯಕತ್ವದಲ್ಲಿ ತಮ್ಮೆಲ್ಲರ ವಿಶ್ವಾಸ ಇದೆ ಎಂದು ಹೇಳಿದರು. ಧರ್ಮಾಂತರ ವಿಷಯಕ್ಕೆ ನಮ್ಮ ಎಲ್ಲರ ಒಪ್ಪಿಗೆ ಇದೆ ಎಂದು ಪ್ರಕಟಿಸಿದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ:

ಇಂದು ಧರ್ಮಾಂತರದ ಕುರಿತು ಮಾತನಾಡುವುದಕ್ಕೆ ನಾನು ಬಂದಿರಲಿಲ್ಲ. ಈ ಮೊದಲೇ ತಿಳಿಸಿದಂತೆ ಅಸ್ಪೃಶ್ಯ ಯುವಕ ಸಂಘ ಉದ್ಘಾಟಿಸುವುದು ಮಾತ್ರ ನನ್ನ ಕಾರ್ಯಕ್ರಮವಾಗಿತ್ತು. ಆದರೆ ತಾವು ಇಷ್ಟೊಂದು ಸಂಖ್ಯೆಯಲ್ಲಿ ಉತ್ಸುಕತೆಯಿಂದ ಸೇರಿರುವ ಕಾರಣ ನಿಮ್ಮನ್ನು ನಿರಾಸೆಗೊಳಿಸುವುದು ನನ್ನಿಂದ ಸಾಧ್ಯವಿಲ್ಲ. ಮೊದಲೇ ಸ್ಪಷ್ಟವಾಗಿ ಹೇಳುತ್ತೇನೆ. ಧರ್ಮ ಬದಲಿಸುವುದು ಎಂದರೆ ಅದು ಪರಿಹಾಸ್ಯವೂ ಅಲ್ಲ ಹುಡುಗಾಟವೂ ಅಲ್ಲ. ತಲೆ ಮುಳುಗಿಸಿ ಸದ್ದುಗದ್ದಲ ಎಬ್ಬಿಸುವ ಸಂಗತಿಯೂ ಅಲ್ಲ. ನಿಮಗೆ ಎಂದಿಗೂ ಕಲ್ಪನೆ ಬಂದಿರಲಿಕ್ಕಿಲ್ಲ. ಕಳೆದ ನಾಲ್ಕು ತಿಂಗಳ ಹಿಂದೆ ಧರ್ಮಾಂತರದ ವಿಷಯ ಪ್ರಕಟಿಸಿದ ಬಳಿಕ ಆ ವಿಚಾರದ ಕುರಿತು ನಾನು ಪದೇ ಪದೇ ಸಮಗ್ರವಾಗಿ ಚಿಂತನೆ ಮಾಡಬೇಕಾದಂತಹ ಪರಿಸ್ಥಿತಿ ಬಂದೊದಗಿದೆ. ಸತತವಾಗಿ ಧರ್ಮಾಂತರದ ಕುರಿತು ವಿಚಾರ ಮಾಡುತ್ತಿರುವುದರಿಂದ ನಾನು ಮಾಡಿದ ತೀರ್ಮಾನ ಸರಿಯಾದದ್ದು ಎಂದು ನಿಮಗೆ ಹೇಳಲು ನನಗೆ ಅಭಿಮಾನ ಎನ್ನಿಸುತ್ತಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ನನಗೆ ಪಶ್ಚಾತ್ತಾಪದ ಲವಲೇಶ ಕೂಡ ಇಲ್ಲ. ಇದೀಗ ಅತ್ಯಂತ ಸಹಜ ಪ್ರಶ್ನೆ ಎಂದರೆ ಧರ್ಮಾಂತರ ಏಕೆ ವಿಳಂಬ ಮಾಡಲಾಗುತ್ತಿದೆ ಎನ್ನುವುದು. ನಾನು ನಿಮಗೆ ಇಲ್ಲಿ ಒಂದು ಸಣ್ಣ ದೃಷ್ಟಾಂತ ನೀಡಬಯಸುತ್ತೇನೆ. ಸೇನಾಪತಿಯು ತನ್ನ ಸೈನಿಕರಿಗೆ ನೆಲೆ ಬದಲಿಸಿ ಪಡೆ ಮುಂದುವರಿಸುವ ಆಜ್ಞೆ ನೀಡುವಾಗ ಆತ ಕೇವಲ ತನ್ನ ಸಶಕ್ತ ಸೈನಿಕರ ಮಾತ್ರ ವಿಚಾರ ಮಾಡುವುದಿಲ್ಲ. ಗಾಯಗೊಂಡ, ಅಂಗವಿಕಲ, ಕಾಯಿಲೆ ಬಿದ್ದಿರುವ ಸೈನಿಕರನ್ನೂ ತನ್ನೊಂದಿಗೆ ಹೇಗೆ ಕರೆದುಕೊಂಡು ಹೋಗಬೇಕೆಂದು ವಿಚಾರ ಮಾಡುತ್ತಾನೆ. ಧರ್ಮಾಂತರದ ತೀರ್ಮಾನ ಮಾಡಿದ ಮೇಲೂ ನಮ್ಮಲ್ಲಿನ ಅನಕ್ಷರಸ್ಥ, ಮುಗ್ಧ, ಅಥವಾ ದೀನರನ್ನು ನರಳುವುದಕ್ಕೆ ಹಿಂದೆ ಬಿಟ್ಟು ಹೋಗುವುದು ಸರಿಯಲ್ಲ. ಆದ್ದರಿಂದ ಎಲ್ಲರೂ ಸಂಘಟಿತರಾಗಿ ಈ ನಿಟ್ಟಿನಲ್ಲಿ ದೃಢ ನಿಶ್ಚಯ ಮಾಡಬೇಕಿದೆ.

ಇನ್ನು ಇಂದಿನ ಮುಖ್ಯ ಕೆಲಸದ ಕುರಿತು ಮಾತನಾಡಬೇಕೆಂದರೆ, ನೀವು ಯುವಕರು ಸೇವಾ ಧರ್ಮದ ಪರಿಕಲ್ಪನೆ ಆಧಾರದ ಮೇಲೆ ಸ್ಥಾಪಿಸಿರುವ ಅನುಕರಣೀಯ ಕೆಲಸಕ್ಕೆ ನನ್ನ ಅಭಿನಂದನೆಗಳು.

ಸಾಕಷ್ಟು ಜನರಿಗೆ ಬೇರೆಯವರ ನೆರವಿಲ್ಲದೇ ಅವರ ಪ್ರಗತಿಯಾಗುವುದಿಲ್ಲ ಅಂತಹ ವ್ಯಕ್ತಿಗಳು ನಿಮ್ಮಲ್ಲಿಯೂ ಕೂಡ ಇರಬಹುದು. ಸಮಾಜ ಸೇವೆಯಂತಹ ಕೆಲಸ ಮಾಡುವ ಸಂದರ್ಭದಲ್ಲಿ ನಾವು ಕೆಲವೊಂದು ಸಂಗತಿಗಳನ್ನು ಮರೆಯಲೇಬಾರದು. ಅವುಗಳಲ್ಲಿ ಮುಖ್ಯವಾದುದು ಶೀಲ ಮತ್ತು ಶಿಕ್ಷಣ. ಈ ಎರಡು ಸಂಗತಿಗಳು ನಮ್ಮ ಬಳಿ ಇರದಿದ್ದರೆ ಜಗತ್ತಿನಲ್ಲಿ ಮನುಷ್ಯನಾದವನಿಗೆ ಏನೂ ಸಾಧನೆ ಮಾಡಲು ಸಾಧ್ಯವಿಲ್ಲ. ಇಂದು ನೀವು ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಗಾಗಿ ಹೋರಾಟ ಮಾಡುತ್ತಿದ್ದೀರಿ. ಅದರಲ್ಲಿ ನಿಮಗೆ ಯಶಸ್ಸು ಸಾಧಿಸಬೇಕು ಎಂದಿದ್ದರೆ ನೀವು ಪರಕೀಯ ವ್ಯಕ್ತಿಯ ನೆರವು ಅಪೇಕ್ಷಿಸದೇ ಪರಾವಲಂಬಿ ಜೀವನದಿಂದ ನಿರ್ಲಿಪ್ತರಾಗಿ ಉಳಿಯಬೇಕು. ಒಂದು ವೇಳೆ ನೀವು ಪರರ ನೆರವಿನ ಅಪೇಕ್ಷೆಗೆ ಬಲಿಯಾದರೆ ನೀವು ಮತ್ತೇ ದಾಸ್ಯದ ಸಂಕೋಲೆಗೆ ಸಿಲುಕಿಕೊಳ್ಳುತ್ತೀರಿ. ನಿಮ್ಮನ್ನು ಇಲ್ಲಿಯವರೆಗೆ ದಾಸ್ಯದಲ್ಲಿ ಇರಿಸಿದ್ದು ಆಮಿಷ ತೋರಿಸಿ ವಿನಃ ಮತ್ತಾವ ಸಂಗತಿಯಿಂದಲ್ಲ ಎನ್ನುವುದು ನೆನಪಿನಲ್ಲಿರಲಿ. ನಿಮಗೆ ಆಮಿಷ ತೋರಿಸುವುದಕ್ಕೆ ತುದಿಗಾಲ ಮೇಲೆ ಅವರು ನಿಂತಿರುತ್ತಾರೆ. ಒಂದು ವೇಳೆ ನೀವು ಆ ಮೋಹಕ್ಕೆ ಬಲಿಯಾದದ್ದೆ ಆದರೆ ನೀವು ಅವರ ಕಾಲಿನ ಗೆಜ್ಜೆಗೆ ಸಮವಾಗುತ್ತೀರಿ ಮತ್ತು ಹಣೆ ಬರಹದಲ್ಲಿನ ಗುಲಾಮಗಿರಿ ತಪ್ಪಿಸಲು ನಿಮ್ಮಿಂದ ಸಾಧ್ಯವಾಗಲಿಕ್ಕಿಲ್ಲ. ಮಹಾಭಾರತದ ಕಥೆಗಳನ್ನು ನೀವು ಓದಿರಬಹುದು. ಅದರಲ್ಲಿನ ಒಂದು ಕಥೆ ಬೋಧಪ್ರದವಾಗಿದೆ. ಆದರೆ ನಿಮ್ಮನ್ನು ನೋಡಿದರೆ ಆ ಕಥೆ ಓದಿರಬಹುದು ಎನ್ನಿಸುತ್ತದೆ. ಬಹುಶಃ ಇನ್ನು ಮುಂದೆ ಆ ಕಥೆ ನಿಮಗೆ ಓದಲಿಕ್ಕೂ ಸಿಗಲಾರದು. ಕೌರವ ಪಾಂಡವರ ಯುದ್ಧದ ಕಥೆ ನಿಮಗೆ ಗೊತ್ತಿದ್ದ ಸಂಗತಿ. ಭೀಷ್ಮ ಮತ್ತು ದ್ರೋಣಾಚಾರ್ಯ ಕೌರವರ ಪರವಾಗಿ ಯುದ್ಧ ಮಾಡಿದರು. ಸತ್ಯ ಮತ್ತು ನ್ಯಾಯ ಪಾಂಡವರ ಪರವಾಗಿದೆಯೆಂದು ಅವರಿಗೆ ಗೊತ್ತಿದ್ದರೂ ಕೌರವರ ಪಕ್ಷ ಅವರಿಗೆ ಬಿಡಲಿಕ್ಕಾಗಲಿಲ್ಲ. ಏಕೆಂದರೆ ಅವರಿಬ್ಬರೂ ಕೌರವನ ಉಪ್ಪು ತಿಂದಿದ್ದರು. ಆದ್ದರಿಂದ ನೀವು ಅಂತಹ ಮೋಹಕ್ಕೆ ಬೀಳಬೇಡಿ.

ಕೊನೆಯದಾಗಿ ನಿಮಗೆ ಒಂದು ಮಾತು ಹೇಳುವುದಿದೆ. ಬೇರೆ ಬೇರೆ ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಬೇಡಿ. ನನ್ನ ಅನುಭವದ ಪ್ರಕಾರ ಬೇರೆ ಬೇರೆ ಸಂಘ ಸಂಸ್ಥೆಗಳು ಇರುವುದರಿಂದ ನಮ್ಮೊಳಗೆ ಭಿನ್ನಾಭಿಪ್ರಾಯ ಬೆಳೆಯುವುದಕ್ಕೆ ಕಾರಣವಾಗಿ ಕೊನೆಗೆ ಎಲ್ಲವೂ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದ ಹಾಗಾಗುತ್ತದೆ. ಆದ್ದರಿಂದ ಇಡೀ ಜಿಲ್ಲೆಗೆ ಒಂದೇ ಸಂಘವಿರಲಿ ಅದರ ಮುಖಾಂತರ ತಮಗೆ ಸೂಕ್ತ ಎನ್ನಿಸಿದ ಮಾರ್ಗದಲ್ಲಿ ಸುಧಾರಣೆಯ ಕೆಲಸ ಕೈಗೆತ್ತಿಕೊಳ್ಳಿ.

---

ಜನತಾ: ಫೆಬ್ರವರಿ ೨೨, ೧೯೩೭

# ೮೧.

## ಗುಲಾಮರಾಗಿ ಇರಬೇಕಾ ಇಲ್ಲವೇ ಸ್ವತಂತ್ರರಾಗಿ ಬದುಕಬೇಕಾ?

ಕುಲಾಬಾ ಜಿಲ್ಲೆಯ ಉತ್ತರ ಮತ್ತು ಠಾಣೆ ಜಿಲ್ಲೆಯ ದಕ್ಷಿಣ ಭಾಗದ ಅಸ್ಪೃಶ್ಯರ ಜಂಟಿ ಸಮಾವೇಶದ ಪೂರ್ವತಯಾರಿಗೆ ಶ್ರೀ. ಗಣಪತರಾವ್ ಮಹಾದೇವ ಜಾಧವ ಉರ್ಫ ಮಡಕೆಬುವಾ ೧೫–೨೦ ದಿನಗಳಿಂದ ಸಮಾವೇಶದ ಪ್ರಚಾರಕ್ಕಾಗಿ ಗ್ರಾಮಗ್ರಾಮಗಳಲ್ಲಿ ಸಂಚರಿಸುತ್ತಿದ್ದರು. ಅದೇ ರೀತಿ ಸಮಾವೇಶದ ಸ್ವಾಗತಾಧ್ಯಕ್ಷ ಶ್ರೀ. ರಾಮಕೃಷ್ಣ ಗಂಗಾರಾಮ ಭಾತನಕರ್ (ಕುಲಾಬಾ ಜಿಲ್ಲಾ ಲೋಕಲ್ ಬೋರ್ಡ್ ಸದಸ್ಯ) ಕೂಡ ಸಮಾವೇಶಕ್ಕೆ ಪೂರ್ವ ಸಿದ್ಧತೆಯನ್ನು ಉತ್ಸಾಹದಿಂದ ಮಾಡಿದ್ದರು. ಇವರಿಬ್ಬರ ಪರಿಶ್ರಮದ ಫಲವಾಗಿ ಫೆಬ್ರವರಿ ೨೯ ಮತ್ತು ಮಾರ್ಚ್ ೧, ೧೯೩೬ರಂದು ಎರಡು ದಿನ ನಡೆದ ಸಮಾವೇಶ ಭಾರಿ ಯಶಸ್ಸು ಕಂಡಿತು.

ಭಾರತೀಯ ದಲಿತರ ಏಕೈಕ ಮುಖಂಡ ಡಾ. ಭೀಮರಾವ್ ಅಂಬೇಡ್ಕರ್ ಅವರು ಸಮಾವೇಶದ ಅಧ್ಯಕ್ಷತೆ ಸ್ವೀಕರಿಸಲಿರುವ ಕಾರಣ ಸಮಾವೇಶಕ್ಕೆ ಮಹತ್ವ ಲಭಿಸಿತ್ತು. ಸಮಾವೇಶದಲ್ಲಿ ಪಾಲ್ಗೊಳ್ಳುವ ನಿಟ್ಟಿನಲ್ಲಿ ಡಾ. ಅಂಬೇಡ್ಕರ್ ಅವರು ಫೆ. ೨೮ ಶನಿವಾರದಂದು ಮುಂಬೈನಿಂದ ತಮ್ಮ ಸಂಗಡಿಗರೊಂದಿಗೆ ವಿಶೇಷ ವಾಹನದಲ್ಲಿ ಪ್ರಯಾಣ ಬೆಳೆಸಿದರು. ಅವರೊಂದಿಗೆ ನಿವೃತ್ತ ಮೇಜರ್ ಸುಭೇದಾರ ಗಂಗಾರಾಮ್ ಸಾವದಕರ್, ಹಿರಿಯರಾದ ಶ್ರೀ. ಸಂಭಾಜಿ ತುಕಾರಾಮ್ ಗಾಯಕವಾಡ್, ಸಿ. ನಾ. ಶಿವತರಕರ್, ವನಮಾಳಿ ಮಾಸ್ತರ್, ಪ್ರಿ. ಮೋ. ವಾ. ದೊಂದೆ, ಕಮಲಾಕಾಂತ ಚಿತ್ರೆ, ಆರ್. ಡಿ. ಕವಳಿ, ರೇವಜಿ ಬುವಾ ಡೋಳಸ್, ದಿವಾಕರ್ ಪಗಾರೆ, ಧುಂಡಿರಾಮ್ ಗಾಯಕವಾಡ, ಮಡಕೆಬುವಾ ಸೇರಿದಂತೆ ಇತರರು ಇದ್ದರು.

ಪನವೆಲ್ ಹತ್ತಿರದ ಕೆರೆಯ ಬಳಿ ಡಾ. ಅಂಬೇಡ್ಕರ್ ಮತ್ತವರ ಸಂಗಡಿಗರ ಸ್ವಾಗತಕ್ಕಾಗಿ ಹಾಕಿದ್ದ ಮಂಟಪದಲ್ಲಿ ಸ್ವಾಗತಾಧ್ಯಕ್ಷ ಶ್ರೀ. ರಾಮಕೃಷ್ಣರಾವ್ ಭಾತನಕರ್ ಖುದ್ದಾಗಿ ಉಪಸ್ಥಿತರಿದ್ದರು. ಮಂಟಪದ ಬಳಿ ಡಾ. ಅಂಬೇಡ್ಕರ್ ಅವರನ್ನು ಪುಷ್ಪಹಾರ ಹಾಕಿ ಸ್ವಾಗತಿಸಿದ ಬಳಿಕ ಸಮಾವೇಶ ನಡೆಯುವ ಸ್ಥಳದತ್ತ ಅಂಬೇಡ್ಕರ್ ಮತ್ತವರ ಸಂಗಡಿಗರ ಪ್ರಯಾಣ ಮುಂದುವರಿಯಿತು. ಪನವೆಲ್ ಗ್ರಾಮದಲ್ಲಿ ಮುಸಲ್ಮಾನ ವ್ಯಾಯಾಮ ಶಾಲೆ ಮತ್ತು ಅಂಜುಮನ್ ಇಸ್ಲಾಂ ಸಮಿತಿ ವತಿಯಿಂದ ಅಂಬೇಡ್ಕರ್ ಅವರಿಗೆ ಸ್ವಾಗತ ಕೋರಲಾಯಿತು. ಸಿದ್ದಿಕ್ ಬುಡ್ಡಾ ಶೇಟ್ ಎಂಬ ಮುಸ್ಲಿಂ ಗೃಹಸ್ಥನಿಂದ ಅಂಬೇಡ್ಕರ್ ಅವರಿಗೆ ಹೂವಿನ ಹಾರ ಸಮರ್ಪಿಸಲಾಯಿತು. ಇದಾದ ಮೇಲೆ ಚಮ್ಮಾರ ಸಮಾಜದಿಂದ ಶ್ರೀ. ಮಹಾದೇವ ಲಕ್ಷ್ಮಣ ಮತ್ತು ಮಹಾದೇವ ಮಾರುತಿ ಅವರಿಂದ ಕೂಡ ಡಾ. ಅಂಬೇಡ್ಕರ್ ಅವರನ್ನು ಸ್ವಾಗತಿಸಲಾಯಿತು.

ಸಮಾಜದ ವಿವಿಧ ಜನರಿಂದ ಗೌರವಾದರ ಸ್ವಾಗತ ಸ್ವೀಕರಿಸಿದ ಡಾ. ಅಂಬೇಡ್ಕರ್ ಅವರು ರಾತ್ರಿ ಏಳು ಗಂಟೆ ಹೊತ್ತಿಗೆ ಪನವೆಲ್‌ನಲ್ಲಿ ಸುಭೇದಾರ್ ವಾಡೆಗೆ ಆಗಮಿಸಿದರು. ಡಾ. ಅಂಬೇಡ್ಕರ್ ಅವರಿಗಾಗಿ ವಿಶೇಷವಾಗಿ ಸಿದ್ಧಪಡಿಸಿದ್ದ ಮಂಟಪದಲ್ಲಿ ಮಹಿಳೆಯರ ಪರವಾಗಿ ಶ್ರೀಮತಿ ಲಕ್ಷ್ಮಿಬಾಯಿ ಅರ್ಜುನ ಶಿರಾವಾಲೆ ಕುಂಕುಮ ಹಚ್ಚಿ ಆರತಿ ಎತ್ತಿ ಸ್ವಾಗತಿಸಿದರು. ಡಾ. ಅಂಬೇಡ್ಕರ್ ಅವರನ್ನು ಸ್ವಾಗತಿಸುವಾಗ ನೆರೆದಿದ್ದ ಯುವಕರಲ್ಲಿ ಉತ್ಸಾಹ ಉಕ್ಕಿ ಎಲ್ಲೆಡೆ ಡಾ. ಅಂಬೇಡ್ಕರ್ ಅವರಿಗೆ ಜಯವಾಗಲಿ ಎಂದು

ಘೋಷಣೆ ಕೇಳಿಬರಲು ಆರಂಭಿಸಿತು. ಬಳಿಕ ಅತಿಥಿಗಳ ಅಲ್ಪೋಪಹಾರ ಮತ್ತು ಚಹಾ ಮುಗಿದ ಬಳಿಕ ವಿವಿಧ ಸ್ಥಳಗಳಿಂದ ಆಗಮಿಸಿದ್ದ ಪ್ರತಿನಿಧಿಗಳು ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರೆ, ಕೆಲವರು ತಮ್ಮ ದುಃಖಗಳನ್ನು ಹೇಳಿಕೊಂಡರು. ಇವರಲ್ಲಿ ಬೋರ್ ಸಂಸ್ಥಾನದ ಸುಧಾಗಡ್ ತಾಲೂಕಿನ ಜನರು ಪ್ರಮುಖರಾಗಿದ್ದರು.

ಒಂದು ಹಳ್ಳಿಯ ದಲಿತ ಕೇರಿಯ ಮೇಲೆ ಸ್ಪೃಶ್ಯ ಹಿಂದೂಗಳು ನಿರಂತರವಾಗಿ ನಡೆಸುತ್ತಿದ್ದ ಹಲ್ಲೆಯ ಮಾಹಿತಿ ಸಂಗ್ರಹ ಮತ್ತು ಅಲ್ಲಿನ ದಲಿತರಿಗೆ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಡಾ. ಅಂಬೇಡ್ಕರ್ ಅವರು ಬಿ. ಟಿ. ತಾಂಬೆ ಅವರನ್ನು ಕಳುಹಿಸಿಕೊಟ್ಟಿದ್ದರು. ಯುವಕ ಬಿ. ಟಿ. ತಾಂಬೆ ಉತ್ಸಾಹಿ ಕಾರ್ಯಕರ್ತರಾಗಿದ್ದರು. ಅವರ ಆಗಮನದಿಂದ ಅಲ್ಲಿಯ ಜನರಲ್ಲಿ ಮಡುಗಟ್ಟಿದ್ದ ಆತಂಕ ದೂರವಾಗಿ ಎದುರಾಗಿರುವ ಸವಾಲಿಗೆ ಪ್ರತ್ಯುತ್ತರ ನೀಡುವುದಕ್ಕೆ ಅವರು ಸಿದ್ಧರಾದರು. ತಾಂಬೆ ಅವರು ಅಲ್ಲಿಯ ಕಾರ್ಯಕರ್ತರನ್ನು ಕರೆದುಕೊಂಡು ಸಮಾವೇಶಕ್ಕೆ ಬಂದಿದ್ದರು.

ಶನಿವಾರ ಜರುಗಿದ ವಿಷಯ ನಿಯಾಮಕ ಸಮಿತಿಯ ಬೈಠಕ್‌ನಲ್ಲಿ ಮರುದಿನ ಆರಂಭವಾಗುವ ಸಮಾವೇಶದಲ್ಲಿ ಒಂಭತ್ತು ನಿರ್ಣಯಗಳನ್ನು ಅಂಗೀಕರಿಸುವುದಕ್ಕೆ ಒಪ್ಪಿಗೆ ಸೂಚಿಸಲಾಯಿತು. ಪರ ಊರಿನಿಂದ ಜನರು ಶುಕ್ರವಾರದಿಂದಲೇ ಆಗಮಿಸುತ್ತಿದ್ದರು. ಶನಿವಾರ ರಾತ್ರಿಯ ಹೊತ್ತಿಗೆ ಸುಮಾರು ೨ ಸಾವಿರ ಜನರು ಸಮಾವೇಶದ ಸ್ಥಳದಲ್ಲಿ ಸೇರಿದ್ದರು. ಪನವೆಲ್ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ಅಸ್ಪೃಶ್ಯ ಸಮಾಜದ ಜನಸಂಖ್ಯೆ ಅತ್ಯಂತ ಕಡಿಮೆ ಇರುವುದನ್ನು ನೋಡಿದರೆ ಸೇರಿರುವ ಎರಡು ಸಾವಿರ ಸಂಖ್ಯೆ ದೊಡ್ಡದೇ ಎಂದು ಹೇಳಬಹುದು. ಸಮಾವೇಶಕ್ಕೆ ಆಗಮಿಸಿದ ಜನರ ಮನರಂಜನೆಗಾಗಿ ಪೋವಾಡಾ ಮತ್ತು ಜಲಸಾ ಆಯೋಜಿಸಲಾಗಿತ್ತು. ನಾಸಿಕ್ ಸತ್ಯಾಗ್ರಹದ ಕುರಿತು ಹರಿಕಾಂತ ಶೇಜವಾಳ ರಚಿಸಿದ ಹೃದಯಸ್ಪರ್ಶಿ ಪೋವಾಡಾನ್ನು ಶ್ರೀ. ದೇಗಡೆ ತಮ್ಮ ಸುಮಧುರ ಕಂಠದಿಂದ ಹಾಡಿದರು, ಲೋಕ ಶಿಕ್ಷಣವನ್ನು ಧ್ಯೇಯವಾಗಿರಿಸಿಕೊಂಡು ಪರಿಶ್ರಮದ ಸೇವೆ ಮಾಡುತ್ತಿರುವ ಕೆಲವು ಜಲಸಾ ತಂಡಗಳ ಪೈಕಿ ಎರಡು ತಂಡಗಳನ್ನು ಮುಂಬೈನಿಂದ ದಲಿತೋದ್ಧಾರಕ ಸುಸ್ವರ ಜಲಸಾ ಮತ್ತು ನಾಸಿಕ್ ಜಿಲ್ಲಾ ಜಲಸಾ ಯುವಕ ಸಂಘಗಳನ್ನು ಕರೆಸಿಕೊಳ್ಳಲಾಗಿತ್ತು. ಎರಡು ತಂಡಗಳು ಇಡೀ ರಾತ್ರಿ ವಿಜಯ ಗೀತೆಗಳನ್ನು ಪ್ರಸ್ತುತಪಡಿಸಿದವು.

ಎರಡನೇ ದಿನ ಭಾನುವಾರ ಬೆಳಗ್ಗೆ ೯–೩೦ಕ್ಕೆ ಸೇರಿದ್ದ ಜನಸ್ತೋಮದ ಭಾರಿ ಮೆರವಣಿಗೆ ಆಯೋಜಿಸಲಾಗಿತ್ತು. ಮೊದಲು ಶ್ರೀ ವಸಂತರಾವ್ ಭಾತನಕರ್ ಜನರಿಗೆ ಶಿಸ್ತಿನ ಮನವರಿಕೆ ಮಾಡಿ ಮೆರವಣಿಗೆಯಲ್ಲಿ ಶಾಂತಿ ಕಾಪಾಡಬೇಕು ಎಂದು ವಿನಂತಿಸಿಕೊಂಡರು. ಬಳಿಕ ಮೂರು ಸಾಲುಗಳಲ್ಲಿ ಜನರನ್ನು ನಿಲ್ಲಿಸಿದ ಮೇಲೆ ಮೆರವಣಿಗೆ ಆರಂಭವಾಯಿತು. ಮೆರವಣಿಗೆ ಮೊದಲನೇ ಸಾಲಿನಲ್ಲಿ ಪನವೆಲ್ ಹನುಮಾನ್ ವ್ಯಾಯಾಮ ಶಾಲೆಯ ಸ್ಕೌಟ್‌ನ ಬ್ಯಾಂಡ್ ಮತ್ತು ಮಧ್ಯಭಾಗದಲ್ಲಿ ಸ್ಥಳೀಯ ವಾದ್ಯಮೇಳಗಳ ತಂಡಗಳಿದ್ದವು.

ಮೆರವಣಿಗೆ ಕಾಯಸ್ಥ ಬೀದಿ, ಬ್ರಾಹ್ಮಣ ಬೀದಿ, ಬಜಾರ್ ರಸ್ತೆ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿ ಸಂಚರಿಸಿತು. ಮೆರವಣಿಗೆಯುದ್ದಕ್ಕೂ ಅಂಬೇಡ್ಕರ್ ಜಿಂದಾಬಾದ್, ಹಿಂದೂ ಸಮಾಜಕ್ಕೆ ಧಿಕ್ಕಾರ, ಪೌರೋಹಿತ್ಯಶಾಹಿ ನಿರ್ಮೂಲನೆಯಾಗಲಿ, ಡಾ. ಅಂಬೇಡ್ಕರ್‌ಗೆ ಜಯವಾಗಲಿ, ದಲಿತರ ರಾಜ ಅಂಬೇಡ್ಕರ್‌ಗೆ ಜಯವಾಗಲಿ ಇಂತಹ ಘೋಷಣೆಗಳು ನಿರಂತರವಾಗಿದ್ದವು. ಮೆರವಣಿಗೆಯ ಮುಂಚೂಣಿಯಲ್ಲಿ ಸಂಭಾಜಿ ಗಾಯಕವಾಡ, ಕಮಲಾಕಾಂತ ಚಿತ್ರೆ, ದಾದಾಸಾಹೇಬ ಪಗಾರೆ, ಭೀಮರಾವ್ ಕರಡಕ್, ರೂಪಾಜಿ ಪಗಾರೆ

ಇತ್ಯಾದಿ ಜನರಿದ್ದರು. ಪನವೆಲ್‌ನಂತಹ ಸಣ್ಣ ನಗರದಲ್ಲಿ ಆಯೋಜಿಸಿದ್ದ ಇಂತಹ ಮೆರವಣಿಗೆ ಅದ್ಭುತವಾಗಿತ್ತು. ಕೆಲವು ದಿನಗಳ ಹಿಂದೆಯಷ್ಟೆ ಚರಂಡಿಯ ಪಕ್ಕದಲ್ಲಿ ಭೀತಿಯಿಂದ ಹೆಜ್ಜೆ ಹಾಕುತ್ತಿದ್ದ ಮಹಾರ್ ಇಂದು ನಡುಬೀದಿಯಲ್ಲಿ ತನ್ನ ನಾಯಕರೊಂದಿಗೆ ಎದೆಯುಬ್ಬಿಸಿ ನಡೆಯುತ್ತಿರುವುದನ್ನು ನೋಡಿ ಜನರ ಹೃದಯ ಬಡಿತದಲ್ಲಿ ಏರಿಳಿತವಾಗುತ್ತಿತ್ತು. ಮಹಾರ್‌ರ ನೆರಳಿನ ಕೆಳಗೆ ಬಾರದ ಜನರು, ಸೇರಿರುವ ವಾಹನ ಮತ್ತು ಕುದುರೆಗಳನ್ನು ನೋಡಿ ಹಾದಿಯಲ್ಲಿ ನಿಂತು ಚರಂಡಿ ಪಕ್ಕಕ್ಕೆ ಸರಿದು ಮಹಾರ್‌ರು ಬರುತ್ತಿದ್ದಾರೆ ಹಾದಿ ಬಿಡಿ ಎನ್ನುತ್ತಿದ್ದರು. ಈ ದೃಶ್ಯ ನೋಡಿದ ಬಳಿಕ ಕಾಲ ಚಕ್ರ ತಿರುಗಲು ಆರಂಭಿಸಿದೆ. ಸಾವಿರಾರು ವರ್ಷಗಳಿಂದ ತುಕ್ಕು ಹಿಡಿದ ಹತಭಾಗ್ಯ ದಲಿತ ವರ್ಗದ ಭಾಗ್ಯದ ದಿನಗಳು ಆರಂಭವಾಗಿವೆ ಎಂದು ನಿಮ್ಮ ಪ್ರತಿನಿಧಿ ಭಾವಿಸಿದರೆ ಅದರಲ್ಲಿ ಅತಿಶಯೋಕ್ತಿ ಏನು?

ಸಮಾವೇಶದ ವೇದಿಕೆಯನ್ನು ಗಾಡೇಶ್ವರಿ ನದಿತೀರದ ಬಳಿ ಇರುವ ಮಾವಿನ ತೋಟದಲ್ಲಿ ಆಯೋಜಿಸಲಾಗಿತ್ತು. ಮೆರವಣಿಗೆಯ ಬಳಿಕ ಜನರನ್ನು ಶಿಸ್ತಿನಿಂದ ಕೂಡ್ರಿಸಲಾಯಿತು. ಸಭೆ ಆರಂಭಕ್ಕೂ ಮೊದಲೇ ಸಭಾಂಗಣ ಜನರಿಂದ ಕಿಕ್ಕಿರಿದು ತುಂಬಿತು. ಗ್ರಾಮದ ಸುಮಾರು ೪೦–೪೫ ಸ್ಪೃಶ್ಯ ಗೃಹಸ್ಥರು ಆಗಮಿಸಿದ್ದರು. ಸ್ವಲ್ಪ ಹೊತ್ತಿನಲ್ಲಿ ಡಾ. ಅಂಬೇಡ್ಕರ್ ತಮ್ಮ ಸಂಗಡಿಗರೊಂದಿಗೆ ವೇದಿಕೆಯತ್ತ ಆಗಮಿಸಿದರು. ಮಹಾಡ್‌ನಿಂದ ಅನಂತರಾವ್ ಚಿತ್ರೆ ಮತ್ತು ಗೋವಿಂದರಾವ್ ವರದರಕರ್ ಸಮಾವೇಶಕ್ಕಾಗಿ ಆಗಮಿಸಿದ್ದರು. ಸಮಾವೇಶದಲ್ಲಿ ನೆರೆದಿದ್ದ ಜನರು ಡಾ. ಬಾಬಾಸಾಹೇಬ್ ಅವರನ್ನು ಎದ್ದು ನಿಂತು ಸ್ವಾಗತಿಸಿದರು. ಬಳಿಕ ಬಾಲಕಿಯರಿಂದ ಸ್ವಾಗತ ಅದರ ಬೆನ್ನ ಹಿಂದೆ ಸ್ವಾಗತಾಧ್ಯಕ್ಷರ ಪ್ರಾಸ್ತಾವಿಕ ಭಾಷಣವಾಯಿತು. ಬಳಿಕ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಡಾ. ಭೀಮರಾವ್ ಅಂಬೇಡ್ಕರ್ ಅವರಿಗೆ ಪುಷ್ಪಹಾರ ಸಮರ್ಪಿಸಲಾಯಿತು.

**ಡಾ.ಅಂಬೇಡ್ಕರ್ ಅವರು ಕರತಾಡನದೊಂದಿಗೆ ಭಾಷಣಕ್ಕೆ ನಿಂತರು.**

ಭಗಿನಿಯರೆ ಮತ್ತು ಬಂಧುಗಳೇ,

ಈ ಪ್ರದೇಶವು ಮುಂಬೈಗೆ ಹತ್ತಿರವಾಗಿದ್ದರೂ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕೆ ನನಗೆ ಬರಲಿಕ್ಕೆ ಆಗಿರಲಿಲ್ಲ. ಇದಕ್ಕಾಗಿ ನನಗೆ ವಿಷಾದ ಎನ್ನಿಸುತ್ತದೆ. ಅನೇಕ ಕಾರಣಗಳಿಂದಾಗಿ ನಮ್ಮ ಭೇಟಿ ಸಾಧ್ಯವಾಗಿಲ್ಲದಿರಬಹುದು. ಜನಜಾಗೃತಿಗಾಗಿ ನೂರಾರು ಸ್ಥಳಗಳಿಂದ ನನಗೆ ಆಮಂತ್ರಣಗಳು ಬರುತ್ತಲೇ ಇರುತ್ತವೆ ಆದರೆ ಎಲ್ಲರನ್ನೂ ತೃಪ್ತಿಪಡಿಸುವುದು ನನ್ನಿಂದ ಸಾಧ್ಯವಾಗಲಾರದು. ನಾನು ನೂರು ಮುಖಗಳಿರುವ ರಾವಣನೂ ಅಲ್ಲ. ಮೈಮೇಲೆ ಬೂದಿ ಬಳಿದುಕೊಂಡ ಸನ್ಯಾಸಿಯೂ ಅಲ್ಲ. ನಿಮ್ಮಂತೆಯೇ ನನಗೂ ಕೂಡ ಹೊಟ್ಟೆಪಾಡಿಗಾಗಿ ಉದ್ಯೋಗ ಮಾಡಬೇಕಾಗುತ್ತದೆ. ನಿಮ್ಮಂತೆಯೇ ನಾನು ಕೂಡ ಪರಿಸ್ಥಿತಿಯೊಂದಿಗೆ ಹೋರಾಡುವ ಒಬ್ಬ ಮನುಷ್ಯ.

ಇಂದಿನದ್ದು ಮಹತ್ವದ ಪ್ರಸಂಗವಾಗಿರುವುದರಿಂದ ನಾನು ಕೆಲವು ವಿಷಯಗಳ ಕುರಿತು ಮಾತನಾಡುತ್ತೇನೆ. ಅದರಲ್ಲೂ ವಿಶೇಷವಾಗಿ ನಿಮ್ಮ ಕರ್ತವ್ಯಗಳು ಏನು ಮತ್ತು ನನ್ನ ಪಾಲಿನ ಕರ್ತವ್ಯಗಳು ಏನು ಎನ್ನುವುದನ್ನು ವಿಷದೀಕರಿಸುತ್ತೇನೆ.

ನೀವುಗಳು ಸಾವಿರಾರು ವರ್ಷಗಳಿಂದ ಈ ದೇಶದಲ್ಲಿ ವಾಸಿಸುತ್ತಿದ್ದೀರಿ. ಅದೇ ರೀತಿ ನಿಮ್ಮ ನೆರೆಹೊರೆಯವರಾಗಿ ಬೇರೆಯವರು ವಾಸಿಸುತ್ತಿದ್ದಾರೆ. ಮೊದಲು ನಿಮ್ಮ ಸ್ಥಿತಿಗತಿ ನೋಡಿಕೊಳ್ಳಿ. ಆಮೇಲೆ ನಿಮ್ಮ ನೆರೆಹೊರೆಯವರ ಪರಿಸ್ಥಿತಿ ಏನು ಅಂತ ಅರ್ಥ ಮಾಡಿಕೊಳ್ಳುವುದಕ್ಕೆ ಯತ್ನಿಸಿ. ನಿಮ್ಮಿಬ್ಬರ ಪರಿಸ್ಥಿತಿಯನ್ನು ಹೋಲಿಸಿ ನೋಡಿ. ನಿಮಗೆ ಮೊದಲಿಗೆ ಗಮನಕ್ಕೆ ಬರುವ ಸಂಗತಿ ಎಂದರೆ ಬೇರೆ

ಸಮಾಜದವರಿಗಿಂತ ನಾವು ದಾರಿದ್ರ್ಯಾವಸ್ಥೆಯಲ್ಲಿದ್ದೇವೆ ಎನ್ನುವುದು. ಬೇರೆ ಸಮಾಜಗಳಿಗೆ ಬೇರೆ ಬೇರೆ ಉದ್ಯೋಗ ಮಾಡಿ ಅನ್ನ ಸಂಪಾದಿಸುವ ಮಾರ್ಗಗಳು ಮುಕ್ತವಾಗಿರುವ ಕಾರಣ ನಿಮಗಿಂತ ಅವರ ಪರಿಸ್ಥಿತಿ ಉತ್ತಮವಾಗಿದೆ. ಸಮಾವೇಶಕ್ಕೆ ಬರಬೇಕು ಎನ್ನುವ ಕಾರಣಕ್ಕೆ ನೀವು ನಿಮ್ಮ ನಿತ್ಯದ ವೇಷಭೂಷಣ ಬದಿಗಿಟ್ಟು ಚೆಂದದ ಬಟ್ಟೆ ಧರಿಸಿಕೊಂಡು ಬಂದಿದ್ದೀರಿ ಸಂತೋಷ. ಆದರೆ ನಿಮ್ಮ ನಿಜ ಸ್ಥಿತಿ ಏನು ಅನ್ನುವುದು ನಿಮ್ಮವನೇ ಆದ ನನಗೆ ಗೊತ್ತು. ವಾರದಲ್ಲಿ ಮೂರು ದಿನ ಹೊಟ್ಟೆಗೆ ಹಿಟ್ಟು ಸಂಪಾದಿಸಲು ನಡೆಸುವ ಹೋರಾಟ. ಮೈಮೇಲೆ ಹರಿದ ಲಂಗೋಟಿ, ಆ ಲಂಗೋಟಿ ಬದಲಿಸಬೇಕು ಎಂದರೂ ಆಗದಂತಹ ಕಂಗಾಲು ಪರಿಸ್ಥಿತಿ. ಇದಕ್ಕೆ ತದ್ವಿರುದ್ಧ ಎನ್ನುವಂತೆ ಉಚ್ಚವರ್ಣದವರ ಸ್ಥಿತಿಗತಿ. ನಿಮಗೆ ಹೋಲಿಸಿದರೆ ನೂರಕ್ಕೆ ಎಷ್ಟೋ ಪಾಲು ಅವರದ್ದು ಉತ್ತಮ ಸ್ಥಿತಿಗತಿ. ಅವರ ಮನೆಗಳ ಮೇಲೆ ಹಂಚು ಇದ್ದರೆ ನಿಮ್ಮ ಗುಡಿಸಲುಗಳ ಮೇಲೆ ಬಿದಿರು ಇಲ್ಲವೇ ಹುಲ್ಲು ಮಾತ್ರ. ಅವರ ಮನೆಗಳಲ್ಲಿ ಹಿತ್ತಾಳೆಯ ಪಾತ್ರೆ ಪಗಡಿಗಳು, ನಿಮ್ಮ ಮನೆಯಲ್ಲಿ ಮಣ್ಣಿನ ಮಡಕೆ ಇಂತಹ ದೈನೇಸಿ ಪರಿಸ್ಥಿತಿ ನಿಮ್ಮದು! ಇದಕ್ಕೆ ಮೊಟ್ಟಮೊದಲನೇ ಕಾರಣ ಎಂದರೆ ಅವರಿಗೆ ತಮ್ಮ ಉಪಜೀವನಕ್ಕೆ ಸಾಕಷ್ಟು ಸಾಧನಗಳಿವೆ. ಇಂದು ನಿಮಗೆ ಡೆಪ್ಯೂಟಿ ಕಲೆಕ್ಟರ್, ಮಾಮಲೇದಾರ ಇಲ್ಲವೇ ಪೊಲೀಸ್ ಅಧಿಕಾರಿಯಂತಹ ಹೆಚ್ಚಿನ ವೇತನದ ನೌಕರಿಗಳು ಸಿಗುವುದಿಲ್ಲ ಏಕೆಂದರೆ ನಿಮ್ಮಲ್ಲಿ ಸುಶಿಕ್ಷಿತರಿಲ್ಲ. ಇದೇ ಮಾತಿನ ಆಧಾರದ ಮೇಲೆ ಹೇಳುವುದಾದರೆ ಅಮಲ್ದಾರ ದರ್ಜೆಗಿಂತ ಕಡಿಮೆ ಹುದ್ದೆಯ ನೌಕರಿಗಳಿವೆ ಅವು ಕೂಡ ನಿಮಗೆ ಸಿಗುವುದಿಲ್ಲ. ಅಲ್ಲಿಯೂ ನಿಮಗೆ ನಿಷೇಧದ ಸ್ವಾಗತವಿದೆ. ಸಾದಾ ಪೊಲೀಸ್ ನೌಕರಿ ತೆಗೆದುಕೊಳ್ಳಿ ಅದು ಕೂಡ ನಿಮಗೆ ಸಿಗುವುದಿಲ್ಲ. ಈ ನೌಕರಿ ನಿರ್ವಹಣೆಗೆ ಹೆಚ್ಚಿನ ಶಿಕ್ಷಣದ ಅಗತ್ಯವಿಲ್ಲ. ೨-೩ನೇ ತರಗತಿ ಕಲಿತಿರುವ ಸ್ಪೃಶ್ಯ ಸಮಾಜದ ಯಾವುದೇ ವ್ಯಕ್ತಿಗೆ ಈ ನೌಕರಿ ಸಿಗುತ್ತದೆ. ನಿಮ್ಮಲ್ಲಿ ಪ್ರಾಮಾಣಿಕತೆ, ಸತ್ಯ ನಿಷ್ಠೆಯ ಕೊರತೆ ಇದೆ ಎಂದು ಹೇಳಿ ಈ ನೌಕರಿಗಳು ಸಿಗುತ್ತಿಲ್ಲವೆನ್ನುವುದಾದರೆ ಇಂದು ಲಕ್ಷಾಂತರ ರೂಪಾಯಿಗಳ ವಸೂಲಿಯನ್ನು ಮಹಾರ್‌ರಿಂದ ಮಾಡಿಸಲಾಗುತ್ತದೆ. ಈ ವಸೂಲಿ ತೆಗೆದುಕೊಂಡು ಹೋಗುವ ಕೆಲಸವನ್ನು ಮಹಾರ್‌ರು ಎಷ್ಟೋ ವರ್ಷಗಳಿಂದ ಮಾಡುತ್ತ ಬಂದಿದ್ದಾರೆ. ಎಲ್ಲಿಯಾದರೂ ಇಂತಹ ಮಹಾರ್‌ರು ಹಣ ಲಪಟಾಯಿಸಿದರೆಂದು ಕೇಳಿದ್ದು ಕಂಡುಬಂದಿದೆಯೇ? ಆದರೆ ಇದಕ್ಕೆ ವಿರುದ್ಧವಾಗಿ ಮಾಮಲೇದಾರನಂತಹ ವರಿಷ್ಠ ಹುದ್ದೆಯಲ್ಲಿರುವ ಉಚ್ಚ ಜಾತಿಯ ವ್ಯಕ್ತಿ ಅವ್ಯವಹಾರ ಮಾಡಿರುವುದು ದಾಖಲೆಗಳು ಸಾಬೀತುಪಡಿಸುತ್ತವೆ. ಇದಿಷ್ಟು ನೌಕರಿಗೆ ಸಂಬಂಧಿಸಿದ್ದು. ಇನ್ನು ಸಣ್ಣಪುಟ್ಟ ಉದ್ಯೋಗ ವ್ಯವಹಾರಗಳನ್ನು ನೋಡೋಣ. ನೀವು ಹಾಲು, ಮೊಸರು ಮತ್ತು ಬೆಣ್ಣೆ ವ್ಯಾಪಾರ ಮಾಡುತ್ತೇನೆ ಎಂದಿಟ್ಟುಕೊಳ್ಳಿ. ನಿಮ್ಮ ಹಾಲನ್ನು ಯಾರೂ ಖರೀದಿಸುವುದಿಲ್ಲ. ನಿಮ್ಮ ಕೈಯಲ್ಲಿನ ಬೆಣ್ಣೆಯಿಂದ ಗ್ರಾಹಕನ ಧರ್ಮ ಮುಳುಗಿಹೋಗುತ್ತದೆ. ತರಕಾರಿ ವ್ಯಾಪಾರ ಮಾಡುವುದಕ್ಕೆ ಹೋಗಿ, ಅಲ್ಲಿಯೂ ನಿಮಗೆ ಇದೇ ಗತಿ ಸ್ವಾಗತಿಸುತ್ತಿರುತ್ತದೆ. ತಲೆ ಎತ್ತಿ ನೀವು ಬದುಕಬೇಕೆಂದರೆ ನಿಮಗೆ ಎಲ್ಲಿಯೂ ಜಾಗ ಇಲ್ಲದಂತ ಶೋಚನೀಯ ಪರಿಸ್ಥಿತಿ ನಿಮ್ಮದು. ನಿಮ್ಮ ಈ ಸ್ಥಿತಿಯ ಬಗ್ಗೆ ಎಂದಾದರೂ ವಿಚಾರ ಮಾಡಿದ್ದೀರಾ? ಈ ನನ್ನ ಪ್ರಶ್ನೆಗಳಿಗೆ ತಮ್ಮ ಬಳಿ ಉತ್ತರ ಇಲ್ಲ. ಬೇರೆ ಜನರು ತಮ್ಮ ಮಕ್ಕಳನ್ನು ಸುಶಿಕ್ಷಿತರನ್ನಾಗಿಸಲು ಶಿಕ್ಷಣ ನೀಡುವ ಕಾರಣ ಅವರ ಪರಿಸ್ಥಿತಿ ಸುಧಾರಿಸುತ್ತದೆ. ಆದರೆ ನಿಮಗೆ ಏಕೆ ಹಾಗೆ ಮಾಡಲಿಕ್ಕಾಗುವುದಿಲ್ಲ? ಎಲ್ಲ ದಿಕ್ಕಿನಿಂದ ನಿಮ್ಮನ್ನು ಹಣಿಯಲಾಗುತ್ತಿದೆ. ಈ ಎಲ್ಲ ಪ್ರಶ್ನೆಗಳಿಗೆ ನೀವು ಇಂದು ಉತ್ತರ ಕಂಡುಕೊಳ್ಳಬೇಕಾಗುತ್ತದೆ. ನಮಗೆ ಅಡತಡೆ ಉಂಟುಮಾಡುತ್ತಿರುವ ಸಂಗತಿಗಳನ್ನು ಯಾವ ರೀತಿ ಪರಿಹರಿಸಿಕೊಳ್ಳಲು ಸಾಧ್ಯ ಎನ್ನುವುದರತ್ತ ವಿಚಾರ ಮಾಡಬೇಕಿದೆ. ನಿಮಗೆ ನಾನು ಕೇಳುವ ಒಂದೇ ಪ್ರಶ್ನೆ ಎಂದರೆ ನಿಮಗೆ ನಿಮ್ಮ ಸ್ಥಿತಿಯಲ್ಲಿ ಸುಧಾರಣೆ ಆಗುವುದು ಬೇಕಿಲ್ಲವೆ?

ಇಲ್ಲಿಯವರೆಗೆ ಯಾವ ಕೊಳಚೆಯಲ್ಲಿ ಬಿದ್ದು ಹೊರಳಾಡುತ್ತಿದ್ದೀರೋ ಅಲ್ಲಿಯೇ ನಿಮಗೆ ಇರಬೇಕಾಗಿದೆಯೇ? ನಿಮ್ಮನ್ನು ಕಾಲಿನ ಚಪ್ಪಲಿಗಿಂತ ಕೀಳಾಗಿ ನೋಡುವ ಜಾಗದಲ್ಲಿ ಮೈ ಪರಚಿಕೊಳ್ಳುತ್ತ ಇರಬೇಕಿದೆಯೇ? ಸಂಕ್ಷಿಪ್ತವಾಗಿ ಹೇಳಬೇಕೆಂದರೆ ನಿಮಗೆ ಗುಲಾಮರಾಗಿ ಬದುಕು ಸವೆಸಬೇಕಾಗಿದೆಯೋ ಅಥವಾ ಸ್ವತಂತ್ರ ಮನುಷ್ಯರಾಗಿ ಬಾಳಬೇಕಾಗಿದೆಯೋ? ಇಷ್ಟೇ ನಾನು ನಿಮ್ಮಲ್ಲಿ ಕೇಳಬೇಕಿರುವುದು. ನಿಮ್ಮ ಮಾರ್ಗದಲ್ಲಿ ಎದುರಾಗುವ ಎಡರು ತೊಡರುಗಳನ್ನು ದೂರ ಮಾಡುವತ್ತ ನೀವು ಗಮನ ಹರಿಸಬೇಕಿದೆ.

ಇಂದು ಮುಖ್ಯವಾಗಿ ನಿಮ್ಮ ಎದುರು ಮೂರು ಸಮಸ್ಯೆಗಳಿವೆ. ಮೊದಲನೆಯದ್ದು ಬಡತನ, ಎರಡನೆಯದ್ದು ನಿಮ್ಮ ಅಸಹಾಯಕತೆ ಮತ್ತು ಮೂರನೆಯದ್ದು ನಿಮ್ಮ ಮನೋದೌರ್ಬಲ್ಯ. ಮಾನಸಿಕ ದೌರ್ಬಲ್ಯ ನಿಮ್ಮೆಲ್ಲರನ್ನೂ ಬಡತನದಲ್ಲಿ ಮುಳುಗಿಸಿದೆ. ಹೀಗಾಗಿ ನೀವು ಪರಾವಲಂಬಿಗಳಾಗಬೇಕಿದೆ. ಸ್ವತಂತ್ರವಾಗಿ ನಿಮಗೆ ಏನೂ ಮಾಡಲಿಕ್ಕೆ ಆಗುತ್ತಿಲ್ಲ. ಸರಳ ಮನುಷ್ಯನ ಜೀವನಕ್ಕಾಗಿ ಹೋರಾಟ ಆರಂಭಿಸಿದರೆ ನೀವು ಸ್ಪೃಶ್ಯರ ಪ್ರಬಲ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ನಿಮ್ಮ ಇಡೀ ಜೀವನ ಅವರ ಮೇಲೆ ಅವಲಂಬಿಸಿರುವುದರಿಂದ ನಿಮ್ಮನ್ನು ಹೋರಾಟದಿಂದ ವಿಮುಖಗೊಳಿಸುವುದಕ್ಕೆ ಎಲ್ಲ ರೀತಿಯ ಮೋಸದ ಬಲೆ ಬೀಸಲಾಗುತ್ತದೆ. ಆದ್ದರಿಂದ ನೀವು ಪರಾವಲಂಬಿಗಳಾಗದೇ ಸ್ವತಂತ್ರವಾಗಿ ಜೀವಿಸುವುದರತ್ತ ಗಮನ ಹರಿಸಬೇಕಿದೆ.

ಎರಡನೇ ಸಂಗತಿ ನಿಮ್ಮ ಅಸಹಾಯಕತೆ. ನಿಮಗೆ ಬೇರೆಯವರ ನೆರವು ಇಲ್ಲವೇ ಇಲ್ಲ. ಬೆನ್ನ ಹಿಂದೆ ಮಿತ್ರನಾಗಿ ನಿಲ್ಲುವುದಕ್ಕೆ ಒಬ್ಬ ವ್ಯಕ್ತಿ ಕೂಡ ಸಿದ್ಧನಿಲ್ಲ. ನಿಮ್ಮ ಮತ್ತು ಗ್ರಾಮಸ್ಥರ ಮಧ್ಯೆ ಜಗಳ ಆದರೆ ನಿಮ್ಮ ನೆರವಿಗೆ ಯಾರೂ ಧಾವಿಸುವುದಿಲ್ಲ. ಈ ದೇಶದಲ್ಲಿ ಹಿಂದೂ ಸಮಾಜ ಅಲ್ಲದೇ ಮುಸ್ಲಿಂ, ಕ್ರೈಸ್ತ, ಸಿಖ್ ಸಮಾಜಗಳು ಅಸ್ತಿತ್ವದಲ್ಲಿವೆ ಆದರೂ ಮುಸ್ಲಿಂ ಇಲ್ಲವೇ ಕ್ರಿಶ್ಚಿಯನ್ನರು ಕೂಡ ನಿಮ್ಮ ನೆರವಿಗೆ ಬರುವುದಿಲ್ಲ. ಅವರೇಕೆ ನಿಮ್ಮ ಸಹಾಯಕ್ಕೆ ಬರುವುದಿಲ್ಲವೆಂದು ಸ್ವಲ್ಪ ವಿಚಾರ ಮಾಡಿ. ಯಾವ ಧರ್ಮದಲ್ಲಿ ನಾವು ಜನ್ಮ ತಳೆದಿದ್ದೇವೆಯೋ, ಯಾವ ಧರ್ಮದ ತತ್ವಗಳನ್ನು ನಾವು ಪಾಲಿಸುತ್ತಿದ್ದೇವೆಯೋ, ಯಾವ ಧರ್ಮ ನಮ್ಮದು ಎಂದು ತಿಳಿದು ಅದನ್ನು ಧರ್ಮವಾಗಿ ಪಾಲಿಸುತ್ತಿದ್ದೇವೆಯೋ ಅದೇ ಧರ್ಮ ನಮ್ಮನ್ನು ತುಚ್ಛವಾಗಿ ನಡೆಸಿಕೊಳ್ಳುತ್ತಿದೆ. ನಮ್ಮ ಅಸಹಾಯ ಪರಿಸ್ಥಿತಿಯಲ್ಲಿ ಅದರ ನಿಕೃಷ್ಟತೆಯನ್ನು ಎಷ್ಟು ದಿನ ಸಹಿಸಲು ಸಾಧ್ಯ?

ಬೇರೆಯವರ ನೆರವಿಲ್ಲದೇ ನೀವು ಹಿಂದೂಗಳೊಂದಿಗೆ ನಡೆಸಿರುವ ಹೋರಾಟದಲ್ಲಿ ನೀವು ಯಶಸ್ವಿಯಾಗುವುದಕ್ಕೆ ಸಾಧ್ಯವಿದೆಯೇ? ಯಾರನ್ನು ಅವಲಂಬಿಸಿ ನೀವು ಜೀವನ ಮಾಡುತ್ತಿದ್ದೀರೋ ಅವರು ನಿಮಗೆ ಹಕ್ಕುಗಳನ್ನು ನೀಡುತ್ತಾರೆ ಎಂದು ಭರವಸೆ ಇಟ್ಟುಕೊಳ್ಳುವುದಕ್ಕೆ ಯಾವುದೇ ಕಾರಣಗಳಿಲ್ಲ. ಹಿಂದೂಗಳಿಂದ ನಿಮಗೆ ಎಂದಿಗೂ ಲಾಭವಾಗಲಾರದು ಎಂದು ಖಾತ್ರಿ ನೀಡಬಲ್ಲೆ. ಸ್ವತಃ ಮಗನನ್ನು ಬಾವಿಗೆ ನೂಕುವ ತಂದೆ ಶ್ರೇಷ್ಠನೋ ಅಥವಾ ಕೈ ನೀಡಿ ಅವನನ್ನು ರಕ್ಷಿಸುವ ಮನುಷ್ಯ ಶ್ರೇಷ್ಠನೋ ಎಂದು ನೀವೇ ನಿರ್ಧರಿಸಿ, ಜೀವ ತೆಗೆಯುವುದಕ್ಕೆ ಸಿದ್ಧನಾಗಿದ್ದ ಆ ತಂದೆ ಮಿತ್ರನಲ್ಲ. ಇಂತಹ ಸಂದರ್ಭದಲ್ಲಿ ಕೈ ನೀಡಿ ಮೇಲಕ್ಕೆತ್ತುವ ಮಿತ್ರನನ್ನು ನಾವು ಹುಡುಕಬೇಕಾಗುತ್ತದೆ.

ಇಂದು ಮುಸ್ಲಿಂರ ತಂಟೆಗೆ ಹಿಂದೂಗಳ, ಏಕೆ ಹೋಗುವುದಿಲ್ಲ? ಅವರು ಆ ಧರ್ಮವನ್ನು ದ್ವೇಷಿಸುತ್ತಾರೆ, ನಿಂದಿಸುತ್ತಾರೆ. ಆದರೂ ಹಳ್ಳಿಯಲ್ಲಿನ ಇಬ್ಬರು ಮುಸ್ಲಿಂ ಬಾಲಕರ ಮೇಲೆ ಕೈ ಮಾಡುವಷ್ಟು ಸಾಮರ್ಥ್ಯ ಹಿಂದೂಗಳಲ್ಲಿ ಇಲ್ಲ. ಇದಕ್ಕೆ ಕಾರಣ ಏನು? ಒಂದು ವೇಳೆ ಮುಸ್ಲಿಂ ಮಕ್ಕಳ ಮೇಲೆ ಕೈ ಮಾಡಿದರೆ ಇಡೀ ಭಾರತದಲ್ಲಿನ ಮುಸ್ಲಿಂರು ಅವರ ನೆರವಿಗೆ ಬರುತ್ತಾರೆ ಅಲ್ಲದೇ ಹಿಂದೂಗಳನ್ನು

ಸರಿಯಾಗಿ ವಿಚಾರಿಸಿಕೊಳ್ಳುತ್ತಾರೆ. ಆದರೆ ಹಿಂದೂಗಳು ನಿಮ್ಮ ಮೇಲೆ ಕೈ ಮಾಡುತ್ತಾರೆ ಏಕೆಂದರೆ ನಿಮ್ಮ ನೆರವಿಗೆ ಧಾವಿಸಿ ಬರುವವರು ಯಾರೂ ಇಲ್ಲ ಎನ್ನುವುದು ಅವರಿಗೆ ಗೊತ್ತಿದೆ.

ಬಹುಶಃ ಸಾಕಷ್ಟು ಜನರು ನಿಮಗೆ ಹೇಳುತ್ತಿರಬಹುದು, ನಿಮ್ಮ ಕಾಲುಗಳ ಮೇಲೆ ನೀವು ನಿಂತುಕೊಳ್ಳಿ ಎಂದು. ಆದರೆ, ಯಾವ ವ್ಯಕ್ತಿಯ ಎರಡು ಕಾಲುಗಳನ್ನು ಕತ್ತರಿಸಿಹಾಕಲಾಗಿದೆಯೋ ಆ ವ್ಯಕ್ತಿ ಹೇಗೆ ತಾನೆ ತನ್ನ ಕಾಲುಗಳ ಮೇಲೆ ನಿಂತುಕೊಳ್ಳಲು ಸಾಧ್ಯ? ನೀವು ಯಾರದಾದರೂ ಸರಿ ಅವರ ಕೈ ಹಿಡಿದು ನಿಲ್ಲಲೇಬೇಕು ಆಗ ಮಾತ್ರ ನಿಮ್ಮಲ್ಲಿ ಸಾಮರ್ಥ್ಯ ವೃದ್ಧಿಸುತ್ತದೆ. ನಿಮ್ಮ ಇಂದಿನ ಅಸಹಾಯಕ ಪರಿಸ್ಥಿತಿಯಲ್ಲಿ ನಿಮ್ಮ ನೆರವಿಗೆ ಬರುವವರೇ ನಿಮ್ಮ ನಿಜವಾದ ಮಿತ್ರರು. ಸ್ವಾವಲಂಬನೆಗಾಗಿ ಧರ್ಮಾಂತರದ ಅವಕಾಶ ಬಂದಿದೆ. ಮನುಷ್ಯನಿಗೆ ಧರ್ಮ ಮುಖ್ಯವಲ್ಲ. ಮನುಷ್ಯನಿಗೆ ಮನುಷ್ಯತ್ವ ಮುಖ್ಯ ಎನ್ನುವುದು ನನ್ನ ಅನಿಸಿಕೆ.

ಕಾತಕರಿಯಂತಹ ಅತ್ಯಂತ ಹಿಂದುಳಿದ ಜಾತಿಗೆ ಕೂಡ ಹಿಂದೂ ಧರ್ಮದಲ್ಲಿ ಗೌರವವಿದೆ. ಅವರು ಬೇಕಿದ್ದರೆ ಹಿಂದೂಗಳ ಮನೆಯ ಒಳಗೆ ಹೋಗಬಹುದು ಆದರೆ ನೀವು ಮಾತ್ರ ಮನೆಯ ಬಾಗಿಲಲ್ಲಿ ಬಿದ್ದಿರಬೇಕಾಗುತ್ತದೆ. ನಿಮ್ಮ ಕೈಯಲ್ಲಿನ ಹಾಲು ತೆಗೆದುಕೊಳ್ಳುವುದಕ್ಕೆ ಯಾರೂ ಸಿದ್ಧರಿಲ್ಲ. ನೌಕರಿ ಅಥವಾ ಇನ್ನಿತರ ವ್ಯವಹಾರ ಮಾಡಿ ನಮ್ಮ ಪ್ರಗತಿ ಮಾಡಿಕೊಳ್ಳುವುದಕ್ಕೆ ಇರುವ ಎಲ್ಲ ಹಾದಿಗಳನ್ನು ನಮಗೆ ಮುಚ್ಚಲಾಗಿದೆ. ಮುಸ್ಲಿಂ ಇಲ್ಲವೇ ಕ್ರೈಸ್ತರು ಮಾಡುವಂತಹ ನೌಕರಿಗಳನ್ನು ನಾವು ಮಾಡುವುದಕ್ಕೆ ಹೊರಟರೆ ಅದಕ್ಕೆ ಹಿಂದೂಗಳು ವಿರೋಧಿಸುತ್ತಾರೆ. ಆದ್ದರಿಂದ ಹೇಳುತ್ತೇನೆ. ಹಿಂದೂ ಧರ್ಮದಲ್ಲಿ ಉಳಿದುಕೊಂಡು ನಿಮ್ಮ ಪ್ರಗತಿ ಮಾಡಿಕೊಳ್ಳುತ್ತೇವೆಂದರೆ ಅದು ಅಸಾಧ್ಯ. ನೀವು ಹಿಂದೂಗಳು ಆಗಿರುವ ಕಾರಣ ನಿಮ್ಮನ್ನು ತುಳಿಯಲಾಗುತ್ತಿದೆ. ಒಂದು ವೇಳೆ ನೀವು ಮುಸ್ಲಿಂ, ಕ್ರೈಸ್ತ ಇಲ್ಲವೇ ಸಿಖ್ಖ ಆಗಿದ್ದರೆ ನಿಮಗೆ ಎಲ್ಲ ಮಾರ್ಗಗಳು ಮುಕ್ತವಾಗುವುದರಿಂದ ಆರ್ಥಿಕವಾಗಿ ಸುಧಾರಿಸಿಕೊಳ್ಳುತ್ತಿದ್ದೀರಿ. ಎಲ್ಲಿಯವರೆಗೆ ನೀವು ಹಿಂದೂ ಧರ್ಮದಲ್ಲಿ ಇರುತ್ತೀರೋ ಅಲ್ಲಿಯವರೆಗೆ ಈ ಶೋಷಣೆ ಮತ್ತು ಅದರ ಪ್ರಭಾವ ದೂರವಾಗಲು ಸಾಧ್ಯವೇ ಇಲ್ಲ. ಈ ಕಾರಣಕ್ಕಾಗಿಯೇ ನೀವು ಇಲ್ಲಿಯವರೆಗೆ ಈ ನರಕದಲ್ಲಿ ಕೊಳೆಯುತ್ತಿದ್ದೀರಿ. ಪರಿಸ್ಥಿತಿ ಏನು ಅನ್ನುವುದನ್ನು ಅರ್ಥ ಮಾಡಿಕೊಳ್ಳಿ ಮತ್ತು ಎಷ್ಟು ದಿನ ಈ ಆತ್ಮದ್ರೋಹದ ಧರ್ಮಕ್ಕೆ ಅಂಟಿಕೊಂಡು ಕುಳಿತುಕೊಳ್ಳುತ್ತೀರಿ? ಸತ್ತ ಮೇಲೆ ನಿಮಗೆ ಸ್ವರ್ಗ ಬೇಕೋ ಅಥವಾ ಬದುಕಿದ್ದಾಗಲೇ ಸ್ವರ್ಗ ಸುಖದ ಅನುಭವ ಆಗಬೇಕೋ? ನನಗಂತೂ ಇದೇ ಜನ್ಮದಲ್ಲಿ ಮೋಕ್ಷ ಅಂದರೆ ಮನುಷ್ಯತ್ವ ಬೇಕು. ಪುನರ್ಜನ್ಮ ಇಲ್ಲವೇ ಸ್ವರ್ಗಕ್ಕಾಗಿ ನಾನು ಏನು ಹಪಹಪಿಸಿಲ್ಲ.

ಮೂರನೆಯ ಸಂಗತಿ ಏನೆಂದರೆ ಹಿಂದೂ ಧರ್ಮದ ಹುಚ್ಚು ಬೋಧನೆ ನಿಮ್ಮ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರಿದೆ. ಹಾವು ನೋಡಿದ ಕೂಡಲೇ ಯಾವ ರೀತಿ ಮನುಷ್ಯನಿಗೆ ಗರಬಡಿದು ಆತನ ನರನಾಡಿಗಳು ತಣ್ಣಗಾಗುತ್ತವೆಯೋ ಅಂತಹದ್ದೆ ಪರಿಸ್ಥಿತಿ ನಿಮ್ಮದಾಗಿದೆ. ಬಹುಶಃ ನೀವು ಭಾವಿಸಿರಬಹುದು ನಾವು ಅತ್ಯಂತ ಹೀನ ಕುಲದವರು, ನಾವು ಕೆಟ್ಟವರು, ಹಿಂದೂ ಧರ್ಮ ನಮ್ಮನ್ನು ಅತಿ ಶೂದ್ರರಂತೆ ನೋಡುತ್ತದೆ ಮತ್ತು ನಮಗೆ ನಾವೇ ಶೂದ್ರ ಎಂದು ಕರೆದುಕೊಳ್ಳುವುದರಿಂದ ರಸ್ತೆಯ ಬದಿಗೆ ಹೋಗುತ್ತಿದ್ದರೆ ಸ್ಪೃಶ್ಯರ ಹತ್ತಿರದಿಂದ ಹೋಗದೆ ಪಕ್ಕ ಸರಿದು ಹೋಗುತ್ತೇವೆ. ಇದಕ್ಕೆ ಕಾರಣ ನಮ್ಮ ಮನಸ್ಸು ನಿಸ್ಸತ್ವಗೊಂಡಿದೆ. ನಿಮ್ಮ ಸ್ವಾಭಿಮಾನ ಸತ್ತು ಹೋಗಿದೆ. ನಿಮಗೆ ನೀವೇ ಮನುಷ್ಯರು ಎಂದು ಪರಿಗಣಿಸುವುದಿಲ್ಲ. ಹೀಗಾಗಿ ನಮ್ಮ ಮೇಲೆ ಅಪರಾಧ ಎಸಗುವ ಹಿಂದೂಗಳೊಂದಿಗೆ ಜಗಳ ಮಾಡುವ ವಿಚಾರ ನಿಮ್ಮ ತಲೆಗೆ ಹೊಳೆಯುವುದಿಲ್ಲ. ಎಲ್ಲಿಯವರೆಗೆ ನೀವು ಹಿಂದೂ ಧರ್ಮದಲ್ಲಿ ಇರುತ್ತೀರೋ ಅಲ್ಲಿಯವರೆಗೆ ನಿಮ್ಮ

ಕೈಕಾಲುಗಳಿಗೆ ಸಂಕೋಲೆ ಇದ್ದೇ ಇರುತ್ತದೆ. ಎಲ್ಲಿಯವರೆಗೆ ಈ ಧರ್ಮದ ಬೋಧನೆಗಳು ನಿಮ್ಮ ತಲೆಯಲ್ಲಿ ಇರುತ್ತವೆಯೋ ನೀವು ತುಳಿತಕ್ಕೆ ಒಳಗಾಗಿಯೇ ಇರುತ್ತೀರಿ ಎಂದು ಖಾತ್ರಿಯಾಗಿ ಹೇಳಬಲ್ಲೆ.

ನೀವು ಎಲ್ಲರೂ ಕೃಷಿಕರು ಇದ್ದೀರಿ, ಗಿಡಗಳು ಎಂತಹ ವಾತಾವರಣದಲ್ಲಿ ಬೆಳೆಯುತ್ತವೆ ಎನ್ನುವುದು ನಿಮಗೆ ಚೆನ್ನಾಗಿ ಗೊತ್ತಿರುವ ವಿಚಾರ. ಒಂದು ಗಿಡದ ಕೆಳಗೆ ಇನ್ನೊಂದು ಗಿಡ ಬೆಳೆಯುವುದು ಅಸಾಧ್ಯ. ಹಾಗೊಂದು ವೇಳೆ ಬೆಳೆದರೂ ಒಣಗಿಹೋಗುತ್ತದೆ. ಮಾವಿನ ಸಸಿಗಳನ್ನು ನೆಡಬೇಕಾದರೂ ೧೫–೨೦ ಅಡಿಗಳ ಅಂತರದಲ್ಲಿ ಸಸಿ ನೆಟ್ಟರೆ ಮಾತ್ರ ಸಸಿಗಳು ದೊಡ್ಡದಾಗಿ ರೆಂಬೆ–ಕೊಂಬೆಗಳು ಬೆಳೆದು ಹೂ ಹೆಚ್ಚು ಬಿಡುತ್ತವೆ. ಹೀಗೆ ಮಾಡುವುದಕ್ಕೆ ಕಾರಣ ಏನು? ದೊಡ್ಡ ಗಿಡದ ನೆರಳಿನಡಿ ಚಿಕ್ಕ ಗಿಡಗಳಿಗೆ ಸಾಕಷ್ಟು ಬೆಳಕು ಸಿಗುವುದಿಲ್ಲ ಮತ್ತು ಪೋಷಕಾಂಶವೂ ಲಭಿಸುವುದಿಲ್ಲ. ಈ ಚಿಕ್ಕ ಗಿಡದ ಪರಿಸ್ಥಿತಿಯಂತೆ ನಿಮ್ಮ ಗತಿಯೂ ಆಗಿದೆ. ಹಿಂದೂ ಧರ್ಮದ ಜನರ ಆಶ್ರಯದಡಿ ಇದ್ದಿದ್ದಕ್ಕೆ ನಿಮ್ಮ ಬೆಳವಣಿಗೆಯಾಗಿಲ್ಲ. ನೀವು ಸೊರಗಿದ ಗಿಡದಂತೆ ಆಗಿದ್ದೀರಿ. ಸದ್ಗೃಹಸ್ಥರೆ ತಾವು ಇಲ್ಲಿಯವರೆಗೆ ನಿದ್ರಾವಸ್ಥೆಯಲ್ಲಿದ್ದೀರಿ. ಈ ಜಗತ್ತಿನಲ್ಲಿ ಬೇರೆಯವರು ಮಾಡಿದ ಲೂಟಿ, ಮೋಸ, ವಂಚನೆಗಳ ಬಗ್ಗೆ ನಾವು ಈಗ ವಿಚಾರ ಮಾಡಬೇಕಿದೆ.

ನಾನು ಹೇಳಿರುವ ಈ ಮೂರು ಅಡೆತಡೆಗಳನ್ನು ಪರಿಹರಿಸುವುದಕ್ಕೆ ಮನಸ್ವಿ ಯತ್ನಿಸಿದರೆ ನಿಮ್ಮ ಉನ್ನತಿಯಾಗುವುದರಲ್ಲಿ ಯಾವುದೇ ಸಂಶಯ ಇಲ್ಲ. ಇದೀಗ ಮೊದಲನೇ ಅಡೆತಡೆ ಎಂದರೆ ನಿಮ್ಮ ಬಡತನ. ಬಡತನ ಕಳೆದುಕೊಳ್ಳುವುದು ನಿಮ್ಮ ಕೈಯಲ್ಲಿ ಇಲ್ಲ. ಆದರೆ ನಾವಿಬ್ಬರೂ ಸೇರಿ ಈ ಅಡೆತಡೆ ಪರಿಹರಿಸಬಹುದು. ಈ ವಿಚಾರದಲ್ಲಿ ನಿಮಗಿಂತ ಹೆಚ್ಚು ಜವಾಬ್ದಾರಿ ನನ್ನ ಮೇಲೆ ಮತ್ತು ನನ್ನ ಸಂಗಡಿಗರ ಮೇಲೆ ಇದೆ. ಆರ್ಥಿಕ ಸ್ಥಿತಿಗತಿ ಸುಧಾರಿಸಬೇಕಾದರೆ ನಮಗೆ ರಾಜಕೀಯ ಹಕ್ಕು ಅತ್ಯಗತ್ಯವಾಗಿದ್ದು, ಇಂದು ನಮಗೆ ಕಾನೂನು ಮಂಡಳಿಯಲ್ಲಿ ೧೫ ಸ್ಥಾನಗಳು ಲಭಿಸಿವೆ. ಆ ಸ್ಥಾನಕ್ಕೆ ಆಯ್ಕೆಯಾಗುವ ಪ್ರತಿಯೊಬ್ಬ ಪ್ರತಿನಿಧಿಗೆ ನಿಮ್ಮ ಆರ್ಥಿಕ ಸ್ಥಿತಿಗತಿ ಸುಧಾರಿಸುವ ಹೊಣೆಗಾರಿಕೆ ಇದೆ. ನಿಮ್ಮ ಮುಖಂಡರಿಗೆ ಇಂದಿನ ನಿಮ್ಮ ಸ್ಥಿತಿಗತಿಯ ಪೂರ್ಣ ಅರಿವು ಮೂಡಿಸಿ ಅವರು ತಮ್ಮ ಕರ್ತವ್ಯ ನಿರ್ವಹಿಸುವಂತೆ ಮಾಡಬೇಕಾಗುತ್ತದೆ.

ಎರಡನೆಯ ಮತ್ತು ಮೂರನೆಯ ಅಡೆತಡೆ ಎಂದರೆ ಅಸಹಾಯಕತೆ ಮತ್ತು ನಿಮ್ಮ ಮಾನಸಿಕ ದೌರ್ಬಲ್ಯ, ಎರಡೂ ಸಂಗತಿಗಳನ್ನು ದೂರ ಮಾಡುವ ಶಕ್ತಿ ನಿಮ್ಮ ಕೈಯಲ್ಲಿ ಇದೆ. ಈ ಅಡೆತಡೆಗಳನ್ನು ಹೇಗೆ ದೂರ ಮಾಡುವುದೆಂದು ಹೇಳುತ್ತೇನೆ ಆದರೆ ಅದರಂತೆ ನಡೆಯುವುದು ಬಿಡುವುದು ನಿಮಗೆ ಬಿಟ್ಟದ್ದು. ನನ್ನ ಪ್ರಕಾರ ನೀವು ಹಿಂದೂ ಧರ್ಮ ತ್ಯಜಿಸಿದರೆ ಈ ಅಡೆತಡೆಗಳು ತನ್ನಿಂದ ತಾವೇ ಪರಿಹಾರವಾಗುತ್ತವೆ. ಅಸಹಾಯಕತೆಯಿಂದ ಮುಕ್ತಿ ಪಡೆಯುವುದಕ್ಕೆ ನೀವು ಬೇರೆ ಸಮಾಜದೊಂದಿಗೆ ಮೈತ್ರಿ ಮಾಡಿಕೊಳ್ಳಬೇಕು ಎಂದು ಹೇಳಿದ್ದೇನೆ. ಅದೇ ರೀತಿ ಮಾನಸಿಕ ದೌರ್ಬಲ್ಯ ಮೆಟ್ಟಿ ನಿಲ್ಲಬೇಕಾದರೆ ಬೇರೆ ಧರ್ಮದ ಬೋಧನೆಗಳನ್ನು ಅನುಸರಿಸದೇ ಗತ್ಯಂತರವಿಲ್ಲ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಈ ಎರಡು ಅಡೆತಡೆಗಳಿಗೆ ಪರಿಹಾರ ಧರ್ಮಾಂತರದಲ್ಲಿದ್ದು ಅದಕ್ಕೆ ನೀವು ಸಿದ್ಧರಾಗಬೇಕಿದೆ. ಧರ್ಮಾಂತರ ಮಾಡುವುದೇ ತೀರ್ಮಾನವಾದಲ್ಲಿ ಯಾವ ಧರ್ಮಕ್ಕೆ ಸೇರಬೇಕು ಎನ್ನುವುದನ್ನು ನಾನು ನಿಮಗೆ ಸೂಕ್ತ ಸಮಯದಲ್ಲಿ ತಿಳಿಸುತ್ತೇನೆ. ನನ್ನ ಅಭಿಪ್ರಾಯ ನಿಮಗೆ ಸೂಕ್ತ ಎಂದು ಅನ್ನಿಸುತ್ತಿದ್ದರೆ ನನ್ನ ಹಿಂದೆ ಬನ್ನಿ. ಇಲ್ಲದಿದ್ದರೆ ಖುಷಿಯಿಂದ ಇದೇ ಧರ್ಮದಲ್ಲಿದ್ದು ಕಷ್ಟಪಡಿ. ಯಾವ ಅರ್ಥದಿಂದ ನಾನು ನಿಮ್ಮ ಜಾತಿಯಲ್ಲಿ ಹುಟ್ಟಿದ್ದೇನೋ ಅದೇ ಅರ್ಥವನ್ನು ಇರಿಸಿಕೊಂಡು ನಾನು ನಿಮಗೆ ಹೇಳುತ್ತಿದ್ದೇನೆ. ನಿಮ್ಮ ಹಿತಾ–ಅಹಿತದ ಜವಾಬ್ದಾರಿಯನ್ನು ನನ್ನ ಮೇಲೆ ಹಾಕುವುದೇ ಆಗಿದ್ದರೆ, ನಾನು ಹೇಳಿದಂತೆ ನೀವು ಕೇಳುವುದಕ್ಕೆ

ಸಿದ್ಧರಾಗಬೇಕಾಗುತ್ತದೆ ಮತ್ತು ನಾನು ಎಲ್ಲಿ ಹೋಗುತ್ತೇನೆ ಅಲ್ಲಿಗೆ ನನ್ನ ಹಿಂದೆ ಬರಬೇಕಾಗುತ್ತದೆ.

ಅಂತಿಮವಾಗಿ ನಾನು ಹೇಳುವುದು ಇಷ್ಟೇ. ಇಂದಿನದ್ದು ಬಿಕ್ಕಟ್ಟಿನ ಪರಿಸ್ಥಿತಿ. ನಾವು ಏನು ಮಾಡಬೇಕು ಎನ್ನುವುದನ್ನು ಇಂದೇ ತೀರ್ಮಾನಿಸಬೇಕಿದೆ. ೫–೧೦ ವರ್ಷದ ಅವಧಿಯನ್ನು ನಿಮಗೆ ನೀಡಿದ್ದಾರೆಂದರೆ ಇದು ಅತಿ ದೊಡ್ಡ ಪ್ರಶ್ನೆಯಾಗಿದೆಂದು ಭಾವಿಸಬೇಕಾಗುತ್ತದೆ. ನಿಮ್ಮ ಪೈಕಿ ಕೇವಲ ಅರ್ಧದಷ್ಟು ಜನರು ಧರ್ಮಾಂತರಕ್ಕೆ ಸಿದ್ಧರಾದರೆ ಅದರಿಂದ ಲಾಭವಾಗುವುದಿಲ್ಲ. ಎಲ್ಲರೂ ಧರ್ಮಾಂತರ ಮಾಡಬೇಕಾಗಿದ್ದು ಎಲ್ಲರ ಧರ್ಮಾಂತರಕ್ಕಾಗಿ ೫–೧೦ ವರ್ಷ ಕಾಲಾವಧಿ ನಿಗದಿ ಮಾಡಲಾಗಿದೆ. ಈ ಅವಧಿಯಲ್ಲಿ ನಿಮ್ಮ ಮನಸ್ಸಿನ ಮೇಲೆ ಕುಳಿತಿರುವ ಹಿಂದೂ ಧರ್ಮದ ಪಟಗಾ ತೆಗೆದುಹಾಕಬೇಕಿದೆ. ಒಂದು ಮಾತು ನೆನಪಿನಲ್ಲಿರಲಿ. ಧರ್ಮಾಂತರಕ್ಕೆ ನೀವು ಸಿದ್ಧ ಅಲ್ಲ ಎಂದು ಗೊತ್ತಾಯಿತೋ ಅಂದಿಗೆ ನನ್ನ ಮತ್ತು ನಿಮ್ಮ ನಡುವಿನ ಸಂಬಂಧ ಮುಗಿತೆಂದು ತಿಳಿದುಕೊಳ್ಳಿ. ನಾನು ಮಾತ್ರ ಈ ನಿಷ್ಪ್ರಯೋಜಕ, ನಿರುಪಯುಕ್ತ ಧರ್ಮದಿಂದ ಹೊರಗೆ ಹೋಗುವುದಂತೂ ಸತ್ಯ.

---

ಜನತಾ: ಮಾರ್ಚ್ ೭, ೧೯೩೬ * ಈ ದಿನ ಶುಕ್ರವಾರ ಇರಬೇಕಿತ್ತು –ಸಂಪಾದಕ.

## ೮೨.

# ಚಳವಳಿಯ ಲಾಭ ಆಗಿದ್ದು ಎಲ್ಲ ಅಸ್ಪೃಶ್ಯರಿಗೆ

ಶನಿವಾರ ಫೆಬ್ರವರಿ ೨೯, ೧೯೩೬ರಂದು ರಾತ್ರಿ ೯ ಗಂಟೆಗೆ ಶ್ರೀ ರಾಘೋಬಾ ವನಮಾಳಿ ಅವರ ಅಧ್ಯಕ್ಷತೆಯಲ್ಲಿ ಪನವೆಲ್‌ನಲ್ಲಿ ಪನವೆಲ್ ತಾಲೂಕಿನ ಚಮ್ಮಾರರ ಸಭೆ ಜರುಗಿ ಈ ಕೆಳಗಿನಂತೆ ನಿರ್ಣಯಗಳನ್ನು ಅಂಗೀಕರಿಸಲಾಯಿತು.

೧ನೇ ನಿರ್ಣಯ:– ಚಕ್ರವರ್ತಿ ೫ನೇ ಜಾರ್ಜ್ ನಿಧನಕ್ಕೆ ಸಂತಾಪ ಮತ್ತು ನೂತನ ಚಕ್ರವರ್ತಿ ೮ನೇ ಎಡ್ವರ್ಡ್ ಅವರಿಗೆ ಅಭಿನಂದನೆ.

೨ನೇ ನಿರ್ಣಯ:– ಡಾ. ಅಂಬೇಡ್ಕರ್ ಅವರ ಮೇಲೆ ಪೂರ್ಣ ನಂಬಿಕೆ.

೩ನೇ ನಿರ್ಣಯ:– ನಾಸಿಕ್ ಜಿಲ್ಲೆಯ ಯವಲೆಯಲ್ಲಿ ತೆಗೆದುಕೊಂಡಿರುವ ಧರ್ಮಾಂತರದ ನಿರ್ಧಾರಕ್ಕೆ ಬೆಂಬಲ.

ಈ ಸಭೆಯಲ್ಲಿ ಶಿವತರಕರ್, ಗವರುಜಿ ಉರನಕರ್, ಮಹಾದೇವ ಕಲ್ಯಾಣಕರ್, ಮಾರುತಿ ಮೊಹೋಕರ್, ಮಹಾದೇವ ಮಹಾಡಿಕ್ ಸೇರಿದಂತೆ ಇತರರು ಭಾಷಣ ಮಾಡಿದರು. ಕೊನೆಯಲ್ಲಿ ಸಭೆಯ ಅಧ್ಯಕ್ಷರು ಡಾ. ಅಂಬೇಡ್ಕರ್ ಅವರು ತಳೆದಿರುವ ಧರ್ಮಾಂತರ ನಿಲುವು ಮತ್ತು ಈ ವಿಚಾರಕ್ಕೆ ಸಂಬಂಧಿಸಿದಂತೆ ಪರಿಣಾಮಕಾರಿ ಭಾಷಣ ಮಾಡಿದ ಬಳಿಕ ಸಭೆ ಮುಕ್ತಾಯವಾಯಿತು.

### ವೀಳ್ಯ ಪ್ರದಾನ ಕಾರ್ಯಕ್ರಮ

ಭಾನುವಾರ, ಮಾರ್ಚ್ ೧, ೧೯೩೬ರಂದು ಪನವೆಲ್‌ನ ಅಸ್ಪೃಶ್ಯ ಸಮಾಜದ ಸಮಾವೇಶ ಪೂರ್ಣಗೊಂಡ ಬಳಿಕ ಅಲ್ಲಿನ ಚಮ್ಮಾರರು ಡಾ. ಅಂಬೇಡ್ಕರ್ ಅವರನ್ನು ವೀಳ್ಯ ಪ್ರದಾನ ಕಾರ್ಯಕ್ರಮಕ್ಕೆ ಆಗಮಿಸುವಂತೆ ವಿನಂತಿಸಿದರು. ಸಮಯದ ಕೊರತೆ ಇದ್ದರೂ ಡಾ. ಅಂಬೇಡ್ಕರ್ ಆನಂದದಿಂದ ಆಹ್ವಾನ ಸ್ವೀಕರಿಸಿದರು. ಈ ಸಮಯದಲ್ಲಿ ಶ್ರೀ. ವನಮಾಳಿ ಅವರು ಗ್ರಾಮಸ್ಥರ ಒತ್ತಾಯದಿಂದಾಗಿ ಡಾ. ಅಂಬೇಡ್ಕರ್ ಕುರಿತು ಒಂದೆರಡು ಮಾತುಗಳನ್ನಾಡಿದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಇಲ್ಲಿನ ಚಮ್ಮಾರರ ವಿನಂತಿಯನ್ನು ಮನ್ನಿಸಿ ತಮ್ಮ ದರ್ಶನ ಇಲ್ಲಿನವರಿಗೆ ಆಗಲಿಯೆಂದು ಇಲ್ಲಿ ಆಗಮಿಸಿರುವುದಕ್ಕೆ ಗ್ರಾಮಸ್ಥರಿಗೆ ಅತೀವ ಸಂತಸವಾಗಿದ್ದು ಅವರೆಲ್ಲರೂ ತಮಗೆ ಆಭಾರಿಯಾಗಿದ್ದಾರೆ. ಈ ಪ್ರದೇಶದಲ್ಲಿನ ಚಮ್ಮಾರರು ಮತ್ತು ಮಹಾರ್‌ರ ಮಧ್ಯೆ ಯಾವುದೇ ಜಾತಿ ಭೇದವಿಲ್ಲ. ಡಾ. ಅಂಬೇಡ್ಕರ್ ಅವರ ಆಗಮನದ ಸಂದರ್ಭದಲ್ಲಿ ಇಲ್ಲಿನ ಚಮ್ಮಾರರು ಅವರನ್ನು ಪುಷ್ಪಹಾರ ಹಾಕಿ ಸ್ವಾಗತಿಸಿದ್ದಾರೆ. ಅಲ್ಲದೆ ಮೆರವಣಿಗೆ ಸಂದರ್ಭದಲ್ಲೂ ಅವರ ಭಾವಚಿತ್ರಕ್ಕೆ ಪುಷ್ಪಹಾರ ಸಲ್ಲಿಸಿ ತಮ್ಮ ಪ್ರೀತಿ ತೋರಿದ್ದಾರೆ. ಸಮಾವೇಶದಲ್ಲೂ ಚಮ್ಮಾರ ಮಹಿಳೆ–ಪುರುಷರು ಪಾಲ್ಗೊಂಡು ಧರ್ಮಾಂತರ ನಿರ್ಣಯಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ ಇಲ್ಲಿ ಜರುಗಿದ ಸಭೆಯಲ್ಲೂ

ಡಾ. ಅಂಬೇಡ್ಕರ್ ಅವರ ಮೇಲೆ ವಿಶ್ವಾಸ ಇರಿಸಿ ಧರ್ಮಾಂತರ ಬೆಂಬಲಿಸಿ ನಿರ್ಣಯ ಅಂಗೀಕರಿಸಲಾಗಿದೆ. ಯಾವ ರೀತಿ ತಾವು ತಮ್ಮ ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿದ್ದೀರೋ ಅದೇ ರೀತಿ ನಮ್ಮ ಬಗ್ಗೆಯೂ ಗಮನ ಇರಲಿ. ನಮ್ಮಲ್ಲಿನ ಕೆಲವು ವ್ಯಕ್ತಿಗಳು ತಮ್ಮನ್ನು ವಿರೋಧಿಸುತ್ತಾರೆ. ಆದರೆ ಅಂತಹ ವ್ಯಕ್ತಿಗಳ ಮೇಲೆ ನಮಗೆ ನಂಬಿಕೆ ಇಲ್ಲ. ನೀವು ನಮ್ಮ ನಿಜವಾದ ಮುಖಂಡರು ಎಂದು ಶ್ರೀ ವನಮಾಳಿ ಹೇಳಿದ ಬಳಿಕ ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ...

ತಾವುಗಳು ನನ್ನನ್ನು ಇಲ್ಲಿಗೆ ಕರೆಸಿ ಗೌರವಾದರ ನೀಡಿದ್ದೀರಿ. ಅದಕ್ಕೆ ನಾನು ಆಭಾರಿಯಾಗಿದ್ದೇನೆ. ನನಗೆ ಏನೂ ಮಾತನಾಡುವುದಕ್ಕೆ ಇರಲಿಲ್ಲ. ಆದರೆ ವನಮಾಳಿ ಅವರು ತಮ್ಮ ಭಾಷಣದಲ್ಲಿ ಕೆಲವೊಂದಿಷ್ಟು ವಿಚಾರಗಳನ್ನು ಪ್ರಸ್ತಾಪಿಸಿದ ಕಾರಣ ಮತ್ತು ನನ್ನ ಬಗ್ಗೆ ಕೆಲವರಿಗೆ ಸಂಶಯ ಇರಬಹುದೆಂದು ಭಾವಿಸುತ್ತೇನೆ. ಆದರೆ ನಾನು ನಿಮಗೆ ಹೇಳುವುದು ಇಷ್ಟು. ನನ್ನ ಚಳವಳಿ ಕೇವಲ ಒಂದು ನಿರ್ದಿಷ್ಟ ವರ್ಗ ಇಲ್ಲವೇ ಜಾತಿಯ ಉನ್ನತಿಗೆ ಇರದೇ ಇಡೀ ಅಸ್ಪೃಶ್ಯ ಜಾತಿಯ ಉನ್ನತಿಗಾಗಿ ಮಾಡಿದ ಚಳವಳಿ ಆಗಿದೆ. ದುರ್ದೈವದ ಸಂಗತಿ ಎನ್ನಿ. ಇಲ್ಲವೇ ಸುದೈವದ ಮಾತು ಎನ್ನಿ. ಇಲ್ಲಿಯವರೆಗೆ ಮಹಾರ್‌ರು ಮಾತ್ರ ಚಳವಳಿ ಮುಂದುವರಿಸಿದ್ದಾರೆ. ಒಂದು ವೇಳೆ ಬೇರೆ ಜಾತಿಯವರು ಇದನ್ನು ಕೈಗೆತ್ತಿಕೊಂಡಿದ್ದರೆ ಖಂಡಿತವಾಗಿ ಮಹಾರ್ ಜಾತಿಯವರಿಗೆ ಇನ್ನು ನೀವು ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೆ. ಇಲ್ಲಿಯವರೆಗೆ ನಡೆದ ಚಳವಳಿಯ ಲಾಭ ಕೇವಲ ಮಹಾರ್ ಜಾತಿಗಷ್ಟೇ ಅಲ್ಲ. ಚಮ್ಮಾರರು ಮತ್ತು ಮಾಂಗ್ ಜಾತಿಯವರಿಗೂ ಆಗಿದೆ. ಶಾಲೆಗೆ ಸೂಪರ್‌ವೈಸರ್ ನೇಮಕ ಮಾಡಿ ಎಂದು ಮುಂಬೈ ನಗರ ಸಭೆಗೆ ಹೇಳಲಾಯಿತು. ನಗರಸಭೆಯಿಂದ ಚಮ್ಮಾರ ಜಾತಿಯವರನ್ನು ಸೂಪರ್‌ವೈಜರ್‌ರೆಂದು ನೇಮಕವಾಯಿತು. ಅವರು ಇಲ್ಲಿಯೇ ನನ್ನ ಪಕ್ಕ (ಶಿವತರಕರ್ ಅವರತ್ತ ಬೊಟ್ಟು ತೋರಿ) ಕುಳಿತಿದ್ದಾರೆ. ಪೊಲೀಸ್ ಟ್ರೇನಿಂಗ್ ಕಾಲೇಜಿಗೆ ಅಸ್ಪೃಶ್ಯರನ್ನು ಸೇರಿಸಿಕೊಳ್ಳಿ ಎಂದು ಸರ್ಕಾರ ಹೇಳಿದ ಮೇಲೆ ಸರ್ಕಾರ ತೆಗೆದುಕೊಂಡಿರುವ ಅಸ್ಪೃಶ್ಯರಲ್ಲಿ ಮಹಾರರು ಇರಲಿಲ್ಲ. ಬದಲಿಗೆ ಅದರಲ್ಲಿ ಮಾಂಗ್ ಮತ್ತು ಚಮ್ಮಾರರು ಇದ್ದರು. ಈ ಉದಾಹರಣೆಗಳನ್ನು ನೋಡಿದ ಬಳಿಕ ನನ್ನ ಚಳವಳಿಯಲ್ಲಿ ಕೇವಲ ಮಹಾರ್‌ರ ಹಿತ ಇದೆ ಎಂದು ಹೇಗೆ ಹೇಳುತ್ತಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಇನ್ನು ಇದೀಗ ನಡೆದಿರುವ ಚಳವಳಿ ಕುರಿತು ಸ್ಪಷ್ಟನೆ ನೀಡುತ್ತೇನೆ. ಅಸ್ಪೃಶ್ಯ ಜಾತಿಯಲ್ಲಿನ ಎಲ್ಲ ಜಾತಿಗಳು ಧರ್ಮಾಂತರವಾಗಬೇಕು ಎನ್ನವುದು ನನ್ನ ಇಚ್ಛೆ. ಆದರೆ ಬೇರೆ ಜಾತಿಯವರು ನನ್ನ ಮಾತು ಕೇಳದೆ ಸುಮ್ಮನೆ ಕುಳಿತರೆ ಅದಕ್ಕೆ ನಾನು ಏನೂ ಮಾಡಲಾಗದು. ಆದರೆ ಒಂದಂತೂ ಸತ್ಯ. ಯಾವ ಜಾತಿ ಹಿಂದೆ ಉಳಿಯುತ್ತದೋ ಆ ಜಾತಿಯ ಸ್ಥಿತಿ ಇನ್ನಷ್ಟು ಹೀನಾಯವಾಗಲಿದೆ. ಏಕಂದರೆ ಅಸ್ಪೃಶ್ಯ ನಿರ್ಮೂಲನೆಯ ವಿರುದ್ಧ ಅವರು ಮಾತ್ರ ಹೋರಾಡಬೇಕಾಗುತ್ತದೆ. ಅಸ್ಪೃಶ್ಯರಲ್ಲಿ ಮಹಾರ್‌ರ ಜನಸಂಖ್ಯೆ. ಶೇ. ೮೦ರಷ್ಟು ಇದೆ. ಇಷ್ಟೊಂದು ದೊಡ್ಡ ಜನಸಂಖ್ಯೆ ಹೊರಗೆ ಹೋದ ಬಳಿಕ ಇನ್ನುಳಿದವರು ಏನು ಮಾಡಲು ಸಾಧ್ಯ? ಇಂದು ಇಷ್ಟೊಂದು ಪ್ರಮಾಣದಲ್ಲಿ ಚಳವಳಿ ಮಾಡಿದರೂ ಇನ್ನು ಏನೂ ಕೈಗೆಟುಕುತ್ತಿಲ್ಲ. ಮುಂದೆ ಏನು ಸಿಕ್ಕೀತು? ಪರಿಸ್ಥಿತಿ ಹೀಗಿದ್ದ ಮೇಲೆ ನೀವು ಬಹುಜನರೊಂದಿಗೆ ಸೇರಿ ಧರ್ಮಾಂತರ ಮಾಡುವುದು ಒಳಿತು. ನಿಮ್ಮ ವಿಚಾರದಲ್ಲಿ ಮಹಾರ್ ಜಾತಿಯವರಿಂದ ಏನಾದರೂ ಕಿರಿಕಿರಿ ಆದರೆ ನನಗೆ ಹೇಳಿ. ನಾನು ಅದನ್ನು ಸರಿಪಡಿಸುತ್ತೇನೆ.

---

ಜನತಾ: ಮಾರ್ಚ್ ೭, ೧೯೩೭

# ೮೩.

# ಮತ ಮಾರಾಟ ಅಪರಾಧವಷ್ಟೇ ಅಲ್ಲ ಅದು ಆತ್ಮದ್ರೋಹ

ಠಾಣೆ ಜಿಲ್ಲೆಯ ಅಸ್ಪೃಶ್ಯರ ಪ್ರಥಮ ಸಮಾವೇಶ ಜಿಲ್ಲೆಯ ಪಾಲಘರ್ ಹತ್ತಿರದ ವೇಡಿ ಗ್ರಾಮದಲ್ಲಿ ಮಾರ್ಚ್ ೨೯, ೧೯೩೬ರಂದು ಅಖಿಲ ಭಾರತೀಯ ದಲಿತ ಮುಖಂಡ ಡಾ. ಬಿ. ಆರ್. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಹಿನ್ನೆಲೆಯಲ್ಲಿ ವೇಡಿ ಗ್ರಾಮಕ್ಕೆ ತೆರಳುವುದಕ್ಕೆ ಡಾ. ಅಂಬೇಡ್ಕರ್ ಅವರೊಂದಿಗೆ ಶ್ರೀ. ಕಮಲಾಕಾಂತ ಚಿತ್ರೆ, ಸಂಭಾಜಿರಾವ್ ಗಾಯಕವಾಡ, ಮಡಕೆಬುವಾ ಜಾಧವ, ಅನಂತರಾವ್ ಚಿತ್ರೆ, ಶ್ರೀ ಶಾಂತಾರಾಮ ಪೋತ್ನಿಸ್, ಶ್ರೀ. ಚಾಂಗದೇವ ಮೋಹಿತೆ, ಶ್ರೀ. ಬಾಪುಸಾಹೇಬ ಸಹಸ್ರಬುದ್ಧೆ, ಶ್ರೀ. ರಾಮಚಂದ್ರ ಮೋರೆ, ಶ್ರೀ. ಕೇಣಿ, ಜೆ.ಪಿ. ವನಮಾಳಿ ಮಾಸ್ತರ ಸೇರಿದಂತೆ ಇತರರು ಮುಂಬೈನಿಂದ ಪ್ರಯಾಣ ಬೆಳೆಸಿದರು. ವಸಯಿ ರೈಲ್ವೆ ನಿಲ್ದಾಣದಲ್ಲಿ ಚಮ್ಮಾರ ಸಮಾಜದಿಂದ ಅವರನ್ನು ಹೂವಿನ ಹಾರ ಹಾಕಿ ಸ್ವಾಗತಿಸಲಾಯಿತು. ಮಧ್ಯಾಹ್ನ ೧೧ ಗಂಟೆ ಹೊತ್ತಿಗೆ ವೇಡಿ ಗ್ರಾಮದ ಬಳಿಯ ಸಪಾಲಾ ನಿಲ್ದಾಣಕ್ಕೆ ಆಗಮಿಸಿದ ಡಾ. ಅಂಬೇಡ್ಕರ್ ಮತ್ತಿತರರನ್ನು ಠಾಣಾ ಜಿಲ್ಲೆಯ ಅಸ್ಪೃಶ್ಯ ಸಮಾಜದ ವತಿಯಿಂದ ಅದ್ದೂರಿ ಸ್ವಾಗತ ಕೋರಲಾಯಿತು.

ವೇಡಿ ಗ್ರಾಮ ಸಫಾಲಾದಿಂದ ಸುಮಾರು ೩–೪ ಮೈಲು ಅಂತರದಲ್ಲಿರುವ ಕಾರಣ ಮುಂಬೈನಿಂದ ಆಗಮಿಸಿದ್ದ ಅತಿಥಿಗಳನ್ನು ಕರೆದುಕೊಂಡು ಹೋಗುವುದಕ್ಕೆ ೨ ದಿನ ಮುಂಚಿತವಾಗಿ ಲಾರಿ ಮತ್ತು ಟಾಂಗಾಗಳ ವ್ಯವಸ್ಥೆಯನ್ನು ಠಾಣೆ ಜಿಲ್ಲೆಯ ಅಸ್ಪೃಶ್ಯರು ಮಾಡಿದ್ದರು. ಆದರೆ ಮಾರ್ಚ್ ೨೮ರ ರಾತ್ರಿ ಅಂದರೆ ಸಮಾವೇಶಕ್ಕೆ ಒಂದು ದಿನ ಮೊದಲು ಸಫಾಲಾದಲ್ಲಿ ವಾಹನ ಮಾಲೀಕರು ಮತ್ತು ಚಾಲಕರು ಸ್ಪೃಶ್ಯ ಹಿಂದೂಗಳ ಚಿತಾವಣೆಗೆ ಬಲಿಯಾಗಿ ಡಾ. ಅಂಬೇಡ್ಕರ್ ಸೇರಿದಂತೆ ಅವರ ಸಂಗಡಿಗರನ್ನು ತಮ್ಮ ವಾಹನಗಳಲ್ಲಿ ಕರೆದುಕೊಂಡು ಹೋಗದಿರುವುದನ್ನು ತೀರ್ಮಾನಿಸಿದ್ದರು. ರೈಲ್ವೆ ನಿಲ್ದಾಣದ ಹೊರಗೆ ಡಾ. ಅಂಬೇಡ್ಕರ್ ಮತ್ತು ಅವರ ಸಂಗಡಿಗರು ಬಂದಾಗ ವಾಹನ ಮಾಲೀಕರು ತಮ್ಮ ವಾಹನಗಳು ಸುಸ್ಥಿತಿಯಲ್ಲಿ ಇಲ್ಲ ಎಂದು ಹೇಳಿದರು. ಬೇರೆ ಇನ್ನೊಂದು ವಾಹನ ಕೂಡ ಅಲ್ಲಿರಲಿಲ್ಲ. ಹೀಗಾಗಿ ಡಾ. ಅಂಬೇಡ್ಕರ್ ಮತ್ತು ಇತರ ಅತಿಥಿಗಳನ್ನು ಟಾಂಗಾದಲ್ಲಿ ಕರೆದುಕೊಂಡು ಹೋಗಲು ನಿರ್ಧರಿಸಲಾಯಿತು. ಆದರೆ ಟಾಂಗಾವಾಲಾಗಳು ತಮ್ಮ ಟಾಂಗಾಗಳಲ್ಲಿ ಅಸ್ಪೃಶ್ಯರನ್ನು ಕರೆದುಕೊಂಡು ಹೋಗಲು ಒಪ್ಪಲಿಲ್ಲ. ಇಲ್ಲಿಯವರೆಗೆ ನಮ್ಮ ಟಾಂಗಾಗಳಲ್ಲಿ ಅಸ್ಪೃಶ್ಯರನ್ನು ಕರೆದುಕೊಂಡು ಹೋಗಿದ್ದಿಲ್ಲ ಆದ್ದರಿಂದ ನಾವು ನಿಮಗೆ ಬಾಡಿಗೆ ಬರಲಿಕ್ಕಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರಿಂದ ಇಕ್ಕಟ್ಟಿನ ಪರಿಸ್ಥಿತಿಗೆ ಸಿಲುಕಿದ ಅಂಬೇಡ್ಕರ್ ಮತ್ತು ಇತರ ಅಸ್ಪೃಶ್ಯರು ಸಫಾಲಾವರೆಗೆ ನಡೆದುಕೊಂಡು ಹೋಗುವುದೆಂದು ತೀರ್ಮಾನಿಸಿದರು. ಇಷ್ಟರಲ್ಲಿ ಮುಷ್ಕರದಲ್ಲಿ ಪಾಲ್ಗೊಂಡಿದ್ದ ಒಬ್ಬ ಮುಸ್ಲಿಂ ಟಾಂಗಾವಾಲಾ ಮುಷ್ಕರದಿಂದ ಹೊರ ಬಂದು ಬಾಡಿಗೆ ಬರುವುದಕ್ಕೆ ಸಿದ್ಧನಾದ. ಮುಷ್ಕರದಿಂದ ಒಬ್ಬ ಟಾಂಗಾವಾಲಾ ಹೊರಬಿದ್ದ ಮೇಲೆ ಮತ್ತೇ ಭಂಡಾರಿ ಜಾತಿಯ ಮೂವರು ಬಾಡಿಗೆ ಬರುವುದಕ್ಕೆ ಸಿದ್ಧರಾದರು. ಈ ರೀತಿ ದೊರೆತ ನಾಲ್ಕು ಟಾಂಗಾಗಳಲ್ಲಿ ಡಾ. ಅಂಬೇಡ್ಕರ್ ಮತ್ತು ಒಂದಿಷ್ಟು ಅತಿಥಿಗಳನ್ನು ಟಾಂಗಾಗಳಲ್ಲಿ ಕಳುಹಿಸಿಕೊಡಲಾಯಿತು. ನಾವು

ಅಸ್ಪೃಶ್ಯರಾಗಿದ್ದಕ್ಕೆ ಈ ಟಾಂಗಾವಾಲಾಗಳು ನಮ್ಮೊಂದಿಗೆ ವರ್ತಿಸಿರುವ ರೀತಿಯನ್ನು ನೋಡಿ ಹಿಂದೂ ಧರ್ಮದಲ್ಲಿನ ಸ್ಥಿತಿಗತಿ ತಿಳಿದು ಅಂಬೇಡ್ಕರ್ ಜೊತೆಗೆ ಬಂದವರು ಹಳಹಳಿಸಿದರು.

ಮಧ್ಯಾಹ್ನ ೧೨ಕ್ಕೆ ಅತಿಥಿಗಳು ವೇಡಿಯಲ್ಲಿನ ಸಮಾವೇಶದ ಸ್ಥಳಕ್ಕೆ ಆಗಮಿಸಿದರು. ವೇದಿಕೆಯ ಮೇಲೆ ಬೃಹತ್ ಆಲದ ಮರದ ನೆರಳು ಪಸರಿಸಿತ್ತು. ಎಲ್ಲ ಕಡೆಯಿಂದ ವೇದಿಕೆ ಶೃಂಗರಿಸಲ್ಪಟ್ಟಿತ್ತು. ಸಮಾವೇಶದ ವೇದಿಕೆಯ ಬಳಿ ಡಾ. ಅಂಬೇಡ್ಕರ್ ಅವರು ಬರುತ್ತಿದ್ದಂತೆಯೇ ಜನರಿಂದ ಅವರ ಜಯಕಾರವಾಯಿತು. ಸಮಾವೇಶಕ್ಕೆ ಜಿಲ್ಲೆಯ ವಸಯಿಯ ನ್ಯಾಯವಾದಿ ಶ್ರೀ. ವಿಷ್ಣುಪಂತ ದಾಂಡೇಕರ್, ಬೋರ್ಡಿಯ ಮುಕುಂದರಾವ್ ಆನಂದರಾವ್ ಸಾವೆ, ವೇಡಿಯ ನಥೋಬಾ ತ್ರ್ಯಂಬಕರಾವ್ ಮ್ಹಾತ್ರೆ, ವಿರಾರ್‌ನ ಎಚ್. ಜಿ. ವರ್ತಕ್, ಶ್ರೀ ಖಂಡುಬಾಯಿ ಶಹಾ, ದೇವಮಾಸ್ತರ್ ಸೇರಿದಂತೆ ವೇಡಿ ಗ್ರಾಮದ ಅಸ್ಪೃಶ್ಯರು ಸೇರಿದಂತೆ ಇತರರು ಇದ್ದರು.

ಈಶ್ವರನ ಪ್ರಾರ್ಥನೆಯೊಂದಿಗೆ ಸಮಾವೇಶಕ್ಕೆ ಚಾಲನೆ ನೀಡಲಾಯಿತು. ಸಮಾವೇಶದ ಸ್ವಾಗತಾಧ್ಯಕ್ಷ ಶ್ರೀ. ಶಿವರಾಮ ಗೋಪಾಲ ಜಾಧವ ಅವರಿಂದ ಸ್ವಾಗತ ಭಾಷಣವಾಯಿತು. ಅವರ ಭಾಷಣದ ಬಳಿಕ ಸಮಾವೇಶದ ನಿಯೋಜಿತ ಅಧ್ಯಕ್ಷ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ...

ಇಂದಿನ ಸಭೆಗೆ ಒಂದು ರೀತಿಯ ವಿಶಿಷ್ಟ ಸ್ವರೂಪ ಲಭಿಸಿದೆ ಎಂದು ಹೇಳಬಯಸುತ್ತೇನೆ. ನಾನು ಸಾರ್ವಜನಿಕ ಕೆಲಸಗಳಲ್ಲಿ ತೊಡಗಿಸಿಕೊಂಡ ದಿನದಿಂದ ಇಲ್ಲಿಯವರೆಗೆ ಇಲ್ಲಿ ಸಾರ್ವಜನಿಕ ಸಭೆ ನಡೆದಿಲ್ಲ. ೧೬ ವರ್ಷಗಳ ಹಿಂದೆ ಈ ಭಾಗದ ಟೆಂಭುರ್ಣಿ ಗ್ರಾಮದಲ್ಲಿ ಸಮಾವೇಶ ಜರುಗಿದ ಬಳಿಕ ಈಗ ಮತ್ತೆ ನಡೆಯುತ್ತಿದೆ. ಈ ಜಿಲ್ಲೆಯ ಜನರು ಇಷ್ಟು ವರ್ಷಗಳ ಬಳಿಕ ಒಂದೆಡೆ ಸೇರುತ್ತಿರುವುದು ಬಹುದೊಡ್ಡ ಆನಂದದ ವಿಚಾರ. ಈ ಸಮಾವೇಶ ಆಯೋಜಿಸುವುದಕ್ಕೆ ಜಿಲ್ಲೆಯ ಮುಖಂಡ ಶಿವರಾಮ ಜಾಧವ ಪಟ್ಟಿರುವ ಪರಿಶ್ರಮಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಸದ್ಗೃಹಸ್ಥರೆ, ಕಾಲಕ್ಷೇಪ ಆಗುವಂತಹ ಭಾಷಣ ಮಾಡಿ ನಿಮ್ಮ ಸಮಯ ವ್ಯರ್ಥ ಮಾಡುವುದಿಲ್ಲ ಆದರೆ ಎರಡು ವಿಷಯಗಳ ಬಗ್ಗೆ ಮಾತನಾಡುತ್ತೇನೆ. ಮೊದಲನೇ ಸಂಗತಿ ಧರ್ಮಾಂತರದ್ದು, ಧರ್ಮಾಂತರದಿಂದ ನೀವು ಸಾಧಿಸಬೇಕಾದ್ದರೂ ಏನು? ಎಂದು ಕೆಲವರು ಪ್ರಶ್ನಿಸುತ್ತಿದ್ದಾರೆ. ಅವರಿಗೆ ಅನೇಕ ವಿಧಗಳಲ್ಲಿ ಉತ್ತರ ನೀಡಬಹುದಾದರೂ ಸರಳ ಶಬ್ದಗಳಲ್ಲಿ ನನ್ನ ಉತ್ತರ ಹೀಗಿದೆ. ಧರ್ಮಾಂತರದ ಪ್ರಶ್ನೆ ಅತ್ಯಂತ ಗಹನವಾದದ್ದು ಮತ್ತು ತತ್ವಜ್ಞಾನದ್ದು ಆಗಿದೆ. ಅದನ್ನು ನಿಮ್ಮ ಬುದ್ಧಿಗೆ, ಮನಸ್ಸಿಗೆ ತಿಳಿದಂತೆ ಅರ್ಥೈಸಿಕೊಳ್ಳಬಹುದು. ಒಂದು ರೀತಿಯ ಅಂಗವೈಕಲ್ಯದಿಂದ ನೀವು ನರಳುತ್ತಿದ್ದೀರಿ. ನೀವು ಅಶಿಕ್ಷಿತರು ಮತ್ತು ದರಿದ್ರಾವಸ್ಥೆಯಲ್ಲಿ ಇದ್ದೀರಿ. ನಿಮ್ಮಲ್ಲಿ ಸಾಮರ್ಥ್ಯ ಎನ್ನುವುದೇ ಇಲ್ಲ. ಇದಕ್ಕೆ ಹೆಚ್ಚಿನ ಸಾಕ್ಷಿ ಏನೂ ಬೇಕಿಲ್ಲ. ನೀವು ಇರುವ ಈ ಗ್ರಾಮದಲ್ಲಿಯೇ ನಿಮ್ಮ ಮತ್ತು ಬೇರೆಯವರು ವಾಸಿಸುವ ಮನೆಗಳನ್ನು ಹೋಲಿಕೆ ಮಾಡಿದರೆ ನಿಮ್ಮ ಸ್ಥಿತಿ ಎಷ್ಟು ನಿಕೃಷ್ಟವಾಗಿದೆ ಎನ್ನುವುದು ಅರಿವಿಗೆ ಬರುತ್ತದೆ. ನಿಸರ್ಗ ಏನು ನೀಡಿದೆಯೋ ಅವುಗಳಿಂದ ಪಶುಪಕ್ಷಿಗಳು ತೃಪ್ತವಾಗುತ್ತವೆ. ಭೂಮಿಯ ಮೇಲೆ ನಿಸರ್ಗ ಸೃಷ್ಟಿಸಿದ ವಸ್ತುಗಳನ್ನು ಅವು ಅವಲಂಬಿಸಿರುತ್ತವೆ. ಆದರೆ ಮನುಷ್ಯನಿಗೆ ಮಹಾತ್ವಾಕಾಂಕ್ಷೆ ಮತ್ತು ಬಯಕೆ ಈ ಎರಡೂ ಸಂಗತಿಗಳು ನಿಸರ್ಗದಿಂದಲೇ ಲಭಿಸಿದ್ದರೂ ನಿಸರ್ಗ ಸೃಷ್ಟಿಗಿಂತ ಹೆಚ್ಚಿಗೆ ಪಡೆಯುವ ಬಯಕೆ ಮನುಷ್ಯನಲ್ಲಿ ಇದ್ದೇ ಇದೆ. ತಮ್ಮ ಉನ್ನತಿಯಾಗಬೇಕು ಎನ್ನುವುದು ಎಲ್ಲ ಸಮಾಜದ ಅಪೇಕ್ಷೆ. ನಿಮ್ಮ ಈ ದಾರಿದ್ರ್ಯ ಸ್ಥಿತಿ ಬದಲಿಸಿ ನಿಮಗೆ ಮುಂದೆ ಹೋಗಬೇಕಿದೆ. ನಿಮ್ಮ ಕಾಲುಗಳ ಮೇಲೆ ನೀವು ನಿಲ್ಲಬಲ್ಲಿರೇ? ಎಂದು ವಿಚಾರ ಮಾಡಿ. ಇಲ್ಲಿಯವರೆಗೆ ನಿಮ್ಮ ಸ್ಥಿತಿಗತಿ ಕುರಿತು ಮಾಡಿದ ಅಧ್ಯಯನದಿಂದ ನನಗೆ

ಖಾತ್ರಿಯಾಗಿರುವ ಒಂದು ಸಂಗತಿ ಏನೆಂದರೆ ಮೇಲೆ ಬರುವುದಕ್ಕೆ ನೀವು ಬೇರೆಯವರ ಸಹಾಯ ಪಡೆಯದೇ ಗತ್ಯಂತರವಿಲ್ಲ. ನಿಮ್ಮಲ್ಲಿ ಇಂದು ಸುಶಿಕ್ಷಿತರ ಸಂಖ್ಯೆಯೂ ಅಷ್ಟಿಲ್ಲ. ಹೀಗಾಗಿ ನೀವು ವಿಶೇಷವಾಗಿ ಉಚ್ಚ ಶಿಕ್ಷಣ ಪಡೆಯಲೇಬೇಕು. ಒಂದು ಕಾಲದಲ್ಲಿ ನಾಲ್ಕು ಪುಸ್ತಕ ಕಲಿತ ಸ್ಪೃಶ್ಯ ವ್ಯಕ್ತಿ ಮಾಮಲೇದಾರ ಆಗುತ್ತಿದ್ದ ಆದರೆ ಇಂದು ಆ ಕಾಲ ಬದಲಾಗಿದೆ. ಉಚ್ಚ ಶಿಕ್ಷಣವಿಲ್ಲದೇ ಇಂದು ಸರ್ಕಾರಿ ನೌಕರಿ ಸಿಗುವುದು ದುರ್ಲಭ. ನಿಮಗೆ ತಿನ್ನುವುದಕ್ಕೆ ಅನ್ನ ಇಲ್ಲದಂತಹ ಸಂದರ್ಭದಲ್ಲಿ ನಿಮ್ಮ ಮಕ್ಕಳಿಗೆ ಬಿ.ಎ., ಎಂ.ಎ. ಶಿಕ್ಷಣ ನೀಡುವುದಕ್ಕೆ ಆಗುತ್ತದೆಯೇ? ತನ್ನ ಸಾಮರ್ಥ್ಯದ ಮೇಲೆ ತನ್ನ ಮಕ್ಕಳಿಗೆ ಶಿಕ್ಷಣ ನೀಡುವ ಸಾಮರ್ಥ್ಯ ಇರುವ ಒಬ್ಬ ವ್ಯಕ್ತಿ ಕೂಡ ನಿಮ್ಮಲ್ಲಿ ಇಲ್ಲ. ಹೀಗಾಗಿ ಶಿಕ್ಷಣ ವಿಚಾರದಲ್ಲಿ ಯಾವ ಸಮಾಜ ನಿಮಗೆ ಯಾವುದೇ ಫಲಾಪೇಕ್ಷೆ ಇಲ್ಲದೇ ಮತ್ತು ನಿಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ನೆರವು ನೀಡುತ್ತದೋ ಅಂತಹ ಸಮಾಜದ ಜೊತೆಗೆ ಕೈಜೋಡಿಸಿ; ಸ್ಪೃಶ್ಯ ಹಿಂದೂಗಳೊಂದಿಗೆ ನಡೆಯುವ ಹೋರಾಟದಲ್ಲಿ ನೀವು ಗೆಲ್ಲಲೇಬೇಕಾಗಿದೆ.

ನಮ್ಮ ಸಮಾಜದ ಸಾಕಷ್ಟು ಜನರು ಪಡಬಾರದ ಕಷ್ಟ ಸಹಿಸಿ ತಮ್ಮ ಹೊಟ್ಟೆ ಹೊರೆಯುತ್ತಾರೆ. ಪರಿಶ್ರಮದಿಂದ ಅವರು ಕೆಲಸ ಮಾಡಿದರೆ ಮಾತ್ರ ಅವರಿಗೆ ತಿನ್ನಲು ಹಿಡಿ ಅನ್ನ, ಮೈಮೇಲೆ ಒಂದಿಷ್ಟು ಬಟ್ಟೆ ಲಭಿಸುತ್ತದೆ. ನಮಗೆ ಇಂದು ಸಿಗುವ ಉದ್ಯೋಗ ಸ್ಪೃಶ್ಯ ಹಿಂದೂಗಳ ದಯೆಯ ಮೇಲೆ ಅವಲಂಬಿಸಿದೆ. ನಿಮಗೆ ಸ್ವತಂತ್ರ ಉದ್ಯೋಗವಿಲ್ಲ. ಸ್ವತಂತ್ರ ಜಮೀನು ಇಲ್ಲ. ಸ್ವತಂತ್ರ ವ್ಯಾಪಾರ ಇಲ್ಲ ಮತ್ತು ಅದರ ಸಾಧನಗಳು ಇಲ್ಲ. ಸ್ವತಂತ್ರ ಉದ್ಯೋಗಕ್ಕೆ ಬೇಕಿರುವ ಸಾಧನಗಳನ್ನು ಒಟ್ಟುಗೂಡಿಸುವ ಸಾಮರ್ಥ್ಯ ಕೂಡ ನಿಮ್ಮಲ್ಲಿ ಇಲ್ಲ, ಇದ್ದರೂ ಕೂಡ ಸ್ವತಂತ್ರ ಉದ್ಯೋಗಕ್ಕೆ ಅವಕಾಶ ಇಲ್ಲ.

ಸಾರ್ವಜನಿಕ ಕುಡಿಯುವ ನೀರಿನ ಮೂಲಗಳಲ್ಲಿ ಕುಡಿಯುವ ನೀರು ತೆಗೆದುಕೊಳ್ಳುವುದಕ್ಕೆ ಸರ್ಕಾರ ಆದೇಶ ಹೊರಡಿಸಿದೆ. ಆದರೆ ಸ್ಪೃಶ್ಯರು ಆ ಕೆರೆ–ಕುಂಟೆಗಳಿಂದ ನೀರು ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲ ಎನ್ನುವುದು ನಮ್ಮ ಅನುಭವಕ್ಕೆ ಬಂದಿದೆ. ಒಂದು ವೇಳೆ ನಾವು ಆ ಕೆರೆಗಳಿಂದ ನೀರು ತೆಗೆದುಕೊಂಡದ್ದೇ ಆದರೆ ನಮ್ಮನ್ನು ಬಹಿಷ್ಕರಿಸಲಾಗುತ್ತದೆ. ಬಹಿಷ್ಕಾರದಿಂದ ನಿಮ್ಮ ಪರಿಸ್ಥಿತಿ ಇನ್ನೂ ಚಿಂತಾಜನಕವಾಗುತ್ತದೆ. ಅಂತಹ ಶೋಷಣೆಯ, ಸಂಕಷ್ಟದ ಮತ್ತು ಹೀನ ಪರಿಸ್ಥಿತಿಯಲ್ಲಿ ಆ ಗ್ರಾಮದ ಮುಸ್ಲಿಂರು ಕೂಡ ನಿಮ್ಮನ್ನು ಬಹಿಷ್ಕಾರದಿಂದ ಹೊರಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ನಾವು ಧೈರ್ಯದಿಂದ ಸಂಕಷ್ಟಕ್ಕೆ ತಲೆಯೊಡ್ಡಬೇಕಾಗುತ್ತದೆ. ಅಂತಹ ಸಂಕಷ್ಟದಲ್ಲಿ ನಮ್ಮ ಪರಿಸ್ಥಿತಿ ಅಸಹಾಯಕತೆಯದ್ದು, ನಮಗೆ ಏನೂ ಮಾಡಲಿಕ್ಕಾಗುವುದಿಲ್ಲ. ಹೀಗಾಗಿ ಇಂದಿನ ನಮ್ಮ ಪರಿಸ್ಥಿತಿಯಿಂದ ಪಾರಾಗುವುದಕ್ಕೆ ಬೇರೆಯವರ ನೆರವು ತೆಗೆದುಕೊಳ್ಳುವುದು ಅತ್ಯಗತ್ಯವಾಗಿದೆ.

ಇಂದು ಹಿಂದೂ ಸಮಾಜದ ಬೇರೆ ಬೇರೆ ಜಾತಿಗಳು ತಮ್ಮ ಸ್ವಾರ್ಥಕ್ಕಾಗಿ ತಮ್ಮ ಧರ್ಮದ ಇತರ ಜಾತಿಗಳ ನೆರವಿಗೆ ನಿಲ್ಲುತ್ತಿವೆ. ಆದರೆ ಈ ಹಿಂದೂ ಸ್ಪೃಶ್ಯ ಜಾತಿ ತನ್ನ ಧರ್ಮದ ಭಾಗವಾಗಿರುವ ಅಸ್ಪೃಶ್ಯರಿಗೆ ನೆರವು ನೀಡುತ್ತಿಲ್ಲ. ಏಕೆಂದರೆ ಆ ಸ್ಪೃಶ್ಯ ಸಮಾಜ ಮತ್ತು ನಮ್ಮ ಅಸ್ಪೃಶ್ಯ ಸಮಾಜದ ಮಧ್ಯೆ ಸಂಬಂಧವೇ ಇಲ್ಲ. ಹೀಗಾಗಿ ನಮಗೆ ಯಾರು ನೆರವಾಗುತ್ತಾರೋ ಅಥವಾ ಅಸಹಾಯಕ ಸ್ಥಿತಿಯಲ್ಲಿ ನಮ್ಮ ರಕ್ಷಣೆಗೆ ಯಾರು ನಿಲ್ಲುತ್ತಾರೋ ಅಂತಹ ಸಮಾಜದೊಂದಿಗೆ ನಮ್ಮ ಋಣಾನುಬಂಧದ ಸಂಬಂಧ ಬೆಳೆಸಿಕೊಳ್ಳಬೇಕು. ಇಲ್ಲಿಯವರೆಗೆ ನಾವು ಹಿಂದೂ ಧರ್ಮದ ದೇವರುಗಳನ್ನು ಪೂಜಿಸುತ್ತಿದ್ದೇವೆ ಆದರೂ ಸ್ಪೃಶ್ಯ ಹಿಂದೂ ಸಮಾಜ ನಮ್ಮನ್ನು ಉಪೇಕ್ಷಿಸಿದೆ. ತಮ್ಮವರನ್ನಾಗಿಸಿಕೊಳ್ಳುವುದಕ್ಕೆ ಹಿಂದೂ ಧರ್ಮೀಯರು ಏನನ್ನು ಮಾಡುತ್ತಿಲ್ಲ. ಕೆಲವೇ ದಿನಗಳ ಹಿಂದೆಯಷ್ಟೇ ಮಹಾತ್ಮ ಗಾಂಧೀಜಿ ಅವರು ತಮ್ಮ ಹರಿಜನದಲ್ಲಿ

ಒಂದು ಲೇಖನ ಬರೆದಿದ್ದಾರೆ. ಅಸ್ಪೃಶ್ಯ ವರ್ಗದ ಕೆಲವು ವಿದ್ಯಾರ್ಥಿಗಳು ತಮ್ಮ ಮುಂದಿನ ಶಿಕ್ಷಣಕ್ಕೆ ಎದುರಾಗಿರುವ ತೊಂದರೆ ಪರಿಹರಿಸುವುದಕ್ಕೆ ವಿದ್ಯಾರ್ಥಿ ವೇತನ ನೀಡಬೇಕು ಎಂದು ಅವರೆದುರು ಬೇಡಿಕೆ ಮಂಡಿಸಿದ್ದರು. ಆ ಅರ್ಜಿಗಳಿಗೆ ಮಹಾತ್ಮ ಗಾಂಧೀಜಿ ಅವರು ತಾವು ನೀಡಿದ ಉತ್ತರದಲ್ಲಿ ಕೇವಲ ಸೌಲಭ್ಯ ಪಡೆಯುವುದಕ್ಕಾಗಿ ನೀವು ಹಿಂದೂ ಧರ್ಮದಲ್ಲಿ ಉಳಿಯಬೇಕು ಎಂದಿದ್ದರೆ ನೀವು ಹಿಂದೂ ಧರ್ಮ ತೊರೆದರೂ ತೊಂದರೆಯಾಗದು ಎಂದು ಹೇಳಿದ್ದರು. ಮಹಾತ್ಮ ಗಾಂಧೀಜಿ ಅವರಂತಹವರೇ ಈ ರೀತಿಯ ಭಾವನೆ ತಾಳಿದರೆ ಇನ್ನುಳಿದ ಸಾಮಾನ್ಯರ ಭಾವನೆ ಹೇಗಿರಬೇಡ?

ಮೇಲಿನ ಸಂಗತಿ ನೋಡಿದರೆ ಹಿಂದೂ ಧರ್ಮದ ಜನರತ್ತ ನಿರೀಕ್ಷೆ ಇರಿಸಿಕೊಂಡು ಕುಳಿತುಕೊಳ್ಳುವುದು ತಪ್ಪಾಗುತ್ತದೆ. ನಿಮಗೆ ನಿಮ್ಮ ಪ್ರಗತಿ, ಉನ್ನತಿ ಸಾಧಿಸುವುದು ಇದ್ದರೆ ಸಹೃದಯ, ಸಮರ್ಥ, ಚಾರಿತ್ರ್ಯ ಮತ್ತು ನಿಸ್ವಾರ್ಥ ಭಾವನೆಯು ಇರುವಂತಹ ಇನ್ನೊಂದು ಸಮಾಜದೊಂದಿಗೆ ನೀವು ಸಂಬಂಧ ಬೆಳೆಸುವುದೇ ಧರ್ಮಾಂತರ.

ಮುಸ್ಲಿಂ, ಕ್ರೈಸ್ತರು ಮತ್ತು ಸಿಖ್‌ರು ನಮಗಾಗಿ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಅದಕ್ಕೆ ವಿರುದ್ಧವಾಗಿ ಹಿಂದೂ ಧರ್ಮೀಯರ ಮನಸ್ಥಿತಿ ಹೇಗಿದೆ ನೋಡಿ. ಮಹಾತ್ಮ ಗಾಂಧೀಜಿ ಅವರು ಸ್ವರಾಜ ಪಡೆಯುವುದಕ್ಕೆ ಹಿಂದೂ ಸಮಾಜದ ನೆರವು ಯಾಚಿಸಿದರು. ಆ ಸಂದರ್ಭದಲ್ಲಿ ಅವರಿಗೆ ಕೋಟಿ ಲೆಕ್ಕದಲ್ಲಿ ಹಣ ಹರಿದುಬಂದಿತು. ಆದರೆ ಯಾವಾಗ ಅವರು ಅಸ್ಪೃಶ್ಯರಿಗಾಗಿ ಹಿಂದೂ ಸಮಾಜದತ್ತ ಕೈ ಚಾಚಿದರೋ ಆಗ ಅವರಿಗೆ ಇಡೀ ದೇಶಾದ್ಯಂತ ಕಷ್ಟಪಟ್ಟು ಸಿಕ್ಕಿದ್ದು ಎಂಟು ಲಕ್ಷ ರೂಪಾಯಿಗಳು ಮಾತ್ರ. ಇದರಲ್ಲಿ ಈಗಾಗಲೇ ನಾಲ್ಕು ಲಕ್ಷ ರೂಪಾಯಿಗಳು ಈ ವರ್ಷ ಖರ್ಚಾಗಿದ್ದು, ಇನ್ನುಳಿದ ಆರು ತಿಂಗಳಿನಲ್ಲಿ ಉಳಿದಿರುವ ನಾಲ್ಕು ಲಕ್ಷ ರೂಪಾಯಿಗಳು ಕೂಡ ಖರ್ಚಾಗುತ್ತವೆ.

ಸ್ವರಾಜ್‌ಕ್ಕಾಗಿ ಹಿಂದೂ ಸಮಾಜ ಎಷ್ಟು ಸ್ವಾರ್ಥ ತ್ಯಾಗಕ್ಕೆ ಸಿದ್ಧವಾಗಿದೆ ಮತ್ತು ಅಸ್ಪೃಶ್ಯರ ಉದ್ಧಾರಕ್ಕೆ ಯಾವ ಮಟ್ಟಿನಲ್ಲಿ ಶ್ರಮಿಸಲಿದೆ ಎನ್ನುವುದು ಇದರಿಂದ ಸಾಬೀತು ಆಗುತ್ತದೆ. ಮುಸ್ಲಿಂರ ಒಂದು ಸಭೆಯಲ್ಲಿ ಒಂದು ಕೋಟಿ ರೂಪಾಯಿ ಸಂಗ್ರಹಿಸಬೇಕು ಮತ್ತು ಅದನ್ನು ನಮಗಾಗಿ ವೆಚ್ಚ ಮಾಡಬೇಕು ಎಂದು ತೀರ್ಮಾನಿಸಲಾಗಿದೆ. ಅದೇ ರೀತಿ ಸಿಖ್ ಸಮುದಾಯ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ನಿಮ್ಮ ಉನ್ನತಿಗೆ ಶ್ರಮಿಸುವುದಕ್ಕೆ ಸಿದ್ಧವಾಗಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಹಿಂದೂಗಳು ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ಕಣ್ಣಿನ ಮೇಲೆ ಬಟ್ಟೆ ಹಾಕಿಕೊಂಡು ಕುಳಿತಿರುವ ಈ ಸಮಾಜದಿಂದ ನಿಮಗೆ ನೆರವು ದೊರೆಯುವುದು ದೂರದ ಮಾತು ಬದಲಿಗೆ ನಿಮ್ಮ ಪ್ರಗತಿಗೆ ಅಡೆತಡೆ ಉಂಟಾಗುವುದು ನಿಶ್ಚಿತ. ಒಟ್ಟಾರೆ ಹೇಳಬೇಕೆಂದರೆ ಅವರಿಂದ ನಿಮ್ಮ ಉದ್ಧಾರವಂತೂ ಸಾಧ್ಯವಿಲ್ಲ. ಇಂದಿನ ಪ್ರಗತಿಯ ಕಾಲದಲ್ಲಿ ನಾವು ನಮ್ಮ ಮಾರ್ಗವನ್ನು ಹಿಂದೂ ಜನರಿಂದ ಪ್ರತ್ಯೇಕಗೊಳಿಸಿ ಸ್ವತಂತ್ರವಾಗಿ ರೂಪಿಸಬೇಕಿದೆ. ಸ್ವಾಭಿಮಾನ ಮತ್ತು ಸನ್ಮಾನಕ್ಕೆ ಧಕ್ಕೆಯಾಗದಂತೆ ನಮ್ಮ ಪ್ರಗತಿಗೆ ಬೆನ್ನೆಲುಬಾಗಿ ನಿಲ್ಲುವಂತಹ ಸಮಾಜದೊಂದಿಗೆ ನಾವು ಸಹಕಾರ ಮನೋಭಾವ ತಳೆಯಬೇಕಿದೆ.

ಪೂರ್ವಜರ ಧರ್ಮಕ್ಕೆ ಅಂಟಿಕೊಂಡು ಕುಳಿತಿರುವುದರಲ್ಲಿ ಅರ್ಥವಿಲ್ಲ. ಸುಳ್ಳು ಅಭಿಮಾನದಲ್ಲಿ ಯಾವುದೇ ಅರ್ಥವೂ ಇಲ್ಲ, ಉಪಯುಕ್ತತೆಯೂ ಇಲ್ಲ. ಹಿಂದೂ ಧರ್ಮದಲ್ಲಿರುವ ಅಪಾಯಕಾರಿ ಚಾತುರ್ವರ್ಣ್ಯ ವ್ಯವಸ್ಥೆ ನಶಿಸಿಹೋಗುವ ಚಿಹ್ನೆಯೂ ಕಾಣುತ್ತಿಲ್ಲ. ವರ್ಣಾಶ್ರಮ ವ್ಯವಸ್ಥೆಯ ಕಾರಣ ಬ್ರಾಹ್ಮಣರು ಹೊರತುಪಡಿಸಿ ಬೇರೆಯವರು ವಿದ್ಯೆ ಪಡೆಯುವಂತಿಲ್ಲ. ಕ್ಷತ್ರಿಯರನ್ನು ಬಿಟ್ಟು ಬೇರೆಯವರು ಶಸ್ತ್ರ ಹಿಡಿಯುವಂತಿಲ್ಲ. ಇಂತಹ ವ್ಯವಸ್ಥೆ ನಮ್ಮ ಪೂರ್ವಜರನ್ನು ಅಜ್ಞಾನಿ ಮತ್ತು ನಿರ್ಬಲರನ್ನಾಗಿಸಲಾಯಿತು.

ವರ್ಣಾಶ್ರಮ ಧರ್ಮ ನಮಗೆ ಜ್ಞಾನ, ಅಧಿಕಾರ, ಶಸ್ತ್ರ ಮತ್ತು ಸಂಪತ್ತು ಗಳಿಕೆಗೆ ಅವಕಾಶ ನೀಡಲಿಲ್ಲ. ಇದೇ ವರ್ಣಾಶ್ರಮ ಧರ್ಮ ನಮ್ಮ ಪೂರ್ವಿಕರ ಪ್ರತಿರೋಧ ಶಕ್ತಿ ಇಲ್ಲವಾಗಿಸಿ ಪ್ರಗತಿ ಪಥದತ್ತ ಅವರು ಹೆಜ್ಜೆ ಹಾಕುವುದನ್ನು ನಿರ್ಬಂಧಿಸಿತು. ಆದರೆ ಇಂದು ನಮ್ಮ ಸ್ಥಿತಿ ಹಾಗಿಲ್ಲ. ಇತ್ತೀಚೆಗಂತೂ ಎಲ್ಲರಿಗೂ ಶಿಕ್ಷಣ ಮುಕ್ತವಾಗಿದೆ. ಶಸ್ತ್ರ ಹಿಡಿಯಬೇಕೆನ್ನುವವರಿಗೆ ಮಾರ್ಗ ಮುಕ್ತಗೊಳಿಸಲಾಗಿದೆ. ಪ್ರಗತಿಯ ಪಥ ಮುಕ್ತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪೂರ್ವಿಕರ ಧರ್ಮಕ್ಕೆ ಅಂಟಿಕೊಂಡು ಕುಳಿತರೆ ನಿಮ್ಮ ಉದ್ಧಾರ ಎಂದಿಗೂ ಆಗುವುದಿಲ್ಲ. ಜ್ಞಾನ ಮತ್ತು ಸಾಮರ್ಥ್ಯ ಬೆಳೆಸಿಕೊಂಡು ಮೂಢ ನಂಬಿಕೆಗಳನ್ನು ಮುರಿದು ಸರ್ವಾಂಗೀಣ ಪ್ರಗತಿಯತ್ತ ಹೆಜ್ಜೆ ಹಾಕಿ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ಕುರಿತು ಮುಕ್ತ ಮನಸ್ಸಿನಿಂದ ವಿಚಾರ ಮಾಡಿ ಮತ್ತು ಪ್ರಗತಿಯ ಪಥದತ್ತ ಹೆಜ್ಜೆ ಹಾಕುವುದಕ್ಕೆ ಬೆಳಕಿನ ರಸ್ತೆಯಲ್ಲಿ ಸಾಗಿ.

ಇನ್ನು ರಾಜಕೀಯಕ್ಕೆ ಸಂಬಂಧಿಸಿದ ವಿಚಾರ, ಒಂದು ವರ್ಷದ ಬಳಿಕ ಮುಂಬೈ ಪ್ರಾಂತದಲ್ಲಿ ಮತ್ತು ಇಡೀ ಭಾರತದಲ್ಲಿ ನೂತನ ಸಂವಿಧಾನ ಅಸ್ತಿತ್ವಕ್ಕೆ ಬರಲಿದೆ. ಈ ಸಂವಿಧಾನ ರಚನೆಗೆ ಸಂಬಂಧಿಸಿದ ನಿಮ್ಮ ಕರ್ತವ್ಯಗಳು ಏನು ಎನ್ನುವುದನ್ನು ತಿಳಿಸುವುದು ನನ್ನಿಚ್ಛೆಯಾಗಿದೆ. ಇಲ್ಲಿಯವರೆಗೆ ನಿಮ್ಮ ದೃಷ್ಟಿಕೋನ ಹೇಗಿತ್ತು ಎಂದರೆ ನಮಗೆ ಎದುರಾಗುವ ಕಷ್ಟಗಳನ್ನು ಪರಿಹರಿಸುವುದಕ್ಕೆ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸುವುದಾಗಿತ್ತು. ಕಲೆಕ್ಟರ್ ರಾಜನಿದ್ದಂತೆ ಎನ್ನುವುದು ನಿಮ್ಮ ಭಾವನೆಯಾಗಿತ್ತು. ಒಂದು ದೃಷ್ಟಿಯಲ್ಲಿ ಕಲೆಕ್ಟರ್ ರಾಜನಾಗಿಯೇ ಇದ್ದ. ಆದರೆ ಈ ಪರಿಸ್ಥಿತಿ ಮುಂದಿನ ವರ್ಷದಿಂದ ಬದಲಾಗಲಿದೆ. ಒಂದು ವರ್ಷದ ಬಳಿಕ ರಾಜಕಾರಣದಲ್ಲಿ ನೌಕರಶಾಹಿಯ ಸ್ವತಂತ್ರ ಸ್ಥಾನ ಮತ್ತು ಅಧಿಕಾರ ಇರುವುದಿಲ್ಲ. ಹೊಸ ಸಂವಿಧಾನದ ಕಾಯ್ದೆ ಪ್ರಕಾರ ಎಲ್ಲ ಅಧಿಕಾರ ಕಾನೂನು ಮಂಡಳಿಗಿರುತ್ತದೆ. ಕಾನೂನು ಮಂಡಳಿಯ ಆದೇಶದಂತೆ ಕಲೆಕ್ಟರ್ ಮತ್ತು ಮಾಮಲೇದಾರ ತಲೆ ತಗ್ಗಿಸಿ ಕೆಲಸ ಮಾಡಬೇಕಾಗುತ್ತದೆ. ಅಂದರೆ ಮುಂದಿನ ದಿನಗಳಲ್ಲಿ ಕಾನೂನು ಮಂಡಳಿ ಮಹತ್ವದ ಸ್ಥಾನ ಪಡೆಯಲಿದ್ದು, ಆ ಕಾನೂನು ಮಂಡಳಿಯಲ್ಲಿ ನಮಗೆ ಪ್ರಾಮುಖ್ಯತೆ ಲಭಿಸಿದೆ. ರಾಜಕಾರಣದ ಭವಿಷ್ಯ ಕಾನೂನು ಮಂಡಳಿಯನ್ನು ಅವಲಂಬಿಸಿರುವ ಕಾರಣ ಕಾನೂನು ಮಂಡಳಿಗೆ ಉತ್ತಮ ವ್ಯಕ್ತಿಗಳ ಆಯ್ಕೆಯಾಗಬೇಕು. ಶೆಟ್ಟಿಗಳು, ವ್ಯಾಪಾರಸ್ಥರು ಮತ್ತು ಶ್ರೀಮಂತರು ಕಾನೂನು ಮಂಡಳಿಯ ಮೇಲೆ ಕಣ್ಣಿರಿಸಿದ್ದಾರೆ. ಆದ್ದರಿಂದ ದೀನ ದಲಿತರೊಂದಿಗೆ ಒಂದಾಗುವ ಮತ್ತು ಅವರೊಂದಿಗೆ ಕೆಲಸ ಮಾಡುವ ನಿಸ್ವಾರ್ಥಿ, ನಿರ್ಭೀತ ಮತದಾರರೊಂದಿಗೆ ಪ್ರಾಮಾಣಿಕವಾಗಿ ವರ್ತಿಸುವ ವ್ಯಕ್ತಿಯನ್ನು ನಾವು ಆಯ್ಕೆ ಮಾಡಬೇಕಿದೆ. ನಮ್ಮ ನಿಜ ಹಿತಚಿಂತಕರನ್ನು ಕಾನೂನು ಮಂಡಳಿಗೆ ಆಯ್ಕೆ ಮಾಡಿದರೆ ಮಾತ್ರ ನಮ್ಮ ಹೆಜ್ಜೆ ಮುಂದಕ್ಕೆ ಹೋಗಿ ನಮ್ಮ ಹಿತಾಸಕ್ತಿಗಳ ರಕ್ಷಣೆಯಾಗಬಲ್ಲುದು.

ಕಾನೂನು ಮಂಡಳಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದಕ್ಕೆ ನಮಗೆ ನೀಡಿರುವ ಮತಾಧಿಕಾರ ಅತ್ಯಂತ ಮಹತ್ವದ್ದು ಮತ್ತು ಶ್ರೇಷ್ಠವಾದುದು. ಅದು ನಮ್ಮ ಸಂರಕ್ಷಣೆಯ ಸಾಧನಾ ಶಕ್ತಿಯಾಗಿದೆ. ಮತ ಮಾರಾಟ ಮಾಡುವುದು ಅಪರಾಧ ಅಷ್ಟೇ ಅಲ್ಲ ಅದು ಆತ್ಮದ್ರೋಹವೂ ಆಗಿದೆ. ಮತ ಮಾರಾಟದಿಂದ ಅನರ್ಹ ವ್ಯಕ್ತಿಗಳು ಕಾನೂನು ಮಂಡಳಿಯಲ್ಲಿ ಸೇರುವುದರಿಂದ ದೇಶಕ್ಕೆ ಅಪಾರ ಹಾನಿಯಾಗಿ ದೇಶ ಅಧೋಗತಿಗೆ ಇಳಿಯುತ್ತದೆ. ಅನರ್ಹ ಮತ್ತು ಅಪಾತ್ರ ವ್ಯಕ್ತಿಗಳು ತಮ್ಮ ಹಣಬಲದ ಮೇಲೆ ಕಾನೂನು ಮಂಡಳಿಗೆ ಆಯ್ಕೆಯಾಗುವ ಉದ್ದೇಶದಿಂದ ನಿಮಗೆ ಹಣದ ಆಮಿಷ ಒಡ್ಡಬಹುದು. ಬಡತನದಿಂದಾಗಿ ಮತ ಮಾರಬೇಕೋ ಬೇಡವೋ ಎಂಬ ಗೊಂದಲ ಹುಟ್ಟುವುದು ಸಹಜ. ಆದರೆ ಹಣದ ಮೋಹಕ್ಕೆ ಬೀಳಬೇಡಿ. ಮೋಹಕ್ಕೆ ಬಲಿ ಬಿದ್ದರೆ ನಿಮ್ಮ ಕಾಲುಗಳ ಮೇಲೆ ಮತ್ತು ಸಮಾಜದ ಕಾಲುಗಳ ಮೇಲೆ ಕಲ್ಲು ಹಾಕಿದಂತಾಗುತ್ತದೆ. ಆದ್ದರಿಂದ ಅಪಾಯದ ಸಂಕೇತವನ್ನು ಇಂದೇ ನಾನು ಎಲ್ಲರಿಗೂ ನೀಡುತ್ತಿದ್ದೇನೆ.

ಮತ ಖರೀದಿಸುವ ವ್ಯಕ್ತಿಗೆ ಸಮಾಜದ ಬೆಂಬಲ ಇರುವುದಿಲ್ಲ ಆ ಕಾರಣಕ್ಕಾಗಿ ಆತ ತನ್ನ ಹಣಬಲದ ಮೇಲೆ ತನ್ನ ಅರ್ಹತೆ ಪ್ರತಿಷ್ಠಾಪಿಸಿ ಅಟ್ಟಹಾಸ ಮೆರೆಯುತ್ತಾನೆ. ಇಂತಹ ಅನರ್ಹ ವ್ಯಕ್ತಿಗಳಿಂದ ಸಮಾಜದ್ದಾಗಲಿ, ರಾಷ್ಟ್ರದ ಹಿತವಾಗಲಿ ರಕ್ಷಣೆಯಾಗುವುದಿಲ್ಲ. ಹಣವಿರುವ ವ್ಯಕ್ತಿ ಕಾನೂನು ಮಂಡಳಿಯ ಪ್ರತಿನಿಧಿಯಾದರೆ ಆತ ಶ್ರೀಮಂತರನ್ನು ರಕ್ಷಿಸುತ್ತಾನೆ ವಿನಃ ನಿಮ್ಮಂತಹ ದೀನ ದಲಿತರ ಹಿತ ರಕ್ಷಿಸುವುದಿಲ್ಲ. ಆದ್ದರಿಂದ ಮತಗಳನ್ನು ಮಾರುವ ಪಾಪದ ಕೆಲಸ ಮಾಡಬೇಡಿ ಮತ್ತು ನೀವು ಇಂತಹ ಕೆಲಸ ಮಾಡುವುದಿಲ್ಲ ಎನ್ನುವುದು ನನಗೆ ಖಾತ್ರಿ ಇದೆ. ಸಿರಿವಂತರ ಯಾವುದೇ ಪ್ರಕಾರದ ಆಮಿಷ, ಸಿಹಿ ಮಾತಿನ ಭಾಷಣ ಮತ್ತು ಹಣಕ್ಕೆ ಬಲಿಯಾಗಿ ನೀವು ದಿಕ್ಕು ತಪ್ಪಬೇಡಿ.

ನಮಗೆ ಲಭಿಸಿರುವ ಮತಾಧಿಕಾರವನ್ನು ಒಂದು ವೇಳೆ ಉತ್ತಮವಾಗಿ ಬಳಸಿಕೊಂಡರೆ ಒಳ್ಳೆಯ ವ್ಯಕ್ತಿಗಳು ಕಾನೂನು ಮಂಡಳಿಗೆ ಆಯ್ಕೆಯಾಗುತ್ತಾರೆ ಮತ್ತು ಅದರಿಂದ ಹೆಚ್ಚಿನ ಪ್ರಗತಿ ನಾವು ಸಾಧಿಸಲು ಸಾಧ್ಯ.  ಕಾನೂನು ಮಂಡಳಿಗೆ ನಾವು ಯಾರನ್ನು ಆಯ್ಕೆ ಮಾಡಬೇಕು ಎನ್ನುವುದನ್ನು ಸೂಕ್ತ ಕಾಲದಲ್ಲಿ ನಾನು ನಿಮಗೆ ತಿಳಿಸುತ್ತೇನೆ.

ಕೊನೆಯದಾಗಿ ಈ ಸಮಾವೇಶ ಯಶಸ್ವಿಗೊಳಿಸುವುದಕ್ಕೆ ತಾವು ದೂರದ ಊರುಗಳಿಂದ ಇಲ್ಲಿಗೆ ಆಗಮಿಸುವ ಕಷ್ಟ ಸಹಿಸಿದ್ದೀರಿ. ನನ್ನ ಬಗ್ಗೆ ತಾವು ತೋರಿಸಿರುವ ವಿಶ್ವಾಸಕ್ಕೆ ಪ್ರತಿಯಾಗಿ ಈ ಸಮಾವೇಶದ ಸ್ವಾಗತಾಧ್ಯಕ್ಷ ಶ್ರೀ. ಶಿವರಾಮ ಗೋಪಾಲ ಜಾಧವ ಅವರಿಗೆ ಕೃತಜ್ಞತೆ ಸಲ್ಲಿಸಿ ನನ್ನ ಮಾತುಗಳಿಗೆ ವಿರಾಮ ನೀಡುತ್ತೇನೆ.

ಡಾ. ಅಂಬೇಡ್ಕರ್ ಅವರ ಭಾಷಣದ ಬಳಿಕ ಸಮಾವೇಶದಲ್ಲಿ ನಿರ್ಣಯಗಳನ್ನು ಮಂಡಿಸಲಾಯಿತು. ಅವುಗಳಲ್ಲಿ ಎರಡು ನಿರ್ಣಯಗಳನ್ನು ಅಧ್ಯಕ್ಷರು ಮಂಡಿಸಿದರು.

೧ನೇ ನಿರ್ಣಯ:– ಚಕ್ರವರ್ತಿ ಐದನೇ ಜಾರ್ಜ್ ಅವರ ನಿಧನಕ್ಕೆ ಈ ಸಮಾವೇಶ ತನ್ನ ಸಂತಾಪ ಸೂಚಿಸುತ್ತದೆ.

೨ನೇ ನಿರ್ಣಯ:– ಚಕ್ರವರ್ತಿ ೮ನೇ ಎಡ್ವರ್ಡ್ ಅವರಿಗೆ ದೀರ್ಘಾಯಸ್ಸು ಮತ್ತು ಆರೋಗ್ಯ ಲಭಿಸಲಿ ಎಂದು ಈ ಸಮಾವೇಶ ಹಾರೈಸುತ್ತದೆ.

೩ನೇ ನಿರ್ಣಯ:– ಯವಲೆಯ ಸಮಾವೇಶದಲ್ಲಿ ಮಾಡಿರುವ ಅಸ್ಪೃಶ್ಯ ಸಮಾಜದ ಧರ್ಮಾಂತರ ಘೋಷಣೆಗೆ ಈ ಸಮಾವೇಶ ಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ. ನಿರ್ಣಯ ಮಂಡಿಸಿದವರು– ಲಕ್ಷ್ಮಣ ಜಾನಬಾ ಗಾಯಕವಾಡ, ಅನುಮೋದಿಸಿದವರು– ಗಂಗಾರಾಮ ಮಾಧವ ಜಾಧವ, ಶ್ರೀ. ಚಾಂಗದೇವ ಮೋಹಿತೆ, ಶ್ರೀ ವನಮಾಳಿ ಮತ್ತು ಶ್ರೀ. ಮಡಕೆ ಬುವಾ ಜಾಧವ.

೪ನೇ ನಿರ್ಣಯ:– ಈ ಜಿಲ್ಲೆಯಲ್ಲಿನ ಎಲ್ಲ ಸಾರ್ವಜನಿಕ ಕೆರೆ ಮತ್ತು ಬಾವಿಗಳನ್ನು ನೀರಿಗಾಗಿ ಎಲ್ಲರೂ ಸಮಾನವಾಗಿ ಬಳಸಬೇಕು ಎಂದು ಠಾಣಾ ಜಿಲ್ಲೆಯ ಲೋಕಲ್ ಬೋರ್ಡ್ ತನ್ನ ಸ್ವಾಧೀನದಲ್ಲಿರುವ ನೀರಿನ ಮೂಲಗಳ ಬಳಿ ಭಿತ್ತಿ ಪತ್ರ ಅಂಟಿಸಿದೆ. ಆದರೂ ಬಹುಸಂಖ್ಯಾತ ಸ್ಪೃಶ್ಯ ಸಮಾಜವು ಅಸ್ಪೃಶ್ಯರಿಗೆ ಈ ನೀರಿನ ಮೂಲಗಳಿಂದ ನೀರು ತೆಗೆದುಕೊಳ್ಳುವುದನ್ನು ನಿಷೇಧಿಸಿದ್ದು, ಆ ಕಾರಣ ಸರ್ಕಾರ ಅಸ್ಪೃಶ್ಯ ಸಮಾಜ ನೀರು ತೆಗೆದುಕೊಳ್ಳುವ ಸಂದರ್ಭದಲ್ಲಿ ಸ್ಪೃಶ್ಯ ಸಮಾಜದಿಂದ ಆಗುವ ಅಡೆತಡೆಗಳನ್ನು ದೂರ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ನಿರ್ಣಯ ಮಂಡಿಸಿದವರು–ಚಾಂಗದೇವ ಮೋಹಿತೆ, ಅನುಮೋದಿಸಿದವರು– ಜನಾರ್ಧನ್ ಪದಮಾಜಿ ಲೋಖಂಡೆ.

೫ನೇ ನಿರ್ಣಯ:– ಅಸ್ಪೃಶ್ಯ ಮತ್ತು ಗುಡ್ಡಗಾಡು ಎಂದು ಗುರುತಿಸಿಕೊಳ್ಳುವ ಜಾತಿಯ ಜನರನ್ನು

ಸರ್ಕಾರ ಕೇವಲ ಅವರ ಜಾತಿಯನ್ನು ಗಮನದಲ್ಲಿ ಇರಿಸಿಕೊಂಡು ಅವರನ್ನು ಜೈಲಿನಲ್ಲಿ ಮಲಮೂತ್ರ ಸ್ವಚ್ಛಗೊಳಿಸುವ ಕೆಲಸ ಮಾಡಿಸುತ್ತಿದೆ. ಇಂತಹ ಅನೇಕ ರೀತಿಯ ಅನ್ಯಾಯದ ಪರಂಪರೆಗಳಿಗೆ ಮಾನ್ಯತೆ ನೀಡುವಂತಹ ಸರ್ಕಾರದ ಈ ಧೋರಣೆಗೆ ಈ ಸಮಾವೇಶ ತನ್ನ ಆಕ್ಷೇಪ ವ್ಯಕ್ತಪಡಿಸುತ್ತದೆ. ಆದ್ದರಿಂದ ತಕ್ಷಣ ಈ ಅನ್ಯಾಯ ದೂರ ಮಾಡಬೇಕು ಎಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳಲಾಗುತ್ತಿದೆ. ನಿರ್ಣಯ ಮಂಡಿಸಿದವರು– ಶ್ರೀ. ಮೋರೆ, ಅನುಮೋದಿಸಿದವರು– ಆಥಾವ ಮತ್ತು ಜಾಧವ.

೬ನೇ ನಿರ್ಣಯ:– ಇಡೀ ಭಾರತದ ಅಸ್ಪೃಶ್ಯ ಸಮಾಜದ ಮುಖಪತ್ರ **"ಜನತಾ"** ಆಗಿದ್ದು, ಈ ವರ್ತಮಾನ ಪತ್ರಿಕೆಗೆ ಎಲ್ಲ ಗ್ರಾಮಗಳ ಅಸ್ಪೃಶ್ಯ ಸಮಾಜ ಚಂದಾದಾರ ಆಗಬೇಕು. ಅದೇ ರೀತಿ ಬಿಕ್ಕಟ್ಟಿನ ಪ್ರಸಂಗದಲ್ಲಿ ಜನತಾ ಪತ್ರಕ್ಕೆ ಆರ್ಥಿಕ ನೆರವು ನೀಡಿ ಅದರ ಅಭಿವೃದ್ಧಿ ಮತ್ತು ಬೆಳವಣಿಗೆಗಾಗಿ ಎಲ್ಲ ಅಸ್ಪೃಶ್ಯ ಸಮಾಜ ನಿರಂತರವಾಗಿ ಯತ್ನಿಸಬೇಕೆನ್ನುವುದು ಈ ಸಮಾವೇಶದಲ್ಲಿ ಎಲ್ಲರ ಆಗ್ರಹದ ವಿನಂತಿಯಾಗಿದೆ. ನಿರ್ಣಯ ಮಂಡಿಸಿದವರು– ಧೋಂಡಿರಾಮ್ ಗಾಯಕವಾಡ್, ಅನುಮೋದಿಸಿದವರು –ಸದಾಶಿವರಾಯ ಸಾಳವಿ.

೭ನೇ ನಿರ್ಣಯ:– ಈ ಭಾಗದ ಅಸ್ಪೃಶ್ಯ ಸಮಾಜ ವಿವಾಹದಂತಹ ಕಾರ್ಯಕ್ರಮದಲ್ಲಿ ಹಳೆಯ ಸಂಪ್ರದಾಯಗಳನ್ನು ಪಾಲಿಸುತ್ತಿದ್ದರೆ ಅವುಗಳನ್ನು ಇನ್ನು ಮುಂದೆ ಬಿಡಬೇಕು ಮತ್ತು ವಿವಾಹ ಕಾರ್ಯಕ್ರಮದಲ್ಲಿ ಶಿಕ್ಷಣದಂತಹ ಸಾಮಾಜಿಕ ಹಿತ ಬೆಳೆಸುವಂತಹ ಕೆಲಸಗಳಿಗೆ ನೆರವಾಗಬೇಕು. ನಿರ್ಣಯ ಮಂಡಿಸಿದವರು– ಶ್ರೀ. ಲಕ್ಷ್ಮಣ ಮಾನೋಜಿ ಗಾಯಕವಾಡ, ಅನುಮೋದಿಸಿದವರು– ಗೋಪಾಲ ಮಹಾದೇವ ಜಾಧವ.

೮ನೇ ನಿರ್ಣಯ:– ಮುಂಬರುವ ತಿಂಗಳಿನಲ್ಲಿ ಮುಂಬೈನಲ್ಲಿ ಅಖಿಲ ಮಹಾರ್ ಸಮಾಜದ ಸಮಾವೇಶ ಆಯೋಜಿಸಲಾಗಿದ್ದು, ಆ ಸಮಾವೇಶದಲ್ಲಿ ಈ ಭಾಗದ ಎಲ್ಲ ಮಹಾರರು ಪಾಲ್ಗೊಳ್ಳಬೇಕು ಎಂದು ವಿನಂತಿಸಲಾಗುತ್ತದೆ. ನಿರ್ಣಯ ಮಂಡಿಸಿದವರು– ದಿವಾಕರ ಪಗಾರೆ, ಅನುಮೋದಿಸಿದವರು– ಸಂಭಾಜಿ ಬಾಬಾ ಗಾಯಕವಾಡ.

೮ನೇ ನಿರ್ಣಯ:– ಈ ಸಮಾವೇಶದ ಯಶಸ್ಸಿಗೆ ಶ್ರಮಿಸಿದ ಎಲ್ಲರಿಗೂ ಈ ಸಮಾವೇಶ ಕೃತಜ್ಞತೆ ಸಲ್ಲಿಸುತ್ತದೆ. ನಿರ್ಣಯ ಮಂಡಿಸಿದವರು– ಗಾಯಕವಾಡ, ಅನುಮೋದಿಸಿದವರು– ಜಾಧವ.

---

ಜನತಾ: ಏಪ್ರಿಲ್ ೪, ೧೯೩೬.

# ೮೪.

# ಒಂದೇ ಬಾರಿಗೆ ಏಳು ಕೋಟಿ ಅಸ್ಪೃಶ್ಯರ ಧರ್ಮಾಂತರ

ಮೇ ೧, ೧೯೩೬ರಂದು ವಾರ್ಧಾಕ್ಕೆ ಆಗಮಿಸಿದ ಡಾ. ಅಂಬೇಡ್ಕರ್ ಅವರನ್ನು ಅಲ್ಲಿಯ ಅಸ್ಪೃಶ್ಯ ಸಮಾಜ ಅತೀ ಉತ್ಸಾಹದಿಂದ ಸ್ವಾಗತಿಸಿತು. ಸೇಠ್ ಜಮನಾಲಾಲ್ ಬಜಾಜ್ ಮತ್ತು ಮಹಾತ್ಮ ಗಾಂಧೀಜಿ ಅವರು ಸೇಠ್ ವಾಲಚಂದ್ ಹೀರಾಚಂದ್ ಅವರೊಂದಿಗೆ ಆಗಮಿಸಿ ಅಂಬೇಡ್ಕರ್‌ರ ಭೇಟಿ ಮಾಡಿದರು. ನಿರ್ಭಯ ತರುಣ ಸಂಘದವರು ವಾರ್ಧಾದಲ್ಲಿ ಅವರ ವಾಸ್ತವ್ಯಕ್ಕೆ ಸೂಕ್ತ ವ್ಯವಸ್ಥೆ ಮಾಡಿದ್ದರು. ಮಹಾತ್ಮ ಗಾಂಧೀಜಿ ಅವರನ್ನು ಭೇಟಿಯಾಗುವುದಕ್ಕೆ ಡಾ. ಅಂಬೇಡ್ಕರ್ ಅವರು ಶೇಗಾವ್[೧] ಊರಿಗೆ ಹೋದರು. ಮಧ್ಯಾಹ್ನ ಸುಮಾರು ೧೧,೩೦ರ ಹೊತ್ತಿಗೆ ಅಲ್ಲಿನ ಅಸ್ಪೃಶ್ಯ ಸಮಾಜದ ಕಾರ್ಯಕರ್ತರಾದ ಪುರುಷೋತ್ತಮ ಖಾಪರ್ಡೆ, ಶಂಕರರಾವ್ ಸೋನವಣೆ, ಗೋಮಾಜಿ ಟೆಂಬರೆ ಮುಂತಾದವರು ಡಾ. ಅಂಬೇಡ್ಕರ್ ಅವರನ್ನು ಭೇಟಿಯಾಗಿ ಧರ್ಮಾಂತರದ ಕುರಿತು ಚರ್ಚಿಸಿದರು.

ಈ ಚರ್ಚೆಯಲ್ಲಿ ಡಾ. ಅಂಬೇಡ್ಕರ್ ಅವರು ತಮ್ಮ ಸ್ಪಷ್ಟ ಮಾತುಗಳಲ್ಲಿ:

ಮುಸ್ಲಿಂ ಇಲ್ಲವೇ ಕ್ರೈಸ್ತ ಧರ್ಮ ಸ್ವೀಕರಿಸಬೇಕು ಎಂದು ನಾನು ಇಲ್ಲಿಯವರೆಗೆ ಯಾರಿಗೂ ಹೇಳಿಲ್ಲ. ಯಾರಾದರೂ ಮುಸ್ಲಿಂ ಅಥವಾ ಕ್ರೈಸ್ತ ಧರ್ಮ ಸ್ವೀಕರಿಸಿದ್ದರೆ, ಅದು ಆತನ ಸ್ವಂತದ ಜವಾಬ್ದಾರಿಯ ಮೇಲೆ ಸ್ವೀಕರಿಸಿದ್ದಾನೆಯೇ ಹೊರತು ಅದಕ್ಕೆ ನಾನು ಜವಾಬ್ದಾರನಲ್ಲ.

ನಾನು ಧರ್ಮಾಂತರ ಘೋಷಿಸಿದ್ದು ನಿಜ. ಆದರೆ ಇದೇ ಧರ್ಮ ಸ್ವೀಕರಿಸಬೇಕೆಂದು ಎಂದೂ ಸ್ಪಷ್ಟಪಡಿಸಿಲ್ಲ. ನಾನು ಹೇಳುವವರೆಗೆ ಧರ್ಮಾಂತರ ಪ್ರಚಾರ ಮುಂದುವರಿಸಿ ಆದರೆ ಯಾವುದೇ ಒಂದು ಧರ್ಮದ ಶ್ಲಾಘನೆ ಬೇಡ. ನಾನು ಯಾವಾಗ ಹೇಳುತ್ತೇನೋ ಆಗ ಒಂದೇ ಬಾರಿಗೆ ಎಲ್ಲ ಏಳು ಕೋಟಿ ಅಸ್ಪೃಶ್ಯರು ಧರ್ಮಾಂತರ ಮಾಡುವಾ.

---

೧. ವಿದರ್ಭಾತೀಲ ದಲಿತ ಚಳವಳಿಚಾ ಇತಿಹಾಸ: ಹಿ.ಲ. ಕೋಸಾರೆ, ಪುಟ: ೨೯೬.
ವಾರ್ಧಾ ಜಿಲ್ಲೆಯಲ್ಲಿ ಸೇವಾಗ್ರಾಮಕ್ಕಾಗಿ ಈ ಉಲ್ಲೇಖ ಇರಬಹುದು –ಸಂಪಾದಕ.

# ೮೫.

# ನ್ಯಾಯ ಮತ್ತು ಉದಾರ ಬುದ್ಧಿಯಿಂದ ರಾಜಕೀಯ ಅಧಿಕಾರ ಬಳಕೆಯಾಗಲಿ

ಆ ತಿಂಗಳ ಮೊದಲನೇ ವಾರದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ನಾಗಪೂರ್–ವಹ್ರಾಡ್ ಭಾಗದ ಪ್ರವಾಸಕ್ಕೆ ತೆರಳಿದ್ದರು. ಭಾನುವಾರ ಮೇ ೩, ೧೯೩೬ರಂದು ನಾಗಪೂರ್ ರೈಲ್ವೆ ನಿಲ್ದಾಣದಲ್ಲಿ ಸಾವಿರಾರು ಅಸ್ಪೃಶ್ಯರು ಅವರನ್ನು ಸ್ವಾಗತಿಸಲು ಆಗಮಿಸಿದ್ದರು. ಶ್ರೀ. ಸಮಿ ಉಲ್ಲಾಖಾನ್ ಮತ್ತು ರಾವ್‌ಸಾಹೇಬ್ ಆರ್. ಡಬ್ಲ್ಯೂ. ಘುಲೆ ಅವರು ನಾಗಪೂರ್ ಮಹಾನಗರ ಪಾಲಿಕೆ ವತಿಯಿಂದ ಸ್ವಾಗತಿಸುವುದಕ್ಕೆ ಆಗಮಿಸಿದ್ದರು. ಬೀಡಿ ಕಾರ್ಮಿಕ ಯೂನಿಯನ್‌ನ ಸದಸ್ಯರು ನಿಲ್ದಾಣಕ್ಕೆ ಆಗಮಿಸಿದ್ದರು. ಸಂಜೆ ಟೌನ್ ಹಾಲ್‌ನಲ್ಲಿ ನಾಗಪೂರ್ ಮಹಾನಗರ ಪಾಲಿಕೆಯ ವತಿಯಿಂದ ಮಾನಪತ್ರ ಸಲ್ಲಿಸಿ ಗೌರವಿಸಲಾಯಿತು. ಮಾನಪತ್ರದಲ್ಲಿನ ಆಶಯ ಹೀಗಿತ್ತು:

ಸಾರ್ವಜನಿಕ ಜೀವನದ ವಿವಿಧ ಕ್ಷೇತ್ರಗಳಲ್ಲಿ ತಾವು ಕೆಲಸ ಮಾಡಿದ್ದೀರಿ. ಅಸ್ಪೃಶ್ಯ ವರ್ಗದವರ ಉದ್ಧಾರಕ್ಕಾಗಿ ತಾವು ರಾಜಕೀಯ ಮತ್ತು ಸಾಮಾಜಿಕ ಕೆಲಸಗಳನ್ನು ಅತ್ಯಂತ ಧೈರ್ಯದಿಂದ ಕೈಗೆತ್ತಿಕೊಂಡು ಅವಿಶ್ರಾಂತವಾಗಿ ದುಡಿದಿದ್ದೀರಿ. ನಾಸಿಕ್ ಮತ್ತು ಮಹಾಡ್‌ನಲ್ಲಿ ಸತ್ಯಾಗ್ರಹ ಮಾಡಿ ತಾವು ಚಿರಕಾಲ ನಿದ್ರೆಗೆ ಶರಣಾಗಿದ್ದ ಹಿಂದೂ ಸಮಾಜವನ್ನು ಬಡಿದೆಬ್ಬಿಸಿದ್ದೀರಿ. ಅಸ್ಪೃಶ್ಯ ವರ್ಗದ ಸ್ವಾಭಿಮಾನದ ದೀಪ ಬೆಳಗಿಸಿ ಅವರಿಗೆ ಸಮಾಜದಲ್ಲಿನ ತಮ್ಮ ಹಕ್ಕುಗಳ ಕುರಿತು ಮನವರಿಕೆ ಮಾಡಿಕೊಟ್ಟಿದ್ದೀರಿ. ದಲಿತ ವರ್ಗದ ಹಕ್ಕುಗಳಿಗಾಗಿ ಮತ್ತು ಅವರ ಸಾಮಾಜಿಕ ಸ್ಥಾನಮಾನಕ್ಕಾಗಿ ಮಾಡಿದ ಚಳವಳಿಯ ಶ್ರೇಯಸ್ಸು ತಮ್ಮದು. ಈ ವಿಚಾರದಲ್ಲಿ ಅಖಿಲ ಭಾರತೀಯ ಶೋಷಿತ ವರ್ಗಗಳ ಒಕ್ಕೂಟ ತಮ್ಮ ಪರಿಶ್ರಮಕ್ಕೆ ಸಾಕ್ಷಿಯಾಗಿ ನಿಂತಿದೆ.

ರಾಜಕೀಯ ಕ್ಷೇತ್ರದಲ್ಲಿ ತಾವು ಅತ್ಯಂತ ಉಚ್ಚ ಸ್ಥಾನ ಪಡೆದುಕೊಂಡಿದ್ದೀರಿ. ಸೈಮನ್ ಕಮಿಷನ್ ಜೊತೆ ಕೆಲಸ ಮಾಡುವುದಕ್ಕೆ ಮುಂಬೈ ಶಾಸಕಾಂಗ ಮಂಡಳಿ ನೇಮಕ ಮಾಡಿದ ಸಮಿತಿಗೆ ಸದಸ್ಯರಾಗಿದ್ದ ತಾವು ಬರೆದಿರುವ ವಿವಿಧ ಮತಪತ್ರಿಕೆಗಳು ತಮ್ಮ ಕುಶಾಗ್ರಮತಿ ಬುದ್ಧಿಗೆ ಸಾಕ್ಷಿಯಾಗಿವೆ. ಇಷ್ಟೇ ಅಲ್ಲ ತಮ್ಮ ದೇಶದ ಹಿತಾಸಕ್ತಿ ಸಂರಕ್ಷಣೆ ವಿಷಯದಲ್ಲೂ ತಮ್ಮ ಚಿಂತನೆ ಸ್ಪಷ್ಟವಾಗಿದೆ ಎನ್ನುವುದು ಮನದಟ್ಟಾಗುತ್ತದೆ. ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ದಲಿತ ವರ್ಗದ ಪರವಾಗಿ ತಾವು ಮಾಡಿದ ಪ್ರಬಲ ಸಮರ್ಥನೆ ಮತ್ತು ಪುಣೆ ಒಪ್ಪಂದದ ವಿಷಯದಲ್ಲಿ ತಾವು ಮಾಡಿದ ಕಾರ್ಯ ಈ ಎರಡು ಸಂಗತಿಗಳು ತಾವು ಏನೆನ್ನುವುದು ಜಗತ್ತಿಗೆ ತಿಳಿಸಿಕೊಟ್ಟಿವೆ ಎಂದು ಮತ್ತೇ ಇಲ್ಲಿ ಹೇಳುವ ಅವಶ್ಯಕತೆ ಇಲ್ಲ.

ಮಾನಪತ್ರಕ್ಕೆ ಪ್ರತ್ಯುತ್ತರವಾಗಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು:

ನನ್ನ ಸಾರ್ವಜನಿಕ ಜೀವನದಲ್ಲಿ ಮಹಾನಗರ ಪಾಲಿಕೆಯಿಂದ ಮಾನಪತ್ರ ಪಡೆಯುವ ಎರಡನೇ ಪ್ರಸಂಗ ಇದು. ಸಾಕಷ್ಟು ಮಹಾನಗರ ಪಾಲಿಕೆಗಳು ನನಗೆ ಮಾನಪತ್ರ ನೀಡುವುದಕ್ಕೆ ಇಚ್ಛೆ ವ್ಯಕ್ತಪಡಿಸಿದ್ದವು.

ಆದರೆ ಮಾನಪತ್ರ ಸ್ವೀಕರಿಸದಿರುವುದು ನನ್ನ ಧೋರಣೆ. ನಾನೇಕೆ ಇಷ್ಟು ಕೃತಘ್ನ ಎಂದು ಯಾರು ಬೇಕಾದರೂ ಭಾವಿಸಬಹುದು. ಆದರೆ ಇದರಲ್ಲಿ ಕೃತಘ್ನತೆಯ ಲವಲೇಶವೂ ಇಲ್ಲ. ರಾಷ್ಟ್ರೀಯ ದಿನಪತ್ರಿಕೆಗಳು ಮತ್ತು ಸಂಸ್ಥೆಗಳ ವಿಚಾರದಲ್ಲಿ ನಾನು ಅಂತಹ ದೊಡ್ಡ ವ್ಯಕ್ತಿಯಲ್ಲ. ಜನರು ನನ್ನನ್ನು ಗೌರವಿಸಲಿ ಇಲ್ಲವೇ ಗೌರವಿಸದೇ ಇರಲಿ ನನ್ನ ಕೆಲಸ ಪವಿತ್ರ ಎಂದು ಯಾವಾಗಲೂ ನಾನು ಭಾವಿಸುತ್ತೇನೆ. ನೀಡುವ ಇಂತಹ ಮಾನಪತ್ರಗಳಲ್ಲಿ ಸುಧಾರಣೆಗೆ ಪ್ರಾಮುಖ್ಯತೆ ನೀಡುವ ಬದಲು ಆಡಂಬರದ ಹೇಳಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ. ಮಾನಪತ್ರ ಸ್ವೀಕರಿಸದಿರುವ ನನ್ನ ಧೋರಣೆಗೆ ಮೊದಲನೇ ಅಪವಾದವಾಗಿದ್ದು ವಸಯಿ ನಗರ ಪಾಲಿಕೆಯ ವಿಚಾರದಲ್ಲಿ. ಏಕೆಂದರೆ ಕೆಲವು ಮಿತ್ರರ ಒತ್ತಾಯಕ್ಕೆ ಮಣಿದು ಮಾನಪತ್ರ ಸ್ವೀಕರಿಸಬೇಕಾಯಿತು. ನಾಗಪೂರ್ ನಗರ ಪಾಲಿಕೆಯ ವಿಷಯದಲ್ಲೂ ಎರಡನೇ ಅಪವಾದವಾಯಿತು. ನಗರ ಪಾಲಿಕೆಯ ಸದಸ್ಯರು ತಮ್ಮ ಸ್ವಂತ ಖರ್ಚಿನಿಂದ ಮಾನಪತ್ರ ನೀಡುತ್ತೇವೆ ಎಂದು ಹೇಳಿದ್ದರಿಂದ ಒಪ್ಪಿಗೆ ಸೂಚಿಸಿದೆ. ಏಕೆಂದರೆ ಈ ಮಾನಪತ್ರದ ಮುಖಾಂತರ ಅವರ ಕಳಕಳಿ ವ್ಯಕ್ತವಾಗಿದೆ.

ಇಂದಿನ ಸಭೆಯನ್ನು ರಾಜಕೀಯ ವೇದಿಕೆಯನ್ನಾಗಿ ಬಳಸಿಕೊಳ್ಳುತ್ತಿರುವುದಕ್ಕೆ ಕ್ಷಮೆ ಇರಲಿ. ನನ್ನ ವಿಚಾರದಲ್ಲಿ ಸಾಕಷ್ಟು ತಪ್ಪು ತಿಳುವಳಿಕೆಗಳನ್ನು ಹರಡಿಸಲಾಗುತ್ತಿದೆ. ನನ್ನ ವಿರುದ್ಧ ಉಪಯೋಗಿಸುವಷ್ಟು ಟೀಕಾಸ್ತ್ರಗಳು ಬೇರೆಯವರ ಮೇಲೆ ಎಂದಿಗೂ ಬಳಕೆಯಾಗುವುದಿಲ್ಲ. ನನ್ನ ವಿರುದ್ಧ ಮಾಡುವ ಟೀಕೆಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೆ, ಅಲ್ಪಸಂಖ್ಯಾತರದ್ದೆಂದು ಯಾವ ಒಪ್ಪಂದ ಪ್ರಸಿದ್ಧವಾಗಿದೆಯೋ ಅದಕ್ಕೆ ನಾನೇ ಕಾರಣ ಮತ್ತು ತಪ್ಪಿತಸ್ತ ಎನ್ನುವುದು ಅವರ ತಿಳುವಳಿಕೆ. ದುಂಡು ಮೇಜಿನ ಸಭೆಯಲ್ಲಿ ನಾನು ತಾಳಿದ ನಿಲುವಿನ ಬಗ್ಗೆ ನನಗೆ ಒಂದಿಷ್ಟೂ ವಿಷಾದ ಇಲ್ಲ. ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ನಾನು ಮಾಡಿದ ಕೆಲಸ ಏನು ಅನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಒಂದಿಷ್ಟು ಓದುವ ತೊಂದರೆ ತೆಗೆದುಕೊಂಡರೆ ಅನೇಕ ಪ್ರಶ್ನೆಗಳ ಪರಿಹಾರಕ್ಕೆ ನಾನು ನೀಡಿದ ಸೂಚನೆಗಳು ರಾಷ್ಟ್ರೀಯ ನಾಯಕರು ಎನ್ನಿಸಿಕೊಂಡಿರುವವರ ಪರಿಹಾರ ಮಾರ್ಗಗಳಿಗಿಂತ ಎಷ್ಟೋ ಪಾಲು ಶ್ರೇಷ್ಟವಾಗಿದ್ದವು ಎನ್ನುವುದು ತಮ್ಮ ಗಮನಕ್ಕೆ ಬರಬಹುದು. ಸ್ವತಃ ಮಹಾತ್ಮ ಗಾಂಧಿ ಅವರೇ ನನ್ನ ಹೇಳಿಕೆಯಲ್ಲಿ ತಥ್ಯವಿದೆ ಎಂದು ಸಾಕ್ಷಿ ನೀಡಬಲ್ಲರು.

ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಅಲ್ಪಸಂಖ್ಯಾತರು ತಳೆದಿದ್ದ ಧೋರಣೆ ನ್ಯಾಯಯುತವಾಗಿತ್ತಲ್ಲದೇ ಔದಾರ್ಯದಿಂದ ಕೂಡಿತ್ತು. ಐರ್ಲೆಂಡ್‌ನಲ್ಲಿ ಅಲ್ಸಟರ್ ವಾಸಿಗಳು ತಮ್ಮ ಹೋಮ್ ರೂಲ್ ಚಳವಳಿಯಲ್ಲಿ ಯಾವ ಉತ್ತರ ನೀಡಿದ್ದಾರೆ ಎನ್ನುವುದನ್ನು ತಮ್ಮ ಕಣ್ಣೆದುರಿಗೆ ತರಲು ಇಚ್ಛಿಸುತ್ತೇನೆ. ಅಲ್ಸಟರ್‌ನಲ್ಲಿ ಪ್ರೊಟೆಸ್ಟಂಟ್‌ರು ಅಲ್ಪಸಂಖ್ಯಾತರಾಗಿದ್ದರೆ, ದಕ್ಷಿಣ ಐರ್ಲೆಂಡ್‌ನಲ್ಲಿ ರೋಮನ್ ಕ್ಯಾಥೋಲಿಕ್‌ರು ಬಹುಸಂಖ್ಯಾತರಾಗಿದ್ದಾರೆ. ದಕ್ಷಿಣ ಐರ್ಲೆಂಡ್‌ನ ಪ್ರತಿನಿಧಿ ಶ್ರೀ. ರೆಡ್‌ಮಂಡ್ ಅವರು ಅಲ್ಸಟರ್ ನಿವಾಸಿಗಳಿಗೆ ನೀವು ಕೇಳುವ ಎಲ್ಲ ಸೌಲಭ್ಯಗಳನ್ನು ನೀಡುತ್ತೇವೆ ಆದರೆ ಇಂಗ್ಲೆಂಡ್‌ನ್ನು ಸೇರಿಕೊಳ್ಳದೇ ಹೋಮ್ ರೂಲ್‌ಗೆ ಬೆಂಬಲ ನೀಡಿ ಎಂದು ಹೇಳಿದ್ದರು. ಹಾಳಾಗಲಿ ನಿಮ್ಮ ಹೋಮ್ ರೂಲ್, ನಾವಂತೂ ಕ್ಯಾಥೋಲಿಕ್‌ಗಳ ರಾಜ್ಯದಲ್ಲಿ ಇರುವುದಿಲ್ಲ ಎಂದು ಕಾರ್ಸನನ್ ಹೇಳಿದ್ದರು. ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಅಲ್ಪಸಂಖ್ಯಾತರು ತಮಗೆ ರಕ್ಷಾಕವಚ ಲಭಿಸುತ್ತದೋ ಅಥವಾ ಇಲ್ಲವೋ ಗೊತ್ತಿಲ್ಲ ಆದರೆ ನಾವು ಹಿಂದೂಗಳ ರಾಜ್ಯದಲ್ಲಿ ಇರುವುದಿಲ್ಲವೆಂದು ಎಲ್ಲಿಯಾದರೂ ಹೇಳಿದ್ದಾರೆಯೇ? ಸ್ವಾಯತ್ತ ಸ್ಥಾನಮಾನ ಅಥವಾ ಹೋಮ್‌ರೂಲ್‌ನ ಮಾರ್ಗದಲ್ಲಿ ನಾವು ಯಾವುದೇ ಅಡೆತಡೆ ಹಾಕಿರಲಿಲ್ಲ. ನಾವು ಕೇವಲ ನಮಗೆ ಸಂರಕ್ಷಣೆ ನೀಡಿ ಎಂದು ಕೇಳಿಕೊಂಡಿದ್ದೆವು. ನಮ್ಮ ಮತ್ತು ಇತರ ದೇಶದಲ್ಲಿನ ಅಲ್ಪಸಂಖ್ಯಾತರಲ್ಲಿ ಇರುವ ವ್ಯತ್ಯಾಸ ಅಂದರೆ ಇದು.

ಇದೀಗ ಸಂರಕ್ಷಣೆಯ ವಿಚಾರಕ್ಕೆ ಬಂದರೆ ರೋಮ್ ಸಾಮ್ರಾಜ್ಯದಲ್ಲೂ ಪ್ಯಾಟ್ರಿಶಿಯನ್ಸ್ ಮತ್ತು ಪ್ಲೇಬಿಯನ್ಸ್ ಎಂಬ ಎರಡು ಗುಂಪುಗಳಿದ್ದವು. ಅವರಿಬ್ಬರ ಆಯ್ಕೆ ಸ್ವತಂತ್ರ ಮತಕ್ಷೇತ್ರಗಳಿಂದ ಆಗುತ್ತಿತ್ತು. ಸ್ವತಂತ್ರ ಮತಕ್ಷೇತ್ರ ಎಂದರೆ ಅದು ಪಾಪದ ಫಲವಲ್ಲ. ಅದರಲ್ಲಿ ಯಾವುದೇ ಕೃಷ್ಣ ಕಾರಸ್ಥಾನವಿಲ್ಲ. ನನ್ನ ಬಹುಸಂಖ್ಯಾತ ಹಿಂದೂಗಳಿಗೆ ಹೇಳುವುದು ಇಷ್ಟೇ, ಇದೀಗ ನೀವು ಬಹುಸಂಖ್ಯಾತರಾಗಿರುವ ಕಾರಣ ಅಧಿಕಾರ ನಿಮ್ಮ ಕೈಗೆ ಬರುತ್ತದೆ ಅದನ್ನು ನ್ಯಾಯ ಮತ್ತು ಉದಾರ ಬುದ್ಧಿಯಿಂದ ಎಲ್ಲರಿಗೂ ಒಳಿತಾಗುವಂತೆ ಬಳಸಿ. ಒಂದು ವೇಳೆ ಭಾರತದ ರಾಜಕೀಯ ಬೆಳವಣಿಗೆ ಮಾರ್ಗ ಕುಂಠಿತವಾದರೆ ಅದಕ್ಕೆ ನೀವೇ ಹೊಣೆಗಾರರು ಆಗಬೇಕಾಗುತ್ತದೆ. ನಿಮಗೆ ಲಭಿಸಿರುವ ರಾಜಕೀಯ ಹಕ್ಕುಗಳನ್ನು ಅಲ್ಪಸಂಖ್ಯಾತರ ಒಳಿತನ್ನು ದೃಷ್ಟಿಯಲ್ಲಿರಿಸಿಕೊಂಡು ಯಾವ ರೀತಿ ಉಪಯೋಗ ಮಾಡಿಕೊಳ್ಳುತ್ತೀರೋ ಅದೇ ಪ್ರಕಾರ ನೀವು ನಿಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸಿದ್ದೀರಿ ಅಥವಾ ಇಲ್ಲವೋ ಎನ್ನುವುದು ತೀರ್ಮಾನವಾಗುತ್ತದೆ. ನೀವು ನೀಡಿರುವ ಮಾನಪತ್ರಕ್ಕೆ ಪ್ರತಿಯಾಗಿ ಮತ್ತೊಮ್ಮೆ ತಮಗೆ ಎಲ್ಲರಿಗೂ ವಂದನೆ ಸಲ್ಲಿಸಿ ನನ್ನ ಮಾತುಗಳಿಗೆ ವಿರಾಮ ನೀಡುತ್ತೇನೆ.

ಇದಾದ ಬಳಿಕ ನಗರಪಾಲಿಕೆ ಉಪಾಧ್ಯಕ್ಷ ರಾವ್‌ಸಾಹೇಬ್ ಘುಲೆ ಅವರು ಡಾ. ಅಂಬೇಡ್ಕರ್ ಮತ್ತು ಅತಿಥಿಗಳಿಗೆ ವಂದನೆ ಸಲ್ಲಿಸುತ್ತ, ಅಲ್ಪಸಂಖ್ಯಾತರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಹಿಂದೂಗಳು ಆಕ್ಷೇಪಿಸುವುದು ಸರಿಯಲ್ಲ. ಅಸ್ಪೃಶ್ಯರು ಸ್ಪೃಶ್ಯರೊಂದಿಗೆ ತಳೆಯುವ ಧೋರಣೆ ರಾಷ್ಟ್ರೀಯತೆಗೆ ಪೋಷಕ ಮತ್ತು ಜಾತಿ ದ್ವೇಷ ನಿರ್ನಾಮ ಮಾಡುವಂತೆ ಇರಬೇಕು. ಇದರಿಂದಾಗಿ ಹಿಂದಿ ರಾಷ್ಟ್ರ ಜಾತಿ ಜಾತಿಗಳ ಮಧ್ಯೆ ತುಂಡಾಗುವಂತಹ ಅಪಾಯದಿಂದ ಪಾರಾಗುತ್ತದೆ. ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಡಾ. ಅಂಬೇಡ್ಕರ್ ಅವರ ಧೋರಣೆ ರಾಷ್ಟ್ರೀಯತೆಗೆ ಪೂರಕವಾಗಿತ್ತು ಎನ್ನುವುದರಲ್ಲಿ ನನಗೆ ಸಂಶಯವಿಲ್ಲ. ಒಂದು ವೇಳೆ ಎಲ್ಲ ಅಲ್ಪಸಂಖ್ಯಾತರು ರಾಷ್ಟ್ರೀಯತೆಗೆ ಪೂರಕ ಧೋರಣೆ ತಳೆದರೆ ಹಿಂದೂ ಸಮಾಜ ಯಾವುದೇ ತ್ಯಾಗಕ್ಕೂ ಸಿದ್ಧವಿದ್ದು, ಈ ವಿಚಾರದಲ್ಲಿ ಯಾರೂ ಆಕ್ಷೇಪಿಸುವುದಿಲ್ಲ ಎಂದು ಹೇಳಿದರು. ಬಳಿಕ ಸಮಾರಂಭ ಮುಕ್ತಾಯವಾಯಿತು.

---

ಜನತಾ: ಮೇ ೨೩, ೧೯೩೬.

## ೮೬.

# ನೂರಾರು ವರ್ಷಗಳಿಂದ ಆಗದ ಆ ಕೆಲಸ ಹತ್ತು ವರ್ಷಗಳ ಅಲ್ಪಾವಧಿಯಲ್ಲಿ ಆಗಿದೆ

ಮೇ ೩, ೧೯೩೬ರಂದು ನಾಗಪೂರ್ ನಗರ ಪಾಲಿಕೆಯ ಮಾನಪತ್ರ ಸಮಾರಂಭದ ಬಳಿಕ ಸಂಜೆ ಕಸ್ತೂರ್‌ಚಂದ್ ಪಾರ್ಕ್‌ನಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಸಾವಿರಾರು ಅಸ್ಪೃಶ್ಯರು ಪಾಲ್ಗೊಂಡಿದ್ದರು. ಡಾ. ಅಂಬೇಡ್ಕರ್ ಅವರ ಜಯಕಾರದ ಘೋಷಣೆಯಲ್ಲಿ ಇಡೀ ನಾಗಪೂರ್ ನಗರ ಗುಮಿಗಿಡುತ್ತಿತ್ತು. ಡಾ. ಅಂಬೇಡ್ಕರ್ ಅವರನ್ನು ಗುರಿಯಾಗಿರಿಸಿಕೊಂಡು ಟೀಕಾಸ್ತ್ರಗಳನ್ನು ಪ್ರಯೋಗಿಸುತ್ತಿದ್ದ ಟೀಕಾಕಾರರು ಮತ್ತು ನಾಯಕರು ನಾಗಪೂರ್‌ದಿಂದ ನಾಪತ್ತೆಯಾಗಿದ್ದರಲ್ಲದೇ ಅವರು ಎಲ್ಲಿದ್ದಾರೆ ಎನ್ನವುದು ಯಾರಿಗೂ ಗೊತ್ತಿರಲಿಲ್ಲ. ಡಾ. ಅಂಬೇಡ್ಕರ್ ಅವರ ಮೇಲಿನ ಪ್ರೀತಿಯಿಂದ ಅವರ ಮೇಲೆ ಇರಿಸಿದ ವಿಶ್ವಾಸಕ್ಕಾಗಿ, ಸರ್ವಸ್ವ ತೊರೆದು ಬೆನ್ನುಹತ್ತಿರುವ ಸಾವಿರಾರು ಅಸ್ಪೃಶ್ಯರು ಡಾ. ಅಂಬೇಡ್ಕರ್ ಅವರ ಭಾಷಣವನ್ನು ಕೇಳುವುದಕ್ಕೆ ಅಲ್ಲಿ ಸೇರಿದ್ದರು. ಡಾ. ಅಂಬೇಡ್ಕರ್ ವೇದಿಕೆ ಏರುತ್ತಿದ್ದಂತೆಯೇ ಡಾ. ಅಂಬೇಡ್ಕರ್‌ರ ಜಯಘೋಷ ಮತ್ತು ಚಪ್ಪಾಳೆ ಸುಮಾರು ಐದು ನಿಮಿಷಗಳ ಕಾಲ ಎಡೆಬಿಡದೆ ಸುರಿದವು.

ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣದಲ್ಲಿ ಮೊದಲು ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಅಸ್ಪೃಶ್ಯ ಸಂಘಟನೆಯ ಚಳವಳಿಯಿಂದ ಆಗಿರುವ ಸ್ಥಿತ್ಯಂತರಗಳ ಸಿಂಹಾವಲೋಕನ ಮಾಡಿದರು. ನಂತರ ತಮ್ಮ ಭಾಷಣದಲ್ಲಿ:

ಈ ಹತ್ತು ವರ್ಷಗಳ ಅವಧಿಯಲ್ಲಿ ನೂರಾರು ವರ್ಷ ಕೂಡ ಆಗದಂತಹ ಕೆಲಸ ಆಗಿದೆ. ಈ ಎಲ್ಲ ಕೆಲಸ ಕೇವಲ ಸ್ವಾಭಿಮಾನ ಮತ್ತು ಸ್ವಾವಲಂಬನೆ ಚಳವಳಿಯಿಂದ ಆಗಿದ್ದರೂ ದೇವ ಕೃಪೆಯಾಗಿದೆ ಎಂಬಂತೆ ಭಾಸವಾಗುತ್ತಿದೆ. ನಮ್ಮಲ್ಲಿ ಕಾಂಗ್ರೆಸ್ ಸಂಸ್ಥೆಯಲ್ಲಿರುವಂತೆ ಹಣ ಇಲ್ಲ. ಸಾರ್ವಜನಿಕ ಕೆಲಸ ಮಾಡುವುದಕ್ಕೆ ಕಾಂಗ್ರೆಸ್‌ನಂತಹ ಸಂಸ್ಥೆಯೊಂದರ ಬೆಂಬಲ ಇಲ್ಲ. ಇಷ್ಟೊಂದು ತೊಂದರೆಗಳ ಮಧ್ಯೆಯೂ ತಾವು ಸ್ವಾಭಿಮಾನದ ಪ್ರತೀಕವಾಗಿರುವ ಈ ಚಳವಳಿಗೆ ಇಂದು ಹತ್ತು ವರ್ಷದ ಸ್ವರೂಪ ನೀಡಿದ್ದೀರಿ. ಈ ಎಲ್ಲದ್ದಕ್ಕೆ ತಮ್ಮ ಪ್ರೀತಿ ಕಾರಣ. ಕಳೆದ ಹತ್ತು ವರ್ಷಗಳಲ್ಲಿ ಆಗಿರುವ ಈ ದೈವಿ ಕೃಪೆಯ ಚಮತ್ಕಾರ, ಎಲ್ಲ ಸಮಾಜ ಮತ್ತು ಕಾಂಗ್ರೆಸ್ಸನ್ನು ಕೂಡ ಹೆದರಿಸಿದೆ. ಇದಕ್ಕೆ ಕಾರಣ ನೀವು ತೋರಿಸಿದ ಏಕತೆ. ಒಂದಿಷ್ಟು ಜನರು ಬಿಟ್ಟುಹೋಗಿರಬಹುದು ಆದರೂ ನೀವು ತೋರಿದ ಒಗ್ಗಟ್ಟು ಇತರ ಸಮಾಜದ ದೃಷ್ಟಿಯಲ್ಲಿ ನಮ್ಮ ರಾಜಕೀಯ ಮಹತ್ವ ಹೆಚ್ಚಿಸಿದೆ ಮತ್ತು ನಾವು ಮಾಡಿದ ಧರ್ಮಾಂತರ ಘೋಷಣೆಯ ಬಳಿಕ ಮುಸ್ಲಿಂ, ಸಿಖ್ ಮತ್ತು ಕ್ರೈಸ್ತರ ಬಾಯಿಯಲ್ಲಿ ನೀರು ಬರಿಸಿದೆ ಹೀಗಾಗಿ ಅವರು ನಮ್ಮನ್ನು ಸಂಪ್ರೀತಿಗೊಳಿಸುವ ಕೆಲಸಕ್ಕೆ ಮುಂದಾಗಿದ್ದಾರೆ. ನಾವು ಇಲ್ಲಿಯವರೆಗೆ ತೋರಿಸಿರುವ ಒಗ್ಗಟ್ಟನ್ನು ಇನ್ನು ಮುಂದೆಯೂ ಕಾಯ್ದುಕೊಳ್ಳಬೇಕಿದೆ ಅಂದರೆ ಹಿಂದೂ ಧರ್ಮದಿಂದ ಪ್ರತ್ಯೇಕವಾಗುವ ನಮ್ಮ ಧ್ಯೇಯ ಈಡೇರಲು ಸಾಧ್ಯ.

ಕೆಲವೇ ದಿನಗಳ ಹಿಂದೆಯಷ್ಟೇ ಸ್ಪೃಶ್ಯ ಹಿಂದೂಗಳು ಜೋಧಪುರ ಮತ್ತು ಗುಜರಾತ್‌ನಲ್ಲಿ ಅಸ್ಪೃಶ್ಯರ ಮೇಲೆ ನಿರಂತರವಾಗಿ ಅತ್ಯಾಚಾರ ಎಸಗಿದ್ದಾರೆ. ಈ ಅತ್ಯಾಚಾರಿಗಳ ಗುಲಾಮಗಿರಿ ನಿರ್ಮೂಲನೆ ಮಾಡಬೇಕೆಂದರೆ ಧರ್ಮಾಂತರ ಮಾಡದೇ ಗತ್ಯಂತರವಿಲ್ಲ. ಹಿಂದೂಗಳಿಗೆ ಸ್ವಾಯತ್ತ ಸ್ಥಾನಮಾನವನ್ನು ಬ್ರಿಟಿಷರು ನೀಡಿದರೂ ಬ್ರಿಟಿಷರ ರಾಜ್ಯದಲ್ಲಿ ಇರುವುದು ಅವರಿಗೆ ಬೇಕಿಲ್ಲ. ಹಾಗಿದ್ದಾಗ ನಾವೇಕೆ ಹಿಂದೂಗಳ ರಾಜ್ಯದಲ್ಲಿ ಇರಬೇಕು? ಒಂದು ಮರದ ಕೆಳಗೆ ಇನ್ನೊಂದು ಗಿಡ ಬೆಳೆಯಲು ಸಾಧ್ಯವಿಲ್ಲ. ಜೀರ್ಣಾವಸ್ಥೆಯ ವೃಕ್ಷವಾಗಿರುವ ಹಿಂದೂ ಧರ್ಮದಡಿ ನಮ್ಮ ಬೆಳವಣಿಗೆ ಸಾಧ್ಯವಿಲ್ಲ, ಆದ್ದರಿಂದ ನಾವು ಧರ್ಮಾಂತರಕ್ಕೆ ಸಿದ್ಧವಾಗಬೇಕಿದೆ.

ಈ ಸಭೆಯಲ್ಲಿ ಸಾಕಷ್ಟು ಸಂಖ್ಯೆಯ ಮುಸ್ಲಿಂರು ಉಪಸ್ಥಿತರಿದ್ದುದು ಕಾಣಿಸುತ್ತಿತ್ತು. ಒಂದಿಷ್ಟು ಮುಸ್ಲಿಂರು ಸಭೆಯ ಪಕ್ಕದಲ್ಲಿ ನಮಾಜು ಮಾಡುತ್ತಿದ್ದರು. ಅಸ್ಪೃಶ್ಯ ನಾಯಕರಿಗೆ ಮತ್ತು ಡಾ. ಅಂಬೇಡ್ಕರ್ ಅವರಿಗೆ ಬೇಕಾಗಿದ್ದ ವಾಹನಗಳನ್ನು ಪರಧರ್ಮೀಯ ಕ್ರೈಸ್ತ ಪಾದ್ರಿಗಳು, ಮುಸ್ಲಿಂ ನಾಯಕರು ಅತ್ಯಂತ ಖುಷಿಯಿಂದ ನೀಡಿದ್ದರು ಎಂದು ತಿಳಿದು ಬಂದಿತ್ತು. ಈ ಸಭೆಯಲ್ಲಿ ಒಬ್ಬೇ ಒಬ್ಬ ಹಿಂದೂ ನಾಯಕನಾಗಲಿ ಅಥವಾ ಧರ್ಮಾಂತರ ವಿರೋಧಿ ಅಸ್ಪೃಶ್ಯ ಕಾರ್ಯಕರ್ತ ಇರಲಿಲ್ಲ.

---

ಜನತಾ: ಮೇ ೨೩, ೧೯೩೬.

# ೮೭.

# ಸಮಾನತೆ, ಪ್ರೀತಿ ಮತ್ತು ಬಂಧುತ್ವವಿಲ್ಲದ ಧರ್ಮ, ಧರ್ಮವಾಗಲಾರದು

ಸೋಮವಾರ ಮೇ ೪, ೧೯೩೬ ಈ ದಿನ ಅಮರಾವತಿಯ ಅಸ್ಪೃಶ್ಯರಿಗೆ ಸುವರ್ಣಾಕ್ಷರದಲ್ಲಿ ಬರೆದಿಡುವ ದಿನವಾಗಿತ್ತು. ಅಂದು ಅಸ್ಪೃಶ್ಯ ವರ್ಗದ ಏಕಮೇವ ನಾಯಕ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಅಮರಾವತಿಗೆ ಆಗಮಿಸುವವರಿದ್ದರು. ಅಮರಾವತಿಯ ರೆಸ್ಟ್ ಹೌಸ್‌ನಿಂದ ನೇಕೋಲೇಟ್ ಪಾರ್ಕ್‌ವರೆಗಿನ ರಸ್ತೆಯನ್ನು ಬಣ್ಣದ ಕಾಗದಗಳಿಂದ ಶೃಂಗರಿಸಲ್ಪಟ್ಟಿತ್ತು. ಬಿಸಿಲಿನ ಬೇಗೆ ಲೆಕ್ಕಿಸದೆ ಸಾವಿರಾರು ದಲಿತ ಮಹಿಳೆಯರು ಮತ್ತು ಪುರುಷರು ರೈಲ್ವೆ ನಿಲ್ದಾಣಕ್ಕೆ ಆಗಮಿಸಿದ್ದರು. ಡಾ. ಅಂಬೇಡ್ಕರ್ ಅವರನ್ನು ವಾದ್ಯ ಮೇಳದೊಂದಿಗೆ ರೆಸ್ಟ್ ಹೌಸ್‌ವರೆಗೆ ಭಾರಿ ಮೆರವಣಿಗೆಯಲ್ಲಿ ಕರೆತರಲಾಯಿತು. ಸಂಜೆ ಏಳು ಗಂಟೆಗೆ ನಾಗಪೂರ್ ಕ್ಯಾಂಪ್ ಮುನ್ಸಿಪಾಲಿಟಿಯ ಕಾರ್ಯದರ್ಶಿ ಶ್ರೀ ಮೇಶ್ರಾಮ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಬಹಿರಂಗ ಸಭೆಯಲ್ಲಿ ಮೊದಲು ಸ್ವಾಗತ ಗೀತೆ ಆಯಿತು. ಸ್ವಾಗತಾಧ್ಯಕ್ಷ ಎಸ್. ಜಿ. ನಾಯಿಕ ಅವರ ನೇತೃತ್ವದಲ್ಲಿ ಅಮರಾವತಿ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳಿಂದ ಡಾ. ಅಂಬೇಡ್ಕರ್ ಅವರಿಗೆ ಮಾಲಾರ್ಪಣೆ ನಡೆಯಿತು. ಇದಾದ ಬಳಿಕ ಸಭೆಯ ಅಧ್ಯಕ್ಷರ ವಿನಂತಿಯ ಮೇರೆಗೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾಷಣಕ್ಕೆ ಎದ್ದು ನಿಂತರು. ಪ್ರವಾಸದ ವೇಳೆ ಡಾ. ಅಂಬೇಡ್ಕರ್ ಅವರ ಆರೋಗ್ಯ ಬಿಗಡಾಯಿಸಿ ಗಂಟಲು ಕಟ್ಟಿದ್ದರೂ ಸಹಿತ ಅವರು ಸಭಿಕರನ್ನು ಉದ್ದೇಶಿಸಿ ಮಾತನಾಡಲು ಆರಂಭಿಸಿದರು. ಅವರು ತಮ್ಮ ಭಾಷಣದಲ್ಲಿ:

ಹೆಚ್ಚು ಕಡಿಮೆ ಅಮರಾವತಿಗೆ ಏಳು ಎಂಟು ವರ್ಷಗಳ ಬಳಿಕ ಬರುತ್ತಿದ್ದೇನೆ. ಹಿಂದೆ ಇಲ್ಲಿ ಅಂಬಾದೇವಿಯ ಸತ್ಯಾಗ್ರಹಕ್ಕಾಗಿ ಆಗಮಿಸಿದ್ದೆ. ಆ ಸಂದರ್ಭದಲ್ಲಿ ಸತ್ಯಾಗ್ರಹ ಮಾಡುವುದಕ್ಕೆ ಅಸ್ಪೃಶ್ಯರಲ್ಲಿ ಯಾರೂ ಸಿದ್ಧರಿರಲಿಲ್ಲ. ಸತ್ಯಾಗ್ರಹದಲ್ಲಿ ಜೈಲಿಗೆ ಹೋಗುವುದಕ್ಕೆ ಕೇವಲ ಆರು ಜನರು ಮಾತ್ರ ಸಿದ್ದರಾದರು. ಆದರೆ ಇಂದು ಬದಲಾಗಿರುವ ಪರಿಸ್ಥಿತಿ ನೋಡಿ ನನಗೆ ಆನಂದವಾಗುತ್ತಿದೆ. ಇಲ್ಲಿಗೆ ಆಗಮಿಸುವ ಮೊದಲು ಮಹಾತ್ಮ ಗಾಂಧೀಜಿ ಅವರು ತಮ್ಮನ್ನು ಭೇಟಿಯಾಗುವಂತೆ ವಾರ್ಧಾಕ್ಕೆ ಬರ ಹೇಳಿದ್ದರು. ನಾನು ಅಲ್ಲಿಗೆ ಹೋಗಿದ್ದ ವೇಳೆ ಶ್ರೀ ಜಮನಾಲಾಲ್ ಬಜಾಜ್ ಅವರು ತಮ್ಮ ಮಾಲೀಕತ್ವದ ಶ್ರೀ ಲಕ್ಷ್ಮಿನಾರಾಯಣ ದೇವಸ್ಥಾನವನ್ನು ಅಸ್ಪೃಶ್ಯರಿಗೆ ಮುಕ್ತಗೊಳಿಸಿದ್ದು ಅದನ್ನು ನಾನು ನೋಡಬೇಕು ಎಂದು ಹೇಳಿದ್ದರು. ನಾನು ದೇವಸ್ಥಾನ ಪ್ರವೇಶಿಸಿ ಹೊರಗೆ ಬಂದ ಬಳಿಕ ಅನ್ನಿಸಿದ್ದು ನನ್ನ ಅಸ್ಪೃಶ್ಯತೆ ಹೇಗಿದೆಯೋ ಹಾಗೆ ಇದೆ ಅದಿನ್ನು ಹೋಗೇ ಇಲ್ಲ. ದೇವಸ್ಥಾನದೊಳಗೆ ಹೋದಾಗ ಸಿಗಬೇಕಾದ ಹೂ ಮತ್ತು ತೀರ್ಥ ಕೂಡ ನಮಗೆ ಲಭಿಸುವುದಿಲ್ಲ ಎಂದ ಮೇಲೆ ದೇವಸ್ಥಾನಕ್ಕೆ ಹೋದರೂ ಅಸ್ಪೃಶ್ಯತೆ ನಿರ್ಮೂಲನೆಯಾಗಲಿಲ್ಲ. ಇರಲಿ.. ಈ ಹಿಂದೆ ದೇವಸ್ಥಾನ ಪ್ರವೇಶಕ್ಕೆ ಆಗ್ರಹಿಸಿ ಮಾಡುತ್ತಿದ್ದ ಸತ್ಯಾಗ್ರಹದಲ್ಲಿ ಎಷ್ಟು ಆನಂದ ಸಿಗುತ್ತಿತ್ತೋ ಅಷ್ಟೇ ತಿರಸ್ಕಾರ ಭಾವನೆ ಈಗ ದೇವಸ್ಥಾನಗಳತ್ತ ಬೆಳೆಯುತ್ತಿದೆ. ಯಾವಾಗ

ಮಹಾತ್ಮ ಗಾಂಧೀಜಿ ಅವರು ಸ್ವರಾಜ್ ಪ್ರಶ್ನೆಯನ್ನು ಕೈಗೆತ್ತಿಕೊಂಡರೋ ಅಂದೇ ನಾನು ಅವರಿಗೆ ಅಸ್ಪೃಶ್ಯತೆಯನ್ನು ನಿರ್ಲಕ್ಷಿಸಬೇಡಿ ಎಂದು ಹೇಳಿದ್ದೆ. ಆದರೆ ಅಸ್ಪೃಶ್ಯತೆ ಎನ್ನುವುದು ಈ ಸ್ವರಾಜ್ ಕಲ್ಪನೆಯ ಒಂದು ಭಾಗ ಎಂದು ಹೇಳಿ ನಿರ್ಲಿಪ್ತರಾಗಿ ಉಳಿದುಬಿಟ್ಟರು. ನಾವು ಧರ್ಮಾಂತರ ಘೋಷಣೆ ಮಾಡಿದ ಬಳಿಕ ಹಿಂದೂಗಳಿಗೆ ನಾವು ಸಹೋದರರಾಗಿ ಕಾಣಿಸುತ್ತಿದ್ದೇವೆ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಒಂದು ವೇಳೆ ಹಿಂದೂ ಧರ್ಮ ನಮ್ಮನ್ನು ಹಿಂದೂ ಎಂದು ಹೇಳುವುದಕ್ಕೆ ಸಿದ್ಧವಿಲ್ಲ ಎಂದ ಮೇಲೆ ನಾವೇಕೆ ಹಿಂದೂ ಎಂದು ಕರೆದುಕೊಳ್ಳಬೇಕು? ಯಾವ ಧರ್ಮದಲ್ಲಿ ಸಮಾನತೆ, ಪ್ರೀತಿ ಮತ್ತು ಬಂಧುತ್ವವಿಲ್ಲವೋ ಅಂತಹ ಧರ್ಮವನ್ನು ಧರ್ಮ ಎಂದು ನಾನು ಕರೆಯುವುದಕ್ಕೆ ಸಿದ್ಧವಿಲ್ಲ. ಎರಡು ಸಾವಿರ ವರ್ಷಗಳ ಹಿಂದೆ ನಮ್ಮ ಪೂರ್ವಿಕರು ಅಜ್ಞಾನಿಗಳಾಗಿದ್ದರು. ಅವರಿಗೆ ಯಾವುದೇ ವಿದ್ಯೆ ಸಂಪಾದಿಸುವ ಅಥವಾ ಶಸ್ತ್ರ ಹಿಡಿಯುವುದಕ್ಕೆ ಪರವಾನಗಿ ಇರಲಿಲ್ಲ. ಆದ್ದರಿಂದಲೇ ಅವರಿಗೆ ಯಾವುದೇ ಹೊಸ ಕೆಲಸಗಳನ್ನು ಮಾಡುವ ಧೈರ್ಯ ಇರಲಿಲ್ಲ. ಅಜ್ಞಾನದಿಂದಾಗಿ ಅವರ ಮನಸ್ಸು ನಿಸ್ಸತ್ವಗೊಂಡಿತ್ತು. ನಾಲ್ಕು ವರ್ಣಗಳಲ್ಲಿ ಹಿಂದೂ ಧರ್ಮವನ್ನು ಕಟ್ಟಿ ಹಾಕಲಾಗಿದೆ. ನಮ್ಮ ಅರ್ಹತೆ ಬ್ರಾಹ್ಮಣರಿಗಿಂತ ಶ್ರೇಷ್ಠವಾಗಿದ್ದರೂ ಗುಲಾಮಗಿರಿಯ ಕೆಲಸಗಳನ್ನು ನಮಗೆ ನೀಡಲಾಗಿತ್ತು. ಈ ಗುಲಾಮಗಿರಿಯಿಂದಾಗಿಯೇ ನಮ್ಮ ಪೂರ್ವಿಕರು ಸ್ವಾಭಿಮಾನ ಮರೆತುಬಿಟ್ಟರು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಈಗ ನಾವು ಹಿಂದೂ ಧರ್ಮದ ಅನಾದರದ ಚೌಕಟ್ಟಿನಲ್ಲಿ ಇರುವುದಕ್ಕೆ ಆಗುವುದಿಲ್ಲ ಆದ್ದರಿಂದ ನಾವು ಧರ್ಮಾಂತರದ ಘೋಷಣೆ ಮಾಡಬೇಕಾಯಿತು.

ಇದರ ಬಳಿಕ ಡಾ. ಅಂಬೇಡ್ಕರ್ ಅವರನ್ನು ಹೂವಿನ ಹಾರ ಮತ್ತು ಪುಷ್ಪಗುಚ್ಛ ನೀಡಿ ಸನ್ಮಾನಿಸಿ ಅವರಿಗೆ ವಂದನೆ ಸಲ್ಲಿಸಲಾಯಿತು.

---

ಜನತಾ: ಮೇ ೧೬, ೧೯೩೬

# ೮೮.

# ಮಣ್ಣು ಪಾಲಾದ ನಮ್ಮ ಜೀವನಕ್ಕೆ ಬಂಗಾರದ ಮೌಲ್ಯ ಬೇಕೆಂದರೆ ಧರ್ಮಾಂತರ ಅತ್ಯಗತ್ಯ

ಭಾನುವಾರ ಮೇ ೧೭, ೧೯೩೬ರಂದು ಕಲ್ಯಾಣದಲ್ಲಿ ಧರ್ಮಾಂತರಕ್ಕೆ ಮುಕ್ತ ಬೆಂಬಲ ನೀಡುವ ಉದ್ದೇಶದಿಂದ ಠಾಣೆ ಜಿಲ್ಲೆ ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಅಸ್ಪೃಶ್ಯರು ಎಂದು ಪರಿಗಣಿಸಲ್ಪಟ್ಟಿರುವ ಜನರ ಸಮಾವೇಶ ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಸಮಾವೇಶದ ನಿಯೋಜಿತ ಅಧ್ಯಕ್ಷರಾಗಿದ್ದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು, ಮುಂಬೈನಿಂದ ಆಗಮಿಸುವ ಮಾಹಿತಿಯನ್ನು ಎಲ್ಲೆಡೆ ಭಿತ್ತಿಪತ್ರ, ಕರಪತ್ರಗಳ ಮುಖಾಂತರ ಪ್ರಚಾರ ಮಾಡಿದ್ದರಿಂದ ದೊಡ್ಡ ಉತ್ಸಾಹದೊಂದಿಗೆ ಸಾಕಷ್ಟು ಸಂಖ್ಯೆಯಲ್ಲಿ ಅಸ್ಪೃಶ್ಯರು ರೈಲ್ವೆ ನಿಲ್ದಾಣದ ಬಳಿ ಸೇರಿದ್ದರು. ಸುಮಾರು ನೂರು ಇನ್ನೂರು ಗ್ರಾಮಗಳಿಂದ ಆಗಮಿಸಿದ್ದ ಅಸ್ಪೃಶ್ಯರು ನಿಲ್ದಾಣದಲ್ಲಿ ಅಂಬೇಡ್ಕರ್ ಅವರ ಹಾದಿ ಕಾಯುತ್ತಿದ್ದರು. ಮಧ್ಯಾಹ್ನ ಸುಮಾರು ೩ ಗಂಟೆ ಹೊತ್ತಿಗೆ ಡಾ. ಅಂಬೇಡ್ಕರ್ ಅವರು ರೈಲಿನಿಂದ ಇಳಿಯುತ್ತಿದ್ದಂತೆಯೇ ಸ್ಥಳೀಯ ಸದಸ್ಯರು ಹೂವಿನ ಹಾರ ಹಾಕಿ ಬರಮಾಡಿಕೊಂಡರು.

ನಿಲ್ದಾಣದ ಹೊರಗೆ ಡಾ. ಅಂಬೇಡ್ಕರ್‌ಗೆ ಜಯವಾಗಲಿ, ಅಂಬೇಡ್ಕರ್ ಜಿಂದಾಬಾದ್, ಕೆಲವೇ ದಿನಗಳಲ್ಲಿ ಭೀಮರಾಜ್ ಮುಂತಾದ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು. ಡಾ. ಅಂಬೇಡ್ಕರ್ ಅವರ ದರ್ಶನಕ್ಕೆ ಆಗಮಿಸಿದ್ದ ದಲಿತ ಸಮಾಜ ಸಂತಸದಿಂದ ಆನಂದಬಾಷ್ಪ ಸುರಿಸಿ ನವಚೈತನ್ಯ ಮೂಡಿಸಿಕೊಂಡಂತೆ ಕಾಣುತ್ತಿತ್ತು. ಬಳಿಕ ಸುಮಾರು ನಾಲ್ಕು ಸಾವಿರ ಜನರ ನಡುವೆ ನಗರದ ಪ್ರಮುಖ ಬೀದಿಗಳಲ್ಲಿ ಡಾ. ಅಂಬೇಡ್ಕರ್ ಅವರ ಅದ್ದೂರಿ ಮೆರವಣಿಗೆ ಜರುಗಿತು. ಮೆರವಣಿಗೆಯ ಇಕ್ಕೆಲಗಳಲ್ಲಿ ಸ್ವಯಂ ಸೇವಕರು ಡಾ. ಅಂಬೇಡ್ಕರ್‌ಗೆ ಜಯವಾಗಲಿ ಎಂದು ಶಿಸ್ತಿನಿಂದ ಘೋಷಣೆ ಹಾಕುತ್ತಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ಬ್ಯಾಂಡ್, ಭಜಂತ್ರಿ ಸೇರಿದಂತೆ ಉಳಿದ ವಾದ್ಯಮೇಳಗಳು ಇದ್ದವು. ಮೆರವಣಿಗೆಯಲ್ಲಿ ಯುವಕರಿಂದ ಲಾಠಿ ಪ್ರಯೋಗದ ಪ್ರದರ್ಶನ ಕೂಡ ನಡೆಯುತ್ತಿತ್ತು. ಒಟ್ಟಾರೆ ಆ ಮೆರವಣಿಗೆ ನೋಡುವಂತಿತ್ತು. ಮುಗ್ದ ಜನರ ನಿಸ್ಸೀಮ ಪ್ರೇಮ ಮತ್ತು ಅವರ ಸ್ವಾಭಿಮಾನ ನೋಡಿ ಯಾರಿಗೇ ಆಗಲಿ ಧನ್ಯತೆಯ ಭಾವ ಒಡಮೂಡುತ್ತಿತ್ತು.

ಈ ಸಮಾವೇಶದ ಭಾಷಣದಲ್ಲಿ ಡಾ. ಅಂಬೇಡ್ಕರ್ ಅವರು ಧರ್ಮಾಂತರದ ವಿಚಾರವಾಗಿ ವಿಸ್ತಾರವಾಗಿ ಮಾತನಾಡಿದರು. ಅವರು ತಮ್ಮ ಭಾಷಣದಲ್ಲಿ:

ನಾನು ಧರ್ಮಾಂತರದ ಕುರಿತು ಏನು ಮಾತನಾಡುವವನಿದ್ದೇನೆ ಎಂದು ಕೇಳುವುದಕ್ಕೆ ತಾವು ಎಲ್ಲರೂ ಇಲ್ಲಿ ಆಗಮಿಸಿದ್ದೀರಿ. ಹೀಗಾಗಿ ನಾನು ಸ್ಪಷ್ಟವಾಗಿ ಮಾತನಾಡುವ ಅವಕಾಶ ಲಭಿಸಿದೆ. ಧರ್ಮಾಂತರಕ್ಕೆ ಸಂಬಂಧಿಸಿದಂತೆ ಕೆಲವರು ನಾವು ಯಾವ ಕಾರಣಕ್ಕೆ ಧರ್ಮಾಂತರ ಮಾಡಬೇಕು? ಎಂದು ಕೇಳುತ್ತಿದ್ದಾರೆ. ಅವರಿಗೆ ನನ್ನದು ಅದಕ್ಕೆ ತದ್ವಿರುದ್ಧ ಪ್ರಶ್ನೆ ಎಂದರೆ ನಾವೇಕೆ ಧರ್ಮಾಂತರ ಮಾಡಬಾರದು? ಧರ್ಮಾಂತರ

ನಾವೇಕೆ ಮಾಡಬೇಕು ಎನ್ನುವುದಕ್ಕೆ ನನ್ನ ಜೀವನದಲ್ಲಿ ನಡೆದ ಘಟನೆಗಳಿಂದ ನಿಮಗೆ ಅರ್ಥವಾಗಬಹುದು. ನನ್ನಂತೆಯೇ ತಮ್ಮ ಜೀವನದಲ್ಲೂ ಇಂತಹ ಘಟನೆಗಳು ಸಂಭವಿಸಿರಬಹುದು. ಯಾವ ಕಾರಣಗಳಿಂದಾಗಿ ನಾನು ಧರ್ಮಾಂತರಕ್ಕೆ ಸಿದ್ಧವಾಗಿದ್ದೇನೆ ಎನ್ನುವುದನ್ನು ಸಾಬೀತುಪಡಿಸುವ ನಾಲ್ಕಾರು ಘಟನೆಗಳು ನನ್ನ ಜೀವನದ ಮೇಲೆ ಗಾಢ ಪ್ರಭಾವ ಬೀರಿವೆ. ಅವುಗಳ ಪೈಕಿ ಒಂದೆರಡು ಸಂಗತಿಗಳನ್ನು ನಾನಿಲ್ಲಿ ತಮ್ಮ ಎದುರು ವಿಷದೀಕರಿಸುತ್ತಿದ್ದೇನೆ.

ನನ್ನ ತಂದೆ ಸೇನೆಯಲ್ಲಿದ್ದ ವೇಳೆ ಇಂದೋರ್ ಹತ್ತಿರದ ಮಹುನಲ್ಲಿ ನಾನು ಹುಟ್ಟಿದ್ದು. ಆಗ ನನ್ನ ತಂದೆ ಸೇನೆಯಲ್ಲಿ ಸುಭೇದಾರ ಆಗಿದ್ದವರು. ನಾನು ಸೇನಾ ವಸತಿ ಪ್ರದೇಶದಲ್ಲಿ ಇದ್ದ ಕಾರಣ ನಮಗೆ ಹೊರ ಜಗತ್ತಿನ ಸಂಪರ್ಕ ಇರಲಿಲ್ಲ. ಹೀಗಾಗಿ ಅಸ್ಪೃಶ್ಯತೆಯ ಕಲ್ಪನೆ ಕೂಡ ನಮಗೆ ಇರಲಿಲ್ಲ. ನನ್ನ ತಂದೆಯ ನಿವೃತ್ತಿ ಬಳಿಕ ಸಾತಾರಾಕ್ಕೆ ನಾವೆಲ್ಲ ಬಂದು ಇರಲು ಆರಂಭಿಸಿದೆವು. ನಾನು ಐದು ವರ್ಷದವನಿದ್ದಾಗ ನನ್ನ ತಾಯಿ ವಿಧಿವಶರಾದರು. ಸಾತಾರಾ ಜಿಲ್ಲೆಯ ಗೋರೆಗಾಂವದಲ್ಲಿ ಬರಗಾಲ ಬಿದ್ದ ಕಾರಣ ಸರ್ಕಾರ ಆರಂಭಿಸಿದ ಬರ ಕಾಮಗಾರಿಯಡಿ ಕೈಗೆತ್ತಿಕೊಂಡ ಕೆರೆ ನಿರ್ಮಿಸುವ ಕಾರ್ಮಿಕರಿಗೆ ವೇತನ ಹಂಚುವ ಕೆಲಸವನ್ನು ನನ್ನ ತಂದೆಗೆ ವಹಿಸಿದ್ದರಿಂದ ಅವರು ಗೋರೆಗಾಂವ್‌ಗೆ ಹೋದರು ಮತ್ತು ನಾವು ಸಾತಾರಾದಲ್ಲಿಯೇ ಸುಮಾರು ನಾಲ್ಕು ವರ್ಷಗಳವರೆಗೆ ಇರಬೇಕಾಯಿತು. ನಾವು ಸಾತಾರಾದಲ್ಲಿದ್ದ ವೇಳೆ ಅಸ್ಪೃಶ್ಯತೆ ಏನು ಎನ್ನುವುದರ ಅರಿವು ಆಗಲು ಆರಂಭಿಸಿತು. ಮೊದಲಿಗೆ ನಮ್ಮ ಕೇಶಮುಂಡನಕ್ಕೆ ಕ್ಷೌರಿಕ ಸಿಗಲಿಲ್ಲ. ಈ ಕಾರಣವಾಗಿ ನಮಗೆ ತುಂಬ ತೊಂದರೆಯಾಯಿತು. ಆಮೇಲೆ ನನ್ನ ಹಿರಿಯಕ್ಕ ನಮ್ಮ ಕೇಶಮುಂಡನ ಮಾಡುತ್ತಿದ್ದಳು. ಸಾತಾರದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಕ್ಷೌರಿಕರಿದ್ದರೂ ಅವರು ನಮ್ಮ ಕೇಶಮುಂಡನ ಮಾಡುವುದಿಲ್ಲ ಎನ್ನುವುದು ಮೊದಲ ಬಾರಿಗೆ ನನ್ನ ಅರಿವಿಗೆ ಬಂದಿತು. ಇನ್ನೊಂದು ಘಟನೆ ಎಂದರೆ, ಗೋರೆಗಾಂವದಲ್ಲಿದ್ದ ನಮ್ಮ ತಂದೆ ನಮಗೆ ಬರೆದಿದ್ದ ಪತ್ರದಲ್ಲಿ ಗೋರೆಗಾಂವ್‌ಗೆ ಬರುವಂತೆ ತಿಳಿಸಿದ್ದರು. ಗೋರೆಗಾಂವ್‌ಗೆ ನಾವು ಉಗಿಬಂಡಿಯಲ್ಲಿ ಕುಳಿತು ಹೋಗುವವರಿದ್ದ ಕಾರಣ ನನಗೆ ಎಲ್ಲಿಲ್ಲದ ಖುಷಿಯಾಗಿತ್ತು. ಈ ಮೊದಲು ನಾನೆಂದೂ ಉಗಿಬಂಡಿಯಲ್ಲಿ ಕುಳಿತವನಲ್ಲ. ತಂದೆ ಕಳುಹಿಸಿದ ಹಣದಿಂದ ಒಳ್ಳೆಯ ಬಟ್ಟೆಗಳನ್ನು ಖರೀದಿಸಿದೆವು. ನಾನು, ನನ್ನ ಸಹೋದರ ಮತ್ತು ಅಕ್ಕನ ಮಗಳೊಂದಿಗೆ ನಾವು ತಂದೆಯ ಭೇಟಿಗೆ ಹೊರಟೆವು. ಅದಕ್ಕೂ ಮೊದಲು ನಾವು ಅವರಿಗೆ ಪತ್ರ ಬರೆದಿದ್ದೆವು. ನೌಕರರ ನಿರ್ಲಕ್ಷ್ಯದಿಂದಾಗಿ ಅವರಿಗೆ ನಮ್ಮ ಪತ್ರ ಸಿಕ್ಕಿರಲಿಲ್ಲ ಹೀಗಾಗಿ ಅವರಿಗೆ ನಾವು ಗೋರೆಗಾಂವ್‌ಗೆ ಬರುತ್ತಿರುವ ವಿಚಾರ ಗೊತ್ತಿರಲಿಲ್ಲ. ಆದರೆ ನಮ್ಮನ್ನು ಕರೆದುಕೊಂಡು ಹೋಗುವುದಕ್ಕೆ ತಂದೆ ನೌಕರನನ್ನು ಕಳುಹಿಸಿಕೊಡುತ್ತಾರೆ ಎಂದು ಭಾವಿಸಿ ನಾವು ಪ್ರಯಾಣ ಬೆಳೆಸಿದೆವು. ಆದರೆ ಈ ವಿಚಾರದಲ್ಲಿ ನಮಗೆ ನಿರಾಸೆ ಕಾದಿತ್ತು. ಉಗಿಬಂಡಿಯಿಂದ ನಾವು ಇಳಿಯುತ್ತಿದ್ದಂತೆಯೇ ನೌಕರನ ಹಾದಿ ಕಾಯುತ್ತ ಕುಳಿತೆವು. ನನ್ನ ವೇಷಭೂಷಣ ಬ್ರಾಹ್ಮಣನಂತಿತ್ತು. ಸುಮಾರು ಅರ್ಧ ಮುಕ್ಕಾಲು ಗಂಟೆ ರೈಲ್ವೆ ನಿಲ್ದಾಣದಲ್ಲಿ ಹಾದಿ ಕಾಯುತ್ತ ಕುಳಿತಿದ್ದೆವು. ನಿಲ್ದಾಣದಲ್ಲಿ ನಮ್ಮನ್ನು ಹೊರತುಪಡಿಸಿ ಬೇರೆಯವರು ಯಾರೂ ಇರಲಿಲ್ಲ. ಅಷ್ಟರಲ್ಲಿ ನಮ್ಮನ್ನು ನೋಡಿದ ಸ್ಟೇಷನ್ ಮಾಸ್ತರ್ ನಮ್ಮ ಬಳಿ ಬಂದು ಯಾವ ಕಡೆ ಹೋಗುವುದು ಇದೆ, ನೀವು ಯಾರು ಇತ್ಯಾದಿ ಪ್ರಶ್ನೆ ಕೇಳಲು ಆರಂಭಿಸಿದ. ನಾವು ಮಹಾರ್ ಎಂದು ಹೇಳುತ್ತಿದ್ದಂತೆಯೇ ಸ್ಟೇಷನ್ ಮಾಸ್ತರ್ ಸಿಡಿಲಿಗೆ ಸಿಕ್ಕ ಹಕ್ಕಿಯಂತೆ ವಿಲಿವಿಲಿ ಒದ್ದಾಡಿದ. ತಕ್ಷಣ ನಾಲ್ಕೈದು ಹೆಜ್ಜೆ ಹಿಂದೆ ಸರಿದು ನಿಂತ. ನಮ್ಮ ವೇಷಭೂಷಣ ನೋಡಿದರೆ ಸುಖಿ ಮಹಾರ್ ಕುಟುಂಬದಿಂದ ಬಂದವರು ಎಂದು ತಿಳಿದು ನಮಗೆ ಗಾಡಿ ಮಾಡಿಕೊಡುವುದಕ್ಕೆ ಸಿದ್ಧನಾದ. ನಾವು ಮಹಾರ್ ಮಕ್ಕಳು

ಎಂದು ತಿಳಿದ ಗಾಡಿ ಹೊಡೆಯುವವರು ರಾತ್ರಿ ಏಳು ಗಂಟೆಯಾದರೂ ಯಾರೂ ಮುಂದೆ ಬರಲಿಲ್ಲ. ಕೊನೆಗೆ ಒಬ್ಬ ಗಾಡಿ ಹೊಡೆಯುವವ ಮುಂದೆ ಬಂದ ಆದರೆ ನಾನು ಗಾಡಿ ನಡೆಸುವುದಿಲ್ಲ ಎಂದು ಷರತ್ತು ಹಾಕಿದ. ನಾನು ಮಿಲಿಟರಿಯಲ್ಲಿ ಇದ್ದವನಾಗಿದ್ದರಿಂದ ಗಾಡಿ ಹೊಡೆಯುವುದು ನನಗೆ ಕಷ್ಟವಾಗಲಿಲ್ಲ. ನಾವು ಒಪ್ಪಿಗೆ ಸೂಚಿಸುತ್ತಿದ್ದಂತೆಯೇ ಗಾಡಿ ಹೊಡೆಯುವವ ತನ್ನ ಗಾಡಿ ತಂದು ನಿಲ್ಲಿಸಿದ. ಗ್ರಾಮದಿಂದ ಸಾಕಷ್ಟು ದೂರ ಬಂದ ಬಳಿಕ ಇಲ್ಲಿಯೇ ರೊಟ್ಟಿ ತಿಂದು ನೀರು ಕುಡಿಯಿರಿ. ಮುಂದೆ ನಿಮಗೆ ಕುಡಿಯಲು ನೀರು ಸಿಗಲಿಕ್ಕಿಲ್ಲ ಎಂದು ಹೇಳಿದ. ನಾವು ಕೆಳಗಿಳಿದು ರೊಟ್ಟಿ ತಿಂದು ನಾಲೆಯ ನೀರು ಕುಡಿಯುವುದಕ್ಕೆ ಹೋದೆವು. ನಾಲೆಯ ನೀರು ಎಷ್ಟು ಕಲುಷಿತವಾಗಿತ್ತೆಂದರೆ ಅದರಲ್ಲಿ ಇದ್ದ ಸೆಗಣಿ ನೋಡಿ ವಾಕರಿಕೆ ಬಂದಿತು. ಗಾಡಿ ಹೊಡೆಯುವವ ಎಲ್ಲಿಯೋ ಕುಳಿತು ರೊಟ್ಟಿ ತಿಂದು ಬಂದ. ಮತ್ತೇ ನಮ್ಮ ಗಾಡಿ ಹೊರಟಿತು. ರಾತ್ರಿ ಸಾಕಷ್ಟು ಆಗಿದ್ದರಿಂದ ಗಾಡಿ ಹೊಡೆಯುವವ ಕೂಡ ಗಾಡಿ ಏರಿ ಕುಳಿತುಕೊಂಡ. ರಸ್ತೆಯಲ್ಲಿ ದೀಪ ಇರಲಿಲ್ಲ. ಮನುಷ್ಯರ ಸುಳಿವಿರಲಿಲ್ಲ. ನಾವು ಯಾರೂ ಗೋರೆಗಾಂವ್ ತಲುಪುವುದೇ ಇಲ್ಲವೇನೋ ಎಂದು ಭಾಸವಾಗುತ್ತಿತ್ತು. ಮನಸ್ಸಿನಲ್ಲಿ ತರ್ಕ–ಕುತರ್ಕದ ಹೋರಾಟವೇ ನಡೆದಿತ್ತು. ಅಷ್ಟೊತ್ತಿಗೆ ನಮ್ಮ ಗಾಡಿ ಟೋಲ್ ನಾಕಾ ಹತ್ತಿರ ಬಂದಿತು. ನನಗೆ ಪರ್ಶಿಯನ್ ಭಾಷೆ ಚೆನ್ನಾಗಿ ಬರುತ್ತಿದ್ದ ಕಾರಣ ಟೋಲ್ ನಾಕಾದಲ್ಲಿದ್ದ ವ್ಯಕ್ತಿಯನ್ನು ರೊಟ್ಟಿ ತಿಂದು ನೀರು ಕುಡಿಯುವುದಕ್ಕೆ ಜಾಗ ಎಲ್ಲಿ ಎಂದು ಕೇಳಿದೆ. ಆದರೆ ಆ ವ್ಯಕ್ತಿ ಅತ್ಯಂತ ನಿರ್ಲಕ್ಷ್ಯದಿಂದ ಎದುರಿನ ಗುಡ್ಡ ತೋರಿಸಿದ. ಕೊನೆಗೆ ಹೇಗೋ ಟೋಲ್ ನಾಕಾದಲ್ಲಿ ರಾತ್ರಿ ಕಳೆದು ಮರುದಿನ ಮಧ್ಯಾಹ್ನ ಅರ್ಧ ಸತ್ತ ಸ್ಥಿತಿಯಲ್ಲಿ ಗೋರೆಗಾವ್ ತಲುಪಿದೆವು.

ನನ್ನ ಜೀವನದಲ್ಲಿನ ಇನ್ನೊಂದು ಘಟನೆ ಎಂದರೆ ಬಡೋದಾ ಸಂಸ್ಥಾನದಲ್ಲಿನ ನನ್ನ ಸರ್ಕಾರಿ ನೌಕರಿ. ಬಡೋದಾ ಸಂಸ್ಥಾನದಿಂದ ಶಿಷ್ಯವೇತನ ಲಭಿಸಿದ ಬಳಿಕ ವಿದೇಶಕ್ಕೆ ಹೋಗಿ ನನ್ನ ಉನ್ನತ ಶಿಕ್ಷಣ ಪೂರ್ಣಗೊಳಿಸಿದೆ. ಅಲ್ಲಿಂದ ಮರಳಿದ ಬಳಿಕ ವಿದ್ಯಾರ್ಥಿವೇತನದ ಶರತ್ತಿನಂತೆ ನಾನು ಬಡೋದಾ ಸಂಸ್ಥಾನದಲ್ಲಿ ನೌಕರಿ ಮಾಡಬೇಕಿತ್ತು. ಆದರೆ ಬಡೋದೆಯಲ್ಲಿ ವಾಸಕ್ಕಾಗಿ ನನಗೆ ಒಂದೇ ಒಂದು ಮನೆ ಸಿಗಲಿಲ್ಲ. ಹಿಂದೂಗಳಾಗಲಿ, ಮುಸ್ಲಿಂರಾಗಲಿ ನನಗೆ ಇರುವುದಕ್ಕೆ ಮನೆ ನೀಡಲು ಸಿದ್ಧರಿರಲಿಲ್ಲ. ಕೊನೆಗೆ ಒಂದು ಪಾರ್ಸಿ ಧರ್ಮಶಾಲೆಯಲ್ಲಿ ಪಾರ್ಸಿ ಎಂದು ಇರಲು ನಿರ್ಧರಿಸಿದೆ. ವಿದೇಶದಿಂದ ಮರಳಿದ ಬಳಿಕ ಕೆಂಪಗೆ, ದಷ್ಟಪುಷ್ಟವಾಗಿ ಕಾಣಿಸುತ್ತಿದ್ದೆ. ಕೊನೆಗೆ ಎದಲಜೀ ಸೋರಾಬ್ಜಿ ಎಂದು ಪಾರ್ಸಿ ಹೆಸರು ಇಟ್ಟುಕೊಂಡು ವಾಸಿಸಲು ಆರಂಭಿಸಿದೆ. ಎರಡು ರೂಪಾಯಿ ದಿನ ಬಾಡಿಗೆಯ ಮೇಲೆ ಧರ್ಮಶಾಲೆಯಲ್ಲಿ ನನ್ನ ಜೀವನ ಆರಂಭವಾಯಿತು. ಆದರೆ ಇದಕ್ಕೆ ಮೊದಲೇ ಶ್ರೀಮಂತ ಮಹಾರಾಜ್ ಸರ್ಕಾರ್ ಅವರು ಒಬ್ಬ ಸುಶಿಕ್ಷಿತ ಮಹಾರ್ ಹುಡುಗನನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ ಎಂದು ಸುದ್ದಿ ಊರ ತುಂಬ ಹರಡಿತ್ತು. ನಾನು ಪಾರ್ಸಿ ಎಂದು ಹೇಳಿಕೊಂಡು ಇರುವ ವಿಚಾರ ಕೂಡ ಗುಪ್ತವಾಗಿ ಉಳಿಯಲಿಲ್ಲ. ಧರ್ಮಶಾಲೆಯಲ್ಲಿ ಮಹಾರ್ ನಾನೇ ಎನ್ನುವುದು ಪಾರ್ಸಿ ಜನರಿಗೆ ಗೊತ್ತಾಯಿತು. ಮರುದಿನ ಊಟ ಮುಗಿಸಿಕೊಂಡು ಆಫೀಸ್‌ಗೆ ಹೊರಡಬೇಕು ಎನ್ನುವಷ್ಟರಲ್ಲಿ ಸುಮಾರು ಹತ್ತು ಹದಿನೈದು ಪಾರ್ಸಿಗಳ ಗುಂಪು ನನ್ನನ್ನು ಅಡ್ಡಗಟ್ಟಿ ಯಾರು ನೀನು? ಎಂದು ಕೇಳಿತು. ನಾನು ಅವರಿಗೆ ಕೇವಲ ಹಿಂದೂ ಎಂದು ಉತ್ತರಿಸಿದೆ. ಅದರಿಂದ ತೃಪ್ತರಾಗದ ಅವರು, ತಕ್ಷಣ ಜಾಗ ಖಾಲಿ ಮಾಡುವಂತೆ ಹೇಳಿದರು. ಕೊನೆಗೆ ಅವರಿಗೆ ಎಂಟು ಗಂಟೆಗಳ ಕಾಲಾವಧಿ ಕೇಳಿದ್ದಕ್ಕೆ ಅವರು ಸಮ್ಮತಿಸಿದರು. ಆ ದಿನ ವಾಸ್ತವ್ಯಕ್ಕಾಗಿ ಸಾಕಷ್ಟು ಹುಡುಕಾಟ ಮಾಡಿದರೂ ನನಗೆ ನೆಲೆ ದಕ್ಕಲೇ ಇಲ್ಲ. ಎಷ್ಟೋ ಮಿತ್ರರ ಬಳಿ ಹೋಗಿ ನೆರವು ಕೇಳಿದೆ. ಅವರು ನಾನಾ ತರಹದ ನೆಪ ಹೇಳಿ ಸಾಗಹಾಕಿದರು. ಕೊನೆಗೆ ಎಷ್ಟೊಂದು ನಿರಾಸೆಯಾಗಿತ್ತೆಂದರೆ ಮುಂದೆ ಏನು

ಮಾಡಬೇಕು ಎನ್ನುವುದು ತಿಳಿಯದಾಗಿತ್ತು. ಒಂದು ಕಡೆ ಸುಮ್ಮನೆ ಕುಳಿತೆ. ಮನಸ್ಸು ಉದ್ವಿಗ್ನವಾಗಿತ್ತು. ಕಣ್ಣಿನಿಂದ ನೀರು ಒಂದೇ ಸಮನೆ ಹರಿದು ಬರುತ್ತಿತ್ತು. (ಈ ಸಮಯದಲ್ಲೂ ಅವರ ಕಣ್ಣಿನಲ್ಲಿ ನೀರು ಒಸರಿತು. ಅಸ್ಪೃಶ್ಯತೆಯ ಬಡಾಗ್ನಿಯಲ್ಲಿ ಅವರ ಮನಸ್ಸು ಸುಟ್ಟುಹೋಗಿತ್ತು) ಇನ್ನು ಗತ್ಯಂತರವೇ ಇಲ್ಲ ಎಂದುಕೊಂಡು ನೌಕರಿ ಬಿಟ್ಟು ಅದೇ ದಿನ ರಾತ್ರಿ ಮುಂಬೈಗೆ ಮರಳಿದೆ. ನನ್ನ ಜೀವನದಲ್ಲಿ ಆಗಿರುವಂತಹ ಘಟನೆಗಳು ನಿಮ್ಮ ಜೀವನದಲ್ಲೂ ಘಟಿಸಿರಬಹುದು. ಅದಕ್ಕೆ ನಾನು ಹೇಳುವುದು ಏನೆಂದರೆ, ಯಾವ ಸಮಾಜದಲ್ಲಿ ಮನುಷ್ಯತ್ವ ಇಲ್ಲವೋ ಕರುಣೆ ಇಲ್ಲವೋ ಅಂತಹ ಸಮಾಜದಲ್ಲಿ ನಿಷ್ಕಾರಣವಾಗಿ ಅಪಮಾನ ಅನುಭವಿಸುತ್ತ ಜೀವನ ಕಳೆಯುವುದರಲ್ಲಿ ಯಾವ ಪುರುಷಾರ್ಥ ಇದೆ? ಇಂತಹ ನಿರ್ದಯ ಧರ್ಮದಲ್ಲಿ ಇರುವವ ಗುಲಾಮನಾಗಿರಬೇಕು. ಮನುಷ್ಯತ್ವ ಬೇಕು ಎನ್ನುವ ವ್ಯಕ್ತಿ ಇಂತಹ ದುಷ್ಟ ಧರ್ಮದಲ್ಲಿ ಇರಲಾರ.

ನನ್ನ ಪೂರ್ವಿಕರು ಈ ಹಿಂದೂ ಧರ್ಮದಲ್ಲಿದ್ದರು ಆದರೆ ಅವರಿಗೆ ಹಿಂದೂ ಧರ್ಮದ ನಿಯಮದಂತೆ ಶಿಕ್ಷಣ ಪಡೆಯುವುದಕ್ಕೆ ಆಗಲಿಲ್ಲ. ಶಸ್ತ್ರಗಳನ್ನು ಹಿಡಿಯುವುದಕ್ಕೆ ಆ ಧರ್ಮ ಅನುಮತಿಸಲಿಲ್ಲ. ಅದಲ್ಲದೇ ಧಾರ್ಮಿಕ ನಿಬಂಧನೆಗಳಿಂದಾಗಿ ಅವರಿಗೆ ಸಂಪತ್ತು ಗಳಿಸುವ ಅಧಿಕಾರ ಇರಲಿಲ್ಲ. ಹೀಗಾಗಿ ನಮ್ಮ ಪೂರ್ವಿಕರಿಗೆ ಶಿಕ್ಷಣ, ಶಸ್ತ್ರ ವಿದ್ಯೆ ಮತ್ತು ಸಂಪತ್ತು ಗಳಿಸಲು ಸಾಧ್ಯವಾಗಲಿಲ್ಲ. ಉನ್ನತ ಶಿಕ್ಷಣ ಪಡೆಯುವ ಸಂದರ್ಭದಲ್ಲಿ ನನಗೆ ಸಂಸ್ಕೃತ ಕಲಿಯಬೇಕು ಎಂದಿತ್ತು. ಆದರೆ ಧಾರ್ಮಿಕ ಕಟ್ಟಳೆಗಳಿಂದಾಗಿ ಅದು ಸಾಧ್ಯವಾಗಲಿಲ್ಲ. ಆದರೆ ಇದೀಗ ವಿದ್ಯೆ ಪಡೆಯುವುದು, ಶಸ್ತ್ರ ಹಿಡಿಯುವುದು ಮತ್ತು ಸಂಪತ್ತು ಗಳಿಸುವುದು ಸಾಧ್ಯವಾಗಿದೆ. ಈ ಸಂದರ್ಭದಲ್ಲಿ ನಿಮ್ಮ ಪೂರ್ವಿಕರನ್ನು ಗುಲಾಮಗಿರಿಯ ಹೀನ ಸ್ಥಿತಿಯಲ್ಲಿ ಇರಿಸಿದ ಆ ಧರ್ಮ, ಯಾವುದೇ ಪರಿಸ್ಥಿತಿಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಈ ಧರ್ಮ ನಿಮ್ಮನ್ನು ಅಜ್ಞಾನದಲ್ಲಿ, ದಾರಿದ್ರ್ಯದಲ್ಲಿ ನರಳುವಂತೆ ಮಾಡಿದ ಈ ಹಿಂದೂ ಧರ್ಮದ ಬಗ್ಗೆ ನಾವೇಕೆ ಚಿಂತೆ ಮಾಡಬೇಕು? ನಿಮ್ಮ ಪೂರ್ವಿಕರಂತೆಯೇ ನೀವೂ ಈ ಧರ್ಮದಲ್ಲಿ ಮುಂದುವರೆಯಬೇಕೆಂದರೆ ನಿಮ್ಮನ್ನು ಕೇಳುವವರು ಯಾರೂ ಇಲ್ಲ. ನಿಮ್ಮ ಬಗ್ಗೆ ಚಿಂತೆ ಮಾಡುವವರು ಯಾರೂ ಇರುವುದಿಲ್ಲ. ಧರ್ಮಾಂತರದ ಪ್ರಶ್ನೆ ಏಕೆ ಇಷ್ಟು ಮಹತ್ವ ಪಡೆದಿದೆ ಎಂದರೆ ಇದೇ ಕಾರಣಕ್ಕೆ. ಹಿಂದೂ ಧರ್ಮದಲ್ಲಿ ನೀವು ಉಳಿದುಕೊಂಡರೆ ನಿಮಗೆ ಗುಲಾಮನ ದರ್ಜೆಗಿಂತ ಹೆಚ್ಚಿನ ಸ್ಥಾನಮಾನ ಲಭ್ಯವಾಗದು. ನಾನು ಅಸ್ಪೃಶ್ಯನಾಗಿದ್ದರೂ ಹಿಂದೂ ಧರ್ಮದಲ್ಲಿ ಯಾವುದೇ ವ್ಯಕ್ತಿ ಮಾಡುವಂತಹ ಕೆಲಸ ನಾನು ಮಾಡಬಲ್ಲೆ. ನನ್ನ ಹಿತಾಸಕ್ತಿ ಹಿಂದೂ ಧರ್ಮದಲ್ಲಿ ಇದೆಯೋ ಅಥವಾ ಇಲ್ಲವೋ ಎನ್ನುವುದರಿಂದ ಪರಿಹಾರವಾಗದು. ಇಂದಿನ ನನ್ನ ಪರಿಸ್ಥಿತಿಯಲ್ಲಿ ನಾನು ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಆಗಬಲ್ಲೆ, ಕಾನೂನು ಮಂಡಳಿಯಲ್ಲಿ ಸಚಿವ ಸ್ಥಾನ ಪಡೆಯುವ ಸಾಮರ್ಥ್ಯ ನನಗೆ ಇದೆ. ಆದರೆ ನಿಮ್ಮ ಸ್ವಾಭಿಮಾನದ ರಕ್ಷಣೆಗಾಗಿ ನಾನು ಧರ್ಮಾಂತರ ಮಾಡುವವನಿದ್ದೇನೆ. ಮಣ್ಣು ಪಾಲಾದ ಜೀವನಕ್ಕೆ ಬಂಗಾರದ ಮೌಲ್ಯ ಬರಬೇಕೆಂದರೆ ಧರ್ಮಾಂತರ ಅವಶ್ಯವೆಂದು ನನಗೆ ಭಾಸವಾಗುತ್ತದೆ. ನಿಮ್ಮ ಸ್ಥಿತಿ ಸುಧಾರಿಸುವುದಕ್ಕೆ ನನ್ನ ಸಂಗಡಿಗರಿಂದ ನಿಮಗೆ ನೆರವು ಲಭಿಸುತ್ತದೆ ಎನ್ನುವುದು ನನಗೆ ಖಾತ್ರಿ ಇದೆ. ನಿಮ್ಮಲ್ಲಿ ಕರ್ತವ್ಯಪರತೆ ಬೆಳಸುವುದಕ್ಕಾಗಿ ನಾನು ಧರ್ಮಾಂತರ ಮಾಡಲೇಬೇಕಿದೆ. ನನ್ನ ಹಿತದ ಬಗ್ಗೆ ನನಗೆ ಕಾಳಜಿ ಇಲ್ಲ. ಇಂದು ನಾನು ಮಾಡುತ್ತಿರುವ ಎಲ್ಲ ಕೆಲಸಗಳಲ್ಲಿ ನಿಮ್ಮ ಹಿತಾಸಕ್ತಿ ಇದೆ. ನೀವು ನನ್ನನ್ನು ಈಶ್ವರ ಎಂದು ಭಾವಿಸಿದ್ದೀರಿ. ಆದರೆ ನಾನು ಈಶ್ವರನಲ್ಲ. ನಾನು ಕೂಡ ನಿಮ್ಮಂತೆಯೇ ಒಬ್ಬ ಸಾದಾ ಸೀದಾ ಮನುಷ್ಯ. ನಿಮಗೆ ಬೇಕಾಗಿರುವ ಯಾವುದೇ ನೆರವು ನನ್ನಿಂದ ನಿಮಗೆ ದೊರಕುತ್ತದೆ. ನನಗಾಗಿ ನಾನು ಏನನ್ನೂ ಮಾಡಿಕೊಳ್ಳುವುದಿಲ್ಲ. ನಿಮ್ಮನ್ನು ಕರ್ತವ್ಯನಿಷ್ಠರನ್ನಾಗಿ ಮಾಡುವ ಕೆಲಸ ನಾನು ಮಾಡಿಯೇ ಮಾಡುತ್ತೇನೆ.

ನಿಮ್ಮ ಪರಿಸ್ಥಿಯ ಕುರಿತು ನೀವೇ ಚಿಂತನೆ ಮಾಡಿಕೊಳ್ಳಿ. ನಾನು ತೋರಿಸುವ ಮಾರ್ಗದಲ್ಲಿ ಮುಂದುವರಿಯುವಲ್ಲಿ ನಿಮ್ಮ ಹಿತ ಅಡಗಿದೆ. ನಿಮ್ಮಲ್ಲಿ ಕರ್ತವ್ಯನಿಷ್ಠೆ ಮೂಡಿಸದೇ ನಾನು ವಿಶ್ರಮಿಸುವುದಿಲ್ಲ.

---

ಜನತಾ: ಮೇ ೨೩, ೧೯೩೬.

## ೪೯.

# ಮುಕ್ತಿಗೆ ಯಾವ ಪಥ?

(ಅಕ್ಟೋಬರ್ ೧೩, ೧೯೩೫ರಂದು ಯವಲೆಯಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಅಸ್ಪೃಶ್ಯ ಹಿಂದೂ ಎಂಬ ಕಲಂಕದ ಧರ್ಮದಲ್ಲಿ ಜನ್ಮ ತಾಳಿದ್ದರೂ ಹಿಂದೂ ಎಂದು ಕರೆಸಿಕೊಳ್ಳುತ್ತ ಸಾಯಲಾರೆ ಎಂಬ ಕ್ರಾಂತಿಕಾರಿ ಭಾಷಣ ಮಾಡಿದರು. ಈ ಘೋಷಣೆಯಿಂದ ಇಡೀ ಹಿಂದೂ ಸಮಾಜ ಸೇರಿದಂತೆ ಇತರ ಧರ್ಮಗಳು ದಡಬಡಿಸಿ ಎದ್ದು ಕುಳಿತವು. ಡಾ. ಅಂಬೇಡ್ಕರ್ ಅವರ ಘೋಷಣೆಯ ಪರವಾಗಿ ಮತ್ತು ವಿರುದ್ಧವಾಗಿ ಪ್ರತಿಕ್ರಿಯೆಗಳ ಸುರಿಮಳೆ ಆಯಿತು. ಎಲ್ಲ ದಿಕ್ಕುಗಳಿಂದ ವಿಚಾರ ವಿನಿಮಯ ಮಾಡಿ ಮುಂದಿನ ಕಾರ್ಯದ ರೂಪುರೇಷೆ ಸಿದ್ಧಪಡಿಸುವುದಕ್ಕೆ ಡಾ. ಅಂಬೇಡ್ಕರ್ ಅವರು ಮುಂಬೈ ಭಾಗದ ಮಹಾರ್ ಒಕ್ಕೂಟದಿಂದ ಮುಂಬೈನಲ್ಲಿ ಮೇ ೩೦ ಮತ್ತು ೩೧, ೧೯೩೬ರಂದು ಸಮಾವೇಶ ಆಯೋಜಿಸಿದರು. ಇದೇ ಸಮಯದಲ್ಲಿ ಮುಂಬೈ ಇಲಾಖೆಯ ಸಂತ ಸಮಾಜದ ಸಮಾವೇಶ, ಮುಂಬೈ ಪ್ರದೇಶದ ಮಾತಂಗ ಸಮಾವೇಶ ಮತ್ತು ರಾಜಕೀಯ ಸಮಾವೇಶಗಳನ್ನು ಆಯೋಜಿಸಲಾಗಿತ್ತು. ಈ ವೇಳೆ ಹೊರಡಿಸಿದ್ದ ಕರಪತ್ರಗಳು, ಕಾರ್ಯಕ್ರಮದ ವಿವರ ಮತ್ತು ಪ್ರಕಟಿಸಿದ್ದ ಡಾ. ಅಂಬೇಡ್ಕರ್ ಅವರ ಭಾಷಣಗಳನ್ನು ಇಲ್ಲಿ ಸಮಗ್ರಗೊಳಿಸಲಾಗಿದ್ದು, ಈ ಎಲ್ಲ ಸಮಾವೇಶಗಳಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿದ ಕ್ರಾಂತಿಕಾರಿ ಭಾಷಣ ಅನನ್ಯವಾಗಿದ್ದವು.

ಮುಕ್ತಿಗೆ ಯಾವ ಪಥ? ಮುಖ್ಯ ಭಾಷಣದ ಬಳಿಕ ಅಸ್ಪೃಶ್ಯ ಸಂತ ಸಮಾಜದ ಸಮಾವೇಶ, ರಾಜಕೀಯ ಸಮಾವೇಶ ಮತ್ತು ಮುಂಬೈ ಭಾಗದ ಮಾತಂಗ ಸಮಾವೇಶದಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿರುವ ಭಾಷಣಗಳನ್ನು ಕ್ರಮಶಃ ನೀಡಲಾಗಿದೆ.– ಸಂಪಾದಕ)

ಅಖಿಲ ಮುಂಬೈ ಪ್ರದೇಶದ ಮಹಾರ್ ಸಮಾವೇಶ ಆಯೋಜಿಸುವ ಕುರಿತು ಜಾಹೀರು ಪ್ರಕಟಣೆ:

"ಇಡೀ ಅಸ್ಪೃಶ್ಯ ಸಮಾಜದ ಏಕೈಕ ನಾಯಕ, ದೀನಬಂಧು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು, ಅಕ್ಟೋಬರ್ ೧೩, ೧೯೩೫ರಂದು ಯವಲೆಯಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಡಾ. ಅಂಬೇಡ್ಕರ್ ಅವರು ಹಿಂದೂ ಧರ್ಮದ ಸಮಾಜ ರಚನೆ ವಿಷಮತೆಯ ಆಧಾರದ ಮೇಲೆ ನಿಂತಿರುವ ಕಾರಣ ನಾವು ಹಿಂದೂಗಳು ಎನ್ನುವ ಭಾವನೆಯಿಂದ ಮಾನವ ಹಕ್ಕುಗಳನ್ನು ಪಡೆಯುವ ನಿಟ್ಟಿನಲ್ಲಿ ಎಂತಹದ್ದೆ ಇಲ್ಲವೇ ಯಾವುದೇ ಪ್ರಯತ್ನ ಮಾಡಿದರೂ ಯಶಸ್ಸು ಸಿಗುವುದಿಲ್ಲ. ಮಹಾಡ್ ಮತ್ತು ನಾಸಿಕ್ ಸೇರಿದಂತೆ ಅನೇಕ ಸ್ಥಳಗಳಲ್ಲಿ ನಮ್ಮ ಹಕ್ಕುಗಳಿಗಾಗಿ ಸತ್ಯಾಗ್ರಹ ಮಾಡಿ ನೋಡಿಯಾಗಿದೆ. ಆದರೆ ಹೋರಾಟದಲ್ಲಿ ನಮ್ಮ ಹಣ ಮತ್ತು ಮನುಷ್ಯ ಬಲ ವ್ಯರ್ಥವಾಯಿತು ವಿನಃ ನಮಗೆ ಯಶಸ್ಸು ಸಿಗುವುದು ಹೋಗಲಿ ಹಳ್ಳಿಗಳಲ್ಲಿರುವ ನಮ್ಮ ಬಾಂಧವರು ಮತ್ತಷ್ಟು ಸಂಕಷ್ಟದ ಪರಿಸ್ಥಿತಿಗೆ ಒಳಗಾಗಬೇಕಾಯಿತು ಮತ್ತು ಅದು ಇಂದಿಗೂ ಮುಂದುವರಿದಿದೆ. ನಮಗೆ ಮನುಷ್ಯರಂತೆ ಬದುಕಬೇಕು ಎಂದಿದ್ದರೆ, ನಮ್ಮ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿ ಸ್ಥಾನಮಾನ ಸುಧಾರಿಸಿಕೊಂಡು ಮಾನವ ಹಕ್ಕುಗಳನ್ನು ಪ್ರತಿಷ್ಠಾಪಿಸಬೇಕು ಎಂದಿದ್ದರೆ ನಾವು ಈ ಹಿಂದೂ ಧರ್ಮದಿಂದ ಪ್ರತ್ಯೇಕವಾಗಲೇಬೇಕು

ಅಂದರೆ ಧರ್ಮಾಂತರ ಮಾಡಲೇಬೇಕು ಮತ್ತು ಅದರಲ್ಲಿಯೇ ನಮ್ಮ ಕಲ್ಯಾಣ ಇದೆ.

ಅಸ್ಪೃಶ್ಯರ ಧರ್ಮಾಂತರ ಪ್ರಶ್ನೆ ಅತ್ಯಂತ ಗಹನವಾದದ್ದು. ಈ ಪ್ರಶ್ನೆಗೆ ಸಂಬಂಧಿಸಿದ ಅಸ್ಪೃಶ್ಯರ ಧೋರಣೆ ಏನು ಅನ್ನುವುದನ್ನು ಅಸ್ಪೃಶ್ಯ ಜನರೇ ನಿರ್ಧರಿಸಬೇಕಿದೆ ಮತ್ತು ಅದು ಅವರ ಹೊಣೆಗಾರಿಕೆಯಾಗಿದೆ. ಅಸ್ಪೃಶ್ಯ ವರ್ಗದಲ್ಲಿನ ವಿವಿಧ ಜಾತಿಗಳ ಸಮಾವೇಶ ಏರ್ಪಡಿಸಿ ಆ ಮೂಲಕ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಅಸ್ಪೃಶ್ಯ ಜನರ ಮನೋ ಇಂಗಿತ ಅರ್ಥೈಸುವ ಮಾರ್ಗವಾಗಿದೆ ಎಂದು ಡಾ. ಅಂಬೇಡ್ಕರ್ ಅವರ ಅನಿಸಿಕೆಯಾಗಿತ್ತು.

ಮೇಲಿನ ಸೂಚನೆಗೆ ಅನುಗುಣವಾಗಿ ಮುಂಬೈ ಪ್ರದೇಶದ ಎಲ್ಲ ಮಹಾರ್ ಬಂಧು ಭಗಿನಿಯರಿಗೆ ಈ ಮೂಲಕ ತಿಳಿಸುವುದು ಏನೆಂದರೆ, ಮುಂಬೈ ಭಾಗದಲ್ಲಿನ ಎಲ್ಲ ಮಹಾರರ ಪ್ರಾತಿನಿಧಿಕ ಸ್ವರೂಪವಾಗಿ ಮುಂಬೈ ನಗರದಲ್ಲಿ ಇದೇ ಮೇ ತಿಂಗಳಿನಲ್ಲಿ ಸಮಾವೇಶ ಆಯೋಜಿಸಲು ತೀರ್ಮಾನಿಸಲಾಗಿದೆ. ಸಮಾವೇಶದಲ್ಲಿ ನಮ್ಮ ಪರಮಪೂಜ್ಯ ಮುಖಂಡ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಮಾಡಿರುವ ಧರ್ಮಾಂತರದ ಘೋಷಣೆಯ ಬಗ್ಗೆ ಸಮಾಜದ ಮುಂದಿನ ಧೋರಣೆಯನ್ನು ನಿಶ್ಚಯಿಸಲಾಗುತ್ತದೆ. ಆದ್ದರಿಂದ ಈ ಮಹತ್ವದ ಸಮಾವೇಶಕ್ಕೆ ಪ್ರತಿಯೊಂದು ಜಿಲ್ಲೆ, ತಾಲೂಕು ಮತ್ತು ಗ್ರಾಮಗಳಿಂದ ಪ್ರತಿನಿಧಿಗಳನ್ನು ಕಳುಹಿಸಿ ಸಮಾವೇಶ ಯಶಸ್ವಿಗೊಳಿಸುತ್ತೀರಿ ಎಂದು ಆಶಿಸುತ್ತೇವೆ.

ಈ ಕೆಲಸ ಅತ್ಯಂತ ಮಹತ್ವದ್ದಾಗಿರುವ ಕಾರಣ ಈ ಕಾರ್ಯಕ್ಕೆ ಸಾಕಷ್ಟು ಹಣ ಮತ್ತು ಮಾನವ ಸಂಪನ್ಮೂಲದ ಅಗತ್ಯವಿರುವುದರಿಂದ ಮುಂಬೈ ನಗರವಾಸಿಗಳು ಮತ್ತು ಈ ಪ್ರದೇಶದಲ್ಲಿ ಮಹಾರ್ ಬಂಧು ಭಗಿನಿಯರಲ್ಲಿ ಆಗ್ರಹದ ವಿನಂತಿ ಏನೆಂದರೆ, ತಾವು ತಮ್ಮೊಳಗಿನ ಭೇದ ಮರೆತು ಒಗ್ಗಟ್ಟಿನಿಂದ ಈ ಸಮಾವೇಶದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು.

ವಿಶೇಷ ಸೂಚನೆ:– ಸಮಾವೇಶಕ್ಕಾಗಿ ಚಂದಾ ಇಲ್ಲವೇ ದೇಣಿಗೆ ಅಥವಾ ಏನಾದರೂ ಸೂಚನೆಗಳು ಇದ್ದರೆ ಕೆಳಗೆ ನೀಡಿರುವ ವಿಳಾಸದೊಂದಿಗೆ ಪತ್ರ ವ್ಯವಹಾರ ಮಾಡಬೇಕು.

ಜಂಟಿ ಕಾರ್ಯದರ್ಶಿ:– ಅಖಿಲ ಮುಂಬೈ ಪ್ರದೇಶ ಮಹಾರ ಸಮಾವೇಶ, ದಾಮೋದರ್ ಹಾಲ್, ಪರಳ್ ಮುಂಬೈ –೧೨

ಎಚ್ಚರಿಕೆ:– ಮುದ್ರಿತ ಪಾವತಿ ಪಡೆಯದೇ ನಿಮ್ಮ ದೇಣಿಗೆ ನೀಡಬಾರದು.

ಇಂತಿ ನಿಮ್ಮ

**ಅಧ್ಯಕ್ಷ:**– ರೇವಜಿ ದಗಡೂಜಿ ಡೋಳಸ್

**ಉಪಾಧ್ಯಕ್ಷ:**– ಸಂಭಾಜಿ ತುಕಾರಾಮ ಗಾಯಕವಾಡ

**ಜಂಟಿ ಕಾರ್ಯದರ್ಶಿಗಳು:**– ದಿವಾಕರ್ ನೇವಾಜಿ ಪಗಾರೆ, ಮಾರುತಿ ವಿಠಲ ಧಮರೆ, ಚಾಂಗದೇವ ನಾರಾಯಣ ಮೋಹಿತೆ

**ಖಜಾಂಚಿ:**– ನಿವೃತ್ತ ಸುಭೇದಾರ ಗಂಗಾರಾಮ್ ಸವಾದಕರ್

ಮೇಲಿನ ಕಾರ್ಯಕ್ರಮಕ್ಕೆ ಅನುಗುಣವಾಗಿ ಮಹಾರ್ ಸಮಾವೇಶ, ಸಂತ ಸಮಾಜ ಸಮಾವೇಶ ಮತ್ತು ಮಾತಂಗ ಸಮಾವೇಶಗಳನ್ನು ಆಯೋಜಿಸಲಾಗಿತ್ತು. ಆಯೋಜಕರು ತಮ್ಮ ಕಾರ್ಯಕ್ರಮಗಳ ಪ್ರತ್ಯೇಕ ಕರಪತ್ರಗಳನ್ನು ಹೊರಡಿಸಿದ್ದರು. ಅವುಗಳು ಹೀಗಿದ್ದವು.

---

ಜನತಾ: ಫೆಬ್ರವರಿ ೨೯, ೧೯೩೬

## ಅಖಿಲ ಮುಂಬೈ ಪ್ರದೇಶ ಮಹಾರ್ ಸಮಾವೇಶ, ಮುಂಬೈ

**ಅಧ್ಯಕ್ಷ–** ಶ್ರೀಯುತ ಬಿ. ಎಸ್. ವೆಂಕಟರಾವ್ ಉರ್ಫ್ ಹೈದ್ರಾಬಾದಿ ಅಂಬೇಡ್ಕರ್

**ಸ್ಥಳ–** ಕಾರ್ಮಿಕ ಮೈದಾನ, ಪರೇಲ್, ಮುಂಬೈ –೧೨

ಶನಿವಾರ, ರವಿವಾರ ಮತ್ತು ಸೋಮವಾರ ೩೦–೩೧ ಮೇ, ೧ ಜೂನ್ ೧೯೩೬

ಈ ಮೊದಲೇ ಪ್ರಕಟಿಸಿದಂತೆ ಮುಂಬೈ ಪ್ರದೇಶ ಮಹಾರ್ ಸಮಾವೇಶದ ಒಟ್ಟು ಕಾರ್ಯಕ್ರಮ ಈ ಕೆಳಗಿನಂತೆ ಇದೆ. ಈ ಸಮಾವೇಶದಲ್ಲಿ ಧರ್ಮಾಂತರ ಕುರಿತಂತೆ ಮುಂಬೈ ಪ್ರದೇಶ ಸಮಾಜದ ಮುಂದಿನ ಧೋರಣೆ ಅಂತಿಮಗೊಳಿಸಲು ನಿಶ್ಚಯಿಸಲಾಗಿದೆ. ಇದರಲ್ಲಿ ಮಹಾರ್ ಸಮಾಜದ ಎಲ್ಲ ಹಿತಾಸಕ್ತಿಗಳ ಕುರಿತು ಪೂರ್ಣಪ್ರಮಾಣದಲ್ಲಿ ವಿಚಾರ ವಿನಿಮಯ ಮಾಡುವುದನ್ನು ತೀರ್ಮಾನಿಸಿರುವ ಕಾರಣ ಮುಂದಿನಂತೆ ಕಾರ್ಯಕ್ರಮದ ರೂಪುರೇಷೆ ಸಿದ್ಧಗೊಳಿಸಲಾಗಿದೆ.

ಭವಿಷ್ಯದಲ್ಲಿ ಈ ಸಮಾವೇಶದ ಬಗ್ಗೆ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡುವ ಕಾರಣ ಎಲ್ಲ ಮಹಾರ್ ಬಂಧು ಭಗಿನಿಯರು ಕಡ್ಡಾಯವಾಗಿ ಈ ಸಮಾವೇಶದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಈ ಸಮಾವೇಶದ ಪ್ರಾತಿನಿಧಿಕ ಸ್ವರೂಪದ್ದು ಆಗಿರಬೇಕು ಎನ್ನುವುದು ಡಾ. ಅಂಬೇಡ್ಕರ್ ಅವರ ಸದಿಚ್ಛೆ. ಆದ್ದರಿಂದ ಎಲ್ಲ ಸ್ಥಳಗಳಿಂದ ಮಹಾರ್ ಸಮಾಜ ತನ್ನ ಪ್ರತಿನಿಧಿಗಳನ್ನು ಕಳಿಸಬೇಕು ಮತ್ತು ಅವರ ಹೆಸರು, ವಿಳಾಸ ಮತ್ತು ಪರ ಊರಿನ ಸದಸ್ಯರು ತಮ್ಮ ಚಂದಾ ಮತ್ತು ಸಮಾವೇಶದ ಬಗ್ಗೆ ಸೂಚನೆ, ನಿರ್ಣಯ ಇತ್ಯಾದಿಗಳನ್ನು ಕೆಳಗೆ ವಿವರಿಸಿದ ವಿಳಾಸಕ್ಕೆ ಪತ್ರ ಬರೆಯುವುದು ಇಲ್ಲವೇ ಸಮಕ್ಷಮ ಭೇಟಿಯಾಗಬಹುದು.

**ವಿ.ಸೂ:–** ಪರ ಊರುಗಳಿಂದ ಬರುವ ಪ್ರತಿನಿಧಿಗಳಿಗಾಗಿ ಊಟ ಮತ್ತು ವಸತಿಯ ವ್ಯವಸ್ಥೆಯನ್ನು ಸ್ವಾಗತ ಸಮಿತಿ ಮಾಡಿದೆ. ಸಮಾವೇಶದ ಮೂರು ದಿನಗಳ ಊಟ ಮತ್ತು ವಸತಿಗೆ ೧ ರೂಪಾಯಿ ಶುಲ್ಕ ನಿಗದಿ ಮಾಡಲಾಗಿದೆ. ಯಾರಿಗೆ ಈ ಸೌಲಭ್ಯ ಲಾಭ ಪಡೆಯಬೇಕಾಗಿದೆಯೋ ಅವರು ಕೆಳಗೆ ನಮೂದಿಸಿರುವ ವಿಳಾಸದಲ್ಲಿ ದಿನಾಂಕ ೨೮–೫–೧೯೩೬ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು.

### ಸಮಾವೇಶಕ್ಕಾಗಿ ಈ ಕೆಳಗಿನಂತ ಚಂದಾ ನಿಗದಿಪಡಿಸಲಾಗಿದೆ

(೧) ಸ್ವಾಗತ ಸಮಿತಿ ಸದಸ್ಯತ್ವಕ್ಕೆ ೫ ರೂಪಾಯಿ (೨) ಸಹಕಾರಿ ಸದಸ್ಯ ೩ ರೂಪಾಯಿ (೩) ಪರಊರಿನ ಸದಸ್ಯರಿಗಾಗಿ ಸ್ವಾಗತ ಸಮಿತಿ ಸದಸ್ಯತ್ವಕ್ಕಾಗಿ ೩ ರೂಪಾಯಿ (೪) ಸಾಧಾರಣ ಸಹಕಾರಿ ಸದಸ್ಯತ್ವ ೨ ರೂಪಾಯಿ (೫) ಸರ್ವಸಾಧಾರಣ ಸದಸ್ಯತ್ವಕ್ಕೆ ೧ ರೂಪಾಯಿ (೬) ಮಹಿಳೆಯರಿಗಾಗಿ ೮ ಆಣೆ.

### ಮುಂಬೈ ಪ್ರದೇಶ ಮಹಾರ್ ಸಮಾವೇಶದ ವೇದಿಕೆಯ ಕಾರ್ಯಕ್ರಮಗಳು

**ಶನಿವಾರ, ದಿನಾಂಕ ಮೇ ೩೦:–** ಸಂಜೆ ೪ರಿಂದ ೪–೩೦ರವರೆಗೆ ಅಧ್ಯಕ್ಷರ ಮೆರವಣಿಗೆ ರಾಜಗೃಹದಿಂದ ಸಭಾ ಮಂಟಪದವರೆಗೆ ೫–೩೦ರಿಂದ ೬ರವರೆಗೆ ಸ್ವಯಂ ಸೇವಕರಿಂದ ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಅಧ್ಯಕ್ಷರಿಗೆ ಗೌರವ ಸಮರ್ಪಣೆ. ೬ರಿಂದ ೯ರವರೆಗೆ (೧) ಸ್ವಾಗತ ಗೀತೆ (೨) ಸ್ವಾಗತಾಧ್ಯಕ್ಷರ

ಭಾಷಣ (೩) ಅಧ್ಯಕ್ಷರ ಭಾಷಣ ರಾತ್ರಿ ೯–೧೫ರಿಂದ ೧೦–೩೦ರವರೆಗೆ ಭೋಜನ ವಿರಾಮ ೧೦–೩೦ರಿಂದ ೧೧–೩೦ರವರೆಗೆ ವಿಷಯ ನಿಯಾಮಕ ಸಮಿತಿ ಸಭೆ ೧೧–೪೫ರಿಂದ ಮನರಂಜನೆ ಕಾರ್ಯಕ್ರಮ.

**ಭಾನುವಾರ ಮೇ ೩೧:–** ಬೆಳಗ್ಗೆ ೮ರಿಂದ ೧೧ರವರೆಗೆ ಸ್ವಾಗತ ಗೀತೆ (೨) ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಭಾಷಣ ೧೧ ರಿಂದ ೨ರವರೆಗೆ ಭೋಜನ ಮತ್ತು ವಿಶ್ರಾಂತಿ ಮಧ್ಯಾಹ್ನ ೨ರಿಂದ ೪ರವರೆಗೆ ವಿಷಯ ನಿಯಾಮಕ ಸಮಿತಿ ಸಭೆ. ಸಂಜೆ ೫ರಿಂದ ೮–೩೦ರವರೆಗೆ ಗೊತ್ತುವಳಿ ಇತ್ಯಾದಿಗಳು ರಾತ್ರಿ ೯ರ ಬಳಿಕ ಮನರಂಜನೆ ಕಾರ್ಯಕ್ರಮ ಮತ್ತು ಅಧ್ಯಕ್ಷರಿಗೆ ವಂದನೆ ಮತ್ತು ಸಮಾವೇಶದ ಮುಕ್ತಾಯ.

**ಸೋಮವಾರ ದಿನಾಂಕ ೧–೬–೧೯೩೬** ಬೆಳಗ್ಗೆ ಬಾಬಾಸಾಹೇಬ ಅವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ ೮ರಿಂದ ೧೧–೩೦ರವರೆಗೆ ಸಂತ ಸಮಾಜ ಸಮಾವೇಶ, ಸಂಜೆ ೫ರಿಂದ ೮–೩೦ರವರೆಗೆ ರಾಜಕೀಯ ಸಮಾವೇಶ, ರಾತ್ರಿ ೯ಕ್ಕೆ ರೇವಜಿ ದಗಡುಜಿ ಡೋಳಸ್ ಅವರಿಗೆ ಮುಂಬೈ ನಗರವಾಸಿ ಅಸ್ಪೃಶ್ಯರಿಂದ ಮಾನಪತ್ರ ಅರ್ಪಣೆ ಮತ್ತು ಮಹಾರ್ ಸಮಾವೇಶಕ್ಕೆ ಸಹಾಯ ಮಾಡಿದವರಿಗೆ ಪಾರಿತೋಷಕ ವಿತರಣೆ ಮತ್ತು ಮಾನಪತ್ರ ಮತ್ತು ಅಧ್ಯಕ್ಷರ ಭಾಷಣ.

ಇಂತಿ ನಿಮ್ಮ
ಸ್ವಾಗತಾಧ್ಯಕ್ಷ – ರೇವಜಿ ದಗಡು ಡೋಳಸ್
ಉಪಾಧ್ಯಕ್ಷ– ಸಂಭಾಜಿ ತುಕಾರಾಮ್ ಗಾಯಕವಾಡ
ಜಂಟಿ ಕಾರ್ಯದರ್ಶಿ– ದಿವಾಕರ್ ನೇವಜಿ ಪಗಾರೆ
ಮಾರುತಿ ವಿಠಲ ಧಮರೆ, ಚಾಂಗದೇವ ನಾ. ಮೋಹಿತೆ
ಖಜಾಂಚಿ– ನಿವೃತ್ತ ಸುಭೇದಾರ ಗಂಗಾರಾಮ್ ಸವಾದಕರ್
ಹಣ ಮತ್ತು ಪತ್ರ ಕಳುಹಿಸುವ ವಿಳಾಸ
ಜಂಟಿ ಕಾರ್ಯದರ್ಶಿ ಶ್ರೀ ದಿವಾಕರ್ ನೇವಜಿ ಪಗಾರೆ
ಅಖಿಲ ಮುಂಬೈ ಪ್ರದೇಶ ಮಹಾರ್ ಸಮಾವೇಶ, ದಾಮೋದರ್ ಹಾಲ್
ಪರಳ್ ಮುಂಬೈ–೧೨[೧]

**ಮುಂಬೈ ಪ್ರದೇಶ ಸಂತ ಸಮಾಜದ ಸಮಾವೇಶ**
**ಅಧ್ಯಕ್ಷ–** ಡಾ. ಬಾಬಾಸಾಹೇಬ ಅಂಬೇಡ್ಕರ್
**ಸೋಮವಾರ ದಿನಾಂಕ ೧ ಜೂನ್ ೧೯೩೬**
**ಸ್ಥಳ–** ಮಹಾರ್ ಸಮಾವೇಶದ ವೇದಿಕೆ

ಧರ್ಮಾಂತರ ಪ್ರಶ್ನೆಯ ಕುರಿತು ಸಂತ ಸಮಾಜದ ವತಿಯಿಂದ ವಿಚಾರ ವಿನಿಮಯ ನಡೆಸಲಾಗುವುದು. ಸಮಾವೇಶದ ಸಮಗ್ರ ಮಾಹಿತಿಯನ್ನು ನೀಡುವ ಜಾಹೀರು ಪತ್ರ ಶೀಘ್ರದಲ್ಲಿ ಎಲ್ಲರಿಗೂ ತಲುಪಲಿದೆ.

---

೧. ಜನತಾ: ಮೇ ೧೬, ೧೯೩೬.

ಆದ್ದರಿಂದ ಎಲ್ಲ ಸಂತರು, ಸಾಧುಗಳು, ನಾಥರು ಮತ್ತು ಬೈರಾಗಿಗಳು ಈ ಸಮಾವೇಶದಲ್ಲಿ ಪಾಲ್ಗೊಳ್ಳಬೇಕು. ಕೆಳಗಿನ ವಿಳಾಸದೊಂದಿಗೆ ಪತ್ರ ವ್ಯವಹಾರ ನಡೆಸಬಹುದು.

**ವಿಳಾಸ–** ಉಪಾಧ್ಯಕ್ಷ, ತಾರಕನಾಥ್ ವಿಠಲನಾಥ
ಫೆರಸ್ ರೋಡ್, ಸಿಮೆಂಟ್ ಚಾಳ್ ನಂ. ೬, ಮುಂಬೈ–೮
**ಸ್ವಾಗತಾಧ್ಯಕ್ಷ–** ಮಹಂತ್ ಶಂಕರದಾಸ್ ನಾರಾಯಣದಾಸ್ ಬರ್ವೆ
ಜಂಟಿ ಕಾರ್ಯದರ್ಶಿ– ಕಾಶಿನಾಥ ತುಳಸಿನಾಥ ಮಹಂತ್

**ಮುಂಬೈ ಪ್ರದೇಶ ಮಾತಂಗ ಸಮಾವೇಶ**

**ಅಧ್ಯಕ್ಷ–** ಶ್ರೀಯುತ ಲಕ್ಷ್ಮಣರಾವ್ ಬಾಬಾಜಿ ಭಿಂಗಾರದೇವೆ ಬಿ.ಎ. (ಆನರ್ಸ್)

**ಮಂಗಳವಾರ ದಿನಾಂಕ ಜೂನ್ ೨, ೧೯೩೬**

**ಸ್ಥಳ**–ಮಹಾರ್ ಸಮಾವೇಶದ ವೇದಿಕೆ, ನಾಯಗಾಂವ, ಮುಂಬೈ

ಈ ಸಮಾವೇಶದಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿರುವ ಧರ್ಮಾಂತರ ಘೋಷಣೆ ಕುರಿತು ನಿರ್ಣಯ ತೆಗೆದುಕೊಳ್ಳುವ ನಿಟ್ಟಿನಲ್ಲಿ ಚರ್ಚಿಸಲಾಗುವುದು.

ಸಮಾವೇಶದ ಸವಿಸ್ತಾರ ಮಾಹಿತಿಯನ್ನು ನಮ್ಮ ಮಾತಂಗ ಬಂಧುಗಳಿಗೆ ಕರಪತ್ರಗಳ ಮುಖಾಂತರ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವಿಳಾಸದೊಂದಿಗೆ ಪತ್ರ ವ್ಯವಹಾರ ಮಾಡಬಹುದು.

**ಸ್ವಾಗತಾಧ್ಯಕ್ಷ–** ವಿಷ್ಣು ಕೇಶವ ವೇತಾಳಜೆ
**ವಿಳಾಸ–** ಮಹಾ ಕಾರ್ಯದರ್ಶಿ ಡಿ.ಸಿ. ವಾಯದಂಡೆ
ಮುಂಬೈ ಪ್ರದೇಶ ಮಾತಂಗ ಸಮಾವೇಶ, ನಾಯಗಾಂವ
ಬಿ.ಡಿ. ಚಾಳ್ ನಂ. ೪, ಬಿ. ಪ್ಲಾಟ್ ೧ನೇ ಮಹಡಿ
ಕೊಠಡಿ ಸಂಖ್ಯೆ ೨೬, ದಾದರ್, ಮುಂಬೈ[1]

**ಅಖಿಲ ಮುಂಬೈ ಪ್ರದೇಶ ಮಹಾರ್ ಸಮಾವೇಶ, ಮುಂಬೈ**

**ಅತ್ಯದ್ಭುತ ಮತ್ತು ಯಶಸ್ವಿ ಸಮಾವೇಶ**

**ಸಾಮೂಹಿಕ ಧರ್ಮಾಂತರ ಬೆಂಬಲ**

ಅಖಿಲ ಮುಂಬೈ ಪ್ರದೇಶ ಮಹಾರ್ ಸಮಾವೇಶ, ಮೇ ೩೦ ಮತ್ತು ೩೧, ೧೯೩೬ರಂದು ಹೈದ್ರಾಬಾದ್ ಸಂಸ್ಥಾನದ ಪ್ರಮುಖ ದಲಿತ ನಾಯಕ ಬಿ. ಎಸ್. ವೆಂಕಟರಾವ್ ಅಧ್ಯಕ್ಷತೆಯಲ್ಲಿ ಅದ್ದೂರಿಯಿಂದ ಆರಂಭವಾಯಿತು. ಸುಮಾರು ೫೦ ಸಾವಿರಕ್ಕೂ ಹೆಚ್ಚು ಜನರಿಗೆ ಕುಳಿತುಕೊಳ್ಳುವುದಕ್ಕೆ ಅನುಕೂಲವಾಗುವಂತಹ ಬೃಹತ್ ಸಮಾವೇಶದ ಮಂಟಪವನ್ನು ದಾದರ್–ನಾಯಗಾಂವ ನಾಕಾ ಹತ್ತಿರದ ವಿಶಾಲ ಮೈದಾನದಲ್ಲಿ ಹಾಕಲಾಗಿತ್ತು. ಈ ವಿಶಾಲ ಮಂಟಪಕ್ಕೆ ಮಹಾಡ್ ದ್ವಾರ, ನಾಸಿಕ್ ಮಹಾದ್ವಾರ್ ಮತ್ತು ರಮಾಬಾಯಿ ಅಂಬೇಡ್ಕರ್ ಮಹಾದ್ವಾರ ಎಂದು ನಾಮಕರಣ ಮಾಡಲಾಗಿತ್ತು. ಈ ಮಂಟಪಕ್ಕೆ ರಮಾಬಾಯಿ ನಗರ ಎಂದು ಹೆಸರಿಡಲಾಗಿತ್ತು. ಮಂಟಪದಲ್ಲಿ ಈ ಕೆಳಗಿನ ಉದ್ಘೋಷಗಳಿರುವ ಭಿತ್ತಿಪತ್ರಗಳನ್ನು ಅಂಟಿಸಲಾಗಿತ್ತು.

---

೧. ಜನತಾ: ಮೇ ೩೦, ೧೯೩೬.

- ಮನುಷ್ಯತ್ವ ಗಳಿಸಿಕೊಳ್ಳುವುದಿದ್ದರೆ ಧರ್ಮಾಂತರ ಮಾಡಿ. ಸಂಘಟಿತರಾಗಬೇಕಿದ್ದರೆ ಧರ್ಮಾಂತರಕ್ಕೆ ಸಿದ್ಧರಾಗಿ.
- ಸಾಮರ್ಥ್ಯ ವೃದ್ಧಿಯಾಗಬೇಕಿದ್ದರೆ ಧರ್ಮಾಂತರಕ್ಕೆ ಮುಂದಾಗಿ.
- ಸಮಾನತೆ ಬೇಕಿದ್ದರೆ ಧರ್ಮಾಂತರ ಮಾಡಿ.
- ಸಂಸಾರದಲ್ಲಿ ಸುಖ ಸಂತೋಷ ಪಡೆಯಬೇಕಿದ್ದರೆ ಧರ್ಮಾಂತರವಾಗಿ.
- ಯಾವ ಧರ್ಮ ನಿಮ್ಮ ಮನುಷ್ಯತ್ವಕ್ಕೆ ಬೆಲೆ ನೀಡುವುದಿಲ್ಲವೋ ಆ ಧರ್ಮದಲ್ಲಿ ನೀವೇಕೆ ಇರುತ್ತೀರಿ?
- ಯಾವ ಧರ್ಮ ನಿಮ್ಮನ್ನು ದೇವಸ್ಥಾನದಲ್ಲಿ ಹೋಗಲು ಬಿಡುವುದಿಲ್ಲವೋ ಆ ಧರ್ಮದಲ್ಲೇಕೆ ಇರುತ್ತೀರಿ?
- ಯಾವ ಧರ್ಮ ನಿಮಗೆ ನೀರು ಕೊಡುವುದಿಲ್ಲವೋ ಆ ಧರ್ಮದಲ್ಲಿ ನೀವು ಇರುವುದಾದರೂ ಏಕೆ?
- ಯಾವ ಧರ್ಮ ನೀವು ಶಿಕ್ಷಣ ಪಡೆಯುವುದಕ್ಕೆ ವಿರೋಧಿಸುವುದೋ ಆ ಧರ್ಮದಲ್ಲಿ ಇರುವುದು ಏಕೆ?
- ಯಾವ ಧರ್ಮ ನಿಮ್ಮನ್ನು ಪ್ರತಿ ಶಬ್ದ ಶಬ್ದಗಳಲ್ಲಿ ಹೀಯಾಳಿಸುತ್ತದೋ ಆ ಧರ್ಮದಲ್ಲಿ ಏಕೆ ಇರುತ್ತೀರಿ?
- ಯಾವ ಧರ್ಮ ನಿಮ್ಮ ಉದ್ಯೋಗಕ್ಕೆ ಅಡ್ಡ ಬರುತ್ತದೋ ಅಂತಹ ಧರ್ಮದಲ್ಲಿ ಏಕೆ ಇರುತ್ತೀರಿ??
- ಯಾವ ಧರ್ಮದಲ್ಲಿ ಮನುಷ್ಯರೊಂದಿಗೆ ಮನುಷ್ಯತ್ವದೊಂದಿಗೆ ನಡೆದುಕೊಳ್ಳುವುದಕ್ಕೆ ನಿಷೇಧವಿದೆಯೋ ಅದು ಧರ್ಮವಲ್ಲ ಅದು ಯಜಮಾನ್ಯದ ಶಿಕ್ಷೆ.
- ಯಾವ ಧರ್ಮದಲ್ಲಿ ಮನುಷ್ಯರನ್ನು ಮನುಷ್ಯರನ್ನಾಗಿ ಗುರುತಿಸುವುದನ್ನು ಅಧರ್ಮ ಎಂದು ಪರಿಗಣಿಸಲಾಗುತ್ತದೋ ಅದು ಧರ್ಮವಲ್ಲ ಅದು ಜಾಡ್ಯ.
- ಯಾವ ಧರ್ಮಕ್ಕೆ ಅಮಂಗಲ ಪ್ರಾಣಿಯ ಸ್ಪರ್ಶವಾದರೂ ನಡೆಯುತ್ತದೆ ಆದರೆ ಮನುಷ್ಯನ ಸ್ಪರ್ಶವಾದರೆ ನಡೆಯುವುದಿಲ್ಲ. ಅದು ಧರ್ಮವಲ್ಲ ಅದು ಹುಚ್ಚುತನದ ಪರಮಾವಧಿ.
- ಯಾವ ಧರ್ಮವು ಒಂದು ವರ್ಗವು ಶಿಕ್ಷಣ ಪಡೆಯಬಾರದು; ಹಣ ಗಳಿಸಬಾರದು; ಶಸ್ತ್ರ ಹಿಡಿಯಬಾರದು ಎಂದು ಹೇಳುವುದೋ ಅದು ಧರ್ಮವಲ್ಲ ಅದು ಮನುಷ್ಯ ಜೀವನದ ವಿಡಂಬನೆಯಾಗಿದೆ.
- ಅಶಿಕ್ಷಿತರು ಅಶಿಕ್ಷಿತರಾಗಿಯೇ ಇರಲಿ, ನಿರ್ಧನಿಗಳು ನಿರ್ಧನರಾಗಿಯೇ ಇರಲಿ ಎಂದು ಕಲಿಸುವ ಧರ್ಮವು ಧರ್ಮವಲ್ಲ ಅದೊಂದು ಶಿಕ್ಷೆ.
- ಮಾತುಗಳಲ್ಲಿ ಎಲ್ಲರಿಗೂ ಒಬ್ಬನೇ ಈಶ್ವರ ಎಂದು ಹೇಳುವ ಆದರೆ ಕೃತಿಯಲ್ಲಿ ಮನುಷ್ಯರನ್ನು ಪಶುಗಳಂತೆ ಬಿಂಬಿಸುವ ಜನರು ಡಾಂಭಿಕರು ಅವರೊಂದಿಗೆ ಬೆರೆಯಬೇಡಿ.
- ಇರುವೆಗಳಿಗೆ ಸಕ್ಕರೆ ಹಾಕುವ ಮತ್ತು ಮನುಷ್ಯರನ್ನು ನೀರಿಲ್ಲದೇ ಸಾಯಿಸುವ ಡಾಂಭಿಕ ಜನರೊಂದಿಗೆ ಬೆರೆಯಬೇಡಿ.

# ಇಲ್ಲಿಯವರೆಗೆ ನಿಮ್ಮ ಅಧಿಕಾರದಡಿ ಇದ್ದೆವು ಪ್ರತಿಕ್ಷಣವೂ ಅವಮಾನ ಸಹಿಸಿದೆವು

ಸುಮಾರು ಐನೂರಕ್ಕೂ ಹೆಚ್ಚು ಪ್ರತಿನಿಧಿಗಳು ಕುಳಿತುಕೊಳ್ಳುವುದಕ್ಕೆ ಅನುಕೂಲವಾಗುವಂತಹ ವಿಶಾಲ ವೇದಿಕೆ ಹಾಕಲಾಗಿತ್ತು. ವೇದಿಕೆಯ ಮೇಲೆ ಸಮಾನತೆಯ ಧ್ವಜ ಹಾರಾಡುತ್ತಿತ್ತು. ಎಲ್ಲ ಸಭಿಕರಿಗೂ ಭಾಷಣ ಕೇಳಲಿ ಎಂದು ಮೈಕ್ರೋಫೋನ್‌ಗಳನ್ನು ಅಳವಡಿಸಲಾಗಿತ್ತು.

ನಿವೃತ್ತ ಸುಭೇದಾರ ಸವಾದಕರ್ ಅವರು ತಮ್ಮ ಸಮತಾ ಸೈನಿಕ ದಳದ ೫೦೦ ಸ್ವಯಂ ಸೇವಕರೊಂದಿಗೆ ಮಂಟಪದ ವ್ಯವಸ್ಥೆಗೆ ಸಜ್ಜಾಗಿ ನಿಂತಿದ್ದರು. ಸಮತಾ ಸೈನಿಕ ದಳದ ಬ್ಯಾಂಡ್ ಮತ್ತು ಶ್ರೀ ಬಾಬುರಾವ್ ಪವಾರ್ ಅವರು ನಿವೃತ್ತ ಮಿಲಿಟರಿ ಬ್ಯಾಂಡ್‌ನ್ನು ಪುಣೆಯಿಂದ ಸಮಾವೇಶಕ್ಕಾಗಿ ಕರೆಸಲಾಗಿತ್ತು.

ಅಧಿವೇಶನ ಸಂಜೆ ೭ಕ್ಕೆ ಆರಂಭವಾಗುವುದಿತ್ತು. ನಾಲ್ಕು ಗಂಟೆಯಿಂದಲೇ ಸುಮಾರು ೩೦–೩೫ ಸಾವಿರ ಪ್ರತಿನಿಧಿ ಮತ್ತು ಪ್ರೇಕ್ಷಕರಿಂದ ಸಭಾ ಮಂಟಪ ತುಂಬಿಹೋಗಿತ್ತು. ಈ ಸಮಾವೇಶಕ್ಕೆ ಪ್ರತಿಯೊಂದು ಜಿಲ್ಲೆಯ ದಲಿತ ನಾಯಕರು ತಮ್ಮ ಜಿಲ್ಲೆಯಲ್ಲಿನ ಜನರೊಂದಿಗೆ ಆಗಮಿಸಿದ್ದರು. ಸಾತಾರಾ ಜಿಲ್ಲೆಯಿಂದ ಬಲವಂತ ಸಖಾರಾಮ್ ಸಾವಂತ, ಪಿರಾಜಿ ಸಂಭಾಜಿ ಖರಾತ್, ಆರ್. ಎನ್. ನಲವಡೆ, ಗಣೇಶ ಹರಿ ಖರಾತ್, ನಾಸಿಕ್ ಜಿಲ್ಲೆಯಿಂದ ಭಾವುರಾವ್ ಗಾಯಕವಾಡ, ಅಮೃತರಾವ್ ರಣಖಾಂಬೆ, ದಾನಿ, ಟಿ. ಎಸ್. ಕಾಳೆ, ಪುಂಜಾಜಿ ಜಾಧವ, ಕುಲಾಬಾ ಜಿಲ್ಲೆಯಿಂದ ಬಾಬುರಾವ್ ಭಾತನಕರ್, ಗಣಪತಬುವಾ ಜಾಧವ, ಕುಡವಲಕರ್, ಗೋವಿಂದರಾವ್ ವರದರಕರ್, ಪುಣೆಯಿಂದ ಮಘಾಳೆ, ಸುಭೇದಾರ ಘಾಟಗೆ, ಭೋಸಲೆ, ಬಾಬುರಾವ್ ಪವಾರ್, ನಾನಾಸಾಹೇಬ ವಾಘಮಾರೆ, ನಾಥ ಮಹಾರಾಜ್ (ಭಂಗಿ), ಶಾಂತಾರಾಮ ಉಪಶಾಮ್, ಕರ್ನಾಟಕದಿಂದ ಬಳವಂತರಾವ್ ವರಾಳೆ, ಎ.ಕೆ. ಮಾಳಗೆ, ಮಾರುತಿರಾವ್ ಜೋತಿರಾವ್ ರಾವಣ್, ಸೊಲ್ಲಾಪುರದಿಂದ ಎನ್. ಟಿ. ಬಂದಸೋಡೆ, ಜೀವಪ್ಪ ಐದಾಳೆ, ಉದ್ಧವ ಧೋಂಡೋ ಶಿವಶರಣ, ಬಾಪುಜಿ ಸರ್ವಗೌಡ, ಕೇರು ರಾಮಚಂದ್ರ ಜಾಧವ, ಮಾಘಾಡೆ, ಹೈದ್ರಾಬಾದ್ ಸಂಸ್ಥಾನದಿಂದ ಗ. ನಿ. ಗಾಯಕವಾಡ, ಕಾಂಬಳೆ, ಪವಾರ, ಅಹ್ಮದನಗರದಿಂದ ಪಿ. ಜಿ. ರೋಹಮ್, ಸೂರ್ಯವಂಶಿ, ಶಂಕರರಾವ್ ಸಾಳವಿ, ಠಾಣೆ ಜಿಲ್ಲೆಯಿಂದ ಶಿವರಾಮ ಗೋಪಾಲ ಜಾಧವ, ಬಿ. ವಿ. ದೊಂದೆ, ಭಾವು ಹರಿ ಪಂಡಿತ್, ದಾಮೋದರ್ ಹರಿ ವಸಯಿಕರ್, ಬಿ.ಡಿ. ಖಂಡೆ, ಪೂರ್ವ ಖಾನ್ ದೇಶದ ನಾಯಕ ದೌಲತರಾವಜಿ ಜಾಧವ್, ತ್ರ್ಯಂಬಕ್ ಸೇನು ಬಾಲೇರಾವ್, ಕಾಳು ವಿಠು ತಾಯಡೆ, ಲಕ್ಷ್ಮಣ ಪಾ ಮೇಢೆ, ನಾಥುರಾವಜಿ ಲೋಖಂಡೆ, ಜಗನ್ನಾಥ ಖಂಡೋಜಿ ಬಡಗೆ, ಕಾಳೋಜಿ ತಾಯಡೆ, ಮೋತಿರಾಮ್ ರಾವಜಿ ಲೋಖಂಡೆ, ಭಿಕನ್ ಗಣುಜಿ ಬೈರುಗೆ, ಶಿವಾ ರಘುನಾಥ ಭಾಸ್ಕರ್, ಧರ್ಮಾಜಿ ಆಬಾಜಿ ವಾರಭುವನ್, ಪಶ್ಚಿಮ ಖಾನ್ ದೇಶದಿಂದ ಪುಂಡಲೀಕ ತುಕಾರಾಮ್ ಬೋರಾಳೆ, ವಿ. ಟಿ. ಜಾಧವ, ಮಹಾದೇವ ಗಣೇಶ ಐದಾಳೆ, ಸದಾಶಿವ ಲಕ್ಷ್ಮಣ ಗಾಯಕವಾಡ, ತುಳಜಾರಾಮ್ ಭಿಕಾಜಿ ತಳಬಂಡಾರೆ, ಲಕ್ಷ್ಮಣರಾವ್ ಗಾಯಕವಾಡ, ಲಕ್ಷ್ಮಣರಾವ್ ಗಜಬಿವ್, ಕಿಸನ್‌ರಾವ್ ವಾಘಮಾರೆ, ಪಾಟೋಳೆ, ಮುಂಬೈನ ಶಿವತರಕರ್ ಮಾಸ್ತರ್, ಸಾಳವಿ ಬೋರವಕರ್, ವನಮಾಳಿ, ಸೋಳಂಕಿ, ವಾಳಂಜಿಕರ್, ಶಂಕರರಾವ್ ವಡವಲಕರ್, ಜನಾಬಾಯಿ ಮೋರೆ, ಸೋನುಬಾಯಿ ಸಯಾಜಿ ಡಾವರೆ, ಭಾಗಿರಥಿಬಾಯಿ ತಾಂಬೆ, ಅನುಸೂಯಾಬಾಯಿ ವ್ಹಾವಳ, ರಾಜುಬಾಯಿ ಲಕ್ಷ್ಮಣರಾವ್ ಗಾಯಕವಾಡ, ಶ್ರೀಮತಿ ಸವಾದಕರ್, ಬಿ. ಎಸ್. ಸಾವಂತ, ಪಿ. ಎಲ್. ಲೋಖಂಡೆ, ಪೊಲಾದಪುರದಿಂದ ಬಿ. ಟಿ. ತಾಂಬೆ, ರತ್ನಾಗಿರಿಯಿಂದ

ಮುಸಾಡಕರ್ ಬುವಾ, ಮೋಹಿತೆ ಮಾಸ್ತರ್, ರಾಜಾರಾಮ್ ಭೋಳೆ, ಅರ್ಜುನರಾವ್ ಸಾಳವಿ, ಜಂಜಿರಾ ಸಂಸ್ಥಾನದಿಂದ ಮಹಾದೇವ ಖೈರೆ, ಬೋರ್ ಸಂಸ್ಥಾನದಿಂದ ಗಾಯಕವಾಡ, ಭಾಲೇರಾವ್, ಸಾಂಗಲಿ ಸಂಸ್ಥಾನದಿಂದ ಪವಾರ್, ಗಾಯಕವಾಡ, ಜಮಖಂಡಿಯಿಂದ ವಾಘಚೈರೆ, ಖೈರಮೋಡೆ, ಅವಧ್ ಸಂಸ್ಥಾನದಿಂದ ಘಾಟಗೆ, ಇಂದೂರ್ ನಿಂದ ನಗೀನಾ ನಾಯಿಕ, ಮಹುದಿಂದ ಶ್ರೀ ಲೋಖಂಡೆ, ಕರಡಕ್, ನೀಳೆ, ಪ್ರಸಿದ್ಧ ಕೀರ್ತನಕಾರ ದಿಗಂಬರ್ ನಾಗನಾಥ ಕಾಂಬಳೆ, ರಾಘ ಸಯಾ ಡುಬಲ್, ವಸಂತರಾವ್ ಭಾತನಕರ್, ಆರ್. ಎಚ್. ಅಡಂಗಾಳೆ, ಜಿ. ಎಸ್. ದಾರೋಳೆ, ದಾದಾ ಪಗಾರೆ ಮಾಸ್ತರ್, ರೋಖಡೆ, ಸಂಭಾಜಿ ತುಕಾರಾಮ ಗಾಯಕವಾಡ, ಚಾಂಗದೇವ ನಾರಾಯಣ ಮೋಹಿತೆ. ಬಾಬಾಜಿ ಶಿಂದೆ, ರಾಮಚಂದ್ರ ವಾಘಚೈರೆ, ಸೋನು ಸಜನಾಜಿ ಸಂದಿರಕರ್ ಸೇರಿದಂತೆ ಅನೇಕರು ಆಗಮಿಸಿದ್ದರು. ಮುಂಬೈ ಪ್ರದೇಶದ ಎಲ್ಲ ಜಿಲ್ಲೆಗಳಿಂದ ಪ್ರತಿನಿಧಿಗಳು ತಮ್ಮ ಜನರೊಂದಿಗೆ ಆಗಮಿಸಿದ್ದರು. ಇವರೊಂದಿಗೆ ಸಮಾವೇಶಕ್ಕೆ ದೇವದತ್ತ ನಾರಾಯಣ ಟಿಳಕ್, ದೇವರಾಯ ನಾಯಿಕ, ಡಿ. ವಿ. ಪ್ರಧಾನ, ಡಾ. ಶ್ರೀಮತಿ ಚಂಪುತಾಯಿ ಪಧಾನ್, ದತ್ತೋಪಂತ ದೇಶಪಾಂಡೆ, ಬಾಬುಜಿ ಕವಳಿ, ಅಸಯಿಕರ್ ವಕೀಲ, ವೇದಕ್ ವಕೀಲ, ಬಿ. ಕದ್ರೇಕರ್, ಎಂ. ಕೆ. ಕರ್ಣಿಕ್, ನ್ಯಾಯವಾದಿ ಪಾದ್ಯೆ, ಪಿ.ಜಿ. ಕಾಣೇಕರ್, ಬಾಪುಸಾಹೇಬ ಸಹಸ್ರಬುದ್ಧೆ, ಅನಂತ್ ಹರಿ ಗದ್ರೆ, ಬ್ಯಾ. ಸಮರ್ಥ, ಭಾಸ್ಕರರಾವ್ ಜಾಧವ್, ಕಮಲಾಕಾಂತ ಚಿತ್ರೆ, ಅನಂತರಾವ್ ಚಿತ್ರೆ, ಗೋಪಿನಾಥ ಪ್ರಧಾನ್, ಶಾಂತಾರಾಮ್ ಪೋತ್ನಿಸ್, ಸುರೇಂದ್ರನಾಥ್ ಟಿಪ್ನಿಸ್ ಸೇರಿದಂತೆ ಇತರರು ಮತ್ತು ಸಿಖ್ ಸಮುದಾಯದ ಸರ್ದಾರ್ ಈಶ್ವರಸಿಂಗ್, ದರ್ಬಾರ್ ಸಿಂಗ್, ಕೆಹರ್ ಸಿಂಗ್, ಅಮರ್ ಸಿಂಗ್ ಸೇರಿದಂತೆ ಇತರ ಸಿಖ್ ನಾಯಕರು ತಮ್ಮ ಸಿಖ್ ಜನರೊಂದಿಗೆ ಆಗಮಿಸಿದ್ದರು.

ಸಂಜೆ ೬–೩೦ಕ್ಕೆ ಸಮಾವೇಶದ ಅಧ್ಯಕ್ಷ ವೆಂಕಟರಾವ್ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಮತಾ ಸೈನಿಕ ದಳದ ಗೌರವ ವಂದನೆ ಸ್ವೀಕರಿಸಿ ಸಮಾವೇಶದ ವೇದಿಕೆಗೆ ಆಗಮಿಸಿದರು. ತಮ್ಮ ಆಸನಗಳಲ್ಲಿ ಅವರು ಕುಳಿತುಕೊಳ್ಳುವವರೆಗೆ ಸಭಿಕರಿಂದ ಭಾರಿ ಕರತಾಡನ ಮುಂದುವರೆಯಿತು. ಸ್ವಾಗತ ಗೀತೆಯೊಂದಿಗೆ ಸಮಾವೇಶ ಆರಂಭವಾಯಿತು. ಸ್ವಾಗತಾಧ್ಯಕ್ಷ ರೇವಜಿಬುವಾ ಉರ್ಫ್ ದಾದಾಸಾಹೇಬ ಡೋಳಸ್ ಸ್ವಾಗತ ಭಾಷಣ ಮಾಡಿದರು.

ಸ್ವಾಗತಾಧ್ಯಕ್ಷರ ಭಾಷಣದ ಬಳಿಕ ಸಮಾವೇಶದ ಅಧ್ಯಕ್ಷರಿಗೆ ಅಧ್ಯಕ್ಷ ಸ್ಥಾನ ಸ್ವೀಕರಿಸುವಂತೆ ಪುಣೆಯ ಮುಖಂಡ ಶ್ರೀ. ರಾಜಾರಾಮ ಭೋಳೆ ವಿನಂತಿಸಿದರು. ಅದಕ್ಕೆ ನಾಸಿಕ್‌ನ ಮುಖಂಡ ಶ್ರೀ.ಭಾವುರಾವ ಗಾಯಕವಾಡ, ಚಾಂಗದೇವ ಮೋಹಿತೆ ಮತ್ತು ಸುಭೇದಾರ ಘಾಟಗೆ ಅನುಮೋದನೆ ನೀಡಿದ ಬಳಿಕ ವೆಂಕಟರಾವ್ ಅವರು ಅಧ್ಯಕ್ಷತೆ ವಹಿಸಿಕೊಂಡರು. ಸಂಭಾಜಿರಾವ್ ಗಾಯಕವಾಡ್ ಹೂವಿನ ಮಾಲೆ ಹಾಕಿ ಸ್ವಾಗತಿಸಿದರು. ವಿವಿಧ ಸ್ಥಳಗಳಿಂದ ಸಮಾವೇಶದ ಯಶಸ್ಸು ಹಾರೈಸಿ ಬಂದಿದ್ದ ಸಂದೇಶಗಳನ್ನು ದಿವಾಕರ್ ಪಗಾರೆ ವಾಚನ ಮಾಡಿದರು. ಅದರಲ್ಲಿ ರಾವಜಿ ಠೇಂಗೆ, ರಾವಸಾಹೇಬ್ ಪಾಪಣ್ಣ ಮತ್ತು ಸರ್ದಾರ್ ಕೇಹರ್‌ಸಿಂಗ್ ಕಳುಹಿಸಿದ್ದ ಸಂದೇಶಗಳು ಪ್ರಮುಖವಾಗಿದ್ದವು. ಎಲ್ಲ ಸಂದೇಶಗಳಲ್ಲಿ ಧರ್ಮಾಂತರಕ್ಕೆ ಬೆಂಬಲ ವ್ಯಕ್ತಪಡಿಸಲಾಗಿತ್ತು.

ಸಮಾವೇಶದ ಅಧ್ಯಕ್ಷ ಶೀ ವೆಂಕಟರಾವ್ ಭಾಷಣಕ್ಕೆ ಎದ್ದುನಿಲ್ಲುತ್ತಿದ್ದಂತೆಯೇ ಸುಮಾರು ಐದು ನಿಮಿಷಗಳ ಕಾಲ ಪ್ರೇಕ್ಷಕರು ಚಪ್ಪಾಳೆ ಹೊಡೆದು, ಡಾ. ಅಂಬೇಡ್ಕರ್‌ಗೆ ಜಯವಾಗಲಿ, ವೆಂಕಟರಾವ್ ಅವರಿಗೆ ಜಯವಾಗಲಿ ಎಂದು ಘೋಷಣೆ ಹಾಕಿ ಸ್ವಾಗತಿಸಿದರು. ವೆಂಕಟರಾವ್ ಅವರು ಸಭಿಕರನ್ನು ಉದ್ದೇಶಿಸಿ ಹಿಂದಿಯಲ್ಲಿ ಮಾತನಾಡಿದರು.

## ಸಮಾವೇಶದಲ್ಲಿ ಅಂಗೀಕರಿಸಿದ ನಿರ್ಣಯಗಳು

**೧ನೇ ನಿರ್ಣಯ –(ಅ)** ಮುಂಬೈ ಪ್ರದೇಶದ ಮಹಾರ್ ಜಾತಿಯ ಈ ಸಮಾವೇಶವು ಮಹಾರ್ ಜಾತಿಗೆ ಸಮಾಜದಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯ ಸಿಗಬೇಕೆಂದರೆ ಧರ್ಮಾಂತರ ಒಂದೇ ಪರಿಹಾರವಾಗಿದೆ ಎಂದು ತೀರ್ಮಾನಿಸಿದೆ. ಈ ಸಮಾವೇಶ ತನ್ನ ಏಕಮೇವ ನಾಯಕ ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ ಮಹಾರ್ ಜಾತಿಯು ಧರ್ಮಾಂತರಕ್ಕೆ ಸಿದ್ಧವಿದೆ ಎಂದು ಆಶ್ವಾಸನೆ ನೀಡುತ್ತದೆ.

(ಬ) ಧರ್ಮಾಂತರದ ಪೂರ್ವ ಸಿದ್ಧತೆಯೆಂದು ಇನ್ನು ಮುಂದೆ ಮಹಾರ್ ಜಾತಿಯವರು ಹಿಂದೂ ದೇವತೆಗಳಿಗೆ ಪೂಜೆ ಅರ್ಚನೆ ಸಲ್ಲಿಸಬಾರದು. ಹಿಂದೂಗಳ ಹಬ್ಬ, ವ್ರತ, ಉಪವಾಸ ಇತ್ಯಾದಿಗಳನ್ನು ಪಾಲಿಸಬಾರದು. ಹಿಂದೂಗಳ ಯಾವುದೇ ಉತ್ಸವದಲ್ಲಿ ಪಾಲ್ಗೊಳ್ಳಬಾರದು. ತೀರ್ಥಕ್ಷೇತ್ರಗಳ ಪ್ರವಾಸ ಇತ್ಯಾದಿಗಳನ್ನು ಮಾಡಕೂಡದು ಎಂದು ಈ ಸಮಾವೇಶವು ಮಹಾರ್ ಜಾತಿಗೆ ಸೂಚಿಸುತ್ತದೆ.

ಈ ಗೊತ್ತುವಳಿಗಳನ್ನು ನಾಸಿಕ್‌ನ ಖ್ಯಾತ ದಲಿತ ಮುಖಂಡ ಶ್ರೀ ಬಾವುರಾವ್ ಕೃಷ್ಣರಾವ್ ಗಾಯಕವಾಡ ಅವರು ಮಂಡಿಸಿದರು. ಈ ನಿರ್ಣಯಕ್ಕೆ ಶ್ರೀ ಎಸ್. ಎಸ್. ವರಾಳೆ ಅನುಮೋದನೆ ನೀಡಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈ ನಿರ್ಣಯಕ್ಕೆ ಬೆಂಬಲವಾಗಿ ಅಹ್ಮದನಗರದ ಶ್ರೀ ಪಿ .ಜೆ. ರೋಹಮ್, ಜನಾಬಾಯಿ ಮೋರೆ, ಕು. ರಾಜುಬಾಯಿ ಗಾಯಕವಾಡ, ಶ್ರೀಮತಿ ಸೋನುಬಾಯಿ ಡಾವರೆ, ಕು. ಭಾಗಿರಥಿಬಾಯಿ ತಾಂಬೆ, ಕುಲಾಬ್‌ನ ಪ್ರಮುಖ ಧುರೀಣ ನಿವೃತ್ತ ಸುಭೇದಾರ ಸವಾದಕರ್ ಭಾಷಣ ಮಾಡಿದರು.

## ಮೊದಲನೇ ವಾರದಲ್ಲಿನ ಸಮಾವೇಶಗಳು

ದಿನಾಂಕ ಮೇ ೩೦ರಿಂದ ಜೂನ್ ೨, ೧೯೩೬ರವರೆಗೆ ಮುಂಬೈನ ದಾದರ್–ನಾಯಗಾಂವ್ ಪ್ರದೇಶದಲ್ಲಿ ಜರುಗಿದ ಅಸ್ಪೃಶ್ಯ ಸಮಾವೇಶಗಳು ಸಾಕಷ್ಟು ಪ್ರಮಾಣದಲ್ಲಿ ವಿವಾದ ಹುಟ್ಟು ಹಾಕಿದವು. ಮುಂಬೈ ಪ್ರದೇಶದ ಮಹಾರ್ ಸಮಾವೇಶಕ್ಕಾಗಿ ನಿರ್ಮಿಸಿದ್ದ ಮಂಟಪಕ್ಕೆ ದಿ. ರಮಾಬಾಯಿ ಉರ್ಫ್ ಆಯಿಸಾಹೇಬ ಭೀಮರಾವ್ ಅಂಬೇಡ್ಕರ್ ಅವರ ಸ್ಮರಣಾರ್ಥ ರಮಾಬಾಯಿ ನಗರ ಎಂದು ನಾಮಕರಣ ಮಾಡಲಾಗಿತ್ತು. ಇದರ ಜೊತೆಗೆ ಸ್ವಾಭಿಮಾನಕ್ಕಾಗಿ ಮತ್ತು ಸಮಾನತೆಗಾಗಿ ಕಳೆದ ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಿರುವ ಮಹಾಡ್ ಮತ್ತು ನಾಸಿಕ್ ಸತ್ಯಾಗ್ರಹಗಳ ಸ್ಮರಣಾರ್ಥ ಮಂಟಪದ ಎರಡು ದ್ವಾರಗಳಿಗೆ ನಾಸಿಕ್ ಮತ್ತು ಮಹಾಡ್ ದ್ವಾರ ಎಂದು ಹೆಸರಿಡಲಾಗಿತ್ತು.

ಅತ್ಯಂತ ಸುಂದರವಾಗಿ ಅಲಂಕರಿಸಿದ್ದ ಮಂಟಪದಲ್ಲಿ ಮುಂಬೈ ಪ್ರದೇಶದ ಮಹಾರ್ ಸಮಾವೇಶ ಅದ್ದೂರಿ, ಸಡಗರ ಸಂಭ್ರಮದಿಂದ ಯಶಸ್ವಿಯಾಯಿತು. ಈ ಸಮಾವೇಶದ ಅಧ್ಯಕ್ಷರಾಗಿ ಹೈದ್ರಾಬಾದ್‌ನ ದಲಿತ ಮುಖಂಡ ಬಿ. ಎಸ್. ವೆಂಕಟರಾವ್ ಆಲಿಯಾಸ್ ಹೈದ್ರಾಬಾದ್ ಅಂಬೇಡ್ಕರ್ ಅವರು ಆಯ್ಕೆಯಾಗಿದ್ದರಿಂದ ಸಮಾವೇಶಕ್ಕೆ ಇನ್ನಷ್ಟು ಮೆರಗು ಬಂದಿತ್ತು.

ಈ ಸಮಾವೇಶವು ಮುಂಬೈ ಪ್ರದೇಶದ್ದಾಗಿದ್ದರೂ ಮಧ್ಯಪ್ರಾಂತ, ವಹ್ರಾಡ್, ಇಂದೂರ್, ಮಹು, ಹೈದ್ರಾಬಾದ್ ಸೇರಿದಂತೆ ವಿವಿಧ ಪ್ರಾಂತಗಳ ಮುಖಂಡರು ಮತ್ತು ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಈ ಮಹಾರ್ ಸಮಾವೇಶದಿಂದ ಸ್ಪೃಶ್ಯ ಹಿಂದೂಗಳ ದೃಷ್ಟಿಕೋನ ಬದಲಾಗದೇ ಗತ್ಯಂತರವಿರಲಿಲ್ಲ. ಮಹಾರ್ ಸಮಾಜದ ಪ್ರತಿಯೊಬ್ಬ ವ್ಯಕ್ತಿ ಇದು ತನ್ನ ಸಮಾವೇಶ ಎನ್ನುವ ಭಾವನೆಯಿಂದ ಪಾಲ್ಗೊಂಡು ಡಾ. ಬಾಬಾಸಾಹೇಬ್ ಅವರ ಮೇಲೆ ಇರಿಸಿದ್ದ ತನ್ನ ಅಚಲ ವಿಶ್ವಾಸವನ್ನು ಮರು

ಸಾಬೀತುಪಡಿಸಿದ. ಸಮಾವೇಶಕ್ಕೆ ಆಗಮಿಸಿದ್ದ ಸಾವಿರಾರು ಜನರ ಶಿಸ್ತು ಮತ್ತು ಸಮಾವೇಶದಲ್ಲಿ ಸುವ್ಯವಸ್ಥೆ ಕಾಪಾಡುವುದಕ್ಕೆ ನಿಯೋಜಿತಗೊಂಡಿದ್ದ ಸಮತಾ ಸೈನಿಕ ದಳದ ಸ್ವಯಂ ಸೇವಕರ ಕಾರ್ಯ ಕೂಡ ನೋಡುವಂತಿತ್ತು.

ಡಾ. ಅಂಬೇಡ್ಕರ್ ಅವರು ಸಮಾವೇಶಕ್ಕಾಗಿ ಹಗಲಿರುಳು ಶ್ರಮಿಸಿದ್ದರು. ಯಾವುದೇ ಪ್ರತಿನಿಧಿ ಅಥವಾ ಆಹ್ವಾನಿತ ಅತಿಥಿಗಳಿಗೆ ತೊಂದರೆ ಆಗಬಾರದೆಂದು ವ್ಯವಸ್ಥಾಪಕ ಸಮಿತಿ ಎಚ್ಚರ ವಹಿಸಿತ್ತು. ಸಮಾವೇಶ ಆಯೋಜಿಸುವಲ್ಲಿ ದಲಿತ ಮುಖಂಡ ಡಾ. ಸೋಳಂಕಿ ಕೂಡ ಡಾ. ಅಂಬೇಡ್ಕರ್ ಅವರಿಗೆ ಸಾಕಷ್ಟು ನೆರವಾದರು. ಸಮಾವೇಶಕ್ಕೆ ಆಗಮಿಸಿದ ಅತಿಥಿಗಳಲ್ಲಿ ಭಾಸ್ಕರರಾವ್ ಜಾಧವ್, ಶೇಠ್ ಶಂಕರರಾವ್ ಪರಶಾ, ಪಿ. ಆರ್. ಲೇಲೆ, ಪಿ. ಜಿ. ಅಭ್ಯಂಕರ್, ಡಾ. ಸೋಳಂಕಿ, ಅಮೃತರಾವ್ ರಣಖಾಂಬೆ, ಭಾವುರಾವ್ ಗಾಯಕವಾಡ, ಅಡ್ವೋಕೇಟ್ ಪಾಧ್ಯೆ, ಬ್ಯಾ. ಸಮರ್ಥ, ವತ್ಸಲಾಬಾಯಿ ಶೇಗಾಂವಕರ್, ಶ್ರೀಮತಿ ವೇದಕ್, ಶ್ರೀಮತಿ, ಡಾ. ಚಂಪುತಾಯಿ ಪ್ರಧಾನ್, ದೇವರಾಯ ನಾಯಿಕ್, ಅನಂತರಾವ್ ಚಿತ್ರೆ, ಬಾಪುಸಾಹೇಬ ಸಹಸ್ರಬುದ್ಧೆ, ಸುರೇಂದ್ರನಾಥ ಟಿಪ್ನಿಸ್, ನಾಗಪೂರ್‌ನ ಎಂ. ಕೆ. ಕರ್ಣಿಕ್, ಎಲ್. ಎನ್. ಹರದಾಸ್, ಶೇಠ್ ಮನಿಯಾರ್ ಸೇರಿದಂತೆ ಇತರ ಪ್ರಮುಖರಿದ್ದರು.

ಸೋಮವಾರ ಜೂನ್ ೧, ೧೯೩೬ರಂದು ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಸಂತ ಸಮಾಜದ ಸಮಾವೇಶ ಜರುಗಿತು. ಈ ಸಂದರ್ಭದಲ್ಲಿ ಸ್ವಾಗತಾಧ್ಯಕ್ಷ ಶ್ರೀ. ಶಂಕರದಾಸ ನಾರಾಯಣದಾಸ ಬರ್ವೆ ಅವರಿಂದ ಪರಿಣಾಮಕಾರಿ ಭಾಷಣವಾಯಿತು. ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣ ಸಂತರ ಅಂತಃಕರಣ ಸ್ಫುರಿಸುವುದಕ್ಕೆ ಕಾರಣವಾಯಿತು. ನೂರಾರು ಸಂತರು ತಮ್ಮ ಗಡ್ಡ ಮೀಸೆ, ಜಡೆ ಮತ್ತು ಮಾಲೆಗಳನ್ನು ಅಗ್ನಿಕುಂಡಕ್ಕೆ ಸಮರ್ಪಿಸಿದರು. ಅದೇ ದಿನ ರಾತ್ರಿ ಡಾ. ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ರಾಜಕೀಯ ಸಮಾವೇಶ ಜರುಗಿತು. ಆ ಸಂದರ್ಭದಲ್ಲಿ ನೂತನ ಸುಧಾರಣೆಗಳು ಮತ್ತು ನೂತನ ಕಾನೂನು ಮಂಡಳಿಯ ಚುನಾವಣೆಗೆ ಯಾವ ರೀತಿ ಸ್ಪರ್ಧಿಸಬೇಕು ಎನ್ನುವುದರ ಕುರಿತು ಚರ್ಚಿಸಲಾಯಿತು.

## ಸಮಾವೇಶದಲ್ಲಿ ಗಾಯನ ಕಾರ್ಯಕ್ರಮ

ಸಮಾವೇಶದ ಕಾರ್ಯಕ್ರಮಗಳಲ್ಲಿ ಈಶಸ್ತವನ, ಸ್ವಾಗತ ಗೀತೆ ಮತ್ತು ಅತಿಥಿಗಳಿಗೆ ವಂದನಾರ್ಪಣೆಯನ್ನು ತಮ್ಮ ಸುಮಧುರ ಕಂಠದಿಂದ ಹಾಡಿದ ಬಾಲಕಿಯರು ಮತ್ತು ಜನರನ್ನು ರಂಜಿಸಿದವರ ಹೆಸರು ಈ ಕೆಳಗಿನಂತೆ ಇವೆ.

ಕು. ಕಮಲಾಬಾಯಿ ಅಮೃತರಾವ್ ರಣಖಾಂಬೆ
ಕು. ಪಾರ್ವತಿಬಾಯಿ ಬಳಿರಾಮ್ ಪಂಡಿತ್
ಕು. ಶಾಂತಾಬಾಯಿ ಬಳಿರಾಮ್ ನೇವಾಳ್ಕರ್
ಕು. ಗೋದಾವರಿ ಮಹಾದೇವ ರೋಕಡೆ
ಕು. ಮನೋರಮಾ ಬಳಿರಾಮ್ ಭಾತನಕರ್
ಕು. ಕುಸುಮ್ ಲಕ್ಷ್ಮಣ್ ಜಾಧವ್
ಕು. ಚಾಂಗುಣಾಬಾಯಿ ಭಾಗೋಜಿ ಕಾಂಬಳೆ
ಕು. ಪ್ರೇಮಾಬಾಯಿ ಚರಣದಾಸ್ ಗಾಯಕವಾಡ

ಶ್ರೀ. ನಾಮದೇವ ಮಹಾದೇವ ಸುರ್ವೆ (ಹಾರ್ಮೋನಿಯಂ) ಶಂಕರ ಅರ್ಜುನ್ ಸೋನವಣೆ (ತಬಲಾ), ಹೀರಾಜಿ ರಾಮಚಂದ್ರ ಔಂಧಕರ್ (ದಿಲ್‌ರುಬಾ). ಮಹಾದೇವ ಪಾಚರಡಕರ್ (ಸಂತೂರ್) ಸೇರಿದಂತೆ ಇತರರು ವಿವಿಧ ವಾದ್ಯಗಳ ವಾದನದಲ್ಲಿ ತಮ್ಮ ಪ್ರಾವಿಣ್ಯತೆ ಪ್ರದರ್ಶಿಸಿದರು.[೧]

## ಡಾ. ಅಂಬೇಡ್ಕರ್ ಅವರ ಭಾಷಣ

ಮೇ ೩೧, ೧೯೩೬ರಂದು ಜರುಗಿದ ಅಖಿಲ ಮುಂಬೈ ಪ್ರದೇಶ ಮಹಾರ್ ಸಮಾವೇಶದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ತಮ್ಮ ಭಾಷಣ ಮಾಡಿದರು. ಅವರು ಸಮಾವೇಶವನ್ನು ಉದ್ದೇಶಿಸಿ:

ಸದ್ಗೃಹಸ್ಥರೆ, ಬಂಧುಗಳೇ ಮತ್ತು ಭಗಿನಿಯರೆ,

ನಿಮಗೆಲ್ಲ ಗೊತ್ತಿರುವಂತೆ ನಾನು ಘೋಷಣೆ ಮಾಡಿದ ಧರ್ಮಾಂತರದ ಕುರಿತು ಚರ್ಚೆ ಮಾಡುವುದಕ್ಕೆ ಈ ಸಮಾವೇಶ ಆಯೋಜಿಸಲಾಗಿದೆ. ನನ್ನ ದೃಷ್ಟಿಯಲ್ಲಿ ಧರ್ಮಾಂತರ ಅತ್ಯಂತ ಮಹತ್ವದ್ದು ಮತ್ತು ನನಗೆ ಅತ್ಯಂತ ಪ್ರೀತಿಯ ವಿಚಾರ. ಅಷ್ಟೇ ಅಲ್ಲ ನಿಮ್ಮ ಎಲ್ಲರ ಭವಿಷ್ಯ ಆ ಧರ್ಮಾಂತರವನ್ನು ಅವಲಂಬಿಸಿರುವ ಕಾರಣ ಆ ವಿಷಯವನ್ನು ನಾನು ಅತ್ಯಂತ ಮಹತ್ವದ್ದು ಎಂದು ಭಾವಿಸುತ್ತೇನೆ. ಇದರ ಮಹತ್ವ ಏನು ಎನ್ನುವುದು ನಿಮಗೆ ಈಗಾಗಲೇ ಅರಿವಿಗೆ ಬಂದಿದೆ. ಇಲ್ಲದೇ ಹೋದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಈ ಸಮುದಾಯ ಇಲ್ಲಿ ಸೇರುತ್ತಿರಲಿಲ್ಲ. ಇದನ್ನು ನೋಡಿ ನನಗೆ ಅತೀವ ಸಂತಸವಾಗುತ್ತಿದೆ.

### ಸಮಾವೇಶದ ಅವಶ್ಯಕತೆ

ಧರ್ಮಾಂತರದ ಘೋಷಣೆ ಬಳಿಕ ಅಲ್ಲಲ್ಲಿ ಚಿಕ್ಕಪುಟ್ಟ ಸಭೆಗಳು ಜರುಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದು ನಿಮಗೆಲ್ಲರಿಗೂ ತಿಳಿದಿರುವ ವಿಚಾರ. ಆದರೆ ಇಂದು ಎಲ್ಲರೂ ಒಂದೇ ಸ್ಥಳದಲ್ಲಿ ಸೇರಿ ಚಿಂತನ–ಮಂಥನ ಮಾಡಿ ಧರ್ಮಾಂತರಕ್ಕೆ ಸಂಬಂಧಿಸಿದ ನಿರ್ಣಯ ತೆಗೆದುಕೊಳ್ಳುವಂತೆ ಚಿಂತನ–ಮಂಥನ ಮಾಡುವುದಕ್ಕೆ ಇಲ್ಲಿಯವರೆಗೆ ಅವಕಾಶ ಕೂಡಿ ಬಂದಿರಲಿಲ್ಲ. ಈ ಅವಕಾಶ ನಿಮಗಿಂತ ನನಗೆ ಅತೀ ಅಗತ್ಯವಿತ್ತು. ಧರ್ಮಾಂತರದ ಗುರಿ ತಲುಪುವುದಕ್ಕೆ ಸಾಕಷ್ಟು ಪೂರ್ವಸಿದ್ಧತೆಯ ಅಗತ್ಯವಿದೆ. ಧರ್ಮಾಂತರ ಎಂದರೆ ಸಣ್ಣ ಮಕ್ಕಳ ಹುಡುಗಾಟವೂ ಅಲ್ಲ ಮೋಜಿನ ಸಂಗತಿಯೂ ಅಲ್ಲ. ಇದು ಮನುಷ್ಯ ಜೀವನದ ಸಾಫಲ್ಯದ ಪ್ರಶ್ನೆಯಾಗಿದೆ. ಒಂದು ಬಂದರಿನಿಂದ ಇನ್ನೊಂದು ಬಂದರಿಗೆ ನಾವೆ ತೆಗೆದುಕೊಂಡು ಹೋಗುವುದಕ್ಕೆ ನಾವಿಕ ಯಾವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೋ ಅಂತಹ ಎಲ್ಲ ಸಿದ್ಧತೆಗಳನ್ನು ಈ ಧರ್ಮಾಂತರದ ವಿಚಾರದಲ್ಲಿ ಮಾಡಬೇಕಿದೆ. ಸಿದ್ಧತೆಗಳಿಲ್ಲದ ನಾವೆ ದಡ ಬಿಟ್ಟು ನದಿ ದಾಟಲಾರದು. ಆದರೆ ನಾವೆಯಲ್ಲಿ ಎಷ್ಟು ಜನರು ಬರುತ್ತಾರೆ ಎನ್ನುವುದನ್ನು ತಿಳಿಯದ ಹೊರತು ನಾವಿಕ ನದಿಗೆ ನಾವೆಯನ್ನು ಬಿಡುವುದಿಲ್ಲ. ಈಗ ನನ್ನದು ಕೂಡ ಅದೇ ಪರಿಸ್ಥಿತಿಯಾಗಿದೆ. ಧರ್ಮಾಂತರಕ್ಕೆ ಎಷ್ಟು ಜನರು ಸಿದ್ಧವಾಗಿದ್ದಾರೆ ಎನ್ನುವ ಅಂದಾಜು ತಿಳಿಯದ ಹೊರತು ನನಗೆ ಧರ್ಮಾಂತರದ ಪೂರ್ವ ಸಿದ್ಧತೆಯ ಕೆಲಸಕ್ಕೆ ಕೈ ಹಾಕಲು ಬರುವುದಿಲ್ಲ. ಹೀಗಾಗಿ ಎಲ್ಲಿಯಾದರೂ ನಮ್ಮ ಜನರ ಕೇಂದ್ರೀಕೃತ ಸಮಾವೇಶ ಆಗದೆ ಅವರ ಅಭಿಪ್ರಾಯದ ಸುಳಿವು ಸಿಗುವುದು ಸಾಧ್ಯವಿರಲಿಲ್ಲ. ಈ ರೀತಿ ಜನರ

ಜನತಾ: ಜೂನ್ ೨೦, ೧೯೩೬.

ಅಭಿಪ್ರಾಯ ಏನೆನ್ನುವುದನ್ನು ತಿಳಿದುಕೊಳ್ಳುವ ಅವಕಾಶ ನನಗೆ ಲಭಿಸಬೇಕಿತ್ತು. ಇರಲಿ.. ಇಂತಹ ಸಮಾವೇಶ ಆಯೋಜಿಸಬೇಕು ಎಂದು ನಾನು ಮುಂಬೈ ಕಾರ್ಯಕರ್ತರಿಗೆ ಸೂಚಿಸಿದ ಬಳಿಕ ಅವರು ಹಣ ಮತ್ತು ಮಾನವ ಸಂಪನ್ಮೂಲದ ಕೊರತೆಯ ಬಗ್ಗೆ ವಿಚಾರ ಮಾಡದೇ ಖುಷಿಯಿಂದ ಸಮಾವೇಶ ಆಯೋಜಿಸುವುದಕ್ಕೆ ಸಮ್ಮತಿಸಿದರು. ಈ ಜವಾಬ್ದಾರಿ ನಿರ್ವಹಿಸುವ ನಿಟ್ಟಿನಲ್ಲಿ ಅವರು ಅನುಭವಿಸಿದ ಕಷ್ಟ, ತೊಂದರೆ ಮತ್ತು ಸಮಸ್ಯೆಗಳ ಬಗ್ಗೆ ಸ್ವಾಗತಾಧ್ಯಕ್ಷ ರೇವಜಿ ದಗಡುಜಿ ಡೋಳಸ್ ಅವರು ತಮ್ಮ ಭಾಷಣದಲ್ಲಿ ಸವಿಸ್ತಾರವಾಗಿ ಹೇಳಿದ್ದಾರೆ. ಇಷ್ಟೊಂದು ಕಷ್ಟ ಸಹಿಸಿ ನನಗಾಗಿ ಈ ಸಮಾವೇಶ ಆಯೋಜಿಸಿದ್ದಕ್ಕೆ ನಾನು ಅವರಿಗೆ ಆಭಾರಿಯಾಗಿದ್ದೇನೆ.

## ಕೇವಲ ಮಹಾರ್‌ರ ಸಮಾವೇಶ ಏಕೆ?

ನನ್ನ ಧರ್ಮಾಂತರ ಘೋಷಣೆ ಇಡೀ ಅಸ್ಪೃಶ್ಯ ಸಮಾಜಕ್ಕೆ ಸೇರಿದ್ದು ಆಗಿದ್ದರೆ, ಇಡೀ ಅಸ್ಪೃಶ್ಯ ಸಮಾಜದ ಸಮಾವೇಶ ನಡೆಸದೇ ಕೇವಲ ಮಹಾರ್‌ರ ಸಮಾವೇಶ ಆಯೋಜಿಸಿದ್ದು ಏಕೆ ಎಂದು ಕೆಲವರು ನನ್ನನ್ನು ಆಕ್ಷೇಪಿಸಬಹುದು. ಯಾವ ಪ್ರಶ್ನೆಯ ಕುರಿತು ಚರ್ಚಿಸುವುದಕ್ಕೆ ಈ ಸಮಾವೇಶ ಆಯೋಜಿಸಲಾಗಿದೆಯೋ ಆ ಪ್ರಶ್ನೆಗೆ ಪರಿಹಾರ ಕಂಡುಕೊಳ್ಳುವ ಮೊದಲು ಈ ಆಕ್ಷೇಪಕ್ಕೆ ಉತ್ತರ ನೀಡುವುದು ಅತ್ಯಗತ್ಯ ಎಂದು ಭಾವಿಸುತ್ತೇನೆ. ಇದಕ್ಕೆ ಅನೇಕ ಕಾರಣಗಳು ಇವೆ. ಮೊದಲನೇ ಕಾರಣ ಎಂದರೆ, ಈ ಸಮಾವೇಶದಲ್ಲಿ ಯಾವುದೇ ರೀತಿಯ ಬೇಡಿಕೆಗಳನ್ನು ಮಂಡಿಸುವಂತಿಲ್ಲ. ಸರ್ಕಾರದಿಂದ ರಾಜಕೀಯ ಹಕ್ಕು ಕೇಳುವಂತಿಲ್ಲ ಇಲ್ಲವೇ ಹಿಂದೂ ಜನರಿಂದ ಸಾಮಾಜಿಕ ಹಕ್ಕುಗಳನ್ನು ಕೇಳುವಂತಿಲ್ಲ. ನಮ್ಮ ಜೀವನ ಏನಾಗಬೇಕು. ನಮ್ಮ ಆಯುಷ್ಯದ ರೂಪುರೇಷೆ ಹೇಗಿರಬೇಕೆಂಬುದನ್ನು ನಿರ್ಧರಿಸುವುದಕ್ಕೆ ಮಾತ್ರ ಈ ಸಮಾವೇಶ ಆಯೋಜಿಸಲಾಗಿದೆ. ಇದೇ ರೀತಿಯ ಪ್ರಶ್ನೆಯನ್ನು ತಮ್ಮ ತಮ್ಮಲ್ಲಿ ಕೇಳಿಕೊಂಡು ತಮ್ಮ ತಮ್ಮ ಸಮಸ್ಯೆಗಳನ್ನು ಸ್ವತ್ರಂತವಾಗಿ ವಿಚಾರ ಮಾಡಿ ಪರಿಹರಿಸುವುದು ಸೂಕ್ತ. ಈ ಕಾರಣಗಳಿಂದಾಗಿ ಎಲ್ಲ ಅಸ್ಪೃಶ್ಯ ಜಾತಿಗಳ ಸಮಾವೇಶ ಆಯೋಜಿಸುವುದು ಅವಶ್ಯಕತೆ ಇಲ್ಲ ಎನ್ನಿಸಿತು. ಇದು ಅವುಗಳ ಪೈಕಿ ಒಂದು ಕಾರಣವಾಗಿದ್ದರೆ, ಇನ್ನೊಂದು ಕಾರಣ ಧರ್ಮಾಂತರ ಘೋಷಣೆ ಮಾಡಿ ಈಗಾಗಲೇ ಹತ್ತು ತಿಂಗಳು ಕಳೆದುಹೋಗಿದ್ದು. ಈ ಅವಧಿಯಲ್ಲಿ ಸಾಕಷ್ಟು ಜನಜಾಗೃತಿಯ ಕೆಲಸವೂ ಆಗಿದೆ. ಇದೀಗ ಜನಮತ ಅಂದಾಜಿಸುವ ಕೆಲಸ ನಡೆಯಬೇಕಿದೆ ಎಂದು ನನಗೆ ಅನ್ನಿಸುತ್ತದೆ. ಜನಮತ ಸಂಗ್ರಹಿಸುವುದಕ್ಕೆ ವಿವಿಧ ಜಾತಿಗಳ ಸಮಾವೇಶ ನಡೆಸುವುದು ಒಂದು ಸರಳ ಮತ್ತು ಸುಲಭ ಮಾರ್ಗ. ಧರ್ಮಾಂತರ ಕೃತಿ ಪ್ರಶ್ನೆಯನ್ನು ಅಕ್ಷರಶಃ ಅನುಷ್ಠಾನ ಪ್ರಯತ್ನಕ್ಕೆ ಕೈಹಾಕುವ ಮುನ್ನ ಜನರ ನಿಜ ಅಭಿಪ್ರಾಯ ಏನು ಅನ್ನುವುದನ್ನು ತಿಳಿದುಕೊಳ್ಳುವುದು ಅತ್ಯಗತ್ಯ. ಜಾತಿ ಜಾತಿಗಳ ಸಭೆ ಸೇರಿಸಿ ಅಂದಾಜಿಸುವ ಲೋಕಮತ ಎಷ್ಟು ಖಾತ್ರಿ ನೀಡುತ್ತದೋ ಅಷ್ಟು ಖಾತ್ರಿಯನ್ನು ಇಡೀ ಅಸ್ಪೃಶ್ಯ ಸಮಾಜದ ಸಮಾವೇಶದಲ್ಲಿ ಸೇರಿರುವ ಜನರಿಂದ ಸಿಗಲಿಕ್ಕಿಲ್ಲವೆನ್ನುವುದು ನನ್ನ ತಿಳುವಳಿಕೆ. ಅಲ್ಲದೇ ಇಡೀ ಅಸ್ಪೃಶ್ಯ ಸಮಾಜದ ಸಮಾವೇಶವೆಂದು ಎಂದು ಹೆಸರಿಸಿ, ಸಮಾವೇಶ ಆಯೋಜಿಸಿದರೂ ಅದು ಇಡೀ ಅಸ್ಪೃಶ್ಯ ಸಮಾಜ ಪ್ರತಿನಿಧಿಸುವ ಸಮಾವೇಶ ಆಗಲಾರದು. ಈ ರೀತಿ ಆಗಬಾರದು ಮತ್ತು ಜನಮತದ ಖಾತ್ರಿಪಡಿಸಿಕೊಳ್ಳುವುದಕ್ಕಾಗಿ ಕೇವಲ ಮಹಾರ್‌ರ ಸಮಾವೇಶ ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ ಬೇರೆ ಜಾತಿಯವರನ್ನು ಸೇರಿಸಿಕೊಂಡಿಲ್ಲವೆಂದ ಮಾತ್ರಕ್ಕೆ ಅವರಿಗೆ ನಷ್ಟವಾಗುವುದಿಲ್ಲ. ಒಂದು ವೇಳೆ ಅವರಿಗೆ ಧರ್ಮಾಂತರ ಬೇಡವಾಗಿದ್ದರೆ, ಈ ಸಮಾವೇಶದಲ್ಲಿ ಅವರನ್ನು ಸೇರಿಸಿಕೊಳ್ಳದ್ದಕ್ಕೆ ಅವರು ಬೇಸರ ಪಡಲು ಕಾರಣವೇ

ಇಲ್ಲ. ಒಂದು ವೇಳೆ ಅವರು ಧರ್ಮಾಂತರ ಮಾಡಬೇಕೆಂದಿದ್ದರೆ ಅವರಿಗೆ ಈ ಸಮಾವೇಶದಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶ ನೀಡಲಿಲ್ಲ ಎಂದ ಮಾತ್ರಕ್ಕೆ ಅವರ ಧರ್ಮಾಂತರ ಪ್ರಕ್ರಿಯೆಯಲ್ಲಿ ಯಾವುದೇ ಸಂಗತಿ ಅಡ್ಡಿಪಡಿಸದು. ಯಾವ ರೀತಿ ಮಹಾರ್‌ರ ಸಮಾವೇಶ ಆಯೋಜಿಸಲಾಗಿದೆಯೋ ಅದೇ ರೀತಿ ಆಯಾ ಜಾತಿಗಳು ತಮ್ಮ ತಮ್ಮ ಸಮಾವೇಶ ಆಯೋಜಿಸುವುದಕ್ಕೆ ಮುಕ್ತವಾಗಿವೆ ಮತ್ತು ಅಂತಹ ಸಮಾವೇಶಗಳನ್ನು ಅವರು ಆಯೋಜಿಸಬೇಕು ಎಂದು ನಾನು ಸೂಚಿಸುತ್ತೇನೆ. ಈ ಕೆಲಸಕ್ಕೆ ಅವರಿಗೆ ನನ್ನ ಕೈಯಿಂದಾಗುವ ನೆರವು ಇದ್ದರೆ ಖಂಡಿತವಾಗಿ ಮಾಡುತ್ತೇನೆ. ಇಲ್ಲಿಯವರೆಗೆ ಕೇವಲ ಪ್ರಸ್ತಾವನೆ ಆಯಿತು. ಇದೀಗ ಸಮಾವೇಶದ ಮುಖ್ಯ ವಿಷಯಕ್ಕೆ ಬರುತ್ತೇನೆ.

ಧರ್ಮಾಂತರ ವಿಷಯ ಎಷ್ಟು ಮಹತ್ವದ್ದಾಗಿದೆಯೋ ಅಷ್ಟೇ ಅದು ಗಹನವಾದ ಸಂಗತಿ. ಮನುಷ್ಯನ ಸರಳ ಬುದ್ಧಿಗೆ ಅದು ನಿಲುಕುವಂತಹದ್ದಲ್ಲ. ಅದೇ ರೀತಿ ಸರಳ ವ್ಯಕ್ತಿಯೊಬ್ಬನಿಗೆ ಧರ್ಮಾಂತರ ಅಂದರೆ ಏನು ಎಂದು ತಿಳಿಸಿಕೊಡುವುದು ಸುಲಭದ ಕೆಲಸ ಅಲ್ಲ. ಹೀಗಾಗಿ ನಿಮಗೆ ಎಲ್ಲರಿಗೂ ಧರ್ಮಾಂತರದ ಕುರಿತು ಸ್ಪಷ್ಟ ಪರಿಕಲ್ಪನೆ ಬರುವವರೆಗೆ ಅದನ್ನು ಕೃತಿಯಲ್ಲಿ ತರುವುದು ಕಠಿಣ ಸಂಗತಿ ಎನ್ನುವ ಅರಿವು ನನಗೆ ಇದೆ. ಆದ್ದರಿಂದ ಎಷ್ಟು ಸಾಧ್ಯವೋ ಅಷ್ಟು ಸರಳವಾಗಿ ಈ ವಿಷಯ ಮಂಡಿಸುವುದಕ್ಕೆ ಪ್ರಯತ್ನಿಸುತ್ತೇನೆ.

## ಧರ್ಮಾಂತರಕ್ಕೆ ಐಹಿಕ ಕಾರಣಗಳು

ಧರ್ಮಾಂತರವನ್ನು ಎರಡು ದೃಷ್ಟಿಕೋನದಿಂದ ನೋಡಬೇಕಾಗಿದೆ. ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಕೋನದಿಂದ ಚಿಂತನೆ ಮಾಡುವ ರೀತಿಯಲ್ಲೇ ಐಹಿಕ ದೃಷ್ಟಿಕೋನದಿಂದಲೂ ವಿಚಾರ ಮಾಡಬೇಕಿದೆ. ಅದೇ ರೀತಿ ತಾತ್ವಿಕ ದೃಷ್ಟಿಕೋನದ ವೈಚಾರಿಕತೆಯ ಅಗತ್ಯವೂ ಇದೆ. ಯಾವುದೇ ದೃಷ್ಟಿಕೋನದಿಂದ ಧರ್ಮಾಂತರದ ಬಗ್ಗೆ ಚಿಂತನೆ ಮಾಡಿದರೂ ಮೊದಲಿಗೆ ಅಸ್ಪೃಶ್ಯತೆ ಅಂದರೆ ಏನು. ಅದರ ನಿಜವಾದ ಸ್ವರೂಪ ಏನು ಎನ್ನುವುದನ್ನು ಸಮಗ್ರವಾಗಿ ತಿಳಿದುಕೊಳ್ಳುವುದು ಅತ್ಯಗತ್ಯವಾಗಿದ್ದು, ಇದು ಅರ್ಥವಾಗದೇ ನನ್ನ ಧರ್ಮಾಂತರದ ಘೋಷಣೆ ನಿಮಗೆ ಅರ್ಥವಾಗಲು ಸಾಧ್ಯವೇ ಇಲ್ಲ. ಅಸ್ಪೃಶ್ಯತೆ ಅಂದರೆ ಏನು, ಅದರ ನಿಜವಾದ ಸ್ವರೂಪ ಏನು ಎನ್ನುವುದು ನಿಮಗೆ ಅರ್ಥವಾಗಲಿ ಎನ್ನುವ ಕಾರಣಕ್ಕೆ ನಾನು ಮೊದಲು ನಿಮ್ಮ ಮೇಲೆ ನಡೆಯುತ್ತಿರುವ ಶೋಷಣೆಗಳ ಕಥೆಯನ್ನು ನೆನಪಿಸಬೇಕಾದ ಅಗತ್ಯವಿದೆ ಎಂದು ಭಾವಿಸುತ್ತೇನೆ. ಸರ್ಕಾರಿ ಶಾಲೆಯಲ್ಲಿ ಮಕ್ಕಳನ್ನು ಸೇರಿಸುವ ಹಕ್ಕುಗಳ ಬಗ್ಗೆ ಹೇಳಿದ್ದಕ್ಕೆ, ಬಾವಿಯಲ್ಲಿನ ನೀರು ತೆಗೆದುಕೊಳ್ಳುವ ಹಕ್ಕು ಇದೆ ಎಂದು ಹೇಳಿದ್ದಕ್ಕೆ, ಕುದುರೆ ಮೇಲೆ ಕೂಡ್ರುವ ಹಕ್ಕು ಇದೆ ಎಂದು ಹೇಳಿದ್ದಕ್ಕೆ ಸ್ಪೃಶ್ಯ ಹಿಂದೂಗಳಿಂದ ಹಲ್ಲೆಗೆ ಒಳಗಾಗುವ ಘಟನೆಗಳು ಯಾವಾಗಲೂ ನಡೆಯುತ್ತಿರುವ ಕಾರಣ ಅಂತಹ ಘಟನೆಗಳು ಎಲ್ಲರ ಮನಸ್ಸಿನಲ್ಲಿ ಇದ್ದೇ ಇರುತ್ತವೆ. ಆದರೆ ಹಲ್ಲೆ ಮಾಡುವುದಕ್ಕೆ ಇಂತಹ ಅನೇಕ ಕಾರಣಗಳಿದ್ದು, ಅವುಗಳನ್ನು ಭಾರತ ಬಿಟ್ಟು ಬೇರೆ ದೇಶದ ಜನರಿಗೆ ಹೇಳಿದರೆ ಅವರಿಗೆ ಅಚ್ಚರಿಯಾಗುತ್ತದೆ. ಉತ್ತಮ ಬಟ್ಟೆ ಧರಿಸಿದ್ದಕ್ಕೆ ಹಲ್ಲೆ ಮಾಡಿರುವ ಉದಾಹರಣೆ ಇದೆ. ನೀರು ತರುವುದಕ್ಕೆ ಹಿತ್ತಾಳೆ–ತಾಮ್ರದ ಪಾತ್ರೆ ಉಪಯೋಗಿಸಿದರು ಎಂದು ಹಲ್ಲೆ ಮಾಡಿದ ಉದಾಹರಣೆಯೂ ಇದೆ. ಆಭರಣ ಹಾಕಿಕೊಂಡಿದ್ದಕ್ಕೆ ಮಾಡಿರುವ ಹಲ್ಲೆಯ ಉದಾಹರಣೆ ನೀಡಬಹುದು. ಜನಿವಾರ ಹಾಕಿದ್ದಕ್ಕೆ ಹಲ್ಲೆ ಮಾಡಿದ ಉದಾಹರಣೆ ಇದೆ. ಸತ್ತ ಜಾನುವಾರುಗಳನ್ನು ತೆಗೆದುಕೊಂಡು ಹೋಗದ್ದಕ್ಕೆ, ಸತ್ತ ಪ್ರಾಣಿಯ ಮಾಂಸ ತಿನ್ನದ್ದಕ್ಕೆ ಮಾಡಿದ ಹಲ್ಲೆಯ ಉದಾಹರಣೆ ನೀಡಬಹುದು. ಕಾಲಿಗೆ ಬೂಟು ಅಥವಾ ಚಪ್ಪಲಿ ಹಾಕಿಕೊಂಡು ಗ್ರಾಮದಲ್ಲಿ ಹೋಗುತ್ತಿದ್ದ ವೇಳೆ ಎದುರಿಗೆ ಬಂದ ಸ್ಪೃಶ್ಯ ಹಿಂದೂವಿಗೆ ಸಲಾಮು ಹಾಕದ್ದಕ್ಕೆ ಹೊಡೆದ ಉದಾಹರಣೆ

ನೀಡಬಹುದು. ಶೌಚಕ್ಕೆ ತಂಬಿಗೆಯಲ್ಲಿ ನೀರು ತೆಗೆದುಕೊಂಡ ಕಾರಣಕ್ಕೆ ಹಲ್ಲೆ ಮಾಡಿದ ಉದಾಹರಣೆ ನೀಡಬಹುದು. ಪಂಚರ ಪಂಕ್ತಿಯಲ್ಲಿ ಚಪಾತಿ ಬಡಿಸಿದ್ದಕ್ಕೆ ಹಲ್ಲೆ ಮಾಡಿದ ಇತ್ತೀಚಿನ ಘಟನೆಯನ್ನೂ ಉದಾಹರಣೆಯಾಗಿ ನೀಡಬಹುದು. ಈ ಮೇಲಿನ ಪ್ರಕಾರದ ಶೋಷಣೆ, ಅಪರಾಧಗಳು ನಿಮ್ಮಲ್ಲಿ ಕುಳಿತಿರುವ ಯಾರಿಗಾದರೂ ಅನುಭವಕ್ಕೆ ಬಂದಿರಬಹುದು. ಎಲ್ಲಿ ಹಲ್ಲೆ ಮಾಡುವುದಕ್ಕೆ ಅವಕಾಶ ಇಲ್ಲವೋ ಅಲ್ಲಿ ಬಹಿಷ್ಕಾರದ ಶಸ್ತ್ರವನ್ನು ಪ್ರಯೋಗಿಸಲಾಗುತ್ತದೆ ಎನ್ನುವ ಅನುಭವ ನಿಮಗೆ ಇದೆ. ಕೂಲಿ ಕೆಲಸ ಸಿಗದಂತೆ ಮಾಡುವುದು. ಗೋಮಾಳದಲ್ಲಿ ನಿಮ್ಮ ಜಾನುವಾರುಗಳು ಹೋಗದಂತೆ ತಡೆಯುವುದು. ಇಲ್ಲವೇ ನಿಮಗೆ ಊರಿನಲ್ಲಿ ಹೆಜ್ಜೆ ಇಡದಂತೆ ಪ್ರತಿಬಂಧಿಸುವುದು ಇತ್ಯಾದಿ ಬಹಿಷ್ಕಾರಗಳನ್ನು ಸ್ಪೃಶ್ಯ ಹಿಂದೂಗಳು ನಿಮ್ಮ ಮೇಲೆ ಒತ್ತಾಯದಿಂದ ಹೇರಿರುವ ನೆನಪುಗಳಲ್ಲಿ ಇಲ್ಲಿ ನೆರದಿದ್ದವ ಸಾಕಷ್ಟು ಜನರಲ್ಲಿ ಇದೆ. ಆದರೆ ಈ ರೀತಿ ಏಕೆ ಆಗುತ್ತದೆ. ಇದಕ್ಕೆ ಮೂಲ ಕಾರಣ ಏನೆನ್ನುವುದು ಇಲ್ಲಿರುವ ಕೆಲವೇ ವ್ಯಕ್ತಿಗಳಿಗೆ ಅದು ಗೊತ್ತು ಎನ್ನುವುದು ನನ್ನ ಭಾವನೆ.

## ಇದು ವರ್ಗ ಕಲಹದ ವಿಚಾರ

ಮೇಲೆ ನೀಡಿರುವ ಕಲಹದ ಉದಾಹರಣೆಗಳಿಗೂ ವ್ಯಕ್ತಿಯೊಬ್ಬನ ಗುಣಾವಗುಣಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲ. ಅಸ್ಪೃಶ್ಯತೆಯ ಪ್ರಶ್ನೆಯೆಂದರೆ ವರ್ಗ ಕಲಹದ ಪ್ರಶ್ನೆಯೂ ಹೌದು. ಸ್ಪೃಶ್ಯ ಮತ್ತು ಅಸ್ಪೃಶ್ಯ ಸಮಾಜದ ನಡುವೆ ಇರುವ ಕಲಹ ಇದು. ಕೇವಲ ಒಬ್ಬ ವ್ಯಕ್ತಿಯ ಮೇಲೆ ಸಾಧಿಸುತ್ತಿರುವ ವೈರತ್ವದ ಪ್ರಶ್ನೆಯಲ್ಲ ಇದು. ಒಂದು ವರ್ಗ ಇನ್ನೊಂದು ವರ್ಗದ ಮೇಲೆ ಸಾಧಿಸುತ್ತಿರುವ ವೈರತ್ವದ ಪ್ರಶ್ನೆ ಇದು. ಒಂದು ವರ್ಗ ಇನ್ನೊಂದು ವರ್ಗದ ಮೇಲೆ ನಡೆಸುತ್ತಿರುವ ಅನ್ಯಾಯದ ಪ್ರಶ್ನೆಯಾಗಿದೆ. ಈ ವರ್ಗ ಕಲಹ ಸಾಮಾಜಿಕ ಸ್ಥಾನಮಾನಕ್ಕೆ ಸಂಬಂಧಿಸಿದ್ದು ಆಗಿದೆ. ಒಂದು ವರ್ಗ ಇನ್ನೊಂದು ವರ್ಗದೊಂದಿಗೆ ಸಂವಾದ ನಡೆಸುವ ಸಂದರ್ಭದಲ್ಲಿ ಯಾವ ರೀತಿಯ ಸಂಬಂಧ ಇರಬೇಕು ಎನ್ನುವುದರ ಪ್ರಶ್ನೆ ಇದು. ಮೇಲೆ ನೀಡಿರುವ ಕಲಹದ ಉದಾಹರಣೆಗಳ ಆಧಾರದ ಮೇಲೆ ಒಂದು ಅಂಶ ಬಹಿರಂಗವಾಗಿ ಸ್ಪಷ್ಟವಾಗುವುದೆಂದರೆ ನೀವು ಮೇಲ್ವರ್ಗದವರೊಂದಿಗೆ ಬೆರೆಯಬೇಕಾದ ಸಂದರ್ಭದಲ್ಲಿ ಅವರ ವರ್ತನೆ ಸಮಾನತೆಯ ತತ್ವದ ಮೇಲಾಗಬೇಕೆಂದು ನೀವು ಆಗ್ರಹಿಸುತ್ತೀರಿ ಎನ್ನುವ ಕಾರಣಕ್ಕೆ ಈ ಜಗಳಗಳು ಉದ್ಭವವಾಗುತ್ತವೆ. ಒಂದು ವೇಳೆ ಆ ರೀತಿ ಏನೂ ಇಲ್ಲದಿದ್ದರೆ ಚಪಾತಿ ತಿಂದದ್ದಕ್ಕೆ, ಉತ್ತಮ ಬಟ್ಟೆ ಧರಿಸಿದ್ದಕ್ಕೆ, ಜನಿವಾರ ಹಾಕಿದ್ದಕ್ಕೆ, ತಾಮ್ರ–ಹಿತ್ತಾಳೆಯ ಪಾತ್ರೆಗಳಲ್ಲಿ ನೀರು ತಂದದ್ದಕ್ಕೆ, ಕುದುರೆ ಮೇಲೆ ದಿಬ್ಬಣ ತೆಗೆದುಕೊಂಡು ಹೋಗಿದ್ದಕ್ಕೆ ಈ ಜಗಳಗಳು ಆಗುತ್ತಿರಲಿಲ್ಲ. ಅಸ್ಪೃಶ್ಯನೊಬ್ಬ ಚಪಾತಿ ತಿಂದದ್ದಕ್ಕೆ, ಉತ್ತಮ ಬಟ್ಟೆ ಧರಿಸಿದ್ದರಿಂದ ಅಥವಾ ಕುದುರೆಯ ಮೇಲೆ ದಿಬ್ಬಣ ಹೋಗಿದ್ದರಿಂದ ಮೇಲ್ವರ್ಗದವರಿಗೆ ಯಾವುದೇ ನಷ್ಟ ಆಗುವುದಿಲ್ಲ. ಆದರೂ ಸ್ಪೃಶ್ಯ ವರ್ಗವು ಅಸ್ಪೃಶ್ಯರ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತದೆ. ಈ ಆಕ್ರೋಶಕ್ಕೆ ಒಂದೇ ಕಾರಣ ಏನೆಂದರೆ ಇಂತಹ ಸಮಾನತೆ ವರ್ತನೆಯಿಂದ ಅವರ ಮಾನ ಮರ್ಯಾದೆಗೆ ಧಕ್ಕೆಯುಂಟಾಗುತ್ತದೆನ್ನುವ ಭ್ರಮೆ ಹಿಂದೂಗಳಲ್ಲಿದೆ. ನೀವು ನೀಚರು, ನೀವು ಅಪವಿತ್ರರು, ನೀವು ಕೊನೆಯ ಮೆಟ್ಟಿಲಿನಲ್ಲಿ ಇದ್ದರೆ ಮಾತ್ರ ನಿಮ್ಮನ್ನು ಸುಖವಾಗಿರುವುದಕ್ಕೆ ಬಿಡುತ್ತೇವೆ. ಮೆಟ್ಟಿಲು ಬಿಟ್ಟು ಮೇಲೇರುವುದಕ್ಕೆ ಯತ್ನಿಸಿದರೆ ಕಲಹ ಆರಂಭವಾಗುತ್ತದೆ ಎನ್ನುವುದು ನಿರ್ವಿವಾದ ಸಂಗತಿ. ಮೇಲಿನ ಉದಾಹರಣೆಯಿಂದ ಒಂದು ಮಾತು ಸಷ್ಟವಾಗುತ್ತದೆ. ಅಸ್ಪೃಶ್ಯತೆ ಕೇವಲ ನಿಮಿತ್ತ ಮಾತ್ರ ಅಲ್ಲ ನಿತ್ಯನೂತನ ಆಗಿದೆ. ಇದೇ ಮಾತನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳಬೇಕೆಂದರೆ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಿನ

ಕಲಹಗಳು ನಿತ್ಯ ಎನ್ನುವಂತಾಗಿದ್ದು, ತ್ರಿಕಾಲ ಆಬಾಧಿತ ಎನ್ನುವಂತಾಗಿವೆ. ಯಾವುದೇ ಕಾಲಮಾನಕ್ಕೆ ಅನುಗುಣವಾಗಿ ಅವುಗಳು ಬದಲಾಗಿಲ್ಲ. ಇದೀಗ ನೀವು ನೀಚ ವರ್ಗದಲ್ಲಿ ಇದ್ದೀರೋ ಅದೇ ರೀತಿ ನಾಳೆ ಕೂಡ ಹಾಗೆಯೇ ಇರಬೇಕಾಗುತ್ತದೆ. ಇದರ ಅರ್ಥ ಹೀಗಿದೆ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಿನ ಈ ಜಗಳ ಶಾಶ್ವತವಾಗಿರುತ್ತದೆ. ಈ ಕಲಹದಿಂದ ನೀವು ಹೇಗೆ ಹೊರಗೆ ಬರುತ್ತೀರಿ ಎನ್ನುವುದೇ ಈಗ ಮುಂದಿರುವ ಪ್ರಶ್ನೆ ಮತ್ತು ನಿಮಗೆ ಈ ಕುರಿತು ಚಿಂತನೆ ಮಾಡದೇ ಗತ್ಯಂತರವಿಲ್ಲ ಎನ್ನುವುದು ನನ್ನ ಅನಿಸಿಕೆ. ನಿಮ್ಮಲ್ಲಿ ಇರುವವರ ಪೈಕಿ ಹಿಂದೂಗಳು ಯಾವ ರೀತಿ ವರ್ತಿಸುತ್ತಾರೋ ಆ ರೀತಿ ವರ್ತನೆ ತೋರುವವರಿಗೆ, ಅವರ ಸೇವಾಧರ್ಮ ಸ್ವೀಕರಿಸಿ ಬದುಕುವಂತಹ ಜನರಿಗೆ ಈ ಕುರಿತು ವಿಚಾರ ಮಾಡುವ ಅವಶ್ಯಕತೆ ಇಲ್ಲ. ಆದರೆ ಯಾರಿಗೆ ಸ್ವಾಭಿಮಾನಿ ಜೀವನದ ಅವಶ್ಯಕತೆ ಇದೆಯೋ ಯಾರಿಗೆ ಸಮಾನತೆಯ ಜೀವನ ಬೇಕೆಂದು ಅನ್ನಿಸುತ್ತದೋ ಅಂತಹವರು ಈ ಪ್ರಶ್ನೆ ಕುರಿತು ಚಿಂತನೆ ಮಾಡದೇ ಗತ್ಯಂತರವಿಲ್ಲ. ಈ ಕಲಹದಲ್ಲಿ ಯಾವ ರೀತಿ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಸಾಧ್ಯ ಎಂದು ವಿಚಾರ ಮಾಡುವುದು ಅತ್ಯಗತ್ಯ. ಈ ಪ್ರಶ್ನೆಯನ್ನು ಯಾವ ರೀತಿ ಪರಿಹರಿಸಲು ಸಾಧ್ಯ ಎಂದು ತೀರ್ಮಾನಕ್ಕೆ ಬರಲು ನನಗಂತೂ ಕಷ್ಟವಾಗುವುದಿಲ್ಲ. ಯಾವುದೇ ಕಲಹದಲ್ಲಿ ಯಾರು ಹೆಚ್ಚು ಶಕ್ತಿಶಾಲಿ ಇರುತ್ತಾರೋ ಅವರಿಗೆ ಜಯ ಲಭಿಸುತ್ತದೆ. ಯಾರಿಗೆ ಸಾಮರ್ಥ್ಯ ಇಲ್ಲವೋ ಅವರು ಗೆಲವಿನ ಆಶಯ ಇರಿಸಿಕೊಳ್ಳುವುದು ಬೇಡವೇ ಬೇಡ. ಈ ಮಾತು ಎಲ್ಲರ ಜೀವನದಲ್ಲಿ ಸ್ಪಷ್ಟವಾಗಿದೆ. ಇದಕ್ಕೆ ಸಮರ್ಥನೆಯಾಗಿ ಇನ್ನಷ್ಟು ಪುರಾವೆ ನೀಡುವುದು ಅಗತ್ಯವಿಲ್ಲ.

## ಮೊದಲು ಸಾಮರ್ಥ್ಯದ ಗಳಿಕೆಯಾಗಲಿ

ಇದರ ಮುಂದಿನ ಪ್ರಶ್ನೆಯ ಬಗ್ಗೆ ನೀವು ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಈ ಕಲಹದಿಂದ ಮುಕ್ತವಾಗುವ ನಿಟ್ಟಿನಲ್ಲಿ ನಿಮ್ಮಲ್ಲಿ ಅಷ್ಟು ಸಾಮರ್ಥ್ಯ ಇದೆಯಾ? ಮನುಷ್ಯನಿಗೆ ಮೂರು ಸಾಮರ್ಥ್ಯಗಳಿರುತ್ತವೆ. ಮೊದಲನೆಯದ್ದು ಮನುಷ್ಯ ಬಲ, ಎರಡನೆಯದ್ದು ದ್ರವ್ಯಬಲ ಮತ್ತು ಮೂರನೆಯದ್ದು ಮಾನಸಿಕ ಸಾಮರ್ಥ್ಯ. ಈ ಮೂರು ಸಾಮರ್ಥ್ಯಗಳ ಪೈಕಿ ನಿಮ್ಮಲ್ಲಿ ಇರುವ ಸಾಮರ್ಥ್ಯ ಯಾವುದು? ಮನುಷ್ಯ ಬಲದ ದೃಷ್ಟಿಯಿಂದ ನೋಡಿದರೆ ನೀವು ಅಲ್ಪಸಂಖ್ಯಾತರು ಎನ್ನುವುದು ಬಹಿರಂಗ ಸತ್ಯ. ಮುಂಬೈ ಪ್ರದೇಶದಲ್ಲಿ ಅಸ್ಪೃಶ್ಯ ವರ್ಗದ ಜನಸಂಖ್ಯೆ ಎಂಟರಲ್ಲಿ ಒಂದು ಭಾಗವಿದೆ. ಅದೂ ಕೂಡ ಸಂಘಟಿತವಾಗಿಲ್ಲ. ತಮ್ಮೊಳಗಿನ ಜಾತಿಭೇದದ ಕಾರಣ ಅವರಲ್ಲಿ ಸಂಘಶಕ್ತಿಯ ಅಭಾವ ಇದೆ. ಸಂಘಟಿತವಾಗಿಯಂತೂ ಇಲ್ಲವೇ ಇಲ್ಲ. ಒಂದೇ ಸ್ಥಳದಲ್ಲಿ ಇದ್ದಾರಾ ಅದೂ ಇಲ್ಲ. ಹಳ್ಳಿ ಹಳ್ಳಿಗಳಲ್ಲಿ ಚದುರಿಹೋಗಿದ್ದಾರೆ. ಹಣದ ವಿಚಾರದಲ್ಲಿ ಹೇಳುವುದಾದರೆ ನಿಮ್ಮ ಸ್ಥಿತಿ ಇನ್ನಷ್ಟು ನಿಕೃಷ್ಟ. ನಿಮ್ಮ ಬಳಿ ಒಂದಿಷ್ಟು ಮನುಷ್ಯ ಬಲ ಇದೆ ಎಂದು ಹೇಳಬಹುದು ಆದರೆ ದ್ರವ್ಯಬಲವಂತೂ ಇಲ್ಲವೇ ಇಲ್ಲ. ನಿಮಗೆ ವ್ಯಾಪಾರ ಇಲ್ಲ. ಉದ್ದಿಮೆಗಳಿಲ್ಲ. ನೌಕರಿ ಇಲ್ಲ ಮತ್ತು ಜಮೀನು ಕೂಡ ಇಲ್ಲ. ಮೇಲ್ವರ್ಗದವರು ನೀಡುವ ತುಂಡು ರೊಟ್ಟಿಯ ಮೇಲೆ ನಿಮ್ಮ ಉಪಜೀವನ. ನಿಮಗೆ ಅನ್ನ ಇಲ್ಲ. ಬಟ್ಟೆ ಇಲ್ಲ ಎಂದ ಮೇಲೆ ನಿಮ್ಮ ಬಳಿ ಇರುವ ದ್ರವ್ಯ ಬಲ ಎಷ್ಟಿರಬಹುದು? ಅನ್ಯಾಯ ಆದರೆ ಕೋರ್ಟಿಗೆ ಹೋಗಿ ಮೊಕದ್ದಮೆ ದಾಖಲಿಸುವಷ್ಟು ಸಾಮರ್ಥ್ಯ ನಿಮ್ಮಲ್ಲಿ ಇಲ್ಲ. ನಿಮ್ಮಲ್ಲಿರುವ ಸಾವಿರಾರು ಜನರಿಗೆ ಕೋರ್ಟು ಕಚೇರಿಯ ವೆಚ್ಚ ಭರಿಸುವ ಸಾಮರ್ಥ್ಯ ಇಲ್ಲದ ಕಾರಣಕ್ಕೆ ಹಿಂದೂಗಳಿಂದ ಆಗುವ ತೊಂದರೆ, ಶೋಷಣೆ, ಅಪಮಾನ, ವಿಡಂಬನೆಗಳನ್ನು ಮೂಕರಾಗಿ ಅನುಭವಿಸುತ್ತಿದ್ದೀರಿ. ಮಾನಸಿಕ ಸಾಮರ್ಥ್ಯದ್ದು ಮಾತ್ರ ಇದಕ್ಕಿಂತ ಹೀನ ಪರಿಸ್ಥಿತಿ. ನೂರಾರು ವರ್ಷಗಳನ್ನು

ಮೇಲ್ವರ್ಗದವರ ಸೇವೆಯಲ್ಲಿ ಕಳೆದಿರುವುದರಿಂದ ಅವರು ಮಾಡಿದ ವಿಡಂಬನೆ, ಛಿ. ಥೂಗಳನ್ನು ಎದುರಾಡದೇ ಅನುಭವಿಸಿದ ಪರಿಣಾಮ ಪ್ರತ್ಯುತ್ತರ ನೀಡುವ ಸ್ವಭಾವ, ಪ್ರತೀಕಾರದ ಧೈರ್ಯ ನಿರ್ಮೂಲನೆಯಾಗಿದೆ. ನಿಮ್ಮಲ್ಲಿನ ಆತ್ಮವಿಶ್ವಾಸ, ಉತ್ಸಾಹ ಮತ್ತು ಮಹಾತ್ವಾಕಾಂಕ್ಷೆಗಳು ವಿಮುಖವಾಗಿವೆ. ನಿಮ್ಮಲ್ಲಿನ ಎಲ್ಲ ಜನರು ಹತಾಶೆ, ದೀನಾವಸ್ಥೆ ಮತ್ತು ನಿಸ್ತೇಜರಾಗಿದ್ದೀರಿ. ನಾವು ಏನು ಬೇಕಾದರೂ ಸಾಧಿಸಬಲ್ಲೆವು ಎನ್ನುವಂತಹ ವಿಚಾರ ಯಾರ ಮನಸ್ಸಿನಲ್ಲೂ ಬರಲಿಕ್ಕೆ ಸಾಧ್ಯವಾಗದಂತಹ ಸ್ಥಿತಿಯಲ್ಲಿದ್ದೀರಿ.

## ನಿಮ್ಮದೇ ಏಕೆ ಶೋಷಣೆ ಆಗುತ್ತಿದೆ?

ನಾನು ವರ್ಣಿಸಿದ ವಾಸ್ತವಿಕ ಚಿತ್ರಣ ಒಂದು ವೇಳೆ ನಿಜವಾಗಿದ್ದರೆ ಅದರಿಂದ ಹೊರಬರುವ ಸಿದ್ಧಾಂತಕ್ಕೆ ನೀವು ಒಪ್ಪಿಗೆ ಸೂಚಿಸಬೇಕಾಗುತ್ತದೆ. ನಿಮ್ಮಲ್ಲಿ ಸಾಮರ್ಥ್ಯವಿಲ್ಲದ ಕಾರಣ ನಿಮ್ಮ ಮೇಲೆ ನಿರಂತರವಾಗಿ ಅನ್ಯಾಯ ಆಕ್ರಮಣ ನಡೆಯುತ್ತಿವೆ ಎನ್ನುವುದರಲ್ಲಿ ನನಗೆ ಸಂಶಯವೇ ಇಲ್ಲ. ಈ ಪ್ರದೇಶದಲ್ಲಿ ನೀವು ಅಲ್ಪಸಂಖ್ಯಾತರಿದ್ದೀರಿ. ಎಲ್ಲ ಕಡೆಯಂತೂ ಅಲ್ಲವಲ್ಲ. ನಿಮ್ಮಂತೆಯೆ ಮುಸ್ಲಿಂರು ಅಲ್ಪಸಂಖ್ಯಾತರು, ಊರಿನಲ್ಲಿ ಯಾವ ರೀತಿ ಮಹಾರ್, ಮಾಂಗ್‌ರ ಒಂದೆರಡು ಮನೆಗಳು ಇರುತ್ತವೋ ಅದೇ ರೀತಿ ಮುಸ್ಲಿಂರ ಒಂದು ಇಲ್ಲವೇ ಎರಡು ಮನೆಗಳಿರುತ್ತವೆ. ಆದರೆ ಮುಸ್ಲಿಂರ ತಂಟೆಗೆ ಯಾರೂ ಹೋಗುವುದಿಲ್ಲ. ಆದರೆ ನಿಮ್ಮ ಮೇಲೆ ಮಾತ್ರ ನಿರಂತರವಾಗಿ ಅನ್ಯಾಯ ನಡೆಯುತ್ತಲೇ ಇರುತ್ತದೆ. ಇದಕ್ಕೆ ಕಾರಣ ಏನು? ಎರಡು ಮನೆಗಳಿರುವ ಮುಸಲ್ಮಾನರ ತಂಟೆಗೆ ಊರಿನ ಗ್ರಾಮಸ್ಥರು ಹೋಗುವುದಿಲ್ಲ. ಆದರೆ ಊರಿನಲ್ಲಿ ನಿಮ್ಮ ಹತ್ತು ಮನೆಗಳಿದ್ದರೂ ನಿಮ್ಮ ಮೇಲೆ ಶೋಷಣೆ ಏಕೆ ಆಗಬೇಕು? ಇದು ಅತ್ಯಂತ ಮಹತ್ವದ ಪ್ರಶ್ನೆ ಇದಕ್ಕೆ ನೀವೇ ಪರಿಹಾರ ಕಂಡುಕೊಳ್ಳಬೇಕು. ನನ್ನ ಅನಿಸಿಕೆ ಪ್ರಕಾರ ಈ ಪ್ರಶ್ನೆಗೆ ಉತ್ತರ ಏನೆಂದರೆ ಆ ಎರಡು ಮುಸ್ಲಿಂ ಮನೆಗಳ ಬೆಂಬಲಕ್ಕೆ ಇಡೀ ಭಾರತದ ಮುಸ್ಲಿಂ ಸಮುದಾಯ ಇದೆ. ಎರಡು ಮುಸ್ಲಿಂ ಮನೆಗಳ ಉಸಾಬರಿಗೆ ಯಾರಾದರೂ ಹೋಗಿದ್ದರೆ ಪಂಜಾಬ್‌ನಿಂದ ಹಿಡಿದು ಮದ್ರಾಸ್‌ವರೆಗಿನ ಎಲ್ಲ ಮುಸ್ಲಿಂರು ಆ ಮನೆಗಳ ರಕ್ಷಣೆಗೆ ನಿಲ್ಲುತ್ತಿದ್ದರು. ಈ ಸಂರಕ್ಷಣೆಯ ಖಾತ್ರಿ ಇರುವುದರಿಂದಲೇ ಆ ಎರಡು ಮುಸ್ಲಿಂ ಮನೆತನಗಳು ಗ್ರಾಮದಲ್ಲಿ ನಿರ್ಭಯದಿಂದ ತಮ್ಮ ನಿತ್ಯ ಜೀವನ ನಡೆಸುತ್ತಿವೆ. ನಿಮ್ಮ ವಿಚಾರದಲ್ಲಿ ಹೇಳಬೇಕೆಂದರೆ ಹಿಂದೂಗಳು ನಿಮ್ಮ ನೆರವಿಗೆ ಬರುವುದಿಲ್ಲ. ನಿಮ್ಮ ನೆರವಿಗೆ ಯಾರೂ ಧಾವಿಸುವುದಿಲ್ಲ. ನಿಮಗೆ ಹಣದ ನೆರವು ಲಭಿಸುವುದಿಲ್ಲ. ಅಧಿಕಾರಿಗಳ ನೆರವು ಸಿಗುವುದಿಲ್ಲ. ಮಾಮಲೇದಾರ ಮತ್ತು ಪೊಲೀಸರು ಸ್ಪೃಶ್ಯ ವರ್ಗದವರೇ ಆಗಿರುವ ಕಾರಣ ಸ್ಪೃಶ್ಯ–ಅಸ್ಪೃಶ್ಯರ ವಿವಾದದಲ್ಲಿ ಅವರು ತಮ್ಮ ಜಾತಿಗೆ ಆದ್ಯತೆ ನೀಡುತ್ತಾರೆಯೇ ಹೊರತು ಕರ್ತವ್ಯಕ್ಕೆ ಅಲ್ಲ. ನಿಮ್ಮದು ಇಂತಹ ಅಸಹಾಯ ಪರಿಸ್ಥಿತಿ ಇರುವ ಕಾರಣ ಹಿಂದೂಗಳು ನಿಮ್ಮನ್ನು ನಿರಂತರವಾಗಿ ಶೋಷಿಸುತ್ತಿದ್ದಾರೆ. ನಾನು ವಿಮರ್ಶಿಸಿಸಿದ ವಿಚಾರಗಳಿಂದ ಇಲ್ಲಿ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಅದರಲ್ಲಿ ಮೊದಲನೆಯದ್ದೆಂದರೆ ಸಾಮರ್ಥ್ಯವಿಲ್ಲದೇ ನೀವು ಈ ಶೋಷಣೆಗೆ ಪ್ರತೀಕಾರ ತೀರಿಸಲು ಸಾಧ್ಯವಿಲ್ಲ. ಎರಡನೆಯದ್ದು ಪ್ರತೀಕಾರ ತೀರಿಸುವುದಕ್ಕೆ ಅಗತ್ಯವಾಗಿರುವ ಸಾಮರ್ಥ್ಯ ಇಂದು ನಿಮ್ಮ ಹತ್ತಿರ ಇಲ್ಲ. ಈ ಎರಡು ಸಂಗತಿಗಳು ಸ್ಪಷ್ಟವಾದ ಬಳಿಕ ಮೂರನೇ ವಿಷಯ ತಾನೇ ತಾನಾಗಿ ಸ್ಪಷ್ಟವಾಗುತ್ತದೆ. ಅದು ಏನೆಂದರೆ ನಿಮಗೆ ಅತ್ಯಗತ್ಯವಾಗಿರುವ ಸಾಮರ್ಥ್ಯವನ್ನು ನೀವು ಹೊರಗಿನಿಂದ ತರಬೇಕಾಗುತ್ತದೆ. ಈ ಸಾಮರ್ಥ್ಯ ನೀವು ಹೇಗೆ ಪಡೆಯಬಹುದು ಎನ್ನುವುದೇ ನಿಜವಾದ ಮತ್ತು ಮಹತ್ವದ ಪ್ರಶ್ನೆ. ಮತ್ತು ಆ ವಿಚಾರದ ಕುರಿತು ನೀವು ನಿರ್ವಿಕಾರದಿಂದ ವಿಚಾರ ಮಾಡಬೇಕಾಗುತ್ತದೆ.

## ಬಾಹ್ಯ ಸಾಮರ್ಥ್ಯ ಪಡೆದುಕೊಳ್ಳಿ

ಈ ದೇಶದಲ್ಲಿನ ಜಾತಿಭೇದ ಮತ್ತು ಧರ್ಮಭೇದ ಇಲ್ಲಿನ ಜನರ ಮನಸ್ಸಿನ ಮತ್ತು ನೈತಿಕತೆಯ ಮೇಲೆ ವಿಲಕ್ಷಣ ಪ್ರಭಾವ ಬೀರಿರುವುದು ನನಗೆ ಸ್ಪಷ್ಟವಾಗಿದೆ. ಈ ದೇಶದಲ್ಲಿ ದುಃಖ, ದಾರಿದ್ರ್ಯ ಮತ್ತು ಕ್ಲೇಶಗಳಿಗೆ ಯಾರಲ್ಲೂ ವಿಷಾದ ಭಾವ ಮೂಡುವುದಿಲ್ಲ. ಒಂದು ವೇಳೆ ಹಾಗೆ ಮೂಡಿದರೂ ಅದರ ನಿರ್ಮೂಲನೆಗೆ ಯಾರೂ ಸಿದ್ಧರಾಗುವುದಿಲ್ಲ. ತಮ್ಮ ಧರ್ಮ ಬಾಂಧವರ, ತಮ್ಮ ಜಾತಿ ಬಾಂಧವರ ಮೇಲೆ ದುಃಖ, ದಾರಿದ್ರ್ಯ ಅಥವಾ ಶೋಷಣೆಯ ಪ್ರಸಂಗಗಳು ಬಂದರೆ ಮಾತ್ರ ಅವುಗಳ ನಿವಾರಣೆಗೆ ಈ ಜನರು ನೆರವಿಗೆ ಬರುತ್ತಾರೆ. ಈ ನೈತಿಕ ದೃಷ್ಟಿಕೋನ ಎಷ್ಟೇ ವಿಚಿತ್ರ ಮತ್ತು ವಿಕೃತವಾಗಿದ್ದರೂ ಇಂದಿಗೂ ಜಾರಿಯಲ್ಲಿದೆ ಎನ್ನುವುದನ್ನು ಯಾರೂ ಮರೆಯಕೂಡದು. ಗ್ರಾಮವೊಂದರಲ್ಲಿ ಅಸ್ಪೃಶ್ಯರನ್ನು ಹಿಂದೂಗಳು ಶೋಷಿಸುತ್ತಿದ್ದಾರೆ. ಅವರ ವಿರುದ್ಧ ಅಪರಾಧ ಎಸಗುತ್ತಿರುತ್ತಾರೆ. ಅಂತಹ ಗ್ರಾಮದಲ್ಲಿ ಬೇರೆ ಧರ್ಮದವರು ಇದ್ದರೂ ನೆರವಿಗೆ ಬರುವುದಿಲ್ಲ. ಅಸ್ಪೃಶ್ಯರ ಮೇಲೆ ಆಗುತ್ತಿರುವುದು ಅನ್ಯಾಯ, ಶೋಷಣೆ ಎನ್ನುವುದು ಅವರಿಗೂ ಗೊತ್ತಿದೆ. ಇದಕ್ಕೆ ಅವರ ಸಮ್ಮತಿಯೂ ಇಲ್ಲ. ನಡೆಯುತ್ತಿರುವ ಅನ್ಯಾಯವನ್ನು ನೋಡಿದರೂ ಅಸ್ಪೃಶ್ಯರ ನೆರವಿಗೆ ಅವರು ಬರುವುದಿಲ್ಲ. ಇದಕ್ಕೆ ಕಾರಣ ಏನಿರಬಹುದು? ಬೇರೆ ಧರ್ಮದವರಿಗೆ ನೀವು ನಮ್ಮ ನೆರವಿಗೆ ಏಕೆ ಬರುತ್ತಿಲ್ಲ ಎಂದು ಕೇಳಿದರೂ ಅದಕ್ಕೆ ಅವರು, ನಿಮ್ಮಿಬ್ಬರ ಜಗಳದಲ್ಲಿ ನಾವೇಕೆ ಮೂಗು ತೂರಿಸಬೇಕು? ಒಂದು ವೇಳೆ ನೀವು ನಮ್ಮ ಧರ್ಮದವರಾಗಿದ್ದರೆ ಖಂಡಿತ ನಿಮ್ಮ ನೆರವಿಗೆ ಬರುತ್ತಿದ್ದೆವು ಎಂದು ಉತ್ತರ ಹೇಳುತ್ತಾರೆ. ಈ ವಿಷಯದಿಂದ ಸ್ಪಷ್ಟವಾಗುವ ಸಂಗತಿ ಎಂದರೆ, ಬೇರೆ ಸಮಾಜದೊಂದಿಗೆ ನೀವು ಸಂಬಂಧ ಬೆಳೆಸಿಕೊಳ್ಳದಿದ್ದರೆ, ಬೇರೆ ಧರ್ಮದ ಜೊತೆಗೆ ನೀವು ಸೇರದಿದ್ದರೆ ನಿಮ್ಮ ಸಾಮರ್ಥ್ಯ ವೃದ್ಧಿಯಾಗುವುದಿಲ್ಲ. ಅಲ್ಲಿಯವರೆಗೆ ನಿಮಗೆ ಬಾಹ್ಯ ಬೆಂಬಲ ಮತ್ತು ಸಾಮರ್ಥ್ಯ ಸಿಗುವುದಿಲ್ಲ. ಅನ್ಯ ಸಮಾಜದಲ್ಲಿ ನೀವು ಸಮ್ಮಿಳಿತಗೊಳ್ಳದೆ ಹೋದರೆ ನಿಮಗೆ ಆ ಸಮಾಜದ ಬೆಂಬಲ ನಿಮಗೆ ಲಭ್ಯವಾಗುವುದಿಲ್ಲ ಮತ್ತು ಎಲ್ಲಿಯವರೆಗೆ ನಿಮಗೆ ಸಾಮರ್ಥ್ಯ ಬರುವುದಿಲ್ಲವೋ ಅಲ್ಲಿಯವರೆಗೆ ನಿಮಗೆ ಮತ್ತು ನಿಮ್ಮ ಮುಂದಿನ ಪೀಳಿಗೆಗೆ ಇಂದಿನ ದೀನಸ್ಥಿತಿಯಲ್ಲಿ ಜೀವನ ಕಳೆಯಬೇಕಾಗುತ್ತದೆ.

## ಧರ್ಮಾಂತರದ ಆಧ್ಯಾತ್ಮಿಕ ಕಾರಣಗಳು

ಇಲ್ಲಿಯವರೆಗೆ ಐಹಿಕ ಸುಖಕ್ಕಾಗಿ ಧರ್ಮಾಂತರ ಅಗತ್ಯ ಏಕೆನ್ನುವುದಕ್ಕೆ ಕಾರಣಗಳನ್ನು ನೋಡಿದ್ದೇವೆ. ಈಗ ಆಧ್ಯಾತ್ಮಿಕ ಕಾರಣಗಳಿಗಾಗಿ ಧರ್ಮಾಂತರ ಅಗತ್ಯ ಏಕೆನ್ನುವ ಅಭಿಪ್ರಾಯವನ್ನು ಈಗ ನಿಮ್ಮೆದುರು ಮಂಡಿಸುತ್ತಿದ್ದೇನೆ. ಧರ್ಮ ಯಾವ ಕಾರಣಕ್ಕೆ ಇದೆ. ಅದರ ಅವಶ್ಯಕತೆ ಏಕಿದೆ ಎನ್ನುವುದನ್ನು ಮೊದಲು ತಿಳಿದುಕೊಳ್ಳಬೇಕಿದೆ. ಧರ್ಮದ ಕುರಿತು ಅನೇಕ ಜನರು ಮಾಡಿರುವ ವ್ಯಾಖ್ಯಾನಗಳಿವೆ. ಆದರೆ ಆ ಎಲ್ಲ ವ್ಯಾಖ್ಯಾನಗಳಲ್ಲಿಯೂ ಎಲ್ಲರಿಗೂ ಅರ್ಥವಾಗುವಂತಹ ಮತ್ತು ಎಲ್ಲರೂ ಸಮ್ಮತಿಸಬಹುದಾದಂತಹ ಒಂದೇ ವ್ಯಾಖ್ಯಾನ ಎಂದರೆ, "ಯಾವುದು ತನ್ನ ಎಲ್ಲ ಪ್ರಜೆಗಳನ್ನು ಎತ್ತಿ ಹಿಡಿಯುತ್ತದೋ ಅದೇ ಧರ್ಮ" ಇದೇ ಧರ್ಮದ ನಿಜವಾದ ವ್ಯಾಖ್ಯಾನ. ಧರ್ಮದ ವ್ಯಾಖ್ಯಾನ ನಾನು ಮಾಡಿಲ್ಲ. ಧರ್ಮದ ಈ ವ್ಯಾಖ್ಯಾನ ಮಾಡಿದ್ದು, ಸನಾತನಿ ಹಿಂದೂಗಳ ಅಗ್ರಗಣ್ಯ ನಾಯಕ ಲೋಕಮಾನ್ಯ ಗಂಗಾಧರ ಟಿಳಕ್ ಅವರು. ಆದ್ದರಿಂದ ಧರ್ಮದ ವ್ಯಾಖ್ಯಾನ ತಿರುಚುವ ಕೆಲಸ ಮಾಡಿದ್ದೀರಿ ಎಂದು ಯಾರೂ ನನ್ನ ಮೇಲೆ ಆರೋಪ ಮಾಡಲಿಕ್ಕಾಗದು. ಈ ವ್ಯಾಖ್ಯಾನ ನಾನು ಮಾಡದೇ ಇದ್ದರೂ ವಾದಕ್ಕಾಗಿ ಅದಕ್ಕೆ ಮಾನ್ಯತೆ ನೀಡಿದ್ದೇನೆ ಎಂದು ಹೇಳಿಕೊಳ್ಳಲು ನನಗೆ ಹಿಂಜರಿಕೆ ಇಲ್ಲ. ಆ ವ್ಯಾಖ್ಯಾನ ನನಗೆ ಒಪ್ಪಿಗೆ ಇದೆ. ಸಮಾಜದ

ಧೋರಣೆಗಳಿಗೆ ಹಾಕಿರುವ ಬಂಧನವೇ ಧರ್ಮ ಎನ್ನುವುದು ನನ್ನ ಕಲ್ಪನೆ. ವಾಸ್ತವಿಕ ದೃಷ್ಟಿಯಲ್ಲಿ ಮತ್ತು ತಾರ್ಕಿಕ ದೃಷ್ಟಿಕೋನದಲ್ಲಿ ಸಮಾಜದ ಧೋರಣೆಗಳಿಗೆ ಬಂಧನ ಸರಿ ಎಂದು ಅನ್ನಿಸಿದರೂ, ಸಮಾಜದ ಧೋರಣೆಗಳಿಗೆ ಸಮಾಜದ ಮೇಲೆ ಯಾವ ರೀತಿಯ ಬಂಧನಗಳು ಇರಬೇಕೆನ್ನುವ ಪ್ರಶ್ನೆಗೆ ವ್ಯಾಖ್ಯಾನದಲ್ಲಿ ಸ್ಪಷ್ಟ ಬೋಧನೆ ಇಲ್ಲ. ಸಮಾಜಕ್ಕೆ ಸೂಕ್ತ ಧೋರಣೆ ನೀಡುವ ನಿಟ್ಟಿನಲ್ಲಿ ಮಾಡುವ ಸಾಮಾಜಿಕ ಬಂಧನಗಳು ಹೇಗೆ ಇರಬೇಕೆನ್ನುವ ಪ್ರಶ್ನೆ ಪರಿಹಾರವಾಗದಿದ್ದರೂ ಈ ಪ್ರಶ್ನೆ ಧರ್ಮದ ವ್ಯಾಖ್ಯಾನಕ್ಕಿಂತ ಅತ್ಯಂತ ಮಹತ್ವದ್ದಾಗಿದೆ. ಯಾವುದು ಧರ್ಮ ಮತ್ತು ಯಾವುದು ಅಧರ್ಮ ಎನ್ನುವುದು ವ್ಯಾಖ್ಯಾನವನ್ನು ಅವಲಂಬಿಸಿರದೆ ಬಂಧನಗಳ ಉದ್ದೇಶ ಮತ್ತು ಅವುಗಳ ಸ್ವರೂಪವನ್ನು ಅವಲಂಬಿಸಿದೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯನ್ನು ಹಿಡಿದಿಡುವುದಕ್ಕೆ ಸಮರ್ಥವಾಗಿರುವ ಆ ಬಂಧನ ಹೇಗಿರಬೇಕು ಎಂಬುದು ವಿಚಾರಾರ್ಹ ಪ್ರಶ್ನೆಯಾಗಿದೆ. ನಿಜವಾದ ಧರ್ಮದ ಸ್ವರೂಪ ಹೇಗಿರಬೇಕು, ಸಮಾಜ ಮತ್ತು ವ್ಯಕ್ತಿಯ ನಡುವಿನ ತಾತ್ವಿಕ ದೃಷ್ಟಿಕೋನದಲ್ಲಿ ಇರುವ ಸಂಬಂಧ ಏನಿರಬೇಕು ಮತ್ತು ಹೇಗಿರಬೇಕೆನ್ನುವ ಪ್ರಶ್ನೆ ಅತ್ಯಂತ ಸಹಜವಾಗಿ ಉದ್ಭವಿಸುತ್ತದೆ. ಈ ಪ್ರಶ್ನೆಯ ಕಾರಣದಿಂದ ಆಧುನಿಕ ಸಮಾಜ ಶಾಸ್ತ್ರಜ್ಞರು ಮೂರು ಪ್ರಕಾರದ ಧರ್ಮಗಳನ್ನು ಪ್ರತಿಪಾದಿಸಿದ್ದಾರೆ. ವ್ಯಕ್ತಿಗೆ ಮಾತ್ರ ಸುಖ ಲಭಿಸಬೇಕು ಎನ್ನುವುದೇ ಸಮಾಜ ರಚನೆಯ ಅಂತಿಮ ಉದ್ದೇಶವಾಗಿರಬೇಕೆಂದು ಕೆಲವರು ತಮ್ಮ ಅಭಿಪ್ರಾಯ ಮಂಡಿಸಿದ್ದರೆ, ಮತ್ತೆ ಕೆಲವರ ಅಭಿಪ್ರಾಯದಲ್ಲಿ ವ್ಯಕ್ತಿಯಲ್ಲಿರುವ ಆತನ ಮೂಲ ಗುಣಗಳು ಮತ್ತು ಸಾಮರ್ಥ್ಯದ ವಿಕಾಸಕ್ಕೆ ಅವಕಾಶ ಕಲ್ಪಿಸಿ ಪೂರ್ಣಾವಸ್ಥೆಗೆ ತಲುಪಿಸುವುದಕ್ಕೆ ನೆರವಾಗುವುದು ಧರ್ಮದ ಅಂತಿಮ ಉದ್ದೇಶವಾಗಬೇಕೆನ್ನುತ್ತಾರೆ. ಇನ್ನು ಕೆಲವರ ಅಭಿಪ್ರಾಯದಲ್ಲಿ ಸಮಾಜ ಸಂಘಟನೆ ಮುಖ್ಯ ಉದ್ದೇಶವಾಗಿರಬೇಕು. ವ್ಯಕ್ತಿಯ ಉನ್ನತಿ ಅಥವಾ ವ್ಯಕ್ತಿಯ ಸುಖಗಳಿಗೆ ಆದ್ಯತೆ ನೀಡದೆ ಆದರ್ಶಯುತ ಸಮಾಜ ನಿರ್ಮಾಣವೇ ಧರ್ಮದ ಉದ್ದೇಶವಾಗಿರಬೇಕು ಎನ್ನುತ್ತಾರೆ. ಆದರೆ ಹಿಂದೂ ಧರ್ಮದ ಕಲ್ಪನೆ ಈ ಮೂರು ಪರಿಕಲ್ಪನೆಗಳಿಗಿಂತ ಪರಿಪೂರ್ಣ ಭಿನ್ನವಾಗಿದೆ. ಹಿಂದೂ ಧರ್ಮದಲ್ಲಿ ವ್ಯಕ್ತಿಗೆ ಯಾವುದೇ ಸ್ಥಾನವಿಲ್ಲ. ಹಿಂದೂ ಧರ್ಮದ ರಚನೆ ವರ್ಗ ಕಲ್ಪನೆಯನ್ನು ಆಧರಿಸಿದೆ. ಒಬ್ಬರು ಇನ್ನೊಬ್ಬರೊಂದಿಗೆ ಹೇಗೆ ಇರಬೇಕು ಎನ್ನುವುದು ಹಿಂದೂ ಧರ್ಮದಲ್ಲಿ ಬೋಧಿಸಿಲ್ಲ. ಒಂದು ವರ್ಗ ಇನ್ನೊಂದು ವರ್ಗದೊಂದಿಗೆ ಹೇಗೆ ಇರಬೇಕು ಎಂದು ಹೇಳಿದೆ. ಯಾವ ಧರ್ಮದಲ್ಲಿ ವ್ಯಕ್ತಿಗೆ ಪ್ರಾಧಾನ್ಯತೆ ಇಲ್ಲವೋ ಅಂತಹ ಧರ್ಮಕ್ಕೆ ನಾನು ಮಾನ್ಯತೆ ನೀಡುವುದಿಲ್ಲ. ವ್ಯಕ್ತಿಯೊಬ್ಬನ ಜೀವನಕ್ಕೆ ಸಮಾಜ ಅತ್ಯಗತ್ಯವಾಗಿದ್ದರೂ ಕೂಡ ಸಮಾಜವನ್ನು ಹಿಡಿದಿಡುವುದೇ ಧರ್ಮದ ಅಂತಿಮ ಧ್ಯೇಯವಾಗಲು ಸಾಧ್ಯವಿಲ್ಲ. ವ್ಯಕ್ತಿ ವಿಕಸನವೇ ಧರ್ಮದ ನಿಜವಾದ ಉದ್ದೇಶ ಎಂದು ನಾನು ನಂಬುತ್ತೇನೆ.

### ಸಮಾಜ ಮತ್ತು ವ್ಯಕ್ತಿ

ಸಮುದ್ರದಲ್ಲಿ ಒಂದು ಹನಿ ನೀರು ಬಿದ್ದರೆ ಅದು ಹೇಗೆ ಲುಪ್ತವಾಗುತ್ತದೋ ಆ ರೀತಿ ಮನುಷ್ಯ ಸಮಾಜದಲ್ಲಿ ಇದ್ದ ಮಾತ್ರಕ್ಕೆ ಅವನ ಅಸ್ತಿತ್ವ ನಾಶವಾಗುವುದಿಲ್ಲ. ಆತನ ಜೀವನ ಸ್ವತಂತ್ರ. ಆತನ ಜನ್ಮ ಸಮಾಜ ಸೇವೆಗೆ ಆಗಿರದೇ ಆತನ ಆತ್ಮೋದ್ಧಾರಕ್ಕಾಗಿದೆ. ಈ ಒಂದು ಕಾರಣದಿಂದಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ವ್ಯಕ್ತಿಯೊಬ್ಬನಿಗೆ ಇನ್ನೊಬ್ಬ ವ್ಯಕ್ತಿಯನ್ನು ಗುಲಾಮನಾಗಿ ಇರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾವ ಧರ್ಮದಲ್ಲಿ ವ್ಯಕ್ತಿಗೆ ಪ್ರಾಧಾನ್ಯತೆ ಇಲ್ಲವೋ ಅಂತಹ ಧರ್ಮಕ್ಕೆ ನನ್ನ ಮಾನ್ಯತೆ ಇಲ್ಲ. ಹಿಂದೂ ಧರ್ಮದಲ್ಲಿ ವ್ಯಕ್ತಿಗೆ ಪ್ರಾಧಾನ್ಯತೆ ಇಲ್ಲ ಹೀಗಾಗಿ ಆ ಧರ್ಮಕ್ಕೆ ನನ್ನ ಮಾನ್ಯತೆ ಇಲ್ಲ. ಅದೇ ರೀತಿ

ಆ ಧರ್ಮದಲ್ಲಿ ಒಂದು ವರ್ಗಕ್ಕೆ ಶಿಕ್ಷಣ, ಇನ್ನೊಂದು ವರ್ಗಕ್ಕೆ ಶಸ್ತ್ರ ಧಾರಣೆ, ಮೂರನೆಯವರು ವ್ಯಾಪಾರ ಮಾಡಬೇಕು ಮತ್ತು ನಾಲ್ಕನೆಯವರು ಸೇವೆ ಮಾಡಬೇಕೆಂದಿರುವ ಆ ಧರ್ಮಕ್ಕೆ ನಾನು ಮಾನ್ಯತೆ ನೀಡಲಾರೆ. ಶಿಕ್ಷಣ ಪ್ರತಿಯೊಬ್ಬರಿಗೂ ಬೇಕು. ಶಸ್ತ್ರ ಹಿಡಿಯುವುದು ಪ್ರತಿಯೊಬ್ಬರಿಗೂ ಅಗತ್ಯವಿದೆ. ಹಣ ಎಲ್ಲರಿಗೂ ಬೇಕೆಂಬ ವಿಚಾರವನ್ನು ಆ ಧರ್ಮ ಮರೆತಿದೆ. ಒಬ್ಬನನ್ನು ಸರ್ವಜ್ಞನನ್ನಾಗಿ ಮಾಡಲು ಇನ್ನುಳಿದವರನ್ನು ಅಜ್ಞಾನದಲ್ಲಿ ಇರಿಸುವುದು ಬೌದ್ಧಿಕ ಗುಲಾಮಗಿರಿಯ ತಂತ್ರ. ಯಾವ ಧರ್ಮ ಒಬ್ಬ ವ್ಯಕ್ತಿಯನ್ನು ಸಶಸ್ತ್ರನನ್ನಾಗಿ ಮಾಡಿ ಇನ್ನೊಬ್ಬನನ್ನು ನಿಶಸ್ತ್ರನನ್ನಾಗಿಸುವುದು ಧರ್ಮವಲ್ಲ ಅದು ಇನ್ನೊಬ್ಬನನ್ನು ಪರತಂತ್ರದಲ್ಲಿರಿಸುವ ತಂತ್ರ. ಕೆಲವರಿಗೆ ಮಾತ್ರ ಹಣ ಗಳಿಕೆಯ ಮಾರ್ಗ ಮುಕ್ತಗೊಳಿಸಿ ಇನ್ನುಳಿದವರು ಅವರ ಅವಲಂಬನೆಯಲ್ಲಿರುವಂತೆ ಮಾಡುವುದು ಧರ್ಮವಾಗಿರದೆ ಸ್ವಾರ್ಥದ ಪರಾಕಾಷ್ಠೆಯಾಗಿದೆ. ವ್ಯಕ್ತಿಯೊಬ್ಬನ ಆತ್ಮೋದ್ಧಾರಕ್ಕೆ ಪೂರಕ ವಾತಾವರಣ ಒದಗಿಸುವುದು ಧರ್ಮದ ಮೂಲ ಪರಿಕಲ್ಪನೆ ಎನ್ನುವುದಕ್ಕೆ ನಿಮ್ಮ ಸಹಮತವಿದ್ದರೆ, ಹಿಂದೂ ಧರ್ಮದಲ್ಲಿ ಅಂತಹ ಆತ್ಮೋದ್ಧಾರ ಎಂದಿಗೂ ಸಾಧ್ಯವಿಲ್ಲ. ವ್ಯಕ್ತಿಯ ವಿಕಾಸಕ್ಕೆ ಸಹಾನುಭೂತಿ, ಸಮಾನತೆ ಮತ್ತು ಸ್ವಾತಂತ್ರ್ಯ ಅತ್ಯಗತ್ಯವಾಗಿದ್ದು, ಹಿಂದೂ ಧರ್ಮದಲ್ಲಿ ಈ ಮೂರು ಸಂಗತಿಗಳ ಪೈಕಿ ಯಾವುದೇ ಒಂದಾದರೂ ತಮ್ಮಲ್ಲಿ ಇದೆ ಎಂದು ಹೇಳಿಕೊಳ್ಳಲು ನಿಮಗೆ ಸಾಧ್ಯವಿದೆಯೇ?

## ಹಿಂದೂ ಧರ್ಮದಲ್ಲಿ ನಿಮ್ಮ ಬಗ್ಗೆ ಸಹಾನುಭೂತಿ ಇದೆಯೇ?

ಸಹಾನುಭೂತಿಯ ದೃಷ್ಟಿಯಲ್ಲಿ ಹಿಂದೂ ಧರ್ಮವನ್ನು ನೋಡಿದರೆ ಎಲ್ಲೆಡೆ ಶೂನ್ಯತ್ವವೇ ಪಸರಿಸಿದೆ ಎಂದು ಹೇಳಬೇಕಾಗುತ್ತದೆ. ನೀವು ಎಲ್ಲಿಯೇ ಹೋಗಲಿ ಅಲ್ಲಿ ನಿಮ್ಮನ್ನು ನಮ್ಮವರು ಎಂದು ನೋಡುವ ಒಬ್ಬ ವ್ಯಕ್ತಿ ಕೂಡ ಸಿಗುವುದಿಲ್ಲ, ಈ ಅನುಭವ ನಿಮಗೆ ಸಾಕಷ್ಟು ಬಾರಿ ಆಗಿರಬೇಕು. ನಮ್ಮವರು ಎನ್ನುವ ಭಾವನೆಯಂತೂ ಇಲ್ಲವೇ ಇಲ್ಲ. ಆದರೆ ಹಿಂದೂ ಧರ್ಮದ ಜನರು ನಿಮ್ಮನ್ನು ಪರಕೀಯರಿಗಿಂತ ಕೀಳಾಗಿ ಕಾಣುತ್ತಾರೆ. ಗ್ರಾಮವೊಂದರಲ್ಲಿನ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಿನ ಪರಸ್ಪರ ಸಂಬಂಧ ಹೇಗೆ ಇರುತ್ತದೆಂದು ನೋಡಲು ಹೋದರೆ ಅದು ಅಕ್ಕಪಕ್ಕದಲ್ಲಿ ಇರುವ ಇಬ್ಬರು ಸಹೋದರರು ಎಂದು ಯಾರೂ ಹೇಳಲಾರರು. ಪರಸ್ಪರ ಕತ್ತಿ ಮಸೆಯುತ್ತಿರುವ ಎರಡು ಸೇನೆಗಳು ನೆಲೆಯೂರಿಯೇನೋ ಎಂಬಂತೆ ಭಾಸವಾಗುತ್ತದೆ. ಹಿಂದೂಗಳಿಗೆ ಮುಸ್ಲಿಂರು ಎಷ್ಟು ಹತ್ತಿರವಾಗಿದ್ದಾರೋ ಮತ್ತು ಅವರೊಂದಿಗೆ ಸ್ನೇಹಭಾವದಿಂದ ವರ್ತಿಸುತ್ತಾರೋ ಅದರಲ್ಲಿನ ನೂರಕ್ಕೆ ಒಂದು ಅಂಶದಷ್ಟು ಕೂಡ ನಿಮ್ಮೊಂದಿಗೆ ಹಿಂದೂಗಳ ವರ್ತನೆ ಇಲ್ಲ. ಲೋಕಲ್ ಬೋರ್ಡ್‌ನಲ್ಲಿ, ಕಾನೂನು ಮಂಡಳಿಯಲ್ಲಿ ಮತ್ತು ವ್ಯಾಪಾರದಲ್ಲಿ ಹಿಂದೂ-ಮುಸ್ಲಿಂರು ಪರಸ್ಪರ ಸಹಕಾರ ಭಾವದಿಂದ ಇರುತ್ತಾರೆ. ನಿಮ್ಮೊಂದಿಗೆ ಹಿಂದೂಗಳು ಸಹಾನುಭೂತಿಯಿಂದ ವರ್ತಿಸಿರುವ ಒಂದೇ ಒಂದು ಉದಾಹರಣೆ ನೀಡಲಿಕ್ಕೂ ನಿಮ್ಮಿಂದ ಸಾಧ್ಯವಾಗದು. ಇದಕ್ಕೆ ತದ್ವಿರುದ್ಧ ಎನ್ನುವಂತೆ ಯಾವಾಗಲೂ ಅವರ ಆಕ್ರೋಶ ನಿಮ್ಮ ಮೇಲೆ ಇದ್ದೇ ಇರುತ್ತದೆ ಎನ್ನುವುದು ನಿಜ. ನಿಮ್ಮ ಬಗ್ಗೆ ಹಿಂದೂಗಳ ಮನಸ್ಸಿನಲ್ಲಿರುವ ಆಕ್ರೋಶಕ್ಕೆ ಯಾವ ಪರಿ ಅಪಾಯಕಾರಿಯಾಗಿ ಪರಿಣಮಿಸಿದೆಯೆಂದರೆ, ನಿಮ್ಮಲ್ಲಿರುವವರ ಪೈಕಿ ಯಾರಾದರೂ ನ್ಯಾಯ ಕೇಳಿ ಕೋರ್ಟಿಗೆ ಹೋಗಿದ್ದ ಪ್ರಸಂಗ ಇದ್ದರೆ, ಅಥವಾ ನೆರವಿಗಾಗಿ ಪೊಲೀಸರ ಬಳಿ ಹೋಗಿದ್ದರೆ ತಮ್ಮ ಆ ಅನುಭವಗಳೇ ಅದನ್ನು ಹೇಳಬಲ್ಲವು. ಕೋರ್ಟು ನಮಗೆ ನ್ಯಾಯ ನೀಡಬಹುದು ಅಥವಾ ಪೊಲೀಸರು ನಮ್ಮ ನೆರವಿಗೆ ಬರಬಹುದು ಎಂದು ನಿಮ್ಮಲ್ಲಿ ಯಾರೇ ಒಬ್ಬರಿಗಾದರೂ ಅಂತಹ ವಿಶ್ವಾಸ ಇದೆಯೇ? ಈ ರೀತಿ ಅನ್ನಿಸದಿದ್ದರೂ ಕೂಡ ಪರವಾಗಿಲ್ಲ. ಆದರೆ ಆ ರೀತಿ ಆಗುವುದಕ್ಕೆ ಕಾರಣ ಏನು? ನನ್ನ ಪ್ರಕಾರ ಈ ಅವಿಶ್ವಾಸಕ್ಕೆ ಇರುವ

ಒಂದೇ ಕಾರಣ ಎಂದರೆ, ಹಿಂದೂ ಜನರಲ್ಲಿ ನಿಮ್ಮ ಬಗ್ಗೆ ಕಿಂಚಿತ್ ಸಹಾನುಭೂತಿಯೂ ಇಲ್ಲ ಆದ್ದರಿಂದ ಅವರು ತಮಗೆ ಕೊಟ್ಟ ಅವಕಾಶದ ಸದುಪಯೋಗ ಮಾಡಿಕೊಳ್ಳುತ್ತಾರೆಂಬ ವಿಶ್ವಾಸ ನಿಮಗೆ ಇಲ್ಲ. ಒಂದು ವೇಳೆ ಇದು ನಿಜವೇ ಆಗಿದ್ದರೆ ಶತ್ರುತ್ವದಿಂದ ತುಂಬಿ ಹೋಗಿರುವ ವಾತಾವರಣದಲ್ಲಿ ಇದ್ದು ಉಪಯೋಗ ಏನು?

### ಹಿಂದೂ ಸಮಾಜದಲ್ಲಿ ನಿಮಗೆ ಸಮಾನತೆ ಇದೆಯೇ?

ನಿಜವಾಗಿಯೂ ಈ ಪ್ರಶ್ನೆ ಕೇಳಲೇಬಾರದು. ಅಸ್ಪೃಶ್ಯತೆಯ ರೂಪದಲ್ಲಿ ಅಸಮಾನತೆ ಮೂರ್ತಸ್ವರೂಪ ಪಡೆದಿದೆ. ಇಂತಹ ಭಯಂಕರ ಅಸಮಾನತೆ ಜಗತ್ತಿನ ಯಾವ ಭಾಗದಲ್ಲೂ ಕಾಣಿಸುವುದಿಲ್ಲ. ಅಸ್ಪೃಶ್ಯತೆಗಿಂತ ಹೆಚ್ಚಿನ ಉಗ್ರ ಸ್ವರೂಪವಿರುವ ಅಸಮಾನತೆ ಜಗತ್ತಿನ ಯಾವುದೇ ಭಾಗದಲ್ಲಿ ನೋಡುವುದಕ್ಕೆ ಸಿಗುವುದಿಲ್ಲ. ಒಬ್ಬ ವ್ಯಕ್ತಿ ತನ್ನ ಮಗಳನ್ನು ಬೇರೆ ಹುಡುಗನಿಗೆ ಧಾರೆ ಎರೆಯದಿರುವುದು. ಅಥವಾ ಒಬ್ಬ, ಇನ್ನೊಬ್ಬನೊಂದಿಗೆ ಸಹಭೋಜನ ಮಾಡದಿರುವಂತಹ ಅನೇಕ ಪ್ರಕಾರದ ಅಸಮಾನತೆಯ ನಿದರ್ಶನಗಳನ್ನು ನಮಗೆ ನೋಡುವುದಕ್ಕೆ ಸಿಗುತ್ತವೆ. ಆದರೆ ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿ ಮುಟ್ಟದಂತಹ ಕೆಟ್ಟ ಸಂಪ್ರದಾಯ ಹಿಂದೂ ಧರ್ಮ ಮತ್ತು ಹಿಂದೂ ಸಮಾಜ ಹೊರತುಪಡಿಸಿ ಬೇರೆ ಎಲ್ಲಾದರೂ ನೋಡಲು ಸಿಗುತ್ತದೆಯೇ? ಯಾವನ ಸ್ಪರ್ಶದಿಂದ ಮನುಷ್ಯ ಲುಪ್ತನಾಗುತ್ತಾನೆಯೋ ಯಾವನ ಸ್ಪರ್ಶ ಮಾತ್ರದಿಂದ ನೀರು ಬತ್ತಿ ಹೋಗುತ್ತದೆಯೋ ಮತ್ತು ಯಾವನ ಸ್ಪರ್ಶದಿಂದ ದೇವರು ಕೂಡ ಅದೃಶ್ಯನಾಗುತ್ತಾನೆಯೋ ಅವನು ಮನುಷ್ಯ ಜಾತಿಯ ಪ್ರಾಣಿಯಲ್ಲಿ ಒಬ್ಬ ಎಂದು ಪರಿಗಣಿಸಲ್ಪಡುತ್ತಾನೆಯೋ? ಅಸ್ಪೃಶ್ಯ ವ್ಯಕ್ತಿಯ ಬಗೆಗಿನ ದೃಷ್ಟಿಕೋನ ಮತ್ತು ಕುಷ್ಠರೋಗಿಯನ್ನು ನೋಡುವ ದೃಷ್ಟಿಕೋನದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಇಬ್ಬರನ್ನೂ ನೋಡುವ ದೃಷ್ಟಿಕೋನದಲ್ಲಿ ಜಿಗುಪ್ಸೆ ಇರುತ್ತದೆ. ಆದರೆ ನಿಮಗಿಂತ ಉತ್ತಮ ಸ್ಥಿತಿ ಕುಷ್ಠರೋಗಿಯದ್ದಿದೆ. ಆತನ ಬಗ್ಗೆ ಒಂದಿಷ್ಟು ಸಹಾನುಭೂತಿಯಾದರೂ ಸ್ಪೃಶ್ಯ ಹಿಂದೂಗಳಲ್ಲಿ ಇರುತ್ತದೆ. ಆದರೆ ನಿಮ್ಮ ಬಗ್ಗೆ ಸಹಾನುಭೂತಿ ಸಾಧ್ಯವೇ ಇಲ್ಲ. ಇಂದಿಗೂ ಹಳ್ಳಿಗಳಲ್ಲಿ ಉಪವಾಸ ವ್ರತ ಆಚರಿಸಿದ ಸ್ಪೃಶ್ಯ ವ್ಯಕ್ತಿ ಉಪವಾಸ ತ್ಯಜಿಸಿ ಭೋಜನ ಮಾಡುವ ಸಂದರ್ಭದಲ್ಲಿ ಅಕಸ್ಮಾತ್ ಆತನ ಕಿವಿಗೆ ಮಹಾರ್ ಶಬ್ದ ಬಿದ್ದರೆ ಆತ ಊಟ ಬಿಟ್ಟು ಏಳುತ್ತಾನೆ. ಇಷ್ಟು ಕಲಂಕ ನಿಮ್ಮ ಶರೀರಕ್ಕೆ, ನಿಮ್ಮ ಜಾತಿಗೆ, ನಿಮ್ಮ ಮಾತುಗಳಿಗೆ ಅಂಟಿಕೊಂಡಿದೆ. ಅಸ್ಪೃಶ್ಯತೆ ಹಿಂದೂ ಧರ್ಮಕ್ಕೆ ಅಂಟಿದ ಕಲಂಕ ಎಂದು ಕೆಲವರು ಹೇಳುತ್ತಾರೆ. ಆ ಹೇಳಿಕೆಯಲ್ಲಿ ನಿಜ ಇಲ್ಲವೇ ಇಲ್ಲ. ವಾಸ್ತವಿಕವಾಗಿ ಹಿಂದೂ ಧರ್ಮವೇ ಕಲಂಕಿತಗೊಂಡಿದೆ. ನೀವು ಹಿಂದೂ ಧರ್ಮದಲ್ಲಿರುವ ಕಾರಣ ನಿಮಗೆ ಇಂತಹದ್ದೊಂದು ದುರ್ಗತಿ ಬಂದೊದಗಿದೆ. ನಿಮ್ಮವರ ಪೈಕಿ ಮುಸ್ಲಿಂ ಧರ್ಮ ಸ್ವೀಕರಿಸಿದವರನ್ನು ಹಿಂದೂಗಳು ಅಸ್ಪೃಶ್ಯರು ಎಂದು ಭಾವಿಸುವುದಿಲ್ಲ. ಇತ್ತೀಚೆಗಷ್ಟೆ ತ್ರಾವಣಕೋರದಲ್ಲಿ ನಡೆದ ಘಟನೆ, ಈ ನಿಟ್ಟಿನಲ್ಲಿ ಚಿಂತನೆಗೆ ಅತ್ಯುತ್ತಮ ವಿಷಯವಾಗಬಲ್ಲುದು. ಅಲ್ಲಿನ ಥಿಯಾ ಜಾತಿಯ ಅಸ್ಪೃಶ್ಯರು ರಸ್ತೆಯಲ್ಲಿ ಸಂಚರಿಸದಂತೆ ನಿರ್ಬಂಧಿಸಲಾಗಿತ್ತು. ಕೆಲವು ದಿನಗಳ ಹಿಂದೆಯಷ್ಟೇ ಆ ಜಾತಿಯ ಕೆಲವರು ಸಿಖ್ ಧರ್ಮ ಸ್ವೀಕರಿಸಿದ್ದು ನಿಮಗೆ ಗೊತ್ತಿರಬೇಕು. ಅಸ್ಪೃಶ್ಯರಿದ್ದಾಗ ಯಾವ ರಸ್ತೆಯಲ್ಲಿ ಸಂಚರಿಸುವುದಕ್ಕೆ ಸಾಧ್ಯವಿರಲಿಲ್ಲವೋ ಅದೇ ಜನರು ಸಿಖ್ ಧರ್ಮ ಸ್ವೀಕರಿಸಿದ ಬಳಿಕ ಅವರ ಮೇಲಿನ ನಿರ್ಬಂಧ ತೆರವುಗೊಳಿಸಲಾಯಿತು. ಈ ಎಲ್ಲ ಸಂಗತಿಗಳಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ನಿಮ್ಮ ಅಸ್ಪೃಶ್ಯತೆ ಮತ್ತು ನಿಮ್ಮ ಅಸಮಾನತೆಗೆ ಒಂದು ವೇಳೆ ಯಾವುದಾದರೂ ಕಾರಣ ಎಂದು ಏನಾದರೂ ಇದ್ದರೆ ಅದು ನಿಮ್ಮ ಮತ್ತು ಹಿಂದೂ ಧರ್ಮದ ಮಧ್ಯೆ ಇರುವ ಕೊಂಡಿ.

ಈ ಅಸಮಾನತೆಯ ಅನ್ಯಾಯಕ್ಕೆ ಸಾಂತ್ವನ ನೀಡುವ ಉದ್ದೇಶದಿಂದ ಕೆಲವು ಸ್ಪೃಶ್ಯ ಜಗತ್ತಿನ ವ್ಯಕ್ತಿಗಳು ನೀವು ಶಿಕ್ಷಣ ಪಡೆದರೆ ಮಾತ್ರ ನಾವು ನಿಮ್ಮನ್ನು ಮುಟ್ಟಿಸಿಕೊಳ್ಳುತ್ತೇವೆ. ನೀವು ಸ್ವಚ್ಛವಾಗಿದ್ದರೆ ಮುಟ್ಟಿಸಿಕೊಳ್ಳುತ್ತೇವೆ ಮತ್ತು ಸಮಾನತೆಯಿಂದ ನೋಡುತ್ತೇವೆ ಎಂದು ಹೇಳುತ್ತಿದ್ದಾರೆ. ನಿಜವಾಗಿ ಹೇಳಬೇಕೆಂದರೆ ನಿರ್ಲಕ್ಷಿತ ಮಹಾರರ, ಬಡ ಮಹಾರರ, ಅಸ್ವಚ್ಛ ಮಹಾರರಿಗೆ ಯಾವ ಗತಿ ಒದಗಿದೆಯೋ ಅದೇ ಗತಿ ಸುಶಿಕ್ಷಿತ ಮಹಾರರು, ಹಣವಂತ ಮಹಾರರದ್ದು ಮತ್ತು ಸ್ವಚ್ಛವಾಗಿರುವ ಮಹಾರರದ್ದು ಆಗುತ್ತದೆ. ಇದು ನಮಗೆ ನಿಮಗೆಲ್ಲರ ಅನುಭವಕ್ಕೆ ಬಂದಿರುವ ಮಾತು. ಆದರೂ ಆ ಪ್ರಶ್ನೆಯನ್ನು ಬದಿಗೆ ಇರಿಸಿದರೂ ಶಿಕ್ಷಣ ಪಡೆಯದೇ, ಹಣ ಗಳಿಸದೇ, ಮೈಮೇಲೆ ಬಟ್ಟೆ ಧರಿಸದ ಹೊರತು ಮಾನ ಮರ್ಯಾದೆ ಸಿಗುವುದಿಲ್ಲ ಎಂದ ಮೇಲೆ ಸಾಮಾನ್ಯ ಮಹಾರ್ ಏನು ಮಾಡಬೇಕು? ಆತನಿಗೆ ಶಿಕ್ಷಣ ಲಭಿಸುವುದು ಇಲ್ಲ. ಅವನಿಗೆ ಧನ ಸಂಪಾದನೆ ಸಾಧ್ಯವಿಲ್ಲ ಮತ್ತು ನೀಟಾದ ಬಟ್ಟೆ ತೊಡುವುದಕ್ಕೆ ಸಾಧ್ಯವಿಲ್ಲದಂತಹ ಮಹಾರ್‌ನಿಗೆ ಸಮಾನತೆ ಹೇಗೆ ಸಿಗಬೇಕು? ಕ್ರೈಸ್ತ, ಮುಸ್ಲಿಂ ಧರ್ಮದಲ್ಲಿ ನೀಡುವ ಸಮಾನತೆಯ ಶಿಕ್ಷಣಕ್ಕೆ ವಿದ್ಯೆ, ಧನ, ಪೋಷಾಕು, ಪರಾಕ್ರಮಗಳಂತಹ ಬಾಹ್ಯ ಸಂಗತಿಗಳಿಗೆ ಎಳ್ಳಷ್ಟು ಸಂಬಂಧವಿಲ್ಲ. ಮನುಷ್ಯನಲ್ಲಿರುವ ಮನುಷ್ಯತ್ವ ಅತ್ಯಂತ ಶ್ರೇಷ್ಠ ಸಂಗತಿ ಎಂದು ಈ ಎರಡೂ ಧರ್ಮಗಳು ಹೇಳುತ್ತವೆ. ಮನುಷ್ಯತ್ವ ಎಲ್ಲರಿಗೂ ಆದರಣೀಯವಾಗಿರಬೇಕು. ಒಬ್ಬ ಇನ್ನೊಬ್ಬನನ್ನು ಅವಮಾನಿಸಬಾರದು. ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಅಸಮಾನತೆಯಿಂದ ನೋಡಬಾರದು ಎಂದು ಆ ಧರ್ಮಗಳಲ್ಲಿ ಬೋಧಿಸಲಾಗುತ್ತದೆ. ಆದರೆ ಹಿಂದೂ ಧರ್ಮದಲ್ಲಿ ಇಂತಹ ಬೋಧನೆಗಳ ಕೊರತೆ ಇದೆ. ಯಾವ ಧರ್ಮದಲ್ಲಿ ಮನುಷ್ಯನ ಮನುಷ್ಯತ್ವಕ್ಕೆ ಮತ್ತು ಆತನಲ್ಲಿರುವ ಮಾನವೀಯತೆಗೆ ಬೆಲೆ ಇಲ್ಲವೋ ಅಂತಹ ಧರ್ಮ ಯಾವ ಪುರುಷಾರ್ಥಕ್ಕೆ? ಮತ್ತು ಅದಕ್ಕೆ ಅಂಟಿಕೊಂಡು ಕುಳಿತುಕೊಳ್ಳುವುದರಿಂದ ಯಾವ ಸಾಧನೆಯಾದೀತು? ಇವುಗಳಿಗೆ ಉತ್ತರವಾಗಿ ಕೆಲವು ಹಿಂದೂಗಳು ಉಪನಿಷತ್ತುಗಳನ್ನು ಸಾಕ್ಷಿಯಾಗಿ ನೀಡುತ್ತಾರೆ. ಅದರಲ್ಲಿ ಈಶ್ವರ ಸರ್ವಾಂತರಯಾಮಿ ಎಂಬ ತತ್ವ ಅಡಗಿದೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಾರೆ. ವಿಜ್ಞಾನ ಮತ್ತು ಧರ್ಮ ಎರಡೂ ಪ್ರತ್ಯೇಕ ವಿಷಯಗಳು. ಯಾವುದೋ ಒಂದು ವಿಷಯ ವೈಜ್ಞಾನಿಕ ತತ್ವವೋ ಅಥವಾ ಧಾರ್ಮಿಕ ಬೋಧನೆಯೋ ಎಂದು ವಿಚಾರ ಮಾಡಬೇಕಾಗುತ್ತದೆ. ಸಮಾಜದ ಮೂಲ ಬಿಜೋಕ್ತಿಯಾಗಿರುವ ಎಲ್ಲರಲ್ಲೂ ಈಶ್ವರನಿದ್ದಾನೆ, ಇದು ವೈಜ್ಞಾನಿಕ ತತ್ವ. ಧರ್ಮಕ್ಕೆ ತಾತ್ವಿಕತೆಗಳ ವರ್ತನೆಯೊಂದಿಗೆ ಸಂಬಂಧವಿಯೇ ಹೊರತು ಅದು ವಿಜ್ಞಾನಕ್ಕೆ ಅನ್ವಯಿಸುವುದಿಲ್ಲ. ಎಲ್ಲರಲ್ಲೂ ಈಶ್ವರ ಇದು ಧರ್ಮ ಬೋಧನೆಯಲ್ಲ ಬದಲಿಗೆ ಇದು ವೈಜ್ಞಾನಿಕ ತತ್ವ ಆಗಿದೆ. ಇದಕ್ಕೆ ಅನುಗುಣವಾಗಿ ಹಿಂದೂಗಳು ನಡೆಯುವುದಿಲ್ಲ ಎನ್ನುವುದಕ್ಕೆ ನನ್ನಲ್ಲಿ ಪುರಾವೆ ಇದೆ. ಇದಕ್ಕೆ ವಿರುದ್ಧವಾಗಿ ಹಿಂದೂಗಳು ಎಲ್ಲರಲ್ಲಿಯೂ ಈಶ್ವರನಿದ್ದಾನೆ ಎನ್ನುವುದು ವೈಜ್ಞಾನಿಕ ತತ್ವವಲ್ಲ. ಅದು ನಮ್ಮ ಧರ್ಮದ ಅಡಿಪಾಯ. ಹೀಗಾಗಿ ನಮ್ಮ ಧರ್ಮ ಶ್ರೇಷ್ಠವಾದುದು ಎಂದು ಹೇಳುತ್ತಾರೆ. ಆದರೆ ಅವರಂತಹ ನೀಚ ಜನರು ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಬಾಯಿಯಲ್ಲಿ ಎಲ್ಲರಲ್ಲೂ ಈಶ್ವರನಿದ್ದಾನೆಂದು ಜಪಿಸಿ ಕೃತಿಯಲ್ಲಿ ಭೂತ, ಪಿಶಾಚಿಗಳಂತೆ ವಿಡಂಬನೆ ಮಾಡುವ ಈ ಜನರನ್ನು ಬಾಯಿಯಲ್ಲಿ ರಾಮನಾಮ ಕೈಯಲ್ಲಿ ಚೂರಿ, ಹೇಳುವುದು ಸಂತನ ಮಾತು, ಮಾಡುವುದು ಕಸಾಯಿ ಕೆಲಸದವರಂತೆ ಇವರನ್ನು ಕೂಡ ದುಷ್ಟ ಜಗತ್ತಿನಲ್ಲಿ ಸೇರ್ಪಡೆ ಮಾಡಬೇಕಾಗುತ್ತದೆ. ಎಲ್ಲರಲ್ಲಿ ಈಶ್ವರನಿದ್ದಾನೆ ಎಂದು ಹೇಳುವ ಇವರು ಮನುಷ್ಯರನ್ನು ಪಶುಗಳಂತೆ ಕಾಣುವ ಇವರು ಡಾಂಭಿಕರು. ಇರುವೆಗಳಿಗೆ ಸಕ್ಕರೆ ಹಾಕುವ ಇವರು ಮನುಷ್ಯರಿಗೆ ಹನಿ ನೀರು ನೀಡದೆ ಸಾಯಿಸುವ ಇವರು ಡಾಂಭಿಕರಿದ್ದಾರೆ. ಅವರೊಂದಿಗೆ ಸೇರಬೇಡಿ. ಅವರೊಂದಿಗೆ ಬೆರೆತದ್ದಕ್ಕಾಗಿ ನಿಮ್ಮ ಮೇಲೆ ಆಗಿರುವ ಪರಿಣಾಮ ಏನು

ಎನ್ನುವುದು ನಿಮ್ಮ ಕಲ್ಪನೆಗೆ ಬಂದಿಲ್ಲ. ನಿಮ್ಮ ಮಾನ ಮೂರಾಬಟ್ಟೆಯಾಯಿತು. ನಿಮ್ಮ ಗೌರವ ಮಣ್ಣು ಸೇರಿತು. ನಿಜವಾಗಿ ಹೇಳಬೇಕೆಂದರೆ ಹಿಂದೂ ಸಮಾಜದಲ್ಲಿ ನಿಮಗೆ ಮಾನ ಮರ್ಯಾದೆ ಇಲ್ಲ ಎಂದು ಹೇಳುವುದು ವಸ್ತುಸ್ಥಿತಿಯ ಅಪೂರ್ಣ ಚಿತ್ರಣವಾಗುತ್ತದೆ. ನಿಮ್ಮನ್ನು ಹಿಂದೂಗಳು ಅಷ್ಟೇ ಏಕೆ, ಕ್ರೈಸ್ತ ಮುಸ್ಲಿಂರು ಕೂಡ ನಿಮ್ಮನ್ನು ಕೀಳಾಗಿ ಕಾಣುತ್ತಾರೆ. ನಿಜವಾಗಿಯೂ ಹೇಳಬೇಕು ಎಂದರೆ ಕ್ರೈಸ್ತ, ಮುಸ್ಲಿಂ ಧರ್ಮಗಳಲ್ಲಿ ಉಚ್ಚ ನೀಚ, ಶ್ರೇಷ್ಠ ಕನಿಷ್ಠ ಭೇದ ಹುಟ್ಟಿಸುವಂತಹ ಬೋಧನೆಗಳಿಲ್ಲ. ಆದಾಗ್ಯೂ ಕೂಡ ಅವರು ನಿಮ್ಮನ್ನು ಕನಿಷ್ಠವಾಗಿ ನೋಡುತ್ತಾರೆ. ಇದಕ್ಕೆ ಕಾರಣ ಏನು? ಹಿಂದೂಗಳು ನಿಮ್ಮನ್ನು ತುಚ್ಛವಾಗಿ ನೋಡುವ ಕಾರಣ ಮುಸ್ಲಿಂ ಮತ್ತು ಕ್ರೈಸ್ತರು ಕನಿಷ್ಠವಾಗಿ ನೋಡುತ್ತಾರೆ. ಒಂದು ವೇಳೆ ಅಸ್ಪೃಶ್ಯರನ್ನು ಸಮಾನವಾಗಿ ನೋಡಿದರೆ ಹಿಂದೂಗಳು ನಮ್ಮನ್ನು ಕೂಡ ನಿಕೃಷ್ಟವಾಗಿ ಕಾಣುತ್ತಾರೆ ಎಂಬ ಭಯದಿಂದ ಮುಸ್ಲಿಂ ಮತ್ತು ಕ್ರೈಸ್ತರು ಕೂಡ ಹಿಂದುಗಳಂತೆ ನಮ್ಮ ಜೊತೆಗೆ ಅಸ್ಪೃಶ್ಯತೆ ಆಚರಿಸುತ್ತಾರೆ. ನಾವು ಹಿಂದೂ ಧರ್ಮದಲ್ಲಿ ಹೀನರು ಎಂದು ಪರಿಗಣಿಸಲ್ಪಟ್ಟಿದ್ದೇವೆ. ಇಷ್ಟೇ ಅಲ್ಲ ಹಿಂದೂಗಳ ಈ ಅಸಮಾನತೆಯ ವರ್ತನೆಯಿಂದಾಗಿ ಇಡೀ ಭಾರತದಲ್ಲಿ ನಾವು ಎಲ್ಲರಿಗಿಂತ ಕೀಳಾಗಿ ಪರಿಗಣಿಸಲ್ಪಟ್ಟಿದ್ದೇವೆ. ಈ ಅಪಮಾನ ಸ್ಥಿತಿಯಿಂದ ಮುಕ್ತಿ ಪಡೆಯುವುದಕ್ಕೆ, ಈ ಕಳಂಕ ತೊಳೆದುಹಾಕುವುದಕ್ಕಾಗಿ, ಮನುಷ್ಯ ಜನ್ಮದ ಸಾರ್ಥಕತೆಗಾಗಿ ಯಾವುದಾದರೂ ಒಂದು ಉಪಾಯ ಇದ್ದರೆ ಅದು ಹಿಂದೂ ಧರ್ಮ ಮತ್ತು ಹಿಂದೂ ಸಮಾಜವನ್ನು ತ್ಯಜಿಸುವುದು.

## ಹಿಂದೂ ಧರ್ಮದಲ್ಲಿ ನಿಮಗೆ ಸ್ವಾತಂತ್ರ್ಯ ಇದೆಯೇ?

ಕಾನೂನು ಪ್ರಕಾರ ವ್ಯವಸಾಯ ಮಾಡುವುದಕ್ಕೆ ಪ್ರತಿಯೊಬ್ಬ ನಾಗರಿಕನಿಗೆ ಇರುವಷ್ಟೇ ಸ್ವಾತಂತ್ರ್ಯ ನಿಮಗೂ ಇದೆ. ಕಾನೂನು ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ಇರವಷ್ಟೇ ವ್ಯಕ್ತಿ ಸ್ವಾತಂತ್ರ್ಯ ನಿಮಗೂ ಇದೆಯೆಂದು ಒಂದಷ್ಟು ಜನರು ಹೇಳಬಹುದು. ಆದರೆ ಇಂತಹ ಹೇಳಿಕೆಯಲ್ಲಿ ಏನಾದರೂ ನಿಜ ಅನ್ನುವುದು ಇದೆಯೇ ಎನ್ನುವುದರ ಬಗ್ಗೆ ಮುಕ್ತವಾಗಿ ಚಿಂತನೆ ಮಾಡಬೇಕಿದೆ. ಕುಲಕಸುಬು ಹೊರತು ಪಡಿಸಿ ಬೇರೆ ಉದ್ಯೋಗ ವ್ಯವಹಾರ ಮಾಡುವುದಕ್ಕೆ ಅವಕಾಶ ನೀಡದೇ ಆ ವ್ಯಕ್ತಿಗೆ ನಿನಗೆ ಉದ್ಯೋಗ ಸ್ವಾತಂತ್ರ್ಯ ಇದೆ ಎಂದು ಹೇಳುವುದರಲ್ಲಿ ಏನು ಅರ್ಥ ಇದೆ. ಯಾರಿಗೆ ಸಂಪತ್ತು ಗಳಿಸುವುದಕ್ಕೆ ಮುಕ್ತ ಮಾರ್ಗಗಳಿಲ್ಲವೋ ಅಂತಹ ವ್ಯಕ್ತಿಗೆ ನಿನ್ನ ಸಂಪತ್ತಿಗೆ ಯಾರೂ ಕೈ ಹಚ್ಚುವುದಿಲ್ಲ. ನಿನ್ನ ಸಂಪತ್ತನ್ನು ನೀನೇ ಅನುಭವಿಸುವುದಕ್ಕೆ ಸ್ವತಂತ್ರ ಎಂದು ಹೇಳುವುದರಲ್ಲಿ ಯಾವ ತಥ್ಯ ಅಡಗಿದೆ? ಜನ್ಮದಿಂದ ಬಂದ ಅಪವಿತ್ರತೆಯ ಕಾರಣಕ್ಕೆ ನೌಕರಿ ಸಿಗುವುದು ದುಸ್ಸಾಧ್ಯ. ಆತನ ಕೈ ಕೆಳಗೆ ನೌಕರಿ ಮಾಡುವುದಕ್ಕೆ ಬೇರೆಯವರಿಗೆ ಅಪಮಾನವಾಗುತ್ತದೆ. ಅಂತಹ ವ್ಯಕ್ತಿಗೆ ನೀನು ಯಾವುದೇ ನೌಕರಿ ಮಾಡುವ ಸ್ವಾತಂತ್ರ್ಯ ಇದೆ ಎಂದು ಹೇಳುವುದು ಕುಚೇಷ್ಟೆಯ ಪರಮಾವಧಿಯಾಗುವುದಿಲ್ಲವೇ? ಕಾಯ್ದೆ ಮುಖಾಂತರ ಸಾಕಷ್ಟು ಹಕ್ಕುಗಳು ಲಭಿಸಬಹುದು ಆದರೆ ಸಮಾಜ ಅವುಗಳನ್ನು ಉಪಯೋಗಿಸುವುದಕ್ಕೆ ಅವಕಾಶ ನೀಡಿದರೆ ಮಾತ್ರ ಅವು ನಿಜವಾದ ಹಕ್ಕುಗಳು ಎನ್ನಿಸಿಕೊಳ್ಳುತ್ತವೆ. ಅಸ್ಪೃಶ್ಯರು ಉತ್ತಮ ಬಟ್ಟೆ ಹಾಕಿಕೊಂಡು ತಿರುಗಾಡಬಹುದು ಎಂದು ಕಾಯ್ದೆ ಮುಖಾಂತರ ಹಕ್ಕು ನೀಡಲಾಗಿದೆ ಎಂದಿಟ್ಟುಕೊಳ್ಳಿ. ಆದರೆ ಹಿಂದೂ ಸಮಾಜ ಅಂತಹ ಬಟ್ಟೆಗಳನ್ನು ಧರಿಸುವುದಕ್ಕೆ ಅವಕಾಶ ನೀಡದಿದ್ದರೆ ಆ ಹಕ್ಕು ಯಾವ ಉಪಯೋಗಕ್ಕೆ ಬಂದಂತಾಯಿತು? ತಾಮ್ರ–ಹಿತ್ತಾಳೆಯ ಪಾತ್ರೆಗಳನ್ನು ಬಳಸುವುದಕ್ಕೆ ಸರ್ಕಾರ ಅಸ್ಪೃಶ್ಯರಿಗೆ ಹಕ್ಕು ನೀಡಿದೆ ಆದರೆ ಹಿಂದೂಗಳು ಲೋಹದ ಪಾತ್ರೆಗಳ ಉಪಯೋಗಕ್ಕೆ ಅವಕಾಶ ನೀಡದಿದ್ದರೆ ಆ ಹಕ್ಕು ಯಾವ ಕಾರಣಕ್ಕೆ? ಅಸ್ಪೃಶ್ಯರು

ತಮ್ಮ ಮನೆಗಳಿಗೆ ಹೆಂಚು ಹಾಕುವುದಕ್ಕೆ ಸರ್ಕಾರ ಅಧಿಕಾರ ನೀಡಿದೆ. ಆದರೆ ಹಿಂದೂ ಸಮಾಜ ಮನೆಗಳಿಗೆ ಹೆಂಚು ಹಾಕುವುದಕ್ಕೆ ಅವಕಾಶ ನೀಡುವುದಿಲ್ಲ ಎಂದ ಮೇಲೆ ಆ ಹಕ್ಕು ಏಕೆ ಬೇಕು? ಈ ರೀತಿ ಸಾಕಷ್ಟು ಉದಾಹರಣೆಗಳನ್ನು ನೀಡಬಹುದು. ಇದರ ಸಾರಾಂಶ ಇಷ್ಟೇ, ಸಮಾಜ ಅವಕಾಶ ನೀಡಿದರೆ ಮಾತ್ರ ಅವುಗಳಿಗೆ ಹಕ್ಕು ಎಂದು ಹೇಳಬಹುದು. ಯಾವ ಹಕ್ಕುಗಳಿಗೆ ಸಮಾಜದ ಅಡೆತಡೆ ಇದೆಯೋ ಅಥವಾ ಯಾವ ಹಕ್ಕುಗಳಿಗೆ ಸಮಾಜದ ಆಕ್ಷೇಪಣೆ ಇದೆಯೋ ಅಂತಹ ಹಕ್ಕುಗಳನ್ನು ಕಾಯ್ದೆ ಮುಖಾಂತರ ನೀಡಿದರೂ ಪ್ರಯೋಜನವಾಗುವುದಿಲ್ಲ. ಅಸ್ಪೃಶ್ಯರಿಗೆ ಕಾಯ್ದೆ ಸ್ವಾತಂತ್ರ್ಯಕ್ಕಿಂತ ಸಾಮಾಜಿಕ ಸ್ವಾತಂತ್ರ್ಯ ಅತ್ಯಗತ್ಯವಾಗಿದೆ. ಎಲ್ಲಿಯವರೆಗೆ ನಿಮಗೆ ಸಾಮಾಜಿಕ ಸ್ವಾತಂತ್ರ್ಯ ಲಭಿಸುವುದಿಲ್ಲವೋ ಅಲ್ಲಿಯವರೆಗೆ ನಿಮಗೆ ಎಷ್ಟೇ ಕಾಯ್ದೆ ಮುಖಾಂತರ ಸ್ವಾತಂತ್ರ್ಯ ನೀಡಿದರೂ ಅದರ ಕಿಂಚಿತ್ ಉಪಯೋಗವಾಗುವುದಿಲ್ಲ. ನಿಮಗೆ ಶಾರೀರಿಕ ಸ್ವಾತಂತ್ರ್ಯ ಇದೆ ಎಂದು ಕೆಲವರು ಹೇಳಬಹುದು. ಕಾಯ್ದೆಯ ಪ್ರತಿಬಂಧವಿಲ್ಲದ ಕಡೆ ನೀವು ಹೋಗಬಹುದು. ಕಾಯ್ದೆಯ ಪ್ರತಿಬಂಧ ಇಲ್ಲ ಎಂದು ಹೇಳುವುದು ನಿಜ. ಆದರೆ ಮನುಷ್ಯನಿಗೆ ಹೇಗೆ ಶರೀರ ಇದೆಯೋ ಅದೇ ರೀತಿ ಮನಸ್ಸೂ ಇದೆ. ಎಷ್ಟು ಶಾರೀರಿಕ ಸ್ವಾತಂತ್ರ್ಯ ಇದೆಯೋ ಅಷ್ಟೇ ಮಾನಸಿಕ ಸ್ವಾತಂತ್ರ್ಯದ ಅಗತ್ಯ ಕೂಡ ಇದೆ. ಕೇವಲ ಶಾರೀರಿಕ ಸ್ವಾತಂತ್ರ್ಯ ಯಾವುದಕ್ಕೂ ಉಪಯೋಗಕ್ಕೆ ಬಾರದು. ಮಹತ್ವ ಇರುವುದು ಆ ಮಾನಸಿಕ ಸ್ವಾತಂತ್ರ್ಯಕ್ಕೆ. ಕೈದಿಯ ಕಾಲಿಗೆ ಹಾಕಿರುವ ಬೇಡಿಗಳನ್ನು ತೆಗೆದು ಮುಕ್ತಗೊಳಿಸುವುದರ ಅರ್ಥ ಏನು? ಉದ್ದೇಶ ಇಷ್ಟೇ ಬಾಹ್ಯ ಜಗತ್ತಿನಲ್ಲಿ ಮುಕ್ತ ಮನಸ್ಸಿನಿಂದ ಸಂಚರಿಸಿ ತನ್ನ ಕರ್ತೃತ್ವ ಶಕ್ತಿಯ ಪೂರ್ಣ ಪ್ರಯೋಜನ ಪಡೆದುಕೊಳ್ಳಲಿ ಎಂದು. ಆದರೆ ಯಾವ ವ್ಯಕ್ತಿಯ ಮನಸ್ಸಿಗೆ ಸ್ವಾತಂತ್ರ್ಯವೇ ಇಲ್ಲವೋ ಆತನಿಗೆ ಬಾಹ್ಯ ಸ್ವಾತಂತ್ರ್ಯ ನೀಡಿ ಏನು ಉಪಯೋಗ? ಮಾನಸಿಕ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯ. ಯಾರ ಮನಸ್ಸು ಸ್ವತಂತ್ರವಾಗಿಲ್ಲವೋ ಅಂತಹ ವ್ಯಕ್ತಿ ಮುಕ್ತವಾಗಿದ್ದರೂ ಗುಲಾಮನೇ ಆಗಿರುತ್ತಾನೆ. ಯಾವನ ಮನಸ್ಸು ಸ್ವತಂತ್ರವಾಗಿಲ್ಲವೋ ಆ ವ್ಯಕ್ತಿ ಕೈದಿಯಾಗಿರದಿದ್ದರೂ ಅವನು ಜೈಲಿನಲ್ಲಿದ್ದಂತೆ. ಯಾವನ ಮನಸ್ಸು ಸ್ವತಂತ್ರವಾಗಿಲ್ಲವೋ ಅಂತಹವನು ಬದುಕಿದ್ದೂ ಸತ್ತಂತೆ. ಮನಸ್ಸಿನ ಸ್ವಾತಂತ್ರ್ಯ ಜೀವಂತಿಕೆಯನ್ನು ಸಾಕ್ಷೀಕರಿಸುತ್ತದೆ. ಮಾನಸಿಕ ಸ್ವಾತಂತ್ರ್ಯ ಲೋಪವಾಗಿಲ್ಲ ಎನ್ನುವುದಕ್ಕೆ ಪುರಾವೆ ಏನು? ಮಾನಸಿಕ ಸ್ವಾತಂತ್ರ್ಯ ಯಾರಿಗೆ ಇದೆ ಎಂದು ಹೇಳಬಹುದು? ಯಾವ ವ್ಯಕ್ತಿ ತನ್ನ ಬುದ್ಧಿ ಜಾಗೃತವಾಗಿರಿಸಿಕೊಂಡು ತನ್ನ ಹಕ್ಕುಗಳೇನು, ತನ್ನ ಅಧಿಕಾರ ಏನು ಮತ್ತು ನನ್ನ ಕರ್ತವ್ಯ ಏನು ಎನ್ನುವುದನ್ನು ತಿಳಿದುಕೊಳ್ಳುತ್ತಾನೋ ಅದಕ್ಕೆ ನಾನು ಸ್ವಾತಂತ್ರ್ಯ ಎನ್ನುತ್ತೇನೆ. ಯಾವ ವ್ಯಕ್ತಿ ಪರಿಸ್ಥಿತಿಯ ಕೈಗೆ ಸಿಕ್ಕು ದಾಸನಾಗದೇ ಪರಿಸ್ಥಿತಿಯ ಮೇಲೆ ಹಿಡಿತ ಸಾಧಿಸುತ್ತಾನೋ ಆ ವ್ಯಕ್ತಿ ಸ್ವತಂತ್ರನಿದ್ದಾನೆ ಎನ್ನುತ್ತೇನೆ. ಯಾವನು ಮೂಢನಂಬಿಕೆಗಳಿಗೆ ಬಲಿ ಬಿದ್ದಿಲ್ಲವೋ, ಕಟ್ಟಳೆಗಳಿಗೆ ಕಟ್ಟು ಬಿದ್ದಿಲ್ಲವೋ ವಿಚಾರಶಕ್ತಿ ಜಾಗೃತವಾಗಿಟ್ಟುಕೊಂಡಿದ್ದಾನೋ ಅವನಿಗೆ ನಾನು ಸ್ವತಂತ್ರ ಎನ್ನುತ್ತೇನೆ. ಯಾವನು ಪರಾಧೀನನಾಗಿಲ್ಲವೋ, ಬೇರೆಯವರ ಕಲಿಕೆಯಂತೆ ನಡೆಯುವುದಿಲ್ಲವೋ ಕೆಲಸದ ಹಿತಾ–ಅಹಿತಗಳನ್ನು ಗಣನೆಗೆ ತೆಗೆದುಕೊಳ್ಳದೇ ಯಾವುದರ ಮೇಲೆಯೂ ವಿಶ್ವಾಸ ಇರಿಸುವುದಿಲ್ಲವೋ ಆ ವ್ಯಕ್ತಿ ನನ್ನ ಪ್ರಕಾರ ಸ್ವತಂತ್ರ. ಯಾವನು ತನ್ನ ಹಕ್ಕುಗಳ ಬಗ್ಗೆ ಜಾಗರೂಕನಾಗಿರುತ್ತಾನೋ, ತನ್ನ ವಿರುದ್ಧವಿರುವ ಜನಮತಕ್ಕೆ ಹೆದರದ, ಬೇರೆಯವರ ಕೈಗೊಂಬೆ ಆಗುವುದಕ್ಕೆ ಸಿದ್ಧವಿಲ್ಲದ ಬುದ್ಧಿ, ಸ್ವಾಭಿಮಾನ ಇರುವ ವ್ಯಕ್ತಿಯೇ ಸ್ವತಂತ್ರ ವ್ಯಕ್ತಿಯಾಗಿದ್ದಾನೆ ಎನ್ನುತ್ತೇನೆ. ಯಾವನು ತನ್ನ ಜೀವನ ಧ್ಯೇಯ ಮತ್ತು ತನ್ನ ಆಯುಷ್ಯವನ್ನು ಬೇರೆಯವರು ತೋರಿಸಿದ ಮಾರ್ಗದಂತೆ ತೀರ್ಮಾನಿಸುವುದಿಲ್ಲವೋ, ಯಾವನು ತನ್ನ ಬುದ್ಧಿಶಕ್ತಿಯ ಸಾಮರ್ಥ್ಯಕ್ಕೆ ತಕ್ಕಂತೆ ತನ್ನ ಜೀವನ ಧ್ಯೇಯ ಏನಿರಬೇಕು ಮತ್ತು ತನ್ನ ಆಯುಷ್ಯವನ್ನು ಯಾವ ಕೆಲಸಕ್ಕೆ ಯಾವ ರೀತಿ ಬಳಕೆಯಾಗಬೇಕು

ಎಂದು ತನಗೆ ತಾನೇ ತೀರ್ಮಾನಿಸುತ್ತಾನೋ ಅಂತಹ ವ್ಯಕ್ತಿಗೆ ಸ್ವಾತಂತ್ರ್ಯ ಇದೆ ಎನ್ನುತ್ತೇನೆ. ಸಾರಾಂಶ ಇಷ್ಟೇ. ಎಲ್ಲವೂ ಯಾವ ವ್ಯಕ್ತಿಯ ಸ್ವಾಧೀನದಲ್ಲಿದೆಯೋ ಆ ವ್ಯಕ್ತಿ ಸ್ವತಂತ್ರ ಎಂದು ಹೇಳುತ್ತೇನೆ.

ಈ ದೃಷ್ಟಿಕೋನದಿಂದ ನೋಡಿದರೆ ನೀವು ಸ್ವತಂತ್ರರೇ? ನಿಮ್ಮ ಜೀವನ ಮತ್ತು ನಿಮ್ಮ ಜೀವನ ಧ್ಯೇಯಗಳು ನಿಮ್ಮ ಸ್ವಾಧೀನದಲ್ಲಿ ಇವೆಯೇ? ನನ್ನ ಅಭಿಪ್ರಾಯದಲ್ಲಿ ನಿಮಗೆ ಸ್ವಾತಂತ್ರ್ಯವಂತೂ ಇಲ್ಲವೇ ಇಲ್ಲ ಬದಲಿಗೆ ನೀವು ದಾಸರು, ಸೇವಕರು ಅಷ್ಟೇ ಅಲ್ಲ ನಿಮ್ಮ ದಾಸ್ಯತ್ವಕ್ಕೆ ಮೇರೆಯೇ ಉಳಿದಿಲ್ಲ. ಹಿಂದೂ ಧರ್ಮದಲ್ಲಿರುವ ಯಾವುದೇ ವ್ಯಕ್ತಿಗೆ ವೈಚಾರಿಕ ಸ್ವಾತಂತ್ರ್ಯ ಇಲ್ಲವೇ ಇಲ್ಲ. ಯಾವ ವ್ಯಕ್ತಿ ಹಿಂದೂ ಧರ್ಮದಲ್ಲಿ ಉಳಿಯುತ್ತಾನೋ ಆ ವ್ಯಕ್ತಿ ತನ್ನ ವೈಚಾರಿಕ ಸ್ವಾತಂತ್ರ್ಯಕ್ಕೆ ತೀಲಾಂಜಲಿ ಇಡಬೇಕಾಗುತ್ತದೆ. ವರ್ತನೆ ಕೂಡ ವೇದಗಳಲ್ಲಿ ಹೇಳಿರುವಂತೆ ಇರಬೇಕು. ಒಂದು ವೇಳೆ ವೇದಗಳಲ್ಲಿ ಅಂತಹ ಆಜ್ಞೆಗಳು ಇಲ್ಲದಿದ್ದರೆ ಸ್ಮೃತಿಯಲ್ಲಿನ ಆಜ್ಞೆಗಳಂತೆ ನಡೆದುಕೊಳ್ಳಬೇಕು. ಸ್ಮೃತಿಗಳಲ್ಲೂ ಅಂತಹ ಆದೇಶಗಳು ಇಲ್ಲದಿದ್ದರೆ ಹಿರಿಯರ ಹೆಜ್ಜೆ ಮೇಲೆ ಹೆಜ್ಜೆ ಇರಿಸಿ ನಡೆಯಬೇಕು. ಹಿಂದೂ ಧರ್ಮದಲ್ಲಿ ಬುದ್ಧಿ ಮತ್ತು ವಿಚಾರಕ್ಕೆ ಪ್ರಾಧಾನ್ಯತೆಯಂತೂ ಇಲ್ಲವೇ ಇಲ್ಲ. ಅದರ ಗಂಧಗಾಳಿ ಕೂಡ ಗೊತ್ತಿಲ್ಲ. ಒಟ್ಟಿನಲ್ಲಿ ಹಿಂದೂಗಳು ಯಾರಿಗಾದರೂ ದಾಸರಾಗಿಯೇ ಇರಬೇಕು. ಇಲ್ಲದಿದ್ದರೆ ವೇದಗಳ ಗುಲಾಮರಾಗಿ ಇರಬೇಕು ಇಲ್ಲದಿದ್ದರೆ ಸ್ಮೃತಿಗಳ ಕಾಲು ಹಿಡಿಯಬೇಕು. ಅದು ಇಲ್ಲದಿದ್ದರೆ ವೈದಿಕರ ಅನುಕರಣೆ ಮಾಡಬೇಕು. ವಿಚಾರ ಶಕ್ತಿಯನ್ನು ಯಾವುದೇ ಕಾರಣಕ್ಕೂ ಉಪಯೋಗಿಸುವಂತಿಲ್ಲ. ಎಲ್ಲಿಯವರೆಗೆ ನೀವು ಹಿಂದೂ ಧರ್ಮದಲ್ಲಿ ಇರುತ್ತೀರೋ ಅಲ್ಲಿಯವರೆಗೆ ನಿಮಗೆ ವೈಚಾರಿಕ ಸ್ವಾತಂತ್ರ್ಯ ಲಭಿಸಲು ಸಾಧ್ಯವೇ ಇಲ್ಲ. ಬಹುಶಃ ಈ ವಿಚಾರ ಸರಣಿಗೆ ಯಾರಾದರೂ, ಕೇವಲ ನಿಮ್ಮದಷ್ಟೇ ಅಲ್ಲ ಹಿಂದೂ ಧರ್ಮವನ್ನು ಪ್ರಮಾಣವಾಗಿ ಸ್ವೀಕರಿಸಿದವರ ವೈಚಾರಿಕ ಶಕ್ತಿಯನ್ನು ಹಿಂದೂ ಧರ್ಮ ಕಬಳಿಸಿದೆ ಎಂದು ಹೇಳಬಹುದು. ಹಿಂದೂ ಧರ್ಮದಲ್ಲಿ ಎಲ್ಲರೂ ಬೌದ್ಧಿಕ ಗುಲಾಮಗಿರಿಯ ಅಡಿಯಾಳಾಗಿದ್ದಾರೆ ಎನ್ನುವುದು ನಿಜ. ಆದರೆ ಎಲ್ಲರೂ ಸಮಾನ ದುಃಖಿಗಳಂತೂ ಅಲ್ಲವಲ್ಲ. ಏಕೆಂದರೆ ಈ ಬೌದ್ಧಿಕ ಗುಲಾಮಗಿರಿಯ ದುಷ್ಪರಿಣಾಮವನ್ನು ಎಲ್ಲರೂ ಅನುಭವಿಸುತ್ತಿಲ್ಲ. ಸ್ಪೃಶ್ಯ ವರ್ಗದ ಐಹಿಕ ಸುಖಗಳ ಮೇಲೆ ಈ ಬೌದ್ಧಿಕ ಗುಲಾಮಗಿರಿ ಯಾವುದೇ ಪರಿಣಾಮ ಬೀರಿಲ್ಲ. ಒಂದು ವೇಳೆ ಅವರು ವೇದಗಳ ಗುಲಾಮರಿದ್ದರೂ, ಸ್ಮೃತಿಗಳ ದಾಸರಿದ್ದರೂ, ವೈದಿಕರ ಅನುಯಾಯಿಗಳಾಗಿದ್ದರೂ ಕೂಡ ವೇದಗಳು, ಸ್ಮೃತಿಗಳು ಮತ್ತು ವೈದಿಕರು ಅವರಿಗೆ ಸಮಾಜದ ನಿತ್ಯ ವ್ಯವಹಾರದಲ್ಲಿ ಉನ್ನತ ಸ್ಥಾನ ಕಲ್ಪಿಸಿವೆ. ವರಿಷ್ಠ ವರ್ಗದ ಹಿಂದೂಗಳು, ವರಿಷ್ಠ ವರ್ಗದ ಹಿಂದೂಗಳ ಬಲ ಸಂವರ್ಧನೆಗೆ ಇಡೀ ಹಿಂದೂ ಧರ್ಮ ಹುಟ್ಟು ಹಾಕಿರುವುದು ನಿರ್ವಿವಾದ ಸಂಗತಿ. ಯಾವುದಕ್ಕೆ ಅವರು ಧರ್ಮ ಎಂದು ಹೇಳುತ್ತಾರೋ ಆ ಧರ್ಮದಲ್ಲಿ ನಿಮಗೆ ಗುಲಾಮನ ಪಾತ್ರ ನೀಡಿದ್ದು ಅಲ್ಲದೇ ಈ ಗುಲಾಮಗಿರಿಯಿಂದ ನೀವು ಮುಕ್ತರಾಗಕೂಡದು ಎಂದು ಆ ಧರ್ಮದಲ್ಲಿ ಅದಕ್ಕೆ ತಕ್ಕ ವ್ಯವಸ್ಥೆ ಕೂಡ ಮಾಡಲಾಗಿದೆ. ಆದ್ದರಿಂದ ಹಿಂದೂ ಧರ್ಮದ ಬೌದ್ಧಿಕ ಗುಲಾಮಗಿರಿಯಿಂದ ಎಷ್ಟು ಸಾಧ್ಯವೋ ಅಷ್ಟು ಬೇಗ ಮುಕ್ತಿ ಪಡೆಯಬೇಕೆನ್ನುವ ಅವಶ್ಯಕತೆ ನಿಮಗೆ ಎಷ್ಟಿದೆಯೋ ಅಷ್ಟು ಅವಶ್ಯಕತೆ ಹಿಂದೂಗಳಿಗೆ ಇಲ್ಲ. ಈ ರೀತಿ ವಿಚಾರ ಮಾಡಿದರೆ ಈ ಹಿಂದೂ ಧರ್ಮ ನಿಮಗೆ ಎರಡು ರೀತಿಯಲ್ಲಿ ಮಾರಕವಾಗಿದೆ. ಈ ಧರ್ಮ ನಿಮ್ಮ ಮಾನಸಿಕ ಸ್ವಾತಂತ್ರ್ಯ ಕಿತ್ತುಕೊಂಡು ನಿಮ್ಮನ್ನು ಗುಲಾಮನನ್ನಾಗಿಸಿದೆ. ಇದೇ ಧರ್ಮ ನಿಮ್ಮನ್ನು ನಿತ್ಯ ಜೀವನದಲ್ಲಿ ಗುಲಾಮಗಿರಿಯ ಸ್ಥಿತಿಗೆ ತಂದು ಹಾಕಿದೆ. ನಿಮಗೆ ಸ್ವಾತಂತ್ರ್ಯವೇ ಬೇಕಿದ್ದರೆ ನೀವು ಧರ್ಮಾಂತರ ಮಾಡಲೇಬೇಕು.

## ಅಸ್ಪೃಶ್ಯ ಸಂಘಟನೆ ಮತ್ತು ಧರ್ಮಾಂತರ

ಅಸ್ಪೃಶ್ಯತೆ ನಿರ್ಮೂಲನೆಗಾಗಿ ಇಂದು ಆರಂಭಿಸಿರುವ ಚಳವಳಿಯ ಮೇಲೆ ಬೇರೆ ಬೇರೆ ನಿಟ್ಟಿನಲ್ಲಿ ಟೀಕೆ ಮಾಡಲಾಗುತ್ತಿದೆ. ಅಸ್ಪೃಶ್ಯ ವರ್ಗದಲ್ಲಿ ಸೇರಿಸಿರುವ ವಿವಿಧ ಜಾತಿಗಳ ನಡುವಿನ ನಿತ್ಯ ವ್ಯವಹಾರದಲ್ಲಿ ಜಾತಿಭೇದ ಮಾಡಲಾಗುತ್ತದಲ್ಲದೇ ಅಸ್ಪೃಶ್ಯತೆಯನ್ನು ಪಾಲಿಸಲಾಗುತ್ತಿದೆ. ಮಹಾರ್, ಮಾಂಗರು ಒಬ್ಬರ ಕೈಯಲ್ಲಿನ ಆಹಾರವನ್ನು ಇನ್ನೊಬ್ಬರು ತಿನ್ನುವುದಿಲ್ಲ. ಇಬ್ಬರೂ ಭಂಗಿ ಜಾತಿಯವರನ್ನು ಮುಟ್ಟಿಸಿಕೊಳ್ಳದೇ ಅಸ್ಪೃಶ್ಯತೆಯನ್ನು ಪಾಲಿಸುತ್ತಿದ್ದಾರೆ. ಪರಸ್ಪರ ನಡುವೆ ಜಾತಿಭೇದ ಪಾಲಿಸುವ ಈ ಜನರು ಮೇಲ್ಜಾತಿಯವರಿಗೆ ನೀವು ಜಾತಿಭೇದ ಮಾಡಬೇಡಿ. ಅಸ್ಪೃಶ್ಯತೆ ತೊಲಗಿಸಿ ಎಂದು ಹೇಳುತ್ತಾರೆಂದು ಹೇಳಲಾಗುತ್ತಿದೆ. ಮೊದಲು ನಿಮ್ಮಲ್ಲಿನ ಭೇದಭಾವ ಅಳಿಸಿಹಾಕಿ ಬಳಿಕ ನಮ್ಮ ಬಳಿ ನ್ಯಾಯ ಕೇಳಿ ಎಂದು ಚುಚ್ಚುವ ರೀತಿಯಲ್ಲಿ ಹಿಂದೂಗಳು ಸಲಹೆ ನೀಡುತ್ತಿದ್ದಾರೆ. ಈ ಟೀಕೆಯ ಮೂಲದಲ್ಲಿ ಸತ್ಯ ಅಡಗಿದೆ. ಇದನ್ನು ನಾವು ಸ್ವೀಕರಿಸಲೇಬೇಕಾಗುತ್ತದೆ. ಆದರೆ ಈ ಟೀಕೆಯಲ್ಲಿ ಮಾಡಿರುವ ಆರೋಪ ಮಾತ್ರ ಸುಳ್ಳು. ಅಸ್ಪೃಶ್ಯ ವರ್ಗದಲ್ಲಿರುವ ಕೆಲವು ಜಾತಿಗಳು ಜಾತಿಭೇದ ಮಾಡಿದರೆ ಇನ್ನು ಕೆಲವು ಜಾತಿಗಳಲ್ಲಿ ಅಸ್ಪೃಶ್ಯತೆ ಅಡಗಿರುವ ವಿಚಾರವನ್ನು ತಿರಸ್ಕರಿಸುವುದು ಸಾಧ್ಯವಿಲ್ಲ. ಈ ವಿಚಾರಕ್ಕೆ ನಾವು ಮಾನ್ಯತೆ ನೀಡಿದರೂ ಈ ಅಪರಾಧಕ್ಕೆ ನಾವೇ ಕಾರಣ ಎಂದು ಹೇಳುವುದು ಶುದ್ಧ ಸುಳ್ಳು. ಜಾತಿಭೇದ ಮತ್ತು ಅಸ್ಪೃಶ್ಯತೆಯ ಕಲ್ಪನೆ ಅಸ್ಪೃಶ್ಯ ಜನರಿಂದ ಹುಟ್ಟಿಕೊಂಡಿದ್ದಲ್ಲ. ಜಾತಿಭೇದ ಮತ್ತು ಅಸ್ಪೃಶ್ಯತೆಯ ಹರಿಕಾರರು ಹಿಂದೂ ಧರ್ಮದ ಉನ್ನತ ವರ್ಗಗಳೇ ಆಗಿವೆ. ಜಾತಿಭೇದ ಮತ್ತು ಅಸ್ಪೃಶ್ಯತೆಗೆ ಅಡಿಪಾಯ ಹಾಕಿ ಕೊಟ್ಟಿದ್ದು ಅವರೇ ವಿನಃ ನಾವಲ್ಲ. ಜಾತಿಭೇದ ಮತ್ತು ಅಸ್ಪೃಶ್ಯತೆಯ ಸಂಪ್ರದಾಯ ಬುನಾದಿ ಹಾಕುವ ಕೆಲಸ ಹಿಂದೂ ಉನ್ನತ ವರ್ಗದಿಂದಲೇ ಆಗಿದೆ. ಜಾತಿಭೇದ ಮತ್ತು ಅಸ್ಪೃಶ್ಯತೆಯನ್ನು ರೂಢಿಗೆ ತಂದ ಜವಾಬ್ದಾರಿ ಉನ್ನತ ಹಿಂದೂ ವರ್ಗ ಹೊರಬೇಕಾಗುತ್ತದೆ ಹೊರತು ತಪ್ಪು ಅಸ್ಪೃಶ್ಯ ವರ್ಗದ್ದಲ್ಲ. ಅಸ್ಪೃಶ್ಯ ವರ್ಗದ ಜನರು ತಾವು ಪಾಲಿಸುವ ಜಾತಿಭೇದ ಮತ್ತು ಅಸ್ಪೃಶ್ಯತೆಗೆ ಉನ್ನತ ವರ್ಗದ ಸಂಪ್ರದಾಯವನ್ನು ಉದಾಹರಿಸುತ್ತಾರೆ. ಒಂದು ವೇಳೆ ಆ ರೂಢಿ ಕೆಟ್ಟದ್ದು ಎನ್ನುವುದಾದರೆ ಆ ಕೆಟ್ಟ ರೂಢಿಯ ಪಾಪ ಅಂಟಿಕೊಳ್ಳಬೇಕಾಗಿರುವುದು ಆ ರೂಢಿಯ ಜನಕರಿಗೆ ವಿನಃ ಅಸ್ಪೃಶ್ಯರಿಗಲ್ಲ. ಈ ಉತ್ತರ ಸರಿ ಎನ್ನಿಸಿದರೂ ಕೂಡ ನನಗೆ ಆ ಉತ್ತರ ತೃಪ್ತಿ ತರುವುದಿಲ್ಲ. ಯಾವ ಕಾರಣಗಳಿಂದಾಗಿ ನಮ್ಮ ಮಧ್ಯೆ ಅಸ್ಪೃಶ್ಯತೆ ಮತ್ತು ಜಾತಿಭೇದ ಪ್ರತಿಷ್ಠಾಪಿತವಾಯಿತೋ ಅದಕ್ಕೆ ನಾವು ಜವಾಬ್ದಾರರಲ್ಲದಿದ್ದರೂ ನಮ್ಮಲ್ಲಿ ಬೆಳೆಯುತ್ತಿರುವ ಜಾತಿಭೇದ ಮತ್ತು ಅಸ್ಪೃಶ್ಯತೆಯನ್ನು ಧಿಕ್ಕರಿಸದಿರುವುದು ಮತ್ತು ಅದನ್ನು ಹೇಗಿದೆಯೋ ಹಾಗೆ ಮುಂದುವರಿಸುವುದು ನನಗೆ ಇಷ್ಟವಿಲ್ಲ. ಅಸ್ಪೃಶ್ಯತೆ ಮತ್ತು ಜಾತಿಭೇದ ನಮ್ಮಲ್ಲಿ ಸೇರುವುದಕ್ಕೆ ನಾವು ಕಾರಣರಾಗದಿದ್ದರೂ ಅದನ್ನು ನಿರ್ಮೂಲನೆ ಮಾಡುವ ಹೊಣೆಗಾರಿಕೆ ನಮ್ಮ ಮೇಲೆ ಇದೆ ಎನ್ನುವುದನ್ನು ನಾವೆಲ್ಲರೂ ಗುರುತಿಸಿರುವುದು ಸಮಾಧಾನಕರ ಸಂಗತಿ. ಮಹಾರ್ ಜಾತಿಯಲ್ಲಿ ಒಬ್ಬನೇ ಒಬ್ಬ ಮುಖಂಡ ಕೂಡ ಇಂತಹ ಜಾತಿಭೇದ ಪಾಲಿಸುವುದಿಲ್ಲ ಎನ್ನುವುದು ನನಗೆ ಖಾತ್ರಿ ಇದೆ. ಹೋಲಿಕೆ ಮಾಡುವುದು ಇದ್ದರೆ ಇಬ್ಬರು ನಾಯಕರ ನಡುವೆ, ಎರಡೂ ಸಮಾಜದ ಮಧ್ಯೆ ಮಾಡಬೇಕು. ಮಹಾರ ಜಾತಿಯಲ್ಲಿನ ಸುಶಿಕ್ಷಿತರು ಮತ್ತು ಬ್ರಾಹ್ಮಣರಲ್ಲಿನ ಸುಶಿಕ್ಷಿತರನ್ನು ಗಣನೆಗೆ ತೆಗೆದುಕೊಂಡು ಹೋಲಿಕೆ ಮಾಡಿದರೆ ಅಸ್ಪೃಶ್ಯ ವರ್ಗದಲ್ಲಿನ ಸುಶಿಕ್ಷಿತರು ಜಾತಿ ಭೇದ ನಿರ್ಮೂಲನೆಗೆ ಉತ್ಸುಕರಿದ್ದಾರೆ ಎನ್ನುವುದನ್ನು ಯಾರೂ ಬೇಕಾದರೂ ಒಪ್ಪಿಕೊಳ್ಳುತ್ತಾರೆ. ಇಷ್ಟೇ ಅಲ್ಲ ಇದನ್ನು ಕೃತಿಯಿಂದ ಕೂಡ ಸಿದ್ಧ ಮಾಡಿ ತೋರಿಸಬಹುದು. ಮಹಾರ್ ಜಾತಿಯ ನಿರ್ಲಕ್ಷಿತರ ಸಹಮತ ಕೂಡ ಇದಕ್ಕೆ ವ್ಯಕ್ತವಾಗುತ್ತದೆ. ಮಹಾರ್–ಮಾಂಗರ ಮಧ್ಯೆ ಸಹಭೋಜನ, ಸಂಬಂಧ ಬೆಳೆಸುವುದಕ್ಕೆ ವಿರುದ್ಧವಾಗಿರುವ

ಒಬ್ಬ ವ್ಯಕ್ತಿ ಕೂಡ ಮಹಾರ್ ಜಾತಿಯಲ್ಲಿ ಇಂದು ಸಿಗಲಿಕ್ಕಿಲ್ಲ. ನಿಮ್ಮ ಮಧ್ಯೆ ಇರುವ ಜಾತಿಭೇದ ನಿರ್ಮೂಲನೆಗೆ ಸಿದ್ಧವಾಗಿರುವುದಕ್ಕೆ ನನಗೆ ಅತೀವ ಸಂತೋಷವಾಗುತ್ತದೆ. ಅಸ್ಪೃಶ್ಯರ ಮಧ್ಯೆ ಇರುವ ಜಾತಿಭೇದದ ನಿರ್ಮೂಲನೆಯನ್ನು ಹೇಗೆ ಮಾಡಬೇಕೆಂದು ನೀವು ವಿಚಾರ ಮಾಡಬೇಕಾಗುತ್ತದೆ. ಸಹಭೋಜನ ಮಾಡುವುದರಿಂದ ಅಥವಾ ತೀರ ಅಪರೂಪಕ್ಕೆ ಎನ್ನುವಂತೆ ಸಂಬಂಧ ಬೆಳೆಸುವುದರಿಂದ ಅಸ್ಪೃಶ್ಯತೆಯಾಗಲಿ, ಜಾತಿಭೇದ ನಿರ್ಮೂಲನೆಯಾಗದು. ಜಾತಿಭೇದ ಒಂದು ಮಾನಸಿಕ ಸ್ಥಿತಿ, ಒಂದು ಮಾನಸಿಕ ವ್ಯಥೆ. ಈ ಮಾನಸಿಕ ವ್ಯಥೆ ಗಟ್ಟಿಯಾಗುವುದಕ್ಕೆ ಕಾರಣ ಹಿಂದೂ ಧರ್ಮದ ಬೋಧನೆ. ನಾವು ಪಾಲಿಸುವ ಜಾತಿ ಭೇದ, ಅಸ್ಪೃಶ್ಯತೆಗೆ ಆ ಹಿಂದೂ ಧರ್ಮವೇ ಕಾರಣ, ಅದು ನಮಗೆ ಆ ರೀತಿ ನಡೆದುಕೊಳ್ಳಬೇಕು ಎಂದು ಬೋಧಿಸುತ್ತದೆ. ಕಹಿಯಾಗಿರುವ ವಸ್ತುವನ್ನು ಸಿಹಿಯಾಗಿ ಮಾಡಬಹುದು. ಉಪ್ಪು, ಖಾರ ಇದ್ದರೆ ಅದರ ರುಚಿ ಬದಲಿಸಬಹುದು, ಆದರೆ ವಿಷವನ್ನು ಅಮೃತವನ್ನಾಗಿ ಪರಿವರ್ತಿಸಲಾಗದು. ಹಿಂದೂ ಧರ್ಮದಲ್ಲಿ ಇದ್ದೂ ಜಾತಿಭೇದ ನಿರ್ಮೂಲನೆ ಮಾಡುವಾ ಎಂದರೆ ವಿಷವನ್ನು ಅಮೃತವಾಗಿ ಪರಿವರ್ತಿಸುವಂತೆ ಆಗುತ್ತದೆ.

ಮನುಷ್ಯನ ಕೊಳಕನ್ನು ಮನುಷ್ಯರಾದವರು ಒಪ್ಪಿಕೊಳ್ಳಬೇಕು ಎಂದು ಬೋಧನೆ ಮಾಡುವ ಆ ಧರ್ಮದಲ್ಲಿ ಎಲ್ಲಿಯವರೆಗೆ ನಾವು ಇರುತ್ತೇವೆಯೋ ಅಲ್ಲಿಯವರೆಗೆ ನಮ್ಮ ಮನಸ್ಸಿನಲ್ಲಿನ ಜಾತಿಭೇದ ಭಾವನೆ ಎಂದಿಗೂ ನಿರ್ಮೂಲನೆಯಾಗದು. ಅಸ್ಪೃಶ್ಯರಲ್ಲಿನ ಜಾತಿಭೇದ ಮತ್ತು ಅಸ್ಪೃಶ್ಯತೆಯ ನಿವಾರಣೆಗೆ ಧರ್ಮಾಂತರದ ರಾಮಬಾಣದಿಂದ ಮಾತ್ರ ಸಾಧ್ಯ.

### ನಾಮಾಂತರ ಮತ್ತು ಧರ್ಮಾಂತರ

ಇಲ್ಲಿಯವರೆಗೆ ಧರ್ಮಾಂತರಕ್ಕೆ ಇರುವ ಕಾರಣಗಳನ್ನು ತಮ್ಮ ಎದುರು ಮಂಡಿಸಿದ್ದೇನೆ. ಈ ಕಾರಣ ಮೀಮಾಂಸೆ ತಮ್ಮನ್ನು ವೈಚಾರಿಕತೆಯೆಡೆಗೆ ತೆಗೆದುಕೊಂಡು ಹೋಗುವ ಆಶಯ ನನಗೆ ಇದೆ. ಯಾರಿಗೆ ಈ ಕಾರಣ ಮೀಮಾಂಸೆ ಗಹನ ಮತ್ತು ಆಳ ಎಂದೆನ್ನಿಸುತ್ತದೋ ಅಂತಹವರಿಗೆ ವಿಷಯದ ಮನವರಿಕೆ ಆಗಲಿ ಎಂದು ಸರಳ ಶಬ್ದಗಳಲ್ಲಿ ಕೆಲವು ವಿಚಾರಗಳನ್ನು ನಾನು ಈಗ ತಮ್ಮ ಎದುರು ಮಂಡಿಸುತ್ತಿದ್ದೇನೆ. ಈ ಧರ್ಮಾಂತರದಲ್ಲಿ ಹೊಸತು ಅನ್ನುವಂತಹದ್ದು ಏನೂ ಇಲ್ಲ. ನಿಜ ಹೇಳಬೇಕು ಎಂದರೆ ಹಿಂದೂಗಳು ಮತ್ತು ನಿಮ್ಮ ಮಧ್ಯೆ ಸಾಮಾಜಿಕ ಸಂಬಂಧ ಹೇಗೆ ಇದೆ? ಯಾವ ರೀತಿ ಮುಸ್ಲಿಂರು ಹಿಂದೂಗಳಿಂದ ಪ್ರತ್ಯೇಕವಾಗಿದ್ದಾರೋ ಅದೇ ರೀತಿ ನೀವು ಕೂಡ ಹಿಂದೂಗಳಿಂದ ಪ್ರತ್ಯೇಕವಾಗಿಯೇ ಉಳಿದಿದ್ದೀರಿ. ಹಿಂದೂ ಸಮಾಜದಿಂದ ಕ್ರೈಸ್ತ ಸಮಾಜ ಹೇಗೆ ಪ್ರತ್ಯೇಕವಾಗಿ ಇದೆಯೋ ಅದೇ ತೆರನಾಗಿ ನೀವು ಕೂಡ ಹಿಂದೂ ಸಮಾಜದಿಂದ ಪ್ರತ್ಯೇಕವಾಗಿಯೇ ಉಳಿದಿದ್ದೀರಿ. ಕ್ರಿಶ್ಚಿಯನ್ನರು ಮತ್ತು ಮುಸ್ಲಿಂರೊಂದಿಗೆ ಹಿಂದೂಗಳ ಅನ್ನ ಮತ್ತು ಕನ್ಯಾದಾನದ ಸಂಬಂಧ ಬೆಳೆಯುವುದಿಲ್ಲವೋ ಅದೇ ರೀತಿ ನಿಮ್ಮ ಮತ್ತು ಹಿಂದೂ ಸಮಾಜದೊಂದಿಗೆ ಅಂತಹ ಸಂಬಂಧ ಏರ್ಪಡುವುದಿಲ್ಲ. ಇಂದಿನವರೆಗೂ ನಿಮ್ಮ ಮತ್ತು ಹಿಂದೂ ಸಮಾಜ ಪ್ರತ್ಯೇಕ, ವಿಭಿನ್ನವಾಗಿರುವ ಎರಡು ಸಮಾಜಗಳು. ಧರ್ಮಾಂತರ ಮಾಡಿದ್ದರಿಂದ ಒಂದು ಸಮಾಜವನ್ನು ಇಬ್ಭಾಗ ಮಾಡಲಾಯಿತು ಎಂದು ಯಾರಿಗೂ ಹೇಳಲಿಕ್ಕಾಗದು. ಇಂದು ನೀವು ಯಾವ ರೀತಿ ಪ್ರತ್ಯೇಕವಾಗಿ ಇದ್ದೀರೋ ಅದೇ ರೀತಿ ಧರ್ಮಾಂತರದ ಬಳಿಕವೂ ಪ್ರತ್ಯೇಕವಾಗಿಯೇ ಉಳಿಯುತ್ತೀರಿ.

ಧರ್ಮಾಂತರದಿಂದ ಹೊಸ ಸಂಗತಿ ಏನೂ ಘಟಿಸುವುದಿಲ್ಲ ಎನ್ನುವುದು ಒಂದು ವೇಳೆ ನಿಜ

ಎಂದಾದರೆ ಧರ್ಮಾಂತರದ ಬಗ್ಗೆ ಯಾರೇಕೆ ಹೆದರಬೇಕೆನ್ನುವುದು ನನಗೆ ತಿಳಿಯುತ್ತಿಲ್ಲ. ಧರ್ಮಾಂತರದ ಮಹತ್ವ ನಿಮ್ಮ ಅರಿವಿಗೆ ಬಾರದಿದ್ದರೂ ನಾಮಾಂತರದ ಮಹತ್ವ ಅಂತೂ ನಿಮಗೆ ಆಗಿದೆ ಎಂದು ಭಾವಿಸುತ್ತೇನೆ. ನಿಮ್ಮಲ್ಲಿಯ ಪೈಕಿ ಯಾರಾದರನ್ನು ನಿನ್ನ ಜಾತಿ ಯಾವುದು ಎಂದು ಕೇಳಿದರೆ ಚೋಖಾಮೇಳಾ ಇಲ್ಲವೇ ಹರಿಜನ ಎಂದು ಹೇಳುತ್ತಾನೆ ವಿನಃ ಮಹಾರ್ ಎಂದು ಹೇಳುವುದಿಲ್ಲ. ನಾಮಾಂತರದ ಅಗತ್ಯವಿಲ್ಲದೇ ಯಾರೂ ನಾಮಾಂತರಕ್ಕೆ ಸಿದ್ಧವಾಗುವುದಿಲ್ಲ. ಈ ರೀತಿ ನಾಮಾಂತರಗೊಳ್ಳುವುದು ಅತ್ಯಂತ ಸರಳವಾಗಿದೆ. ಅಪರಿಚಿತ ವ್ಯಕ್ತಿಗೆ ಸ್ಪೃಶ್ಯರು ಯಾರು, ಅಸ್ಪೃಶ್ಯರು ಯಾರು ಎಂದು ಗೊತ್ತಾಗುವ ಸಾಧ್ಯತೆ ತೀರ ಕಡಿಮೆ. ಜಾತಿ ಯಾವುದು ಎಂದು ಗೊತ್ತಾಗುವವರೆಗೆ ಸ್ಪೃಶ್ಯ ಹಿಂದೂಗಳ ಭಾವನೆ ಕಲುಷಿತವಾಗುವುದಿಲ್ಲ. ಪ್ರವಾಸದಲ್ಲಿ ಅಪರಿಚಿತ ಸ್ಪೃಶ್ಯ ಮತ್ತು ಅಪರಿಚಿತರು ಸಹೋದರರಂತೆ ಪ್ರಯಾಣ ಮುಂದುವರಿಸುತ್ತಾರೆ. ಒಬ್ಬರಿಗೊಬ್ಬರು ಎಲೆ ಅಡಿಕೆ, ಹಣ್ಣು ಹಂಪಲು ನೀಡಿ ಕೊಡುವ–ತೆಗೆದುಕೊಳ್ಳುವ ಕೆಲಸ ಮಾಡುತ್ತಾರೆ. ಆದರೆ ಯಾವ ವ್ಯಕ್ತಿಯೊಂದಿಗೆ ನಾವು ವ್ಯವಹಾರ ಮಾಡುತ್ತಿರುತ್ತೇವೆಯೋ ಆ ವ್ಯಕ್ತಿಯ ಜಾತಿ ಯಾವುದು ಮತ್ತು ಅದು ಅಸ್ಪೃಶ್ಯ ಜಾತಿ ಎಂದು ತಿಳಿದ ಬಳಿಕ ಆತನ ಬಗ್ಗೆ ಮನಸ್ಸಿನಲ್ಲಿ ತಿರಸ್ಕಾರ ಭಾವ ಬೆಳೆಯುತ್ತದೆ. ತಾನು ಮೋಸಕ್ಕೊಳಗಾದೆ ಎಂದು ಆಕ್ರೋಶದಿಂದ ಪ್ರವಾಸದಲ್ಲಿ ಬೆಳೆದಿದ್ದ ಮೈತ್ರಿ, ಪರಸ್ಪರರ ಬೈದಾಟ ಮತ್ತು ಹಲ್ಲೆಯಲ್ಲಿ ಪರ್ಯಾವಸಾನಗೊಳ್ಳುತ್ತದೆ. ಈ ಅನುಭವ ಸಾಕಷ್ಟು ಜನರಿಗೆ ಆಗಿರಬೇಕು. ಇಂತಹದ್ದು ನಡೆದೇ ನಡೆಯುತ್ತದೆ ಎನ್ನುವುದು ನಿಮಗೆ ಎಲ್ಲರಿಗೂ ಗೊತ್ತಿರುವಂತಹದ್ದೇ. ನಿಮ್ಮ ಪಾಲಿಗೆ ಬಂದಿರುವ ಜಾತಿ ಸೂಚಕ ಹೆಸರುಗಳಿಗೆ ಯಾವ ಪರಿ ದುರ್ಗಂಧ ಅಡರಿಕೊಂಡಿದೆ ಎಂದರೆ, ನಿಮ್ಮ ಜಾತಿಯ ಉಚ್ಚಾರ ಮಾತ್ರದಿಂದ ಸ್ಪೃಶ್ಯರ ಹೊಟ್ಟೆಯಲ್ಲಿ ತಳಮಳ ಶುರುವಾಗುತ್ತದೆ. ಆದ್ದರಿಂದ ನೀವು ಸ್ವತಃ ನಿಮ್ಮ ಜಾತಿಯ ಹೆಸರನ್ನು ಉಚ್ಚರಿಸುವುದಕ್ಕೆ ಹಿಂಜರಿದು ಚೋಖಾಮೇಳಾ ಎಂದು ಹೇಳಿ ಜನರನ್ನು ಮೋಸಗೊಳಿಸುವ ಪ್ರಯತ್ನ ಮಾಡುತ್ತೀರಿ. ಆದರೆ ಇದಕ್ಕೂ ಜನರು ಮೋಸಕ್ಕೆ ಒಳಗಾಗುತ್ತಿಲ್ಲ ಎನ್ನುವುದು ನಿಮ್ಮ ಅನುಭವಕ್ಕೆ ಬಂದಿದೆ.

ನೀವು ಚೋಖಾಮೇಳಾ ಅಂದುಕೊಂಡರೆ ಏನು ಅಥವಾ ಹರಿಜನ ಅಂದುಕೊಂಡರೆ ಏನು? ಜನರು ಯಾವ ರೀತಿ ಅರ್ಥೈಸಿಕೊಳ್ಳಬೇಕೋ ಅದೇ ರೀತಿ ನಿಮ್ಮನ್ನು ಅರ್ಥೈಸಿಕೊಳ್ಳುತ್ತಾರೆ. ನಾಮಾಂತರದ ಅಗತ್ಯ ನಿಮಗೆ ಕಾಡುತ್ತಿದೆ ಎನ್ನುವುದನ್ನು ನಿಮ್ಮ ವರ್ತನೆಯಿಂದ ಸಾಬೀತುಪಡಿಸಿದ್ದೀರಿ. ಒಂದು ವೇಳೆ ನಾಮಾಂತರ ಅವಶ್ಯ ಎಂದು ನೀವು ಭಾವಿಸುತ್ತಿದ್ದರೆ, ಧರ್ಮಾಂತರ ಮಾಡುವುದಕ್ಕೆ ನಿಮ್ಮ ಆಕ್ಷೇಪ ಏಕಿರಬೇಕು? ಒಂದು ದೃಷ್ಟಿಯಲ್ಲಿ ಧರ್ಮಾಂತರ ನಾಮಾಂತರವಾಗಿದ್ದು, ಧರ್ಮಾಂತರದಿಂದ ಆಗುವ ನಾಮಾಂತರದಿಂದ ಇನ್ನೂ ಹೆಚ್ಚಿನ ಲಾಭವಾಗುತ್ತದೆ. ಮುಸ್ಲಿಂ ಎಂದು ಕರೆಸಿಕೊಳ್ಳುವುದು ಕ್ರಿಶ್ಚಿಯನ್ ಎಂದು ಕರೆಸಿಕೊಳ್ಳುವುದು, ಬೌದ್ಧ ಎಂದು ಕರೆಸಿಕೊಳ್ಳುವುದು ಅಥವಾ ಸಿಖ್ ಎಂದು ಕರೆಸಿಕೊಳ್ಳುವುದು ಧರ್ಮಾಂತರವಷ್ಟೇ ಅಲ್ಲ ನಿಜವಾದ ನಾಮಾಂತರ ಆಗಿದೆ. ಈ ನಾಮಾಂತರಕ್ಕೆ ದುರ್ಗಂಧವೂ ಇಲ್ಲ. ಈ ನಾಮಾಂತರ ಆಮೂಲಾಗ್ರವಾಗಿರುವ ಕಾರಣ ಅದರ ಹಿನ್ನೆಲೆಯನ್ನು ಯಾರೂ ಶೋಧಿಸಲು ಹೋಗಲಾರರು. ಆದರೆ ಚೋಖಾಮೇಳಾ ಇಲ್ಲವೇ ಹರಿಜನದ ನಾಮಾಂತರದಲ್ಲಿ ಯಾವುದೇ ಅರ್ಥವಿಲ್ಲ. ಹಳೆಯ ಹೆಸರಿನ ದುರ್ಗಂಧ ಹೊಸ ಹೆಸರಿಗೆ ಅಂಟಿಕೊಳ್ಳದೇ ಇರಲಾರದು. ಎಲ್ಲಿಯವರೆಗೆ ನೀವು ಹಿಂದೂ ಧರ್ಮದಲ್ಲಿ ಇರುತ್ತೀರೋ ಅಲ್ಲಿಯವರೆಗೆ ನಿಮಗೆ ನಾಮಾಂತರ ಮಾಡಲೇಬೇಕಾಗುತ್ತದೆ. ಏಕೆಂದರೆ ಕೇವಲ ಹಿಂದೂ ಎಂದು ಕರೆಸಿಕೊಳ್ಳುವುದರಿಂದ ನಡೆಯುವುದಿಲ್ಲ. ಇದು ಮನುಷ್ಯ ಪ್ರಾಣಿ ಎಂದು ಹಿಂದೂ ಧರ್ಮೀಯ ಎಂದೂ ಗುರುತಿಸುವುದಿಲ್ಲ. ಮಹಾರ್ ಎಂದು ಉಚ್ಚರಿಸಿದ ಕೂಡಲೇ

ಹತ್ತಿರ ಯಾರೂ ಬರುವುದಿಲ್ಲ. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿರುವುದಕ್ಕಿಂತ, ಇಂದು ಈ ಹೆಸರು ನಾಳೆ ಆ ಹೆಸರು ಎಂದು ನಾಮಾಂತರ ಮಾಡುತ್ತ ಇರುವುದಕ್ಕಿಂತ ಧರ್ಮಾಂತರದಿಂದ ಶಾಶ್ವತವಾಗಿ ನಾಮಾಂತರ ಆಗಬೇಕೆಂದು ನನ್ನ ಸಲಹೆ.

## ವಿರೋಧಿಗಳ ಪಾತ್ರ

ಧರ್ಮಾಂತರ ಚಳವಳಿ ಕೈಗೆತ್ತಿಕೊಂಡಾಗಿನಿಂದ ಹಲವಾರು ಜನರು ಈ ಚಳವಳಿ ವಿರುದ್ಧ ವ್ಯಕ್ತಪಡಿಸುತ್ತಿರುವ ಆಕ್ಷೇಪದಲ್ಲಿ ಎಷ್ಟು ಸತ್ಯ ಅಡಗಿದೆ ಎನ್ನುವುದನ್ನು ವಿಚಾರ ಮಾಡಬೇಕಿದೆ. ಒಂದಿಷ್ಟು ಹಿಂದೂಗಳು ಇಂದು ಈ ಕೋಟು ಧರಿಸುತ್ತೇನೆ, ನಾಳೆ ಆ ಕೋಟು ಧರಿಸುತ್ತೇನೆ ಎಂದು ಅಂದುಕೊಳ್ಳುವಂತೆ ಧರ್ಮ ಬದಲಾವಣೆಯ ವಸ್ತುವಲ್ಲ ಎಂದು ಹೇಳುತ್ತಿದ್ದಾರೆ. ಇಂದು ಹಿಂದೂ ಧರ್ಮವನ್ನು ಧಿಕ್ಕರಿಸಿ ಬೇರೆ ಧರ್ಮ ಸ್ವೀಕರಿಸಲು ಹೋರಟಿದ್ದೀರಿ. ಇಲ್ಲಿಯವರೆಗೆ ನಿಮ್ಮ ಪೂರ್ವಿಕರು ಹಿಂದೂ ಧರ್ಮದಲ್ಲಿ ಇದ್ದವರು ಅವರೇನು ಮೂರ್ಖರಿದ್ದರೆ? ಎಂದು ಕೆಲವು ಜಾಣರು ಕೇಳುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಅವರ ಆಕ್ಷೇಪದಲ್ಲಿ ತಥ್ಯ ಇಲ್ಲವೇ ಇಲ್ಲ. ಪೂರ್ವಿಕರು ಎಂದುಕೊಂಡು ಅದಕ್ಕೆ ಅಂಟಿಕೊಂಡು ಕುಳಿತುಕೊಳ್ಳುವುದು ಮೂರ್ಖನಿಗೆ ಮಾತ್ರ ಶೋಭಿಸುವಂತಹದ್ದು. ಯಾವುದೇ ಬುದ್ಧಿವಂತ ವ್ಯಕ್ತಿ ಇಂತಹ ಹೇಳಿಕೆಗಳನ್ನು ನೀಡಲು ಸಾಧ್ಯವಿಲ್ಲ. ಪೂರ್ವಿಕರ ಧರ್ಮ ಎಂದ ಕಾರಣಕ್ಕೆ ಧರ್ಮಾಂತರ ಮಾಡಬಾರದು ಎಂದು ಹೇಳುವ ಜನರು ಇತಿಹಾಸ ಓದಿಲ್ಲ ಎಂದು ಹೇಳಬೇಕಾಗುತ್ತದೆ. ಪ್ರಾಚೀನ ಆರ್ಯ ಧರ್ಮ, ವೈದಿಕ ಧರ್ಮ ಎಂದೂ ಕರೆಸಿಕೊಳ್ಳುವ ಆ ಧರ್ಮದಲ್ಲಿ ಗೋಮಾಂಸ ಭಕ್ಷಣೆ, ಸೋಮರಸ ಸೇವೆ ಮತ್ತು ಸ್ವೇಚ್ಛೆಯ ಜೀವನದಂತಹ ಮೂರು ಸಂಗತಿಗಳಿದ್ದವು. ಸಾವಿರಾರು ವರ್ಷಗಳಿಂದ ಆ ಧರ್ಮವನ್ನು ಭಾರತೀಯರು ಪಾಲಿಸಿದ್ದಾರೆ ಮತ್ತು ಇಂದಿಗೂ ಕೆಲವು ಬ್ರಾಹ್ಮಣರಿಗೆ ವೈದಿಕ ಧರ್ಮಕ್ಕೆ ಮರಳುವ ಹುಕಿ ಆಗಾಗ ಬರುತ್ತಿರುತ್ತದೆ. ಪೂರ್ವಿಕರ ಧರ್ಮ ಮಾತ್ರ ಪಾಲಿಸಬೇಕು ಎಂದಿದ್ದರೆ ಜನರು ವೈದಿಕ ಧರ್ಮ ಬಿಟ್ಟು ಬೌದ್ಧ ಧರ್ಮ ಏಕೆ ಸ್ವೀಕರಿಸಿದರು. ವೈದಿಕ ಧರ್ಮ ಬಿಟ್ಟು ಜೈನ ಧರ್ಮ ಏಕೆ ಸ್ವೀಕರಿಸಿದರು. ಈ ಧರ್ಮವನ್ನು ನಮ್ಮ ಪೂರ್ವಜರು ಪಾಲಿಸಿಕೊಂಡು ಬಂದಿದ್ದರು ಎನ್ನುವುದು ನಿಜ. ಆದರೆ ಅವರು ಸ್ವಸಂತೋಷದಿಂದ ಇಲ್ಲವೇ ಖುಷಿಯಿಂದ ಇದ್ದರು ಎಂದು ಹೇಳಲಿಕ್ಕೆ ಆಗದು. ಈ ದೇಶದಲ್ಲಿ ಸುದೀರ್ಘ ಕಾಲದಿಂದ ಚಾತುರ್ವರ್ಣ ವ್ಯವಸ್ಥೆ ನಡೆದುಕೊಂಡು ಬಂದಿದೆ. ಈ ಚಾತುರ್ವರ್ಣದಲ್ಲಿ ಬ್ರಾಹ್ಮಣರಿಗೆ ವಿದ್ಯೆ, ಕ್ಷತ್ರಿಯರಿಗೆ ಶಸ್ತ್ರ, ವೈಶ್ಯರಿಗೆ ವ್ಯಾಪಾರ, ಕೃಷಿ ಇದ್ದರೆ ಶೂದ್ರರು ಈ ಎಲ್ಲ ವರ್ಗಗಳ ಸೇವೆಗಳನ್ನು ಮಾಡಬೇಕೆಂದು ಕಟ್ಟುಪಾಡು ಹಾಕಲಾಗಿತ್ತು. ಶೂದ್ರರ ಬಳಿ ವಿದ್ಯೆ ಇರಲಿಲ್ಲ. ಅನ್ನವೂ ಇರಲಿಲ್ಲ. ಅಸ್ತ್ರ ಶಸ್ತ್ರಗಳೂ ಇರಲಿಲ್ಲ. ಇಂತಹ ಕ್ಲಿಷ್ಟಕರ ಮತ್ತು ನಿಶಸ್ತ್ರ ಸ್ಥಿತಿಯಲ್ಲಿ ನಿಮ್ಮ ಪೂರ್ವಿಕರು ಇರಬೇಕಾದ ಪರಿಸ್ಥಿತಿ ಇತ್ತು. ಅವರು ಈ ಧರ್ಮವನ್ನು ಸ್ವಸಂತೋಷದಿಂದ ಸ್ವೀಕರಿಸಿದ್ದರು ಎಂದು ಯಾವುದೇ ಬುದ್ಧಿವಂತ ವ್ಯಕ್ತಿ ಹೇಳಲು ಸಾಧ್ಯವಿಲ್ಲ. ನಿಮ್ಮ ಪೂರ್ವಜರು ಈ ಧರ್ಮದ ವಿರುದ್ಧ ಬಂಡೇಳುವುದಕ್ಕೆ ಸಾಧ್ಯವಿತ್ತೆ? ಇದನ್ನು ವಿಚಾರ ಮಾಡುವ ಕಾಲ ಇದೀಗ ಬಂದಿದೆ. ಅವರಿಗೆ ಬಂಡೇಳುವುದಕ್ಕೆ ಅವಕಾಶ ಇತ್ತು. ಆದರೆ ವಸ್ತು ಸ್ಥಿತಿ ನೋಡಿದರೆ ಈ ಧರ್ಮದಲ್ಲಿ ಅವರು ಇರಬೇಕಾದ ಅನಿವಾರ್ಯತೆ ಇತ್ತು ಹೀಗಾಗಿ ಅವರು ಈ ಧರ್ಮದಲ್ಲಿ ಇದ್ದರು ಎನ್ನುವುದು ನಿರ್ವಿವಾದ. ಈ ದೃಷ್ಟಿಯಿಂದ ನೋಡಿದರೆ ಹಿಂದೂ ಧರ್ಮ ನಮ್ಮ ಧರ್ಮವಲ್ಲ. ಅದನ್ನು ಒತ್ತಾಯದಿಂದ ನಮ್ಮ ಮೇಲೆ ಹೇರಿದ ಗುಲಾಮಗಿರಿ. ಈ

ಗುಲಾಮಗಿರಿಯಿಂದ ತಮ್ಮನ್ನು ಮುಕ್ತಗೊಳಿಸಿಕೊಳ್ಳುವ ಸಾಧನ ಅವರಲ್ಲಿ ಇರಲಿಲ್ಲ. ಹೀಗಾಗಿ ಅವರು ಗುಲಾಮಗಿರಿ ವಿರುದ್ಧ ಬಂಡೇಳುವುದಕ್ಕೆ ಆಗಲಿಲ್ಲ. ಅವರು ಗುಲಾಮಗಿರಿಯಲ್ಲಿಯೇ ಉಳಿಯಬೇಕಾದ್ದರಿಂದ ಅವರನ್ನು ದೂಷಿಸುವಂತಿಲ್ಲ ಬದಲಿಗೆ ದಯೆ ತೋರಬೇಕಾಗುತ್ತದೆ. ಆದರೆ ಇತ್ತೀಚಿನ ಪೀಳಿಗೆಯ ಮೇಲೆ ಒತ್ತಡ ತರುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ ಏಕೆಂದರೆ ಅವರಿಗೆ ಎಲ್ಲ ವಿಚಾರಗಳಲ್ಲಿ ಸ್ವಾತಂತ್ರ್ಯ ಇದೆ. ಈ ಸ್ವಾತಂತ್ರ್ಯ ಬಳಸಿ ಅವರು ತಮ್ಮನ್ನು ತಾವೇ ಮುಕ್ತಗೊಳಿಸಿಕೊಳ್ಳದಿದ್ದರೆ ಅವರಂತಹ ನೀಚ, ಅಧಮ ಮತ್ತು ಅವರಂತಹ ಪರಾವಲಂಬಿ ಜೀವಿ ಈ ಜಗತ್ತಿನಲ್ಲಿ ಎಲ್ಲಿಯೂ ಇರಲಿಕ್ಕಿಲ್ಲ ಎಂದು ಹೇಳಬೇಕಾಗುತ್ತದೆ.

## ಮನುಷ್ಯ ಮತ್ತು ಪ್ರಾಣಿಯ ನಡುವಿನ ವ್ಯತ್ಯಾಸ

ಕೇವಲ ಪೂರ್ವಿಕರ ಧರ್ಮ ಎಂದ ಮಾತ್ರಕ್ಕೆ ಅದರಲ್ಲಿಯೇ ಮುಂದುವರಿಯಬೇಕು ಎನ್ನುವುದು ಕೇವಲ ಮೂರ್ಖನಿಗೆ ಶೋಭಿಸುವಂತಹ ವಿಚಾರ. ಬುದ್ಧಿವಂತ ವ್ಯಕ್ತಿ ಎಂದಿಗೂ ಇಂತಹ ಹೇಳಿಕೆ ನೀಡಲಾರ. ಒಬ್ಬ ವ್ಯಕ್ತಿ ತನ್ನ ಜೀವನದುದ್ದಕ್ಕೂ ಅದೇ ಕಷ್ಟ ಅನುಭವಿಸಿ ಕಳೆಯಬೇಕು ಎಂದು ಹೇಳುವುದು ಪಶುಗಳಿಗೆ ಶೋಭಿಸುತ್ತದೆ ವಿನಃ ಮನುಷ್ಯರಿಗೆ ಶೋಭಿಸುವುದಿಲ್ಲ. ಮನುಷ್ಯ ಮತ್ತು ಪ್ರಾಣಿಯ ನಡುವೆ ಏನೇ ವ್ಯತ್ಯಾಸಗಳಿದ್ದರೂ ಕೂಡ ಪ್ರಾಣಿ ತನ್ನ ಉನ್ನತಿಯನ್ನು ತಾನೇ ಮಾಡಿಕೊಳ್ಳಲಿಕ್ಕೆ ಆಗದು. ಆದರೆ ಮನುಷ್ಯ ತನ್ನ ಪ್ರಗತಿ ತಾನೇ ಮಾಡಿಕೊಳ್ಳಬಲ್ಲ. ಸ್ಥಿತ್ಯಂತರವಾಗದೇ ನಮ್ಮ ಪ್ರಗತಿ ಸಾಧ್ಯವಿಲ್ಲ. ಧರ್ಮಾಂತರ ಕೂಡ ಒಂದು ರೀತಿಯ ಸ್ಥಿತ್ಯಂತರವಾಗಿದ್ದು, ಧರ್ಮಾಂತರವಾಗದೇ ಪ್ರಗತಿ ಅಸಾಧ್ಯ. ತನ್ನ ತಂದೆಯ ಧರ್ಮ ಎಂಬ ವಿಚಾರ ಯಾವುದೇ ಪ್ರಗತಿ ಪ್ರಿಯ ವ್ಯಕ್ತಿಗೆ ಅಡ್ಡ ಬರಲಾರದು.

ಧರ್ಮಾಂತರದ ವಿರುದ್ಧ ಇನ್ನೂ ಒಂದು ವಿಚಾರ ಹೇಳಲಾಗುತ್ತಿದೆ. ಒಂದು ರೀತಿಯಲ್ಲಿ ಧರ್ಮಾಂತರ ಇದೊಂದು ಹೇಡಿಗಳ ಕೆಲಸವಾಗಿದ್ದು, ಇಂದು ಹಿಂದೂಗಳಲ್ಲಿ ಅನೇಕ ಜನರು ಹಿಂದೂ ಧರ್ಮದ ಸುಧಾರಣೆಗೆ ಕೆಲಸ ಮಾಡುತ್ತಿದ್ದಾರೆ. ಅವರ ನೆರವಿನಿಂದ ಹಿಂದೂ ಧರ್ಮದಲ್ಲಿನ ಜಾತಿಭೇದ ಮತ್ತು ಅಸ್ಪೃಶ್ಯತೆ ನಿರ್ಮೂಲನೆ ಸಾಧ್ಯವಿದೆ. ಇಂತಹ ಸಮಯದಲ್ಲಿ ಧರ್ಮಾಂತರ ಅಯೋಗ್ಯವಾಗಿದೆ ಎನ್ನುವುದು ಕೆಲವರ ಅನಿಸಿಕೆ. ಹಿಂದೂಗಳಲ್ಲಿನ ಸಮಾಜ ಸುಧಾರಕರ ಬಗ್ಗೆ ಯಾರಿಗೆ ಬೇಕಾದರೂ ಎಂತಹ ಅಭಿಪ್ರಾಯವೇ ಇರಲಿ. ಆದರೆ ನನ್ನ ಮನಸ್ಸಿನಲ್ಲಿ ಮಾತ್ರ ಅವರ ಬಗ್ಗೆ ಖಾರವಾದ ಭಾವನೆ ಇದೆ. ಇದರ ಅನುಭವ ನನಗೆ ಆಗಿದೆ. ಅರೆನೆರೆತ ತಲೆಗೂದಲಿನ ಈ ವ್ಯಕ್ತಿಗಳ ಬಗ್ಗೆ ನನಗಂತೂ ಜಿಗುಪ್ಸೆ ಇದೆ. ಯಾರಿಗೆ ತಮ್ಮ ಜಾತಿಯಲ್ಲಿ ಇರುವುದು ಇದೆಯೋ ಅಥವಾ ಆ ಜಾತಿಯಲ್ಲೇ ಸಾಯುವುದು ಇದೆಯೋ, ತಮ್ಮ ಜಾತಿಯಲ್ಲೇ ಮದುವೆ ಮಾಡಿಕೊಳ್ಳುವುದು ಇದೆಯೋ ಅಂತಹ ಜನರು, 'ನಾವು ಜಾತಿಭೇದ ನಿರ್ಮೂಲನೆ ಮಾಡುತ್ತೇವೆ' ಎಂದು ಹೇಳುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ಜನರ ಹೇಳಿಕೆಗಳನ್ನು ಕೇಳಿದರೆ ಅಮೆರಿಕದಲ್ಲಿ ನಿಗ್ರೋಗಳ ಮುಕ್ತಿಗೆ ಬಿಳಿಯರು ಮಾಡಿದ ಪ್ರಯತ್ನದ ನೆನಪಾಗುತ್ತದೆ. ಒಂದು ಕಾಲದಲ್ಲಿ ಅಮೆರಿಕದಲ್ಲಿನ ನಿಗ್ರೋಗಳ ಸ್ಥಿತಿ ಭಾರತದಲ್ಲಿನ ಅಸ್ಪೃಶ್ಯರಂತೆ ಇತ್ತು. ಅವರ ಗುಲಾಮಗಿರಿಯು ಕಾಯ್ದೆಯಿಂದ ಪ್ರತಿಷ್ಠಾಪಿತಗೊಂಡಿದ್ದರೆ ನಿಮ್ಮ ಗುಲಾಮಗಿರಿಯನ್ನು ಧರ್ಮ ಪ್ರತಿಷ್ಠಾಪಿಸಿದೆ. ಇಷ್ಟೇ ವ್ಯತ್ಯಾಸ ಇರುವುದು. ಈ ಗುಲಾಮಗಿರಿಯಿಂದ ಅವರನ್ನು ಮುಕ್ತಗೊಳಿಸುವುದಕ್ಕೆ ಒಂದಿಷ್ಟು ಬಿಳಿಯ ಸುಧಾರಕರು ಶ್ರಮಿಸುತ್ತಿದ್ದರು. ಹಿಂದೂ ಸಮಾಜ ಸುಧಾರಕರನ್ನು ಆ ಬಿಳಿಯರೊಂದಿಗೆ ಹೋಲಿಸಲಿಕ್ಕಾಗುತ್ತದೆಯೇ? ಕರಿಯರು ಗುಲಾಮಗಿರಿಯಿಂದ ಮುಕ್ತವಾಗಬೇಕು ಎಂದು ತಮ್ಮವರೇ ಆದ ಬಿಳಿಯರೊಂದಿಗೆ ಅಮೆರಿಕದ ಸುಧಾರಕರು ಯುದ್ಧ ಮಾಡಿದರು. ಅವರನ್ನು ಗುಲಾಮಗಿರಿಯಲ್ಲಿ ಮುಂದುವರಿಯಬೇಕು ಎಂದು

ಹೇಳುವ ಅಸಂಖ್ಯಾತ ಜನರ ಪ್ರಾಣಾಹುತಿ ತೆಗೆದುಕೊಂಡರು ಮತ್ತು ತಮ್ಮ ನೂರಾರು ಜನರ ಪ್ರಾಣಾಹುತಿ ನೀಡಿದರು ಎನ್ನುವುದನ್ನು ಇತಿಹಾಸದಲ್ಲಿ ಓದಿದ್ದೇವೆ. ಇತಿಹಾಸದ ಈ ಘಟನೆಯ ಆಧಾರದ ಮೇಲೆ ನಮ್ಮ ಹಿಂದೂ ಸುಧಾರಕರನ್ನು ಕಣ್ಮುಂದೆ ತಂದರೆ ಎಲ್ಲಿ ರಾಜಾ ಎಲ್ಲಿ ಪೋತರಾಜ ಎಂದು ಹೇಳಬೇಕಾಗುತ್ತದೆ. ಸುಧಾರಕರು ಎಂದು ಹೇಳಿಕೊಳ್ಳುವವರಿಗೆ ನಾನು ಕೇಳುತ್ತೇನೆ: ಭಾರತದಲ್ಲಿನ ಅಸ್ಪೃಶ್ಯರ ಕಲ್ಯಾಣಕ್ಕಾಗಿ, ಅಮೆರಿಕದಲ್ಲಿನ ನಿಗ್ರೋಗಳ ಮುಕ್ತಿಗಾಗಿ ಅಲ್ಲಿನ ಬಿಳಿಯರು ಮಾಡಿದ ಯಾದವಿ ಕಲಹದಂತೆ ನೀವು ಕೂಡ ಅಸ್ಪೃಶ್ಯರ ಕಲ್ಯಾಣಕ್ಕಾಗಿ ಅಂತಹ ಯಾದವಿ ಕಲಹಕ್ಕೆ ಸಿದ್ಧರಿದ್ದೀರಾ? ಎಂದು. ಅಂತಹ ಕಲಹಕ್ಕೆ ಸಿದ್ಧವಿಲ್ಲದಿದ್ದರೆ ಸುಧಾರಣೆಯ ವ್ಯರ್ಥ ಹೇಳಿಕೆಗಳಿಂದ ಯಾವ ಪುರುಷಾರ್ಥ ಸಾಧನೆಯಾಗುತ್ತದೆ? ಅಸ್ಪೃಶ್ಯರ ಉನ್ನತಿಗೆ ಹಿಂದೂಗಳಲ್ಲಿ ಅತಿ ಹೆಚ್ಚು ಶ್ರಮಿಸುತ್ತಿರುವವರು ಎಂದರೆ ಮಹಾತ್ಮ ಗಾಂಧೀಜಿ, ಅವರ ಜಿಗಿತ ಎಷ್ಟು ದೊಡ್ಡದಿರಬಹುದು? ಬ್ರಿಟಿಷರ ವಿರುದ್ಧ ನಿಶ್ಶಸ್ತ್ರ ಪ್ರತೀಕಾರ ತೋರುವ ಮಹಾತ್ಮ ಗಾಂಧೀಜಿ, ಅಸ್ಪೃಶ್ಯ ವರ್ಗದವರ ಮೇಲೆ ಅಪರಾಧ ಎಸಗುವ ಹಿಂದೂಗಳ ಮನಸ್ಸು ನೋಯಿಸುವುದಕ್ಕೆ ಸಿದ್ಧವಿಲ್ಲ. ಅವರ ವಿರುದ್ಧ ಸತ್ಯಾಗ್ರಹಕ್ಕೆ ಸಿದ್ಧವಿಲ್ಲ, ಹೋಗಲಿ ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಿಲ್ಲ ಎಂದ ಮೇಲೆ ಇಂತಹ ಸುಧಾರಕರಿಂದ ಯಾವ ಉಪಯೋಗ ಇದೆ? ಇದು ನನಗಂತೂ ಅರ್ಥವಾಗುತ್ತಿಲ್ಲ.

## ದೋಷ ನಿಜವಾಗಿಯೂ ಸ್ಪೃಶ್ಯರದ್ದೆ

ಯಾರೋ ಒಂದಿಷ್ಟು ಜನರು ಅಸ್ಪೃಶ್ಯರ ಸಭೆಗೆ ಬಂದು ದೊಡ್ಡ ಧ್ವನಿಯಲ್ಲಿ ಸ್ಪೃಶ್ಯರನ್ನು ಬೈಯ್ಯಬಹುದು. ಯಾರೋ ಒಂದಿಷ್ಟು ಜನರು ಅಸ್ಪೃಶ್ಯರ ಸಭೆಯಲ್ಲಿ ಆಧ್ಯಕ್ಷತೆಯಿಂದ ಬಂಧುಗಳೇ, ನೀವು ಶುಭ್ರವಾಗಿರಿ. ಶಿಕ್ಷಣ ಪಡೆಯಿರಿ, ನಿಮ್ಮ ಕಾಲುಗಳ ಮೇಲೆ ನೀವು ನಿಂತುಕೊಳ್ಳಿ ಇತ್ಯಾದಿ ಹೇಳಬಹುದು. ನಿಜವಾಗಿ ಹೇಳಬೇಕೆಂದರೆ ಆರೋಪಿ ಅಂತ ಯಾರಾದರೂ ಇದ್ದರೆ ಅವರು ಸ್ಪೃಶ್ಯರು. ಯಾರದಾದರೂ ತಪ್ಪು ಅಂತ ಎನ್ನುವುದು ಇದ್ದರೆ ಅದು ಸ್ಪೃಶ್ಯರದ್ದು. ಆದರೆ ಸ್ಪೃಶ್ಯ ವರ್ಗದವರ ಸಭೆ ಸೇರಿಸಿ ಅವರಿಗೆ ಬುದ್ಧಿ ಮಾತು ಹೇಳಲು ಹೋದರೆ ಅದು ನೀಚತನದ ಕೆಲಸವಾಗುತ್ತದೆ. ಹಿಂದೂ ಧರ್ಮದಲ್ಲಿಯೇ ಇದ್ದುಕೊಂಡು ನಿಮ್ಮ ಯುದ್ಧ ಮುಂದುವರಿಸಿ, ನಾವು ನೀವು ಸೇರಿ ಯುದ್ಧ ಯಶಸ್ವಿಗೊಳಿಸೋಣ ಎನ್ನುವ ಸುಧಾರಕರಿಗೆ ನಾನು ಎರಡು ಸಂಗತಿಗಳನ್ನು ನೆನಪು ಮಾಡಿಕೊಡುವುದು ಅಗತ್ಯ ಎಂದು ಭಾವಿಸುತ್ತೇನೆ. ಕಳೆದ ಮಹಾಯುದ್ಧದ ವೇಳೆ ಒಬ್ಬ ಅಮೆರಿಕನ್ ಪ್ರಜೆ ಮತ್ತು ಬ್ರಿಟಿಷ್ ಪ್ರಜೆಯ ಮಧ್ಯೆ ನಡೆದ ಸಂವಾದ ನಾನು ಓದುತ್ತಿದ್ದ ಸಮಯದಲ್ಲಿ ಗಮನಿಸಿದ್ದು. ಇದು ಉದ್ಬೋಧಕವಾಗಿರುವ ಕಾರಣ ಅದನ್ನು ಇಲ್ಲಿ ಉಲ್ಲೇಖಿಸುವುದು ಉಚಿತ ಎಂದು ಭಾವಿಸುತ್ತೇನೆ. ಸಂವಾದದ ವಿಷಯ ಯುದ್ಧ ಎಲ್ಲಿಯವರೆಗೆ ಮುಂದುವರೆಯಬೇಕು ಎನ್ನುವುದರ ಮೇಲೆ ಇತ್ತು. ಆ ಅಮೆರಿಕನ್ ಗೃಹಸ್ಥನು ಈ ಯುದ್ಧ ಯಾವಾಗ ಮುಗಿಯಲಿದೆ ಎಂದು ಕೇಳಿದ ಅದಕ್ಕೆ ಬ್ರಿಟಿಷ್ ನಾಗರಿಕ ದೊಡ್ಡ ದ್ವನಿಯಲ್ಲಿ, ಕಟ್ಟಕಡೆಯ ಫ್ರೆಂಚ್ ವ್ಯಕ್ತಿ ಸಾಯುವವರೆಗೆ ನಾವು ಯುದ್ಧ ಮುಂದುವರೆಸುತ್ತೆವೆ ಎಂದು ಹೇಳಿದ. ಹಿಂದೂ ಸಮಾಜದಲ್ಲಿನ ಸುಧಾರಕರು ಕೂಡ ಅಸ್ಪೃಶ್ಯತೆಯ ಈ ಯುದ್ಧ ಕೊನೆಯವರೆಗೆ ನಡೆಸುವಾ ಎಂದು ಹೇಳುತ್ತಾರೆ ಅಂದರೆ ಕಟ್ಟಕಡೆಯ ಅಸ್ಪೃಶ್ಯ ವ್ಯಕ್ತಿ ಸಾಯುವವರೆಗೆ ಯುದ್ದ ನಡೆಯಲಿ ಎಂದು ನಾನಂತೂ ಅರ್ಥ ಮಾಡಿಕೊಳ್ಳುತ್ತೇನೆ.

ಇನ್ನೊಬ್ಬರ ಬೋಧನೆ ತಲೆಗೆ ತುಂಬಿಕೊಂಡು ಯುದ್ಧಕ್ಕೆ ಹೋಗುವ ಯೋಧನಿಂದ ಗೆಲುವು ನಿರೀಕ್ಷಿಸುವುದು ಎಷ್ಟರಮಟ್ಟಿಗೆ ಉಚಿತ? ನಮ್ಮ ಯುದ್ಧದಲ್ಲಿ ನಾವೇ ಸಾಯುವುದು ನಿಶ್ಚಿತ ಎಂದಾದ

ಮೇಲೆ ಭಲ್ಲೆಗಳನ್ನು ಬಿಟ್ಟು ಹೋರಾಡುವುದರಿಂದ ಏನು ಸಾಧಿಸಿದಂತಾಗುತ್ತದೆ? ಹಿಂದೂ ಸಮಾಜದ ಸುಧಾರಣೆ ನಮ್ಮ ಧ್ಯೇಯವಲ್ಲ. ಅದು ನಮ್ಮ ಕೆಲಸವೂ ಅಲ್ಲ. ನಮಗೆ ಸ್ವಾತಂತ್ರ್ಯ ಬೇಕಿದ್ದು ಅದು ನಮ್ಮ ಧ್ಯೇಯ. ಇದನ್ನು ಹೊರತುಪಡಿಸಿ ನಮಗೆ ಬೇರೆ ಕೆಲಸವೇ ಇಲ್ಲ. ಧರ್ಮಾಂತರದಿಂದ ನಮಗೆ ಸ್ವಾತಂತ್ರ್ಯ ಲಭಿಸುತ್ತದೆ ಎಂದರೆ ಹಿಂದೂ ಸಮಾಜದ ಸುಧಾರಣೆಯ ಹೋರಾಟವನ್ನು ನಾವು ಯಾವ ಕಾರಣಕ್ಕೆ ಕೈಗೆತ್ತಿಕೊಳ್ಳಬೇಕು? ಹಿಂದೂ ಸಮಾಜದ ಸುಧಾರಣೆ ಅಸ್ಪೃಶ್ಯ ಚಳವಳಿಯ ಮುಖ್ಯ ಉದ್ದೇಶ ಎಂದು ಯಾರೂ ತಪ್ಪಾಗಿ ಭಾವಿಸಬೇಡಿ. ಅಸ್ಪೃಶ್ಯತೆ ನಿವಾರಣೆಯ ಚಳವಳಿಯಲ್ಲಿ ಅಸ್ಪೃಶ್ಯರಿಗೆ ಸಾಮಾಜಿಕ ಸ್ವಾತಂತ್ರ್ಯ ತಂದುಕೊಡುವುದು ಮುಖ್ಯ ಉದ್ದೇಶವಾಗಿದೆ. ಮತ್ತು ಆ ಸ್ವಾತಂತ್ರ್ಯ, ಧರ್ಮಾಂತರದಿಂದ ಮಾತ್ರ ನಮಗೆ ಲಭಿಸುತ್ತದೆ ಎನ್ನುವುದು ಅಷ್ಟೇ ಸತ್ಯ ಸಂಗತಿ. ಅಸ್ಪೃಶ್ಯರಿಗೆ ಸಮಾನ ಸ್ಥಾನಮಾನ ನೀಡಬೇಕು ಎನ್ನುವ ವಿಚಾರಕ್ಕೆ ನನ್ನದು ಒಪ್ಪಿಗೆ ಇದೆ. ಅಲ್ಲದೇ ಅವರ ಚಳವಳಿಯ ಮುಖ್ಯ ಉದ್ದೇಶವೂ ಸಮಾನತೆ ಪಡೆಯುವುದು ಆಗಿದೆ. ಆದರೆ ಈ ಸಮಾನತೆಯನ್ನು ಪಡೆಯುವುದಕ್ಕೆ ಅವರು ಹಿಂದೂ ಧರ್ಮದಲ್ಲಿಯೇ ಉಳಿಯಬೇಕು ಇಲ್ಲದಿದ್ದರೆ ಅವರಿಗೆ ಸಮಾನ ಸ್ಥಾನ ಲಭಿಸದು ಎಂದು ಯಾರೂ ಆಕ್ಷೇಪ ಎತ್ತಕೂಡದು. ಹಿಂದೂ ಧರ್ಮದಲ್ಲಿಯೇ ಇದ್ದುಕೊಂಡು ಸಮಾನತೆ ಪಡೆಯುವುದು ಇಲ್ಲವೇ ಧರ್ಮಾಂತರದಿಂದ ಸಮಾನತೆ ಪಡೆಯುವುದು ಹೀಗೆ ಎರಡು ಮಾರ್ಗಗಳಿವೆ. ಹಿಂದೂ ಧರ್ಮದಲ್ಲಿಯೇ ಇದ್ದುಕೊಂಡು ಸಮಾನತೆ ಪಡೆಯುವುದಾದರೆ ಕೇವಲ ಸ್ಪೃಶ್ಯ–ಅಸ್ಪೃಶ್ಯತೆ ತೊಲಗಿದರೆ ಸಾಲದು. ಎರಡೂ ವರ್ಗದ ಮಧ್ಯೆ ಸಹಭೋಜನ– ಸಹ ಸಂಬಂಧ ಬೆಳೆದರೆ ಮಾತ್ರ ಸಮಾನತೆ ಲಭಿಸಿದಂತಾಗುತ್ತದೆ. ಅಂದರೆ ಇದರಿಂದ ಚಾತುರ್ವರ್ಣ್ಯದ ಬೆನ್ನೆಲುಬು ಮುರಿಯಬೇಕು ಮತ್ತು ಪೌರೋಹಿತ್ಯಶಾಹಿಯ ಧ್ವಂಸ ಆಗಬೇಕು. ಆದರೆ ಇದು ಸಾಧ್ಯವಾಗಬಲ್ಲದೇ?

ಒಂದು ವೇಳೆ ಇದು ಸಾಧ್ಯವಾಗದ್ದು ಎಂತಾದರೆ ಹಿಂದೂ ಧರ್ಮದಲ್ಲಿದ್ದುಕೊಂಡು ಸಮಾನತೆ ಅಪೇಕ್ಷಿಸುವುದು ಜಾಣತನ ಎನ್ನಿಸಿಕೊಳ್ಳಬಲ್ಲದೇ? ಅಥವಾ ಈ ಪ್ರಯತ್ನದಲ್ಲಿ ನೀವು ಯಶಸ್ವಿಯಾಗುವ ಸಾಧ್ಯತೆ ಇದೆಯೇ? ಇದಕ್ಕೆ ಹೋಲಿಸಿದರೆ ಧರ್ಮಾಂತರ ಎಷ್ಟು ಸರಳವಾಗಿದೆ. ಮುಸ್ಲಿಂ ಸಮಾಜವನ್ನು ಹಿಂದೂ ಸಮಾಜ ತನ್ನ ಸರಿಸಮನಾಗಿ ನೋಡುತ್ತದೆ. ಕ್ರಿಶ್ಚಿಯನ್ನರಿಗೂ ಸಮಾನತೆಯ ಮಣೆ ಹಾಕುತ್ತದೆ. ಧರ್ಮಾಂತರದಿಂದ ಸಹಜವಾಗಿ ಸಾಮಾಜಿಕ ಸ್ಥಾನಮಾನ ನಿಮಗೆ ಲಭಿಸುತ್ತದೆ ಎನ್ನುವುದು ನಿಜವೇ ಆಗಿದ್ದರೆ ನೀವು ಧರ್ಮಾಂತರದಂತಹ ಸರಳ ಮಾರ್ಗ ಏಕೆ ಅನುಸರಿಸಬಾರದು? ನನ್ನ ಪ್ರಕಾರ ಧರ್ಮಾಂತರದಿಂದ ಅಸ್ಪೃಶ್ಯರು ಮಾತ್ರ ಅಲ್ಲ ಹಿಂದೂಗಳು ಸುಖದಿಂದ ಇರುತ್ತಾರೆ. ನೀವು ಎಲ್ಲಿಯವರೆಗೆ ಹಿಂದೂ ಧರ್ಮದಲ್ಲಿ ಇರುತ್ತೀರೋ ಅಲ್ಲಿಯವರೆಗೆ ನೀವು ಅವರೊಂದಿಗೆ ನೀರಿಗಾಗಿ, ರೊಟ್ಟಿಗಾಗಿ ಅವರೊಂದಿಗೆ ಸಂಬಂಧ ಬೆಳೆಸುವುದಕ್ಕೆ ನಿತ್ಯ ಜಗಳ ಮಾಡಲೇಬೇಕಾಗುತ್ತದೆ. ಎಲ್ಲಿಯವರೆಗೆ ಈ ಜಗಳ ಇರುತ್ತದೋ ಅಲ್ಲಿಯವರೆಗೂ ಇಬ್ಬರಿಗೂ ನೆಮ್ಮದಿ ಇರುವುದಿಲ್ಲ. ಅಂತಿಮವಾಗಿ ಎರಡು ಸಮಾಜಗಳು ಪರಸ್ಪರ ಬದ್ಧ ವೈರಿಗಳಾಗಬೇಕಾಗುತ್ತದೆ. ಹೀಗಾಗಿ ಧರ್ಮಾಂತರವಾಗಿಬಿಟ್ಟರೆ ಜಗಳದ ಮೂಲ ಕಾರಣವೇ ಇಲ್ಲದಂತಾಗುತ್ತದೆ. ಅವರ ಗುಡಿಗಳಲ್ಲಿ ಪ್ರವೇಶಿಸುವುದಕ್ಕೆ ನಿಮಗೆ ಹಕ್ಕು ಮಂಡಿಸಲಿಕ್ಕಾಗುವುದಿಲ್ಲ ಅಲ್ಲದೇ ನಿಮಗೆ ಅದರ ಅಗತ್ಯವೂ ಇಲ್ಲವಾಗುತ್ತದೆ. ನಮ್ಮೊಂದಿಗೆ ಸಹಭೋಜನ ಮಾಡಿ, ಸಹವಿವಾಹ ಸಂಬಂಧ ಬೆಳೆಸಿ ಎಂದು ಅವರೊಂದಿಗೆ ಜಗಳ ಮಾಡಿಕೊಳ್ಳುವ ಪರಿಸ್ಥಿತಿಯೂ ಇರುವುದಿಲ್ಲ. ಈ ಜಗಳ ಇಲ್ಲವಾದ ಮೇಲೆ ತನ್ನಿಂದತಾನೆ ಎರಡೂ ಸಮಾಜದ ಮಧ್ಯೆ ಸೌಹಾರ್ದದ ಸಂಬಂಧ ಬೆಳೆಯುತ್ತದೆ. ಹಿಂದೂಗಳು ಹೇಗೆ ತಮ್ಮ ಮಂದಿರಗಳಿಂದ ನಿಮ್ಮನ್ನು ದೂರ ಇರಿಸಿದ್ದಾರೋ ಅದೇ ರೀತಿ ಕ್ರಿಶ್ಚಿಯನ್, ಮುಸ್ಲಿಂರನ್ನು

ದೂರ ಇರಿಸಿದ್ದಾರೆ. ನಿಮ್ಮಂತೆಯೇ ಅವರೊಂದಿಗೆ ಸಹಭೋಜನ ಮತ್ತು ಸಂಬಂಧಗಳನ್ನು ಮಾಡಿಕೊಳ್ಳುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಹಿಂದೂಗಳು ಮತ್ತು ಅವರ ನಡುವೆ ಇರುವ ಸೌಹಾರ್ದ ಸಂಬಂಧ, ನಿಮ್ಮ ಮತ್ತು ಹಿಂದೂಗಳ ನಡುವೆ ಇಲ್ಲ. ಈ ವ್ಯತ್ಯಾಸಕ್ಕೆ ಮುಖ್ಯ ಕಾರಣ ಇಷ್ಟೇ ನೀವು ಹಿಂದೂ ಧರ್ಮದಲ್ಲಿದ್ದುಕೊಂಡು ಹಿಂದೂ ಸಮಾಜದೊಂದಿಗೆ ಸಾಮಾಜಿಕ ಮತ್ತು ಧಾರ್ಮಿಕ ಹಕ್ಕುಗಳಿಗಾಗಿ ಬಡಿದಾಡುತ್ತಿದ್ದೀರಿ. ಆದರೆ ಅವರು ಹಿಂದೂ ಧರ್ಮದಿಂದ ಹೊರಗೆ ಹೋಗಿರುವ ಕಾರಣ ಹಿಂದೂಗಳೊಂದಿಗೆ ಧಾರ್ಮಿಕ ಮತ್ತು ಸಾಮಾಜಿಕ ಹಕ್ಕುಗಳಿಗಾಗಿ ಬಡಿದಾಡುವುದಕ್ಕೆ ಕಾರಣವೇ ಇಲ್ಲ. ಇನ್ನೊಂದು ಸಂಗತಿ ಏನೆಂದರೆ ಹಿಂದೂ ಸಮಾಜದೊಂದಿಗೆ ಅವರು ಯಾವುದೇ ವ್ಯವಹಾರ ಇಟ್ಟುಕೊಳ್ಳದಿದ್ದರೂ ಅವರನ್ನು ಹಿಂದೂ ಸಮಾಜ ಸಮಾನವಾಗಿ ಕಾಣುತ್ತದೆ. ಧರ್ಮಾಂತರದಿಂದ ಸಮಾನತೆ ಲಭಿಸುತ್ತದೆಂದಾದರೆ, ಹಿಂದೂ ಮತ್ತು ಅಸ್ಪೃಶ್ಯರ ಮಧ್ಯೆ ಸೌಹಾರ್ದತೆ ಬೆಳೆಯುತ್ತದೆಂದಾದರೆ ಸಮಾನತೆಗೆ ಅತ್ಯಂತ ಸರಳ ಮತ್ತು ಅನುಕೂಲಕರ ಮಾರ್ಗವನ್ನು ಅಸ್ಪೃಶ್ಯರು ಏಕೆ ಆಯ್ಕೆ ಮಾಡಿಕೊಳ್ಳಬಾರದು? ಈ ದೃಷ್ಟಿಕೋನದಿಂದ ನೋಡಿದರೆ ಅಸ್ಪೃಶ್ಯತೆ ನಮ್ಮನ್ನು ನಿಜವಾದ ಸ್ವಾತಂತ್ರ್ಯದತ್ತ ಕೊಂಡೊಯ್ಯುವ ಮಾರ್ಗವಾಗಿದ್ದು ಅದರಿಂದ ಸಮಾನತೆ ಲಭಿಸಲಿದೆ. ಧರ್ಮಾಂತರ ಮನೆ ಒಡೆಯುವ ಕೆಲಸ ಅಲ್ಲ. ಅದು ಪಲಾಯನವಾದವೂ ಅಲ್ಲ ಬದಲಿಗೆ ಅದು ಜಾಣತನದ ಮಾರ್ಗ. ಧರ್ಮಾಂತರವನ್ನು ವಿರೋಧಿಸುವವರು ಜಾತಿ ಕಾರಣವಾಗಿ ಧರ್ಮಾಂತರ ಮಾಡುವುದರಲ್ಲಿ ಏನೂ ಅರ್ಥವಿಲ್ಲವೆಂದು ಹೇಳುತ್ತಿದ್ದಾರೆ. ಎಲ್ಲಿ ಹೋದರೂ ಜಾತಿ ಭೇದ ಇದ್ದದ್ದೇ. ಮುಸ್ಲಿಂರಲ್ಲೂ, ಕ್ರಿಶ್ಚಿಯನ್ನರಲ್ಲೂ ಈ ಜಾತಿ ಭೇದ ಇದ್ದದ್ದೇ ಎಂದು ಹಿಂದೂಗಳು ಹೇಳುತ್ತಾರೆ. ದುರ್ದೈವದ ಸಂಗತಿ ಎಂದರೆ ಭಾರತದಲ್ಲಿರುವ ಅನ್ಯ ಧರ್ಮಗಳಲ್ಲೂ ಈ ಜಾತಿ ಭೇದ ತನ್ನ ಸ್ಥಾನ ಕಂಡುಕೊಂಡಿದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ಪಾಪಗೇಡಿ ಕೆಲಸ ಆಗಿದ್ದು ಹಿಂದೂಗಳಿಂದ ಈ ರೋಗದ ಮೂಲ ಹಿಂದೂಗಳೇ ಆಗಿದ್ದು ಅವರ ಸಂಪರ್ಕ ಬಂದ ಮೇಲೆ ಇತರ ಧರ್ಮಗಳಿಗೂ ಅದು ಅಂಟಿಕೊಂಡಿದೆ. ಹಿಂದೂಗಳ ದೃಷ್ಟಿಯಲ್ಲಿ ಇದು ಪರಿಹಾರ ಕಾಣದ ಸಮಸ್ಯೆ. ಮುಸ್ಲಿಂ ಮತ್ತು ಕ್ರೈಸ್ತರಲ್ಲಿ ಜಾತಿಭೇಧವಿದ್ದರೂ ಅದು ಹಿಂದೂ ಧರ್ಮದಲ್ಲಿರುವಂತೆ ಕಠೋರವಾಗಿದೆ ಎಂದು ಹೇಳುವುದು ಹುಚ್ಚುತನದ ಪರಮಾವಧಿ. ಹಿಂದೂಗಳ ಜಾತಿಭೇದ ಮತ್ತು ಮುಸ್ಲಿಂ, ಕ್ರೈಸ್ತರಲ್ಲಿನ ಜಾತಿಭೇದಕ್ಕೆ ಅಜಗಜಾಂತರ ವ್ಯತ್ಯಾಸವಿದೆ. ಒಂದು ವೇಳೆ ಮುಸ್ಲಿಂ ಮತ್ತು ಕ್ರೈಸ್ತರಲ್ಲಿ ಜಾತಿಭೇದ ಇದ್ದರೂ ಅದು ಸಮಾಜದ ಪ್ರಮುಖ ಅಂಗ ಎಂದು ಯಾರಿಗೂ ಹೇಳಲಿಕ್ಕೆ ಬಾರದು. ಯಾರು ನೀನು ಎಂದು ಮುಸ್ಲಿಂನನ್ನು ಕೇಳಿದರೆ ಆ ನಾನು ಮುಸ್ಲಿಂ ಅಥವಾ ಕ್ರೈಸ್ತ ಎಂದು ಹೇಳಿದರೆ ಸಾಕು ಎದುರಿನ ಮನುಷ್ಯ ತೃಪ್ತನಾಗುತ್ತಾನೆ. ನಿನ್ನ ಜಾತಿ ಯಾವುದು ಎಂದು ಕೇಳುವ ಅಗತ್ಯವೇ ಬೀಳುವುದಿಲ್ಲ. ಆದರೆ ಯಾವುದೇ ಹಿಂದೂವಿಗೆ ಯಾರು ನೀನು ಎಂದು ಪ್ರಶ್ನಿಸಿದರೆ ನಾನು ಹಿಂದೂ ಎಂದು ಹೇಳಿದರೆ ಯಾರಿಗೂ ತೃಪ್ತವಾಗದು. ಮುಂದಿನ ಪ್ರಶ್ನೆಯಾಗಿ ನಿನ್ನ ಜಾತಿ ಯಾವುದು ಎಂದು ಕೇಳುತ್ತಾರೆ. ಅದಕ್ಕೆ ಉತ್ತರ ನೀಡಲಿಕ್ಕಾಗದಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗುತ್ತದೆ. ಇದರ ಆಧಾರದ ಮೇಲೆ ಹಿಂದೂ ಧರ್ಮದಲ್ಲಿ ಜಾತಿಗೆ ಯಾವ ಮಟ್ಟದ ಪ್ರಾಧಾನ್ಯತೆ ಇದೆ ಮತ್ತು ಮುಸ್ಲಿಂ ಮತ್ತು ಕ್ರೈಸ್ತರಲ್ಲಿ ಜಾತಿ ಎಷ್ಟು ಗೌಣ ಎನ್ನುವುದು ತನ್ನಿಂದ ತಾನೇ ಸಿದ್ದವಾಗುತ್ತದೆ. ಇದಲ್ಲದೇ ಹಿಂದೂಗಳಲ್ಲಿ ಜಾತಿಭೇದಕ್ಕೂ ಮತ್ತು ಕ್ರೈಸ್ತ, ಮುಸ್ಲಿಂರಲ್ಲಿನ ಜಾತಿಭೇದಕ್ಕೂ ಇನ್ನೊಂದು ವ್ಯತ್ಯಾಸವಿದ್ದು, ಜಾತಿಭೇದ ಹಿಂದೂ ಧರ್ಮದ ಮೂಲವಾಗಿದ್ದರೆ, ಮುಸ್ಲಿಂ ಮತ್ತು ಕ್ರೈಸ್ತರಲ್ಲಿ ಜಾತಿಭೇದ ಧರ್ಮದಿಂದ ಪ್ರತಿಷ್ಠಾಪಿತಗೊಂಡಿಲ್ಲ. ಹಿಂದೂಗಳು ಜಾತಿಭೇದ ತೆಗೆದು ಹಾಕೋಣವೆಂದು ಹೇಳಿದರೂ ಅದಕ್ಕೆ ಧರ್ಮ ಅಡ್ಡ ಬರುತ್ತದೆ. ಆದರೆ ಮುಸ್ಲಿಂರು ಮತ್ತು

ಕ್ರೈಸ್ತರು ತಮ್ಮ ಧರ್ಮದಲ್ಲಿನ ಜಾತಿಭೇದ ನಿರ್ಮೂಲನಗೆ ಮುಂದಾದರೆ ಅದಕ್ಕೆ ಅವರ ಧರ್ಮ ಅಡ್ಡ ಬರುವುದಿಲ್ಲ. ಹಿಂದೂಗಳಿಗೆ ಧರ್ಮನಾಶ ಮಾಡದೇ ಜಾತಿಭೇದ ನಿರ್ಮೂಲನೆ ಸಾಧ್ಯವಿಲ್ಲ ಆದರೆ ಅದೇ ಕ್ರೈಸ್ತರಿಗೂ ಮತ್ತು ಮುಸ್ಲಿಂರಿಗೆ ಧರ್ಮನಾಶದ ಅಗತ್ಯವಿಲ್ಲ ಅಲ್ಲದೇ ಇಂತಹ ಕೆಲಸಕ್ಕೆ ಅವರ ಧರ್ಮದ ಬೆಂಬಲವೂ ಲಭಿಸುತ್ತದೆ. ಜಾತಿಭೇದ ಸರ್ವತ್ರ ಸ್ಥಾಪಿತವಾಗಿದೆ ಎಂದು ಒಪ್ಪಿಕೊಂಡರೂ ಹಿಂದೂ ಧರ್ಮದಲ್ಲಿಯೇ ಮುಂದುವರೆಯಿರಿ ಎಂದು ಅದರಿಂದ ತೀರ್ಪು ನೀಡಲಿಕ್ಕಾಗುವುದಿಲ್ಲ. ಜಾತಿಭೇದ ಅನಿಷ್ಠವಾಗಿರುವ ಸಮಾಜದಲ್ಲಿ ಜಾತಿ ಭೇದದ ತೀವ್ರತೆ ಅಷ್ಟಿರುವುದಿಲ್ಲ. ಇಲ್ಲವೇ ಆ ಸಮಾಜಕ್ಕೆ ಸೇರ್ಪಡೆಯಾದ ಬಳಿಕ ಅದನ್ನು ಆದಷ್ಟು ಶೀಘ್ರ ಮತ್ತು ಸಹಜತೆಯಿಂದ ನಿರ್ಮೂಲನೆ ಮಾಡುವಂತಿದ್ದರೆ ಅಂತಹ ಸಮಾಜಕ್ಕೆ ಸೇರ್ಪಡೆಯಾಗಿರಿ ಎನ್ನುವುದೇ ನಿಜವಾದ ತರ್ಕಶುದ್ಧ ಸಿದ್ಧಾಂತವಾಗಿದೆ ಎನ್ನುವುದು ನನ್ನ ಅನಿಸಿಕೆ.

ಕೇವಲ ಧರ್ಮಾಂತರದಿಂದ ಏನು ಸಾಧಿಸಿದಂತೆ ಆಗುತ್ತದೆ? ನೀವು ನಿಮ್ಮ ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿ ಸುಧಾರಿಸುವ ನಿಟ್ಟಿನಲ್ಲಿ ಪ್ರಯತ್ನಿಸಿ ಎಂದು ಒಂದಿಷ್ಟು ಹಿಂದೂಗಳು ಹೇಳುತ್ತಿರಬಹುದು. ಇಂತಹ ಪ್ರಶ್ನೆಗಳಿಂದ ನಮ್ಮಲ್ಲಿನ ಕೆಲವರು ಸಂಭ್ರಮದಿಂದ ಕುಣಿದಾಡುವ ಸಾಧ್ಯತೆ ಇರುವ ಕಾರಣ ಈ ನಿಟ್ಟಿನಲ್ಲಿ ವಿಚಾರ ಮಾಡಬೇಕಾದ ಅಗತ್ಯವಿದೆ ಎನ್ನುವುದು ನನ್ನ ಅನಿಸಿಕೆ. ಮೊದಲಿಗೆ ನನ್ನ ಪ್ರಶ್ನೆ ಎಂದರೆ ನಿಮ್ಮ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಸುಧಾರಣೆಗೆ ಯತ್ನಿಸುವವರು ಯಾರು? ನೀವು ಅಥವಾ ನಿಮಗೆ ಆ ರೀತಿ ಬೋಧನೆ ಮಾಡಿದವರೋ? ಈ ರೀತಿ ಉಪದೇಶ ಮಾಡುವ ಆ ಹಿಂದೂಗಳು ಕೇವಲ ಬೋಧನೆ ಬಿಟ್ಟು ಅದಕ್ಕಿಂತ ಹೆಚ್ಚಿಗೆ ಏನೂ ಮಾಡಲಾರರು ಎನ್ನುವುದು ನನ್ನ ಅನಿಸಿಕೆ ಅಲ್ಲದೇ ಆ ನಿಟ್ಟಿನಲ್ಲಿ ಆಗಬೇಕಾದ ಸಿದ್ಧತೆಗಳು ನನ್ನ ಕಣ್ಣಿಗಂತೂ ಗೋಚರಿಸುತ್ತಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಹಿಂದೂ ತಮ್ಮ ತಮ್ಮ ಜಾತಿಗಳ ಆರ್ಥಿಕ ಸ್ಥಿತಿಗತಿ ಸುಧಾರಿಸುವುದಕ್ಕೆ ಶ್ರಮಿಸುತ್ತಿದ್ದಾರೆ. ಬ್ರಾಹ್ಮಣರು ಬ್ರಾಹ್ಮಣ ಮಹಿಳೆಯರಿಗಾಗಿ ಸೂತಿಕಾಗೃಹ, ಬ್ರಾಹ್ಮಣ ಮಕ್ಕಳಿಗಾಗಿ ವಿದ್ಯಾರ್ಥಿ ವೇತನ, ಬ್ರಾಹ್ಮಣ ನಿರುದ್ಯೋಗಿಗಳಿಗೆ ನೌಕರಿ ಕೊಡಿಸುವ ಕೆಲಸದಲ್ಲಿ ತಲ್ಲೀನರಾಗಿದ್ದಾರೆ. ಸಾರಸ್ವತರು, ಕಾಯಸ್ಥರು, ಮರಾಠರು ಅದೇ ರೀತಿ ಮಾಡುತ್ತಿದ್ದಾರೆ. ಅವರು ತಮ್ಮವರಿಗಾಗಿ ಮಾತ್ರ ಇದ್ದಾರೆ. ಯಾರಿಗೆ ಯಾರೂ ಇಲ್ಲವೋ ಅವರಿಗೆ ಪರಮಾತ್ಮನೇ ಗತಿ ಎನ್ನುವಂತಹ ಸ್ಥಿತಿ ಇದೆ. ನಿಮಗೆ ಉನ್ನತಿ ಆಗಬೇಕು ಎಂದಿದ್ದರೆ ನೀವೇ ಮಾಡಿಕೊಳ್ಳಬೇಕು. ಬೇರೆಯವರು ನಿಮಗೆ ನೆರವು ನೀಡುವುದಿಲ್ಲ ಎನ್ನುವುದು ಕಟು ವಾಸ್ತವ. ಈ ಜನರ ಮಾತುಗಳಿಗೆ ಕಿವಿ ಕೊಡುವುದರಲ್ಲಿ ಯಾವುದೇ ಅರ್ಥ ಇಲ್ಲ. ದಿಕ್ಕು ತಪ್ಪಿಸಿ ಕಾಲಹರಣ ಮಾಡುವುದು ಹೊರತುಪಡಿಸಿ ಬೇರೆ ಇನ್ನಾವುದೇ ಉದ್ದೇಶ ಇದರಲ್ಲಿ ಇಲ್ಲ. ನಿಮ್ಮ ಸ್ಥಿತಿಗತಿ ನೀವು ಸುಧಾರಿಸಬೇಕು ಎಂದಿದ್ದರೆ, ಈ ಹಿಂದೂಗಳ ತರ್ಕಕ್ಕೆ ಕಿವಿಗೊಡುವ ಅಗತ್ಯವೇ ಇಲ್ಲ ಮತ್ತು ಉಪದೇಶ ಮಾಡುವುದಕ್ಕೆ ಅವರಿಗೆ ಅಧಿಕಾರವೂ ಇಲ್ಲ. ಅಲ್ಲದೇ ಇಷ್ಟು ಹೇಳಿ ಈ ಪ್ರಶ್ನೆ ಇಲ್ಲಿಗೆ ಕೈ ಬಿಡುವುದಕ್ಕೆ ನಾನು ಸಿದ್ಧನಿಲ್ಲ ಅದನ್ನು ಖಂಡಿಸುವುದು ನನಗೆ ಅಗತ್ಯವಾಗಿದೆ.

ಕೇವಲ ಧರ್ಮಾಂತರದಿಂದ ಏನಾಗುತ್ತದೆ? ಎಂದು ಕೇಳುವ ಹಿಂದೂಗಳಲ್ಲಿ ತುಂಬಿರುವ ವಿಚಾರಶೂನ್ಯತೆಯ ಬಗ್ಗೆ ನನಗೆ ದೊಡ್ಡ ಆಶ್ಚರ್ಯವಾಗುತ್ತದೆ. ಭಾರತದಲ್ಲಿರುವ ಸಿಖ್, ಮುಸ್ಲಿಂ ಮತ್ತು ಕ್ರೈಸ್ತರು ತಮ್ಮ ಪೂರ್ವಾಶ್ರಮದಲ್ಲಿ ಹಿಂದೂಗಳೇ ಆಗಿದ್ದವರು ಅದರಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಶೂದ್ರರು ಮತ್ತು ಅಸ್ಪೃಶ್ಯರೇ ಆಗಿದ್ದವರು. ಯಾವ ಹಿಂದೂಗಳು, ಹಿಂದೂ ಧರ್ಮ ತೊರೆದು ಸಿಖ್ ಧರ್ಮ ಅಪ್ಪಿಕೊಂಡರೋ, ಯಾವ ಹಿಂದೂಗಳು ಹಿಂದೂ ಧರ್ಮ ಬಿಟ್ಟು ಮುಸ್ಲಿಂ ಧರ್ಮಕ್ಕೆ ಶರಣಾದರೋ

ಅಥವಾ ಯಾವ ಹಿಂದೂಗಳು ಹಿಂದೂ ಧರ್ಮ ಬಿಟ್ಟು ಕ್ರೈಸ್ತ ಧರ್ಮದ ಕೈ ಹಿಡಿದರೋ ಅವರ ಉನ್ನತಿಯೇ ಆಗಿದೆ. ಧರ್ಮಾಂತರದಿಂದ ಏನೂ ಸಾಧಿಸಲಿಕ್ಕಾಗುವುದಿಲ್ಲೆಂಬ ಹೇಳಿಕೆಯ ಗರ್ಭಿತಾರ್ಥ, ಧರ್ಮ ಎನ್ನುವುದು ನಿಷ್ಪ್ರಯೋಜಕ ಸಂಗತಿ ಎಂದು ಹೇಳಬೇಕಾಗುತ್ತದೆ. ಧರ್ಮ ನಿಷ್ಪ್ರಯೋಜಕವಾಗಿದ್ದು ಅದರಿಂದ ಲಾಭವೂ ಇಲ್ಲ. ಹಾನಿಯೂ ಇಲ್ಲ ಎಂತಾದರೆ ಅವರು ಹಿಂದೂ ಧರ್ಮದಲ್ಲಿ ಅಸ್ಪೃಶ್ಯರು ಉಳಿಯಲಿ ಎಂದೇಕೆ ಆಗ್ರಹಿಸುತ್ತಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಯಾರಿಗೆ ಧರ್ಮದಲ್ಲಿ ಅರ್ಥವೇ ಇಲ್ಲೆಂದು ಮನವರಿಕೆಯಾಗಿದ್ದರೆ ಒಂದು ಧರ್ಮ ಬಿಟ್ಟು ಇನ್ನೊಂದು ಧರ್ಮ ಸ್ವೀಕರಿಸಿದರೆ ಈ ಜನರು ಇಂತಹ ವಿತಂಡವಾದ ಏಕೆ ಮಂಡಿಸಬೇಕು? ಕೇವಲ ಧರ್ಮಾಂತರದಿಂದ ಏನು ಆಗುವುದು ಎಂದು ಕೇಳುವ ಹಿಂದೂಗಳಿಗೆ ಕೇವಲ ಸ್ವರಾಜ್ ಗಳಿಕೆಯಿಂದ ಏನಾದರೂ ಸಾಧಿಸಲು ಸಾಧ್ಯವೇ ಎಂದು ಮರುಪ್ರಶ್ನಿಸುವುದರಲ್ಲಿ ತಪ್ಪಿಲ್ಲ. ಭಾರತದಲ್ಲಿನ ಇತರ ಜನರಿಗೂ ಅಸ್ಪೃಶ್ಯರಂತೆ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿ ಸಾಧಿಸುವುದು ನಿಜ ಎಂದಾಗಿದ್ದರೆ ಕೇವಲ ಸ್ವರಾಜ್‌ದಿಂದ ಯಾವ ಉಪಯೋಗವಾಗಬಲ್ಲುದು? ಮತ್ತು ಕೇವಲ ಸ್ವರಾಜ್‌ದಿಂದ ದೇಶಕ್ಕೆ ಲಾಭವಾಗುತ್ತದೆ ಎನ್ನವುದಾದರೆ ಧರ್ಮಾಂತರದಿಂದ ಅಸ್ಪೃಶ್ಯರಿಗೂ ಲಾಭ ಆಗಲೇಬೇಕು ಅಲ್ಲವೇ? ಭಾರತಕ್ಕೆ ಸ್ವರಾಜ್‌ದ ಅವಶ್ಯಕತೆ ಎಷ್ಟರ ಮಟ್ಟಿಗೆ ಇದೆಯೋ ಅಷ್ಟೇ ಧರ್ಮಾಂತರದ ಅವಶ್ಯಕತೆ ಅಸ್ಪೃಶ್ಯರಿಗೆ ಇದೆ. ದೇಶಕ್ಕೆ ಎಷ್ಟು ಸ್ವರಾಜ್ ಮಹತ್ವದ್ದಾಗಿದೆಯೋ ಅಷ್ಟೇ ಧರ್ಮಾಂತರ ಕೂಡ ಅಸ್ಪೃಶ್ಯರಿಗೆ ಮಹತ್ವದ್ದಾಗಿದೆ. ಧರ್ಮಾಂತರ ಮತ್ತು ಸ್ವರಾಜ್ ಎರಡೂ ವಿಚಾರಗಳ ಉದ್ದೇಶ ಒಂದೇ ಆಗಿದ್ದು, ಅವುಗಳ ಅಂತಿಮ ಉದ್ದೇಶದಲ್ಲಿ ಯಾವುದೇ ಭೇದವಿಲ್ಲ. ಆ ಅಂತಿಮ ಉದ್ದೇಶ ಅಂದರೆ ಸ್ವಾತಂತ್ರ್ಯ ಗಳಿಕೆ ಇದು ಮನುಷ್ಯನಾದವನಿಗೆ ತೀರ ಅಗತ್ಯದ ವಿಚಾರವಾಗಿದ್ದರೆ ಧರ್ಮಾಂತರದಿಂದ ಅಸ್ಪೃಶ್ಯರಿಗೆ ಸ್ವತಂತ್ರ ಜೀವನ ಲಭಿಸುತ್ತದೆ ಎಂದರೆ ಅಂತಹ ಧರ್ಮಾಂತರ ನಿರರ್ಥಕ ಎಂದು ಯಾರಿಗೂ ಹೇಳಿಕೆ ನೀಡಲು ಸಾಧ್ಯವಿಲ್ಲ.

**ಯಾವುದು ಮೊದಲು ಧರ್ಮಾಂತರವೇ, ಆರ್ಥಿಕ ಪ್ರಗತಿಯೇ?**

ಈ ಸಂದರ್ಭದಲ್ಲಿ ಮೊದಲು ಆರ್ಥಿಕ ಪ್ರಗತಿಯೋ ಅಥವಾ ಧರ್ಮಾಂತರವೋ ಎಂದು ಕೇಳುವವರಿದ್ದಾರೆ. ಮೊದಲು ಧರ್ಮಾಂತರದ ಪ್ರಶ್ನೆಯ ಬಗ್ಗೆ ಚಿಂತನೆ ಮಾಡುವುದು ಅಗತ್ಯ ಎಂದು ನಾನು ಭಾವಿಸುತ್ತೇನೆ. ಆರ್ಥಿಕ ಪ್ರಗತಿಯೇ ಮೊದಲು ಎನ್ನುವವರಿಗೆ ನನ್ನ ಅಭಿಪ್ರಾಯ ಸರಿಬಾರದು. ಮೊದಲು ಧರ್ಮಾಂತರ ಅಥವಾ ಮೊದಲು ಆರ್ಥಿಕ ಪ್ರಗತಿ ಇಲ್ಲವೇ ಮೊದಲು ಆರ್ಥಿಕ ಪ್ರಗತಿ ಬಳಿಕ ಧರ್ಮಾಂತರ ಎನ್ನುವ ವಾದ, ಮೊದಲು ರಾಜಕೀಯ ಪ್ರಗತಿ ಬಳಿಕ ಸಾಮಾಜಿಕ ಪ್ರಗತಿ ಎನ್ನುವ ವಾದದಂತೆ ಇದೆ. ಸಾಮಾಜಿಕ ಪ್ರಗತಿಗೆ ಅನೇಕ ಸಾಧನಗಳ ಅವಶ್ಯಕತೆ ಇರುತ್ತದೆ. ಅದರಲ್ಲಿ ಒಂದು ಸಾಧನದ ಬಳಕೆಯಾದ ಮೇಲೆ ಇನ್ನೊಂದು ಸಾಧನದ ಬಳಕೆಯಾಗಬೇಕು ಎಂದು ಮೊದಲೇ ನಿರ್ಧರಿಸಲಿಕ್ಕಾಗದು. ಒಂದು ವೇಳೆ ಇಂತಹ ಅನುಕ್ರಮ ಇರಲೇಬೇಕು ಎಂದು ಆಗ್ರಹಿಸಿದರೆ ನಾನು ಮೊದಲು ಧರ್ಮಾಂತರ ಇಲ್ಲವೇ ಆರ್ಥಿಕ ಪ್ರಗತಿಯ ಪ್ರಶ್ನೆಗೆ ನನ್ನ ಉತ್ತರ ಮೊದಲು ಧರ್ಮಾಂತರ ಎಂದಾಗುತ್ತದೆ. ಎಲ್ಲಿಯವರೆಗೆ ನಿಮ್ಮ ಮೇಲೆ ಅಸ್ಪೃಶ್ಯತೆಯ ಕಳಂಕ ತಗುಲಿಕೊಂಡಿರುತ್ತದೋ ಅಲ್ಲಿಯವರೆಗೆ ನಿಮ್ಮ ಆರ್ಥಿಕ ಪ್ರಗತಿ ಹೇಗೆ ಸಾಧ್ಯ ಎನ್ನುವುದು ನನಗೆ ತಿಳಿಯಲೊಲ್ಲದು. ನಿಮ್ಮಲ್ಲಿ ಯಾರಾದರೊಬ್ಬರು ಅಂಗಡಿ ಹಾಕಬೇಕು ಎಂಬ ಉದ್ದೇಶದಿಂದ ಒಂದು ವೇಳೆ ಆಂಗಡಿ ಹಾಕಿದರು ಎಂದಿಟ್ಟುಕೊಳ್ಳಿ. ಆ ವ್ಯಾಪಾರಿ ಅಸ್ಪೃಶ್ಯ ಎಂದು ತಿಳಿದ ಕೂಡಲೇ ಯಾರೂ ನಿಮ್ಮ ಹತ್ತಿರ ಸಾಮಾನು ಖರೀದಿಸುವುದಿಲ್ಲ.

ನೌಕರಿ ಮಾಡಬೇಕು ಎಂದುಕೊಂಡು ನೌಕರಿಗೆ ಅರ್ಜಿ ಗುಜರಾಯಿಸುತ್ತೀರಿ. ಅರ್ಜಿ ಹಾಕಿದವ ಅಸ್ಪೃಶ್ಯ ಎಂದು ಗೊತ್ತಾದರೆ ನಿಮಗೆ ನೌಕರಿಯೂ ಸಿಗುವುದಿಲ್ಲ. ಯಾರದೊ ಒಬ್ಬರ ಹೊಲ ಮಾರುವುದಿದೆ. ಆ ಹೊಲ ನಿಮ್ಮ ಪೈಕಿ ಒಬ್ಬರು ಖರೀದಿಸುವುದಕ್ಕೆ ಸಿದ್ಧರಿದ್ದೀರಿ. ಅದಕ್ಕಾಗಿ ಹೊಲ ಖರೀದಿಸುತ್ತೇನೆ ಎಂದು ನೀವು ಆ ಮಾರುವ ವ್ಯಕ್ತಿ ಬಳಿ ಬೇಡಿಕೆ ಮಂಡಿಸುತ್ತೀರಿ. ಆದರೆ ಹೊಲ ಖರೀದಿಸುವವ ಅಸ್ಪೃಶ್ಯ ಎಂದು ಗೊತ್ತಾಯಿತು ಎಂದರೆ ನಿಮಗೆ ಆ ಹೊಲ ಸಿಗಲಿಕ್ಕೆ ಸಾಧ್ಯವಿಲ್ಲ. ಆರ್ಥಿಕ ಪ್ರಗತಿಗೆ ನೀವು ಯಾವುದೇ ಮಾರ್ಗ ಸ್ವೀಕರಿಸಿದರೂ ಅಸ್ಪೃಶ್ಯತೆಯ ಕಾರಣಕ್ಕೆ ಆ ಮಾರ್ಗದಲ್ಲಿ ನಿಮಗೆ ಯಶಸ್ಸು ಲಭಿಸದು. ನಿಮ್ಮ ಉನ್ನತಿಯ ಮಾರ್ಗದಲ್ಲಿ ಅಸ್ಪೃಶ್ಯತೆ ಶಾಶ್ವತವಾಗಿ ಅಡ್ಡ ನಿಂತಿರುವ ಕಲ್ಲು ಬಂಡೆ. ಅದನ್ನು ಬದಿಗೆ ಸರಿಸದೇ ನಿಮ್ಮ ಪ್ರಗತಿಯ ಮಾರ್ಗ ಮುಕ್ತವಾಗದು. ಧರ್ಮಾಂತರದಿಂದ ಮಾತ್ರ ಈ ಬಂಡೆಗಲ್ಲು ಮಾರ್ಗ ಮಧ್ಯದಿಂದ ಬದಿಗೆ ಸರಿಸಲು ಸಾಧ್ಯ. ನಿಮ್ಮಲ್ಲಿನ ಕೆಲವು ಯುವಕರು ಶಿಕ್ಷಣದ ಹಿಂದೆ ಬೆನ್ನು ಬಿದ್ದಿದ್ದೀರಿ, ಶಿಕ್ಷಣಕ್ಕಾಗಿ ಎಲ್ಲಿಂದ ಸಾಧ್ಯವೋ ಅಲ್ಲಿಂದ ಹಣ ತರುವ ಪ್ರಯತ್ನ ಮಾಡುತ್ತಿದ್ದೀರಿ. ಈ ಹಣದ ಲಾಲಸೆಯಿಂದಾಗಿ ಎಲ್ಲಿದ್ದೇವೆಯೋ ಅಲ್ಲಿಯೇ ಅಸ್ಪೃಶ್ಯರಾಗಿ ಇದ್ದುಕೊಂಡು ಉನ್ನತಿ ಸಾಧಿಸುವ ಪ್ರವೃತ್ತಿ ಅನೇಕರಲ್ಲಿ ಇತ್ತೀಚಿನ ದಿನಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಈ ಬಗ್ಗೆ ನನ್ನ ಒಂದು ಪ್ರಶ್ನೆ ಎಂದರೆ, ಒಂದು ವೇಳೆ ಶಿಕ್ಷಣ ಪಡೆದಿದ್ದೀರಿ ಸುಶಿಕ್ಷಿತರಾಗಿದ್ದೀರಿ ಎಂದಿಟ್ಟುಕೊಳ್ಳಿ. ನಿಮ್ಮ ಶೈಕ್ಷಣಿಕ ಅರ್ಹತೆಗೆ ನಿಮಗೆ ನೌಕರಿಯೇ ದೊರೆಯುವ ಮಾರ್ಗವೇ ಮುಕ್ತವಿಲ್ಲ ಎಂದ ಮೇಲೆ ನೀವು ಶಿಕ್ಷಣ ಪಡೆದು ಏನು ಮಾಡುವವರಿದ್ದೀರಿ? ನಿಮ್ಮಲ್ಲಿ ಸಾಕಷ್ಟು ಸುಶಿಕ್ಷಿತರು ನಿರುದ್ಯೋಗಿಗಳಾಗಿ ಉಳಿದಿದ್ದಾರೆ ಅದಕ್ಕೆ ಕಾರಣ ಏನಿರಬಹುದು? ನಿರುದ್ಯೋಗಕ್ಕೆ ಬೇಕಾದಷ್ಟು ಕಾರಣಗಳಿದ್ದರೂ ನನ್ನ ಪ್ರಕಾರ ನಿಮ್ಮ ನಿರುದ್ಯೋಗಕ್ಕೆ ಅಸ್ಪೃಶ್ಯತೆ ಕಾರಣ. ಅಸ್ಪೃಶ್ಯತೆ ಕಾರಣದಿಂದ ನಿಮ್ಮ ಅರ್ಹತೆಯ ಪರೀಕ್ಷೆಯಾಗುವುದಿಲ್ಲ. ಅಸ್ಪೃಶ್ಯರಿರುವ ಕಾರಣ ನಿಮ್ಮನ್ನು ಪೊಲೀಸ್ ಇಲಾಖೆಯಲ್ಲಿ ಸೇರಿಸಿಕೊಳ್ಳುವುದಿಲ್ಲ, ಅಸ್ಪೃಶ್ಯತೆಯ ಕಾರಣಕ್ಕೆ ನಿಮ್ಮಲ್ಲಿನ ಸಾಮರ್ಥ್ಯದ ಅರಿವು ಬೇರೆಯವರಿಗೆ ಆಗುವುದಿಲ್ಲ. ಅಸ್ಪೃಶ್ಯತೆಯಿಂದಾಗಿ ನಿಮಗೆ ಪಟ್ಟೆದಾರನ ಹುದ್ದೆ ಸಿಗುವುದಿಲ್ಲ. ಅಸ್ಪೃಶ್ಯರಾಗಿರುವ ಕಾರಣಕ್ಕೆ ನಿಮ್ಮನ್ನು ಸೈನ್ಯದಿಂದ ತೆಗೆದುಹಾಕಲಾಗಿದೆ. ಅಸ್ಪೃಶ್ಯತೆಯ ಕಾರಣಕ್ಕೆ ನೀವು ಮೇಲಿನ ಹುದ್ದೆಗೆ ಏರುವಂತಿಲ್ಲ. ಅಸ್ಪೃಶ್ಯತೆ ಒಂದು ರೀತಿಯ ಶಾಪವಿದ್ದಂತೆ. ಅದರಿಂದ ನೀವು ಭಸ್ಮವಾಗಿದ್ದೀರಿ. ಅದರಿಂದ ನಿಮ್ಮ ಸಾಮರ್ಥ್ಯ ಬೂದಿಯಾಗಿದೆ. ಇಂತಹ ಸ್ಥಿತಿಯಲ್ಲಿ ಯಾವ ಅರ್ಹತೆ ಸಂಪಾದಿಸಲು ಸಾಧ್ಯ? ಮತ್ತು ಅರ್ಹತೆ ಸಂಪಾದಿಸಿದರೂ ಅದರಿಂದ ಯಾವ ಉಪಯೋಗವಾಗಬಲ್ಲುದು? ನಿಮ್ಮ ಅರ್ಹತೆಯ ಬಗ್ಗೆ ಮೆಚ್ಚುಗೆ ಬೇಕು. ನಿಮ್ಮ ಶಿಕ್ಷಣದ ಉಪಯೋಗ ಆಗಬೇಕು. ನಿಮ್ಮ ಆರ್ಥಿಕ ಪ್ರಗತಿಯ ಮಾರ್ಗ ಮುಕ್ತವಾಗಬೇಕು ಎನ್ನುವುದು ನಿಮ್ಮ ಇಚ್ಛೆಯಾಗಿದ್ದರೆ ಮೊದಲು ನೀವು ಅಸ್ಪೃಶ್ಯತೆ ಕಳೆದುಕೊಳ್ಳಬೇಕಾಗುತ್ತದೆ.

ಇಲ್ಲಿಯವರೆಗೆ ಧರ್ಮಾಂತರ ವಿರೋಧಿಗಳು ಮಂಡಿಸಿದ ಕಾರಣಗಳನ್ನು ವಿಮರ್ಶಿಸಲಾಗಿದೆ. ಇದೀಗ ಧರ್ಮಾಂತರಕ್ಕೆ ಸಹಾನುಭೂತಿ ವ್ಯಕ್ತಪಡಿಸಿರುವ ಜನರಲ್ಲಿ ಉದ್ಭವಿಸಿರುವ ಸಂಶಯಗಳ ನಿವಾರಣೆಗೆ ಪ್ರಯತ್ನಿಸುತ್ತೇನೆ. ಈ ಧರ್ಮಾಂತರದಿಂದ ನಮ್ಮ ಮಹಾರ್ ವತನದಾರಿಕೆ ಉಳಿಯುವುದೇ ಎಂದು ಅನೇಕ ಮಹಾರರಲ್ಲಿ ಗೊಂದಲ ಉಂಟಾಗಿದೆಂದು ನನ್ನ ಕಿವಿಗೆ ಬಿದ್ದಿದೆ. ಧರ್ಮಾಂತರ ವಿರೋಧಿ ಹಿಂದೂಗಳು ನೀವು ಧರ್ಮಾಂತರ ಮಾಡಿದರೆ ನಿಮ್ಮ ಮಹಾರ್ ವತನದಾರಿಕೆ ಹೋಗುತ್ತದೆ ಎಂಬ ಭೀತಿಯನ್ನು ಹಳ್ಳಿ ಹಳ್ಳಿಗಳಲ್ಲಿ ಹರಡುತ್ತಿರುವ ವಿಚಾರ ನನ್ನ ಕಿವಿಗೆ ಬಿದ್ದಿದೆ. ಮಹಾರದಾರಿಕೆ ಹೋದರೂ ಕೂಡ ನನಗೆ ಖೇದವಾಗುವುದಿಲ್ಲ ಎನ್ನುವುದು ನಿಮಗೆಲ್ಲರಿಗೂ ಗೊತ್ತಿರುವ ವಿಚಾರ. ಮಹಾರರನ್ನು ಅಧೋಗತಿಗೆ ತಳ್ಳಿದ ಯಾವುದಾದರೂ ಒಂದು ಸಂಗತಿ ಅನ್ನುವುದು ಇದ್ದರೆ ಅದು ಮಹಾರ್‌ದಾರಿಕೆ. ಈ

ಅಭಿಪ್ರಾಯವನ್ನು ನಾನು ಕಳೆದ ಹತ್ತು ವರ್ಷಗಳಿಂದ ಮಂಡಿಸುತ್ತಿರುವುದು ನಿಮಗೆ ತಿಳಿದಿರುವ ವಿಚಾರ. ಯಾವ ದಿನ ನೀವು ಮಹಾರದಾರಿಕೆಯ ಸಂಕೋಲೆಯಿಂದ ಮುಕ್ತರಾಗುತ್ತೀರೋ ಅದೇ ದಿನ ನಿಮ್ಮ ಉದ್ಧಾರದ ಮಾರ್ಗ ಮುಕ್ತವಾಗುತ್ತದೆ. ಧರ್ಮಾಂತರದಿಂದ ನಿಮ್ಮ ಮಹಾರ್ ವತನದಾರಿಕೆಗೆ ಯಾವುದೇ ತೆರನಾದ ಧಕ್ಕೆ ಬರುವುದಿಲ್ಲ ಎಂದು ಈ ಮೂಲಕ ಭರವಸೆ ನೀಡುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ೧೮೫೦ರ ಕಾಯ್ದೆಯನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯವಾಗುತ್ತದೆ. ಈ ಕಾಯ್ದೆಯ ಕಲಮಿನ ಪ್ರಕಾರ ಯಾವುದೇ ವ್ಯಕ್ತಿ ಕೇವಲ ಧರ್ಮಾಂತರ ಮಾಡಿದ ಮಾತ್ರಕ್ಕೆ ಆತನ ವಾರಸುದಾರಿಕೆ ಮತ್ತು ಆಸ್ತಿಯ ಮೇಲಿನ ಅಧಿಕಾರಕ್ಕೆ ಬಾಧೆ ಬರುವುದಿಲ್ಲ. ಯಾರಿಗೆ ಕಾಯ್ದೆಯ ಸಾಕ್ಷಿ ಸಮರ್ಪಕವಾಗಿಲ್ಲ ಎಂದು ಅನ್ನಿಸುತ್ತದೋ ಅವರು ಅಹ್ಮದನಗರ ಜಿಲ್ಲೆಯಲ್ಲಿನ ಪರಿಸ್ಥಿತಿ ಪರಿಶೀಲಿಸಬಹುದು. ಅಹ್ಮದನಗರ ಜಿಲ್ಲೆಯಲ್ಲಿನ ಸಾಕಷ್ಟು ಅಸ್ಪೃಶ್ಯರು ಕ್ರೈಸ್ತ ಧರ್ಮ ಸ್ವೀಕರಿಸಿದ್ದರೆ ಇನ್ನೂ ಕೆಲವರು ಮಹಾರ್ ಆಗಿಯೇ ಉಳಿದಿದ್ದಾರೆ. ಆದಾಗ್ಯೂ ಕ್ರೈಸ್ತರಾಗಿರುವ ಮಹಾರ್‌ರ ವತನದಾರಿಕೆ ಹಕ್ಕು ಕಳೆದುಕೊಂಡಿಲ್ಲ. ಈ ವಿಚಾರವನ್ನು ಅಹ್ಮದನಗರ ಜಿಲ್ಲೆಯ ಮಹಾರರು ಸ್ಪಷ್ಟವಾಗಿ ನೀಡಬಲ್ಲರು. ಹೀಗಾಗಿ ಧರ್ಮಾಂತರಿಂದಾಗಿ ವತನದಾರಿಕೆಗೆ ಧಕ್ಕೆ ಆಗುತ್ತದೆ ಎಂಬ ಭೀತಿ ಬೆಳೆಸಿಕೊಳ್ಳುವುದು ಸರಿಯಲ್ಲ.

ಇನ್ನೊಂದು ರಾಜಕೀಯ ಹಕ್ಕುಗಳಿಗೆ ಸಂಬಂಧಿಸಿದ ಸಂಶಯ. ಧರ್ಮಾಂತರ ಮಾಡಿದರೆ ನಮಗೆ ದಕ್ಕಿರುವ ಹಕ್ಕುಗಳ ಗತಿ ಏನು? ಎಂಬ ಸಂಶಯ ಸಾಕಷ್ಟು ಜನರಿಂದ ವ್ಯಕ್ತವಾಗುತ್ತಿದೆ. ಅಸ್ಪೃಶ್ಯರಿಗೆ ಲಭಿಸಿರುವ ರಾಜಕೀಯ ಹಕ್ಕುಗಳ ಮಹತ್ವ ನನಗೆ ಗೊತ್ತಿಲ್ಲೆಂದು ಯಾರಿಗೂ ಹೇಳಲಿಕ್ಕಾಗದು. ಈ ರಾಜಕೀಯ ಹಕ್ಕುಗಳನ್ನು ಪಡೆಯುವ ನಿಟ್ಟಿನಲ್ಲಿ ನಾನು ಮಾಡಿದ ಪ್ರಯತ್ನ, ಪರಿಶ್ರಮಗಳನ್ನು ಬೇರೆ ಯಾರೂ ಮಾಡಿಲ್ಲ. ಆದಾಗ್ಯೂ ರಾಜಕೀಯ ಹಕ್ಕುಗಳಿಗಾಗಿ ಎಲ್ಲೆಡೆ ಆದ್ಯತೆ ನೀಡುವುದು ಸರಿಯಲ್ಲ ಎನ್ನುವುದು ನನ್ನ ಭಾವನೆ. ನೀಡಿರುವ ರಾಜಕೀಯ ಹಕ್ಕುಗಳು ಸೂರ್ಯ ಚಂದ್ರರಿರುವರೆಗೆ ಎನ್ನುವ ಷರತ್ತಿನ ಮೇಲೆ ಅವುಗಳನ್ನು ನೀಡಿಲ್ಲ ಒಂದಲ್ಲ ಒಂದು ದಿನ ಅವುಗಳು ರದ್ದಾಗಬೇಕು. ಬ್ರಿಟಿಷ್ ಸರ್ಕಾರ ನೀಡಿದ್ದ ತೀರ್ಮಾನದಲ್ಲಿ ನಮಗೆ ನೀಡಿರುವ ರಾಜಕೀಯ ಹಕ್ಕುಗಳ ಕಾಲಮಿತಿಯನ್ನು ೨೦ ವರ್ಷ ನಿಗದಿಪಡಿಸಲಾಗಿತ್ತು. ಪುಣೆ ಒಪ್ಪಂದದಲ್ಲಿ ಅಂತಹ ಕಾಲಮಿತಿ ಇರದಿದ್ದರೂ ಅದರಲ್ಲಿನ ಅವಧಿ ನಿರಂತರ ಎಂದೂ ಯಾರಿಗೂ ಹೇಳಲಿಕ್ಕೆ ಸಾಧ್ಯವಿಲ್ಲ. ಯಾವ ದಿನ ಈ ರಾಜಕೀಯ ಹಕ್ಕುಗಳು ನಮ್ಮ ಪಾಲಿಗೆ ಇಲ್ಲವಾಗುತ್ತವೆಯೋ ಆ ದಿನದಿಂದ ನಾವು ನಮ್ಮ ಸಾಮಾಜಿಕ ಸಾಮರ್ಥ್ಯ ಅವಲಂಬಿಸಿ ಜೀವನ ಮುಂದುವರಿಸಬೇಕಾಗುತ್ತದೆ. ಈ ಸಾಮರ್ಥ್ಯ ಈಗ ನಮ್ಮ ಬಳಿ ಇಲ್ಲ ಎಂದು ಈ ಮೊದಲೇ ಹೇಳಿದ್ದೇನೆ. ಧರ್ಮಾಂತರ ಮಾಡದೇ ನಮಗೆ ಆ ಸಾಮರ್ಥ್ಯ ಲಭಿಸದು ಎನ್ನುವುದನ್ನು ಸಾಬೀತುಪಡಿಸಿದ್ದೇನೆ. ಯಾವುದೇ ವ್ಯಕ್ತಿ ಸನೀಹದ ಭವಿಷ್ಯ ನೋಡಿದರೆ ಆಗದು. ತಾತ್ಕಾಲಿಕ ಆಸೆಗೆ ಬಿದ್ದು ಶಾಶ್ವತ ಸುಖ ಯಾವುದರಿಂದ ಲಭಿಸುತ್ತದೆ ಎನ್ನುವುದರ ಬಗ್ಗೆ ಚಿಂತನೆ ಮಾಡದಿದ್ದರೆ ದುಃಖ ಅನುಭವಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಶಾಶ್ವತ ಸುಖ ಯಾವುದರಲ್ಲಿ ಅಡಗಿದೆ ಎಂದು ಎಲ್ಲರೂ ವಿಚಾರ ಮಾಡುವ ಅಗತ್ಯವಿದೆ. ಶಾಶ್ವತ ಸುಖದ ದೃಷ್ಟಿಯಿಂದ ನನ್ನ ಅಭಿಪ್ರಾಯ ನೋಡುವುದಾದಲ್ಲಿ ಧರ್ಮಾಂತರ ಮಾತ್ರ ಈ ನಿಟ್ಟಿನಲ್ಲಿ ಪರಿಹಾರ ಒದಗಿಸಬಲ್ಲುದು. ಹೀಗಾಗಿ ಒಂದು ವೇಳೆ ರಾಜಕೀಯ ಹಕ್ಕುಗಳನ್ನು ಈ ವಿಚಾರಕ್ಕೆ ಸಂಬಂಧಿಸಿದಂತೆ ಆಹುತಿ ನೀಡಬೇಕಾದರೂ ಅದಕ್ಕೆ ಯಾರೂ ಪರಿತಪಿಸಬೇಕಿಲ್ಲ. ಧರ್ಮಾಂತರದಿಂದ ರಾಜಕೀಯ ಹಕ್ಕುಗಳಿಗೆ ಧಕ್ಕೆಯಾಗುವುದಿಲ್ಲ. ನಿಮ್ಮ ರಾಜಕೀಯ ಹಕ್ಕುಗಳು ನೀವು ಎಲ್ಲಿಗೆ ಹೋದರೂ ಅವು ನಿಮ್ಮೊಂದಿಗೇ ಬರುತ್ತವೆ ಎನ್ನುವುದರಲ್ಲಿ ನನಗೆ ಸಂಶಯ ಇಲ್ಲ. ನೀವು ಮುಸ್ಲಿಂ

ಆದರೆ ನಿಮಗೆ ಮುಸ್ಲಿಂರ ಹಕ್ಕುಗಳು ಸಿಗುತ್ತವೆ. ಕ್ರೈಸ್ತರಾದರೆ ನಿಮಗೆ ಕ್ರೈಸ್ತ ಎನ್ನುವ ಕಾರಣಕ್ಕೆ ಹಕ್ಕುಗಳು ಲಭಿಸುತ್ತವೆ. ಸಿಖ್ ಆದರೆ ಸಿಖ್‌ರಿಗೆ ನೀಡಿರುವ ರಾಜಕೀಯ ಹಕ್ಕುಗಳು ನಿಮಗೆ ದೊರೆಯುತ್ತವೆ. ರಾಜಕೀಯ ಹಕ್ಕುಗಳು ಜನಸಂಖ್ಯೆಯನ್ನು ಅವಲಂಬಿಸಿವೆ. ಯಾವ ಸಮಾಜದ ಜನಸಂಖ್ಯೆ ಅಧಿಕವಿರುತ್ತದೋ ಅದಕ್ಕೆ ತಕ್ಕಂತೆ ಅವರ ರಾಜಕೀಯ ಹಕ್ಕುಗಳು ವಿಸ್ತಾರಗೊಳ್ಳುತ್ತವೆ. ನಾವು ಹಿಂದೂ ಸಮಾಜದಿಂದ ಹೊರಗೆ ಬಿದ್ದ ಮೇಲೆ ನಮ್ಮ ಹದಿನೈದು ಸ್ಥಾನಗಳು ಹಿಂದೂಗಳ ತೆಕ್ಕೆಗೆ ಬೀಳುತ್ತವೆ ಎಂಬ ಭ್ರಮೆ ಯಾರಲ್ಲಿಯೂ ಬೇಡ. ನಾವು ಮುಸ್ಲಿಂ ಆದರೆ ನಮ್ಮ ಹದಿನೈದು ಸ್ಥಾನಗಳು ಇತ್ತೀಚೆಗೆ ಮುಸ್ಲಿಂರಿಗೆ ನೀಡಿರುವ ಸ್ಥಾನಗಳಲ್ಲಿ ಸೇರ್ಪಡೆಯಾಗಲಿವೆ. ನಾವು ಕ್ರೈಸ್ತರಾದರೆ ನಮ್ಮ ಸ್ಥಾನಗಳು ಈಗಾಗಲೇ ಕ್ರೈಸ್ತರಿಗೆ ಲಭಿಸಿರುವ ಸ್ಥಾನಗಳಲ್ಲಿ ಸೇರ್ಪಡೆಯಾಗಲಿವೆ. ಸಿಖ್ ಆದರೂ ಕೂಡ ಸಿಖ್‌ರಿಗೆ ಮೀಸಲು ಇರಿಸಿದ ಸ್ಥಾನಗಳೊಂದಿಗೆ ನಮ್ಮ ಹದಿನೈದು ಸ್ಥಾನಗಳು ಸೇರಲಿವೆ. ಒಟ್ಟಾರೆ ಹೇಳಬೇಕೆಂದರೆ ನಮ್ಮ ರಾಜಕೀಯ ಹಕ್ಕುಗಳು ನಾವು ಎಲ್ಲಿಗೆ ಹೋಗುತ್ತೇವೆಯೋ ಅಲ್ಲಿಗೆ ನಮ್ಮೊಂದಿಗೆ ಬರಲಿವೆ. ಹೀಗಾಗಿ ಈ ವಿಷಯದಲ್ಲಿ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಇದಕ್ಕೆ ವಿರುದ್ಧವಾಗಿ ನಾವು ಒಂದು ವೇಳೆ ಧರ್ಮಾಂತರ ಮಾಡದೇ ಹಿಂದೂ ಧರ್ಮದಲ್ಲಿಯೇ ಉಳಿದುಕೊಂಡರೆ ನಮ್ಮ ಹಕ್ಕುಗಳು ಉಳಿಯುತ್ತವೆಯೇನೆಂದು ಖಂಡಿತ ವಿಚಾರ ಮಾಡಬೇಕಾಗುತ್ತದೆ. ಹಿಂದೂಗಳು ಅಸ್ಪೃಶ್ಯತೆಗೆ ಮನ್ನಣೆ ನೀಡುವುದಿಲ್ಲ ಮತ್ತು ಆ ರೀತಿ ಮನ್ನಣೆ ನೀಡುವುದು ಅಪರಾಧ ಎಂದು ಒಂದು ಕಾಯ್ದೆ ಮಾಡಿ, ಆ ಕಾಯ್ದೆ ಬಳಿಕ ನಿಮ್ಮನ್ನು ಉದ್ದೇಶಿಸಿ ನಿಮ್ಮ ಅಸ್ಪೃಶ್ಯತೆಯನ್ನು ನಾವು ಕಾಯ್ದೆ ಮುಖಾಂತರ ತೆಗೆದು ಹಾಕಿದ್ದೇವೆ. ಇದೀಗ ನೀವು ಅಸ್ಪೃಶ್ಯರಾಗಿ ಉಳಿದಿಲ್ಲ. ಹೆಚ್ಚೆಂದರೆ ನೀವು ಬಡವರು ಮತ್ತು ದರಿದ್ರರು ಇರಬಹುದು. ನಿಮ್ಮಂತೆ ಬೇರೆ ಜಾತಿಯವರಲ್ಲೂ ದರಿದ್ರತನ ಇದೆ. ಆದರೆ ನಾವು ದರಿದ್ರ ಜಾತಿಗಳಿಗೆ ಸ್ವತಂತ್ರ ರಾಜಕೀಯ ಹಕ್ಕುಗಳನ್ನು ನೀಡಿಲ್ಲ ಎಂದ ಮೇಲೆ ನಿಮಗೇಕೆ ನೀಡಬೇಕು ಎಂದು ಪ್ರಶ್ನಿಸಬಹುದು. ಈ ಪ್ರಶ್ನೆಗೆ ನೀವು ಏನು ಉತ್ತರ ಕೊಡಲಿಕ್ಕಾಗುತ್ತದೆ ಎಂದು ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ಆದರೆ ಕ್ರೈಸ್ತರಾಗಲಿ, ಮುಸ್ಲಿಂರಾಗಲಿ ಈ ಪ್ರಶ್ನೆಗೆ ಅತ್ಯಂತ ಸಹಜವಾಗಿ ಉತ್ತರಿಸುತ್ತಾರೆ. ನಮ್ಮ ಸಮಾಜದಲ್ಲಿ ದಾರಿದ್ರ್ಯವಿದೆ. ಅನಕ್ಷರತೆ ಇದೆ. ಹಿಂದುಳಿದಿದೆ ಎಂದು ನಮಗೆ ರಾಜಕೀಯ ಹಕ್ಕುಗಳನ್ನು ನೀಡಿಲ್ಲ. ನಮ್ಮ ಧರ್ಮ ಪ್ರತ್ಯೇಕವಾಗಿದೆ. ನಮ್ಮ ಸಮಾಜ ಪ್ರತ್ಯೇಕವಾಗಿದೆ ಮತ್ತು ಎಲ್ಲಿಯವರೆಗೆ ನಮ್ಮ ಸಮಾಜ, ಧರ್ಮ ಪ್ರತ್ಯೇಕವಾಗಿ ಇರುತ್ತದೋ ಅಲ್ಲಿಯವರೆಗೆ ನಮ್ಮ ರಾಜಕೀಯ ಹಕ್ಕುಗಳು ನಮಗೆ ಬೇಕು ಎಂದು ಹೇಳುತ್ತಾರೆ. ಎಲ್ಲಿಯವರೆಗೆ ನೀವು ಹಿಂದೂ ಧರ್ಮದಲ್ಲಿ ಮತ್ತು ಹಿಂದೂ ಸಮಾಜದಲ್ಲಿ ಇರುತ್ತೀರೋ ಅಲ್ಲಿಯವರೆಗೆ ನಮ್ಮ ಸಮಾಜ ಪ್ರತ್ಯೇಕವಾಗಿದ್ದು ನಮಗೆ ರಾಜಕೀಯ ಹಕ್ಕುಗಳು ಬೇಕು ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಯಾವ ದಿನ ಧರ್ಮಾಂತರಗೊಂಡು ಹಿಂದೂ ಧರ್ಮದಿಂದ ಸ್ವತಂತ್ರವಾಗುತ್ತೀರೋ ಅದೇ ದಿನ ನೀವು ಈ ರೂಪದಲ್ಲಿ ಕಾಣಿಸಿಕೊಳ್ಳಬಹುದು. ಅಲ್ಲಿಯವರೆಗೆ ನೀವು ಈ ರೂಪದಲ್ಲಿ ಕಾಣಿಸಿಕೊಳ್ಳುವುದು ನಿಮ್ಮಿಂದ ಆಗದ ಕೆಲಸ. ನಿಮ್ಮ ರಾಜಕೀಯ ಹಕ್ಕುಗಳು ಶಾಶ್ವತವಾಗಿದ್ದು, ಅವುಗಳಿಗೆ ಧಕ್ಕೆ ಬರುವುದಿಲ್ಲ ಎಂಬ ಭಾವನೆ ಬೆಳೆಸಿಕೊಳ್ಳುವುದು ಅಜ್ಞಾನದ ಲಕ್ಷಣ ಎನ್ನುವುದು ನನ್ನ ಅನಿಸಿಕೆ. ಈ ದೃಷ್ಟಿಯಲ್ಲಿ ಧರ್ಮಾಂತರವನ್ನು ನೋಡಿದರೆ ಅದು ರಾಜಕೀಯ ಹಕ್ಕುಗಳಿಗೆ ವಿರುದ್ಧವಾಗಿರದೇ ಅವುಗಳ ಸಂವರ್ಧನೆಗೆ ಪೂರಕವಾಗಿದೆ ಎಂದು ಭಾವಿಸುತ್ತೇನೆ.

ನೀವು ಹಿಂದೂ ಧರ್ಮದಲ್ಲಿ ಉಳಿದುಕೊಂಡರೆ, ನಿಮ್ಮ ರಾಜಕೀಯ ಹಕ್ಕುಗಳು ಕಸಿಯಲ್ಪಡುತ್ತವೆ. ರಾಜಕೀಯ ಹಕ್ಕುಗಳನ್ನು ಕಳೆದುಕೊಳ್ಳಬಾರದು ಎನ್ನುವುದು ನಿಮ್ಮ ಮನಸ್ಸಿನಲ್ಲಿದ್ದರೆ ಧರ್ಮಾಂತರಕ್ಕೆ ಮುಂದಾಗಿ, ಧರ್ಮಾಂತರದಿಂದ ಅವು ಶಾಶ್ವತವಾಗಲಿವೆ.

## ಉಪಸಂಹಾರ

ನಾನು ನನ್ನ ತೀರ್ಮಾನ ಮಾಡಿದ್ದೇನೆ. ಧರ್ಮಾಂತರ ಮಾಡುವುದು ನನ್ನದು ಗಟ್ಟಿ ತೀರ್ಮಾನ. ನನ್ನ ಧರ್ಮಾಂತರ ಯಾವುದೇ ಐಹಿಕ ಲಾಭಗಳಿಗಾಗಿ ಅಲ್ಲ ಮತ್ತು ಅಸ್ಪೃಶ್ಯನಾಗಿದ್ದುಕೊಂಡು ಪಡೆಯಲಿಕ್ಕೆ ಆಗದಿರುವಂತಹ ಯಾವುದೇ ಸಂಗತಿಗಳು ಈ ಜಗತ್ತಿನಲ್ಲಿ ಇವೆ ಎಂದು ನಾನು ಭಾವಿಸುವುದಿಲ್ಲ. ನನ್ನ ಧರ್ಮಾಂತರದಲ್ಲಿ ಆಧ್ಯಾತ್ಮಿಕ ಭಾವನೆ ಹೊರತು ಬೇರೆ ಯಾವುದೇ ಭಾವನೆಗಳು ಅದರಲ್ಲಿ ಇಲ್ಲ. ಹಿಂದೂ ಧರ್ಮ ನನ್ನ ಬುದ್ಧಿಗೆ, ಮನಸ್ಸಿಗೆ ಒಪ್ಪಿಗೆಯಾಗುತ್ತಿಲ್ಲ. ಹಿಂದೂ ಧರ್ಮ ನನ್ನ ಸ್ವಾಭಿಮಾನಕ್ಕೆ ಒಗ್ಗುತ್ತಿಲ್ಲ. ನಿಮಗೆ ಆಧ್ಯಾತ್ಮಿಕ ಮತ್ತು ಐಹಿಕ ಲಾಭಗಳನ್ನು ನೋಡಿ ಧರ್ಮಾಂತರ ಮಾಡುವ ಅಗತ್ಯವಿದೆ. ಐಹಿಕ ಲಾಭಗಳಿಗಾಗಿ ನಡೆಯುತ್ತಿರುವ ಧರ್ಮಾಂತರ ಎಂದು ಕೆಲವರು ನಗಬಹುದು ಇಲ್ಲವೇ ಅಪಹಾಸ್ಯ ಮಾಡಬಹುದು. ಅಂತಹವರನ್ನು ಮೂರ್ಖರು ಎಂದು ಕರೆಯುವುದಕ್ಕೆ ನನಗೆ ಒಂದಿಷ್ಟೂ ಬೇಸರವಾಗುವುದಿಲ್ಲ. ಸತ್ತ ಮೇಲೆ ಆತ್ಮದ ಗತಿ ಏನು ಆಗುತದೆ ಮತ್ತು ಏನು ಆಗುವುದಿಲ್ಲ ಎಂದು ಹೇಳುವ ಧರ್ಮ ಶ್ರೀಮಂತರ ಉಪಯೋಗಕ್ಕೆ ಮಾತ್ರ ಇರಬಹುದು. ನಿರುಮ್ಮಳವಾಗಿ ಕುಳಿತ ಸಂದರ್ಭದಲ್ಲಿ ಇಂತಹ ಧರ್ಮದ ಕುರಿತು ಚಿಂತನೆ ಮಾಡಿ ಮನರಂಜನೆ ಪಡೆದುಕೊಳ್ಳಬಹುದು. ಜೀವಂತವಿದ್ದಾಗ ಸುಖ ಅನುಭವಿಸಿದವರು ತಾವು ಸತ್ತ ಬಳಿಕ ಮತ್ತೇ ನಮಗೆ ಸುಖ ಹೇಗೆ ಲಭಿಸಬಹುದು ಎನ್ನುವುದನ್ನು ಕೇಂದ್ರೀಕರಿಸಿ ಮಾಡುವ ವಿಚಾರವೇ ಅವರ ಪಾಲಿಗೆ ಧರ್ಮದಂತೆ ಭಾಸವಾಗುವುದು ಅತ್ಯಂತ ಸಹಜ. ಆದರೆ ಒಂದೇ ಧರ್ಮದಲ್ಲಿ ಇದ್ದ ಕಾರಣಕ್ಕೆ ಬೂದಿಯಾಗಿದ್ದಾರೋ, ಅನ್ನ, ವಸ್ತ್ರಕ್ಕೆ ಪರದಾಡುತ್ತಿದ್ದಾರೋ, ಯಾರಲ್ಲಿ ಮನುಷ್ಯ ಸ್ವಭಾವ ನಾಶವಾಗಿದೆಯೋ ಅಂತಹವರು ಧರ್ಮವನ್ನು ಐಹಿಕ ದೃಷ್ಟಿಯಿಂದ ನೋಡದೇ ಕಣ್ ಕಣ್ ಬಿಟ್ಟುಕೊಂಡು ಆಕಾಶ ನೋಡುತ್ತ ಕುಳಿತುಕೊಳ್ಳಬೇಕೇ? ಈ ಅಗರ್ಭ ಶ್ರೀಮಂತರ ನಿಸ್ಸತ್ವದ ವೇದಾಂತದಿಂದ ದೀನ ದಲಿತರಿಗೆ ಯಾವ ಉಪಯೋಗ?

## ಧರ್ಮ ಇರುವುದು ಮನುಷ್ಯರಿಗಾಗಿ

ನಾನಂತೂ ನಿಮಗೆ ಸ್ಪಷ್ಟ ಮಾತುಗಳಲ್ಲಿ ಒಂದು ವಿಷಯ ಹೇಳಬಯಸುತ್ತೇನೆ. ಧರ್ಮಕ್ಕಾಗಿ ಮನುಷ್ಯ ಇಲ್ಲ. ಮನುಷ್ಯನಿಗಾಗಿ ಧರ್ಮ ಇರಬೇಕು. ಮನುಷ್ಯತ್ವ ಬೇಕು ಎಂದಿದ್ದರೆ ಧರ್ಮಾಂತರಕ್ಕೆ ಸಿದ್ಧರಾಗಿ. ಸಂಘಟನೆಯಾಗಬೇಕಿದ್ದರೆ ಧರ್ಮಾಂತರ ಮಾಡಿ. ಸಾಮರ್ಥ್ಯ ವೃದ್ಧಿಯಾಗಬೇಕಿದ್ದರೆ ಧರ್ಮಾಂತರ ಮಾಡಿ. ಸಮಾನತೆ ಬೇಕಿದ್ದರೆ ಧರ್ಮಾಂತರಕ್ಕೆ ಮುಂದಾಗಿ. ಸ್ವತಂತ್ರ ಜೀವನ ಬೇಕು ಎನ್ನುವಂತಿದ್ದರೆ ಧರ್ಮಾಂತರದ ಮಾರ್ಗದಲ್ಲಿ ಸಾಗಿ. ಸಂಸಾರ ಸುಖ ಅನುಭವಿಸಬೇಕು ಎಂದಿದ್ದರೆ ಧರ್ಮಾಂತರವಾಗಿ. ಯಾವ ಧರ್ಮ ನಿಮ್ಮ ಮನುಷ್ಯತ್ವಕ್ಕೆ ಬೆಲೆ ನೀಡುವುದಿಲ್ಲವೋ ಆ ಧರ್ಮದಲ್ಲಿ ನೀವೇಕೆ ಇರಬೇಕು? ಯಾವ ಧರ್ಮ ನಿಮಗೆ ಶಿಕ್ಷಣ ನೀಡುವುದಿಲ್ಲವೋ ಆ ಧರ್ಮಕ್ಕೆ ಏಕೆ ಅಂಟಿಕೊಂಡಿರಬೇಕು? ಯಾವ ಧರ್ಮ ನಿಮಗೆ ದೇವಸ್ಥಾನಗಳಲ್ಲಿ ಪ್ರವೇಶಿಸುವುದಕ್ಕೆ ಅನುಮತಿ ಕೊಡುವುದಿಲ್ಲವೋ ಅಂತಹ ಧರ್ಮ ನಿಮಗೆ ಏಕೆ ಬೇಕು? ಯಾವ ಧರ್ಮ ನಿಮಗೆ ಹನಿ ನೀರು ಕೂಡ ಕೊಡುವುದಿಲ್ಲವೋ ಆ ಧರ್ಮ ಯಾವ ಕಾರಣಕ್ಕೆ ನಿಮಗೆ ಬೇಕು? ಯಾವ ಧರ್ಮ ನಿಮ್ಮ ನೌಕರಿಗೆ ಅಡ್ಡ ಬರುತ್ತದೋ ಆ ಧರ್ಮದಲ್ಲಿ ಏಕೆ ಇರಬೇಕು? ಯಾವ ಧರ್ಮ ನಿಮ್ಮನ್ನು ಶಬ್ದ ಶಬ್ದಗಳಲ್ಲಿ, ಪದ–ಪದಗಳಲ್ಲಿ ಅವಮಾನಿಸುತ್ತದೆಯೋ ಆ ಧರ್ಮದಲ್ಲಿ ನೀವು ಏಕೆ ಇರಬೇಕು? ಯಾವ ಧರ್ಮದಲ್ಲಿ ಮನುಷ್ಯ–ಮನುಷ್ಯರೊಂದಿಗೆ ಮಾತನಾಡುವುದಕ್ಕೆ ಪ್ರತಿಬಂಧವಿದೆಯೋ ಅಂತಹ ಧರ್ಮದಲ್ಲಿ ಏಕಿರಬೇಕು? ಯಾವ ಧರ್ಮದಲ್ಲಿ ಅಮಂಗಲ ಪ್ರಾಣಿಯ

ಸ್ಪರ್ಶಕ್ಕೆ ವಿನಾಯಿತಿ ಇದೆ ಆದರೆ ವ್ಯಕ್ತಿ ಮುಟ್ಟಿದರೆ ನಡೆಯುವುದಿಲ್ಲವೋ ಆ ಧರ್ಮದಲ್ಲಿ ನೀವು ಏಕೆ ಇರಬೇಕು? ಯಾವ ಧರ್ಮದಲ್ಲಿ ಮನುಷ್ಯನಲ್ಲಿರುವ ಮನುಷ್ಯತ್ವ ಗುರುತಿಸುವುದನ್ನು ಅಧರ್ಮ ಎಂದು ಹೇಳಲಾಗುತ್ತದೋ ಅಂತಹ ಧರ್ಮದಲ್ಲಿ ನೀವು ಇದ್ದು ಏನು ಪ್ರಯೋಜನ? ಯಾವ ಧರ್ಮ ಒಂದು ವರ್ಗಕ್ಕೆ ಶಿಕ್ಷಣ, ಧನ ಸಂಚಯ ಮತ್ತು ಶಸ್ತ್ರ ಹಿಡಿಯುವುದಕ್ಕೆ ನಿರ್ಬಂಧ ವಿಧಿಸಿದೆಯೋ ಅಂತಹದ್ದು ಧರ್ಮ ಅಲ್ಲ, ಅದು ಮನುಷ್ಯ ಜೀವನದ ವಿಡಂಬನೆಯಾಗಿದೆ. ಯಾವ ಧರ್ಮ ಅಶಿಕ್ಷಿತರು ಅಶಿಕ್ಷಿತರಾಗಿಯೇ ಇರಬೇಕು. ನಿರ್ಧನಿಗಳು ನಿರ್ಧನರಾಗಿ ಉಳಿಯಬೇಕು ಎಂದು ಬೋಧಿಸುವುದೋ ಅದು ಧರ್ಮವಲ್ಲ ಅದು ಶಿಕ್ಷೆ.

ಧರ್ಮಾಂತರಕ್ಕೆ ಸಂಬಂಧಿಸಿದಂತೆ ಏಳುವ ಊಹಾಪೋಹಗಳ ಆಯಾ ಪ್ರಶ್ನೆಗಳಿಗೆ ನನ್ನ ಬುದ್ಧಿಗೆ ತಿಳಿದ ಪ್ರಕಾರ ಉತ್ತರಿಸುವ ಪ್ರಯತ್ನ ಮಾಡಿದ್ದೇನೆ. ಈ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಾನು ಮಾಡಿರುವ ವಿಮರ್ಶೆಯಲ್ಲಿ ಒಂದಿಷ್ಟು ಕಾಲಕ್ಷೇಪವಾಗಿರಬಹುದು. ಆದರೆ ಈ ವಿಷಯದ ಕುರಿತು ಸಮಗ್ರ ಚಿಂತನೆ ಮಾಡಬೇಕು ಎಂದು ಮೊದಲೇ ನಿರ್ಧರಿಸಿದ್ದೆ. ಧರ್ಮಾಂತರದ ಕುರಿತು ವಿರೋಧಿಗಳು ಎತ್ತಿರುವ ಆಕ್ಷೇಪಗಳಿಗೆ ಉತ್ತರಿಸುವುದು ಅಗತ್ಯವಾಗಿತ್ತು. ಧರ್ಮಾಂತರದ ಸಾರ್ಥಕತೆ ಮನವರಿಕೆಯಾಗುವವರೆಗೆ ಧರ್ಮಾಂತರ ಮಾಡಬಾರದು ಎನ್ನುವುದು ನನ್ನ ಅಭಿಲಾಷೆ. ಈ ಕಾರಣಕ್ಕಾಗಿ ಯಾರಲ್ಲಿಯೂ ಸಂಶಯದ ಬೇರುಗಳು ಇರಬಾರದು ಮತ್ತು ಮನಸ್ಸಿನಲ್ಲಿ ತೃಣ ಮಾತ್ರ ಕ್ಲೇಶ ಇರಕೂಡದು ಎನ್ನುವ ಉದ್ದೇಶದಿಂದ ಸವಿಸ್ತಾರವಾಗಿ ಮಾತನಾಡಬೇಕಾಯಿತು. ನನ್ನ ಅನಿಸಿಕೆಗಳು ನಿಮಗೆ ಎಷ್ಟರಮಟ್ಟಿಗೆ ಮನವರಿಕೆ ಆಗಿದೆ ಎಂದು ನನಗೆ ಹೇಳಲಿಕ್ಕಾಗುವುದಿಲ್ಲ. ಆದರೆ ನೀವು ಈ ಸಂಗತಿಗಳ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡುತ್ತೀರಿ ಎಂಬ ಆಶಯವಿದೆ. ಪರರ ಇಷ್ಟದಂತೆ ಮಾತನಾಡಿ ಜನಪ್ರಿಯತೆ ಗಳಿಸುವುದು ವ್ಯವಹಾರಿಕ ಮನುಷ್ಯನಿಗೆ ಶೋಭಿಸುತ್ತದೆ ವಿನಃ ಮುಖಂಡನಿಗೆ ಶೋಭಿಸುವಂತಹದ್ದಲ್ಲ ಎನ್ನುವುದು ನನ್ನ ಅನಿಸಿಕೆ. ಜನರ ಹಿತ ಯಾವುದರಲ್ಲಿ ಇದೆ. ಅಹಿತ ಯಾವುದರಲ್ಲಿ ಇದೆ ಎನ್ನುವುದನ್ನು ನಿರ್ಭಯ, ನಿರ್ಭಿಡೆಯಿಂದ ಲೋಕೋಪವಾದದ ಬಗ್ಗೆ ವಿಚಾರ ಮಾಡದೇ ಯಾವ ವ್ಯಕ್ತಿ ತನ್ನ ಅಭಿಪ್ರಾಯ ಮಂಡಿಸುತ್ತಾನೋ ಅವನು ಮುಖಂಡ ಎನ್ನಿಸಿಕೊಳ್ಳುತ್ತಾನೆ. ನಿಮ್ಮ ಹಿತ ಯಾವುದರಲ್ಲಿ ಇದೆ ಎನ್ನುವುದನ್ನು ಹೇಳುವುದು ನನ್ನ ಕರ್ತವ್ಯದ ಭಾಗವಾಗಿತ್ತು. ನಿಮಗೆ ಅದು ರುಚಿಸದಿದ್ದರೂ ಅದನ್ನು ನಾನು ಹೇಳಲೇಬೇಕಾಗುತ್ತದೆ. ನಾನು ನನ್ನ ಕರ್ತವ್ಯ ನಿರ್ವಹಿಸಿದ್ದೇನೆ. ಈಗ ನಾನು ಮಂಡಿಸಿದ ವಿಚಾರದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಕರ್ತವ್ಯ ನಿಮ್ಮ ಎದುರಿಗೆ ಇದೆ. ಧರ್ಮಾಂತರ ವಿಷಯವನ್ನು ಉದ್ದೇಶಪೂರ್ವಕವಾಗಿ ಎರಡು ಭಾಗ ಮಾಡಿದ್ದೇನೆ. ಹಿಂದೂ ಧರ್ಮ ತ್ಯಜಿಸುವುದು ಅಥವಾ ಅದರಲ್ಲಿಯೇ ಮುಂದುವರಿಯುವುದು ಇದರ ಒಂದು ಭಾಗ. ತ್ಯಜಿಸುವುದೇ ಆದರೆ ಯಾವ ಧರ್ಮ ಸ್ವೀಕರಿಸುವುದು ಇಲ್ಲವೇ ಹೊಸ ಧರ್ಮ ಹುಟ್ಟು ಹಾಕುವುದು ಅದರ ಎರಡನೇ ಭಾಗ. ಆದರೆ ನನಗೆ ಇಂದು ಮೊದಲನೇ ಪ್ರಶ್ನೆಗೆ ಪರಿಹಾರ ಕಂಡುಕೊಳ್ಳುವುದು ಇದೆ. ಈ ಪ್ರಶ್ನೆ ಪರಿಹಾರವಾಗದೇ ಎರಡನೇ ವಿಚಾರದ ಕುರಿತು ಮಾತನಾಡುವುದಾಗಲಿ ಅಥವಾ ಅದಕ್ಕೆ ಸಿದ್ಧತೆ ಮಾಡುವುದರಲ್ಲಿ ಅರ್ಥ ಇಲ್ಲ. ಮೊದಲನೇ ಪ್ರಶ್ನೆ ಬಗ್ಗೆ ಏನು ತೀರ್ಮಾನ ಮಾಡಬೇಕು ಅದನ್ನು ಮಾಡಿ. ಅದನ್ನು ತೀರ್ಮಾನಿಸುವುದಕ್ಕೆ ಎರಡನೇ ಅವಕಾಶ ನೀಡುವುದಕ್ಕೆ ನನ್ನಿಂದ ಆಗುವುದಿಲ್ಲ. ಈ ಸಮಾವೇಶದಲ್ಲಿ ನೀವು ತೀರ್ಮಾನಿಸಿದಂತೆ ನಾನು ಮುಂದಿನ ಕಾರ್ಯಕ್ರಮ ನಿರ್ಧರಿಸುತ್ತೇನೆ. ಒಂದು ವೇಳೆ ನೀವು ಧರ್ಮಾಂತರದ ವಿರುದ್ಧ ನಿರ್ಣಯ ಅಂಗೀಕರಿಸಿದರೆ ಪ್ರಶ್ನೆ ಪರಿಹಾರವಾಗಿಬಿಡುತ್ತದೆ. ನನ್ನ ಸ್ವಂತಕ್ಕಾಗಿ ನಾನು ಏನು ಮಾಡಿಕೊಳ್ಳಬೇಕು ಅದರ ಬಗ್ಗೆ ನಾನು ಬಳಿಕ ತೀರ್ಮಾನಿಸುತ್ತೇನೆ. ಒಂದು

ವೇಳೆ ಧರ್ಮಾಂತರದ ಪರವಾಗಿ ನಿರ್ಣಯ ಅಂಗೀಕರಿಸಿದರೆ ಸಂಘಟಿತರಾಗಿ ಧರ್ಮಾಂತರ ಮಾಡುತ್ತೇವೆ ಎಂದು ಆಶ್ವಾಸನೆ ನೀಡಬೇಕಾಗುತ್ತದೆ. ಧರ್ಮಾಂತರ ನಿಶ್ಚಯಿಸಿದ ಬಳಿಕ ತಮಗೆ ತಿಳಿದ ಧರ್ಮಕ್ಕೆ ಸೇರುವಂತಹ ಒಡಕಿನ ಮಾರ್ಗ ಅನುಸರಿಸಿದರೆ ನಾನು ನಿಮ್ಮ ಧರ್ಮಾಂತರದಲ್ಲಿ ಪಾಲ್ಗೊಳ್ಳಲಾರೆ. ನೀವು ಎಲ್ಲರೂ ನನ್ನೊಂದಿಗೆ ಬರಬೇಕು ಎನ್ನುವುದು ನನ್ನ ಸದಿಚ್ಛೆ. ಯಾವ ಧರ್ಮ ನಾವು ಸ್ವೀಕರಿಸುತ್ತೇವೆಯೋ ಆ ಧರ್ಮದಲ್ಲಿ ನಮ್ಮ ಉನ್ನತಿಗಾಗಿ ಏನೇ ಕಷ್ಟ ಮತ್ತು ಪರಿಶ್ರಮ ಮಾಡಬೇಕಾಗಿ ಬಂದರೂ ಆ ಕಷ್ಟ ಮತ್ತು ಪರಿಶ್ರಮಕ್ಕೆ ನಾನು ಸಿದ್ಧನಾಗಿದ್ದೇನೆ. ಆದರೆ ನಾನೇ ಹೇಳುತ್ತೇನೆ ಎನ್ನುವ ಕಾರಣಕ್ಕೆ ಧರ್ಮಾಂತರ ಮಾಡಬೇಕು ಎನ್ನುವ ಭಾವಾವೇಶಕ್ಕೆ ಒಳಗಾಗಿ ಏನೂ ಮಾಡಬೇಡಿ. ನಿಮ್ಮ ಬುದ್ಧಿಗೆ ಅದು ಸರಿ ಎನ್ನಿಸಿದರೆ ಸಮ್ಮತಿ ನೀಡಿ. ನನ್ನೊಂದಿಗೆ ಬರುವುದಿಲ್ಲ ಎಂದು ನೀವು ತೀರ್ಮಾನ ಮಾಡಿದರೂ ನನಗೆ ಕಿಂಚಿತ್ ಕೂಡ ದುಃಖ ಆಗುವುದಿಲ್ಲ. ಇದಕ್ಕೆ ಬದಲಿಗೆ ನನ್ನ ಮೇಲಿನ ಜವಾಬ್ದಾರಿ ಕಳೆಯಿತು ಎಂದು ಸಂತೋಷವಾಗುತ್ತದೆ. ನಿಮ್ಮ ಮುಂದಿನ ಪೀಳಿಗೆಯ ಭವಿಷ್ಯ ನೀವು ಈಗ ತೆಗೆದುಕೊಳ್ಳುವ ತೀರ್ಮಾನದ ಮೇಲೆ ನಿಂತಿದೆ. ಒಂದು ವೇಳೆ ನೀವು ಸ್ವತಂತ್ರರಾಗುವುದಕ್ಕೆ ತೀರ್ಮಾನಿಸಿದರೆ ನಿಮ್ಮ ಮುಂದಿನ ಪೀಳಿಗೆ ಸ್ವತಂತ್ರವಾಗುತ್ತದೆ. ಒಂದು ವೇಳೆ ನೀವು ಪರಾಧೀನರಾಗಿ ಉಳಿಯುತ್ತೇವೆ ಎಂದು ತೀರ್ಮಾನಿಸಿದರೆ ನಿಮ್ಮ ಮುಂದಿನ ಪೀಳಿಗೆ ಕೂಡ ಪರಾಧೀನವಾಗಿಯೇ ಉಳಿಯುಲಿದೆ. ಹೀಗಾಗಿ ನಿಮ್ಮ ಮೇಲೆ ಇರುವ ಜವಾಬ್ದಾರಿ ಅತ್ಯಂತ ಕಠಿಣವಾಗಿದೆ.

## ಸ್ವಯಂಪ್ರಭೆ ಇರಲಿ

ಈ ಸಂದರ್ಭದಲ್ಲಿ ನಿಮಗೆ ಏನು ಹೇಳಬೇಕು ಎಂದು ವಿಚಾರ ಮಾಡುತ್ತಿದ್ದ ವೇಳೆ ಮನಸ್ಸಿನಲ್ಲಿ ಮೂಡಿದ್ದು ಭಗವಾನ್ ಬುದ್ಧನ ಅವತಾರ. 'ಮಹಾಪರಿನಿರ್ವಾಣ ಸೂಕ್ತ' ದಲ್ಲಿ ಉಲ್ಲೇಖಿಸಿರುವ ಈ ಉಪದೇಶವನ್ನು ಭಗವಾನ್ ಬುದ್ಧ ತನ್ನ ಮಹಾಪರಿನಿರ್ವಾಣಕ್ಕೆ ಮುನ್ನ ತನ್ನ ಭಿಕ್ಷುಗಳಿಗೆ ಮಾಡಿದ್ದು ನನ್ನ ಸ್ಮರಣೆಗೆ ಬರುತ್ತಿದೆ. ಆಗ ತಾನೇ ವೇದನೆಯಿಂದ ಎದ್ದಿದ್ದ ಭಗವಾನ್ ಬುದ್ಧ ವಿಹಾರದಲ್ಲಿದ್ದ ಒಂದು ಆಸನದ ಮೇಲೆ ವಿಶ್ರಾಂತಿ ಪಡೆಯುತ್ತಿದ್ದ. ಅವರ ಓರ್ವ ಶಿಷ್ಯ ಆಯುಷ್ಮಾನ್ ಆನಂದ, ಭಗವಾನ್ ಬುದ್ಧರಿಗೆ ಅಭಿವಂದಿಸಿ ಅವರ ಬಳಿ ಕುಳಿತುಕೊಂಡನು. ಬಳಿಕ ಭಗವಾನನನ್ನು 'ಸುಖದಲ್ಲಿದ್ದಾಗ ನೋಡಿದ್ದೇನೆ. ಆನಾರೋಗ್ಯದಿಂದಿದ್ದಾಗ ಕೂಡ ನೋಡಿದ್ದೇನೆ. ಭಗವಂತನ ಅನಾರೋಗ್ಯದಿಂದ ನನ್ನಲ್ಲಿ ಜಡತ್ವ ಆವರಿಸಿಕೊಂಡಿದೆ. ದಿಕ್ಕುಗಾಣದಂತಾಗಿದ್ದೇನೆ. ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ. ಆದರೆ ಒಂದು ಸಂತಸ ಸಂಗತಿ ಎಂದರೆ, ಭಿಕ್ಷುಗಳ ಬಗ್ಗೆ ಏನೂ ಹೇಳದೇ ಭಗವಂತನ ಪರಿನಿರ್ವಾಣ ಆಗುವುದಿಲ್ಲ ಎನ್ನುವುದು ನನಗೆ ಖಾತ್ರಿ ಇದೆ' ಎಂದ. ಅದಕ್ಕೆ ಭಗವಾನ್ ಬುದ್ಧ, "ಭಿಕ್ಷುಗಳಿಗೆ ನನ್ನಿಂದ ಯಾವ ಅಪೇಕ್ಷೆ ಇದೆ? ಅಂತರಂಗದಲ್ಲಿ ಏನೊಂದು ಇರಿಸಿಕೊಳ್ಳದೇ ಧರ್ಮೋಪದೇಶ ಮಾಡಿದ್ದೇನೆ. ಅದರಲ್ಲಿ ತಥಾಗತ್ ಆಚಾರ್ಯ ಸ್ತುತಿ ಮಾಡಿಯೇ ಇಲ್ಲ ಎಂದ ಬಳಿಕ ತಥಾಗತ ಭಿಕ್ಷುಗಳ ಬಗ್ಗೆ ಏನು ಹೇಳಲು ಸಾಧ್ಯ? ಆನಂದಾ, ಇಂತಹ ಸಂದರ್ಭದಲ್ಲಿ ನೀವು ಸೂರ್ಯನಂತೆ ಸ್ವಯಂ ಪ್ರಭೆ ಇರುವವರಾಗಬೇಕು. ಭೂಮಿಯಂತೆ ಪರಪ್ರಕಾಶಿತವಾಗಿ ಉಳಿಯಬೇಡಿ. ನಿಮ್ಮ ಮೇಲೆ ನಿಮಗೆ ವಿಶ್ವಾಸ ಇರಲಿ. ಬೇರೆಯವರ ಅಂಕಿತದಲ್ಲಿ ಇರಬೇಡಿ. ಸತ್ಯ ನಿಷ್ಠರಾಗಿ ಉಳಿಯಿರಿ. ಬೇರೆಯವರಿಗೆ ಶರಣು ಎನ್ನಬೇಡಿ ಎಂದರು. ನಾನು ಬುದ್ಧನ ಶಬ್ದಗಳ ಆಶ್ರಯದಡಿ ನಿಮಗೆ ಈ ಸಂದೇಶ ನೀಡುತ್ತಿದ್ದೇನೆ. ನಿಮಗೆ ನೀವೇ ಆಧಾರ ಸ್ತಂಭವಾಗಿರಿ. ನಿಮ್ಮ ಸ್ವಂತ ಬುದ್ಧಿಗೆ ಶರಣಾಗಿರಿ. ಬೇರೆಯವರ ಉಪದೇಶಕ್ಕೆ ಕಿವಿಗೊಡಬೇಡಿ. ಬೇರೆಯವರ ವಶದಲ್ಲಿ ಇರಬೇಡಿ.

ಸತ್ಯದ ಆಧಾರವಿರಲಿ. ಸತ್ಯಕ್ಕೆ ಶರಣಾಗಿ, ಬೇರೆ ಯಾವುದಕ್ಕೂ ಶರಣಾಗಬೇಡಿ. ಇದು ಭಗವಾನ್ ಬುದ್ಧನ ಉಪದೇಶ. ಈ ಸಂದರ್ಭದಲ್ಲಿ ಇದನ್ನು ಲಕ್ಷ್ಯದಲ್ಲಿ ಇರಿಸಿಕೊಂಡರೆ ನಿಮ್ಮ ನಿರ್ಣಯ ತಪ್ಪಾಗಲಾರದು ಎನ್ನುವುದು ಖಾತ್ರಿ ಇದೆ.

---

ಜನತಾ: ಜೂನ್ ೨೬, ೧೯೩೬.

# ೯೦.

# ಈಗ ಸದ್ಯ ಸನ್ಯಾಸತ್ವದ ಅಸ್ಥಿಪಂಜರ ಮಾತ್ರ ಉಳಿದಿದೆ

ಜೂನ್ ೧, ೧೯೩೬ರಂದು ಮುಂಬೈ ಪ್ರದೇಶ ಅಸ್ಪೃಶ್ಯ ಸಂತ ಸಮಾಜದ ಸಮಾವೇಶ, ಮುಂಬೈ ಪ್ರದೇಶ ಮಹಾರ್ ಸಮಾವೇಶಕ್ಕಾಗಿ ನಿರ್ಮಿಸಿದ್ದ ವೇದಿಕೆಯಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಅದ್ದೂರಿಯಿಂದ ಜರುಗಿತು. ಡಾ. ಅಂಬೇಡ್ಕರ್ ಅವರು ಧರ್ಮಾಂತರದ ಘೋಷಣೆಯ ಬಳಿಕ ಇಡೀ ಅಸ್ಪೃಶ್ಯ ಸಮಾಜದಲ್ಲಿ ಮಾತ್ರವಲ್ಲದೇ ಇಡೀ ಹಿಂದೂ ಸಮಾಜದಲ್ಲಿ ದೊಡ್ಡ ವಿವಾದದ ಗಾಳಿ ಬೀಸಲಾರಂಭಿಸಿತ್ತು. ಸ್ಪೃಶ್ಯ ಹಿಂದೂ ಸಮಾಜದ ಶೋಷಣೆಗೆ ಸಿಲುಕಿ ಶತಶತಮಾನಗಳಿಂದ ನರಳುತ್ತಿದ್ದ ಅಸ್ಪೃಶ್ಯ ಸಮಾಜಕ್ಕೆ ಡಾ.ಅಂಬೇಡ್ಕರ್ ಅವರ ಧರ್ಮಾಂತರ ಘೋಷಣೆ ದೇವವಾಣಿಗಿಂತ ಕಡಿಮೆಯಾಗಿರಲಿಲ್ಲ. ಧರ್ಮಾಂತರ ಘೋಷಣೆ ಬಳಿಕ ಇಡೀ ದೇಶಾದ್ಯಂತ ಅಸ್ಪೃಶ್ಯರು ಸಭೆಗಳನ್ನು, ಸಮಾವೇಶಗಳನ್ನು ಆಯೋಜಿಸಿ ಡಾ. ಅಂಬೇಡ್ಕರ್ ಅವರಿಗೆ ತಮ್ಮ ಬೆಂಬಲ ನೀಡುವ ನಿರ್ಣಯ ಅಂಗೀಕರಿಸಿ ತಾವು ಧರ್ಮಾಂತರಕ್ಕೆ ಸಿದ್ಧ ಎನ್ನುವುದನ್ನು ಪ್ರಕಟಿಸಿದರು. ಧರ್ಮಾಂತರಕ್ಕೆ ವಿರೋಧವಾಗಿದ್ದ ಮತ್ತು ಬೇರೆಯರ ಮಾತಿನಂತೆ ನಡೆಯುವ ಹರಿಜನ ಎಂದು ಹೇಳಿಕೊಳ್ಳುವ ಅಸ್ಪೃಶ್ಯರ ಹೊರತಾಗಿ ಉಳಿದೆಲ್ಲ ಅಸ್ಪೃಶ್ಯರಿಗೆ ಧರ್ಮಾಂತರದ ಮಹತ್ವ ಮನವರಿಕೆಯಾಗಿದ್ದರಿಂದ ಧರ್ಮಾಂತರದ ತಮ್ಮ ಸಿದ್ಧತೆಗಳನ್ನು ತೋರ್ಪಡಿಸುವ ನಿಟ್ಟಿನಲ್ಲಿ ಮುಂಬೈ ಪ್ರದೇಶದ ಮಹಾರ್ ಸಮಾವೇಶದಂತೆ ಸಮಾವೇಶ ಆಯೋಜಿಸಿ ಡಾ. ಅಂಬೇಡ್ಕರ್ ಅವರಿಗೆ ಸಮುದಾಯದ ಬೆಂಬಲ ಘೋಷಿಸಲಾಯಿತು. ಅದೇ ರೀತಿ ಮಾತಂಗ ಸಮಾಜದವರು ಬೆಂಬಲ ಘೋಷಿಸಿದ ಬೆನ್ನಲ್ಲೇ ಸಂತ, ಮಹಂತ, ಸಾಧು, ಬೈರಾಗಿಗಳ ಸಮಾವೇಶ ಅದೇ ಸ್ಥಳದಲ್ಲಿ ಜರುಗಿತು.

ಈ ಸಮಾವೇಶದ ಪೂರ್ವ ಸಿದ್ಧತೆಗೆ ಸಾಧುಗಳು ಮತ್ತು ಸಂತರು ಕಾರ್ಯಕಾರಿ ಸಮಿತಿ ರಚಿಸಿ ಕೆಳಗಿನಂತೆ ವಿನಂತಿ ಪತ್ರ ಪ್ರಕಟಿಸಿದ್ದರು "ಈ ಸಮಾವೇಶದಲ್ಲಿರುವ ಸಂತ ಸಮಾಜದ ಕಾರ್ಯಕಾರಿ ಮಂಡಳಿ ಧರ್ಮಾಂತರಕ್ಕೆ ಬೆಂಬಲ ವ್ಯಕ್ತಪಡಿಸುತ್ತದೆ. ದಲಿತ ಮುಖಂಡ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ತಿಳಿಸಿದ ದಿನದಂದು ನಾವು ಹಿರಿಯರು ಕಿರಿಯರು ಎನ್ನದೇ ಎಲ್ಲರೂ ಧರ್ಮಾಂತರ ಮಾಡುವುದಕ್ಕೆ ಸಿದ್ಧರಾಗಬೇಕಿದೆ. ಈ ರೀತಿ ಮುಕ್ತ ವಿಚಾರ ವಿನಿಮಯದಿಂದ ಸಂತ ಸಮಾಜ ತನ್ನ ಮುಂದಿನ ಧೋರಣೆ ನಿಶ್ಚಯಿಸಬೇಕಿದೆ. ಅದೇ ರೀತಿ ಸಂತ ಸಮಾಜದ ಹಿತಾಸಕ್ತಿಯ ಕುರಿತು ಸಮಗ್ರವಾಗಿ ಚಿಂತನೆ ಮಾಡಿ ಮುಂದಿನ ಕಾರ್ಯಕ್ರಮದ ರೂಪುರೇಷೆ ಅಂತಿಮಗೊಳಿಸಲಾಗುವುದು." ಈ ಸಮಾವೇಶವನ್ನು ಯಶಸ್ವಿಗೊಳಿಸುವುದಕ್ಕೆ ಶಂಕರರಾವ್ ನಾರಾಯಣದಾಸ್ ಬರ್ವೆ, ಕರ್ಪೂರನಾಥ ಗೋಕುಲನಾಥ್, ತಾರಕನಾಥ ವಿಠಲನಾಥ, ವೈದ್ಯ ಶಂಕರನಾಥ ಲಕ್ಷ್ಮಣನಾಥ, ಹರಿದಾಸ ಯೋಗಾನಂದ, ದಶರಥನಾಥ ವಿಠಲನಾಥ, ಕಿಸನದಾಸ್ ಶಂಕರದಾಸ ಮಹಂತ, ರಾಮನಾಥ ಕಡಕನಾಥ, ಯೋಗಿನಾಥ ರಘುನಾಥ, ಜಗನ್ನಾಥ ಭಡಕನಾಥ, ಕಾಶಿನಾಥ ತುಳಸಿನಾಥ ಮಹಂತ, ಸೋಮನಾಥ ದಶರಥನಾಥ, ಭಕ್ತಿದಾಸ

ಸೇರಿದಂತೆ ಇತರ ಸದಸ್ಯರು ಸಾಕಷ್ಟು ಪರಿಶ್ರಮಿಸಿದ್ದರು. ಯಾವುದೇ ಸಮಾಜವಿರಲಿ ಆ ಸಮಾಜದ ಮೇಲೆ ಸಾಧು ಸಂತರ ಪ್ರಭಾವ ಅಪಾರವಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಹಿಂದೂ ಧರ್ಮದ ಬೋಧನೆಯಂತೆ ಅಸ್ಪೃಶ್ಯ ವರ್ಗದಲ್ಲಿ ಸಂಚರಿಸುತ್ತಿದ್ದ ಈ ಸಂತ, ಮಹಂತರು ಧರ್ಮಾಂತರಕ್ಕೆ ಆದ್ಯತೆ ನೀಡುತ್ತಿರುವುದು ಅಭಿನಂದನೀಯ ವಿಚಾರವಾಗಿತ್ತು.

ಸ್ವಾಗತಗೀತೆ ಮೂಲಕ ಸಮಾವೇಶ ಆರಂಭವಾಯಿತು. ಅಧ್ಯಕ್ಷರಾಗಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಆಯ್ಕೆಗೆ ಸೇರಿದ್ದ ಜನರಿಂದ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಯಿತು. ಸ್ವಾಗತಾಧ್ಯಕ್ಷ ಶಂಕರದಾಸ್ ಬರ್ವೆ ಮೊದಲು ಎಲ್ಲರನ್ನೂ ಸ್ವಾಗತಿಸಿ ತಮ್ಮ ಭಾಷಣದಲ್ಲಿ ಡಾ. ಅಂಬೇಡ್ಕರ್ ಅವರನ್ನು ಉದ್ದೇಶಿಸಿ ಬ್ರಹ್ಮರ್ಷಿ ಮತ್ತು ತತ್ವಜ್ಞಾನಿ ಎಂದು ಸಂಬೋಧಿಸಿದರು. ಬಳಿಕ ಧರ್ಮಾಂತರ ಮತ್ತು ಸಂತರ ಕರ್ತವ್ಯದ ಕುರಿತು ಒಂದಿಷ್ಟು ಮಾತನಾಡಿದರು.

ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಂತರ ಸಮಾವೇಶದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

**೧ನೇ ನಿರ್ಣಯ:–** ಅಖಿಲ ಮುಂಬೈ ಪ್ರದೇಶ ಸಂತ ಸಮಾವೇಶ ಪೂರ್ಣಪ್ರಮಾಣದ ಚಿಂತನ–ಮಂಥನ ಮಾಡಿ ಅಖಿಲ ಭಾರತೀಯ ಅಸ್ಪೃಶ್ಯ ಸಮಾಜದ ಮುಖಂಡ ಡಾ. ಅಂಬೇಡ್ಕರ್ ಅವರು ಘೋಷಿಸಿದ ಧರ್ಮಾಂತರ ಮತ್ತು ಅಖಿಲ ಮುಂಬೈ ಪ್ರದೇಶ ಮಹಾರ್ ಸಮಾವೇಶದಲ್ಲಿ ತೆಗೆದುಕೊಂಡ ಧರ್ಮಾಂತರದ ನಿರ್ಣಯಕ್ಕೆ ತನ್ನ ಬೆಂಬಲ ವ್ಯಕ್ತಪಡಿಸುತ್ತದೆ.

ಸೂಚಿಸಿದವರು– (೧) ಭಕ್ತಿದಾಸ ವಿಠಲದಾಸ (೨) ಗಂಗಾರಾಮ್ ರಘುನಾಥ

ಮಂಡನೆ– ಸಾಳುಂಕೆ ಬುವಾ ಅನುಮೋದನೆ– ಹರಿಶ್ಚಂದ್ರ ಜ್ಞಾನದೇವ ಗಾಯಕವಾಡ, ಕಮಲಾದಾಸ ಸೇವಾದಾಸ

**೨ನೇ ನಿರ್ಣಯ:–** ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಸೇರಿದಂತೆ ಇತರ ವಿಚಾರಗಳಲ್ಲಿ ಡಾ. ಅಂಬೇಡ್ಕರ್ ಅವರ ವಿಚಾರಧಾರೆ ಮತ್ತು ಸಂದೇಶಗಳನ್ನು ಸಂತ ಸಮಾಜ ತನ್ನ ಬೋಧನೆ ಮತ್ತು ಆಚಾರದಲ್ಲಿ ಅನುಷ್ಠಾನಗೊಳಿಸಲಿದ್ದು, ಇದಕ್ಕೆ ವಿರುದ್ಧವಾಗಿ ಯಾರೂ ಧೋರಣೆ ತಳೆಯಕೂಡದು ಎಂದು ಈ ಸಂತ ಸಮಾವೇಶ ಸ್ಪಷ್ಟಪಡಿಸುತ್ತದೆ.

ಮಂಡನೆ– ಹರಿದಾಸ ತೋರಣೆ ಮಾಸ್ತರ್– ಶಿವರಾಮ್ ಗೋಪಾಲ ಜಾಧವ ಮತ್ತು ವಿಠಲನಾಥ ತುಳಸಿನಾಥ ಮಹಂತ

**೩ನೇ ನಿರ್ಣಯ:–** ಡಾ. ಅಂಬೇಡ್ಕರ್ ಅವರು ಧರ್ಮಾಂತರ ನಿರ್ಣಯವನ್ನು ಘೋಷಿಸಿದ್ದರಿಂದ ಇಡೀ ಅಸ್ಪೃಶ್ಯ ಸಮಾಜವು ಧರ್ಮಾಂತರಕ್ಕೆ ತನ್ನ ಬೆಂಬಲವನ್ನು ಪ್ರಕಟಿಸಿದೆ. ಹೀಗಾಗಿ ಹಿಂದೂ ಧರ್ಮಕ್ಕೆ ವಿರುದ್ಧವಾಗಿರುವ ಬೇರೆ ಧರ್ಮವನ್ನು ಸ್ವೀಕರಿಸುವುದಕ್ಕೂ ಅದು ತೀರ್ಮಾನಿಸಿದೆ. ಹೊಸ ಧರ್ಮದ ಕುರಿತು ಅಸ್ಪೃಶ್ಯ ಸಮಾಜಕ್ಕೆ ಬೋಧನೆ ಅಗತ್ಯವಾಗಿರುವ ಕಾರಣ ಹೊಸ ಧರ್ಮದ ಬಗ್ಗೆ ಜ್ಞಾನ ಸಂಪಾದಿಸುವುದಕ್ಕೆ ಸಂತ ಸಮಾಜವು ತನ್ನ ಪ್ರಚಾರಕರನ್ನು ನಿಯೋಜಿಸಲಿದೆ. ಈ ಪ್ರಚಾರಕರು ಹೊಸ ಧರ್ಮದ ಶಿಕ್ಷಣ ಪಡೆದು ಅದನ್ನು ಅಸ್ಪೃಶ್ಯರಿಗೆ ಬೋಧಿಸುವ ಕೆಲಸ ಮಾಡಲಿದ್ದಾರೆ.

ಮಂಡನೆ–ಪತೀತಪಾವನ ಬುವಾ ಅನುಮೋದನೆ– ದಿಗಂಬರನಾಥ ನಾಗನಾಥ ಕಾಂಬಳೆ[೧]

---

ಜನತಾ: ಜೂನ್ ೨೬, ೧೯೩೬.

ಮೇಲಿನ ನಿರ್ಣಯಗಳ ಕುರಿತು ಪ್ರಮುಖ ಅತಿಥಿಗಳು ಮಾತನಾಡಿದ ಬಳಿಕ ಡಾ. ಅಂಬೇಡ್ಕರ್ ಅವರು ಭಾಷಣ ಮಾಡಬೇಕೆಂದು ವಿನಂತಿಸಿಕೊಳ್ಳಲಾಯಿತು. ಡಾ. ಅಂಬೇಡ್ಕರ್‌ರು ಜನರನ್ನು ಉದ್ದೇಶಿಸಿ ಮಾತನಾಡಿದರು.

**ಸಾಧು, ಸಂತರೆ ಮತ್ತು ಬಂಧು, ಭಗಿನಿಯರೇ,**

ನಾನು ಸಂತ ಅನ್ನಿಸಿಕೊಳ್ಳದಿದ್ದರೂ ನನ್ನ ಧೋರಣೆಗಳು ಸಂತರಂತೆ ಇವೆ. ನನ್ನ ಮನೆತನದಲ್ಲಿ ಮೂರು ತಲೆಮಾರುಗಳವರೆಗೆ ಹಿರಿಯರು ಸಂತರಾಗಿದ್ದರು. ನನ್ನ ಜೀವನದ ಬಹುತೇಕ ವರ್ಷಗಳನ್ನು ಸಾಧು ಸಂತರ ಸಂಗಮದಲ್ಲಿ ಕಳೆದಿದ್ದೇನೆ. ಸಾಧು ಸಂತರ ಮುಖಾಂತರ ನಾವು ಸಾಕಷ್ಟು ಕೆಲಸ ಮಾಡಲು ಸಾಧ್ಯ ಎಂದು ನನ್ನ ಅನಿಸಿಕೆ ಆದ್ದರಿಂದ ಈ ನಿಟ್ಟಿನಲ್ಲಿ ವಿಚಾರ ಮಾಡುವುದಕ್ಕೆ ಈ ಸಮಾವೇಶ ಆಯೋಜಿಸಲಾಗಿದೆ.

ನಮ್ಮ ಸಂತ ಜನರು ಒಂದು ಬಹು ದೊಡ್ಡ ಕೆಲಸ ಮಾಡಿದ್ದಾರೆ. ಹಿಂದೂ ಧರ್ಮದಲ್ಲಿ ಶೂದ್ರರಿಗೆ ಶಿಕ್ಷಣ ಪಡೆಯುವ ಅಧಿಕಾರವಿರಲಿಲ್ಲ. ಇಷ್ಟೇ ಅಲ್ಲ ಒಂದು ವೇಳೆ ನೀವು ಮನುಸ್ಮೃತಿ ಓದಿದ್ದರೆ ಅದರಲ್ಲಿ ಒಂದು ವಿಚಾರ ಇದೆ. ಯಾವ ಶೂದ್ರ ವೇದಾಧ್ಯಯನ ಮಾಡುತ್ತಾನೋ ಆತನ ನಾಲಿಗೆ ಕತ್ತರಿಸಬೇಕು. ಆತನ ಕಿವಿಯಲ್ಲಿ ಕಾದ ಸೀಸ ಹಾಕಬೇಕು ಎಂದು ಮನುಸ್ಮೃತಿಯಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ಸಂತ ಸಮಾಜ ಅಸ್ಪೃಶ್ಯ ಸಮಾಜಕ್ಕೆ ಜ್ಞಾನ ನೀಡುವಂತಹ ಮಹತ್ಕಾರ್ಯ ಮಾಡಿದೆ. ಅವರು ಪಟ್ಟ ಶ್ರಮ ಅನುಭವಿಸಿದ ನೋವು ವರ್ಣನಾತೀತ. ಶೂದ್ರರು ಜ್ಞಾನ ಸಂಪಾದಿಸಬಾರದು ಎಂದು ಹಿಂದೂ ಧರ್ಮ ವಿಧಿಸಿದ ಕಟ್ಟಳೆ ಮತ್ತು ನಿಬಂಧನೆಗಳ ಮಧ್ಯೆಯೂ ಇವರು ಜ್ಞಾನ ಸಂಪಾದನೆಗೆ ಪ್ರಯತ್ನಿಸಿರುವುದು ಅವರ ಜ್ಞಾನ ದಾಹಕ್ಕೆ ಉದಾಹರಣೆಯಾಗಿದೆ. ಈ ಸಮಾಜ ಬರೆದಿರುವ ಕೆಲವೊಂದು ಗ್ರಂಥಗಳು ಈಗ ಲಭ್ಯವಾಗುತ್ತಿಲ್ಲ. ಇಂದು ಅನೇಕ ಅಸ್ಪೃಶ್ಯ ಸಂತರ ಬಳಿ ಸಾಕಷ್ಟು ಪುರಾತನ ಹಸ್ತಪ್ರತಿಯ ಗ್ರಂಥಗಳಿವೆ ಅಷ್ಟು ಹಿಂದೂ ಧರ್ಮದ ಅಭಿಮಾನಿಗಳ ಬಳಿಯೂ ಇರಲಿಕ್ಕಿಲ್ಲ. ಹೀಗಾಗಿ ನಾವು ಅವರ ಋಣದಲ್ಲಿ ಇರುವಂತಹ ಪರಿಸ್ಥಿತಿ ಇದೆ.

ಇಂದಿನ ಸಂತ ಸಮಾಜದ ಸ್ಥಿತಿಗತಿ ಏನು? ಸನ್ಯಾಸ ಸ್ವೀಕರಿಸಿರುವ ಈ ಜನರಿಗೆ ಸನ್ಯಾಸ್ಯತ್ವದಿಂದ ಯಾವ ಲಾಭ ಆಗಿದೆ? ಇಲ್ಲಿಯವರೆಗೆ ಅವರು ಗಳಿಸಿದ್ದು ಏನು? ಅವರಲ್ಲಿರುವ ಈಶ್ವರ ಭಕ್ತಿ ಮತ್ತು ಜ್ಞಾನಪ್ರಾಪ್ತಿಯಿಂದಾಗಿ ಅವರಿಗೆ ಅಂಟಿಕೊಂಡಿರುವ ಅಸ್ಪೃಶ್ಯತೆ ನಿವಾರಣೆಯಾಯಿತೆ? ಅವರ ಮೈಗೆ ಅಂಟಿಕೊಂಡಿರುವ ಅಸ್ಪೃಶ್ಯತೆಯ ಕಳಂಕ ಸ್ವಚ್ಛಗೊಳಿಸಿಕೊಳ್ಳಲು ಅವರಿಂದ ಆಯಿತೆ? ಮಹಾರ್ ಜಾತಿಯಲ್ಲಿ ಹುಟ್ಟಿದ ಸನ್ಯಾಸಿ, ಮಹಾರ್‌ರ ಸನ್ಯಾಸಿಯಾಗಿಯೇ ಉಳಿದ, ಮಹಾರ್ ಸಂತ ಎಷ್ಟೇ ವಿದ್ವತ್ತು ಗಳಿಸಿದರೂ ಎಷ್ಟೇ ಧರ್ಮ ನಿಷ್ಠೆ ಮೈಗೂಡಿಸಿಕೊಂಡರೂ ಬ್ರಾಹ್ಮಣರಿಗೆ ಗುರುವಾಗಲಿಲ್ಲ. ಈ ರೀತಿಯ ವಚನಗಳನ್ನು ಹಿಂದೂ ಧರ್ಮದ ಶಿಲಾಶಾಸನಗಳಲ್ಲಿ ಕೆತ್ತಲಾಗಿದೆ.

ಸಂತ ಸಮಾಜದ ಇಂದಿನ ಅಗತ್ಯ ಏನೆಂದು ನಾವೀಗ ವಿಚಾರ ಮಾಡಬೇಕಿದೆ. ಸಂತ ಸಮಾಜವನ್ನು ಮೊದಲು ಸ್ಥಾಪಿಸಿದ್ದು ಭಗವಾನ್ ಬುದ್ಧ. ಅವರ ಕಾಲದಲ್ಲಿ ಈ ಸಮಾಜಕ್ಕೆ ಭಿಕ್ಷುಗಳು ಎಂದು ಕರೆಯಲಾಗುತ್ತಿತ್ತು. ಭಗವಾನ್ ಬುದ್ಧ ಭಿಕ್ಷು ಸಮಾಜ ಏಕೆ ಹುಟ್ಟು ಹಾಕಿದ? ಸಮಾಜದಲ್ಲಿ ಎಲ್ಲ ಜನರೂ ಸಾಂಸಾರಿಕ ಪ್ರಪಂಚದಲ್ಲಿ ಮುಳುಗಿರುವ ಕಾರಣ ಅವರ ಜ್ಞಾನ ವೃದ್ಧಿಯಾಗುವುದಿಲ್ಲ. ಅಂತಹ ಸಮಾಜದಲ್ಲಿ ಸತ್ಯದ ವಿವೇಚನೆ ಆಗುವುದೇ ಇಲ್ಲ. ಹೀಗಾಗಿ ಸ್ವಾರ್ಥರಹಿತ ಆದರ್ಶ ಸಮಾಜ ಸ್ಥಾಪಿಸಬೇಕು ಎನ್ನುವ ಉದ್ದೇಶದಿಂದ ಭಗವಾನ್ ಬುದ್ಧ ಭಿಕ್ಷು ಸಮಾಜ ಸ್ಥಾಪಿಸಿ ಸಂಸಾರ ಸುಖದತ್ತ ಭಿಕ್ಷುಗಳು ಮತ್ತೆ ಮರಳಬಾರದು ಎನ್ನುವ

ಉದ್ದೇಶದಿಂದ ಅವರ ಮೇಲೆ ಅನೇಕ ನಿರ್ಬಂಧಗಳನ್ನು ವಿಧಿಸಿದ. ಭಿಕ್ಷುಗಳ ಮುಖ್ಯ ಕರ್ತವ್ಯ ಸ್ವಧರ್ಮ ಪ್ರಚಾರವಾಗಿತ್ತು. ಇಂದಿನ ಈ ಸಂತ ಸಮಾಜ ಬುದ್ಧನ ಕಾಲದಲ್ಲಿದ್ದ ಭಿಕ್ಷು ಸಮಾಜವೇ ಆಗಿದ್ದು ಸ್ಥಿತ್ಯಂತರದ ಪರಿಣಾಮವಾಗಿ ದುರ್ಧರ ಸ್ಥಿತಿಯಲ್ಲಿದೆ. ಭಿಕ್ಷುತ್ವದ ಮೂಲ ಕಲ್ಪನೆ ನಾಶವಾದ ಕಾರಣ ಇಂದು ಅದು ಒಂದು ಹೊಟ್ಟೆ ಹೊರೆಯುವ ಉದ್ಯೋಗವಾಗಿ ಮಾರ್ಪಟ್ಟಿದೆ.

ಸಂತರ ಮೇಲೆ ಸಮಾಜದ ಜವಾಬ್ದಾರಿ ಇರಬೇಕು. ಆದರೆ ಇಂದಿನ ಸಾಧುಗಳು ಮಾಡುತ್ತಿರುವುದು ಏನು? ಮೈಗೆ ಬೂದಿ ಬಳಿದುಕೊಂಡು ಸಮಾಜದಿಂದ ದೂರ ಉಳಿಯುತ್ತಿದ್ದಾರೆ. ಜಡೆ, ಗಡ್ಡ, ಮಾಲೆಗಳು ಮತ್ತು ಬಣ್ಣದ ಅಂಗಿಗಳಂತಹ ಲಕ್ಷಣಗಳಿಂದ ಯಾರೂ ನಿಜವಾದ ಸಂತರಾಗುವುದಿಲ್ಲ. ಸಮಾಜದಲ್ಲಿ ಆಗುವ ಅಧೋಗತಿ, ಸಮಾಜದಲ್ಲಿ ಅಲ್ಲಲ್ಲಿ ಆಗುವ ಅನ್ಯಾಯ, ಅಪರಾಧ, ಶೋಷಣೆಗಳಿಗೆ ವಿರೋಧಿಸುವುದು ಸಾಧುಗಳ ಕರ್ತವ್ಯ ಮತ್ತು ಅದೇ ಲೋಕ ಕಲ್ಯಾಣ, ಅದೇ ನಿಜವಾದ ಜನಸೇವೆ.

ಈ ಸಾಧು, ಸಂತ ಜನರು ಧರ್ಮಾಂತರ ಕಾರ್ಯದಲ್ಲಿ ಸಾಕಷ್ಟು ನೆರವಾಗಬಲ್ಲರು. ನಾವು ಸ್ಥಾಪಿಸುವ ಹೊಸ ಧರ್ಮದ ಬಗ್ಗೆ ಗ್ರಾಮಗ್ರಾಮಗಳ ಕಿವಿಗಳಿಗೆ ತಲುಪಿಸುವ ಕೆಲಸದಲ್ಲಿ ಈ ಸಾಧುಗಳು ಸಾಕಷ್ಟು ಉಪಯೋಗಕ್ಕೆ ಬರಲಿದ್ದಾರೆ. ಈ ಜನರು ಧರ್ಮೋಪದೇಶದ ಕೆಲಸವನ್ನು ಅತ್ಯುತ್ತಮವಾಗಿ ಮಾಡಬಲ್ಲರು. ಈ ವಿದ್ವಾನರು ಹೊಸ ಧರ್ಮದ ಬೋಧನೆಯನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಬಲ್ಲರು.

ಇಂದು ಸನ್ಯಾಸತ್ವದ ಅಸ್ಥಿಪಂಜರ ಮಾತ್ರ ಉಳಿದುಕೊಂಡಿದೆ. ಹೀಗಾಗಿ ಈ ಸಾಧು, ಸಂತರು ಈ ಹೊಸ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಹೊಸ ಜೀವನಕ್ಕೆ ಅಡಿ ಇಡಬೇಕು. ಇಂದು ಸ್ವಾರ್ಥ ತ್ಯಾಗ ಅತ್ಯಂತ ಮಹತ್ವದ ವಿಚಾರವಾಗಿದೆ ವಿನಃ ಬರೀ ಮಾಲೆಗಳಲ್ಲ. ಹೀಗಾಗಿ ಈ ಸಂತ ಸಮಾಜ ಹೊಸ ಧರ್ಮ ಸ್ಥಾಪನೆಯ ಕೆಲಸದ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಳ್ಳಬೇಕು ಎಂದು ಹೇಳಿ ನನ್ನ ಮಾತಿಗೆ ವಿರಾಮ ನೀಡುತ್ತೇನೆ.

ಈ ಸಮಾವೇಶದಲ್ಲಿ ಸಂತರು, ಮಹಂತರಂತೆ ಇತರ ಅತಿಥಿಗಳು ಆಹ್ವಾನಿತರಾಗಿದ್ದರು. ಇದರಲ್ಲಿ ಮುಂಬೈ ಪ್ರದೇಶದ ಮಹಾರ್ ಸಮಾವೇಶದ ಅಧ್ಯಕ್ಷ ಬಿ. ಎಸ್. ವೆಂಕಟರಾವ್, ಭಾಯಿ ಅನಂತರಾವ್ ಚಿತ್ರೆ, ಶ್ರೀ. ಶಿವತರಕರ್, ಸುಭೇದಾರ ಸವಾದಕರ್, ಡಿ, ವಿ. ಪ್ರಧಾನ್, ಎಂ. ಕೆ. ಕರ್ಣಿಕ್, ದಿವಾಕರ್ ಪಗಾರೆ, ರೇವಜಿಬುವಾ ಡೋಳಸ್, ಸಂಭಾಜಿ ತುಕಾರಾಮ್ ಗಾಯಕವಾಡ, ಅಣ್ಣಾಸಾಹೇಬ ಪೋತ್ನಿಸ್, ಚಾಂಗದೇವ ಮೋಹಿತೆ, ಶಾಂತಾರಾಮ ಅಣ್ಣಾಜಿ ಉಪಶಾಮ, ಕವಳಿ, ದೇವರಾಯ ನಾಯಿಕ, ಅಮೃತರಾವ್ ರಣಖಾಂಬೆ,

ಭಾವುರಾವ್ ಗಾಯಕವಾಡ ಸೇರಿದಂತೆ ಇತರ ಅತಿಥಿಗಳು ಉಪಸ್ಥಿತರಿದ್ದರು. ಅದೇ ರೀತಿ ಸಂತ ಮಹಂತರ ಪೈಕಿ ಪತೀತಪಾವನದಾಸ್ ಬುವಾ, ಗಣಪತ್ ಬುವಾ ಉರ್ಫ ಮಡಕೆಬುವಾ, ಶಿವರಾಮ ಗೋಪಾಲ ಜಾಧವ, ಸೇವಕನಾಥ ಶೃಂಗನಾಥ, ಜಗನ್ನಾಥ ತಾರಖನಾಥ, ಗಣೇಶ ಸಿದ್ಧನಾಥ, ಬುದ್ಧಿನಾಥ ವಿಠಲನಾಥ, ಭಾವಿಕನಾಥ ಭಡಕನಾಥ, ಚಂಚಲನಾಥ ಭಡಕನಾಥ, ಭಡಕನಾಥ ಆಲಕನಾಥ್, ಸೇವಕನಾಥ ಕೇಶವನಾಥ, ಮಾಧವದಾಸ ದೇವಕಾದಾಸ, ಮೇಣಿನಾಥ ತಾರಖನಾಥ, ಕಿಸನ್ ದಾಸ್ ಗೋವಿಂದದಾಸ, ಗೋಪಿನಾಥ ಗಂಗಾನಾಥ, ಅಂಕುಶಬುವಾ, ರಾಘೋಜಿ ಫಣಸೆ, ಕಿಸನ್ ದಾಸ ಶಂಕರದಾಸ, ಶಂಬುನಾಥ ಗೋವಿಶ್ವನಾಥ, ಮಂತ್ರಿನಾಥ ಗರೀಬನಾಥ, ಚತುರನಾಥ ಚಿತ್ತಗಂಗಾನಾಥ, ಆದಿನಾಥ ಮೇಣಿನಾಥ, ದಶರಥನಾಥ ವಿಠಲನಾಥ, ರಾಮನಾಥ ಖಡಕನಾಥ, ಬಾಲಕನಾಥ ಸೇವಕನಾಥ, ಶ್ರೀಪತಿದಾಸ ಮುಕ್ತಿದಾಸ,

---

ಜನತಾ: ಜುಲೈ ೪, ೧೯೩೬.

ಯಮಾಜಿ ದಾಸ ಪಾಂಡವದಾಸ, ಅಂಬರದಾಸ ಲಕ್ಷ್ಮಣದಾಸ, ರಮಾಜಿನಾಥ ಆತ್ಮಾರಾಮನಾಥ, ಕಾಲಾದಾಸ ಸೇವಾದಾಸ ಮತ್ತು ಗರೀಬನಾಥ ತಾರಖನಾಥ ಸೇರಿದಂತೆ ಇತರರು ಇದ್ದರು.

ಸಂತ ಸಮಾವೇಶದಲ್ಲಿ ತೆಗೆದುಕೊಂಡ ಮೇಲಿನ ನಿರ್ಣಯಗಳ ಬಗ್ಗೆ ಮಾಡಿದ ಭಾಷಣಗಳು ಅತ್ಯಂತ ಪರಿಣಾಮಕಾರಿ ಮತ್ತು ಚಿಂತನಾರ್ಹವಾಗಿದ್ದವು. ಇತರ ಸಮಾಜಗಳಂತೆ ಅಸ್ಪೃಶ್ಯರ ಸಂತ ಸಮಾಜ ಕೂಡ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಕೈಗೆತ್ತಿಕೊಂಡ ಕೆಲಸಕ್ಕೆ ನೀಡಿದ ಬೆಂಬಲದಲ್ಲಿ ಎಷ್ಟೊಂದು ಆತ್ಮೀಯತೆ ಇತ್ತು ಎನ್ನುವುದು ಈ ಸಮಾವೇಶದ ಮೂಲಕ ಖಾತ್ರಿಯಾಯಿತು. ಇಲ್ಲಿಯವರೆಗೆ ಈ ಸಂತ ಸಮಾಜ ತನ್ನ ನಿತ್ಯ ವ್ಯವಹಾರದಲ್ಲಿ ಅನುಸರಿಸುತ್ತಿದ್ದ ಹಿಂದೂ ಧರ್ಮದ ಸಂಪ್ರದಾಯಗಳನ್ನು ಕಿತ್ತೊಗೆದರು. ಅಸ್ಪೃಶ್ಯರ ದಿಕ್ಕುತಪ್ಪಿಸಿ, ಅಸಮಾನತೆಯ, ಗುಲಾಮಗಿರಿಯ ವಾತಾವರಣದಲ್ಲಿ ನರಳುವಂತೆ ಮಾಡಿದ ಆ ಹಿಂದೂ ಧರ್ಮದ ಗ್ರಂಥಗಳಿಗೆ ಬಹಿರಂಗವಾಗಿ ಬೆಂಕಿ ಹಾಕಿ ಸುಡಲಾಯಿತು.

ಈ ಸಮಾವೇಶದಲ್ಲಿ ಹಿಂದೂ ಧರ್ಮದ ಗ್ರಂಥಗಳನ್ನು ಸುಡುವುದರ ಜೊತೆಗೆ ಇನ್ನೊಂದು ಮಹತ್ವದ ಘಟನೆ ಜರುಗಿತು. ಸಾವಿರಾರು ವರ್ಷಗಳಿಂದ ಹಿಂದೂ ಸಮಾಜದ ಬೋಧನೆಗೆ ಅನುಗುಣವಾಗಿ ನಡೆದುಕೊಳ್ಳುತ್ತಿದ್ದ ಈ ಸಂತ ಸಮಾಜ ಗಡ್ಡ, ಮೀಸೆ ಬಿಟ್ಟು ಜಟಾಧಾರಿಗಳಾಗಿದ್ದರು. ಅವರ ಕೊರಳುಗಳಲ್ಲಿ ಮಾಲೆಗಳು ಸುಶೋಭಿತವಾಗಿದ್ದವು. ನಾನಾ ಸಂಪ್ರದಾಯದ ಸಂತರು, ಮಹಂತರು ಕೈಗಳಲ್ಲಿ, ಕಿವಿ, ಕೊರಳುಗಳಲ್ಲಿ ದಾರ, ಗೊಂಡೆಗಳನ್ನು ಧರಿಸಿದ್ದರು. ಆದರೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಹಿಂದೂ ಧರ್ಮದಲ್ಲಿನ ಅಸಮಾನತೆ ಮತ್ತು ಅಸ್ಪೃಶ್ಯರೊಂದಿಗಿನ ಅವರ ಅನ್ಯಾಯದ ವರ್ತನೆಯನ್ನು ವಿವರಿಸಿ ಧರ್ಮಾಂತರದ ಅಗತ್ಯತೆಯ ಪ್ರತಿಪಾದನೆಯಿಂದ ಎಚ್ಚರಗೊಂಡ ಸಂತ ಸಮಾಜ, ಡಾ. ಅಂಬೇಡ್ಕರ್ ಅವರ ಘೋಷಣೆಯನ್ನು ಅನುಸರಿಸುವುದನ್ನು ನಿಶ್ಚಯಿಸಿತು, ಅದಕ್ಕೆ ಅನುಗುಣವಾಗಿ ಸಾವಿರಾರು ವರ್ಷಗಳ ಸಂಸ್ಕಾರ ತೊಡೆದುಹಾಕುವ ನಿಟ್ಟಿನಲ್ಲಿ ಗಡ್ಡ, ಮೀಸೆ, ಜಟೆ, ಮಾಲೆಗಳ ಅಲಂಕಾರ ತ್ಯಜಿಸಿದರು. ಸಮಾವೇಶದಲ್ಲಿ ನಿರ್ಮಿಸಿದ್ದ ಬೃಹತ್ ಅಗ್ನಿಕುಂಡದಲ್ಲಿ ನೂರಾರು ಸಾಧು, ಸಂತರು ತಮ್ಮ ಗಡ್ಡ, ಮೀಸೆ, ಜಟೆ ಮತ್ತು ಇನ್ನಿತರ ಸಾಧನಗಳ ಆಹುತಿ ನೀಡಿ ಸಂತ, ಮಹಂತದ ಕುರುಹುಗಳನ್ನು ನಿರ್ನಾಮ ಮಾಡಿದರು. ತಮ್ಮ ಧರ್ಮಾಂತರದ ನಿಶ್ಚಯವನ್ನು ಡಾ. ಅಂಬೇಡ್ಕರ್ ಅವರ ಎದುರು ಬಹಿರಂಗವಾಗಿ ಪ್ರಕಟಿಸಿದರು.

ಸಂತ ಸಮಾಜದ ಈ ಅಧಿವೇಶನ ಇತರ ಅಸ್ಪೃಶ್ಯ ಸಮಾಜದ ಮೇಲೆ ಸಾಕಷ್ಟು ಪರಿಣಾಮ ಬೀರಿತು. ಗಡ್ಡ, ಮೀಸೆ, ಜಟೆಗಳನ್ನು ಅಗ್ನಿಗೆ ಅರ್ಪಿಸಿ ಮುಕ್ತರಾಗಿದ್ದ ಸಂತರು ಅಸ್ಪೃಶ್ಯ ಸಮಾಜದಲ್ಲಿ ಧರ್ಮಾಂತರದ ಕುರಿತು ಜನಜಾಗೃತಿ ಮೂಡಿಸಲು ಅಥವಾ ಸಮಾಜದ ಹಿತಾಸಕ್ತಿ ರಕ್ಷಣೆಯ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತಹ ಕೆಲಸಗಳನ್ನು ಮಾಡುವುದಕ್ಕೆ ತಮ್ಮ ಒಪ್ಪಿಗೆ ಸೂಚಿಸಿದರು. ದೇವರ ಭಜನೆ, ಪೂಜೆಗಳಲ್ಲಿ ವ್ಯರ್ಥ ಕಾಲ ಕಳೆಯುವುದಕ್ಕಿಂತ ನಿಸ್ವಾರ್ಥದಿಂದ ಜನಸೇವೆ ಮಾಡುವುದೇ ನಿಜವಾದ ಈಶ ಸೇವೆ ಆಗಿದೆ. ಒಟ್ಟಾರೆ ಈ ಸಂತ ಸಮಾವೇಶದ ಕಾರ್ಯ ಯಶಸ್ವಿಯಾಗಿದ್ದು ಅಲ್ಲದೇ, ಸಾವಿರಾರು ವರ್ಷಗಳಿಂದ ಧರ್ಮದ ಹೆಸರಿನಲ್ಲಿ ರೂಢಿಗತ ಸಂಪ್ರದಾಯಗಳ ಡಾಂಭಿಕತೆ ಅವರ ಅರಿವಿಗೆ ಬರುತ್ತಿದ್ದಂತೆಯೇ ಡಾ. ಅಂಬೇಡ್ಕರ್ ಅವರ ಘೋಷಣೆಗೆ ಅನುಗುಣವಾಗಿ ಆ ಢೋಂಗಿ ಧರ್ಮ ತ್ಯಾಗ ಮಾಡುವುದಕ್ಕೆ ಸಿದ್ಧರಾಗಿ ಅದನ್ನು ಜಾರಿ ಮಾಡಿದ್ದು ಇಡೀ ಅಸ್ಪೃಶ್ಯ ಸಮಾಜಕ್ಕೆ ಭೂಷಣವಾಗಿತ್ತು. ಸಂತ, ಮಹಂತರ ಗಡ್ಡ, ಮೀಸೆ, ಜಟೆಗಳ ಅಗ್ನಿ ಆಹುತಿ ಕಾರ್ಯಕ್ರಮ ಮುಗಿದ ಬಳಿಕ ಸಭೆ ಡಾ. ಅಂಬೇಡ್ಕರ್ ಅವರ ಜಯಕಾರದೊಂದಿಗೆ ಈ ಅಧಿವೇಶನವು ಮುಕ್ತಾಯವಾಯಿತು.

---

ಜನತಾ: ಜುಲೈ ೪, ೧೯೩೬.

# ೯೧.

# ಕಾಯ್ದೆ ಮಂಡಳಿಗೆ ಪಕ್ಷದ ಅರ್ಹ ಅಭ್ಯರ್ಥಿಗಳ ಆಯ್ಕೆಯಾಗಲಿ

ಜೂನ್ ೧, ೧೯೩೬ರಂದು ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಭಾಷಣ ರಾಜಕೀಯ ಸಮಾವೇಶದಲ್ಲಿ ಆಯಿತು. ಅವರು ತಮ್ಮ ಭಾಷಣದಲ್ಲಿ...

ನಿನ್ನೆ ನಾನು ಧರ್ಮಾಂತರಕ್ಕೆ ಸಂಬಂಧಿಸಿದಂತೆ ನನ್ನ ವಿಚಾರಗಳನ್ನು ವ್ಯಕ್ತಪಡಿಸುವ ವೇಳೆ ಮೊದಲು ಸಾಮಾಜಿಕ ಸುಧಾರಣೆ ಬಳಿಕ ರಾಜಕೀಯ ಸುಧಾರಣೆ ಕುರಿತು ಒಂದಿಷ್ಟು ವಿಷಯ ಪ್ರಸ್ತಾಪಿಸಿದ್ದೇನೆ. ಮನುಷ್ಯನಿಗೆ ತನ್ನ ಸಮಾಜದ ಪ್ರಗತಿಗೆ ನಾನಾ ರೀತಿಯ ಸಾಧನಗಳ ಅವಶ್ಯಕತೆ ಇರುತ್ತದೆ. ಒಟ್ಟಾರೆ ಸಾಧನಗಳ ಪೈಕಿ ಮೊದಲು ಇದು, ಬಳಿಕ ಇನ್ನೊಂದು ಎಂಬ ವಾದ ಶುಷ್ಕವಾಗಿದೆ. ಅಸ್ಪೃಶ್ಯರಿಗೆ ಧರ್ಮಾಂತರ ಎಷ್ಟು ಮುಖ್ಯವಾಗಿದೆಯೋ ರಾಜಕಾರಣವೂ ಕೂಡ ಅಷ್ಟೇ ಮುಖ್ಯವಾಗಿದೆ ಎಂದು ನಾನು ಹೇಳಬಲ್ಲೆ. ಯಾವ ರೀತಿ ಧರ್ಮಾಂತರಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯ ಏನು ಎನ್ನುವುದನ್ನು ನಿನ್ನೆ ಪರಾಮರ್ಶಿಸಿದ್ದೇವೆಯೋ ಅದೇ ರೀತಿ ರಾಜಕಾರಣಕ್ಕೂ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯ ಏನು ಎನ್ನುವುದನ್ನು ಪರಾಮರ್ಶಿಸಬೇಕಾದ ಅಗತ್ಯವಿದೆ. ನಾವೆಲ್ಲರೂ ಒಂದೆಡೆ ಸೇರಿ ರಾಜಕೀಯದ ಚಿಂತನೆ ಮಾಡಬೇಕು ಎನ್ನುವುದು ನನ್ನ ಬಹಳ ದಿನಗಳ ಇಚ್ಛೆಯಾಗಿತ್ತು. ಆದರೆ ಅಂತಹ ಅವಕಾಶ ಇಲ್ಲಿಯವರೆಗೆ ಲಭಿಸಿರಲಿಲ್ಲ. ಅಂತಹ ಅವಕಾಶ ಲಭಿಸಿರುವುದಕ್ಕೆ ನನಗೆ ಸಂತೋಷವಾಗುತ್ತಿದೆ. ರಾಜಕಾರಣ ಸುಲಭದ ತುತ್ತಲ್ಲ. ಆದರೂ ನಿಮಗೆ ಎಲ್ಲರಿಗೂ ಅರ್ಥವಾಗಲಿ ಎನ್ನುವ ಉದ್ದೇಶದಿಂದ ಸರಳಭಾಷೆಯಲ್ಲಿ ನನ್ನ ವಿಚಾರಗಳನ್ನು ಮಂಡಿಸುವ ಪ್ರಯತ್ನ ಮಾಡುತ್ತೇನೆ.

ನಿಮ್ಮಲ್ಲಿನ ಪೈಕಿ ಯಾರಾದರೂ ಜನತಾಪತ್ರ ಇಲ್ಲವೇ ಇತರ ದಿನಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿದ್ದರೆ ಮುಂದಿನ ವರ್ಷದ ಏಪ್ರಿಲ್‌ನಲ್ಲಿ ಭಾರತದಲ್ಲಿ ನೂತನ ಸುಧಾರಣೆಗಳು ಜಾರಿಯಾಗಲಿವೆಂಬುದು ಗೊತ್ತಾಗುತ್ತಿತ್ತು. ಈ ಸುಧಾರಣೆಗಳಿಗೆ ಸಂಬಂಧಿಸಿದಂತೆ ನಮ್ಮ ಧೋರಣೆ ಹೇಗೆ ಇರಬೇಕು ಮತ್ತು ಆ ಸುಧಾರಣೆಗಳ ಪ್ರಯೋಜನ ಪಡೆಯುವ ನಿಟ್ಟಿನಲ್ಲಿ ನಮ್ಮ ಸಂಘಟನೆ ಹೇಗೆ ಇರಬೇಕು ಎಂದು ನಿರ್ಧರಿಸುವುದು ಅಗತ್ಯವಾಗಿದೆ.

ಈ ರಾಜಕೀಯ ಸುಧಾರಣೆಗಳಿಗೆ ಸಂಬಂಧಿಸಿದಂತೆ ಭಾರತೀಯರ ಅಭಿಪ್ರಾಯ ಏನೇ ಇದ್ದರೂ ಇರಲಿ. ಈ ಸಂವಿಧಾನದಿಂದ ಭಾರತ ದೇಶದ ಸ್ಥಿತಿಗತಿಯಲ್ಲಿ ಸುಧಾರಣೆಯಾಗುತ್ತದೋ ಅಥವಾ ಸ್ಥಿತಿಗತಿ ಇನ್ನಷ್ಟು ಹಾಳಾಗುತ್ತದೆಯೋ ಎಂದು ನೋಡುವುದರಲ್ಲಿ ನಮ್ಮ ಪ್ರಯೋಜನವೇನೂ ಇಲ್ಲ. ಈ ರಾಜಕೀಯ ಸುಧಾರಣೆಗಳ ಪೈಕಿ ಯಾವವು ಅಪೂರ್ಣವಾಗಿವೆಯೋ ಅವುಗಳನ್ನು ಧಿಕ್ಕರಿಸಬೇಕಾಗುತ್ತದೆ ಎಂಬ ಧೋರಣೆಯನ್ನು ಕಾಂಗ್ರೆಸ್ ಸೇರಿದಂತೆ ಇತರ ಪಕ್ಷಗಳು ತಳೆದಿವೆ. ಯಾವ ಜನರಿಗೆ ಈ ಸುಧಾರಣೆಗಳನ್ನು ದುಡಿಸಿಕೊಳ್ಳುವ ಸಾಮರ್ಥ್ಯ ಇರುವುದಿಲ್ಲವೋ ಅಂತಹವರ ಬಗ್ಗೆ ನಾನು ವಿಚಾರ ಸಹಿತ ಮಾಡಲು ಹೋಗುವುದಿಲ್ಲ. ಸದ್ಯದ ರಾಜಕೀಯ ವ್ಯವಸ್ಥೆಗೆ ಹೋಲಿಸಿದಲ್ಲಿ ನೂತನ ರಾಜಕೀಯ ಸುಧಾರಣೆಗಳಿಂದ ದೇಶಕ್ಕೆ ಒಳಿತಾಗುವುದಿಲ್ಲ ಎನ್ನುವುದು ಕೆಲವರ ಹೇಳಿಕೆ. ಈ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ನಾನು

ಹೇಳುವುದು ಇಷ್ಟೇ. ಈ ನೂತನ ರಾಜಕೀಯ ಸುಧಾರಣೆಗಳಿಂದ ದೇಶಕ್ಕೆ ಅಪರಿಮಿತ ಒಳ್ಳೆಯದ್ದು ಆಗುತ್ತದೆಂದಲ್ಲ. ಅವುಗಳನ್ನು ಜಾರಿಗೊಳಿಸಿದರೆ ಒಂದಿಷ್ಟಾದರೂ ಸುಧಾರಣೆಯಾಗುತ್ತದೆನ್ನುವುದು ನನ್ನ ಅಭಿಪ್ರಾಯ. ಆ ರಾಜಕೀಯ ಸುಧಾರಣೆಗಳು ಅಪೂರ್ಣ ಎನ್ನುವ ಹೇಳಿಕೆಗೆ ನನ್ನ ಸಮ್ಮತಿ ಇದೆ. ಆದರೆ ರಾಜಕೀಯ ಪರಿಸ್ಥಿತಿಗೆ ಹೋಲಿಸಿ ನೋಡಿದರೆ ನೂತನ ಸುಧಾರಣೆಗಳು ದೇಶವನ್ನು ಮತ್ತಷ್ಟು ಹಿಂದಕ್ಕೆ ಸರಿಸಿವೆ ಎನ್ನುವುದು ನನಗೆ ಒಪ್ಪಿಗೆಯಾಗದ ವಿಚಾರ. ಈ ರೀತಿ ಹೇಳಿಕೆ ನೀಡುವ ಜನರಿಗೆ ರಾಜಕೀಯದ ಗಂಧಗಾಳಿ ಕೂಡ ಗೊತ್ತಿಲ್ಲ ಎಂದಲ್ಲ ಆದರೆ ನನಗೂ ಕೂಡ ರಾಜಕೀಯದ ಬಗ್ಗೆ ಒಂದಿಷ್ಟು ಅರಿವು ಇದೆ.

ನೂತನ ರಾಜಕೀಯ ಸುಧಾರಣೆಗಳಿಂದಾಗಿ ದೇಶ ಹಿಂದಕ್ಕೆ ಹೋಗಿದೆ ಎಂಬ ಕೆಲವರ ಹೇಳಿಕೆಗೆ ನನ್ನ ಸಮ್ಮತಿ ಇಲ್ಲ. ಇಷ್ಟೇ ಅಲ್ಲ ಆ ರಾಜಕೀಯ ಸುಧಾರಣೆಗಳು ಅಪೂರ್ಣವಾಗಿದ್ದರೂ ಕೂಡ ಅವುಗಳು ಇತ್ತೀಚಿನ ಸುಧಾರಣೆಗಳಿಗಿಂತ ಸಾಕಷ್ಟು ಉತ್ತಮ ಅಂಶಗಳು ಅದರಲ್ಲಿ ಇದವೆ ಎನ್ನವುದು ನನ್ನ ಅಭಿಪ್ರಾಯ.

ಈ ರಾಜಕೀಯ ಸುಧಾರಣೆಗಳನ್ನು ಸ್ವೀಕರಿಸಕೂಡದು, ಅವುಗಳನ್ನು ಬಳಸಕೂಡದು ಎಂದು ಹೇಳುವ ಜನರಿಗೆ ಒಂದು ಪ್ರಶ್ನೆ ಕೇಳಬೇಕಾಗುತ್ತದೆ. ಒಂದು ವೇಳೆ ನಿಮಗೆ ಸುಧಾರಣೆಗಳು ಬೇಡವಾಗಿದ್ದು ಪೂರ್ಣ ಸ್ವಾತಂತ್ರ್ಯವೇ ಬೇಕಿದ್ದರೆ, ಆ ಸ್ವಾತಂತ್ರ್ಯ ಪಡೆಯುವುದಕ್ಕೆ ನಿಮ್ಮಲ್ಲಿ ಇರುವ ಸಾಹಿತ್ಯ ಸಾಧನಗಳಾದರೂ ಏನು? ಪೂರ್ಣ ಸ್ವಾತಂತ್ರ್ಯ ಪಡೆಯಬೇಕಿದ್ದರೆ, ಇಂಗ್ಲೆಂಡ್ ಸರ್ಕಾರದ ವಿರುದ್ಧ ಯಾವ ರೀತಿ ಐರಿಷ್ ಜನರು ಸೈನ್ಯ ಮತ್ತು ಸಾಮಗ್ರಿ ಸಂಗ್ರಹಿಸಿ ಬಂಡಾಯ ಎದ್ದರೋ, ಆ ರೀತಿ ಬಂಡಾಯ ಏಳಬೇಕಾಗುತ್ತದೆ. ಆದರೆ ಈ ರೀತಿ ಭಾರತೀಯರಿಗೆ ಬಂಡಾಯ ಏಳುವುದಕ್ಕೆ ಸಾಧ್ಯ ಇದೆಯೇ? ಬ್ರಿಟಿಷ್ ಸಾಮ್ರಾಜ್ಯ ಎಷ್ಟೊಂದು ವಿಸ್ತಾರವಾಗಿದೆ. ಅವರ ಬಳಿ ಇರುವ ಯುದ್ಧ ಸಾಮಗ್ರಿ ಎಷ್ಟು ಪ್ರಚಂಡವಾಗಿದೆ ಎನ್ನುವುದನ್ನು ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕೆ ನಾನು ಇಂಗ್ಲೆಂಡ್‌ಗೆ ಹೋಗಿದ್ದ ವೇಳೆ ನೋಡಿದ್ದೇನೆ.

ಯಾರಿಗೆ ಈ ಸುಧಾರಣೆಗಳು ಬೇಡವಾಗಿವೆಯೋ ಆದರೆ ಸ್ವಾತಂತ್ರ್ಯ ಬೇಕಾಗಿದೆಯೋ ಅವರಿಗೆ ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಡುವುದಕ್ಕೆ ಅಗತ್ಯವಿರುವ ಸಾಮಗ್ರಿ ತಮ್ಮ ಬಳಿ ಇಲ್ಲ ಎನ್ನುವ ಸಂಗತಿಯ ಖಾತ್ರಿ ಇದೆ. ಸ್ವಾತಂತ್ರ್ಯಕ್ಕಾಗಿ ಅವರು ಅನುಸರಿಸುತ್ತಿರುವ ಅಸಹಕಾರ ಮತ್ತು ಕಾಯ್ದೆ ಭಂಗ ಮಾರ್ಗ ಅನತ್ಯಾಚಾರದ ಮಾರ್ಗವಾಗಿದೆ. ಈ ಮಾರ್ಗ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿದೆ ಎನ್ನುವುದರ ಅರಿವು ಈಗೀಗ ಜನರಿಗೆ ಆಗುತ್ತಿದೆ. ಬಲವಾದ ಗಾಳಿಯಿಂದ ಯಾವ ರೀತಿ ಗಿಡ ಅಲುಗಾಡುತ್ತದೋ ಅದೇ ರೀತಿ ಈ ಅಸಹಕಾರದ ಅಸ್ತ್ರದಿಂದ ಬ್ರಿಟಿಷ್ ಸರ್ಕಾರ ಕೆಲಕಾಲ ಅಲುಗಾಡಿತು. ಆದರೆ ಅದು ಧರಾಶಾಯಿ ಆಗಲಿಲ್ಲ. ಕಾಂಗ್ರೆಸ್ ಶೋಧಿಸಿದ ಈ ಅಸಹಕಾರ ಮಾರ್ಗ ಸ್ವಾತಂತ್ರ್ಯ ಗಳಿಕೆಯಲ್ಲಿ ಏನೇನೂ ಉಪಯೋಗಕ್ಕೆ ಬರಲಿಲ್ಲ. ಹಾಗಿದ್ದಾಗ ಈಗ ಮತ್ತೇ ಅದೇ ಮಾರ್ಗ ಅನುಸರಿಸುವುದರಿಂದ ಯಾವ ಪ್ರಯೋಜನ ಆಗುತ್ತದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನನ್ನ ಪ್ರಕಾರ ಈ ಅಸಹಕಾರದ ಮಾರ್ಗ ಘಾತಕಕಾರಿಯಾಗಿ ಪರಿಣಮಿಸಲಿದೆ. ಒಂದು ವೇಳೆ ಅದರಿಂದ ನಿಶ್ಚಿತ ಗುರಿ ತಲುಪಲು ಸಾಧ್ಯವಾಗದಿದ್ದರೆ ಹಾನಿಯಂತೂ ಖಂಡಿತ ಸಂಭವಿಸುತ್ತದೆ.

ಈ ಸಂದರ್ಭದಲ್ಲಿ ಇಂಗ್ಲೆಂಡ್ ಇತಿಹಾಸದಲ್ಲಿನ ಒಂದು ಘಟನೆ ನನಗೆ ನೆನಪಿಗೆ ಬರುತ್ತದೆ. ಫ್ರಾನ್ಸ್‌ನಲ್ಲಿ ರಾಜ್ಯ ಕ್ರಾಂತಿ ಉಂಟಾಗಿದ್ದ ವೇಳೆ ಬ್ರಿಟಿಷ್ ನಾಗರಿಕರು ರಾಜಕೀಯ ಹಕ್ಕುಗಳನ್ನು ಪಡೆಯುವುದಕ್ಕೆ

---

ಜನತಾ: ೪ ಜುಲೈ ೧೯೩೭

ಬೃಹತ್ ಚಳವಳಿ ಆರಂಭಿಸಿದರು. ಈ ರಾಜಕೀಯ ಹಕ್ಕುಗಳನ್ನು ಪಡೆಯುವ ನಿಟ್ಟಿನಲ್ಲಿ ಅವರು ಬ್ರಿಟಿಷ್ ಸಂಸತ್ತಿನೊಂದಿಗೆ ಹೋರಾಟಕ್ಕೆ ಇಳಿದಿದ್ದರು. ಈ ಹೋರಾಟದಲ್ಲಿ ಉಗ್ರಪಂಥೀಯ ಎಂದು ಪರಿಗಣಿಸಲ್ಪಟ್ಟಿದ್ದ ಚಾರ್ಲ್ಸ್ ಜೇಮ್ಸ್ ಫಾಕ್ಸ್ ಎಂಬ ಮುಖಂಡನಿದ್ದ. ಪ್ರತಿಯೊಬ್ಬರಿಗೂ ಮತದಾನದ ಹಕ್ಕು ನೀಡಬೇಕು ಎಂದು ಈ ಪಕ್ಷ ದೊಡ್ಡ ಮಟ್ಟದಲ್ಲಿ ಪ್ರಯತ್ನ ನಡೆಸಿತ್ತು. ಆದರೆ ಆ ಸಮಯದಲ್ಲಿ ಸಂಸತ್ತಿನಲ್ಲಿ ಶ್ರೀಮಂತರ ಪ್ರಾಬಲ್ಯವಿತ್ತು. ಈ ಶ್ರೀಮಂತರ ಸಂಸತ್ತಿನೊಂದಿಗೆ ಚಾರ್ಲ್ಸ್ ಜೇಮ್ಸ್ ಫಾಕ್ಸ್ ಮತ್ತು ಅವರ ಅನುಯಾಯಿಗಳು ನಿಖರವಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡಿದರು. ಈ ಹೋರಾಟದಲ್ಲಿ ಅವರು ವಿಫಲರಾಗಬೇಕಾಯಿತು. ಅಂತಿಮ ಉಪಾಯ ಎಂದು ಅವರ ಪಕ್ಷ ಸಂಸತ್ತಿನೊಂದಿಗೆ ಅಸಹಕಾರ ಆರಂಭಿಸಿತು. ಯಾವ ರೀತಿ ಭಾರತದಲ್ಲಿ ಮಹಾತ್ಮ ಗಾಂಧೀಜಿ ಅವರು ಅಸಹಕಾರ ಚಳವಳಿ ನಡೆಸಿದರೋ ಅದೇ ರೀತಿ ಇಂಗ್ಲೆಂಡ್‌ನಲ್ಲಿ ಕೂಡ ಆ ಕಾಲದಲ್ಲಿ ಈ ಚಳವಳಿ ಜೋರಾಗಿತ್ತು. ಲೇಡಿ ಪಾರ್ಟಂಡ್ ಎಂಬ ಮಹಿಳೆ ಈ ಉಗ್ರಪಂಥೀಯ ಪಕ್ಷದ ಅಧಿಷ್ಠಾತ್ರಿಯಾಗಿದ್ದಳು. ಚಾರ್ಲ್ಸ್ ಜೇಮ್ಸ್ ಫಾಕ್ಸ್ ಸಂಸತ್ತು ಬಹಿಷ್ಕರಿಸುವ ತೀರ್ಮಾನ ತೆಗೆದುಕೊಂಡಿರುವ ವಿಚಾರ ಈ ಮಹಿಳೆಗೆ ಗೊತ್ತಾದ ಬಳಿಕ ಅವಳು ಚಾರ್ಲ್ಸ್ ಜೇಮ್ಸ್ ಫಾಕ್ಸ್‌ನನ್ನು ಚಹಾಕೂಟಕ್ಕೆ ಮನೆಗೆ ಕರೆಸಿಕೊಂಡಳು. ಚಹಾಕೂಟದಲ್ಲಿ ಪಾಲ್ಗೊಂಡಿದ್ದ ಫಾಕ್ಸ್‌ನನ್ನು ಉದ್ದೇಶಿಸಿ ಪಾರ್ಟಂಡ್ ಕೇಳಿದ ಪ್ರಶ್ನೆಗಳು ಅತ್ಯಂತ ಮಹತ್ವದ್ದು ಆ ಕಾರಣಕ್ಕೆ ನಿಮಗೆ ಅದನ್ನು ಇಲ್ಲಿ ಹೇಳುತ್ತಿದ್ದೇನೆ. "ಮಿ. ಫಾಕ್ಸ್ ನಿಮ್ಮ ಅಸಹಕಾರದಿಂದ ನಿಮ್ಮ ಶತ್ರು ಪರಾಭವಗೊಳ್ಳುತ್ತಾನೆ ಎಂದಾದರೆ ಈ ಅಸಹಕಾರ ಮಾರ್ಗ ಸರಿಯಾಗಿದೆ ಎಂದರ್ಥ. ಒಂದು ವೇಳೆ ಆ ರೀತಿ ಆಗದೇ ಹೋದಲ್ಲಿ ಅಸಹಕಾರಕ್ಕೆ ಯಾವ ಅರ್ಥವೂ ಇಲ್ಲ. ನೀವು ನಿಮ್ಮ ವೈರಿಯೊಂದಿಗೆ ಕೈಮಿಲಾಯಿಸುವುದನ್ನು ಬಿಟ್ಟು ಸೋತು ಅಳುತ್ತ ಕುಳಿತಿದ್ದೀರಿ ಮತ್ತು ಭಾಗುಬಾಯಿಯಂತೆ ರಣಾಂಗಣದಿಂದ ಪಲಾಯನ ಮಾಡಿದರೆ ನಿಮ್ಮ ಶತ್ರು ನಿಮ್ಮ ಮೇಲೆ ವಿಜಯ ಸಾಧಿಸದೇ ಬಿಡುವುದಿಲ್ಲ. ಆದ್ದರಿಂದ ಈ ರಣಾಂಗಣದಿಂದ ಪಲಾಯನ ಮಾಡುವುದು ಶುದ್ಧ ಮೂರ್ಖತನದ ಸಂಗತಿ". ಈ ಟೀಕೆ ಕಾಂಗ್ರೆಸ್ಸಿಗರಿಗೆ ಅನ್ವಯವಾಗುತ್ತದೆ ಎನ್ನುವುದು ನನ್ನ ಅನಿಸಿಕೆ.

ನಮಗೆ ಲಭಿಸಿರುವ ರಾಜಕೀಯ ಸುಧಾರಣೆಗಳು ಅಪೂರ್ಣವಾಗಿದ್ದರೂ ಅವುಗಳ ಪ್ರಯೋಜನಗಳನ್ನು ಪಡೆದುಕೊಳ್ಳಬೇಕು. ಅವುಗಳನ್ನು ತಿರಸ್ಕರಿಸದೇ ಅವುಗಳ ಬಲದ ಮೇಲೆ ಇನ್ನಷ್ಟು ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ. ಯಾವುದೇ ವಿಚಾರ ಕಾಯ್ದೆ ಸ್ವರೂಪ ಪಡೆಯದೇ ಏನೂ ಮಾಡಲು ಸಾಧ್ಯವಿಲ್ಲ, ಅದಕ್ಕೆ ಕಾನೂನೇ ಆಗಬೇಕಾಗುತ್ತದೆ. ಕನಿಷ್ಠ ಅಸ್ಪೃಶ್ಯ ಸಮಾಜದ ಭವಿಷ್ಯವಾದರೂ ಕಾನೂನನ್ನು ಅವಲಂಬಿಸಿರುವುದರಿಂದ ನೀವು ರಾಜಕೀಯ ಸುಧಾರಣೆಗಳನ್ನು ಸ್ವೀಕರಿಸಬೇಕಾದ ಅಗತ್ಯವಿದೆ.

ನಮ್ಮ ಸಾಮಾಜಿಕ ಸುಧಾರಣೆ ಕಾನೂನುಗಳಿಂದ ಸಾಧ್ಯವಿಲ್ಲ. ಆದರೆ ನಮ್ಮ ಆರ್ಥಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ಉನ್ನತಿಗೆ ಕಾನೂನು ಅಗತ್ಯವಾಗಿದ್ದು, ನಮ್ಮ ಉನ್ನತಿಗೆ ಪೂರಕವಾಗಿರುವಂತಹ ಕಾನೂನುಗಳನ್ನು ಹೇಗೆ ರಚಿಸಬೇಕು ಎನ್ನುವುದು ಕಾನೂನು ಮಂಡಳಿಗೆ ನಾವು ಆಯ್ಕೆ ಮಾಡುವ ಅರ್ಹ ಸದಸ್ಯರನ್ನು ಅವಲಂಬಿಸಿದೆ. ನಾವು ಆಯ್ಕೆ ಮಾಡುವ ಪ್ರತಿನಿಧಿ ಸಮಾಜದ ಹಿತಕ್ಕಾಗಿ ಕೆಲಸ ಮಾಡುತ್ತಾನೋ ಇಲ್ಲವೋ ಎನ್ನುವುದನ್ನು ನೋಡಬೇಕು. ನಮ್ಮ ಸಮಾಜದ ಹಿತ, ದೃಷ್ಟಿಯಲ್ಲಿ ಇಟ್ಟುಕೊಂಡು ಕಾಯ್ದೆ ರೂಪಿಸುವಂತಹ ಜನರನ್ನು ನಾವು ಆಯ್ಕೆ ಮಾಡಬೇಕಿದೆ. ಇಲ್ಲಿಯವರೆಗೆ ನಾವು ಬ್ರಿಟಿಷ್ ಸರ್ಕಾರದ ಬಳಿ ನ್ಯಾಯ ಕೋರಬೇಕಾಗುತ್ತಿತ್ತು. ಆದರೆ ನೂತನ ಸಂವಿಧಾನದ ಪ್ರಕಾರ ಬ್ರಿಟಿಷ್ ಸರ್ಕಾರದ ಕೈಯಲ್ಲಿ ಅಧಿಕಾರವೇ ಇಲ್ಲದಂತಾಗುತ್ತದೆ.

ನೀವು ಕಾನೂನು ಮಂಡಳಿಗೆ ಆಯ್ಕೆ ಮಾಡಿ ಕಳುಹಿಸುವ ಪ್ರತಿನಿಧಿಗಳನ್ನು ನೀವು

ಅವಲಂಬಿಸಬೇಕಾಗುತ್ತದೆ. ನಿಮಗೆ ಎದುರಾಗುವ ತೊಂದರೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅವರು ಕ್ರಮ ಕೈಗೊಳ್ಳಬೇಕು ಎಂದು ಅವರನ್ನು ಒತ್ತಾಯಿಸಬೇಕಾಗುತ್ತದೆ. ಕೇವಲ ಕಾನೂನು ಮಂಡಳಿಗೆ ಪ್ರತಿನಿಧಿಗಳ ಆಯ್ಕೆ ಮಾಡುವುದರಿಂದ ಏನೂ ಸಾಧಿಸಲು ಸಾಧ್ಯವಿಲ್ಲ. ಆಯ್ಕೆಯಾದ ಬಳಿಕ ಅವರ ಕೆಲಸ ಕಾರ್ಯಗಳ ಮೇಲೆ ನೀವು ಕಣ್ಣೀಡಬೇಕಾಗುತ್ತದೆ. ನಾನು ನಿಮಗೆ ಪದೇ ಪದೇ ಒಂದು ಸಂಗತಿ ಹೇಳುತ್ತಿದ್ದೇನೆ. ನೀವು ಕಾನೂನು ಮಂಡಳಿಗೆ ಆಯ್ಕೆ ಮಾಡುವ ವ್ಯಕ್ತಿಯಲ್ಲಿ ಅರ್ಹತೆ ಇರಬೇಕು. ನೀವು ಮುಗ್ಧರಿದ್ದೀರಿ. ಬಹುಶಃ ಪ್ರತಿನಿಧಿಯಾಗಿ ಒಬ್ಬ ವ್ಯಕ್ತಿ ನಮ್ಮ ಗ್ರಾಮದ ಯಶಾ ಮಹಾರ್ ಆಯ್ಕೆಯಾಗಬೇಕೆಂದು ಹೇಳಿದರೆ, ಇನ್ನೊಬ್ಬ ನಮ್ಮ ಊರಿನ ರಾಮಾ ಮಹಾರ್, ಮತ್ತೊಬ್ಬ ನಮ್ಮ ಶಂಕರ ಮಹಾರ್ ಆಯ್ಕೆಯಾಗಬೇಕು ಎಂದು ಹೇಳಬಹುದು. ಇಂತಹ ಅಭಿಮಾನ ಏಕೆ ಬೇಕು? ಕಾನೂನು ಮಂಡಳಿಯಲ್ಲಿರುವ ವ್ಯಕ್ತಿ ನಿಮ್ಮ ಹಿತಾಸಕ್ತಿಗಳನ್ನು ರಕ್ಷಿಸಲು ಸಾಧ್ಯ ಎನ್ನುವುದನ್ನು ಮಾತ್ರ ನೀವು ನೋಡಬೇಕು. ವಿನಾಕಾರಣ ಗ್ರಾಮದ, ತಾಲೂಕಿನ ಮತ್ತು ಜಿಲ್ಲೆಯ ಅಭಿಮಾನಕ್ಕೆ ಅಂಟಿಕೊಳ್ಳಬೇಡಿ.

ಒಂದು ವೇಳೆ ನೀವು ಅಭ್ಯರ್ಥಿಯ ಆಯ್ಕೆಯಲ್ಲಿ ಎಚ್ಚರಿಕೆ ವಹಿಸದಿದ್ದರೆ ಇಲ್ಲಿಯವರೆಗೆ ನೀವು ಮಾಡಿದ ಎಲ್ಲ ಕೆಲಸಗಳು ಹೊಳೆಯಲ್ಲಿ ಹುಣಸೆ ತೊಳೆದಂತಾಗುತ್ತದೆ. ಇನ್ನೊಂದು ಹೇಳಬೇಕಾದ ವಿಚಾರ ಎಂದರೆ, ಕಾನೂನು ಮಂಡಳಿಯಲ್ಲಿ ಒಬ್ಬ ವ್ಯಕ್ತಿಯಿಂದ ಏನೂ ಮಾಡಲಿಕ್ಕಾಗದು. ೧೯೨೬ರಿಂದ ಮುಂಬೈ ಕಾನೂನು ಮಂಡಳಿಯಲ್ಲಿದ್ದೇನೆ ಹೀಗಾಗಿ ನನಗೂ ಒಂದಿಷ್ಟು ಜ್ಞಾನವಿದೆ. ಆದರೂ ನನಗೆ ಸಮಾಜ ಹಿತಕ್ಕೆ ಸಂಬಂಧಿಸಿದಂತೆ ಒಂದೂ ಕೆಲಸ ಮಾಡಲಿಕ್ಕಾಗಲಿಲ್ಲ. ಇದಕ್ಕೆ ಕಾರಣ ಎಂದರೆ ನಾನು ಮತ್ತು ಡಾ. ಸೋಳಂಕಿ ಇಬ್ಬರೇ ಕಾನೂನು ಮಂಡಳಿಯಲ್ಲಿ ಇದ್ದೇವೆ. ಕಾನೂನು ಮಂಡಳಿಯಲ್ಲಿ ಒಬ್ಬರು ಇಬ್ಬರು ಏನೂ ಮಾಡಲಿಕ್ಕಾಗದು. ನೀವು ಆಯ್ಕೆ ಮಾಡಿರುವ ಪ್ರತಿನಿಧಿಗಳು ಒಗ್ಗಟ್ಟಿನಿಂದ ಸಂಘಟಿತರಾಗಿ ಇರುತ್ತಾರೋ ಇಲ್ಲವೋ ಎಂದು ನೀವು ನೋಡಬೇಕು. ಪಕ್ಷಕ್ಕೆ ನಿಷ್ಠರಾಗಿರುವಂತಹ ವ್ಯಕ್ತಿಗಳನ್ನು ನೀವು ಆಯ್ಕೆ ಮಾಡಿದಲ್ಲಿ ಯಾವುದೇ ಹಿತಾಸಕ್ತಿ ರಕ್ಷಿಸಲು ಸಾಧ್ಯ. ಜಾಣನಿದ್ದಾನೆ ಎಂದ ಮಾತ್ರಕ್ಕೆ ನಡೆಯುವುದಿಲ್ಲ, ಆತನಿಗೆ ಪಕ್ಷ ಇದೆಯೋ ಅಥವಾ ಇಲ್ಲವೋ ಎನ್ನುವುದನ್ನು ನೋಡಬೇಕಾಗುತ್ತದೆ.

ನಮ್ಮ ಸುದೈವದಿಂದಾಗಿ ನಮಗೆ ಹದಿನೈದು ಸ್ಥಾನಗಳು ಲಭಿಸಿವೆ. ಆದರೆ ನಮಗೆ ಲಭಿಸಿರುವ ಹದಿನೈದು ಸ್ಥಾನಗಳ ಪ್ರತಿನಿಧಿಗಳು ಒಗ್ಗಟ್ಟಿನಿಂದ ಇರದಿದ್ದರೆ ಆ ಸ್ಥಾನಗಳು ದುರುಪಯೋಗವಾದಂತೆ ಆಗುತ್ತದೆ. ಆದ್ದರಿಂದ ನೀವು ಆಯ್ಕೆ ಮಾಡುವ ಸದಸ್ಯರು ಯಾವ ರೀತಿ ಕಾನೂನು ಮಂಡಳಿಯಲ್ಲಿ ಒಗ್ಗಟ್ಟಿನಿಂದ ಇರಲಿದ್ದಾರೆ ಎನ್ನುವುದರ ಬಗ್ಗೆ ನಾವು ಯೋಜನೆ ರೂಪಿಸಬೇಕಾಗುತ್ತದೆ. ಮತ್ತು ಆ ಯೋಜನೆ ಹೇಗಿರಬೇಕು ಎಂದರೆ ಈ ಹದಿನೈದು ಪ್ರತಿನಿಧಿಗಳು ತಮ್ಮ ಐದು ವರ್ಷದ ಅವಧಿಯಲ್ಲಿ ಕಾನೂನು ಮಂಡಳಿಯಲ್ಲಿ ಒಗ್ಗಟ್ಟಿನಿಂದ ಇದ್ದು ಸಮಾಜದ ಹಿತ ನಿರ್ಲಕ್ಷಿಸದಂತೆ ಇರಬೇಕಾಗುತ್ತದೆ. ಯಾವ ಜಿಲ್ಲೆಗಳನ್ನು ನಮಗಾಗಿ ಮೀಸಲು ಇರಿಸಲಾಗಿದೆಯೋ ಆ ಜಿಲ್ಲೆಗಳಲ್ಲಿ ಹತ್ತು ಜನರ ಒಂದು ಸಮಿತಿ ರಚಿಸಬೇಕು. ಈ ರೀತಿಯ ನಾನಾ ಜಿಲ್ಲೆಗಳಲ್ಲಿ ಕಮಿಟಿ ರಚನೆ ಆಯಿತು ಎಂದರೆ ಈ ಒಂದು ಕೇಂದ್ರ ಸಮಿತಿ ರಚನೆಯಾಗಬೇಕು. ಈ ಕೇಂದ್ರ ಸಮಿತಿಯಿಂದ ಎಲ್ಲ ಜಿಲ್ಲೆಗಳಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಸಾಧ್ಯವಾಗುತ್ತದೆ. ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಸ್ಪರ್ಧಿಸಬಯಸುವ ವ್ಯಕ್ತಿಗಳು ಸ್ಥಾನಿಕ ಕಮಿಟಿಗೆ ಅರ್ಜಿ ಸಲ್ಲಿಸಬೇಕು ಮತ್ತು ಶಿಫಾರಸು ಪತ್ರದೊಂದಿಗೆ ಆ ಅರ್ಜಿ ಕೇಂದ್ರ ಮಂಡಳಿಗೆ ಬಂದ ಬಳಿಕ ಆ ಅರ್ಜಿಗಳ ಕುರಿತು ವಿಚಾರಣೆ ಮಾಡಿ ಒಬ್ಬ ಅಭ್ಯರ್ಥಿಯನ್ನು ಅಂತಿಮಗೊಳಿಸಲಾಗುವುದು. ಈ ಯೋಜನೆ ಯಶಸ್ವಿಯಾಗಬೇಕಾದರೆ ನಿಮ್ಮ ಸಂಘಟನೆ ಮತ್ತು ಸಹಕಾರದಿಂದ ಮಾತ್ರ ಸಾಧ್ಯ. ಒಂದು

ವೇಳೆ ನೀವು ಕೇಂದ್ರ ಮಂಡಳಿ ಅಂತಿಮಗೊಳಿಸುವ ಅಭ್ಯರ್ಥಿಗಳಿಗೆ ನಮ್ಮ ಮತ ಎಂದು ತೀರ್ಮಾನಿಸಿದರೆ ನಾವು ಹದಿನೈದು ಸ್ಥಾನಕ್ಕಿಂತ ಹೆಚ್ಚು ಸ್ಥಾನಗಳನ್ನು ಪಡೆಯಲು ಸಾಧ್ಯ. ಕೇಂದ್ರ ಮಂಡಳಿಯಿಂದ ಚುನಾವಣೆ ಅಭ್ಯರ್ಥಿಯಾಗಿ ಆಯ್ಕೆಯಾಗುವ ವ್ಯಕ್ತಿ ಪಕ್ಷದ ಎಲ್ಲ ಶರತ್ತುಗಳನ್ನು ಪೂರೈಸಬೇಕಾಗುತ್ತದೆ. ಇವುಗಳನ್ನು ನಾನು ನಂತರ ಪ್ರಕಟಿಸುತ್ತೇನೆ.

ನಾವು ರಾಜಕಾರಣದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಬಹುದು. ನೋಡುವುದಕ್ಕೆ ಕೇವಲ ಹದಿನೈದು ಸ್ಥಾನಗಳಾದರೂ ನಾವು ಒಗ್ಗಟ್ಟಿನಿಂದ ಇದ್ದರೆ ಹದಿನೈದು ಏಕೆ ನಲವತ್ತೈದು ಸದಸ್ಯರನ್ನಾದರೂ ನಾವು ಸಹಜವಾಗಿ ಆಯ್ಕೆ ಮಾಡಬಹುದು. ಇಂತಹ ಅವಕಾಶ ನಿಮಗೆ ಈಗ ಲಭಿಸಿದೆ.

ನಿಮಗೆ ಲಭಿಸಿರುವ ರಾಜಕೀಯ ಅಧಿಕಾರದ ಕಲ್ಪನೆ ನಿಮಗೆ ಇಲ್ಲದಿದ್ದರೂ ಉನ್ನತ ವರ್ಗಕ್ಕೆ ನಿಮಗೆ ಲಭಿಸಿರುವ ಅಧಿಕಾರದ ಪರಿಕಲ್ಪನೆ ಇದೆ. ಅದೇ ಕಾರಣಕ್ಕೆ ಅವರು ನಿಮ್ಮ ಗಡ್ಡ ನೇವರಿಸುವ ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ನಮ್ಮ ಹಿತ ಕಾಯುವವರು ಯಾರು, ನಮ್ಮ ಹಿತಶತ್ರುಗಳು ಯಾರು ಎನ್ನುವುದರ ಬಗ್ಗೆ ವಿಚಾರ ಮಾಡಿ ನಾವು ಮತ ಹಾಕಬೇಕಾಗುತ್ತದೆ. ಉನ್ನತ ವರ್ಗದ ಕೆಲವು ವ್ಯಕ್ತಿಗಳಾದರೂ ನಮ್ಮ ಪರವಾಗಿ ಕೆಲಸ ಮಾಡುತ್ತಿರಬಹುದು. ಚುನಾವಣೆಯಲ್ಲೂ ನಾವು ಅವರಿಗೆ ಸಹಕರಿಸಬಹುದು. ಈ ರೀತಿ ನಮ್ಮ ಗುಂಪನ್ನು ಇನ್ನೂ ಗಟ್ಟಿಗೊಳಿಸಬಹುದು. ಅಸ್ಪೃಶ್ಯ ಜಾತಿಯಲ್ಲಿ ಅನೇಕ ಜಾತಿಗಳು ಸಮ್ಮಿಳಿತಗೊಂಡಿದ್ದು, ಅಸ್ಪೃಶ್ಯ ಸಮಾಜಕ್ಕೆ ಮಹಾರ್ ಜಾತಿಯು ಹಿರಿಯಣ್ಣನಂತೆ, ತಂದೆ ಸ್ಥಾನದಲ್ಲಿ ನಿಂತು ಎಲ್ಲ ಜಾತಿಗಳೊಂದಿಗೆ ಬಂಧು ಪ್ರೇಮ, ಸಮಾನತೆಯಿಂದ ನಡೆದುಕೊಳ್ಳಬೇಕು. ಎಲ್ಲ ಸ್ಥಾನಗಳನ್ನು ನೀವೇ ಕಬಳಿಸಿ ಕುಳಿತುಕೊಳ್ಳಬೇಡಿ. ಈ ಶಿಸ್ತು ರೂಢಿಸಿಕೊಳ್ಳಲು ನೀವು ಸಿದ್ಧರಿದ್ದರೆ ಮಾತ್ರ ನಾನು ರಾಜಕೀಯ ಪ್ರವೇಶಿಸುತ್ತೇನೆ. ನೀವು ಶಿಸ್ತು ಪಾಲನೆಗೆ ಮಹತ್ವ ನೀಡುವುದಿಲ್ಲವೆಂದರೆ ನನಗೆ ರಾಜಕೀಯ ಮಾಡುವುದರಲ್ಲಿ ಆಸಕ್ತಿಯೇ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

## ೯೨.

# ಧರ್ಮಾಂತರದಿಂದ ಅಸ್ಪೃಶ್ಯರಿಗೆ ಸಮಾನತೆಯ ಹಕ್ಕು ಲಭ್ಯ

ಅಖಿಲ ಮುಂಬೈ ಪ್ರಾಂತ ಮಾತಂಗ ಸಮಾವೇಶದ ಅಧಿವೇಶನ ದಾದರ್ ನಾಯಗಾಂವದಲ್ಲಿನ ಮುಂಬೈ ಪ್ರಾಂತ ಮಹಾರ್ ಸಮಾವೇಶದ ವೇದಿಕೆಯಲ್ಲಿ ಜೂನ್ ೨, ೧೯೩೬ರಂದು ರಾತ್ರಿ ೯ಕ್ಕೆ ಆಯೋಜಿಸಲಾಗಿತ್ತು. ಯವಲೆಯಲ್ಲಿ ಡಾ. ಅಂಬೇಡ್ಕರ್ ಅವರು ಪ್ರಕಟಿಸಿದ ಧರ್ಮಾಂತರದ ನಿರ್ಧಾರಕ್ಕೆ ಬೆಂಬಲ ನೀಡುವ ಉದ್ದೇಶದಿಂದ ಮಾತಂಗ ಬಂಧುಗಳ ಸಮಾವೇಶ ಆಯೋಜಿಸಲಾಗಿತ್ತು. ಈ ಸಮಾವೇಶಕ್ಕೆ ಮುಂಬೈ ಪ್ರಾಂತದ ಪ್ರತಿಯೊಂದು ಜಿಲ್ಲೆಯಿಂದ ಸುಮಾರು ಏಳು–ಎಂಟು ಸಾವಿರ ಮಹಿಳೆಯರು–ಪುರುಷರು ಆಗಮಿಸಿದ್ದರು. ಶ್ರೀ. ಡಿ. ಜಿ. ರೋಖಡೆ, ಶ್ರೀ. ಮಾನೆ ಮತ್ತು ಫಾಲಕೆ ಅವರ ಸ್ವಾಗತ ಗೀತೆಯೊಂದಿಗೆ ಆರಂಭವಾಯಿತು. ಇದಾದ ಬಳಿಕ ರಾಮಚಂದ್ರ ನಾಥೋಬಾ ಕಾಳೋಖೆ ಅವರ ಸ್ವಾಗತ ಭಾಷಣದ ಬಳಿಕ ದೌಲತರಾವ್ ಚಿಲೋಬಾ ವಾಯದಂಡೆ ಅವರು ಸಮಾವೇಶದ ಅಧ್ಯಕ್ಷತೆ ಸ್ವೀಕರಿಸುವ ಸಂಬಂಧ ಮಂಡಿಸಿದ ಸೂಚನೆಗೆ ಶ್ರೀ ಮಾರುತರಾವ್ ತುಫಸೌಂದರ್, ಬಾಬುರಾವ್ ರಾಮಜಿ ಕಾಂಬಳೆ, ಕೆ.ಎಸ್. ಸಕಾಟೆ ಅನುಮೋದನೆ ನೀಡಿದರು. ಬಳಿಕ ಅಧ್ಯಕ್ಷರಿಗೆ ಮತ್ತು ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ಪುಷ್ಪಹಾರ ಸಮರ್ಪಿಸಿದ ಬಳಿಕ ಅಧ್ಯಕ್ಷ ಬೋತಾಳ ಅವರು ಅಧ್ಯಕ್ಷೀಯ ಭಾಷಣ ಮಾಡಿದರು.

ಸಮಾವೇಶಕ್ಕೆ ಶುಭ ಕೋರಿ ವಿವಿಧ ಸ್ಥಳಗಳ ಮುಖಂಡರಿಂದ ಸಂದೇಶಗಳು ಬಂದಿದ್ದವು. ಅವುಗಳಲ್ಲಿ ಶಂಕರರಾವ್ ಶಿವರಾಮ ಸಾತೆ (ಅಹ್ಮದನಗರ), ಗಣಪತ ಜಯವಂತ ಪವಾರ್, ಅನಂತರಾವ್ ದೌಲತರಾವ್ ಲೋಖಂಡೆ (ಕೊಲ್ಹಾಪುರ) ಇವುಗಳು ಮುಖ್ಯವಾದವುಗಳು. ದೌಲತರಾವ್ ಗಾಯಕವಾಡ (ಸೋಲಾಪುರ), ಪಾಂಡುರಂಗ ನಾನಾ ವಡೆಕರ್ (ಕಹ್ರಾಡ್), ರಾಮಚಂದ್ರ ಪುನಾಜಿ ಸಕಟ್ (ದೌಂಡ್), ಕಿಸನ್ ಭಾವುರಾವ್ ವಾಘಮಾರೆ (ಅಹ್ಮದನಗರ), ಸೀಮಾರಾಮ್ ಬಾಬಾಜಿ ಲಾಂಡಗೆ (ಪುಣೆ), ದಾದೋಬಾ ಶೆಂಡಗೆ (ಪುಣೆ), ರಾಮಚಂದ್ರ ಕಾಳೋಖೆ (ಜುನ್ನರ್), ಶಾಂತಾಬಾಯಿ ಶ್ರಾವಣ ಸಕಾಟೆ (ಖಡಕಿ), ಭಾಗವತ ಪವಾರ (ಜುನ್ನರ್), ಶಂಕರ ಶಿವರಾಮ ಶಿಂಧೆ (ಜುನ್ನರ್), ಆರ್. ಎಸ್. ಫಾಳಕೆ (ಪುಣೆ), ಆಬಾ ಗೇಣು ಖಂಡಾಳೆ (ಜೇಜುರಿ), ಮೋಹನಾ ಮಲ್ಹಾರಿ ಸಾತೆ (ಅಹ್ಮದನಗರ) ಸೇರಿದಂತೆ ಇತರ ಪ್ರಮುಖ ಪ್ರತಿನಿಧಿಗಳು ಸಮಾವೇಶದಲ್ಲಿ ಹಾಜರಾಗಿದ್ದರು.

### ಮುಂಬೈ ಪ್ರಾಂತ ಮಾತಂಗ ಸಮಾವೇಶದಲ್ಲಿ ಅಂಗೀಕರಿಸಿದ ನಿರ್ಣಯಗಳು

**೧ನೇ ನಿರ್ಣಯ:– (ಅ)** ಈ ಅಖಿಲ ಮುಂಬೈ ಪ್ರಾಂತ ಮಾತಂಗ ಸಮಾವೇಶವು ಸಮಾನತೆ ಮತ್ತು ಸ್ವಾತಂತ್ರ್ಯಕ್ಕಾಗಿ ಮಾತಂಗ ಸಮಾಜವು ಧರ್ಮಾಂತರ ಮಾಡಬೇಕು ಎಂದು ತೀರ್ಮಾನಿಸುತ್ತದೆ.

(ಬ) ಅಸ್ಪೃಶ್ಯ ಸಮಾಜದ ಏಕೈಕ ನಾಯಕ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರಲ್ಲಿ ಮಾತಂಗ ಸಮಾಜ ಪೂರ್ಣ ನಂಬಿಕೆ ಇರಿಸಿದ್ದು, ಮಾತಂಗ ಸಮಾಜವು ಜೊತೆಗೆಯೇ ಸಾಮೂಹಿಕವಾಗಿ ಧರ್ಮಾಂತರಕ್ಕೆ

ಸಿದ್ಧವಾಗಿದ್ದಾರೆಂದು ಈ ಸಮಾವೇಶದಲ್ಲಿ ತೀರ್ಮಾನಿಸಲಾಗುತ್ತದೆ.

ನಿರ್ಣಯ ಮಂಡಿಸಿದವರು– ಕೇರು ರಾಮಚಂದ್ರ ಜಾಧವ (ಸೋಲಾಪುರ)

ಅನುಮೋದನೆ ನೀಡಿದವರು– ಸೀಮಾರಾಮ ಬಾಬಾಜಿ ಲಾಂಡಗೆ (ಪುಣೆ), ಆರ್. ಎಸ್. ಫಾಳಕೆ (ಮುಂಬೈ), ಕು. ಶಾಂತಾಬಾಯಿ ಶ್ರಾವಣ ಸಕಾಟೆ (ಮುಂಬೈ), ರಾಮಚಂದ್ರ ಪುನಾಜಿ ಸಕಟ (ದೌಂಡ್), ಬಾಳಕೃಷ್ಣ ವಡೆಕರ್ (ಸಾತಾರಾ), ಕಿಸನ್ ಭಾವುರಾವ್ ವಾಘಮಾರೆ (ಅಹ್ಮದನಗರ).

**೨ನೇ ನಿರ್ಣಯ:–** ಮುಂಬೈ ಇಲಾಖೆಯಲ್ಲಿ ಬರುವ ನಗರಗಳಲ್ಲಿ ಪೋಲೀಸ್ ಇಲಾಖೆಯಿಂದ ಆಯೋಜಿಸುವ ಸಾರ್ವಜನಿಕ ಜಾಗಟೆ, ಹಲಗೆ ಬಾರಿಸುವ ಕೆಲಸಕ್ಕೆ ಮಾತಂಗ ಜಾತಿಯವರನ್ನು ನೇಮಕ ಮಾಡಬೇಕು. ಅದೇ ರೀತಿ ಹಳ್ಳಿಗಳಲ್ಲಿರುವ ಸಾರ್ವಜನಿಕ ಜಾಗಟೆ ಬಾರಿಸುವವರಿಗೆ ವೇತನ ಸಿಗುತ್ತಿಲ್ಲ. ಆದ್ದರಿಂದ ಜಾಗಟೆ, ಹಲಗೆ ಬಾರಿಸುವವರಿಗೆ ಸೂಕ್ತ ವೇತನ ನೀಡಬೇಕೆಂದು ಈ ಸಮಾವೇಶ ಆಗ್ರಹಿಸುತ್ತದೆ.

ನಿರ್ಣಯ ಮಂಡಿಸಿದವರು –ಕೆ. ಎಸ್. ಸಕಾಟೆ

ಅನುಮೋದನೆ ನೀಡಿದವರು –ಕೆ. ಎಂ. ಕಾಳೋಖೆ

**೩ನೇ ನಿರ್ಣಯ:–** ಮುಂಬೈ ಪ್ರದೇಶದಲ್ಲಿರುವ ಅರಣ್ಯ ಭೂಮಿಯನ್ನು ಉಳುಮೆಗಾಗಿ ಮಾತಂಗ ಸಮಾಜಕ್ಕೆ ಕಂದಾಯ ಮೊತ್ತವನ್ನು ನಿಗದಿಪಡಿಸದೇ ನಿರ್ದಿಷ್ಟ ಅವಧಿಗಾಗಿ ಬಿಟ್ಟುಕೊಡಬೇಕು. ಅವಧಿ ಮುಗಿದ ಬಳಿಕ ಒಂದನೇ ನಾಲ್ಕರಷ್ಟು ಉತ್ಪನ್ನದಲ್ಲಿ ಕಂದಾಯ ಪಡೆಯಬೇಕು.

ನಿರ್ಣಯ ಮಂಡಿಸಿದವರು–ಕೆ. ಎಂ. ಕಾಳೋಖೆ

ಅನುಮೋದನೆ ನೀಡಿದವರು–ಶಂಕರಬುವಾ ಸಕಾಟೆ, ಬಾಬುರಾವ ರಾಮಾ ಕಾಂಬಳೆ, ಡಿ. ಸಿ. ವಾಯದಂಡೆ, ಕೆ.ಜಿ. ಕುಚೇಕರ್, ಮಾರುತಿ ಜ್ಞಾನು ತುಪಸೌಂದರ್

**೪ನೇ ನಿರ್ಣಯ:–** ಮಾತಂಗ ಸಮಾಜದ ವ್ಯಕ್ತಿಗಳ ವಿರುದ್ಧ ದಾಖಲಾಗಿರುವ ಮೊಕದ್ದಮೆಗಳ ಹಾಜರಿಯನ್ನು ಸ್ಥಗಿತಗೊಳಿಸಿ ಮೇಲ್ಕಾಣಿಸಿದ ಜಾತಿ ಅಪರಾಧಿಕ ಹಿನ್ನೆಲೆಯ ಪಟ್ಟಿಯಿಂದ ಬೇರ್ಪಡಿಸಬೇಕು ಎಂದು ಈ ಸಮಾವೇಶ ಸರ್ಕಾರಕ್ಕೆ ವಿನಂತಿಸುತ್ತದೆ.

ನಿರ್ಣಯ ಮಂಡಿಸಿದವರು– ಸೀಮಾರಾಮ ಬಾಬಾಜಿ ಲಾಂಡಗೆ (ಪುಣೆ),

ಅನುಮೋದನೆ ನೀಡಿದವರು– ಕೆ. ಎಂ. ಕಾಳೋಖೆ, ಎಸ್. ಕೆ. ದೇಶಮುಖ, ಬಾಬುರಾವ್ ದೌಲತರಾವ್ ಗಾಯಕವಾಡ

**೫ ನಿರ್ಣಯ:–** ಮುಂಬೈ ಪ್ರಾಂತ ವ್ಯಾಪ್ತಿಯ ಸರ್ಕಾರಿ ಇಲಾಖೆಗಳಲ್ಲಿ ಮಾತಂಗ ಜಾತಿಯ ಜನರಿಗೆ ಸಿಪಾಯಿ ಹುದ್ದೆಯಿಂದ ಮೇಲಿನ ಅಧಿಕಾರಿಗಳ ಹುದ್ದೆಗಳವರೆಗೆ ನೌಕರಿಗಳನ್ನು ನೀಡಬೇಕು ಎಂದು ಈ ಸಮಾವೇಶ ಸರ್ಕಾರಕ್ಕೆ ವಿನಂತಿಸುತ್ತದೆ.

ನಿರ್ಣಯ ಮಂಡಿಸಿದವರು–ಎಸ್. ಕೆ. ದೇಶಮುಖ

ಅನುಮೋದನೆ ನೀಡಿದವರು–ಕೇರು ರಾಮಚಂದ್ರ ಜಾಧವ

**೬ ನಿರ್ಣಯ:–** ಗ್ರಹಣ, ಅಮಾವಾಸ್ಯೆಯಂತಹ ಸಂದರ್ಭದಲ್ಲಿ ಭಿಕ್ಷೆ ಬೇಡುವುದು ಸೇರಿದಂತೆ ಇತರ ಹಳೇ ಅನಿಷ್ಟ ಪದ್ಧತಿಗಳನ್ನು ತಕ್ಷಣದಿಂದ ಸ್ಥಗಿತಗೊಳಿಸಬೇಕು ಎಂದು ಈ ಸಮಾವೇಶವು ಮಾತಂಗ ಸಮಾಜದ ಬಂಧುಗಳಿಗೆ ಕಟ್ಟಪ್ಪಣೆ ವಿಧಿಸುತ್ತದೆ. ಸಮಾಜಕ್ಕೆ ಕಳಂಕ ತರುವ ಇಂತಹ ಅನಿಷ್ಟ ರೂಢಿಯನ್ನು ಕೈಬಿಡದಿದ್ದರೆ ಅಂತಹ ವ್ಯಕ್ತಿಯ ವರ್ತನೆ ಬಗ್ಗೆ ಮಾತಂಗ ಸಮಾಜ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ನಿರ್ಣಯ ಮಂಡಿಸಿದವರು– ಅಧ್ಯಕ್ಷ

**೭ ನಿರ್ಣಯ:–** ಅಹ್ಮದನಗರ ಜಿಲ್ಲೆಯ ಲೋಕಲ್ ಬೋರ್ಡ್‌ಗೆ ಮಾತಂಗ ಜಾತಿಯ ವ್ಯಕ್ತಿಯನ್ನು ನಾಮನಿರ್ದೇಶಿತ ಸದಸ್ಯ ಎಂದು ನೇಮಕ ಮಾಡಬೇಕು ಎಂದು ಈ ಸಮಾವೇಶ ಸರ್ಕಾರಕ್ಕೆ ವಿನಂತಿಸುತ್ತದೆ.

ನಿರ್ಣಯ ಮಂಡಿಸಿದವರು– ಅಧ್ಯಕ್ಷ

**೮ನೇ ನಿರ್ಣಯ:–** ಮಾತಂಗ ಸಮಾಜದಲ್ಲಿ ಶೈಕ್ಷಣಿಕ ಪ್ರಗತಿಯ ಉದ್ದೇಶದಿಂದ ವಿದ್ಯಾರ್ಥಿ ವಸತಿ ಗೃಹಗಳ ಅಗತ್ಯವಿದೆ. ಈ ಕಾರ್ಯಕ್ಕಾಗಿ ಕೇಂದ್ರ ಸಮಿತಿ ಸ್ಥಾಪಿಸಿ ಅದು ವಸತಿ ಗೃಹಗಳನ್ನು ತೆರೆಯುವುದಕ್ಕೆ ಮಾತಂಗ ಸಮಾಜ ಆರ್ಥಿಕ ನೆರವು ನೀಡಬೇಕು. ಅದೇ ರೀತಿ ಮುಂಬೈನಲ್ಲಿರುವ ಮಾತಂಗ ವಿದ್ಯಾರ್ಥಿ ಹಿತಚಿಂತಕ ಮಂಡಳಿಗೂ ಆರ್ಥಿಕ ನೆರವು ನೀಡಬೇಕು.

ನಿರ್ಣಯ ಮಂಡಿಸಿದವರು– ಡಿ. ಸಿ. ವಾಯದಂಡೆ

ಅನುಮೋದಿಸಿದವರು–ಕೆ. ಜಿ. ಕುಚೇಕರ್, ಪಾಂಡುರಂಗ ನಾನಾ ಬಡೇಕರ್.

ನಿರ್ಣಯ ಬಳಿಕ ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣದಲ್ಲಿ:

ಬಂಧುಗಳೇ,

ಈಗಷ್ಟೇ ನೀವು ಅಂಗೀಕರಿಸಿದ ಧರ್ಮಾಂತರ ನಿರ್ಣಯಕ್ಕೆ ನಾನು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ನೀವು ಅಂಗೀಕರಿಸಿದ ನಿರ್ಣಯದಿಂದ ನನಗೆ ಸಂತೋಷವಾಗುವುದು ಅತ್ಯಂತ ಸಹಜ. ಧರ್ಮಾಂತರ ಕೇವಲ ಒಂದು ಜಾತಿಗೆ ಮಾತ್ರವಾಗಿರದೆ ಇಡೀ ಅಸ್ಪೃಶ್ಯ ಜಾತಿಗೆ ಸಂಬಂಧಿಸಿದ್ದಾಗಿದೆ. ಎಷ್ಟು ಅಸ್ಪೃಶ್ಯ ಜಾತಿಗಳು ಧರ್ಮಾಂತರಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತವೆಯೋ ಅಷ್ಟು ನನಗೆ ಬೇಕು. ಧರ್ಮಾಂತರದ ಸಾಧಕ–ಬಾಧಕಗಳ ಬಗ್ಗೆ ನಾನೀಗಾಗಲೇ ಮಹಾರ್ ಸಮಾವೇಶದಲ್ಲಿ ಮಾತನಾಡಿದ್ದೇನೆ. ಈಗ ಅದನ್ನು ಮತ್ತೇ ಪುನರಾವರ್ತಿಸುವುದು ಅಗತ್ಯವಿಲ್ಲ ಎನ್ನುವುದು ನನ್ನ ಅನಿಸಿಕೆ. ಈಗಾಗಲೇ ನೀವು ಧರ್ಮಾಂತರದ ಪರ ನಿರ್ಣಯ ಅಂಗೀಕರಿಸಿದ್ದೀರಿ. ನಿರ್ಣಯ ಅಂಗೀಕಾರವಾಗಿರುವ ವಿಷಯದ ಕುರಿತು ಮಾತನಾಡುವುದು ನಿರರ್ಥಕ. ನಿಜವಾಗಿ ಹೇಳಬೇಕೆಂದರೆ ಧರ್ಮಾಂತರದ ಬಗ್ಗೆ ಈ ಸಮಾವೇಶದಲ್ಲಿ ಮಾತನಾಡುವುದು ನನಗೆ ಇಷ್ಟವಿರಲಿಲ್ಲ. ಮಾತಂಗ ಸಮಾವೇಶಕ್ಕೆ ಆಗಮಿಸಿ ಭಾಷಣ ಮಾಡಬೇಕೆಂದು ನಿಮ್ಮ ಸ್ವಾಗತ ಸಮಿತಿ ಸದಸ್ಯರು ಹೇಳಿದ್ದರು. ಆಗ ನಾನು ಅವರಿಗೆ ಭಾಷಣ ಮಾಡುವುದಕ್ಕೆ ಯಾವುದೇ ತೊಂದರೆ ಇಲ್ಲ. ಆದರೆ ಧರ್ಮಾಂತರದ ಕುರಿತು ಮಾತನಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೆ. ಇದಕ್ಕೆ ಕಾರಣ ಇಷ್ಟೇ. ಸಭೆಯಲ್ಲಿ ನಾನು ಧರ್ಮಾಂತರ ಕುರಿತು ಮಾತನಾಡಿದ ಬಳಿಕ ಒಂದು ವೇಳೆ ನೀವು ಧರ್ಮಾಂತರದ ಪರವಾಗಿ ನಿರ್ಣಯ ಅಂಗೀಕರಿಸಿದ್ದರೆ ಕ್ಷುಲ್ಲಕ ಬುದ್ಧಿಯ ಜನರು ನನ್ನ ದಾಕ್ಷಿಣ್ಯಕ್ಕೆ ಬಿದ್ದು ಇಲ್ಲವೇ ನಾನು ಹಾಕಿದ ಒತ್ತಡದಿಂದಾಗಿ ಮಾತಂಗ ಸಮಾವೇಶದಲ್ಲಿ ಧರ್ಮಾಂತರದ ಪರ ನಿರ್ಣಯ ಅಂಗೀಕರಿಸಲಾಯಿತು

ಎಂದು ಜನರಲ್ಲಿ ತಪ್ಪು ಗ್ರಹಿಕೆ ಹುಟ್ಟಿಸುತ್ತಿದ್ದರು. ಒಂದು ವೇಳೆ ಈ ರೀತಿ ಏನಾದರೂ ಆಗಿದ್ದರೆ ನೀವು ತೆಗೆದುಕೊಂಡಿರುವ ಧರ್ಮಾಂತರ ನಿರ್ಣಯಕ್ಕೆ ಎಷ್ಟು ಮಹತ್ವ ಲಭಿಸಬೇಕಿತ್ತೋ ಅಷ್ಟು ಮಹತ್ವ ಲಭಿಸುತ್ತಿರಲಿಲ್ಲ. ಧರ್ಮಾಂತರವನ್ನು ಒತ್ತಾಯದಿಂದ ಇಲ್ಲವೇ ಬಲಪ್ರಯೋಗದಿಂದ ಮಾಡಲಿಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ದಾಕ್ಷಿಣ್ಯಕ್ಕೆ ಒಳಗಾಗುವುದು ಮತ್ತು ಅದನ್ನು ಬಳಸುವಿಕೆಯೂ ಸೂಕ್ತವಲ್ಲ ಯಾರ ಮನಸ್ಸು ಧರ್ಮಾಂತರಕ್ಕೆ ಒಪ್ಪುತ್ತದೋ ಅವರು ಧರ್ಮಾಂತರ ಮಾಡುತ್ತಾರೆ. ಹೀಗಾಗಿ ಧರ್ಮಾಂತರದ ಕುರಿತು ನಾನು ಮಾತನಾಡದಿರುವುದನ್ನು ತೀರ್ಮಾನಿಸಿದ ಕಾರಣಕ್ಕೆ ನಿಮಗೆ ಯಾರಿಗೂ ಬೇಸರವಾಗಲಿಕ್ಕಿಲ್ಲ. ಮತ್ತು ಆ ಬಗ್ಗೆ ನಿಮ್ಮಲ್ಲಿ ಯಾರಿಗೂ ತಪ್ಪು ತಿಳುವಳಿಕೆ ಮೂಡಲಿಕ್ಕಿಲ್ಲ ಎಂದು ಆಶಯ ವ್ಯಕ್ತಪಡಿಸುತ್ತೇನೆ.

ಇಂದಿನ ಈ ಸಭೆಯಲ್ಲಿ ನಾನು ಮಾತನಾಡುತ್ತಿರುವುದು ಕೇವಲ ಮಹಾರ್ ಮತ್ತು ಮಾಂಗ್ ಜಾತಿಗಳ ಮಧ್ಯೆ ಏಕತೆ ಹೇಗೆ ಬೆಳೆಯಬೇಕು ಎನ್ನುವುದರ ಬಗ್ಗೆ. ಹಳ್ಳಿ ಹಳ್ಳಿಗಳಲ್ಲಿರುವ ಮಹಾರ್ ಮತ್ತು ಮಾಂಗರ ಮಧ್ಯೆ ಸಾಕಷ್ಟು ಭಿನ್ನಾಭಿಪ್ರಾಯ ಇದೆ. ಅವರಲ್ಲಿ ಏಕತೆ ಇಲ್ಲ; ಸೌಹಾರ್ದತೆ ಇಲ್ಲ ಎನ್ನುವ ವಿಚಾರ ಮುಚ್ಚಿಡುವುದರಲ್ಲಿ ಅರ್ಥವಿಲ್ಲ. ಅವರ ಮಧ್ಯೆ ಇರುವ ಭಿನ್ನಾಭಿಪ್ರಾಯ ಯಾವ ರೀತಿ ಇಲ್ಲವಾಗಬೇಕೆನ್ನುವುದರ ಬಗ್ಗೆ ವಿಚಾರ ಮಾಡುವುದು ನಮ್ಮ–ನಿಮ್ಮ ಕರ್ತವ್ಯ ಆಗಿದೆ. ಈ ತಿಕ್ಕಾಟ ಸಾಕಷ್ಟು ದಿನಗಳಿಂದ ನಡೆದುಕೊಂಡು ಬಂದಿದೆ. ಈ ವಿಚಾರ ನನ್ನ ಕಿವಿಗೆ ಬಿದ್ದಾಗಿನಿಂದ ಮಾಂಗರ ಅನಿಸಿಕೆಯಾದರೂ ಏನೆಂದು ಕೇಳಿಸಿಕೊಳ್ಳಲು ಒಂದು ಅವಕಾಶ ಲಭಿಸಬೇಕು ಮತ್ತು ಮಹಾರ್‌ರ ಪರವಾಗಿ ಹೇಳಬೇಕಿರುವ ವಿಚಾರ ಸ್ಪಷ್ಟಪಡಿಸುವುದಕ್ಕೆ ನನಗೆ ಅವಕಾಶ ಲಭಿಸಬೇಕು ಎಂದು ನನ್ನೊಂದಿಗೆ ಸಂಪರ್ಕ ಇರಿಸಿಕೊಂಡಿರುವ ಮಾಂಗರಿಗೆ ಕಳೆದ ಐದು– ಆರು ವರ್ಷಗಳಿಂದ ಮಾಂಗರ ಸಭೆ ಸೇರಿಸಿ ಎಂದು ಹೇಳುತ್ತಿದ್ದೆ. ಆದರೆ ಅವರಿಗೆ ಕೂಡಲೇ ಸಭೆ ಆಯೋಜಿಸಲು ಆಗಲಿಲ್ಲ. ಈ ರೀತಿಯ ಒಂದು ಸಭೆಗೆ ನಾನು ಕಾತುರನಾಗಿದ್ದೆ. ಯಾವ ಅವಕಾಶಕ್ಕಾಗಿ ನಾನು ಕಾಯುತ್ತಿದ್ದನೋ ಆ ಅವಕಾಶ ಇಂದು ಮಾಡಿಕೊಟ್ಟಿದ್ದಕ್ಕೆ ನಾನು ಆಭಾರಿಯಾಗಿದ್ದೇನೆ. ಮಾಂಗ ಸಮಾಜದಲ್ಲಿ ಇಂದು ಕೈಗೆತ್ತಿಕೊಂಡಿರುವ ಚಳವಳಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಆ ಚಳವಳಿಗಳು ಮಹಾರ ವಿರುದ್ಧ ಕೇಂದ್ರಿಕೃತವಾಗಿವೆ ಎನ್ನುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಮಹಾರ್ ಜೊತೆ ವ್ಯವಹರಿಸಬೇಡಿ. ಮಹಾರ್ ಜೊತೆ ಭೋಜನ ಮಾಡಬೇಡಿ, ಅವರಿಗೆ ಪೊರಕೆ ಮಾರಾಟ ಮಾಡಬೇಡಿ. ಅವರನ್ನು ದೂರವಿಡಿಯೆಂದು ಮಾಂಗ್ ಜಾತಿಯ ಮುಖಂಡರು ತಮ್ಮ ಜಾತಿಯ ಜನರಿಗೆ ಹೇಳುತ್ತಿದ್ದಾರೆಂದು ಕೇಳಿಸಿಕೊಂಡಿದ್ದೇನೆ. ಅವರ ಈ ಬೋಧನೆಯಿಂದ ನನಗೆ ಖೇದವಂತೂ ಆಗುವುದಿಲ್ಲ. ಒಂದು ವೇಳೆ ಮಹಾರರು ನಿಮ್ಮ ಕೈ ಅಡುಗೆ ತಿನ್ನದಿದ್ದರೆ ನೀವೂ ಅವರ ಕೈ ಅಡುಗೆ ತಿನ್ನಬೇಡಿ. ಮಹಾರರು ನೀವು ಮಾಡಿದ ಅಡುಗೆ ಉಣ್ಣುವುದಿಲ್ಲ ಎನ್ನುವುದು ನಿಜವೇ ಆಗಿದ್ದರೆ, ಬ್ರಾಹ್ಮಣರೂ ನಿಮ್ಮ ಅಡುಗೆ ಉಣ್ಣುವುದಿಲ್ಲ ಅಷ್ಟೇ ಏಕೆ ಬೇರೆ ಯಾವ ಜಾತಿಯವರೂ ನೀವು ಮಾಡಿದ ಅಡುಗೆ ಉಣ್ಣುವುದಿಲ್ಲ. ಹಾಗಿದ್ದಾಗ ನಿಮ್ಮ ಮುಖಂಡರು ಬ್ರಾಹ್ಮಣರು ಮಾಡಿದ ಅಡುಗೆ ನೀವು ಉಣ್ಣಬೇಡಿ ಎಂದು ಉಪದೇಶ ಮಾಡಿದ್ದರೆ ಅದು ಸಮಂಜಸವಾಗುತ್ತಿತ್ತು. ನಿಮ್ಮ ಅಡುಗೆಯನ್ನು ಯಾರು ಯಾರು ಊಟ ಮಾಡುವುದಿಲ್ಲವೋ ಅವರ ಅಡುಗೆಯನ್ನು ನೀವು ಊಟ ಮಾಡಬೇಡಿ. ಎಲ್ಲರಿಗೂ ಸ್ವಾಭಿಮಾನ ಇರಬೇಕಾದುದು ಅವಶ್ಯ. ಈ ಸ್ವಾಭಿಮಾನ ನನಗೆ ಸರ್ವಸ್ವ ನನಗಷ್ಟೆ ಅಲ್ಲ ಎಲ್ಲರಿಗೂ ಇರಬೇಕು. ಆದರೆ ಬ್ರಾಹ್ಮಣರು ಮಾಡಿದ ಅಡುಗೆ ಉಣ್ಣಬೇಡಿ, ಮರಾಠರ ಅಡುಗೆ ತಿರಸ್ಕರಿಸಿ ಎಂದು ಒಬ್ಬೇ ಒಬ್ಬ ಮಾತಂಗ ಮುಖಂಡ ಉಪದೇಶ ಮಾಡಿದ್ದನ್ನು ನಾನು ಕೇಳಿಲ್ಲ. ನಾನು ಸ್ವತಃ ಉಚ್ಚ– ನೀಚ ಭೇದಭಾವ ಇರಿಸಿಕೊಂಡವನಲ್ಲ. ಮಹಾರ್ ಜಾತಿ ಕೂಡ ಉಚ್ಚ– ನೀಚ ಭೇದ ಅನುಸರಿಸುವುದನ್ನು ಬಿಟ್ಟಿದೆ. ಚಮ್ಮಾರರು ಕೂಡ ತಮ್ಮಷ್ಟಕ್ಕೆ

ತಾವೇ ಶ್ರೇಷ್ಠರು ಎಂದು ಭಾವಿಸಿಕೊಂಡು ಮಹಾರ್– ಮಾಂಗರು ಮಾಡಿದ ಅಡುಗೆ ಉಣ್ಣುವುದಿಲ್ಲ ಎಂದು ಹೇಳುತ್ತಾರೆ. ಇದೀಗ ನೀವು ಕೂಡ ಅವರಂತೆ ಮಹಾರರು ಮಾಡಿದ ಅಡುಗೆ ಉಣ್ಣುವುದಿಲ್ಲ ಎಂದು ಹೇಳುತ್ತಿದ್ದೀರಿ. ನಿಜವಾಗಿ ಹೇಳಬೇಕೆಂದರೆ ಇಂತಹದ್ದೆ ಒಂದು ಜಾತಿ ಶ್ರೇಷ್ಠವಾದುದು ಎಂದು ಹೇಳುವುದಕ್ಕೆ ಒಂದೇ ಒಂದು ಪುರಾವೆ ಇಲ್ಲ. ಇಂತಹದ್ದೆ ಜಾತಿ ಶ್ರೇಷ್ಠವಾದುದು ಎಂದು ಯಾರೂ ತಾಮ್ರಪಟದಲ್ಲಿ ಶಾಸನ ಬರೆದಿಲ್ಲ. ಯಾರು, ಯಾರು ಮಾಡಿದ ಅಡುಗೆ ಉಣ್ಣಬೇಕು ಮತ್ತು ಯಾರು, ಯಾರು ಮಾಡಿದ ಅಡುಗೆ ಉಣ್ಣಬಾರದು ಎಂಬ ಈ ವಿಚಾರದ ಮೇಲೆ ಹಿಂದೂ ಸಮಾಜದ ಜಾತಿ ಶ್ರೇಷ್ಠತ್ವ ಅವಲಂಬಿಸಿದೆ. ಇಂತಹದ್ದೇ ಜಾತಿಯೊಂದು ಇಂತಹದ್ದೆ ಜಾತಿಗಿಂತ ಶ್ರೇಷ್ಠ ಏಕಿರಬೇಕು? ಎನ್ನುವುದಕ್ಕೆ ಆ ಜಾತಿಯ ಮನುಷ್ಯರು ಮಾಡಿದ ಅಡುಗೆಯನ್ನು ಉಣ್ಣುವುದಿಲ್ಲ ಎನ್ನುವ ಕಾರಣ ಜನರಿಗೆ ಸಾಕಾಗುತ್ತದೆ. ಈ ಕಾರಣಕ್ಕಾಗಿ ಅನೇಕ ಜಾತಿಯವರು ಬೇರೆ ಜಾತಿಗಿಂತ ಶ್ರೇಷ್ಠರು ಎಂದು ತೋರಿಸಿಕೊಳ್ಳುವುದಕ್ಕೆ ಬೇರೆ ಜಾತಿಯ ವ್ಯಕ್ತಿಗಳು ಮಾಡಿದ ಅಡುಗೆ ಉಣ್ಣದಿರುವ ಸಿದ್ಧಾಂತ ಪಾಲಿಸುತ್ತಿರುವುದನ್ನು ನೀವು ನೋಡಿರಬಹುದು. ಮಹಾರ್‌ರಗಿಂತ ಶ್ರೇಷ್ಠರು ಎನ್ನಿಸಿಕೊಳ್ಳುವುದು ಹೊರತು ಪಡಿಸಿ ಈ ಮಹಾರರು ಮಾಡಿದ ಅನ್ನ ಉಣ್ಣಬೇಡಿ ಎಂಬ ಬೋಧನೆಯಲ್ಲಿ ಬೇರೆ ಯಾವುದೇ ಉದ್ದೇಶ ಇದೆ ಎಂದು ನಾನಂತೂ ಭಾವಿಸುವುದಿಲ್ಲ. ಆದರೆ ಈ ರೀತಿ ಬೋಧನೆ ಮಾಡುತ್ತಿರುವ ಮಾಂಗ ಜಾತಿಯ ಮುಖಂಡರು ಒಂದು, ಎರಡು ಸಂಗತಿಗಳ ಬಗ್ಗೆಯಾದರೂ ವಿಚಾರ ಮಾಡಿರಲಿಕ್ಕಿಲ್ಲ. ಮಹಾರ್‌ರಿಗಿಂತ ಶ್ರೇಷ್ಠರು ಎನ್ನಿಸಿಕೊಂಡರೆ ಯಾವ ಹಿತ ಸಾಧನೆಯಾಗುತ್ತದೆ ಎನ್ನುವುದು ನನಗಂತೂ ತಿಳಿದಿಲ್ಲ. ಮಹಾರರಿಗಿಂತ ಶ್ರೇಷ್ಠರು ಎಂದುಕೊಂಡಾಕ್ಷಣ ಬ್ರಾಹ್ಮಣರು, ಮರಾಠರು ಮತ್ತು ಇತರ ಉಚ್ಚ ಜಾತಿಯ ಜನರು ಮಾಂಗ್ ಜಾತಿಯ ಶ್ರೇಷ್ಠತ್ವ ಒಪ್ಪಿಕೊಂಡು ತಮ್ಮೊಂದಿಗೆ ಸೇರಿಸಿಕೊಳ್ಳಲು ಸಿದ್ಧರಿದ್ದಾರೆಯೋ ಹಾಗಿದ್ದರೆ ನೀವು ಮಹಾರರು ಮಾಡಿದ ಅಡುಗೆಯನ್ನು ಊಟ ಮಾಡದಿದ್ದರೆ ಅದರಲ್ಲಿ ತಪ್ಪೇನೂ ಇಲ್ಲ. ಆದರೆ ಬ್ರಾಹ್ಮಣರಾಗಲಿ ಅಥವಾ ಇತರ ಸ್ಪೃಶ್ಯ ವರ್ಗದ ಹಿಂದೂಗಳೇ ಆಗಲಿ ನಿಮ್ಮನ್ನು ತಮ್ಮೊಂದಿಗೆ ಸೇರಿಸಿಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆಯೇ? ಅಥವಾ ಇಲ್ಲವೋ ಎನ್ನುವುದರ ಬಗ್ಗೆ ಮೊದಲು ವಿಚಾರ ಮಾಡಬೇಕಾಗುತ್ತದೆ. ಹಾಗೊಂದು ವೇಳೆ ಅವರು ಸಿದ್ಧವಿಲ್ಲದಿದ್ದರೆ ನೀವು ಮಾಂಗರು ವಿನಾಕಾರಣ ಮಹಾರರಿಂತ ಶ್ರೇಷ್ಠರು ಎಂದು ದುರಭಿಮಾನ ಮತ್ತು ಅಹಂಕಾರ ಬೆಳೆಸಿಕೊಂಡು ನಿಮಗೆ ನೀವೇ ನಷ್ಟ ಮಾಡಿಕೊಳ್ಳುತ್ತಿದ್ದೀರಿ ಎಂಬ ಆತಂಕ ಕಾಡಲು ಆರಂಭಿಸುತ್ತದೆ. ಎರಡನೆಯದ್ದು ಅಂದರೆ ಮಾಂಗರು ಮತ್ತು ಚಮ್ಮಾರ ಜಾತಿಯ ಜನರು ಮಹಾರರು ಮಾಡಿದ ಅನ್ನ ಉಣ್ಣುವುದಿಲ್ಲ ಎಂದು ಹಠ ಹಿಡಿದರೆ ಅದಕ್ಕೆ ಪ್ರತಿಯಾಗಿ ಮಹಾರರು ಅದೇ ರೀತಿಯ ಧೋರಣೆ ತಳೆಯುತ್ತಾರೆ ಎಂದು ಹೇಳಬಹುದು. ಮಹಾರರಲ್ಲಿ ಕೆಲವರಿದ್ದಾರೆ. 'ಚಮ್ಮಾರರು ಮತ್ತು ಮಾಂಗ್ ಜಾತಿಯವರಲ್ಲಿ ಬೆಳೆದಿರುವ ದುರಭಿಮಾನ ಮೇರೆ ಮೀರಿದ್ದು ಅದನ್ನು ಇಳಿಸಬೇಕಿದೆ. ಒಂದು ವೇಳೆ ಅವರು ನಮ್ಮೊಂದಿಗೆ ಸಹಭೋಜನ ಮಾಡದಿದ್ದರೆ ನಾವು ಕೂಡ ಅವರೊಂದಿಗೆ ಯಾವುದೇ ರೀತಿಯ ಸಂಬಂಧ ಇರಿಸಿಕೊಳ್ಳಬಾರದು' ಎನ್ನುತ್ತಿರುತ್ತಾರೆ. ನಾನೀಗ ಇಲ್ಲಿ ಒಂದು ವಿಷಯ ಹೇಳಲು ಇಚ್ಛಿಸುತ್ತೇನೆ ಮಹಾರರು ಜಾತಿ ಅಭಿಮಾನ ಹಿಡಿದುಕೊಂಡು ಮಾಂಗ್ ಮತ್ತು ಚಮ್ಮಾರರನ್ನು ದೂರ ಇರಿಸುವುದಕ್ಕೆ ತೀರ್ಮಾನಿಸಿದ್ದೇ ಆದಲ್ಲಿ ಅವರು ಮಾಂಗ್ ಮತ್ತು ಚಮ್ಮಾರರಿಗೆ ಬಹಳಷ್ಟು ಹಾನಿಯನ್ನು ಮಾಡಬಹುದು. ಅಸ್ಪೃಶ್ಯ ವರ್ಗದಲ್ಲಿ ಮಹಾರರದ್ದು ಬಹುಸಂಖ್ಯಾತ ಜಾತಿ ಹೀಗಾಗಿ ಅವರಿಲ್ಲದೇ ಅಸ್ಪೃಶ್ಯರ ಯಾವುದೇ ಚಳವಳಿ, ಅಸ್ಪೃಶ್ಯ ರಾಜಕಾರಣ ಸಾಧ್ಯವಾಗುವುದಿಲ್ಲ. ಮಹಾರರ ನೆರವಿಲ್ಲದೇ ಏನು ಬೇಕಾದರೂ ಮಾಡಬಹುದು ಎಂದು ಮಾಂಗ್ ಮತ್ತು ಚಮ್ಮಾರರು ತಿಳಿದುಕೊಂಡಿದ್ದರೆ ಅದು

ತಪ್ಪು ತಿಳುವಳಿಕೆ ಎಂದು ಅರಿವಾಗುವುದಕ್ಕೆ ಬಹಳ ಕಾಲ ಬೇಕಾಗುವುದಿಲ್ಲ. ಯಾರೋ ಒಬ್ಬರು ಕರುವಿಗೆ ಹೊಡೆದರೆಂದು ನಾವು ಹಸುವಿಗೆ ಹೊಡೆಯುವುದು ನ್ಯಾಯವಾಗುವುದಿಲ್ಲ. ಮಾಂಗರು ಮತ್ತು ಚಮ್ಮಾರರು ದುರಭಿಮಾನಪೀಡಿತರಾಗಿ ಮಹಾರರೊಂದಿಗೆ ಸಂಬಂಧ ಇರಿಸಿಕೊಳ್ಳುವುದಿಲ್ಲ ಎಂದು ಹೇಳಿದ ಮಾತ್ರಕ್ಕೆ ಮಹಾರ್ ಜಾತಿಯವವರು ಚಮ್ಮಾರ ಮತ್ತು ಮಾಂಗ್ ಜಾತಿಯವರೊಂದಿಗೆ ಸಂಬಂಧ ಕಡಿದುಕೊಳ್ಳಬೇಕು ಎನ್ನುವುದು ನನಗೆ ಇಷ್ಟವಿಲ್ಲ. ಏಕೆಂದರೆ ಮಹಾರ್ ಸಮಾಜಕ್ಕೆ ನಾನು ಅಂತಹ ಬೋಧನೆ ಮಾಡಿಲ್ಲ. ಮಹಾರ್ ಜಾತಿಯವರಿಗೆ ಜಾತಿ ಅಭಿಮಾನವೂ ಬೇಕಿಲ್ಲ ಮತ್ತು ಮಾಂಗ್, ಚಮ್ಮಾರರಿಗಿಂತ ತಾವು ಶ್ರೇಷ್ಠರೆಂದು ಅನ್ನಿಸಿಕೊಳ್ಳುವುದು ಬೇಕಿಲ್ಲ. ಅವರಿಗೆ ತಮ್ಮಂತೆ ಎಲ್ಲ ಅಸ್ಪೃಶ್ಯರನ್ನು ಸಂಘಟಿಸುವುದು ಬೇಕಿದೆ. ಈ ಕಾರಣಕ್ಕಾಗಿಯೇ ಅವರು ಖೊಟ್ಟಿ ಅಭಿಮಾನಕ್ಕೆ ಬಲಿ ಬಿಳದೇ ಎಲ್ಲ ಅಸ್ಪೃಶ್ಯರನ್ನು ಸೇರಿಸಿಕೊಂಡು ಚಳವಳಿ ಮಾಡುವುದಕ್ಕೆ ಇಷ್ಟಪಡುತ್ತಾರೆ. ಮಹಾರ್ ಜಾತಿಯವರು ಜಾತಿಭೇದ ಮಾಡುತ್ತಿದ್ದಾರೆಂದು ಯಾರೂ ಆರೋಪ ಮಾಡಲು ಸಾಧ್ಯವಿಲ್ಲ. ಅವರು ಈ ವಿಚಾರವನ್ನು ಕೃತಿಯಲ್ಲೂ ಜಾರಿಗೆ ತರುತ್ತಿದ್ದಾರೆ ಎಂದು ಪುರಾವೆಯೊಂದಿಗೆ ಹೇಳಬಲ್ಲೆ. ಪುಣೆಯಲ್ಲಿ ಅಸ್ಪೃಶ್ಯ ಜಾತಿಯ ವಿದ್ಯಾರ್ಥಿಗಳ ವಸತಿ ಗೃಹ ಇರುವುದು ಇಲ್ಲಿರುವ ಕೆಲವರಿಗೆ ಗೊತ್ತಿರಬಹುದು. ಆ ಅಸ್ಪೃಶ್ಯ ವಿದ್ಯಾರ್ಥಿ ವಸತಿಗೃಹ ಸರ್ಕಾರದ ಮುಖಾಂತರ ನಡೆಯುತ್ತಿದ್ದು, ಅದರಲ್ಲಿ ಮಹಾರ್, ಮಾಂಗ್, ಚಮ್ಮಾರ ಸೇರಿದಂತೆ ಇತರ ಅಸ್ಪೃಶ್ಯ ಜಾತಿಯ ಮಕ್ಕಳಿದ್ದಾರೆ. ಅಲ್ಲಿನ ಮಕ್ಕಳಿಗೆ ಅಡುಗೆ ಮಾಡುವುದಕ್ಕೆ ಮೊದಲು ಒಬ್ಬ ಅಡುಗೆಯವನನ್ನು ನೇಮಕ ಮಾಡಲಾಗಿತ್ತು ಮತ್ತು ಎಲ್ಲ ಮಕ್ಕಳು ಒಂದೇ ಪಂಕ್ತಿಯಲ್ಲಿ ಭೋಜನ ಮಾಡುತ್ತಿದ್ದರು. ಕೆಲವು ದಿನಗಳ ಬಳಿಕ ಚಮ್ಮಾರ ಜಾತಿಯ ಮುಖಂಡರು ತಮ್ಮ ಜಾತಿಯ ಮಕ್ಕಳಲ್ಲಿ ನೀವು ಮಾಂಗ್ ಮತ್ತು ಮಹಾರ್ ಮಕ್ಕಳೊಂದಿಗೆ ಭೋಜನ ಮಾಡಬೇಡಿ, ಅವರು ಮಾಡಿದ ಅನ್ನ ಉಣ್ಣಬೇಡಿ ಎಂದು ಪುಸಲಾಯಿಸಿದರು. ಇದರ ಪರಿಣಾಮ ಎಲ್ಲಿಯವರೆಗಾಯಿತು ಎಂದರೆ, ಮಾಂಗ್ ಮತ್ತು ಮಹಾರ್ ಜಾತಿಯ ಮಕ್ಕಳಲ್ಲಿ ಭಿನ್ನಾಭಿಪ್ರಾಯ ಮೂಡಿತು. ಅದು ಎಲ್ಲಿಯವರೆಗೆ ಹೋಯಿತೆಂದರೆ ಮಹಾರ್ ಜಾತಿಯ ಮಕ್ಕಳು ನಾವು ಕೂಡ ಬೇರೆಯವರು ಮಾಡಿದ ಅನ್ನ ಉಣ್ಣುವುದಿಲ್ಲ ನಮ್ಮ ಜಾತಿಗೂ ಪ್ರತ್ಯೇಕ ಅಡುಗೆಯವನು ಬೇಕು ಎಂದು ಆಗ್ರಹಿಸಲು ಆರಂಭಿಸಿದರು.

ಈ ಭಿನ್ನಾಭಿಪ್ರಾಯ ಯಾವ ಮಟ್ಟಕ್ಕೆ ಬೆಳೆಯಿತೆಂದರೆ ನಾನೇ ಸ್ವತಃ ಮುಂಬೈನಿಂದ ಪುಣೆವರೆಗೆ ಹೋಗಿ ಮಹಾರ್ ಜಾತಿಯ ಮಕ್ಕಳಿಗೆ ತಿಳಿ ಹೇಳಬೇಕಾಯಿತು. ಚಮ್ಮಾರ ಜಾತಿಯ ಮಕ್ಕಳು ಮೂರ್ಖರಾದರೆ ನೀವೇಕೆ ಮೂರ್ಖರಾಗಬೇಕು ಎಂದು ಪ್ರಶ್ನಿಸಿದೆ. ಒಂದು ವೇಳೆ ಚಮ್ಮಾರ ಜಾತಿಯ ಮಕ್ಕಳು ಮಾಂಗ್ ಜಾತಿಯವರೊಂದಿಗೆ ಊಟ ಮಾಡದಿದ್ದರೆ ನೀವು ಮತ್ತು ಮಾಂಗ್ ಜಾತಿಯ ಮಕ್ಕಳು ಸೇರಿ ಊಟ ಮಾಡಿ ಎಂದು ಹೇಳಿದೆ. ಒಂದು ವೇಳೆ ನನಗೆ ಜಾತಿಯ ಅಭಿಮಾನ ಇದ್ದಿದ್ದರೆ ಮಹಾರ್ ಜಾತಿಯ ಮಕ್ಕಳಿಗೆ ಚಮ್ಮಾರರು ಮತ್ತು ಮಾಂಗರು ನಿಮ್ಮೊಂದಿಗೆ ಊಟ ಮಾಡದಿದ್ದರೆ ನೀವು ಅವರೊಂದಿಗೆ ಊಟ ಮಾಡುವುದನ್ನು ಬಿಟ್ಟುಬಿಡಿ ಎಂದು ಹೇಳಿರುತ್ತಿದ್ದೆ. ಆದರೆ ನಾನು ಅಂತಹ ಸಲಹೆ ನೀಡಲಿಲ್ಲ. ನಾನೇ ಸ್ವತಃ ಸೋಲಾಪುರದಲ್ಲಿ ಬೋರ್ಡಿಂಗ್ ತೆರೆದಿದ್ದೆ. ಅಲ್ಲಿ ಮಹಾರ್ ಜಾತಿಯ ಮಕ್ಕಳನ್ನು ಹೊರತುಪಡಿಸಿ ಬೇರೆ ಜಾತಿಯ ಮಕ್ಕಳಿಗೆ ಅವಕಾಶ ಇರಲಿಲ್ಲ. ಆದಾಗ್ಯೂ ಆ ಬೋರ್ಡಿಂಗ್‌ನಲ್ಲಿ ಅಸ್ಪೃಶ್ಯ ಜಾತಿಯ ಇತರ ಮಕ್ಕಳನ್ನು ಸೇರಿಸಿಕೊಳ್ಳಲಾಯಿತು. ಅದರಲ್ಲಿ ಮಾಂಗ್‌ರು, ಚಮ್ಮಾರರು, ಢೋರ್ ಮತ್ತು ಭಂಗಿ ಜಾತಿಯ ಮಕ್ಕಳಿದ್ದರು. ಸಾಕಷ್ಟು ದಿನಗಳವರೆಗೆ ಎಲ್ಲ ಮಕ್ಕಳು ಒಂದೇ ಪಂಕ್ತಿಯಲ್ಲಿ ಒಬ್ಬನೇ ಅಡುಗೆಯವ ಮಾಡಿದ ಊಟ ಮಾಡುತ್ತಿದ್ದರು. ಆದರೆ ಕೆಲವು ದಿನಗಳ ಬಳಿಕ ಚಮ್ಮಾರ–ಢೋರ್ ಜಾತಿಯ ಮಕ್ಕಳು ಸೇರಿಕೊಂಡು

ನಮಗೆ ಚಮ್ಮಾರ ಜಾತಿಯ ಅಡುಗೆಯವನು ಬೇಕು ಎಂದು ಬೇಡಿಕೆ ಇರಿಸಿದರು. ಆಗ ನಾನು ಅವರಿಗೆ ಹೇಳಿದ್ದು ಎಲ್ಲ ಅಸ್ಪೃಶ್ಯ ಜಾತಿಗಳಲ್ಲಿ ಕೀಳು ಜಾತಿ ಎಂದರೆ ಭಂಗಿ ಜಾತಿ. ಆ ಜಾತಿಯ ಅಡುಗೆಯವನನ್ನು ನೇಮಕ ಮಾಡುವಾ ಎಂದು ಹೇಳಿದೆ. ಇದಕ್ಕೆ ಮಹಾರ್ ಮಕ್ಕಳು ಒಪ್ಪಿಗೆ ಸೂಚಿಸಿದರು. ಆದರೆ ಬೇರೆ ಜಾತಿಯ ಮಕ್ಕಳು ಇದಕ್ಕೆ ತಯಾರಿಲ್ಲದ ಕಾರಣ ಅನಿವಾರ್ಯವಾಗಿ ಆ ಬೋರ್ಡಿಂಗ್ ಮುಚ್ಚಬೇಕಾಯಿತು. ಆದರೆ ನಾವು ನಮ್ಮ ತತ್ವದಿಂದ ಹಿಂದೆ ಸರಿಯಲಿಲ್ಲ. ಯಾವ ಬ್ರಾಹ್ಮಣ ಅಥವಾ ಮರಾಠರ ಮಾತು ಕೇಳಿ ನೀವು ಈ ರೀತಿ ವರ್ತಿಸುತ್ತಿದ್ದೀರೋ ಅವರು ಎಂದಾದರೂ ನಿಮ್ಮ ಸಹಾಯಕ್ಕೆ ಬಂದಿದ್ದಾರೆಯೇ? ಒಂದು ವೇಳೆ ಅವರು ಸಹಾಯದ ಆಶ್ವಾಸನೆ ನೀಡಿದ್ದರೆ ಖುಷಿಯಿಂದ ಅವರೊಂದಿಗೆ ಹೋಗಿ. ನನಗೆ ಏನೂ ಕೆಟ್ಟೆನಿಸದು. ನಾನು ನಿಮಗೆ ಹೇಳುವುದು ಇಷ್ಟೇ. ಮಹಾರ್ ಜಾತಿ, ಬ್ರಾಹ್ಮಣ ಮತ್ತು ಮರಾಠರಿಗಿಂತ ಸಾವಿರಪಟ್ಟು ಸುಧಾರಿಸಿದ ಜಾತಿಯಾಗಿದೆ. ಅವರು ಜಾತಿಭೇದ ಒಪ್ಪುವುದಿಲ್ಲ. ಎಲ್ಲ ಸಮದುಃಖಿಗಳಿಗೆ ಸಹಾಯ ನೀಡುವುದಕ್ಕೆ ಅವರು ಸಿದ್ಧರಿದ್ದಾರೆ. ಒಂದು ವೇಳೆ ನಿಮಗೆ ಅವರೊಂದಿಗೆ ಸಹಕರಿಸಬೇಕು ಎನ್ನುವ ಮನಸ್ಸಿದ್ದರೆ ಅವರು ತೋರಿದ ಮಾರ್ಗದಲ್ಲಿ ಸಾಗಿ, ಮಹಾರರ ಸಾಮರ್ಥ್ಯ ಮತ್ತು ಸಂಘಟನಾ ಶಕ್ತಿಯಿಂದ ನಿಮಗೂ ಲಾಭವಾಗುತ್ತದೆ. ಇದೀಗ ಲಭಿಸಿರುವ ರಾಜಕೀಯ ಹಕ್ಕುಗಳಿಗಾಗಿ ಶ್ರಮಿಸಿದವರು ಯಾರು? ಆ ಹಕ್ಕುಗಳಿಗೆ ನೀವು ಮಾಂಗ್‌ರಾಗಲಿ ಅಥವಾ ಚಮ್ಮಾರರು ಆಗಲಿ ಯಾವ ಪ್ರಯತ್ನ ಮಾಡಿದ್ದೀರಿ? ನಾನು ಇಲ್ಲಿ ನಿರ್ಭಯದಿಂದ ಒಂದು ವಿಷಯ ಹೇಳಲಿಚ್ಛಿಸುತ್ತೇನೆ. ಈ ರಾಜಕೀಯ ಹಕ್ಕುಗಳಿಗಾಗಿ ಯಾರಾದರೂ ಸ್ವಾರ್ಥತ್ಯಾಗ ಮಾಡಿ ಆ ನಿಟ್ಟಿನಲ್ಲಿ ಪರಿಶ್ರಮಪಟ್ಟಿದ್ದು ಎಂದರೆ ಅದು ಮಹಾರ್ ಜಾತಿ. ಆದರೆ ಅದರ ಲಾಭ ನಿಮಗೆ ಎಲ್ಲರಿಗೂ ಲಭಿಸಿದೆ. ನಾಸಿಕ್ ಪೋಲೀಸ್ ಟ್ರೇನಿಂಗ್ ಸೆಂಟರ್‌ನಲ್ಲಿ ಸೇರ್ಪಡೆಯಾಗಿರುವ ಅಸ್ಪೃಶ್ಯರು ಯಾರ ಪ್ರಯತ್ನದಿಂದ ಸೇರ್ಪಡೆಯಾಗಿದ್ದಾರೆ? ಈ ತರಬೇತಿ ಆರಂಭವಾದ ದಿನದಿಂದ ಅಸ್ಪೃಶ್ಯ ಜಾತಿಯವರಿಗೆ ಪ್ರವೇಶವೇ ಅಲ್ಲಿ ಇರಲಿಲ್ಲ. ಇಷ್ಟೇ ಅಲ್ಲ ಕೀಳುಮಟ್ಟದ ಜಾತಿಯವರನ್ನು ಸೇರಿಸಿಕೊಳ್ಳುವುದಕ್ಕೆ ಸರ್ಕಾರದ ನಿರ್ಬಂಧ ಇತ್ತು. ಆ ನಿರ್ಬಂಧ ತೆರವುಗೊಳಿಸುವುದಕ್ಕೆ ಒಬ್ಬೇ ಒಬ್ಬ ಮಾಂಗ್ ಅಥವಾ ಚಮ್ಮಾರ ಜಾತಿಯ ಮುಖಂಡ ಪ್ರಯತ್ನಿಸಿರಲಿಲ್ಲ. ನಾನು ಶ್ರಮಪಟ್ಟ ಕಾರಣಕ್ಕೆ ಇಂದು ಆ ತರಬೇತಿ ಶಾಲೆ ದ್ವಾರ ಅಸ್ಪೃಶ್ಯರಿಗೆ ಮುಕ್ತವಾಗಿದೆ. ಈ ಸೌಲಭ್ಯದ ಲಾಭ ಮಹಾರರಿಗಂತೂ ಲಭಿಸಿಲ್ಲ. ಆದರೆ ಮಾಂಗ್ ಮತ್ತು ಚಮ್ಮಾರ ಜಾತಿಯವರಿಗಂತೂ ಆಗಿದೆ. ಪೋಲೀಸ್ ಇಲಾಖೆಯಲ್ಲಿ ಇಂದು ಪೋಲೀಸ್ ಇನ್ಸ್‌ಪೆಕ್ಟರ್ ಆಗಿರುವ ಇಬ್ಬರ ಪೈಕಿ ಓರ್ವ ಮಾಂಗ್ ಇದ್ದರೆ ಇನ್ನೊಬ್ಬ ಚಮ್ಮಾರ ಜಾತಿಯವ. ಈ ಇಬ್ಬರಿಗಿಂತ ಮಹಾರ್ ಅಭ್ಯರ್ಥಿಗಳು ಅರ್ಹತೆಯಲ್ಲಿ ಅನೇಕ ಪಟ್ಟು ಮೇಲಿನವರಾಗಿದ್ದರೂ ಅವರ ಪೈಕಿ ಒಬ್ಬರನ್ನೂ ತೆಗೆದುಕೊಳ್ಳಲಿಲ್ಲ. ಇದಕ್ಕೆ ವ್ಯತಿರಿಕ್ತ ಎನ್ನುವಂತೆ ಪರೀಕ್ಷೆಗೆ ಎಂದು ಕಮೀಟಿ ಎದುರು ಹಾಜರಾದ ಅಭ್ಯರ್ಥಿಗಳಿಗೆ ಅವರ ಅರ್ಹತೆಯ ಬಗ್ಗೆ ಪ್ರಶ್ನಿಸದೆ, ನೀವು ಎಷ್ಟು ಬಾವಿ ಕೆಡಿಸಿದ್ದೀರಿ. ನೀವು ಅಸ್ಪೃಶ್ಯ ಚಳವಳಿಯಲ್ಲಿ ಪಾಲ್ಗೊಳ್ಳುತ್ತೀರಾ? ಇತ್ಯಾದಿ ಸಂಬಂಧವಿಲ್ಲದ ಪ್ರಶ್ನೆಗಳನ್ನು ಕೇಳಿ ಅವರನ್ನು ಹೊರಗೆ ಹಾಕಲಾಯಿತು. ಆದಾಗ್ಯೂ ಕೂಡ ಮಹಾರರು ಯಾವುದೇ ಆಕ್ಷೇಪ ಎತ್ತಲಿಲ್ಲ. ನಮ್ಮಿಬ್ಬರ ಜಗಳ ಮೂರನೆಯವನಿಗೆ ಲಾಭ ಎನ್ನುವ ಕಾರಣಕ್ಕೆ ಮಹಾರರು ಯಾವತ್ತಿಗೂ ಆಕ್ಷೇಪ ಎತ್ತಲಿಲ್ಲ.

ಜಾತಿಭೇದದ ಸಮಸ್ಯೆ ಕಾರಣ ಅಸ್ಪೃಶ್ಯರನ್ನು ಮುಂಬೈ ಪ್ರಾಂತದ ಪೋಲೀಸ್ ಇಲಾಖೆಗೆ ನೇಮಕ ಮಾಡಿಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿರಲಿಲ್ಲ. ಈಗ ಅದೇ ಪೋಲೀಸ್ ಇಲಾಖೆಯಲ್ಲಿ ಬಹಳಷ್ಟು ಅಸ್ಪೃಶ್ಯರಿದ್ದಾರೆ. ಸರ್ಕಾರ ಹೀಗೆ ಮಾಡುವಂತೆ ಮಾಡಿದ್ದು ಯಾರು? ಈ ಪ್ರಯತ್ನದ ಲಾಭ ಮಾಂಗ್ ಮತ್ತು ಚಮ್ಮಾರರು

ಮಾಡಿಕೊಂಡಿಲ್ಲವೆ? ಮಹಾರ್ ಜಾತಿಯ ಜನರು ಚಳವಳಿ ಮಾಡಬೇಕು ಅದರ ಲಾಭ ಬೇರೆ ಜಾತಿಯವರಿಗೆ ಆಗಬೇಕು ಎನ್ನುವುದಕ್ಕೆ ಇದು ಎರಡನೇ ಉದಾಹರಣೆ. ಇಂದು ಜಿಲ್ಲಾ ಲೋಕಲ್ ಬೋರ್ಡ್, ಮಹಾನಗರ ಪಾಲಿಕೆ ಜಾಗಗಳಿಗೆ ನನ್ನ ಶಿಫಾರಸು ಬಯಸಿ ಬಂದ ವ್ಯಕ್ತಿಗಳಿಗೆ ನಾನು ಹನ್ನೆರಡಾಣೆ ಕಿಮ್ಮತಿನ ಮಾಂಗ್ ಜಾತಿಯ ವ್ಯಕ್ತಿ ಮುಂದೆ ಬಂದರೆ, ಹದಿನಾರಾಣೆ ಕಿಮ್ಮತ್ತಿನ ಮಹಾರ್ ಜಾತಿಯ ವ್ಯಕ್ತಿಯನ್ನು ಬದಿಗೆ ಸರಿಸುವುದಕ್ಕೆ ಸಿದ್ಧ ಎಂದು ಸ್ಪಷ್ಟಪಡಿಸಿದ್ದೇನೆ. ಇದಕ್ಕಿಂತ ಹೆಚ್ಚು ವಿಶಾಲ ದೃಷ್ಟಿಕೋನವನ್ನು ಯಾವುದೇ ಸಮಾಜಕ್ಕೆ ಇರಲು ಸಾಧ್ಯವಿಲ್ಲ. ಜವಾಬ್ದಾರಿಯುತ ಸರ್ಕಾರ ರಚನೆಯಲ್ಲಿ ಕೃಷಿ ಭೂಮಿ ಮಾಲೀಕರ ಮತಾಧಿಕಾರ ಅರ್ಹತೆಗೆ ಸಂಬಂಧಿಸಿದಂತೆ ತೀರ್ಮಾನಿಸಿದ ಸಂಗತಿಗಳಲ್ಲಿ ಮಹಾರರು ವತನಿ ಕೃಷಿಕರಾಗಿದ್ದು ಅವರಿಗೆ ಅರ್ಹತೆಯ ಲಾಭ ಲಭಿಸುತ್ತದೆ, ಆದರೆ ಉಳಿದ ಜಾತಿಗಳಿಗೆ ಈ ಲಾಭ ಸಿಗಲು ಸಾಧ್ಯವಿಲ್ಲ. ಈ ವಿಚಾರವನ್ನು ತದ್ವಿರುದ್ಧವಾಗಿ ಭಾವಿಸಿದ ಅನೇಕರು ನಾನು ಪಕ್ಷಪಾತ ಬುದ್ಧಿಯಿಂದ ಉದ್ದೇಶಪೂರ್ವಕವಾಗಿ ಕೃಷಿ ಭೂಮಿ ಮಾಲೀಕತ್ವದ ಅರ್ಹತೆಯನ್ನು ಪಟ್ಟಿಯಲ್ಲಿ ಸೇರಿಸಿ ಒಟ್ಟಾರೆ ಮಹಾರ್‌ರಿಗೆ ಅನುಕೂಲವಾಗುವಂತಹ ಕೆಲಸ ಮಾಡಿದ್ದೇನೆ ಎಂದು ಆರೋಪಿಸಿದ್ದಾರೆ. ಆದರೆ ಈ ಆರೋಪ ಸುಳ್ಳು. ಮಹಾರ್ ಮತ್ತು ಮಾಂಗ್ ಜಾತಿಯ ಮಧ್ಯೆ ಭಿನ್ನಾಭಿಪ್ರಾಯ ಬೆಳೆಯಲಿ ಎನ್ನುವ ಉದ್ದೇಶದಿಂದ ಈ ಆರೋಪ ಮಾಡಲಾಗಿದೆ. ಮತಾಧಿಕಾರ ಪಡೆಯುವುದಕ್ಕೆ ಕೃಷಿಭೂಮಿ ಮಾಲೀಕತ್ವ (ವತನಿ ಭೂಮಿ) ಅರ್ಹತೆಯ ಮಾನದಂಡವಾಗಬೇಕು ಎಂದು ಹೇಳಿದ್ದು ನಾನಲ್ಲ. ಇಂತಹ ಪ್ರಸ್ತಾಪ ಮಾಡಿದ್ದು ಪ್ರಾಂತೀಯ ಸರ್ಕಾರಗಳು ಹೀಗಾಗಿ ಅದರ ಸಾಧಕ–ಬಾಧಕಗಳ ಬಗ್ಗೆ ನಾನು ಹೊಣೆಗಾರನಾಗುವುದಿಲ್ಲ. ಇನ್ನೊಂದು ಸಂಗತಿ ಎಂದರೆ ಕೇವಲ ಮುಂಬೈ ಪ್ರಾಂತದಲ್ಲಿರುವ ಅಸ್ಪೃಶ್ಯ ಕೃಷಿಕರಿಗೆ ಈ ಮತಾಧಿಕಾರ ನೀಡಿಲ್ಲ ಬದಲಿಗೆ ಇಡೀ ಭಾರತದಲ್ಲಿನ ಅಸ್ಪೃಶ್ಯ ಕೃಷಿಕರಿಗೆ ಈ ಮತಾಧಿಕಾರ ನೀಡಲಾಗಿದೆ. ಮದ್ರಾಸ್, ಉತ್ತರಪ್ರದೇಶದಲ್ಲಿ ಇರುವ ಅಸ್ಪೃಶ್ಯ ವರ್ಗದ ಕೃಷಿಕರಿಗೂ ಈ ಮತಾಧಿಕಾರ ಲಾಭ ಲಭಿಸಿದೆ ಪರಿಸ್ಥಿತಿ ಹೀಗಿರುವಾಗ ಕೇವಲ ಮುಂಬೈ ಪ್ರಾಂತಕ್ಕೆ ಸಿಮೀತಗೊಳಿಸಿ ಅದನ್ನು ಜಾರಿಗೊಳಿಸಲಾಗಿದೆ ಎಂದು ಹೇಳುವುದು ಶುದ್ಧ ಸುಳ್ಳು ಆಗುತ್ತದೆ. ಈ ವಿಚಾರದಲ್ಲಿ ನನ್ನದು ಇನ್ನೂ ಒಂದು ಪ್ರಶ್ನೆ ಇದೆ. ಮುಂಬೈ ಪ್ರಾಂತದಲ್ಲಿ ಈ ಮತಾಧಿಕಾರ ಕೇವಲ ಮಹಾರ್ ಜಾತಿಯವರಿಗೆ ಮಾತ್ರ ಲಭಿಸಿದೆಯೆ? ಈ ಹಕ್ಕು ಮಹಾರ್‌ರಿಗೆ ಸಿಕ್ಕಿಲ್ಲ ಬದಲಿಗೆ ವತನದಾರರಿಗೆ ಸಿಕ್ಕಿದೆ. ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ಮಾಂಗ್ ಜಾತಿಯವರು ವತನದಾರರಾಗಿದ್ದಾರೆ ವಿನಃ ಅಲ್ಲಿ ಮಹಾರರು ಕೃಷಿ ಮಾಡುವುದಿಲ್ಲ. ಅಂದರೆ ಕೃಷಿ ಭೂಮಿ ಮಾಲೀಕತ್ವದಿಂದಾಗಿ ಆ ಭಾಗದಲ್ಲಿ ಆಗುವ ಲಾಭ ಯಾರದ್ದು? ಮಾಂಗ್ ಜಾತಿಯವರದ್ದೋ ಅಥವಾ ಮಹಾರ್ ಜಾತಿಯವರದ್ದೊ? ಈ ದೃಷ್ಟಿಯಿಂದ ನೀವು ನೋಡಿದರೆ ಈ ಹುಚ್ಚಾಟ ಮಾಡುತ್ತಿರುವವರು ಒಂದೋ ಅಜ್ಞಾನಿಗಳಾಗಿರಬೇಕು ಇಲ್ಲದಿದ್ದರೆ ನಯವಂಚಕರು ಆಗಿರಬೇಕು, ಇಂತಹ ಜನರ ಉಪದ್ವ್ಯಾಪಿಗಳ ಬಗ್ಗೆ ನೀವು ಎಚ್ಚರದಿಂದ ಇರಬೇಕು ಎಂದು ನಿಮಗೆ ಸೂಚನೆ ನೀಡುವುದು ಅತ್ಯಗತ್ಯವಾಗಿದೆ. ಮಹಾರ ಜಾತಿಯ ರಾಜಕೀಯ ವೈಭವ ವಿಸ್ತಾರವಾಗಬೇಕು ಮತ್ತು ಇನ್ನುಳಿದ ಜಾತಿಯ ರಾಜಕೀಯ ವೈಭವ ನಶಿಸಬೇಕು ಎಂಬ ಇಚ್ಛೆ ನನ್ನಲ್ಲಿ ಇದ್ದಿದ್ದರೆ ನಿನ್ನೆ ಜರುಗಿದ ರಾಜಕೀಯ ಸಮಾವೇಶದಲ್ಲಿ ನಾನು ಆ ಭಾಷಣ ಮಾಡುತ್ತಲೇ ಇರಲಿಲ್ಲ. ನಿನ್ನೆ ಜರುಗಿದ ಮಹಾರ್ ಸಮಾವೇಶದಲ್ಲಿ ಸ್ಪಷ್ಟ ಮಾತುಗಳಲ್ಲಿ ಮುಂದಿನ ಕಾನೂನು ಮಂಡಳಿಯಲ್ಲಿ ನಮಗೆ ಲಭಿಸಿರುವ ೧೫ ಸ್ಥಾನಗಳ ಪೈಕಿ ಒಂದಷ್ಟು ಸ್ಥಾನಗಳನ್ನು ಮಾಂಗ್ ಜಾತಿಯವರಿಗೂ ಬಿಟ್ಟುಕೊಡಬೇಕೆಂದು ಹೇಳಿದ್ದೇನೆ. ಬ್ರಾಹ್ಮಣೇತರರಲ್ಲೂ ಅಸ್ಪೃಶ್ಯರಂತೆ ಚಿಕ್ಕಪುಟ್ಟ ಉಪಜಾತಿಗಳಿವೆ. ಅಸ್ಪೃಶ್ಯರಂತೆ ಬ್ರಾಹ್ಮಣೇತರರಿಗೂ ಏಳು ಸ್ಥಾನಗಳನ್ನು ನೀಡಲಾಗಿದೆ. ಆದರೆ ಒಂದು

ಜಾಗವನ್ನಾದರೂ ಬ್ರಾಹ್ಮಣೇತರ ಜಾತಿಯಲ್ಲಿರುವ ಚಿಕ್ಕಪುಟ್ಟ ಜಾತಿಗಳಿಗೆ ಬಿಟ್ಟುಕೊಡುವ ಆಶ್ವಾಸನೆಯನ್ನು ಒಬ್ಬೇ ಒಬ್ಬ ಮರಾಠಾ ಮುಖಂಡನಿಗೆ ನೀಡುವುದಕ್ಕೆ ಸಾಧ್ಯವಾಗಿಲ್ಲ. ಆದರೆ ನಾನು ನಿಮಗೆ ಅಂತಹ ಆಶ್ವಾಸನೆ ನೀಡಬಲ್ಲೆ ಮತ್ತು ಅದನ್ನು ಕೃತಿಯಲ್ಲೂ ತರುವ ನಿಟ್ಟಿನಲ್ಲಿ ಶ್ರಮಿಸಬಲ್ಲೆ ಎಂದು ಭರವಸೆ ನೀಡಬಲ್ಲೆ. ಯಾವ ಉದಾರತೆಯನ್ನು ಮರಾಠಾ ಸಮಾಜಕ್ಕೆ ತೋರಿಸಲು ಸಾಧ್ಯವಿಲ್ಲವೋ ಅಂತಹ ಔದಾರ್ಯವನ್ನು ಮಹಾರ್ ಸಮಾಜ ತೋರ್ಪಡಿಸಬಲ್ಲುದು. ಇದು ಅತ್ಯಂತ ಸರಳ ಮತ್ತು ಸುಲಭದ ವಿಚಾರ ಎಂದು ಹೇಳಿ ಜಾರಿಕೊಳ್ಳಲು ಸಾಧ್ಯವಿಲ್ಲ.

ಇದು ಅತ್ಯಂತ ಅಪಾಯಕಾರಿ ಮತ್ತು ಕಠಿಣ ಕೆಲಸ. ಎಲ್ಲ ಜಾತಿಗಳಲ್ಲೂ ತನ್ನದೇ ಆದ ಸ್ವಾರ್ಥ ಇದೆ ಆ ಸ್ವಾರ್ಥ ಬದಿಗಿಟ್ಟು ತಮ್ಮ ಪಾಲಿಗೆ ಬಂದಿರುವುದನ್ನು ಬೇರೆಯವರಿಗೆ ಬಿಟ್ಟುಕೊಡುವುದು ಸಣ್ಣ ಸಂಗತಿಯಲ್ಲ. ತಮ್ಮ ಪಾಲಿಗೆ ಬಂದಿದ್ದನ್ನು ಬಿಟ್ಟುಕೊಡುವುದಕ್ಕಷ್ಟೇ ಅಲ್ಲ. ಮಹಾರ್ ಮತ್ತು ಮಾಂಗ್ ಮಧ್ಯೆ ಇರುವ ಜಾತಿಭೇದ ನಿರ್ಮೂಲನೆ ಮಾಡಿ ಒಂದೇ ಜಾತಿ ಇರಬೇಕು ಎನ್ನುವುದಕ್ಕೆ ಮಹಾರ್‌ರು ಸಿದ್ಧರಾಗಿದ್ದಾರೆ. ಮಹಾರ್ ಜಾತಿ ಧರ್ಮಾಂತರಕ್ಕೆ ಸಿದ್ಧವಾಗಿದ್ದು, ಅದರಂತೆ ನೀವು ಕೂಡ ಧರ್ಮಾಂತರಕ್ಕೆ ಸಿದ್ಧವಾಗಿರುವ ಕಾರಣ ಈ ವಿಚಾರವನ್ನು ನಾನು ನಿಮ್ಮ ಎದುರು ಪ್ರಸ್ತಾಪಿಸುತ್ತಿದ್ದೇನೆ. ಧರ್ಮಾಂತರಕ್ಕೆ ಅನೇಕ ಉದ್ದೇಶಗಳಿದ್ದರೂ ಅಸ್ಪೃಶ್ಯರಲ್ಲಿನ ಜಾತಿಭೇದ ನಿರ್ನಾಮ ಮಾಡುವುದು ಕೂಡ ಅದರಲ್ಲಿನ ಒಂದು ಪ್ರಮುಖ ಉದ್ದೇಶ. ಎಲ್ಲ ಅಸ್ಪೃಶ್ಯರು ಧರ್ಮಾಂತರವಾಗದೇ ಅಸ್ಪೃಶ್ಯರಲ್ಲಿ ಜಾತಿಭೇದ ನಿರ್ಮೂಲನೆಯಾಗದು. ಜಾತಿಭೇದ ಹೋಗದೆ ಜಾತಿ ಮತ್ಸರವೂ ದೂರವಾಗದು. ಕೇವಲ ಮಹಾರರ ಕಲ್ಯಾಣಕ್ಕಾಗಿ ಧರ್ಮಾಂತರ ಮಾಡಲಾಗುತ್ತಿದೆ ಎಂದಲ್ಲ. ಎಲ್ಲ ಅಸ್ಪೃಶ್ಯರು ಒಂದೇ ಸೂತ್ರದಡಿ ಬಂದು ಅವರಲ್ಲಿನ ಭೇದಭಾವ ಇಲ್ಲವಾಗಿ ಅವರು ಸಮರ್ಥ ಮತ್ತು ಸಂಘಟಿತರಾಗಬೇಕು ಎನ್ನುವುದು ಈ ಧರ್ಮಾಂತರದ ಮುಖ್ಯ ಉದ್ದೇಶ. ಒಂದು ರೀತಿಯಲ್ಲಿ ಧರ್ಮಾಂತರ ಅಮೃತವಿದ್ದಂತೆ, ಆ ಅಮೃತದಿಂದ ನಾವು ಪರಿಶುದ್ಧರಾಗುತ್ತೇವೆ ಎನ್ನುವುದು ನಮಗೆ ಖಾತ್ರಿ ಇದೆ. ಆದರೆ ನಾವಷ್ಟೇ ಶುದ್ಧವಾಗಬೇಕು ಎನ್ನುವುದು ನಮ್ಮ ಉದ್ದೇಶವಾಗಿರದೇ ಅದರಿಂದ ಮಾಂಗರು ಮತ್ತು ಚಮ್ಮಾರರೂ ಧರ್ಮಾಂತರದ ಅಮೃತ ಸೇವಿಸಿ ಪಾವನರಾಗಬೇಕು ಎನ್ನುವುದು ನಮ್ಮ ಇಚ್ಛೆ. ಈ ಅಮೃತ ಎಲ್ಲರಿಗಾಗಿ ಇದೆ. ತುಕಾರಾಮ್ ಮಹಾರಾಜ್ ಅವರು ತಮ್ಮ ಒಂದು ಅಭಂಗ್‌ದಲ್ಲಿ 'ಸೇವುನಿಯಾ ರಸ ವಾಟಿತೋ ಅನೇಕಾ ಫ್ಯಾರೇ ಹೋವು ನಕಾ ರಾನೋರಾನ್' ಎಂದು ಹೇಳಿರುವ ಸಲಹೆಯನ್ನು ನಿಮಗೆ ನೀಡಬಹುದು. ಧರ್ಮಾಂತರದಿಂದ ನೀವು ಮಹಾರ್‌ರೊಂದಿಗೆ ಸಹಭೋಜನ ಮಾಡಬಹುದು. ಸಂಬಂಧ ಬೆಳೆಸಿ ಸಮಾನತೆಯ ಹಕ್ಕು ಪಡೆಯಬಹುದು ಮತ್ತು ಅಂತಹ ಹಕ್ಕುಗಳನ್ನು ನೀಡುವುದಕ್ಕೆ ಮಹಾರ್ ಸಮಾಜ ಸಿದ್ಧವಾಗಿದೆ. ಇಷ್ಟೊಂದು ಉದಾರತೆಯನ್ನು ಯಾವ ಸಮಾಜ ಕೂಡ ತೋರ್ಪಡಿಸುವುದಿಲ್ಲ. ಕೌನ್ಸಿಲ್‌ನಲ್ಲಿ ಸ್ಥಾನಗಳನ್ನು ನೀಡುವುದಕ್ಕಿಂತ ಇದು ದೊಡ್ಡ ಕಾಣಿಕೆಯಲ್ಲವೇ? ಇಷ್ಟೊಂದು ಔದಾರ್ಯವನ್ನು ತೋರಿಸುವುದಕ್ಕೆ ಮಹಾರ್ ಜಾತಿ ಸಿದ್ಧವಾಗಿದೆ. ಒಂದು ವೇಳೆ ನಿಮಗೆ ಆ ಉದಾರತೆಯ ಮಹತ್ವ ತಿಳಿದುಕೊಳ್ಳುವುದಕ್ಕೆ ಆಗದಿದ್ದರೆ ನಿಮ್ಮ ಹಾದಿ ನಿಮಗೆ ಮುಕ್ತವಾಗಿದೆ. ನಿಮಗೆ ಯಾವ ದಾರಿಯಲ್ಲಿ ಹೋಗಬೇಕು ಎನ್ನಿಸುತ್ತದೋ ಆ ಮಾರ್ಗದಲ್ಲಿ ನೀವು ಖುಷಿಯಿಂದ ಹೋಗಿ. ನಮ್ಮ ಉದ್ಧಾರ ನಾವು ಮಾಡಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಇದಕ್ಕಾಗಿ ನಾವು ನಮ್ಮ ತಲೆದಂಡ ನೀಡಬೇಕಾದರೂ ಸಿದ್ಧರಿದ್ದೇವೆ. ಚಮ್ಮಾರರ ಮತ್ತು ಮಾಂಗರ ಸಾಮರ್ಥ್ಯದ ಅಗತ್ಯ ನಮಗೆ ಇಲ್ಲ. ಆದರೆ ನಮ್ಮ ಮೇಲೆ ಅಂತಹ ಆರೋಪ ಮಾಡಕೂಡದು. ಮಹಾರರಿಗೆ ತಮ್ಮ ಜಾತಿಯ ಅಭಿಮಾನ ಬೆಳೆಸುವ ಅಥವಾ ತಮ್ಮ ಜಾತಿಯ ಮಹತ್ವ ಬೆಳೆಸುವ ಉದ್ದೇಶವಿಲ್ಲ. ಅವರಿಗೆ

ಜಾತಿಭೇದ ತೆಗೆದುಹಾಕಿ ಒಂದೇ ಅಸ್ಪೃಶ್ಯ ಜಾತಿ ಮಾಡಬೇಕು ಎನ್ನುವುದು ಇದೆ. ಕೇವಲ ಮಾಂಗ ಜಾತಿಯವರು ಎಂದು ಕರೆಸಿಕೊಂಡು ಇರುವುದರಿಂದ ಏನು ಸಿಗುತ್ತದೆ ಎನ್ನುವುದು ನನಗಂತೂ ತಿಳಿಯುತ್ತಿಲ್ಲ. ಒಂದು ವೇಳೆ ನೀವು ಜಾತಿಯ ಹುಚ್ಚು ಅಭಿಮಾನ ಬೆಳೆಸಿಕೊಂಡಿದೆಯಾದರೆ ನಿಮ್ಮ ಸರ್ವಸ್ವ ನಾಶವಾಗುತ್ತದೆ ಎಂದು ಸೂಕ್ಷ್ಮವಾಗಿ ಹೇಳುವುದು ನನ್ನ ಕರ್ತವ್ಯ.

ಮೇಲಿನಂತೆ ಡಾ. ಅಂಬೇಡ್ಕರ್ ಅವರ ಭಾಷಣ ಪೂರ್ಣಗೊಂಡ ಬಳಿಕ ವಂದನಾರ್ಪಣೆ ನಡೆಯಿತು.

ಮುಂಬೈ ಪ್ರಾಂತ ಮಾಂಗ್ ಸಮಾವೇಶ ಯಶಸ್ವಿಗೆ ಮತ್ತು ಪ್ರಚಾರಕ್ಕಾಗಿ ಕೆಲಸ ಮಾಡಿದ ಶ್ರೀ ಕೃಷ್ಣಾ ಗುಂಡಾಜಿ ಕುಚೇಕರ್, ರಾಮಚಂದ್ರ ಗುಂಡಾಜಿ ಕುಚೇಕರ್, ಯಶವಂತ ಲಕ್ಷ್ಮಣ ವಾಯದಂಡೆ, ಶಂಕರಬುವಾ ಸಕಟೆ. ಬಾಬು ರಾಮಾ ಕಾಂಬಳೆ, ಜ್ಞಾನು ದಾಜಿ ಇವಳೆ, ಮಾರುತಿ ಜ್ಞಾನು ತುಪಸುಂದರೆ, ಧೋಂಡಿಬಾ ತಾನೂ ಕಾಂಬಳೆ, ಕೇಶವ ಧೋಂಡಿ ದೇವಖುಳೆ, ಗಂಗಾರಾಮ್ ಸಖಾರಾಮ್ ಯಾದವ್, ಲಾಲಾ ಪೀರಾ ಯಾದವ್, ಭಾಗಾರಾಮ್ ಜಾಧವ, ಲಹು ಲಕ್ಷ್ಮಣ ಅಹ್ಲಾಟ್, ಹನ್ಯಾ ಕೇಶವ ಭೋತಾಳಜೆ, ತುಕಾರಾಮ ಯಶವಂತ ಚವ್ಹಾಣ, ರತ್ನಾಕರ ಖಂಡುಜಿ ಅವಳೆ, ಶಂಕರನಾಥ ಅವಳೆ, ಶಿಂಗೋನಕರ್, ದಾಜಿ ಸಂತು ಕಾಂಬಳೆ, ಸಿಂಗಾಜಿ ವಾಯದಂಡೆ, ಕೆ.ಡಿ. ವಾಯದಂಡೆ, ಆಭಾ ಗೇನು ಖಂಡಾಳೆ, ಲಹು ಅಂಕುಶ ಮೋಹಿತೆ, ಕೆ. ಎಂ. ಕಾಳೋಖೆ, ಶಂಕರ ಶಿಂಧೆ, ಬಾಳು ಸಖಾರಾಮ್ ಯಾದವ, ಎಸ್.ಕೆ. ದೇಶಮುಖ್, ಮಾರ್ತಂಡ ತಯಾಪಾ ಮಾನೆ, ರಾಉ ಮಲು ಮಾನೆ ಸೇರಿದಂತೆ ಇತರರು ಕಠಿಣ ಪರಿಶ್ರಮದಿಂದ ಸಮಾವೇಶ ಜರುಗಿದ್ದಕ್ಕೆ, ನಾಯಗಾಂವ ಬಿ. ಡಿ. ಚಾಳ್ ೪ ಮತ್ತು ೧೩ರ ಬಾಲಕಿಯರ ಸ್ವಾಗತ ಗೀತೆಗೆ, ಅವರ ಶಿಕ್ಷಕ ರಾಮಚಂದ್ರ ಗುಂಡಾಜಿ ಕುಚೇಕರ್, ಹಾರ್ಮೋನಿಯ ವಾದನದಲ್ಲಿ ಪ್ರಾವೀಣ್ಯತೆ ತೋರಿದ ಲಕ್ಷ್ಮಣ ಕುಚೇಕರ್ ಮಾಸ್ತರ್‌ಗೆ ಕುಲಾಬಾದ ಮಕ್ಕಳನ್ನು ಬ್ಯಾಂಡ್ ವಾದನದಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ತಯಾರಿ ಮಾಡಿದ್ದ ಶ್ರೀ. ಕಾಂಬಳೆ ಬ್ಯಾಂಡ್ ಮಾಸ್ತರ್‌ಗೆ, ಕುಲಾಬಾ ಬ್ಯಾಂಡ್, ಕುಲಾಬಾ ಸ್ಕೌಟ್ಸ್, ಸೈತನಾಚೌಕಿ ಸ್ಕೌಟ್ಸ್, ವಡಾಳಾ ಸ್ಕೌಟ್ಸ್, ನಾಯಗಾಂವ ಸ್ಕೌಟ್ಸ್, ಡಿಲಾಯಿಟ್ ರೋಡ್ ಸ್ಕೌಟ್ಸ್ ಮುಂತಾದವರು ಸಮಾವೇಶದ ಸುವ್ಯವಸ್ಥೆ ಕಾಪಾಡಿದ್ದಕ್ಕೆ ಮತ್ತು ಇಷ್ಟೊಂದು ದೊಡ್ಡ ಕೆಲಸಕ್ಕೆ ಆರ್ಥಿಕ ನೆರವು ನೀಡಿದ ಮುಂಬೈ ನಗರ ವಾಸಿಗಳಿಗೆ ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಆರ್ಥಿಕ ನೆರವು ನೀಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಲಾಯಿತು. ಅದೇ ರೀತಿ ಪುಣೆ, ಅಹ್ಮದನಗರ, ದೌಂಡ್, ಸೋಲಾಪುರ, ಕಹ್ರಾಡ್, ನಾಸಿಕ್, ಇತ್ಯಾದಿ ಸ್ಥಳಗಳಿಂದ ಆಗಮಿಸಿ ಸಮಾವೇಶಕ್ಕೆ ಮೆರುಗು ತಂದಿದ್ದಕ್ಕೆ ಎಲ್ಲರಿಗೂ ಕೂಡ ಅಭಿನಂದನೆ ಸಲ್ಲಿಸಲಾಯಿತು.

---

ಜನತಾ: ಜೂನ್ ೧೩, ೧೯೩೭.

## ೯೩.

## ಸಹೋದರಿಯರೇ ಸಮಾಜಕ್ಕೆ ಕಳಂಕ ತರುವ ವೃತ್ತಿ ಬೇಡ

ಮೇ ೩೦ ಮತ್ತು ಜೂನ್ ೧, ೧೯೩೬ರಂದು ಆಯೋಜಿಸಿದ್ದ ಮುಂಬೈ ಪ್ರಾಂತ ಮಹಾರ್ ಸಮಾವೇಶದಲ್ಲಿ ಅಂಗೀಕರಿಸಿದ ಧರ್ಮಾಂತರದ ನಿರ್ಣಯಕ್ಕೆ ಮುಂಬೈ ಕಾಮಾಟಿಪುರದಲ್ಲಿರುವ ಜೋಗತಿಯರು, ವೇಶ್ಯೆಯರು ಮತ್ತು ದೇವದಾಸಿಯರು ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಧರ್ಮಾಂತರದ ನಿರ್ಣಯಕ್ಕೆ ಅನುಗುಣವಾಗಿ ಈ ಮಹಿಳೆಯರು ತಮ್ಮ ವೃತ್ತಿ ತ್ಯಜಿಸುವುದಕ್ಕೆ ಸಿದ್ಧರಾಗಿದ್ದರು. ಈ ಮಹಿಳೆಯರಿಗೆ ಸದಾಚಾರದ ಜೀವನ ನಡೆಸಲಿಕ್ಕಾಗದ ಕಾರಣ ಅನೀತಿಯ ವ್ಯವಸಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಮಹಾರ್ ಸಮಾವೇಶದ ಬಳಿಕ ಈ ಮಹಿಳೆಯರು ತಮ್ಮ ಪರಿಸ್ಥಿತಿಯ ಕುರಿತು ಚಿಂತನೆ ಮಾಡಿ ತಾವೇ ಸ್ವಯಂ ಸ್ಫೂರ್ತಿಯಿಂದ ಸಭೆ ಸೇರಿ ತಮ್ಮ ವೃತ್ತಿಯಲ್ಲಿರುವ ಮಹಿಳೆಯರು, ಪುರುಷರ ಒಂದು ಸಭೆ ಸೇರಿಸಿ ಡಾ. ಅಂಬೇಡ್ಕರ್ ಅವರನ್ನು ಆ ಸಭೆಗೆ ಅತಿಥಿಯಾಗಿ ಆಮಂತ್ರಿಸಿ ಅವರಿಂದ ಮುಕ್ತಿ ಮಾರ್ಗಕ್ಕೆ ಉಪದೇಶ ಕೇಳುವುದು ಎಂದು ನಿರ್ಧರಿಸಿದರು. ಆ ರೀತಿಯಾಗಿ ಎಲ್ಲ ದೇವದಾಸಿ ಮಹಿಳೆಯರು ಮತ್ತು ಪುರುಷರು (ವಾಘೆ, ಪೋತರಾಜ ಮತ್ತು ಭುತೆ) ಸಭೆ ಜೂನ್ ೧೬, ೧೯೩೬ರಂದು ಪೋಯಬಾವಡಿ ಹತ್ತಿರದ ದಾಮೋದರ್ ಹಾಲ್‌ನಲ್ಲಿ ಆಯೋಜಿಸಲಾಗಿತ್ತು. ಸಭೆಗೆ ಬೃಹತ್ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಪುರುಷರು ಆಗಮಿಸಿದ್ದರು. ಆರಂಭದಲ್ಲಿ ಮೊದಲು ಒಂದಿಷ್ಟು ದೇವದಾಸಿಯರು, ವೇಶ್ಯೆಯರು, ಪೋತರಾಜ ಮತ್ತು ವಾಘೆ ಮುಂತಾದವರು ಮಾಡಿದ ಭಾಷಣದಲ್ಲಿ ಈ ವೃತ್ತಿಯಿಂದ ಹೊರಬರಬೇಕು ಎಂದು ತಮ್ಮ ಬಂಧು ಭಗಿನಿಯರಲ್ಲಿ ವಿನಂತಿಸಿದರು. ಕೆಲವು ಭಾಷಣಕಾರರು ನಾವು ಈಗಾಗಲೇ ಈ ಉದ್ಯೋಗದಿಂದ ಹೊರಗೆ ಬಂದು ಪ್ರಾಮಾಣಿಕವಾಗಿ ಸಿಗುವ ಅಲ್ಪಹಣದಿಂದ ನಮ್ಮ ಉಪಜೀವನ ನಡೆಸುತ್ತಿದ್ದೇವೆ ಎಂದು ಹೇಳಿದರು.

ಬಳಿಕ ಡಾ. ಅಂಬೇಡ್ಕರ್ ಅವರು ಭಾಷಣಕ್ಕೆ ಎದ್ದು ನಿಂತರು. ಆ ರಾತ್ರಿಯ ಕಾರ್ಯಕ್ರಮದ ವೇಳೆ ಅವರ ಮುಖದ ಮೇಲೆ ಉದ್ವಿಗ್ನತೆ ಇತ್ತು. ಅವರು ಭಾಷಣ ಆರಂಭಿಸುತ್ತಿದ್ದಂತೆಯೇ ಇಡೀ ಸಭಾಂಗಣದುದ್ದಕ್ಕೂ ಗಂಭೀರತೆ ಪಸರಿಸಲು ಶುರು ಮಾಡಿಕೊಂಡಿತು. ಡಾ. ಅಂಬೇಡ್ಕರ್ ತಮ್ಮ ಮಾತಿನಲ್ಲಿ:

ಇಂದು ಆಯೋಜಿಸಿರುವ ಈ ಸಭೆ ನನಗೆ ಇತ್ತೀಚೆಗಷ್ಟೇ ಆಯೋಜಿಸಿದ್ದ ಮಹಾರ್ ಸಮಾವೇಶಕ್ಕಿಂತ ನೂರು ಪಟ್ಟು ಶ್ರೇಷ್ಠ ಎನ್ನಿಸುತ್ತಿದೆ. ಸಮಾಜದ ಯಾವ ಭಾಗ ಅತ್ಯಂತ ಹೀನ ಎಂದು ಪರಿಗಣಿಸಲ್ಪಡುತ್ತದೋ ಅಂತಹ ಸಮಾಜ ನಿಮ್ಮದು. ಧರ್ಮದ ಹೆಸರಿನಲ್ಲಿ ಅನೈತಿಕತೆಯನ್ನು ತಮ್ಮದಾಗಿಸಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ಈ ಮಹಿಳೆಯರದ್ದಾಗಿದೆ. ಇವರಲ್ಲಿ ಸ್ವಾಭಿಮಾನ ಕಳೆದುಹೋಗಿದೆ. ದೇಹ ಮಾರಿ ಹೊಟ್ಟೆ ತುಂಬಿಸಿಕೊಳ್ಳುವುದೇ ಅವರ ಜೀವನದ ಸರ್ವಸ್ವ ಆಗಿದೆ. ಇಂತಹ ವರ್ಗ ಜಗತ್ತಿನಲ್ಲಿ ಏನು ನಡೆಯುತ್ತಿದೆಯೆಂದು ತಿಳಿದುಕೊಳ್ಳುವುದಕ್ಕೆ ತೋರಿಸಿರುವ ಜಿಜ್ಞಾಸೆ ಮತ್ತು ತಮ್ಮ ಚರಿತ್ರೆ ಬದಲಿಸಿಕೊಂಡು ಸುಧಾರಣೆಯ ಮಾರ್ಗದಲ್ಲಿ ಸಾಗುವುದಕ್ಕೆ ಮಾಡುತ್ತಿರುವ ಸಿದ್ಧತೆ ನಿಜವಾಗಿಯೂ ಭೂಷಣಪ್ರಾಯವಾಗಿದೆ. ಈ ಕಾರಣಕ್ಕಾಗಿಯೇ ನಾನು ಮಹಾರ್ ಸಮಾವೇಶದಲ್ಲಿ ೨೫ ಸಾವಿರ ಜನರು ಸೇರಿದ್ದರೂ ಅದು ನನಗೆ

ಮಹತ್ವದ್ದು ಎಂದು ಭಾಸವಾಗುವುದಿಲ್ಲ. ಇಂದು ನೀವು ಇಲ್ಲಿ ಸೇರಿರುವ ೪೦೦–೫೦೦ ಜನರು ಸೇರಿದ್ದರೂ ಕೂಡ ನನಗೆ ಇದೇ ಮಹತ್ವದ್ದಾಗುತ್ತದೆ. ಇಂದು ನೀವು ಆಯೋಜಿಸಿರುವ ಈ ಸಭೆಯ ಬಗ್ಗೆ ನನ್ನ ಅಭಿವಂದನೆಗಳು.

ಇದಿಷ್ಟು ಪ್ರಸ್ತಾವನೆ ಆಯಿತು. ಇನ್ನು ಮುಖ್ಯ ವಿಷಯ, ಇಂದು ಮುಂಬೈ ನಗರದಲ್ಲಿ ಮಹಾರ ಸಮಾಜ ನಾಚಿಕೆಯಿಂದ ತಲೆ ತಗ್ಗಿಸಿ ಮುಂದೆ ಹೋಗಬೇಕಾಗುತ್ತದೆಂದರೆ ಅದು ನಿಮ್ಮ ಕಾಮಾಟಿಪುರದಿಂದ ಹೋಗುವ ಸಂದರ್ಭದಲ್ಲಿ. ನಮ್ಮ ಸಹೋದರಿಯರು ಈ ಸ್ಥಳದಲ್ಲಿ ಇತರ ಸಮಾಜದ ವ್ಯಕ್ತಿಗಳಿಂದ ಹೇಗೆ ವಿಡಂಬನೆಗೆ ಒಳಗಾಗುತ್ತಾರೆ ಎನ್ನುವ ಚಿತ್ರವನ್ನು ಕಣ್ಣೆದುರು ಕಲ್ಪಿಸಿಕೊಂಡರೂ ಪ್ರತಿಯೊಬ್ಬ ಮಹಾರ್‌ನ ಮುಖದ ಮೇಲೆ ವಿಷಾದ ಭಾವ ಆವರಿಸದೇ ಇರದು. ನೀವು ಇಂದೇ ಮಹಾರ್ ಸಮಾಜದೊಂದಿಗೆ ಧರ್ಮಾಂತರಕ್ಕೆ ಸಿದ್ಧವಾಗಿರುವುದನ್ನು ಈ ಮೂಲಕ ತೋರ್ಪಡಿಸಿದ್ದೀರಿ. ಆದರೆ ನಿಮ್ಮ ತೀರ್ಮಾನದಿಂದ ನನ್ನ ಅನುಯಾಯಿಗಳ ಸಂಖ್ಯೆ ಮತ್ತಷ್ಟು ಹೆಚ್ಚಾಯಿತು ಎಂದು ನನಗೆ ಸಂತೋಷವಾಗುವುದಿಲ್ಲ. ನಮ್ಮ ಧರ್ಮಾಂತರ ಅರ್ಥ ಸರಿಯಾಗಿ ತಿಳಿದುಕೊಳ್ಳಿ. ನಾವು ಧರ್ಮಾಂತರ ಮಾಡುತ್ತಿರುವುದು ಈ ದುರ್ಗಂಧ ವಾತಾವರಣದಿಂದ ಹೊರ ಬರುವುದಕ್ಕೆ, ಎಲ್ಲರಿಗೂ ಸಮಾನತೆ, ಬಂಧುತ್ವ ಮತ್ತು ಸ್ವಾಭಿಮಾನದ ಜೀವನ ಲಭಿಸಿ ಅವರ ಜೀವನ ಸುಖಮಯವಾಗಲಿ ಎನ್ನುವ ಉದ್ದೇಶದಿಂದ ಈ ಧರ್ಮಾಂತರ ಮಾಡುತ್ತಿದ್ದೇವೆ. ಒಂದು ವೇಳೆ ನಿಮಗೆ ನಮ್ಮೊಂದಿಗೆ, ನಿಮ್ಮ ಬಂಧು ಬಳಗದೊಂದಿಗೆ ಬರುವುದಿದ್ದರೆ ಮೊದಲು ಈ ಅಸಹ್ಯಕರ ವಾತಾವರಣದಿಂದ ಮುಕ್ತವಾಗಬೇಕು. ನಿಮ್ಮ ಹೀನ ವೃತ್ತಿಗೆ ನೀವು ವಿದಾಯ ಹೇಳಲೇಬೇಕು. ಒಂದು ವೇಳೆ ಇದಕ್ಕೆ ನೀವು ಸಿದ್ಧರಿದ್ದರೆ ನೀವು ನಮ್ಮೊಂದಿಗೆ ಬರಬಹುದು. ಇಲ್ಲದಿದ್ದರೆ ನಮ್ಮೊಂದಿಗೆ ಬರುವುದು ಬೇಕಿಲ್ಲ. ಬೇಕಿದ್ದರೆ ಈಗ ನೀವು ಎಲ್ಲಿ ಇದ್ದೀರೋ ಅಲ್ಲಿಯೇ ಇರಬಹುದು, ನೀವು ಮುಸ್ಲಿಂ ಆಗಿ. ಕ್ರೈಸ್ತರಾಗಿ ನಮ್ಮ ಆಕ್ಷೇಪವಿಲ್ಲ. ಆದರೆ ಒಂದು ವೇಳೆ ನೀವು ನಮ್ಮೊಂದಿಗೆ ಬರುವುದೇ ಆಗಿದ್ದರೆ ತನು, ಮನ, ಧನಗಳಿಂದ ಶುಚಿಯಾಗಿ ತ್ರಿಶುದ್ಧಿಗಳಿಂದ ಶುಚಿರ್ಭೂತರಾಗಿ ನೀವು ನಮ್ಮೊಂದಿಗೆ ಬರತಕ್ಕದ್ದು, ಇಲ್ಲದಿದ್ದರೆ ನಾನು ಸ್ಪಷ್ಟವಾಗಿ ಹೇಳುತ್ತೇನೆ ನಿಮಗೆ ನಮ್ಮೊಂದಿಗೆ ಬರಲಿಕ್ಕಾಗದು.

ಒಂದು ವೇಳೆ ನೀವು ಮತ್ತೇ ಹಿಂದಿನ ವೃತ್ತಿಯನ್ನು ಆರಂಭಿಸಿ ಮಹಾರ್ ಜಾತಿಗೆ ಕಳಂಕ ಹಚ್ಚುವ ಕೆಲಸ ಮಾಡಿದರೆ ಸಾವಿರಾರು ಯುವ ಸ್ವಯಂ ಸೇವಕರನ್ನು ತಯಾರು ಮಾಡಿ ನಿಮ್ಮ ಇಡೀ ಕಾಮಾಟಿಪುರ ಧ್ವಂಸ ಮಾಡಬಲ್ಲೆ ಎಂದು ನಿಮಗೆ ಘಂಟಾಘೋಷವಾಗಿ ಹೇಳುತ್ತೇನೆ.

ನಿಮಗೆ ಗೊತ್ತಾಗಬೇಕು ಸ್ತ್ರೀ ಜಾತಿ ಸಮಾಜಕ್ಕೆ ಅಲಂಕಾರವಿದ್ದಂತೆ. ಪ್ರತಿಯೊಂದು ಸಮಾಜ ಸ್ತ್ರೀ ಜಾತಿಗೆ ಅತ್ಯಂತ ಗೌರವದ ಸ್ಥಾನ ನೀಡಿದೆ. ನಮ್ಮ ಮನೆಯ ಗೃಹಿಣಿಯಾಗುವ ಮಹಿಳೆ ಉತ್ತಮ ಕುಲದವಳಾಗಿರಬೇಕು ಎಂದು ಅಪೇಕ್ಷಿಸುತ್ತೇವೆ ಮತ್ತು ಅಂತಹ ಪತ್ನಿ ಸಿಗಬೇಕು ಎಂದು ಪ್ರಯತ್ನಿಸುತ್ತೇವೆ. ಏಕೆಂದರೆ ಆತನಿಗೆ ಗೊತ್ತಿರುತ್ತದೆ ತನ್ನ, ತನ್ನ ಮಕ್ಕಳ, ತನ್ನ ಕುಟುಂಬದ ಹೆಸರು ಅಜರಾಮರ ಆಗುವುದು ಸ್ತ್ರೀಯ ಶೀಲವನ್ನು ಅವಲಂಬಿಸಿದೆ ಎಂದು. ಇಂತಹ ಹಿರಿಯತನ ಸ್ತ್ರೀಗೆ ಲಭಿಸಿದೆ. ಆದರೆ ನಿಮ್ಮ ಕಾಮಾಟಿಪುರದ ಇತಿಹಾಸ ಕ್ರಮ ನೋಡಿದರೆ ಸಮಾಜಕ್ಕೆ, ಸ್ತ್ರೀ ಜಾತಿಗೆ ಕಳಂಕ ಹಚ್ಚುವಂತಿದೆ. ಆದ್ದರಿಂದಲೇ ನಿಮಗೆ ಸ್ತ್ರೀ ಸಮಾಜದಲ್ಲಿ ಯಾವ ಸ್ಥಾನ ಇದೆ ಎನ್ನುವುದನ್ನು ನೋಡಿ. ನೀವು ನಿಮ್ಮ ಹೀನ ಜೀವನ ತ್ಯಜಿಸಿ ನಿಮ್ಮ ಸ್ವಂತ ಮತ್ತು ನಿಮ್ಮ ಜಾತಿಯ ಸ್ಥಾನಮಾನ ಅಜರಾಮರವಾಗುವಂತೆ ಮಾಡಬೇಕಿದೆ. ಒಂದು ವೇಳೆ ನೀವು ಇದು ನಮ್ಮ ಉಪಜೀವನದ ಉದ್ಯೋಗವಾಗಿದೆ. ಈ ಉದ್ಯೋಗದಿಂದಾಗಿಯೇ ನಾವು ಬೇರೆಯವರನ್ನು ಬೇಡುವ ದುರ್ಗತಿ ಬಂದಿಲ್ಲ. ನಮ್ಮ ಜೀವನ ಸುಖದಲ್ಲಿದೆ. ನಮಗೆ ಇಲ್ಲಿ ನೌಕರರರಿದ್ದಾರೆ,

ಸೌಲಭ್ಯಗಳಿವೆ ಇಂತಹ ಐಶಾರಾಮಿ ಬದುಕು ಬಿಟ್ಟು ನಾವು ಏನು ಮಾಡಬೇಕು? ಎಂದು ಪ್ರಶ್ನಿಸಬಹುದು. ಇಂತಹ ನಿರ್ಲಜ್ಜ ಜೀವನ ಬಿಡಬೇಕು ಎಂದು ನಾನು ಹೇಳುತ್ತೇನೆ. ಅದೇ ಕಾಲಕ್ಕೆ ನಿಮ್ಮ ಉಪಜೀವನಕ್ಕೆ ಉದ್ಯೋಗ ನೀಡುವ ಜವಾಬ್ದಾರಿ ಹೊರುವುದಕ್ಕೆ ನಾನು ಸಿದ್ಧನಿಲ್ಲ ಎಂದು ಸ್ಪಷ್ಟವಾಗಿ ಹೇಳಿಬಿಡುತ್ತೇನೆ. ಇಂದು ಸಾವಿರಾರು ಸ್ತ್ರೀಯರು ತಮ್ಮ ಬಡ ಪತಿಯೊಂದಿಗೆ ದಟ್ಟ ದರಿದ್ರತನವನ್ನು ಮಡಿಲಲ್ಲಿ ಇಟ್ಟುಕೊಂಡು ಎಂತೆಂತಹ ಕಷ್ಟದ ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಹೊಟ್ಟೆ ಹೊರೆಯುವುದಕ್ಕೆ ಕಷ್ಟಗಳನ್ನು ಸಹಿಸಬೇಕಿದೆ. ಸಾವಿರಾರು ಸ್ತ್ರೀಯರು ಇಂದು ಕಾರ್ಖಾನೆ, ಗಿರಣಿಗಳಲ್ಲಿ ಕೆಲಸ ಮಾಡುತ್ತ ಸಂಸಾರದ ಇತರ ಜವಾಬ್ದಾರಿಗಳನ್ನು ನಿರ್ವಹಿಸಿ ತನ್ನ ಮಕ್ಕಳಿಗೆ ಹೊಟ್ಟೆಗೆ ಹಾಕಿ ಅರ್ಧ ಹೊಟ್ಟೆಯಲ್ಲಿ ಜೀವಿಸುತ್ತಾರೆ ವಿನಃ ನಿಮ್ಮ ದಂಧೆಯಲ್ಲಿ ಸುಖವಿದೆ. ಹಣವಿದೆಯೆಂದು ಅವರು ಈ ದಿಕ್ಕಿನತ್ತ ತಲೆ ಹಾಕಿಯೂ ಮಲಗುವುದಿಲ್ಲ. ಅವರು ಏಕೆ ಹಾಗೆ ಮಾಡುವುದಿಲ್ಲ. ಕಷ್ಟ ಏಕೆ ಸಹಿಸಿಕೊಳ್ಳಬೇಕು? ಮಹಾಭಾರತದ ಕಥೆಯನ್ನು ನೀವು ಕೇಳಿರಬೇಕು. ಪಾಂಡವರು ಜೂಜಿನಲ್ಲಿ ಸೋತು ವನವಾಸಕ್ಕೆ ಹೋಗುವುದಕ್ಕೆ ಚಮರಿಮೃಗದ ವಸ್ತ್ರ ಧರಿಸಿ ಹೊರಟರು. ಪಾಂಡವರೊಂದಿಗೆ ದ್ರೌಪದಿ ಕೂಡ ಅಂತಹದ್ದೇ ವಸ್ತ್ರಗಳನ್ನು ಧರಿಸಿ ಹೊರಟಿದ್ದಳು. ಆಗ, ದುರ್ಯೋಧನ ದ್ರೌಪದಿಯನ್ನು ಉದ್ದೇಶಿಸಿ ಒಂದು ಮಾತು ಹೇಳುತ್ತಾನೆ. ಈ ಮೂರ್ಖ ಪತಿಗಳ ಸಹವಾಸ ಮಾಡಿ ನಿನ್ನನ್ನು ನೀನು ಯಾವ ಸ್ಥಿತಿಗೆ ತಂದುಕೊಂಡೆ ದ್ರೌಪದಿ. ನಿನ್ನ ಸುಕೋಮಲ ದೇಹಕ್ಕೆ ಏಕೆ ಕಷ್ಟ ಕೊಡುತ್ತಿ? ನೀನು ನನ್ನೊಂದಿಗೆ ಬಾ. ನಿನ್ನನ್ನು ಐಶ್ವರ್ಯ ಸುಖ ಸಂಪತ್ತಿನಲ್ಲಿ ಇರಿಸುತ್ತೇನೆ. ನಿನಗೆ ಒಂದಿಷ್ಟೂ ಕಷ್ಟವಾಗದಂತೆ ನೋಡಿಕೊಳ್ಳುತ್ತೇನೆ ಎನ್ನುತ್ತಾನೆ. ಇದಕ್ಕೆ ಪ್ರತ್ಯುತ್ತರವಾಗಿ ದ್ರೌಪದಿ, ನನಗೆ ನೀತಿಯಿಂದ ಜೀವನ ನಡೆಸಲಿಕ್ಕೆ ಅವಕಾಶ ನೀಡದ ಅಂತಹ ಐಶ್ವರ್ಯ ನನಗೆ ಬೇಕಿಲ್ಲ. ಅರಮನೆಗಿಂತ ನನಗೆ ವನವಾಸವೇ ಅತ್ಯಂತ ಪ್ರೀತಿಯದ್ದು ಎಂದು ಹೇಳುತ್ತಾಳೆ. ನೀವು ಕೂಡ ಇದೇ ಮನಸ್ಥಿತಿ ಬೆಳೆಸಿಕೊಳ್ಳಬೇಕು. ನೀವು ಕಷ್ಟಗಳಿಗೆ ಏಕೆ ಹೆದರಬೇಕು? ನಿಮ್ಮಂತೆಯೇ ಇರುವ ಸಾವಿರಾರು ಮಹಿಳೆಯರಂತೆ ಹಳ್ಳಿಗಳಿಗೆ ಹೋಗಿ ಕಷ್ಟಪಟ್ಟು ಉಪಜೀವನ ಮಾಡುವುದಕ್ಕೆ ನಿಮಗೆ ಏಕೆ ಭಾರ ಅನ್ನಿಸಬೇಕು? ನಿಮಗೆ ಏಕೆ ನಿಮ್ಮ ಜಾತಿಯ ಬಗ್ಗೆ ಅಭಿಮಾನ ಇರಬಾರದು? ನಿಮ್ಮ ಈ ಕಳಂಕಿತ ಉದ್ಯೋಗದಿಂದಾಗಿ ಮಹಾರ್ ಜಾತಿಗೆ ಆಗುತ್ತಿರುವ ಅವಮಾನದ ಕಲ್ಪನೆ ನಿಮಗೆ ಇರಲಿಕ್ಕಿಲ್ಲ. ಆದರೆ ನಾನು ಮಾತ್ರ ಪ್ರತಿಕ್ಷಣ ತಲೆ ತಗ್ಗಿಸಬೇಕಾಗುತ್ತದೆ. ಕೆಲವು ವರ್ಷಗಳ ಹಿಂದೆ ಕಾಮಾಟಿಪುರದಲ್ಲಿ ಆಯೋಜಿಸಿದ್ದ ಒಂದು ಸಭೆಗೆ ಹೋಗಿದ್ದೆ. ಆಗ ಡಾ. ಸೋಳಂಕಿ ಕೂಡ ನನ್ನ ಜೊತೆಗೆ ಇದ್ದರು. ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾತನಾಡುತ್ತಿದ್ದ ವೇಳೆ ಸರ್ಕಾರ ಶಿಕ್ಷಣದ ವಿಚಾರದಲ್ಲಿ ಮುಸ್ಲಿಂರಿಗೆ ನೀಡುವಷ್ಟು ಸೌಲಭ್ಯಗಳನ್ನು ಅಸ್ಪೃಶ್ಯ ಸಮಾಜಕ್ಕೆ ನೀಡುತ್ತಿಲ್ಲವೆಂದು ಹೇಳಿದೆ. ಅಲ್ಲಿದ್ದ ಕೆಲವು ಮುಸ್ಲಿಂ ಗೃಹಸ್ಥರ ಪೈಕಿ ಒಬ್ಬ ಎದ್ದು ನಿಂತು ಮಹಾರರಿಗೆ ಮುಸ್ಲಿಂರ ಬಗ್ಗೆ ಏಕೆ ಈ ವೈಷಮ್ಯ? ನಾವು ಎರಡು–ಎರಡು, ನಾಲ್ಕು–ನಾಲ್ಕು ಮಹಾರ್ ಮಹಿಳೆಯನ್ನು ಇಟ್ಟುಕೊಳ್ಳುತ್ತೇವೆ ಅದಕ್ಕೆ ಏನೀಗ? ಎಂದ. ಈ ತೀಕ್ಷ್ಣ ಪ್ರಶ್ನೆಗೆ ನನಗೆ ಉತ್ತರಿಸಲಾಗಲಿಲ್ಲ. ಆದರೆ ಆ ಮಾತಿನಿಂದ ನನಗೆ ಎಷ್ಟು ಬೇಸರ ಆಗಿರಬಹುದು ಇದನ್ನು ನೀವೇ ಕಲ್ಪನೆ ಮಾಡಿಕೊಳ್ಳಿ. ನಿಮ್ಮ ಜೀವನ ಶೈಲಿ ಮತ್ತು ನೀವು ಕಾಮಾಟಿಪುರದಲ್ಲಿ ಇರುವ ರೀತಿ ನೋಡಿ ನನಗೆ ಅತೀವ ಸಂತಾಪವಾಗುತ್ತದೆ. ಈ ಸಂತಾಪವು ಅಂಗುಷ್ಠದಿಂದ ಮಸ್ತಕದವರೆಗೆ ಕ್ರೋಧಾಗ್ನಿಯಂತೆ ಉರಿಯುತ್ತದೆ. ಆದ್ದರಿಂದ ನಿಮಗೆ ನಾನು ಮತ್ತೊಮ್ಮೆ ಸ್ಪಷ್ಟವಾಗಿ ಹೇಳುತ್ತೇನೆ. ಒಂದು ವೇಳೆ ನಿಮಗೆ ಮಹಾರ್ ಅಂತ ಅನ್ನಿಸಿಕೊಳ್ಳಬೇಕಿದ್ದರೆ ನೀವು ತಕ್ಷಣ ಈ ಹೊಲಸು ವೃತ್ತಿ ಬಿಡಬೇಕು. ಈ ದಂಧೆಯಲ್ಲಿದ್ದುಕೊಂಡು ನೀವು ನನ್ನೊಂದಿಗೆ ಬರುತ್ತೀರಿ ಎಂದರೆ ಅದಕ್ಕೆ ನಾನು ಅವಕಾಶ ನೀಡಲಾರೆ ಮತ್ತು ಇಷ್ಟು ಹೇಳಿದರೂ ನೀವು ಕೇಳದಿದ್ದರೆ ನಿಮ್ಮ ಈ ಜಾಗದಿಂದ ನಿಮ್ಮನ್ನು

ಎತ್ತಿಹಾಕದೇ ಸುಮ್ಮನಿರುವುದಿಲ್ಲ. ಈಗಲಾದರೂ ತಕ್ಷಣ ಎಚ್ಚರಾಗಿ ಮತ್ತು ಈ ಜೀವನ ಶೈಲಿಯನ್ನು ಬಿಟ್ಟುಬಿಡಿ.

ಇಂದಿನ ಈ ಸಭೆಯನ್ನು ನೀವು ಸ್ವಯಂಸ್ಫೂರ್ತಿಯಿಂದ ಆಯೋಜಿಸಿದ್ದೀರಿ ಎಂದು ಭಾವಿಸುತ್ತೇನೆ. ನಿಮ್ಮನ್ನು ನೀವೇ ಸುಧಾರಿಸಿಕೊಳ್ಳುವುದಕ್ಕೆ ಉದ್ಯುಕ್ತರಾಗಿದ್ದೀರಿ. ಆದಾಗ್ಯೂ ನನ್ನ ಈ ಆಶಯ ಆದಷ್ಟು ಬೇಗ ಸಫಲವಾಗುತ್ತದೆ ಎಂದು ಆಶಯ ವ್ಯಕ್ತಪಡಿಸಿ ನನ್ನ ಭಾಷಣ ಪೂರ್ಣಗೊಳಿಸುತ್ತೇನೆ.

ಡಾ. ಅಂಬೇಡ್ಕರ್ ಅವರು ಮಾತನಾಡುತ್ತಿದ್ದ ವೇಳೆ ಮಹಿಳೆಯರ ಅಂತಃಕರಣ ಗದ್ಗದಿತವಾಗಿತ್ತು. ಏಕೆಂದರೆ ಡಾ. ಅಂಬೇಡ್ಕರ್ ಅವರ ಭಾಷಣ ಅಷ್ಟೊಂದು ಪರಿಣಾಮಕಾರಿ ಮತ್ತು ಸ್ಫೂರ್ತಿದಾಯಕವಾಗಿತ್ತು. ಇತರ ಕಲಾಪಗಳು ಮುಗಿದ ಬಳಿಕ ಸಭೆ ಮುಕ್ತಾಯವಾಯಿತು.

---

ಜನತಾ: ಜುಲೈ ೪, ೧೯೩೬.

## ೯೪.

# ನಾವೀಗ ಬೃಹತ್ ಸಮುದ್ರ ದಾಟಬೇಕಿದೆ

ಸೆಪ್ಟಂಬರ್ ೭, ೧೯೩೬ರಂದು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಕಾರ್ಯನಿಮಿತ್ತ ಬೆಳಗಿನ ಎಕ್ಸ್‌ಪ್ರೆಸ್ ರೈಲಿನಲ್ಲಿ ಹೊರಟು ಮಧ್ಯಾಹ್ನ ೧೨ರ ಹೊತ್ತಿಗೆ ಪುಣೆಗೆ ಆಗಮಿಸಿದ್ದರು. ಅವರನ್ನು ಬರಮಾಡಿಕೊಳ್ಳುವುದಕ್ಕೆ ಅಸ್ಪೃಶ್ಯ ಮುಖಂಡರು ಸ್ಟೇಷನ್‌ಗೆ ಆಗಮಿಸಿದ್ದರು. ಮೇಜರ್ ಸುಭೇದಾರ ಆರ್. ಎಸ್. ಘಾಟಗೆ, ರಾಜಾರಾಮ ಭೋಳೆ, ಡಿ. ಜಿ. ಜಾಧವ, ಆರ್. ಕೆ. ಕದಮ್, ಸುಭೇದಾರ, ದುಬೆ, ಸಾವಂತ ಮತ್ತು ಮಾತಂಗ ಸಮಾಜದ ಲಾಂಡಗೆ ಸೇರಿದಂತೆ ಇತರರು ಸ್ಟೇಷನ್‌ನಲ್ಲಿ ಇದ್ದರು. ಮಾತಂಗ ಸಮಾಜದಿಂದ ಭಾವಚಿತ್ರ ಮತ್ತು ಪುಷ್ಪಹಾರ ಸಮರ್ಪಣೆಯ ಬಳಿಕ ತಮ್ಮ ವೈಯಕ್ತಿಕ ಕೆಲಸಕ್ಕಾಗಿ ತೆರಳಿದ್ದ ಡಾ.ಅಂಬೇಡ್ಕರ್ ಅವರನ್ನು ಪುನಃ ಡಿ. ಸಿ. ಮಿಷನ್‌ಗೆ ಕರೆತರಲಾಯಿತು. ಈ ವೇಳೆ ಅವರೊಂದಿಗೆ ಡಾ. ಸೋಳಂಕಿ ಕೂಡ ಇದ್ದರು. ಮುಂಬರುವ ಅಸೆಂಬ್ಲಿ ಚುನಾವಣೆ ಸಂಬಂಧ ಚರ್ಚಿಸುವುದಕ್ಕಾಗಿ ಪುಣೆಯ ಸುಮಾರು ನೂರು–ಇನ್ನೂರು ಮುಖಂಡರು ಅಲ್ಲಿ ನೆರೆದಿದ್ದರು. ಎಲ್ಲರೊಂದಿಗೆ ಚರ್ಚೆ ನಡೆಸಿದ ಬಳಿಕ ಡಾ.ಅಂಬೇಡ್ಕರ್ ಅವರು, ಅಸ್ಪೃಶ್ಯರ ಮೀಸಲು ಸ್ಥಾನಗಳ ಅಭ್ಯರ್ಥಿಗಳ ಹೆಸರುಗಳನ್ನು ಸ್ವತಂತ್ರ ಮಜೂರ್ ಪಕ್ಷದಿಂದ ಪ್ರಕಟಿಸಲಾಗುವುದು ಎಂದು ಹೇಳಿ ಮುಂಬರುವ ಚುನಾವಣೆ ಕುರಿತು ತಮ್ಮ ಭಾಷಣದಲ್ಲಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರೀತಿಯ ಬಾಂಧವರೆ,

ನಾನು ಆಯ್ಕೆ ಮಾಡಿರುವ ಅಭ್ಯರ್ಥಿಗಳ ಬಗ್ಗೆ ಒಂದಿಷ್ಟು ಟೀಕೆಗಳು ವ್ಯಕ್ತವಾಗುತ್ತಿದ್ದು ಅವುಗಳ ಬಗ್ಗೆ ನನಗೆ ಯಾವುದೇ ರೀತಿಯ ಬೇಸರ ಅಥವಾ ಆಶ್ಚರ್ಯವಾಗುತ್ತಿಲ್ಲ. ನನ್ನ ಆಯ್ಕೆಗೆ ಪ್ರತಿಕೂಲ ಎನ್ನುವಂತಹ ಅಭಿಪ್ರಾಯಗಳು ಹೆಚ್ಚಾಗಿ ಬಂದಿಲ್ಲ. ಇದರ ಅರ್ಥ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದ ನನ್ನ ತೀರ್ಮಾನ ಸಮಾಜಕ್ಕೆ ಮೆಚ್ಚುಗೆಯಾಗಿದೆ ಎಂದು ಹೇಳಲು ತೊಂದರೆ ಇಲ್ಲ. ನಾನು ಆಯ್ಕೆ ಮಾಡಿರುವ ಅಭ್ಯರ್ಥಿಗಳಲ್ಲಿ ನನ್ನ ಸಂಬಂಧಿಕರು, ಸಹೋದರರು, ಮಕ್ಕಳು, ಅಳಿಯ ಯಾರೂ ಇಲ್ಲ. ಅಭ್ಯರ್ಥಿಗಳ ಆಯ್ಕೆಗೆ ಮೂರು ಪರೀಕ್ಷೆಗಳನ್ನು ಇರಿಸಿದ್ದೆ. ಆ ಪರೀಕ್ಷೆ ಎದುರಿಸಿದವರನ್ನು ಆಯ್ಕೆ ಮಾಡಿದ್ದೇನೆ. ಮೊದಲನೇ ಪರೀಕ್ಷೆ ಎಂದರೆ ಇಂಗ್ಲಿಷ್ ಭಾಷೆಯ ಮೇಲಿನ ಪ್ರೌಢಿಮೆ. ಇದು ಏಕೆಂದರೆ ಎಲ್ಲ ಕೆಲಸಗಳು ಇಂಗ್ಲಿಷ್ ಭಾಷೆಯಲ್ಲಿಯೇ ನಡೆಯುತ್ತವೆ. ತಮ್ಮ ಜಿಲ್ಲೆಯ, ತಾಲೂಕಿನ ಗೋಮಾಳಗಳು ಸೇರಿದಂತೆ ಇತರ ವಿಷಯಗಳ ಬಗ್ಗೆ ಇಂಗ್ಲಿಷ್‌ನಲ್ಲಿ ಕೇಳಬೇಕಾಗುತ್ತದೆ. ಹೀಗಾಗಿ ಅಭ್ಯರ್ಥಿಗೆ ಇಂಗ್ಲಿಷ್ ಜ್ಞಾನ ಅಗತ್ಯವಾಗಿದೆ. ಎರಡನೆಯ ವಿಚಾರ ಎಂದರೆ, ಅಭ್ಯರ್ಥಿ ತರುಣನಾಗಿರಬೇಕು. ಮುದುಕರನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಹೋಗುವುದಕ್ಕೆ ಅಲ್ಲಿ ಯಾರೂ ಇರುವುದಿಲ್ಲ. ಒಂದು ವೇಳೆ ಅಸೆಂಬ್ಲಿಯ ಕಲಾಪ ನಡೆಯುತ್ತಿದ್ದ ವೇಳೆ ಹಳ್ಳಿಯಿಂದ ತಂತಿ ಸಂದೇಶ ಬಂದರೆ ಅಗತ್ಯವೆನ್ನಿಸಿದರೆ ನಡೆದುಕೊಂಡು ಹೋಗಿ ತರುವಂತಹ ಸಾಮರ್ಥ್ಯವಿರಬೇಕು. ಹಗಲು ರಾತ್ರಿ ಎನ್ನದೇ ತನ್ನ ಜಿಲ್ಲೆಯ ಜನರಿಗಾಗಿ

ಸುತ್ತಬೇಕಾಗುತ್ತದೆ. ಇಂತಹ ಕೆಲಸಗಳು ಮುದುಕರಿಂದ, ಸಂಧಿವಾತದಿಂದ ಬಳಲುತ್ತಿರುವ ಜನರಿಂದ ಸಾಧ್ಯವಿಲ್ಲ. ಮೂರನೆಯ ಮಹತ್ವದ ಸಂಗತಿ ಎಂದರೆ ನಮ್ಮ ಪಕ್ಷದ ಅಭ್ಯರ್ಥಿ ಪಕ್ಷದ ಶಿಸ್ತಿನ ಚೌಕಟ್ಟಿನೊಳಗೆ ಇರಬೇಕು. ಪಕ್ಷದ ನಿಯಮಗಳಿಗೆ ಬದ್ಧನಾಗಿ ಅದರ ಕಟ್ಟಳೆಗಳ ಮಧ್ಯೆ ಕೆಲಸ ಮಾಡುವ ಛಾತಿ ಇರಬೇಕು ಮತ್ತು ಪಕ್ಷಕ್ಕಾಗಿ ನಿಸ್ವಾರ್ಥ ಬುದ್ಧಿಯಿಂದ ಕೆಲಸ ಮಾಡುವವರಾಗಿರಬೇಕು. ಸ್ವಾರ್ಥಪರ ವ್ಯಕ್ತಿಗಳಿಗೆ ಕವಡೆ ಕಾಸಿನ ಕಿಮ್ಮತ್ತು ನೀಡಲು ನಾನು ಸಿದ್ಧನಿಲ್ಲ.

ನಿಮ್ಮ ಜಿಲ್ಲೆಯಿಂದ ಆಯ್ಕೆಯಾಗಿರುವ ರಾಜಾರಾಮ ಭೋಳೆ ಅವರನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ. ಅವರಷ್ಟು ಕಲಿತವರು ಮತ್ತು ಅರ್ಹ ವ್ಯಕ್ತಿ ಪುಣೆಯಲ್ಲಿ ಇಲ್ಲವೇ ಇಲ್ಲ. ಅವರು ಆಯ್ಕೆಗೊಂಡರೆ ನನಗೆ ಅಣ್ಣತಮ್ಮಂದಿರತ್ತ, ಜಿಲ್ಲೆಯ ಯೋಜನೆಗಳತ್ತ ಇಲ್ಲವೇ ವತನದಾರಿಕೆಗೆ ಗಮನ ನೀಡಬೇಕಾದ ಅಗತ್ಯ ಕಾಣಿಸುತ್ತಿಲ್ಲ. ಒಂದು ವೇಳೆ ಭೋಳೆ ಅವರು ಅವಿರೋಧವಾಗಿ ಆಯ್ಕೆಯಾದರೆ ನಮ್ಮ ಪಾಲಿಗೆ ಒಟ್ಟು ಮೂರು ಸ್ಥಾನಗಳು ಲಭಿಸಲಿವೆ. ಒಂದು ವೇಳೆ ಅವರಿಗೆ ಪ್ರತಿಸ್ಪರ್ಧೆ ಇಲ್ಲದೇ ಇದ್ದರೆ ಅವಿರೋಧವಾಗಿ ಆಯ್ಕೆಯಾಗುತ್ತಾರೆ. ಭೋಳೆ ಅವರಿಗೆ ಚಲಾಯಿಸದ ಉಳಿದ ಮತಗಳಿಂದ ನಮ್ಮ ಪಕ್ಷದ ಇನ್ನೊಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಬಹುದು ಮತ್ತು ಇನ್ನೊಂದು ಭಾಗದ ನಮ್ಮ ಪಕ್ಷದ ಅಭ್ಯರ್ಥಿಯೂ ಕೂಡ ತನ್ನ ಭಾಗದ ಮತಗಳಿಂದ ಚುನಾವಣೆಯಲ್ಲಿ ಆಯ್ಕೆಯಾಗಬಹುದು. ಈ ರೀತಿ ನಾವು ಶಿಸ್ತಿನಿಂದ ವರ್ತಿಸಿದರೆ ಕೇವಲ ಪುಣೆಯೊಂದರಲ್ಲಿಯೇ ಮೂರು ಸ್ಥಾನಗಳನ್ನು ಪಡೆಯಬಹುದು. ಹೀಗಾಗಿ ನಾವು ತಾಲೂಕಿನ, ಗ್ರಾಮದ ಇಲ್ಲವೇ ಜಿಲ್ಲೆಯ ಅಭಿಮಾನ ಬದಿಗಿರಿಸಿ ನಮ್ಮ ಪಕ್ಷದ ಹಿತಕ್ಕಾಗಿ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕಿದೆ. ಕೌನ್ಸಿಲ್ ಅಂದರೆ ಮಹಾರಿಕೆ ಅಲ್ಲ. ಅಪ್ಪ ಸತ್ತ ಎಂದು ಮಗನಿಗೆ ಸಿಗುವುದಿಲ್ಲ!

ಸದ್ಯ ನನ್ನ ಆರೋಗ್ಯ ಸರಿಯಾಗಿಲ್ಲ. ರಕ್ತದೊತ್ತಡ ಹೆಚ್ಚಾಗಿರುವ ಕಾರಣ ಒಂದಿಷ್ಟು ದೂರ ನಡೆಯುವುದಕ್ಕೂ ಆಗುವುದಿಲ್ಲ. ಹೀಗಾಗಿ ಪ್ರತಿಯೊಂದು ಸ್ಥಳಕ್ಕೆ ಹೋಗಿ ಸಂಶಯ ನಿವಾರಿಸುವುದಕ್ಕೆ ನನಗೆ ಸಮಯ ಸಿಗಲಾರದು. ನಮ್ಮ ಪಕ್ಷದ ಅಭ್ಯರ್ಥಿಗಳ ವಿರುದ್ಧ ಅಪ್ರಪಚಾರ ಮಾಡುವವರು ಸರಿಯಾಗಿ ವಿಚಾರ ಮಾಡಿ ಅಂತಹ ಕೆಲಸಕ್ಕೆ ಕೈ ಹಾಕುವ ಧೈರ್ಯ ತೋರಿಸಲಿ. ನಾನು ಅವರ ಸ್ವಾರ್ಥ ಏನು ಎನ್ನುವುದನ್ನು ಸಿದ್ಧ ಮಾಡಿ ತೋರಿಸಬಲ್ಲೆ. ದಿನ ನಿತ್ಯ ನನ್ನ ಹೆಗಲ ಮೇಲೆ ಜವಾಬ್ದಾರಿಗಳು ಬಂದು ಬೀಳುತ್ತಿವೆ. ನನ್ನ ಸಮಾಜದ ಸ್ವಾತಂತ್ರ್ಯದ ಕೆಲಸದಲ್ಲಿ ತೊಡಗಿರುವ ನನಗೆ ಹಿತಶತ್ರುಗಳು ಬೆಳೆದು ನಿಂತಿದ್ದಾರೆ. ಈಗಿನ ಈ ಹೋರಾಟದಲ್ಲಿ ನನ್ನ ಪ್ರಾಣ ಹೋಗುವಂತಹ ಪ್ರಸಂಗ ಉದ್ಭವಿಸಿದರೂ ಆಶ್ಚರ್ಯವಿಲ್ಲ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ನಿಮ್ಮ ಪರವಾಗಿ ನಾನು ಎಂತಹದ್ದೇ ಜವಾಬ್ದಾರಿ ಸ್ವೀಕರಿಸಲು ಸಿದ್ಧನಿದ್ದೇನೆ. ನನ್ನ ಮೇಲೆ ವಿಶ್ವಾಸ ಇದ್ದರೆ ನಾನು ಆಯ್ಕೆ ಮಾಡಿದ ಅರ್ಹ ವ್ಯಕ್ತಿಗಳಿಗೆ ನೀವು ಮತ ನೀಡಿ ಸಮಾಜದ ಹಿತ ಕಾಯಬೇಕು. ಎಲ್ಲ ಸ್ಥಾನಗಳ ಮೇಲೆ ವೃದ್ಧರಿಗೆ ಹಕ್ಕು ಇದೆ ಎಂದಾದರೆ ಎಲ್ಲ ಕಡೆಗೂ ವೃದ್ಧರೆ ತುಂಬಿಕೊಳ್ಳುತ್ತಾರೆ. ಸ್ವತಃ ನನಗೂ ಜಾಗ ಇಲ್ಲದಂತಾಗುತ್ತದೆ. ನನಗಿಂತ ಸುಭೇದಾರ ಘಾಟಗೆ ೫೦ ವರ್ಷ ಹೆಚ್ಚಿಗೆ ಕೆಲಸ ಮಾಡಿದ್ದಾರೆ. ಶ್ರೀ. ಶಿವರಾಮ ಜಾನಬಾ ಕಾಂಬಳೆ ೬೦ ವರ್ಷ ಕೆಲಸ ಮಾಡಿದ್ದಾರೆ. ಅವರ ವಯಸ್ಸಿಗೆ ಅನುಗುಣವಾಗಿ ನನ್ನನ್ನು ನೋಡಿದರೆ ಕೆಲಸ ಮಾಡಲಿಕ್ಕಾಗುವುದಿಲ್ಲ. ಹೀಗಾಗಿ ಇಂತಹ ವಾದ ವಿವಾದಗಳಿಗೆ ತಲೆ ಕೆಡಿಸಿಕೊಳ್ಳುವುದಕ್ಕೆ ನನಗೆ ಕಾರಣಗಳೂ ಇಲ್ಲ, ಸಮಯವೂ ಇಲ್ಲ. ಎಲ್ಲಿಯವರೆಗೆ ನಿಮ್ಮ ವಿಶ್ವಾಸ ನನ್ನ ಮೇಲೆ ಇದೆಯೋ ಅಲ್ಲಿಯವರೆಗೆ ನಿಮ್ಮ ಮುಖಂಡತ್ವ ಸ್ವೀಕರಿಸುತ್ತೇನೆ. ಈ ಸಂದರ್ಭದಲ್ಲಿ ನಾವೀಗ ಬೃಹತ್ ಸಮುದ್ರ ದಾಟಿ ಹೋಗಬೇಕಿದೆ. ಸಮುದ್ರ ದಾಟಲು

ಮುರುಕು ನಾವೆ ಮತ್ತು ಆಲಸಿ ನಾವಿಕನನ್ನು ನೀಡಿದಲ್ಲಿ ನಾನು ನಾವೆಯಲ್ಲಿ ಕಾಲಿಡುವುದಿಲ್ಲ. ನನಗೆ ನಿಮ್ಮ ಮುಖಂಡತ್ವದ ಅಗತ್ಯವೇ ಇಲ್ಲ. ಎಲ್ಲರೂ ಗಮನ ಇಟ್ಟು ಕೇಳಿ: ಪ್ರತಿಯೊಬ್ಬರಲ್ಲೂ ಅರ್ಹತೆ ಇರಬೇಕು; ಅದು ಹೆಸರಿನಿಂದಲ್ಲ ಕೆಲಸದಿಂದ ಇರಬೇಕು.

---

ಜನತಾ: ಸೆಪ್ಟೆಂಬರ್ ೧೨, ೧೯೩೭.

## ೯೫.

# ಅಂಧ, ಸ್ವಾರ್ಥ ದೃಷ್ಟಿಕೋನದಿಂದ ಇಡೀ ಸಮಾಜವೇ ಸರ್ವನಾಶ

ಗುರುವಾರ ಅಕ್ಟೋಬರ್ ೮, ೧೯೩೬ರಂದು ಪರಮಪೂಜ್ಯ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಬೆಳಗಿನ ೬–೩೦ರ ರೈಲಿನಲ್ಲಿ ಜಳಗಾಂವಕ್ಕೆ ಆಗಮಿಸಿದರು. ಈ ಸಂದರ್ಭದಲ್ಲಿ ಅವರ ಸ್ವಾಗತಕ್ಕಾಗಿ ಪೂರ್ವ ಖಾನ್ ದೇಶದ ಪ್ರಮುಖ ಸದಸ್ಯರು ಇದ್ದರು. ಸ್ವಾಗತದ ಸಮಯದಲ್ಲಿ ಮೇಜರ್ ಸೇನು ನಾರಾಯಣ ಮೇಢೆ, ಶಾಮರಾವ್ ಕಾಮಾಜಿ ಜಾಧವ, ರಾಯಲಾ ಝುಗಾ ನಿಕಮ್, ಲಕ್ಷ್ಮಣ ಪಾಹುಣಾ ಮೇಢೆ, ಧನಾಜಿ ರಾಮಚಂದ್ರ ಬಿಹ್ರಾಡೆ, ಮೋತಿರಾಮ್ ರಾಮಜಿ ಬಿಹ್ರಾಡೆ, ದೇವಿದಾಸ ಸೋನಾವಣೆ, ನಾಮದೇವ ಸೋನಾವಣೆ, ಓಂಕಾರ ಸೋನಾವಣೆ, ದಿವಾನ್ ಸೀತಾರಾಮ್ ಚವ್ಹಾಣ, ಮಾಛಾಡೆ, ಶ್ರೀ. ಪ್ರಧಾನ ವಕೀಲ, ವಾನಖೇಡೆ, ಬಾರಸೆ, ಬಹಿರೂಪೆ, ಕೆ. ಎಲ್. ತಾಯಡೆ, ಬಡಗೆ, ನಾಮದೇವ ಭಾಗಾಜಿ ಭಾಲೇರಾವ್, ಶಿವಾ ರಘುನಾಥ, ಭಾಸ್ಕರ್ ಗರಬಡ್, ವಾಘ ಸೇರಿದಂತೆ ಇತರರು ಇದ್ದರು. ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ರೈಲಿನಿಂದ ಕೆಳಗೆ ಇಳಿಯುತ್ತಿದ್ದಂತೆ ಮುಗಿಲು ಮುಟ್ಟುವಂತಹ ಜಯಕಾರ ಹಾಕಿ ಅವರನ್ನು ಸ್ವಾಗತಿಸಲಾಯಿತು. ಮೇಢೆ ಪುಷ್ಪಹಾರ ಹಾಕಿ ಸ್ವಾಗತಿಸಿದರು. ಆಗಮಿಸಿದ ಸದಸ್ಯರ ಕುಶಲೋಪರಿ ಬಳಿಕ ಪೂರ್ವ ಖಾನ್ ದೇಶ ಕಲೆಕ್ಟರ್ ಅವರ ವಾಹನದಲ್ಲಿ ಡಾ. ಅಂಬೇಡ್ಕರ್ ಅವರನ್ನು ಪ್ರಧಾನ್ ವಕೀಲರ ಮನೆಗೆ ಕರೆತರಲಾಯಿತು. ಡಾ. ಅಂಬೇಡ್ಕರ್ ಅವರಿಗೆ ಕೋರ್ಟಿನಲ್ಲಿ ಕೆಲಸವಿದ್ದ ಕಾರಣ ೧೧ ಗಂಟೆಗೆ ನ್ಯಾಯಾಲಯಕ್ಕೆ ತೆರಳಿದರು. ಡಾ. ಅಂಬೇಡ್ಕರ್ ಅವರು ಕೋರ್ಟಿಗೆ ತಲುಪಿದರೋ ಇಲ್ಲವೋ ಗೊತ್ತಿಲ್ಲ. ಆದರೆ ಜನರು ಮಾತ್ರ ಅವರ ಹಿಂದೆಯೇ ಕೋರ್ಟ್‌ನತ್ತ ಧಾವಿಸಿದರು. ೧೫–೨೦ ನಿಮಿಷಗಳಲ್ಲಿ ಇಡೀ ಕೋರ್ಟ್ ಆವರಣ ಜನದಟ್ಟಣೆಯಿಂದ ತುಂಬಿದ್ದರಿಂದ ಆ ಜಾಗದಲ್ಲಿ ದೊಡ್ಡ ಜಾತ್ರೆ ನಡೆಯುತ್ತಿದೆ ಏನೋ ಎನ್ನುವಂತೆ ಭಾಸವಾಗುತ್ತಿತ್ತು. ಕೋರ್ಟ್ ಕಲಾಪಕ್ಕೆ ಸಾಕಷ್ಟು ತೊಂದರೆಯಾದ ಕಾರಣ ನ್ಯಾಯಾಧೀಶರು ಕೋರ್ಟಿನ ಬಾಗಿಲು ಮುಚ್ಚಿಸಬೇಕಾಯಿತು. ಆದರೂ ಕೂಡ ಜನಸಮುದಾಯ ಕೋರ್ಟ್‌ನ ಅಂಗಳದಲ್ಲಿ ಕುಳಿತು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಹೊರಗೆ ಬರುವುದನ್ನು ಕಾಯುತ್ತಿದ್ದರು. ಕೋರ್ಟಿನ ಕೆಲಸ ೫–೨೦ಕ್ಕೆ ಮುಗಿಯುತ್ತಿದ್ದಂತೆ ಅವರು ಹೊರಬಂದರು. ಅಲ್ಪಕಾಲದಲ್ಲಿ ಡಾ. ಅಂಬೇಡ್ಕರ್ ಅವರ ವಾಹನ ಮುನ್ಸಿಪಲ್ ಟೌನ್ ಹಾಲ್‌ಗೆ ಆಗಮಿಸಿತು. ಈ ಸಂದರ್ಭದಲ್ಲಿ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಜನರು ಸೇರಿದ್ದರು. ಡಾ. ಅಂಬೇಡ್ಕರ್ ಅವರಿಗೆ ಜಯವಾಗಲಿ ಎಂಬ ರಣಗರ್ಜನೆಯ ಸ್ವಾಗತವನ್ನು ಅವರಿಗೆ ನೀಡಲಾಯಿತು ಮತ್ತು ಸಭೆಯ ಕಲಾಪ ಆರಂಭಗೊಂಡಿತು.

ಈ ಸಂದರ್ಭದಲ್ಲಿ ನಾಸಿಕ್‌ನ ಪ್ರಮುಖ ಮುಖಂಡ ಭಾವುರಾವ್ ಗಾಯಕವಾಡ, ಅಹ್ಮದನಗರದ ಯುವ ನಾಯಕ ಪ್ರಭಾಕರ ಜನಾರ್ಧನ್ ರೋಹಮ್, ಬಲರಾಮ್ ದಾದಾ ಟೇಲರ್ ಸೇರಿದಂತೆ ಇತರರು ಇದ್ದರು. ಮುಂಬರುವ ಅಸೆಂಬ್ಲಿ ಚುನಾವಣೆ ಕುರಿತು ಶ್ರೀ ಭಾವುರಾವ ಗಾಯಕವಾಡ ಅವರು ಮಾಡಿದ ಭಾಷಣ ಅತ್ಯಂತ ಪರಿಣಾಮಕಾರಿಯಾಗಿತ್ತು ಅಲ್ಲದೇ ಕಳಕಳಿಯಿಂದ ಕೂಡಿದ್ದಾಗಿತ್ತು.

ಡಾ. ಅಂಬೇಡ್ಕರ್ ಅವರು ಭಾಷಣ ಮಾಡುವುದಕ್ಕೆ ಎದ್ದು ನಿಲ್ಲುತ್ತಿದ್ದಂತೆಯೇ ಇಡೀ ಆವರಣ ಕರತಾಡನದ ಸದ್ದಿನಿಂದ ದುಮಿಗುಡಲಾರಂಭಿಸಿತು. ಎಲ್ಲರಿಗೂ ಶಾಂತವಾಗುವಂತೆ ಡಾ. ಅಂಬೇಡ್ಕರ್ ಸಂಜ್ಞೆ ಮಾಡುತ್ತಲೇ ಎಲ್ಲ ಸಭಿಕರು ಒಂದೇ ಕ್ಷಣದಲ್ಲಿ ಶಾಂತತೆಗೆ ಶರಣಾದರು. ಸಭೆ ಶಾಂತವಾಗುತ್ತಿದ್ದಂತೆ ಡಾ. ಅಂಬೇಡ್ಕರ್ ಅವರು ಭಾಷಣ ಆರಂಭಿಸಿದರು.

ಇಂದಿನ ಈ ಸಭೆಯನ್ನು ದೌಲತರಾವ್ ಗುಲಾಜಿ ಜಾಧವ ಅವರಿಗೆ ಬೆಂಬಲ ನೀಡುವ ಉದ್ದೇಶದಿಂದ ಆಯೋಜಿಸಲಾಗಿದೆ. ಪೂರ್ವ ಖಾನ್ ದೇಶ ಜಿಲ್ಲೆಯ ವ್ಯಾಪ್ತಿಯ ಮೀಸಲು ಪೂರ್ವ ಭಾಗದ ಅಭ್ಯರ್ಥಿಯಾಗಿ ಅವರು ಕಣಕ್ಕೆ ಇಳಿದಿದ್ದಾರೆ. ಈ ಜಾಗದಿಂದ ಇನ್ನೂ ಕೆಲವು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ ಎಂದು ಕೇಳಿದ್ದೇನೆ. ಆ ಹೆಸರುಗಳ ಪೈಕಿ ಮೇಢೆ ಮತ್ತು ಬಿಹ್ರಾಡೆ ಅವರ ಹೆಸರು ಕೇಳಿದ್ದೇನೆ. ಅವರ ಬಗ್ಗೆ ನನಗೆ ಸಾಕಷ್ಟು ಗೊತ್ತಿದೆ. ಅವರನ್ನು ನಾನು ಕಳೆದ ೧೫–೨೦ ವರ್ಷಗಳಿಂದ ಬಲ್ಲೆ ಅದರಲ್ಲಿಯೂ ಮೇಢೆ ಅವರೊಂದಿಗೆ ನನ್ನ ಸಂಬಂಧ ಚೆನ್ನಾಗಿಯೇ ಇದೆ. ಮೇಢೆ ಅವರು ಒಂದಿಷ್ಟು ಕೆಲಸ ಮಾಡಿದ್ದಾರೆ ಎಂದು ಗೊತ್ತಿದ್ದರೂ ನಾನೇಕೆ ಜಾಧವ ಅವರನ್ನು ಕಣಕ್ಕೆ ಇಳಿಸಿದ್ದೇನೆ ಎಂದು ಸಾಕಷ್ಟು ಜನರ ಮನಸ್ಸಿನಲ್ಲಿ ಕೊರೆಯುತ್ತಿರಬಹುದು. ಅದಕ್ಕೆ ಇರುವ ಕಾರಣ ಇಷ್ಟೇ. ಅಸೆಂಬ್ಲಿಯಲ್ಲಿ ಚಾಣಾಕ್ಷ ಮತ್ತು ಸಮಾಜಮುಖಿ ಜನರ ಅಗತ್ಯವಿದ್ದು ನಮಗೆ ಅಂತಹ ಕೆಲಸ ಮಾಡುವ ವ್ಯಕ್ತಿ ಬೇಕಾಗಿದ್ದಾರೆ. ಆಯಾ ಕ್ಷೇತ್ರಗಳಿಗೆ ಆಯಾ ಕ್ಷೇತ್ರದ ವ್ಯಕ್ತಿಯಲ್ಲದವನನ್ನು ಆಯ್ಕೆ ಮಾಡಿದರೆ ಆತನಿಗೆ ಆ ಕೆಲಸ ಪೂರ್ಣಗೊಳಿಸಲು ಆಗುವುದಿಲ್ಲ ಮತ್ತು ಆತನಿಗೆ ಕೆಲಸ ಮಾಡಲಿಕ್ಕೆ ಬರುವುದೂ ಇಲ್ಲ. ಒಂದು ವೇಳೆ ನಿಮಗೆ ಮನೆ ಕಟ್ಟಿಸುವುದಿದ್ದರೆ ಅದಕ್ಕೆ ಸೂಕ್ತ ವ್ಯಕ್ತಿಗೆ ಕೆಲಸ ಹೇಳುತ್ತೀರಿ. ಕಮ್ಮಾರನಿಗೆ ಬಡಿಗೆಯವನಿಗೆ ಕೆಲಸ ಹೇಳಿದರೆ ಅವರಿಗೆ ಆ ಕೆಲಸ ಮಾಡಲಿಕ್ಕಾಗುವುದಿಲ್ಲ. ನೀವು ಗೌಂಡಿಗೆ ಗೌಂಡಿ ಕೆಲಸ ಹೇಳಬೇಕಾಗುತ್ತದೆ. ಒಂದು ವೇಳೆ ನೀವು ಹಾಗೇ ಹೇಳದಿದ್ದಲ್ಲಿ ನಿಮಗೆ ಮನೆಯಂತಹ ಕಟ್ಟಡ ಮಾತ್ರ ಕಾಣಲು ಸಿಗುತ್ತದೆ. ಸರಿಯಾದ ವ್ಯಕ್ತಿಗೆ ಸರಿಯಾದ ಕೆಲಸ ವಹಿಸಿಕೊಟ್ಟರೆ ಕಣ್ಣಿಗೆ ಕಟ್ಟುವಂತಹ ಕಟ್ಟಡ ನಿಮ್ಮ ಕಣ್ಣೆದುರು ಎದ್ದು ನಿಲ್ಲುತ್ತದೆ. ಇದೇ ವಿಚಾರ ನಿತ್ಯದ ವ್ಯವಹಾರಕ್ಕೂ ಅನ್ವಯಿಸುತ್ತದೆ. ಈ ಬಗ್ಗೆ ನೀವು ಪ್ರತಿಯೊಬ್ಬರು ವಿಚಾರ ಮಾಡಿದರೆ ಇದು ಅರಿವಿಗೆ ಬರಬಹುದು. ಮೇಜರ್ ಮೇಢೆ ಮತ್ತು ಬಿಹ್ರಾಡೆ ಅವರಂತಹವರು ಲೋಕಲ್ ಬೋರ್ಡ್, ನಗರ ಪಾಲಿಕೆ ಇಲ್ಲವೇ ಸ್ಕೂಲ್ ಬೋರ್ಡ್‌ಗಳಲ್ಲಿ ಕೆಲಸ ಮಾಡುವುದಕ್ಕೆ ಅರ್ಹರು. ನಮ್ಮಿಂದ ಯಾವ ಹೊಣೆಗಾರಿಕೆ ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಂತಹ ಹೊಣೆಗಾರಿಕೆ ಅಪೇಕ್ಷಿಸಬಾರದು. ಒಂದು ವೇಳೆ ಅವರಿಗೆ ನಿಜವಾಗಿಯೂ ಸಮಾಜದ ಹಿತದ ಬಗ್ಗೆ ಕಳಕಳಿ ಇದ್ದಲ್ಲಿ ಅವರು ಒಂದಷ್ಟು ಹೊತ್ತು ಆತ್ಮಸಾಕ್ಷಿಯಿಂದ ವಿಚಾರ ಮಾಡಿ ಆ ಕೆಲಸಕ್ಕೆ ಯಾರು ಅರ್ಹರು ಎಂದು ವಿಚಾರ ಮಾಡಿದರೆ ಅದಕ್ಕೆ ಅವರ ಮನಸ್ಸೇ ಉತ್ತರ ನೀಡುತ್ತದೆ. ಅಂತಹ ಕೆಲಸ ಅವರಿಂದ ಸಾಧ್ಯವಿಲ್ಲ ಆದರೆ ಅವರು ಅನರ್ಹರು ಎನ್ನುತ್ತಿಲ್ಲ. ಆದರೆ ಆ ಕೆಲಸಕ್ಕೆ ಯಾರಾದರೂ ಅರ್ಹ ವ್ಯಕ್ತಿಗಳಿದ್ದರೆ ಅವರ ಪೈಕಿ ಶ್ರೀ ಜಾಧವ ಅವರು ಹೆಚ್ಚು ಅರ್ಹರಾಗಿದ್ದಾರೆ. ಕೌನ್ಸಿಲ್‌ನಲ್ಲಿ ಎಲ್ಲ ಕೆಲಸಗಳು ಇಂಗ್ಲಿಷ್‌ನಲ್ಲಿ ನಡೆಯುತ್ತವೆ ಆದ್ದರಿಂದ ಅಭ್ಯರ್ಥಿಗೆ ಇಂಗ್ಲಿಷ್ ಜ್ಞಾನ ಅತ್ಯಗತ್ಯವಾಗಿದೆ. ತನಗೆ ಸರಿ ಎನಿಸಿದ ಪ್ರಶ್ನೆಗಳನ್ನು ಕೇಳುವ ಧೈರ್ಯ ಇರಬೇಕು. ಈ ಎಲ್ಲ ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕೆ ಇಂಗ್ಲಿಷ್ ಜ್ಞಾನ ಅತ್ಯಗತ್ಯ ಮತ್ತು ಇಂಗ್ಲಿಷ್ ಜ್ಞಾನವಿಲ್ಲದವರು ಅಲ್ಲಿರುವುದು ನಿಷ್ಪ್ರಯೋಜಕ. ನಾವು ನಮ್ಮ ಪಾಲಿನ ಕುರ್ಚಿಗಳಲ್ಲಿ ಕೇವಲ ಶೋಭಿಸಲೆಂದು ಕುಳಿತುಕೊಳ್ಳುವ ಹಾಗಿಲ್ಲ. ಅಲ್ಲಿ ನಮಗೆ ಕೆಲಸ ಮಾಡಬೇಕಿದೆ. ಇಂದು ಜಾಧವರಷ್ಟು ಕಲಿತವರು ನಿಮ್ಮ ಜಿಲ್ಲೆಯಲ್ಲಿ ಬೇರೊಬ್ಬರು ಇಲ್ಲವೇ ಇಲ್ಲ. ಅವರದ್ದು ಬಿ.ಎ. ವರೆಗೆ ಶಿಕ್ಷಣ ಆಗಿದೆ ಮತ್ತು ಅವರೇನೂ ನನ್ನ ಸಂಬಂಧಿಕರೂ ಅಲ್ಲ ಅಥವಾ ತಮಗೆ ಬರುವ ಭತ್ಯೆಯನ್ನು ನನಗೆ ನೀಡುವವರಲ್ಲ. ನಿಮ್ಮ ಲಾಭಕ್ಕಾಗಿಯೇ

ನಾನು ಅವರನ್ನು ಆಯ್ಕೆ ಮಾಡಿದ್ದೇನೆ. ನಾನು ಯಾವುದೇ ಪಕ್ಷಪಾತ ಮಾಡಿಲ್ಲ. ಈ ಎಲ್ಲ ಸಂಗತಿಗಳ ಬಗ್ಗೆ ಸಮಗ್ರವಾಗಿ ವಿಚಾರ ಮಾಡಿ, ಪೂರ್ವ ಖಾನ್ ದೇಶ ಜಿಲ್ಲೆಯ ನಕಾಶೆಯನ್ನು ನನ್ನ ಕಣ್ಣೆದುರು ಇಟ್ಟುಕೊಂಡು ಶ್ರೀ ಜಾಧವ ಅವರನ್ನು ಆಯ್ಕೆ ಮಾಡಿದ್ದೇನೆ.

'ಅಶಿಕ್ಷಿತ ಮರಾಠರು ಮತ್ತು ಕುಣಬಿಗಳು ಕೂಡ ಕೌನ್ಸಿಲ್‌ಗೆ ಹೋಗುತ್ತಾರೆ. ಅವರಿಗೆ ಎಲ್ಲಿ ಇಂಗ್ಲಿಷ್ ಬರುತ್ತದೆ? ಅವರು ಹೋಗುತ್ತಾರೆಂದರೆ ನಮ್ಮ ವ್ಯಕ್ತಿ ಏಕೆ ಹೋಗಬಾರದು'? ಎಂದು ನೀವು ಕೇಳಬಹುದು. ಆದರೆ ನಿಮಗೆ ಒಂದು ಮಾತು ಹೇಳುತ್ತೇನೆ; ನಿಮ್ಮ ಮತ್ತು ಕುಣಬಿ ಮರಾಠರ ಮಧ್ಯೆ ಭೂಮ್ಯಾಕಾಶದ ಅಂತರ ಇದೆ. ಅವರಿಗೆ ಉಳಿದ ಎಲ್ಲ ಸಂಗತಿಗಳು ಅನುಕೂಲಕರವಾಗಿ ಇವೆ. ಅವರಿಗೆ ಎಲ್ಲಿಯೂ ಕಷ್ಟವಿಲ್ಲ. ಆದರೆ ನೀವು ಕಂಗಾಲಾಗಿದ್ದವರು. ನಿಮಗೆ ಪ್ರತಿಯೊಂದು ಕಷ್ಟಪಟ್ಟು ಪಡೆದುಕೊಳ್ಳಬೇಕಾಗುತ್ತದೆ ಮತ್ತು ಅದನ್ನು ಸುಲಭವಾಗಿ ಪಡೆದುಕೊಳ್ಳಬೇಕಾಗಿದ್ದರೆ ಅದು ಕೇವಲ ಕಾಯ್ದೆ ಮುಖಾಂತರ ಸಾಧ್ಯ. ಇಷ್ಟೆಲ್ಲ ಸಂಗತಿಗಳಿಗಾಗಿ ನಿಮ್ಮ ಮೂರ್ಖ ಅಭ್ಯರ್ಥಿಗಳು ಅಲ್ಲಿ ನಡೆಯುವುದಿಲ್ಲ ಬದಲಿಗೆ ತಜ್ಞರು ಬೇಕಾಗುತ್ತದೆ. ನಿಮ್ಮ ಗ್ರಹಗತಿ ಬದಲಿಸಬೇಕಿದೆ. ಹೀಗಾಗಿ ಶ್ರೀ ಜಾಧವ ಅವರಂತಹ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಿದೆ. ಒಂದು ವೇಳೆ ನೀವು ಹಾಗೆ ಮಾಡದೇ ಇದ್ದರೆ ನಿಮ್ಮದೇ ಸರ್ವನಾಶವಾಗುವ ಅಪಾಯದ ಸೂಚನೆಯನ್ನು ನಾನು ಈಗ ನೀಡುತ್ತಿದ್ದೇನೆ. ಒಂದು ವೇಳೆ ಯಾರಾದರೂ ಇಂತಹ ಮೂರ್ಖತನದ ಕೆಲಸ ಮಾಡಿದರೂ ನೀವು ಮಾತ್ರ ಅಂತಹ ಕೆಲಸ ಮಾಡಬೇಡಿ. ಇಂದಿಗೆ ಎರಡು ಸಾವಿರ ವರ್ಷಗಳಿಂದ ನಿಮ್ಮ ಪೂರ್ವಿಕರು ಭಾರತದಲ್ಲಿದ್ದಾರೆ. ಆದರೆ ಯಾರಾದರೂ ಬ್ರಾಹ್ಮಣರ ಹತ್ತಿರ ಕುಳಿತುಕೊಂಡಿದ್ದ ಉದಾಹರಣೆ ಇದೆಯೇ? ಆದರೆ ಅಂತಹ ಭಾಗ್ಯೋದಯದ ಅವಕಾಶ ಈಗ ಬಂದಿದೆ. ಇಂತಹ ಸಂದರ್ಭದಲ್ಲಿ ಒಂದು ವೇಳೆ ನೀವು ಅಂಧ, ಸ್ವಾರ್ಥ ದೃಷ್ಟಿಕೋನ ಇರಿಸಿಕೊಂಡರೆ ಇಡೀ ಸಮಾಜದಷ್ಟೇ ಅಲ್ಲ. ನಿಮ್ಮ ಪತ್ನಿ–ಮಕ್ಕಳಿಗೂ ದ್ರೋಹ ಬಗೆದಂತಾಗುತ್ತದೆ. ಬಿಹ್ರಾಡೆ ಮತ್ತು ಮೇಢೆ ಅವರುಗಳು ಸಮಾಜದ ಪ್ರಗತಿಗೆ ಅಡ್ಡ ಬಂದು ವಿನಾಕಾರಣ ಗೊಂದಲ ಸೃಷ್ಟಿಸಬೇಡಿ ಎಂದು ಎಲ್ಲ ಸದಸ್ಯರ ಪರವಾಗಿ ನಾನು ಅವರಿಗೆ ವಿನಂತಿಸಿಕೊಳ್ಳುತ್ತೇನೆ. ಇಷ್ಟು ಹೇಳಿದರೂ ಅವರು ಕೇಳಲಿಲ್ಲ ಎಂದರೆ ನೀವು ಏನು ಮಾಡುತ್ತೀರಿ? (ಎಲ್ಲೆಡೆಯಿಂದ ಇಲ್ಲ. ಇಲ್ಲ... ಇಲ್ಲ– ಒಕ್ಕೊರಲಿನ ಕೂಗು) ಹಾಗಿದ್ದರೇ ಏನು ಮಾಡುತ್ತೀರಿ? ನಿಮ್ಮ ಭಾಗದಲ್ಲಿ ೫,೦೦೦ ಮತದಾರರು ಇದ್ದಾರೆ. ಪ್ರತಿಯೊಬ್ಬರು ಲಭಿಸಿರುವ ಮತದಾನದ ಹಕ್ಕನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಬೇಕು. ಸಮಾಜದ ಕೆಲಸ ಉತ್ತಮವಾಗಿ ಆಗಬೇಕು ಎಂದು ನಿಮಗೆ ಅನ್ನಿಸಿದರೆ ನೀವು ನಿಮ್ಮ ಕರ್ತವ್ಯವನ್ನು ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸಿ. ಎಲ್ಲರೂ ಸೇರಿ ಜಾಧವ ಅವರನ್ನು ಆಯ್ಕೆ ಮಾಡಿ. ಮುರಿದ ನಾವೆ ಮತ್ತು ಕೆಲಸಕ್ಕೆ ಬಾರದ ನಾವಿಕರನ್ನು ಇಟ್ಟುಕೊಂಡು ನದಿಯ ಇನ್ನೊಂದು ತೀರಕ್ಕೆ ಹೋಗಿ ಎಂದು ಹೇಳಿದರೆ ನಾನು ಅಂತಹ ನಾವೆಯನ್ನು ಎಂದಿಗೂ ಇನ್ನೊಂದು ತೀರಕ್ಕೆ ತೆಗೆದುಕೊಂಡು ಹೋಗಲಿಕ್ಕಿಲ್ಲ ಅಷ್ಟೇ ಅಲ್ಲ ಆ ನಾವೆಯಲ್ಲಿ ನಾನು ಕಾಲು ಕೂಡ ಇಡಲಿಕ್ಕಿಲ್ಲ. ನಾನು ಹೇಳಿದ ನಾವಿಕನನ್ನೇ ನೀವು ನನಗೆ ನೀಡಬೇಕು ಅಂದರೆ ಮಾತ್ರ ನಾನು ನಾವೆಯನ್ನು ಸಹಜವಾಗಿ ತೆಗೆದುಕೊಂಡು ಹೋಗಬಹುದು. ಅಂತಿಮವಾಗಿ ಜಾಧವ ಅವರನ್ನು ಆಯ್ಕೆ ಮಾಡಬೇಕು ಎಂದು ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಬಳಿಕ ಶ್ರೀ ವಾರಭುವನ್ ಅವರು, ಡಾ. ಅಂಬೇಡ್ಕರ್ ಅವರು ಹೇಳಿದ ವಿಚಾರಗಳನ್ನು ಎಲ್ಲರೂ ಗಮನದಲ್ಲಿ ಇರಿಸಿಕೊಂಡು ಜಾಧವ ಅವರನ್ನು ಆಯ್ಕೆ ಮಾಡಿ ತರುವುದಕ್ಕೆ ವಿವಿಧ ಹಳ್ಳಿಗಳಲ್ಲಿ ಪ್ರಚಾರ ಮೆರವಣಿಗೆಗಳನ್ನು ಆಯೋಜಿಸುವುದಾಗಿ ಹೇಳಿದರು.

---

ಜನತಾ: ಅಕ್ಟೋಬರ್ ೧೭, ೧೯೩೬.

## ೯೬.

# ಯಾವ ವೃಕ್ಷದ ನೆರಳಿನಡಿ ಸುಖದಿಂದ ಕೂಡ್ರಬೇಕಾಗಿದೆಯೋ ಆ ವೃಕ್ಷದ ರೆಂಬೆಳನ್ನು ಕತ್ತರಿಸುವ ದುಷ್ಟತನ ಬೇಡ

ನವೆಂಬರ್ ೧೯೩೬ರಲ್ಲಿ ಡಾ. ಅಂಬೇಡ್ಕರ್ ಅವರು ವಿದೇಶಕ್ಕೆ ತೆರಳುವವರಿದ್ದರು. ಅದಕ್ಕೂ ಮುನ್ನ ನವೆಂಬರ್ ೭, ೧೯೩೬ರಂದು 'ಜನತಾ'ದಲ್ಲಿ ಪ್ರಕಟಿಸಿದಂತೆ ನವೆಂಬರ್ ೮ರಂದು ಬೆಳಗ್ಗೆ ೯ಕ್ಕೆ ಮುಂಬೈನ ಪರೇಲ್‌ನಲ್ಲಿರುವ ದಾಮೋದರ್ ಹಾಲ್‌ನಲ್ಲಿ ಮುಂಬೈ ಸಮತಾ ಸೈನಿಕ ದಳದ ಸಭೆಯನ್ನು ಡಾ. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು.

ಪ್ರಚಂಡ ಕರತಾಡನದೊಂದಿಗೆ ಡಾ. ಅಂಬೇಡ್ಕರ್ ಅವರು ಮಾಡಿದ ತಮ್ಮ ಭಾಷಣದಲ್ಲಿ:

ಕೆಲವು ತುರ್ತು ಕಾರ್ಯನಿಮಿತ್ತ ನಾನು ನಾಳೆ ವಿದೇಶಕ್ಕೆ ತೆರಳುವವನಿದ್ದೇನೆ. ನನ್ನ ಅನುಪಸ್ಥಿತಿಯಲ್ಲಿ ನೀವು ಅತ್ಯಂತ ಪ್ರಮುಖ ಜವಾಬ್ದಾರಿ ನಿರ್ವಹಿಸಬೇಕಿದೆ. ತಮಗೆಲ್ಲರಿಗೂ ತಿಳಿದಿರುವಂತೆ ಜವಾಬ್ದಾರಿಯುತ ಸರ್ಕಾರದಲ್ಲಿ ಅಸ್ಪೃಶ್ಯರಿಗೆ ಕಾನೂನು ಮಂಡಳಿಯಲ್ಲಿ ೧೫ ಸ್ಥಾನಗಳನ್ನು ಮೀಸಲು ಇರಿಸಲಾಗಿದ್ದು, ಕಾನೂನು ಮಂಡಳಿಗೆ ಮುಂಬರುವ ಫೆಬ್ರವರಿಯಲ್ಲಿ ಚುನಾವಣೆ ನಡೆಯಲಿದೆ. ನಮಗೆ ಲಭಿಸಿರುವ ೧೫ ಸ್ಥಾನಗಳನ್ನು ಪ್ರಾಂತದ ವಿವಿಧ ಜಿಲ್ಲೆಗಳ ನಡುವೆ ವಿಭಾಗ ಮಾಡಲಾಗಿದೆ. ಈ ಕ್ಷೇತ್ರಗಳಿಗೆ ನಾನು ಸ್ವತಂತ್ರ ಮಜೂರ ಪಕ್ಷದಿಂದ ವಿವಿಧ ಕ್ಷೇತ್ರಗಳ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದೇನೆ. ಈ ಚುನಾವಣೆಯನ್ನು ಎದುರಿಸುವುದಕ್ಕೆ ನಾನು ಮತ್ತು ನನ್ನ ಸಂಗಡಿಗರು ಸೇರಿ ಸ್ವತಂತ್ರ ಮಜೂರ ಪಕ್ಷವನ್ನೇಕೆ ಸ್ಥಾಪಿಸಿದ್ದೇವೆ ಎನ್ನುವುದನ್ನು ಇಲ್ಲಿ ಸ್ಪಷ್ಟಪಡಿಸುತ್ತೇನೆ. ಕಾಂಗ್ರೆಸ್‌ನಂತಹ ಬಲಾಢ್ಯ ಮತ್ತು ಸುಸಂಘಟಿತ ಪಕ್ಷವಿರುವಾಗ ಹೊಸ ಸಂಘಟನೆಯ ಅಗತ್ಯತೆ ಏಕೆ ಬೇಕು ಎನ್ನುವ ಪ್ರಶ್ನೆಗೆ ಉತ್ತರ ಅತ್ಯಂತ ಸರಳವಾಗಿದೆ. ಕಾಂಗ್ರೆಸ್‌ನ ಮುಖ್ಯ ಧ್ಯೇಯ ಅಂದರೆ ಸ್ವಾತಂತ್ರ್ಯ. ನಾನಾಗಲಿ ಅಥವಾ ನನ್ನ ಸಂಗಡಿಗರಾಗಲಿ ಇದನ್ನು ಒಪ್ಪುವುದಿಲ್ಲ. ಸ್ವಾತಂತ್ರ್ಯ ಸಾಧ್ಯವಾಗಿಸುವುದು ಅಷ್ಟು ಸರಳವಲ್ಲ. ಗಾಂಧೀಜಿ ಅವರ ಸತ್ಯಾಗ್ರಹದಂತಹ ಶಸ್ತ್ರಗಳು ಕೂಡ ಇಲ್ಲಿ ನಿರುಪಯುಕ್ತವಾಗಲಿವೆ. ಕಾನೂನು ಭಂಗದ ಮುಖಾಂತರ ಸ್ವಾತಂತ್ರ್ಯ ಪಡೆಯುವುದು ಅಸಾಧ್ಯ, ಮತ್ತು ಸಾಮರ್ಥ್ಯಕ್ಕೆ ಮೀರಿದ ಸಂಗತಿ ಎಂದು ಎಲ್ಲರಿಗೂ ಭಾಸವಾಗುತ್ತಿದೆ. ವಸ್ತುಸ್ಥಿತಿ ಹೀಗಿದ್ದರೂ ನಾವು ನಿಷ್ಫಲವಾಗುವ ಸ್ವಾತಂತ್ರ್ಯದ ಹೇಳಿಕೆ ನೀಡುವುದರಲ್ಲಿ ಯಾವ ಅರ್ಥವಿದೆ? ಎಲ್ಲಿಯವರೆಗೆ ನಿಜವಾದ ಸ್ವಾತಂತ್ರ್ಯ ಪಡೆಯುವ ಸಾಮರ್ಥ್ಯ ನಮ್ಮಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ಕಾಯ್ದೆ ಮುಖಾಂತರ ನಮ್ಮ ಧ್ಯೇಯ ಮಾರ್ಗ ತಲುಪುವುದಲ್ಲಿ ಹೆಚ್ಚಿನ ಹಿತವಿದೆ ಎನ್ನುವುದು ನನ್ನ ಪ್ರಾಮಾಣಿಕ ಅನಿಸಿಕೆ. ಅದರಲ್ಲಿಯೂ ಭಾರತ ಒಂದು ರಾಷ್ಟ್ರವಲ್ಲ. ಈ ದೇಶದಲ್ಲಿ ವೈವಿಧ್ಯಮಯವಾದ ೪,೦೦೦ಕ್ಕೂ ಹೆಚ್ಚು ಜಾತಿಗಳಿವೆ. ಈ ನೂರಾರು ಜಾತಿಗಳ ನಡುವೆ ವೈಷಮ್ಯ, ಜಾತಿಭೇದ, ಪ್ರಾಂತಭೇದಗಳಿಂದಾಗಿ ಜಗಳ, ವಿವಾದ ಮತ್ತು ಧರ್ಮಭೇದದಂತಹ ಗಂಭೀರ ಸಂಗತಿಗಳಿಂದಾಗಿ ಏಕತೆ ಸಾಧಿಸುವುದಕ್ಕೆ ಸಾಧ್ಯವಿಲ್ಲ. ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತರ ನಡುವೆ ಒಂದೇ ಧ್ಯೇಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಬ್ರಿಟಿಷ್

ಸರ್ಕಾರದ ಆಡಳಿತದ ನೆರಳು ಇಲ್ಲದೇ ಹೋಗಿದ್ದಲ್ಲಿ ಜಾತ್ಯಾಭಿಮಾನಿ ಮತ್ತು ಧರ್ಮಾಭಿಮಾನಿಗಳು ತಮ್ಮ ತಮ್ಮ ನಡುವೆ ಕಾದಾಡಿ ತಮ್ಮ ಕೈಗೆ ಅಧಿಕಾರ ತೆಗೆದುಕೊಳ್ಳುವುದಕ್ಕೆ ಯತ್ನಿಸುತ್ತಿದ್ದರು.

ಇನ್ನೊಂದು ನಿಟ್ಟಿನಲ್ಲಿ ವಿಚಾರ ಮಾಡಿದರೆ ಕಾಂಗ್ರೆಸ್ ಮತ್ತು ನಮ್ಮ ಸಂಘಟನೆಯ ನಡುವೆ ಅನೇಕ ರೀತಿಯ ಭೇದಗಳಿವೆ. ಕಾಂಗ್ರೆಸ್ಸಿಗೆ ಇಂದಿನ ಸುಧಾರಣೆಗಳು ಅಪೂರ್ಣ ಎಂದು ಭಾಸವಾಗುತ್ತಿವೆ. ಹೀಗಾಗಿ ಕಾಯ್ದೆ ಮಂಡಳಿಗೆ ಹೋಗಿ ಈ ಸುಧಾರಣೆಗಳ ವಿರೋಧದ ಉದ್ದೇಶದಿಂದ ಮಂಡಳಿಯನ್ನೇ ವಿಸರ್ಜಿಸುವುದು ಅವರಿಗೆ ಇಷ್ಟವಾಗಿರುವ ಸಂಗತಿ. ಆದರೆ ನಮಗೆ ಈ ಸುಧಾರಣೆಗಳು ಅಪೂರ್ಣ ಎಂದು ಭಾಸವಾಗಿದ್ದರೂ ಕೂಡ ಕಾನೂನು ಮಂಡಳಿಯಲ್ಲಿ ಕುಳಿತು ಸುಧಾರಣೆಯ ಕೆಲಸ ಮಾಡಿದ ಅಧಿಕಾರದ ಬಲದಿಂದ ಇನ್ನಷ್ಟು ಹಕ್ಕುಗಳನ್ನು ಪಡೆಯುವ ನಿಟ್ಟಿನಲ್ಲಿ ಶ್ರಮಿಸುವುದು ಇಷ್ಟ. ಕಾಯ್ದೆ ಮಂಡಳಿ ವಿಸರ್ಜಿಸುವಂತಹ ಮಕ್ಕಳಾಟ ಮಾಡುವುದಕ್ಕೆ ಇಂದಿನ ದಿನಮಾನಗಳಲ್ಲಿ ಸರಿಯಲ್ಲ. ನಿಜವಾದ ಸ್ವಾತಂತ್ರ್ಯ ಪಡೆಯುವುದಕ್ಕೆ ನಮ್ಮಲ್ಲಿ ಶಕ್ತಿ ಸಾಮರ್ಥ್ಯ ಇಲ್ಲದಂತಹ ಸಂದರ್ಭದಲ್ಲಿ, ಸ್ವಾತಂತ್ರ್ಯವೇ ಬೇಕು ಎಂಬ ಹಠಮಾರಿ ಮನೋಭಾವ ಕೊನೆಗೆ ಅಪಾಯಕಾರಿಯಾಗಿ ಪರಿಣಮಿಸಬಲ್ಲುದು.

ಅಂತಹದ್ದರಲ್ಲಿ ಕಾಂಗ್ರೆಸ್ ಕಲಸುಮೇಲೋಗರದಂತಿದೆ. ಅದರಲ್ಲಿ ನಿರುದ್ಯೋಗಿಗಳು, ಕಾರ್ಮಿಕರು, ಬಂಡವಾಳಶಾಹಿಗಳು, ಶ್ರೀಮಂತರು, ರೈತರು, ಕೂಲಿಗಳು, ಜಮೀನ್ದಾರರು, ಚಿಕ್ಕಪುಟ್ಟ ವ್ಯಾಪಾರಿಗಳು, ಮಧ್ಯಮ ವರ್ಗ ಹೀಗೆ ನಾನಾ ರೀತಿಯ ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಇರಿಸಿಕೊಂಡಿರುವ ದೊಡ್ಡ ಗುಂಪು ಇದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಕಾಂಗ್ರೆಸ್ ಅಮೃತ–ವಿಷದ ಮಿಶ್ರಣದಂತಿದೆ. ರಕ್ತ ಶೋಷಣೆ ಮಾಡುವವರು ಮತ್ತು ರಕ್ತ ಶೋಷಣೆಗೊಳಪಟ್ಟವರು ಕೂಡಿ ಹೇಗೆ ಹೋಗಲಿಕ್ಕಾಗುತ್ತದೆ? ಇಂದು ಕಾಂಗ್ರೆಸ್ ಶ್ರೀಮಂತರ ಮೊಸಳೆಯ ಬಿಗಿ ಹಿಡಿತದಲ್ಲಿ ಇದೆ. ಅದು ದೀನ ದಲಿತರ, ರೈತರು–ಕಾರ್ಮಿಕ ಜನತೆಯ ಹಿತ ಹೇಗೆ ಕಾಯಬಲ್ಲುದು? ಅದು ಬಂಡವಾಳಶಾಹಿಗಳ ಬೆನ್ನೆಲುಬು ಆಗಿದೆ. ಅದರ ಕೈಯಿಂದ ಬಹುಜನ ಎನ್ನಿಸಿಕೊಂಡಿರುವ ಶ್ರಮಿಕ ವರ್ಗದ ಹಿತ ರಕ್ಷಣೆಯಾಗುವುದು ಕಠಿಣ. ಇದಕ್ಕೆ ವಿರುದ್ಧವಾಗಿ ನಮ್ಮ ಸ್ವತಂತ್ರ ಮಜೂರ ಪಕ್ಷ, ದುರ್ಬಲ ವರ್ಗದ ತತ್ವಗಳ ಆಧಾರದ ಮೇಲೆ ನಿಂತಿದೆ. ರೈತರ–ಕಾರ್ಮಿಕರ ಹಿತ ರಕ್ಷಣೆಯನ್ನು ನಾವು ಎಷ್ಟು ಪ್ರೀತಿಯಿಂದ ಮಾಡಬಲ್ಲೆವೋ ಅಷ್ಟು ಪ್ರೀತಿಯಿಂದ ಕಾಂಗ್ರೆಸ್‌ಗೆ ಮಾಡಲಿಕ್ಕೆ ಸಾಧ್ಯವಿಲ್ಲ. ತಳ ಸಮುದಾಯ, ದೀನರು ಮತ್ತು ಶ್ರಮಜೀವಿಗಳ ಹಿತ ರಕ್ಷಣೆಯೇ ನಮ್ಮ ಪಕ್ಷದ ಮುಖ್ಯ ಉದ್ದೇಶವಾಗಿದೆ. ತತ್ವದ ವಿಚಾರದಲ್ಲಿ ಯಾವುದೇ ರಾಜೀ ಹೊಂದಾಣಿಕೆ ಮಾಡಿಕೊಳ್ಳದೇ ಯಾವುದೇ ಪಕ್ಷದೊಂದಿಗೆ ಸಮಾಜದ ಹಿತಾಸಕ್ತಿಗಾಗಿ ಸಹಕರಿಸುತ್ತೇವೆ. ಅದೇ ರೀತಿ ಅಸ್ಪೃಶ್ಯ ಜಾತಿಯನ್ನು ಬಿಟ್ಟು ಬೇರೆ ಜಾತಿಯ ಜನರೊಂದಿಗೆ ಹೊಂದಾಣಿಕೆಗೇಕೆ ಸಿದ್ಧವಾದೆ? ಎಂದೂ ಕೂಡ ನನ್ನನ್ನು ಪ್ರಶ್ನಿಸಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಹೇಳುವುದು ಏನೆಂದರೆ, ನೂತನ ಸಂವಿಧಾನಕ್ಕೆ ಅನುಗುಣವಾಗಿ ರಚನೆಯಾಗುವ ಶಾಸಕಾಂಗ ಮಂಡಳಿಯಲ್ಲಿ ಒಟ್ಟು ೧೭೫ ಸದಸ್ಯರ ಆಯ್ಕೆಯಾಗಬೇಕಾಗುತ್ತದೆ. ಈ ೧೭೫ ಸದಸ್ಯರ ಪೈಕಿ ೧೫ ಸದಸ್ಯರು ಅಸ್ಪೃಶ್ಯ ಜಾತಿಗೆ ಸೇರಿದವರು ಆಗಿರುತ್ತಾರೆ. ಈ ಹದಿನೈದು ಸದಸ್ಯರ ನೆರವಿಲ್ಲದೇ ಬೇರೆ ಯಾರಿಗೂ ಕೆಲಸ ಮಾಡಲು ಬರುವುದಿಲ್ಲ. ಹೀಗಾಗಿ ನಮ್ಮ ನೆರವಿಗೆ ಇನ್ನೂ ಹೆಚ್ಚಿನ ಜನರ ಅಗತ್ಯವಿದ್ದು, ಈ ಜನರೂ ಕೂಡ ನಮ್ಮ ಮಿತ್ರರಾಗಿರಬೇಕು ಈ ನಿಟ್ಟಿನಲ್ಲಿ ನಾವು ಯಾವ ಯಾವ ಸ್ಪೃಶ್ಯ ವ್ಯಕ್ತಿಗಳು ನಮ್ಮನ್ನು ತಮ್ಮವರು ಎಂದು ಭಾವಿಸಿ ಸಹಾಯದ ಹಸ್ತ ಚಾಚಿದ್ದಾರೋ ಮತ್ತು ನಮಗಾಗಿ ಸ್ವಾರ್ಥ ತ್ಯಾಗ ಮಾಡಿದಂತಹವರನ್ನು ಆಯ್ಕೆ ಮಾಡಿ ನಮ್ಮ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು. ಈ ವಿಚಾರದಲ್ಲಿ ತರ್ಕ–ಕುತರ್ಕ ಬೆಳೆಸಿ ವಿನಾಕಾರಣ ಸಮಯ ಹಾಳು ಮಾಡಬೇಡಿ. ನಮ್ಮ ಪಕ್ಷದಿಂದ ಸಿದ್ಧಪಡಿಸಿದ ಕಾರ್ಯಕ್ರಮದ ರೂಪುರೇಷೆ ಪೂರ್ಣಗೊಳಿಸುವುದಕ್ಕೆ ನಮ್ಮಲ್ಲಿನ ಆಂತರಿಕ ಭಿನ್ನಾಭಿಪ್ರಾಯ,

ವಿವಾದ, ಹೊಡೆದಾಟಗಳನ್ನು ಬದಿಗಿರಿಸಬೇಕು. ಶಿಸ್ತು ಮತ್ತು ತತ್ವಕ್ಕೆ ತಕ್ಕಂತೆ ನಮ್ಮ ನಡತೆ ಇದ್ದರೆ ಇಲ್ಲಿಯವರೆಗೆ ನನ್ನಿಂದ ಸಮಾಜಕ್ಕೆ ಆಗಿರುವ ಸ್ವಲ್ಪ ಕೆಲಸ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾಡಲು ಸಾಧ್ಯವಾಗುತ್ತದೆ. ತತ್ವ ಮತ್ತು ಶಿಸ್ತಿಗಾಗಿ ಹೋರಾಡುವುದಕ್ಕೆ ನಾನು ಕಾನೂನು ಮಂಡಳಿಯ ಚುನಾವಣೆಯಲ್ಲಿ ಪಾಲ್ಗೊಂಡರೂ ತೊಂದರೆ ಇಲ್ಲ. ಆದರೆ ಮುಂಬೈ ಜಿ ವಾರ್ಡ್ ಮತ್ತು ಉಪನಗರ ವಿಭಾಗದಿಂದ ಸ್ಪರ್ಧಿಸಿರುವ ನಮ್ಮ ಅಭ್ಯರ್ಥಿ ಕಾಳೋಖೆ ಅವರನ್ನು ಆಯ್ಕೆ ಮಾಡಬೇಕು. ಅದರಲ್ಲಿಯೇ ನಿಮ್ಮ ಕಲ್ಯಾಣ ಇದೆ. ಅದರಲ್ಲಿಯೇ ನಿಮ್ಮ ಎಲ್ಲ ಮಾನ-ಮರ್ಯಾದೆ ಇದೆ. ಈ ಸಂದರ್ಭದಲ್ಲಿ ಮಹಾರ್- ಮಾಂಗ್ ಜಾತಿ ನಂಬಬೇಡಿ. ಇನ್ನು ಮುಂದೆ ನಾವೆಲ್ಲರೂ ಒಂದೇ ಎಂಬ ಉಜ್ವಲ ಭಾವನೆಯನ್ನು ಹೃದಯದಲ್ಲಿ ಬೆಳೆಸಿಕೊಂಡು ನಿರಂತರ ಜಾಗೃತವಾಗಿ ಇರಿ.

ಇದೀಗ ಇನ್ನೊಂದು ಮಹತ್ವದ ಸಂಗತಿ ಪ್ರಸ್ತಾಪಿಸುತ್ತೇನೆ. ನಾನು ಆಯ್ಕೆ ಮಾಡಿರುವ ಎಲ್ಲ ಅಭ್ಯರ್ಥಿಗಳು ಮಹಾರ್ ಜಾತಿಯವರಿದ್ದು ಬೇರೆ ಜಾತಿಯ ಜನರನ್ನು ಏಕೆ ಆಯ್ಕೆ ಮಾಡಲಿಲ್ಲ? ಹೌದು! ನಿಜವಾಗಿ ಹೇಳಬೇಕೆಂದರೆ ನಾವು ಈ ವಿಷಯದಲ್ಲಿ ಅಷ್ಟು ಆಳವಾಗಿ ಚಿಂತಿಸಬೇಕಿಲ್ಲ. ಆದರೂ ಕೂಡ ರಾಷ್ಟ್ರೀಯ ಹರಿಜನ ಪಕ್ಷ ಸ್ಥಾಪಿಸಿ ಈ ಆರೋಪ ಮಾಡಿರುವ ಅವರಿಗಾದರೂ ಉತ್ತರಿಸಲೇಬೇಕಿದೆ. ಈ ರಾಷ್ಟ್ರೀಯ ಹರಿಜನ ಪಕ್ಷದವರನ್ನು ನಾನು 'ಲೇಭಾಗು' ಎಂದೇ ಸಂಬೋಧಿಸುತ್ತೇನೆ. ಇವರು ಚಮ್ಮಾರರು ಎನ್ನುವ ಕಾರಣಕ್ಕೆ ನಾನು ನನ್ನ ಪಕ್ಷದಿಂದ ಅವರನ್ನು ಹೊರಗೆ ಹಾಕಿಲ್ಲ. ಅವರಿಗೆ ಹೇಗೆ ಬೇಕೋ ಹಾಗೇ ಅರಚಿಕೊಳ್ಳಬಹುದು ಅದರ ಬಗ್ಗೆ ನನಗೆ ಸ್ವಲ್ಪವೂ ಬೇಸರ ಇಲ್ಲ. ಅವರನ್ನು ಆಯ್ಕೆ ಮಾಡದಿರುವುದಕ್ಕೆ ಕಾರಣ ಎಂದರೆ ಅವರ ಲಂಪಟತನ. ಎಲ್ಲಿ ಏನು ಸಿಗುತ್ತದೋ ಅಲ್ಲಿಗೆ ಹೋಗುವುದು, ತತ್ವ-ಶಿಸ್ತಿನ ಬಗ್ಗೆ ಇವರಿಗೆ ಕಾಳಜಿ ಇಲ್ಲ. ಏನು ಸಿಗುತ್ತದೋ ಅದನ್ನು ಉಡಿಯಲ್ಲಿ ಕಟ್ಟಿಕೊಳ್ಳುವುದು ನಂತರ ಪರಾರಿಯಾಗುವುದೇ ಇವರ ಧರ್ಮ. ನಾವು ಮಹಾಡ್ ಸತ್ಯಾಗ್ರಹ ಮಾಡಿದೆವು. ಸ್ವಾವಲಂಬನೆಗೆ ವಿವಿಧ ಚಳವಳಿ ಮಾಡಿದೆವು. ನಾಸಿಕ್‌ನಲ್ಲಿ ಸತ್ಯಾಗ್ರಹ ಮಾಡಿದೆವು. ಹೆಚ್ಚೆಗೆ ಏಕೆ ಪುಣೆ ಒಪ್ಪಂದದ ಉದಾಹರಣೆ ತೆಗೆದುಕೊಳ್ಳಿ. ನಾವು ತತ್ವಕ್ಕಾಗಿ ಪ್ರಾಣ ಬಿಡುವುದಕ್ಕೆ ಸಿದ್ಧವಾಗಿ ಕಾಂಗ್ರೆಸ್ ಮತ್ತು ಅದರ ಪಂಚಪ್ರಾಣ ಮಹಾತ್ಮ ಗಾಂಧೀಜಿ ಅವರೊಂದಿಗೆ ಜಗಳ ಮಾಡುತ್ತಿದ್ದರೆ ಇವರು ಈ ರಾಷ್ಟ್ರೀಯ ಹರಿಜನರು ಶತ್ರು ಪಾಳಯದಲ್ಲಿ ಸ್ವಸ್ಥದಿಂದ ಕುಳಿತಿದ್ದರು. ಇಂತಹ ಲೇಭಾಗು ಜನರಿಗೆ ಅವರ ಪಾಲನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಅವರಿಗೆ ಏನಾದರೂ ನೀಡಬೇಕೆಂದು ನಾವೇಕೆ ಉದಾರತೆ ತೋರಬೇಕು? ವಟಗುಟ್ಟುವಿಕೆಯಿಂದ ತಮ್ಮ ಜೀವನ ಸಾಗಿಸಬೇಕು ಎನ್ನುವವರ ಆರೋಪಗಳಿಗೆ ಮತ್ತು ಕಂಗಾಲುತನ ವರ್ತನೆಗೆ ಚಿಂತೆ ಮಾಡಬೇಕು ಎಂದು ನನಗೆ ಅನ್ನಿಸುವುದಿಲ್ಲ. ಇಷ್ಟೇ ಅಲ್ಲ ಪುಣೆ ಒಪ್ಪಂದಕ್ಕೆ ಮುನ್ನ ಗಾಂಧೀಜಿ ಅವರು ತಮ್ಮ ಪ್ರಾಣ ಪಣಕ್ಕೆ ಹಚ್ಚಿದ ಮೇಲೆ ಇವರಿಗೆ ಗಾಂಧೀಜಿಯ ಪ್ರಾಣ ಉಳಿಸುವುದಕ್ಕೆ ಕಾನೂನು ಮಂಡಳಿಯಲ್ಲಿ ಸ್ಥಾನಗಳು ಬೇಡವಾಗಿದ್ದವು. ಈಗ ನನ್ನ ಪ್ರಯತ್ನದ ಫಲವಾಗಿ ಲಭಿಸಿರುವ ಸ್ಥಾನಗಳನ್ನು ಇವರು ಏಕೆ ಕೇಳಬೇಕು? ನಿಜವಾಗಿ ಹೇಳಬೇಕೆಂದರೆ ರಾಷ್ಟ್ರೀಯ ಹರಿಜನ ಪಕ್ಷದ ಮುಖಂಡ ಎಂದು ಹೇಳಿಕೊಳ್ಳುವ ಶ್ರೀ. ನಾರಾಯಣರಾವ್ ಕಾಜರೋಳಕರ್ ಅವರು ಸಮಯ ಬಂದರೆ ವೀರ ಸಾವರ್ಕರ್ ಉಡಿಯಲ್ಲೂ ಹೋಗಿ ಕುಳಿತುಕೊಳ್ಳಬಹುದು. ಪಿ. ಬಾಳು ಅವರು ದೇಶಭಕ್ತ ವಲ್ಲಭಬಾಯಿ ಪಟೇಲ್ ಅವರ ಮಡಿಲಿನಲ್ಲಿ ಕೊಸರಾಡುವುದನ್ನು ನೋಡಬಹುದು. ಇಂತಹ ಪರಿಸ್ಥಿತಿಯಲ್ಲಿ ಈ ಪಕ್ಷದ ಮುಂದಿನ ಗತಿ ಏನು ಆಗುತ್ತದೆ ಎಂದು ಈಗ ಹೇಳಿ ಉಪಯೋಗವಿಲ್ಲ. ಇಂತಹ ವಸ್ತುಸ್ಥಿತಿಯ ಮೇಲೆ ಯಾರಾದರೂ ಬೆಳಕು ಚೆಲ್ಲಿದ್ದಾರಾ? ಇಲ್ಲಿಯವರೆಗೆ ನಮ್ಮ ಪಕ್ಷಕ್ಕಾಗಿ ನೆರವಾಗಿರುವ ಮತ್ತು ನಮ್ಮ ಕೆಲಸದ ಯಶಸ್ಸಿಗಾಗಿ ಶ್ರಮವಹಿಸಿದ ಶ್ರೀ. ಶಿವತರಕರ್ ಮಾಸ್ತರ್ ಅವರು ಚಮ್ಮಾರ ಜಾತಿಯಲ್ಲಿ ಓರ್ವ ಪ್ರಮುಖರಾಗಿದ್ದಾರೆ.

ದುರ್ದೈವದ ಕಾರಣ ಮುನ್ಸಿಪಾಲಿಟಿ ಸಮಿತಿಯಿಂದ ಕಾನೂನು ಮಂಡಳಿಯ ಚುನಾವಣೆಗೆ ಸ್ಪರ್ಧಿಸುವುದಕ್ಕೆ ಅವಕಾಶ ಲಭಿಸದ ಕಾರಣ ಅವರನ್ನು ನಮ್ಮ ಪಕ್ಷದ ಅಭ್ಯರ್ಥಿ ಎಂದು ಘೋಷಿಸಲು ಆಗಲಿಲ್ಲ.

ನಿಜವಾಗಿಯೂ ಹೇಳಬೇಕು ಎಂದರೆ ಕಾನೂನು ಮಂಡಳಿಗೆ ಹೋಗಿ ಅಲ್ಲಿ ಕೆಲಸ ಮಾಡುವುದಕ್ಕಿಂತ ನನಗೆ ಹೊರಗೆ ಇದ್ದುಕೊಂಡು ಕೆಲಸ ಮಾಡುವುದು ಇಷ್ಟವಾಗುತ್ತದೆ. ಈಗ ನನ್ನ ಎದುರು ಧರ್ಮಾಂತರದ ಪ್ರಶ್ನೆ ಇದೆ. ಹೊಸ ಕಾಲೇಜಿನ ಬಗ್ಗೆ ವಿಚಾರ ಮಾಡಬೇಕಿದೆ. ಹೀಗೆ ಅನೇಕ ಸಾರ್ವಜನಿಕ ಕೆಲಸಗಳಿವೆ. ಆದರೂ ಕೂಡ ನಿಮ್ಮ ಎಲ್ಲರ ಇಚ್ಛೆಯ ಮೇರೆಗೆ ನಾನು ಈ ಹೊಸ ಪಕ್ಷದ ಮುಖಾಂತರ ಕಾನೂನು ಮಂಡಳಿಗೆ ಸೇರುವುದಕ್ಕೆ ತೀರ್ಮಾನಿಸಿದ್ದೇನೆ. ನನ್ನ ಈ ನಿರ್ಧಾರಕ್ಕೆ ಅಡ್ಡ ಬರುವ ಉದ್ದೇಶದಿಂದ ಕಾಂಗ್ರೆಸ್ ಮಗ್ಗಲು ಮುಳ್ಳಿನಂತೆ ಕೆಲಸ ಮಾಡಲಿದೆ ಎನ್ನುವುದು ನನಗೆ ಮನದಟ್ಟಾಗಿದೆ. ಹಣಬಲದ ಮೇಲೆ ನನ್ನ ವಿರುದ್ಧ ಕೆಲಸ ಮಾಡುವುದಕ್ಕೆ ಕಾಂಗ್ರೆಸ್ ಯತ್ನಿಸಬಹುದು ಮತ್ತು ಅಂತಹ ಕೆಲಸಗಳನ್ನು ಅವರು ಈಗಾಗಲೇ ಆರಂಭಿಸಿದ್ದಾರೆ. ಹೀಗಾಗಿ ತಾವು ಎಲ್ಲರೂ ಶಿಸ್ತಿನಿಂದ ಸಂಘಟನೆಯಾಗಬೇಕು ಮತ್ತು ಈ ಸಂದರ್ಭದಲ್ಲಿ ನಿಮ್ಮ ಪ್ರತಿಯೊಬ್ಬರ ಮತಗಳು ನನಗೆ ಲಭಿಸಬೇಕು. ಆಯ್ಕೆಯಾಗುವುದಕ್ಕಾಗಿ ನನ್ನ ತಾತ್ವಿಕ ನಿಲುವುಗಳಿಂದ ಹಿಂದೆ ಸರಿಯಲಾರೆ ಎನ್ನುವ ವಿಚಾರ ನಿಮ್ಮ ಗಮನದಲ್ಲಿ ಇರಲಿ. ತಾವಾಗಿಯೇ ಯಾರೂ ನಮಗೆ ನೆರವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಪಿತೂರಿಗೆ ಬಲಿ ಬೀಳಲೇಬಾರದು. ಯಾರಿಗೆ ಅಭ್ಯರ್ಥಿ ಆಗುವುದಕ್ಕೆ ಅವಕಾಶ ಲಭಿಸಿಲ್ಲವೋ ಅಂತಹ ಅತೃಪ್ತ ವ್ಯಕ್ತಿಗಳು ಪಿತೂರಿ ಮಾಡುವ ಕೆಲಸದಲ್ಲಿ ಮಗ್ನರಾಗಿದ್ದಾರೆ. ಕನಿಷ್ಠ ಸ್ವಾಭಿಮಾನಕ್ಕಾಗಿಯಾದರೂ ಅವರ ಪಿತೂರಿಗೆ ಬಲಿಯಾಗಬೇಡಿ. ನೀವೇ ವಿಚಾರ ಮಾಡಿ ಯಾವ ಗಿಡದ ನೆರಳಿನಿಂದ ನಮಗೆ ಸಂಪೂರ್ಣ ತೃಪ್ತಿ ಸಿಗುತ್ತದೋ, ಆ ನೆರಳು ಹಾಳು ಮಾಡಬೇಕೋ, ನೆರಳು ನೀಡುವ ಆ ರೆಂಭೆ ಕತ್ತರಿಸಿ ಹಾಕುವಂತಹ ದುಷ್ಟತನ ನೀವು ಮಾಡುವುದಿಲ್ಲ ಎಂದು ನನಗೆ ಖಾತ್ರಿ ಇದೆ. ಯಾರು ಕುಹಕ ವಿಚಾರಗಳಿಂದ ದುಷ್ಟತನದ ಕೆಲಸ ಮಾಡುವುದಕ್ಕೆ ಪ್ರವೃತ್ತರಾಗಿದ್ದಾರೋ ಅವರಿಗೆ ಯಾವ ಪ್ರಮಾಣದ ಯಶಸ್ಸು ಲಭಿಸುತ್ತದೆ ಎನ್ನುವುದರ ಬಗ್ಗೆ ನನಗೆ ಸಂಶಯ ಇದೆ. ಆದ್ದರಿಂದ ಈ ಎಲ್ಲ ಕಾರಸ್ಥಾನಗಳಿಂದ ದೂರವಾಗಿ ಉಳಿದು ನಾನು, ನನ್ನ ಸಂಗಡಿಗರ ನೆರವಿನಿಂದ ರೂಪಿಸಿರುವ ಕಾರ್ಯಕ್ರಮದ ರೂಪುರೇಷೆಯನ್ನು ತಮ್ಮ ಎದುರು ಇರಿಸುತ್ತಿದ್ದೇನೆ. ಈ ಕೆಲಸವನ್ನು ಸಮತಾ ಸೈನಿಕ ದಳದ ಸೈನಿಕರು ಅತ್ಯಂತ ಶಿಸ್ತಿನಿಂದ ಮಾಡಬೇಕಿದೆ.

ನಮಗೆ ಪ್ರಬಲ ಶತ್ರುವಿನೊಂದಿಗೆ ಹೋರಾಟಕ್ಕೆ ಇಳಿಯಬೇಕಿದೆ. ಈ ಕೆಲಸಕ್ಕಾಗಿ ಕನಿಷ್ಠ ಏನಿಲ್ಲವೆಂದರೂ ಎರಡು ಸಾವಿರ ಸಮತಾ ಸೈನಿಕರನ್ನು ಈ ನಗರದಲ್ಲಿ ತಯಾರು ಮಾಡಬೇಕಿದೆ. ನಮ್ಮ ಹತ್ತಿರ ಸಾಕಷ್ಟು ಮನುಷ್ಯ ಬಲ ಇದ್ದರೆ, ಶಿಸ್ತು ಮತ್ತು ಸಂಘಟನೆಯಿಂದ ಎಂತಹದ್ದೆ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ನಾವು ಮಾರ್ಗ ಕಂಡುಕೊಳ್ಳುವುದಕ್ಕೆ ಎಂದಿಗೂ ಸಮಸ್ಯೆಯಾಗುವುದಿಲ್ಲ. ನನ್ನ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಸೇರಿದಂತೆ ಇತರ ಹಿತಶತ್ರುಗಳು ಸಾಕಷ್ಟು ಕಾರಸ್ಥಾನ ಮಾಡಿ ಅವರ ಹಾದಿಯಲ್ಲಿನ ಕಂಟಕ ದೂರ ಮಾಡುವುದಕ್ಕೆ ಯತ್ನಿಸುತ್ತಿದ್ದಾರೆ. ವಾರ್ಡಿನಲ್ಲಿರುವ ಪ್ರತಿಯೊಬ್ಬ ಅಸ್ಪೃಶ್ಯ ಮತದಾರ ತಪ್ಪದೇ ನನಗೆ ಮತ ಹಾಕುತ್ತಾನೆ ಎನ್ನುವುದು ನನಗೆ ಖಾತ್ರಿ ಇದೆ ಮತ್ತು ಈ ಕೆಲಸವನ್ನು ಸಮತಾ ಸೈನಿಕ ದಳದ ಸೈನಿಕರು ತಾವೇ ಖುದ್ದಾಗಿ ಕೈಗೆತ್ತಿಕೊಳ್ಳಬೇಕು. ನನ್ನ ಅನುಪಸ್ಥಿತಿಯಲ್ಲೂ ಸಮತಾ ಸೈನಿಕ ದಳದ ಪ್ರತಿಯೊಬ್ಬ ಯೋಧ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾನೆಂದು ನನಗೆ ಖಾತ್ರಿ ಇದೆ. ಈ ಕೆಲಸಕ್ಕಾಗಿ ನಾನೊಂದು ಕಮಿಟಿಯನ್ನು ನೇಮಕ ಮಾಡಿದ್ದು, ಅದರ ನೆರವಿನಿಂದ ನೀವು ನಿಮ್ಮ ಕರ್ತವ್ಯ ನಿರ್ವಹಿಸಬಲ್ಲಿರಿ.

* * * *

---

ಜನತಾ: ಡಿಸೆಂಬರ್ ೫, ೧೯೩೬.

## ೯೭.

# ಈ ಸ್ಥಾನ ಗೌರವದ್ದಲ್ಲ, ಹೋರಾಟದ್ದಾಗಿದೆ

ಅಸ್ಪೃಶ್ಯರ ಒಬ್ಬನೇ ಮುಖಂಡ ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ವಿದೇಶಿದಿಂದ ಬಂದೊಡನೆ ತಮ್ಮದೇ ಆದ ಸ್ವತಂತ್ರ ಮಜೂರ ಪಕ್ಷದ ಸಂಚಾರದ ಕಾರ್ಯಕ್ರಮವನ್ನು ಯೋಜಿಸಿದರು. ಮೊದಲ ಹಂತದ ತಿರುಗಾಟದಲ್ಲಿ ಅವರು ನಾಶಿಕ ಜಿಲ್ಲೆಯ ಸಂಚಾರ ನಡೆಸುವ ನಿರ್ಧಾರ ಪ್ರಕಟಿಸಿದರು. ಸಭೆ ನಡೆಸಲು ಸಮಯ ಕಡಿಮೆಯಿತ್ತು. ಆದರೂ ನಾಶಿಕದ ಕರ್ತವ್ಯದಕ್ಷ ಮತ್ತು ಧೈರ್ಯವಂತ ನೇತಾರ ಬಾವುರಾವ ಗಾಯಕವಾಡರು ಡಾ. ಬಾಬಾಸಾಹೇಬರ ಸಂಚಾರವನ್ನು ಅದೆಷ್ಟು ಕೌಶಲ್ಯದಿಂದ ಯೋಜಿಸಿದರೆಂದರೆ ಸಾವಿರಾರು ಸ್ತ್ರೀಪುರುಷರು ಮತ್ತು ಮಕ್ಕಳಾದಿಯಾಗಿ ಬೇರೆಬೇರೆ ಸ್ಥಳಗಳಲ್ಲಿ, ಚಾವಡಿ, ಅಗಸಿಯಲ್ಲಿ ಡಾ. ಬಾಬಾಸಾಹೇಬರ ದರ್ಶನಕ್ಕಾಗಿ ಕಾತುರರಾಗಿ ದಾರಿಕಾಯುತ್ತಿದ್ದರು.

ಮೊದಲು ಶನಿವಾರ ದಿ. ೧೬ ಜನವರಿ, ೧೯೩೭ರಂದು ಡಾ. ಬಾಬಾಸಾಹೇಬ ಅಂಬೇಡ್ಕರರು ನಾಗಪುರ ಮೇಲ್‌ನಿಂದ ಇಗತಪುರಿಗೆ ರಾತ್ರಿ ೮ ಗಂಟೆಗೆ ಆಗಮಿಸಿದರು. ಅಲ್ಲಿ ಇಗತಪುರಿವಾಸಿಗಳ ಪರವಾಗಿ ಮತ್ತು ಸ್ವಾವಲಂಬನ ಮಂಡಳದ ವತಿಯಿಂದ ಸ್ಟೇಶನ್‌ನಲ್ಲಿ ಮಾಲಾರ್ಪಣೆ ಅರ್ಪಿಸಿ ಸ್ವಾಗತಿಸಿದರು. ರಾತ್ರಿ ೯ ಗಂಟೆ ಪೋಸ್ಟ್‌ನ ಪಕ್ಕದಲ್ಲಿರುವ ಬಯಲಿನಲ್ಲಿ ಸಾರ್ವಜನಿಕ ಸಭೆ ನಡೆಯಿತು. ಎರಡು ಸಾವಿರದಷ್ಟು ಜನಸಮೂಹ ನೆರೆದಿತ್ತು. ಎರಡನೆಯ ದಿನ ದಿ. ೧೭-೦೧-೧೯೩೭ರ ರವಿವಾರದಂದು ಪ್ಯಾಸೆಂಜರ್ ಟ್ರೇನಿನಿಂದ ಬೆಳಗಿನ ೬.೧೫ಕ್ಕೆ ಕ್ಯಾಂಪ್ ದೇವಳಾಕ್ಕಲಿಗೆ ಆಗಮಿಸುತ್ತಿದ್ದಂತೆಯೇ ಇಗತಪುರಿ ಸ್ಟೇಶನ್‌ನಲ್ಲಿ ಮಾಲಾರ್ಪಣೆ ನಡೆಸಿದರು. 'ಡಾ. ಬಾಬಾಸಾಹೇಬ ಅಂಬೇಡ್ಕರರಿಗೆ ಜಯವಾಗಲಿ' ಎಂಬ ಜಯಘೋಷ ಅಲ್ಲಿ ಮೊಳಗಿತು. ಆಗ ಇಗತಪುರಿಯನ್ನು ಬಿಟ್ಟರು. ಡಾ. ಬಾಬಾಸಾಹೇಬರ ಜೊತೆಗೆ ನಾಶಿಕದ ಅಭ್ಯರ್ಥಿ ಶ್ರೀ ಭಾವುರಾವ ಕೃಷ್ಣರಾವ ಗಾಯಕವಾಡ, ಪೂರ್ವಖಾನದೇಶದ ಅಭ್ಯರ್ಥಿ ಶ್ರೀ ದೌಲತರಾವ ಜಾಧವ, ನಗರದ ಉಮೇದವಾರ ಶ್ರೀ ಪ್ರಭಾಕರ ಜನಾರ್ದನರೋಹಮ, ನಾಶಿಕ ಜಿಲ್ಲೆ ಯುವಕಸಂಘದ ಜಲಶಾಮಂಡಳಿವತಿಯಿಂದ ದೇವರಾವ ಡಾಂಗಳೆ ಭೀಮರಾವ ಕರ್ಡಕ, ಬಾಳಾಜಿ ಮುಂತಾದವರು ಇದ್ದರು. ನಾಶಿಕ ರಸ್ತೆಯ ಮತ್ತು ಇಗತಪುರಿಯ ಸ್ಕೌಟ್ ತಂಡವು ಶಾಂತತೆ ಹಾಗೂ ಸುವ್ಯವಸ್ಥೆಯನ್ನು ಅತ್ಯುತ್ತಮ ಬಗೆಯಲ್ಲಿ ನೋಡಿಕೊಂಡಿತು. ಮುಂದೆ ಮಾರ್ಗದಲ್ಲಿ ಘೋಟಿ, ಆಸವಲಿ, ಲಹವೀಯ ಸ್ಟೇಶನ್ನುಗಳಲ್ಲಿ ಜನರು ಡಾ. ಅಂಬೇಡ್ಕರರಿಗೆ ಪುಷ್ಪಮಾಲೆ ಅರ್ಪಿಸಿದರು. ಕ್ಯಾಂಪ್ ದೇವಳಾಲಿಯ ಸ್ಟೇಶನ್ನಿನಲ್ಲಿ ದಟ್ಟವಾಗಿ ಅಧಿಕ ಸಂಖ್ಯೆಯಲ್ಲಿ ಜನಸಮೂಹ ನೆರೆದಿತ್ತು. ಅನೇಕ ಸಂಘಸಂಸ್ಥೆಗಳು ಡಾ. ಬಾಬಾಸಾಹೇಬರಿಗೆ ಪುಷ್ಪಮಾಲೆ ಅರ್ಪಿಸಿದವು. ತೇಲ ಖೋರಾ ಮತ್ತು ನಾಶಿಕ ರಸ್ತೆಯ ಸ್ಕೌಟ್‌ತಂಡವು ನಿಲ್ದಾಣದ ಹೊರಗೆ ಗಾರ್ಡ್ ಆಫ್ ಆನರ್ (ಗೌರವ ವಂದನೆ) ನೀಡಿತು. ಆನಂತರ ಪ್ರಮುಖ ದಾರಿಗಳಲ್ಲಿ ನಿಲ್ದಾಣದಿಂದ ಹೊರಟ ಮೆರವಣಿಗೆ ಕ್ಯಾಂಪ್ ದೇವಳಾಲಿಯ ಜ್ಞಾನ ಮಂದಿರದವರೆಗೆ

---

ಜನತಾ: ೨೩ ಮತ್ತು ೩೦ ಜನೇವರಿ ೧೯೩೭.

ಬಂತು. ಮಾದಿಗ ಸಮುದಾಯದ ಬ್ಯಾಂಡ್‌ನವರು ಎದುರಿನ ಭಾಗದಲ್ಲಿ ವಾದ್ಯ ನುಡಿಸುತ್ತಿದ್ದರು. 'ಡಾ. ಬಾಬಾಸಾಹೇಬ ಅಂಬೇಡ್ಕರ ಕೀಜಯ' 'ಅಂಬೇಡ್ಕರರಿಗೆ ಜಯವಾಗಲಿ' 'ಅಂಬೇಡ್ಕರ ಕೌನ್‌ಹೈ, ದಲಿತೋಂಕಾ ರಾಜಾ ಹೈ', 'ತರುಣ ಪಾರ್ಟಿ ಜಿಂದಾಬಾದ, ಥೋಡೆ ದಿ ಮೇ ಭೀಮರಾಜ', ಸ್ವತಂತ್ರ ಮಜೂರ ಪಕ್ಷದ ಜಯ ಘೋಷಗಳಲ್ಲಿ ಮೆರವಣಿಗೆ ಜ್ಞಾನಮಂದಿರ ಪ್ರವೇಶಿಸಿತು. ಅತ್ಯಂತ ಕಡಿಮೆ ಅವಧಿಯೊಳಗೆ ಸುಮಾರು ಸಾವಿರ ಸಂಖ್ಯೆಯ ಜನರು ಸೇರಿದರು. ಶ್ರೀ ಭಾವುರಾವ ಗಾಯಕವಾಡ ಇವರಿಗೆ ಮತನೀಡಿ ಆಯ್ಕೆಗೊಳಿಸುವುದರ ಅವಶ್ಯಕತೆ ಕುರಿತು ಮಾರ್ಮಿಕವಾಗಿ ಮತ್ತು ಕಡಿಮೆ ಸಮಯದಲ್ಲಿ ಪ್ರಾಸ್ತಾವಿಕ ಮಾತುಗಳಾಯಿತು. ಬಳಿಕ ಜ್ಞಾನ ಮಂದಿರ ಪರವಾಗಿ ಮಾಲಾರ್ಪಣೆ ಜರುಗಿತು. ಈ ಸಂದರ್ಭದಲ್ಲಿ ತೇಲಖೋರಾ ಸ್ಕೌಟ್ ತಂಡದಿಂದ ಮಾಲಾರ್ಪಣೆ ನಡೆಯಿತು. ಆನಂತರ ನಾಶಿಕಗೆ ಆಗಮಿಸುತ್ತಿರುವಾಗ ಮಾರ್ಗ ಮಧ್ಯೆ ವಿದಗಾವ, ದೇವಳಾಲಿ, ನಾಶಿಕ ರಸ್ತೆಯ ದೀನ ಬಂಧು ಅಂಬೇಡ್ಕರ ವಾಚನಾಲಯದ ವತಿಯಿಂದ ಡಾ. ಬಾಬಾಸಾಹೇಬರಿಗೆ ಹೂಮಾಲೆ ಅರ್ಪಿಸಲಾಯಿತು. ನಾಶಿಕದಲ್ಲಿ ಶ್ರೀ ಭಾವುರಾವ ಗಾಯಕವಾಡರು ಡಾ. ಸಾಹೇಬರಿಗೆ ಭರ್ಜರಿ 'ಟೀ ಪಾರ್ಟಿ' ಏರ್ಪಡಿಸಿದರು. ಧುಳೇಕರ ವಾಮನರಾವ ಪವಾರ ಅವರು ಮತ್ತು ಭಗಿನಿ ಮಂಡಳದ ವತಿಯಿಂದ ಸೌ. ಗೀತಾಬಾಯಿ ಗಾಯಕವಾಡ ಅವರು ಪುಷ್ಪಮಾಲೆ ಅರ್ಪಿಸಿದರು. ಅಲ್ಲಿಂದ ಸಭೆಗೆಂದು ಹೊಲಗೇರಿಗೆ ಹೋಗುತ್ತಿರುವಾಗ ದಾರಿಯಲ್ಲಿ ಶ್ರೀಮತಿ ಅಕ್ಕಾತಾಯಿ ತೇಜಾಳೆಯವರು ಮಾಲಾರ್ಪಣೆ ನೆರವೇರಿಸಿದರು. ಸಭಾಸ್ಥಳಕ್ಕೆ ಡಾ. ಬಾಬಾಸಾಹೇಬರು ಆಗಮಿಸುತ್ತಿದ್ದಂತೆಯೇ 'ಡಾ. ಬಾಬಾಸಾಹೇಬ ಅಂಬೇಡ್ಕರ ಕೀ ಜೈ', 'ಅಂಬೇಡ್ಕರ ಕೌನ್ ಹೈ, ದಲಿತೋಂಕಾ ರಾಜಾ ಹೈ' 'ತರುಣ ಪಾರ್ಟಿ ಜಿಂದಾಬಾದ್, ಥೋಡೆ ದಿನ ಮೇ ಭೀಮರಾಜ' ಮುಂತಾದ ಜಯಘೋಷಗಳಿಂದ ಅಲ್ಲಿಯ ವಾತಾವರಣ ನಿನಾದ ಗೊಂಡಿತು. ಸೇರಿದ ಅಂದಾಜು ಒಂದೂವರೆ ಸಾವಿರದಿಂದ ಎರಡುಸಾವಿರವರೆಗಿನ ಜನ ಸಮೂಹದೆದುರು ಡಾ. ಬಾಬಾಸಾಹೇಬರು ಭಾವುರಾವ ಗಾಯಕವಾಡರ ಉಮೇದುವಾರಿಕೆಯನ್ನು ಬೆಂಬಲಿಸಿ ಭಾಷಣ ಮಾಡಿದರು. ಅಲ್ಲಿ ದಾಣಿಮಂಡಳಿ ಪರವಾಗಿ ಹೂಹಾರ ಅರ್ಪಿಸಿದರು. ಪವಳಾರ ನೇಟಾವಟೆಯವರು ಹೂಮಾಲೆ ಹಾಕಿದರು. ಸಮಸ್ತ ಮಹಾರ ಮಂಡಳಿ ಪರವಾಗಿ ಶ್ರೀ ಸಖಾರಾಮ ಕಾಳೆಯವರು ಪುಷ್ಪಹಾರ ನೀಡಿದರು. ನಾಶಿಕದಲ್ಲಿ ಶ್ರೀ ಶಿವರಾಮ ಪಾಲಾಜಿ ಮೋರೆಯವರ ಅಂಗಡಿಯಲ್ಲಿ ಡಾ. ಬಾಬಾಸಾಹೇಬರ ಫೋಟೋವನ್ನು ಮೇಘವಾಳ ಮಂಡಳಿಯವರು ತೆಗೆದುಕೊಂಡರು. ಅಲ್ಲಿಂದ ವರಖೇಡಾಗೆ ಆಗಮಿಸುವಾಗ ದಾರಿಯಲ್ಲಿ ಮಸರೂಳ, ಢಕಾಂಬೆ, ತಳೇಗಾವ ಈ ಊರುಗಳಲ್ಲಿ ಮಾಲಾರ್ಪಣೆ ಕಾರ್ಯಕ್ರಮ ನಡೆಯಿತು. ದಿಂಡೋರಿಯಲ್ಲಿ ಊರುತುಂಬ ಮೆರವಣಿಗೆ ನಡೆಯಿತು. ಸುಸ್ವರದ ವಾದ್ಯವೃಂದಗಳು ಸಂಗೀತ ನುಡಿಸುತ್ತಿದ್ದವು. ಡಾ. ಬಾಬಾಸಾಹೇಬ ಜಯಜಯಕಾರಗಳಿಂದ ದಿಂಡೋರಿ ಊರು ದಣದಣಿಸಿ ಸದ್ದುಮಾಡಿತು. ಹೊಲಗೇರಿಯೊಳಗೆ ಸುಂದರವಾದ ವೇದಿಕೆಯನ್ನು ಅಂಬೇಡ್ಕರರು ಹತ್ತಿ ಕೂರುತ್ತಿದ್ದಂತೆ ಅಲ್ಲಿಯ ನೂರಾರು ಮಹಿಳೆಯರು ಆರತಿಯೆತ್ತಿದರು. ಡಾ. ಬಾಬಾಸಾಹೇಬ ಅಂಬೇಡ್ಕರರಿಗೆ ಭಕ್ತಿ ಭಾವನೆ–ಯಿಂದ ಮತ್ತು ಸೋದರ ವಾತ್ಸಲ್ಯದಿಂದ ಆರತಿ ಬೆಳಗಿ 'ಕಂಟಕಗಳೆಲ್ಲ ದೂರಾಗಿ ಭೀಮರಾಜ ಬೇಗಬರಲಿ' ಎಂದರು. ಈ ಸಂದರ್ಭದಲ್ಲಿ ಡಾ. ಬಾಬಾಸಾಹೇಬ–'ಶ್ರೀ ಭಾವುರಾವ ಗಾಯಕವಾಡರು ನಿಮ್ಮ ತಾಲೂಕಿನವರಾಗಿರಬಹುದು. ವೃಥಾ ತಾಲೂಕಿನ ಅಭಿಮಾನದಿಂದ ಮರುಳಾಗದೆ ಅವರಿಗೆ ಮತಹಾಕದೆ ನಿಜವಾದ ಯೋಗ್ಯವ್ಯಕ್ತಿಯೆಂದು, ಕರ್ತವ್ಯ ದಕ್ಷನೆಂದು ಅರಿತು ಈ ಅಭ್ಯರ್ಥಿಗೆ ನೀವೆಲ್ಲರೂ ನಿಮ್ಮ ನಾಲ್ಕೂ ಮತಗಳನ್ನು ನೀಡುವುದು ಅಗತ್ಯವಾಗಿದೆ ಎಂದು ಭಾಷಣ ಮಾಡಿದರು. ಮಾಲಾರ್ಪಣೆಯಾದ

ನಂತರ ಮುಂದೆ ಆವನಖೇಡನಲ್ಲೂ ಪುಷ್ಪಮಾಲೆ ಹಾಕಿದರು. ಆಂಬೆವಣಿಯಲ್ಲಿ ಶ್ರೀಕಿಸನರಾವ ಶಿವರಾಮ ಗಾಂಗುರ್ಡೆಯವರು ಚಹಾಕೂಟ ಏರ್ಪಡಿಸಿದರು. ಇದೇ ಸಂದರ್ಭದಲ್ಲಿ ಆಂಬೆವಣಿಯ ಮಹಾರ ಮಂಡಳ ಮತ್ತು ಭಗಿನಿ ಮಂಡಳ ಪರವಾಗಿ ಹೂಹಾರ ಅರ್ಪಿಸಲಾಯಿತು. ಇಲ್ಲಿಂದ ವಾಜಂತ್ರಿಗಳ ವಾದ್ಯವಾದನ ಮತ್ತು ಜೈಕಾರಗಳ ಜಯಘೋಷದೊಂದಿಗೆ ಮೆರವಣಿಗೆ ವರಖೇಡಾಗೆ ಬಂತು. ಶ್ರೀ ಶಿವರಾಮ ದಾದಾಜಿ ಗಾಂಗುರ್ಡೆಯವರ ಮನೆಯಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ ಹಾಗೂ ಅವರ ಜತೆ ಬಂದವರಿಗೆ ಭೋಜನಕೂಟ ಏರ್ಪಡಿಸಿದರು. ಈ ಸಭೆಯಲ್ಲಿ ಅರ್ಧ, ಮುಕ್ಕಾಲುಗಂಟೆ ಮಾರ್ಮಿಕವಾದ ಉಪನ್ಯಾಸ ನೀಡಿದರು. ಸಭೆಗೆ ಆಗಮಿಸಿದವರೆಲ್ಲರಿಗೂ ವರಖೇಡಾದ ಇಡೀ ಗ್ರಾಮಸ್ಥರು ಸುಗ್ರಾಸಭೋಜನ ನೀಡಿದರು. ಇಲ್ಲಿಂದ ಮುಂದೆ ಸಾಗುವಾಗ ಮಧ್ಯೆ ದಾರಿಯಲ್ಲಿ ಜುಳಕೆಯಲ್ಲಿ ಹೂಹಾರ ಅರ್ಪಿಸಿದರು. ಪಿಂಪಳಗಾವ ಬಸವಂತದ ಚಾವಡಿಯೊಳಗೆ ಬಯಲಲ್ಲಿ ಶ್ರೀ ಭಾವುರಾವ ಗಾಯಕವಾಡ ಅವರಿಗೆ ಬೆಂಬಲಿಸಿ ಪುಟ್ಟದಾದ ಭಾಷಣವನ್ನು ಡಾ. ಬಾಬಾ ಸಾಹೇಬರು ಮಾಡಿದರು.* ಓಝುರ, ತಾಂಬಟ ಎಂಬಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರರ ಮೆರವಣಿಗೆಯನ್ನು ಊರಿನ ಮುಖ್ಯಬೀದಿಗಳಲ್ಲಿ ನಡೆಸಲಾಯಿತು. ವಾದ್ಯಗೋಷ್ಠಿ ಮತ್ತು ಜಯಘೋಷಗಳು ಮೆರವಣಿಗೆಗೆ ಕಳೆನೀಡಿದವು. ಹೊಲಗೇರಿಯಲ್ಲಿ ಪುಟ್ಟದಾದ ಸಂಖ್ಯೆಯ ಜನಸಮೂಹವಿತ್ತು. ಅಲ್ಲಿ ಭಾಷಣ ಮಾಡಿ ಶ್ರೀ ಗಾಯಕವಾಡರಿಗೆ ಬೆಂಬಲಿಸಿದರು. ಅಲ್ಲಿಂದ ಮುಂದೆ ಖೇರವಾಡಿ, ಚಾಂದೋರಿ, ಸಾಯಖೇಡಾ, ಚಾಟೋರಿ, ನಾಯಗಾವ ಮುಂತಾದ ಸ್ಥಳಗಳಲಿ ಹೂಹಾರ ನೀಡಿ ಗೌರವಿಸಿದರು. ರಾತ್ರಿ ೮-೩೦ಕ್ಕೆ ಸಿನ್ನರನ ಮುಖ್ಯರಸ್ತೆಗಳಲ್ಲಿ ವಾಹನದಲ್ಲಿ ಮೆರವಣಿಗೆ ನಡೆಸಲಾಯಿತು. ಇದು ತುಂಬ ಜನಸಂದಣಿ ಹೊಂದಿದ ಪ್ರಚಂಡ ಮೆರವಣಿಗೆಯಾಗಿತ್ತು. ರಾತ್ರಿ ೯-೩೦ಕ್ಕೆ ಸಭೆ ಆರಂಭಗೊಂಡಿತು. ಪ್ರಾರಂಭದಲ್ಲಿ ಶ್ರೀ ದೌಲತರಾವ ಜಾಧವ, ಪುಂಜಾಜಿ ನವಸಾಜಿ ಜಾಧವ ಮತ್ತು ರಘುನಾಥ ರಾವ ರಿಪೋಟೆಯವರಿಂದ ಶ್ರೀ ಭಾವುರಾವ ಗಾಯಕವಾಡರಿಗೆ ಬೆಂಬಲ ಸೂಚಿಸಿದ ಭಾಷಣಗಳು ನಡೆದವು. ಕೊನೆಗೆ ಡಾ. ಬಾಬಾಸಾಹೇಬರು ಚಪ್ಪಾಳೆಗಳ ಸುರಿಮಳೆಯಲ್ಲಿ ಭಾಷಣಕ್ಕೆ ಸಿದ್ಧರಾಗಿ ಎದ್ದರು. ಎದುರಿಸಲಿರುವ ಚುನಾವಣೆಯ ಮಹತ್ವ ಮತ್ತು ತಾವುಗಳು ಅದೆಷ್ಟು ದಕ್ಷತೆಯಿಂದ ವರ್ತಿಸಬೇಕೆಂಬುದರ ಅಗತ್ಯತೆಯನ್ನು ಮನವರಿಕೆ ಮಾಡಿದರು. ಜಿಲ್ಲೆಯಿಂದ ಶ್ರೀ ಭಾವುರಾವ ಗಾಯಕವಾಡರನ್ನೇ ತಾವು ಆಯ್ಕೆಮಾಡುವುದರ ತೀವ್ರ ಅಗತ್ಯವಿದೆ ಎಂದು ಹೇಳಿದರು. ಆನಂತರ ಸಿನ್ನರ ತಾಲೂಕ ಸಂಘದ ಅಧ್ಯಕ್ಷ ಶ್ರೀ ಬಾಪುರಾವ ಭಾಲೆರಾವ ಅವರಿಂದ ಡಾ. ಬಾಬಾಸಾಹೇಬರಿಗೆ, ಸ್ಕೌಟ್ ತಂಡದವರಿಗೆ ಭೋಜನಕೂಟ ನಡೆಯಿತು. ಅಲ್ಲಿಂದ ನಾಶಿಕ ಸ್ಟೇಶನ್‌ಗೆ ಬರುತ್ತಿರುವಾಗ ದಾರಿಮಧ್ಯೆದಲ್ಲಿ ಶಿಂದೆ ಎಂಬಲ್ಲಿ ಮರಾಠೆ ಮಂಡಳಿ ಮತ್ತು ಮಹಾರ ಮಂಡಳಿ ಜನರು ಡಾ. ಅಂಬೇಡ್ಕರರಿಗೆ ಮಾಲೆ ಅರ್ಪಿಸಿದರು. ಅದರಂತೆ ಪಳಸೆಯ ಮಹಾರ ಮಂಡಳಿಯವರು ಪುಷ್ಪಮಾಲೆ ಅರ್ಪಿಸಿದರು.

ಹೀಗೆ ಅಖಿಲ ಭಾರತೀಯ ಅಸ್ಪೃಶ್ಯ ಎಂದೆನಿಸಿದ ಸಮಾಜದ ಏಕಮೇವ ಮುಂದಾಳು ಡಾ. ಬಾಬಾಸಾಹೇಬ ಅಂಬೇಡ್ಕರರು ಕಾನೂನು ಮಂಡಳಿಯ ಚುನಾವಣೆ ಸಂದರ್ಭದಲ್ಲಿ ನಾಶಿಕ ಜಿಲ್ಲೆಯ ಪ್ರವಾಸ ನಡೆಸಿದರು. ಈ ಪ್ರವಾಸದಲ್ಲಿ ಇಗತಪುರಿ, ಕ್ಯಾಂಪ್ ದೇವಳಾಲಿ, ನಾಶಿಕ, ದಿಂಡೋರಿ, ವರಖೇಡಾ, ಪಿಂಪಳಗಾವ, ಬಸವಂತ, ಓಝುರ, ಸಿನ್ನರ ಮುಂತಾದ ಅನೇಕ ಕಡೆಗೆ ಮಾಡಿದ ಭಾಷಣಗಳ ಸಾರಾಂಶ ರೂಪದ ವರದಿಯು ಈ ಕೆಳಗಿನಂತಿದೆ.

---

* ಅಲ್ಲಿಯ ಜನರು ಡಾ. ಅಂಬೇಡ್ಕರರಿಗೆ ಮಾಲೆ ತೊಡಿಸಿ ಗೌರವಿಸಿ ಫಲಾಹಾರ ನೀಡಿದರು.

ಪ್ರಿಯ ಬಂಧು–ಭಗಿನಿಯರೆ,

ಇಂದಿಲ್ಲಿ ತಮ್ಮನ್ನು ಆಹ್ವಾನಿಸಿದ್ದಕ್ಕೆ ಕಾರಣಗಳನ್ನು ತಮಗೆ ಕಳಿಸಿದ ಹಸ್ತಪ್ರತಿಯಲ್ಲಿ ತಿಳಿಸಲಾಗಿದೆ. ಮುಂಬಯಿ ಕಾನೂನು ಸಮಿತಿಗೆ ನಡೆವ ಚುನಾವಣೆಯಲ್ಲಿ ತಾವು ಯಾರನ್ನು ನಿಮ್ಮ ಮತನೀಡಿ ಆಯ್ಕೆ ಮಾಡಬೇಕೆಂಬುದರ ಕುರಿತು ನೀವು ಯೋಚಿಸಬೇಕಿದೆ. ಈ ದೇಶದಲ್ಲಿ ಅನೇಕ ಅರಸರು ಆಳಿಹೋದರು. ಇಂಗ್ಲೀಷರು ದೇಶಕ್ಕೆ ಬಂದು ಒಟ್ಟು ೧೫೦ವರ್ಷ ಕಳೆದವು. ಈ ೧೫೦ವರ್ಷಗಳ ಇಂಗ್ಲೀಷರ ಕಾಲದಲ್ಲಿ ಅಂದಾಜು ೬೦ವರ್ಷಗಳಿಂದ ಈ ಕೌನ್ಸಿಲ್‌ಗಳು ಜಾರಿಯಲ್ಲಿ ಬಂದವು. ಈ ಕೌನ್ಸಿಲ್ ಮೂಲಕ ಜನಪ್ರತಿನಿಧಿಗಳು ತಮ್ಮ ಜನರ ಅಹವಾಲುಗಳನ್ನು ಸರಕಾರಕ್ಕೆ ಮಂಡಿಸುತ್ತಿರುವರು. ಆದರೆ ೮ಕೋಟಿ ಅಸ್ಪೃಶ್ಯರೆಂದು ಒಪ್ಪಿದ ವರ್ಗದಪರ ಅವರ ಅಹವಾಲನ್ನು ಮಂಡನೆ ಮಾಡುವ ಪ್ರತಿನಿಧಿಯಿರಬೇಕೆಂಬ ಈ ವಿಚಾರವು ಪ್ರಪಂಚದ ಇತಿಹಾಸದಲ್ಲಿ ಇಲ್ಲಿತನಕ ಘಟಿಸಿಲ್ಲ. ಈ ಮಾತು ತಮ್ಮ ಪ್ರಯತ್ನದಿಂದ ಆಗಿದೆ. ಬರುವ ಏಪ್ರಿಲ್ ೧೯೩೭ರಿಂದ ಆರಂಭಗೊಳ್ಳುವ ಕಾನೂನು ಸಮಿತಿಗಾಗಿ ನಾಶಿಕ ಜಿಲ್ಲೆಯ ಜನರು ಒಬ್ಬ ಪ್ರತಿನಿಧಿಯನ್ನು ಕಳುಹಿಸುವ ಅಧಿಕಾರವನ್ನು ಪಡೆದಿದ್ದಾರೆ. ಈಗ ಯಾವ ಕೌನ್ಸಿಲ್ ಸಭೆ ಸೇರುವುದಿದೆಯೋ ಅಲ್ಲಿ ತಮ್ಮ ಸುಖದುಃಖಗಳಿಗೆ ಸ್ಪಂದನೆ ದೊರೆವ ಅವಕಾಶ ಸಿಕ್ಕಿದೆ. ಇಲ್ಲಿತನಕದ ಪದ್ಧತಿ, ತಮ್ಮ ಅಹವಾಲು, ಮನವಿಗಳನ್ನು ಸರಕಾರಿ ಅಧಿಕಾರಿವತಿಯಿಂದ ಮಂಡಿಸಲಾಗುತ್ತಿತ್ತು. ಆದರೆ ಇನ್ನು ಮುಂದೆ ತಮ್ಮ ಅಹವಾಲನ್ನು ಕಾನೂನು ಸಮಿತಿಗೆ ನೀಡಬೇಕಾಗುತ್ತದೆ. ತಮ್ಮೆಲ್ಲ ಸುಖದುಃಖಗಳ ಆಲೋಚನೆ ಅಲ್ಲಿ ಆಗಲಿದೆ. ಇಂಥ ಕಾನೂನುಸಮಿತಿಗೆ ಆಯ್ಕೆಗೊಳ್ಳುವ ವ್ಯಕ್ತಿ ಮಜಬೂತಾದವನು ಆಗಿರಬೇಕಾಗುತ್ತದೆ. ಈ ಸ್ಥಾನ ಗೌರವದ ಹುದ್ದೆಯಲ್ಲ, ಹೋರಾಟದ್ದಾಗಿದೆ. ಕಾನೂನು ಸಮಿತಿಗೆ ಹೋಗುವ ವ್ಯಕ್ತಿ ಸ್ವಂತ ಕಾರ್ಯಕ್ಕೆಂದು ಹೋಗುತ್ತಿಲ್ಲ, ತಮ್ಮ ಸಮಾಜಕ್ಕಾಗಿ ಹೋಗುತ್ತಿದ್ದಾನೆ. ಸಮಾಜ ಹಿತದ ದೃಷ್ಟಿಯಿಂದ ಉದ್ಭವಗೊಳ್ಳುವ ಸಮಸ್ಯೆಗಳ ಸಾಧಕ ಬಾಧಕಗಳನ್ನು ಕೂಲಂಕುಷ ಚಿಂತಿಸಿ ಕಾನೂನು ಸಮಿತಿಯಲ್ಲಿ ಹೋರಾಡುವಂಥ ವ್ಯಕ್ತಿಯನ್ನು ನಾವು ಆರಿಸಿ ಕಳಿಸಬೇಕಾಗಿದೆ. ಕಾನೂನು ಸಮಿತಿ ಇದು ತಮ್ಮ ಹಿತರಕ್ಷಣೆಯ ಸಾಧನವಾಗಿದೆ.

ತಮ್ಮ ಜಿಲ್ಲೆಯ ಪಶ್ಚಿಮ ಭಾಗದಿಂದ ಒಬ್ಬ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅಧಿಕಾರ ನಿಮ್ಮದಾಗಿದೆ. ಈ ಸ್ಥಾನಕ್ಕೆ ಶ್ರೀ ಭಾವುರಾವ ಗಾಯಕವಾಡ ಮತ್ತು ರಾಮಚಂದ್ರ ರೋಕಡೆ ಎಂಬ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಇವರಿಬ್ಬರನ್ನು ನೀವು ಚೆನ್ನಾಗಿ ಬಲ್ಲಿರಿ. ಆದ್ದರಿಂದ ಈ ಬಾಬತ್ತಿನಲ್ಲಿ ನಾನು ನಿಮಗೆ ಶಿಫಾರಸ್ಸು ಮಾಡುವ ಅಗತ್ಯವಿಲ್ಲ.

ಈ ಕಾನೂನು ಸಮಿತಿ ಮೂಲಕ ಮಹಾರರ ವತನಭೂಮಿಯ ವಿಚಾರ ಚರ್ಚೆಯಾಗುವುದು ಅಗತ್ಯವಾಗಿದೆ. ನಿಮಗೆ ಜಮೀನಿಲ್ಲದಿದ್ದರೆ ಹಾಳುಭೂಮಿ ನಿಮಗೆ ಸಿಗಬೇಕಾಗಿದೆ. ನಮ್ಮ ಸಮಾಜ ಶೈಕ್ಷಣಿಕವಾಗಿ ಹಿಂದುಳಿದಿದೆ. ತಮ್ಮ ಮಕ್ಕಳಿಗೆ ಯೋಗ್ಯವಾದ ಶಿಕ್ಷಣ ದೊರೆಯಬೇಕು. ಬಡವನಾದರೆ ಸರಕಾರಿ ಸ್ಕಾಲರ್‌ಶಿಪ್ ಸಿಗಬೇಕು. ನಿಮ್ಮನ್ನು ಅಸ್ಪೃಶ್ಯರೆಂದು ಪರಿಗಣಿಸಿದ್ದರಿಂದ ನಿಮ್ಮ ತುಳಿತ, ಹಿಂಸೆ ನಿಲ್ಲಬೇಕು. ಅದಕ್ಕಾಗಿ ಅಸ್ಪೃಶ್ಯತೆ ನಿವಾರಣೆಗಾಗಿ ಕಾನೂನು ರಚನೆಯಾಗುವುದು ಅಗತ್ಯವಾಗಿದೆ. ನಮ್ಮ ಜನರನ್ನು ಸರಕಾರಿ ಕೆಲಸಗಳಿಗೆಂದು ಯೋಗ್ಯರೀತಿಯ ಮೂಲಕ ತುಂಬುವ ಕಾರ್ಯವಾಗಬೇಕು. ಇದು ಅತ್ಯಂತ ಜರೂರಿನದ್ದು; ಈ ವಿಷಯದಲ್ಲಿ ಏರ್ಪಾಡುಗಳಾಗಬೇಕು. ಈ ರೀತಿ ಒಂದಲ್ಲ ಎರಡಲ್ಲ ನೂರಾರು ವಿಷಯಗಳಲ್ಲಿ ಸಂಘರ್ಷಕ್ಕಿಳಿದು ಕಾನೂನು ಸಮಿತಿಯಿಂದ ಕೆಲಸ ಮಾಡಿಸಿಕೊಳ್ಳಬೇಕು. ಈ ಇಬ್ಬರು ಅಭ್ಯರ್ಥಿಗಳಲ್ಲಿ ಯಾರು ಈ ಕಾರ್ಯಗಳನ್ನು ಮಾಡಬಹುದು ಎಂದು ನಿಮಗನಿಸುತ್ತದೆ?

(ಗಾಯಕವಾಡರು ಮಾಡಬಹುದು ಎಂದು ಜನರು ಕೂಗುತ್ತಾರೆ)

ಎಂದಿನ ವ್ಯವಹಾರಗಳಲ್ಲಿ ನಾವು ಹೀಗೆ ಗಮನಿಸಿರುತ್ತೇವೆ; ಒಂದುಪಕ್ಷ ಒಬ್ಬನಿಗೆ ಮನೆ ಕಟ್ಟಬೇಕಾಗಿದೆ–ಯೆಂದರೆ ಬಡಿಗನ ಅವಶ್ಯಕತೆಯೆನಿಸಿದರೆ ಯಾರು ಬಡಿಗವೃತ್ತಿಯನ್ನು ಅರಿತಿರುತ್ತಾರೋ ಆತನನ್ನೇ ಕಾರ್ಯೋನ್ಮುಖಗೊಳ್ಳಲು ಬಿಡುತ್ತೇವೆ. ಮನೆಕಟ್ಟುವವನ ಕೆಲಸಕ್ಕೆ ಆ ಕಾರ್ಯದಲ್ಲಿ ಪಾರಂಗತನಾದವನ್ನೇ ನೇಮಿಸುತ್ತೇವೆ. ಕಾನೂನು ಸಮಿತಿಯಲ್ಲಿ ಆಗಬೇಕಾದ ಕಾರ್ಯಗಳನ್ನು ಯಾರು ಚೆನ್ನಾಗಿ ಮಾಡಲು ಸಾಧ್ಯವೋ ನೀವು ಯೋಚಿಸಿ ನಿರ್ಧರಿಸಬೇಕು. ಇದು ಅಗತ್ಯವಾಗಿದೆ. ಅಲ್ಲಿ ದೈಹಿಕ ಸಾಮರ್ಥ್ಯ ನೋಡುವುದಂಥಲ್ಲ. ಆಪ್ತೇಷ್ಟರ ಸಂಬಂಧಗಳನ್ನು ಗುರುತಿಸುವುದಲ್ಲ. ತಮ್ಮೊಳಗಿನ ದ್ವೇಷದಿಂದ ಪ್ರೇರಣೆ ಪಡೆದು ಸೇಡಿನ ಭಾವದಿಂದ ಬೆಚ್ಚಿಬೀಳುವುದಲ್ಲ. ತಮ್ಮ ಮನವಿಗಳನ್ನು ಕಾನೂನು ಸಮಿತಿಯೆದುರಿಟ್ಟು ಯಾರು ಪರಿಹಾರ ಕಾಣಲು ಯತ್ನಿಸುವರೆಂದು ನಿಮಗನಿಸುವುದೋ ಅಂಥವರಿಗೆ ಮತ ನೀಡಿ ಆಯ್ಕೆ ಮಾಡುವುದು ಅವಶ್ಯ. ಯಾವ ವ್ಯಕ್ತಿ ಕಾನೂನು ಸಮಿತಿಗೆ ಯೋಗ್ಯನಿಹನೋ ಅಂಥವನನ್ನೇ ಕಳಿಸಿರಿ.

ಈಗ ಎರಡು ಸ್ಥಾನಗಳಿಗಾಗಿ ಸ್ಪರ್ಧೆಗಳಿದ್ದು ಇಬ್ಬರು ಉಮೇದುವಾರಗಳಲ್ಲಿ ಹೆಚ್ಚಿಗೆ ಯೋಗ್ಯರು ಯಾರೆಂಬುದು ನಮ್ಮೆದುರು ಇರುವ ಅತ್ಯಂತ ಜರೂರಿನ ಪ್ರಶ್ನೆಯಾಗಿದೆ. ಶ್ರೀ ಭಾವುರಾವ ಗಾಯಕವಾಡರು ಕಳೆದ ಅನೇಕ ವರ್ಷಗಳಿಂದ ಸಲ್ಲಿಸುತ್ತಿರುವ ಸಾರ್ವಜನಿಕ ಸೇವೆ ಪ್ರಸಿದ್ಧವಾಗಿದೆ. ಲೋಕಲ್‌ಬೋರ್ಡ್ ಮತ್ತು ನಾಸಿಕ ಮುನ್ಸಿಪಾಲಿಟಿ –ಯಂತಹ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಲ್ಲಿ ಕಳೆದ ಹಲವು ವರ್ಷಗಳಿಂದ ಹೊಣೆಯರಿತು ಕಾರ್ಯನಿರ್ವಹಿಸಿದ್ದಾರೆ. ತಮ್ಮ ಜಿಲ್ಲೆಯ ಜನರ ನಿವೇದನೆಗಳನ್ನು ಸರಕಾರದ ದರಬಾರಿನಲ್ಲಿ ಕಳೆದ ಆರೇಳು ವರ್ಷಗಳಿಂದ ಮಂಡಿಸುತ್ತ ಅವುಗಳಿಗೆ ಪರಿಹಾರ ಸಿಗುವಂತೆ ಯತ್ನಿಸಿದ್ದಾರೆ. ನಾಸಿಕ ಜಿಲ್ಲೆಯು ಅಸ್ಪೃಶ್ಯರೆಂದು ಕರೆವ ಸಮುದಾಯಗಳ ಚಳುವಳಿಯ ಕೇಂದ್ರವಾಗಿದೆ. ಕಳೆದ ಐದಾರು ವರ್ಷಗಳಲ್ಲಿ ಜಿಲ್ಲೆಯೊಳಗೆ ಅದೆಷ್ಟು ದೊಡ್ಡ ಪ್ರಮಾಣದಲ್ಲಿ ಚಳುವಳಿ ಮೊಳಗಿತ್ತು, ಇದರ ಅರಿವು ಎಲ್ಲರಿಗಿದೆ. ಅವೆಲ್ಲ ಹೋರಾಟಗಳಲ್ಲಿ ಅವರು ಮತ್ತು ಜವಾಬ್ದಾರಯುತ ಸ್ಥಾನದಲ್ಲಿದ್ದು ನಡೆಸಿದ ಸೇವೆ ನಿಮ್ಮ ಕಣ್ಣೆದುರು ಇದ್ದೇಇದೆ. ಆ ಚಳುವಳಿಯಲ್ಲಿ ಅನೇಕಬಾರಿ ಹಲ್ಲೆಗೊಳಗಾಗಿದ್ದು, ಅನೇಕ ಪ್ರಸಂಗಗಳಲ್ಲಿ ಸರಕಾರಕ್ಕೆ ದಂಡನೀಡಿದ್ದು ಅಲ್ಲದೆ ಅನೇಕಸಾರಿ ಕಠಿಣಶಿಕ್ಷೆಗೆ ಗುರಿಯಾಗಿ ಜೈಲುವಾಸವನ್ನೂ ಅನುಭವಿಸಿದ್ದಾರೆ. ಶ್ರೀ ಭಾವುರಾವ ಗಾಯಕವಾಡ ಅವರ ಈ ಕಾರ್ಯವನ್ನು ಪರಿಗಣಿಸಿಯೇ ಸ್ವತಂತ್ರ ಮಜೂರ ಪಕ್ಷದಿಂದ ನಾನವರ ಹೆಸರನ್ನು ಸೂಚಿಸಿದ್ದೇನೆ. ಶ್ರೀ ಗಾಯಕವಾಡರ ವಿರುದ್ಧ ಶ್ರೀರಾಮಚಂದ್ರ ರೋಕಡೆ ನಿಂತಿದ್ದಾರೆ. ಅವರು ಮಂದಿರ ಪ್ರವೇಶ ಸತ್ಯಾಗ್ರಹದ ಸಂದರ್ಭದಲ್ಲಿ ಅದೆಲ್ಲಿ ಅಡಗಿಕೂತಿದ್ದರು? ಯಾವುದಕ್ಕೆ ಸಾರ್ವಜನಿಕ ಸೇವೆಯೆಂದು ಕರೆಯುತ್ತಾರೋ ಅದು ಅವರಲ್ಲಿದೆಯೇ?(ಜನರು–ಇಲ್ಲ...ಇಲ್ಲ...ಎಂದು ಕೂಗುವರು)೧೯೩೫ರ ಇಂಡಿಯಾ ಆ್ಯಕ್ಟ್‌ನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ, ಇನ್ನು ಮುಂದೆ ಮುಂಬಯಿ ಕಾನೂನುಮಂಡಳಿಯ ಸಭೆಯ ಕಾರ್ಯ ಚಟುವಟಿಕೆಗಳು ಇಂಗ್ಲೀಷ್‌ನಲ್ಲಿ ನಡೆಯುತ್ತದೆ. ಒಂದುವೇಳೆ ತಮ್ಮ ನಿವೇದನೆಗಳನ್ನು ಕಾನೂನು ಮಂಡಳಿಯೆದುರು ಪ್ರಸ್ತುತ ಪಡಿಸುವುದಾದರೆ ಅದನ್ನು ಇಂಗ್ಲೀಷಿನಲ್ಲೇ ಮಂಡಿಸಬೇಕು. ಒಂದುವೇಳೆ ತಮ್ಮ ನಿವೇದನೆಗಳನ್ನು ಕಾನೂನುಮಂಡಳಿ ಎದುರು ಇಡುವುದಾದರೆ ಅದನ್ನು ಇಂಗ್ಲೀಷಿನಲ್ಲಿಯೆ ಮಂಡಿಸಬೇಕೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆ ನಿರ್ಬಂಧವಿದೆ. ಹೀಗಿದ್ದಾಗ ತಮ್ಮ ನಿವೇದನೆಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಹೇಳುವಷ್ಟು ಇಂಗ್ಲೀಷು ಶ್ರೀರೋಕಡೆ ಅವರಿಗೆ ಬರುತ್ತದೆಯೆ?(ಜನರು–ಇಲ್ಲ...ಇಲ್ಲ...ಎಂದು ಕೂಗುವರು) ರೋಕಡೆಯವರು ಪ್ರಕಟಿಸಿದ ವಿನಂತಿಪತ್ರದಲ್ಲಿ ಹೇಳುತ್ತಾರೆ, ನಾನು ಯಾವುದೇ ಪಕ್ಷದ ವತಿಯಿಂದಾಗಲಿ, ಸಂಸ್ಥೆಗಳ ಪರ ಆಗಲಿ ಸ್ಪರ್ಧಿಸಿಲ್ಲ. ಒಂದು

ಪಕ್ಷ ರೋಕಡೆಯವರು ಪಕ್ಷ, ಸಂಸ್ಥೆಗಳ ವತಿಯಿಂದ ಸ್ಪರ್ಧಿಸದೆ ಇರುವವರಾಗಿದ್ದರೆ ಅವರಿಗೆ ಯಾರಸಹಾಯ ಮಾಡುವರು? ನಪಶು-ನಪಕ್ಷಿ ಎಂದೆನ್ನುವ ಬಾವುಲಿಯ (ತ್ರಿಶಂಕು) ಸ್ಥಿತಿಯು ಈ ವ್ಯಕ್ತಿಯದಾಗುವುದಿಲ್ಲವೆ? ಅದಕ್ಕಿಂತ ನೇರ ಕಾಂಗ್ರೇಸ್ ಅಥವಾ ಇಂಥದೇ ಬೇರೆ ಸಂಸ್ಥೆಯ ಪರವಾಗಿ ರೋಕಡೆ ಸ್ಪರ್ಧಿಸಿದ್ದರೆ ಒಂದು ವೇಳೆ ನಡೆದಿರುತ್ತಿತ್ತು. ಆದರೆ 'ಅತ್ತೂ ಇಲ್ಲ, ಇತ್ತೂ ಇಲ್ಲ'ದ ಸ್ಥಿತಿಯಾಗಿದೆ. ಇದು ಸರಿಯಲ್ಲ.

ಮೇಲಿನ ಎಲ್ಲ ವಿಷಯಗಳ ವಿಚಾರಗಳನ್ನು ಅನುಸರಿಸಿ ಸ್ಪರ್ಧೆಗಿರುವ ಅಭ್ಯರ್ಥಿಗಳಲ್ಲಿ ಕಾನೂನು ಮಂಡಳಿಗೆ ಯಾರು ಯೋಗ್ಯರು ಮತ್ತು ಅಯೋಗ್ಯರು ಎಂಬುದನ್ನು ಶೋಧಿಸುವ ಕಾರ್ಯ ಅತ್ಯಂತ ಸುಲಭವಾಯಿತು. ಯಾಕೆಂದರೆ ಶ್ರೀಭಾವುರಾವ ಗಾಯಕವಾಡ ಮತ್ತು ಶ್ರೀ ರಾಮಚಂದ್ರ ರೋಕಡೆಯವರ ಸಾರ್ವಜನಿಕ ಕಾರ್ಯ ಮತ್ತು ಮುತ್ಸದ್ಧಿ ತನದ ದೃಷ್ಟಿಯಿಂದ, ಕರ್ತವ್ಯದಕ್ಷತೆ ಮತ್ತು ಅನುಭವದ ದೃಷ್ಟಿಯಿಂದ, ಶಿಕ್ಷಣದ ದೃಷ್ಟಿಯಿಂದ ಎಲ್ಲ ಮಗ್ಗುಲಗಳಿಂದ ತುಲನೆ ನಡೆಸಿದರೆ:

"ಎಲ್ಲಿಯ ರಾಜ ಮತ್ತೆಲ್ಲಿಯ ಪೋತರಾಜಾ"
"ಎಲ್ಲಿಯ ಬೆಟ್ಟವೋ ಮತ್ತೆಲ್ಲಿಯ ಹರಳೋ"
"ಎಲ್ಲಿಯ ಚಿನ್ನವು ಎಲ್ಲಿಯ ತವರ"
"ಎಲ್ಲಿಯ ಕುದುರೆ ಮತ್ತೆಲ್ಲಿಯ ಕತ್ತೆ"

ಇಷ್ಟು ವ್ಯತ್ಯಾಸ ಈ ಇಬ್ಬರು ಅಭ್ಯರ್ಥಿಗಳಲ್ಲಿದೆ. ಇದು ಸೂರ್ಯನ ಬೆಳಕಿನಷ್ಟೇ ಸತ್ಯ. ಹೀಗಿದ್ದಾಗಲೂ ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುವಂಥಾದ್ದೇನಿದೆ? ಆದ್ದರಿಂದ ಸರ್ವರೂ ತಮ್ಮ ನಾಲ್ಕೂ ಮತಗಳನ್ನು ಶ್ರೀ ಭಾವುರಾವ ಗಾಯಕವಾಡ ಇವರಿಗೆಯೇ ನೀಡಬೇಕು ಇದು ನನ್ನ ವಿನಂತಿ.

ನನಗೊಂದು ವಿಚಾರ ಗಮನಕ್ಕೆ ಬಂದಿದೆ. ಕೆಲವು ವಿರೋಧಿ ಪ್ರಚಾರಕರು ತಮ್ಮಬಳಿ ಮತಕೇಳಲು ಬಂದರೆ, ಎರಡು ಮತ ಶ್ರೀ ಗಾಯಕವಾಡರಿಗೆ ಮತ್ತೆರಡು ಮತಗಳನ್ನು ಶ್ರೀ ರೋಕಡೆಯವರಿಗೆ ನೀಡಿರೆಂದು ಮತದಾರರಲ್ಲಿ ವಿನಂತಿಸುತ್ತ ತಿರುಗುತ್ತಿದ್ದಾರೆ. ಕಾರಣ, 'ಇಬ್ಬರೂ ಅಭ್ಯರ್ಥಿಗಳು ಒಂದೇ ಜಾತಿಯವರು' ಎಂದು ಆ ಪ್ರಚಾರ ನಡೆಸುವವರು ಹೇಳುತ್ತ ತಿರುಗುತ್ತಿದ್ದಾರೆಂದು ತಿಳಿದಿದೆ. ಈ ವಿಷಯದಲ್ಲಿ ನಾನು ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ, ಈ ಜಿಲ್ಲೆಯ ವತಿಯಿಂದ ತಮಗೆ ಒಬ್ಬ ವ್ಯಕ್ತಿಯನ್ನೇ ಆಯ್ಕೆ ಮಾಡುವುದಿದೆ. ಮತಗಳ ವಿಭಜನೆ ಕೂಡದು. ಮತ್ತು ನೀವು ನೀಡಿದ ಒಂದು ಸ್ಥಾನಕ್ಕಾಗಿ ದೊರೆತ ಮತಗಳು ನಿರರ್ಥಕವೆನಿಸಿದರೆ ಅದು ನಿಮ್ಮ ಆತ್ಮಘಾತುಕ ಕೃತ್ಯವೆಸುತ್ತದೆ. ದೊಡ್ಡದಾದ ಹಾನಿಯಾಗಿದೆ. ಇದನ್ನು ಮರೆಯಬೇಡಿರಿ. ಹಾಗೆಯೇ ಮತ ನೀಡುವುದಕ್ಕಾಗಿ ಹಣದ ಆಮಿಷ ತೋರಿಸಬಹುದು. ಕೆಲಸ ಕಾರ್ಯವಾಗುವತನಕ 'ಅಣ್ಣ-ಅಪ್ಪ' ಎಂದು ಸವಿಮಾತಿನ ಪೊಳ್ಳು ಮಾತಾಡಬಹುದು. ಆದರೆ ನೀವು ಯಾವುದೇ ಮೋಹಕ್ಕೆ ಒಳಗಾಗಬೇಡಿರಿ. ಮತದಿಂದ ದೊರೆತ ಅಧಿಕಾರವು ನಿಮ್ಮ ಮುಕ್ತಿಯ ಸಾಧನವೂ ಹೌದು. ಮುಕ್ತಿಗೆಂದು ದೊರೆತ ಅಸ್ತ್ರವೊಂದನ್ನು ನೀವು ಹಣಕ್ಕಾಗಿ ಮಾರಿದರೆ. ನಿಮಗಿಂತ ಆತ್ಮಘಾತುಕ, ಸಮಾಜದ್ರೋಹಿ ಮತ್ತು ಮೂರ್ಖರು ಬೇರೆ ಯಾರಿರಲು ಸಾಧ್ಯ. ನಿಮಗೆ ನೀವೇ ಆಗುವಿರಿ. ಆದ ಕಾರಣ ಬಂಧುಗಳೇ-ಭಗಿನಿಯರೇ ಯಾವುದೇ ಪರಿಸ್ಥಿತಿಯಲ್ಲೂ ನಿಮಗೆ ಸಿಕ್ಕ ಈ ಅಧಿಕಾರವನ್ನು ಹಣಕ್ಕಾಗಿ ಮಾರಬೇಡಿರಿ, ಇದು ನನ್ನ ನಮ್ರ ಕೋರಿಕೆ.

ಶ್ರೀ ರೋಕಡೆ ತುಂಬಾ ಶ್ರೀಮಂತರಿದ್ದಾರೆ, ಅದಕ್ಕೆ ಅವರಿಗೆ ಮತನೀಡಿ, ಎಂದು ಕೆಲವರು ಮಾತನಾಡುವುದನ್ನು ನಿನ್ನೆ ನಾನಿಲ್ಲಿ ಬಂದನಂತರ ಕೇಳಿದ್ದೇನೆ. ಈ ಬಾಬತ್ತು ನಾನು ನಿಮಗೆ ಸ್ಪಷ್ಟವಾಗಿ ಹೇಳುವುದಿಷ್ಟೇ- ಮಹನಿಯರೆ, ಕಾನೂನು ಮಂಡಳಿ ಎಂಬುದು ಶ್ರೀಮಂತರ ಪ್ರದರ್ಶನ ಮಾಡುವ

ಸ್ಥಳವಲ್ಲ. ಅಲ್ಲಿ ಬಡವ ಮತ್ತು ಶ್ರೀಮಂತ ಈ ಬೇಧವಿರದೆ 'ಯಾರಕೈಯಲ್ಲಿ ದೊಣ್ಣೆಯೋ ಅವನೇ ಅಧಿಕಾರಸ್ಥ' ಈ ನ್ಯಾಯದಿಂದ ಕಾನೂನು ಮಂಡಳಿಯಲ್ಲಿ ಆಯ್ಕೆಗೊಳ್ಳುವ ಅಭ್ಯರ್ಥಿಯ ಯೋಗ್ಯತೆಯು ಶ್ರೀಮಂತಿಕೆಯದ್ದಾಗಿರದೆ ಕರ್ತವ್ಯ ಪರರಾದವರ, ಸಮಾಜಸೇವೆ ಮತ್ತು ಕಠಿಣ ತಪಸ್ಸುಗೈದವರ ಪರವಾಗಿರಬೇಕು. ಕೇವಲ ಶ್ರೀಮಂತಿಕೆಯ ಪ್ರಭಾವಳಿಗೆ ಒಳಗಾಗುವ ಅಗತ್ಯವಿಲ್ಲ. ಕಾರಣ ಶ್ರೀಮಂತ ಸಂಭಾಜಿ ರೋಕಡೆಯವರ ನಿಧನಾನಂತರ ಅವರ ಸಂಪತ್ತಿನ ವಾರಸುದಾರಿಕೆ ಮಗನಿಗೆ ಬಂದಿದೆ. ಸಿರಿವಂತ ಧೋಂಡಿಬಾ ರಣಖಾಂಬೆಯವರು ತೀರಿದ ಬಳಿಕ ಆ ಸಂಪತ್ತು ಅವರ ಮಗನ ಕಡೆಗೆಯೇ ಹರಿದು ಬಂದಿದೆ. ನನ್ನ ಸಾವಿನ ಬಳಿಕ ಸಂಪತ್ತಿನ ವಾರಸಾ ನನ್ನ ಮಗನಿಗೆ ಹೋಗುತ್ತದೆ. ಒಂದು ವೇಳೆ ಹೀಗಿದ್ದರೆ ಶ್ರೀಮಂತರದ್ದು ನಿಮಗೆ–ನಮಗೇನು? ಎಷ್ಟೋ ಜನರು ಕಾನೂನು ಮಂಡಳಿಯಲ್ಲಿ ಅತ್ಯಂತ ಜಾಣ ಮತ್ತು ಕರ್ತವ್ಯ ನಿಷ್ಠರ ಅಗತ್ಯವಿದೆ ಎಂದೇನೂ ಇಲ್ಲ ಎನ್ನತ್ತಾರೆ. ಮರಾಠಾ ಸಮಾಜದ ಅಭ್ಯರ್ಥಿ ಹಾಗೂ ಹಿಂದೆ ಕೌನ್ಸಿಲರ್ ಆಗಿದ್ದವರನ್ನು ಗಮನಿಸಿದರೆ ಈ ವಿಚಾರ ಕಂಡುಬರುತ್ತದೆ. ಈ ವಿಷಯ ಕುರಿತು ನನ್ನ ಅಭಿಪ್ರಾಯ ಹೀಗಿದೆ–ಮರಾಠರ ಒಬ್ಬನಾದರೂ ಪಟಗೆ ತೊ ಮತ್ತು ಅಡನಾಡಿ ವ್ಯಕ್ತಿ ಕಾನೂನು ಮಂಡಳಿ ಸೇರಿದರೂ ನಡೆದೀತು. ಆದರೆ ನಿಮ್ಮ ವ್ಯಕ್ತಿಯನ್ನು ಮಾತ್ರ ಅದರಂತೆ ಕಳಿಸಿಕೊಟ್ಟರೆ ನಡೆಯುವುದಿಲ್ಲ. ಅಂದರೆ ಆತ ಅದಕ್ಕಿಂತ ೧೫ಪಟ್ಟು ಜಾಣ ಮತ್ತು ಕರ್ತವ್ಯಪರನಾಗಿರಬೇಕು.

ಈ ನಾಶಿಕ ಜಿಲ್ಲೆಯಲ್ಲಿ ಗಾಯಕವಾಡ ಮತ್ತು ರಣಖಾಂಬೆ ಇವರಿಬ್ಬರು ಕಾರ್ಯಕರ್ತರಿರುವಾಗ ಭಾವುರಾವ ಗಾಯಕವಾಡ ಅವರನ್ನೇ ನಾನ್ಯಾಕೆ ಆಯ್ಕೆಮಾಡಿದೆ ಎಂಬ ವಿಷಯದ ಕುರಿತು ಸಾಕಷ್ಟು ಸಂಶಯ ಮೂಡಿದೆ ಎಂದು ಕೇಳಿಬರುತ್ತಿದೆ. ನಮ್ಮ ನಾಶಿಕಜಿಲ್ಲೆಯ ಇಬ್ಬರು ವ್ಯಕ್ತಿಗಳಾದ ಗಾಯಕವಾಡ ಮತ್ತು ರಣಖಾಂಬೆ ಅವರು ಕಾನೂನು ಮಂಡಳಿಯನ್ನು ಸೇರುವ ಯೋಗ್ಯತೆಯಿದ್ದವರು ಎಂಬುದಂತು ಸತ್ಯ. ಆದಕಾರಣ ನಾಲ್ಕುತಿಂಗಳ ಪೂರ್ವದಲ್ಲಿಯೇ ಇಬ್ಬರನ್ನು ಕರೆಯಿಸಿ ಹೇಳಿದ್ದೇನೆಂದರೆ, ನೀವಿಬ್ಬರು ಪರಸ್ಪರ ನಿರ್ಧರಿಸಿ ಯಾರು ಕಾನೂನು ಮಂಡಳಿ ಪ್ರವೇಶಿಸಬೇಕೆಂಬುದನ್ನು ನನಗೆ ತಿಳಿಸಿ ಎಂದಿದ್ದೆ. ಹಾಗೆಯೇ ನಿಮ್ಮಿಬ್ಬರಲ್ಲಿ ಈ ವಿಷಯದಲ್ಲಿ ವಿವಾದವುಂಟಾದರೆ, ಅದರ ಫಲಿತಾಂಶ ರೂಪದಲ್ಲಿ ನಾನು ನನ್ನ ಆಯ್ಕೆ ಹೇಳುವ ಪ್ರಸಂಗ ಬಂದರೆ, ನಾನು ಮಾತ್ರ ಭಾವುರಾವ ಗಾಯಕವಾಡರ ಹೆಸರನ್ನೇ ಸೂಚಿಸುವೆನೆಂದು ರಣಖಾಂಬೆಯವರಿಗೆ ತಿಳಿಸಿದ್ದೆ. ಕಾರಣ ಇವರಿಬ್ಬರಲ್ಲಿ ಉತ್ತಮರಾರು ಎಂಬುದನ್ನು ನಾನು ಚೆನ್ನಾಗಿಬಲ್ಲೆ. ಇಲ್ಲಿತನಕ ಅಮೃತರಾವ ರಣಖಾಂಬೆಯವರು ಅಧ್ಯಕ್ಷ ಮತ್ತು ಸ್ವಾಗತಾಧ್ಯಕ್ಷರೆಂದು ಅನೇಕ ಸಭೆಗಳಲ್ಲಿ ಮಾತನಾಡಿದ ಭಾಷಣವು ಅವರ ಸ್ವಂತದಲ್ಲ. ಅದು ಭಾವುರಾವ ಗಾಯಕವಾಡರು ಬರೆದುಕೊಟ್ಟ ಭಾಷಣವಾಗಿದೆ. ಇದೂ ಸಹ ನನಗೆ ಗೊತ್ತು. ರಣಖಾಂಬೆಯವರು 'ಬೇರೆಯವರ ಕೈಗೊಂಬೆ ತರಹ' ಎನ್ನುವುದರ ಮೂಲವು ನನಗೆ ಸಂಪೂರ್ಣವಾಗಿ ಗೊತ್ತು. ಆದ್ದರಿಂದ ಅಮೃತರಾವ ರಣಖಾಂಬೆಯವರಿಗಿಂತ ಭಾವುರಾವ ಗಾಯಕವಾಡರು ಅಧಿಕ ಯೋಗ್ಯರೆಂದು ನನಗನಿಸುವುದು.

ಮತ್ತೊಂದು ವಿಷಯವೆಂದರೆ, ರಣಖಾಂಬೆಯವರು ಸ್ವಸಂತೋಷದಿಂದ ಕಾನೂನುಬದ್ಧ ಮಾಡದೆ ಸ್ವಂತ ಸಹಿಹಾಕಿ ನನಗೆ ಪತ್ರ ಬರೆದು ಸ್ಪಷ್ಟವಾಗಿ ತಿಳಿಸಿರುವುದು ನಾಶಿಕ ಜಿಲ್ಲೆಯ ಮೀಸಲು ಕ್ಷೇತ್ರಕ್ಕೆ ಕಾನೂನು ಮಂಡಳಿಗೆ ಶ್ರೀ ಭಾವುರಾವ ಗಾಯಕವಾಡರನ್ನೇ ಸೂಚಿಸಿರೆಂದು. ಹೀಗಿದ್ದಾಗ ರಣಖಾಂಬೆಯವರು ಶ್ರೀ ಗಾಯಕವಾಡರನ್ನು ಅಭ್ಯರ್ಥಿಯಾಗಿ ಬೆಂಬಲಿಸಬೇಕು, ಸಹಾಯ ಮಾಡಬೇಕು. ಆದರೆ ನೇರ ಸಹಾಯ ನೀಡದೆ, ತಟಸ್ಥರಾಗಿಯೂ ಇರದೆ ರಣಖಾಂಬೆಯವರು ಬಹಿರಂಗವಾಗಿ(ಓಪನ್ನಾಗಿ)

ಭಾವುರಾವ ಗಾಯಕವಾಡರ ಉಮೇದುವಾರಿಕೆಯನ್ನು ವಿರೋಧಿಸುತ್ತಿದ್ದಾರೆ. ಇದಕ್ಕೇನೆನ್ನಬೇಕು? ಹಾಗೆ ಗಮನಿಸಿದರೆ ರಣಖಾಂಬೆ ಮನೆತನ ಮತ್ತು ರೋಕಡೆ ಮನೆತನದ್ದು ಕಳೆದ ಏಳೆಂಟು ವರ್ಷಗಳಿಂದ ವಾದವಿವಾದವಿದೆ. ನನಗೆ ಗೊತ್ತಿರುವ ಮಾಹಿತಿಯಿದು. ಉಭಯತರಲ್ಲಿ ಪ್ರೇಮಭಾವನೆ, ಸೌಹಾರ್ದತೆ ಮೂಲತಃ ಇಲ್ಲವೇ ಇಲ್ಲ. ಹೀಗಿರುವಾಗ ರಣಖಾಂಬೆಯವರ ಹೆಸರನ್ನು ಕಾನೂನು ಮಂಡಳಿಗಾಗಿ ನಾನು ಸೂಚಿಸಿಲ್ಲ. ಕಳೆದ ಹಲವು ವರ್ಷಗಳಿಂದ ಅಣ್ಣತಮ್ಮಂದಿರಂತೆ ಮತ್ತು ಸೌಹಾರ್ದತೆಯಿಂದ ಇರುವ ಗಾಯಕವಾಡರ ವಿರುದ್ಧ ರಣಖಾಂಬೆಯವರು ಹೋಗಿ ವಿರೋಧಿಗಳ ಗುಂಪಿನವರನ್ನು ಅಪ್ಪಿಕೊಂಡಿದ್ದು ಹಾಗೂ ಗೆಳೆಯರೆಂದು ಇಲ್ಲಿತನಕ ಭಾವಿಸಿದವರನ್ನು ವಿರೋಧಿಸಿದ ರಣಖಾಂಬೆಯವರ ಕಾರ್ಯವೈಖರಿ ನ್ಯಾಯ ಸಮ್ಮತವಲ್ಲ. ಅಯೋಗ್ಯವಾದುದು. ನಾಶಿಕ ಜಿಲ್ಲೆಯ ಸಂಘಟನೆಗಳು ಇಬ್ಭಾಗಗೊಂಡು ಜಗಳಕ್ಕಿಳಿದು ಸನ್ನಿವೇಶ ಸೃಷ್ಟಿ (ಸೀನ್‌ಕ್ರಿಯೇಟ್) ಮಾಡಿದುದಕ್ಕೆ ಶ್ರೀ ರಣಖಾಂಬೆಯವರೇ ಹೊಣೆಗಾರರು.

ನನ್ನ ಭಾಷಣ ಮುಗಿಸುವ ಮುನ್ನ ನಿಮ್ಮೆಲ್ಲರಿಗೂ ಆಗ್ರಹದ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಿನಾಂಕ ೧೭ ಫೆಬ್ರುವರಿ ೧೯೩೭ ಬುಧವಾರ ದಿವಸ, ಮತದಾರ ಸೋದರ–ಸೋದರಿಯರಾದ ತಾವು ತಮ್ಮ ಸ್ವಂತ ಖರ್ಚಿನಿಂದ, ಕಾಲ್ನಡಿಗೆಯಿಂದ ತಮ್ಮ ಪೋಲಿಸ್ ಸ್ಟೇಶನ್‌ಗೆ ತೆರಳಿ ತಮ್ಮ ನಾಲ್ಕೂ ಮತಗಳನ್ನು ಸ್ವತಂತ್ರ ಮಜೂರ ಪಕ್ಷದ, ನಾನು ಹೇಳಿದ ಅಭ್ಯರ್ಥಿ ಭಾವುರಾವ ಗಾಯಕವಾಡರಿಗೆಯೇ ನೀಡಬೇಕು. ಅವರ ಚಿನ್ಹೆ ಕುದುರೆಯಾಗಿದ್ದು ಕುದುರೆ ಚಿತ್ರದ ಬಲಗಡೆಗೆ ನಾಲ್ಕು ಮುದ್ರೆ ಒತ್ತಿರಿ.

ಡಾ. ಬಾಬಾಸಾಹೇಬ ಅಂಬೇಡ್ಕರರ ನಾಶಿಕ ಜಿಲ್ಲೆಯ ಪ್ರವಾಸ ಅಂದುಕೊಂಡುದಕ್ಕಿಂತ ಯಶಸ್ವಿಯಾಯಿತು. ಎರಡು ದಿನಗಳು ನಾಶಿಕ ಜಿಲ್ಲೆಯಲ್ಲಿ ವಾಸವಾಗಿದ್ದು ತುಂಬಾ ಚರ್ಚೆಯಾಯಿತು. ಡಾ. ಬಾಬಾಸಾಹೇಬರಿಗೆ ನಾಶಿಕದಲ್ಲಿ ಶ್ರೀ ಭಾವುರಾವ ಗಾಯಕವಾಡರು ಚಹಾಕೂಟ ಏರ್ಪಡಿಸಿದ್ದರು. ಇದರಲ್ಲಿ ಸ್ಪೃಶ್ಯ ಅಸ್ಪೃಶ್ಯ ಪುಢಾರಿಗಳೂ ಪಾಲ್ಗೊಂಡಿದ್ದರು. ಶ್ರೀ ಭಾವುರಾವ ಗಾಯಕವಾಡರು ನಾಶಿಕ ಜಿಲ್ಲೆಯ ತಮ್ಮ ಪ್ರತಿ ಸ್ಪರ್ಧಿಯನ್ನು ಚಿತ್ತುಮಾಡಿ ಸೋಲಿಸಿ ಪ್ರಚಂಡ ಬಹುಮತದಿಂದ ಆಯ್ಕೆಗೊಳ್ಳುವುದು ಇದು ವಿಶೇಷ! ಕೊನೆಗೆ ಡಾ. ಅಂಬೇಡ್ಕರ ಸಾಹೇಬರು ಸರ್ವ ನಾಶಿಕವಾಸಿ ಬಂಧು–ಭಗಿನಿಯರಿಗೆ ಸಂದೇಶದ. ಮೂಲಕ ಹೇಳಿದ್ದು ಹೀಗೆ– “ಇದುವರೆಗೆ ನಾಶಿಕವಾಸಿ ಬಾಂಧವರು ತೋರಿದ ಸ್ವಾಭಿಮಾನ, ವೀರವೃತ್ತಿ ಮತ್ತು ತಮ್ಮ ಧ್ಯೇಯ ಸಂದರ್ಭದಲ್ಲಿ ತೋರಿದ ನಿಷ್ಠೆಯು ಇನ್ಮುಂದೆ ಬರಲಿರುವ ಪ್ರತಿಯೊಂದು ಕಾರ್ಯದೊಳಗೆ ಹೆಚ್ಚಿನ ಶಕ್ತಿನೀಡಿ ತಮ್ಮ ಪಕ್ಷವನ್ನು ಯಶಸ್ಸುಗೊಳಿಲಿದೆ. ನಾಶಿಕ ಜಿಲ್ಲೆಯು ಶ್ರೀ ಭಾವುರಾವ ಗಾಯಕವಾಡರನ್ನು ಬಹುಮತದಿಂದ ಆರಿಸಿತರುವುದೇ ಅವರ ಪವಿತ್ರ ಮತ್ತು ಆದ್ಯಕರ್ತವ್ಯವಾಗಿದೆ. ಎನ್ನುವುದನ್ನು ನಿಮ್ಮ ಅರಿವಿಗೆ ತರುತ್ತಿರುವೆ. ನಾನು ನಿಮ್ಮಮೇಲೆ ಇಂದು ಹರಿದು ಬರುತ್ತಿರುವ ಕಾರ್ಯವೈಖರಿಯನ್ನು ತಾವು ನಿರ್ಭಯತೆಯಿಂದ ಪೂರ್ಣಗೊಳಿಸುವಿರೆಂಬ ತುಂಬು ಆಸೆ ನನ್ನದು.”

ಕೊನೆಗೆ ನಸುಕಿನ ಮೇಲ್‌ಗಾಡಿಯಿಂದ ಡಾ. ಬಾಬಾಸಾಹೇಬರು ಮುಂಬೈಗೆ ಮರಳಿದರು.

## ೯೮.

# ಯಾರಿಗೆ ಪಕ್ಷವಿಲ್ಲ, ಧ್ಯೇಯವಿಲ್ಲ, ತತ್ವವಿಲ್ಲ ಅಂಥ ಅಧಾಂತರವಾಗಿ ಜೋತಾಡುವ ಅಭ್ಯರ್ಥಿಯನ್ನು ಆಯ್ಕೆಮಾಡಬೇಡಿರಿ

ಅಖಿಲ ಭಾರತೀಯ ಅಸ್ಪೃಶ್ಯರ ಏಕಮೇವ ಗೌರವಾನ್ವಿತ ಮುಂದಾಳು ಡಾ. ಬಾಬಾಸಾಹೇಬ ಅಂಬೇಡ್ಕರ ವಿದೇಶದಿಂದ ಮರಳಿದ ತಕ್ಷಣ ಸ್ವತಂತ್ರ ಮಜೂರ ಪಕ್ಷದ ಪ್ರವಾಸ ಕಾರ್ಯಕ್ರಮವನ್ನು ರೂಪಿಸಿದರು. ದಿ. ೨೪ ಜನೇವರಿ ೧೯೩೭ರಂದು ಸೊಲ್ಲಾಪುರದಲ್ಲಿ ನಡೆಸುವುದರ ತೀರ್ಮಾನವಾಯಿತು. ಈ ಸುದ್ದಿ ತಿಳಿಯುತ್ತಿದ್ದಂತೆ ಸೊಲ್ಲಾಪುರದ ವಯೋವೃದ್ಧ ಸರಪಂಚ ಶ್ರೀ ವಿಶ್ವನಾಥಬುವಾ ಬಂದಸೋಡೆ, ಪುಟ್ಟ ಮಹಾರವಾಡೆಯ ಯಜಮಾನರಾದ ಸಂಭಾಜಿ ರಾವ ತಳಭಂಡಾರೆ ಹಾಗೆಯೇ ಕೇಶವರಾವ ಸೋವೆ, ಶಂಕರರಾವ ಸಾತಪುತೆ, ಶ್ರೀಪತರಾವ ಪಕ್ವಾಳೆ, ವಿಠ್ಠಲರಾವ ಸಾಬಳೆ, ಮಾರುತಿರಾವ ಬಂದಸೋಡೆ, ಮಾರುತಿರಾವ ಗಾಯಕವಾಡ, ಜನತೆಯ ಏಜಂಟ ರಾ. ಬಲ್ಲಾಳ, ರಾಮಕೃಷ್ಣ ಪುಜಾರಿ ಮುಂತಾದ ಪ್ರದೇಶದ ಪುಢಾರಿಗಳು ಬಾಬಾಸಾಹೇಬರ ಆಗಮನದ ಸುದ್ಧಿಯನ್ನು ಜಿಲ್ಲೆಯಾದ್ಯಂತ ತಲುಪಿಸಿ – ದರು. ಹಾಗೆಯೆ ತಕ್ಷಣವೆ ಕರಸಾಳೆ, ಬಾರ್ಶಿ, ಕುರ್ಡುವಾಡಿ, ಟೆಂಭುರ್ಣಿ, ಮಂಢೂಪ, ಘಳಸಂಗ ಮುಂತಾದ ಭಾಗದ ಮುಂದಾಳುಗಳು ಬಾಬಾಸಾಹೇಬರ ಪ್ರವಾಸದ ಕಾರ್ಯಕ್ರಮ–ಸಭೆಗಳಿಗೆ ಆಗಮಿಸುವವರ ಭೋಜನ ವ್ಯವಸ್ಥೆಯ ಜೊತೆಗೆ ಯಶಸ್ವಿಗೊಳಿಸುವ ಸಿದ್ಧತೆ ನಡೆಸಿದ್ದರು. ಅಲ್ಲದೆ ಅಸ್ಪೃಶ್ಯರ ಉದ್ಧಾರಕ, ಅಖಿಲ ಭಾರತೀಯ ದಲಿತರ ದೊರೆ ಬಾಬಾಸಾಹೇಬ ಅಂಬೇಡ್ಕರರ ದರ್ಶನ ಪಡೆಯಲು ಅಬಾಲವೃದ್ಧರಾಗಿಯಾಗಿ ಜನಸಮೂಹವು ಜಿಲ್ಲೆಯಾದ್ಯಂತ ದಾರಿಕಾಯುತ್ತಿತ್ತು. ೨೩ಜನೇವರಿಯ ರಾತ್ರಿ ಸೊಲ್ಲಾಪುರದಲ್ಲಿ ಸೇರಿದ್ದ ಅಸ್ಪೃಶ್ಯ ಸಮಾಜದವರು ಜಾಗರಣೆ ನಡೆಸಿ ಅದ್ಭುತ ಸಿದ್ಧತೆಗಳನ್ನು ಮಾಡಿದರು. ಕ್ಯಾಪ್ಟನ್ ಯಾದವರಾವ ಲೋಂಢೆ ಮತ್ತು ಪಟ್ಟಣದ ವಿವಿಧ ಭೀಮಸೇನೆಯ ಸ್ವಯಂಸೇವಕರು ನಸುಕಿನ ೩ ಗಂಟೆ, ಸೊಲ್ಲಾಪುರ ಸ್ಟೇಶನ್‌ನಲ್ಲಿ ತಮ್ಮ ಠಿಕಾಣಿ ಹೂಡಿದರು. ೪ ಗಂಟೆಯಿಂದ ಜನರ ಸಾಲು ನಿರಂತರವಾಗಿ ಸ್ಟೇಶನನತ್ತ ಆರಂಭವಾಯಿತು. ೬ಗಂಟೆಯೊಳಗೆ ಐದಾರುಸಾವಿರ ಜನರ ಜನ ಸಮೂಹವು ಸ್ಟೇಶನ್ನಿನ ಜಾಗ ಮತ್ತು ಹೊರಗಿನ ಸ್ಥಳವನ್ನು ಆಕ್ರಮಿಸಿತು. ೬ರ ನಂತರ ಬಾಬಾಸಾಹೇಬರು ಗಾಡಿಯಿಂದ ಸ್ಟೇಶನ್‌ಒಳಗೆ ಪ್ರವೇಶಿಸುತ್ತಿದ್ದಂತೆ 'ಡಾ. ಬಾಬಾಸಾಹೇಬ ಅಂಬೇಡ್ಕರರಿಗೆ ಜಯವಾಗಲಿ' 'ಅಂಬೇಡ್ಕರ್ ಜಿಂದಾಬಾದ್' ಮುಂತಾದ ಜಯಘೋಷಗಳು ಮೊಳಗಿದವು. ಆ ಜಯಘೋಷಣೆಯಲ್ಲಿ ಮಾದಿಗ ಸಮಾಜದ ವತಿಯಿಂದ ಕೇರು ರಾಮಚಂದ್ರ ಜಾಧವ ಮತ್ತು ಅಪಾರಾವ ದಣಾಣೆ. ಸತ್ಯಪ್ರಸಾರಕ ಭೀಮಸೇನೆಯ ಕ್ಯಾಪ್ಟನ್ ಯಾದವರಾವ ಲೋಂಢೆ, ದೊಡ್ಡ ಮಹಾರವಾಡಾ ಪಂಚರ ತಾಲೀಮಿನ ವತಿಯಿಂದ ನಾರಾಯಣ ಬಾಬರೆ, ಚಿಕ್ಕ ಮಹಾರವಾಡ ಅಂಬೇಡ್ಕರ ತಾಲೀಮಿವತಿಯಿಂದ ಸಂಭಾಜಿ

---

ಜನತಾ: ೬ ಮತ್ತು ೧೩ ಫೆಬ್ರುವರಿ ೧೯೩೭.

ತಳಭಂಡಾರೆ, ಫಾರೆಸ್ಟ್ ದೀನಬಂಧು, ಅಂಬೇಡ್ಕರ ತಾಲೀಮಿವತಿಯಿಂದ ಹರಿಬಾಖಲೀಫಾ, ಶ್ರೀ ತಾತ್ಯಾಬಾ ಪಾಂಡುರಂಗ ಸಾವಂತ, ಚೇರ್‌ಮನ್, ಮಾಳಶಿರಸ ಗ್ರಾಮಪಂಚಾಯತಿ, ನಿವೃತ್ತಿ ರಾವಮಾನೆ ಹಾಗೂ ಅಕುಬಾಲೋಂಢೆ ಮತ್ತು ನಗರದ ಸರ್ವ ಮೊಹಲ್ಲಾಗಳ ಪರವಾಗಿ ಅಂಬೇಡ್ಕರರಿಗೆ ಮಾಲಾರ್ಪಣೆ ಮಾಡಲಾಯಿತು. ಪುಷ್ಪವೃಷ್ಟಿಗರೆಯುತ್ತಲೇ ಆನಂದೋತ್ಸಾಹದಿಂದ ಜಯಕಾರಗಳಿಂದ ಮೊಳಗಿದ ಆ ಪ್ರಚಂಡ ಜನಸಾಗರದಿಂದ ಸ್ವಯಂಸೇವಕರು ಬಾಬಾಸಾಹೇಬರನ್ನು ಸರಪಳಿ ರಚಿಸಿ ಮೋಟಾರು ತನಕ ಬೇಲಿ ರಚಿಸಿ ಅತ್ಯಂತ ಪ್ರಯಾಸಪಟ್ಟು ತಲುಪಿಸಿದರು. ಮುಂದೆ ಬಾಬಾಸಾಹೇಬರು ಮೆಸರ್ಸ್ ಜಿ.ಆರ್. ದೇಶಪಾಂಡೆ ವಕೀಲರ ಬಂಗಲೆಗೆ ವಾಸಕ್ಕಾಗಿ ತೆರಳಿದರು. ಉಳಿದವರು 'ಅಂಬೇಡ್ಕರ ಜಿಂದಾಬಾದ' ಎಂದು ಗರ್ಜಿಸುತ್ತ ದೊಡ್ಡ ಮಹಾರ ವಾಡೆಯ ಮಂಟಪಕ್ಕೆ ಬಂದರು. ಚಹಾಸೇವನೆ ಬಳಿಕ ಸರಿಯಾಗಿ ೮ಗಂಟೆ, ಬಾಬಾಸಾಹೇಬ ಮಂಟಪಕ್ಕೆ ಆಗಮಿಸಿದರು. (ಜಿಂದಾಬಾದದ ಘನಗರ್ಜನೆ, ಚಪ್ಪಾಳೆಗಳ ಕರತಾಡನ ಮತ್ತು ಒಮ್ಮೆಲೆಶಾಂತತೆ) ಮಾದಿಗ ಸಮಾಜದ ಪರವಾಗಿ ಕೇರು ರಾಮಚಂದ್ರ ಜಾಧವರವರು ಮತ್ತೆ ಹೂಹಾರ ಹಾಕಿ "ಅಖಿಲ ಭಾರತೀಯ ಅಸ್ಪೃಶ್ಯ ಸಮಾಜಕ್ಕೆ ಶಿಕ್ಷಣ, ಸಮತೆ, ಗೌರವ ಮತ್ತು ರೊಟ್ಟಿಯನ್ನು ಗಳಿಸಿಕೊಡುವುದಕ್ಕೆ ಸ್ವಂತ ಜೀವದ ಹಂಗನ್ನೂ ತೊರೆದು ಅತ್ಯಂತ ನಿರ್ಭಯದಿಂದ, ಸಮತೆಯಿಂದ ಮತ್ತು ವ್ಯಾಪಕತೆಯಿಂದ ಬಾಬಾಸಾಹೇಬರು ನಡೆಸಿದ ಕಾನೂನುಬದ್ಧ ಚಳುವಳಿಯು ಖಂಡಿತ ನಮ್ಮ ಉದ್ಧಾರವನ್ನು ಮಾಡಿತು. ಬಾಬಾಸಾಹೇಬರೇ ನಮ್ಮ ನಾಯಕರು. ಇವರೇ ನಮ್ಮ ಧರ್ಮಾಧಿಕಾರಿಗಳು ಮತ್ತು ಇವರೇ ನಮ್ಮಗಳ ಪೂಜ್ಯದೇವರಾಗಿದ್ದಾರೆ. ಮಾದಿಗಸಮಾಜವು ಅವರಿಗೆ ಏಕನಿಷ್ಠೆಯ ಅನುಯಾಯಿಯಾಗಿದೆ ಎಂಬುದನ್ನು ಮುಂಬೈಯಲ್ಲಿ ನಡೆದ ಇಲಾಖಾ ಮಾದಿಗಪರಿಷತ್ತು ಸಿದ್ಧಪಡಿಸಿತೋರಿಸಿದೆ." ಈ ಮುಂತಾಗಿ ಭಾಷಣ ಮಾಡಿದ ನಂತರ ಬಾಬಾಸಾಹೇಬರು ಮಾತಾಡಲು ಎದ್ದುನಿಂತರು. (ಜಿಂದಾಬಾದಿನ ಗರ್ಜನೆ, ಭರಪೂರ ಚಪ್ಪಾಳೆ ಮತ್ತು ಒಮ್ಮೆಲೆ ಶಾಂತತೆ)
ಡಾ. ಬಾಬಾಸಾಹೇಬ ತಮ್ಮ ಭಾಷಣದಲ್ಲಿ ಹೇಳಿದರು.

ಬಂಧುಗಳೆ ಮತ್ತು ಭಗಿನಿಯರೆ,

ಮುಂಬೈ ಲೆಜಿಸ್ಲೆಟಿವ್ ಅಸೆಂಬ್ಲಿಯ ಮುಂಬರುವ ಚುನಾವಣೆಯಲ್ಲಿ ಯಾರಿಗೆ ಮತ ನೀಡಿ ಆಯ್ಕೆ ಮಾಡಬೇಕೆಂದು ಚಿಂತಿಸಲು ನಾವಿಲ್ಲಿಂದು ಸೇರಿದ್ದೇವೆ. ಈ ದೇಶದಲ್ಲಿ ಅನೇಕ ಆಳರಸರು ಆಗಿಹೋದರು. ಇಂಗ್ಲೀಷರು ಇಲ್ಲಿಗೆ ಬಂದು ಹೆಚ್ಚುಕಮ್ಮಿ ೧೫೦ ವರ್ಷಗಳು ಕಳೆದವು. ಇಂಗ್ಲೀಷರ ಈ ೧೫೦ ವರ್ಷಗಳ ಕಾಲಾವಧಿಯಲ್ಲಿ ಸುಮಾರು ೬೦ ವರ್ಷಗಳಿಂದ ಈ ಕೌನ್ಸಿಲ್‌ಗಳು ಜಾರಿಯಲಿದ್ದು ಅವುಗಳ ಮೂಲಕ ಜನಪ್ರತಿನಿಧಿಗಳು ಜನರ ನಿವೇದನೆಗಳನ್ನು ಸರಕಾರದೆದುರು ಮಂಡಿಸುತ್ತಿದ್ದಾರೆ. ಆದರೆ ಅಸ್ಪೃಶ್ಯರೆಂದು ತಿಳಿದ ೮ ಕೋಟಿ ಪ್ರಜೆಗಳ ಪರವಾಗಿ ಅವರ ಮನವಿ, ನಿವೇದನೆಗಳನ್ನು ಮಂಡಿಸುವ ಅವರ ಪ್ರತಿನಿಧಿ ಕೌನ್ಸಿಲ್‌ನೊಳಗಿರಬೇಕೆಂಬ ಈ ಯೋಚನೆ ಇಲ್ಲಿಯತನಕ ಜಗತ್ತಿನ ಇತಿಹಾಸದಲ್ಲಿ ಘಟಿಸಿರಲಿಲ್ಲ. ಅದೀಗ ತಮ್ಮೆಲ್ಲರ ಪ್ರಯತ್ನದಿಂದ ಆಗಿದೆ. ಬರುವ ಏಪ್ರಿಲ್ ೧೯೩೭ರಿಂದ ಆರಂಭವಾಗುವ ಕಾನೂನು ಮಂಡಳಿಗಾಗಿ ಸೊಲ್ಲಾಪುರ ಜಿಲ್ಲೆಯ ಜನರು ತಮ್ಮ ಪ್ರತಿನಿಧಿಯನ್ನು ಆಯ್ಕೆಗೊಳಿಸುವ ಅಧಿಕಾರ ಹೊಂದಿದ್ದಾರೆ. ಈಗ ಯಾವ ಕೌನ್ಸಿಲ್ ಸೇರುವುದೋ ಅದು ತಮ್ಮ ಸಮಾಜದ ಬಚಾವುಗೊಳಿಸುವ ಸಾಧನವಾಗಿದೆ. ತಮ್ಮ ಸುಖದುಃಖಗಳಿಗೆ ಪ್ರತಿಕ್ರಿಯಿಸುತ್ತಾರೆ. ಅಲ್ಲಿಯೇ ಹೊಲೆಯರ ಭೂ ಸಂಬಂಧಿ, ಪಾಳುಭೂಮಿ ಸಂದರ್ಭದಲ್ಲಿ, ಶಿಕ್ಷಣ ಪಡೆಯುವುದಕ್ಕಾಗಿ, ಸ್ಕಾಲರ್‌ಶಿಪ್‌ಗಾಗಿ,

ಅಸ್ಪೃಶ್ಯತೆಯಿಂದ ನಿರ್ಮಾಣಗೊಂಡ ದೈನ್ಯಾವಸ್ಥೆಯನ್ನು ದೂರಗೊಳಿಸುವ ಸಂಬಂಧದ, ಸರಕಾರಿ ನೌಕರಿಗಳಲ್ಲಿ ಯೋಗ್ಯಪ್ರಮಾಣದ ಪ್ರವೇಶದೊರೆವ ಸಂದರ್ಭದಲ್ಲಿ ಇಂಥ ಒಂದೆರಡಲ್ಲ ನೂರಾರು ವಿಚಾರಗಳನ್ನು ಈ ಕಾನೂನುಮಂಡಳಿ ಮೂಲಕ ಜಗಳವಾಡಿ ತಮಗೆ ದೊರಕಿಸಿಕೊಳ್ಳುವುದಿದೆ. ಅರ್ಥಾತ್ ಅಲ್ಲಿಗೆ ಆಯ್ಕೆಗೊಳ್ಳುವವ ಕೇವಲ ಗೌರವ ಸಮ್ಮಾನಕ್ಕೆಂದಲ್ಲ; ತಮ್ಮ ಸಮಾಜದ ಹಿತಕ್ಕಾಗಿ ಹೋರಾಡುವವನೆಂಬುದನ್ನು ಗಮನದಲ್ಲಿಡಿರಿ. ಅದರಂತೆ ನಿತ್ಯವ್ಯವಹಾರಗಳಲ್ಲಿ ನಾವು ನೋಡುತ್ತಿರುತ್ತೇವೆ, ಮನೆಕಟ್ಟಲು ಗೌಂಡಿಬೇಕು. ಮರಗೆಲಸಕ್ಕೆ ಬಡಿಗನ ಅಗತ್ಯವಿದೆ. ಎಲ್ಲೋ ಒಂದೆಡೆ ರೇಲ್ವೆ ಸೇತುವೆ ನಿರ್ಮಾಣಕ್ಕೆ ಇಂಜಿನಿಯರನ್ನು ನಿಯೋಜಿಸುತ್ತೇವೆ. ಶಾಲೆಯ ಮಾಸ್ತರ ಆ ಕಾರ್ಯವನ್ನು ಮಾಡಲಾಗುವುದಿಲ್ಲ. ಆದರೆ ನಿಮ್ಮೊಳಗಿನ ಉದ್ಧವಶಿವಶರಣ ಮಾಸ್ತರರು ಈ ಜವಾಬ್ದಾರಿಯ ಸ್ಥಾನಕ್ಕೆ ತನ್ನನ್ನು ಆಯ್ಕೆಗೊಳಿಸಿರೆಂದು ನನಗೆ ಪತ್ರ ಬರೆದರು. ಇಂಗ್ಲೀಷ್ ಗೊತ್ತಿರದ ಈ ಶಿಕ್ಷಕರ ಬಗ್ಗೆ ನಾನು ಬೆರಗಾದೆ. ಇಡೀ ಎರಡು ತಿಂಗಳು ಯೋಚಿಸಿ ಬಳಿಕ ಶ್ರೀ ಜಿವಾಪ್ಪಾ ಐದಾಳೆಯವರ ಹೆಸರನ್ನು ಸೂಚಿಸಿದೆ. ಇಷ್ಟೆಲ್ಲ ಆಗುವತನಕ ಶ್ರೀ ಮಾಗಾಢೆಯವರ ಹೆಸರನ್ನು ನನಗೆ ತಿಳಿಸಿರಲಿಲ್ಲ. ನಂತರ ತಿಳಿಸಿದರು. ಆದರೆ ಇದರ ಬುಡಕ್ಕೆ ಕಾಂಗ್ರೆಸ್ಸಿನ ಕೈವಾಡವಿದೆ ಎನ್ನುವುದರ ಪುರಾವೆಗಳು ನನ್ನ ಬಳಿ ಇವೆ. ಬಂಧುಗಳೆ, ಕಾಂಗ್ರೆಸ್ಸಿಗೆ ಸ್ವರಾಜ್ಯಬೇಕು. ನಮಗೂ ಸ್ವರಾಜ್ಯಬೇಕು. ಆದರೆ ಅದನ್ನು ಪಡೆಯುವುದಕ್ಕೆ ಕಾಂಗ್ರೆಸ್ಸಿನ ಕಾನೂನುಭಂಗದ ಮಾರ್ಗವು ನಮಗೆ ಒಪ್ಪಿಗೆಯಿಲ್ಲ. ಕಾನೂನು ಭಂಗದಿಂದ ಸ್ವರಾಜ್ಯದ ಬುನಾದಿ ಬಲಿಷ್ಟಗೊಳಿಸಲಾಗಿದೆ. ಕಾಂಗ್ರೆಸ್ಸಿನವರು ನಿಮಗೆ ಹೇಳಬಹುದು, ತಮ್ಮೆಲ್ಲರ ಒಗ್ಗಟ್ಟಿನ ಬಲದಿಂದ ಇಂಗ್ಲಿಷ್ ಸರಕಾರವನ್ನು ನಮ್ಮ ದೇಶದಿಂದ ಹೊರದಬ್ಬೋಣ ಮತ್ತು ಸ್ವಾತಂತ್ರ್ಯ ಪಡೆಯೋಣವೆಂದು, ಆದರೆ ತಿಗಣೆ ಸಾಯಿಸುವ ಎದೆಗಾರಿಕೆಯಿಲ್ಲದವರು, ಅವರು ಎಲ್ಲ ಮಗ್ಗುಲಗಳಿಂದ ಸದೃಢ, ಸುಸಜ್ಜಿತವಾದ ಇಂಗ್ಲೀಷ್ ಸರಕಾರವನ್ನು ಹೇಗೆ ಓಡಿಸಿಯಾರು? ಒಂದು ಪಕ್ಷ ಇಂಗ್ಲೀಷ್ ಸರಕಾರ ಹೋಯಿತೆಂದೆ ತಿಳಿಯಿರಿ. ಆಗ ನಮ್ಮನ್ನು ಧಾರ್ಮಿಕ, ಆರ್ಥಿಕ, ಸಾಮಾಜಿಕ ಅವನತಿಯ ಹೊಂಡದೊಳಗೆ ಕೊಳೆಸುವ ಗೌಡ, ಜಮೀನುದಾರ ಇವರೆಲ್ಲ ಪರದೇಶಕ್ಕೆ ಹೋಗುವವರಿದ್ದಾರೆಯೇ? ಕಾಂಗ್ರೆಸ್ ಅಂತು ಸೇಠ, ಸಾಹುಕಾರ, ಜಮೀನದಾರ ಮತ್ತು ಬಂಡವಾಳಿಗರ ಸಂಸ್ಥೆ. ಆದ್ದರಿಂದ ಇಂಥ ಜನರ ಯಾವುದೇ ಪೊಳ್ಳುಮಾತುಗಳನ್ನು ಕೇಳಿಸಿಕೊಳ್ಳಬೇಡಿರಿ.

ಬಂಧುಗಳೆ, ನಿಮ್ಮ ಮತಗಳ ಬೆಲೆಯನ್ನು ಉಪ್ಪು, ಖಾರದಂತೆ ತಿಳಿಯಬೇಡಿರಿ. ನಿಮ್ಮ ಪ್ರಾಣದಷ್ಟೆ ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ್ದು ನಿಮ್ಮ ಮತಗಳು, ಇದನ್ನು ಮರೆಯದಿರಿ. ಅನರ್ಹ ಅಭ್ಯರ್ಥಿಗೆ ಮತ ನೀಡಿದರೆ ಕಟುಕನ ಕೈಗೆ ಕುರಿಯನ್ನು ಮತ್ತು ಕತ್ತಿಯನ್ನು ಒಯ್ದು ಕೊಟ್ಟಂತಾಗುವುದು. ಶೀ ಜಿವಪ್ಪಾ ಐದಾಳೆಯವರು ನನ್ನ ಪಕ್ಷದ ಅಭ್ಯರ್ಥಿಗಳು. ಅವರಿಗೆ ಧ್ಯೇಯವಿದೆ, ತತ್ವವಿದೆ. ಅವರ ಮತ್ತು ನಿಮ್ಮ ಭಾವಿ ಹಿತಾಹಿತದ ಎಲ್ಲ ಹೊಣೆಯು ನನ್ನ ತಲೆಯಮೇಲಿದೆ. ಆದಕಾರಣ ಶ್ರೀ ಜಿವಪ್ಪಾ ಐದಾಳೆಯವರಿಗೆಯೇ ನಿಮ್ಮ ಮೂರೂ ಮತಗಳನ್ನು ನೀಡಿ ಆರಿಸಿ ತನ್ನಿರಿ. ಬೇರೆ ಉಮೇದುವಾರರು ನನ್ನ ಶತ್ರುಗಳಲ್ಲ. ಆದರೆ ಯಾರಿಗೆ ಧ್ಯೇಯ, ತತ್ವ, ಪಕ್ಷಗಳಿಲ್ಲವೋ ಅಂಥ ನೇತಾಡುವ ಅಧಾಂತರ ಆದವರ ಜವಾಬ್ದಾರಿಯನ್ನು ನಾನು ಸ್ವೀಕರಿಸುವುದಿಲ್ಲ. ನಿಮಗೆ ಯಾರಾದರು ಇಲ್ಲಿತನಕ ನಿಮ್ಮ ಜಿಲ್ಲೆಯ, ತಾಲೂಕಿನ, ಸಂಬಂಧಿಗಳ ಬಗ್ಗೆ ಅಭಿಮಾನವಿಟ್ಟುಕೊಳ್ಳಿರಿ ಎಂದು ಹೇಳಿರಬಹುದು ಇಲ್ಲವೆ ಮುಂದೆ ಹೇಳಲೂಬಹುದು. ಆದರೆ ಹೀಗೆ ಅಭಿಮಾನವಿಟ್ಟುಕೊಳ್ಳುವುದಾದರೆ ಕೊನೆಗೆ ನೀವು ನಿಮ್ಮೂರಿನ ಮತ್ತು ಮನೆಯ ಅಭಿಮಾನ ಇಟ್ಟುಕೊಳ್ಳ ಬೇಕಾದೀತು ಮತ್ತು ಹೀಗೆ ಮನೆಮನೆಗೆ ಆಭ್ಯರ್ಥಿಗಳು ಸ್ಪರ್ಧಿಸಿದಂತಾದರೆ ನಿಮ್ಮ ಭಾವಿಕಲ್ಯಾಣದ ಸರ್ವನಾಶವಾದೀತೆಂಬುದರ ವಿಚಾರವನ್ನೂ ಮಾಡಿರಿ.

ಕೊನೆಗೆ ನಿಮ್ಮಲ್ಲಿ ಹೇಳುವ ಮಾತೆಂದರೆ, ಈ ನಗರದ ಕೂಲಿಕಾರರ ಪರವಾಗಿ ಒಂದು ಮತ ನೀಡುವ ಅಧಿಕಾರವಿದೆ. ಆ ಸ್ಥಾನಕ್ಕೆ ಕೂಲಿಕಾರ್ಮಿಕರ ಪರ ಶ್ರೀ ರಘುನಾಥರಾವ ಬಖಲೆ ನಿಂತಿದ್ದಾರೆ. ಇಲ್ಲಿತನಕ ಅವರು ಕೌನ್ಸಿಲ್‌ನಲ್ಲಿ ಮಾಡಿದ ಬಡವರ, ಕೂಲಿಗಳ, ರೈತರ, ಅಸ್ಪೃಶ್ಯರ ಸೇವೆಯು ನನಗೆ ಒಪ್ಪಿತವಾದುದು. ಸೊಲ್ಲಾಪುರದ ಕೂಲಿಕಾರರು ಅವರಿಗೆ ಮಾತ್ರ ಮತ ನೀಡಬೇಕು. ಸೇಠ ಸಾವಕಾರರ ಗಿರಣಿಯವರ ಹಸ್ತಕರಿಗೆ ಮತನೀಡಬೇಡಿರಿ. ಅವರಿಂದ ನಿಮ್ಮ ಏಳ್ಗೆಯಾಗದು. ಆದಕಾರಣ ಶ್ರೀ ಬಖಲೆಯವರಿಗೆ ಮತನೀಡಿರಿ.

ಇಷ್ಟು ಮಾತಾಡಿ ಬಾಬಾಸಾಹೇಬರು ಭಾಷಣವನ್ನು ಮುಗಿಸಿದರು. ತುಳಜಾಪುರ ಕದಮ್ ಬ್ರದರ್ಸ್ ಅವರು ಮತ್ತು ಇತರ ಅನೇಕರು ಮಾಲಾರ್ಪಣೆ ಮಾಡಿದರು. ಜಯಘೋಷಗಳೊಂದಿಗೆ ಸಭೆ ಮುಗಿದು ಬಾಬಾಸಾಹೇಬರು ಮಂಢೂಪದತ್ತ ಪ್ರಯಾಣ ಬೆಳೆಸಿದರು.

## ಮಂಢೂಪಿನ ಸಭೆ

ಸೊಲ್ಲಾಪುರದ ಸಭೆ ಮುಗಿಸಿಕೊಂಡು ಬಾಬಾಸಾಹೇಬರು ಬರುತ್ತಿದ್ದಾರೆಂದು ಮಂಢೂಪ, ಪರಗಣಾ ಮತ್ತು ಮಂಗಳವೇಢೆ ಸಂಸ್ಥಾನಗಳಿಂದ ಆಗಮಿಸಿದ ಎರಡು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯ ಜನಸಮುದಾಯವು ವಾದ್ಯ ತಂಡದವರೊಂದಿಗೆ ಊರಹೊರಗೆ ದಾರಿಕಾಯುತ್ತಿತ್ತು. ೧೦ಗಂಟೆಗೆ ಬಾಬಾಸಾಹೇಬರ ವಾಹನಬಂತು. 'ಅಂಬೇಡ್ಕರರಿಗೆ ಜಯವಾಗಲಿ' ಜಯಘೋಷದ ಧ್ವನಿ ಗಗನಕ್ಕೆ ಚಿಮ್ಮಿತು. ಬಾಬಾಸಾಹೇಬರನ್ನು ಮೆರವಣಿಗೆ ಮೂಲಕ ಸಭಾಂಗಣಕ್ಕೆ ಕರೆತಂದ ಒಡನೆ ಸುಮಂಗಳೆಯರು ಅವರ ಕಾಲಿಗೆ ನೀರಿನ ಕೊಡಗಳಲ್ಲಿಯ ನೀರನ್ನು ಹಣಿಸಿದರು. ಕರ್ಪೂರಹಚ್ಚಿ, ತೆಂಗಿನಕಾಯಿ ಒಡೆದು ಪಂಚಾರತಿಯಿಂದ 'ಸಂಕಟಗಳು ದೂರಾಗಲಿ, ಬಾಬಾಸಾಹೇಬರ ರಾಜ್ಯಬರಲಿ' ಎಂದು ಆರತಿ ಎತ್ತಿದರು. ನಂತರ ಸಭೆಕಲಾಪಗಳು ಶುರುವುಗೊಂಡವು. ಮೊದಲು ಮಂಢೂಪ ಪರಪಣೆಯದೇಶ ಮೆಹತ್ರೆ, ಗಂಗಪ್ಪಾ ರಣಖಾಂಬೆ ಸ್ವಾಗತಿಸಿದರು. ಬಾಬಾಸಾಹೇಬರು ಸೊಲ್ಲಾಪುರದಲ್ಲಿ ಮಾತಾಡಿದಂತೆ ತುಸು ವ್ಯತ್ಯಾಸಗಳೊಂದಿಗೆ ಮಾತನಾಡಿದರು. ಶ್ರೀ ಐದಾಳೆಯವರಿಗೆ ಮತನೀಡಲು ವಿನಂತಿಸಿದರು. ಅನಂತರ ಭೀಮಪ್ಪಾ ರಣಖಾಂಬೆ ಅವರು ಶ್ರೀಮಂತ ದೇಶಮುಖ, ಶ್ರೀ ಪಾಂಢರೆ ಮತ್ತು ಸಭಿಕರಿಗೆ ಧನ್ಯವಾದ ಅರ್ಪಿಸಿದರು. ಬಾಬಾ ಸಾಹೇಬರ ಜಯಕಾರದೊಂದಿಗೆ ಸಭೆಮುಗಿಯಿತು. ಆ ಬಳಿಕ ಬಾಬಾಸಾಹೇಬರು ಸೊಲ್ಲಾಪುರಕ್ಕೆ ಹಿಂದಿರುಗಿ ಹೋದರು. ಅಲ್ಲಿ ಚಿಕ್ಕಮಹಾರ ವಾಡಾ ಗರಡಿಯ ಅವರು ನೀಡಿದ ಎಲೆಅಡಿಕೆಯನ್ನು ನಿಂತಲ್ಲೆ ಸ್ವೀಕರಿಸಿ ತಕ್ಷಣವೇ ವಳಸಂಗಕ್ಕೆ ಹೋದರು.

## ವಳಸಂಗದ ಸಭೆ

ದಾರಿಯಲ್ಲಿ ಕುಂಭಾರಿಕರ ಯೋಗಿಬುವಾ ಮತ್ತು ಸಂಪೂರ್ಣ ಜನಸಮೂಹವು ತಮ್ಮ ಚಾವಡಿಯೆದುರು ಇದಕ್ಕಾಗಿ ನಿರ್ಮಿಸಿದ ಸಭಾಂಗಣದಲ್ಲಿ ನಡೆದ ಎಲೆಅಡಿಕೆ, ಹೂಹಾರವನ್ನು ಸ್ವೀಕರಿಸುವುದರಲ್ಲಿ ಪಾಲ್ಗೊಂಡು ೧೧-೨೫ಕ್ಕೆ ಬಾಬಾಸಾಹೇಬರು ವಳಸಂಗಕ್ಕೆ ಬಂದರು. ಅಲ್ಲಿಯೂ ವಳಸಂಗ ಕುಂಭಾರಿ, ಸಲಗರ, ಮಂಗಳೂರ ಪ್ರದೇಶದ ಮತ್ತು ಅಕ್ಕಲಕೋಟ ಸಂಸ್ಥಾನದಿಂದ ಆಗಮಿಸಿದ ಮೂರು ಸಾವಿರಕ್ಕಿಂತ ಹೆಚ್ಚಿನ ಜನಸಮುದಾಯವು ಸೇರಿತ್ತು. ನಂತರ ಅಲ್ಲಿಯ ಹಿರಿಯರು ಶ್ರೀ ಓಂಕಾರಪ್ಪಾ ವಳಸಂಗಕರ ಅವರು ಸ್ವಾಗತಿಸಿದರು. ಸೊಲ್ಲಾಪುರ ಮಾದರಿಯದ್ದೇ, ಆದರೆ ತುಸು ಭಿನ್ನವಾದ ಭಾಷಣವನ್ನು

ಬಾಬಾಸಾಹೇಬರು ಮಾಡಿದರು. ಐದಾಳೆಯವರಿಗೆ ಮತನೀಡಲು ಕೇಳಿಕೊಂಡರು. ಆಮೇಲೆ ಸೊಲ್ಲಾಪುರ ಜಿಲ್ಲೆ ಲೋಕಲ್ ಬೋರ್ಡ್ ಕಟ್ಟಿಸಿದ ಬಾವಿಯಿಂದ ನೀರು ಸೇದಲು ಜನರು ವಿನಂತಿಸಿದರು. ಆಗ ಬೆಳ್ಳಿಕೊಡಕ್ಕೆ ಕಟ್ಟಿದಹಗ್ಗ ಜಗ್ಗಿ ಬಾಬಾಸಾಹೇಬರು ನೀರುಎತ್ತಿದರು. ಜನರು ಪ್ರಸಾದ ರೂಪದಲ್ಲಿ ನೀರು ಕೇಳಿದಾಗ ಬಾಬಾಸಾಹೇಬರು ತಮಾಷೆಯಾಗಿ 'ದಕ್ಷಿಣೆ ತಗೀರಿ' ಅಂದಾಗ ಎಲ್ಲೆಡೆ ನಗೆ ಚಿಮ್ಮಿತು. ಕೊನೆಗೆ ಬಾಬಾಸಾಹೇಬರು ಜನರಿಗೆ ನೀರಿನ ಪ್ರಸಾದ ನೀಡಬೇಕಾಯಿತು. ಜನರು ಆ ಬಾವಿಗೆ ಅಂಬೇಡ್ಕರ ಬಾವಿ ಎಂದು ಹೆಸರಿಟ್ಟರು. ಬಾಬಾ ಸಾಹೇಬರು ಸೊಲ್ಲಾಪುರಕ್ಕೆ ಪ್ರಯಾಣ ಬೆಳೆಸಿದರು.

ಸೊಲ್ಲಾಪುರದಲ್ಲಿ ಶ್ರೀ ದೇಶಪಾಂಡೆ ವಕೀಲರ ಮನೆಯಲ್ಲಿ ಅಂಬೇಡ್ಕರರು ಭೋಜನ ಸ್ವೀಕರಿಸಿ ಬಾರ್ಶಿಗೆ ಪ್ರಯಾಣ ಬೆಳೆಸಿದರು. ದಾರಿಯಲ್ಲಿ ಬೈರಾಗಿ, ಪಾನಗಾವ, ಮುಂತಾದೆಡೆ ಪುಷ್ಪಮಾಲೆ ಸ್ವೀಕರಿಸಿ ಮೂರು ಗಂಟೆಗೆ ಬಾರ್ಶಿಯ ಶ್ರೀ ಭಗವಂತ ಮೀಲ್ ಹತ್ತಿರ ತಲುಪಿದರು.

**ಬಾರ್ಶಿಯ ಸಭೆ**

ಇಲ್ಲಿ ೮–೯ಸಾವಿರ ಜನಸಮೂಹ ಮತ್ತು ಸರಮಾಳೇಕರ, ರಾ. ನಾಮದೇವರಾವ ವಾಸಕರ, ಮಾಣಕೇಶ್ವರ, ಕಾಸಾರವಾಡಿಕರರ ಬ್ಯಾಂಡಿನ ತಂಡದೊಂದಿಗೆ ಎದುರುಗೊಂಡಿದ್ದರು. ಅಲ್ಲಿಂದ ಮೆರವಣಿಗೆ ಮೂಲಕ ಬಾಬಾ ಸಾಹೇಬರು ಪೋಸ್ಟ್ ಆಫೀಸ್, ಪೋಲಿಸ್ ಚೌಕಿ, ಕಾಝಿ ಮಸೀದಿ, ಜೈನ ಬಸದಿ, ಭಾಜಿ ಮಾರ್ಕೆಟ್ ಮಾರ್ಗವಾಗಿ ಮುನ್ಸಿಪಲ್ ದವಾಖಾನೆಯ ಹತ್ತಿರ ನಿರ್ಮಿಸಿದ ಭವ್ಯ ಸಭಾಂಗಣಕ್ಕೆ ಬಂದರು.

ಮೊದಲು ಬಾರ್ಶಿಯ ಸುಶಿಕ್ಷಿತ ಯುವಕ, ಮಹಾರ ಮುಂದಾಳು ಶ್ರೀ ಮನೋಹರ ದಾದಾ ಬೋಕೆಫೋಡೆ ಅವರ ಚಿಂತನಾಪೂರ್ವ ಪ್ರಸ್ತಾವನೆ ಮತ್ತು ಸ್ವಾಗತಭಾಷಣ ನಡೆಯಿತು. ಅನಂತರ ಬಾಬಾಸಾಹೇಬರು ಸೊಲ್ಲಾಪುರದ ಭಾಷಣದಂತೆಯೆ, ಆದರೆ ತುಸು ಭಿನ್ನಬದಲಾವಣೆಯ ವಿಚಾರಗಳನ್ನು ಹೇಳಿದರೂ ಒಂದು ಗಂಟೆ ಸಮಯದ ಭಾಷಣವಿತ್ತು. ಶ್ರೀ ಐದಾಳೆಯವರಿಗೆ ಮತನೀಡಲು ಹೇಳಿದರು. ನಂತರ ವಿವಿಧ ಸಂಘಸಂಸ್ಥೆಗಳಿಂದ ಮಾಲಾರ್ಪಣೆ ನಡೆಯಿತು. ಸಭೆ ವಿಸರ್ಜನೆಗೊಂಡಿತು. ಬಾಬಾಸಾಹೇಬರು ಕುರ್ಡವಾಡಿಯತ್ತ ನಡೆದರು.

**ಕುರ್ಡವಾಡಿ ಸಭೆ**

ಈಲ್ಲಾ ಬೋರ್ಡ್ ಸದಸ್ಯ ಶ್ರೀ ಶಂಕರರಾವ ರಿಕೀಬೆ, ಕೋಂಡಿರಾಮ ಕಾಂಬಳೆ, ನಿಂಗಪ್ಪ ಕುಮಾರ ಐದಾಳೆ, ಸಾಂಗೋಳಕರ, ಬಂದಸೋಡೆ, ಖಂಡೇರಾವ ಮಿಸ್ತ್ರೀ, ಭಾವುಸಾಹೇಬ ಕಾಂಬಳೆ, ಕೇಸಕರ ಮುಂತಾದವರು 'ಶ್ರೀ ಹೀರಾಲಾಲ ಥೇಟರ್'ಅನ್ನು ಸಿಂಗರಿಸಿ ಅದ್ಭುತಸಿದ್ಧತೆ ಮಾಡಿದ್ದರು. ಶ್ರೀ ಬಾಳಕೃಷ್ಣ ಐದಾಳೆಯವರು ಸ್ವಾಗತಭಾಷಣವನ್ನು ಸವಿಸ್ತಾರವಾಗಿ ಮಾಡಿದರು. ಸೊಲ್ಲಾಪುರದ ಭಾಷಣದಂತೆ ಅರ್ಧಗಂಟೆ ಭಾಷಣವನ್ನು ಬಾಬಾಸಾಹೇಬ ಮಾಡಿದರು. ಐದಾಳೆಯವರಿಗೆ ಮತ ನೀಡಲು ಒಪ್ಪಿದ ನಂತರ ಜನರಿಂದ ಹೂಹಾರ ಸ್ವೀಕರಿಸಿದರು. ನಂತರ ಬಾಬಾ ಸಾಹೇಬರು ಟೆಂಭುರ್ಣಿಯತ್ತ ಪ್ರಯಾಣ ಬೆಳೆಸಿದರು.

**ಟೆಂಭುರ್ಣಿಯ ಸಭೆ**

ಇಲ್ಲಿ ಮಹಾರ ಮತ್ತು ಮಾದಿಗ ಸಮಾಜದವರು ತಮ್ಮ ತಮ್ಮ ಚಾವಡಿಗಳೆದುರು ಶೋಭಾಯಮಾನ ಮಂಡಪ ಹಾಕಿ ಎಲೆಅಡಿಕೆಯ ಸಿದ್ಧತೆ ಮಾಡಿದ್ದರು. ಇಲ್ಲಿ ೧೦-೧೦ ನಿಮಿಷ ಬಾಬಾಸಾಹೇಬರು ಚುನಾವಣೆ ಸಂಬಂಧಿ ಭಾಷಣವನ್ನು ತಮ್ಮ ಹಿಂದಿನ ಭಾಷಣಗಳಂತೆ ಮಾತಾಡಿದರು. ಎಲೆಯಡಿಕೆ, ಪುಷ್ಪ ಸ್ವೀಕರಿಸಿದ ಬಾಬಾಸಾಹೇಬರು ಕರಮಾಳೆಯತ್ತ ನಡೆದರು.

**ಕರಮಾಳೆಯ ಸಭೆ**

ಕರಮಾಳೆಯ ಮುಂದಾಳು ಶ್ರೀ ಖಂಡೇರಾವ ಕಾಂಬಳೆ ಮತ್ತು ಮಿತ್ರರು ಭವ್ಯವಾಗಿ ಸಿಂಗರಿಸಿದ ಮಂಟಪದಲ್ಲಿ ಐದುಸಾವಿರ ಜನಸಮುದಾಯವು ಆತುರತೆಯಿಂದ ಕಾಯುತ್ತಿತ್ತು. ಬಾಬಾಸಾಹೇಬರ ಆಗಮನವಾಗುತ್ತಿದ್ದಂತೆಯೇ 'ಅಂಬೇಡ್ಕರ ಜಿಂದಾಬಾದ್, ಅಂಬೇಡ್ಕರ್ ಕೀಜಯ' ಮುಂತಾದ ಘೋಷಣೆಗಳಿಂದ ಬಾನು ದಣದಣಿಸಿತು. ಮೊದಲು ಅಲ್ಲಿಯ ಮಹಾರದ ಸುಶಿಕ್ಷಿತ ನಾಯಕ ಶ್ರೀ ಜನಾರ್ಧನರಾವ ಕಾಂಬಳೆ ಅವರು ಬಾಬಾಸಾಹೇಬರ ಗುಣಗೌರವದ ಪರ ಭಾಷಣ ಮಾಡಿದರು. ಬಾಬಾಸಾಹೇಬರ ಹೇಳಿಕೆಯಂತೆ ಶ್ರೀ ಐದಾಳೆಯವರಿಗೆ ಮತನೀಡಲು ಇಲ್ಲಿಯ ಸಮಾಜ ಸಿದ್ಧವಿದೆಯೆಂದರು. ನಂತರ ಸೊಲ್ಲಾಪುರದಂತೆ ಅರ್ಧಗಂಟೆ ಭಾಷಣ ಮಾಡಿದರು. ಆ ಬಳಿಕ ಅಹಮದನಗರದ ಅಭ್ಯರ್ಥಿ ಶ್ರೀ ಪ್ರಭಾಕರರಾವ ರೋಹಮ ಇವರೂ ಅದಕ್ಕೆ ಪೂರಕವಾಗಿ ಉತ್ತಮ ಮಾತುಗಳನ್ನಾಡಿದರು. ನಂತರ ಕ್ರಿಶ್ಚಿಯನ್ ಮಿಶನರಿ ಉಪದೇಶಕರು ಶ್ರೀ ಐದಾಳೆಯವರಿಗೆ ಬೆಂಬಲಿಸಿ ಮಾತನಾಡಿದರು. ಸ್ಥಳೀಯ ನಾಯಕ ಶ್ರೀ ಖಂಡೇರಾವ್ ಕಾಂಬಳೆಯವರು ಬಾಬಾಸಾಹೇಬರನ್ನು ಮತ್ತು ಸಭಿಕರನ್ನು ವಂದಿಸಿದರು. ಐದಾಳೆಯವರನ್ನು ಆಯ್ಕೆ ಮಾಡಲು ಕರಮಾಳೆ ತಾಲೂಕು ಮುಂಚೆಯೇ ಸಿದ್ಧಗೊಂಡಿದೆ ಎಂದರು. ಕೊನೆಗೆ ಹೂಹಾರ ಅರ್ಪಣೆಯಾಗಿ ಸಭೆ ಮುಕ್ತಾಯಗೊಂಡಿತು. ಬಾಬಾಸಾಹೇಬರ ಜಯಘೋಷ ನಡೆಯಿತು. ಶ್ರೀ ರೋಹಮ ಮತ್ತು ನಗರ ಕಡೆಯ ಇನ್ನಿತರ ನಾಯಕರು ಸೇರಿ ಬಾಬಾಸಾಹೇಬರ ಒಟ್ಟಿಗೆ ಕರ್ಜತಗೆ ಪ್ರಯಾಣ ಬೆಳೆಸಿದರು.

ಸೊಲ್ಲಾಪುರ ಜಿಲ್ಲೆಯ ಡಾ. ಬಾಬಾಸಾಹೇಬ ಅಂಬೇಡ್ಕರರ ಪ್ರಯಾಣ ಎಲ್ಲರೀತಿಯಿಂದ ಯಶಸ್ವಿಯಾಗಲು ಕಾರಣ ಅನೇಕ ಸದ್ಗೃಹಸ್ಥರ ಸಹಾಯ ಹಾಗೂ ವಿಶೇಷವಾಗಿ ಸೊಲ್ಲಾಪುರದ ಅಸ್ಪೃಶ್ಯರ ಹಿತಚಿಂತಕ ರಾ.ಬ.ಡಾ. ಮುಳೆ ಅವರ ಸಹಾಯ ಅತ್ಯಂತ ಪ್ರಮುಖವಾದುದು. ಅದರಂತೆ ಕುರ್ಡುವಾಡಿಯ ಅವರ ಮಿತ್ರ ಶ್ರೀ ಹೀರಾರಾಲ್ ಶೇಠ ಪರದೇಶಿ ಮತ್ತು ಬಾರ್ಶಿಯ ಸವರ್ಣಿಯರ ಸಹಾಯ ದೊರಕಿದೆ. ಜಿಲ್ಲೆಯ ಎಲ್ಲ ಮಹಾರ ಬಂಧುಗಳು ತುಂಬಾ ಸಹಾಯ ನೀಡಿದರು. ಹಾಗೆಯೇ ಸೊಲ್ಲಾಪುರದ ಯುವಮಾದಿಗ ಮುಂದಾಳು ಕೆರುರಾಮಚಂದ್ರ ಜಾಧವ, ವಮಾಜಿ ಧೋಂಡಿ ಚವ್ಹಾಣ, ಭಾಗಣ ಪರಶುರಾಮ ಹೆಗಡೆ, ಅಪ್ಪಾಜಿ ಸುಭಾನಾ ವಾಘಮಾರೆ, ಟೆಂಭುರ್ಣಿಯ ಜಗತಾಪ ಬ್ರದರ್ಸ್ ಮತ್ತು ಬಾರ್ಶಿಯ ಮನೋಹರ ಗೋಮಾಜಿ ಕಾಂಬಳೆ ಹಾಗೂ ಪ್ರೇಮಾಜಿ ಅಪ್ಪಾಕಾಂಬಳೆ ಈ ಮುಂತಾದ ಮಾದಿಗ ಬಂಧುಗಳು ಅತ್ಯಂತ ಪರಿಶ್ರಮ ವಹಿಸಿದ್ದಾರೆ. ಬಾರ್ಶಿ ಭಾಗದ ಮತಪ್ರಚಾರ, ಮೆರವಣಿಗೆ ಮತ್ತು ಮಂಟಪಗಳ ಎಲ್ಲ ವ್ಯವಸ್ಥೆಯನ್ನು ಬಾರ್ಶಿಕರ ಕಾಂಬಳೆಬ್ರದರ್ಸ್ ಎಂಬ ಮಾದಿಗ ಬಾಂಧವರ ನೆರವಿಂದಲೇ ನಡೆದು ಹೋಯಿತು. ಇದು ಅವರಿಗೆ ಭೂಷಣಪ್ರಾಯ ಕಾರ್ಯವಾಗಿದೆ.

# ೯೯.

# ಖೊಟ್ಟಿ ದಸ್ತಾವೇಜು ಸೃಷ್ಟಿಸುವವರು ಬಡವ, ರೈತ, ಕಾರ್ಮಿಕರ ಏಳ್ಗೆ ಮಾಡಿಯಾರೆ?

ಅಹಮದನಗರದಲ್ಲಿ ದಿ: ೨೫ ಜನೇವರಿ ೧೯೩೭ರಂದು ಮೊದಲೆ ಜಾಹೀರಗೊಳಿಸಿದಂತೆ ಕ್ಯಾಂಪ್‌ಸದರ ಎಂಬಲ್ಲಿ ಶನಿದೇವರ ಹಿಂದಿನ ಭವ್ಯ ಮಂಟಪದಲ್ಲಿ ಅಸ್ಪೃಶ್ಯ ಸಮಾಜದ ಅಹಮದನಗರ ಜಿಲ್ಲಾ ಪರಿಷತ್ತನ್ನು, ಅಖಿಲ ಭಾರತೀಯ ಅಸ್ಪೃಶ್ಯ ಸಮಾಜದ ಏಕಮೇವ ನಾಯಕ ಪರಮಪೂಜ್ಯ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಈ ಪರಿಷತ್ತಿಗೆ ಅಂದಾಜು ೫–೬ ಸಾವಿರದಷ್ಟು ಜನಸಮುದಾಯ ಸೇರಿತ್ತು. ಎಲ್ಲಿ ನೋಡಿದಲ್ಲಿ ಆನಂದವೇ ಆನಂದ. ಜನರು ಡಾ. ಬಾಬಾಸಾಹೇಬರ ಆಗಮನವನ್ನು ಕಾತುರತೆಯಿಂದ ನಿರೀಕ್ಷಿಸುತ್ತಿದ್ದರು. ಕೆಲವು ಸ್ಪೃಶ್ಯ ಮತ್ತು ಅಧಿಕಾರಿ ವರ್ಗವೂ ಹಾಜರಾಗಿತ್ತು. ವೇದಿಕೆ ಮೇಲೆ ಪುಣೆಯ ಅರ್ಜುನರಾವ ನಲಾವಡೆ, ಪಾರಗಾವಕರ ಭಾನುದಾಸ, ನೇವಾಸಕರ ಕವರಾಮ ಮತ್ತು ಪಂಢರಿನಾಥ ಬುವಾ ಇವರುಗಳು ಸಾಮಾಜಿಕ ಪದ್ಯಗಳನ್ನು ವೀರ ಶ್ರೀಯುತ್ತವಾಗಿ ಹಾಡಿ ಜನರನ್ನು ರಂಜಿಸುತ್ತಿದ್ದರು. ಅದರಂತೆ ಮ್ಹಾಪಾಜಿ ಭೀಮಾಜಿ ಚಾಬೂಕ ಸಾರ ಜಖಣಗಾವಕರ ಕವಿ ಇವರು ಬಾಬಾಸಾಹೇಬರ ಗುಣವರ್ಣಿಸುವ ವೀರ ಶ್ರೀಯುಕ್ತ ಮತ್ತು ಜನರಲ್ಲಿ ಶೌರ್ಯ ಬಿತ್ತುವ ಪೋವಾಡೆ(ಪವಾಡ ಹೇಳುವ ಹಾಡು) ಹಾಡಿದರು. ಬಾಬಾಸಾಹೇಬರ ಆಗಮನದ ವೇಳೆ ೮ ಆಗಿತ್ತು. ಆದರೆ ಮಧ್ಯಾಹ್ನ ಹನ್ನೆರಡಾದರೂ ಬರದೇ ಇದ್ದಾಗ ಸವರ್ಣೀಯರಲ್ಲಿ ನಿರಾಶೆ ಉಂಟಾಗತೊಡಗಿತು. ಆದರೂ ಅಸ್ಪೃಶ್ಯರಲ್ಲಿ ನಿರಂತರ ಉತ್ಸಾಹ ಮತ್ತು ಸಂತಸ ಎದ್ದುಕಾಣುತ್ತಿತ್ತು. ಮತ್ತೆ ಮತ್ತೆ ಜನರ ನಿಭಿಡತೆ ವೃದ್ಧಿಗೊಂಡು ಬಾಬಾಸಾಹೇಬರ ದರ್ಶನಕ್ಕೆಂದು ಜನರು ತೀವ್ರ ಆಸಕ್ತಿಯಿಂದ ಕಾಯುತ್ತ ಕುಳಿತಿದ್ದರು. ಬಾಬಾಸಾಹೇಬರು ಆಗಮಿಸುವ ಮಾರ್ಗದಲ್ಲಿ ಅವರನ್ನು ಸ್ವಾಗತಿಸಲು ಫಸ್ಟ್ ಲಾಯಿನ್ ಸ್ಕೌಟ್ ಬ್ಯಾಂಡ್ ಮತ್ತು ಸ್ಕೌಟ್, ರಾಧಿಯ ತೋಟದ ಬಲಭೀಮ ಸ್ಕೌಟ್, ಮಾತಂಗ ಪ್ರಭೃತಿ ಮಂಡಳ ಸ್ಕೌಟ್, ಮಾಳಿವಾಡಾ, ದರೇವಾಡಿಯ ಸ್ಕೌಟ್, ಪೇವಶವ ಲೈನ್ ಕ್ಯಾಂಪ್‌ನಲ್ಲಿಯ ಮಾತಂಗ ಸ್ಕೌಟ್, ಬಾಕೋಡಿ ಸ್ಕೌಟ್ ಸೇರಿದಂತೆ ಮುನ್ನೂರು ಸ್ಕೌಟ್‌ಗಳು ಲಾಠಿ ಮತ್ತು ಬ್ಯಾಂಡ್ ಜೊತೆಗೆ ಹಾಜರಿದ್ದರು. ಅದರಂತೆ ರಾಹರೀಕರ ಮಹಾರಮಂಡಳಿಯ ಬ್ಯಾಂಡ್, ಕಹಳೆ, ತುತ್ತೂರಿ ವಾದ್ಯಗಳ ನುಡಿಸುವಿಕೆಯಿಂದ ಇಡೀ ವಾತಾವರಣವು ಧ್ವನಿಸಿ ಹೋಗಿತ್ತು. ನೋಡಿದತ್ತ ಉತ್ಸಾಹ ಹುಟ್ಟಿ ನಿರಂತರವಾಗಿ ಬಾಬಾಸಾಹೇಬರ ಜೈಕಾರವಾಗುತ್ತಿತ್ತು. ಸರಿಯಾಗಿ ೨ ಗಂಟೆಗೆ ಬಾಬಾಸಾಹೇಬರು ವಾಹನದಲ್ಲಿ ಆಗಮಿಸುತ್ತಿದ್ದಂತೆ ವಾದ್ಯಗಳ ಗರ್ಜನೆ ಮುಗಿಲುಮುಟ್ಟಿತು. ಜಯಘೋಷ ಮೊಳಗಿತ್ತಿತ್ತು. ಬಾಬಾಸಾಹೇಬರ ಜೊತೆ ಮೋಟಾರಿನಲ್ಲಿ ಶ್ರೀ ಪ್ರಭಾಕರ ರೋಹಮ ಸಾಹೇಬ, ಬಿ.ಎಸ್. ಕದಮ್, ಕರ್ಜತ್, ಎಸ್.ಆರ್.

---

ಜನತಾ: ೧೩ ಫೆಬ್ರುವರಿ ೧೯೩೭.

ಸಾಳವೆ ಅಹಮದ್‌ನಗರ, ವಿಠ್ಠಲರಾವ ಗಾಯಕವಾಡ, ನಗರಕರ ಅವರುಗಳಿದ್ದರು. ಬಾಬಾಸಾಹೇಬರಿಗೆ ಎಲ್ಲ ಸ್ಕೌಟ್‌ನವರು ಗೌರವ ವಂದನೆ ಸಲ್ಲಿಸಿದರು. ಅಂದಿನ ಸ್ತಬ್ಧಚಿತ್ರ ಶೌರ್ಯ ಮತ್ತು ಸಾಹಸದ್ದಾಗಿ ಕಾಣುತ್ತಿತ್ತು. ಬಾಬಾಸಾಹೇಬರ ವಾಹನ ಮಧ್ಯದಲ್ಲಿ ಹಾಗೂ ಅಕ್ಕಪಕ್ಕದಲ್ಲಿ ಲಾಠಿ ಹಿಡಿದ ಸ್ಕೌಟ್ ಸಾಲಾಗಿ ಹೆಜ್ಜೆಯಿಡುತ್ತಿದ್ದರು. ನಡುವೆ ಬ್ಯಾಂಡ್, ಕಹಳೆ, ತುತ್ತೂರಿ ವಾದ್ಯಗಳ ವಾದನಗಳ ಸಂಗಡ ದೊಡ್ಡಸಂಖ್ಯೆಯಲ್ಲಿ ಸೇರಿದ ಜನರು ಅತಿವೈಭವದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಅಲ್ಲಲ್ಲಿ ಮಹಿಳೆಯರ ಗುಂಪು ಬಾಬಾಸಾಹೇಬರು ವೇದಿಕೆಗೆ ಹೂಮಾಲೆ ಅರ್ಪಿಸಿ ಹೂ ಚೆಲ್ಲುತ್ತಿದ್ದರು. ಮೆರವಣಿಗೆ ನಂತರ ಬಾಬಾಸಾಹೇಬರು ವೇದಿಕೆಗೆ ಬಂದರು. ಸಭೆ ಪ್ರಾರಂಭವಾಯಿತು. ಪರಿಷತ್ತಿನ ಸೆಕ್ರೆಟರಿ ರಂಗನಾಥ ಮಾರುತಿರಾವ ಸೂರ್ಯವಂಶಿಯವರು ನೆರೆದ ಜನರನ್ನು ಅಭಿನಂದಿಸಿದರು. ಡಾ. ಬಾಬಾಸಾಹೇಬರು ಅಹಮದ್‌ನಗರ ಜಿಲ್ಲೆಯ ಪ್ರವಾಸ ಕೈಗೊಂಡಿದ್ದಕ್ಕೆ ಅವರಿಗೆ ಕೃತಜ್ಞತೆ ಅರ್ಪಿಸಿದರು. ಹಾಗೆಯೇ ಸ್ವಾಗತಾಧ್ಯಕ್ಷ ಸಖಾರಾಮ ಬಾಳಾಜಿ ಭಿಂಗಾರದಿವೆ ಅವರು ಬಾಬಾಸಾಹೇಬರನ್ನು ಸ್ವಾಗತಿಸಿ ನೆರೆದ ಸಮುದಾಯಕ್ಕೆ ಪರಿಚಯಿಸಿದರು. ಮೆ. ರಾಮಚಂದ್ರ ಮಕಾಜಿ ನಲವಡೆ (ಡೋಹರ) ಮತ್ತು ಶ್ರೀ ಸೋನವಣೆ (ದೋಹರ) ಅಹಮದ್‌ನಗರದ ಮಾದಿಗ ಸಮಾಜದ ಮುಂದಾಳು ಶಂಕರರಾವ ಸಾಠೆ (ಮಾಳಿವಾಡಾ), ಮಹಾರ ಸಮಾಜದ ಶ್ರೀ ಭಾವುರಾವ ಯಶವಂತ ಕದಮ, ಮಾರುತಿರಾವ ಗಾಯಕವಾಡ ದೇಹರೆಕರ, ಯಶವಂತ ಶ್ರಾವಣ ಪಾಟೋಳೆ ಮುಂತಾದವರು ಅಹಮದನಗರ ಜಿಲ್ಲೆಯ ವತಿಯಿಂದ ಶ್ರೀ ಪ್ರಭಾಕರ ಜನಾರ್ದನ ರೋಹಮ ಅವರನ್ನೇ ಆರಿಸಿ ತರುವುದು ಎಂಥ ತುರ್ತಿನ ಕಾರ್ಯ ಎಂಬ ಆಶಯದ ಭಾಷಣ ಮಾಡಿದರು. ಹಾಗೂ ಅವರನ್ನು ಅತ್ಯಧಿಕ ಮತಗಳಿಂದ ಆಯ್ಕೆ ಮಾಡುವುದರ ಭರವಸೆಯನ್ನು ಬಾಬಾಸಾಹೇಬರಿಗೆ ನೀಡಿದರು. ಆನಂತರ ಸ್ಕೌಟ್ ಮಾಸ್ತರ ಶಂಕರರಾವ ಕುಶಾಬಾ ಕಾಂಬಳೆಯವರು ಬಾಬಾಸಾಹೇಬರ ಕಾರ್ಯವೈಖರಿ, ಸಮಗಾರ ಸಮಾಜದ ಸಮಾಜದ್ರೋಹಿ ಮತ್ತು ಘಾತಕ ವರ್ತನೆ, ಕಾಂಗ್ರೆಸ್ಸಿನ ಕೃತಘ್ನ ಧೋರಣೆ ಕುರಿತು ಪರಿಣಾಮಕಾರಿ ಭಾಷಣ ಮಾಡಿದರು. ಮತ್ತು ಶ್ರೀ ಪ್ರಭಾಕರ ಜನಾರ್ದನ ರೋಹಮ ಅವರನ್ನೇ ಅಹಮದ್‌ನಗರ ಜಿಲ್ಲೆಯಿಂದ ಆರಿಸಿ ತರಲು ಜನರಿಗೆ ವಿನಂತಿಸಿದರು. ಆ ಬಳಿಕ ಡಾ. ಬಾಬಾಸಾಹೇಬರು ಭಾಷಣ ನೀಡಲು ಎದ್ದಾಗ ಎಲ್ಲೆಡೆ ಅವರ ಹೆಸರಿನ ಜಯಘೋಷ ಮೊಳಗಿತು. ಚಪ್ಪಾಳೆ ಸುರಿಮಳೆ ನಡೆಯಿತು.

ಡಾ. ಬಾಬಾಸಾಹೇಬ ಅಂಬೇಡ್ಕರರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು,

ಬಂಧುಗಳೆ–ಭಗಿನಿಯರೆ,

ಇಂದಿನ ಸಭೆಯಲ್ಲಿ ಅಪಾರ ಸಂಖ್ಯೆಯಲ್ಲಿ ಸೇರಿದ ಜನಸಮುದಾಯ ಮತ್ತು ಒಟ್ಟಾರೆ ಅಹಮದನಗರ ಜಿಲ್ಲೆಯ ಎಲ್ಲ ಜನರ ಉತ್ಸಾಹ ಕಂಡು ನನಗೆ ಆನಂದವಾಗಿದೆ. ಇವತ್ತಿನ ಈ ಸಭೆಯು ರೋಹಮರ ಚುನಾವಣೆ ಸಂದರ್ಭದಲ್ಲಿ ಸೇರಿದೆ ಎಂಬುದು ತಮಗೆ ತಿಳಿದ ಸಂಗತಿ. ಆದರೂ ಯಾವ ಅರ್ಥದಲ್ಲಿ ನನ್ನ ಪಕ್ಷದ ಪರವಾಗಿ ಯಾವ್ಯಾವ ಅಭ್ಯರ್ಥಿಗಳನ್ನು ನಿಲ್ಲಿಸಿದ್ದೇನೆಯೋ ಆ ಅರ್ಥದಲ್ಲಿ ಅವರಿಗೆ ನೆರವಾಗುವುದು ನನ್ನ ಕರ್ತವ್ಯವಾಗಿದೆ.

ರೋಹಮ ಅವರಿಗೆ ಅಹಮದನಗರ ಜಿಲ್ಲೆಯ ಮಹಾರ–ಮಾದಿಗ ಸಮುದಾಯದ ವಿರೋಧವಿಲ್ಲವೆಂಬುದು ಸಂತಸದ ಸಂಗತಿ. ಕೇವಲ ಸಮಗಾರರ ವಿರೋಧವಿದೆ. ಆದರೆ ಅದರ ಬಗ್ಗೆ ಚಿಂತಿಸಬೇಡಿರಿ. ಅವರ ಅಭ್ಯರ್ಥಿಗೆ ಮೂಲತಃ ಮತವನ್ನೇ ನೀಡಬೇಡಿರಿ, ಇದನ್ನು ಬಹಿರಂಗವಾಗಿಯೇ

ಹೇಳುತ್ತೇನೆ. ಅಸ್ಪೃಶ್ಯರ ಹಕ್ಕುಗಳು ಸರ್ವಅಸ್ಪೃಶ್ಯರಲ್ಲಿ ವಿಭಜಿಸಿವೆ ಎಂಬ ಮಾತು ನಿಜ. ಆದರೆ ಈ ಸಮಗಾರ ಸಮುದಾಯದವರು ಆರಂಭದಿಂದಲೂ ನನ್ನ ಯಾವುದೇ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿಲ್ಲ. ಇದಷ್ಟೇ ಅಲ್ಲ, ನಾನು ದುಂಡುಮೇಜಿನ ಪರಿಷತ್ತಿನಲ್ಲಿ ಸ್ಪೃಶ್ಯ ಹಿಂದೂಗಳ ಸಂಗಡ ಮತ್ತು ಸರಕಾರದ ಜೊತೆ ಜಗಳಕ್ಕಿಳಿದಾಗ, ಅಂಬೇಡ್ಕರ ನಮ್ಮ ನಾಯಕರಲ್ಲ, ಅವರ ಅನಿಸಿಕೆಗಳನ್ನು ತಾವು ಒಪ್ಪಕೂಡದು ಎಂದು ಈ ಜನರು ಪಾರ್ಲಿಮೆಂಟಿಗೆ ತಂತಿಸಂದೇಶ ಕಳಿಸಿದ್ದಲ್ಲದೆ ನಾಶಿಕಸತ್ಯಾಗ್ರಹ ಆರಂಭಗೊಂಡಿದ್ದಾಗ ನಮ್ಮ ಜನರ ಮೇಲಾದ ಸ್ಪೃಶ್ಯರ ಕಲ್ಲುಇಟ್ಟಿಗೆ ತೂರಾಟದಲ್ಲಿ ಸಮಗಾರರೂ ಸಾಮೀಲಾಗಿದ್ದರು. (ಧಿಕ್ಕಾರ, ಧಿಕ್ಕಾರ, ಶೇಮ್ ಶೇಮ್) ಇದು ನನಗೆ ಚೆನ್ನಾಗಿ ಗೊತ್ತು. ಆದ್ದರಿಂದ ತಾವು ಯೋಚಿಸಿರಿ. ಯಾವ ಜನರು ನನ್ನ ಕೆಲಸಕ್ಕೆ ಅಡ್ಡಿಪಡಿಸುವರೋ ಅಥವಾ ಕಾಂಗ್ರೆಸ್ಸಿನ ಬಗಲಲ್ಲಿ ತೂರಿಕೊಂಡು ನನ್ನ ಕಾರ್ಯಚಟುವಟಿಕೆಗಳ ಮಾರ್ಗದಲ್ಲಿ ಮುಳ್ಳನ್ನು ಹಾಸುತ್ತಾರೋ ಅಂಥವರನ್ನು ನಮ್ಮವರೆಂದು ಕರೆಯಲು ಹೇಗೆ ಸಾಧ್ಯ? ಮತ್ತೆ ಅವರೂ ಸಹ ನಮ್ಮೆಡೆ ಯಾಕೆ ಯಾಚಕರಾಗಿ ನೋಡಬೇಕು? ಈಚೆಗೂ ಸಹ ಪ್ರತಿಯೊಂದು ಜಾಗದಲ್ಲಿ ಈ ಸಮಗಾರ ಸಮುದಾಯದವರು ಕಾಂಗ್ರೆಸ್ ಟಿಕೆಟ್ಟಿನ ಮೇಲೆ ಸ್ಪರ್ಧಿಸಿ ನಮ್ಮಪಕ್ಷದ ಅಭ್ಯರ್ಥಿಯನ್ನು ಓಪನ್ಆಗಿ ವಿರೋಧಿಸುತ್ತಿದ್ದಾರೆ. ನಿಮ್ಮ ಜಿಲ್ಲೆಯೊಳಗೆ ರೋಹಮ್ ಅವರನ್ನು ವಿರೋಧಿಸಲೆಂದೇ ಸೋನವಣೆ ಎಂಬ ಹೆಸರಿನ ಗೃಹಸ್ಥ ಸ್ಪರ್ಧಿಸಿದ್ದಾರೆ. ಕೆಲವು ಸ್ಪೃಶ್ಯರು ಹೇಳುತ್ತಾರೆ, ಸೋನವಣೆ ಬಿ.ಎ., ಎಲ್.ಎಲ್.ಬಿ., ಉತ್ತೀರ್ಣರು, ಆದರೆ ರೋಹಮ್ ಕೇವಲ ಮೆಟ್ರಿಕ್ ಕಲಿತವರು ಅಂತ, ಆದರೆ ಇಂಥ ಲಕ್ಷಲಕ್ಷ ಬಿ.ಎ.ಯನ್ನು ಹೂತುಬಿಟ್ಟು ಉಳಿಯೋ ರೋಹಮನ ಬೆನ್ನಿಂದೆ ನಾನೀದಿನಲ್ಲ. (ಜೋರಾದ ಚಪ್ಪಾಳೆ ಮತ್ತು ಬಾಬಾಸಾಹೇಬರ ಜಯಘೋಷಣೆ) ಶ್ರೀ ಸೋನವಣೆ ಯಾವುದೇ ಪಕ್ಷದಿಂದ ಸ್ಪರ್ಧಿಸಿಲ್ಲ ಅದಕ್ಕೆ ಅವರು ನಿಮ್ಮ ಕೆಲಸವನ್ನು ಏನನ್ನೂ ಮಾಡದೇ ಹೋದರೆ ಯಾರನ್ನು ಹೊಣೆ ಮಾಡುತ್ತೀರಿ? ರೋಹಮ್ ಅವರು ನನ್ನ ಸ್ವತಂತ್ರ ಮಜೂರಪಕ್ಷದ ವತಿಯಿಂದ ಸ್ಪರ್ಧಿಸಿರುವುದರಿಂದ ಅವರ ಕಾರ್ಯನಿರ್ವಹಣೆಯ ಜವಾಬುದಾರಿ ನನ್ನಮೇಲಿದೆ.(ಚಪ್ಪಾಳೆ) ಆದ್ದರಿಂದ ನೀವು ನಿಮ್ಮ ಮೂರೂ ಮತಗಳನ್ನು ರೋಹಮ್‌ರ ಕುದುರೆ ಚಿತ್ರದೆದುರು ಒತ್ತಿನೀಡಿರಿ. ('ಹೌದು ಹೌದು ಬಾಬಾಸಾಹೇಬ' ಜನರು ಕೂಗುವರು) ಶ್ರೀ ಸೋನವಣೆ ಅವರಿಗೆ ಒಂದೂ ಮತವನ್ನು ನೀಡಬೇಡಿರಿ. (ಇಲ್ಲ ಇಲ್ಲ, ಖಂಡಿತ ಇಲ್ಲ).

ಈ ದೇಶದಲ್ಲಿ ಅನೇಕ ಬಲಿಷ್ಠ ಹಾಗೂ ಸುಶಿಕ್ಷಿತ ಪಕ್ಷಗಳಿವೆ. ಹಾಗೆ ನನ್ನದೂ ಒಂದು ಪುಟ್ಟ ಸ್ವತಂತ್ರ ಮಜೂರಪಕ್ಷವಿದೆ. ಇದಕ್ಕಿಂತ ಕೆಲವು ಪಕ್ಷಗಳು ಇವೆಯಲ್ಲ, ಅವರ ಮತ್ತು ನನ್ನಲ್ಲಿ ಅಜಗಜಾಂತರವಿದೆ. ಬಾನು ಭುವಿಯ ಅಂತರವಿದೆ. ಇನ್ನು ಕೆಲವು ಪಕ್ಷಗಳಲ್ಲಿ ಸ್ವಲ್ಪ ಅಂತರ. ಕಾಂಗ್ರೆಸ್ ಮತ್ತು ನನ್ನ ಪಕ್ಷದಲ್ಲಿರುವ ಅಂತರವಿಷ್ಟೆ. ಕಾಂಗ್ರೆಸ್ ಶ್ರೀಮಂತ ಅಭ್ಯರ್ಥಿಯನ್ನು ನಿಲ್ಲಿಸಿದೆ, ನಾನು ನನ್ನ ಪಕ್ಷದಿಂದ ಬಡ ಅಭ್ಯರ್ಥಿಯನ್ನು ಸ್ಪರ್ಧೆಗೆ ನಿಲ್ಲಿಸಿರುವೆ. ತತ್ವಕ್ಕೆ ಭಂಗ ಬರದಿರಲೆಂದು ನಾನು ನನ್ನ ಸಮಾಜದ ಸಿರಿವಂತರನ್ನು ಬಿಟ್ಟುಬಿಟ್ಟೆ. ಆದಕಾರಣ ಅವರು ನನ್ನ ಮೇಲೆ ಕೋಪಗೊಂಡಿದ್ದಾರೆ. ರೋಷವಿದೆ. ನನ್ನ ತತ್ವಗಳಿಗಾಗಿ ನನಗೆ ಅವರು ಮಹತ್ವವೆನಿಸುವುದಿಲ್ಲ. ಕಾಂಗ್ರೆಸ್ ತಾನು ಬಡವರ ಪರವಾದವ ಎಂದು ಹೇಳುತ್ತದೆ. ಮತ್ತು ಫಿರೋದಿಯಾನಂಥ ಶ್ರೀಮಂತ ಮಾರವಾಡಿಯನ್ನು ಸ್ಪರ್ಧೆಗಿಳಿಸುತ್ತದೆ. ಆದರೆ ನೀವು ಯೋಚಿಸಿ, ಯಾವ ಮಾರವಾಡಿ ಖೊಟ್ಟಿ ಕಾಗದಪತ್ರಗಳನ್ನು ಸಿದ್ಧಪಡಿಸಿ ಮತ್ತು ನಿಮ್ಮ ಹೆಬ್ಬೆಟ್ಟು ಒತ್ತಿಕೊಂಡು ಹೊಲಗದ್ದೆ ಮನೆಮಾರು ಕಬಳಿಸುವನೋ ಆ ಮಾರವಾಡಿ ಬಡವ, ರೈತರ, ಕಾರ್ಮಿಕ ಕೂಲಿಗಳ ಏಳ್ಗೆಯನ್ನು ಮಾಡಬಹುದೆಂದು ನಿಮಗೆ ಅನಿಸುತ್ತದೆಯೇ?(ಇಲ್ಲ ಇಲ್ಲ) ಕಾಂಗ್ರೆಸ್‌ಗೆ ತನ್ನ

ಬಂಡವಾಳದಾರರನ್ನು ಉಳಿಸಿಬೇಕಿದೆ ಮತ್ತು ನಿಮಗೆ ಹಾನಿಯುಂಟು ಮಾಡುವುದಾಗಿದೆ. ಆದಕಾರಣ ಅವರ ಪೊಳ್ಳುಮಾತುಗಳಿಗೆ ಬಲಿಯಾಗಬೇಡಿರಿ. ನೀವು ತಮ್ಮ ಪಕ್ಷದ ಕುರಿತು ಚಿಂತಿಸಿರಿ ಮತ್ತು ಸ್ವತಂತ್ರ ಮಜೂರ ಪಕ್ಷದ ಅಭ್ಯರ್ಥಿ ಶ್ರೀರೋಹಮ ಅವರಿಗೆಯೆ ನಿಮ್ಮೆಲ್ಲ ಮತಗಳನ್ನು ನೀಡಿರಿಯೆಂದು ವಿನಂತಿಸಿಕೊಳ್ಳುವೆ. ಕೊನೆಗೆ ಅಹಮದನಗರ ಕ್ಯಾಂಪ್‌ನ ಸ್ಕೌಟ್ ತಂಡದವರನ್ನು ಅಭಿನಂದಿಸದೆ ಇರಲಾರೆ. ನಿಮ್ಮೊಳಗೆ ಶೂರತನ ತುಂಬಲು ಸ್ಕೌಟ್ ಒಂದು ಸಾಧನ. ಅದಕ್ಕೆ ಪ್ರತಿ ಹಳ್ಳಿಗಳಲ್ಲಿ ಜನರೂ ಸಹ ಸ್ಕೌಟ್ ಉಡುಪುಗಳನ್ನು ತಮ್ಮ ೧೧ವರ್ಷ ಮೇಲಿನ ಮಕ್ಕಳಿಗೆ ನೀಡಿ ಉತ್ಸಾಹ ತುಂಬಬೇಕು. ಈ ಧೋತರಗಳು ಬೇಡ. ಈ ಧೋತರುಗಳು ನಮಗೆ ತುಂಬಾ ಹಾನಿಯುಂಟು ಮಾಡಿವೆ. ಇಂದು ಈ ನೂರಾರು ಸ್ಕೌಟ್‌ನವರನ್ನು ನೋಡಿ ತುಂಬಾ ಖುಷಿಯಾಗಿದೆ. ಮತ್ತೊಮ್ಮೆ ನಿಮ್ಮನ್ನು ಮನಸಾರೆ ಅಭಿನಂದಿಸುವೆ. ಹೀಗೆ ಹೇಳಿದ ಅವರು ಭಾಷಣ ಮುಗಿಸಿದರು. ಆಗ ಚಪ್ಪಾಳೆ ಸದ್ದು ಮುಗಿಲು ಮುಟ್ಟಿತು. ಜಯಕಾರ ಮೊಳಗಿತು. ಬ್ಯಾಂಡು, ಕಹಳೆ, ತುತ್ತೂರಿ ಮುಂತಾದ ವಾದ್ಯಗಳಿಂದ ಭವ್ಯವಾದ ವೇದಿಕೆ ನಿನಾದಗೊಂಡು ದಣದಣಿಸಿತು. ಅವರು ಅಹಮದನಗರ ಕ್ಯಾಂಪ್ ಫಸ್ಟ್ ಲೈನ್ ಸ್ಕೌಟ್ ಟ್ರುಪ್, ರಾಯಿತೋಟದ ಬಲಭೀಮ ಸ್ಕೌಟ್, ಪ್ರಗತಿಮಾತಂಗ ಮಂಡಳಿ, ಮಾಳಿವಾಡಾ ಸ್ಕೌಟ್, ದರೇವಾಡಿ ಸ್ಕೌಟ್, ಬಾಕೋಡಿ ಸ್ಕೌಟ್, ಸದರ ಕ್ಯಾಂಪ್ ಮಾತಂಗ ಸ್ಕೌಟ್ ಮುಂತಾದ ಸ್ಕೌಟುಗಳಿಗೆ ಯಶಸ್ಸು ಕೋರಿದ ಅಭಿಪ್ರಾಯವನ್ನು ಬರೆದುಕೊಟ್ಟರು. ಆನಂತರ ಶ್ರೀಪ್ರಭಾಕರ ಜನಾರ್ದನ ರೋಹಮ ಅವರು ಡಾ. ಬಾಬಾಸಾಹೇಬ ಅಂಬೇಡ್ಕರರು ಅಹಮದನಗರಜಿಲ್ಲೆಗೆ ಭೇಟಿನೀಡಿದ್ದಕ್ಕೆ ಕೃತಜ್ಞತೆ ಹೇಳಿದರು. ಸೇರಿದ ಎಲ್ಲ ಜನರು, ಮತದಾರರು ನನ್ನ ಮೇಲಿಟ್ಟ ಪ್ರೀತಿ–ವಿಶ್ವಾಸ, ನಿಷ್ಠೆಗೆ ನಾನು ಎಲ್ಲ ಸಮಾಜದವರಿಗೆ ಅತ್ಯಂತ ಋಣಿಯಾಗಿರುವೆ. ನಮ್ಮ ಅಹಮದನಗರ ಜಿಲ್ಲೆಯ ಚುನಾವಣೆಯ ಬಾಬತ್ತಿನಲ್ಲಿ ತೋರಿದ ಸಾಹಸವು ಅತ್ಯಂತ ಪ್ರಶಂಸನೀಯವಾಗಿದ್ದು ಅಭಿನಂದನೆಗೆ ಪಾತ್ರವಾಗಿದೆ. ಹೀಗೆ ಸ್ಫೂರ್ತಿದಾಯಕ ಮಾತುಗಳನ್ನು ರೋಹಮ ಆಡಿದರು. ಬಳಿಕ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಹಸ್ತದಿಂದ ಫಸ್ಟ್ ಲೈನ್ ಸ್ಕೌಟಿನ(ಹಳೆಯ) ಕ್ಯಾಪ್ಟನ್ ಲ.ಬಾ. ಬನಸೋಡೆ, ಬಲಭೀಮ ಸ್ಕೌಟಿನ ಕ್ಯಾಪ್ಟನ್ ಶ್ರೀಪತರಾವ ಗಾಯಕವಾಡ, ದರೇವಾಡಿ ಸ್ಕೌಟಿನ ಕ್ಯಾಪ್ಟನ್ ಕುಂಡಲೀಕ ಭಿಂಗಾರದಿವೆ, ಬಾಕೋಡಿ ಸ್ಕೌಟಿನ ಕ್ಯಾ. ಕಿಸನರಾವ, ಮಾತಂಗ ಪ್ರಗತಿ ಮಂಡಳಿಯ ಸ್ಕೌಟಿನ ಕ್ಯಾ. ಕಿಸನರಾವ ಪಾರಧೆ ಅವರಿಗೆ ಹಾಗೂ ವ್ಯಾಯಾಮ ಮಂಡಳಿಯ ಶಿಕ್ಷಕ ಯಶವಂತ ಶ್ರಾವಣ ಪಾಚೋಳೆ, ರಾಹುರಿಯ ಬ್ಯಾಂಡ್ ಮಾಸ್ತರ ನಾಮದೇವ ಸಾಳವೆ ಅವರಿಗೆ ಬೆಳ್ಳಿಪದಕವನ್ನು ನೀಡಲಾಯಿತು. ಕೊನೆಗೆ ಎಲ್ಲ ಸಂಸ್ಥೆಗಳ ಪರವಾಗಿ ಬಾಬಾಸಾಹೇಬರಿಗೆ ಮಾಲಾರ್ಪಣೆ ಮಾಡಲಾಯಿತು. ಆನಂತರ ಬಾಬಾಸಾಹೇಬರ ಜಯಕಾರಗಳೊಂದಿಗೆ ಈ ಬೃಹತ್ ಸಭೆ ಕೊನೆಗೊಂಡಿತು.

## ೧೦೦.
## ಪೊಳ್ಳುಮಾತುಗಳಿಗೆ ಬಲಿಯಾಗದೆ ಎಚ್ಚರದಿಂದ ವರ್ತಿಸಬೇಕಿದೆ

ಅಖಿಲ ಭಾರತೀಯ ಅಸ್ಪೃಶ್ಯ ಸಮಾಜದ ಏಕೈಕ ಪುಢಾರಿ ಮತ್ತು ಸ್ವತಂತ್ರ ಮಜೂರು ಪಕ್ಷದ ಸಂಸ್ಥಾಪಕ ಡಾ. ಬಾಬಾಸಾಹೇಬ ಅಂಬೇಡ್ಕರ ಎಮ್.ಎ., ಪಿಎಚ್.ಡಿ., ಬಾರ್–ಆರ್–ಲಾ., ಅವರು ದಿನಾಂಕ ೨೫ಜನೇವರಿ ೧೯೩೭ ರಂದು ಸೊಲ್ಲಾಪುರ ಮತ್ತು ಅಹಮದ್‌ನಗರ ಜಿಲ್ಲೆಯ ಪ್ರವಾಸಮುಗಿಸಿ ರಾತ್ರಿ ಏಳೂವರೆಗೆ ಬೆಳಗಾವ ಸ್ಟೇಷನ್‌ಗೆ ಆಗಮಿಸಿದರೆ. ಅವರ ಸಂಗಡ ಪೂರ್ವ ಖಾನದೇಶದ ಸ್ವತಂತ್ರ ಮಜೂರ ಪಕ್ಷದ ಅಭ್ಯರ್ಥಿ ಶ್ರೀದೌಲತರಾವ ಗುಲಾಜಿ ಜಾಧವ, ಬಿ.ಎ., ಇವರಿದ್ದರು. ಜಾಮನೇರ ತಲುಪಿದೊಡನೆ ಬೃಹತ್ ಮೆರವಣಿಗೆ ತೆಗೆದರು. ಮೆರವಣಿಗೆ ಸಭೆಯಲ್ಲಿ ರೂಪಾಂತರಗೊಂಡ ನಂತರ ಡಾ. ಬಾಬಾಸಾಹೇಬ ಅಂಬೇಡ್ಕರರು ಸಭೆಯನ್ನುದ್ದೇಶಿಸಿ ಸಂಬೋಧಿಸುವಾಗ ಹೀಗೆ ಹೇಳಿದರು.

ನಾನೀಗ ಪ್ರವಾಸ ಯಾಕೆ ಕೈಗೊಂಡೆ ತಮಗೆ ತಿಳಿದಿರಬಹುದು. ಬರುವ ಸುಧಾರಣಾ ಕಾನೂನಿನಂತೆ ತಮಗೆ ಮುಂಬಯಿ ಕಾನೂನು ಕೌನ್ಸಿಲಿನ್‌ಗೆ ೧೫ ಅಭ್ಯರ್ಥಿಗಳನ್ನು ಆಯ್ಕೆಗೊಳಿಸುವ ಅಧಿಕಾರ ದೊರಕಿದೆ. ರಾಜ್ಯ ಸಂವಿಧಾನದಂತೆ ಸ್ಥಾಪನೆಗೊಳ್ಳುವ ಲೆಜಿಸ್ಲೆಟಿವ್ ಅಸೆಂಬ್ಲಿಯಲ್ಲಿ ಒಟ್ಟು ೧೭೫ ಸಭಾಸದರು ಇರುತ್ತಾರೆ. ಅವರಿಗೆ ಹೋಲಿಸಿದರೆ ನಮ್ಮದು ಕಡಿಮೆ ಮತ್ತು ಅದೂಸಹ ಒಗ್ಗಟ್ಟಾಗಿರದಿದ್ದರೆ ನಮ್ಮ ಯಾವುದೇ ಹಿತ ಕಾಪಾಡಿಕೊಳ್ಳುವುದು ಸಾಧ್ಯವಿಲ್ಲ. ಎಲ್ಲರೂ ಐಕ್ಯಮತದಿಂದ ಇರಬೇಕಾದರೆ ಯಾವುದಾದರು ಪಕ್ಷದ ಜೊತೆಗೆ ಸಂಬಂಧಿಸಿರಬೇಕಾಗುತ್ತದೆ. ನಿಮ್ಮ ಜಿಲ್ಲೆಯಿಂದ ನಾನು ನನ್ನ ಪಕ್ಷದ ವತಿಯಿಂದ ಶ್ರೀ ಜಾಧವ ಅವರನ್ನು ಆರಿಸಿರುವೆ. ಅವರನ್ನು ವಿರೋಧಿಸುವ ಶ್ರೀ ಮೇಢೆ, ಬಿರ್ಹಾಡೆಯವರ ಯೋಗ್ಯತೆ ತಮಗೆ ಗೊತ್ತಿದೆ. ಜಾಧವರು ಒಂದು ವೇಳೆ ನಿಮ್ಮ ಇಚ್ಛಾನುಸಾರ ನಡೆದುಕೊಳ್ಳದಿದ್ದರೆ ಅದರಹೊಣೆ ನಾನು ಹೊರುತ್ತೇನೆ. ಆದರೆ ಶ್ರೀ ಮೇಢೆಯವರ ಬಾಬತ್ತಿನಲ್ಲಿ ನೀವು ಯಾರನ್ನು ಹೊಣೆಯಾಗಿಸುತ್ತಿರಿ? ಎರಡನೆಯ ವಿಚಾರವೆಂದರೆ ಕಾನೂನು ಕೌನ್ಸಿಲ್‌ನಲ್ಲಿ ಎಲ್ಲ ಕಾರ್ಯಚಟುವಟಿಕೆಗಳು ಇಂಗ್ಲೀಷ್‌ನಲ್ಲಿ ನಡೆಯುತ್ತವೆ. ಆದ್ದರಿಂದ ನಿಮ್ಮ ನಿವೇದನೆಗಳನ್ನು ಮಂಡಿಸಲು ಉತ್ತಮ ಇಂಗ್ಲೀಷ್ ಭಾಷೆ ಬಲ್ಲವ ಇರಬೇಕು. ಅಂಥ ವ್ಯಕ್ತಿಯೆಂದರೆ ಜಾಧವ ಅವರು. ಶ್ರೀ ಜಾಧವರು ನನ್ನ ಸಂಬಂಧಿಕರಲ್ಲ ಮತ್ತು ಇತರ ಅಭ್ಯರ್ಥಿಗಳು ನನ್ನ ಶತ್ರುಗಳಲ್ಲ. ಆದರೆ ಆಯಾ ಕಾರ್ಯಕ್ರಿಯೆಗೆ ವ್ಯಕ್ತಿಗಳನ್ನು ನೇಮಿಸುವುದು ನನ್ನ ಕರ್ತವ್ಯವಾಗಿದೆ. ನಿಮಗೆ ಈ ಹಕ್ಕು ದೊರೆಯಬಾರದೆಂದು ಮಹಾತ್ಮಾ ಗಾಂಧಿಯಂಥವರು ಪ್ರಾಣಾಂತಿಕ ಉಪವಾಸ ಕೈಗೊಂಡಿದ್ದರು. ಆದರೆ ಅದನ್ನು ಕಡೆಗಣಿಸಿ ಈ ಹಕ್ಕನ್ನು ನಾವು ಪಡೆದಿದ್ದೇವೆ. ಈಗದರ ಬಳಕೆ ನಿಮ್ಮ ಸ್ವತ್ತಾಗಿದೆ. ನಿಮ್ಮನ್ನು ಹರಕೆಯ ಕುರಿಯಾಗಿಸಲು ಜನರು ಬೋರ್ಡಿಂಗ್ ತೆರೆಯುತ್ತಾರೆ. ಚಹಾಪಾನ ಮಾಡುತ್ತಾರೆ. ಆದರೆ ಅದಕ್ಕೆಲ್ಲ ಕಡಿಮೆ ಆಯಸ್ಸು. ಅದರಿಂದ ನಮ್ಮ ಉದ್ಧಾರ ಸಾಧ್ಯವಿಲ್ಲ. ನಾವಿನ್ನೂ ಬಹಳಷ್ಟು ಗಳಿಸುವುದಿದೆ, ಅದಕ್ಕಾಗಿ ತೀರ ಎಚ್ಚರದಿಂದ ವರ್ತಿಸಬೇಕಿದೆ. ಶ್ರೀ ಮೇಢೆ ಅವರಿಗೆ ಸಹಾಯ ಮಾಡುವ ಕೆಲವು ಮಾಸ್ತರರು ಇದ್ದಾರೆಂದು ಕೇಳಿದ್ದೇನೆ. ಆದರೆ ಯಾಕೆ ನೆರವಿಗೆ

---

ಜನತಾ: ೬ ಫೆಬ್ರುವರಿ ೧೯೩೭.

ಧಾವಿಸಿದ್ದಾರೆ ಅರ್ಥವಾಗುತ್ತಿಲ್ಲ. ಆದರೆ ಒಂದು ಕಾರಣ ಎದ್ದುಕಾಣುತ್ತಿದೆ. ಅದೇನೆಂದರೆ ಮೇಢೆಯವರು ಸ್ಕೂಲ್‌ಬೋರ್ಡಿನ ಮೆಂಬರ್ ಆಗಿರುವರು. ಅವರಪಕ್ಷ ಬಿಟ್ಟರೆ ತಮ್ಮನ್ನು ಟ್ರಾನ್ಸ್‌ಫರ್ ಮಾಡಿಯಾರು ಎಂಬ ಹೆದರಿಕೆ. ಆದರೆ ನಾನು ಆ ಶಿಕ್ಷಕರಿಗೆ ತಿಳಿಯ ಬಯಸುವುದಿಷ್ಟೇ, ಮೇಢೆಯವರು ಖಾಯಮ್ಮಾಗಿ ಕುರ್ಚಿಯಲ್ಲಿರುವುದಿಲ್ಲ. ಈ ವರ್ಷವಿದ್ದರೆ ಮುಂದಿನ ವರ್ಷವಿಲ್ಲ. ತಿಳಿಯಿರಿ, ಮುಂದೆ ಶ್ರೀ ಜಾಧವ ಸ್ಕೂಲ್‌ಬೋರ್ಡಿಗೆ ಆಯ್ಕೆಗೊಂಡರೆ ಈ ಮಾಸ್ತರರು ಯಾವ ಮುಖವನ್ನು ನೋಡುವರು? ನಾನು ಹೇಳುವುದಿಷ್ಟೇ, ನಾನು ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ, ನೀವು ನಿಮ್ಮ ಕರ್ತವ್ಯ ನಿರ್ವಹಿಸುವುದು ಉಳಿದಿದೆ. ಯಾರದೇ ಪೊಳ್ಳುಮಾತುಗಳಿಗೆ ಬಲಿಯಾಗದೆ ತೀರ ಎಚ್ಚರದಿಂದ ವರ್ತಿಸಬೇಕಿದೆ.

ಶ್ರೀ ಜಾಧವರ ಹತ್ತಿರ ವಾಹನಗಳಿಲ್ಲ, ಹಣವಿಲ್ಲ. ನೀವು ಮನೆಯ ರೊಟ್ಟಿಬುತ್ತಿ ಕಟ್ಟಿಕೊಂಡು ಪೋಲೀಸ್ ಸ್ಟೇಷನ್‌ಗೆ ಹೋಗಬೇಕು. ಈ ದೇಶದಲ್ಲಿ ಮತನೀಡುವುದೆಂದರೆ ಉಮೇದುವಾರುಗಳ ಮೇಲೆ ಉಪಕಾರ ಮಾಡುತ್ತಿದ್ದೇವೆಯೇನೋ ಎಂಬ ತಿಳುವಳಿಕೆಯಿದೆ. ಆದರೆ ಇದು ನಿಜವಲ್ಲ. ಆಯ್ದ ಅಭ್ಯರ್ಥಿ ಯಾರಿಗಾಗಿ ಹೋಗುತ್ತಾನೆ ಎಂಬುದನ್ನು ಅರಿಯಬೇಕು. ಆತ ನಿಮ್ಮ ನಿವೇದನೆಯನ್ನು ಹೇಳುವುದಕ್ಕೆ ಮತ್ತು ಪರಿಹಾರವನ್ನು ಹೇಗೆ ಕಂಡುಕೊಳ್ಳಬೇಕೆಂಬುದರ ಕಾನೂನು ರಚಿಸುವುದಕ್ಕೆಂದು ಆಯ್ಕೆಗೊಂಡು ಹೋಗುತ್ತಾನೆ. ನಮಗೇನಾದರು ದೊರೆಯುವುದೇ ಇದ್ದರೆ ಅದು ಕಾನೂನಿನಡಿಯಲ್ಲಿ ದೊರೆಯುವುದು, ಇದನ್ನು ಲಕ್ಷ್ಯದಲ್ಲಿಟ್ಟು ನೀವು ಶ್ರೀಜಾಧವ ಅವರಿಗೆ ತಮ್ಮೆಲ್ಲ ಮತಗಳನ್ನು ನೀಡಿ ಆರಿಸಿ ತರಬೇಕು. ಹೀಗೆ ವಿನಂತಿಸಿಕೊಂಡು ತಮ್ಮ ಭಾಷಣ ಮುಗಿಸಿದರು. ಆಮೇಲೆ ಎಲ್ಲರೂ ಜಾಧವರಿಗೆಯೆ ಮತ ನೀಡುವುದಾಗಿ ಬಹಿರಂಗ ಘೋಷಣೆ ಹಾಕಿದರು.

## ೧೦೧.

# ಕೇವಲ ಚುನಾವಣೆಯಲ್ಲಿ ಗೆದ್ದಮಾತ್ರಕ್ಕೆ ಚಳುವಳಿಯ ಕಾರ್ಯಮುಗಿಯಿತು ಎಂದು ತಿಳಿಯಬೇಡಿರಿ

"ಡಾ. ಬಾಬಾಸಾಹೇಬ ಅಂಬೇಡ್ಕರರು ಸ್ಥಾಪಿಸಿದ ಸ್ವತಂತ್ರ ಮಜೂರ ಪಕ್ಷದಿಂದ ಮುಂಬಯಿ ಪ್ರಾಂತ ಲೆಜಿಸ್ಲೆಟಿವ್ ಅಸೆಂಬ್ಲಿಯಲ್ಲಿ ವಿವಿಧ ಜಿಲ್ಲೆಯ ವಿಭಾಗಗಳಿಂದ ಯಾವ ಸ್ಪೃಶ್ಯ ಅಸ್ಪೃಶ್ಯ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದರೋ ಅವರಲ್ಲಿ ಮೂರ್‍ನಾಲ್ಕು ಅಭ್ಯರ್ಥಿಗಳ ಸೋಲನ್ನು ಹೊರತುಪಡಿಸಿ ಬಹುತೇಕ ಎಲ್ಲ ಅಭ್ಯರ್ಥಿಗಳು ಯಶಸ್ವಿಯಾದರು. ಮುಂಬಯಿ ನಗರ ಮತ್ತು ಉಪನಗರದ ವಿಭಾಗದ ಚುನಾವಣೆಯಲ್ಲಿ ದೊಡ್ಡ ಸ್ಪರ್ಧೆಯಿತ್ತು. ಈ ವಿಭಾಗದಿಂದ ಸ್ವತಂತ್ರ ಮಜೂರ ಪಕ್ಷದಿಂದ ಕೇವಲ ಇಬ್ಬರೇ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಅವರಲ್ಲಿ ಈ ಹೊಸಪಕ್ಷದ ಮುಂದಾಳು ಡಾ. ಬಾಬಾಸಾಹೇಬ ಅಂಬೇಡ್ಕರರು ಕಾಂಗ್ರೆಸ್ಸಿನ ದಕ್ಷತೆಯ ವಿರೋಧವನ್ನು ಧೈರ್ಯದಿಂದ ಮೆಟ್ಟಿ ವಿಜಯಿಯಾದರು. ಇದಲ್ಲದೆ ವಿಜಾಪುರ, ನಾಶಿಕ, ಪುಣೆ, ಸಾತಾರಾ, ಬೆಳಗಾವಿ, ಅಹಮದನಗರ, ಪೂರ್ವಖಾನದೇಶ ಠಾಣೆ, ರತ್ನಾಗಿರಿ, ಸೊಲ್ಲಾಪುರ ಜಿಲ್ಲೆಯಿಂದ ತಮ್ಮಪಕ್ಷದ ಮೂರುಅಭ್ಯರ್ಥಿಗಳು ಬಹುಮತದಿಂದ ಆಯ್ಕೆಗೊಂಡಿದ್ದಾರೆ. ರತ್ನಾಗಿರಿ ಜಿಲ್ಲೆಯಿಂದ ತಮ್ಮಪಕ್ಷದ ಮೂರು ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಅವರಲ್ಲಿ ಈ ಮೂವರೂ ಉಮೇದವಾರರು ಆರಿಸಿ ಬಂದಿದ್ದಾರೆ. ಭಾಯಿ ಚಿತ್ರೆ, ಶ್ರೀ ಶಾಮರಾವ ಪರುಳೇಕರ ಮತ್ತು ಭಾವುಸಾಹೇಬ ಗಡಕರಿಯವರ ಜಯದಿಂದ ಸ್ವತಂತ್ರ ಮಜೂರ ಪಕ್ಷದ ಬಲ ಅಧಿಕವಾಗಿದೆ.

| **ಯಶಸ್ವಿ ಅಭ್ಯರ್ಥಿಗಳ ಹೆಸರುಗಳು** | **ದೊರೆತ ಮತಗಳು** |
|---|---|
| ಮುಂಬಯಿ ಇ ಮತ್ತು ಎಫ್ ವಾರ್ಡ್– | |
| ಡಾ. ಬಿ.ಆರ್. ಅಂಬೇಡ್ಕರ | ೧೩,೨೪೫ |
| ಪುಣೆ ಪಶ್ಚಿಮ ವಿಭಾಗ– | |
| ಶ್ರೀ ಆರ್. ಆರ್. ಭೋಳೆ | ೧೨,೧೧೧ |
| ಸಾತಾರಾ ಉತ್ತರ ಭಾಗ– | |
| ಶ್ರೀ ಖಂಡೇರಾವ ಸಖಾರಾಮ ಸಾವಂತ | ೬,೭೩೬ |
| ಪುಣೆ ಪೂರ್ವ ಭಾಗ– | |
| ಶ್ರೀ ವಿನಾಯಕರಾವ ಆ. ಗಡಕರಿ | ೮,೨೬೭ |

| | |
|---|---|
| ಠಾಣೆ ದಕ್ಷಿಣ ವಿಭಾಗ– | |
| ಶ್ರೀ ರಾಮಕೃಷ್ಣ ಗಂಗಾರಾಮ ಭಾತನಕರ | ೪,೨೩೩ |
| ರತ್ನಾಗಿರಿ ಉತ್ತರ ಭಾಗ– | |
| ಶ್ರೀ ಅನಂತರಾವ ವಿ. ಚಿತ್ರೆ | ೯,೨೬೮ |
| ಶ್ರೀ ಗಂಗಾರಾಮ ರಾ. ಘಾಟಗೆ | ೫,೫೨೩ |
| ರತ್ನಾಗಿರಿ ದಕ್ಷಿಣ ಭಾಗ– | |
| ಶ್ರೀ ಶಾಮರಾವ ವಿಷ್ಣು ಪರುಳೇಕರ | ೭,೫೮೯ |
| ಅಹಮದನಗರ ದಕ್ಷಿಣ ಭಾಗ– | |
| ಶ್ರೀ ಪ್ರಭಾಕರ ಜನಾರ್ದನ ರೋಹಮ | ೮,೯೮೫ |
| ಸೊಲ್ಲಾಪುರ ಉತ್ತರ ಭಾಗ– | |
| ಶ್ರೀ ಜಿವಾಪ್ಪಾ ಸುಭಾನ ಐದಾಳೆ | ೭,೬೬೨ |
| ಪೂರ್ವ ಖಾನದೇಶ ಪೂರ್ವ ಭಾಗ– | |
| ಶ್ರೀದೌಲತರಾವ ಗುಲಾಜಿ ಜಾಧವ | ೯,೫೧೯ |
| ನಾಶಿಕ ಪಶ್ಚಿಮ ಭಾಗ– | |
| ಶ್ರೀ ಭಾವುರಾವ ಕೃಷ್ಣರಾವ ಗಾಯಕವಾಡ | ೧೬,೬೦೫ |
| ಬೆಳಗಾವ ಉತ್ತರ ಭಾಗ– | |
| ಶ್ರೀ ಬಳವಂತ ಹನುಮಂತ ವರಾಳೆ | ೨೧,೩೨೨ |
| ಠಾಣೆ ಜಿಲ್ಲಾ ಉತ್ತರ ವಿಭಾಗ– | |
| ಶ್ರೀ ದತ್ತಾತ್ರಯ ವಾಮನ ರಾವುತ | ೧೦,೧೨೫ |

ಡಾ. ಬಾಬಾಸಾಹೇಬ ಅಂಬೇಡ್ಕರ ಮತ್ತು ಅವರ ಅಸ್ಪೃಶ್ಯ ಸಮಾಜದ ಅಭ್ಯರ್ಥಿ ಮತ್ತು ಇತರ ಸ್ಪೃಶ್ಯವರ್ಗದ ಅಭ್ಯರ್ಥಿಗಳು ಆಯ್ಕೆಗೊಳ್ಳಬಾರದೆಂದು ಕಾಂಗ್ರೆಸ್ ಮತ್ತು ಇತರೆ ಪಕ್ಷಗಳು ಅದೆಷ್ಟು ವಿರೋಧದ ವಾತಾವರಣ ಸೃಷ್ಟಿಸಿದ್ದರೆಂದರೆ, ಅದಕ್ಕೆ ಹಣದ ಬಲವನ್ನು ಸೇರಿಸಿದರು. ಡಾ. ಬಾಬಾಸಾಹೇಬರ ಬಗ್ಗೆ ಖೊಟ್ಟಿರೂಪದ ಸುದ್ದಿ ಪ್ರಕಟಿಸಿ ಅವರ ಉಜ್ವಲ ಚರಿತ್ರೆಗೆ ಕಪ್ಪುಮಸಿ ಬಳೆಯುವ ತೀವ್ರವಾದ ಪ್ರಯತ್ನ ಮಾಡಿದರೂ ಅವೆಲ್ಲ ವೈರುಧ್ಯಗಳನ್ನು ಎದುರಿಸಿ ಡಾಕ್ಟರ್‌ಸಾಹೇಬರು ವಿಜಯಿಗಳಾದರು.

ಈ ಮಾತು ಅಪೂರ್ವವಲ್ಲದೆ ಇನ್ನೇನು?"[೧]

ಸ್ವತಂತ್ರ ಮಜೂರ ಪಕ್ಷದಿಂದ ಕಾನೂನು ಮಂಡಳಿಗೆ ಆಯ್ಕೆಗೊಂಡ ಪ್ರತಿನಿಧಿಗಳನ್ನು ಅಭಿನಂದಿಸನಲು ರವಿವಾರ ದಿ: ೩೦ ಮೆ ೧೯೩೭ರಂದು ಸಂಜೆ ಪರಳದ ಕಾಮಗಾರ ಮೈದಾನದಲ್ಲಿ ಸಭೆ ನಡೆದಿತ್ತು. ಪಕ್ಷದ ವತಿಯಿಂದ ನಡೆದ ಸಭೆಯ ಅಧ್ಯಕ್ಷತೆಯನ್ನು ಡಾ. ಪಿ.ಜೆ. ಸೋಳಂಕಿ, ಜೆ.ಪಿ. ಅವರು ವಹಿಸಿದ್ದರು.

ಕಾನೂನು ಮಂಡಳಿಯ ಪ್ರತಿನಿಧಿಗಳು ಮತ್ತು ಅತಿಥಿಗಳನ್ನು ಕುಳ್ಳಿರಿಸಲು ಎತ್ತರದ ಮೆತ್ತನೆಯ ಕುರ್ಚಿಗಳನ್ನು ಮತ್ತು ಮಖಮಲ್ಲುಹಾಸಿದ ಸೋಫಾ ಇರಿಸಿದ್ದರು. ಮೈದಾನದಲ್ಲಿ ಸ್ಪೀಕರ್‌ಗಳನ್ನು ಹಚ್ಚಿದ್ದರು. ಅಲ್ಲಲ್ಲಿ ಕಿಟ್ಸನ್ ಲೈಟ್ಸ್‌ನ ಬೆಳಕುಇತ್ತು. ಸಭೆಗೆ ೧೫ಸಾವಿರ ಜನಸಮುದಾಯ ಸೇರಿತ್ತು. ಅದರಲ್ಲಿ ಸಾವಿರದ ಹನ್ನೆರಡುನೂರು ಮಹಿಳೆಯರಿದ್ದರು.

ಸಭೆ ಅಚ್ಚುಕಟ್ಟಾಗಿ ನಡೆಯಲು ಸಮತಾ ಸೈನಿಕದಳದ ಅನೇಕ ತಂಡಗಳನ್ನು ಕರೆಯಿಸಲಾಗಿತ್ತು. ಸಭೆಯ ಶಿಸ್ತು ಉತ್ತಮವಾಗಿತ್ತು. ಉಚ್ಚ ಆಸನಗಳಲ್ಲಿ ಗೆದ್ದ ಪ್ರತಿನಿಧಿಗಳಲ್ಲಿ ಶ್ರೀ ಅ.ವಿ. ಚಿತ್ರೆ, ಎಸ್.ವಿ. ಪರುಳೇಕರ, ಆರ್.ಜಿ. ಭಾತನಕರ, ಭಾವುರಾವ ಗಾಯಕವಾಡ, ಡಿ.ಜಿ. ಜಾಧವ, ಜಿ.ಆರ್. ಫಾಂಗುರ್ಡೆ, ಪಿ.ಜೆ. ರೋಹಮ, ಬಿ.ಎಸ್. ವರಾಳೆ ಮತ್ತು ಜೆ.ಎಸ್. ಐದಾಳೆಯವರಿದ್ದರು. ಅದರಂತೆ ಖಾಲಸಾ ಕಾಲೇಜಿನ ಪ್ರಾಚಾರ್ಯ ಕಾಶ್ಮಿರಾಸಿಂಗ, ಪ್ರೊ. ರಾಯ, ಶ್ರೀ ಸಮರ್ಥ, ಬಾರ್-ಅಟ್-ಲಾ, ಶ್ರೀ ಖಾಂಬೆ, ಶ್ರೀ ಡಿ.ವಿ. ಪ್ರಧಾನ, ಕಮಲಾಕಾಂತ ಚಿತ್ರೆ, ಕದ್ರೇಕರ, ಪ್ರಿನ್ಸಿಪಾಲ್ ದೊಂದೆ, ಶ್ರೀ ಕೇನಿ, ಜೆ.ಪಿ., ಬಾಪುಸಾಹೇಬ ಸದಸ್ತ್ರಬುದ್ಧೆ, ಮುಸಾಢಕರ ಬುವಾ, ಮಫಾಳೆ, ಆರ್.ಆರ್. ಪವಾರ, ಧೋ.ನಾ.ಪಗಾರೆ, ಕಾಳೋಖೆ, ಸುಭೇದಾರ ದೇವರುಖಕರ ಮುಂತಾದವರಿದ್ದರು. ಸರಿಯಾಗಿ ೭ಗಂಟೆಗೆ ನಿಯೋಜಿತ ಅಧ್ಯಕ್ಷ ಡಾ. ಸೋಳಂಕಿ, ಡಾ. ಅಂಬೇಡ್ಕರ ಮುಂತಾದವರು ಹಾಗೂ ಪ್ರತಿನಿಧಿಗಳು ವೇದಿಕೆಗೆ ಆಗಮಿಸಿದರು. ಸಮತಾ ಸೈನಿಕದಳದ ಸ್ವಯಂಸೇವಕರು ಗಾರ್ಡ್ ಆಫ್ ಆನರ್ ನೀಡಿ ಗೌರವಿಸಿದರು. ಎಲ್ಲರೂ ವೇದಿಕೆ ಅಲಂಕರಿಸಿದ ನಂತರ ಸಭೆ ಆರಂಭಗೊಂಡಿತು. ಶ್ರೀ ಚಾಂ.ನಾ. ಮೋಹಿತೆಯವರು ಅಧ್ಯಕ್ಷಸ್ಥಾನ ವಹಿಸಿಕೊಂಡರು. ನಂತರ ಅಧ್ಯಕ್ಷರ ಅನುಮತಿ ಮೇರೆಗೆ ಸುಭೇದಾರ ಸವಾದಕರ ಅವರು ಮುಂದಿನ ನಿರ್ಣಯವನ್ನು ಸಭೆಯೆದುರಿಗೆ ಇಟ್ಟರು. ಸ್ವತಂತ್ರ ಮಜೂರ ಪಕ್ಷದ ವತಿಯಿಂದ ಮುಂಬಯಿ ಲೆಜಿಸ್ಲೆಟಿವ್‌ಅಸೆಂಬ್ಲಿಗೆ ಆಯ್ಕೆಗೊಂಡ ಪ್ರತಿನಿಧಿಗಳಿಗೆ ಅಭಿನಂದಿಸುವ ನಿರ್ಣಯವನ್ನು ಮಂಡಿಸಲು ನನಗೆ ಅತೀವ ಅನಂದವಾಗುತ್ತಿದೆ. ಎಲ್ಲ ಸಭಾಸದಸ್ಯರನ್ನು ಸ್ವತಂತ್ರ ಮಜೂರ ಪಕ್ಷದ ನೇತೃತ್ವದಲ್ಲಿ ನಡೆದ ಈ ಬಹಿರಂಗ ಸಭೆಯು ಅಂತಃಕರಣ ಪೂರ್ವಕವಾಗಿ ಅಭಿನಂದಿಸುತ್ತದೆ.

ಮೇಲಿನ ನಿರ್ಣಯದ ಮೇಲೆ ಭಾಷಣ ಮಾಡಿದ ಸುಭೇದಾರ ಸವಾದಕರ ಅವರು, "ಸ್ವತಂತ್ರ ಮಜೂರ ಪಕ್ಷದಿಂದ ಆರಿಸಿಬಂದ ಪ್ರತಿನಿಧಿಗಳನ್ನು ಅಭಿನಂದಿಸುವ ನಿರ್ಣಯಮಂಡಿಸಲು ನನಗೆ ತುಂಬಾ ಸಂತೋಷವಾಗಿದೆ. ಅಸ್ಪೃಶ್ಯವರ್ಗದ ಹೋರಾಟವನ್ನು ಇಡೀ ಭಾರತದಲ್ಲಿ ಯಶಸ್ವಿಯಾಗಿ ನಡೆಸಿದ ಡಾ. ಬಾಬಾಸಾಹೇಬ ಅಂಬೇಡ್ಕರರು ರೈತ ಕೂಲಿಗಳ ಹಿತಕ್ಕಾಗಿ ಸ್ವತಂತ್ರ ಮಜೂರ ಪಕ್ಷವನ್ನು ಸ್ಥಾಪಿಸಿದರು. ಚುನಾವಣೆಯಲ್ಲಿ ನಮ್ಮನ್ನು ಸೋಲಿಸಲು ಕಾಂಗ್ರೆಸ್ಸು ಎಲ್ಲ ತರದ ಯತ್ನಗಳನ್ನು ಮಾಡಿತು. ಆದರೆ ಸೋಲುಣ್ಣಬೇಕಾಯಿತು. ನಮ್ಮ ಪಕ್ಷ ಜಯಗಳಿಸಿತು. ಆಯ್ಕೆಗೊಂಡ ನಮ್ಮೆಲ್ಲ ಪ್ರತಿನಿಧಿಗಳು ಮುಂಚೂಣಿಯ ವೀರರು. ಅವರು ತಮ್ಮ ಹೊಣೆಯನ್ನು ಚೆನ್ನಾಗಿ ಅರಿತು ನಡೆಯುವರೆಂಬ ವಿಶ್ವಾಸವಿದೆ.

---

೧ ಜನತಾ: ೨೬ ಫೆಬ್ರುವರಿ ೧೯೩೭.

ಇದರ ಬಗ್ಗೆ ಅನುಮಾನ ಬೇಡ."

ಈ ನಿರ್ಣಯಕ್ಕೆ ಶ್ರೀ. ಶಾ. ಅ. ಉಪಶಾಮ ಅವರು ಅನುಮೋದಿಸಿದರು. ಅವರು ಅನುಮೋದಿಸಿ ಭಾಷಣ ಮಾಡಿದರು. ಅಧ್ಯಕ್ಷರು ನಿರ್ಣಯವನ್ನು ಮತಕ್ಕೆ ಇಟ್ಟಾಗ ಚಪ್ಪಾಳೆಯ ಕರತಾಡನದೊಂದಿಗೆ ಮಂಜೂರಗೊಂಡಿತು. ಅನಂತರ ಯಶಸ್ಸು ಪಡೆದ ಸಭಾಸದಸ್ಯರಿಗೆ ಶ್ರೀ ರೇವಜಿಬುವಾ ಡೋಳಸ ಮತ್ತು ಶ್ರೀ ಸಂಭಾಜಿ ಗಾಯಕವಾಡ ಅವರು ಮಾಲಾರ್ಪಣೆ ಮಾಡಿದರು. ಪ್ರತಿಯಾಗಿ ಪ್ರತಿಯೊಬ್ಬ ಸಭಾಸದಸ್ಯರು ಅಭಿನಂದನೆಗೆ ಸೇರಿದ ಸಭಿಕರಿಗೆ ಕೃತಜ್ಞತೆ ಹೇಳಿದರು. ಅಧ್ಯಕ್ಷರು ಡಾ. ಬಾಬಾಸಾಹೇಬ ಅಂಬೇಡ್ಕರರಿಗೆ ಭಾಷಣ ಮಾಡಲು ಭಿನ್ನವಿಸಿದರು.

ಚಪ್ಪಾಳೆಗಳ ಸದ್ದು ಮೊಳಗಿತು. ಡಾ. ಬಾಬಾಸಾಹೇಬರು ಮಾತು ಆರಂಭಿಸಿದರು. ಅವರು ಹೇಳಿದರು–

ಪ್ರೀತಿಯ ಸೋದರ ಮತ್ತು ಸೋದರಿಯರೆ,

ಇಲ್ಲಿ ನನ್ನ ಸಂಗಡ ಸ್ವತಂತ್ರ ಮಜೂರಪಕ್ಷದ ಗೆಲುವುಕಂಡ ಎಲ್ಲ ಸಭಾಸದರಿದ್ದಾರೆ. ಅವರನ್ನು ಅಭಿನಂದಿಸಲಾಗಿದೆ. ಇಂಥ ಸಂದರ್ಭದಲ್ಲಿ ಭಾಷಣ ಮಾಡುವ ಜವಾಬುದಾರಿಯನ್ನು ನನ್ನ ಮೇಲೆ ಯಾಕೆ ಹಾಕಿದರು ತಿಳಿಯುತ್ತಿಲ್ಲ. ಆದರೂ ತಮ್ಮ ಇಚ್ಛೆಯಾನುಸಾರ ಮತ್ತು ಅದನ್ನು ಮನ್ನಿಸಿ ಎರಡು ಮಾತುಗಳನ್ನಾಡುತ್ತೇನೆ. ನಾನು ಸಾರ್ವಜನಿಕ ಬದುಕು ಪ್ರಾರಂಭಿಸಿದಾಗಿನಿಂದ ತೀರ ಕಳೆದ ವರ್ಷದ ಅಸ್ಪೃಶ್ಯರ ಚಳುವಳಿಯಲ್ಲಿ ಕಾರ್ಯನಿರ್ವಹಿಸುತ್ತ ಬಂದಿದ್ದೇನೆ. ಆದರೆ ಈಗ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಈ ಕಾರ್ಯಸ್ವರೂಪವನ್ನು ಬದಲಿಸಿರುವೆ. ಇನ್ನು ಮುಂದೆ ಧರ್ಮ ಮತ್ತು ಜಾತಿಗಳ ವಿಚಾರ ಮಾಡದೆ ಎಲ್ಲ ರೈತ ಕೂಲಿಗಳ ಪರವಾಗಿ ಅವರ ಹಿತಕ್ಕಾಗಿ ಕಾರ್ಯ ಮಾಡಲು ಆರಂಭಿಸಿದ್ದೇನೆ. ನಾನು ಸ್ಥಾಪಿಸಿದ ಸ್ವತಂತ್ರ ಮಜೂರಪಕ್ಷವೇ ನನ್ನ ಬದಲಾದ ಕಾರ್ಯಕ್ರಮದ ದ್ಯೋತಕವಾಗಿದೆ. ಕಳೆದ ಚುನಾವಣೆಯಲ್ಲಿ ಸ್ವತಂತ್ರ ಮಜೂರ ಪಕ್ಷವು ಅಪೇಕ್ಷಿತ ಯಶಸ್ಸನ್ನು ಸಾಧಿಸಿದೆ. ಇದು ಸತ್ಯವಾದರೂ ನಮ್ಮ ಇಬ್ಬರು ನಿಷ್ಠಾವಂತ ಕಾರ್ಯಕರ್ತರಾದ ಡಾ. ಸೋಳಂಕಿ ಮತ್ತು ಸುಭೇದಾರ ಸವಾದಕರ ಇವರು ಚುನಾವಣೆಯಲ್ಲಿ ಸೋತರು. ಇದಕ್ಕಾಗಿ ನನ್ನಂತೆ ಎಲ್ಲರಿಗೂ ನೋವಾಗಿದೆ. ಇದರಲ್ಲಿ ಎರಡು ಮಾತಿಲ್ಲ. ಹೀಗೆ ಸೋತರೂ ಇಂದಿನ ಅಭಿನಂದನೆ ಸಮಾರಂಭದಲ್ಲಿ ಅವರು ತುಂಬ ಖುಷಿಯಿಂದ ಪಾಲ್ಗೊಂಡಿದ್ದಾರೆ. ಇದರಿಂದ ಅವರ ದೊಡ್ಡ ಗುಣ ಎಂಥದು ಎಂಬುದು ವ್ಯಕ್ತವಾಗುತ್ತಿದೆ. ಡಾ. ಸೋಳಂಕಿಯವರಿಗೆ ಅಸೆಂಬ್ಲಿ ಚುನಾವಣೆಯಲ್ಲಿ ಸೋಲನುಭವವಾದರೂ ಲೆಜಿಸ್ಲೆಟಿವ್ ಕೌನ್ಸಿಲ್‌ಗೆ ಸರಕಾರ ಸದಸ್ಯರಾಗಿ ನೇಮಿಸುವ ಅವಕಾಶವಿದೆ. ಇದು ನನ್ನ ಇಚ್ಛೆಯೂ ಆಗಿದೆ.

ಲೆಜಿಸ್ಲೆಟಿವ್ ಅಸೆಂಬ್ಲಿಯ ಚುನಾವಣೆಯಲ್ಲಿ ಜಯಗಳಿಸಿದುದಕ್ಕೆ ಅಭಿನಂದನೆಗೆ ಪಾತ್ರವಾದ ಪಕ್ಷ ಅಂತೇನಾದರೂ ಇದ್ದರೆ ಅದು ಸ್ವತಂತ್ರ ಮಜೂರ ಪಕ್ಷವೇ ಹೌದು. ಕಾರಣ, ಸ್ವತಂತ್ರ ಮಜೂರ ಪಕ್ಷಕ್ಕೆ ಎದುರಾಳಿಗಳಾದ ಎಲ್ಲ ಪಕ್ಷಗಳು ನಮಗಿಂತ ಸಾಕಷ್ಟು ಪ್ರಬಲವಾದವು ಆಗಿದ್ದವು. ಅವು ಆರ್ಥಿಕ ಮತ್ತು ಸಂಘಟನೆಯ ದೃಷ್ಟಿಯಿಂದಲೂ ಅನುಕೂಲಕರವಾಗಿದ್ದವು. ಮುಂಬೈ ಇಲಾಖೆಯಲ್ಲಿ ಕಾಂಗ್ರೆಸ್, ಬ್ರಾಹ್ಮಣೇತರ, ಮುಸ್ಲಿಂ, ಕ್ರಿಶ್ಚಿಯನ್ ಮುಂತಾದ ಪಕ್ಷಗಳ ಅಭ್ಯರ್ಥಿಗಳು ಸ್ಪರ್ಧೆಗಿದ್ದರು. ಅವರಲ್ಲಿ ಮುಸ್ಲಿಮರು ಪ್ರತ್ಯೇಕತೆ ಮತ್ತು ವಿಂಗಡಣೆಯ ಮುಳ್ಳಿನ ಬೇಲಿಯನ್ನು ತಮ್ಮ ಸುತ್ತ ನಿರ್ಮಿಸಿಕೊಂಡಿದ್ದರು. ನಮ್ಮ ಮತ್ತು ಕಾಂಗ್ರೆಸ್ಸಿನ ಮೈದಾನ ಒಂದೇ ಆಗಿತ್ತು. ನಮ್ಮ ಸಂಗಡ ಬ್ರಾಹ್ಮಣೇತರ ಪಕ್ಷವೂ ಕೂಡ ಮೈದಾನಕ್ಕಿಳಿದಿತ್ತು. ಆದರೆ

ಸ್ವಂತಕ್ಕೆ ಹೋರಾಟಗಾರರು ಎಂದು ಕರೆಯಿಸಿಕೊಳ್ಳುವ ಬ್ರಾಹ್ಮಣೇತರ ಪಕ್ಷವನ್ನು ಕಾಂಗ್ರೆಸ್ ಹೇಗೆ ಧೂಳಿಪಟ ಮಾಡಿದರು ಎಂಬುದನ್ನು ಎಲ್ಲರೂ ಗಮನಿಸಿಯೇ ಇದೀರಿ. ಅದರಂತೆ ಇತರ ಪಕ್ಷಗಳದ್ದೂ ಸೋಲಾಯಿತು. ಆದರೆ ಕಾಂಗ್ರೆಸ್ ಜತೆಗೆ ನಡೆದ ಸಂಗ್ರಾಮದಲ್ಲಿ ಯಾವುದಾದರು ಒಂದು ಪಕ್ಷ ಅದು ಜಯಗಳಿಸಿದ್ದೆಂದರೆ ಅದು ಏಕೈಕ ಸ್ವತಂತ್ರ ಮಜೂರ ಪಕ್ಷವೇ ಸರಿ. ನಮ್ಮ ಬಳಿ ಹಣವಿರಲಿಲ್ಲ. ಸಂಘಟನೆಯಿಲ್ಲ. ಕೇವಲ ನಮ್ಮ ಜಿಗುಟುತನದ ಪ್ರಚಾರ ಕಾರ್ಯದ ಬಲದಿಂದಲೇ ನಮ್ಮ ೧೪ ವ್ಯಕ್ತಿಗಳು ಆರಿಸಿಬರಲು ಸಾಧ್ಯವಾಯಿತು. ಕಾಂಗ್ರೆಸ್‌ನಂತಹ ಬಲಿಷ್ಠ ಪಕ್ಷದ ಜೊತೆ ಹೋರಾಡಿ ಜಯಗಳಿಸಲು ಮತ್ತು ಪಕ್ಷ ಇಂದು ಅಭಿನಂದನೆ ಸಭೆ ನಡೆಸುವ ಹಕ್ಕು ಪಡೆವಷ್ಟು ದಾರಿಕ್ರಮಿಸಿತು. ಚುನಾವಣೆಯಲ್ಲಿ ಇತರ ಪಕ್ಷಗಳದ್ದು ಏನು ದಯನೀಯ ಸ್ಥಿತಿ ಉಂಟಾಯಿತೋ ಅದಕ್ಕೆ ಹೋಲಿಸಿದರೆ ಸ್ವತಂತ್ರ ಮಜೂರ ಪಕ್ಷವು ಗಳಿಸಿದ ವಿಜಯವು ಅಪೂರ್ವವಾಗಿದೆ. ಈ ಮಾತನ್ನು ವೈರಿಗಳೂ ಸಹ ಒಪ್ಪುವರು.

ನಮ್ಮ ಇಲಾಖೆಯಂತೆ ಬೇರೆ ಪ್ರಾಂತದ ಅಸೆಂಬ್ಲಿಯಲ್ಲೂ ಅಸ್ಪೃಶ್ಯರಿಗೆ ಸ್ಥಾನ ಮೀಸಲಿಡಲಾಗಿದೆ. ಆದರೆ ಮುಂಬೈ ಹೊರತುಪಡಿಸಿ ಇತರ ಪ್ರಾಂತ್ಯದಲ್ಲಿ ಕಾಂಗ್ರೆಸ್ ಪಕ್ಷವು ಅಸ್ಪೃಶ್ಯ ವರ್ಗದ ಅಭ್ಯರ್ಥಿಗಳ ಚುನಾವಣೆಯಲ್ಲಿ ಅಕ್ಷಮ್ಯ ಹಸ್ತಕ್ಷೇಪ ಮಾಡಿತು. ಮುಂಬೈ ಪ್ರಾಂತದಲ್ಲಿ ಮಾತ್ರ ನಾವು ನಮ್ಮ ಹೋರಾಟವನ್ನು ವೀರತ್ವದಿಂದ ನಡೆಸಿದೆವು. ಕುಸ್ತಿಗಾಗಿ ಒಮ್ಮೆ ಬೈಠಕ್ ಹೊಡೆದು ಡಾವಪೇಚಿಗಾಗಿ ಸಿದ್ಧಗೊಂಡ ಪೈಲವಾನನೇ ಗೆಲ್ಲಲು ಸಾಧ್ಯ, ಇದರಲ್ಲಿ ಎರಡು ಮಾತಿಲ್ಲ. ಮಹಾಭಾರತದಲ್ಲಿ ಹೇಳಲಾದ ಮಾತೆಂದರೆ, ಧರ್ಮಯುದ್ಧ ಮಾಡಿ ನೀತಿಯಿಂದ ಗಳಿಸಿದ ವಿಜಯವು ಶ್ರೇಷ್ಠತೆ ಮತ್ತು ಆನಂದವು ಶ್ರೇಷ್ಠ ರೂಪದ್ದಿರುತ್ತದೆ ಎಂಬುದು. ದುರ್ದೈವದಿಂದ ಕಳೆದ ಚುನಾವಣೆಯ ಯುದ್ಧದಲ್ಲಿ ಕಾಂಗ್ರೆಸ್ಸು ಧರ್ಮನೀತಿಯನ್ನು ಪಾಲಿಸಿಲ್ಲ. ಪ್ರಮುಖ ಉದಾಹರಣೆ ನೀಡಲು ಸಾಕಷ್ಟಿವೆ. ಕೇವಲ ಒಂದೇ ಉದಾಹರಣೆಯನ್ನು ಉಲ್ಲೇಖಿಸುತ್ತೇನೆ. ಅಲಹಾಬಾದನಲ್ಲಿ ಕಾಂಗ್ರೆಸ್ ಆಧಿಪತ್ಯದ ಪ್ರಾಂತದಲ್ಲಿ ಅದೇ ಸರ್ವಾಧಿಕಾರಿಯೆಂದು ಕರೆಯಿಸಿಕೊಳ್ಳುವ ವ್ಯಕ್ತಿಯಿಂದ ಕಳೆದ ಚುನಾವಣೆಯಲ್ಲಿ ನಡೆದ ಆಚರಣೆಯು ತೀರ ಹೀನವೃತ್ತಿಯದಾಗಿರಲಿಲ್ಲ ಎಂದು ಯಾರು ಹೇಳಲು ಸಾಧ್ಯ? ಅಲಹಾಬಾದ ಪಟ್ಟಣದಲ್ಲಿ ಅಸ್ಪೃಶ್ಯರಿಗಾಗಿ ಒಂದೇ ಸ್ಥಾನವನ್ನು ಮೀಸಲಿರಿಸಿದ್ದಾರೆ. ಇಲ್ಲಿ ಇಬ್ಬರು ಸ್ಪರ್ಧಿಸಿದ್ದರು. ಅವರಲ್ಲಿ ಅಸ್ಪೃಶ್ಯ ಸಮಾಜಕ್ಕಾಗಿ ಯಾರು ಅನೇಕ ವರ್ಷಗಳಿಂದ ತನುಮನಧನದಿಂದ ಶ್ರಮಿಸಿದ್ದಾರೋ ಅಂಥ ಯೋಗ್ಯ, ಅನುಭವಿ ಮತ್ತು ಹಳೆಯ ಮುಂದಾಳು ನಿಂತಿದ್ದರು. ಅವರ ವಿರುದ್ಧ ಕಾಂಗ್ರೆಸ್ಸಿನ ಪ್ರಾಣಜೀವಾಳವೆನಿಸಿದ ಪಂಡಿತ ಜವಾಹರಲಾಲನೆಹರು ಅವರು ತಮ್ಮ ಹರಿ ಎಂಬ ಹೆಸರಿನ ಕೈಗೊಂಬೆ ತರದ ನೌಕರನನ್ನು ಸ್ಪರ್ಧೆಗೆ ಇಳಿಸಿದ್ದರು. ಅಸ್ಪೃಶ್ಯರಿಗಾಗಿ ಶ್ರಮಿಸಿದ ಆ ತೂಕದ ವ್ಯಕ್ತಿಯೆದುರು ಈ ಹರಿಯೆಂಬುವವನ ಯೋಗ್ಯತೆಯನ್ನು ಯಾರುಬೇಕಾದರು ಅಳೆಯಬಲ್ಲರು. ಕಾಂಗ್ರೆಸ್ಸಿನ ಪುಢಾರಿಗಳಿಗೆ ಅಸ್ಪೃಶ್ಯರ ಈ ಮುಂದಾಳುವಿಗಿಂತ ಹಿರಿಯ ಕರ್ತವ್ಯವು ಶ್ರೇಷ್ಠವೆನಿಸಿತು. ಆದರೆ ನಮಗೆ ಇಂಥ ವಿಷಯಗಳ ಕುರಿತು ಯೋಚಿಸುವ ಅಗತ್ಯವಿಲ್ಲ. ಒಮ್ಮೆ ರಣರಂಗಕ್ಕಿಳಿದಾಗ ರೋಧಿಸುತ್ತ ನಿಂತರೆ ನಡೆದೀತೆ! ಸೂರತನಲ್ಲಿ ಡಾ. ಸೋಳಂಕಿಯವರ ಉಮೇದುವಾರಿಕೆಯೆದುರು ಅದೇ ರೀತಿಯ ಪ್ರಸಂಗ ನಡೆಯಿತು. ಡಾ. ಸೋಳಂಕಿಯವರ ವಿರುದ್ಧ ಕಾಂಗ್ರೆಸ್ಸು ಒಬ್ಬ ಚಪರಾಶಿಯನ್ನು ಸ್ಪರ್ಧೆಗೆ ಇಳಿಸಿತು. ಇದೆಲ್ಲ ವಿಷಯಗಳ ಹಿನ್ನೆಲೆಯಲ್ಲಿ ಕಳೆದ ಚುನಾವಣೆಯ ನಮ್ಮ ಗೆಲುವು ಸಾಮಾನ್ಯ ದರ್ಜೆಯದಲ್ಲ. ಮೊಸಳೆಯ ಅಪ್ಪುಗೆಯಿಂದ ಬಿಡಿಸಿತಂದ ದಿವ್ಯಮಣಿಯಂತಿದೆ. ಇದರರ್ಥ ಯಾವ ಗೆಲುವನ್ನು ನಾವು ಸಾಧಿಸಿದ್ದೇವೆಯೋ ಅದು ಕೊನೆಯದಲ್ಲ. ಕೇವಲ ಚುನಾವಣೆಯಲ್ಲಿ ಗೆದ್ದ ಮಾತ್ರಕ್ಕೆ ನಮ್ಮ ಚಳುವಳಿಯ ಕಾರ್ಯ ನಿಂತಿತೆಂದು ತಿಳಿಯಬೇಡಿರಿ. ಹೊಸ ಕಾನೂನುಮಂಡಳಿಯ ಅವಧಿ ಐದುವರ್ಷಕ್ಕೆ ಇದ್ದರೂ ಅದನ್ನು ಮೊಟಕುಗೊಳಿಸುವ

ಅಧಿಕಾರ ಗವರ್ನರ್ ಅವರಿಗಿದೆ. ಇಂಥ ಪ್ರಸಂಗ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ಮರುಚುನಾವಣೆಗಾಗಿ ನಮ್ಮಪಕ್ಷವು ಸರ್ವಪರಿಯ ಸಿದ್ಧತೆ ಮಾಡಿಟ್ಟುಕೊಳ್ಳಬೇಕಾಗುತ್ತದೆ. ಸೂಚನೆ ದೊರೆತ ತಕ್ಷಣ ಕೇವಲ ಐದೇ ನಿಮಿಷದಲ್ಲಿ ಚುನಾವಣೆಯ ಹೊಸಯುದ್ಧಕ್ಕೆ ಸಿದ್ಧರಾಗಬೇಕಿದೆ. ಸ್ವತಂತ್ರ ಮಜೂರ ಪಕ್ಷವು ಇಂದು ಬಹುಜನ ಸಮಾಜದೊಳಗೆ ಏನೊಂದು ಆತ್ಮವಿಶ್ವಾಸವನ್ನು, ಜಾಗೃತಿ ನಿರ್ಮಾಣವನ್ನು ಬಿತ್ತಿದೆಯೋ ಅದನ್ನು ಅಖಂಡವಾಗಿ ಕಾಯ್ದಿಟ್ಟುಕೊಳ್ಳುವ ಯೋಗ್ಯ ಎಚ್ಚರವನ್ನು ಎಲ್ಲರೂ ಇಟ್ಟುಕೊಳ್ಳುವುದರ ಅಗತ್ಯವಿದೆ. ಪಕ್ಷ ಸಂಘಟನೆಯನ್ನು ಬಲಗೊಳಿಸುವ ದೃಷ್ಟಿಯಿಂದ ಅಲ್ಲಲ್ಲಿ ಪಕ್ಷದ ಶಾಖೆಗಳನ್ನು ಸ್ಥಾಪಿಸಬೇಕಿದೆ. ಕಾಂಗ್ರೆಸ್ ಪಕ್ಷದ ಜೊತೆಗೆ ಮತ್ತೆ ಹೋರಾಡುವ ಪ್ರಸಂಗ ಎದುರಾದರೆ ತಮ್ಮ ಪಕ್ಷದ ಶಕ್ತಿ ಮೊದಲಿಗಿಂತಲೂ ಹೆಚ್ಚಾಗಿದೆ. ಈ ಮಾತನ್ನು ಪ್ರಪಂಚದ ನಿದರ್ಶನಕ್ಕೆ ತೋರಿಸಬೇಕಿದೆ.

ಕೊನೆಗೆ ಸದ್ಯದ ಪರಿಸ್ಥಿತಿ ಕುರಿತು ಎರಡು ಮಾತು ಹೇಳುವುದು ಅಗತ್ಯವಿದೆ. ನಿಮಗೆ ತಿಳಿದಿರುವಂತೆ ಇಂದು ರಾಜಕೀಯ ಕ್ಷೇತ್ರದಲ್ಲಿ ಎಲ್ಲೆಡೆ ತಣ್ಣಗಿನ ವಾತಾವರಣ ನಿರ್ಮಾಣಗೊಂಡಿದೆ. ಎಲ್ಲ ರಾಜಕೀಯ ಆಟಗಳು ನಿಂತಿವೆ. ಎಲ್ಲ ಕಡೆಗೆ ಉದ್ವೇಗಕಾರಿ ಪರಿಸ್ಥಿತಿ ಎದ್ದು ಕಾಣುತ್ತಿದೆ. ಆದರೆ ಈ ಪರಿಸ್ಥಿತಿಗೆ ಹೊಣೆಗಾರರು ನಾವಲ್ಲ. ರಾಜಕಾರಣದೊಳಗೆ ಅಲ್ಪಸಂಖ್ಯೆ ಪಕ್ಷವು ಮುಂದಾಳತ್ವ ಸ್ವೀಕರಿಸಿ ಏನೂ ಮಾಡಲಾಗುವುದಿಲ್ಲ. ಜನರ ಹಿತಕ್ಕಾಗಿ ಏನಾದರೂ ಉತ್ತಮ ಸ್ವರೂಪದ ಕಾರ್ಯಮಾಡಲು ಕಾನೂನು ಮಂಡಳಿಯಲ್ಲಿಯ ಹೊಣೆಗಾರಿಕೆ ನಮ್ಮಿಂದ ಸಾಧ್ಯವಾಗದಿದ್ದರೆ ಅದರ ದೋಷವು ಯಾರು ಈ ವಿಪರೀತ ಪ್ರಸಂಗವನ್ನು ಹುಟ್ಟುಹಾಕಿರುತ್ತಾರೋ ಅವರ ತಲೆಯ ಮೇಲೆಯೇ ಕೂರಲಿದೆ. ಇಂದು ರಾಜಕೀಯದ ಡಾವಪೇಚುಗಳು ನಿಂತಿದ್ದರೂ, ಮತ್ತೆ ಆರಂಭಗೊಂಡರೆ ಆಗ ಅಗತ್ಯವಿರುವ ಸಿದ್ಧತೆ ನಮ್ಮ ಹತ್ತಿರ ಗಟ್ಟಿಯಾಗಿದೆ. ಯಾವ ಕಾನೂನನ್ನು ನಾವು ತರಲು ಆಶಿಸಿದ್ದೆವೆಯೋ ಅದರ ಮದ್ದು ತುಂಬಿದ ಬಂದೂಕು ನಮ್ಮ ಬಳಿ ಸಿದ್ಧವಾಗಿದೆ. ಟಾರಗೇಟ್ ತಡವಾದರೆ ನಮ್ಮ ಬಂದೂಕು ಒಮ್ಮೆಲೆ ಸಿಡಿಯುತ್ತದೆ. ಇವತ್ತು ನಿರಾಸೆಯ ವಾತಾವರಣ ಸೃಷ್ಟಿಯಾಗಿ ಪಸರಿಸಿದ್ದರೂ ಬೇಗನೆ ಆಶಾದಾಯಕ ಪರಿಸ್ಥಿತಿ ನಿರ್ಮಾಣವಾಗದೆ ಇರದು. ನಿಮಗೆ ನಿರಾಶರಾಗುವ ಕಾರಣವಿಲ್ಲ. ಪ್ರಾಂತಿಕ ಕಾನೂನು ಮಂಡಳಿಗೆ ಯಾವ ವ್ಯಕ್ತಿಗಳು ನಿಮ್ಮಿಂದ ಆಯ್ಕೆಗೊಂಡಿದ್ದಾರೋ ಅವರು ಯಾವತ್ತೂ ನಿಮ್ಮ ಹಿತಕ್ಕಾಗಿ ಜಾಗೃತವಾಗಿರುತ್ತಾರೆ, ಇದು ನನ್ನ ಭರವಸೆಯ ಮಾತು.

ಕಾಂಗ್ರೆಸ್ ಹೊರತುಪಡಿಸಿ ಇತರ ಪಕ್ಷದಿಂದ ಆಯ್ಕೆಗೊಂಡ ಅಭ್ಯರ್ಥಿಗಳು ತಮ್ಮ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಸೇರಬೇಕೆಂದು ಅವರಿಗೆ ಅನಿಸುತ್ತಿದೆ. ಆದರೆ ನಾವಿಂಥ ಶಕ್ತಿಹೀನತೆಯಿಂದ ಕಾಂಗ್ರೆಸ್‌ಗೆ ಸಿಗಲು ಸಾಧ್ಯವಿಲ್ಲ. ನಮಗೆ ಶ್ರಮಜೀವಿ ಬಹುಜನ ಸಮಾಜದ ಸರ್ವಾಂಗೀಣ ಹಿತಕ್ಕಾಗಿ ಸ್ಥಾಪಿತಗೊಂಡ ಸ್ವತಂತ್ರ ಮಜೂರ ಪಕ್ಷವನ್ನು ಜೀವಂತವಾಗಿಡುವುದಿದೆ. ನಮ್ಮ ೧೪ಜನರ ಸಂಖ್ಯೆ ಅಲ್ಪವಾಗಿದ್ದರೂ ಲಾಭಲೋಭಕ್ಕೆ ಯಾವುದೇ ಸಂಸ್ಥೆಯಲ್ಲಿ ಮಿಳಿತವಾಗುವ ಹಾಗಿಲ್ಲ. ಕಾಂಗ್ರೆಸ್ ಸಂಸ್ಥೆಯು ಎಲ್ಲ ಪ್ರಕಾರದ ಜನರ ಖಿಚಡಿಯಾಗಿದೆ. ಬಂಡವಾಳುದಾರ–ಕಾರ್ಮಿಕ, ಜಮೀನುದಾರ –ರೈತ, ಗೌಡ–ಸಾವಕಾರ ಮತ್ತು ಗೇಣಿದಾರರು, ಶತ್ರು–ಮಿತ್ರರು ಹೀಗೆ ಪರಸ್ಪರ ವಿರೋಧಿ ವರ್ಗದ ಮಿಶ್ರಣದ ಪಕ್ಷವೆಂದರೆ ಕಾಂಗ್ರೆಸ್ಸು. ಇಂಥ ಕಾಂಗ್ರೆಸ್ಸಿನಿಂದ ಬಡವರ ಏಳ್ಗೆ ಎಂದೂ ಆಗುವುದಿಲ್ಲ. ನಮ್ಮ ಸ್ವತಂತ್ರ ಮಜೂರ ಪಕ್ಷವು ಕಾರ್ಮಿಕ ಮತ್ತು ರೈತರ ಮೇಲೆ ಶ್ರೀಮಂತರಿಂದ ಆಗುವ ದೌರ್ಜನ್ಯ ಮತ್ತು ಅನ್ಯಾಯಗಳೇನು ಜರುಗುತ್ತಿವೆಯೋ ಅದನ್ನು ತಡೆಯುವುದಕ್ಕೆ ಹುಟ್ಟಿಕೊಂಡಿದೆ. ಕಾಂಗ್ರೆಸ್ಸಿನ ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿದರೆ ಅದರಲ್ಲಿ ಇಬ್ಭಾಗವಾಗದೇ ಇರದು. ಇದು ನನಗೆ ಚೆನ್ನಾಗಿ ಗೊತ್ತು. ಆಗ ಕಾಂಗ್ರೆಸ್‌ನೊಳಗಿನ ತಮ್ಮ

ಆಲೋಚನೆಯ ಜನರು ನಮ್ಮತ್ತ ಬರಬಹುದು. ಈ ವಿಷಯದ ಬಗ್ಗೆಯೂ ನನಗೆ ಸಂಶಯವಿಲ್ಲ.

ಈ ಕ್ಷಣದ ಲಾಭಕ್ಕಾಗಿ ನಾವು ಕಾಂಗ್ರೆಸ್ ಜತೆ ಸೇರಿ ಅಪ್ರಾಮಾಣಿಕತೆ ಮೆರೆಯಲು ಸಾಧ್ಯವಿಲ್ಲ. ನಮಗೆ ರಾಷ್ಟ್ರಕಾರ್ಯ ಮಾಡುವುದಿದೆ. ಸಾರ್ವಜನಿಕರ ಹಿತದ ದೃಷ್ಟಿಯಿಂದ ಅವರ ಸಮಸ್ಯೆಗಳಿಗೆ ಒಮ್ಮತವಾಗುವಾಗ ಆ ಕ್ಷಣ ಭೇದಭಾವ ಮರೆತು ನಾವು ಕಾಂಗ್ರೆಸ್ ಜೊತೆಗೆ ಸಹಕರಿಸಬೇಕು. ಆದರೆ ಎಲ್ಲ ಬಗೆಯ ಭೇದಭಾವಗಳು ಕಾಯಮ್ಮಾಗಿ ಮರತು ಕಾಂಗ್ರೆಸ್ ಒಟ್ಟಿಗೆ ಏಕಜೀವವಾಗುವುದು ನಮಗೆ ಎಂದೂ ಸಾಧ್ಯವಿಲ್ಲ.

ಸದ್ಯದ ತಾತ್ಕಾಲಿಕ ಮಂತ್ರಮಂಡಳದಲ್ಲಿ ನಾನ್ಯಾಕೆ ದಿವಾನಗಿರಿಯನ್ನು ಸ್ವೀಕರಿಸಿಲ್ಲ? ಈ ಪ್ರಶ್ನೆಯನ್ನು ಅನೇಕರು ಕೇಳುತ್ತಾರೆ. ಅದರುತ್ತರ ಇಷ್ಟೆ. ಯಾವ ಮಂತ್ರಿಮಂಡಳಕ್ಕೆ ಬಹುಮತದ ಬೆಂಬಲವಿಲ್ಲವೋ ಅದರಲ್ಲಿ ಬಹುದಿನಗಳವರೆಗೆ ಇರುವುದಕ್ಕಾಗುವುದಿಲ್ಲ. ಇಂಥ ಕೆಲಕಾಲದ ರಾಜ್ಯಾಡಳಿತದಲ್ಲಿ ಪಾಲ್ಗೊಳ್ಳಲು ಯಾವ ತರದ ಲಾಭಗಳಿಲ್ಲ.

ಮಂತ್ರಿಮಂಡಳ ರಚನೆ ನಿರಾಕರಿಸಿ ಕಾಂಗ್ರೆಸ್ ರಾಜಕಾರಣದ ಚಕ್ಕಡಿಗೆ ಕೀಲುಹಾಕುವ ಯಾವ ಪ್ರಯತ್ನವನ್ನು ಮುಂದುವರೆಸಿದೆಯೋ ಅದರಿಂದ ಕಾಂಗ್ರೆಸ್ಸಿಗೇನೂ ಲಾಭವಿಲ್ಲ. ಕಾಂಗ್ರೆಸ್ ಗವರ್ನರ್ ಅವರ ಕಡೆಯಿಂದ ಕೇಳಿದ ಭರವಸೆ ತೀರ ಅನಗತ್ಯವಾಗಿದೆ. ಕಾಂಗ್ರೆಸ್‌ಪಕ್ಷದ ಮುಂದಾಳುಗಳು ಅಧಿಕಾರ ಪದಸ್ವೀಕರಿಸಿ ರಾಜ್ಯಭಾರ ನಡೆಸುವುದೊಂದೆ ದಾರಿ ಎನ್ನುವುದು ಕಾಂಗ್ರೆಸ್‌ನ ದೃಷ್ಟಿಯಿಂದಲೂ ಶ್ರೇಯಸ್ಕರವಾಗಿದೆ. ರಾಜ್ಯ ಸಂವಿಧಾನವನ್ನು ಮುರಿದೊಗೆಯುವ ಧೋರಣೆ ಸ್ವತಂತ್ರ ಮಜೂರ ಪಕ್ಷಕ್ಕೆ ಒಪ್ಪಿಗೆಯಿಲ್ಲ. ಅದು ರದ್ದಾದರೆ ಶೋಷಣೆಗೊಳಗಾಗುವ ರೈತ–ಕೂಲಿಗಳ ಸಮುದಾಯದ ದುಃಖ ಮತ್ತು ನಿವೇದನೆಗಳನ್ನು ಹೆಚ್ಚುಕಮ್ಮಿ ಇಲ್ಲವಾಗುವ ದಾರಿಯೂ ನಿಲ್ಲುವುದು. ಕಾಂಗ್ರೆಸ್ಸಿನ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಕೊನೆಗಾಣಿಸುವ ತನಕ ನಾವು ನಮ್ಮ ದುಃಖವನ್ನು ಎದೆಯೊಳಗೆ ಬಚ್ಚಿಟ್ಟುಕೊಂಡು ಕಷ್ಟ ಅನುಭವಿಸುತ್ತ ಇರುವುದು ಸಾಧ್ಯವೇ ಇಲ್ಲ. ಕಾನೂನು ಮಂಡಳಿಯೆದುರು ಮಂಡಿಸಲಿರುವ ಕಾನೂನು ಮಸೂದೆ ನಮ್ಮ ಜೇಬಿನೊಳಗೆ ಇದೆ. ನಾವು ಕೇವಲ ಅದು ಆರಂಭಗೊಳ್ಳುವ ದಾರಿಯನ್ನೇ ಕಾಯುತ್ತಿದ್ದೇವೆ.[೧]

---

೧ ಜನತಾ: ೧೨ ಜೂನ್ ೧೯೩೭.

## ೧೦೨.
## ಶಿಸ್ತು ಮತ್ತು ಸಂಘಟನೆಯೇ ನಮ್ಮ ಪಕ್ಷದ ಧ್ಯೇಯ

ಡಾ. ಬಾಬಾಸಾಹೇಬ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಪುಣೆಯ ಅಹಲ್ಯಾಶ್ರಮದಲ್ಲಿ ಮಂಗಳವಾರ ದಿ: ೨೦ ಜುಲೈ ೧೯೩೭ರಂದು ಸ್ವತಂತ್ರ ಮಜೂರ ಪಕ್ಷದ ಮುಂಬೈ ಪ್ರಾಂತಿಕ ಅಸೆಂಬ್ಲಿಯ ಸದಸ್ಯರ ಮೊದಲ ಸಭೆ ಜರುಗಿತು.

ಕೌನ್ಸಿಲ್‌ನಲ್ಲಿಯ ಕಾರ್ಯಚಟುವಟಿಕೆಗಳ ಸಂಬಂಧದಲ್ಲಿ ನಿಯಮ ಇತ್ಯಾದಿಗಳನ್ನು ಪಾಸ್ ಮಾಡಿಕೊಳ್ಳಲಾಯಿತು. ಸ್ವತಂತ್ರ ಮಜೂರ ಪಕ್ಷದ ಮುಂದಾಳು ಡಾ. ಬಾಬಾಸಾಹೇಬ ಅಂಬೇಡ್ಕರರು ತಮ್ಮ ಪಕ್ಷದ ಸಂಘಟನೆ ಮತ್ತು ಕಡಕ್ ಶಿಸ್ತಿನ ಅರಿವು ಮಾಡಿಕೊಟ್ಟರು. ಯಾವುದೇ ಪಕ್ಷವು ನೈತಿಕ ಬಲದಿಂದ ಕಾರ್ಯನಿರ್ವಹಿಸುವುದಾದರೆ ಶಿಸ್ತು ಮತ್ತು ಸಂಘಟನೆಯತ್ತ ಮೊದಲು ಗಮನಹರಿಸಬೇಕಿದೆ. ತಾವು ಅಂಗೀಕರಿಸಿದ ಕಾರ್ಯಕ್ಕೆ ಸೋಲುಂಟಾದರೂ ಸರಿ. ಆದರೆ ತಮ್ಮ ಧ್ಯೇಯದಿಂದ ಎಂದೂ ಅಲಿಪ್ತವಾಗದಿರಿ. ಮನುಷ್ಯನೊಳಗೆ ಎಷ್ಟು ನೈತಿಕತೆ ಅಧಿಕವಾಗಿ ಅಡಗಿರುತ್ತದೆಯೋ ಅಷ್ಟು ಆತನಲ್ಲಿ ಆತ್ಮವಿಶ್ವಾಸ ತುಂಬುತ್ತ ಹೋಗುತ್ತದೆ. ಸೋಲಿನಲ್ಲೂ ಆತನಿಗೆ ಕೊನೆಗೆ ಗೌರವದ ಯಶಸ್ಸು ದೊರೆಯಲು ಸಾಧ್ಯವಾಗುತ್ತದೆ. ಇಂಗ್ಲೆಂಡಿನ ವಿವಿಧ ರಾಜಕೀಯ ಪಕ್ಷಗಳ ಸಿಂಹಾವಲೋಕನ ನಡೆಸಿದರೆ ಅಲ್ಲಿಯೂ ಶಿಸ್ತು ಮತ್ತು ಸಂಘಟನೆಗಳ ಆಪ್ತ ಸಂಬಂಧ ಕಂಡು ಬರುತ್ತದೆ. ಒಂದು ಕಾಲದಲ್ಲಿ ಇಂಗ್ಲೆಂಡಿನಲ್ಲಿಯ ಪುಟ್ಟ ಮಜೂರ ಪಕ್ಷವಾಗಿದ್ದ ಅದು ಶಿಸ್ತು ಮತ್ತು ಸಂಘನೆಯ ಶಕ್ತಿ ಮೂಲಕವೇ ಮುಂದೆ ಅಧಿಕಾರರೂಢ ಆಗಿದ್ದನ್ನು ನಾವು ಕಂಡಿದ್ದೇವೆ. ಆದರೆ ಅವರ ಮೊದಲಿನ ಶಿಸ್ತು ಮತ್ತು ಸಂಘಟನೆ ತುಸು ಕುಸಿದೊಡನೆ ಆ ಪಕ್ಷವು ಅಧಿಕಾರದಿಂದ ಹೇಗೆ ಕುಸಿಯಿತು ಎಂಬುದರ ಮನವರಿಕೆ ನಮಗಾಗಿದೆ.

ಪ್ರಪಂಚದ ರಾಜಕೀಯ ಚಟುವಟಿಕೆಗಳಲ್ಲಿ ಯಶಕಾಣುವುದು ಸುಲಭದ ಮಾತಲ್ಲ. ಅದಕ್ಕಾಗಿ ಒಂದು ಬಗೆಯ ತಪಸ್ಸಿನ ಅಗತ್ಯವಿದೆ. ಪಕ್ಷವನ್ನು ಪ್ರಬಲಗೊಳಿಸಲು ನಮ್ಮೊಳಗೆ ಯಾವ ಬಗೆಯ ನ್ಯೂನತೆಗಳಿವೆ ಎಂಬುದರ ಕಡೆಗೆ ಪ್ರಥಮತಃ ಗಮನಕೊಡಬೇಕು. ರಾಜಕೀಯ ಸ್ವರೂಪದ ಪಕ್ಷದಲ್ಲಿ ಕೇವಲ ಸಿರಿವಂತಕ ಮತ್ತು ನೆಚ್ಚಿನವರನ್ನು ಸಮಾವೇಶಗೊಳಿಸಿದರೆ ಆಗಲಿಲ್ಲ. ವಿವಿಧ ವಿಷಯಗಳ ಅಧ್ಯಯನ ನಡೆಸಿದವರನ್ನು ಮತ್ತು ಅಂಥ ತಜ್ಞರನ್ನು ನಮ್ಮ ಪಕ್ಷದೊಳಗಿನ ಜವಾಬುದಾರಿ ಸ್ಥಾನಗಳಲ್ಲಿ ಕುಳ್ಳಿರಿಸಿ ಕಾರ್ಯಕ್ಕೆ ಒಂದು ದೆಸೆ ಕಾಣಬೇಕಾಗುತ್ತದೆ. ಭಾವನಾವಶ, ಪ್ರಭಾವಪೂರ್ಣ ಭಾಷೆ ಬಳಸಿ ಅಜ್ಞರ ದಿಕ್ಕುತಪ್ಪಿಸಿದ ಮತ್ತು ಸಂಖ್ಯಾಗಾತ್ರದಲ್ಲಿ ಬೃಹತ್ತಾದ ಪಕ್ಷಕ್ಕಿಂತ ಶಿಸ್ತು, ಸಂಘಟನೆ ಮತ್ತು ಉಜ್ವಲ ಧ್ಯೇಯದ ಅರಿವಿರುವ ಅಲ್ಪಸಂಖ್ಯಾತ ಜನರ ಪುಟ್ಟ ಪಕ್ಷವು ಕೊನೆಗೆ ರಾಜಕೀಯ ಕ್ಷೇತ್ರದಲ್ಲಿ ನಿಜ ಪ್ರಭಾವ ಬೀರಿ ಯಶಸ್ಸು ಸಾಧಿಸುತ್ತದೆ. ಇಂದು ನಮ್ಮ ಸ್ವತಂತ್ರ ಮಜೂರ ಪಕ್ಷವು ಕಾಣಲು ಪುಟ್ಟದಾದ ಪಕ್ಷ. ಆದರೆ ನಾವು ವಿನ್ಯಾಸಗೊಳಿಸಿದ ಧ್ಯೇಯ ಮುಕ್ತ ಕಾರ್ಯಗಳ ರೂಪುರೇಷೆಗಳು ಅದೆಷ್ಟು ಉಜ್ವಲವಾಗಿವೆಯೆಂದರೆ ನಮಗೆ ಹಿಂದೆ ಮುಂದೆ ಅಪೂರ್ವ ಗೆಲವು ಸಿಗದೇ ಇರುವುದಿಲ್ಲ.

---

ಜನತಾ: ೩೧ ಜುಲೈ ೧೯೩೭.

ಮುಂಬೈ ಅಸೆಂಬ್ಲಿಯ ಸ್ವತಂತ್ರ ಮಜೂರ ಪಕ್ಷದ ಶಾಸಕರು ಈ ವಿಚಾರಗಳನ್ನು ಆಚರಣೆಯಲ್ಲಿ ತರುವ ಯತ್ನವನ್ನು ಮಾಡಬೇಕು. ಅವರು ಶಿಸ್ತು ಮತ್ತು ಸಂಘಟನೆಯ ವಿಷಯವಾಗಿ ಪಕ್ಷಸೇರುವ ಪ್ರತಿಯೊಬ್ಬ ಸದಸ್ಯರ ಹೃದಯದ ಮೇಲೆ ಪೂರ್ಣವಾಗಿ ಬಿಂಬಿಸುವ ಪ್ರಯತ್ನ ಮಾಡಬೇಕು. ಬಹುಜನಸಮಾಜದ ಜೊತೆ ಸಮರಸಗೊಳ್ಳುವ ಕಾರ್ಯಕ್ರಮವು ನಮ್ಮ ಪಕ್ಷದ್ದಾಗಿದೆ. ಬಡವ ದೀನ, ಕಾರ್ಮಿಕ ಮತ್ತು ರೈತ ವರ್ಗಗಳ ಹಿತರಕ್ಷಣೆ ಮಾಡುವುದು ನಮ್ಮ ಪಕ್ಷದ ಪ್ರಥಮ ಕಾಯಕವಾಗಿದೆ. ಆ ಕಾಯಕ ಪೂರ್ಣಗೊಳಿಸಲು ನಮ್ಮ ಸ್ವತಂತ್ರ ಮಜೂರ ಪಕ್ಷವು ಶಿಸ್ತಿನಿಂದ ಸಂಘಟನೆಯನ್ನು ವೃದ್ಧಿಸಿ, ನಮ್ಮ ಧ್ಯೇಯಗಳ ದಾರಿಯನ್ನು ಆಕ್ರಮಣಗೊಳಿಸುವ ಸಂಕಲ್ಪವನ್ನು ಇವತ್ತೇ ಮಾಡಬೇಕು. ನಿಸ್ವಾರ್ಥವೃತ್ತಿಯಿಂದ ಮಾಡಿದ ಕಾರ್ಯದಲ್ಲಿ ಖಂಡಿತವಾಗಿ ಗೆಲುವು ದೊರೆಯುತ್ತದೆ. ಇದರಲ್ಲಿ ಸಂಶಯವಿಲ್ಲ.

# ೧೦೩.
# ಸಾಮ್ರಾಜ್ಯಶಾಹಿಗಿಂತ ಬ್ರಾಹ್ಮಣ್ಯ ಸಾವಿರಪಟ್ಟು ಕೆಟ್ಟದ್ದು

ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ದಿ: ೩೧ಜುಲೈ ೧೯೩೭ರಂದು ಧುಳೆ ಎಂಬಲ್ಲಿಗೆ ಕೆಲ ಕೋರ್ಟ್ ವಿಷಯಕ್ಕನುಗುಣದ ಕಾರ್ಯಕ್ಕೆ ಹೋಗಬೇಕಿತ್ತು. ಅವರು ಶುಕ್ರವಾರ ರಾತ್ರಿಯ ಗಾಡಿಯಿಂದ ಇಲ್ಲಿಂದ ಹೊರಟರು. ಅವರ ಗಾಡಿ ದಿ. ೩೧ರಂದು ಸಂಜೆ ೫ಕ್ಕೆ ಚಾಳೀಸಗಾವ ಎಂಬಲ್ಲಿಗೆ ಬಂತು. ಡಾ. ಬಾಬಾಸಾಹೇಬರು ಚಾಳೀಸಗಾವದಿಂದ ಧುಳೆಗೆ ಹೋಗುವವರಿದ್ದರು. ಈ ಸುದ್ದಿತಿಳಿದ ಸಾವಿರಾರು ಅಸ್ಪೃಶ್ಯ ಬಂಧುಭಗಿನಿಯರು ಅವರನ್ನು ಸ್ವಾಗತಿಸಲು ಹೆಚ್ಚಿನ ಸಂಖ್ಯೆಯಲ್ಲಿ ನಸುಕಿನಲ್ಲೇ ಚಾಳೀಸಗಾವ ಸ್ಟೇಶನನಲ್ಲಿ ಹಾಜರಿದ್ದರು. ಸ್ಟೇಶನ್ ಪೂರ್ಣವಾಗಿ ಸ್ತ್ರೀಪುರುಷ ಮತ್ತು ಮಕ್ಕಳಿಂದ ತುಂಬಿತುಳುಕಿತ್ತು. ಅಂಬೇಡ್ಕರರ ಜಯಘೋಷ ಹೇಳುತ್ತ ನಿಂತಿದ್ದರು.

ರೈಲು ಸರಿಯಾಗಿ ೫ ಗಂಟೆಗೆ ಸ್ಟೇಶನ್‌ಗೆ ಬಂತು. ಡಾಕ್ಟರ್ ಸಾಹೇಬರು ಹಸನ್ಮುಖರಾಗಿ ರೈಲಿಂದ ಇಳಿಯುತ್ತಿದ್ದಂತೆಯೇ 'ಅಂಬೇಡ್ಕರ ಜಿಂದಾಬಾದ್' ಜಯಘೋಷ ಮೊಳಗಿತು. ಆರಂಭದಲ್ಲಿ ಮೆ.ಎಸ್.ಎಸ್. ಕರ್ಣಿಕ, ಚೀಫ್ ಆಫೀಸರ್ ಮತ್ತು ಅಸ್ಪೃಶ್ಯೋದ್ಧಾರಕ ಬೋರ್ಡಿಂಗ್ ಫಂಡ್ ಕಮಿಟಿಯ ಸೆಕ್ರೆಟರಿ ಮತ್ತು ಮೆ. ಚವ್ಹಾಣ ಅವರು ಅವರ ಸಂದರ್ಶನ ನಡೆಸಿದರು. ಆನಂತರ ರಾಂಜಣಗಾವನ ಸೋದರಿಯರಾದ ಶ್ರೀಮತಿ ಸಖುಬಾಯಿ ಕನ್ನಡಕರ, ಸೋನಾಬಾಯಿ ಕನ್ನಡಕರ, ಸಾವಿತ್ರಬಾಯಿ ಅಹಿರೆ ಮುಂತಾದವರು ಆರತಿಯೆತ್ತಿ ವಂದಿಸಿದರು. ವೇಡಾಬಾಯಿ ಸರದಾರ, ಶಾಂತಾಬಾಯಿ ಚವ್ಹಾಣ, ಶಾಂತಾಬಾಯಿ ಜಾಧವ ಅವರು ವಿದ್ಯಾರ್ಥಿಗಳ ಪರವಾಗಿ ಮಾಲಾರ್ಪಣೆ ಮಾಡಿದರು. ಡಾ. ಬಾಬಾಸಾಹೇಬರು ಅಸ್ಪೃಶ್ಯೋದ್ಧಾರಕ ಬೋರ್ಡಿಂಗ್ ನೋಡಲು ಹೋಗಬಹುದೆಂದು ಅನೇಕರಿಗೆ ಅನಿಸಿದ್ದರಿಂದ ದೊಡ್ಡ ಸಂಖ್ಯೆಯಲ್ಲಿ ಸಮುದಾಯವು ಬೋರ್ಡಿಂಗ್ ಆವರಣದಲ್ಲಿ ಸೇರಿತ್ತು. ಆದ್ದರಿಂದ ಶ್ರೀ ಶಾಮರಾವ ಕಾಮಾಜಿ ಜಾಧವ ಮತ್ತು ಶ್ರಾವಣ ಧರ್ಮಾಜಾಧವ ಅವರು ಅವರಿಗೆ ಭಿನ್ನವಿಸಿಕೊಂಡರು. ಆದರೆ ಸಮಯದ ಅಭಾವದಿಂದ ರಾತ್ರಿ ೮.೩೦ಕ್ಕೆ ಬರಲು ಒಪ್ಪಿದರು. ಆದ್ದರಿಂದ ಬೋರ್ಡಿಂಗ್‌ನಲ್ಲಿ ಸೇರಿದ್ದ ಜನಸಮೂಹ ಅವರಿಗೆ ಮುಗಿಲು ಮುಟ್ಟುವ ಜಯಕಾರ ಹಾಕುತ್ತ ಸ್ಟೇಶನ್‌ಗೆ ಬಂತು. ಅಸ್ಪೃಶ್ಯ ಜನರ ನಾಯಕ ಡಾಕ್ಟರ್ ಬಾಬಾಸಾಹೇಬರ ಮೇಲಿದ್ದ ಅಲೌಕಿಕ ಪ್ರೇಮ ಮತ್ತು ಅವರ ಕಾರ್ಯಶೀಲತೆಯ ಉತ್ಸಾಹ ಕಂಡು ಚಾಳಿಸಗಾವನ ಅಸ್ಪೃಶ್ಯ ಜನರು ಅಚ್ಚರಿಯಿಂದ ಬೆರಳು ಕಚ್ಚಿದರು. ಅವರ ದರ್ಶನ ಸುಖ ಕಂಡ ಅಸ್ಪೃಶ್ಯ ಸಮುದಾಯದ ಈ ಅಪೂರ್ವ ಉತ್ಸಾಹ ಪ್ರಶಂಸನೀಯವೇ ಸರಿ! ಕಾರಣ ಡಾಕ್ಟರ್ ಸಾಹೇಬರು ಯಾವುದೇ ಕಾರ್ಯಕ್ರಮಕ್ಕೆಂದು ಈ ಭಾಗಕ್ಕೆ ಬಂದವರಲ್ಲ. ಅವರು ಕೇವಲ ತಮ್ಮ ಕೋರ್ಟಿನ ಕಾರ್ಯಕ್ಕೆಂದು ಹೋಗುತ್ತಿರುವಾಗ ಸಹ ಜನರಿಗೆ ಅವರನ್ನ ಕಾಣುವ, ದರ್ಶನಸುಖ ಪಡುವ ಆತುರತೆ ಅನಿಸುವುದು ಅಲೌಕಿಕತ್ವದ ಲಕ್ಷಣವೆಂದು ಹೇಳಲು ಏನಡ್ಡಿಯಿಲ್ಲ.

ವಿಶೇಷವೆಂದರೆ ಇಂದು ಸಂತೆಯ ದಿನವಾಗಿದ್ದರೂ ಜನರು ತಮ್ಮ ಖರೀದಿ ಮಾರಾಟವನ್ನು

---

ಜನತಾ: ೭ ಮತ್ತು ೧೪ ಆಗಸ್ಟ್ ೧೯೩೭.

ತಟ್ಟನೆ ಮುಗಿಸಿ ಮಕ್ಕಳು ಮಹಿಳೆಯರೆಲ್ಲ ಚಾಳೀಸಗಾವ ಸ್ಟೇಶನ್ನಿಗೆ ಆಗಿಮಿಸಿದ್ದರು. ಅದರಂತೆ ಅವರ ಆಗಮನ ಸಂದರ್ಭದಲ್ಲಿಯ ಹ್ಯಾಂಡ್‌ಬಿಲ್ಲು ಇತ್ಯಾದಿ ಏನನ್ನೂ ತೆಗೆದಿರಲಿಲ್ಲ. ಕೇವಲ ಕೇಳಿಕೆ ಹೇಳಿಕೆ ಸುದ್ಧಿ ಅರಿತು ಇಷ್ಟೆಲ್ಲ ದೊಡ್ಡ ಪ್ರಮಾಣದ ಜನಸಮೂಹವು ಅವರ ದರ್ಶನಕ್ಕೆಂದು ಅಲ್ಲಿ ಸೇರಿದ್ದು ವಿಶೇಷವೇ ಹೌದು!

ಆ ಬಳಿಕ ಡಾ. ಅಂಬೇಡ್ಕರರು ಎಲ್ಲರನ್ನು ಪ್ರೀತಿಯಿಂದ ಬೀಳ್ಕೊಟ್ಟು ಬೆಳಗಿನ ೬.೪೫ರ ಗಾಡಿ ಹಿಡಿದು ಧುಳೆಗೆ ಪ್ರಯಾಣ ಬೆಳೆಸಿದರು. ಮೆ.ಡಿ. ಜಿ. ಜಾಧವ ಮತ್ತು ದತ್ತಾತ್ರಯ ಮಾಗಾಡೆ ಎಂಬ ಉತ್ಸಾಹಿ ತರುಣ ಸಾಮಾಜಿಕ ಕಾರ್ಯಕರ್ತರು ಡಾ. ಬಾಬಾಸಾಹೇಬರ ಜೊತೆಗಿದ್ದರು. ರಾತ್ರಿ ಬೋರ್ಡಿಂಗ್‌ಗೆ ಡಾ. ಅಂಬೇಡ್ಕರರು ಭೇಟಿ ನೀಡುತ್ತಾರೆಂದು ಅಲ್ಲಿ ದೀಪ, ಗ್ಯಾಸ್‌ಬತ್ತಿಗಳ ಬೆಳಗಿನ ಹಬ್ಬದ ಸಿದ್ಧತೆ ನಡೆದಿತ್ತು. ಡಾ. ಬಾಬಾಸಾಹೇಬರ ಆಗಮನದ ನಿರೀಕ್ಷೆಯಲ್ಲಿರುವವರು ಬೋರ್ಡಿಂಗ್‌ನಿಂದ ಸ್ಟೇಶನ್ ತನಕ ಎರಡು ಫರ್ಲಾಂಗು ಅಂತರದಲ್ಲಿ ಜನರು ಎರಡು ಸಾಲುಗಟ್ಟಿ ನಿಂತಿದ್ದರು. ಜನರು ಶಿಸ್ತುಪಾಲಿಸಲು ಪಹಿಲವಾನ ಧಾವಜಿಯವರು ತಮ್ಮ ಸಹಚರರೊಟ್ಟಿಗೆ ಒಟ್ಟು ವ್ಯವಸ್ಥೆ ಮಾಡಿದ್ದರು. ಹಾಗೆಯೇ ಡಾ. ಅಂಬೇಡ್ಕರ ಸಾಹೇಬರನ್ನು ಸ್ಟೇಶನ್‌ನಿಂದ ಕರೆತರಲು ಶ್ರೀ ಹರಿಭಾವು ಪಾಟಸಕರ ವಕೀಲರ ಮಡದಿ ಸೌ. ವಾರುಬಾಯಿ ಪಾಟಸಕರರು ತಮ್ಮ ಮೋಟಾರುಗಾಡಿ ಕಳಿಸಿದ್ದರು. ಶ್ರೀ ಪಾಟಸಕರರು ಪರ ಊರಿಗೆ ಹೋಗಿದ್ದರಿಂದ ಡಾಕ್ಟರ್‌ಸಾಹೇಬರನ್ನು ಭೇಟಿಯಾಗಲು ಆಗಲಿಲ್ಲ.

ಡಾ. ಬಾಬಾಸಾಹೇಬ ಅಂಬೇಡ್ಕರರು ದಿ: ೩೧ ಜುಲೈ ೧೯೩೭ ಶನಿವಾರದ ಬೆಳಿಗ್ಗೆ ಗಾಡಿಯಿಂದ ನ್ಯಾಯಾಲಯದ ಕೆಲಸಕ್ಕೆಂದು ಧುಳೆಗೆ ಬರಲಿದ್ದಾರೆಂಬ ಖಚಿತ ಮಾಹಿತಿಯನ್ನು ಮಿ. ಪಾಟೀಲ ವಕೀಲರಿಂದ ತಿಳಿದ ಸಮತಾವಾದಿ ದಲಿತ ಮಂಡಳದ ಕಾರ್ಯಕಾರಿ ಮಂಡಳಿಯವರು ಮುಂಚೆಯೇ ಚೊಕ್ಕದಾದ ಸಿದ್ಧತೆ ಮುಗಿಸಿದ್ದರು. ಅದರಂತೆ ದಿ: ೩೧-೭-೧೯೩೭ರಂದು ೭೦-೮೦ ಸ್ಕೌಟ್ಸ್ ಸಂಗಡ ಸಾವಿರಾರು ಸಂಖ್ಯೆಯ ಅಸ್ಪೃಶ್ಯ ಸೋದರ ಸೋದರಿಯರು ಡಾ. ಬಾಬಾಸಾಹೇಬ ಅಂಬೇಡ್ಕರರ ಹೃದಯಪೂರ್ವಕ ಸ್ವಾಗತಕ್ಕೆ ಸಜ್ಜಾಗಿ ಉತ್ಸಾಹದಿಂದ ನಸುಕಿನಲ್ಲಿಯೇ ಸ್ಟೇಶನ್‌ನಲ್ಲಿ ಹಾಜರಿದ್ರು. ಧುಳೆ ಸ್ಟೇಶನ್ ಮಹಿಳೆ, ಮಕ್ಕಳು, ಪುರುಷರಿಂದ ತುಂಬಿತ್ತು. ಅವರು ಡಾ. ಬಾಬಾಸಾಹೇಬರ ನಿರಂತರ ಜಯಕಾರ ಹಾಕುತ್ತ ಸಾಮಾಜಿಕ ಪದ್ಯಗಳನ್ನು ಎದ್ದುನಿಂತೇ ಹಾಡುತ್ತಿದ್ದರು. ಸ್ವಾಗತಕ್ಕೆಂದು ಶ್ರೀ. ಎ.ಆರ್. ಸಾವಂತ, ಪುನಾಜಿರಾವ್ ಲಳಿಂಗಕರ, ತುಕಾರಾಮಜಿ ಪಹಿಲವಾನ, ಶ್ರೀ? ಜಿ.ಎಸ್. ಅಹಿರೆ, ಆರ್.ಬಿ. ಅಹಿರೆ, ಸುಕದೇವ ಪಹಿಲವಾನ, ಧೋಂಡಿರಾಮ ಪಹಿಲವಾನ, ಸಖಾರಾಮ ಪಹಿಲವಾನ, ದೇವರಾಮಪಂತ ಅಹಿರೆ ಮುಂತಾದವರು ಅಗತ್ಯಪೂರ್ವಕ ಹಾಜರಿದ್ದರು.

ರೈಲುಗಾಡಿ ಸರಿಯಾಗಿ ೮.೨೦ಕ್ಕೆ ಧುಳೆ ಸ್ಟೇಶನ್‌ಗೆ ಬಂತು. ಡಾಕ್ಟರ್‌ಸಾಹೇಬರು ನಗುನಗುತ್ತ ಶ್ರೀ ಡಿ.ಜಿ. ಜಾಧವ ಎಂ.ಎಲ್.ಎ.ಯವರ ಸಂಗಡ ಗಾಡಿಯಿಂದ ಇಳಿಯುತ್ತಿದ್ದಂತೆಯೇ, 'ಅಂಬೇಡ್ಕರ ಕೌನ್‌ಹೈ। ದಲಿತೋಕಾ ರಾಜಾ ಹೈ।' 'ಅಂಬೇಡ್ಕರ ಜಿಂದಾಬಾದ್' ಬಿರುಸಿನ ಘೋಷಣೆಗಳು ಮೊಳಗಿದವು. ಆರಂಭದಲ್ಲಿ ಶ್ರೀ ಸಾವಂತ ಢಂಗೆ, ಬೈಸಾಣೆ, ಪುನಾಜಿರಾವ ಲಳಿಂಗಕರ ಮುಂತಾದವರು ಅವರನ್ನು ಸಂದರ್ಶಿಸಿದರು. ಸಮತಾವಾದಿ ದಲಿತ ಮಂಡಳಿಯ ಸೆಕ್ರೆಟರಿ ಶ್ರೀ ತುಕಾರಾಮ ಪಹಿಲವಾನರು ಸಂಘದ ಪರವಾಗಿ ಮತ್ತು ಸೌ. ಪಾರ್ವತಿಬಾಯಿ ಅಹಿರೆಯವರು ಚೋಖಾಮೇಳಾ ಬೋರ್ಡಿಂಗ್ ಪರವಾಗಿ ಡಾ. ಬಾಬಾಸಾಹೇಬರಿಗೆ ಮಾಲಾರ್ಪಣೆ ಮಾಡಿದರು. ಅನಂತರ ಸ್ಟೇಶನ್‌ನಿಂದ ಟ್ರೊವಲರ್ಸ್ ಬಂಗ್ಲೋವರೆಗೆ ಮಿ. ಪಾಟೀಲ ನ್ಯಾಯವಾದಿಗಳು ಇವರು ತಮ್ಮ ವಾಹನದಲ್ಲಿ ಡಾ. ಬಾಬಾಸಾಹೇಬರ

ಮೆರವಣಿಗೆ ನಡೆಸಿದರು. ಈ ಸಮಯದಲ್ಲಿ, ಅಂಬೇಡ್ಕರರ ಚೌಕ, ಲಳಿಂಗ, ಅವಧಾನ, ವರ್ಹ್ವಾಳ, ಹಳೆ ಧುಳೆಮಿಲ್ಲಿನ ಸ್ಕೌಟ್ ತಂಡದವರು ಉತ್ತಮ ರೂಪದ ಶಿಸ್ತನ್ನು ಇಟ್ಟಿದ್ದರು. ಮೆರವಣಿಗೆ ಬಂಗ್ಲೋಗೆ ಬಂದೊಡನೆ ಅಲ್ಲಿಯೂ ಹೊರಗೆ ಹಳ್ಳಿಹಳ್ಳಿಯಿಂದ ಆಗಮಿಸಿದ ಸ್ತ್ರೀ–ಪುರುಷ ಮತ್ತು ಮಕ್ಕಳ ದೊಡ್ಡ ಸಮೂಹವೇ ನೆರೆದಿತ್ತು. ಇಷ್ಟೇ ಅಲ್ಲ. ಡಾ. ಬಾಬಾಸಾಹೇಬರ ದರ್ಶನಕ್ಕೆಂದು ಲಳಿಂಗದ ಅನೇಕ ಸೌದೆಮಾರುವ ಮಹಿಳೆಯರೂ ಬಂದಿದ್ದರು. ಆ ಬಂಗಲೆಯಿಂದ ಅವರ ದರ್ಶನ ಪಡೆಯದೇ ಅಸ್ಪೃಶ್ಯ ಸ್ತ್ರೀ–ಪುರುಷರು ಅಲುಗಾಡುತ್ತಿಲ್ಲ. ಆ ಬಳಿಕ ಡಾ. ಬಾಬಾಸಾಹೇಬರು ನಗೆಯ ಬೀರುತ್ತ ಬಂಗಲೆಯ ಹೊರಬಂದರು. ಈಗ ಕೋರ್ಟಿನ ಕೆಲಸವಿದೆ, ಅದು ಮುಗಿದ ಬಳಿಕ ತಾವು ಕರೆದಲ್ಲಿಗೆ ಬರುವೆ, ಎಂದು ಹೇಳಿ ಅವರಿಗೆಲ್ಲರಿಗೂ ಮರಳಿ ಹೋಗಲು ಹೇಳಿದರು.

ಮಧ್ಯಾಹ್ನ ಕೋರ್ಟಿನ ಕೆಲಸ ಮುಗಿಸಿದ ನಂತರ ನಿರ್ಧರಿಸಿದಂತೆ ಡಾ. ಬಾಬಾಸಾಹೇಬ ಅವರು ಹರಿಜನ ಸೇವಕ ಸಂಘದ ಸಚಿವ ಶ್ರೀ ಬರ್ವೆ ವಕೀಲರ ಮನೆಯಲ್ಲಿ ಸರಿಯಾಗಿ ನಾಲ್ಕುಗಂಟೆಗೆ ಬಂದರು. ಶ್ರೀ ಜಾಧವ ಎಮ್.ಎಲ್.ಎ. ಶ್ರೀ ಸಾವಂತ, ಶ್ರೀ ಪುನಾಜರಾವ ಲಳಿಂಗಕರ, ಶ್ರೀ ತುಕಾರಾಮ ಪಹಿಲವಾನ ಮತ್ತು ಶ್ರೀ ಢೇಂಗೆ ಮುಂತಾದವರು ಸೇರಿದ ಟೀಪಾರ್ಟಿ ನಡೆಯಿತು. ಅಲ್ಲಿ ಕಾಂಗ್ರೆಸ್ಸಿನವರೂ ಇದ್ದರು. ಸಾಕಷ್ಟು ಚರ್ಚೆ ನಡೆಯಿತು. ನಂತರ ಡಾ. ಬಾಬಾಸಾಹೇಬರು ರಾಜೇಂದ್ರ ಹರಿಜನ ಛಾತ್ರಾಲಯಕ್ಕೆ ಮತ್ತು ಚೋಖಾಮೇಳಾ ಬೋರ್ಡಿಂಗ್‌ಗೆ ಭೇಟಿಯಿತ್ತರು. ಅಲ್ಲಿಯೂ ಡಾ. ಬಾಬಾಸಾಹೇಬರನ್ನು ಸ್ವೋದ್ಧಾರಕ ವಸತಿಗೃಹ, ಹರಿಜನ ಛಾತ್ರಾಲಯ ಮತ್ತು ಚೋಖಾಮೇಳಾ ಬೋರ್ಡಿಂಗ್ ವತಿಯಿಂದ ಮಾಲಾರ್ಪಣೆ ಮಾಡಿ ಸ್ವಾಗತಿಸಲಾಯಿತು.

ನಂತರ ನಿರ್ಧರಿಸಿದಂತೆ ಧುಳೆಯ ವಿಜಯಾನಂದ ಥಿಯೇಟರ್‌ನಲ್ಲಿ ಡಾ. ಬಾಬಾಸಾಹೇಬರದ್ದು ಉತ್ತಮ ಭಾಷಣ ಆಯಿತು. ಇಲ್ಲಿ ದೊಡ್ಡ ಸಂಖ್ಯೆಯಲ್ಲಿ ಸ್ಪೃಶ್ಯಾಸ್ಪೃಶ್ಯ ಸ್ತ್ರೀಪುರುಷರು ಸೇರಿದ್ದರು. ಸ್ಥಳಾಭಾವದಿಂದ ಅನೇಕರು ಹೊರಗೆ ನಿಲ್ಲಬೇಕಾಯಿತು.

ಡಾ. ಅಂಬೇಡ್ಕರ ಹೇಳಿದರು.

ನಾಳೆ ದಿ. ೧ ಅಗಸ್ಟರಂದು ಯುಗಾದಿ ಹಬ್ಬದಂತೆ ಸ್ವರಾಜ್ಯದ ಆರಂಭದಿನವೆಂದು ಆಚರಿಸಲು ಕಾಂಗ್ರೆಸ್ ಆದೇಶಿಸಿದೆ. ಕಾಂಗ್ರೆಸ್‌ಪಕ್ಷ ರಾಜ್ಯಾಧಿಕಾರದ ಸೂತ್ರಗಳನ್ನು ಕೈಗೆತ್ತಿಕೊಂಡರೆ ಅದು ಸ್ವರಾಜ್ಯ ಮತ್ತು ನಮ್ಮಂಥವರು ದಿವಾಣಪದವನ್ನು ಗ್ರಹಿಸಿದರೆ ಮಾತ್ರ ಅದು ಸ್ವರಾಜ್ಯವಲ್ಲ, ಈ ಅನಿಸಿಕೆ ಯೋಗ್ಯವೇನು? ಭಾವನೆ ಮತ್ತು ತತ್ವಜ್ಞಾನವನ್ನು ಒಂದರೆಕ್ಷಣ ಪಕ್ಕಕ್ಕಿಟ್ಟು ವ್ಯವಹಾರ ದೃಷ್ಟಿಯಿಂದ ಯೋಚಿಸಿದರೆ, ಹೀಗೆ ಕಾಣುತ್ತದೆಯಲ್ಲ; ಕತ್ತುಕೊಯ್ಯುವ ಸಾಹುಕಾರ, ಕಾರ್ಮಿಕರನ್ನು ಸುಲಿಯುವ ಗಿರಣಿ ಮಾಲಿಕ ಮತ್ತು ತಮ್ಮನ್ನು ಅನ್ಯ ಬಗೆಯಲ್ಲಿ ಉಪದ್ರವ ನೀಡುವ ಜನರು ಹೇಗಿದ್ದರೋ ಈ ದೇಶದಲ್ಲಿ ಹಾಗೆಯೇ ಇರುತ್ತಾರೆ. ಜಮೀನುದಾರರು, ಪಾಟೀಲರು ಎಲ್ಲರೂ ಹಾಗೆಯೇ ಇರುವರು. ಇಂಗ್ಲೀಷರು ಹೋದರೂ ಈ ಜನರು ಕಾಯಮ್ಮಾಗಿರುವವರು. ಆದಕಾರಣ ಮೊದಲಿಗಿಂತ ನಮಗೆ ಅಧಿಕವಾಗಿ ಚಿಂತಿಸುವ ಅಗತ್ಯವಿದೆ. ಇಷ್ಟುದಿನ ನಮಗೊಂದು ವಿಚಾರವು ಪೋಷಕವಾಗಿತ್ತು. ಅದೇನೆಂದರೆ, ಇಂಗ್ಲೀಷ ವ್ಯಕ್ತಿಯ ಭಾವನೆ ಜಾತಿ ವಿಷಯಕವಾಗಿರುತ್ತಿದ್ದಿಲ್ಲ ಮತ್ತು ಸ್ಪೃಶ್ಯಾಸ್ಪೃಶ್ಯ ವಿಚಾರವನ್ನು ನೋಡುತ್ತಿರಲಿಲ್ಲ. ನಿಮ್ಮ ಉಪದ್ರವಿಗಳ ಕೈಗೆ ಅಧಿಕಾರ ಹೋಗಿದೆ. ಈಗ ನಮ್ಮನ್ನು ಕೇಳುವರ್‍ಯಾರು? ಇದು ಸ್ವರಾಜ್ಯವಲ್ಲ, ಇತರ ಜನರ ರಾಜ್ಯಾಳಿಕೆ ನಮ್ಮ ಮೇಲೆ ಆಗಲಿದೆ. ಆದ್ದರಿಂದ ಸಂಘಟಿಸುವುದು ನಿಮ್ಮ ಕರ್ತವ್ಯವಾಗಿದೆ. ಸಂಘಟಿತರಾಗದಿದ್ದರೆ ನಿಮ್ಮ

ಗೋಳು ನೂರು ಪಟ್ಟಾಗುವುದು. ಇಂದು ಹೊಲೆಯರ ಮೇಲೆ ಅನ್ಯಾಯವಾಗುತ್ತಿದ್ದರೆ ಪಾಟೀಲ, ಶಿಪಾಯಿ, ಮಾಮಲೇದಾರ ಇವರಾರೂ ಸಹಾಯಕ್ಕೆ ಬರುವುದಿಲ್ಲ. ಇದಷ್ಟೇ ಅಲ್ಲ ಒಬ್ಬ ಮಹಾರ ಮತ್ತೊಬ್ಬ ಮಹಾರನ ನೆರವವಿಗೆ ಬರುವುದಿಲ್ಲ. ಆದಕಾರಣ ಜಾತೀಯ ಸಂಘಟನೆಯನ್ನು ಅಗತ್ಯವಾಗಿ ಮಾಡಿರಿ. ದುಡ್ಡಿಲ್ಲದೆ ಯಾವ ಕೆಲಸವೂ ಆಗುವುದಿಲ್ಲ. ವಕೀಲರು, ಸಾಕ್ಷಿದಾರ, ಕೋರ್ಟಿನ ಪ್ರೊಸೆಸ್, ಮೋಟಾರು ಬಾಡಿಗೆ ಇವೆಲ್ಲದಕ್ಕೂ ಹಣಬೇಕು. ಅದಕ್ಕಾಗಿ ನ್ಯಾಯ ದೊರಕಿಸಿಕೊಳ್ಳುವುದಕ್ಕಾಗಿ ಜಾತಿಯ ಫಂಡ್ ನಿರ್ಮಿಸಿರಿ.

ಒಂದೂರಲ್ಲಿ ಪ್ರಯತ್ನಿಸಿ ನೀವು ನ್ಯಾಯ ಪಡೆದರೆ ಅದರ ಭಯ ಬೇರೆ ಊರುಗಳ ಮೇಲಾಗುವುದು. ನಿಮ್ಮ ಕಾರ್ಯವನ್ನು ಬೇರೆಯವರು ಮಾಡಬೇಕೆಂದು ಯಾಕೆ ನೀವು ಬಯಸುತ್ತೀರಿ? ನಿಮಗಾಗಿ ಶ್ರೀ ಬರ್ವೆಯವರು ವಿದ್ಯಾರ್ಥಿನಿಲಯ ತೆಗೆಯಬೇಕು ಅಥವಾ ಗಾಂಧೀಜಿಯವರು ತೆಗೆಯಬೇಕೆಂದು ಯಾಕೆ ಬಯಸುವಿರಿ? ಮಹಾರಾಷ್ಟ್ರದಲ್ಲಿ ಹತ್ತುಲಕ್ಷ ಮಹಾರ ಅಸ್ಪೃಶ್ಯರಿದ್ದಾರೆ. ಪ್ರತಿಯೊಬ್ಬರು ಒಂದು ರೂಪ್ಯೆ ನೀಡಿದರೆ ಹತ್ತು ಲಕ್ಷದ ಫಂಡು ಸಂಗ್ರಹಗೊಳ್ಳಬಹುದು.

ಇಂಗ್ಲಿಷರಿಗೆ ಇನ್ನೇನು ಮಾಡಲಾಗುವುದಿಲ್ಲ. ಇದರ ಉದಾಹರಣೆ ನೀಡುತ್ತೇನೆ. ಮಂತ್ರಿಮಂಡಳದಲ್ಲಿ ಆಗಬಹುದಾದ ಮತ್ತು ಅಲ್ಪಸಂಖ್ಯಾತರ ಪ್ರತಿನಿಧಿಯನ್ನು ತೆಗೆದುಕೊಳ್ಳಲು ಬಾದಶಹಾ ಅವರು ಗವರ್ನರ್‌ರಿಗೆ ನೀಡಿದ ಆಜ್ಞಾಪತ್ರದಲ್ಲಿ ಹೇಳಿದೆ. ಸದ್ಯದ ಮಂತ್ರಮಂಡಳವು ಗಾಂಧಿಯವರ ಹೇಳಿಕೆಯಂತೆ ಸಿದ್ಧವಾಯಿತು. ಮುಂಬೈ ಮಂತ್ರಿ ಮಂಡಳದಲ್ಲಿ ಮಹಾರಮಾದಿಗರ ಒಬ್ಬ ಪ್ರತಿನಿಧಿಯೂ ಇಲ್ಲ. ಆದರೂ ಗವರ್ನರ್ ಅದರಲ್ಲಿ ಕೈಹಾಕಲಿಲ್ಲ.

ನಾನು ಕಾಂಗ್ರೆಸ್ ಜತೆಯಾಕಿಲ್ಲ, ಎಂಬ ಪ್ರಶ್ನೆಗಳನ್ನು ಅನೇಕರು ಕೇಳುತ್ತಾರೆ. ಅದರ ಕಾರಣಗಳು ಇಲ್ಲಿವೆ–

೧) ಕಾಂಗ್ರೆಸ್ಸಿನ ರಾಜಕಾರಣದಲ್ಲೇನಾದರೂ ನಿಷ್ಪನ್ನವಾಗಿದ್ದರೆ ಅದು ಬ್ರಾಹ್ಮಣ್ಯದ ಉದಯ. ಇದಷ್ಟೇ ನನಗೆ ಕಾಣುತ್ತಿದೆ. ಆರುಪ್ರಾಂತಗಳಲ್ಲಿ ಯಾರು ದಿವಾಣರಾದರು ಅದನ್ನು ನೋಡಿರಿ. ಬ್ರಾಹ್ಮಣರು ಮುಖ್ಯ ಪ್ರಧಾನರಾಗಿದ್ದಾರೆ. ಸಾಮ್ರಾಜ್ಯಶಾಹಿಗಿಂತ ಬ್ರಹ್ಮಣ್ಯ ಸಾವಿರುಪಟ್ಟು ಕೆಟ್ಟದ್ದು.

೨) ನಾನು ಅಸ್ಪೃಶ್ಯರಿಗಾಗಿ ನಡೆಸುವ ಚಳವಳಿಯನ್ನು ನಿಲ್ಲಿಸಿಯೆಂದು ಹೇಳುತ್ತಾರೆ; ಆದರೆ ನನಗೆ ಸಂಬಳದ ಧನಿಕನಾಗುವುದು ಬೇಡ ಅಥವಾ ಗೌರವ ಗಳಿಸಬೇಕೆಂಬುದರ ಪರಿವೆಯೂ ಇಲ್ಲ. ನೀವು ಸ್ವಾಭಿಮಾನಿಗಳಾಗಿ ಎಂಬುದೇ ನನ್ನಾಸೆ. ಅದಕ್ಕಾಗಿ ಸ್ವತಂತ್ರ ಚಳುವಳಿ ಮಾಡುವುದು ಅಗತ್ಯ. ನಿಮ್ಮಲ್ಲಿ ಮತ್ತು ನನ್ನಲ್ಲಿ ವ್ಯತ್ಯಾಸವಿಷ್ಟೇ, ನಿಮಗಿಂತ ನನಗೆ ಅಧಿಕ ಜ್ಞಾನವಿದೆ. ಅದಕ್ಕೆಯೆ ಅಪಾಯ ಎಲ್ಲಿದೆ ಎಂಬುದು ಅರಿಯಲು ನನಗೆ ಸಾಧ್ಯವಾಗುತ್ತದೆ. ಕಾಂಗ್ರೆಸ್ಸಿನ ಜನರು ಏನೇ ನನಗೆ ಅಂದರೂ ಅದರ ಚಿಂತೆಯಿಲ್ಲ. ನೀವು ಮನುಷ್ಯರಾದರೆ ಸಾಕು, ನನ್ನ ಶ್ರಮ ಸಾರ್ಥಕ್ಯ ಮತ್ತು ಸಫಲತೆ ಹೊಂದಿದಂತೆ. ಈ ಸ್ವರಾಜ್ಯ ಅಪಾಯಕಾರಿಯಾಗಿದೆ. ಯಾರ ಕೈಯಲ್ಲಿ ಸಾಮಾಜಿಕ ಅಧಿಕಾರವಿತ್ತೊ ಅವರದೇ ಕೈಯಲ್ಲಿ ರಾಜಕೀಯ ಸತ್ತೆಯೂ ಹೋಗಿದೆ. ಆದಕಾರಣ ಪ್ರತಿಯೊಂದು ಹಳ್ಳಿಯೂ ಹತ್ತು ರೂಪ್ಯೆನಾದರೂ ಫಂಡಿಗೆ ನೀಡಬೇಕು. ಅಂದರೆ ನಿಮಗೆ ನ್ಯಾಯದೊರೆಯಬಹುದು. ನಮ್ಮ ಸ್ವತಂತ್ರ ಮಜೂರ ಪಕ್ಷದ ಹದಿನೈದು ಜನರು ಮುಂಬೈ ಅಸೆಂಬ್ಲಿಯಲ್ಲಿದ್ದಾರೆ. ಈ ಜನರು ಒಂದು ಡಾವಣೆಯಲ್ಲಿ ಪಕ್ಕಾ ಕಟ್ಟಲ್ಪಟ್ಟಿದ್ದಾರೆ. ಒಬ್ಬರ ಮುಖ ಒಂದೆಡೆ ಮತ್ತೊಬ್ಬರದು ಇನ್ನೊಂದೆಡೆ ಎಂದೇನೂ ಇಲ್ಲ. ಇದರಿಂದ ಕಾಂಗ್ರೆಸ್ ಪಕ್ಷಕ್ಕೆ ಏನಾದರೂ ಬೆದರಿಕೆಯಿದ್ದರೆ ಅದು ನಮ್ಮ ಪಕ್ಷದ್ದು. ಕಾಂಗ್ರೆಸ್ಸಿಗೆ ಮುಸ್ಲಿಮರ ಭೀತಿಯಿಲ್ಲ ಅಥವಾ

ಲೋಕಶಾಹಿ ಪಕ್ಷದ್ದೂ ಭೀತಿಯೆನಿಸುವುದಿಲ್ಲ. ಈ ಮಾತು ವಲ್ಲಭಭಾಯಿಯವರು ಪುಣೆಯಲ್ಲಿ ಯಾವ ಭಾಷಣ ಮಾಡಿದರೋ ಅಲ್ಲಿ ಬೆಳಕಿಗೆ ಬಂದಿದೆ. ನಾವು ಚುನಾವಣೆಯ ಕಾಲದಲ್ಲಿ ಸಂಘಟಿತರಾಗಿ ಹೋರಾಡಿದ್ದರಿಂದಲೇ ಫಲಸಿಕ್ಕಿದೆ. ಚುನಾವಣೆ ವೇಳೆಯಲ್ಲಿ ಮಾಡಿದ ಪ್ರತಿಜ್ಞೆಯನ್ನು ನೆನಪಿನಲ್ಲಿಡಿರಿ. ಅದು ಕಾಯಮ್ಮಾಗಿರಲಿ. ನಮ್ಮ ಸಂಸ್ಥೆಯ ಶಾಖೆಗಳನ್ನು ಪ್ರತಿಯೊಂದು ಜಿಲ್ಲೆಗಳಲ್ಲಿ ಸ್ಥಾಪಿಸಬೇಕಿದೆ. ಮೇಲಿಂದ ಸಹಾಯ ಮಾಡುವ ಯಾವ ದಾತೃವಿಲ್ಲ, ಯಾರು ಕಷ್ಟಪಡುವರೋ ಅವರದೇ ಅಧಿಕಾರವಿರುತ್ತದೆ. ಪ್ರತಿಯೊಂದು ಸಂಸ್ಥೆಯಲ್ಲಿ ನಮ್ಮ ಜನ ಹೆಚ್ಚುಹೆಚ್ಚು ಹೋಗುವ ಹಾಗೆ ಪರಿಶ್ರಮ ಪಡೆಯಿರಿ. ಕಾಂಗ್ರೆಸ್ಸಿಗೆ ಹರಿಜನರ ಕುರಿತು ದಯೆ ಇದ್ದಿದ್ದರೆ ಯಾವುದೇ ಶರತ್ತುಗಳನ್ನು ವಿಧಿಸದೇ ಒಬ್ಬ ಹರಿಜನ ವ್ಯಕ್ತಿಯನ್ನು ಅವರು ಮಂತ್ರಿಮಂಡಳದಲ್ಲಿ ಸೇರಿಸಿಕೊಳ್ಳುತ್ತಿರಲಿಲ್ಲವೇನು? ಆದರೆ ಇದಕ್ಕಾಗಿ ನಾವು ಯಾರ ಬಳಿಯೂ ಭಿಕ್ಷೆ ಕೇಳಬೇಕಾಗಿಲ್ಲ. ನಾನು ಕಾಂಗ್ರೆಸ್ಸಿನವರ ಸಂಗಡ ಎಂದೂ ಸಲಹೆ, ವಿಚಾರ ಕೇಳಿಲ್ಲ. ಅವರಿಂದ ಮೈಲು ಮೈಲು ದೂರ ಉಳಿದೆ.

ಖಾನದೇಶದಿಂದ ನಮ್ಮ ಪಕ್ಷದ ಶ್ರೀ ದೌಲತ ಗುಲಾಜಿ ಜಾಧವ ಅವರು ಆಯ್ಕೆಯಾಗಿದ್ದಾರೆ. ಅವರಿಂದ ಕೆಲಸಮಾಡಿಕೊಳ್ಳಿರಿ. ಈ ದೇಶದಲ್ಲಿ ನಮ್ಮನ್ನು ಮನುಷ್ಯತ್ವದಿಂದ ನಡೆಸಿಕೊಳ್ಳುವುದಿಲ್ಲ, ಇದನ್ನು ನೀವು ಮರೆಯುತ್ತೀರಿ. ಆದರೆ ನಾನು ಮರೆಯಲು ಸಾಧ್ಯವಿಲ್ಲ. ಸತತ ಜಾಗೃತರಾಗಿದ್ದರೆ ಗೆಲುವು ದೊರೆಯುತ್ತದೆ.

ಈ ರೀತಿ ಡಾಕ್ಟರ್ ಸಾಹೇಬರ ಉಪನ್ಯಾಸ ಆಯಿತು. ಉಪನ್ಯಾಸ ಮುಗಿದೊಡನೆ ಡಾಕ್ಟರ್ ಸಾಹೇಬರಿಗೆ ಸೌ. ನರ್ಮದಾಬಾಯಿ ವಾಘ, ಲಳಂಗೀಕರ, ದಶರಥ ಧಾಂಕೂ ವಾಘ, ಹಳೇಧುಳೆ ಮತ್ತು ಬೇರೆ ಬೇರೆ ತಾಲೂಕಿನ ಜನರು ಮಾಲಾರ್ಪಣೆ ಮಾಡಿದ ಬಳಿಕ ಸಭೆಯು ಕೊನೆಗೊಂಡಿತು.

ಈ ಪಶ್ಚಿಮ ಖಾನದೇಶಜಿಲ್ಲೆಗೆ ಡಾ. ಬಾಬಾಸಾಹೇಬರು ಸಾಮಾಜಿಕ ಕಾರ್ಯಕ್ಕಾಗಿ ಎಂದೂ ಆಗಮಿಸಿರಲಿಲ್ಲ. ಬೇರೆ ಜಿಲ್ಲೆಯ ಅಸ್ಪೃಶ್ಯ ಧುರೀಣರು ಎಂದೂ ಚಾಲನೆ ನೀಡಿರಲಿಲ್ಲ. ಆದರೆ ಡಾ. ಬಾಬಾಸಾಹೇಬರ ವಿದ್ವತ್ತು ಮತ್ತು ಅಪೂರ್ವ ಕಾರ್ಯಕಂಡು ಸ್ವಾಭಿಮಾನಿ ಅಸ್ಪೃಶ್ಯ ಜನಸಮೂಹವು ದಡಬಡಿಸಿ ಎಚ್ಚರಗೊಂಡಿದ್ದರಲ್ಲಿ ಅನುಮಾನವಿಲ್ಲ.

ಅನಂತರ ಸ್ಕೌಟ್ ಜತೆಗೆ ಡಾ. ಬಾಬಾಸಾಹೇಬರರು ಅಂಬೇಡ್ಕರ ಸರ್ಕಲ್ಲಿಗೆ ಭೇಟಿಯಿತ್ತರು ಮತ್ತು ಸಂಜೆ ೬ ಗಂಟೆಗೆ ಅವರ ವಾಹನವು ಧುಳೆ ಸ್ಟೇಶನ್ನಿಗೆ ಬಂತು.

ಇವತ್ತು ಧುಳೆಯ ಪ್ರತಾಪ ಮಿಲ್ಲು ಚಾಲೂ ಇತ್ತು. ಅದು ಐದಕ್ಕೆ ಬಂದಾಗುತ್ತದೆ. ಮಿಲ್ಲಿನ ಸಮಯ ಮುಗಿದ ಬಳಿಕ ಮತ್ತೆ ಸ್ಟೇಶನ್ನಿನಲ್ಲಿ ಸ್ತ್ರೀಪುರಷರ ಸಮೂಹ ಡಾ. ಬಾಬಾಸಾಹೇಬರ ದರ್ಶನಕ್ಕೆ ಸೇರಿತ್ತು. ಅಲ್ಲಿ ಸ್ಕೌಟಿನ ಗೌರವವನ್ನು ಡಾ. ಬಾಬಾಸಾಹೇಬರಿಗೆ ನೀಡಲಾಯಿತು. ಆಗ ಭೀಮರಾವ ಸಾಳುಂಖೆ, ವೇಸಾಪಹಿಲವಾನ, ಶಂಕರರಾವ ಘೋಡೆ, ಕಿಸನರಾವ ಮುಂತಾದವರು ಲಾಠಿ ಆಟವಾಡಿದರು. ಅಲ್ಲಿ ಅನೇಕ ಸ್ತ್ರೀ, ಪುರುಷರು ಡಾ. ಬಾಬಾ ಸಾಹೇಬರಿಗೆ ಮಾಲಾರ್ಪಣೆ ಮಾಡಿದರು. ಆನಂತರ ೬.೪೦ಕ್ಕೆ ಎಲ್ಲರನ್ನು ಬೀಳ್ಕೊಟ್ಟು ಅವರ ವಾಹನ ಚಾಳಿಸಗಾವಕ್ಕೆ ಹೊರಟಿತು.

ಪೂರ್ವ ನಿರ್ಧಾರದಂತೆ ಡಾಕ್ಟರ್ ಸಾಹೇಬರು ರಾತ್ರಿ ೮.೩೦ಕ್ಕೆ ಚಾಳಿಸಗಾವಕ್ಕೆ ಖಂಡಿತ ಬರುವರೆಂಬುದು ಗಟ್ಟಿಯಾಗಿತ್ತು. ಆದರೆ ಅಷ್ಟರಲ್ಲಿ ಒಂದು ಸುದ್ದಿ ಬಂತು. ಡಾಕ್ಟರ್ ಸಾಹೇಬರು ಬರುತ್ತಿದ್ದ ಉಗಿಬಂಡಿಯ ಇಂಜಿನ್ ದಾರಿಯ ಮಧ್ಯೆ ಜಾಮದೆ ಸ್ಟೇಶನ್ ಬಿಡುತ್ತಿದ್ದಂತೆಯೇ ಸೀಕ್ ಆಯಿತು. ಆದಕಾರಣ ಜನರಲ್ಲಿ ನಿರಾಶೆ ಮೂಡಿತು. ೧–೨ ಗಂಟೆಯಲಿ ಇಂಜಿನ್ ಸರಿಪಡಿಸಿ, ಬಹಳ

ಅಂದರೆ ಎರಡುಗಂಟೆ ತಡವಾಗಿ ಬರಬಹುದೆಂಬ ಕಲ್ಪನೆ ಜನರದ್ದಾಗಿತ್ತು. ಡಾಕ್ಟರ್ ಸಾಹೇಬರ ಸ್ವಾಗತಕ್ಕೆ ಶ್ರೀ ಝಿಪರು ತುಕಾರಾಮ ಜಾಧವ, ನಥ್ಥು ದೋನೂ ಜಾಧವ, ಜಾಬರಸಾಹೇಬ, ಮಾಂಗೋ ಆನಂದಾ ಜಾಧವ ಇವರು ಸ್ಟೇಶನ್‌ನಲ್ಲಿ ಹಾಜರಿದ್ದರು. ಬೋರ್ಡಿಂಗ್‌ನಲ್ಲಿರುವ ಜನರ ಮನರಂಜನೆಗಾಗಿ ಮೆ. ಭಾಸ್ಕರಮಾಸ್ತರ, ಜಗನ್ನಾಥ ಸುಂದರನಾಥ ಅವರ ಪೋವಾಡ ಗಾಯನ ಮತ್ತು ವೇಡಾ ಬಾಯಿ ಚವ್ಹಾಣ, ಶಾಂತಾಬಾಯಿ ಜಾಧವ ಇವರ ಬೋಧಪರ ಪದಗಳ ಗಾಯನ ಈ ಮುಂತಾದ ಕಾರ್ಯಕ್ರಮಗಳು ನಡೆದವು. ಸೋದರಿಯರಿಗೆ ಉಳಿದುಕೊಳ್ಳಲು ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ ಮಾಡಲಾಗಿತ್ತು. ಶ್ರೀಮತಿ ಧುಪತಾ ಬಾಯಿ ದಿವಾಣ, ಝೀಲಾಬಾಯಿ ಪೋಮಮೋರೆ, ಸಖುಬಾಯಿ ಆನಂದಾ ಜಾಧವ, ಸಾವಿತ್ರಬಾಯಿ ತೋತಾರಾಮ ಜಾಧವ, ನಾರದಾಬಾಯಿ ನಾನಾಜಿ ಜಾಧವ, ಭಾಗಾಬಾಯಿ ಉರವಾ ಸರದಾರ, ದಯಾಬಾಯಿ ರಾಮಾಜಿ ಜಾಧವ, ಮುಂತಾದ ಪ್ರಮುಖ ಮಹಿಳೆಯರು ಹಾಜರಿದ್ದರು. ಕೊನೆಗೆ ನಸುಕಿನ ೩–೪ಗಂಟೆಗೆಗಾಡಿ ಸ್ಟೇಶನ್ನಿಗೆ ಬರಬಹುದೆಂಬ ಸುದ್ಧಿಯನ್ನು ಶ್ರೀ ರಾಯಲಾ ಮಾಸ್ತರ ಅವರು ತಂದರು. ಆಯಿತು, ಜನರು ಬೋರ್ಡಿಂಗ್ ಆವರಣ ಬಿಟ್ಟವರೇ ರಾತ್ರಿ ಹನ್ನೆರಡುಗಂಟೆಗೆ ಸ್ಟೇಶನ್ನಿಗೆ ಬಂದರು. ಈ ಮುಂಚೆಯೇ ಅಕ್ಕಪಕ್ಕದ ಹಳ್ಳಿಯ ಜನರು ಸ್ಟೇಶನ್‌ನಲ್ಲಿ ಜಮಾಯಿಸಿದ್ದರು. ಅದರಲ್ಲಿ ಈ ಜನರೂ ಸೇರಿದ್ದರಿಂದ ಸ್ಟೇಶನ್ನು ತುಂಬೆಲ್ಲ ಜನಸಾಗರವೇ ತುಂಬಿಹೋಗಿತ್ತು. ಅವರು ನಸುಕಿನ ೪ ಗಂಟೆಯ ತನಕ ಎಚ್ಚರವಾಗಿ ಕಾಯುತ್ತಿದ್ದರು. ಒಮ್ಮೆ ಸ್ಟೇಶನ್ನಿಗೆ ಗಾಡಿ ಬಂದೇ ಬಿಟ್ಟಿತು. ಡಾ. ಬಾಬಾಸಾಹೇಬ ಅಂಬೇಡ್ಕರರ ಜಯಘೋಷದಿಂದ ಇಡೀ ಪರಿಸರ ದಣದಣಿಸಿತು. ಡಾ. ಬಾಬಾಸಾಹೇಬ ಗಾಡಿಯಿಂದ ಇಳಿಯುತ್ತಿದ್ದಂತೆಯೇ ಇಲ್ಲಿಯ ಸಮಾಜದ ಪರವಾಗಿ ಶ್ರೀ ರಾಯಲಾ ಮಾಸ್ತರರು ಅವರಿಗೆ ಮಾಲಾರ್ಪಣೆ ಮಾಡಿದರು. ಅದೇ ಸಮಯದಲ್ಲಿ ಎಂಟುಮೈಲು ಕಾಲ್ನಡಿಗೆಯಿಂದ ಆಗಮಿಸಿದ ಶ್ರೀ ಡಿ.ಜಿ. ಜಾಧವ ಅವರ ತಂದೆ ಮತ್ತು ತಾಯಿಯವರು ಡಾಕ್ಟರ್‌ಸಾಹೇಬರನ್ನು ಕಂಡರು. ಬಾಬಾಸಾಹೇಬರಿಗೆ ಅವರು ವಂದಿಸಿದರು. ಇಂಜಿನ್ನಿನ ಸಮಸ್ಯೆಯಿಂದ ತಡವಾಗಿತ್ತು. ೫ ಗಂಟೆಗೆ ಮುಂಬೈಗೆ ಪ್ರಯಾಣ ಬೆಳೆಸುವುದರಿಂದ ಬೋರ್ಡಿಂಗ್‌ಗೆ ಅವರು ಹೋಗಲಾಗಲಿಲ್ಲ. ಸ್ಟೇಶನ್ನಿನಲ್ಲೇ ನೆರೆದವರು ಅವರನ್ನು ಸ್ವಾಗತಿಸಿದರು. ವಿವಿಧ ಸಂಘ, ಸಂಸ್ಥೆಗಳು ಅವರಿಗೆ ಮಾಲಾರ್ಪಣೆ ಮಾಡಿ ಗೌರವಿಸಿದವು. ಡಾಕ್ಟರ್ ಸಾಹೇಬರು ಪ್ರೀತಿಯಿಂದ ಸ್ವೀಕರಿಸಿ, ಚಳುವಳಿ ಕುರಿತು ಪುಟ್ಟ ಸಂದೇಶ ನೀಡಿ ಹೊರಟರು. ಈ ಅಪೂರ್ವ ಸತ್ಕಾರ ಸಮಾರಂಭ ಚಾಳಿಸಗಾವ ತುಂಬ ಚರ್ಚೆಗೀಡಾಯಿತು.

## ೧೦೪.
# ನೀವು ಸ್ವತಂತ್ರ ಮಜೂರ ಪಕ್ಷವನ್ನು ಸಂಘಟಿಸಿ ಬಲಪಡಿಸಿರಿ

(ಡಾ. ಬಾಬಾಸಾಹೇಬ ಅಂಬೇಡ್ಕರರ ಈ ಭಾಷಣವು ದಿ. ೧೪ ಆಗಸ್ಟ ೧೯೩೭ರ ಜನತೆಯ ಸಂಚಿಕೆಯಲ್ಲಿ ಸಂಪಾದಕೀಯ ಜಾಗದಲ್ಲಿ ಬಂದಿದೆ. ಭಾಷಣವನ್ನು ಯಾವಾಗ ಮತ್ತು ಎಲ್ಲಿ ಮಾಡಿದ್ದರು ಎಂಬ ಬಗ್ಗೆ ಉಲ್ಲೇಖವಿಲ್ಲ–ಸಂಪಾದಕ)

ಪ್ರಿಯ ಬಂಧಗಳೆ,

ನಿಮ್ಮ ಈ ಸಭೆಯನ್ನುದ್ದೇಶಿಸಿ ಮಾತಾಡಲು ನನಗೆ ಅತೀವ ಸಂತೋಷವಾಗುತ್ತಿದೆ. ಸ್ವತಂತ್ರ ಮಜೂರ ಪಕ್ಷಕ್ಕೆ ಒಂದು ವ್ಯವಸ್ಥಿತ ಸ್ವರೂಪ ನೀಡುವ ಹಾಗೂ ತಮ್ಮಲ್ಲಿ ಸಂಘಟನೆ ಬೇರೂರುವಂತೆ ಮಾಡುವ ತಮ್ಮ ಈ ಪ್ರಯತ್ನವೇನು ಆರಂಭಗೊಂಡಿದೆ, ಅದು ಸ್ತುತ್ಯವೂ ಮತ್ತು ಅತ್ಯಂತ ಮಹತ್ವದ್ದೂ ಆಗಿದೆ.

ಆರುತಿಂಗಳ ಹಿಂದೆನಡೆದ ಅಸೆಂಬ್ಲಿ ಇಲೆಕ್ಷನ್ನಿನ ಸಿಂಹಾವಲೋಕನ ಮಾಡಿದರೆ ಆಗ ನಮ್ಮ ಜನರು ತೋರಿದ ಕಾರ್ಯದಕ್ಷತೆ ಬಗ್ಗೆ ನನಗೆ ಧನ್ಯತೆಯೆನಿಸುತ್ತದೆ. ಯಾಕೆಂದರೆ ಅತ್ಯಂತ ಪ್ರಭಾವಶಾಲಿಯಾದ ಮತ್ತು ಶ್ರೀಮಂತವೆನಿಸಿದ ಕಾಂಗ್ರೆಸ್ಸಿನಜತೆ ಸ್ಪರ್ಧೆಗೆ ಇಳಿಯಬೇಕಾಗಿತ್ತು. ಸ್ವತಂತ್ರ ಮಜೂರಪಕ್ಷದ ಒಬ್ಬ ಅಭ್ಯರ್ಥಿಯೂ ಆಯ್ಕೆಯಾಗಕೂಡದೆಂದು ಕಾಂಗ್ರೆಸ್ಸು ಪಣತೊಟ್ಟಿತ್ತು. ನಮ್ಮವರನ್ನು ಸೋಲಿಸಲು ಅದು ಸಾಕಷ್ಟು ಪ್ರಯತ್ನಮಾಡಿತ್ತು. ಇಂಥ ಬಿಕ್ಕಟ್ಟು ಪರಿಸ್ಥಿತಿಯನ್ನು ನಾನು ಎದುರಿಸಿದೆ. ಇತರ ಪ್ರಾಂತಗಳನ್ನು ಗಮನಿಸಿದರೆ ಎಲ್ಲರೂ ಕಾಂಗ್ರೆಸ್ಸಿಗೆ ಬೆನ್ನುತೋರಿದ್ದು ಕಂಡು ಬರಬಹುದು. ಇಡೀ ಹಿಂದೂಸ್ಥಾನದಲ್ಲಿ ಕಾಂಗ್ರೆಸ್ ಜೊತೆ ಹೋರಾಡಲು ನಾನೊಬ್ಬನೇ ಟೊಂಕಕಟ್ಟಿ ನಿಂತು ಯಶಸ್ವಿಯೂ ಆಗಿದ್ದೇನೆ. ಆದರೆ ಒಂದು ಮಾತು ಸತ್ಯ, ನಿಮ್ಮೆಲ್ಲರ ಬೆಂಬಲವಿರದಿದ್ದಿದ್ದರೆ ಇದು ಸಾಧ್ಯವಿರಲಿಲ್ಲ. ನಿಮಗೆ ಗೊತ್ತೂ ಇದೆ, ನಮ್ಮವರೇ ಕೆಲವರು ಕಾಂಗ್ರೆಸ್ಸಿಗೆ ಬಲಿಯಾಗಿದ್ದರು. ಆದರೆ ಇಂಥ ಸ್ಥಿತಿಯಲ್ಲೂ ನಾವು ದೊಡ್ಡ ಯಶಸ್ಸನ್ನು ಸಂಪಾದಿಸಿದ್ದೆವು. ಈ ವಿಚಾರವನ್ನು ಕಾಂಗ್ರೆಸ್ಸನ್ನು ಬೆಂಬಲಿಸುವವರೂ ಒಪ್ಪುತ್ತಾರೆ. ಆಗ ಇಡೀ ಹಿಂದೂ ಸ್ಥಾನದಲಿ ಮೂರೇಸ್ಥಾನಗಳು ಮಹತ್ವದ್ದು ಎನಿಸುತ್ತಿದ್ದವು. ಅವು ಯಾವುವು ಎಂದರೆ, ಡಾ. ವಾಡೆಯವರ ಮುಂಬೈ ಯುನಿವರ್ಸಿಟಿ ಸ್ಥಾನ, ಲೋಕಶಾಹಿ ಸ್ವರಾಜ್ಯಪಕ್ಷದ ಅಧ್ವರ್ಯು ಶ್ರೀ ಲಕ್ಷ್ಮಣ ಬಳವಂತ ಭೋಪಟಕರ ಅವರ ಪುಣೆಯ ಕ್ಷೇತ್ರ ಮತ್ತು ಮೂರನೆಯದು ಸ್ವತಂತ್ರ ಮಜೂರ ಪಕ್ಷದ ನನ್ನ ಮುಂಬೈನ ಸ್ಥಾನ. ಇದರಲ್ಲಿ ಎರಡು ಸ್ಥಾನಗಳನ್ನು ಕಾಂಗ್ರೆಸ್ಸು ಪಡೆಯಿತು. ಆದರೆ ಮೂರನೆಯ ನಮ್ಮ ಸ್ಥಾನವನ್ನು ಪಡೆಯಲಾಗಲಿಲ್ಲ. ಇದರಿಂದ ಕಾಂಗ್ರೆಸ್ಸಿನವರಿಗೆ ತಮ್ಮ ಸಾಮರ್ಥ್ಯದ ಅರಿವಾಗಿದೆ. ಯಾವ ವಲ್ಲಭಭಾಯಿ ಪಟೇಲರು ಚುನಾವಣೆ ಪೂರ್ವದಲ್ಲಿ ಸ್ವತಂತ್ರ ಮಜೂರ ಪಕ್ಷದ ಹೆಸರನ್ನೂ ಎತ್ತಲು ಸಿದ್ಧರಿರಲಿಲ್ಲವೋ ಅದೇ ವಲ್ಲಭಭಾಯಿ ಪಟೇಲರು ಕಾಂಗ್ರೆಸ್ಸಿನ ಮಂತ್ರಿಸ್ಥಾನವನ್ನು ಸ್ವೀಕರಿಸುವಾಗ ಶನಿವಾರ ವಾಡೆಯೆದುರು

---

ಜನತಾ: ೧೪ ಆಗಸ್ಟ್ ೧೯೩೭.

ತುಂಬಿದ ಸಭೆಯಲ್ಲಿ ಹೀಗೆ ಹೇಳಿದರು,–ಮುಂಬೈ ಅಸೆಂಬ್ಲಿಯಲ್ಲಿ ಭಿನ್ನಭಿನ್ನ ಪಕ್ಷಗಳೇನಿದ್ದಾವೆಯೋ ಅವುಗಳಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರರ ಸ್ವತಂತ್ರ ಮಜೂರ ಪಕ್ಷಕೂಡ ಅತ್ಯಂತ ಮಹತ್ವದ್ದಾಗಿದೆ. ಮತ್ತು ಆ ಪಕ್ಷದ ಅನಿಸಿಕೆಗಳನ್ನು ಕಾಂಗ್ರೆಸ್ಸು ಒಪ್ಪಬೇಕಾಗುತ್ತದೆ. ಹಾಗಿದ್ದರೆ ಈ ಪರಿಣಾಮ ಹೇಗಾಯಿತು, ಇದರ ಕುರಿತು ಆಳವಾಗಿ ಯೋಚಿಸಿರಿ. ಈ ಪರಿಣಾಮವು ಬೇರೆ ಯಾರದ್ದೂ ಅಲ್ಲ, ನಮ್ಮ ಸಂಘಟನೆಯದ್ದೇ ಪರಿಣಾಮವಾಗಿದೆ.

ಕಾಂಗ್ರೆಸ್ಸು ಹಿಂದೂಗಳ ಸಂಸ್ಥೆ. ಹಿಂದೂಸ್ಥಾನದ ಮೇಲೆ ಇಲ್ಲಿತನಕ ಇಂಗ್ಲೀಷ ಸರಕಾರದ ರಾಜ್ಯವಿತ್ತು. ಆದ್ದರಿಂದ ಇಲ್ಲಿತನಕ ಇವರ ಕೈಯಲ್ಲಿ ರಾಜಕಾರಣದ ಸೂತ್ರಗಳರಲಿಲ್ಲ. ಆದರೆ ಈಗ ಹಿಂದೂಸ್ಥಾನದ ಮೇಲೆ ಕೇವಲ ಹೆಸರಿಗೆ ಇಂಗ್ಲೀಷ್‌ಸರಕಾರ ರಾಜ್ಯವಿದೆ. ರಾಜಕಾರಣದ ಎಲ್ಲ ಸೂತ್ರಗಳು ಇವತ್ತು ಹಿಂದೂಗಳ ಕೈಸೇರಿದೆ. ಆದಕಾರಣ ಇನ್ನುಮುಂದೆ ನಾವೀಗ ನಮ್ಮ ಬಚಾವಿಗಾಗಿ ಸಂಘಟಿತ ಯತ್ನ ಮಾಡಬೇಕಿದೆ. ಅದರ ಹೊರತು ಬೇರೆ ಗತ್ಯಂತರವಿಲ್ಲ. ಯಾವ ಕೌನ್ಸಿಲ್ ಮೂಲಕ ರಾಜಕೀಯ ಅಧಿಕಾರದ ವಿನಿಯೋಗ ಮಾಡಲಾಗುತ್ತದೆಯೋ ಆ ಕೌನ್ಸಿಲ್‌ನಲ್ಲಿ ನಿಮ್ಮ ಪ್ರತಿನಿಧಿ ಸೇರಬೇಕು. ಹಿಂದೂಸ್ಥಾನದಲ್ಲಿ ಎಲ್ಲೆಡೆ ಯಾವ ಕಾಂಗ್ರೆಸ್ಸಿನ ಗೆಲುವು ಆಗಿದೆಯೋ ಅದು ಕಾಂಗ್ರೆಸ್ಸಿನದ್ದಾಗಿರದೆ ಬ್ರಾಹ್ಮಣ್ಯರದ ಜಯವಾಗಿದೆ. ಇದನ್ನು ನೀವು ಮರೆಯಬಾರದು. ೫–೬ಪ್ರಾಂತಗಳ ಪ್ರಮುಖ ದಿವಾನರ ಸ್ಥಾನಗಳು ಬ್ರಾಹ್ಮಣರ ಕಡೆಗೆಯೆ ಹೋಗಿವೆ. ಮತ್ತು ನಮ್ಮ ಮುಂಬೈ ಪ್ರಾಂತದೊಳಗಿನ ೧೧ ಸ್ಥಾನಗಳ ಪೈಕಿ ೫ ಸ್ಥಾನಗಳು ಬ್ರಾಹ್ಮಣರದ್ದೇ ಪಾಲಾಗಿವೆ. ೧೯೧೯ರಿಂದ ೧೯೩೫ರ ತನಕ ಕೌನ್ಸಿಲ್‌ನಲ್ಲಿ ಬ್ರಾಹ್ಮಣ ಸಭಾಸದಸ್ಯರ ಸಂಖ್ಯೆ ಅತ್ಯಂತ ಕಮ್ಮಿಯೆಂದರೆ ೧೦–೧೨ರಷ್ಟಿತ್ತು. ಅದು ಮುಂದೆ ಕಡಿಮೆಯಾಗುತ್ತ ಸಾಗಿತು. ಆದರೆ ಇಂದು ಕಾಂಗ್ರೆಸ್ಸಿನ ಹೆಸರಲ್ಲಿ ಮುಂಬೈ ಪ್ರಾಂತದಲ್ಲಿ ೨೭ ಬ್ರಾಹ್ಮಣರು ಆರಿಸಿ ಬಂದಿದ್ದಾರೆ. ಇದರಿಂದ ಬ್ರಾಹ್ಮಣ್ಯದ ಗೆಲುವು ಎಷ್ಟು ದೊಡ್ಡದು ಎನ್ನುವುದು ಕಂಡುಬರುತ್ತದೆ. ಈ ಬ್ರಾಹ್ಮಣ್ಯದಿಂದ ನೀವು ಸ್ವಂತಕ್ಕೆ ಬಚಾವು ಆಗಬೇಕಾದರೆ ಸಂಪೂರ್ಣ ನೀವು ಸಂಘಟಿತರಾಗಬೇಕು.

ಹಿಂದಿನ ರೌಂಡ್‌ಟೇಬಲ್ ಕಾನ್ಫರನ್ಸ್ ಸಂದರ್ಭದಲ್ಲಿ ನನ್ನಿಂದ ಒಂದು ತಪ್ಪಾಯಿತು. ಅಲ್ಪಸಂಖ್ಯಾತ ಪಕ್ಷದಿಂದ ಒಬ್ಬ ಪ್ರತಿನಿಧಿಯನ್ನಾದರೂ ಗವರ್ನರ್‌ರು ಮಂತ್ರಿಮಂಡಲದಲ್ಲಿ ನೇಮಿಸಬೇಕೆಂಬ ಕಾನೂನನ್ನೇ ಸಿದ್ಧಪಡಿಸಬೇಕಿತ್ತು. ಈ ಜನರ ಮರ್ಜಿಯನ್ನು ಅವಲಂಬಿಸಬಾರದಿತ್ತು. ಆದರೆ ಆಗ ಯೋಚಿಸಿದಾಗ 'ಅತ್ತದರಿ ಇತ್ತಪುಲಿ'ಯ ಮಾತಿನಂತೆ ಈ ವಿಷಯದಲ್ಲಿ ಹೆಚ್ಚಿಗೆ ಒತ್ತಡ ಹೇರಲಿಲ್ಲ. ಆದರೆ ಅವರ ಮರ್ಜಿ ಕಾಯ್ದಾಗ ಯಾವ ಪರಿಣಾಮ ಆಯಿತು ನೋಡಿರಿ! ಅಸ್ಪೃಶ್ಯರ ಒಬ್ಬರನ್ನೂ ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲಿಲ್ಲ. ಈ ಬಾಬಾತ್ತಿನಲ್ಲಿ ಕಾನೂನಿಲ್ಲ; ಆದರೆ ಶಿಷ್ಟಾಚಾರಕ್ಕಾದರೂ ಅವರು ಒಬ್ಬ ಪ್ರತಿನಿಧಿಯನ್ನು ಸೇರಿಸಿಕೊಳ್ಳಬೇಕಿತ್ತು. ನಮ್ಮ ೧೫ಸ್ಥಳಗಳ ಪೈಕಿ ನಾಲ್ಕು ಸ್ಥಾನಗಳ ಮೇಲೆ ಕಾಂಗ್ರೆಸ್ಸು ತಮ್ಮ ಪರ ನಮ್ಮವರನ್ನು ಆರಿಸಿತಂದರು. ಹಾಗಿದ್ದರೆ ಮಂತ್ರಿಪದವನ್ನು ಯಾಕೆ ನೀಡಲಿಲ್ಲ? ಸರಿ, ನಾಲ್ಕೂಮಂದಿ ನಾಲಯಕರಾಗಿದ್ದಾರೆ ಎಂದನ್ನುವುದಾದರೆ ಕಾಂಗ್ರೆಸ್ಸು ಈ ನಾಲಾಯಕ ಮಂದಿಯನ್ನು ಆರಿಸಿ ತಂದಿರುವುದು ಕಾಂಗ್ರೆಸ್ಸು ಮಾಡಿದ ತಪ್ಪು ಎಂದು ಹೇಳಲು ಯಾವ ಅಡ್ಡಿಗಳಿಲ್ಲ ಅಲ್ಲವೇನು? ಮುಸ್ಲಿಮರ ಪ್ರತಿನಿಧಿಯನ್ನು ಯಾಕೆ ತಗೊಳ್ಳಲಿಲ್ಲ? ಇದಕ್ಕೊಂದೇ ಕಾರಣವೆಂದರೆ, 'ನಾವು ನಿಮಗಾಗಿ ಏನೆಲ್ಲ ಮಾಡಬಹುದು; ನಿಮಗೆ ಸ್ವತಃ ಏನೊಂದು ಮಾಡುವ ಜರೂರತ್ತಿಲ್ಲ' ಅನ್ನುವ ಸ್ವಭಾವ.

ಕೆಲ ದಿನಗಳ ಹಿಂದೆ ಒಬ್ಬ ಸಮಗಾರ ಸಮುದಾಯದ ಪುಢಾರಿ ದಿನಪತ್ರಿಕೆಯಲ್ಲಿ ನೀಡಿದ ಹೇಳಿಕೆ ಹೀಗಿತ್ತು. 'ಅಸ್ಪೃಶ್ಯರ ಪ್ರತಿನಿಧಿಯನ್ನು ಮಂತ್ರಿಮಂಡಳದಲ್ಲಿ ತೆಗೆದುಕೊಳ್ಳದಿರುವುದಕ್ಕೆ ನಮಗೇನೂ

ಕೆಡುಕೆನಿಸಿಲ್ಲ. ಕಾರಣ ಖೇರ ಸಾಹೇಬರ ಮೇಲೆ ನಮಗೆ ಪೂರ್ಣನಂಬಿಕೆಯಿದೆ'. ಒಂದುಪಕ್ಷ ಹೀಗಿದ್ದರೆ ಈ ಜನ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಇಷ್ಟೇಕೆ ಕಷ್ಟಪಡಬೇಕಿತ್ತು.? ಈ ರೀತಿ ಈ ಜನರ ಮೇಲೆ ನಂಬಿಕೆಯಿಟ್ಟರೆ ನಿಮ್ಮನ್ನು ಮುಳುಗಿಸಿಬಿಟ್ಟಾರು, ಇದನ್ನು ಗಮನದಲ್ಲಿಡಿರಿ.

ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ಸಿನ ದಮ್ಮಡಿಯ ಸಭಾಸದಸ್ಯರು ಅಲ್ಲ, ಆದರೆ ಅವರೆಲ್ಲ ಫತವಾಗಳನ್ನು ಕಾಂಗ್ರೆಸ್ಸಿನ ಜನರು ಒಪ್ಪುತ್ತಾರೆ. ಹಾಗಾದರೆ ಈ ವಿಷಯದಲ್ಲಿ ಮಾತ್ರ ಅವರು ಏನೊಂದು ಮಾಡುವುದಿಲ್ಲ ಯಾಕೆ? ಆದರೆ ಅವರಿಗೆ ನಮ್ಮ ಬಗೆಗೆ ಯಾವ ಕಾಳಜಿಗಳಿಲ್ಲ. ಅದಕ್ಕೆ ನಾವು ಸಂಘಟಿತರಾಗಬೇಕು. ಇನ್ನೊಂದು ಮಾತನ್ನು ನಿಮಗೆ ಹೇಳಬೇಕು, ಕೌನ್ಸಿಲ್‌ಗೆ ಸೇರುವುದೆಂದರೆ ಅಷ್ಟು ಸರಳಮಾತಲ್ಲ. ಅದಕ್ಕಾಗಿ ಪ್ರಪಂಚವನ್ನು ತ್ಯಾಗ ಮಾಡಬೇಕು. ಚುನಾವಣೆ ವೆಚ್ಚವು ಜಬರದಸ್ತಾಗಿರುತ್ತದೆ. ಅದನ್ನು ಮಾಡುವುದು ಅಭ್ಯರ್ಥಿಗಳಿಗೆ ಕಷ್ಟ. ಕಳೆದ ಚುನಾವಣೆಗೆ ನಿಂತ ಅಭ್ಯರ್ಥಿಗಳಿಗೆ ಹಣಕಾಸಿನ ಸಹಾಯವನ್ನು ನಾನು ಮಾರಬೇಕಾಗಿ ಬಂತು. ಪ್ರತಿ ಚುನಾವಣೆಗೆ ನಾನು ಹೀಗೆ ಸಹಾಯ ಮಾಡುವುದು ಸಾಧ್ಯವಿಲ್ಲ. ಅಭ್ಯರ್ಥಿಗಳೂ ಅಷ್ಟೊಂದು ಖರ್ಚು ಮಾಡುವುದೂ ಸಾಧ್ಯವಿಲ್ಲ. ಆದ್ದರಿಂದ ನೀವು ನಿಮ್ಮ ಒಬ್ಬ ಉತ್ತಮ ವ್ಯಕ್ತಿಯನ್ನು ಕೌನ್ಸಿಲ್‌ಗೆ ಕಳಿಸುವುದಾದರೆ ಅವರ ವೆಚ್ಚವನ್ನು ನೀವು ನೀಡಬೇಕು. ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಉಮೇದುವಾರರಿಗೆ ಆ ಪಕ್ಷವೇ ಹಣಖರ್ಚು ಮಾಡಿತ್ತು. ಮುಂಬೈ ಪಟ್ಟಣ ಒಂದರಲ್ಲೇ ಚುನಾವಣೆಯ ದಿನ ಸಾವಿರಾರು ರೂಪೈಗಳನ್ನು ಕಾಂಗ್ರೆಸ್ಸು ಖರ್ಚು ಮಾಡಿತ್ತು. ಈ ಮಾತು ಗಮನದಲ್ಲಿಡುವಂಥದ್ದು.

ನಾನು ಹೇಳುವುದಿಷ್ಟೆ, ಈ ಸಂಸ್ಥೆಯನ್ನು ಉತ್ತಮರೀತಿಯಲ್ಲಿ ಬಲಪಡಿಸಿರಿ ಮತ್ತು ಕಾಂಗ್ರೆಸ್ಸಿನಷ್ಟೆ ಪ್ರಬಲವಾಗಿಸಿರಿ. ಮುಂಬೈನಲ್ಲಿ ನಮ್ಮ ಜನಸಂಖ್ಯೆ ಒಂದು ಲಕ್ಷಕ್ಕಿಂತ ಅಧಿಕವಿದೆ. ಅದಕ್ಕೆ ಕೊನೆಪಕ್ಷ ಒಂದು ಲಕ್ಷ ಸಂಖ್ಯೆಯ ಜನರಾದರೂ ಈ ಸಂಸ್ಥೆಯ ಸದಸ್ಯರಾಗಿರಿ.

ಈ ಸಂಸ್ಥೆಯ ವಾರ್ಷಿಕ ಚಂದಾ ಎಂಟಾಣೆಯಿದೆ. ಅದು ತುಂಬಾ ಕಡಿಮೆಯೂ ಆಗಿದೆ. ಹಾಗಾಗಿ ಪ್ರತಿಯೊಬ್ಬರು ಆ ಹಣ ನೀಡಲು ಅಭ್ಯಂತರವಿಲ್ಲ. ಕಾಂಗ್ರೆಸ್‌ನ ಹಿಂದೆ ಹೇಗೆ ಸಿರಿವಂತರಿದ್ದಾರೋ ಹಾಗೆ ನಿಮ್ಮ ಬೆನ್ನು ಹಿಂದೆ ಯಾರೂ ಇಲ್ಲ. ನಿಮ್ಮ ಸಂಸಾರವನ್ನು ನೀವೇ ಹೂಡಬೇಕು. ವಿದೇಶದಲ್ಲೂ ಪಾರ್ಲಿಮೆಂಟಿನಲ್ಲಿ ಮಜೂರ (ಕೂಲಿಗಳ) ಪಕ್ಷವಿದೆ. ಅವರೂ ಸಹ ಹೀಗೆಯೇ ಚಂದಾಹಣ ಕೂಡಿಸಿ ಚುನಾವಣೆಗೆ ಸ್ಪರ್ಧಿಸುತ್ತಾರೆ.

ಯಾವುದೇ ಪಕ್ಷಕ್ಕೆ ದಿನಪತ್ರಿಕೆಯ ಅಗತ್ಯವಿರುತ್ತದೆ. ದಿನಪತ್ರಿಕೆ ಬಿಟ್ಟು ಕಾರ್ಯನಿರ್ವಹಿಸುವುದು ಕಷ್ಟ. ಆದ್ದರಿಂದ ನಮ್ಮ ಪಕ್ಷದ ಜನತಾಪತ್ರಿಕೆ ಒಳ್ಳೆದು ರೀತಿಯಲ್ಲಿ ನಡೆಯಬೇಕಿದೆ. ಕೌನ್ಸಿಲ್‌ಗೆ ನೀವು ಆರಿಸಿಕೊಟ್ಟವರು ನಿಮಗಾಗಿ ಏನು ಮಾಡುತ್ತಿದ್ದಾರೆಂಬುದನ್ನು ತಿಳಿಯಲು ಅದು ಬೇಕು. ಜನತಾ ಪತ್ರದಿಂದಲೇ ನಿಮ್ಮಗಮನಕ್ಕೆ ಬರುವುದು. ಇದಕ್ಕಾಗಿ ನೀವೆಲ್ಲ ಜನತಾಪತ್ರಿಕೆಯ ಚಂದಾದಾರರಾಗಬೇಕು. ಇದು ಅಗತ್ಯ. ಕೆಲವರು ಇತರ ಪತ್ರಿಕೆಗಳನ್ನು ಓದುತ್ತಾರೆ. ಯಾಕೆ? ಕಾರಣ ಅದರಲ್ಲಿ ಸಟ್ಟಾ ಸಂಖ್ಯೆಗಳಿರುತ್ತವೆ. ಭವಿಷ್ಯ ಇರುತ್ತದೆ. ಸಟ್ಟಾ ಆಡಿ ಯಾರಿಗೂ ಒಳ್ಳೆಯದಾಗಿಲ್ಲ. ಅದಲ್ಲದೆ ದಿನಪತ್ರಿಕೆಯಲ್ಲಿ ಬರುವ ಭವಿಷ್ಯ ಸತ್ಯವಲ್ಲ. ನಮ್ಮದೇ ಪತ್ರಿಕೆ ಹೊರತು ನಮ್ಮ ಪಕ್ಷದ ಅಧಿಕೃತ ಕಾರ್ಯಕ್ರಮ ಹಾಗೂ ಚಳುವಳಿಯ ನಿಜವಾದ ದಿಕ್ಕು ದೆಸೆಗಳು ಬೇರೆಯ ಪತ್ರಿಕೆಗಳಲ್ಲಿ ಸಿಗಲು ಸಾಧ್ಯವಿಲ್ಲ. ಇದಕ್ಕಾಗಿ ನಮ್ಮ ಜನತಾ ಪತ್ರಿಕೆಯ ಚಂದಾದಾರರಾಗಿ ಪಕ್ಷದ ಅಭಿಮಾನವಿಟ್ಟುಕೊಳ್ಳಬೇಕು.

ಕೊನೆಗೆ ನಿಮಗೆ ಒಂದೇ ಒಂದು ವಿಚಾರ ಹೇಳುವುದಿದೆ. ನೀವು ನಿಮ್ಮ ನಿಮ್ಮೊಳಗಿನ ಮಾನ

ಅವಮಾನದ ಭಾವನೆಗಳನ್ನು ಕಿತ್ತೊಗೆಯಬೇಕು. ನನ್ನ ಹೆಸರು ಬರದಿದ್ದರೆ ಮುಂದಿನ ಕಾರ್ಯಕ್ಕೆ ವಿರೋಧ ವ್ಯಕ್ತಪಡಿಸುತ್ತೇನೆ ಎಂಬ ಭಾವನೆ ಅತ್ಯಂತ ಕೆಟ್ಟದ್ದು. ನೀವು ನಿಮ್ಮ ಕೆಲಸ ಕಾರ್ಯ ಅಚ್ಚುಕಟ್ಟಾಗಿ ನಿರ್ವಹಿಸಿದರೆ ಹೆಸರು ನಿಮ್ಮ ಬೆನ್ನಟ್ಟಿ ಬರುತ್ತದೆ. ನನಗೆ ಮತ್ತು ನನ್ನ ಮಿತ್ರರಿಗೆ ಒಂದು ಮಾತು ಚೆನ್ನಾಗಿ ಗೊತ್ತಿದೆ. ಎಲ್ಲಿತನಕ ಒಳ್ಳೆಯ ಕಾರ್ಯಮಾಡಿ ತೋರಿಸಿರಲಿಲ್ಲವೋ ಅಲ್ಲಿತನಕ ಟೈಮ್ಸ್‌ನಂಥ ಪತ್ರಿಕೆಯಲ್ಲಿ ಸ್ವಲ್ಪಾದರು ಸುದ್ದಿ ಪ್ರಕಟಿಸುವುದಕ್ಕೆ ನಾವು ಅದೆಷ್ಟೋ ಮನಸು ಒಲಿಸುವುದನ್ನು ಮಾಡುತ್ತಿದ್ದೆವು. ಆದರೆ ಈಗ ಅದೇ ಜನ 'ನಿಮ್ಮದೇನಾದರು ಸುದ್ದಿ ಇದೆಯೇ? ಇದ್ದರೆ ಕಳಿಸಿರಿ' ಎಂದೆನ್ನುತ್ತ ಬೆನ್ನುಹತ್ತುತ್ತಾರೆ. ಎಲ್ಲರೂ ರಾಜಕಾರಣದ ಮತ್ತು ಸಮಾಜಕಾರಣದ ಜಗಳಗಳನ್ನು ತಕ್ಷಣ ಮರೆಯೇಕು. ಹಿಂದೆ ನಡೆದ ಮಹಾರ ಪರಿಷತ್ತಿನ ಸಂದರ್ಭದಲ್ಲಿ ನನಗೆ ಕಂಡು ಬಂದದ್ದೇನೆಂದರೆ, ಯಾರ ಕೈಯಲ್ಲಿ ಪರಿಷತ್ತಿನ ಅಧಿಕಾರವಿತ್ತೋ ಅವರಲ್ಲಿ ಕೆಲವರು ಆ ಅಧಿಕಾರವನ್ನು ತಮ್ಮೊಳಗಿನ ಜಗಳಕ್ಕೆ ದುರುಪಯೋಗ ಪಡಿಸಿಕೊಂಡರು, ಹೀಗಾಗಕೂಡದು.

ಈ ಸಂಸ್ಥೆಯ ಮುಖ್ಯ ಕಾರ್ಯವೆಂದರೆ ಚುನಾವಣೆ ಕಾಲದಲ್ಲಿ ಒಗ್ಗಟ್ಟಾಗಿರುವುದೇ ಆಗಿದೆ. ಈ ಸಂಸ್ಥೆಯ ಅಭ್ಯರ್ಥಿಗಳಿಗೇ ನೀವೆಲ್ಲರು ಮತ ಹಾಕಬೇಕು. ಇದಕ್ಕಾಗಿ ಸಂಘಟನೆ ಅಗತ್ಯ. ಅದು ಅದೆಷ್ಟು ಮಜಬೂತಾಗಿರಬೇಕೆಂದರೆ ನಮ್ಮ ಒಬ್ಬ ವ್ಯಕ್ತಿಯೂ ಬಿಟ್ಟುಹೋಗಬಾರದು. ಒಡೆದು ಹೋಗಬಾರದು. ಇದನ್ನು ಮಾಡದ ಹೊರತು ಬೇರೆ ಮಾರ್ಗವಿಲ್ಲ. ಹಿಂದಿನ ಇಲೆಕ್ಷನ್ನಿನಲ್ಲಿ ನನ್ನ ಮತ್ತು ಪಿ. ಬಾಳು ಅವರ ಮತಗಳಲ್ಲಿ ಹೆಚ್ಚೆಂದರೆ ಸಾವಿರ ಎರಡು ಸಾವಿರ ಮತಗಳ ಅಂತರವಿತ್ತು. ನಿಮ್ಮವರಲ್ಲಿ ಕೆಲವರು ದುರ್ಲಕ್ಷ್ಯ ಮಾಡಿದ್ದರೆ ಚುನಾವಣೆಯಲ್ಲಿ ನನ್ನ ಸ್ಥಿತಿ ಗಂಭೀರ ವಾಗಬಹುದಿತ್ತು. ನಿಮ್ಮ ಉನ್ನತಿಯ ಎಲ್ಲ ಅವಲಂಬನೆ ರಾಜಕಾರಣದ ಮೇಲೆಯೇ ಇದೆ. ಆದಕಾರಣ ನೀವು ಸಂಘಟನೆಗೆ ಒತ್ತು ನೀಡಿ ಸ್ವತಂತ್ರ ಮಜೂರ ಪಕ್ಷವನ್ನು ಬಲಿಷ್ಟಗೊಳಿಸಿರಿ. ಇಷ್ಟೇ ನನಗೆ ಹೇಳುವುದಿದೆ.

## ೧೦೫.

# ಪ್ರಾಂತದ ಪ್ರಧಾನ ಮಂಡಳವು ಅದರ ಬುದ್ಧಿವಂತಿಕೆಯ ಅಲೌಕಿಕ ಸಂಚಯವಾಗಬೇಕಿದೆ

ದಿ: ೨೩ ಆಗಸ್ಟ ೧೯೩೭ರಂದು ವಿಧಿಮಂಡಳದ ಸಭೆಯ ಮೊದಲ ಮಾಮೂಲಿ ಕಾರ್ಯಕಲಾಪದ ಬಳಿಕ ಮುಖ್ಯಪ್ರಧಾನ ಶ್ರೀ ಬಾಳಾಸಾಹೇಬ ಖೇರ (ಮಂತ್ರಿ) ಅವರು ದಿವಾಣರ ಸಂಬಳ ಸಂಬಂಧದ ಬಿಲ್, ಮೊದಲ ಸರಕಾರಿ ಬಿಲ್ ಮುಂತಾದವುಗಳನ್ನು ಸಾದರಪಡಿಸಿದರು. ಈ ಬಿಲ್ಲಿನಂತೆ ಪ್ರತಿ ದಿವಾಣರಿಗೆ ತಿಂಗಳಿಗೆ ೫೦೦ ರೂ, ಸಂಬಳ ೧೦೦ರೂ, ಬಾಡಿಗೆ ಮತ್ತು ೧೫೦ರೂ ಮೋಟಾರ್‌ಅಲೌನ್ಸ್ ನೀಡಲಾಗಿತ್ತು. ಈ ಬಿಲ್ಲನ್ನು ಅಸೆಂಬ್ಲಿಯಲ್ಲಿಟ್ಟಾಗ ಮುಖ್ಯ ಪ್ರಧಾನರು ಕಾಂಗ್ರೆಸ್‌ನ ಸ್ವಾರ್ಥ ಮಜೂರ ಪಕ್ಷದ ಪುಢಾರಿ ಡಾ. ಬಾಬಾಸಾಹೇಬ ಅಂಬೇಡ್ಕರರು ಭಾಷಣ ಮಾಡಿದರು. ಮಂಡಿಸಿದ ಈ ಬಿಲ್ಲಿನ ವಿರುದ್ಧ ಅಂಬೇಡ್ಕರರು ತುಂಬಾ ಪ್ರಭಾವಶಾಲಿ ಮತ್ತು ವಸ್ತುನಿಷ್ಠ ಭಾಷೆಯಲ್ಲಿ ತಮ್ಮ ಚಿಂತನೆಗಳನ್ನು ಮಂಡಿಸಿದರು. ಅವರು ಹೇಳಿದರು–

ಈಗ ನಾನು ಭಾಷಣ ಮಾಡಲು ನಿಂತಿದ್ದೇನೆ. ಭಾಷಣ ಎಂದು ಯಾಕೆ ಹೇಳಿದೆನೆಂದರೆ, ಈ ವಿಷಯದ ಮೇಲೆ ಸಭಾಗೃಹದಲ್ಲಿ ಮತವಿಭಜಣೆ ನೋಂದು ಮಾಡಿಕೊಳ್ಳುವ ಇಚ್ಛೆಯಂತು ನನಗೆ ಮೂಲತಃ ಇಲ್ಲ. ಪ್ರಸ್ತುತ ಬಿಲ್ಲಿನ ಸಂದರ್ಭದಲ್ಲಿ ನನ್ನ ಮೊದಲ ಆಕ್ಷೇಪ ಹೀಗೆ, ಸರಕಾರದ ಪರವಾಗಿ ಹೀಗೆ ನಾವೇ ಬಿಲ್ಲು ಮಂಡಿಸುವುದಕ್ಕಿಂತ ಸರ್ವಪಕ್ಷಗಳ ಸಮ್ಮತಿಯಿಂದ ಮಂಡಿಸಬೇಕಿತ್ತು. ಎರಡನೆಯ ವಿಚಾರವೆಂದರೆ ಈ odd ನಿರ್ಧರಿಸಿದ ಸಂಬಳ ಯೋಗ್ಯವಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ಬೇರೆ ವಸಾಹತುಗಳ ಮಂತ್ರಿಗಳ ಸಂಬಳದತ್ತ ಒಂದುಕ್ಷಣ ಕಣ್ಣಾಡಿಸಿದರೆ ಅಲ್ಲಿಯ ಮಂತ್ರಿಗಳ ಸಂಬಳವು ಸಾಧಾರಣ ಪ್ರತಿತಿಂಗಳಿಗೆ ೨,೦೦೦/–ರೂ ಹತ್ತಿರದಷ್ಟಿದ್ದುದು ಕಂಡುಬರುತ್ತದೆ. ಹಂಗಾಮಿ ಮಂತ್ರಿಮಂಡಳದ ಕಾಲದಲ್ಲಿ ಆ ಮಂತ್ರಿಗಳಿಗೆ ಹಿಂದೂಸ್ಥಾನದ ಭಿನ್ನಭಿನ್ನ ಪ್ರಾಂತಗಳಲ್ಲಿ ನೇಮಿಸಿದ ಸಂಬಳವು ಓರಿಯಾಪ್ರಾಂತ ಹೊರತುಪಡಿಸಿ ೨,೦೦೦/–ರೂಪೈಗಿಂತ ಹೆಚ್ಚಿಗಿತ್ತು. ಹೀಗೆ ಕಂಡುಬರುತ್ತದೆ. ಆದರೆ ಈಗ ಹೊಸದೊಂದು ಪದ್ಧತಿಯನ್ನೇ ಹಾಕಲಾಗುತ್ತಿದೆ. ಇನ್ನುಮುಂದೆ ಮಂತ್ರಿಗಳಿಗೆ ಪ್ರತಿತಿಂಗಳು ೫೦೦ರೂಪಾಯಿ ಸಂಬಳ ದೊರೆಯಬೇಕೆಂದು ಸೂಚಿಸಲಾಗಿದೆ. ಇವೆರಡೂ ರಕ್ಕಮಿನ ವ್ಯತ್ಯಾಸಗಳು ಕೇವಲ ಸಂಖ್ಯೆಗಳಿಗೆ ಅಲ್ಲ, ಒಂದು ತಾತ್ವಿಕ ವ್ಯತ್ಯಾಸವಿದೆ. ಯಾವುದೇ ಸ್ಥಾನದ ಸಂಬಳ ನಿರ್ಧರಿಸುವಾಗ ನಾಲ್ಕು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಅಗತ್ಯ. ೧) ಮಂತ್ರಿಗಳ ಸಾಮಾಜಿಕ ಸ್ಥಾನ ೨) ಕಾರ್ಯಕ್ಷಮತೆ ೩) ಪ್ರಜಾಪ್ರಭುತ್ವ ೪) ರಾಜ್ಯಕಾರಭಾರದ ಪಾವಿತ್ರ್ಯ ಮತ್ತು ಇವೇ ಆ ನಾಲ್ಕು ಯೋಚನೆಗಳು. ಪ್ರಾಂತದ ಮಂತ್ರಿಗಳು ಆ ಪ್ರಾಂತದ ಮೊದಲ ನಾಗರಿಕರಾಗಿರುವುದರಿಂದ ಅವರ ಬದುಕು ಹಸನಾಗಿರಬೇಕು, ಸುಸಂಸ್ಕೃತವಾಗಿರಬೇಕಾಗಿರುವುದು

---

ಜನತಾ: ೩೦ ಆಗಸ್ಟ್ ೧೯೩೭.

ಯೋಗ್ಯವೇ ಸರಿ. ಅದರ ಬಗ್ಗೆ ಅವರ ಮೇಲಂತು ಒತ್ತಾಯ ಮಾಡಲಾಗುವುದಿಲ್ಲ. ಅದಕ್ಕೆ ಮಂತ್ರಿಗಳ ಸಂಬಳದ ಕುರಿತು ಯೋಚಿಸುವಾಗ ಕೊನೆಯ ಮೂರು ವಿಚಾರಗಳನ್ನು ಬಿಡುವುದಕ್ಕಾಗುವುದಿಲ್ಲ. ಖುದ್ದಾಗಿ ಮಂತ್ರಿಗಳಿಗೆ ಏನನ್ನಿಸುತ್ತದೆಯೋ ನನಗೆ ಗೊತ್ತಿಲ್ಲ. ಆದರೂ ಸಹ ಧ್ವಜಕ್ಕೆ ವಂದಿಸುವುದು ಅಥವಾ ಕೇಶರಿಯಾ ಸ್ವಯಂಸೇವಕ ಗೌರವವಂದನೆ ಸ್ವೀಕರಿಸುವುದು– ಇದಿಷ್ಟೇ ಮಂತ್ರಿಸ್ಥಾನದ ಕಲ್ಪನೆಯಲ್ಲ ಅಂತ ನಾನು ತಿಳಿದಿದ್ದೇನೆ. ರಾಜ್ಯಕಾರಭಾರದ ಮೂರು ಪ್ರಮುಖ ಅಂಗಗಳಲ್ಲಿ ಕಾರ್ಯಕಾರಿ ಮಂಡಳಿಯು ಅತ್ಯಂತ ಮಹತ್ವದ್ದಾಗಿದೆ.

ಪ್ರಾಂತದ ಪ್ರಧಾನ ಮಂಡಳವು ಆ ಪ್ರಾಂತದ ಬೌದ್ಧಿಕತೆಯ ಅಲೌಕಿಕ ಸಂಚಯವಾಗಿರಬೇಕು. ಈ ಬಿಲ್ಲಿನಲ್ಲಿ ನಮೂದಿಸಿದ ಸಂಬಳದಿಂದ ರಾಜ್ಯಕಾರಭಾರದಲ್ಲಿ ಹುಟ್ಟುವ ಕಠಿಣ ಸಮಸ್ಯೆಗಳಿಗೆ ಉತ್ತರ ಶೋಧಿಸುವ ಜನರು ಮುಂದೆ ಬರಬಹುದು. ಬರದಿರಬಹುದೆಂಬುದರ ಕುರಿತು ಅನುಮಾನವಿದೆ. ಕಾರಣ ಬೇರೆ ಅಧಿಕ ಆಮಿಷಗಳು ಇತರ ಸ್ಥಾನಗಳಲ್ಲಿ ಕಾಣಬಹುದಾಗಿದೆ. ಎರಡನೆಯ ಮಾತು, ನಮ್ಮಲ್ಲಿ ಸುಶಿಕ್ಷಿತರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ನಮ್ಮಲ್ಲಿಯ ಸಾಮಾಜಿಕ ವ್ಯವಸ್ಥೆಯಿಂದ ಶಿಕ್ಷಣದ ಲಾಭವು ಕೇವಲ ಒಂದೇ ಸಣ್ಣ ವರ್ಗಕ್ಕೆ ದೊರೆಯುತ್ತ ಹೋಗಿದೆ. ಈ ಸಮಾಜ ವ್ಯವಸ್ಥೆಯು ಎಷ್ಟು ಬಲಿಷ್ಠವಾಗಿದೆಯೆಂದರೆ ಬ್ರಿಟಿಷ್ ಸರಕಾರಕ್ಕೂ ಸಂಪ್ರದಾಯ ಮುರಿಯಲಾಗಿಲ್ಲ. ಚಾತುರ್ವರ್ಣದೊಳಗೂ ಶಿಕ್ಷಣವನ್ನು ಒಂದು ವರ್ಗಕ್ಕೆಯೇ ದಾನಮಾಡಲಾಗಿದೆ. ಈಗ ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಇದರ ಪರಿಣಾಮ ಏನಾಗುತ್ತದೆ ಅದನ್ನೊಮ್ಮೆ ನೋಡಿರಿ. ಯಾರ ಬಳಿ ಹಣಬಲವಿದೆಯೋ ಅವರು ತಮ್ಮ ಖಾಸಗಿ ಇಲ್ಲವೆ ಬೇರೆ ಹೇತುಗಳ ಪುರಸ್ಕಾರಾರ್ಥವಾಗಿ ರಾಜಕೀಯ ಸತ್ತೆಯನ್ನು ತನ್ನದಾಗಿಸಿಕೊಳ್ಳಬಹುದು. ಅಥವಾ ಎಲ್ಲಿ ಏನೊಂದೂ ಸಿಗದಿರುವ ಮಂದಿ ಮಂತ್ರಿಗಳಾಗಬಹುದು. ನನ್ನ ಅನಿಸಿಕೆಯೆಂದರೆ, ಮಂತ್ರಿಗಳ ಸಂಬಳವು ಅವರನ್ನು ಮೋಹದಿಂದ ದೂರವಿಡುವಷ್ಟು ಅಗತ್ಯವಾಗಿರಲಿ. ಯಾವಾಗ ಮಂತ್ರಿಗಳ ಸಂಬಳ ೪,೦೦೦ ಮತ್ತು ೩,೦೦೦ ರೂಪ್ಯೆ ಇತ್ತು ಆಗಲೂ ನಮ್ಮ ಪ್ರಾಂತಗಳಲ್ಲಿ ಅನೇಕ ವಿಚಾರಗಳಲ್ಲಿ ಅಪಕೀರ್ತಿಯಿತ್ತು. ಹಾಗಾದರೆ ಈಗವರ ಸಂಬಳ ೫೦೦ ರೂಪ್ಯೆ ಆದಾಗ ಅವರ ಸಂಖ್ಯೆ ಹೆಚ್ಚಾದೀತು ಎಂದರೆ ಏನು ಬಿಗಡಾಯಿಸುತ್ತದೆ? ಖರೆ ಸಮಸ್ಯೆಯೆಂದರೆ, ಸಂಬಳದ ಮಟ್ಟ ಹೀಗಿಟ್ಟರೆ ಸುರಕ್ಷಿತ ರಾಜ್ಯಾಡಳಿತ ಸಾಧ್ಯವೇ? ಕಾಂಕ್ರಾಕ್ಟು ನೀಡುವಾಗಲೂ ನಾವದನ್ನು ಎಲ್ಲರಿಗೂ ಕಮ್ಮಿ ರಕ್ಕಮ್ಮಿನ ಟೆಂಡರ್‌ಗೆ ನೀಡುವುದಿಲ್ಲ. ಕಡಿಮೆ ಸಂಬಳ ಸ್ವೀಕರಿಸಲು ಸಿದ್ಧರಾಗಿರುವುದೂ ಸಹ ಸಂಬಳ ಕಡಿಮೆಯಾಗಿಡಲು ಇರುವ ಯೋಗ್ಯ ಕಾರಣವಲ್ಲ. ಉಳಿತಾಯ ಮಾಡುವುದೂ ಕೂಡ ಯೋಗ್ಯ ಆಲೋಚನೆಯಿಂದ ಮಾಡಬೇಕು. ಎರಡನೆಯ ಸಂಗತಿಯೆಂದರೆ, ಈ ಸಂಬಳ ಕಡಿಮೆಯೆಂಬುದರ ಅರ್ಥ ರಾಷ್ಟ್ರೀಯ ಬದುಕಿನ ಮಟ್ಟ ಒಟ್ಟಿಗೆ ಸುಸಂಗತಗೊಂಡಿರಬೇಕು. 'ಹರಿಜನ'ರಲ್ಲಿ ಬೇರೆ ಬೇರೆ ದೇಶದ ರಹವಾಸಿಗಳ ಸಾಮಾನ್ಯ ಉತ್ಪನ್ನದ ಯಾವ ಅಂಕಿಗಳನ್ನು ಕೊಟ್ಟಿದ್ದಾರೋ ಅದರಲ್ಲಿ ಹಿಂದಿ ವ್ಯಕ್ತಿಯ ಸಾಮಾನ್ಯ ಉತ್ಪನ್ನವು ೪ ಪೌಂಡು ಇರುವಾಗ ಈ ಸಂಬಳವು ಅದರಲ್ಲಿ ಹೇಳಿದಂತೆ ಪ್ರತಿತಿಂಗಳಿಗೆ ೭೫ ರೂಪ್ಯೆ ಇರಬೇಕಾದುದು ಉಚಿತವಾಗಿದೆ. ಈ ದೃಷ್ಟಿಯಿಂದ ೫೦೦ ರೂ ಸಂಬಳವು ದೊಡ್ಡದಾದ ಮಿತಿಮೀರಿದ ವೆಚ್ಚ ಆಗಬಹುದು. ಹಾಗಿದ್ದರೆ ಪ್ರಾಮಾಣಿಕವಾದ ೭೫ ರೂ ಸಂಬಳವನ್ನು ಯಾಕೆ ತೆಗೆದುಕೊಳ್ಳುವುದಿಲ್ಲ? ನನಗೆ ಹೇಳುವುದಿದೆ, ಈ ರೀತಿಯಾಗಿ ನಿಮ್ಮ ಬಗ್ಗೆ ಜನತೆಯ ಮನದಲ್ಲಿ ಭರವಸೆ ಉಂಟಾಗುವುದಿಲ್ಲ, ಇಂಥ ಮೋಸತನ ಯಾಕೆ? ಬೆತ್ತಲಾಗಿ ಅಡ್ಡಾಡುವುದು, ಸಿಗರೇಟು ಬದಲು ಬೀಡಿ ಸೇದುವುದು ಎತ್ತಿನ ಬಂಡಿಯಲ್ಲಿ, ಅಡ್ಡಾಡುವುದರಿಂದ, ಇಲ್ಲವೆ ಮೂರನೆಯ ದರ್ಜೆಯಲ್ಲಿ ಪ್ರವಾಸ ಮಾಡುವುದರಿಂದ

ಜನರ ಕಣ್ಣಲ್ಲಿ ಮಣ್ಣು ಯಾಕೆ ಎರಚುತ್ತೀರಿ? ವಿದೇಶದ ಮಧ್ಯಯುಗೀನ ಭಿಕ್ಷು ಬ್ರಹ್ಮಚರ್ಯ, ಶುಚಿರ್ಭೌತ್ಯ ಮುತ್ತು ದಾರಿದ್ರ್ಯ ಇದರಲ್ಲಿ ತಮ್ಮ ಜೀವನವನ್ನು ಸಾಗಿಸುವುದರ ಪ್ರತಿಜ್ಞೆ ಮಾಡುತ್ತಿದ್ದರು. ನಮ್ಮ ಮಂತ್ರಿಗಳಿಗೆ ಬ್ರಹ್ಮಚರ್ಯೆಯ ಸಮಸ್ಯೆ ಇಲ್ಲ. ಕಾರಣ ಅದು ಅವರ ಕೈಮೀರಿದೆ. ಶುಚಿರ್ಭೌತ್ಯೆಯ ಪ್ರತಿಜ್ಞೆಯನ್ನು ಅವರು ಮುರಿದಿದ್ದಾರೆ. ಆದಕಾರಣ ಈ ಸಭೆಗೆ ಆ ಕುರಿತು ತಕರಾರು ಮಾಡುವ ಅಗತ್ಯವಿಲ್ಲ. ದಾರಿದ್ರ್ಯದ ಕುರಿತು ಹೇಳುವುದಾದರೆ ಆ ಭಿಕ್ಷುಗಳು ಶ್ವೇಚ್ಛಾಚಾರಿಗಳಿರುವುದಿಂದ ಅವರಿಗೆ ಸಮಸ್ಯೆಯಾಗಿರಲಿಲ್ಲ. ಆದರೆ ಈಗಿನ ಮಂತ್ರಿಗಳಿಗೆ ದಾರಿದ್ರ್ಯದಲ್ಲಿ ಬದುಕನ್ನು ವ್ಯಯಿಸುವುದು ಸಾದ್ಯವಿದೆಯೇ? ನಾನು ಹೇಳಲು ಹೊರಟಿದ್ದೇನೆಂದರೆ, ೫೦೦ರೂ ಸಂಬಳದ ನಿರ್ಧಾರದ ಮಂತ್ರಿ ಮಂಡಳದ ಉದ್ದೇಶ ಪವಿತ್ರವಾಗಿಲ್ಲ. ಅದರ ಹಿಂದೆ ಹೊಂಚಿದೆ. ಈ ಮಂತ್ರಿಸ್ಥಾನವು ಕಾಯಮ್ಮಾಗಿ ತಮ್ಮಲ್ಲಿಯೇ ಉಳಿಯಬೇಕು. ಬೇರೆಯವರು ಯಾರು ಅದನ್ನು ಆರೂಢ ಮಾಡಬಾರದೆಂಬ ಹೊಂಚಿದೆ. ಮಂತ್ರಿಗಳ ಸಂಬಳ ಪ್ರತಿ ತಿಂಗಳು ೪,೦೦೦ ಅಥವಾ ೩,೦೦೦ ಇರಬೇಕೆಂತಲೂ ಹೇಳುವುದಿಲ್ಲ. ನಾನೇನು ಈ ಬಿಲ್ಲ ಕುರಿತು ಟೀಕೆ ಮಾಡಿದ್ದೇನೆ, ಇದು ಕೇವಲ ಸಾರ್ವಜನಿಕವಾಗಿ ಚರ್ಚೆಯಾಗಬೇಕೆಂಬ ಉದ್ದೇಶದಿಂದಲೇ ಮಾಡಿರುವೆ. ಡಾ. ಜಾನ್ಸನ್ ಒಮ್ಮೆ ಹೇಳಿದ್ದರು. ಬದ್ಮಾಶ್‌ರಿಗೆ ದೇಶಭಕ್ತಿಯ ಆಶ್ರಯ ಪಡೆಯುವುದು ಸುಲಭ. ನನಗೆ ನಂಬಿಕೆಯಿದೆ, ಬದ್ಮಾಶ್‌ರಿಗೆ ಮಂತ್ರಿಸ್ಥಾನವನ್ನು ಅಲಂಕರಿಸುವುದು ಸುಲಭವಾಗುವುದೆಂದು ಹೇಳುವ ಸರದಿ ನಮ್ಮಗಳಿಗೆ ಬರುವುದಿಲ್ಲ.

ಡಾ. ಬಾಬಾಸಾಹೇಬ ಅಂಬೇಡ್ಕರರ ಭಾಷಣದ ನಂತರ ಪ್ರೊಗ್ರೆಸ್ಸಿವ್ ಪಕ್ಷದ ಮುಂದಾಳು ಮಿ. ಅಬರ್ ಕ್ರಾಂಬಿಯವರು ಡಾ. ಅಂಬೇಡ್ಕರರ ಬಾಷಣದಲ್ಲಿಯ ಅನೇಕ ವಿಷಯಗಳ ಮೇಲೆ ಮಾತನಾಡಿದರು. ಬ್ಯಾ. ಜಮನಾ ದಾಸ ಮೆಹತಾ ಅವರು ಕೂಡ ಕಾಂಗ್ರೆಸ್ಸಿನ ಈ ಬಿಲ್ಲಿನ ಅವ್ಯವಹಾರತೆ ಬಗ್ಗೆ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಖಾ.ಬ. ಅಬ್ದುಲ್ ಲತಿಫ್, ಶಿ.ಲ. ಕರಂದೀಕರ ಮತ್ತು ಸ.ಕಾ. ಪಾಟೀಲ ಅವರ ಭಾಷಣಗಳು ಮುಗಿದ ನಂತರ ಭಾಯಿ ಅನಂತರಾವ ಚಿತ್ರೆ ಅವರ ಭಾಷಣವಾಯಿತು.

# ೧೦೬.
# ದೇವರನ್ನು ಯಾಕೆ ಪೂಜಿಸಬೇಕು?

ದಿ:೨೮ ಆಗಸ್ಟ್ ೧೯೩೭ರಂದು ಡಾ. ಬಾಬಾಸಾಹೇಬ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಅಸ್ಪೃಶ್ಯ ಸಮುದಾಯದ ಬೃಹತ್ ಬಹಿರಂಗ ಸಭೆಯು ಮುಂಬೈನ ಮುನ್ಸಿಪಲ್ ಹಾಲ್‌ನಲ್ಲಿ ನಡೆದು ಈ ಕೆಳಗಿನ ಗೊತ್ತುವಳಿ ಪಾಸ್ ಮಾಡಲಾಯಿತು. **<u>ಗೊತ್ತುವಳಿ ೧:</u>** ಮುಂಬೈ ಇಲಾಖೆಯ ಮಹಾರ್ ಪರಿಷತ್ತಿನ ಗೊತ್ತುವಳಿಯಂತೆ ತಮ್ಮ ಸೋದರ ಸೋದರಿಯರು ಹಿಂದೂಧರ್ಮದ ಹಬ್ಬಗಳನ್ನು, ವ್ರತಾದಿಗಳನ್ನು ಧಾರ್ಮಿಕ ವಿಧಿ, ಉಪವಾಸ ಮತ್ತು ಧಾರ್ಮಿಕ ಆಚಾರಗಳನ್ನು ಪಾಲಿಸಕೂಡದು. **<u>ಗೊತ್ತುವಳಿ ೨:</u>** ವಾಂದ್ರೆ ಮುನ್ಸಿಪಾಲಿಟಿಯನ್ನು ಅಸ್ಪೃಶ್ಯರಿಗೆ ಮೀಸಲು ಸ್ಥಾನವಾಗಿ ನೀಡಿರುವುದರಿಂದ ಮಾನ್ಯ ಕಲೆಕ್ಟರ್ ಸಾಹೇಬರಿಗೆ ಈ ಸಭೆಯು ಕೃತಜ್ಞತೆ ಸಲ್ಲಿಸುತ್ತದೆ. ಅಸ್ಪೃಶ್ಯರ ಜನಸಂಖ್ಯೆಯ ಅನುಗುಣವಾಗಿ ಒಂದು ಸ್ಥಾನ ಅಪೂರ್ಣವೆನಿಸುತ್ತದೆ, ಅದಕ್ಕಾಗಿ ಅಧಿಕ ಸ್ಥಾನಗಳನ್ನು ನೀಡಬೇಕೆಂದು ಈ ಸಭೆಯು ಕಲೆಕ್ಟರ್ ಸಾಹೇಬರನ್ನು ಕೇಳಿಕೊಳ್ಳುತ್ತದೆ. **<u>ಗೊತ್ತುವಳಿ ೩:</u>** ಸ್ವತಂತ್ರ ಮಜೂರ ಪಕ್ಷದ ಸದಸ್ಯರಾಗಲು ಎಲ್ಲ ಜನರಿಗೂ ಸಭೆಯು ಆಗ್ರಹದ ಕೋರಿಕೆ ಸಲ್ಲಿಸಿತು. **<u>ಗೊತ್ತುವಳಿ ೪:</u>** ಶ್ರೀ ಸಂಭಾಜಿ ತುಕಾರಾಮ ಗಾಯಕವಾಡರ ಸನ್ಮಾನಪತ್ರಕ್ಕಾಗಿ ವಾಂದ್ರೆ ಪಂಚಾಯಿತಿ ಕಡೆಯಿಂದ ೨೫ ರೂ ನೀಡಲಾಗುತ್ತಿದೆ. ಆದಕಾರಣ ಬೇರೆ ಪಂಚಾಯಿತಿಗಳು ಸಹ ಈ ಕಾರ್ಯಕ್ಕೆ ವಿಪುಲವಾಗಿ ನೆರವು ನೀಡಬೇಕು.

ಈ ಗೊತ್ತುವಳಿ ಮೇಲೆ ಶ್ರೀ ಶು. ತು. ಶಿರ್ಕೆ, ಸ.ಭಿ. ಧೋತ್ರೆ, ಅಮರಸಿಂಗ್, ಶಂ.ಲ. ವಡವಲಕರ, ಧ.ಸೋ. ಜಾಧವ, ಮ.ಗ. ಜಾಧವ, ಚಾಂ. ನಾ. ಮೋಹಿತೆ, ಶಾಂ. ಅ. ಉಪಶಾಮ, ನಾ.ಭಿ. ಅಸಗೋಲಕರ, ವಾಂ.ಸ್ಕೂ.ಬೋ. ಮೆಂಬರ್ ಮುಂತಾದವರ ಭಾಷಣಗಳಾದವು.

ಅನಂತರ ಡಾ. ಬಾಬಾಸಾಹೇಬ ಅಂಬೇಡ್ಕರರು ಮಾತನಾಡಲು ಸಿದ್ಧರಾದರು. ಸೂಚನೆ ಹೊರತುಪಡಿಸಿ ಅವರು ಹೇಳಿದರು, ಧರ್ಮಾಂತರ ಕುರಿತು ಮುಂಬೈ ಇಲಾಖೆ ಮಹಾರ್ ಪರಿಷತ್ತು ತೆಗೆದುಕೊಂಡ ಗೊತ್ತುವಳಿಯ ನೆನಪಿಸಲು ವಿಶೇಷವಾಗಿ ಈ ಸಭೆ ಕರೆಯಲಾಗಿದೆ. ಆದ್ದರಿಂದ ಧರ್ಮಾಂತರ ಕುರಿತು ಯಾರಿಗಾದರೂ ಅನುಮಾನಗಳಿದ್ದರೂ ಅಗತ್ಯವಾಗಿ ಕೇಳಲು ಈ ಸಭೆ ಕರೆಯಲಾಗಿದೆ. ಯಾರೂ ಅನುಮಾನ ವ್ಯಕ್ತಪಡಿಸದೇ ಇರುವುದಿರಂದ ಡಾ. ಬಾಬಾಸಾಹೇಬ ಅಂಬೇಡ್ಕರರು ಭಾಷಣ ಆರಂಭಿಸಿದರು. ಅವರು ಹೇಳಿದರು.

ಪ್ರಿಯ ಸೋದರ-ಸೋದರಿಯರೆ,

ಈ ಸಭೆಗೆ ನಾನು ಬರುವವನಿರಲಿಲ್ಲ. ಆದರೆ ಇಲ್ಲಿ ಹಳೆಯ ಪರಂಪರೆಗೆ ಅಂಟಿಕೊಂಡ ಜನರು ಮಹಾರ್ ಪರಿಷತ್ತು ಪಾಸುಮಾಡಿದ ಧರ್ಮಾಂತರ ಬಗೆಗಿನ ಗೊತ್ತುವಳಿಯನ್ನು ಜಾರಿಗೆ ತರಲು ಸಿದ್ಧರಿಲ್ಲ ಎಂಬ ವಿಚಾರವನ್ನು ತಿಳಿದು ಬರಬೇಕಾಯಿತು. ಅವರ ಸಂಶಯ ನಿರಸನಗೊಳಿಸಲು ನಾನಿಲ್ಲಿ

---

ಜನತಾ: ೪ ಸಪ್ಟೆಂ.

ಬಂದಿದ್ದೇನೆ. ನನ್ನ ಅಭಿಪ್ರಾಯವನ್ನು ಈ ಮೊದಲೇ ಅನೇಕ ಬಾರಿ ಹೇಳಿದ್ದೇನೆ. ಅದರ ಬಗ್ಗೆ ಸಂಶಯ ಸಲ್ಲ. ೧೯೩೫ರಂದು ಸೇರಿದ ಮುಂಬೈ ಇಲಾಖೆಯ ಮಹಾರ್ ಪರಿಷತ್ತು ಮಹಾರಜಾತಿಯ ಇತಿಹಾಸದಲ್ಲಿಯೇ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತೆ ಆಗಿದೆ. ಆ ಪರಿಷತ್ತು ಅಪೂರ್ವ, ಪ್ರಚಂಡ ಮತ್ತು ಪೂರ್ಣ ಪ್ರಾತಿನಿಧಿಕವಾಗಿದೆ. ಕಾರಣ ಇಂಥ ಪರಿಷತ್ತು ಪಾಸು ಮಾಡಿದ ಗೊತ್ತುವಳಿಯನ್ನು ವಾಸ್ತವವಾಗಿ ಎಲ್ಲ ಮಹಾರರು ಒಪ್ಪಬೇಕಾಗಿದೆ. ಮತ್ತು ಮಹಾರ ಜಾತಿಯ ಬಹುಸಂಖ್ಯಾತರು ಒಪ್ಪುತ್ತಾರೆಯೂ ಸಹ. ಆದರೆ ಕೆಲವರು ಇನ್ನೂ ಹಳೆಯ ಪರಂಪರೆಗೆ ಅಂಟಿಕೊಂಡಿದ್ದಾರೆ. ಈ ಮಾತುಗಳು ನನ್ನ ಕಿವಿಗೆ ಬಿದ್ದಿವೆ. ಇಂಥವರಿಗೆ ನಾನು ಹೀಗೆ ಹೇಳಬೇಕೆನಿಸುತ್ತದೆ. ಅಲ್ಪಮತ ಜನರು ನಿತ್ಯಬಹುಮತ ಜನರಂತೆ ವರ್ತಿಸಬೇಕಾಗುತ್ತದೆ ಎಂದು. ಸದ್ಯದ ಕೌನ್ಸಿಲ್ಲಿನ ಉದಾಹರಣೆಯನ್ನೇ ತಗೊಳ್ಳಿರಿ. ಈಗ ಕೌನ್ಸಿಲ್ಲಿನಲ್ಲಿ ಕಾಂಗ್ರೆಸ್ಸಿಗೆ ಬಹುಮತವಿದೆ. ಅವರು ಮಾಡುವ ಕಾನೂನುಗಳಿಗೆ ಗೌರವಿಸಬೇಕಾಗುವುದು ಅನಿವಾರ್ಯ. 'ಜಾತಿಗಾಗಿ ತಿನ್ನು ಮಣ್ಣು' ಗಾದೆಯಿದೆ. ಹಾಗಾದರೆ ತಾನಾಗಿಯೆ ಧರ್ಮಾಂತರದ ಕುರಿತಾದ ನಿರ್ಣಯವನ್ನು ಒಪ್ಪುವುದು ಕರ್ತವ್ಯ ಅಲ್ಲವೇನು? ಅನೇಕ ಕೆಲಸಗಳಿಗೆ ನಮಗೆ ಜಾತಿಯುತ್ತ ಸಾಗಬೇಕಾಗುತ್ತದೆ. ಹಾಗಾದರೆ ಸ್ವತಃ ಗೊತ್ತುವಳಿ ಸ್ವೀಕರಿಸಿದ ನಂತರ ಯಾಕೆ ಒಪ್ಪಬಾರದು? ಹಿಂದೂಧರ್ಮದಂತೆ ನಾವು ಆಚರಿಸುವ ಧಾರ್ಮಿಕ ಹಬ್ಬಹರಿದಿನಗಳನ್ನು ಬಿಡಬೇಕು. ಬಿಡಬೇಕಾದ ಕಾರಣಗಳನ್ನು ನಾನಿಂದು ಹೇಳುವವನಿದ್ದೇನೆ. ಬೇರೆಯ ರೀತಿ ಹೇಳುವೆ. ಹಿಂದೂಧರ್ಮದ ವಿಧಿಗಳು ಕೆಲವು. ಅವು ಕೇವಲ ಧರ್ಮದ್ದಾಗಿರದೆ ನೀತಿಯ ದೃಷ್ಟಿಯಿಂದ ಸರಿಯಾಗಿವೆಯೇ ಎಂಬುದನ್ನು ಯೋಚಿಸಿ ಪರಾಮರ್ಶಿಸಬೇಕು. ಕೆಲವು ವಿಧಿವಿಧಾನಗಳಲ್ಲಂತು ಅತಿಶಯ ನಿರರ್ಥಕತೆ ತುಂಬಿದೆ. ಉದಾಹರಣೆಗೆ ಶಂಕರನ ಹೆಸರಲ್ಲಿ ಸೋಮವಾರ ಉಪವಾಸ ಮಾಡುವರು ಹಾಗೂ ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸುವರು. ಆದರೆ ಶಿವ ಲಿಂಗದ ಆಕಾರ, ವಸ್ತುವಿನ ಕುರಿತು ಯೋಚಿಸಿದ್ದಾರೇನು? ಅದು ಬೇರೆ ಏನೂ ಅಲ್ಲ, ಸ್ತ್ರೀ–ಪುರುಷರ ಸಂಭೋಗ ಕ್ರಿಯೆಯ ಪ್ರತಿಮೆ ಅಷ್ಟೇ. ಇಂಥ ಭೀಭತ್ಸ ಪ್ರತಿಮೆಯ ಗುಣಗಾನ ಮಾಡಬೇಕೇನು? ರಸ್ತೆಯಲ್ಲಿ ಶ್ವಾನದಂತೆ ಒಂದು ವೇಳೆ ಹೆಣ್ಣುಗಂಡುಗಳು ಸಮಾಗಮ ಮಾಡತೊಡಗಿದರೆ ಹೂವಿಂದ ಅರ್ಚನೆ ಮಾಡಬೇಕೋ ಇಲ್ಲವೆ ಚಪ್ಪಲಿಯೇಟು ನೀಡಬೇಕೋ? ಹಾಗಾದರೆ ಶಂಕರ–ಪಾರ್ವತಿಯರ ಅದೇ ಕ್ರಿಯೆಯ ಪ್ರತಿಮೆಗೆ ಅಂದರೆ ದೇವರ ಭೀಭತ್ಸತನಕ್ಕೆ ನಾವು ಪೂಜಿಸಬೇಕೇನು?

ಗಣೇಶನದ್ದೂ ಅದೇ ರೀತಿ! ಗಣೇಶನ ಕತೆ ಹೀಗಿದೆ, ಒಮ್ಮೆ ಪಾರ್ವತಿ ನಗ್ನಳಾಗಿ ಸ್ನಾನ ಮಾಡುತ್ತಿದ್ದಳು. ಆಗ ಶಿವ ಬೇರೆಡೆ ಎಲ್ಲೋ ಹೋಗಿದ್ದ. ಆಗ ಪಾರ್ವತಿ ತನಗೆ ಯಾರಿಂದಲೂ ತೊಂದರೆ ಆಗಬಾರದೆಂದು ಭಾವಿಸಿ ರಕ್ಷಣೆಗೆ ತನ್ನ ಮೈಮೇಲಿನ ಕೆಸರನ್ನು ತೆಗೆದು ಗಣಪತಿಯನ್ನು ರಚಿಸಿದಳು. ಹೀಗಾಗಿ ಕೆಸರು ಕೊಳೆಯಿಂದ ನಿರ್ಮಾಣ ಗೊಂಡ ಅಮಂಗಲ ದೇವರನ್ನು ಯಾಕೆ ಪೂಜಿಸಬೇಕು? ಈಶ್ವರ ನಿಷ್ಕಂಳಕ, ಮೂರ್ತಿವಂತ, ಪವಿತ್ರನಾಗಿರಬೇಕು. ಆದರೆ ಹಿಂದೂ ಧರ್ಮದ ದೇವತೆಗಳು ಬಲು ವಿಚಿತ್ರವಾಗಿವೆ! ಆದಕಾರಣ ಅವುಗಳ ಪೂಜೆ ಕೂಡದು, ಇದು ನನ್ನ ಪ್ರಾಮಾಣಿಕ ಅನಿಸಿಕೆಯಾಗಿದೆ.

ಮೂರನೆಯದು ದತ್ತಾತ್ರೇಯನದ್ದು. ಅತ್ರಿ ಋಷಿಯ ಮಡದಿ ಅನುಸೂಯ ಮಹಾನ ಪತಿವ್ರತೆ ಸ್ತ್ರೀಯೆಂದು ಬ್ರಹ್ಮ, ವಿಷ್ಣು, ಮಹೇಶ ಅವರ ಮೂವರು ಮಡದಿಯರಿಗೆ ನಾರದ ಹೇಳುತ್ತ ಹೋದ. ತಮಗಿಂತ ಬೇರೆ ಸ್ತ್ರೀಯರು ಹೆಚ್ಚು ಪತಿವ್ರತೆಯರಾಗಿರುವುದನ್ನು ಈ ದೇವತೆಗಳಿಗೆ ನೋಡಲಾಗಲಿಲ್ಲ. ಆ ಮೂರು ಹೆಂಡಂದಿರು ತಮ್ಮ ತಮ್ಮ ಗಂಡಂದಿರಿಗೆ ಅನುಸೂಯಳ ಪಾತಿವ್ರತ್ಯಹರಣ ಮಾಡಲು

ಹೇಳಿದರು. ಮತ್ತೆ ಹೆಂಡಂದಿರ ಮಾತುಕೇಳಿ ಈ ಮೂರು ವೀರಪುರುಷರು ಆ ಕಾರ್ಯಕ್ಕೆ ಸಿದ್ಧರಾದರು. ಈ ಮೂವರು ಅನುಸೂಯಳ ಮನೆಗೆ ಹೋದರು. ಆಕೆಯ ಗಂಡನಿಗೆ ಏನೋಕಾರಣ ಹೇಳಿ ಹೊರಕಳಿಸಿದರು. ಅವರು ಅನುಸೂಯಳ ಸಹವಾಸದಲ್ಲಿರತೊಡಗಿದರು. ಇಂಥ ಅವಸ್ಥೆಯಲ್ಲಿ ಆಕೆ ಒಂದು ಗಂಡು ಮಗುವಿಗೆ ಜನ್ಮಕೊಟ್ಟಳು. ಈ ಬಾಲಕನ ಜನಕ ಯಾರು ಎಂಬ ಯೋಚನೆ ಬಿದ್ದಾಗ ಈ ಮೂವರ ಮೇಲೆಯೂ ಜವಾಬ್ದಾರಿ ಹೇರಲು ಆತನಿಗೆ ಮೂರು ಮುಖಗಳನ್ನು ಹಚ್ಚಲಾಯಿತು. ಅದೇ ದತ್ತಾತ್ರೇಯ ಅವತಾರ! ಬಹಳಷ್ಟು ಜನರ ತಿಳುವಳಿಕೆ ಹೀಗಾಗಿದೆಯಲ್ಲ, ಧರ್ಮಾಂತರದ ಅಲೆ ನಿಂತಿದೆ ಅಂತ. ಆದರೆ ಅದು ಹಾಗೆ ಇಲ್ಲ. ಧರ್ಮಾಂತರ ಆಗುವುದು ಖಚಿತ. ಈ ಚಳುವಳಿಯನ್ನು ನಾನು ಬಿಟ್ಟಿಲ್ಲ. ಇದನ್ನು ಗಮನದಲ್ಲಿಡಿರಿ. ಬಹಳಷ್ಟು ಹಿಂದೂಗಳು ನನ್ನಲ್ಲಿ ಕೇಳುತ್ತಾರೆ, 'ನಿಮ್ಮ ಧರ್ಮಾಂತರದ ವಿಚಾರದಿಂದ ನಮ್ಮ ಕಣ್ಣು ತೆರೆದಿವೆ. ನಾವೀಗ ಎಚ್ಚರಗೊಂಡಿದ್ದೇವೆ. ನಿಮ್ಮ ವಿಷಯದ ಕರ್ತವ್ಯದಲ್ಲಿ ನಾವು ತಪ್ಪುವುದಿಲ್ಲ. ಅದಕ್ಕೆ ಧರ್ಮಾಂತರದ ಚಳುವಳಿಯನ್ನು ಹಿಂದಕ್ಕೆ ಪಡೆಯಿರಿ! ಆದರೆ ಇದುವರೆಗೆ ನಾನೇನು ಮಾತನಾಡಿದೆನೋ ಆ ಕಾರಣಗಳಿಗಾಗಿ ಚಳವಳಿಯನ್ನು ಹಿಂಪಡೆಯಲಾರೆ'. ನೀವು ಸಂಪೂರ್ಣವಾಗಿ ಯೋಚಿಸಿರಿ. ಬೇರೆ ಧರ್ಮವನ್ನು ಸ್ವೀಕರಿಸುವುದಾದರೆ ಪೂರ್ಣ ಕಷ್ಟನಷ್ಟ ಸಹಿಸಿ ಗೆದ್ದವನಾಗಿ ಸ್ವೀಕರಿಸಬೇಕು. ಇನ್ನು ಮುಂದೆ ಮಹಾರ ಜಾತಿಯ ಎಲ್ಲರೂ ಮಹಾರ ಪರಿಷತ್ತು ಮಂಡಿಸಿದ ಗೊತ್ತುವಳಿಯಂತೆ ವರ್ತಿಸುವರೆಂಬ ನಂಬಿಕೆ ನನಗಿದೆ.

ಡಾ. ಬಾಬಾ ಸಾಹೇಬರ ಭಾಷಣ ಮುಗಿದ ನಂತರ ಆಭಾರ ಮನ್ನಿಸಿ ಪುಷ್ಪ ಅರ್ಪಣೆ ನಡೆಯಿತು. ಡಾ. ಬಾಬಾಸಾಹೇಬ ಅಂಬೇಡ್ಕರರ ಜಯಘೋಷಗಳು ಮೊಳಗಿದವು.

# ೧೦೭.

# ಬಹುಜನ ಸಮಾಜದ ಮೇಲೆ ಅನ್ಯಾಯ ಆಗಕೂಡದೆಂಬ ಕಾನೂನು ರಚಿಸಬೇಕು

ಮುಕ್ಕಾಮ ಮಸೂರ ಜಿ. ಸಾತಾರಾದಲ್ಲಿ ಈ ಪೂರ್ವದಲ್ಲಿ ನಿರ್ಧರಿಸಿದಂತೆ ದಿ:೯ ನವೆಂಬರ್ ೧೯೩೭ರಂದು ಸಾತಾರಾ ಜಿಲ್ಲಾ ೭ನೇ ಮಹಾರ ಪರಿಷತ್ತಿನ ಅಧಿವೇಶನವು ಡಾ. ಬಾಬಾಸಾಹೇಬ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು. ಡಾಕ್ಟರ್ ಅಂಬೇಡ್ಕರರ ಮುಗಿಲು ಮುಟ್ಟುವ ಜಯಘೋಷಗಳು ಮೊಳಗುತ್ತಿದ್ದವು. ಸ್ಪೃಶ್ಯ ಸಮುದಾಯ ಬಾಂಧವರು ಈ ಅಪೂರ್ವ ಮತ್ತು ಉತ್ಸಾಹದ ವಾತಾವರಣ ಕಂಡು ಕುತೂಹಲ ಮತ್ತು ಅಚ್ಚರಿಯಾಗಿರುವುದರಲ್ಲಿ ಅನುಮಾನವಿಲ್ಲ. ಈ ಮೆರವಣಿಗೆಯಲ್ಲಿ ಅಧ್ಯಕ್ಷರ ಜೊತೆಗೆ ಸ್ವಾಗತಾಧ್ಯಕ್ಷ ಮಿ.ಕೆ.ಎಸ್. ಸಾವಂತ ಎಂ.ಎಲ್.ಎ ಯವರು ವಾಹನದಲ್ಲಿದ್ದರು. ಅವರ ಹಿಂದಿನ ವಾಹನದಲ್ಲಿ ಶಾಸಕ ಶ್ರೀ ರಾಜಾರಾಮ ಭಾವು ಭೋಳೆ, ಅಡ್ವೊಕೇಟ್ ವಿನಾಯಕರಾವ ಗಡಕರಿ, ಅಣ್ಣಾಸಾಹೇಬ ಪೋತನೀಸ ಮುಂತಾದ ಮುಂದಾಳುಗಳು ಕುಳಿತಿದ್ದರು. ಸಂಜೆ ೩ ಗಂಟೆಗೆ ಈ ಭವ್ಯ ಮೆರವಣಿಗೆಯು ಪರಿಷತ್ತಿನ ಬೃಹತ್ ಮಂಟಪಕ್ಕೆ ಆಗಮಿಸಿತು. ಡಾ. ಬಾಬಾಸಾಹೇಬರ ದರ್ಶನ ಪಡೆಯಲು ಮಂಟಪದ ಪ್ರವೇಶದ್ವಾರದಲ್ಲಿ ನೂಕುನುಗ್ಗಲು ಉಂಟಾಯಿತು. ಆದಕಾರಣ ಕೆಲವುಕಾಲ ಪರಿಷತ್ತಿನ ವ್ಯವಸ್ಥೆಯಲ್ಲಿ ಕಠಿಣತೆ ಉಂಟಾಗಿತ್ತು. ಸಮತಾ ಸೈನಿಕ ದಳದ ಉತ್ಕೃಷ್ಟ ಕಾರ್ಯದಿಂದ ಎಲ್ಲ ವ್ಯವಸ್ಥೆಗಳು ಉತ್ತಮರೀತಿಯಾಗಿತ್ತು.

ಸ್ವಾಗತ ಗೀತೆಯ ಬಳಿಕ ಡಾ. ಬಾಬಾಸಾಹೇಬ ಅಂಬೇಡ್ಕರರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಆಗ ಜಯಕಾರ ಮೊಳಗಿತು. ಚಪ್ಪಾಳೆಗಳ ಸುರಿಮಳೆ ನಡೆಯಿತು. ನಂತರ ಸ್ವಾಗತಾಧ್ಯಕ್ಷ ಮಿ. ಖಂಡೆರಾವ ಎಸ್. ಸಾವಂತ ಅವರ ಭಾಷಣ ನಡೆಯಿತು. ಅವರು ತಮ್ಮ ಮಾತಿನಲ್ಲಿ ಡಾ. ಬಾಬಾಸಾಹೇಬರನ್ನು ಪರಿಚಯಿಸಲು ಸಾತ್ವಿಕ ಉಕ್ತಿ ಬಳಸಿದರು. 'ಬಹಳ ಜನ ಹೋದರು, ಬಹಳ ಬನ ಇರಲೂ ಬಹುದು, ಮುಂದೆಯೂ ಬರಬಹುದು. ಆದರೆ ಇವರ ಸಮರಾರಿಲ್ಲ' ಇವು ಡಾಕ್ಟರ್‌ಸಾಹೇಬರ ಬಣ್ಣನೆಯ ಪದಗಳು ಅತಿಶಯೋಕ್ತಿಯಂತೂ ಅಲ್ಲವೆ ಅಲ್ಲ!

ಬಳಿಕ ಡಾ. ಬಾಬಾಸಾಹೇಬ ಅಂಬೇಡ್ಕರರ ಭಾಷಣ ಪ್ರಾರಂಭವಾಯಿತು. ಅವರು ಹೇಳಿದರು– ಸೋದರಿಯರೆ ಮತ್ತು ಸೋದರರೆ,

ಈ ಮಸೂರ ಊರನ್ನು ನೆನೆದರೆ ನನ್ನ ಅಸ್ಪೃಶ್ಯತೆಯ ಬಾಲ್ಯದ ದಿನಗಳಲ್ಲಿಯ ಕಹಿ ಅನುಭವಗಳು ನೆನಪಾಗಿ ಕಣ್ಣು ತುಂಬುತ್ತವೆ. ಕಳೆದ ೩೫ ವರ್ಷಗಳಲ್ಲಿ ಈ ಊರಿಗೆ ಎರಡನೆಯ ಬಾರಿ ಬಂದಿರುವೆ. ಈ ಪರಿಸರದ ಗೋರೆಗಾವನಲ್ಲಿ ಕೆರೆಕಟ್ಟಿಸುವಾಗ ಆ ಕೆಲಸದಲ್ಲಿ ನನ್ನ ತಂದೆ ಕ್ಯಾಶಿಯರ್ ಎಂದು

---

ಜನತಾ: ೧೩ ಮತ್ತು ೨೦ ನವೆಂಬರ್ ೧೯೩೭.

ಕಾರ್ಯನಿರ್ವಹಿಸುತ್ತಿದ್ದರು. ನಾನು, ನನ್ನ ಇಬ್ಬರು ಸೋದರರು ಮತ್ತು ಸೋದರಿಯ ಮಗ ಹೀಗೆ ನಾಲ್ಕು ಜನರು ಸಾತಾರಾದಲ್ಲಿ ಶಿಕ್ಷಣ ಪಡೆಯುತ್ತಿದ್ದೆವು. ನನ್ನ ತಾಯಿಯವರು ಆಗ ತೀರಿಹೋಗಿದ್ದರು. ನಮ್ಮೆಲ್ಲ ಮಕ್ಕಳಮೇಲೆ ತಂದೆಯಮಿತ್ರರು ನೆರೆಯಲ್ಲಿ ವಾಸವಾಗಿದ್ದವರು ಲಕ್ಷ್ಯವಿಟ್ಟಿರುತ್ತಿದ್ದರು. ಬೇಸಿಗೆಯ ರಜೆಗೆ ತಂದೆಯವರು ನಮ್ಮನ್ನು ಗೋರೆಗಾವಿಗೆ ಕರೆಯಿಸಿಕೊಂಡರು. ನಾವಲ್ಲಿಗೆ ಬರುವುದರ ಬಗ್ಗೆ ಒಂದು ಪತ್ರವನ್ನು ಮುಂಚೆಯೇ ಒಬ್ಬ ಹಮಾಲಿನ ಕೈಯಲ್ಲಿಕೊಟ್ಟು ಕಳಿಸಿದ್ದರು. ರೈಲಿಗೆ ಹೋಗುವುದೆಂದರೆ ನಮಗೆಲ್ಲ ತುಂಬ ಸಂತೋಷವಾಗಿತ್ತು. ಕಾರಣ ನಾವು ಇಂಜಿನಿನಮೂಲಕ ಗಾಡಿ ಹೇಗೆ ಓಡುತ್ತದೆಯೆಂದು ಎಂದೂ ನೋಡಿರಲಿಲ್ಲ. ಅದಕ್ಕೆ ನಮಗೆಲ್ಲ ಕಾತುರ. ಪ್ರವಾಸಕ್ಕಾಗಿ ಹೊಸಬಟ್ಟೆ, ಜರಿಯ ಟೊಪ್ಪಿಗೆ ಮುಂತಾದ ವಸ್ತು ಖರೀದಿಸಿ ನಾವು ಸಾತಾರಾ ಮೂಲಕ ಪಾಡಲಿ ಸ್ಟೇಷನ್‌ಗೆ ಬಂದು ರೈಲು ಹತ್ತಿದೆವು. ಅಲ್ಲಿಂದ ಮಸೂರ ತನಕದ ಪಯಣ ಅತ್ಯಂತ ಆನಂದದಲ್ಲಿ ಕಳೆಯಿತು. ಮಸೂರ ಸ್ಟೇಷನ್ ತಲುಪಿದೊಡನೆ ನಮ್ಮನ್ನು ಇಳಿಸಿಕೊಳ್ಳಲು ಯಾರೂ ಬರದಿರುವುದನ್ನು ಕಂಡು ಅಚ್ಚರಿಯೆನಿಸಿತು. ಮಧ್ಯಾಹ್ನ ೪ರಿಂದ ರಾತ್ರಿ ೭ರ ತನಕ ಮಸೂರ ನಿಲ್ದಾಣದಲ್ಲಿಯೇ ಕಳೆದೆವು. ನಾವು ದಾರಿಕಾಯುತ್ತ ಕುಳಿತಿರುವುದನ್ನು ಕಂಡ ಸ್ಟೇಷನ್ ಮಾಸ್ತರರು ಬಂದು ವಿಚಾರಿಸಿದರು. ನಾವು ನಮ್ಮ ಜಾತಿಯನ್ನು ಹೇಳಿದ ತಕ್ಷಣ ಆತ ಬೆರಗಾದ. ಕೊನೆಗೆ ಆತ ಕಷ್ಟಪಟ್ಟು ಗೋರೆಗಾವಗೆ ಹೋಗಲು ಒಂದು ಗಾಡಿ ಗೊತ್ತುಮಾಡಿದ. ಆದರೆ ಗಾಡಿಯವ ಸಹ ನಮ್ಮ ಜಾತಿಯನ್ನು ಹೇಳಿದೊಡನೆ ಬೆದರಿದ. ನಾವು ಹೊಲೆಯರ ಹುಡುಗರೆಂದು ಕೊಂಡೊಯ್ಯಲು ನಿರಾಕರಿಸಿದ. ಕೊನೆಗೆ ನಮ್ಮ ಸೋದರ ಒಂದು ಒಪ್ಪಂದಕ್ಕೆ ಒಪ್ಪಿಸಿದ. ಒಂದು ರೂಪಾಯಿ ನಿರ್ಧರಿಸಿದ ಬಾಡಿಗೆಗಿಂತ ಜಾಸ್ತಿಕೊಡುವುದು, ಮತ್ತು ಗಾಡಿಯನ್ನು ನಾವೇಹೊಡೆಯುವುದು ಮತ್ತು ಗಾಡಿವಾಲಾ ನಮ್ಮ ಹಿಂದೆ ನಡೆಯುತ್ತ ಬರುವುದು. ಹೀಗೆ ಹೊಂದಿಸಿ ಚಕ್ಕಡಿಗಾಡಿಗೆ ಆತ ಎತ್ತುಗಳನ್ನು ಹೂಡಿದ. ನಾವು ಹೊಡೆಯ ಹತ್ತಿದೆವು. ಮುಂದೆ ಮಸೂರನ ಹಳ್ಳದಬಳಿ ಗಾಡಿನಿಂತಿತು. ನಮಗೆಲ್ಲ ತುಂಬಾ ಬಾಯಾರಿಕೆ ಆಗಿತ್ತು. ನಾವು ಆತನಿಗೆ ಎಲ್ಲಿಯ ನೀರುಕುಡಿಯೋಣ ಎಂದು ಕೇಳಿದಾಗ ಆತ ಅಸ್ಪೃಶ್ಯರಿಗಾಗಿದ್ದ ಸೆಗಣಿ ಕೆಸರುತುಂಬಿದ ಹೊಂಡ ತೋರಿಸಿದ. ಆ ದುರ್ಗಂಧದ ನೀರು ಕುಡಿಯೋದು ಸಾಧ್ಯವಿರಲಿಲ್ಲ. ನಮಗಂತು ವಿಪರೀತ ನೀರಡಿಕೆ. ಆದರೆ ನೀರಿನ ಅನಾನುಕೂಲತೆಯಿಂದ ತೆಪ್ಪಗೆ ಮುಂದಿನದಾರಿ ಹಿಡಿದೆವು. ರಾತ್ರಿಯಾಗುತ್ತಿತ್ತು. ನೀರು ಮತ್ತು ಹಸಿವಿನಿಂದ ಜೀವ ತಳಮಳಿಸುತ್ತಿತ್ತು. ಬೇರೆ ಸ್ಪೃಶ್ಯರ ಹಳ್ಳದ ನೀರನ್ನು ಕುಡಿಯಲು ಇಲ್ಲವೆ ಬೇಡಿ ಪಡೆಯಲು ನಿಷೇಧವಿತ್ತು. ಮಧ್ಯರಾತ್ರಿ ನಾವು ಟೋಲನಾಕೆಗೆ ಬಂದೆವು. ಅಲ್ಲಿಯೂ ಮಹಾರರೆಂದು ನೀರು ಸಿಗಲಿಲ್ಲ. ಕೊನೆಗೆ ಇಂಥ ನೊಂದ ಅವಸ್ಥೆಯಲ್ಲಿ ಗೋರೆ ಗಾವ ತಲುಪಿದೆವು. ತಂದೆಯವರು ಹೀಗೆ ಮುಂಚೆಯೇ ಹೇಳದೆ ಬಂದುದ್ಯಾಕೆಂದು ಕೇಳಿದರು. ಹೇಳಿ ಕಳಿಸದೆ ಬರ ಕೂಡದು ಎಂಬುದು ಅವರ ವಿಚಾರವಾಗಿತ್ತು. ನಮ್ಮೊಬ್ಬ ವ್ಯಕ್ತಿ ಕಡೆಯಿಂದ ಕಳಿಸಿದಪತ್ರ ತಂದೆಯವರ ಕೈ ಸೇರಿರಲಿಲ್ಲ. ದಾರಿಯಲ್ಲಿ ನಮಗಾದ ಶೋಚನೀಯ ಅವಸ್ಥೆ ಕೇಳಿ ಗಂಟಲುಬ್ಬಿಬಂತು. ಈ ಪ್ರವಾಸವು 'ನಾವು ಅಸ್ಪೃಶ್ಯರು' ಎಂಬುದನ್ನು ಹೇಳಿದಂತಿತ್ತು. ನಮ್ಮನ್ನು ಕೀಳರಮೆಯಿಂದ ಕಾಣುತ್ತಾರೆ, ನಮ್ಮ ನೀರು ಹೊಲಸು ಸ್ಥಳದಲ್ಲಿರುತ್ತದೆ. ಸ್ಪೃಶ್ಯರು ನಮ್ಮನ್ನು ಮೈಲಿಗೆಯಾಗಿ ನೋಡುತ್ತಾರೆ ಮುಂತಾದವು ಮೊದಲಿಗೆ ನನ್ನ ಬದುಕಿನಲ್ಲಿ ಅನುಭವಕ್ಕೆ ಬಂದವು. ನನ್ನ ಬಾಲ್ಯದ ಕೋಮಲ ಮನಸ್ಸಿಗೆ ಈ ಸಂಗತಿ ತೀವ್ರವಾಗಿ ನಟ್ಟಿತು. ಇಂದು ಇಲ್ಲಿ ನೆರೆದ ಸಾವಿರಾರು ಸಂಖ್ಯೆಯ ಜನರೆದುರು ಹೇಳುವಂತಹ ಪ್ರಸಂಗ ಬಂದೀತೆಂದು ನನ್ನ ಕನಸು ಮನಸ್ಸಿನಲ್ಲೂ ನೆನೆಸಿರಲಿಲ್ಲ, ಇರಲಿ.

ಇಂದಿಲ್ಲಿ ನಾವು ಸ್ವತಂತ್ರ ಮಜೂರ ಪಕ್ಷದ ಸ್ಥಾಪನೆಗಾಗಿ ಎಲ್ಲರೂ ಸೇರಿದ್ದೇವೆ. ತಮ್ಮ ಪಕ್ಷದ

ಕಾರ್ಯಕ್ರಮ ಸ್ವರೂಪಗಳ ಅರಿವು ಇದ್ದೇ ಇದೆ. ಹಿಂದೂಸ್ಥಾನದ ಮೇಲೆ ಹೇರಿದ ಹೊಸ ಸುಧಾರಣೆಗಳಲ್ಲಿ ಸಾಕಷ್ಟು ದೋಷಗಳು ಮತ್ತು ಕೊರತೆಗಳಿರುವುದರಿಂದ ಅವು ಪೂರ್ಣ ಹೊಣೆಯಿಂದ ಸ್ವರಾಜ್ಯ ತಂದುಕೊಡುವಲ್ಲಿ ಅಸಮರ್ಥ ಆಗಿವೆ. ಪ್ರಾಂತಿಕ ರಾಜ್ಯಾಡಳಿತದ ಅನೇಕ ಘಟನೆಗಳು, ವಿಶೇಷವಾಗಿ ಸೆಕೆಂಡ್ ಚೇಂಬರನ ಘಟನೆಗಳನ್ನು ನಮ್ಮ ಪಕ್ಷವು ಆಕ್ಷೇಪಿಸುತ್ತದೆ. ಆದರೂ, ಈ ಹೊಸ ಸುಧಾರಣ ಕ್ರಮವನ್ನು ದುಡಿಸಿಕೊಳ್ಳಲು ಅಭ್ಯಂತರವಿಲ್ಲ. ಹೊಣೆಗಾರಿಕೆಯ ಸ್ವರಾಜ್ಯದಸ್ವರೂಪ ನಿಸ್ತೇಜಗೊಳಿಸಿ ಒಗೆಯುವಂತಿರುವ ಮುಖ್ಯ ಮತ್ತು ಅನಿಯಂತ್ರಿತ ಸ್ವರೂಪದ ಅಧಿಕಾರವು ಗವರ್ನರ್‌ಗೆ ಸಿಕ್ಕಿದೆ. ಅದರ ಪ್ರಯೋಜನವು ಈ ಅವಧಿಯಲ್ಲಿ ಆಗಕೂಡದೆಂಬ ಬಾಬತ್ತಿಗೆ ಸ್ವತಂತ್ರ ಮಜೂರವು ಎಚ್ಚರವಾಗಿರುತ್ತದೆ. ಹಾಗೆಯೇ ಅಸ್ಪೃಶ್ಯ ಬಂಧುಗಳು, ಕೂಲಿಕಾರ್ಮಿಕರು ಮತ್ತು ರೈತರ ಸಂಬಂಧಗಳು ಒಳ್ಳೆಯದಾಗಿ ಹೇಗೆ ಹೊರ ಹೊಮ್ಮುವವು ಎಂಬುದನ್ನು ಯೋಚಿಸಿ, ಸಾಮಾನ್ಯ ಶ್ರಮಜೀವಿ ಸಮೂಹಕ್ಕಾಗಿ ರಚನಾತ್ಮಕ ಕಾರ್ಯ ಮಾಡುವ ಸಂಕಲ್ಪ ನಮ್ಮ ಪಕ್ಷಕ್ಕಿದೆ. ನಿಮಗೆ ಗೊತ್ತಿರಬಹುದು. ಗಿರಣಿ ಕಾರ್ಮಿಕರಲ್ಲಿ ಅಸ್ಪೃಶ್ಯ ಮತ್ತು ಸ್ಪೃಶ್ಯ ಕಾರ್ಮಿಕರ ಮಧ್ಯೆ ಭೇದಭಾವವು ರಹಸ್ಯವಾಗಿಲ್ಲ. ಓಪನ್ನಾಗಿಯೇ ಇದೆ. ಸ್ಪೃಶ್ಯ ಕಾರ್ಮಿಕನಿಗೆ ಬಟ್ಟೆ ವಿಭಾಗದೊಳಗೆ ಕೆಲಸ ದೊರಕುತ್ತದೆ. ಆತ ಜಾಬರ್ ತನಕ ಮೇಲೆ ಹೋಗುತ್ತಾನೆ. ಆದರೆ ಅಸ್ಪೃಶ್ಯ ಕಾರ್ಮಿಕನಿಗೆ ಆತ ಎಷ್ಟೇ ಯೋಗ್ಯನಾಗಿದ್ದರೂ ಬಟ್ಟೆ ವಿಭಾಗದಲ್ಲಿ ಕೆಲಸ ಸಿಗುವುದಿಲ್ಲ. ಆತ ತೇಲವಾಲಾ ಆಗಿಯೇ ಉಳಿಯುತ್ತಾನೆ. ಸಾಧಾರಣವಾಗಿ ಕಾರ್ಮಿಕನ ಪರಿಸ್ಥಿತಿ ದಾರಿದ್ರ್ಯ ಹಾಗೂ ಕಷ್ಟದ್ದಾಗಿರುತ್ತದೆ. ಸ್ಪೃಶ್ಯ ಕಾರ್ಮಿಕನ ದಾರಿದ್ರ್ಯ ಮಾಲಿಕಶಾಹಿಯಿಂದಾದರೆ ಅಸ್ಪೃಶ್ಯ ಕಾರ್ಮಿಕನ ದಾರಿದ್ರ್ಯವು ಮಾಲಿಕಶಾಹಿ ಮತ್ತು ಅಸ್ಪೃಶ್ಯತನ ಇವೆರಡರಿಂದ ಕೂಡಿದೆ. ಆದರೆ ದುಃಖ ಪಡುವ ಸಂಗತಿಯೆಂದರೆ ಕಾಂಗ್ರೆಸ್ಸಿನೊಳಗಿನ ಮತ್ತು ಹೊರಗಿನ ಕಾರ್ಮಿಕರ ನಾಯಕರು ಈ ವಿಚಾರದತ್ತ ತಿಳಿದು ತಿಳಿದೂ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಸ್ವತಂತ್ರ ಮಜೂರ ಪಕ್ಷದ ವಿಂಗಡಿಸುವಿಕೆಗೆ ಯಾವ ಕಾರಣಗಳಿವೆಯೋ ಅದರಲ್ಲಿ ಇದೂ ಕೂಡ ಒಂದು. ಕಾರ್ಮಿಕರಿಗೆ ಜಾತಿಭೇದದಿಂದ ಆಗಲಿ ಇಲ್ಲವೆ ವರ್ಗಭೇದದಿಂದಲೋ ಅವರ ಯೋಗ್ಯತೆಗೆ ಧಕ್ಕೆಬರುವುದಿಲ್ಲ ಮತ್ತು ಅವರ ಪ್ರಗತಿಯ ದಾರಿ ಸುಖಮಯವಾಗುವ ಪ್ರಯತ್ನವನ್ನು ಕಾಂಗ್ರೆಸ್ ಅಥವಾ ಬೇರೆ ಬಂಡವಾಳದಾರರ ಕೈಗೊಂಬೆಗಳಾಗಿರುವುದರಿಂದ ಬಡಕೂಲಿಕಾರರ ಮತ್ತು ರೈತರ ಏಳ್ಗೆಯನ್ನು ಮಾಡುವುದು ಅವರಿಂದ ಸಾಧ್ಯವಿಲ್ಲ. ಕಾಂಗ್ರೆಸ್ಸು 'ಬಂಡವಾಳದಾರರ ಹಿತವನ್ನು ಮತ್ತು ಬಡವರ ಕಲ್ಯಾಣವನ್ನು ಮಾಡುವೆವು' ಎಂದು ಘೋಷಣೆ ಮಾಡುತ್ತದೆ. ಇಂಥ ಇಬ್ಬಗೆ ಪರಿಸ್ಥಿತಿಯಲ್ಲಿ ಒಂದು ಕತ್ತಿಯ ಒರೆಯಲ್ಲಿ ಎರಡು ಖಡ್ಗಗಳು ಇರಲು ಸಾಧ್ಯವಿಲ್ಲ. ನಮ್ಮ ಶ್ರಮಜೀವಿವರ್ಗ ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿನೊಂದಿಗಿರುವುದು ವ್ಯರ್ಥ. ಕಾಂಗ್ರೆಸ್ಸಿನ ಪಂಚಪ್ರಾಣವೆನಿಸುವ ಮಹಾತ್ಮಾಗಾಂಧಿಯವರ ಮನದ ಇಂಗಿತ ನನಗೆ ಚೆನ್ನಾಗಿಗೊತ್ತು. ಅವರ ಅಂತರಾಳ ನನಗೆಷ್ಟು ಗೊತ್ತಿದೆಯೋ ಅಷ್ಟು ನಿಮಗಿಲ್ಲ. ನನಗೆ ಅವರ ಪರಿಚಯವಿರುವುದರಿಂದ ಹೇಳ್ತೀನಿ ಮಹಾತ್ಮಾಜೀ ನಿಮ್ಮ ಏಳ್ಗೆಯನ್ನು ಮಾಡುವುದಿಲ್ಲ. ನಮ್ಮಿಬ್ಬರ ದಾರಿಗಳು ತೀರಾ ಭಿನ್ನವಾಗಿವೆ. ಯಾರಿಗೆ ರೊಟ್ಟಿಬೇಕೋ ಅವನು ದೇವಾಲಯ ಇಟ್ಟುಕೊಂಡು ಏನು ಮಾಡುವನು? ಕಳೆದ ದುಂಡುಮೇಜಿನ ಪರಿಷತ್ತಿನಲ್ಲಿ ಅಸ್ಪೃಶ್ಯ ಸಮಾಜದ ಸಂದರ್ಭದಲ್ಲಿ ಒಂದು ಕ್ಲಿಷ್ಟಕರ ಸಮಸ್ಯೆಯಿತ್ತು. ನೌಕರಶಾಹಿಯ ಅಧಿಕಾರ ಕಿತ್ತುಕೊಂಡು ಅದನ್ನು ಬಹುಜನ ಸಮಾಜದ ಕೈಗೆ ನೀಡುವಾಗ ಅದರಲ್ಲಿಯ ಕೆಲವು ಅಂಶಗಳನ್ನು ಅಸ್ಪೃಶ್ಯರ ಕೈಗೆ ನೀಡಿಯೆಂಬ ಅಭಿಪ್ರಾಯ ಎಲ್ಲರದಾಗಿತ್ತು. ಆದರೆ ಇದೇ ಮಹಾತ್ಮಾಜೀ ಅವರೇ ಈಗ ಅಸ್ಪೃಶ್ಯರ ಹಕ್ಕಿನ ವಿರುದ್ಧ ಹೋದರು. ಆದರೆ ಮುಸ್ಲಿಮರು, ಕ್ರಿಸ್ತರಿಗೆ ಇನ್ನಿತರ ಅಲ್ಪಸಂಖ್ಯಾತರಿಗೆ ಈ ಅಧಿಕಾರದ ಕೆಲವು ಅಂಶಗಳನ್ನು ನೀಡಲು ಸಿದ್ಧರಿದ್ದರು. ಇಂಥ

ಬಿಕ್ಕಟ್ಟಿನ ಪ್ರಸಂಗದಲ್ಲಿ ಈ ಹಿಂದೂ ಮಹಾನ್ ನಾಯಕರುಗಳ ಜೊತೆಗೆ ಸ್ವತಂತ್ರ ಹಕ್ಕಿಗಾಗಿ ಹೋರಾಟ ಮಾಡಬೇಕಾಯಿತು. ಅಸ್ಪೃಶ್ಯರ ಕಲ್ಯಾಣಕರ್ತನೆಂದು ಹೇಳಿಕೊಳ್ಳುವ ಈ ಹಿಂದೂಸ್ಥಾನದ ಮಹಾತ್ಮ ಈ ಸಮಯದಲ್ಲಿ ನಮ್ಮ ವಿರುದ್ಧ ಹೋಗಬಾರದಿತ್ತು. ಅವರು ನಿಜವಾದ ಕಲ್ಯಾಣ ಬಯಸುವವರಾಗಿದ್ದರೆ ಅವರ ಸಂಗಡ ವಾದವಿವಾದ ಮಾಡುವುದರ ಮೂಲಕ ನನ್ನ ಶಕ್ತಿಯನ್ನು ವ್ಯಯ ಮಾಡುತ್ತಿರಲಿಲ್ಲ.

ಸ್ವರಾಜ್ಯಕ್ಕಾಗಿ ತಕ್ಷಣ ಮಹಾತ್ಮಾಜಿ ಅವರಿಗೆ ಒಂದು ಕೋಟಿ ನೀಡುವ ಸ್ಪೃಶ್ಯರು ಅಸ್ಪೃಶ್ಯತೆಯ ನಿವಾರಣೆಗಾಗಿ ಐದಾರುಲಕ್ಷ ನೀಡಲು ಸಮರ್ಥರಿಲ್ಲವೇ? ಇದರಿಂದ ಗೊತ್ತಾಗುತ್ತದೆ ಸ್ಪೃಶ್ಯರಿಗೆ ಅಸ್ಪೃಶ್ಯತೆಯ ಹೋಗಲಾಡಿಸುವ ಕಾಳಜಿ ಎಷ್ಟಿದೆಯೆಂಬುದು. ಈ ಅತ್ಯಾಚಾರದ ರಾಮನಾಮ ಹೇಳುವ ಗಾಂಧೀಜಿಯವರ ಚಳವಳಿಯು ನಮ್ಮ ಏಳ್ಗೆಯನ್ನು ಹೇಗೆ ಮಾಡೀತು? ನಿಮ್ಮ ಮೈಲಿಗೆ, ನಿಮ್ಮ ಮೇಲಾಗುವ ತೀವ್ರ ಅನ್ಯಾಯ, ಸಾಮಾಜಿಕ ನೋವು, ಕಷ್ಟ, ಅವಮಾನ, ದಾರಿದ್ರ್ಯವನ್ನು ಈ ಜನ ಹೇಗೆ ನಾಶಮಾಡುವರು? ಖರೆ ಮಾತೆಂದರೆ ಸ್ಪೃಶ್ಯ ಹಿಂದೂಗಳು ತೋರಿಕೆ ಕಾರ್ಯ ಮಾಡುವುದರಲ್ಲಿ ನಿಷ್ಣಾತರು. ಒಳದಾರಿಯಿಂದ ನಿಮ್ಮ ಸಾಮಾಜಿಕ ಜೀವನದೊಳಗೆ ಮುಳ್ಳುಗಳನ್ನು ಹರಡಲು ನಿತ್ಯ ಗಟ್ಟಿಯಾಗಿ ಕಾರ್ಯ ನಿರ್ವಹಿಸುತ್ತಾರೆ. ಶ್ರೀಮಂತ, ಸಾಹುಕಾರ, ಗೌಡ, ಬಂಡವಾಳದಾರ ಇವರೆಲ್ಲ ನಿಮ್ಮ ಆರ್ಥಿಕ ಜೀವನವನ್ನು ಅಧಿಕ ಕಷ್ಟದಾಯಕವಾಗಿಸುತ್ತಿದ್ದಾರೆ. ಇನ್ನೊಂದು ಕಡೆ ಬಹುಜನ ಸಮಾಜದ ಪ್ರಾತಿನಿಧಿಕಪಕ್ಷ ಕಾಂಗ್ರೆಸ್ಸು ಅತ್ಯಂತ ದಿಮಾಕಿನಿಂದ ನಮ್ಮ ಪಕ್ಷವೇ ಅಸ್ಪೃಶ್ಯರ, ಬಡವರೆಂದೆನಿಸಿಕೊಳ್ಳುವ ಜನರ, ದೀನದಲಿತರ ಪಕ್ಷವೆಂದೂ ತಲೆಯೆತ್ತಿ ಹೇಳುತ್ತದೆ. ಇವೆಲ್ಲವನ್ನು ಗಮನಿಸಿದಾಗ ಕಾಂಗ್ರಸ್ಸು ನಮ್ಮ ಏಳ್ಗೆಯನ್ನು ನಿಜವಾಗಿ ಬಯಸಿದ್ದರೆ, ನಾನು ಅತ್ಯಂತ ಸಂತೋಷದಿಂದ ಅದರಲ್ಲಿ ಶಾಮೀಲಾಗುತ್ತಿದ್ದೆ. ಆದರೆ ಕಾಂಗ್ರೆಸ್ಸಿನಿಂದ ನಮ್ಮ ಸಮಾಜದ, ಕಾರ್ಮಿಕರ, ರೈತರ ಮತ್ತು ಕಡುಬಡವರ ಹಿತವು ಸಾಧ್ಯವಿಲ್ಲ ಎಂದನಿಸಿದಾಗಲೇ ಸ್ವತಂತ್ರ ಮಜೂರ ಪಕ್ಷವನ್ನು ಸ್ಥಾಪಿಸಿದೆ.

ಈ ದೇಶದಿಂದ ಒಂದು ವೇಳೆ ಬ್ರಿಟಿಷರು ಹೋಗಬಹುದು. ಆದರೆ ಎಲ್ಲ ಬಡವರನ್ನು ಶೋಷಿಸಿ ಅವರ ರಕ್ತ ಹೀರುವ ಜಿಗಳಿತರದ ಯಾವ ಶ್ರೀಮಂತ ಬಂಡವಾಳ ವರ್ಗವಿದೆಯೋ ಅದು ಈ ದೇಶದಿಂದ ತೊಲಗುವುದಿಲ್ಲ. ಅದು ಕಾಂಗ್ರೆಸ್ಸಿನಲ್ಲಿ ಲೀನಗೊಂಡಿದೆ. ಆದ್ದರಿಂದ ಅದರ ರಕ್ತಶೋಷಕ ವೃತ್ತಿ ನಾಶವಾಗುವುದಿಲ್ಲ. ಅದರ ದೊಡ್ಡ ರಕ್ಕಮ್ಮಿನ ಬಡ್ಡಿಹಣ ಹೀರುವ ರಾಕ್ಷಸಿ ವಾಸನೆ ನಷ್ಟವಾಗುವುದಿಲ್ಲ. ಅವರ ಬಡವರ ಮನೆಗೆ ಬೆಂಕಿಯಿಡುವ ಬುದ್ಧಿ ಇಲ್ಲವಾಗುವುದಿಲ್ಲ.

ನಮ್ಮ ಮುಂಬೈ ಇಲಾಖೆಯ ಬ್ರಾಹ್ಮಣೇತರ ಪಕ್ಷ ಬಡವರಿಗಾಗಿ ಏನಾದರು ಕೆಲಸ ಮಾಡಿಯಾರು ಅಂದು ಕೊಂಡಿದ್ದೆ. ಇದಷ್ಟೆ ಅಲ್ಲ ಅವರ ಬಗ್ಗೆ ಕೆಲವು ಸಮಯ ಅಭಿಮಾನವೆನಿಸುತ್ತಿತ್ತು. ಆದರೆ ಕೊನೆಗೆ ಶಿಸ್ತು ಮತ್ತು ಸಂಘಟನೆ ಅಭಾವದಿಂದ ಹಾಗೂ ಹರಿಯುವ ನದಿಯಲ್ಲಿ ಕೈತೊಳೆದುಕೊಳ್ಳುವ ಸ್ವಭಾವದಿಂದ ಪಕ್ಷದಬಲ ಕುಸಿಯಿತು. ತಾವು ಉಚ್ಚವೆಂದೆನಿಸಿಕೊಳ್ಳುವ ಬ್ರಾಹ್ಮಣ ಸಮಾಜದ ಆಕ್ರಮಣಶೀಲ ಧೋರಣೆ ಹಾಳು ಮಾಡುವ ಉದ್ದೇಶವು ಎಲ್ಲಿಂದೆಲ್ಲಿಗೆ ನಾಶಕ್ಕೆ ಕರೆದೊಯ್ದಿತು. ಒಂದು ಪ್ರಬಲ ಪಕ್ಷದ ಇಂದಿನ ಶೋಚನೀಯ ಅವಸ್ಥೆಯನ್ನು ನಾವು ಗಮನದಲ್ಲಿಡಬೇಕು. ನಮ್ಮ ಪ್ರತಿಯೊಬ್ಬ ವ್ಯಕ್ತಿ ಪಕ್ಷದ ಜೊತೆಗೆ ಪೂರ್ಣ ಪ್ರಾಮಾಣಿಕನಾಗಿರಬೇಕು. ಆತ ನಾಯಕರ ಆಜ್ಞೆಯನ್ನು ಗೌರವಿಸಬೇಕು. ಪಕ್ಷದ ಕಾರ್ಯಕ್ರಮಗಳ ಮೇಲೆ ನಂಬಿಕೆಯಿಟ್ಟು ಮೋಸವೆಸಗದೆ ಜಾರಿಗೊಳಿಸಲು ತೀವ್ರ ಯತ್ನಮಾಡಬೇಕು. ವೈಯಕ್ತಿಕ ಸ್ವಾರ್ಥವನ್ನು ಬಿಡಬೇಕು. ಪಕ್ಷಕ್ಕಾಗಿ ಕಷ್ಟನಷ್ಟ, ನೋವು ಅನುಭವಿಸಬೇಕು. ಶಿಸ್ತಿನಿಂದ ಎಲ್ಲ ಕೆಲಸಕಾರ್ಯ ಮಾಡುವ ಧ್ಯೇಯವಿಟ್ಟುಕೊಳ್ಳಬೇಕು. ಆದ್ದರಿಂದ ಸ್ವತಂತ್ರ ಮಜೂರ ಪಕ್ಷ ಸೇರುವವರು ಇವೆಲ್ಲ ವಿಚಾರಗಳನ್ನು

ಅರಿಯಬೇಕು.

ಇವತ್ತು ಅಸೆಂಬ್ಲಿಯಲ್ಲಿ ನಮ್ಮ ಪಕ್ಷದ ಪ್ರತಿನಿಧಿಗಳು ಕಡಿಮೆ ಸಂಖ್ಯೆಯಲ್ಲಿದ್ದರೂ ಬೇರೆ ಪಕ್ಷಗಳಿಗೆ ಅದರ ಭೀತಿಯಿದೆ. ಇದಕ್ಕೆ ಕಾರಣ ಜನಕಲ್ಯಾಣಕ್ಕಾಗಿ ನಾವು ಹಾಕಿಕೊಂಡ ಕಾರ್ಯಕ್ರಮಗಳನ್ನು ಪೂರ್ಣಗೊಳಸಲು ನಾವು ತೀವ್ರವಾಗಿ ಯತ್ನಿಸುತ್ತೇವೆಂಬ ವಿಶ್ವಾಸದ ಕ್ರಿಯೆ. ಬಹುಜನ ಸಮಾಜಕ್ಕೆ ಸುಖದೊರಕಬಹುದು. ಅವರ ಮೇಲೆ ಅನ್ಯಾಯ ಆಗುವುದಿಲ್ಲ ಎಂಬ ಕಾನೂನು ಅಧಿಕಾರ ಹೊಂದಿದ ಪಕ್ಷದಿಂದ ಮಾಡಿಕೊಳ್ಳಬೇಕಿದೆ. ಫೌಜದಾರ, ಮಾಮಲೆದಾರ, ಸರ್ಕಲ್ ಇನ್ಸ್‌ಪೆಕ್ಟರ್, ತಲಾಠಿ ಮತ್ತು ಪಾಟೀಲರ ಬಳಿ ಅಧಿಕಾರವಿಲ್ಲ. ಮಹಾರ ಯಾವ ರೀತಿಯಲ್ಲಿ ಸರಕಾರಿ ನೌಕರರಾಗಿದ್ದಾರೆ ಹಾಗೆಯೇ ಅವರೂ ನೌಕರರು, ನಿಜವಾದ ರಾಜ್ಯಾಧಿಕಾರ ಜನರ ಕೈಯಲ್ಲಿದೆ, ಅಂದರೆ ಕೌನ್ಸಿಲ್ ಹತ್ತಿರವಿದೆ. ಆದ್ದರಿಂದ ಸರಕಾರಿ ನೌಕರರು ಹೆದರುವ ಕಾರಣವಿಲ್ಲ. ಅವರಾಗಲಿ, ಬೇರೆಯವರಾಗಲಿ ನಿಮಗೆ ತೊಂದರೆ ಕೊಟ್ಟರೆ ಅದನ್ನು ಗಮನಿಸಿ ನಿಮ್ಮ ನಿವೇದನೆ, ದುಃಖ ಮತ್ತು ಅನ್ಯಾಯವನ್ನು ಬೀದಿಗೆ ತಂದು, ಅದನ್ನು ಇಲ್ಲವಾಗಿಸುವ ಪ್ರಯತ್ನವನ್ನು ಸ್ವತಂತ್ರ ಮಜೂರ ಪಕ್ಷವು ಮಾಡುತ್ತದೆ. ಈ ಆಶ್ವಾಸನೆಯನ್ನು ನಾನು ನೀಡುತ್ತೇನೆ. ಸ್ವತಂತ್ರ ಮಜೂರ ಜಿಲ್ಲಾ ಶಾಖೆ ಸ್ಥಾಪನೆಯಾಗುವುದಿದೆ. ನನ್ನ ಬಾಲ್ಯ ಮತ್ತು ಪ್ರಾಥಮಿಕ ಶಿಕ್ಷಣ ಈ ಜಿಲ್ಲೆಯಲ್ಲಿ ಆಗಿರುವುದರಿಂದ ಈ ಜಿಲ್ಲೆಯ ಶಾಖೆ ಸ್ಥಾಪಿಸಲು ನನಗೆ ಅತೀವ ಸಂತೋಷವಾಗುತ್ತಿದೆ.

# ೧೦೮.
# ಮನುಷ್ಯರಾಗಿಯೂ ರೊಟ್ಟಿಗಾಗಿ ಸ್ವಾಭಿಮಾನ ಶೂನ್ಯರಾಗುವಿರೇನು?

ಪುಣೆಜಿಲ್ಲೆಯ ದೌಂಡ ಎಂಬಲ್ಲಿ ದಿನಾಂಕ ೭ ನವೆಂಬರ್ ೧೯೩೭ರಂದು ಡಾ. ಬಾಬಾಸಾಹೇಬ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಸಭೆ ನಡೆದಿತ್ತು. ಪುಣೆ ಜಿಲ್ಲೆಯ ಈ ಪ್ರದೇಶ ತುಂಬಾ ಹಿಂದುಳಿದಿದೆ ಮತ್ತು ಈ ಕಾರಣಕ್ಕಾಗಿಯೇ ಡಾ. ಅಂಬೇಡ್ಕರರು ಅಲ್ಲಿಗೆ ತೆರಳಿ ಒಟ್ಟು ಪರಿಸ್ಥಿತಿಯನ್ನು ಅವಲೋಕಿಸಿದರು. ಅವರು ಆಗಮಿಸಿದಾಗ ಸೌ. ಠಕೂಬಾಯಿ ರೋಕಡೆ, ಭೀಮಾಬಾಯಿ ಮಚಾರ, ಚಿಮಾಬಾಯಿ ಸೋನವಣೆ, ಗೋಧಾಬಾಯಿ, ಭಾಗೀರಥಿಬಾಯಿ ರೋಕಡೆ, ಲಕ್ಷ್ಮೀಬಾಯಿ ಡಿಖಳೆ ಮತ್ತು ಜಯಾಬಾಯಿ ಭಿಂಗಾರದಿವೆ ಮುಂತಾದ ಮಹಿಳೆಯರು ಪಂಚಾರತಿಯೆತ್ತಿ ಸ್ವಾಗತಿಸಿದರು. ನಂತರ ಸಭೆ ಆರಂಭವಾಯಿತು. ಮೊದಲಿಗೆ ಶಾಸಕ ರಾಜಾರಾಮ ಭೋಳೆಯವರು ಎಲ್ಲರನ್ನು ಸ್ವಾಗತಿಸಿದರು. ಡಾ. ಅಂಬೇಡ್ಕರರಿಗೆ ಅಧ್ಯಕ್ಷತೆ ವಹಿಸಲು ಕೇಳಿಕೊಂಡರು. ಆ ಬಳಿಕ ಶಾಸಕ ಡಾ. ಭಾವುಸಾಹೇಬ ಗಡಕರಿ ಅವರು ಬೆಂಬಲ ಸೂಚಿಸಿ ಭಾಷಣ ಮಾಡಿದರು.

ಆನಂತರ ಡಾ. ಬಾಬಾಸಾಹೇಬ ಅಂಬೇಡ್ಕರರು ಮಾತನಾಡಲು ಎದ್ದರು. ಅವರು ತಮ್ಮ ಭಾಷಣದಲ್ಲಿ ಹೇಳಿದರು,

ಪ್ರಿಯ ಸೋದರಿಯರೆ ಮತ್ತು ಸೋದರರೆ,

ಇಲ್ಲಿ ಬಂದು ಬಹಳಷ್ಟು ಮಾತಾಡಬೇಕೆಂದೇನೂ ನನಗೆ ಅನಿಸಿಲ್ಲ. ನಿಮ್ಮ ಭೇಟಿಯಾದ ಬಳಿಕ ಕೆಲಸವೆಲ್ಲ ಮುಗೀತು ಅನಿಸುತ್ತದೆ. ಆದರೆ ಇಲ್ಲಿಯ ನಿಮ್ಮ ಪರಿಸ್ಥಿತಿ ಕಂಡು ಎರಡು ಮಾತು ಹೇಳಬೇಕೆಂದೆನಿಸುತ್ತದೆ. ಇವತ್ತಿನ ಸಭೆಯ ಪ್ರಮುಖ ಉದ್ದೇಶ ಸ್ವತಂತ್ರ ಮಜೂರ ಪಕ್ಷದ ಶಾಖೆ ಆರಂಭಿಸುವುದಾಗಿದೆ. ನಮ್ಮ ಈ ಪಕ್ಷ ಕೇವಲ ಅಸ್ಪೃಶ್ಯ ವರ್ಗದವರಿಗಷ್ಟೆ ಮೀಸಲಿಲ್ಲ, ಯಾರು ಕೂಲಿ ಕಾರ್ಮಿಕರಾಗಿರುವರೊ, ರೈತರು, ದುಡಿದು ಹೊಟ್ಟೆ ತುಂಬಿಸಿಕೊಳ್ಳುವವರಿದ್ದಾರೋ ಅವರಿಗೆ ಪ್ರಾಮುಖ್ಯತೆ ನೀಡೋ ಪಕ್ಷವಾಗಿದೆ. ನಮ್ಮ ಪಕ್ಷ ಹುಟ್ಟಿ ಒಂದು ವರ್ಷವಾಗಿದೆ. ಆದರೆ ಅದರ ಕಾರ್ಯಕಲಾಪಗಳ ವಿಸ್ತಾರ ವ್ಯಾಪಕವಾಗಿ ವೃದ್ಧಿಸಿದೆ. ಇದರ ಮೇಲಿಂದ ಈ ಪಕ್ಷದ ಅವಶ್ಯಕತೆಯ ಬಗ್ಗೆ ನಿಮಗೆ ಅರಿವು ಮಾಡಬಹುದು. ಕಾಂಗ್ರೆಸ್ಸು ಶ್ರಮಜೀವಿಗಳ ಏಳ್ಗೆಯನ್ನು ಮೂಲತಃ ಮಾಡುವುದಿಲ್ಲ. ಕಾಂಗ್ರೆಸ್ ಒಂದು ಮಾಯೆ. ಈ ಮಹಾಮಾಯೆಯೊಳಗೆ ಸಿಲುಕಿ ನಿಮ್ಮ ಅಧಃಪತನ ಮಾಡಿಕೊಳ್ಳಬೇಡಿರಿ. ನಿಮಗೆ ಗೊತ್ತಿರಬಹುದು, ಒಮ್ಮೆ ನರಿ ಮೇಕೆಗೆ ಹೇಳಿತು–'ನಡೆ, ನಿನ್ನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತೇನೆ' ಆದರೆ ನರಿ ಮೇಕೆಯನ್ನು ಸ್ವರ್ಗಕ್ಕೆ ಕೊಂಡೊಯ್ಯದೆ ಮಧ್ಯೆದಲ್ಲೇ ಕೊಂದು ತಿಂದು ನಿಜ ಸ್ವರ್ಗ ತೋರಿಸಲಿಲ್ಲ. ಅದಕ್ಕೆ ಎಚ್ಚರಿರಬೇಕು. ಖರೆ–ಖೊಟ್ಟಿ ಯಾವುದೆಂಬುದನ್ನು ಸ್ವಂತ ಬುದ್ಧಿಯಿಂದ ಅರಿಯಿರಿ. ನಿಮ್ಮ ನಿಜವಾದ ಹಿತವನ್ನು ಕಾಪಾಡುವ ಆಸೆಯಿದ್ದರೆ ಇಂದೇ ಸ್ವತಂತ್ರ ಮಜೂರ ಪಕ್ಷದ ಸದಸ್ಯರಾಗಿ, ಕಾನೂನು

---

ಜನತಾ: ೧೯೩೭.

ಮಂಡಳಿಯಲ್ಲಿ ನಮ್ಮವರು ಹೆಚ್ಚಿನ ಸಂಖ್ಯೆಯಲ್ಲಿರುವುದು ಅಗತ್ಯವಾಗಿದೆ. ಅವರೇ ನಮ್ಮ ಪ್ರತಿನಿಧಿಗಳು ನಮ್ಮ ಹಿತದ ಕಾರ್ಯಮಾಡುವವರು.

ಹಾಗೆಯೇ ಇನಾಮು ಜಮೀನು ಬಾಬತ್ತಿನಲ್ಲೂ ಕಾಂಗ್ರೆಸ್ಸಿನವರು ನಿಮಗೆ ತಪ್ಪುಕಲ್ಪನೆ ಮೂಡುವ ಹಾಗೆ ಮಾಡಬಹುದು. ಹಳ್ಳಿಗಳಲ್ಲಿ ನಿಮ್ಮ ವಾಸ ಕಡಿಮೆಯಾಗಿರುತ್ತದೆ. ನಿಮ್ಮ ಉಪಜೀವನ ಅಲ್ಲಿಯ ಸ್ಪೃಶ್ಯರ ಇಚ್ಚೆಯ ಮೇಲೆ ಅವಲಂಬಿಸಿರುತ್ತದೆ. ಅದಕ್ಕಾಗಿ ಅವರು ನಿಮ್ಮ ಉಪಜೀವನದ ದಿಕ್ಕು ತಪ್ಪಿಸಬಹುದು. ಅದರ ಮೇಲೆ ವಿಶ್ವಾಸವಿಡಬೇಡಿರಿ. ದೀಪಾವಳಿಯಲ್ಲಿ ಹೊಲೆಯರ ಸ್ತ್ರೀಯರು ಪಾಟೀಲರಿಗೆ ಆರತಿಯೆತ್ತಲು ಹೋಗಬೇಕು ಮತ್ತು 'ರೈತನ ರಾಜ್ಯ ಬರಲಿ' ಎಂದು ಹೇಳಬೇಕು ಎಂದಿದೆ. ಇಲ್ಲಿತನಕ ಅವರು ಸಾಕಷ್ಟು ರಾಜ್ಯಭೋಗಿಸಿ ಆಗಿದೆ. ಹಾಗಿದ್ದರೆ ಪಾಟೀಲನ ಹೆಂಡತಿ ಮಹಾರನಿಗೆ ಯಾಕೆ ಆರತಿ ಬೆಳಗುವುದಿಲ್ಲ. ದಸರೆಯ ದಿನ ಮಹಾರನು ಬನ್ನಿ ಎಲೆ ತರುವವ ಮತ್ತು ಅದನ್ನು ಪಾಟೀಲನು ಬೇಕಾದ ಹಾಗೆ ಲೂಟಿ ಮಾಡುವವ. ಇಂಥ ಸಮಯದಲ್ಲಿ ಪಾಟೀಲನೆ ಬನ್ನಿ ಎಲೆ ತರೋದಕ್ಕೆ ಏನು ಧಾಡಿ? ಪಂಚಾಯತಿ ಮುಂತಾದ ಮಹತ್ವದ ಕಾರ್ಯಗಳಿಗೆ ಎಲ್ಲರನ್ನು ಕರೆಯಲು ಮಹಾರನನ್ನೇ ಕಳಿಸಲಾಗುತ್ತದೆ. ಆದರೆ ಪಂಚಾಯತಿಯಲ್ಲಿ ಕುಳಿತುಕೊಳ್ಳುವ ಹಕ್ಕು ಮಹಾರನಿಗಿಲ್ಲ? ಸತ್ತಸುದ್ಧಿಯನ್ನು ಪತ್ರದಿಂದಲೋ ಟೆಲಿಗ್ರಾಂದಿದಲೋ ಕಳಿಸುವುದನ್ನು ಬಿಟ್ಟು ಎಲ್ಲವನ್ನೂ ಮಹಾರನೇ ಕಾಲ್ನಡಿಗೆಯಲ್ಲಿ ಓಡಾಡಿ ಯಾಕೆ ಹೇಳಬೇಕು? ನಾನಿಲ್ಲಿ ತನಕ ಎರಡು ವಿಚಾರಗಳನ್ನು ಹೇಳಿದ್ದೇನೆ. ಅದೆಂದರೆ ಸತ್ತಮಾಂಸ ತಿನ್ನಕೂಡದು ಮತ್ತು ಎಂಜಲನ್ನು ಮುಟ್ಟಕೂಡದು. ರೊಟ್ಟಿ ಇತ್ಯಾದಿ ಭಿಕ್ಷೆ ಬೇಡಿ ತರುವುದರ ವಿರುದ್ಧ ನಾನಿದ್ದೇನೆ. ಇದರಿಂದ ನಾವು ಇತರರ ಹಾಗೆ ಮನುಷ್ಯರಿದ್ದೂ ರೊಟ್ಟಿಗಾಗಿ ಯಾಕೆ ಸ್ವಾಭಿಮಾನ ಶೂನ್ಯರಾಗಬೇಕು?

ಇಂಥ ಪರಿಸ್ಥಿತಿಯಲ್ಲಿ ನಿಮಗೆ ನಾನು ಸ್ಪೃಶ್ಯರ ಬಳಿ ರೊಟ್ಟಿಗಾಗಿ ಭಿಕ್ಷೆಯೆತ್ತಿ ಎಂದು ಹೇಗೆ ಹೇಳಿಯೇನು? ಇಲ್ಲಿ ಸೇರಿದ ಮಹಿಳೆಯರಿಗೆ ನಾನು ಹೇಳುವುದೆಂದರೆ, ನೀವು ಮಕ್ಕಳನ್ನು ಹೆತ್ತ ಬಳಿಕ ಅವುಗಳನ್ನು ನೋಡಿಕೊಳ್ಳದೆ, ಸ್ಪೃಶ್ಯ ಮಕ್ಕಳಂತೆ ಪೋಷಿಸಿ ಅವರ ಶಿಕ್ಷಣದತ್ತ ಗಮನಹರಿಸದೆ ಊರಲ್ಲಿ ಯಾಕೆ ಭಿಕ್ಷೆ ಬೇಡುತ್ತ ಅಲೆಯುತ್ತೀರಿ? ನೀವೂ ಮನುಷ್ಯರಾಗಿದ್ದೀರಿ. ಸ್ಪೃಶ್ಯ ಸಮಾಜದ ಮಕ್ಕಳು ಶಿಕ್ಷಣ ಪಡೆದು ಹೆಸರು ಗಳಿಸಿದಂತೆ ನಿಮ್ಮ ಮಕ್ಕಳಿಗೆ ಹಾಗೆ ಮಾಡಲು ಯಾಕೆ ಹೇಳುವುದಿಲ್ಲ. ನಾನು ಹೇಳಿದಂತೆ ನೀವೆಲ್ಲ ನಡೆದುಕೊಳ್ಳುತ್ತಿದ್ದೀರಿ ಎಂದು ನಾನು ಕೇಳಿಸಿಕೊಂಡಾಗ ಮಾತ್ರ ನನಗೆ ಸಂತೋಷ.

ಈ ಸಭೆಗೆ ಪುಣೆಯಿಂದ ಮೆ. ಸುಭೇದಾರ ಘಾಟಗೆ ಬಂಧು, ಮಧಾಳೆ, ಅಣ್ಣಾ ಪೋತನೀಸ, ಡಿಖಳೆ ಬಂಧು, ಬೋರಾಳೆ, ಪಾನಸರೆ, ಗಾಯಕವಾಡ, ಘೋಟಗೆ ಮುಂತಾದವರು ಬಹುಸಂಖ್ಯೆಯಲ್ಲಿ ಹಾಜರಿದ್ದರು. ಈ ಸಭೆಯಲ್ಲಿ (೧) ಮಹಾರ ಜಮೀನು ಬಿಲ್‌ಗೆ ಬೆಂಬಲ, (೨) ಲೋಕಲ್ ಬೋರ್ಡನ ಬಾವಿಯನ್ನು ಅಸ್ಪೃಶ್ಯರ ವಸತಿ ಹತ್ತಿ ನಿರ್ಮಿಸುವುದು, (೩) ಪಾಟೀಲವೃತ್ತಿ ನಷ್ಟ ಮಾಡುವ ಕಾನೂನಿಗೆ ಬೆಂಬಲ, (೪) ಮಿಲಿಟರಿ ಗೋಳಿಬಾರಿನಿಂದ ಮಹಾರರಿಗೆ ಆಗುವ ತೊಂದರೆ ದೂರಾಗಬೇಕು ಅಥವಾ ಅದಕ್ಕಾಗಿ ಅವರಿಗೆ ವೇತನ ದೊರೆಯಬೇಕು ಇತ್ಯಾದಿ ಗೊತ್ತುವಳಿ ಪಾಸು ಮಾಡಲಾಯಿತು. ಕೊನೆಗೆ ಪುಷ್ಪ ಮಾಲಾರ್ಪಣೆ ಬಳಿಕ ಸಮಾರಂಭ ತೆರೆಕಂಡಿತು.

## ೧೧೯.
# ನಾನೇನನ್ನು ಸಂಪಾದಿಸಿದ್ದೇನೆಯೋ ಅದೆಲ್ಲವು ಅಖಿಲ ಅಸ್ಪೃಶ್ಯರಿಗಾಗಿ

ರವಿವಾರ ದಿ: ೭ ನವೆಂಬರ್ ೧೯೩೭ರಂದು ರಾತ್ರಿ ೮ ಗಂಟೆ, ಪುಣೆಯ ಭವಾನಿಪೇಠ, ಭಂಗಿ ವಸತಿಗೆ ಅಸ್ಪೃಶ್ಯರ ಏಕಮೇವ ಮುಂದಾಳು ಡಾ. ಬಾಬಾಸಾಹೇಬ ಅಂಬೇಡ್ಕರರು ಭೇಟಿಯಿತ್ತರು. ಆ ಸಂದರ್ಭದಲ್ಲಿ ಶಾಸಕ ಭೋಳೆ, ಮೆ. ಖಂಡೇರಾವ ಸಖರಾಮ ಸಾವಂತ, ಮೆ. ಸುಭೇದಾರ ಆರ್.ಎಸ್. ಘಾಟಗೆಸಾಹೇಬ, ಮೆ. ರೇವಜಿದಗಡೂಜಿ ಡೋಳಸ, ಮೆ. ಕೆ. ಗಾಯಕವಾಡ, ಮೆ.ಎಸ್. ಥೋರಾತ, ಮೆ. ಶಾಂತರಾಮ ಪೋತನೀಸ, ಮೆ.ಕೆ. ಆರ್. ಮಧಾಳೆ, ಮೆ.ಎಸ್. ಗಾಯಕವಾಡ, ಮುಂತಾದ ಪ್ರಮುಖರು ಹಾಗೂ ಮಹಾರ, ಮಾದಿಗ, ಭಂಗಿ ಮುಂತಾದ ಜನಸಮುದಾಯ ಉಪಸ್ಥಿತವಿತ್ತು. ಡಾ. ಬಾಬಾಸಾಹೇಬರ ವಾಹನ ಬರುತ್ತಿದ್ದಂತೆಯೆ ಅವರ ಜಯಘೋಷದೊಂದಿಗೆ ಸ್ವಾಗತಿಸಲಾಯಿತು. ಮೊದಲಿಗೆ ಭಂಗಿ ಸಮಾಜದ ಪ್ರಸಿದ್ಧ ಗಾಯನರತ್ನ ಕಾಸಮ ಇಸೂಪ ಜ್ಞಾನಜೋತ ಅವರು ತಮ್ಮ ಮೇಳದೊಟ್ಟಿಗೆ ಮಧುರವಾಗಿ ಹಾಡಿ ಸಂಗೀತಸುಧೆ ಹರಿಸಿದರು. ಅನಂತರ ಭಂಗಿ ಸಮಾಜದ ತರುಣ ಕಾರ್ಯಕರ್ತ ಮೆ. ವಿಠ್ಠಲದಾಸ ಅಲ್ಲಿಭಾಯಿ ಚವ್ಹಾಣ ಅವರು ತಮ್ಮ ಸಮಾಜದ ಆರ್ಥಿಕ ಪರಿಸ್ಥಿತಿ ಕುರಿತು ಮತ್ತು ಫ್ಲಶಿಂಗ್ ಸಂಡಾಸ ಸಿಸ್ಟಮ್‌ನಿಂದ ಉಂಟಾದ ನಿರುದ್ಯೋಗ ವಿಷಯದ ಮಾಹಿತಿಯನ್ನು ಡಾ. ಬಾಬಾಸಾಹೇಬರಿಗೆ ನೀಡಿದರು. ಆಮೇಲೆ ಭಂಗಿ ಸಮಾಜದ ಪರವಾಗಿ ಅವರನ್ನು ಪುಷ್ಪಹಾರ ನೀಡಿ ಸ್ವಾಗತಿಸಲಾಯಿತು. ನಂತರ ಹರಿಜನ ಹಿತಚಿಂತದ ಮಂಡಳಿವತಿಯಿಂದ ನಡೆಸುತ್ತಿರುವ ಉಚಿತ ವಾಚನಾಲಯ ಪರವಾಗಿ ಮಂಡಳದ ಜಾಯಿಂಟ್ ಸೆಕ್ರೆಟರಿ ಮೆ. ಕಿಸನ ತುಕಾರಾಮ ಭೋಸಲೆಯವರು ಮಂಡಳ ಮತ್ತು ವಾಚನಾಲಯಗಳ ಮಾಹಿತಿ ನೀಡಿ ವಾಚನಾಲಯದ ವತಿಯಿಂದ ಮಾಲಾರ್ಪಣೆ ಮಾಡಿದರು.

ನಂತರ ಡಾ. ಬಾಬಾಸಾಹೇಬ ಅಂಬೇಡ್ಕರರು ತಮ್ಮ ಅಮೃತಮಯ ವಾಣಿಯ ಅಮೂಲ್ಯ ಪ್ರಸಾದ ನೀಡಿದುದರಿಂದ ನೆರೆದ ಶ್ರೋತೃವರ್ಗವು ತೃಪ್ತಿಗೊಂಡಿತು. ಅವರು ಹೇಳಿದರು–

ನಾನೇನನ್ನು ಸಂಪಾಸಿದ್ದೇನೆಯೋ ಅದು ಕೇವಲ ಮಹಾರರಿಗಾಗಿ ಮಾತ್ರವಲ್ಲ, ಅದೆಲ್ಲವು ಅಖಿಲ ಅಸ್ಪೃಶ್ಯರಿಗಾಗಿದೆ. ನಾವು ಹೇಗೆ ಬ್ರಾಹ್ಮಣರ ಜೊತೆ ಕೂಡಿ ಒಡನಾಟ ಬೆಳೆಸುವುದಕ್ಕೆ ಯತ್ನಿಸುತ್ತೇವೆಯೋ ಅದರಂತೆ ಮಹಾರರು ಭಂಗಿ, ಮಾದಿಗ ಇವರೊಡನೆಯೂ ಕೂಡಿ ನಡೆಯಬೇಕು. ಇಲ್ಲದಿದ್ದರೆ ನಾನು ಮಹಾರರಿಗಾಗಿ ಏನೂ ಮಾಡಲು ಹೋಗುವುದಿಲ್ಲ. ಅದರಂತೆ ಭಂಗಿ ಸಮಾಜವು ನಾನು ಹೇಳಿದಂತೆ ನಡೆದುಕೊಳ್ಳಬಹುದು.

---

ಜನತಾ ಪತ್ರಿಕೆ: ೨೦ ನವೆಂಬರ್ ೧೯೩೭.

# ೧೧೧.
# ನಮ್ಮ ಅಸ್ತಿತ್ವಗಳನ್ನು ಸ್ವತಂತ್ರವಾಗಿಡದೆ ಹೋದಲ್ಲಿ ವೇದನೆಗೆ ಆಸ್ಪದವಿಲ್ಲ

ಆದಿ–ದ್ರವಿಡರು(ಮದ್ರಾಸ ಭಾಗದ ಬಹಿಷ್ಕೃತರು) ಸಾಕಷ್ಟು ಪ್ರಮಾಣದಲ್ಲಿ ಮುಂಬೈ ಧಾರಾವಿ(ಸಾಯನ್) ಪರಿಸರದಲ್ಲಿ ವಾಸವಾಗಿದ್ದಾರೆ. ಬಹುತೇಕ ಜನರು ಈ ಪರಿಸರದಲ್ಲಿರುವ ಚರ್ಮ ಹದಮಾಡುವ ಕಾರಖಾನೆಯಲ್ಲಿ ಕಾರ್ಮಿಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಮಾಜದ ಕೆಲವು ಯುವಕರು 'ಆದಿ–ದ್ರವಿಡ ಯುವಕ ಸಂಘ' ಎಂಬ ಹೆಸರಿನ ಸಂಘಟನೆ ನಡೆಸುತ್ತಿದ್ದಾರೆ. ಈ ಸಂಸ್ಥೆಯ ಸರ್ವಸಾಧಾರಣ ಸಭೆ ರವಿವಾರ ದಿ: ೧೪ ನವೆಂಬರ್ ೧೯೩೭ರಂದು ಮಾತಂಗದಲ್ಲಿಯ ಬಮೂಹಾಲ್‌ನಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಗೆ ಕಮಲಾಕರ ಚಿತ್ರೆ, ಶ್ರೀ ಶಾಂತಾರಾಮ ಉಪಶಾಮ ಮತ್ತು ಡಿ.ವ್ಹಿ. ಪ್ರಧಾನ ಮುಂತಾದ ಆಮಂತ್ರಿತ ಮಹನಿಯರು ಅತಿಥಿಗಳಾಗಿ ಆಗಮಿಸಿದ್ದರು. ಸಭೆಯ ಆರಂಭದಲ್ಲಿ ಆದಿ–ದ್ರವಿಡ ಸಮಾಜದ ವತಿಯಿಂದ ಡಾ. ಬಾಬಾಸಾಹೇಬರಿಗೆ ಸನ್ಮಾನ ಪತ್ರ ಅರ್ಪಿಸಿದರು. ಆನಂತರ ಸಂಸ್ಥೆಯ ಮಾಮೂಲಿ ಚಟುವಟಿಕೆಗಳು ಮುಗಿದವು.

ಡಾ. ಬಾಬಾಸಾಹೇಬರು ಗೌರವಪತ್ರ ಸ್ವೀಕರಿಸಿ ಭಾಷಣ ಮಾಡಿದರು. ಅವರು ಅಂದರು:

ಪ್ರಿಯ ಭಗಿನಿಯರೆ ಮತ್ತು ಬಂಧುಗಳೆ,

ನನಗೆ ಸನ್ಮಾನಪತ್ರ ನೀಡಿ ಗೌರವಿಸಿದ್ದೀರಿ, ಅದಕ್ಕೆ ತಮಗೆ ಆಭಾರಿಯಾಗಿರುವೆ. ನೀವೆಲ್ಲ ಮದರಾಸು ಪ್ರಾಂತ ಬಿಟ್ಟು ಮುಂಬೈಗೆ ಕೆಲಸಕ್ಕಾಗಿ ಬಂದಿರುವಿರಿ. ನೀವು ನಿಮ್ಮೂರಿಗೆ ಹೋಗಿ ಬರುವುದನ್ನು ಮಾಡುತ್ತಿರುವಿರಿ. ಆಗ ನಿಮ್ಮ ಜನರೊಟ್ಟಿಗೆ, ನಿಮ್ಮ ಪ್ರಾಂತದವರ ಜೊತೆಗೆ ಯಾವ್ಯಾವ ಸಮಯದಲ್ಲಿ ಸಂಬಂಧಗಳುಂಟಾಗುತ್ತವೆಯೋ ಆಗ ಒಂದು ಮಾತು ಅವರಿಗೆ ಮನವರಿಕೆ ಮಾಡಿರಿ. ಸದ್ಯ ಹೊಸ ಸಂವಿಧಾನ ಜಾರಿಗೆ ಬಂದಿದೆಯಲ್ಲ. ಅದರೊಳಗೆ ಅಸ್ಪೃಶ್ಯರಿಗಾಗಿ ಯಾವ ರಾಜಕೀಯ ಹಕ್ಕನ್ನು ನೀಡಲಾಗಿದೆಯೋ ಅದು ಅಭೂತಪೂರ್ವವಾಗಿದೆ. ಇಲ್ಲಿ ತನಕ ಗಮನಿಸಿದಾಗ ನಮ್ಮ ವರ್ಗದವರಿಗೆ ಇಂಥದ್ದು ಘಟಿಸಿರಲಿಲ್ಲ. ಅಸ್ಪೃಶ್ಯರ ಹಿತಕ್ಕಾಗಿ ದೊರೆತ ಈ ಹಕ್ಕಿನ ಪ್ರಯೋಜನ ಆಗದಿದ್ದರೆ ಅದು ದೊರೆತು ದೊರೆಯದ ಹಾಗೆನೇ ಸರಿ. ಇತರ ಯಾವುದೇ ಪ್ರಾಂತಕ್ಕೆ ಸಿಗದಷ್ಟು ಮದ್ರಾಸ ಪ್ರಾಂತದ ಬಹಿಷ್ಕೃತರಿಗೆ ಅಧಿಕ ಸ್ಥಾನಗಳು ಸಿಕ್ಕಿವೆ. ಅದರಂತೆ ಬೇರೆ ಭಾಗಕ್ಕೆ ಹೋಲಿಸಿದಾಗ ನಿಮ್ಮ ಪ್ರದೇಶದ ದುಃಖಕಷ್ಟಗಳು ಹೇರಳವಾಗಿವೆ. ಇಂಥ ಪರಿಸ್ಥಿತಿಯಲ್ಲಿ ನಿಮಗೆ ದೊರೆತ ರಾಜಕೀಯ ಹಕ್ಕನ್ನು ಪ್ರಯೋಜನವನ್ನು ಯೋಗ್ಯವಾಗಿ ಮಾಡಿಕೊಳ್ಳಬೇಕು. ಹಾಗೆ ಮಾಡಿಕೊಂಡಿದ್ದಿರೇನು ಎಂದು ಕೇಳಿದರೆ ತುಂಬಾ ಕಷ್ಟದಿಂದ ನೀವು ಈ ವಿಷಯದಲ್ಲಿ ತಮ್ಮ ಕರ್ತವ್ಯವನ್ನು ಎಚ್ಚರದಿಂದ ಕಂಡಿಲ್ಲ ಎಂದೇ ಹೇಳಬೇಕಾಗುತ್ತದೆ. ೩೦ ಸ್ಥಾನಕ್ಕಿಂತ ತೀರ ಕೆಲವು ಪ್ರತಿನಿಧಿಗಳನ್ನು ಹೊರತುಪಡಿಸಿ ಎಲ್ಲರು ಕಾಂಗ್ರೆಸ್‌ನ

---

ಜನತಾ: ೨೦ ನವೆಂಬರ್ ೧೯೩೭.

ಪರಿಣಾಮದಿಂದ ಆ ಭಾಗದ ಜನರ ನಿವೇದನೆಗಳನ್ನು ಕೇಳುವವರಿಲ್ಲದೆ ಗೌಣತ್ವ ಉಂಟಾಗಿದೆ. ನಿಮ್ಮನ್ನು ಅಸ್ಪೃಶ್ಯರೆಂದು ತಿಳಿದ ಹಿಂದೂಗಳು ನಿಮ್ಮ ಮೇಲೆ ಅನ್ಯಾಯ ಎಸಗುತ್ತಾರೆ. ಅದೇ ಹಿಂದೂಗಳು ಕಾಂಗ್ರೆಸ್ಸನ್ನೆಲ್ಲ ವ್ಯಾಪಿಸಿದ್ದಾರೆ. ಈಗ ಅವರೊಂದಿಗೆ ಒಂದು ವೇಳೆ ಅಸ್ಪೃಶ್ಯ ಸಮುದಾಯ ಒಂದಾದರೆ ನಿಮ್ಮ ಕಷ್ಟ ಸುಖ ಕೇಳುವರಾರು? ಕಾಂಗ್ರೆಸ್ ಒಳಗೆ ಸಾಮೀಲುಗೊಂಡ ಅಸ್ಪೃಶ್ಯ ವರ್ಗದ ಪ್ರತಿನಿಧಿಗಳಿಗೆ ಅಧಿಕಾರ ಹೊಂದಿದ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಆ ಪಕ್ಷದ ಶಿಸ್ತಿನಂತೆ ಯಾವುದೇ ನಿವೇದನೆಯನ್ನು ಕಾನೂನು ಮಂಡಳಿಯಲ್ಲಿ ವಿಚಾರಣೆಗೆ ಸ್ವೀಕರಿಸುವುದು ಸಾಧ್ಯವಿಲ್ಲ. ಅವರ ವಿಷಯವಾಗಿ ಭಯಂಕರ ತಾಂಡವವಾಡಿ ಮಂತ್ರಿಮಂಡಳದಲ್ಲಿಟ್ಟ ಆ ನಿವೇದನೆಗಳಿಗೆ ಪರಿಹಾರ ಕಾಣುವುದು ದೂರದ ಮಾತೇ ಸರಿ. ಮತ್ತೊಂದು ಮಹತ್ವದ ಪ್ರಶ್ನೆಯೆಂದರೆ ನಿಮ್ಮ ಮೇಲೆ ಅತ್ಯಾಚಾರ ಎಸಗುವ ಹಿಂದೂಗಳೆಂದರೆ ಕಾಂಗ್ರೆಸ್, ಇಂಥ ಪಕ್ಷದ ಮೇಲೆ ಇಷ್ಟೊಂದು ನಂಬಿಕೆಯಿದ್ದರೆ ನಿಮಗೆ ನಿಮ್ಮ ಭಿನ್ನ ಅಸ್ತಿತ್ವ ಎಲ್ಲಿದೆ? ನಾಳೆ ನಿಮ್ಮನ್ನು ಯಾರಾದರು ಕೇಳಬಹುದು, ನಿಮಗೆ ರಾಜಕೀಯ ಹಕ್ಕಿನ ಅವಶ್ಯಕತೆ ಎಲ್ಲಿ ಉಳಿದಿದೆಯೆಂದು? ಆಗ ಅಸ್ಪೃಶ್ಯರ ಹಿತವಾಗುತ್ತಿದ್ದರೆ ಕಾಂಗ್ರೆಸ್ಸಿನೊಳಗೆ ಕರಗಿ ಹೋಗುವುದಿಲ್ಲ, ತಮ್ಮ ಅಸ್ತಿತ್ವವನ್ನು ಇಂದು ಬಹಿರಂಗವಾಗಿ ಸ್ವತಂತ್ರರೂಪದಲ್ಲಿ ಅಭಿವ್ಯಕ್ತಿಸಿ; ಅಸ್ಪೃಶ್ಯರ ಅನೇಕ ರೂಪಿ ವೇದನೆಗಳಿಗೆ ಸಮಯಕ್ಕೆ ಸರಿಯಾಗಿ ಸ್ಪಂದಿಸುವುದರ ನೈತಿಕತೆಯಲ್ಲಿಯೆ ಅಡಗಿದೆ. ಇಲ್ಲದಿದ್ದರೆ ಅಸ್ಪೃಶ್ಯರು ಪೀಡೆಗಳಿಂದ ಮುಕ್ತರಾಗುವುದಿಲ್ಲ, ಅವರ ಉನ್ನತಿಯಾಗುವುದಿಲ್ಲ. ಅನಂತರ ಡಾಕ್ಟರ್‌ಸಾಹೇಬರು ಮತ್ತೊಮ್ಮೆ ಆದಿ–ದ್ರವಿಡ ಸಮಾಜಕ್ಕೆ ಆಭಾರ ಹೇಳಿ ಭಾಷಣ ಮುಗಿಸಿದರು. ಆ ಬಳಿಕ ಮದ್ರಾಸು ಕಡೆಯ ಅಸ್ಪೃಶ್ಯರ ನಾಯಕ ಶ್ರೀ. ದಿ.ಬ. ಶ್ರೀನಿವಾಸನ್ ಅವರ ಭಾಷಣ ನಡೆಯಿತು.

## ೧೧೧.

# ನಾಯಕರ ನಿಧನದ ನಂತರವೂ ಸಮಾಜಕಾರ್ಯ ಅವ್ಯಾಹತವಾಗಿ ಚಲಿಸಿ, ಚಿರಕಾಲ ಉಳಿಯಬೇಕು

ಜನತಾ ಪತ್ರಿಕೆಯ ದಿನಾಂಕ ೧೩ ನವೆಂಬರ್ ೧೯೩೭ರ ಸಂಚಿಕೆಯಲ್ಲಿ ಜಾಹೀರುಗೊಳಿಸಿದಂತೆ ಶನಿವಾರ ೨೦ ನವೆಂಬರ್ ೧೯೩೭ರ ರಾತ್ರಿ ೮ಕ್ಕೆ ವಡಾಳಾ, ಮುಂಬೈಯಲ್ಲಿ ಶ್ರೀ ಭಾವುರಾವ ಗಾಯಕವಾಡರಿಗೆ ಸಮ್ಮಾನಪತ್ರ ನೀಡಿ ಗೌರವಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಡಾ. ಬಾಬಾಸಾಹೇಬ ಅಂಬೇಡ್ಕರರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಶಂಕರರಾವ್ ವಡವಲಕರ ಅವರು ಶ್ರೀ ಭಾವುರಾವ ಗಾಯಕವಾಕರ ಕಾರ್ಯವೈಖರಿಯ ಸಂಕ್ಷಿಪ್ತ ಸಿಂಹಾವಲೋಕನ ಭಾಷಣ ಮಾಡಿದರು. ನಂತರ ಸಮ್ಮಾನಪತ್ರಕ್ಕೆ ಉತ್ತರವಾಗಿ ಶ್ರೀ ಭಾವುರಾವ ಗಾಯಕವಾಡರು ಮಾತನಾಡಿದರು.

ಈ ಸನ್ಮಾನಪತ್ರ ಸಮಾರಂಭದ ಅಧ್ಯಕ್ಷತೆ ವಹಿಸಿದ ಡಾ. ಬಾಬಾಸಾಹೇಬ ಅಂಬೇಡ್ಕರ ಭಾಷಣ ಜರುಗಿತು. ಅವರು ತಮ್ಮ ಭಾಷಣದಲ್ಲಿ ನುಡಿದರು:

ಇಂದಿನ ಸಮಾರಂಭಕ್ಕೆ ಉಪಸ್ಥಿತನಾಗಲು ಧನ್ಯತೆಯೆನಿಸುತ್ತಿದೆ. ಇದನ್ನು ಆಯೋಜಿಸಿದ ಎಲ್ಲ ಜನರಿಗೂ ತುಂಬಾ ಕೃತಜ್ಞನಾಗಿದ್ದೇನೆ. ನಾವು ಯಾವತ್ತು ಚಳುವಳಿಯ ಜ್ಯೋತಿಯನ್ನು ನಿರಂತರ ಬೆಳಗಲು ಸಹಜ ಸಭೆಗಳನ್ನು ನಡೆಸುತ್ತೇವೆಯೋ ಇದು ಅಂತಹ ಸಮಾರಂಭವಲ್ಲ. ಒಬ್ಬ ಗೌರವದ ವ್ಯಕ್ತಿಯ ಅಭಿನಂದನೆಯ ಕಾರ್ಯಕ್ರಮ ಮಹತ್ವ ಪೂರ್ಣವಾದುದೆ ಆಗಿದೆ. ಶ್ರೀ ಭಾವುರಾವರ ಮಟ್ಟವು ಎಷ್ಟು ದೊಡ್ಡದು ಎಂದು ಹೇಳುವ ಅಗತ್ಯವಿಲ್ಲ. ಇಂದಿನ ಸಮ್ಮಾನ ಪತ್ರದಲ್ಲಿ ಬಳಸಿದ ಭಾಷೆ ಅವರಿಗೆ ಅತಿಶಯೋಕ್ತಿಯದ್ದೆನಿಸಿತು. ಆದರೆ ನನ್ನ ಅಭಿಪ್ರಾಯದಂತೆ ತಿರುಗಿ ಅದು ನೀರಿನಷ್ಟೇ ತೆಳ್ಳಗಿದೆ. ಅವರ ಕಾರ್ಯ ಬಹುಮೌಲಿಕವಾದುದಾಗಿದೆ. ನನಗೆ ಕೆಡುಕೆನಿಸುವುದೆಂದರೆ, ಈ ಸನ್ಮಾನಪತ್ರ ಅರ್ಪಣೆ ಸಮಾರಂಭವು ವಡಾಳಾದ ನಗರವಾಸಿಗಳ ಪರವಾಗಿ ನಡೆಯದೆ ಕೆಲವೇ ಜನರು ನೆರವೇರಿಸುತ್ತಿರುವುದು. ಇನ್ನೊಂದು ಮಾತು ಈ ಸಮಾರಂಭ ಸರ್ವ ಮುಂಬೈನ ಇಲಾಖೆಗಳ ವತಿಯಿಂದ, ಕೊನೆಪಕ್ಷ ಮುಂಬೈ ನಗರದ ವತಿಯಿಂದಲಾದರೂ ನಡೆಯಬೇಕಿತ್ತು. ಇರಲಿ, ಆದರೂ ಈ ಸಂತೋಷದ ಸಂದರ್ಭದಲ್ಲಿ ಅಧ್ಯಕ್ಷನಾಗಲು ಮಾಡಿದ ವಿನಂತಿಗೆ ಇಲ್ಲ ಎನ್ನಲಾಗಲಿಲ್ಲ.

ಕಳೆದ ೧೦ ವರ್ಷಗಳ ನಮ್ಮ ಸಮಾಜದ ಪ್ರಗತಿಯ ಕುರಿತು ಯಾವಾಗ ಯೋಚಿಸುತ್ತಿರುತ್ತೇನೆಯೋ ಆಗ ನನ್ನ ಮನದೊಳಗೆ ಮತ್ತೆ ಮತ್ತೆ ಎರಡು ವಿಚಾರಗಳು ಸುಳಿದಾಡುತ್ತಿರುತ್ತವೆ. ಒಂದು ಗಾಂಧೀಜಿಯಂಥ ವ್ಯಕ್ತಿಯ ಸಂಗಡದ ಸಂಘರ್ಷದಲ್ಲಿ ಯಶಸ್ಸು ದೊರೆತು ನಮಗೆ ರಾಜಕೀಯ ಅಧಿಕಾರ ದೊರೆಯಿತು. ರಾಜಕಾರಣದಲ್ಲಿ ಸಮಾನತೆಯ ದರ್ಜೆಸಿಕ್ಕಿತು. ಬ್ರಾಹ್ಮಣ, ಕ್ಷತ್ರಿಯ ಇವರುಗಳ ತೊಡೆಗೆ ತೊಡೆ ಹಚ್ಚಿ ಕುಳಿತುಕೊಳ್ಳುಲು ಕಾನೂನು ಮಂಡಳದಲ್ಲಿ ಸ್ಥಾನದೊರೆತವು. ಅವರ ಕೂಡ ಚಿಂತನೆ–ಮಂಥನ ನಡೆಸುವ

ಅವಕಾಶ ಸಿಕ್ಕಿತು. ಇದನ್ನೆಲ್ಲ ಪಡೆಯಲು ಕೇವಲ ನಾನು ನಿಮಿತ್ತ ಮಾತ್ರ. ನನಗೆ ಹೀಗೆ ಅನಿಸುತ್ತದೆ. ಎರಡು, ಶ್ರೀ ಭಾವುರಾವ ಗಾಯಕವಾಡರಂಥ ವ್ಯಕ್ತಿಗಳ ಸಹಾಯ ಸಿಗದೇ ಹೋಗಿದ್ದರೆ ನನಗೊಬ್ಬನಿಗೆ ಏನನ್ನೂ ಮಾಡಲಾಗುತ್ತಿರಲಿಲ್ಲ. ಇಂದು ಜನರು ನನ್ನ ಕಾರ್ಯ ಚಟುವಟಿಕೆ ಬಗ್ಗೆ ಯಾವ ಕೃತಜ್ಞತಾ ಭಾವನೆಗಳನ್ನು ವ್ಯಕ್ತಪಡಿಸುತ್ತಾರೋ ಅದರಲ್ಲಿ ಶೇಕಡ ೮೦ರಷ್ಟು ಪಾಲು ಶ್ರೀ ಭಾವುರಾವ ಗಾಯಕವಾಡರಿಗೆ ಸಲ್ಲಬೇಕು. ಇದನ್ನು ನಮೂದು ಮಾಡಲು ನನಗ್ಯಾವ ಅಭ್ಯಂತರವಿಲ್ಲ. ಇಂಥ ಎಲ್ಲ ದಿಕ್ಕಿನಿಂದಲೂ ಅತ್ಯಂತ ಯೋಗ್ಯರಾದ ಮುಂದಾಳುವಿನ ಸನ್ಮಾನಪತ್ರ ನೀಡಿ ಗೌರವಿಸುತ್ತಿರುವುದು ಯೋಗ್ಯ ಹಾಗೂ ಅಪೂರ್ವವಾದ ಕ್ಷಣವಾಗಿದೆ.

ಇಲ್ಲಿ ನಮ್ಮ ಚಳುವಳಿ ಕುರಿತು ಎರಡುಮಾತು ಹೇಳಲು ಅಡ್ಡಿಯಿಲ್ಲ ಅಂದುಕೊಂಡಿದ್ದೇನೆ. ಹಿಂದೂಸ್ಥಾನದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸು ಒಂದು ದೊಡ್ಡ ಮತ್ತು ಪ್ರಬಲ ಪಕ್ಷವೆಂದು ಪರಿಗಣಿಸಲಾಗಿದೆ. ಹೀಗಿದ್ದೂ ನಾನು ಸ್ವತಂತ್ರ ಮಜೂರಪಕ್ಷದ ಬೇರೆ ಪಂಗಡವನ್ನ್ಯಾಕೆ ಕಟ್ಟಿದೆ? ಇದಕ್ಕೆ ಕಾರಣ ಒಂದೇ, ಕಾಂಗ್ರೆಸ್ಸಿನೊಳಗಿರುವ ಬಂಡವಾಳಶಾಹಿಗಳು ತಮ್ಮ ವರ್ಗದವರ ಹಿತವನ್ನು ಅಧಿಕವಾಗಿ ಕಾಪಾಡುತ್ತಾರೆಯೇ ಹೊರತು ಕಡುಬಡವರ, ಕಾರ್ಮಿಕರ, ರೈತರ ನಿಜವಾದ ಹಿತವನ್ನು ಎಂದೂ ಕಾಪಾಡುವುದಿಲ್ಲ. ಅದರಂತೆ ಇನ್ನೊಂದು ಪಕ್ಷವು ಕಾರ್ಮಿಕ ಸಮೂಹದಲ್ಲಿ ನಿರ್ಮಾಣ ಗೊಂಡಿದೆ. ಈ ಲಾಲ ಬಾವುಟದ ಚಳುವಳಿಯು ಶ್ರಮಜೀವಿ ವರ್ಗದವರ ಹಿತವನ್ನು ಇಂದಿನ ಸಂದರ್ಭದಲ್ಲಿ ಮಾಡುತ್ತದೆಯೋ ಇಲ್ಲವೋ ಇದರಲ್ಲಿ ನನಗೆ ಸಂಶಯವಿದೆ. ಆದಕಾರಣ ಈ ಹೊಸ ಸ್ವತಂತ್ರ ಮಜೂರ ಪಕ್ಷದ ಸ್ಥಾಪನೆಯನ್ನು ನಾವು ಮಾಡಬೇಕಾಗಿ ಬಂತು. ನಮ್ಮ ಪಕ್ಷದಪರವಾಗಿ ಕಳೆದ ಪ್ರಾಂತಿಕ ಅಸೆಂಬ್ಲಿಯ ಚುನಾವಣೆಯಲ್ಲಿ ನಾಶಿಕ ಜಿಲ್ಲೆಯಿಂದ ಶ್ರೀ ಭಾವುರಾವ ಗಾಯಕವಾಡರನ್ನು ನಮ್ಮ ಸ್ವತಂತ್ರ ಮಜೂರ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಯಿತು. ಕಾಂಗ್ರೆಸ್ ವಿರುದ್ಧ ಸೆಣಸಾಡಿದರು. ಈ ಚುನಾವಣೆ ಫಲಿತಾಂಶ ಯಾವಾಗ ಹೊರಬಂತು ಆಗ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪ್ರಥಮವಾಗಿ ಬಂದು ಅವನಿಗೆ ೧೬,೯೦೦ ಮತಗಳು ಬಂದರೆ ಶ್ರೀ ಭಾವುರಾವರಿಗೆ ೧೬,೬೫೦ ಮತಗಳು ಬಂದವು. ಕೇವಲ ೨೫೦ ಮತಗಳ ಅಂತರವು ಈ ಉಭಯ ಅಭ್ಯರ್ಥಿಗಳಿಲ್ಲಿತ್ತು ನಿಜ! ಆದರೆ ನನ್ನ ಅಭಿಪ್ರಾಯದಂತೆ ಈ ಲೆಕ್ಕ ತಪ್ಪಾಗಿದೆ. ಕಾರಣ ನಮ್ಮೊಳಗಿನ ಒಬ್ಬನು ಕೊನೆಗಳಿಗೆಯಲ್ಲಿ ವಿರುದ್ಧ ತಿರುಗಿಬಿದ್ದ. ಅವನ ಹೆಸರನ್ನೆತ್ತುವುದು ಈ ಪ್ರಸಂಗದಲ್ಲಿ ಯೋಗ್ಯವೆನಿಸುವುದಿಲ್ಲ. ಆತನಿಗೆ ೪,೦೦೦ ಮತಗಳು ಬಿದ್ದವು. ಈ ಮತಗಳು ವಿಭಜನೆಗೆ ಒಳಗಾಗದೇ ಇದ್ದಿದ್ದರೆ ಶ್ರೀ ಭಾವುರಾವ ಗಾಯಕವಾಡರು ಕಾಂಗ್ರೆಸ್ ಅಭ್ಯರ್ಥಿಯನ್ನು ೩,೭೫೦ ಮತಗಳಿಂದ ಸೋಲಿಸುತ್ತಿದ್ದರು. ಇದರಿಂದ ಶ್ರೀ ಭಾವುರಾವರ ಯೋಗ್ಯತೆಯ ಅರಿವಾಗುತ್ತದೆ. ನನಗೆ ಹೇಳಲು ಸಂತೋಷವಾಗುವ ವಿಚಾರವೆಂದರೆ, ಕಾನೂನು ಮಂಡಳಿಗೆ ಆಯ್ಕೆಗೊಂಡವರೆಲ್ಲ ಅತ್ಯಂತ ಯೋಗ್ಯರಿದ್ದಾರೆ. ಕಾನೂನು ಮಂಡಳಿಯಲ್ಲಿ ಯಾವ ವ್ಯಕ್ತಿಗಳ ಬಗೆಗೆ ಗೌರವ ಮೂಡುತ್ತದೆಯೋ ಅಂಥವರಲ್ಲಿ ಶ್ರೀ ಭಾವುರಾವ ಕೂಡ ಒಬ್ಬರು. ಜನರಿಂದ ಗೌರವಿಸಲ್ಪಡುವವರು.

ನಾವು ಸ್ಥಾಪಿಸಿದ ಸ್ವತಂತ್ರ ಮಜೂರ ಪಕ್ಷದ ಸದಸ್ಯರಾಗಿ ಪ್ರತಿಯೊಬ್ಬ ಸ್ತ್ರೀ ಪುರುಷರು ಹೊರಹೊಮ್ಮಬೇಕು. ನಾನು ನಿಮಗೆ ಆಹ್ವಾನರೂಪದಲ್ಲಿ ಹೇಳುತ್ತಿರುವುದೆನೆಂದರೆ, ಎಲ್ಲ ಬಗೆಯ ರಾಜಕಾರಣದ ಅಧ್ಯಯನಗೈದಿದ್ದೇನೆ. ಆ ಅಧ್ಯಯನದಂತೆ ಸ್ವತಂತ್ರ ಮಜೂರ ಪಕ್ಷದ ಕಾರ್ಯಕ್ರಮ ರೂಪಿಸಿದ್ದೇನೆ. ಯಾರಿಗಾದರೂ ಈ ಕಾರ್ಯಕ್ರಮದ ಬಗ್ಗೆ ಅನುಮಾನವಿದ್ದರೆ ನನ್ನ ಬಳಿ ಬರಲಿ. ಅವರ ಅನುಮಾನ ನಿವಾರಿಸಿಯೇನು. ಆದರೆ ಹೀಗೆ ಮಾಡದೆ ಜನರ ದಿಕ್ಕುತಪ್ಪಿಸುವ ವ್ಯಕ್ತಿ ವಂಚಕನೇ ಆಗಿರುತ್ತಾನೆ. ಇರಲಿ.

ಕಾಂಗ್ರೆಸ್ ಇದು ವಿಶ್ವಾಮಿತ್ರನ ಮಾಯೆ. ಮಾಯೆ ಕುರಿತು ಮುಕ್ತೇಶ್ವರನ ಒಂದು ವರ್ಣನೆಯಿದೆ. ಅದರಲ್ಲಿ ಮುಂಗುಸಿಹಾವಿನ ಕತೆಯಿದೆ. ಇಲಿ–ಬೆಕ್ಕಿನ ಹಾಲು ಕುಡಿಯುತ್ತಿದೆ. ಸಿಂಹ ಮತ್ತು ಆನೆ ಬಂಧುಪ್ರೇಮದಿಂದ ಬದುಕುತ್ತಿವೆ. ಈ ಮುಂತಾದ ಕತೆಗಳಿವೆ. ಈ ಕತೆಗಳು ಸತ್ಯಸೃಷ್ಟಿಗಾಗಿಯೋ ಅಥವಾ ವ್ಯವಹಾರ ದಲ್ಲೋ ಅದೆಷ್ಟು ಮನವರಿಕೆ ಆಗಲು ಸಾಧ್ಯ? ಅದೇ ರೀತಿ ಕಾಂಗ್ರೆಸ್ಸಿನ ಕತೆಯಾಗಿದೆ, ಸಮಾಜವು ಹೇಗೆ ಮುಂದುವರೆಯಬೇಕೆಂದರೆ, ಒಬ್ಬ ಮುಂದಾಳು ಹೋದರೂ, ನಿಧನರಾದರೂ ಸಮಾಜಕಾರ್ಯ ಅವ್ಯಾಹತ ನಡೆದು ಅವರು ಚಿರಕಾಲ ಉಳಿವಂತೆ ಆಗಬೇಕು. ಇದೇ ಬಗೆಯ ಕಾರ್ಯಯೋಜನೆಗಳು ನಡೆದರೆ ಮಾತ್ರ ಆ ಪಕ್ಷ ಅಥವಾ ಸಮಾಜವು ಪ್ರಪಂಚದಲ್ಲಿ ವೈಭವದಿಂದ ಬದುಕಬಹುದು.

ಡಾ. ಬಾಬಾಸಾಹೇಬ ಭಾಷಣ ಮುಗಿದನಂತರ ಅವರಿಗೆ ಮತ್ತು ಶ್ರೀ ಭಾವುರಾವರಿಗೆ ಅನೇಕ ಸಂಸ್ಥೆಗಳು ಮಾಲಾರ್ಪಣೆ ಮಾಡಿದವು. ಈ ಸುಂದರ ಸನ್ಮಾನಪತ್ರ ಸಮಾರಂಭದಲ್ಲಿ ಪ್ರಿ. ದೋಂದೆ, ಅಡ್.ಆರ್.ಡಿ. ಕವಳಿ, ಮ್ಯಾಂಚೆಸ್ಟರ್ ಮಿಲ್ಲಿನ ಮ್ಯಾನೇಜರ್ ಹೇಮಿಸಾಹೇಬ, ಕಾಸ್ಟಿಲ್‌ಸಾಹೇಬ, ದ.ವಿ. ಪ್ರಧಾನ, ಭಾ.ರ. ಕದ್ರೇಕರ, ದೇವರಾವ ನಾಯಿಕ, ವಡವಲಕರ, ಕಮಲಾಕಾಂತ ಚಿತ್ರೆ, ಉಪಶಾಮ ಮಾಸ್ತರ, ಶ್ರೀ ಮಡಕೆಬುವಾ, ನಿಳೆ, ಗಾಯಕವಾಡ, ರಾಮಜಿ, ಬೋರಿಕರ, ಶ್ರೀ ಕೋತವಾಲ, ಆರೋಳಕರ ಮುಂತಾದ ಪ್ರಮುಖರು ಉಪಸ್ಥಿತರಿದ್ದರು. ಕೊನೆಗೆ ವಂದನಾರ್ಪಣೆ ನಡೆಯಿತು. ಆನಂತರ ವಿವಿಧ ಮನರಂಜನೆ ಕಾರ್ಯಕ್ರಮಗಳು ನಡೆದವು.

## ೧೧೨.
# ಅಸ್ಪೃಶ್ಯ ಸಮಾಜದೊಳಗೆ ಒಗ್ಗಟ್ಟಿಲ್ಲ, ಇದಕ್ಕೆ ಕಾರಣ ಜಾತಿಭೇದವೇ ಆಗಿದೆ

ಗುರುವಾರ ದಿ: ೩೦ ಡಿಸೆಂಬರ್ ೧೯೩೭ರ ರಾತ್ರಿ ೧೦ಗಂಟೆಗೆ ಡಾ. ಬಾಬಾಸಾಹೇಬ ಅಂಬೇಡ್ಕರರು ಮದ್ರಾಸ್ ಮೇಲ್‌ನಿಂದ ಬೋರಿಬಂದರ ಸ್ಟೇಶನ್ ಮೂಲಕ ಸೊಲ್ಲಾಪುರ ಜಿಲ್ಲಾಪ್ರವಾಸ ಕೈಗೊಂಡರು. ಅವರ ಸಂಗಡ ನಾಶಿಕ ಶಾಸಕ ಭಾವುರಾವ ಗಾಯಕವಾಡ ಮತ್ತು ಶ್ರೀ ಕಮಲಾಕರ ಚಿತ್ರೆಯವರಿದ್ದರು. ದಾರಿ ಮಧ್ಯೆ ದಾದರ ಸ್ಟೇಶನ್‌ನಲ್ಲಿ ನಾಸಿಕನಿಂದ ಪರಿಷತ್ತಿನ ಕಾರ್ಯಕ್ಕೆ ಬಂದಿದ್ದ ರಾಮಾಪಾಲ (ಭಂಗಿ ಸಮಾಜದ ಒಬ್ಬ ಪುಢಾರಿ) ಮುಂತಾದವರು ಬಂದು ಸೇರಿದರು. ದಾದರ ಸ್ಟೇಶನ್ನಿನಲ್ಲಿ ಡಾಕ್ಟರ್‌ಸಾಹೇಬರಿಗೆ ಮಾಲಾಪರ್ಣನೆ ಮಾಡಲಾಯಿತು. ನಂತರ ಪುಣೆಯ ಸ್ಟೇಶನ್ನಿನಲ್ಲಿ ಸಾತಾರಾ ಶಾಸಕ ಶ್ರೀ ಖಂಡೇರಾವ ಸಾವಂತರು ಗಾಡಿಹತ್ತಿದರು ಹಾಗು ದೌಂಡ ನಿಲ್ದಾಣದಲ್ಲಿ ಶಾಸಕ ಶ್ರೀ ಪ್ರಭಾಕರ ರೋಹಮ ಮತ್ತು ಅಹಮ್ಮದನಗರದ ಜನರು ಪ್ರವಾಸದಲ್ಲಿ ಸೇರ್ಪಡೆಗೊಂಡರು.

ಸೊಲ್ಲಾಪುರ ಜಿಲ್ಲಾ ಪರಿಷತ್ತು ಪಂಢರಪುರದಲ್ಲಿ ಸೇರುವುದಿತ್ತು. ಅದಕ್ಕಾಗಿ ಡಾ. ಬಾಬಾಸಾಹೇಬ ಮತ್ತು ಅವರ ಜೊತೆಗಿನವರು ಕುರ್ಡುವಾಡಿ ರೈಲು ನಿಲ್ದಾಣದಲ್ಲಿ ಶುಕ್ರವಾರ ದಿ: ೩೧-೧೨-೧೯೩೭ರಂದು ನಸುಕಿನ ಐದುವರೆ ಗಂಟೆಗೆ ಸೇರಿದರು. ನಿಲ್ದಾಣದಲ್ಲಿ ಪರಿಷತ್ತಿನ ಸ್ವಾಗತಾಧ್ಯಕ್ಷ ಶಾಸಕ ಶ್ರೀ ಜೀವಪ್ಪಾ ಐದಾಳೆ, ಡಾ. ಬಾಬಾಸಾಹೇಬರನ್ನು ಸ್ವಾಗತಿಸಲು ಎದುರುಗೊಂಡರು. ಅವರು ಮತ್ತು ಸೇರಿದ ಇತರರು ಅವರನ್ನು ಪ್ರೀತಿಯಿಂದ ಸ್ವಾಗತಿಸಿದರು. ಡಾ. ಬಾಬಾಸಾಹೇಬರಿಗೆ ಮಾಲಾರ್ಪಣೆ ಮಾಡಿದರು.

ಕುರ್ಡುವಾಡಿ ನಿಲ್ದಾಣದ ಪ್ಲಾಟ್‌ಫಾರ್ಮ್‌ವು ಜನರಿಂದ ತುಂಬಿ ತುಳುಕಿತ್ತು. ಈ ನಿಲ್ದಾಣದ ರೈಲು ಅಧಿಕಾರಿಯ ವರ್ತನೆ ಮಾತ್ರ ಸಿಟ್ಟು ತರಿಸುವಂತಿತ್ತು. ಅವರಿಗೆ ಬಡವರ ಉತ್ಸಾಹ ಮತ್ತು ಡಾ. ಬಾಬಾಸಾಹೇಬರ ಜನಪ್ರಿಯತೆಯ ಉತ್ಕರ್ಷವನ್ನು ನೋಡಲು, ಸಹಿಸಿಕೊಳ್ಳಲು ಆಗುತ್ತಿರಲಿಲ್ಲವೆಂದು ಕಷ್ಟದಿಂದ ಹೇಳಬೇಕಾಗುತ್ತದೆ. ಉತ್ಸಾಹದ ಭರದಲ್ಲಿ ಕೆಲವರು ಡಾ. ಬಾಬಾಸಾಹೇಬರ ದರುಶನ ಮಾಡಲು ಟಿಕೆಟ್ಟಿಲ್ಲದೆ ಪ್ಲಾಟ್‌ಫಾರ್ಮಿನಲ್ಲಿ ನೆರೆದಿದ್ದರು. ಅವರು ನೆರೆದ ಅವರೆಲ್ಲರ ಕಡೆಯಿಂದ ದೌಂಡ ಸ್ಟೇಶನ್‌ನಿಂದ ಟಿಕಿಟ್ಟಿನ ಎರಡುಪಟ್ಟು ಹಣವನ್ನು ಕೇಳಿದರು. ಅಲ್ಲಿದ್ದ ಹಣವಿಲ್ಲದವರು ಇಷ್ಟೊಂದು ಹಣವನ್ನು ಎಲ್ಲಿಂದ ತರಬೇಕು? ಆದರೆ ಕೊನೆಗೆ ಸ್ಟೇಶನ್ ಮಾಸ್ತರರ ಮಧ್ಯಸ್ತಿಕೆ ಮೂಲಕ ಈ ಘಟನೆ ಹೇಗೆಗೋ ಬಗೆಹರಿಯಿತು. ಇಕ್ಕಟ್ಟಿಗೆ ಸಿಕ್ಕಿದವರ ಬಿಡುಗಡೆಯಾಯಿತು.

ಈ ಕಹಿಪ್ರಸಂಗವನ್ನು ಬೇಕೆಂದೆ ನಮೂದಿಸಲು ಕಾರಣ ನಮ್ಮ ಜನರೂ ಕೂಡ ಅಸ್ಪೃಶ್ಯರ ಚಳವಳಿ ಸಾಧಾರಣವಾಗಿ ಬಹುಜನ ಸಮಾಜದವರ ಕಣ್ಣಲ್ಲಿ ನಿರಂತರ ಚುಚ್ಚಿತ್ತಿರುತ್ತದೆ ಎಂಬುದು ನೆನಪಿಡಬೇಕು. ಯಾರಿಂದಲೂ ಕೊಂಚವೂ ಸಹಾಯದ ಅಪೇಕ್ಷೆ ಮಾಡದೇ ಇರಬೇಕಾಗುತ್ತದೆ. ಇಲ್ಲದಿದ್ದರೆ ಅವಮಾನದ ಪ್ರಸಂಗಗಳು ಬರದೆ ಇರಲಾರವು.

ಕುರ್ಡಿವಾಡಿಗೆ ತೆರಳಲು ಡಾಕ್ಟರ್‌ಸಾಹೇಬರಿಗಾಗಿ ಒಂದು ವಿಶೇಷ ಮೋಟಾರು ವ್ಯವಸ್ಥೆ

---

ಜನತಾ: ೮ ಜನವರಿ ೧೯೩೮.

ಮಾಡಲಾಗಿತ್ತು. ಇತರೆ ಅತಿಥಿಗಳು ಮತ್ತು ಸ್ವಯಂಸೇವಕರಿಗಾಗಿ ಬಸ್‌ವ್ಯವಸ್ಥೆಯಿತ್ತು. ಇವೆರಡು ವಾಹನಗಳು ಬೆಳಗಾಗುತ್ತಿದ್ದಂತೆ ಪಂಢರಪುರ ರಸ್ತೆಗಿಳಿದವು. ದಾರಿಯಲ್ಲಿ ಮಾಢೆ ತಾಲೂಕಿನ ವಾವಳೆ ಊರಲ್ಲಿ ಹಳ್ಳಿಗರ ಪರವಾಗಿ ಡಾ. ಬಾಬಾಸಾಹೇಬರಿಗೆ ಮತ್ತು ಇತರ ಶಾಸಕರಿಗೆ ಮಾಲಾರ್ಪಣೆ ಮಾಡಲಾಯಿತು. ಮುಂದೆ ಕುರ್ಕಮ ಹಳ್ಳಿಯ ಬಳಿ ವಾಹನ ಬರುತ್ತಿದ್ದಂತೆ ಊರಿನ ಅಸ್ಪೃಶ್ಯ ಸಮಾಜದವರು, ಸ್ವಯಂಸೇವಕ ದಳದವರು ಡಾಕ್ಟರ್ ಸಾಹೇಬರ ಸ್ವಾಗತಕ್ಕೆ ವಾದ್ಯವಾದನಗಳೊಂದಿಗೆ ಬಂದರು. ನೆರೆದವರು ಮೆರವಣಿಗೆಯಲ್ಲಿ ಶಾಮೀಲಾದರು. ಊರೊಳಗೆ ಮಹಾರ ಮತ್ತು ಮಾದಿಗ ಸಮಾಜದವರು ಮಂಟಪಹಾಕಿ ಬಾಬಾಸಾಹೇಬರ ಸ್ವಾಗತದ ಸಿದ್ಧತೆ ನಡೆಸಿದ್ದರು. ಕರ್ಕಮ ಊರೊಳಗಿನಿಂದ ಮೆರವಣಿಗೆ ಹೊರಟ ನಂತರ ಬಾಬಾಸಾಹೇಬರ ವಾಹನ ಮತ್ತು ಸ್ವಯಂ ಸೇವಕರ ಬಸ್ಸು ಕರ್ಕಮ ಹತ್ತಿರದ ಬಾದಲಕೋಟ ಫಾರೆಸ್ಟ್‌ನ ಚಂದ್ರಭಾಗಾ ದಂಡೆಯಲ್ಲಿ ಒಣಭೂಮಿಯನ್ನು ನೋಡಲು ಹೊರಟಿತು. ವಾಹನದಲ್ಲಿ ಶಾಸಕ ಗಾಯಕವಾಡ, ಐದಾಳೆ, ರೋಹಮ, ಸಾವಂತ ಮತ್ತು ಶ್ರೀ ಚಿತ್ರೆಯವರಿದ್ದರು. ಈ ಒಣಭೂಮಿಯು ಅಸ್ಪೃಶ್ಯ ಸಮುದಾಯದವರಿಗೆ ರಿಯಾಯತಿಯಲ್ಲಿ ದೊರಕಬೇಕೆಂದು ಶಾಸಕ ಐದಾಳೆಯವರು ಸರಕಾರದ ಜತೆಗೆ ಶ್ರೀ ಐದಾಳೆಯವರು ಈ ಕಾರ್‍ಯಕ್ರಮವನ್ನು ಏರ್ಪಡಿಸಿದ್ದರು. ಆ ಒಣ ಜಾಗ ತಲುಪಲು ಬಾಬಾಸಾಹೇಬರು ೩ಮೈಲು ಕಾಲ್ನಡಿಗೆ ಪ್ರವಾಸ ಕೈಕೊಂಡು ಪ್ರತ್ಯಕ್ಷ ವೀಕ್ಷಿಸಿದರು. ನದಿದಂಡೆಯಲ್ಲಿ ಗ್ರಾಮಸ್ಥರು ತಂದು ಅಲ್ಪೋಪಹಾರ ಮುಗಿಸಿ ಮರಳಿ ಕರ್ಕಮ ಗ್ರಾಮಕ್ಕೆ ಆಗಮಿಸಿದರು. ಅಲ್ಲಿ ಗ್ರಾಮದ ಮಹಾರ ಸಮಾಜದವರು ವಿಶೇಷವಾಗಿ ನಿರ್ಮಿಸಿದ ಮಂಟಪದಲ್ಲಿ ಪ್ರೀತಿಯಿಂದ ಅವರನ್ನು ಸ್ವಾಗತಿಸಿದರು. ಎರಡು ಮಾತು ಹೇಳಲು ಕೋರಲಾಯಿತು. ತಾನು ಮಾತನಾಡುವುದೇನಿದೆಯೋ ಅದನ್ನು ಮಾದಿಗ ಸಮಾಜವು ಸ್ವಾಗತ ಕಾರ್ಯಕ್ರಮ ಹಮ್ಮಿಕೊಂಡಿದೆಯಲ್ಲ ಅಲ್ಲಿಯೇ ಹೇಳುವೆ ಎಂದು ಹೇಳಿದ ಬಾಬಾಸಾಹೇಬರು ಶಾಸಕ ಗಾಯಕವಾಡರಿಗೆ ಎರಡು ಮಾತಾಡಲು ಹೇಳಿದರು. ಬಳಿಕ ಭಾವುರಾವ ಗಾಯಕವಾಡರು ಸ್ವಲ್ಪ ಸಮಯದ ಸಮಯೋಚಿತ ಮಾತುಗಳನ್ನಾಡಿದರು. ಡಾಕ್ಟರ್ ಸಾಹೇಬರು ಎಲ್ಲರು ಸ್ವತಂತ್ರ ಮಜೂರ ಪಕ್ಷದ ಸದಸ್ಯರಾಗಲು ಹೇಳಿದ ಬಳಿಕ ಕಾರ್ಯಕ್ರಮ ಕೊನೆಗೊಂಡಿತು. ಅನಂತರ ಎಲ್ಲರೂ ಮಾದಿಗ ಸಮಾಜವು ನಿರ್ಮಿಸಿದ ವೇದಿಕೆಗೆ ಬಂದರು. ಇಲ್ಲಿ ದೊಡ್ಡಪ್ರಮಾಣದಲ್ಲಿ ಮಹಾರ ಮತ್ತು ಮಾದಿಗ ಸಮಾಜದ ಜನಸಮುದಾಯ ಸೇರಿತ್ತು.

ಡಾ. ಬಾಬಾಸಾಹೇಬರು ಪುಟ್ಟದಾದ ಭಾಷಣ ಮಾಡುತ್ತ ಹೇಳಿದರು:

ನಾಳೆ ದಿ: ೧, ಜನೆವರಿ ೧೯೩೮ರಂದು ಸೊಲ್ಲಾಪುರದಲ್ಲಿ ಮಾದಿಗ ಸಮಾಜವು ಹಮ್ಮಿಕೊಂಡ ಪರಿಷತ್ತು ಸೇರುವುದಿದೆ. ಅಲ್ಲಿ ನನಗೆ ಆಮಂತ್ರಣವಿದ್ದು, ಸವಿಸ್ತಾರ ಮಾತನಾಡುವನಿದ್ದೇನೆ. ಆದಕಾರಣ ಕೆಲವು ಮಾತುಗಳನ್ನು ಆಡಲು ಕಾರಣ ನಮ್ಮವರು ಕೆಲವರು ಪರಿಷತ್ತಿಗೆ ಉಪಸ್ಥಿತರಿರವುವವರಿದ್ದಾರೆ ಮತ್ತು ಕೆಲವರು ಅಲ್ಲಿ ಹೋಗದೇ ಇರುವವರೂ ಇರುವುದರಿಂದ ಅವರಿಗೆ ನನ್ನ ಅನಿಸಿಕೆಗಳನ್ನು ಹೇಳಬೇಕಿದೆ. ಮೊದಲಿಗೆ ಅಸ್ಪೃಶ್ಯ ಸಮುದಾಯಗಳ ಮಹಾರ, ಸಮಗಾರ, ಭಂಗಿ ಮುಂತಾದ ಜಾತಿಗಳಲ್ಲಿ ಒಗ್ಗಟ್ಟಿಲ್ಲದಿರವುದು ನಮ್ಮೆಲ್ಲರ ದುರ್ದೈವವೇ ಹೌದು. ಈ ಒಗ್ಗಟ್ಟಿರದಿರುವುದಕ್ಕೆ ನಿಜವಾದ ಕಾರಣವೆಂದರೆ ಹಿಂದೂ ಸಮಾಜದೊಳಗಿನ ಜಾತಿಭೇದವೇ ಆಗಿದೆ. ಈ ಜಾತಿಭೇದಕ್ಕೆ ಮಹಾರ, ಸಮಗಾರ, ಮಾದಿಗರು ಇಲ್ಲವೆ ಭಂಗಿಸಮುದಾಯ ಹೊಣೆಗಾರರಲ್ಲ. ಜಾತಿಭೇದವು ಮೇಲಿಂದ ಹರಿಯುತ್ತಿರುವ ಗಟಾರಿನ ಗಂಗೆಯಾಗಿದೆ. ನಮ್ಮತ್ತ ಹರಿಯುತ್ತ ಬರುವ ನರಕವಾಗಿದೆ. ಆಧ್ದರಿಂದ ಜಾತಿಭೇದದ ಕಹಿಫಲಗಳು

ಮತ್ತದರ ದುಷ್ಪರಿಣಾಮಗಳನ್ನು ನಾವೇ ಅನುಭವಿಸಬೇಕಾಗುತ್ತಿದೆ. ಖೇದ ತರುವ ಸಂಗತಿಯೆಂದರೆ ಈ ಹಿಂದೂಗಳು ತಮ್ಮೊಳಗಿನ ಜಾತಿಭೇದವನ್ನಂತು ದೂರಮಾಡುವುದಿಲ್ಲ. ತಿರುಗಿ ಅಸ್ಪೃಶ್ಯರೊಳಗಿನ ಅಜ್ಞಾನದ ಲಾಭ ಪಡೆದು ಅವರ ಜಾತಿಭೇದವನ್ನು ದೃಢಗೊಳಿಸಲು ಗುದ್ದಾಡುತ್ತಾರೆ. ಮಾದಿಗರನ್ನು ಹೊಲೆಯರ ವಿರುದ್ಧ ಎತ್ತಿಕಟ್ಟುವುದು, ಸಮಗಾರರನ್ನು ಹೊಲೆಯ ಮಾದಿಗರ ವಿರುದ್ಧ ಎತ್ತಿಕಟ್ಟುವುದು, ತಮ್ಮ ಭೇದನೀತಿ ನಮ್ಮೊಳಗೆ ಹಬ್ಬಿಸುವುದು. ನಮಗೆ ಒಗ್ಗಟ್ಟಾಗಿರಲು ಬಿಡದೇ ಇರುವಂತೆ ನೋಡುವುದು. ಈ ಜಾತಿಭೇದದ ಮೂಲ ಹೊಣೆ ಒಂದು ವೇಳೆ ಹಿಂದೂ ಸಮಾಜದ್ದಾಗಿದ್ದರೂ ನಾವು ನಮ್ಮ ಜವಾಬ್ದಾರಿಯನ್ನು ಮರೆತು ಹೋಗುವುದೆಂದರೆ ಅದು ಆತ್ಮಘಾತುಕವೇ ಸರಿ. ನಮ್ಮಲ್ಲಿಯ ಜಾತಿಭೇದವನ್ನು ಅಳಿಸಿಹಾಕುವುದು, ಅದು ಪಸರದಂತೆ ನೋಡಿಕೊಳ್ಳುವುದು ನಮ್ಮ ಆದ್ಯಕರ್ತವ್ಯವಾಗಿದೆ. ನಾವಿದನ್ನು ಸಾಧಿಸದೆ ನಮ್ಮ ಉನ್ನತಿಯಾಗುವುದಿಲ್ಲ. ಮಹಾರಮಾದಿಗರ ನಡುವಿನ ಹೆಣ್ಣುಗಂಡು ಊಟ ಉಪಹಾರದ ನಿಷೇಧಗಳು ಇಲ್ಲವಾಗಬೇಕು. ಪ್ರತಿಯೊಂದು ಜಾತಿಯು ಒಂದುವೇಳೆ ತನ್ನ ಸೊಕ್ಕನ್ನು ಮೆರೆಯುವುದಕ್ಕಾಗಿ ತನ್ನ ಜಾತಿಗೆ ಅಂಟಿಕೊಂಡಿರಬಹುದು. ಮಹಾರ ಮಹಾರನಾಗಿಯೇ ಉಳಿಯಬಹುದು. ಮಾದಿಗ ಮಾದಿಗನಾಗಿಯೇ ಉಳಿದರೆ ನಮ್ಮ ಮೇಲಾಗುವ ದೌರ್ಜನ್ಯಕ್ಕೆ ಪ್ರತಿಕಾರ ಮಾಡುವುದು ಸಾಧ್ಯವಿಲ್ಲವಾಗುವುದು. ನಿಮಗೆ ಅಭಿಮಾನವೆನಿಸುವಂಥದ್ದು ಮಹಾರ ಮತ್ತು ಮಾದಿಗ ಹೆಸರಲ್ಲೇನಿದೆ? ಹಳೆಯ ಪರಂಪರೆಯಲ್ಲಿಯೇ ಮುಂದುವರೆಯಲು ನೀವು ಸಂಘರ್ಷ ಮಾಡುವಂತಾಗಲು ಈ ಹೆಸರಲ್ಲಿ ಅಂಥ ಉಜ್ವಲ ಇತಿಹಾಸವು ನಿಮ್ಮ ಕಣ್ಣೆದುರು ಇದೆಯೆ? ಸರ್ವ ಸಮಾಜಗಳು ಈ ಹೆಸರಲ್ಲಿ ತುಚ್ಛತೆಯನ್ನು ಕಾಣುತ್ತವೆ. ತಿಪ್ಪೆಯ ಮೇಲಿನ ಕಸದ ಕಿಮ್ಮತ್ತೂ ನಿಮಗಿಲ್ಲ; ಆಗ ಈ ಹೆಸರಿನ ಅಭಿಮಾನವನ್ನಿಟ್ಟುಕೊಳ್ಳದೆ ನಮ್ಮ ಎರಡೂ ಸಮುದಾಯಗಳು ಒಂದು ಒರಳುಗಲ್ಲಿನಲ್ಲಿ ಪುಡಿಪುಡಿಯಾಗುತ್ತಿವೆ ಎಂಬುದನ್ನು ಅರಿಯಬೇಕು. ಎರಡೂ ಸಮಾಜ ಒಗ್ಗಟ್ಟಾಗಿರಬೇಕು. ಈ ವಿಷಯದಲ್ಲಿ ಮಹಾರ ಸಮಾಜದ ಮಟ್ಟಿಗೆ ಹೇಳುವುದಾದರೆ ಅವರು ಯಾವುದೇ ಜಾತಿಭೇದ ಎಣಿಸಲು ಸಿದ್ಧರಿಲ್ಲ. ಮಾದಿಗ, ಸಮಗಾರ, ಭಂಗಿ ಸಮುದಾಯಗಳ ಮಧ್ಯೆ ಹೆಣ್ಣು ಗಂಡು ಕೊಡುಕೊಳ್ಳುವಿಕೆ ನಡೆಸಲು ಸಿದ್ಧರಿದ್ದಾರೆ. ಒಂದು ವೇಳೆ ಮಹಾರರು ಈ ವಿಷಯದಲ್ಲಿ ಹಿಂದೆಮುಂದೆ ನೋಡತೊಡಗಿದರೆ ಅವರನ್ನು ಈ ಕಾರ್ಯಕ್ಕೆ ಹಚ್ಚುವಂತೆ ಮಾಡಲು ನಾನು ಹೊಣೆಯಿಂದ ನಡೆದುಕೊಳ್ಳುತ್ತೇನೆ.

ಎರಡನೆಯ ವಿಚಾರವನ್ನು ನಿಮ್ಮೆದುರು ಇಡುವುದೆಂದರೆ ಕಾಂಗ್ರೆಸ್‌ನಿಂದ ದೂರ ಇರಬೇಕು. ಅದಕ್ಕೆ ಒಂದೇ ಕಾರಣವಿದೆ. ಅದೇನೆಂದರೆ, ಕಾಂಗ್ರೆಸ್ ಇದು ಮಾಯೆಯ ಸೃಷ್ಟಿಯಾಗಿದೆ. ನನಗೆ ಒಂದುಮಾತು ಹೇಳಿರಿ, ಗ್ರಾಮದೊಳಗಿನ ಮಾರವಾಡಿ ಇಲ್ಲವೆ ಸಾವುಕಾರರು ೪ ಆಣೆಯ ಚಂದಾ ತುಂಬಿದರೆ ಇಲ್ಲವೆ ಗಾಂಧಿ ಟೊಪ್ಪಿಗೆ ತಲೆಮೇಲೆ ಇಟ್ಟುಕೊಂಡರೆ ಅವರ ಸ್ವಭಾವವನ್ನು ಮರೆವರೆ? ಅವರು ಬಡವನಿಂದ ಬಡ್ಡಿ ಕಿತ್ತುಕೊಳ್ಳದೆ ಇರುತ್ತಾರೆಯೆ? ನಿಮ್ಮ ಕತ್ತು ಕೊಯ್ಯುವುದನ್ನು ಬಿಟ್ಟುಬಿಟ್ಟಾನೆಯೆ? ಇವತ್ತು ಕಾಂಗ್ರೆಸ್ಸು ಹೇಳುತ್ತಿದೆ, ಸಾವುಕಾರನ ಹಿತವನ್ನು ಮತ್ತು ಬಡವರ ಹಿತವನ್ನೂ ಕಾಪಾಡುವವರಿದ್ದೇವೆ ಎಂದು. ಬೆಕ್ಕು ಮತ್ತು ಇಲಿಯನ್ನು ಒಂದೇ ಜಾಗೆಯಲ್ಲಿ ಇಡುವವರು ಬೆಕ್ಕಿನ ಮುಂದೆ ಇಲಿಯನ್ನಿಟ್ಟು ಜೀವವನ್ನು ಹೇಗೆ ಉಳಿಸಿಯಾರು? ಇದನ್ನು ನೀವೇ ಅರಿಯಿರಿ, ಬೆಕ್ಕಿನ ಜೊತೆ ನಮ್ಮ ವ್ಯವಹಾರವಿಲ್ಲ. ಆದರೆ ಬದುಕುಕಟ್ಟಿ ಜೀವ ಕಾಪಾಡಿದಂತಿದೆ. ಆದ್ದರಿಂದ ನಮ್ಮ ಶಕ್ತಿಯನ್ನು ಹೆಚ್ಚಿಸಿ ಕೊಳ್ಳಬೇಕು. ಆ ಶಕ್ತಿ ವೃದ್ಧಿಸಲು, ನಿಮ್ಮ ಹಿತಕ್ಕೆ ಹುಟ್ಟಿದ ಸ್ವತಂತ್ರ ಮಜೂರ ಪಕ್ಷದ ಸದಸ್ಯರಾಗುವುದು ಒಳಿತು. ಈ ಪಕ್ಷಸೇರಲು ನೀವು ಕೇವಲ ೪ ಆಣೆಯನ್ನು ವರ್ಷದ ಕೊನೆಗೆ ಕೊಡಬೇಕಾಗುವುದು. ಇಷ್ಟೆ ನಿಮಗೆ ಹೇಳುವುದು.

ಆಮೇಲೆ ಡಾಕ್ಟರ್ ಸಾಹೇಬರಿಗೆ ಮತ್ತು ಇತರರಿಗೆ ಮಾಲಾರ್ಪಣೆ ಪುಷ್ಪಗುಚ್ಛ ನೀಡಲಾಯಿತು. ಚಹಾಕೂಟದ ಬಳಿಕ ಪ್ರವಾಸ ಮಾಡುವವರೆಲ್ಲರು ಪಂಢರಪುರದತ್ತ ಸಾಗಿದರು.

## ೧೧೩.
# ಅನ್ಯಾಯ ಮಾಡುವವರ ಸಂಗಡ ಜಗಳ ಕಾಯುವ ಸಿದ್ಧತೆಯಿರಲಿ

ದಿನಾಂಕ ೩೧ ಡಿಸೆಂಬರ್ ೧೯೩೭ರಂದು ಕುರ್ಕಮದಿಂದ ಪಂಢರಪುರಕ್ಕೆ ಹೋಗುವ ಮಾರ್ಗದಲ್ಲಿ ವಾಹನದಲ್ಲಿರುವ ಶಾಸಕರು ವಿವಿಧ ವಿಷಯಗಳ ಕುರಿತು ಚರ್ಚಿಸುತ್ತ, ತಮ್ಮ ಅಲೌಕಿಕ ಮುಂದಾಳುವಿನ ಮೊಗದಿಂದ ಹರಿವ ಅಮೃತಧಾರೆಯನ್ನು ಮನಸಾರೆ ಸವಿಯುತ್ತ ಸಾಗಿದ್ದರು. ಸ್ವಲ್ಪ ಸಮಯಲ್ಲಿಯೇ ಅಂದರೆ ಮಧ್ಯಾಹ್ನ ಹನ್ನೆರಡು ಗಂಟೆಗೆ ಚಂದ್ರಭಾಗೆಯ ದಡದೀಚೆಗೆ ವಾಹನ ಬಂದು ನಿಂತಿತು. ಅಲ್ಲಿ ಸ್ತ್ರೀ, ಪುರುಷರ ಅಪಾರ ಸಮುದಾಯವು, ಸತ್ತ ಸಮಾಜಕ್ಕೆ ಸಂಜೀವಿನಿ ಉತ್ಪತ್ತಿ ಮಾಡಿಕೊಡಲು ಬಂದ ಲೋಕೋತ್ತರ ವಿಭೂತಿಯ ದರುಶನ ಪಡೆಯಲು ಸೇರಿತ್ತು. ವಾಹನವು ಕಣ್ಣಿಗೆ ಬಿದ್ದಕ್ಷಣ ಧಾವಿಸಿ ಬರತೊಡಗಿತು. ಚಂದ್ರಭಾಗೆಯ ಸೇತುವೆ ಆರಂಭಕ್ಕೆ ವಾಹನ ಬರುತ್ತಿದ್ದಾಗ ಮುಂದೆ ಸಾಗಲು ಅಸಾಧ್ಯವಾಯಿತು.

ಸಂಪಾದಕ ಮಹಾಶಯರೆ, ನಿಮ್ಮ ವರದಿಗಾರನೇನು ಪಂಢರಪುರದ ವಾರಕರಿಯಲ್ಲ. ಇಡಿ ಜೀವಮಾನದಲ್ಲಿ ಪಂಢರಪುರಕ್ಕೆ ಅವರ ಮೊದಲನೆಯ ಭೇಟಿಯೇ ಸರಿ. ಆದರೆ "ಪಂಢರಪುರದ ಮಹಿಮಾ" ಮಾತ್ರ ಕೇಳಿಸಿಕೊಂಡಿದ್ದಾರೆ. ವಿಠ್ಠಲನ ದರ್ಶನಕ್ಕೆ ಮಾತ್ರ ಅಗಣಿತ ಜನಸಮುದಾಯ ಪಂಢರಪುರ ಪ್ರವೇಶ ಮಾಡುತ್ತದೆ ಎಂದು ಅವರಿಗೆ ಕೇಳಿಗೊತ್ತು. ಆದರೆ ಒಬ್ಬ ವಿಭೂತಿ ಪುರುಷನ ದರ್ಶನಕ್ಕೆಂದು ಪಂಢರಪುರದ ಜನತೆ ಚಂದ್ರಭಾಗಾ ನದಿ ದಾಟಿ ಮತ್ತು "ವಿಠ್ಠಲನಿಗೆ" ವಿನ್ಮುಖರಾಗಿ ಪಂಢರಿಯ ಹೊರಗೆ ಬಂದು ಬಿಡುತ್ತಾರೆನ್ನುವುದನ್ನು ಕೇಳಿರಲಿಲ್ಲ; ಆದರೆ ನಿಮ್ಮ ವರದಿಗಾರನಿಗೆ ಇಂದೇನು ಕಾಣುತ್ತಿತ್ತು? ಒಂದು ಸಮಾಜವು ವಿಠ್ಠಲನ ಮಹಿತಿಯನ್ನು ಪ್ರಶ್ನಿಸುವ ವಿಭೂತಿ ಪುರುಷನ ದರ್ಶನ ಪಡೆಯಲು ಪಂಢರಿಯ ಹೊರಗೆ ಬೀಳುತ್ತದೆ. ಈ ಸನ್ನಿವೇಶದಿಂದಲೇ ಹುಚ್ಚು ಧಾರ್ಮಿಕ ಭಾವನೆಯಿಂದ ಕುರುಡರಾದ ಬಹುಜನ ಸಮಾಜವು ಕಣ್ಣು ಪೊರೆಯ ಕಳಚಿ ಹಿಂದುಮಾತೆಯ ಭವಿಷ್ಯವು ಉಜ್ವಲವಾದೀತೆಂಬ ಆಶೆಯ ಕಿರಣದತ್ತ ಗಮನವಿಟ್ಟದ್ದು ಕ್ಷಣ ಹೊತ್ತು ನಿಮ್ಮ ವರದಿಗಾರನ ಹೃನ್ಮನದಲ್ಲಿ ಹೊಳೆದೀತು. ಅದೇನೆ ಇರಲಿ. ಈ ದೃಶ್ಯದಿಂದ ಇಷ್ಟಂತು ಸ್ಪಷ್ಟವಾಯಿತು, ಸ್ಪೃಶ್ಯ ಸಮಾಜವು ಯಾವ ಮಾರ್ಗವನ್ನು ಆಕ್ರಮಿಸಿದೆಯೋ ಅದರಿಂದ ತೀರ ವಿರುದ್ಧ ದಿಕ್ಕಿನತ್ತ ಅಸ್ಪೃಶ್ಯರೆಂದು ತಿಳಿದ ಸಮಾಜದ ಮಾರ್ಗವು ಇಂದಿನದ್ದಾಗಿದೆ.

ವಾಹನದ ಎದುರಿನ ದಾರಿಯು ಸಮವಸ್ತ್ರ ಧರಿಸಿದ ಸಮತಾ ಸೈನಿಕ ದಳದ ಸ್ಥಾನಿಕ ಪಥಕದ್ದಾಗಿತ್ತು. ಅದು ದಾರಿಯನ್ನು ಮುಕ್ತಗೊಳಿಸಿತು. ವಾಹನ ಸೇತುವೆ ಮೇಲಿಂದ ಸಾಗತೊಡಗಿತು. ವಾಹನದ ಎರಡುಬದಿಗೆ ಜನಸಂದಣಿ. ಮುಂದೆ ಸ್ವಯಂಸೇವಕರು, ಹಿಂದೆ ಅಪಾರವಾದ ಸಮೂಹ–ಹೀಗೆ ಮೆರವಣಿಗೆ ಕಾಣತೊಡಗಿತು. ವಾಹನ ಮಂದ ಗತಿಯಲ್ಲಿ ಸಾಗತೊಡಗಿತು. ಮುಂದಿನ ಕಾರ್ಯಕ್ರಮ ಹೇಗೆ ಮುಗಿಯುವುದು ಎಂದು ಸಮಸ್ಯೆಯೆನಿಸತೊಡಗಿತು. ವಾಹನ ಜೋರಾದರೆ ಜನರೂ ಧಾವಿಸಹತ್ತಿದರು.

---

ಜನತಾ: ೮ ಮತ್ತು ೧೫ ಜನೆವರಿ ೧೯೩೮.

ಒಂದು ನಾಕೆಯ ಬಳಿ ಮೆರವಣಿಗೆ ಬಂದು ನಿಂತಿತು. ಮೆರವಣಿಗೆಯಿಂದ ಹೊರಬರದೆ ಮುಂದೆ ಹೋಗುವುದು ಕಷ್ಟವಾದುದರಿಂದ ವಾಹನವನ್ನು ಬೇರೆ ರಸ್ತೆಗೆ ಇಳಿಸಲಾಯಿತು. ಜನರಿಗೆ ಸಭೆಗೆ ಬರಲು ಹೇಳಿ ಬಾಬಾಸಾಹೇಬರು ಶೀಘ್ರವಾಗಿ ಡಾಕಬಂಗಲೆಗೆ ಹೋದರು. ಅಲ್ಲೂ ಕೆಲವರು ಬಂದು ಇವರಿಗಾಗಿ ಕಾಯುತ್ತ ಕುಳಿತಿದ್ದರು. ಬಾಬಾಸಾಹೇಬರ ಆಗಮನದ ನಂತರ ಮತ್ತಷ್ಟು ಜನರು ಬರತೊಡಗಿದರು. ಅನೇಕರು ಹಳ್ಳಿಯ ಜನರಿಂದ ತಮಗಾಗುವ ತೊಂದರೆಗಳನ್ನು ಬಾಬಾಸಾಹೇಬರಿಗೆ ಹೇಳುತ್ತಿದ್ದರು ಮತ್ತು ಅವರನ್ನು ಭೇಟಿಮಾಡಿ ಅವರ ನಾಲ್ಕು ಮಾತು ಕೇಳಿ ನಿರ್ಗಮಿಸುತ್ತಿದ್ದರು. ಭೋಜನದ ನಂತರ ೩ ಗಂಟೆಗೆ ಸೊಲ್ಲಾಪುರ ಜಿಲ್ಲಾ ಅಸ್ಪೃಶ್ಯ ರಾಜಕೀಯ ಪರಿಷತ್ತಿನ ಸಭೆಗೆ ಹಾಜರಾಗಲು ತಮ್ಮ ಜೊತೆಗೆ ಬಂದಿದ್ದ ಸಹಕಾರಿಗಳ ಒಟ್ಟಿಗೆ ಬಾಬಾ ಸಾಹೇಬರು ಹೊರಟರು. ಡಾಕ್ಟರ್‌ಸಾಹೇಬರನ್ನು ಕಾಣಲು ಪಂಢರಪುರ ಮುನಿಸಿಪಾಲಿಟಿಯ ಅಧ್ಯಕ್ಷ ರಾ.ಬ. ಪರಿಚಾರಕರು ಬಂದಿದ್ದರು. ಅವರೂ ಸಹ ಪರಿಷತ್ತಿನ ಸಭೆಗೆ ಉಪಸ್ಥಿತರಿರಲು ಹೊರಟರು. ಪರಿಷತ್ತಿನ ಸ್ಥಳವನ್ನು ಮುನಿಸಿಪಲ್ ಧರ್ಮಶಾಲೆಯಲ್ಲಿ ನಿರ್ಧರಿಸಲಾಗಿತ್ತು. ಅಲ್ಲಿ ಬಾಬಾಸಾಹೇಬರ ಆಗಮನವಾಗುತ್ತಿದ್ದಂತೆ ನೆರೆದ ಅಸಂಖ್ಯ ಜನಸಮುದಾಯವು ಚಪ್ಪಾಳೆಯ ಸದ್ದಿನಿಂದ ಅವರನ್ನು ಸ್ವಾಗತಿಸಿದರು. ಜಯಘೋಷಗಳ ಗರ್ಜಿಸಿದವು. ತಕ್ಷಣವೇ ಸಭೆಯ ಕಾರ್ಯಕಲಾಪಗಳು ಆರಂಭಗೊಂಡವು.

ಮೊದಲಿಗೆ ಹೆಣ್ಣುಮಕ್ಕಳ ಸ್ವಾಗತಗಾಯನ ನಡೆಯಿತು. ಸ್ವಾಗತಾಧ್ಯಕ್ಷ ಮೆ. ಜೀವಪ್ಪಾ ಐದಾಳೆ ಎಂ.ಎಲ್.ಎ. ಅವರ ಭಾಷಣ ನಡೆಯಿತು. ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಲು ಡಾ. ಬಾಬಾಸಾಹೇಬರಿಗೆ ವಿನಂತಿಸಲಾಯಿತು. ಆ ಸೂಚನೆಗೆ ಅನುಮೋದನೆ ದೊರೆತ ನಂತರ ಅವರು ಭಾಷಣ ಮಾಡಿದರು.

ಅವರು ಹೇಳಿದರು:

ವಾಸ್ತವವಾಗಿ ಅಧ್ಯಕ್ಷೀಯ ಮಾತುಗಳನ್ನು ಬರೆದು ತಮ್ಮೆದುರು ಓದಬೇಕಾಗಿತ್ತು. ಆದರೆ ಸಮಯದ ಅಭಾವದಿಂದ ನನ್ನಿಂದಾಗಲಿಲ್ಲ. ಅದಕ್ಕಾಗಿ ವಿಷಾದಿಸುತ್ತೇನೆ. ಆದಕಾರಣ ಸುಮ್ಮನೇ ದೀರ್ಘಭಾಷಣ ಮಾಡುವ ಅಗತ್ಯವಿಲ್ಲ. ಇಂದು ಮೂರು ಸಮಸ್ಯೆಗಳ ಕುರಿತು ಮಾತನಾಡುವವನಿದ್ದೇನೆ. ಒಂದು, ಹಿಂದೂಸಮಾಜದಲ್ಲಿ ನಮ್ಮನ್ನು ಸಮಾನತೆಯಿಂದ ನೋಡಲಾಗುತ್ತಿದೆಯೆ? ಎರಡು, ನಮ್ಮ ಆರ್ಥಿಕ ಪರಿಸ್ಥಿತಿ ಕುರಿತು ಯೋಚಿಸಿದಾಗ ನಮಗೆ ಸಂಪತ್ತಿನಲ್ಲಿ ಯೋಗ್ಯಪಾಲು ಸಿಕ್ಕಿದೆಯೆ? ಮೂರು, ನಮ್ಮ ಆತ್ಮೋನ್ನತಿಯ ಚಳುವಳಿ ನಡೆಸಿದರೆ ನಮ್ಮ ಮೇಲೆ ಅತ್ಯಾಚಾರ ನಡೆಯುತ್ತದೆ. ಇದಕ್ಕೆ ಪ್ರತಿಕಾರ ಮಾಡಲು ನಾವು ಹೇಗೆ ಸಮರ್ಥರಾಗಬೇಕು?

ಮೊದಲನೆಯದರ ಯೋಚನೆಯನ್ನು ಪೂರ್ಣ ಮಾಡಿರುವೆ. ಈ ಪ್ರಶ್ನೆ ಧರ್ಮಾಂತರದ ಸಮಸ್ಯೆಗೆ ಸಂಬಂಧಿಸಿದ್ದಾಗಿದೆ. ಅದರ ಕುರಿತು ಇಲ್ಲಿ ಹೆಚ್ಚಿಗೆ ಮಾತನಾಡಲಾರೆ. ಆದರೆ ನಿಮಗೆ ಈ ಪಂಢರಪುರದಲ್ಲಿ ಚೋಖೋಬಾನ ನೆನಪನ್ನು ಮಾಡಿಕೊಡಬೇಕಾಗಿದೆ. ಮಂಗಳವೇಢೆಯಲ್ಲಿ ವಿಶಾಲ ಗೋಡೆ ಕಟ್ಟುವುದಿತ್ತು. ಅದಕ್ಕಾಗಿ ಪಂಢರಪುರದಿಂದ ಹೊಲೆಯರನ್ನು ಜೀತಕ್ಕೆ ಕೆಲಸಕ್ಕಾಗಿ ತಂದಿದ್ದರು. ಅದರಲ್ಲಿ ಚೋಖೋಬಾನೂ ಇದ್ದ. ಕೆಲಸ ನಡೆಯುತ್ತಿದ್ದಾಗ ಗೋಡೆ ಕುಸಿದುಬಿತ್ತು. ಅದರಲ್ಲಿ ಹಲವರು ಸಿಲುಕಿ ಸತ್ತರು. ಚೋಖೋಬಾ ಕೂಡ ಕುಸಿದ ಗೋಡೆಯ ಕೆಳಗೆ ಸಿಕ್ಕುಸತ್ತ. ಆಮೇಲೆ ಚೋಖೋಬಾನ ಸಮಾಧಿ ಕಟ್ಟುವುದಿತ್ತು. ಅದಕ್ಕಾಗಿ ಆತನ ಎಲುಬುಗಳು ಬೇಕಿದ್ದವು. ಅನೇಕ ಮಹಾರರು ಗೋಡೆಮಣ್ಣಲ್ಲಿ ಸತ್ತುಹೋಗಿರುವುದರಿಂದ ಎಲ್ಲರ ಎಲುಬುಗಳು ಹೂತಿದ್ದವು. ಅವುಗಳಲ್ಲಿ ಚೋಖೋಬಾನ ಎಲುಬುಗಳು ಯಾವುವು ಎಂಬುದು

ತಿಳಿಯಲು ಸಾಧ್ಯವಿರಲಿಲ್ಲ. ಆಗ ಜನರು ನಾಮದೇವನನ್ನು ಬೇಟಿಯಾದರು. ತಾವು ದಾರಿ ತೋರಿಯೆಂದು ವಿನಂತಿಸಿದರು. ನಾಮದೇವ ಹೇಳಿದರು ಇದೇನು ಕಷ್ಟದ ಕೆಲಸವಲ್ಲ. ಯಾಕೆಂದರೆ ಚೋಖೋಬಾನ ಎಲುಬುಗಳು ವಿಠ್ಠಲ ವಿಠಲ ಎಂದು ಹಾಡುತ್ತಿರುತ್ತವೆ. ಆಗ ಆ ಹಾಡುವ ಎಲುಬುಗಳನ್ನು ಆಯ್ದುತಂದು ಸಮಾಧಿ ನಿರ್ಮಿಸಿರಿ. ಎಲುಬಿನಿಂದ ಧ್ವನಿ ಹೊರಡುವುದೆಂಬ ವಿಚಾರವನ್ನು ಒಂದಿಷ್ಟು ಬದಿಗಿಟ್ಟು ನೋಡಿದರೂ ಚೋಖೋಬಾನ ಯೋಗ್ಯತೆಯ ಸಂಬಂಧದಲ್ಲಿ ಒಂದು ವಿಚಾರ ನಿರ್ವಿವಾದವಾಗಿದೆ. ಅದೇನೆಂದರೆ ನಿರ್ಜೀವ ಅಸ್ಥಿಯಿಂದಲೂ ವಿಠ್ಠಲನಾಮದ ಉಚ್ಚಾರವಾಗಬೇಕು; ಇಷ್ಟೊಂದು ಶ್ರೇಷ್ಠತ್ವವಿತ್ತು. ಜ್ಞಾನದೇವ, ಸೋಪಾನದೇವ, ಮುಕ್ತಾಬಾಯಿ ಮುಂತಾದ ಸಂತರ ಸಾಲಿನಲ್ಲಿ ಚೋಖೋಬಾನಿಗೆ ಸ್ಥಾನಸಿಕ್ಕಿದೆ. ಆದರೆ ಆತನಿಗೂ ಸಹ ವಿಠ್ಠಲ ಮಂದಿರವನ್ನು ಪ್ರವೇಶ ಮಾಡಲಾಗಿಲ್ಲ. ಆತನ ಸಮಾಧಿಯನ್ನು ಸಹ ಗುಡಿಯಿಂದ ದೂರ ಇಡಲಾಗಿದೆ. ಚೋಖೋಬಾನ ಕಾಲದಲ್ಲಿ ಯಾವ ಪರಿಸ್ಥಿತಿಯಿತ್ತೋ; ಅವನ ಕಾಲದಲ್ಲಿ ಯಾವ ಬಗೆಯಲ್ಲಿ ಆತನ ಕುಲಬಾಂಧವರ ಜತೆ ನಡೆದುಕೊಳ್ಳಲಾಯಿತೋ, ಅದೇತರೆನಾಗಿ ಚೋಖೋಬಾನ ಜನನವು ಯಾವ ಸಮುದಾಯದಲ್ಲಿ ಆಗಿದೆಯೋ ಆ ಸಮುದಾಯವನ್ನು ಈಗಲೂ ಸಹ ಹೀನಾಯವಾಗಿ ನೋಡಲಾಗುತ್ತಿದೆ. ಅದೇ ಮಾನದಂಡದಿಂದ ನಮ್ಮನ್ನೂ ಅಳೆಯಲಾಗುತ್ತಿದೆ. ಆದ್ದರಿಂದ ಯಾವ ಧರ್ಮವನ್ನು ಚೋಖೋಬಾ ಪುರಸ್ಕರಿಸಿದ್ದರೋ ಅದನ್ನೇ ನಾವ್ಯಾಕೆ ಪುರಸ್ಕರಿಸಬೇಕು? ಆ ಧರ್ಮದೊಳಗೆ ನಮ್ಮನ್ನು ಕೀಳಾಗಿಯೇ ನೋಡುವವರೆ! ಅದಕ್ಕಾಗಿ ಆ ಧರ್ಮದಿಂದ ನಾವು ದೂರವಿರಲೇಬೇಕು.

ಎರಡನೆಯ ಸಮಸ್ಯೆಯೆಂದರೆ ಆರ್ಥಿಕದ್ದು–ನಮ್ಮ ಉದರ ಪೋಷಣೆಯದ್ದು. ಇಂದು ದೇಶದ ಸರ್ವ ಸಂಪತ್ತನ್ನು ವೈಟ್ ಕಲರ್ ವರ್ಗ ಕಿತ್ತುಕೊಂಡಿದೆ. ಅವರ ಐಶಾರಾಮಿ ನಡೆದೇ ಇದೆ. ಆದರೆ ನಿಮಗೆ ಹಿಡಿ ಅನ್ನವಿಲ್ಲ. ಇಲ್ಲವೆ ಮೈ ಮುಚ್ಚಿಕೊಳ್ಳಲು ವಸ್ತ್ರವಿಲ್ಲ. ಈಗತಾನೆ ಒಬ್ಬ ಹೆಣ್ಣುಮಗಳು ನನ್ನ ಬಳಿ ಬಂದಿದ್ದಳು. ಆಕೆ ಮಗುವಿಗೆ ಅಂಗಿಕೊಳ್ಳಲು ಎರಡಾಣೆ ಕೇಳುತ್ತಿದ್ದಳು. ಅವಳ ಸ್ಥಿತಿಯೇ ನಮ್ಮೆಲ್ಲರ ಸ್ಥಿತಿಯಾಗಿದೆ. ಕಾರಣ ಅವರ ಪಾಲಿಗೆ ಸಂಪತ್ತು ಇದ್ದರೆ, ನಿಮ್ಮ ಪಾಲಿಗೆ ದಾರಿದ್ರ್ಯವಿದೆ. ಅಂದರೆ ಸಂಪತ್ತಿನ ಪಾಲು ನ್ಯಾಯದಿಂದ ಕೂಡಿಲ್ಲ, ಮತ್ತದನ್ನು ಹೇಗೆ ನಿವಾರಣೆ ಮಾಡಿಕೊಳ್ಳಬೇಕೆಂಬುದೇ ಮುಖ್ಯ ಪ್ರಶ್ನೆಯಾಗಿದೆ. ಗ್ರಾಮಬಳಿಯ ಒಣಜಮೀನು ನಮಗೆ ದೊರೆಯಲೆಂದು ಸರಕಾರದ ಬಳಿ ಬೇಡಿಕೆಯಿತ್ತರೆ, ಆ ಜಮೀನು ದನಕರುಗಳ ಮೇವಿಗಾಗಿ ಅಗತ್ಯವೆಂದು ಆ ಕಾರಣ ನಮಗೆ ನೀಡಬಾರದೆಂದು ಹೇಳಲಾಯಿತು. ಊರೊಳಗಿನ ಜನರು ಇಂಥ ಪ್ರಯತ್ನ ಮಾಡುತ್ತಿರುತ್ತಾರೆ. ಆ ಜಮೀನು ಸಹ ನಮಗೆ ದೊರಕದಂತೆ ಮಾಡುತ್ತಾರೆ. ಯಾವಾಗ ಮುಖ್ಯಮಂತ್ರಿ ಖೇರ ಅವರನ್ನು ಭೇಟಿ ಮಾಡಿದ್ದೇನೋ ಆಗ ಅವರಲ್ಲಿ ಈ ವಿಷಯದ ಬಗ್ಗೆ ವಿಚಾರಿಸಿದೆ, ಊರಿನವರ ಎಮ್ಮೆ ಹಸುಗಳಿಗಿಂತ ನಮ್ಮ ಜೀವಗಳು ಕಮ್ಮಿ ಕಿಮ್ಮತ್ತಿನವು ಏನು? ಸರಕಾರ ನಮ್ಮ ಜೀವಕ್ಕೆ ಬೆಲೆಕೊಡದೆ ಊರೊಳಗಿನ ದನಗಳಿಗೆ, ಅವುಗಳ ಹೊಟ್ಟೆ, ನೀರಿನ ವ್ಯವಸ್ಥೆಗೆ ಮಾನ್ಯತೆ ನೀಡಬೇಕೇನು? ಸರಕಾರ ಮೊದಲು ಮನುಷ್ಯರ ಜೀವ ಉಳಿಸಬೇಕು. ನಂತರ ಜಾನುವಾರುಗಳತ್ತ ಗಮನಹರಿಸಲಿ. ಒಟ್ಟು ನಿಮಗೆ ಹೇಳುವುದೆಂದರೆ ನಿಮ್ಮ ಬೆಲೆ ಜಾನುವಾರುಗಳಿಗಿಂತ ಕಡಿಮೆಯಾಗಿರುವುದು. ಬಡವರ ಬಂಧುಗಳಾರೂ ಇಲ್ಲ. ಬಡವರಿಗೆ ಬಡವರೆ ಸಂರಕ್ಷಕರು. ಬಡವರು ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕಾದರೆ ಕಾನೂನು ರಚಿಸುವ ಶಕ್ತಿಪಡೆಯಲು ರಾಜಕೀಯ ಸತ್ತೆಯನ್ನು ಹಸ್ತಗತ ಮಾಡಿಕೊಳ್ಳಬೇಕು. ಅವರು ಒಂದುವೇಳೆ ಕಾನೂನು ಮಂಡಳಿಯಲ್ಲಿ ನಿಸ್ವಾರ್ಥಿಗಳನ್ನು ಆರಿಸಿಕಳಿಸದೆ ಇದ್ದಲ್ಲಿ ಅವರು ವಂಚನೆಗೊಳಗಾಗದೆ ಇರರು. ಆದಕಾರಣ ತಮ್ಮ

ಹಿತವನ್ನು ಕಾಪಾಡುವವರು ಕಾನೂನು ಮಂಡಳಿಯಲ್ಲಿರಬೇಕು. ಅದಕ್ಕಾಗಿ ಸಂಘಟಿತರಾಗಬೇಕು. ಅದಕ್ಕಾಗಿಯೇ ಸ್ವತಂತ್ರ ಮಜೂರ ಪಕ್ಷದ ಸ್ಥಾಪನೆಯಾಗಿದೆ. ಇವತ್ತು ಕಾನೂನು ಮಾಡುವ ಸರಕಾರ ಕಾಂಗ್ರೆಸ್ಸಿನದ್ದಾಗಿದೆ. ಆ ಕಾಂಗ್ರೆಸ್ಸು ವಿಶ್ವಾಮಿತ್ರ ಸೃಷ್ಟಿಸಿದ ಒಂದು ಮಾಯೆ. ಅಲ್ಲಿ ಮುಕ್ತೇಶ್ವರರು ವರ್ಣಿಸಿದ ಇಲಿ ಬೆಕ್ಕಿಗಿಟ್ಟ ಹಾಲನ್ನು ಕುಡಿಯುತ್ತಿದೆ. ಹುಲಿ, ಆಡು ಒಂದೇ ಹಾಸಿಗೆಯಲ್ಲಿ ನಿದ್ರಿಸುತ್ತಿವೆ. ಮುಂಗುಸಿ ಹಾವು ಪರಸ್ಪರ ಮುತ್ತಿಕ್ಕುತ್ತಿವೆ. ಅಲ್ಲಿ ಶೇಠ, ಸಾವುಕರರು ಗೇಣಿದಾರರ ಹಿತ ಕಾಪಾಡುತ್ತೇವೆಂದು ಹೇಳುತ್ತಿದ್ದಾರೆ. ಬಂಡವಾಳುದಾರರು ಕೂಲಿಗಳ ಕಲ್ಯಾಣ ಮಾಡುವೆವು ಎಂದು ಬಡ ಬಡಿಸುತ್ತಿರುವರು. ಅವರ ಮಾತು ಎಷ್ಟು ಪೊಳ್ಳು. ಜನರನ್ನು ಹೇಗೆ ವಂಚಿಸುವರೆಂಬುದನ್ನು ಬಡಜನರಿಗೆ ಹೇಳುವ ಅಗತ್ಯವಿಲ್ಲ. ಶೇಠ, ಸಾವುಕಾರರು ನಮ್ಮ ಹಿತಶತ್ರುಗಳು. ಇದು ಇವರ ಹುಟ್ಟುಗುಣ ಎಂಬುದರ ಅರಿವು ನಮಗಿದೆ. ಕಾಂಗ್ರೆಸ್ಸು ಹೀಗೆ ಜನರನ್ನು ವಂಚಿಸುತ್ತಿದೆಯೆಂದು ನಾನದರಲ್ಲಿ ಸಾಮೀಲುಗೊಂಡಿಲ್ಲ. ಅದಕ್ಕೆ ನಿಮಗೂ ಹೇಳುವೆ, ಅದರಿಂದ ತೀರ ದೂರವಿರಿ.

ನಿಮ್ಮ ಹಿತ ಕಾಪಾಡುವ ಕಾನೂನು ತರುವುದು ಮತ್ತು ಅದಕ್ಕಾಗಿ ಸಂಘರ್ಷಕ್ಕಿಳಿಯುವುದು ನನ್ನ ಕರ್ತವ್ಯವೇ ಆಗಿದೆ. ಅದನ್ನು ನಾನು ಮಾಡುವೆ. ನಾನು ನನ್ನ ಕರ್ತವ್ಯವನ್ನು ಎಚ್ಚರದಿಂದ ಗಮನಿಸುವೆ. ಆದರೆ ನೀವೂ ಅದೇ ಕಾಲಕ್ಕೆ ನಿಮ್ಮ ಕರ್ತವ್ಯ ಕುರಿತು ಎಚ್ಚರದಿಂದಿರಬೇಕು. ಇದನ್ನು ನಿಮಗೆ ಹೇಳುವುದಿದೆ. ನೀವು ನಿಮಗೂ ಚಳವಳಿಯನ್ನು ಬಿರುಸಾಗಿ ನಡೆಸದೆ ಹೋದರೆ ಯಶಸ್ಸು ದೊರಕುವುದಿಲ್ಲ. ತಮ್ಮ ಜೀವನ ಸುಖಕರವಾಗುವುದಿಲ್ಲ.

ಮೂರನೆಯ ಸಮಸ್ಯೆಯೆಂದರೆ, ನಮ್ಮ ಉನ್ನತಿಯ ಕಾರ್ಯನಿರ್ವಹಿಸುತ್ತಿರುವಾಗ ನಮ್ಮ ಮೇಲಾಗುವ ದೌರ್ಜನ್ಯವನ್ನು ತಡೆದು ನಿವಾರಣೆಗೊಳಿಸುವುದು ಹೇಗೆ? ನಿಮಗೆ ಗೊತ್ತಿದೆ. ನಮ್ಮ ವಿರುದ್ಧವೇ ಇಡಿ ಪ್ರಪಂಚವಿದೆ. ಅದನ್ನು ಎರಡು ಬಗೆಯಲ್ಲಿ ಎದುರಿಸಬೇಕು. ಮೊದಲು ನಾವು ನಮ್ಮೊಳಗಿನ ಭೀತಿಯನ್ನು ಕಿತ್ತೊಗೆಯಬೇಕು. ಯಾವ ಯಾವ ಸಂದರ್ಭದಲ್ಲಿ ನಮ್ಮಮೇಲಾಗುವ ಅತ್ಯಾಚಾರವು ಯಾವುದೇ ಬಗೆಯದಾಗಿರಲಿ ಆ ಅನ್ಯಾಯ ಮಾಡುವವರ ಸಂಗಡ ಜಗಳ ಮಾಡಬೇಕು. ಏನಾಗುವುದೋ ಅದಾಗಲಿ, ಅದಕ್ಕೆ ಯಾಕೆ ಹೆದರಬೇಕು? ನೀವು ಕಳಕೊಳ್ಳುತ್ತೀರಿ ಎನ್ನುವುದಕ್ಕೆ ಎದೆಗುಂದಲು ಏನಿದೆ? ಸಾವಿಗೂ ಬೆದರಬಾರದು. ಇಷ್ಟೊಂದು ನಿರ್ಭಯರಾದಾಗಲೇ ನಿಮ್ಮ ಮೇಲಾಗುವ ಅನ್ಯಾಯಕ್ಕೆ ಪ್ರತಿಕಾರ ಮಾಡಲು ಸಾಧ್ಯವಾಗಬಹುದು. ನಮ್ಮ ಯುವಕರೂ ಸಹ ತಮ್ಮ ಪೋಷಾಕನ್ನು ತಿದ್ದಿಕೊಳ್ಳಬೇಕು. ಧೋತರ ಬದಲು ಅಂಗಿಚೆಡ್ಡಿಯ ಸ್ಕೌಟ್ ಡ್ರೆಸ್ಸು ತೊಡಬೇಕು. ೧೮-೪೦ ವರ್ಷದ ಪ್ರತಿಯೊಬ್ಬರು ಹೀಗೆ ಸುಲಭಸಾಧ್ಯ ಪೋಷಾಕು ತೊಟ್ಟರೆ ನಿಮ್ಮ ಮನೋವೃತ್ತಿಯೂ ಬದಲಾಗದೆ ಇರದು. ಹೆದರಿಕೆಯೂ ಮಾಯವಾಗುವುದು. ಅದಲ್ಲದೆ ಅಂತಃ ಶುದ್ಧಿಗೆ ಜೊತೆಯಾಗಿ ಅನ್ಯಾಯದಿಂದ ರಕ್ಷಿಸಿಕೊಳ್ಳಲು ನಮಗೊಂದಿಷ್ಟು ಫಂಡನ್ನು ಸಂಗ್ರಹಿಸಿಟ್ಟುಕೊಳ್ಳಬೇಕು. ಆ ನಿಧಿಯ ಹಣದಿಂದ ಕಾನೂನು ಸಮರಕ್ಕೈಗೊಂಡು ಪೀಡಿತರ ದುಃಖ ನಿವಾರಿಸುವುದೆಲ್ಲ ಆಗಬಹುದು.

ನಾನು ಹೇಳಿದ ಎಲ್ಲ ವಿಚಾರಗಳನ್ನು ಜಾರಿಗೊಳಿಸಲು ನೀವು ಸಿದ್ಧರಾಗಬೇಕು ಮತ್ತು ನೀವು ಹಾಗಾಗಬಹುದೆಂಬುದರ ಬಗ್ಗೆ ನನಗೆ ನಂಬಿಕೆಯಿದೆ.

ಬಾಬಾಸಾಹೇಬರ ಈ ರೀತಿ ಅಸ್ಖಲಿತ ಭಾಷಣವು ೧ ಗಂಟೆ ನಡೆಯಿತು. ಸಭೆಯೆದುರು ಮೂರು ಠರಾವು ಮಂಡಿಸಲಾಯಿತು. ೧. ಮಹಾರರ ವತನ ಬಿಲ್ಲಿಗೆ ಬೆಂಬಲಿಸುವುದು. ೨. ಗೌಡಕಿಪದ್ಧತಿ ನಷ್ಟಮಾಡುವುದಕ್ಕೆ ಬೆಂಬಲ. ೩. ಜನತಾ ಪತ್ರಿಕೆಯ ಚಂದಾದಾರರು ಸ್ವತಂತ್ರ ಮಜೂರ ಪಕ್ಷದ

ಸದಸ್ಯರಾಗಬೇಕು. ಹೀಗೆ ವಿನಂತಿಸಿದರು. ಕೊನೆಗೆ ವಂದನಾರ್ಪಣೆಯ ನಂತರ ಸಭೆಮುಗಿಯಿತು. ಬಾಬಾಸಾಹೇಬರು ಮತ್ತು ಅವರ ಜೊತೆಗೆ ಬಂದವರು ಪಂಢರಪುರ ಮುನಿಸಿಪಾಲಿಟಿಯ ಹಾಲ್‌ಗೆ ಬಂದರು. ಅಲ್ಲಿ ಮುನಿಸಿಪಾಲಿಟಿಯ ಸದಸ್ಯರು ಸೇರಿದ್ದರು. ಮುನಿಸಿಪಾಲಿಟಿ ಅಧ್ಯಕ್ಷ ರಾ.ಬ. ಪರಿಚಾರಕ ಅವರು ಸಾಂದರ್ಭಿಕ ಮಾತುಗಳನ್ನಾಡಿದರು. ಡಾ. ಬಾಬಾಸಾಹೇಬ ಅಂಬೇಡ್ಕರರನ್ನು ಸ್ವಾಗತಿಸಿದರು. ಪುಷ್ಪಾರ್ಪಣೆ ನಡೆಯಿತು. ಆ ಬಳಿಕ ಇತರೆ ಸದಸ್ಯರ ಮತ್ತು ಬಾಬಾಸಾಹೇಬರ ಪರಿಚಯ ಮಾಡಿ ಕೊಡಲಾಯಿತು. ಡಾಕ್ಟರ್ ಸಾಹೇಬರು ಪ್ರತ್ಯುತ್ತರ ಪರ ಭಾಷಣ ಮಾಡಿದ ನಂತರ ಪಂಢರಪುರ ಮುನಿಸಿಪಾಲಿಟಿಗೆ ಕೃತಜ್ಞತೆ ಹೇಳಿದರು.

ಆನಂತರ ಎಲ್ಲರು ಸ್ಥಳೀಯ ವಕೀಲರಾದ ಶ್ರೀ ಪಟವರ್ಧನ ಅವರ ಆಮಂತ್ರಣ ಸ್ವೀಕರಿಸಿ ಚಹಾಕೂಟಕ್ಕೆ ತೆರಳಿದರು. ಆ ದಿನದ ಕಾರ್ಯಕ್ರಮ ಇಲ್ಲಿಗೆ ಮುಗಿಯಿತು.

# ೧೧೪.

# ರಾಜಕಾರಣದ ಬಂಡಿ ಎಳೆಯುವಾಗ ಚಕ್ರ ಮೈಮೇಲೆ ಬರದಂತೆ ಎಚ್ಚರವಹಿಸಿರಿ

೧ ಜನೆವರಿ ೧೯೩೮ ರ ಹೊಸ ವರ್ಷದ ದಿನ ಶ್ರೀ ಬಳವಂತರಾವ ಗಾಯಕವಾಡ, ಶ್ರೀ ರಾಮಭಾವು ಪಾಟೋಳೆ ಮತ್ತು ರ.ಬಿ. ಶಿಂದೆಯವರು, ರೆ. ಗಂಗಾಧರರಾವ ಜಾಧವ ಅವರ ಅಧ್ಯಕ್ಷತೆ ಅಡಿಯಲ್ಲಿ ಶ್ರೀ ಐದಾಳೆ ಎಮ್.ಎಲ್.ಎ. ಇವರ ಸಹಾಯದಿಂದ ಡಾ. ಬಾಬಾಸಾಹೇಬ ಅಂಬೇಡ್ಕರರ ಅತ್ಯಂತ ಮನಸೂರೆಗೊಳ್ಳುವ ಉಪನ್ಯಾಸವನ್ನು ಸೊಲ್ಲಾಪುರದ ಕ್ರಿಶ್ಚಿಯನ್ ಸಮಾಜದವರು ಏರ್ಪಡಿಸಿದ್ದರು.

ಡಾ. ಬಾಬಾಸಾಹೇಬ ಅಂಬೇಡ್ಕರರು ಮೊದಲಿಗೆ ತಮ್ಮ ಚರಿತ್ರೆಯು ಶೂನ್ಯದಿಂದಲ್ಲ; ಆದರೆ ಚಿನ್ನೆಯಿಂದ ಆರಂಭವಾಗಿ ಸದ್ಯ ಸ್ಥಿತಿಗೆ ಹೇಗೆ ಬಂತು ಎಂಬುದನ್ನು ಮಾರ್ಮಿಕವಾಗಿ ತಿಳಿಸಿದರು. ಇದರಲ್ಲಿ ಅವರ ಉದ್ದೇಶವಿಷ್ಟೇ, ನಮ್ಮ ಸಮಾಜವು ದುರ್ಬಲವಾಗಿ ನಲುಗಿ ಕಾಲ ನೂಕಕೂಡದು. ಹೊಸವರ್ಷದ ನವಸಂಕಲ್ಪದಿಂದ, ನಿರ್ಧಾರದಿಂದ ಅದರ ಪ್ರಗತಿಗಾಗಿ ಸಂಘರ್ಷ ಮಾಡಬೇಕು. ಡಾ. ಬಾಬಾಸಾಹೇಬ ಮುಂದುವರಿದು ಹೇಳಿದರು.

ನಮ್ಮ ಧರ್ಮಾಂತರದ ಅಪಮಾನ ಎಲ್ಲೆಡೆ ನಡೆಯುತ್ತಿದೆ. ಇದರ ತಾತ್ಪರ್ಯವನ್ನು ಅತ್ರೆಯವರ ವಂದೇ ಮಾತರಂ ನಾಟಕದ ಒಂದು ಪ್ರಸಂಗದಿಂದ ಹೇಳಬಹುದು. ಆದರೂ ಧರ್ಮಾಂತರದ ಉದ್ದೇಶದಿಂದ ಎಳ್ಳಷ್ಟು ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಉಳಿದದ್ದು ಧರ್ಮಾಂತರವಾಗುವವರ ಕುರಿತು ಯಾರಾದರು ಪ್ರಶಂಸೆ ಮಾಡಿದ್ದರ ಬಗ್ಗೆ ನಮ್ಮ ಹಿಂದೂಸ್ಥಾನದಲ್ಲಿಯಂತು ಕಣ್ಣಿಗೆ ಬಿದ್ದಿಲ್ಲ.

ಪ್ರಪಂಚದಲ್ಲಿ ಲಭ್ಯವಿದ್ದ ಪ್ರಮುಖ ಧರ್ಮಗಳ ಆಳ ಅಧ್ಯಯನವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಮಾಡಿದ್ದೇನೆ. ಅವೆಲ್ಲವುಗಳಲ್ಲಿ ನನ್ನೆದುರು ಕೇವಲ ಇಬ್ಬರು ವ್ಯಕ್ತಿಗಳು ಮಾತ್ರ ನಿಲ್ಲುತ್ತಾರೆ. ಒಬ್ಬ ಬುದ್ಧ ಮತ್ತು ಇನ್ನೊಬ್ಬ ಯೇಸು. ಮನುಷ್ಯರೊಟ್ಟಿಗೆ ಮನುಷ್ಯರ ನಡುವಿನ ಕರ್ತವ್ಯವೇನು, ಮಾನವನ ದೇವರ ಜೊತೆಗಿನ ಕರ್ತವ್ಯ ಯಾವುದು, ಮಗ ತಂದೆಯ ಜೊತೆಗೆ ಹೇಗೆ ವರ್ತಿಸಬೇಕು, ಮಾನವರೆಲ್ಲರಲ್ಲಿ ಸಮತೆ, ಸ್ವಾತಂತ್ರ್ಯವನ್ನು ಅನುಭವಿಸುವ ಧರ್ಮವು ಯಾವುದೋ ಅದು ನನಗೆ ಮತ್ತು ನನ್ನ ಅನುಯಾಯಿಗಳಿಗೆ ಬೇಕು.

ಮಿಶನರಿಗಳು ಧರ್ಮಾಂತರ ಮಾಡಿದರೆ ಮುಗಿಯಿತು, ನಮ್ಮ ಕಾರ್ಯ ಮುಗಿಯಿತು ಎಂದು ಭಾವಿಸಿದ್ದಾರೆ. ಆದರೆ ಅವರ ರಾಜಕೀಯ ಅಧಿಕಾರದ ಸವಲತ್ತುಗಳನ್ನು ಗಮನಿಸುವುದಿಲ್ಲ. ನನಗೆ ಕ್ರಿಶ್ಚಿಯನ್ನರಲ್ಲಿ ಇದೊಂದು ದೊಡ್ಡ ದೋಷವಾಗಿ ಎದ್ದುಕಾಣುತ್ತಿದೆ. ಯಾಕೆಂದರೆ ಅವರು ರಾಜಕಾರಣದಲ್ಲಿ

---

ಜನತಾ: ೪ ಫೆಬ್ರುವರಿ ೧೯೩೮.

ಎಷ್ಟು ತೀವ್ರವಾಗಿ ತೊಡಗಿಸಿಕೊಳ್ಳಬೇಕಿತ್ತೋ ಅಷ್ಟು ತೊಡಗಿಸಿಕೊಂಡಿಲ್ಲ. ಯಾವುದೇ ಸಂಸ್ಥೆ ರಾಜಕೀಯ ಆಧಾರವಿಲ್ಲದೆ ಉಳಿಯುವುದು ಕಷ್ಟ. ನಾವು ಅಸ್ಪೃಶ್ಯರು, ಹುಂಬರು ಮತ್ತು ಅಶಿಕ್ಷಿತರಾಗಿದ್ದರೂ ಚಳುವಳಿ ನಡೆಸುತ್ತಿದ್ದೇವೆ. ಆ ಕಾರಣದಿಂದಲೇ ನಮ್ಮ ೧೫ ಸ್ಥಳಗಳು ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿವೆ. ಅಸ್ಪೃಶ್ಯ ಮಕ್ಕಳಿಗೆ ಸರಕಾರದ ಸ್ಕಾಲರ್‌ಶಿಪ್ ದೊರೆಯುತ್ತಿದೆ. ನಮ್ಮ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಬೋರ್ಡಿಂಗ್ ತೆರೆದಿದ್ದಾರೆ. ಆದರೆ ಕ್ರಿಶ್ಚಿಯನ್ನರ ಸಂದರ್ಭದಲ್ಲಿ ಇದೇನು ಇಲ್ಲ. ಒಬ್ಬ ಅಸ್ಪೃಶ್ಯ ಹುಡುಗ, ಅಸ್ಪೃಶ್ಯನಾಗಿರುವ ತನಕ ಸರಕಾರಿ ಸ್ಕಾಲರ್‌ಶಿಪ್ ದೊರೆಯುತ್ತದೆ. ಅದೇ ಆತ ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದರೆ ಅದು ನಿಂತು ಬಿಡುತ್ತದೆ. ಅಂದರೆ ಧರ್ಮಾಂತರವಾದ ಬಳಿಕವೂ ಆತನ ದಾರಿದ್ರ್ಯ ಕೊನೆಗೊಳ್ಳುವುದಿಲ್ಲ. ಧರ್ಮಾಂತರದಿಂದ ಆತನು ಆರ್ಥಿಕ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಅದೇ ನಿಮ್ಮ ಹಸ್ತವು ರಾಜಕಾರಣದೊಳಗಿದ್ದರೆ ಇದರ ವಿರುದ್ಧ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು.

ನಿಮ್ಮ ಸಮಾಜವು ಕಲಿತಿರುವಂತಹದು. ನೂರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮೆಟ್ರಿಕ್ ಮುಗಿಸಿದ್ದಾರೆ. ಅವರು ಈ ಸಾರ್ವಜನಕ ಅನ್ಯಾಯದ ವಿರುದ್ಧ ಅವಿದ್ಯಾವಂತ ಅಸ್ಪೃಶ್ಯರಿಗಾಗಿ ಎಂದೂ ಹೋರಾಟ ಮಾಡಿಲ್ಲ. ಚಳುವಳಿ ನಡೆಸಿಲ್ಲ. ಒಬ್ಬಳು ನರ್ಸ್‌ಳಾಗಿ ಕೆಲಸ ಮಾಡತೊಡಗಿದರೆ ತನ್ನ ಕಾರ್ಯದಲ್ಲಿಯೇ ಮುಳುಗಿರುತ್ತಾಳೆ. ಶಿಕ್ಷಕನಾದರೆ ಅದರೊಳಗೆಯೆ ಮುಳುಗಿಹೋಗುತ್ತಾನೆ. ಸಾರ್ವಜನಿಕ ಕಾರ್ಯದೊಳಗೆ ತೊಡಗಿಸಿಕೊಳ್ಳುವುದಿಲ್ಲ. ಕಾರಕೂನ ಅಥವಾ ಇನ್ನಾವುದೇ ಹುದ್ದೆಯಲ್ಲಿರುವವರು ತಮ್ಮ ಕ್ಷೇತ್ರದೊಳಗೆಯೆ ಸೀಮಿತಗೊಂಡಿರುತ್ತಾರೆಯೆ ಹೊರತು ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಡದೇ ನಿರ್ಲಕ್ಷ್ಯ ಮಾಡುತ್ತಾರೆ. ನಿಮ್ಮ ಸಮಾಜ ಒಂದು ಪಕ್ಷ ಸುಶಿಕ್ಷಿತವಾಗಿದ್ದರೆ ನಿಮ್ಮೊಳಗಿನ ಅದೆಷ್ಟು ಮಂದಿ ಡಿಸ್ಟ್ರಿಕ್ಟ್ ಜಡ್ಜ್ ಮತ್ತು ಮ್ಯಾಜಿಸ್ಟ್ರೇಟರಾಗಿದ್ದಾರೆ? ಇದಕ್ಕಿರುವ ಕಾರಣ ನೀವು ರಾಜಕೀಯವನ್ನು ನಿರ್ಲಕ್ಷಿಸಿರುವುದು. ನಿಮ್ಮಹಿತ ಕಾಪಾಡಿ ಮಾತಾಡುವವರು ಸರಕಾರದೊಳಗೆ ಯಾರೊಬ್ಬರೂ ಇಲ್ಲ. ರಾಜಕಾರಣದ ಬಂಡಿಯನ್ನು ಎಳೆಯಲು ನಿಮ್ಮಿಂದಾಗದಿದ್ದರೂ ಕೊನೆಗೆ ಅದು ನಿಮ್ಮ ಆಸೆಯಂತೆ ನಡೆಯದಿದ್ದರೆ, ನಿಮ್ಮ ಮೈಮೇಲೆ ಹರಿದು ಹೋದೀತೆಂಬುದರ ಬಗ್ಗೆ ಎಚ್ಚರಿಕೆಯನ್ನಾದರೂ ಇಟ್ಟುಕೊಳ್ಳಿರಿ.

ನೀವು ಮುಕ್ಕಾಮಿನಲ್ಲಿದ್ದೀರಿ; ನಾವು ದಾರಿಕ್ರಮಿಸುತ್ತಿದ್ದೇವೆ. ನಿಮ್ಮ ವಾಸ್ತವ್ಯದ ಒಳ್ಳೆಯದು ಕೆಟ್ಟದ್ದರ ಮೇಲೆಯೆ ನಮ್ಮದು ಅಲ್ಲಿ ಮುಕ್ಕಾಮು ಆಗುವುದು.

## ೧೧೫.
## ಹಾವು–ಮುಂಗುಸಿ, ಇಲಿ–ಬೆಕ್ಕು ಇವುಗಳ ಮೈತ್ರಿ ಎಂದಾದರು ಆದೀತೆ?

ಸೋಮವಾರ ದಿ: ೧೦ ಜನೇವರಿ ೧೯೩೮ರಂದು ಮುಂಬೈ ಪ್ರಾಂತಿಕ ಅಸೆಂಬ್ಲಿಯ ಸಭೆ ಮುಂಬೈ ಕೌನ್ಸಿಲ್ ಹಾಲ್‌ನಲ್ಲಿ ಆರಂಭವಾಯಿತು. ಈ ಸಭೆಯವೇಳೆ ರೈತಬಾಂಧವರು ತಮ್ಮ ಮೋರ್ಚಾ ಕೊಂಡೊಯ್ಯುವ ನಿರ್ಧಾರವನ್ನು ಮುಂಚೆಯೇ ಜಾಹೀರಗೊಳಿಸಿದ್ದರು. ಕೊಂಕಣ, ಸಾತಾರಾ, ನಾಶಿಕ ಮುಂತಾದ ಜಿಲ್ಲೆಗಳ ರೈತಬಾಂಧವರು. ಅದರಂತೆ ರೈತರ ಈ ಮೋರ್ಚಾ ಸಂಘಟಿತವಾಗಿರಬೇಕು. ಮತ್ತು ಯೋಗ್ಯರೀತಿಯಿಂದ ಯಶಸ್ವಿಗೊಳಿಸಬೇಕೆಂದು ಸ್ವತಂತ್ರ ಮಜೂರ ಪಕ್ಷ ಮತ್ತು ಇತರ ರೈತ ಸಂಘಟನೆಗಳು ಸಿದ್ಧತೆ ನಡೆಸಿ ಪರಸ್ಪರ ಸಹಕರಿಸಿ 'ಮೋರ್ಚಾ ಕಮಿಟಿ' ಒಂದನ್ನು ಕಟ್ಟಿದರು. ಇದರ ನೇತೃತ್ವದಲ್ಲಿ ರೈತರು ಈ ಅಪೂರ್ವ ಮೋರ್ಚಾವನ್ನು ಕೌನ್ಸಿಲ್‌ಗೆ ಕೊಂಡೋಯ್ಯುವುದನ್ನು ನಿರ್ಧರಿಸಿದರು. ಈ ನಿರ್ಧಾರದಂತೆ ದಿ: ೧೦ರಂದು ಮೇಲೆ ಹೇಳಿದ ಸ್ಥಳದ ಎಲ್ಲ ರೈತರು ಮೆರವಣಿಗೆ ಮೂಲಕ ಮಧ್ಯಾಹ್ನ ೧.೨೦ಕ್ಕೆ ಆರಂಭವಾದ ಮೈದಾನದಲ್ಲಿ ಸೇರಿದರು. ಕೊಂಕಣ ಭಾಗದಿಂದ ಬಂದ ರೈತ ಬಂಧುಗಳು ವಿಕ್ಟೋರಿಯಾ ಡಾಕ್‌ನಿಂದ ನೇರ ಬೋರಿಬಂದರ ಎದುರಿನ ಮೈದಾನಕ್ಕೆ ಆಗಮಿಸಿದರು. ಇತರೆ ರೈತರುಗಳ ಗುಂಪು ಪರಳನ ಕಾಮಗಾರ ಮೈದಾನದಲ್ಲಿ ಜಮಾಯಿಸಿದರು. ನಂತರ ಅಲ್ಲಿಂದ ಬೃಹತ್ ಮೆರವಣಿಗೆ ಮೂಲಕ ಆಝಾದ ಮೈದಾನಕ್ಕೆ ಆಗಮಿಸಿದರು. ಈ ಮೆರವಣಿಗೆಯಲ್ಲಿ 'ಗೌಡಕೀ ಪದ್ಧತಿ ನಷ್ಟಗೊಳಿಸಿ', 'ಸಾಹುಕಾರಶಾಹಿಗೆ ಹಿಡಿಮಣ್ಣು ಹಾಕಿರಿ', 'ರೈತರಿಗೆ ಜಯವಾಗಲಿ' ಎಂಬ ಮುಂತಾದ ಆಶಯಗಳ ದೊಡ್ಡದೊಡ್ಡ ಬಾವುಟಗಳು ಹಾರಾಡುತ್ತಿದ್ದವು. ಡಾ. ಬಾಬಾಸಾಹೇಬ ಅಂಬೇಡ್ಕರರ ಜಯಕಾರಗಳೂ ಮೊಳಗುತ್ತಿದ್ದವು. ಇಂಥ ಅದ್ಭುತ ಮೆರವಣಿಗೆಗೆ ಕಾಳಬಾದೇವಿ ಮಾರ್ಗ ಮೂಲಕ ಬರುತ್ತಿದ್ದಾಗ ಅಲ್ಲಿಯ ವ್ಯಾಪಾರಿಗಳ ಜಂಘಾಬಲವೇ ಉಡುಗಿತು. ಕಾಂಗ್ರೆಸ್‌ನಂಥ ಅಧಿಕಾರರೂಢ ಸತ್ತೆಯ ವಿರುದ್ಧ ರೈತರ ಈ ಸಂಘಟಿತ ಬಂಡಾಯ ಕಂಡು ಅವರಿಗೆಲ್ಲ ಭೀತಿ ಮತ್ತು ಅಚ್ಚರಿಯೆನಿಸಿದ್ದಲ್ಲಿ ವಿಶೇಷವೇನಿಲ್ಲ. ಈ ಮೆರವಣಿಗೆ ಆಝಾದ ಮೈದಾನಕ್ಕೆ ಬಂತು ಅದೇ ಚೌಪಾಟಿ ಮಾರ್ಗದಿಂದ ಮುಂಬೈನ 'ಬಾಲೂ' ಜನರ ಮೂರನೇ ಮೆರವಣಿಗೆಯು ಈ ರೈತರ ಮೆರವಣಿಗೆಯಲ್ಲಿ ಸೇರಿತು. ಅದಲ್ಲದೆ ಠಾಣೆ–ಕಲ್ಯಾಣ ಮುಂತಾದ ಸ್ಥಳಗಳ ರೈತರು ವಿವಿಧ ದಾರಿಗಳ ಮೂಲಕ ಆಝಾದ ಮೈದಾನಕ್ಕೆ ಬಂದು ಕೂಡಿದರು. ಡಾ. ಭೊಯಿರ ಅವರ ನೇತೃತ್ವದಲ್ಲಿ ಠಾಣೆ ಜಿಲ್ಲೆಯೊಳಗಿನ ರೈತಬಾಂಧವರು ತೀರ ನಸುಕಿನಲ್ಲೇ ದಾದರ ಮೂಲಕ ಕಾಮಗಾರ ಮೈದಾನದಲ್ಲಿ ಹಾಜರಗಿದ್ದರು. ಇದೇ ಬಗೆಯಲ್ಲಿ ಈ ಸಮೂಹವು ವೃದ್ಧಿಗೊಳ್ಳುತ್ತ ಇಪ್ಪತ್ತು ಇಪ್ಪತ್ತೈದು ಸಾವಿರಸಂಖ್ಯೆ ತಲುಪಿತು. ಈ ರೈತ ಬಂಧುಗಳು ಆಝಾದ ಮೈದಾನದಲ್ಲಿ ಮೆರವಣಿಗೆಗೆ ಸಿದ್ಧರಾದರು. ಈ ಬೃಹತ್ ಮೆರವಣಿಗೆಯ ಶಿಸ್ತನ್ನು ಕಾಪಾಡಲು ಭಾಯಿ ಚಿತ್ರೆ, ಯಾಜ್ಞಿಕ, ಪರುಳೇಕರ, ಪೋತನೀಸ, ಪ್ರಧಾನ, ಮಿರಜಕರ, ಬಾಲಜಿ ಪೇಂಡಸೆ, ಸುರಬಾ ಟಿಪಣೀಸ, ಮಡಕೆಬುವಾ ಜಾಧವ, ರಾಜಾರಾಮ ಭೋಳೆ, ಡಾ. ಭೋಯಿರ ಮುಂತಾದವರು ಸಿದ್ಧರಾಗಿದ್ದರು.

---

ಜನತಾ: ೧೫ ಜನೆವರಿ ೧೯೩೮

ಅವರು ಸೇರಿದ ರೈತರಿಗೆ ಇಂದಿನ ಐತಿಹಾಸಿಕ ರೈತಮೋರ್ಚಾ ವಿಷಯ ಕುರಿತು ಸವಿವರ ಮಾಹಿತಿ ನೀಡಿದರು. ಅಷ್ಟರಲ್ಲಿ ಯಾವ ಮಾರ್ಗದಿಂದ ಈ ಮೆರವಣಿಗೆ ಸಾಗಬೇಕು ಎಂಬುದರ ಪೋಲಿಸ ಕಮಿಷನರ ಅವರ ಆದೇಶ ತೆಗೆದುಕೊಂಡು ಎ. ಡಿವಿಜನ್ ಪೋಲೀಸ್ ಇನ್ಸ್‌ಪೆಕ್ಟರ್ ಆಗಮಿಸಿದರು. ಪೋಲಿಸರು ಈ ಮೆರವಣಿಗೆಯು ಕೌನ್ಸಿಲ್‌ಹಾಲ್ ಮೂಲಕ ಹೋಗಬಹುದು, ಆದರೆ ಎಲ್ಲೂ ನಿಲ್ಲಕೂಡದೆಂದು ಮತ್ತು ನೇರ ಆಝಾದ ಮೈದಾನ ಸೇರಬೇಕೆಂದು ಕಾರ್ಯಕರ್ತರಿಗೆ ತಿಳಿಸಿದರು. ಈ ವಿಷಯವಾಗಿ ರೈತ ಮುಂದಾಳುಗಳ ಜೊತೆಗೆ ಸಾಕಷ್ಟು ಚರ್ಚೆಯಾಗಿ ಕೊನೆಗೆ ಪೋಲಿಸರ ಮಾತನ್ನೇ ಕೇಳಬೇಕಾಯಿತು. ಕೊನೆಪಕ್ಷ ಈ ಮೆರವಣಿಗೆ ಪೈಕಿ ಕನಿಷ್ಠ ಇಪ್ಪತ್ತು ಪ್ರತಿನಿಧಿಗಳು ಮಾನ್ಯ ಮುಖ್ಯಪ್ರಧಾನರನ್ನು ಭೇಟಿಯಾಗಿ ರೈತರ ಅನಿಸಿಕೆಗಳನ್ನು ತಿಳಿಸುವ ಪರವಾನಗಿ ಕೇಳಲಾಯಿತು. ಪರವಾನಗಿಯನ್ನು ಪೋಲಿಸ್ ಕಮಿಷನರ್ ತಕ್ಷಣ ನೀಡಿದರು. ಈ ಬಗೆಯಲ್ಲಿ ಮೆಯೋ ರಸ್ತೆಯ ಮೂಲಕ ಕುಪರೇಜ ಹತ್ತಿರವಾಗಿ ಕೌನ್ಸಿಲ್ ಹಾಲ್ ಸುತ್ತಿ ಮ್ಯುಝಿಯಮ್ ಮಾರ್ಗವಾಗಿ ೨೦–೨೫ ಸಾವಿರ ಸಂಖ್ಯೆಯ ಬೃಹತ್ ರೈತರ ಮೆರವಣಿಗೆಯು ಗಗನಭೇದಿ ಜಯಘೋಷಗಳನ್ನು ಹೇಳುತ್ತ ಸಂಜೆ ಐದರ ಹೊತ್ತಿಗೆ ಆಝಾದ ಮೈದಾನಕ್ಕೆ ಬಂತು. ಈ ಮೆರವಣಿಗೆಯ ಶಿಸ್ತು ಮತ್ತು ಸಂಘಟನೆ ಕಂಡು ಯಾರಿಗಾದರೂ ಕುತೂಹಲ ಎನಿಸದೆ ಇರದು. ನಮಗನಿಸುವುದೆಂದರೆ, ಕಾನೂನು ಮತ್ತು ಸುವ್ಯವಸ್ಥೆ ಖಾತೆಯ ಸರ್ವ ಅಧಿಕಾರಿಗಳು, ಮುಂಬೈನ ಎಲ್ಲ ಪೋಲಿಸ್‌ರು ಮೆರವಣಿಗೆಯ ಸಂದರ್ಭದಲ್ಲಿ ಭದ್ರವಾದ ಬಂದೋಬಸ್ತ ಮಾಡಿದ್ದರು. ಇಂತಹದ್ದೇ ಭದ್ರತೆಯನ್ನು ೧೯೩೧ರಲ್ಲಿ ಕಾಂಗ್ರೆಸ್ ಕರೆಕೊಟ್ಟಿದ್ದ ಕಾನೂನು ಭಂಗ ಚಳುವಳಿಯಲ್ಲಿ ನೌಕರಶಾಹಿ ಸರಕಾರವು ಇಟ್ಟಿದ್ದರಿಂದ ಕಾಂಗ್ರೆಸ್ನ ಕಿತ್ತಳೆ ಬಣ್ಣದ ವೇಷಧಾರಿ ದೇಶಸೇವಿಕೆಯರು ಈ ಪೋಲಿಸರ ಭದ್ರತೆ ಕಂಡು "ಈ ಅನ್ಯಾಯದ ಸರಕಾರ ಇರಕೂಡದು" ಎಂದು ಹಾಡುತ್ತಿದ್ದರು. ಈಗ ಅದೇ ಹಾಡಿನ ಸೂತ್ರಧಾರರು ಕಡುಬಡವರ ಶಾಂತತೆಯ, ಯೋಗ್ಯ ಮತ್ತು ನ್ಯಾಯಯುತ ಬೇಡಿಕೆಯ ಮೋರ್ಚಾಕ್ಕಾಗಿ ಪೋಲಿಸರ ತೀವ್ರಭದ್ರತೆಯನ್ನಿಡಲು ಕಾರಣಿಭೂತರಾಗಿರುವುದನ್ನು ಕಂಡು ಯಾವುದೇ ಸಾಮಾನ್ಯನಿಗೆ ಅಚ್ಚರಿಯೆನಿಸದೆ ಇರದು. ಅದರಂತೆ ಈ ರೈತರ ಬೃಹತ್ ಮೆರವಣಿಗೆ ಕೌನ್ಸಿಲ್ ಹಾಲ್ ಮೂಲಕ ಹೋಗುತ್ತಿರುವಾಗಲೂ ಈ ಬಡವರ ಬಂಧುವೆಂದು ಕರೆಸಿಕೊಳ್ಳುವ ಕಾಂಗ್ರೆಸ್ ಸರಕಾರಕ್ಕೆ ಅವರತ್ತ ಸಹಾನುಭೂತಿಯಿಂದಲೂ ನೋಡಬೇಕೆಂದೆನಿಸಲಿಲ್ಲ. ಇದು ಕಾಂಗ್ರೆಸ್ಸಿಗರ ವರ್ತನೆ ಮತ್ತು ರೈತರಪರ ಕಾಳಜಿ ಎಂಬ ಢೋಂಗಿ ತನದ ಖಚಿತವಾದ ಸಾಕ್ಷಿಯಾಗಿದೆ.

ಕೊನೆಗೆ ಮೆರವಣಿಗೆ ಆಝಾದ ಮೈದಾನಕ್ಕೆ ಬಂದ ನಂತರ ಸ್ವತಂತ್ರ ಮಜೂರ ಪಕ್ಷದ ನೇತಾರ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಈ ಮೊದಲು ಖೇರ ಅವರು ರೈತರ ಇಪ್ಪತ್ತು ಪ್ರತಿನಿಧಿಗಳಿಗೆ ಸಂಜೆ ೭ಗಂಟೆಗೆ ಸಂದರ್ಶನ ನೀಡುವ ಭರವಸೆ ಕೊಟ್ಟಿದ್ದರು. ಆಝಾದ ಮೈದಾನದಲ್ಲಿ ರೈತರ ಸಭೆಯಲ್ಲಿ ಭಾಯಿಚಿತ್ರೆ ಅವರ ಭಾಷಣ ನಡೆಯಿತು. ಭಾಯಿ ಚಿತ್ರೆಯವರಂತೆ ಕಾ. ಯಾಜ್ಞಿಕ, ದ.ವಿ. ಪ್ರಧಾನ, ಲಾಲಜಿ ಪೇಂಡಸೆ, ಮಿರಜಕರ, ಟಿಪಣೀಸ ಮುಂತಾದವರ ಜೋರಿನ ಭಾಷಣಗಳು ಆದವು. ಅವರ ಭಾಷಣಗಳ ಬಳಿಕ ಡಾ. ಬಾಬಾಸಾಹೇಬ ಅಂಬೇಡ್ಕರರು ಮಾತನಾಡಿದರು.

ಡಾ. ಬಾಬಾಸಾಹೇಬ ಅಂಬೇಡ್ಕರರು ಮಾತನಾಡಲು ಏಳುತ್ತಿದ್ದಂತೆಯೇ ಅಂಬೇಡ್ಕರ ಹೆಸರಿನ ಜಯಘೋಷಗಳು ಮೊಳಗಿದವು. ಸ್ಪಷ್ಟ ಮಾತುಗಳಲ್ಲಿ ಅವರು ಹೇಳಿದರು.

ಕಷ್ಟಾಳುಗಳ ಸಂಘಟನೆ ಮಾಡುವುದಾದರೆ ಅಲ್ಲಿ ಜಾತಿಭೇದ, ಧರ್ಮಬೇಧಗಳು ಮೂಲತಃ

ಬರಲೇಬಾರದು. ಈ ವರ್ಗವು ಮೊದಲೇ ಆರ್ಥಿಕ ಬಿಕ್ಕಟ್ಟಿನ ಒತ್ತಡದಲ್ಲಿ ನಲುಗಿ ಹೋಗಿದೆ. ಇಂಥ ಪರಿಸ್ಥಿತಿಯಲ್ಲಿ ಯಾವ ಸಂಘಟನೆ ಘಟಿಸಿತೋ ಅದರಲ್ಲಿ ನಾನು ಹೇಳಿದ ವಿಷಮತೆ ಕೂಡದು ಮತ್ತು ನಾನು ಪ್ರತಿಪಾದಿಸುವಂಥ ಈ ತರದ ಸರ್ವ ಜಾತಿಗಳ ಕಟ್ಟಾಳು ವರ್ಗದ ಸಂಘಟನೆ ಕಂಡು ನನಗೆ ಸಂತೋಷವಾಗುತ್ತಿದೆ. ಆದಕಾರಣ ಇಂದಿನ ದಿನವನ್ನು ದೊಡ್ಡ ಭಾಗ್ಯದ ದಿನವೆಂದು ಭಾವಿಸುತ್ತೇವೆ. ಯಾಕೆಂದರೆ ಇವತ್ತಿನ ಈ ಸಂಘಟನೆ ಸ್ವಾರ್ಥವನ್ನು ತ್ಯಜಿಸಿದ ಶಕ್ತಿಯ ಆಧಾರದಲ್ಲಿ ನಿಂತಿದೆ. ಅದಕ್ಕೆಂದೆ ಶ್ರಮಜೀವಿ ವರ್ಗವು ಶ್ರೀಮಂತ ವರ್ಗದ ಅಂದರೆ ಕಾಂಗ್ರೆಸ್ಸಿನಂಥವರ ಮೇಲೆ ನಂಬಿಕೆಯಿಟ್ಟು ಪ್ರಯೋಜನವಿಲ್ಲ. ನಿಮಗೆ ಗೊತ್ತೆ ಇದೆ, ಈ ಜಗತ್ತಿನಲ್ಲಿ ಯಾರ ಮನೆ ಬೆಂಕಿಯಲ್ಲಿ ಧಗಧಗಿಸುತ್ತದೆ, ಯಾರಮನೆಗೆ ಬೆಂಕಿಯನ್ನಿಡಲಾಗುತ್ತದೆ ಮತ್ತು ಯಾರು ಬೆಂಕಿಯಿಡುತ್ತಾರೋ ಅವರ ಜೊತೆ ಪರಸ್ಪರ ಸಹಕಾರದಿಂದ ಇರಲು ಸಾಧ್ಯವೇ? ಸಾಮಾನ್ಯವಾಗಿ ಪ್ರಾಣಿಗಳತ್ತ ದೃಷ್ಟಿನೆಟ್ಟು ಗಮನಿಸಿ ಮುಂಗುಸಿ-ಹಾವು ಒಂದೆಡೆ ಬದುಕಲು ಸಾಧ್ಯವೇ? ಬೆಕ್ಕು ಇಲಿ ಜೊತೆಗಿರುತ್ತವೆಯೆ? ಈ ರೀತಿ ನಿಸರ್ಗದ ವಿರುದ್ಧವಾಗಿ ಸೃಷ್ಟಿಸಲು ಹೊರಟವರನ್ನು ಎಂದಾದರು ನಂಬಲು ಬರುತ್ತದೆಯೆ? ನಾವು ಅದೇ ದೃಷ್ಟಿಕೋನದಿಂದ ಶ್ರೀಮಂತರನ್ನು ಬೆಂಬಲಿಸುವ ಕಾಂಗ್ರೆಸ್ಸಿನತ್ತ ಗಮನಕೊಡಬೇಕು.

ಮುಂಬೈ ಅಸೆಂಬ್ಲಿಯ ಕಾಂಗ್ರೆಸ್ ಸದಸ್ಯರನ್ನೇ ನೋಡಿರಿ. ಬಹುತೇಕ ಆಯ್ಕೆಗೊಂಡವರೆಲ್ಲರೂ ಸಾಹುಕಾರ, ಜಮೀನದಾರ, ಪಾಟೀಲ ಮತ್ತು ಶ್ರೀಮಂತರೆ ಆಗಿದ್ದಾರೆ. ಅವರು ತಮ್ಮ ಹಿತಾಸಕ್ತಿ ವಿರುದ್ಧ ಕಾಂಗ್ರೆಸ್ಸಿಗೆ ಏನನ್ನೂ ಮಾಡಲು ಬಿಡರು. ಅವರಲ್ಲಿ ಅನೇಕರ ಸಾವುಕಾರಿಕೆ ೫೦ಸಾವಿರ ಮೇಲ್ಪಟ್ಟಿದೆ. ಇಂಥ ಬಡ್ಡಿವ್ಯವಹಾರಸ್ಥರು, ತಮ್ಮ ಧನ ವೃದ್ಧಿಸುವವರು ನಮ್ಮಂಥ ಶ್ರಮಜೀವಿ ವರ್ಗಗಳ ಕಲ್ಯಾಣವನ್ನು ಹೇಗೆ ಮಾಡಿಯಾರು? ಒಂದು ವಿಷಯ ನಿಮ್ಮ ಮನದಲ್ಲಿ ಪಕ್ಕಾಮಾಡಿಕೊಳ್ಳಿರಿ, ಈ ಅಸೆಂಬ್ಲಿಗೆ ಕಾಂಗ್ರೆಸ್ಸಿನ ಕೃಪೆಯಿಂದ ಆಯ್ಕೆಗೊಂಡ ಸದಸ್ಯರು ನಿಮ್ಮ ಹಿತಸಂಬಂಧದ ಯಾವ ಯೋಚನೆಯನ್ನೂ ಮಾಡಲಾರರು. ನಾವು ೧೯೩೭ನೇ ವರ್ಷದಲ್ಲಿ ಈ ಕಾಂಗ್ರೆಸ್ಸಿನ ಪ್ರತಿನಿಧಿಗಳನ್ನು ಆರಿಸಿ ತಂದಾಗ ಯಾವರೀತಿ ಕಾಲು ಹಿಡಿಯುವುದನ್ನು ಮಾಡುತ್ತಿದ್ದರು. ಇದನ್ನು ಲಕ್ಷ್ಯದಲ್ಲಿಡಿರಿ. ನಿಮ್ಮ ಹಿತವನ್ನು ಮೊದಲು ಕಾಪಾಡುತ್ತೇವೆ, ನಿಮ್ಮ ಸುಖಕ್ಕೆ ಕಾಂಗ್ರೆಸ್ಸು ಫಕೀರತ್ವ ಪಡೆದರೂ ನಡೆದೀತು, ಇದನ್ನು ಗಮನದಲ್ಲಿಟ್ಟು ಕಾಂಗ್ರೆಸ್ಸಿಗೆ ಮತ ನೀಡಿರಿ. ಹೀಗೆ ಹೇಳುವ ಮತ್ತು ಆಯ್ಕೆಗೊಂಡ ನಂತರ ಈ ಪ್ರತಿನಿಧಿಗಳು ನಿಮ್ಮತ್ತ ಹಣಿಕಿಹಾಕಿಯೂ ನೋಡುವುದಿಲ್ಲ. ಅದಕ್ಕಾಗಿ ನಾನು ಹೇಳುವುದಿಷ್ಟೆ, ಈ ಬಾಯಿಬಡುಕರನ್ನು ಗಮನಕ್ಕೆ ತೆಗೆದುಕೊಳ್ಳಲೇಬಾರದು.

ಇಂಥ ಮೋಸಗಾರರಿಗೆ ಇನ್ಮುಂದೆ ಒದ್ದು ಬುದ್ಧಿ ಕಲಿಸಬೇಕು. ನಮ್ಮ ನಿಜವಾದ ಹಿತ ಸಾಧಿಸುವವರು ಯಾರೆಂಬುದನ್ನು ಆಯ್ಕೆ ಮಾಡುವಾಗ ಎಚ್ಚರವಹಿಸಿರಿ. ನಿಮ್ಮಲ್ಲಿರುವ ಬುದ್ಧಿ ಬಳಸಿ ವಿವೇಕದಿಂದ ವರ್ತಿಸಿರಿ. ನಿಮ್ಮ ಖರೇ ಹಿತಚಿಂತಕರಾರು, ಯಾವ ಪಕ್ಷ ನಿಮಗಾಗಿ ಪ್ರಾಣದ ಹಂಗು ತೊರೆದು ಸಂಘರ್ಷಕ್ಕಿಳಿಯಲು ಸಮರ್ಥವಿದೆ, ಇದನ್ನು ನೀವೇ ಆಯ್ಕೆ ಮಾಡಿರಿ.

ನಿಜವಾಗಿ ಪ್ರಪಂಚದಲ್ಲಿ ಎರಡೇ ಜಾತಿಗಳಿವೆ. ಮೊದಲನೆಯದು ಸಿರಿವಂತರದ್ದು, ಎರಡನೆಯದ್ದು ಬಡವರದ್ದು. ಇದಲ್ಲದೆ ಮೂರನೆಯ ವರ್ಗ ಮಧ್ಯಮವರ್ಗ. ಜಗತ್ತಿನ ಯಾವುದೇ ಒಂದು ಉಜ್ವಲರೂಪದ ಚಳುವಳಿಯ ನಾಶಕ್ಕೆ ಇದೇ ವರ್ಗ ಕಾರಣೀಭೂತವಾಗುತ್ತಿರುತ್ತದೆ. ಈ ದೇಶದಲ್ಲಿ ಕಷ್ಟಪಟ್ಟು ಹೊಟ್ಟೆತುಂಬಿಸಿಕೊಳ್ಳುವ ಬಂಧುಗಳು ಶೇಕಡಾ ೮೦ರಷ್ಟಿದ್ದಾರೆ. ಈ ಸಂಖ್ಯೆ ಎದುರಿಟ್ಟು ನೋಡಿದಾಗ ಇತರ ವರ್ಗ ಅದೆಷ್ಟು ಅಲ್ಪ ಸಂಖ್ಯಾತರು ಎಂಬುದು ಗೋಚರವಾಗುತ್ತದೆ. ಆದರೆ ಕೇವಲ ಅಜ್ಞಾನದಿಂದ ಮತ್ತು ವರಿಷ್ಠರೆಂದು ಕರೆಯಿಸಿಕೊಳ್ಳುವವರ ಕೈಗೆ ಅಧಿಕಾರ ಇರುವುದರಿಂದ ನಮ್ಮಂಥ ಬಹುಸಂಖ್ಯಾತ

ಜನತೆಗೆ ಅಡ್ಡಿ ಆತಂಕಗಳನ್ನು ತರುತ್ತಾರೆ. ಆದರೆ ತಾವೆಲ್ಲ ಎಚ್ಚರಗೊಂಡಿದ್ದೀರಿ, ನಿಮ್ಮ ಹಿತ ಯಾವುದರಲ್ಲಿ ಅಡಗಿದೆಯೆಂಬುದನ್ನು ಸಂಘಟನೆಯ ಶಕ್ತಿಯಿಂದ ಮತ್ತು ಸ್ವಾವಲಂಬನೆ ಮೂಲಕ ಅರಿಯಲು ಯತ್ನಿಸುತ್ತಿದ್ದೀರಿ. ಹೀಗಾದಾಗ ಕ್ಷಣಾರ್ಧದಲ್ಲಿ ಅಧಿಕಾರವನ್ನು ಕೈಗೆತ್ತುಕೊಳ್ಳಬಹುದು. ರಾಷ್ಟ್ರೀಯ ಕಾಂಗ್ರೆಸ್ಸಿನ ಹಿಂದಿನ ಕಾಯಿದೆಭಂಗ ಚಳುವಳಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸ್ಪಷ್ಟವಾಗುವ ಸಂಗತಿಯೆಂದರೆ ಶ್ರಮಜೀವಿಗಳ ಸಹಾಯದಿಂದಲೇ ಕಾಂಗ್ರೆಸ್ ತನ್ನ ಹೋರಾಟವನ್ನು ಇಷ್ಟೊಂದು ಪ್ರಭಾವಪೂರ್ಣವಾಗಿ ನಡೆಸಿತ್ತು. ಈ ಶ್ರಮಜೀವಿಗಳಿಗೆ ಅಧಿಕಾರರೂಢ ಕಾಂಗ್ರೆಸ್ಸಿಗರು ಆಗ ಸಾಕಷ್ಟು ಆಸೆಯ ಭರವಸೆಗಳನ್ನಿತ್ತಿದ್ದರು. ಕಾಂಗ್ರೆಸ್ ಕೈಗೆ ಅಧಿಕಾರ ಬಂದಕ್ಷಣ ಮೊಟ್ಟಮೊದಲಿಗೆ ಬಡವ, ಶ್ರಮಜೀವಿ ವರ್ಗಗಳ ಹಿತ ರಕ್ಷಣೆಯ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳಿದ್ದರಂತೆ. ನಿಮಗದು ಎಲ್ಲಾದರು ಕಾಣುತ್ತಿದೆಯೆ? ಇವತ್ತು ಅವರ ಕೈಗೆ ಅಧಿಕಾರವಿದೆ. ಆದರೆ ಯಾವುದೇ ಬಗೆಯ ಕೆಲಸವನ್ನು ದೊಡ್ಡ ಆಸ್ಥೆಯಿಂದ ಅಥವಾ ತತ್‌ಕ್ಷಣ ಮಾಡಿಲ್ಲ. ಅವರ ಪ್ರತಿನಿಧಿಗಳು ಮುಂಬೈ ಅಸೆಂಬ್ಲಿಯಲ್ಲಿ ಬಹುಸಂಖ್ಯೆಯಲ್ಲಿದ್ದಾರೆ. ಬಹುಮತದಿಂದ ನಿಮ್ಮ ಹಿತದ ಸಂಬಂಧದಲ್ಲಿ ಬೇಕಾದಷ್ಟು ಕೆಲಸ ಕಾರ್ಯ, ಕಾನೂನು ಮಾಡಲು ಅಶಕ್ಯವೇನಿಲ್ಲ. ನಮ್ಮ ಸ್ವತಂತ್ರ ಮಜೂರ ಪಕ್ಷದ ಕೇವಲ ೧೪–೧೫ ಸದಸ್ಯರಿದ್ದಾರೆ. ಇಷ್ಟು ಕಡಿಮೆಸಂಖ್ಯೆಯ ಸದಸ್ಯರ ಬಲದಿಂದ ನಿಮ್ಮ ಹಿತದ ಕಾನೂನು ಪಾಸುಮಾಡಿಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ಲಕ್ಷ್ಯದಲ್ಲಿಡಿರಿ, ಈ ಕಾಂಗ್ರೆಸ್‌ನ ಬಂಡವಾಳದಾರರಿಗೆ ತಮ್ಮ ಮತ ನೀಡಿ ಆರಿಸಿ ತರಬೇಡಿರಿ. ಇವತ್ತು ಹೇಗೆ ಸಂಘಟಿತರಾಗಿ ಇಲ್ಲಿ ಆಗಮಿಸಿದ್ದೀರೋ ಹಾಗೆಯೇ ಜಾತಿಭೇದ–ಧರ್ಮಭೇದ ಮರೆತು ಸಂಘಟನೆ ಬಲಗೊಳಿಸಿರಿ.

ಕೊಂಕಣ ಪ್ರಾಂತದ ಸ್ಥಿತಿ ಗಮನಿಸಿದರೆ, ಗೌಡ ಸಾವುಕಾರ ಮುಂತಾದ ಜನರು ಕೇವಲ ಸಾವಿರ ಎರಡು ಸಾವಿರ ಸಂಖ್ಯೆಯಲ್ಲಿದ್ದಾರೆ. ನಿಮ್ಮಂಥ ಕಡುಕಷ್ಟ ಅನುಭವಿಸುವ ಜನರು ೧೩ ಲಕ್ಷದಷ್ಟಿದ್ದಾರೆ. ಇಂದು ಸಾವಿರ ಎರಡು ಸಾವಿರ ಸಂಖ್ಯೆಯ ಜನ ನಮ್ಮಂಥ ೧೩ಲಕ್ಷ ಜನ ಸಮುದಾಯವನ್ನು ಆಳುತ್ತಿದ್ದಾರೆ. ಇದರ ಮೂಲ ಕಾರಣ ನಮ್ಮ ದಾರುಣ ಬಡತನವೇ ಸರಿ. ಮುಷ್ಠಿಯಷ್ಟು ಶ್ರೀಮಂತರು ನಿಮ್ಮನ್ನು ಹಿಂಡುತ್ತಿದ್ದಾರೆ. ನಮ್ಮಲ್ಲಿ ಈ ಶೋಷಣೆ ವಿರುದ್ಧ ಹೋರಾಟ ನಡೆಸುವ ಶಕ್ತಿ ಉಳಿದಿಲ್ಲ. ನಿಮ್ಮ ಈ ಅಸಹ್ಯ ಅವಸ್ಥೆಗೆ ಕಾರಣರಾದ ಇವರಿಗೆ ಇನ್ಮುಂದೆ ಯಾವುದೇ ಪ್ರಕಾರದ ಸಹಕಾರ ನೀಡಬೇಡಿರಿ. ಮತ್ತು ಇದನ್ನು ಗಮನದಲ್ಲಿಡಿರಿ, ಕಾಂಗ್ರೆಸ್ಸು ಈ ಸಿರಿವಂತರಿಗೆ ನೋವುಂಟು ಮಾಡಿ ನಿಮ್ಮ ಹಿತಕಾಪಾಡಲು ಸಾಧ್ಯವಿಲ್ಲ. ಅದರಂತೆ ಇಲ್ಲಿ ಸೇರಿದ ವಿವಿಧ ಜಾತಿಗಳ ನೀವು ತಮ್ಮದೇ ಜಾತಿಗಳ ಬಗೆಬಗೆಯ ಸಂಘಟನೆ ಕಟ್ಟಿಕೊಂಡಿದ್ದೀರಿ ಮತ್ತು ಕಾರ್ಯನಿರ್ವಹಿಸುತ್ತಿದ್ದೀರಿ. ಆ ಕಾರಣ ಶ್ರಮಜೀವಿ ಎಂದು ಪ್ರತ್ಯೇಕ ಒಂದು ವರ್ಗದ ಒಟ್ಟುಗೂಡಿದಂತಹ ಒಂದು ಸಂಘಟನೆಯಿರಲಿಲ್ಲ. ಆದರೆ ಆ ಭಾಗ್ಯ ಎದುರು ಕಾಣುತ್ತಿದೆ. ಇದು ಅತ್ಯಂತ ಆನಂದದ ಸಂಗತಿಯಾಗಿದೆ.

ಶ್ರೀಮಂತರಿಗೆ ನೆರವು ನೀಡುವ ಕಾಂಗ್ರೆಸ್ಸಿಗೆ ಸಹಕಾರ ನೀಡಿದರೆ ನಮ್ಮ ಯಾವುದೇ ಹಿತವು ಸಾಧ್ಯವಿಲ್ಲ. ಇವತ್ತಿನ ಪರಿಸ್ಥಿತಿಯನ್ನೇ ತಮ್ಮೆದುರು ಇಡುತ್ತಿದ್ದೇನೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ನಾವು ಸ್ವತಂತ್ರ ಮಜೂರ ಪಕ್ಷದಪರ ಕಾಂಗ್ರೆಸ್ ಒಟ್ಟಿಗೆ ಸಂಘರ್ಷಕ್ಕಿಳಿದು ಚುನಾವಣೆ ಹೋರಾಟ ನಡೆಸಿದೆವು. ಕೊಂಚ ಯಶಸ್ಸೂ ದೊರೆಯಿತು. ಅದರಂತೆ ಕಮ್ಯುನಿಷ್ಟ್ ಮುಂತಾದ ಉದ್ದಾಮ ಪಕ್ಷಗಳ ಮುಂದಾಳುಗಳು ಯೋಚಿಸಿದ್ದರೆ ಅವರಿಗೂ ಹೆಚ್ಚುಕಡಿಮೆ ಯಶಸ್ಸು ದೊರೆತು, ನಮಗೆ ಅಸೆಂಬ್ಲಿಯಲ್ಲಿ ನೆರವು ಸಿಗಬಹುದಿತ್ತು. ಆದರೆ ಇನ್ನು ಮುಂದಾದರು ಕರ್ತವ್ಯಗಳನ್ನು ಪೂರೈಸಿಕೊಳ್ಳಲು ದುರ್ಲಕ್ಷ ಕೂಡದು. ಹಾಗೆಯೇ ನಮ್ಮ ಕಮ್ಯುನಿಸ್ಟ್ ಮಿತ್ರರಿಗೆ ಎರಡು ಮಾತು ಹೇಳುವುದು ಯೋಗ್ಯವೆಂದೇ

ಭಾವಿಸಿದ್ದೇನೆ. ನಾನು ಈ ಕಮ್ಯುನಿಸ್ಟ್ ತತ್ವಜ್ಞಾನವುಳ್ಳ ಇಲ್ಲಿಯ ಎಲ್ಲ ಪುಢಾರಿಗಳಿಗಿಂತ ಹೆಚ್ಚಿನ ಪುಸ್ತಕಗಳನ್ನು ಅಧ್ಯಯನ ಪೂರ್ಣವಾಗಿ ಓದಿದ್ದೇನೆ ಎಂದು ಖಚಿತವಾಗಿ ಹೇಳಬಲ್ಲೆ. ಈ ಕೃತಿಗಳಿಂದ ನನಗನಿಸುವುದೆಂದರೆ, ಕಮ್ಯುನಿಸ್ಟ್ ತತ್ವಜ್ಞಾನವು ಅದೆಷ್ಟೋ ಸುಂದರವಾಗಿದ್ದರೂ ಅದರ ಪ್ರಯೋಜನ ಎಷ್ಟರಮಟ್ಟಿಗೆ ಸಾಧ್ಯವಾದೀತು ಎಂಬುದನ್ನು ನೋಡಬೇಕು. ಆ ದೃಷ್ಟಿಯಿಂದ ಕಾರ್ಯನಿರ್ವಹಿಸಿದರೆ ರಶಿಯನ್ನರಿಗೆ ದೊರಕಿದ ಯಶಸ್ಸಿಗೆ ಸಾಕಷ್ಟು ಶ್ರಮ ಮತ್ತು ಕಾಲಾವಧಿ ಬೇಕಾಯಿತಲ್ಲ ಅಷ್ಟು ಹಿಂದೂಸ್ಥಾನದೊಳಗಿನ ಪರಿಸ್ಥಿತಿಯಿಂದ ಬೇಕಾಗುವುದಿಲ್ಲ, ಹೀಗೆ ನನಗನಿಸುತ್ತದೆ. ಅದಕ್ಕೆ ನನಗೆ ಶ್ರಮಜೀವಿಗಳ ಚಳವಳಿಯ ಹೋರಾಟದ ಬಾಬತ್ತಿನಲ್ಲಿ ಕಮ್ಯುನಿಸ್ಟ್ ಸಿದ್ಧಾಂತ ಅಧಿಕ ಹತ್ತಿರದ್ದೆನಿಸುತ್ತದೆ. ನಮ್ಮ ಪರಿಸ್ಥಿತಿಯು ಹೇಗಿದೆಯೆಂದರೆ, ನಮ್ಮ ಬಳಿ ಹಣವಿಲ್ಲ. ನಮ್ಮ ಚಳವಳಿಯ ಪ್ರಚಾರವನ್ನು ಎಲ್ಲೆಡೆ ನಡೆಸಲು ಒಂದು ಪ್ರಭಾವ ಪೂರ್ಣ ದಿನ ಪತ್ರಿಕೆಯಿಲ್ಲ. ಸರಕಾರದ ಸಹಾಯ ಸಿಗುವ ಭರವಸೆಯಿಲ್ಲ. ಆದ್ದರಿಂದ ತಾವು ತಮ್ಮ ಸ್ವತಂತ್ರ ಹಾಗೂ ಸಂಘಟಿತರೂಪಿ ಸಂಘಟನೆ ಸಿದ್ಧಗೊಳಿಸಿರಿ. ನಿಮ್ಮ ಹೋರಾಟವು ಎಲ್ಲ ಭೇದಗಳ ಅಳಿಸಿಹಾಕಿ ಮುನ್ನಡೆಯಲಿ, ಅದಕ್ಕಾಗಿ ಸಿದ್ಧರಾಗಿರಿ, ಇಷ್ಟೇ ಕೋರಿಕೆ.

**ಮುಂಬೈ ಸರಕಾರದೆದುರು ಸಾದರ ಪಡಿಸಿದ ಬೇಡಿಕೆಗಳು: ಮೂಲಭೂತ ಬೇಡಿಕೆಗಳು**

೧) ರೈತ ಸಮುದಾಯಕ್ಕೆ ಸ್ವತಂತ್ರವಾಗಿ ಮತ್ತು ಸುಖಸಮಾಧಾನದಿಂದ ಬದುಕಲು ಅನುವಾಗುವಂತೆ ಜಮೀನಿನ ಸಾಗುವಳಿ ಮಾಡುವವರಿಗೆಯೆ ಶ್ರಮದ ಫಲ ದೊರಕಬೇಕು.

೨) ಜಮೀನಿನ ಸಾಗುವಳಿ ಮಾಡಿ ಅದರ ಮೇಲೆಯೇ ಬದುಕುವ ರೈತನಿಗೆ ನ್ಯಾಯ ದೊರಕಿಸಿಕೊಡ ಬೇಕಾದರೆ ಮತ್ತು ಅವರ ಆರ್ಥಿಕ ಹಿತವನ್ನು ಕಾಪಾಡುವ ವ್ಯವಸ್ಥೆ ಆಗಬೇಕಾದರೆ ಪಾಟೀಲ, ಇನಾಮದಾರರಂತಹ ಮಧ್ಯಸ್ಥರು ಇರಕೂಡದು.

೩) ಜಮೀನು ಉಳುವ ರೈತರ ಮೇಲೆ ಕರ ಅಥವಾ ಪಟ್ಟಿಹಾಕುವ ಮೊದಲು ಅವನಿಗೆ ಜೀವನ ನಡೆಸಲು ಯೋಗ್ಯ ಸವಲತ್ತು ನೀಡುವುದರ ಕುರಿತು ಸರಕಾರ ಯೋಚಿಸಿ ಅದು ತನ್ನ ಕರ್ತವ್ಯವೆಂದು ಭಾವಿಸಬೇಕು.

೪) ಅದರಂತೆ ರೈತನಿಗೆ ಕನಿಷ್ಠ ಕೂಲಿ ನೀಡುವ ಕಾನೂನು ತಂದು ರೈತರ ಹಿತ ಕಾಪಾಡುವುದೂ ಸಹ ಜನಪರ ಸರಕಾರದ ಕರ್ತವ್ಯವೇ ಆಗಿದೆ.

**ತತ್‌ಕ್ಷಣದ ಬೇಡಿಕೆಗಳು:**

೧) ಯಾವ ರೀತಿಯಾಗಿ ನಿಂತಂಥ ಭೂಕಂದಾಯ ಬಾಕಿಗಳಿಗೆ ರಿಯಾಯತಿ ನೀಡಲಾಗುತ್ತಿದೆಯೋ ಅದೇ ರೀತಿ ಇಲ್ಲಿತನಕ ನಿಂತ ಬಾಕಿಗಳಿಗೂ ತಕ್ಷಣ ರಿಯಾಯತಿ ಕೊಡಬೇಕು.

೨) ಹೊಲದ ಕನಿಷ್ಟ ಉತ್ಪನ್ನ ನಿರ್ಧರಿಸಿ ಅದಕ್ಕಿಂತ ಕಡಿಮೆ ಉತ್ಪನ್ನದ ಮೇಲೆ ತೆರಿಗೆಯನ್ನು ಒಟ್ಟಾಗಿ ರಿಯಾಯತಿಗೆ ಒಳಪಡಿಸಬೇಕು. ಕನಿಷ್ಟ ಉತ್ಪನ್ನಕ್ಕಿಂತ ಅಧಿಕವಿರುವ ಜಮೀನಿನ ಬೆಳವಣಿಗೆ ಆಧರಿಸಿ ಕಂದಾಯದ ಆಕರಣೆ ಮಾಡುವ ದೃಷ್ಟಿಯಿಂದ ಜಮೀನು ವಾರ್ಷಿಕ ಆದಾಯ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕು. ಅದೇ ರೀತಿ ನಿಗದಿತ ಬೆಲೆ ಇಳಿದುದರಿಂದ ಈ ತಿದ್ದುಪಡಿ ಆಗುವತನಕ ಅವಧಿಯೊಳಗೆ ಯಾರಿಗೆ ಪ್ರತಿವರ್ಷ ೬೫ರೂ ಅಥವಾ ಅದಕ್ಕಿಂತ ಕಡಿಮೆ ಭೂಕಂದಾಯ ಕೊಡಬೇಕಾಗಿ ಬರುತ್ತದೆಯೋ ಅವರ ಕಂದಾಯವನ್ನು ತಕ್ಷಣ ಶೇಕಡ ೫೦ರಷ್ಟು ಕಡಿಮೆಗೊಳಿಸಬೇಕು.

೩) ಗೌಡಕಿಪದ್ಧತಿ ಮತ್ತು ಇನಾಮದಾರ ಪದ್ಧತಿಗಳು ಆರ್ಥಿಕ ದೃಷ್ಟಿಯಿಂದ ಹಾನಿಕಾರಕವು ಮತ್ತು ಸಾಮಾಜಿಕ ದೃಷ್ಟಿಯಿಂದ ಅನ್ಯಾಯದ್ದಾಗಿರುವುದರಿಂದ ಈ ಪದ್ಧತಿಗಳನ್ನು ನಷ್ಟ ಪರಿಹಾರದೊಂದಿಗೆ ಅಥವಾ ನಷ್ಟ ಪರಿಹಾರ ರಹಿತವಾಗಿ ನಾಶ ಮಾಡುವುದಕ್ಕೆ ಕಾನೂನು ತರುವುದರ ಅಗತ್ಯ ತೀವ್ರವಾಗಿದೆ. ಅದೇ ರಿತಿ ಗೇಣಿದಾರರಿಂದ ಪಾಲು ವಸೂಲಿ ಮಾಡಲು ಮತ್ತು ಅವರನ್ನು ಪೀಡಿಸುವುದಕ್ಕೆ ಜಮೀನುದಾರರು ಯಾವ್ಯಾವ ಅವಧಿಗಳನ್ನು ದಾವೆಗಳಂತೆ ಅನ್ಯಾಯ ಎಸಗುವುದಕ್ಕೇನೆ ಉಪಾಯಗಳನ್ನು ಬಳಸಲು ಯೋಚಿಸುತ್ತಿದ್ದರು ಅಥವಾ ಯೋಚಿಸುವ ಉದ್ದೇಶ ಮಾಡುತ್ತಿದ್ದರೋ ಆಯಾ ಉದ್ದೇಶಿತ ಯೋಜನೆಗಳನ್ನು ತಕ್ಷಣ ನಿಲ್ಲಿಸಬೇಕು. ಇದಕ್ಕಾಗಿ ಸರಕಾರವು ಯೋಗ್ಯಕ್ರಮ ಕೈಗೊಳ್ಳಬೇಕು.

೪) ೧) ಮೂರುವರ್ಷ ಜಮೀನು ಉಳುವ ಗೇಣಿದಾರನು ಕಾಯಮ ರೈತನೆಂದು ತಿಳಿಯಬೇಕು. ಇಂಥ ಕಾನೂನು ಎಲ್ಲ ಜಮೀನುದಾರರ ಗೇಣಿದಾರರಿಗೆ ಅನ್ವಯವಾಗಿ ಜಾರಿಗೊಳ್ಳಬೇಕು. ಈ ಕಾನೂನಿಗೆ ಪರ್ಯಾಯ ರೂಪ ಕೊಡುವುದನ್ನು ಜಮೀನುದಾರ ಮಾಡಕೂಡದು. ಅದಕ್ಕಾಗಿ ಒಂದು ಬ್ಯಾಂಡ್ ಕಮೀಷನ್ ನೇಮಿಸಬೇಕು. ಆ ಕಮೀಷನ್‌ನ ಪರವಾನಗಿಯಿಲ್ಲದೆ ಗೇಣಿದಾರನ ಕಡೆಯಿರುವ ಜಮೀನನ್ನು ಪಡೆಯಕೂಡದು. ಈ ನೇಗಿಲಂಯೋಗಿ ಎಲ್ಲಿ ತನಕ ಪಾಲುಕೊಡುತ್ತಿರುತ್ತಾನೆಯೋ ಅಲ್ಲಿಯ ತನಕ ಅವನ ಬಳಿ ಮೂರು ವರ್ಷವಿರುವ ಜಮೀನನ್ನು ಯಾವುದೇ ಸಬೂಬು ಹೇಳಿ ಮರಳಿ ಪಡೆಯಕೂಡದು.

೨) ಕಂದಾಯದ ದೃಷ್ಟಿಯಿಂದ ಕೇವಲ ಮೂರನೇ ಹಿಸ್ಸೆಯ ಅಧಿಕ ಪಾಲು ನೀಡಬೇಕು. ಹೆಚ್ಚಿನ ಪಾಲನ್ನು ಗೇಣಿದಾರರಿಂದ ಪಡೆಯಕೂಡದು.

೫) ಸಣ್ಣರೈತರ ನೀರಿನ ಕರ ಶೇಕಡ ೫೦ರಷ್ಟು ಕಡಿಮೆ ಮಾಡಬೇಕು. ಬಹುಸಂಖ್ಯೆ ಸಣ್ಣ ಹಿಡುವಳಿದಾರರು ಮತ್ತು ಗೇಣಿದಾರರಿಗೆ ಲಾಭವಾಗುವಂತಿರುವ ಧೋರಣೆಯನ್ನು ಇರಿಗೇಷನ್ ಖಾತೆಯು ನಿರ್ವಹಿಸುವ ದೃಷ್ಟಿಯಿಂದ ಇರಿಗೇಷನ್ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕು.

೬) ಎಲ್ಲ ಹಳ್ಳಿಗಳಲ್ಲಿ ಉಚಿತ ಗೋಮಾಳವಿರಬೇಕು.

೭) ಸಾಲ ನಿವಾರಣೆಯ ಸರಿಯಾದ ಕಾನೂನು ಎಲ್ಲೆಡೆ ಜಾರಿಯಾಗುವ ತನಕ ಕಟಬಾಕಿ ಜಾಹೀರಪಡಿಸ ಬೇಕು.

೮) ರೈತರ ಜಮೀನು ಸಾವುಕಾರರ ಕೈಗೆ ಹೋಗದಂತೆ ಸಾವುಕಾರಿ ವೃತ್ತಿಮೇಲೆ ಬಂಧನ ಹಾಕಬೇಕು.

೯) ರೈತರ ನಿರ್ವಹಣೆಗೆ ಕನಿಷ್ಟ ಜಮೀನು ಮತ್ತು ಜೀವನ ನಡೆಸಲು ಬೇಕಾಗುವ ವಸ್ತುಗಳ ಮೇಲೆ ಸಾವುಕಾರಿ ಜಪ್ತಿ ತರುವುದರ ನಿಷೇಧವಾಗಬೇಕು.

೧೦) ಜೀತವಿಟ್ಟುಕೊಳ್ಳುವುದು ಕಾನೂನುಬಾಹಿರ ಮತ್ತು ಕ್ರಿಮಿನಲ್ ಚಿನ್ಹೆಯೆಂದು ನಿರ್ಧರಿಸಬೇಕು.

೧೧) ಜಮೀನು ಕಂದಾಯ ಖಾತೆಯೊಳಗಿನ ಎಲ್ಲ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ಕೈಬಿಡಬೇಕು.

೧೨) ಉಳುವಿಗೆ ಬರುವಂಥ ಎಲ್ಲ ಸರಕಾರಿ ಕ್ಷಾರಭೂಮಿಯನ್ನು ಕೃಷಿಕೂಲಿಗಳಿಗೆ ಉಚಿತವಾಗಿ ನೀಡಬೇಕು.

## ೧೧೬.

# ರಾಷ್ಟ್ರೀಯ ಐಕ್ಯತೆಯ ಭಾವನೆಗಾಗಿ ಹಿಂದೂ–ಮುಸ್ಲಿಮ್ ವಿಭಕ್ತಿಕರಣವು ವಿನಾಶಕ

ಮುಂಬೈ ಪ್ರಾಂತ ಅಸೆಂಬ್ಲಿಯ ಸಭೆಯು ಮಂಗಳವಾರ ದಿ: ೧೮ ಜನೇವರಿ ೧೯೩೮ರಿಂದ ಆರಂಭವಾಯಿತು. ಅಸೆಂಬ್ಲಿಯಲ್ಲಿ ಮಂತ್ರಿಗಳಾದ ಪಾಟೀಲ ಅವರು ಲೋಕಲ್ ಬೋರ್ಡ್ ಕಾನೂನು ತಿದ್ದುಪಡಿ ಬಿಲ್ಲನ್ನು ಮಂಡಿಸಿದರು. ಈ ಬಿಲ್ಲಿನೊಳಗೆ ವಿಶೇಷವಾಗಿ ನಾಮಿನೇಷನ್ ಪದ್ಧತಿಯನ್ನು ರದ್ದು ಮಾಡಲಾಗಿದ್ದು ಬದಲಿಗೆ ಅಸ್ಪೃಶ್ಯ ಮತ್ತು ಸ್ತ್ರೀ ವರ್ಗಕ್ಕೆ ಸಂಯುಕ್ತ ಮತದಾರ ಸಂಘದಲ್ಲಿ ಮೀಸಲಾತಿ ಸ್ಥಳ ನಿಗದಿಪಡಿಸಲಾಗಿದೆ.

ಈ ನಿರ್ಣಯದ ಪರ ವಿಷಯ ಮಂಡಿಸುವಾಗ, ಇಲ್ಲಿಯ ತನಕ ಸರಕಾರ ನಿಯಮಿಸಿದ ಸದಸ್ಯರನ್ನು ಆಯ್ಕೆ ಮಾಡಿ ಪ್ರಜಾಪ್ರಭುತ್ವ ತತ್ವದ ಮೇಲೆ ಪ್ರಹಾರ ಮಾಡಲಾಗಿದೆ. ಇಂಥ ರಾಷ್ಟ್ರೀಯ ಕಾರ್ಯಕ್ಕೆ ಅಡಚಣೆಯಂಟು ಮಾಡುವ ಪದ್ಧತಿಯನ್ನು ನಾಶಗೊಳಿಸಲು ಸರಕಾರ ಮುಂದೆ ಬರಬೇಕು. ಈ ಅನಿಷ್ಟ ಪದ್ಧತಿಯನ್ನು ಹೊಸ ಕಾನೂನು ಮಂಡಳಿಯಿಂದ ಇಲ್ಲವಾಗಿಸಿ ಬಿಡಲಾಗಿದೆ. ಹಾಗೆಯೇ ಸ್ಥಳೀಯ ಸ್ವರಾಜ್ಯದಿಂದ ಅದನ್ನು ಉಚ್ಚಾಟಿಸಲಾಗಿದೆ. ಸರ್. ಅಲಿ ಮಹಮ್ಮದ್ ದೆಹಲವಿ ಅವರು ತಮ್ಮ ಮುಸ್ಲಿಂ ಸಮಾಜಕ್ಕೆ ಯಾಕೆ ಸ್ವತಂತ್ರ ಮಜೂರ ಸಂಘದ ಅವಶ್ಯಕತೆಯಿದೆ ಎಂಬ ಚಿಂತನೆಯ ಮಹತ್ವವನ್ನು ಪ್ರತಿಪಾದಿಸಿದ ಬಳಿಕ ಸ್ವತಂತ್ರ ಮಜೂರ ಪಕ್ಷದ ಮುಂದಾಳು ಡಾ. ಬಾಬಾಸಾಹೇಬ ಅಂಬೇಡ್ಕರರ ಪ್ರಖರ ಭಾಷಣ ಆಯಿತು. ಡಾ. ಬಾಬಾಸಾಹೇಬರ ಮಾತುಗಳನ್ನು ಕೇಳುತ್ತಿರುವಾಗ ಸಭೆಗೆ ತುಂಬು ಗಾಂಭೀರ್ಯ ಒದಗಿತ್ತು. ಆದರೂ ಬೆಳಗಾವಿಯ ಕಾಂಗ್ರೆಸ್ ಪ್ರತಿನಿಧಿ ಶ್ರೀ ಗೋಖಲೆಯವರು ಈ ನಡುವೆ ಏನೋ ಒಂದಿಷ್ಟು ಹುಚ್ಚುತನ ಮಾಡಿಯೇ ಬಿಟ್ಟರು. ಅವರಿಗೊಂದು ದಿಟ್ಟವಾದ ಹೊಡೆತದ ಮಾತು ಸೇರಿಸಿ ಡಾ. ಬಾಬಾ ಸಾಹೇಬ ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು–

ಈ ತಿದ್ದುಪಡಿಯ ಬಿಲ್ಲಿನಲ್ಲಿ ಕಡಿಮೆ, ತೀರ ಅಲ್ಪಪ್ರಮಾಣದ ಪ್ರಗತಿ ಹೊರತುಪಡಿಸಿ ಏನಾದರೂ ವಿಶೇಷವಿದೆ ಎಂದು ನನಗನಿಸುವುದಿಲ್ಲ. ಈ ಬಿಲ್ಲಿನಲ್ಲಿರುವ ಸಂಯುಕ್ತ ಮತದಾನ ಪದ್ಧತಿ ಸಂದರ್ಭದಲ್ಲಿ ನನಗೆ ಚರ್ಚೆ ಮಾಡುವ ಅಗತ್ಯವಿಲ್ಲ. ಆದರೂ ಈ ಪದ್ಧತಿಯ ಕುರಿತು ನನ್ನ ದೃಷ್ಟಿಕೋನವು ಯಾವುದು ಎಂಬುದನ್ನು ಸ್ಪಷ್ಟವಾಗಿ ನಿವೇದಿಸುತ್ತಿದ್ದೇನೆ. ಈ ಸಂಯುಕ್ತ ಮತದಾನ ಪದ್ಧತಿಯನ್ನು ಒಪ್ಪಿದ ನಂತರ ಅಂಥದ್ದೇನು ವಿಶೇಷ ಘಟಿಸಿತು. ಎನ್ನುವುದನ್ನು ಕೂಲಂಕಷವಾಗಿ ನೋಡಿದಾಗ ಗಮನಕ್ಕೆ ಬಂದುದೇನೆಂದರೆ, ಕೇವಲ ಚುನಾವಣೆಯಲ್ಲಿ ಮಾತ್ರ ಹಿಂದೂ ಮತ್ತು ಮುಸ್ಲಿಮ್ ಜಾತಿಗಳು ಒಟ್ಟಾಗಿ ಮತದಾನಕ್ಕೆ ಬರಬಹುದು, ಮತ ನೀಡಬಹುದು. ಆದರೆ ಎರಡು ಕೋಮುಗಳ ಮನೋವೃತ್ತಿಯಲ್ಲಿ ಬದಲಾವಣೆಯಾದೀತೆ? ಯಾವ

---

ಜನತಾ: ೨೨ ಜನೆವರಿ ೧೯೩೮.

ಭಾವನೆಗೋಸ್ಕರ, ಯಾವ ರಾಷ್ಟ್ರೀಯ ಐಕ್ಯತೆಯ ಭಾವನೆಗಾಗಿ ಈ ಸಂಯುಕ್ತ ಮತದಾನ ಪದ್ಧತಿಯನ್ನು ಜಾರಿ ತರಲಾಗುತ್ತಿದೆಯೋ ಆ ದೃಷ್ಟಿಯಲ್ಲಿ ಯಾವ ಬದಲಾವಣೆ ಕಾಣಲುಸಾಧ್ಯ? ಚುನಾವಣೆಯ ನಂತರ ಉಭಯ ಸಮಾಜಗಳ ವಿಭಕ್ತಿಕರಣ ಮಾತ್ರ ಕಾಯಮ್ಮಾಗಿಯೇ ಇರುವಂಥದ್ದು! ವ್ಯಾವಹಾರಿಕ ದೃಷ್ಟಿಯಿಂದ ಗಮನಿಸಿದಾಗ ಒಂದೇ ವಠಾರದಲ್ಲಿ ಒಟ್ಟಾಗಿ ಸಹಭೋಜನ ಮಾಡಲಾರರು. ಕಳ್ಳುಬಳ್ಳಿ ಸಂಬಂಧವಂತು ದೂರದ ಮಾತು. ಹೀಗಿದ್ದಾಗ ಕೇವಲ ಸಂಯುಕ್ತ ಮತದಾರ ಸಂಘದಿಂದ ಉಭಯ ಸಮಾಜದೊಳಗೆ ಐಕ್ಯತೆ ಮೂಡಲು ಹೇಗೆ ಸಾಧ್ಯ? ಇದಕ್ಕಾಗಿ ಇಂದಿನ ಎಲ್ಲ ಸಾಮಾಜಿಕ ಬಂಧನಗಳನ್ನು ತಟ್ಟನೆ ಮುರಿದೊಗೆಯಬೇಕು. ಈ ಕಾರಣಕ್ಕೆ ಹಿಂದೂ ಸಮಾಜವು ಮುಂದಾಳತ್ವ ವಹಿಸಬೇಕು. ಇದನ್ನು ಹೊರತುಪಡಿಸಿ ಈ ಬಿಲ್ಲಿನೊಳಗೆ ಇಂಥ ರಾಷ್ಟ್ರಭಾವನೆಗಳನ್ನು ಜಾಗೃತಗೊಳಿಸುವ ಯೋಜನೆಯನ್ನು ಯೋಜಿಸಿ ಕಾರ್ಯ ರೂಪಕ್ಕೆ ತರುವುದು ಸಾಧ್ಯವಿಲ್ಲ. ಈ ಸಾಮಾಜ ತಿದ್ದುಪಡಿಯ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುವುದೆಂದರೆ ನನಗೆ ನಿರಾಸೆಯಾಗಿದೆ. ಈ ಕರಡಲ್ಲಿ ಸಮಾಧಾನವಾಗುವಂಥದ್ದೇನಿದೆ ಎಂದು ಹುಡುಕ ಹೊರಟರೆ 'ಬಾನಿಂದ ನಕ್ಷತ್ರ' ತಂದು ಕೊಡುತ್ತೇನೆ ಎನ್ನುವ ಅವಸ್ಥೆಯಾಗಿದೆ.

# ೧೧೭.
# ಚಾತುರ್ವರ್ಣದಿಂದ ಹಿಂದೂಸ್ಥಾನದ ಕ್ಷೀಣತೆ ಮತ್ತು ಅಧಃಪತನ

ಶನಿವಾರ ದಿ: ೧೨ ಫೆಬ್ರುವರಿ ೧೯೩೮ರಂದು ಬೆಳಿಗ್ಗೆ ೯ ಗಂಟೆಗೆ ಮನಮಾಡ ಹೊರಟುಬಿಟ್ಟು ಪರಿಷತ್ತಿಗಾಗಿ ಸಟಾಣೆಗೆ ಹೋಗುತ್ತಿರುವಾಗ ದಾರಿಯಲ್ಲಿ ಬರುವ ಚಾಂದವಡ ಮುಂತಾದ ಸ್ಥಳಗಳಲ್ಲಿ ಡಾ. ಬಾಬಾಸಾಹೇಬರಿಗೆ ಮಾಲಾರ್ಪಣೆ ನಡೆಸಿ ಸ್ವಾಗತಿಸಿದರು. ಮಧ್ಯಾಹ್ನ ೧೧ ಗಂಟೆಗೆ ಡಾ. ಬಾಬಾಸಾಹೇಬ ಅಂಬೇಡ್ಕರ, ಶ್ರೀದೇವರಾವ ನಾಯಿಕ, ಪ್ರಧಾನ, ಕವಳಿ, ಗಣಪತರಾವ ನಿಳೆ, ರೋಕಡೆ, ಭೋಳೆ, ಭಾವುರಾವ ಗಾಯಕವಾಡ ಹಾಗೂ ನಾಶಿಕ ಜಿಲ್ಲಾ ಯುವಸಂಘದ ೨೦ ಸ್ವಯಂಸೇವಕರ ಒಂದು ತಂಡ ಮೋಟಾರು ವಾಹನದ ಜೊತೆಗೆ ಸಟಾಣೆ ಊರು ತಲುಪಿದರು. ಸಟಾಣೆಯ ಶ್ರೀಅಭಿಮಾನ ಪಾಟೀಲ, ಧರ್ಮಾತಾನಾಜಿ ಪಾಟೀಲ ಮತ್ತು ಪ್ರಮುಖರು ಎರಡು ಮೈಲು ಎದುರುಗೊಂಡಿದ್ದರು. ಡಾ. ಬಾಬಾಸಾಹೇಬರ ಮೆರವಣಿಗೆಯು ಸಟಾಣೆಯ ಪ್ರಮುಖ ಬೀದಿಗಳಲ್ಲಿ ನಡೆದಿತ್ತು. ಇಡೀ ಊರು ತುಂಬ ಬಾಬಾಸಾಹೇಬರ ಸ್ವಾಗತದ ಅಲಂಕಾರವನ್ನು ರೂಪಿಸಲಾಗಿತ್ತು. ಊರಿನ ಮೇಲ್ಭಾಗದಲ್ಲಿರುವ ಯಶವಂತರಾವ ಮಹಾರಾಜರ ಮಂದಿರದ ಹಿಂದಿನ ನದಿದಂಡೆಯಲ್ಲಿ ಭವ್ಯ ವೇದಿಕೆಯನ್ನು ಸಜ್ಜುಗೊಳಿಸಲಾಗಿತ್ತು. ಪರಿಷತ್ತು ಆ ಸಿದ್ಧತೆ ಮಾಡಿತ್ತು. ಪರಿಷತ್ತಿನ ಸ್ವಾಗತಾಧ್ಯಕ್ಷ ಮಹಂತ ನಾನಕದಾಸರು ಡಾ. ಬಾಬಾಸಾಹೇಬರನ್ನು ಮತ್ತು ನೆರೆದ ಅತಿಥಿಗಳನ್ನು ಸ್ವಾಗತಿಸಿದರು. ಪರಿಷತ್ತಿನ ಅಧ್ಯಕ್ಷತೆ ಅಲಂಕರಿಸಲು ಡಾ. ಬಾಬಾಸಾಹೇಬರಲ್ಲಿ ಭಿನ್ನವಿಸಿಕೊಳ್ಳಲಾಯಿತು. ಪದ್ಧತಿಯಾನುಸಾರ ಅನುಮೋದನೆ ನಡೆದು ಡಾ. ಬಾಬಾಸಾಹೇಬ ಅಧ್ಯಕ್ಷತೆ ವಹಿಸಿದರು. ಪರಿಷತ್ತಿನಲ್ಲಿ ಶ್ರೀಭೋಳೆ, ದೇವರಾವ ನಾಯಿಕ, ಭಾವುರಾವ ಗಾಯಕವಾಡ ಮುಂತಾದವರು ಮಾತನಾಡಿದರು. ಡಾ. ಬಾಬಾ ಸಾಹೇಬರು ಮಾತನಾಡಲು ಎದ್ದು ನಿಲ್ಲುತ್ತಿದ್ದಂತೆ ಪ್ರಚಂಡ ಕರತಾಡನ ಮತ್ತು ಜಯಘೋಷಗಳು ಮುಗಿಲು ಮುಟ್ಟಿದವು. ಡಾ. ಬಾಬಾಸಾಹೇಬರು ಹೇಳಿದರು.

ಬಂಧು ಮತ್ತು ಭಗಿನಿಯರೆ,

ಮನಮಾಡನಲ್ಲಿ ಸೇರಲಿರುವ ಪರಿಷತ್ತಿನ ಕಾರ್ಯಕ್ರಮಕ್ಕೆಂದು ಈ ಪರಿಸರಕ್ಕೆ ಬಂದಿದ್ದೆ. ಈ ಸಂದರ್ಭ ಬಳಸಿಕೊಂಡು ನಿಮ್ಮಲ್ಲಿಗೆ ಬರಲು ನನಗೆ ಅತೀವ ಆನಂದವಾಗುತ್ತಿದೆ. ನನ್ನ ಪ್ರವಾಸದ ಮುಖ್ಯ ಉದ್ದೇಶ ನಮ್ಮ ರಾಜಕಾರಣ ಬಲಿಷ್ಠಗೊಳಿಸಲು ಹುಟ್ಟಿಕೊಂಡ ಸ್ವತಂತ್ರ ಮಜೂರ ಪಕ್ಷದ ಪ್ರಚಾರ ಮಾಡುವುದು. ಇಂದಿನ ಸಂದರ್ಭದಲ್ಲಿ ಸ್ವತಂತ್ರ ಮಜೂರಪಕ್ಷದ ಮಾಹಿತಿಗಿಂತ ಇನ್ನೊಂದು ಹೇಳುವುದೇನೂ ಇಲ್ಲ. ಹಾಗೇ ಏನಾದರು ಹೇಳುವುದರ ಪ್ರಯೋಜನವೂ ಇಲ್ಲ. ಇವತ್ತಿನ ಸಭೆಯಲ್ಲಿ ಸ್ಪೃಶ್ಯ ಸಮಾಜದ ಬಾಂಧವರು ಪಾಲ್ಗೊಂಡಿರುವುದು ನನಗೆ ಸಂತೋಷ ತಂದಿದೆ. ಈ ಹಿಂದೆಯೂ ನಾವು ಸಭೆಗಳನ್ನು ನಡೆಸಿದಾಗ ಮಾನವೀಅಂತಃಕರಣದ ಕೆಲವರು ಹಾಜರಾಗಿರುತ್ತಿದ್ದರು, ಆದರೆ ಅವರು

---

ಜನತಾ: ೨೬ ಫೆಬ್ರುವರಿ ೧೯೩೮

ಇಲ್ಲಿ ಏನು ನಡೀತಿದೆ ಎಂಬುದನ್ನು ತಿಳಿಯಲು ಬಂದವರಾಗಿದ್ದರು. ಇಂದಿನಸ್ಥಿತಿ ಅಂತಹುದಲ್ಲ. ಆದ್ದರಿಂದ ಈ ಸಭೆಯಲ್ಲಿ ಕೊಂಚ ಭಿನ್ನವಾಗಿ ಮಾತನಾಡುವವನಿದ್ದೇನೆ. ಹಿಂದೂಸ್ಥಾನದ ಇತಿಹಾಸವನ್ನು ಸಿಂಹಾವಲೋಕನ ನಡೆಸಿದರೆ ಇಲ್ಲಿ ಇದುವರೆಗೆ ಪ್ರಜಾಪ್ರಭುತ್ವ ರಾಜ್ಯಪದ್ಧತಿ ಜಾರಿಯಲ್ಲಿರಲಿಲ್ಲ. ಅನೇಕ ಗ್ರಂಥಗಳ ವಾಚನದಿಂದ ನಾನು ಕಂಡುಕೊಂಡ ಸತ್ಯಗಳ ಮೂಲಕ ಹೇಳುವುದೆಂದರೆ, ಹಿಂದೂ ರಾಷ್ಟ್ರದ ಕ್ಷೀಣತೆ ಮತ್ತು ಅಧಃ ಪತನವು ಹಿಂದೂಗಳು ಒಪ್ಪಿದ ಚಾತುರ್ವರ್ಣದಿಂದಲೇ ಆಗಿದೆ. ಈ ಪದ್ಧತಿಯ ಹಿಂದೂ ಸಂಸ್ಕೃತಿ ಆಳಕ್ಕೆ ಸೇರಿರುವುದರಿಂದ ಅದರ ದುಷ್ಪರಿಣಾಮವನ್ನು ಹಿಂದೂಸ್ಥಾನಿಗಳೇ ಭೋಗಿಸುವಂತಾಗಿದೆ.

ಚಾತುರ್ವರ್ಣದ ಕಲಿಕೆಯೆಂದರೆ ಬ್ರಾಹ್ಮಣರು ವಿದ್ಯೆಯನ್ನು ಕಲಿಯುವುದು ಮತ್ತು ಕಲಿಸುವುದು. ಕ್ಷತ್ರಿಯರು ಯುದ್ಧಮಾಡುವುದು, ವೈಶ್ಯರು ವ್ಯಾಪಾರ, ಉದ್ಯಮ ನಡೆಸುವುದು. ಶೂದ್ರರು ಸೇವೆ ಮಾಡುವುದು. ಈ ಪದ್ಧತಿಯಿಂದ ನಮ್ಮ ರಾಷ್ಟ್ರ ಹೇಗೆ ಮತ್ತು ಎಷ್ಟು ಹಾನಿಯಾಗಿದೆ ಎಂಬುದು ತುಂಬಾ ಬುದ್ಧಿವಂತರಿಗೂ ಸರಿಯಾಗಿ ತಿಳಿಯದ ವಿಚಾರವಾಗಿದೆ. ಈ ದೇಶದ ಬಹುಸಂಖ್ಯಾತ ಎಂಬ ವರ್ಗವನ್ನು ಒಟ್ಟಾಗಿ ಪಕ್ಕಕ್ಕೆ ದೂಡಿ ಬಿಡಲಾಗಿದೆ. ದೇಶದ ಸ್ವಾತಂತ್ರ್ಯಕ್ಕೆ ಪೋಷಕವಾದ ಈ ಬಹುಸಂಖ್ಯಾತ ವರ್ಗವು ಕೆಲಸಕ್ಕೆ ಬಾರದು ಎಂದು ಠರಾಯಿಸಿದರೆ, ಈ ದೇಶವು ಯಾವತ್ತೂ ಪರತಂತ್ರದಲ್ಲೇ ಹೊರಳಾಡುತ್ತಿರಬೇಕಾಗುತ್ತದೆ. ಕೆಲವುದಿನ ಸ್ವಾತಂತ್ರ್ಯಅನುಭವಿಸಿದ ಗ್ರೀಕ್‌ನ ಅಲೆಕ್ಸಾಂಡರ್ ಹಿಂದೂಸ್ಥಾನದ ಮೇಲೆ ದಂಡೆತ್ತಿಬಂದು ತನ್ನ ರಾಜ್ಯಸ್ಥಾಪಿಸಿದ. ತದನಂತರದ ಅಲ್ಪಕಾಲದಲ್ಲಿ ಸ್ವಲ್ಪ ಸ್ವಾತಂತ್ರ್ಯ ಪಡೆದು ಮರಾಠೆಶಾಹಿ ಇತ್ತೋ ಇಲ್ಲವೋ ಹಾಗಿತ್ತು. ಪೇಶವೆ ಎಲ್ಲ ಕಾರುಬಾರುಗಳನ್ನು ತಮ್ಮ ಕೈಗೆ ತಗೊಂಡರೋ ಇಲ್ಲವೋ; ಅದೇ ಕೊನೆಯಾಗಿ ಇಡೀದೇಶವನ್ನು ಇಂಗ್ಲೀಷರ ಗುಲಾಮಗಿರಿಗೆ ತಳ್ಳುತ್ತಾರೆ. ಇವತ್ತು ಸೇರಿದ ನಿಮ್ಮೆಲ್ಲರನ್ನು ನಾನು ಕೇಳ ಬಯಸುವುದೇನೆಂದರೆ ಈ ದೇಶಕ್ಕೆ ಒಳ್ಳೆಯ ದಿನಗಳು ಯಾಕೆ ಬಂದಿಲ್ಲ? ಬೇರೆ ದೇಶಗಳ ಇತಿಹಾಸವನ್ನು ಕಂಡಾಗ ಇಂಥಸ್ಥಿತಿ ನಮಗೆಲ್ಲೂ ಕಾಣಸಿಗುವುದಿಲ್ಲ, ಇದಕ್ಕೆ ಕಾರಣವೇನು? ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಹಿಂದೂ ಧರ್ಮಗುರುಗಳು ಅರ್ಥಾತ್ ಬ್ರಾಹ್ಮಣರು ಹಿಂದೂಸ್ಥಾನದ ಮೇಲೆ ಹೇರಿದ ಚಾತುರ್ವರ್ಣ ಚೌಕಟ್ಟಿನಿಂದಲೇ ಈ ಅನರ್ಥಗಳು ನಡೆಯುತ್ತಿವೆ.

ನಿಮಗೊಂದು ವಿಚಾರ ಮನವರಿಕೆಯಾಗುವಂತಿದೆ. ಊಹಿಸಿ, ಒಂದು ಗ್ರಾಮದ ಮೇಲೆ ಪಠಾಣರು ಹಲ್ಲೆ ಮಾಡಲು ಬಂದರೆ ಎಲ್ಲಜಾತಿಯ ಜನರು ಕೈಗೆ ಶಸ್ತ್ರತಗೊಂಡು ಸಂಘಟಿತರಾಗಿ ಆ ಹಲ್ಲೆಯನ್ನು ತೊಡೆದು ಹಾಕಬಹುದು. ಯಾರ ಕೈಯಲ್ಲಿ ಶಸ್ತ್ರವಿದೆಯೋ ಅಂಥವರು ತಮ್ಮ ಮೇಲಾಗುವ ಅನ್ಯಾಯವನ್ನು ತಡೆಯಬಹುದು. ಆದರೆ ಕೇವಲ ನಾಲ್ವರು ಖಡ್ಗಎತ್ತಿಕೊಂಡು ಉಳಿದವರಿಗೆ ಕುರುಪಿ ಹಿಡಿಯಲೂ ಸಹ ನಿಷೇಧ ಹೇರಿದರೆ ಹೇಗೆ? ಅದರಿಂದ

ರಾಷ್ಟ್ರದ ಸಂರಕ್ಷಣೆಯನ್ನು ಮಾಡಲು ಹೇಗೆ ಸಾಧ್ಯ?

ಹಿಂದೂಸ್ಥಾನದ ಮೇಲೆ ದಂಡೆತ್ತಿ ಅಲೆಕ್ಸಾಂಡರ್ ಬರಲಿ ಅಥವಾ ಮಹಮ್ಮದ ತುಘಲಕ್ ಬಂದರೂ ಮುಷ್ಠಿಯಷ್ಟು ಕ್ಷತ್ರಿಯರನ್ನು ಬಿಟ್ಟರೆ ಯಾರೂ ಯುದ್ಧ ಮಾಡಲು ಅಥವಾ ರಾಷ್ಟ್ರ ಸಂರಕ್ಷಣೆಗೆ ಹೋಗಕೂಡದೆಂಬುದು ಚಾತುರ್ವರ್ಣದ ಕಲಿಕೆಯಾಗಿದೆ. ಹಿಡಿಯಷ್ಟು ಬ್ರಾಹ್ಮಣರು ಅವರಿಗೆ ಶಸ್ತ್ರನೀಡರು. ಈ ರೀತಿಯ ಕಲಿಕಾ ವಿಧಾನದಿಂದಲೇ ಹಿಂದುಸ್ಥಾನದ ಅಧಃಪತನ ಮತ್ತು ಕ್ಷೀಣತೆ ಉಂಟಾಗಿದೆ. ಯಾರ ತೋಳಲ್ಲಿ ಹುರಿಯಿದೆಯೋ ಅವರ ಕೈಗೆ ಶಸ್ತ್ರಾಸ್ತ್ರ ಕೊಟ್ಟಿದ್ದರೆ, ಮುಕ್ತವಾಗಿ ಬಿಟ್ಟಿದ್ದರೆ ಇಂಥ ವಿಪರೀತ

ಪರಿಸ್ಥಿತಿ ಇರುತ್ತಿರಲಿಲ್ಲ. ಇವೆಲ್ಲ ಧರ್ಮಗುರು ಎಂದು ಮೆರೆವ ಭಟ್ಟರು ತಮ್ಮ ಸ್ವಂತ ಲಾಭಕ್ಕಾಗಿ ಒಂದು ವೇಳೆ ಮೊದಲು ಮಾಡಿದರೂ ಸಹ ಪರಿಣಾಮ ಮಾತ್ರ ರಾಷ್ಟ್ರ ಘಾತಕವೆಂದೇ ಪರಿಗಣಿತವಾಗಿವೆ, ಇದರಲ್ಲಿ ಬೇರೆ ಮಾತಿಲ್ಲ. ಅಸ್ಪೃಶ್ಯರೆಂದು ತಿಳಿದ ಸಮಾಜಕ್ಕೆ ಇಂದಿನವರೆಗೆ ನಿರಂತರ ಅನ್ಯಾಯ ಮತ್ತು ಹಿಂಸೆಯನ್ನು ಅನುಭವಿಸುವುದಾಗಿದೆ. ಅದರ ಮರ್ಮ ಇದರಲ್ಲಿದೆ. ಒಂದು ಪಕ್ಷ ಅಸ್ಪೃಶ್ಯ ಸಮಾಜದ ಪೂರ್ವಜರ ಕೈಯಲ್ಲಿ ಶಸ್ತ್ರಗಳಿದ್ದಿದ್ದರೆ ಅವರ ಹಿರಿಯರು ಎರಡು ಸಾವಿರ ವರ್ಷ ಅಸ್ಪೃಶ್ಯತೆಯ ಮತ್ತಿತರ ಅನ್ಯಬಗೆಯ ಅತ್ಯಾಚಾರಗಳನ್ನು ನಯವಾಗಿ ಅನುಭವಿಸುತ್ತಿದ್ದರೇನು? ಚಾತುರ್ವರ್ಣದ ದುಷ್ಟವ್ಯವಸ್ಥೆಯು, ಮತ್ತದರ ನಡವಳಿಕೆಯು ಬಹುಜನ ಸಮಾಜದ ಕೈಗೆ ಶಸ್ತ್ರ ಮತ್ತು ವಿದ್ಯೆಯನ್ನು ನೀಡದೆ ಅದರಿಂದ ವಂಚಿತವಾಗುವ ಹಾಗೆ ಮಾಡಿದೆ. ಆ ಕಾರಣದಿಂದ ಈ ದೇಶದ ಸ್ಥಿತಿಯೇನಾಗಿದೆ ನೋಡಿರಿ? ಈ ಪ್ರಾಂತದಲ್ಲಿ ಒಂದು ಕಾಲದಲ್ಲಿ ಕ್ಷತ್ರಿಯರ ರಾಜ್ಯವಿತ್ತು. ಅವರು ಕ್ಷೀಣಿಸಿದನಂತರ ಪೇಶ್ವಾಯಿ ಉದಯವಾಯಿತು. ಪೇಶ್ವಾಯಿ ಅಸ್ತವಾದ ಬಳಿಕ ಇಂಗ್ಲಿಷ್ ಆಳ್ವಿಕೆ ಆರಂಭವಾಯಿತು. ಒಂದು ಕಾಲದಲ್ಲಿ ಆಳಿದ ಕ್ಷತ್ರಿಯರು ಈಗೆಲ್ಲಿ? ಕೆಂಪು ಪಗಡಿ, ಕೊರಳಲ್ಲಿ ಪಟ್ಟಿ ಹಾಕಿಕೊಂಡು, ಚಪರಾಶಿಗಳ ಕೆಲಸ ಮಾಡುತ್ತಿರುವುದನ್ನು ಸಾಕಷ್ಟು ಕಡೆ ಕಾಣಬಹುದು.

ಬ್ರಾಹ್ಮಣರು ವೇದಾಧ್ಯಯನ ಮಾಡಿ ಕಲಿಸುವುದು ಮತ್ತು ಕಲಿಯುವುದು. ಕ್ಷತ್ರಿಯರು ಯುದ್ಧ ಮಾಡುವುದು. ವೈಶ್ಯರು ವ್ಯಾಪಾರ–ಉದ್ಯಮ ಮಾಡಬೇಕು. ಶೂದ್ರರು ಸೇವಾಧರ್ಮವನ್ನು ನಿಭಾಯಿಸುವುದು. ಇದು ಮನುವಾದ. ಹಿಂದೂಸ್ಥಾನದಲ್ಲಿ ಪ್ರಜಾಪ್ರಭುತ್ವ ರಾಜ್ಯ ಈಗ ಪ್ರಥಮವಾಗಿ ಆರಂಭವಾಗಿದೆ. ಇಂಥ ಸಂದರ್ಭದಲ್ಲಿ ರಾಷ್ಟ್ರಹಿತ ಸಾಧಿಸಿ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡಲು ಕದನ ನಡೆಸುತ್ತಿರುವ ಕಾಂಗ್ರೆಸ್ಸು ನಮ್ಮ ಬಹುಸಂಖ್ಯಾತ ಬಡವ, ರೈತರ ಮತ್ತು ಕೂಲಿಗಳ ಕಲ್ಯಾಣಕರ್ತರು ತಾವೆಂದು, ನಿಮ್ಮ ಬೆಂಗಾವಲುಗಳೇ ನಾವೆಂದು ಎಷ್ಟೇ ಕೂಗಾಡಿದರು, ಅದಕ್ಕೆ ಮರುಳಾಗುವಷ್ಟು ಈ ಪ್ರಜೆಗಳು ಅಮಾಯಕರಲ್ಲ. ಯಾವ ಪ್ರಜೆಗಳ ಹಿತಕ್ಕಾಗಿ ಕಾಂಗ್ರೆಸ್ಸು ಏಳು ಪ್ರಾಂತಗಳಲ್ಲಿ ಅಧಿಕಾರ ಗದ್ದುಗೆ ಅಲಂಕರಿಸಿದೆಯೋ ಅದನ್ನು ತುಸು ನಿರೀಕ್ಷಣೆ ಮಾಡಿ ನೋಡಿದಾಗ ಏನು ಕಾಣಸಿಗುತ್ತದೆ? ಮುಂಬೈ ಕಾನೂನು ಮಂಡಳಿಯ ೧೧ ಸ್ಥಾನಗಳ ಪೈಕಿ ೬ ಸ್ಥಾನಗಳನ್ನು ಬ್ರಾಹ್ಮಣರು ಕಿತ್ತುಕೊಂಡಿದ್ದಾರೆ. ಮದ್ರಾಸ ಮತ್ತು ಬಿಹಾರ ಭಾಗಗಳನ್ನು ಗಮನಿಸಿದಾಗ ಆ ಮಂತ್ರಮಂಡಳದಲ್ಲಿ ಅರ್ಧದಷ್ಟು ಬ್ರಾಹ್ಮಣರಿದ್ದಾರೆ. ಇದೇ ಸ್ಥಿತಿಯನ್ನು ಕಾಂಗ್ರೆಸ್ಸು ಇತರ ಪ್ರಾಂತಗಳಲ್ಲೂ ಮಾಡಿದೆ. ಆದಕಾರಣ ಕೊಂಚದರಲ್ಲೇ ಹೇಳುವುದೆಂದರೆ ಪಕ್ಷದ ಹೆಸರನ್ನು ಬಳಸಿ ಕಾಂಗ್ರೆಸ್ಸು ಬ್ರಾಹ್ಮಣ ಭೂತವನ್ನು ಬಹುಸಂಖ್ಯರಾಗಿರುವ ಬಡವ, ರೈತ ಮತ್ತು ಕೂಲಿಗಳ, ಹೆಗಲ ಮೇಲೆ ಹೇರಲು ಯತ್ನಿಸುತ್ತಿದೆ. ನಾವು ಎಚ್ಚರವಾಗಿರಬೇಕಾಗಿರುವುದು ಅಗತ್ಯವಿದೆ.

ಬ್ರಾಹ್ಮಣೇತರ ಸುಶಿಕ್ಷಿತರು ಕೆಲವು ಕಾಲ ಸತ್ಯಶೋಧಕ ಹೆಸರಿನ ಪಂಥವೊಂದನ್ನು ಹುಟ್ಟುಹಾಕಿದರು. ಆ ಪಂಥವು ಹೆಸರು ಗಳಿಸುವ ಹೊತ್ತಿಗೆ ಅದರ ಕಾರ್ಯಕರ್ತರು ತಮ್ಮ ಗಂಟುಮೂಟೆ ಕಟ್ಟಿಕೊಂಡು ಕಾಂಗ್ರೆಸ್ ಹಿಂದೆ ಸುತ್ತತೊಡಗಿದರು. ಅವರು ಎಚ್ಚರತಪ್ಪಿದಂತಿದೆ. ಮಹಾತ್ಮಾಗಾಂಧೀಜಿಯವರ ರಾಜಕಾರಣದಿಂದ ಅವರ ಕಾಲಾವಧಿಯಲ್ಲಿ ಎಲ್ಲ ಅಧಿಕಾರ(ರಾಜಕೀಯ)ವು ಬ್ರಾಹ್ಮಣರ ಕೈಗೆ ಸೇರುವುದಾದರೆ ಆ ರಾಜಕಾರಣಕ್ಕೆ ಬೆಂಕಿಯಿಡಬೇಕು. ಮಹಾತ್ಮಾಗಾಂಧೀಜಿಯವರು ರಾಜಕಾರಣದ ಸೂತ್ರಗಳನ್ನು ಒಂದುವೇಳೆ ಶೇಠಜಿ ಮತ್ತು ಭಟಜಿಗಳ ಕೈಗೆ ನೀಡುವುದೇ ಆದರೆ, ಆ ಬ್ರಾಹ್ಮಣರ ಪಿಶಾಚಿಯನ್ನು ಮತ್ತೆ ಜೀವಂತ ಮಾಡುವುದಾದರೆ ಆ ಬ್ರಾಹ್ಮಣರ ವಿನಾಶವನ್ನು ನಾವೇ ಎಲ್ಲರೂ ಸೇರಿ ಮಾಡಬೇಕಾಗುತ್ತದೆ. ಈ ಕಾರ್ಯ ಕೇವಲ ನನ್ನದಲ್ಲ. ಬಹುಸಂಖ್ಯಾತರಾದ ಎಲ್ಲ ಬಡರೈತರ, ಕೂಲಿಗಳ ಮತ್ತು ಮರಾಠರದ್ದಾಗಿದೆ.

ಇವರೆಲ್ಲರನ್ನೂ ಸಂಘಟಿತಗೊಳಸಿದಲ್ಲಿ ಕಾನೂನುಮಂಡಳಿಯ ಎಲ್ಲ ೧೧ಕ್ಕೆ ೧೧ ಸ್ಥಾನಗಳನ್ನು ವಶಮಾಡಿಕೊಳ್ಳಬಹುದು. ಆದರೆ ಯಥೇಚ್ಛ ಭೋಜನಾನಂತರ ಉಳಿದ ಎಂಜಲಿನ ಪತ್ರಾವಳಿಯನ್ನು ತಿಪ್ಪೆಗೆಸೆದರೆ ಆ ಎಲೆ ನೆಕ್ಕುವಲ್ಲಿ ಸಂತೋಷ ಪಡುವ ನಾಯಿಗಳಂತೆ ಅವರ ಸ್ಥಿತಿಯಾಗಿದೆ. ಚೂರುಪಾರು ಪಾಲು ದೊರೆಕಿಸಿಕೊಳ್ಳುವಲ್ಲಿ ಸಮಾನತೆ ಹುಟ್ಟಬೇಕು. ಅದಷ್ಟೇ ಅಲ್ಲ, ಒಬ್ಬ ಯೋಗ್ಯನಾದ ಭಿಲ್ಲನೂ ಯೋಗ್ಯತಾನುಸಾರ ಮುಖ್ಯ ಪ್ರಧಾನನಾಗಬೇಕು. ಸಮಾಜದೊಳಗೆ ಉಚ್ಚ-ನೀಚ ಭೇದಗಳು ಕಡಿಮೆಯಾಗಬೇಕು. ಇದು ಕಾಂಗ್ರೆಸ್ಸಿಗರಿಂದ ಆಗುವುದು ಸಾಧ್ಯವಿಲ್ಲ. ಆ ಕಾರಣದಿಂದ ನಾನು ಕಾಂಗ್ರೆಸ್ಸಿನಲ್ಲಿ ಶಾಮೀಲು ಆಗುವುದಿಲ್ಲ.

ಅನೇಕ ಸಲ ಹೀಗೆ ಹೇಳಲಾಗುತ್ತಿದೆ. ಮಹಾತ್ಮಾಗಾಂಧೀಜಿಯವರ ಎದುರು ಹೋದ ವಿರೋಧಕರು ತಮ್ಮ ವಿರೋಧ ಮರೆತು ಬಿಡುತ್ತಾರೆ. ಅವರ ಬಾಯಿಯಿಂದ ಮಾತೇ ಹೊರಡುವುದಿಲ್ಲವಂತೆ, ಆದರೆ ನನ್ನ ಅನುಭವ ಇದರ ತದ್ವಿರುದ್ಧವಿದೆ. ನಾನು ಹತ್ತುಬಾರಿ ಮಹಾತ್ಮ ಗಾಂಧೀಜಿಯವರನ್ನು ಭೇಟಿಯಾಗಿದ್ದೇನೆ. ಆದರೆ ಜನ ಆಡಿಕೊಳ್ಳುವಂತೆ ನನಗೇನೂ ದೆವ್ವ ಹಿಡಿದಿಲ್ಲ.

ಬಡವ, ರೈತ ಮತ್ತು ಕೂಲಿ ವರ್ಗದ ಹಿತರಕ್ಷಣೆಗಾಗಿ ನಾವು "ಸ್ವತಂತ್ರ ಮಜೂರಪಕ್ಷ" ಹೆಸರಿನ ಪಕ್ಷವನ್ನು ಕಟ್ಟಿದ್ದೇವೆ. ಈ ಪಕ್ಷದ ಬಗ್ಗೆ ಸುದೀರ್ಘವಾಗಿ ಹೇಳದೆ, ಪಕ್ಷದ ಅರಿವಿನ ಬೀಗದ ಕೈನ ವಿಚಾರದ ಪವಿತ್ರ ಮಾತನ್ನು ಸ್ವಲ್ಪದರಲ್ಲೇ ಹೇಳುತ್ತೇನೆ. ಅನೇಕರು ನನಗೊಂದು ಪ್ರಶ್ನೆ ಕೇಳುತ್ತಾರೆ. ಅದೇನೆಂದರೆ, ರಾಜಕೀಯ ಹೋರಾಟಕ್ಕಾಗಿ ಕಾಂಗ್ರೆಸ್ಸು ಇರುವಾಗ ಎರಡನೆಯ ಪಕ್ಷದ ಅಗತ್ಯವೇನು? ಅವರಿಗೆ ನಾನು ಹೇಳುವುದಿಷ್ಟೆ, ಕಾಂಗ್ರೆಸ ಇಂದು ಬಂಡವಾಳ ಶಾಹಿಗಳ ತೊತ್ತಾಗಿದೆ. ಕಾರಣ ಕಾಂಗ್ರೆಸ್ಸಿನ ಇಂದಿನ ಎಲ್ಲ ಹುಡುಗಾಟಿಕೆಗಳಿಗೆ ಕಾಂಗ್ರೆಸ್ಸಿನೊಳಗಿನ ಬಂಡವಾಳಶಾಹಿಗಳೆ ಹಣ ಪೂರೈಸಿ ಅಮಲಿಂದ ಮೆರೆಯುತ್ತಿದ್ದಾರೆ. ಇದರರ್ಥ ಇಷ್ಟೆ, ಬಂಡವಾಳಿಗರ ಮೂಲದ ಒಂದೇ ಹೇತು; ಅದು ಈ ಕಾಂಗ್ರೆಸ್ಸಿನಿಂದ ತಮ್ಮ ಹಿತವನ್ನು ಅದೆಷ್ಟು ಕಾಪಾಡಿಕೊಳ್ಳಬೇಕೋ ಅಷ್ಟು ಸಾಧಿಸಿಕೊಂಡುಬಿಡುವುದು. ಇದು ಸತ್ಯವಾಗಿದ್ದರೂ ಅವರು ಹೊರನೋಟಕ್ಕೆ ನಾವು ಬಡವರು, ರೈತರು ಮತ್ತು ಕೂಲಿ ಕಾರ್ಮಿಕರಿಗಾಗಿ ಸ್ವರಾಜ್ಯದ ಹೋರಾಡವನ್ನು ನಡೆಸಿದ್ದೇವೆ ಎಂದುಹೇಳುತ್ತಾರೆ. ಈ ಹೇಳಿಕೆ ದೊಡ್ಡಸ್ತಿಕೆ ಮಾತೆನಿಸುತ್ತದೆ. ಕಾರಣ ಶ್ರೀಮಂತ ಬಂಡವಾಳದಾರರು ಹಾಗೂ ಬಡವರು, ರೈತರು ಮತ್ತು ಕೂಲಿಗಳ ಹಿತಸಂಬಂಧವು ಪರಸ್ಪರ ವಿರೋಧವಾಗಿದೆ. ಆಗ ಕಡುಬಡವರಿಗಾಗಿ ಸಿರಿವಂತರು ಕೈಯಿಂದ ಹಣ ವೆಚ್ಚಮಾಡಿ ಸ್ವಂತಕ್ಕೆ ಹಾನಿ ಮಾಡಿಕೊಳುತ್ತಾರೆಯೆ, ಈ ಮಾತು ಸಾಧ್ಯವೆನಿಸುವುದಿಲ್ಲ. ಹೇಗೆ ವ್ಯಾವಹಾರಿಕವಾಗಿ ನಾವು ನಿತ್ಯ ಕಾಣುವ ಸತ್ಯವಾದ ವೈರುದ್ಧಗಳಾಗಿವೆ ಅದರಂತೆ ಶ್ರೀಮಂತ ಬಂಡವಾಳದಾರ ಮತ್ತು ಬಡರೈತ, ಕೂಲಿಗಳದ್ದಾಗಿದೆ. ವ್ಯವಹಾರದಲ್ಲಿ ಹೇಗೆ ಮುಂಗುಸಿ ಹಾವನ್ನು ನೆಕ್ಕುತ್ತಿರುವಂತೆ, ಬೆಕ್ಕು ಇಲಿಯನ್ನು ಕೂಡಿದಂತೆ ಒಂದು ವೇಳೆ ಆಡು ತೋಳನ ತೊಡೆಯ ಮೇಲೆ ನಿರ್ವಿಘ್ನವಾಗಿ ಮಲಗಿದ್ದನ್ನು ಕಾಣಲು ಸಾಧ್ಯವಿಲ್ಲವೋ, ಹಾಗೆಯೇ ಸಿರಿವಂತ ಬಂಡವಾಳಿಗರ ಪ್ರೀತಿಯ ಮೇಲೆ ಬಡವ, ರೈತ ಮತ್ತು ಕೂಲಿಗಳ ಹಿತವು ಸಾಧ್ಯ ಎನ್ನುವ ಮಾತನ್ನು ಯಾರೂ ನಂಬಿ ಮೋಸ ಹೋಗಬಾರದು. ಇದು ಗಾಂಧೀಜಿಯವರ ಮಾಯಾ. ಆದ್ದರಿಂದ ರೈತರು ಮತ್ತು ಕೂಲಿಗಳು ಬಂಡವಾಳದಾರ ಕಾಂಗ್ರೆಸ್ಸು ಸಂಸ್ಥೆಯಿಂದ ತುಸು ಎಚ್ಚರವಾಗಿರಿ. ಇಷ್ಟೆ ನನಗೆ ಹೇಳುವುದಿದೆ. ಕಾರಣ ಯಾವ ಮಾರವಾಡಿ ಬಡ ರೈತರನ್ನು ಮತ್ತು ಕೂಲಿಕಾರ್ಮಿಕರನ್ನು ಲೂಟಿ ಮಾಡಿ ಅದರ ಮೇಲೆಯೇ ಶ್ರೀಮಂತನಾಗುತ್ತಾನೆಯೋ ಆತ ನಾಲ್ಕಾಣೆ ಕೊಟ್ಟು ಕಾಂಗ್ರೆಸ್ಸಿನ ಸದಸ್ಯನಾಗಿ ತನ್ನ ಸ್ವಭಾವವನ್ನು ಒಮ್ಮೆಲೆ ಬದಲಿಸಿ ಬದುಕಲು ಸಾಧ್ಯವೆಂಬ ಮಾತೆ ಹಾಸ್ಯಾಸ್ಪದವಾಗಿದೆ.

ಇಂದು ಹರಿಪುರದಲಿ ಕಾಂಗ್ರೆಸ್ಸಿನ ೫೧ನೇ ಅಧಿವೇಶನ ನಡೆಯಲಿದೆ. ಅದಕ್ಕಾಗಿ ಎಷ್ಟೋ ಲಕ್ಷ ಖರ್ಚಾಗುವುದಿದೆ ಎನ್ನುತ್ತಾರೆ. ಇಷ್ಟೊಂದು ವೆಚ್ಚವಾಗುವ ಹಣ ಎಲ್ಲಿಂದ ಬರುತ್ತದೆ? ಈ ಹಣವನ್ನು ಸಿರಿವಂತ ಶೇಠರು ನೀಡಿದ್ದಾರೆ. ಈ ವಿಷಯದಲ್ಲಿ ಒಂದು ಅನುಭವದ ಮಾತು ಹೇಳುತ್ತೇನೆ ಕೇಳಿರಿ. ನಮ್ಮ ಕೋಂಕಣ ಪ್ರದೇಶದಲ್ಲಿ ಶ್ರೀಮಂತ ಮುಸ್ಲಿಮ್‌ರು ಬಡವರ ಮಕ್ಕಳ ಮದುವೆಯನ್ನು ೧೦ ವರ್ಷಗಳ ಅವಧಿಯ ಕೆಲಸವನ್ನು ತಮ್ಮಲ್ಲಿ ಮಾಡಬೇಕು ಎಂಬ ಕರಾರು ಮಾಡಿಕೊಂಡು ಮಾಡುತ್ತಾರೆ. ಇದು ಒಬ್ಬರ ಲಗ್ನವಾಗಿರದೆ ಇಂಥ ಅನೇಕ ಅವಶ್ಯಕತೆಯಿರುವವರು ಲಗ್ನಮಾಡಿಕೊಳ್ಳುತ್ತಾರೆ. ಅದೂ ಸಹ ಒಂದೇ ಮುಹೂರ್ತದಲ್ಲಿ! ಕೊನೆಗೆ ಅವಧಿ ಮುಗಿದ ಬಳಿಕವೂ ಆಸೆಯಿಂದ ಇನ್ನೊಂದು ವರ್ಷ ಕಳೆಯುತ್ತಾರೆ. ಇವರೆಲ್ಲರೂ ಸಾಹುಕಾರರ ಬಳಿ ಕೆಲಸ ಮಾಡಬೇಕಾಗುತ್ತದೆ. ಅದೇ ರೀತಿ ಕಾಂಗ್ರೆಸ್ಸಿನ ಅಧಿವೇಶನಕ್ಕಾಗಿ ತಗಲುವ ವೆಚ್ಚದ ಲಕ್ಷಗಟ್ಟಲೆ ಹಣವನ್ನು ಶ್ರೀಮಂತ ಸಾಲಕ್ಕಾಗಿ ಈ ಹಿಂದುಸ್ಥಾನವು ಇನ್ನೆಷ್ಟು ದಿನಗಳನ್ನು ಗುಲಾಮಗಿರಿಯಲ್ಲಿ ಕಳೆಯಬೇಕಾಗಬಹುದು? ಆದಕಾರಣ ಈ ಸಂಘರ್ಷವನ್ನು ಬಡವ, ರೈತ ಮತ್ತು ಕೂಲಿವರ್ಗಗಳು ಸಂಘಟನೆಗೊಂಡೇ ಹೋರಾಡಬೇಕು. ಸ್ವತಂತ್ರ ಮಜೂರ ಪಕ್ಷದ ಅಧ್ಯಕ್ಷನಾಗಿದ್ದರೂ ನನಗದರ ಮೋಹವಿಲ್ಲ. ಬೇರೆ ಯಾರಾದರೂ ಆ ಸ್ಥಾನವನ್ನು ಅಲಂಕರಿಸುವವರಿದ್ದರೆ ನನಗೆ ಅದು ಸಂತೋಷ ತರುವ ಸಂಗತಿಯೇ ಸರಿ. ಈ ರಾಜಕಾರಣದಿಂದ ನನಗೆ ಅಂಥ ಲಾಭವೇನು? ನಾನಿದರಿಂದ ಒಂದು ವೇಳೆ ದೂರವಿದ್ದಿದ್ದರೆ, ಕೆಲವು ಲಕ್ಷಗಳ ಧನಿಯಾಗಿರುತ್ತಿದ್ದೆ. ಇಂಗಿಗೆ ಹೇಗೆ ಪರಿಮಳವಿದೆಯೋ ಹಾಗೆ ನಮಗೆ ಅಸ್ಪೃಶ್ಯತೆಯಿಂದ ಹತ್ತಿಕೊಂಡಿದೆ. ಆದ್ದರಿಂದ ಅಸ್ಪೃಶ್ಯೇತರರು ಒಂದು ವೇಳೆ ಇದರಿಂದ ಬೆದರಿ ಸ್ವತಂತ್ರ ಮಜೂರ ಪಕ್ಷದಿಂದ ದೂರವಿರಲು ಇಚ್ಛಿಸಿದ್ದಲ್ಲಿ ಅದು ಅವರ ಆಲೋಚನೆಯಷ್ಟೇ. ಆದರೆ ನಮ್ಮೊಳಗಿನ ಪ್ರತಿಯೊಂದು ವಯಸ್ಸಿಗೆ ಬಂದ ಸ್ತ್ರೀ–ಪುರುಷರು ವರ್ಷದ ಕೊನೆಗೆ ಸ್ವತಂತ್ರ ಮಜೂರ ಪಕ್ಷದ ಸದಸ್ಯರಾಗಲು ನಾಲ್ಕಾಣೆ ತುಂಬಿರಿ, ಸದಸ್ಯರಾಗಿರಿ. ಪಕ್ಷದ ಬಲವನ್ನು ವೃದ್ಧಿಸಿರಿ. ಇಷ್ಟು ಹೇಳಿ ನಿಮ್ಮಿಂದ ಬೀಳ್ಕೊಡುತ್ತೇನೆ. ಪುಷ್ಪಮಾಲೆ ಅರ್ಪಿಸಿದ ನಂತರ 'ಡಾ. ಬಾಬಾಸಾಹೇಬ ಅಂಬೇಡ್ಕರ ಕೀ ಜಯ' ಎಂಬ ಘೋಷಣೆಗಳೊಂದಿಗೆ ಸಭೆ ಮುಗಿಯಿತು.

ಮಧ್ಯಾಹ್ನ ೩ ಗಂಟೆಗೆ ಸಟಾಣೆಯಿಂದ ಹೊರಟು ದಾರಿ ಮಧ್ಯೆದಲ್ಲಿ ಬರುವ ಕಾಖಿಸಾಂಗವಿ, ತಾಲೂಕು ಚಾಂದವಡ ಎಂಬ ಊರಲ್ಲಿ ಡಾ. ಬಾಬಾಸಾಹೇಬರನ್ನು ಅಭಿನಂದಿಸಲಾಯಿತು. ಸದರಿ ಊರಿನ ಮರಾಠಾ ಜಾತಿಯ ಪ್ರಮುಖ ಪುಢಾರಿ ಶ್ರೀಕಾರಭಾರಿ ಬಗಾಜಿ ಪಾಟೀಲ ಅವರು ಡಾ. ಬಾಬಾಸಾಹೇಬರ ಗುಣಗಾನದ ಮಾತುಗಳನ್ನಾಡಿದರು.

# ೧೧೮.

# ಸ್ವಾತಂತ್ರ್ಯ, ಸಮತೆ ಮತ್ತು ಬಂಧುಭಾವ–ಈ ತತ್ವಗಳ ಆಧಾರದ ಹೊಸಪದ್ಧತಿಯು ಕಾರ್ಮಿಕ ಸಂಘಟನೆಯ ಧ್ಯೇಯ

ಮನಮಾಡದ ಅಖಿಲ ಜಿ.ಐ.ಪಿ.ರೇಲ್ವೆ ಅಸ್ಪೃಶ್ಯ ಕಾರ್ಮಿಕ ಪರಿಷತ್ತು ಆಯೋಜಿಸಲು ಕೆಲವು ಧೋರಣೆಗಳನ್ನು ವಿಶದ ಪಡಿಸಲು ರೇಲ್ವೆ ಅಸ್ಪೃಶ್ಯ ಕಾರ್ಮಿಕರಿಗೆ ಉದ್ದೇಶಿಸಿ ಪ್ರಕಟನೆ ಹೊರಡಿಸಲಾಗಿತ್ತು. ಅದರಂತೆ–

"ಅಖಿಲ ಜಿ.ಐ.ಪಿ.ರೇಲ್ವೆ ಅಸ್ಪೃಶ್ಯ ಕಾರ್ಮಿಕ ಪರಿಷತ್ತು, ಮನಮಾಡನಲ್ಲಿ ಈ ತಿಂಗಳ ಕೊನೆಗೆ ಸಭೆ ಸೇರಲಿದೆ. ಸಭೆಸೇರುವ ಪೂರ್ವದಲ್ಲಿ, ನಿರ್ಧಾರಕ್ಕೆ ಮುನ್ನ ಪರಿಷತ್ತಿನ ಪದಾಧಿಕಾರಿಗಳಲ್ಲಿ ಕೆಲವು ಪ್ರಮುಖವ್ಯಕ್ತಿಗಳು ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರನ್ನು ಕಳೆದ ತಿಂಗಳಲ್ಲಿ ಭೇಟಿಯಾಗಿದ್ದರು. ಪರಿಷತ್ತು ಸಭೆಸೇರಲು ಕಾರಣ ವರ್ತಮಾನದಲ್ಲಿ ಅಲ್ಲಲ್ಲಿ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಿಂದ ದಾರಿದ್ರ್ಯ ಅವಸ್ಥೆ ನಿರ್ಮಾಣಗೊಂಡಿದೆ. ಬಡ ಕಾರ್ಮಿಕರಿಗೆ ಈ ಬಿಕ್ಕಟ್ಟಿನ ಪರಿಸ್ಥಿತಿಯ ಅರಿವು ಆಗಿದೆ. ಅದರಲ್ಲೂ ಅಸ್ಪೃಶ್ಯ ಕಾರ್ಮಿಕರಿಗೆ ಉಂಟಾಗುವ ದಯನೀಯ ಸ್ಥಿತಿಗೆ ಎಲ್ಲೆಯಿಲ್ಲದಂತಾಗಿದೆ. ಸ್ಪೃಶ್ಯವರ್ಗದ ಕಾರ್ಮಿಕರಿಂದ ಆಗುವ ಕೊಂಚಕಷ್ಟ ಒಂದೆಡೆಯಾದರೆ, ಅಧಿಕಾರಿಗಳಿಂದ ಉಂಟಾಗುವ ಕಷ್ಟಗಳನ್ನು, ತ್ರಾಸುಗಳನ್ನು ಯಾರ ಬಳಿ ಹೇಳಿಕೊಳ್ಳುವುದು. ಕೇಳಿಸಿಕೊಳ್ಳುವ ಹೊಣೆಗಾರಿಕೆಯ ವ್ಯಕ್ತಿಗಳು ಯಾರೂ ಇಲ್ಲ. ಅಥವಾ ಯೋಗ್ಯ ರೀತಿಯಲ್ಲಿ ನಮ್ಮ ನಿವೇದನೆಯನ್ನು ಅಧಿಕಾರಿಗಳೆದುರು ಮಂಡಿಸುವ ನಿಜವಾದ ಪ್ರತಿನಿಧಿಯೂ ಇಲ್ಲ. ಅಂತಕರಣದ ಖರೆ ಕಕ್ಕುಲಾತಿ ಹೊರತು ಕಾರ್ಯವಾಗುವುದಿಲ್ಲವೆಂಬ ಸತ್ಯವು ಅಸ್ಪೃಶ್ಯ ಕಾರ್ಮಿಕ ಬಂಧುಗಳು ಕಹಿ ಅನುಭವದಿಂದ ಸಂಪೂರ್ಣ ತಿಳಿದುಕೊಂಡಿದ್ದಾರೆ. ರಾಕ್ಷಸಿ ಸ್ವರೂಪದ ರೇಲ್ವೆ ಕೆಲಸ ಮಾಡುವುದು ಮತ್ತು ದೊರೆವ ವೇತನವೆಷ್ಟು? ರಾತ್ರಿಯಿಡಿ ಜೀವ ತೇಯ್ದು ಮೆಹನತ್ತು ಮಾಡಿದರೂ ಒಂದು ವೇಳೆಯ ರೊಟ್ಟಿಗೆ ಸೀಮೀತ! ಕಡಿಮೆ ವೇತನದ ನೌಕರಿ! ಈ ಕಾರ್ಯ ನಿರ್ವಹಿಸುವಾಗ ಸ್ವಂತ ಕೌಟುಂಬಿಕ ಸಂಸಾರಕ್ಕೆ ಸಾಲಪಡೆದು ಸಾಲಗಾರನಾಗಿ ಬಿಡುವ ಸ್ಥಿತಿಯು ಬೇರೆನೆ! ಇಂಥ ಬಿಕ್ಕಟ್ಟಿನ ಜೊತೆಗೆ ಅಸ್ಪೃಶ್ಯತೆಯೆಂಬ ಕಳಂಕ ಹೊತ್ತು ಬದುಕುವ ಯಾತನೆಯು ದಿನದಿಂದ ದಿನಕ್ಕೆ ಕಷ್ಟದಾಯಕವಾಗುತ್ತ ಸಾಗುತ್ತದೆ. ಇವೆಲ್ಲ ಸಾಧಕ ಬಾಧಕಗಳನ್ನು ಯೋಚಿಸಿ ಅಸ್ಪೃಶ್ಯ ಕಾರ್ಮಿಕರನ್ನು ಒಟ್ಟುಗೂಡಿಸಿ ಮುಂದಿನ ಕಾರ್ಯದ ಸ್ವರೂಪ ಸಿದ್ಧಪಡಿಸಲು ಕಾರ್ಮಿಕರ ಪ್ರಮುಖ ವ್ಯಕ್ತಿಗಳ ಅಖಿಲ ಜಿ.ಐ.ಪಿ ರೇಲ್ವೆ ಕಾರ್ಮಿಕ ಪರಿಷತ್ತು ಎಂಬ ಸಭೆಯನ್ನು ಕರೆಯಲಾಗಿದೆ.

ಮನಮಾಡದಲ್ಲಿ ಸೇರಲಿರುವ ಈ ಉಪನಿರ್ದಿಷ್ಟ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಅಸ್ಪೃಶ್ಯ ಸಮುದಾಯದ ಪುಢಾರಿ ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಒಪ್ಪಿಕೊಂಡರು. ಅಸ್ಪೃಶ್ಯರ ಸರ್ವಾಂಗೀಣ ಉನ್ನತಿಗಾಗಿ

---

೧. ಜನತಾ: ೮ ಮೇ ೧೯೩೭

ಅವರಿಗೆ ರಾಜಕೀಯ ಹಕ್ಕು ದೊರಕಿಸಿಕೊಡಲು ಡಾ. ಬಾಬಾಸಾಹೇಬರು ಇದುವರೆಗೆ ನಡೆಸಿದ ಹೋರಾಟ, ಚಿಂತನೆ ನಿಸ್ವಾರ್ಥ ರೂಪದ್ದು. ಇದು ಎಲ್ಲರಿಗೂ ತಿಳಿದಿರುವ ಸಂಗತಿ. ಹಿಂದೂಸ್ಥಾನದಲ್ಲಿಯ ಜಿ.ಐ.ಪಿ.ರೇಲ್ವೆಯಲ್ಲಿ ಅಸ್ಪೃಶ್ಯಕಾರ್ಮಿಕರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇದರ ಸಂಘಟನೆಯಾಗಬೇಕು. ಅದರಿಂದ ಬಂಡವಾಳದಾರ ಮತ್ತು ಕಾರಖಾನೆಯ ಮಾಲಿಕರ ವಿರುದ್ಧ ನಡೆಯುತ್ತಿರುವ ಹೋರಾಟದ ಸಂದರ್ಭದ ಸರಿಯಾದ ಚರ್ಚೆ ನಡೆದು ಈ ಪರಿಷತ್ತು ನಡೆಸುವ ಅಧಿವೇಶನದಿಂದ ಅಖಿಲ ರೇಲ್ವೆ ಕಾರ್ಮಿಕರ ಹಿತದ ಅನೇಕ ಕಾರ್ಯಗಳು ನಡೆಯದೇ ಇರಲಾರವು. ಕೇವಲ ಪುಸ್ತಕೀ ವಿದ್ಯೆಯಿಂದ ಕಾರ್ಮಿಕರ ಕಷ್ಟಗಳು ಅರ್ಥವಾಗುವುದಿಲ್ಲ. ಅವರ ಬಿಕ್ಕಟ್ಟುಗಳಿಗೆ, ಬದುಕಿನ ಕಲಹಗಳಿಗೆ ಸಮರಸವಾಗದೇ ಅವರ ಅಸಹ್ಯ ಸ್ಥಿತಿಯ ಕಲ್ಪನೆ ಬರುವುದು ಅಸಾಧ್ಯ. ರೇಲ್ವೆಯಂಥ ಬಲಿಷ್ಠ ವ್ಯಾಪಾರಿ ಸಂಸ್ಥೆ ತನ್ನ ಕಾರ್ಮಿಕರ ಸಂದರ್ಭದಲ್ಲಿ ಕಾಳಜಿವಹಿಸುವುದು ಎಷ್ಟು ಅಗತ್ಯವಾಗಿದೆ ಎಂಬುದನ್ನು ಬೇರೆಯವರು ಹೇಳಿ ಪ್ರಯೋಜನವಿಲ್ಲ. ಅದರ ಅರಿವು ಈ ಧನಿಕರಿಗೆ ಮೊದಲಿಗೆ ಆಗಬೇಕು. ಯಾರ ಶ್ರಮದ ಮೇಲೆ ಸಿರಿವಂತರಾಗಿ ಐಶಾರಾಮದ ಬದುಕನ್ನು ಅನುಭವಿಸುತ್ತಿದ್ದೇವೆಯೋ ಅವರಿಗೆ ಕನಿಷ್ಠ ಎರಡುಹೊತ್ತು ಹೊಟ್ಟೆತುಂಬ ಅನ್ನ ದೊರಕುವಷ್ಟು ಸಂಬಳನೀಡುವ ಕರ್ತವ್ಯವು ಪ್ರತ್ಯೇಕ ಕಾರಖಾನೆದಾರನದ್ದು, ಧನಿಕರದ್ದು ಮತ್ತು ಬಂಡವಾಳಶಾಹಿಗಳದ್ದಾಗಿದೆ. ಕಾರ್ಮಿಕರ ಹೋರಾಟವೆಂದರೆ ಹೊಟ್ಟೆಪಾಡಿನ ಸಂಘರ್ಷ ತಮಗೆ ಮತ್ತು ತಮ್ಮ ಮಕ್ಕಳಿಗೆ ಎರಡೊತ್ತು ಹೇಗೆ ಅನ್ನ ನೀರು ದೊರೆಯಬಹುದು ಎಂಬುದರ ವಿವಂಚನೆಯು ಈ ಕಾರ್ಮಿಕ ಬಂಧುಗಳಿಗೆ ಹತ್ತಿರುತ್ತದೆ. ಇಂಥ ಸಮಯದಲ್ಲಿ ತುಸು ವಿಶ್ರಾಂತಿ ಮತ್ತು ಐಶಾರಾಮ ಬದುಕುವಷ್ಟು ಪ್ರವೃತ್ತಿ ಮತ್ತು ಅಂಥ ಮನಸ್ಥಿತಿಯಿರುವುದಿಲ್ಲ. ಇವೆಲ್ಲ ಪರಿಸ್ಥಿತಿಯ ಕುರಿತು ಯೋಚಿಸಿ ಪರಿಷತ್ತು ಸೇರುವುದರ ಕುರಿತು ಯೋಚಿಸಲಾಗಿದೆ.

ಈ ಪರಿಷತ್ತು ಯಶಸ್ವಿಯಾಗಿಸಲು ಮನಮಾಡ, ಭುಸಾವಳ, ಕಲ್ಯಾಣ, ಇಗತಪುರಿ, ನಾಂದಗಾವ, ದೌಂಡ, ಸೊಲ್ಲಾಪುರ, ಠಾಣೆ, ಮುಂಬೈ ಮುಂತಾದ ಸ್ಥಳಗಳ ಪ್ರಮುಖ ಕಾರ್ಯಕರ್ತರು ಡಾ. ಬಾಬಾಸಾಹೇಬರ ಜೊತೆಗೆ ಮುಂಚೆಯೇ ವಿಚಾರ ವಿನಿಮಯ ಮಾಡಿದ್ದಾರೆ. ಪರಿಷತ್ತಿನ ಆಲೋಚನೆ ಹೊರಬೀಳುತ್ತಿದ್ದಂತೆ ಮುಂಬೈನಿಂದ ವಿಚಾರ ವಿನಿಮಯ ಮಾಡಿದ್ದಾರೆ. ಪರಿಷತ್ತಿನ ಆಲೋಚನೆ ಹೊರಬೀಳುತ್ತಿದ್ದಂತೆ ಮುಂಬೈನಿಂದ ದಿಲ್ಲಿ, ಅಲಹಾಬಾದ, ಲಖನೌ, ಕಾನಪುರ ಜಬಲಪುರ, ರಾಯಪುರ ಮುಂತಾದ ಬ್ರ್ಯಾಂಚ್‌ಲೈನ್ ವಿಭಾಗಗಳಿಂದ ಈ ಪರಿಷತ್ತನ್ನು ಯಶಸ್ವಿಗೊಳಿಸಲು ನೇರ ಸಹಾನುಭೂತಿಯ ಬೆಂಬಲ ಸಿಗುತ್ತಿದೆ. ಹೀಗೆ ಪ್ರತಿಯೊಂದು ಪ್ರಾಂತದ ಪ್ರತಿನಿಧಿಗಳ ಪ್ರಾಥಮಿಕ ಸ್ವರೂಪದ ನಿಜ ಕಾನ್ಫರನ್ಸ ಯಶಸ್ವಿಗೊಳಿಸಲು ಎಲ್ಲ ಅಸ್ಪೃಶ್ಯ ರೇಲ್ವೆ ಕಾರ್ಮಿಕರು ಪರಿಷತ್ತನ್ನು ನಡೆಸುವವರಿಗೆ ಆಪ್ತ ಪ್ರೀತಿಯಿಂದ ಮತ್ತು ಕಾರ್ಯದಕ್ಷತೆಯ ಕಳಕಳಿಯಿಂದ ಸಹಾಯ ಮಾಡುವುದು ಅಗತ್ಯವಾಗಿದೆ. ಈ ಪರಿಷತ್ತಿನ ಜನರಲ್ ಸೆಕ್ರೆಟರಿ ಶ್ರೀ ಆರ್.ಆರ್. ಪವಾರ ಅವರಾಗಿದ್ದಾರೆ. ಇವರ ಕೆಲಸ ಕಾರ್ಯಕುರಿತು ಅಸ್ಪೃಶ್ಯ ರೇಲ್ವೆ ಕಾರ್ಮಿಕರಿಗೆ ಸಂಪೂರ್ಣ ಅರಿವಿದೆ. ಅದರಂತೆ ಪರಿಷತ್ತಿನ ಬೇರೆ ಚಾಲಕ ಮಂಡಳಿಯವರ ಕುರಿತೂ ನಮ್ಮ ರೇಲ್ವೆ ಕಾರ್ಮಿಕರಿಗೆ ಗೊತ್ತಿದೆ. ಇದಲ್ಲದೆ ಈ ಪರಿಷತ್ತು ನಮ್ಮ ಪರಮಪೂಜ್ಯ ಮುಂದಾಳು ಮತ್ತು ಸ್ವತಂತ್ರ ಮಜೂರ ಪಕ್ಷದ ಅಧ್ಯಕ್ಷ ಡಾ. ಬಾಬಾಸಾಹೇಬ ಅಂಬೇಡ್ಕರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಪರಿಷತ್ತಿನ ವಿನಂತಿ ಪ್ರಕಟನೆಗಳು, ಚಂದಾ ಮಾಡುವ ರಶೀತಿ ಪುಸ್ತಕಗಳು ಅಲ್ಲಲ್ಲಿ ಪರಿಷತ್ತಿನ ಕಾರ್ಯಕರ್ತರ ಬಳಿ ನೀಡಲಾಗಿದೆ. ಹಾಗೆಯೇ ಪ್ರತಿಯೊಬ್ಬ ಅಸ್ಪೃಶ್ಯ ರೇಲ್ವೆ ಕಾರ್ಮಿಕರು ಪರಿಷತ್ತಿನ ಪ್ರತಿನಿಧಿಯಾಗಲೇ ಬೇಕು. 'ನಮ್ಮ ಸಂಘಟನೆ ಸ್ವಾವಲಂಬಿ ದಾರಿಯಲ್ಲಿ ಹೆಜ್ಜೆ ಹಾಕದೇ ನಮ್ಮ ಕೆಲಸ ಕಾರ್ಯಗಳಿಗೆ

ನಿಜವಾದ ಯಶಸ್ಸು ಲಭಿಸುವುದಿಲ್ಲ' ಇದು ಡಾ. ಬಾಬಾಸಾಹೇಬರ ಸಂದೇಶ. ಇದನ್ನು ಪ್ರತಿಯೊಬ್ಬ ರೇಲ್ವೆ ಅಸ್ಪೃಶ್ಯ ಕಾರ್ಮಿಕರು ತಮ್ಮ ಅಂತಃಕರಣಲ್ಲಿ ಜಾಗೃತವಾಗಿಡಬೇಕು. ಮನಮಾಡನಲ್ಲಿಯ ಅಖಿಲ ಜಿ.ಐ.ಪಿ ರೇಲ್ವೆ ಅಸ್ಪೃಶ್ಯ ಕಾರ್ಮಿಕ ಪರಿಷತ್ತನ್ನು ಯಶಸ್ವಿಗೊಳಿಸಲು ನಮ್ಮ ಕಾರ್ಮಿಕ ಚಳವಳಿಯ ದೃಷ್ಟಿಯಿಂದ ವಿಶೇಷ ಮಹತ್ವವಿದೆ. ಈ ವಿಚಾರವನ್ನು ಪ್ರತಿಯೊಬ್ಬರು ಸಂಪೂರ್ಣ ಗಮನದಲ್ಲಿಟ್ಟು ಈ ಪರಿಷತ್ತನ್ನು ತನುಮನ ಧನದಿಂದ ವಿಜಯುಗೊಳಿಸುವ ನಿರ್ಧಾರವನ್ನು ಇಂದೇ ತೆಗೆದುಕೊಳ್ಳಬೇಕು'[೧]

ಮೇಲಿನ ಪರಿಷತ್ತನ್ನು ಇದೇ ವರ್ಷ ಮನಮಾಡನಲ್ಲಿ ನಡೆಸುವುದನ್ನು ಪಕ್ಕಾ ನಿರ್ಧರಿಸಲಾಗಿತ್ತು. ಆದರೆ ಪರಿಷತ್ತಿನ ನಿಯೋಜಿತ ಅಧ್ಯಕ್ಷ ಡಾ. ಬಾಬಾಸಾಹೇಬ ಅಂಬೇಡ್ಕರರಿಗೆ ಈ ಮೊದಲೇ ನಿರ್ಧಾರಗೊಂಡ ತಾರೀಖುಗಳಿಗೆ ಇತರ ಕಾರ್ಯನಿಮಿತ್ತ ಹಾಜರಾಗುವುದು ಸಾಧ್ಯವಾಗಿರಲಿಲ್ಲ. ಈಗ ಈ ಪರಿಷತ್ತು ಮನಮಾಡನಲ್ಲಿ ದಿ: ೨೯ ಮತ್ತು ೩೦ ಜನೆವರಿ ೧೯೩೮ ಖಂಡಿತ ನಡೆಯಲಿದೆ. ಡಾ. ಬಾಬಾಸಾಹೇಬರು ಈ ದಿನಾಂಕಗಳಿಗೆ ಅನುಮತಿ ನೀಡುತ್ತಿದ್ದಂತೆ ಬಹುಬಿರುಸಿನಿಂದ ಸಿದ್ಧತೆಗಳು ನಡೆಯುತ್ತಿವೆ. 'ರೇಲ್ವೆ ಅಥವಾ ಗಿರಣಿಗಳಲ್ಲಿ, ದೊಡ್ಡ ದೊಡ್ಡ ಕಾರಖಾನೆಗಳಲ್ಲಿ ಅಸ್ಪೃಶ್ಯಕಾರ್ಮಿಕರಿಗೆ ಅದೆಷ್ಟು ತೊಂದರೆಗಳಾಗುತ್ತಿವೆ. ದೇಹ ದುಡಿಮೆಯ ಆ ಕೆಸಲಗಳಲ್ಲಿಯೂ ಅಸ್ಪೃಶ್ಯತೆಯ ಕಾರಣವಾಗಿ ಅವಮಾನಗಳನ್ನು ಅನುಭವಿಸಬೇಕಾಗುತ್ತದೆ. ಹಾಗೆಯೇ ಆರ್ಥಿಕದೃಷ್ಟಿಯಿಂದಲೂ ಜಗದೆದುರು ತೆರೆದಿಟ್ಟು ಇವತ್ತಿನ ಸುಧಾರಣೆಯ ಕಾಲದಲ್ಲೂ ಅಸ್ಪೃಶ್ಯತೆಯ ಕಳಂಕವು ಅಸ್ಪೃಶ್ಯಕಾರ್ಮಿಕರನ್ನು ಹೇಗೆ ಅಡ್ಡಿಪಡಿಸುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಅಸ್ಪೃಶ್ಯಕಾರ್ಮಿಕರ ಮೇಲಾಗುವ ಅನ್ಯಾಯವನ್ನು ನಿರ್ಮೂಲನೆ ಮಾಡುವುದಕ್ಕಾಗಿ ಈ ರೇಲ್ವೆ ಕಾರ್ಮಿಕರು ಭಿನ್ನ ಮತ್ತು ಸ್ವತಂತ್ರ ಪರಿಷತ್ತನ್ನು ಸೇರಿಸುವುದನ್ನು ಮಾಡುತ್ತಿದ್ದಾರೆ. ಅಂಥ ಪರಿಸ್ಥಿತಿ ಅವರಿಗೊದಗಿದೆ. ಅಸ್ಪೃಶ್ಯ ಕಾರ್ಮಿಕರು ಇತರ ಕಾರ್ಮಿಕರಿಂದ ವಿಭಕ್ತವಾಗಲು ಇಚ್ಛಿಸುವುದಿಲ್ಲ. ಎಲ್ಲ ಕಾರ್ಮಿಕರು ಇತರ ಕಾರ್ಮಿಕರಿಂದ ವಿಭಕ್ತವಾಗಲು ಇಚ್ಛಿಸುವುದಿಲ್ಲ. ಎಲ್ಲ ಕಾರ್ಮಿಕರ ಬೇಡಿಕೆಗಳಿಗೆ ಅಸ್ಪೃಶ್ಯ ಕಾರ್ಮಿಕರು ಸ್ಪಂಧಿಸಿ ಸಹಕಾರ ನೀಡಿಯೇ ನೀಡುತ್ತಾರೆ. ಆದರೆ ಇಂದು ಅಸ್ಪೃಶ್ಯತೆಯಿಂದ ಈ ಅಸ್ಪೃಶ್ಯ ಕಾರ್ಮಿಕರು ಎದುರಿಸುತ್ತಿರುವ ಬಿಕ್ಕಟ್ಟು ನಿರ್ಮಾಣಗೊಂಡಿದೆ. ಅದರ ವಿಚಾರ ಮಂಥನ ನಡೆಸಲು ಮತ್ತು ಬೇರೆ ಕಾರ್ಮಿಕರ ಹಿತಸಂಬಂಧದ ಸಮಸ್ಯೆಗಳಿಗೆ ಖಚಿತ ಧೋರಣೆಗಳನ್ನು ನಿರ್ಧರಿಸಲು ಈ ಜಿ.ಐ.ಪಿ. ರೇಲ್ವೆ ಕಾರ್ಮಿಕ ಪರಿಷತ್ತನ್ನು ಕರೆಯಲಾಗಿದೆ.

ಈ ಪರಿಷತ್ತಿನ ಸ್ಪಷ್ಟೀಕರಣವನ್ನು ಮೇಲಿನಂತೆ ಮಾಡಲಾಗಿದೆ. ಆದ್ದರಿಂದ ರೇಲ್ವೆ ಕಾರ್ಮಿಕರು ತಮ್ಮ ಸಂಘಟನೆ ಹುರಿಗೊಳಿಸಿ ಮನಮಾಡನ ಪರಿಷತ್ತನ್ನು ಯಶಸ್ವಿಗೊಳಿಸಬೇಕು. ಈ ಪರಿಷತ್ತಿನ ಯುವ, ಉತ್ಸಾಹಿ ಜನರಲ್ ಸೆಕ್ರೆಟರಿ ಶ್ರೀ ಆರ್. ಆರ್. ಪವಾರರು ಅಪೂರ್ವವಾಗಿ ಯಶಸ್ವಿಗೊಳಿಸಲು ಸಂಕಲ್ಪ ಮಾಡಿದ್ದಾರೆ. ತಮ್ಮ ಮಿತ್ರ ಸಮೂಹದಿಂದ ಸಹಕಾರದಿಂದ ಆ ಕಾರ್ಯಕ್ಕೆ ತೊಡಗಿಯೇ ಬಿಟ್ಟಿದ್ದಾರೆ. ಡಾ. ಬಾಬಾ ಸಾಹೇಬ ಅಂಬೇಡ್ಕರರು ಅಧ್ಯಕ್ಷತೆ ಮಾತುಗಳಲ್ಲಿ ರೇಲ್ವೆ ಕಾರ್ಮಿಕರಿಗೆ ಮಾರ್ಗದರ್ಶನ ನೀಡುವ ಧೋರಣೆಯ ವಿಚಾರಗಳನ್ನು ಹೇಳುವವರಿದ್ದಾರೆ. ಈ ಪರಿಷತ್ತು ಅಖಿಲ ಭಾರತೀಯ ಸ್ವರೂಪದ್ದಾಗಿದೆ. ಅದರ ಯಶಸ್ಸೆಂದರೆ ಭಾರತೀಯ ರೇಲ್ವೆ ಅಸ್ಪೃಶ್ಯ ಕಾರ್ಮಿಕರ ನಿಜ ಹಿತವೂ ಹೌದು. ಆದಕಾರಣ ಸರ್ವ ಕಾರ್ಮಿಕರು ತಮ್ಮ ಅಪಾರ ಶಕ್ತಿಯ ಮೂಲಕ ಈ ಪರಿಷತ್ತನ್ನು ಬಿರುಸಿನಿಂದ ಮತ್ತು ಅಪೂರ್ವ ವಿಜಯದ ಮೂಲಕ ನೆರವೇರಿಸಬೇಕು. ಅದಕ್ಕಾಗಿ ಚಾಲಕ ಮಂಡಳಿಯ ಸಂಗಡ ನೇರ ಸಹಕಾರ್ಯ ಇರಬೇಕು. ಅಗತ್ಯಬಿದ್ದರೆ ಅಸ್ಪೃಶ್ಯ ಕಾರ್ಮಿಕರು ತಮ್ಮ ಚಳುವಳಿಯನ್ನು

ಸ್ವಾವಲಂಬನೆ ಮಾರ್ಗದ ಮೂಲಕವು ಯಶಸ್ಸು ಕಾಣಿಸಿ ದಡ ಸೇರಿಸಬಲ್ಲರೆಂಬುದನ್ನು ಪ್ರಪಂಚಕ್ಕೆ ತಿಳಿಸಿಯಾರು. ಜಾಗೃತಗೊಂಡ ರೇಲ್ವೆ ಅಸ್ಪೃಶ್ಯ ಕಾರ್ಮಿಕರು ತಮ್ಮ ಕರ್ತವ್ಯದ ಅಲೌಕಿಕ ಶಕ್ತಿಯನ್ನು ಎಲ್ಲರಿಗೆ ತೋರಿಸದೆ ಇರರು. ಇದು ನಮ್ಮ ಖಚಿತವಾದ ಅಭಿಪ್ರಾಯ'[೧]

ಈ ಪರಿಷತ್ತಿಗೆ ಹಾಜರಾಗಲು ಡಾ. ಬಾಬಾಸಾಹೇಬ ಅಂಬೇಡ್ಕರರು ಜನರಲ್ ಸೆಕ್ರೆಟರಿ ಅವರಿಗೆ ಪತ್ರ ಬರೆದರು. ಅದರಂತೆ ಜನರಲ್ ಸೆಕ್ರೆಟರಿಯವರು ಬಾಬಾಸಾಹೇಬರಿಗೆ ಪತ್ರ ರವಾನಿಸಿದರು ಮತ್ತು ಬಹಿರಂಗ ಹೇಳಿಕೆ ನೀಡಿದರು. ಇವೆರಡು ಪತ್ರ ಮತ್ತು ಹೇಳಿಕೆಗಳು ಹೀಗಿವೆ–

"ರಾಜಗೃಹ, ಹಿಂದೂ ಕಾಲನಿ
ದಾದರ–ಮುಂಬೈ ದಿ: ೧೪–೧–೧೯೩೮.

ಶ್ರೀಯುತ ರಾಮಚಂದ್ರರಾವ ಪವಾರ, ಜನರಲ್ ಸೆಕ್ರೆಟರಿ, ರೇಲ್ವೆ ದಲಿತ ಕಾರ್ಮಿಕ ಮಂಡಳಿ ಮತ್ತು ಕಾಮಗಾರರಿಗೆ–

ಮನಮಾಡನಲ್ಲಿ ನಡೆವ ರೇಲ್ವೆದಲಿತ ಕಾರ್ಮಿಕಪರಿಷತ್ತು ಸರ್ವದೃಷ್ಟಿಕೋನಗಳಿಂದ ಅತ್ಯಂತ ಮಹತ್ವದ್ದಾಗಿದೆ. ಈ ಪರಿಷತ್ತಿಗೆ ದಿ. ೨೯ ಮತ್ತು ೩೦ ಜನೆವರಿ ೧೯೩೮ಕ್ಕೆ ಹಾಜರಿರುವೆನೆಂದು ಒಪ್ಪಿಗೆ ನೀಡಿದ್ದೆ. ಆದರೆ ಅನಿವಾರ್ಯ ಕಾರಣಗಳಿಂದ ಈ ಮೇಲಿನ ದಿನಾಂಕಗಳಂದು ಹಾಜರಿರಲು ಆಗದೇ ಇರುವುದಕ್ಕೆ ಕೆಡುಕೆನಿಸುತ್ತದೆ. ಸದರಿ ದಿನಾಂಕಗಳನ್ನು ಕೇವಲ ೧೫ದಿನಗಳಷ್ಟು ಮುಂದೂಡಿದ್ದಲ್ಲಿ ಪರಿಷತ್ತಿಗೆ ಬರಲು ನನಗೆ ಸಾಕಷ್ಟು ಅವಧಿ ದೊರೆಯುವುದು. ಕಾರಣ ಸದರಿ ಪರಿಷತ್ತನ್ನು ಶನಿವಾರ ಮತ್ತು ರವಿವಾರ ದಿ: ೧೨ ಮತ್ತು ೧೩ ಫೆಬ್ರುವರಿ ೧೯೩೮ಕ್ಕೆ ಇಟ್ಟರೆ ಸರಿಯಾಗುತ್ತದೆ. ಅದರಂತೆ ಅನೇಕ ದಿನಗಳಿಂದ ನಾಶಿಕಜಿಲ್ಲೆಯ ಪೂರ್ವ ಭಾಗದ ಸಟಾಣೆ ಮತ್ತು ಕಾಯ್ಖಿಸಾಂಗಾವಿ ಎಂಬ ಊರುಗಳಿಗೆ ನಾನು ಭೇಟಿಕೊಡಬೇಕೆಂಬ ಆ ಜನರ ಆಸೆಯೂ ಪೂರ್ತಿಗೊಳ್ಳಬಹುದು. ಆದಕಾರಣ ಈ ಮೇಲಿನ ತಾರೀಕುಗಳಂದು ಪರಿಷತ್ತನ್ನು ಇಡುವ ದಯೆ ತೋರಬೇಕು. ತಮ್ಮ ಅನೇಕರಿಗೆ ದಿ: ೨೯, ೩೦ ಜನೆವರಿ ೧೯೩೮ರಂದು ತೆಗೆದುಕೊಳ್ಳುವ ರಜಾ ಹಾಗೂ ಪಾಸ್‌ಗಾಗಿ ತೊಂದರೆಯಾಗಿರಬಹುದು. ಇದನ್ನು ನಾನು ಒಪ್ಪುವೆ. ಅದಕ್ಕಾಗಿ ನನ್ನನ್ನು ಕ್ಷಮಿಸಬೇಕೆಂದು ವಿನಂತಿಸುವೆ.

ತಮ್ಮ ಕೃಪಾಭಿಲಾಷಿ
ಭೀಮರಾವ ರಾ. ಅಂಬೇಡ್ಕರ.

ಪರಮಪೂಜ್ಯ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಪಾದಗಳಿಗೆ ಶಿರಸಾಷ್ಟಾಂಗ ನಮಸ್ಕಾರಗಳು.

ತಮ್ಮ ಆಜ್ಞೆಯಂತೆ ರೇಲ್ವೆ ದಲಿತ ಕಾರ್ಮಿಕ ಪರಿಷತ್ತಿನ ದಿನಾಂಕಗಳಾದ ೧೨ ಮತ್ತು ೧೩ ಫೆಬ್ರುವರಿ ೧೯೩೮, ಶನಿವಾರ ಹಾಗೂ ರವಿವಾರದ ವಿಚಾರಗಳನ್ನು ಸ್ವಾಗತಮಂಡಳಿಯೆದುರು ಇಟ್ಟಿರುವೆ,

---

೧. ಜನತಾ: ೨೫ ಡಿಸೆಂಬರ್ ೧೯೩೭.

ನಮಸ್ಕಾರಗಳೊಂದಿಗೆ

ತಮ್ಮ ನಮ್ರ ಸೇವಕ

ಆರ್. ಆರ್. ಪವಾರ.
ಬಹಿರಂಗ ಹೇಳಿಕೆ

ಪರಮಪೂಜ್ಯ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಆಜ್ಞೆಯಂತೆ ರೇಲ್ವೆ ದಲಿತ ಕಾರ್ಮಿಕ ಪರಿಷತ್ತನ್ನು ದಿ: ೧೨ ಮತ್ತು ೧೩ಫೆಬ್ರುವರಿ ೧೯೩೮ರ ಶನಿವಾರ ಹಾಗೂ ಭಾನುವಾರದಂದು ತೆಗೆದುಕೊಳ್ಳಲು ನಿಶ್ಚಯಿಸಲಾಗಿದ್ದು ಬಹುಬೇಗನೆ ಕಾರ್ಯಕ್ರಮದ ವಿವರಗಳನ್ನು ಪ್ರಕಟಿಸಲಾಗುವುದು.

ತಮ್ಮ ನಮ್ರ ಸೇವಕ

ಆರ್. ಆರ್. ಪವಾರ
ಜನರಲ್ ಸೆಕ್ರೆಟರಿ
ಮನಮಾಡ ರೇಲ್ವೆ ದಲಿತ ಕಾರ್ಮಿಕ ಪರಿಷತ್ತು'[೧]

## ಮನಮಾಡನಲ್ಲಿಯ ತ್ರಿವೇಣಿ ಸಂಗಮ

ಶನಿವಾರ ಹಾಗೂ ರವಿವಾರ ದಿ: ೧೨ ಮತ್ತು ೧೩ ಫೆಬ್ರುವರಿ ೧೯೩೮ ರಂದು ಮನಮಾಡದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಸೇರಲಿರುವ ಅಖಿಲ ಜಿ.ಐ.ಪಿ. ರೇಲ್ವೆ ಅಸ್ಪೃಶ್ಯ ಕಾರ್ಮಿಕ ಪರಿಷತ್ತಿಗಾಗಿ ಒಂದು ಭವ್ಯವಾದ ವೇದಿಕೆಯನ್ನು ಮನಮಾಡ ಸ್ಟೇಶನ್ ಹತ್ತಿರವೇ ಇರುವ ಮಿ. ಇಬ್ರಾಹಿಮ್ ತಾಜಭಾಯಿ ಶೇಠ ಅವರ ಜಾಗೆಯಲ್ಲಿ ನಿರ್ಮಿಸಲಾಗಿದೆ. ಆ ವೇದಿಕೆಯ ಪರಿಸರಕ್ಕೆ ದಲಿತ ಕಾಮಗಾರ ನಗರ ಎಂದು ಹೆಸರಿಡಲಾಗಿದೆ. ಇದುವರೆಗೆ ರೇಲ್ವೆಯಲ್ಲಿ ಕೆಲಸ ಮಾಡುತ್ತಿರುವ ಅಸ್ಪೃಶ್ಯಕಾರ್ಮಿಕರ ಮೇಲಾಗುವ ಅನ್ಯಾಯ, ಎಲ್ಲ ದಿಸೆಯಿಂದ ನಡೆವ ದೌರ್ಜನ್ಯ ಮತ್ತು ಸರ್ವ ಪರಿಯ ಹೃದಯ ವಿದ್ರಾವಕ ವಿಷಯಗಳ ವಿಚಾರ ವಿನಿಮಯವು ಈ ಪರಿಷತ್ತಿನಲ್ಲಿ ಮುಖ್ಯವಾಗಿ ನಡೆಯಲಿದೆ. 'ಕಾರ್ಮಿಕ ಎಂದರೆ ಜಾತಿಯಿಲ್ಲ, ಧರ್ಮವಿಲ್ಲ' ಎಂದು ಉಚ್ಚತಮ ತತ್ವಗಳನ್ನು ಒಪ್ಪಿದರೂ ಅಸ್ಪೃಶ್ಯ ಕಾರ್ಮಿಕರ ಮೇಲೆ ಕೇವಲ ಅವರು ಅಸ್ಪೃಶ್ಯರೆಂಬ ಕಾರಣಕ್ಕೆ ಹೇಗೆ ಅನ್ಯಾಯ ಎಸಗಲಾಗುತ್ತದೆ ಎಂಬುದನ್ನು ಈ ಅಧಿವೇಶನದಲ್ಲಿ ನಿಯೋಜಿತ ಅಧ್ಯಕ್ಷ ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ತಮ್ಮ ಭಾಷಣದಲ್ಲಿ ಸ್ಪಷ್ಟ ಪಡಿಸುವವರಿದ್ದಾರೆ. ಕಾರ್ಮಿಕರ ನಿಜ ಹೋರಾಟಗಳ ಸ್ವರೂಪಗಳ ಕುರಿತೂ ಯೋಗ್ಯರೀತಿಯಲ್ಲಿ ವಿವೇಚನೆ ನಡೆಸಲಿದ್ದಾರೆ. ಆದಕಾರಣ ಇಂಥ ಮಹತ್ವದ ಪರಿಷತ್ತಿನ ಅಧಿವೇಶನದಲ್ಲಿ

---

೧ ಜನತಾ: ೨೨ ಜನೆವರಿ ೧೯೩೮

ಪ್ರತಿಯೊಬ್ಬ ಅಸ್ಪೃಶ್ಯ ರೇಲ್ವೆ ಕಾರ್ಮಿಕರು ಪ್ರತಿನಿಧಿಗಳಾಗಿ ಪಾಲ್ಗೊಳ್ಳಬೇಕು.

**ಪರಿಷತ್ತಿನ ಕಾರ್ಯಕ್ರಮ**

ಶನಿವಾರ ದಿ: ೧೨ ಫೆಬ್ರುವರಿ ೧೯೩೮ರಂದು ಮುಂಜಾನೆ ೮ ರಿಂದ ೧೧ ಆಡಳಿತ ಗಮನಿಸುವ ಸಮಿತಿ ಸಭೆ. ಮಧ್ಯಾಹ್ನ ೩ ಗಂಟೆಗೆ ಸ್ವಾಗತಾಧ್ಯಕ್ಷ ಶ್ರೀ ಪಿ.ಎನ್. ಬನಕರ ಅವರ ಭಾಷಣ, ಅಧ್ಯಕ್ಷರ ಸೂಚನೆ, ಸ್ವಾಗತಗೀತೆ, ಪೋವಾಡೆ (ಪವಾಡ ಹೇಳುವ ಗೀತೆ), ಸಂದೇಶ ವಾಚನ, ರಾತ್ರಿ ಭೋಜನ ಬಳಿಕ ಜಲಸಾ.

ರವಿವಾರ ದಿ:೧೩ ಫೆಬ್ರುವರಿ ೧೯೩೮ ರಂದು ಮುಂಜಾನೆ ೯ ಗಂಟೆಗೆ ಡಾ. ಬಾಬಾಸಾಹೇಬ ಅಂಬೇಡ್ಕರರ ಭಾಷಣ ಮತ್ತು ಇತರ ಕಾರ್ಯಕ್ರಮಗಳು.

ಶನಿವಾರ ಮತ್ತು ರವಿವಾರ ಎರಡೂ ದಿನ ಬಾಬಾಸಾಹೇಬರು ಮನಮಾಡದಲ್ಲೆ ವಾಸ್ತವ್ಯ ಹೂಡುವರು. ಶನಿವಾರದಂದು ರೇಲ್ವೆ ಪರಿಷತ್ತಿನ ಕಾರ್ಯಕಲಾಪಕ್ಕೆ ಮುನ್ನ ಡಾ. ಅಂಬೇಡ್ಕರ ಮತ್ತು ಕೆಲವು ಆಮಂತ್ರಿತರಿಗಾಗಿ ಸಟಾಣೆ ಮತ್ತು ಕಾಝಿಸಾಂಗವಿಯಲ್ಲಿ ಬಹಿರಂಗ ಎಲೆ ಅಡಿಕೆ ನಿಮಿತ್ತ ಪುಟ್ಟ ಕಾರ್ಯಕ್ರಮ ಮುಗಿಸಲಾಗುವುದು.

**ಮುಂಬೈ ಇಲಾಖೆ ಅಸ್ಪೃಶ್ಯಯ ಯುವಕ ಪರಿಷತ್ತು.**

ಶನಿವಾರ ದಿ: ೧೨ರಂದು ರಾತ್ರಿ ೮ಗಂಟೆಗೆ ಮೇಲಿನ ಯುವಕ ಪರಿಷತ್ತಿನ ಅಧಿವೇಶನ ಡಾ. ಬಾಬಾಸಾಹೇಬ ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಈ ಯುವ ಪರಿಷತ್ತಿನಲ್ಲಿ ಸ್ವತಂತ್ರ ಮಜೂರ ಪಕ್ಷದ ಕಾರ್ಯಕ್ರಮವನ್ನು ಎಲ್ಲ ಇಲಾಖೆಗಳಲ್ಲಿ ಬಿರುಸಿನಿಂದ ಜಾರಿಗೆ ತರುವುದರ ಬಗ್ಗೆ ಚರ್ಚೆಯಾಗಿ ಮುಂದಿನ ಕಾರ್ಯ ಚಟುವಟಿಕೆಗಳ ದಿಕ್ಕು ದೆಸೆಗಳನ್ನು ಸಿದ್ಧಪಡಿಸಲಾಗುವುದು. ನಮ್ಮ ಪಕ್ಷದ ಕಾರ್ಯಕ್ರಮಗಳು ಯುವಕರ ಸಹಕಾರದಿಂದಲೆ ಯಶಸ್ವಿಯಾಗಲಿರುವುದರಿಂದ ಈ ಯುವಕ ಪರಿಷತ್ತಿನ ಮಹತ್ವವನ್ನು ಅರಿತು ಎಲ್ಲ ಯುವಕರು ಈ ಪರಿಷತ್ತಿಗೆ ಅಗತ್ಯವಾಗಿ ಹಾಜರ ಇರಬೇಕು.

**ಮಹಾರಾಷ್ಟ್ರೀಯ ಅಸ್ಪೃಶ್ಯ ಮಹಿಳಾ ಪರಿಷತ್ತು.**

ಯುವಕರ ಪರಿಷತ್ತಿನಂತೆ ಈ ಅಸ್ಪೃಶ್ಯ ಮಹಿಳಾ ಪರಿಷತ್ತು 'ದಲಿತ ಕಾಮಗಾರ ನಗರ'ದಲ್ಲಿ ರವಿವಾರ ದಿ: ೧೩ ಫೆಬ್ರುವರಿಯಂದು ಮಧ್ಯಾಹ್ನ ಮೂರು ಗಂಟೆಗೆ ಪುಣೆಯ ಮುಖ್ಯ ಕಾರ್ಯಕರ್ತೆ ಸೌ. ಮೈನಾಬಾಯಿ ಶಾಮರಾವ ಭೋಳೆಯವರ ಅಧ್ಯಕ್ಷತೆಯಲ್ಲಿ ಸೇರಲಿದೆ. ಈ ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿ ಸೌ. ವೇಣೂಬಾಯಿ ರವಿಕಾಂತ ಜಾಧವ ಅವರು ಆಯ್ಕೆಗೊಂಡಿದ್ದಾರೆ. ಈ ಮಹಿಳಾ ಪರಿಷತ್ತಿನಲ್ಲಿ ಮಹಿಳೆಯರ ಚಳವಳಿಯ ಕರ್ತೃತ್ವ ಕುರಿತು ಸಂಶೋಧಾತ್ಮಕ ಉಪನ್ಯಾಸವನ್ನು ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ನೀಡಲಿದ್ದಾರೆ. ಹೊರತಾಗಿ ಇತರರ ಭಾಷಣಗಳು, ಗೊತ್ತುವಳಿಗಳು ಇತ್ಯಾದಿ ಕಾರ್ಯಕ್ರಮಗಳು ನಡೆಯುವವು.

ಎರಡು ದಿನದ ಮನಮಾಡನಲ್ಲಿ ನಡೆಯುವ ಈ ಬೃಹತ್ ಕಾರ್ಯಕ್ರಮವು ನಿರ್ವಿಘ್ನವಾಗಿ, ಯಶಸ್ವಿಯಾಗಿ ಜರುಗಲು ಎಲ್ಲ ವ್ಯವಸ್ಥೆಗಳನ್ನು ರೇಲ್ವೆ ಪರಿಷತ್ತಿನ ಕಾರ್ಯಕಾರಿ ಮಾಡಿತ್ತು.

## ಮನರಂಜನೆ ಕಾರ್ಯಕ್ರಮ

ಎರಡು ದಿನಗಳಲ್ಲಿ ಭಾಗವಹಿಸುವ ಪ್ರಮುಖ ಅತಿಥಿಗಳ, ಪ್ರತಿನಿಧಿ ಮತ್ತು ಪ್ರೇಕ್ಷಕರ ಮನರಂಜನೆಗಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ನಾಶಿಕ ಜಿಲ್ಲಾ ಯುವಕ ಸಂಘದ ಜಲಸಾ, ಮನಮಾಡನ ಹಳೆಯ ರೂಢಿವಿಧ್ವಂಸಕ ಜಲಸಾ ಮಂಡಳಿ, ನಾಶಿಕ ರಸ್ತೆಯ ಸತ್ಯವಾದಿ ಸಾಮಾಜಿಕ ಜಲಸಾ, ಅದಲ್ಲದೆ ಚಾಂದವಡ, ಜೋಪೂಳ ಮುಂತಾದವರ ಜಲಸಾಗಳು; ಶಾಹಿರ ಘೇಗಡೆ ಅವರ ಪೋವಾಡೆ(ಪವಾಡ ಗಾಯನ), ಗಾಯನ, ಕಾತರಗಾವಕರ ಮತ್ತು ವಡಾಳಾದ ಶ್ರೀ ಎಸ್. ಆರ್. ಸಾಳವೆಯವರ ಹೆಣ್ಣುಮಕ್ಕಳ ಸಂಗೀತ ಮೇಳಾ, ಹೀಗೆ ವಿವಿಧ ಕಾರ್ಯಕ್ರಮಗಳು ಜರುಗುವವು.

ಈ ರೀತಿ ಮನಮಾಡನಲ್ಲಿ ಪರಿಷತ್ತು ಹಮ್ಮಿಕೊಂಡ ಕಾರ್ಯಕ್ರಮಗಳು ನಮೂದಾಗಿದ್ದವು. ಆದಕಾರಣ ಮಹತ್ವದ ಈ ಮೂರು ಪರಿಷತ್ತುಗಳ ತ್ರಿವೇಣಿ ಸಂಗಮಕ್ಕೆ ಒದಗಿದ ಅಪೂರ್ವ ಯೋಗಾಯೋಗವೆಂದರೆ ಡಾ. ಬಾಬಾಸಾಹೇಬ ಅಂಬೇಡ್ಕರರ ನೇತೃತ್ವದಲ್ಲಿ ನಡೆಯುತ್ತಿರುವ ಸ್ವಾವಲಂಬನದ ಮತ್ತು ಸ್ವಾತಂತ್ರ್ಯದ ಚಳುವಳಿಗೆ ವಿಶೇಷ ಪೋಷಕವಾಗಬಹುದು. ಇದರಲ್ಲಿ ಅನುಮಾನವಿಲ್ಲ. ಹೊಣೆಯಂತೆ ಇವೆಲ್ಲ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ನಡೆಯುವಂತಾಗಲು ಶ್ರಮಿಸಿದ ವ್ಯಕ್ತಿಗಳೆಂದರೆ ಮೆ. ಆರ್.ಆರ್. ಪವಾರ, ಬನಕರ, ಅಹಿರೆ, ಖರೆ, ಸಂಸಾರೆ, ಪಾಟೀಲ, ಸರೋದೆ, ಮೋರೆ, ಪಗಾರೆ ಮತ್ತು ತೇಲೂರೆ ಮುಂತಾದವರು.

ಮೂರು ಪರಿಷತ್ತುಗಳ ಸಭೆ ಮಹತ್ವದ್ದು. ಇದರ ಯಶಸ್ಸಿಗೆ ಕೇವಲ ಮುಂಬೈ ಇಲಾಖೆಯ ಅಸ್ಪೃಶ್ಯ ಸೋದರ ಸೋದರಿಯರ ಸಹಾಯ ಸಾಲದೆಂದು, ಇತರೆ ಪ್ರಾಂತದವರ ಸಹಕಾರ ಕೋರಲಾಗಿತ್ತು. ಹೀಗಾಗಿ ಮುಂಬೈ, ಪುಣೆ, ಔರಂಗಾಬಾದ, ಧುಳೆ, ಜಳಗಾವ, ನಾಶಿಕರೋಡ, ಇಗತಪುರಿ, ಧಾನೋರಿ, ನಾಗಪುರ ವರ್ಹಾಡ ಪ್ರಾಂತಗಳಿಂದಲೂ ಪ್ರತಿನಿಧಿಗಳು ಆಗಮಿಸುವವರಿದ್ದಾರೆ.

---

೧ ಜನತಾ: ೫ ಫೆಬ್ರುವರಿ ೧೯೩೮

## ನಾಗಪುರದ ಅತಿಥಿಗಳೊಂದಿಗೆ ಸಮಾಲೋಚನೆ

ಭಾನುವಾರ ದಿ. ೧೩ ಫೆಬ್ರುವರಿ ೧೯೩೮ರ ಮಧ್ಯಾಹ್ನ ೧ ರಿಂದ ೨ ಗಂಟೆಯ ಸಮಯದಲ್ಲಿ ನಾಗಪುರ ವರ್ಹಾಡ ಪ್ರಾಂತದಿಂದ ಆಗಮಿಸಿದ ಪ್ರತಿನಿಧಿಗಳೊಂದಿಗೆ ಇಲ್ಲಿಯ ಚಳುವಳಿಯ ಕುರಿತು ಡಾ. ಅಂಬೇಡ್ಕರರು ಸಮಾಲೋಚನೆ ನಡೆಸಲಿದ್ದಾರೆ. ಪರಿಷತ್ತಿನ ಮನರಂಜನೆಯ ಕಾರ್ಯಕ್ರಮದಲ್ಲಿ ಸಮಯಕ್ಕೆ ತಕ್ಕಂತೆ ಬದಲಾವಣೆ ಮಾಡಲಾಗುವುದು. ಈ ಪರಿಷತ್ತಿಗಾಗಿ ಚಾಳಿಸಗಾಂವದಿಂದ ಬ್ಯಾಂಡು ಬರಲಿದ್ದು, ಪರಿಷತ್ತಿನ ಬಹಿರಂಗ ಸಭೆಯ ಕಾಲದಲ್ಲಿ ಎರಡೂ ದಿನ ಲೌಡ್‌ಸ್ಪೀಕರ್ ವ್ಯವಸ್ಥೆ ಮಾಡಲಾಗಿದೆ.

ಜನತಾಪತ್ರ ಸ್ವತಂತ್ರ ಮಜೂರ ಪಕ್ಷಗಳಿಗಾಗಿ ಎರಡು ಬೇರೆ-ಬೇರೆ ಆಫೀಸ ತೆರೆಯಲಾಗಿದೆ. ಜನತಾ ಪತ್ರಕ್ಕೆ ಸದಸ್ಯರಾಗುವವರು ತಮ್ಮ ವಂತಿಗೆಯನ್ನು ಇಲ್ಲಿ ತುಂಬಬೇಕು. ಹಾಗೆಯೇ ಸ್ವತಂತ್ರ ಮಜೂರ ಪಕ್ಷದ ಸದಸ್ಯರು ತಮ್ಮ ಆಫೀಸಿನಲ್ಲಿ ವಂತಿಗೆಯನ್ನು ನೀಡಬೇಕು. ಅದೂ ಅಲ್ಲದೆ ಎರಡೂ ಆಫೀಸಿನಲ್ಲಿ ಈ ಚಳುವಳಿಯ ಬಗೆಗೆ ಮಾಹಿತಿಯನ್ನು ನೀಡುವ ವ್ಯವಸ್ಥೆ ಮಾಡಲಾಗಿದೆ.[೧]

ಇಷ್ಟುದಿನ ಸಾಕಷ್ಟು ಪ್ರಚಾರ ಪಡೆದ ಅಖಿಲ ಜಿ.ಐ.ಪಿ. ರೇಲ್ವೆ ಅಸ್ಪೃಶ್ಯ ಕಾರ್ಮಿಕರ ಪರಿಷತ್ತಿನ ಅಧಿವೇಶನವು ಕಳೆದ ಶನಿವಾರ ಮತ್ತು ರವಿವಾರ ತಾ. ೧೨-೧೩ ಫೆಬ್ರುವರಿ ೧೯೩೮ರಂದು ಯಶಸ್ವಿಯಾಗಿ ನೇರವೇರಿತು. ಈ ಪರಿಷತ್ತಿಗಾಗಿ 'ದಲಿತ ಕಾರ್ಮಿಕ ನಗರ' ದವರು ಮಾಡಿದ ಆಲಂಕಾರ ಉತ್ಕೃಷ್ಟವಾಗಿತ್ತು. ಪರಿಷತ್ತಿನ ಸಂಘಟಕರು ೨೦,೦೦೦ ಜನ ಕೂತುಕೊಳ್ಳುವಂತೆ ಆಸನದ ವ್ಯವಸ್ಥೆಯನ್ನು ಮಾಡಿದ್ದರು. ಹಾಗೆಯೇ ಪರಿಷತ್ತಿನ ಭಾಷಣ ಎಲ್ಲರಿಗೂ ಕೇಳಿ ಬರಲಿ ಎಂಬ ಕಾರಣಕ್ಕೆ ಲೌಡ್‌ಸ್ಪೀಕರ್ ವ್ಯವಸ್ಥೆಯನ್ನು ಮಾಡಿದ್ದರು. ಅಧ್ಯಕ್ಷ ಮತ್ತು ಸಿಬ್ಬಂದಿಯವರಿಗಾಗಿ ಒಂದು ಚಿಕ್ಕವೇದಿಕೆಯನ್ನು ಸಿದ್ಧಪಡಿಸಿದ್ದರು. ಅದೇ ರೀತಿ ಪ್ರಮುಖ ಕಾರ್ಯಕರ್ತರ ಫೋಟೋ ಮತ್ತು ಡಾ. ಅಂಬೇಡ್ಕರರ ಭವ್ಯಭಾವಚಿತ್ರವನ್ನು ತೂಗುಹಾಕಿ ಹೂಮಾಲೆಯಿಂದ ಅಲಂಕರಿಸಲಾಗಿತ್ತು. ವೇದಿಕೆಯ ಬಲಬದಿಗೆ ಮಹಿಳೆಯರಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ವೇದಿಕೆ ಅಕ್ಕಪಕ್ಕದಲ್ಲಿ ಸ್ವಾಗತ ಸಮಿತಿಯ ಸದಸ್ಯರಿಗೆ, ಆಮಂತ್ರಿತರಿಗೆ ವ್ಯವಸ್ಥೆ ಮಾಡಲಾಗಿತ್ತು.

ಶನಿವಾರ ಸಂಜೆ ಪರಿಷತ್ತಿನ ನಿಯೋಜಿತ ಅಧ್ಯಕ್ಷರಾದ ಡಾ. ಅಂಬೇಡ್ಕರ ಅವರು ಸ್ನೇಹಪರಿವಾರದ ಜೊತೆಗೆ 'ದಲಿತ ಕಾರ್ಮಿಕ' ನಗರವನ್ನು ಪ್ರವೇಶ ಮಾಡಿದ ಕೂಡಲೇ ಅವರನ್ನು ಮಧುರಸ್ವರ ಮತ್ತು ಗಗನಭೇದಿ ಜೈಘೋಷದೊಂದಿಗೆ ಪ್ರೀತಿ ಮತ್ತು ಆತ್ಮೀಯತೆಯಿಂದ ಸ್ವಾಗತಿಸಲಾಯಿತು. ಅವರು ವೇದಿಕೆಯನ್ನು ಏರಿ ಕೂತುಕೊಳ್ಳುವವರೆಗೂ 'ಡಾ. ಅಂಬೇಡ್ಕರರಿಗೆ ಜೈ', 'ಡಾ. ಅಂಬೇಡ್ಕರ ಚಿರಾಯುವಾಗಿರಲಿ', 'ಕಾರ್ಮಿಕರಿಗೆ ಜಯವಾಗಲಿ'-ಮುಂತಾದ ಘೋಷಣೆಯಿಂದ ಸಂಪೂರ್ಣ ವಾತಾವರಣವೇ ಕೆಲನಿಮಿಷಗಳು ನಿನದಿಸತೊಡಗಿತು. ಅನಂತರ ಚಿಕ್ಕಮಕ್ಕಳು ಸ್ವಾಗತದ ಮತ್ತು ಅಭಿನಂದನೆಯ ಗೀತೆಯನ್ನು ಹಾಡಿದರು. ಈ ಕುರಿತು ಶ್ರೀ ಶಂಕರರಾವ ಸಾಳವೆಯವರು ತುಂಬ ಪರಿಶ್ರಮಿಸಿದ್ದರು. ಪರಿಷತ್ತಿನ ಕಾರ್ಯಕಲಾಪ ತುಂಬಿ ತುಳುಕಿತ್ತು. ನಗರವನ್ನು ತಳಿರು ತೋರಣದಿಂದ, ದೀಪದಿಂದ ಅಲಂಕರಿಸಿದ ಕೂಡಲೇ ಸ್ವಾಗತಾಧ್ಯಕ್ಷರಾದ ಶ್ರೀ. ಪಿ.ಎನ್. ಬನಕ ಅವರು ತಮ್ಮ ಭಾಷಣವನ್ನು ಓದಿದರು.

---

೧ ಜನತಾ: ೫ ಫೆಬ್ರುವರಿ ೧೯೩೮.

ಬಳಿಕ ಪರಿಷತ್ತಿನ ಜನರಲ್ ಸೆಕ್ರೆಟರಿಯಾದ ಶ್ರೀ ರಾಮಚಂದ್ರರಾವ ಪವಾರರು ಪರಿಷತ್ತಿನ ಕಾರ್ಯಕಲಾಪದ ಬಗೆಗೆ ಹೇಳಿ, ಅತಿಥಿಗಳ, ಪ್ರತಿನಿಧಿಗಳ ಸ್ವಾಗತವನ್ನು ಕೋರಿದರು. ಬಂದ ಸಂದೇಶಗಳಲ್ಲಿ ಅಸ್ಪೃಶ್ಯ ಸಮಾಜದ ಒಬ್ಬ ಮುಖಂಡರಾದ ಮೆ. ಶುಭೇದಾರ ವಿಶ್ರಾಮ, ಗಂಗಾರಾಮ ಸವಾದಕರ ಅವರ ಸಂದೇಶ ಅತ್ಯಂತ ಮಹತ್ವದ್ದಾಗಿದ್ದು, ಅಸ್ಪೃಶ್ಯ ಕಾರ್ಮಿಕರಿಗೆ ಕರ್ತವ್ಯದ ಅರಿವನ್ನು ಉಂಟು ಮಾಡುವಂತಹದಾಗಿತ್ತು. ಅದೂ ಅಲ್ಲದೆ ರತ್ನಾಗಿರಿ ಉತ್ತರ ವಿಭಾಗದ ಸ್ವತಂತ್ರ ಮಜೂರ ಪಕ್ಷದ ಶಾಖೆಯ ಅಧ್ಯಕ್ಷರೂ, ಶ್ರಮಜೀವಿ ವರ್ಗದ ಮುಖಂಡರೂ ಆದ ಭಾಯಿ ಆನಂತರಾವ ಚಿತ್ರೆ ಅವರು ಮಹಾಡರಿಂದ ಸಂದೇಶ ಕಳಿಸಿದ್ದರು. ಅವರು ತಮ್ಮ ಪ್ರದೇಶದ ರೈತರಪರವಾಗಿ ಯಶವನ್ನು ಕೋರಿದ್ದರು. ಕಾರ್ಮಿಕರ ಚಳುವಳಿಗೆ ಹೊಸದಿಕ್ಕು ತೋರಿಸಲು ಡಾ. ಅಂಬೇಡ್ಕರರು ಈ ಪರಿಷತ್ತಿನ ಅಧ್ಯಕ್ಷಸ್ಥಾನ ಸ್ವೀಕರಿಸಿದ ಬಗೆಗೆ ಅತ್ಯಾನಂದವನ್ನು ವ್ಯಕ್ತಮಾಡಿದ್ದರು. ಅವರ ಅತುಲ ಪರಾಕ್ರಮ ಮತ್ತು ಸೂಕ್ತ ನಾಯಕತ್ವದ ಅಡಿಯಲ್ಲಿ ಕಾರ್ಮಿಕರ ಚಳುವಳಿಯ ಭಾಗ್ಯೋದಯವಾಗಿರುತ್ತದೆ. ಅದಕ್ಕಾಗಿ ನಾವೆಲ್ಲ ಬಿರುಸಿನಿಂದ ಸಂಘಟನೆಮಾಡಿ, ಪ್ರತ್ಯಕ್ಷವಾಗಿ ಕಾರ್ಯವನ್ನು ಆರಂಭಿಸುವ ಸಂಕಲ್ಪವನ್ನು ಇಂದೆ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಂಡರು. ಅದೂ ಅಲ್ಲದೆ ಉಳಿದ ಸಂದೇಶವಚನದ ಬಳಿಕ ಪದ್ಧತಿಯಂತೆ ಡಾ. ಅಂಬೇಡ್ಕರ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಕಿವಿಗಡಚಿಕ್ಕುವ ಕರತಾಡನದ ನಡುವೆ ಅವರು ಅಧ್ಯಕ್ಷಸ್ಥಾನ ಸ್ವೀಕರಿಸಿದ ಹೂಮಾಲೆಯನ್ನು ಅರ್ಪಿಸಲಾಯಿತು.

ಅಧ್ಯಕ್ಷಪದ ಸ್ವೀಕರಿಸಿದ ಬಳಿಕ ಡಾ. ಅಂಬೇಡ್ಕರರು ಚಿಕ್ಕ ಭಾಷಣವನ್ನು ಮಾಡಿ, ಪರಿಷತ್ತಿನ ಸಂಘಟಕರು ಪರಿಷತ್ತಿನ ಕಾರ್ಯದ ಬಹುದೊಡ್ಡ ಹೊಣೆಗಾರಿಕೆಯನ್ನು ಹೊರಿಸಿರುವುದಾಗಿ ಹೇಳಿ, ಯಶಸ್ವಿಗೊಳಿಸಲು ತಮ್ಮೆಲ್ಲರ ಸಹಾಯ ಸಹಕಾರ ಅಗತ್ಯವೆಂದು ನಿವೇದನೆ ಮಾಡಿಕೊಂಡರು. ಹಾಗೆಯೇ, ಇಂದು ಇಲ್ಲಿ ಸೇರಿದ ಸಾವಿರಾರು ಕಾರ್ಮಿಕ ಬಂಧುಗಳು ತಮ್ಮ ದುಃಖದಿಂದ ಹೊರಬರಲು ನಿರ್ಭಯತೆಯಿಂದ ಒಂದೆಡೆ ಸೇರಿದ್ದು ಕಂಡು ತಮಗೆ ತುಂಬ ಸಂತೋಷವಾಗಿದೆ. ನಿಮ್ಮ ಸುಖದುಃಖದ ಬಗೆಗೆ ಚರ್ಚಿಸಿ. ಈ ಅಸಹಾಯಕ ಅವಸ್ಥೆಯಿಂದ ತಮ್ಮನ್ನು ಹೇಗೆ ಪಾರುಮಾಡಬಹುದು ಎನ್ನುವುದರ ಕುರಿತು ತಮ್ಮ ಭಾಷಣದಲ್ಲಿ ಹೇಳುವುದಾಗಿ ಭರವಸೆ ನೀಡಿದರು. ಈ ಪರಿಷತ್ತಿಗೆ ಆಗಮಿಸಿದ ಪ್ರಮುಖ ವ್ಯಕ್ತಿಗಳೆಂದರೆ, ಶ್ರೀದೇವರಾಯ ನಾಯಿಕ, ಕಮಲಾಕಾಂತ ಚಿತ್ರೆ, ದ.ವಿ. ಪ್ರಧಾನ, ಆರ್.ಡಿ. ಕವಳಿ., ಭಾ.ರ. ಕದ್ರೆಕರ, ನಾಗಪುರದ ಮಿ. ಹರದಾಸ, ಎಂ.ಎಲ್.ಎ., ಡಾ. ಎಸ್.ಸಿ ಜೋಶಿ, ಭಾವೂರಾವ ಕೃಷ್ಣರಾವ ಕಾಯಕವಾಡ, ಭಂಗಿ ಸಮಾಜದ ಮುಖಂಡ ಶ್ರೀ ರಾಮಾಶಿವಾಪಾಲಾ, ಠಾಣೆಯ ಶಿವರಾಮ ಗೋ. ಜಾಧವ, ವಿಠ್ಠಲ ರಾವ ರಣಖಾಂಬೆ, ಗಣಪತರಾವ ನೀಳೆ, ಮುನಕ ಪರಿಷತ್ತಿನ ಸ್ವಾಗತಾಧ್ಯಕ್ಷ ಮುರಲಿಧರ ಪಗಾರೆ, ಮನಮಾಡಿನ ಮಾಜಿ ಕೌನ್ಸಿಲರ್ ರಾಮಭಾವೂ ಜಮಧಾಡೆ, ಹಾಗೆಯೇ, ಉಳಿದ ಪ್ರಾಂತದ ಪ್ರಮುಖರೆಲ್ಲ ಆಗಮಿಸಿದ್ದರು. ಶಾಸಕರಲ್ಲಿ ಶ್ರೀ ರಾಜಾರಾಮ ಭೋಳೆ, ಕೆ.ಎಸ್. ಸಾವಂತ, ಪ್ರ.ಜ. ರೋಹಮ, ಡಿ.ಜಿ. ಜಾಧವ, ಮುಂತಾದವರೂ ಆಗಮಿಸಿದ್ದರು.

ಶನಿವಾರ ಬೆಳಿಗ್ಗೆ ವಿಷಯ ನಿಯಾಮಕ ಸಮಿತಿಯ ಕಾರ್ಯಕಲಾಪ ಮುಗಿದ ಬಳಿಕ ಪರಿಷತ್ತಿನ ಎರಡನೇ ದಿನದ ಕಾರ್ಯಕಲಾಪ ಆರಂಭಗೊಂಡಿತು. ಇಂದು ಪರಿಷತ್ತಿನಲ್ಲಿ ಡಾ. ಅಂಬೇಡ್ಕರು ಭಾಷಣ ಮಾಡಲಿದ್ದರು. ಪರಿಷತ್ತಿನ ಕಾರ್ಯಕಲಾಪ ಸ್ವಲ್ಪ ವಿಳಂಬದಿಂದ ಆರಂಭಗೊಂಡಿತ್ತು. ದಲಿತ ಕಾರ್ಮಿಕ

---

೧ ಜನತಾ: ೫ ಫೆಬ್ರುವರಿ ೧೯೩೮.

ನಗರದಲ್ಲಿ ಬಿಸಿಲು ಏರುತ್ತಿದ್ದರೂ ಪ್ರಚಂಡ ಜನಸಮುದಾಯವು ಡಾ. ಅಂಬೇಡ್ಕರರ ಭಾಷಣವನ್ನು ಆಲಿಸಲು ಆಗಮಿಸಿತ್ತು. ಆರಂಭಕ್ಕೆ ಕೆಲವು ಮಾಮೂಲಿ ಕಾರ್ಯಕ್ರಮ ಮುಗಿದ ಬಳಿಕ ಜನರ ಪ್ರಚಂಡ ಕರತಾಡನದ ನಡುವೆ ಡಾ. ಅಂಬೇಡ್ಕರರು ಭಾಷಣ ಮಾಡಲು ಎದ್ದು ನಿಂತರು. [೧]

"ಗೆಳೆಯರೆ, ಇದು ಜಿ.ಐ.ಪಿ. ರೇಲ್ವೆಯಲ್ಲಿ ಕೆಲಸ ಮಡುವ ಕಾರ್ಮಿಕರ ಸಮ್ಮೇಳನ. ಈ ಹಿಂದೆ ಈ ಪ್ರದೇಶ ಮತ್ತು ಉಳಿದ ಸ್ಥಳಗಳಲ್ಲಿ ದಲಿತವರ್ಗದ ಹಲವು ಸಮ್ಮೇಳನಗಳು ಜರುಗಿದ್ದು, ಆ ವಿಶಿಷ್ಟ ಅರ್ಥದಲ್ಲಿ ಇದು ಮೊದಲ ಸಮ್ಮೇಳನವಲ್ಲ. ಆದರೆ ಬೇರೊಂದು ಅರ್ಥದಲ್ಲಿದು ಮೊದಲ ಸಮ್ಮೇಳನವೆನ್ನಬಹುದು. ಈ ಮೊದಲು ಸಾಮಾಜಿಕ ಅನ್ಯಾಯದ ವಿರುದ್ಧ ದಲಿತವರ್ಗವು ತತ್ವಶಃ ಹೋರಾಟ ಮಾಡಿದೆ. ಅವರ ಆರ್ಥಿಕ ತಕರಾರಿನ ಬಗೆಗೆ ದಲಿತ ವರ್ಗ ಮೊದಲ ಬಾರಿಗೆ ಈ ಸಮ್ಮೇಳನದ ಮೂಲಕ ಒಂದೆಡೆ ಸೇರುತ್ತಲಿದೆ. ಇಲ್ಲಿಯವರೆಗೆ ಅದೊಂದು ಪರ್ಯಾಯ ಸಮ್ಮೇಳನವೆಂದು ಒಂದೆಡೆ ಬರುತ್ತಿದ್ದರು. ಆದರೆ ನೀವಿಂದು ಕಾರ್ಮಿಕರು ಎಂಬ ಸಂಬಂಧದಿಂದ ಒಂದೆಡೆ ಬರುತ್ತಿದ್ದೀರಿ. ಸಾಮಾಜಿಕ ಅನ್ಯಾಯವನ್ನು ದೂರಮಾಡಲು ಇಲ್ಲಿಯವರೆಗೆ ನಮ್ಮ ಶ್ರಮವನ್ನು ಕೇಂದ್ರಿಕೃತಗೊಳಿಸಿ ಕೆಲವು ತಪ್ಪುಮಾಡಿದ್ದೇವೆ ಎಂದು ನನ್ನ ಭಾವನೆಯಲ್ಲ. ಉಳಿದವರು ಏನೇ ಹೇಳಲಿ ಈ ಸಾಮಾಜಿಕ ಅನ್ಯಾಯ ಮಾತ್ರ ನಮ್ಮ ಮಾನವೀಯತೆಯನ್ನು ಹೊಸಕಿ ಹಾಕುವ ರುಬ್ಬುಕಲ್ಲುಗಳಾಗಿವೆ. ನಮ್ಮ ಹೋರಾಟಕ್ಕೆ ಯಾವುದೇ ಫಲ ದೊರಕಲಿಲ್ಲ ಎಂದೂ ಹೇಳುವಂತೆಯಿಲ್ಲ. ನಾವು ಅಸ್ಪೃಶ್ಯತೆಯನ್ನು ಬೇರುಸಹಿತ ಕಿತ್ತುಬಗೆಯುವಲ್ಲಿ ಯಶಸ್ವಿಯಾಗಲಿಲ್ಲ ಎನ್ನವುದು ಸತ್ಯ. ಪ್ರತಿಯೊಬ್ಬ ಮಾನವನಿಗೆ ಸಿಗಲೇಬೇಕಾದ ಮೂಲಭೂತ ಸ್ವರೂಪದ ಹಕ್ಕು ನಮಗಿನ್ನೂ ಸಿಗಲೇ ಇಲ್ಲಎನ್ನುವುದೂ ಅಷ್ಟೇಸತ್ಯ. ಆದರೆ ರಾಜಕೀಯ ಸತ್ತೆಯನ್ನು ಪಡೆಯುವಲ್ಲಿ ನಾವು ಯಶಸ್ವಿಯಾಗಿದ್ದಂತೂ ಖರೆ. ಯಾರ ಬಳಿಯಲ್ಲಿ ಸತ್ತೆಯಿರುತ್ತದೆಯೋ, ಅವನಿಗೆ ಸ್ವಾತಂತ್ರ್ಯವಿರುತ್ತದೆ ಎನ್ನುವ ಸಿದ್ಧಾಂತವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸ್ವಾತಂತ್ರ್ಯ ಗಳಿಸುವ ಮತ್ತು ಎಲ್ಲ ಸಮಸ್ಯೆಗಳಿಂದ ಮುಕ್ತರಾಗುವ ಏಕಮೇವ ಮಾರ್ಗವೆಂದರೆ ಸತ್ತೆಯೇ ಆಗಿದ್ದು, ಧಾರ್ಮಿಕ ಮತ್ತು ಆರ್ಥಿಕ ಶಕ್ತಿಯು ಅಷ್ಟು ಇದ್ದರೂ ರಾಜಕೀಯ ಶಕ್ತಿಯೇ ನಿಜವಾದ ಶಕ್ತಿಯಾಗಿದ್ದು ಸಾಕಷ್ಟು ಪರಿಣಾಮಕಾರಕವೂ ಆಗಿದೆ. ದುಃಖದ ಸಂಗತಿಯೇನೆಂದರೆ, ಹೊಸ ಸಂವಿಧಾನದ ಪ್ರಕಾರ ದಲಿತ ವರ್ಗದವರಿಗೆ ಲಭಿಸಿದ ರಾಜಕೀಯ ಹಕ್ಕನ್ನು ನಮ್ಮೊಳಗಿನ ಕೆಲವು ಸ್ವಾರ್ಥಿ, ಆಸೆಬುರುಕ ದುರಾಚಾರಿ ಜನರ ಸಹಾಯದಿಂದ ದುರ್ಬಲಗೊಳಿಸಲಾಗಿದೆ. ಯಾವ ಸತ್ತೆಯ ಹಿಂದೆ ಸಂಘಟನೆಯು ಇರುವುದಿಲ್ಲವೋ, ಯಾವ ಸತ್ತೆಯ ಹಿಂದೆ ಸುಜ್ಞತೆಯಿರುವುದಿಲ್ಲವೋ ಅದು ಸತ್ತೆಯೇ ಅಲ್ಲ. ಒಂದು ದಿನ ಬಹಳ ದೂರದ ಕಾಲದಲ್ಲಿ ದಲಿತ ವರ್ಗ ಸಂಘಟಿತಗೊಳ್ಳುತ್ತದೆ ಮತ್ತು ಅವರಿಗೆ ಲಭಿಸಿದ ರಾಜಕೀಯ ಸತ್ತೆಯ ಮಹತ್ವ ಅವರಿಗೆ ತಿಳಿದು ಬರಲಿದೆ. ತಮ್ಮ ಸಾಮಾಜಿಕ ಮುಕ್ತಿಗಾಗಿ ಅದನ್ನು ಪರಿಣಾಮಕಾರಕವಾಗಿ ಬಳಸಿಕೊಳ್ಳುತ್ತಾರೆ ಎಂಬ ನಂಬಿಕೆ ನನಗಿದೆ.

ನಮ್ಮ ಪ್ರಯತ್ನ ತಪ್ಪು ಹಾದಿಯಲ್ಲಿ ಸಾಗಿದೆ ಎಂದೇನೂ ನಾನು ಹೇಳುತ್ತಿಲ್ಲವಾದರೂ ನಾವು ತೀರ ಬಹಳ ಕಾಲದವರೆಗೆ ನಮ್ಮ ಸಾಮಾಜಿಕ ಸಮಸ್ಯೆಯಷ್ಟೇ ತೀವ್ರವಾಗಿದ್ದ ಆರ್ಥಿಕ ಪ್ರಶ್ನೆಯನ್ನು ನಿರ್ಲಕ್ಷ ಮಾಡಿದ್ದು, ನಾವಿಂದು ಅಸ್ಪೃಶ್ಯರೆಂದಲ್ಲ. ಕಾರ್ಮಿಕರೆಂದು ಒಂದೆಡೆ ಸೇರಿದ್ದರಿಂದ ನನಗೆ ತುಂಬ ಸಂತೋಷವಾಗಿದೆ. ಇದೊಂದು ಹೊಸ ಮಾರ್ಗವಾಗಿದ್ದು, ಅದರ ಕುರಿತು ಚರ್ಚಿಸುವ ಅವಕಾಶ ಯಾರು ಯಾರು ಮಾಡಿಕೊಟ್ಟರೋ ಅವರನ್ನೆಲ್ಲ ನಾನು ಅಭಿನಂದಿಸುತ್ತೇನೆ.

ಆದಾಗ್ಯೂ ಕೆಲವು ಜನರು ಎಂಥವರಿದ್ದಾರೆ ಎಂದರೆ, ನಮ್ಮ ನಡಿಗೆಯ ಬಗ್ಗೆ ಅಶುಭ ಭಾವನೆಯನ್ನು

ತಾಳಿ ಈ ಸಮ್ಮೇಳನದಲ್ಲಿ ಭಾಗವಹಿಸಿದ ಬಗೆಗೆ ಅವರು ನನ್ನನ್ನು ದೋಷಿಯಾಗಿ ಕಂಡಿದ್ದಾರೆ. ಕಾರ್ಮಿಕ ಮುಖಂಡರಿಂದ ಈ ಟೀಕೆ ನಡೆಯದೆ ಇದ್ದಿದ್ದರೆ, ನಾನದನ್ನು ತಿಳಿಸುತ್ತಿರಲಿಲ್ಲ. ದಲಿತ ವರ್ಗದ ಬೇರೆ ಕಾರ್ಮಿಕ ಸಮ್ಮೇಳನವನ್ನು ಜರುಗಿಸಿ ನಾನು ಕಾರ್ಮಿಕರನ್ನು ಇಬ್ಭಾಗ ಮಾಡುತ್ತಿದ್ದೇನೆ ಎಂದವರ ತಕರಾರಿನಲ್ಲಿರುವ ಭಾವನೆಯಾಗಿದೆ. ನನಗೆ ಅನಿಸಿದಂತೆ ಈ ದೇಶದ ಕಾರ್ಮಿಕರು ಇಬ್ಬರು ಶತ್ರುಗಳನ್ನು ಎದುರಿಸಬೇಕಾಗಿದೆ. ಒಂದು ಬ್ರಾಹ್ಮಣಶಾಹಿ, ಮತ್ತೊಂದು ಬಂಡವಾಳಶಾಹಿ. ಕಾರ್ಮಿಕರು ಯಾರೊಂದಿಗೆ ಹೋರಾಡ ಬೇಕಾಗಿದೆಯೋ ಅಂಥ ಬ್ರಾಹ್ಮಣಶಾಹಿಯನ್ನು ವೈರಿಯೆಂದು ಗುರುತಿಸುವಲ್ಲಿ ಅಪಯಶ ಬಂದಿರುವುದರಿಂದ ಈ ಟೀಕೆಯು ಕೆಲ ಪ್ರಮಾಣದಲ್ಲಿ ಉದ್ಭವಿಸಿದೆ. ಬ್ರಾಹ್ಮಣಶಾಹಿ ಎಂಬ ಶತ್ರುವಿನ ವಿರುದ್ಧ ಹೋರಾಡಬೇಕಾಗುತ್ತದೆ ಎಂಬ ನನ್ನ ಮಾತನ್ನು ತಪ್ಪಾಗಿ ಅರ್ಥೈಸಬಾರದು. ಬ್ರಾಹ್ಮಣಶಾಹಿ ಎಂಬ ಪದದ ಮೂಲಕ ಬ್ರಾಹ್ಮಣ ಜಾತಿಯ ಸತ್ತೆ, ಹಕ್ಕು, ಮತ್ತು ಅದರ ಹಿತಾಸಕ್ತಿಯ ಬಗೆಗೆ ನಾನು ಹೇಳುತ್ತಿಲ್ಲ. ಆ ಅರ್ಥದಲ್ಲಿ ನಾನು ಈ ಪದವನ್ನು ಬಳಸುತ್ತಿಲ್ಲ. ಸ್ವಾತಂತ್ರ್ಯ, ಸಮತೆ, ಮತ್ತು ಬಂಧುಭಾವ ಎಂಬ ತತ್ವದ ಅಭಾವವೇ ನನ್ನ ಬ್ರಾಹ್ಮಣಶಾಹಿ ಪದದ ಅರ್ಥ. ಈ ಅರ್ಥದಲ್ಲಿ ಅದು ಎಲ್ಲ ವಿಷಯಗಳಲ್ಲಿ ಅನರ್ಥವನ್ನು ಉಂಟು ಮಾಡಿದ್ದರಿಂದ, ಬ್ರಾಹ್ಮಣ ಅದರ ಜನಕನಾಗಿದ್ದರೂ ಅದರ ಅಭಾವ ಕೇವಲ ಬ್ರಾಹ್ಮಣರಿಗಷ್ಟೇ ಸೀಮಿತವಾಗಿ ಉಳಿಯಲಿಲ್ಲ. ಈ ಬ್ರಾಹ್ಮಣಶಾಹಿಯು ಎಲ್ಲೆಡೆ ಹಬ್ಬಿದ್ದು, ಅದು ಎಲ್ಲ ವರ್ಗದ ಆಚಾರವಿಚಾರವನ್ನು ನಿಯಂತ್ರಣ ಮಾಡಿದ ವಿಷಯ ನಿರ್ವಿವಾದ. ಅದೂ ಅಲ್ಲದೆ ಬ್ರಾಹ್ಮಣಶಾಹಿಯು ಕೆಲ ವಿಶಿಷ್ಟ ವರ್ಗಗಳಿಗೆ ವಿಶೇಷಾಧಿಕಾರ ನೀಡುತ್ತದೆ ಎನ್ನುವದರಲ್ಲೂ ಎರಡು ಮಾತಿಲ್ಲ. ಅದು ಕೆಲವು ವರ್ಗಗಳಿಗೆ ಸಮಾನತೆಯ ಅವಕಾಶವನ್ನೂ ಸಹ ನಿರಾಕರಿಸುತ್ತದೆ. ಬ್ರಾಹ್ಮಣಶಾಹಿಯ ದುಷ್ಪರಿಣಾಮವು ಕೇವಲ ಸಹಭೋಜನ ಮತ್ತು ಅಂತರ್ಜಾತಿಯ ವಿವಾಹದಂತಹ ಸಾಮಾಜಿಕ ಹಕ್ಕಿನವರೆಗೆ ಅಷ್ಟೇ ಸೀಮಿತವಾಗಿ ಉಳಿದಿಲ್ಲ.

ಅದಷ್ಟೇ ಇದ್ದಿದ್ದರೆ ಅದರ ಬಗೆಗೆ ಲಕ್ಷ್ಯನೀಡಬೇಕಾದ ಅಗತ್ಯವಿರುತ್ತಿರಲಿಲ್ಲ. ಆದರೆ ಅದಷ್ಟೇ ಇಲ್ಲ. ಸಾಮಾಜಿಕ ಹಕ್ಕಿಗಿಂತ ಭಿನ್ನವಾಗಿರುವ ನಾಗರಿಕ ಹಕ್ಕಿನವರೆಗೂ ಅದರ ವ್ಯವಹಾರ ಪಸರಿಸಿದೆ. ಸಾರ್ವನಿಕ ಶಾಲೆ, ಸಾರ್ವಜನಿಕ ಬಾವಿ, ಸಾರ್ವಜನಿಕ ವಾಹನ, ಸಾರ್ವಜನಿಕ ವಿಶ್ರಾಂತಿ ತಾಣವನ್ನು ಉಪಯೋಗ ಮಾಡುವದೂ ಸಹ ನಾಗರಿಕ ಹಕ್ಕಿನ ವಿಷಯವಾಗಿದೆ. ಸಾರ್ವಜನಿಕ ವಂತಿಗೆಯಿಂದ ನಿರ್ಮಿಸಿದ ಅಥವಾ ಮುನ್ನಡೆಸುವ ಪ್ರತಿಯೊಂದು ಸಂಗತಿಯು ಪ್ರತಿಯೊಬ್ಬ ನಾಗರಿಕನ ಉಪಯೋಗಕ್ಕಾಗಿ ಮುಕ್ತವಾಗಿರ ಬೇಕಾಗುತ್ತದೆ. ಆದರೆ ಕೋಟ್ಯಾವಧಿ ಜನರಿಗೆ ಈ ನಾಗರಿಕ ಹಕ್ಕನ್ನು ನಿರಾಕರಿಸಲಾಗಿದೆ. ಈ ದೇಶದಲ್ಲಿ ಸಾವಿರಾರು ವರ್ಷಗಳಿಂದ ಸ್ವಚ್ಛಂಧವಾಗಿರುವ ಮತ್ತು ವಿದ್ಯುತ್ತಿನ ಜೀವಂತ ಪ್ರವಾಹದಂತೆ ಇಂದಿಗೂ ಕ್ರಿಯಾಶೀಲವಾಗಿರುವ ಈ ಬ್ರಾಹ್ಮಣಶಾಹಿಯ ಪರಿಣಾಮವಿದು. ಇದರ ಬಗೆಗೆ ಯಾರಿಗಾದರೂ ಶಂಕೆಯಿದೆಯೆ? ಬ್ರಾಹ್ಮಣಶಾಹಿ ಅದೆಷ್ಟು ಸರ್ವವ್ಯಾಪಿಯಾಗಿದೆಯೆಂದರೆ ಆರ್ಥಿಕ ಅವಕಾಶದ ಪ್ರದೇಶದಲ್ಲೂ ಅದರ ಆಡಳಿತ ನಡೆಯುತ್ತದೆ. ದಲಿತವರ್ಗ ಕಾರ್ಮಿಕರನ್ನು ಉಳಿದ ವರ್ಗದ ಕಾರ್ಮಿಕರೊಂದಿಗೆ ತುಲನೆ ಮಾಡಿನೋಡಿ. ದಿನಗೂಲಿ ಪಡೆಯುವ ಯಾವ ಅವಕಾಶ ಅವನಿಗೆ ಉಪಲಬ್ದವಿದೆ? ನೌಕರಿಯ ಸುರಕ್ಷತೆ ಮತ್ತು ಅದರಲ್ಲಿಯ ಪ್ರಗತಿಯ ದೃಷ್ಟಿಯಿಂದ ಅವನ ಭವಿತವ್ಯವೇನು? ಅವನು ಅಸ್ಪೃಶ್ಯನಾಗಿರುವುದರಿಂದ ಹಲವು ಉದ್ಯೋಗಗಳ ಬಾಗಿಲು ಅವನಿಗಾಗಿ ಮುಚ್ಚಿರುವುದು ಅತ್ಯಂತ ಕುಪ್ರಸಿದ್ಧ ಸಂಗತಿಯಾಗಿದೆ. ಈ ವಿಷಯಕ್ಕೆ ಸಂಬಂಧಿಸಿದ ಜವಳಿ ಗಿರಣಿಯಲ್ಲಿ ನಡೆದ ಪ್ರಸಂಗ ಸಹ ಕುಪ್ರಸಿದ್ಧವೇ ಆಗಿದೆ. ಭಾರತದ ಉಳಿದ ಪ್ರದೇಶದಲ್ಲಿ ಏನು ನಡೆಯುತ್ತಿದೆ ಎನ್ನುವುದು ನನಗೆ ಗೊತ್ತಿಲ್ಲ.

ಆದರೆ ಮುಂಬೈ ಇಲಾಖೆಯಲ್ಲಿ ಮುಂಬೈ ಮತ್ತು ಅಹಮದಾಬಾದಲ್ಲಿಯ ಜವಳಿ ಗಿರಣಿಯಲ್ಲಿಯ ಹೆಣಿಗೆ ವಿಭಾಗದ ಬಾಗಿಲು ದಲಿತ ವರ್ಗದವರಿಗಾಗಿ ಮುಚ್ಚಿದೆ ಎನ್ನುವುದು ನನಗೆ ಖಚಿತವಾಗಿದೆ. ಈ ನೂಲುವ ವಿಭಾಗದಲ್ಲಿ ಉಳಿದವರಿಗಿಂತ ತೀರಕಡಿಮೆ ಸಂಬಳವಿದೆ. ಅವರು ಅಸ್ಪೃಶ್ಯರಾಗಿರುವುದರಿಂದ ಹೆಣಿಕೆ ವಿಭಾಗದಿಂದ ಕೈಬಿಡಲಾಗಿದೆ! ಇತರ ಹಿಂದೂ ಕಾರ್ಮಿಕರು ಮುಸಲ್ಮಾನರ ಜೊತೆಗೆ ಕೆಲಸ ಮಾಡಲು ಸಿದ್ದರಿದ್ದರೂ, ಅಸ್ಪೃಶ್ಯ ಕಾರ್ಮಿಕರ ಜೊತೆಗೆ ಕೆಲಸ ಮಾಡಲು ಸಿದ್ಧರಿಲ್ಲ!

ರೇಲ್ವೆಯ ಉದಾಹರಣೆಯನ್ನು ತೆಗೆದುಕೊಳ್ಳಿ! ರೈಲಿನ ದಲಿತವರ್ಗದ ಕಾರ್ಮಿಕರ ಸ್ಥಿತಿಹೇಗಿದೆ? ಅವರ ಹಣೆ ಬರಹದಲ್ಲಂತೂ ಗ್ಯಾಂಗ್‌ಮನ್ ಎಂದೇ ಕೆಲಸ ಮಾಡಬೇಕಾಗಿರುವುದನ್ನು ಯಾರೂ ಅಲ್ಲಗಳೆಯುವುದು ಸಾಧ್ಯವಿಲ್ಲ. ಪ್ರತಿದಿನ ಜನ್ಮವಿಡೀ ಅವನು ಗ್ಯಾಂಗ್‌ಮನ್ ಎಂದೇ ಕೆಲಸ ಮಾಡುತ್ತಿರುತ್ತಾನೆ. ಬಡತಿಯ ಆಸೆಯಂತೂ ಇರುವುದೇ ಇಲ್ಲ. ಅವನಿಗೆ ಮೇಲಿನ ಯಾವ ಹುದ್ದೆಯೂ ಖಾಲಿಯಿರುವುದಿಲ್ಲ, ವಿರಳಪ್ರಸಂಗದಲ್ಲಿ ಆವನನ್ನು ಪೋರ್ಟರ್ ಎಂದೇ ನೇಮಿಸಲಾಗುತ್ತದೆ. ಅದರ ಕಾರಣವೇನೆಂದರೆ ಪೋರ್ಟರ್‌ನಾಗಿರುವುದರಿಂದ ಸ್ಟೇಶನ್ ಮಾಸ್ತರನ ಮನೆಕೆಲಸವನ್ನೂ ತನ್ನ ನೌಕರಿಯ ಭಾಗವೆಂದೇ ಮಾಡಬೇಕಾಗುತ್ತದೆ. ಸ್ಟೇಶನ್ ಮಾಸ್ತರನಾದವನು ಸಾಮಾನ್ಯವಾಗಿ ಉಚ್ಚವರ್ಗದ ಹಿಂದುವಾಗಿರುತ್ತಾನೆ. ಪೋರ್ಟರ್ ಅಸ್ಪೃಶ್ಯನಾಗಿದ್ದರೆ ಈ ಉಚ್ಚವರ್ಣದ ಸ್ಟೇಶನ್ ಮಾಸ್ತರನ ಮನೆಯಕೆಲಸ ಮಾಡಲು ಅವಕಾಶವಿರುವುದಿಲ್ಲ. ಹೀಗಾಗಿ ದಲಿತವರ್ಗದ ಪೋರ್ಟರ್ ನಿರುಪಯೋಗಿಯಾಗಿರುವುದೇ ಇದರ ಕಾರಣ. ಆದ್ದರಿಂದ ಸ್ಟೇಶನ್ ಮಾಸ್ತರನು ದಲಿತವರ್ಗದ ಮನುಷ್ಯನನ್ನು ಪೋರ್ಟರ್ ಎಂದು ನೇಮಿಸಲು ಒಪ್ಪುವುದಿಲ್ಲ. ರೈಲಿನಲ್ಲಿ ಗುಮಾಸ್ತನ ಪಾತ್ರತೆ ನಿರ್ಧರಿಸುವ ಪರೀಕ್ಷೆಯನ್ನು ಏರ್ಪಡಿಸದೆ ಮೆಟ್ರಿಕ್‌ಪರೀಕ್ಷೆಯಲ್ಲಿ ಉತ್ತೀರ್ಣನಾಗಿರದ ವ್ಯಕ್ತಿಯನ್ನು ಪ್ರಾಯಃ ನೇಮಿಸುತ್ತಾರೆ. ಭಾರತದಲ್ಲಿಯ ಕ್ರಿಶ್ಚನ್, ಆಂಗ್ಲೋ ಇಂಡಿಯನ್ ಮತ್ತು ಉಚ್ಚವರ್ಣದ ಹಿಂದೂಗಳ ನೂರಾರು ನಾನ್‌ಮೆಟ್ರಿಕ್ ಗುಮಾಸ್ತರನ್ನು ರೇಲ್ವೆಯಲ್ಲಿ ನೇಮಿಸಿಕೊಳ್ಳಲಾಗಿದೆ. ಆದರೆ ದಲಿತವರ್ಗದ ನೂರಾರು ಯುವಕರನ್ನು ಈ ಹುದ್ದೆಗಾಗಿ ಚಾಣಾಕ್ಷತನದಿಂದ ತಪ್ಪಿಸಲಾಗಿದ್ದು, ವಿರಳವಾಗೇ ಯಾರಿಗಾದರೂ ಅಂಥ ಅವಕಾಶ ಸಿಗುತ್ತದೆ. ಇಂಥದೇ ಸ್ಥಿತಿ ವರ್ಕ್‌ಶಾಪ್‌ನಲ್ಲೂ ಇದೆ. ದಲಿತವರ್ಗದ ವ್ಯಕ್ತಿಯನ್ನು ಅಪರೂಪಕ್ಕೆ ಮೆರೆನಿಕ್‌ನೆಂದು ನೇಮಿಸಲಾಗುತ್ತದೆ. ದಲಿತರಿಗೆ ಮೇಸ್ತ್ರಿಯ ಹುದ್ದೆನೀಡಿದ್ದು ತೀರ ಅಪರೂಪ. ವರ್ಕ್‌ಶಾಪ್‌ನಲ್ಲಿ ಅವನನ್ನು ಫೋರಮನ್ ಅಥವಾ ಚಾರ್ಜಮನ್ ಎಂದು ನೇಮಿಸಿದ್ದೂ ವಿರಳವೇ. ಅವನು ಕೇವಲ ಕೂಲಿಯವನಾಗಿದ್ದು, ಕೂಲಿಯವನಾಗಿಯೇ ಉಳಿಯುತ್ತಾನೆ. ರೇಲ್ವೆ ಇಲಾಖೆಯಲ್ಲಿ ದಲಿತರ ಅವಸ್ಥೆ ಹೀಗಿದೆ. ಯಾವ ಉದ್ಯೋಗದಲ್ಲಿ ಅವನ ಪಾತ್ರತೆಗೆ ತಕ್ಕಂತೆ ಕೆಲಸ ಸಿಗುವ ಆಶೆಯಿರುತ್ತದೆಯೋ ಅಲ್ಲಿ ಅವನನ್ನು ಕೆಳಗಿನ ಹುದ್ದೆಯಲ್ಲಿ ನೇಮಿಸಲಾಗುತ್ತದೆ, ಅಷ್ಟೇ ಅಲ್ಲ ನಿವೃತ್ತನಾಗುವವರೆಗೂ ಅವನನ್ನು ಅದೇ ಸ್ಥಾನದಲ್ಲಿರಿಸಲಾಗುತ್ತದೆ. ಅವನಿಗಾಗಿ ಉತ್ಕರ್ಷವಿಲ್ಲ. ಅವನಿಗೆ ಪ್ರಗತಿಯ ಆಸೆಯಿಲ್ಲ. ಪ್ರಾಯಃ ಅವನಿಗೆ ಬಡತಿಯೂ ಇಲ್ಲ! ಕಾರ್ಮಿಕರ ಬೇಡಿಕೆ ಕ್ಷೀಣಿಸದಿದ್ದರೆ, ಅವನ ವಿಷಯದಲ್ಲಿ ಹೀಗೆ ಜರಗುತ್ತದೆ. ಆದರೆ ಕಾರ್ಮಿಕರ ಬೇಡಿಕೆ ಕ್ಷೀಣಿಸಿದರೆ ನೌಕರಿ ದೂರಕಿಸುವಲ್ಲಿ ಅವನದೇ ಕೊನೆಯ ಕ್ರಮಾಂಕವೆಂದು ಎಲ್ಲರಿಗಿಂತ ಮೊದಲೇ ಅವನನ್ನು ಬೆದರಿಸಲಾಗುತ್ತದೆ.

ಯಾವ ಟೀಕಾಕಾರನು ನಿಮ್ಮಮೇಲೆ ಮತ್ತು ನನ್ನಮೇಲೆ ಕೆಟ್ಟ ಉದ್ದೇಶ ಹೊಂದಿರುವ ಬಗೆಗೆ ಟೀಕಿಸಿದನೋ, ಅವನಿಗೆ ನಾನು ಎರಡು ಸರಳ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಒಂದು, ಈ ನಮ್ಮ ಬೇಡಿಕೆ ಸರಿಯೋ ತಪ್ಪೋ? ಎರಡನೇ ಪ್ರಶ್ನೆ, ಈ ಬೇಡಿಕೆ ಸತ್ಯವಾಗಿದ್ದರೆ ಯಾವುದರಿಂದ ಅವರಿಗೆ

ಯಾತನೆಯನ್ನು ಅನುಭವಿಸಬೇಕಾಯಿತೋ, ಅವರು ಅದರಿಂದ ಬಿಡುಗಡೆಹೊಂದಲು ಸಂಘಟಿತರಾಗಬೇಕೋ ಬೇಡವೋ? ಈ ಎರಡೂ ಪ್ರಶ್ನೆಯ ಉತ್ತರ ಹೌದೆಂದಾರೂ, ಯಾವುದೇ ಪ್ರಾಮಾಣಿಕ ಮನುಷ್ಯ ಇದಕ್ಕೆ ಬೇರೆ ಉತ್ತರ ನೀಡಬಹುದೆಂದು ನನಗೆ ಅನಿಸುವುದಿಲ್ಲ. ಹೀಗಾಗಿ ನಮ್ಮ ಈ ಪ್ರಯತ್ನ ನ್ಯಾಯಯುತವಾದುದು. ನಮ್ಮ ಮೇಲೆ ದೋಷ ಹೊರಿಸುವ ಕಾರ್ಮಿಕ ನಾಯಕರಿಗೆ ಒಂದು ಬಗೆ ಭ್ರಮೆಯಾಗಿದೆ. ಕಾರ್ಲಮಾರ್ಕ್ಸ ಓದಿದ್ದರಿಂದ ಸಮಾಜದಲ್ಲಿ ಕೇವಲ ಕಾರ್ಮಿಕ ಮತ್ತು ಮಾಲೀಕ ಎಂಬೆರಡೇ ವರ್ಗವಿರುತ್ತದೆ ಎಂದವರು ಅಂದುಕೊಂಡಿದ್ದಾರೆ. ಭಾರತದಲ್ಲೂ ಇವೆರಡೇ ವರ್ಗವಿದೆ ಎಂದವರು ಭಾವಿಸಿ, ಅವರು ತಮ್ಮ ಕಾರ್ಯಾಚರಣೆಯನ್ನು ಆರಂಭಿಸುತ್ತಾರೆ. ಈ ದೃಷ್ಟಿಯಲ್ಲಿ ಎರಡು ದೊಡ್ಡ ತಪ್ಪುಗಳಿವೆ. ಯಾವ ಸಂಗತಿಯು ಸಂಭವನೀಯವಾಗಿರುತ್ತದೋ ಅದನ್ನವರು ವಾಸ್ತವಿಕವೆಂದು ಭಾವಿಸುವುದು ಮೊದಲ ತಪ್ಪು. ಯಾವುದೇ ಸಮಾಜದಲ್ಲಿ ನೌಕರ ಮತ್ತು ಮಾಲೀಕ ಎಂಬ ಎರಡೇ ವರ್ಗವಿರುತ್ತದೆಂದು ಮಾರ್ಕ್ಸ್ ಎಲ್ಲಿಯೂ ಹೇಳಲಿಲ್ಲ. ಎಲ್ಲ ಸಮಾಜದ ಜನರು ಅರ್ಥವೃತ್ತಿಯ ಅಥವಾ ಬುದ್ಧಿವಾದಿ ಇಲ್ಲವೇ ನ್ಯಾಯಪ್ರಿಯರಾಗಿರುತ್ತಾರೆ ಎನ್ನುವುದು ಹೇಗೆ ಸುಳ್ಳೋ, ಹಾಗೆಯೇ ಸಮಾಜದಲ್ಲಿ ಎರಡೇ ವರ್ಗಗಳಿರುತ್ತವೆ ಎನ್ನುವುದೂ ಅಷ್ಟೇ ಸುಳ್ಳು. ಮನುಷ್ಯನ ಆರ್ಥಿಕ ಪ್ರವೃತ್ತಿಯು ಮೂಲಭೂತ ಸಂಗತಿಯಾಗಿದೆ ಎಂದು ಭಾವಿಸಿ ನಿಷ್ಕರ್ಷೆ ಮಾಡುವಾಗ ಅರ್ಥಶಾಸ್ತ್ರಜ್ಞರು ಸದಾಕಾಲ ಒಂದು ಜಾಣತನದ ಸೂಚನೆ ಮಾಡುತ್ತಾರೆ. ಅದು ಯಾವುದೆಂದರೆ, ಇತರ ಪರಿಸ್ಥಿತಿಗಳೆಲ್ಲ ಸಮಾನವಾಗುಳಿದರೆ ಮನುಷ್ಯನ ಅರ್ಥಪ್ರವೃತ್ತಿ ಸ್ಪಷ್ಟವಾಗಿ ಅಸ್ತಿತ್ವದಲ್ಲಿರುತ್ತದೆ. ಕಾರ್ಮಿಕ ಮುಖಂಡರು ಈ ಮೂಲಭೂತ ಸಂಗತಿಯನ್ನೇ ಮರೆತುಬಿಟ್ಟರು. ಮಾರ್ಕ್ಸ್ ಹೇಳಿದ್ದು ಯುರೋಪಿನ ಮಟ್ಟಿಗೆ ಸರಿಯಾಗಿತ್ತು ಎಂದು ಭಾವಿಸುವುದೂ ತಪ್ಪು. "ಜರ್ಮನಿಯಲ್ಲಿ ಬಡವ ಮತ್ತು ಶೋಷಣೆಗೊಳಗಾದ ಮನುಷ್ಯನಿದ್ದಾನೆಯೇ? ಅವರು ಒಂದೇ ವಂಶದವರು, ಒಂದೇ ದೇಶದವರು, ಸಮಾನ ಭೂತಕಾಲ ಮತ್ತು ವರ್ತಮಾನಕಾಲ ಇದ್ದವರು. ಅವರ ಭವಿತವ್ಯವೂ ಅಮಾನವಾಗಿರುತ್ತದೆ. ಅಂದಾಗ ಅವರು ಸಂಘಟಿತರಾಗಬೇಕು". ಈ ಉಪದೇಶವನ್ನು ಮಾರ್ಕ್ಸ್‌ನ ಕಾಲದಿಂದಲೂ ಭಾಷಣದಲ್ಲಿ ಮಾಡಲಾಗುತ್ತಿದೆ. ಜರ್ಮನಿಯ ಸಂಕಟಗ್ರಸ್ತ ಬಡವ ಮತ್ತು ಫ್ರಾನ್ಸಿನ ದೋಚಲ್ಪಟ್ಟ ರೈತ ಸಂಘಟಿತರಾದರೆ? ನೂರುವರ್ಷ ಗತಿಸಿದರೂ ಅವರು ಸಂಘಟಿತರಾಗುವುದು ಸಾಧ್ಯವಾಗಿಲ್ಲ. ಹಿಂದಿನ ಮಹಾಯುದ್ಧದಲ್ಲಿ ಅವರ ಬಹಿರಂಗಿಗಳೇ ಪರಸ್ಪರರ ವಿರುದ್ಧ ನಿರ್ದಯಿ ಶತ್ರುಗಳಂತೆ ಹೋರಾಡಿದವರು. ಭಾರತದ ಮಟ್ಟಿಗಂತೂ ಈ ವಿಷಯ ಸಂಪೂರ್ಣ ತಪ್ಪು. ಭಾರತದಲ್ಲಿ ಹೀಗೆ ಸಾಪೇಕ್ಷವಾಗಿ ಖಚಿತವಾದ ಎರಡು ವರ್ಗವಿದೆ ಎಂಬ ಘೋಷಣೆಯು ಆದರ್ಶರೂಪವಾಗಿದ್ದು, ಅದನ್ನು ಪ್ರತ್ಯಕ್ಷದಲ್ಲಿ ತರಬೇಕೆಂದುಕೊಂಡು ಅದು ವಸ್ತುಸ್ಥಿತಿಯಾಗಿದೆ ಎಂದು ಭಾವಿಸಿ ನಡೆದುಕೊಳ್ಳುವುದು ಒಂದು ದೊಡ್ಡ ತಪ್ಪಾಗಿದೆ. ಕಾರ್ಮಿಕರ ಸೈನ್ಯವನ್ನು ಅಧಿಕ ಮಜಭೂತವನ್ನಾಗಿ ಮಾಡುವುದು ಹೇಗೆ ಸಾಧ್ಯ? ಕಾರ್ಮಿಕರಲ್ಲಿ ಐಕ್ಯತೆಯನ್ನು ಹೇಗೆ ಸ್ಥಾಪಿಸಲಿದ್ದೇವೆ? ಕಾರ್ಮಿಕರ ಒಂದು ಗುಂಪು ಮತ್ತೊಂದು ಗುಂಪಿನ ಮೇಲೆ ಅನ್ಯಾಯ ಮಾಡಿಯಲ್ಲ, ಅನ್ಯಾಯಕ್ಕೊಳಗಾದ ಗುಂಪು ಸಂಘಟಿತಗೊಳ್ಳುವಾಗ ಅಡ್ಡಿಯನ್ನುಂಟು ಮಾಡಿಯಲ್ಲ, ಅನ್ಯಾಯಕ್ಕೊಳಗಾದವರು ಅನ್ಯಾಯದ ವಿರುದ್ಧ ಚಳುವಳಿಯನ್ನು ಆರಂಭಿಸಲು ಅಡ್ಡಿಯನ್ನುಂಟು ಮಾಡಿಯೂ ಅಲ್ಲ! ವಂಶ ಮತ್ತು ಧರ್ಮದಿಂದ ಒಬ್ಬ ಕಾರ್ಮಿಕ ಮತ್ತೊಬ್ಬನ ವೈರಿಯಾಗುತ್ತಿರುವುದರಿಂದ ಕಾರ್ಮಿಕರ ಒಗ್ಗಟ್ಟಿಗೆ ಅಡ್ಡಬರುವ ಈ ಕಾರಣಗಳನ್ನು ನಾಶಗೊಳಿಸುವುದೇ ಕಾರ್ಮಿಕರ ಐಕ್ಯದ ನಿಜವಾದ ಮಾರ್ಗ. ಒಬ್ಬ ಕಾರ್ಮಿಕ ಮತ್ತೊಬ್ಬ ಕಾರ್ಮಿಕನಿಗೆ ಹಕ್ಕು ಕೊಡಲಾರ. ಅದನ್ನು ಸ್ವಂತಕ್ಕಾಗಿ ಬೇಡುವ ಅಧಿಕಾರ ನಿಮಗಿಲ್ಲ. ಅದನ್ನು ಅವರಿಗೆ ಹೇಳುವದೇ

ಕಾರ್ಮಿಕರ ಐಕ್ಯದ ನಿಜವಾದ ಉಪಾಯ. ಸಾಮಾಜಿಕ ದೃಷ್ಟಿಯಿಂದ ಉಚ್ಚ-ನೀಚ ಭೇದಭಾವವನ್ನು ಒಪ್ಪುವುದು ಮತ್ತು ಪಾಲಿಸುವುದು ತಾತ್ವಿಕವಾಗಿ ತಪ್ಪಾಗಿದ್ದ ಕಾರ್ಮಿಕ ಸಂಘಟನೆಗೆ ಅದು ತೀರ ಮಾರಕವಾದುದು. ಇದನ್ನು ಅವರಿಗೆ ತಿಳಸುವುದೇ ನಿಜವಾದ ಏಕತೆಯ ಮಾರ್ಗ. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಬ್ರಾಹ್ಮಣ ಶಾಹಿಯ ಅಸಮಾನತೆಯ ವಿಚಾರವನ್ನು ಕಾರ್ಮಿಕರಿಂದ ಸಂಪೂರ್ಣನಾಶ ಪಡಿಸಬೇಕಾಗಿದೆ. ಆದರೆ ಕಾರ್ಮಿಕರಲ್ಲಿ ಈ ಬಗೆಯ ಸ್ಫೂರ್ತಿಯನ್ನು ನಿರ್ಮಿಸುವ ಕಾರ್ಮಿಕ ನಾಯಕರೆಲ್ಲಿದ್ದಾರೆ? ಕಾರ್ಮಿಕನಾಯಕರು ಬಂಡವಾಳಶಾಹಿಯ ವಿರುದ್ಧ ಜೋರು ಜೋರಾಗಿ ಭಾಷಣ ಮಾಡುವುದನ್ನು ನಾನು ಕೇಳಿದ್ದೇನೆ. ಆದರೆ ಕಾರ್ಮಿಕರಲ್ಲಿರುವ ಬ್ರಾಹ್ಮಣ ಶಾಹಿಯ ವಿರುದ್ಧ ಮಾತಾಡುವ ಒಬ್ಬ ಕಾರ್ಮಿಕ ನಾಯಕನನ್ನೂ ನಾನು ಕಂಡಿಲ್ಲ. ಇದರ ಬದಲು ಈ ವಿಷಯದ ಬಗೆಗೆ ಅವರು ಮೌನವಾಗಿರುವುದನ್ನು ಕಾಣಬಹುದು. ಬ್ರಾಹ್ಮಣಶಾಹಿ ಮೇಲೆ ಶ್ರದ್ಧೆಯಿರುವುದರಿಂದ ಇರಬಹುದು ಮತ್ತು ಕಾರ್ಮಿಕರ ಐಕ್ಯದ ಬಗೆಗೆ ಅವರಿಗೆ ಆಸಕ್ತಿಯಿರಲಿ ಬಿಡಲಿ, ಬ್ರಾಹ್ಮಣ ಶಾಹಿಯ ಕಾರ್ಮಿಕರ ಜಗಳದೊಂದಿಗೆ ಏನಾದರೂ ಸಂಬಂಧ ಇದೆಯೆಂದು ಅವರಿಗೆ ಅನಿಸದೇ ಇರುವುರಿಂದ ಅವರು ಮೌನತಾಳಿರಲಿ ಬಿಡಲಿ. ಅಥವಾ ಕೇವಲ ಕಾರ್ಮಿಕರ ನಾಯಕತ್ವವನ್ನು ಮೆರೆಯುವ ಉತ್ಸಾಹವಿರುವದರಿಂದ ಕಾರ್ಮಿಕರ ಭಾವನೆಗಳಿಗೆ ನೋವು ಉಂಟು ಮಾಡಬಾರದೆಂಬ ಕಾರಣಕ್ಕಾಗಿ ಈ ಮೌನವಿರಲಿ ಬಿಡಲಿ, ಅದರ ಬಗೆಗೆ ವಿಚಾರಣೆ ಮಾಡಲು ನಾನು ಹಾದಿಕಾಯುವುದಿಲ್ಲ. ಆದರೂ ನಾನು ಹೇಳಲೇ ಬೇಕಾಗದ್ದೇನೆಂದರೆ, ಬ್ರಾಹ್ಮಣಶಾಹಿಯು ಕಾರ್ಮಿಕರ ಒಡಕಿನ ಮೂಲಭೂತ ಕಾರಣವಾಗಿದ್ದರೆ ಅದನ್ನು ಕಾರ್ಮಿಕರಿಂದ ಕಿತ್ತು ಹಾಕಲು ಬಿರುಸಿನ ಪ್ರಯತ್ನ ನಡೆಯಬೇಕು. ಈ ಸಾಂಕ್ರಾಮಿಕ ರೋಗವನ್ನು ನಿರ್ಲಕ್ಷ್ಯ ಮಾಡುವುದರಿಂದಾಗಲಿ, ಮೌನತಾಳುವುದರಿಂದಾಗಲಿ ಅದು ಹೋಗಲಾರದು. ಅದಕ್ಕೆ ಬೆಂಬಲ ನೀಡಿ, ಅದರ ಬೇರುಕಿತ್ತು ಹಾಕಬೇಕಾಗಿದೆ. ಅಂದಾಗಲೇ ಕಾರ್ಮಿಕರ ಐಕ್ಯದ ಮಾರ್ಗ ಮುಕ್ತವಾಗಬಲ್ಲದು.

ಬ್ರಾಹ್ಮಣಶಾಹಿ ಎಲ್ಲಿಯವರೆಗೆ ಒಂದು ಪ್ರಚಲಿತ ಜೀವಂತ ಶಕ್ತಿಯಾಗಿರುತ್ತದೆಯೋ ಮತ್ತು ಜನರು ಎಲ್ಲಿಯವರೆಗೆ ತಮ್ಮ ತಮ್ಮ ಅಧಿಕಾರದ ಸ್ವಾರ್ಥಕ್ಕಾಗಿ ಅದಕ್ಕೆ ಅಂಟಿಕೊಂಡಿದ್ದಾರೋ ಮತ್ತು ಉಳಿದ ಬಂಧವನ್ನು ಹೇರುತ್ತಾರೋ ಅಲ್ಲಿಯವರೆಗೆ ಯಾರಿಗೆ ಅದರಿಂದ ಯಾತನೆಯಾಗಿರುತ್ತದೆಯೋ ಅವರು ಇದರ ವಿರುದ್ಧ ಸಂಘಟಿತರಾಗುವುದು ತುಂಬ ಅಗತ್ಯ. ಅವರು ಈ ರೀತಿ ಸಂಘಟಿತರಾದರೆ ಅದರಿಂದಾಗುವ ಹಾನಿಯೇನು? ಈ ಸಂಘಟನೆಯ ಮೇಲೆ ಮಾಲೀಕರ ನಿಯಂತ್ರಣ ಇದ್ದದ್ದೇ ಆಗಿದ್ದರೆ, ಈ ಸಂಘಟನೆಯ ವಿರುದ್ಧದ ಒದರಾಡುವಿಕೆಗೆ ಏನಾದರೂ ಅರ್ಥವಿದೆ ಎಂದು ನಾನು ಅಂದುಕೊಳ್ಳುತ್ತಿದ್ದೆ. ನಾವು ಮಾಲೀಕರ ಕೈಗೊಂಬೆ ಅಥವಾ ನಾವು ಅವರ ಇಚ್ಛೆಯಂತೆ ವರ್ತಿಸುತ್ತಿದ್ದೇವೆ ಅಥವಾ ಕಾರ್ಮಿಕರಲ್ಲಿ ಒಡಕುಂಟು ಮಾಡಲೆಂದೇ ನಾವು ಬೇಕೆಂದೇ ಈ ಸಂಘಟನೆಯನ್ನು ಕಟ್ಟುತ್ತಿದ್ದೇವೆ ಎನ್ನುವುದನ್ನು ಸಿದ್ಧಮಾಡಿದ್ದರೆ ಈ ಪರಿಷತ್ತಿನ ಬಗೆಗೆ ಮಾಡಿದ ಟೀಕೆಯು ನ್ಯಾಯೋಚಿತವಾಗಿದೆ ಎಂದೆನಿಸಬಹುದಾಗಿತ್ತು. ಖಂಡಿತಕ್ಕೂ ಈ ಬಗೆಯ ವರ್ತನೆಯು ವಿಶ್ವಾಸ ಘಾತುವಾಗಬಹುದಾಗಿತ್ತು. ಆದರೆ ನಮ್ಮ ಈ ಚಳುವಳಿಯ ಮೇಲೆ ಮಾಲೀಕರ ನಿಯಂತ್ರಣವಿದ್ದು, ಅದು ಮಾಲೀಕರಿಗೆ ಸಹಾಯ ಮಾಡುತ್ತದೆ ಅಥವಾ ಕಾರ್ಮಿಕರ ಹಿತವನ್ನು ನಾಶಗೊಳಿಸುತ್ತದೆ ಎಂದು ಯಾರಾದರೂ ಹೇಳಬಲ್ಲರೇ? ಇದನ್ನು ಸಿದ್ಧಮಾಡಿತೋರಿಸ ಬೇಕೆಂದು ನಾನು ಟೀಕಾಕಾರರಿಗೆ ಆಹ್ವಾನ ಮಾಡುತ್ತೇನೆ.

ಹೀಗಾಗಿ ಈ ಸಮ್ಮೇಳನ ಏರ್ಪಡಿಸಿದ್ದಕ್ಕಾಗಿ ಯಾರೂ ನಾಚಿಕೆಪಡುವ ಅಥವಾ ಯಾರದ್ದೇ ಕ್ಷಮೆಬೇಡುವ ಅಗತ್ಯವಿಲ್ಲ. ನಮ್ಮ ಉದ್ದೇಶ ಮತ್ತು ಅದರ ಹಿಂದಿನಕಾರಣ ಸಾಕಷ್ಟು ನ್ಯಾಯೋಚಿತವಾಗಿದೆ.

ದಲಿತ ವರ್ಗದಲ್ಲಿಯ ಒಂದಿಬ್ಬರಿಗೂ ಈ ಸಮ್ಮೇಳನ ಇಷ್ಟವಿಲ್ಲ. ಆದರೆ ಅದರಲ್ಲಿ ಹೊಸದೇನೂ ಇಲ್ಲ. ಅವರಲ್ಲಿಯ ಕೆಲವರು ಬೇರೆಯವರ ಕೈಗೊಂಬೆಯಾಗಿದ್ದು ಅವರಿಗೆ ಹಣ ತಿನ್ನಿಸಿ ವಿರೋಧಿಸಲೆಂದೇ ಅವರನ್ನು ಸಿದ್ಧಪಡಿಸಲಾಗಿದೆ. ಮತ್ತೆ ಕೆಲವರ ಹಾದಿಯನ್ನು ತಪ್ಪಿಸಲಾಗಿದೆ. ದಲಿತ ವರ್ಗವು ಅದೆಷ್ಟು ದುರ್ಬಲವಾಗಿದೆ ಎಂದರೆ ಮತ್ತು ಕಾರ್ಮಿಕರ ಒಗ್ಗಟ್ಟು ಎಂಬ ಪದ ಆದೆಷ್ಟು ಆಕರ್ಷಕವಾಗಿದೆ ಎಂದರೆ ಹಾಗೂ ಅದೂ ಸಹ ಪ್ರಭಾವಕಾರಿ ಪ್ರಚಾರಕರ ಬಾಯಿಂದ ಅದನ್ನು ಕೇಳಿದ್ದರಿಂದ ನಮ್ಮ ಜನರು ಮೋಡಿಗೊಳಗಾಗಿರುವುದರಲ್ಲಿ ಏನೂ ಅಚ್ಚರಿಯಿಲ್ಲ. ಆದರೆ ಆ ಜನರು ಯಾವ ಗುಂಪಿನಲ್ಲಿ ಇಷ್ಟೆಲ್ಲ ಪರಸ್ಪರ ವಿರೋಧಿ ಭಾವನೆ ಮತ್ತು ವೃತ್ತಿಯು ಪ್ರತಿಯೊಂದು ವಿಷಯದಲ್ಲಿದ್ದು, ಅದರಲ್ಲಿಯ ಒಂದು ಗುಂಪು ಬೇರೆಯವರ ಹಿತದ ವಿರುದ್ಧ ಸ್ವಂತದಹಕ್ಕು ಮತ್ತು ಅಧಿಕಾರದ ಬಗೆಗೆ ಹಕ್ಕು ಚಲಾಯಿಸುತ್ತದೆಯೋ ಅಲ್ಲಿ ಕಾರ್ಮಿಕರ ನಿಜವಾದ ಐಕ್ಯತೆಯಿರುವುದು ಸಾಧ್ಯವಿಲ್ಲೆನ್ನುವುದನ್ನು ಮರೆಯುತ್ತಾರೆ. ಇಲ್ಲಿಯ ಐಕ್ಯವೆಂದರೆ ದುರ್ಬಲ ಮತ್ತು ಶೋಷಿತ ಜನರನ್ನು ವಂಚಿಸಲೆಂದೇ ಮಾಡಿದ ಕೇವಲ ಒಂದು ಸೋಗು ಆಗಿದೆ. ಈ ಡಾಂಭಿಕರು ಅವರನ್ನು ಒಗ್ಗಟ್ಟು ಒಡೆಯುವವರು ಎಂದು ಜರಿಯುತ್ತಾರೆ. ಒಗ್ಗಟ್ಟಿನ ಒಡಕು, ಹೌದು! ಆದು ಒಡಕು ಆಗಿರಲೂಬಹುದು, ಆದರೆ ಅದೆಂಥ ಒಡಕೊಂಡರೆ ಅಲ್ಲಿ ನಿಜವಾದ ವಿರೋಧಿ ಮತ್ತು ಭಿನ್ನಾಭಿಪ್ರಾಯ ಆಸ್ತಿತ್ವದಲ್ಲಿದೆ! ಈ ವಿರೋಧ ನಿರ್ಮಾಣವಾಗುವ ಸರಳಕಾರಣವೇನೆಂದರೆ, ಕಾರ್ಮಿಕರ ಒಂದು ಗುಂಪು ಬೇರೆ ಕಾರ್ಮಿಕರ ಅಂದರೆ ದಲಿತವರ್ಗ ಕಾರ್ಮಿಕರ ವಿರೋಧದಲ್ಲಿ ತಮಗೂ ವಿಶೇಷ ಹಕ್ಕು ಇದೆ ಎಂದು ದಾವೆ ಮಾಡುತ್ತದೆ. ಯಾರಿಗೆ ಆಗಲಿ ಭಿನ್ನಾಭಿಪ್ರಾಯಕ್ಕಾಗಿ ಭಿನ್ನಮತ ನಿರ್ಮಾಣ ಮಾಡುವುದರಲ್ಲಿ ಖುಷಿಯಿರುವುದಿಲ್ಲ. ನಾವು ಕೇವಲ ಈ ಮೊದಲೇ ಇದ್ದ ಒಡಕನ್ನು ಗಮನಕ್ಕೆ ತಂದುಕೊಡುವ ಪ್ರಯತ್ನ ಮಾಡುತ್ತಲಿದ್ದು, ನಮ್ಮ ಮೇಲೆ ನಡೆಯುತ್ತಿರುವ ಅನ್ಯಾಯಕ್ಕೆ ತಡೆಯೊಡ್ಡಿ ಈ ಒಡಕಿಗೆ ಕಡಿವಾಣ ಹಾಕುವ ಪ್ರಯತ್ನ ನಮ್ಮದಾಗಿದೆ.

ಒಂದುವೇಳೆ ನಿಮಗೆ ನಿಮ್ಮ ಮೇಲಿನ ಅನ್ಯಾಯವನ್ನು ಪರಿಮಾರ್ಜನೆ ಮಾಡಿಕೊಳ್ಳುವ ಹಾಗಾಗಿದ್ದರೆ ನೀವು ಸಂಘಟನೆ ಕಟ್ಟಬಾರದು ಎಂಬ ಪ್ರಶ್ನೆಯೇ ಏಳುವುದಿಲ್ಲ. ಮುಂದಿನ ಪ್ರಶ್ನೆ ಏನೆಂದರೆ, ನಿಮ್ಮ ಸಂಘಟನೆಯು ಸಾಧಿಸಲಿರುವ ಧ್ಯೇಯವಾದರೂ ಏನು? ನಿಮ್ಮ ಉದ್ಯೋಗದ ಉದ್ದೇಶ ಈಡೇರಲು ನೀವು ಸಂಘಟನೆಯನ್ನು ಕಟ್ಟಬೇಕು ಎನ್ನುವುದು ಯಾರೂ ಹೇಳದಿದ್ದರೂ ತಿಳಿಯಬಹುದಾದ ಸಂಗತಿ. ಈಗ ಉಳಿದಿರುವಪ್ರಶ್ನೆ ಎಂದರೆ ಈ ಉದ್ದೇಶಕ್ಕಾಗಿ ನೀವು ಬೇರೆಯದೆ ಸಂಘಟನೆ ಕಟ್ಟಬೇಕೆ ಅಥವಾ ಈ ಮೊದಲೇ ಆಸ್ತತ್ವದಲ್ಲಿದ್ದ ಸಂಘಟನೆಯಲ್ಲಿ ಸಹಭಾಗಿಯಾಗ ಬೇಕೆ? ಪ್ರತ್ಯಕ್ಷಕಾರ್ಯ ಶುರುವಾಗುವ ಮೊದಲೇ ನೀವು ಈ ಪ್ರಶ್ನೆಯ ಬಗೆಗೆ ಗಂಭೀರವಾಗಿ ಯೋಚಿಸಬೇಕು.

ಭಾರತದಲ್ಲಿಯು ಕಾರ್ಮಿಕ ಸಂಘಟನೆಯು ಒಂದು ಖೇದದ ಸಂಗತಿಯಾಗಿದೆ. ಕಾರ್ಮಿಕ ಸಂಘಟನೆಯ ಮುಖ್ಯ ಉದ್ದೇಶವು ಸಂಪೂರ್ಣ ಕಣ್ಮರೆಯಾಗಿದೆ. ಕಾರ್ಮಿಕವರ್ಗದ ಜೀವನಸ್ತರವು ಕಡಿಮೆಯಾಗುವುದನ್ನು ಸಂರಕ್ಷಿಸುವುದೇ ಸಂಘಟನೆಯ ಮುಖ್ಯ ಉದ್ದೇಶವಾಗಿದೆ. ಹುಟ್ಟಿನಿಂದ ಅಥವಾ ಪ್ರಶಿಕ್ಷಣದಿಂದಾಗಿ ಅರಿವು ಮೂಡಿದ್ದರಿಂದ ಯೂರೋಪದ ಪ್ರತಿಯೊಬ್ಬ ಮನುಷ್ಯ ತನ್ನ ಜೀವನಸ್ತರವನ್ನು ಸಮಾಧಾನಕಾರಕವಾಗಿ ಯೋಗ್ಯ ಸ್ಥಿತಿಯಲ್ಲಿ ಇರಿಸುವ ಸತತ ಪ್ರಯತ್ನ ಮಾಡುತ್ತಿರುವುದನ್ನು ಕಾಣುತ್ತೇವೆ. ಅದನ್ನು ಕಡಿಮೆ ಮಾಡುವ ಎಂಥ ಭಯಾನಕ ಪ್ರಯತ್ನ ನಡೆದರೂ ಅವನದನ್ನು ವಿರೋಧಿಸುತ್ತಾನೆ. ಭಾರತೀಯ ಕಾರ್ಮಿಕರಲ್ಲಿ ಇಂಥ ಧೃಢನಿಶ್ಚಯ ಕಂಡು ಬರುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಕೇವಲ ಬದುಕಿ ಉಳಿಯಲೆಂದೇ ಅವನು ಶತಪ್ರಯತ್ನ ಮಾಡುತ್ತಲಿರುತ್ತಾನೆ. ಮಿಲ್ ಹೇಳಿದಂತೆ,

"ಎಲ್ಲಿ ಈ ನಿಕೃಷ್ಟತೆಯತ್ತ ಒಯ್ಯುವ ಪ್ರಯತ್ನಗಳಿಗೆ ನಿಗ್ರಹದ ಪ್ರತೀಕಾರ ಮಾಡುವ ಮತ್ತು ಸಮಾಧಾನಕಾರಕ ಜೀವನಸ್ತರವನ್ನು ಸಂಭಾಳಿಸುವ ವೃತ್ತಿಯು ಜನರಲ್ಲಿರುವುದಿಲ್ಲವೋ ಅಲ್ಲಿ ದೊಡ್ಡದೊಡ್ಡ ಪ್ರಗತಿಪರ ರಾಷ್ಟ್ರದಲ್ಲೂ ಬಡವರ ಅವಸ್ಥೆಯು ಕೇವಲ ಜೀವವನ್ನು ಧಾರಣ ಮಾಡುವ ಸ್ಥಿತಿಯವರೆಗೆ ತಲುಪುತ್ತದೆ." ನನ್ನ ದೃಷ್ಟಿಯಲ್ಲಿ ಕಾರ್ಮಿಕ ಸಂಘಟನೆಯ ತೀರ ಅಗತ್ಯವಿದ್ದ ದೇಶವೆಂದರೆ ಅದು ಕೇವಲ ಭಾರತ ಮಾತ್ರ. ಆದರೆ ನಾನು ಹೇಳಿದಂತೆ, ಭಾರತದಲ್ಲಿಯ ಇಂದಿನ ಕಾರ್ಮಿಕ ಸಂಘಟನೆಯು ಕೊಳೆತು ನಾರುವ ಒಂದು ಹೊಂಡವಾಗಿದೆ. ಅದರ ಪ್ರಮುಖ ಕಾರಣವೆಂದರೆ, ಕಾರ್ಮಿಕರ ನಾಯಕರು ಒಂದೋ ಪುಕ್ಕಲು, ಸ್ವಾರ್ಥಿ ಇಲ್ಲವೇ ಹಾದಿತಪ್ಪಿದವರಾಗಿರುವುದು. ಅದರಲ್ಲಿ ಕೆಲವರು ಎಂಥ ನಾಯಕರಿದ್ದಾರೆ ಎಂದರೆ ಅವರು ಕೇವಲ ಆರಾಮ ಕುರ್ಚಿಯ ತತ್ವಜ್ಞಾನಿಗಳೂ ಅಥವಾ ಪತ್ರಿಕೆಯಲ್ಲಿ ತಮ್ಮ ಭಾಷಣ ಪ್ರಕಟಪಡಿಸುವುದರಲ್ಲೇ ಸಂತೋಷ ಪಡುವ ರಾಜಕಾರಣಿಗಳಾಗಿದ್ದಾರೆ. ಕಾರ್ಮಿಕರನ್ನು ಸಂಘಟಿತಗೊಳಿಸುವುದು, ಶಿಕ್ಷಿತರನ್ನಾಗಿ ಮಾಡುವುದು ಮತ್ತು ಸಂಘರ್ಷದ ಕಾಲದಲ್ಲಿ ಅವರಿಗೆ ಸಹಾಯ ಮಾಡುವುದು ಅವರ ಕರ್ತವ್ಯದ ಭಾಗವೇ ಆಗಿಲ್ಲ. ಅವರು ಕೇವಲ ಕಾರ್ಮಿಕರನ್ನು ಪ್ರತಿನಿಧಿಸುವ ಮತ್ತು ಅವರ ಪರವಾಗಿ ಮಾತಾಡುವ ಆತುರದವರಾಗಿರುತ್ತಾರೆ. ಆದರೆ ಕಾರ್ಮಿಕರೊಂದಿಗೆ ನೇರ ಸಂಪರ್ಕ ಸಾಧಿಸುವುದನ್ನು ಮಾತ್ರ ಮರೆಯುತ್ತಾರೆ. ಕಾರ್ಮಿಕ ನಾಯಕನ ಎರಡನೇ ಪ್ರಕಾರವೆಂದರೆ, ಅವರು ಕೇವಲ ಸೆಕ್ರೆಟರಿ, ಅಧ್ಯಕ್ಷ ಅಥವಾ ಬೇರೆ ಯಾವುದೇ ಹುದ್ದೆಯನ್ನು ಪಡೆಯುವ ಉದ್ದೇಶದಿಂದ ಕಾರ್ಮಿಕ ಸಂಘಟನೆಯನ್ನು ಕಟ್ಟುವುದರಲ್ಲಿ ತನ್ಮಯರಾಗಿರುತ್ತಾರೆ. ಅವರು ತಮ್ಮ ಹುದ್ದೆಯನ್ನು ಸಂಭಾಳಿಸಲೆಂದು ತಮ್ಮ ಸಂಸ್ಥೆಯನ್ನು ಸದಾಕಾಲ ಪ್ರತ್ಯೇಕ ಮತ್ತು ಪರಸ್ಪರ ವಿರೋಧಿಯಾಗಿಡಲು ಪ್ರಯತ್ನಿಸುತ್ತಾರೆ. ಒಮ್ಮೊಮ್ಮೆ ಎಂಥ ನಾಚಿಕೆಗೇಡಿನ ಪ್ರಸಂಗ ಮತ್ತು ಚಕಿತಗೊಳಿಸುವ ಪ್ರಸಂಗ ನೋಡಲು ಸಿಗುತ್ತದೆಯೆಂದರೆ, ಈ ವಿಭಿನ್ನ ಸಂಸ್ಥೆಯಲ್ಲಿಯ ಬಡಿದಾಟವು, ಕಾರ್ಮಿಕ ಮತ್ತು ಮಾಲೀಕರದ್ದಾಗಿದ್ದರಂತೂ ಅವರ ನಡುವಿನ ಬಡಿದಾಟ ತುಂಬ ಅಸಹ್ಯವಾಗಿರುತ್ತದೆ. ಹಾಗಾದರೆ ಇದೆಲ್ಲ ಯಾವುದಕ್ಕಾಗಿ ಅಂತೀರಾ? ಕೆಲವರಿಗೆ ತಾವು ಕಾರ್ಮಿಕರ ನಾಯಕರೆಂದು ಮೆರೆಯಬೇಕಾಗಿರುವುದರಿಂದ, ಅಧಿಕಾರ ಚಲಾಯಿಸುವ ಉತ್ಸಾಹವಿರುವುದರಿಂದ! ಮೂರನೇ ಬಗೆಯ ನಾಯಕತ್ವವು ಕಮ್ಯುನಿಸಂ ತತ್ವದ ಮೇಲೆ ನಂಬಿಕೆಯಿಡುವವರದ್ದು. ಅವರ ಉದ್ದೇಶ ಪ್ರಾಯಃ ಚೆನ್ನಾಗಿರಲೂಬಹುದು. ಆದರವರು ಬೇರೆಯದೇ ಮಾರ್ಗವನ್ನು ಹಿಡಿದಿದ್ದಾರೆ. ಅವರಿಗಿಂತ ಕಾರ್ಮಿಕರನ್ನು ಹೆಚ್ಚು ನಾಶಮಾಡಿದವರು ಮತ್ತೊಬ್ಬರಿರಲಿಕ್ಕಿಲ್ಲ ಎಂದು ಹೇಳಲು ನಾನು ಖಂಡಿತಕ್ಕೂ ಹಿಂಜರಿಯಲಾರೆ. ಇಂದು ಕಾರ್ಮಿಕರ ಸಂಘಟನೆಯ ಬೆನ್ನೆಲುಬು ಯಾವುದಾದರೂ ಕಾರಣಕ್ಕೆ ಮುರಿದಿದ್ದರೆ, ಮಾಲೀಕರು ಯಾವುದಾದರೂ ಕಾರಣಕ್ಕೆ ಏಳ್ಗೆಯನ್ನು ಹೊಂದಿದ್ದರೆ, ಕಾರ್ಮಿಕ ಸಂಘಟನೆಯು ಶಾಪಿತವಾಗಿರುವುದೇ ಕಾರಣ. ಅದರ ಏಕೈಕ ಕಾರಣವೆಂದರೆ ಒಂದುಕಾಲದಲ್ಲಿ ಕಾರ್ಮಿಕ ಸಂಘಟನೆಯ ಮೇಲೆ ಕಮ್ಯೂನಿಸ್ಟರ ಸಂಪೂರ್ಣ ಹಿಡಿತವಿತ್ತು. ಅವರು ಅದರ ದುರ್ಬಳಕೆ ಮಾಡಿಕೊಂಡರು. ಕಾರ್ಮಿಕರಲ್ಲಿ ಯಾವುದೇ ಬಗೆಯ ಅಸಮಾಧಾನವಿಲ್ಲ ಎಂದು ಭಾವಿಸಿ ಅವರಲ್ಲಿ ಅಸಂತೋಷ ನಿರ್ಮಾಣ ಮಾಡುವುದು ಅವರ ಧ್ಯೇಯವಿದ್ದಂತೆ ಕಾಣುತ್ತದೆ. ಏಕೆಂದರೆ ಅತೃಪ್ತ ಕಾರ್ಮಿಕ ಸಂಘಟನೆಯ ಮೂಲಕ ಕ್ರಾಂತಿಯನ್ನುಂಟು ಮಾಡಬಹುದು, ಕಾರ್ಮಿಕರ ರಾಜ್ಯಸ್ಥಾಪನೆ ಮಾಡಬಹುದು ಎನ್ನುವುದು ಅವರ ನಂಬಿಕೆ. ಹೀಗಾಗಿ ಕಾರ್ಮಿಕರಲ್ಲಿ ಅಸಂತೋಷ ನಿರ್ಮಾಣ ಮಾಡುವ ಆ ಮೂಲಕ ಕಾರ್ಮಿಕರಲ್ಲಿ ಸಂಘಟನೆ ಕಟ್ಟುವ ಒಂದು ಉದ್ಯೋಗವನ್ನೇ ಆರಂಭಿಸಿದ್ದಾರೆ. ಕ್ರಾಂತಿ ಯಶಸ್ವಿಯಾಗಲು ಬರೇ ಅಸಂತೋಷವಷ್ಟೇ ಸಾಲದು. ನ್ಯಾಯ, ಅಗತ್ಯ ಮತ್ತು ಸಾಮಾಜಿಕ, ರಾಜಕೀಯ ಹಕ್ಕಿನ ಗಂಭೀರ ಹಾಗೂ

ಪರಿಪೂರ್ಣ ಅರಿವಿನ ಅಗತ್ಯವಿದೆ. ಕ್ರಾಂತಿಕಾರಕ ಕಮ್ಯುನಿಸ್ಟರೂ ಸಹ ಮಾಡದಷ್ಟು ಕಠೋರ ಉಪಾಸನೆಯನ್ನು ಸಿಂಡಿಕ್ಯಾಲಿಸ್ಟ್ (ಕೇವಲ ಕಾರ್ಯಕಾರಿ ಮಂಡಳಿಯಿದ್ದವರು) ಕಮ್ಯುನಿಸ್ಟರು ಹಿಂದಿನ ಕಾಲದಲ್ಲಿ ಮಾಡಿದ್ದಾರೆ. ಕ್ರಾಂತಿವಾದಿ ಕಮ್ಯುನಿಷ್ಟರು ಮುಷ್ಕರವನ್ನು ಎಂದೂ 'ಕ್ರಾಂತಿಯ ಮೊದಲ ಪಾಠ' ಎಂದು ಒಪ್ಪಿಕೊಂಡಿರದೆ, ಎಲ್ಲ ಉಪಾಯಗಳು ವಿಫಲಗೊಂಡಾಗ ಒಂದು ಗಂಭೀರ ಮತ್ತು ಅಂತಿಮ ಸಾಧನವೆಂದೇ ಒಪ್ಪಿದ್ದಾರೆ. ಆದರೆ ಕಮ್ಯುನಿಸ್ಟರು ಇದನ್ನೆಲ್ಲ ಗಾಳಿಗೆ ತೂರಿ ಕಾರ್ಮಿಕರಲ್ಲಿ ಅಸಂತೋಷ ನಿರ್ಮಾಣ ಮಾಡುವ ಒಂದು ದೈವೀಸಾಧನವೆಂದೇ ಮುಷ್ಕರವನ್ನು ಕಂಡಿದ್ದಾರೆ. ಅವರು ಅಧಿಕ ಅಸಂತೋಷವನ್ನು ನಿರ್ಮಾಣ ಮಾಡಿರಲಿ ಬಿಡಲಿ ಆದರೆ ಅವರ ಶಕ್ತಿ ಮತ್ತು ಸತ್ತೆಯ ಮುಖ್ಯ ಸ್ತ್ರೋತವಾಗಿದ್ದ ಕಾರ್ಮಿಕ ಸಂಘಟನೆಯನ್ನು ಖಚಿತವಾಗಿಯೂ ಸರ್ವನಾಶ ಮಾಡಿದರು. ಸಧ್ಯಕ್ಕೆ ಅವರು ಬಂಡವಾಳಶಾಹಿ ಸಂಘಟನೆಯ ಆಶ್ರಯವನ್ನು ಶೋಧಿಸುವ ಪ್ರಯತ್ನದಲ್ಲಿದ್ದಾರೆ. ಇಂಥ ಬಗೆಯ ನಿರರ್ಥಕ ಚಳುವಳಿಯಿಂದ ಇದಕ್ಕಿಂತ ಹೆಚ್ಚು ನಿರೀಕ್ಷೆಯನ್ನು ಏನು ಮಾಡುವುದು ಸಾಧ್ಯ? ಬೆಂಕಿ ಹಚ್ಚುವಾಗ ಅದು ತನ್ನ ಮನೆಗೂ ವ್ಯಾಪಿಸಿಕೊಳ್ಳಬಹುದು ಎಂಬ ಪ್ರಜ್ಞೆಯೂ ಇಲ್ಲದ ಕಮ್ಯುನಿಸ್ಟ್ ಮನುಷ್ಯ ಕಿಚ್ಚು ಹಚ್ಚುವ ವ್ಯಕ್ತಿಯೆಂದೇ ಸಾಬೀತಾಗಿದ್ದಾನೆ.

ಇದರ ಪರಿಣಾಮವೇನಾಯಿತೆಂದರೆ, ಕಾರ್ಮಿಕರು ಆಸರೆ ಪಡೆಯಬಹುದಾದ ಒಂದೂ ಸಂಘಟನೆಯು ಅಸ್ತಿತ್ವದಲ್ಲಿ ಉಳಿಯಲಿಲ್ಲ. ಮುಂಬೈ ಜವಳಿಗಿರಣಿಯಲ್ಲಿ ಹರಿಡಿದ ಅನಾರೋಗ್ಯದ ಬಗೆಗೆ ನಾನು ಏನೂ ಹೇಳುವುದಿಲ್ಲ. ಅದರ ಬಗೆಗೆ ಕಡಿಮೆ ಮಾತಾಡಿದಷ್ಟು ಒಳ್ಳೆಯದು. ಆದರೆ ಜಿ.ಐ.ಪಿ. ರೇಲ್ವೆ ಕಾರ್ಮಿಕರ ಸಂಘಟನೆಯನ್ನು ೧೯೨೦ರಲ್ಲಿ ಸ್ಥಾಪಿಸಲಾಯಿತು. ಅದು ೧೯೨೨ರಿಂದ ೧೯೨೪ವರೆಗೆ ಮೃತಪ್ರಾಯವೇ ಆಗಿತ್ತು. ೧೯೨೫ರಲ್ಲಿ ಅದನ್ನು ಪುನರುಜ್ಜೀವನ ಗೊಳಿಸಲಾಯಿತು. ೧೯೨೬ರಲ್ಲಿ ಬೇರೊಂದು ಸಂಘಟನೆಯನ್ನು 'ಜಿ.ಐ.ಪಿ. ರೇಲ್ವೆಮೆನ್ಸ್ ಯೂನಿಯನ್' ಎಂಬ ಹೆಸರಿನಲ್ಲಿ ಆರಂಭಿಸಲಾಯಿತು. ೧೯೩೧ರಲ್ಲಿ ಈ ಎರಡೂ ಸಂಘಟನೆಯನ್ನು ಐಕ್ಯಗೊಳಿಸಿ 'ರೇಲ್ವೆ ವರ್ಕರ್ಸ್ ಯೂನಿಯನ್' ಎಂಬ ಸಂಸ್ಥೆಯನ್ನು ಆರಂಭಿಸಲಾಯಿತು. ೧೯೩೨ರಲ್ಲಿ ಈ ಸಂಸ್ಥೆಯಲ್ಲಿ ಮತ್ತೊಮ್ಮೆ ಬಿರುಕು ಬಿಟ್ಟಿತು. 'ರೇಲ್ವೆ ಲೇಬರ್ ಯೂನಿಯನ್' ಎಂಬ ಹೆಸರಿನಲ್ಲಿ ಬೇರೊಂದು ಸಂಸ್ಥೆಯನ್ನು ಆರಂಭಿಸಲಾಯಿತು. ೧೯೩೫ರಲ್ಲಿ ಹಳೆಯ 'ಜಿ.ಐ.ಪಿ. ಸ್ಟಾಫ್ ಯೂನಿಯನ್'ನ್ನು ಪುನರುಜ್ಜೀವನಗೊಳಿಸಲಾಯಿತು. ಹೊಸ ಸಂಸ್ಥೆಯೆಂದು ಆರಂಭಿಸಲಾಯಿತು. ಈಗದು ಮಾನ್ಯತೆ ಪಡೆದ ಸಂಸ್ಥೆಯಾಗಿದ್ದು ರೇಲ್ವೆಕಾರ್ಮಿಕರ ಹಿತವನ್ನು ಜಪಿಸುವ ಈ ಸಂಘಟನೆಯಲ್ಲಿ ತೀವ್ರವಾದ ವಿರೋಧ ಮತ್ತು ಶತ್ರುತ್ವವಿದೆ. ಕಮ್ಯುನಿಸ್ಟ್ ನಾಯಕರು ಮತ್ತು ಕಮ್ಯುನಿಸ್ಟರಾಗಿರದ ರೇಲ್ವೆ ಕಾರ್ಮಿಕ ನಾಯಕರ ನಡುವೆ ಮುಖಂಡತ್ವಕ್ಕಾಗಿ ನಡೆದ ಎಳೆದಾಟದ ಪರಿಣಾಮವಿದು. ಇಂಥದೇ ವೈರತ್ವದಿಂದಾಗಿ ಕೇಂದ್ರ ಸಂಘಟನೆಯಲ್ಲೂ ಬಿರುಕು ಬಿದ್ದಿದೆ. 'ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್' ಎಂಬ ಕಾರ್ಮಿಕರ ಕೇಂದ್ರ ಸಂಘಟನೆಯನ್ನು ೧೯೧೯ರಲ್ಲಿ ಸ್ಥಾಪಿಸಲಾಯಿತು. ಕಾರ್ಮಿಕರ ಎಲ್ಲ ಸಂಘಟನೆಗಳನ್ನು ಈ ಕಾಂಗ್ರೆಸ್ಸಿಗೆ ೧೯೨೯ರ ವರೆಗೆ ಜೋಡಿಸಲಾಗಿತ್ತು. ೧೯೨೯ರಲ್ಲಿ ನಾಗಪುರದಲ್ಲಿ ಬಿರುಕು ಬಿಟ್ಟಿತು. ಕಮ್ಯುನಿಸ್ಟ್‌ನಾಯಕರ ಮುಖಂಡತ್ವವನ್ನು ನಿರಾಕರಿಸುವವರು ಹೊರಬಿದ್ದರು. ಅವರಿಂದ 'ನ್ಯಾಶನಲ್ ಟ್ರೇಡ್‌ಯೂನಿಯನ್ ಫೆಡರೇಶನ್' ಎಂಬ ಹೆಸರಿನ ಹೊಸ ಸಂಸ್ಥೆ ಸ್ಥಾಪಿನೆಗೊಂಡಿತು. ಈ ಎರಡೂ ಸಂಸ್ಥೆಗಳ ನಡುವೆ ತೀವ್ರ ಸ್ವರೂಪದ ಶತ್ರುಭಾವ ತಲೆದೋರಿದೆ. ೧೯೩೧–೧೯೩೨ರಲ್ಲಿ ಈ ಎರಡೂ ವಿರೋಧಿ ಸಂಸ್ಥೆಗಳನ್ನು ಒಗ್ಗೂಡಿಸುವ ಪ್ರಯತ್ನ ಮುಂದುವರೆದಿದೆ. ಅದರಿಂದ ಯಾವ ಪರಿಣಾಮ ಹೊರಬೀಳುತ್ತದೆಯೋ ಬಲ್ಲವರಾರು? ಇಂಥ ಪರಿಸ್ಥಿತಿಯಲ್ಲಿ ನಿಮಗೇನಾದರೂ ಉಪದೇಶ ಮಾಡುವುದು ಸಹ ನನಗೆ ಕ್ಲಿಷ್ಟಕರ. ನಿಮ್ಮ ಹತ್ತಿರ ಇಂಥ ಸಂಸ್ಥೆಯನ್ನು ನಡೆಸಲು ಜನರಿದ್ದರೆ, ನೀವು

ನಿಮ್ಮದೇ ಆದ ಪ್ರತ್ಯೇಕ ಸಂಘಟನೆಯನ್ನು ಕಟ್ಟುವುದರಲ್ಲಿ ಯಾವ ತಪ್ಪೂ ಇಲ್ಲ. ಇದೊಂದು ದೊಡ್ಡ ಕರಾರು. ಯಾವುದೇ ಸಂಘಟನೆಯು ಏಳ್ಗೆಯನ್ನು ಹೊಂದಬೇಕೆಂದಿದ್ದರೆ, ಅದು ಕಾರ್ಯಮಾಡಬೇಕು. ಯಾವುದೇ ಸಂಸ್ಥೆಯು ಸಮರ್ಥ ವ್ಯಕ್ತಿಯ ಸೇವೆಯನ್ನು ಒದಗಿಸುವಲ್ಲಿ ವಿಫಲಗೊಂಡರೆ, ಅದು ಕಾರ್ಯ ಮಾಡುವುದೇ ಸಾಧ್ಯವಿಲ್ಲ. ನಿಮ್ಮ ಸಂಘಟನೆಯನ್ನು ಮುನ್ನಡೆಸಲು ಇಂಥ ಜನರನ್ನು ನೀವು ಒಗ್ಗೂಡಿಸುವುದು ಸಾಧ್ಯವೇ? ಹಾಗೊಂದು ವೇಳೆ ನಿಮಗೆ ಸಾಧ್ಯವೆಂದಾದರೆ ನೀವು ನಿಮ್ಮ ಸ್ವಂತ ಸಂಘಟನೆಯನ್ನು ಕಟ್ಟಿ. ವಾಸ್ತವವಾಗಿ ನೀವು ಹೀಗೊಂದು ವೇಳೆ ಮಾಡಿದರೆ ಅದು ಅಧಿಕ ಉತ್ತಮ. ಏಕೆಂದರೆ ಬೇರೆ ಬೇರೆ ಸಂಘಟನೆಯ ಪರಿಣಾಮವು ವಿಭಕ್ತಿಯ ಭಾವನೆಯಲ್ಲಿ ಅಥವಾ ದೌರ್ಬಲ್ಯದಲ್ಲಾಗುತ್ತದೆ ಎಂದೇನೂ ಅಲ್ಲ. ಈ ನಿಮ್ಮ ಸಂಘಟನೆಯನ್ನು ಕಾರ್ಮಿಕರ ಸಮಾನ ಉದ್ದೇಶಗಳ ಮತ್ತು ಸಮಾನ ಕಾರ್ಯದ ಕೇಂದ್ರಿಯ ಸಂಘಟನೆಯೊಂದಿಗೆ ನೀವು ಜೋಡಿಸಲೂಬಹುದಾಗಿದೆ. ನೀವು ಒಂದು ವೇಳೆ ಸ್ವತಂತ್ರ ಸಂಘಟನೆಯನ್ನು ಕಟ್ಟುವುದು ಸಾಧ್ಯವಿಲ್ಲ ಎಂದಾದರೆ ಸದ್ಯ ಆಸ್ತಿತ್ವದಲ್ಲಿದ್ದ ಯಾವುದೇ ಸಂಘಟನೆಯಲ್ಲಿ ಸಹಭಾಗಿಯಾಗಬಹುದು. ಆದರೆ ಇಂಥ ಸಂಘಟನೆಗಳು ತಮ್ಮ ಸ್ವಂತ ಕಾರ್ಯಕ್ಕಾಗಿ ನಿಮ್ಮನ್ನು ದುರುಪಯೋಗಪಡಿಸಿಕೊಳ್ಳದಂತೆ ಎಚ್ಚರವಹಿಸಿ. ಹೀಗೆ ಜರುಗುವ ಗಂಡಾಂತರ ಬಹಳ ದೊಡ್ಡ ಪ್ರಮಾಣದಲ್ಲಿದೆ. ಮುಂಬೈ ಜವಳಿ ಗಿರಣಿಯಲ್ಲಿ ಹೀಗೇ ನಡೆದಿತ್ತು. ಅಲ್ಲಿ ನೇಕಾರರ ಹಿತಕ್ಕಾಗಿ ಸತತ ಮುಷ್ಕರಕ್ಕೆ ಕರೆ ನೀಡಲಾಗುತ್ತದೆ. ಆ ಮುಷ್ಕರಕ್ಕೆ ನೂಲುವ ವಿಭಾಗದಲ್ಲಿ ಕೆಲಸ ಮಾಡುವವರು ಬೆಂಬಲ ನೀಡುತ್ತ ಬಂದರು. ಇದನ್ನು ತಪ್ಪಿಸಲು ನೀವು ಎರಡು ಕರಾರುಗಳಿಗೆ ಒತ್ತಾಯ ಮಾಡಬೇಕು. ಮೊದಲಿಗೆ ನೀವು ಕಾರ್ಯಕಾರಿ ಮಂಡಳದಲ್ಲಿ ಪ್ರತಿನಿಧಿತ್ವ ಪಡೆಯಲು ಒತ್ತಾಯಿಸಬೇಕು. ಅದರಿಂದ ನಿಮಗೆ ಸಂಬಂಧಿಸಿದ ಖಾಸಾ ಪ್ರಶ್ನೆಗಳತ್ತ ಸಂಘಟನೆಯ ಗಮನಸೆಳೆಯಬಹುದು, ಬೆಂಬಲವೂ ಸಿಗಬಹುದು. ಎರಡನೇ ಕರಾರು, ನಿಮ್ಮ ವಂತಿಗೆಯ ಕೆಲಭಾಗವನ್ನು ಅಗತ್ಯ ಬಿದ್ದರೆ, ನಿಮ್ಮ ತಕರಾರು ನಿವಾರಣೆಗಾಗಿ ಮಾತ್ರ ಬಳಸಲು ಸುರಕ್ಷಿತವಾಗಿಡಬೇಕು: ನೀವು ಒಂದುವೇಳೆ ಸ್ವಂತ ಸಂಘಟನೆಯನ್ನು ಕಟ್ಟುವ ನಿರ್ಣಯ ತೆಗೆದುಕೊಳ್ಳದೆ ಇದ್ದರೆ, ಬೇರೊಂದು ಸಂಘಟನೆಯನ್ನು ಸೇರಿಕೊಳ್ಳುವ ನಿರ್ಧಾರ ಮಾಡಿದ್ದರೆ ಈ ಎರಡೂ ಕರಾರುಗಳನ್ನು ಒಪ್ಪಿಕೊಳ್ಳದಂತೆ ಒತ್ತಡ ಹೇರಬೇಕು.

ಕಾರ್ಮಿಕರ ಹಿತಕ್ಕಾಗಿ ನೀವು ಸಂಘಟನೆಯನ್ನು ಕಟ್ಟಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅದಷ್ಟೇ ಸಾಲದು. ನೀವು ರಾಜಕೀಯ ಉದ್ದೇಶಕ್ಕಾಗಿಯೂ ಸಂಘಟಿತರಾಗಬೇಕು. ಕೇವಲ ಕಾರ್ಮಿಕರ ಸಂಘಟನೆಯ ಬಲದಿಂದ ಕಾರ್ಮಿಕರು ಮಾಲೀಕರ ವಿರುದ್ಧ ಗೆಲ್ಲುವುದು ಸಾಧ್ಯವಿಲ್ಲ ಎನ್ನುವುದು ಅನುಭವದಿಂದ ಸಿದ್ಧವಾಗಿದೆ. ಕಾರ್ಮಿಕ ಸಂಘಟನೆಗಳು ರಾಜಕಾರಣವನ್ನು ಪ್ರವೇಶಿಸಬೇಕೆ, ಪ್ರವೇಶಿಸಬಾರದು ಎಂಬ ಬಗೆಗೂ ಎರಡು ಅಭಿಪ್ರಾಯವಿರುವುದು ಸಾಧ್ಯವಿಲ್ಲ. ಕಾರ್ಮಿಕ ಸಂಘಟನೆಗಳು ರಾಜಕಾರಣದಲ್ಲಿ ಪ್ರವೇಶಿಸಲೇಬೇಕು. ಏಕೆಂದರೆ ಸರಕಾರವು ಅಧಿಕಾರದ ಹೊರತು ಕಾರ್ಮಿಕರ ಹಿತವನ್ನು ರಕ್ಷಿಸುವುದು ಅಸಾಧ್ಯ. ಅಷ್ಟೇ ಅಲ್ಲ ಕನಿಷ್ಠ ಕೂಲಿಯ ವೇತನ, ಕೆಲಸದ ವೇಳೆ, ಉಳಿದ ನಿಯಮಗಳನ್ನು ಅಂದರೆ ಸಾಮಾನ್ಯಸ್ವರೂಪದ ಸುಧಾರಣೆ ಸಹ ಕೇವಲ ಸಂಘಟನೆಯ ಬಲದಿಂದಲೇ ಜಾರಿಗೆ ತರುವುದು ಅಸಾಧ್ಯ. ಸಂಘಟನೆಯ ಶಕ್ತಿಗೆ ಕಾನೂನಿನ ಶಕ್ತಿಯ ಬೆಂಬಲ ಸಿಗಬೇಕು. ನೀವು ಸಂಘಟನೆ ಕಟ್ಟುವುದರ ಜೊತೆ ಜೊತೆಗೆ, ನೀವು ರಾಜಕಾರಣದಲ್ಲಿ ಭಾಗವಹಿಸದ ವಿನಾ ಇದು ಜರುಗುವುದು ಸಾಧ್ಯವೇ ಇಲ್ಲ.

ಕೇವಲ ಕಾರ್ಮಿಕ ಸಂಘಟನೆಯ ಉದ್ದೇಶವನ್ನು ರಕ್ಷಿಸುವ ಏಕೈಕ ಉದ್ದೇಶ ಮಾತ್ರ ರಾಜಕಾರಣ ಸೇರುವುದರಲ್ಲಿರಬಾರದು. ನೀವು ನಿಮ್ಮ ಉದ್ದೇಶವನ್ನು ಕೇವಲ ಕಾರ್ಮಿಕರ ಉದ್ದೇಶಕ್ಕಾಗಿ ಮಾತ್ರ

ಸೀಮಿತಗೊಳಿಸುವುದು ಎಂದರೆ ಪ್ರಾಪ್ತ ಕರ್ತವ್ಯವನ್ನೇ ಧ್ಯೇಯವೆಂದು ಭಾವಿಸಿದಂತೆ. ಗುಲಾಮಗಿರಿಯು ದೈವದಾಟವಾಗಿದ್ದ ಕಾರ್ಮಿಕರು ಅದರಿಂದ ಬಿಡುಗಡೆ ಹೊಂದುವುದಿಲ್ಲ ಎಂದು ಭಾವಿಸಿಕೊಂಡಂತೆ ಇದೂ ಸಹ ಇದೆ. ಅದರ ಬದಲು ಈ ಕಾರ್ಮಿಕ ಪದ್ಧತಿಯನ್ನೇ ಬದಲಾಯಿಸಿ, ಅದರ ಸ್ಥಳದಲ್ಲಿ ಸ್ವಾತಂತ್ರ್ಯ, ಸಮತೆ ಮತ್ತು ಬಂಧುಭಾವ ಈ ತತ್ವವನ್ನು ಆಧರಿಸಿದ ಹೊಸ ಪದ್ಧತಿಯನ್ನು ಸ್ಥಾಪಿಸುವುದೇ ನಿಮ್ಮ ಧ್ಯೇಯವಾಗಿರಬೇಕು. ಇದರ ಅರ್ಥ, ಸಮಾಜದ ಪುನರ್ರಚನೆ ಮತ್ತು ಇಂಥ ಪ್ರಕಾರದ ಪುನರ್ರಚನೆಯನ್ನು ಸಮಾಜದಲ್ಲಿ ಅಳವಡಿಸುವುದು ಕಾರ್ಮಿಕ ವರ್ಗದ ಪ್ರಾಥಮಿಕ ಸ್ವರೂಪದ ಕರ್ತವ್ಯವಾಗಿದೆ. ಆದರೆ ಕಾರ್ಮಿಕ ವರ್ಗವು ಈ ಧ್ಯೇಯವನ್ನು ಹೇಗೆ ಪೂರ್ಣಗೊಳಿಸುವುದು ಸಾಧ್ಯ? ರಾಜಕೀಯ ಶಕ್ತಿಯನ್ನು ಪರಿಣಾಮಕಾರವಾಗಿ ಉಪಯೋಗ ಮಾಡಿಕೊಂಡರೆ, ಈ ವಿಷಯದಲ್ಲದು ಖಂಡಿತಕ್ಕೂ ಒಂದು ಶಕ್ತಿಶಾಲಿ ಸಾಧನವಾಗುತ್ತದೆ. ಬಳಿಕ ಅವರು ರಾಜಕೀಯ ಶಕ್ತಿಯನ್ನು ಪಡೆದುಕೊಳ್ಳಬೇಕು. ಕಾರ್ಮಿಕ ಸಂಘಟನೆಯು ರಾಜಕಾರಣದಿಂದ ದೂರವಿರುವುದು ಎಂದರೆ, ಕಾರ್ಮಿಕರು ವ್ಯಕ್ತಿಗತವಾಗಿ ರಾಜಕಾರಣದಲ್ಲಿ ಭಾಗವಹಿಸಬಾರದು ಎಂದರ್ಥವಲ್ಲ. ಅದರ ಬದಲು ಹಲವರು ರಾಜಕೀಯ ಸಭೆಗಳಿಗೆ ಹಾಜರಿರುತ್ತಾರೆ. ಯಾವುದಾದರೂ ಅಭ್ಯರ್ಥಿಯ ಪರವಾಗಿ ಮತದಾನ ಮಾಡುತ್ತಾರೆ. ಕೆಲವರು ಒಂದೇ ರಾಜಕೀಯ ಪಕ್ಷದಲ್ಲಿ ಸಹಭಾಗಿಗಳಾಗಬಹುದು. ಕಾರ್ಮಿಕ ಸಂಘಟನೆಗಳಿಗೆ, 'ರಾಜಕಾರಣ ಬೇಡ' ಎನ್ನುವುದರ ಅರ್ಥ, ಆ ಸಂಘಟನೆಯ ಕಾರ್ಮಿಕ ಸದಸ್ಯರಿಗೆ ರಾಜಕಾರಣ ಬೇಡ ಎಂದೇನಲ್ಲ. 'ರಾಜಕಾರಣ ಬೇಡ' ಎಂಬ ಅಪಾಯಕಾರಿ ಸೂಚನೆಯು ಕೇವಲ ಪಕ್ಷಬದ್ಧ ರಾಜಕಾರಣಿಗಾಗಿ ಇದೆ. ಇಂಥ ಸ್ಥಿತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಇಚ್ಛೆಯಂತೆ ಸ್ವತಂತ್ರವಾಗಿ ರಾಜಕಾರಣದಲ್ಲಿ ಭಾಗವಹಿಸ ಬಹುದು. ಒಂದು ವೇಳೆ ಅವನ ಕಾರ್ಮಿಕ ಬಂಧುಗಳ ಸಹಕಾರ್ಯದಿಂದ ಅವನ ಸ್ವಂತದ ಸಂಘಟನೆಯನ್ನು ಕಟ್ಟಿದರೆ, ಅದೇ ಅವನು ರಾಜಕಾರಣದಿಂದ ಹೊರಬೀಳಬೇಕಾಗುತ್ತದೆ. ಈ ರೀತಿ ಸ್ವಂತ ವರ್ಗದ ಉದ್ದೇಶಕ್ಕಾಗಿ ಅವನ ವ್ಯಕ್ತಿಗತ ಶಕ್ತಿಯನ್ನು ನಿಯಂತ್ರಿಸಿ ರಾಜಕಾರಣದಿಂದ ಹೊರಬೀಳಬೇಕಾಗಬಹುದು. ಅದರಿಂದ ಈ ಕಾರ್ಮಿಕರ ಸಂಘಟನೆಯು, ಖಂಡಿತವಾಗಿಯೂ ಬಂಡವಾಳಶಾಹಿವಾದಿ ರಾಜಕೀಯ ಪಕ್ಷದ ಹುಲ್ಲುಗಾವಲಾಗದೆ ಇರಲಾರದು.

ಪ್ರಾಯಃ ನಿಮಗೆಲ್ಲರಿಗೂ ಗೊತ್ತಿರಲೂಬಹುದು. ಕಾರ್ಮಿಕರ ಹೆಸರಿನಲ್ಲಿ ಮಾತಾಡುವ ಅಧಿಕಾರ ಇರುವ ಟ್ರೇಡ್ ಯುನಿಯನ್ ಕಾಂಗ್ರೆಸ್ ಮತ್ತು ಟ್ರೇಡ್ ಯೂನಿಯನ್ ಪೆಢರೇಶನ್ ಈಗ ಒಂದೇ ಸಂಘಟನೆಯಲ್ಲಿ ವಿಲೀನಗೊಳ್ಳುವ ಹಾದಿಯಲ್ಲಿವೆ. ಪ್ರತಿಯೊಂದು ಈಗ ಅರ್ಧಧೋರಣೆಯನ್ನು ತ್ಯಾಗಮಾಡಿ ಐಕ್ಯಗೊಳ್ಳುವ ನಿರ್ಧಾರಕ್ಕೆ ಬಂದಿದೆ. ಟ್ರೇಡ್ ಯೂನಿಯನ್ ಕಾಂಗ್ರೆಸ್ಸು ಟ್ರೇಡ್ ಯೂನಿಯನ್ ಫೆಡರೇಶನ್ನಿನ ಬೈ.ಲಾ ಸ್ವೀಕರಿಸಿದ್ದು, ಟ್ರೇಡ್ ಯೂನಿಯನ್ ಫೆಡರೇಶನ್ನು ತನ್ನ ಹೆಸರನ್ನು ತ್ಯಾಗ ಮಾಡಲು ಮುಂದಾಗಿದೆ. ಈ ಏಕತೆಯ ಒಂದು ಕರಾರು ಏನೆಂದರೆ, ಸಂಘಟನೆಯು ಪರಿಶುದ್ಧವಾಗಿ ಕಾರ್ಮಿಕರ ಸಂಘಟನೆಯ ಸ್ವರೂಪದ್ದಾಗಿಬೇಕೆಂದು ಯೋಚಿಸಿರುವುದು ನನಗೆ ತಿಳಿದು ಬಂದಿದೆ. ಅದಕ್ಕೂ ರಾಜಕಾರಣಕ್ಕೂ ಯಾವ ಸಂಬಂಧವು ಇರಲಾರದು. ಇದು ನನ್ನ ಕಿವಿಗೆ ಬಿದ್ದಾಗ ಈ ಸದ್ಗೃಹಸ್ಥರಿಗೆ ಅವರ ಮಾತಿನ ನಿಜವಾದ ಅರ್ಥವಾಗಿದೆಯೋ ಇಲ್ಲವೋ ಎನ್ನುವುದರ ಬಗೆಗೆ ನನಗೆ ಅಚ್ಚರಿಯಾಯಿತು. ತನ್ನ ಕೈಯಲ್ಲಿರುವ ರಾಜಕೀಯ ಶಕ್ತಿಯ ಬಳಕೆಯನ್ನು ತಮ್ಮ ಮೇಲಿನ ಅನ್ಯಾಯದ ನಿವಾರಣೆಗಾಗಿ ಬಳಸುವುದರ ಮೇಲೆ ನಿಷೇಧ ಹೇರುವುದು ಒಂದು ಸಾಮಾನ್ಯ ಪ್ರಕಾರವಾಗಿದ್ದು, ಅದು ತುಂಬ ಬೇಧಕಾರಕ ಪ್ರಕಾರವಾಗಿದೆ. ಒಂದು ವೇಳೆ ಒಗ್ಗೂಡಿದ ಕಾರ್ಮಿಕ ಸಂಘಟನೆಯೂ ತಮ್ಮ ಒಕ್ಕಟ್ಟಿನ ರಾಜಕೀಯ ಶಕ್ತಿಯನ್ನು

ಬಳಸಬಾರದೆಂದಿದ್ದರೆ, ಅವು ಏಕೆ ಒಗ್ಗೂಡಿದವು ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಕ್ಷುಲ್ಲಕ ಸ್ವರೂಪದ ಭಿನ್ನಾಭಿಪ್ರಾಯವಿದ್ದರೆ, ಮತ್ತದನ್ನು ಬೇರೆ ದೊಡ್ಡ ಉದ್ದೇಶಕ್ಕಾಗಿ ಕೈಬಿಟ್ಟರೆ ಆ 'ಹೊಂದಾಣಿಕೆ'ಗೆ ಏನಾದರೂ ಅರ್ಥ ಪ್ರಾಪ್ತವಾಗಿರುತ್ತದೆ. ಆದರೆ ಯಾವುದೇ ದೊಡ್ಡ ಪ್ರಶ್ನೆಯ ಬಗೆಗೆ ಜನರಲ್ಲಿ ಭಿನ್ನಾಭಿಪ್ರಾಯವಿದ್ದರೆ ಅದನ್ನು ತ್ಯಾಗ ಮಾಡಿ ಕೇವಲ ಕ್ಷುಲ್ಲಕ ವಿಷಯವನ್ನು ಸ್ವೀಕರಿಸಲು ಒಂದಾಗಲೂ, 'ಐಕ್ಯ' ಎಂಬ ಪದಕ್ಕೆ ಯಾವ ಅರ್ಥವೂ ಉಳಿಯಲಾರದು. ಈ ವಿಷಯದ ಬಗೆಗೆ ಉಳಿದವರು ಯಾವುದೇ ದೃಷ್ಟಿಕೋನ ಹೊಂದಿರಲಿ ತಾನು ಮಾತ್ರ ಹೀಗೆ ಹೇಳುತ್ತೇನೆ ಎನ್ನುವ ಕಾರ್ಮಿಕರು ರಾಜಕಾರಣದಿಂದ ನಿರ್ಲಿಪ್ತವಾಗಿರುವ ಪ್ರತಿಜ್ಞೆಯನ್ನು ಸ್ವೀಕರಿಸಿದ್ದರೆ ಅದು ಅವರಿಗೆ ಅಭಿಶಾಪವೇ ಆಗಲಿದೆ.

ನಾವು ಮಾತ್ರ ಇನ್ನು ಮುಂದೆ ನಮ್ಮ ಪ್ರಯತ್ನವನ್ನು ಸಾಮಾಜಿಕ ಸುಧಾರಣೆಯ ಒಂದೇ ದಿಶೆಯತ್ತ ಮುನ್ನಡೆಸುವುದು ತೀರ ಅಗತ್ಯವಾದುದು ಎನ್ನುವುದನ್ನು ಅರಿತುಕೊಳ್ಳಬೇಕು ಮತ್ತು ಇಂದಿನವರೆಗೆ ನಾವು ಆರ್ಥಿಕ ಸುಧಾರಣೆಗಾಗಿ ಪ್ರಯತ್ನ ಮಾಡಿದೆವು. ನಾವು ಸಹಿಸುತ್ತಿರುವ ಅನ್ಯಾಯದ ಮೂಲ ಒಂದೇ ಆಗಿದೆ, ಅದು ಯಾವುದೆಂದರೆ, ಯಾರ ಕೈಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯು ಇದೆಯೋ, ಅವರು ಕಾರ್ಮಿಕರ ರಾಜಕೀಯ ಹಕ್ಕನ್ನು ಕಸಿದುಕೊಂಡಿದ್ದಾರೆ.

ರಾಜಕಾರಣದಲ್ಲಿ ಪ್ರವೇಶಿಸುವುದು ಎಂದರೆ, ಅದರರ್ಥ ನಮ್ಮ ಪಕ್ಷ ಸ್ಥಾಪಿಸುವುದು ಎಂದಾಗುತ್ತದೆ. ಪಕ್ಷದ ಬೆಂಬಲವಿಲ್ಲದ ರಾಜಕಾರಣವೆಂದರೆ ಅದೊಂದು ಕಲ್ಪನೆಯ ವಸ್ತುವಾಗುತ್ತದೆ. ಸ್ವತಂತ್ರವಾಗಿ ರಾಜಕಾರಣ ಮಾಡುವ ಅಥವಾ ತಮ್ಮ ಅಡುಗೆಯನ್ನು ತಾವೇ ಮಾಡುವ ಹಲವು ರಾಜಕೀಯ ವ್ಯಕ್ತಿಗಳಿದ್ದಾರೆ. ಯಾವ ರಾಜಕಾರಣಿಯು ಹೀಗೆ ಸ್ವತಂತ್ರವಾಗುಳಿಯುವ ಪ್ರಯತ್ನ ಮಾಡುತ್ತಾನೋ ಅವನ ಬಗೆಗೆ ನಾನು ಸದಾ ಜಾಗರೂಕನಾಗಿರುತ್ತೇನೆ. ಒಂದು ವೇಳೆ ಯಾವುದೇ ರಾಜಕೀಯ ಮನುಷ್ಯನು ಯಾರಲ್ಲೂ ಸಹಭಾಗಿಯಾಗದಷ್ಟು ಸ್ವತಂತ್ರವಾಗಿದ್ದರೆ ಯಾವುದೇ ರಾಜಕೀಯ ಉದ್ದೇಶಕ್ಕೆ ಅವನು ನಿರರ್ಥಕವಾಗಿರುತ್ತಾನೆ. ಅವನು ಏನೂ ಸಾಧಿಸಲಾರ. ಅವನ ಒಂಟಿ ಪ್ರಯತ್ನದಿಂದ ಅವನು ಒಂದು ಹುಲ್ಲುಗರಿಕೆಯನ್ನೂ ಬೆಳೆಸಲಾರ. ಆದರೆ ಸ್ವತಂತ್ರದ ಹಪಾಹಪಿಯನ್ನು ಬೆಳೆಸಿಕೊಂಡ ರಾಜಕೀಯ ವ್ಯಕ್ತಿಗಳು ಅವರ ಬೌದ್ಧಿಕ ಪ್ರಾಮಾಣಿಕತೆಯಿಂದಾಗಿ ಸ್ವತಂತ್ರವಾಗಿ ಉಳಿಯಲಾರರು. ಆದರೆ ಹೆಚ್ಚೆಚ್ಚು ಬೇಡಿಕೆಗಳನ್ನು ಬೇಡಲು ಅವರು ಹಾಗೆ ಸ್ವತಂತ್ರವಾಗಿ ಉಳಿಯುತ್ತಾರೆ. ಅದರಿಂದಾಗಿಯೇ ಅವರಿಗೆ ಪಕ್ಷದ ಶಿಸ್ತಿನ ಬಲೆಯಿಂದ ಮುಕ್ತವಾಗಿರಬೇಕೆಂದೆನಿಸುತ್ತದೆ. ಅದೇನೆ ಇರಲಿ, ಆದರೆ ರಾಜಕಾರಣದಲ್ಲಿ ಸ್ವತಂತ್ರವಾಗುಳಿಯುವ ಹಲವು ರಾಜಕೀಯ ಮುತ್ಸದ್ಧಿಯ ಬಗೆಗಿನ ನನ್ನ ಅನುಭವವಂತೂ ಇದೇ ರೀತಿಯದಾಗಿದೆ. ಪಕ್ಷದ ಹೊರತು ನಿಜವಾದ ಮತ್ತು ಪರಿಣಾಮಕಾರಿಯಾದ ರಾಜಕಾರಣವಿರುವುದು ಸಾಧ್ಯವೇ ಇಲ್ಲ.

ಸಮಸ್ಯೆ ಏನೆಂದರೆ ನೀವು ಯಾವ ಪಕ್ಷದಲ್ಲಿ ಶಾಮೀಲಾಗಲು ಬಯಸುತ್ತೀರಿ? ಹಲವಾರು ಪರ್ಯಾಯ ಪಕ್ಷಗಳಿವೆ. ಕಾಂಗ್ರೆಸ್ ಪಕ್ಷವಿದೆ. ನೀವು ಕಾಂಗ್ರೆಸ್ ಸೇರಲು ಬಯಸುತ್ತೀರಾ? ಕಾರ್ಮಿಕರ ಉದ್ದೇಶವನ್ನು ಅದು ಈಡೇರಿಸುತ್ತದೆಯೇ? ಕಾಂಗ್ರೆಸಿಗಿಂತ ಬೇರೆಯಾಗಿರುವ ಒಂದು ಸ್ವತಂತ್ರ ರಾಜಕೀಯ ಪಕ್ಷವನ್ನು ಕಾರ್ಮಿಕರು ಸ್ಥಾಪಿಸಬೇಕು ಎಂದು ಸಲಹೆ ನೀಡಲು ನಾನಂತೂ ಹಿಂಜರಿಯಲಾರೆ. ನನ್ನ ಈ ಅಭಿಪ್ರಾಯಕ್ಕೆ ಕಾರ್ಮಿಕ ನಾಯಕರ ವಿರೋಧವಿದೆ ಎನ್ನುವದು ನನಗೆ ಗೊತ್ತು. ಕಾಂಗ್ರೆಸ್ಸ ಸೋಶಿಯಾಲಾಜಿಸ್ಟರ್ ಪ್ರತಿನಿಧಿತ್ವ ಮಾಡುವ ಒಂದು ಗುಂಪು ಆಗಿದ್ದು ಸಮಾಜವಾದದ ಉದ್ದೇಶಕ್ಕಾಗಿ ಅವರಿಗೆ ಕಾರ್ಮಿಕ ಸಂಘಟನೆಯ ಅಗತ್ಯವಿದೆ. ಆದರೆ ಈ ಸಂಘಟನೆಯು ಕಾಂಗ್ರೆಸ್ಸಿನ

ಅಂತರ್ಗತವಾಗಿರಬೇಕು ಎನ್ನುವದು ಅವರ ಬಯಕೆ. ಶ್ರೀ ರಾಯ್ ಅವರ ನಾಯಕತ್ವದಲ್ಲಿ ಕಾರ್ಯ ಮಾಡುತ್ತಿರುವ ಮತ್ತು ತನ್ನನ್ನು ಕಮ್ಯುನಿಷ್ಟ್ ಎಂದು ಕರೆದುಕೊಳ್ಳುವ ಒಂದು ಗುಂಪು ಇದೆ. ಅವರು ಉಳಿದ ಯಾವುದೇ ಕಾರ್ಮಿಕ ಸಂಘಟನೆಯನ್ನು ಬಲವಾಗಿ ವಿರೋಧಿಸುತ್ತದೆ. ಬೇಕಾದರೆ ಆ ಸಂಘಟನೆಯೂ ಕಾಂಗ್ರೆಸಿನ ಅಂತರ್ಗತವಾಗಿರಲಿ ಅಥವಾ ಬಾಹ್ಯಗತವಾಗಿರಲಿ, ನಾನು ಈ ಎರಡೂ ಗುಂಪುಗಳಿಗೆ ಸಂಪೂರ್ಣ ಅಸಮ್ಮತಿಯನ್ನು ವ್ಯಕ್ತಮಾಡುತ್ತೇನೆ. ಶ್ರೀ ರಾಯ್ ನನಗೆ ಹೇಗೆ ಒಗಟು ಎನಿಸುತ್ತಾರೋ ಹಾಗೆಯೇ ಹಲವರಿಗೂ ಅನಿಸುತ್ತಿರಬಹುದು. ಒಂದು ಕಮ್ಯುನಿಷ್ಟ್ ಮತ್ತು ಸ್ವತಂತ್ರ ಕಾರ್ಮಿಕ ಸಂಘಟನೆಗೆ ವಿರೋಧ! ಈ ವಿರೋಧ ತುಂಬ ಭಯಾನಕವಾದ ಪದ. ತನ್ನ ಗೋರಿಯಲ್ಲಿ ಲೆನಿನ್ ಸಹ ಚಡಪಡಿಸುತ್ತಿರಬೇಕು, ಅಂಥ ದೃಷ್ಟಿಕೋನವಿದು. ಈ ವಿಚಿತ್ರ ದೃಷ್ಟಿಕೋನದ ಸ್ಪಷ್ಟೀಕರಣ ಒಂದೇ ಆಗಿರುವುದು ಸಾಧ್ಯ. ಭಾರತೀಯ ರಾಜಕಾರಣದ ಎಲ್ಲಕ್ಕಿಂತ ಮಹತ್ವದ ಧ್ಯೇಯವೆಂದರೆ ಸಾಮ್ರಾಜ್ಯಶಾಹಿಯನ್ನು ನಾಶ ಪಡಿಸುವುದೇ ಆಗಿದೆ, ಎಂದು ರಾಯ್ ಅವರಿಗೆ ಅನಿಸುತ್ತಿರಬೇಕು. ಶ್ರೀ ರಾಯ್ ಅವರು ಒಪ್ಪಿಕೊಂಡ ಅಭಿಪ್ರಾಯಕ್ಕೆ ಬೇರೆ ಯಾವುದೇ ಅರ್ಥ ಇರುವಂತೆ ಕಾಣುವುದಿಲ್ಲ. ಒಂದು ವೇಳೆ ಸಾಮ್ರಾಜ್ಯ ಶಾಹಿ ನಾಶಹೊಂದಿದ ಕೂಡಲೇ ಭಾರತದಲ್ಲಿಯ ಸರ್ವ ಬಂಡವಾಳದಾರರ ಹಿತ ಸಂಬಂಧ ನಾಶಗೊಂಡರೇನೆ ಈ ಅಭಿಪ್ರಾಯ ಸರಿಯೆನ್ನಬಹುದು. ಆದರೆ ಆಂಗ್ಲರು ಈ ದೇಶವನ್ನು ತೊರೆದು ಹೋದರೂ, ಈ ದೇಶದಲ್ಲಿ ಜಮೀನ್ದಾರರು, ಮಿಲ್ ಮಾಲೀಕರು ಮತ್ತು ಸಾಹುಕಾರರು ಶಾಶ್ವತವಾಗಿ ಉಳಿದು ಜನರ ಶೋಷಣೆಯಂತೂ ಹಾಗೇ ಮುಂದುವರಿಯಲಿದೆ. ಸಾಮ್ರಾಜ್ಯಶಾಹಿ ನಾಶಹೊಂದಿದ ನಂತರವೂ ಸಹ ಇಂದಿನಂತೇ ಕಾರ್ಮಿಕರು ಈ ಬಂಡವಾಳದಾರರ ಜೊತೆಗೆ ಸಂಘರ್ಷ ಮಾಡಲೇಬೇಕಾಗುತ್ತದೆ ಎನ್ನುವುದನ್ನು ತಿಳಿಯಲು ಅಷ್ಟೇನೂ ದೊಡ್ಡ ಬೌದ್ಧಿಕ ಚತುರತೆ ಬೇಕಾಗಿಲ್ಲ. ಹೀಗಿದ್ದಾಗ ಕಾರ್ಮಿಕರು ಈಗಿನಿಂದಲೇ ಏಕೆ ಸಂಘಟಿತರಾಗಬಾರದು? ಸಂಘಟನೆಯನ್ನು ಬೆಳೆಸಲು ಅವರೇಕೆ ಹಾದಿ ಕಾಯಬೇಕು? ನನಗಂತೂ ಇದರ ಯಾವ ಉತ್ತರವೂ ಕಾಣಿಸುತ್ತಿಲ್ಲ. ಕಾಂಗ್ರೆಸ್ ಸಮಾಜವಾದಿಗಳಿಗೆ ಸಂಪೂರ್ಣವಾಗಿ ಗೊತ್ತಿರುವುದೇನೆಂದರೆ, ಕಾರ್ಮಿಕರು ಸಾಮ್ರಾಜ್ಯಶಾಹಿಗಳಂತೆ ಬಂಡವಾಳ ಶಾಹಿಗಳ ಜೊತೆಗೂ ಸಂಘರ್ಷ ಮಾಡಬೇಕಾಗುತ್ತದೆ. ಆದ್ದರಿಂದಲೇ ಕಾರ್ಮಿಕರು ಸಂಘಟಿತರಾಗಬೇಕು ಎನ್ನುವುದು ಅವರಿಗೆ ಒಪ್ಪಿಗೆಯಾಗಿದೆ. ಆದರೆ ಅವರು ಹಾಕುವ ಷರತ್ತು ಏನೆಂದರೆ, ಯಾವುದೇ ಕಾರ್ಮಿಕರ ಸಂಘಟನೆಯಿರಲಿ, ಅದು ಕಾಂಗ್ರೆಸ್ಸಿನ ಅಂತರ್ಗತವಾಗಿರಬೇಕು. ಕಾಂಗ್ರೆಸ್ ಮತ್ತು ಕಾರ್ಮಿಕರ ಬಲವಂತದ ಹೊಂದಾಣಿಕೆಯ ಅವಶ್ಯಕತೆಯಾಗಲಿ, ಮೌಲ್ಯವಾಗಲಿ ನನಗಂತೂ ಕಾಣುತ್ತಿಲ್ಲ. ಕಾಂಗ್ರೆಸ್ ಸೋಶಿಯಾಲಾಜಿಷ್ಟ್ ಜನರ ಹೇಳಿಕೆಯಂತೆ ದೇಶದಲ್ಲಿ ಸಮಾಜವಾದವನ್ನು ತರುವುದು ಅವರ ಧ್ಯೇಯವಾಗಿದೆ. ಅವರು ಸಮಾಜವಾದವನ್ನು ಹೇಗೇ ತರುತ್ತಾರೆ? ಕಾಂಗ್ರೆಸ್ಸಿನ ಬಲಗೈ ಬಂಟನಾಗಿ! ಕಾಂಗ್ರೆಸ್ಸಿನಿಂದ ಹೊರಬೀಳದಿರುವುದಕ್ಕೆ ಅವರು ಈ ಕಾರಣ ನೀಡುತ್ತಾರೆ. ಅವರ ಮನುಷ್ಯ ಸ್ವಭಾವದ ವಿಷಯದ ಬಗೆಗಿನ ಜ್ಞಾನವು ಎಷ್ಟು ಕರುಣಾಜನಕವಾಗಿದೆ ಎಂದರೆ, ಅದನ್ನು ಊಹಿಸುವುದೂ ಸಾಧ್ಯವಿಲ್ಲ. ಸಮಾಜವಾದವನ್ನು ತರುವುದೇ ಅವರ ಉದ್ದೇಶವಾಗಿದ್ದರೆ, ಜನರಿಗೆ ಅವರ ಉಪದೇಶವನ್ನು ಮಾಡಿ ಅಪೇಕ್ಷಿತ ಕಾರ್ಯಗಳಿಗಾಗಿ ಅವರನ್ನು ಸಂಘಟಿಸುವುದು ಅಗತ್ಯದ್ದಾಗಿದೆ. ಉಚ್ಚವರ್ಣದವರನ್ನು ಓಲೈಸುವುದರಿಂದ ಸಮಾಜವಾದ ಬರಲಾರದು. ಕಾಂಗ್ರೆಸ್ಸಿನ ಬಲಗೈಯಾಗಿರುವ ಜನರಿಗೆ ಸಮಾಜವಾದದ ಚಿಕ್ಕಅಂಶ ಸಹ ಸಹಿಸುವುದು ಸಾಧ್ಯವಿಲ್ಲ. ಇದು ವಾಸ್ತವಸ್ಥಿತಿಯಾಗಿದ್ದು, ದಿನೇ ದಿನೇ ಅದು ಅಧಿಕ ಸ್ಪಷ್ಟವಾಗುತ್ತಲಿದೆ. ಪಂಡಿತ ನೆಹರೂ ಅವರು ಹಿಂದಿನ ವರ್ಷ ಸಮಾಜವಾದದ

ಬಿರುಸಾದ ಆಂದೋಲನವನ್ನು ಆರಂಭಿಸಿದ್ದರು. ಆದರೆ ಈ ಬಡಪಾಯಿ ಬಡ ಆಸಾಮಿಗೆ ಬೇಗ ಸರಿಯಾದ ಮಾರ್ಗಕ್ಕೆ ತಂದು, ಉಂಡಾಡಿ ಹುಡುಗನಿಗೆ ಲಡ್ಡು ಪೇಡೆಯನ್ನು ತಿನ್ನಲು ಮನೆಗೆ ಮರಳಿ ಕಳಿಸುವಂತೆ, ಕೇವಲ ಇನ್ನು ಮುಂದೆ ಸರಿಯಾಗಿ ವರ್ತಿಸುವ ಕರಾರುಮಾಡಿ ಮನೆಯೊಳಗೆ ಸೇರಿಸಿ ಕೊಳ್ಳಲಾಯಿತು. ಈಗ ಈ ಪಂಡಿತನು ಸಂಪೂರ್ಣ ಬದಲಾಗಿದ್ದು ಎಷ್ಟು ಬಡಪಾಯಿಯಾಗಿದ್ದಾನೆಂದರೆ, ಅವನು ಒಮ್ಮೆ ಮೆರೆಯಿಸಿದ ಮತ್ತು ಸಧ್ಯ ಕಾಂಗ್ರೆಸ್ಸಿನ ಬಲಗೈ ಎಂದು ಶಾಪಗ್ರಸ್ತವಾದ ಕೆಂಪು ನಿಶಾನೆಯನ್ನು ಅವನು ವಿರೋಧಿಸುತ್ತಿದ್ದಾನೆ. ಬಿಹಾರದಲ್ಲಿಯ ಈ ಬಲಬದಿಯ ಬಣ್ಣ ಬಯಲಾಗಿದೆ. ಕಾಂಗ್ರೆಸ್ಸಿನ ಮುಖಂಡರಾದ ಸ್ವಾಮಿ ಸಹಜಾನಂದರು ಕಾಂಗ್ರೆಸ್ಸು ತೊರೆದು, ಅವರ ಸಹಕಾರಿಯಾಗಿದ್ದ ಜಯಪ್ರಕಾಶ ನಾರಾಯಣನೂ ಸಹ ಅದನ್ನು ತ್ಯಾಗ ಮಾಡುವ ಹಾದಿಯಲ್ಲಿದ್ದಾನೆ. ನನಗೆ ಗೊತ್ತಾದ ವಿಷಯವೇನೆಂದರೆ, ಆಲ್‌ಇಂಡಿಯಾ ಕಾಂಗ್ರೆಸ್ ಸಮಿತಿಯ ಮುಂಬೈ ಸಭೆಯಲ್ಲಿ ಕಾಂಗ್ರೆಸ್ಸಿನ ಈ ಬಲಬದಿಯ ಜನರು ಸೋಶ್ಯಾಲಾಜಿಸ್ಟ್‌ರ ಅಶಿಸ್ತಿನ ವರ್ತನೆಯ ಬಗೆಗೆ ನಿಂದಿಸಿದ್ದಾರಂತೆ. ಕಾಂಗ್ರೆಸ್ಸಿನ ವೇದಿಕೆಯಲ್ಲೇ ಸಮಾಜವಾದದ ಪ್ರಚಾರ ಮಾಡುವ ಆರೋಪವನ್ನು ಹೇರಿ ಇಂಡಿಯನ್ ಪಿನಲ್‌ಕೋಡ್‌ನಂತೆ ಮೊದಲಬಾರಿಗೆ ತಪ್ಪುಮಾಡುವ ವ್ಯಕ್ತಿಗೆ ಹೇಗೆ ಎಚ್ಚರಿಕೆಯನ್ನು ನೀಡಲಾಗುತ್ತದೆಯೋ ಹಾಗೆ ಎಚ್ಚರಿಕೆ ನೀಡಲಾಗಿದೆ. ಕಾಂಗ್ರೆಸ್ಸಿನಲ್ಲಿಯ ಸಮಾಜವಾದಿಗಳ ಸ್ಥಿತಿ ಹೀಗೆ ದುರ್ಬಲಗೊಂಡಿದೆ.

ಸಾಮ್ರಾಜ್ಯವಾದಿಗಳ ಪ್ರತಿಕ್ರಿಯೆಯಿಂದಾಗಿ ಭಾರತೀಯ ರಾಜಕಾರಣ ಅಚ್ಛಾದಿತಗೊಂಡಿದೆ. ಕಾರ್ಮಿಕರಿಗೆ ಅವರ ನಿಜವಾದ ವೈರಿಗಳ ಅಂದರೆ ಅಧಿಕಾರವನ್ನು ಕಸಿದು ಕೊಂಡವರ ನೆನಪು ಮಾಸುವಂತೆ ಮಾಡಲಾಗಿದೆ. ರಾಯ್‌ವಾದಿ ಮತ್ತು ಕಾಂಗ್ರೆಸ್‌ವಾದಿ–ಈ ಎರಡೂ ಬಗೆಯ ಸಮಾಜವಾದಿ ಜನರು ವೈಚಾರಿಕ ಗೊಂದಲದಿಂದಾಗಿ ಕೆಸರಿನಲ್ಲಿ ಹೂತು ಹೋಗಿದ್ದಾರೆ. ಒಬ್ಬ ಸಾಮಾನ್ಯ ವೈರಿಯೆಂದು ಈ ಸಾಮ್ರಾಜ್ಯಶಾಹಿ ವಿರುದ್ಧ ಸಂಘರ್ಷ ಮಾಡುವದಾಗಿದ್ದರೂ, ಸರ್ವ ವರ್ಗದವರು ತಮ್ಮ ತಮ್ಮ ವರ್ಗದ ಹಿತವನ್ನು ನಿರ್ಲಕ್ಷ್ಯ ಮಾಡಿ, ಒಂದೇ ಸಂಘಟನೆಯಲ್ಲಿ ವಿಲೀನರಾಗಬೇಕೆಂದೇನೂ ಅದರ ಅರ್ಥವಲ್ಲ. ವಿವಿಧ ವರ್ಗದ ಸಂಘಟನೆಗಳ ಒಂದು ಪಕ್ಷವನ್ನು ಸಿದ್ಧಪಡಿಸಿ ಈ ಸಾಮ್ರಾಜ್ಯಶಾಹಿಯೊಂದಿಗೆ ಹೋರಾಡಬಹುದಾಗಿತ್ತು. ಈ ಕಾರಣಕ್ಕಾಗಿ ಎಲ್ಲ ಸಂಘಟನೆಗಳನ್ನು ಬರಖಾಸ್ತುಗೊಳಿಸಬೇಕಾದ ಅಗತ್ಯವಿರಲಿಲ್ಲ. ಎಲ್ಲ ಸಂಘಟನೆಗಳನ್ನು ಸಮಾವೇಶ ಮಾಡಿಕೊಳ್ಳುವ ಸಂಸ್ಥೆಯ ಅಗತ್ಯವೂ ಇರಲಿಲ್ಲ. ಅದಕ್ಕಾಗಿ ಎಲ್ಲರೂ ಸೇರಿ ಒಂದೇ ಒಂದು ಪಕ್ಷ ಕಟ್ಟಿದರೂ ಸಾಕು. ಕಾಂಗ್ರೆಸ್ಸಿನ ಈ ಬಲಪಕ್ಷವು ಸಾಮ್ರಾಜ್ಯವಾದಿಯ ಹೆಸರಿನಲ್ಲಿ ಯಾವುದೇ ಸ್ವತಂತ್ರ ಮತ್ತು ಬೇರೆ ಸಂಘಟನೆಯನ್ನು ಕಟ್ಟುವ ನಡುವೆ ಬರುವುದಿಲ್ಲ ಎನ್ನುವುದನ್ನು ಬಹಳ ಜನ ಈಗಲೂ ಅರಿತಿಲ್ಲ. ಇದನ್ನು ಅರಿವಿಗೆ ತಂದುಕೊಡುವಾಗ ನನಗೆ ಖೇದವೆನಿಸುತ್ತದೆ. ಮತ್ತು ಈ ತಪ್ಪನ್ನು ನೀನೂ ಮಾಡಬಹುದು, ಎಂಬ ಗಂಡಾಂತರಕಾರಿ ಎಚ್ಚರಿಕೆಯನ್ನು ನಿಮಗೆ ನೀಡುತ್ತಿದ್ದೇನೆ. ರಾಜಕಾರಣವನ್ನು ವರ್ಗಹಿತದ ಪ್ರಜ್ಞೆಯಿಂದ ನಿರ್ಮಿಸಬೇಕು. ಯಾವ ರಾಜಕಾರಣವು ವರ್ಗಹಿತದ ತಳಹದಿಯ ಮೇಲೆ ನಿಂತಿರುವುದಿಲ್ಲವೋ ಅದೊಂದು ಸೋಗು ಆಗಿದೆ.

ಅಂದರೆ ಯಾವ ಪಕ್ಷವು ವರ್ಗಹಿತದ ಮತ್ತು ವರ್ಗ ಪ್ರಜ್ಞೆಯ ತಳಹದಿಯನ್ನು ಆಧರಿಸಿದಿಯೋ ಅಂಥ ಪಕ್ಷವನ್ನು ನೀವು ಸೇರಬೇಕು. ಈ ಒರೆಗಲ್ಲಿಗೆ ಹಚ್ಚಿನೋಡಿದಾಗ ನಿಮ್ಮ ಹಿತದ ವಿರೋಧಿಯಾಗಿರದ, ನನಗೆ ಗೊತ್ತಿರುವ ಪಕ್ಷವೆಂದರೆ ಸ್ವತಂತ್ರ ಮಜೂರಪಕ್ಷ. ಖಚಿತ ಕಾರ್ಯಕ್ರಮವಿರುವ ಅದು ಏಕೈಕ ಪಕ್ಷವಾಗಿದ್ದು ಕಾರ್ಮಿಕರ ಹಿತಕ್ಕೆ ಅದು ಅತ್ಯುನ್ನತ ಸ್ಥಾನವನ್ನು ನೀಡುತ್ತದೆ. ಅದರ ಧೋರಣೆ ನಿಶ್ಚಿತವಾಗಿದೆ.

ಅದು ಸಾಮಾನ್ಯ ಪರಿಸ್ಥಿತಿಯಲ್ಲಿ ಎಂದೂ ಕಾಯ್ದೆಬಾಹಿರ ಮಾರ್ಗವನ್ನು ಅವಲಂಬಿಸುವುದಿಲ್ಲ. ಆದರೆ ಅಂಥ ಪರಿಸ್ಥಿತಿ ತಂದಲ್ಲಿ ಹಿಂದೆಮುಂದೆಯೂ ನೋಡಲಾರದು. ವರ್ಗಯುದ್ಧವನ್ನು ತಪ್ಪಿಸುವುದು ಅದರ ಇಚ್ಛೆಯಾಗಿದ್ದರೂ ವರ್ಗ ಸಂಘಟನೆಯ ತತ್ವದ ತ್ಯಾಗ ಮಾಡಲು ಅದೆಂದೂ ಸಿದ್ಧವಿಲ್ಲ. ಇಂದು ಈ ಸ್ವತಂತ್ರ ಮಜೂರ ಪಕ್ಷವು (ಇಂಡಿಪೆಂಡೆಂಟ್ ಲೇಬರ್ ಪಾರ್ಟಿ) ಬಾಲ್ಯಾವಸ್ಥೆಯಲ್ಲಿದೆ. ಅದು ಕೇವಲ ಮುಂಬೈ ಇಲಾಖೆ ಮಟ್ಟಿಗೆ ಮಾತ್ರ ಸೀಮಿತವಾಗಿರುವುದಂತೂ ಸತ್ಯ. ಆದರೆ ಇದೇನು ಅದರ ವಿರೋಧಿ ಯುಕ್ತಿವಾದವಲ್ಲ. ಪ್ರತಿಯೊಂದು ಪಕ್ಷಕ್ಕೆ ಬಾಲ್ಯಾವಸ್ಥೆ ಇದ್ದೇ ಇರುತ್ತದೆ. ಯಾವುದೇ ಒಂದು ಪಕ್ಷದ ವಯಸ್ಸು ಎಷ್ಟು ಎನ್ನುವುದು ಮಹತ್ವದ ಪ್ರಶ್ನೆಯಲ್ಲ. ಆದರೆ ಅದರ ತತ್ವವೇನು, ಅದರ ಉದ್ದೇಶವೇನು ಮತ್ತು ಅದರ ಸುಪ್ತಶಕ್ತಿ ಏನು ಈ ಸಂಗತಿಗಳು ಮಹತ್ವದ್ದು. ಸ್ವತಂತ್ರ ಕಾರ್ಮಿಕ ಪಕ್ಷದ ಪ್ರಣಾಳಿಕೆಯನ್ನು ಯಾರು ಓದುತ್ತಾರೋ, ಅವರಿಗೆ ಅದರ ತತ್ವ, ಉದ್ದೇಶ ತಿಳಿದು ಬರುತ್ತದೆ. ಈ ಪಕ್ಷದಲ್ಲಿ ಅತ್ಯಂತ ದೊಡ್ಡ ಸುಪ್ತಶಕ್ತಿಯಿದೆ ಎನ್ನುವುದು ಸ್ಪಷ್ಟ. ಈ ಪಕ್ಷ ಸೀಮಿತವಲ್ಲ. ಜಾತಿ, ಪಂಥವನ್ನು ಲೆಕ್ಕಿಸದೆ ಅದು ಎಲ್ಲರಿಗೂ ಮುಕ್ತವಾಗಿದೆ. ಅದರ ಕಾರ್ಯ ಚಟುವಟಿಕೆ ಸ್ವಲ್ಪ ದಲಿತವರ್ಗದ ಅಗತ್ಯಕ್ಕೆ ಮಹತ್ವ ನೀಡುತ್ತಿದ್ದರೂ, ಸಂಪೂರ್ಣ ಕಾರ್ಮಿಕ ವರ್ಗದ ಅಗತ್ಯವು ಸಮಾವೇಶಗೊಳಿಸಬಹುದಾದಷ್ಟು ಅದು ವಿಶಾಲವಾಗಿದೆ. ಈ ಸ್ವತಂತ್ರ ಕಾರ್ಮಿಕ ಪಕ್ಷದ ಏಳ್ಗೆಗೆ ಅಡ್ಡಿಯಾಗಬಹುದಾದ ಒಂದು ಅಡಚಣೆಯೆಂದರೆ ರಾಜಕೀಯದ್ದಲ್ಲ ಸಾಮಾಜಿಕ. ಸದ್ಯ ಈ ಪಕ್ಷದ ಕೇಂದ್ರಸ್ಥಾನದಲ್ಲಿ ದಲಿತ ವರ್ಗದ ಜನರಿದ್ದಾರೆ. ಈ ವಸ್ತುಸ್ಥಿತಿಯು ಮುಖ್ಯವಾಗಿ ಈ ಪಕ್ಷದ ಏಳ್ಗೆ ಮತ್ತು ವಿಸ್ತಾರಕ್ಕೆ ಅಡ್ಡಬರುತ್ತಿದೆ. ದಲಿತವರ್ಗದಂತಹ ಕೆಳದರ್ಜೆಯ ಜನರ ಜೊತೆಗೆ ಸಹಕಾರ್ಯ ಮಾಡಬಾರದು ಎನ್ನುವುದು ಸರ್ವಸಾಧಾರಣ ಭಾವನೆಯಾಗಿದೆ. ಅದು ಉಚ್ಚವರ್ಗದ ಹಿಂದೂಗಳಿಗೆ ಸ್ವತಂತ್ರ ಕಾರ್ಮಿಕ ಪಕ್ಷದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವದಿಲ್ಲ. ಯಾರು ಈ ಪಕ್ಷದ ಹಾನಿಯನ್ನು ಬಯಸುತ್ತಾರೋ ಅವರು ಈ ಭಾವನೆಯ ದುರುಪಯೋಗ ಮಾಡಿಕೊಂಡು ಅಶಿಕ್ಷಿತ ಮತ್ತು ಧಾರ್ಮಿಕ ಮುಗ್ಧರು ಈ ಪಕ್ಷದಲ್ಲಿ ಶಾಮೀಲಾಗದಂತೆ ಪರಾವೃತಗೊಳಿಸುತ್ತಿದ್ದಾರೆ. ಆದರೆ ಸ್ವತಂತ್ರ ಕಾರ್ಮಿಕ ಪಕ್ಷದ ಶುದ್ಧ ಮತ್ತು ಪ್ರಾಮಾಣಿಕ ರಾಜಕಾರಣವು ಸರ್ವ ಕಾರ್ಮಿಕ ವರ್ಗವನ್ನು ತನ್ನ ಧ್ವಜದ ಅಡಿಯಲ್ಲಿ ಲೋಹಚುಂಬಕದಂತೆ ಎಳೆದು ತಂದು, ಹಿಂದೂ ಸಮಾಜ ರಚನೆಯಿಂದ ನಿರ್ಮಾಣಗೊಂಡ ವಿರೋಧಿಶಕ್ತಿಗೆ ಪ್ರತಿಕಾರಕ ಶಕ್ತಿಯಾಗಬಲ್ಲದು ಎಂಬ ಭರವಸೆ ನನಗಿದೆ. ಇಲ್ಲಿವರೆಗೆ ಠಾಣಾ, ಕುಲಾಬಾ ಮತ್ತು ರತ್ನಾಗಿರಿ ಈ ಮೂರೂ ಜಿಲ್ಲೆಗಳಲ್ಲಿ ಈ ಪಕ್ಷವು ಸಂಪೂರ್ಣವಾಗಿ ಸ್ಥಾಪನೆಗೊಂಡಿದ್ದು ರೈತರಲ್ಲಿ ಮತ್ತು ಕಾರ್ಮಿಕರಲ್ಲಿ ಅದು ತನ್ನ ತಳಪಾಯವನ್ನು ರಚಿಸಿದೆ. ಈ ಪ್ರಾಂತದ ಉಳಿದ ಪ್ರದೇಶಗಳಲ್ಲೂ ಅದರ ಬಿರುಸಾದ ಪ್ರಸಾರ ಮುಂದುವರೆದಿದೆ. ಮಧ್ಯಪ್ರಾಂತ ಮತ್ತು ವರ್ಹಾಡದಲ್ಲೂ ಈ ಪಕ್ಷವು ಕಾರ್ಯರತಗೊಂಡಿದ್ದು ಭಾರತದ ಅನ್ಯ ಪ್ರಾಂತದಲ್ಲೂ ತನ್ನ ಸ್ಥಾನವನ್ನು ಪಡೆಯಬಹುದೆಂಬ ಆಸೆ ನನಗಿದೆ. ಆದರಿಂದ ಕಾರ್ಮಿಕ ವರ್ಗದ ನ್ಯಾಯಯುತವಾದ ಬೆಂಬಲ ಪಡೆಯಲು ಸ್ವತಂತ್ರ ಕಾರ್ಮಿಕ ಪಕ್ಷ ಒಂದೇ ಅರ್ಹವಾಗಿದೆ.

ಕಾರ್ಮಿಕ ಸಂಘಟನೆಯಲ್ಲಿರುವ ದಲಿತ ವರ್ಗದ ಜನರು ಭಾರತದಲ್ಲಿಯ ಸಂಪೂರ್ಣ ಕಾರ್ಮಿಕ ವರ್ಗಕ್ಕೆ ಬಹುದೊಡ್ಡ ಚಾಲನೆಯನ್ನು ನೀಡಬಲ್ಲರು. ಇಂಗ್ಲೆಂಡಿನಲ್ಲಿ ಚಾರ್ಟಿಸ್ಟ್ ಚಳುವಳಿಯ ಅಧ್ಯಯನ ಮಾಡುವ ಗೆಮೆಜ ಎನ್ನುವ ವ್ಯಕ್ತಿಯು ಹೇಳಿರುವುದೇನೆಂದರೆ, "ಸಾಮಾಜಿಕ ಪ್ರಶ್ನೆಯ ಹೊರತು ಯಾವುದೇ ರಾಜಕೀಯ ಚಳುವಳಿಯು ಇಂದಿನವರೆಗೆ ರೂಪಗೊಂಡಿದಿಯೋ ಇಲ್ಲವೋ ಎಂಬ ಬಗ್ಗೆ ಶಂಕೆಯೇ ಇದೆ. ಮಾನವ ಜಾತಿಯ ಮುಖ್ಯ ಉದ್ದೇಶವು ಸಾಮಾಜಿಕ ಸುಖೋಪಭೋಗದ ಸಾಧನವನ್ನು ಹಸ್ತಗತ

ಮಾಡಿಕೊಳ್ಳುವುದೇ ಆಗಿದೆ. ಈ ಸಾಧನೆಗಳ ಮಾಲೀಕತ್ವ ಅವರಿಗೆ ಸಿಕ್ಕರೆ ರಾಜಕೀಯ ವಿದ್ಯಮಾನಗಳ ಬಗೆಗೆ ಆಸಕ್ತಿ ತಾಳುವ ಅವರ ವೃತ್ತಿಯು ತೀರ ಕಡಿಮೆಯಾಗುತ್ತದೆ. ಸಾಮಾನ್ಯ ಜನತೆಗೆ ರಾಜಕೀಯ ಹಕ್ಕಿನ ಮಹತ್ವವನ್ನು ತತ್ವತಃ ಮನವರಿಕೆಯಾಗುವ ಕಾರ್ಯವನ್ನು ಯಾರಾದರೂ ಮಾಡುತ್ತಿದ್ದರೆ ಅದು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ದೋಷವೇ ಆಗಿದೆ." ನಿಮ್ಮ ಸಾಮಾಜಿಕ ದೋಷ ದೊಡ್ಡದೂ, ವಾಸ್ತವವೂ ಅಗಿದೆ. ಅದರಿಂದಾಗಿ ನಿಮ್ಮ ರಾಜಕಾರಣವೂ ಅಸಲೀ ಮತ್ತು ವಾಸ್ತವವಾಗಿರುವುದು ಸಾಧ್ಯ. ನೀವಿದನ್ನು ಅರಿತುಕೊಂಡಿದ್ದೇ ಆಗಿದ್ದರೆ ಅಸಲೀ ರಾಜಕೀಯ ಪಕ್ಷದ ವಿಷಯದಲ್ಲಿ ನೀವು ಭಾರತದ ಸಂಪೂರ್ಣ ಕಾರ್ಮಿಕ ವರ್ಗಕ್ಕೆ ದೀಪಸ್ತಂಭದಂತೆ ಮಾರ್ಗದರ್ಶಕರಾಗುತ್ತೀರಿ. ಕಾರ್ಮಿಕರ ಬೇರೊಂದು ಸೇವೆಯನ್ನೂ ಸಂಪೂರ್ಣ ನೀವೆ ಮಾಡಬಲ್ಲಿರಿ. ವಿಧಾನಸಭೆಯಲ್ಲಿ ನಿಮಗೆ ಪ್ರತಿನಿಧಿಯ ವಿಶಿಷ್ಟಸ್ಥಾನ ಲಭಿಸಿದೆ. ಈ ಖಚಿತಸ್ಥಾನದ ಉಪಯೋಗ ಕಾರ್ಮಿಕ ವರ್ಗಕ್ಕೆ ಅದೆಷ್ಟು ಮಹತ್ವದ್ದು ಎನ್ನುವ ಅರಿವು ಕೆಲವು ಕಾರ್ಮಿಕ ನಾಯಕರಿಗೆ ಇದ್ದಂತಿಲ್ಲ. ಚುನಾವಣೆಯು ಒಂದು ಬಗೆಯ ಜೂಜು ಇದ್ದಂತೆ. ಯಾವುದೇ ಪಕ್ಷಕ್ಕೆ ವಿಧಾನ ಸಭೆಯಲ್ಲಿ ಇಂತಿಷ್ಟು ಜಾಗ ಸಿಕ್ಕೇ ಸಿಗುತ್ತದೆ ಎಂದು ಯಾವುದೇ ಚುನಾವಣೆಯ ಪದ್ಧತಿಯಿಂದ ಖಚಿತವಾಗಿ ಹೇಳಲು ಬರುವುದಿಲ್ಲ. ಅಷ್ಟೇ ಅಲ್ಲ. ಮತದಾರರ ಯಾವುದೇ ಗುಂಪಿಗೆ ಯಾವ ಚುನಾವಣೆಯ ಪದ್ಧತಿಯಿಂದಲೂ ಅವರ ಜನಸಂಖ್ಯೆಯ ಪ್ರಮಾಣದಲ್ಲಿ ಸ್ಥಾನ ಸಿಗಬಹುದು ಎಂದೂ ಅಲ್ಲ. ಚುನಾವಣೆಯ ಫಲಿತಾಂಶ ಕೆಲವು ಪಕ್ಷಗಳಿಗೆ ಅದೆಷ್ಟು ಅಚ್ಚರಿಯ ಮತ್ತು ವಿನಾಶಕಾರಿಯಾಯಿತು ಎನ್ನುವುದು ಇಂಗ್ಲಂಡಿನಲ್ಲಿಯ ಚುನಾವಣೆಯ ಇತಿಹಾಸದಿಂದ ಕಂಡು ಬರುತ್ತದೆ. ಹಲವು ಸಲ ಅಲ್ಪಸಂಖ್ಯಾತ ಮತದಾರರಿಗೆ ಬಹುಸಂಖ್ಯೆಯ ಹುದ್ದೆ ಸಿಗುತ್ತದೆ. ನಮ್ಮದು ಇಲ್ಲಿ ಖಚಿತಸ್ಥಾನ ನಿರ್ಧಾರಗೊಂಡಿದ್ದರಿಂದ ಅಂಥ ಭಯಪಡಬೇಕಾದ ಅಗತ್ಯವಿಲ್ಲ. ದಲಿತ ವರ್ಗದ ಕಾಯ್ದಿರಿಸಿದ ಸ್ಥಾನದ ಬಗೆಗೆ ಯೋಚಿಸಿದಾಗ ಅದು ಕೇವಲ ದಲಿತ ವರ್ಗದ ಉಪಯೋಗಕ್ಕೇ ಇದೆ ಎಂದು ಭಾವಿಸಬೇಕಾಗಿಲ್ಲ. ಅವು ಸರ್ವ ಕಾರ್ಮಿಕರ ವರ್ಗಕ್ಕೆ ಉಪಕಾರವಾಗಿದೆ. ದಲಿತವರ್ಗಕ್ಕೆ ಖಚಿತ ಪ್ರತಿನಿಧಿತ್ವ ಲಭಿಸುವ ಭರವಸೆಯಿರುವುದರಿಂದ, ಉಳಿದ ಕಾರ್ಮಿಕವರ್ಗಕ್ಕೆ ಏನಾದರೂ ಸಹಾಯಬೇಕು ಎಂದಾದಲ್ಲಿ ಅವರ ಸಂಘಟನೆಯ ನಿರ್ಮಾಣದಲ್ಲಿ ಅದು ಬಹಳ ದೊಡ್ಡ ಸಹಾಯವಾಗಲಿದೆ. ಕಾರ್ಮಿಕ ವರ್ಗಕ್ಕೆ ರಾಜಕೀಯ ಪ್ರತಿನಿಧಿತ್ವ ಪಡೆಯಲು ದಲಿತವರ್ಗದ ಉಪಯೋಗ ಎಷ್ಟೆಲ್ಲ ಆಗಲಿದೆ ಎನ್ನುವುದು ಹಿಂದಿನ ಚುನಾವಣೆಯಲ್ಲಿ ಸಿದ್ಧವಾಗಿದೆ. ಸ್ವತಂತ್ರ ಕಾರ್ಮಿಕ ಪಕ್ಷದ ವತಿಯಿಂದ ಸ್ಪರ್ಧಿಸುವ ಮೂವರು ಹಿಂದೂಗಳಿಗೆ ದಲಿತವರ್ಗವು ಮುಂಬೈ ವಿಧಾನ ಸಭೆಗಾಗಿ ಚುನಾವಣೆಯ ಅವಕಾಶ ಮಾಡಿಕೊಟ್ಟಿತು ಮತ್ತು ಸ್ವತಂತ್ರ ಕಾರ್ಮಿಕ ಪಕ್ಷದ ಪರವಾಗಿ ಸ್ಪರ್ಧಿಸದೇ ಇರುವ, ಆದರೆ ದಲಿತರ ಬೆಂಬಲ ಪಡೆದ ಅಭ್ಯರ್ಥಿಗಳಿಗೆ ಗೆದ್ದುಬರಲು ಅವಕಾಶ ಮಾಡಿಕೊಟ್ಟಿತು. ಯಾರಿಗೆ ನಮ್ಮ ಪ್ರಯತ್ನದಿಂದ ಹಿತವನ್ನು ಸಾಧಿಸಿಕೊಳ್ಳಬೇಕು ಎಂದಿದೆಯೋ ಅಂಥವರು ಮಾಡಿಕೊಳ್ಳಬಹುದು. ಆದರೆ ಈ ದೇಶದ ರಾಜಕಾರಣದಲ್ಲಿ ದಲಿತ ವರ್ಗ ಮಹತ್ವದ ಪಾತ್ರ ವಹಿಸಬಲ್ಲದು ಎಂಬ ವಸ್ತುಸ್ಥಿತಿಯು ಬಾಕಿ ಉಳಿಯುತ್ತದೆ. ಈ ಭೂಮಿಕೆಯು ಅವರ ಸ್ವಂತಕ್ಕಾಗಿ ಮತ್ತು ಕಾರ್ಮಿಕರ ವರ್ಗಕ್ಕಾಗಿ ಅತ್ಯಂತ ಸಹಾಯಕಾರಿಯಾಗಿದೆ.

ಆದಾಗ್ಯೂ, ನೀವು ಎಷ್ಟು ಬೇಗ ಮತ್ತು ಎಷ್ಟು ಉತ್ತಮರೀತಿಯಲ್ಲಿ ಸಂಘಟಿತಗೊಳ್ಳುತ್ತೀರಿ ಎನ್ನುವುದರ ಮೇಲೆ ಇದೆಲ್ಲ ಅವಲಂಬಿಸಿದೆ. ನೀವೇಕೆ ಸಂಘಟಿತರಾಗಬೇಕು, ಸಂಘಟನೆಯ ಮೂಲಕ ನೀವೇನು ಮಾಡಬಲ್ಲಿರಿ ಎನ್ನುವುದನ್ನು ನಾನು ನಿಮಗೆ ಹೇಳಿದ್ದೇನೆ. ಈಗ ನಾನೊಂದು ಕೊನೆಯ ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನಿಮ್ಮ ಸ್ವಂತದ ಸಂಘಟನೆಯನ್ನು ಕಟ್ಟುವ ಕಾರ್ಯದ ಬಗೆಗೆ

ನೀವಿನ್ನು ವಿಳಂಬ ಮಾಡಬಾರದು. ಈ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವಂತೆ "ಆಮಂತ್ರಣವನ್ನು ನೀಡಿ, ನನ್ನನ್ನು ಗೌರವಿಸಿದ್ದಕ್ಕಾಗಿ ನಿಮಗೆಲ್ಲ ಋಣಿಯಾಗಿದ್ದೇನೆ. ನಿಮಗೆ ಶುಭವಾಗಲಿ".[೧]

---

೧. ಡಾ. ಬಾಬಾಸಾಹೇಬ ಅಂಬೇಡ್ಕರಾಂಚೀ ಭಾಷಣೆ: ಮಾ. ಫ. ಗಾಂಜರೆ ಖಂಡ–೨, ಮರುಮುದ್ರಣ ೧೦–೪–೧೯೮೬, ಪು. ೧೩೨–೧೪೮.

## ೧೧೯.

# ಸಚ್ಚಾರಿತ್ರ್ಯ ಸೌಜನ್ಯವಿಲ್ಲದಿದ್ದರೆ ಸುಶಿಕ್ಷಿತ ಮನುಷ್ಯನು ಕಾಡುಪ್ರಾಣಿಗಿಂತಲೂ ಕ್ರೂರ ಮತ್ತು ಭಯಪ್ರದನಾಗುತ್ತಾನೆ

ದಿನಾಂಕ ೫ ಫೆಬ್ರುವರಿ ೧೯೩೮ರ 'ಜನತಾ' ಪತ್ರಿಕೆಯಲ್ಲಿ ತಿಳಿಸಿದಂತೆ ಮನಮಾಡದಲ್ಲಿ ದಿನಾಂಕ ೧೨ ಮತ್ತು ೧೩ ಫೆಬ್ರುವರಿ ೧೯೩೮ರಲ್ಲಿ ಏರ್ಪಡಿಸಿದ ಅಖಿಲ ಜಿ.ಐ.ಪಿ. ರೇಲ್ವೆ ಅಸ್ಪೃಶ್ಯ ಕಾರ್ಮಿಕರ ಸಮ್ಮೇಳನದ ಭವ್ಯಮಂಟಪದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರರ ಅಧ್ಯಕ್ಷತೆಯ ಅಡಿಯಲಿ ಮುಂಬೈ ಇಲಾಖೆಯ ಅಸ್ಪೃಶ್ಯ ಯುವ ಸಮ್ಮೇಳನವನ್ನು ೧೨ರ ರಾತ್ರಿ ಎಂಟಕ್ಕೆ ಏರ್ಪಡಿಸಲಾಗಿತ್ತು. ಈ ಸಮ್ಮೇಳನದಲ್ಲಿ ಶ್ರೀ ಮುರಲಿಧರ ಪಗಾರೆಯ ಭಾಷಣದ ಬಳಿಕ ವಿವಿಧ ಗೊತ್ತುವಳಿಯನ್ನು ಸ್ವೀಕರಿಸಿದ ನಂತರ ಡಾ. ಅಂಬೇಡ್ಕರ ಸಾಹೇಬರು ಭಾಷಣ ಮಾಡಿದರು.

ಡಾ. ಅಂಬೇಡ್ಕರರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ್ದು ಹೀಗೆ–

ಇಂದಿನ ಈ ಸಮ್ಮೇಳನವು ಯುವಕರಿಗಾಗಿ ಎಂದಿದ್ದರೂ ಇಲ್ಲಿ ಎಲ್ಲ ವಯಸ್ಸಿನವರು ಸೇರಿದ್ದಾರೆ. ಏಕೆಂದರೆ ಈ ಯುವಕರ ಸಮ್ಮೇಳನದಲ್ಲಿ ಮುದುಕರಿದ್ದಾರೆ, ನನ್ನ ಬಲಬದಿಯ ಸಂಪೂರ್ಣ ಬ್ಲಾಕ್ ಭಗಿನಿಯರಿಂದ ತುಂಬಿ ಹೋಗಿದೆ. ಹೀಗಾಗಿ ಇಂದಿನ ಯುವ ಸಮ್ಮೇಳನದಲ್ಲಿ ನನ್ನ ಭಾಷಣ ಯುವಕೇತರರಿಗೆ ವಿಸಂಗತಿ ಎನಿಸಬಹುದು. ಹೀಗಾಗಿ ನಾನಿಂದು ಮಾತನಾಡಲಿರುವ ವಿಷಯ ಕೇವಲ ಯುವಜನರಿಗೆ ಮಾತ್ರ ಸಂಬಂಧಿಸಿದ್ದು.

ಇಂದಿನ ಈ ಯುವಸಮ್ಮೇಳನವು ಅತ್ಯಂತ ಮಹತ್ವದ್ದು. ಸಾಮಾನ್ಯ ಜನಸಂಖ್ಯೆಯಲ್ಲಿ ಯುವಕರ ಸಂಖ್ಯೆ ಹೆಚ್ಚಿದೆ. ಇದ್ದ ಕೆಲವೇ ಮುದುಕರಲ್ಲಿ ಹಲವರ ಗೋರಿಯನ್ನು ಈಗಾಗಲೇ ಅಗೆದು ಇಡಲಾಗಿದೆ. ಹಲವರು ಬಾಲ್ಯದಲ್ಲಿ ಯಾವ ಪರಿಸ್ಥಿತಿಯಲ್ಲಿ ಬೆಳೆದರೋ, ಅದರಿಂದ ಹೊರಬರಲು ಈಗಲೂ ಅವರು ಸಿದ್ಧರಿಲ್ಲ. ಬೆಳೆದ ಪರಿಸ್ಥಿತಿಗೇ ಅಂಟಿ ಕೊಂಡಿರುವುದು ಅವರ ಸ್ವಭಾವ. ಅವರಿಂದ ನಾವು ಬೇರೆ ಏನನ್ನೂ ಬಯಸದಿದ್ದರೂ, ಮುಂದೆ ಸಾಗುತ್ತಿರುವ ಚಳುವಳಿಯ ರಥದ ನಡುವೆ ಅವರು ಬರದಿದ್ದರೆ, ಅದೇ ದೊಡ್ಡ ಉಪಕಾರ ಮಾಡಿದಂತೆ.

ಇಂದಿನ ಈ ಯುವಸಮ್ಮೇಳನವು ಯುವಕ ಸಂಘದಿಂದಲೇ ಜರುಗಬೇಕಿತ್ತು. ಆದರದು ಸ್ವತಂತ್ರ ಕಾರ್ಮಿಕ ಪಕ್ಷದ ವತಿಯಿಂದ ನಡೆಯುತ್ತಿದೆ. ಈ ಸಮ್ಮೇಳನಗಳನ್ನು ಯುವಕರೇ ಏರ್ಪಡಿಸಿದ್ದರೆ ತುಂಬ ಚೆನ್ನಾಗಿರುತ್ತಿತ್ತು. ಆದರೆ ಯುವಕರಲ್ಲಿ ಚಿಕ್ಕಪುಟ್ಟ ಭಿನ್ನಾಭಿಪ್ರಾಯವಿದ್ದರೂ, ನಾಶಿಕ ಜಿಲ್ಲಾ ಯುವ ಸಂಘದ ಪರವಾಗಿ ಈ ಸಮ್ಮೇಳನವು ಏರ್ಪಡಿಸಲಾಗುತ್ತಿದೆ ಎಂದು ಈ ಮೊದಲೇ ತಿಳಿಸಿದ್ದರೂ, ಕಾರ್ಯವನ್ನು ಗಮನಿಸಿ ಯಾವ ಹಠವನ್ನು ಹಿಡಿಯದೆ ಇದು ಯುವಕರ ಸಮ್ಮೇಳನ, ಅದನ್ನು ಯಾರೇ

---

ಜನತಾ: ೨೬ ಫೆಬ್ರುವರಿ ೧೯೩೮.

ಏರ್ಪಡಿಸಲಿ, ಎಂಬ ಉದಾತ್ತಭಾವನೆಯಿಂದ ಭಾಗವಹಿಸಿದ್ದು ಅಭಿನಂದನೀಯ ಸಂಗತಿಯಾಗಿದೆ. ಸಾರ್ವಜನಿಕ ಕಾರ್ಯದಲ್ಲಿ ತೊಡಗಿಕೊಂಡವರಲ್ಲಿ ಈ ಭಾವನೆಯು ಇರದಿದ್ದರೆ ಅವರಿಂದ ಯಾವ ಕೆಲಸವೂ ಆಗಲಾರದು. ಸಾರ್ವಜನಿಕ ಕಾರ್ಯ ಮಾಡಬಯಸುವವರಲ್ಲಿ ಒಂದುವೇಳೆ ಈ ಭಾವನೆಯು ಇರದಿದ್ದರೆ ಅವರ ಕೈಯಿಂದ ಏನೂ ಮಾಡುವುದು ಸಾಧ್ಯವಿಲ್ಲ. ಹೀಗಾಗಿ ಸಾಮಾಜಿಕ ಕಾರ್ಯ ಮಾಡುವವರು, ಮಾಡಬಯಸುವವರು ಈ ಭಾವನೆಯನ್ನು ಸತತ ಮನದೊಳಗೆ ಸಂರಕ್ಷಿಸುವುದರಲ್ಲೇ ಸಮಾಜಹಿತವಿದೆ. ಯುವಕಸಂಘದ ಜನರು ಆರಂಭಿಸಿದ ಈ ಸ್ತುತ್ಯ ಮತ್ತು ಅನುಕರಣೀಯ ಯೋಜನೆಯ ಬಗೆಗೆ ನಾನು ಮತ್ತೊಮ್ಮೆ ಅವರನ್ನು ಅಭಿನಂದಿಸುತ್ತೇನೆ.

ಈ ಭಾಷಣ ೧೨ನೇ ತಾರೀಖಿನದಾಗಿದ್ದರೂ, ಸಮ್ಮೇಳನದ ವೃತ್ತಾಂತದಲ್ಲಿ ಅಂತರವಿರುವುದು ಸರಿಯಲ್ಲ ಎಂಬ ಕಾರಣಕ್ಕೆ ೧೩ನೇ ತಾರೀಖಿನ ನಂತರ ಪ್ರಕಟಿಸುತ್ತಿದ್ದೇವೆ–ಸಂಪಾದಕ.

ಯುವ ಸಮ್ಮೇಳನದಲ್ಲಿ ನಾನು ಹೇಳಲಿರುವ ಮಾತನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸ ಬೇಕೆಂದಿದ್ದೆ. ಆದಾಗ್ಯೂ ಕೆಲಸದ ಬಾಹುಳ್ಯದಿಂದಾಗಿ ಇವತ್ತು ಅದು ಸಾಧ್ಯವಾಗದಿದ್ದರೂ, ಆದಷ್ಟು ಬೇಗ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತೇನೆ. ಇಂದಿನ ಸಂದರ್ಭದಲ್ಲಿ ಒಂದೆರಡು ಮಹತ್ವದ ಸಂಗತಿಗಳನ್ನು ಹೇಳಲಿದ್ದೇನೆ. ನನ್ನ ವಯಸ್ಸು ೪೦ ದಾಟಿದ್ದರಿಂದ ನಾನು ಯುವಕನಲ್ಲ ಎಂಬ ಮಾತನ್ನು ನಾನು ಒಪ್ಪಲೇಬೇಕು. ಮನುಷ್ಯನು ತನ್ನ ಆಯುಷ್ಯವನ್ನು ಬರೇ ತಿನ್ನುವುದು, ಕುಡಿಯುವುದು ಮತ್ತು ಬದುಕುವುದರಲ್ಲೇ ಕಳೆಯುವುದು ಸರಿಯಲ್ಲ. ತಿನ್ನುವುದು ಉಣ್ಣುವುದು ಬದುಕುವುದಕ್ಕಾಗಿ ಮತ್ತು ಬದುಕುವುದು ಗೌರವಕ್ಕಾಗಿ ಹಾಗೇ ಸಮಾಜದಲ್ಲಿ ಭೂಷಣ ಪ್ರಾಯವಾಗಲು ಸಮಾಜಸೇವೆ ಅಗತ್ಯವಾದುದು. 'ಭೂಮಿಗೆ ಭಾರ'ವಾಗಿ ಬದುಕುವುದರಲ್ಲಿ ಏನಿದೆ ಅರ್ಥ? ಈ ವಿಷಯಕ್ಕೆ ಸಂಬಂಧಿಸಿದಂತೆ ಶ್ರೇಷ್ಠ ನಾಟಕಕಾರ ಕೈ. ಗಡಕರಿ ಒಂದೆಡೆ ಹೇಳಿದ್ದು ಹೀಗೆ, 'ಸಮಾಜ ಎಲ್ಲಿಯವರೆಗೆ ನಮ್ಮನ್ನು ಗೌರವದಿಂದ ಕಾಣುತ್ತದೆಯೋ ಅಲ್ಲಿಯವರೆಗೆ ಬದುಕಿರುವುದು ಭೂಷಣಪ್ರಾಯವಾದುದು'. ಇಲ್ಲದಿದ್ದರೆ ಸಮಾಜಕ್ಕೆ ಬೇಡವಾಗಿ ತೀರ ಮುದುಕರಾಗಿ, ಹಾಸಿಗೆ ಹಿಡಿದು, ಮನೆಯ ಸೊಸೆ ಮಕ್ಕಳ ತಿರಸ್ಕಾರಕ್ಕೆ ಪಾತ್ರರಾಗಿ ಸೊರಗಿ–ಕೊರಗಿ ಬದುಕುವುದಕ್ಕಿಂತ ಮೊದಲೇ ಸಾಯುವುದು ಭೂಷಣಪ್ರಾಯವಾದುದು.

ನಾನು ಯುವಕನಾಗಿದ್ದಾಗಿನ ನನ್ನ ಅನುಭವವನ್ನು ನಿಮಗೆ ಹೇಳಲು ಬಯಸುತ್ತೇನೆ. ಯುವಕರಾದವರು ತಮ್ಮ ಎದುರಿಗೆ ಉದಾತ್ತ ಧ್ಯೇಯವನ್ನು ಇರಿಸಿಕೊಳ್ಳಬೇಕು. ಯಾವುದೇ ವಿಷಯವನ್ನು ಹಸ್ತಗತ ಮಾಡಿಕೊಳ್ಳಬೇಕಿದ್ದರೆ ತಪಸ್ಸು ಮಾಡಬೇಕಾಗುತ್ತದೆ ಎನ್ನುವುದನ್ನು ಯುವಕರು ನೆನಪಿನಲ್ಲಿರಿಸಿಕೊಳ್ಳಬೇಕು. ಹೀಗಾಗಿ ನಮ್ಮಲ್ಲೊಂದು ಗಾದೆ ಮಾತಿದೆ. 'ತಪದ ಕೊನೆಗೆ ಫಲ'; ಕಾರ್ಯ ಆತ್ಮೋನ್ನತಿಯದ್ದೇ ಆಗಿರಲಿ, ಅಥವಾ ರಾಷ್ಟ್ರೋನ್ನತಿಯದ್ದೇ ಆಗಿರಲಿ, ಯಾವುದೇ ಆಗಿರಲಿ ಅದಕ್ಕಾಗಿ ಸತತ ಪ್ರಯತ್ನ ಮಾಡಬೇಕಾಗುತ್ತದೆ. ಮನುಷ್ಯ ಇದನ್ನು ಸಮರ್ಪಣಾ ಭಾವನೆಯಿಂದ ಮಾಡಬೇಕಾಗುತ್ತದೆ. ನಾನು ನೋಡಿದ ಹಲವರು ಯುವಕರು ಹೇಗಿದ್ದಾರೆ ಎಂದರೆ, ಅವರಿಗೆ ಹದಿನೈದು ನಿಮಿಷ ಮೇಜಿನ ಎದುರಿಗೆ ಕೂತಿರುವುದು ಸಾಧ್ಯವಿಲ್ಲ. ಅವರಿಗೆ ಗಳಿಗೆ ಗಳಿಗೆಗೂ ಸೇದಲು ಬೀಡಿಬೇಕಾಗುತ್ತದೆ, ಗುಟುಕರಿಸಲು ಚಹಾ ಬೇಕಾಗುತ್ತದೆ. ಅದರ ಹೊರತು ಅವರಿಂದ ಕೆಲಸ ಮಾಡುವುದೇ ಸಾಧ್ಯವಿಲ್ಲ. ಇದು ಸರಿಯಲ್ಲ. ಯಾವುದೇ ವ್ಯಕ್ತಿ ತನ್ನ ಹುಟ್ಟುಗುಣದಿಂದ ಪರಾಕ್ರಮ ಮಾಡುವುದು ಸಾಧ್ಯವಿಲ್ಲ. ಪ್ರಪಂಚದಲ್ಲಿ ಕೆಲವೇ ಹುಚ್ಚು ಜನರು ಹುಟ್ಟುತ್ತಾರೆ. ಬುದ್ದಿಯ ವಿಕಾಸ ಮಾಡುವುದು ಪ್ರತಿಯೊಬ್ಬರ ಕೈಯಲ್ಲಿದೆ. ೨೪ ಗಂಟೆಗಳಲ್ಲಿ ೨೦ಗಂಟೆ ಟೇಬಲ್ ಎದುರಿಗೆ ಕೂತುಕೆಲಸ ಮಾಡಲು ಬರುವಂತಿರಬೇಕು. ಯಾರಿಗೆ ಬುದ್ಧಿಯ ವಿಕಾಸ

ಮಾಡುವ ಇಚ್ಛೆಯಿದೆಯೋ ಅವರು ತಪಸ್ಸು ಮಾಡಬೇಕು, ಶ್ರಮಪಡಬೇಕು.

ಮನುಷ್ಯನು ಸಂಕಟದಲ್ಲಾಗಲಿ, ಬಡತನದಲ್ಲಾಗಲಿ ಸಿಲುಕಿದನೆಂದರೆ ಅವನು ನಿರಾಸೆಗೊಳಗಾಗುತ್ತಲೇ ಇರುತ್ತಾನೆ. ತನಗೆ ಯಶ ಸಿಗಲಾರದು ಎಂಬ ಭಾವನೆಯೂ ಅವನ ಮನದಲ್ಲಿ ಮೂಡುತ್ತದೆ. ಈ ಭಾವನೆಯ ಕಪಿಮುಷ್ಟಿಯಲ್ಲಿ ಸಿಲುಕಿದ ಮನುಷ್ಯನು ನಿರುಪಯೋಗಿಯಾಗುತ್ತಾನೆ. ಪ್ರತಿಯೊಬ್ಬ ಯುವಕನು ಆಸೆಯನ್ನು ಎಂದೂ ತೊರೆಯಬಾರದು. ಅವನು ಆಸೆ ಬಿಟ್ಟ ದಿನದಿಂದಲೇ ಸತ್ತರೂ ಅಷ್ಟೇ. ಪ್ರತಿಯೊಬ್ಬ ಯುವಕನು ಮಹಾತ್ವಾಕಾಂಕ್ಷೆಯಾಗಿರಬೇಕು. ಮಹಾತ್ವಾಕಾಂಕ್ಷೆಯ ಹೊರತು ಮನುಷ್ಯ ಪ್ರಯತ್ನವನ್ನು ಮಾಡುವುದು ಸಾಧ್ಯವೇ ಇಲ್ಲ. ನೀವಿಂದು ಎಲ್ಲಿಯೇ ಹೋಗಿ, ಅದು ಬೇಕಾದರೆ ತಹಶೀಲ್ದಾರ ಆಫೀಸಿರಲಿ, ಜಿಲ್ಲಾಧಿಕಾರಿಯ ಆಫೀಸಿರಲಿ ಅಥವಾ ಕೋರ್ಟ್ ಆಗಿರಲಿ ಎಲ್ಲೆಡೆ ಬರೇ ಭಟ್ಟ-ಬ್ರಾಹ್ಮಣರದ್ದೇ ಹಾವಳಿಯನ್ನು ಕಾಣಬಹುದು. ಈ ಪರಿಸ್ಥಿತಿಯನ್ನು ಕಂಡು ಉಳಿದವರು ನಿರಾಸೆಗೊಳ್ಳುವುದು ಸ್ವಾಭಾವಿಕವಾಗಿದ್ದರೂ, ನಾವಿಂದು ನಿರಾಸೆಗೊಳ್ಳದೆ, ಉನ್ನತ ಮಹಾತ್ವಾಕಾಂಕ್ಷೆಯನ್ನು ಮನದೊಳಗೆ ಬೆಳೆಸಿಕೊಂಡು ಪ್ರಯತ್ನಶೀಲರಾಗಬೇಕಾಗಿದೆ. ನನ್ನನ್ನು ಮುಂಬೈಯ ಗವ್ಹರ್ನರ್‌ನೆಂದು ನೇಮಿಸಿದ್ದರೂ ಅದು ಕಡಿಮೆಯೇ ಎಂದು ಭಾವಿಸುವವನು ನಾನು. ಇದನ್ನು ಹೇಳುವ ಉದ್ದೇಶವಿಷ್ಟೇ. ನಮ್ಮಲ್ಲಿಯ ಪ್ರತಿಯೊಬ್ಬನು ಉನ್ನತ ಮಹಾತ್ವಾಕಾಂಕ್ಷೆಯನ್ನು ಹೊಂದಿ, ಅದನ್ನು ಫಲಪ್ರದಗೊಳಿಸಲು ಶತಪ್ರಯತ್ನ ಮಾಡಬೇಕು.

ಯುವ ಬಂಧುಗಳು ಒಳಗೊಂದು ಹೊರಗೊಂದು ಎಂಬ ನಡವಳಿಕೆಯನ್ನು ಬೆಳೆಸಿಕೊಂಡಿರಬಾರದು. ಸತ್ಯಕ್ಕೆ ತಾತ್ಕಾಲಿಕ ಯಶ ಸಿಗದಿದ್ದರೂ, ಅಂತಿಮವಾಗಿ ಸತ್ಯಕ್ಕೆ ಜಯಸಿಗುತ್ತದೆ. ನಾವು ಇಬ್ಬಂದಿಯಿಂದ ವರ್ತಿಸಬಾರದು. ಜಗತ್ತಿಗೆ ವ್ಯಕ್ತಿಯು ಎರಡು ನಾಲಿಗೆಯುಳ್ಳವನು ಎನ್ನುವುದು ಗೊತ್ತಾದರೆ, ಅವನ ಮೇಲೆ ನಂಬಿಕೆ ಇಡುವುದಿಲ್ಲ.

ನಮಗಿಂದು ವಿದ್ಯೆಯ ಬಾಗಿಲು ತೆರೆದಿದೆ. ಈಗ ಸಿಗುತ್ತಿರುವ ಶಿಕ್ಷಣದ ಸವಲತ್ತುಗಳು ನಮ್ಮ ಕಾಲದಲ್ಲಿ ಖಂಡಿತಕ್ಕೂ ಇರಲಿಲ್ಲ. ಆಗ ನಮಗೆ ಯಾರ ಸಹಾಯವೂ ಸಿಗುತ್ತಿರಲಿಲ್ಲ. ನಾನು ಇಲ್ಲಿಯ ವಿಶ್ವವಿದ್ಯಾಲಯದಲ್ಲಿದ್ದಾಗ ನನ್ನ ತಂದೆ, ಕುಟುಂಬದ ಜನರು, ಒಂದು ಆಡು, ಕಟ್ಟಿಗೆ, ಒಲೆ, ವಾರದ ಸಂತೆ ಮುಂತಾದ ಎಲ್ಲ ಸಾಮಾನುಗಳು ಇದ್ದ ೮ x ೮ ಉದ್ದಗಲದ ಖೋಲಿಯಲ್ಲಿದ್ದೆ. ಕಾಲೇಜಿನ ಪಾಠವನ್ನು ಅಲ್ಲಿಯೇ ಓದಿಕೊಳ್ಳಬೇಕಾಗುತ್ತಿತ್ತು. ನಿಮ್ಮ ಪುಣ್ಯಕ್ಕೆ ಇಂದು ಈ ಪರಿಸ್ಥಿತಿ ಬದಲಾಗಿದೆ. ಸೌಲಭ್ಯದ ಕೊರತೆಯಿಂದ ಶಿಕ್ಷಣ ಪಡೆಯುವುದಾಗಲಿಲ್ಲ ಎಂದು ನೀವೇನಾದರೂ ತಕರಾರು ಮಾಡಿದರೆ ಅದು ನಿರಾಧಾರ ಎನಿಸಿಬಿಡುತ್ತದೆ.

ನಮ್ಮಲ್ಲಿಯ ಪ್ರತಿಯೊಬ್ಬರೂ ಸುಶಿಕ್ಷಿತನಾಗಬೇಕೆಂಬ ಹೆಬ್ಬಯಕೆ ನನ್ನದು. ಅದರ ಜೊತೆಗೆ ನನಗೆ ಶಿಕ್ಷಣದ ಬಗೆಗೆ ಭಯವೂ ಇದೆ. ನನ್ನಂತೆ ಉಳಿದವರೂ ಸುಶಿಕ್ಷಿತ ಮನುಷ್ಯನ ಬಗೆಗೆ ಭಯವನ್ನು ಹೊಂದಿರಬೇಕು. ಏಕೆಂದರೆ ಶಿಕ್ಷಣವೆಂದರೆ ಖಡ್ಗವಿದ್ದಂತೆ. ಶಿಕ್ಷಣ ಒಂದು ಶಸ್ತ್ರವಿದ್ದಂತೆ. ಯಾರೇ ಆಗಲಿ ಕೈಯಲ್ಲಿ ಖಡ್ಗ ಹಿಡಿದುಕೊಂಡು ಬಂದರೆ ನಾವೆಲ್ಲ ಭಯಪಡುತ್ತೇವೆ. ಆದರೆ ವಿದ್ಯೆ ಎಂಬ ಶಸ್ತ್ರ ಸದಾಕಾಲ ಬಳಸುವವನನ್ನು ಅವಲಂಬಿಸಿರುತ್ತದೆ. ಅತ್ಯಾಚಾರದಿಂದ ಅಬಲೆಯರನ್ನು ಸಂರಕ್ಷಣೆ ಮಾಡಬಹುದು. ಸುಗುಣ ವ್ಯಕ್ತಿಯ ಕೈಯಲ್ಲಿ ಶಸ್ತ್ರವಿರುವುದು ಗಂಡಾಂತರಕಾರಿ. ಶಿಕ್ಷಣ ಪಡೆದ ಮನುಷ್ಯನಲ್ಲಿ ಸಚ್ಚಾರಿತ್ರ್ಯ ಮತ್ತು ಸೌಜನ್ಯವಿರದಿದ್ದರೆ ಅವನು ಕಾಡು ಪ್ರಾಣಿಗಿಂತಲೂ ಗಂಡಾಂತರಕಾರಿ ಎಂದು ಭಾವಿಸಬೇಕು. ಅನಾಗರಿಕರಿಗೆ ಮೋಸ ವಂಚನೆ ಗೊತ್ತಿರುವುದಿಲ್ಲ. ಕಲಿತವರಿಗೆ ಅದು ಹಸ್ತಗತವಾಗಿರುತ್ತದೆ. ಒಬ್ಬ ವ್ಯಕ್ತಿಯ ವ್ಯೂಹ ರಚಿಸಿದ್ದರೆ, ಅದನ್ನಷ್ಟೇ ತೊಡೆದು ಹಾಕಿ ಅವನನ್ನು ಪೇಚಿಗೆ ಹೇಗೆ ಸಿಲುಕಿಸುವುದು

ಎಂದು ಹಲವರು ತಮ್ಮ ಶಿಕ್ಷಣದ ಬಳಕೆ ಮಾಡುತ್ತಿರುತ್ತಾರೆ. ದೀನದಲಿತರು, ಬಡರೈತರು ಶಿಕ್ಷಣ ಪಡೆದಿರುವುದಿಲ್ಲ. ಅವನ ಅಜ್ಞಾನದ ಲಾಭವನ್ನು ಕಲಿತ ಶೇಠಜಿ, ಭಟಜಿ, ವಕೀಲ ಮುಂತಾದವರು ಪಡೆಯುತ್ತಿದ್ದಾರೆ. ಈ ರೀತಿ ಬಡಜನರ ಅಸಹಾಯಕತೆಗಾಗಿಯೇ, ಶಿಕ್ಷಣವನ್ನು ಬಳಸಿಕೊಳ್ಳುತ್ತಿದ್ದಾರೆ, ಅಂಥ ಶಿಕ್ಷಣಕ್ಕೆ ಧಿಕ್ಕಾರವಿರಲಿ. ಈ ದೃಷ್ಟಿಯಿಂದ ನೋಡಿದರೆ ಶಿಕ್ಷಣಕ್ಕಿಂತ ಸಚ್ಚಾರಿತ್ರ್ಯವೇ ಮಹತ್ವದ್ದು. ಈಗಿನ ಯುವಕರಲ್ಲಿ ಧರ್ಮದ ಬಗೆಗೆ ಉದಾಸೀನತೆಯಿದೆ. ಧರ್ಮವೆಂದರೆ ಆಫೀಮು ಎಂದು ಹೇಳಲಾಗುತ್ತದೆ. ಆದರೆ ನನ್ನಲ್ಲಿರುವ ಉತ್ತಮ ಸಂಗತಿಗೆ, ಶಿಕ್ಷಣದಿಂದ ಅನ್ಯರಿಗೆ ಮಾಡಿದ ಸಹಾಯಕ್ಕೆ ನನ್ನಲ್ಲಿರುವ ಧಾರ್ಮಿಕ ಭಾವನೆಯೇ ಮುಖ್ಯ ಕಾರಣ. ನನಗೆ ಧರ್ಮಬೇಕು, ಧರ್ಮದ ಸೋಗು ಬೇಡ. ಹಿಂದೂಧರ್ಮವು ನರಕವಾಗಿದೆ ಎಂದು ನಾನೆಂದಿಗೂ ದೃಢವಾಗಿ ನಂಬಿದ್ದೇನೆ. ಹೀಗಾಗಿ ನಾನು ಹೇಳಬಹುದಾದ ಸಂಗತಿ ಏನೆಂದರೆ, ಶಿಕ್ಷಣಕ್ಕಿಂತ ಶೀಲಕ್ಕೆ, ಚಾರಿತ್ರ್ಯಕ್ಕೆ ಹೆಚ್ಚು ಮಹತ್ವ ನೀಡಿ. ಹಾಗೆಯೇ ತಮ್ಮ ಶಿಕ್ಷಣವನ್ನು ನಮ್ಮದೇ ದೀನದಲಿತರ ಉದ್ಧಾರಕ್ಕಾಗಿ ಬಳಸದೆ, ಕೇವಲ ತನ್ನ ನೌಕರಿ ಮತ್ತು ಹೆಂಡತಿ ಮಕ್ಕಳ ಜಗೆಗೆ ಯೋಚಿಸುತ್ತಿದ್ದಾರೆ. ನಮ್ಮ ಯುವಕರು ಪಡೆದ ಶಿಕ್ಷಣದಿಂದ ಸಮಾಜಕ್ಕೇನು ಉಪಯೋಗ? ಯುವಕರು ಇಂದು ತಮ್ಮ ಮೇಲೆ ಬಿದ್ದಿರುವ ಹೊಣೆಯನ್ನು ಅರಿತು ಕಾರ್ಯ ಪ್ರವೃತ್ತರಾಗಬೇಕು. ಜನರ ನರನಾಡಿಗಳಲ್ಲಿ ಕೇವಲ ಪುಕ್ಕಲುತನ ಹರಿಯುತ್ತಿರುತ್ತದೆ. ತಮ್ಮ ಕಾನೂನು ಬದ್ಧ ಹಕ್ಕನ್ನು ಚಲಾಯಿಸಲು ಸಹ ಅವರು ಧೈರ್ಯದಿಂದ ಮುಂದೆ ಬರುವುದಿಲ್ಲ. ಸಾರ್ವಜನಿಕ ಬಾವಿಯಲ್ಲಿ ನೀರು ತುಂಬುವುದು, ಸಾರ್ವಜನಿಕ ರಸ್ತೆಯಲ್ಲಿ ಮೆರವಣಿಗೆ ಮಾಡುವುದು ಇವುಗಳನ್ನು ಜನರು ಭೀತಿಯಿಂದಲೇ ಮಾಡುತ್ತಿಲ್ಲ. ಈ ಬದಲಾವಣೆಯನ್ನು ತರುವುದು ಕೇವಲ ಯುವಕರಿಂದಲೇ ಸಾಧ್ಯ. ಆದರೆ ಮೊದಲಿಗೆ ಟೊಂಕಕಟ್ಟಿ ಸಿದ್ಧರಾಬೇಕು. ಅದಕ್ಕಾಗಿ ಅವರು ಬಿರುಸಿನಿಂದ ಸೆಣಸಾಡಬೇಕು. ಈ ಕುರಿತು ಒಂದು ಮನೋರಂಜಕ ಮತ್ತು ಬೋಧಪ್ರದವಾದ ಪೌರಾಣಿಕ ಕತೆ ನೆನಪಿಗೆ ಬಂತು. ಅದನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ದ್ರೋಣ ಅತ್ಯಂತ ಬಡವನಾಗಿದ್ದ. ಅವನು ಶ್ರೀಮಂತರ ವಠಾರದಲ್ಲಿ ವಾಸಿಸುತ್ತಿದ್ದ. ಅವನಿಗೆ ಅಶ್ವತ್ಥಾಮನೆಂಬ ಮಗ ಜನಿಸಿದ. ಅದೇ ವಠಾರದಲ್ಲಿಯ ಶ್ರೀಮಂತರ ಮಕ್ಕಳು ಬಂಗಾರದ ಬಟ್ಟಲಲ್ಲಿ ಹಾಲು ಕುಡಿಯುತ್ತಿದ್ದರು. ಇದನ್ನು ಅಶ್ವತ್ಥಾಮನು ಕಂಡು ಅವನೂ...(*)

(*) ಮುಂದಿನ ಭಾಷಣವಿರುವ ಸಂಚಿಕೆ ಸಿಗಲಿಲ್ಲ–ಸಂಪಾದಕ.

# ೧೨೦.

# ಬಡವರ ಹೊಟ್ಟೆಯ ಮೇಲೆ ಕಾಲಿಡುವ ಸರಕಾರವು ಅಧಿಕಾರವನ್ನು ತ್ಯಾಗ ಮಾಡುವುದೇ ಯೋಗ್ಯ

ಈ ವರ್ಷದ ಬಜೆಟ್ ಅಧಿವೇಶನವು ೨೫ ಫೆಬ್ರುವರಿ ೧೯೩೮ ರಂದು ಮಧ್ಯಾಹ್ನ ೨.೦೦ ಗಂಟೆಗೆ ಸಂಸದ ಮಾವಳಣಕರ ಅವರ ಅಧ್ಯಕ್ಷತೆಯ ಅಡಿಯಲ್ಲಿ ಆರಂಭಕೊಂಡಿತು. ಇಂದಿನ ಅಧಿವೇಶನಕ್ಕೆ ಸಾಕಷ್ಟು ಜನರು ಉಪಸ್ಥಿತರಿದ್ದರು. ಸದ್ಯದ ಅಧಿವೇಶನಕ್ಕಾಗಿ ಪೆನೆಲ್ ಆಫ್ ಚೇರಮನ್ ಸ್ಥಾನಕ್ಕಾಗಿ (೧) ಖಾನ ಬಹಾದೂರ ಅಬ್ದುಲ್ಲಾ ಲತೀಫ್ (೨) ಸ್ವತಂತ್ರ ಕಾರ್ಮಿಕ ಪಕ್ಷದ ರಾಜಾರಾಮ ಆರ್. ಭೋಳೆ (೩) ಮಿ. ಬ್ರಾಬಲ್ ಮತ್ತು (೪) ಸರ್.ಎಸ್.ಟಿ. ಕಾಂಬಳಿಯವರನ್ನು ನೇಮಿಸಿರುವುದಾಗಿ ಸ್ಪೀಕರ್ ಅವರು ಘೋಷಣೆ ಮಾಡಿರು. ಮೊದಲಿಗೆ ಪ್ರಶ್ನೋತ್ತರ ಮುಗಿದ ಬಳಿಕ ಆಸೆಂಬ್ಲಿಯ ಎದುರಿಗೆ ಸಚಿವರಾದ ಲಠ್ಠೆಯವರು ೧೯೩೭-೩೮ ವರ್ಷದ ಬಜೆಟ್ ಮಂಡಿಸುವಾಗ ತನ್ನ ಭಾಷಣವನ್ನು ಮಾಡಿದರು. ಈ ಭಾಷಣವು ಸುಮಾರು ಎರಡು ಗಂಟೆಗಳವರೆಗೆ ಮುಂದುವರೆಯಿತು.

ಸಚಿವ ಲಠ್ಠೆಯವರ ಭಾಷಣದ ನಂತರ ಶುಕ್ರವಾರದ ಸಭೆಯ ಕಾರ್ಯಕಲಾಪವು ಮುಗಿಯಿತು. ಶನಿವಾರ ಬಜೆಟ್ ಮೇಲಿನ ಚರ್ಚೆಯ ದಿನವಾಗಿತ್ತು. ಆದರೆ ಆ ದಿನ ಮುಸ್ಲಿಂ ಲೀಗ್‌ನ ಸದಸ್ಯರಾದ ಮಿಸೆಸ್ ಸಲೀಮಾ ಫೌಜ್ ತಯ್ಯಬಜಿಯವರು ಚಿಕ್ಕಭಾಷಣ ಮಾಡಿ ಮುಸ್ಲಿಂ ಹುಡುಗಿಯರ ಶಿಕ್ಷಣಕ್ಕಾಗಿ ಯೋಗ್ಯ ವ್ಯವಸ್ಥೆಯನ್ನು ಅಂದಾಜ ಪತ್ರಿಕೆಯಲ್ಲಿ ಮಾಡಿದ್ದಕ್ಕಾಗಿ ಫಡ್ನಿಸ್‌ರನ್ನು ಅಭಿನಂದಿಸಿದರು. ಅನಂತರ ಶ್ರೀ ಬಾಬೂಭಾಯಿ ಪಟೇಲರು ಅಂದಾಜು ಪತ್ರಿಕೆಯನ್ನು ಅಭಿನಂದಿಸಿದ ಬಳಿಕ ಆ ದಿನ ಬೇರೆ ಯಾವ ಸದಸ್ಯರೂ ಭಾಷಣ ಮಾಡಲು ಮುಂದಾಗಲಿಲ್ಲ. ಹೀಗಾಗಿ ಆಸೆಂಬ್ಲಿಯ ಸಭೆಯನ್ನು ಮಂಗಳವಾರವರೆಗೆ ಮುಂದೂಡಲಾಗಿತ್ತು. ಮಂಗಳವಾರ ಮೊದಲಿಗೆ ಪ್ರಶ್ನೋತ್ತರ ಮುಗಿದ ಬಳಿಕ ಬಜೆಟ್ ಬಗೆಗೆ ಚರ್ಚೆ ಶುರುವಾಯಿತು. ಇಂದಿನ ಸಭೆಯಲ್ಲಿ ಶ್ರೀ ಜಮನಾದಾಸ ಮೆಹತಾಯರವರು ಮೊದಲು ಭಾಷಣ ಮಾಡಿದರು. ಬುಧವಾರ ಸಭೆ ಶುರುವಾದ ಬಳಿಕ ೨-೩೦ ಗಂಟೆಗೆ ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ. ಬಾಬಾಸಾಹೇಬ ಅಂಬೇಡ್ಕರರು ನಿರ್ಭಿಡೆ ಶೈಲಿಯ ಪರಿಣಾಮಕಾರಕವಾದ ಭಾಷಣವನ್ನು ಮಾಡಿದರು.

ಡಾ. ಅಂಬೇಡ್ಕರ್ ತಮ್ಮ ಭಾಷಣದಲ್ಲಿ ನುಡಿದದ್ದು ಹೀಗೆ–

ಮುಂಬೈ ಸರಕಾರದ ಹೊಸ ಬಜೆಟ್ ಮೇಲೆ ನಿನ್ನೆ ಮೊನ್ನೆ ನಡೆದ ಭಾಷಣದಲ್ಲಿ ಈ ಬಜೆಟ್‌ನ್ನು ಅಭಿನಂದಿಸಲಾಯಿತು. ಆದರೆ ಈ ಅಭಿನಂದನೆಯಲ್ಲಿ ನಾನೂ ಭಾಗಿಯಾಗುವುದು ಅಸಾಧ್ಯವೆಂದು ಖೇದದಿಂದ ಹೇಳಬೇಕಾಗಿದೆ. ಬಜೆಟಿನ ಕಡೆಗೆ ನೋಟಹರಿಯಿಸಿದಾಗ ಆರಂಭಕ್ಕೇನೆ ಬಜೆಟ್

---

ಜನತಾ: ೫ ಮಾರ್ಚ ೧೯೩೮.

ನಿರಾಶಾಜನಕವಾಗಿದೆ ಎಂದೆನಿಸುತ್ತದೆ. ಈ ಅಂದಾಜು ಪತ್ರಿಕೆಯನ್ನು ಹೇಗೆ ಯೋಚಿಸಲಾಗಿದೆ ಎಂದರೆ, ಶ್ರೀಮಂತರ ಕಿಸೆಗೆ ಕಿಂಚಿತ್ತು ಧಕ್ಕೆಯಾಗದಂತೆ ಬಡವರು ಸಂಕಟದ ತೊಳಲಾಟದಲ್ಲೇ ದಿನ ನೂಕುವಂತೆ ಮಾಡಲಾಗಿದೆ. ಹಾಗೆಯೇ ಈ ಬಜೆಟಿನಿಂದ ಭಾವೀ ಸುಖಕರ ಪರಿಸ್ಥಿತಿಯ ಮಸಕು ಅರಿವೂ ಆಗುವುದಿಲ್ಲ ಅಥವಾ ಪ್ರಾಂತದಲ್ಲಿ ಉಜ್ವಲ ಭವಿಷ್ಯಕಾಲದ ಪ್ರಭಾತಕಾಲ ಶುರುವಾಗಿದ್ದರ ಸುಳಿವೂ ಸಿಗುವುದಿಲ್ಲ. ಟೊಳ್ಳು ಆಶ್ವಾಸನೆಗಳ ಮೂಲಕ ಈ ಬಜೆಟನ್ನು ಅಲಂಕರಿಸಲಾಗಿದೆ. ಕೆಲಮಟ್ಟಿಗೆ ಅಭಿನಂದನೀಯವಾಗಿದೆ. ಆದರೆ ನಾನು ಈ ಯೋಜನೆಯ ಶ್ರೇಯಸ್ಸನ್ನು ಫಡ್ಕಿಸರಿಗಿಂತ ಗೃಹಮಂತ್ರಿಗೆ ನೀಡಲು ಬಯಸುತ್ತೇನೆ. ಇದೇ ಪೊಲೀಸರ ಫೋರ್ಸ್ ಬಗೆಗೆ ಅಧಿಕಾರ ರೂಢ ಕಾಂಗ್ರೆಸ್ ಮತ್ತು ಹಿಂದಿನ ಕಾಂಗ್ರೆಸ್ಸಿನ ಸಂಬಂಧ ಹೇಗೆ ವಿಸಂಗತಿಯಿಂದ ಕೂಡಿತ್ತು ಎಂಬ ಅರಿವು ಎಲ್ಲರಿಗೂ ಇದೆ. ಹಿಂದೆ ಕಾಂಗ್ರೆಸಿನ ಅಸಹಕಾರ ಚಳುವಳಿಯ ಕಾಲದಲ್ಲಿ ಪೊಲೀಸರ ಬಗೆಗೆ ಕಾಂಗ್ರೆಸ್ಸಿಗೆ ಇಷ್ಟು ಆತ್ಮೀಯತೆ ಅನಿಸುತ್ತಿರಲಿಲ್ಲ. ಅಸಂಖ್ಯವಾದ ಖಾದಿ ಟೊಪ್ಪಿಗೆಗಳನ್ನು ಧರಿಸಿದ ಕಾಂಗ್ರೆಸ್ಸಿಗರ ಬಾಯಿಂದ 'ಹಳದಿ ಪಗಡಿ ಕೆಳಗಿಳಿಯಲಿ' ಎಂದು ಹೊರಬೀಳುವ ಬೈಗಳನ್ನು ಕೇಳಿದವರಿಗೆ ಇಂದು ಅದೇ ಅಧಿಕಾರಾರೂಢ ಕಾಂಗ್ರೆಸ್ಸಿಗೆ ಅಧಿಕ ೩೬,೦೦೦ ರುಪಾಯಿಯ ವ್ಯವಸ್ಥೆಯನ್ನು ಇದೇ ಪೊಲೀಸ ಫೋರ್ಸಿಗಾಗಿ ಮಾಡುವ ಸಮಯ ಬಂತೆಂದರೆ, ಇದು ಎಷ್ಟು ಅಭಿನಂದನೀಯವೋ ಅಷ್ಟೇ ಬೆರಗಿನ ವಿಷಯವಾಗಿದೆ. ಸದ್ಯದ ಮುಂಬೈ ಸರಕಾರವು ಅಸೆಂಬ್ಲಿಯ ಅಧಿಕಾರದ ಅತಿಕ್ರಮಣ ಮಾಡುತ್ತಿದೆ ಎಂದೆನಿಸುತ್ತಿದೆ. ಇಂದಿನವರೆಗೆ ಯಾವುದೇ ಸರಕಾರವು ತನ್ನದೇ ಅಧಿಕಾರದಲ್ಲಿ ಅಂದಾಜು ಪತ್ರಿಕೆಯಲ್ಲಿಯ ಖರ್ಚಿನ ಬಾಬತ್ತಿನಲ್ಲಿ ದೊಡ್ಡ ರಕಮನ್ನು ಜಮೆಗೆ ಹಿಡಿದಿರಲಿಲ್ಲ. ಹಾಗೆಯೇ ಈ ವಿಷಯದಲ್ಲಿ ಸರಕಾರವು ಮೊದಲು ಈ ಖರ್ಚಿನ ಯೋಜನೆಗೆ ಸಂಬಂಧಿಸಿದಂತೆ ಅಸೆಂಬ್ಲಿಗೆ ಮೊದಲೇ ತಿಳುವಳಿಕೆ ನೀಡಬೇಕಾಗಿತ್ತು. ಎರಡನೆಯದೆಂದರೆ,

ಅಕೌಂಟೆಂಟ್ ಜನರಲ್‌ನಿಗೆ ಈ ರಕಮು ಯಾವ ಬಗೆಯಲ್ಲಿ ಉಪಯೋಗಕ್ಕೆ ಬರುತ್ತದೆ ಎಂಬ ಮಾಹಿತಿಯನ್ನು ನೀಡಬೇಕಾಗುತ್ತದೆ. ಆದರೆ ಸತ್ತೆಯ ಬಲದಿಂದ ಈ ವಿಷಯವನ್ನೆಲ್ಲ ನಿರ್ಲಕ್ಷಿಸಿ ಮುಂಬೈ ಸರಕಾರವು ಇಂದು ತಮ್ಮ ಕಲ್ಪನೆಯ ಬಲದಿಂದ ಅಷ್ಟೇಅಲ್ಲ ಗಾಳಿಯಲ್ಲಿ ಗೋಪುರವನ್ನು ಕಟ್ಟುವ ಯೋಜನೆಗಾಗಿ ಒಮ್ಮೆಲೆ ೩೬ಲಕ್ಷ ರುಪಾಯಿಂದ ಹಣವನ್ನು ಸಂಗ್ರಹಿಸುತ್ತಲಿದೆ. ಈ ವಿಷಯದಲ್ಲಿ ಅಸೆಂಬ್ಲಿಯ ಅಭಿಪ್ರಾಯವನ್ನು ಕೇಳಲಿಲ್ಲ. ತಾವು ಮಾಡಲಿರುವ ವಿಧಾಯಕ ಕಾರ್ಯದ ಮಸಕು ಕಲ್ಪನೆಯನ್ನೂ ನೀಡಲಿಲ್ಲ. ಹಾಗೆಯೇ ಈ ಸಭೆಯಲ್ಲಿ ಮಂಜೂರು ಮಾಡಿದ ಕಾನೂನಿನ ನಿಯಮದಡಿಯಲ್ಲಿ ಈ ಸಭೆಗೆ ನಿಯಮವನ್ನು ಮಾಡುವ ಯಾವುದೇ ಹಕ್ಕುಯಿಲ್ಲ ಎಂದಂತಾಯಿತಲ್ಲವೇ. ಗೃಹಮಂತ್ರಿಗಳು ಪ್ರಾಮಾಣಿಕ ಅಭಿಪ್ರಾಯವನ್ನು ವ್ಯಕ್ತಮಾಡಿದಂತೆ ಕಾಣುತ್ತದೆ. ಇಂದು ಅವರು ಗೈರುಹಾಜರಾಗಿರುವುದರಿಂದ ಅದಕ್ಕೆ ಸಂಬಂಧಿಸಿದ ಸ್ಪಷ್ಟೀಕರಣ ಸಿಗುವುದು ಸಾಧ್ಯವಿಲ್ಲದಿದ್ದರೂ ಗೃಹಮಂತ್ರಿಗಳ ಅಧಿಕಾರದ ದುರುಪಯೋಗದ ಬಗೆಗೆ ನಾನಿಲ್ಲಿ ಸ್ಪಷ್ಟವಾಗಿ ಸೂಚಿಸಲೇಬೇಕಾಗಿದೆ.

ಹೊಸ ಲೋಕೋಪಯೋಗಿ ಕಾರ್ಯಕ್ಕಾಗಿ ಸರಕಾರವು ೧ಕೋಟಿ, ೧೩ಲಕ್ಷ ರೂಪಾಯಿಯ ವ್ಯವಸ್ಥೆ ಮಾಡಿರುವುದಾಗಿ ಹೇಳಿಕೊಂಡಿದೆ. ಆದರೆ ಈ ಎಲ್ಲ ಅಂಕೆಗಳ ಪರಿಶೀಲನೆ ಮಾಡಿದರೆ ಕಂಡು ಬರುವುದು ಏನು? ಈ ಅಪಾರ ಹಣದಿಂದ ಪ್ರತಿವರ್ಷ ಖರ್ಚಾಗುವ ೪೮ಲಕ್ಷ ೧೧ಸಾವಿರ ರುಪಾಯಿ, ಮದ್ಯನಿಷೇಧದ ಖರ್ಚಿಗಾಗಿ ೩೧ಲಕ್ಷ ರುಪಾಯಿಯನ್ನು ಕಾಯ್ದಿರಿಸಲಾಗಿದೆ. ಅದನ್ನು ಕಳೆದರೆ ಲೋಕೋಪಯೋಗಿ ಕಾರ್ಯಕ್ಕಾಗಿ ೩೭ಲಕ್ಷ ಮಾತ್ರ ಜಮೆಗೆ ಹಿಡಿದಂತೆ ಕಾಣುತ್ತದೆ. ಅದೇ ರೀತಿ ಶಿಕ್ಷಣ, ನೀರು ಪೂರೈಕೆ, ವೈದ್ಯಕೀಯ ಸಹಾಯ ವಗೈರೆಗಾಗಿ ಖರ್ಚುಮಾಡಿದ ಹಣ ಮರಳಿ ಪಡೆಯುವುದು

ಅಸಾಧ್ಯ ಅಥವಾ ಆ ಇಲಾಖೆಯಲ್ಲಿ ಖರ್ಚುಮಾಡಿದ ರಕಮಿನಿಂದ ಆದಾಯ ಪಡೆಯವುದು ಅಸಾಧ್ಯ. ಹಾಗೆಯೇ ಪ್ರಾಂತದಲ್ಲಿಯ ನಿರುದ್ಯೋಗ ನಿವಾರಣೆ, ಅನಾರೋಗ್ಯದ ವಿಮೆ, ವೃದ್ಧಾಪ್ಯಕ್ಕಾಗಿ ವಿಮೆ, ಅಪಘಾತದ ವಿಮೆ, ಮಹಿಳೆಯರ ಹೆರಿಗೆ ಸಹಾಯ–ಮುಂತಾದ ಹಲವು ಅಗತ್ಯವಿರುವ ಲೋಕೋಪಯೋಗಿ ಕಾರ್ಯ ಮಾಡುವ ಅಗತ್ಯವಿದೆ. ಆದರೆ ಈ ವಿಷಯದಲ್ಲಿ ಮುಂಬೈ ಸರಕಾರವು ಸಂಪೂರ್ಣ ಮೌನ ವಹಿಸಿದಂತೆ ಕಾಣುತ್ತದೆ. ಇಂದು ಮೇಲಿನ ಲೋಕೋಪಯೋಗಿ ಕಾರ್ಯಕ್ಕಾಗಿ ಜಮೆಗೆ ಹಿಡಿದ ಹಣವನ್ನು ಮುಂದಿನ ವರ್ಷವೂ ಹಿಡಿಯುವುದು ಕಷ್ಟಸಾಧ್ಯ ಎಂದೆನಿಸುತ್ತದೆ.

ಇದೇ ಅಧಿಕಾರಾರೂಢ ಸರಕಾರವು ಕಾರ್ಮಿಕರ ಹಿತರಕ್ಷಣೆಯ ಧೋರಣೆಯನ್ನು ಕಳೆದ ಅಗಸ್ಟ್ ತಿಂಗಳಲ್ಲಿ ರೂಪಿಸಿತ್ತೋ ಆ ಯೋಜನೆಯಂತೆ ಈ ಪ್ರಾಂತಕ್ಕೆ ಅದೆಷ್ಟು ಖರ್ಚಾಗಬಹುದು ಎಂಬ ಅಂದಾಜನ್ನು ಗೃಹಮಂತ್ರಿಯವರು ನೀಡಿದ್ದರೆ ಅನುಕೂಲವಾಗುತ್ತಿತ್ತು.

ನಮ್ಮ ಪ್ರಾಂತದ ಲೋಕೋಪಯೋಗಿ ಯೋಜನೆಗಾಗಿ ಸಚಿವರಾದ ಫಡ್ನಸರ್ ಯೋಜನೆಯನ್ನು ಕೆಲಕಾಲ ಬದಿಗೆ ಸರಿಸಿದರೆ ನನ್ನ ಅಲ್ಪ ತಿಳುವಳಿಕೆಯಂತೆ ಈ ಯೋಜನೆಗೆ ಕನಿಷ್ಟ ೨೪ ಕೋಟಿ ರುಪಾಯಿ ಖರ್ಚಾಗುತ್ತದೆ. ಇಷ್ಟು ಖರ್ಚು ಮಾಡುವ ಶಕ್ತಿ ಯಾವ ಸರಕಾರಕ್ಕಿದೆಯೋ ಅದೇ ಸರಕಾರ ಆ ಪ್ರಾಂತದ ಆಡಳಿತ ನಡೆಸಲು ಅರ್ಹವಾಗಿದೆ ಎನ್ನವುದು ನನ್ನ ಅಭಿಪ್ರಾಯ. ಆದರೆ ಇಷ್ಟು ಹಣವನ್ನು ಸಂಗ್ರಹಿಸುವ ಪ್ರಯತ್ನವನ್ನು ನಮ್ಮ ಪ್ರಾಂತೀಯ ಸರ್ಕಾರ ಮಾಡುತ್ತದೆಯೇ? ಇತರ ಪಾಶ್ಚಿಮಾತ್ಯ ದೇಶಗಳು ಪ್ರತಿಯೊಬ್ಬ ಮನುಷ್ಯನಿಗೆ ಖರ್ಚು ಮಾಡುವ ಪ್ರಮಾಣ ಹೀಗಿದೆ– ಕೆನಡಾ ೯ಪೌಂಡು, ಮತ್ತು ೮ಶಿಲ್ಲಿಂಗ್, ಸೌಥ್ ಆಸ್ಟ್ರೇಲಿಯಾ ೧೯ ಪೌಂಡು, ನ್ಯೂಜಿಲೆಂಡ್ ೨೨ ಪೌಂಡು, ಐರೀಶ್ ಕ್ರೆಸ್ಟೇಟ್ ೧೦ ಪೌಂಡು ಮತ್ತು ಮುಂಬೈನಲ್ಲಿ ೭ ಪೆನ್ಸ್. ಈ ಪ್ರಮಾಣವನ್ನು ಗಮನಿಸಿದಾಗ ನಮ್ಮ ದರಿದ್ರ ಆರ್ಥಿಕ ಪರಿಸ್ಥಿತಿಯ ಚಿತ್ರ ಅದೆಷ್ಟು ವಿಕಾರವಾಗಿದೆ ಎಂಬ ಸ್ಪಷ್ಟ ಕಲ್ಪನೆ ಬರುತ್ತದೆ. ನಮ್ಮ ಪ್ರಾಂತದ ಆದಾಯದ ತಪಶೀಲು ನೋಡಿದಾಗ ಸಂಪೂರ್ಣ ನಿರಾಸೆಯಾಗುತ್ತದೆ. ಕಳೆದ ೧೯೨೨–೧೯೩೫ ಕಾಲಾವಧಿಯಲ್ಲಿ ಮುಂಬೈ ಪ್ರಾಂತಕ್ಕಿಂತ ಉಳಿದ ಪ್ರಾಂತಗಳ ಏರಿದ ಆದಾಯದ ವಿವರ ಹೀಗಿದೆ–ಮದ್ರಾಸ್ ೨೬.೫%, ಪಂಜಾಬ ೨೮%, ಸಂಯುಕ್ತ ಪ್ರಾಂತ ೧೬.೫%, ಅಸಾಮ ೧೪.೫%, ಬಂಗಾಲ ೧೧.೫%, ಮುಂಬೈ ೩%, ಕಳೆದ ೧೩–೧೪ ವರ್ಷಗಳಲ್ಲಿ ಹೆಚ್ಚಿನ ಕರಾಕರಣೆಯಿಂದ ಜಮೆಯಾದ ಆದಾಯವನ್ನು ಪರಿಗಣಿಸದಿದ್ದರೆ ಮುಂಬೈಯ ಆದಾಯವು ೫.೫%ಯಷ್ಟು ಕುಂಠಿತವಾಗಿರುವುದನ್ನು ಕಾಣಬಹುದು. ಇಂಥ ಪರಿಸ್ಥಿತಿಯಲ್ಲಿ ನಮ್ಮ ಸರಕಾರವು ಮದ್ಯನಿಷೇಧದ ಚಳುವಳಿಯನ್ನು ಕೈಗೆತ್ತಿಕೊಂಡು ಆದಾಯದ ಬಾಬತ್ತಿನ ದೃಷ್ಟಿಯಿಂದ ಮುಳುಗುವವನಿಗೆ ಯಾವ ಆಸರೆಯೂ ಇಲ್ಲದ ವೃತ್ತಿಯನ್ನು ಸ್ವೀಕರಿಸಿದೆ. ಈ ಯೋಜನೆಯನ್ನು ಜಾರಿಗೆ ತರುವಾಗ ಬೇರೆ ಯಾವ ಆದಾಯದ ಹಣವನ್ನು ಜಮೆಗೆ ಹಿಡಿಯದೆ, ಬದಲಿಗೆ ಲ್ಯಾಂಡ್ ರೆವಿನ್ಯೂ ಕಡಿಮೆ ಮಾಡುವ ಧೋರಣೆಯನ್ನು ರೂಪಿಸಿದೆ. ಕಂದಾಯವನ್ನು ಸೂಟು ಬಿಡಬಾರದು ಎಂದೇನೂ ನಾನು ಹೇಳುತ್ತಿಲ್ಲ. ನನ್ನ ಒಲವು ಯಾವ ಕಡೆಗೆ ಇದೆಯೆಂದರೆ, ಮದ್ಯನಿಷೇಧ ಮತ್ತು ಕಂದಾಯದ ಸೂಟನ್ನು ಕೈಗೆತ್ತಿಕೊಂಡಾಗ, ಈ ಯೋಜನೆಯಿಂದ ಸರಕಾರದ ಬೊಕ್ಕಸ ಖಾಲಿಯಾಗುತ್ತದೆ. ಅದನ್ನು ತುಂಬವ ಯಾವ ವಿಧಾಯಕ ಯೋಜನೆಯನ್ನು ಫಡ್ನಿಸರು ರೂಪಿಸಿದ್ದಾರೆ?

ಕಳೆದ ಅಂದಾಜುಪತ್ರಿಕೆಯ ಕಾಲಕ್ಕೆ ಸಚಿವ ಫಡ್ನಿಸರು ತಮ್ಮ ಭಾಷಣದಲ್ಲಿ ನೀಡಿದ ಭರವಸೆಯ ಮಾತುಗಳು ಇಂದಿನ ಬಜೆಟನ್ನು ಕೇಳಿದಾಗ ಏನೆನಿಸುತ್ತದೆ? ಆ ಕಾಲಕ್ಕೆ ನೀಡಿದ ಭರವಸೆಯ ಮಾತುಗಳನ್ನು ಈ ಹೊಸ ಬಜೆಟಿನಲ್ಲಿ ಪ್ರಸ್ತಾಪಿಸಲೇ ಇಲ್ಲ. ಬದಲಿಗೆ ಆ ಬಜೆಟದ ಕಾಲಕ್ಕೆ ಬಹುಜನ ಸಮಾಜದ

ಹಿತಸಂಬಂಧದ ಪ್ರಶ್ನೆಯ ಬಗ್ಗೆ ಅವರು ತೋರಿದ ಧೈರ್ಯವು ಹೊಸ ಬಜೆಟಿನಲ್ಲಿ ಕಾಣಬರುತ್ತಿಲ್ಲ. ಈ ಬಜೆಟಿನಲ್ಲಿ ಹೊಸ ಕರಾಕರಣೆಯಿಲ್ಲ ಎಂದು ಈ ಬಜೆಟು ಉತ್ತಮವಾಗಿದೆ ಎಂದೆಲ್ಲ ಹಾಡಿಹೊಗಳುವುದು ಕಂಡು ನನಗೆ ಬೆರಗಗಾಗುತ್ತಿದೆ. ಹೊಸ ಕರಾಕರಣೆಯಿಲ್ಲದ್ದರಿಂದ, ಶ್ರೀಮಂತರ ಮೇಲಿನ ಖರ್ಚಿನಭಾರವನ್ನು ಕಡಿಮೆ ಮಾಡಿದ್ದರಿಂದ ಬಡವರು ಸಹಿಸಬೇಕಾಗಿರುವ ಸಂಕಟದ ಬಗೆಗೆ ಬಡವರ ಬಂಧು ಎಂದು ಕರೆಯಿಸಿಕೊಳ್ಳುವ ಕಾಂಗ್ರೆಸ್ಸಿನ ಅಧಿಕಾರಾರೂಢ ಮಂತ್ರಿಮಂಡಳವು ಕಿಂಚಿತ್ತಾದರೂ ಯೋಚಿಸಿದೆಯೇ? ಆದ್ದರಿಂದ ನಾನು ಸ್ಪಷ್ಟವಾಗಿ ಹೇಳ ಬಯಸುವುದೇನೆಂದರೆ, ಈ ಹೊಸ ಬಜೆಟ್ ಬಡವರದ್ದಲ್ಲ. ಶ್ರೀಮಂತರದ್ದು ಎಂಬ ಬಗೆಗೆ ತಿಲಮಾತ್ರವೂ ಶಂಕೆ ಬೇಡ. ಹಾಗೆ ನೋಡಿದರೆ ಯಾವುದೇ ಸರಕಾರದ ಸಹಾಯ ಬಡವರಿಗೆ ಬೇಕೇಬೇಕು. ಬಡವರಿಗಾಗಿ ಹೋರಾಡುವ ಸರಕಾರ ನಮಗೆ ಬೇಕು. ಯಾವ ಶ್ರೀಮಂತರಿಗೆ ವೈಯಕ್ತಿಕವಾಗಿ ಬೇಕಾದ ಅನುಕೂಲವನ್ನು ತನ್ನ ಹೆಂಡತಿ ಮಕ್ಕಳಿಗೆ ಕೊಡುವುದು ಸಾಧ್ಯವೋ ಅಂಥವರಿಗೇ ಒಂದು ಸರಕಾರವು ಇಂಥ ತುರ್ತು ಪರಿಸ್ಥಿತಿಯಲ್ಲಿ ಸಹಾಯ ಮಾಡಲು ಮುಂದಾಗುವುದು ಹಾಸ್ಯಾಸ್ಪದವಲ್ಲ ಎಂದೇನೂ ಹೇಳಲು ಬರುವುದಿಲ್ಲ. ಈ ಬಗೆಯಲ್ಲಿ ಬಡವರ ಹೊಟ್ಟೆಯ ಮೇಲೆ ಕಾಲಿರಿಸುವ ಸರಕಾರವು ಅಧಿಕಾರರೂಢವಾಗಿರುವುದಕ್ಕಿಂತ ಅದು ಆದಷ್ಟು ಬೇಗ ಅಧಿಕಾರವನ್ನು ತ್ಯಾಗ ಮಾಡುವುದೇ ಯೋಗ್ಯ ಎಂದೆನಿಸುತ್ತದೆ.

ಅಂಬೇಡ್ಕರರ ಭಾಷಣ ತುಂಬ ಪರಿಣಾಮಕಾರಕವಾಯಿತು. ಈ ಬಗೆಯಲ್ಲಿ ಉತ್ಕೃಷ್ಟ, ಪರಿಣಾಮಕಾರಕ, ಪ್ರಮಾಣಬದ್ಧ ಮತ್ತು ಅಧಿಕಾರಯುತವಾದ ಇಂಥ ಭಾಷಣವು ಇಲ್ಲಿಯವರೆಗೆ ಮುಂಬೈ ಕಾಯ್ದೆಮಂಡಳದಲ್ಲಿ ಆಗಿರಲಿಲ್ಲ ಎಂದು ಹೇಳಲಾಗುತ್ತಿದೆ. ನಮಗೂ ಈ ಮಾತು ಒಪ್ಪಿಗೆಯಾಗಿರುವಂತಹದು.

ಸಚಿವರಾದ ಲಠ್ಠೆಯವರು ನೀಡಿದ ಉತ್ತರ ಮಾತ್ರ ಅಷ್ಟೊಂದು ಸಮಾಧಾನಕಾರಕವಾಗಿರಲಿಲ್ಲ. ಅವರು ಕೇವಲ ಅರ್ಧಗಂಟೆ ಮಾತ್ರ ಭಾಷಣ ಮಾಡಿದರು. ಇದರ ಮೇಲಿಂದ ಅವರಿಗೆ ತಮ್ಮ ವಿರೋಧಕರಿಗೆ ನೇರ ಮತ್ತು ಖಚಿತವಾದ ಉತ್ತರ ನೀಡುವುದು ಎಷ್ಟೊಂದು ಕಷ್ಟಕರವಾಗಿತ್ತು ಎನ್ನುವುದು ತಿಳಿದುಬರುತ್ತದೆ. ಅವರು ತಮ್ಮ ಭಾಷಣದ ಕೊನೆಗೆ ತಾವು ಸರ್ವ ವರ್ಗದ ಜನರ ಹಿತದ ಕಡೆಗೆ ವಿಶೇಷ ಮಹತ್ವ ನೀಡಿ ಪ್ರಾಮಾಣಿಕವಾಗಿ ಕಾರ್ಯ ಮಾಡುತ್ತಿರುವುದಾಗಿ ಹೇಳಿದರು.

# ೧೨೧.

# ಅಪರಾಧಿಗೆ ನೀಡಿದ ಶಿಕ್ಷೆಯನ್ನು ಸ್ಥಗಿತಗೊಳಿಸುವುದೆಂದರೆ ಕಾಯ್ದೆಯನ್ನು ಉಲ್ಲಂಘಿಸಿದಂತೆಯೇ

ಜಾಧವಜಿ ಗಾಂಧಿ ಮತ್ತು ಧೀರಜಲಾಲ ಎಂಬಿಬ್ಬರು ಧನವಂತ ಆದರೆ ಜೂಜುಕೋರರಿಗೆ ಮುಂಬಯ ಹೈಕೋರ್ಟು ಜುಗಾರಿ ಆರೋಪದಿಂದಾಗಿ ನೀಡಿದ ಸೆರೆಯ ಶಿಕ್ಷೆಯನ್ನು ತನ್ನ ಅಧಿಕಾರದಿಂದ ಸ್ಥಗಿತಗೊಳಿಸಿ ಲೋಕಶಕ್ತಿ ಸೆಕ್ಯುಲರ್ ಪ್ರಕರಣದಲ್ಲಿ ಗಳಿಸಿದ ಕುಪ್ರಸಿದ್ಧಿಯ ಶಿಬಿರಸ್ಥಿತಿ ತಲುಪುವಂಥ ನ್ಯಾಯದಾನದ ಕಾರ್ಯದಲ್ಲಿ ಅಕ್ಷಮ್ಯ ಹಸ್ತಕ್ಷೇಪ ಮಾಡಿತು. ಈ ಬಗೆಗೆ ಮುಂಬೈ ಸರಕಾರದ ಗೃಹಮಂತ್ರಿಗಳಾದ ಮುಸ್ಕಿಯ ವಿರುದ್ಧ ನಿಂದಾಜನಕ ಕಾರ್ಯದ ಸ್ಥಗಿತದ ಸೂಚನೆಯನ್ನು ಬ್ಯಾ. ಜಮನಾದಾಸ ಮೆಹತಾ ಅವರು ಕಳೆದ ಸೋಮವಾರ ಮುಂಬೈ ಲೆಜಿಸ್ಲೆಟಿವ್ ಆಸೆಂಬ್ಲಿಯಲ್ಲಿ ತಂದರು.

ಈ ಸೂಚನೆಯ ಸಮರ್ಥನೆಗಾಗಿ ಸ್ವತಃ ಬ್ಯಾ. ಜಮನಾದಾಸ ಮೆಹತಾ ಮತ್ತು ಖ್ಯಾತಕಾಯ್ದೆ ಪಂಡಿತ ಮತ್ತು ಅಸೆಂಬ್ಲಿಯ ಸ್ವತಂತ್ರ ಕಾರ್ಮಿಕಪಕ್ಷದ ನಾಯಕರಾದ ಬ್ಯಾ. ಬಿ.ಆರ್. ಉರ್ಫ್ ಬಾಬಾಸಾಹೇಬ ಅಂಬೇಡ್ಕರ ಅವರು ವಿಸ್ತೃತವಾದ ಭಾಷಣವನ್ನು ಮಾಡಿದರು. ಡಾ. ಅಂಬೇಡ್ಕರ ಅವರು ದಿ.೭ ಮಾರ್ಚ್ ೧೯೩೮ರಂದು ಮಾಡಿದ ಭಾಷಣ–

ಅಧ್ಯಕ್ಷ ಮಹಾಶಯರೆ, ನಾನು ಈ ಗೊತ್ತುವಳಿಯನ್ನು ಬೆಂಬಲಿಸಲು ಎದ್ದುನಿಂತಿದ್ದೇನೆ. ಚರ್ಚೆಯ ಕೊನೆಗೆ ಈ ಗೊತ್ತುವಳಿಯ ಮೇಲೆ ನಾನು ಮಾತಾಡುತ್ತಿರುವುದರಿಂದ ಮತ್ತು ಗೃಹಮಂತ್ರಿಗಳಿಗೆ ಉತ್ತರ ನೀಡಲು ಅವಕಾಶ ನೀಡಬೇಕಾಗಿರುವುದರಿಂದ, ನಾನು ಸ್ವಲ್ಪದರಲ್ಲಿ ನನ್ನ ಮಾತು ಮುಗಿಸುತ್ತೇನೆ.

ನಾನು ಹೇಳಲಿರುವ ಮೊದಲ ಸಂಗತಿಯೆಂದರೆ, ಯಾವ ಕೃತಿಗಾಗಿ ನಿಂದಾ ವಾಚಕ ಗೊತ್ತುವಳಿಯನ್ನು ಮಂಡಿಸಲಾಗಿದೆಯೋ, ಅಂಥ ನಡೆದ ಆ ಘಟನೆಯ ಬಗೆಗೆ ನನಗೆ ಕಿಂಚಿತ್ತು ವಿಸ್ಮಯವೆನಿಸುತ್ತಿಲ್ಲ.

ಸದ್ಯದ ಸರಕಾರವು ಅಧಿಕಾರವನ್ನು ಸ್ವೀಕರಿಸಿದಂದಿನಿಂದ ಕಾಯ್ದೆಭಂಗದಲ್ಲಿ ನಿಸ್ಸಂದೇಹವಾಗಿಯೂ ಸೇರ್ಪಡೆ ಮಾಢಬಹುದಾದಂಥ ಹಲವು ಕೃತಿಗಳನ್ನು ಈ ಸರಕಾರವು ಮಾಡುತ್ತ ಬಂದಿದೆ. ಅವರ ಈ ಕೃತಿಯಂತೂ ಶಿಖರ ಪ್ರಾಯವೇ ಎನ್ನಲಡ್ಡಿಯಿಲ್ಲ ಎಂದೇ ನನ್ನ ಭಾವನೆ.

ಆದಾಗ್ಯೂ, ಈ ಸಂಪೂರ್ಣ ಕಾರ್ಯದ ಒಂದು ಭಾಗವು ನಡೆದ ನಾಟಕದ ಒಂದು ಅಂಕದಂತಿದೆ. ಅದು ಎಂದು ಕೊನೆಗೊಳ್ಳುವುದೋ ತಿಳಿಯದು. ಅದರಲ್ಲಿಯ ಮೊದಲ ಕೃತಿಯೆಂದರೆ ಬಾರ್ಡೋಲಿಯ ರೈತರ ಜಪ್ತಿ ಮಾಡಿದ ಭೂಮಿಯನ್ನು ಮರಳಿ ಕೊಡಿಸುವ ಗಂಡಾಂತರವನ್ನು ಸರಕಾರ ಹೊತ್ತಿದ್ದು. (ಒಬ್ಬ ಸದಸ್ಯ ನಡುವೆಯೇ ಎದ್ದು ಮಾತಾಡಲು ಪ್ರಯತ್ನಿಸುತ್ತಾನೆ). ನನಗಿರುವುದು ಕೆಲವೇ ಸಮಯ, ಹೀಗಾಗಿ ನನ್ನ ಭಾಷಣವನ್ನು ಸರಿಯಾಗಿ ಆಲಿಸಬೇಕೆಂದು ವಿನಂತಿಸುತ್ತೇನೆ.

---

ವಿವಿಧ ವೃತ್ತ: ೧೩ ಮಾರ್ಚ ೧೯೩೮.

**ಅಧ್ಯಕ್ಷ:–** ಆರ್ಡರ್, ಆರ್ಡರ್, ಸಚಿವರೇ ಕೆಳಗೆ ಕೂರುತ್ತೀರಾ? (ಡಾ. ಅಂಬೇಡ್ಕರರಿಗೆ) ಈ ಬಗೆಯ ಚರ್ಚೆಯನ್ನು ಮುಂದುವರೆಸಿದರೆ ಅದು ಸತತ ಬೆಳೆಯುವ ಭೀತಿ ನನಗೆ ಕಾಡುತ್ತಿದೆ. ಸರಕಾರದ ಗತಕಾರ್ಯದ ಬಗೆಗೆ ಅದು ದೋಷಿಯೋ ಅಲ್ಲವೋ ಎನ್ನುವುದು ಸದ್ಯದ ವಿಷಯವಲ್ಲ, ಪ್ರಸ್ತುತ ಗೊತ್ತುವಳಿಯ ವಿಷಯವಾದ ವಿಶಿಷ್ಟ ಕೃತಿಯ ನಿಷೇಧಾರ್ಹವೋ ಅಲ್ಲವೋ ಎನ್ನುವುದೇ ವಾದದ ವಿಷಯ. ತಕ್ಷಣದ ಸಾರ್ವಜನಿಕ ಮಹತ್ವದ ನಿಯಮದ ವಿಷಯಕ್ಕೆ ಈ ಗೊತ್ತುವಳಿಯು ಸಂಬಂಧ ಹೊಂದಿದೆ. ಗೊತ್ತುವಳಿಗೆ ಅನುಮತಿ ಪಡೆಯಲು ಕಾರಣಿಭೂತವಾದ ನಿಯಮವನ್ನು ವಾದದಲ್ಲೂ ಉಳಿಸಿಕೊಳ್ಳುವುದು ಅಗತ್ಯವಾಗಿದೆ. ಆದ್ದರಿಂದ ಸಭೆಯ ಎದುರಿಗೆ ಬಂದ ನಿಯಮದ ವಿಷಯದ ಬಗೆಗೆ ಮಾತಾಡಬೇಕೆಂದು ನಾನು ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಡಾ. ಅಂಬೇಡ್ಕರ್:–** ಅಧ್ಯಕ್ಷರೆ, ತಮ್ಮೆದುರಿಗೆ ಈ ವಿಷಯವನ್ನು ಮಂಡಿಸಲು ನಾನು ಅನುಮತಿಯನ್ನು ಪಡೆಯುತ್ತಿದ್ದೇನೆ. ತುಲನೆ ಮಾಡಲು ಒಂದು ವಿಷಯವನ್ನು ಹೇಳುವುದಕ್ಕೂ ಮತ್ತು ಅದರ ಉಚಿತತೆ–ಅನುಚಿತತೆಯನ್ನು ನಿರ್ಧರಿಸುವ ದೃಷ್ಟಿಯಿಂದ ಚರ್ಚೆಗೆ ಅದನ್ನು ಬಳಸುವದಕ್ಕೂ ವ್ಯತ್ಯಾಸವಿದೆ. ಬಾರ್ಡೋಲಿಯ ಜಪ್ತಿಗೊಂಡ ಭೂಮಿಯನ್ನು ಮರಳಿ ನೀಡುವ ಬಗೆ ಸರಿಯೋ ತಪ್ಪೋ ಎಂಬುದನ್ನು ಚರ್ಚೆ ಮಾಡಿದ್ದರೆ ನಿಮ್ಮ ಮಾತು ಖಂಡಿತವಾಗಿಯೂ ನನಗೆ ಅನ್ವಯಿಸುತ್ತಿತ್ತು. ಆದರೆ ಸರಕಾರ ಮಾಡಿದ ಗತಕೃತಿಯ ಶಿಖರ ಸ್ಥಿತಿಯನ್ನು ಸದ್ಯದ ಕೃತಿಯು ತಲುಪಿದೆ. ಅದರ ಬಗೆಗೆ ಹೇಳಿದ, ಅಥವಾ ಸರಿಯೋ ತಪ್ಪೋ ಎಂದು ಕೇವಲ ನಿರ್ದೇಶ ಮಾಡಿದ ಮಾತ್ರಕ್ಕೆ ನಿಯಮವನ್ನು ಭಂಗಗೊಳಿಸಸಿದಂತಾಗುವುದಿಲ್ಲ.

**ಅಧ್ಯಕ್ಷ:–** ನಿಯಮದ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆ ಸಭೆಯ ಎದುರಿಗಿದೆ. ಬೇರೆ ವಿಷಯವನ್ನು ಹೇಳುವುದರಿಂದ ಮತ್ತೊಂದು ವಿಷಯ ಚರ್ಚೆಗೆ ಬರಹುದೆಂಬ ಕಾರಣಕ್ಕೆ ಸ್ಥೂಲವಾಗಿದ್ದರೂ ಇತರ ವಿಷಯದ ಬಗೆಗೆ ನಿರ್ದೇಶ ಮಾಡಲು ಮುಕ್ತ ಅವಕಾಶ ನೀಡುವುದು ಯೋಗ್ಯವೆಂದು ನನಗಿನಿಸುತ್ತದೆ.

**ಡಾ. ಅಂಬೇಡ್ಕರ್:–** ಹಾಗಾದರೆ ಸಭೆಯ ಎದುರಿಗಿರುವ ವಿಷಯವನ್ನಷ್ಟೇ ನಾನು ಪ್ರಸ್ತಾಪ ಮಾಡುತ್ತೇನೆ. ಮೊದಲನೆಯದೆಂದರೆ, ಈ ಮೊಕದ್ದಮೆಗೆ ಸಂಬಂಧಿಸಿದ ವಿಷಯವೆಲ್ಲ ನಿಮಗೆ ಗೊತ್ತಿಲ್ಲ. ಗೊತ್ತಿರುವದು ಕೇವಲ ಪತ್ರಿಕಾ ವರದಿಯನ್ನು ಆಧರಿಸಿದೆ. ನಿಯಮ ಬದ್ಧವಾದ ಪುರಾವೆ ನಮ್ಮೆದುರಿಗಿಲ್ಲ. ಈ ಖಟ್ಲೆಗೆ ಸಂಬಂಧಿಸಿದ ಸತ್ಯ ಸಂಗತಿಯನ್ನು ಸಭೆಯ ಎದುರಿಗಿಡುವಂತೆ ಗೃಹಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳಲಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅದರಿಂದಾಗಿ ನಾನೂ ಉಳಿದ ಸದಸ್ಯರೂ ತುಂಬ ದೊಡ್ಡ ಅಡಚಣೆಯನ್ನು ಎದುರಿಸಬೇಕಾಗಿದೆ. ಪ್ರಾಯಃ ಈ ಸತ್ಯಸಂಗತಿಯು ಕೊನೆಗೆ ಬೆಳಕಿಗೆ ಬಂದಾಗ, ಪ್ರಸ್ತುತ ಈ ಚರ್ಚೆಯ ಅನಾವಶ್ಯಕವೆಂದು ಅನಿಸಿದರೆ, ಅದರ ಸಂಪೂರ್ಣ ಹೊಣೆಯು ಗೃಹಮಂತ್ರಿಯ ತಲೆಯ ಮೇಲೆ ಬೀಳುವುದರಲ್ಲಿ ಕಂಚಿತ್ತೂ ಸಂದೇಹವಿಲ್ಲ. ಏಕೆಂದರೆ ಸಭೆಯನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಂಡು ಪ್ರಸ್ತುತ ಪ್ರಕರಣದಲ್ಲಿಯ ಸಂಪೂರ್ಣ ವಿವರವನ್ನು ಮಂಡಿಸಲು ಅವರೇ ನಿರಾಕರಿಸಿದ್ದಾರೆ. ಅವರದನ್ನು ಹಾಗೆ ಮಂಡಿಸಿದ್ದರೆ, ಗೊತ್ತುವಳಿಯ ಪ್ರವರ್ತಕರು ಅದನ್ನು ಪ್ರಾಯಃ ಹಿಂದಕ್ಕೆ ಪಡೆಯುತ್ತಿದ್ದರು. ಇಲ್ಲವೇ ಪ್ರಾಯಃ ಇತರ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ತಮಗೆ ಇಚ್ಛೆಯಿಲ್ಲ ಎಂದು ಹೇಳುತ್ತಿದ್ದರು. ಆದರೆ ಗೃಹಮಂತ್ರಿಗಳು ಹಾಗೇನೂ ಮಾಡದೇ ಇರುವುದರಿಂದ ಈ ಚರ್ಚೆ ಒಂದು ವೇಳೆ ವ್ಯರ್ಥ ಎಂದೇನಾದರೂ ಅನಿಸಿದರೆ, ಅದಕ್ಕೆ ಮೇಲೆ ಹೇಳಿದಂತೆ ಗೃಹಮಂತ್ರಿಗಳೇ ಹೊಣೆಯಾಗುತ್ತಾರೆ.

ವೃತ್ತಪತ್ರಿಕೆಯಲ್ಲಿ ಲಭ್ಯವಿದ್ದ ಮಾಹಿತಿಯ ಮೇರೆಗೆ ಎದುರಿಗೆ ಗೋಚರಿಸುವ ಪ್ರಮುಖ ಸಂಗತಿ ಎಂದರೆ, ಅಪರಾಧಿಯ ಶಿಕ್ಷೆಯನ್ನು ತಡೆಹಿಡಿಯಲು ಯೋಗ್ಯ ಎನಿಸಬಹುದಾದ ಏನಾದರೂ ಸಮರ್ಥನೀಯವಾದ ಕಾರಣ ಸಭೆಗೆ ಲಭಿಸಿದೆಯೇ? ಗೃಹಮಂತ್ರಿಗಳು ಹೇಳುವುದೇನೆಂದರೆ, ಹೈಕೋರ್ಟಿಗೆ ಶಿಕ್ಷೆಯನ್ನು ಸ್ಥಗಿತಗೊಳಿಸುವ ಅಧಿಕಾರವಿಲ್ಲ. ಹೀಗಾಗಿ ಹೈಕೋರ್ಟು ನಿರಾಕರಿಸಿದ್ದು ಜಾಣತನದ್ದೋ, ಮೂರ್ಖತನದ್ದೋ ಎಂಬ ಪ್ರಶ್ನೆ ಇಲ್ಲಿ ಏಳುವುದಿಲ್ಲ. ಮಹತ್ವದ ಪ್ರಶ್ನೆ ಎಂದರೆ, ಕಾನೂನಿನಂತೆ ಶಿಕ್ಷೆಗೊಳಗಾದ ಅಪರಾಧಿಯ ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು ಗೃಹಮಂತ್ರಿಗೆ ನೀಡಲಾಗಿದ್ದು, ಅವರದನ್ನು ಸರಿಯಾಗಿ ಜಾರಿಗೊಳಿಸಿದರೋ ಇಲ್ಲವೋ? ತಾರತಮ್ಯವನ್ನು ನೋಡುವ ವಿಶೇಷ ಸವಲತ್ತು ಎಂದು ಅವರಿಗದನ್ನು ನೀಡಲಾಗಿದ್ದು, ಅವರದನ್ನು ಯೋಗ್ಯವಾದ ರೀತಿಯಲ್ಲಿ ಬಳಕೆಗೆ ತಂದರೋ ಇಲ್ಲವೋ! ಗೃಹಮಂತ್ರಿಗಳು ತಮ್ಮ ಹಕ್ಕನ್ನು ಯೋಗ್ಯವಾದ ರೀತಿಯಲ್ಲಿ ಜಾರಿಗೊಳಿಸಿದರೋ ಇಲ್ಲವೋ ಎನ್ನುವದನ್ನು ಪರಿಶೀಲಿಸಲು ಕೆಲವು ವಿಷಯಗಳನ್ನು ಸ್ಪಷ್ಟ ಪಡಿಸುವ ಅಗತ್ಯವಿದೆ.

ಪತ್ರಿಕಾ ವರದಿಯಂತೆ ತಟ್ಟನೆ ಗಮನಕ್ಕೆ ಬರುವ ಸಂಗತಿ ಎಂದರೆ, ಭಯಂಕರ ಪ್ರಮಾಣದಲ್ಲಿ ಜೂಜಾಡುವ ಜನರು ಬಡವರು. ಹೊಟ್ಟೆಗೆ ಅನ್ನ ಸಿಗದೆ, ಅನ್ಯ ಮಾರ್ಗವಿಲ್ಲದೆ ಜೂಜಿನಂತಹ ನಿಂದ್ಯ ಕೃತಿಯ ಕಡೆಗೆ ಹೊರಳಲೇಬೇಕಾಯಿತು ಎನ್ನುವುದು ಅಲ್ಲ, ವರದಿಯಂತೆ ಅವರೆಲ್ಲ ಶ್ರೀಮಂತ ವ್ಯಾಪಾರಿಗಳಾಗಿದ್ದರು. ಅವರ ಬಳಿ ಅಪಾರ ಸಂಪತ್ತು ಇದೆ. ಹಲವು ಕಂಪನಿಗಳ ಮಾಲೀಕರಾಗಿದ್ದರೆ. ನಗರದ ಬೇರೆ ಬೇರೆ ಕಡೆಗಳಲ್ಲಿ, ಹಿಂದೂಸ್ಥಾನದ ಹಲವು ಪ್ರದೇಶಗಳಲ್ಲಿ ಅವರ ಕಾರ್ಯಾಲಯಗಳಿದ್ದು ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ನಡೆಯುತ್ತಿದೆ. ಹೀಗಾಗಿ ಈ ಜನರು ಬಾಬತ್ತಿನಲ್ಲಿ ಬಡತನ ಅಥವಾ ಬಿಕ್ಕಟ್ಟಿನ ಪರಿಸ್ಥಿತಿಯಿಂದಾಗಿ ಜೂಜಿನ ಹಾದಿ ಹಿಡಿದರು ಎಂದು ಖಚಿತವಾಗಿ ಹೇಳುವಂತಿಲ್ಲ. ಗೋಚರಿಸಿದ ವಸ್ತುಸ್ಥಿತಿಯು ಸಂಪೂರ್ಣ ವಿರುದ್ಧವಾಗಿದ್ದು, ಮೇಲಿನ ಘಟನೆಯ ಕಾರಣವನ್ನು ಈ ಜನರಿಗೆ ಹೋಲಿಸುವುದು ಸಾಧ್ಯವಾಗಿದೆ. ಅಲ್ಲಾಗಲಿ ಅಥವಾ ಹೈಕೋರ್ಟಿನ ಮುಂದೆಯಾಗಲಿ ಸಲ್ಲಿಸಿದ ಅರ್ಜಿಯಲ್ಲೂ ಈ ಜನರ ಶಿಕ್ಷೆಯನ್ನು ಸ್ಥಗಿತಗೊಳಿಸಲು ತೋರಿಸಿದ ಅನ್ಯಕಾರಣದಲ್ಲೂ ಇದು ಕಂಡು ಬರುವುದಿಲ್ಲ. ಅಪರಾಧಿಗಳು ರೋಗಗ್ರಸ್ತರಾಗಿದ್ದರು ಎಂದು ತೋರಿಸುವ ಯಾವ ಪುರಾವೆಯೂ ಇಲ್ಲ, ಅವರ ಕುಟುಂಬದ ಮೇಲೆ ದೊಡ್ಡ ಸಂಕಟ ಬಂದೆರಗಿದೆ ಎನ್ನುವುದು ಕಣ್ಣಿಗೆ ಬೀಳುವುದಿಲ್ಲ. ನಮ್ಮೆದುರಿಗೆ ಬಂದ ಮಾಹಿತಿಯ ಮೇಲಿಂದ ಇದನ್ನು ಸ್ವೀಕರಿಸದೆ ಬೇರೆಯದನ್ನು ಸ್ವೀಕರಿಸಲು ಕಾರಣಗಳೂ ಸಿಗುತ್ತಿಲ್ಲ. ಆದ್ದರಿಂದ ಈ ಎಲ್ಲ ಊಹೆಗಳನ್ನು ಬದಿಗಿರಿಸಬೇಕಾಗುತ್ತದೆ. ಮೂರನೆಯ ಸಂಭವನೀಯ ಕಾರಣ ಯಾವುದೆಂದರೆ, ಮೇಲಿನ ನ್ಯಾಯಾಲಯಕ್ಕೆ ಇವರು ಅಪೀಲು ಮಾಡಲಿದ್ದರು. ಇದರ ವಿರುದ್ಧ ಏನು ಹೇಳಬೇಕೆನ್ನುವುದು ಸರ್ವಶ್ರುತ, ಗೃಹಮಂತ್ರಿಗಳಿಗಂತೂ ನನಗಿಂತ ಹೆಚ್ಚು ಗೊತ್ತಿರಬಹುದು. ಅವರು ನನಗಿಂತಲೂ ದೊಡ್ಡ ವಕೀಲರು. ಪ್ರಿವ್ಹಿ ಕೌನ್ಸಿಲು ನೂರಾರು ಖಟ್ಲೆಯಲ್ಲಿ ಹಾಕಿದ ನಿಯಮವೇನೆಂದರೆ, ನ್ಯಾಯದ ತತ್ವದ ಉಲ್ಲಂಘನೆಯಾಗಿದೆ ಎಂಬುದನ್ನು ತೋರಿಸದ ಹೊರತು ಹಿಂದೂಸ್ಥಾನದಲ್ಲಿಯ ಕ್ರಿಮಿನಲ್ ಪ್ರೊಸಿಜರ್ ಕೋಡ್‌ನಂತೆ ಸಾಮಾನ್ಯ ಕಲಮಿನ ಭಂಗದ ಬಗೆಗೆ ಮುಕ್ತತೆಯನ್ನು ನೀಡಲಾಗಿಲ್ಲ ಎನ್ನುವುದೂ ಅವರಿಗೆ ಗೊತ್ತಿದೆ. ತನ್ನ ಬುದ್ಧಿಗನುಗುಣವಾಗಿ ಪ್ರಿವ್ಹಿ ಕೌನ್ಸಿಲ್ಲು ಕ್ರಿಮಿನಲ್ಲ ಅಪೀಲುಗಳನ್ನು ಸ್ವೀಕರಿಸುವ ತನ್ನ ಅಧಿಕಾರ ಕ್ಷೇತ್ರವನ್ನು ತೀರ ಸೀಮಿತಗೊಳಿಸಿಕೊಂಡಿದೆ. ಪ್ರಸ್ತುತ ಖಟ್ಲೆಯಲ್ಲಿ ಯಾರ ಎದುರಿಗೆ ಈ ಖಟ್ಲೆ ನಡೆಯಿತೋ ಆ ಚೀಫ್‌ಪ್ರೆಸಿಡೆನ್ಸಿ ಮೆಜಿಸ್ಟ್ರೇಟ್ ಅಥವಾ ಯಾರ ಎದುರಿಗೆ ಈ

ವಿಷಯದ ಅಪೀಲು ಮಾಡಬಹುದೋ ಅಂಥ ಹೈಕೋರ್ಟು ಇವರಿಬ್ಬರೂ ಕ್ರಿಮಿನಲ್‌ಪ್ರೊಸಿಜರ್ ಕೋಡಿನ ಕಲಮಿನ ಅಥವಾ ಸರ್ವ ಸಾಧಾರಣ ನ್ಯಾಯತತ್ವದ ಯಾವುದೇ ದೃಷ್ಟಿಯಿಂದ ಭಂಗ ಮಾಡಿದರು ಎಂದು ತೋರಿಸುವ ಎಳ್ಳಿನಷ್ಟೂ ಪುರಾವೆಯಿಲ್ಲ. ಇಂಥ ಸ್ಥಿತಿಯಲ್ಲಿ ಈ ಜನರ ಶಿಕ್ಷೆಯನ್ನು ತಡೆಹಿಡಿಯ ಬಹುದಾದ ಸಬಲ ಕಾರಣ ಗೃಹಮಂತ್ರಿಗಳಿಗೆ ಸಿಕ್ಕಿರಬಹುದು ಎಂದು ಒಪ್ಪಲು ಎದುರಿಗೆ ಬಂದಿರುವ ವಸ್ತುಸ್ಥಿತಿಯನ್ನು ನೋಡಿದರೆ ಯಾವ ಒಂದು ಪುರಾವೆಯೂ ಕಾಣಿಸುವುದಿಲ್ಲ.

ಅದೇ ರೀತಿ ನನಗೆ ಗೊತ್ತಿರುವಂತೆ, ಸಾದಾ ಅಪರಾಧಿಗಳ ಶಿಕ್ಷೆಯನ್ನು ಈ ಮೊದಲಿನ ಯಾವುದೇ ಗೃಹಮಂತ್ರಿಯು ಯಾವುದೇ ಕಾರಣದಿಂದ ತಡೆಹಿಡಿದ ಒಂದೂ ಉದಾಹರಣೆಯೂ ಕಾಣಸಿಗಲಾರದು. ಈ ಪ್ರಾಂತದ ಸರ್ವಶ್ರೇಷ್ಠ ನ್ಯಾಯಮಂಡಳಿಯು ನ್ಯಾಯಬುದ್ಧಿಯಿಂದ ನೀಡಿದ ಶಿಕ್ಷೆಯನ್ನು ತಡೆಹಿಡಿಯಲು ಅನಾರೋಗ್ಯ ಅಥವಾ ಖಾಸಗಿ ಸಮಸ್ಯೆಯ ನೆಪವನ್ನು ಯಾವುದೇ ಕೋರ್ಟು ಈವರೆಗೆ ಯೋಗ್ಯವೆಂದು ಒಪ್ಪಿದ್ದಿಲ್ಲ. ಹೀಗಿರುವಾಗ ಗೃಹಮಂತ್ರಿಯವರು ಹೈಕೋರ್ಟಿನ ನಿರ್ಣಯವನ್ನು ಲೆಕ್ಕಿಸದೆ ಅದು ನೀಡಿದ ಶಿಕ್ಷೆಯನ್ನು ತಡೆಹಿಡಿಯುವ ಯಾವುದೇ ಸಬಲ ಕಾರಣ ಎದುರಿಗೆ ಬರಲಿಲ್ಲ. ನಡೆದ ಘಟನೆಯು ನಿಂದನೀಯವಾದುದು. ಮಾನಗೇಡಿಯಾದುದು ಎಂದೇ ಹೇಳಬೇಕಾಗುತ್ತದೆ. ಹೈಕೋರ್ಟಿನ ಮುಂದೆ ಈ ಆರೋಪಿಗಳ ಪರವಾಗಿ ಯಾವ ವಕೀಲರು ವಾದಿಸಿದರೋ, ಅವರು ಈ ಅಪರಾಧಿಗಳಿಗೆ ಕಾರಾಗೃಹದಲ್ಲಿ ವಿಶೇಷ ಸವಲತ್ತು ಸಿಗಬೇಕು, ಅವರನ್ನು 'ಬಿ' ವರ್ಗದ ಕೈದಿ ಎಂದು ಪರಿಗಣಿಸಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದಾರೆ. ಈ ವಿಷಯ ಗೃಹಮಂತ್ರಿಗಳಿಗೆ ಗೊತ್ತಿದೆ. ಕೊನೆಪಕ್ಷ ಪತ್ರಿಕೆಗಳ ಮೂಲಕ ಈ ವಿಷಯ ನಮಗೂ ತಿಳಿದುಬಂತು. ಲಭಿಸಿದ ಮತ್ತೂ ಒಂದು ಮಾಹಿತಿಯೆಂದರೆ, ಆರೋಪಿಯ ಪರವಾಗಿ ವಕೀಲರು ಅಪರಾಧಿಗಳ ಶಿಕ್ಷೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕೆಂದು ಮತ್ತೂ ಒಂದು ಅರ್ಜಿಯನ್ನು ಹೈಕೋರ್ಟಿಗೆ ಸಲ್ಲಿಸಿದ್ದಾರೆ. ಈ ಎರಡೂ ಅರ್ಜಿಯನ್ನು ತಿರಸ್ಕರಿಸಲಾಯಿತು. ಆದರೆ ಇವೇ ಎರಡೂ ಅರ್ಜಿಗಳಲ್ಲಿ ಒಂದಕ್ಕೆ ಗೃಹಮಂತ್ರಿಗಳು ಒಪ್ಪಿಗೆ ನೀಡಿದ್ದಾರೆ. ಈ ಕೃತಿಯ ಮೂಲಕ ಗೃಹಮಂತ್ರಿಗಳು ಮಾಡಿದ ಅಪರಾಧವು ಕಾನೂನು, ಸುವ್ಯವಸ್ಥೆಯ ಬಗೆಗಿನ ಉಪೇಕ್ಷೆಯನ್ನು ನಿರ್ಮಾಣ ಮಾಡುವ ಕಾರ್ಯವು ಬೇರೆ ಯಾವುದೇ ಕೃತಿಯ ಮೂಲಕ ಪರಿಣಾಮಕಾರಕವಾದ ರೀತಿಯಲ್ಲಿ ಸಾಧಿಸಬಹುದು ಎಂದೆನಿಸುವುದಿಲ್ಲ. ನಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ಹೀಗೆ ವ್ಯಕ್ತ ಮಾಡಲು ನನಗೆ ಯಾವುದೇ ಹಿಂಜರಿಕೆ ಎನಿಸುವುದಿಲ್ಲ. ಗೃಹಮಂತ್ರಿಗಳಿಗೆ ನಾನು ಕೇಳುವುದೇನೆಂದರೆ, ಎರಡನೇ ಪ್ರಶ್ನೆಯು ಮುಖ್ಯಮಂತ್ರಿಗೆ ಸಂಬಂಧಿಸಿದ್ದು. ಸಚಿವ ಮುನ್ಶಿಯವರು ನೀಡಿದ ಆಜ್ಞೆಯ ವಿಷಯ ಮುಖ್ಯಮಂತ್ರಿಗೆ ಗೊತ್ತಿತ್ತೇ? ಈ ಆಜ್ಞೆಯನ್ನು ಸಂಪೂರ್ಣ ಮಂತ್ರಿಮಂಡಳದ ಅನುಮತಿಯನ್ನು ಪಡೆದು ಹೊರಡಿಸಲಾಗಿದೆಯೇ? ಅಥವಾ ಗೃಹಮಂತ್ರಿಗಳು ಆ ಆಜ್ಞೆಯನ್ನು ತಮ್ಮ ಇಚ್ಛೆಯಿಂದಲೇ ಹೊರಡಿಸಿದ್ದಾರೆಯೆ? ಈ ಪ್ರಶ್ನೆಯನ್ನು ಕೇಳಲು ಸಬಲ ಕಾರಣವೂ ಇದೆ. ಹೊಸ ಸಂವಿಧಾನದ ಪ್ರಕಾರ ಕಾಂಗ್ರೆಸ್ ಮಂತ್ರಿ ಮಂಡಳವು ಸಾಮೂದಾಯಿಕ ಜವಾಬ್ದಾರಿಯ ತತ್ವದಂತೆ ಆಡಳಿತ ನಡೆಸುತ್ತಲಿದೆ ಎಂದುಕೊಂಡರೂ, ಅದಕ್ಕೆ ಖಚಿತ ಪುರಾವೆಯಿಲ್ಲದಿದ್ದರೂ, ನಾವು ಒಪ್ಪಿ ನಡೆಯುತ್ತಿದ್ದೇವೆ ಮತ್ತು ಇದರಿಂದಾಗಿ ಈ ವಿಷಯ ಒಟ್ಟು ಮಂತ್ರಿಮಂಡಳದ ಎದುರಿಗೆ ಅಥವಾ ಕಾಯ್ದೆಶೀರ ದೃಷ್ಟಿಯಿಂದ ಪ್ರಾಂತದ ಆಡಳಿತಕ್ಕೆ ಜವಾಬ್ದಾರಿಯಿರುವ ವ್ಯಕ್ತಿ ಎಂಬ ಕಾರಣಕ್ಕೆ ಕೊನೆಪಕ್ಷ ಮುಖ್ಯಮಂತ್ರಿಯ ಎದುರಿಗೆ ಇಡಲಾಗಿತ್ತು ಎಂದು ಒಪ್ಪಲು ನಮಗೆ ಯಾವ ಅಡ್ಡಿಯೂ ಇಲ್ಲ. ಈ ಉಲ್ಲೇಖ ಮಾಡುವುದು, ಹಾಗೆಯೇ ಈಗಿನ ಪ್ರಶ್ನೆ ಕೇಳುವುದು ನನಗೆ ಅಗತ್ಯದ್ದು ಎನಿಸಿತು. ಏಕೆಂದರೆ ಸಧ್ಯ ನಡೆದ ಘಟನೆಯು ನನ್ನ ಪ್ರಕಾರ ಅತ್ಯಂತ ಗಂಭೀರ ಸ್ವರೂಪದ್ದು. ಅಪರಾಧಿ ಆರೋಪಿಗೆ

ನೀಡಿದ ಶಿಕ್ಷೆಯನ್ನು ಜಾರಿಗೊಳಿಸುವ ಬದಲಿಗೆ ಸ್ಥಗಿತಗೊಳಿಸುವುದೆಂದರೆ ಕಾಯ್ದೆಯನ್ನು ಉಲ್ಲಂಘಿಸಿದಂತೆ. ನನ್ನ ಮಾತಿನ ತಾತ್ಪರ್ಯವೇನೆಂದರೆ, ಪ್ರಾಂತಿಯ ಸರಕಾರದ ಆಡಳಿತ ಮತ್ತು ಜನತೆಯ ಕಲ್ಯಾಣದ ಮೇಲೆ ಗಂಭೀರ ಪರಿಣಾಮ ಬೀರುವ ಸದ್ಯದ ಈ ಕೃತಿಯು ಮುಖ್ಯಮಂತ್ರಿಯ ಅರಿವಿಗೆ ಬರದೆ ನಡೆದಿದೆ. ನನ್ನ ಈ ತಾತ್ಪರ್ಯ ಸರಿಯೋ ತಪ್ಪೋ ಎನ್ನುವುದು ನನಗೆ ಗೊತ್ತಾಗಲೇಬೇಕು. ಆದ್ದರಿಂದ ಮಂತ್ರಿಮಂಡಳವು ಈ ಪ್ರಶ್ನೆಗೆ ಉತ್ತರಿಸುತ್ತದೆ ಎಂದು ನಾನು ಅಂದುಕೊಂಡಿದ್ದೇನೆ.

# ೧೨೨.
# ಸತ್ಯಾಗ್ರಹದ ಯಶಸ್ಸಿನ ಫಲ ನನ್ನೊಬ್ಬನದೇ ಅಲ್ಲ ನಿಮ್ಮೆಲ್ಲರದ್ದು

ದಿನಾಂಕ ೧೯ ಮಾರ್ಚ ೧೯೩೮ರಂದು ಸೋಮವಂಶ ಹಿತಕಾರಿ ಸಮಾಜ ಮತ್ತು ತಾಡವಾಡಿಯಲ್ಲಿಯ ಅಖಿಲ ಅಸ್ಪೃಶ್ಯ ಸಹವಾಸಿಗಳ ಸಹಯೋಗದಲ್ಲಿ ಡಾ. ಅಂಬೇಡ್ಕರ ಮತ್ತು ಡಾ. ಪಿ.ಬಿ. ಸೋಳಂಕಿಯವರಿಗೆ ಸನ್ಮಾನಪತ್ರ ಮತ್ತು ಹಮ್ಮಿಣಿಯನ್ನು ಅರ್ಪಿಸುವ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಮೇಲೆ ಉಲ್ಲೇಖಿಸಿದ ಜನ ಸಮುದಾಯದವರ ಸಹಯೋಗದಲ್ಲಿ ಮಹಾಡ ಸತ್ಯಾಗ್ರಹದ ಹನ್ನೊಂದನೆಯ ಸ್ಮೃತಿದಿನದ ಶುಭಪ್ರಸಂಗದಲ್ಲಿ ಅಸ್ಪೃಶ್ಯ ವರ್ಗದ ಏಕಮೇವ ಮುಖಂಡ ಡಾ. ಬಾಬಾಸಾಹೇಬ ಅಂಬೇಡ್ಕರ ಮತ್ತು ಡಾ. ಪಿ.ಜಿ. ಸೋಳಂಕಿ ಅವರಿಗೆ ಅವರ ಸರ್ವಶ್ರೇಷ್ಠ ಮತ್ತು ಅಮೂಲ್ಯ ಕಾರ್ಯಕ್ಕಾಗಿ ಸನ್ಮಾನಪತ್ರ ಮತ್ತು ಹಮ್ಮಿಣಿ ನೀಡಿ ಅಭಿನಂದಿಸುವ ಭವ್ಯ ಸಮಾರಂಭವು ಶನಿವಾರ ದಿ. ೧೯ ಮಾರ್ಚ, ೧೯೩೮ರಂದು ಪ್ರಸಿದ್ಧ ಸಾಪ್ತಾಹಿಕ 'ವಿವಿಧ ವೃತ್ತ' ವಿದ್ವಾನ ಸಂಪಾದಕರಾದ ರಾ.ಕಾ. ತಟಣಿಸ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿತು. ಸಭೆಯ ಸ್ಥಾನವನ್ನು ವರ್ಣರಂಜಿತ ತಳಿರು-ತೋರಣ ಮತ್ತು ಹೂವುಗಳಿಂದ ಅಲಂಕರಿಸಿಲಾಗಿತ್ತು. ಇಂದು ಮಹಾಡ ಸ್ಮೃತಿದಿನವಿರುವುದರಿಂದ ಇಲ್ಲಿಯ ಕಾರ್ಯಕರ್ತರು ಸೇರಿ ಧ್ವಜವಂದನೆಯನ್ನು ಸೋಮವಂಶ ಹಿತಕಾರಿ ಸಮಾಜದ ಚೇರ್‌ಮನ್‌ರಾದ ಶ್ರೀ ರಾಮಭಾವೂ ರಾವಜಿ ಬೋರಿಕರ್ ಅವರ ಮಹಾಡ ಸತ್ಯಾಗ್ರಹದ ಬಗೆಗೆ ವಿವರವಾದ ಮಾಹಿತಿಯನ್ನು ನೀಡಿದರು. ಅನಂತರ ಶ್ರೀ ಮಿಡಗಾವಕರ ಮತ್ತು ಶ್ರೀ ಡೋಳಸ ಮುಂತಾದವರು ಇದೇ ವಿಷಯದ ಬಗೆಗೆ ಮಾತಾಡಿದರು. ರಾತ್ರಿ ೯.೩೦ಕ್ಕೆ ಮುಖ್ಯ ಕಾರ್ಯಕ್ರಮ ಶುರುವಾಯಿತು.

ಮುಖ್ಯ ಆಸನದ ಮೇಲೆ ಮುಂಬೈ ಲೆಜಿಸ್ಲೇಟಿವ್ ಆಸೆಂಬ್ಲಿಯ ಭಾಯಿ ಚಿತ್ರೆ, ಭಾವೂರಾವ ಗಾಯಕವಾಡ, ಡಿ.ಬಿ. ಜಾಧವ, ಖಂಡೇರಾವ ಸಾವಂತ, ಭಾತನಕರ ಮುಂತಾದ ಶಾಸಕರು, ಅಡ್ವೋ. ತಳಪದೆ, ಸ್ವತಂತ್ರ ಕಾರ್ಮಿಕರ ಪಕ್ಷದ ಸೆಕ್ರೆಟರಿದ್ವಯರಾದ ಶ್ರೀ ಕಮಲಾಕಾಂತ ಚಿತ್ರೆ ಮತ್ತು ಎಸ್.ಎ. ಉಪಶಾಮ, ನಾಯಗಾವ ಸೇವಾ ಮಂಡಳದ ಮಿಸ್. ಚೈಲ್ಡಬಾಯಿ, ಆರ್.ಸಿ.ಎ. ಮಿಶನ್ನಿನ ಮಿಸ್. ದೇಸೂರ ಬಾಯಿ ಮತ್ತು ಅವರ ಸಹಕಾರಿಗಳು, ಹಾಗೆಯೇ ಹಲವು ಸಂಸ್ಥೆಗಳ ಮತ್ತು ಅಸ್ಪೃಶ್ಯ ವರ್ಗದ ಕಾರ್ಯಕರ್ತರೆಲ್ಲ ಪ್ರಮುಖವಾಗಿ ಹಾಜರಿದ್ದರು. ಡಾ. ಅಂಬೇಡ್ಕರರು ಸಭಾಮಂಟಪಕ್ಕೆ ಬಂದ ಕೂಡಲೇ ಸಮತಾ ಸೈನಿಕ ದಳದವರು ಬ್ಯಾಂಡ್ ಮೂಲಕ ವಂದನೆಯನ್ನು ಸಲ್ಲಿಸಿದರು. ಅವರ ಆಗಮನದ ಜೊತೆಗೆ ಕಿವಿಗಡಚಿಕ್ಕುವ ಚಪ್ಪಾಳೆ ಮತ್ತು ಜಯಘೋಷದಿಂದ ಸಂಪೂರ್ಣ ವಾತಾವರಣವೇ ಮಾರ್ದನಿಸಿತು.

ಆರಂಭಕ್ಕೆ ಹಾಡು ಮತ್ತು ಸ್ತುತಿಗೀತೆ ಹಾಡಿದ ಬಳಿಕ ಶ್ರೀ ಕರಂದಿಕರ ಅವರು ಅಧ್ಯಕ್ಷರ ಕಿರುಪರಿಚಯ ಮಾಡಿಕೊಟ್ಟರು. ಅವರಿಗೆ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸುವಂತೆ ವಿನಂತಿ ಮಾಡಿದರು. ಅದಕ್ಕೆ ಶ್ರೀ. ಆರ್. ಆರ್. ಢಸಾಳರು ಆನುಮೋದನೆ ನೀಡಿದ ಬಳಿಕ, ಅಧ್ಯಕ್ಷರು ಸ್ಥಾನವನ್ನು ಅಲಂಕರಿಸಿದರು. ಜನರು

---

ಜನತಾ: ೯ ಏಪ್ರಿಲ್ ೧೯೩೮.

ಚಪ್ಪಾಳೆ ತಟ್ಟಿದರು. ಅವರು ಸಮಾರಂಭಕ್ಕೆ ಆಗಮಿಸಿದ ಭಾಸ್ಕರರಾವ ಮುಂಥದ ಶ್ರೇಷ್ಠ ಮುಖಂಡರ ಸಂದೇಶವನ್ನು ಓದಿದರು. ಹಾಗೆಯೇ ಅನಾರೋಗ್ಯದಿಂದಾಗಿ ಡಾ. ಪಿ.ಜಿ. ಸೋಳಂಕಿ ಸನ್ಮಾನ ಸ್ವೀಕರಿಸಲು ಬಂದಿರಲಿಲ್ಲ. ಕ್ಷಮೆಯಾಚಿಸಿದ ಅವರ ತತ್ವವನ್ನು ಓದಿದರು. ಗಾಯನ ಮಾಸ್ತರ ಭಾಮಾಜಿಯ ತಂಡದ ಹುಡುಗ-ಹುಡುಗಿಯರು ಸ್ವಾಗತಗೀತೆಯನ್ನು ಹಾಡಿದ ಬಳಿಕ, ಶ್ರೀ. ವಿ.ಕಾ. ಉಪಶಾಮ ಅವರು ಡಾ. ಸೋಳಂಕಿಯವರ ಅನುಪಸ್ಥಿತಿಯ ಬಗೆಗೆ ಖೇದವನ್ನು ವ್ಯಕ್ತ ಮಾಡಿ, ಡಾ. ಅಂಬೇಡ್ಕರರ ಸನ್ಮಾನ ಪತ್ರವನ್ನು ಓದಿದರು. ಅನಂತರ ಶಾಸಕರಾದ ಭಾವೂರಾವ ಗಾಯಕವಾಡ ಅವರು ಭಾಷಣ ಮಾಡಿದರು. ಅವರು ಡಾ. ಅಂಬೇಡ್ಕರರ ಕಾರ್ಯ ಸರ್ವಶ್ರೇಷ್ಠ ಮತ್ತು ಅವರ್ಣನೀಯ ಎಂದು ಹೊಗಳಿ ಸ್ವತಂತ್ರ ಕಾರ್ಮಿಕ ಪಕ್ಷದ ಸಂಘಟನೆಯ ಮಹತ್ವ ಹೇಳಿದರು. ಅನಂತರ ಅಡ್ವೋ. ತಳಪದೆಯವರು ಡಾ. ಸಾಹೇಬರ ಗುಣಗೌರವಪರ ಅಭಿನಂದನೆಯ ಭಾಷಣವನ್ನು ಮಾಡಿ, ಕಾಂಗ್ರೆಸ್ಸಿನ ಪಕ್ಷಪಾತಿ ಧೋರಣೆಯ ಬಗೆಗೆ ಹೇಳಿ ಆಸೆಂಬ್ಲಿಯಲ್ಲಿ ಸ್ವತಂತ್ರ ಕಾಮಿಕ ಪಕ್ಷವು ಮಾಡಿದ ಕಾರ್ಯಕ್ಕೆ ಧನ್ಯವಾದ ಸಲ್ಲಿಸಿದರು. ಭಾಯಿ ಚಿತ್ರೆಯವರು ಮಹಾಡ ಸಿಹಿನೀರಿನ ಕೆರೆ ಆತ್ಮೋದ್ಧಾರಕ ಚಳುವಳಿಯ ಶುಭಾರಂಭ ಮತ್ತು ಅದೇ ಚಳುವಳಿಯು ದೀನದಲಿತ ರೈತ ಕಾರ್ಮಿಕ ವರ್ಗದ ವರ್ಗ ಹೋರಾಟ ತತ್ವದ ಮೇಲೆ ಸ್ವತಂತ್ರ ಕಾರ್ಮಿಕ ಪಕ್ಷದ ರೂಪದಿಂದ ಹೇಗೆ ಸಂಘಟಿತವಾಗಿ ಮುಂದೆ ಸಾಗಿದೆ ಎಂಬ ವಿವೇಚನೆಯನ್ನು ಮಾಡಿದರು. ನಮ್ಮ ಸ್ವಾತಂತ್ರ್ಯ ಯುದ್ಧದಲ್ಲಿ ಯಾವ ಪಾಶವೀ ಶಕ್ತಿಯೂ ಪ್ರತೀಕಾರ ಮಾಡುವುದು ಸಾಧ್ಯವಿಲ್ಲ, ನಾವು ಅಹಿಂಸೆಯ ಪಠಣ ಮಾಡುತ್ತ, ಹೊಟ್ಟೆತುಂಬ ತಿನ್ನದೆ, ಈಗ ನಮಗೆ ಅಡ್ಡಿಪಡಿಸಿದ ಶತ್ರುಗಳಿಗೆ ಮೈತುಂಬ ಹೊಡೆತ ಹಾಕುತ್ತೇವೆ ಎಂದು ಎದೆ ತಟ್ಟಿ ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಬಳಿಕ ಅಧ್ಯಕ್ಷರ ಹಸ್ತದಿಂದ ಶ್ರೀ ಗಜೋಬಾ ದಗಡೂಜಿ ಧೂಧಾವಡೆಯವರು ಡಾ. ಅಂಬೇಡ್ಕರರಿಗೆ ಬೆಳ್ಳಿಯ ಕರಂಡಕದಲ್ಲಿ 'ಸನ್ಮಾನಪತ್ರ ಮತ್ತು ೧೦೧ ರುಪಾಯಿಯ' ಹಮ್ಮಿಣಿಯನ್ನು ಅರ್ಪಿಸಿದರು. ಹಾರ ಪುಷ್ಪಗುಚ್ಛ ಅರ್ಪಿಸಿದಾಗ ಸಭಿಕರು ಜಯಘೋಷ ಮತ್ತು ಚಪ್ಪಾಳೆ ಹೊಡೆದು ಗೌರವಿಸಿದರು. ಬಳಿಕ ಶ್ರೀ ವಿ.ಲ. ಡೋಳಸರು ಅಧ್ಯಕ್ಷರ ಸೂಚನೆಯಂತೆ ಡಾ. ಸೋಳಂಕಿಯವರ ಸನ್ಮಾನ ಪತ್ರವನ್ನು ಓದಿತೋರಿಸಲಾಯಿತು. ಸೋಳಂಕೆ ಅವರ ಸನ್ಮಾನಪತ್ರ ಮತ್ತು ೧೦೧ ರುಪಾಯಿಯ ಹಮ್ಮಿಣಿಯನ್ನು ಮೇಸರ್ಸ್ ಧುರಾವಡೆ, ಬೋರಿಕರ, ಉಪಶಾಮ, ಢೋಳಸ, ಕರಂದಿಕರ ಮತ್ತು ಸಂಸ್ಥೆಯ ಸೆಕ್ರೆಟರಿಯಾದ ಶ್ರೀ ಭವಾರ ಮುಂತಾದ ಕಾರ್ಯಕರ್ತರ ಕೈಗೆ ಒಪ್ಪಿಸಲಾಯಿತು. ಬಳಿಕ ಚಪ್ಪಾಳೆಯ ಸದ್ದಿನ ನಡುವೆ ಡಾ. ಅಂಬೇಡ್ಕರರು ಮಾತು ಆರಂಭಿಸಿದರು.

ಬಂಧು, ಭಗಿನಿಯರೆ,

ನೀವು ನನ್ನ ಭಾಷಣವನ್ನು ಆಲಿಸಲು ಆತುರರಾಗಿದ್ದೀರಿ. ಆದರೆ ನಾನಿಂದು ಹೆಚ್ಚು ಮಾತನಾಡಲಾರೆ. ಆನಾರೋಗ್ಯದ ನಿಮಿತ್ತದಿಂದಾಗಿ ನಾನು ಇಂದು ಉಪವಾಸ ಮಾಡಿದ್ದೇನೆ. ಶನಿವಾರವೆಂದು ಉಪವಾಸ ಮಾಡಲಿಲ್ಲ. ನನಗೆ ದೇವ-ದರ್ಮದ ಮೇಲೆ ಕಿಂಚಿತ್ತೂ ನಂಬಿಕೆಯಿಲ್ಲ. ದೇವರ ಬಗೆಗೆ, ಧರ್ಮದ ಬಗೆಗೆ ರೂಪಗೊಂಡ ಹುಚ್ಚು ಕಲ್ಪನೆಯ ಕುರಿತು ನಾನೊಮ್ಮೆ ನನ್ನ ಹಿಂದೂ ಗೆಳೆಯರಿಗೆ ಶಿವಲಿಂಗದ ಬಗ್ಗೆ ಮಾಹಿತಿ ಕೇಳಿದೆ. ಅವರಿಗೆ ಅದರ ಬಗ್ಗೆ ಗೊತ್ತಿರಲಿಲ್ಲ. ಶಿವಲಿಂಗ ಎಂದರೇನು? ಇಲ್ಲಿ ಅದರ ಬಗ್ಗೆ ಹೆಚ್ಚು ಸ್ಪಷ್ಟೀಕರಣ ನೀಡುವುದು ಸಾಧ್ಯವಿಲ್ಲ. ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ ಅದೊಂದು ಕೇವಲ ಸಂಭೋಗ ದೃಶ್ಯ. ಧಾರ್ಮಿಕ ಶ್ರದ್ಧೆಯುಳ್ಳವರು ಸಂತೋಷದಿಂದ ಅದರ ಷೋಡಶೋಪಚಾರದ ಪೂಜೆ ಮಾಡಲಿ,

ನನ್ನ ಯಾವ ಅಭ್ಯಂತರವೂ ಇಲ್ಲ. ತಾತ್ಪರ್ಯವೇನೆಂದರೆ, ನನ್ನದು ಅಂಥ ರೀತಿಯ ಉಪವಾಸವಲ್ಲ. ನನ್ನ ಉಪವಾಸವು ಇಂದು ಮಧ್ಯಾಹ್ನ ಆರಂಭಗೊಂಡು, ಎರಡು ಹಗಲು–ಎರಡು ರಾತ್ರಿ ಉಪವಾಸ ಮಾಡಿ ಸೋಮವಾರ ಮಧ್ಯಾಹ್ನ ಅನ್ನಸೇವನೆ ಮಾಡುತ್ತೇನೆ. ಈ ಎರಡು ದಿನ ನಾನು ನೀರು ಸಹ ಸೇವಿಸುವುದಿಲ್ಲ, ಇಷ್ಟು ಕಠಿಣ ಉಪವಾಸವಿದು. ಬೇರೆಯವರು ಹರಕೆ–ವ್ರತಾಚರಣೆಗಾಗಿ ಉಪವಾಸ ಮಾಡುತ್ತಾರೆ. ಅದರೆ ನನಗೆ ಅಜೀರ್ಣವಾಗಿದ್ದರಿಂದ ವಾರಕ್ಕೆ ಎರಡು ದಿನ ಉಪವಾಸ ಮಾಡಲು ವೈದ್ಯರು ಸಲಹೆ ನೀಡಿದ್ದಾರೆ. ದೇಹದ ಆರೋಗ್ಯಕ್ಕಾಗಿ ನಾನು ಈ ಉಪವಾಸ ಮಾಡಬೇಕಾಗಿದೆ. ಹೀಗಾಗಿ ಇಂಥ ಪರಿಸ್ಥಿತಿಯಲ್ಲಿ ನಾನು ಹೆಚ್ಚು ಮಾತನಾಡಲಾರೆ. ನನಗಿಂದು ಸನ್ಮಾನಪತ್ರ ಮತ್ತು ಹಮ್ಮಿಣಿಯನ್ನು ಅರ್ಪಿಸಿದ್ದಕ್ಕಾಗಿ ನಿಮಗೆಲ್ಲ ನಾನು ಋಣಿಯಾಗಿದ್ದೇನೆ. ಎರಡನೆಯದು ಇವತ್ತು ಬರೇ ಸನ್ಮಾನಪತ್ರ ಮಾತ್ರ ನೀಡಲಿಲ್ಲ, ಅದರ ಜೊತೆಗೆ ಹಮ್ಮಿಣಿಯನ್ನು ನೀಡಲಾಗಿದೆ. ಸನ್ಮಾನಪತ್ರವನ್ನು ಸಂತೋಷದಿಂದ ಸ್ವೀಕರಿಸಿ, ಹಮ್ಮಿಣಿಯ ನಿಧಿಯನ್ನು ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ದೇಣಿಗೆಯಾಗಿ ನೀಡುತ್ತಿದ್ದೇನೆ.

ಈ ಸನ್ಮಾನ ಪತ್ರದಲ್ಲಿ ಹೇಳಿದಂತೆ, ಇಂದಿನವರೆಗೆ ಅಸ್ಪೃಶ್ಯರ ಚಳುವಳಿಗೆ ಯೋಗ್ಯ ಮಾರ್ಗ ಮಾಡಿದ ಬಗೆಗೆ ನನಗೆ ತುಂಬ ಸಮಾಧಾನವಾಗಿದೆ. ನನ್ನ ಕಾರ್ಯದ ಬಗೆಗೆ ಅಲಂಕಾರಿಕ ವರ್ಣನೆಯು ಅದು ಕೇವಲ ನನ್ನ ಒಬ್ಬನದೇ ಶ್ರಮದ ಫಲವಾಗಿರದೆ, ಅದಕ್ಕೆ ನಿಮ್ಮೆಲ್ಲರ ಅವಿಶ್ರಾಂತ ದುಡಿಮೆಯೂ ಕಾರಣವಾಗಿದೆ. ಅದರಲ್ಲೂ ಎರಡು ಮಹತ್ವದ ಚಳುವಳಿಯಿಂದಾಗಿ ಅದು ಪ್ರಪಂಚದ ಎದುರಿಗೆ ಬಂತು. ಯಶೋಗಿರಿಯನ್ನು ತಲುಪಿದ ಆ ಎರಡು ಘಟನೆಗಳೆಂದರೆ, 'ಮಹಾಡದ ಸಿಹಿನೀರಿನ ಕೆರೆ ಮತ್ತು ನಾಶಿಕದ ಮಂದಿರ ಪ್ರವೇಶದ ಸತ್ಯಾಗ್ರಹ', ಈ ಎರಡೂ ಪ್ರಸಂಗಗಳಲ್ಲಿ ನನ್ನ ಗೆಳೆಯರಾದ ಭಾಯಿಚಿತ್ರೆ ಮತ್ತು ಭಾವೂರಾವ ಗಾಯಕವಾಡರೇ ದಿಟ್ಟತನದಿಂದ ಮತ್ತು ಹಲವು ಸಂಕಟಗಳನ್ನು ಛಲದಿಂದ ಎದುರಿಸಿದ್ದರಿಂದಾಗಿ ಸಾಧ್ಯವಾಯಿತು.

## ೧೨೩.

# ಶ್ರೀಮಂತರ ಹಣದಿಂದ ಪಕ್ಷದ ಕಾರ್ಯವನ್ನು ಮುಂದುವರೆಸಿದರೆ ಪಕ್ಷದ ವೈಶಿಷ್ಟ್ಯವೇ ನಾಶವಾಗಬಹುದು

ದಿ. ೨೭ ಮಾರ್ಚ್ ೧೯೩೮ರಂದು ಮುಂಬೈಯ ನಾಯಗಾವ ಎಂಬಲ್ಲಿ ಸ್ವತಂತ್ರ ಕಾರ್ಮಿಕಪಕ್ಷದ ವಾರ್ಷಿಕ ಸಭೆ ಜರುಗಿತು. ಆ ಕಾಲಕ್ಕೆ ಅಧ್ಯಕ್ಷೀಯ ಭಾಷಣ ಮಾಡುವಾಗ ಡಾ. ಅಂಬೇಡ್ಕರ ಹೀಗೆ ಹೇಳಿದರು.

ಇಂದಿನ ಈ ಸ್ವತಂತ್ರ ಕಾರ್ಮಿಕ ಪಕ್ಷದ ಮುಂಬೈ ಶಾಖೆಯ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಭಾಗವಹಿಸಲು ನನಗೆ ಸಂತೋಷವಾಗುತ್ತದೆ. ನಮ್ಮ ಸ್ವತಂತ್ರ ಕಾರ್ಮಿಕ ಪಕ್ಷವು ಶಿಸ್ತಿನಿಂದ, ನಿಯಮಬದ್ಧವಾಗಿ ಕಾರ್ಯ ಮಾಡುವ ಅಗತ್ಯವಿದೆ. ಇಂದಿನ ಸಭೆ ಮಹತ್ವದ್ದು. ನಾನಿಂದು ಬೆಳಿಗ್ಗೆ ಸ್ವತಂತ್ರ ಕಾರ್ಮಿಕ ಪಕ್ಷದ ಮುಂಬೈ ಶಾಖೆಯ ಆಫೀಸಿಗೆ ಭೇಟಿನೀಡಿದೆ. ಎರಡು-ಎರಡೂವರೆ ಗಂಟೆಯಕಾಲ ಅಲ್ಲಿದ್ದು ನಡೆದ ಕೆಲಸವನ್ನು ಪರಿಶೀಲಿಸಿದೆ. ಅಚ್ಚರಿಯೆಂದರೆ, ಪಕ್ಷದ ಕಾರ್ಯವು ಅತ್ಯಂತ ವ್ಯವಸ್ಥಿತವಾಗಿಯೂ, ಸುಗಮವಾಗಿಯೂ ಸಾಗಿರುವುದು ಗಮನಕ್ಕೆ ಬಂತು. ಬೇರೆ ಯಾರೇ ಆಗಲಿ ಆಫೀಸಿಗೆ ಹೋಗಿ ನೋಡಿದರೆ ಅವನಿಗೂ ಸಮಾಧಾನವಾಗದೆ ಇರದು. ಆಫೀಸಿನಲ್ಲಿ ಕಾರ್ಯನಿರ್ವಹಿಸುವ ಸ್ವಯಂಸೇವಕರಿಗೆ ಈ ಕೆಲಸದ ಶ್ರೇಯ ಸಲ್ಲಬೇಕು. ನಮ್ಮದು ಬಡವರ ಪಕ್ಷವಾಗಿರುವುದರಿಂದ ಅವರಿಗೆ ನಾವು ಹೆಚ್ಚು ಸಂಭಾವನೆಯನ್ನು ನೀಡುವುದು ಸಾಧ್ಯವಿಲ್ಲ. ಆದರೂ ಸಹ ಅವರು ಅಚ್ಚುಕಟ್ಟಾಗಿ ಕೆಲಸ ಮಾಡುತ್ತಾರೆ. ಇದು ಅವರಿಗೆ ಭೂಷಣಪ್ರಾಯವಾಗಿದೆ. ಈಗ ಜಮಾ-ಖರ್ಚು ಅಹವಾಲನ್ನು ಓದಿತೋರಿಸ-ಲಾಗಿದೆ. ಅದರ ಮೇಲಿಂದ ಕಂಡು ಬರುವುದರಿಂದ, ಇಲ್ಲಿಯವರೆಗೆ ಸಾವಿರ ರುಪಾಯಿ ಖರ್ಚಾಗಿದೆ. ಮತ್ತೆ ೧೨೦೦ ರುಪಾಯಿ ಶಿಲ್ಕು ಉಳಿದಿದೆ. ಈ ಜಮಾಖರ್ಚು ಮತ್ತು ಕಾಂಗ್ರೆಸ್ಸಿನ ಜಮಾಖರ್ಚನ್ನು ತುಲನೆ ಮಾಡಿದರೆ, ಕಾಂಗ್ರೆಸ್ಸಿನ ಉಪ್ಪು-ಮೆಣಸಿಗೂ ನಮ್ಮ ಹಣ ಸಾಲಲ್ಲಿಕ್ಕಿಲ್ಲ, ಅಷ್ಟು ಚಿಕ್ಕ ಮೊತ್ತ ನಮ್ಮದು. ಈವರೆಗೆ ಕಾರ್ಯಕಾರಿ ಮಂಡಳಿಯ ೪೦-೫೦ ಜನರು, ಹೊರಗಿನ ೨೫-೩೦ ಪ್ರಚಾರಕರಷ್ಟೇ ಈ ಕಾರ್ಯ ಮಾಡಿದ್ದಾರೆ. ನೀವೆಲ್ಲ ಮನಸ್ಸು ಮಾಡಿದರೆ ಇದಕ್ಕಿಂತಲೂ ದೊಡ್ಡ ಕಾರ್ಯಮಾಡಬಹುದು. ಮುಂಬೈನಗರದಲ್ಲಿ ಅಸ್ಪೃಶ್ಯ ವರ್ಗದ ಜನಸಂಖ್ಯೆಯು ಒಂದು ಲಕ್ಷಕ್ಕಿಂತ ಹೆಚ್ಚಿದೆ. ಇಲ್ಲಿವರೆಗೆ ಸ್ವತಂತ್ರ ಕಾರ್ಮಿಕಪಕ್ಷದ ಸದಸ್ಯರ ಸಂಖ್ಯೆಯು ನಾಲ್ಕು ಸಾವಿರ. ಇದು ನಾಚಿಕೆ ಗೇಡಿನ ಸಂಗತಿ. ಈ ಸಭೆಯ ಆಸನದ ವ್ಯವಸ್ಥೆ ಕಂಡಾಗ ಮಹಿಳೆಯರ ಗುಂಪು ಎರಡು, ಪುರುಷರದ್ದು ಎರಡು ಗುಂಪು ಕಾಣಿಸುತ್ತಿದೆ. ಕೇಳಿದಾಗ ಮುಂದೆಕೂತ ಮಹಿಳೆಯರ ಗುಂಪಿನವರು ಸದಸ್ಯರಾದವರು, ಹಿಂದಿನ ಗುಂಪಿನವರು ಸದಸ್ಯರಲ್ಲದವರು ಎನ್ನುವುದು ತಿಳಿದುಬಂತು. ಈ ಎರಡೂ ಗುಂಪಿನಲ್ಲಿ ಸದಸ್ಯರಾಗದೆ ಇರುವ ಮಹಿಳೆಯ

---

ಜನತಾ: ೨ ಏಪ್ರಿಲ್ ೧೯೩೮.

ಗುಂಪೇ ದೊಡ್ಡದಾಗಿದೆ. ಯಾವ ಸ್ತ್ರೀ–ಪುರುಷರಿಗೆ ಸಭೆಗೆ ಬಂದು ನಡೆದ ಕಾರ್ಯಗಳ ಬಗೆಗೆ ಕೇಳಬೇಕೆಂದಿದೆಯೋ ಅವರಿಗೆ ಎಂಟಾಣೆ ನೀಡಿ ಸದಸ್ಯರಾಗಬೇಕೆಂಬ ಬುದ್ಧಿ ಏಕೆಬರಲಿಲ್ಲ ಎಂದು ನನಗೆ ಅಚ್ಚರಿಯೆನಿಸುತ್ತಿದೆ. ಈ ಸ್ವತಂತ್ರ ಕಾರ್ಮಿಕ ಪಕ್ಷದವರ ಒಟ್ಟೂ ಕಾರಭಾರ ಯಾರಿಗಾಗಿ, ಏತಕ್ಕಾಗಿ ಎನ್ನುವುದನ್ನು ನೀವು ಯೋಚಿಸಿದ್ದೀರಾ? ಈ ಚಟುವಟಿಕೆ ನಡೆಯುತ್ತಿರುವುದು ನಿಮ್ಮ ಮತ್ತು ನಮ್ಮೆಲ್ಲರ ಮೇಲೆ ನಡೆಯುವ ದಮನವನ್ನು ಹೋಗಲಾಡಿಸಲು. ಹೀಗಾಗಿ ಈ ಕಾರ್ಯಗಳಿಗೆ ಸಹಾಯ ಮಾಡುವುದು ನಿಮ್ಮ ಕರ್ತವ್ಯವಲ್ಲವೇ? ಇಲ್ಲಿ ಸೇರಿದ ಹಲವು ಮಹಿಳೆಯರಿಗೆ ಎಲೆಯಡಿಕೆ ತಿನ್ನುವ ಚಟವಿದ್ದಿರಬೇಕು. ಅದಕ್ಕಾಗಿ ಪ್ರತಿತಿಂಗಳು ಒಂದೆರಡು ರುಪಾಯಿಗಳಾದರೂ ಖರ್ಚಾಗುತ್ತಿರಬಹುದು! ಹೀಗಿರುವಾಗ ಸ್ವತಂತ್ರ ಕಾರ್ಮಿಕ ಪಕ್ಷಕ್ಕೆ ವರ್ಷಕ್ಕೆ ಎಂಟಾಣೆ ನೀಡುವುದು ಅವರಿಗೇಕೆ ಸಾಧ್ಯವಾಗುತ್ತಿಲ್ಲ? ನನಗೆ ಸಂಪೂರ್ಣ ಮಹಾರ ಮಹಿಳೆಯರ ಮೇಲೆ ನಂಬಿಕೆಯಿದೆ. ಅವರು ಮುಂದೆ ಬಂದು ಸ್ವತಂತ್ರ ಕಾರ್ಮಿಕ ಪಕ್ಷದ ಸದಸ್ಯರಾಗಬಹುದು. ಆಗ ಪರುಷರೂ ಅವರನ್ನೂ ಅನುಕರಿಸಲೇಬೇಕು. ಇಂದಿನವರೆಗೆ ನೀವು ಎಂಟಾಣೆ ನೀಡಿ ಪಕ್ಷದ ಸದಸ್ಯರಾಗದೆ ಇರುವದು ಕಂಡು ಖೇದವೆನಿಸುತ್ತಿದೆ. ಆದರೂ ನೀವು ಕೆಲವೇ ದಿನಗಳಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷದ ಸದಸ್ಯರಾಗುತ್ತೀರೆಂಬ ನಂಬಿಕೆಯಿದೆ.

ಪುರುಷರಿಗೂ ನಾನು ಹೇಳಬಯಸುವದೇನೆಂದರೆ, ಸ್ವತಂತ್ರ ಕಾರ್ಮಿಕ ಪಕ್ಷ ನಿಮ್ಮ ಹಿತಕ್ಕಾಗಿ ಕಟ್ಟಲಾಗಿದೆ. ಇಂದಿನವರೆಗೆ ನಾಲ್ಕೇ ಸಾವಿರ ಸದಸ್ಯರಾಗಿರುವುದು ನಾಚಿಕೆಗೇಡಿನ ಸಂಗತಿ. ನೀವೇಕೆ ಪಕ್ಷದ ಸದಸ್ಯರಾಗುವುದಿಲ್ಲ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಕಾಂಗ್ರೆಸ್ಸಿನ–ಶ್ರೀಮಂತರ ಮುಂದಾಳತ್ವದ ಸಂಸ್ಥೆಯ ವಿರುದ್ಧ ಕಡುಬಡವರಿಗೆ ನ್ಯಾಯದೊರಕಿಸಿ ಕೊಡುವ ಕಾರ್ಯವನ್ನು ಈ ಪಕ್ಷ ಮಾಡುತ್ತಿದೆ. ಇಂದು ಅಸೆಂಬ್ಲಿಯಲ್ಲಿ ತಲೆಗೂದಲು ಕಿತ್ತುಹಾಕುವ, ಬಡವರ ಧುರೀಣತ್ವವನ್ನು ಸ್ವೀಕರಿಸುವ ಯಾವುದಾದರೂ ಏಕೈಕ ಪಕ್ಷವಿದ್ದರೆ ಅದು ಸ್ವತಂತ್ರ ಕಾರ್ಮಿಕ ಪಕ್ಷ ಮಾತ್ರ! ನನಗೆ ಈ ಪಕ್ಷಕ್ಕಾಗಿ ಕಾಂಗ್ರೆಸ್ಸಿನಂತಹ ಶ್ರೀಮಂತರಿಂದ ಹಣಸಿಗುವುದಿಲ್ಲವೆಂದು ಭಾವಿಸಬೇಡಿ. ನಾನು ಮನಸ್ಸು ಮಾಡಿದರೆ ಪಕ್ಷಕ್ಕಾಗಿ ಅಪಾರ ಹಣವನ್ನು ಅವರಿಂದ ಸಂಗ್ರಹಿಸಬಲ್ಲೆ. ಆದರೆ ಈ ರೀತಿಯಲ್ಲಿ ಶ್ರೀಮಂತರ ಹಣದಿಂದ ಈ ಪಕ್ಷದ ಕಾರ್ಯವನ್ನು ಮುನ್ನಡೆಸಿದರೆ ಪಕ್ಷದ ವೈಶಿಷ್ಟ್ಯವೇ ನಾಶವಾಗುತ್ತದೆ. ಅಂದಾಗ ಈ ಪಕ್ಷ ಬಡವರ ಹಿತಕ್ಕಾಗಿ ಹೋರಾಡುವುದು ಹೇಗೆ ಸಾಧ್ಯ? ಆದ್ದರಿಂದ ಬಡವರ ಹಿತಕ್ಕಾಗಿ ಆರಂಭಗೊಂಡ ಈ ಪಕ್ಷಕ್ಕೆ ಬಡವರೇ ಸಹಾಯ ಮಾಡಬೇಕು. ಹಾಗೆ ಮಾಡುವುದರಿಂದ ನಿಮ್ಮ ಸ್ವಾತಂತ್ರ್ಯ ಶಾಶ್ವತವಾಗಿ ಉಳಿಯಬಲ್ಲದು. ಬಡವರ ಸಂಸಾರ ಬಡವರೇ ಮುನ್ನಡೆಸಬೇಕು. ಈ ಮಾತಿನ ಅರ್ಥ ನಿಮಗೆ ಆಗಿದ್ದರೆ ಮುಂಬೈ ಶಾಖೆಯ ಸ್ವತಂತ್ರ ಕಾರ್ಮಿಕ ಪಕ್ಷದ ಸದಸ್ಯರ ಸಂಖ್ಯೆಯು ೪೦೦೦ದ ಬದಲು ೪೦,೦೦೦ಆಗಲು ಹೆಚ್ಚುಸಮಯ ಬೇಕಾಗುವುದಿಲ್ಲ. ದೇಶದ ಸ್ವಾತಂತ್ರ್ಯವನ್ನು ಕಾಂಗ್ರೆಸ್ಸಿನ ಶೇಠಜಿ–ಭಟಜಿಯವರು ಗಳಿಸಿಕೊಡದೆ, ಸ್ವತಂತ್ರ ಕಾರ್ಮಿಕ ಪಕ್ಷದ ಶ್ರಮಜೀವಿಗಳೇ ಗಳಿಸಿಕೊಡುತ್ತಾರೆ ಎನ್ನುವುದು ಲಕ್ಷ್ಯದಲ್ಲಿರಲಿ.

## ೧೨೪.

# ಪ್ರತಿಯೊಬ್ಬನು ಮೊದಲು ಭಾರತೀಯ, ಕೊನೆಗೂ ಭಾರತೀಯ ಎಂಬ ನಿಲುವನ್ನು ಹೊಂದಿರಬೇಕು

ಸೋಮಾವಾರ ದಿ.೪ ಮತ್ತು ಮಂಗಳವಾರ ದಿ.೫ ಏಪ್ರಿಲ್ ೧೯೩೮ರಂದು ಕೇವಲ ಬಿನ್ ಸರಕಾರಿ ಬಿಲ್ಲಿನ ಕಾರ್ಯ ನಡೆಯಲಿತ್ತು. ಇಂದು ಕರ್ನಾಟಕ ವಿಭಕ್ತಿಕರಣದ ಗೊತ್ತುವಳಿಯು ಅಸೆಂಬ್ಲಿಯ ಎದುರಿಗೆ ಬರಲಿರುವುದರಿಂದ ಸ್ಪೀಕರ್ ಗ್ಯಾಲರಿಯಲ್ಲಿ ಕರ್ನಾಟಕದ ಸುಪ್ರಸಿದ್ಧ ಮುಖಂಡರಾದ ಶ್ರೀ ಗಂಗಾಧರ ದೇಶಪಾಂಡೆ ಮುಂತಾದವರು ಕಾಣಬರುತ್ತಿದ್ದರು. ಪ್ರೇಕ್ಷಕರ ಗ್ಯಾಲರಿಯಲ್ಲೂ ಕನ್ನಡ ಬಾಂಧವರೇ ತುಂಬಿಕೊಂಡಿದ್ದರು. ಮೊದಲಿಗೆ ಪ್ರಶ್ನೋತ್ತರ ಮುಗಿದ ಬಳಿಕ ಶ್ರೀ ವ್ಹಿ. ಎನ್. ಜೋಗ್ ಅವರು ತಮ್ಮ ಗೊತ್ತುವಳಿಯನ್ನು ಅಸೆಂಬ್ಲಿಯ ಎದುರಿಗೆ ಮಂಡಿಸಿದರು.

ಶ್ರೀ. ವ್ಹಿ.ಎನ್. ಜೋಗ ಅವರು ಮಂಡಿಸಿದ ಮೂಲ ಗೊತ್ತುವಳಿಯನ್ನು ತಾತ್ವಿಕವಾಗಿ ವ್ಯತ್ಯಾಸ ಮಾಡಿ ಮುಂದಿನ ಉಪಸೂಚನೆಯ ಜೊತೆಗೆ ಅಸೆಂಬ್ಲಿಯಲ್ಲಿ ಮಂಡಿಸಲಾಯಿತು. “ಬಹುಮುಖ್ಯವಾಗಿ ಕನ್ನಡ ಮಾತಾಡುವ ಎಲ್ಲ ವಿಭಾಗಗಳನ್ನು ಒಂದೆಡೆ ಸೇರಿಸಿ, ಅದನ್ನು ಒಂದು ಸ್ವಾಯತ್ತ ಕರ್ನಾಟಕ ಪ್ರಾಂತವನ್ನಾಗಿ ಮಾಡುವ ವ್ಯವಸ್ಥೆಯನ್ನು ಆದಷ್ಟು ಬೇಗ ಮಾಡಬೇಕು–ಎಂಬ ಅಸೆಂಬ್ಲಿಯ ಅಭಿಪ್ರಾಯವನ್ನು ಮುಂಬೈ ಸರಕಾರವು ಆಂಗ್ಲ ಸರಕಾರಕ್ಕೆ ತಿಳಿಸಬೇಕು”. ಶ್ರೀ ಜೋಗ ಅವರು ಕರ್ನಾಟಕ ವಿಭಕ್ತಿಕರಣದ ಸಾಕಷ್ಟು ಮಾಹಿತಿಯನ್ನು ಹೇಳಿದ ಬಳಿಕ ಅಸೆಂಬ್ಲಿಯ ಕನ್ನಡ ಸದಸ್ಯರಾದ ಶ್ರೀ ದೊಡ್ಡಸೆಟಿ, ವಲವಡಿ, ಜಕಾತಿಯವರ ಕನ್ನಡ, ಕರಂದಿಕರ, ಕ್ಯಾ. ಝೂಬ್ ವಾಲಾ, ಎಸ್.ಪಿ. ಪಾಟೀಲಯವರ ಭಾಷಣ ಮುಗಿದ ಬಳಿಕ ಸ್ವತಂತ್ರ ಕಾರ್ಮಿಕ ಪಕ್ಷದ ಮುಖಂಡರಾದ ಡಾ. ಬಾಬಾಸಾಹೇಬ ಅಂಬೇಡ್ಕರ ಇವರ ವಿರೋಧಿ ಭಾಷಣ ನಡೆಯಿತು. ಅವರು ತಮ್ಮ ಭಾಷಣದಲ್ಲಿ ಹೇಳಿದ್ದು ಹೀಗೆ–

‘ಈ ಗೊತ್ತುವಳಿಯ ಪ್ರಶ್ನೆಯು ನನ್ನ ದೃಷ್ಟಿಯಲ್ಲಿ ಅತ್ಯಂತ ಗಂಭೀರ ಸ್ವರೂಪದ್ದು. ಈ ಗೊತ್ತುವಳಿ ಭಾವುಕರಾಗಿ ಮಾಡಬೇಕಾದ ಕಾರ್ಯವಲ್ಲ. ಕರ್ನಾಟಕದ ವಿಭಕ್ತಿಕರಣದ ಪ್ರಶ್ನೆಯನ್ನು ಸಹಜವಾಗಿ ಬಿಡಿಸುವುದು ಸಾಧ್ಯವಿಲ್ಲ. ನಾವು ಅಸ್ಪೃಶ್ಯ ಬಾಂಧವರು, ನಾವು ಬೇರೆ–ಬೇರೆ ಪ್ರಾಂತದವರು ಆಗಿದ್ದರು, ಅವನು ಗುಜರಾತಿ, ಇವನು ಮಹಾರಾಷ್ಟ್ರೀಯ, ಅವನು ಕನ್ನಡಿಗ ಎಂಬ ಭೇದಭಾವವನ್ನು ಎಂದಿಗೂ ಮಾಡುವುದಿಲ್ಲ. ನಾನು ಈ ಪ್ರಶ್ನೆಯನ್ನು ಭವನಾರಹಿತವಾಗಿ ಕಾಣುತ್ತಿದ್ದೇನೆ. ನಮ್ಮ ಮುಂಬೈ ಇಲಾಖೆಯ ಸಂಯುಕ್ತ ಕುಟುಂಬದಲ್ಲಿ ಈ ಮೂರೂ ಪ್ರಾಂತದ ಜನರು ಕಳೆದ ೧೧೫ ವರ್ಷಗಳಿಂದ ಸುಖ ಸಂತೋಷದಿಂದ ಬಾಳಿಬದುಕುತ್ತಲಿದ್ದಾರೆ. ನಮ್ಮ ಜೊತೆಗೆ ಸಿಂಧ ಪ್ರಾಂತವು ಸುಮಾರು ೯೦ ವರ್ಷಗಳ ಕಾಲವಿತ್ತು. ಅದನ್ನು ವಿಭಕ್ತಿಕರಣಗೊಳಿಸಲಾಗಿದೆ. ಆದರೆ ಅದರಿಂದಾಗಿ ಆರ್ಥಿಕ ಪರಿಸ್ಥಿತಿಯಲ್ಲಿ

---

ಜನತಾ: ೯ ಏಪ್ರಿಲ್ ೧೯೩೮.

ಈ ವಿಭಕ್ತಿ ಸಿಂಧವು ಎಂಥ ಕಠಿಣ ಪ್ರಸಂಗವನ್ನು ಎದುರಿಸುತ್ತಿರಬಹುದು ಎನ್ನವುದು ನಿಮಗೆಲ್ಲ ಗೊತ್ತೆಯಿದೆ. ಕರ್ನಾಟಕವನ್ನು ವಿಭಕ್ತಿಕರಣಗೊಳಿಸುವ ಮುಖ್ಯಕಾರಣವೆಂದರೆ, ಕನ್ನಡ ಮಾತನಾಡುವವರದ್ದು ಒಂದು ಪ್ರತ್ಯೇಕ ಪ್ರಾಂತವಾಗಲಿ ಎನ್ನುವುದು. ಆದರೆ ಅವರ ಈ ಏಕೀಕರಣವು ಎಷ್ಟರಮಟ್ಟಿಗೆ ಸಾಧ್ಯವಾಗಬಹುದು ಎಂಬ ಬಲವಾದ ಶಂಕೆಯಿದೆ. ಏಕೆಂದರೆ ಈ ಕರ್ನಾಟಕದ ಸಾಕಷ್ಟು ಪ್ರದೇಶ ಸಂಸ್ಥಾನದ ಅಡಿಯಲ್ಲಿದೆ. ಕನ್ನಡ ಸಂಸ್ಥಾನದ ಪ್ರದೇಶವನ್ನು ಕರ್ನಾಟಕದಲ್ಲಿ ಶಾಮೀಲು ಮಾಡಿಕೊಳ್ಳುವುದೆಂದರೆ, ಅದರ ಬದಲಿಗೆ ಬೇರೆ ಪ್ರದೇಶವನ್ನು ಸಂಸ್ಥಾನಗಳಿಗೆ ನೀಡಬೇಕಾಗುತ್ತದೆ. ಹಾಗೆಯೇ ಖಾಲಸಾ ಪ್ರಾಂತದ (ಆಂಗ್ಲರ ಆಧೀನ ರಾಜ್ಯ) ಜನರು ಇದರ ಬದಲಿಗೆ ಸಂಸ್ಥಾನದೊಳಗೆ ಸೇರಲು ಎಂದೂ ಒಪ್ಪಲಾರರು. ಅದರ ಬಗೆಗೆ ಸೂಕ್ಷ್ಮವಾಗಿ ಯೋಚಿಸಿದರೆ, ಕಂಡು ಬರುವುದೇನೆಂದರೆ, ಹೊಸ ರಾಜ್ಯಘಟನೆಯಂತೆ ಈ ಪ್ರಾಂತಕ್ಕೆ ಸಿಕ್ಕ ಪ್ರಾತಿನಿಧ್ಯವೇನು ಕಡಿಮೆಯೇ? ನಾವು ಭಾಷಾವಾರು ಜನಸಂಖ್ಯೆಯನ್ನು ಪರಿಗಣಿಸಿದರೆ ಮರಾಠಿ ಮಾತನಾಡುವವರ ಜನಸಂಖ್ಯೆಯು ೯೮ಲಕ್ಷ. ಗುಜರಾತಿ ೩೪ಲಕ್ಷ ಮತ್ತು ಕರ್ನಾಟಕ ೩೨ಲಕ್ಷ. ಈ ಬಗೆಯಲ್ಲಿ ವಿಭಾಗಿಸಲಾಗಿದೆ. ಈ ಜನಸಂಖ್ಯೆಯ ಮೇಲಿಂದ ಗುಜರಾತಿ ಜನರಿಗೆ ೨೭ ಮತ್ತು ಕರ್ನಾಟಕದವರಿಗೆ ೨೧ ಜಾಗ ಸಿಗಬೇಕಾಗ ಅಗತ್ಯವಿದೆ. ಆದರೆ ಪ್ರತ್ಯಕ್ಷ ವಿಭಾಗದಲ್ಲಿ ಗುಜರಾತಿಗೆ ೩೧, ಕರ್ನಾಟಕಕ್ಕೆ ೨೮ ಜಾಗ ಲಭಿಸಿದ್ದರಿಂದ ಮಹಾರಾಷ್ಟ್ರದವರಿಗೇ ಅನ್ಯಾಯವಾಗಿದೆ. ನಾನು ಪ್ರಾಂತಭೇದವನ್ನು ಪಾಲಿಸುವವನಲ್ಲ. ಆದರೆ ಈಗ ಕರ್ನಾಟಕ ಪ್ರಾಂತ ವಿಭಜನೆಯ ಪ್ರಶ್ನೆ ನಿರ್ಮಾಣವಾಗಿರುವುದರಿಂದ ಪ್ರತ್ಯಕ್ಷ ಸ್ಥಿತಿಯನ್ನು ಎದುರಿಗಿಡಬೇಕಾಗಿದೆ. ಅದೇ ವಿಷಯ ಅಧಿಕಾರದ ಹುದ್ದೆಗೂ ಸಂಬಂಧಿಸುತ್ತದೆ. ಈ ಹುದ್ದೆಯ ವಿಭಾಗ ಮಾಡುವಾಗಲೂ ಮರಾಠಿ ಪ್ರತಿನಿಧಿಯ ಮೇಲೆ ಅನ್ಯಾಯವಾಗಿದೆ. ಅವರ ಶೇಕಡಾ ಪ್ರಮಾಣ ೯.೩, ಗುಜರಾತಿಯದು ೩.೬ ಮತ್ತು ಕನ್ನಡದ್ದು ೩.೧ ಇದೆ. ಆದರೆ ಹುದ್ದೆಯ ಹಂಚಿಕೆಯೂ ಅನುಕ್ರಮವಾಗಿ ೬, ೬ ಮತ್ತು ೪ ಮಾಡಿದ್ದು ಕಂಡು ಬರುತ್ತದೆ. ಹೀಗಾಗಿ ಕರ್ನಾಟಕಕ್ಕೆ ಅನ್ಯಾಯವಾಗಿಲ್ಲ ಎನ್ನುವುದು ಸಿದ್ಧವಾಗುತ್ತದೆ. ಸರಿ ಈ ಪ್ರಾಂತದ ಆರ್ಥಿಕ ಪರಿಸ್ಥಿತಿಯತ್ತ ಗಮನಹರಿಸಿದರೆ ಆದಾಯದ ೨ ೧/೨ ಕೋಟಿಯಿದ್ದೂ ಈ ನಗರದ ಅಗತ್ಯವನ್ನು ಪೂರೈಸುವುದು ಸಾಧ್ಯವಿಲ್ಲ. ಆಧುನಿಕ ಪದ್ಧತಿಯಿಂದ ಪ್ರಾಂತದ ವ್ಯವಸ್ಥೆಯನ್ನು ಮಾಡಬೇಕಾದರೆ ೨ ೧/೨ ಕೋಟಿಯಿಂದ ಕರ್ನಾಟಕಕ್ಕೆ ಆಗುವ ಉಪಯೋಗವಾದರೂ ಏನು?

ಬರಗಾಲದಿಂದ ತ್ರಪ್ತವಾದ ಮತ್ತು ಅನ್ನ-ಬಟ್ಟೆಯಿಂದಾಗಿ ಜನರು ಅನುಭವಿಸುವ ಅವಮಾನವನ್ನು ಈ ಅಲ್ಪ ಆದಾಯದಿಂದ ಸ್ವತಂತ್ರರಾಗಲು ಬಯಸುವ ಪ್ರಾಂತಗಳ ಖರ್ಚು ನಿಭಾಯಿಸುವದು ಹೇಗೇ? ಬಹಳವೆಂದರೆ ಕೆಲವೇ ಜನರಿಗೆ, ಅಧಿಕಾರದ ಸೂತ್ರವನ್ನು ಸ್ಥಳಾಂತರಿಸುವ ಲಾಲಸೆಯುಳ್ಳವರಿಗೆ ಒಂದಿಷ್ಟು ಸಮಾಧಾನವಾಗಬಹುದು. ಈ ಕಾರಣಕ್ಕಾಗಿ ನಾನು ಈ ಪ್ರಾಂತದ ವಿಭಕ್ತಿಕರಣ ಮಾಡಲು ಒಪ್ಪಿಗೆ ನೀಡಲಾರೆ. ಹಾಗೆಯೇ ವಿಜಾಪುರ ಮತ್ತು ವಲ್ಲಾರಿ (ಬಳ್ಳಾರಿ)ಯಂತಹ ಬರಗಾಲದ ಪ್ರದೇಶಗಳು ಬಾಯ್ತೆರೆದು ಎದುರಿಗೆ ನಿಂತಾಗ ಪ್ರಾಂತದ ಜಮಾಖರ್ಚನ್ನು ಹೇಗೆ ಹೊಂದಿಸುತ್ತೀರಿ? ನಮ್ಮ ಜಾತಿಯವರಿಗೆ ಈ ಪ್ರಾಂತದಲ್ಲಿ ಬರೇ ಎರಡೇ ಜಾಗಗಳಿವೆ. ಇಲ್ಲಿಯ ಅಸೆಂಬ್ಲಿಯಲ್ಲಿ ನಮ್ಮ ಉಳಿದ ಪ್ರತಿನಿಧಿಗಳಿಂದಾಗಿ ಅವರಿಗೆ ಬೆಂಬಲವಿದೆ. ಆದರೆ ಈ ವಿಭಕ್ತಿಕರಣದಿಂದ ಉಳಿದ ವರಿಷ್ಠ ವರ್ಗದವರು ಅವರನ್ನು ತುಳಿಯದೆ ಬಿಡಲಾರರು. ನಾನು ಯಾವುದೇ ಬಗೆಯ ಪ್ರಾಂತಭೇದ, ಅಷ್ಟೇ ಅಲ್ಲ ಮಹಾರಾಷ್ಟ್ರೀಯನೆಂದೂ ಹೇಳಿಕೊಳ್ಳುವುದರಲ್ಲಿ ಅಭಿಮಾನ ಪಡುವವನಲ್ಲ. ಹಾಗೆಯೇ ಭಾಷೆ, ಪ್ರಾಂತಭೇದ, ಸಂಸ್ಕೃತಿ ಮುಂತಾದ ಭೇದಭಾವವನ್ನು ನಾನೆಂದೂ ಪಾಲಿಸಲು ಬಯಸಲಾರೆ. ಮೊದಲಿಗೆ ಹಿಂದಿ, ನಂತರ ಹಿಂದೂ ಮುಸಲ್ಮಾನ

ಎಂಬ ತತ್ವವೂ ನನಗೆ ಒಪ್ಪಿಗೆಯಿಲ್ಲ. ಪ್ರತಿಯೊಬ್ಬರು ಮೊದಲು ಭಾರತೀಯ, ಕೊನೆಗೂ ಭಾರತೀಯ, ಭಾರತೀಯದ ಆಚೆಗೆ ಏನೂ ಬೇಡ ಎಂಬ ನಿಲುವನ್ನು ಹೊಂದಿರಬೇಕು. ಈ ವೃತ್ತಿಯೇ ನಿಜವಾದ ಭಾರತೀಯ ಸ್ವಾತಂತ್ರ್ಯದ ಹೋರಾಟದ ಪಾರಿತೋಷಕ. ಆದ್ದರಿಂದ ನಾನು ಈ ಗೊತ್ತುವಳಿಯನ್ನು ವಿರೋಧಿಸುತ್ತೇನೆ.

## ೧೨೫.
## ನಿಮ್ಮ ಪವಿತ್ರ ಮತವನ್ನು ಮಾರಬೇಡಿ, ಸತ್ಕಾರ್ಯಕ್ಕಾಗಿ ಬಳಸಿ

ಕಳೆದ ವಾರದ ಬುಧವಾರ ದಿ:೨೦ ಏಪ್ರಿಲ್ ೧೯೩೮ ರಂದು, ಇಸ್ಲಾಂಪುರ ಮತ್ತು ಓಂಡ್‌ದಲ್ಲಿ ಡಾ. ಅಂಬೇಡ್ಕರರ ಅಧ್ಯಕ್ಷತೆಯ ಕೆಳಗೆ ಬೃಹತ್ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಪ್ರವಾಸದಲ್ಲಿ ಡಾ. ಅಂಬೇಡ್ಕರರ ಜೊತೆಗೆ ಶಾಸಕ ಸಾವಂತ, ಸಸಾವೇ ಮಾಸ್ತರ, ಮೆ. ಉಬಾಳೆಯವರಿದ್ದರು. ಇಸ್ಲಾಂಪುರದ ಸಭೆ ಆರಂಭವಾದ ಕೂಡಲೇ ಶ್ರೀ. ಡಿ.ಎಸ್. ಪವಾರ ಅವರ ಭಾಷಣದ ಬಳಿಕ ಶಾಸಕ ಸಾವಂತರು ಮೊದಲಿಗೆ ಭಾಷಣ ಮಾಡಿದರು. ಅವರು ತುಂಬ ಕುಶಲತೆಯಿಂದ ಕಾಂಗ್ರೆಸ್ ಮತ್ತು ಸ್ವತಂತ್ರ ಕಾರ್ಮಿಕ ಪಕ್ಷವನ್ನು ತುಲನೆ ಮಾಡಿದರು. ಅನಂತರ ಸತ್ಯಶೋಧಕ (ಬ್ರಾಹ್ಮಣೇತರ) ಪಕ್ಷವನ್ನು ಕಾಂಗ್ರೆಸ್ಸು ಹೇಗೆ ನಾಶಗೊಳಿಸಿತು ಎಂದು ಹೇಳಿ, ಸಾತಾರಾ ಜಿಲ್ಲೆಯ ಮರಾಠಾ ಸಮಾಜದವರಿಗೆ ಅವರ ಕರ್ತವ್ಯದ ಅರಿವು ಮಾಡಿಕೊಟ್ಟರು. ಹಾಗೆಯೇ 'ಮುಂಬರುವ ಜಿಲ್ಲಾ ಬೋರ್ಡ್ ಚುನಾವಣೆಗಾಗಿ ನಮ್ಮ ಪಕ್ಷದ ಅಭ್ಯರ್ಥಿಯಾಗಿ ವಾಳಪೆ, ಇಸ್ಲಾಂಪುರ ತಾಲೂಕಿನ ಪರವಾಗಿ ಶ್ರೀ ಭಾವೂರಾವ ದೇವಜಿ, ಕಾಂಬಳೆ, ತಾಸಗಾಂವ ಪರವಾಗಿ ಶ್ರೀ ಖಂಡನಾಕ ರಾಜನಾಕ ಇನಾಂದಾರ ಮತ್ತು ಖಾನಾಪುರ ಪರವಾಗಿ ಶ್ರೀ ಧೋಂಡಿಮಾಲೂ ಸಾಳವೆ ಎಂಬ ಅಭ್ಯರ್ಥಿ ಸ್ಪರ್ಧಿಸಲಿದ್ದಾರೆ. ಅವರನ್ನು ಆಯಾ ಭಾಗದ ಮತದಾರರು ಗೆಲ್ಲಿಸಬೇಕು.' ಬಳಿಕ ಪ್ರಚಂಡ ಕರತಾಡನದ ನಂತರ ಡಾ. ಅಂಬೇಡ್ಕರ ಭಾಷಣವನ್ನು ಆರಂಭಿಸಿದರು–

ಈ ಜಿಲ್ಲೆಯಲ್ಲಿ ಮುಂದಿನ ತಿಂಗಳ ೨೪ರಂದು ಜಿಲ್ಲಾ ಲೋಕಲ್ ಬೋರ್ಡಿನ ಚುನಾವಣೆ ಜರುಗಲಿದೆ. ಆ ಚುನಾವಣೆಗಾಗಿ ಸ್ವತಂತ್ರ ಕಾರ್ಮಿಕ ಪಕ್ಷದ ಪರವಾಗಿ ಸ್ಪರ್ಧಿಸುವ ಅಭ್ಯರ್ಥಿಗಳನ್ನು ಮತದಾರರು ಗೆಲ್ಲಿಸಬೇಕೆಂದು ಹೇಳಲು ನಾನು ನಿಮ್ಮ ಎದುರಿಗೆ ನಿಂತಿದ್ದೇನೆ. ಈ ಸಭೆಯಲ್ಲಿ ಮರಾಠಾ ಮತ್ತು ಅಸ್ಪೃಶ್ಯರು ಒಂದೆಡೆ ಸೇರಿದ ಜನ ಸಮುದಾಯವಿದೆ. ಇದರಿಂದ ಮರಾಠರಿಗೆ ನಾನು ಪ್ರತ್ಯೇಕವಾಗಿ ಹೇಳುವುದು ಸಾಧ್ಯವಾಗಲಾರದು. ಇರಲಿ,

ಈ ದೇಶದ ಹಿಂದೂ ಸಮಾಜದ ರಚನೆಯೇ ಹೇಗಿದೆ ಎಂದರೆ, ಎಲ್ಲರ ಮೇಲೂ ಬ್ರಾಹ್ಮಣರ ಪ್ರಭುತ್ವವಿದೆ. ಯಾವ ವಿಧಿಯೂ ಬ್ರಾಹ್ಮಣರ ಹೊರತು ನಡೆಯುವುದಿಲ್ಲ. ಹಾಗೇ ಉಳಿದ ವ್ಯವಹಾರ ಸಹ ಅವರಿಲ್ಲದೆ ನಡೆಯುವುದಿಲ್ಲ. ಹೈಕೋರ್ಟಿನ ಹಿರಿಯ ಹುದ್ದೆಯಿಂದ ಹಿಡಿದು ಹಳ್ಳಿಯ ತಲಾಠಿ (ಶಾನಭೋಗ)ವರೆಗೆ ಬ್ರಾಹ್ಮಣರ ಹೊರತು ಬೇರೆ ಯಾರೂ ಕಾಣಲಾರರು. ೧೯೧೯ ರಿಂದ ೧೯೩೮ವರೆಗೆ ಕೇವಲ ನಾಲ್ಕೇ ಬ್ರಾಹ್ಮಣರು ಕಾಣುತ್ತಿದ್ದರು. ಈಗ ಈ ಬ್ರಾಹ್ಮಣ ಕೌನ್ಸಿಲರ್ ಸಂಖ್ಯೆಯು ಸುಮಾರು ಇಪ್ಪತ್ತೇಳು. ನನ್ನ ಮಾಹಿತಿಯಂತೆ ಅಸೆಂಬ್ಲಿಯಲ್ಲಿರುವ ಹನ್ನೊಂದು ಅಧಿಕಾರದ ಜಾಗದಲ್ಲಿ ಆರನ್ನು ಬ್ರಾಹ್ಮಣರೇ ವಶಪಡಿಸಿಕೊಂಡಿದ್ದಾರೆ. ಅದರಲ್ಲಿ ಪಾಟೀಲನಿಗೆ ಬೆಲೆಯಿದೆಯೆ? ೧೭೫ ಸದಸ್ಯರಲ್ಲಿ ಅವರನ್ನು ಯಾರೂ ಲೆಕ್ಕಿಸುವುದಿಲ್ಲ. ನಿಜವಾಗಿ ನೋಡಿದರೆ ಈ ದೇಶದ ರಾಜಕಾರಣದಲ್ಲಿ ಭಟ್ಟ, ಶೇಠ, ಗುಜರ

---

ಜನತಾ: ೩೦, ಏಪ್ರಿಲ್, ೧೯೩೮.

ಮತ್ತು ಸಾಹುಕಾರರದ್ದೇ ಮುಖ್ಯಪಾಲು. ಅದರಲ್ಲಿ ಬಡವ, ರೈತ ಮುಂತಾದ ಶ್ರಮಜೀವಿಗಳಿಗೆ ಅವಕಾಶವಿಲ್ಲ. ಇಂದಿನ ಈ ಪರಿಸ್ಥಿತಿಯ ಬಗೆಗೆ ಯೋಚಿಸಿದರೆ ಗಾಂಧೀಜಿಯ ನಂತರ ಈ ರಾಜಕಾರಣದಲ್ಲಿ ಗೊಂದಲ ನಿರ್ಮಾಣವಾಗದೆ ಇರದು. ಇಂದು ನಾವು ರಾಜಕಾರಣದಲ್ಲಿ ಹಾಕುವ ಗುದುಮುರಿಗೆಗೆ ಗಾಂಧೀಜಿಯ ಬಳಿಕ ಯಾರು ಬೆಲೆ ಕೊಡುತ್ತಾರೆ? ಇದರ ಬಗೆಗೆ ಇನ್ನೂ ಯಾರೂ ಯೋಚಿಸಿವಂತಿಲ್ಲ. ಆದ್ದರಿಂದ ನಮ್ಮ ಹಿತಕ್ಕಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಸ್ವತಂತ್ರ ಚಳುವಳಿಯನ್ನು ಆರಂಭಿಸಿ. ನನ್ನ ಪಕ್ಷವನ್ನು ಸೇರಿಕೊಳ್ಳಿ ಎಂದೇನೂ ನಾನು ಹೇಳುವುದಿಲ್ಲ. ಆದರೆ ನಮ್ಮ ನ್ಯಾಯ ಹಕ್ಕು ಸಂರಕ್ಷಣೆಯಾಗುವ ರೀತಿಯಲ್ಲಿ ಚಳುವಳಿ ಮಾಡಿ. ಮರಾಠಾ ಜನರಿಗೆ ಹೇಳಬೇಕೆಂದರೆ ನಿಮ್ಮ ಹಿತಕ್ಕಾಗಿ ನಮ್ಮ ಶ್ರೀ ವಿಚಾರೆ ಮಾಸ್ತರರು ರೈತರ ಪಕ್ಷವನ್ನು ಕಟ್ಟಿದ್ದಾರೆ. ನೀವು ಮರಾಠಿಗರೆಲ್ಲ ಸೇರಿ ಅಗತ್ಯ ಸಹಾಯ ಮಾಡಿ. ಹಾಗೆಯೇ ಎಲ್ಲಿ ಮೀಸಲಾತಿಯ ಕ್ಷೇತ್ರವಿಲ್ಲವೋ ಅಲ್ಲಿ ಅಸ್ಪೃಶ್ಯರು ಈ ಹೊಸ ರೈತ ಪಕ್ಷದ ಅಭ್ಯರ್ಥಿಗೆ ಸಹಾಯ ಮಾಡಿ. ಈ ಲೋಕಲ್ ಬೋರ್ಡಿನ ಚುನಾವಣೆಯ ಕಾಲಕ್ಕೆ ಯಾರಾದರೂ ಸುಳ್ಳು ಭರವಸೆ ನೀಡಿದರೆ, ಆಮಿಷ ತೋರಿಸಿದರೆ ನೀವು ಮರಳಾಗಬೇಡಿ. ನಿಮ್ಮ ಪವಿತ್ರಮತವನ್ನು ಮಾರಬೇಡಿ, ಅದನ್ನು ಸತ್ಕಾರ್ಯಕ್ಕಾಗಿ ಬಳಸಿ.

ಡಾ. ಅಂಬೇಡ್ಕರ ಅವರ ಭಾಷಣದ ಬಳಿಕ ಶ್ರೀ ವಿಚಾರ ಅವರು ಮಾತಾಡಿದರು, ಬಳಿಕ ಹೂಮಾಲೆ ಅರ್ಪಿಸಲಾಯಿತು. ಅನಂತರ ಡಿ.ಎಸ್. ಪವಾರ ಅವರು ಆಮಂತ್ರಿತರಿಗೆ ಭೋಜನದ ಏರ್ಪಾಡು ಮಾಡಿದರು.

## ೧೨೬.

# ಅನ್ಯರನ್ನು ಅವಲಂಬಿಸುವುದೆಂದರೆ ಪೇಶ್ವೆಕಾಲದ ಗಡಿಗೆಯನ್ನು ಕೊರಳಿಗೆ ಕಟ್ಟಿಕೊಂಡಂತೆ

೨೦, ಏಪ್ರಿಲ್ ೧೯೩೮ರಂದು ಮಧ್ಯಾಹ್ನ ಮೂರಕ್ಕೆ ಓಂಡ್ ಎಂಬಲ್ಲಿ ಸಭೆ ಏರ್ಪಡಿಸಲಾಗಿತ್ತು. ಈ ಸಭೆಗೆ ಅಸ್ಪೃಶ್ಯ ಸಮುದಾಯದವರೇ ಆರುಸಾವಿರಕ್ಕಿಂತ ಹೆಚ್ಚು ಜನರು ಆಗಮಿಸಿದ್ದರು. ಶಾಸಕರಾದ ಕೆ.ಎಸ್. ಸಾವಂತರು ಓಂಡ್ ಊರಿನ ಹಾಗೂ ಅಲ್ಲಿಯ ಪ್ರತಿಷ್ಠಿತರ ಪರಿಚಯ ಮಾಡಿದ ಬಳಿಕ, ಪ್ರತಿಯೊಬ್ಬರೂ ಸ್ವತಂತ್ರ ಕಾರ್ಮಿಕ ಪಕ್ಷದ ಸದಸ್ಯರಾಗುವಂತೆ ಭಿನ್ನವಿಸಿದರು. ಅನಂತರ ಕರಾರಿನ ಮೇರೆಗೆ ಶ್ರೀ ಘೋರವಡೆಯವರು ಜನತಾ ಪತ್ರಿಕೆ ಮತ್ತು ಸ್ವತಂತ್ರ ಕಾರ್ಮಿಕ ಪಕ್ಷದ ಮಾಹಿತಿ ನೀಡಿದ ಬಳಿಕ ಡಾ. ಅಂಬೇಡ್ಕರ ಅವರು ಭಾಷಣವನ್ನು ಶುರು ಮಾಡಿದರು.

ಡಾ. ಅಂಬೇಡ್ಕರರು ತಮ್ಮ ಭಾಷಣದಲ್ಲಿ ಅಸ್ಪೃಶ್ಯರ ಪೂರ್ವದ ಮತ್ತು ಸದ್ಯದ ಸ್ಥಿತಿಯನ್ನು ತೌಲನಿಕವಾಗಿ ವಿವರಿಸಿ ಸಂಘಟನೆಯ ಬಗೆಗೆ ಹೇಳಿದರು.

ಅನಂತರ ಪ್ರತಿ ಊರವರು ಡಾ. ಅಂಬೇಡ್ಕರ ಅವರಿಗೆ ಹೂಮಾಲೆಯನ್ನು ಅರ್ಪಿಸಿದರು. ಇಲ್ಲಿಯ ಕಾರ್ಯಕ್ರಮದ ಬಳಿಕ ಹಾದಿಯಲ್ಲಿ ಕರ್ಹಾಡ ತಾಲೂಕಿನ ಶಿವಡಿ ಎಂಬೂರಲ್ಲಿ ತಾಂಬೂಲದ ಸಮಾರಂಭ ಜರುಗಿತು. ಇಲ್ಲಿ ಊರ ಜನರಂತೆ ಮಳೆರಾಯನೂ ಡಾ. ಅಂಬೇಡ್ಕರರ ಸ್ವಾಗತ ಮಾಡಿದನು. ಈ ಸಮಾರಂಭದ ಕಾಲಕ್ಕೆ ಮೆ. ಉಬಾಳೆಯವರು ಸೇರಿದ ಜನರನ್ನು ಉದ್ದೇಶಿಸಿ ಹೀಗೆ ಹೇಳಿದರು. 'ಪ್ರವಾಸದ ಕಾಲಕ್ಕೆ ಡಾ. ಅಂಬೇಡ್ಕರರಿಗೆ ತುಂಬ ಆಯಾಸವಾಗಿದೆ. ನೀವು ಈಗ ಮತ್ತೆ ತೊಂದರೆ ನೀಡಬಾರದು'. ಆದರೂ ಜನರ ಒತ್ತಾಯಕ್ಕೆ ಮಣಿದು ಅಂಬೇಡ್ಕರರು ಕೆಲವು ಮಾತು ಹೇಳಿದರು– 'ಮುಂದಿನ ತಿಂಗಳ ೨೪ಕ್ಕೆ ಜಿಲ್ಲೆಯ ಲೋಕಲ ಬೋರ್ಡಿನ ಚುನಾವಣೆ ನಡೆಯಲಿದೆ. ಈ ತಾಲೂಕಿನ ಅಭ್ಯರ್ಥಿಯಾಗಿ ನಮ್ಮ ಸ್ವತಂತ್ರ ಕಾರ್ಮಿಕ ಪಕ್ಷದ ವತಿಯಿಂದ ಶ್ರೀ ಗಣಪತ ಭೀಕಾಜಿ ವಾಘಮಾರೆಯವರು ಸ್ಪರ್ಧಿಸಲಿದ್ದಾರೆ. ನೀವು ಅವರಿಗೆ ಮತನೀಡಿ ಗೆಲ್ಲಿಸಬೇಕು. ನಾನು ಹೇಳಿದಂತೆ ನೀವು ಮತದಾರರೆಲ್ಲ ವರ್ತಿಸುತ್ತೀರಿ ಎಂದು ನಂಬುತ್ತೇನೆ.' ಅನಂತರ ಡಾಕ್ಟರ್ ಸಾಹೇಬರು ವಾಹನ ಏರಿ ಸಾತಾರಾಗೆ ಬಂದರು. ಅಲ್ಲಿ ಮೆ. ಕಾಶಿನಾತ ಕಾಂಬಳೆ, ಭೋಸಲೆ, ಕೇರವಾ ಮೇಢೆಕರ ಮತ್ತು ಬಂದಸೋಡೆ ಮಾಸ್ತರ ಮುಂತಾದವರು ಡಾ. ಸಾಹೇಬರಿಗೆ ಮಾಲಾರ್ಪಣೆ ಮಾಡಿದ ಬಳಿಕ ಪುಣೆಗೆ ತೆರಳಿದರು.

---

ಜನತಾ: ೩೦ ಏಪ್ರಿಲ್, ೧೯೩೮.

# ೧೨೭.
# ದಂಗೆಯನ್ನು ನಿಯಂತ್ರಿಸಲು ಉಗ್ರಕ್ರಮ ಅಗತ್ಯ

ಕಳೆದ ನಾಲ್ಕೈದು ದಿನಗಳಿಂದ ಚರ್ಚೆಗೊಳಗಾಗಿದ್ದ ಮುನ್ಶಿಯವರ ಮುಂಬೈ ಗೂಂಡಾಗಳನ್ನು ದಂಗೆಯ ಕಾಲಕ್ಕೆ ಬಂಧಿಸಿ, ಗಡಿಪಾರು ಮಾಡುವ ಅಧಿಕಾರವನ್ನು ಪೋಲಿಸ ಕಮೀಶನರಿಗೆ ನೀಡುವ ಬಿಲ್ ೨೬ ಏಪ್ರಿಲ್ ೧೯೩೮ರಂದು ಚರ್ಚೆಗೆ ಬಂತು. ಮುನ್ಶಿಯವರ ಮೂಲಬಿಲ್‌ಗೆ ತಿದ್ದುಪಡಿ ಎಂದು ಜೋಡಿಸಿದ ಸ್ವತಂತ್ರ ಕಾರ್ಮಿಕ ಪಕ್ಷದ ನಾಯಕರಾದ ಡಾ. ಅಂಬೇಡ್ಕರರ ಉಪಸೂಚನೆಯೂ ವಿಶೇಷ ಮಹತ್ವದ್ದಾಗಿತ್ತು. ಈ ಸೂಚನೆಯಿಂದ ಮೂಲ ಬಿಲ್‌ನ ಉದ್ಧೇಶವನ್ನು ನಿರ್ಧರಿಸಲಾಯಿತು. ಡಾ. ಅಂಬೇಡ್ಕರರ ಸೂಚನೆಯ ಆಶಯ ಹೀಗಿದೆ–'ಮುಂಬೈ ನಗರದಲ್ಲಿ ಅಥವಾ ನಗರದ ಯಾವುದೇ ಭಾಗದಲ್ಲಿ ಬೇರೆ ಬೇರೆ ಜಾತಿಗಳ ನಡುವೆ ವೈಮನಸ್ಸು ತಲೆದೋರಿ, ಒಂದು ತುರ್ತು ಪರಿಸ್ಥಿತಿಯೇನಾದರೂ (ಸ್ಟೇಟ್ ಆಫ್ ಎಮರ್ಜನ್ಸಿ) ನಿರ್ಮಾಣಗೊಂಡರೆ ಸರಕಾರವು ಗೆಜೆಟ್ ಮೂಲಕ ತಕ್ಷಣ ಪ್ರಕಟನೆಯನ್ನು ನೀಡಿ, ಈ ಬಿಲ್ಲಿನ ಅಧಿಕಾರವನ್ನು ಪೋಲಿಸ್ ಕಮೀಶನರ್‌ಗೆ ನೀಡಬೇಕು. ಈ ಅಧಿಕಾರವನ್ನು ಒಂದು ತಿಂಗಳೊಳಗೆ ಜಾರಿಗೊಳಿಸಬೇಕು. ಅದಕ್ಕಿಂತ ಕಾನೂನಿನ ಅಗತ್ಯವಿದ್ದರೆ ಮತ್ತೆ ಪ್ರಕಟಣೆ ನೀಡಬೇಕು. ಅದೇ ರೀತಿ ಪೋಲಿಸ್ ಕಮೀಶನರ್‌ನ ಆಜ್ಞೆಯ ವಿರುದ್ಧ ಇಪ್ಪತ್ತು ದಿನದೊಳಗಾಗಿ ಪ್ರಾಂತೀಯ ಸರಕಾರಕ್ಕೆ ಆಪೀಲು ಮಾಡಿಕೊಳ್ಳುವ ಅಧಿಕಾರ ನೀಡಲಾಗಿದೆ.' ಈ ಸೂಚನೆಯಿಂದ ಮುಂಬೈ ನಗರದ ನಿವಾಸಿಗಳಿಗೆ ಹಕ್ಕಿನ ಸಂರಕ್ಷಣೆಯನ್ನು ಪಡೆಯುವ ಅವಕಾಶ ಸಿಕ್ಕಂತಾಯಿತು.

ಈ ಸೂನೆಯನ್ನು ಮಂಡಿಸುವ ಮುನ್ನ ಕೆಲವು ಉಪಸೂಚನೆ ಬಂದ ಬಳಿಕ ೨೭ ಏಪ್ರಿಲ್, ೧೯೩೮ರಂದು ಡಾ. ಅಂಬೇಡ್ಕರರು ತನ್ನ ಸೂಚನೆಯ ಬಗೆಗೆ ವಿವರಣೆ ನೀಡಲು ಮುಂದಾದರು. ಅವರು ತಮ್ಮ ಭಾಷಣದಲ್ಲಿ ಹೇಳಿದ್ದು ಹೀಗೆ–

ಯಾವ ಗೂಂಡಾಗಳ ಉಪದ್ರವಗಳ ಕುರಿತು ಈ ಬಿಲ್ಲು ಮಂಡಿಸುವಾಗ ಮುನ್ಶಿಯವರು ಹೇಳಿದ ವಿಷಯದ ಬಗ್ಗೆ ಪೋಲಿಸ ಕಮೀಶನರ್ ಅಥವಾ ಮುನ್ಶಿಯವರಿಗಿಂತಲೂ ಹೆಚ್ಚುಗೊತ್ತಿದೆ. ೧೯೧೧–೧೯೩೩ವರೆಗಿನ ನನ್ನ ಆಯುಷ್ಯದ ಕಾಲವನ್ನು ಮುಂಬೈ ಇಂಪ್ರೂವ್‌ಮೆಂಟ್ ಚಾಳಿನಲ್ಲಿ ಕಳೆದದ್ದರಿಂದ, ಗೂಂಡಾ ಅಥವಾ ಮವ್ವಾಲಿಗಳಿಂದ ಬಡವರಿಗೆ ಆಗುವ ಭಯಂಕರ ಉಪದ್ರವದ ಮಾಹಿತಿ ನನಗಿದೆ. ಹಾಗೆಯೇ ಯಾವದಂಗೆಯ ನಿವಾರಣೆಗಾಗಿ ಈ ಕಾಯ್ದೆಯನ್ನು ಜಾರಿಗೆ ತರಲಾಗುತ್ತಿದೆಯೋ, ಅದರ ಬಗೆಗಿನ ಸ್ವಲ್ಪ ಪೂರ್ವ ಇತಿಹಾಸವನ್ನು ನಮೂದಿಸಲು ಯಾವ ಅಡ್ಡಿಯು ಇರಲಿಕ್ಕಿಲ್ಲ. ೧೮೫೧ರಿಂದ ೧೯೩೮ವರೆಗೆ ಮುಂಬೈಯಲ್ಲಿ ಒಟ್ಟೂ ಒಂಬತ್ತು ಜಾತಿಯ ಭಯಂಕರ ದಂಗೆಗಳಾಗಿವೆ. ಮೊದಲ ದಂಗೆಯು ೧೮೫೧ರಲ್ಲಿ ಮುಸಲ್ಮಾನ ಮತ್ತು ಫಾರಶಿಗಳ ನಡುವೆ ನಡೆಯಿತು. ಎರಡನೆಯದೂ ಸಹ ೧೮೭೪ರಲ್ಲಿ ಫಾರಶಿ–ಮುಸಲ್ಮಾನರಲ್ಲಿ ನಡೆಯಿತು. ಅನಂತರ ೧೮೯೩, ೧೯೨೯, ೧೯೩೨, ೧೯೩೩, ೧೯೩೬, ೧೯೩೭ ಮತ್ತು ೧೯೩೮ರಲ್ಲಿ ನಡೆಯಿತು. ಈ ದಂಗೆಗಳು ಮಾತ್ರ

---

ಜನತಾ: ೩೦ ಏಪ್ರಿಲ್, ೧೯೩೮.

ಹಿಂದೂ–ಮುಸಲ್ಮಾನರ ನಡುವೆ ಜರುಗಿವೆ. ಈ ದಂಗೆಗಳಲ್ಲಿ ಗಾಯಗೊಂಡವರ ಅಂಕಿ–ಅಂಶವನ್ನು ನೀಡಿದ ಬಳಿಕ ಡಾ. ಅಂಬೇಡ್ಕರರು ಮತ್ತೆ ತಮ್ಮ ಮಾತನ್ನು ಮುಂದುವರೆಸಿದರು. ಈ ದಂಗೆಯ ವೃತ್ತಿಯನ್ನು ಗಮನಿಸಿದಾಗ ಅದನ್ನು ನಿಯಂತ್ರಿಸಲು ಏನಾದರೂ ಕಠಿಣ ಕ್ರಮವನ್ನು ಕೈಕೊಳ್ಳುವುದು ಅನಿವಾರ್ಯ ಎಂದೆನಿಸುತ್ತದೆ. ಪ್ರತಿವರ್ಷ ಸುಧಾರಣೆಯ ಹಾದಿಯನ್ನು ಹಿಡಿದ ಮುಂಬೈನಗರದಲ್ಲಿ ರಕ್ತದಹೊಳೆ ಹರಿಯುತ್ತಿರುವುದು ನಿಜವಾಗಿಯೂ ದುರಾದೃಷ್ಟದ ಸಂಗತಿ ಎನ್ನಬೇಕಾಗುತ್ತದೆ. ಅದರ ನಿಯಂತ್ರಣಕ್ಕೆ ಯೋಗ್ಯಕ್ರಮ ಕೈಕೊಳ್ಳಲು ನಾನು ಈ ಬಿಲ್‌ಗೆ ಬೆಂಬಲವನ್ನು ಸೂಚಿಸುತ್ತಿದ್ದೇನೆ. ಹಾಗೆಯೇ ಈ ಬಿಲ್‌ನಿಂದಾಗಿ ಪೊಲೀಸ್ ಕಮೀಶನರ್ ಅವರಿಗೆ ಲಭಿಸಿದ ಹೊಸ ಅಧಿಕಾರದಿಂದ ನಾಗರಿಕರ ಸ್ವಾತಂತ್ರ್ಯದ ಯೋಗ್ಯ ಸಂರಕ್ಷಣೆ ಸಿಗಲೆಂದು ನಾನು ಕೆಲವು ಉಪಸೂಚನೆಗಳನ್ನು ಈ ಬಿಲ್‌ಗೆ ಜೋಡಿಸುತ್ತಿದ್ದೇನೆ. ತುರ್ತು ಪರಿಸ್ಥಿತಿಯ ಕಾಲದಲ್ಲಿ ಪ್ರಕಟಣೆಯನ್ನು ಹೊರಡಿಸಿಯೇ ಉಗ್ರಕ್ರಮ ಕೈಕೊಳ್ಳಬೇಕೆಂದು ನಾನು ನನ್ನ ಉಪಸೂಚನೆಯಲ್ಲಿ ತಿಳಿಸಿದ್ದೇನೆ. ಹಾಗೆಯೇ ಕಾನೂನು ಜಾರಿಗೊಳಿಸುವ ಕಾಲಾವಧಿಯನ್ನು ಒಂದು ತಿಂಗಳಿಗೆ ಮಾತ್ರ ಸೀಮಿತಗೊಳಿಸುವಂತೆ ನೀಡಿದ ಸೂಚನೆಯಿಂದಾಗಿ ಪೋಲಿಸ ಕಮೀಶನರ್‌ನ ಅಧಿಕಾರದ ಕ್ಷೇತ್ರವು ಕೇವಲ ಈ ಜಾತಿಯ ಹಾಗೆಯ ಕಾಲಾವಧಿಗಷ್ಟೇ ಸೀಮಿತಗೊಳ್ಳುತ್ತದೆ. ಮುನ್ಶಿಯವರೂ ಸಹ ತಮ್ಮ ಭಾಷಣದಲ್ಲಿ ಈ ಕಾನೂನನ್ನು ಜಾತಿಯ ದಂಗೆಯ ಹೊರತು ಬೇರೆಡೆ ಬಳಸಲಾಗುವುದಿಲ್ಲ ಎಂದೂ ಹೇಳಿದ್ದಾರೆ, ಖಚಿತ ಭರವಸೆಯನ್ನು ನೀಡಿದ್ದಾರೆ.

ಡಾ. ಅಂಬೇಡ್ಕರರ ಸೂಚನೆಯು ಬಹುಮತದಿಂದ ಅನುಮೋದನೆ ಪಡೆದ ಬಳಿಕ ಈ ಬಿಲ್‌ನ ಮೊದಲ ವಾಚನ ಸ್ವೀಕಾರಗೊಂಡಿತು.

# ೧೨೮.

# ಚುನಾಯಿತನಾದ ಅಭ್ಯರ್ಥಿಯು ತನ್ನ ಕರ್ತವ್ಯ ಮಾಡುತ್ತಾನೋ ಇಲ್ಲವೋ ಎಂಬ ಬಗ್ಗೆ ಪಹರೆ ನಡೆಸಿ

ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಮಂಗಳವಾರ ದಿ. ೧೦ ಮೇ, ೧೯೩೮ರಂದು ನಾಗಪುರಗೆ ಬಂದರು. ಒಂದು ಕ್ರಿಮಿನಲ್ ಖಟ್ಲೆಗಾಗಿ ಮೇಲ್ ಏರಿಬಂದಿದ್ದರು. ಅವರು ನಾಗಪುರಗೆ ಬಂದಿರುವ ಬಗ್ಗೆ ಯಾರಿಗೂ ನಂಬಿಕೆಯಾಗಲಿಲ್ಲ. ಹಲವರು ಜವಳಿಗಿರಣಿಯ ಕೆಲಸಕ್ಕೆ ರಜೆಹಾಕಿ ಪ್ರತ್ಯಕ್ಷ ನೋಡಿದಾಗಲೇ ನಂಬಿಕೆಯಾಯಿತು. ಸಾವಿರ ಸಂಖ್ಯೆಯಲ್ಲಿ ಜನರು ಬಂದು ಸೇರಿದರು. ಇಂದು ಕಚೇರಿಯ ಕೆಲಸವಿಲ್ಲದ್ದರಿಂದ ಸ್ವಲ್ಪ ಚರ್ಚೆಗೆ ಅವಕಾಶ ಸಿಕ್ಕಿತು. ಅದರ ಲಾಭ ಪಡೆದ ಜನರಿಗೆ ದರ್ಶನ ನೀಡಲು ರಾತ್ರಿಯ ಸಮಯದಲ್ಲಿ ಅವರಿಗೆ ವಿನಂತಿಮಾಡಿಕೊಳ್ಳಲಾಯಿತು. ಸ್ವತಂತ್ರ ಕಾರ್ಮಿಕ ಪಕ್ಷ ನಾಗಪುರ ನಗರ ಮತ್ತು ಸಮತಾ ಸೈನಿಕದಳ ಮುಂತಾದ ಅಂಬೇಡ್ಕರರ ನಾಯಕತ್ವದ ಅಡಿಯಲ್ಲಿ ನಡೆಯುವ ಸಂಸ್ಥೆಯವರು ಇಂದೂರಿನಲ್ಲಿ ತಕ್ಷಣ ಬಹಿರಂಗ ಸನ್ಮಾನದ ವ್ಯವಸ್ಥೆ ಮಾಡಿದರು. ಸಮಾರಂಭದ ಕಾಲಕ್ಕೆ ಸಿಡಿಲ್ಮಿಂಚಿನ ಬಿರುಗಾಳಿ ಮಳೆ ಸುರಿಯುತ್ತಿದ್ದರೂ ಜನರು ಅವರನ್ನು ಕಾಣಲು ಹಿಂಡು ಹಿಂಡಾಗಿ ಆಗಮಿಸಿದರು. ಸತ್ಯಪ್ರಸಾರಕ ಜಲಸಾ ಮಂಡಳಿ, ಇಂದೂರ ಇವರು ಭವ್ಯ ವೇದಿಕೆಯನ್ನು ನಿರ್ಮಿಸಿದರು. ಸಮತಾ ಸೈನಿಕ ದಳದವರು ಗಣವೇಷ ಧರಿಸಿ ಬಂದರು. ಈ ಸಭೆ ಕನಿಷ್ಠ ೨೦,೦೦೦ ಸ್ತ್ರೀ ಪುರುಷ ಅಬಾಲವೃದ್ಧರು ಬಂದರು. ಕುತೂಹಲದಿಂದ ಅಂಬೇಡ್ಕರರ ಹಾದಿ ಕಾಯಲಾರಂಭಿಸಿದರು. ರಾತ್ರಿ ೯.೩೦ ಗಂಟೆಗೆ ಅಂಬೇಡ್ಕರರ ಕಾರಿನಿಂದ ಬಂದು ಇಳಿದ ಕೂಡಲೇ ದಳದವರು ಮೊದಲಿಗೆ ಬ್ಯಾಂಡ್ ಸಲಾಮು. ಗಾರ್ಡ್ ಆಫ್ ಆನರ್ ನೀಡಿದರು. ಅಂಬೇಡ್ಕರರು ವೇದಿಕೆ ಏರಿ ಕೂತ ಬಳಿಕ ಜನರು ಚಪ್ಪಾಳೆ ಬಾರಿಸಿ, ಜಯಘೋಷ ಹಾಕಿದರು. ಮಧ್ಯಪ್ರಾಂತ, ವರ್‍ಹಾಡ ದಲಿತ ಫೆಡರೇಶನ್ನಿನ ಸೆಕ್ರೆಟರಿಗಳಾದ ಶ್ರೀ ಆರ್. ಆರ್. ಪಾಟೀಲರು ಜನಸಮುದಾಯವನ್ನು ಉದ್ದೇಶಿಸಿ ಹೀಗೆ ಹೇಳಿದರು.–'ಬಂಧು, ಭಗಿನಿಯರೆ, ಯಾವ ದೇವರಿಗಾಗಿ ಕಳೆದ ಒಂದು ಗಂಟೆಯಿಂದ ಹಾದಿ ಕಾಯುತ್ತಿದ್ದಿರೋ. ಆ ದೇವರು ಎಲ್ಲರ ಎದುರಿಗೆ ವಿರಾಜಮಾನರಾಗಿದ್ದಾರೆ. ಅವರಿಗೆ ಮಾಲಾರ್ಪಣೆ ಮಾಡಲು ನೀವು ಕಾತುರರಾಗಿದ್ದಿರಿ. ನಾನು ಹೆಸರು ಹೇಳಿದ ಕೂಡಲೇ ಅವರು ಬಂದು ಹೂವಿನಹಾರ ಅರ್ಪಿಸಬೇಕು–ಸ್ವತಂತ್ರ ಕಾರ್ಮಿಕ ಪಕ್ಷ, ನಾಗಪುರ ನಗರ ದಲಿತ ಫೆಡರೇಶನ್ ಮತ್ತು ಸಮತಾ ಸೈನಿಕ ದಳ, ಸತ್ಯಪ್ರಸಾರಕ ಜಲಸಾ ಮಂಡಳಿ, ಬೆರ್ಘುನ್‌ಬಾಗ, ಅಂಬೇಡ್ಕರ ಸೋಶಿಯಲ್ ಕ್ಲಬ್, ಲೈಬ್ರರಿ, ಸಾಹಿತ್ಯ, ಚರ್ಚಾ ಮಂಡಳಿ, ಅಸ್ಪೃಶ್ಯ ಮಹಿಳಾ ವಸತಿಗೃಹ, ಅಂಬೇಡ್ಕರ ಸಹಾಯಕ ಸಮಾಜ, ವಿಜಯಿ ಸಮಾಜ, ಮಹಾರ ನವಯುವಕ ದಳ ಭಾನಖೇಡಾ, ಬಲವೀರ ವಾಚನಾಲಯ ಸಿರಸಪೇಠ, ಸಮತಾ ವಿಜಯ ಸಮಾಜ, ಕುಂಬಾರ

---

ಜನತಾ: ೧೪ ಮತ್ತು ೨೧ ಮೇ, ೧೯೩೮.

ಪರಿಕಾ–ಮುಂತಾದ ಅಸಂಖ್ಯ ಸಂಘದವರು ಮಾಲಾರ್ಪಣೆ ಮಾಡಿದರು. ಪಟ್ಟಿ ಬಹಳ ದೊಡ್ಡದಿದೆ. ಬಳಿಕ ಶ್ರೀ ಬಾಬು ಮೆಶ್ರಾಮ ಇಂದೋರಾ ಇವರು ಸ್ತುತಿಗೀತೆ ಹಾಡಿದರು. ಅಂಬೇಡ್ಕರ ಅವರಿಗೆ ಉಪದೇಶದ ನುಡಿ ಹೇಳುವಂತೆ ಕೇಳಿಕೊಳ್ಳಲಾಯಿತು. ಕ್ಷಣಕಾಲ ಎಲ್ಲೆಡೆ ಸ್ತಬ್ಧತೆ. ಅಂಬೇಡ್ಕರರು ಭಾಷಣಕ್ಕೆ ಎದ್ದು ನಿಂತಾಗ ಜನರು ಕರತಾಡನ ಮಾಡಿ ಜಯಘೋಷ ಹಾಕಿದರು.

'ಬಂಧು–ಭಗಿನಿಯರೆ'

ಇಂಥ ಸಿಡಿಲ್ಮಿಂಚಿನ ಮಳೆಯಲ್ಲೂ ಇಲ್ಲಿ ಸೇರಿದ ಜನಸಾಗರ ಕಂಡು ನಿಮ್ಮೆಲ್ಲರನ್ನು ಅಭಿನಂದಿಸುತ್ತೇನೆ. ನಾನು ಯಾವ ಕಾರ್ಯಕ್ಕಾಗಿ ಬಂದಿದ್ದೇನೋ ಆ ಜನರು ನಮ್ಮ ಹಾದಿಕಾಯುತ್ತಿದ್ದಾರೆ. ಅವರಿಗೆ ದಾರಿಕಾಯುವಂತೆ ಮಾಡುವುದು ಸರಿಯಲ್ಲ. ಆದರೂ ವಿಳಂಬ ಮಾಡದೆ ನಿಮಗೆ ಒಂದೆರಡು ಮಾತು ಹೇಳುತ್ತೇನೆ. ನಿಮ್ಮ ಪ್ರಾಂತದಲ್ಲಿ ನಡೆದ ತಂಟೆಯ ಬಗೆಗೆ ಮತ್ತೊಮ್ಮೆ ಮಾತಾಡುತ್ತೇನೆ. ಈಗ ನಿಮ್ಮ ಪ್ರಾಂತಕ್ಕೆ ೨೦ ಸ್ಥಾನ ಸಿಕ್ಕಿರುವ ವಿಷಯ ನಿಮಗೂ ಗೊತ್ತಿರಬಹುದು. ಅಷ್ಟು ಸ್ಥಾನಕ್ಕಾಗಿ ತುಂಬ ಪ್ರಯಾಸ ಪಡಬೇಕಾಯಿತು. ಆದ್ದರಿಂದ ಅದನ್ನು ಉಳಿಸಿಕೊಳ್ಳುವುದು ನಿಮ್ಮೆಲ್ಲರ ಕರ್ತವ್ಯವಾಗಿದೆ. ಅಸ್ಪೃಶ್ಯ ಜನರು ಬಡವರು, ನಿರ್ಧನರೂ ಆಗಿದ್ದಾರೆ. ಅವನು ರಾಜಕೀಯ ಸತ್ತೆಯನ್ನು ಉಳಿಸಿಕೊಳ್ಳುವುದು ಕಷ್ಟ. ಅದರಲ್ಲೂ ಕಾಂಗ್ರೆಸ್ಸಿನಂಥ ದೊಡ್ಡ ಸಂಸ್ಥೆಯೊಂದಿಗೆ ಸೆಣಸಾಡುವುದು ಮತ್ತೂ ಕಷ್ಟ. ಹೀಗಾಗಿ ಇಂಥ ಕಠಿಣ ಪ್ರಸಂಗದಲ್ಲಿ ನಿಮಗೆ ಲಭಿಸಿದ ರಾಜಕೀಯ ಸತ್ತೆಯನ್ನು ಉಳಿಸಿಕೊಳ್ಳುವುದು ಅತ್ಯಂತ ದುಸ್ತರ. ನೀವು ಚುನಾಯಿಸಿದ ಅಭ್ಯರ್ಥಿಯು ನಮ್ಮ ಹಿತದ ಕಾರ್ಯವನ್ನು ಮಾಡುತ್ತಾನೋ ಇಲ್ಲವೋ ಎಂಬುದನ್ನು ನೋಡುವುದು ನಿಮ್ಮ ಕರ್ತವ್ಯ ಪ್ರತಿಯೊಂದು ಸೆಶನ್ನಿನ ಬಳಿಕ ಇಂದಿನಂತೆ ಸಭೆ ಏರ್ಪಡಿಸಿ ಅವರು ಮಾಡಿದ ಕಾರ್ಯವನ್ನು ಪರಿಶೀಲಿಸಿ ಪ್ರಶ್ನೆ ಕೇಳಬಹುದು. ಯಾರು ಹಿತದ ಕಾರ್ಯ ಮಾಡುವುದಿಲ್ಲ ಅಂಥ ಮತಕ್ಷೇತ್ರದವರು ಅವರ ವಿರುದ್ಧ ಪ್ರಚಾರ ಮಾಡುವುದು ನಿಮ್ಮ ಕರ್ತವ್ಯ. ಚುನಾಯಿಸುವದು ಹೇಗೆ ಕರ್ತವ್ಯವೋ, ಹಾಗೆಯೇ ಅವರ ಮೇಲೆ ಪಹರೆ ನಡೆಸುವುದೂ ನಿಮ್ಮ ಆದ್ಯಕರ್ತವ್ಯ. ನೀವು ಹೀಗೆ ಪಹರೆ ಮಾಡುವುದರಿಂದಲಾದರೂ ಅವರು ಭಯದಿಂದ ತಮ್ಮ ಕ್ಷೇತ್ರದಲ್ಲಿ ಕಾರ್ಯ ಮಾಡಬಹುದು. ಈ ಬಗೆಯಲ್ಲಿ ಕಾರ್ಯ ನಡೆದರೆ ನಿಮ್ಮ ಹಿತದ ಹಲವು ಕಾರ್ಯ ಸುಗಮವಾಗಿ ಸಾಗುತ್ತದೆ. ಅವರಿಗಿಂದು ಸಮಯವಿಲ್ಲದ್ದರಿಂದ ಭಾಷಣವನ್ನು ಮುಗಿಸಿದರು. ಅನಂತರ ಡಾ. ಅಂಬೇಡ್ಕರ ಮತ್ತು ಸಭಿಕರ ಆಭಾರ ಮನ್ನಣೆಯ ಬಳಿಕ ಜಯಘೋಷದಲ್ಲಿ ಸಭೆ ಮುಕ್ತಾಯಗೊಂಡಿತು.

# ೧೨೯.
# . . .ಇಲ್ಲದಿದ್ದರೆ ನಿಮ್ಮ ಸ್ವತಂತ್ರ ಯೂನಿಯನ್ ಸ್ಥಾಪಿಸಿ

ಡಾ: ೧೧ ಮೇ, ೧೯೩೮ರಂದು ನಾಗಪುರದಲ್ಲಿ ಬೆಳಿಗ್ಗೆ ಎಂಟಕ್ಕೆ ವಿದ್ಯಾರ್ಥಿಗಳ ಪರವಾಗಿ ಡಾ. ಅಂಬೇಡ್ಕರ ಅವರನ್ನು ಸ್ವಾಗತಿಸಲಾಯಿತು. ಈ ಪ್ರಸಂಗದಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಗಿದ ಬಳಿಕ ಸಮಾಜ ಕಾರ್ಯವನ್ನು ಕೈಗೆತ್ತಿಕೊಂಡು, ಸಮಾಜಸೇವೆ ಮಾಡಬೇಕೆಂಬ ಆಶಯದ ಭಾಷಣ ಮಾಡಿದರು. ೧೦ರಿಂದ ೪.೩೦ವರೆಗೆ ಕಾರ್ಯಾಲಯಕ್ಕೆ ಹೋದರು. ಸಂಜೆ ಆರಕ್ಕೆ ಕಾಮಠಿ ಎಂಬಲ್ಲಿ ಶ್ರೀ ಹರಿದಾಸ ಎಲ್.ಎನ್. ಅವರ ಜೊತೆಗೆ ಸ್ವಾಗತ ಮಾಡಲಾಯಿತು. ಅಪಾರ ಜನ ಸಮುದಾಯವಿತ್ತು. ಆದರೆ ಕೆಟ್ಟ ಮಳೆಗೆ ಇದನ್ನು ಸಹಿಸುವುದಾಗಲಿಲ್ಲ. ಜನರ ಉತ್ಸಾಹ ಇಳಿಸಲು ಅದು ಉಗ್ರರೂಪವನ್ನು ಧರಿಸಿತು. ಮಾಲಾರ್ಪಣೆಗೆ ಸಮಯವಿಲ್ಲದ್ದರಿಂದ ನೂರಾರು ಹಾರಗಳನ್ನು ಕಾರಿನ ಮೇಲೆ ಹಾಕಲಾಯಿತು.

ಹೀಗೆ ಕಾಮಠಿ ಸಮಾರಂಭ ಮುಗಿಸಿ ಬಂದ ಬಳಿಕ, ಅವರ ವಾಸಸ್ಥಳಕ್ಕೆ ಹಲವು ಕಾರ್ಯಕರ್ತರು ಆಗಮಿಸಿದರು. ಅವರ ನಡುವಿನ ಚರ್ಚೆಯು ಜನರ ಹಿತಾಸಕ್ತಿಗೆ ಸಂಬಂಧಿಸಿದ್ದರಿಂದ ಕೆಳಗೆ ನೀಡುವುದು ಅಯೋಗ್ಯವಾಗಲಾರದು.

ಮೊದಲಿಗೆ ಜಿ.ಐ.ಪಿ. ರೇಲ್ವೆ ಕಾರ್ಮಿಕರು ತಾವು ರೇಲ್ವೆ ಯೂನಿಯನ್ ಸೇರಬೇಕೆ ಬೇಡವೇ ಎಂದು ಪ್ರಶ್ನಿಸಿದರು. ಅದಕ್ಕೆ ಡಾಕ್ಟರ್ ಸಾಹೇಬರು ಹೀಗೆ ಉತ್ತರಿಸಿದರು. 'ಯೂನಿಯನ್ ನಿಮ್ಮ ಒಳಿತಿಗಾಗಿ ಕಾರ್ಯ ಮಾಡುತ್ತಿದ್ದರೆ ಎಲ್ಲರೂ ಅದರ ಸದಸ್ಯರಾಗಬಹುದು. ನೀವು ನೀಡಿದ ವಂತಿಗೆಯ ೧/೫ ಭಾಗವನ್ನು ನಿಮ್ಮ ಹಿತಕ್ಕಾಗಿ ಬಳಸುವುದು, ನಿಮ್ಮ ಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ನೀಡುವ–ಮುಂತಾದ ವಿಷಯವನ್ನು ಮೀಸಲಿರಿಸಿ ನಿಮ್ಮ ಹಿತವನ್ನು ಮಾಡುತ್ತಿದ್ದರೆ ಖಂಡಿತ ಎಲ್ಲರೂ ಭಾಗವಹಿಸಬಹುದು. ಇಲ್ಲದಿದ್ದರೆ ನಿಮ್ಮದೇ ಸ್ವತಂತ್ರ ಯೂನಿಯನ್ ಸ್ಥಾಪಿಸಿ. (ಈ ಪ್ರಶ್ನೆಯು ಜವಳಿಗಿರಣಿಯ ಕಾರ್ಮಿಕರಿಗೂ ಅನ್ವಯಿಸುತ್ತದೆ). ಬಳಿಕ ಅವರು ತಮ್ಮ ಗಮನವನ್ನು ನಾಗಪುರ ಕಾರ್ಯಕರ್ತರ ಕಡೆಗೆ ಹರಿಯಿಸಿದರು. ಆ ಕಾಲಕ್ಕೆ ಶಾಸಕರ ಸೆಕ್ರೆಟರಿ, ಸಿ.ಸ್ಟೇ.ಸಂ.ಕಮಿಟಿ, ಮುಖ್ಯ ಸದಸ್ಯರು, ಶ್ರೀ ಆರ್.ಆರ್. ಪಾಟೀಲ, ಸೆಕ್ರೆಟರಿ ಮಧ್ಯಪ್ರಾಂತ–ವರ್ಹಾಡ ಫೆಡರೇಶನ್ ಮತ್ತು ಕೆಲವು ವಿರೋಧಿ ಪಕ್ಷದವರೂ ಹಾಜರಿದ್ದರು. ಅವರ ಸಂಕ್ಷಿಪ್ತ ಮುಖ್ಯ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ.

ವಿರೋಧಿ ಪಕ್ಷ ಮತ್ತು ಡಾ. ಅಂಬೇಡ್ಕರರ ಪಕ್ಷದಲ್ಲಿಯ ವೈಗುಣ್ಯದ ಬಗೆಗೆ ಸಾಕಷ್ಟು ಚರ್ಚೆ ನಡೆದ ಬಳಿಕ ಅದಕ್ಕೆ ರಾಮಬಾಣದಂತಹ ಉಪಾಯವನ್ನು ಈ ಕೆಳಗಿನಂತೆ ಡಾಕ್ಟರ್ ಸಾಹೇಬರು ಸೂಚಿಸಿದರು.

೧) ಸ್ವತಂತ್ರ ಕಾರ್ಮಿಕ ಪಕ್ಷದ ಸದಸ್ಯರ ಸಂಖ್ಯೆ ಸಾವಿರಾರು ಏರಿಸಿ. ಐಕ್ಯತೆಯಿಂದ ಈ ಪಕ್ಷದ ಒಗ್ಗಟ್ಟನ್ನು ಬಲಪಡಿಸಿ.

೨) ದಲಿತ ಫೆಡರೇಶನ್ನಿನ ಕಾರ್ಯವು ಜಾತಿಯ ಐಕ್ಯತೆಗಾಗಿ ಸೀಮಿತವಾಗಿರಲಿ (optinal)

---

ಜನತಾ: ೨೧ ಮೇ ೧೯೩೮.

೩) ಸಮತಾ ಸೈನಿಕ ದಳದ ಮೂಲಕ ಸಾರ್ವಜನಿಕ ಬಾವಿಗಳನ್ನು ಮತ್ತು ತಾಣಗಳನ್ನು ವಶಪಡಿಸಿಕೊಳ್ಳಿ.

ಅನಂತರ ಪಕ್ಷವನ್ನು ಇಬ್ಭಾಗ ಮಾಡುವವರ ಬಗೆಗೆ ಸಮರ್ಥನೆ ಪರ ಭಾಷಣ ನಡೆಯಿತು. ಆದರೆ ಅಂಬೇಡ್ಕರರ ಸ್ವತಂತ್ರ ಕಾರ್ಮಿಕ ಪಕ್ಷದ ಸದಸ್ಯರಾಗಿ ಎಲ್ಲರೂ ಇದೇ ಪಕ್ಷದ ಅಡಿಯಲ್ಲಿ ಹೊಸ ಪ್ರತಿನಿಧಿಯನ್ನು ಚುನಾಯಿಸಿ. ಒಂದೇ ಪಕ್ಷವನ್ನು ಉಳಿಸಿ. ಸ್ವತಂತ್ರ ಕಾರ್ಮಿಕ ಪಕ್ಷದ್ದೇ ಕಾರ್ಯವನ್ನು ಬಿರುಸಿನಿಂದ ಮುಂದುವರಿಸಬೇಕು ಮತ್ತು ಅಂಬೇಡ್ಕರರ ಭಾಷಣದಿಂದ ಇತರ ವಿರೋಧಿ ಪಕ್ಷದ ಕಣ್ಣುಕುಕ್ಕಿದೆ, ಈಗ ಲೋಕನಿಯುಕ್ತ ಆಡಳಿತ ನಡೆದರೆ ತಮ್ಮ ಗತಿ ಏನಾಗಬಹುದು ಎನ್ನುವುದೇ ಅವರಿಗೆ ಅರ್ಥವಾಗದಂತಾಗಿದೆ. ಡಾಕ್ಟರ್ ಸಾಹೇಬರ ಹೆಸರಿನ ದುರ್ಬಳಕೆ ಮಾಡಿ, ಸ್ವಂತಕ್ಕೆ ಅಂಬೇಡ್ಕರ ಪಕ್ಷದವರು ಎಂದು ಮೆರೆಯುವ ಉಳಿದ ಜನರಿಗೆ ನಾವು ನೀಡುವ ಸಲಹೆ ಏನೆಂದರೆ, ಇನ್ನಾದರೂ ಅಂಬೇಡ್ಕರರ ಆಜ್ಞೆಯನ್ನು ಪರಿಪಾಲಿಸಿ ಸ್ವತಂತ್ರ ಕಾರ್ಮಿಕ ಪಕ್ಷದ ಸದಸ್ಯರಾಗಬೇಕು. ತಮ್ಮ ತಮ್ಮ ಪ್ರತಿನಿಧಿಯನ್ನು ಚುನಾಯಿಸಿ ಸಂಪೂರ್ಣ ನಾಗಪುರದಲ್ಲಿ ಒಂದೇ ಒಂದು ಅಂಬೇಡ್ಕರರ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಶಾಶ್ವತವಾಗಿ ಉಳಿಸಬೇಕೆಂದು ಶ್ರೀ ಆರ್. ಆರ್. ಪಾಟೀಲರು ತಮ್ಮ ವಿಚಾರವನ್ನು ವ್ಯಕ್ತಮಾಡಿದರು.

# ೧೩೦.
# ನ್ಯಾಯಯುತವಾದ ಹಕ್ಕಿಗಾಗಿ ಯುವಕರು ಸಾಯಲೂ ಸಿದ್ಧರಾಗಬೇಕು

ದಿ. ೧೦ ಜನೇವರಿ ೧೯೩೮ರಂದು ಮುಂಬೈ ಅಸೆಂಬ್ಲಿ ಹಾಲ್‌ನಲ್ಲಿ ಕೊಂಕಣ ರೈತರು ತಮ್ಮ 'ಮಾರ್ಚ್' ಮೂಲಕ ಸಂಘಟನೆಯ ಬಲವನ್ನು ತೋರಿಸಿದ್ದು ಮುಂಬೈ ಜನರ ನೆನಪಿನಿಂದ ಅಳಿದಿರಲಿಕ್ಕಿಲ್ಲ. ಸ್ವತಂತ್ರ ಕಾರ್ಮಿಕರ ಪಕ್ಷದ ನಾಯಕತ್ವದಲ್ಲಿ ರೈತರು ಶಿಸ್ತು ಮತ್ತು ಸಂಘಶಕ್ತಿಯಿಂದ ಮೆರವಣಿಗೆಯನ್ನು ಅಸೆಂಬ್ಲಿಗೆ ತೆಗೆದುಕೊಂಡು ಹೋಗಿ, ಡಾ. ಅಂಬೇಡ್ಕರರ ಮುಂದಾಳುತನದಲ್ಲಿ ಸಚಿವ ಖೇರರನ್ನು ಭೇಟಿಯಾದರು. ರೈತರ ಪ್ರತಿನಿಧಿಗಳು ಗೌಡನಿಂದ ಕೊಂಕಣದ ರೈತರಿಗೆ ಆಗುವ ಕಿರುಕುಳವನ್ನು, ದೌರ್ಜನ್ಯವನ್ನು ಖೇರರ ಎದುರಿಗೆ ತೋಡಿಕೊಂಡರು. ಮಾತಿನ ಆಶ್ವಾಸನೆಯ ಹೊರತು ಇದರಿಂದ ಬೇರೆ ಏನೂ ಲಾಭವಾಗಿರಲಿಲ್ಲ. ರೈತರಿಗೆ ಕಾಂಗ್ರೆಸ್ ಸರಕಾರದ ಆಶ್ವಾಸನೆಯ ಯಾವ ನಂಬಿಕೆಯೂ ಇರಲಿಲ್ಲ. ಹೈರಾಣಾದ ರೈತರು, ಸ್ಥಳಿಯ ನಾಯಕರು ಇದರಿಂದ ಪಾರಾಗುವುದು ಹೇಗೆ ಎಂಬ ಬಗೆಗೆ ಯೋಚಿಸುತ್ತಿದ್ದರು. ಹಾಗೆಯೇ ಸ್ವತಂತ್ರ ಕಾರ್ಮಿಕಪಕ್ಷದ ನಾಯಕರೂ, ಶ್ರಮಿಕರಿಗಾಗಿ ಸೆಣಸಾಡುವ ಡಾ. ಅಂಬೇಡ್ಕರರು ಕರಾವಳಿಯನ್ನು ಸುತ್ತಾಡಿ, ರೈತರ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ಅವಲೋಕಿಸಲಿದ್ದಾರೆಂಬ ಸುದ್ದಿಯನ್ನು ಕೇಳಿ ಸ್ಥಳೀಯ ಮುಖಂಡರು ಅವರ ಪ್ರವಾಸದ ರೂಪರೇಷೆಯನ್ನು ರಚಿಸಿದರು. ಅದರಂತೆ ಡಾ. ಅಂಬೇಡ್ಕರ ತಮ್ಮ ಸಹಕಾರಿಗಳಾದ ಭಾಯಿ ಚಿತ್ರೆ, ಸುರೇಂದ್ರನಾಥ ಟಿಪಣಿಸ, ಡಿ.ವ್ಹಿ. ಪ್ರಧಾನ ಮುಂತಾದವರ ಜೊತೆಗೆ ಹಿಂದಿನ ವಾರ ಕೊಂಕಣದ ಪ್ರವಾಸವನ್ನು ಕೈಕೊಂಡರು.

ಕರಾವಳಿಯ ಜನಸಂಖ್ಯೆಯು ಸುಮಾರು ೧೩ ಲಕ್ಷದಷ್ಟಿದ್ದು, ಇಲ್ಲಿಯ ಕುಣಬಿ, ಮಹಾರ, ಮರಾಠರೂ ೮–೧೦ ಲಕ್ಷದಷ್ಟು ರೈತರು ಗೌಡನ ದೌರ್ಜನ್ಯಕ್ಕೆ ಸಿಕ್ಕು ನರಳುತ್ತಿದ್ರು. ಗೌಡರ ದೌರ್ಜನ್ಯವನ್ನು ಬಯಲಿಗೆಳೆಯಲು ಸ್ವಕಾ.ಪ.ವು ಈ ಮುಖ್ಯ ಸಭೆಯನ್ನು ಗೌಡರ ಆಯಕಟ್ಟಿನ ಪ್ರದೇಶದಲ್ಲಿ ಏರ್ಪಡಿಸಿತು.

**ಕಣಕವಲಿಯ ಮೊದಲ ಭವ್ಯಸಭೆ:**– ಅಪಾರ ಜನಸಮುದಾಯ ಸೇರಿದ ಲೌಡ್‌ಸ್ಪೀಕರ್ ಬಳಸಿದ ಭವ್ಯಸಭೆಯೂ ಇಲ್ಲಿ ನೆರವೇರಿದ್ದು ಯಾರಿಗೂ ಗೊತ್ತಿಲ್ಲ. ಆದರೆ ಕೊಂಕಣದ ಮಹಾರರಾದಿಗಳ ಅಸ್ಪೃಶ್ಯರ ಭವ್ಯಸಭೆಯೂ ಕಣಕವಲಿಯಲ್ಲಿ ೧೪ ಮೇ, ೧೯೩೮ರಂದು ಜರುಗಿತು. ಇಲ್ಲಿ ಡಾ. ಅಂಬೇಡ್ಕರರು ಮಾಡಿದ ಭಾಷಣವನ್ನು ಕೇಳಿ ಅಸ್ಪೃಶ್ಯರಲ್ಲಿ ಹೊಸ ಚೈತನ್ಯ ಸಂಚಾರವಾಗದೆ ಇರಲಿಲ್ಲ.

ಮೊದಲಿಗೆ ಒಂದು ದಿನ ವಿಳಂಬ ಮಾಡಿದ ಬಗ್ಗೆ ಸ್ಪಷ್ಟೀಕರಣ ನೀಡಿ, ಅದರ ಬಗ್ಗೆ ಅಂಬೇಡ್ಕರರು ಕ್ಷಮೆಯಾಚಿಸಿದರು. ಬಳಿಕ ಮಾತು ಮುಂದುವರೆಸಿದರು–

'ನಾನಿಲ್ಲಿ ಬೇರೆ ಬಗೆಯಲ್ಲಿ ಭಾಷಣ ಮಾಡಬೇಕಾಗುತ್ತದೆ. ಯಾವ ದಿನದಿಂದ ಮುಂಬೈಯಲ್ಲಿ ಆಂಗ್ಲರ ಕಾಲಿಗೆ ಎರಗಿದರೋ ಅಂದಿನಿಂದ ಮಹಾರ ಸಮಾಜದವರ ದೈವ ತೆರೆಯಲು ಅವಕಾಶವಾಯಿತು. ಆಂಗ್ಲರ ರಾಜ್ಯದಿಂದ ನಮ್ಮ ಹಣೆಬರಹ ಬದಲಾಯಿತು. ಆಂಗ್ಲರು ವಿದೇಶದಿಂದ ಬಂದರು. ಅವರ ಬಳಿ ಸೈನಿಕರು ಇರಲಿಲ್ಲ. ಸೈನ್ಯದ ಹೊರತು ರಾಜ್ಯ ಪಡೆಯುವುದು ಸಾಧ್ಯವಿರಲಿಲ್ಲ. ಪೇಶ್ವೆಯ ರಾಜ್ಯದಲ್ಲಿ

---

ಜನತಾ: ಶನಿವಾರ ೨೮ ಮೇ, ಮತ್ತು ೪ ಜೂನ್ ೧೯೩೮.

ಮೇಲ್ವರ್ಗದವರಿಗೆ ದೊಡ್ಡಸ್ತಿಕೆ ಮತ್ತು ಸುಖಸಂಪತ್ತು ಸಿಗುತ್ತಿರುವುದರಿಂದ, ಅವರು ಆಂಗ್ಲಸೈನ್ಯ ಸೇರುತ್ತಿರಲಿಲ್ಲ. ಪೇಶ್ವೆಯವರು ಅಸ್ಪೃಶ್ಯಾದಿ ದಲಿತರನ್ನು ತೀರ ಅಮಾನುಷವಾಗಿ ನೋಡಿಕೊಳ್ಳುತ್ತಿದ್ದರು. ಮನುಷ್ಯರಾಗಿ ಬದುಕುವ ಹಕ್ಕೂ ಇರಲಿಲ್ಲ. ಶೂರಜಾತಿಯವರಾಗಿಯೂ ಪೇಶ್ವೆಯರಿಂದ ಬೆಲೆಸಿಗಲಿಲ್ಲ. ಹೀಗಾಗಿ ಹೊಲೆಮಾದಿಗ ಸಮಗಾರರಿಗೆ ಆಂಗ್ಲರ ಸೈನ್ಯದಲ್ಲಿ ಭರತಿಯಾಗದೇ ಅನ್ಯಮಾರ್ಗವಿರಲಿಲ್ಲ.

ಹೊಲೆ ಮಾದಿಗ ಸಮಗಾರಾದಿ ಅಸ್ಪೃಶ್ಯವರ್ಗದ ಶೂರರ ಸಹಾಯದಿಂದ ಆಂಗ್ಲರು ಹಿಂದುಸ್ಥಾನದಲ್ಲಿ ರಾಜ್ಯ ಗಳಿಸಿದರು. ಕೋರೆಗಾಂವದಲ್ಲಿ ಕಟ್ಟಿದ ಗೋಪುರವೇ ಇದಕ್ಕೆ ಐತಿಹಾಸಿಕ ಸಾಕ್ಷಿ ನೀಡುತ್ತದೆ. ಇಲ್ಲದಿದ್ದರೆ ಆಂಗ್ಲರಿಗೆ ಈ ದೇಶದಲ್ಲಿ ಎಂದಿಗೂ ರಾಜ್ಯವೇ ಸಿಗುತ್ತಿರಲಿಲ್ಲ. ಅದರ ಪರಿಣಾಮ ಒಳಿತೋ ಕೆಡಕೋ ಎನ್ನುವುದು ನಿಮಗಂತೂ ಗೊತ್ತೆ ಇದೆ. ಮಹಾರರು ರಸ್ತೆಯಲ್ಲಿ ಮುಕ್ತವಾಗಿ ತಿರುಗಾಡಲು ಪೇಶ್ವೆಕಾಲದಲ್ಲಿ ಅವಕಾಶವಿರಲಿಲ್ಲವಂತೆ. ಯಾರಾದರೂ ಮಹಾರರು ಉಗುಳಿದ ಎಂಜಲು ಬ್ರಾಹ್ಮಣರ ಕಾಲಿಗೆ ಅಂಟಿಕೊಂಡರೆ ಅದು ಮೈಲಿಗೆಯಾಗುತ್ತಿತ್ತು. ಅವನು ಮರಳಿ ಸ್ನಾನ ಮಾಡಬೇಕಾಗುತ್ತಿತ್ತು. ಹೀಗಾಗಿ ಮಹಾರರ ಕೊರಳಿಗೆ ಗಡಿಗೆಯನ್ನು ಕಟ್ಟುತ್ತಿದ್ದರು. ಮಹಾರರಿಗೆ ನಾಯಿ ಬೆಕ್ಕುಗಳಷ್ಟು ಬೆಲೆಯಿರಲಿಲ್ಲ. ಆದರೆ ಆಂಗ್ಲರ ಸೈನ್ಯ ಭರತಿಯಿಂದ ಮಹಾರರ ಪರಿಸ್ಥಿತಿಯು ಬದಲಾಯಿತು. ಅವರನ್ನು ಮನುಷ್ಯರಂತೆ ನೋಡಿಕೊಳ್ಳಲಾಯಿತು. ಇಂಥ ಆಂಗ್ಲರ ರಾಜ್ಯದಲ್ಲಿ ಮೊದಲ ಆಡಳಿತದ ಕಾಲದಲ್ಲಿ ೧೦೦-೧೨೪ ಸುಭೇದಾರ, ಅದಕ್ಕಿಂತ ಎಷ್ಟೋ ಹೆಚ್ಚು ಜಮಾದಾರ-ಹವಾಲ್ದಾರ ಆಗಿಹೋದರು. ಹಿಂದೆ ಯಾವ ಮರಾಠರು ಯಾರ ನೆರಳು ಕಂಡು ದೂರ ಸರಿಯುತ್ತಿದ್ದರೋ, ಅವರು ಸೈನ್ಯ ಸೇರಿದ್ದೇ ತಡ, ಅವನದೇ ಊರ ಮಹಾರ ಸುಭೇದಾರನಿಗೆ ಸಲಾಮ ಮಾಡಬೇಕಾಯಿತು. ನಮ್ಮ ಬಡಾಯಿ ಕೊಚ್ಚಿಕೊಳ್ಳಲು ನಾನು ಈ ಇತಿಹಾಸವನ್ನು ಹೇಳುತ್ತಿಲ್ಲ. ೧೮೯೩ರಲ್ಲಿ ಮಹಾರರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳುವುದನ್ನು ಆಂಗ್ಲರು ಸ್ಥಗಿತಗೊಳಿಸಿದರು. ಅದರಿಂದ ಹುದ್ದೆಗೆ ಹೋಗುವುದಕ್ಕೆ ಬಂದಿಹಾಕಲಾಯಿತು. ಯಾವ ಆಂಗ್ಲಸರಕಾರಕ್ಕೆ ಅನ್ನಬೇಯಿಸಿ ಕೊಟ್ಟು, ತಾವು ಗಂಜಿಯನ್ನು ಕುಡಿದರೋ, ತಮ್ಮ ರಕ್ತವನ್ನು ಹರಿಯಿಸಿದರೋ, ಅವರೇ ಏಕೆ ಬಂದಿ ಹಾಕಿದರು ಎಂಬ ಪ್ರಶ್ನೆ ಏಳುತ್ತದೆ. ಆದರೆ ಇದರಲ್ಲಿ ಆಂಗ್ಲರ ದೋಷವೇನೂ ಇಲ್ಲ, ಇದು ನಮ್ಮ ನಿಮ್ಮ ತಪ್ಪು. ಮಹಾರ ಜಾತಿಯು ಅತ್ಯಂತ ದಲಿತ ಜಾತಿ. ಈ ಜಾತಿಗೆ ಯಾವುದೇ ರೀತಿ ಮಾನ-ಸನ್ಮಾನವಿಲ್ಲ. ಅಂಥವರು ಆಂಗ್ಲ ಸರಕಾರದ ಅಧಿಕಾರವನ್ನು ಪಡೆದರೆ ಮರಾಠಾ, ಕ್ಷತ್ರಿಯ ಮುಂತಾದ ಮೇಲ್ಜಾತಿಯ ಜನರು ಅವರಿಗೆ ಸಲಾಮು ಹೊಡೆಯ ಬೇಕಾಗಿರುವುದರಿಂದ ಬಂಡಾಯ ಅರಾಜಕತೆ ಬೆಳೆಯಬಹುದು ಎಂಬ ಕಾರಣಕ್ಕೆ ಸೈನ್ಯದಲ್ಲಿ ಪ್ರವೇಶವನ್ನು ನಿಷೇಧಿಸಲಾಯಿತು. ಅಂದಿನಿಂದ ಗಿರಟೆ ಹಿಡಿದು ಭಿಕ್ಷೆ ಬೇಡಬೇಕಾದ ಸ್ಥಿತಿ ಬಂತು.

ಇಂದು ಇಲ್ಲಿ ಸೇರಿದ ಯುವಕರೆಲ್ಲ ಇನ್ನುಮುಂದೆ ಸತ್ತ ದನಗಳಿಗೆ ಕೈ ಹಚ್ಚುವುದಿಲ್ಲ ಮತ್ತು ಎಂಜಲು ತಿನ್ನುವುದಿಲ್ಲ ಎಂಬ ಪ್ರತಿಜ್ಞೆಯನ್ನು ಮಾಡಬೇಕಾಗಿದೆ. ಮಹಿಳೆಯರು, ಯುವಕರು ಇದನ್ನು ಅಮಲಿಗೆ ತರಲು ಪ್ರಾಣ ಹೋದರೂ ಲೆಕ್ಕಿಸಬಾರದು(ಚಪ್ಪಾಳೆ). ವರಿಷ್ಠವರ್ಗದವರ ಎದುರಿಗೆ ಕೈಚಾಚಿ ಯಾಚನೆ ಮಾಡುವ ದೈನ್ಯಾವಸ್ಥೆಯನ್ನು ತೊರೆಯಬೇಕು. ಇನ್ನು ಮುಂದೆ ಕಾನೂನು ನೀಡಿದ ಹಕ್ಕಿನಂತೆ ನಡೆಯಲು ಹಿಂಜರಿಯಬಾರದು. ಇಂದು ಮಹಾರರ ೨೦ಲಕ್ಷ ವಸತಿಯಿದೆ. ಅದರಲ್ಲಿ ಹಕ್ಕಿಗಾಗಿ ಹೋರಾಡುವಾಗ ಒಂದು ಲಕ್ಷ ಜನರು ಸತ್ತರೆ ಏನಂತೆ? ನೀವು ನ್ಯಾಯದ ಹಕ್ಕಿಗಾಗಿ ಹೋರಾಡಲು ಸಾವಿನ ಹೊಸ್ತಿಲಿಗೆ ಹೋಗುವ ಸಿದ್ಧತೆ ತೋರಬೇಕೆಂದು ಮುದುಕರಿಗಿಂತ ಯುವಕರಿಗೆ ನಾನು ಹೇಳಬಯಸುತ್ತೇನೆ.

ಈಗ ಅಂತಿಮವಾಗಿ ಹೇಳುವ ಮಾತೊಂದಿದೆ. ಈ ದೇಶದಲ್ಲಿ ಹೊಸ ರಾಜಕಾರಣ ಶುರುವಾಗಿದೆ. ಈ ದೇಶದಲ್ಲಿ ಆಂಗ್ಲರ ರಾಜ್ಯವಿದೆ ಎಂಬ ಭಾವನೆ ಸರಿಯಲ್ಲ. ೧೯೩೭ರವರೆಗೆ ಆಂಗ್ಲರ ಸತ್ತೆಯಿತ್ತು. ಆದರೆ ೧೯೩೭ ವರ್ಷದ ಕಾನೂನು ಅದನ್ನು ಜನರ ಸ್ವಾಧೀನಕ್ಕೆ ನೀಡಿದೆ. ಈ ಸತ್ತೆಯ ಲಾಭ ಯಾರಿಗಾಗಲಿದೆ ಎನ್ನುವುದು ಅವರವರ ರಾಜಕಾರಣದ ಪಟುತ್ವವನ್ನು ಅವಲಂಬಿಸಿದೆ. ಕೆಲವು ಕಾಲದ ಹಿಂದೆ ನೀವು ಪ್ರಸಂಗಕ್ಕೆ ತಕ್ಕಂತೆ ಕಲೆಕ್ಟರ್ ಅಥವಾ ತಹಶೀಲ್ದಾರರಿಗೆ ಅರ್ಜಿ ನೀಡಿದರೆ ಅವರು ಅದರ ಬಗೆಗೆ ವಿಚಾರಣೆ ಮಾಡುತ್ತಿದ್ದರು. ಆದರೆ ಇಂದು ಹಾಗೆ ಮಾಡಿದರೆ, 'ಇಂದು ಅಧಿಕಾರ ನಮ್ಮ ಕೈಯಲ್ಲಿಲ್ಲ, ಕಾಯ್ದೆ ಕೌನ್ಸಿಲ್ಲಿನ ಕೈಯಲ್ಲಿದೆ' ಎಂದವರು ಹೇಳುತ್ತಾರೆ. ಈ ಮಾತು ಸತ್ಯ. ನೀವೀಗ ಲಕ್ಷವಿಟ್ಟು ಕಾಯ್ದೆ ಮಂಡಳಿಯ ಕಾರ್ಯವನ್ನು ಗಮನಿಸಬೇಕು. ಯಾವ ಗೊತ್ತುವಳಿಯು ಸ್ವೀಕೃತಗೊಂಡಿತು, ಯಾವುದು ಅಸ್ವೀಕೃತಗೊಂಡಿತು ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ. ಅಸ್ಪೃಶ್ಯರಿಗೆ ೧೫ ಸ್ಥಾನವನ್ನು ನೀಡಲಾಗಿದೆ. ಈ ಜನರು ಏನು ಮಾಡುತ್ತಾರೆ ಎಂದು ಗಮನಿಸಿ, ಅವರನ್ನು ಮತ್ತಷ್ಟು ಜನರು ಹೇಗೆ ಬಂದು ಸೇರಬಹುದು. ಬಹುಮತ ಹೇಗಾಗಬಹುದು ಎನ್ನುವುದರ ಕಡೆಗೆ ಲಕ್ಷವಿರಲಿ. ಹೆಚ್ಚು ಜನರು ಬಂದು ಸೇರಲೆಂದೇ ನಾನು ಸ್ವತಂತ್ರ ಕಾರ್ಮಿಕರ ಪಕ್ಷವನ್ನು ಸ್ಥಾಪಿಸಿದ್ದೇನೆ. ಇಂದು ಚಿಕ್ಕಪಕ್ಷವಾಗಿದ್ದರೂ, ಸಂಖ್ಯೆ ಕಡಿಮೆಯಿದ್ದರೂ ಅದನ್ನು ಬೆಳೆಸಲು ಪ್ರಯತ್ನಿಸಿ. ನಮ್ಮ ಪ್ರದೇಶದಲ್ಲಿ ಅತ್ಯಂತ ದೊಡ್ಡದಾದ ಒಂದು ಪ್ರಬಲ ಸಂಸ್ಥೆಯಿದೆ. ಅದೇ ಕಾಂಗ್ರೆಸ್. ಕಾಂಗ್ರೆಸ್ಸು ಅದೆಷ್ಟೇ ದೊಡ್ಡದಾಗಿದ್ದರೂ ಅದು ಕಡುಬಡವರ ಕಲ್ಯಾಣ ಮಾಡಲಾರದು ಎನ್ನುವುದನ್ನು ನೆನಪಿನಲ್ಲಿಡಿ. ಯಾವ ವರ್ಗದವರಿಂದ ನಿಮ್ಮ ಹಿತವಾಗುತ್ತದೆ ಎನ್ನುವುದು ಗಮನದಲ್ಲಿರಲಬೇಕು. ನಮ್ಮ ಮಾನವೀಯತೆಯನ್ನು ಕಸಿದುಕೊಂಡವರು ಶೇಠಜಿ, ಭಟಜಿಗಳಾಗಿದ್ದರು. ಅದೇ ವರ್ಗದಿಂದಾಗಿ ನಮಗೆ ಅನ್ನಸಿಗುತ್ತಿಲ್ಲ. ಅದೇ ವರ್ಗದವರಿಂದ ನಾವು ಈ ಸ್ಥಿತಿಗೆ ತಲುಪಿದ್ದೇವೆ.

ನೀವು ಕಾಂಗ್ರೆಸ್ ಸೇರಬೇಡಿರೆಂದು ಎಲ್ಲ ಬ್ರಾಹ್ಮಣೇತರ ರೈತಾಪಿ ವರ್ಗದವರಿಗೆ ಹೇಳಬಯಸುತ್ತೇನೆ. ಸಂಕಟಗ್ರಸ್ತರು, ದೀನರೂ ಆದ ನಾವೆಲ್ಲ ಒಂದು. ಹಾಗೆಯೇ ಒಂದಾಗೋಣ. ಕೆಲವು ಹೇಳುವುದೇನೆಂದರೆ, 'ನಾನು ಸಾಮ್ರಾಜ್ಯಶಾಹಿಯ ವಿರುದ್ಧವಿಲ್ಲ. ಆಂಗ್ಲಸರಕಾರವನ್ನು ಹೊಡೆದೋಡಿಸುವ ಇಚ್ಛೆ ನನಗಿಲ್ಲ.' ಆದರೆ ಅದು ಸರಿಯಲ್ಲ. ಶೇಠಜಿ–ಭಟಜಿಯವರೆಲ್ಲ ಮನೆಗಳ್ಳರು. ಅವರ ಮೋಸಗಾರಿಕೆಯನ್ನು ನಿಲ್ಲಿಸಬೇಕು. ನಾವು ನಮ್ಮ ಕಾಲಮೇಲೆ ನಿಂತರೆ ಅದಕ್ಕೆ ಹೆಚ್ಚು ಸಮಯ ಬೇಕಾಗಲಾರದು. ಆಂಗ್ಲರು ಹಡಗಿನಲ್ಲಿ ಕುಳಿತು ಹೋಗುತ್ತಾರೆ! ಹೀಗಿರುವಾಗ ಅವರನ್ನು ಓಡಿಸಬೇಕೆ ಅಥವಾ ಗೌಡರನ್ನು ಸಾಹುಕಾರರನ್ನು ಓಡಿಸಬೇಕೆ?. ಮನೆಯೊಳಗಿನ ಕಳ್ಳರೊಂದಿಗೆ ನಾವು ಸೆಣಸಾಡಬೇಕಿದೆ. ನಿಮಗೆ ಆಂಗ್ಲ ಸರಕಾರ ಬೇಡವೆಂದಾದರೆ ನನಗೂ ಬೇಡ.

ಕಾಂಗ್ರೆಸ್ ಸೇರುವ ಕೆಲ ಬ್ರಾಹ್ಮಣೇತರ ವರ್ಗದವರಿಗೆ, ಅವರ ಮುಖಂಡರಿಗೆ ನನ್ನ ಈ ಮಾತು ಒಪ್ಪಿಗೆ ಆಗುತ್ತಿಲ್ಲ. ಇಂದು ಅವರಿಗೆ ಒಪ್ಪಿಗೆಯಾಗದಿದ್ದರೂ ಮುಂಬರುವ ಐದುವರ್ಷಗಳಲ್ಲಿ ಒಪ್ಪಿಗೆಯಾಗಿ, ಅವರು ನಮ್ಮ ಪಕ್ಷವನ್ನು ಸೇರುತ್ತಾರೆ ಎನ್ನುವುದು ನೆನಪಿರಲಿ(ಚಪ್ಪಾಳೆ). ಗೌಡಕಿ ಪದ್ಧತಿಯು ಒಂದು ರೀತಿಯಲ್ಲಿ ಗುಲಾಮಗಿರಿಯೇ ಆಗಿದೆ. ಈ ವಿಷಯದಲ್ಲಿ ಅದೆಷ್ಟು ಅನ್ಯಾಯ, ದುಃಖ ಸಹಿಸಬೇಕಾಗುತ್ತದೆ ಎನ್ನುವುದು ನಿಮಗೆ ಗೊತ್ತು. ಗೌಡಕಿ ಹೋಗಲಾಡಿಸುವ ಯಾವ ಪ್ರಯತ್ನವನ್ನು ಕಾಂಗ್ರೆಸ್ ಮಾಡಲಿಲ್ಲ. ಇದರ ಮೇಲಿಂದ ಕಾಂಗ್ರೆಸ್ ಯಾರ ಪರವಾಗಿದೆ ಎನ್ನುವುದು ನಿಮ್ಮ ಲಕ್ಷಕ್ಕೆ ಬರುತ್ತದೆ. ಇನ್ನು ಮುಂದೆ ಕಾಂಗ್ರೆಸಿನ ಏಳ್ಗೆಯಾಗಲಾರದು. ಸ್ವತಂತ್ರ ಕಾರ್ಮಿಕ ಪಕ್ಷ ಇಂದು ಸಸಿಯಾಗಿದ್ದರೂ ಮುಂದೆ ವೇಗದಿಂದ

ಬೆಳೆಯಲಿದೆ. ನೀವೆಲ್ಲ ಅದರ ನೆರಳಿನಲ್ಲಿ ಕೂರುತ್ತೀರಿ. ಹಾಗೆಯೇ ಬ್ರಾಹ್ಮಣೇತರ ಶ್ರಮಜೀವಿಗಳೂ ಕೂಡ್ರುತ್ತಾರೆ.

ಡಾ. ಅಂಬೇಡ್ಕರ ಅವರ ಭಾಷಣ ಮುಗಿದ ಬಳಿಕ ಸಭೆಯಲ್ಲಿ (೧) ಸತ್ತದನಗಳನ್ನು ಎಳೆಯಬಾರದು (೨) ಮಹಾರದಲ್ಲಿಯ ಪಾನಾ ಮತ್ತು ಬೇಟೆ ಎಂಬ ಭೇದವನ್ನು ನಾಶಪಡಿಸುವುದು (೩) ಗೌಡಕಿ ನಾಶಪಡಿಸುವುದು ಮತ್ತು ಮಹಾರ ವತನ ಮಸೂದೆಗೆ ಬೆಂಬಲಸೂಚಿಸುವುದು (೪) ಹೊಟೇಲು, ಉಪಾಹಾರ ಗೃಹದಲ್ಲಿ ಇತರ ಸ್ಪೃಶ್ಯ ಹಿಂದೂಗಳಂತೆ ಸರಿಯಾದ ವ್ಯವಸ್ಥೆಯಾಗದಿದ್ದರೆ ಅದರ ಮೇಲೆ ಬಹಿಷ್ಕಾರ ಹಾಕುವುದು (೫) ಮಹಾರ ಸೇವಾಸಂಘ ಇರುವ ಕಡೆಗಳಲ್ಲಿ ಸಂಘ ಮತ್ತು ಶಾಖೆಯನ್ನು ಆರಂಭಿಸುವುದು (೬) ಮಹಾರ ಕೆಲಸವನ್ನು ಸ್ಥಗಿತಗೊಳಿಸಿದರೆ, ಉಳಿದವರೂ ಅದನ್ನು ಮಾಡದೆ ಇರುವುದು (೭) ಪ್ರತಿ ಊರವರು ಎಂಟಾಣೆ ವಂತಿಗೆಯನ್ನು ನೀಡಿ ಸಂಘದ ಬಲವನ್ನು ಹೆಚ್ಚಿಸುವುದು– ಹೀಗೆ ಏಳು ಗೊತ್ತುವಳಿಯನ್ನು ಸ್ವೀಕರಿಸುವುದು.

# ೧೩೧.

# ಬಹುಸಂಖ್ಯಾತ ರೈತ ಮತ್ತು ಕಾರ್ಮಿಕ ವರ್ಗದವರೇ ಈ ದೇಶದ ಸತ್ತಾಧಾರಿಗಳಾಗಬೇಕು

ದಿನಾಂಕ ೧೪ ಮೇ ೧೯೩೮ರ ಕಣಕವಲಿಯ ಭವ್ಯಸಭೆಯ ಬಳಿಕ ೧೦೦ ಮೈಲುಗಳಾಚೆಗಿರುವ ದೇವರುಖ ಎಂಬಲ್ಲಿ ರೈತರ ಸಭೆಯನ್ನು ಏರ್ಪಡಿಸಲಾಯಿತು. ಡಾ. ಅಂಬೇಡ್ಕರರು ತಮ್ಮ ಪ್ರಮುಖ ಮುಖಂಡರ ಸಹಿತ ೧೫ಮೇ ೧೯೩೮ರ ಮಧ್ಯಾಹ್ನ ಒಂದು ಗಂಟೆಗೆ ಕಾರು ಏರಿ ಬಂದರು. ಡಾ. ಅಂಬೇಡ್ಕರ ಅವರನ್ನು ಸ್ವಾಗತಿಸಲು ೪–೫ ಸಾವಿರ ರೈತ ಬಾಂಧವರು ತುಂಬ ಕುತೂಹಲದಿಂದ ಹಾದಿಕಾಯುತ್ತಲಿದ್ದರು. ಈ ಸಭೆಗೆ ಸ್ಪೃಶ್ಯ ಅಸ್ಪೃಶ್ಯ ರೈತ ಬಾಂಧವರ ಜೊತೆಗೆ ಮುಸಲ್ಮಾನ ರೈತರೂ ಆಗಮಿಸಿದ್ದು ವಿಶೇಷವಾಗಿತ್ತು.

ಭಾಯಿಚಿತ್ರೆ, ಡಿ.ವ್ಹಿ. ಪ್ರಧಾನ, ಸುರಬಾ ಟಿಪನಿಸ್, ಭಾಸ್ಕರರಾವ ಕೋವಳೆಘಾಟಿಗೆ ಮುಂತಾದ ಮುಖಂಡರು ಈ ಸಭೆಯಲ್ಲಿ ಭಾಷಣ ಮಾಡಿದರು. ಡಾ. ಅಂಬೇಡ್ಕರ ತಮ್ಮ ಭಾಷಣದಲ್ಲಿ ನೇರವಾಗಿ ಹೇಳಿದ್ದು ಹೀಗೆ–

'ನಮ್ಮ ಉದ್ದೇಶ ಗೌಡಕಿ ಮಸೂದೆಯನ್ನು ಸ್ವೀಕರಿಸುವುದು ಮತ್ತು ರೈತಾಪಿ ವರ್ಗದವರ ಬಡತನವನ್ನು ಸುಧಾರಿಸುವುದು. ರೈತರು ತಮ್ಮ ಸನದು ಹೋರಾಟವನ್ನು ಮುಂದುವರೆಸುವುದು. ಅದರ ಜೊತೆಗೆ ತಮ್ಮ ಸಂಘಟನೆಯನ್ನು ಬಲಪಡಿಸುವುದು. ಕಾಂಗ್ರೆಸ್ಸು ಗೌಡಕಿ ಬಿಲ್‌ನ್ನು ಮಂಜೂರು ಮಾಡದಿದ್ದರೆ ಮುಂದೆ ರೈತರು ಸತ್ಯಾಗ್ರಹಕ್ಕೆ ಸಿದ್ಧರಾಗಿರಬೇಕು. ಕುಣಬಿ ರೈತರು ಇದಕ್ಕಿಂತಲೂ ದೊಡ್ಡಸಂಖ್ಯೆಯಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸೇರುವುದು. ಏಕೆಂದರೆ ಇದೇ ಪಕ್ಷವು ಬಡವರ, ಕಾರ್ಮಿಕರ, ರೈವರ್ಗದವರ ಹಿತವನ್ನು ಕಾಪಾಡುತ್ತದೆ. ಇದರ ವಿರುದ್ಧ ಕಾಂಗ್ರೆಸ್ಸು ಸಾವಕಾರರ, ಗೌಡರ ಮತ್ತು ಸುಶಿಕ್ಷಿತರದ್ದು ಆಗಿದೆ. ಏಕೆಂದರೆ ಅದು ಅವರ ಹಣದ ಬಲದಿಂದ ಬದುಕುತ್ತಿರುವುದುರಿಂದ, ಅದು ರೈತರ ಉದ್ಧಾರ ಮಾಡುತ್ತದೆ ಎಂದು ರೈತರು ಭಾವಿಸಬಾರದು. ಹೀಗಾಗಿ ಎಲ್ಲ ಜಾತಿ, ಪಂಥವನ್ನು ದೂರ ಸರಿಸಿ ಎಲ್ಲ ರೈತರು ಬಿರುಸಿನ ಹೋರಾಟವನ್ನು ಆರಂಭಿಸಿ, ಸಂಘಟಿತರಾಗಿ ಶಿಸ್ತಿನಿಂದ ಹೋರಾಡಬೇಕು. ನಮ್ಮ ಹೋರಾಟ ನಿಜವಾದ ತತ್ವದ್ದು. ಹಿಂದಿ ರಾಜಕೀಯ ಸತ್ತೆಯ ಶೇಠಜಿ, ಭಟಜಿ, ಸಾಹುಕಾರ ಜಮೀನ್ದಾರಾದಿ ಬಂಡವಾಳದಾರರ ಕಾಂಗ್ರೆಸ್ಸಿನ ಕೈಗೆ ಹೋಗುವದಕ್ಕಿಂತ ನಿಜವಾದ ಶ್ರಮಜೀವಿಗಳ ಕೈಗೆ ಹೋಗಬೇಕು. ಬಹುಸಂಖ್ಯಾತರಾದ ರೈತರೇ, ಕಾರ್ಮಿಕವರ್ಗದವರೇ ಈ ದೇಶದ ನಿಜವಾದ ಸತ್ತಾಧಾರಿ ವರ್ಗವಾಗಬೇಕು. ಇದೇ ದೃಷ್ಟಿಯನ್ನು ಇರಿಸಿಕೊಂಡು ನಮ್ಮ ಸ್ವತಂತ್ರ ಕಾರ್ಮಿಕ ಪಕ್ಷವು ದಿಟ್ಟತನದಿಂದ ಕಾರ್ಯ ಮಾಡಲು ಮುಂದಾಗಿದೆ.'

---

ಜನತಾ: ೨೮ ಮೇ, ೪ ಜೂನ್ ೧೯೩೮.

೫.೩೦ ಕ್ಕೆ ಸಭೆಯು 'ಅಂಬೇಡ್ಕರರಿಗೆ ಜಯವಾಗಲಿ', 'ಗೌಡಕೀ ನಾಶವಾಗಲಿ' ಎಂಬ ಘೋಷಣೆಯೊಂದಿಗೆ ಮುಕ್ತಾಯಗೊಂಡಿತು.

ಅನಂತರ ಅದೇದಿನ ಅರವಲಿ(ತಾ.ಸಂಗಮೇಶ್ವರ) ಎಂಬ ಊರಲ್ಲಿ ಸಾಯಂಕಾಲ ಏಳಕ್ಕೆ ಆರಂಭಗೊಂಡಿತು. ಡಾ. ಅಂಬೇಡ್ಕರ, ಶಾಸಕರಾದ ಘಾಟಗೆ, ಶಾಸಕರಾದ ಚಿತ್ರೆ ಮುಂತಾದವರು ಭಾಷಣದಲ್ಲಿ 'ರೈತರು ಸನದಿನ ಪ್ರಕಾರವೇ ಹೋರಾಟ ನಡೆಸಬೇಕು. ಸ್ವತಂತ್ರ ಕಾರ್ಮಿಕ ಪಕ್ಷದ ಸದಸ್ಯರಾಗ ಬೇಕೆಂದು ಹೇಳಿದರು. ಸಭೆ ಎಂಟಕ್ಕೆ ಮುಗಿಯಿತು. ಬಳಿಕ ಎಲ್ಲರೂ ಡಾ. ಅಂಬೇಡ್ಕರ ಸಹಿತ ರಾತ್ರಿ ಒಂಬತ್ತಕ್ಕೆ ಚಿಪಳೂಣನ ಪ್ರವಾಸಿಬಂಗಲೆ ತಲುಪಿದರು. ಅಲ್ಲಿ ನಾಯಿಸ್ಕರ್ ಬಂಧುಗಳು ಅತಿಥಿಗಳಿಗೆ ಸುಗ್ರಾಸ ಭೋಜನವನ್ನು ನೀಡಿದರು. ೧೩ನೇ ತಾರೀಕಿಗೆ ಶ್ರೀ ಗಡಕರಿ ವಕೀಲರು ಅತಿಥಿಗಳಿಗೆ ಅಲ್ಪೋಪಹಾರದ ವ್ಯವಸ್ಥೆಯನ್ನು ಮಾಡಿದ್ದರು. ಎಲ್ಲರೂ ಅಂಬೇಡ್ಕರರ ಜೊತೆಗೆ ಸ್ವತಂತ್ರ ಕಾರ್ಮಿಕ ಪಕ್ಷದ ಆಫೀಸು ನೋಡಲು ಹೋದರು. ಅಂಬೇಡ್ಕರರೇ ಚಿಪಳೂಣ ಆಫೀಸು ಪರಿಶೀಲನೆ ನಡೆಸಿದರು.

ಅಲ್ಲಿಯ ಕೆಲಸ ಮುಗಿಸಿ ಮಧ್ಯಾಹ್ನಕ್ಕೆ ನಾಯಿಸ್ಕರ್ ಅವರ ಮನೆಗೆ ಊಟಕ್ಕೆ ತೆರಳಿದರು. ವಿಶ್ರಾಂತಿಯ ಬಳಿಕ ೧.೩೦ಕ್ಕೆ ಅಲ್ಲಿಂದ ಹೊರಟು ೨.೩೦ಕ್ಕೆ ಗುಹಾಗಾರ ಪ್ರವಾಸಿಮಂದಿರವನ್ನು ತಲುಪಿದರು. ಶ್ರೀ ಆಸಗೋಲಕರ, ಪೋಲಿಸ ಪಾಟೀಲರು ತೆಂಗಿನಕಾಯಿ ಮತ್ತು ಮಾವಿನ ಹಣ್ಣಿನಿಂದ ಸಿದ್ಧಪಡಿಸಿದ ಅಲ್ಪೋಪಹಾರವನ್ನು ಅತಿಥಿಗಳಿಗೆ ನೀಡಿದರು. ಅಲ್ಪ ವಿಶ್ರಾಂತಿಯ ಬಳಿಕ ಸರಿಯಾಗಿ ೩.೩೦ಕೆಕ ಎಲ್ಲರೂ ಸಭಾಮಂಟಪಕ್ಕೆ ಬಂದರು. ಶಾಸಕರಾದ ಘಾಟಗೆ, ಭಾಯಿ ಕೋವಳೆ, ಭಾಯಿ ಟಿಪನಿಸ್‌ಯವರು ಭಾಷಣ ಮಾಡಿದರು. ಡಾ. ಅಂಬೇಡ್ಕರರು ತಮ್ಮ ಭಾಷಣದಲ್ಲಿ ರೈತರು ತಮ್ಮ ಬಡ ಪರಿಸ್ಥಿತಿಯನ್ನು ಹೇಗೆ ಹೋಗಲಾಡಿಸಬೇಕು, ಸಂಘಟಿತರಾಗಿ ಕ್ರೂರ ಗೌಡಕಿ ಪದ್ಧತಿಯನ್ನು ಹೇಗೆ ನಾಶಪಡಿಸಬೇಕು. ಅದರಿಂದ ರೈತರ ದೈನ್ಯಾವಸ್ಥೆಯು ಹೇಗೆ ಬದಲಾಗುತ್ತದೆ. ಕಾಂಗ್ರೆಸ್ಸು ಗೌಡಕಿ ಮಸೂದೆಯನ್ನು ಅಂಗೀಕಾರ ಮಾಡದಿದ್ದರೆ ಮುಂದಿನ ಹೋರಾಟ ಹೇಗಿರುತ್ತದೆ–ಎಂಬ ವಿವರಣೆಯನ್ನು ನೀಡಿದರು. ಸಭೆಯು 'ಅಂಬೇಡ್ಕರರಿಗೆ ಜಯ, ಗೌಡಕಿಪದ್ಧತಿಗೆ ಧಿಕ್ಕಾರ' ಎಂಬ ಘೋಷಣೆಯೊಂದಿಗೆ ಮುಕ್ತಾಯಗೊಂಡಿತು. ಬಳಿಕ ಅಂಬೇಡ್ಕರ ಮತ್ತು ಅತಿಥಿಗಳು ಗುಹಾಗಾರ ಪೇಠೆಯಲ್ಲಿರುವ ಶ್ರೀ ಖೋತ ಎಂಬವರ ಮನೆಗೆ ಅಲ್ಪೋಪಹಾರಕ್ಕೆ ಹೋದರು. ಅಲ್ಪ ವಿಶ್ರಾಂತಿಯ ಬಳಿಕ ಆರುಗಂಟೆಗೆ ಗುಹಾಗಾರದಿಂದ ಹೊರಟು ೭.೩೦ಕ್ಕೆ ಚಿಕಪಳೂಣನ ಸಭಾಮಂಟಪಕ್ಕೆ ಬಂದು ತಲುಪಿದರು. ಮೊದಲಿಗೆ ಭಾಯಿಕೋವಳೆ ಮತ್ತು ಶಾಸಕರಾದ ಘಾಟಗೆಯವರ ಭಾಷಣವಾಯಿತು. ಬಳಿಕ ಡಾ. ಅಂಬೇಡ್ಕರರು ರೈತರಿಗಾಗಿ ಕೈಗೊಂಡ ಈ ಪ್ರವಾಸದ ಮಹತ್ವವನ್ನು ವಿವರಿಸಿ, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಗೆ ಹಾಜರಾಗಬೇಕು, ಎಲ್ಲರೂ ಸ್ವತಂತ್ರ ಕಾರ್ಮಿಕಪಕ್ಷದ ಅಡಿಯಲ್ಲಿ ಸಂಘಟಿತರಾಗಿ ಗೌಡಕಿಪದ್ಧತಿಯನ್ನು ನಾಶಗೊಳಿಸಲು ತಮಗೆ ಸಹಕರಿಸಬೇಕೆಂದು ಕರೆ ನೀಡಿದರು. ಮರುದಿನ ಬೆಳಿಗ್ಗೆ ಎಂಟಕ್ಕೆ ಚಹಾಸೇವಿಸಿ ಚಪಳೂಣದಿಂದ ಹೊರಟು ಹಾದಿಯಲ್ಲಿರುವ ಪರಶುರಾಮ ದೇಗುಲಕ್ಕೆ ಭೇಟಿ ನೀಡಿದರು. ದೇಗುಲದ ಟ್ರಸ್ಟಿಗಳು ಅತಿಥಿಗಳಿಗೆ ಅಲ್ಪೋಪಹಾರ ನೀಡಿದರು. ಅಲ್ಲಿಂದ ೯.೩೦ಕ್ಕೆ ಹೊರಬಿದ್ದು ನೇರವಾಗಿ ಖೇಡ ಎಂಬೂರಿನ ಪ್ರವಾಸಿಮಂದಿರಕ್ಕೆ ಬಂದರು. ಶ್ರೀ ಜಾಧವ ಅವರು ಅತಿಥಿಗಳಿಗೆ ಅಲ್ಪೋಪಹಾರ ನೀಡಿದರು. ಅಲ್ಲಿ ಅಂಬೇಡ್ಕರಾದಿಯಾಗಿ ಎಲ್ಲರೂ ೨ ಗಂಟೆಯವರೆಗೆ ವಿಶ್ರಾಂತಿ ತೆಗೆದುಕೊಂಡರು. ಖೇಡಿನ ಸಭಾಮಂಟಪಕ್ಕೆ ಆಗಮಿಸಿದರು. ಮೊದಲಿಗೆ ತಾಲೂಕು ಸೆಕ್ರೆಟರಿಗಳಾದ ಶ್ರೀ ಖಾಂಬೆ ಮತ್ತು ಶಾಸಕರಾದ ಘಾಟಗೆಯವರು ಭಾಷಣ ಮಾಡಿದರು. 'ರೈತರು ಸನದು ಪದ್ಧತಿಯಲ್ಲೇ ಹೋರಾಡಿ.' ಡಾ. ಅಂಬೇಡ್ಕರರ ನಾಯಕತ್ವಕ್ಕೆ

ಜಯ ತಂದುಕೊಡಬೇಕೆಂದು ಹೇಳಿದರು. ಬಳಿಕ ಅಂಬೇಡ್ಕರರು ಭಾಷಣ ಮಾಡಲು ನಿಂತಾಗ 'ಅಂಬೇಡ್ಕರರಿಗೆ ಜೈ, ಗೌಡಕಿಗೆ ಧಿಕ್ಕಾರ' ಎಂಬ ಜಯಘೋಷ ಹಾಕಲಾಯಿತು. ಅಂಬೇಡ್ಕರರು ರೈತರಿಗೆ ಸಂಘಟಿತರಾಗಿ ಪಕ್ಷದ ಸಂಖ್ಯೆಯನ್ನು ಬಲಪಡಿಸುವಂತೆ ಉಪದೇಶ ಮಾಡಿದರು. ಗೌಡಕಿ ಮಸೂದೆ ತಿರಸ್ಕಾರಗೊಂಡರೆ ಮುಂದೇನು ಮಾಡಬೇಕು ಎಂಬ ಬಗೆಗೆ ಮುನ್ಸೂಚನೆಯನ್ನು ನೀಡಿದರು. ರೈತರು ನ್ಯಾಯ, ಸನದುಶೀಲ ಪದ್ಧತಿಯಲ್ಲಿ ಹೋರಾಡಬೇಕು. ಬೇರೆ ಮಾರ್ಗದಿಂದ ಹೋರಾಡಿದರೆ ಯಶಸ್ವಿಯಾಗಲಾರೆವು. ಸ್ವತಂತ್ರ ಕಾರ್ಮಿಕಪಕ್ಷದ ಮೇಲೆ ನಂಬಿಕೆಯಿಡಿ. ಇದೇ ಪಕ್ಷ ರೈತರ, ಬಡವರ ಹಿತವನ್ನು ಸಾಧಿಸುತ್ತದೆ. ಉಳಿದ ಯಾವ ಪಕ್ಷದ ಮೇಲೂ ನಂಬಿಕೆಯಿಡ ಬಾರದು' ಎಂದರು. ಅನಂತರ ಶ್ರೀ ಚಿತ್ರೆ ಟಿಪಣಿಸ, ಪ್ರಧಾನರು ಭಾಷಣವನ್ನು ಮಾಡಿ ರೈತರು ಸಂಘಟಿತರಾಗಿ ಅಂಬೇಡ್ಕರರ ನಾಯಕತ್ವದಲ್ಲಿ ಸದ್ಯದ ಹೋರಾಟವನ್ನು ಮುಂದುರಿಸಲು ಸಲಹೆ ನೀಡದರು. ಪಕ್ಷದ ಸದಸ್ಯರಾಗುವಂತೆ ಸೂಚಿಸಿದರು. ಸಭೆ ಮುಗಿದ ಬಳಿಕ ಅಂಬೇಡ್ಕರಾದಿಯಾಗಿ ಅತಿಥಿಗಳೆಲ್ಲ ಖೇಡದಿಂದ ದಾಸೋಲಿಗೆ ಹೊರಟರು. ಹಾದಿಯಲ್ಲಿ ಘುರೂಸ ಎಂಬಲ್ಲಿ ಶಾಸಕ ಘಾಟಗೆಯವರ ಮನೆಗೆ ಬಂದರು. ಸುಭೇದಾರ ಘಾಟಗೆ, ಗ್ರಾಮ ಮುಖಂಡರು, ಸ್ಕೌಟಿನವರು, ಊರ ಹಿರಿಯರೆಲ್ಲರೂ ಆಗಮಿಸಿ ಸ್ವಾಗತಿಸಿದರು. 'ಅಂಬೇಡ್ಕರರಿಗೆ ಜೈ' ಎಂಬ ಘೋಷಣೆಯಲ್ಲಿ ಮೆರವಣಿಗೆಯು ಘುರೂಸ ಹೋಲಗೇರಿಗೆ ಆಗಮಿಸಿತು. ಅಲ್ಲಿ ಶ್ರೀ ಸುಭೇದಾರ ಘಾಟಗೆ, ಫನ್ಸನರ್ ಗಣಪತ ಗಮಕಿ ಎಂಬ ಮುಖಂಡರು ಅತಿತಿಗಳ ಭೋಜನದ ವ್ಯವಸ್ಥೆ ಮಾಡಿದರು. ಬಳಿಕ ಆಖಾಡದಲ್ಲಿ ನಡೆದ ಕುಸ್ತಿಕ್ರೀಡೆಯನ್ನು ನೋಡಿದರು. ಡಾ. ಅಂಬೇಡ್ಕರರು ಸ್ಕೌಟ್ ಜೊತೆಗೆ ನಡೆದು ಹೊರಟರು. 'ಅಂಬೇಡ್ಕರರಿಗೆ ಜೈ, ಗೌಡಕಿಗೆ ಧಿಕ್ಕಾರ' ಎಂಬ ಘೋಷಣೆಯನ್ನು ಕೇಳಿ ಮುಸ್ಲಿಂ ಗೌಡರೆಲ್ಲ ಹೆದರಿ ಕಂಗಾಲಾದರು. ಹಲವು ಗೌಡರಂತೂ ಅಡಗಿಕೂತೇ ಅಂಬೇಡ್ಕರ ಅವರನ್ನು ನೋಡಲು ಪ್ರಯತ್ನಿಸುತ್ತಿದ್ದರು. ಶ್ರೀ. ಭಿ. ಗೋ. ಘಾಟಗೆ ಮತ್ತು ಮಾಧವರಾವ ಘುಂಸಕರ, ಗಮಕಿಯವರು ಸ್ಕೌಟ್ ಮತ್ತು ಆಖಾಡದ ವ್ಯವಸ್ಥೆಯ ಉಸ್ತುವಾರಿ ವಹಿಸಿಕೊಂಡಿದ್ದರು. ಲಕ್ಷ್ಮೀಬಾಯಿ ಘಾಟಗೆ, ಸೌ. ಗಂಗೂಬಾಯಿ ಗಮಕಿ ಮತ್ತು ಸೌ. ಮುಕ್ತಬಾಯಿ ಘಾಟಗೆಯವರು ಅಂಬೇಡ್ಕರರಿಗೆ ಆರತಿ ಬೆಳಗಿದರು. ಕು. ಮುಕ್ತಾಬಾಯಿ ಘಾಟಗೆ ಮಂಗಳಪದವನ್ನು ಹಾಡಿದಳು. ೫.೩೦ರ ಸುಮಾರಿಗೆ ಡಾ. ಅಂಬೇಡ್ಕರ ಮತ್ತು ಅತಿಥಿಗಳು ಘುರಸದಿಂದ ಹೊರಟರು. ಸುಭೇದಾರ ಘಾಟಗೆ, ಗಮಕಿಯವರು ಎಲ್ಲರಿಗೂ ವಿದಾಯ ಹೇಳಿದರು. ದಾಪೋಲಿಯಲ್ಲಿ ಕಾಳಕಾಯಿ ಎಂಬಲ್ಲಿ ಅತಿಥಿಗಳ ವಾಸ್ತವ್ಯದ ಏರ್ಪಾಡು ಮಾಡಿದ್ದರು. ಅಲ್ಲಿ ಚಹಾಸೇವಿಸಿ ಎಂಟು ಗಂಟೆಗೆ ಸಭೆಯ ಸ್ಥಾನಕ್ಕೆ ಅಧ್ಯಕ್ಷರು, ಅತಿಥಿಗಳು ಆಗಮಿಸಿದ್ದರು.

**ದಾಸೋಲಿಯಲ್ಲಿ ಭವ್ಯಸಭೆ:–**

ಸಭೆಯ ಆರಂಭಕ್ಕೆ ಸೆಕ್ರೆಟರಿ ಖಾಂಬೆಯವರು ಡಾ. ಅಂಬೇಡ್ಕರರ ಪ್ರವಾಸದ ಬಗೆಗೆ ಮಾಹಿತಿಯನ್ನು ನೀಡಿದರು. ಡಾ. ಅಂಬೇಡ್ಕರರು ಭಾಷಣಕ್ಕೆ ಎದ್ದುನಿಂತಾಗ ಗಂಟಲು ಹೂತುಹೋಗಿ ಮಾತಾಡುವುದೇ ಸಾಧ್ಯವಾಗಲಿಲ್ಲ. ನನ್ನ ಬದಲಿಗೆ ಭಾಯಿಚಿತ್ರೆ ಮಾತಾಡುತ್ತಾರೆಂದು ಹೇಳಿ ಕೂತರು. ಚಿತ್ರೆ ಅವರು ಪ್ರವಾಸದ ಉದ್ದೇಶವನ್ನು ವಿವರಿಸಿ, ಅದು ಡಾಕ್ಟರ್ ಸಾಹೇಬರ ಆರೋಗ್ಯದ ಮೇಲೆ ಎಷ್ಟು ಪರಿಣಾಮ ಬೀರಿದೆ ನೋಡಿ ಎಂದರು. ಅಂಬೇಡ್ಕರರು ಹೇಳಬೇಕಾಗಿರುವ ವಿಷಯವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು. ಗೌಡರ ದೌರ್ಜನ್ಯವನ್ನು ಗೌಡಕಿ ಮಸೂದೆ ಸ್ವೀಕಾರವಾಗುವವರೆಗಾದರೂ ಸಹಿಸಬೇಕಾಗಿದೆ.

ಏಕೆಂದರೆ ಇಂದು ಕಾಂಗ್ರೆಸ್ ಸರಕಾರ, ಅಮಲ್ದಾರರು, ಕೋರ್ಟುಕಚೇರಿಗಳೆಲ್ಲ ಗೌಡರ, ಶೇಠ ಸಾಹುಕಾರರ ಪರವಾಗಿವೆ. ಆದರೂ ನಮ್ಮ ಹೋರಾಟ ಹೀಗೇ ದಿಟ್ಟತನದಿಂದ ಮುಂದುವರಿಸಬೇಕಾಗಿದೆ. ಪ್ರಸಂಗಬಂದರೆ ಆಹುತಿ ನೀಡಲೂ ಹಿಂಜರಿಯುವಂತಿಲ್ಲ. ಇದೂ ಸಾಧ್ಯವಾಗದಿದ್ದರೆ ಕಾಂಗ್ರೆಸ್ಸಿನಂತೆ ಹಕ್ಕಿಗಾಗಿ ಕಾರಾಗೃಹಕ್ಕೆ ಹೋಗಲು ಸಿದ್ಧರಾಗಬೇಕು. ಕೊನೆಗೆ ಮಳೆಗಾಲದ ಬಳಿಕ ಮಸೂದೆಯ ನಿರ್ಣಯವನ್ನು ಗಮನಿಸಿ ಮುಂದಿನ ಹೋರಾಟವನ್ನು ರೂಪಿಸಲಾಗುವುದು. ಆದರೂ ನಿರಾಶರಾಗದೆ, ಸಹನಶೀಲರಾಗಿ ಸದ್ಯದ ಹೋರಾಟವನ್ನು ಮುಂದುವರಿಸಬೇಕಾಗಿದೆ ಎಂದರು. ಅನಂತರ ಭಾಯಿ ಟಿಪಣಿಸ, ಪ್ರಧಾನ, ಚಿಟ್ನಿಸ್, ಕೋವಳೆಯವರ ಉಪದೇಶಪರ ಭಾಷಣ ನಡೆಯಿತು. ಶಾಸಕ ಘಾಟಗೆಯವರ ಉಸ್ತುವಾರಿಯಲ್ಲಿ ಈ ಪ್ರವಾಸ ಯಶಸ್ವಿಯಾಗಿ ಮುಗಿಯಿತು. ಸ್ಥಳೀಯ ನಾಯಕರು, ಕಾರ್ಯಕರ್ತರು ಸಹಕರಿಸಿದರು. ಭಾಯಿ ಚಿತ್ರೆಯವರು ಪಕ್ಷದ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಶಾಸಕ ಘಾಟಗೆಯವರು ಡಾ. ಅಂಬೇಡ್ಕರ ಮತ್ತು ಅವರ ಸಹಕಾರಿಗಳು ತಮ್ಮ ಅಮೂಲ್ಯ ಸಮಯವನ್ನು ಈ ಪ್ರವಾಸಕ್ಕಾಗಿ ವಿನಿಯೋಗಿಸಿದ್ದಕ್ಕೆ ಆಭಾರ ಮನ್ನಿಸಿದರು. ಬಳಿಕ ಅವರೂ, ಭಗಿನಿ ಮಂಡಳದವರೂ ಅಧ್ಯಕ್ಷರಿಗೆ ಮಾಲಾರ್ಪಣೆ ಮಾಡಿದರು.

ಈ ಎಲ್ಲ ಸಭೆಗಳಿಗೆ ೧೦ ರಿಂದ ೧೫ಸಾವಿರ ಮಹಾರರು, ಮುಸಲ್ಮಾನರಾದಿಯಾಗಿ ಸರ್ವಜಾತಿ, ಧರ್ಮದ ರೈತರು ಪ್ರೀತಿ, ಆಸ್ಥೆ ಮತ್ತು ಕುತೂಹಲದಿಂದ ಹಾಜರಾಗಿದ್ದರು. ಸಂಘಟನೆಯವರೂ ಆಗಮಿಸಿದ್ದರು. ಪ್ರತಿ ಸಭೆಗೆ ೨೦–೨೫ ಮೈಲುಗಳಿಂದ ಹಲವು ರೈತಾಪಿ ಜನರು ಬಂದಿದ್ದರು.

## ೧೩೨.
## ಜೀವನದಲ್ಲಿ ಸರ್ವೋಚ್ಚಸ್ಥಾನ ಪ್ರಾಪ್ತಿಯ ಮಹಾತ್ವಾಕಾಂಕ್ಷೆ ಬೆಳೆಸಿಕೊಳ್ಳಿ

ದಿನಾಂಕ ೧೬ಮೇ ೧೯೩೮ ರಂದು ಚಿಪಳೂಣ ಎಂಬಲ್ಲಿ ಡಾ. ಅಂಬೇಡ್ಕರರು ಸ್ಫೂರ್ತಿದಾಯಕ ಭಾಷಣವನ್ನು ಮಾಡಿದರು. ಅವರಿಗಿಂತ ಮೊದಲು ಶ್ರೀಮತಿ ರತ್ನಾಬಾಯಿ ಮಾತಾಡಿದರು. 'ಗೌಡರು ನಮ್ಮ ಮೇಲೆ ಭಯಂಕರ ದೌರ್ಜನ್ಯ ಮಾಡುತ್ತಿದ್ದಾರೆ. ಈಗಂತೂ ತೀರ ಅತಿರೇಕ ತಲುಪಿದೆ. ನೀವು ಇಲ್ಲಿ ಸಭೆಮಾಡಿ ಖೇಡ, ದಾಪೋಲಿ ಬಳಿಕ ಮುಂಬೈಗೆ ಹೋಗುತ್ತೀರಿ. ಆದರೆ ನಾವು ಮಾತ್ರ ಇಲ್ಲೇ ಶಾಶ್ವತವಾಗಿ ಉಳಿಯಬೇಕಾಗುತ್ತದೆ. ನೀವು ಹೋದ ಬಳಿಕ ನಮ್ಮ ಮೇಲಿನ ಹಿಂಸೆ ಮತ್ತೆ ಮುಂದುವರಿಯುತ್ತದೆ. ಹೀಗಿರುವಾಗ ನಮಗಾಗಿ ನೀವೇನು ಮಾಡುತ್ತೀರಿ? ಆದರೂ ನನಗೆ ಡಾ. ಅಂಬೇಡ್ಕರರ ಮೇಲೆ ನಂಬಿಕೆಯಿದೆ.' ವಗೈರೆ. ಈ ಮಾತಿಗೆ ಕಾಂಗ್ರೆಸ್ ಪಕ್ಷದವರು ಕುಪಿತರಾಗಿ ಚಪ್ಪಾಳೆ ಬಾರಿಸಿದರು.

'ನಿಜಕ್ಕೂ ಇಲ್ಲಿ ರೈತರ ಜೊತೆಗಿದ್ದು ಯಥಾಶಕ್ತಿ ಸೇವೆ ಮಾಡಲು ಅವಕಾಶ ಸಿಕ್ಕಿದ್ದರೆ ಧನ್ಯತಾಭಾವ ಮೂಡುತ್ತಿತ್ತು. ಆದರೆ ದುರಾದೃಷ್ಟವೆಂದರೆ, ನಿಮ್ಮಂತೆ ನನಗೂ ವ್ಯವಸಾಯವಿದೆ. ಅದನ್ನು ಮಾಡದ ಹೊರತು ನನ್ನ ಉದರ ನಿರ್ವಹಣೆಯಾಗುವಂತಿಲ್ಲ. ನನ್ನ ವ್ಯವಸಾಯವು ದೊಡ್ಡ ದರ್ಜೆಯದಾಗಿದ್ದರೂ ನಾನು ಕಟ್ಟಲ್ಪಟ್ಟಿದ್ದೇನೆ. ನಾನು ಬಡಪರಿಸ್ಥಿತಿಯಲ್ಲೇ ಜನಿಸಿದೆ. ಅಪ್ಪ ಮಾಡಿದ ೩–೪ಸಾವಿರ ರುಪಾಯಿಸಾಲ ನನ್ನ ತಲೆಯ ಮೇಲಿತ್ತು. ತಾತ್ಪರ್ಯವೇನೆಂದರೆ, ನಾನು ಆಗರ್ಭ ಶ್ರೀಮಂತನಲ್ಲ. ಹೀಗಾಗಿ ನನ್ನಿಚ್ಛೆಯ ವಿರುದ್ಧ ನಿಮ್ಮನ್ನು ತೊರೆದು ನನ್ನ ವ್ಯವಸಾಯಕ್ಕಾಗಿ ನಾನು ಮುಂಬೈಗೆ ಹೋಗಲೇಬೇಕಾಗಿದೆ.

ಈಗ ತಾನೇ ರತ್ನಾಬಾಯಿಯ ಭಾಷಣದ ಬಳಿಕ ಕೆಲವರು ಕುಹಕತನದಿಂದ ಚಪ್ಪಾಳೆ ಬಾರಿಸಿದರು. ನಮ್ಮ ಪಕ್ಷದ 'ಹಜಾಮತಿ'ಯಾಯಿತೆಂದು ಅವರು ಭಾವಿಸಿರಬೇಕು. ಈ ಜನರಿಗೆ ಬಾರಿಸುವ ಹಕ್ಕು ನೀಡಿದವರು ಯಾರು? ಎಂದು ನಾನು ಹೇಳಬಯಸುತ್ತೇನೆ. ನಾವು ಮುಂಬೈಯಲ್ಲಿದ್ದರೂ ಈ ಜನರಂತೂ ಹನ್ನೆರಡೂ ತಿಂಗಳೂ ಇಲ್ಲೇ ಇರುತ್ತಾರೆ. ಅವರಿಗೆ ನಿಮ್ಮ ದುಃಖ ಕಾಣಿಸುವುದಿಲ್ಲವೇ? ಅವರಿಗೆ ಗೊತ್ತಿದ್ದರೂ ಅವರು ನಿಮಗಾಗಿ ಏನೂ ಮಾಡಲು ಬಯಸುವುದಿಲ್ಲ. ಕೆಲವು ಗೌಡರು ರೈತರಿಗೆ 'ನಿಮ್ಮ ಅಂಬೇಡ್ಕರ ಏನು ಮಾಡುತ್ತಾನೆ ನೋಡೇ ಬಿಡುತ್ತೇವೆ' ಎನ್ನುತ್ತಾರಂತೆ. ಆ ಗೌಡರ ಮತ್ತು ನನ್ನ ಅರ್ಹತೆ ಒಂದೇ ಏನು? ಯಾವುದೇ ಗೌಡ ನನ್ನ ಎದುರಿಗೆ ಬಂದರೆ, ನಾನವನನ್ನು ಬೌದ್ಧಿಕತೆಯಿಂದ ಸೋಲಿಸುತ್ತೇನೆ. ಅವರು ನನ್ನ ಮತ್ತು ತಮ್ಮ ತುಲನೆ ಮಾಡುತ್ತಿದ್ದರೆ, ಎಲ್ಲಿ ಹಿಮಾಲಯ, ಎಲ್ಲಿ ಮೂತ್ರದ ಕಲ್ಲು! ಎಂದು ಕೇಳಬಲ್ಲೆ! ನಾನು ಶ್ರೀಮಂತನಾಗಿರದಿದ್ದರೂ ಈವರೆಗಿನ ನನ್ನ ಜೀವನ ನಿಷ್ಕಲ್ಮಷವಾಗಿದೆ. ನಿಮ್ಮ ಹಿತದ ಕಾರ್ಯವನ್ನು ಮಾಡಿದ್ದೇನೆ, ಮುಂದೆಯೂ ಅದನ್ನೇ ಮಾಡುತ್ತೇನೆ.

ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ನೀಡಿದ ವಚನಗಳಲ್ಲಿ ಯಾವುದನ್ನು ಪಾಲಿಸಿದೆ? ಕಾಂಗ್ರೆಸ್ ಈವರೆಗೆ ಮಂಜೂರು ಮಾಡಿದ ಮಸೂದೆಯಲ್ಲಿ ರೈತರ ಹಿತ ಸಂಬಂಧದ್ದು ಏನಿದೆ? ಅದರ ಬದಲು ಗೌಡಿಕೆಯಂತಹ ಮಹತ್ವದ ಬಿಲ್ಲನ್ನು ಕಳೆದ ಹತ್ತು ತಿಂಗಳಿಂದ ಕಾಂಗ್ರೆಸ್ಸು ಮುಂದೂಡುತ್ತಲಿದ್ದು ಚುನಾವಣೆಯ

---

ಜನತಾ: ೨೮ ಮೇ. ೧೯೩೮.

ಕಾಲಕ್ಕೆ ನೀಡಿದ ವಚನಕ್ಕೆ ಮಸಿ ಬಳಿಯುತ್ತಲಿದೆ. ನಾನಿಂದು ಕಾಂಗ್ರೆಸ್ ಸೇರಿಕೊಂಡರೆ ನನಗಲ್ಲಿ ಯೋಗ್ಯಸ್ಥಾನ ಸಿಗಲಿಕ್ಕಿಲ್ಲ. ನನ್ನ ಪ್ರತಿಷ್ಠೆ ಉಳಿಯಲಿಕ್ಕಿಲ್ಲ ಎಂದು ನಿಮಗನಿಸುತ್ತದೆಯೆ? ನಾನೊಂದು ವೇಳೆ ಕಾಂಗ್ರೆಸ್ ಸೇರಿದರೆ, ನನ್ನ ಬುದ್ಧಿಯ ಬಲದಿಂದ ಅಲ್ಲೂ ಪ್ರಭಾವ ಬೀರದೆ ಗೌರವದ ಸ್ಥಾನವನ್ನು ಗಳಿಸದೆ ಇರಲಾರೆ ಎಂಬ ನಂಬಿಕೆ ನನಗಿದೆ. ಗಾಂಧಿಯ ಪ್ರಾಣ ಉಳಿಸಿದವರಾರು? ನಾನು. ಆದರೆ ಗಾಂಧಿಯ ಕಾಂಗ್ರೆಸ್ಸು ಬಡವರಿಗಾಗಿಲ್ಲ ಎನ್ನುವುದು ಖಚಿತವಾಗಿದ್ದರಿಂದ ನಾನು ಕಾಂಗ್ರೆಸ್ ಸೇರಲು ಸಿದ್ಧನಿಲ್ಲ. ಗಾಂಧಿಯ ವ್ಯಕ್ತಿತ್ವದ ಎದುರಿಗೆ ಸುಭಾಷಚಂದ್ರ ಭೋಸ, ಪಂಡಿತ್ ನೆಹರೂ ಅವರು ತಮ್ಮ ತಲೆಬಾಗಿಸಿದರು. ಆದರೆ ಗಾಂಧಿಯ ಪ್ರಭಾವ ನನ್ನ ಮೇಲೆ ಎಂದೂ ಬೀಳಲಿಲ್ಲ. ಕಾಂಗ್ರೆಸ್ ಇಲ್ಲಿಯವರೆಗೆ 'ಭಟಜಿ ಶೇಠಜಿ'ಗಳ ಹಣದಿಂದ ಸಾಕಲ್ಪಡುತ್ತಿರುವುದರಿಂದ ಅದು ಅವರ 'ದಾಸ'ನಾಗಿ ಬಿಟ್ಟಿದೆ. ಅನ್ನ ತಿಂದವರ ಹಂಗಿನಲ್ಲಿರಬೇಕಾಗುತ್ತದೆ. ಹೀಗಿರುವಾಗ ಶೇಠ ಸಾಹುಕಾರರ ಹಣದಿಂದ ಸಾಕಲಾದ. ಕಾಂಗ್ರೆಸ್ ಅವರ ವಿರುದ್ಧ ಹೇಗೆ ಹೋಗಲು ಸಾಧ್ಯ ಹೇಳಿ? ಇಂದಿನವರೆಗೆ 'ಬ್ರಾಹ್ಮಣ' ವರ್ಗದವರು ನಿಮಗಾಗಿ ಏನು ಮಾಡಿದ್ದಾರೆ? ನೀವು ಅವರ ಮನೆಯ ಪಾತ್ರೆ ತಿಕ್ಕುವುದು, ಅವರ ಹೆಂಗಸರ ಸೀರೆ ಒಗೆಯುವುದು ಬಿಟ್ಟು ಬೇರೇನು ಮಾಡಿದ್ದೀರಿ? ಇಂದು ಸರಕಾರಿ ನೌಕರಿಯಲ್ಲಿರುವ ಜನರು ಯಾರು? ಇಂದು ನೀವೆಲ್ಲಿಯೇ ಹೋಗಿ ಜಡ್ಜ, ಮಾಮಲೇದಾರ, ಮುನ್ಸಿಫ್, ಕಲೆಕ್ಟರ್– ಇವರೆಲ್ಲ ಮೇಲುವರ್ಗದವರೇ ಆಗಿದ್ದಾರೆ. ಇಂದು ನಿಮ್ಮ ಸಂಖ್ಯೆಯು ೮೦% ಇದ್ದೂ, ಸರಕಾರಿ ನೌಕರಿಯಲ್ಲಿ ಕಡಿಮೆ ಜನರಿರುವುದು ಯಾವುದರ ಸಂಕೇತ? ನಿಮ್ಮಲ್ಲಿ ಯಾರಾದರೂ ಪ್ರೈಮ್ ಮಿನಿಸ್ಟರ್ ಆಗುವುದನ್ನು ನಾನು ನೋಡಬೇಕಾಗಿದೆ. ನನಗೆ ಹಿಡಿಯಷ್ಟು ಭಟಜಿ–ಶೇಠಜಿಗಳ ರಾಜ್ಯ ಬೇಡ, ೮೦% ಜನರಿರುವ ನಿಮ್ಮ ರಾಜ್ಯಬೇಕು.

ನೀವಿಂದು ಗೌಡರ ದೌರ್ಜನ್ಯದಿಂದಾಗಿ ಪುಕ್ಕಲು ಮತ್ತು ಹೇಡಿಗಳಾಗಿದ್ದಿರಿ. ಗೌಡ ಬರೇ ನಿಮ್ಮನ್ನು ದಿಟ್ಟಿಸಿದರೂ ಸಾಕು ನೀವು ನಡುಗುತ್ತೀರಿ. ಈಗ ಈ ಭಯವನ್ನು ತೊರೆದು 'ಏ' ಎಂದರೆ 'ಯಾಕೋ' ಎನ್ನುವ ಸಿದ್ಧತೆ ನಿಮ್ಮಲ್ಲಿರಬೇಕು. ಅವನು ಕೋಲಿನಿಂದ ಹೊಡೆದರೆ ನೀವೂ ಕೋಲಿನಿಂದಲೇ ಹೊಡೆಯಿರಿ. ಕಾನೂನಿನಂತೆ ಪ್ರತಿಯೊಬ್ಬನಿಗೆ ಸ್ವಸಂರಕ್ಷಣೆ ಮಾಡಿಕೊಳ್ಳುವ ಅಧಿಕಾರವಿದೆ. ನಾನು ಬ್ಯಾರಿಸ್ಟರ್‌ನಾಗಿರುವುದರಿಂದ ಈ ಮಾತು ಹೇಳುತ್ತಿದ್ದೇನೆ. ಏಕೆಂದರೆ ಪ್ರತಿಯೊಬ್ಬರ ಸಹಾಯಕ್ಕೆ ಪೋಲಿಸರನ್ನು ನೀಡುವುದು ಸಾಧ್ಯವಿಲ್ಲ. ನೀವಿಂದು ಜಾತಿಭೇದ, ಧರ್ಮಭೇದವನ್ನು ಮರೆತು ಗೌಡಕಿಯನ್ನು ನಾಮಾವಶೇಷ ಮಾಡಬೇಕಾಗಿದೆ. ರೈತರೆಲ್ಲ ಒಂದೇ ಜಾತಿ ಎಂದು ತಿಳಿಯಬೇಕು. ಹಾಗೆಯೇ ಗೌಡ ಮಹಾರಗೇಣಿದಾರರನ್ನು ಕಿತ್ತೊಗೆದರೆ, ಅದನ್ನು ಮುಸಲ್ಮಾನ ಗೇಣಿದಾರ ಮಾಡಬಾರದು. ಹಾಗೆಯೇ ಮುಸಲ್ಮಾನರನ್ನು ಕಿತ್ತೊಗೆದರೆ ಮಹಾರರು ಕೆಲಸ ಮಾಡಬಾರದು. ಇಂದು ಗೌಡರು ನಿಮ್ಮ ದೌರ್ಜನ್ಯ ಮಾಡುತ್ತಿದ್ದರೂ ಇದೇ ಕೊನೆಯದು. ಮನುಷ್ಯ ಸಾಯುವಾಗ ಹೆಚ್ಚು ಒದ್ದಾಡುತ್ತಾನೆ. ಸ್ವತಂತ್ರ ಕಾರ್ಮಿಕ ಪಕ್ಷವು ನಿಮಗಾಗಿ ಗೌಡಿಕೆ ಮಸೂದೆಯನ್ನು ತಂದಿದೆ. ಇದು ನಿಮಗೂ ಗೊತ್ತಿರಬಹುದು. ಅದರಿಂದ ಕಾಯ್ದೆ ಮಂಡಳದಲ್ಲಿ ಕಾಂಗ್ರೆಸ್ಸು ಬಹುಮತ ಹೊಂದಿರುವುದರಿಂದ 'ಗೌಡಿಕೆ ಬಿಲ್' ಅಂಗೀಕಾರವಾಗುತ್ತದೆ ಎಂದು ಭರವಸೆ ನೀಡುವಂತಿಲ್ಲ. ಬಿಲ್ ಅಂಗೀಕಾರವಾಗದಿದ್ದರೆ ನಾನು ಆಜ್ಞೆ ಮಾಡಿದ ಕೂಡಲೇ ಎಲ್ಲ ಗೇಣಿದಾರರು ಗೌಡನಿಗೆ ಗುತ್ತಿಗೆ ನೀಡುವುದನ್ನು ಸ್ಥಗಿತ ಮಾಡ್ಬಿ ಆಗವನು ನಿಮ್ಮ 'ದಾವೆ' ಹೂಡಿ ಜಪ್ತಿ ವಾರಂಟ್ ತಂದು, ನಿಮ್ಮಲ್ಲಿರುವ ಧಾನ್ಯವನ್ನು ಬೆಲಿಫನಿಂದ ಜಪ್ತು ಮಾಡಿ ಒಯ್ಯುತ್ತಾನೆ. ಆದರೆ ರತ್ನಾಗಿರಿ ಜಿಲ್ಲೆಯ ರೈತರೆಲ್ಲರೂ ಸೇರಿ ಗೌಡನಿಗೆ ಗುತ್ತಿಗೆ ಹಾಕುವುದನ್ನು ನಿಲ್ಲಿಸಿದರೆ ಸರಕಾರಕ್ಕೆ ಪಾಠಕಲಿಸಿದಂತಾಗುತ್ತದೆ. ಏಕೆಂದರೆ ಪ್ರತಿ ತಾಲ್ಲೂಕಿನಲ್ಲೂ ೫೦–೬೦ ಸಾವಿರ ರೈತರಿದ್ದಾರೆ. ಈ ಲೆಕ್ಕದಂತೆ ಗೌಡ ಅಷ್ಟೇ ದಾವೆಯನ್ನು

ಹೂಡಬೇಕಾಗುತ್ತದೆ. ಪ್ರತಿ ತಾಲೂಕಿನಲ್ಲಿ ಇಬ್ಬರೋ ಮೂವರೋ ಬೆಲಿಫ್ ಇರುವುದರಿಂದ ಇಷ್ಟೆಲ್ಲ ರೈತರಿಂದ ವಸೂಲಿ ಮಾಡುವುದು ಅಸಾಧ್ಯ. ಇದರಿಂದ ಗೌಡಕಿಗೆ ಆಘಾತಬೀಳದೆ ಇರಲಾರದು. ಆಗ ನೀವು ಕಾರಾಗೃಹಕ್ಕೆ ಹೋಗಲೂ ಸಿದ್ಧರಾಗಬೇಕು. ನಿಮಗಾಗಿ ನಾನು ಕಾರಾಗೃಹ ಸೇರಲೂ ಸಿದ್ಧ. ಪ್ರಸಂಗ ಬಂದರೆ ಪಕ್ಷದ ಕಾರ್ಯಕರ್ತರೂ ಸಿದ್ಧರಾಗುತ್ತಾರೆ. ಆದರೆ ನೀವೂ ಆತ್ಮಬಲಿದಾನಕ್ಕೆ ಸಿದ್ಧರಾಗಬೇಕು. ಸೆರೆವಾಸ ಅಪಮಾನವಲ್ಲ. ಏಕೆಂದರೆ ಅಧಿಕಾರದಲ್ಲಿರುವ 'ಎಲ್ಲ ಕಾಂಗ್ರೆಸ್ ದಿವಾನರು' ಸೆರೆಮನೆಗೆ ಹೋಗಿ ಬಂದವರೇ, ನೀವು ಕಳ್ಳತನ ಅಥವಾ ಯಾವುದೇ ಅಪರಾಧಕ್ಕಾಗಿ ಸೆರೆಮನೆಗೆ ಹೋಗುತ್ತಿಲ್ಲ. ಒಂದು ತತ್ವಕ್ಕಾಗಿ ಹೋಗುತ್ತಿದ್ದೀರಿ, ಅಷ್ಟೇ.

'ಸ್ವತಂತ್ರ ಕಾರ್ಮಿಕ ಪಕ್ಷವು ರೈತರನ್ನು ವಂಚಿಸುವ ಪಕ್ಷವಾಗಿದೆ. ಅಂಬೇಡ್ಕರರು ಮಹಾರರ ಮೂಲಕ ಕುಲಗೆಡಿಸುವ, ಪಂಕ್ತಿ ಭೋಜನ, ಲಗ್ನ ಸಮಾರಂಭದಲ್ಲಿ ಗಲಿಬಿಲಿಯಂಚುವ ಪ್ರಯತ್ನ ಮಾಡುತ್ತಿದೆ' ಎಂದು ಕಾಂಗ್ರೆಸ್ಸಿನ ಕೆಲಪ್ರಚಾರಕರು ವದಂತಿಯನ್ನು ಹರಡುತ್ತಿದ್ದಾರೆ. ನೀವು ಅವರ ಮಾತಿಗೆ ಮರಳಾಗಬೇಡಿ. ನಮ್ಮ ಮಹಾರ ಜನರಲ್ಲಿ ಉತ್ತಮ ಹುಡುಗಿಯರು ಇಲ್ಲವೇ? ಮಹಾರ ಜನರು ಸತತ ನನ್ನನ್ನು ಅನುಸರಿಸುತ್ತಾರೆ ಎಂಬ ನಂಬಿಕೆ ನನಗಿದೆ. ಆದರೆ ನೀವು ಗೇಣಿದಾರರು ಮತ್ತು ಉಳಿದವರು ಗೌಡರ ಮಸೂದೆ ಅಂಗೀಕಾರಗೊಂಡ ಬಳಿಕ ಸ್ವತಂತ್ರ ಕಾರ್ಮಿಕಪಕ್ಷದ ಜೊತೆಗಿನ ಸಂಬಂಧವನ್ನು ಕಡಿದುಕೊಂಡು, ಹೊಳೆದಾಟಿದ ಮೇಲೆ....' ಅಂತಾರಲ್ಲ ಹಾಗೆ ಮಾಡಲಾರರು ಎಂಬ ನಂಬಿಕೆ ನನಗಿದೆ. ನೀವು ಹಲವಾರು ತಲೆಮಾರಿನವರೆಗೆ ಸ್ವತಂತ್ರ ಕಾರ್ಮಿಕಪಕ್ಷದ ಜೊತೆಗೆ ಸಂಬಂಧವಿರಿಸಿಕೊಳ್ಳಿ, ಏಕೆಂದರೆ ಗೌಡಕಿ ಮಸೂದೆಯ ಬಳಿಕ ಹಲವು ಬಿಲ್ಲ್‌ನ್ನು ಪಕ್ಷ ತರಲಿದೆ. ರೈತರ ಮತ್ತು ಕಾರ್ಮಿಕರ ಕೈಗೆ ಸತ್ತೆಯನ್ನು ತಂದು ಕೊಡುವುದೇ ಸ್ವತಂತ್ರ ಕಾರ್ಮಿಕಪಕ್ಷದ ಅಂತಿಮ ಧ್ಯೇಯ. ಆದರಿಂದ ಅವರದೇ ಸರಕಾರ ಅಸ್ತಿತ್ವಕ್ಕೆ ಬರಲಿದೆ.' ಈ ರೀತಿಯಲ್ಲಿ ಅಂಬೇಡ್ಕರರು ೧.೩೦ ಗಂಟೆಯ ಕಾಲದ ವಿಚಾರಪೂರಿತ ಭಾಷಣ ಮುಗಿದ ಬಳಿಕ ಭಾಯಿ ಟಿಪಣಿಸ, ಭಾಯಿ ಚಿತ್ರೆ, ಭಾಯಿ ಕೋವಳೆ, ಭಾಯಿ ಪ್ರಧಾನ ಮುಂತಾದವರೂ ಭರ್ಜರಿ ಭಾಷಣ ಮಡಿದರು. 'ಡಾ. ಅಂಬೇಡ್ಕರರಿಗೆ' ಜಯವಾಗಲಿ' ಎಂಬ ಜೈಘೋಷದೊಂದಿಗೆ ಸಭೆ ಮುಕ್ತಾಯಗೊಂಡಿತು.

## ೧೩೩.
# ಗೌಡಕಿಯನ್ನು ನಾಶಗೊಳಿಸಲು ನಾನು ಕೈಗೆ ಕಂಕಣ ಕಟ್ಟಿದ್ದೇನೆ

ರತ್ನಾಗಿರಿ ಜಿಲ್ಲೆಯ ಕಾರ್ಯಕ್ರಮ ಮುಗಿಸಿದ ಬಳಿಕ ಡಾ. ಅಂಬೇಡ್ಕರ ಅವರು ವಿಶ್ರಾಂತಿಗಾಗಿ ೧೮ ಮೇ, ೧೯೩೮ರಂದು ಮಹಾಡಗೆ ತೆರಳಿದರು. ೨೦ ಮೇ, ೧೯೩೮ರಂದು ಅಲ್ಲಿಯ ಪ್ರಸಿದ್ಧ ಗಾಡಿತಲದಲ್ಲಿ ರಾತ್ರಿ ಒಂಬತ್ತಕ್ಕೆ ಬಹಿರಂಗ ಸಭೆಜರುಗಿತು. ಸುಮಾರು ೧೦,೦೦೦ ರೈತರು ತುಂಬ ಉತ್ಸಾಹದಿಂದ ಆಗಮಿಸಿದ್ದರು. ವಿರೋಧಿ ಪಕ್ಷದವರು ಬೇಕೆಂದೇ ಬಂದಿದ್ದರು. ಅಸ್ಪೃಶ್ಯರಿಗಿಂತ ಸ್ಪೃಶ್ಯರೈತರ ಸಂಖ್ಯೆಯೇ ಹೆಚ್ಚಿತ್ತು. ಶೇಠ, ಸಾಹುಕಾರ, ಜಮೀನ್ದಾರ ಮುಂತಾದ ಬಂಡವಾಳದಾರರೂ ಭಯಚಕಿತರಾಗಿ ಆಚೆ ಈಚೆ ನಿಂತು ಮೋಜು ನೋಡುತ್ತಿದ್ದರು. ಡಾ. ಅಂಬೇಡ್ಕರ ಒಂಬತ್ತರ ಸುಮಾರಿಗೆ ಸ್ವಯಂಸೇವಕರ ಸಾಲಿನ ನಡುವಿನಿಂದ ನಡೆದು ಸಭಾಸ್ಥಾನಕ್ಕೆ ಬಂದರು. ಮೊದಲಿಗೆ ಶ್ರೀ ನಾನಾಸಾಹೇಬ ಟಿಪಣಿಸರು ಕೋಲಾಬಾ ಜಿಲ್ಲೆಯ ರೈತರಿಗಾಗಿ ಸ್ವತಂತ್ರ ಕಾರ್ಮಿಕಪಕ್ಷ ಏನು ಮಾಡಿತು ಎಂಬ ವಿಷಯವನ್ನು ವಿವರವಾಗಿ ನೀಡಿದರು. ಮುರ್ಶಿ ಚಾಂಡೋರೆ–ಮುಂತಾದ ಗೌಡರು ಊರಲ್ಲಿ ರೈತರಮೇಲೆ ನಡೆಸಿದ ದೌರ್ಜನ್ಯವನ್ನು ದೂರ ಮಾಡಿದ ಶ್ರೇಯಸ್ಸು ಸ್ವತಂತ್ರ ಕಾರ್ಮಿಕಪಕ್ಷಕ್ಕೆ ಸೇರಬೇಕು ಎಂದು ಹೇಳಿದರು. ಅನಂತರ ಜನರು ಕರತಾಡನ ಮಾಡಿದ ಬಳಿಕ ಡಾ. ಅಂಬೇಡ್ಕರರು ಭಾಷಣಮಾಡಲು ಎದ್ದುನಿಂತರು. ಮುಂಬೈ ಪ್ರಾಂತದ ಕಾಂಗ್ರೆಸ್ಸಿನ ರಾಜಕಾರಣ ಮತ್ತು ಗೌಡಕಿ ಬಿಲ್ ಈ ಎರಡು ವಿಷಯಗಳ ಕುರಿತು ಸುಮಾರು ಒಂದೂವರೆ ಗಂಟೆಯ ಕಾಲ ಮಾತಾಡಿದರು.

'ಚುನಾವಣೆಗಿಂತ ಮೊದಲು ಕಾಂಗ್ರೆಸ್ಸು ರೈತರಿಗೆ ಸಾಕಷ್ಟು ಆಕರ್ಷಕ ಆಶ್ವಾಸನೆಯನ್ನು ನೀಡಿ ಅವರ ಮತಗಳನ್ನು ಗಳಿಸಿದರು. ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿದ ಹನ್ನೊಂದು ತಿಂಗಳು ಗತಿಸಿದರೂ ಜನಹಿತದ ಒಂದೂ ಕೆಲಸ ಅವರು ಮಾಡಲಿಲ್ಲ. ಪದವಿದಾನ ವಿರೋಧ, ಲೋಕಲ್ ಬೋರ್ಡ್ ಮುಂತಾದ ನಿಷ್ಫಲ, ನಿರುಪಯೋಗಿ ಮಸೂದೆಯನ್ನು ಅಂಗೀಕರಿಸಿ ಕಾಂಗ್ರೆಸ್ ಮಂತ್ರ ಮಂಡಳವು ಕಾಲಹರಣ ಮಾಡಿ ಜನರನ್ನು ವಂಚಿಸುತ್ತಲಿದೆ. ಆದರೂ ರೈತರ ಪ್ರತಿಭಟನೆಗೆ ಹೆದರಿ ರೈತರ ಹೊಲಗಳನ್ನು ಮಾರಲು ನಿಷೇಧ ಹೇರುವ ಮಸೂದೆಯನ್ನು ಕಾಂಗ್ರೆಸ್ ಸ್ವೀಕರಿಸಿದೆ. ಅದರಲ್ಲೂ ಸಹ ಅಂಥ ಸತ್ವವಿರಲಿಲ್ಲ. ರೈತರ ಹಿತಕ್ಕೆ ಸಂಬಂಧಿಸಿದ ಸ್ವತಂತ್ರ ಕಾರ್ಮಿಕ ಪಕ್ಷವು ಮಂಡಿಸಿದ ಹಲವು ಉಪಸೂಚನೆಗಳನ್ನು ಸರಕಾರ ನಿರಾಕರಿಸಿತು. ತುಂಬ ಪ್ರಯಾಸದಿಂದ ರೈತರ ಉಪಯೋಗಕ್ಕೆ ಬರುವ ಎತ್ತುಗಳ ಜೋಡಿಯನ್ನು ಜಪ್ತು ಮಾಡಬಾರದು ಎನ್ನುವ ಉಪಸೂಚನೆಯನ್ನು ಮಾತ್ರ ಅದು ಅಂಗೀಕರಿಸಿತು. ಈ ರೀತಿ ಕಾಂಗ್ರೆಸ್ಸು ರೈತರನ್ನು ವಂಚಿಸುತ್ತಲಿದೆ. ಶೇಠ, ಸಾಹುಕಾರರ ಹಣದ ಬಲದಿಂದ ಚುನಾಯಿತರಾದ ಕಾಂಗ್ರೆಸ್ ಸರಕಾರವು ತನ್ನ ಅನ್ನದಾತರ ವಿರುದ್ಧ ಕಾನೂನು ರಚಿಸಿ, ಎಂದಿಗೂ ರೈತರ ಹಿತವನ್ನು ಮಾಡಲಾರದು ಎನ್ನುವುದು ಗಮನದಲ್ಲಿರಲಿ.

ಗೌಡಕಿಯನ್ನು ನಾಶಗೊಳಿಸಲು ನಾನು ಕಂಕಣ ಬದ್ಧನಾಗಿದ್ದೇನೆ. ಕಾಂಗ್ರೆಸ್ ಸರಕಾರವು ಮಸೂದೆಗೆ

---

ಜನತಾ: ೪ ಜೂನ್ ೧೯೩೮.

ಬೆಂಬಲ ನೀಡುವುದೋ ಇಲ್ಲವೋ ಹೇಳಲೂ ಬರುವುದಿಲ್ಲ. ಆದರೆ ಗಾಳಿ ವಿರುದ್ಧ ದಿಕ್ಕಿನತ್ತ ಹರಿಯುತ್ತಲಿದೆ. ಒಂದು ವೇಳೆ ಗೌಡಕಿ ಬಿಲ್ಲು ಮಂಜೂರಾಗದಿದ್ದರೆ ನಾನು ಮತ್ತು ನನ್ನ ಸಹಕಾರಿಗಳು ಕಾರಾಗೃಹಕ್ಕೆ ಹೋಗುವ ನಿಶ್ಚಯ ಮಾಡಿದ್ದೇವೆ. ನೀವು ನಮ್ಮ ಬೆನ್ನ ಹಿಂದೆ ಬರಬೇಕು. ಇಷ್ಟು ಸಿದ್ಧತೆ ಮಾಡಿದರೆ ಗೌಡಕಿ ಪದ್ಧತಿ ನಾಶಗೊಳ್ಳಲು ಸಮಯ ಬೇಕಾಗಲಾರದು.

ಅನಂತರ ರೈತರ ಪ್ರಿಯ ಮುಖಂಡರಾದ ಶ್ರೀ ಭಾಸ್ಕರರಾವ ಕೋವಳೆಯವರು ಮಾತಾಡಲು ಎದ್ದುನಿಂತರು. ಅವರು ತಮ್ಮ ಕಂಚಿನ ಕಂಠದಲ್ಲಿ ಹೇಳಿದರು, "ರಾಷ್ಟ್ರಗುರು ಡಾ. ಬಾಬಾಸಾಹೇಬ ಅಂಬೇಡ್ಕರರು ಹೇಳಿದಂತೆ ನೀವು ನಡೆದುಕೊಳ್ಳಿ. ಅವರು ನೀಡಿದ ಮಂತ್ರದಂತೆ ವರ್ತಿಸಿ. ಗೌಡ ಸಾಹುಕಾರನ ಮಾತಿಗೆ ಮರುಳಾಗಿ ನಿಮ್ಮನಿಮ್ಮಲ್ಲಿ ಒಡಕು ಬರದಂತೆ ನೋಡಿಕೊಳ್ಳಿ. ಅಂದಾಗ ಗೌಡಕಿ ನಾಶಗೊಳ್ಳಲು ಸಮಯ ಹಿಡಿಯಲಿಕ್ಕಿಲ್ಲ." ಕೋವಳೆಯವರ ಭಾಷಣದ ಬಳಿಕ ವಿರೋಧ ಪಕ್ಷದ ಇಬ್ಬರಿಗೆ ಮಾತಾಡಲು ಅನುಮತಿ ನೀಡಲಾಯಿತು.

## ೧೩೪.
# ನಮ್ಮ ಪಕ್ಷದ ಸದಸ್ಯರಾಗಿ, ಪಕ್ಷವನ್ನು ಬಲಪಡಿಸಿ

ಜಾವಳಿ ತಾಲೂಕಿನ ಜನತೆಯು ಡಾ. ಅಂಬೇಡ್ಕರ ಅವರು ತಮ್ಮ ತಾಲೂಕಿಗೆ ಭೇಟಿ ಕೊಡಲೆಂದು ಬಹಳ ದಿನಗಳಿಂದ ಬಯಸಿದ್ದರು. ಅವರು ಸುಭೇದಾರ ಸವಾದಕರ ಅವರನ್ನು ಭೇಟಿಯಾಗಲು ೨೧ಮೇ, ೧೯೩೮ರಂದು ಶನಿವಾರ ಪಾಚಗಣಿಗೆ ಬರಲಿದ್ದಾರೆ ಎಂಬ ವಾರ್ತೆಯು, ಮೇ ೧೯ರಂದು ತಿಳಿದ ಕೂಡಲೇ ಒಂದೇ ದಿನದೊಳಗೆ ಜಾವಳಿ ತಾಲೂಕಾ ಸ್ವತಂತ್ರ ಕಾರ್ಮಿಕಪಕ್ಷದ ಅಧಿವೇಶನವನ್ನು ಶಾಸಕ ಭಾಯಿ ಚಿತ್ರೆಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಬೇಕೆಂದು ಕಾರ್ಯಕರ್ತರು ನಿರ್ಧರಿಸಿದರು. ಶುಕ್ರವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ಪಾಚಗಣಿಯ ಸುತ್ತಮುತ್ತ ಆರುಮೈಲಿನೊಳಗಿರುವ ಹಳ್ಳಿಗಳಿಗೆ ಕರಪತ್ರವನ್ನು ಹಂಚಿ ಪ್ರಚಾರ ಕಾರ್ಯವನ್ನು ಕೈಕೊಂಡರು. ಶನಿವಾರ ಬೆಳಿಗ್ಗೆ ಸರಿಯಾಗಿ ಹತ್ತೂವರೆಗೆ ಡಾ. ಅಂಬೇಡ್ಕರ, ಶಾಸಕರಾದ ಭಾಯಿ ಚಿತ್ರೆ, ರೇವಜಿ ಡೋಳಸ, ನಾನಾಸಾಹೇಬ ಟಿಪಣಿಸ, ಕೋವಳೆ, ಮತ್ತು ಸರದಾರ ಆದಿಯಾಗಿ ಪಾಚಗಣಿಯ ಸ್ವತಂತ್ರ ಕಾರ್ಮಿಕ ಪಕ್ಷದ ಶಾಖೆಯ ಆಫೀಸಿಗೆ ಬಂದು ತಲುಪಿದರು. ಶಾಖೆಯ ಚೇರಮನ್‌ರಾದ ಡಾ. ಎಸ್.ಎಸ್. ಬಂದಿನೋಡೆ ಅವರು ಅತಿಥಿಗಳನ್ನು ಸ್ವಾಗತಿಸಿದರು. ಸ್ವಲ್ಪ ವಿಶ್ರಾಂತಿಪಡೆದು ಅಲ್ಪೋಪಹಾರವನ್ನು ಸ್ವೀಕರಿಸಿದರು. ಮಧ್ಯಾಹ್ನ ಹನ್ನೆರಡುಗಂಟೆಗೆ ಸುಭೇದಾರ ಸವಾದಕರರನ್ನು ಭೇಟಿಯಾಗಲು ಡಾ. ಬಿಲಿಮೋರಿಯಾ ಹಾಸ್ಪಿಟಲಿಗೆ ಹೋದರು. ಮೊದಲಿಗೆ ಕುಶಲ ಪ್ರಶ್ನೆಯ ಬಳಿಕ ಸವಾದಕರರ ಆರೋಗ್ಯದ ಬಗ್ಗೆ ಕೇಳಿದರು. ಅವರು ಚೇತರಿಸಿಕೊಳ್ಳುವುದನ್ನು ಕಂಡು ಡಾ. ಅಂಬೇಡ್ಕರ ಅವರಿಗೆ ಸಮಾಧಾನವಾಯಿತು. ಸುಭೇದಾರರಿಗೆ ತಮ್ಮ ಆರೋಗ್ಯಕ್ಕಿಂತಲೂ ಪರಿಸರದ ಸಾಮಾಜಿಕ, ರಾಜಕೀಯ ವಿದ್ಯಮಾನ ಹೇಗೆ ನಡೆದಿದೆ ಎಂಬ ಚಿಂತೆ ಕಾಡುತ್ತಿತ್ತು. ಅವರು ಒಂದೊಂದಾಗಿ ಹಲವು ಪ್ರಶ್ನೆಗಳನ್ನು ಕೇಳಿದರು. ಅಂಬೇಡ್ಕರ ಚಿತ್ರೆ, ಟಿಪಣಿಸರು ಅವರ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿದರು. ಸುಭೇದಾರರ ಅಂತರಂಗದಲ್ಲಿ ಎಂಥದೋ ಚಡಪಡಿಕೆಯಿರುವುದು ಅವರ ಮಾತಿನಿಂದ ತಿಳಿದುಬಂತು. ಅಗಾಗ ಅವರ ಕಣ್ಣಿನಿಂದ ಕಂಬನಿ ಉರುಳುತ್ತಿತ್ತು. ಕೊನೆಗೆ ಅಂಬೇಡ್ಕರ ಹೇಳಿದರು –'ಸುಭೇದಾರ, ಆರೋಗ್ಯ ಸಂಪೂರ್ಣ ಸುಧಾರಿಸುವವರೆಗೆ ನೀವು ಯಾವ ಚಲನೆಯನ್ನು ಮಾಡಬೇಡಿ, ವೈದ್ಯರು ಅನುಮತಿ ನೀಡುವವರೆಗೂ ಅಸ್ಪತ್ರೆಯಿಂದ ಹೊರಬೀಳಬೇಡಿ', ಹೀಗೆ ಸುಭೇದಾರರ ಜೊತೆಗೆ ಒಂದೂವರೆ ಗಂಟೆ ಕಳೆದು, ಎಲ್ಲರೂ ಜಡವಾದ ಮನದಿಂದ ವಿದಾಯ ಹೇಳಿ ಹೊರಬಿದ್ದರು. ಎಲ್ಲರನ್ನೂ ಬೀಳ್ಕೊಡಲು ಸುಭೇದಾರ ಕೆಲವು ಹೆಜ್ಜೆ ನಡೆದು ಬಂದರು. ಎರಡುಗಂಟೆಗೆ ಸೇಂಟ್‌ಲುಕಸ್ ನರ್ಸಿಂಗ್‌ಹೋಮ್‌ನ ಮೆಡಿಕಲ್ ಸುಪರಿಂಟೆಂಡೆಂಟ ಆದ ಡಾ॥ ಫ್ಯುಲರ ಅವರ ಮನೆಯಲ್ಲಿ ಡಾ. ಅಂಬೇಡ್ಕರ ಮತ್ತು ಉಳಿದ ಅತಿಥಿಗಳಿಗೆ ಭವ್ಯ ಪಾರ್ಟಿಯನ್ನು ಏರ್ಪಡಿಸಲಾಗಿತ್ತು. ಬಳಿಕ ಎಲ್ಲರೂ ಸನಿಹದಲ್ಲಿರುವ ಭವ್ಯ ಸಭಾಮಂಟಪಕ್ಕೆ ಬಂದರು. ಬ್ಯಾಂಡಿನ ಸುಸ್ವರ ಕೇಳಿ ಬರುತ್ತಿತ್ತು. ಹುಡುಗರು ಲೇಝಿಮ ಕುಣೀತದಲ್ಲಿ ಮೈಮರೆತಿದ್ದರು. ಪಾಚಗಣಿಯ ಸಮತಾಸೈನಿಕ ದಳದವರು ತಮ್ಮ ಗಣ ವೇಷ ಧರಿಸಿ ಬಂದಿದ್ದರು. ಸಮ್ಮೇಳನದ

---

ಜನತಾ: ೧೧ ಜೂನ, ೧೯೩೮.

ಕಾರ್ಯಕರ್ತರು ಒಂದೇ ದಿನ ಪ್ರಚಾರ ಮಾಡಿದ್ದರೂ ಎರಡುಸಾವಿರ ಜನರು ಸೇರಿದ್ದರು. ಸಮ್ಮೇಳನದ ಮಂಟಪದ ಎದುರಿಗೆ ಸುಮಂಗಲೆಯರು ಅಂಬೇಡ್ಕರ ಅವರಿಗೆ ಆರತಿ ಬೆಳಗಿ ಮಾಲಾರ್ಪಣೆಯನ್ನು ಮಾಡಿದರು. ಸಮತಾಸೈನಿಕದಳ ಮತ್ತು ಬ್ಯಾಂಡಿನವರು ವಂದನೆಯನ್ನು ಸಲ್ಲಿಸಿದರು. ಅಂಬೇಡ್ಕರ ಎಂಬ ಜೈಕಾರ ಗಗನವನ್ನು ಭೇದಿಸುತ್ತಿತ್ತು. ಇಂಥ ಆಡಂಬರದಲ್ಲಿ ಅಂಬೇಡ್ಕರ ಅವರು ವೇದಿಕೆಯನ್ನು ಏರಿ ವಿರಾಜಮಾನರಾದರು. ಕಿವಿಗಡಚಿಕ್ಕುವ ಕರತಾಡನ ಮಾಡಲಾಯಿತು. ಅನಂತರ ಸ್ವಾಗತಾಧ್ಯಕ್ಷರಾದ ಶ್ರೀ ಬಂದಿ ನೋಡೆ ಮತ್ತು ಭಾಯಿ ಚಿತ್ರೆಯವರು ಭಾಷಣ ಮಾಡಿದರು. ಡಾ. ಅಂಬೇಡ್ಕರ ಹೇಳಿದ ಮಾತು ಹೀಗಿತ್ತು–

‘ಕಳೆದ ಒಂಬತ್ತು ದಿನಗಳಿಂದ ನಾನು ಪ್ರವಾಸ ಮಾಡುತ್ತಲಿದ್ದೇನೆ. ರಾತ್ರಿ ಮಹಾಡದಲ್ಲಿ ನಾನು ಎರಡು ಗಂಟೆಯ ಸಮಯದಲ್ಲೂ ಭಾಷಣ ಮಾಡಿದ್ದೇನೆ. ನಸುಕಿಗೆ ಎದ್ದು ಪಾಚಗಣಿಯ ಪ್ರವಾಸ ಕೈಕೊಂಡಿದ್ದೇನೆ. ಹೀಗಾಗಿ ನನಗಿಲ್ಲಿ ಭಾಷಣ ಮಾಡುವಷ್ಟು ತ್ರಾಣ ಉಳಿದಿಲ್ಲ. ನೀವೆಲ್ಲ ಮಾಡಿದ ನನ್ನ ಸನ್ಮಾನಕ್ಕೆ ನಾನು ಋಣಿಯಾಗಿದ್ದೇನೆ. ನಾನು ಏನಾದರೂ ಹೇಳಲಿ ಎಂದು ನೀವು ಬಯಸುತ್ತಿದ್ದೀರಿ. ಆದರೆ ಈ ಸಲ ನಾನು ನಿಮ್ಮನ್ನು ನಿರುತ್ಸಾಹಗೊಳಿಸುತ್ತಿದ್ದೇನೆ. ನೀವು ಈ ಕಾರಣಕ್ಕಾಗಿ ಸಿಟ್ಟಿಗೇಳುವುದಿಲ್ಲ ಎಂಬ ನಂಬಿಕೆ ನನಗಿದೆ. ನಾನು ಈ ಪ್ರದೇಶಕ್ಕೆ ಮತ್ತೊಮ್ಮೆ ಬಂದಾಗ ನಿಮಗೆ ಖಂಡಿತ ಮಾರ್ಗದರ್ಶನ ಮಾಡುತ್ತೇನೆ. ಇಂದು ಹೇಳಬೇಕಾದ ಒಂದೇ ಮಾತೆಂದರೆ, ಸುದೈವಕ್ಕೆ ಇಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷವನ್ನಂತೂ ಸ್ಥಾಪಿಸಿದ್ದೀರಿ. ನೀವೆಲ್ಲ ಅದರ ಸದಸ್ಯರಾಗಿ, ಪಕ್ಷದ ಬಲವನ್ನು ಹೆಚ್ಚಿಸಬೇಕು. ಹೆಚ್ಚು ಮಾತನಾಡಲಾರೆ, ಕ್ಷಮೆಯಿರಲಿ.

## ೧೩೫.
# ದ್ವಂದ್ವದಿಂದಾಗಿ ಯಾವ ಕಾರ್ಯವೂ ಸಾಧ್ಯವಾಗಲಾರದು

ಮೊದಲೇ ನಿರ್ಧರಿಸಿದಂತೆ ಪುಣೆ ಜಿಲ್ಲೆಯ ವತನವಾದ ಮಹಾರರ ಎರಡನೇ ಅಧಿವೇಶನವು ಘೋಡೆ ಎಂಬಲ್ಲಿ ರವಿವಾರ ದಿ: ೨೨ಮೇ ೧೯೩೮ ರಂದು ೪ ಗಂಟೆಗೆ ಅಖಿಲ ಭಾರತೀಯ ಅಸ್ಪೃಶ್ಯರ ಏಕೈಕ ಮುಖಂಡರಾದ ಪರಮಪೂಜ್ಯ ಡಾ. ಅಂಬೇಡ್ಕರ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭಿಕರ ಸಂಖ್ಯೆಯು ಸಾಕಷ್ಟು ದೊಡ್ಡದಾಗಿತ್ತು. ಡಾ. ಅಂಬೇಡ್ಕರರು ಸಾವಿರ ಮೈಲುಗಳ ಪ್ರವಾಸ ಮಾಡಿ ಶಾಸಕರಾದ ರಾ.ರಾ. ಭೋಳೆ, ಕ.ರಾ. ಮಧಾಳೆ, ಹಿರಿಯ ನಾಯಕರಾದ ರೇವಜಿ ಡೋಳಸ, ಅವರೊಂದಿಗೆ ಆಗಮಿಸಿದರು. ಮುಂಬೈ ಅಸ್ಪೃಶ್ಯಸಮಾಜದ ಪ್ರಮುಖನಾಯಕರಾದ ರಾ. ರಾ. ಬೋರಿಕರ, ಶಂಕರ ಮೇಸ್ತ್ರಿ, ಗಜೋಬಾ ದುಧಾವಡೆ ಮುಂತಾದವರು, ಪುಣೆಯಿಂದ ವಿ.ಬಾ. ಭಾಲೇರಾವ, ಡಿ.ಸಿ. ಮಿಶನ್, ಗಾಯಕವಾಡ ಮಾಸ್ತರ ಮತ್ತು ವಾಲ್ಹೇಕರ ಮಂಡಳಿಯು ಹಾಜರಿತ್ತು. ಸರಿಯಾಗಿ ೪.೩೦ಕ್ಕೆ ಡಾ. ಅಂಬೇಡ್ಕರರು ಸ್ಥಾಪನ್ನರಾದ ಬಳಿಕ ಸಭೆ ಆರಂಭಗೊಂಡಿತು. ಮಾತಂಗ ಸಮಾಜದ ಕಾಳೋಖೆಯವರು ಸ್ವಾಗತ ಪರ ಸ್ತುತಿಗೀತೆ ಹಾಡಿದರು. ಅನಂತರ ಗ್ರಾಮಪಂಚಾಯತಿ ಚೇರಮನ್ನರೂ, ಸ್ವಾಗತ ಅಧ್ಯಕ್ಷರೂ ಆದ ಕೆ.ರಾ. ಶಿಶುಸಾಳಗು ಸ್ವಾಗತ ಭಾಷಣ ಮಾಡಿದರು. ಬಳಿಕ ಪಟಬಾಜಿ ಲಕ್ಷ್ಮಣ, ಕ್ರಿ.ಮ. ಕಾಳೋಖೆ, ಮಾ.ಶೆ. ಗಾಯಕವಾಡ, ವಿ.ಕಾ. ಉಪಶಾಮ, ಕೆ.ಟಿ. ಭೋಸಲೆ, ಮಧಾಳೆ, ಧೋತ್ರೆ–ಮುಂತಾದವರು ಪರಿಣಾಮಕಾರಕವಾದ ಭಾಷಣ ಮಾಡಿದರು. ಅನಂತರ ಕರತಾಡನದ ಮಧ್ಯೆ ಡಾ. ಅಂಬೇಡ್ಕರ ಮಾತು ಆರಂಭಿಸಿದರು. ಆಗ ಜೈಕಾರದ ಘೋಷಣೆ ಕೇಳಿ ಬರುತ್ತಿತ್ತು. ಅಂಬೇಡ್ಕರ ಹೀಗೆ ಹೇಳಿದರು.

ನಾನು ಸಾವಿರ ಮೈಲು ಪ್ರವಾಸ ಮಾಡಿ ಈ ಅಧಿವೇಶನಕ್ಕೆ ಆಗಮಿಸಿದ್ದೇನೆ. ಪುಣೆ ಜಿಲ್ಲೆಯ ಮಹಾರರು ಉಳಿದ ಜಿಲ್ಲೆಗಿಂತ ತೀರ ಕ್ಷುದ್ರರಾಗಿದ್ದಾರೆ. ಅವರು ಸತ್ತಪ್ರಾಣಿಯ ಮಾಂಸ, ಎಂಜಲುಅನ್ನ ತಿನ್ನುತ್ತಾರೆಂದು ಕೇಳಿದ್ದೇನೆ! ಅವರು ಸದಾ ದ್ವಂದ್ವದಲ್ಲಿ ಬದುಕುತ್ತಾರೆ. ಇದರಿಂದಾಗಿ ಯಾವ ಕಾರ್ಯವೂ ಸಫಲವಾಗುತ್ತಿಲ್ಲ. ಅವರು ಧಾರ್ಮಿಕ ಹುಚ್ಚರು. ನಾನಂತೂ ದೇವರು ಧರ್ಮವನ್ನು ನಂಬುವುದಿಲ್ಲ. ದೇವ–ಧರ್ಮದ ಬಗೆಗಿನ ಹುಚ್ಚು ಕಲ್ಪನೆಯ ಬಗೆಗೆ ನಾನೊಮ್ಮೆ ನನ್ನ 'ಹಿಂದೂ' ಗೆಳೆಯರಿಗೆ ಶಂಕರಲಿಂಗದ ಬಗ್ಗೆ ಕೇಳಿದೆ. ಅವರಿಗೆ ಅದರ ಅರ್ಥ ಗೊತ್ತಾಗಲಿಲ್ಲ. ಅದು ಕೇವಲ ಒಂದು ಸಂಭೋಗ ದೃಶ್ಯವಾಗಿದೆ. ಇಲ್ಲಿ ಧಾರ್ಮಿಕ ಶ್ರದ್ಧೆಯ ಜನರು ವಂತಿಗೆಯನ್ನು ಸಂಗ್ರಹಿಸಿ ಒಂದು ದಿನದ ಯಾತ್ರೆಗಾಗಿ ಧರ್ಮಶಾಲೆಯನ್ನು ಕಟ್ಟುವುದು ಕೇವಲ ಸ್ವಾರ್ಥಸಾಧನೆಯ ಉಪಾಯವಾಗಿದೆ. ಧರ್ಮಶಾಲೆಗೆ ೧೫೦ರುಪಾಯಿ ಕೊಡಲು ಮುಂದಾಗಿದ್ದಾರೆ. ನೀವು ೨೦೦ರು. ಕೊಟ್ಟರೆ ನಾವು ನಿಮಗೆ ಮತ ಹಾಕುತ್ತೇವೆ ಎಂದು ವಾಡೆ ಗುಂಪಿನವರು ಹೇಳುತ್ತಾರೆ. ಅಂದರೆ ವಾಡೆಗುಂಪಿನ ಜನರು ಅದೆಷ್ಟು ನೀಚರು ಎನ್ನುವುದು ಗೊತ್ತಾಗುತ್ತದೆ. ಜಿಲ್ಲಾ ಬೋರ್ಡಿಗೆ ಒಂದುಕಲ್ಲು ಅಭ್ಯರ್ಥಿಯಾಗಿ ನಿಲ್ಲಿಸಿ, ಮಾನಕ್ಕಾಗಿ ಹಣಬೇಡುವ ಸಮಾಜ ಅದೆಷ್ಟು ಹಾನಿಗೊಳಗಾಗುತ್ತದೆ ಎನ್ನುವುದನ್ನು ನೀವೆ ಊಹಿಸಿ. ಆದ್ದರಿಂದ ಸಮಾಜವು ಇಂಥವರ ಜೊತೆಗೆ

---

ಜನತಾ: ೪ ಜೂನ್ ೧೯೩೮.

ಯಾವ ಸಂಬಂಧವನ್ನು ಇಟ್ಟುಕೊಳ್ಳಬಾರದು. ಅವರು ಒಂದು ಕಲ್ಲಿಗೆ ಮತನೀಡಿ ಆಯ್ಕೆ ಮಾಡಿದರೂ ಕೊನೆಗೆ ಕೆಲಸವಿರುವುದು ನನ್ನ ಜೊತೆಗೇ. ಆದ್ದರಿಂದ ನಾನು ಸ್ಪರ್ಧಿಸುವಂತೆ ಸೂಚಿಸಿದ ಸ್ವತಂತ್ರ ಕಾರ್ಮಿಕ ಪಕ್ಷದ ಅಭ್ಯರ್ಥಿಗಳಾದ ಶ್ರೀ ಕೇಶವ ರಾಣಾಜಿ, ಶಿಶುಪಾಳಿ ಮತ್ತು ಮಹಾದೇವ ಬಾಳಾಜಿ ಕೊಂಕಣಿಯವರಿಗೆ ಮತ ನೀಡಿದರೆ ನಾನು ನಿಮಗೆ ಋಣಿಯಾಗಿರುತ್ತೇನೆ. ಇಂದಿನ ಕಾಂಗ್ರೆಸ್ ಸರಕಾರವು ಮುಂಬೈ ಕಾಯ್ದೆ ಮಂಡಳದಲ್ಲಿರುವ ಅಲ್ಪಸಂಖ್ಯಾತ ಗುಂಪಿನ ಬಗೆಗೆ ಕಿಂಚಿತ್ತೂ ಯೋಚಿಸದೆ, ಬಹುಮತ ಬಲದಿಂದ ಗದ್ದಲ ಹಾಕುತ್ತಲಿದೆ. ಆದರಿಂದಾಗಿ ರೈತರ, ಕಾರ್ಮಿಕರ ಮತ್ತು ಬಡಕೂಲಿಗಳ ಹಾಸಿಯಾಗುತ್ತಲಿದೆ. ಮಹಾರವತನದ ಮಸೂದೆಯ ಮಾಹಿತಿಯನ್ನು ನೀಡಿದಾಗ ಈ ಅಧಿವೇಶನವು ಮನಃಪೂರ್ವಕವಾಗಿ ಬೆಂಬಲ ನೀಡಿತು. ಸರ್ವಾನುಮತದಿಂದ ಗೊತ್ತುವಳಿ ಅಂಗೀಕಾರಗೊಂಡಿತು. ಪುಣೆ ಜಿಲ್ಲೆಯಲ್ಲಿ ಬೋರ್ಡಿಂಗ ಆರಂಭಿಸಬೇಕು, ಎಲ್ಲರೂ ಸೇರಿ ಪ್ರಯತ್ನಿಸಬೇಕು ಎಂಬ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ಜೀವದಯೆ ಸಂಸ್ಥೆಗೆ ಸಂಪೂರ್ಣ ಬೆಂಬಲನೀಡಿ' ಎಂದವರು ಭಾಷಣವನ್ನು ಮುಗಿಸಿದರು.

ಅನಂತರ ಜೀವದಯಾ ಸಂಸ್ಥೆಯ ಅಡ್ವೋಕೇಟ್ ನಿಜಾಮುದ್ದಿನ ಸಾಹೇಬರು ಸಂಸ್ಥೆಗೆ ಬೆಂಬಲ ನೀಡಿದ್ದಕ್ಕೆ ಡಾ. ಅಂಬೇಡ್ಕರರಿಗೆ ಕೃತಜ್ಞತೆ ಸಲ್ಲಿಸಿದರು. ಪ್ರತಿವರ್ಷ ನಾಲ್ಕು ಆಣೆ ನೀಡಿ ಸ್ವತಂತ್ರ ಕಾರ್ಮಿಕಪಕ್ಷದ ಸದಸ್ಯರಾಗುವ ನಿರ್ಧಾರಗೊಂಡಿತು. ಕೊನೆಗೆ ಕರಂದಿಕರ ಮಾಸ್ತರರು ಆಭಾರ ಮನ್ನಣೆ ಸಲ್ಲಿಸಿದ ಬಳಿಕ ಸಭೆಯ ಕಾರ್ಯಕಲಾಪ ಮುಕ್ತಾಯಗೊಂಡಿತು. ಡಾ. ಅಂಬೇಡ್ಕರ ಅವರಿಗೆ ಮಾಲಾರ್ಪಣೆ ಮಾಡಿ, ಅಲ್ಪೋಪಹಾರದ ವ್ಯವಸ್ಥೆ ಮಾಡಿದ್ದರು. ಬಳಿಕ ಡಾ. ಅಂಬೇಡ್ಕರ ಹಾಗೂ ಅವರ ಸಹಚರರು ಸುಮಾರು ಆರುಗಂಟೆಯ ಹೊತ್ತಿಗೆ ಜಯಘೋಷದ ನಡುವೆ ವಿದಾಯ ಹೇಳಿ ಪುಣೆಗೆ ಹೋದರು.

## ೧೩೬.

# ರಾಜಕಾರಣದಲ್ಲಿಯ ನಮ್ಮ ಏಳ್ಗೆಯನ್ನು ಬ್ರಹ್ಮದೇವನೂ ತಡೆಯುವುದು ಸಾಧ್ಯವಿಲ್ಲ

ಡಾ. ಅಂಬೇಡ್ಕರರು ಕೋರ್ಟಿನ ಕೆಲಸದ ನಿಮಿತ್ತ ೧೭ ಜೂನ್, ೧೯೩೮ ರಂದು ಬೆಳಗಿನ ರೈಲಿನಲ್ಲಿ ಧುಳೆಗೆ ಬಂದರು. ಪ್ರಮುಖ ಜನರು ಸ್ಟೇಶನ್ನಿಗೆ ಆಗಮಿಸಿದ್ದರು. ಸ್ಕೌಟ್ ಪಥಕದವರು ಅಂಬೇಡ್ಕರರಿಗೆ ಗೌರವ ವಂದನೆ ನೀಡಿದರು. ಮಧ್ಯಾಹ್ನ ಕೋರ್ಟಿನಲ್ಲಿ ಅಪಾರ ಜನಸಂದಣಿಯು ಸೇರಿತ್ತು. ಅಪೀಲು ಮುಗಿದಬಳಿಕ ವಕೀಲರ ಮಾತಿಗೆ ಒಪ್ಪಿ ಅಂಬೇಡ್ಕರರು ಬಾರ್ ಲೈಬ್ರರಿಗೆ ಭೇಟಿನೀಡಿದರು. ಅಲ್ಲಿ ಕಾಕಾ ಸಾಹೇಬ ಖರ್ವೆಯವರು ಅಲ್ಪೋಪಹಾರ ನೀಡಿದರು. ಸಂಜೆ ರಾಜವಾಡೆ ಸಂಶೋಧನ ಕೇಂದ್ರಕ್ಕೆ ಭೇಟಿನೀಡಿದರು. ಅಲ್ಲಿ ತಾತ್ಯಾಸಾಹೇಬ ಭಟ ವಕೀಲರು, ಭಾವೂರಾವ ಕುಲಕರ್ಣಿ ವಕೀಲ, ಕಾಕಾಸಾಹೇಬ ಖರ್ವೆ, ಉಪಾಧ್ಯೆ, ಖರಟಮಲ್, ಶ್ರೀಜಾಧವ, ಬೋರಾಳೆ ಮುಂತಾದವರು ಹಾಜರಿದ್ದರು. ಸಾಕಷ್ಟು ವಾದವಿವಾದದ ಬಳಿಕ ಪಾಠಕ ಶಾಸ್ತ್ರಿಗಳು ಸ್ವತಃ ಹಾಜರಾದರು. ಭಟ್ಟ ವಕೀಲರು, ಶಾಸ್ತ್ರಿಯವರು ಯೋಗ್ಯವಾದ ಮಾಹಿತಿ ನೀಡುವ ಭರವಸೆ ನೀಡಿದ್ದರಿಂದ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ.

ರಾತ್ರಿ ಎಂಟರ ಸುಮಾರಿಗೆ ಮು. ಶಾಲೆ ನಂ–೫ ಆವರಣದಲ್ಲಿ ಸಭೆ ಏರ್ಪಡಿಸಲಾಯಿತು. ಸುಮಾರು ಐದಾರು ಸಾವಿರ ಜನರು ಸಭೆಗೆ ಆಗಮಿಸಿದ್ದರು. ಪ್ರಾಣಯಜ್ಞದಳದ ಸಂಸ್ಥೆಯ ಜನರು ಕೆಂಪು ಪೋಷಾಕು ಧರಿಸಿದ್ದರು. ಮಹಿಳೆಯರ ಸಂಖ್ಯೆಯೂ ಸಾಕಷ್ಟಿತ್ತು. ಅಂಬೇಡ್ಕರ, ಜಾಧವ ಮುಂತಾದವರು ಆಗಮಿಸಿದಾಗ ಕರತಾಡನ ಮಾಡಲಾಯಿತು. ಅಂಬೇಡ್ಕರ ಹೆಸರಿನ ಜೈ ಘೋಷದಿಂದ ಪರಿಸರ ಮಾರ್ಧನಿಸಿತು. ಯ.ಚಿಂ. ಗಾಯಕ ವಾಡ, ಸೌ. ಕೃಷ್ಣಾಬಾಯಿ ಅಹಿರೆ, ಗೋಜಾಬಾಯಿ ಬಾಗಲೆ, ಅಹಲ್ಯಾ ದೇವರಾವ, ಕು. ಸಾವಿತ್ರಿ ಸಾವಂತ, ಸೌ. ಆನಂದಿ ಜಾಧವ ಮುಂತಾದವರ ಸ್ಫೂರ್ತಿದಾಯಕ ಭಾಷಣವಾಯಿತು. ಬಳಿಕ ಪಶ್ಚಿಮ ಖಾನದೇಶದ ಉತ್ಸಾಹಿ ಯುವಕ ಪು.ತು. ಬೋರಾಳೆಯೂ ಮಾತಾಡಿದರು. ಅನಂತರ ವಿವಿಧ ಸಂಘ–ಸಂಸ್ಥೆ–ವ್ಯಕ್ತಿಗಳಿಂದ ಸುಮಾರು ೪೦ ಹಾರವನ್ನು ಅಂಬೇಡ್ಕರರಿಗೆ ಅರ್ಪಿಸಲಾಯಿತು. ಕರತಾಡನದ ನಡುವೆ ಡಾ. ಅಂಬೇಡ್ಕರರು ಭಾಷಣವನ್ನು ಆರಂಭಿಸಿದರು.

ಪ್ರಿಯ ಭಗಿನಿಯರೆ, ಬಂಧುಗಳೆ,

ಈ ಪ್ರದೇಶಕ್ಕೆ ಬಂದು ಬಹಳ ದಿನಗಳಾದವು. ನನಗೆ ಬೇರೆ ಬೇರೆ ಜಿಲ್ಲೆಗಳಿಂದ ಪತ್ರ ಬಂದಿವೆ. ಮಧ್ಯಪ್ರಾಂತ, ಸಂಯುಕ್ತ ಪ್ರಾಂತ, ಪಂಜಾಬದಿಂದಲೂ ಪತ್ರಗಳು ಬಂದಿವೆ. ಮಾತಾಡಲು ಹಿಂದೂಸ್ಥಾನದ ಎಲ್ಲ ಪ್ರದೇಶಗಳಿಂದ ಪತ್ರಗಳು ಬರುತ್ತಿವೆ ಎಂದರೆ ಅತಿಶಯೋಕ್ತಿಯಲ್ಲ. ಈ ದೇಶ ಆದೆಷ್ಟು ವಿಶಾಲವಾಗಿದೆ

ಜನತಾ: ೨ ಮತ್ತು ೨೩ ಜುಲೈ ೧೯೩೮.

ಒಬ್ಬ ಮನುಷ್ಯ ಆದೆಷ್ಟು ಕೆಲಸದ ಹೊರೆಯನ್ನು ಹೊರಬಹುದು? ಇತ್ತೀಚಿಗೆ ನನ್ನ ಆರೋಗ್ಯ ಹದಗೆಟ್ಟಿದೆ. ಕಳೆದ ಎರಡು ತಿಂಗಳಲ್ಲಿ ೩೮ ಪೌಂಡು ತೂಕ ಇಳಿದಿದೆ. ಆದರೂ ಉಳಿದ ಪ್ರದೇಶಗಳಿಗೆ ಹೋಲಿಸಿದರೆ, ಈ ಪ್ರದೇಶವನ್ನು ನಿರ್ಲಕ್ಷಿಸಲಾಗಿದೆ. ಈ ಹಾನಿಯನ್ನು ಎಂದಾದರೂ ನಾನು ತುಂಬಿ ಕೊಡುತ್ತೇನೆಂಬ ಭರವಸೆ ನೀಡಬಲ್ಲೆ.

ಕಳೆದ ಹತ್ತು ವರ್ಷಗಳಿಂದ ಆರಂಭಗೊಂಡ ರಾಜಕಾರಣ, ಸಮಾಜಕಾರಣ ಚಳುವಳಿಯ ಪ್ರವಾಹವು ಯಾವ ಹಂತ ತಲುಪಬಹುದು ಎಂಬ ಭೀತಿ ನನ್ನನ್ನು ಕಾಡುತ್ತಿದೆ. ಆದರೂ ರಾಜಕೀಯ ವಿಷಯದಲ್ಲಿ ಭೀತಿ ಪಡಬೇಕಾಗಿಲ್ಲ. ಯಾವ ನೆರಳನ್ನು ಇಣುಕಿಸಹ ನೋಡುತ್ತಿರಲಿಲ್ಲವೋ, ಅಂಥವರು ಇಂದು ೧೫ಜನರು ಅಸೆಂಬ್ಲಿಯಲ್ಲಿ ಕೂತು ಅಧಿಕಾರ ಮತ್ತು ಹಕ್ಕಿನಿಂದ ತಮ್ಮ ಬೇಡಿಕೆಗಳ ಬಗೆಗೆ ಹೇಳಬಹುದಾಗಿದೆ. ಇಂದು ಕಾಯ್ದೆ ಮಂಡಳದಲ್ಲಿ ಕಾಂಗ್ರೆಸ್ಸಿನಂಥ ಬಲಾಢ್ಯ ಸಂಸ್ಥೆಯಿದೆ. ಅಂಥ ದೊಡ್ಡ ಸಂಸ್ಥೆಗೂ ಸ್ವತಂತ್ರ ಕಾರ್ಮಿಕ ಪಕ್ಷದ ಭೀತಿಯಿದೆ. (ಚಪ್ಪಾಳೆ). ಅಸ್ಪೃಶ್ಯ ಸಮಾಜದ ದೃಷ್ಟಿಯಿಂದ ಇದೇನು ಸಣ್ಣಸಂಗತಿಯಲ್ಲ. ಕಾಂಗ್ರೆಸ್ಸಿನಲ್ಲಿಂದು ಲಕ್ಷಾಂತರ ರುಪಾಯಿ ಖರ್ಚು ಮಾಡುವ ಸಾಹುಕಾರರಿದ್ದಾರೆ. ಶಿಕ್ಷಣದಲ್ಲಿ ಪಾರಂಗತರಾದ ಬ್ರಾಹ್ಮಣರು ತುಂಬಿಕೊಂಡಿದ್ದಾರೆ. ಆದರ ಹಿಂದೆ ೪೦ ವರ್ಷಗಳ ಇತಿಹಾಸವಿದೆ. ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿ ಕೇವಲ ಒಂದು ವರ್ಷವಾಯಿತು. ಆದರೂ ಪಕ್ಷ ಅದೆಷ್ಟು ಜನಪ್ರಿಯವಾಯಿತೆಂದರೆ ಪಕ್ಷದ ಹೆಸರು ಗೊತ್ತಿಲ್ಲದ ಸ್ತ್ರೀ–ಪುರುಷರೇ ಸಿಗಲಿಕ್ಕಿಲ್ಲ. ಅದರ ಬಗೆಗೆ ಉಳಿದ ರಾಜಕೀಯ ಪಕ್ಷಗಳಿಗೆ ಭಯವೆನಿಸುತ್ತಿರುವುದು ರಾಜಕಾರಣದಲ್ಲಿಯ ವಿಚಿತ್ರ ಪ್ರಸಂಗವೆನ್ನಬಹುದು. ಮರಾಠರಿಗಾಗಲಿ, ಕುಣಬಿಗಳಿಗಾಗಲಿ ನಮ್ಮೆದುರು ಕೈ ಒಡ್ಡಲು ನಾಚಿಕೆ ಎನಿಸುತ್ತಿತ್ತು. ಅಂಥವರು ಈಗ ಬಹಿರಂಗವಾಗಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಲಿದ್ದಾರೆ. ಸ್ವತಂತ್ರ ಕಾರ್ಮಿಕ ಪಕ್ಷದಲ್ಲಿ ಕಾಯಸ್ಥ–ಮರಾಠಾ ಮುಂತಾದ ಜಾತಿಯವರಿದ್ದಾರೆ. ಈ ವಿಷಯ ಹಿಂದೂಸ್ಥಾನದಲ್ಲೇ ಅಪೂರ್ವ. ನಮ್ಮ ರಾಜಕಾರಣದ ಏಳ್ಗೆಯ ನಡುವೆ ಬ್ರಹ್ಮದೇವನು ಅಡ್ಡಬಂದರೂ ನಿಲ್ಲಿಸುವುದು ಸಾಧ್ಯವಿಲ್ಲ.(ಚಪ್ಪಾಳೆ). ಇದು ಹೊಳೆ–ಹಳ್ಳವಲ್ಲ, ಸಿಂಧೂನದಿಯಾಗಿದೆ. ಡ್ಯಾಮು ಕಟ್ಟಿದರೂ ಒಡೆದು ಹೋಗುತ್ತದೆ. ರಾಜಕಾರಣದಲ್ಲಿ ಹಕ್ಕು ಪಡೆಯಲು ಅಡ್ಡಿಯಾಗಲಾರದು. ೧೫ ಜನರು ಮಾಡಿದ್ದೇನು? ಅದನ್ನು ಇಂದೇ ಹೇಳುವುದು ಕಠಿಣ. ೨೦೦೦ ವರ್ಷಗಳಿಂದ ರೂಢಿಯು ಹೆಗಲೇರಿ ಕೂತಿದೆ. ಅದನ್ನು ಬೇರುಸಹಿತ ಕಿತ್ತುಹಾಕಲು ೧೦–೨೦ ವರ್ಷ ಸಾಲುವುದಿಲ್ಲ. ರಾಜಕಾರಣದಲ್ಲಿ ಐಕ್ಯ ಮತ್ತು ಸಂಘಟನೆಯು ಎಷ್ಟು ಹೆಚ್ಚೋ ಪ್ರಗತಿಯೂ ಅಷ್ಟೇ ತ್ವರಿತ. ಈ ವಿಷಯಕ್ಕೆ ನನ್ನ ಸಮಾಜದ ಬಗೆಗೆ ಅಭಿಮಾನ ಎನಿಸುತ್ತಿದೆ. ಚುನಾವಣೆಯ ಕಾಲದಲ್ಲಿ ನೀವು ತೋರಿದ ಪ್ರಾಮಾಣಿಕತೆ, ಧೈರ್ಯ ಮತ್ತು ಸಂಘಟನೆಯನ್ನು ಉಳಿದ ಯಾವ ಜಾತಿಯವರೂ ತೋರಿಸಲಿಲ್ಲ. ನಾವು ಬಡತನ, ದಾರಿದ್ರ್ಯದಿಂದ ತೊಳಲಾಡುತ್ತಿದ್ದೇವೆ. ಈ ಸಲ ನೀವು ಇದರ ಬಗೆಗೆ ಯೋಚಿಸಲೂ ಹೊಗಲಿಲ್ಲ. ಉಪವಾಸದಿಂದ ಬಳಲುತ್ತಿದ್ದರೂ, ಮಾರವಾಡಿ ನೀಡುವುದನ್ನೇ ತಿನ್ನುತ್ತಿದ್ದರೂ ನೀವು ತೋರಿದ ದಿಟ್ಟತನ ಪ್ರಶಂಸನೀಯ. ನಾವು ಹಳ್ಳಿಪಳ್ಳಿಗಳಲ್ಲಿ ಚೆದುರಿ ಹೋಗಿದ್ದೇವೆ. ಹಳ್ಳಿಯಲ್ಲಿ ನಮ್ಮದು ಕೇವಲ ೧೦–೧೫ ಮನೆಗಳಿದ್ದರೆ, ಉಳಿದವರದ್ದು ೧೦೦ ಮನೆಗಳಿವೆ. ಈ ಕೆಲಸವನ್ನು ಮಾಡಿ ಇಲ್ಲದಿದ್ದರೆ ನಿಮ್ಮ ವಸತಿಯನ್ನು ಹಾಳುಗೆಡುಹುತ್ತೇವೆ ಎಂದವರು ಮನಸ್ಸು ಮಾಡಿದರೆ, ಅದು ಸಹಜ ಸಾಧ್ಯವಿದೆ. ಅಂಥ ಸ್ಥಿತಿ ನಿಮ್ಮದಾಗಿತ್ತು.

ನಮ್ಮವರು ಸ್ವತಂತ್ರ ಕಾರ್ಮಿಕಪಕ್ಷವನ್ನು ಬಲಪಡಿಸಬೇಕು. ಅದರ ಹೇಳಿಕೆಯ ವಿರುದ್ಧ ಏನೂ ಮಾಡುವಂತಿಲ್ಲ. ಅದರಲ್ಲಿ ಸಮಾಜದ ಹಿತದ ದೃಷ್ಟಿಯಿಂದ ನಿಮಗೇ ಲಾಭವಾಗಲಿದೆ. ಒಂದು ಸಂತೋಷದ

ಸುದ್ದಿ ಏನೆಂದರೆ, 'ಸಂಘಟನೆಯಿದ್ದರೆ ಡಾ. ಅಂಬೇಡ್ಕರರ ಸಂಘಟನೆಯಂತಿರಬೇಕೆಂದು!' ಎಂದು ಶ್ರೀ ವಲ್ಲಭಬಾಯಿ ಪಟೇಲರೇ ನಮ್ಮ ಶಿಸ್ತನ್ನು ಕೊಂಡಾಡಿದ್ದಾರೆ.(ಚಪ್ಪಾಳೆ) ನೀವು ಈ ಸಂಘಟನೆಯನ್ನು ಹದಗೆಡಿಸಬಾರದು. ಹಂಡೆತುಂಬ ಹಾಲನ್ನು ಒಂದೇ ಉಪ್ಪಿನಹರಳು ಹಾಳುಮಾಡುತ್ತದೆ. ಒಂದೇಹನಿ ವಿಷದಿಂದ ಅಮೃತ ಕೆಡಬಲ್ಲದು. ಹಾಗೆಯೇ ಸ್ವಾರ್ಥ, ದುರ್ಗುಣ ಉಳ್ಳವರು ತಮ್ಮ ಸ್ವಾರ್ಥ ತೀರಿಸಿಕೊಳ್ಳಲು ಹವಣಿಸುತ್ತಾರೆ. ಅವರ ವಿಚಾರದಲ್ಲಿ ಬರೇ ಸ್ವಾರ್ಥವೇ ತುಂಬಿರುತ್ತದೆ. ಇಂಥ ಜನರು ನಿರ್ಮಾಣವಾಗುತ್ತಾರೆ. ಇದೇ ಕಾಲ ಶಾಶ್ವತವಾಗುಳಿಯುತ್ತದೆ ಎಂದೂ ಅನಿಸುವುದಿಲ್ಲ. ಕಾಳು ಆರಿಸುವಾಗ ಹರಳನ್ನು ಎತ್ತಿ ಹೊರಗೆ ಚೆಲ್ಲುವಂತೆ ಕಂಟಕರನ್ನು ಸ್ವಾರ್ಥಿಗಳನ್ನು ಹೊರಗೆ ಹಾಕಬೇಕು. (ಚಪ್ಪಾಳೆ) ಮಹಾರ ಜಾತಿಯಲ್ಲಂತು ಯಾರೂ ಸ್ವತಂತ್ರ ಕಾರ್ಮಿಕ ಪಕ್ಷದ ವಿರುದ್ಧ ಹೋಗಬಾರದು. ರಾಜಕಾರಣದಲ್ಲಿ ಸಂಘಟನೆ ಮತ್ತು ಸಂಘಶಕ್ತಿ ಕೈಕೊಳ್ಳದ ಹೊರತು ಏನೂ ಸಾಧಿಸುವುದು ಸಾಧ್ಯವಿಲ್ಲ. ಸಂಘಶಕ್ತಿಗೆ ಹಣಬೇಕು. ಮನೆಯಲ್ಲೂ ಸಂಸಾರ ಸಾಗಿಸಲು ಹಣಬೇಕು. ಉಪ್ಪು–ಮೆಣಸಿಗೂ ಹಣಬೇಕು. ಹಣವಿಲ್ಲದೆ ಏನೂ ನಡೆಯಲಾರದು. ಅದೇ ರೀತಿ ಸಾರ್ವಜನಿಕ ಕೆಲಸಕ್ಕೂ ಹಣಬೇಕು. ಕಾಂಗ್ರೆಸಿನಬಳಿ ರಾಜಕಾರಣ ಆಡಲು ಹಣವಿದೆ. ಈಗತಾನೇ ನಡೆದ ಜಿಲ್ಲಾಲೋಕಲ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯೂ ೩೦೦೦ರುಪಾಯಿ ಖರ್ಚುಮಾಡಿ ಯಶ ಸಂಪಾದಿಸಿದನೆಂದು ತಿಳಿದು ಬಂದಿದೆ. ಹಣವಿಲ್ಲದೆ ರಾಜಕಾರಣದ ಗಾಡಿ ಓಡಿಸುವಂತಿಲ್ಲ. ಅನ್ಯರ ಅಂಕಿತದಲ್ಲಿರದೆ ಸ್ವಂತಕಾಲ ಮೇಲೆ ನಿಲ್ಲಲು ಕಲಿಯಬೇಕು. ಈಗ ನಿಮಗೊಂದು ಮಹಾಭಾರತದ ಕಥೆ ಹೇಳುತ್ತೇನೆ. ಭೀಷ್ಮ ಮತ್ತು ದ್ರೋಣ ಕೌರವರ ಪರವಾಗಿದ್ದರು. ಕೌರವರ ಪಕ್ಷ ಹುಸಿಯಾಗಿದ್ದು, ಪಾಂಡವರದು ದಿಟ ಎನ್ನುವುದು ಅವರಿಗೆ ಗೊತ್ತಿತ್ತು. 'ಸೂಜಿಯ ಮೊನೆಯಷ್ಟೂ ಭೂಮಿ ಕೊಡಲಾರೆ'–ಎಂದು ಕೌರವ ಪಾಂಡವರಿಗೆ ಹೇಳಿದ. ಸತ್ಯ–ಸುಳ್ಳು ಅರಿಯದೇ ಭೀಷ್ಮ ದ್ರೋಣರು ಕೌರವರ ಪರವಾಗಿ ಹೋರಾಡಿದರು. ಸತ್ಯದ ಪರವಾಗಿರುವ ಪಾಂಡವರ ಪಕ್ಷವನ್ನು ಏಕೆ ವಹಿಸಲಿಲ್ಲ ಎಂದು ಕೇಳಿದಾಗ, 'ನಾವು ಕೌರವನ ಅನ್ನ ತಿನ್ನುತ್ತೇವೆ' ಎಂದವರು ಹೇಳಿದರು. ಅನ್ಯರ ಸಹಾಯದಿಂದ ಬದುಕುವವನು ಮತ್ತೊಬ್ಬನ ಗುಲಾಮನಾಗದೆ ಇರಲಾರ. ನಾನು ಕಾಂಗ್ರೆಸ್ಸಿನ ಹರಿಜನಸೇವಕ ಫಂಡನ್ನು ಸ್ವೀಕರಿಸಲಿಲ್ಲ. ಅವರಿಂದ ೮–೧೦ಲಕ್ಷ ಪಡೆದಿದ್ದರೆ ಅವರ ಗುಲಾಮನಾಗಿರಬೇಕಾಗುತ್ತಿತ್ತು. ನಿಮಗಾಗಿ ಏನೂ ಮಾಡುವುದು ಸಾಧ್ಯವಾಗುತ್ತಿರಲಿಲ್ಲ. ಅವರ ಸಾವಿರಾರು ರುಪಾಯಿಗಿಂತ ನಿಮ್ಮ ಒಂದೇದುಡ್ಡು ಲಕ್ಷದ್ದು.(ಚಪ್ಪಾಳೆ)ನಿಮ್ಮ ಸಂಸಾರವನ್ನು ನಿಮ್ಮ ಸ್ವಂತ ತಲೆಯ ಮೇಲೆ ಹೊರಬೇಕು. ಅದರಲ್ಲಿ ನಿಮಗೆ ಲಾಭವಾಗಲಿದೆ. ನಮಗೆ ಕಾಂಗ್ರೆಸ್ಸಿನ ದುಡ್ಡುಬೇಡ. ಕಾಂಗ್ರೆಸ್ ಪ್ರಚಾರಕರು ಪ್ರತಿತಿಂಗಳು ೩೦–೪೦ ರುಪಾಯಿ ಪಡೆದು ಕೆಲಸ ಮಾಡುತ್ತಾರೆ. ನಮ್ಮ ಸೇವಕರು ೧೦ ರುಪಾಯಿಯಲ್ಲಿ ಈ ಕೆಲಸ ಮಾಡಬಲ್ಲರು. ಸ್ವತಂತ್ರ ಕಾರ್ಮಿಕಪಕ್ಷ ನಿಮ್ಮದು. ನೀವದನ್ನು ಬಲಪಡಿಸಬೇಕು.

ನಾನು ೨೦ವರ್ಷದವನಿದ್ದಾಗ ಬಿ.ಎ. ಮುಗಿಸಿದೆ. ೨೦೦೦ರುಪಾಯಿಯ ನೌಕರಿ ಸಿಗಲಿತ್ತು. ನನ್ನ ಸಹಪಾಠಿಗಳು ಜಿಲ್ಲೆಯ ಜಡ್ಜರಾಗಿದ್ದಾರೆ. ಅದರಿಂದ ನನಗೇನು ಲಾಭ? ಕಾರಿನಲ್ಲಿ ತಿರುಗಾಡುತ್ತೇನೆ. ಬ್ಯಾರಿಸ್ಟರ್‌ನಾಗಿ ಏನು ಲಾಭ ಸಿಕ್ಕಿತು? ನೀವಂತು ಬಡವರು. ನಿಮ್ಮ ತಕರಾರು ನನ್ನ ಬಳಿಗೆಲ್ಲಿ ಬರುತ್ತದೆ! ಜಗಳ ಸ್ಪೃಶ್ಯವರ್ಗದವರದ್ದು. ಅವರೇ ಧನವಂತರು! ನನಗೆ ಹಣಸಿಗುವುದೂ ಅವರಿಂದಲೇ. ಆದರೆ ನಿಮ್ಮ ಲಾಭಕ್ಕೆ ಅವರೊಂದಿಗೆ ಜಗಳಾಡುತ್ತೇನೆ. ಹೀಗಾಗಿ ಅವರು ನನಗೆ ಹೆದರುತ್ತಾರೆ.

ನನ್ನ ಬಳಿಕ ಯಾರು ಈ ಜವಾಬ್ದಾರಿ ಹೊರಲು ಸಿದ್ಧರಿದ್ದಾರೆ? ಎಷ್ಟು ಜನರು ಹೊಣೆಗಾರಿಕೆಯಿಂದ ಕೆಲಸ ಮಾಡಬಲ್ಲರು? ಕೆಲವು ತರುಣರು ಮುಂದೆಬಂದು ಈ ಜವಾಬ್ದಾರಿ ಹೊರುತ್ತಾರೆಂಬ ನಂಬಿಕೆ

ನನಗಿದೆ. ಇಲ್ಲದಿದ್ದರೆ ಘಟ್ಟಹತ್ತಿ ಬೆಟ್ಟದ ತುದಿಗೆ ಬಂದ ಚಕ್ಕಡಿಯು ಎತ್ತಿಲ್ಲದೆ ಕೆಳಗೆ ಜಾರಿಬೀಳುವಂತೆ ನನ್ನ ಸ್ಥಿತಿಯಾಗಬಹುದು. ಅದರ ಬಗೆಗೆ ನನಗೆ ಭಯವಿದೆ. ನಾವಿಂದು ಬೆಟ್ಟದ ಅಡಿಯಲ್ಲಿದ್ದೇವೆ. ಘಟ್ಟವನ್ನು ಏರುತ್ತಲಿದ್ದೇವೆ. ನಮ್ಮ ಅಂತಿಮ ಉದ್ದೇಶ ಇನ್ನೂ ಈಡೇರಲಿಲ್ಲ. ಯಾತ್ರೆಗೇನೋ ಹೊರಟಿದ್ದೇನೆ. ದೇವರನ್ನು ಇನ್ನೂ ಕಂಡಿಲ್ಲ. ಯಾತ್ರ ಮುಗಿಯುವವರೆಗೂ ನಾವೆಲ್ಲರೂ ಅಕ್ಕಿ, ಬೇಳೆ ಮುಂತಾದ ಸಾಮಾನುಗಳೊಂದಿಗೆ ನಡೆಯಬೇಕಾಗಿದೆ. ಇಂದು ರಾಜಕಾರಣದ ಬಗೆಗೆ ಭಯವಿಲ್ಲ. ಆದರೆ ರಾಜಕಾರಣದ ಕೆಸರೆಚಾಟದಲ್ಲಿ ಯಾವ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬೇಕಾಗಿತ್ತೋ, ಅದೇ ಹಿಂದುಳಿದಿದೆ. ತನ್ನ ಸ್ವಂತ ದುಷ್ಕೃತಿಯಿಂದಾಗಿ ನಮಗೆ ಪ್ರಾಣಿಗಳ ಬಗೆಗೂ ಬೆಲೆಯಿಲ್ಲದಂತಾಗಿದೆ. ಏಕೆಂದರೆ ನಾವು ಊರಲ್ಲಿ ಬೇಡಿತಿನ್ನುತ್ತೇವೆ. ಸತ್ತದನಗಳ ಮಾಂಸವನ್ನು ಹರಿದುತಿನ್ನುತ್ತೇವೆ. ಇಂದು ರಾಜಕಾರಣಕ್ಕಾಗಿ ಹೋರಾಡಿದರೂ ಏನು ಲಾಭ? ದೇಗುಲವನ್ನು ಹೊರಗಿನಿಂದ ಹೊದಿಸಿದರೆ ಸುಂದರವಾಗಿ ಕಾಣುವುದೇ? ನೀವು ಸತ್ತದನ ತಿನ್ನದಿದ್ದರೆ ಯಾರು ತಿಂತಾರೆ? ಹದ್ದು, ನಾಯಿಗಳು ತಿನ್ನುತ್ತವೆ. ನಿಮಗೆಲ್ಲಿ ಬೆಲೆಯಿದೆ? ನಿಮಗೇಕೆ ನಾಚಿಕೆಯಾಗುತ್ತಿಲ್ಲ? ನಾಳೆ ಜಾಧವ ಮುಖ್ಯ ಪ್ರಧಾನನಾದ ಎಂದಿಟ್ಟುಕೊಳ್ಳಿ, ಅದೇನು ಅಸಾಧ್ಯದ ಮಾತಲ್ಲ. ಆಗ ಸ್ಪೃಶ್ಯರು ಅವನಿಗೆ ಗೌರವ ನೀಡಬಹುದೇ? ಈಗಿನಂತೆ ಆರತಿ ಬೆಳಗಬಹುದೇ? ಇಂದಿನ ಜೀವನ ಪದ್ಧತಿಯನ್ನು ತೊರೆದು, ಶುಭ್ರವಾಗಿ ಅಚ್ಚುಕಟ್ಟಾಗಿ ಬದುಕಲು ಕಲಿಯಿರಿ.

'ನೀವು ಸತ್ತದನಗಳನ್ನು ತಿನ್ನುವುದನ್ನು ಬಂದ್ ಮಾಡಿದರೆ ನಾವು ತಿನ್ನುವುದೇನು?' ಎಂದು ನಿಮ್ಮಲ್ಲಿಯ ಕೆಲವರು ಕೇಳುತ್ತಾರೆ. ಅವರಿಗೆ ನಾನು ನೀಡುವ ಉತ್ತರ ಹೀಗಿದೆ– ಒಂದು ವೇಳೆ ಸನಿಹದ ಚಿತೋಡ ಊರಿಂದ ಇಬ್ಬರು ಮಹಿಳೆಯರು ಮುಂಬೈಗೆ ಓಡಿಹೋದರು ಎಂದು ಭಾವಿಸಿಕೊಳ್ಳಿ. ಅವರಲ್ಲಿ ಒಬ್ಬವಳು ಸಂಸಾರ ತೊರೆದು ವೇಶ್ಯೆಯ ಧಂದೆಯನ್ನು ಸ್ವೀಕರಿಸುತ್ತಾಳೆ. ಅವಳಿಗೆ ಮಂಚ, ಗಾದಿ, ತಲೆದಿಂಬು, ಕುರ್ಚಿ, ಟೇಬಲ್ ಎಲ್ಲಾ ಇದೆ. ಒಬ್ಬ ಚಾಕರ ಇದ್ದಾನೆ. ಇರಾನಿ ಹೋಟೇಲಿನಿಂದ ಬ್ರೆಡ್, ಬೆಣ್ಣೆ, ಖೀಮಾ, ರೋಟಿಯನ್ನು ತರಿಸಿಕೊಳ್ಳುತ್ತಾಳೆ. ದಿನಕ್ಕೆ ನಾಲ್ಕಾರು ಪೀತಾಂಬರ ಉಡುತ್ತಾಳೆ. ಪೌಡರ ಮೆತ್ತಿಕೊಳ್ಳುತ್ತಾಳೆ. ಎಂಥ ಸುಂದರ ಬದುಕಲ್ಲವೇ? ಎರಡನೆಯವರು ಏಳು ರುಪಾಯಿಗಾಗಿ ಬೆವರುಸುರಿಸಿ ದುಡಿಯುತ್ತಾಳೆ. ಗಂಡನಿಗೆ ಒಂದೋ, ಒಂದೂವರೆ ರುಪಾಯಿ ಸಿಗುತ್ತದೆ. ಅಷ್ಟರಲ್ಲೇ ಸಂಸಾರ ನಿಭಾಯಿಸುತ್ತಾಳೆ. ತವರಿನ ಸರಬಿಟ್ಟು ಬೇರೆ ಆಭರಣವಿಲ್ಲ. ರೊಟ್ಟಿ ಚೂರುತಿಂದು ನೀರು ಕುಡಿಯ ಬೇಕಾಗುತ್ತದೆ. ಹಲವುಸಲ ಖಾಲಿ ಹೊಟ್ಟೆಯಲ್ಲಿರಬೇಕಾಗುತ್ತದೆ. ಈಗ ಇವರಿಬ್ಬರಲ್ಲಿ ನೀವು ಯಾರಿಗೆ ಬೆಲೆಕೊಡುತ್ತೀರಿ? ದೇಹ ವಿಕ್ರಯ ಮಾಡಿ ಪೀತಾಂಬರ ಉಡುತ್ತಾಳೆ ಅವಳಿಗೋ ಅಥವಾ ಹೊಟ್ಟೆಗಿಲ್ಲದೆ ಸಂಕಟದಿಂದ ಬಡತನದಲ್ಲಿ ಕಾಲಕಳೆಯುವವಳಿಗೋ? ನನಗನಿಸಿದಂತೆ ಎಲ್ಲರೂ ಪತಿವ್ರತೆಗೇ ಬೆಲೆಕೊಡುತ್ತಾರೆ.

ಆದ್ದರಿಂದ ಹೊಟ್ಟೆ ಹಸಿದಿರಲಿ, ಬಿಡಲಿ ನೀವು ಮಾತ್ರ ನ್ಯಾಯಯುತವಾಗಿಯೇ, ಬದುಕಬೇಕು. ಸ್ವಾಭಿಮಾನ, ಧೈರ್ಯ, ನೀತಿ ಎನ್ನುವುದು ಏನಾದರೂ ಇದೆಯೋ ಇಲ್ಲವೋ? ನಾವು ಮಾಡುವ ಕೆಲಸ ತಪ್ಪೋ, ಸರಿಯೋ, ನ್ಯಾಯವೋ, ಗೌರವಯುತವೋ ಎನ್ನುವುದರ ಕಡೆಗೆ ಗಮನವಿರಬೇಕು. ನೀವು ಸಭೆ ಮುಗಿಸಿ ಮನೆಗೆ ಹೋದ ಬಳಿಕ ಹೊಸಜೀವನ ಶುರು ಮಾಡಬೇಕು.(ಮಹಿಳೆಯರಿಗೆ) ನೀವೂ ಉಳಿದ ಮಹಿಳೆಯರಂತೆ ಇದ್ದೀರಿ. ನಾವು ನಿಮ್ಮ ಹಾಲು ಕುಡಿದೇ ಬೆಳೆದವರು. ಇತರ ಮಹಿಳೆಯರ ಮಕ್ಕಳು ತಹಶೀಲ್ದಾರ, ಹೈಕೋರ್ಟ ನ್ಯಾಯಾಧೀಶರಾಗಿದ್ದಾರೆ. ಆದರೆ ನಿಮ್ಮ ಮಕ್ಕಳು ದನಕಾಯುತ್ತಾರೆ. ಏಕೆಂದರೆ ನೀವು ನರಕದಲ್ಲಿ ಜೀವಿಸುತ್ತಿದ್ದೀರಿ. ಇದು ನಿಮ್ಮ ಪಾಪ, ನಿಮ್ಮ ವರ್ತನೆ ಅಶುದ್ಧವಾಗಿದ್ದರೆ

ನಿಮ್ಮ ಮಕ್ಕಳೂ ಹಾಗೇ ಬದುಕುತ್ತಾರೆ. 'ನರನಂತೆ ಕೆಲಸ ಮಾಡಿದರೆ ನರನೇಕೆ ನಾರಾಯಣನಾಗುತ್ತಾನೆ'. ಇತರ ಮಹಿಳೆಯರೇನು ದೇವತಾ ಅವತಾರಿಗಳಲ್ಲ. ಅವರೂ ಮಹಿಳೆಯರೇ! ಅವರಿಗೆ ಅವಕಾಶವಿದೆ, ನಿಮಗಿಲ್ಲವೇ? ಆದ್ದರಿಂದ ನೀವೆಲ್ಲರೂ ಅಭಿಮಾನ, ಧೈರ್ಯದಿಂದ ಬದುಕಲು ಕಲಿಯಿರಿ. ಅಂತಿಮ ಗುರಿ ತಲುಪಲು ಶತಪ್ರಯತ್ನ ಮಾಡಿ'.

ಹೀಗೆ ಅಂಬೇಡ್ಕರರು ಒಂದೂವರೆಗಂಟೆ ಉಪದೇಶ ಮಾಡಿದ ಬಳಿಕ ಶ್ರೀ ಪುನಾಜಿರಾಬ ಲಳಿಂಗಕರರು ಸಭಿಕರಿಗೆ ಧನ್ಯವಾಗದ ಹೇಳಿದರು. 'ಡಾ. ಬಾಬಾಸಾಹೇಬ ಅಂಬೇಡ್ಕರರಿಗೆ ಜಯವಾಗಲಿ' ಎಂಬ ಘೋಷಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

# ೧೩೯.
# ಪರರನ್ನು ನಂಬಿದರೆ ನಿಮ್ಮ ಕೆಲಸ ಹಾಳು

೧೭ಜೂನ್ ೧೯೩೮ರ ನಸುಕಿನ ಐದಕ್ಕೆ ಡಾ. ಅಂಬೇಡ್ಕರ ಅವರು ಚಾಳಿಸಗಾಂವ ಸ್ಟೇಶನ್ನಿನಲ್ಲಿ ಇಳಿದಾಗ ಅವರನ್ನು ಸ್ವಾಗತಿಸಲು ಅಪಾರ ಜನಸಮುದಾಯ ಸೇರಿತ್ತು. ಒಂದೇಸಮನೆ ಜಯಘೋಷ ಕೇಳಿಬರುತ್ತಿತ್ತು. ರೈಲಿನಿಂದ ಇಳಿದಾಕ್ಷಣ ಅಸ್ಪೃಶ್ಯೋದ್ಧಾರಕ ಬೋರ್ಡಿಂಗಿನ ಸೆಕ್ರೆಟರಿ ಶ್ರೀ ಡಿ.ಎಂ. ಮಾಗಾಡೆಯವರು ಬೋರ್ಡಿಂಗ ಪರವಾಗಿ ಮಾಲಾರ್ಪಣೆ ಮಾಡಿದರು. ಮಹಿಳೆಯರ ಪರವಾಗಿ ಕು. ಶಾಂತಾಬಾಯಿ ದಿವಾಣ ಚವ್ಹಾನ ಮತ್ತು ಪಿಂಪರಖೇಡ ಕ್ರೆಡಿಟ್‌ಸೊಸೈಟಿ ಪರವಾಗಿ ಸೋಮಾ ಸಂಸಾರೆಯವರು ಮಾಲಾರ್ಪಣೆ ಮಾಡಿದರು. ಸ್ಟೇಶನ್ನಿಗೆ ಡಿ.ಜಿ. ಜಾಧವ ಶಾಸಕರು, ಶಾ.ಕಾ. ಜಾಧವ ಸದಸ್ಯರು ಜಿಲ್ಲಾಲೋಕಲ್ ಬೋರ್ಡ್, ಜಳಗಾವ, ಶ್ರಾ.ಧ. ಜಾಧವ, ಮುನ್ಸಿಪಲ್ ಕೌನ್ಸಿಲರ್ ಚಾಳೀಸಗಾವ, ದಿವಾಣ ಸೀತಾರಾಮ ಚವ್ಹಾಣ, ಧಾವಜಿ ಪೈಲವಾನ, ಬಾಪೂ ಮುಕಾದವರ್, ಉಬಾಳೆ, ಅಡಂಗಳೆ, ತಾತ್ಯಾಬಾ ಪವಾರ, ಶ್ರೀಪತ ಪವಾರ, ಸೀತಾರಾಮ ಆವ್ಹಾಡ ಮುಂತಾದವರು. ಗ್ರಾಮೀಣ ಜನರು ಆಗಮಿಸಿದ್ದರು.

ಆರೂವರೆ ಸುಮಾರಿಗೆ ಡಾ. ಅಂಬೇಡ್ಕರರು ಕೋರ್ಟುಕೆಲಸದ ನಿಮಿತ್ತ ಧುಳೆಗೆ ಹೋದರು. ಅವರ ಜೊತೆಗೆ ಏಕನಿಷ್ಠ ಸೇವಕರಾದ ಡಿ.ಜಿ. ಜಾಧವ ಮತ್ತು ಬೋರ್ಡಿಂಗಿನ ಸೆಕ್ರೆಟರಿ ಡಿ.ಎಂ. ಮಾಗಾಡೆಯವರೂ ಹೋದರು. ಕೋರ್ಟುಕೆಲಸ ಮುಗಿಸಿ ೧೯ಜೂನ್ ೧೯೩೮ರ ರಾತ್ರಿ ಎಂಟೂವರೆಗೆ ಚಾಳಿಸಗಾಂವಿಗೆ ಬಂದು ಇಳಿದರು. ಡಾ. ಅಂಬೇಡ್ಕರ ಬಂದಿರುವುದ ಕಂಡು ಜನರೂ ಆಗಮಿಸಿದ್ದರು. ೩–೪ಸಾವಿರದಷ್ಟು ಜನಸಮುದಾಯವಿತ್ತು. ಅಂಬೇಡ್ಕರ ಊಟ ಮುಗಿಸಿ, ಬೋರ್ಡಿಂಗ್ ಪರಿಶೀಲಿಸಿದ ಬಳಿಕ ಸಭೆಶುರುವಾಯಿತು. ಕವಿಬನಾ ಸಖಾರಾಮ ಸಾಳುಂಕೆಯವರ ಹಾಡು ಮುಗಿದ ಬಳಿಕ ಕು. ಶಾಂತಾಬಾಯಿ ಚವ್ಹಾಣ ಅವರು ಭಾಷಣ ಮಾಡಿದರು. ಬಳೀಕ ದಿವಾನ ಸೀತಾರಾಮ ಚವ್ಹಾಣರು ತಮ್ಮ ಭಾಷಣದಲ್ಲಿ ಹೇಳಿದ್ದೇನೆಂದರೆ, 'ಸಂಸ್ಥೆಯು ಇಂದು ಸಮಾಧಾನಕಾರಕ ಸ್ಥಿತಿಗೆ ಬರಲು ಡಾ. ಅಂಬೇಡ್ಕರರ ಅಮೃತ ಹಸ್ತವೇ ಕಾರಣ. ಇಂದು ೧೧೧೦ ರುಪಾಯಿ ಗ್ರ್ಯಾಂಟ್ ಮತ್ತು ಸ್ಥಳವೂ ಸಿಕ್ಕಿದ್ದು ೩೫೦೦ ರುಪಾಯಿಯ ಕಟ್ಟಡವೂ ಪೂರ್ಣಗೊಂಡಿದೆ. ಬೋರ್ಡಿಂಗ್‌ಗೆ ಬೇಗ ಹೊಲವೂ ಸಿಗಲಿದೆ. ಹೀಗೆ ಸಂಸ್ಥೆ ಏಳ್ಗೆಯನ್ನು ಹೊಂದಲು ಅವರೇ ಕಾರಣರಾಗಿದ್ದಾರೆ. ಅವರು ಕೈಗೊಂಡಿದ್ದಾರೆ. ಅವರಿಗೆ ಸೂಕ್ತ ದಿನಾಂಕವನ್ನು ನೀಡಲು ಕೇಳಿಕೊಂಡಿದ್ದೇವೆ...' ಅನಂತರ ಡಿ.ಎಸ್. ಮಾಗಾಡೆ ಭಾಷಣ ಮಾಡಿದರು. ಅವರು ೧೯೨೭ರಿಂದ ಈಗಿನವರೆಗಿನ ಒಟ್ಟೂ ಪರಿಸ್ಥಿತಿಯ ಬಗೆಗೆ ಹೇಳಿದರು. ಬಳಿಕ ಎಸ್. ಕೆ. ಸೋನವಣೆ, ಡಿ.ಜಿ. ಜಾಧವ ಅವರ ಭಾಷಣದ ಬಳಿಕ ಡಾ. ಅಂಬೇಡ್ಕರರು ಭಾಷಣ ಮಾಡಲು ಸಿದ್ಧರಾದರು. ಎಲ್ಲರು ಕರತಾಡನ ಮಾಡಿದರು.

ಡಾ. ಅಂಬೇಡ್ಕರ ಭಾಷಣದ ಸಾರಾಂಶ ಹೀಗಿದೆ–"ನಾನಿಂದು ಭಾಷಣ ಮಾಡಬೇಕಾಗ ಬಹುದೆಂಬ

---

ಜನತಾ: ೧೬ ಜುಲೈ, ೧೯೩೮.

ಕಲ್ಪನೆ ನನಗಿರಲಿಲ್ಲ. ಜನ ಬಹಳ ಸೇರಿರುವುದರಿಂದ ಒಂದೆರಡು ಮಾತು ಹೇಳುತ್ತೇನೆ. ನಮ್ಮನ್ನು ಇಂದು ಆಳುತ್ತಿರುವವರು ಆಂಗ್ಲ ಸರಕಾರವಲ್ಲ, ಕಾಂಗ್ರೆಸ್ ಸರಕಾರ. ನನಗೆ ಹನ್ನೊಂದು ವರ್ಷದ ಆಂಗ್ಲ ಸರಕಾರದ ಅನುಭವವಿದೆ. ಹಾಗಯೇ, ೧೧ತಿಂಗಳ ಕಾಂಗ್ರೆಸ್ ಸರಕಾರದ ಅನುಭವವಿದೆ. ಕಾಂಗ್ರೆಸ್ ಅಧಿಕಾರಾರೂಢವಾಗುವ ಮುನ್ನ ನಾನು ಬಹಳ ಆಸೆಯನ್ನಿಟ್ಟುಕೊಂಡಿದ್ದೆ. ಅದೆಲ್ಲ ಹುಸಿಹೋಯಿತು. ಆಂಗ್ಲಸರಕಾರದ ಕಾಲಕ್ಕೆ ಅಸ್ಪೃಶ್ಯರಿಗೆ ಪೋಲಿಸ ಇಲಾಖೆಯಲ್ಲಿ ಪ್ರವೇಶವಿರಲಿಲ್ಲ. ನಾನು ಆಸೆಂಬ್ಲಿಯಲ್ಲಿ ಜಗಳ ಮಾಡಿ ಪ್ರವೇಶ ಸಿಗುವಂತೆ ಮಾಡಿದೆ. ಆಂಗ್ಲಸರಕಾರ ಏನಾದರೂ ಕೊಡುತ್ತಿತ್ತು. ಮರಡಿನೆಲದ ಬಗ್ಗೆ ಆಂಗ್ಲಸರಕಾರವು ಅಸ್ಪೃಶ್ಯರ ಅರ್ಜಿಯನ್ನು ಗಮನಿಸುತ್ತಿತ್ತು. ಕಚೇರಿಯಲ್ಲಿ ಅದರ ದಾಖಲೆಯೂ ಇದೆ. ಮಾಹಿತಿ ಅಲ್ಲಿ ಸಿಗಲೂಬಹುದು. ಪೋಲಿಸ ಇಲಾಖೆಯಲ್ಲಿ ಅಸ್ಪೃಶ್ಯರ ಅರ್ಜಿಯನ್ನು ಮೊದಲಿಗೆ ಪರಿಗಣಿಸಬೇಕು. ಆಂಗ್ಲ ಸರಕಾರ ನಮಗಾಗಿ ಏನೂ ಸಂರಕ್ಷಿಸಿ ಉಳಿಸಲಿಲ್ಲ. ಎಲ್ಲರ ಜೊತೆಗೆ ಏನಾದರೂ ಲಾಭವಾದರೆ ನೀವು ಪಡೆಯಬೇಕು. ಒಂದೇ ತಾಯಿಯ ಉದರದಲ್ಲಿ ಜನಿಸಿದ ನಾಲ್ವರು ಮಕ್ಕಳಲ್ಲಿ ದೊಡ್ಡ ರೊಟ್ಟಿಯ ತುಣುಕು ಹಿರಿಯ ಮಗನಿಗೆ ನೀಡಲಾಗುತ್ತದೆ. ತಾಯಿ ಕೊನೆಯ ಮಗನಿಗಾಗಿ ರೊಟ್ಟಿಮುಚ್ಚಿಡುತ್ತಾಳೆ. ಹಾಗೆ ನಮಗಾಗಿ ಕಾಂಗ್ರೆಸ್ ಏನು ಉಳಿಸಿದೆ? ಕಾಂಗ್ರೆಸ್ ನಮಗಾಗಿ ಏನೂ ಸಂರಕ್ಷಣೆ ಮಾಡಿ ಇಡುವುದಿಲ್ಲ. ಅಂದಾಗ ಅದು ಹೇಗೆ ತಾಯಿಯಾಗುವುದು ಸಾಧ್ಯ? ನಮಗೆ ವಾತ್ಸಲ್ಯದ ಅಗತ್ಯವಿಲ್ಲ. ನಾವು ಸತ್ತರೂ ಸರಿ. ನಮ್ಮ ತೋಳ್ಬಲದಿಂದಲೇ ಸಂಪಾದಿಸುತ್ತೇವೆ. ನಾವು ಹೆದರುವುದೂ ಇಲ್ಲ, ಗಿರಟೆ ಹಿಡಿದು ಬೇರೆಯವರ ಮನೆ ಬಾಗಿಲಿಗೂ ಹೋಗುವುದಿಲ್ಲ. ಕಾಂಗ್ರೆಸ್ಸಿನ ವಾತ್ಸಲ್ಯದಿಂದ ಏನು ಲಾಭ? ನಾನು ಗಾಂಧಿಯ ಶತ್ರುವಲ್ಲ. ಯಾರಿಗೆ ಸತ್ಯವೆನಿಸುತ್ತದೆಯೋ ಅದನ್ನೇ ಅವನು ಮಾಡುತ್ತಾನೆ. ನಾನು ಗಾಂಧಿಯವರ ಕಾರ್ಯವನ್ನು ಲೆಕ್ಕಿಸುವುದಿಲ್ಲ. ಕಾಂಗ್ರೆಸ್ಸು ಗಾಂಧಿಯ ಕೈಯಲ್ಲಿದೆ. 'ರಾಜಾಜ್ಞೆಯಂತೆ ಸೈನ್ಯ ಮನ್ನುಗ್ಗುತ್ತದೆ' ಗಾಂಧಿ ಹೇಳುತ್ತಾನೆ, ಕಾಂಗ್ರೆಸ್ ಮಾಡುತ್ತದೆ. ಗಾಂಧಿಯ ಮನಸ್ಸು ಒಪ್ಪಿ, ಅಸ್ಪೃಶ್ಯರಿಗೆ ಸವಲತ್ತು ನೀಡಿದರೆ ಅವರಿಗೆ ತಿನ್ನಲು ಸಿಗುತ್ತದೆ. ಗಾಂಧಿಯ ವಿರುದ್ಧ ಯಾರೂ ಹೋಗಲಾರರು 'ಕನಿಕರವಿದ್ದವರು ಲೋಭ ರಹಿತ ಪ್ರೀತಿ ಮಾಡುತ್ತಾರೆ' ತಾಯಿಯಾದವಳು ಎಲ್ಲ ಮಕ್ಕಳನ್ನು ಸಮಾನವಾಗಿ ಪ್ರೀತಿಸುತ್ತಾಳೆ. ತುಂಟ ಹುಡುಗನ ಮೇಲೂ ಇರುತ್ತದೆ. ಕಾಂಗ್ರೆಸ್ ಮತ್ತು ನಿಮ್ಮ ತಾಯಿ ಗಾಂಧಿ, ಅಂದಾಗ ಗಾಂಧಿ ನಿಮ್ಮನ್ನು ಹೆಚ್ಚು ಪ್ರೀತಿಯಿಂದ ಕಾಣಬೇಕಿತ್ತು. ಆದರೆ ಹಾಗೆ ಕಾಣುವುದಿಲ್ಲ. ಪರರನ್ನು ನಂಬಿದರೆ ಅವರ ಕೆಲಸಮುಳುಗಿದಂತೆ, ಆದ್ದರಿಂದ ತನ್ನ ಕೆಲಸ ತಾನೇ ಮಾಡಬೇಕು. ನಮ್ಮ ಮೇಲೆ ದೊಡ್ಡ ಸಂಕಟ ಎರಗಿದೆ. ಅದು ನಿಮಗೆ ಗೋಚರಿಸುತ್ತಿಲ್ಲ. ೨೦೦೦ ವರ್ಷಗಳ ಪರಿಸ್ಥಿತಿ ನಿಮಗೆ ಮೈಗೂಡಿಬಿಟ್ಟಿದೆ. ಧುಳೆಯ ಬಗೆಗೆ ಹೇಳುತ್ತೇನೆ. ಧುಳೆಯ ಪಾಠಕ ಶಾಸ್ತ್ರಿಗಳು ಹಿಂದೂಧರ್ಮ ಶಾಸ್ತ್ರಜ್ಞರು. 'ಅಸ್ಪೃಶ್ಯರ ಪೂರ್ವೋಕ್ತಿ' ಎಂಬ ಪುಸ್ತಕ ರಚಿಸಿದ್ದಾರೆ. ಯಾವುದೋ ಕೆಲಸದ ನಿಮಿತ್ತ ಶಾಸ್ತ್ರಿಗಳಿಗೆ ಸುದ್ದಿ ಕಳಿಸಿದೆ. ನಾನು ಕಾರು ಏರಿ ಪಾಠಕಶಾಸ್ತ್ರಿಗಳ ಕಡೆಗೆ ಹೋದೆ. ನಾನು ಬಂದಿದ್ದೇನೆ, ಭೇಟಿಯಾಗಬಹುದೇ' ಎಂದು ಒಬ್ಬ ಆಸಾಮಿಯನ್ನು ಕೇಳಲು ಕಳಿಸಿದೆ. ಅಲ್ಲಿ ಊಟ ನಡೆದಿತ್ತು. ಶಾಸ್ತ್ರಿಗಳ ಉತ್ತರ ಬರಲಿಲ್ಲ. ಅವರೇ ಧಾವಿಸಿ ಹೊರಗೆ ಬಂದರು. 'ನಾನು ನಿಮ್ಮೊಂದಿಗೆ ಚರ್ಚೆ ಮಾಡಲು ಬಯಸುತ್ತೇನೆ. ಪಾಠಶಾಲೆಗೆ ಹೋಗೋಣ' ಎಂದು ಹೇಳಿದೆ. ಅವರು ಕಾರಿನಲ್ಲೇ ಕೂತು ಚರ್ಚೆ ಮಾಡೋಣ ಎಂದರು. ಧುಳೆಯ ರಸ್ತೆ ತೀರ ಕಿರಿದಾಗಿದೆ, ಹೆಚ್ಚು ಹೊತ್ತು ಕಾರಿನಲ್ಲಿ ಕೂತಿರುವ ಹಾಗಿಲ್ಲ–ಎಂದು ಸಾಕಷ್ಟು ಹೇಳಿನೋಡಿದೆ. ಆದರೆ ಪ್ರಯೋಜನವಾಗಲಿಲ್ಲ. ನಿರುಪಾಯಗೊಂಡು ಬಂಗಲೆಗೆ ಹೋಗಿ ಚರ್ಚೆ ಮಾಡಬೇಕಾಯಿತು. ಚರ್ಚೆ ಚೆನ್ನಾಗಿ ನಡೆಯಿತು. ನನ್ನಂತೆ ಶಿಕ್ಷಣ ಪಡೆಯುವವರು ಕಡಿಮೆಯಿರಬಹುದು. ಆದರೆ ನನಗೂ

ಸಹ ಶಾಸ್ತ್ರಿಗಳ ಪಾಠಶಾಲೆಯಲ್ಲಿ ಪ್ರವೇಶ ಸಿಗಲಿಲ್ಲ. ಎಂಥ ಅಪಮಾನವಿದು! ನನ್ನ ಹೃದಯ ಘಾಸಿಗೊಂಡಿದೆ ನಿಮಗೆ ಅದರ ಅರಿವಿಲ್ಲ. ನಾವು ಹೋರಾಡಿದಾಗಲೇ ನಮಗೇನು ಬೇಕೋ ಅದು ಲಭಿಸುತ್ತದೆ. ಕಾಂಗ್ರೆಸ್, ಗಾಂಧಿಯ ಧೋರಣೆಯು ಹನ್ನೊಂದು ತಿಂಗಳಲ್ಲಿ ಕಂಡುಬಂತು. ನಾಗಪುರದ ಸಚಿವ ಶರೀಪರ ಪ್ರಕರಣವೇ ಅದರ ಉತ್ತಮ ಪುರಾವೆ. ಅದಕ್ಕಾಗಿ ನಾವೆಲ್ಲರೂ ಒಗ್ಗಟ್ಟನಿಂದ ಸಂಘಟಿತರಾಗಿ ಹೋರಾಡಬೇಕಾಗಿದೆ. ಕಾಂಗ್ರೆಸ್ಸು ೫೦ವರ್ಷದ್ದು. ಸ್ವತಂತ್ರ ಕಾರ್ಮಿಕ ಪಕ್ಷವು ಒಂದೂವರೆ ಎರಡು ವರ್ಷದ್ದು. ಕಾಂಗ್ರೆಸಿಗೆ ಯಾರದ್ದಾದರೂ ಹದರಿಕೆಯಿದ್ದರೆ ಅದು ಸ್ವತಂತ್ರ ಕಾರ್ಮಿಕ ಪಕ್ಷದ್ದೇ. ನಾವು ಹದಿನೈದು ಜನರು ಸೇರಿ ಕಾಂಗ್ರೆಸನ್ನು ಹೈರಾಣಗೊಳಿಸಿ ಬಿಡುತ್ತೇವೆ. ೧೫ರ ಬದಲಿಗೆ ೩೫-೪೦ ಜನರು ಇದ್ದದ್ದೇ ಆಗಿದ್ದರೆ ನಮ್ಮದೇ ರಾಜ್ಯ ಬಂದು ಬಿಡುತ್ತಿತ್ತು. ೧೦-೧೫ವರ್ಷಗಳಲ್ಲಿ ಒಗ್ಗಟ್ಟಾಗಿ ಬಿಟ್ಟರೆ ಖಂಡಿತವಾಗಿಯೂ ನಮ್ಮದೇ ರಾಜ್ಯ ಬರುತ್ತದೆ. ನೀವೆಲ್ಲರೂ ನನ್ನನ್ನು ದೇವರೆಂದು ಭಾವಿಸುತ್ತೀರಿ. ನಾನು ದೇವರಲ್ಲ ಮಹಾರ. ನಿಮ್ಮ ಸ್ವತಂತ್ರ ಕಾರ್ಮಿಕ ಪಕ್ಷವೇ ದೇವರು. ಗುಂಡುಕಲ್ಲಿಗೆ ಸಿಂಧೂರ ಲೇಪಿಸಿದರೆ ದೇವರಾಗುತ್ತಾನೆ. ಹಾಗೆ ನಿಮ್ಮ ನಿಜವಾದ ದೇವರು ಸ್ವತಂತ್ರ ಕಾರ್ಮಿಕ ಪಕ್ಷ. ಎಲ್ಲರೂ ಈ ಪಕ್ಷದ ಸದಸ್ಯರಾಗಿ, ವರ್ಷಕ್ಕೆ ನಾಲ್ಕಾಣೆ ವಂತಿಗೆ ಏನು ಹೆಚ್ಚಲ್ಲ. ನಾನು ಸಾಕಷ್ಟು ಮಾತಾಡಿದೆ.

ಈ ಭಾಷಣದ ಬಳಿಕ ಬೋರ್ಡಿಂಗಿನ ಪರವಾಗಿ ಡಿ.ಎಂ. ಮಾಗಾಡೆಯವರ, ವ್ಯಾಯಾಮ ಶಾಲೆಯ ಪರವಾಗಿ ಧಾವಜಿ ಮಾನೆಯವರು ಮಾಲಾರ್ಪಣೆ ಮಾಡಿದರು. ಹರಿಭಾವೂ ಕನ್ನಡಕರ ನಿಜಾಮಸ್ಟೇಟ್ ಪರವಾಗಿ ಹಾರ ಹಾಕಿದರು. ಭಗಿನಿಯರ ಪರವಾಗಿ ಕು. ಶಾಂತಾಬಾಯಿ ಚವ್ಹಾಣ ಅವರು ಮಾಲೆ ಹಾಕಿದರು. ಕೊನೆಗೆ ಡಿ.ಎಂ. ಮಾಗಾಡೆಯವರು ಎಲ್ಲರಿಗೆ ಕೃತಜ್ಞತೆ ಸಲ್ಲಿಸಿದ ಬಳಿಕ ಸಭೆ ಬರಖಾಸ್ತುಗೊಂಡಿತು. ಬೆಳಗಿನ ರೈಲು ಏರಿ ಡಾ. ಅಂಬೇಡ್ಕರರು ಮುಂಬೈಗೆ ತೆರಳಿದರು.

# ೧೩೮.
# ಮಹಾರಾಷ್ಟ್ರ ಏಕೆ ಹಿಂದುಳಿದಿದೆ?

ದಿ: ೪ ಆಗಸ್ಟ್, ೧೯೩೮ರಂದು ಮಧ್ಯಪ್ರಾಂತದ ವಿಶ್ರಾಂತ ಮುಖ್ಯಪ್ರಧಾನರಾದ ಡಾ. ಖರೆಯವರನ್ನು ಸ್ವಾಗತಿಸಲು ಅವರ ಕೆಲವು ಆಪ್ತಮಿತ್ರರು ಭಾರತಸೇವಕ ಸಮಾಜದ ದಿವಾನಖಾನೆಯಲ್ಲಿ ಒಂದು ಭೋಜನಕೂಟವನ್ನು ಏರ್ಪಡಿಸಿದರು. ಈ ಪ್ರಸಂಗದಲ್ಲಿ ಸಮಾರಂಭದ ಅಧ್ಯಕ್ಷರಾದ ಡಾ. ಅಂಬೇಡ್ಕರರು ಮಾಡಿದ ವೈಚಾರಿಕ ಭಾಷಣವು ನಿಜವಾದ ಪ್ರಜಾಪ್ರಭುತ್ವದ ಮತ್ತು ತತ್ವದ ವಿಶ್ಲೇಷಣೆಯಾಗಿದ್ದು, ಇಂದಿನ ಸದ್ಯದ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರೂ ಮನನ ಮಾಡುವಂತಹದಾಗಿದೆ. ಅದೇ ಕಾಲಕ್ಕೆ ಶ್ರೀ ತುಳಜಾಪುರಕರ ಮತ್ತು ಡಾ. ಖರೆಯವರೂ ಮಾತಾಡಿದರು.

ಈ ಸಮಾರಂಭಕ್ಕೆ ಶ್ರೀ. ನಾ.ಮ. ಜೋಶಿ, ಡಾ. ಗೋಪಾಲರಾವ ದೇಶಮುಖ, ಡಾ. ವಾಡ, ಡಾ. ಬಾಲಿಯಾ ಮತ್ತು ಮುಂಬೈನ ಪ್ರತಿಷ್ಠಿತ ವೈದ್ಯರು, ವಕೀಲರು ಮತ್ತು ನಾಗರಿಕರು ಹಾಜರಿದ್ದರು. ಭೋಜನದ ನಂತರ ಸಭೆ ಆರಂಭಗೊಳ್ಳುವಾಗ ಅಧ್ಯಕ್ಷಸ್ಥಾನಕ್ಕಾಗಿ ಡಾ. ಅಂಬೇಡ್ಕರ ಅವರ ಹೆಸರನ್ನು ಸೂಚಿಸುವಾಗ ಶ್ರೀ ದಾಜಿಸಾಹೇಬ ತುಳಜಾಪುರಕರು ಭಾಷಣ ಮಾಡಿದರು.

ಅನಂತರ ಶ್ರೀ ದಳವಿಯರು ಅನುಮೋದನೆ ವ್ಯಕ್ತಪಡಿಸಿದ ಬಳಿಕ ಡಾ. ಅಂಬೇಡ್ಕರರು ಅಧ್ಯಕ್ಷಸ್ಥಾನ ಸ್ವೀಕರಿಸಿ ತಮ್ಮ ಭಾಷಣವನ್ನು ಆರಂಭಿಸಿದರು–

ನಾವಿಂದು ಖರೆಯವರನ್ನು ಸ್ವಾಗತಿಸಲು ಸೇರಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಯಾವ ಕಾರಣ ಮತ್ತು ಉದ್ದೇಶದಿಂದ ನಾವು ಸ್ವಾಗತ ಮಾಡುತ್ತಿದ್ದೇವೆ ಎಂಬ ಬಗೆಗೆ ಒಂದಿಷ್ಟು ವಿವರಣೆ ನೀಡುವುದು ಅಗತ್ಯ. ನೀವು ಸಭಿಕರ ಕಡೆಗೆ ಗಮನಹರಿಸಿದಿರಿ ಎಂದರೆ ನಾವೆಲ್ಲ ಒಂದೇ ಭಾವನೆ, ಒಂದೇ ಕಾರಣಕ್ಕಾಗಿ ಸ್ವಾಗತಿಸಲು ಸೇರಿದ್ದೇವೆ ಎಂದೇನೂ ಅನಿಸುವುದಿಲ್ಲ. ರಾಜಕಾರಣದ ಮತದ ದೃಷ್ಟಿಯಿಂದ ಇಂದಿನ ಈ ಸಮುದಾಯವು ಹಲವು ಬಗೆಯದಾಗಿರುವುದು ಕಂಡು ಬರುತ್ತದೆ. ಕೆಲವರಂತೂ ವಿಶಿಷ್ಟ ಪಕ್ಷದ, ಕಾಂಗ್ರೆಸ್ಸಿನ ವಿಚಾರ ಸರಣಿಯ ಗುರುತು ಮಾಡಿಸುವ ಪೋಷಾಕೂ ಧರಿಸಿದ್ದಾರೆ. ಹಿಂದೂಸ್ಥಾನದಲ್ಲಿಯ ಹಲವು ಹಿಂದೂಗಳಿಗೆ ಇದೊಂದೇ ಜಗನ್ಮಾನ್ಯ ಪಂಥ ಎನಿಸುತ್ತದೆ. ಉಳಿದ ಕೆಲವರು ಯಾರು ಇಲ್ಲಿಗೆ ಆಗಮಿಸಿದ್ದಾರೋ ಅವರು ನನ್ನಂತೆ ದೇಶದ ಇಂದಿನ ಆ ಅಗ್ರಗಣ್ಯ ಪಕ್ಷದ ಸದಸ್ಯರಲ್ಲ. ಬದಲಿಗೆ ಅವರು ಆ ಪಕ್ಷದ ವಿರೋಧಿಗಳೇ ಆಗಿದ್ದಾರೆ. ಇದರ ಹೊರತು ಹಾಜರಿದ್ದ ಮತ್ತೆ ಕೆಲವರು ರಾಜಕಾರಣದ ಬಗೆಗೆ ಉದಾಸೀನರಾಗಿದ್ದರು. ಅವರು ಜಾತಿ ಪ್ರೀತಿಯಿಂದಲೋ, ಅಥವಾ ಅಂಥ ಬೇರೆ ಯಾವುದೇ ಕಾರಣದಿಂದಾಗಿ ಬಂದಿರಲೂಬಹುದು. ಅದೇನೆ ಇರಲಿ, ಡಾ. ಖರೆಯವರಂತೂ ನಮ್ಮೆದುರಿಗೆ ಮೂರು ಭಿನ್ನ ಸ್ವರೂಪದಲ್ಲಿ ನಿಂತಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಮೊದಲನೆಯದು, ಅವರು ಮಹಾರಾಷ್ಟ್ರೀಯನ್, ಎರಡನೆಯದು, ಅವರು ಕಾಂಗ್ರೆಸ್‌ನವರು, ಮೂರನೆಯ ಸ್ವರೂಪವೆಂದರೆ ಪದಚ್ಯುತಗೊಂಡ ಮಧ್ಯಪ್ರಾಂತದ ಮುಖ್ಯ ಪ್ರಧಾನರು. ಇಂದು ನಾನಿಲ್ಲಿಗೆ ಬಂದು ಅಧ್ಯಕ್ಷ ಪದ

---

ವಿವಿಧ ವೃತ್ತ: ೧೪ ಆಗಸ್ಟ್ ೧೯೩೮.

ಸ್ವೀಕರಿಸಲು ಕಾರಣವೇನಿರಬಹುದು ಅಂತಿರಾ? ಡಾ. ಖರೆ ಮತ್ತು ನಾನು ಈ ಮೊದಲೆಂದೂ ಭೇಟಿಯಾಗಿರಲಿಲ್ಲ. ನಿನ್ನೆ ಒಬ್ಬ ಸ್ನೇಹಿತನ ಕಚೇರಿಯಲ್ಲಿ ಭೇಟಿಯಾಯಿತು. ಅದೇ ನನ್ನ ಮತ್ತು ಡಾ. ಖರೆಯವರ ಮೊದಲ ಪರಿಚಯ. ಅವರ ರಾಜಕಾರಣದ ವಿಷಯದಲ್ಲಿ ನಾವು ಹಲವರಿಗೆ ಭಿನ್ನ ಮತ್ತು ವಿರೋಧಿಯೇ ಆಗಿದ್ದೇನೆ.

ಡಾ. ಖರೆ ಮಹಾರಾಷ್ಟ್ರದವರು ಎನ್ನುವುದು ಮಹತ್ವದ ಸಂಗತಿ. ಅವರಿಗಾದ ಅನ್ಯಾಯದಿಂದಾಗಿ ಹಲವು ಮಹಾರಾಷ್ಟ್ರದವರ ಮನಸ್ಸು ಪ್ರಕ್ಷುಬ್ಧಗೊಂಡಿರುವುದು ಸತ್ಯ. ಅದು ಸ್ವಾಭಾವಿಕ ಎನ್ನಿ. ಹಿಂದಿ ರಾಜಕಾರಣದಲ್ಲಿಯ ಮಹಾರಾಷ್ಟ್ರದ ಪಾಲಿನ ಇತಿಹಾಸ ಗಮನಿಸಿದಿರಿ ಎಂದರೆ, ಮಹಾರಾಷ್ಟ್ರದವರು ಹಿಂದೆ ಬಿದ್ದಿರುವುದರಲ್ಲಿ ನನಗಂತೂ ಅನುಮಾನವಿಲ್ಲ. ಮಹಾರಾಷ್ಟ್ರದವರು ಎಂದೂ ವ್ಯಾಪಾರದಲ್ಲಿ ತೊಡಗಿಕೊಂಡವರಲ್ಲ. ಅದರಿಂದಾಗಿ ವಿಪುಲ ದ್ರವ್ಯವಾಗಲಿ, ಸಂಪತ್ತಾಗಲಿ ಗಳಿಸಿದವರಲ್ಲ. ಯಾವಕಾಲಕ್ಕೆ ಇತರ ಭಾಗದ ಹಿಂದಿಜನರು ಪರಕೀಯರ ದೌರ್ಜನ್ಯಕ್ಕೊಳಗಾಗಿದ್ದಾರೋ, ಆಗ ಮಹಾರಾಷ್ಟ್ರದ ಪೂರ್ವಜರು ತಮ್ಮ ಸಂಪೂರ್ಣ ಜೀವನವನ್ನು ಸ್ವರಾಜ್ಯದ ಆಡಳಿತ ಮುನ್ನಡೆಸಲು ವ್ಯಯಿಸಿದರು. ಅದಕ್ಕಾಗಿ ಅವರು ರಕ್ತಸುರಿಸಿದರು. ಮಹಾರಾಷ್ಟ್ರ ಏಕೆ ಹಿಂದುಳಿದಿದೆ ಎಂಬ ಬಗೆಗೆ ಮೊನ್ನೆಯೇ ಒಬ್ಬ ಕಾಂಗ್ರೆಸ್ ಪುಢಾರಿಯು ಮುಂಬೈ ಭಾಷಣದಲ್ಲಿ ಮೀಮಾಂಸೆ ಮಾಡಿದ. ಮಹಾರಾಷ್ಟ್ರದವರಿಗೆ ವ್ಯವಹಾರಜ್ಞಾನ ಕಡಿಮೆಯಿರುವುದರಿಂದ ಅವರು ಹಿಂದುಳಿಯುತ್ತಿದ್ದಾರೆ ಎಂದವನ ಹೇಳಿಕೆ. ಆದರೆ ನನಗಂತೂ ಈ ಮಾತು ಸರ್ವಥಾ ಒಪ್ಪಿಗೆಯಿಲ್ಲ. ನನ್ನ ಪ್ರಕಾರ ಮಹಾರಾಷ್ಟ್ರದವರಷ್ಟು ವ್ಯವಹಾರಿಕ ಬುದ್ಧಿ ಹಿಂದೂಸ್ಥಾನದ ಬೇರೆ ಯಾವ ಪ್ರಾಂತದವರಲ್ಲಿ ಕಂಡು ಬರುವುದು ಸಾಧ್ಯವಿಲ್ಲ. ಮಹಾರಾಷ್ಟ್ರದ ತ್ರಾಸ ಬೇರೆ ಯಾವುದೇ ಕಾರಣದಿಂದ ಆಗಿರಲಿಲ್ಲ. ಆದರೆ ವ್ಯವಹಾರ ಬುದ್ಧಿಯ ಅಭಾವದಿಂದ ಮಾತ್ರ ಅದು ಖಚಿತವಾಗಿಯೂ ಆಗಲಿಲ್ಲ. ಮಹಾರಾಷ್ಟ್ರ ಹಿಂದುಳಿಯಲು ಕಾರಣವೇನೆಂದರೆ, ಅವರು ತಮ್ಮ ಸಂಪೂರ್ಣ ಜೀವಮಾನವನ್ನೇ ಮಹಾರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಬಳಸಿಕೊಂಡರು. ರಾಜಕಾರಣ ಮಾಡುವುದರಲ್ಲಿ, ರಾಜ್ಯದ ಆಡಳಿತ ನಡೆಸುವುದರಲ್ಲಿ ಅವರ ಕಾಲ ಹೊರಟು ಹೋಯಿತು. ನನ್ನ ಈ ಮಾತಿಗೆ ಚರಿತ್ರೆಯೇ ಸಾಕ್ಷಿ. ಧನಾಢ್ಯ ಶ್ರೇಷ್ಠಿಗಳ ಹೆಸರು ನಿಮಗೆ ಮಹಾರಾಷ್ಟ್ರದ ಚರಿತ್ರೆಯಲ್ಲಿ ಕೇಳಿಬರಲಿಕ್ಕಿಲ್ಲ. ಆದರೆ ಸೇನಾನಿ, ಮುತ್ಸದ್ಧಿ, ರಾಜಕಾರಣಿ ಪುರುಷರ ಹೆಸರು ನಿಮಗೆ ಕ್ಷಣಕ್ಷಣಕ್ಕೂ ಸಿಗುತ್ತವೆ. ಜಗತ್ತಿನ ಯಾವುದೇ ದೇಶದವರಿಗೆ ಅಭಿಮಾನವೆನಿಸುವಂತಹ ಹೆಸರುಗಳು ಅವು.

ಮಹಾರಾಷ್ಟ್ರ ಹಿಂದುಳಿಯುವ ಮುಖ್ಯಕಾರಣವೇನೆಂದರೆ, ಅವರು ಉಳಿದವರಂತೆ ವ್ಯಾಪಾರದ ಮಾರ್ಗ ಸ್ವೀಕರಿಸಲಿಲ್ಲ. ಲಕ್ಷ್ಮಿಕೃಪೆಗಾಗಿ ಪ್ರಯತ್ನಿಸಲಿಲ್ಲ, ಅವಳ ಬೆನ್ನುಹತ್ತಲಿಲ್ಲ. ಇಂದು ಕೇವಲ ಹಣಕ್ಕೆಮಾತ್ರ ಬೆಲೆಯಿದೆ! ಹಣ ಬುದ್ಧಿಯನ್ನು ವಶಪಡಿಸಿಕೊಂಡಿದೆ. ಕೊನೆಪಕ್ಷ ಅವರು ಬುದ್ಧಿ ಮತ್ತು ಶೀಲ ಇವೆರಡನ್ನು ಸೋಲಿಸಿದ್ದು ವಿಶೇಷವೆನ್ನಬೇಕು!

ಒಂದು ಕಾಲದಲ್ಲಿ ನಾವು ರಾಜಕಾರಣದಲ್ಲಿ ಅಗ್ರಸ್ಥಾನದಲ್ಲಿದ್ದೆವು. ತಿಲಕ, ಗೋಖಲೆ ಮತ್ತು ರಾನಡೆಯಂತಹ ಅತ್ಯಂತ ಬುದ್ದಿಶಾಲಿ ಮತ್ತು ರಾಜಕೀಯ ದುರಂಧರ ವ್ಯಕ್ತಿಗಳು ನಮ್ಮ ನಡುವೆಯಿದ್ದರು. ಈ ವ್ಯಕ್ತಿಗಳ ರಾಜಕಾರಣವು ಇಂದಿನಂತೆ ಕೋಲಾಹಲದಿಂದ ಕಾಡಿರಲಿಕ್ಕಿಲ್ಲ ಅಥವಾ ಉತ್ಸುಕತೆಯಿಂದ ಕೂಡಿರಲಿಕ್ಕಿಲ್ಲ. ಆದರೆ ಅವರು ಇಂದಿನವರಿಗಿಂತ ಹೆಚ್ಚು ಪ್ರಾಮಾಣಿಕ ಮತ್ತು ವಿಚಾರಪ್ರವರ್ತಕರಂತೂ ಖಂಡಿತವಾಗಿದ್ದರು. ಆದರೆ ಈ ವಿಷಯದಲ್ಲೂ ಸಹ ನಾಯಕತ್ವ ನಮ್ಮ ಹತ್ತಿರ ಉಳಿಯಲಿಲ್ಲ. ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿದರೆ ಗುಮಾಸ್ತ ಮತ್ತು ಕಾರ್ಮಿಕ ಈ ಎರಡೂ ವೃತ್ತಿಯ ಆಚೆಗೆ ಯಾವ

ಕರ್ತೃತ್ವವಿಲ್ಲದ ಜನರೇ ಮಹಾರಾಷ್ಟ್ರದಲ್ಲಿರುವಂತೆ ಕಾಣಬರುತ್ತದೆ. ಈ ಇಳಿಮುಖದ ಸಂಗತಿಯನ್ನು ಗಮನಿಸಿದಾಗ, ಅಂಥ ಇಳಿಮುಖದಲ್ಲೂ ಮಹಾರಾಷ್ಟ್ರದ ಕೆಲವರು ರಾಜಕಾರಣದಲ್ಲಿ ಪಡೆದ ಸ್ಥಾನವನ್ನು ಸ್ಥಳಾಂತರಿಸಿ ಕಸಿದುಕೊಳ್ಳುವುದನ್ನು ಕಂಡು ಮಹಾರಾಷ್ಟ್ರದವರು ಘಾಸಿಗೊಳ್ಳುವದರಲ್ಲಿ ಅಚ್ಚರಿಯೇನಿಲ್ಲ. ಆದರೂ ಈ ಸಂಕುಚಿತ, ಮತ್ತೊಂದು ರೀತಿಯಲ್ಲಿ ಸದ್ಬುದ್ಧಿಯ ದೃಷ್ಟಿಯಿಂದ ಡಾ. ಖರೆಯವರ ಹೋರಾಟವನ್ನು ಕಂಡು, ಅದನ್ನು ಮುಂದುವರಿಸುವುದು ನಮ್ಮಲ್ಲಿ ಯಾರಿಗೂ ಸೂಕ್ತವೆನಿಸಲಾರದು. ಹೀಗಾಗಿ ನಾನು ಡಾ. ಖರೆಯವರ ಸ್ವಾಗತಕ್ಕಾಗಿ ಮಹಾರಾಷ್ಟ್ರೀಯ ಎಂಬ ಸಂಬಂಧದಿಂದ ಬರಲಿಲ್ಲ. ಹಾಗೆ ಮಹಾರಾಷ್ಟ್ರೀಯನ್ ಎಂದು ಕರೆಸಿಕೊಳ್ಳಲು ನಾನು ಅಭಿಮಾನವನ್ನೇ ಪಡುತ್ತೇನೆ. ನನ್ನ ಮಹಾರಾಷ್ಟ್ರೀಯತ್ವದ ಬಗ್ಗೆ ನನಗೆ ತುಂಬ ತುಂಬ ಅಭಿಮಾನವಿದೆ ಎಂದು ನೇರವಾಗಿಯೇ ಹೇಳುತ್ತೇನೆ. ಮಹಾರಾಷ್ಟ್ರದವರಲ್ಲಿರುವ ಕೆಲವುಗುಣ ಉಳಿದ ಪ್ರಾಂತದವರಲ್ಲಿ ಕಾಣಲಾರೆವು. ಲಂಡನ್ನಿನಂಥ ಪರಕೀಯ ಸ್ಥಳದಲ್ಲಿ ಎಲ್ಲ ಪ್ರಾಂತದವರ ಸಮಾವೇಶ ನಡೆದಾಗ ಈ ವ್ಯತ್ಯಾಸ ಸಹಜವಾಗಿ ಗಮನಕ್ಕೆ ಬರುತ್ತದೆ. ಯಾರದ್ದು ಎಂಥ ಗುಣದೋಷವಿದೆ ಎನ್ನುವುದನ್ನು ಆಗ ಸಹಜವಾಗಿ ಗುರುತಿಸಬಹುದು.

ಡಾ. ಖರೆ ಮಹಾರಾಷ್ಟ್ರದವರು ಎಂಬ ಕಾರಣದಿಂದಾಗಿ ನಾನು ಇಲ್ಲಿಗೆ ಹೇಗೆ ಬರಲಿಲ್ಲವೋ, ಹಾಗೆಯೇ ಅವರು ಕಾಂಗ್ರೆಸ್ಸನವರು ಎಂಬ ಕಾರಣಕ್ಕೂ ಬಂದಿಲ್ಲ. ಡಾ. ಖರೆಯವರು ಕಾಂಗ್ರೆಸ್ಸಿನ ಅನುಯಾಯಿಗಳಾಗಿದ್ದಾರೆ. ಸಂಸ್ಥೆಯ ನಿಯಮವನ್ನು ಶಿಸ್ತನ್ನು ಪರಿಪಾಲಿಸಲು ಅವರು ಮುಂದಾಗಿದ್ದಾರೆ ಎನ್ನುವುದು ಸ್ಪಷ್ಟ. ಈ ಶಿಸ್ತು ಪಾಲನೆಯ ಬಗೆಗೆ ಅವರಿಗೂ ಸಂಸ್ಥೆಗೂ ಇರುವ ವಾದದ ವಿಷಯದಲ್ಲಿ ಕಾಂಗ್ರೆಸಿನ ಹೊರಗಿನವರಾದ ನಾವು ಏನೂ ಸಹಾಯ ಮಾಡುವಂತಿಲ್ಲ. ನಾನು ಇಲ್ಲಿಗೆ ಬರುವ ಕಾರಣವೇನೆಂದರೆ, ಡಾ. ಖರೆಯವರು ಮುಖ್ಯ ಪ್ರಧಾನರ ಹಕ್ಕಿಗಾಗಿ ಹೋರಾಡುತ್ತಲಿದ್ದಾರೆ. ಮುಖ್ಯ ಪ್ರಧಾನರ ಈ ಹಕ್ಕು ನನಗೆ ಜನತೆಯ, ಮತದಾರರ ಮತ್ತು ಹೊಣೆಗಾರಿಕೆಯ ರಾಜ್ಯ ಪದ್ಧತಿಯ ದೃಷ್ಟಿಯಿಂದ ಅತ್ಯಂತ ಮೌಲ್ಯದ್ದು ಎಂದೆನಿಸುತ್ತದೆ. ಈ ಕಾರಣಕ್ಕಾಗಿ ನಾನು ಡಾ. ಖರೆಯವರನ್ನು ಸ್ವಾಗತಿಸಲು ಇಲ್ಲಿಗೆ ಆಗಮಿಸಿದ್ದೇನೆ.

ಮುಖ್ಯಪ್ರಧಾನನು ಜವಾಬ್ದಾರಿ ರಾಜ್ಯಪದ್ಧತಿಯ ಕೀಲು ಇದ್ದಂತೆ ಎಂದೊಮ್ಮೆ ನಾನು ಹೇಳಿದ್ದೆ. ಅದನ್ನೇ ಮತ್ತೊಮ್ಮೆ ಹೇಳಬೇಕೆಂದೆನಿಸುತ್ತಿದೆ. ಜವಾಬ್ದಾರಿ ರಾಜ್ಯಪದ್ಧತಿಗೆ ಎರಡು ಸಂಗತಿಗಳು ಮುಖ್ಯವಾಗಿರುತ್ತವೆ. ಒಂದನೆಯದು ತನ್ನ ಪ್ರತಿನಿಧಿಯ ಕೃತಿಯನ್ನು ಕಣ್ಣಲ್ಲಿ ಎಣ್ಣೆಹಾಕಿ ಗಮನಿಸುವ ಜನತೆ, ಎರಡನೆಯದು ಯಾರು ಜನತೆಯ ಮತಗಳಿಂದ ಆಯ್ಕೆಯಾಗುತ್ತಾನೋ ಅವನನ್ನೇ ಹೊಣೆಗಾರನೆಂದು ಪರಿಗಣಿಸುವ ಮುಖ್ಯಪ್ರಧಾನ. ಮುಖ್ಯಪ್ರಧಾನನ ಕೃತಿಯ ಯೋಗ್ಯ ಆಯೋಗ್ಯವನ್ನು ತೂಗಿನೋಡುವ ಜನತೆಯೇ ತನ್ನ ಬಳಿಗೆ ಕೊನೆಯ ನಿರ್ಣಾಯಕ ಹಕ್ಕನ್ನು ಪಡೆದಿರುತ್ತದೆ. ಆ ಹಕ್ಕು ಅದರದ್ದು. ಕಾಂಗ್ರೆಸ್ ವರ್ಕಿಂಗ್ ಕಮೀಟಿಯು ಹೇಳಿದ ಹಕ್ಕು, ನನ್ನ ದೃಷ್ಟಿಯಲ್ಲಿ ಜವಾಬ್ದಾರ ರಾಜ್ಯಪದ್ಧತಿಯ ಅಪಮಾನ ಎನ್ನಬಹುದು!

ಕಾಂಗ್ರೆಸ್ ವರ್ಕಿಂಗ್ ಕಮೀಟಿಯು ಎರಡು ತತ್ವಗಳನ್ನು ಜಾರಿಗೆ ತಂದಿದೆ. ನನ್ನ ಪ್ರಕಾರ ಈ ತತ್ವಗಳು ಅತ್ಯಂತ ವಿಘಾತಕ ಮತ್ತು ಯಾವುದೇ ಪ್ರಜಾಪ್ರಭುತ್ವ ದೇಶದಲ್ಲಿ ಅಸಮ್ಮತಿ ಸೂಚಕವಾಗಿರುವಂತಹದು. ಮೊದಲತತ್ವ ಹೀಗಿದೆ. ಮುಖ್ಯ ಪ್ರಧಾನನಿಗೆ ತನ್ನ ಸಹಕಾರಿಗಳನ್ನು ಆಯ್ಕೆಮಾಡುವ ಹಕ್ಕಿಲ್ಲ. ಅವನ ಸಹಕಾರಿ, ಮತದಾರರಿಗೆ ಅಥವಾ ಕಾಯ್ದೆಮಂಡಳಕ್ಕೆ ಜವಾಬ್ದಾರಿಯಿರದ ಬಾಹ್ಯಸಂಸ್ಥೆಯೆ ಅವರನ್ನು ಆಯ್ಕೆ ಮಾಡಬೇಕು! ಮಂತ್ರಿಮಂಡಳದ ಸಾಮೂದಾಯಿಕ ಜವಾಬ್ದಾರಿಯ

ತತ್ವವನ್ನು ಪ್ರಸ್ಥಾಪಿತಗೊಳಿಸಲು ದುಂಡುಮೇಜಿನ ಪರಿಷತ್ತಿನಲ್ಲಿ ನಾವೆಷ್ಟು ಬಡಿದಾಡಬೇಕಾಯಿತು ಎನ್ನುವುದು ನಿಮಗೆ ಗೊತ್ತಿಲ್ಲ. ಗೃಹಸ್ಥರೆ! ಈ ವಿಷಯದಲ್ಲಿ ಸೈಮನ್‌ಕಮೀಶನ್ ಮಾಡಿದ ರಿಪೋರ್ಟು ಏನೆಂದರೆ, ಪ್ರಾಂತದಲ್ಲಿಯ ರಾಜ್ಯಪದ್ಧತಿಯು ಪೂರ್ಣ ಜವಾಬ್ದಾರಿಯಿಂದ ಕೂಡಿರಬೇಕು ಎಂದಿದ್ದರೂ, ಕಾಯ್ದೆ ಮತ್ತು ಸುವ್ಯವಸ್ಥೆಯ ಖಾತೆಯು ಮೀಸಲಾತಿಯದಾಗಿರಬಾರದು ಎಂದೊಪ್ಪಿದ್ದರೂ, ಆ ಖಾತೆಯನ್ನು ಗವ್ಹರ್ನರ್‌ನಿಂದ ನೇಮಕಾತಿಗೊಂಡ ಮಂತ್ರಿಗಳ ಜೊತೆಜೊತೆಗೆ ಮಂತ್ರಿಮಂಡಳದಲ್ಲಿ ಸಮಾವೇಶಗೊಳಿಸಬೇಕು. ಈ ಶಿಫಾರಸನ್ನು ಮುರಿದು ಹಾಕಲು ಎಲ್ಲ ಹಿಂದಿ ಪ್ರತಿನಿಧಿಗಳು ಒಗ್ಗಟ್ಟಿನಿಂದ ಹೇಗೆ ಹೋರಾಡಿದರು ಎಂಬ ಬಗೆಗೆ ಇಲ್ಲಿ ಹಾಜರಿರುವ ಡಾ. ಮುಂಜೆಯವರೂ ಸಾಕ್ಷಿನೀಡಬಹುದು. ಸದರಿ ಶಿಫಾರಸಿನಿಂದ ಸಾಮೂದಾಯಿಕ ಜವಾಬ್ದಾರಿಯ ತತ್ವ ನಾಶವಾಗಬಹುದು ಎಂಬ ವಿಚಾರ ನಮ್ಮದಾಗಿತ್ತು. ಸಾಮೂದಾಯಿಕ ಜವಾಬ್ದಾರಿಯ ಈ ತತ್ವವು ಮುಖ್ಯಪ್ರಧಾನನ ರಾಜ್ಯ ಸಂವಿಧಾನದಲ್ಲಿಯ ಸ್ಥಾನವನ್ನು ಅವಲಂಬಿಸಿದೆ. ಮುಖ್ಯಪ್ರಧಾನನ ಸ್ಥಾನದ ಮಹತ್ವವಿರುವುದು ಇಲ್ಲೇ. ಈ ತತ್ವವನ್ನು ಜಾರಿಗೊಳಿಸಲು ಎರಡು ಸಂಗತಿಗಳು ಅಗತ್ಯವಿದೆ. ಈ ವಿಷಯದ ಬಗೆಗೆ ನಾನು ಒಂದಿಷ್ಟು ಹೆಚ್ಚು ಅಧ್ಯಯನ ಮಾಡಿರುವುದರಿಂದ ಅಧಿಕಾರಯುತವಾಗಿ ಮಾತಾಡುವ ಹಕ್ಕು ನನಗಿದೆ. ಸಾಮೂದಾಯಿಕ ಜವಾಬ್ದಾರಿಯ ತತ್ವಕ್ಕಾಗಿ ಅಗತ್ಯವಿರುವ ಮೊದಲ ಸಂಗತಿಯೆಂದರೆ, ಮುಖ್ಯಪ್ರಧಾನನಿಗೆ ತನ್ನ ಸಹಕಾರಿಯನ್ನು ಆಯ್ಕೆ ಮಾಡುವ ಪೂರ್ಣ ಸ್ವಾತಂತ್ರ್ಯವಿರಬೇಕು. ಈ ತತ್ವವನ್ನು ಅನುಷ್ಠಾನಕ್ಕೆ ತರುವುದಾದರೆ ಈ ಅಧಿಕಾರ ಬೇರೆ ಯಾರಿಗೂ ಸಿಗಬಾರದು. ಎರಡನೆಯದು, ಯಾವನಾದರೂ ಮಂತ್ರಿ ನಮಗೆ ಬೇಡವೆಂದಾದರೆ ಅವನನ್ನು ತೆಗೆದು ಹಾಕಲು ಹೇಳುವ ಅಧಿಕಾರವು ಮುಖ್ಯಪ್ರಧಾನನಿಗೆ ಇರಬೇಕು. ಮುಖ್ಯ ಪ್ರಧಾನನಿಂದಾಗಿ ತಾವು ಅಧಿಕಾರಾರೂಢರಾಗಿದ್ದೇವೆ ಮತ್ತು ನಮ್ಮನ್ನು ಅಧಿಕಾರಚ್ಯುತರನ್ನಾಗಿ ಮಾಡುವುದೂ ಅವನ ಕೈಯಲ್ಲೇ ಇದೆ ಎಂಬ ವಿಷಯವು ಸಂಪೂರ್ಣ ಮಂತ್ರಿಗಳ ಮನದ ಮೇಲೆ ಮೂಡದ ಹೊರತು ಸಾಮೂದಾಯಿಕ ಜವಾಬ್ದಾರಿಯ ತತ್ವ ಅನುಷ್ಠಾನಕ್ಕೆ ತರುವುದು ಎಂದಿಗೂ ಸಾಧ್ಯವಾಗಲಾರದು. ಪ್ರತಿಯೊಬ್ಬ ಮಂತ್ರಿಗೆ ಇದು ಅರಿವಾಗಿದ್ದರೆ ಮಾತ್ರ ಈ ಮಹತ್ವದ ತತ್ವವನ್ನು ಮುನ್ನಡೆಸಬಹುದು.

ಮಂತ್ರಿಮಂಡಳದಲ್ಲಿಯ ಮಂತ್ರಿಗಳನ್ನು ಆಯ್ಕೆ ಮಾಡುವ ಹಕ್ಕು, ಅಧಿಕಾರ ಮತ್ತು ಕೆಲಸವು ಮುಖ್ಯಮಂತ್ರಿಯದಾಗಿರದೆ, ಆ ಅಧಿಕಾರ ತಮ್ಮದು ಎಂಬ ವರ್ಕಿಂಗ್‌ಕಮಿಟಿ ಹಾಕಿಕೊಟ್ಟ ತತ್ವವು ಸಾಮೂದಾಯಿಕ ಜವಾಬ್ದಾರಿಯ ತತ್ವಕ್ಕೆ ಸಂಪೂರ್ಣ ವಿಸಂಗತವಾಗಿದೆ. ವರ್ಕಿಂಗ್‌ಕಮಿಟಿ ಹೇಳಿದ ಎರಡನೆ ತತ್ವವೆಂದರೆ ಮಂತ್ರಿಗಳ ಆಡಳಿತಕ್ಕೆ ಸಂಬಂಧಿಸಿದ್ದು. ಒಬ್ಬಮಂತ್ರಿಗೆ ಅಧಿಕಾರ ನೀಡಬೇಕೆ ಬೇಡವೇ ಎಂಬುದನ್ನು ನಿರ್ಧರಿಸುವ ಅಧಿಕಾರವು ವರ್ಕಿಂಗ್ ಕಮಿಟಿಯಂತಹ ಹೊರಗಿನ ಸಂಸ್ಥೆಗಿದೆ ಎನ್ನುವುದು ಅದರ ಹೇಳಿಕೆ.

ಗೃಹಸ್ಥರೆ, ಯಾರು ನಮ್ಮನ್ನು ಆರಿಸಿಕಳಿಸಿದರೋ, ಅವರ ಹೊರತು ಬೇರೆ ಯಾರಿಗೂ ಮಂತ್ರಿಯು ಜವಾಬ್ದಾರಿಯಾಗಿರಬಾರದು ಎನ್ನುವುದೇ ಜವಾಬ್ದಾರ ರಾಜ್ಯಪದ್ಧತಿಯ ಮುಖ್ಯತತ್ವವಾಗಿದೆ. ಆದರೆ ವರ್ಕಿಂಗ್ ಕಮಿಟಿಯು ಈ ಮತದಾರರನ್ನು ಸಂಪೂರ್ಣ ಗಾಳಿಗೆ ತೂರಿಬಿಟ್ಟಿದೆ.

ಮತದಾರನೆಂದರೆ ಯಾವಗಿಡದ ತೊಪ್ಪಲು ಎಂಬ ಧೋರಣೆಯು ವರ್ಕಿಂಗ್ ಕಮಿಟಿಯದು. ಕಿರಿದರಲ್ಲಿ ಹೇಳಬೇಕೆಂದರೆ, ವರ್ಕಿಂಗ್ ಕಮಿಟಿಯು ಮತದಾರನಿಗೆ ಯಕಚ್ಚಿತ್ ಇಲಿಯ ಬೆಲೆಯನ್ನು ಕೊಡಲಿಲ್ಲ. ಆಜ್ಞೆಮಾಡಿದಂತೆ ಮತ ಚಲಾಯಿಸಿ, ಮತ್ತೆ ಕಾಲಿನಿಂದ ಒದಿಸಿಕೊಂಡವರಂತೆ ಪಂಜರದೊಳಗೆ

ಹೋಗಿ ಬಿದ್ದಿರಬೇಕು ಇದಿಷ್ಟೇ ಅವರ ಕೆಲಸ. ವರ್ಕಿಂಗ್ ಕಮಿಟಿಯು ಘೋಷಿಸಿದ ತತ್ವದ ಅರ್ಥಹೀಗಿದೆ.

ಡಾ. ಖರೆಯವರು ಮುಖ್ಯಪ್ರಧಾನರ ಮೂಲಭೂತ ಹಕ್ಕಿಗಾಗಿ ಹೋರಾಡುತ್ತಿರುವುದರಿಂದಲೇ ನಾನವರನ್ನು ಸ್ವಾಗತಿಸಲು ಬಂದಿದ್ದೇನೆ. ನಾವೆಲ್ಲ ಅವರ ಈ ಹೋರಾಟಕ್ಕೆ ಬೆಂಬಲ ನೀಡುವುದು ನಮ್ಮ ಕರ್ತವ್ಯ. ಅಂತಿಮವಾಗಿ ಮತ್ತೊಂದೆರಡು ವಿಷಯ ಹೇಳಿ ನನ್ನ ಮಾತು ಮುಗಿಸುತ್ತೇನೆ. ಈ ವಿಷಯವನ್ನು ಹೇಳುವಾಗ ಡಾ. ಖರೆಯವರ ಕೆಲವು ಹೇಳಿಕೆಗಳ ಬಗೆಗೆ ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ಅವರು ನನ್ನನ್ನು ಕ್ಷಮಿಸುತ್ತಾರೆಂದು ನಾನು ಭಾವಿಸುತ್ತೇನೆ. 'ತಾನು ಕಾಂಗ್ರೆಸ್‌ನಲ್ಲೇ ಇರುತ್ತೇನೆ. ಒಳಗಿದ್ದುಕೊಂಡೇ ಯಾವ ಗುಂಪಿನವರು ತನ್ನನ್ನು ಕ್ಷುದ್ರವಾಗಿ ನಡೆಸಿಕೊಂಡರೋ ಅವರ ವಿರುದ್ಧ ಹೋರಾಡಲಿದ್ದೇನೆ'– ಎಂದು ಡಾ. ಖರೆ ಹೇಳುತ್ತಲಿದ್ದಾರೆ. ಅದರ ಬಗೆಗೆ ನಮ್ಮದೇನೂ ತಕರಾರಿಲ್ಲ. ಆದರೆ ಈ ಕೆಲಸದಲ್ಲಿ ಅವರಿಗೆ ಅದೆಷ್ಟು ಯಶಸಿಗಲಿದೆ ಎಂಬ ಬಗ್ಗೆ ನನಗೆ ಸಂಶಯವಿದೆ. ಡಾ. ಖರೆ ಪ್ರಧಾನ ಮಂತ್ರಿಯಾಗಿದ್ದಾಗ ಅವರ ಕೈಯಲ್ಲಿ ಅಧಿಕಾರವಿತ್ತು. ಮಧ್ಯಪ್ರಾಂತದ ಮುಖ್ಯಪ್ರಧಾನರೆಂದು ಜನರ ದೃಷ್ಟಿಯಲ್ಲಿ ಗೌರವದ ವೈಭವ ಅವರಿಗೆ ಪ್ರಾಪ್ತವಾಗಿತ್ತು. ಆದರೆ ಇಷ್ಟೆಲ್ಲ ಸೌಲಭ್ಯವಿದ್ದಾಗಲೂ ಸಹ ವರ್ಕಿಂಗ್ ಕಮಿಟಿಯ ವಿರುದ್ಧ ಅವರು ಏನೂ ಮಾಡುವುದು ಸಾಧ್ಯವಾಗಲಿಲ್ಲ. ಈಗ ಕಾಂಗ್ರೆಸ್ ಪಕ್ಷದ ಒಬ್ಬ ಸಾಮಾನ್ಯ ಸದಸ್ಯನಾಗಿದ್ದುಕೊಂಡು ಅದನ್ನೆಲ್ಲ ಸಾಧಿಸುವುದು ಹೇಗೆ ಸಾಧ್ಯ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಆದರೂ ಕೆಲವರು ಹೇಗಿರುತ್ತಾರೆ ಎಂದರೆ ಅಧಿಕಾರದಲ್ಲಿದ್ದಾಗಿನದಕ್ಕಿಂತ ಸ್ಥಾನಭ್ರಷ್ಟರಾದಾಗಲೇ ಅವರ ಧೈರ್ಯ ದ್ವಿಗುಣಗೊಳ್ಳುತ್ತದೆ. ಡಾ. ಖರೆಯವರು ಅಪವಾದವೆಂದು ಭಾವಿಸುವ ವ್ಯಕ್ತಿಗಳಲ್ಲಿ ಒಬ್ಬರೆಂದು ಭಾವಿಸಬಹುದು.

ನಾನಿಲ್ಲಿ ರಾಜಕೀಯ ಪ್ರಚಾರಕ್ಕಾಗಿ ಮಾತಾಡುತ್ತಿಲ್ಲ. ಅಥವಾ ನಮ್ಮ ಸ್ವತಂತ್ರ ಕಾರ್ಮಿಕ ಪಕ್ಷದ ಸದಸ್ಯರನ್ನು ಕಳಿಸಲೆಂದು ಪ್ರಚಾರಕಾರ್ಯ ಮಾಡುತ್ತಿಲ್ಲ. ಆದರೆ ಒಂದು ಮಾತನ್ನು ಖಚಿತ ಹಾಗೂ ಮನದುಂಬಿ ಹೇಳಬೇಕೆಂದು ಅನಿಸುವುದೇನೆಂದರೆ, ನಿಮಗೆ ಪ್ರಜಾಪ್ರಭುತ್ವ ಬೇಕೆಂದಿದ್ದರೆ ಎರಡು ಕಾರ್ಯವನ್ನು ನೀವು ಮಾಡಲೇಬೇಕು.

ಪ್ರಜಾಪ್ರಭುತ್ವಕ್ಕೆ ಅಗತ್ಯವಿದ್ದ ಮೊದಲ ಸಂಗತಿ ಎಂದರೆ ಪಕ್ಷಪದ್ಧತಿ. ಒಂದು ಅಧಿಕಾರಾರೂಢ ಮತ್ತು ವಿರೋಧಿ ಪಕ್ಷವಿರಬೇಕು. ವಿರೋಧ ಮಾಡುವ ಪಕ್ಷವು ಅಸ್ತಿತ್ವದಲ್ಲಿಲ್ಲದ್ದಾದ್ದರೆ, ದೇಶದ ಆಡಳಿತದಲ್ಲಿ ಜನತೆ ಗಮನ ಹರಿಸುವುದು ಸಾಧ್ಯವಿಲ್ಲ.

ಪ್ರತಿಯೊಂದು ವಿಷಯಕ್ಕೆ ಎರಡು ಮಗ್ಗುಲುಗಳಿರುತ್ತವೆ. ಅಷ್ಟೇ ಅಲ್ಲ, ಮೊನ್ನೆಯೇ ಸ್ಟೇಟ್ಸ್‌ಮನ್ ಎಂಬ ಇಂಗ್ಲಿಷ್ ಮುತ್ಸದ್ದಿಯು, 'ಯಾವುದೇ ಪ್ರಶ್ನೆಗೆ ಎರಡು ಮಗ್ಗಲುಗಳಿರುತ್ತವೆ ಎಂದು ತೋರಿಸುವುದೇ ರಾಜಕಾರಣಿಯ ಕೆಲಸ ಅಷ್ಟೇ ಅಲ್ಲ, ಕರ್ತವ್ಯವೇ ಆಗಿದೆ' ಎಂದು ಹೇಳಿದ ನೆನಪು. ಆ ಪ್ರಶ್ನೆಗೆ ಎರಡು ಮಗ್ಗಲು ಇರಲಿ ಬಿಡಲಿ, ಮತ್ತೊಂದು ಮಗ್ಗಲು ಇರುತ್ತದೆ ಎಂದೇ ಭಾವಿಸಬೇಕು. ಕಾಂಗ್ರೆಸ್ ಹೇಳುವುದು ಆ ಪ್ರಶ್ನೆಯು ಒಂದು ಮಗ್ಗಲು, ಮತ್ತೊಂದು ಮಗ್ಗಲು ಇರುವುದಿಲ್ಲ ಎಂದುಕೊಳ್ಳಬೇಕಿಲ್ಲ.

ನಾವು ಕಲಿಯಬೇಕಾದ ಮತ್ತೊಂದು ವಿಷಯವೆಂದರೆ, ಸದಾಕಾಲ ಸರಕಾರವನ್ನು ಪರೀಕ್ಷೆಗೆ ಈಡು ಮಾಡದ ಹೊರತು ಪ್ರಜಾಪ್ರಭುತ್ವ ಸುರಕ್ಷಿತವಾಗಿರುವುದು ಸಾಧ್ಯವಿಲ್ಲ. ಸುಲ್ತಾನಶಾಹಿ ಅಥವಾ ಸರ್ವಾಧಿಕಾರ ಮತ್ತು ಪ್ರಜಾ ಪ್ರಭುತ್ವ ಅಥವಾ ಪ್ರಜಾಸತ್ತೆಯ ನಡುವಣ ವ್ಯತ್ಯಾಸವೇನು? ರಾಜ್ಯಶಾಸ್ತ್ರದ ಪಂಡಿತರು ಇದರ ಬಗೆಗೆ ಏನು ವ್ಯಾಖ್ಯೆ ಕೊಡುತ್ತಾರೋ ನನಗಂತೂ ಗೊತ್ತಿಲ್ಲ. ಆದರೆ ರಾಜಕಾರಣಿಯಾಗಿ ನನಗೆ ಗೋಚರಿಸುವ ವ್ಯತ್ಯಾಸವೇನೆಂದರೆ, ಸುಲ್ತಾನ ಶಾಹಿಯಲ್ಲಿ ಸರಕಾರವನ್ನು ಪರೀಕ್ಷೆಗೆ ಗುರಿ

ಮಾಡುವುದಾಗಲಿ, ವಿಚಾರ ಮಾಡುವುದಾಗಲಿ ಸಾಧ್ಯವಿಲ್ಲ. ಅದು ಒಮ್ಮೆ ಸ್ಥಾಪನೆಯಾಯಿತೆಂದರೆ, ನಿರಂತರವಾಗಿ ಮುಂದುವರಿಯುತ್ತಲೇ ಇರುತ್ತದೆ. ಬೇಕಾದರೆ ಅದು ಹಿಂದಿ ಸಂಸ್ಥಾನದಂತೆ ವಂಶಪರಂಪರಾಗತವಾಗಿ ಮುಂದುವರಿಯಲಿ, ಅಥವಾ ಕೆಲ ಯುರೋಪಿಯನ್ ದೇಶದಲ್ಲಿಯಂತೆ ಒಂದೇ ಡಿಕ್ಟೇಟರ್‌ಶಿಪ್ ಅಡಿಯಲ್ಲಿ ಸಾಗಲಿ. ಹೇಗೆ ಮುಂದುವರಿದರೂ, ಒಂದು ಸಂಗತಿ ಮಾತ್ರ ಖಚಿತವಾಗಿದೆ. ಅದೇಂದರೆ, ಪ್ರಜಾಪ್ರಭುತ್ವದಲ್ಲಿ ಸರಕಾರವು ಪ್ರತಿಕ್ಷಣ ಪರೀಕ್ಷೆಗೊಳಪಡುತ್ತದೆ. ಪ್ರತಿದಿನ ಸರಕಾರವು ತನ್ನ ಅಸ್ತಿತ್ವವನ್ನು ಖಾತ್ರಿ ಪಡಿಸಬೇಕಾಗುತ್ತದೆ. ತನ್ನ ಪ್ರತಿಕೃತಿಯ ಸಮರ್ಥನೆಯ ಬಗ್ಗೆ ಉತ್ತರ ನೀಡಬೇಕಾಗುತ್ತದೆ. ಅಂಥ ಸ್ಥಿತಿ ಸುಲ್ತಾನಶಾಹಿಯಲ್ಲಿರುವುದಿಲ್ಲ. ನಿಮಗೆ ಸುರಕ್ಷಿತತೆ ಬೇಕೆಂದಿದ್ದರೆ, ಪ್ರಗತಿಯಾಗಬೇಕೆಂಬ ಬಯಕೆಯಿದ್ದರೆ, ಎಲ್ಲರೂ ಒಂದೇ ಸಂಸ್ಥೆಗೆ ಅಂಟಿಕೊಳ್ಳಬೇಡಿ, ಬೇಕಾದರೆ ಉಳಿದವರು ಏನೂ ಬೇಕಾದರೂ ಅಂದುಕೊಳ್ಳಲಿ. ಅದರ ಬಗೆಗೆ ತಲೆಕೆಡಿಸಿಕೊಳ್ಳಬೇಡಿ. ನಾನು ಕಾಂಗ್ರೆಸ್ ಸೇರಿಕೊಳ್ಳದಿರಲು ಕಾರಣವೇನೆಂದರೆ,ನನ್ನ ಕರ್ತೃತ್ವ ಮತ್ತು ಬುದ್ಧಿಗೆ ತಕ್ಕಂತಹ ಹುದ್ದೆ ಅಲ್ಲಿ ಸಿಗಲಿಕ್ಕಿಲ್ಲ ಎಂದಲ್ಲ. ನನ್ನನ್ನು ಅಲ್ಲಿ ಹತ್ತಿಕ್ಕುವುದು ಯಾರಿಂದಲೂ ಸಾಧ್ಯವಿಲ್ಲ. ಕಾಂಗ್ರೆಸ್ ಸೇರದಿರಲು ಅದಕ್ಕೆ ಅಂತಹದೇ ಕಾರಣವಿದೆ. ಸಂಸ್ಥೆಯ ಹೊರಗಿರುವುದೇ ನನಗೆ ಹೆಚ್ಚು ಮತ್ತು ಅತ್ಯಂತ ಅವಶ್ಯಕವೆಂದೆನಿಸುತ್ತದೆ. ಟೀಕಾಕಾರನ ಪಾತ್ರವಹಿಸಿ. ಪ್ರತಿಯೊಂದು ಪ್ರಶ್ನೆಯ ಬೇರೊಂದು ಮಗ್ಗಲನ್ನು ಅನಾವರಣಗೊಳಸಿ ತೋರಿಸುವುದೇ ನನಗೆ ಹೆಚ್ಚು ಶ್ರೇಯಸ್ಕರವೆನಿಸುತ್ತದೆ. ಜನರನ್ನು ವಂಚಿಸಬಾರದು ಎಂಬ ಕಾರಣಕ್ಕಾಗಿ ಈ ಭೂಮಿಕೆಯನ್ನು ಸ್ವೀಕರಿಸಬೇಕೆಂದೆನಿಸುತ್ತದೆ.

ನಮ್ಮ ಜನರ ದೇಹದಲ್ಲಿರುವ ವೈಶಿಷ್ಟ್ಯವು ವ್ಯಕ್ತಗೊಳ್ಳುತ್ತಿರುವ ಅರಿವು ಸದ್ಯ ನನಗಾಗುತ್ತಿದೆ. ಇಂಗ್ಲಂಡಿನಲ್ಲಿರುವ ಹೊಣೆಗಾರಿಕೆಯ ರಾಜಸತ್ತೆಯಂತಹದನ್ನು ನಮ್ಮ ದೇಶದಲ್ಲಿ ಸ್ಥಾಪಿಸಲೆಂದೇ ನಾವು ಪ್ರಯತ್ನಿಸಿದೆವು. ನಮ್ಮ ಸಂವಿಧಾನದಲ್ಲಿ ಅದನ್ನು ಸೇರಿಸಲು ಬಲವಂತ ಮಾಡಿದೆವು. ಆದರೆ ಆ ರಾಜಸತ್ತೆಗೆ ಬೇರೆಯದೆ ವಿಶಿಷ್ಟ ಸ್ವರೂಪ ಪ್ರಾಪ್ತವಾಗುತ್ತಿರುವುದು ಗಮನಕ್ಕೆ ಬರಲಾರಂಭಿಸಿದೆ. ಹೊಣೆಗಾರಿಕೆಯ ರಾಜ್ಯಪದ್ಧತಿಗೆ ನಾವಿಂದು ಹಲವು ವರ್ಷಗಳಿಂದ ಅಪರಿಚಿತರಾಗುತ್ತಿದ್ದೇವೆ. ಇಲ್ಲಿಯವರೆಗೆ ದೇವರು ಮತ್ತು ಅವನ ಪೂಜೆ ಮಾಡುತ್ತಿರುವುದೇ ನಮ್ಮ ಧರ್ಮ. ಇದೇ ವೈಶಿಷ್ಟ ಈಗಲೂ ಪ್ರಸ್ಥಾಪಿತಗೊಳ್ಳಲು ಹವಣಿಸುತ್ತಿದೆ. ಯಜಮಾನ ಹೇಳಿದ್ದೇ ಸತ್ಯ. ಅವನ ವಿರುದ್ಧ ಟೀಕಿಸುವುದು ನಮ್ಮ ಕೆಲಸವಲ್ಲ ಎಂಬ ಭಾವನೆಯು ಮತದಾರರಲ್ಲಿ ಕಾಣಿಸಿಕೊಳ್ಳಲು ಇದೇ ವೈಶಿಷ್ಟ್ಯ ಕಾರಣ. ಆದರೆ ಇಂಥ ಕುರುಡು ಭಕ್ತಿಯಿಂದ ಜವಾಬ್ದಾರ ರಾಜ್ಯಪದ್ಧತಿಗೆ ಸಿಹಿಯಾದ ಫಲ ಬಿಡುವುದು ಎಂದಿಗೂ ಸಾಧ್ಯವಿಲ್ಲ. ಆದರೆ ಹೊಣೆಯಿರುವ ರಾಜ್ಯಪದ್ಧತಿಯನ್ನು ಮುಂದುವರಿಸಬೇಕೆಂದಿದ್ದರೆ ಸರಕಾರವನ್ನು ಪರೀಕ್ಷೆಗೊಳಪಡಿಸಲು, ಒಂದು ಬದಿಯಿಂದ ಮತ್ತೊಂದು ಬದಿಗೆ ಸಹಜವಾಗಿ ಹೊರಳುವ ಸಿದ್ಧತೆಯಿರುವ ಜನಸಮುದಾಯ ಮೊದಲಿಗೆ ಬೇಕಾಗುತ್ತದೆ. ಇಂಥ ಜನಸಮುದಾಯ ಸಿದ್ಧಗೊಳ್ಳದಿದ್ದರೆ ಎಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದರೆ, ಆಂಗ್ಲರಿಂದ ಪಡೆಯಲಿರುವ ಸತ್ತೆಯು ಬಹುಜನ ಸಮಾಜದ ಕೈಗೆ ಬರದೆ, ಯಾವುದಾದರೂ ಒಂದು ಗುಂಪಿನವರ ಕೈಗೆಹೋಗಿ, ಮೊದಲಿಗಿಂತಲೂ ಕೆಟ್ಟಪರಿಸ್ಥಿತಿ ಬರಬಹುದು. ಇದಕ್ಕಿಂತ ಹೆಚ್ಚು ಹೇಳುವ ಇಚ್ಛೆ ನನಗಿಲ್ಲ. ಕೊನೆಗೆ ಡಾ. ಖರೆಯವರಿಗೆ ಹೇಳಬಯಸುವುದೇನೆಂದರೆ, ರಾಜಕೀಯವಾಗಿ ಬಹುಜನ ಸಮಾಜಕ್ಕೆ ಅತ್ಯಂತ ಪ್ರಿಯವಾದ, ಮಹತ್ವದ್ದಾದ ಇಂಥ ಪ್ರಶ್ನೆಗೆ ಸಾಧ್ಯವಾದಷ್ಟು ಬೆಂಬಲ ನೀಡಬೇಕೆಂಬ ಕಾರಣಕ್ಕೆ ನಾವಿಂದು ಇಲ್ಲಿ ಸೇರಿದ್ದೇವೆ. ಪಕ್ಷ ವೈಶಿಷ್ಟ್ಯ ರಾಜಕಾರಣದ ಕಕ್ಷೆಯ ಹೊರಗಿನ ಸರ್ವಸಾಮಾನ್ಯ ವಾಗಿರುವ ಪ್ರಶ್ನೆಯಿದು. ಆದ್ದರಿಂದಲೇ ಎಲ್ಲರೊಂದಿಗೆ ಅದು ಇಂಥ ಸಂಬಂಧ ಹೊಂದಿದೆ. ಡಾ. ಖರೆಯವರ ಈ ಹೋರಾಟದಲ್ಲಿ ಅವರಿಗೆ ಸಂಪೂರ್ಣ ಯಶ ಸಿಗಲೆಂದು ಹಾರೈಸುತ್ತೇನೆ.

ಡಾ. ಅಂಬೇಡ್ಕರರ ಭಾಷಣದ ಬಳಿಕ ಡಾ. ಖರೆಯವರು ಭಾಷಣದ ಮೂಲಕ ಉತ್ತರ ನೀಡಿದರು.

ಅನಂತರ ಶ್ರೀ. ನಾ.ಮ. ಜೋಶಿಯವರು ಕೆಲವೇ ವಾಕ್ಯಗಳಲ್ಲಿ ಅಭಾರ ಮನ್ನಣೆ ಮಾಡಿದ ಬಳಿಕ ಸಮಾರಂಭ ಮುಕ್ತಾಯಗೊಂಡಿತು.

## ೧೩೯.
## ಹೊಲಸು ಮಾಡಿದವನೇ ಬಳಿದು ಸ್ವಚ್ಛ ಮಾಡಬೇಕು

ಮಧ್ಯಪ್ರಾಂತದ ವಿಶ್ರಾಂತ ಮುಖ್ಯಪ್ರಧಾನರಾದ ಡಾ. ಖರೆಯವರು ಮುಂಬೈಗೆ ಬಂದಾಗ ಅವರಿಗೆ ಸನ್ಮಾನ ಮಾಡಿ, ಅವರ ಧೋರಣೆಗೆ ಬೆಂಬಲ ಸೂಚಿಸಲು ಸಭೆಯನ್ನು ಏರ್ಪಡಿಸಲಾಗಿತ್ತು. ಡಾ. ಖರೆಯವರ ಆಪ್ತರು ೪ ಅಗಸ್ಟ್‌ರಂದು ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯ ದಿವಾನಖಾನೆಯಲ್ಲಿ ಡಾ. ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಅವರಿಗೆ ಮೇಜವಾನಿ ನೀಡಲಾಯಿತು. ಇದೇ ರೀತಿ ಡಾ. ಖರೆಯವರ ಮತ್ತೊಂದು ಸನ್ಮಾನ ಸಭೆಯು ೫ ಅಗಸ್ಟ್, ೧೯೩೮ ರಂದು ಶ್ರೀ ಜಮನಾದಾಸ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಪರಳದಲ್ಲಿ ಏರ್ಪಡಿಸಲಾಗಿತ್ತು.

ಸಭೆಯ ಆರಂಭಕ್ಕೆ ಡಾ. ಖರೆಯವರು ತಮ್ಮ ಭಾಷಣದಲ್ಲಿ ತಮ್ಮ ಹೋರಾಟ ವ್ಯಕ್ತಿಗಾಗಿಯಲ್ಲ. ಪ್ರಜಾಪ್ರಭುತ್ವದ ತತ್ವಕ್ಕಾಗಿ ಎಂದು ಖಚಿತ ಪಡಿಸಿ, ಮಧ್ಯಪ್ರಾಂತದ ಕಾರಸ್ತಾನದ ಬಗೆಗೆ ಹೇಳಿದರು. ಅನಂತರ ಡಾ. ಅಂಬೇಡ್ಕರ ಅವರು ಭಾಷಣ ಮಾಡಿದರು–

'ಇಂದಿನ ಪ್ರಸಂಗದಲ್ಲಿ ನಾನು ಭಾಷಣ ಮಾಡಬೇಕಾದ ಅಗತ್ಯವಿರಲಿಲ್ಲ. ನಿನ್ನೆಯೇ ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯ ದಿವಾನಖಾನೆಯಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಭೆಜರುಗಿತ್ತು. ಅಲ್ಲಿ ನಾನು ಹೇಳಬೇಕಾಗಿರುವುದನ್ನೆಲ್ಲ ಹೇಳಿದ್ದೇನೆ. ಅಲ್ಲಿ ನಾನು ಇಂಗ್ಲಿಷಿನಲ್ಲಿ ಮಾತಾಡಿದೆ. ಆದರೆ ಮರಾಠಿವೃತ್ತ ಪತ್ರಿಕೆಯ ಗೂಢಚಾರರು ಅಲ್ಲೂ ಹಾಜರಿದ್ದರು. ಅವರು ನನ್ನ ಭಾಷಣವನ್ನು ಸರಿಯಾಗಿ ತರ್ಜುಮೆ ಮಾಡಿದ್ದಾರೆ ಎಂದು ಕೊಂಡಿದ್ದೇನೆ.

ನಿಮಗೆಲ್ಲ ಗೊತ್ತಿರುವಂತೆ ನಾನು ಕಾಂಗ್ರೆಸ್ಸಿನ ಸದಸ್ಯನಲ್ಲ. ಡಾ. ಖರೆಯವರು ಹೇಳಿದ ಕಥೆಯು ಅವರ ಬಳಗದ ವಾದಗಳಲೊಂದು. ನಾನು ಹೊರಗಿನವನು. ಈ ವಾದದಲ್ಲಿ ನೀವೇಕೆ ಬೀಳುತ್ತೀರಿ ಎಂದು ಯಾರಾದರೂ ಕೇಳಿದರೆ ಅದು ತಪ್ಪು ಎಂದು ನಾನು ಭಾವಿಸಲಾರೆ. ನನ್ನ ಪಕ್ಷದ ಜನರು ಮನೆಯ ಅನ್ನತಿಂದು ಬೇರೆಯವರ ಕಿತಾಪತಿ ಏಕೆ ಮಾಡುತ್ತೀರಿ ಎಂದು ಕೇಳುವ ಪ್ರಶ್ನೆಯೂ ಸಹಜವಾದುದೇ. ಆದ್ದರಿಂದ ನನಗಿಂದು ಭಾಷಣ ಮಾಡುವ ಅಧಿಕಾರವಿಲ್ಲ. ನಾನು ಹೊರಗಿನವನಾಗಿದ್ದರೂ ವ್ಯಾಪಕ ಅರ್ಥದಲ್ಲಿ ಡಾ. ಖರೆಯವರ ನೆರೆಯವನು.

ನಾವಿಬ್ಬರೂ ಒಂದೆ ವಾತಾವರಣದಲ್ಲಿ ಜೀವನ ಸಾಗಿಸುತ್ತಿದ್ದೇವೆ. ನೆರೆಮನೆಗೆ ಬೆಂಕಿಹತ್ತಿದಾಗ ತನ್ನ ಮನೆ ಸುರಕ್ಷಿತವಾಗಿದೆ ಎಂದವನು ಸುಮ್ಮನೇ ಕೂತಿರುವುದಿಲ್ಲ. ಏಕೆಂದರೆ ಒಮ್ಮೆ ಬೆಂಕಿ ಹತ್ತಿದಾಗ ಅದರ ಧಗೆ ಯಾರನ್ನು ಸುಡುವುದೋ ಎಂದೂ ಹೇಳುವಂತಿಲ್ಲ. ಮುಂಬೈ ಎಸೆಂಬ್ಲಿಯಲ್ಲಿ ನನ್ನ ಸ್ಥಿತಿಯು ಮರಿಗಳನ್ನು ರೆಕ್ಕೆಯಲ್ಲಿ ಹುದುಗಿಸಿಕೊಂಡು ಕಾವು ಕೊಡುವ ಕೋಳಿಯಂತಾಗಿದೆ ಎನ್ನುವುದು ನಿಮಗೂ ಗೊತ್ತು. ೧೦–೧೨ ಹುಡುಗರ ಜೊತೆಗೆ ನಾನು ಅಸೆಂಬ್ಲಿಯಲ್ಲಿ ವಿರೋಧಿ ಪಕ್ಷದ ಕಕ್ಷೆಯಲ್ಲಿ

---

ವಿವಿಧ ವೃತ್ತ: ೨೦ ಆಗಸ್ಟ್ ೧೯೩೮.

ಕೂತಿರುತ್ತೇನೆ. ಈ ಹುಡುಗರು ಬೆಳೆದು ದೊಡ್ಡವರಾಗಬಹುದು. ಕ್ರಮೇಣ ಸಂಖ್ಯೆಯೂ ಬೆಳೆದು, ನನಗೆ ಪ್ರಧಾನಮಂತ್ರಿಯಾಗುವ ಯೋಗ ಬರಬಹುದು. ಡಾ. ಖರೆಯವರ ಮೇಲೆ ಎರಗಿದ ಆಪತ್ತು ಕಂಡು ನಾನು ಸುಮ್ಮನೇ ಕೂತರೆ, ಅದೇ ಆಪತ್ತು ನನ್ನ ಮೇಲೂ ಎರಗಬಹುದು. ಮುಂದಿನ ಕಾಲದ ಬಗೆಗೆ ಯೋಚಿಸಿ, ಮೂರನೆಯವನೆಂದು ಈ ವಾದದಲ್ಲಿ ಪ್ರವೇಶಿಸದೆ ಸುಮ್ಮನೆ ಕೂತಿರದೆ, ನನ್ನ ವಿಚಾರವನ್ನು ನಿಮ್ಮೆದುರಿಗೆ ಇರಿಸುವುದು ಮತ್ತು ಡಾ. ಖರೆಯವರೊಂದಿಗೆ ಗೆಳೆತನ ಬೆಳೆಸುವುದೇ ಯೋಗ್ಯ ಎಂದು ನನಗನಿಸುತ್ತದೆ. ಆದ್ದರಿಂದ ನಾನಿಂದು ಮಾತಿಗೆ ಎದ್ದು ನಿಂತಿದ್ದೇನೆ. ಆದಾಗ್ಯೂ ಈ ನಾಟಕದ ಮುಖ್ಯ ಪಾತ್ರಧಾರಿಯಾದ ಡಾ. ಖರೆಯವರು ರಂಗಭೂಮಿಯನ್ನು ಪ್ರವೇಶಿಸಿ ಹೋದ ಬಳಿಕ, ನನ್ನಂತಹ ಬೇರೆ ಪಾತ್ರಧಾರಿ ಮಾತಾಡುವುದರಲ್ಲಿ ಏನೂ ಹುರುಳಿಲ್ಲ ಎಂದು ನನಗನಿಸುತ್ತದೆ.

ಡಾ. ಖರೆಯವರು ಈ ಪ್ರಸಂಗ ಜರುಗಿದ ಬಳಿಕ ನಮ್ಮ ಪ್ರಾಂತಕ್ಕೆ ಬಂದಿದ್ದರು. ಅವರು ಮಾಡಿದ ಭಾಷಣವನ್ನು ನಾನು ಮನಸ್ಸುಗೊಟ್ಟು ಓದಿದ್ದೇನೆ. ಪ್ರತಿಪಕ್ಷದಲ್ಲಿಯ ಪರಸ್ಪರ ಜಗಳವನ್ನು ಓದುವುದಾಗಲಿ, ಕೇಳುವುದಾಗಲಿ ಮನೋರಂಜಕ ಎನ್ನುವುದೇನೋ ಹೌದು. ಆದರೆ ನಾನು ಅವರ ಭಾಷಣವನ್ನು ಆ ದೃಷ್ಟಿಯಿಂದ ಓದಲಿಲ್ಲ. ಆ ವಾದದಲ್ಲಿ ಕಾಣಿಸುವ ಕೆಲವು ಸಂಗತಿಗಳು ಅತ್ಯಂತ ಮಹತ್ವದ್ದು. ಅದನ್ನು ನೀವು ಗಮನಿಸಬೇಕು.

ಈ ವಾದದಲ್ಲಿ ತಲೆದೋರಿದ ಮುಖ್ಯತತ್ವಗಳು ಹೀಗಿವೆ. ಸದ್ಯದ ಸಂವಿಧಾನದಲ್ಲಿ ಪ್ರೈಮ್ ಮಿನಿಸ್ಟರ್‌ರ ಅಧಿಕಾರದ ಬಗೆಗೆ ಏನು ಹೇಳಲಾಗಿದೆ? ಡಾ. ಖರೆಯವರ ಹೇಳಿಕೆ ಏನೆಂದರೆ, ಮಂತ್ರಮಂಡಳದ ಎಲ್ಲ ಮಂತ್ರಿಗಳು ಪ್ರಧಾನಮಂತ್ರಿಯನ್ನು ಆಯ್ಕೆ ಮಾಡಬೇಕಾಗಿದ್ದು, ಹೊರಗಿನ ಯಾರೂ ಅದರಲ್ಲಿ ಹಸ್ತಕ್ಷೇಪ ಮಾಡಕೂಡದು, 'ಮಂತ್ರಿ ಮಂಡಳದಲ್ಲಿರುವ ಯಾವುದೇ ಮಂತ್ರಿಯು ಅನರ್ಹ, ಜಗಳಗಂಟನೆಂದು ಕಂಡು ಬಂದರೆ ಅವನನ್ನು ಕಿತ್ತುಹಾಕುವ ಅಧಿಕಾರವು ಮುಖ್ಯಮಂತ್ರಿಗಿರಬೇಕು' ಎಂದು ಡಾ. ಖರೆಯವರು ಹೇಳುತ್ತಾರೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಹೇಳಿಕೆಯು ಇದಕ್ಕೆ ತೀರ ವಿರುದ್ಧವಾದುದು. ಯಾರನ್ನು ಸಚಿವನಾಗಿ ನೇಮಿಸುವುದು, ಯಾವಾಗ ಕಿತ್ತೊಗೆಯುವುದು–ಈ ಎಲ್ಲ ಅಧಿಕಾರ ತನ್ನದು, ಪ್ರೈಮ್ ಮಿನಿಸ್ಟರ್‌ನದಲ್ಲ–ಎಂದು ವರ್ಕಿಂಗ್ ಕಮಿಟಿ ಹೇಳುತ್ತದೆ.

ಮಂತ್ರಿಮಂಡಳವು ವ್ಯವಸ್ಥಿತವಾಗಿ ಆಡಳಿತ ನಡೆಸದಿದ್ದರೆ, ಅವರಿಗೆ ಶಿಕ್ಷೆನೀಡುವ ಅಧಿಕಾರ ಯಾರದ್ದು? ಎಂಬಪ್ರಶ್ನೆ ಉದ್ಭವಿಸುತ್ತದೆ. ಮಂತ್ರಿಮಂಡಳಕ್ಕೆ ಶಿಕ್ಷೆನೀಡುವ ಅಧಿಕಾರ ಯಾರು ಅವರನ್ನು ಆಯ್ಕೆಮಾಡಿ ಕಳಿಸಿದ್ದಾರೋ ಅವರದ್ದು ಎಂದು ನನಗೆ ಅನಿಸುತ್ತದೆ. ಯಾವ ಸಾವಿರಾರು ಮತದಾರರು ಅವರನ್ನು ಆಯ್ಕೆ ಮಾಡಿದ್ದಾರೋ ಅವರದ್ದು. ಆದರೆ ವರ್ಕಿಂಗ್ ಕಮಿಟಿಯು ಶಿಕ್ಷಿಸುವ ಅಧಿಕಾರ ತನಗಿದೆ ಎಂದು ಹೇಳುತ್ತದೆ. ಕಳೆದ ಎಸೆಂಬ್ಲಿ ಚುನಾವಣೆಯಲ್ಲಿ ವಲ್ಲಭಭಾಯಿಯವರು ಯಾರನ್ನು ಅಭ್ಯರ್ಥಿಯನ್ನಾಗಿ ನಿಲ್ಲಿಸಿದ್ದರೋ ಅವರೆಲ್ಲ ಕಲ್ಲುಗಳು. ಅವರಿಗೆ ಯಾವ ಹಕ್ಕೂ ಇಲ್ಲ. ಅಧಿಕಾರವೂ ಇಲ್ಲ. ವಲ್ಲಭಭಾಯಿ, ಗಾಂಧಿ, ಬಜಾಜ, ರಾಜೇಂದ್ರ ಪ್ರಸಾದ, ಜವಾಹರ ಲಾಲ್ ನೆಹರೂ, ಇವರಾರೂ ಚುನಾವಣೆಗೆ ಸ್ಪರ್ಧಿಸಲಿಲ್ಲ. ಮತದಾರರು ಅವರಿಗೆ ಯಾವ ಹಕ್ಕೂ ನೀಡಲಿಲ್ಲ. ಇವರೆಲ್ಲ ಹಕ್ಕಿಲ್ಲದಿದ್ದರೂ ಅಧಿಕಾರದ ಗದ್ದುಗೆ ಏರಿದರು. ಎಲ್ಲ ಜವಾಬ್ದಾರಿಯುತ ರಾಜ್ಯಪದ್ಧತಿಯ ಅರ್ಥ ಒಂದೇ. ನ್ಯಾಯ ನೀಡುವ ಅಂತಿಮ ಸಂಸ್ಥೆಯೆಂದರೆ ಮಂತ್ರಿಮಂಡಳವನ್ನು ಆಯ್ಕೆ ಮಾಡುವ ಮತಕ್ಷೇತ್ರ ಮಾತ್ರ. ಈ ದೃಷ್ಟಿಯಿಂದ ನೋಡಿದರೆ, ನ್ಯಾಯ ಮತ್ತು ಸತ್ಯವು ಡಾ. ಖರೆಯವರ ಜೊತೆಗಿದ್ದು, ವರ್ಕಿಂಗ್ ಕಮಿಟಿಯ ಹತ್ತಿರ ನ್ಯಾಯವೂ ಇಲ್ಲ, ಸತ್ಯವೂ ಇಲ್ಲ ಎನ್ನುವುದು ಕಂಡುಬರುತ್ತದೆ.

ಇದೆಲ್ಲ ಸರಿ. ಮುಂದೇನು ಎಂಬ ಪ್ರಶ್ನೆಯೇ ಮಹತ್ವದ್ದೆಂದು ಅನಿಸುತ್ತದೆ. ಡಾ. ಖರೆಯವರ ಗತಿ ಏನು ಎಂಬ ಪ್ರಶ್ನೆಯಿಂದ ನನ್ನ ಮನ ಗಲಿಬಿಲಿಗೊಂಡಿದೆ. ಈ ಸಂದರ್ಭದಲ್ಲಿ ನನಗೆ ಬಾಲ್ಯದ ಘಟನೆ ನೆನಪಾಗುತ್ತದೆ. ನಾವಿದ್ದ ಊರಿನಲ್ಲಿ, ನಮ್ಮ ನೆರೆಯಲ್ಲಿ ಒಂದು ಕುಟುಂಬವಿತ್ತು. ಅವರಿಗೆ ೧೦-೧೨ ವರ್ಷದ ಒಬ್ಬ ಮಗಳಿದ್ದಳು. ಅವಳು ಬೆಳೆದ ಬಳಿಕ ಅವಳ ತಾಯಿತಂದೆಯರು ಒಬ್ಬ ಯುವಕನ ಜೊತೆಗೆ ಅವಳ ಮದುವೆ ಮಾಡಿದರು. ಅನಂತರ ಮಗಳು ಗಂಡನ ಮನೆಗೆ ಹೋದಳು. ಅವಳು ಅಲ್ಲಿ ಸುಖವಾಗಿದ್ದಾಳೆ ಎಂಬ ವಿಚಾರದಿಂದ ತಾಯಿ ತಂದೆಗಳು ನೆಮ್ಮದಿಯಿಂದ ಇದ್ದರು. ಲಗ್ನವಾದ ೧೦-೧೨ ತಿಂಗಳ ಬಳಿಕ, ಒಂದು ದಿನ ಯಾವ ಪತ್ರವೂ ಇಲ್ಲದೆ, ಆ ಮಗಳು ತನ್ನ ತಂದೆಯ ಮನೆಯ ಬಾಗಿಲೆದುರಿಗೆ ಧುತ್ತೆಂದು ಬಂದುನಿಂತಳು. ಜೋರು ಜೋರಾಗಿ ಅಳಲಾರಂಭಿಸಿದಳು. ತಾಯಿ ತಂದೆಗಳಿಗೆ ಅನಿಸಿತು, ಮಗಳಿಗೆ ಆಗಿದ್ದಾದರೂ ಏನು? ಸುಶಿಕ್ಷಿತ ವರನನ್ನು ನೋಡಿಯೇ ಲಗ್ನಮಾಡಲಾಗಿದೆ. ಮನೆತನವೂ ಚೆನ್ನಾಗಿದೆ. ಹೀಗಿರುವಾಗ ಆಕಸ್ಮಿಕವಾಗಿ ಆಗಿದ್ದಾದರೂ ಏನು? ತಾಯಿ ಮಗಳನ್ನು ತಬ್ಬಿಕೊಂಡಳು, ಏನಾಯ್ತು ಎಂದು ಕೇಳಲಾರಂಭಿಸಿದಳು. ಮಗಳು ಅತ್ತೆಮನೆಯ ಕಿರುಕುಳ, ಹೊಡೆತ ಬಡಿತದ ಬಗ್ಗೆ ಹೇಳಿದಳು. ಮೈಮೇಲೆ ಕೈಯಾಡಿಸಿದಾಗ ತಲೆಗೆ ಗಾಯವಾಗಿದ್ದು ಕಂಡುಬಂತು! ಮಗಳ ರವಿಕೆಯನ್ನು ತೆಗೆಸಿ ನೋಡಿದಾಗ ಮೈತುಂಬ ಗಾಯ, ಊತ ಕಾಣಿಸಿತು. ತಾಯಿ ಮಗಳ ಮೈಗೆ ಅರಿಸಿಣಎಣ್ಣೆ ಲೇಪಿಸಿದಳು. ಕೆಲದಿನಗಳ ಬಳಿಕ, 'ತನಗೆ ಏನಾಗುವುದೋ ಆಗಲಿ, ಅತ್ತೆಯಮನೆಗೆ ಕಳಿಸಿ' ಎಂದು ಮಗಳು ಹಠಹಿಡಿದಳು. ತಾಯಿ ತಂದೆ ಮಗಳಿಗೆ ಬಟ್ಟೆ ಬರೆಯನ್ನು ತಂದುಕೊಟ್ಟರು. ಬೈತಲೆಗೆ ಕುಂಕುಮ ಹಚ್ಚಿ, ಉಡಿತುಂಬಿ ಮಗಳನ್ನು ಕಳಿಸಿಕೊಟ್ಟರು. ಮಗಳು ಮತ್ತೆ ಸಂಸಾರ ಹೂಡಲು ಅತ್ತೆಮನೆಗೆ ಹೋದಳು. ಗಂಡನ ಮನೆಯವರು 'ಸೊಸೆ ಎಷ್ಟು ಚೆನ್ನಾಗಿದ್ದಾಳೆ ನೋಡಿ, ಅವಳು ಮತ್ತೆ ಗಂಡನಮನೆಗೆ ಬಂದಳು, ಅವಳ ತಾಯಿತಂದೆಗಳೇ ಅವಳ ಕಿವಿತುಂಬುತ್ತಿರಬೇಕು-ಎಂದು ಮಾತಾಡಿಕೊಂಡರು. ಹೀಗೆ ಮಗಳು ಗಂಡನಮನೆಯಲ್ಲಿ ಪ್ರಿಯಳಾದಳು, ಸಂಕಟದ ಕಾಲಕ್ಕೆ ಆಸರೆ ನೀಡಿದ ತಾಯಿತಂದೆಗಳೇ ವೈರಿಗಳಾದರು. ಆದರೆ ಮಗಳ ಅತ್ತೆಯೋ, ಜಗಳಗಂಟಿಯಾಗಿದ್ದಳು. ಅವಳ ದುರ್ಗುಣ ಕಡಿಮೆಯಾಗಲಿಲ್ಲ. ದುರಾದೃಷ್ಟಕ್ಕೆ ಆ ಮಗಳಿಗೆ ಮಕ್ಕಳಾಗಲಿಲ್ಲ. ನೆಪಸಿಕ್ಕಿತು. 'ನೀನು ಈಗ ಬೇರೆ ಲಗ್ನ ಮಾಡಿಕೋ' ಎಂದವಳು ಮಗನಿಗೆ ಹೇಳಿದಳು. ಮಗಳ ತಾಯಿ ತಂದೆಯರಿಗೆ ಸಮಸ್ಯೆ ಬಂತು. ಮಗಳನ್ನು ಮತ್ತೆ ತವರಿಗೆ ಕರೆ ತರಬೇಕೆಂದರೆ, ತಿರುಗಿ ಗಂಡನ ಮನೆಗೆ ಹೋಗುತ್ತೇನೆ ಎಂದು ಹಠಹಿಡಿದರೆ ಏನು ಮಾಡುವುದು ಎಂದವರು ನಿರ್ಲಕ್ಷ್ಯ ಮಾಡಿದರು. ಗಂಡ ಎರಡನೆಯ ಮದುವೆ ಮಾಡಿಕೊಂಡ. ಎರಡನೇ ಹೆಂಡತಿಗೆ ಮಕ್ಕಳಾದವು. ಎಲ್ಲರ ಗಮನ ಅವಳ ಕಡೆಗೇ. ಇವಳು ಅನಾದರಕ್ಕೆ ಗುರಿಯಾದಳು. ಕೊನೆಗೆ ಅವಳಿಗೆ ಕ್ಷಯವಾಗಿ ಕೊರಗಿ ಸೊರಗಿ ಸತ್ತುಹೋದಳು. ಡಾ. ಖರೆಯವರ ಪರಿಸ್ಥಿತಿಯೂ ಸಹ ನಮ್ಮ ನೆರೆಮನೆಯ ಹುಡುಗಿಯಂತೆಯೇ ಇದೆ. ಅವರಿಗೆ ಕಾಂಗ್ರೆಸ್‌ನಿಂದ ಅನ್ಯಾಯವಾಗಿದೆ ಎಂದವರು ಮಹಾರಾಷ್ಟ್ರದ ಬಂಧುಬಳಗದವರ ಬಳಿಗೆ ಬಂದು ತಮ್ಮ ಬೇಡಿಕೆಯನ್ನು ಇಟ್ಟರು. ಸಾಕಷ್ಟು ಅನ್ಯಾಯವಾಗಿದ್ದರೂ ಹೇಗೆ ಆ ನೆರೆಯ ಹುಡುಗಿ ಗಂಡನ ಮನೆಗೇ ಹೋಗುತ್ತೇನೆ ಎಂದು ಹಠಹಿಡಿದಳೋ, ಅದೇ ರೀತಿ ಡಾ. ಖರೆಯವರೂ 'ನಾನು ಕಾಂಗ್ರೆಸ್ಸು ತೊರೆಯುವುದಿಲ್ಲ!' ಎನ್ನುತ್ತಾರೆ. ಆ ಹುಡುಗಿಯಂತೆ ಇವರಿಗೂ ಕೊರಗಿ ಸೊರಗಿ ಸಾಯುವ ಪ್ರಸಂಗ ಬರದಿದ್ದರೆ ಸಾಕು!

ಡಾ. ಖರೆಯವರಿಗಾದ ಅನ್ಯಾಯವನ್ನು ತೊಡೆದು ಹಾಕುವುದು ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ತತ್ವ ಹೀಗೆಲ್ಲ ಅಳಿಸಿ ಹಾಕುವಂತಾಗಬಾರದು ಎಂದೇ ಎಲ್ಲರೂ ಪ್ರಸಂಗವನ್ನು ನೋಡಿ ಯೋಚಿಸಬೇಕಾಗಿದೆ.

ಯಾವ ಕಲ್ಲು ಅಥವಾ ದೇವರು ಡಾ. ಖರೆಯವರನ್ನು ಬಲಿ ತೆಗೆದುಕೊಂಡಿತೋ, ಅದೇ ಕಲ್ಲು ಮತ್ತೊಂದು ಬಲಿಯನ್ನು ತೆಗೆದುಕೊಳ್ಳಲಿಕ್ಕಿಲ್ಲ ಎಂದು ಹೇಗೆ ಭಾವಿಸುವುದು? ಎಲ್ಲರೂ ಕಾಂಗ್ರೆಸ್ಸಿಗೆ ಬನ್ನಿ ಎಂದು ಡಾ. ಖರೆ ಹೇಳುತ್ತಾರೆ. ಕೆಲವು ಕಾಂಗ್ರೆಸ್ಸಿಗರು ಹೇಳುವುದೇನೆಂದರೆ, 'ಕಾಂಗ್ರೆಸಿನಲ್ಲಿರುವ ಹೊಲಸನ್ನು ನೀವು ಕಾಂಗ್ರೆಸ್ಸು ಸೇರಿ ಕಿತ್ತುಹಾಕಿ' ಎಂದು. ಇದಕ್ಕೆ ನನ್ನ ಉತ್ತರವೇನೆಂದರೆ, 'ಹೊಲಸು ಮಾಡುವವರು ನೀವು! ನೀವು ಮಾಡಿದ ಹೊಲಸನ್ನು ನೀವೇ ಬಳಿಯಬೇಕು. ನಾನು ನನ್ನ ಶುಭ್ರಬಟ್ಟೆಯಿಂದ ಆ ಹೊಲಸನ್ನು ಏಕೆ ಬಳಿಯಲಿ? ನಿಮ್ಮ ಹೊಲಸನ್ನು ನೀವೆ ಬಳಿದು ಹಾಕಿ. ಬಳಿಕ ಶುಭ್ರ ಬಟ್ಟೆಯ ನಾನು ಕಾಂಗ್ರೆಸ್ ಸೇರಬೇಕೆ ಬೇಡವೆ ಎಂದು ಯೋಚಿಸುತ್ತೇನೆ. ಇದರಿಂದ ಉದ್ಭವಗೊಳ್ಳುವ ಸಂಗತಿ ಏನೆಂದರೆ, ಒಂದೇ ರಾಜಕೀಯ ಪಕ್ಷವಿರುವುದು ಯೋಗ್ಯವೇ? ಎಲ್ಲರೂ ತಮ್ಮ ಜುಟ್ಟನ್ನು ಕಾಂಗ್ರೆಸ್ಸಿನ ಕೈಗೆ ನೀಡುವುದು ಸರಿಯೇ? ನನಗೆ ಪ್ರಾಮಾಣಿಕವಾಗಿ ಅನಿಸುವುದೇನೆಂದರೆ, ದೇಶದಲ್ಲಿ ಒಂದೇ ಪಕ್ಷವಿರುವುದು ದೇಶದ ಉನ್ನತಿ ದೃಷ್ಟಿಯಿಂದ ಹಿತವಲ್ಲ. ಯಾವ ದೇಶದಲ್ಲಿ ಒಂದಕ್ಕಿಂತ ಅಧಿಕ ರಾಜಕೀಯ ಪಕ್ಷವಿಲ್ಲವೋ, ಅಲ್ಲಿ ಬುದ್ಧಿಯ ಬೆಳವಣಿಗೆಯಾಗುವುದು ಸಾಧ್ಯವಿಲ್ಲ. ಎಲ್ಲಿ ಬುದ್ಧಿ ಬೆಳೆಯುವುದಿಲ್ಲವೋ ಅಲ್ಲಿ ಸ್ವಾತಂತ್ರ್ಯ ಸಿಗುವುದು ಸಾಧ್ಯವಿಲ್ಲ.

ಕೊನೆಗೆ ಡಾ. ಖರೆಯವರಲ್ಲಿ ನಾನು ಬೇಡಿಕೊಳ್ಳಲಿದ್ದೇನೆ. ನನಗೆ ಬೇರೆಯವರು ಹೇಳಿದ್ದೇನೆಂದರೆ, ಮುಂಬೈ ಪ್ರಭಾತ ಪತ್ರಿಕೆಯಲ್ಲಿ ಮಧ್ಯಪ್ರಾಂತದ ಮಂತ್ರಿಮಂಡಳದ ಬಗೆಗೆ ಬರೆಯುವಾಗ, 'ಡಾ. ಖರೆಯವರು ಬೀಸುವ ಕಲ್ಲಿನಲ್ಲಿದ್ದರೆ, ಮುಂಬೈ ಮುಖ್ಯ ಪ್ರಧಾನಿ ಬಾಳಾಸಾಹೇಬ ಬೇರೆ ಮೊರದಲ್ಲಿದ್ದಾರೆ'–ಎಂದಿದ್ದಾರಂತೆ. ನಮ್ಮ ಬಾಳಾ ಸಾಹೇಬರು ಎಂದೂ ಸಂಕಟದಲ್ಲಿ ಸಿಲುಕುವವರಲ್ಲ ಎಂದೆನಿಸುತ್ತದೆ. ಒಳ್ಳೆಯ ಸೊಸೆಗೆ ನಾವು ಆದರ್ಶಸೊಸೆ ಎನ್ನುತ್ತೇವೆ. ಹಾಗೆ ಬಾಳಾಸಾಹೇಬ ಖೇರ ಸಹ ಆದರ್ಶ ಸೊಸೆಯಂತಿದ್ದಾರೆ. ಹೇಗೆ ಆದರ್ಶಸೊಸೆಯು ಮೈದುನ ಬರಲಿ, ಅತ್ತೆ–ಮಾವ ಬರಲಿ, ನಾದಿನಿ ಬರಲಿ, ನೆಗೆಣ್ಣ ಬರಲಿ– ಎಲ್ಲರಿಗೂ ನಮಸ್ಕರಿಸುತ್ತಾಳೆ. ಸವಿಯಾಗಿ ಮಾತಾಡುತ್ತಾಳೆ. ಯಾರನ್ನೂ ಕಾಲಿನಿಂದ ಸ್ಪರ್ಶಿಸುವುದಿಲ್ಲ. ಕೆಳಗೆ ಬಾಗುವಾಗ ಕಾಲಿನ ಮೀನುಖಂಡ ಗೋಚರಿಸುತ್ತದೆಯೇ ಎಂಬುದನ್ನು ನೋಡಿ ಬಾಗುತ್ತಾಳೆ. ಪ್ರತಿದಿನ ಗಂಡನ ಹೆಸರಿನಲ್ಲಿ ಕುಂಕುಮ ಹಚ್ಚಿಕೊಳ್ಳುವವಳು. ಆದರಿದು ಶಾಂತಾಆಷ್ಟೆಯ ಕುಂಕುಮವಲ್ಲ. ಅವನಿಗೆ ಯಶಕೋರುವವಳು. ಏಳೇಳು ಜನ್ಮಕ್ಕೂ ಇವನೇ ಗಂಡಸಿಗಲಿ ಎಂದು ಸಾವಿತ್ರಿಯಂತೆ ಬಯಸುವವಳು. ಅತ್ತೆಮನೆಯವರು ಪರರಿಗೆ ಬಯ್ದರೂ ಘಾಸಿಗೊಳ್ಳದವಳು–ಹೀಗವಳ ಬದುಕು. ನಮ್ಮ ಬಾಳಾಸಾಹೇಬ ಖೇರ ಯಥಾವತ್ತಾಗಿ ಹೀಗೇ ವರ್ತಿಸುತ್ತಾರೆ. ಆದ್ದರಿಂದ ನನಗನಿಸುವುದೇನೆಂದರೆ, ಕೇವಲ ೧೨ತಿಂಗಳು ಅಷ್ಟೇಅಲ್ಲ, ೧೨ವರ್ಷಗಳ ಕಾಲ ಕಾಂಗ್ರೆಸ್ಸು ಅಧಿಕಾರದಲ್ಲಿದ್ದರೆ ಬಾಳಾಸಾಹೇಬರೇ ಮುಖ್ಯಪ್ರಧಾನಿಯಾಗುತ್ತಾರೆ. ಅವರೆಂದೂ ಸಂಕಟದಲ್ಲಿ ಸಿಲುಕುವ ಪ್ರಶ್ನೆಯೇ ಬರುವುದಿಲ್ಲ. ಒಬ್ಬ ಮಗಳನ್ನು ಹಿಂದಿ ಮನೆಗೆ ಲಗ್ನಮಾಡಿಕೊಟ್ಟರು. ಆದರೆ ಅವಳದ್ದು ಹೀಗಾಯ್ತು. ಮತ್ತೊಬ್ಬಳನ್ನು ಗುಜರಾತಿಗೆ ಲಗ್ನಮಾಡಿಕಳಿಸಿದರು. ಅವಳ ಸುಖವನ್ನು ನೋಡಿ ದುಃಖದಲ್ಲಿ ಸುಖ ಬಂತೆಂದು ಸಮಾಧಾನವೆನಿಸುತ್ತದೆ. ಆದರೆ ಕಾಲದಗತಿ ವಿಚಿತ್ರವಾಗಿರುತ್ತದೆ. ನಮ್ಮ ಬಾಳಾಸಾಹೇಬ ಖೇರ ಪ್ರಾಯಃ ಮುಂದೆಂದಾದರೂ ಸಂಕಟದಲ್ಲಿ ಸಿಲುಕಬಹುದು. ಹಾಗೇನಾದರೂ ಸಂಭವಿಸಿದರೆ ಡಾ. ಖರೆಯವರು ಮುಂಬೈ–ಪುಣೆಗೆ ಬಂದಂತೆ, ಪ್ರಾಯಃ ನಮ್ಮ ಬಾಳಾಸಾಹೇಬ ಖೇರ ಅವರು ನಾಗಪುರಕ್ಕೆ ತೆರಳಬಹುದು. ಅಂಥಕಾಲಕ್ಕೆ ಡಾ. ಖರೆಯವರು ಅವರ ಬೆನ್ನಮೇಲೆ ವಾತ್ಸಲ್ಯದಿಂದ ಕೈಯಾಡಿಸಲಿ ಎನ್ನುವುದೇ ನನ್ನಕೋರಿಕೆ'. (ಜೋರಾದ ನಗೆ ಮತ್ತು ಚಪ್ಪಾಳೆ)

ಅನಂತರ ಡಾ. ಮುಂಜೆ ಮತ್ತು ರಾ. ವರ್ದೆಯವರು ಭಾಷಣ ಮಾಡಿದರು. ಬಳಿಕ ಶ್ರೀ ಜಮನಾದಾಸ ಮೆಹತಾ ಅವರ ಭಾಷಣದ ಬಳಿಕ ಸಭೆ ಮುಕ್ತಾಯಗೊಂಡಿತು.

ವಂಚಕರ ನಡುವೆ ಡಾ. ಖರೆಯವರಿಗೆ ನ್ಯಾಯ ಸಿಗದಿರುವುದು ಕಂಡು ನನಗೆ ಆಶ್ಚರ್ಯವಾಗಲಿಲ್ಲ ಎಂದು ಶ್ರೀ ಮೆಹತಾ ಉದ್ಗರಿಸಿದರು. ಪ್ರಜಾಪ್ರಭುತ್ವದ ವಿರುದ್ಧ ಕಾರಸ್ಥಾನ ಮಾಡುವ ಜನಗಳನ್ನು ಡಾ. ಖರೆ ಬಂಧಿಸಬೇಕಿತ್ತು ಎಂಬ ಭಾವನೆಯನ್ನು ಅವರು ವ್ಯಕ್ತ ಮಾಡಿದರು.

# ೧೪೦.
# ಸತತ ಉದ್ಯೋಗ ಮತ್ತು ಕಷ್ಟ ಪಡುವುದರಿಂದ ಯಶ ಪ್ರಾಪ್ತಿಯಾಗುತ್ತದೆ

"ಪುಣೆಯ ಅಸ್ಪೃಶ್ಯಯ ವಿದ್ಯಾರ್ಥಿಗಳ ೧೧ನೇ ಸಮ್ಮೇಳನವನ್ನು ರವಿವಾರ ೧೧ ಸಪ್ಟೆಂಬರ್ ೧೯೩೮ರಂದು, ಪುಣೆಯ ಡಿ.ಸಿ. ಮಿಶನ್‌ಹಾಲ್‌ನಲ್ಲಿ ಏರ್ಪಡಿಸಲಾಯಿತು. ಸಮ್ಮೇಳನದ ಅಧ್ಯಕ್ಷ ಮತ್ತು ಮುಖ್ಯ ಭಾಷಣಕಾರರಾಗಿ ಡಾ. ಅಂಬೇಡ್ಕರ ಅವರನ್ನು ಆಯ್ಕೆ ಮಾಡಲಾಗಿತ್ತು.

ಸಮ್ಮೇಳನಕ್ಕಿಂತ ಹಿಂದಿನ ಶನಿವಾರ ಮತ್ತು ರವಿವಾರ ವಿದ್ಯಾರ್ಥಿಗಳ ಕುಸ್ತಿಸ್ಪರ್ಧೆ, ಕ್ರೀಡೆ, ನಾಟಕ ಪ್ರಯೋಗ, ಭಾಷಣಕಲೆ, ಬಳಿಕ ಭೋಜನದಂತಹ ಹಲವು ಕಾರ್ಯಕ್ರಮಗಳು ಉತ್ಸಾಹದಿಂದ ನೆರವೇರಿತು. ಸಮ್ಮೇಳನದ ಸೆಕ್ರೆಟರಿಗಳಾದ ಟಿ.ಬಿ.ಭೋಸಲೆ ಮತ್ತು ಅವರ ಸಹಕಾರಿಗಳು ತುಂಬ ಶ್ರಮವಹಿಸಿದ್ದರು. ಸಮ್ಮೇಳನದ ಚೇರಮನ್‌ರೂ ಶಾಸಕರೂ ಆದ ಶ್ರೀ ರಾಜಾರಾಮ ಭೋಳೆ ಅವರು ಸಂಘಟಕರಿಗೆ ತುಂಬ ಬೆಂಬಲ, ಉತ್ತೇಜನ ನೀಡಿದ್ದರಿಂದ ಸಮ್ಮೇಳನದ ಕಾರ್ಯದರ್ಶಿಗಳ ಜೊತೆಗೆ ಕಾಲೇಜಿನ ಮೊದಲ ವಿದ್ಯಾರ್ಥಿನಿಯಾದ ಕು. ಘಟಕಾಂಬಳೆ ಎಂಬವರು ತುಂಬ ಸಹಕಾರ ನೀಡಿದರು.

ಸಮ್ಮೇಳನ ಮುಖ್ಯಕಾರ್ಯದರ್ಶಿಗಳಾದ ಮಿ. ಭೋಸಲೆಯವರು ೧೦ ಸಮ್ಮೇಳನಗಳ ಮಹತ್ವವನ್ನು ವಿವರಿಸಿದ್ದರು. ಈ ಸಮ್ಮೇಳನಕ್ಕೆ ಭಾವೂರಾವ ಗಾಯಕವಾಡ, ಡಿ.ಜಿ. ಜಾಧವ, ಕೆ.ಎಸ್. ಸಾವಂತ, ರೋಹಮ್, ವರಾಳೆ, ಕಾಳೆ, ಬ್ಯಾಕ್‌ವರ್ಡ್‌ಕ್ಲಾಸ್ ಆಫೀಸರ್ ಶ್ರೀ ದೇವಧರ, ಭಾ.ರಾ. ಕದ್ರೆಕರ, ಸೌ. ಗೀತಾಬಾಯಿ ಗಾಯಕವಾಡ, ಶ್ರೀ ಬಾಬೂರಾವ ಭಾತನಕರ, ಗಂಗಾಧರ ಘಾಟಗೆ, ಸುಪರ್‌ವೈಜರ್ ಶ್ರೀ ಢಿಖಳೆ, ಕೆ.ಆರ್. ಮಧಾಳೆ ಮುಂತಾದವರು ಪ್ರಮುಖವಾಗಿ ಹಾಜರಿದ್ದರು."[೧]

ಈ ೧೧ನೇ ಅಸ್ಪೃಶ್ಯ ವಿದ್ಯಾರ್ಥಿಗಳ ಸಮ್ಮೇಳನದಲ್ಲಿ ಡಾ. ಅಂಬೇಡ್ಕರ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ್ದು ಹೀಗೆ–

"ಇಂದಿನ ಸಮ್ಮೇಳನವು ವಿದ್ಯಾರ್ಥಿಗಳದ್ದಾಗಿದ್ದರೂ, ಇಲ್ಲಿ ಆಗಮಿಸಿರುವ ಸಭಿಕರ ಸಮೂಹವನ್ನು ನೋಡಿದಾಗ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿಯೇತರರೇ ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತಾರೆ. ಕಿಚಡಿಯಲ್ಲಿ ಅಕ್ಕಿಗಿಂತ ಬೇಳೆಯೇ ಹೆಚ್ಚಾಗಿರುವಂತೆ ಈ ಸಮ್ಮೇಳನದ ಸ್ಥಿತಿಯಾಗಿದೆ. ಇದು ವಿದ್ಯಾರ್ಥಿಗಳ ಸಮ್ಮೇಳನವಾಗಿರುವುದರಿಂದ ಅವರಿಗೆ ಒಂದೆರಡು ಉಪದೇಶಪರ ಮಾತು ಹೇಳುವುದು ನನ್ನ ಕರ್ತವ್ಯ. ಏಕೆಂದರೆ ನಾನಿಲ್ಲಿಗೆ ಬಂದಿರುವುದು ವಿದ್ಯಾರ್ಥಿಗಳಿಗಾಗಿ. ಇಂದಿನ ಸಮ್ಮೇಳನದ ಅಧ್ಯಕ್ಷ ಪದವನ್ನು ಸ್ವೀಕರಿಸುವಾಗ ನಾನು ಕಾರ್ಯ ಮಂಡಳಿಯರಿಗೆ ಕೆಲವು ಷರತ್ತು ಹಾಕಿದೆ. ಅದನ್ನೆಲ್ಲ ವಿದ್ಯಾರ್ಥಿಗಳು ಒಪ್ಪಿಕೊಂಡಿದ್ದರಿಂದ ಇಂದಿನ ಸಮ್ಮೇಳನದ ವೈಭವ ಮತ್ತು ಶೋಭೆ ಸ್ವಲ್ಪ ಕಡಿಮೆಯಾಗಿರಬೇಕು. ನನ್ನ ಭಾಷಣ ವಿದ್ಯಾರ್ಥಿಗಳಿಗಾಗೇ ಇರುವುದರಿಂದ ಉಳಿದವರಿಗದು ನೀರಸವೆನಿಸುವ ಸಾಧ್ಯತೆಯಿದೆ. ಆದಾಗ್ಯೂ, ವಿದ್ಯಾರ್ಥಿಗಳಿಗದು ಇಷ್ಟವಾಗಬಹುದು. ವಿದ್ಯಾರ್ಥಿಗಳು ಈ ಅವಕಾಶ ನೀಡಿದ್ದರಿಂದ ಅವರಿಗೆ ಧನ್ಯವಾದ ಹೇಳುವುದೂ ನನ್ನ ಕರ್ತವ್ಯವೆಂದು ಭಾವಿಸುತ್ತೇನೆ.

---

೧. ಜನತಾ: ೧ ಅಕ್ಟೋಬರ್ ೧೯೩೮.

ನನ್ನ ಆಯುಷ್ಯವು ಸದ್ಯ ಹಳ್ಳಿಗಾಡಿನ ಅಶಿಕ್ಷಿತ, ಅಜ್ಞಾನಿಗಳಾದ, ದೌರ್ಜನ್ಯದಿಂದ ತ್ರಪ್ತರಾದ ಜನರ ಪ್ರಾರ್ಥನೆಯನ್ನು ಆಲಿಸಿ ಅದರ ನಿವಾರಣೆಗಾಗಿ ಪ್ರಯತ್ನ ಮಾಡುವುದರಲ್ಲಿ ಮತ್ತು ಅವರ ಚಿಂತೆಯಲ್ಲಿ ಕಳೆಯುತ್ತಿದೆ. ಅದರಿಂದ ವಿದ್ಯಾರ್ಥಿಗಳ ಕಡೆಗೆ ನಿರ್ಲಕ್ಷಿಸುತ್ತಿದ್ದೇನೆ ಎಂಬ ಭಾವನೆ ಬೆಳೆದಿದ್ದು, ಅಂಥ ರಾಗವೂ ಕೇಳಿಬರುತ್ತಿದೆ. ಆದರೆ ನಾನು ಮೊದಲಿಗೇ ಹೇಳಬಯಸುವ ಮಾತೆಂದರೆ, ಒಬ್ಬನೇ ವ್ಯಕ್ತಿಯು ಜೀವನದ ವಿವಿಧ ಬಗೆಯ ಕಾರ್ಯವನ್ನು ಉತ್ತಮವಾಗಿ ಮಾಡಿ ಮುಗಿಸುವುದು ಸಾಧ್ಯವಿಲ್ಲ. ಇದಕ್ಕೆ ಸಂಬಂಧಿಸಿದ ಒಬ್ಬ ಲೇಖಕನ ಸುಭಾಷಿತ ನೆನಪಾಗುತ್ತಿದೆ. If you want success you must be narrow minded. ಈ ಮಾತಿನಲ್ಲಿ ವಿಶಾಲ ಅರ್ಥ ಹುದುಗಿದೆ. ಏಕೆಂದರೆ ಒಬ್ಬ ವ್ಯಕ್ತಿಯು ಎಲ್ಲ ಕೆಲಸ ಮಾಡಬೇಕೆಂದುಕೊಂಡರೂ ಹಾಗೆ ಮಾಡುವುದು ಅಸಾಧ್ಯ. ಸರಿಯಾಗಿ ಒಂದೇ ಮಾಡದೇ ಹೊರೆತುಂ ಚಿಂದಿ ಎಂಬಂತೆ, ಯಾವುದೇ ಒಂದು ಕಾರ್ಯವನ್ನು ಸರಿಯಾಗಿ ಮಾಡದೆ, ಹಲವು ಕೆಲಸಗಳಿಗೆ ಕೈಹಾಕುವುದು ಯೋಗ್ಯವಲ್ಲ. ನಮ್ಮ ಸಮಾಜದ ಬಗೆಗೆ ಯೋಚಿಸಿದರೆ, ನಮಗೆ ಉಪಲಬ್ದವಿರುವ ಸಾಧನ ಸಾಮಗ್ರಿಯು ತೀರ ಅಲ್ಪ. ಆದ್ದರಿಂದ ಮನುಷ್ಯನು ಚಿಕ್ಕಮಟ್ಟ ಕಾರ್ಯವನ್ನು ಕೈಗೆತ್ತಿಕೊಂಡು ಮುಗಿಸುವುದು ಉತ್ತಮ. ಆದ್ದರಿಂದಲೇ ದೀನದಲಿತ, ಸ್ಪೃಶ್ಯ ಸಮಾಜದ ದೌರ್ಜನ್ಯದಿಂದ ರೋಸಿಹೋದ ಅಜ್ಞಾನಿ ಸಮಾಜದ ಕಾರ್ಯದ ಹೊರೆಯನ್ನು ನಾನು ಹೊತ್ತಿದ್ದೇನೆ. ಆ ಕಾರಣಕ್ಕಾಗಿ ವಿದ್ಯಾರ್ಥಿಗಳ ಕಡೆಗೆ ಸಾಕಷ್ಟು ಗಮನ ಕೊಡುವುದು ಸಾಧ್ಯವಾಗಲಿಲ್ಲ. ಅದರರ್ಥ ನಾನು ವಿದ್ಯಾರ್ಥಿಗಳ ವಿರುದ್ಧ ಇದ್ದೇನೆ ಎಂದಾಗುವುದಿಲ್ಲ. ಅದರ ಬದಲು ನಾನು ರಾಜಕಾರಣ, ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡರೂ, ಆಜನ್ಮ ವಿದ್ಯಾರ್ಥಿಯಾಗಿಯೇ ಇರುತ್ತೇನೆ. ಹೀಗಿರುವಾಗ ವಿದ್ಯಾರ್ಥಿಯು ವಿದ್ಯಾರ್ಥಿಗಳ ವಿರುದ್ಧ ಹೋಗುವದು ಹೇಗೆ ಸಾಧ್ಯ? ನಾನು ಈವರೆಗೆ ಖರೀದಿಸಿದ ಪುಸ್ತಕದ ಸಾವಿರ ರುಪಾಯಿ ಬಾಕಿ ಸಾಲತೀರಸಬೇಕಾಗಿದೆ. ಆದರೂ ನನಗೆ ಸಾಕಷ್ಟು ಗೌರವವಿದೆ. ಮುಂಬೈಯಲ್ಲಿಯ ಯಾವುದೇ ಪುಸ್ತಕದ ಅಂಗಡಿಯಿಂದ ಪುಸ್ತಕವನ್ನು ಸಾಲವಾಗಿ ತರಬಲ್ಲೆ, ಆದರೆ ನನ್ನ ಅಧ್ಯಯನವನ್ನು ಅರ್ಧಕ್ಕೆ ನಿಲ್ಲಿಸುವುದಿಲ್ಲ. ಏಕೆಂದರೆ ವ್ಯಾಸಂಗವೇ ನನ್ನ ಅತೀದೊಡ್ಡ ಹವ್ಯಾಸ. ಹೀಗಿರುವಾಗ ನಾನು ವಿದ್ಯಾರ್ಥಿಗಳ ವಿರುದ್ಧ ಹೇಗೆ ಹೋಗಬಲ್ಲೆ?

ವಿದ್ಯಾರ್ಜನೆಯ ಬಳಿಕ ವಿದ್ಯಾರ್ಥಿಗಳು ಗೃಹಸ್ಥಾಶ್ರಮ ಪ್ರವೇಶಿಸಿದ ನಂತರ ಹೇಗೆ ವರ್ತಿಸಬೇಕೆಂದು ಉಪದೇಶ ಮಾಡಲು ನಾನು ಅಪಾತ್ರನಾಗಿದ್ದೇನೆ. ಅವರಿಗೆ ಎಂಥ ಉಪದೇಶ ಮಾಡಲಿ ಎಂಬ ವಿಷಯದಲ್ಲಿ ನಾನು ಗಲಿಬಿಲಿಗೊಂಡಿದ್ದೇನೆ. ಏಕೆಂದರೆ ನನ್ನ ಗೃಹಸ್ಥಾಶ್ರಮ ವ್ಯರ್ಥವಾಗಿ ಕಳೆದಿದೆ. ಆದರೂ ಅವರು ವಿದ್ಯಾರ್ಥಿದಿಶೆಯಲ್ಲಿ ಹೇಗೆ ವರ್ತಿಸಬೇಕೆಂಬ ಬಗೆಗೆ ಸ್ವಾನುಭವದಿಂದ ಏನಾದರೂ ಹೇಳಬಲ್ಲೆ. ಯಾವ ಸಮಾಜದವರಿಗೆ ಸಾವಿರಾರು ವರ್ಷಗಳಿಂದ ಯಾವ ಬಗೆಯ ಶಿಕ್ಷಣವೂ ಇರಲಿಲ್ಲವೋ ಅಂಥ ಸಮಾಜದ ಹಲವರು ಬಿ.ಎ., ಎಂ.ಎ., ಮುಂತಾದ ವಿಶ್ವವಿದ್ಯಾಲಯದ ಪದವಿಯನ್ನು ಪಡೆದು ಹೊರಬರುವುದನ್ನು ಕಾಣುತ್ತಿದ್ದೇವೆ. ಮೊದಲು ಬಿ.ಎ. ಪದವೀಧರರು ಔಷಧಿಗೂ ಸಿಗುತ್ತಿರಲಿಲ್ಲ. ಹಿಂದೆ ಕೃಷ್ಣಾ ಜಿಲ್ಲೆಯಲ್ಲಿ ನಮ್ಮ ಸಮಾಜದ ಒಬ್ಬ ಆಸಾಮಿ ಬಿ.ಎ. ಆಗಿದ್ದ. ಅವನು ಅದೆಷ್ಟು ಪ್ರಸಿದ್ಧನಾಗಿದ್ದನೆಂದರೆ ಬರೇ ಹೆಸರು ಬರೆದು, ಅದರ ಮುಂದೆ ಬಿ.ಎ., ಎಂದು ಬರೆದರೂ ಸಾಕಿತ್ತು. ಆ ಪತ್ರವನ್ನು ಅಂಚೆಯವನು ಅವನಿಗೇ ತಂದುಕೊಡುತ್ತಿದ್ದ. ಇವತ್ತಂತೂ ನಮ್ಮ ಸಮಾಜದಲ್ಲಿ ಹಲವರು ಬಿ.ಎ. ಪಡೆದವರಿದ್ದಾರೆ. ಹಾಸ್ಯಕ್ಕೆ ಹೇಳಬೇಕೆಂದರೆ, ಇಲ್ಲಿ ನೆರೆದ ಸಭಿಕರಲ್ಲಿ ಕಲ್ಲು ಎಸೆದರೂ, ಅದು ಬಿ.ಎ. ಆದವನಿಗೆ ತಾಗುತ್ತದೆ. ಬಿ.ಎ. ಆದವರು ಹಲವರಿದ್ದರೂ, ಅವರು ಗಮನದಲ್ಲಿರಿಸಬೇಕಾದ ಒಂದು ಸಂಗತಿ ಎಂದರೆ, ನಾವು

ಎದುರಿಸಬೇಕಾದ ಜನರು ತುಂಬ ಮುಂದುವರೆದವರು. ಇಂದಿನ ಜೀವನದ ಸಂಘರ್ಷದಲ್ಲಿ ಮುಂದುವರೆದ ಜನರಿಗಿಂತ ನಾವು ನೀರಸವೆನಿಸಿದರೆ ನಾವು ಬಂಡೆಕಲ್ಲಾಗಿ ಉಳಿದು ಬಿಡುತ್ತೇವೆ. ಏಕೆಂದರೆ ಈಗ ಸತ್ತಾಧಾರಿಗಳೆಲ್ಲ ಮುಂದುವರಿದ ವರ್ಗದವರೇ ಆಗಿದ್ದಾರೆ. ನೌಕರಿ ಬೇಡಲು ಯಾವ ಆಫೀಸಿಗೆ ಹೋದರೂ ಅಲ್ಲಿದ್ದ ವರಿಷ್ಠ ಅಧಿಕಾರಿಯೂ ತನ್ನ ಬಳಗದ ಜನರನ್ನೇ ಸೇರಿಸಿಕೊಳ್ಳುತ್ತಾರೆನ್ನುವುದು ಬಹಿರಂಗಸತ್ಯ. ಕೇವಲ ಬಿ.ಎ.ಮುಗಿಸಿದ ಮಾತ್ರಕ್ಕೆ ನಿಮಗೆ ಉದ್ಯೋಗ ಸಿಗಲಾರದು. ಮುಂದುವರಿದ ಜಾತಿಯವರೊಂದಿಗೆ ಸ್ಪರ್ಧಿಸಿ, ಅಲ್ಲಿ ಬುದ್ಧಿಯ ಪ್ರಭಾವ ಬೀರದ ಹೊರತು ಶಿಕ್ಷಣದಿಂದ ಏನೂ ಉಪಯೋಗವಿಲ್ಲ. ಒಂದು ವೇಳೆ ಮುಂದುವರಿದ ಜಾತಿಯವರು ನಮ್ಮನ್ನು ಹತ್ತಿಕ್ಕದಿದ್ದರೋ, ಬದಲಿಗೆ ನೂರಾರು ವರ್ಷಗಳಿಂದ ನಮ್ಮನ್ನು ನಮ್ಮ ಅಪ್ಪಅಜ್ಜಂದಿರನ್ನು ಹೇಗೆ ಹತ್ತಿಕ್ಕಿದರೋ, ಹಾಗೇ ನಿಮ್ಮನ್ನು ತುಳಿಯುದೇ ಇರಲಾರರು. ಆದ್ದರಿಂದ ನೀವೀಗ ಎಂಥ ಶಿಕ್ಷಣ ಪಡೆಯಿರಿ ಎಂದರೆ ಅದರಿಂದ ನಮ್ಮ ಎಲ್ಲ ವಿದ್ಯಾರ್ಥಿಗಳು ಮುಂದೆ ಬರುವಂತಾಗಬೇಕು. ಅಜ್ಞಾನಿ ತಾಯಿತಂದೆಗಳ ಉದರದಲ್ಲಿ ಜನಿಸಿ ಬಿ.ಎ. ಆದ ಮಾತ್ರಕ್ಕೆ ಅಹಂಕಾರ ಪಡಬೇಡಿ. ನಿಮ್ಮ ಕರ್ತವ್ಯದ ಅರಿವಿನ್ನಿರಿಸಿಕೊಂಡೇ ಬಹಳ ಅಭ್ಯಾಸಮಾಡಿ. ನಾನು ಮೊದಲಿಗೆ ಬ್ಯಾರಿಸ್ಟರ್ ಆಗಿ ಬಂದಾಗ ಮಹಾರ ಬ್ಯಾರಿಸ್ಟರ್ ಎಂದೇ ನನ್ನನ್ನು ಮುಂದುವರಿದ ಬ್ಯಾರಿಸ್ಟರ್‌ಗಳು ಹಂಗಿಸುತ್ತಿದ್ದರು. ಆದರೆ ನಾನು ಕರ್ತೃತ್ವಶಕ್ತಿಯಿಂದ ಅವರ ಬಾಯಿಯನ್ನು ಮುಚ್ಚಿಬಿಟ್ಟೆ.

ನಾವು ಕಠಿಣ ಪರೀಕ್ಷೆಯನ್ನು ಎದುರಿಸದ ಹೊರತು ಮಹತ್ವ ಬರುವುದಿಲ್ಲ. ಉಳಿದ ಜಾತಿಯವರ ವಿಷಯ ಹಾಗಲ್ಲ. ನಾವು ಚಿನ್ನದ ಬೆಲೆಯ ಕಾರ್ಯ ಮಾಡಿದಾಗ ಉಳಿದವರು ತವರದ ಬೆಲೆನೀಡುತ್ತಾರೆ. ಉಳಿದವರು ತವರದ ಕೆಲಸ ಮಾಡಿದರೂ ಚಿನ್ನದ ಬೆಲೆ ಬರುತ್ತದೆ. ಇದಂತೂ ಇಂದಿನ ವ್ಯವಹಾರವೇ ಆಗಿಬಿಟ್ಟಿದೆ. ನೋಡಿ, ಒಂದುವೇಳೆ ಹೊಲೆ-ಮಾದಿಗ ಸಮಗಾರ ಹೆಂಗಸರು ಚಿನ್ನದ ಆಭರಣ ಧರಿಸಿದರೂ ಅದು ನಕಲಿ ಎಂದೇ ಉಚ್ಚ ವರ್ಗದವರು ಭಾವಿಸುತ್ತಾರೆ. ಅದೇ ರೀತಿ ಮುಂದುವರಿದ ಮಹಿಳೆಯರು ಹಿತ್ತಾಳೆಯ ಆಭರಣ ಧರಿಸಿದರೂ ಅದು ಚಿನ್ನದ್ದಿರಬೇಕೆಂದು ಅಂದುಕೊಳ್ಳುತ್ತಾರೆ. ಉಳಿದ ವಿಷಯದಲ್ಲೂ ಹೀಗೇ ಆಗಿದೆ. ನಾವು ಯಾವುದೇ ಕಾರ್ಯವನ್ನು ಅವರಿಗಿಂತಲೂ ನೂರುಪಟ್ಟು ಚೆನ್ನಾಗಿ ಮಾಡಿದಾಗಲೇ ನಾವು ಅವರಿಗೆ ಸರಿಸಮಾನರೆಂದು ಪರಿಗಣಿಸಲ್ಪಡಬಹುದು. ಇದೆಲ್ಲ ಮಾಡಲು ನಮ್ಮಲ್ಲಿ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು.

ಆತ್ಮವಿಶ್ವಾಸದಂತಹ ದೈವೀಶಕ್ತಿ ಬೇರೊಂದಿಲ್ಲ. ನಾವು ನಮ್ಮ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬಾರದು. ಉದಾಹರಣೆಗಾಗಿ, ಕುಸ್ತಿ ಹಿಡಿಯಲು ಆಖಾಡಕ್ಕಿಳಿದ ಮಲ್ಲನು ತೋಳುತಟ್ಟುವ ಎದುರಾಳಿಯನ್ನು ನೋಡಿ ಉಡುಗಿ ಹೋಗಬಾರದು, ಅದರಿಂದೇನು ಪ್ರಯೋಜನ? ನಾನು ಏನು ಮಾಡುತ್ತೇನೆ ಅದು ಆಗೇ ಆಗುತ್ತದೆ ಎಂದೇ ಸದಾ ನಾನು ಅಂದುಕೊಳ್ಳುತ್ತಿರುತ್ತೇನೆ. ಅರ್ಥಾತ್, ನಾನಿದನ್ನೆಲ್ಲ ಆತ್ಮವಿಶ್ವಾಸವನ್ನು ಅವಲಂಬಿಸಿ ಹೇಳುತ್ತಿರುತ್ತೇನೆ. ನನ್ನ ಈ ಮಾತು ಕೇಳಿ ಕೆಲವರು ನನ್ನನ್ನು ಸೊಕ್ಕಿನ ಮನುಷ್ಯ, ಧಿಮಾಕಿನವನು ಎಂದೆಲ್ಲ ಆರೋಪ ಹೊರಿಸಬಹುದು. ಆದರೆ ಇದು ಸೊಕ್ಕಿನ ಮಾತಾಗಿರದೆ ಆತ್ಮವಿಶ್ವಾಸದ ಮಾತಾಗಿರುತ್ತದೆ. ನಾನು ಮನಸ್ಸು ಮಾಡಿದರೆ ಸಾವಿರ ವಿಷಯವನ್ನು ಸಹಜವಾಗಿ ಮಾಡಬಲ್ಲೆ. ನಾನೂ ಸಹ ನಿಮ್ಮಂತೆ ಒಬ್ಬಹೊಲತಿಯ ಉದರದಲ್ಲಿ ಜನಿಸಿದ್ದೇನೆ. ಬಡತನದ ದೃಷ್ಟಿಯಿಂದ ನೋಡಿದರೆ ಇಂದಿನ ಕಡುಬಡ ಹುಡುಗನ ಪರಿಸ್ಥಿತಿಗಿಂತ ನನ್ನದು ಚೆನ್ನಾಗಿತ್ತು ಎಂದೇನಲ್ಲ. ಮುಂಬೈಯ ಡೆವಲೆಪ್‌ಮೆಂಟ್ ಡಿಪಾರ್ಟ್‌ಮೆಂಟಿನ ಚಾಳಿನ ೧೦x೧೦ ಅಡಿ ಉದ್ದಗಲದ ಖೋಲಿಯಲ್ಲಿ ತಾಯಿತಂದೆ, ಸೋದರರ ಸಹಿತ ವಾಸಮಾಡಿ ಒಂದೇ ದುಡ್ಡಿನ ಸೀಮೆಎಣ್ಣೆಯ ದೀಪದ ಮುಂದೆ ಕೂತು ಓದಿದ್ದೇನೆ. ಅಷ್ಟೇ ಅಲ್ಲ,

ಆ ಕಾಲದ ಹಲವು ಸಂಕಟ, ಸಮಸ್ಯೆಗಳನ್ನು ಎದುರಿಸಿ ನಾನು ಇಷ್ಟು ಮಾಡಿರುವಾಗ, ನೀವು ಎಲ್ಲ ಸುಸಜ್ಜಿತ ಅನುಕೂಲತೆ ಇರುವಾಗ ಏಕೆ ಮಾಡುವುದು ಸಾಧ್ಯವಿಲ್ಲ? ಪ್ರತಿಯೊಬ್ಬನು ಸತತ ಉದ್ಯೋಗದಿಂದಲೇ ಪರಾಕ್ರಮಿಯೂ, ಬುದ್ಧಿವಂತನೂ ಆಗಬಲ್ಲ. ಯಾರೇ ಆಗಲಿ ಹುಟ್ಟಿನಿಂದಲೇ, ಜಾಣ ಇಲ್ಲವೇ ಪರಾಕ್ರಮಿಯಾಗಿರಲು ಸಾಧ್ಯವಿಲ್ಲ. ನಾನು ವಿದ್ಯಾರ್ಥಿ ದಿಶೆಯಲ್ಲಿ ಇಂಗ್ಲಂಡಿನಲ್ಲಿದ್ದಾಗ ಯಾವ ಪಠ್ಯಕ್ರಮಕ್ಕೆ ಎಂಟು ವರುಷ ಬೇಕಾಗುತ್ತಿತ್ತೋ, ಅದನ್ನು ನಾನು ೨ ವರ್ಷ, ಮೂರೇ ತಿಂಗಳಲ್ಲಿ ಯಶಸ್ವಿಯಾಗಿ ಪೂರ್ತಿಮಾಡಿದೆ. ಇದನ್ನು ಮಾಡಲು ದಿನದ ೨೪ಗಂಟೆಗಳಲ್ಲಿ ೨೧ಗಂಟೆ ಅಧ್ಯಯನ ಮಾಡಬೇಕಾಯಿತು. ನನಗಿಂದು ೪೦ವರ್ಷ ದಾಟಿದ್ದರೂ ೨೪ಗಂಟೆಗಳಲ್ಲಿ ೧೮ಗಂಟೆ ಖುರ್ಚಿಯಲ್ಲಿ ಕೂತು ಕೆಲಸಮಾಡುತ್ತೇನೆ. ಈಗಿನ ವಿದ್ಯಾರ್ಥಿಗಳಿಗೆ ಅರ್ಧಗಂಟೆ ಕೂತರೂ ಚಿಮಟಿಯಷ್ಟು ನಸ್ಯ ಮೂಗಿಗೆ ತುರುಕಬೇಕಾಗುತ್ತದೆ. ಇಲ್ಲವೇ ಸಿಗರೇಟುಸೇದಿ, ಕಾಲುಚಾಚಿ ಕೆಲವು ಕಾಲ ತೂಕಡಿಸಿದ ವಿನಾ ಉತ್ಸಾಹ ಬರುವುದಿಲ್ಲ. ನನಗೆ ಈ ವಯಸ್ಸಿನಲ್ಲೂ ಸಹ ಇವುಗಳಲ್ಲಿ ಯಾವುದರ ಅಗತ್ಯವೂ ಎನಿಸುವುದಿಲ್ಲ.

ಸತತ ಕಾರ್ಯ ಮತ್ತು ದುಡಿಮೆ ಮಾಡುವುದರಿಂದಲೇ ಯಶಪ್ರಾಪ್ತಿಯಾಗುತ್ತದೆ. ಕೇವಲ ಪದವಿ ಗಳಿಸುವುದರಿಂದ ಏನೂ ಪ್ರಯೋಜನವಿಲ್ಲ. ಏಕೆಂದರೆ ಪದವಿ ಎಂದರೆ ಜ್ಞಾನವಾಗಿರದೆ ಶಿಕ್ಷಕನ ಸಹಾಯವಿಲ್ಲದೆ ಜ್ಞಾನಾರ್ಜನೆ ಮಾಡಲು ಸಂಗ್ರಹಿಸಿದ ಸಾಧನ ಸಾಮಗ್ರಿಯಾಗಿದೆ. ವಿಶ್ವವಿದ್ಯಾಲಯದ ಪದವಿಗೂ, ಬುದ್ಧಿವಂತಿಕೆಗೂ ಏನೂ ಸಂಬಂಧವಿಲ್ಲ. ಈ ವಿಷಯದ ಒಂದು ಮನನೀಯವಾದ ಉದಾಹರಣೆಯನ್ನು ನಿಮ್ಮ ಮಾಹಿತಿಗಾಗಿ ನೀಡುತ್ತೇನೆ. VIIನೇ ಎಡ್ವರ್ಡ್ ಬಳಿಕ ಯಾವಾಗ ಪಂಚಮ ಜಾರ್ಜನು ಸಿಂಹಾಸನವನ್ನು ೧೯೧೧ರಲ್ಲಿ ಏರಿದನೋ ಆಗವನು ಹಿಂದೂಸ್ಥಾನಕ್ಕೆ ಬಂದು ಹೋದ. ನಂತರ ಅವನು ಹಿಂದೂಸ್ಥಾನದ ವಿಶ್ವವಿದ್ಯಾಲಯಗಳಿಗೆ ಹಲವು ಲಕ್ಷಗಳ ಅನುದಾನ ನೀಡಿದನು. ಈ ಅನುದಾನದ ಹಣದಿಂದ ಗಣಿತಶಾಸ್ತ್ರದಲ್ಲಿ ಪಾರಂಗತರಾದ ಪ್ರೊಫೆಸರ್‌ನನ್ನು ಕರೆಸಿ ಅದರ ಲಾಭ ದೇಶಕ್ಕೆ ಸಿಗಲಿ ಎಂದು ನಿರ್ಧರಿಸಿದರು. ಅದರಂತೆ ಅವನನ್ನು ಕರೆಯಿಸಿದರು. ಯಾರು ಎಂ.ಎ. ಕಲಿಯುತ್ತಿದ್ದಾರೋ ಅವರೇ ಕ್ಲಾಸಿಗೆ ಹಾಜರಾಗಬೇಕೆಂದು ನಿರ್ಧರಿಸಲಾಯಿತು. ಆಗ ಮದ್ರಾಸಿನ ರೇಲ್ವೆ ಆಫೀಸಿನಲ್ಲಿ ಪ್ರತಿತಿಂಗಳಿಗೆ ೨೦ ರುಪಾಯಿ ಪಡೆದು ಕೆಲಸ ಮಾಡುವ ರಾಮಾನುಜ ಎಂಬ ಒಬ್ಬ ಗುಮಾಸ್ತನಿದ್ದ. ಅವನು ತನ್ನ ಕೆಲಸ ಮುಗಿಸಿ ಗಣಿತ ವಿದ್ವಾಂಸನ ಉಪನ್ಯಾಸ ಕೇಳಲು ಮುಂದಾದ. ಅವನು ತನಗೆ ಕ್ಲಾಸಿಗೆ ಹಾಜರಾಗಲು ಅನುಮತಿ ನೀಡಬೇಕೆಂದು ಬೇಡಿಕೊಂಡ. ಆದರೆ ರಾಮಾನುಜ ಕಲಿತದ್ದು ಕೇವಲ ಮೆಟ್ರಿಕ್. ಅವನಿಗೆ ಏನೂ ಅರ್ಥವಾಗಲಿಕ್ಕಿಲ್ಲ ಎಂದು ಮೊದಲು ಆ ವಿದ್ವಾಂಸ ಭಾವಿಸಿದ. ಆದರೂ ಇಚ್ಛೆಯಿದ್ದರೆ ಕ್ಲಾಸಿಗೆ ಹಾಜರಾಗಬಹುದು ಎಂದು ರಾಮಾನುಜನ್‌ನಿಗೆ ಅನುಮತಿ ನೀಡಲಾಯತು. ರಾಮಾನುಜನ್ ಆ ಪ್ರೊಫೆಸರ್‌ನ ಐದಾರು ಉಪನ್ಯಾಸವನ್ನು ಆಲಿಸಿದ. ಆದರೆ ಪ್ರತಿಸಲ ಅವನು ವಿದ್ವಾಂಸನ ಭಾಷಣ ಕೇಳುವ ಬದಲು ತನ್ನ ನೋಟ್‌ಬುಕ್‌ನಲ್ಲಿ ಏನೋ ಬರೆಯುತ್ತ ಕೂತಿರುತ್ತಿದ್ದ. ಅದರಿಂದ ಸಿಟ್ಟಿಗೆದ್ದ ಪ್ರೊಫೆಸರ್ ಅವನನ್ನು ಸಾಕಷ್ಟು ಬಯ್ದ. ಕೊಟ್ಟ ಅವಕಾಶದ ದುರುಪಯೋಗ ಪಡಿಸಿಕೊಳ್ಳುತ್ತಿ ಎಂದ. ಆಗ ರಾಮಾನುಜನ್ ನೀಡಿದ ಉತ್ತರ ಹೀಗಿತ್ತು: 'ಸರ್, ನೀವಿಂದು ಹೇಳುವ ಗಣಿತದ ಪ್ರಮೇಯವನ್ನು ನಾನು ಬಾಲ್ಯದಲ್ಲೇ ಕಲಿತಿದ್ದೇನೆ. ಅದರಲ್ಲಿ ಹೊಸದೇನೂ ಇದ್ದಂತೆ ನನಗೆ ಕಾಣಲಿಲ್ಲ. ಅಷ್ಟೇ ಅಲ್ಲ, ಮುಂದಿನ ಪ್ರಮೇಯವನ್ನೂ ನಾನು ನೋಟಬುಕ್‌ನಲ್ಲಿ ಬಿಡಿಸಿದ್ದೇನೆ'. ಪ್ರೊಫೆಸರ್ ಅವನ ನೋಟ್‌ಬುಕ್ ಪರಿಶೀಲಿಸಿದ. ಅವನು ಗಣಿತಶಾಸ್ತ್ರದ ದೊಡ್ಡ ದೊಡ್ಡ ಪ್ರಾಬ್ಲಮ್‌ಗಳನ್ನು ಬಿಡಿಸಿದ್ದ. ಅದನ್ನು ಕಂಡು ಪ್ರೊಫೆಸರ್‌ನು ಗವ್ಹರ್ನ್‌ಮೆಂಟ್ ಆಫ್ ಇಂಡಿಯಾಕ್ಕೆ ಬರೆದು ತಿಳಿಸಿದ, 'ಯಾವ

ವ್ಯಕ್ತಿಯು ಗಣಿತಶಾಸ್ತ್ರದಲ್ಲಿ ಇಷ್ಟೆಲ್ಲ ಪಾರಂಗತನಾಗಿದ್ದಾನೋ ಅವನಿಗೆ ಕಾರಕೂನ ಕೆಲಸ ನೀಡಿ ಪ್ರತಿತಿಂಗಳು ೨೦ ರುಪಾಯಿ ಕೊಡುತ್ತಿರುವುದಕ್ಕೆ ಖೇದವನ್ನು ವ್ಯಕ್ತ ಪಡಿಸಿದನು. ಅಷ್ಟೇ ಅಲ್ಲ, ಆ ಪ್ರೊಫೆಸರು ಅವನನ್ನು ವಿದೇಶಕ್ಕೆ ಕರೆದೊಯ್ದು ಹೆಚ್ಚಿನ ಸಂಬಳ ನೀಡಿ, ಗಣಿತದಲ್ಲಿ ನಿಷ್ಣಾತನಾಗಿರುವುದರಿಂದ ಅಲ್ಲಿಯವರಿಗೆ ಗಣಿತ ಕಲಿಸಲು ನೇಮಿಸಿದನು. ತಾನು ಸ್ವತಃ ಅವನ ವಿದ್ಯಾರ್ಥಿಯಾದನು. ಆದರೆ ರಾಮಾನುಜನು ಬ್ರಾಹ್ಮಣನಾಗಿರುವುದರಿಂದ ಅವನ ಬ್ರಾಹ್ಮಣ್ಯ ಅಡ್ಡ ಬಂತು. ಅವನು ವಿದೇಶಕ್ಕೆ ಹೋಗುವಾಗ ತನ್ನ ಜೊತೆಗೆ ಅಡುಗೆಗೆ ಬೇಕಾಗುವ ಸಕಲ ಸಾಮಗ್ರಿಗಳನ್ನು ಒಯ್ದನು. ಇಟ್ಟಿಗೆಯ ಒಲೆ ಮಾಡಿ, ಅದರ ಮೇಲೆ ಸ್ವತಃ ಅಡುಗೆಮಾಡಿ ಅವನು ಊಟಮಾಡುತ್ತಿದ್ದ. ಯುರೋಪಿಯನ್‌ರು ಯವನರಾಗಿದ್ದರಿಂದ ಮುಂಜಾನೆ, ಸಂಚೆ ಅವರನ್ನು ಸ್ಪರ್ಶಿಸಿದ್ದರಿಂದ ತಣ್ಣೀರಿನ ಸ್ನಾನ ಮಾಡುತ್ತಿದ್ದ. ಸ್ನಾನದಿಂದ ನಿಮೋನಿಯಾ ಆಗಿ ಅದರಲ್ಲೇ ಅವನು ಕೊನೆಯುಸಿರೆಳೆದನು. ಹಾಗೆಯೇ ಲಿಬರಲ್ ಪಕ್ಷದ ಶ್ರೀ ಚಿಂತಾಮಣಿ ಎಂಬುವನು ತುಂಬ ಬುದ್ಧಿವಂತ, ಜಾಣನೆಂಬ ಖ್ಯಾತಿ ಪಡೆದಿದ್ದ. ಅಷ್ಟೇ ಅಲ್ಲ, ಸಂಪೂರ್ಣ ಹಿಂದೂಸ್ಥಾನದಲ್ಲೇ ಮೊದಲ ದರ್ಜೆಯ ಸಂಪಾದಕ ಮತ್ತು ಲೇಖಕನೆನಿಸಿದ್ದ. ಬಿ.ಎ. ಮುಗಿದ ಕೂಡಲೇ ಏನೂ ಓದಬೇಕಿಲ್ಲ ಎಂಬ ಭಾವನೆ ನಮ್ಮ ವಿದ್ಯಾರ್ಥಿಗಳಲ್ಲಿದೆ. ಆದರೆ ಹಾಗೆ ನೋಡಿದರೆ, ಬಿ.ಎ. ಮುಗಿದ ಬಳಿಕ ಶಿಕ್ಷಕರ ಹೊರತು ಸ್ವತಂತ್ರ ಅಧ್ಯಯನ ಮಾಡಬಹುದಾಗಿದೆ. ಅಂದರೆ ಕಲಿಯಬೇಕಾಗಿರುವುದು ಇನ್ನು ಮುಂದೆ ಇದೆ. ಮನುಷ್ಯ ಆಯುಷ್ಯದುದ್ದಕ್ಕೂ ಕಲಿಯಬೇಕೆಂದು ಮನಸ್ಸು ಮಾಡಿದರೆ ವಿದ್ಯಾಸಾಗರದ ಬದಿಯಲ್ಲಿದ್ದ ಮೊಣಕಾಲಿನಷ್ಟು ಜ್ಞಾನದಲ್ಲಿ ಬಹಳವೆಂದರೆ ನಡೆಯಬಹುದು.

ವಿದ್ಯೆಯ ಜೊತೆಗೆ ಶೀಲಚಾರಿತ್ರ್ಯವು ಅಷ್ಟೇ ಮಹತ್ವದ್ದು. ಚಾರಿತ್ರ್ಯವಿಲ್ಲದ ವಿದ್ಯೆ ಹುರುಳಿಲ್ಲದ್ದು. ಏಕೆಂದರೆ ವಿದ್ಯೆ ಒಂದು ಶಸ್ತ್ರ. ವಿದ್ಯೆಯ ಶಸ್ತ್ರವಿದ್ದರೆ, ಚಾರಿತ್ರ್ಯವಂತನಾಗಿದ್ದರೆ ಅದರ ಮೂಲಕ ಮತ್ತೊಬ್ಬನ ಸಂರಕ್ಷಣೆ ಮಾಡಬಹುದು. ಚಾರಿತ್ರ್ಯವೇ ಇಲ್ಲದಿದ್ದರೆ ಅವನು ವಿದ್ಯೆಯ ಶಸ್ತ್ರ ಬಳಸಿ ಮತ್ತೊಬ್ಬನನ್ನು ನಾಶಮಾಡಬಹುದು. ವಿದ್ಯೆಯು ಖಡ್ಗದಂತಿದ್ದು, ಅದರ ಮಹತ್ವ ಅದನ್ನು ಧಾರಣ ಮಾಡುವವನನ್ನು ಅವಲಂಬಿಸಿದೆ. ಏಕೆಂದರೆ ಅಜ್ಞಾನಿಯಾದವನು ಬೇರೆಯವರನ್ನು ವಂಚಿಸಲಾರ. ವಂಚಿಸುವದು ಹೇಗೆ ಎನ್ನುವುದೇ ಅವನಿಗೆ ಗೊತ್ತಿರುವುದಿಲ್ಲ. ಆದರೆ ಕಲಿತವನು ಯಾರನ್ನು ಹೇಗೆ ವಂಚಿಸಬೇಕೆಂಬ ಯುಕ್ತಿವಾದ ಗೊತ್ತಿರುವುದರಿಂದ ಅವನು ಸತ್ಯವನ್ನು ಸುಳ್ಳೆಂದೂ, ಸುಳ್ಳನ್ನು ಸತ್ಯವೆಂದು ಭಾಸ ನಿರ್ಮಾಣ ಮಾಡಬಹುದಾಗಿದೆ. ಪ್ರತಿಹಳ್ಳಿಯಲ್ಲಿ ಬ್ರಾಹ್ಮಣ, ವ್ಯಾಪಾರಿ, ಮತ್ತು ಇತರ ಕಲಿತ ಉಂಡಾಡಿಗಳು ಮೋಸ ವಂಚನೆಯಿಂದ ಹೇಗೆ ವರ್ತಿಸುತ್ತಾರೆನ್ನುವುದನ್ನು ನಾವೆಲ್ಲವರೂ ನೋಡಿದ್ದೇವೆ. ಮೋಸ ಮಾಡಲು ಚತುರತೆ ಮತ್ತು ಬುದ್ಧಿ ಬೇಕಾಗುತ್ತದೆ. ಆದರೆ ಚಾತುರ್ಯ ಮತ್ತು ಬುದ್ಧಿಗೆ ಸದಾಚಾರದ ಜೊತೆಸಿಕ್ಕರೆ ಅವನು ಮೋಸ ವಂಚನೆ ಮಾಡಲಾರ. ಆದ್ದರಿಂದಲೇ ಕಲಿತವರಿಗೆ ಶೀಲ–ಚಾರಿತ್ರ್ಯದ ಅಗತ್ಯವಿದೆ. ಚಾರಿತ್ರ್ಯವಿಲ್ಲದ ಕಲಿಕೆಯಲ್ಲಿ ಜನರ, ಸಮಾಜದ, ದೇಶದ ನಾಶ ಅಡಗಿದೆ. ಆದ್ದರಿಂದಲೇ ಚಾರಿತ್ರ್ಯಕ್ಕೆ ಶಿಕ್ಷಣಕ್ಕಿಂತಲೂ ಆದೆಷ್ಟು ಅಧಿಕ ಮಹತ್ವವಿದೆ ಎನ್ನುವುದು ನಿಮ್ಮ ಲಕ್ಷ್ಯಕ್ಕೆ ಬಂದಿರಲೂಬಹುದು. ಆದ್ದರಿಂದಲೇ ಪ್ರತಿ ವ್ಯಕ್ತಿಯಲ್ಲಿ ಶೀಲವಿರಬೇಕು.

ನನ್ನ ಮಾತು ಮುಗಿಸುವ ಮುನ್ನ ರಾಜಕಾರಣದ ಕುರಿತು ಒಂದೆರಡು ವಿಷಯ ಹೇಳುವುದು ನನ್ನ ಕರ್ತವ್ಯವೆಂದು ನಾನು ಅಂದುಕೊಂಡಿದ್ದೇನೆ. ಸಾಮಾನ್ಯವಾಗಿ ಜನರು ಬಡತನದಿಂದಾಗಿ ವಿದ್ಯೆಯನ್ನು ಹೊಟ್ಟೆ ತುಂಬಿಸಿಕೊಳ್ಳಲು ಬಳಸುತ್ತಾರೆ. ನಾನು ಅದರ ಬಗೆಗೆ ಅವರನ್ನು ದೂಷಿಸುವುದಿಲ್ಲ. ಶಿಕ್ಷಣ ಪಡೆದವರ ಸಮಸ್ಯೆಗಳನ್ನು ನೀವು ನಿರ್ಲಕ್ಷಿಸುವಂತಿಲ್ಲ. ಇಂದು ಸ್ಪೃಶ್ಯಸಮಾಜ ಅಧಿಕಾರಾರೂಢವಾಗಿದೆ.

ಆದರಿಂದಾಗಿ ಸ್ಪೃಶ್ಯರಾಗಿದ್ದವರ ಸ್ಥಿತಿ ತುಂಬ ಸಮಾಧಾನಕಾರಕವಾಗಿದೆ. ಅದರ ಮಾರ್ಗ ಎಲ್ಲ ದೃಷ್ಟಿಯಿಂದ ಸುಖಕರವಾಗಿದೆ. ಅದರ ವಿರುದ್ಧ ನಿಮ್ಮ ಮಾರ್ಗ ಮಾತ್ರ ಕಂಟಕಮಯವಾಗಿದೆ. ಯಾವ ಉಪಾಯದಿಂದ ಆ ಮಾರ್ಗ ಸುಲಭವಾಗಬಹುದು ಎಂಬ ಬಗೆಗೆ ನೀವು ಈಗಿನಿಂದಲೇ ಯೋಚಿಸಬೇಕು. ಎಲ್ಲ ದೃಷ್ಟಿಯಿಂದ ನಮ್ಮ ಸಮಾಜವು ತುಳಿತಕ್ಕೊಳಗಾಗಿದೆ. ಇಲ್ಲಿ ಅದರ ವಿವರ ನೀಡುವುದು ಸಾಧ್ಯವಿಲ್ಲ. ನಾವು ಅಲ್ಪಸಂಖ್ಯಾತರು; ಸಂಖ್ಯೆಯ ಬಲದಿಂದ ಸ್ಪೃಶ್ಯರಾದವರು ದೌರ್ಜನ್ಯ ಮಾಡುತ್ತಲಿದ್ದಾರೆ. ಇಂದು ನಾವು ಕೋರ್ಟು ಕಚೇರಿಗೆ ಹೋದರೆ ನಿಮಗೆ ಕಾಣಿಸುವುದೇನು? ನ್ಯಾಯಾಧೀಶ ಬ್ರಾಹ್ಮಣ, ಗುಮಾಸ್ತ ಬ್ರಾಹ್ಮಣ, ಫೌಜದಾರ್ ಬ್ರಾಹ್ಮಣ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಖಟ್ಲೆಯ ನ್ಯಾಯಕ್ಕಾಗಿ ಕೋರ್ಟುಕಟ್ಟೆ ಏರಿದರೆ ನ್ಯಾಯಸಿಗಬಹುದೇ? ಖಂಡಿತಕ್ಕೂ ಇಲ್ಲ, ಎಷ್ಟೋ ಖಟ್ಲೆಯ ನಿರ್ಣಯದಲ್ಲಿ ನ್ಯಾಯಾಧೀಶನು ಮಹಾರರ ಪರವಾಗಿ ಮಹಾರ ಸಾಕ್ಷಿದಾರನಿರುವುದರಿಂದ ಅದನ್ನು ನಂಬುವಂತಿಲ್ಲ ಎಂದಿದ್ದಾರೆ. ಆದರೆ ಸ್ಪೃಶ್ಯ ಜಾತಿಯ ಪರವಾಗಿ ಸ್ಪೃಶ್ಯ ಸಾಕ್ಷಿದಾರನಿದ್ದರೆ ನ್ಯಾಯಧೀಶರು ಆಕ್ಷೇಪವೆತ್ತುವುದಿಲ್ಲ. ಅಷ್ಟೇ ಏಕೆ, ಇಂದಿನ ಕಾಂಗ್ರೆಸ್ ಸಚಿವರೂ ಸಹ ಕಾಂಗ್ರೆಸ್‌ನವನಿಗೆ ಸಹಾಯ ಮಾಡಲು ಮುಂದಾಗುತ್ತಾನೆ. ಇಂಥ ಪರಿಸ್ಥಿತಿಯಲ್ಲಿ ಆಯಕಟ್ಟಿನ ಜಾಗ ನಮಗೆ ಹಸ್ತಗತವಾಗದ ಹೊರತು ನಡೆಯುತ್ತಿರುವ ದೌರ್ಜನ್ಯ ನಿಲ್ಲಲಾರದು. ಆದರೆ ಅಂಥ ಜಾಗವನ್ನು ವಶಪಡಿಸಿಕೊಳ್ಳುವುದು ಹೇಗೆ ಎನ್ನುವುದೇ ಯೋಚಿಸಬೇಕಾದ ಸಂಗತಿ. ಇವತ್ತಂತೂ ಕಳ್ಳರು ಮತ್ತು ವಂಚಕರೆಲ್ಲ ಸ್ಪೃಶ್ಯ ಕಾಂಗ್ರೆಸಿಗರ ಗೆಳೆಯರಾಗಿದ್ದಾರೆ. ಅವರ ಗುಂಪು ಸೇರಿದವರತ್ತ ಮಾತ್ರ ಸಹಾನುಭೂತಿಯ ನೋಟ ಬೀರುತ್ತಾರೆ. ಯಾರು ಅವರ ಗುಂಪಿಗೆ ಸೇರುವುದಿಲ್ಲವೋ ಅವರತ್ತ ಕ್ರೂರವಾದ ನೋಟಬೀರುತ್ತಾರೆಂಬ ಅನುಭವ ನಮಗೆಲ್ಲ ಇದೆ. ಈ ಕಾರಣಕ್ಕಾಗಿ ನಾನು ನಿಮಗೆರಡು ಸಂಗತಿ ಹೇಳಲು ಬಯಸುತ್ತೇನೆ. ಮೊದಲನೆಯದು ನಾವೆಲ್ಲರೂ ಸಂಘಟಿತರಾಗಬೇಕು. ನಾವು ಅಸ್ಪೃಶ್ಯರಾಗಿರುವ ಜನರೆಲ್ಲ ಒಗ್ಗಟ್ಟಾಗದಿದ್ದರೆ ಈ ಭೇದದ ಕೋಟೆಗೆ ಎಲ್ಲಾದರೂ ಬಿರುಕುಬಿಡದೆ ಇರದು. ಜನರು ಅಜ್ಞಾನಿಗಳಾಗಿದ್ದಾರೆ. ಅವರಿಗೆ ಓದುಬರಹ ಬರುವುದಿಲ್ಲ. ಊರಿನ ಉಚ್ಚವರ್ಗದವರು ಹೇಳಿದಂತೆ ಅವರು ವರ್ತಿಸುತ್ತಾರೆ. ಯೋಚಿಸುವುದೂ ಇಲ್ಲ. ಭಯದಿಂದಾಗಿ ಜನರು ಬೇರ್ಪಡುವ ಸಾಧ್ಯತೆಯೇ ಹೆಚ್ಚು. ಈ ಒಗ್ಗಟ್ಟಿಗಾಗಿ ವಿದ್ಯಾರ್ಥಿ ಸಮೂಹ ಏನು ಮಾಡಲು ಸಿದ್ಧವಾಗಿದೆ? ಈ ಒಗ್ಗಟ್ಟನ್ನು ವಿದ್ಯಾರ್ಥಿಗಳು ಹೇಗೆ ಸಂಭಾಳಿಸುತ್ತಾರೋ ಎಂಬ ಬಗೆಗೆ ಶಂಕೆಯಿದೆ. ಅವರು ತಮ್ಮ ವಿದ್ಯಾರ್ಥಿದಿಶೆಯಲ್ಲಿ ವಿದ್ಯೆ ಪಡೆಯಲು ಶತಪ್ರಯತ್ನ ಮಾಡಬೇಕು. ಅದು ತುಂಬ ಸಮಾಧಾನ ತಂದು ಕೊಡುವ ಸಂಗತಿ. ಅದರ ಜೊತೆಗೆ ಸಂಘಟನೆಯ ಕಾರ್ಯದ ಆಂಶೀಕ ಭಾರವನ್ನು ಅವರು ತಮ್ಮ ಹೆಗಲ ಮೇಲೆ ಹೊರಬೇಕು. ನಮ್ಮೆಲ್ಲರ ಬಯಕೆಯನ್ನು ಈಡೇರಿಸುವ ಸಾಮರ್ಥ್ಯ ನಮಗಾರಿಗೂ ಇಲ್ಲ. ಹೀಗಾಗಿ ವೈಯಕ್ತಿಕ ಆಶೆ–ಆಕಾಂಕ್ಷೆ ಈಡೇರದಿದ್ದಾಗ ನಾವು ತಕ್ಷಣ ವಿಪರೀತವಾಗಿ ವರ್ತಿಸುವುದರಿಂದ ನಮ್ಮ ಆತ್ಮನಾಶವನ್ನು ನಾವೇ ಮಾಡಿಕೊಂಡಂತಾಗುತ್ತದೆ. ಆದ್ದರಿಂದ ಈ ಸಂಗತಿಯನ್ನು ಕಣ್ಣೆದುರಿಗಿರಿಸಿಕೊಂಡು ಸ್ವಾರ್ಥವನ್ನು ತ್ಯಜಿಸಿ ಸಂಘಟನೆಗಾಗಿ ನಾವೆಲ್ಲ ಹೋರಾಡಬೇಕು. ವ್ಯಕ್ತಿಗತ ಸ್ವಾರ್ಥಕ್ಕಿಂತ ಸಮಾಜದ ಹಿತಕ್ಕಾಗಿ ನಾವು ಹೆಚ್ಚು ಗಮನ ಹರಿಸಬೇಕು.

ಎರಡನೆಯ ಸಂಗತಿ ಎಂದರೆ, ನಮ್ಮ ಉದ್ಧಾರಕ್ಕಾಗಿ ಹರಿಜನ ಸೇವಕ ಸಂಘದಂತಹ ಸಾವಿರಾರು ಸಂಸ್ಥೆಗಳು ಸ್ಥಾಪನೆಗೊಂಡಿವೆ. ಆದರೆ ಅವುಗಳ ಅಂತಿಮ ಧ್ಯೇಯವೇನು ಎನ್ನುವುದೇ ಗೊತ್ತಾಗುತ್ತಿಲ್ಲ. ಅವರ ಕಾರ್ಯವು ಕರ್ತವ್ಯದ ಉದ್ದೇಶದಿಂದ ಶುರುವಾಗಿದೆಯೇ, ಅಥವಾ ಕೋಳಿಗೆ ಕಾಳುಹಾಕಿ ಕೊಲ್ಲುವ ಸಿದ್ಧತೆಯ ಸ್ವಾರ್ಥ ಬುದ್ಧಿಯದಾಗಿದೆಯೆ? ಈ ಸಂಸ್ಥೆಯ ಲಾಭದ ಪರಿಣಾಮವೇನು ಎನ್ನುವುದೇ

ಯೋಚಿಸಬೇಕಾದ ಪ್ರಶ್ನೆ. ಈ ಬ್ರಾಹ್ಮಣ ಸಂಸ್ಥೆಗಳಿಂದ ನಮ್ಮ ವಿದ್ಯಾರ್ಥಿಗಳು ಲಾಭ ಪಡೆದರೆ 'ಉಂಡ ಮನೆಗೆ ದ್ರೋಹ ಮಾಡಬಾರದು' ಎಂಬ ಹಲವು ವರ್ಷಗಳ ಬೋಧನೆಯಿಂದ ನಾವು ನಮ್ಮ ಸ್ವತ್ವವನ್ನೇ ಮರೆಯುವ ಭೀತಿಯಿದೆ. ಈ ಬಗೆಗಿನ ದ್ರೋಹ, ಭೀಷ್ಮರ ಉದಾಹರಣೆಯಂತೂ ನಮ್ಮ ಕಣ್ಣೆದುರಿಗಿದ್ದೇ ಇದೆ. ಪಾಂಡವರ ಪ್ರಶ್ನೆಯು ನ್ಯಾಯಯುತವಾಗಿರುವಾಗ ನೀವು ಅವರ ವಿರುದ್ಧ ಹೇಗೆ ಹೋರಾಡುತ್ತೀರಿ ಎಂಬ ಪ್ರಶ್ನೆಯನ್ನು ಭೀಷ್ಮನಿಗೆ ಕೇಳಿದಾಗ, ಅವನು 'ಅರ್ಥಸ್ಯ ಪುರಷೋ ದಾಸ' ಎಂದು ಉತ್ತರಿಸಿದ.

'ನಾನು ಯಾರ ಅನ್ನ ತಿನ್ನುತ್ತೇನೋ ಅವರ ಪರವಾಗಿ ಹೋರಾಡಬೇಕಾಗುತ್ತದೆ.' ಈ ಉತ್ತರದಲ್ಲಿ ಮನುಷ್ಯನ ಸರ್ವಸಾಧಾರಣ ಸ್ವಭಾವವನ್ನು ಚಿತ್ರಿಸಲಾಗಿದೆ. ಆದ್ದರಿಂದ ಸ್ಪೃಶ್ಯಜನರು ಆರಂಭಿಸಿದ ಈ ಸಂಸ್ಥೆಯ ಲಾಭಪಡೆಯುವ ಮುನ್ನ ಅದರ ಬಗೆಗೆ ಯೋಚಿಸುವುದೊಳಿತು. ಈ ವಿಷಯಕ್ಕೆ ಸಂಬಂಧಿಸಿದ ಒಂದು ಕಥೆಯನ್ನು ನಾನು ಹೇಳಲು ಬಯಸುತ್ತೇನೆ. ಪ್ರಾಚೀನ ಕಾಲದಲ್ಲಿ ದೇವ–ದಾನವರ ಯುದ್ಧ ನಡೆದಿತ್ತು. ದಾನವರ ಗುರು ಶುಕ್ರಾಚಾರ್ಯನಿಗೆ ಸಂಜೀವಿನಿ ವಿದ್ಯೆ ಅವಗತವಾಗಿರುವುದರಿಂದ ಕಾಳಗದಲ್ಲಿ ಮಡಿದ ರಕ್ಕಸರನ್ನು ಅವನು ಜೀವಂತಗೊಳಿಸುತ್ತಿದ್ದ. ಆದರೆ ಯುದ್ಧದಲಿ ದೇವರ ಕಡೆಯವರು ಸತ್ತರೆ ಅವರನ್ನು ಜೀವಂತಗೊಳಿಸಲು ಬರುತ್ತಿರಲಿಲ್ಲ. ಅದರಿಂದ ದಿನೇ ದಿನೇ ದೇವರ ಸೈನ್ಯ ಕಡಿಮೆಯಾಗಲಾರಂಭಿಸಿತು. ಹೀಗಾಗಿ ದೇವರುಗಳೆಲ್ಲ ಒಂದಾಗಿ ಸಾಕಷ್ಟು ಚರ್ಚೆಮಾಡಿ ನಿರ್ಧಾರಕ್ಕೆ ಬಂದರು. ದೇವರ ಗುರುವಿನ ಮಗ ಕಚನನ್ನು ಸಂಜೀವಿನಿ ವಿದ್ಯೆಕಲಿಯಲು ದಾನವರ ಗುರುವಿನ ಬಳಿಗೆ ಕಳಿಸುವುದು. ಅದರಂತೆ ಕಚನು ವಿದ್ಯೆಕಲಿಯಲು ಶುಕ್ರಾಚಾರ್ಯರ ಬಳಿಗೆ ಹೋದ. ಆದರೆ ದಾನವರಿಗೆ ದೇವರ ಈ ಕಾರಸ್ತಾನ ಗೊತ್ತಾಗಿ ಕಚನನ್ನು ಕೊಂದರು. ಅವನನ್ನು ಸುಟ್ಟುಬೂದಿ ಮಾಡಿ ಶುಕ್ರಾಚಾರ್ಯನಿಗೆ ಮದ್ಯದಲ್ಲಿ ಕಲೆಸಿ ಕುಡಿಯಲು ನೀಡಿದರು. ಉದ್ದೇಶವೇನೆಂದರೆ ಕಚನು ಶುಕ್ರಾಚಾರಿಯ ಮಗಳಾದ ದೇವಯಾನಿಯನ್ನು ಪ್ರೀತಿಸಿ ವಶಪಡಿಸಿಕೊಂಡಿದ್ದ. ಅವನಿಗೆ ಸಂಜೀವಿನಿ ವಿದ್ಯೆ ಕಲಿಸುವಂತೆ ದೇವಯಾನಿ ತಂದೆಯ ಎದುರಿಗೆ ಹಠಹಿಡಿದಳು. ಅವಳ ಹಠಕ್ಕೆ ಮಣಿದು ಶುಕ್ರಾಚಾರ್ಯನು ಕಚನಿಗೆ ಸಂಜೀವಿನಿ ವಿದ್ಯೆ ಕಲಿಸಿದರೆ ತಮಗೆ ಉಳಿಗಾಲವಿಲ್ಲ ಎಂಬ ಭೀತಿಯಿಂದ, ಮದ್ಯದ ಮೂಲಕ ಅವನ ಬೂದಿ ಶುಕ್ರಾಚಾರ್ಯನ ಉದರ ಸೇರಿದರೆ, ಅವನಿಗೆ ಜೀವದಾನ ಮಾಡಬೇಕಾದರೆ ಶುಕ್ರಾಚಾರ್ಯ ಸಾಯಬೇಕಾಗುತ್ತದೆ. ಇಂಥ ಸ್ಥಿತಿಯಲ್ಲಿ ದೇವಯಾನಿ ಹಠ ಹಿಡಿಯಲಿಕ್ಕಿಲ್ಲ ಎಂಬ ಭಾವನೆಯಿಂದ ದಾನವರು ಇದನ್ನೆಲ್ಲ ಮಾಡಿದರು. ಆದರೆ ಈ ಕಾರಸ್ತಾನ ದೇವಯಾನಿಗೆ ಗೊತ್ತಾದಾಗ ಅವಳು ಶುಕ್ರಾಚಾರಿಯ ಉದರದಲ್ಲಿದ್ದ ಕಚನಿಗೆ ಮೊದಲು ಸಂಜೀವಿನಿ ವಿದ್ಯೆಕಲಿಸುವಂತೆ ಹಠಹಿಡಿದಳು. ಹೀಗಾಗಿ ಶುಕ್ರಾಚಾರಿ ಕಚನಿಗೆ ವಿದ್ಯೆ ಕಲಿಸಿದ. ಬಳಿಕ ಮಂತ್ರೋಚ್ಚಾರ ಮಾಡಿದ ಕೂಡಲೇ ಕಚ ಗುರುವಿನ ಉದರವನ್ನು ಸೀಳಿಹೊರಬಿದ್ದ. ಅದೇ ವಿದ್ಯೆಯ ಬಲದಿಂದ ಅವನು ಶುಕ್ರಾಚಾರಿಯನ್ನು ಮತ್ತೆ ಜೀವಂತಗೊಳಿಸಿದ. ಇದೊಂದು ಆಖ್ಯಾಯಿಕೆ. ಕಚನು ದೇವಯಾನಿಯನ್ನು ಮದುವೆಯಾಗುವುದಾಗಿ ಹೇಳಿದ್ದರೂ, ತನ್ನ ಕೆಲಸ ಮುಗಿದಕೂಡಲೇ ಅವನು ಎಲ್ಲ ಮರೆತು, ದೇವಯಾನಿಯನ್ನು ಮದುವೆಯಾಗದೇ ತನ್ನ ಗೂಡುಸೇರಿದ. ಕಚನ ಈ ಕಾರ್ಯವನ್ನು ಹಲವರು ಕೃತಘ್ನತೆ ಎನ್ನುತ್ತಾರೆ. ನಮ್ಮ ವಿದ್ಯಾರ್ಥಿಗಳು ಇದನ್ನು ಅನುಕರಿಸಿದರೆ ನನಗೆ ಕೆಡಕು ಎನಿಸಲಾರದು. ಈ ವಿಷಯಕ್ಕೆ ಸಂಬಂಧಿಸಿದ ಆಂಗ್ಲ ಸುಭಾಷಿತ ನೆನಪಾಗುತ್ತದೆ– 'No man can be greatful at the cost of his honour, no woman can be greatful at the cost of her chastity and no nation can be greatful at the cost of as liberty'.

ಗಾಂಧಿಯ ಸತ್ಯ, ಅಹಿಂಸೆ ನನಗಿಂದೂ ಅರ್ಥವಾಗಿಲ್ಲ. ಸತ್ಯಯಾರಿಗೆ, ಯಾವಾಗ ಹೇಳಬೇಕೆಂಬುದರ

ಉತ್ತರವನ್ನು ಗಾಂಧಿ ಇವತ್ತಿಗೂ ಕೊಟ್ಟಿಲ್ಲ. ಕಲ್ಪನೆ ಮಾಡಿ, ನನ್ನ ನೆರೆಯಲ್ಲೊಬ್ಬ ಶ್ರೀಮಂತ ಗೃಹಸ್ಥನಿದ್ದಾನೆ. ಅವನು ನನ್ನ ಸ್ನೇಹಿತನಾಗಿರುವುದರಿಂದ ಅವನು ತನ್ನ ಠೇವಣಿಯನ್ನು ಎಲ್ಲಿಡುತ್ತಾನೊ ನನಗೆ ಗೊತ್ತಿದೆ. ಒಂದು ವೇಳೆ ಕಳ್ಳ ಬಂದು 'ನಿಮ್ಮ ನೆರೆಯವನ ಸಂಪತ್ತು ಎಲ್ಲಿದೆ ಹೇಳು' ಎಂದರೆ ನಾನು ಸತ್ಯವನ್ನು ಹೇಳಿ ಗೆಳೆಯನಿಗೆ ಮೋಸ ಮಾಡುವುದೇ ಅಥವಾ ಸುಳ್ಳು ಹೇಳಿ ಗೆಳೆಯನ ಪ್ರಾಣ ಉಳಿಸುವುದೆ? ಇಂಥ ಒಂದಲ್ಲ ನೂರು ಉದಾಹರಣೆಯನ್ನು ನೀಡಬಹುದು.

ಕೊನೆಗೆ ನಾನು ಹೇಳಬೇಕಾಗಿರುವುದಿಷ್ಟೇ, ನೀವು ಎಲ್ಲರೂ ಒಗ್ಗಟ್ಟಾದರೆ ಏನಾದರೂ ಮಾಡುವುದು ಸಾಧ್ಯ. ನಮ್ಮ ಸಮುದಾಯದವರ ಮೇಲೆ ಸಾವಿರಾರು ವರ್ಷಗಳಿಂದ ನಡೆಯುತ್ತಿರುವ ದೌರ್ಜನ್ಯ ಮತ್ತು ಅನ್ಯಾಯವನ್ನು ನಿವಾರಣೆ ಮಾಡುವ ಕೆಲಸವನ್ನು ಇಂದಿನ ಪೀಳಿಗೆಯವರು ಸ್ವಸಂತೋಷದಿಂದ ಕೈಗೆತ್ತಿಕೊಳ್ಳಬೇಕು. ನಮ್ಮ ಸಮಾಜದಲ್ಲಿ ಒಗ್ಗಟ್ಟಿನ ಅಗತ್ಯವಿದೆ. ಐಕ್ಯದಿಂದಲೇ ನಾವು ಈ ಕಾರ್ಯ ಮಾಡುವುದು ಸಾಧ್ಯವೆಂದು ನನ್ನ ನಂಬಿಕೆ.

ಈ ವಿಷಯದಲ್ಲಿ ಶಿಸ್ತನ್ನು ಕಠೋರವಾಗಿ ಪಾಲಿಸಿದರೆ ಮಾತ್ರ ಏನಾದರೂ ಮಾಡುವುದು ಸಾಧ್ಯ. ಇಲ್ಲದಿದ್ದರೆ ಎಲ್ಲೆಡೆ ಗೊಂದಲ ನಿರ್ಮಾಣವಾಗಿ ಸಮಾಜನಾಶ ಮತ್ತು ವಿಘಟನೆಯಾಗಬಹುದು. ಇಂಥ ಸಮಯದಲ್ಲಿ ಎಲ್ಲರೂ ಯೋಗ್ಯ ಮುಂಜಾಗರೂಕತೆಯನ್ನು ವಹಿಸಬೇಕು. ಕೊನೆಗೆ ನಿಮ್ಮಲ್ಲಿ ಸಂಘಟನೆ, ಚಾರಿತ್ರ್ಯ ಮತ್ತು ಶಿಸ್ತನ್ನು ಬೆಳೆಸಿ, ಸಮಾಜದ ಉನ್ನತಿಗಾಗಿ ಶ್ರಮಿಸಿ ಎಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.[೧]

---

೧. ಡಾ. ಬಾಬಾಸಾಹೇಬ ಅಂಬೇಡ್ಕರರು ಭಾಷಣಗಳು, ಸಂ. ಮಾ.ಷ. ಗಾಂಜರೆ ಸಂಪುಟ–೧, ಪುಟ–೫೯–೬೭.

## ೧೪೧.

# ಕಾರ್ಮಿಕರನ್ನು ಗುಲಾಮರನ್ನಾಗಿ ಮಾಡುವುದೆಂದರೆ ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿದಂತೆ

ಕಾಂಗ್ರೆಸ್ ಸರಕಾರವು ಮುಂಬೈ ಕಾಯ್ದೆ ಮಂಡಳದಲ್ಲಿ ಜಾರಿಗೆ ತಂದ ಕಾರ್ಮಿಕರ ನಾಗರಿಕ ಸ್ವಾತಂತ್ರ್ಯಕ್ಕೆ ವಿಘಾತಕ ಎನ್ನಬಹುದಾದ ಟ್ರೇಡ್ ಡಿಸ್ಪುಟ್ ಮಸೂದೆಯ ಕುರಿತು ಮೊದಲ ವಾಚನ ನಡೆದಾಗ ಡಾ. ಅಂಬೇಡ್ಕರ ಅವರು ಅತ್ಯಂತ ಬಿರುಸಾಗಿ ಮತ್ತು ವಿಷಯಕ್ಕನುಸರಿಸಿ ೧೫ ಸೆಪ್ಟೆಂಬರ್ ೧೯೩೮ರಂದು ಭಾಷಣ ಮಾಡಿದರು. ಆ ಕಾಲಕ್ಕೆ ಡಾ. ಅಂಬೇಡ್ಕರ ಅವರು ಸುಮಾರು ಮೂರುಗಂಟೆ ಕಾಲ ಮಾತಾಡಿದರು. ಅವರು ಹೇಳಿದ್ದು ಹೀಗೆ–

ಈ ಬಿಲ್ಲಿನ ವಿವಿಧ ಕಲಮಿನ ಕುರಿತು ಟೀಕೆ ಮಾಡುವಾಗ ಈ ಮೊದಲು ಅಂಗೀಕರಿಸಿದ ಇಂಥದೇ ಬಗೆಯ ಕಾನೂನಿನ ಬಗೆಗೂ ಯೋಚಿಸುವುದು ಈಗ ಅಗತ್ಯವಿದೆ. ಏಕೆಂದರೆ ಈ ಬಿಲ್ಲಿನ ಕಲಮಿನ ತುಲನೆಯನ್ನು ಈ ಮೊದಲಿನ ಕಾನೂನಿನ ಕಲಮಿನ ಜೊತೆಗೆ ಮಾಡದ ಹೊರತು ಈ ಬಿಲ್ಲ್‌ನ ಕಲಮು ಸರಿಯಾಗಿ ಅರ್ಥವಾಗಲಾರದು. ಈ ಬಿಲ್ಲಿನ ಕೊನೆಯ ಕಲಮಿನ ಮೇಲಿಂದ ಕಂಡು ಬರುವುದೇನೆಂದರೆ, ಈ ಬಿಲ್ ೧೯೩೪ನೇ ವರ್ಷ ಮುಷ್ಕರ ನಿಷೇಧ ಬಿಲ್ಲಿನ (ಟ್ರೇಡ್ ಡಿಸ್ಪುಟ್ ಇನ್ಸಿಲಿಯೇಶನ್ ಬಿಲ್) ಖಾಲಿಜಾಗವನ್ನು ತುಂಬಲು ತರಲಾಗಿದೆ. ೧೯೩೪ ಮುಷ್ಕರ ನಿಷೇಧ ಕಾನೂನನ್ನು, ಹೊಂದಾಣಿಕೆ ಮಾಡಿಕೊಳ್ಳುವ ಯಾವುದಾದರೂ ಸಂಸ್ಥೆಯನ್ನು ಸ್ಥಾಪಿಸಲೆಂದೇ ಅಂಗೀಕರಿಸಲಾಗಿದೆ. ೧೯೩೪ರ ಕಾನೂನು ಹೊಂದಾಣಿಕೆಯನ್ನು ಐಚ್ಛಿಕವಾಗಿರಿಸಿತ್ತು. ಆದರೆ ಇಂದಿನ ಬಿಲ್ ಮಾತ್ರ ಹೊಂದಾಣಿಕೆಯನ್ನು ಕಡ್ಡಾಯವನ್ನಾಗಿ ಮಾಡಲಿದೆ. ಇಷ್ಟೇ ವ್ಯತ್ಯಾಸವು ಮುಖ್ಯವಾಗಿ ೧೯೩೪ರ ಕಾನೂನಿನಲ್ಲಿ ಈ ಬಿಲ್‌ನಿಂದ ಆಗಲಿದೆ. ೧೯೩೪ನೇ ವರ್ಷದ ಸ್ಥಾಪಿಸಿದ ಐಚ್ಛಿಕ ಹೊಂದಾಣಿಕೆಯನ್ನು ಜಾರಿಗೆ ತರುವ ಅಗತ್ಯವೇಕೆ ಬಂತು?

ಐಚ್ಛಿಕ ಹೊಂದಾಣಿಕೆಯನ್ನು ಜಾರಿಗೊಳಿಸುವ ಅಗತ್ಯ ಇಂದು ನಿಜಕ್ಕೂ ಇದೆಯೇ? ಅಥವಾ ಇಲ್ಲವೇ ಎನ್ನುವುದನ್ನು ನೋಡುವುದಕ್ಕೆ ಮೊದಲು ನಾವು ಒಂದುವೇಳೆ ೧೯೩೪ರ ಪರಿಸ್ಥಿತಿಯನ್ನು ಗಮನಿಸಿದೆವಾದರೆ, ನಮಗೆ ಕೆಲವು ಮಹತ್ವದ ಸಂಗತಿಗಳು ಕಾಣಬರುತ್ತದೆ. ಸರ್ ರಾಬರ್ಟ್‌ಬೆಲ್ ಅವರ ಬಿಲ್‌ನಲ್ಲಿ ಮೊದಲಿಗೇ ಕಡ್ಡಾಯದ ಹೊಂದಾಣಿಕೆಯು ತಪ್ಪದೇ (Compulsory Conciliation)ಇತ್ತು. ಆದರೆ ೧೯೩೪ನೇ ವರ್ಷದ ಪರಿಸ್ಥಿತಿಯ ಕುರಿತು ಯೋಚಿಸಿದಾಗ ಕಡ್ಡಾಯದ ಹೊಂದಾಣಿಕೆಯ ಯಾವ ಅಗತ್ಯವೂ ಇರಲಿಲ್ಲವೆಂದು ಸರ್ ರಾಬರ್ಟಬೆಲ್ ಅವರಿಗೆ ಅನಿಸಿದ್ದರಿಂದ ಬಿಲ್‌ವಾಚನದ ಕಾಲಕ್ಕೆ ಅವರು 'ನಾನು ಕಡ್ಡಾಯದ ಬದಲಿಗೆ ಐಚ್ಛಿಕ ಹೊಂದಾಣಿಕೆಯನ್ನೇ ಯೋಚಿಸಲಿದ್ದೇನೆ'–

---

ಜನತಾ: ೧,೮ ಮತ್ತು ೧೫ ಅಕ್ಟೋಬರ್ ೧೯೩೮.

ಎಂದವರು ಸ್ಪಷ್ಟಪಡಿಸಿದರು. ಇದರರ್ಥವೇನೆಂದರೆ ಸರ್ ರಾಬರ್ಟ್‌ಬೆಲ್ ಅವರಿಗೂ ಸಹ ೧೯೩೪ರಲ್ಲಿ ಹೊಂದಾಣಿಕೆಯನ್ನು ಜಾರಿಗೊಳಿಸುವ ಅಗತ್ಯ ಬರಲಿಲ್ಲ. ಆಗ ಮಿ. ಸಕಲಾತವಾಲಾ ಇವರು ಹಾಜರಿದ್ದರು. ಅವರಿಗೂ ಹೊಂದಾಣಿಕೆಯನ್ನು ಜಾರಿಗೊಳಿಸಬೇಕೆಂದೆನಿಸಲಿಲ್ಲ. ಅಷ್ಟೇ ಅಲ್ಲ ಇಂಥ ಕಾನೂನಿನ ಅಗತ್ಯವೇ ಇಲ್ಲವೆಂದೂ ಹೇಳಿದರು.

ಒಂದು ವೇಳೆ ೧೯೩೪ರಲ್ಲೇ ಕಡ್ಡಾಯದ ಹೊಂದಾಣಿಕೆಯ ಅಗತ್ಯವಿರಲಿಲ್ಲ ಎಂದೆನಿಸುತ್ತಿರಬೇಕಾದರೆ, ಈಗ ಸರಕಾರಕ್ಕೆ ಆ ಕಾನೂನನ್ನು ಬದಲಾಯಿಸಿ ಹೊಂದಾಣಿಕೆಯನ್ನು ಜಾರಿಗೊಳಿಸಬೇಕೆಂದು ಅನಿಸಲು ಕಾರಣವೇನು? ಜಾರಿಗೊಳಿಸುವ ಹೊಂದಾಣಿಕೆಯ ಸಮರ್ಥನೆ ಮಾಡುವಾಗ ಮುಖ್ಯಪ್ರಧಾನಿಯು ಮುಷ್ಕರದ ಕೆಲವು ಅಂಕಿ ಅಂಶವನ್ನು ನೀಡಿ ತೋರಿಸಿದ್ದೇನೆಂದರೆ, ಸದ್ಯ ಭಾರತದಲ್ಲಿ ಆಗಾಗ ಗಂಭೀರ ಸ್ವರೂಪದ ಮುಷ್ಕರ ನಡೆಯುತ್ತಿರುವುದರಿಂದ ಐಚ್ಛಿಕದ ಬದಲಿಗೆ ಕಡ್ಡಾಯದ ಹೊಂದಾಣಿಕೆಯ ವ್ಯವಸ್ಥೆಯನ್ನು ಮಾಡಬೇಕಾದ ಅಗತ್ಯ ಬಂದಿದೆ. ಆದರೆ ನಾನು ಮುಷ್ಕರದ ಅಂಕಿ ಅಂಶ, ಅದರಲ್ಲಿ ಭಾಗವಹಿಸಿದ ಕಾರ್ಮಿಕರ ಸಂಖ್ಯೆ ಮತ್ತು ವ್ಯರ್ಥವಾದ ಕೆಲಸಗಳ ದಿನಗಳ ಸಂಖ್ಯೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದರಿಂದ ನನಗೆ ಮುಖ್ಯಪ್ರಧಾನಿಯ ಸಮರ್ಥನೆ ಸರಿಯೆನಿಸುವುದಿಲ್ಲ. ಲೇಬರ್ ಆಫೀಸಿನವರು ಪ್ರಕಟಿಸಿದ ಲೇಬರ್ ಗೆಜೆಟ್‌ನಲ್ಲಿ ಮುಂಬೈ ಪ್ರಾಂತದಲ್ಲಾದ ಮುಷ್ಕರದ ಅಂಕಿ ಅಂಶವನ್ನು ನೀಡಲಾಗಿದೆ. ಅದರಲ್ಲಿ ಭಾಗವಹಿಸಿದ ಕಾರ್ಮಿಕರ ಸಂಖ್ಯೆ, ಮತ್ತು ಹಾಳಾದ ದಿನಗಳ ಸಂಖ್ಯೆ–ಮುಂತಾದವುಗಳ ಬಗೆಗೆ ವಿವರವಾಗಿ ನೀಡಲಾಗಿದೆ. ಈ ಅಂಕಿಅಂಶವನ್ನು ಗಮನಿಸಿದರೆ, ಮುಷ್ಕರದ ಸಂಖ್ಯೆಯು ಪ್ರತಿವರ್ಷ ಕಡಿಮೆಯಾಗುತ್ತಿರುವುದು ಯಾರಿಗೂ ಗೋಚರಿಸುತ್ತದೆ. ೧೯೨೧ರಲ್ಲಿ ಮುಂಬೈ ಪ್ರಾಂತದಲ್ಲಿ ಒಟ್ಟೂ ೧೦೩ ಮುಷ್ಕರಗಳು ಜರುಗಿದವು. ೧೯೨೨ರಲ್ಲಿ ೧೪೩; ೧೯೨೩ರಲ್ಲಿ ೧೦೯ ಇತ್ತು. ೧೯೨೪ರಿಂದ ೧೯೨೬ವರೆಗಿನ ಕಾಲದಲ್ಲಿ ಮುಷ್ಕರದ ಸಂಖ್ಯೆಯು ೫೦ಕ್ಕೆ ಕೆಳಗಿಳಿಯಿತು. ಅಂದರೆ ಸಂಖ್ಯೆಯ ದೃಷ್ಟಿಯಿಂದ ೫೦ರಷ್ಟು ಕಡಿಮೆಯಾಯಿತು. ೧೯೨೬ರಲ್ಲಿ ೧೧೪ವರೆಗೆ ಏರಿತು. ೧೯೨೯ರಿಂದ ೧೯೩೬ಕಾಲಾವಧಿಯಲ್ಲಿ ಮುಷ್ಕರದ ಸಂಖ್ಯೆಯು ೮೮ರಿಂದ ೫೩ರ ನಡುವೆಯಿತ್ತು. ಉದ್ಯೋಗ, ವ್ಯಾಪಾರದಲ್ಲಿ ತಲೆಯೆತ್ತಿದ ಕ್ಷುಬ್ಧತೆಯನ್ನು ಸಂಪಿನ ಸಂಖ್ಯೆಯ ಮೇಲಿಂದ ಅಳೆಯಲು ಬರುವುದಿಲ್ಲ. ಮುಷ್ಕರದ ಸಂಖ್ಯೆಯು ಕಡಿಮೆಯಾಗಿದ್ದರೂ ಮುಷ್ಕರದಲ್ಲಿ ಭಾಗವಹಿಸಿದ ಕೆಲಸಗಾರರ ಸಂಖ್ಯೆ ಮತ್ತು ವ್ಯರ್ಥವಾದ ದಿನಗಳ ಸಂಖ್ಯೆಯು ತುಲನಾತ್ಮಕ ದೃಷ್ಟಿಯಿಂದ ದೊಡ್ಡದೇ ಆಗಿದೆಎನ್ನುವದು ಈ ಕೋಷ್ಟಕದಲ್ಲಿ ನೀಡಿದ ಅಂಕೆಯ ಮೇಲಿಂದ ಕಂಡು ಬರುತ್ತದೆ. ಮುಷ್ಕರದ ದಿನಗಳು ಮತ್ತು ಕಾರ್ಮಿಕರ ಸಂಖ್ಯೆಯ ಮೇಲಿಂದ ಉದ್ಯೋಗ ಧಂದೆಯಲ್ಲಿ ಅಸ್ವಸ್ಥತೆಯ ಅಳತೆ ಮಾಡಬೇಕು. ಈ ದೃಷ್ಟಿಯಿಂದ ೧೯೨೮ನೇವರ್ಷ ಎಲ್ಲಕ್ಕಿಂತ ಕೆಟ್ಟವರ್ಷವಾಗಿತ್ತು. ಏಕೆಂದರೆ ಆ ವರ್ಷ ಹಾಳಾದ ದಿನಗಳ ಒಟ್ಟೂ ಸಂಖ್ಯೆಯು ೨೪,೦೦೦,೦೦೦ವಾಗಿತ್ತು. ಎರಡನೇ ಕೆಟ್ಟ ವರ್ಷವೆಂದರೆ ೧೯೨೫. ಆ ವರ್ಷ ೧೧,೦೦೦,೦೦೦ ದಿನಗಳು ಹಾಳಾದವು. ಮೂರನೇ ಕೆಟ್ಟವರ್ಷವೆಂದರೆ ೧೯೨೯, ಆ ವರ್ಷ ೮,೦೦೦,೦೦೦ ದಿನಗಳು ಹಾಳಾದವು. ಅನಂತರ ೧೯೩೪ನೇ ವರ್ಷ ಹೊರತುಪಡಿಸಿ, ಉಳಿದ ವರ್ಷಗಳ ಹಾಳಾದ ಕೆಲಸದ ದಿನಗಳ ಸಂಖ್ಯೆ ಮತ್ತು ಮುಷ್ಕರದಲ್ಲಿ ಭಾಗವಹಿಸಿದ ಕಾರ್ಮಿಕರ ಸಂಖ್ಯೆಯು ತೀರ ಕ್ಷುಲ್ಲಕ ಪ್ರಮಾಣದಲ್ಲಿತ್ತು. ಮುಷ್ಕರ ವಿರೋಧಿ ಕಾನೂನು ೧೯೩೪ರಲ್ಲಿ ಅಂಗೀಕಾರಗೊಂಡಿತು. ೧೯೩೪ ನಂತರದ ವರ್ಷದಲ್ಲಿಯು ಹಾಳಾದ ದಿನಗಳ ಸಂಖ್ಯೆ ಮತ್ತು ಮುಷ್ಕರದಲ್ಲಿ ಭಾಗವಹಿಸಿದ ಕಾರ್ಮಿಕರ ಸಂಖ್ಯೆಯನ್ನು ಗಮನಿಸಿದರೆ ಯಾವುದೇ ಮುತ್ಸದ್ಧಿ ರಾಜಕಾರಣಿಗಾಗಲಿ ಸರಕಾರಿ ಅಧಿಕಾರಿಗಾಗಲಿ ಉದ್ಯೋಗ ಧಂದೆಯ ಪರಿಸ್ಥಿತಿಯು ಬಿಕ್ಕಟ್ಟಿನಿಂದ ಕೂಡಿತ್ತು

ಎಂದು ಭಾವಿಸಲು ಅವಕಾಶವೇ ಇಲ್ಲ. ೧೯೩೭ ಮಾತ್ರ ಕೆಟ್ಟವರುಷವಾಗಿತ್ತು ಎಂದೆನಿಸುತ್ತದೆ. ಆ ವರ್ಷ ಹಾಳಾದ ಕೆಲಸದ ದಿನಗಳ ಸಂಖ್ಯೆಯು ಕೇವಲ ೮೯೭ರಷ್ಟಿದೆ. ಹಿಂದಿನ ವರ್ಷದಲ್ಲಿಯ ಹಾಳಾದ ಕೆಲಸದ ದಿನಗಳ ಸಂಖ್ಯೆಯ ಜೊತೆಗೆ ತುಲನೆ ಮಾಡಿದರೆ ಈ ಸಂಖ್ಯೆಯು ತೀರ ಕ್ಷುಲ್ಲಕ ಎಂದೆನ್ನಬಹುದು. ಈ ದಿನಗಳು ವ್ಯರ್ಥ ಹಾಳಾಗಲು ಮುಖ್ಯ ಕಾರಣವೇನೆಂದರೆ ಅಹಮದಾಬಾದ ನಗರದ ಸಾರ್ವತ್ರಿಕ ಮುಷ್ಕರವು ೧೫ ದಿನಗಳು ನಡೆದಿತ್ತು.

ಇದರ ಮೇಲಿಂದ ನಾನು ಸ್ಪಷ್ಟಪಡಿಸುವುದೇನೆಂದರೆ, ಐಚ್ಛಿಕ ಹೊಂದಾಣಿಕೆಯ ಬದಲು ಜಾರಿಯ ಹೊಂದಾಣಿಕೆಯನ್ನು ತಂದು ೧೯೩೪ರ ಕಾಯ್ದೆಯನ್ನು ಆಮೂಲಾಗ್ರ ಬದಲಾಯಿಸುವ ವ್ಯತ್ಯಾಸವನ್ನು ಮಾಡುವ ಅಗತ್ಯ ಸರಕಾರಕ್ಕೆ ಬಂತು ಎಂದು ಈ ಸಭೆಗೆ ಹೇಳುವ ಯಾವ ಸಂಗತಿಯನ್ನು ಮೂಡಿಸಲಿಲ್ಲ.

ಅನಂತರ ಡಾ. ಅಂಬೇಡ್ಕರರು ಕೆಲವು ನಿರ್ದಿಷ್ಟ ಮುಷ್ಕರವನ್ನು ಕಾನೂನುಬಾಹಿರ ಎಂದೆನ್ನುವ ಕಲಮಿನ ಬಗೆಗೆ ತರಾಟೆಗೆ ತೆಗೆದುಕೊಂಡರು. ಮೊದಲಿಗೆ ಅವರು ಬಿಲ್‌ದಲ್ಲಿರುವ ಮುಷ್ಕರ ಕಾನೂನುಬಾಹಿರ ಎಂದು ನಿರ್ಧರಿಸುವ ೬೨ನೇ ಪ್ರಕರಣವನ್ನು ಓದಿದರು.

ಈ ಕಲಮು ನ್ಯಾಯಯುತವಾಗಿದೆ ಎಂದು ತೋರಿಸಲು ಏನುಹೇಳಲಾಗಿದೆ ಎಂದರೆ, 'ಮುಷ್ಕರ ಮಾಡುವ' ಹಕ್ಕು ಯಾರಿಗೂ ಇರುವುದಿಲ್ಲ. ಕಾರ್ಮಿಕರಿಗೆ ಮುಷ್ಕರ ಮಾಡುವ ಹಕ್ಕು ಇಲ್ಲವೆಂದಾಗ ಅವರನ್ನು ಶಿಕ್ಷಿಸುವುದು ನೀತಿಯ ವಿರುದ್ಧವಾಗಲಿ, ಕಾಯ್ದೆಯ ವಿರುದ್ಧವಾಗಲಿ ಅಲ್ಲ"–ನನ್ನ ಭಾಷಣದಲ್ಲಿ ಇದನ್ನು ಖಂಡಿಸಬೇಕಾಗಿದೆ.

ಮೊದಲಿಗೆ ಮುಷ್ಕರ ಈ ಪದದ ಅರ್ಥವನ್ನು ಪರಿಶೀಲಿಸೋಣ. ಸಾಮಾನ್ಯವಾಗಿ ಮುಷ್ಕರವೆಂದರೆ, 'ಉದ್ಯೋಗದ ಗುತ್ತಿಗೆ'ಯನ್ನು ಮುರಿಯುವುದು ಎಂದು ಭಾವಿಸಲಾಗುತ್ತದೆ. ಕಾರ್ಮಿಕರು ಮುಷ್ಕರ ಮಾಡಿದಾಗ ಅವರು ಉದ್ಯೋಗದ ಕಾಂಟ್ರಾಕ್ಟನ್ನು ಮುರಿಯುವುದರ ಹೊರತು ಹೆಚ್ಚೇನೂ ಮಾಡುವುದಿಲ್ಲ. ಈ ಅಪರಾಧಕ್ಕೆ ಹಿಂದೂಸ್ಥಾನದ ಕಾನೂನು ಯಾವಶಿಕ್ಷೆ ಹೇಳಿದೆ ಎನ್ನುವುದನ್ನು ನಾವು ನೋಡೋಣ. ಹಿಂದುಕಾಯ್ದೆಯು ಕಾರ್ಮಿಕರಿಗೆ ಮುಷ್ಕರ ಮಾಡುವ ಹಕ್ಕನ್ನು ಒಪ್ಪುತ್ತದೆಯೇ? ಒಪ್ಪಿದರೆ ಯಾವ ರೀತಿಯಲ್ಲಿ ಒಪ್ಪುತ್ತದೆ, ಅವರಿಗೆ ಕಾನೂನು ನೀಡುವ ಶಿಕ್ಷೆ ಯಾವುದು? ನಾನು ನಿಮ್ಮೆದುರಿಗೆ ಪ್ರಾಥಮಿಕ ಕಲ್ಪನೆಯನ್ನು ಮಂಡಿಸುತ್ತೇನೆ. ಯಾವುದೇ ಒಂದು ಕೃತಿಯು ಸಿವಿಲ್ ಅಥವಾ ಕ್ರಿಮಿನಲ್ ಮಾದರಿಯ ಅಪರಾಧವಾಗಿರುತ್ತದೆ. ಹೀಗಿರುವಾಗ 'ನೌಕರಿಯ ಕಾಂಟ್ರಾಕ್ಟನ್ನು' ಮುರಿಯುವುದು ಕ್ರಿಮಿನಲ್ ಮಾದರಿಯ ಅಪರಾಧವಾಗುತ್ತದೆಯೇ? ಆಗುವುದಿಲ್ಲ. ಅದು ಸಿವಿಲ್ ಮಾದರಿಯ ಅಪರಾಧವಾಗುತ್ತದೆ. ಆಗ ಈ ಮುಷ್ಕರದಿಂದ ಯಾವ ವ್ಯಕ್ತಿಗೆ ಹಾನಿಯಾಗುತ್ತದೆಯೋ ಅವನಿಗೆ ಕಾನೂನಿನ ಪ್ರಕಾರ ಹಾನಿಯನ್ನು ತುಂಬಿಕೊಡಲಾಗುವುದು. ಹೆಚ್ಚಿಗೇನೂ ಸಿಗಲಾರದು.

'ನೌಕರಿಯ ಕಾಂಟ್ರಾಕ್ಟ್' ಮುರಿಯುವುದು ಕ್ರಿಮಿನಲ್ ಮಾದರಿಯ ಅಪರಾಧವೆಂದು ಭಾವಿಸಿದರೆ ಹಿಂದು ಕಾಯ್ದೆಯು ಯಾವ ಶಿಕ್ಷೆ ಹೇಳಿದೆ ಎನ್ನುವುದನ್ನು ನಾವು ಪರಿಶೀಲಿಸಬೇಕು. ನಮ್ಮ ಹಿಂದುಕಾಯ್ದೆಯು ಈ ಅಪರಾಧವನ್ನು ಹೇಗೆ ಅರ್ಥಮಾಡಿಕೊಂಡಿದೆ ಎನ್ನವುದನ್ನು ಅರಿಯಲು ಸ್ವಲ್ಪಚರಿತ್ರೆಯನ್ನು ನೋಡೋಣ. ನೌಕರಿಯ ಕಾಂಟ್ರಾಕ್ಟು ಮುರಿಯುವುದು ಮೊದಲಿಗೆ ೧೮೫೯ರಲ್ಲಿ ಕಾನೂನು ಆಯಿತು. ಅದಕ್ಕೆ Breach of Contract Act ಎಂದು ಹೆಸರು ನೀಡಲಾಯಿತು. ೪೯೦, ೪೯೧ ಮತ್ತು ೪೯೨ ಇದು ಐಪಿಸಿ ಅಲ್ಲಿಯ ಕಲಮು 'ನೌಕರಿಯ ಕಾಂಟ್ರಾಕ್ಟ್' ಮುರಿಯಲು ನಿಷೇಧ ಹಾಕಿದೆ. ೧೮೫೯ರಲ್ಲಿ ಅಂಗೀಕರಿಸಲಾದ ಕಾಯ್ದೆಯು ಕೇವಲ ಕುಶಲ ಕಾರ್ಮಿಕರಿಗೆ ಮಾತ್ರ ಅನ್ವಯಿಸುತ್ತದೆ. ಆಂಗ್ಲ ಸರಕಾರಕ್ಕೆ ಆ ಕಾಲದ

ಪರಿಸ್ಥಿತಿಯಿಂದಾಗಿ ಅಗತ್ಯವೆನಿಸಿತು. ಆಗ ಆಂಗ್ಲ ಸಾಮ್ರಾಜ್ಯಶಾಹಿಯ ಎದುರಿಗೆ ಬಂಡಾಯದ ದೊಡ್ಡ ಪ್ರಶ್ನೆಯಿತ್ತು. ಕುಶಲ ಕಾರ್ಮಿಕರಿಗೆ ಸೈನ್ಯಕ್ಕೆ ಪೂರೈಸುವ ಸಾಮಗ್ರಿಯ ಬಗ್ಗೆ ಮೊದಲೇ ಹಣ ನೀಡಲಾಗಿತ್ತು. ಆದರೆ ಭಯದಿಂದಲೋ ಅಥವಾ ಬೇರೆ ಯಾವುದೇ ಕಾರಣದಿಂದಲೋ ಅವರು ಊರಿಗೆ ಓಡಿ ಹೋದರು. ಅಂಥ ಪರಿಸ್ಥಿತಿಯಲ್ಲಿ ಈ ಕಾನೂನು ಮಾಡಲಾಗಿತ್ತು. ಇಷ್ಟಾದರೂ ಈ ಕಾನೂನು ಕೆಲವೇ ಸಲ ಮಾತ್ರ ಅಮಲಿಗೆ ಬಂದಿದೆ. ಜನರಿಗೆ ರಕ್ಷೆ ನೀಡುವಂತಹ ಕಾನೂನು ಅದಾಗಿರಲಿಲ್ಲ. ಈ ಕಾನೂನಿನ ಅನಂತರ ಇತಿಹಾಸವೂ ಸಹ ಮನೋರಂಜಕವಾಗಿದೆ. ಈ ಕಾನೂನು ಎಂದೂ ಬಳಕೆಗೆ ಬರಲಿಲ್ಲ. ೧೯೨೦ರಲ್ಲಿ ಅದರಲ್ಲಿ ಸುಧಾರಣೆಯನ್ನು ಮಾಡಲಾಯಿತು. ಈ ಕಾನೂನಿನಲ್ಲಿ ಎರಡು ತತ್ವಗಳನ್ನು ಸೇರಿಸಲಾಯಿತು. ಒಂದು, ನೌಕರಿಯ ಕರಾರನ್ನು ಮುರಿಯುವ ಬಗ್ಗೆ ಕಾರ್ಮಿಕನಿಗೆ ಶಿಕ್ಷೆ ನೀಡುವ ಮುನ್ನ ನ್ಯಾಯಾಧೀಶನು ಆ ಕರಾರು ಯೋಗ್ಯವಾಗಿತ್ತೇ, ಅಯೋಗ್ಯವಾಗಿತ್ತೆ ಎಂಬುದನ್ನು ಗಮನಿಸಬೇಕು. ಕರಾರು ಅಯೋಗ್ಯವಾಗಿದೆ ಎಂದು ನ್ಯಾಯಾಧೀಶನಿಗೆ ಅನಿಸಿದರೆ, ಕುಶಲ ಕಾರ್ಮಿಕನು ಮುಂಗಡ ಹಣವನ್ನು ಮಾಲೀಕನಿಂದ ಪಡೆದಿದ್ದರೂ ಅವನನ್ನು ಶಿಕ್ಷೆಗೆ ಗುರಿಪಡಿಸಬಾರದು. ಎರಡನೆಯದು, ಸುಳ್ಳು ತಕರಾರು ಸಲ್ಲಿಸುವ ಮಾಲೀಕನಿಗೆ ಶಿಕ್ಷೆ ನೀಡುವ ಅಧಿಕಾರ ನ್ಯಾಯಾಧೀಶನಿಗೆ ಸಿಕ್ಕಿತು.

ಐಪಿಸಿಯಲ್ಲಿಯ ೪೦೦ನೇ ಕಲಮು 'ಪ್ರವಾಸದಲ್ಲಿದ್ದಾಗ ನೌಕರಿಯ ಕರಾರು ಮುರಿಯುವುದು' ಎಂಬ ಅಪರಾಧಕ್ಕೆ ಸಂಬಂಧಿಸಿದ್ದು, ಎಲ್ಲ ರೀತಿಯ ನೌಕರಿಯ ಕರಾರಿಗೆ ಈ ಕಾನೂನು ಅನ್ವಯಿಸುವುದಿಲ್ಲ. ಈ ಕಾನೂನಿನಂತೆ, ಮಾಲೀಕನ ಸಂಗಡ ಪ್ರವಾಸ ಮಾಡುತ್ತಿರಬೇಕಾದರೆ ನೌಕರನು ಕರಾರನ್ನು ಮುರಿದರೆ ಆ ನೌಕರನಿಗೆ ಶಿಕ್ಷೆ ನೀಡಬಹುದು. ಐಪಿಸಿ ೪೯೧ರ ಕಲಮಿನಂತೆ, ಅಸಹಾಯಕ ವ್ಯಕ್ತಿಗೆ ಸಹಾಯ ಮಾಡಲು ನೇಮಿಸಿದ ನೌಕರನು ನೌಕರಿಯ ಕರಾರು ಮುರಿದರೆ ಅವನನ್ನು ಶಿಕ್ಷಿಸಬಹುದು. ಮಾಲೀಕನು ತನ್ನ ನೌಕರನನ್ನು ತನ್ನ ಸ್ವಂತ ಖರ್ಚಿನಿಂದ ದೂರದ ದೇಶಕ್ಕೆ ಕಳಿಸಿದಾಗ ಆ ನೌಕರನು ಅಲ್ಲಿ ಕರಾರನ್ನು ಭಂಗ ಮಾಡಿದರೆ, ಆ ನೌಕರನಿಗೆ ಆ ಅಪರಾಧದ ಬಗೆಗೆ ಐಪಿಸಿ ೪೯೨ ಕಲಮಿನ ಪ್ರಕಾರ ಶಿಕ್ಷೆ ನೀಡಬಹುದು. ಆದರೆ ಮಧ್ಯಂತರ ಕಾಯ್ದೆಮಂಡಳಿಯು ೧೯೨೫ರಲ್ಲಿ ೪೯೦ ಮತ್ತು ೪೯೨ ಈ ಕಲಮನ್ನು ರದ್ದುಪಡಿಸಿದರು. ಈ ಕಲಮನ್ನು ಸದ್ಯಬಳಸುತ್ತಿಲ್ಲ. ಯಾವ ಕೃತಿಯೂ ಕಲಮಿನ ಪ್ರಕಾರ ಅಪರಾಧವೆಂದು ಗಣಿಸುತ್ತಿಲ್ಲ. ಈ ರೀತಿಯಲ್ಲಿ 'ನೌಕರಿಯ ಕರಾರನ್ನು ಭಂಗ ಮಾಡುವುದನ್ನು' ಕ್ರಿಮಿನಲ್ ಸ್ವರೂಪದ ಅಪರಾಧವನ್ನು ಪರಿಗಣಿಸಿ ಶಿಕ್ಷೆ ನೀಡುವ ಏಕಮಾತ್ರ ಕಲಮು ಹಿಂದುಕಾಯ್ದೆಯಲ್ಲಿದೆ. ಅದೇ ಐಪಿಸಿ ೪೯೧ನೇ ಕಲಮು. ಈ ಕಲಮನ್ನು ಕೇವಲ ಅಸಹಾಯಕ ವ್ಯಕ್ತಿಯ ಬಾಬತ್ತಿನಲ್ಲಿ ಯಾವುದೇ ಅನಾನುಕೂಲವಾಗಬಾರದೆಂದು ಕಾಯ್ದಿರಿಸಲಾಗಿದೆ. ಬೇರೆ ಯಾವ ಉದ್ದೇಶವಿಲ್ಲ.

ಮೇಲಿನ ವಿವರಣೆಯಿಂದ ಏನು ಸ್ಪಷ್ಟವಾಗುತ್ತದೆ ಎಂದರೆ, 'ನೌಕರಿಯ ಕರಾರು ಭಂಗ ಮಾಡುವುದು' ಕ್ರಿಮಿನಲ್ ಸ್ವರೂಪದ ಅಪರಾಧವೇನಲ್ಲ. ಇದರ ಬಗ್ಗೆ ಹಿಂದುಕಾಯ್ದೆಯ ೪೯೧ ಕಲಮಿನ ಹೊರತು ಇತರ ಯಾವುದೇ ಕಲಮಿನ ಪ್ರಕಾರ ಶಿಕ್ಷೆ ಮಾಡಲು ಬರುವುದಿಲ್ಲ. ಅದು ಕೇವಲ ಹಾನಿಯನ್ನು ತುಂಬಿ ಕೊಡಲಾಗುವುದು. ಹೆಚ್ಚಿಗೇನೂ ಸಿಗಲಾರದು. ಹಿಂದುಕಾಯ್ದೆಯು ನೌಕರಿಯ ಕರಾರು ಭಂಗ ಮಾಡುವುದರ ಚಿನ್ಹೆ ಎಂದು ಪರಿಗಣಿಸದೆ ಅವನ್ನು ಸಿವಿಲ್ ಮಾದರಿಯ ಅಪರಾಧವೆಂದು ಭಾವಿಸಿದೆ. ಕಾರಣವೇನೆಂದರೆ, ನೌಕರಿಯ ಕರಾರು ಭಂಗ ಮಾಡುವವನನ್ನು ಕ್ರಿಮಿನಲ್ ಅಪರಾಧಿಯೆಂದು ಪರಿಗಣಿಸುವುದು ಎಂದರೆ ವ್ಯಕ್ತಿಗೆ ಅವನ ಮನಸಿನ ವಿರುದ್ಧ ನೌಕರಿ ಮಾಡಲು ಒತ್ತಾಯ ಮಾಡಿದಂತೆ, ಅಂದರೆ ಅವನನ್ನು ಗುಲಾಮನನ್ನಾಗಿ ಮಾಡಿಕೊಂಡಂತೆ ಎಂದು ಹಿಂದುಕಾಯ್ದೆ ಮಂಡಳಿಗೆ ಅನಿಸುವುದೇ ಆಗಿದೆ. ಗುಲಾಮಗಿರಿ

ಎಂದರೇನು? ಯುನೈಟೆಡ್ ಸ್ಟೇಟ್ಸ ಸಂವಿಧಾನದಲ್ಲಿ, 'ಗುಲಾಮಗಿರಿ ಎಂದರೆ ಮನಸ್ಸಿನ ವಿರುದ್ಧ ಕಡ್ಡಾಯವಾಗಿ ಮಾಡಲೇ ಬೇಕಾದ ನೌಕರಿ'–ಎಂದು ವ್ಯಾಖ್ಯೆ ಮಾಡಲಾಗಿದೆ. ಮುಷ್ಕರಕ್ಕಾಗಿ ಕಾರ್ಮಿಕರಿಗೆ ಶಿಕ್ಷೆ ನೀಡುವುದೆಂದರೆ ಅವರನ್ನು ಗುಲಾಮರನ್ನಾಗಿ ಮಾಡಿಕೊಂಡಂತೆ ಎಂದು ನನ್ನ ಭಾವನೆ. ಮುಷ್ಕರ ಕಾನೂನುಬಾಹಿರ ಎಂದು ನಿರ್ಧರಿಸುವುದು ಅವರನ್ನು ಅವರ ಮನದ ವಿರುದ್ಧ ಕೆಲಸ ಮಾಡಲು ಹಚ್ಚಿದಂತೆ. ಒಬ್ಬ ವ್ಯಕ್ತಿಯನ್ನು ಗುಲಾಮನನ್ನಾಗಿ ಮಾಡುವುದು ನೀತಿತತ್ವದ ವಿರುದ್ಧವಾಗಿದೆ. ಇದು ಕಾನೂನಿನ ವಿರುದ್ಧವಾಗಿದೆ. ೪೯೦, ೪೯೧, ೪೯೨ ಕಲಮು ಸಿದ್ಧಪಡಿಸುವಾಗ ಕಾರ್ಮಿಕರ ಸ್ವಾತಂತ್ರ್ಯದ ಮೇಲೆ ಬಂಧನ ಹಾಕುವ, ಅದು ಕ್ಷುಲ್ಲಕ ಸ್ವರೂಪದ್ದಾಗಿದ್ದರೂ, ಅದನ್ನು ಹಾಕುವ ಕೆಲಸವನ್ನು ಮಾಡುವುದು ಯೋಗ್ಯವೇ, ಅಲ್ಲವೇ ಎಂಬುದು ಶಂಕೆ ಎನಿಸುತ್ತಿತ್ತು.

ಕಾರ್ಮಿಕರಿಗೆ ಮುಷ್ಕರ ಮಾಡುವ ಹಕ್ಕು ಇಲ್ಲವೇ ಇಲ್ಲ ಎಂದು ಹೇಳಲಾಗುತ್ತದೆ. ಅದಕ್ಕೆ ನನ್ನ ಉತ್ತರವೇನೆಂದರೆ, ಯಾರು ಹೀಗೆ ಹೇಳುತ್ತಾರೋ ಅವರಿಗೆ ಮುಷ್ಕರವೆಂದರೇನು ಎನ್ನುವುದೇ ಗೊತ್ತಿಲ್ಲ. ಮುಷ್ಕರವೆಂದರೆ ನೌಕರಿಯ ಕರಾರುಭಂಗ ಮಾಡುವುದು ಎಂದು ಅರ್ಥೈಸಿದರೆ, ಮುಷ್ಕರವಿಂದು ಸ್ವಾತಂತ್ರ್ಯದ ಹಳ್ಳಿಗೆ ನೀಡಿದ ಮತ್ತೊಂದು ಹೆಸರು ಎಂದೊಪ್ಪಿಕೊಳ್ಳಬೇಕಾಗುತ್ತದೆ. ನೀವು ಒಂದು ವೇಳೆ ಮನುಷ್ಯನಿಗೆ ಸ್ವಾತಂತ್ರ್ಯದ ಹಕ್ಕಿದೆ ಎಂದೊಪ್ಪಿಕೊಂಡರೆ, ಪ್ರತಿಯೊಬ್ಬ ಕಾರ್ಮಿಕನಿಗೂ ಮುಷ್ಕರ ಮಾಡುವ ಅಧಿಕಾರವಿದೆ ಎಂದೊಪ್ಪಬೇಕಾಗುತ್ತದೆ. ಸ್ವಾತಂತ್ರ್ಯದ ಅಧಿಕಾರವು ದೈವಿಕ ಅಧಿಕಾರವಾಗಿದೆ ಎಂದು ನಾವು ಒಪ್ಪಿಕೊಂಡರೆ, ಮುಷ್ಕರ ಮಾಡುವ ಪ್ರತಿಯೊಬ್ಬ ಕಾರ್ಮಿಕನ ಅಧಿಕಾರ ದೈವಿಕವಾದುದು ಎಂದು ನೀವು ಒಪ್ಪಬೇಕಾಗುತ್ತದೆ.

ಟ್ರೇಡ್ ಡಿಸ್ಪೂಟ್ ಬಿಲ್‌ನ್ನು ಅಂಗೀಕಾರ ಮಾಡುವುದರ ಹಿಂದೆ ಕಾಂಗ್ರೆಸ್ ಸರಕಾರಕ್ಕೆ ಮುಷ್ಕರವನ್ನು ಕಾನೂನು ಬಾಹಿರ ಎಂದು ನಿರ್ಧರಿಸಿ, ಅದೊಂದು ಅಪರಾಧವೆಂದು ಪರಿಗಣಿಸಬೇಕಾಗಿದೆ. ಅದಕ್ಕಿಂತ ಮೊದಲು ಯಾವುದೇ ಕಾನೂನಿನಂತೆ ಮುಷ್ಕರ ಕಾನೂನು ಬಾಹಿರ ಕಾರ್ಯವಾಗಲಾರದು ಎಂದು ವಿವರಿಸುವಾಗ ಡಾ. ಅಂಬೇಡ್ಕರ ಹೇಳಿದರು.–ಕಾರ್ಮಿಕರ ಮುಷ್ಕರವು ಯಾವುದೇ ಕಾನೂನಿನ ಪ್ರಕಾರ ಬಾಹಿರವಾಗಲಾರದು. ಇಂಥ ಸಮಯದಲ್ಲಿ ನನಗೆ ಐಪಿಸಿ ೧೨೦ಅ ಕಲಮಿನ ನೆನಪು ಮಾಡಿಕೊಡಲಾಗುವುದು. ೧೨೦ ಅ–ಇದು ಕಾರಸ್ತಾನ ಮಾಡುವವರಿಗೆ ಶಿಕ್ಷೆ ನೀಡುವ ಕಲಮಾಗಿದೆ. ಮುಷ್ಕರವೆಂದರೆ ಕಾರ್ಮಿಕ ಸಂಘದವರು ಮಾಡಿದ ಕಾರಸ್ತಾನವೆಂದು ಭಾವಿಸಿ, ಈ ಕಲಮಿನ ಪ್ರಕಾರ ಕಾರ್ಮಿಕರಿಗೆ ಮುಷ್ಕರ ಮಾಡುವ ಅಧಿಕಾರವಿಲ್ಲ ಎಂದು ಹೇಳುವ ಪ್ರಯತ್ನ ಕೆಲವು ವಿರೋಧಿ ಪಕ್ಷದ ಜನರು ಮಾಡಿಸುವ ಸಂಭವವಿದೆ. ಅದಕ್ಕಾಗಿ ಅವರು 'ಮುಷ್ಕರ ಮಾಡುವುದು' ಎಂದರೆ 'ಕಾರಸ್ತಾನ ಮಾಡುವುದು' ಎಂದು ಸಿದ್ಧಮಾಡಬೇಕಾಗುತ್ತದೆ. ಆದರೆ 'ಮುಷ್ಕರ'ವು 'ಕಾರಸ್ತಾನ'ವಾಗಲಾರದು.

೧೨೦–ಅ ಕಲಮಿನ ಅಡಿಯಲ್ಲಿ 'ಮುಷ್ಕರ'ವನ್ನು ಅಪರಾಧವೆಂದು ನಿರ್ಧರಿಸುವ ಪ್ರಯತ್ನ ಹಿಂದೂಸ್ಥಾನದಲ್ಲಿ ನಡೆಯಲೇ ಇಲ್ಲ. ನನ್ನ ಈ ಮಾತಿಗೆ ಇಂಗ್ಲಿಷ್ ಕಾನೂನಿನ ಆಧಾರವಿದೆ. "ಅನಂತರ ಡಾ. ಅಂಬೇಡ್ಕರ ಅವರು 'ದಿ ಲೀಗಲ್ ಪೊಜಿಶನ್ ಆಫ್ ಟ್ರೇಡ್ ಯೂನಿಯನ್' ಈ ಪುಸ್ತಕದಲ್ಲಿಯ ಮುಷ್ಕರವನ್ನು ಕಾರಸ್ತಾನವೆಂದು ಪರಿಗಣಿಸುವ ಒಂದು ಇಂಗ್ಲಿಷ್ ಕೇಸ್‌ದಲ್ಲಿಯ ನಿರ್ಣಯದ ಒಂದು ಪರಿಚ್ಛೇದವನ್ನು ಓದಿತೋರಿಸಿದರು. ಈ ಜಡ್ಜ್‌ಮೆಂಟಿನಲ್ಲಿ, ಯಾವುದೇ ಸಾಮಾನ್ಯ ಕಾನೂನಿನಿಂದ ಮುಷ್ಕರ ಕಾನೂನು ಬಾಹಿರವಾಗಲಾರದು ಮತ್ತು ಮುಷ್ಕರ ಮಾಡುವುದು ಎಂದರೆ ಕಾರಸ್ತಾನ ಮಾಡುವುದೂ ಅಲ್ಲ, ಎಂದೇ ನಿರ್ಣಯ ನೀಡಲಾಗಿತ್ತು.

"೧೨೦–ಅ ಈ ಕಲಮಿನ ಅನ್ವಯ ಯಾರಿಗೋ ಹಾನಿ ಮಾಡಲೆಂದೇ ಮುಷ್ಕರ ಮಾಡಲಾಯಿತು–

ಎನ್ನುವುದು ಸಿದ್ಧವಾಗದ ವಿನಾ 'ಮುಷ್ಕರ ಮಾಡುವುದು' ಅಪರಾಧವಾಗಲಾರದು. ಮುಷ್ಕರದಿಂದ ಹಾನಿಯಾಗುವ ಸಂಭವವಿದೆ. ಆದರೆ ಹಾನಿ ಮಾಡುವುದೇ ಸಂಪಿನ ಉದ್ದೇಶ ಎಂದೂ ಆಗಿರುವುದಿಲ್ಲ. ಕಾರ್ಮಿಕರ ಬೇಡಿಕೆಯನ್ನು ಈಡೇರಿಸುವ ಸದುದ್ದೇಶದಿಂದಲೇ ಮುಷ್ಕರ ಮಾಡಲಾಗುತ್ತದೆ"–ಈ ರೀತಿ ಅಸ್ತಿತ್ವದಲ್ಲಿದ್ದ ಯಾವುದೇ ಕಾನೂನಿನಂತೆ ಮುಷ್ಕರವು ಕಾನೂನು ಬಾಹಿರವಾಗಲಾರದು ಎಂದು ಸಿದ್ಧಪಡಿಸಿದ ಬಳಿಕ ಡಾ. ಅಂಬೇಡ್ಕರ ಹೀಗೆ ಅಂದರು.

'ಈ ಮಸೂದೆಯು ಮುಷ್ಕರ ಮಾಡುವುದನ್ನು ಅಪರಾಧವೆಂದು ನಿರ್ಧರಿಸಿ ಕಾಂಗ್ರೆಸ್ ಸರಕಾರವು ಕಾರ್ಮಿಕರ ಮೇಲೆ ಗುಲಾಮಗಿರಿಯನ್ನೇ ಹೇರಿದೆ. ನನ್ನ ದೃಷ್ಟಿಯಿಂದ ಈ ಬಿಲ್‌ಗೆ 'ಕಾರ್ಮಿಕರ ನಾಗರಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಕಾನೂನು' ಎಂಬ ಹೆಸರು ಶೋಭಿಸುತ್ತದೆ.'

ಹೊಂದಾಣಿಕೆಯ ಎಲ್ಲ ಪ್ರಯತ್ನ ಮುಗಿಯುವವರೆಗೆ ಎರಡೇ ತಿಂಗಳು ಕಾರ್ಮಿಕರು ಮುಷ್ಕರ ಮಾಡಲು ಈ ಬಿಲ್ ಬಂದಿಹಾಕಿದೆ. ಆ ಬಳಿಕ ಅವರು ಮುಷ್ಕರ ಮಾಡುವ ಸಂಪೂರ್ಣ ಅವಕಾಶ ನೀಡಲಾಗಿದೆ–ಎಂದೇ ಹಲವರು ಈ ಬಿಲ್ ಬಗೆಗೆ ತಪ್ಪುಗ್ರಹಿಕೆ ಮಾಡಿಕೊಳ್ಳುವ ಸಾಧ್ಯತೆಯಿದೆ. ಆದರೆ ಈ ಬಿಲ್‌ನಲ್ಲಿ ಎಂಥ ಕಲಮುಗಳಿವೆ ಎಂದರೆ, ಅದು ಜಾರಿಗೆ ಬಂದರೆ ಕಾರ್ಮಿಕರ ಮೇಲೆ ಶಾಶ್ವತವಾಗಿ ಗುಲಾಮಗಿರಿಯನ್ನು ಹೇರಲಾಗುವುದು. ಮುಷ್ಕರ ಮಾಡುವುದು ಕಾರ್ಮಿಕರಿಗೆ ಎಂದೂ ಸಾಧ್ಯವಾಗಲಾರದು. ಏಕೆಂದರೆ ಕಾಲಾಪವ್ಯಯ ಮಾಡಿ ಮುಷ್ಕರವನ್ನು ಮುಂದೂಡುವ ಸಂಪೂರ್ಣ ಅವಕಾಶ ಈ ಬಿಲ್ ಮಾಡಿಕೊಟ್ಟಿದೆ.

ಮೊದಲನೆಯದಾಗಿ ಈ ಬಿಲ್ ಜಾರಿಗೆ ಬಂದ ಕೂಡಲೇ ಒಂದು ವರ್ಷದವರೆಗೆ ಯಾವುದೇ ಬಗೆಯ ಮುಷ್ಕರಕ್ಕೆ ನಿಷೇಧ ಹಾಕಲಾಗಿದೆ. ಈ ಕಲಮಿಗೆ ಕಾರ್ಮಿಕರಿಂದ ಅನುಮತಿ ಸಿಗಲಿ ಬಿಡಲಿ, ಒಂದು ವರ್ಷದವರೆಗಿನ ಗುಲಾಮಗಿರಿಯನ್ನು ಹೇರುವುದಂತೂ ಖಚಿತ. ಕಾರ್ಮಿಕರಿಗೆ ಇದರಿಂದ ಬಿಡುಗಡೆಯಾಗುವ ಯಾವುದೇ ಆಶೆಯಿಲ್ಲ. ಈ ಒಂದು ವರ್ಷದ ಗುಲಾಮಗಿರಿ ಮುಗಿದ ಬಳಿಕ ಏನು?

ಹಾಗೊಂದು ವೇಳೆ ಕಾರ್ಮಿಕರು ಮುಷ್ಕರ ಮಾಡುವುದಾದರೆ ಮೊದಲೇ ನೋಟಿಸ್ ನೀಡಬೇಕು. ಅಂದರೆ ನೋಟಿಸ್ ನೀಡಲು ಕೆಲಕಾಲ ಹೋಗುತ್ತದೆ. ಅನಂತರ ಮುಷ್ಕರದ ನೋಟಿಸಿಗೆ ಉತ್ತರ ಸಿಗುವವರೆಗೆ ಕೆಲ ಕಾಲ ಕಳೆಯುತ್ತದೆ. ನೋಟಿಸ್ ನೀಡುವ ಮತ್ತು ಉತ್ತರ ಬರುವ ಈ ಕಾಲದಲ್ಲಿ ಕಾರ್ಮಿಕರು ಮುಷ್ಕರ ಮಾಡಲು ಸಂಪೂರ್ಣ ನಿಷೇಧ ಹಾಕಲಾಗಿದೆ. ಅನಂತರ ಹೊಂದಾಣಿಕೆಯ ಪ್ರಯತ್ನ ನಡೆಯುವುದು. ಈ ಮಾತುಕತೆ ಎರಡು ತಿಂಗಳು ಜರುಗುತ್ತದೆ. ಈ ಮಾತುಕತೆ ಎರಡೇ ತಿಂಗಳಲ್ಲಿ ಮುಗಿಯಲೇ ಬೇಕೆಂದೇನಿಲ್ಲ. ಕಾರ್ಮಿಕರ ಪಕ್ಷ ಮತ್ತು ಮಾಲೀಕ ಇವರಿಬ್ಬರ ಹೇಳಿಕೆಗಳು ಉಭಯ ಪಕ್ಷಗಳಿಗೆ ಒಪ್ಪಿಗೆಯಾದರೆ ಕಾರ್ಮಿಕರ ಸುದೈವ. ಇಲ್ಲದಿದ್ದರೆ ಹೊಂದಾಣಿಕೆಯ ಮಾತುಕತೆಯು ನಾಲ್ಕು ತಿಂಗಳವರೆಗೆ ಬೆಳೆಸುವ ವ್ಯವಸ್ಥೆಯನ್ನು ಈ ಬಿಲ್ ಮಾಡಿ ಇರಿಸಿದೆ. ಅಂದರೆ ಕಾರ್ಮಿಕ ಮತ್ತು ಮಾಲೀಕ ಇವರ ನಡುವೆ ಜಗಳ ಏರ್ಪಟ್ಟಂದಿನಿಂದ ಮತ್ತೆ ಮೇಲೆ ೨೫ ದಿನಗಳು–ಇಷ್ಟು ಕಾಲಾವಧಿಯಲ್ಲಿ ಕಾರ್ಮಿಕರು ಯಾವುದೇ ಬಗೆಯ ಚಲನ ವಲನವನ್ನು ಮಾಡುವಂತಿಲ್ಲ.

ಆ ಕಾಲದಲ್ಲಿ ಕಾರ್ಮಿಕರು ಪ್ರಚಾರ ಮಾಡುವಂತಿಲ್ಲ. ಸಂಘಟನೆ ಮಾಡುವಂತಿಲ್ಲ. ಸಭೆ ಏರ್ಪಡಿಸುವಂತಿಲ್ಲ. ಮೆರವಣಿಗೆ, ಭಾಷಣ ಯಾವುದೂ ಇಲ್ಲ. ಈ ಕಾಲದಲ್ಲಿ ಯಾವುದೇ ಬಗೆಯ ಸಿದ್ಧತೆ ಮಾಡಿಕೊಳ್ಳಲು ಬಿಲ್ ಕಾಯ್ದೆಯ ನಿಷೇಧ ಹಾಕಿದೆ. ಕಾನೂನು ಶಿಕ್ಷೆಯ ವ್ಯವಸ್ಥೆಯನ್ನೂ

ಮಾಡಿದೆ. ಒಂದು ವೇಳೆ ನಾಲ್ಕು ತಿಂಗಳು, ೨೫ ದಿನಗಳ ದೀರ್ಘಕಾಲದಲ್ಲಿ (Period of Gestation) ಯಾವುದೇ ರೀತಿಯಲ್ಲಿ ಹೊಂದಾಣಿಕೆ ಯಶಸ್ವಿಯಾಗದಿದ್ದಲ್ಲಿ ಕಾರ್ಮಿಕರು ಏನು ಮಾಡಬೇಕು? ಹೊಂದಾಣಿಕೆಯ ಈ ಕಾಲ ಮುಗಿದ ಬಳಿಕ ಕಾರ್ಮಿಕರು ಮುಷ್ಕರಕ್ಕೆ ಕರೆ ನೀಡಲು ಕೇವಲ ಎರಡೇ ತಿಂಗಳ ಮುದ್ಧತ್ತು ನೀಡಿದೆ. ಹೊಂದಾಣಿಕೆಯ ದೀರ್ಘವಾದ ಕಾಲ ವ್ಯರ್ಥವಾಗಿ ಹೋದ ಬಳಿಕ ಅಸಂಘಟಿತ ಮತ್ತು ಅಸ್ತವ್ಯಸ್ತಗೊಂಡ ಕಾರ್ಮಿಕರಿಗೆ ಪ್ರತ್ಯಕ್ಷ ಪ್ರತೀಕಾರದ ಸಿದ್ಧತೆಯನ್ನು ಮರಳಿ ಮಾಡಲು ಎರಡೇ ತಿಂಗಳ ಈ ಅಲ್ಪಕಾಲ ಸಾಕು ಎಂದು ಸರಕಾರ ಭಾವಿಸಿದಂತಿದೆಯೇನೋ. ಇದೇ ನನಗೆ ಅರ್ಥವಾಗುತ್ತಿಲ್ಲ.

ಹಾಗೆ ನಾನು ಕಾರ್ಮಿಕ ಚಳುವಳಿಯಲ್ಲಿ ಪ್ರತ್ಯಕ್ಷ ಭಾಗವಹಿಸದೇ ಇದ್ದುದರಿಂದ ಮುಷ್ಕರಕ್ಕಾಗಿ ಕಾರ್ಮಿಕರ ಸಂಘಟನೆ ಮಾಡಲು ಕಾರ್ಮಿಕ ನಾಯಕನಿಗೆ ಏನೇನು ಸಮಸ್ಯೆಗಳು ಎದುರಾಗುತ್ತವೆ ಎನ್ನುವುದು ನನಗೆ ಅಷ್ಟೊಂದು ಮಾಹಿತಿಯಿಲ್ಲ. ಆದರೂ ಮುಂಬೈನಗರದ ಕಾರ್ಮಿಕರನ್ನು ನಾಲ್ಕು ತಿಂಗಳಿಗಿಂತ ಹೆಚ್ಚುಕಾಲ ಹತ್ತಿಕ್ಕಿಟ್ಟ ಬಳಿಕ, ಮುಷ್ಕರದ ಸಿದ್ಧತೆಗೆ ಎರಡು ತಿಂಗಳ ಕಾಲಾವಧಿ ತೀರ ಕಡಿಮೆಯೆನಿಸುತ್ತದೆ. ಹೀಗಾಗಿ ಎರಡು ತಿಂಗಳೊಳಗೆ ಕಾರ್ಮಿಕರು ಮುಷ್ಕರಕ್ಕೆ ಕರೆನೀಡದಿದ್ದರೆ, ಅವರ ಸ್ಥಿತಿಯು ತೀರ ಶೋಚನೀಯವಾಗಲಿದೆ. ಏಕೆಂದರೆ ಮುಷ್ಕರ ಮಾಡದಿದ್ದರೆ ಅವರಿಗೆ ಒಪ್ಪಿಗೆಯಿರದ ಒಪ್ಪಂದದ ಕರಾರನ್ನು ಅಪ್ರತ್ಯಕ್ಷವಾಗಿ ಒಪ್ಪಿಕೊಂಡಂತಾಗುತ್ತದೆ. ಆ ಬಳಿಕ ಕಾರ್ಮಿಕರು ತಮ್ಮ ಚಳುವಳಿಯನ್ನು ಆರಂಭಿಸಿದರೂ ಮತ್ತು ತಮ್ಮ ಬೇಡಿಕೆಯನ್ನು ಮರಳಿ ಮಂಡಿಸಿದರೆ ಮತ್ತೆ ೪ ತಿಂಗಳು, ೨೫ದಿನ ಚರ್ಚೆಯ ಕಡೆಗೆ ಕಣ್ಣಿಟ್ಟು ಸುಮ್ಮನೆ ಕೂತಿರಬೇಕಾಗುತ್ತದೆ. ಹಾದಿಕಾಯಿರಿ ಮತ್ತು ೪ ತಿಂಗಳು, ೨೫ ದಿನ ಸುಮ್ಮನೆ ಕೂತು ಚರ್ಚೆಯ ಹಾದಿಯನ್ನು ಕಾಯುತ್ತ ಕೂತಿರಿ. ಅನಂತರ ಸಹ ಏನೂ ಆಗದಿದ್ದರೆ ಅಗತ್ಯವೆನಿಸಿದರೆ, ಸಾಧ್ಯವಾದರೆ ಎರಡು ತಿಂಗಳ ಒಳಗೆ ಮುಷ್ಕರ ಮಾಡಿ, ಇಲ್ಲದಿದ್ದರೆ ಹೊಸ ಬೇಡಿಕೆ ಏನಾದರೂ ತಲೆದೋರಿದರೆ ಮತ್ತೆ ೪ ತಿಂಗಳು, ೨೫ದಿನ ಚರ್ಚೆಯ ಚಕ್ರ ಶುರು. ಹೀಗೆ ಈ ಚರ್ಚೆಯ ಕಾಲಚಕ್ರವು ಕಾರ್ಮಿಕರನ್ನು ಶಾಶ್ವತ ಗುಲಾಮಗಿರಿಯಲ್ಲಿ ನೂಕುವುದಿಲ್ಲವೆಂದು ಯಾರಾದರೂ ಹೇಳುವುದು ಸಾಧ್ಯವೇ? ಈ ಬಿಲ್ ಕಾರ್ಮಿಕರ ಮೇಲೆ ಗುಲಾಮಗಿರಿಯನ್ನು ಹೇರಲು ಅಪೂರ್ಣವೆನಿಸಿದರೆ, ಬೇರೆ ಯಾವ ಬಗೆಯ ಕಪ್ಪು ಕಾನೂನು ಕಾರ್ಮಿಕರ ಮೇಲೆ ಗುಲಾಮಗಿರಿಯನ್ನು ಹೇರಬಹುದು ಎನ್ನುವುದು ತಿಳಿಯುವುದು ತುಂಬ ಮನೋರಂಜಕವಾದುದು.

ಈ ಮಸೂದೆಯಲ್ಲಿಯ ಮುಷ್ಕರ ವಿಷಯದ ಕಲಮಿನ ಮೇಲೆ ಇಷ್ಟು ವಿವೇಚನೆ ಸಾಕು ಎಂದು ನನಗನಿಸುತ್ತದೆ.

ಈಗ ಈ ಬಿಲ್‌ನಲ್ಲಿಯ ಮತ್ತು ೧೯೨೯ ಟ್ರೇಡ್ ಡಿಸ್ಪ್ಯೂಟ್ ಎಕ್ಟ್‌ನಲ್ಲಿರುವ ಮುಷ್ಕರ ವಿಷಯದ ಕಲಮನ್ನು ಹೋಲಿಸುವುದು ಅಗತ್ಯ ಮತ್ತು ಉಪಯುಕ್ತವಾಗಲಿದೆ ಎಂದೆನಿಸುತ್ತದೆ. ೧೯೨೯ರ ಕಾನೂನು ಸಹ ಕಾರ್ಮಿಕರು ಮುಷ್ಕರ ಮಾಡುವ ಹಕ್ಕಿನ ಮೇಲೆ ಕೆಲವು ನಿಯಂತ್ರಣವನ್ನು ಹೇರಿದೆ. ಹೀಗಾಗಿ ಈ ಎರಡೂ ಕಾನೂನಿನ ಕಲಮಿನ ತುಲನೆ ಮೂಲಕ ನಾವು ಸ್ವಾತಂತ್ರ್ಯದ ಮಾರ್ಗದಲ್ಲಿದ್ದೇವೋ ಅಥವಾ ಗುಲಾಮಗಿರಿಯ, ದಾಸ್ಯದ ಹಾದಿಯಲ್ಲಿ ಮುಗ್ಗರಿಸುತ್ತ ಸಾಗಿದ್ದೇವೆ ಎಂಬುದನ್ನು ಅರಿಯುವುದು ತುಂಬ ಬೋಧಪರವೆನಿಸುತ್ತದೆ. ಅಸೆಂಬ್ಲಿಯ ಸದಸ್ಯರಿಗೂ ತಾವೆಲ್ಲಿದ್ದೇವೆ ಎಂಬ ಅರಿವು ಮೂಡುತ್ತದೆ.

೧೯೨೯ರ ಕಾನೂನಿನಲ್ಲಿಯ ಒಂದು ಕಲಮು ರಾಜಕೀಯ ಪ್ರಶ್ನೆಗಾಗಿ ಮಾಡಿದ ಸಾರ್ವತ್ರಿಕ ಮುಷ್ಕರವನ್ನು ಕಾನೂನು ಬಾಹಿರ ಎಂದು ನಿರ್ಧರಿಸಿದೆ. ಮತ್ತೊಂದು ಕಲಮು ನೋಟಿಸ್ ನೀಡದೆ

ಮಾಡಿದ ಮುಷ್ಕರ ಕಾನೂನು ಬಾಹಿರ ಎಂದಿದೆ. ೧೯೨೮ರ ಕಾನೂನಿನ ಎರಡನೇ ಕಲಮಿಗೂ ಇಂದಿನ ಬಿಲ್ಲಿನ ನೋಟಿಸ್ ನೀಡದೆ ಮಾಡಿದ ಮುಷ್ಕರ ಕಾನೂನು ಬಾಹಿರ ಎಂದಿರುವುದಕ್ಕೂ ಸಾಮ್ಯವಿದೆ. ಈ ಸಂಗತಿಯನ್ನು ಬಿಟ್ಟರೆ ಈ ಎರಡೂ ಬಿಲ್‌ಗಳು ಒಂದಕ್ಕೊಂದು ಭಿನ್ನವಾಗಿವೆ. ಇಂದಿನ ಬಿಲ್ ಅಂತ್ಯಂತ ಪ್ರತಿಗಾಮಿ ಸ್ವರೂಪದ್ದಾಗಿದೆ. ಈ ಬಿಲ್ಲಿನ ನಿರ್ಮಾತನು ೧೯೨೯ ಕಾನೂನಿನ ನಿರ್ಮಾತನಿಗಿಂತಲೂ ತೀರ ಪ್ರತಿಗಾಮಿ ವೃತ್ತಿಯ ಮನುಷ್ಯನಾಗಿದ್ದಾನೆ–ಎಂದು ಹೇಳಲು ಏನಾದರೂ ಅಡ್ಡಿಯಿದೆ ಎಂದೇನೂ ನನಗನಿಸುವುದಿಲ್ಲ.

೧೯೨೮ರ ಕಾನೂನಿನಲ್ಲಿಯ ಕಲಮನ್ನು ಕೇವಲ ಲೋಕೋಪಯೋಗಿ (Public utilities) ಉದ್ಯೋಗಕ್ಕೆ ಮಾತ್ರ ಅನ್ವಯಿಸಲಾಗಿದೆ. ಆ ಕಾನೂನು ಕೇವಲ ಪಬ್ಲಿಕ್ ಯುಟಿಲಿಟಿದಲ್ಲಿಯ ಮುಷ್ಕರವನ್ನಷ್ಟೇ ಕಾನೂನು ಬಾಹಿರ ಎಂದು ನಿರ್ಧರಿಸಿತ್ತು. ಆದರೆ ಇಂದಿನ ಕಾನೂನು ಎಲ್ಲ ಉದ್ಯೋಗದ ಮುಷ್ಕರವನ್ನು ಕಾನೂನು ಬಾಹಿರ ಎಂದು ನಿರ್ಧರಿಸಲು ಪ್ರಯತ್ನಿಸುತ್ತದೆ. ಇದು ಈ ಕಾನೂನುದಲ್ಲಿಯ ಮಹತ್ವದ ವ್ಯತ್ಯಾಸ ಎಂದೆನಿಸುತ್ತದೆ. ಈ ಬಗೆಯ ವ್ಯತ್ಯಾಸವನ್ನು ಇಂದು ಜಾರಿಗೆ ತರುವುದು ನ್ಯಾಯಯುತವೇ?

ಇಂಥ ಕಾಲಕ್ಕೆ, ೧೯೨೯ರಲ್ಲಿ ಕಾಂಗ್ರೆಸ್‌ಪಕ್ಷವು ಅಸೆಂಬ್ಲಿಯಲ್ಲಿ ಈ ಕಾನೂನಿಗೆ ಸಂಬಂಧಿಸಿದಂತೆ ಯಾವ ಧೋರಣೆಯನ್ನು ಸ್ವೀಕರಿಸಿತ್ತು ಎಂದು ನೋಡುವುದು ಸೂಕ್ತ.

ಅನಂತರ ಅಂಬೇಡ್ಕರರು ಆ ಸಮಯದ ಸಿಲೆಕ್ಟ್ ಕಮಿಟಿಯ ರಿಪೋರ್ಟದಲ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರು ಬರೆದ ಭಾಗವನ್ನು ಓದಿ ತೋರಿಸಿದರು. ಅಷ್ಟೇ ಅಲ್ಲ, ೧೯೨೯ರಲ್ಲಿಯ ಕಾನೂನಲ್ಲಿಯ ಮುಷ್ಕರವನ್ನು ಕಾನೂನುಬಾಹಿರವೆಂದು ನಿರ್ಧರಿಸುವ ಕಲಮನ್ನು ಕಾಂಗ್ರೆಸ್ ವಿರೋಧಿಸಿದ್ದನ್ನು ಮತ್ತು ಪಬ್ಲಿಕ್ ಯುಟಿಲಿಟಿಜ ಸರ್ವಿಸಿನ ವ್ಯಾಖ್ಯೆಯನ್ನು ನಿರ್ಧರಿಸಿಲು ಒತ್ತಾಯಿಸಿದ್ದನ್ನು ಎತ್ತಿತೋರಿಸಿದರು. ಸರಕಾರವು ಆ ಸಮಯದಲ್ಲಿ ಪಬ್ಲಿಕ್ ಯುಟಿಲಿಟಿ ಜನ ವ್ಯಾಖ್ಯೆ ನಿರ್ಧರಿಸಲು ಒಪ್ಪಿರಲಿಲ್ಲ. ಮತ್ತು ನೌಕರಶಹಿಯ ಲಹರಿಯ ಮೇಲೆ ಏನೂ ಅವಲಂಬಿಸಿ ಇರಬಾರದೆಂದು 'ಪಬ್ಲಿಕ್ ಯುಟಿಲಿಟಿಜನ' ಸ್ಪಷ್ಟ ವ್ಯಾಖ್ಯೆ ಮಾಡಬೇಕೆನ್ನುವುದು ಕಾಂಗ್ರೆಸ್ ಪಕ್ಷದ ಹೇಳಿಕೆಯಾಗಿತ್ತು. ಅದೂ ಅಲ್ಲದೆ 'ಪಬ್ಲಿಕ್ ಯುಟಿಲಿಟಿಜ್'ನಲ್ಲಿ ಎಷ್ಟೋ ಉದ್ಯೋಗಗಳು ಬರಬಹುದು ಮತ್ತು ನೌಕರಶಾಹಿ ತನ್ನ ಉದ್ದೇಶ ಈಡೇರಿಸಿಕೊಳ್ಳಲು ಬೇಕಾದ ಉದ್ಯೋಗದ ಮುಷ್ಕರವನ್ನು 'ಪಬ್ಲಿಕ್ ಯುಟಿಲಿಟಿಜ್'ನ ಹೆಸರಿನಲ್ಲಿ ಕಾನೂನು ಬಾಹಿರವೆಂದು ನಿರ್ಧರಿಸಬಹುದು ಎಂದು ಈ ಕಾನೂನನ್ನು ಕೇವಲ 'ಸೋಶಿಯಲ್ ಸೆಕ್ಯುರಿಟಿ ಸರ್ವಿಸೆಸ್'ಕಷ್ಟೇ ಅನ್ವಯಿಸಬೇಕೆಂದು ಕಾಂಗ್ರೆಸ್ ಪಕ್ಷ ಹೇಳಿತ್ತು. ಆದರೆ ಇಂದು ಮಾತ್ರ ಅದೇ ಕಾಂಗ್ರೆಸ್ ಸತ್ತೆಯು ಕೈಗೆ ಬಂದಕೂಡಲೇ ಅದೇ ಕಾನೂನನ್ನು ಎಲ್ಲ ಉದ್ಯೋಗಗಳಿಗೆ ಹೇಗೆ ಅನ್ವಯಿಸಲು ಬಯಸುತ್ತದೆ' ಎಂಬುದನ್ನು ಡಾ. ಅಂಬೇಡ್ಕರ ಅವರು ಬಹಿರಂಗ ಪಡಿಸಿದರು.

ಯಾವ ಉದ್ಯೋಗ ದಂಧೆಯ ಮೇಲೆ ಸಮಾಜದ ವ್ಯವಹಾರವು ಅವಲಂಬಿಸಿದಯೋ ಆ ಉದ್ಯೋಗ ದಂಧೆಗಷ್ಟೇ ನೋಟಿಸು ನೀಡದೆ ಮಾಡಿದ ಮುಷ್ಕರವನ್ನು ಕಾನೂನುಬಾಹಿರವೆಂದು ನಿರ್ಧರಿಸಬೇಕೆಂದು ಈ ಸಲ ಕಾಂಗ್ರೆಸ್ ಪಕ್ಷದ ಹೇಳಿಕೆಯಾಗಿತ್ತು. ಆದರೆ ಈ ಬಿಲ್ ಪ್ರತಿಯೊಂದು ಉದ್ಯೋಗ ವ್ಯವಹಾರದಲ್ಲಿಯ ಮುಷ್ಕರವನ್ನು ಕಾನೂನುಬಾಹಿರವೆಂದು ನಿರ್ಧರಿಸುತ್ತಿದೆ.

ಒಂದು ವೇಳೆ ಹಿಂದು ಮಹಿಳೆಯರಲ್ಲಿ ತುಟಿಗೆ ಬಣ್ಣಲೇಪಿಸುವ ಫ್ಯಾಶನ್ ವೇಗದಿಂದ ಶುರುವಾಗಿದ್ದರೆ, ಯಾವನಾದರೂ ಲಿಪ್‌ಸ್ಟಿಕ್ ಕಾರಖಾನೆಯನ್ನು ಆರಂಭಿಸಿದಾಗ, ಅಲ್ಲಿಯ ಕಾರ್ಮಿಕರು ನೋಟಿಸ್ ನೀಡದೆ ಮುಷ್ಕರವನ್ನು ಮಾಡಿದರೆ, ಆ ಮುಷ್ಕರವು ಕಾನೂನುಬಾಹಿರವಾಗುತ್ತದೆ. ಮಹಿಳೆಯರ ತುಟಿಗೆ

ಬಣ್ಣಹಚ್ಚುವ ಸುಖಕ್ಕೆ ಈ ಮುಷ್ಕರದಿಂದ ಅಡಚಣೆ ನಿರ್ಮಾಣವಾಗುತ್ತದೆ ಎಂದು ಲಿಪ್‌ಸ್ಟಿಕ್ ತಯಾರಿಸುವ ಕಾರಖಾನೆಯು ಜನರ ಜೀವಿತಕ್ಕೆ ಉಪಯುಕ್ತವೆಂದು ನಿರ್ಧರಿಸಿ, ಮುಷ್ಕರದಲ್ಲಿ ನಿರತರಾದ ಕಾರ್ಮಿಕರ ಹಕ್ಕಿಗೆ ನಿಯಂತ್ರಣ ಹಾಕಬೇಕೆಂದು ಯಾರೂ ಹೇಳಲಾರರು!

'ಸೋಶಿಯಲ್ ಸರ್ವಿಸ್ ಸೆಕ್ಯುರಿಟಿಜ್'ಗಷ್ಟೇ ಕಾರ್ಮಿಕರ ಮುಷ್ಕರನಿರತ ಹಕ್ಕಿನ ಮೇಲೆ ನಿಯಂತ್ರಣ ಹಾಕಲು ಬರುವಂತಹ ತಮ್ಮ ೧೯೨೯ರ ಧೋರಣೆಯನ್ನು ಇಂದು ಕಾಂಗ್ರೆಸ್ ಕೈಬಿಟ್ಟಂತೆ ಕಾಣುತ್ತದೆ. ಅಷ್ಟೇ ಅಲ್ಲ, ೧೯೨೯ರ ಕಾನೂನಿನ ಕಲಮಿನ ಆಚೆಗೂ ಹೋಗಿ ಕಾಂಗ್ರೆಸ್ಸು ಇಂದು ನೌಕರಶಾಹಿಯನ್ನು ಹಿಂದಕ್ಕೆ ಸರಿಸಿದೆ.

ಹಿಂದಿನ ನೌಕರಶಾಹಿಯು ಬುದ್ಧಿವಂತಿಕೆಯನ್ನು ತೋರಿಸಿ, ಹೊಣೆಗಾರಿಕೆಯನ್ನು ಅರಿತು, ಮುಷ್ಕರ ಮಾಡುವುದು ಕಾರ್ಮಿಕರ ಮಹತ್ವದ ಹಕ್ಕು ಎಂದರಿತು ಕೇವಲ ಲೋಕೋಪಯೋಗಿ ಉದ್ಯೋಗದಲ್ಲಿಯ ಮುಷ್ಕರವನ್ನು ಮಾತ್ರ ಕಾನೂನುಬಾಹಿರ ಎಂದು ನಿರ್ಧರಿಸಿತು. ಆದರೆ ಇಂದಿನ ಸರಕಾರಕ್ಕೆ ಅಷ್ಟು ಹೊಣೆಗಾರಿಕೆಯನ್ನು ಗುರುತಿಸುವುದಾಗಲಿಲ್ಲ. ಕಾಂಗ್ರೆಸಿನ ಬಿಲ್ ಲಿಪ್‌ಸ್ಟಿಕ್ ಕಾರಖಾನೆಯಲ್ಲಿ ನಡೆದ ಮುಷ್ಕರವೂ ಶಿಕ್ಷೆಗೆ ಪಾತ್ರವಾಗಲಿದೆ.

ಹಾಗಾದರೆ ಇದೆಲ್ಲ ಏತಕ್ಕೆ? ಈ ವಿಚಾರಣೆ ಮತ್ತು ಚರ್ಚೆಯಿಂದ ಕಾರ್ಮಿಕರಿಗೆ ಪ್ರತ್ಯಕ್ಷವಾಗಿ ಏನು ಉಪಯೋಗವಾಗಲಿದೆ? ನನಗೆ ಕಾಣಿಸುವುದೇನೆಂದರೆ, ಈ ಬಿಲ್ ಪ್ರಕಾರ ಕಾರ್ಮಿಕರಿಗೆ ಒಪ್ಪಂದಕ್ಕಾಗಿ ನೇಮಿಸಲಾದ ನಾಲ್ಕಾರು ಸಭ್ಯಗೃಹಸ್ಥರ ಮುಖದ ಕಡೆಗೆ ನೋಡುತ್ತ ೪ ತಿಂಗಳು, ೨೫ದಿನಗಳ ಕಾಲ ಸುಮ್ಮನೆ ಕೂತಿರುವುದರ ಆಚೆಗೆ ಏನೂ ಸಿಗಲಾರದು. ಅದರ ಬದಲಿಗೆ ಕಾಂಗ್ರೆಸ್ ಸರಕಾರವು ನೇರ ಮತ್ತು ಬಹಿರಂಗವಾಗಿ ಹೇಳಬೇಕಾದದ್ದು ಏನೆಂದರೆ, 'ನಿಮಗೆ ಒಪ್ಪಿಗೆಯಿರಲಿ ಬಿಡಲಿ' ನಿಮ್ಮ ಮೇಲೆ ಹೊಂದಾಣಿಕೆಯ ಒಪ್ಪಂದವನ್ನು ಬಲವಂತವಾಗಿ ಹೇರುತ್ತವೆ.'. ಅಂದರೆ ಕೊನೆಪಕ್ಷ ಹೊಂದಾಣಿಕೆಯ ಒಪ್ಪಂದದ ನಂತರವಾದರೂ ಏನಾದರೂ ನಿರ್ಣಯವಾಗಬಹುದು ಎಂದಾದರೂ ನಿರೀಕ್ಷೆಯಲ್ಲಿರಬಹುದು.

ಆದರೆ ಈ ಬಿಲ್ಲಿನ ಕಾರಣದಿಂದಾಗಿ ಕಾರ್ಮಿಕರು ಮೊದಲಿಗೆ ರಜಿಸ್ಟ್ರಾರ್, ಕನ್ಸಿಲಿಯೇಟರ್, ಕನ್ಸಿಲಿಯೇಟರ್ಸ್ ಬೋರ್ಡ್ ಮುಂತಾದ ಹಂತಗಳಲ್ಲಿ ದಾಟಿಹೋಗಬೇಕಾಗುತ್ತದೆ. ಎಲ್ಲ ಆಡಂಬರದಿಂದಾಗಿ ಬೇರೆ ಬೇರೆ ಜನರಿಗೆ ಮತ್ತು ಹಸಿವಿನಿಂದ ತ್ರಸ್ತಗೊಂಡ ಕಾರ್ಮಿಕರಿಗೆ ಸವಿಯಾದ ಮಧುರಬೊಗಳೆ ಹೊಡೆದು ಒಪ್ಪಂದವನ್ನು ಮಾಡುವ ಗೃಹಸ್ಥರ ಎದುರಿಗೆ ಕೇವಲ ಬೇಡಿಕೆಯ ಪ್ರದರ್ಶನ ಮಾಡುವುದರ ಆಚೆ ಏನಾದರೂ ಫಲಿತಾಂಶ ಸಿದ್ಧಗೊಳ್ಳಬಹುದೆಂದು ನನಗೆ ಅನಿಸುವುದಿಲ್ಲ. ಈ ವಿವಿಧ ಹಂತದಿಂದಾಗಿ ಯಾವುದೇ ಖಚಿತ ಫಲಿತಾಂಶ ರೂಪಗೊಳ್ಳಬಹುದೆಂದು ಅನಿಸುವುದಿಲ್ಲ. ಮುಷ್ಕರ ಮಾಡಲು ಮುಂದಾದ ಕಾರ್ಮಿಕರನ್ನು 'ಶಾಂತ'ಗೊಳಿಸುವ ಮಾರ್ಗ ಇದಲ್ಲ. ಅದರಿಂದ ಕಾರ್ಮಿಕರ ದೃಷ್ಟಿಯಿಂದ ೪ತಿಂಗಳು ೨೫ದಿನ ವಿಳಂಬವಾದುದರಿಂದ ಕಾರ್ಮಿಕರ ಸಂಘಟನೆಯ ಬಗೆಗೆ ಚರ್ಚೆಯಾಗಿ, ಕಾರ್ಮಿಕರು ಮಾತ್ರ ಮುಷ್ಕರ ಮಾಡಲು ಅಸಮರ್ಥರಾಗುವುದಷ್ಟೇ ಇದರ ಪರಿಣಾಮ!

೧೯೩೪ ಕಾಯ್ದೆಯಲ್ಲಿ ಮತ್ತು ಇಂದಿನ ಬಿಲ್‌ನಲಿರುವ ಒಂದು ಮಹತ್ವದ ವ್ಯತ್ಯಾಸವನ್ನು ನಾನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ೧೯೩೪ರ ಕಾನೂನಿನ ಬಗ್ಗೆ ವಾದ ವಿವಾದ ಶುರುವಿದ್ದಾಗ ಒಪ್ಪಂದದ ಕಾಲದಲ್ಲಿ ಮುಷ್ಕರಕ್ಕೆ ಬಂದಿಯನ್ನು ತರಬೇಕೆಂಬ ಸೂಚನೆಯನ್ನು ತರಲಾಗಿತ್ತು. ಮುಷ್ಕರವನ್ನು ನಿಷೇಧಿಸಲಾಗದಿದ್ದರೂ ಕೊನೆಪಕ್ಷ ಪಿಕೆಟಿಂಗ್‌ಗಾದರೂ ಬಂದಿಯಿರಬೇಕೆಂಬ ಸೂಚನೆಯನ್ನು ತರಲಾಗಿತ್ತು. ಆದರೆ ಈ ಎರಡೂ ಸೂಚನೆಗಳಿಗೆ ಗೌರವಾನ್ವಿತ ಸರ್ ರಾಬರ್ಟ್‌ಬೆಲ್ ಅವರು ಮಾನ್ಯತೆಯನ್ನು

ನೀಡಲಿಲ್ಲ.

ಆಗ ಒಬ್ಬ ಸದಸ್ಯರು ಡಾಕ್ಟರರ ಮಾತಿಗೆ ವಿರೋಧವನ್ನು ಒಡ್ಡಿದ್ದರಿಂದ ಡಾಕ್ಟರರು ರಾಬರ್ಟ್‌ಬೆಲ್‌ನ ಆ ಕಾಲದ ಅವರ ಭಾಷಣದ ಒಂದು ಪರಿಚ್ಛೇದವನ್ನು ಓದಿತೋರಿಸಿದರು.

ನನ್ನ ಖಚಿತ ಅಭಿಪ್ರಾಯವೇನೆಂದರೆ, ಕಾರ್ಮಿಕರ ಚರ್ಚೆಯ ಕಾಲಕ್ಕೆ ಮುಷ್ಕರ ಮಾಡಲು ನಿಷೇಧವಿರದಿದ್ದರೆ ಮಾತ್ರ ಒಪ್ಪಂದ ಯಶಸ್ವಿಯಾಗುವುದು ಸಾಧ್ಯ. ಮಾಲೀಕರಿಗೆ ತಮ್ಮ ಸಾಮರ್ಥ್ಯವನ್ನು ಒಗ್ಗೂಡಿಸಲು ೪ ತಿಂಗಳು, ೨೫ ದಿನಗಳಿರುವಾಗ, ಆ ಕಾಲದಲ್ಲಿ ಮುಷ್ಕರಕ್ಕಾಗಿ ಕಾರ್ಮಿಕರು ಯಾವುದೇ ಬಗೆಯ ಸಂಘಟನೆ ಮತ್ತು ಸಿದ್ಧತೆ ಮಾಡುವುದು ಸಾಧ್ಯವಿಲ್ಲ. ಚರ್ಚೆಯ ಕಾಲ ಮುಗಿದ ಬಳಿಕವೂ ಎರಡು ತಿಂಗಳೊಳಗಾಗಿ ಮುಷ್ಕರ ಮಾಡಲು ಕಾರ್ಮಿಕರ ಮೇಲೆ ನಿಯಂತ್ರಣವಿದೆ. ಈ ಎಲ್ಲಸಂಗತಿಗಳು ಗೊತ್ತಿರುವಾಗ ಮಾಲೀಕರಾದರೂ ಒಂದು ಯೋಗ್ಯವಾದ ಒಪ್ಪಂದವನ್ನು ಸಿದ್ಧಪಡಿಸಲು ಏಕೆ ಸಿದ್ದರಾಗಬೇಕು? ಕಾರ್ಮಿಕರ ಒಪ್ಪಂದದ ಕರಾರನ್ನು ಮಾಲೀಕರು ಸ್ವೀಕರಿಸಲೇಬೇಕೆಂಬ ಯಾವುದೇ ಬಗೆಯ ಒತ್ತಡ ಮಾಲೀಕರ ಮೇಲಿಲ್ಲ. ಮುಷ್ಕರದ ಒತ್ತಡವಿಲ್ಲದೆ ಮಾಲೀಕರು ಯಾವ ಒಪ್ಪಂದಕ್ಕೂ ಸಿದ್ಧರಾಗಿರುವುದಿಲ್ಲ.

ತಾವು ರೂಪಿಸಿದ ವ್ಯವಸ್ಥೆಯಿಂದ ಮಾಲೀಕರ ಜೊತೆಗೆ ಕಾರ್ಮಿಕರಿಗೂ ಲಾಭವಾಗಲಿ ಎನ್ನುವುದು ನಿಜವಾಗಿಯೂ ಬಿಲ್ ತರುವುದರ ಇಚ್ಛೆಯಾಗಿದ್ದರೆ, ಅವರು ರಾಬರ್ಟ್‌ಬೆಲ್ ಅವರದ್ದೇ ಧೋರಣೆಯನ್ನು ಅವಲಂಬಿಸಿ ಒಪ್ಪಂದ, ಚರ್ಚೆಯ ಕಾಲದಲ್ಲಿ ಕಾರ್ಮಿಕರ ಮುಷ್ಕರಕ್ಕೆ ಸ್ಥಗಿತ ತರಬಾರದಾಗಿತ್ತು. ಆದರೆ ಹಿಂದಿನ ನೌಕರ ಶಾಹಿಯವರು ಒಪ್ಪಿದ ತತ್ವವನ್ನು ಇಂದಿನ ಕಾಂಗ್ರೆಸ್ಸಿನ 'ಜನಪ್ರಿಯ' ಮತ್ತು ಸ್ವಂತಕ್ಕೆ 'ಕಾರ್ಮಿಕರ ಪ್ರತಿನಿಧಿ' ಎಂದು ಮೆರೆಯುವ ಸರಕಾರವು ಧಿಕ್ಕರಿಸುತ್ತದೆ. ಕಾಂಗ್ರೆಸ್ ಸರಕಾರವು ಇದೇ ಬಗೆಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಿಲಿದೆಯೇ? ನಿಮಗಿದು ಪ್ರಜಾಪ್ರಭುತ್ವ ಅನಿಸುತ್ತಿರಬಹುದು. ನನಗೆ ಮಾತ್ರ ಅನಿಸುವುದಿಲ್ಲ. ಎಲ್ಲಿ ಕಾರ್ಮಿಕರ ಮೂಲಭೂತ ಹಕ್ಕಿನ ಮೇಲೆ ಆಘಾತ ಹಾಕಲಾಗುವುದೋ ಅದು ಪ್ರಜಾಪ್ರಭುತ್ವವೇ ಅಲ್ಲ.

ಯಾವ ಪ್ರಜಾಪ್ರಭುತ್ವದಲ್ಲಿ ಬದುಕುವ ಸಾಧನಗಳೇ ಇಲ್ಲದ, ಸಂಘಟನೆಯ ದೃಷ್ಟಿಯಿಂದ ಅಸ್ತವ್ಯಸ್ತಗೊಂಡ ಆಶಿಕ್ಷಿತ ಮತ್ತು ಬುದ್ಧಿಹೀನರಾಗಿರುವ ಕಾರ್ಮಿಕ ವರ್ಗದ ಮೇಲೆ ಈ ಬಗೆಯ ಗುಲಾಮಗಿರಿಯ ಬಂಧನವನ್ನು ಹೇರಲಾಗುವುದೋ ಅದು ಪ್ರಜಾಪ್ರಭುತ್ವವೇ ಅಲ್ಲ. ಅದು ಪ್ರಜಾಪ್ರಭುತ್ವದ ವಿಡಂಬನೆ.

ಅನಂತರ ಡಾ.ಅಂಬೇಡ್ಕರರು ಬಿಲ್‌ದಲ್ಲಿರುವ ಯುನಿಯನ್ ಬಗೆಗೆ ಕಲಮನ್ನೂ ತರಾಟೆಗೆ ತೆಗೆದುಕೊಂಡರು. ಈ ಕಲಮು ಕಾರ್ಮಿಕರ ಯೂನಿಯನ್‌ಗಳನ್ನು ಕ್ವಾಲಿಫೈಡ್ ಯೂನಿಯನ್ ರಜಿಸ್ಟರ್ಡ್, ರೆಪ್ರೆಜೆಂಟೇಟಿವ್ಹ ಯೂನಿಯನ್ಸ್ ಎಂಬ ವಿವಿಧ ಪ್ರಕಾರಗಳನ್ನು ಮಾಡಿದೆ. ವಿವಿಧ ಪ್ರಕಾರಗಳ ಯೂನಿಯನ್ಸ್‌ಗಳನ್ನು ಯಾವ ಶರತ್ತು ಮತ್ತು ಯಾವ ಪದ್ಧತಿಯಿಂದ ರಜಿಸ್ಟರ್ ಮಾಡಬೇಕು ಹಾಗೂ ರಜಿಸ್ಟರ್ ಯುನಿಯನ್ಸ್ ಯಾವ ಶರತ್ತಿನ ಮೇರೆಗೆ ರಿಪ್ರೆಜೆಂಟೇಟಿವ್ಹ್ ಯೂನಿಯನ್‌ಗಳನ್ನಾಗಿ ಮಾಡಬೇಕು, ರಜಿಸ್ಟರ್ ಯುನಿಯನ್ಸಗಳ ಪ್ರತಿನಿಧಿತ್ವವನ್ನು ಯಾವ ತತ್ವಗಳ ಸಹಾಯದಿಂದ ರದ್ದು ಮಾಡಬೇಕು ಮುಂತಾದ ಸಂಗತಿಗಳನ್ನು ಈ ಕಲಮು ನಿರ್ಧರಿಸಿದೆ. ಡಾ. ಅಂಬೇಡ್ಕರರ ಮುಂದುವರೆಸಿ ಹೇಳಿದ್ದು ಹೀಗೆ–

ಬಲವಂತದ ಒಪ್ಪಂದದ ಹೊಂದಾಣಿಕೆ ಮತ್ತು ಚರ್ಚೆಯ ಕಾಲದಲ್ಲಿ ಬಿಲ್ಲಿನ ಮುಖ್ಯ ಕಲಮಾದ ಮುಷ್ಕರ ನಿಷೇಧಕ್ಕೂ, ಈ ಕಲಮಿಗೂ ಅದೆಂಥ ಸಂಬಂಧವಿರುತ್ತದೆ ಎನ್ನುವುದೇ ನನಗೆ ಅರ್ಥವಾಗುವುದಿಲ್ಲ.

ಈ ಕಲಮುಗಳನ್ನು ಉದ್ದೇಶ ಪೂರ್ವಕವಾಗಿ ಈ ಬಿಲ್‌ನಲ್ಲಿ ತುರುಕಿದಂತಿದೆ. ಈ ಬಿಲ್ಲಿನ ಹೆಸರ ಮೇಲಿಂದ 'ಉದ್ಯೋಗ ಧಂದೆಯಲ್ಲಿ ತಲೆದೋರಿದ ತಂಟೆಯನ್ನು ಶಾಂತವಾಗಿ ಹೊಂದಾಣಿಕೆಯ ಮಾರ್ಗದಿಂದ ಬಗೆಹರಿಸಲೆಂದು ಮತ್ತು ಕೆಲವು ಕಾರಣಗಳಿಂದಲೂ ತರಲಾದ ಬಿಲ್ ಎಂದು ಬಿಲ್‌ನ ಉದ್ದೇಶದ ಬಗೆಗೆ ಹೇಳಲಾಗಿದೆ. ಆ ಬೇರೆ ಕೆಲವು ಕಾರಣಗಳು ಯಾವವು? ಬಿಲ್‌ನಲ್ಲಿ ಬೇರೆ ಕಾರಣಗಳ ಕುರಿತು ಏಕೆ ಹೇಳಲಿಲ್ಲ? ಅದರಲ್ಲಿ ನಾಚಿಕೆ ಪಡುವಂತಹದು ಏನಿದೆ? ಬಿಲ್‌ನಲ್ಲಿಯ ಈ ಎರಡೂ ಭಾಗದ ಸಂಬಂಧವನ್ನು ಸ್ಪಷ್ಟಗೊಳಿಸಬೇಕು. ಅಂಥ ಸಂಬಂಧವಿರದಿದ್ದರೆ ಬೇರೆ ಭಾಗದ ಕಲಮಗಳನ್ನು ನೇರವಾಗಿ ಕೈಬಿಡಬೇಕು.

ಸಾಕಷ್ಟು ಯೋಚಿಸಿದ ಬಳಿಕ ಈ ಎರಡೂ ಭಾಗಗಳ ನಡುವೆ ಅತ್ಯಂತ ಮಹತ್ವದ ಸಂಬಂಧವಿದೆ ಎನ್ನುವುದು ನನಗೆ ತಿಳಿದು ಬಂದಿತು. ಈ ಸಂಪೂರ್ಣ ಬಿಲ್‌ದಲ್ಲಿಯ ೭೫ ಕಲಮಿನಿಂದ ಸ್ಪಷ್ಟವಾಗುತ್ತದೆ. ಈ ಕಲಮಿನ ಪ್ರಕಾರ ಕಾರ್ಮಿಕರ ಪ್ರತಿನಿಧಿಯನ್ನು ಹೊರತುಪಡಿಸಿ ಅನ್ಯರಾರೂ ಈ ಕಾನೂನಿನಂತೆ ಚರ್ಚೆಯಲ್ಲಿ ಭಾಗವಹಿಸುವಂತಿಲ್ಲ. ಈ ಕಲಮು ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಹಿಂದುಟ್ರೇಡ್ ಯೂನಿಯನ್ ಚಳುವಳಿಗೆ ಈ ಕಲಮು ತುಂಬ ವಿಧಾಯಕವಾಗಲಿದೆ.

ಈಗ, ಕಾರ್ಮಿಕರ ಪ್ರತಿನಿಧಿ ಯಾರು? ಚರ್ಚೆಯಲ್ಲಿ ಕಾರ್ಮಿಕರ ಪ್ರತಿನಿಧಿಯೆಂದು ಭಾಗವಹಿಸುವ ಅಧಿಕಾರ ಯಾರಿಗೆ? ಎಂಬ ವಿಷಯವನ್ನು ಕಲಮು ನಿರ್ಧರಿಸಿದೆ. ಈ ಬಿಲ್ ಮಾಡಿದ ಕಾರ್ಮಿಕರ ವ್ಯಾಖ್ಯೆಯಲ್ಲಿ ಯಾರು ಶಾಮೀಲಾಗುವುದಿಲ್ಲವೋ, ಅಂಥ ಯಾವುದೇ ಮನುಷ್ಯನಿಗೆ ಹೊಂದಾಣಿಕೆಯ ಸಂಬಂಧದಲ್ಲಿ ನಡೆದ ಚರ್ಚೆಯಲ್ಲಿ ಕಾರ್ಮಿಕರ ಪರವಾಗಿ ಭಾಗವಹಿಸಲು ಅವಕಾಶವಿಲ್ಲ. ಆ ವ್ಯಕ್ತಿಬೇಕಾದರೆ ನಿಜವಾದ ಮತ್ತು ಅರ್ಹ, ಹಾಗೂ ಕಾರ್ಮಿಕ ಚಳುವಳಿಯ ಅನುಭವವಿರುವ ಪುಢಾರಿಯಾಗಿದ್ದರೂ ಈ ವ್ಯಾಖ್ಯೆಯ ಪ್ರಕಾರ ಪ್ರತಿನಿಧಿಯಾಗಲಾರ.

ಕಾರ್ಮಿಕರ ಪ್ರತಿನಿಧಿ ಎಂದು ಕರೆಯಬಹುದಾದ ಸ್ವಂತ ಯೂನಿಯನ್‌ಗಳ ಎರಡು ಪ್ರಕಾರ ಮಾಡಲಾಗಿದೆ. ಮೊದಲ ಪ್ರಕಾರದಲ್ಲಿ ಕಾರ್ಮಿಕರಲ್ಲಿಯ ೨೦%ಸದಸ್ಯರಿರುವ ಮತ್ತು ಮಾಲೀಕರ ಮಾನ್ಯತೆಯರುವ ಯೂನಿಯನ್‌ಗಳು ಬರುತ್ತವೆ. ಎರಡನೇ ಪ್ರಕಾರದಲ್ಲಿ ೫೦% ಸದಸ್ಯರಿರುವ ಯೂನಿಯನ್‌ಗಳು ಬರುತ್ತವೆ. ಈ ಎರಡೂ ಪ್ರಕಾರಗಳ ಯೂನಿಯನ್ಸ್‌ಗಳಿಗೆ ಪ್ರಾತಿನಿಧಿಕ ಯೂನಿಯನ್ಸ್ ಎಂದು ಗುರುತಿಸಲಾಗುತ್ತದೆ. ಆದರೆ ಪರಸ್ಪರ ವಿರೋಧಿಯಾಗಿರುವ ಎರಡು ಯೂನಿಯನ್ಸ್‌ಗಳನ್ನು ಒಂದೇ ನಾಮಾವಳಿಯಲ್ಲಿ ಸೇರಿಸುವುದಾದರೂ ಹೇಗೆ? ನನ್ನ ಪ್ರಕಾರ ಈ ಎರಡು ರೀತಿಯ ಯುನಿಯನ್ಸ್‌ಗಳನ್ನು ಗುಲಾಮ ಯುನಿಯನ್ಸ್ ಮತ್ತು ಸ್ವತಂತ್ರ ಯುನಿಯನ್ಸ್‌ಗಳೆಂದು ಕರೆಯುವುದು ಯೋಗ್ಯ? ಯಾವ ಯೂನಿಯನ್ಸ್‌ನ ಕಾನೂನು ಬದ್ಧ ಅಸ್ತಿತ್ವ, ಪ್ರತಿನಿಧಿತ್ವದ ಅಧಿಕಾರ ಮತ್ತು ಮತಾಧಿಕಾರ ವಗೈರೆ ಎಲ್ಲವೂ ಮಾಲೀಕನ ಇಚ್ಛೆಯನ್ನು ಅವಲಂಬಿಸಿದೆಯೋ. ಆ ಯೂನಿಯನ್‌ಗೆ 'ಗುಲಾಮ ಯುನಿಯನ್' ಎಂದು ಕರೆಯುವುದು ಅತಿಶಯೋಕ್ತಿಯಾಗಬಹುದೆಂದು ನನಗೆ ಅನಿಸುವುದಿಲ್ಲ. 'ಮಾಲೀಕನ ಮಾನ್ಯತೆ' ಎನ್ನುವ ಬದಲಿಗೆ ಮಾಲೀಕನ ಇಚ್ಛೆ' ಎಂಬ ಪದಪ್ರಯೋಗವನ್ನು ಯುನಿಯನ್ಸ್ ಬಗೆಗೆ ಬಳಸಿದ್ದರೆ ಒಳಿತಾಗುತ್ತಿತ್ತು. ಅಂದರೆ ಈ ಯುನಿಯನ್ಸ್‌ಗಳ ಗುಲಾಮ ತನದ ಸ್ವರೂಪ ಸ್ಪಷ್ಟವಾಗುತ್ತಿತ್ತು.

ಯುನಿಯನ್ಸ್‌ಗಳಿಗೆ ಪ್ರಾತಿನಿಧ್ಯ ನೀಡುವ ಮೊದಲು ಅದು ರಜಿಸ್ಟರ್ ಆಗಿರಬೇಕೆನ್ನುವುದರ ಉದ್ದೇಶ ನನಗೆ ಅರ್ಥವಾಗುತ್ತಿಲ್ಲ. ಈ ಬಿಲ್ಲು ೧೯೨೬ರಲ್ಲಿ ಮಂಜೂರಾದ ಮಧ್ಯವರ್ತಿ ಸರಕಾರದ ಟ್ರೇಡ್ ಯುನಿಯನ್ಸ್‌ನ್ನು ರದ್ದುಪಡಿಸಲಿಲ್ಲ. ಈ ಕಾನೂನು ಶಾಶ್ವತವಾಗಿದೆ ಎಂದೇ ಈ ಬಿಲ್ ನಿರ್ಧರಿಸಿದೆ.

ಈ ಬಿಲ್ಲು ಯಾವುದೇ ಬಿಲ್ಲು ರಿಜಿಸ್ಟರ್ ಆಗುವ ಮುನ್ನ ಹಳೆಯ ಕಾನೂನಿನಂತೆ ರಜಿಸ್ಟರ್ ಆಗಿರಬೇಕೆಂದು ಏಕೆ ನಿರ್ಧರಿಸಿತು? ಅದರಿಂದ ಪ್ರತಿಯೊಂದು ಯೂನಿಯನ್ ಎರಡು ಸಲ ರಿಜಿಸ್ಟರ್ ಆಗಬೇಕಾಗುತ್ತದೆ. ಪ್ರಥಮ ೧೯೨೩ರ ಕಾನೂನಿನಂತೆ ಮತ್ತು ನಂತರ ಈ ಹೊಸ ಬಿಲ್ಲಿನಂತೆ ರಿಜಿಸ್ಟರ್ ಆಗಬೇಕು.

೧೯೨೬ರ ಕಾನೂನಿನಂತೆ ರಜಿಸ್ಟರ್‌ಗೊಂಡ ಯುನಿಯನ್‌ಗೆ ಏನು ಲಭಿಸುತ್ತದೆ ಎಂಬುದನ್ನು ಮೊದಲು ನೋಡೋಣ. ಏಕೆಂದರೆ ಅದರಿಂದ ಈ ಬಿಲ್ಲು ಟ್ರೇಡ್ ಯುನಿಯನ್‌ಗಳಿಗೆ ಕೆಲವು ಹೊಸ ಸವಲತ್ತು ನೀಡುತ್ತದೆಯೋ ಅಥವಾ ಕಸಿದುಕೊಳ್ಳಲಿದಯೋ ಎನ್ನುವುದು ನಮಗೆ ಗೊತ್ತಾಗುತ್ತದೆ. ೧೯೨೬ರ ಕಾನೂನಿನ್ವಯ ರಜಿಸ್ಟರಾದ ಯುನಿಯನ್ ಮೇಲೆ ತಕರಾರು ಸಲ್ಲಿಸಬಹುದಾದ ಮತ್ತು ಯುನಿಯನ್ನೆ ತಕರಾರು ಸಲ್ಲಿಸುವ ಒಂದು ಸಂಸ್ಥೆಯಾಗುತ್ತದೆ. ಅದು ಸಂಸ್ಥೆಯಾಗಿರುವುದರಿಂದ ಅದಕ್ಕೆ ಸದಸ್ಯರ ಪ್ರತಿನಿಧಿತ್ವದ ಅಧಿಕಾರವಿದೆ. ೧೯೨೬ರ ಕಾನೂನಿನ ಅಡಿಯಲ್ಲಿ ರಜಿಸ್ಟರ್‌ಗೊಂಡ ಯುನಿಯನ್‌ಗಳಿಗೆ ರಾಜಕೀಯ ಪ್ರಾತಿನಿಧ್ಯದ ಅಧಿಕಾರ ಲಭಿಸುತ್ತದೆ. ಅಂದರೆ ಈ ಯುನಿಯನ್‌ಗೆ ಪ್ರಾಂತೀಕ ಅಸೆಂಬ್ಲಿಗೆ ಕಳಿಸುವ ಸದಸ್ಯರನ್ನು ಆಯ್ಕೆಮಾಡುವ ಅಧಿಕಾರವಿದೆ. ೧೯೨೬ರ ಕಾನೂನಿನಂತೆ ರಜಿಸ್ಟರ್‌ಗೊಂಡ ಯುನಿಯನ್‌ಗೆ ಮುಂಬೈ ಕಾರ್ಪೋರೇಶನ್ನಿಗೆ ಸದಸ್ಯರನ್ನು ಕಳಿಸುವ ಅಧಿಕಾರವಿದೆ. ಈ ರೀತಿಯಲ್ಲಿ ಕಾರ್ಮಿಕರ ಪ್ರತಿನಿಧಿ ಎಂದು ಕರೆಯಿಸಿಕೊಳ್ಳುವ ಆಧಿಕಾರವು ೧೯೨೬ ಕಾನೂನಿನ ಅಡಿಯಲ್ಲಿ ರಜಿಸ್ಟರ್‌ಗೊಂಡ ಯುನಿಯನ್‌ಗಳಿಗೆ ಸಿಗುತ್ತಿದ್ದರೆ, ಈ ಬಿಲ್ಲಿನ ಪ್ರಕಾರ ಆ ಯುನಿಯನ್ನನ್ನು ಮತ್ತೆ ರಜಿಸ್ಟರ್ ಮಾಡಬೇಕಾದ ಅಗತ್ಯವೇನಿದೆ? ಈ ಬಿಲ್ಲಿನಿಂದ ಮತ್ತೂ ಒಂದು ವಿಚಿತ್ರ ಪ್ರಸಂಗ ಎದುರಾಗಲಿದೆ, ೧೯೨೬ರ ಕಾನೂನಿನಂತೆ ರಜಿಸ್ಟರ್ ಆದ ಯೂನಿಯನ್ನ್‌ಗೆ ಈ ಬಿಲ್ಲಿನಂತೆ ಕಾನೂನು ಮಂಡಳಿಯಲ್ಲಿ ಕಾರ್ಮಿಕರ ಪ್ರತಿನಿಧಿ ಎಂದು ಹೋಗಲು ಬರುತ್ತದೆ. ಆದರೆ ಪಂಚಮಂಡಳಿಯಲ್ಲಿ ಹೋಗಲು ಬರುವುದಿಲ್ಲ.

ಇದಕ್ಕೆ ನಿಯಮ ಬಾಹೀರತೆ ಏಕಿರಬೇಕು? ೧೯೨೬ರ ಕಾನೂನಿನ ಅಡಿಯಲ್ಲಿ ರಜಿಸ್ಟರ್ ಆದ ಯುನಿಯನ್ಸ್–ದವರಿಂದ ಅತೀ ದೊಡ್ಡ ಅಧಿಕಾರವನ್ನು ಕಸಿದುಕೊಂಡಂತಾಗಿದೆ ಎಂದು ನನಗನಿಸುತ್ತದೆ.

೧೯೩೪ರ ಕಾನೂನು ಹೊಂದಾಣಿಕೆಯ ಚರ್ಚೆಯಲ್ಲಿ ಕಾರ್ಮಿಕರ ಪ್ರತಿನಿಧಿಗಳು ಭಾಗವಹಿಸಬೇಕೆಂದು ನಿರ್ಧರಿಸಿತು. ಕಾರ್ಮಿಕರ ಪ್ರತಿನಿಧಿತ್ವದ ಅಧಿಕಾರವನ್ನು ೧೯೨೬ರ ಕಾನೂನಿನಂತೆ ರಜಿಸ್ಟರ್‌ಗೊಂಡ ಯುನಿಯನ್‌ಗಳಿಗೆ ನೀಡಲಾಯಿತು. ೧೯೨೬ರ ಕಾನೂನಿನಂತೆ ರಜಿಸ್ಟರ್‌ಗೊಂಡ ಯುನಿಯನ್‌ಗಳು ಒಂದು ಸಂಘಟಿತ ಸಂಸ್ಥೆಯಾಗಿರುವುದರಿಂದ ಅದರ ಕಾರ್ಮಿಕರ ಪ್ರತಿನಿಧಿತ್ವದ ಅಧಿಕಾರವನ್ನು ೧೯೩೪ರ ಕಾನೂನು ಮಾನ್ಯತೆ ನೀಡಿತ್ತು. ಟ್ರೇಡ್ ಯುನಿಯನ್‌ಗಳಿಗೆ ೧೯೩೫ರ ಕಾನೂನಿನಂತೆ ತಮ್ಮ ಸದಸ್ಯರನ್ನು ಕಾನೂನು ಮಂಡಳಿಗೆ ಕಳಿಸುವ ಅಧಿಕಾರ ಲಭಿಸಿತು. ಮುಂಬೈ ಕಾನೂನು ಮಂಡಳಿಯು ಅಂಗೀಕರಿಸಿದ ೧೯೩೪ರ ಕಾನೂನು ಪಂಚಮಂಡಳಿಯ ಎದುರು ತಮ್ಮ ಪ್ರತಿನಿಧಿಯನ್ನು ಕಳಿಸುವ ಟ್ರೇಡ್ ಯೂನಿಯನ್ನ್‌ನ ಅಧಿಕಾರಕ್ಕೆ ಮಾನ್ಯತೆ ನೀಡಿತು. ಯುನಿಯನ್‌ಗಳಿಗೆ ಸದ್ಯಯಿರುವ ಅತೀ ಮಹತ್ವದ ಅಧಿಕಾರವನ್ನು ಯುನಿಯನ್ಸ್‌ಗಳಿಗೆ ನೀಡಲಿದೆ ಎಂಬುದನ್ನು ನಾನು ಸ್ಪಷ್ಟಪಡಿಸಿ ನಿಮಗೆ ತೋರಿಸಲಿದ್ದೇನೆ. ಈ ಬಿಲ್ಲಿನ ಪ್ರಕಾರ ರಜಿಸ್ಟರ ಆದ ಯುನಿಯನ್‌ಗಳು ೧೯೨೬ರ ಕಾನೂನಿನ ಅಡಿಯಲ್ಲಿ ರಜಿಸ್ಟಾರ್ ಆಗಿರಬೇಕು ಎಂದು ನಿರ್ಧರಿಸುವಲ್ಲಿ ಪಂಚಮಂಡಳಿಯ ಮುಂದೆ ಪ್ರತಿನಿಧಿ ಕಳಿಸುವ ಯುನಿಯನ್ಸ್‌ಗಳ ಅಧಿಕಾರದ ಜೊತೆಗೆ ಅವರಿಗೆ ಕಾನೂನು ಮಂಡಳಿಯಲ್ಲೂ ಸಹ ಸದಸ್ಯರಾಗುವ ಅಧಿಕಾರವೂ ಸಿಗಬೇಕು ಎಂದು ಉದ್ದೇಶವಿರಬೇಕು ಎಂದೆನಿಸುತ್ತದೆ. ಈ ಬಗೆಯ ಧೋರಣೆಯು ಟ್ರೇಡ್ ಯುನಿಯನ್‌ಗಳಿಗೆ ಅತ್ಯಂತ ಆಘಾತಕವಾಗಲಿದೆ. ಈ ಎಲ್ಲ ಶರತ್ತುಗಳು ಗುಲಾಮ ಯುನಿಯನ್ಸ್‌ಗಳ ಲಾಭಕ್ಕಾಗಿ ಇವೆ ಎಂದೇ ನನ್ನ

ಖಚಿತ ಅಭಿಪ್ರಾಯ.

ಟ್ರೇಡ್‌ಯುನಿಯನ್‌ಗಳು ಮಾಲೀಕರ ಲಹರಿಯನ್ನು ಅವಲಂಬಿಸಿರಬೇಕು ಎನ್ನುವ ಸ್ಪಷ್ಟ ಅಭಿಪ್ರಾಯ ಕಾಂಗ್ರೆಸ್ ಮಂತ್ರಿಗಳದ್ದಾಗಿದ್ದರೆ, ಅವರೊಂದಿಗೆ ವಾದ-ವಿವಾದ ಮಾಡುವ ಇಚ್ಛೆಯೇ ನನಗಿಲ್ಲ. ಗುಲಾಮ ಮನುಷ್ಯನೇ ಸ್ವತಂತ್ರ ಮನುಷ್ಯನೆಂದು ಕಾಂಗ್ರೆಸ್‌ಪಕ್ಷಕ್ಕೆ ಅನಿಸುತ್ತಿದ್ದರೆ ಅದು ಅವರ ಇಚ್ಛೆ. ಈ ಬಿಲ್ಲು ಯಾವ ರೀತಿ ಕಾರ್ಮಿಕರ ಮುಷ್ಕರಕ್ಕೆ ಬಂಧಿಹಾಕಿ ಬಂಧಿಸಿ ಇಡುವುದೋ, ಅದೇ ರೀತಿ ಮಾಲೀಕರು ಕಾರ್ಮಿಕರನ್ನು ಗುಲಾಮ ಯುನಿಯನ್ ಮೂಲಕ ಸಂಕೋಲೆಬದ್ಧಗೊಳಿಸಬೇಕೆನ್ನುವುದು ಕಾಂಗ್ರೆಸ್ ಮಂತ್ರಿಗಳ ಅಭಿಪ್ರಾಯವಾಗಿದ್ದರೆ ಅವರೊಂದಿಗೆ ಯಾರು ವಿಚಾರ ವಿನಿಯಮ ಮಾಡಲು ಮುಂದಾಗುತ್ತಾರೆ? ನನಗಂತೂ ಈ ವಿಚಾರಸರಣಿ ಒಪ್ಪಿಗೆಯಿಲ್ಲ. ಯಾವಶಾಂತತೆ ಸ್ವೀಕಾರಕ್ಕಾಗಿ ಈ ಬಿಲ್ ತರಲಾಗಿದೆಯೋ ಅಂಥ ಶಾಂತತೆ ನಮಗೆ ಬೇಕಿಲ್ಲ. ಯಾವ ಶಾಂತತೆಯು ಶ್ರಮಜೀವಿ ವರ್ಗದ ಹಾನಿ ಮಾಡುತ್ತದೆಯೋ ಅಂಥ ಶಾಂತತೆಯನ್ನು ನಾನು ನಿಷೇಧಿಸುತ್ತೇನೆ.

ಯಾರ ಹೊಟ್ಟೆಯು ವ್ಯವಸ್ಥಿತವಾಗಿ ತುಂಬುತ್ತಿದೆಯೋ ಅಂಥವರಿಗಾಗಿ ಈ ಶಾಂತತೆ ಸರಿಯಾಗಿರಬಹುದು. ಆದರದು ಹಸಿದು ಕಂಗಾಲಾದ ಶ್ರಮಜೀವಿ ವರ್ಗಕ್ಕೆ ಹಿತಕಾರಿಯಾಗಲಾರದು. ಹಿಂದೂಸ್ಥಾನದಲ್ಲಿ ಟ್ರೇಡ್‌ಯುನಿಯನ್ ಚಳುವಳಿಯು ಎಷ್ಟು ತೀವ್ರವಾಗಿರಬೇಕೋ ಅಷ್ಟು ಆಗಿಲ್ಲ ಎನ್ನುವುದು ಪ್ರಾಯಃ ಸತ್ಯವಿರಬೇಕು. ಕೆಲವರು ಟ್ರೇಡ್ ಯುನಿಯನ್‌ಗಳನ್ನು ವಿಘಾತಕವೆಂದು ನಿರ್ಧರಿಸುತ್ತಿರಬೇಕು. ಆದರೆ ಯಾರು ಕಾಂಗ್ರೆಸಿನ ಸದಸ್ಯರಾಗಿದ್ದಾರೋ, ಯಾರಿಗೆ ಕಾಂಗ್ರೆಸ್ಸಿನ ಅಹಿಂಸೆ ವಗೈರೆ ಕಾಂಗ್ರೆಸ್ಸಿನ ತತ್ವಗಳು ಒಪ್ಪಿಗೆಯಾಗಿತ್ತೋ ಅಂಥ ಕಮ್ಯುನಿಸ್ಟ್ ಮುಖಂಡರು ಕಾರ್ಮಿಕರ ಹಿತಕ್ಕೆ ವಿಘಾತಕವಾಗಲಿದ್ದಾರೆ ಎಂಬ ಭೀತಿಯು ಕಾಂಗ್ರೆಸ್ ಮಂತ್ರಿಗಳಿಗೆ ಅನಿಸುತ್ತಿರುವುದು ನಿಜಕ್ಕೂ ನನಗೆ ಬೆರಗು ಉಂಟು ಮಾಡುತ್ತಲಿದೆ.

ಗುಲಾಮ ಯೂನಿಯನ್ಸ್‌ಗಳು ಕೆಲಕಾಲಾನಂತರ ಸ್ವತಂತ್ರವಾಗುವುದು ಸಾಧ್ಯವೆಂದು ಸರಕಾರವು ಸಿದ್ಧ ಮಾಡಿದರೆ ನಾನು ನನ್ನ ಯೋಚನೆಯನ್ನು ಬದಲಾಯಿಸುತ್ತೇನೆ. ಗುಲಾಮಯೂನಿಯನ್‌ಗಳು ಎಂದೂ ಸ್ವತಂತ್ರವಾಗಲಾರದು ಎಂದೇ ನನಗೆ ಅನಿಸುತ್ತದೆ. ಏಕೆಂದರೆ ಸ್ವತಂತ್ರ ಯುನಿಯನ್‌ಗಳಿಗೆ ಹಾಕಿದ ಶರತ್ತು ಅಸಾಧ್ಯ ಮಟ್ಟದ್ದಾಗಿದೆ. ಅದನ್ನೆಂದಿಗೂ ಈಡೇರಿಸುವುದು ಸಾಧ್ಯವಿಲ್ಲ. ಯಾವುದೇ ಯೂನಿಯನ್ ಸ್ವತಂತ್ರವಾಗಲು, ಆ ಯೂನಿಯನ್ನ್‌ನ ಒಟ್ಟೂ ಕಾರ್ಮಿಕರಲ್ಲಿ ೫೦.೧% ಸದಸ್ಯರಿರಬೇಕೆಂದಿದೆ. ಈ ಶರತ್ತು ಯೋಗ್ಯವಾದುದೇ? ಕಾರ್ಮಿಕರು ಮಾಲೀಕರ ಮಾನ್ಯತೆಯ ಗುಲಾಮಗಿರಿಯನ್ನು ತಪ್ಪಿಸಿ ಸ್ವತಂತ್ರರಾಗಬೇಕೆಂದಿದ್ದರೆ, ಅವರಲ್ಲಿ ೫೦% ಕಾರ್ಮಿಕರು ಟ್ರೇಡ್ ಯೂನಿಯನ್ಸ್‌ನ ಸದಸ್ಯರಾಗಿರಬೇಕೆಂಬ ಶರತ್ತು ಪಾಲಿಸುವುದು ಎಂದಾದರೂ ಸಾಧ್ಯವೇ?

ನಮಗೆ ಕಾಂಗ್ರೆಸ್ ಮಿತ್ರರು ಅಹಮದಾಬಾದದಲ್ಲಿಯ ನಮೂನೆಯಿಂದ ಕೂಡಿದ ಪರಿಸ್ಥಿತಿಯತ್ತ ದೃಷ್ಟಿ ಬೀರುವಂತೆ ಹೇಳಿದ್ದಾರೆ. ಸರಕಾರವು ಅದೇ ನಮೂನೆಯಂತೆ ವರ್ತಿಸಬೇಕೆಂದು ಉಪದೇಶ ಮಾಡಿದೆ. ನನಗೆ ಅದೆಲ್ಲ ಒಪ್ಪಿಗೆ. ಆದರೆ ನಾನು ಕೇಳುವುದೇನೆಂದರೆ, ಈ ಬಿಲ್ಲಿನಂತೆ 'ಅಹಮದಾಬಾದ ಕಾರ್ಮಿಕ ಮಹಾಜನ' ಎಂಬ ಸಂಸ್ಥೆಯೂ ಸಹ ಸ್ವತಂತ್ರಯೂನಿಯನ್ ಆಗುವುದು ಸಾಧ್ಯವೇ? ಆ ಯುನಿಯನ್ನ ಸ್ವತಂತ್ರಕಾರ್ಮಿಕರ ಯೂನಿಯನ್ ಆಗಬಹುದೆಂದು ನನಗಂತೂ ಅನಿಸುವುದಿಲ್ಲ. ಅಹಮದಾಬಾದದಲ್ಲಿ ಕೆಲವು ಮುಸಲ್ಮಾನರನ್ನು ಬಿಟ್ಟರೆ ಎಲ್ಲ ಗಿರಣಿಗಳ ಮಾಲೀಕರು ಮತ್ತು ಜವಳಿಗಿರಣಿಯ ಕಾರ್ಮಿಕರು ಒಂದೇ ಧರ್ಮದವರು ಮತ್ತು ಒಂದೇ ಭಾಷೆಯನ್ನು ಮಾತಾಡುತ್ತಾರೆ. ಅದರಿಂದಾಗಿ ಮಾಲೀಕ ಮತ್ತು ಕಾರ್ಮಿಕರ ನಡುವೆ ವೈಮನಸ್ಸು ತಲೆದೋರುವ ಸಾಧ್ಯತೆ ಕಡಿಮೆಯಿರುತ್ತದೆ. ಅದೂ

ಅಲ್ಲದೆ ಗುಜರಾತವು ಮಹಾತ್ಮಗಾಂಧಿಯ ನಿವಾಸಸ್ಥಾನವಾಗಿರುವುದರಿಂದ ಅವರೆದುರಿಗೆ ಮಾಲೀಕ ಮತ್ತು ಕಾರ್ಮಿಕರು ತಮ್ಮ ಬೇಡಿಕೆಯನ್ನು ತೋಡಿಕೊಳ್ಳುವುದು ಸಾಧ್ಯ. ಅವರು ನೀಡಿದ ನಿರ್ಣಯವನ್ನು ಅವರು ಮೌನವಾಗಿ ಸ್ವೀಕರಿಸಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ 'ಕಾರ್ಮಿಕ ಮಹಾಜನ' ಎಂಬ ಯೂನಿಯನ್ ಬೆಳೆದಿದೆ. ನನ್ನ ಹತ್ತಿರ ೧೯೩೮ರ ವರ್ಷದ ಲೇಬರ್ ಗೆಜೆಟಯಿದೆ. ಅದರ ಮೇಲಿಂದ ತಿಳಿದು ಬರುವುದೇನೆಂದರೆ, ಅಹಮದಾಬಾದಿನ ಜವಳಿಗಿರಣಿಯಲ್ಲಿ ಒಟ್ಟೂ ೯೦,೦೦೦ ಕಾರ್ಮಿಕರು ಕೆಲಸ ಮಾಡುತ್ತಾರೆ. ಈ ೯೦,೦೦೦ರಲ್ಲಿ ಎಷ್ಟು ಜನರು ಕಾರ್ಮಿಕ ಯೂನಿಯನ್‌ನ ಸದಸ್ಯರಾಗಿದ್ದಾರೆ? 'ಕಾರ್ಮಿಕ ಮಹಾಜನ' ಎಂಬ ಸಂಸ್ಥೆಯು ಐದು ಬೇರೆ ಬೇರೆ ಯೂನಿಯನ್ಸ್‌ಗಳು ಸೇರಿ ಸಿದ್ದಗೊಂಡಿದೆ. ಈ ಸಂಯುಕ್ತ ಯೂನಿಯನ್‌ದಲ್ಲಿ ಒಟ್ಟೂ ೨೨,೦೦೦ ಕಾರ್ಮಿಕರಿದ್ದಾರೆ. ಅಂದರೆ ಒಟ್ಟೂ ಕಾರ್ಮಿಕರ ವರ್ಗದವರಲ್ಲಿ ಕೇವಲ ೨೯% ರಷ್ಟು ಜನರು ಮಾತ್ರ ಸದಸ್ಯರಾಗಿದ್ದಾರೆ. ಹೀಗಿರುವಾಗ ಅಹಮದಾಬಾದ ಕಾರ್ಮಿಕ ಮಹಾಜನವು ಮಾಲೀಕನ ಅನುಮತಿಯಿಲ್ಲದೆ ಈ ಬಿಲ್‌ನಂತೆ ರಜಿಸ್ಟರ್‌ಗೊಳ್ಳಲು ಪಾತ್ರವಾಗುತ್ತದೆಯೆ?

ಆಹಮದಾಬಾದಿನಂತಹ ಸುಖಸೌಲಭ್ಯ ಪರಿಸ್ಥಿತಿಯಲ್ಲಿರುವ 'ಕಾರ್ಮಿಕ ಮಹಾಜನ'–ಈ ಯೂನಿಯನ್‌ಗೂ ಸ್ವಾತಂತ್ರಗೊಳ್ಳಲು ಬರಲಾರರು. ಏಕೆಂದರೆ ಇದು ರಜಿಸ್ಟರ್ ಆಗಲು ಮಾಲೀಕರ ಒಪ್ಪಿಗೆಯನ್ನು ಅವಲಂಬಿಸಿರಬೇಕಾಗುತ್ತದೆ.

ಆದ್ದರಿಂದಲೇ ಈ ಬಿಲ್‌ಹಾಕಿದ ಶರತ್ತು ಅಸಾಧ್ಯವಾಗಿದೆ. ಉದ್ಯೋಗ ಧಂದೆಯಲ್ಲಿ ಮುಂದುವರಿದ ಇಂಗ್ಲಂಡ್ ದೇಶದಲ್ಲೂ ಸಹ ಈ ಶರತ್ತು ಅಸಾಧ್ಯವೆಂದೇ ನನ್ನ ಅನಿಸಿಕೆ. ಮಿ. ವಾಲ್ಟರ್ ಅವರ ಪುಸ್ತಕದಿಂದ ತಿಳಿದು ಬರುವುದೇನೆಂದರೆ, ಇಂಗ್ಲಂಡಿನಲ್ಲಿ ಒಟ್ಟೂ ೧೮,೦೦೦,೦೦೦ ಕಾರ್ಮಿಕರಿದ್ದಾರೆ ಮತ್ತು ಅವರಲ್ಲಿ ೫,೫೩೧,೦೦೦ ಕಾರ್ಮಿಕ ಯೂನಿಯನ್ಸ್‌ನ ಸದಸ್ಯರಾಗಿದ್ದಾರೆ. ಸುಮಾರು ೩೦% ಕಾರ್ಮಿಕರು ಇಂಗ್ಲೆಂಡಿನಲ್ಲಿ ಯುನಿಯನ್ ಸದಸ್ಯರಾಗಿದ್ದಾರೆ. ಯಾವ ದೇಶದ ಕಾರ್ಮಿಕರು ಸಂಘಟಿತರಾಗಿದ್ದಾರೋ, ಉದ್ಯೋಗ ಧಂದೆಯು ಸಾಕಷ್ಟು ಬೆಳೆದಿದೆಯೋ ಅಂಥ ಇಂಗ್ಲೆಂಡ್ ದೇಶದಲ್ಲೇ ಈ ಸ್ಥಿತಿಯಿರುವಾಗ, ನಮ್ಮಂಥ ಹಿಂದುಳಿದ ಹಿಂದೂಸ್ಥಾನದಲಿ ಟ್ರೇಡ್ ಯೂನಿಯನ್‌ನ ಸ್ಥಿತಿ ಹೇಗಿರಬಹುದು? ಯಾವುದೇ ಯೂನಿಯನ್ ಒಟ್ಟೂ ಕಾರ್ಮಿಕರಲ್ಲಿ ೫೦.೧% ಕಾರ್ಮಿಕರನ್ನು ತಮ್ಮ ಸದಸ್ಯರನ್ನಾಗಿ ಮಾಡಲಾರದು. ಅದರ ಪರಿಣಾಮವೇನಾಗುವುದೆಂದರೆ, ಮಾಲೀಕರ ಸಂಪತ್ತಿನ ಮೇಲೆ ಅವಲಂಬಿಸಿದ್ದ ಗುಲಾಮ ಯೂನಿಯನ್ ಮಾತ್ರ ಕಾರ್ಮಿಕರ ಪರವಾಗಿ ಹೊಂದಾಣಿಕೆಯ ಒಪ್ಪಂದದ ಚರ್ಚೆಯಲ್ಲಿ ಭಾಗವಹಿಸಬಹುದಾಗಿದೆ.

ಒಂದೇ ಉದ್ಯೋಗ ಧಂದೆಯಲ್ಲಿ ಇಲ್ಲವೇ ಒಂದೇ ನಿರ್ದಿಷ್ಟ ಸ್ಥಳದಲ್ಲಿರುವ ಉದ್ಯೋಗದಲ್ಲಿ ಒಂದೇ ಯೂನಿಯನ್ ಇರಬೇಕೆಂದು ಈ ಬಿಲ್ ನಿರ್ಧರಿಸಲಿದೆ. ಈ ಕಲಮಿನಿಂದಾಗಿ ಹಿಂದೂ ಟ್ರೇಡ್ ಯೂನಿಯನ್ಸ್‌ಗಳ ಬೆಳವಣಿಗೆ ಕುಂಠಿತವಾಗಲಿದೆ ಎಂದೆನಿಸುತ್ತದೆ. ಈ ತತ್ವವನ್ನು ಜಗತ್ತಿನ ಬೇರೆ ಯಾವುದಾದರೂ ದೇಶದಲ್ಲಿ ಅಳವಡಿಸಲಾಗಿದೆಯೇ? ಇಂಗ್ಲಂಡದಲ್ಲಿಯ ಟ್ರೇಡ್ ಯೂನಿಯನ್ಸಗಳ ಬಗೆಗೆ ನಾನು ಓದಿಕೊಂಡಿದ್ದೇನೆ. ಆದ್ದರಿಂದ ಪುರಾವೆ ಸಹಿತ ಖಾತ್ರಿಯಾಗಿ ನಾನು ಹೇಳುವುದೇನೆಂದರೆ, ಮೇಲಿನ ತತ್ವವನ್ನು ಇಂಗ್ಲೆಂಡಿನಲ್ಲಿ ಅಳವಡಿಸಲಾಗಿಲ್ಲ. ಯಾವುದೇ ತತ್ವ ಮತ್ತು ಧೋರಣೆಯಿಂದ ಕಾರ್ಮಿಕ ವರ್ಗವು ತನ್ನ ಸಂಘಟನೆಯನ್ನು ಮಾಡಬಹುದು ಎಂಬ ಅನುಮತಿಯನ್ನು ಇಂಗ್ಲಿಷ್‌ಕಾಯ್ದೆ ನೀಡಿದೆ. ಒಂದೇ ಉದ್ಯೋಗ ಅಥವಾ ಉದ್ಯೋಗ ವ್ಯಾಪಾರದಲ್ಲಿ ಒಂದೇ ತತ್ವವಿರಬೇಕೆಂಬ

ಈ ತತ್ವವನ್ನು ಇಂಗ್ಲೆಂಡಿನಲ್ಲಿ ವ್ಯವಹಾರದಲ್ಲಿ ತಂದಿಲ್ಲ."

ಈ ಮೇಲಿನ ವಿಷಯದ ಸಮರ್ಥನೆಗಾಗಿ 'The Employment Exchange of Great Britain' ಪುಸ್ತಕದ ಒಂದು ಭಾಗವನ್ನು ಓದಿತೋರಿಸಿದರು.

ಇಂಗ್ಲಂಡಿನಲ್ಲಿ ಸಾರ್ವತ್ರಿಕ ಯೂನಿಯನ್‌ಗೆ ಸಂಪೂರ್ಣ ಒಪ್ಪಿಗೆಯಿದೆ. ಬೇರೆ ಬೇರೆ ಉದ್ಯೋಗಧಂದೆಯಲ್ಲಿ ಇರುವ ಕಾರ್ಮಿಕ ಜನರು ಸಂಘಟಿತರಾಗಿ ಒಂದು ಯೂನಿಯನ್ ಸ್ಥಾಪಿಸಬಹುದು. ಸಾರ್ವತ್ರಿಕ ಯೂನಿಯನ್‌ನ ಸದಸ್ಯರು ಒಂದೇ ಉದ್ಯೋಗಧಂದೆಯಲ್ಲಿಯ ಬೇರೆ ಬೇರೆ ವ್ಯವಸಾಯದಲ್ಲಿ ನೌಕರರಾಗಿರುತ್ತಾರೆ. ಅಂದರೆ ಬೇರೆ ಬೇರೆ ಉದ್ಯೋಗಧಂದೆಯಲ್ಲಿರುವ ಕಾರ್ಮಿಕರು ಒಂದೇ ಯೂನಿಯನ್‌ನ ಸದಸ್ಯರಾಗಬಹುದು. ಯಾವ ರೀತಿಯ ಕಾರ್ಮಿಕರು ತಮ್ಮ ಸಂಘಟನೆಯನ್ನು ಕಟ್ಟಬೇಕು ಎನ್ನುವುದು ಇಂಗ್ಲಂಡಿನಲ್ಲಿ ಕಾರ್ಮಿಕರಿಗೇ ಬಿಟ್ಟುಕೊಡಲಾಗಿದೆ. ಇಂಥ ಸ್ಥಿತಿಯು ಇಂಗ್ಲಂಡದಂತಹ ಮುಂದುವರೆದ ದೇಶದಲ್ಲಿರುವಾಗ ಹಿಂದೂಸ್ಥಾನದಂತಹ ಹಿಂದುಳಿದ ದೇಶಕ್ಕೆ ಈ ಬಗೆಯ ಕಾನೂನಿನ ಅಗತ್ಯವೇನಿದೆ ಎನ್ನುವುದೇ ನನಗೆ ಗೊತ್ತಾಗುತ್ತಿಲ್ಲ.

---

ಇದರ ಮುಂದಿನ ಭಾಷಣದ ಸಂಚಿಕೆಯು ಉಪಲಬ್ದವಾಗಿಲ್ಲ –ಸಂಪಾದಕ.

# ೧೪೨.
# ಬಂಡವಾಳದಾರರ ಕೃಪೆಯಿಂದ ಶ್ರಮಜೀವಿ ವರ್ಗದ ಕಲ್ಯಾಣ ಅಸಾಧ್ಯ

ಮೊದಲೇ ಪ್ರಕಟಣೆ ನೀಡಿದಂತೆ ಕಳೆದ ಭಾನುವಾರ, ದಿನಾಂಕ ೧೬ ಅಕ್ಟೋಬರ ೧೯೩೮ರ ಸಾಯಂಕಾಲ, ಆರೂವರೆ ಗಂಟೆಗೆ, ಮುಂಬೈಯ ಪ್ರಮುಖ ಕಾರ್ಮಿಕಸಂಸ್ಥೆಯ ಪರವಾಗಿ, ವಿಶೇಷವಾಗಿ ಸ್ವತಂತ್ರ ಕಾರ್ಮಿಕ ಪಕ್ಷ ಮತ್ತು ಟ್ರೇಡ್ ಯೂನಿಯನ್ ಕಾಂಗ್ರೆಸ್ ಪರವಾಗಿ ಕಾರ್ಮಿಕರ ಒಂದು ಸಂಯುಕ್ತ ಸಮ್ಮೇಳನವು ಪರಳಿನ ಕಾರ್ಮಿಕರ ಬಯಲಲ್ಲಿ ಏರ್ಪಟ್ಟಿತ್ತು. ಈ ಸಮ್ಮೇಳನವು ಅಧ್ಯಕ್ಷಸ್ಥಾನವನ್ನು ಬ್ಯಾ. ಜಮನಾದಾಸ ಮೆಹತಾ ಸ್ವೀಕರಿಸಿದ್ದರು. ಮುಂಬೈ ಪ್ರಾಂತೀಯ ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಮಂತ್ರಮಂಡಳವು ಕಾರ್ಮಿಕರ ಹಿತರಕ್ಷಣೆಯ ನೆಪದಲ್ಲಿ ಟ್ರೇಡ್ ಡಿಸ್ಪ್ಯೂಟ್ ಬಿಲ್‌ನ್ನು ಮಂಡಿಸಿತ್ತು. ಅದನ್ನು ನಿಷೇಧಿಸಲು ೫೦,೦೦೦ ಕಾರ್ಮಿಕರ ಭವ್ಯ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಅದೇ ರೀತಿ ಈ ಸಮ್ಮೇಳನದಲ್ಲಿ ದಿನಾಂಕ ೭ ನವ್ಹೆಂಬರ ೧೯೩೮ರಂದು ಮುಂಬೈ ಪರಿಸರದಲ್ಲಿ ಒಂದು ದಿನದ ಸಾರ್ವತ್ರಿಕ ಮುಷ್ಕರಕ್ಕೆ ಕರೆನೀಡಿ ಈ ಸರಕಾರಿ ಬಿಲ್‌ನ್ನು ಕಾರ್ಮಿಕರು ಅದೆಷ್ಟು ತೀವ್ರವಾಗಿ ವಿರೋಧಿಸುತ್ತಾರೆ ಎನ್ನುವುದನ್ನು ಬಹಿರಂಗವಾಗಿ ಸರಕಾರದ ಗಮನಕ್ಕೆ ತರುವ ನಿರ್ಧಾರವನ್ನು ಸಮ್ಮೇಳನ ಕೈಕೊಂಡಿತು.

ಕಳೆದ ಭಾನುವಾರ, ಈ ಸಮ್ಮೇಳನದ ಪ್ರಚಾರಕ್ಕಾಗಿ ಕೆಲವು ಕಾರ್ಮಿಕರು ಮತ್ತು ಮುಖಂಡರು ಕಾರ್ಮಿಕರ ವಸತಿಯಲ್ಲಿ ಲಾರಿ ಏರಿ ತಿರುಗಾಡುತ್ತಿದ್ದರು. ಘೋಡಪದೇವ ಬದಿಯಿಂದ ಈ ಲಾರಿಯು ಹೋಗುತ್ತಿರುವಾಗ, ಕೆಲವು ಗೂಂಡಾಗಳು ಅಡಗಿ ಕೂತು ಕಾರ್ಮಿಕರ ಲಾರಿಗೆ ಕಲ್ಲುಹೊಡೆದರು. ಅನಿರೀಕ್ಷಿತವಾಗಿ ನಡೆದ ಈ ಕಲ್ಲು ತೂರಾಟದಲ್ಲಿ ೧೦-೧೨ ಕಾರ್ಮಿಕರಿಗೆ ಗಂಭೀರ ಗಾಯವಾಯಿತು. ರಕ್ತಸಿಕ್ತಗೊಂಡ ಅವರ ಬಟ್ಟೆಯನ್ನು ಬ್ಯಾ. ಮೆಹತಾ ಸಭೆಯಲ್ಲಿ ಎಲ್ಲರಿಗೂ ತೋರಿಸಿದರು. ಆಗ ಕಾರ್ಮಿಕರು ಕಾಂಗ್ರೆಸಿನ ಈ ಗೂಂಡಾಗಿರಿಯನ್ನು ಬಹಿರಂಗವಾಗಿ ನಿಷೇಧಿಸಿದರು. ಬ್ಯಾ. ಮೆಹತಾ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಕಾಂಗ್ರೆಸಿನ ಹಿಂಸಾವಾದಿ ವರ್ತನೆಯನ್ನು ಖಂಡಿಸಿದರು.

ಅನಂತರ ಕ್ಯಾ. ಮಿರಜಕರ ಅವರು ಗೊತ್ತುವಳಿಯ ಮಸೂದೆಯನ್ನು ಓದಿತೋರಿಸಿದ ಬಳಿಕ ಶಾಸಕ ಖೇಡಗಿಕರ, ಜೋಶಿ, ರಾಮರಾವ ಪರೂಳೇಕರ, ಬಿ.ಟಿ. ರಣದಿವೆ, ಜೋಗಳೆಕರ, ಸೌ. ಉಷಾತಾಯಿ ದಾಂಗೆ, ಓಕ್, ಪಾಟಕರ್, ಕು. ನಿಮಕರ, ಜೆ. ಬುಖಾರಿ, ಸ್ವಕಾ.ಪ.ದ ಸೆಕ್ರೇಟರಿ ಭಾಮಿಡಿ, ಮಿ. ಪ್ರಧಾನ, ಶಾಸಕ ಜೋಳೆ, ಮಧ್ಯ ಪ್ರಾಂತದ ಕಾರ್ಮಿಕ ಮುಖಂಡರಾದ ಶ್ರೀ ದಶರಥ ಪಾಟೀಲ, ಭಾಯಿಜಯವಂತ ಮುಂತಾದ ಮುಖಂಡರ ಭಾಷಣದ ಬಳಿಕ, ಕರತಾಡನದ ನಡುವೆ ಡಾ. ಅಂಬೇಡ್ಕರ ಅವರ ಭಾಷಣ ಶುರುವಾಯಿತು.

ಮೊದಲಿಗೆ ಅವರು ಅಸಂಖ್ಯ ಕಾರ್ಮಿಕರ ಸಂಘಟನೆಯ ಬಗೆಗೆ ಸಂತೋಷ ವ್ಯಕ್ತಪಡಿಸಿ, ಮಾತಿಗೆ ಆರಂಭಿಸಿದರು.

'ಇಂದು ಇಲ್ಲಿಗೆ ಆಗಮಿಸಿ ಕಾರ್ಮಿಕ ಮುಖಂಡರ ಮತ್ತು ಕಾರ್ಮಿಕ ಬಂಧು ಭಗಿನಿಯರ

---

ಜನತಾ: ೨೨ ಅಕ್ಟೋಬರ್ ೧೯೩೮.

ಎದುರಿಗೆ ಮಾತಾಡುವ ಅವಕಾಶ ಯೋಗಯೋಗದಿಂದ ಲಭಿಸಿದ್ದು, ನನ್ನ ದೃಷ್ಟಿಯಿಂದ ಅಪೂರ್ವವಾದುದು.' ಯಾವ ಬಿಲ್‌ನ್ನು ಬಹಿರಂಗವಾಗಿ ವಿರೋಧಿಸಲು ತಾವೆಲ್ಲ ಇಲ್ಲಿ ಸೇರಿದ್ದೀರಿ, ಆ ಬಿಲ್‌ಗಾಗಿ ನಾನು ಅಸೆಂಬ್ಲಿಯಲ್ಲಿ ನನ್ನ ಅಭಿಪ್ರಾಯವನ್ನು ಮಂಡಿಸಿ, ಈ ಅನ್ಯಾಯಕಾರಕವಾದ ಕಾಯ್ದೆಯ ಬಗೆಗಿನ ಕಾಂಗ್ರೆಸ್ ಸರಕಾರದ ಧೋರಣೆಯನ್ನು ಖಂಡಿಸಿದ್ದೇನೆ. ಅನಂತರ ಈ ಬಿಲ್ ಬಗೆಗೆ ಹೆಚ್ಚು ಸಮಯ ನೀಡಿ ಅಸೆಂಬ್ಲಿಯಲ್ಲಿ ಕಾರ್ಯ ಮಾಡುವುದಾಗಲಿಲ್ಲ. ನಿಜವಾಗಿಯೂ ನಾನು ಖೇದವನ್ನು ವ್ಯಕ್ತಮಾಡುತ್ತೇನೆ. ಆದರೆ ಹೋರಾಟದ ಆ ಕಾರ್ಯವನ್ನು ನನ್ನ ಗೆಳೆಯನಾದ ಬ್ಯಾ. ಜಮನಾದಾಸ ಮೆಹತಾ ಅವರು ಯೋಗ್ಯರೀತಿಯಿಂದ ನಿರ್ವಹಿಸಿದ್ದರಿಂದ, ಈ ಸಮ್ಮೇಳನದಲ್ಲಿ ನಾನವರನ್ನು ಅಭಿನಂದಿಸುತ್ತೇನೆ. ಈ ಮಸೂದೆಯು ಕಾರ್ಮಿಕರ ಸ್ವಾತಂತ್ರ್ಯದ ಮೇಲೆ ಮತ್ತು ಒಟ್ಟೂ ಹಿತಸಂಬಂಧದ ಮೇಲೆ ಹೇಗೆ ಗದಾಪ್ರಹಾರ ಮಾಡಲಿದೆ ಎಂಬುದನ್ನು ಸದ್ಯದ ಅಸೆಂಬ್ಲಿಯಲ್ಲಿ ಈ ಬಿಲ್ಲಿನ ಚರ್ಚೆಯ ಕಾಲಕ್ಕೆ ಕಾರ್ಮಿಕರ ಪ್ರತಿನಿಧಿಗಳು ಕಾಂಗ್ರೆಸಿನ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಿದ್ದಾರೆ.

ಇಂದಿನ ಸಮ್ಮೇಳನದ ಕಾರ್ಯಕರ್ತರು ಈ ಬಿಲ್ ಬಗ್ಗೆ ಅಸಂತೋಷ ವ್ಯಕ್ತಪಡಿಸಲು ಕರೆ ನೀಡಿದ ಒಂದು ದಿನದ ಸಾರ್ವತ್ರಿಕ ಮುಷ್ಕರಕ್ಕೆ ನನ್ನ ಬೆಂಬಲವಿದೆ. ಇದೇ ಬಗೆಯಲ್ಲೇ ಕಾರ್ಮಿಕರು ಸ್ವಂತ ಬಲದಿಂದ ಈ ಘಾತುಕ ಬಿಲ್‌ನ್ನು ಸದೆಬಡಿಯಲು ಪ್ರಯತ್ನಿಸುವುದು ಸದಾಕಾಲ ಹಿತಕಾರಿಯಾದುದು. ಈ ದೇಶದಲ್ಲಿ ೧೮೫೦ರಿಂದಲೇ ಜವಳಿ ಗಿರಣಿಗಳು, ಕಾರಖಾನೆಯಂಥ ಬೇರೆ ಬೇರೆ ಪ್ರಕಾರದ ಉದ್ಯೋಗಳು ಶುರುವಾದವು. ಅಂದಿನಿಂದ ಸಾವಿರಾರು ಮುಷ್ಕರಗಳಾದವು. ಆಗ ಅವರ ಈ ನ್ಯಾಯಯುತವಾದ ಶಸ್ತ್ರದ ಬಗೆಗೆ ಯಾರೂ ಅಡ್ಡಿ ಆತಂಕವನ್ನು ಉಂಟು ಮಾಡಲಿಲ್ಲ. ಗುಲಾಮಗಿರಿಯ ಮೇಲೆ ಬೆಳಕು ಬೀರುವ ಮುಷ್ಕರದಂತಹ ಹತಾರವನ್ನು ನೌಕರಶಾಹಿಯೂ ಸತ್ತೆಯ ಬಲದಿಂದ ಕಸಿದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಆದರೆ ಇಂದು ಕಾರ್ಮಿಕರ ಬೆಂಬಲಿಗರು ಎಂದು ಕರೆಸಿಕೊಳ್ಳುವ, ಗುಲಾಮಗಿರಿಯನ್ನು ಧಿಕ್ಕರಿಸಿ ಸ್ವಂತದ ಬಡಾಯಿಯನ್ನು ಕೊಚ್ಚಿಕೊಳ್ಳುವ ಕಾಂಗ್ರೆಸು, ಅದರ ಮುಂಬೈ ಅಸೆಂಬ್ಲಿಯ ಮಂತ್ರಿಮಂಡಳದವರಿಂದ ಈ ಉಜ್ವಲ ತತ್ವಕ್ಕೆ ಮಸೀ ಬಳಿದು ಟ್ರೇಡ್ ಡಿಸ್ಪೂಟ್ ಬಿಲ್‌ನಂತಹ ಕಪ್ಪು ಕಾನೂನನ್ನು ಕಾರ್ಮಿಕರ ಗೋಣಿನ ಮೇಲೆ ಹೇರುತ್ತದೆ. ಯಾವುದೇ ಸರಕಾರ ಜನರಿಗೆ ಇಷ್ಟವಾಗದ ಕಾನೂನು ರೂಪಿಸಿದರೆ, ಅದರ ಪ್ರತಿಕಾರ ಮಾಡಲು ಅಸಹಕಾರದಂತಹ ಹೋರಾಟವನ್ನು ಶುರುಮಾಡುವುದು ಅಗತ್ಯವಾಗಿದೆ–ಎಂದು ಕಾಂಗ್ರೆಸಿನ ಪಂಚಪ್ರಾಣವಾದ ಗಾಂಧೀಜಿಯವರು ಯಾವ ಬೋಧನೆಯನ್ನು ಈ ದೇಶದ ಬಂಧುಗಳಿಗೆ ನೀಡಿದರೋ,

ಅದನ್ನು ಕಾರ್ಮಿಕರು 'ಗುರುವಿಗೇ ತಿರುಮಂತ್ರ' ಎಂಬಂತೆ ನ್ಯಾಯಯುತವಾಗಿ ಬಳಸಿಕೊಂಡರು. ನಾನು ಈವರೆಗೆ ಈ ಪ್ರಶ್ನೆಯ ಬಗೆಗೆ ಶಾಂತವಾಗಿ ಯೋಚಿಸಿದ್ದೇನೆ. ಅದರ ಮೇಲಿಂದ ಸಾರ್ವತ್ರಿಕ ಮುಷ್ಕರದಿಂದಾಗಲಿ. ನಿಷೇಧಾತ್ಮಕ ಸಭೆಯಿಂದಾಗಲಿ ಅಥವಾ ಪ್ರತಿಭಟನಾ ಮೆರವಣಿಗೆಯಿಂದಾಗಲಿ ಶ್ರಮಿಕರ ಸರ್ವಾಂಗೀಣ ಪ್ರಗತಿಯ ಹಿತಾಸಕ್ತಿಯ ಪ್ರಶ್ನೆಯನ್ನು ಬಗೆಹರಿಸಬಹುದು ಎಂದೆನಿಸುವದಿಲ್ಲ. ಅದಕ್ಕಿಂತ ಅಧಿಕ ಮಹತ್ವದ ಕೆಸಲ ಮಾಡದೇ ನಿರ್ವಾಹವಿಲ್ಲ. ಆ ಕಾರ್ಯವನ್ನು ಮಾಡಲು ಕಾರ್ಮಿಕರು ಬೇರೆ ಯಾವುದೇ ಪಕ್ಷದ ನೆರಳಲ್ಲಿ ತಮ್ಮ ಚಳುವಳಿಯನ್ನು ಶುರು ಮಾಡುವುದಕ್ಕಿಂತ, ಸ್ವತಂತ್ರ ಪಕ್ಷವನ್ನು ಸ್ಥಾಪಿಸುವುದರಲ್ಲೇ ನಿಜವಾದ ಹಿತಾಸಕ್ತಿ ಅಡಗಿದೆ. ನನ್ನ ಹಲವು ಗೆಳೆಯರು ಕಾಂಗ್ರೆಸಿನಲ್ಲಿ ಶಾಮೀಲಾಗುವಂತೆ ಕಳಕಳಿಯ ಉಪದೇಶ ಮಾಡುತ್ತಿದ್ದಾರೆ. ಆದರೆ ನಮ್ಮ ಹೋರಾಟವನ್ನು ನಾವು ನಮ್ಮ ಸ್ವಂತ ಕಾಲಮೇಲೆ ನಿಂತೇ ಮಾಡಬೇಕಾಗಿದೆ. ಪರರ ಬಳಿ ಭಿಕ್ಷೆಬೇಡಿ ಯಾರದೇ ಆಗಲಿ ಯಾವ ಕಾಲಕ್ಕೂ ಕಾರ್ಯ

ಪೂರ್ತಿಯಾಗಲಾರದು, ಸ್ವಂತ ದಿಟ್ಟತನವೇ ನಿಜವಾದ ಮಾರ್ಗದರ್ಶಕ ಶಕ್ತಿಯಾಗಿರುತ್ತದೆ. ಆದ್ದರಿಂದ ಬಂಡವಾಳದಾರರ ಕೃಪೆಯಲ್ಲಿ ಬದುಕುವ ಕಾಂಗ್ರೆಸಿನಿಂದ ಎಂದೂ ಶ್ರಮಿಕರ ಕಲ್ಯಾಣವಾಗಲಾರದು. ಆ ಕಾರಣಕ್ಕಾಗಿ ಸಂಪೂರ್ಣ ರಾಜಕೀಯ ಸತ್ತೆಯನ್ನು ಹಸ್ತಗತ ಮಾಡಿಕೊಳ್ಳಲು ಕಾರ್ಮಿಕರೆಲ್ಲ ಸೇರಿ ಸ್ವತಂತ್ರಪಕ್ಷದ ಧ್ವಜದ ಅಡಿಯಲ್ಲಿ ದಿಟ್ಟತನದಿಂದ ಹೋರಾಡುವ ಅಗತ್ಯವಿದೆ.

# ೧೪೩.
# ನನ್ನ ಮತ್ತು ಮಹಾತ್ಮಾಜಿಯ ಭೇಟಿಯಾದಾಗ–

ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಅಹಮದಾಬಾದಿಗೆ ಬರಲಿದ್ದಾರೆ ಎಂಬ ಸುದ್ಧಿ ಗೊತ್ತಾಗಿದ್ದೇ ತಡ ಅಲ್ಲಿಯ ಕೆಲ ಕಾಂಗ್ರೆಸ್ ಧುರೀಣರು ಚಡಪಡಿಸಲಾರಂಭಿಸಿದರು. ಹೇಗಾದರೂ ಮಾಡಿ ಅವರು ಬರುವುದನ್ನು ಪ್ರತಿಬಂಧಿಸಬೇಕೆಂದು ಟೆಲಿಗ್ರಾಮ, ಟೆಲಿಫೋನ ಮೂಲಕ ಮುಂಬೈ ಜೊತೆಗೆ ರಹಸ್ಯ ಕಾರ್ಯಾಚರಣೆ ನಡೆಯಿತು. ಅದರಿಂದ ಏನೂ ಲಾಭವಾಗದೆ, ಕೊನೆಗೆ ಅವರು ಬರುವುದು ಖಚಿತವಾದಾಗ ಅಹಮದಾಬಾದಿನಲ್ಲಿ ಅವರನ್ನು ನಿಷೇಧಿಸಿ, ಧಿಕ್ಕಾರ ಹಾಕುವ ವಿಫಲ ಪ್ರಯತ್ನ ನಡೆಯಿತು.

ದಿನಾಂಕ. ೨೨, ೨೩ ಅಕ್ಟೋಬರ ೧೯೩೮ ಈ ಎರಡು ದಿನಗಳ ಅಹಮದಾಬಾದಿನ ಮುಕ್ಕಾಮಿನಲ್ಲಿ ಡಾಕ್ಟರ ಸಾಹೇಬರ ಸನ್ಮಾನಗಳ ಮತ್ತು ಉಪನ್ಯಾಸಗಳ ಕನಿಷ್ಠ ಹದಿನೈದು ಸಮಾರಂಭಗಳನ್ನಾದರೂ ಜರುಗಿಸಬೇಕು. ಅವರ ಎಲ್ಲ ಕಾರ್ಯಕ್ರಮಗಳು ಭರ್ಜರಿಯಾಗಿ ನೆರವೇರಿತು. ಗುಜರಾತ ಪ್ಹರ್ನಾಕ್ಯುಲರ್ ಸೊಸೈಟಿಯ ಪ್ರೇಮಭಾಯಿ ಹಾಲ್‌ನಲ್ಲಿ ಜರುಗಿದ ಸಮಾರಂಭವು ಸದ್ಯದ ರಾಜಕಾರಣದ ದೃಷ್ಟಿಯಿಂದ ತೀರ ಮಹತ್ವದ್ದು. ಈ ಕಾಲಕ್ಕೆ ದಲಿತ ನವಯುವಕ ಮಂಡಳದ ಪರವಾಗಿ ನೀಡಿದ ಸನ್ಮಾನಕ್ಕೆ ಉತ್ತರನೀಡಿದ ಭಾಷಣವು ಅತ್ಯಂತ ಮೌಲಿಕವೂ, ಉದ್ಬೋಧಕವೂ ಆಗಿತ್ತು. ಅದರಲ್ಲಿಯ ಕೆಲವು ಭಾಗ ನಮೂದಿತಗೊಂಡು ಎಲ್ಲರ ಗಮನಕ್ಕೆ ಬರುವುದು ತುಂಬ ಮಹತ್ವದ್ದಾಗಿದೆ.

ತಾನು ಗಾಂಧಿಯ ವಿರೋಧಿ ಮತ್ತು ಕಾಂಗ್ರೆಸ್ ಪಕ್ಷ ಸೇರುವುದಿಲ್ಲ ಎಂಬೆರಡು ಆರೋಪಗಳಿಗೆ ಅವರು ಉತ್ತರಿಸಿದ್ದು ಹೀಗೆ–

'ನಾನು ಗಾಂಧಿಯ ವಿರೋಧಿ ಎಂಬ ಆರೋಪ ಮಾಡಲಾಗಿದೆ. ನಾನು ಅವರನ್ನು ವಿರೋಧಿಸುತ್ತಿರುವುದು ಸತ್ಯವೇ. ನಾನು ಗಾಂಧಿಯ ವಿರೋಧಿ ಎಂದು ಗುಜರಾತಿನ ಈ ಪಾಟನಗರದಲ್ಲಿ, ಗಾಂಧಿವಾದದ ಕೇಂದ್ರತಾಣದಲ್ಲಿ ನಿಮ್ಮೆಲ್ಲರ ಎದುರಿಗೆ ಬಹಿರಂಗವಾಗಿಯೇ ಹೇಳುತ್ತಿದ್ದೇನೆ. ಈ ಮಾತು ಹೇಳುವಾಗ ನನಗೆ ಯಾವ ಹಿಂಜರಿಕೆಯೂ ಇಲ್ಲ. ಗಾಂಧಿಯ ವಿರುದ್ಧ ಮಾತಾಡುವುದು ಅಷ್ಟೊಂದು ಹಗುರದ ವಿಷಯವಲ್ಲ. ಇಂದು ಕೋಟ್ಯಾವಧಿ ಜನರು ಅವರನ್ನು ಅವತಾರಪುರುಷನೆಂದು ಒಪ್ಪುತ್ತಾರೆ. ಪ್ರಪಂಚದಲ್ಲಿ ಅವರು ಹಿಂದೂಸ್ಥಾನದ ಏಕಮೇವ ಪ್ರತಿನಿಧಿಯೆಂದು ಮೆರೆಯುತ್ತಿದ್ದಾರೆ. ಅವರು ಸಂತ, ಮಹಾತ್ಮಾ ಎಂದು ಭಾವಿಸಲಾಗುತ್ತಿದೆ. ಗಾಂಧಿಯ ಪಾದದ ಬಳಿ ಕೂತು 'ಜೀ ಹುಜೂರ್' ಎಂದು ಹೇಳುವುದರಿಂದ ಏನು ಲಾಭವಾಗಲಿದೆ ಎನ್ನುವುದು ನನಗೆ ಗೊತ್ತಿಲ್ಲವೇ? ಸುಭಾಷಭೋಸನನ್ನೇ ನೋಡಿ. ೧೯೩೨ರಲ್ಲಿ ವಿಠ್ಠಲಭಾಯಿ ಪಟೇಲರ ಕೈ ಹಿಡಿದು ಅವರು ಗಾಂಧಿಯ ಬಗೆಗೆ ಹೇಳಿದ್ದೇನು?

ಮಹಾತ್ಮಾ ಗಾಂಧಿಯವರು ಕಾಯ್ದೆಭಂಗ ಚಳುವಳಿಯನ್ನು ಸ್ಥಗಿತಗೊಳಿಸಿದ್ದು ಕಂಡು ಬೆರಗಾಯಿತು. ಮಹಾತ್ಮಾ ಗಾಂಧಿಯವರು ಈವರೆಗೆ ರಾಷ್ಟ್ರದಲ್ಲಿ ನಡೆದ ಮಹತ್ವದ ಕಾರ್ಯದ ಮೇಲೆ ಲೆಕ್ಕಣಿಕೆಯ

---

ಚಿತ್ರಾ: ೬ ನವ್ಹೆಂಬರ್ ೧೯೩೮.

ಒಂದೇ ಬಳಕೆಯಿಂದ ಕಪ್ಪುಮಸಿ ಬಳಿದಿದ್ದಾರೆ. ಕಳೆದ ೧೩ ವರ್ಷಗಳಲ್ಲಿ ಅಪೂರ್ವ ಸ್ವಾರ್ಥತ್ಯಾಗ ಮತ್ತು ಆತ್ಮಯಜ್ಞ ಮಾಡಿ ಹಿಂದುರಾಷ್ಟ್ರವು ತಾನು ಮಾಡಿದ ಚಳುವಳಿಯ ಕೀರ್ತಿ ಮತ್ತು ಮರ್ಯಾದೆಯನ್ನು ಮಹಾತ್ಮಾಜಿಯ ಈ ಚಳುವಳೀಯ ಸ್ಥಗಿತದ ನಿರ್ಣಯದಿಂದಾಗಿ ತೀರ ಕಳೆದುಕೊಂಡಂತಾಯಿತು. ಇಂಥ ಚಳುವಳಿಯನ್ನು ಒಮ್ಮೆಲೆ ಸ್ಥಗಿತಗೊಳಿಸುವ ಹಕ್ಕು ಅವರಿಗೆಲ್ಲಿದೆ ಎನ್ನುವುದು ನನಗೆ ಈಗಲೂ ಅರ್ಥವಾಗಲಿಲ್ಲ. ಒಮ್ಮೆ ನೆಪೋಲಿಯನ್‌ನು 'ಐ ಆ್ಯಮ್ ದಿ ಸ್ಟೇಟ್' (I am the State) ಎಂದು ಉದ್ಗರಿಸಿದ್ದ. ಇಂದು ಗಾಂಧಿ 'ಐ ಆ್ಯಮ್ ದಿ ಕಾಂಗ್ರೆಸ್' (I am the Congress) ಎಂದು ಅಪ್ರತ್ಯಕ್ಷವಾಗಿ ಹೇಳುತ್ತಲಿದ್ದಾರೆ. ಸವಿನಯ ಕಾಯ್ದೆಭಂಗ ಚಳುವಳಿಯನ್ನು ಸ್ಥಗಿತಗೊಳಿಸುವುದು ಎಂದರೆ ಸದ್ಯದ ಕಾಂಗ್ರೆಸಿನ ಕಾರ್ಯಕ್ರಮ ಅಯಶಸ್ವಿಗೊಂಡಿದೆ ಎಂದೊಪ್ಪಿಕೊಂಡಂತಾಗುತ್ತದೆ. ಮಹಾತ್ಮಾಗಾಂಧಿ ರಾಜಕೀಯ ಮುಖಂಡರು ಎಂಬ ದೃಷ್ಟಿಯಿಂದ ಅಯಶಸ್ವಿಯಾಗಿದ್ದಾರೆ ಎಂದೇ ನನ್ನ ವ್ಯಕ್ತಿಗತ ಅಭಿಪ್ರಾಯವಾಗಿದೆ. ಗಾಂಧಿಯನ್ನು ಹೀಗೆ ಬಯ್ಯುವ ಈ ಗೃಹಸ್ಥನು ಇಂದು ರಾಷ್ಟ್ರಭಕ್ತನಾಗಿದ್ದಾನೆ. ಈ ಬದಲಾವಣೆಗೆ ಕಾರಣವೇನೆಂದರೆ ಅನಂತರ ಅವರು ಹೊದೆದುಕೊಂಡ ಗಾಂಧಿಭಕ್ತಿಯ ಹೊದಿಕೆ, ವಂತಿಕೆಯ ನಾಲ್ಕಾಣೆ ಮತ್ತು ಬಿಳಿಟೊಪ್ಪಿಗೆಯ ಎರಡಾಣೆಯನ್ನು ಖರ್ಚುಮಾಡಿ ನಾನು ಕಾಂಗ್ರೆಸ್ ಸೇರಿಕೊಂಡರೆ ನಾನು ಬಯಸಿದ ಗೌರವ ನನಗೆ ಸಿಗುತ್ತದೆ ಎನ್ನುವುದು ಗೊತ್ತು. ಆದರೆ ಇಂಥ ಗೌರವವನ್ನು ಕಾಲಕಸವಾಗಿ ಕಾಣುತ್ತೇನೆ. ನಾನು ಗಾಂಧಿಯನ್ನು ಏಕೆ ವಿರೋಧಿಸುತ್ತೇನೆ, ನಾನು ಸ್ವಾರ್ಥಕ್ಕಾಗಿ ಗಾಂಧಿಯನ್ನು ವಿರೋಧಿಸುತ್ತಿಲ್ಲ. ಈ ಮಹಾತ್ಮಾ ವಿಶ್ವಾಸಘಾತುಕನಾಗಿರುವುದರಿಂದ ನಾನು ವಿರೋಧಿಸುತ್ತಿದ್ದೇನೆ. ಅವರ ವಿಶ್ವಾಸ ಘಾತುಕದ ಸಾಕಷ್ಟು ಪುರಾವೆ ನನ್ನ ಬಳಿಯಿದೆ. ನನ್ನ ಕಾರ್ಯದಲ್ಲೂ ನನಗೆ ಅದರ ಸಾಕಷ್ಟು ಅನುಭವ ಬಂದಿದೆ. ಆದ್ದರಿಂದ ನಾನು ಅವರನ್ನು ವಿರೋಧಿಸುತ್ತೇನೆ ಮತ್ತು ಮುಂದೆಯೂ ವಿರೋಧಿಸುತ್ತಲೇ ಇರುತ್ತೇನೆ.

ನಾನು ಗಾಂಧಿಯನ್ನು ವಿಶ್ವಾಸಘಾತುಕ ಎಂದೇಕೆ ಕರೆಯುತ್ತೇನೆ ಎಂಬ ಬಗ್ಗೆ ನಿಮಗೆ ಹೇಳಲಿದ್ದೇನೆ. ಹಿಂದೂಸ್ಥಾನದ ದಲಿತ ವರ್ಗದ ಪ್ರತಿನಿಧಿಯಾಗಿ ದುಂಡುಮೇಜಿನ ಪರಿಷತ್ತಿಗಾಗಿ ಇಂಗ್ಲೆಂಡಿಗೆ ಹೋಗುವ ಮೊದಲು ಗಾಂಧಿಯನ್ನು ಭೇಟಿಯಾಗಿದ್ದೆ. ಅಸ್ಪೃಶ್ಯರಿಗೆ ಸ್ವತಂತ್ರ ಸ್ಥಾನ ನೀಡುವುದನ್ನು ತಾನು ವಿರೋಧಿಸುತ್ತೇನೆ ಎಂದವರು ಹೇಳಿದ್ದರು. ಆದರೂ ಮತ್ತಷ್ಟು ಚರ್ಚೆನಡೆದ ಬಳಿಕ, ಇತರ ಅಲ್ಪಸಂಖ್ಯಾತ ಗುಂಪಿನ ಪ್ರತಿನಿಧಿಗಳು ಅಸ್ಪೃಶ್ಯರ ಬೇಡಿಕೆಗಳನ್ನು ಒಪ್ಪಿಕೊಂಡರೆ, ಅದಕ್ಕೆ ತಾನು ಅಡ್ಡ ಬರಲಾರೆನೆಂದವರು ಒಪ್ಪಿದ್ದರು. ಎರಡನೇ ದುಂಡು ಮೇಜಿನ ಪರಿಷತ್ತಿಗೆ ಗಾಂಧಿಯೂ ಬಂದರು. ನಾನು ಯಾವ ಕಾರ್ಯಕ್ಕಾಗಿ ಹೋಗಿದ್ದೇನೋ ಅದರ ಬಗೆಗಿನ ಚರ್ಚೆ ನಡೆದೇ ಇತ್ತು. ಒಂದು ದಿನ ಸರೋಜಿನಿಯವರು ನನ್ನನ್ನು ಗಾಂಧಿಯ ಬಳಿಗೆ ಕರೆದೊಯ್ದರು. ಅವರಿಗೆ ಅಸ್ಪೃಶ್ಯರ ಬೇಡಿಕೆಯ ಬಗೆಗೆ ತಿಳಿದುಕೊಳ್ಳಬೇಕಿತ್ತು. ರಾತ್ರಿ ಹತ್ತುಗಂಟೆಯ ಸಮಯ. ನಾವು ಹೋದಾಗ ಗಾಂಧಿ ಚರಕದಿಂದ ನೂಲುತ್ತಿದ್ದರು. ನಾನು ಹೇಳಬೇಕಾದ ವಿಷಯವನ್ನು ಹೇಳಿದೆ. ನನ್ನ ಮಾತು ಶುರುವಿತ್ತು. ಗಾಂಧಿಯ ಚರಕ ಸಹ ಶುರುವಿತ್ತು. ನಾನು ಒಂದೂವರೆ ಗಂಟೆ ಅಲ್ಲಿದ್ದೆ. ಅಷ್ಟು ಕಾಲಾವಧಿಯಲ್ಲಿ ಗಾಂಧಿ ಒಂದು ಶಬ್ದವೂ ಮಾತಾಡಲಿಲ್ಲ. ಕೊನೆಗೆ ಅವರ ರಾಟಿಯ ಚಕ್ರ ನಿಂತಾಗ ನಾವು ಎದ್ದೆವು. ಆಗ ಗಾಂಧಿ ನನಗಿಷ್ಟೇ ಹೇಳಿದರು. 'ನಾನು ನಿಮ್ಮ ಮಾತು ಆಲಿಸಿದ್ದೇನೆ. ನಾನು ಖಂಡಿತ ಅದರ ಬಗೆಗೆ ಯೋಚಿಸುತ್ತೇನೆ', ನಾನು ಹೊರಟು ಬಂದೆ.

ಮುಂದೆ ಒಂದು ಸಲ ಎಲ್ಲ ಅಲ್ಪಸಂಖ್ಯಾತ ಪ್ರತಿನಿಧಿಗಳನ್ನು ಗಾಂಧಿ ಕರೆಸಿದ್ದಾರೆಂಬ ಸುದ್ದಿ ಬಂತು. ನಾವೆಲ್ಲ ಒಂದಾದೆವು. ನಾಮದೇವನ ಲಗ್ನದಲ್ಲಿ ಒಬ್ಬಾತ ಬೀಗರಿಗೆ 'ನಿಮಗೇನು ಬೇಕು'

'ನಿಮಗೇನುಬೇಕು' ಎಂದು ಕೇಳಿದಂತೆ, ಗಾಂಧಿಯವರು ನಮ್ಮಲ್ಲಿಯ ಪ್ರತಿಯೊಬ್ಬರಿಗೂ ಕೇಳಿದರು. ಎಲ್ಲರೂ ತಮ್ಮ ತಮ್ಮ ಬೇಡಿಕೆಗಳನ್ನು ಅವರೆದುರಿಗಿಟ್ಟರು. ಎಲ್ಲರ ಮಾತು ಆಲಿಸಿ ಗಾಂಧಿ ಶಾಂತವಾಗಿ ಹೇಳಿದರು, 'ನಾನು ನಿಮ್ಮೆಲ್ಲರ ಮಾತು ಆಲಿಸಿದ್ದೇನೆ. ನಾನು ಎಲ್ಲ ವಿಷಯಗಳ ಬಗೆಗೆ ಸರಿಯಾಗಿ ಯೋಚಿಸಿದ್ದೇನೆ. ಅಸ್ಪೃಶ್ಯರಿಗೆ ನಾನು ಕೊಡಬೇಕಾಗಿರುವುದು ಏನೂ ಇಲ್ಲ'.

ಅಲ್ಪಸಂಖ್ಯಾತ ಪ್ರತಿನಿಧಿಗಳ ಸಭೆ ಪದ್ಧತಿಯಂತೆ ಸೇರಿತು. ರೆಮ್ಸೆ ಮೆಕ್‌ಡೊನಾಲ್ಡ ಅಧ್ಯಕ್ಷರಾಗಿದ್ದರು. ಕಾರ್ಯ ಕಲಾಪ ಶುರುವಾಗುವ ಮೊದಲೇ ಮುಸಲ್ಮಾನರು ಸ್ಥಗಿತಗೊಳಿಸುವ ಸೂಚನೆ ತಂದರು. ಕಾರಣವೇನೆಂದರೆ, ಅವರು ಗಾಂಧಿಯೊಂದಿಗೆ ಖಾಸಗಿಯಾಗಿ ಏನೋ ಚರ್ಚಿಸಲಿದ್ದರಂತೆ. ನಾನು ಅಚ್ಚರಿಯಿಂದ ದಿಙ್ಮೂಢನಾದೆ. ನನಗಂತೂ ಈ ಘಟನೆಯ ಅರ್ಥವೇ ಆಗಲಿಲ್ಲ. ನಾನು ಎದ್ದು ಸ್ಥಗಿತವನ್ನು ವಿರೋಧಿಸಿದೆ. 'ಈ ಚರ್ಚೆ ಅಲ್ಪಸಂಖ್ಯಾತರ ಹಕ್ಕಿಗೆ ಸಂಬಂಧಿಸಿದ್ದಾಗಿದ್ದರೆ, ಗಾಂಧಿಯವರ ಜೊತೆಗಷ್ಟೇ ಖಾಸಗಿ ಚರ್ಚೆ ಏಕೆ? ಅಲ್ಲಿ ನಮಗೇಕೆ ಪ್ರವೇಶವಿಲ್ಲ? ಈ ಮೊದಲೇ ಖಾಸಗಿ ಭೇಟಿ ಚರ್ಚೆ ನಡೆದಿದೆ. ಈ ಚರ್ಚೆಯು ಅಸ್ಪೃಶ್ಯರ ಬೇಡಿಕೆಗೆ ಸಂಬಂಧಿಸಿದ್ದೇ ಅಗಿದ್ದರೆ, ನಮ್ಮನ್ನು ಹೊರತು ಪಡಿಸುವುದು ಏತಕ್ಕಾಗಿ? ಈ ವಿಷಯದ ಕುರಿತು ಈಗಾಗಲೇ ಹೇಳಿದ್ದಾರೆ'–ಎಂದೆ. ಆಗ ಅಧ್ಯಕ್ಷರು ಈ ವಿಷಯದ ಬಗೆಗೆ ಗಾಂಧಿಯವರ ಅಭಿಪ್ರಾಯವನ್ನು ಕೇಳಿದರು. ಆಗ ಗಾಂಧಿ ಹೇಳಿದರು. 'ಸ್ವತಃ ನನಗೆ ಅಸ್ಪೃಶ್ಯರಿಗೆ ಏನೂ ಕೊಡುವ ಇಚ್ಛೆಯಿಲ್ಲ. ಆದರೆ ಉಳಿದ ಅಲ್ಪಸಂಖ್ಯಾತ ಪ್ರತಿನಿಧಿಗಳು ಅಸ್ಪೃಶ್ಯರ ಬೇಡಿಕೆಯನ್ನು ಒಪ್ಪಿದರೆ, ಅದನ್ನು ನಾನು ವಿರೋಧಿಸುವುದಿಲ್ಲ' ಈ ವಿಷಯವನ್ನು ನಾನು ಮನಸ್ಸಿಗೆ ತೋಚಿದಂತೆ ಹೇಳುವುದಿಲ್ಲ. ದುಂಡು ಮೇಜಿನ ಪರಿಷತ್ತಿನ ಗೊತ್ತುವಳಿಯಲ್ಲಿ ಅದು ನಮೂದುಗೊಂಡಿದೆ. ಅದನ್ನು ಯಾರು ಬೇಕಾದರೂ ನೋಡಬಹುದು. ಕೊನೆಗೆ ನನ್ನ ವಿರೋಧದಿಂದ ಏನೂ ಉಪಯೋಗವಾಗದೆ ಸಭೆ ಸ್ಥಗಿತಗೊಂಡಿತು.

ಅನಂತರ ನಡೆದ ಘಟನೆಗಳು, ಗಾಂಧಿ ಮಾಡಿದ ಕೆಲಸಗಳು ನನ್ನ ಹೃದಯದ ಮೇಲೆ ಬರೆ ಮೂಡಿಸಿದವು. ಅದರಿಂದಾಗಿಯೇ ಗಾಂಧಿ ವಿಶ್ವಾಸಘಾತುಗಕ ಮನುಷ್ಯ ಎನ್ನುವುದು ಖಚಿತವಾಗಿ ಗೊತ್ತಾಯಿತು.

ಅಲ್ಪಸಂಖ್ಯಾತ ಸಭೆಯಲ್ಲಿ ಮೇಲಿನಂತೆ ಭಾಷಣ ಮಾಡಿದಾಗ ಆ ಮಹಾತ್ಮನು ಏನು ಮಾಡಿರಬಹುದು? ತನ್ನ ಹಠವನ್ನು ಈಡೇರಿಸಲು ಅವರೊಂದು ಯುಕ್ತಿಯನ್ನು ಹುಡುಕಿದರು. ಅವರು ಕುರಾನದ ಪ್ರತಿಯನ್ನು ತರಿಸಿ ಕೊಂಡರು. ಅದರ ಪುಟ ತಿರುವಿ ಓದಿದರು. ರಿಟ್ಝ್ ಹೊಟೇಲಿನಲ್ಲಿ ಆಗಾಖಾಸರ ಜೊತೆಯಲ್ಲಿ ಮುಸಲ್ಮಾನರ ಖಾಸಗಿ ಸಭೆನಡೆದಿತ್ತು. ಗಾಂಧಿ ಅಲ್ಲಿಗೆ ಹೋದರು. ಅವರೆದುರಿಗೆ ಕುರಾನ ಗ್ರಂಥವನ್ನು ಹಿಡಿದು, 'ನಿಮ್ಮ ಧರ್ಮಗ್ರಂಥ ಏನು ಹೇಳುತ್ತದೆ ನೋಡಿದಿರಾ? ಯಾವುದೇ ಸಮಾಜದಲ್ಲಿ ಒಡಕು ಉಂಟು ಮಾಡುವುದು ಪವಿತ್ರ ಇಸ್ಲಾಂ ಧರ್ಮಕ್ಕೆ ಶೋಭಿಸುತ್ತದೆಯೇ?' ಅವರೆಂದರು– 'ಇಲ್ಲ'. ಗಾಂಧಿ ಎಂದರು–'ಹಾಗಾದರೆ ನೀವು ಒಂದು ದೊಡ್ಡ ಅಧರ್ಮ ಕಾರ್ಯ ಮಾಡುತ್ತಿಲ್ಲವೇ'– ಅಸ್ಪೃಶ್ಯರಿಗೆ ಮಾನ್ಯತೆ ನೀಡಿ ಹಿಂದೂ ಸಮಾಜದಲ್ಲಿ ಒಡಕು ತರುವ ಈ ಕೃತಿಯು ಇಸ್ಲಾಂಧರ್ಮದ ವಿರುದ್ಧವಾಗಿದೆ. ಆಗ ಜನರೆಂದರು–'ಆದರೆ ಗಾಂಧೀಜಿ, ಅದರಲ್ಲಿ ಧರ್ಮದ ಸಂಬಂಧವೆಲ್ಲಿ ಬರುತ್ತದೆ? ಅದು ರಾಜಕೀಯ ಹಕ್ಕಿನ ಪ್ರಶ್ನೆ. ನಾವು ಅಸ್ಪೃಶ್ಯರಿಗಿಂತ ಅಧಿಕ ಸಂಪನ್ನ, ಅಧಿಕ ಸುಸ್ಥಿತ, ಅಧಿಕ ಪ್ರಗತಿ ಹೊಂದಿದ್ದರೂ ರಾಜಕೀಯ ಹಕ್ಕಿಗಾಗಿ ಹೋರಾಡುತ್ತಿದ್ದೇವೆ. ನಮಗೂ ಮತ್ತು ಉಳಿದ ಅಲ್ಪಸಂಖ್ಯಾತ ಸಮಾಜದವರಿಗೆ ಯಾವ ಹಕ್ಕು ಬೇಡುವ ಮತ್ತು ಪಡೆಯುವ ಅಧಿಕಾರವಿದೆಯೋ ಅದನ್ನು ಅಸ್ಪೃಶ್ಯರಿಗೆ

ನೀಡುವುದು ಯೋಗ್ಯವಾಗಿದೆ. ಇದರಲ್ಲಿ ಅಧರ್ಮ ಎಲ್ಲಿ ಬಂತು?'.

ಕುರಾನದ ಹೆಸರಿನಲ್ಲಿ ಮಾಡಿದ ಈ ಹಲ್ಲೆಯು ವಿಫಲಗೊಂಡಿರುವುದನ್ನು ಕಂಡು ಗಾಂಧಿಯವರು ಬೇರೊಂದು, ಮತ್ತಷ್ಟು ನಾಚಿಕೆಗೇಡಿನ ಪ್ರಯೋಗ ಮಾಡಿದರು. ಅವರೆಂದರು, "ಸರಿ ಹಾಗಾದರೆ, ನಿಮ್ಮ ಹದಿನಾಲ್ಕೂ ಬೇಡಿಕೆ ನಿಮಗಂತೂ ಬೇಕಲ್ಲವೇ", "ಹೌದು, ಬೇಕೆಬೇಕು", "ಹಾಗಾದರೆ ನಾನದನ್ನು ನಿಮಗೆ ದೊರಕಿಸಿ ಕೊಡಬಲ್ಲೆ. ಆದರೆ ನೀವು ನನ್ನ ಕೆಲಸ ಮಾಡಬೇಕು. ನೀವು ಕಮೀಟಿಯ ಸಭೆಯಲ್ಲಿ ಅಸ್ಪೃಶ್ಯರ ಬೇಡಿಕೆಯನ್ನು ನಿರಾಕರಿಸಿದರೆ, ನಾನು ನಿಮ್ಮ ೧೪ ಬೇಡಿಕೆ ಸ್ವೀಕರಿಸುವಂತೆ ಮಾಡುತ್ತೇನೆ."

ಅಸ್ಪೃಶ್ಯರಿಗೆ ಏನೂ ಕೊಡಬಾರದು ಎಂದು ಹಠ ಹಿಡಿದ ಮಹಾತ್ಮನು ಯಾವ ಮಟ್ಟಕ್ಕೆ ಹೋಗಬಲ್ಲ ಎನ್ನುವುದನ್ನು ಕಂಡಾಗ ಅವರ ಮೇಲೆ ಯಾರಿಗೆ ನಂಬಿಕೆ ಹುಟ್ಟುತ್ತದೆ? ಅವರು ಮುಸಲ್ಮಾನರೊಂದಿಗೆ ಮಾಡಿದ ಕರಾರಿನ ಮಸೂದೆ ನನ್ನ ಬಳಿಯಲ್ಲಿದೆ. ನಾನದನ್ನು ನನ್ನ ಪುಸ್ತಕದಲ್ಲಿ ಪ್ರಕಟಿಸಲಿದ್ದೇನೆ. ನಾನು ಬರೇ ಗಾಳಿಯ ಸುದ್ದಿಯನ್ನು ಹೇಳುವುದಿಲ್ಲ.

ನನ್ನ ಮೇಲಿನ ಮತ್ತೂ ಒಂದು ಆರೋಪವೆಂದರೆ, ನಾನು ಕಾಂಗ್ರೆಸ್ ಸೇರುವುದಿಲ್ಲ ಎನ್ನುವುದು. ಹೌದು ಇದು ಸತ್ಯ. ಕಾಂಗ್ರೆಸ್ ಸೇರುವುದರಿಂದ ಆಗುವ ಲಾಭ ಏನು ಎಂಬುದನ್ನು ಈಗಾಗಲೇ ಹೇಳಿದ್ದೇನೆ. ನಾನು ಕಾಂಗ್ರೆಸ್ ಸೇರಲಿ ಎಂಬ ಪ್ರಯತ್ನವೂ ನಡೆದಿದೆ. ಅದರಲ್ಲಿಯ ಒಂದನ್ನು ನಿಮಗೆ ಹೇಳುತ್ತೇನೆ. ಅಂದರೆ ಕಾಂಗ್ರೆಸ್ ಸೇರುವ ರಹಸ್ಯ ಏನಿರುತ್ತದೆ ಎನ್ನವುದು ನಿಮಗೆ ಗೊತ್ತಾಗಬಹುದು. ೧೯೩೬ರಲ್ಲಿ ಒಮ್ಮೆ ನನ್ನ ಒಬ್ಬ ಗೆಳೆಯ ಬಲವಂತದಿಂದ ಗಾಂಧಿಯ ಬಳಿಗೆ ವಾರ್ಧಾಕ್ಕೆ ಅವರ ನನ್ನ ಸ್ನೇಹ ಬೆಳೆಸಲು ಕರೆದೊಯ್ದ. ಹೋಗುವುದರಿಂದ ಏನೂ ಪ್ರಯೋಜನ ಇಲ್ಲ ಎನ್ನುವುದು ನನಗೆ ಗೊತ್ತಿತ್ತು. ಆದರೆ ಗೆಳೆಯನ ದಾಕ್ಷಿಣ್ಯಕ್ಕೆ ಹೋದೆ. ಸೇವಾಗ್ರಾಮದಲ್ಲಿ ಗಾಂಧಿಯ ಭೇಟಿಯಾಯಿತು. ನನ್ನ ಊಹೆ ನಿಜವಾಯಿತು. ನಾವು ಮರಳಿ ವಾರ್ಧಾಕ್ಕೆ ಶೇಠ ಜಮನಾಲಾಲಜಿಯವರ ಬಳಿಗೆ ಬಂದೆವು. ಅಲ್ಲಿಯೂ ಕೆಲವರು ನನ್ನ ಮನಸ್ಸನ್ನು ಬದಲಾಯಿಸುವ ಪ್ರಯತ್ನ ಮಾಡಿದರು.

'ಡಾಕ್ಟರ್ ಸಾಹೇಬರೆ, ನೀವು ದೊಡ್ಡ ತಪ್ಪು ಮಾಡುತ್ತಿದ್ದೀರಿ' ಜಮನಾಲಾಲ ಅಂದರು.

'ಎಂಥ ತಪ್ಪು?' ನಾನೆಂದೆ.

'ಕಾಂಗ್ರೆಸ್ ಸೇರುವುದರಿಂದ ನಿಮಗೆ ಒಳಿತಾಗುತ್ತದೆ. ಅಸ್ಪೃಶ್ಯೋದ್ಧಾರದ ಚಳುವಳಿಯನ್ನು ನಾವು ನಿಮ್ಮ ಕೈಗೆ ಕೊಡುತ್ತೇವೆ. ನಮ್ಮ ಮಾರವಾಡಿ ಸಮಾಜದ ಬಗ್ಗೆ ಹಿಂದು ಜನರು ಏನು ಹೇಳುತ್ತಿದ್ದರು ಗೊತ್ತೇ? ಈ ಜನರು ಸಮಾಜದ ರಕ್ತಹೀರುವ ಉಂಬಳ ಇದ್ದಂತಿದ್ದಾರೆ. ರೈತರ ಮನೆಮಾರು ವಿಧ್ವಸ್ತ ಮಾಡುವವರು, ಕಠಿಣ ಹೃದಯಿಗಳು ಎಂದರು. ಆದರೆ ಇಂದು! ಮಾರವಾಡಿ ರಾಷ್ಟ್ರಪುರುಷವಾಗಿದ್ದಾನೆ. ಎಲ್ಲೆಡೆ ಅವರದ್ದೇ ವರ್ಚಸ್ಸು. ಕಾರಣವೇನು ಗೊತ್ತೆ? ನಾವು ಕಾಂಗ್ರೆಸ್ ಸೇರಿದ್ದೇ ಅದಕ್ಕೆ ಕಾರಣ. ನೀವೂ ಕಾಂಗ್ರೆಸ್ ಸೇರಿ, ರಾಷ್ಟ್ರಪುರುಷರಾಗುತ್ತೀರಿ'.

'ಅದು ಹೇಗೆಸಾಧ್ಯ? ನನಗಂತೂ ಗಾಂಧಿ ಮೇಲೆ ನಂಬಿಕೆಯಿಲ್ಲ. ಅವರ ಕಾರ್ಯದ ಮೇಲೂ ನಂಬಿಕೆಯಿಲ್ಲ. ನನಗೂ ಅವರಿಗೂ ಮತಭೇದವಿದೆ. ನಾನು ಕಾಂಗ್ರೆಸ್ ಸೇರಿ ಅವರೊಂದಿಗೆ ಹೇಗೆ ಕೆಲಸ ಮಾಡಲಿ?' ನಾನೆಂದೆ.

'ಯಹ್ ಕೋಯಿ ಬಡಿಬಾತ್‌ನಹೀ' ಮತಭೇದವಿದ್ದರೇನೆಂತೆ? ಜವಾಹರಲಾಲ ನೆಹರು ಇಲ್ಲವೇ? ಅವರಿಗೂ ಗಾಂಧಿಗೂ ಸರಿಬರುವುದಿಲ್ಲ. ಬಹಳ ಸಲ ಅವರಿಬ್ಬರ ನಡುವೆ ಜಗಳ ನಡೆದಿರುತ್ತದೆ.

ಆದರೂ ಅವರು 'ಗಾಂಧಿ ನನ್ನ ಗುರು' ಅಂತಾರೆ. ನೀವು ಹಾಗೇ ಮಾಡಿದರಾಯಿತು. ಮುಂದೆಲ್ಲ ಸರಿ ಹೋಗುತ್ತದೆ'

ನಾನು ನಕ್ಕುಹೇಳಿದೆ–"ಒಬ್ಬನ ಮೇಲೆ ನಂಬಿಕೆಯಿದ್ದರೆ ಮತಭೇದವಿದ್ದರೂ ಅವನೊಂದಿಗೆ ಕೆಲಸಮಾಡ ಬಹುದು. ಆದರೆ ನನಗಂತೂ ಗಾಂಧಿಯ ಮೇಲೆ ನಂಬಿಕೆಯೇ ಇಲ್ಲ. ಹೀಗಿರುವಾಗ ನಾನು ಅವರನ್ನು ಗುರು ಎಂದು ಹೇಗೆ ಕರೆಯಲಿ? ಅವರ ಜೊತೆ ಹೇಗೆ ಕೆಲಸ ಮಾಡಲಿ?"

ಅಲ್ಲಿಗೇ ಮಾತು ನಿಂತಿತು. ಮರಳಿ ಮತ್ತೆ ನಾವು ಗಾಂಧಿಗೆ ವಿದಾಯ ಹೇಳಲು ಸೇವಾಗ್ರಾಮಕ್ಕೆ ಹೋದೆವು. ಆದರೆ ನಾವು ಹೋಗುವ ಮೊದಲೇ ವರ್ಧಾದಲ್ಲಿ ನಡೆದ ಸಂಭಾಷಣೆಯೂ ಅವರಿಗೆ ಕಿವಿಗೆ ಬಿದ್ದಿರುವುದು ಕಂಡು ಬಂತು! ಅಲ್ಲಿ ಗಾಂಧಿಯ ಎದುರಿಗೆ ಹೋದ ಕೂಡಲೇ ಮಹಾದೇವ ದೇಸಾಯಿ ಎಂದರು–

'ಖಬರ ಛೆ ಬಾಪೂಜಿ, ಡಾಕ್ಟರ್ ಸಾಹೇಬ ಸೂ ಕಹೇ ಛೇ'

'ಏನು? ಏನಂದಿರಿ?' ಗಾಂಧಿ ಕೇಳಿದರು.

ಗಾಂಧಿಯ ಎದುರಿಗೆ ನಾನು ನನ್ನ ಅವರ ಸಂಬಂಧದ ಬಗೆಗೆ ಹೇಳಲು ಹಿಂಜರಿಯಬಹುದು ಎಂದು ಕೊಂಡು ಮಹಾದೇವ ದೇಸಾಯಿ ಎಂದರು–

'ಅವರಿಗೆ ನಿಮ್ಮ ಮೇಲೆ ನಂಬಿಕೆಯಿಲ್ಲದ್ದರಿಂದ, ನಿಮ್ಮ ಜೊತೆ ಕೆಲಸ ಮಾಡಲು ಅವರು ಸಿದ್ಧರಿಲ್ಲವಂತೆ.'

ಗಾಂಧಿ ನನ್ನತ್ತ ಪ್ರಶ್ನಾರ್ಥಕ ನೋಟ ಬೀರಿದರು. 'ಹೌದು ಸತ್ಯವಾದ ಮಾತು. ನನಗೂ ನಿಮ್ಮ ಮೇಲೆ ಕಿಂಚಿತ್ತೂ ನಂಬಿಕೆಯಿಲ್ಲ' ಎಂದರು.

ಇಂದು ಕಾಂಗ್ರೆಸು ಹಣವಂತರ ಕೈಗೊಂಬೆಯಾಗಿದೆ. ಅದು ಜನಹಿತದ ಕಾರ್ಯ ಮಾಡುವುದು ಅಸಾಧ್ಯ. ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸೇರಿ ಯಾವುದೇ ಹಲ್ಲೆಯದಾಗಲಿ, ಹೋರಾಟದ್ದಾಗಲಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುವಂತಿಲ್ಲ. ಆದ್ದರಿಂದ ನಾನು ಕಾಂಗ್ರೆಸ್ ಸೇರುವುದಿಲ್ಲ.

# ೧೪೪.
# ರಾಜಕಾರಣದ ಮಾತುಗಳನ್ನು ಮರುಕ್ಷಣವೇ ಮರೆತು ಬಿಡಬೇಕು

ದಿನಾಂಕ ೨೬ ಅಕ್ಟೋಬರ ೧೯೩೮ರಂದು ಮಧ್ಯಪ್ರಾಂತದ ವರ್ಹಾಡ ಪ್ರಾಂತದ ಕಾರ್ಯಕರ್ತರ ನಿಯೋಗವು ಡಾ. ಅಂಬೇಡ್ಕರ ಅವರನ್ನು ಅವರ ರಾಜಗೃಹದಲ್ಲಿ ಭೇಟಿಯಾಗಿದ್ದರು. ಕಾರ್ಯಕರ್ತರ ಮಾತು ಕೇಳಿದ ಬಳಿಕ, ಡಾ. ಅಂಬೇಡ್ಕರರು ಕಾರ್ಯಕರ್ತರನ್ನು ಉದ್ದೇಶಿಸಿ ನೀಡಿದ ಉಪದೇಶವನ್ನು ಕೆಳಗೆ ನೀಡಲಾಗಿದೆ. ಲೇಖಕರು ಸ್ವತಃ ನಿಯೋಗದ ಜೊತೆಗಿದ್ದರು. ಡಾ. ಅಂಬೇಡ್ಕರರು ಮಾತಾಡಿದ್ದನ್ನೆಲ್ಲ ಲೇಖಕನು ನಮೂದಿಸಿರುವುದರಿಂದ ಅದನ್ನೆ ಆಯ್ದು ನೀಡಲಾಗಿದೆ.

ಬೆಳಿಗ್ಗೆ ಏಳಕ್ಕೆ ಕಾರ್ಯಕರ್ತರು ಡಾ. ಅಂಬೇಡ್ಕರ ಅವರನ್ನು ಭೇಟಿಯಾದರು. ಆಗವರು ಗಂಭೀರ ಮತ್ತು ಶಾಂತವಾಗಿ ಕಾಣುತ್ತಿದ್ದರು. ಚೆಹರೆಯ ಮೇಲೆ ದಿಟ್ಟ ಅಭಿಮಾನ ಗೋಚರಿಸುತ್ತಿತ್ತು. ಕಾರ್ಯಕರ್ತರೊಂದಿಗಿನ ಚರ್ಚೆಯ ಬಳಿಕ ನಮ್ಮನ್ನು ಉದ್ದೇಶಿಸಿ ಹೇಳಿದರು. ಆಗ ಅವರ ಮಾತಿನಲ್ಲಿ ಕಳಕಳಿಯಿರುವುದು ನಮಗೆ ಕಾಣಿಸಿತು. ಡಾ. ಅಂಬೇಡ್ಕರ ಹೇಳಿದರು–

'ನಿಮ್ಮ ಮಧ್ಯಪ್ರಾಂತದ ವರ್ಹಾಡ ಕೌನ್ಸಿಲ್ ಚುನಾವಣೆಯು ನಡೆದು ಸುಮಾರು ಒಂದೂವರೆ ವರ್ಷವಾಯಿತು. ಇಷ್ಟು ದಿನ ನಾವು ಏನೂ ಮಾಡಲಿಲ್ಲ. ನಿಮಗೆ ೨೦ ಸ್ಥಾನಗಳನ್ನು ದೊರಕಿಸಿ ಕೊಟ್ಟೆವು. ಅದರಲ್ಲಿ ಕೇವಲ ಏಳೇ ಸ್ಥಾನ ಸಿಕ್ಕಿತು. ೧೩ ಸ್ಥಾನಗಳ ಬಗೆಗೆ ಏನೂ ಮಾಡುವುದಾಗಲಿಲ್ಲ. ಈ ಏಳೂ ಜನರಲ್ಲಿ ಎಂದೂ ಆತ್ಮೀಯತೆ ಕಾಣಲಿಲ್ಲ. ಎಂದೂ ಒಗ್ಗಟ್ಟಿರಲಿಲ್ಲ. ನಮ್ಮ ಮುಂಬೈಯಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷವು ಕಾಂಗ್ರೆಸಿಗಿಂತ ಉತ್ತಮ ಸಂಘಟನೆಯಿಂದ ಇದೆ. ಜನಜಾಗೃತಿ ಮತ್ತು ರಾಜಕಾರಣದಲ್ಲಿಯ ಸಂಘಟನೆ ಎರಡೂ ಬೇರೆ ಬೇರೆ ಕಾರ್ಯ.

ಚುನಾವಣೆಯ ಬಳಿಕ ನಾವೆಷ್ಟು ಸದಸ್ಯರನ್ನು ಮಾಡಿದೆವು? ಹಿಂದೆ ನಾನು ಒಮ್ಮೆ ಕೇಸಿನ ಸಂದರ್ಭದಲ್ಲಿ ಬಂದಾಗ ಕೇಳಿದೆ, ಆಗ ಯಾರೂ ಪಕ್ಷದ ಸದಸ್ಯರಾಗಿದ್ದು ಕಂಡು ಬಂದಿರಲಿಲ್ಲ. ಅಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷದ ಆಫೀಸಿಲ್ಲ. ಅಲ್ಲಿ ಯಾರಾದರೂ ದೂರುತಂದರೆ, ತಕರಾರಿದ್ದರೆ, ಅದರ ವ್ಯವಸ್ಥೆ ಮಾಡುವ ಯಾವ ಅನುಕೂಲತೆಯೂ ಅಲ್ಲಿಲ್ಲ. ನಿಮ್ಮ ಹತ್ತಿರ ದುಡ್ಡಿಲ್ಲ, ಹಣವಿಲ್ಲದೆ ರಾಜಕಾರಣ ನಡೆಯುವುದು ಹೇಗೇ? ಹಣಕ್ಕಾಗಿ ಕೇವಲ ಒಬ್ಬನನ್ನೇ ಅವಲಂಬಿಸಿದ್ದರೆ ರಾಜಕಾರಣ ನಡೆಯುವುದಿಲ್ಲ. ನಾವು ಮಾಡಿದ ಸದಸ್ಯರಲ್ಲಿ ಕೆಲವರು ಶಾಶ್ವತ ಸದಸ್ಯರಿದ್ದಾರೆಂದೇ ರಾಜಕಾರಣವಿದೆ. ನೀವು ಏನೂ ಮಾಡಲಿಲ್ಲ. ನಾನು ಹೇಳಿದ್ದನ್ನೂ ಮಾಡುವುದಿಲ್ಲ. ನಾನು ಕೇವಲ ಮುಂಬೈ ಜವಾಬ್ದಾರಿಯನ್ನು ಹೊತ್ತಿದ್ದೇನೆ. ನನಗೂ ಮಧ್ಯಪ್ರಾಂತದ ವರ್ಹಾಡಿಗೂ ಏನುಸಂಬಂಧ. ನಿಮಗೆ ಯಾವುದೇ ಕಾರ್ಯ ಮಾಡುವ ಇಚ್ಛೆಯಿರದಿದ್ದರೆ ನಾನು ನಿಮ್ಮ ಪ್ರಾಂತದ ಬಗೆಗೆ ಏನೂ ಮಾಡಲಾರೆ. ನಿಮ್ಮ ಪ್ರಾಂತದಲ್ಲಿ ಕೆಲವು ಸ್ವಾರ್ಥಿಗಳಿದ್ದಾರೆ. ಸವಿಯಾಗಿ ಮಾತಾಡುವವರೂ ಇದ್ದಾರೆ. ಮತ್ತೆ ಕೆಲವರು ಕೆಲಸ ಮಾಡುವವರೂ ಇದ್ದಾರೆ. ಆದರೆ ಇಂದಿನವರೆಗೆ ಏನೂ ಆಗಲೇ ಇಲ್ಲ. ನೀವೀಗ ಆ ಕಾರ್ಯವನ್ನು ಮಾಡಬೇಕು. ನೀವು

---

ವಿದರ್ಭದ ದಲಿತ ಚಳುವಳಿಯ ಇತಿಹಾಸ: ಎಚ್.ಎಲ್. ಕೋಸಾರೆ. ಪು–೫೧೭–೫೧೮.

ಯಾವುದಾದರೂ ಒಂದು ಸಂಗತಿಯನ್ನು ಮಾಡಬೇಕು. ಒಂದೋ ನಾನು ಹೇಳಿದಂತೆ ಮಾಡಬೇಕು ಅಥವಾ ಎರಡನೆಯದು ನಾನು ಮಾಡಿದಂತೆ ವರ್ತಿಸಬೇಕು. ಜಯವಂತ ಭಾಯಿಯನ್ನು ಸಂಘಟಕನೆಂದು ನೇಮಿಸಲಾಗಿದೆ. ಹೀಗಾಗಿ ನೀವು ಅವರಿಗೆ ಸಹಕಾರ ನೀಡಿ ಕೆಲಸ ಮಾಡಬೇಕು. ಅದನ್ನು ಬಿಟ್ಟು ನೀವೇಕೆ ವಿರೋಧಿಸುತ್ತಿದ್ದೀರಿ? ನಮ್ಮಲ್ಲಿರುವ ಒಂದು ದೋಷವೆಂದರೆ ಒಮ್ಮೆ ನಡೆದ ಜಗಳವನ್ನು ತಲೆತಲಾಂತರದವರೆಗೂ ಮುಂದುವರೆಸುವುದು. ರಾಜಕಾರಣದ ಮಾತನ್ನು ಮರುಕ್ಷಣವೇ ಮರೆಯಬೇಕು. ಹರದಾಸನ ಬಗೆಗೆ ನನಗೆ ಗೌರವವಿದೆ. ಆದರೆ ಅವರಲ್ಲಿ ಕೆಲವು ದೋಷಗಳೂ ಇವೆ. ಪಾಟೀಲನಿಗೆ ಹರದಾಸರು ಚುನಾವಣೆಯ ಟಿಕೀಟ ಕೊಡಲಿಲ್ಲವೆಂದು ಪಾಟೀಲ ಹೀಗೆ ವರ್ತಿಸಬಾರದು.

ನಾವು ಅಲ್ಪಸಂಖ್ಯಾತರು. ಕಪ್ಪೆ ಎಷ್ಟೇ ಉಬ್ಬಿದರೂ ಎತ್ತಿನಷ್ಟಾಗುವುದು ಸಾಧ್ಯವಿಲ್ಲ. ಆದ್ದರಿಂದ ಯಾರ ಜೋಡಿಗಾದರೂ ಜೋಡು ಹಚ್ಚದ ಹೊರತು ರಾಜಕಾರಣ ನಮ್ಮ ಕೈಗೆ ಬರಲಾರದು. ಹಿಂದಿನ ಚಳುವಳಿಯು ನಮಗಷ್ಟೇ ಸೀವಿತವಾಗಿತ್ತು. ನಾವು ಆಂಗ್ಲಸರಕಾರದಿಂದ ಆ ಕಾಲಕ್ಕೆ ಪಡೆಯಬೇಕಾಗಿತ್ತು. ಈಗ ಬ್ರಿಟಿಷ್ ಸರಕಾರ ಉಳಿದಿಲ್ಲ. ಇಂದಿನ ರಾಜಕಾರಣ ಬಹುಮತದಿಂದ ನಡೆಯುವಂತಹದಾಗಿದೆ. ಬಹುಮತವಿಲ್ಲದೆ ನಾವು ರಾಜಕಾರಣವನ್ನು ಹಸ್ತ-ಗತ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ಬಹುಮತವನ್ನು ಬೆಳೆಸಬೇಕು. ಜಯವಂತನ ಪ್ರಕರಣವನ್ನು ಏಕೆ ಬೆಳೆಸುತ್ತೀರಿ? ಜಯವಂತನೇನು ರಾಜನಲ್ಲ. ಯಾರೇ ಆಗಲಿ ಉತ್ತಮವಾಗಿ ಕಾರ್ಯಮಾಡುತ್ತಿದ್ದರೆ ಸರಿ. ಯಾರಾದರೂ ವಿರುದ್ಧ ಕಾರ್ಯ ಮಾಡಲಾರಂಭಿಸಿದರೆ ಅವನನ್ನು ಒಂದೇ ಮಾತಿಗೆ ಹೊರಗೆ ಹಾಕಬಲ್ಲೆ. ಯಾರು ಸ್ವತಂತ್ರ ಕಾರ್ಮಿಕಪಕ್ಷದ ಸದಸ್ಯರಾಗಿದ್ದಾರೋ ಅವರು ಬೇರೆ ರಾಜಕೀಯ ಪಕ್ಷದ ಸದಸ್ಯರಾಗುವಂತಿಲ್ಲ. ರಾಜಕಾರಣದ ಹೊರತು ಸಾಮಾಜಿಕ ಕಾರ್ಯ, ಧಾರ್ಮಿಕ ಕಾರ್ಯ ಮಾಡಬಹುದಾಗಿದೆ. ಸತ್ತೆಯ ಮೇಲೆ ಯಾರಿರಬೇಕು ಎಂದು ನಿರ್ಧರಿಸುವುದು ಜನರ ಕರ್ತವ್ಯ. ಸದಸ್ಯರ ಮೇಲೆ ಉಸ್ತುವಾರಿ ನಡೆಸಲು ಒಬ್ಬ ಅರ್ಹವ್ಯಕ್ತಿಯಿಲ್ಲವೆಂದು ಹೀಗಾಗುತ್ತಿರಬೇಕು. ನಾನು ಏನಾದರೂ ಹೆಚ್ಚುಕಡಿಮೆ ಕಾರ್ಯ ಮಾಡಿದರೆ ಇಲ್ಲಿಯ ಜನರು ಕೇಳಲು ಬರುತ್ತಾರೆ.

ಯಾವ ಮನುಷ್ಯನನ್ನು ನಾವು ಪ್ರೀತಿಸುತ್ತೇವೋ ಅಂಥವನ ವಿರುದ್ಧ ಮಾಡುವುದೇ ಸತ್ಯಾಗ್ರಹ. ಮಗು ತಾಯಿಯ ವಿರುದ್ಧ ಸತ್ಯಾಗ್ರಹ ಮಾಡುತ್ತದೆ. ಡಾ. ಖರೆಯವರಿಂದ ನಾನು ತಪ್ಪೊಪ್ಪಿಗೆಯ ಪತ್ರವನ್ನು ಬರೆಯಿಸಿ ಕೊಂಡಿದ್ದೇನೆ. "ಈ ಜನರು(ಅಸ್ಪೃಶ್ಯ) ಅಜ್ಞಾನಿಗಳು. ಅವರಿಗೆ ಮಹಾತ್ವಾಕಾಂಕ್ಷೆಯಿಲ್ಲ. ನನಗೆ, ಅಸ್ಪೃಶ್ಯ ಮಿನಿಸ್ಟರ್ ತೆಗೆದು ಕೊಳ್ಳಬಹುದಾಗಿತ್ತು. ಏಕೆ ತೆಗೆದುಕೊಂಡಿರಿ? ಒಬ್ಬ ಮಿನಿಸ್ಟರ್‌ನನ್ನು ತೆಗೆದುಕೊಂಡು ನೀವು ಅವರ ಮನದೊಳಗೆ ಮಹಾತ್ವಾಕಾಂಕ್ಷೆಯನ್ನು ಹುಟ್ಟಿಸಿದಿರಿ" ಎಂದು ಮಹಾತ್ಮಾ ಗಾಂಧಿ ಹೇಳಿದರು.

ನೀವು ಸತ್ಯಾಗ್ರಹ ಮಾಡಿದಾಗ ಅಗ್ನಿಭೋಜ ಸ್ವಲ್ಪವಾದರೂ ಭಾಗವಹಿಸಿದ್ದನೆ? ಅವನು ಒಂದುವೇಳೆ ತನ್ನ ಹಕ್ಕಿಗಾಗಿ ಜಗಳಾಡಲು ಸಿದ್ಧನಿಲ್ಲದಿದ್ದರೆ, ನೀವು ಗಾಂಧಿ ವಿರುದ್ಧ ಏಕೆ ಸತ್ಯಾಗ್ರಹ ಮಾಡಿದಿರಿ? ಯಾರು ಜಗಳವಾಡಲು ಸಿದ್ಧನಾಗಿರುತ್ತಾನೋ ಅವನಿಗೆ ಜಗಳಾಡಲು ಮುಂದೆ ಬರುವುದು ಕರ್ತವ್ಯವಾಗುತ್ತದೆ.

ಸ್ವತಂತ್ರ ಕಾರ್ಮಿಕ ಪಕ್ಷದ ಕಾರ್ಯವೆಲ್ಲಿ ನಡೆಯುತ್ತದೆಯೋ, ಆ ಬ್ರಾಂಚಿನ ಮೇಲೆ ಹೆಡ್‌ಆಫೀಸಿನ ಕಂಟ್ರೋಲ್ ಇರಬೇಕಾಗುತ್ತದೆ. ನಾನು ಶಿಸ್ತು ಪರಿಪಾಲಿಸುವ ವ್ಯಕ್ತಿ. ಹಾಗೆ ಒಂದು ಬಗೆಯ ಡಿಕ್ಟೇಕ್ಟರ್‌ನಾಗಿದ್ದೇನೆ. ಹಣದ ವಿಷಯದಲ್ಲಿ ನಾವು ಅತ್ಯಂತ ಪ್ರಾಮಾಣಿಕವಾಗಿರಬೇಕು.

ಪ್ರತಿಯೊಂದು ಜಿಲ್ಲೆಯ ಐದೈದು ಸದಸ್ಯರನ್ನು ಕರೆಸಿ ಅವರ ಸಭೆಯನ್ನು ಏರ್ಪಡಿಸಿ, ಅಲ್ಲಿ

ಏಳೂ ಶಾಸಕರನ್ನು ಕರೆಯಿಸಿ, ಎಲ್ಲರೂ ಸೇರಿ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿ.

ಕಾಂಗ್ರೆಸು ಭದ್ರಬುನಾದಿಯ ಮೇಲೆ ನಿಂತಸಂಸ್ಥೆ. ಅದರ ಮುಂದೆ ನಮ್ಮದೇನೂ ನಡೆಯುವುದಿಲ್ಲ. ಅವರದ್ದೇ ಬಹುಮತವಿರವುದರಿಂದ ನಾವು ಏನೂ ಮಾಡುವಂತಿಲ್ಲ. ಆದ್ದರಿಂದ ಅವರಲ್ಲಿ ಒಡಕು ತರುವುದು ನಮ್ಮ ಕರ್ತವ್ಯ. ಡಾ. ಖರೆಯವರು ವೈರಿಪಕ್ಷದ ಒಂದು ಕಲ್ಲು. ಅದನ್ನು ಉರುಳಿಸುವ ಪ್ರಯತ್ನವನ್ನು ನಾನು ಮಾಡಿದೆ.

ಪಕ್ಷದ ಸದಸ್ಯರ ಹಣವನ್ನು ಒಬ್ಬನೇ ವ್ಯಕ್ತಿಯ ಹೆಸರಿನಲ್ಲಿಡಬಾರದು. ಇಬ್ಬರ ಅಥವಾ ಐವರ ಹೆಸರಿನಲ್ಲಿ ಬ್ಯಾಂಕಿನಲ್ಲಿಡಬೇಕು. ಪಕ್ಷದ ಕೆಲಸಕ್ಕಾಗಿ ಒಬ್ಬ ಸೆಕ್ರೆಟರಿಯನ್ನು ನೇಮಿಸಿ!(ಈ ಕೆಲಸವಂತೂ ಆಗಿದೆ). ಆಫೀಸಿಗಾಗಿ ಒಂದು ಮನೆಯನ್ನು ಮಾಡಿ. ತಿಂಗಳಲ್ಲಿ ಸಂಗ್ರಹಗೊಂಡ ವಂತಿಗೆಯನ್ನು ಫಾರ್ಮಿನಲ್ಲಿ ತುಂಬಿಕಳಿಸಿ. ನೀವು ಸರಿಯಾಗಿ ಕಾರ್ಯನಿರ್ವಹಿಸಿದರೆ, ಜನತಾ ಪತ್ರಿಕೆಯಲ್ಲಿ ಸಿ.ಪಿ. ಮತ್ತು ಬೇರಾರಗಾಗಿ ಎರಡುಪುಟ ಮೀಸಲು ಇರಿಸೋಣ. ಸದ್ಯಕ್ಕೆ ಒಂದು ಹಂಗಾಮಿ ಕಮಿಟಿಯನ್ನು ನೇಮಿಸಿ, ಅನಂತರ ಚುನಾವಣೆ ಜರುಗುತ್ತದೆ. ಪ್ರಚಾರ ಕಾರ್ಯಕ್ಕಾಗಿ ಬೇರೆ ಬೇರೆ ಜನರಿಗೆ ಬೇರೆ ಬೇರೆ ವಿಭಾಗಗಳನ್ನು ಕೊಡಿ. ಸ್ವತಂತ್ರ ಕಾರ್ಮಿಕ ಪಕ್ಷದ ರಾಜಕಾರಣಕ್ಕಾಗಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಸಂಘಟಿಸುವ ಅಗತ್ಯವಿದೆ.

ಯಾವ ಮನುಷ್ಯನ ಕೈಗೆ ಸತ್ತೆ ಹೋಗುತ್ತದೋ, ಅಲ್ಲಿ ಒಬ್ಬ ಯೋಗ್ಯವ್ಯಕ್ತಿಯನ್ನು ಆಯ್ಕೆ ಮಾಡಿ ಕಳಿಸಬೇಕು. ಸಾಮಾಜಿಕ ಕಾರ್ಯವೆಂದರೇನು, ಸಮಾಜದ ಹಿತ ಯಾವುದರಲ್ಲಿದೆ, ಯಾವ ಯಾವ ಸಂಗತಿಗಳು ಸಮಾಜಕ್ಕೆ ಅಗತ್ಯವಿದೆ, ಎಂಬುದರ ಅರಿವು ಅವನಿಗಿರಬೇಕು. ಕಾರ್ಯ ಮಾಡಲು ಪ್ರಥಮ ದರ್ಜೆಯ ಜನರನ್ನು ಆಯ್ಕೆ ಮಾಡಿ ಕಳಿಸದೆ, ಅಂಥಲ್ಲಿ ತಮ್ಮ ಬಂಧುಬಳಗದವರನ್ನು ಕಳಿಸಿದರೆ ಯಾವ ಕಾರ್ಯವೂ ಆಗಲಾರದು. ತಮ್ಮ ವ್ಯಕ್ತಿಯ ಬಗೆಗೆ ಬಹಿರಂಗ ಸಭೆಯಲ್ಲಿ ಏನೇ ಭಿನ್ನಾಭಿಪ್ರಾಯವಿದ್ದರೂ ತಮ್ಮ ಪಕ್ಷ ಕುಂಠಿತವಾಗದಂತೆ ಪ್ರತಿಯೊಬ್ಬ ಸದಸ್ಯರು ವರ್ತಿಸಬೇಕು.

ಪಕ್ಷದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿ. ಹಾಗೇ ಮಧ್ಯ ಪ್ರಾಂತದ ನಕಾಶೆಯನ್ನು ಬಿಡಿಸಿ ನನಗೆ ಕಳಿಸಿ ಆ ನಕಾಶೆಯಲ್ಲಿ ಪ್ರತಿಜಿಲ್ಲೆಯ ವಿಭಾಗವನ್ನು ತೋರಿಸಿ, ಅಲ್ಲಿ ನಮ್ಮ ಮತದಾರರು ಎಷ್ಟು, ಸಾಮಾನ್ಯ ಮತದಾರರು ಎಷ್ಟು, ಎಲ್ಲಿಯ ಜಾಗ ರಿಜರ್ಸ್ ಆಗಿದೆ ಮತ್ತು ಎಲ್ಲಿ ಚುನಾವಣೆಗೆ ಸ್ಪರ್ಧಿಸಬೇಕಾಗುತ್ತದೆ ಈ ಎಲ್ಲ ಮಾಹಿತಿಯನ್ನು ಅದರಲ್ಲಿ ಬರೆದು ನನಗೆ ಕಳಿಸಿ. ಅಂದರೆ ಮುಂದಿನ ವ್ಯವಸ್ಥೆ ಹೇಗಿರಬೇಕು ಎನ್ನುವುದನ್ನು ನಿರ್ಧರಿಸುವುದು ತುಂಬ ಸುಲಭವಾಗುತ್ತದೆ.

## ೧೪೫.

# ಮಾಲೀಕ–ಕಾರ್ಮಿಕರ ಜಗಳದ ನಿವಾರಣೆಯ ಕಾನೂನು ಕಾರ್ಮಿಕರ ಗೋಣು ಮುರಿಯುವಂತಹದಾಗಿದೆ

ಭಾನುವಾರ ದಿ. ೬ ನವ್ಹೆಂಬರ್ ೧೯೩೮ ರಂದು ಸಂಜೆ ಪರಳದ ಕಾರ್ಮಿಕ ಬಯಲಿನಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚಿರುವ ಜನ ಸಮುದಾಯವು ಕಾರ್ಮಿಕರಸಭೆಗೆ ಹಾಜರಿತ್ತು. ಸಭೆಗೆ ಆಗಮಿಸಿದವರಿಗೆಲ್ಲ ೭ನವ್ಹೆಂಬರಿನ ಕಾರ್ಮಿಕರ ಒಂದು ದಿನದ ಮುಷ್ಕರವು ಯಶಸ್ವಿಯಾಗುತ್ತದೆಂಬ ದೃಢನಂಬುಗೆಯಾಯಿತು. ಆ ದಿನ ಸಭೆಯ ಅಧ್ಯಕ್ಷರಾದ ಬ್ಯಾ. ಜಮನಾದಾಸ ಮೆಹತಾ, ಶಾಮರಾವ ಪರೂಳೆಕರ, ಭಾಯಿ ಯಾಜ್ಞಿಕ್, ಎಸ್.ಎ. ಡಾಂಗೆ, ಮಿರಜಕರ–ಅವರು ಭಾಷಣ ಮಾಡಿದರು. ಆ ಸಭೆಯ ಪ್ರಚಂಡ ಜನಸಮುದಾಯದ ಎದುರಿಗೆ ಭಾಷಣ ಮಾಡುವಾಗ ಡಾ. ಅಂಬೇಡ್ಕರ್ ಹೇಳಿದ್ದು ಹೀಗೆ.

'ನಾವಿಂದು ಮುಂಬಯ ಸರಕಾರ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಪ್ರಸ್ಥಾಪ ಮಾಡಿದ' ಟ್ರೇಡ್ ಡಿಸ್ಪ್ಯೂಟ್ ಬಿಲ್‌ನಲ್ಲಿ ನಿಷೇಧಿಸಲು ಸೇರಿದ್ದೇವೆ. ಈ ವಿಷಯವನ್ನು ನನಗಿಂತ ಮೊದಲು ಮಾತಾಡಿದವರು ಹೇಳಿದ್ದಾರೆ. ಆ ಬಿಲ್ಲಿಗೆ 'ಟ್ರೇಡ್ ಡಿಸ್ಪ್ಯೂಟ್ ಬಿಲ್' ಅಥವಾ 'ಮಾಲೀಕ–ಕಾರ್ಮಿಕ ಜಗಳ ನಿವಾರಣೆಯ ಕಾನೂನು' ಎಂದು ಕರೆಯಲಾಗುತ್ತದೆ. ಈ ಬಿಲ್ಲು ಕಾರ್ಮಿಕ ವರ್ಗದ ಗೋಣನ್ನು ಎಷ್ಟು ಸಲೀಸಾಗಿ ಮುರಿದಿದೆ–ಎಂಬ ಚರ್ಚೆಯನ್ನು ನಾನೀಗ ಮಾಡುವುದಿಲ್ಲ. ಏಕೆಂದರೆ ಈ ಚರ್ಚೆಯನ್ನು ನನ್ನ ಮೊದಲಿನ ಭಾಷಣಕಾರರು ಮತ್ತು ನಮ್ಮ ಅಸೆಂಬ್ಲಿಯ ಸದಸ್ಯರು ಕಳೆದ ಎರಡು–ಎರಡೂವರೆ ತಿಂಗಳಿಂದ ಅಖಂಡ ಉತ್ಸಾಹದಿಂದ ಮತ್ತು ಕರ್ತವ್ಯ ತತ್ಪರತೆಯಿಂದ ಮಾಡಿದ್ದಾರೆ. ನೀವು ಅದನ್ನು ಪತ್ರಿಕೆಯಲ್ಲಿ ಓದಿದ್ದೀರಿ. ನಾನಿಂದು ನಿಮಗೆ ಹೇಳಬೇಕಾದ ವಿಷಯವೇನೆಂದರೆ, ಕಾಂಗ್ರೆಸ್ ಸರಕಾರವು ಅಧಿಕಾರಕ್ಕೆ ಬಂದ ಮೇಲೆ ಸಂಖ್ಯೆಯ ಬಲದಿಂದ ಕಾರ್ಮಿಕರಿಗೆ ಸಂಬಂಧಿಸಿದ ಅನ್ಯಾಯದ ಕಾನೂನನ್ನು ಅಂಗೀಕರಿಸಿ, ಆ ಅನ್ಯಾಯದ ಪರಿಸ್ಫೋಟ ಮಾಡುವವರ ವಿರುದ್ಧ ಸುಳ್ಳು ನಿಂದ್ಯ ಮತ್ತು ನಾಚಿಕೆಗೇಡಿನ ಪ್ರಚಾರ ಮಾಡುವಷ್ಟು ಕಾಂಗ್ರೆಸ್ಸಿನ ಸತ್ಯ–ಅಹಿಂಸೆಯ ವೃತ್ತಿಯೂ ಇಂದು ಅಧೋಗತಿಗೆ ಇಳಿದಿದೆ–ಎಂಬ ಸಂಗತಿಯನ್ನು ಮರೆಯುವಂತಿಲ್ಲ.

'ಕಾರ್ಮಿಕರ ಮುಖಂಡರು ಸ್ವಾರ್ಥಿಗಳು, ವಂಚಕರೂ ಅಗಿದ್ದಾರೆ' ಎಂದು ಬಾಡಿಗೆಯ ಖಾದಿಧಾರಿಗಳಿಂದ ಹಿಡಿದು ಅಗ್ರಗಣ್ಯ ಕಾಂಗ್ರೆಸ್ ಜಂಬೂಕಿನವರೆಗಿನ ಎಲ್ಲರೂ ಬಡಬಡಿಸುತ್ತಿದ್ದಾರೆ! ನಾನು ನಿಮ್ಮೆದುರಿಗೆ ಇರಿಸುವ ನೇರ ಪ್ರಶ್ನೆ ಯಾವುದೆಂದರೆ, ಹಿಂದೆ ೧೯೩೦–೩೪ರಲ್ಲಿ ಕಾಂಗ್ರೆಸ್ಸು ಕಾರ್ಮಿಕರ ಹಿತಸಂಬಂಧದ ಧೋರಣೆಯನ್ನು ಸ್ಪಷ್ಟ ಪಡಿಸಿರುವಾಗ, ಅದನ್ನು ಸಮಾಧಿ ಮಾಡಿ, ಕಾಮಿಕರ ಗೋಣು ಮುರಿಯುವ ಕಾನೂನು ರೂಪಿಸುವ ಕಾಂಗ್ರೆಸಿನ ಪುಢಾರಿಗಳು ವಂಚಕರೇ, ಅಥವಾ

---

ಜನತಾ: ೧೨ ನವ್ಹೆಂಬರ್ ೧೯೩೮.

ಸತ್ತೆಯ ಮದಾಂಧ ಕಾಂಗ್ರೆಸ್ ಪಕ್ಷದಿಂದ ಮಾಡಲಾದ ಅಪಮಾನವನ್ನು ಸಹಿಸಿ, ಕಾರ್ಮಿಕರ ನಿಲುವನ್ನು ನಿರ್ಭಿಡೆಯಿಂದ ಅಸೆಂಬ್ಲಿಯಲ್ಲಿ ಮಂಡಿಸುವ ಕಾರ್ಮಿಕ ಮುಖಂಡರು ವಂಚಕರು–ಎಂಬ ನಿರ್ಣಯವನ್ನು ನೀವೆ ಕೈಕೊಳ್ಳಬೇಕು. 'ದೇಶಹಿತ ಮತ್ತು ದೇಶಭಕ್ತಿಯ ಸಂಪೂರ್ಣ ಅಧಿಕಾರ ವಂಶಪಾರಂಪರ್ಯ ವಾಗಿ ಕಾಂಗ್ರೆಸ್ಸಿಗೇ ಸೇರಿದ್ದು, ಡಾ. ಅಂಬೇಡ್ಕರ ಜಾತಿನಿಷ್ಠರು', ಡಾ. ಅಂಬೇಡ್ಕರ ದೇಶದ್ರೋಹಿ, ಏಕೆಂದರೆ ಅವರೆಂದೂ ಜೈಲಿಗೆ ಹೋಗಲಿಲ್ಲ!' ಕೇವಲ ಜೈಲಿಗೆ ಹೋಗುವುದರಿಂದಲೇ ಮನುಷ್ಯ ಹೇಗೆ ದೇಶಭಕ್ತನಾಗುತ್ತಾನೆ ಎನ್ನುವುದೇ ಅರ್ಥವಾಗುವುದಿಲ್ಲ. ನಾನು ಜೈಲಿಗೆ ಹೋಗದಿರುವ ಸಂಗತಿಯು ಸತ್ಯವೇ. ನಾನು ಜೈಲಿಗೆ ಹೋಗಿ ಏನು ಲಾಭ? ನಾನು ಜೈಲುಸೇರಿದ್ದರೆ, ನನಗೆ 'ಎ'ಕ್ಲಾಸ್ ಸಿಗುತ್ತಿತ್ತು. 'ಎ'ಕ್ಲಾಸಿನ ಭೋಗವನ್ನು ಅನುಭವಿಸಿ, ಅನುಯಾಯಿಗಳ ಹಾದಿ ತಪ್ಪಿಸುವ ಡಾಂಭಿಕತನ ನನ್ನಲ್ಲಿಲ್ಲ ಎಂದು ಪ್ರಾಮಾಣಿಕವಾಗಿ ನಾನು ಒಪ್ಪಿಕೊಳ್ಳುತ್ತೇನೆ. ಇಂದಿನ ಕಾಂಗ್ರೆಸಿಗರು ನೆಪಮಾತ್ರಕ್ಕೆ ಕಾರಾಗೃಹ ಸೇರಿದ್ದಾರೆ. ನಿಜವಾಗಿ ಕಾರಾಗೃಹವನ್ನು ಅನುಭವಿಸಿದ್ದು ಲೋಕಮಾನ್ಯ ತಿಲಕರು ಮತ್ತು ಇತರ ಮಹಾರಾಷ್ಟ್ರದ ಮುಖಂಡರು!

ಒಮ್ಮುಖ ಮತ್ತು ಹುಡುಗಾಟಿಕೆಯ ಪ್ರಚಾರದಿಂದಾಗಿ ಕೆಲವೇ ಜನರ ದಿಕ್ಕುತಪ್ಪಿದರೂ, ನಿಷ್ಪಕ್ಷಪಾತಿ ಮನುಷ್ಯನಿಗೆ ಈ ಪ್ರಚಾರದ ಪೊಳ್ಳುತನ ಅರಿವಾಗದೆ ಇರದು. ಕಾಂಗ್ರೆಸಿಗರ ಗುರು ಮಹಾತ್ಮ ಗಾಂಧಿ ಎರಡನೇ ದುಂಡುಮೇಜಿನ ಪರಿಷತ್ತಿಗೆ ಹೋದಾಗ, ಹಿಂದೂಸ್ಥಾನದ ಏಕೈಕ ಪ್ರತಿನಿಧಿ ಎಂದು ಅವರ ಜೈಜೈಕಾರ ಮಾಡಿದೆವು. ಗಾಂಧಿಯ ಭಕ್ತ ಮತ್ತು ಅಭಿಮಾನಿಗಳಿಗೆ ನಾನು ನೇರವಾಗಿ ಕೇಳುವುದೇನೆಂದರೆ, ರೌಂಡ್ ಟೇಬಲ್ ಕಾನ್ಫರೆನ್ಸಿನ ಪ್ರೊಸಿಡಿಂಗ್‌ದಲ್ಲಿ ಸುರಕ್ಷಿತವಾಗಿರುವ ನನ್ನ ಮತ್ತು ಗಾಂಧಿಯವರ ಭಾಷಣವನ್ನು ಪುಸ್ತಕರೂಪದಲ್ಲಿ ಪ್ರಕಟಿಸಬೇಕು. ಅಂಬೇಡ್ಕರರ ಭಾಷಣ ಸಂಪುಟ–೧, ಮಹಾತ್ಮ ಗಾಂಧಿಯ ಭಾಷಣ ಸಂಪುಟ–೨ ಈ ರೂಪದಲ್ಲಿ ಅದನ್ನೇ ಪ್ರಕಟಿಸಬೇಕು. ಅದನ್ನು ಓದಿ ಯಾರು ದೇಶದ್ರೋಹಿ ಎನ್ನುವುದನ್ನು ನಿರ್ಧರಿಸಬೇಕು. ಯಾವುದೇ ನಿರ್ಭಿತ ಮತ್ತು ನಿಸ್ಪೃಹ ನ್ಯಾಯಾಧೀಶರು ಇದರ ಬಗೆಗೆ ನೀಡಿದ ನಿರ್ಣಯವನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ ಎಂದು ಈ ಸಭೆಯಲ್ಲಿ ಬಹಿರಂಗವಾಗಿ ಹೇಳಲು ಬಯಸುತ್ತೇನೆ.

ನಾಳೆಯ ಮುಷ್ಕರ ನಿಜವಾದ ಅರ್ಥದಲ್ಲಿ ಮುಷ್ಕರವೇ ಅಲ್ಲ. ಇಂದಂತೂ ನಮ್ಮ ಜಗಳ ಮಾಲೀಕನ ಜೊತೆಗಿನದಲ್ಲ. ಮುಂಬೈ ಸರಕಾರವು ದುರಾಗ್ರಹದಿಂದ ಮತ್ತು ಮಾಲೀಕರನ್ನು ಸಂತೋಷ ಪಡಿಸುವ ಇರಾದೆಯಿಂದ ಕಾರ್ಮಿಕರ ಕಗ್ಗೊಲೆ ಮಾಡುವ ಬಿಲ್‌ನ್ನು ಅಂಗೀಕರಿಸಿದೆ. ಅಸೆಂಬ್ಲಿಯಲ್ಲಿ ಆ ಬಿಲ್ ಪಾಸ್ ಆಗಿದೆ. ಕೌನ್ಸಿಲ್ಲಿನಲ್ಲಿ ಅಂಗೀಕಾರವಾಗಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಅದರ ಬಗೆಗೆ ನಮ್ಮ ನಿರಾಕರಣೆಯನ್ನು ವ್ಯಕ್ತ ಮಾಡಲು ಸಂಪೂರ್ಣ ಕಾರ್ಮಿಕ ಮತ್ತು ಕೂಲಿಯಾಳುಗಳು ಒಂದು ದಿನದ ಸಾರ್ವತ್ರಿಕ ಮುಷ್ಕರವನ್ನು ನಡೆಸಲಿದ್ದೇವೆ. ಒಂದು ದಿನ ನಡೆಯಲಿರುವ ಶಾಂತಿಯುತ ಮುಷ್ಕರದ ಮೂಲಕ ಕಾರ್ಮಿಕರ ಮತ್ತು ಕೂಲಿಗಳ ಪ್ರಚಂಡ ಶಕ್ತಿಯನ್ನು ಜಗತ್ತಿಗೆ ತೋರಿಸಲಿದ್ದೇವೆ.

ನೀವೆಲ್ಲ ಮುಷ್ಕರದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂಬ ಕೋರಿಕೆ ನನ್ನದು. ಆದರೆ ನಾನಾಗಲಿ, ಇತರ ಕಾರ್ಮಿಕ ಮುಖಂಡರಾಗಲಿ ಹೇಳುತ್ತೇವೆ ಎಂಬ ಕಾರಣಕ್ಕಾಗಿ ಭಾಗವಹಿಸಬೇಡಿ. ಆ ಮಸೂದೆಯ ಅಸಹ್ಯ ಸ್ವರೂಪ ಮತ್ತು ಅದರ ಬಗೆಗಿನ ನಿಮ್ಮ ಕರ್ತವ್ಯವನ್ನು ಅರಿತು ಮನದುಂಬಿ, ಮುಷ್ಕರ ಯೋಗ್ಯವೆನಿಸಿದರೆ ಮಾತ್ರ ಭಾಗವಹಿಸಿ.

ನಾಳೆಯ ಮುಷ್ಕರ ಮುಗಿದಾಕ್ಷಣ ಕೆಲಸ ಮುಗಿಯಿತು ಎಂದು ಮಾತ್ರ ಭಾವಿಸಬೇಡಿ. ಇದು

ಮುಂದೆ ನೀವು ನಡೆಸಲಿರುವ ಹೋರಾಟದ ಶುಭಾರಂಭ ಎಂಬುದನ್ನು ನೀವು ಮರೆಯಬೇಡಿ. ನೀವು ಸಾವಿರಾರು ಸಂಖ್ಯೆಯಲ್ಲಿ ಉಪಸ್ಥಿತರಾಗಿರುವುದರಿಂದ ನಿಮಗೆ ಧನ್ಯವಾದ ಹೇಳಿ ನನ್ನ ಮಾತಿಗೆ ವಿರಾಮ ನೀಡುತ್ತೇನೆ.

ಸಾರ್ವತ್ರಿಕ ಮುಷ್ಕರದ ಬಗೆಗೆ ಡಾ. ಅಂಬೇಡ್ಕರರು ಮಾಡಿದ ಭಾಷಣವು ಜನರ ಮನದಲ್ಲಿ ಸಂಪೂರ್ಣ ಬಿಂಬಸಿದಂತೆ ಕಂಡುಬಂತು. ನಿರಂತರವಾಗಿ ನಡೆದ ಪ್ರಚಾರದಿಂದಾಗಿ ಕಾರ್ಮಿಕರಲ್ಲಿ ಒಗ್ಗಟ್ಟು ಕಂಡು ಬಂದದ್ದು ವಿಶೇಷವಾಗಿತ್ತು.

ಸಭೆಯ ಬಳಿಕ ಕಾರ್ಮಿಕರ ಮತ್ತು ಕಾರ್ಮಿಕರ ಬಡಾವಣೆಯಿಂದ ಹೊರಟ ಮೆರವಣಿಗೆಯು ಅಭೂತಪೂರ್ವವಾಗಿತ್ತು. ಮುಷ್ಕರ ಯಶಸ್ಸುಗೊಂಡುದರ ಪ್ರತೀಕವಾಗಿತ್ತು. ಸಾವಿರಾರು ಕಾರ್ಮಿಕರ ಶಾಂತಿಯುತ ಮತ್ತು ಶಿಸ್ತಿನ ರಾತ್ರಿಯ ಮೆರವಣಿಗೆಯನ್ನು ಕಂಡವರು ಬೆರಗಾಗದೆ ಇರಲಿಲ್ಲ. ಮುಷ್ಕರದ ಪ್ರಚಾರಕ್ಕಾಗಿ ಇಷ್ಟುದೊಡ್ಡ ಪ್ರಮಾಣದಲ್ಲಿ ಎಂದೂ ಮೆರವಣಿಗೆ ಜರುಗಿರಲಿಲ್ಲ. ಸಮತಾಸೈನಿಕ ದಳದವರ ಅಚ್ಚುಕಟ್ಟಾದ ಶಿಸ್ತು ಪ್ರಶಂಸನೀಯವಾಗಿತ್ತು. ಸ್ವತಂತ್ರ ಕಾರ್ಮಿಕ ಪಕ್ಷದ ಕಾರ್ಯಕರ್ತರು ನಡೆಸಿದ ಪ್ರಯತ್ನ ವರ್ಣನಾತೀತವಾದುದು. ರಾತ್ರಿ ಎಲ್ಲ ಕಾರ್ಮಿಕ ಮುಖಂಡರು ಮುಷ್ಕರದ ಸಿದ್ಧತೆಯಲ್ಲಿ ತೊಡಗಿದ್ದರು. ಡಾ. ಅಂಬೇಡ್ಕರ, ಬ್ಯಾ. ಮೆಹತಾ, ಡಿ.ವ್ಹಿ. ಪ್ರಧಾನ, ಡಾಂಗೆ, ನಿಮಕರ್–ಮುಂತಾದವರು ಇಡೀರಾತ್ರಿ ಕಾರ್ಮಿಕರ ವಿಭಾಗದಲ್ಲಿ ಅಲೆದಾಡುತ್ತಿದ್ದರು.

## ೧೪೬.

# ಯಾವುದೇ ಪರಿಸ್ಥಿತಿಯಲ್ಲಿ ಕಾರ್ಮಿಕ ಪ್ರತಿನಿಧಿಗಳನ್ನು ಚುನಾವಣೆಯಲ್ಲಿ ಗೆಲ್ಲಿಸಲೇಬೇಕು

ದಿನಾಂಕ ೭ ನವ್ವೆಂಬರ ೧೯೩೮ರ ಮುಂಬೈ ಕಾರ್ಮಿಕರ ಮುಷ್ಕರವು ಯಶಸ್ವಿಗೊಂಡ ಬಳಿ, ಸಂಜೆ ಕಾರ್ಮಿಕರ ಬಯಲಿನಲ್ಲಿ ಭವ್ಯಸಭೆ ಏರ್ಪಟ್ಟಿತು. ಒಂದೂವರೆ ಲಕ್ಷದಷ್ಟು ಕಾರ್ಮಿಕರು ಆಗಮಿಸಿದ್ದರು. ಕಾರ್ಮಿಕರು ಮುಷ್ಕರಿದಿಂದ ಕಲಿಯಬೇಕಾದ ಪಾಠ, ಮುಂದಿನ ಧೋರಣೆ ಏನಿರಬೇಕು ಮತ್ತು ಪ್ರತ್ಯಕ್ಷ ಹೋರಾಟದ ಜೊತೆಗೆ ಕಾರ್ಮಿಕರ ಮುಷ್ಕರ, ಹೋರಾಟ ಮತ್ತು ಸ್ವಾತಂತ್ರ್ಯದ ಹೋರಾಟ ಯಶಸ್ವಿಯಾಗಿ ಪೂರ್ಣಗೊಳ್ಳಲು ರಾಜಕೀಯ ಸತ್ತೆಯಿರುವ ಕಾನೂನು ಕೌನ್ಸಿಲ್‌ಗಳು, ನಗರ ಪಾಲಿಕೆಗಳು, ಲೋಕಲ್ ಬೋರ್ಡ್‌ಗಳು ಕಾರ್ಮಿಕರ–ರೈತರ ಮತ್ತು ಜನತೆಯ ಪ್ರತಿನಿಧಿಗಳ ಕೈಗೆ ಬರುವುದು ಅದೆಷ್ಟು ಅಗತ್ಯವಿದೆ ಎಂಬ ವಿಷಯದ ಬಗೆಗೆ ಡಾ. ಅಂಬೇಡ್ಕರರು ನೇರವಾಗಿ, ವಿಷಯವನ್ನಾಧರಿಸಿ ಭಾಷಣ ಮಾಡಿದರು.

**ಡಾ. ಅಂಬೇಡ್ಕರ ಹೀಗೆ ಹೇಳಿದರು.**

ಇಂದಿನ ಸಾಯಂಕಾಲದ ಪತ್ರಿಕೆಯನ್ನು ಗಮನಿಸಿದರೆ ವಿಚಿತ್ರಲೀಲೆ ಗೋಚರಿಸುತ್ತದೆ. ಪತ್ರಿಕೆಯಲ್ಲಿ ಪ್ರಕಟಗೊಂಡ ವಿಷಯ ಬೆರಗುಗೊಳಿಸುವಂತಹದು. ಒಂದು ಪತ್ರಿಕೆಯು ಸತ್ಯವೋ ಸುಳ್ಳೋ ನಾನು ಹೇಳಲಾರೆ. ಆದರೆ ಮುಂಬೈ ಮಂತ್ರಿಮಂಡಳ ಮತ್ತು ಬಂಡವಾಳದಾರರು ಮುಂಬೈಯಲ್ಲಿರುವ ಪತ್ರಿಕೆಗಳನ್ನು ಕೊಂಡುಕೊಂಡಿದ್ದಾರೆ ಎಂದೆನಿಸುತ್ತದೆ. ಮುಷ್ಕರ ಯಶಸ್ವಿಯಾದರೂ ಇಂಥ ಹುಸಿ ಮತ್ತು ವಿಪರೀತ ಪರಿಸ್ಥಿತಿಯನ್ನು ಚಿತ್ರಿಸುವುದು ನಿಷೇಧಾರ್ಹವಾದುದು. ಪತ್ರಿಕೆಯಲ್ಲಿ ಬರೆದುದರ ಬಗೆಗೆ ಚಿಂತಿಸಬೇಕಿಲ್ಲ. ಎದುರಿಗಿರುವುದನ್ನು ನೋಡಿ, ತಾಳ್ಮೆಯಿಂದ ವರ್ತಿಸಿ.

ಇಂದು ಒಂದೂಕಾಲು ಲಕ್ಷದಷ್ಟು ಕಾರ್ಮಿಕರು ಒಗ್ಗಟ್ಟಿನಿಂದ ಒಂದಾಗಿ ಹಸಿವೆಯನ್ನು ಲೆಕ್ಕಿಸದೆ, ದಿನದ ಗಳಿಕೆಯನ್ನೂ ಕಳಕೊಂಡು ಈ ಬಿಲ್ ಬಗೆಗೆ ವಿರೋಧವನ್ನು ವ್ಯಕ್ತಪಡಿಸಿದಿರಿ. ಕಾಂಗ್ರೆಸ್ ಮಾಡಿದ ಕಾನೂನನ್ನು ನೀವು ವಿರೋಧಿಸಿದಿರಿ. ಮೇಲಿನ ಕೌನ್ಸಿಲ್‌ನಲ್ಲಿ ಗೆಳೆಯ ಜೋಶಿಯವರು ಹೀಗೆಯೇ ವಿರೋಧಿಸಲಿದ್ದರೂ, ಅವರಿಗೆ ಸಹಕಾರವಿಲ್ಲ. ಹೀಗಾಗಿ ಈ ಕಾನೂನು ನಮ್ಮ ಎದೆಯ ಮೇಲೆ ಕೂರಲಿದೆ. ಕಾಂಗ್ರೆಸು ಈ ಕಾನೂನು ರೂಪಿಸುವುದು, ನಾವದನ್ನು ವಿರೋಧಿಸುವುದು–ಇದಷ್ಟೇ ನಮ್ಮ ಕೆಲಸವೇ? ಕೇವಲ ಧ್ವಜಹಾರಿಸಿ, ಘೋಷಣೆ ಹಾಕಿ, ಸುಮ್ಮನೆ ಕೂತರೆ, ನಿಮ್ಮಂತಹ ಮಹಾಮೂರ್ಖರು ಇನ್ನೊಬ್ಬರಿಲ್ಲ ಎಂದೇ ನಾನು ಹೇಳಬೇಕಾಗುತ್ತದೆ. ಯಾವ ಕಾಂಗ್ರೆಸ್ ಸರಕಾರವು ಕುದುರೆಯ ಮೇಲೆಕೂತು, ನಮ್ಮ ಬಾಯಿಗೆ ಕಡಿವಾಣ ಹಾಕಿದೆಯೋ ಅಂಥ ಕಾಂಗ್ರೆಸ್ ಸರಕಾರವನ್ನು ಕೆಳಗಿಳಿಸುವುದು ಜಾಣತನದ

---

ಜನತಾ: ೧೨ ನವ್ವೆಂಬರ ೧೯೩೮.

ಕಾರ್ಯ. ಕಾನೂನು ರೂಪಿಸುವ ಅವಕಾಶವನ್ನು ವೈರಿಗಳಿಗೆ ಕೊಡಬೇಡಿ. ನೀವು ಮೊದಲೇ ಜಾಣತನ ತೋರಿ. ಹೆಚ್ಚು ಕಾರ್ಮಿಕ ನಾಯಕರನ್ನು ಚುನಾವಣೆಯಲ್ಲಿ ಗೆಲ್ಲಿಸಿದ್ದರೆ ಈ ಕಾನೂನು ಸ್ವೀಕಾರವಾಗುತ್ತಿರಲಿಲ್ಲ. ಇಂದು ಕಾಂಗ್ರೆಸಿಗೆ ಅಧಿಕ ಮತವಿದೆ. ಆದ್ದರಿಂದಲೇ ಕಾಂಗ್ರೆಸು ಈ ಕಾನೂನು ಅಂಗೀಕಾರ ಮಾಡಬಹುದು. ಇಂದು ಸತ್ತೆಯಿರುವ ಸ್ಥಾನವನ್ನು ನೀವು ಹಸ್ತಗತ ಮಾಡಿಕೊಂಡರೆ ಮಾತ್ರ ನಿಮಗೆ ಉಳಿಗಾಲ.

ರಾಜಕೀಯ ಸತ್ತೆಯಿರುವ ನಗರಪಾಲಿಕೆ, ಲೋಕಲ್ ಬೋರ್ಡ್, ಕಾಯ್ದೆ ಕೌನ್ಸಿಲ್ ಮುಂತಾದ ಸ್ಥಾನಗಳನ್ನು ಕಾರ್ಮಿಕರು ಹಸ್ತಗತ ಮಾಡಿಕೊಂಡರೆ ಮಾತ್ರ ಇಂದಿನ ಕಾರ್ಯಕ್ರಮ ಸಫಲಗೊಂಡಿತು ಎಂದೆನ್ನಬಹುದು.

ಮುಂಬರುವ ಮುನ್ಸಿಪಲ್ ಚುನಾವಣೆಗೆ ಕಾರ್ಮಿಕ ಪಕ್ಷದ ಮುಖಂಡರು ಸ್ಪರ್ಧಿಸಲಿದ್ದಾರೆ. ಅವರಿಗೆ ನೀವು ಮತಗಳನ್ನು ನೀಡಿ. ಕಾಂಗ್ರೆಸು ೫೦ ವರ್ಷಗಳಲ್ಲಿ ಗಳಿಸಿದ ಮಾನ–ಮರ್ಯಾದೆಯನ್ನು ಕಳೆದ ೧೫ ತಿಂಗಳಲ್ಲಿ ಕಳೆದುಕೊಂಡಿದೆ.

ಸಾಮ್ರಾಜ್ಯಶಾಹಿಯ ವಿರುದ್ಧ ಕಾಂಗ್ರೆಸ್ ತೀವ್ರವಾದ ಹೋರಾಟವನ್ನು ಆರಂಭಿಸಿದರೆ ನಾನು ಸ್ವಾತಂತ್ರ್ಯಕ್ಕಾಗಿ ನನ್ನೆಲ್ಲ ಶಕ್ತಿಯನ್ನು ಕಾಂಗ್ರೆಸಿಗಾಗೇ ವಿನಿಯೋಗಿಸುತ್ತೇನೆ. ಆದರೆ ಕಾಂಗ್ರೆಸ್ ಇಂದು ಬಳಸುವ ಸಾಮ್ರಾಜ್ಯಶಾಹಿ ವಿರುದ್ಧದ ಭಾಷೆಯು ಜನರ ದಿಕ್ಕುತಪ್ಪಿಲು ಬಳಸಲಾಗುತ್ತಿದೆ. ಕಾಂಗ್ರೆಸು ಇಂದು ಪ್ರಾಮಾಣಿಕವಾಗಿ ಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡುತ್ತಿರುವುದು ಕಂಡುಬಂದಲ್ಲಿ, ನಾನು ನನ್ನ ಇಂದಿನ ನಿಲುವನ್ನು ತೊರೆದು ಕಾಂಗ್ರೆಸ್ಸಿನ ಸ್ವಾತಂತ್ರ್ಯದ ಹೋರಾಟಕ್ಕೆ ಸಹಕಾರ ನೀಡುತ್ತೇನೆ.

ಆದ್ದರಿಂದಲೇ ನಾನು ನಿಮಗೆ ಮರಳಿ ಹೇಳುವುದೇನೆಂದರೆ, ಯಾವುದೇ ಚುನಾವಣೆ ಇರಲಿ, ನೀವು ಕಾರ್ಮಿಕರ ಪ್ರತಿನಿಧಿಗಳನ್ನೇ ಗೆಲ್ಲಿಸಬೇಕು. ಸರಕಾರ ಕಾನೂನು ಮಾಡುವುದು, ಮತ್ತು ನೀವದನ್ನು ವಿರೋಧಿಸುವುದು ನಿಜವಾದ ಹೋರಾಟವಲ್ಲ. ನಿಮಗೆ ಬೇಡವಾಗಿರುವ, ನಿಮ್ಮ ಅಹಿತದ ಕಾನೂನು ಮಾಡುವ ಕಾಂಗ್ರೆಸ್ ಜನರನ್ನು ನೀವೇಕೆ ಮತನೀಡಿ ಗೆಲ್ಲಿಸುತ್ತೀರಿ? ಮುಂಬೈ ಮುನ್ಸಿಪಲ್ ಚುನಾವಣೆಯು ಸನಿಹಕ್ಕೆ ಬಂದಿದೆ. ಈ ಚುನಾವಣೆಯಲ್ಲಿ ಯಾರಿಗೆ ಬೇಕಾದರೂ ಮತನೀಡಿ, ಆದರೆ ಕಾಂಗ್ರೆಸಿಗೆ ಮಾತ್ರ ನೀಡಬೇಡಿ. ನೀವು ಹೀಗೆ ಮಾಡದಿದ್ದರೆ ನಿಮ್ಮ ಹೋರಾಟ ಸರಿಯಾದ ಹಾದಿ ಹಿಡಿಯಲಾರದು ಎನ್ನುವುದು ನಿಮ್ಮ ಗಮನದಲ್ಲಿರಲಿ.

# ೧೪೭.
# ಸ್ವತಂತ್ರ ಕಾರ್ಮಿಕ ಪಕ್ಷದ ಪ್ರಭಾವ

ಭಾನುವಾರ ದಿ. ೩ ಡಿಸೆಂಬರ ೧೯೩೮ರಂದು ರಾತ್ರಿ ಹತ್ತಕ್ಕೆ ಮುಂಬೈ ಫೋರಾಸ್‌ರೋಡ್ ಮುನ್ಸಿಪಲ್ ಸಿಮೆಂಟ್ ಚಾಳ ನಂ. ೧೮ರಲ್ಲಿ ಮಂಡಳಿಯ ಜನನಾಯಕ ಮತ್ತು ಕಾರ್ಮಿಕರ ನಾಯಕರಾದ ಡಾ. ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಕಟ್ಟಡ ಫಂಡಿಗೆ ಸಹಾಯ ಮಾಡಲು ಭವ್ಯ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಈ ಪ್ರಸಂಗದಲ್ಲಿ ಪ್ರಿ. ದೊಂದ್ಡೆ, ಕೆ.ವ್ಹಿ. ಚಿತ್ರೆ, ಭಾಯಿಪ್ರಧಾನ, ಶಾಸಕರಾದ ಡಿ.ಜಿ. ಜಾಧವ, ಸಿ.ಎನ. ಮೋಹಿತೆ, ದಾದಾಸಾಹೇಬ ಗಾಯಕವಾಡ, ಟಿ.ಎಂ. ಸುಂಡೇಕರ, ಮಡಕೆ ಬುವಾ, ರೇವಜಿ ಡೋಳಸಿ, ಎಸ್.ಸಿ. ಧೋತ್ರೆ, ವಡವಲಕರ ಮತ್ತು ಕೇಶವರಾವ ಆಡೇಕರ ಮುಂತಾದ ಸದ್ಗೃಹಸ್ಥರು ಹಾಜರಿದ್ದರು. ಸುಮಾರು ೩–೪ ಸಾವಿರ ಜನಸಮುದಾಯವಿರಬೇಕು. ಹತ್ತರ ಸುಮಾರಿಗೆ ಅಧ್ಯಕ್ಷರಾದ ಅಂಬೇಡ್ಕರ ಮತ್ತು ಇತರ ಯೂರೋಪಿಯನ್ ಅತಿಥಿಗಳು ಸಭೆಯ ಸ್ಥಾನಕ್ಕೆ ಬಂದಕೂಡಲೇ ಜನರು ಚಪ್ಪಾಳೆ ಬಾರಿಸಿ ಅವರನ್ನು ಸ್ವಾಗತಿಸಿತು. ಬಳಿಕ ಸಿ.ಎನ್. ಮೋಹತೆ ಅಧ್ಯಕ್ಷರ ಹೆಸರು ಸೂಚಿಸಲು ಎದ್ದು, ಕಟ್ಟಡದ ಅವಶ್ಯಕತೆಯ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಟ್ಟರು. ಫೋರಾಸ ರೋಡ್ ಮುನ್ಸಿಪಲ್ ಚಾಳ ನಂ.೧೮ ದಲ್ಲಿಯ ಹೆಲ್ಥ ಡಿಪಾರ್ಟಮೆಂಟದಲ್ಲಿ ಕೆಲಸ ಮಾಡುವ ಜನರಿಂದ ೨೩೫ ರುಪಾಯಿ ಸಂಗ್ರಹಿಸಲಾಗಿತ್ತು. ಇದು ವಿಶೇಷ. ಬಳಿಕ ಕೆ.ಡಿ. ಶಿರ್ಕೆಯವರು ಅನುಮೋದಿಸಿದ ಬಳಿಕ ಅಂಬೇಡ್ಕರರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಆರಂಭಕ್ಕೆ ಮಡಕೆ ಬುವಾ, ಡೋಳಸ ಮತ್ತು ಪಿ. ದೊಂಡೆ ಭಾಷಣ ಮಾಡಿದರು.

ಅನಂತರ ಡಾ.ಅಂಬೇಡ್ಕರ ಮಾತಾಡಲು ಎದ್ದುನಿಂತರು. ಅವರು ಬೈಬಲ್‌ದಲ್ಲಿಯ ಹಳೆಯ ಒಡಂಬಡಿಕೆಯ ಯಹೂದಿಗಳ ಹೃದಯ ವಿದ್ರಾವಕ ಮತ್ತು ಗುಲಾಮಗಿರಿಯ ಕಥೆ ಹೇಳಿದರು. ಯಾಹೂದಿಗಳ ಗುಲಾಮಗಿರಿಗೂ, ಅಸ್ಪೃಶ್ಯರ ಪರಿಸ್ಥಿತಿಗೂ ಇರುವ ವ್ಯತ್ಯಾಸವನ್ನು ತಿಳಿಸಿದರು. ಬಳಿಕ ಮಹಾಡದ ಸತ್ಯಾಗ್ರಹದಿಂದ ಇಂದಿನವರೆಗಿನ ಸಾಮಾಜಿಕ–ರಾಜಕೀಯ ಪರಿಸ್ಥಿತಿಯ ಸಿಂಹಾವಲೋಕನ ಮಾಡಿದರು. ಕಟ್ಟಡ ಫಂಡಿನ ಬಗ್ಗೆ ಅವರು ಹೇಳಿದ್ದು ಹೀಗೆ 'ಪ್ರತಿಯೊಂದು ಚಾಳಿನ ಜನರು ತಮ್ಮ ಪರವಾಗಿ ಐವರ ಕಮಿಟಿನೇಮಿಸಿ, ಚಾಳಿನಲ್ಲಿರುವ ೧೮ ವರುಷ ಮೇಲ್ಪಟ್ಟ ಗಂಡಸು–ಹೆಂಗಸರ ಜನಗಣತಿಯನ್ನು ಮಾಡಬೇಕು. ಅಂದರೆ ಆ ಚಾಳಿನ ಎಷ್ಟು ಜನರಿಂದ ಹಣ ಸಂಗ್ರಹವಾಯಿತು ಎನ್ನುವುರು ನನಗೆ ಗೊತ್ತಾಗುತ್ತದೆ. ಪ್ರತಿಯೊಬ್ಬರೂ ಒಂದಕ್ಕಿಂತ ಹೆಚ್ಚು ರುಪಾಯಿ ತಮ್ಮ ಶಕ್ತಿಗನು ಗುಣವಾಗಿ ನೀಡಬೇಕು. ಮುಂಬೈಸ್ಕೂಲ್‌ಕಮಿಟಿ ಇಲಾಖೆಯ ಪ್ರತಿಶಿಕ್ಷಕರ ಅರ್ಧಸಂಬಳ ಸಂಗ್ರಹಸಲಿದ್ದೇನೆ. ಇಂದು ನಮ್ಮ ಕಾರ್ಯದ ವ್ಯಾಪ್ತಿಯು ಬೆಳೆದದ್ದರಿಂದ ಸಮಾಜ ಮತ್ತು ರಾಜಕಾರಣದ ಸೂತ್ರವನ್ನು ಸ್ಥಳಾಂತರಿಸಲು ಸ್ವಂತ ಕಟ್ಟಡವಿರುವುದು ಅಗತ್ಯದ್ದು. ಎರಡನೇ ವಿಷಯ ಮುಂಬರುವ ಮುನ್ಸಿಪಲ್

---

ಜನತಾ: ೧೦ ಡಿಸೆಂಬರ್ ೧೯೩೮.

ದಿ. ೪ ಡಿಸೆಂಬರ್ ೧೯೩೮ ಇರಬೇಕು. ಸಂಪಾದಕ.

ಚುನಾವಣೆಗೆ ಸಂಬಂಧಿಸಿದ್ದು. ನಾನು ಸ್ವತಂತ್ರ ಕಾರ್ಮಿಕ ಪಕ್ಷದ ಪರವಾಗಿ ಸದ್ಯ ಒಂಭತ್ತು ಅಭ್ಯರ್ಥಿಗಳನ್ನು ನೇಮಿಸಿದ್ದೇನೆ. ನೀವು ಅವರಿಗೇ ನಿಮ್ಮ ಮತಗಳನ್ನು ನೀಡಿ ಗೆಲ್ಲಿಸಬೇಕು. ಕಾಂಗ್ರೆಸ್ ಎದುರಿಗೆ ಉಳಿದ ರಾಜಕೀಯ ಪಕ್ಷಗಳು ಕ್ಷೀಣಗೊಂಡಿವೆ. ಕೆಲವು ನಾಮಾವಶೇಷಗೊಂಡಿದೆ. ಆದರೆ ಇಂದು ಕೇವಲ ಸ್ವತಂತ್ರ ಕಾರ್ಮಿಕಪಕ್ಷ ಮಾತ್ರ ಕಾಂಗ್ರೆಸ್ ವಿರೋಧಿಯಾಗಿ ಸ್ಪರ್ಧಿಸಲಿದೆ. ಈ ಪಕ್ಷವು ಕಡುಬಡ ಕಾರ್ಮಿಕರದ್ದು. ಹೀಗಾಗಿ ಅದು ಮುನ್ಸಿಪಲ್ ಚುನಾವಣೆಯಲ್ಲಿ ಸಂಪೂರ್ಣ ಯಶಸ್ವಿಯಾಗಬೇಕು. ಇರಲಿ. ಯಾರು ಕಟ್ಟಡ ಫಂಡಿಗಾಗಿ ೨೩೫ ರುಪಾಯಿ ನೀಡಿದರೋ ಅವರಿಗೆ ನಾನು ಅಭಾರಿಯಾಗಿದ್ದೇನೆ. ಕಟ್ಟಡ ಫಂಡಿಗೆ ವಂತಿಗೆ ನೀಡಿದವರ ಹೆಸರನ್ನು ಜನತಾ ಪತ್ರಿಕೆಯಲ್ಲಿ ಪ್ರಕಟಸಲಾಗುವುದು.'–ಈ ರೀತಿ ಡಾ. ಅಂಬೇಡ್ಕರ ಅವರು ಎರಡು ಗಂಟೆಗಳ ಕಾಲ ಅಸ್ಖಲಿತ, ಕಳಕಳಿಯಿಂದ, ಅಧಿಕಾರವಾಣಿಯಿಂದ ಭಾಷಣವನ್ನು ಮಾಡಿದರು. ಬಳಿಕ ಮೋಹಿತೆ ಮಾಸ್ತರರು ಅಧ್ಯಕ್ಷರಿಗೆ, ಸಭಿಕರಿಗೆ ಕೃತಜ್ಞತೆ ಹೇಳಿದ ಬಳಿಕ ಮಾಲಾರ್ಪಣೆ ಮಾಡಲಾಯಿತು. ೧೨–೩೦ಕ್ಕೆ ಸಭೆಯು ಬರಖಾಸ್ತುಗೊಂಡಿತು. ಅನಂತರ ಶ್ರೀ ಕರಡಕರ ಅವರ ಜಲಸಾದ ಕಾರ್ಯಕ್ರಮ ಜರುಗಿತು. ಈ ಸಮಾರಂಭವನ್ನು ಏರ್ಪಡಿಸಲು ಶ್ರೀ. ರಾ. ಹಿ. ಮಾಟವಣಕರ ಮತ್ತು ಕೃ.ಕಾ. ಕುಂಭವಡೇಕರ ತುಂಬ ಶ್ರಮಿಸಿದರು. ಅದೇ ರೀತಿ ಗಂಗಾಬಾಯಿ ಸಾತಾರಕರ ಇವರೂ ತುಂಬ ಸಹಕರಿಸಿದರು.

# ೧೪೮.

# ನನ್ನ ಪುಸ್ತಕಗಳನ್ನು ಗುಮಾಸ್ತನು ಮುಟ್ಟಿದರೆ ನಾನವನನ್ನು ಗುಂಡು ಹೊಡೆದು ಕೊಲ್ಲುತ್ತೇನೆ

ಮುಂಬೈಯಲ್ಲಿ ಅಸ್ಪೃಶ್ಯ ವಿದ್ಯಾರ್ಥಿಗಳ ಪರವಾಗಿ ಏರ್ಪಡಿಸಲಾದ 'ಮುಂಬೈ ಅಸ್ಪೃಶ್ಯ ವಿದ್ಯಾರ್ಥಿ ಸಮ್ಮೇಳನವು' ದಿನಾಂಕ ೧೦,೧೧,೧೨, ಡಿಸೆಂಬರ ೧೯೩೮ರಂದು ಯಶಸ್ವಿಯಾಗಿ ನೆರವೇರಿತು. ದಿ. ೧೨ರಂದು ಸಮ್ಮೇಳನಾ ಅಧ್ಯಕ್ಷರಾದ ಡಾ. ಅಂಬೇಡ್ಕರ ಅವರು ವಿದ್ಯಾರ್ಥಿಗಳಿಗೆ ಹಿತೋಪದೇಶ ನೀಡಿದರು. ಕರತಾಡನ ಮತ್ತು ಮಹಿಳೆಯರ ಗ್ಯಾಲರಿಯಿಂದ ನಡೆದ ಪುಷ್ಪವೃಷ್ಟಿಯ ನಡುವೆ ಡಾ. ಅಂಬೇಡ್ಕರ ಭಾಷಣವನ್ನು ಆರಂಭಿಸಿದರು.

ನೀವಿಂದು ಮುಂಬೈಯಲ್ಲಿ ಅಸ್ಪೃಶ್ಯ ವಿದ್ಯಾರ್ಥಿಗಳ ಸಮ್ಮೇಳನವನ್ನು ಏರ್ಪಡಿಸಿದಿರಿ. ಅದು ಎಲ್ಲ ರೀತಿಯಿಂದ ಯಶಸ್ವಿಯಾಯಿತು. ಈ ಕಾರಣಕ್ಕಾಗಿ ನಿಮಗೂ, ಸಹಕರಿಸಿದ ವಿದ್ಯಾರ್ತಿಗಳಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನು ಶನಿವಾರ, ಭಾನುವಾರ ನಾಶಿಕದಲ್ಲಿದ್ದೆ. ಪ್ರವಾಸದ ಆಯಾಸದಿಂದ ನನ್ನ ಆರೋಗ್ಯ ಹದಗೆಟ್ಟಿದೆ. ನನ್ನಲ್ಲಿ ಅಷ್ಟೊಂದು ತ್ರಾಣವಿಲ್ಲ. ಭಾಷಣ ಮಾಡುವಷ್ಟು ಶಕ್ತಿಯೂ ಇಲ್ಲ. ಇಂದು ಈ ಸಮ್ಮೇಳನಕ್ಕೆ ಬರುವುದಕ್ಕೆ ಸಾಧ್ಯವಾಗಿದ್ದರಿಂದ ಸಂತೋಷ ಮತ್ತು ಧನ್ಯತೆ ಎನಿಸುತ್ತದೆ.

ಈ ಬಗೆಯ ಸಮ್ಮೇಳನ ಸಾಕಷ್ಟು ಜರುಗುತ್ತವೆ. ಇಂಥಕಾಲಕ್ಕೆ ನಾನು ಸದಾ ಗಮನಿಸಿದಂತೆ ಅಧ್ಯಕ್ಷನಾದವನು ವಿದ್ಯಾರ್ಥಿಗಳನ್ನು ಚುಚ್ಚಿ ಮಾತಾಡುತ್ತಾನೆ. 'ನೀವು ಕಲಿತು ಏನುಮಾಡುತ್ತೀರಿ? ಸರಕಾರಿ ನೌಕರಿಯೇ?' ಅವರಿಗೆ ದೇಶ ಸೇವೆ ಮಾಡುವಂತೆ ಉಪದೇಶ ನೀಡಲಾಗುತ್ತದೆ. ಆದರೆ ಅದರಲ್ಲೇನೂ ಹುರುಳಿಲ್ಲ. ನಾನು ವಿದ್ಯಾರ್ಥಿಗಳ ಕುರಿತು ಯೋಚಿಸಿದ್ದೇನೆ. ಅದರ ಮೇಲಿಂದ ಹೇಳಬಯಸುವುದೇನೆಂದರೆ– ಈ ಉಪದೇಶದಲ್ಲಿ ಹುರುಳಿಲ್ಲ. ನಾನು ಅಂಥ ಉಪದೇಶ ನೀಡಲಾರೆ. ವಿದ್ಯಾರ್ಥಿಗಳು ಕಲಿತು ನೌಕರಿಮಾಡಿದರೆ ಅದರಲ್ಲೇನು ಪಾಪವಿದೆ? ಅವನಿಗೂ ಜೀವನವಿದೆ. ಭಾವನೆಯಿದೆ. ಪ್ರತಿಯೊಬ್ಬ ಮನುಷ್ಯನ ಅಂತಿಮ ಧ್ಯೇಯವೇನು? ತನ್ನಲ್ಲಿ ಮೈಗೂಡಿರುವ ಗುಣವನ್ನು ಪರಿಪೋಷಿಸಿ ಸತ್ಫಲ ಸಿಗಲಿ ಎಂಬ ಧ್ಯೇಯವಿರುತ್ತದೆ. ಆದ್ದರಿಂದ ನಾನು ನಿಮಗೆ ಅಂಥ ಉಪದೇಶ ನೀಡಲಾರೆ. ಸರಕಾರದ ನೌಕರಿಯು ಸದ್ಯ ಒಂದೇಜಾತಿಯ ಸತ್ತಿಗೆಯಾಗಿದೆ. ಕಲೆಕ್ಟರ್ ಆಫೀಸಿನಲ್ಲಾಗಲಿ, ಉಳಿದ ಪ್ರತಿಯೊಂದು ಆಫೀಸಿನಲ್ಲೂ ಒಂದೇ ಜಾತಿಯ ಜನರಿದ್ದಾರೆ. ನೀವು ನೌಕರಿಗಾಗಿ ಏಕೆ ಜಗಳಾಡುತ್ತೀರಿ? ಎಂದು ಹಲವರು ಕೇಳುತ್ತಾರೆ. ಅರ್ಹತೆಯಿದ್ದರೆ ನೌಕರಿ ಸಿಗುತ್ತದೆ. ಅದರಲ್ಲಿ ಜಾತಿಯ ಪ್ರಶ್ನೆ ಎಲ್ಲಿಂದ ಬರುತ್ತದೆ? ಆದರೆ ನಮ್ಮ ಸಾಮಾಜಿಕ ಪರಿಸ್ಥಿತಿಯ ಬಗೆಗೆ ಯೋಚಿಸಿದಿರಿ ಎಂದರೆ, ನೌಕರಿಯಿಂದ ಏನುಲಾಭ ಎಂದು ಕೇಳುವುದು ಮೂರ್ಖತನ. ಈ ದೇಶದಲ್ಲಿ ಜಾತಿಭೇದದ ಪದ್ಧತಿ ಬೇಕಾಗಿದೆ. ಇಂದು ದುಡ್ಡಿದ್ದವರ

---

ಜನತಾ: ೧೭ ಡಿಸೆಂಬರ್ ೧೯೩೮.

ಕೈಯಲ್ಲೇ ಸತ್ತೆಯಿದೆ. ಅವನದನ್ನು ಸದ್ಭಾವನೆಯಿಂದ ಬಳಸದೆ, ತುಪ್ಪವನ್ನು ತಾನೇ ತಿನ್ನುತ್ತಾನೆ. ನೌಕರಿಯಿಂದ ಸಂಬಳ ಕೈಗೆ ಸಿಗುತ್ತದೆ. ಯಾವ ಸಮಾಜ ಸರಕಾರಿ ನೌಕರಿ ಮಡುವುದಿಲ್ಲವೋ, ಯಾವ ಸಮಾಜಕ್ಕೆ ಅಧಿಕಾರದ ಹುದ್ದೆ ಸಿಗಲಿಲ್ಲವೋ ಅವರ ಊರ್ಜಿತಾವಸ್ಥೆಯಾಗಲಾರದು. ಬ್ರಾಹ್ಮಣ ಸಮಾಜವು ನೌಕರಿಯಲ್ಲಿ ತೊಡಗಿಕೊಂಡಿದೆ. ಹೀಗಾಗಿ ಅವರಲ್ಲಿ ಸಾಮರ್ಥ್ಯವಿದೆ. ಅದು ತನ್ನ ವರ್ಚಸನ್ನು ಚಲಾಯಿಸಬಹುದಾಗಿದೆ. ಹೀಗಾಗಿ ನೀವು ಸರಕಾರಿ ನೌಕರಿಗಾಗಿ ಪ್ರಯತ್ನಿಸಿದಿರೆಂದರೆ ಸಮಾಜದ ಉನ್ನತಿಯಾಗುತ್ತದೆ. ಅದನ್ನು ಪಡೆಯಲು ನೀವು ಶತಪ್ರಯತ್ನ ಮಾಡಿ.

ಕಲಿತವರಲ್ಲಿ ಕೆಲವು ದೋಷವಿರುತ್ತದೆ. ಆದರೆ ಕಲಿತ ಮೇಲೆ ನೌಕರಿಯ ಬೆನ್ನು ಹತ್ತುವುದೇನು ದೋಷವಲ್ಲ. ಆ ದೋಷವಾಗಲಿ, ಅವಗುಣವಾಗಲಿ ನಿಮ್ಮಲ್ಲಿ ಮೈಗೂಡದಂತೆ ಎಚ್ಚರವಹಿಸಿ, ಮೊದಲನೆಯದೆಂದರೆ ಶಿಕ್ಷಣ ಪೂರ್ಣಗೊಂಡ ಬಳಿಕ ಮನುಷ್ಯ ಸ್ವಾರ್ಥಿಯಾಗುತ್ತಾನೆ. ಮನುಷ್ಯ ಸ್ವಾರ್ಥಿಯಾಗಿರುವುದು ಸಹಜ. ಆದರೆ ಕಲಿತವನು ಸ್ವಂತದ ಹಿತವನ್ನು ನೋಡುತ್ತಾನೆಯೇ ಹೊರತು, ಸಮಾಜದ ಹಿತವನ್ನು ನೋಡುವುದಿಲ್ಲ. ಅವನು ತನ್ನ ಹೆಂಡತಿ–ಮಕ್ಕಳ ಮತ್ತು ತನ್ನದಷ್ಟೇ ನೋಡಿಕೊಳ್ಳುತ್ತಾನೆ. ಮೆಝಿನ ಹೇಳುವುದೇನೆಂದರೆ, 'ಜನರಲ್ಲಿ ಪಾರತಂತ್ರ ಪಸರಿಸಿದಾಗ, ಮನುಷ್ಯ ಕಲಿತರೂ ಸಹ ಕರ್ತವ್ಯಕ್ಕಿಂತ ಹಕ್ಕಿನ ಅರಿವೇ ಹೆಚ್ಚು ಬೆಳೆಯುತ್ತದೆ'. ತನ್ನ ಕರ್ತವ್ಯ ಯಾವುದು ಎಂಬ ಭಾವನೆಯೂ ಜಾಗೃತವಾಗದಿರುವುದೇ ಕಲಿತವನ ದೋಷವಾಗಿದೆ.

ನನಗೆ ಖೇದವೆನಿಸುವ ಸಂಗತಿಯೆಂದರೆ ಪದವಿ, ನೌಕರಿ ಸಿಕ್ಕ ಬಳಿಕ ಅವನ ವಿದ್ಯಾರ್ಜನೆಯ ಮಾರ್ಗ ತೀರ ಕುಂಠಿತವಾಗುತ್ತದೆ. ವಿದ್ಯೆಯ ಮಹತ್ವ ಕುಂಠಿತವಾಗುತ್ತದೆ. ನಾನು ಪ್ರವಾಸ ಮಾಡುವಾಗ ನನ್ನ ಹತ್ತಿರ ನಾಲ್ಕಾರು ಪುಸ್ತಕ ಮತ್ತು ಪತ್ರಿಕೆಗಳಿರುತ್ತವೆ. ಆದರೆ ಕಲಿತವರ ಕೈಯಲ್ಲಿ ಪುಸ್ತಕ, ಪತ್ರಿಕೆಯ ಬದಲಿಗೆ ಸಿಗರೇಟು ಕಾಣಿಸುತ್ತದೆ. ಮನುಷ್ಯ ಬಿ.ಎ. ಪಡೆದ ಮಾತ್ರಕ್ಕೆ ಅವನಿಗೆ ಅಧಿಕ ಶಿಕ್ಷಣದ ಅಗತ್ಯವಿಲ್ಲವೇ? ಬಿ.ಎ. ಅಥವಾ ಎಂ.ಎ. ಗಳಿಸಿದ ಮಾತ್ರಕ್ಕೆ ಅವನಿಗೆ ಸರ್ವಜ್ಞಾನ ಪ್ರಾಪ್ತವಾಯಿತು ಎಂಬ ಭಾವನೆಯು ತಪ್ಪು. ಅಗಸ್ತ್ಯ ಮುನಿಯು ಸಮುದ್ರಪ್ರಾಶನ ಮಾಡಿದಂತೆ, ಕಲಿತವರಿಗೆ ತಾವು ಪದವಿಗಳಿಸಿದ ಮಾತ್ರಕ್ಕೆ ಎಲ್ಲ ವಿದ್ಯೆ ಹಸ್ತಗತ ಮಾಡಿಕೊಂಡಂತೆ ಅನಿಸುತ್ತದೆ! ಬರೋಡೆಯ ಸಂಸ್ಥಾನದಲ್ಲಿ ಒಬ್ಬ ವ್ಯಕ್ತಿಯಿದ್ದ, ಅವನು ಬಿ.ಎ. ಪದವೀಧರ. ಮಹಾರಾಜರು ಅವನನ್ನು ಒಂದು ಹಳ್ಳಿಗೆ ನೇಮಿಸಿದರು. ಆ ಕಾಲದಲ್ಲಿ ಬರೋಡ ಸಂಸ್ಥಾನದ ಭಾಷೆ ಗುಜರಾತಿನಲ್ಲಿತ್ತು, ಇಂಗ್ಲಿಷಿನಲ್ಲಿರಲಿಲ್ಲ. ಆ ವ್ಯಕ್ತಿ ತುಂಬ ಆಲಸಿ! ತಪ್ಪಿಯೂ ಟೈಮ್ಸ್ ಓದುತ್ತಿರಲಿಲ್ಲ. ಮುಂದೆ ಏನಾಯಿತೆಂದರೆ, ಅವನಿಗೆ ಕೆಲವು ವರ್ಷಗಳ ಬಳಿಕ ಎಬಿಸಿಯ ಪರಿಚಯವೂ ಉಳಿಯಲಿಲ್ಲ. ಇದು ಸತ್ಯವಾದ ಸಂಗತಿ. ನನ್ನ ಅನುಭವವೂ ಹೀಗೇ ಇದೆ. ಪಿ.ಎಚ್.ಡಿ. ಪದವಿ ಪಡೆಯಲು ಫ್ರೆಂಚ್ ಮತ್ತು ಜರ್ಮನ್ ಭಾಷೆ ಬರಬೇಕು. ಆಗ ನನಗೆ ಆ ಭಾಷೆ ಬರುತ್ತಿತ್ತು. ಆದರೆ ಈಗ ಆ ಭಾಷೆಯ ವ್ಯಾಸಂಗವಿಲ್ಲದ್ದರಿಂದ, ಆ ಭಾಷೆಯಲ್ಲಿ ಮಾತಾಡುವುದು ಕಷ್ಟ. ಇತ್ತೀಚೆಗೆ ನಾನು ಫ್ರಾನ್ಸ್ ಮತ್ತು ಜರ್ಮನಿಗೆ ಹೋದಾಗ ನನಗೆ ಆ ಭಾಷೆಯಲ್ಲಿ ಮಾತಾಡುವುದು ದುಸ್ತರವೆನಿಸಿತು. ಒಬ್ಬ ವ್ಯಕ್ತಿ ಶೆರೆ ಕುಡಿಯಲು ಆರಂಭಿಸಿದರೆ ಜನ್ಮವಿಡೀ ಕುಡಿಯುವಂತೆ, ವಿದ್ಯಾರ್ಜನೆಯ ವಿಷಯದಲ್ಲಾಗಬೇಕು. ವಿದ್ಯೆಯ ನಿಜವಾದ ರುಚಿ ಯಾರಿಗಿರುತ್ತದೆ? ಪರೀಕ್ಷೆಯ ಬಳಿಕ ಪುಸ್ತಕವನ್ನು ಹಳೆ ಪುಸ್ತಕದ ಅಂಗಡಿಗೆ ಮಾರುತ್ತಾರೋ, ಅವನಿಗೆ ವಿದ್ಯೆಯ ರುಚಿಗೊತ್ತಿದೆ ಎಂದೇ ನನ್ನ ಭಾವನೆ. ನನ್ನ ಮನೆಯಮೇಲೆ ಸರಕಾರ ಜಪ್ತಿತಂದರೆ, ಗುಮಾಸ್ತನು ನನ್ನ ಪುಸ್ತಕವನ್ನೇನಾದರೂ ಮುಟ್ಟಿದರೆ ನಾನವನನ್ನು ಗುಂಡು ಹೊಡೆದು ಕೊಲ್ಲುತ್ತೇನೆ. ಕಲಿತ ನಿಮಗೆ ಸೌಂದರ್ಯದ ರುಚಿಯಿದ್ದಂತೆ ಕಾಣುತ್ತದೆ. ಮದುವೆ ಮಾಡಿಕೊಳ್ಳಲಿರುವ ಹುಡುಗಿ

ಸುಂದರಿಯಾಗಿದ್ದಾಳೆಯೇ? ತನಗವಳು ಇಷ್ಟವೇ? ಮುಂತಾದ ವಿಷಯಗಳ ಬಗ್ಗೆ ನೀವು ಯೋಚಿಸುತ್ತೀರಿ. ಆದರೆ ಅದೇ ಹಕ್ಕನ್ನು ಹುಡುಗಿಯರಿಗೆ ನೀಡಿ. ಸಾಕಷ್ಟು ಸುಂದರ ಹುಡುಗಿಯರು ಕುರೂಪಿ ಗಂಡಸರ ಸ್ವಾಧೀನವಾಗಿರುವುದನ್ನು ಕಂಡಿದ್ದೇನೆ. ನನಗೆ ಈ ದೇಶದ ಬಗ್ಗೆ ಬೇಸರಬಂದಿದೆ. ಆದರೆ ನನಗೆ ನನ್ನ ಕರ್ತವ್ಯದ ಅರಿವಿರುವುದರಿಂದ ನಾನಿಲ್ಲಿ ನಿಲ್ಲಬೇಕಾಗಿದೆ. ಅದರಲ್ಲೂ ಧರ್ಮ, ಸಾಮಾಜಿಕ ರಚನೆ, ಸುಧಾರಣೆ ಮತ್ತು ಸಂಸ್ಕೃತಿಯ ಬಗೆಗೆ ನಾನು ತುಂಬ ರೋಸಿ ಹೋಗಿದ್ದೇನೆ. I am at war with civilizationನಲ್ಲಿಯ ಕೋಟ್ಯಾಧೀಶ ಮಾರವಾಡಿಯ ಮನೆಯಲ್ಲಿ ಕಾಣಿಸುವುದೇನು? ಅವನ ಮನೆಯಲ್ಲಿ ಮೂರ್ತಿ, ಫರ್ನಿಚರ್, ಪೆಂಟಿಂಗ್ ಮತ್ತು ಪುಸ್ತಕಗಳಲ್ಲಿ ಒಂದಾದರೂ ವಸ್ತುಕಾಣಲಾರದು. ಇದೇ ವಿಷಯ ಬ್ರಾಹ್ಮಣರದ್ದು. ಒಬ್ಬ ಬ್ರಾಹ್ಮಣನಿಗೆ ಸಂಬಳ ಸಿಕ್ಕಿದ್ದೇ ತಡ, ಅವನು ತನ್ನ ಹೆಂಡತಿಗೆ ಆಭರಣ ಮಾಡಿಕೊಡಲು ಪ್ರಯತ್ನಿಸುತ್ತಾನೆ. ಏಕೆಂದರೆ ಚಿನ್ನ ಸಂಕಟದ ಕಾಲಕ್ಕೆ ಉಪಯೋಗವಾಗುತ್ತದಲ್ಲ! ಪ್ರಪಂಚದಲ್ಲಿ ಬದುಕುವುದೇ ಧ್ಯೇಯವಾಗಿದ್ದರೆ ಪಶು ಮತ್ತು ಮನುಷ್ಯನಲ್ಲಿ ವ್ಯತ್ಯಾಸವೇನು? ಮನುಷ್ಯನು ಸೌಂದರ್ಯವನ್ನು ಸಂಗ್ರಹಿಸಬಲ್ಲ ಪಶು ಹಾಗೆ ಮಾಡಲಾರದು. ಕೇವಲ ಕಾಲರ್‌ಸೆಟಿಸಿ, ನೆಕ್‌ಟೈ ಕಟ್ಟುವುದರಿಂದ ಸೌಂದರ್ಯ ಬೆಳೆಯುವುದಿಲ್ಲ. ನಾನು ಈವರೆಗೆ ೮–೧೦ ಸಲವಾದರೂ ವಿದೇಶಕ್ಕೆ ಹೋಗಿ ಬಂದಿದ್ದೇನೆ. ನನ್ನ ಜೊತೆಗೆ ಹಲವು ಜನರೂ ಬಂದಿದ್ದರು. ಈಗ ನಾನವರನ್ನು ಕಾಣುವುದೇನು. ಅವರಿಗೆ ವರ್ಣಾಶ್ರಮ ಧರ್ಮ ಒಪ್ಪಿಗೆಯಿದೆ! ಅವರ ಮೇಲೆ ಯಾವ ಪರಿಣಾಮವೂ ಗೋಚರಿಸುವುದಿಲ್ಲ. ಅವರದ್ದು ಎಂಥ ಜನ್ಮ! ಹಿಂದೂಧರ್ಮದಲ್ಲಿಯ ಎಲ್ಲ ಹೊಲಸೂ ಅವರಿಗೆ ಒಪ್ಪಿಗೆ! ನೀವು ಕೊಳಚೆಯಲ್ಲಿ ಬಿದ್ದ ರತ್ನ! ಕೊಳಚೆ ನೀರಿನಲ್ಲಿ ಬಿದ್ದ ಅತ್ತರಿನ ಹನಿಯಂತೆ ನಿಮ್ಮ ಸ್ಥಿತಿಯಾಗಿದೆ. ನೂರಾರು ದಾರಿದ್ರ್ಯ. ಹೀಗಾಗಿ ಈ ಕೊಳಚೆಯನ್ನು ಸ್ವಚ್ಛಗೊಳಿಸುವುದು ನಿಮ್ಮ ಕರ್ತವ್ಯ. ಉಪ್ಪಿಗೆ ರುಚಿಯಿಲ್ಲದಿದ್ದರೆ ಉಳಿದ ಪದಾರ್ಥಗಳ ರುಚಿಯ ಗತಿಯೇನು? ಎಂದು ಬೈಬಲನಲ್ಲಿ ಹೇಳಲಾಗಿದೆ. ಯಾವುದೇ ಕಾರ್ಯ ಮಾಡಬೇಕಾಗಿದ್ದರೆ ನಮ್ಮ ಗುಣ ಸ್ಥಿರವಾಗಿರಬೇಕು. ಅದು ಸ್ಥಿರಗೊಳ್ಳಲು ಒಂದು ಪೀಳಿಗೆಯಾದರೂ ದಾಟಬೇಕಾಗುತ್ತದೆ. ಸ್ವತಃ ಸುಧಾರಿಸದ ಹೊರತು ಪರರನ್ನು ಹೇಗೆ ಸುಧಾರಿಸುತ್ತೀರಿ? ಸುಧಾರಣೆಯ ಮೂಲದಲ್ಲಿ ವಂಶಪರಂಪರೆ ಹುದುಗಿರಬೇಕು. ನಿಮ್ಮಲ್ಲೇ ಈ ಗುಣದ ಕೊರತೆ ಇದ್ದರೆ ಶತಪ್ರಯತ್ನ ಮಾಡಿಯಾದರೂ ಅದನ್ನು ಗಳಿಸಿ.

ನಿಮ್ಮಲ್ಲಿ ಹಲವರು ವಿವಾಹಿತರಾಗಿರಬೇಕು. ಮತ್ತೆ ಹಲವರು ಮದುವೆಯಾದವರೂ ಇದ್ದಿರಬಹುದು. ಆದರೆ ಮದುವೆಯ ನಂತರ ನೀವೇನು ಮಾಡಲಿದ್ದೀರಿ? ಈ ವಿಷಯದಲ್ಲಿ ನಿಮ್ಮ ಮೇಲೆ ಗುರುತರವಾದ ಜವಾಬ್ದಾರಿಯಿದೆ. ನಾನು ನಿಮ್ಮ ತಂದೆಯ ಉದಾಹರಣೆ ನೀಡಿದೆ. ನನ್ನ ತಂದೆಯದೇ ಉದಾಹರಣೆ ನೀಡುತ್ತೇನೆ. ಅವರಿಗೆ ಒಟ್ಟೂ ೧೪ ಮಕ್ಕಳು ಜನಿಸಿದವು. ಅವರಲ್ಲಿ ನಾನು ೧೧ನೇ ರತ್ನ. ಆದರೆ ನಾನು ಎಲ್‌ಫಿನ್‌ಸ್ಟನ್ ಕಾಲೇಜಿಗೆ ಹೋದಾಗ ನನ್ನ ಸ್ಥಿತಿ ಹೇಗಿತ್ತು ಅಂತೀರಾ? ನನ್ನ ಕಾಲಲ್ಲಿ ಪಾದರಕ್ಷೆಯಿರಲಿಲ್ಲ. ನಾನು ಧರಿಸಿದ್ದು ಮಂಜರಪಾಟದಂತಹ ತೆಳು ಶರ್ಟು ಮತ್ತು ಅಪ್ಪನ ಹರಕು ಕೋಟು!! ನೀವು ಎಲಿಫನ್‌ಸ್ಟನ್ ಕಾಲೇಜಿಗೆ ಹೋದಿರಿ ಎಂದರೆ ಅಲ್ಲಿ ನಿಮಗೆ ಮುಲ್ಲರ್ ಸಾಹೇಬರ ಚಿತ್ರ ಕಾಣಿಸುತ್ತದೆ. ಅವರು ನನಗೆ ಕೊನೆಯ ಎರಡು ವರ್ಷ ಶರ್ಟು ನೀಡಿದರು. ನಾನು ಯೋಚಿಸುತ್ತಿದ್ದೆ. ಅಪ್ಪನಿಗೆ ೧೪ರ ಬದಲು ೪ ಮಕ್ಕಳು ಹುಟ್ಟಿದ್ದರೆ ಎಂಥ ಸುಖ ಸಿಗುತ್ತಿತ್ತಲ್ಲ ಎಂದು 'ನನ್ನ ಈ ದುಃಖಕ್ಕೆ ಅಪ್ಪನೇ ಕಾರಣನಾಗಿದ್ದ. ನಾನೊಮ್ಮೆ ಕಾಲೇಜಿಗೆ ಹೋಗುವಾಗ ರೇಲ್ವೆ ಪಾಸನ್ನು ಮನೆಯಲ್ಲೇ ಮರೆತೆ. ಅದೇ ದಿನ ಪಾಸಿನ ತಪಾಸಣೆ ನಡೆದಿತ್ತು. ಟಿಕೇಟು ಸ್ವೀಕರಿಸುವ ಮಾಸ್ತರ ನನ್ನನ್ನು ತಡೆದು ನಿಲ್ಲಿಸಿದ. ಹತ್ತಿರವಂತೂ ದಮ್ಮಡಿಯಿಲ್ಲ. ನಾಲ್ಕು ಗಂಟೆಯವರೆಗೆ ಚರ್ಚ್‌ಗೇಟಿನ ಸ್ಟೇಶನ್ನಿನಲ್ಲಿ ಕೂತೇ ಇರಬೇಕಾಯಿತು. ಬಳಿಕ

ಕೈಶಿಣಿ ಎಂಬ ಸಹಪಾಠಿ ಅಲ್ಲಿಗೆಬಂದ. 'ಏನೋ, ಇಲ್ಲೇಕೆ ಕುಳಿತಿರುವೆ?' ಎಂದು ಕೇಳಿದ. ನಾನು ಅವನಿಗೆ ಎಲ್ಲ ವಿಷಯ ಹೇಳಿದೆ. ಅವನು ನಾಲ್ಕಾಣೆ ತುಂಬಿ ನನ್ನ ಬಿಡುಗಡೆ ಮಾಡಿದ ಬಳಿಕ ಟಿಕೇಟ ತೆಗೆಸಿ ಮನೆಗೆ ಮರಳಿ ಕಳಿಸಿದ. ಈ ಕಾರಣಕ್ಕಾಗಿ ನಾನು ಅಪ್ಪನ ಮೇಲೆ ದೋಷ ಹೊರಿಸುತ್ತೇನೆ. ಏಕೆಂದರೆ ಅವರು ತಮ್ಮ ಜವಾಬ್ದಾರಿಯನ್ನು ಮರೆತರು. ಅಪ್ಪ ತಪ್ಪಿದಾಗ ಅವರಿಗೆ ಅದನ್ನು ಹೇಳುವುದು ತಪ್ಪೇನಲ್ಲ ಎಂದು ನನಗೆ ಅನಿಸುತ್ತದೆ. ಈಗ ನಿಮ್ಮ ಮೇಲೆ ಈ ಜವಾಬ್ದಾರಿಯಿದೆ. ಅದೇ ರೀತಿ ಮಹಿಳೆಯರ ಮೇಲೂ ಇದೆ. ನಾನು ಕೇವಲ ಪುರುಷರಿಗಾಗಿ ಮಾತ್ರ ಹೇಳುತ್ತಿಲ್ಲ. ಮಹಿಳೆಯರೂ ಸಹ ತಮ್ಮ ಜವಾಬ್ದಾರಿಯನ್ನು ಅರಿಯಬೇಕು. ಅದರ ಬಗೆಗೆ ನೀವು ಯೋಚಿಸಬೇಕು. ನೀವು ನೌಕರಿಗೆ ಹೋಗುತ್ತೀರಿ. ನನಗನಿಸಿದಂತೆ ಹಲವರು ಗುಮಾಸ್ತರೇ ಆಗುತ್ತೀರಿ. ಏನಿಲ್ಲವೆಂದರೂ ೫೦-೬೦ ರುಪಾಯಿ ಸಂಬಳ ನಿಮಗೆ ಸಿಗುತ್ತದೆ. ಅಂಥದರಲ್ಲಿ ನಿಮಗೂ ೧೪ ಮಕ್ಕಳು ಜನಿಸಿದರೆ, ಆ ಮಕ್ಕಳ ಗತಿ ಏನು? ಅವರ ಹೊಣೆಯನ್ನು ಸಮಾಜದ ಮೇಲೆ ಹಾಕುತ್ತೀರಾ? ಇದರ ಬಗೆಗೆ ಸರಿಯಾಗಿ ಯೋಚಿಸಿ. ನೀವಂತೂ ಸನ್ಯಾಸಿಯಾಗಲು ಸಿದ್ಧರಿರಲಿಕ್ಕಿಲ್ಲ, ಆದರೂ ಯಾರಾದರೂ ಸನ್ಯಾಸಿಯಾದರಂತೂ ಬಹಳ ಒಳ್ಳೆಯದು! (ನಗು). ನಗಬೇಡಿ, ಇದು ತುಂಬ ಮಹತ್ವದ ವಿಷಯ ನನಗೆ ಐವರು ಮಕ್ಕಳು ಹುಟ್ಟಿದವು. ಅವರಲ್ಲಿ ನಾಲ್ವರು ಸತ್ತರು. ಅದರ ಬಗೆಗೆ ನನಗೆ ಈಗ ಕೆಡಕೆನಿಸುವುದಿಲ್ಲ ಬದಲು ಸಂತೋಷವೇ ಆಗುತ್ತಿದೆ. ಈ ಮಕ್ಕಳು ಬದುಕಿ ಉಳಿದಿದ್ದರೆ ಅವರ ಶಿಕ್ಷಣ, ಊಟತಿಂಡಿ, ಬಟ್ಟೆಬರೆ-ಅದರ ಹೊರೆ ನನ್ನ ಮೇಲೆ ಬೀಳುತ್ತಿತ್ತು. ಅದರಿಂದ ನಾನು ತುಂಬ ಸಂಕಟ ಪಡಬೇಕಾಗುತ್ತಿತ್ತು. ನನಗೆ ಈಗ ಒಬ್ಬನೇ ಮಗನಿದ್ದಾನೆ. ಅವನ ಹೊಣೆ ನನ್ನ ಮೇಲಿದೆ. ಅದರಲ್ಲಿ ಒಂದು ನೂರಾಂಶವಾದರೂ ಜವಾಬ್ದಾರಿಯನ್ನು ನೀವು ನಿಮ್ಮ ಮಕ್ಕಳ ಬಗೆಗೆ ಹೊತ್ತರೆ ಎಷ್ಟೋ ಉಪಯೋಗವಾದೀತು. ಇದು ಸಮಾಜದ ಕಲ್ಯಾಣದ ವಿಷಯವಾಗಿದೆ. ನಿಮಗೆ ಐದಾರು ಮಕ್ಕಳು ಜನಿಸಿದರೆ ಅವರಿಗೆ ಶಿಕ್ಷಣವನ್ನು ಹೇಗೆ ಕೊಡುತ್ತಿರಿ? ಅವರ ಉಳಿದ ಬೇಡಿಕೆ ಹೇಗೆ ಪೂರೈಸುತ್ತೀರಿ? ಇದು ಏರಿಕೆಯ ಕಾವಿಗಿಂತ ಇಳಿಕೆಯ ಕಾವು ಎಂದು ನನಗನಿಸುತ್ತದೆ. ಆದ್ದರಿಂದ ಗಂಡಸರು ಹೆಂಗಸರು ಪಶುವಿನಂತೆ ಬದುಕುವುದು ಅಮಾನವೀಯ ಸಂಗತಿ ಎಂಬುದನ್ನು ಮರೆಯದೆ, ನೀವು ಅದರ ಬಗೆಗೆ ಚೆನ್ನಾಗಿ ಯೋಚನೆ ಮಾಡಿ.

# ೧೪೯.
# ಸ್ವಾತಂತ್ರ್ಯ, ಮಾನವೀಯತೆ, ಸಮಾನ ಹಕ್ಕು ಸಿಕ್ಕರೆ ಅದೇ ಸ್ವರಾಜ್ಯ

ದಿನಾಂಕ: ೬ ಜನೇವರಿ ೧೯೩೮ರಂದು ಮಹಾಡದಲ್ಲಿ ಏಳುಸಾವಿರ ರೈತರ ಎದುರಿಗೆ ಡಾ. ಅಂಬೇಡ್ಕರ ಅವರು ನಿರ್ಭೀತ ಮತ್ತು ಮನನೀಯವಾದ ಭಾಷಣವನ್ನು ಮಾಡಿದರು. ಅವರು ಭಾಷಣದಲ್ಲಿ ಹೇಳಿದ್ದು ಹೀಗೆ–

ಪ್ರಿಯ ಭಗಿನಿಯರೆ ಮತ್ತು ಬಂಧುಗಳೆ,

ನಾನು ಅಹಮದನಗರ, ಖಾನದೇಶ ಮತ್ತು ನಿಜಾಮನ ರಾಜ್ಯದೊಳಗೆಲ್ಲ ಸುತ್ತಾಡಿ ಈಗಷ್ಟೇ ಮರಳಿದ್ದೇನೆ. ದಣಿವು ಆಗಿದ್ದರಿಂದ ನಾಲ್ಕುದಿನ ವಿಶ್ರಾಂತಿ ಪಡೆಯಬೇಕೆಂದಿದ್ದೆ. ಆದರೂ ಈ ಸಭೆಯಲ್ಲಿ ತಾನು ಮಾತಾಡಲೇಬೇಕಾಗಿ ಬಂತು. ನಾನು ಹೆಚ್ಚು ಮಾತಾಡಲಾರೆ, ೧೦–೧೨ನಿಮಿಷ ಮಾತಾಡುತ್ತೇನೆ. ಇಂದು ನಾನು ಮೂರು ಸಂಗತಿಗಳ ಬಗೆಗೆ ಹೇಳಲಿದ್ದೇನೆ. ಏಳು ಪ್ರಾಂತಗಳಲ್ಲಿ ಕಾಂಗ್ರೆಸಿನ ರಾಜ್ಯವಿದೆ. ಪಂಜಾಬ, ಬಂಗಾಲದಲ್ಲಿ ಇತರ ಪಕ್ಷಗಳನ್ನು ನಾಮಾವಶೇಷಗೊಳಿಸಿ ಕಾಂಗ್ರೆಸಿನ ರಾಜ್ಯಸ್ಥಾಪಿಸುವ ಪ್ರಯತ್ನ ನಡೆದಿದೆ. ೩/೪ ಭಾಗದಲ್ಲಿ ಕಾಂಗ್ರೆಸಿನ ರಾಜ್ಯವಿದೆ.

ನನ್ನೊಬ್ಬ ಗೆಳೆಯ ಚೇಷ್ಟೆ ಮಾಡಿ ಹೇಳಿದ–'ಕಾಂಗ್ರಸ್ ಅಧಿಕಾರ ಸೂತ್ರವನ್ನು ಕೈಗೆ ತೆಗೆದುಕೊಂಡು ೧೮ ತಿಂಗಳುಗಳಾದವು. ಯಾವುದೇ ಮಹಿಳೆ ೧೮ತಿಂಗಳಲ್ಲಿ ಎರಡುಬಾರಿ ಹೆರಿಗೆಯಾಗುತ್ತಾಳೆ. ಆದರೆ ಈ ಮಹಿಳೆ ಈಗಲೂ ಗರ್ಭಿಣಿಯಾಗಲಿಲ್ಲ.' ಇದು ಸರಿಯಾದ ಮಾತು ಈ ಕಾಲದ ಪ್ರಜೆಗಳ ಸುಖಸಮಾಧಾನದ ಸಂಗತಿಗಳ ಬಗ್ಗೆ ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಮೊದಲನೆಯದು ಹಿಂದೂ–ಮುಸಲ್ಮಾನರ ಐಕ್ಯದ ಮಹತ್ವದ ಪ್ರಶ್ನೆಯಿದೆ. ಸ್ವತಂತ್ರ ಕಾರ್ಮಿಕಪಕ್ಷದ ಸಭೆಯಲ್ಲಿ ಈ ಪ್ರಶ್ನೆ ಬರುವುದಿಲ್ಲ. ನಾವು ಕೇವಲ ಹೊಟ್ಟೆಯ ಪ್ರಶ್ನೆಯ ಕುರಿತು ಚರ್ಚಿಸುತ್ತೇವೆ. ಮೊದಲು ಹೊಟ್ಟೆ, ಬಳಿಕ ದೇವರು, ಎಂಬಂತೆ ನಾವು ವರ್ತಿಸುತ್ತೇವೆ. ಆದರೆ ಉಳಿದ ಪ್ರಶ್ನೆ ಬಂತೆಂದರೆ ಹೊಟ್ಟೆಯ ಪ್ರಶ್ನೆ ಬದಿಗೆ ಸರಿಯುತ್ತದೆ.

ಈ ದೇಶದಲ್ಲಿ ೮–೯ ಕೋಟಿ ಮುಸಲ್ಮಾನರಿದ್ದಾರೆ. ಈ ಜನರು ಕೂಲಿಯವರಾಗಲಿ, ಗುಲಾಮರಾಗಲಿ ಅಲ್ಲ. ಮಹಾರಾಷ್ಟ್ರ ಹೊರತುಪಡಿಸಿ ಹಿಂದೂಸ್ಥಾನದ ಇತರ ಕಡೆಗಳಲ್ಲಿ ಔರಂಗಜೇಬ, ಅಕಬರ ಮುಂತಾದ ಮುಸಲ್ಮಾನ ದೊರೆಗಳ ಆಡಳಿತವಿತ್ತು. ಹಿಂದೂಸ್ಥಾನದ ೩/೪ ಭಾಗಗಳಲ್ಲಿ ಮುಸಲ್ಮಾನರ ಮಹಾತ್ವಾಕಾಂಕ್ಷೆಯಾಗಿತ್ತು. ಹಿಂದೂಸ್ಥಾನದಲ್ಲಿಯ ಒಂಬತ್ತುಕೋಟಿ ಮುಸಲ್ಮಾನರೊಂದಿಗೆ ನಮ್ಮ ಸಂಬಂಧವಿದೆ ಎಂದು ಯಾರೂ ಭಾವಿಸಬೇಕಿಲ್ಲ. ಹಿಂದೂಸ್ಥಾನ ಹೊರಗೆ ಆಫಗಾನಿಸ್ತಾನ, ಇರಾಕ್, ಪರ್ಶಿಯಾ, ತುರ್ಕಸ್ಥಾನ, ಈಜಿಪ್ಟದಲ್ಲೆಲ್ಲ ಮುಸಲ್ಮಾನರ ಸತ್ತೆಯಿದ್ದು, ಆಯಾ ಪ್ರಸಂಗದಲ್ಲಿ ಅವುಗಳ

---

ಜನತಾ: ೨೧ ಜನೇವರಿ ೧೯೩೮.

ಕಾಂಗ್ರಸ್ ಸರಕಾರ ಮಾಡುವ ಉಪಾಯ ಯಾವುದು?

ಬೆಂಬಲ ಸಿಗುತ್ತದೆ. ಮುಸಲ್ಮಾನರು ಅಂತಾರೆ 'ಮತ್ತೊಮ್ಮೆ ಪಾನಿಪತ್ ನಡೆಯಲಿ' ಆದ್ದರಿಂದ ಹಿಂದೂ–ಮುಸಲ್ಮಾನರು ಐಕ್ಯರಾಗಬೇಕಾದ ಅಗತ್ಯವಿದೆ. ರಾಜ್ಯಸತ್ತೆ ಯಾವ ಕಾಂಗ್ರೆಸಿನ ಕೈಯಲ್ಲಿದೆಯೋ ಅದರ ಮೇಲೆ ಈ ಹೊಣೆಯಿದೆ, ನಮ್ಮ ಮೇಲಿಲ್ಲ! ಹಿಂದೂ–ಮುಸ್ಲಿಂ ಹೊಡೆದಾಟದ ಬಗೆಗೆ ಕಾಂಗ್ರೆಸ್ ಏನು ಮಾಡಿತು? ಬೇಕೆಂದೇ ಏನೂ ಮಾಡಲಿಲ್ಲ!

ಕಳೆದ ಆರೇಳು ದಿನಗಳ ಹಿಂದೆ ಪಾಟಣಾದಲ್ಲಿ ಮುಸ್ಲಿಂ ಲೀಗ್ ಸಭೆಸೇರಿತು. ಅಲ್ಲಿಯ ಭಾಷಣದ ಧ್ವನಿಯನ್ನು ಗಮನಿಸಿ. ಹಿಂದೂ ವಿರುದ್ಧ ಸತ್ಯಾಗ್ರಹ ಮಾಡಬೇಕೆಂದು ಮುಸಲ್ಮಾನ ಸಮಾಜ ಘೋಷಣೆ ಹಾಕಿತ್ತು! ಆದರೆ ಮುಸಲ್ಮಾನರ ಸತ್ಯಾಗ್ರಹವೆಂದರೆ ಗಾಂಧಿಯ ಸತ್ಯಾಗ್ರಹವಲ್ಲ! 'ಹಿಂದೂಸ್ಥಾನದ ವಿಭಜನೆ ಮಾಡಿ' ಎಂದು ಮುಸಲ್ಮಾನರ ಬಹುಜನ ಸಮಾಜ ಬೇಡಲಿಲ್ಲ. ಮುಸಲ್ಮಾನರಿಗೆ ಬೇಕಾದ್ದು ದಿವಾನಲೀಗ್. ಕಾಂಗ್ರೆಸ್ ಕೆಲವು ಪ್ರಾಂತಗಳಲ್ಲಿ ಮುಸಲ್ಮಾನ ದಿವಾನರನ್ನು ತೆಗೆದುಕೊಂಡಿದ್ದಾರೆ. ಅಂದಾಗ ಮುಂಬೈಯಲ್ಲೇ ಲೀಗ್ ಮನುಷ್ಯನನ್ನು ಏಕೆ ತೆಗೆದುಕೊಳ್ಳಬಾರದು? ಸೂರಿಯ ಬದಲಿಗೆ ದೇಹಲವಿಯನ್ನು ಏಕೆ ತೆಗೆದುಕೊಳ್ಳಬಾರದು? ಇಂದು ಸೂರಿ ೫೦೦ ರುಪಾಯಿ ಪಡಯುತ್ತಾನೆ. ಅದನ್ನೆ ಸರ್ ದೇಹಲವಿ ತೆಗೆದುಕೊಳ್ಳುತ್ತಿದ್ದ. ಅದರಲ್ಲಿ ಏನು ತಪ್ಪು ಅನ್ನುವುದೇ ಗೊತ್ತಾಗುವುದಿಲ್ಲ.! ಮತ್ತೆ ಪಾನಿಪತ್ ಆರಂಭಿಸಿಬೇಕಾಗಿದೆಯೇ?

ಎರಡನೇ ಪ್ರಶ್ನೆ ಸಾಮ್ರಾಜ್ಯಶಾಹಿಯನ್ನು ಓಡಿಸುವುದು. ಆಂಗ್ಲ ಸಾಮ್ರಾಜ್ಯ ಹೋದರೂ ಇಲ್ಲಿಯ ಗುಜರ, ಸಾವಕಾರ, ಗೌಡ, ಪಟೇಲ, ಗಿರಣಿ ಮಾಲೀಕ ಹೋಗಲಾರ. ಅವರು ನಿಮ್ಮ ರಕ್ತವನ್ನು ಹೀರುವವರೆ! ಸಾಮ್ರಾಜ್ಯಶಾಹಿ ಹೋಗಬೇಕೆಂಬ ಇಚ್ಛೆ ನನಗೂ ಇದೆ; ಆದರೆ ಕಾಂಗ್ರೆಸ್ ಏನು ಮಾಡುತ್ತಿದೆ? ಮಧ್ಯವರ್ತಿ ಸರಕಾರ (ಫೇಡರೇಶನ್) ಅತ್ಯಂತ ಹೇಸಿಗೆಯದ್ದಾಗಿದೆ. ಲೂಟಿಗಾರರ, ರಾಜರ ಕೈಗೆ ನಮ್ಮ ಗೋಣು ಕೊಡಬೇಕೆಂದು ಆಂಗ್ಲಸರಕಾರ ಬಯಸಿದಂತಿದೆ. ಕಾಂಗ್ರೆಸಿನ ಕೈಯಲ್ಲಿ ಸತ್ತೆಯಿದೆ. ಅದರಿಂದ ಈ ಹೊಸ ಸಂಕಟ ಹೋಗಬಹುದು. ಆದರೆ ಕಾಂಗ್ರೆಸು ಯಾವ ಉಪಾಯ ಯೋಜನೆ ಮಾಡಲಿದೆ? ಆಂಗ್ಲ ಸರಕಾರವು ಈ ಫೆಡರೇಶನ್ ಅನ್ನು ನಮ್ಮ ತಲೆಗೆ ಕಟ್ಟಲಿದೆ! ಅದಕ್ಕೆ ಸಾಮ್ರಾಜ್ಯದ ಕಟ್ಟಾ ಶತ್ರುಗಳಾದ ಕಾಂಗ್ರೆಸಿನವರು ಫೆಡರೇಶನ್ನಿನ ವಿರುದ್ಧವಿದ್ದಾರೆ ಎಂದು ನನಗಂತೂ ಅನಿಸುವುದಿಲ್ಲ! ಒಬ್ಬ ಕಾಂಗ್ರೆಸ್ ಭಕ್ತ ಗಾಳಿಸಂಚಾರಕ್ಕೆಂದು ವಿದೇಶಕ್ಕೆ ಹೋಗಿದ್ದರು. ಅವರಿಗೆ ಯಾವ ರೋಗವಿತ್ತೋ ನನಗೆ ಗೊತ್ತಿಲ್ಲ! ಈ ಕಾಂಗ್ರೆಸ್ ರಾಜಕಾರಣದ ದರ್ಪದ ಮನುಷ್ಯನು, ನಾವು ಫೆಡರೇಶನ್ ವಿರುದ್ಧ ಎಷ್ಟೇ ಕೂಗಾಡಿದರೂ, ನಾವದನ್ನು ಒಪ್ಪುತ್ತೇವೆ ಎಂದು ಆಂಗ್ಲರಿಗೆ ಭರವಸೆ ನೀಡಿದ ದೇ. ಭಿ. ಸುಭಾಷಬಾಬೂ ಅವರು ಹಾಕಿದ ಫೆಡರೇಶನ್ನಿನ ವಿರುದ್ಧದ ಘೋಷಣೆಯು ಕಾಂಗ್ರೆಸ್ ಪಕ್ಷದ ಮುಖವಾಣಿಯಿಂದ–ಬೇಕಾದರೆ ಗೋಮುಖ ಎನ್ನಿ– ಬಹಿರಂಗಗೊಂಡಿತ್ತು. ಮತ್ತೊಂದೆಡೆ ಸತ್ಯಮೂರ್ತಿಯವರು ಪತ್ರಿಕೆಯಲ್ಲಿ ಪ್ರಕಟಿಸಿದ್ದೇನೆಂದರೆ 'ಸುಭಾಷಬಾಬುಗಳಿಗೆ ಈ ವಿಷಯದ ಬಗ್ಗೆ ಮಾತಾಡುವ ಅಧಿಕಾರವಿಲ್ಲ' ಸತ್ಯಮೂರ್ತಿಯ ಈ ಹೇಳಿಕೆಯನ್ನು ಕಾಂಗ್ರೆಸಿನ ಪುಢಾರಿಗಳಲ್ಲಿ ಒಬ್ಬರೂ ವಿರೋಧಿಸಲಿಲ್ಲ! ಅಂದರೆ ಎಲ್ಲೋ ಬೇಳೆ ಬೇಯುತ್ತಿದೆ ಎಂದರ್ಥ! ಒಬ್ಬ ಗೃಹಸ್ಥ ವೈಸರಾಯ ಜೊತೆಗೆ ನಡೆಸಿದ ಸಂವಾದ ಹೀಗಿತ್ತು–

ಗೃಹಸ್ಥ– ಕಾಂಗ್ರೆಸ್ ಫೆಡರೇಶನ್ ಸ್ವೀಕರಿಸುವುದಿಲ್ಲ.

ವೈಸರಾಯ– ಹಾಗಾದರೆ ಏನು ಮಾಡುತ್ತದೆ? ನೀವಿದನ್ನು ಹೇಗೆ ಹೇಳುತ್ತೀರಿ?

ಗೃಹಸ್ಥ– ಸುಭಾಷಬಾಬುಗಳ ಧೋರಣೆಯ ಮೇಲಿಂದ.

ವೈಸರಾಯ– ಸುಭಾಷಬಾಬುಗಳ ಘೋಷಣೆಯನ್ನು ನಾವು ಕೇಳಿದ್ದೇವೆ. ಅದರೆ ನಿಮ್ಮ ಗಾಂಧಿ

ಎಲ್ಲಿಮಾತಾಡುತ್ತಾರೆ? ಗಾಂಧಿ ಏಕೆ ಮೌನ ಹಿಡಿದಿದ್ದಾರೆ?

ಮಹಾತ್ಮಾ ಗಾಂಧಿಯ ಈ ಮುಗ್ಧತೆಯಲ್ಲೇ ಏನೋ ರಹಸ್ಯ ಅಡಗಿದೆ. ಗಾಂಧಿ ಹಿಂದೂಸ್ಥಾನವನ್ನು ಸಾಮ್ರಾಜ್ಯಶಾಹಿಯ ಗುಲಾಮರನ್ನಾಗಿ ಮಾಡಲಿದ್ದಾರೆ!

ಮೂರನೇ ಪ್ರಶ್ನೆ, ನಮಗೆ ಸ್ವರಾಜ್ಯ ಬೇಕಾಗಿರುವುದು ನಮ್ಮ ಸ್ವಾತಂತ್ರ್ಯಕ್ಕಾಗಿ! ಸುಖಕ್ಕಾಗಿ! ನಮಗೆ ದೇಶದಲ್ಲಿ ಹೊಟ್ಟೆತುಂಬ ಅನ್ನಸಿಗುತ್ತಿಲ್ಲ. ಮನೆಯಲ್ಲಿ, ಸುಖ ಸಂಪತ್ತಿಲ್ಲ! ಯಾವ ರಾಜ್ಯದಲ್ಲಿ ಸ್ವಾತಂತ್ರ, ಮಾನವೀಯತೆ ವಗೈರೆ ಸಮಾನ ಹಕ್ಕು ನಮಗೆ ಸಿಗುತ್ತದೆಯೋ ಅದೇ ನಮ್ಮ ಸ್ವರಾಜ್ಯ!

ಕಾಂಗ್ರೆಸ್ ನಮಗಾಗಿ ಏನು ಮಾಡಿದೆ? ಚುನಾವಣೆಗಿಂತ ಮೊದಲು ಶಿಕ್ಷಣ ನೀಡುತ್ತೇವೆ. ಹೊಲ ಕಂದಾಯ ಕಡಿಮೆ ಮಾಡುತ್ತೇವೆ ಎಂಬ ಆಶ್ವಾಸನೆ ನೀಡಿತ್ತು. ಅದೆಲ್ಲಿ ಹೋಯಿತು? ಮುಂಬೈ ಇಲಾಖೆಯ ಆಸೆಂಬ್ಲಿಯಲ್ಲಿ ಕಾಂಗ್ರೆಸಿಗೆ ಬಹುಮತವಿದೆ. ಹೀಗಿದ್ದಾಗ ಕೈಯಲ್ಲಿ ಅಧಿಕಾರವಿಲ್ಲೆಂದು ಹೇಗೆ ಅಂತೀರಿ? ಆದರೆ ಕಾಂಗ್ರೆಸಿಗೋ ನಿಮಗಾಗಿ ಏನೂ ಮಾಡುವ ಇಚ್ಛೆಯಿಲ್ಲ! ಕಾಂಗ್ರೆಸಿನ ಸ್ವಾತಂತ್ರ್ಯವೆಲ್ಲಿದೆ? ಈಗಷ್ಟೇ ಮುಖ್ಯ ಪ್ರಧಾನರಾದ ಬಾಳಾಸಾಹೇಬ ಖೇರ ಮಹಾಡಿಗೆ ಬಂದುಹೋದರು. ಅವರು ನಮ್ಮ ವಿಷಯವೇನಾದರೂ ಪ್ರಸ್ತಾಪ ಮಾಡಿದರೆ? ಇಲ್ಲ! ಹೇಗೆ ಮಾಡಿಯಾರು? ಅವರಿಗೆ ಗಾಂಧಿಯ ಮತ್ತು ವಲ್ಲಭಭಾಯಿರ ಭಯವಿದೆ. ಸದ್ಯ ನಮ್ಮನ್ನು ಗುಜರಾತಿಗಳು ಆಳುತ್ತಿದ್ದಾರೆ. ವರಿಷ್ಠ ಸರಕಾರದಿಂದ ಬಂದ ಹೆಚ್ಚಿನ ಮೂರುಕೋಟಿ ರಕಮಿನಲ್ಲಿ ೧ಕೋಟಿ, ೯೩ಲಕ್ಷ, ಅಂದರೆ ಸುಮಾರು ೨ಕೋಟಿ ರುಪಾಯಿಯನ್ನು ಗುಜರಾತ ಪ್ರಾಂತಕ್ಕಾಗಿ ಖರ್ಚು ಮಾಡಲಾಯಿತು. ಮುಂಬೈ ಇಲಾಖೆಯಲ್ಲಿಯ ಮೂರುಭಾಗದಲ್ಲಿ ಮಹಾರಾಷ್ಟ್ರದಲ್ಲಿ ಬಡತನವಿದೆ. ಹೀಗಾಗಿ ಈ ಮೂರುಕೋಟಿ ಬಡ ಮಹಾರಾಷ್ಟ್ರಕ್ಕಾಗಿ ಖರ್ಚು ಮಾಡಬೇಕಾಗಿತ್ತು. ಆದರೆ ಎಲ್ಲಕ್ಕಿಂತ ಶ್ರೀಮಂತವಾಗಿರುವ ಗುಜರಾತ ಪ್ರಾಂತಕ್ಕಾಗೇ ಇದರ ವಿನಿಯೋಗವಾಯಿತು. ರತ್ನಾಗಿರಿ, ಅಹಮದನಗರದಂತಹ ಬರಪ್ರದೇಶದಲ್ಲಿ ಅದರ ಉಪಯೋಗವಾಗುತ್ತಿತ್ತು! ಆದರೆ ಸದ್ಯ ನಮ್ಮನ್ನು ಗುಜರಾತ ಆಳುತ್ತಿದೆ! ಮೂರು ಗುಜರಾತದ ದಿವಾನರು ಬೀಸುತ್ತಿದ್ದಾರೆ ಮತ್ತು ಉಳಿದವರು ಹಿಟ್ಟು ತುಂಬಿ, ರೊಟ್ಟಿ ತಯಾರಿಸಿ ಗುಜರಾತಿಗೆ ಕಳಿಸುತ್ತಾರೆ! ಇವರೆಲ್ಲ ದಿವಾನ ವಲ್ಲಭಭಾಯಿಯ ಬಾಗಿಲ ನಾಯಿಗಳು!

ವಲ್ಲಭಭಾಯಿ ಖೇರ ಅವರನ್ನು ಗುಜರಾತಿನ ಒಂದು ಸಮಾರಂಭಕ್ಕೆ ಕರೆಯಿಸಿ ತುಂಬ ಅಪಮಾನ ಮಾಡಿದರು! 'ನಿಮ್ಮನ್ನು ಮುಖ್ಯಪ್ರಧಾನರೆಂದು ಕರೆಸಯಿಸಲಿಲ್ಲ, ನೀವು ಗಾಂಧಿಯ ಭಕ್ತರು ಎಂಬ ಕಾರಣಕ್ಕಾಗಿ ಕರೆಯಿಸಿದ್ದೇವೆ, ಇಲ್ಲದಿದ್ದರೆ ಹೊರಗೆ ದಬ್ಬಿ ಬಿಡುತ್ತಿದ್ದೆವು!' ಎಂದು ಮಾತಾಡಿ ವಲ್ಲಭಭಾಯಿಯವರು ಒಬ್ಬ ಮಹಾರಾಷ್ಟ್ರದ ಮನುಷ್ಯನಿಗೆ ಅಪಮಾನ ಮಾಡಿದರು! ನಮ್ಮ ಸಚಿವರಾದ ಖೇರರು ಈ ಅಪಮಾನದ ಸೇಡು ತೀರಿಸಿಕೊಳ್ಳುತ್ತಾರೆಯೇ? ಆ ಸೇಡು ನಾನು ತೀರಿಸುತ್ತೇನೆ. ಆ ವಲ್ಲಭಭಾಯಿಯನ್ನು ನಾನು ಮೆಟ್ಟಿನಿಂದ ಹೊಡೆಯುತ್ತೇನೆ ಎಂದು ಬೇಕಾದರೆ ಮಾತಾಡಿಕೊಳ್ಳಲಿ! ನಾನು ಅವರ ಸಭೆಗೆ ಹೋಗುತ್ತೇನೆ. ತಾಕತ್ತಿದ್ದರೆ ಅವರು ನನ್ನ ಸಭೆಗೆ ಬರಲಿ.

ಒಂದೆರಡು ತಿಂಗಳಲ್ಲಿ ಗೌಡರಬಿಲ್ ಚರ್ಚೆಗೆ ಬರಬಹುದು, ಆದರದು ಅಂಗೀಕಾರಗೊಳ್ಳಲಾರದು. ಕಾಂಗ್ರೆಸ್ ಸರಕಾರ ಕುಸಿದು ಬೀಳದ ಹೊರತು ಇದು ಆಗಲಾರದು. ಸ್ವತಂತ್ರ ಕಾರ್ಮಿಕ ಪಕ್ಷದ, ರೈತರ ಕಾರ್ಮಿಕರ ಪಕ್ಷ ರಾಜ್ಯ ಬಂದ ಹೊರತು ಇದು ಆಗಲಾರದು. ಗೌಡ–ಪಾಟೀಲರು ಕಾನೂನುಬಾಹೀರವಾಗಿ ರೈತ ಗೇಣಿದಾರರನ್ನು ಲೂಟಿ ಮಾಡುತ್ತಾರೆ. ನೀವು ಅದರ ಪ್ರತೀಕಾರ ಮಾಡಬೇಕು. ಸ್ವತಂತ್ರ ಕಾರ್ಮಿಕ ಪಕ್ಷವು ಕರಾರುಪತ್ರವನ್ನು ಸಿದ್ಧ ಪಡಿಸಲಿದೆ. ಅದು ಸಿದ್ಧಗೊಂಡ ಬಳಿಕ ನೀವು ಅದರಂತೆ ವರ್ತಿಸಬೇಕು.

ಅನ್ಯಾಯದ ಪ್ರತೀಕಾರ ಮಾಡಬೇಕು. ಅಧಿಕಾರ ವರ್ಗದವರೆಲ್ಲ ಗೌಡ–ಪಾಟೀಲರ ಜಾತಿಯವರು. ಹೀಗಾಗಿ ಅವರು ಪಕ್ಷಪಾತ ಮಾಡಿದರೂ, ನೀವು ಕಾರಾಗೃಹಕ್ಕೆ ಭಯಪಡಬೇಡಿ. ಅಲ್ಲಿ ಮನೆಗಿಂತ ಕೆಟ್ಟದ್ದೇನೂ ಇಲ್ಲ. ನಾವು ನಿಮ್ಮೊಂದಿಗೆ ಕಾರಾಗೃಹಕ್ಕೆ ಬರುತ್ತೇವೆ. ಆದರೆ ನಿಮ್ಮ ಕಾರಾವಾಸವೆಂದರೆ ಗಾಂಧಿಯ ಕಾರಾವಾಸವಲ್ಲ. ಅದೆಂಥ ಕಾರಾವಾಸ! ಕಾರಾಗೃಹದಲ್ಲಿ ಅವರಿಗೆ ಅತ್ಯಂತ ಪ್ರಿಯವಾದ ಆಡಿನ ಹಾಲು, ಹಣ್ಣು, ಅಂಜೂರ, ಮೋಸಂಬಿ–ಮುಂತಾದವುಗಳ ಬುಟ್ಟಿಗೆ ಬುಟ್ಟಿಯೇ ಅವರಿಗಾಗಿ ಸಿದ್ಧವಾಗುತ್ತದೆ! ನಿಮ್ಮ ಕಾರಾವಾಸ ಅದಕ್ಕಿಂತ ಭಿನ್ನ.

ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ್ ಚುನಾವಣೆಯನ್ನು ಸ್ಪರ್ಧಿಸಿ, ನಮ್ಮ ಅಭ್ಯರ್ಥಿಯು ಗೆಲ್ಲುವಂತೆ ಮಾಡಿ, ಸತ್ತೆಯ ಸಂಪೂರ್ಣ ಸ್ಥಾನವನ್ನು ಹಸ್ತಗತ ಮಾಡಿಕೊಳ್ಳಿ.

# ೧೫೦.
# ಸಮತಾಸೈನಿಕ ದಳದ ಸೈನಿಕರೆಂದರೆ ನಿರ್ಭಯ ಯೋಧರೆನ್ನಬಹುದು

ಸ್ವತಂತ್ರ ಕಾರ್ಮಿಕ ಪಕ್ಷದ ಮತ್ತು ಡಾ. ಅಂಬೇಡ್ಕರ ಅವರ ಅಸ್ಪೃಶ್ಯರ ಸರ್ವಾಂಗೀಣ ಉನ್ನತಿಯ ಕಾರ್ಯಕ್ಕೆ ಯಾವ ಸೈನಿಕರು ಆಜನ್ಮ ಮೀಸಲಾಗಿಟ್ಟರೋ, ಆ ಮುಂಬೈಯ ಸಮತಾ ಸೈನಿಕ ದಳದ ವಾರ್ಷಿಕ ಪರೇಡ ಮತ್ತು ನಿರೀಕ್ಷಣೆಯು ಡಾ. ಅಂಬೇಡ್ಕರರ ಮುಂದಾಳುತನದಲ್ಲಿ, ಕಳೆದ ಭಾನುವಾರ ೮ಜನೇವರಿ ೧೯೩೯ರ ಬೆಳಿಗ್ಗೆ ಪರಳದಲ್ಲಿ ಇರುವ ಕಾರ್ಮಿಕರ ಬಯಲಿನಲ್ಲಿ ಜರುಗಿತು. ಮುಂಬೈದಲ್ಲಿಯ ವಿವಿಧ ಬಡಾವಣೆ, ಚಾಳು, ವಾರ್ಡಗಳಿಂದ ಸಮತಾ ಸೈನಿಕ ದಳದ ಗುಂಪು ತಮ್ಮ ಕ್ಯಾಪ್ಟನ್ ಸಮೇತ ಬೆಳಿಗ್ಗೆ ೬-೩೦ರಿಂದಲೇ ಬಯಲಿಗೆ ಬಂದು ಸೇರಲಾರಂಭಿಸಿದ್ದರು. ದಳದ ಕ್ರಿಯಾಶೀಲ ಜಿ.ಓ.ಸಿ. ಶ್ರೀ ರಾಮಜಿ ಧಯಾಳಕರ ಅವರು ಸೈನಿಕ ದಳದವರನ್ನು ಸಾಲಾಗಿ ನಿಲ್ಲಿಸಿ ಪರೇಡಿನ ಪ್ರಾಥಮಿಕ ತಾಲೀಮ ನಡೆಸಿದರು. ಬ್ಯಾಂಡಿನ ಮಧುರಸ್ವರದಲ್ಲಿ ಈ ಪರೇಡಿನ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ಸರಿಯಾಗಿ ೧೦ ಗಂಟೆಗೆ ಡಾ. ಅಂಬೇಡ್ಕರ ಅವರು ತಮ್ಮ ಸಹಕಾರಿಗಳೊಂದಿಗೆ ಬಯಲಿಗೆ ಬಂದಕೂಡಲೇ ದಳದವರ ಹೊರತು ಉಳಿದ ಜನರು ಕರತಾಡನ ಮಾಡಿ ಸ್ವಾಗತಿಸಿದರು. ಸಮತಾ ಸೈನಿಕರು ಮಿಲಿಟ್ರಿ ಪದ್ಧತಿಯಲ್ಲಿ ಅವರಿಗೆ ಗೌರವವಂದನೆ ಸಲ್ಲಿಸಿದರು. ಆರಂಭದ ಸ್ವಾಗತ ಸಮಾರಂಭದ ಬಳಿಕ ಡಾ. ಅಂಬೇಡ್ಕರ, ಸ್ವತಂತ್ರ ಕಾರ್ಮಿಕ ಪಕ್ಷದ ಸೆಕ್ರೆಟರಿ ಡಿ.ವ್ಹಿ. ಪ್ರಧಾನ ಮತ್ತು ಜೆ.ಓ.ಸಿ. ಧಯಾಳಕರರು ಸಮತಾ ಸೈನಿಕ ದಳದ ನಿರೀಕ್ಷಣೆ ಮಾಡಿದರು. ಆ ಸಮಯದಲ್ಲಿ ಒಟ್ಟೂ ಪ್ರಸಂಗವು ಸೈನ್ಯದ ಮಾದರಿಯ, ಮೈಯಲ್ಲಿ ವೀರಶ್ರೀ ಸಂಚರಿಸುವ ರೀತಿಯಲ್ಲಿತ್ತು. ಪ್ರತಿ ಸೈನಿಕರ ಅಚ್ಚುಕಟ್ಟುತನ, ಸಮವಸ್ತ್ರ, ಶಿಸ್ತು ಆಕರ್ಷಕವಾಗಿತ್ತು.

ದಳದ ನಿರೀಕ್ಷಣೆಯ ಬಳಿಕ ವೀರ ಫೋಟೋ ಆರ್ಟ್ ಸ್ಟುಡಿಯೋದವರು ದಳದ ಮತ್ತು ಡಾ. ಅಂಬೇಡ್ಕರರ ಮತ್ತು ಮುಖಂಡರ ಸಮೂಹ ಫೋಟೋಗಳ ವಿವಿಧ ಭಂಗಿಯನ್ನು ಸೆರೆಹಿಡಿಯಲಾಯಿತು. ಈ ಜನರಲ್ ಪರೇಡಿಗಾಗಿ ೨೫೦೦ ಸಮತಾಸೈನಿಕದಳ ಮತ್ತು ಇತರ ಜನತೆ ೨೦,೦೦೦ರಷ್ಟು ಹಾಜರಿತ್ತು. ಪಕ್ಷದ ಸೆಕ್ರೆಟರಿಯಾದ ಡಿ.ವ್ಹಿ. ಪ್ರಧಾನ ಅವರು ಪ್ರಾಸ್ತಾವಿಕವಾಗಿ ಹೇಳಿದ ಮಾತು ಹೀಗಿತ್ತು.-'ಸಮವಸ್ತ್ರ ಧರಿಸಿದ ದಳದ ಸೈನಿಕರು ೨೫೦೦ ಇದ್ದರೆ, ಸಮವಸ್ತ್ರವಿಲ್ಲದ, ಅಷ್ಟೇ ಇತರ ಸೈನಿಕರಿದ್ದಾರೆ. ಇಂದು ೫೦೦೦ದಷ್ಟು ದಳದ ಸೈನಿಕರ ಸಂಖ್ಯೆಯು ಮುಂಬೈದಲ್ಲಿದೆ. ಮುಂದಿನ ವರ್ಷ ಇದು ದ್ವಿಗುಣಿತಗೊಂಡು ೧೦,೦೦೦ದಷ್ಟಾಗಬಹುದೆಂಬ ಭರವಸೆ ನನಗಿದೆ. ಹಾಗೆಯೇ ದಳದ ಶಾಖೆಯ ಪ್ರಸಾರ ಮಧ್ಯಪ್ರಾಂತದ ಕಡೆಗಳಲ್ಲಿ ಕೈಕೊಳ್ಳಲಾಗಿದೆ. ಆದಷ್ಟು ಬೇಗ ಸಂಪೂರ್ಣ ಹಿಂದೂಸ್ಥಾನದಲ್ಲೇ ಸ್ವತಂತ್ರ ಕಾರ್ಮಿಕ ಪಕ್ಷದ ಧ್ವಜದಡಿಯಲ್ಲಿ ೫೦,೦೦೦ದಷ್ಟು ಸೈನಿಕರು ಸೇರುವ ದೃಶ್ಯವನ್ನು ಕಾಣಬಹುದು. ಪ್ರತಿಯೊಬ್ಬ ಸೈನಿಕನು ಪಕ್ಷದ ಕಾರ್ಯಕ್ಕಾಗಿ ಹೋರಾಡಲು ಮುಂದಾಗಬೇಕು' ಎಂದು ಹೇಳಿದರು. ಬಳಿಕ ಡಾ. ಅಂಬೇಡ್ಕರ ಭಾಷಣ ಮಾಡಲು ಎದ್ದುನಿಂತರು.

---

ಜನತಾ: ೧೪ ಜನೇವರಿ ೧೯೩೯.

"ಸಮತಾ ಸೈನಿಕ ದಳದ ಇಂದಿನ ವಾರ್ಷಿಕ ಜನರಲ್ ಪರೇಡಿಗೆ ಮುಂಬೈದಲ್ಲಿಯ ಸಕಲ ಸೈನಿಕರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದು ಕಂಡು ನನಗೆ ಸಂತೋಷವಾಗಿದೆ. ಇಂದು ಅವರು ಒಗ್ಗಟ್ಟಿನಿಂದ ವ್ಯಕ್ತ ಮಾಡಿದ ಸಂಘಟನೆ, ಶಿಸ್ತು ಮತ್ತು ಸ್ವಾರ್ಥ ತ್ಯಾಗದ ಪ್ರದರ್ಶನವು ಬಹುಜನ ಸಮಾಜಕ್ಕೆ ಆದರ್ಶವೆಂದು ಪರಿಗಣಿಸಲಾಗಿದೆ. ಪ್ರತಿಯೊಬ್ಬರು ತಮ್ಮ ಸ್ವಂತ ಹಣದಿಂದ ಸಮವಸ್ತ್ರವನ್ನು ಹೊಲಿಸಿಕೊಂಡು, ತಮ್ಮ ಪಕ್ಷದ ಬಗೆಗೆ ತೋರಿಸಿದ ಕಳಕಳಿಯು ನಿಜಕ್ಕೂ ಅಭಿನಂದನೀಯವಾಗಿದೆ. ನನ್ನ ಮತ್ತು ನನ್ನ ಗೆಳೆಯರ ದೊಡ್ಡಸ್ತಿಕೆಗಾಗಿ ಈ ದಳವನ್ನು ಸಿದ್ಧ ಪಡಿಸಲಾಗಿದೆ ಎಂದು ಕೆಲವರ ಭಾವನೆ. ಆದರೆ ಯಾರಿಗೆ ಈ ದಳದ ಪೂರ್ವಪೀಠಿಕೆಯು ಗೊತ್ತಿದೆಯೋ ಅವರಿಗೆ ಈ ದಳಸ್ಥಾಪಿಸಲು ಎಂಥ ಉದಾತ್ತ ಮತ್ತು ಉಜ್ವಲ ಧ್ಯೇಯವನ್ನು ಎದುರಿಗಿಡಲಾಗಿದೆ ಎನ್ನುವುದು ಖಚಿತವಾಗಿ ಗೊತ್ತಿದೆ.

೧೯೨೬-೨೭ ಸುಮಾರಿಗೆ ಈ ದಳದ ಶುಭಾರಂಭವನ್ನು ಮಹಾಡದ ಸಿಹಿನೀರಿನ ಕೆರೆಯ ಸತ್ಯಾಗ್ರಹದ ಕಾಲಕ್ಕೆ ಮಾಡಲಾಯಿತು. ಆ ಕಾಲಕ್ಕೆ ಮಹಾಡ ಸತ್ಯಾಗ್ರಹದ ಕಾರ್ಯ ನಿರ್ವಿಘ್ನವಾಗಿ ಮತ್ತು ಯಶಸ್ವಿಯಾಗಿ ನೆರವೇರಿಸಲು ಇಂಥ ಸಂಘಟಿತ ದಳದ ಆಗತ್ಯವಿತ್ತು. ನಾವು ಸ್ಥಾಪನೆ ಮಾಡಿದ ಸಮತಾ ಸೈನಿಕ ದಳದ ಹಿನ್ನೆಲೆಯನ್ನು ಗಮನಿಸಿದರೆ ಮತ್ತು ಒಟ್ಟೂ ಪರಿಸ್ಥಿತಿಯ ಬಗೆಗೆ ಯೋಚಿಸಿದರೆ ದಳದ ಸ್ಥಾಪನೆಯನ್ನು ನಾನು ನನ್ನ ಹೆಸರಿಗಾಗಲಿ, ಜೈಜೈಕಾರಕ್ಕಾಗಲಿ ಮೆರೆಯಬೇಕೆಂಬ ಕಾರಣಕ್ಕಾಗಿ ಮಾಡಲಿಲ್ಲ ಎನ್ನುವುದು ಯಾರಿಗಾದರೂ ಗೊತ್ತಾಗಬಹುದು. ಇದಕ್ಕೆ ನೇರ, ದಿಟ್ಟ ಉತ್ತರವು ಮಹಾಡದ ಕೆರೆಯ ಹೋರಾಟದಿಂದ ಸಹಜ ಪಡೆಯಬಹುದಾಗಿದೆ. ಹಿಂದೂಸ್ಥಾನದಲ್ಲಿ ಹಲವು ಧರ್ಮದ ಸಮಾಜವಿದೆ. ಅದರಲ್ಲಿ ಹಿಂದೂಸಮಾಜದಲ್ಲಿ ಅಸ್ಪೃಶ್ಯರ ಸಮಾವೇಶವಾಗುತ್ತಿರುವದರಿಂದ, ಈ ಸಮಾಜದ ಸ್ಪೃಶ್ಯಬಾಂಧವರು ಅಸ್ಪೃಶ್ಯ ಸಮಾಜದ ಮೇಲೆ ಮಾಡುವ ಅನ್ಯಾಯ, ಶೋಷಣೆ, ಅತ್ಯಾಚಾರ, ಅಸಮಾನತೆಯ ಬೋಧನೆ, ಮುಂತಾದ ಅನಿಷ್ಠ, ಘಾತುಕ ಪ್ರಕಾರಗಳಿಗೆ ನಿಯಂತ್ರಣ ಹಾಕಲು ಈ ದಳವನ್ನು ಮುಖ್ಯವಾಗಿ ಸ್ಥಾಪಿಸಲಾಗಿದೆ. ಯಾವ ಸಮಾಜದಲ್ಲಿ ಮಾನವೀಯತೆಯಿಂದ ಬದುಕುವುದು ಸಾಧ್ಯವಿಲ್ಲವೋ, ಎಲ್ಲಿ ನೈಸರ್ಗಿಕ ಹಕ್ಕನ್ನು ಸಮತೆಯಿಂದ ಉಪಭೋಗಿಸುವುದು ಸಾಧ್ಯವಿಲ್ಲವೋ, ಅಂಥ ಧರ್ಮವನ್ನು ಧಿಕ್ಕರಿಸಿ, ನಿಜವಾದ ಮಾನವೀಯತೆಯಿಂದ ವರ್ತಿಸುವ ಧರ್ಮವನ್ನು ನಿರ್ಮಾಣ ಮಾಡಲು ಯಾವಕಾರ್ಯ ಮಾಡಬೇಕಾಗಿದಯೋ, ಆ ಪವಿತ್ರ ಮತ್ತು ಉಜ್ವಲ ಕಾರ್ಯಕ್ಕಾಗಿ ಈ ದಳವನ್ನು ಸ್ಥಾಪಿಸಲಾಗಿದೆ. ಈ ಕಾರ್ಯದ ಶುಭಾರಂಭವನ್ನು ಮಹಾಡದ ಸಿಹಿ ನೀರಿನ ಕೆರೆಯ ಸತ್ಯಾಗ್ರಹದಿಂದ ಮಾಡಿ ಈ ಸತ್ಯಾಗ್ರಹದ ಹೋರಾಟದಲ್ಲಿ ವಿಜಯವನ್ನು ಸಂಪಾದಿಸಲಾಗಿದೆ. ಅದೇ ರೀತಿ ಸಾರ್ವಜನಿಕ ಕೆರೆ, ಬಾವಿ, ನಲ್ಲಿ, ಇರುವ ಕಡೆಗಳಲ್ಲೆಲ್ಲ ಸಮಾನ ಹಕ್ಕಿನ ಹೋರಾಟವನ್ನು ನಡೆಸಿ ನಮ್ಮ ಕಾರ್ಯವನ್ನು ಮುಂದುವರಿಸಬೇಕಾಗಿದೆ. ನಮಗೆ ಕುಡಿಯಲು ನೀರು ಸಿಗುವುದಿಲ್ಲೆಂಬ ಕಾರಣಕ್ಕಾಗಿ ಮಹಾಡ ಕೆರೆಯ ಸತ್ಯಾಗ್ರಹವನ್ನು ಆರಂಭಿಸಿರಲಿಲ್ಲ. ಈ ಕೆರೆಯ ನೀರಿನಿಂದಾಗಿ ನಮಗೆ ಅಡ್ಡಿ ಬಂದಿರಲಿಲ್ಲ. ನಾವು ಚಡಪಡಿಸಿ ಸಾಯುತ್ತಿರಲಿಲ್ಲ. ಈ ಹೋರಾಟ ಕುಡಿಯುವ ನೀರಿಗಾಗಿ ಮಾಡಿದ್ದಲ್ಲ. ಅಲ್ಲಿಯ ನೀರು ಎಲ್ಲ ಜಾತಿಯ, ಧರ್ಮದ ಮತ್ತು ಪಂಥದವರಿಗೆ ಸಮಾನವಾಗಿ ಕುಡಿಯಲು ಸಿಗಬೇಕು ಎಂಬ ಹಕ್ಕಿಗಾಗಿ ಈ ಹೋರಾಟ ನಡೆಸಿದ್ದು. ಅದೇ ಸಂಗತಿ ನಾಶಿಕದ ಕಾಳಾ ರಾಮಮಂದಿರ ಪ್ರವೇಶದ್ದು. ನಾವು ಕೇವಲ ದೇವರ ದರ್ಶನಕ್ಕಾಗಿ ಹಸಿದಿರಲಿಲ್ಲ. ಕಳೆದ ಎರಡು ಸಾವಿರ ವರ್ಷಗಳಿಂದ ಅಸ್ಪೃಶ್ಯ ಬಾಂಧವರಿಗೆ ಹಿಂದೂ ದೇವರ ದರ್ಶನ ಸಿಕ್ಕಿರಲಿಲ್ಲ. ಅದರಿಂದ ಅಸ್ಪೃಶ್ಯರಿಗೇನು ಅಂಥ ಅಡಚಣೆ ಇರಲಿಲ್ಲ. ನಾಶಿಕ ಮಂದಿರದ ಪ್ರವೇಶದ ಹೋರಾಟವನ್ನು ಕೇವಲ ನಮ್ಮ ಹಿಂದೂಸಮಾಜದ ಸಮಾನತೆಯ ಹಕ್ಕಿನ

ಸಂರಕ್ಷಣೆಗಾಗಿ ಮಾಡಬೇಕಾಯಿತು. ಈ ಸತ್ಯಾಗ್ರಹದ ಹೋರಾಟದಿಂದ ಜನರಿಗಾದ ಯಾತನೆಯನ್ನು, ಹಲವು ದುಃಖದ ಪ್ರಸಂಗಗಳನ್ನು ನಾವೂ ಮನುಷ್ಯರು, ಉಳಿದವರಂತೆ ನಮಗೂ ಮಂದಿರ ಪ್ರವೇಶದ ಹಕ್ಕಿದೆ ಎಂಬುದನ್ನು ಪ್ರಸ್ಥಾಪಿಸಲು ಸಹಿಸಲಾಯಿತು. ನಾವು ಉಳಿದವರಂತೆ ಮನುಷ್ಯರಾಗಿದ್ದು, ನಾವು ಮಂದಿರ ಪ್ರವೇಶಿಸಿದ ಮಾತ್ರಕ್ಕೆ ಹಿಂದೂ ದೇವಾಲಯಗಳು ಹೇಗೆ ಅಪವಿತ್ರಗೊಳ್ಳುತ್ತವೆ ಎನ್ನುವುದೇ ಗೊತ್ತಾಗುವುದಿಲ್ಲ. ಹಿಂದೂ ಸಮಾಜವು ನಮ್ಮ ಮೇಲೆ ಹೇರಿದ ಮಡಿಮೈಲಿಗೆಯ ಕಳಂಕವನ್ನು ತೊಳೆದು ಹಾಕಲು, ನಾವು ಮನುಷ್ಯರಾಗಿದ್ದು, ಯಾವ ದೃಷ್ಟಿಯಿಂದಲೂ ಅಪವಿತ್ರರಲ್ಲ ಎಂದು ತೋರಿಸಲೆಂದೇ ಈ ಕಾಳಾರಾಮ ಮಂದಿರ ಪ್ರವೇಶದ ಹೋರಾಟವನ್ನು ಮಾಡಬೇಕಾಯಿತು.

ಮೇಲಿನ ಪ್ರಕಾರದ ಉಜ್ವಲ ತತ್ವದ ಹೋರಾಟವನ್ನು ಆರಂಭಿಸಲೆಂದೇ ನಮ್ಮ ಸಮತಾ ಸೈನಿಕದಳದ ಸ್ಥಾಪನೆ ಮಾಡಬೇಕಾಯಿತು. ಇದೇ ನಮ್ಮ ದಳದ ನಿಜವಾದ ಪೂರ್ವಪೀಠಿಕೆ. ಇದರಿಂದ ತಿಳಿದು ಬರುವುದೇನೆಂದರೆ, ಈ ದಳದ ಸ್ಥಾಪನೆಯು ವ್ಯಕ್ತಿಗತವಾದುದಲ್ಲ. ಈ ದೇಶದಲ್ಲಿಯ ಹಿಂದು ಸಮಾಜದಲ್ಲಿ ನಿಜವಾದ ಸಮತೆಯನ್ನು ಪ್ರಸ್ಥಾಪಿಸಲೆಂದೇ ಈ ಸಮತಾ ಸೈನಿಕ ದಳವನ್ನು ಆರಂಭಿಸಲಾಗಿದೆ.

ಸಮತಾ ಸೈನಿಕದಳದ ಸೈನಿಕರೆಂದರೆ ಸಮಾಜಸೇವೆಗಾಗಿ ಪ್ರಾಣಾರ್ಪಣೆಯನ್ನು ಮಾಡಲೂ ಹಿಂಜರಿಯದ ನಿರ್ಭಯ ಯೋಧರೇ ಎನ್ನಬೇಕಾಗುತ್ತದೆ. ಮಾನವೀಯತೆಗಾಗಿ ಸಮತೆಯ ಉಜ್ವಲ ತತ್ವವನ್ನು ಅಂತರಂಗದಲ್ಲಿ ಹೊತ್ತಿಸಿ, ತನ್ನ ಕಾರ್ಯವನ್ನು ಪೂರ್ಣಮಾಡಬೇಕು. ಅದಕ್ಕಾಗಿ ಎಲ್ಲರೂ ಪಣತೊಟ್ಟು ಯಾವುದೇ ರೀತಿಯ ಜಾತಿಭೇದವನ್ನು ಒಪ್ಪುವುದಿಲ್ಲ. ಹೊಲೆ–ಮಾದಿಗ ಭಂಗಿ ಮುಂತಾದ ಉಚ್ಚ–ನೀಚ ಭೇದವನ್ನು ಒಪ್ಪುವುದಿಲ್ಲ, ತಾನು ಮನುಷ್ಯ, ಎಲ್ಲರನ್ನೂ ಮಾನವೀಯತೆಯಿಂದಲೇ ಕಾಣುತ್ತೇನೆ, ವಿಷಮತೆಯ ನಂಜನ್ನು ಸಮಾಜದಿಂದ ತೊಡೆದು ಹಾಕುತ್ತೇನೆ ಎಂದು ವರ್ತಿಸಬೇಕು. ಇಂಥ ಅಭಿಮಾನದಿಂದ ವರ್ತಿಸುವವನೇ ನಿಜವಾದ ಸಮತಾ ಸೈನಿಕ ದಳದ ಸೈನಿಕ ಎನಿಸಿಕೊಳ್ಳುತ್ತಾನೆ. ಒಟ್ಟೂ ಪರಿಸ್ಥಿತಿಯ ಬಗೆಗೆ ಯೋಚಿಸಿದಾಗ, ನಮ್ಮ ದಳವು ಸ್ವಾತಂತ್ರ್ಯದ ಹೋರಾಟದಲ್ಲಿ ಹಿಂದುಳಿದ ವರ್ಗದವರ ನಾಯಕತ್ವದ ಒಂದು ಯುದ್ಧದ ತುಕುಡಿಯಾಗಿದೆ ಎನ್ನುವುದನ್ನು ಮರೆಯಬಾರದು. ನೀವು ನಿಮ್ಮ ಕೃತಿಯಿಂದ ದೇಶದ ಆದರ್ಶ ಸೈನಿಕರೆಂದು ಕರೆಸಿಕೊಳ್ಳಬೇಕು. ನಿಮ್ಮನ್ನು ಕಂಡಾಗ ನೀವು ಜಗತ್ತಿನ ಅತ್ಯಂತ ಶ್ರೇಷ್ಠ ಮಾದರಿ ಎಂಬ ದೃಷ್ಟಿಯಿಂದ ಜಗತ್ತಿನ ತುಂಬ ನಿಮ್ಮ ಕೀರ್ತಿ ಹರಡಿರಬೇಕು. ಸದ್ಗುಣ, ಶಿಸ್ತು, ಸಂಘಟನೆಯಿಂದಾಗಿ ನಿಮ್ಮ ದಳ ಉಕ್ಕಿನಂತಾಗಿರಬೇಕು. ಶುದ್ಧವರ್ತನೆ ಮತ್ತು ಸಮತೆಯ ಭಾವವನ್ನು ಮನದೊಳಗೆ ಉಳಿಸಿಕೊಂಡಾಗ, ನಮ್ಮಲ್ಲಿಯ ಗಾದೆಮಾತಿನಂತೆ 'ತವೆಯ ಮಸಿ ತೊಳೆದರೆ ಅದು ಕನ್ನಡಿಯಾಗುತ್ತದೆ' ಎಂಬಂತೆ ನಡೆದುಕೊಳ್ಳಬೇಕು. ಹಲವು ಪರಿಸ್ಥಿತಿಯ ಕಾರಣದಿಂದ ತವೆಯು ಮಸಿಗಟ್ಟಿ ಕೂತಿದೆ. ಅದರಿಂದಾಗಿ ತವೆಯು ಕಪ್ಪು ಮತ್ತು ಹೊಲಸಾಗಿ ಕಾಣುತ್ತಲಿದೆ. ಆದರೆ ಸ್ವಲ್ಪ ಪರಿಶ್ರಮ ಪಟ್ಟು ಅದನ್ನು ತೊಳೆದು ಸ್ವಚ್ಛ ಮಾಡಿದಿರಿ ಎಂದಾದರೆ, ಅದಕ್ಕೆ ಮೆತ್ತಿಕೊಂಡ ಹೊಲಸನ್ನು ಶಾಶ್ವತವಾಗಿ ತೊಡೆದು ಹಾಕಿದಿರಿ ಎಂದರೆ ಕೊನೆಗೂ ಯಶಲಭಿಸಿ, ಕನ್ನಡಿಯಂತೆ ಫಳಪಳ ಹೊಳೆಯುತ್ತದೆ. ಹಾಗೆಯೇ ಪರಿಸ್ಥಿತಿಯಿಂದಾಗಿ ನಮ್ಮ ಸಮಾಜದಲ್ಲಿ ಏನಾದರೂ ಅನಿಷ್ಠ ರೀತಿ ಪದ್ಧತಿಯಿದ್ದರೆ, ಕೆರೆಯ ವ್ಯಸನ ಅಂಟಿಕೊಂಡಿದ್ದರೆ, ಪಾನ ತಂಬಾಕು ತಿಂದು ನಾವು ಸಮಯದ, ದೇಹದ ದುರುಪಯೋಗ ಮಾಡುತ್ತಿದ್ದರೆ, ನಾವು ಸಕಾಲಕ್ಕೆ ಎಚ್ಚೆತ್ತುಕೊಂಡು ವ್ಯಸನ ಮುಕ್ತರಾಗಬೇಕು. ಈ ರೀತಿ ಎಲ್ಲ ಬಗೆಯ ಅನಿಷ್ಠ ಪ್ರಸಂಗ, ರೀತಿರಿವಾಜಿನ ಮೇಲೆ ನಿಯಂತ್ರಣವನ್ನು ಹಾಕಿದರೆ ಯಾರೂ ನಮ್ಮ ಮೇಲೆ ಯಾವುದೇ ಬಗೆಯ ಆರೋಪ ಮಾಡಲಾರರು. ಯಾವುದೇ ಬಗೆಯ ಹಿಂಸೆ ನೀಡಲು ಮುಂದಾಗಲಿಕ್ಕಿಲ್ಲ. ಇಂಥ ಉಜ್ವಲ

ಧ್ಯೇಯದಿಂದ ನಾವು ಕಾರ್ಯ ಮಾಡಿದ್ದೇ ಆದರೆ, ಯಾರು ಟೀಕಿಸಿದರೂ 'ನಾಯಿ ಬೊಗಳಿದರೂ ದೇವಲೋಕ ಹಾಳಾಗುವುದಿಲ್ಲ' ಎಂಬಂತಾಗುತ್ತದೆ. ಪ್ರಾಮಾಣಿಕವಾಗಿ ಕಾರ್ಯ ಮಾಡುತ್ತ ಇದ್ದರೆ, ಬೇಕೆಂದೇ ಮಾಡಿದ ಟೀಕೆಯನ್ನು ಲೆಕ್ಕಿಸಬೇಕಿಲ್ಲ.

ಈ ಬಗೆಯಲ್ಲಿ ಸಮತಾ ಸೈನಿಕ ದಳದ ಕಾರ್ಯವು ದಿನೇದಿನೇ ಯಶಸ್ವಿಯಾಗುತ್ತಿರುವುದು ಕಂಡು ನನಗೆ ಧನ್ಯತಾಭಾವ ಮೂಡುತ್ತಿದೆ. ಆದರೆ ನಮ್ಮ ದಳದ ಈ ಲೋಕೋಪಯೋಗಿ ಕಾರ್ಯವನ್ನು ಕಂಡು ನಮ್ಮ ವಿರೋಧಿಗಳಿಗೆ, ಟೀಕೆ ಮಾಡುವವರಿಗೆ ಹೊಟ್ಟೆಕಿಚ್ಚು ಶುರುವಾಗಿದೆ. ಸದ್ಯ ಮುಂಬೈ ಕಾಂಗ್ರೆಸ್ ಸರಕಾರವು ದಿ: ೭ ನವ್ಹೆಂಬರ ೧೯೩೮ರಂದು ನಡೆದ ಒಂದು ದಿನದ ಮುಷ್ಕರದ ಕಾಲಕ್ಕೆ ಪೋಲಿಸರು ಮಾಡಿದ ಗೋಳಿಬಾರಿನ ಕುರಿತು ವಿಚಾರಣೆ ನಡೆದಿದೆ. ವಿಚಾರಣೆ ನಡೆದಾಗ ಅದರ ಕಾರ್ಯಕಲಾಪದ ಬಗೆಗೆ ಟೀಕೆಮಾಡುವುದು ನನ್ನ ಉದ್ದೇಶವಲ್ಲ. ಆದರೆ ಯಾವ ಸೈನಿಕರು ಸಮಾಜ ಸೇವೆಯಂಥ ಉಜ್ವಲ ಕಾರ್ಯ ಮಾಡಿದರೋ, ಅದರ ಕುರಿತು ಪ್ರಮುಖ ಪುಢಾರಿಗಳಲ್ಲಿ ಮುಂಬೈಯ ಮುಖ್ಯಪ್ರಧಾನ ಶ್ರೀ ಬಾಬಾಸಾಹೇಬ ಖೇರ ಮತ್ತು ಕಾಂಗ್ರೆಸಿನ ಪ್ರಮುಖ ಪುಢಾರಿ ಶ್ರೀ ವಲ್ಲಭಭಾಯಿ ಪಟೇಲರು ಹೊಗಳಿದ್ದಾರೆ.

ಮುಂಬೈ ಪ್ರಧಾನ ಮಂಡಳದ ಸಂಬಳದ ಬಗೆಗೆ ನಾನು ಮಾಡಿದ ಭಾಷಣಕ್ಕೆ ಉತ್ತರಿಸುವಾಗ ಸಚಿವ ಖೇರರು ಹೀಗೆ ಹೇಳಿದರು.–'ಸ್ವತಂತ್ರ ಕಾರ್ಮಿಕಪಕ್ಷಕ್ಕೆ ಸಹಾಯ ಮಾಡುವ ಸಮತಾ ಸೈನಿಕದಳದ ಸ್ವಯಂ ಸೇವಕರು ಸ್ವಾರ್ಥತ್ಯಾಗ ಮಾಡಿ, ಸ್ವಾಭಿಮಾನದಿಂದ ಮತ್ತು ಶಿಸ್ತಿನ ಬಲದಿಂದ ಪ್ರತಿಫಲ ಬಯಸದೆ ಮಾಡಿದ ಕಾರ್ಯದ ಅರಿವು ನನಗಿದೆ. ಈ ಸ್ವಯಂಸೇವಕರು ಉಜ್ವಲ ಬಗೆಯ ಕಾರ್ಯ ಮಾಡುತ್ತಾರಾದರೆ, ನಾವು ಅಸೆಂಬ್ಲಿಯ ಸಚಿವರು ಕೇವಲ ಸ್ವಾರ್ಥತ್ಯಾಗ ಮಾಡಿ ಪ್ರತಿತಿಂಗಳು ೫೦೦ ರುಪಾಯಿ ಸ್ವೀಕರಿಸಲು ಯಾವ ಅಡಚಣೆಯೂ ಇಲ್ಲ'. ಇದೇ ಮಾತು ಶ್ರೀ ವಲ್ಲಭಭಾಯಿ ಪಟೇಲರ ಹೇಳಿಕೆಗೂ ಅನ್ವಯಿಸುತ್ತದೆ.

ಕಳೆದ ಪ್ರಾಂತೀಯ ಅಸೆಂಬ್ಲಿಯ ಚುನಾವಣೆ ಮುಗಿದ ನಂತರ ಪುಣೆಯ ಶನಿವಾರವಾಡೆಯ ಎದುರಿಗೆ ಸ್ವಯಂಸೇವಕರ ಕಾರ್ಯದ ಬಗೆಗೆ ಭಾಷಣ ಮಾಡುವಾಗ ಶ್ರಿ ವಲ್ಲಭಭಾಯಿಪಟೇಲರು ಹೇಳಿದ್ದು ಹೀಗೆ–'ಸಂಘಟನೆ, ಶಿಸ್ತು, ಕೆಲಸದ ಬಗೆಗಿರುವ ಕಳಕಳಿ ಮತ್ತು ಅದನ್ನು ಯಶಸ್ವಿಗೊಳಿಸಿ ತೋರಿಸುವ ಕೆಚ್ಚೆದೆಯ ದೃಷ್ಟಿಯಿಂದ ಯೋಚಿಸಿದರೆ ಸ್ವತಂತ್ರ ಕಾರ್ಮಿಕ ಪಕ್ಷದ ಸ್ವಯಂ ಸೇವಕರೇ ಕಾಂಗ್ರೆಸಿನ ಸ್ವಯಂ ಸೇವಕರಿಗಿಂತ ಮಿಗಿಲಾಗಿದ್ದಾರೆ. ಅವರಲ್ಲಿರುವ ವಿಶೇಷ ಗುಣವನ್ನು ಉಳಿದ ಸ್ವಯಂ ಸೇವಕರು ಅಗತ್ಯ ಮೈಗೂಡಿಸಿಕೊಳ್ಳಬೇಕು' ವಗೈರೆ. ನಮ್ಮ ಸಮತಾ ಸೈನಿಕ ದಳದಲ್ಲಿ ೯೦%ಭಾಗ ಮಹಾರ ಯುವಕರೇ ತುಂಬಿಕೊಂಡಿದ್ದಾರೆ. ಈ ದೇಶದಲ್ಲಿ ಆಂಗ್ಲಸರಕಾರದ ಆಡಳಿತ ಶುರುವಾದಾಗಿನ ಇತಿಹಾಸವನ್ನು ಅವಲೋಕಿಸಿದರೆ ಎಂದರೆ, ಪ್ರಜೆಗಳ ಹಣವನ್ನು ತಾಲೂಕಿನ ಬೊಕ್ಕಸಕ್ಕೆ ಒಯ್ದು ತುಂಬುವವರೆ ಮಹಾರ ಜನರು ಎನ್ನುವುದು ಗೊತ್ತಾಗುತ್ತದೆ. ಕಳೆದ ೧೫೦–೨೦೦ ವರ್ಷಗಳಲ್ಲಿ ಈ ವಿಷಯದಲ್ಲಿ ಒಬ್ಬ ಮಹಾರನೂ ಅಪ್ರಮಾಣಿಕತನ ತೋರಿದ ಪುರಾವೆಯಿಲ್ಲ. ರಾತ್ರಿ ಅಪರಾತ್ರಿ, ಮಳೆಬಿಸಿಲು ಎನ್ನದೆ ಸಾವಿರಾರು ರುಪಾಯಿಯನ್ನು ತೆಗೆದುಕೊಂಡು ಹೋಗಿ ಪ್ರವಾಸ ಮಾಡಿ ಪ್ರಜೆಗಳ ಈ ಹಣವನ್ನು ಮಹಾರರು ಸರಕಾರದ ತಿಜೋರಿಯಲ್ಲಿ ತುಂಬಿ ತಮ್ಮ ಪ್ರಾಮಾಣಿಕತೆಯನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಹೀಗೆ ಎಲ್ಲ ಸಂಗತಿಗಳನ್ನು ಯೋಚಿಸಿದಾಗ ಮುಂಬೈಯ ಕಾರ್ಮಿಕ ಮುಷ್ಕರದ ಗೋಳಿಬಾರಿನ ವಿಚಾರಣ ಕಮಿಟಿಯ ಎದುರು ಮಹಾರರ ಮೇಲೆ ಮಾಡಲಾದ ಅಪ್ರಾಮಾಣಿಕತೆಯ ಮತ್ತು ಗೈರು ವರ್ತನೆಯ

ಆರೋಪವು ಎಷ್ಟು ಸತ್ಯವಾದುದು ಎನ್ನುವುದರ ನಿರ್ಣಯವಾಗುವ ಸಮಯ ಬರದೇ ಇರುವುದಿಲ್ಲ. ಬಡತನದಿಂದ ತೊಳಲಾಡುವ ಈ ಸಮಾಜದ ಮನುಷ್ಯನ ಕೈಯಲ್ಲಿ ಸಾವಿರಾರು ರುಪಾಯಿ ಇರುವಾಗ ಯಾವುದೇ ಬಗೆಯ ವಂಚನೆ ಮಾಡಲಾರ ಎನ್ನುವುದು, ಆ ಮಹಾರ ಸಮಾಜದ ಚಾರಿತ್ರ್ಯ ಅದೆಷ್ಟು ಉಜ್ವಲವಾಗಿದೆ ಎಂದು ನಾನು ಹೊಗಳಬೇಕಾಗಿಲ್ಲ. ಜನತೆ ಈ ಎಲ್ಲ ವಿಷಯದ ಬಗೆಗೆ ಯೋಚಿಸುವಷ್ಟು ಸಮರ್ಥವಾಗಿದೆ. ಅಂಥದರಲ್ಲೂ ಸಮತಾ ಸೈನಿಕ ದಳದಲ್ಲಿ ಕೆಲಸ ಮಾಡುವ ಕೆಲ ಸ್ವಯಂಸೇವಕರು ಮಿಲಿಟ್ರಿಯಲ್ಲಿ ಕೆಲಸ ಮಾಡಿದವರೇ ಆಗಿದ್ದಾರೆ. ಅವರಿಗೆ ಕಾನೂನು, ಶಿಸ್ತು ಚೆನ್ನಾಗಿ ಗೊತ್ತಿದೆ. ಹೀಗಿರುವಾಗ ದಳದ ಸ್ವಯಂಸೇವಕರ ಮೇಲೆ ಆರೋಪ ಮಾಡುವುದು ದಾರ್ಷ್ಟ್ಯದ ಮತ್ತು ತುಂಟತನದ ಕೆಲಸವೆಂದು ಭಾವಿಸಬೇಕಾಗುತ್ತದೆ.

ಕೊನೆಗೆ ಪ್ರತಿಯೊಬ್ಬ ಸೈನಿಕನಿಗೂ ನಾನು ಹೇಳಬಯಸುವುದೇನೆಂದರೆ, ಸೈನಿಕನೆಂಬ ಪದ ಬಹಳ ದೊಡ್ಡದು. ನಾವು ಸೈನ್ಯದಲ್ಲಿರುವ ಚಾಕರಿ ಮನುಷ್ಯರಲ್ಲ ಎಂಬುದನ್ನು ಸಿದ್ಧಮಾಡುವ ಪದವಿದು. ನಿಮ್ಮ ಕೆಲಸ ಮಾಡುವಾಗ ನೀವೆಲ್ಲ ಸೈನ್ಯದಲ್ಲೇ ಇದ್ದೀರಿ ಎಂಬ ಭಾವನೆ ನಿಮ್ಮ ಮನದಲ್ಲಿರಲಿ. ಸಭೆ ನಡೆದಾಗ ಆಗಮಿಸಿದ ಅಪಾರ ಜನಸಮುದಾಯದ ಯೋಗ್ಯ ಬಂದೋಬಸ್ತ ಮಾಡುವಾಗ, ತಾವು ಸೈನಿಕರು ಎಂಬುದು ನಿಮ್ಮ ಲಕ್ಷ್ಯದಲ್ಲಿರಲಿ. ಜನಸಮುದಾಯ ಅನಾಗರಿಕರಂತೆ ವರ್ತಿಸಬಹುದು. ಅವರ ಕೃತಿಗೂ ಮತ್ತು ನಿಮ್ಮ ಕಾರ್ಯಕ್ಕೂ ಅಜಗಜಾಂತರವಿದೆ. ಆದ್ದರಿಂದ ಸೈನಿಕನೆಂದರೆ ಅವನು ಶಿಸ್ತಿನ ಸಿಪಾಯಿ. ಯಾವುದೇ ಅಧಿಕಾರಿಯ ಆಜ್ಞೆಯು ತಪ್ಪಾಗಿದ್ದರೂ ಅವನ ವಿರುದ್ಧ ವಟಗುಡುವದಾಗಲಿ, ಅಥವಾ ಪ್ರತೀಕಾರ ಮಾಡುದಾಗಲಿ ಸಾಧ್ಯವಿಲ್ಲ. ಕೇವಲ ಶಿಸ್ತಿಗಾಗಿ ಸಮಯ ಸಂದರ್ಭ ನೋಡಿ ಎಲ್ಲ ಬಗೆಯ ಪ್ರಸಂಗಗಳನ್ನು ಧೈರ್ಯದಿಂದ ಎದುರಿಸುವ ನಿಮ್ಮ ಸಂಕಲ್ಪವನ್ನು ಇನ್ನು ಮುಂದೆಯೂ ಉಜ್ವಲ ಸಮಾಜ ಸೇವೆಯಿಂದ ಪೂರ್ಣಗೊಳಿಸಿ ಎಂದಷ್ಟೇ ನಾನು ನಿಮಗೆ ಹೇಳಬೇಕಾಗಿರುವುದು.

# ವಿಷಯಸೂಚಿ

## ಅ


ಅಂಡಮಾನ್ ೩೩೮
ಅಂತುಜೀ ನಾಭಾಜಿ ಮಡಕ್‌ವಾರೇ ೫೩೧
ಅಂಬನಾಕ್ ಕಾರ್‌ನಾಕ್ ೩೯೩
ಅಂಬಾದೇವಿ ೨೧೬, ೨೧೭
ಅಂಬಾಲ್ಲಾ ೧೩೯
ಅಂಬೇಡ್ಕರ್ ೬೨, ೬೩, ೬೪, ೬೭, ೮೧, ೮೪, ೮೫, ೮೬, ೮೭, ೮೮, ೯೨, ೧೧೧, ೧೧೩, ೧೫೩, ೧೫೪, ೧೫೫, ೧೬೦, ೧೬೧, ೧೬೩, ೧೬೪, ೧೮೫, ೧೮೬, ೧೯೯, ೨೦೬, ೨೨೨, ೨೮೫, ೨೮೬, ೩೦೭, ೩೦೮, ೩೧೧, ೩೧೨, ೩೨೧, ೩೪೦, ೩೬೭, ೩೬೯, ೩೮೩, ೩೮೫, ೪೦೧, ೪೦೪, ೪೦೫, ೪೦೬, ೪೦೭, ೪೧೧, ೪೧೬, ೪೨೧, ೪೨೩, ೪೨೪, ೪೨೮, ೪೨೯, ೪೩೦, ೪೩೧, ೪೩೨, ೪೩೩, ೪೩೪, ೪೪೯, ೪೫೭, ೪೬೭, ೪೬೮, ೪೭೩, ೪೭೭, ೪೮೧, ೪೮೪, ೪೮೫, ೪೮೬, ೪೮೭, ೪೮೮, ೪೮೯, ೪೯೦, ೪೯೧, ೪೯೨, ೪೯೩, ೪೯೪, ೫೦೪, ೫೦೮, ೫೨೪, ೫೨೬, ೫೨೮, ೫೩೨, ೫೩೯, ೫೪೦, ೫೪೧, ೫೪೩, ೫೪೪, ೫೪೫, ೫೪೬, ೫೫೫, ೫೫೬, ೫೫೭, ೫೫೮, ೫೫೯, ೫೬೦, ೫೬೧
ಅಂಬೇಯ ೨೫೬
ಅಕೋಟ್ ೪೭೪
ಅಕೋಟೆ ೫೮
ಅಕೋಲ ೩೫೧, ೩೫೨, ೪೭೩
ಅಕ್ಬರ್ ೧೫೦
ಅಕ್ಷೋಭ್ಯ ತೀರ್ಥ ೫೪೧
ಅಗರ್‌ಕರ್ ೩೨೩, ೪೮೨, ೫೨೨, ೫೨೭
ಅಗರ್‌ಕರ್ ಗೋಪಾಲರಾವ್ ಗಣೇಶ್ ೫೨೨
ಅಗಸ್ತ್ಯ ೧೮೦
ಅಚರೇಕರ್ ೪೪೯
ಅಚ್ಯುತಪ್ರೇಕ್ಷಣಾಚಾರ್ಯ ೫೪೧
ಅಚ್ಯುತ ಬಳವಂತ ಕೋಲಟ್ಕರ್ ೮೬, ೫೨೩, ೫೨೪, ೫೩೦
ಅಜಮತ್ ಮಿಯಾ ಭಾಳಾಪುರ ೪೭೪
ಅಜಮೀರ್ ೫೩೫
ಅಜಾಮಿಳ ೪೨೫
ಅಡ್ಸನ್ ಎಚ್. ಎಲ್. ೩೮೧
ಅಥೆನ್ಸ್ ೪೧೨
ಅನಂತರಾವ್ ಚಿತ್ರೆ ರಾ. ೨೯೦
ಅನಂತರಾವ್ ವಿನಾಯಕ್ ಚಿತ್ರೆ ೫೨೭
ಅನಂತೇಶ್ವರ ೫೪೧
ಅನ್ನಪೂರ್ಣಾಬಾಯಿ ಆಪ್ಟೆ ೫೫೭
ಅಪಾಜಿ ಹರಿ ೫೪೭
ಅಬ್ದುಲ್ ಲತೀಫ್ ೩೪೦
ಅಬ್ರಾಹಾಂ ಲಿಂಕನ್ ೨೭೬, ೫೫೦
ಅಭೀರ್ ೫೫೨
ಅಮರಸಿಂಗ್ ೯೯
ಅಮರಾವತಿ ೨೧೬, ೨೧೭, ೨೫೬, ೨೫೭, ೨೫೮, ೨೫೯, ೨೬೫, ೫೩೧, ೫೩೪
ಅಮೀರ ಆಲಿ ೫೪೪
ಅಮೃತರಾವ್ ರಣಖಾಂಬೆ ೪೩೧
ಅಮೃತಲಾಲ್ ಠಕ್ಕರ್ ೫೦೮
ಅಮೃತ್‌ಕರ್ ೨೯೦
ಅಮೃತ್‌ಸರ್ ೯, ೪೮

ಅಮೆರಿಕನ್ ೪೭೮, ೫೧೧, ೫೫೮
ಅಮೆರಿಕಾ ೨೦, ೪೬, ೧೮೩, ೨೪೫, ೨೭೬, ೪೭೮, ೫೧೮, ೫೫೦
ಅಮೇರಿಕನ್ ೧೮೨
ಅಯೋಧ್ಯಾ ೫೧೨
ಅಯ್ಯಂಗಾರ್ ೩೩೭
ಅರಬ್ ೧, ೫೨೫
ಅರಬರು ೩೮೯೧, ೩೯೨
ಅರಬ್‌ಸ್ಥಾನ ೫೨೫
ಅರ್ನೆಸ್ಟ್ ವೂಟ್ ೪೭೮
ಅಲಹಾಬಾದ್ ೪೯೮
ಅಲಾವಿ ೩೮೯, ೪೪೨
ಅಲಿಬಾಗ್ ೧೫೩, ೫೫೭
ಅಲೆಕ್ಸಾಂಡರ್ ೪೨೫
ಅಲೆಕ್ಸಾಂಡರ್ ರಾಬಟ್ಸ್ನ್ ಎನ್. ಎ ೪೨೫
ಅಲೆಕ್ಸಾಂಡರ್ ರಾಬರ್ಟ್ಸನ್ ಎನ್. ಎ ೪೨೫
ಅಲ್ತೇಕರ್ ಎ.ಎಸ್ ೪೧೨
ಅಹಮದಾಬಾದ್ ೩೮೫
ಅಹಮದ್ ನಗರ ೩೨೯, ೩೭೫, ೩೮೦, ೩೮೧, ೪೧೦, ೪೧೭, ೫೩೮, ೫೫೭
ಅಹಿರ್ವಾರ್ ೫೪೮

**ಆ**

ಆಂತೊವನ್ ೩೮೮
ಆಂಬೆ ೪೨೯
ಆಗಾಖಾನ್ ೫೪೪
ಆಗ್ರಿ ೨೮೧
ಆಚಾರ್ಯ ಘಾಸೆ ೪೮೪, ೪೮೪, ೫೪೫
ಆಚಾರ್ಯ ರಮಾನಂದ ೫೪೫
ಆಜಾದ್ ಹಿಂದ್ ಸೇನೆ ೫೪೦
ಆಠವಲೆ ರಾ. ೨೬೩
ಆತ್ಮಾರಾಮ ಪಾಂಡುರಂಗ ತರ್ಖಡ್ ಡಾ. ೫೩೭
ಆನಂದತೀರ್ಥ ೫೪೧
ಆನಂದರಾವ್ ಬಾಬಾಜಿ ದೇಶಪಾಂಡೆ ೩೮೦
ಆನಂದೀಬಾಯಿ ಸಾಹೇಬ ೪೬೬
ಆನಿಬೆಸೆಂಟ್ ೫೨೧
ಆಪಟೆ ಡಾ. ೨೪೮
ಆಫ್ರಿಕಾ ೪೩, ೪೩, ೧೧೦, ೨೦೨, ೨೦೩, ೨೦೪, ೩೧೭
ಆರ್ಕಾಟು ೩೯೦
ಆರ್ಯ ೧೩೮, ೧೮೦, ೨೧೮, ೩೮೮, ೫೧೪, ೫೩೦
ಆರ್ಯಧರ್ಮ ೨೬೫, ೩೧೫, ೪೬೭, ೫೪೨
ಆರ್ಯನ್ ೧೭
ಆರ್ಯಸಮಾಜ ೨೬೫, ೩೩೭, ೩೩೮
ಆರ್ಯಾವರ್ತ ೩೭೩
ಆಲಿವ್ಹಿಯರ್ ೨೦೨, ೨೦೩
ಆಲೀಬಾಗ್ ೫೨೮
ಆಲೆನ್ ಆಕ್ಟೇವಿಯನ್ ಹ್ಯೂಮ್ ೫೪೭
ಆಲ್ಬರ್ನಿ ೪೧೩
ಆವಳಸಕರ್ ಶಾಂ. ವಿ. ೫೪೬
ಆಸಫ್ ಆಲಿ ೫೨೧
ಆಸೀರಿಯ ೩೫೨
ಆಳಂದ ೫೩೪
ಆಳ್ವಾರ ೫೫೫

**ಇ**

ಇಂಗ್ಲಿಷ್ ೧, ೯, ೪೬, ೧೬೯, ೧೮೨, ೨೦೪, ೩೦೪, ೩೧೩, ೩೧೯, ೩೨೦, ೩೩೮, ೩೫೪, ೩೯೦, ೩೯೧, ೩೯೨, ೩೯೩, ೩೯೫, ೪೧೭, ೪೧೮, ೪೩೨, ೪೩೯, ೪೪೭, ೪೭೬, ೫೦೧, ೫೦೨, ೫೧೧, ೫೨೨, ೫೨೩, ೫೨೫, ೫೨೬, ೫೨೭, ೫೩೨, ೫೩೫, ೫೩೭, ೫೪೪, ೫೪೫, ೫೪೬, ೫೪೮, ೫೫೪, ೫೬೦
ಇಂಗ್ಲೀಷರು ೭, ೩೯೦, ೩೯೧, ೩೯೩, ೪೧೮, ೪೪೦, ೫೩೦, ೫೪೪, ೫೪೬, ೫೫೬

ಇಂಗ್ಲೆಂಡ್ ೩೦, ೩೧, ೭೭, ೨೪೬, ೩೪೭, ೩೪೮, ೪೧೯, ೪೪೨, ೪೯೮, ೪೯೯, ೫೧೮, ೫೨೫, ೫೨೬, ೫೩೬, ೫೪೫, ೫೫೬, ೫೫೭

ಇಂದಿರಾ ಗಾಂಧಿ ೪೯೯

ಇಂದುಪ್ರಕಾಶ್ ೬೩

ಇಂದೋರ್ ೧೫೭

ಇಟಲಿ ೨೦

ಇಟಾಲಿಯನ್ ೧, ೩೧೩

ಇಡಾ ೫೧೩

ಇಡಾಪಿಡಾ ೫೧೨

ಇತಿಯೋಪಿಯಾ ೫೦೦

ಇಲಿನಾಯ್ಸ್ ೫೫೦

ಇಸ್ಲಾಂ ೧೨೫

## ಈ

ಈಜಿಪ್ತ್ ೩೫೨

ಈರೋಡ್ ೫೧೮

ಈಸೋಪನ ಕತೆಗಳು ೫೧೨

## ಉ

ಉಖಡೆ ೫೪೬

ಉಡುಪಿ ೫೪೧

ಉತ್ತಮರಾವ್ ಕದಮ್ ೪೮೪, ೪೯೨, ೪೯೩

ಉದಯ್ ೨೫೮

ಉದ್ಗಾಂವಕರ್ ಡಾ. ೧೬೦, ೧೬೧, ೧೬೨, ೨೪೮, ೫೨೨

ಉರಸ್ಕುರ್ ೫೩೨

## ಋ

ಋಗ್ವೇದ ೧೬೮

## ಎ

ಎಡಿನ್‌ಬರೋ ೧೨೭, ೨೦೩, ೫೪೦

ಎಲ್ಫಿನ್‌ಸ್ಟನ್ ೩೭೯, ೪೧೬, ೪೫೩, ೫೨೮, ೫೩೦

## ಏ

ಏಕನಾಥ್ ೫೨೨, ೫೩೭

ಏಕನಾಥ ೨೦೨, ೫೫೨

ಏಡನ್ ೩೪

ಏಲಮಗಾರ್ ೫೫೧

ಏಷಿಯ ೫೨೫

ಏಷಿಯಾಡ್ ೫೦೨

ಏಷ್ಯಾಟಿಕ್ ೪೯೬, ೪೯೭

ಏಸು ೩೧೩

## ಐ

ಐದಾಳೆ ೪೯೨

## ಒ

ಒರಿಸ್ಸಾ ೩೮೮, ೫೨೭

## ಓ

ಓಕ್ ೪೭೩

## ಔ

ಔರಂಗಜೇಬ ೧೫೦, ೫೨೨, ೫೫೪

## ಕ

ಕಚ್‌ಖೌನ್ ಮ್ಹಸೋಬಾ ೧೬೩

ಕಠಾನ ೫೪೮

ಕದೀಮ್‌ಪಾಟೀಲ ೫೩೩

ಕದ್ರೇಕರ್ ಭಾಸ್ಕರ್ ರಘುನಾಥ ೪೮೪, ೪೮೫, ೪೮೮, ೫೬೦, ೫೬೧

ಕನ್ಯಾಕುಬ್ಜ ೩೫೨

ಕಪಿಲವಸ್ತು ೫೩೮

ಕಪಿಲ್‌ದೇವ್ ಮಾಲವೀಯ ೧೪೫, ೧೪೬

ಕಬೀರ್ ೫೪೮, ೫೪೯, ೫೫೨

ಕಮಲಾ ನೆಹರು ೪೯೯

ಕಮಲ್ ಕೌಲ್ ೪೯೯
ಕರಂದೀಕರ್ ಜನಾರ್ಧನ ಸಖಾರಾಮ್ ೨೮೧, ೫೨೨
ಕರಾಚಿ ೩೭೧
ಕರ್ಜನ್ ೭೭, ೧೧೭, ೫೨೨, ೫೪೪
ಕರ್ನಾಟಕ ೫೫೪
ಕರ್ಹಾಢ್ ೫೩೪
ಕಲಕತ್ತಾ ೧೪೧, ೪೮೭, ೫೨೧, ೫೨೬, ೫೪೦, ೫೬೦
ಕಳಂಬಿ ೫೫೪
ಕಾಂಕರವ್ ೫೫೧
ಕಾಂಗ್ರೆಸ್ ೯, ೧೯, ೨೯, ೪೧, ೧೩೯, ೧೪೦, ೩೧೫, ೩೧೬, ೩೨೪, ೩೨೭, ೪೨೨, ೪೪೦, ೪೪೧, ೪೪೨, ೪೪೩, ೪೫೦, ೪೭೬, ೪೮೭, ೪೯೬, ೪೯೭, ೪೯೯, ೫೦೦, ೫೦೧, ೫೦೨, ೫೧೮, ೫೨೧, ೫೨೨, ೫೨೪, ೫೨೯, ೫೩೦, ೫೩೧, ೫೪೦, ೫೪೪, ೫೫೦, ೫೫೬
ಕಾಂಚಿಪೂರ್ಣ ೧೩೬
ಕಾಂಬಳೆ ಗೋ.ಗೋ. ೪೯೨
ಕಾಂಬಳೆ ಭಾನುದಾಸ್ ಗುಂಡೋರಾವ್ ೧೦೭, ೧೦೮, ೩೯೯, ೪೯೨, ೫೪೬
ಕಾಕಡಾರತಿ ೪೬೧
ಕಾಗಲ್ ೨೭೭
ಕಾಚೀಪುರ ೫೫೫
ಕಾಠೆವಾಡ ೧೩೩
ಕಾಣೆ ೨೫೨
ಕಾಣೆ ಪಾಂಡುರಂಗ ವಾಮನ ೫೨೩
ಕಾನಜಿ ದ್ವಾರಕಾ ದಾಸ್ ೪೧೯
ಕಾಬೂಲು ೪೯೭
ಕಾಮತ್ ನಾ. ೩೭, ೩೮
ಕಾಮಾಟಿಪುರ ೨೫೯, ೫೬೦
ಕಾರಖಾನೀಸ್ ೫೪೭
ಕಾರಹುಣ್ಣಿಮೆ ೪೭೩
ಕಾರ್ತೀಕ ೫೧೩
ಕಾರ್ಲ್ ಮಾರ್ಕ್ಸ್ ೪೭೭
ಕಾಶಿ ೩೫೨, ೩೫೫, ೫೧೨, ೫೧೫, ೫೪೩, ೫೪೮, ೫೫೩
ಕಾಶೀನಾಥ್ ತ್ರ್ಯಂಬಕ್ ೫೩೧
ಕಾಶ್ಮೀರಿ ೪೯೮
ಕಾಸಿಮ್‌ಬಜಾರ್ ೧೩೯, ೧೪೭, ೫೩೨
ಕಾಸಿಯಾ ೫೩೫
ಕಾಳಾರಾಮ್ ೪೩೦
ಕಿಸನ್ ಫಾಗುಜೀ ಬಂದ್‌ಸೋಡೆ ೫೩೧
ಕುಂಭಕೋಣ ೧೩೬
ಕುಜಾಗಿರಿ ೫೧೩
ಕುಬೇರ ೧೧೮
ಕುಮಾರ್ ವಿನಯಮಂದಿರ ೨೫೦, ೨೫೧
ಕುರೀಲ್ ೫೪೮
ಕುಲಾಬಾ ೮೪, ೮೫, ೮೬, ೮೮, ೧೫೮, ೨೧೦, ೨೭೯, ೨೮೦, ೨೮೧, ೨೮೫, ೨೮೮, ೨೯೧, ೩೧೬, ೩೩೨, ೫೨೮, ೫೪೬
ಕುಲಾಬಾ ಸಮಾಚಾರ್ ೨೮೦
ಕೂಚಬಿಹಾರ್ ೫೫೮
ಕೃಷ್ಣರಾವ್ ೪೨೯
ಕೃಷ್ಣಲಾಲ್ ಜವೇರಿ ೫೫೮
ಕೃಷ್ಣಾಜಿ ೫೧೫
ಕೆನ್ಯಾ ೩೭೩
ಕೆಲ್ಪ್ ೩೪೭
ಕೇಂಬ್ರಿಜ್ ೪೭೮, ೪೯೮, ೫೩೫, ೫೩೬, ೫೪೦, ೫೪೪
ಕೇತ್ಕರ್ ೫೬೦
ಕೇಶವ ೪೨೭
ಕೇಶವಚಂದ್ರ ೫೫೭, ೫೫೮
ಕೇಶವರಾವ್ ೪೦೯, ೪೧೦, ೪೮೪, ೫೨೯, ೫೩೧, ೫೩೯
ಕೇಶವರಾವ್ ಜಾಣೂಜಿ ಖಂಡಾರೆ ೫೩೧

ಕೇಶವರಾವ್ ಠಾಕ್ರೆ ೪೮೪
ಕೇಶವರಾವ್ ಮಾರುತಿರಾವ್ ಜೇಧೆ ೪೦೯, ೪೧೦, ೪೨೧, ೪೮೩, ೫೨೯
ಕೇಶವ ಸೀತಾರಾಮ ಠಾಕ್ರೆ ೪೮೧
ಕೇಶವ್ ಚಂದ್ರಸೇನ್ ೧೬೬, ೫೫೭
ಕೇಸರಿ ೧೪, ೨೬, ೨೭, ೪೧, ೪೨, ೪೩, ೪೪, ೫೦, ೮೧, ೧೦೮, ೧೦೯, ೧೧೦, ೧೧೧, ೧೧೨, ೧೧೩, ೧೫೬, ೧೭೦, ೧೮೫, ೨೮೧, ೩೦೯, ೩೧೦, ೪೮೨, ೫೨೨, ೫೨೩
ಕೇಸರಿಕರ್ ೧೫೧
ಕೇಳಕರ್ ಎನ್.ಸಿ. ೪೮೭
ಕೇಳ್ಕರ್ ಎನ್.ಸಿ. ೩೭೩, ೪೮೭, ೫೨೨
ಕೈಝುರ್ ೯೧, ೯೨
ಕೈಫಿಯತ್ತು ೪೧೬
ಕೊಂಕಣಿ ೪೨೯
ಕೊಂಡಾಜಿ ರಾಮಜಿ ಮಾಸ್ತರ್ ೬
ಕೊರೆಗಾವ್ ೩೯೧, ೩೯೨
ಕೊಲಂಬಿಯಾ ೫೫೦
ಕೊಲಾಬಾ ೭೬, ೨೮೩, ೨೮೪, ೨೮೬, ೨೮೮
ಕೊಲ್ಹಾಪುರ ೧೨೫, ೨೭೬, ೨೭೭
ಕೊಲ್ಹಾಪುರ ೨೭೫, ೩೬೯, ೪೪೯, ೪೬೬, ೪೭೬, ೫೨೫, ೫೨೭, ೫೨೮, ೫೨೯, ೫೫೪
ಕೋಂಡಿರಾಮ್ ಮಾಣಕೋಜಿ ರೋಕಡೆ ೬
ಕೋತವಾಲ ೨೨೩
ಕೋರೆಗಾಂವ್ ೧೨೫, ೩೯೦, ೩೯೧, ೩೯೩
ಕೋಲಕತ್ತಾ ೪೭೮, ೪೮೭
ಕೋಷ್ಟಿ ೩೭೯
ಕೋಸಾರೆ ೫೩೧
ಕೋಹಾಟ್ ೧೪೧
ಕೋಳಿವಾಡ ೪೭೭
ಕೋಳೀ ೨೮೧
ಕೌಟಿಲೀಯ ೫೨೨, ೫೩೦
ಕ್ಯಾಥರೀನ್ ಮೇಯೋ ೪೭೮, ೫೬೦
ಕ್ಯಾಥರೀನ್ ಮ್ಯಾಥ್ಯೂ ೪೧೩
ಕ್ಯಾಥೋಲಿಕ್ ೨೧೫
ಕ್ರಾನಿಕಲ್ ೧೬
ಕ್ರಿಶ್ಚಿಯನ್ ೩೩, ೪೫, ೧೦೬, ೧೫೯, ೧೬೭, ೧೮೨, ೨೦೪, ೨೦೫, ೨೦೮, ೨೬೨, ೩೧೩, ೩೨೪, ೩೪೮, ೩೫೧, ೩೬೫, ೩೬೭, ೩೭೫, ೩೭೬, ೩೭೭, ೩೭೮, ೩೭೯, ೩೮೦, ೩೮೧, ೩೮೨, ೩೮೫, ೩೯೬, ೪೦೭, ೪೧೨, ೪೧೫, ೪೪೭, ೪೬೦, ೪೬೧, ೪೭೩, ೫೪೫, ೫೫೭, ೫೫೮
ಕ್ರಿಸ್‌ಮಸ್ ೯

## ಖ

ಖಂಡೂ ಬೋರೀಕರ್ ೩೯೪
ಖಂಡೇರಾವ್ ಮೋರೇಶ್ವರ ೫೪೭
ಖಜನಚಂದ್ ೯೯
ಖನ್ನಾ ೯೯
ಖರ್ಡೆ ೫೨೩, ೫೨೪
ಖರ್ಡ್ಯಾ ೫೫೪
ಖಲೀಫ ೫೨೫
ಖಾದಿಜಾ ಬೀಬಿ ೨೧೫
ಖಾನ್ ೧೫೦, ೧೮೮, ೨೦೮, ೨೧೨, ೨೧೩, ೨೧೪, ೨೧೫, ೨೮೯, ೫೨೪
ಖಾನಾಪುರಕರ್ ದ.ಪು. ಡಾ. ೩೮೮
ಖುನ್ಯಾ ಮುರಲೀಧರ್ ೧೬೩
ಖೇಡೇಹಳ್ಳಿ ೫೨೩

## ಗ

ಗಂಗಾಧರ್‌ರಾವ್ ಸಹಸ್ರಬುದ್ಧೆ ೨೯೦
ಗಂಗಾಬಾಯಿ ೩೮೭
ಗಂಗಾವಾಡಿ ೫೬೧
ಗಜನಾಕ್ ಧರ್ಮನಾಕ್ ೩೯೩
ಗಣನಾಕ್ ಲಖ್‌ನಾಕ್ ೩೯೩

ಗಣವೀರ ರತ್ನಾಕರ ೫೮, ೫೫೯
ಗಣೇಶ ೪೪೩
ಗಣೇಶೋತ್ಸವ ೫೭, ೨೪೭, ೨೫೦, ೩೨೬
ಗಯಾ ೩೯೮
ಗರೀಬಾಲ್ಡಿ ೫೪೯
ಗರ್ಜಾಸಿಂಗ ೯೯
ಗವಯಿ ಗಣೇಶ ಆಕಾಜಿ ೪೯೨, ೪೯೩, ೫೩೦, ೫೩೧
ಗಾಂಧಿ ೮೧, ೮೨, ೧೪೬, ೧೯೮, ೨೫೦, ೨೮೪, ೨೮೯, ೨೯೩, ೩೧೫, ೩೧೬, ೩೨೭, ೩೯೫, ೪೩೯, ೪೪೦, ೪೪೧, ೪೪೪, ೪೫೦, ೪೯೯, ೫೦೦, ೫೦೨, ೫೧೮, ೫೨೫, ೫೪೪
ಗಾಂವ್‌ನಾಳ್ ೨೨೨
ಗಾಡ್ಗಿಲ್ ೩೫೭
ಗಾಡ್ಗೀಳ್ ನರಹರ್ ವಿಷ್ಣು ೫೨೪
ಗಾಯಕ್‌ವಾಡ್ ೨೦೯
ಗಾಯಕ್‌ವಾಡ ೧೬೫
ಗಾಯಕ್‌ವಾಡ್ ಭಾ. ಕೃ. ೪೩೬
ಗಾಯಕ್‌ವಾಡ್ ಮ. ಕೃ ೫೦೯
ಗಾರ್ಟಿಜನ್ ೫೪೦
ಗಿರಿಗಾವ್ ೫೫೭
ಗೀತಾಂಜಲಿ ೩೯೫
ಗೀತಾರಹಸ್ಯ ೪೮೧, ೫೩೦
ಗುಂಡ್ಯಾ ಭಾವೂ ೫೩೦
ಗುಜರಾತ್ ೪೯೧, ೪೯೨
ಗುಜರಾತಿ ೪೫೪, ೪೭೬, ೫೫೮
ಗುಜ್ಜರು ೪೩೭
ಗುರು ನಾನಕ ೫೪೯, ೫೫೨
ಗುರುಬಾಣಿ ೫೪೯
ಗುರ್ಜರ ೩೫೨
ಗುಲಾಬ್ ಖಾನ್ ಬಶೀರುದ್ದಿನ್ ಖಾನ್ ೫೨೪
ಗುಲಾಮ ಅಲಿ ೩೭೬, ೫೨೧
ಗುಲ್ಬರ್ಗಾ ೧೪೧
ಗೂಢಗುಂಜೀತ ೩೯೫
ಗೊಂಡ–ಖೊಂಡ ೧
ಗೋಂದ ೫೩೪
ಗೋಂದಕರ್ ೫೧೫
ಗೋಣಾಬಾಯಿ ೫೩೪
ಗೋದ್‌ನಾಕ್ ಕೋಠೇನಾಕ್ ೩೯೩
ಗೋಪಾಲಕೃಷ್ಣ ಗೋಖಲೆ ೨೨, ೧೯೩, ೨೮೧, ೪೯೮, ೫೨೫, ೫೩೬
ಗೋಪಾಲಬುವಾ ವಲಂಗ್‌ಕರ್ ೩೬೯
ಗೋಪಾಲರಾವ್ ಹರಿ ದೇಶಮುಖ್ ೩೪೫, ೪೩೬, ೫೨೨, ೫೩೨, ೫೩೬
ಗೋಪಾಲ ಶಂಕರ್ ೫೧೫
ಗೋಪಾಲ್‌ನಾಕ್ ಬಾಳನಾಕ್ ೩೯೩
ಗೋಪೀನಾಥ ಪ್ರಧಾನ್ ೪೮೪
ಗೋವರ್ಧನಪುರ ೫೪೮
ಗೋವಿಂದ ಚಿಮಾಜಿ ಭಾಟೆ ೫೨೯
ಗೋವಿಂದಶೇಟ್ ಸೌದಾಗರ್‌ಕರ್ ೫೩೪
ಗೋವಿಂದಾಚಾರ್ಯ ೫೫೩
ಗೌಡಪಾದಾಚಾರ್ಯ ೫೫೩
ಗೌಡಾಲಿ ೫೩೩
ಗೌತಮ್ ಬುದ್ಧ ೫೩೮, ೫೪೨
ಗ್ರಾಹಮ್ ವಾಲ್ಸ್ ೪೮
ಗ್ರೀಕ್ ೭
ಗ್ರೀಸ್ ೩೫೨
ಗ್ವಾಲಿಯರ್ ೧೫೭, ೫೫೭

## ಘ

ಘನಶ್ಯಾಮ ತಳವಟ್ಕರ್ ೫೪೬
ಘಾಟಕಾಂಬಳೆ ರಾ. ೭೧, ೭೨
ಘೊಲಪ್ ೪೫೩
ಘೋಡೇಶ್ವಾರ್ ಪ್ರಾ. ದೇವೀದಾಸ್ ೫೬೦
ಘೋರ್ಪಡೆ ೧೯೭, ೧೯೭, ೧೯೮
ಘೋರ್ಪಡೆ ವಾ.ನ. ೧೯೭, ೧೯೮, ೪೨೧,

೪೬೧, ೫೨೬
ಫೋಲಪ್ ಜ್ಞಾ. ಶ್ರು. ೪೧೯, ೪೫೩
ಫೋಲೆ ವಿ.ರಾ. ೪೨೮

**ಚ**

ಚಂದಾವರ್ಕರ್ ೪೮೯, ೪೯೦, ೪೯೧, ೫೫೮
ಚಂದ್ರಾಪುರ ೫೬೦
ಚಡಾರ್ ೫೪೮
ಚವ್‌ದಾರ್ ೭೬, ೮೬, ೮೮, ೮೯, ೧೦೦, ೧೧೩, ೧೧೪, ೧೧೬, ೧೫೩, ೧೭೩, ೨೧೦, ೨೭೯, ೨೯೪, ೪೨೯
ಚಾಂಗದೇವ್ ಭವಾನ್ ರಾವ್ ೫೫೯
ಚಾಂದೋರ್ ೫೪೮
ಚಾಪ್ಮನ್ ಜೆ.ಐ. ೪೭೮
ಚಾಬುಕ್‌ಸ್ವಾರ್ ೮೬, ೮೭, ೮೮
ಚಾಬೂಕ ಸ್ವರ ೫೨೪
ಚಾರ್ಲ್ಸ್‌ವುಡ್ ೩೮೧
ಚಾವದಾರ್ ೪೭೩, ೫೨೭, ೫೩೦
ಚಿಂಘುಜೀ ಫುಲ್‌ಮಾಳಿ ೫೩೧
ಚಿಂತಾಮಣರಾವ್ ಅಪ್ಪಾ ಸಾಂಗಲೀಕರ್ ೫೫೫
ಚಿಕೋಡಿ ೫೦೮
ಚಿಟಣಿಸ್ ರಾ. ೨೮೦
ಚಿಟ್ನೀಸ್ ೪೭೧
ಚಿತ್ತರಂಜನದಾಸ್ ದೇಶಬಂಧು ೪೪೦, ೫೨೬
ಚಿತ್ತೋಡ್ ೫೪೮
ಚಿಪ್ಲೂಣಕರ್ ೩೪೫
ಚಿಪ್ಳೂಣಕರ್ ವಿಷ್ಣು ಶಾಸ್ತ್ರಿ ಕೃಷ್ಣಶಾಸ್ತ್ರಿ ೫೨೭
ಚಿಪ್ಳೂನ್‌ಕರ್ ೫೨೨
ಚಿಮಣ್ಣಾ ಗಣಪತಿ ೧೬೩, ೪೮೩
ಚಿಮಣ್‌ರಾವ್ ೫೩೦
ಚಿಮನ್ ಲಾಲ್ ಸೆಟಲ್ ವಾಡ್ ೫೩೧
ಚಿಮಾಜಿ ಭಾಟೆ ೫೨೯
ಚಿರುಮನ್ ೯೮
ಚಿಶೋಲ್ಮಾ ೩೯೨
ಚೀನ ೧೮೩, ೫೦೧
ಚುನೀಲಾಲ್ ಮೆಹ್ತಾ ೪೫೫, ೪೭೩
ಚೇವುಳ್ ೨೮೧
ಚೈರುಮಾನ್ ೩೬೫
ಚೋಕೋಬ ೨೦೨, ೨೦೨, ೪೨೫, ೪೨೬, ೪೨೭
ಚೋಖಾಮೇಳಾ ೪೨೫, ೪೨೮, ೫೫೨, ೫೫೩, ೫೬೦
ಚೋಷಣ್ ೫೪೮
ಚೋಳಕರ್ ೫೩೭
ಚೌಧರಿ ನಾಗೇಶ ೫೫೯
ಚೌಧರಿ ಹೇಮೇಂದು ಬಿಕಾಶ್ ೫೬೦

**ಛ**

ಛತ್ರಪತಿ ರಾಜಾರಾಮ್ ೩೮೭, ೪೪೯, ೫೩೩
ಛತ್ರಪತಿ ರಾಜಾರಾಮ್ ಮಹಾರಾಜ ೩೮೭
ಛತ್ರಪತಿ ಶಾಹೂ ಮಹಾರಾಜ ೨೭೫, ೪೪೮, ೪೬೬, ೪೬೭, ೪೬೯, ೫೪೭

**ಜ**

ಜಗತಾಪ್ ಬಾ. ರಾ. ೫೬೧
ಜಗನ್ನಾಥ ರಘುನಾಥ್ ಅಜಗಾವ್‌ಕರ್ ೪೨೭
ಜಗನ್ನಾಥ ಶಂಕರ ಶೇಠ್ ೫೨೮
ಜಟಿಯಾ ೫೪೮
ಜನಗಣಮನ ೩೯೫
ಜನಾರ್ಧನ ಪಂತ ೫೨೨
ಜಪಾನ್ ೫೪೦
ಜಮುನಾದಾಸ್ ಮೇಥಾ ೨೬೭, ೨೬೮
ಜಯಕರ್ ಬ. ೫೨೧, ೫೩೭
ಜಯದೇವ ೫೩೪
ಜರ್ಮನ್ ೧, ೪೫, ೯೧, ೩೧೩, ೫೨೪, ೫೪೦
ಜರ್ಮನ ೨೦, ೧೩೯, ೫೨೫

ಜಲಿಯನ್ ವಾಲಾ ಬಾಗ್ ೩೨೦, ೩೨೦, ೩೯೫, ೪೬೧, ೪೯೯, ೫೨೭, ೫೫೯
ಜವಹರಲಾಲ್ ನೆಹರು ೩೧೬, ೩೨೨, ೩೨೩, ೩೨೫, ೩೬೦, ೪೩೩, ೪೯೮, ೪೯೯, ೫೦೦, ೫೦೧, ೫೦೨
ಜವಹರ್ ಲಾಲ್ ನೆಹರು ೩೧೬, ೩೨೩, ೩೨೪, ೩೨೫, ೩೫೭, ೩೬೦, ೪೩೩, ೪೯೮, ೪೯೯, ೫೦೦, ೫೦೧, ೫೦೨
ಜವಳಕರ್ ದಿನಕರ್‌ರಾವ್ ಶಂಕರರಾವ್ ೧೭೩, ೧೭೪, ೧೯೭, ೪೦೯, ೪೧೦, ೪೨೧, ೪೮೩, ೫೨೭, ೫೭೯
ಜಹಾಂಗೀರ್ ಬಾ. ೫೩೧
ಜಳಗಾವ್ ೫೫೯
ಜಾಟವ್ ೫೪೮
ಜಾಧವ್ ೫೫, ೪೦೨, ೪೩೩, ೪೮೪, ೫೨೩, ೫೨೮, ೫೬೧
ಜಾಧವ್ ಎಮ್.ಕೆ. ೬೮
ಜಾಧವ್ ರಾ. ೬೯, ೭೦
ಜಾನಕೀ ೫೫೭
ಜಾನನಾಕ್ ಹೀರ್‌ನಾಕ್ ೩೯೩
ಜಾನವೇಕರ್ ಡಿ.ಎ. ೫೦೮
ಜಾನೋ ಬಾಬಾಜಿ ಭಿಂಗಾರದೇವ್ ೪೦೧
ಜಾನ್ ಬೂನ್ ೫೫೧
ಜಾಮಖೇಡ್ ೫೨೪
ಜಾರ್ಜ್ ಜೆರ್‍ವೀಸ್ ಆರ್. ಇ ೪೧೭
ಜಾರ್ಜ್ ಪಿ. ಡಿಕ್ ೫೩೧
ಜಾಲ್ಪೋನ್ ೫೩೪
ಜಾವಡೇಕರ್ ಭಟ್ಟ ೧೨೮
ಜಾವಳೆ ಡಾ. ೨೬೭
ಜಿವ್ಯಾ ೧೨೮, ೧೨೯
ಜೆಟ್‌ನಾಕ್ ಧೈನಾಕ್ ೩೯೩
ಜೇಠಾಲಾಲ್ ಮಾಣಸೂರ್ ಪರ್‌ಮಾರ್ ೧೩೩
ಜೇಧೆ ರಾ. ೧೭೩, ೧೭೪
ಜೈನಧರ್ಮ ೫೪೨
ಜೈನುದ್ದೀನ ೧೨೮
ಜೈಸವಾರ್ ಸತನಾಮೀ ೫೪೮
ಜೋಗಳೇಕರ್ ೪೮೪
ಜೋಗ್ ವಿ.ಶಿ. ೩೬೯
ಜೋತಿಬಾ ಫುಲೆ ೩೬೯, ೪೭೭
ಜೋತಿರಾವ್ ಫುಲೆ ೩೬೮, ೪೭೬
ಜೋನಾಥನ್ ಕೇಪ್ ೫೬೦
ಜೋಶಿ ೮೯, ೯೦, ೧೧೮, ೧೭೮
ಜೋಶಿ ರಾ. ೯೧, ೧೭೭
ಜೋಶಿ ವಿನಾಯಕ ಚಿಂತಾಮಣ್ ೫೩೦
ಜೋಶೀ ಪುರುಷೋತ್ತಮ ಪ್ರಭಾಕರ ೫೩೦
ಜೋಷಿ ೮೮, ೮೯, ೧೧೮, ೧೭೬, ೨೫೯
ಜೋಷಿ ರಾ. ೮೮
ಜೋಹಾರ್ ೧೧೫, ೨೮೮
ಜ್ಞಾನಪ್ರಕಾಶ ೩೭, ೩೮, ೩೯, ೪೦, ೬೩, ೮೪, ೮೮, ೧೫೫, ೨೮೦, ೨೮೯, ೩೭೧, ೪೮೪
ಜ್ಞಾನೇಶ್ವರ ೫೨೨, ೫೩೪, ೫೩೭
ಜ್ಞಾನೇಶ್ವರಿ ೫೨೨
ಜ್ಞಾನೋಬಾ ೪೨೫
ಜ್ಯೂ ೩೬೭
ಜ್ಯೋತಿರಾವ್ ಫುಲೆ ೩೬೮

## ಝ

ಝುಂಬರಾಬಿಗಾರ್ ೧೫೭
ಝುಂಬರ್ ಲಾಲ್ ಕಾಂಬಳೆ ೫೪೬

## ಟ

ಟರ್ನರ್ ೯೭, ೧೦೧, ೧೦೬
ಟಾಂಡ್ ೩೯೦
ಟಾಲ್ಸಟಾಯ್ ೨೮೩
ಟಿಕೇಕರ್ ೫೨೪
ಟಿಪಣಿಸ್ ೧೦೮, ೧೫೪, ೩೮೪, ೪೭೫, ೫೩೦

ಟಿಪ್ನಿಸ್ ಸು. ಗೋ. ೪೭೪
ಟಿಪ್ನೀಸ್ ೩೮೩, ೪೭೪, ೪೭೫, ೫೪೬
ಟಿಳಕ್ ೧೨, ೧೨, ೨೮, ೨೯, ೩೯, ೪೨, ೫೮, ೭೮, ೮೦, ೧೧೭, ೧೨೩, ೩೦೭, ೩೦೮, ೩೦೯, ೩೧೧, ೩೨೩, ೩೨೪, ೩೨೫, ೩೪೫, ೪೮೧, ೪೮೨, ೪೮೩, ೪೮೪, ೪೮೫, ೪೮೬, ೪೮೭, ೪೮೮, ೪೯೮, ೫೦೨, ೫೨೧, ೫೨೨, ೫೨೩, ೫೨೭, ೫೩೦, ೫೪೧, ೫೪೪, ೫೫೪
ಟ್ರೈಟ್ಲರ್ ೩೭೭
ಟೈಮ್ಸ್ ಆಫ್ ಇಂಡಿಯಾ ೪೮೭

**ಠ**

ಠಾಕರೆ ೪೮೧, ೪೮೫

**ಡ**

ಡಚ್ ೪೬
ಡಯರ್ ಜನರಲ್ ೪೯೯
ಡಾಕಾ ೫೨೭
ಡಾಫ್ಫರೀನ್ ಲಾರ್ಡ್ ೧೦
ಡಿಡೋಳ್ಕರ್ ದೇ. ಫ. ೩೮೬
ಡುಬಾಯ್ಸ್ ೪೮೦
ಡೆಕ್ಕನ್ ಜನತೆ ೫
ಡೆಕ್ಕನ್‌ರಯತ್ ೬೩
ಡೆನ್ಮಾರ್ಕ ೨೦
ಢೋರ್ ೪೬೭

**ತ**

ತಳವನ್ ೫೫೫
ತಾಂಬೋಳಿ ೩೧೧
ತಾಬೂದು ೨೪೭
ತಾಮ್ಹಣಮಳಾ ೫೨೫
ತಾರಾಪುರ ೫೩೪
ತಾಸ್ಗಾವ್ ೫೫೪
ತಿನ್ನವೇಲಿ ೯೮
ತಿರುಚನಾಪಳ್ಳಿ ೫೩೨, ೫೫೫
ತಿರುಮಳ್ಳವರ್ ೫೫೩
ತಿರುವಾಂಕೂರು ೨೦೭
ತಿಲಕ್ ೩೯, ೩೯, ೭೮, ೧೦೩, ೧೨೩, ೧೬೧, ೨೦೪, ೨೪೭, ೩೦೭
ತೀಟ್ಯಾ ೩೬೫
ತುಕಾರಾಮ ೪೨೫
ತುಕಾರಾಮ್ ಲಕ್ಷ್ಮಣ್ ಢಕ್‌ಪಾಳ್ ೪೦೧
ತುರ್ಕಸ್ತಾನ ೪೪೬, ೫೨೫
ತುರ್ಕಿ ೨೧೮, ೨೧೯, ೪೪೦, ೫೨೫
ತುಳಜಾರಾಮ್ ಭಾಯಿ ೪೩೭
ತುಳಶಿ ಶೆಡಗಾ ೫೪೬, ೫೪೬, ೫೪೭
ತುಳಸೀದಾಸ ೫೫೨
ತೆಲಂಗ್ ನ್ಯಾ. ಕಾಶೀನಾಥ್ ತ್ರ್ಯಂಬಕ್ ೧೩೮, ೫೩೧, ೫೪೭
ತೇಜ್‌ಬಹಾದ್ದೂರ್ ಸಪ್ರು ೧೪೭
ತೋಫಖಾನೆ ೩೯೧
ತ್ಯಾಗರಾಜ ಚೆಟ್ಟಿ ೫೩೮
ತ್ರಿಪುರ ೫೪೦
ತ್ರ್ಯಂಬಕ ನರಹರ್ ಶ್ರೀಗೋಂದಕರ್ ೫೧೫

**ಥ**

ಥಾಮಸ್ ಲೋ ೫೪೨
ಥಿಯಾಸಫಿ ೪೯೮
ಥೋರಾತ್ ಎನ್. ಎ. ೫೦೮

**ದ**

ದಂಡಗಾವ್ಕರ್ ೫೧೫
ದತ್ತಾತ್ರೇಯ ರಾಮಚಂದ್ರ ರಾರಾವೀಕರ್ ೪೭೩
ದರ್ಯಾಪುರ ೪೭೩
ದಳವಿ ೨೬೮
ದಾಂಢೆಫರ್ ೫೩೩

ದಾತೆ ೧೦೭, ೧೧೦, ೫೩೧
ದಾದರ್ ೨೬೭, ೩೦೯, ೩೨೬, ೪೮೪, ೪೮೮, ೫೫೭, ೫೬೧
ದಾದಾಭಾಯಿ ನವರೋಜಿ ೫೨೬, ೫೪೭
ದಾದಾಸಾಹೇಬ ಗಾಯಕ್‌ವಾಡ್ ೨೧೬, ೪೨೯, ೪೩೧, ೪೩೨, ೪೩೩, ೪೩೪, ೫೨೬, ೫೬೦, ೫೬೧
ದಾದಾಸಾಹೇಬ್ ಪಾಟಿಲ್ ೨೧೬
ದಾದೋಬಾ ಪಾಂಡುರಂಗ ೫೩೭
ದಾಪೋಲಿ ೩೦೮, ೪೮೬
ದಾಭೋಳಿ ೩೦೧
ದಾಮಾ ಶೆಟ್ಟಿ ೫೩೪
ದಾಮೋದರ್ ಮುರಾರಿ ಖಾಪರ್ಡೆ ೨೮, ೨೯, ೫೩೧
ದಾಶರಥಿ ೧೩೬
ದಾಸಬಾಬು ೪೪೧
ದಾಸ್‌ಗಾಂವ್ ೨೯೪
ದಿಂಡೋರಿ ೨೦೯, ೨೦೯, ೪೩೫, ೪೩೬
ದಿನಕರ್‌ರಾವ್ ಜವಳ್ಕರ್ ೪೦೯, ೪೧೦, ೫೨೭, ೫೨೯
ದಿಲ್ಲಿ ೭, ೭, ೧೫೯, ೪೯೯, ೫೦೧, ೫೨೧, ೫೪೦, ೫೪೮
ದಿವೇಕರ್ ಮಹಾದೇವ ಶಾಸ್ತ್ರಿ ೧೧೦, ೫೩೨
ದೀಕ್ಷಿತ್ ಕೆ. ಎಸ್. ೫೦೯
ದೀನಬಂಧು ೪೦೦
ದುನಿಯಾ ೩೦೭, ೩೦೮, ೩೧೧, ೪೮೫, ೪೮೮, ೫೬೧
ದೆಹಲಿ ೧೪೧, ೩೭೬
ದೇವಗಿರಿ ೫೨೨
ದೇವನಾಕ್ ಆನನಾಕ್ ೩೯೩
ದೇವರಾವ್ ನಾಯಕ್ ೨೯೦, ೪೮೪, ೪೮೫, ೪೮೮
ದೇವಲಸ್ಮೃತಿ ೫೧೬, ೫೧೭
ದೇವಳೆ ೨೨೫, ೨೨೬
ದೇವಾಸ್ ೨೮೮
ದೇವೀದಾಸ್ ೫೬೦
ದೇವೂ ದಾಸ್ ಗೋಸಾವಿ ೪೦೨
ದೇವೇಂದ್ರನಾಥ ಟಾಗೋರ್ ೫೫೭
ದೇವೇಂದ್ರನಾಥ ಟಾಗೋರ ೫೫೭
ದೇಶಪಾಂಡೆ ಎಲ್. ಎಮ್. ೫೦೮
ದೇಶಪಾಂಡೆ. ಗೋ. ೪೩೮
ದೇಶಬಂಧು ದಾಸ್ ೩೨೫
ದೋಹರೆ ೫೪೮
ದೋಹೆ ೫೪೯
ದ್ವಾರಕಾ ೫೫೪
ದ್ವಾರಕಾ ಚಾಂಗದೇವ್ ಖೈರ್‌ಮೋಡೆ ೩೧೧, ೩೬೯, ೫೪೩, ೫೫೯
ದ್ವಾರಕಾನಾಥ್ ೫೫೫
ದ್ವೈತಮತ ೫೪೧


## ಧ


ಧನಗೋಪಾಲ ಮುಖರ್ಜಿ ೪೭೮
ಧನುರ್ದಾಸ ೧೩೬, ೧೩೭, ೫೩೨
ಧಮ್ಮಚಕ್ರ ೪೩೪
ಧರ್ಮದಾಸ್ ಮಾರುತಿ ನಗರಾರೆ ೪೬೨
ಧಸಿಯಾ ೫೪೮
ಧಾಂಗದ್ರಾ ೧೩೩
ಧಾಂಧರಫ಼ಳ್ ೨೨೭
ಧಾರವಾಡ ೫೫೪
ಧಾರಿಯಾ ೮೮, ೮೯, ೯೦, ೯೧, ೫೩೨
ಧಾರಿಯಾ ಶಂಕರ್ ವಿಠಲ್ ೫೩೨


## ನ


ನಟರಾಜನ್ ಕೆ. ೪೭೮
ನಟೇಶನ್ ಜಿ.ಎ. ೫೨೧
ನರಸೀ ಬ್ರಾಹ್ಮಣಿ ೫೩೪

ನರಸೀ ಮೆಹ್ತಾ ೫೫೨
ನರಹರಿ ತೀರ್ಥ ೫೪೧
ನರ್ಮದಾಬಾಯಿ ೫೩೬
ನರ್ಸೋಪಂತಿ ೩೩೭
ನವಬ್ರಹ್ಮ ಸಮಾಜ ೫೫೭
ನವಾಕಾಲ ೮೪, ೩೮೩, ೩೮೮, ೩೯೯
ನಾಂದಗಾಂವ್ ೨೨೨, ೨೭೧
ನಾಗನಾಕ ೧೨೫
ನಾಗನಾಕ್ ಸೇಠಿ ಬಿನ್ ೫೩೩
ನಾಗಪಂಚಮಿ ೫೫
ನಾಗಪುರ ೧೮೭, ೧೯೭
ನಾಗಪುರ ೧೭೦, ೨೧೪, ೨೧೫, ೪೨೧, ೪೩೪, ೪೬೧, ೪೬೨, ೪೭೬, ೪೯೨, ೫೩೦, ೫೩೧, ೫೩೯, ೫೫೭, ೫೫೯, ೫೬೦, ೫೬೧
ನಾಗಾವ್ ೫೨೮
ನಾಗೇವಾಡಿ ೧೨೫, ೫೩೩, ೫೩೪
ನಾಗೇಶ್ ಚೌಧರಿ ೫೫೯, ೫೬೧
ನಾಝಿವಾದ ೫೦೦
ನಾಥಪಂಥ ೫೨೨
ನಾನಾಸಾಹೇಬ್ ೩೮೭
ನಾನಾಸಾಹೇಬ ೫೪೬
ನಾನಾಸಾಹೇಬ ಗವಯಿ ೫೩೧
ನಾನಾಸಾಹೇಬ ಫಡ್ನವೀಸ್ ೫೨೩
ನಾಮದೇವ ೨೯, ೨೦೨, ೪೨೫, ೪೨೭, ೫೩೪, ೫೫೨, ೫೫೫
ನಾಮ್‌ದಾರ್ ಖಾಪರ್ಡೆ ೨೮
ನಾಯರ್ ೯೮, ೩೬೫, ೪೮೦
ನಾಯರ್ ಟಿ.ಎಮ್. ಡಾ. ೫೩೮
ನಾರಾಯಣ ೫೩೪
ನಾರಾಯಣ ಮಲ್ಹಾರ್ ಜೋಶಿ ೫೫೮
ನಾರಾಯಣ ರಘುನಾಥ ವಿಜಯಕರ್ ೫೩೮
ನಾರಾಯಣರಾವ್ ೩೮೭
ನಾರಾಯಣರಾವ್ ಚಂದಾವರ್‌ಕರ್ ೪೯೦
ನಾರಾಯಣೀಯ ೫೫೨
ನಾರಾಯಣ್ ಮೋರೇಶ್ವರ್ ಪಟವರ್ಧನ್ ೧೪೭
ನಾಸಿಕ್ ೨೦೯, ೨೨೨, ೨೨೪, ೨೨೫, ೨೯೦, ೩೪೪, ೪೨೯, ೪೩೦, ೪೩೧, ೪೩೨, ೪೮೪, ೫೦೯, ೫೧೫, ೫೪೪, ೫೫೪, ೫೫೭, ೫೬೧
ನಿಕಾಳಜೆ ೨೪೩, ೪೫೪, ೪೫೫, ೪೫೬, ೫೩೫, ೫೪೩
ನಿಳೋಂಡಪಾಡಾ ೪೩೫
ನೀಗ್ರೋ ೨೦೩
ನೂರ್ ಮೊಹಮದ್ ೪೧೫
ನೆಪೋಲಿಯನ್ ಬೋನಾಪಾರ್ಟ್ ೩೫೪, ೫೩೫
ನೇಪಾಳ ೫೩೮
ನ್ಯೂ ಆರ್ಲಿಯನ್ಸ್ ೫೫೦
ನ್ಯೂಯಾರ್ಕ್ ೨೮೯, ೪೭೮

## ಪ

ಪಂಚಗಂಗೆ ೪೬೭
ಪಂಚವಟಿ ೫೫೪
ಪಂಜಾಬ್ ೯೩, ೧೩೮, ೧೩೯, ೧೪೭, ೨೪೫, ೩೩೭, ೩೩೮, ೪೪೦, ೪೪೩, ೫೨೪, ೫೩೪, ೫೩೫, ೫೪೯, ೫೫೫, ೫೫೮
ಪಂಜಾಬಿ ೯೩, ೯೪, ೫೪೮
ಪಂಡರಾಪುರ ೧೦೫
ಪಂಡಿತಪ್ಪ ಚಿಕೋಡಿ ೫೦೮
ಪಂಢರಾಪುರ ೨೧೬, ೩೬೯, ೪೨೫, ೪೨೭, ೪೨೮, ೫೩೪
ಪಂಢರಿ ೪೨೭, ೪೨೮
ಪಂತಪ್ರಧಾನ ೫೫೬
ಪಚ್ಚಪ್ಪಾ ೨೨೦
ಪಟವರ್ಧನ ೫೫೫
ಪಟಿನ್‌ಸನ್ ೩೯೨
ಪಡವಳ್ ೫೩೭
ಪದ್ಮನಾಭ ತೀರ್ಥ ೫೪೧

ಪದ್ಮಪುರಾಣ ೫೧೩
ಪನ್ಹಾಳಾ ೧೨೫, ೪೬೮
ಪರಮಾನಂದ್ ಭಾಯಿ ೨೪೫, ೨೪೬, ೨೪೭, ೨೪೮, ೫೩೫
ಪರಶುರಾಮಪಂತ್ ೫೩೩
ಪರಶುರಾಮ್ ಭಾವೂ ೧೨೫, ೫೫೫
ಪರಾಂಜಪೆ ಎಸ್.ಎಮ್. ೪೮೭
ಪರಾಂಜಪೆ ಡಾ. ೧೯೩, ೧೯೪
ಪರಾಂಜಪೆ ನಾ. ೩೭೨
ಪರಾಂಜಪೆ ರಘುನಾಥ ಪುರುಷೋತ್ತಮ ಡಾ. ೫೩೫
ಪರಿಯಾ ೯೭
ಪರೇಳ್ ೫೬೧
ಪವಳಾ ಬಾಯಿ ೪೨೯
ಪಾಂಗಾರಕರ್ ಬುವಾ ೧೭೫, ೧೭೬
ಪಾಂಗಾರಕರ್ ರಾ. ೧೭೫, ೧೭೬, ೧೭೭, ೧೭೮, ೫೩೭
ಪಾಂಚರಾತ್ರ ೫೫೨
ಪಾಂಡುರಂಗದಾಸ್ ೪೦೨
ಪಾಂಡುರಂಗ ನಾಥೂಜಿ ರಾಜಭೋಜ್ ೪೬೧
ಪಾಕಿಸ್ತಾನ ೪೩೩
ಪಾಚಾಡ ೫೪೫, ೫೪೬
ಪಾಟಲೀಪುತ್ರ ೩೯೬
ಪಾಣಂದಿಕರ್ ೧೪೯, ೧೫೧, ೧೫೨, ೧೮೮, ೫೨೪, ೫೩೬
ಪಾತಂಡೆ ರಾ. ೧೬೫
ಪಾದ್ರಿ ೨೧೫
ಪಾನಪತ್ ೭
ಪಾಪಣ್ಣ ೪೯೨, ೪೯೩
ಪಾಮಜಿ ಅಂಬಾಜಿ ವಾವ್ಹಾಳ್ ೬
ಪಾರನೇರ್ ೨೨೭
ಪಾರೇಖ್ ಜಿ.ಕೆ. ೫೫೮
ಪಾರ್ಸಿ ೧, ೧೩೫
ಪಾಲೇಯ ಶಾಸ್ತ್ರಿ ೧೧೧, ೧೧೨
ಪಿಂಪಳಗಾಂವ್ ೨೨೬, ೨೨೭
ಪೀತಾಂಬರ ಭಾಯಿ ಗುಜರ್ ೪೭೪
ಪೀಪಾಜಿ ಮಹಾರಾಜ ೫೪೮
ಪುಣೆ ೨೩, ೨೬, ೨೭, ೪೨, ೯೩, ೧೬೩, ೧೬೫, ೧೭೦, ೨೮೧, ೨೯೬, ೩೦೨, ೩೦೭, ೩೦೯, ೩೧೪, ೩೨೯, ೩೫೭, ೩೫೮, ೩೫೯, ೩೮೩, ೩೯೦, ೩೯೧, ೪೦೯, ೪೩೦, ೪೬೧, ೪೮೧, ೪೮೨, ೪೮೩, ೪೮೬, ೪೮೭, ೪೮೮, ೫೧೫, ೫೨೨, ೫೨೪, ೫೨೫, ೫೨೭, ೫೩೬, ೫೪೧, ೫೪೪, ೫೪೬, ೫೪೭, ೫೪೮, ೫೫೬, ೫೫೭
ಪುರಿ ೧೩೭, ೧೭೭
ಪುರುಷೋತ್ತಮದಾಸ್ ಠಾಕೋರ್ ದಾಸ್ ೫೩೧
ಪುಲಿಯ ೪೮೦
ಪುಷ್ಯಮಿತ್ರ ೪೦೩
ಪೂನಾ ೧೭೮, ೩೮೯, ೪೮೧, ೪೮೫, ೪೮೬, ೫೨೬, ೫೩೧
ಪೂರ್ಣಪ್ರಜ್ಞ ೫೪೧
ಪೃಥ್ವಿರಾಜ್ ಚವ್ಹಾಣ ೭
ಪೆನ್ಸಿಲ್ವೇನಿಯಾ ೪೭೮
ಪೆರಿಯಾರ್ ರಾಮಸ್ವಾಮಿ ನಾಯಕರ್ ೫೧೮, ೫೫೯
ಪೆಹೆಲ್‌ಜಾನಿ ಮಿ. ೧೯೬
ಪೇಶ್ವಾಯಿ ೩೮೭, ೪೭೬
ಪೈಗಂಬರ ೨೮೫
ಪೈಠಣ ೪೫೩, ೫೨೨
ಪೋತ್ನೀಸ್ ಜಿ. ವೀ. ೫೦೯
ಪೋಪ್ ೧೬೭
ಪೋಯ್ಬಾವಡಿ ೫೬೧
ಪೋರ್ತುಗೀಸ್ ೪೫, ೩೧೩, ೫೩೮
ಪ್ಯಾರಿಸ್ ೫೩೫
ಪ್ಯಾಲೆಸ್ಟೈನ್ ೫೨೫
ಪ್ರಕಾಶವೀರ ಶಾಸ್ತ್ರಿ ೪೩೨, ೪೩೨, ೪೩೩
ಪ್ರದೀಪ ಗಾಯಕ್ವಾಡ್ ೫೬೦

ಪ್ರಬೋದ್‌ಕಾರ್ ೧೫೯
ಪ್ರಯಾಗ ೫೪೩
ಪ್ರಹ್ಲಾದ ಕೇಶವ ಅತ್ರೆ ೫೫೯
ಪ್ರಾಣ್ ಜೀವನ್ ೧೩೩

### ಫ

ಫಣಸವಾಡಿ ೪೧೧
ಫರ್ಗುಸನ್ ಕಾಲೇಜು ೫೨೫, ೫೩೫, ೫೩೬
ಫಾರ್ಸಿ ೧, ೨೫೫, ೩೨೪
ಫುಲೆ ೩೬೮, ೩೬೮, ೩೬೯, ೪೬೭, ೪೭೬, ೪೭೭, ೫೧೦, ೫೧೨, ೫೨೬, ೫೬೦
ಫೋತನೀಸ್ ೫೪೬
ಫೌಜ್ ೫೦೮
ಫ್ಯಾಸಿಸಮ್ ೫೦೦
ಫ್ರಾಂಕೋ ೫೦೦
ಫ್ರಾನ್ಸ್ ೫೦೦, ೫೩೫
ಫ್ರಾನ್ಸಿಸ್ ಸ್ಪಾಂಟನ್ ೩೯೧
ಫ್ರೆಂಚ್ ೩೧೩, ೫೧೧, ೫೨೫, ೫೩೫
ಫ಼ಕೀರ ೧೭೫, ೧೭೮, ೨೩೩
ಫ಼ಣಸ್‌ವಾಡಿ ೧೬೩, ೧೮೫
ಫ಼ಾತಿಮಾ ಬೀಬಿ ೨೧೫
ಫ಼ಿರೋಜ್‌ಪುರ್ ೧೪೭
ಫ಼ುಲೆ ೨೮೧, ೨೮೨
ಫ಼್ಲೆಂಚ್ ೧
ಫ಼್ರಾನ್ಸ ೨೦
ಫ಼್ರಾನ್ಸಿಸ್ ಪ್ಲೇಸ್ ೪೮
ಫ಼್ರೆಂಚ್ ೪೫, ೪೬

### ಬ

ಬಂಕಾ ೪೨೫
ಬಂಗಾಲೀ ೫೫೭
ಬಂಗಾಳ ೧೧೭, ೩೨೨, ೩೨೩, ೩೨೪, ೩೨೫, ೩೫೨, ೪೫೩, ೪೪೦, ೪೪೧, ೪೪೩, ೪೪೪, ೪೪೫, ೪೮೭, ೪೯೫, ೫೨೬, ೫೨೭, ೫೪೦, ೫೪೪, ೫೪೭, ೫೪೮
ಬಂಡೋಪಂತ್ ಜೋಶಿ ೪೭೩
ಬಡೋದೆ ೫೨೪, ೫೨೮, ೫೩೦
ಬದಲಾಪುರ್ ೧೧೧
ಬದ್ರಿಕೇಶ್ವರ ೫೫೪
ಬನಹಟ್ಟಿ ನಾ. ೧೭೦
ಬನಾರಸ್ ೧೪೦, ೫೪೫
ಬರಾಫ಼್‌ಖಾನ್ ೧೬
ಬರೋಡಾ ೧೭೫
ಬರ್‌ಗೆ ಕರ್ನಲ್ ೩೯೧
ಬಲಿರಾಜ ೫೧೦, ೫೧೦, ೫೧೧, ೫೧೨
ಬಲೂತೇದಾರ್ ೫೩೩
ಬಲ್ಗೇರಿಯನ್ ೩೧೩
ಬಲ್ ನಾಕ್ ಕೋಂಡ್‌ನಾಕ್ ೩೯೩
ಬಶೀರುದ್ದಿನ್ ೫೨೪
ಬಸ್ತವಾಡ್ ೪೬೯
ಬಹೋರದಾಸ್ ೫೩೪
ಬಳಹಾಯಿ ೧೫೭, ೨೮೭, ೨೮೮
ಬಳೀರಾಮ್ ೪೭೪
ಬಳೀರಾಮ್ ಭಿವಸನ್ ಆಠವಳೆ ೪೭೪
ಬಾಂಬೆ ೧೦೫, ೩೭೦, ೩೭೧, ೩೯೧, ೪೧೪, ೪೧೬, ೪೧೭, ೪೩೨, ೫೩೧
ಬಾಗವೆ ಬ್ಯಾ. ೨೫೬, ೨೫೭
ಬಾಜಿಪ್ರಭು ೧೨೫
ಬಾಜಿಪ್ರಭು ದೇಶಪಾಂಡೆ ೧೨೫
ಬಾಜಿರಾವ್ ೧೯೧, ೩೮೭, ೩೯೧
ಬಾಣಾಸುರ ೫೧೨, ೫೧೩
ಬಾಪ್ ೧೮೯, ೨೮೮
ಬಾಪುರಾವ್ ೪೭೩, ೪೭೪
ಬಾಪುರಾವ್ ಜೋಶಿ ೪೭೪
ಬಾಪೂ ೪೮೩
ಬಾಪ್ಟಿಷ್ಟಾ ಲೋ. ೨೯

ಬಾಬರ್ ೭
ಬಾಬಾ ಪದಮನಜೀ ೫೩೮
ಬಾಬಾಸಾಹೇಬ ಖೇರ್ ೫೩೧
ಬಾಬಾಸಾಹೇಬ ದೇವಧರ್ ೫೫೭
ಬಾಬು ಅರವಿಂದ ಘೋಷ್ ೫೨೬
ಬಾಬು ಕೇಶವ್ ಚಂದ್ರಸೇನ್ ೧೬೬
ಬಾಬುರಾವ್ ಗೋಖಲೆ ೨೮೧
ಬಾರಡೋಲಿ ೨೯೨, ೨೯೩
ಬಾರಾಮತಿ ೨೩೨, ೫೫೭
ಬಾರ್ಡೋಲಿ ೩೧೬
ಬಾರ್ಶಿ ೩೩೨, ೩೬೬
ಬಾಲಚಂದ್ರ ಭಾಟವಾಡೇಕರ್ ಡಾ. ೫೫೮
ಬಾಲಾಜಿ ವಿಶ್ವನಾಥ್ ೩೮೭
ಬಾಲಿಕಾಶ್ರಮ ೪೭೬
ಬಾಶಿರುದ್ದೀನ್‌ಖಾನ್ ೧೪೯
ಬಾಳಂಭಟ್ಟ ೪೭೩
ಬಾಳಂಭಡಜಿ ೨೮೦
ಬಾಳ ಗಂಗಾಧರ್ ಟಿಳಕ್ ಲೋ. ೫೩೦
ಬಾಳ ಭಾಸ್ಕರ್ ಶಿಂತ್ರೆ ೫೩೮
ಬಾಳ ಶಾಸ್ತ್ರಿ ಜಂಬೇಕರ್ ೪೭೬
ಬಾಳು ಬಾವಾಜಿ ಪಾಲವಣಕರ್ ೧೭, ೩೦೧
ಬಿಪಿನ್ ಚಂದ್ರ ಪಾಲ್ ೪೯೮
ಬಿಯಾಂಟ್ ಲೋಕಮಾತಾ ೧೨
ಬಿಲೇವಾಡಿ ೨೨೬
ಬುದ್ಧ ೨೮
ಬುದ್ಧಗಯಾ ೩೯೮
ಬುದ್ಧ ಪೂರ್ಣಿಮಾ ೫೬೦
ಬುರ್ಸಲೇಲಿ ೫೩೨
ಬುವಾಲಾಲ್ ವಕೀಲ ೩೪೧, ೩೪೨
ಬೂ ಫೂಟ್ ೫೦೮
ಬೆಂಗಳೂರು ೧೪೬, ೪೯೧
ಬೆಂಗಾಲ್ ೫೬೦
ಬೆಲ್ಜಿಯಂ ೨೦
ಬೆಳಗಾವಿ ೭೦, ೨೨೨, ೨೬೯, ೨೮೫, ೩೦೭,
೩೦೮, ೩೨೯, ೪೬೫, ೪೯೨
ಬೇಟಿಬಂದಿ ೧೪೯
ಬೇಡನ್ ಪೂವೆಲ್ ೩೮೯
ಬೊಮನ್.ಬೆಹ್ರಾಂ ಮಿ. ೨೬೭
ಬೋಡಸೇ ೫೩೭
ಬೋಪಟಕರ್ ೫೪೧
ಬೋಲೆ ರಾ. ೧೦೪
ಬೋಲೆ ವರೇರಕರ್ ಮಾಮಾ ೪೮೫
ಬೋಲ್ತೆವಿಸಮ್ ೧೭೦, ೨೬೯, ೫೪೦
ಬೋಲ್ತೇವಿಕ್ ೫೪೦
ಬೋಸ್ಟನ್ ೪೭೮
ಬೋಸ್ ಬಾಬೂ ಸುಭಾಷಚಂದ್ರ ೫೪೦
ಬೌದ್ಧ ೨೮೮, ೪೨೮, ೪೩೩
ಬೌದ್ಧಧರ್ಮ ೪೦೩
ಬ್ಯಾನರ್ಜಿ ಎ.ಆರ್. ೪೯೧
ಬ್ರಹ್ಮಸಮಾಜ ೫೫೭
ಬ್ರಿಟನ್ ೧೩೯, ೪೧೩, ೫೦೦
ಬ್ರಿಟಿಷ್ ೪, ೮, ೯, ೧೨, ೧೪, ೧೫, ೨೦, ೨೨,
೨೩, ೨೪, ೨೫, ೨೬, ೨೭, ೨೮, ೩೧, ೩೪,
೩೬, ೪೧, ೪೨, ೪೫, ೪೬, ೪೭, ೪೮, ೪೯,
೫೯, ೬೭, ೭೦, ೭೨, ೧೦೫, ೧೧೮, ೧೨೩,
೧೩೯, ೧೫೩, ೧೮೬, ೨೨೩, ೨೪೩, ೨೫೫,
೨೬೩, ೩೦೫, ೩೧೫, ೩೧೮, ೩೧೯, ೩೨೦,
೩೨೧, ೩೬೮, ೪೧೬, ೪೧೮, ೪೧೯, ೪೩೧,
೪೩೬, ೫೦೨, ೫೨೫
ಬ್ರಿಸ್ಟೋಲ್ ೫೪೨
ಬ್ರೀಟಿಷ್ ೨೯೮
ಬ್ರುಸೆಲ್ಸ್ ೫೪೦


**ಭ**


ಭಂಗ್ಯಾ ಮಾರುತಿ ೧೬೩
ಭಂಡಾರೆ ೪೮೮

ಭಗವದ್ಗೀತೆ ೩೬೬, ೫೫೨, ೫೫೪
ಭಟಕರ್ ಪಿ. ಎನ್. ೫೩೧
ಭಟ್‌ಕರ್ ೪೯೩
ಭಟ್ಟ ರಾ.ಲ. ೧೪೬, ೧೪೭
ಭಾಗವತ ೧೭೬, ೧೭೬, ೧೭೭, ೫೧೦, ೫೧೨, ೫೧೩, ೫೧೬, ೫೧೭, ೫೨೨, ೫೩೪, ೫೫೧, ೫೫೨, ೫೫೩
ಭಾಗವತಧರ್ಮ ೫೧೬
ಭಾಗವತ್ ಪರಮಾನಂದ್ ೫೩೭
ಭಾಗ್‌ನಾಕ್ ಹರ್‌ನಾಕ್ ೩೯೩
ಭಾಜೆಕರ್ ಡಾ. ೨೫೧
ಭಾಟವಡೆ ೨೨೬
ಭಾಟವಾಡೇಕರ್ ೫೫೮
ಭಾನುದಾಸ ೩೮೩
ಭಾನುದಾಸ್ ಗುಂಡೋರಾವ್ ಕಾಂಬಳೆ ೧೦೭, ೧೦೮, ೩೯೯
ಭಾಲಾ ಸಂಗ್ರಾಮ್ ೨೮೫
ಭಾಲೇಕರ್ ೪೭೬
ಭಾಲ್ಯಾ ೧೧೩, ೧೨೮
ಭಾವೂದಾಜಿ ೫೫೫
ಭಾವೂರಾವ್ ೪೨೯, ೪೩೦, ೪೩೪
ಭಾವೂರಾವ್ ಗಾಯಕ್ ವಾಡ್ ೪೩೧, ೪೩೩
ಭಾಸ್ಕರ ೫೨೩
ಭಾಸ್ಕರಶಾಸ್ತ್ರಿ ೫೩೭
ಭಾಸ್ಕರ್ ರಘುನಾಥ ಕದ್ರೇಕರ್ ೫೬೦
ಭಾಸ್ಕರ್‌ರಾವ್ ೫೫, ೫೨೮, ೫೨೯
ಭಾಸ್ಕರ್‌ರಾವ್ ಜಾಧವ್ ೫೫, ೫೨೮, ೫೨೯
ಭಾಳಾಪುರ ೪೭೪
ಭಿಂಗಾರದೇವ್ ೪೦೧
ಭಿಕಾಜಿ ರಾಮ್ ಜೀ ಗಾಯಕ್‌ವಾಡ್ ೪೦೧
ಭಿಕೊಬಾ ೫೩೮
ಭಿಕೊಬಾ ಲಕ್ಷ್ಮಣ ೫೩೮
ಭಿಕ್ಕು ೫೩೯
ಭೀಕ್‌ನಾಕ್ ರತನ್‌ನಾಕ್ ೩೯೩
ಭೀಮಾ ನದಿ ೩೯೨, ೩೯೩
ಭೀಮ್ಸನ್ ರಾ. ೨೬೪
ಭುಲಾಭಾಯಿ ದೇಸಾಯಿ ೫೨೧
ಭುಸಾವಳ್ ೫೫೯
ಭುಸ್ಕುಟೆ ರಾ. ೨೮೩
ಭೋಪಟಕರ್ ಭಾಸ್ಕರ್ ಬಳವಂತ ೨೪, ೫೪೧
ಭೋಬಲೆ ೪೯೨
ಭೋಸಲೆ ೧೪೪
ಭೋಸಲೆ ನಾರಾಯಣ ಧನಾಜಿ ೫೪೧
ಭೋಸ್ಲೆ ೩೯೨


## ಮ


ಮಂಗಳವೇಢೆ ೪೨೫
ಮಜಿನಿ ೫೪೯
ಮಟಾಣಿ ೨೨೬
ಮಥುರಾ ೫೫೧
ಮದನ ಮೋಹನ ಮಾಲವೀಯ ೧೪೦, ೧೪೨, ೧೪೬, ೧೪೭, ೧೪೮, ೫೪೩, ೫೫೯
ಮದೀನಾ ೨೮೫
ಮದ್ರಾಸ್ ೭೩, ೯೬, ೯೭, ೯೮, ೯೯, ೨೧೫, ೨೨೦, ೨೨೧, ೩೩೫, ೩೬೦, ೩೯೦, ೪೧೪, ೪೪೮, ೪೭೬, ೪೭೮, ೫೧೮, ೫೨೧, ೫೨೮, ೫೩೪, ೫೩೮, ೫೪೫, ೫೪೮, ೫೫೬
ಮಧ್ವಾಚಾರ್ಯ ೧೩೬, ೫೪೧, ೫೫೧, ೫೫೨
ಮನುಸ್ಮೃತಿ ೧೫೯, ೧೫೯, ೧೬೯, ೨೦೬, ೨೬೩, ೨೮೩, ೨೮೪, ೨೮೬, ೨೮೭, ೨೮೮, ೨೮೯, ೨೯೦, ೪೦೩, ೪೩೨
ಮರಾಠ ೪೫, ೯೩, ೧೧೫, ೧೩೧, ೩೬೬, ೩೬೮, ೩೯೪, ೪೦೨, ೪೩೫, ೪೩೮, ೪೪೮, ೪೪೯, ೪೫೦, ೫೨೨, ೫೨೩, ೫೨೭, ೫೨೮, ೫೨೯, ೫೩೦, ೫೩೩, ೫೩೫, ೫೪೬, ೫೫೪, ೫೫೫
ಮರಾಠವಾಡೆ ೪೩೩

ಮರಾಠಾ ೧, ೫, ೭, ೪೬, ೬೮, ೬೯, ೮೧, ೮೪, ೯೪, ೧೨೫, ೧೩೧, ೧೪೯, ೧೮೯, ೧೯೦, ೧೯೧, ೨೨೩, ೨೩೪, ೨೮೧, ೩೮೯, ೪೪೯, ೫೨೩, ೫೫೫

ಮರಾಠಿ ೩೭, ೧೪೭, ೧೫೭, ೨೧೨, ೩೦೨, ೩೨೯, ೩೫೧, ೩೭೮, ೩೮೮, ೩೯೩, ೩೯೪, ೪೨೫, ೪೩೨, ೪೭೬, ೫೦೪, ೫೧೫, ೫೨೨, ೫೨೩, ೫೨೪, ೫೨೫, ೫೨೭, ೫೩೦, ೫೩೭, ೫೪೩, ೫೪೪, ೫೪೮, ೫೫೪, ೫೫೯, ೫೬೦

ಮರಾಠಿಶಾಹಿ ೫೩೩

ಮರಿಆಯಿ ೨೫೯, ೨೬೦

ಮಲಬಾರ್ ೯೭, ೯೮, ೧೫೭, ೨೦೭, ೩೬೫, ೪೪೦, ೪೪೩, ೪೮೦, ೫೨೧, ೫೫೩

ಮಲ್ಹಾರಗಡ್ ೫೨೪

ಮಹಜೂರ ೧೨೫

ಮಹಡ್ ೮೫

ಮಹಮ್ಮದ್ ೨೮೫

ಮಹಾಡ್ ೪೦, ೫೭, ೫೮, ೬೦, ೬೨, ೭೬, ೭೮, ೮೦, ೮೨, ೮೩, ೮೪, ೮೫, ೮೬, ೮೮, ೮೯, ೯೧, ೯೨, ೯೩, ೯೬, ೧೦೦, ೧೦೧, ೧೦೪, ೧೦೫, ೧೦೭, ೧೦೮, ೧೧೦, ೧೧೫, ೧೧೬, ೧೨೦, ೧೨೫, ೧೫೩, ೧೫೪, ೧೫೭, ೧೬೧, ೧೬೫, ೧೭೦, ೧೭೨, ೧೭೩, ೧೯೭, ೧೯೮, ೨೦೦, ೨೧೦, ೨೭೯, ೨೮೦, ೨೮೧, ೨೮೨, ೨೮೩, ೨೮೪, ೨೮೫, ೨೮೬, ೨೮೭, ೨೯೦, ೨೯೧, ೨೯೨, ೨೯೪, ೩೧೬, ೩೮೩, ೩೮೪, ೩೮೫, ೩೯೯, ೫೩೦, ೫೪೬, ೫೫೬

ಮಹಾದ ೫೩೪

ಮಹಾಭಾರತ ೩೦೩, ೩೧೮, ೫೫೨

ಮಹಾರ್ ೩೧೬, ೩೧೭, ೩೨೮, ೩೨೯, ೩೩೦, ೩೩೧, ೩೩೨, ೩೩೪, ೩೬೬, ೩೭೭, ೩೭೮, ೩೮೮, ೩೮೯, ೩೯೦, ೩೯೧, ೩೯೩, ೩೯೪, ೪೦೨, ೪೨೫, ೪೨೭, ೪೩೫, ೪೩೬, ೪೫೧, ೪೫೩, ೪೫೪, ೪೫೫, ೪೫೭, ೪೬೧, ೪೬೬, ೪೬೯, ೪೭೦, ೪೭೧, ೪೭೨, ೪೭೪, ೪೭೬, ೪೭೭, ೪೮೨, ೪೮೯, ೫೨೮, ೫೩೩, ೫೩೪, ೫೪೨, ೫೪೩, ೫೪೫, ೫೪೬, ೫೫೪

ಮಹಾರ ೩೨೯, ೩೩೦, ೩೩೨, ೩೩೩, ೩೩೪, ೩೬೬, ೩೮೮, ೩೮೯, ೩೯೧, ೪೦೨, ೪೧೧, ೪೨೫, ೪೨೬, ೪೩೨, ೪೩೫, ೪೩೬, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೭, ೪೬೧, ೪೬೯, ೪೭೦, ೪೭೧, ೪೭೩, ೫೩೩, ೫೪೬, ೫೪೭, ೫೫೩, ೫೫೬

ಮಹಾರಾಷ್ಟ್ರ ೨೦೭, ೨೮೪, ೨೯೮, ೩೪೫, ೪೮೭

ಮಹಾವೀರ ಪಾರ್ಶ್ವನಾಥ ೫೪೨

ಮಹೇಂದ್ರ ಚಂದ್ರ ನಂದಿ ೧೪೭

ಮಹೋಬಿಯಾ ೫೪೮

ಮಾಂಟೆಗ್ಯು ೪೮೯, ೪೯೦, ೪೯೧, ೫೫೬

ಮಾಂಟ್ಫರ್ಡ್ ಎ.ಜೆ. ೫೪೩

ಮಾಂಟ್ಫರ್ಡ್ಎ.ಜೆ. ೫೪೩

ಮಾಂಡೂರ ೫೪೮

ಮಾಟುಂಗಾ ೧೪೨, ೧೪೨, ೨೪೮, ೨೫೦

ಮಾಟೆ ೧೦೭, ೧೦೭, ೧೦೮, ೧೧೦, ೧೧೩, ೧೫೧, ೧೫೪, ೧೫೫, ೧೫೬, ೨೯೬, ೩೮೩, ೩೯೯, ೪೮೨, ೫೪೨

ಮಾಟೇ ಮಾಸ್ತರ್ ೧೧೦, ೧೧೩, ೩೮೩, ೫೪೨

ಮಾರಿತ್ ೪೬೫

ಮಾಣಸೂರ್ ೧೩೩

ಮಾಥಡಿ ೩೬೫

ಮಾದಿಗ ೯೨, ೯೩, ೯೪, ೧೦೫, ೧೦೯, ೧೧೩, ೧೧೪, ೧೧೫, ೧೨೮, ೧೨೯, ೧೩೦, ೧೪೩, ೧೫೬, ೨೦೨, ೨೨೨, ೨೫೮, ೨೫೯, ೨೬೦, ೨೬೧, ೨೯೬

ಮಾಧವತೀರ್ಥ ೫೪೧

ಮಾಧವರಾವ್ ೩೮೭
ಮಾಧವ್‌ರಾವ್ ಟಿ. ೫೫೬
ಮಾನೂರ್ ೧೫೭
ಮಾನ್ಕರ್ ೫೩೭
ಮಾಮಾ ಪರಮಾನಂದ್ ೫೩೬, ೫೩೮
ಮಾರಿಸ್ ಹೇವರ್ಡ್ ೩೭೨
ಮಾರುತಿರಾವ್ ೫೨೯
ಮಾರುತಿ ಸಾಬಜಿ ಗಾಯಕ್‌ವಾಡ್ ೬
ಮಾರ್ಲೆ ಲಾರ್ಡ್‌ಆ ೩೪, ೧೪೭, ೪೩೯, ೫೪೪
ಮಾಲಿನ ಪಾಣಂದಿಕರ್ ೧೪೯, ೧೫೦, ೧೫೧,
೧೮೮, ೨೦೮, ೫೨೪
ಮಾಲಿನ.ಪಾಣಂದೀಕರ್ ೨೧೩
ಮಾಲಿನಬಾಯಿ ೧೪೯, ೧೫೦, ೧೫೧
ಮಾಲಿನೀಬಾಯಿ ೨೧೩
ಮಾವಳ ೧೨೫
ಮಾವಳ್ಕರ್ ೪೩೨
ಮಾಸ್ತರ್ ಮಾಂಗ್ ೪೮೨
ಮಾಹಾಡ್ ೧೧೬, ೧೨೦, ೧೯೭
ಮಾಹಾರಾಷ್ಟ್ರ ೩೧೧
ಮಾಹಿ ೫೪೯
ಮಾಳೀ ೩೭೯
ಮಿಂಟೋ ಲಾರ್ಡ್ ಗಿಲ್ಬರ್ಟ್ ಜಾನ್ ೫೪೪
ಮಿಯಾ ೪೭೪
ಮಿಲ್ ೪೮
ಮಿಸ್.ಮೇಯೋ ೨೮೯
ಮೀತ್ ೫೪೯
ಮೀರಟ್ ೧೬
ಮೀರತ್ ೫೩೨
ಮೀರಾಬಾಯಿ ೫೪೮, ೫೫೨
ಮುಂಜೆಯವರು ೪೬೧
ಮುಂಡಲೆ ೨೯೦, ೪೦೭, ೫೪೪
ಮುಂಡಲೆ ಮಹಾದೇವ ಸೀತಾರಾಮ ೫೪೪
ಮುಂಬಯಿ ೪, ೫, ೬, ೧೪, ೧೭, ೩೩, ೩೫,
೮೬, ೮೭, ೮೮, ೧೩೦, ೧೪೨, ೧೪೩, ೧೪೪,
೧೬೩, ೧೬೪, ೧೬೫, ೧೬೬, ೧೮೫, ೨೧೭,
೨೪೭, ೨೫೦, ೨೫೯, ೨೭೦, ೩೦೨, ೩೦೮,
೩೦೯, ೩೧೧, ೩೩೮, ೩೪೧, ೩೭೨, ೩೭೫,
೩೭೮, ೩೭೯, ೩೯೦, ೪೦೪, ೪೦೫, ೪೧೬,
೪೨೦, ೪೪೯, ೪೫೩, ೪೫೭, ೪೬೮, ೪೭೩,
೪೮೪, ೪೮೬, ೪೮೮, ೪೯೦, ೪೯೧, ೪೯೪,
೫೦೪, ೫೦೫, ೫೦೭, ೫೨೧
ಮುಂಬಯಿ ಟೈಮ್ಸ್ ೧೭೮, ೩೦೯, ೩೭೫,
೪೮೯
ಮುಕಾದಮ್ ಡಬ್ಲ್ಯು.ಎಸ್. ೪೫೪
ಮುಕುಂದರಾವ್ ಗಣಪತ್ ರಾವ್ ಪಾಟೀಲ್
೫೨೩
ಮುಕ್ತೇಶ್ವರ ೫೩೭
ಮುಖೇಡ್ ೪೩೧
ಮುಘಲ್ ೧೫೦
ಮುನೀಂದ್ರಚಂದ್ರ ನಂದಿ ೧೩೯, ೫೩೨
ಮುನ್ತ್ರಾಮ್ ೧೪೭
ಮುನ್ಶೀರಾಮ್ ೫೫೫
ಮುಲ್ಕಿ ೧೦, ೨೨೭
ಮುಸಲೋನಿ ೫೦೦
ಮುಸಲ್ಮಾನ್ ೩೭೫, ೩೭೭, ೪೪೦, ೫೨೫
ಮುಸಲ್ಮಾನ ೧, ೧, ೭, ೧೬, ೧೭, ೩೩, ೩೪,
೪೫, ೪೬, ೫೮, ೬೧, ೬೨, ೬೮, ೬೯, ೭೩,
೭೯, ೮೨, ೮೫, ೯೬, ೯೭, ೧೦೩, ೧೦೯,
೧೧೧, ೧೧೬, ೧೨೧, ೧೩೩, ೧೩೮, ೧೩೯,
೧೪೧, ೧೪೭, ೧೪೯, ೧೫೦, ೧೫೯, ೧೬೦,
೧೭೫, ೧೮೪, ೧೮೮, ೧೮೯, ೧೯೦, ೧೯೧,
೧೯೨, ೨೦೪, ೨೦೫, ೨೧೧, ೨೧೨, ೨೧೩,
೨೧೪, ೨೧೫, ೨೧೮, ೨೦೯, ೨೪೬, ೨೪೭,
೨೫೫, ೨೬೫, ೨೬೮, ೨೮೫
ಮುಸ್ಲಿಂ ೭೭, ೧೨೧, ೧೩೮, ೧೫೦, ೧೬೦,
೧೬೭, ೧೮೪, ೨೧೨, ೨೫೫, ೨೮೫, ೩೬೭,

೪೩೯, ೪೪೧, ೪೪೨, ೪೯೮, ೫೪೪, ೫೫೮
ಮೂಕನಾಯಕ್ ೩೭, ೩೮, ೬೩, ೧೦೯, ೫೬೧
ಮೆನ್ನೋವಿಕಿ ೫೪೦
ಮೆಸಪಟೋಮಿಯ ೫೨೫
ಮೆಹತಾ ಸಿ.ವಿ ೪೫೪
ಮೆಹ್ತಾ ಜೆ. ಕೆ. ೫೦೮
ಮೇಘವಾಲ್ ೨೬೩
ಮೇಘವಾಲ ೨೬೩, ೨೬೪
ಮೇಢಾ ೨೬೭
ಮೈಥಿಲ ೩೫೨
ಮೈಸೂರಿನಲ್ಲಿ ೧೪೬
ಮೊಂಟೆಗ್ಯು ಮಿ. ೪೧
ಮೊಘಲ್ ೭, ೧೨೫, ೧೯೧, ೩೫೧, ೩೯೬, ೪೩೬, ೫೩೩, ೫೩೪
ಮೊಹಮ್ಮದೀಯ ೭೬, ೭೭
ಮೊಹರಂ ೨೪೭
ಮೋತಿಲಾಲ್ ಘೋಷ್ ೧೪೭
ಮೋತಿವಾಲ ಬಿ.ಎನ್. ೫೫೮
ಮೋರೋಜಿ ೫೩೩
ಮೋರೋಪಂತ್ ಜೋಶಿ ೩೭೩
ಮೋರ್ಶಿ ೨೯೦, ೪೦೭, ೫೪೪
ಮೌಂಟ್ ಎಲ್.ಜೆ. ೩೯೦
ಮೌಂಟ್ ಫೋರ್ಡ್ ಎಲ್.ಜಿ. ೪೫೫
ಮೌಂಟ್ ಫೋರ್ಡ್ ಐ.ಜೆ. ೪೫೫
ಮೌಂಟ್ ಸ್ಟುವರ್ಟ್ ಎಲ್ಫಿಸ್ಟನ್ ೪೧೬
ಮೌಜ್ ೪೦೬
ಮೌಡನ್ಸ್‌ಫರ್ಡ ಮಿ. ೭೧

## ಯ

ಯಮುನಾಚಾರ್ಯ ೫೫೫
ಯಶವಂತ ದಿನಕರ್ ಫಡಕೆ ೫೬೦
ಯಶವಂತ ಮಹಾದೇವ ಪೋತ್ನೀಸ್ ೫೪೭
ಯಶವಂತ ಮೋರೆ ೫೪೭
ಯಹೂದಿ ೧, ೧೩೫
ಯಾಜ್ಞವಲ್ಕ ೩೪೮
ಯಾದವಗಿರಿ ೧೩೭
ಯುರೇಶಿಯನ್ ೨೦೩
ಯುರೋಪಿಯನ್ ೧, ೩೩, ೫೮, ೬೧, ೬೨, ೭೨, ೭೬, ೧೬೬, ೧೮೬, ೨೦೩, ೨೧೪, ೨೪೮, ೩೮೭, ೪೧೬, ೪೧೭
ಯೂರೋಪು ೪೬, ೪೬, ೧೨೭, ೧೬೭, ೧೮೩, ೩೧೩, ೩೫೪, ೩೯೫, ೩೯೬, ೪೧೨, ೪೯೯, ೫೦೦
ಯೇಸುಕ್ರಿಸ್ತ ೨೮೫

## ರ

ರಂಗನಾಥ ಶಾಸ್ತ್ರಿ ನಾಶಿಕಕರ್ ೫೧೫
ರಂಗಾ ಅಯ್ಯರ್ ಸಿ.ಎಸ್. ೪೭೮, ೫೨೧
ರಂಗಾಚಾರ್ಯ ರೆಡ್ಡಿ ೫೧೫
ರಘುನಾಥ ಭಾಂಡಾರ್ಕರ್ ೫೩೬
ರಘುನಾಥರಾವ್ ಸಬ್ನೀಸ್ ೪೪೯
ರಘುನಾಥ ಸಿಂಗ್ ೪೩೨
ರಘುನಾಥ್ ಜನಾರ್ಧನ ಭಾಂಡಾರಕರ್ ೫೩೬
ರಜಪುತವಾಡಿ ೪೭೧
ರತನ್‌ನಾಕ್ ಧಾನ್‌ನಾಕ್ ೩೯೩
ರತ್ನಾಗಿರಿ ೨೮೮, ೨೯೧, ೩೧೬, ೩೩೨, ೫೩೫
ರಮಜಾನ್ ೧೭೮
ರಮಾನಂದ ಆಚಾರ್ಯ ೫೪೫, ೫೫೨
ರಮಾಬಾಯಿ ರಾನಡೆ ೫೫೭
ರಮೇಶ್ಚಂದ್ರ ಬ್ಯಾನರ್ಜಿ ೪೪೦, ೪೪೧, ೪೪೪, ೫೪೭
ರಮ್‌ಜಾನ್ ೧೭೫
ರವಿದಾಸ ೫೪೮, ೫೪೯, ೫೫೨, ೫೫೩
ರವೀಂದ್ರನಾಥ ಡಾ. ೧೪೯
ರವೀಂದ್ರನಾಥ್ ಟಾಗೋರ್ ೧೪೯, ೩೨೫, ೩೯೫, ೩೯೬, ೩೯೮, ೫೦೨

ರಷಿಯನ್ ೧೮೨, ೫೧೧, ೫೪೦
ರಷಿಯಾ ೧೮೩, ೫೧೮, ೫೪೦
ರಸೆಲ್ ೩೮೮
ರಹಿಮತ್‌ಪುರ್ ೨೨೨, ೨೭೧
ರಾಜಪುತಾನ ೫೨೪
ರಾಜಪೂತ ೨೬೩
ರಾಜಭೋಜ್ ೧೫೫, ೩೯೯, ೪೬೧, ೪೮೪, ೫೪೫
ರಾಜಭೋಜ ೨೯೬, ೪೮೬, ೪೮೭, ೫೪೪
ರಾಜಭೋಜ ಪಾಂಡುರಂಗ ನತ್ಥೂಜೀ ೧೫೫, ೨೯೬, ೫೪೪
ರಾಜಭೋಜ್ ಪಿ. ಎನ್. ೩೯೯, ೫೩೧
ರಾಜಮಾನ್ಯ ನಾಯ್ಡು ೨೬೨
ರಾಜವಲ್ಲಭ ೫೫೭
ರಾಜವಾಡೆ ೪೪೯
ರಾಜಶ್ರೀ ೬
ರಾಜಸ್ಥಾನ ೫೪೮
ರಾಜಾ ಎಮ್.ಸಿ ೭೩, ೭೪, ೭೫
ರಾಜಾಯೀ ೫೩೪
ರಾಜಾರಾಮ್‌ಪಾಲ್ ೧೩೯
ರಾಜಾರಾಮ್ ಮೋಹನ್‌ರಾಯ್ ೧೩೭, ೧೩೭, ೪೭೬
ರಾಜು ಮಿ. ೭೪
ರಾನಡೆ ೫೨೫, ೫೩೬, ೫೪೭
ರಾಮಕೃಷ್ಣ ಗೋಪಾಲ್ ಭಾಂಡಾರಕರ್ ಡಾ. ೧೪೯, ೫೨೪, ೫೪೦
ರಾಮಕೃಷ್ಣ ಪಂತ್ ಭಾಂಡಾರ್ಕರ್ ೫೩೮, ೫೪೦
ರಾಮಕೃಷ್ಣ ಪು.ಲೋ.ಡಾ. ೧೪೯
ರಾಮಚಂದ್ರ ಅಮೃತ ದುಗಲ್ ಬ. ೩೭೯
ರಾಮಚಂದ್ರ ಡೋಮಾಜಿ ವಾಸ್ನಿಕ್ ೫೩೧
ರಾಮಚಂದ್ರ ಬಾಲಕೃಷ್ಣ ೫೩೭
ರಾಮಚಂದ್ರ ಸಟವಾಜಿ ನಕಾಳಜೆ ೫೩೫
ರಾಮಜೀ ಲಕ್ಷ್ಮಣ ಸಾಂಗವಕರ್ ೫೩೧
ರಾಮನಾಕ್ ಯೇಮನಾಕ್ ೩೯೩
ರಾಮನಾಕ್ ಯೇಸ್‌ನಾಕ್ ೩೯೩
ರಾಮರಾಜ ೫೪೭
ರಾಮಸ್ವಾಮಿ ನಾಯಕರ್ ಇ.ವ್ಹಿ. ೩೬೦, ೫೧೮, ೫೫೯
ರಾಮಾನುಜಾಚಾರ್ಯ ೧೩೬, ೧೩೬, ೧೩೭, ೫೩೨, ೫೪೫, ೫೫೧, ೫೫೨, ೫೫೫, ೫೫೬
ರಾಮ್ ಭಾವೂ ಪಾಲಜಿ ಮಾರೂ ೪೩೧
ರಾಯಗಡ ೧೨೫, ೨೮೫, ೫೪೫, ೫೪೬, ೫೪೭
ರಾಯದಾಸ್ ೫೪೮
ರಾಯನಾಕ್ ೧೨೫, ೫೪೫, ೫೪೬, ೫೪೭
ರಾಯಬಾಗ್ ೪೬೯
ರಾಯಬಾ ಜಾನಬಾ ಗಾಯಕ್ವಾಡ್ ೫೪೫
ರಾಯ್‌ಸಾಹೇಬ್ ೧೬
ರಾವಳಪಿಂಡಿ ೧೪೧
ರಾವಿ ೫೦೦
ರಾವ್‌ಬಾಜಿ ಮರಾಠೆ ೪೦೨
ರಾವ್‌ಸಾಹೇಬ ೪೯೨
ರಿಜ್ವೇ ೪೭೮
ರೂಪನಾಕ್ ಲಖ್‌ನಾಕ್ ೩೯೩
ರೂಪಾಜಿ ವಸ್ತಾದ್ ೪೩೧
ರೂಯಿದಾಸ್ ೫೪೮
ರೆಬೇಸಾ ೩೭೬
ರೇಯಿದಾಸ್ ೫೪೮
ರೈಗರ್ ೫೪೮
ರೈದಾಸ್ ೫೪೮
ರೈನಾಕ್ ವಾನ್‌ನಾಕ್ ೩೯೩
ರೋಮ್ ೩೫೨, ೫೦೦
ರೋಮನ್ ೭, ೨೧೫, ೨೮೫
ರೋಹಿತದಾಸ್ ೫೪೮
ರೋಹಿದಾಸ್ ೨೦೨, ೫೪೮
ರೌಲತ್ ೧೩೯, ೩೨೦, ೫೪೯
ರ‍್ಯಾಂಗ್ಲಡರ್ ೫೩೬

ರ್‍ಯಾಮ್ಸೆ ಮ್ಯಾಕ್‌ಡೊನಾಲ್ಡ್ ೩೫೪, ೫೪೨

ಲ

ಲಂಡನ್ ೬೪, ೪೧೫, ೪೩೧, ೪೭೮, ೫೧೯, ೫೩೬, ೫೪೦, ೫೪೨, ೫೪೫, ೫೬೦
ಲಂಡನ್‌ಟೈಮ್ಸ್ ೪೩೧
ಲಕ್ಷ್ಮಣ್ ೪೦೧
ಲಕ್ಷ್ಮಣ ಭಟ್ಟ ೫೫೧
ಲಕ್ಷ್ಮಣ ರಾಮಚಂದ್ರ ೫೩೭
ಲಕ್ಷ್ಮಣ ಶಾಸ್ತ್ರಿ ಜೋಶಿ ೫೬೦
ಲಕ್ಷ್ಮಣ ಶಾಸ್ತ್ರಿ ಹಳವೇ ೫೩೮
ಲಕ್ಷ್ಮೀಕಾಂತ್ ಭಟ್ ೧೪೬
ಲಖನೌ ೪೯೯
ಲಖ್ನೋ ೪೩೯
ಲಖ್ನೌ ೫೩೬
ಲಡಿಯಾ ೫೪೮
ಲದ್ಧಾ ೫೩೪
ಲಬಾಚಂದ್ ರಾ. ೩೦೮
ಲಲ್ಲೂಭಾಯಿ ಮೆಹ್ತಾ ೪೫೫, ೫೪೩
ಲಲ್ಲೂಭಾಯಿ ಸಾಮಳ್ ದಾಸ್ ೪೫೪
ಲಹರ್ ೨೨೪
ಲಾಡ್ ರಾಮಚಂದ್ರ ನಾರಾಯಣ ೫೬೦
ಲಾಲಾಜಿ ೩೩೭, ೩೩೮, ೩೩೯
ಲಾಲಾ ಲಜಪತ್‌ರಾಯ್ ೧೪೭, ೩೩೭, ೪೭೮, ೫೪೯, ೫೫೯
ಲಾಲಾ ಸುಖವಿಂದರ್ ಸಿಂಗ್ ೧೩೯
ಲಾಲಾ ಹಂಸರಾಜ್ ೧೪೭
ಲಾಲ್ ಜ್ಯೋತಿಪ್ರಸಾದ್ ೧೬
ಲಾಸೂರು ೪೭೩
ಲಾಹೋರ್ ೯೯, ೧೪೧, ೧೮೭, ೩೩೭, ೩೩೯, ೫೦೦, ೫೫೫
ಲಿಂಬಾಜಿ ತುಳಸಿರಾಮ್ ಓರ್ಝುರ್‌ಕರ್ ೬
ಲಿಟೇಶಿಯಾ ೫೩೫
ಲುಂಬಿನ ೫೩೮
ಲುಧಿಯಾನಾ ೯೯
ಲುನಯಾ ೫೪೮
ಲುಸೀಮೌತ್ ೫೪೨
ಲೋಖಂಡೆ ರಾ. ೨೯೬
ಲೋಟಬಂದಿ ೨೬೭, ೨೬೮
ಲೋಣಾವಳಾ ೨೬೦
ಲೋ.ನಾಮದೇವ್.ಖಾಪರ್ಡೆ ೨೯
ಲೋಮೋಡ್ ಬೇಂರಹ ೫೪೮

ವ

ವಡೋದ ೫೫೧
ವಡ್‌ಗಾವ್ ೪೦೨
ವನಸ್ಪತಿಶಾಸ್ತ್ರ ೪೯೮
ವಪ್‌ನಾಕ್ ಹರ್‌ನಾಕ್ ೩೯೩
ವರಾಡ್ ೫೮, ೧೭೩, ೨೬೪
ವರೇರಕರ್ ೪೮೪, ೪೮೫
ವರ್ಧಾ ೫೨೬
ವರ್ಹಾಡ ೧೪೪, ೨೧೬, ೨೧೭, ೩೩೧, ೪೦೭, ೪೨೮, ೪೩೯, ೫೪೪
ವಲ್ಲಭಭಾಯಿ ಪಟೇಲ್ ೧೩೯, ೨೯೨, ೨೯೩, ೫೦೦
ವಲ್ಲಭಾಚಾರ್ಯ ೧೩೬, ೫೫೧, ೫೫೨
ವಾಗಳೆ ೫೩೭
ವಾಜಗಾಂವ್ ೨೨೬
ವಾಮನರಾವ್ ಘೋರ್ಪಡೆ ೫೨೬
ವಾಮನರಾವ್ ಜೋಶಿ ೪೭೩, ೪೭೫
ವಾಮನ್ ಜೋಶಿ ೨೮೦, ೨೮೧, ೪೭೩, ೪೭೫
ವಾಯಿ ೫೩೨, ೫೩೩
ವಾಯಿಕರ್ ೫೩೩
ವಾಯ್ ದಂಡೆ ೪೦೦
ವಾರಕರಿ ೪೨೫, ೫೨೨, ೫೩೪
ವಾರ್ಥೋಟ್ ೫೧೮

ವಾಷಿಂಗಟನ್ ೫೫೪
ವಿಕ್ಟೋರಿಯಾ ೪೧೫
ವಿಜಯ್‌ಮರಾಠಾ ೬೩, ೮೪
ವಿಜಾಪುರ ೧೨೫, ೫೨೮
ವಿಟ್ಟಲ್ ಭಾಯಿ ಪಟೇಲ್ ೪೯೪
ವಿಠನಾಕ್ ಧಾಮ್‌ನಾಕ್ ೩೯೩
ವಿಠಲ ಪಿರಾಜಿ ಡೋಣೆ ೫೨೩
ವಿಠಾ ೫೩೪
ವಿಠೋಜಿರಾವ್ ೫೨೮
ವಿಠ್ಠಲರಾವ್ ೪೩೧
ವಿಠ್ಠಲ್ ರಾಮಜೀ ಶಿಂದೆ ೪೯೦, ೪೯೦, ೪೯೧, ೫೩೪, ೫೫೫
ವಿದ್ಯಾಧರ ಕೃಷ್ಣಾಜಿ ಶಹರ್‌ಕರ್ ೫೧೫
ವಿನಯಮಂದಿರ ೨೫೦, ೨೫೧
ವಿನಾಯಕ್ ವಾಕಸಕರ್ ೧೭೫, ೧೭೬, ೧೭೭, ೫೫೧
ವಿಲ್ಸನ್ ೫೨೮
ವಿಶಿಷ್ಟಾದ್ವೈತ ೧೩೬, ೫೫೫
ವಿಶ್ವಭಾರತಿ ೩೯೫
ವಿಶ್ವಾಸ್‌ಎನ್.ಕೆ ೪೬೧
ವಿಶ್ವಾಸ ಬಲವಂತ ಡಾವರೆ ೫೧೫
ವಿಷ್ಣು ನಾರಾಯಣ ಮವಾಳ್ ೫೧೫
ವಿಷ್ಣುಪಂತ ೩೭೫, ೩೭೫, ೩೭೬, ೩೭೭, ೩೭೮, ೩೭೯
ವಿಷ್ಣುಪದಿ ೧೭೦
ವಿಷ್ಣು ಭಾಸ್ಕರ್ ೩೭೭
ವಿಷ್ಣು ಭಾಸ್ಕರ್ ಕರಮರಕರ್ ೩೮೨
ವಿಷ್ಣುಶಾಸ್ತ್ರಿ ಚಿಪಳುಣಕರ್ ೧೭೦
ವಿಷ್ಣುಶಾಸ್ತ್ರಿ ಚಿಪ್ಳೂಣಕರ್ ೩೨೩, ೩೨೫, ೫೨೭
ವಿಷ್ಣುಸ್ವಾಮಿನಿ ೫೫೧
ವಿಸೋಬಾ ಖೇಚರ್ ಚಾಟಿ ೫೩೪
ವೀರಕರ್ ೪೩೭, ೪೩೮
ವೆಲಿಂಗಟನ್ ೫೩೫
ವೆಲ್ಬಿ ೫೨೫
ವೇಡರ್ಬನ್ ೫೪೭
ವೇದಾದೇವಿ ೫೪೧
ವೈಕಮ್ ೫೧೮
ವೈದಿಕಧರ್ಮ ೫೧೯
ವೈರಾಟಗಡ್ ೧೨೫, ೫೩೩, ೫೩೪

## ಶ

ಶಂಕರ್ ೧೮೩
ಶಂಕರ ೧೯, ೨೯೦, ೪೨೬
ಶಂಕರನ್ ನಾಯರ್ ೨೧೪, ೨೧೫, ೪೩೯, ೫೨೮, ೫೩೪
ಶಂಕರರಾವ್ ೫೨೭
ಶಂಕರವಾಡಿ ೨೫೦, ೨೫೪
ಶಂಕರಾಚಾರ್ಯ ಡಾ. ಲಿಂಗೇಶ್ ಕುರ್ತಕೋಟಿ ೧೩೬, ೧೩೯, ೧೫೪, ೨೫೨, ೫೫೧, ೫೫೨, ೫೫೩, ೫೫೪
ಶಂಕರ್ ನಾ. ಜೋಶಿ ೫೩೩
ಶಂಕರ್ ನಾಯರ್ ೩೮, ೧೮೨, ೧೮೪
ಶಂಕರ್ ನಾರಾಯಣ್ ೩೭
ಶಂಕರ್‌ರಾವ್ ೫೩೬
ಶಾಂತಾಬಾಯಿ ೪೮೮, ೫೨೪, ೫೩೬, ೫೫೫
ಶಾಂತಾರಾಮ್ ಪೋತ್ನೀಸ್ ೩೯
ಶಾಂತಿನಿಕೇತನ ೩೯೮
ಶಾಮರಾವ್ ಗೋವಿಂದರಾವ್ ದೇಸಾಯಿ ೪೬೫
ಶಾಮ್‌ರಾವ್ ಗೋವಿಂದ ದೇಸಾಯಿ ೨೬೯
ಶಾಸ್ತ್ರಿ ೧೨, ೨೭
ಶಾಹು ದಾಜಿ ೩೭೮
ಶಾಹುದಾಜಿ ಕುಕಡೆ ೩೭೭
ಶಾಹೂ ಮಹಾರಾಜ ೨೭೫, ೩೬೯, ೪೪೮, ೪೪೯, ೪೬೬, ೪೬೮, ೪೯೨, ೫೨೮, ೫೪೭, ೫೫೪
ಶಾಹೇನ್ ಶಾಹ್ ಸುಲ್ತಾನ್ ೫೨೩
ಶಿಂಗೆ ಬ. ನಾ. ೪೭೨

ಶಿಂದೆ ೩೯೨
ಶಿಂದೆ ಡಿ. ಬಿ. ೩೯೪, ೪೮೯
ಶಿಂಧೆ ೩೭, ೩೮, ೩೯, ೪೦, ೪೯೦, ೪೯೧, ೪೯೨
ಶಿದನಾಕ್ ೧೨೫, ೫೫೪, ೫೫೫
ಶಿದ್ದಿ ೨೭೬
ಶಿರೂರು ೩೯೧, ೩೯೨
ಶಿರೋಲ್ ೪೭೧
ಶಿರ್ಗಾವ್ಕರ್ ೫೩೭
ಶಿವಜಯಂತಿ ೧೧೧
ಶಿವತರ್‌ಕರ್ ೧೬೪, ೪೮೮, ೪೯೨, ೫೪೧, ೫೫೫
ಶಿವತರ್‌ಕರ್ ಸೀತಾರಾಮ ನಾಮದೇವ್ ೫೫೫
ಶಿವದಾಸ ದೇಶಮುಖ್ ೩೪೨
ಶಿವರಾಮ ಗೋಪಾಲ ಜಾಧವ್ ೪೦೨
ಶಿವಾಜಿ ೧೦೭, ೧೧೧, ೨೮೫, ೩೮೩, ೫೨೭, ೫೪೯
ಶೀಲವತಿಬಾಯಿ ೫೨೪
ಶೃಂಗೇರಿ ೫೫೪
ಶೆಂಡೆ ನಾ.ರಾ. ೫೩೧
ಶೆಟ್ಯೆ ರಾ. ೨೫೦, ೨೫೧, ೨೫೨, ೨೫೪
ಶೇತಕರಿ ಸಂಘ ೩೨೯
ಶೋಲಾಪುರ್ ೫೫೭
ಶ್ಯಾಮಜೀ ಕೃಷ್ಣ ವರ್ಮ ೪೯೮
ಶ್ರೀಧರ ಪಂತ ೩೦೭, ೩೦೯, ೩೧೦, ೩೧೧, ೪೮೧, ೪೮೨, ೪೮೩, ೪೮೪, ೪೮೫, ೪೮೮
ಶ್ರೀಧರ್ ಬಳವಂತ್ ಟಿಳಕ್ ೩೦೭, ೩೦೮, ೩೦೯, ೪೮೧, ೪೮೩, ೪೮೮, ೫೨೩, ೫೨೪, ೫೪೧
ಶ್ರೀನಾಥ್ ಸದಾಶಿವ್ ವೈರಾತ್ ೪೦೧
ಶ್ರೀರಂಗಂ ೫೫೫


## ಸ


ಸಂಕೇಶ್ವರ ೫೫೪
ಸಂಖವಾರ್ ೫೪೮
ಸಂಜಗಿರಿ ೫೩೭
ಸಂಭಾಜಿ ೫೪೭, ೫೫೪
ಸಂಸ್ಕೃತ ೧೩೯, ೪೧೨, ೫೨೪
ಸಕಟ/ಕೆ.ಕೆ./ರಾ. ೧೧೩, ೧೧೩, ೧೧೪, ೧೫೬, ೨೫೯, ೨೬೦, ೨೯೬, ೪೦೦
ಸಖಾರಾಮ್ ಲಕ್ಷ್ಮಣ ೫೨೨, ೫೩೮
ಸತ್ಯನಾರಾಯಣ್ ಪಂ. ೧೪೬
ಸದಾಶಿವ ಅಪ್ಪಾ ದೇಶಮುಖ್ ೩೪೧
ಸದಾಶಿವ ಕಾಶೀನಾಥ ಚಿತ್ರೆ ೪೧೭
ಸದಾಶಿವ ರಾವ್ ನಾಯಿಡು ೪೬೦
ಸದಾಶಿವ್ ಧಾರಪ್ ೨೮೦, ೪೭೪
ಸದಾಶಿವ್ ಪೇಠೆ ೯೩
ಸಪನಾವೀರ ೫೪೮
ಸಭೋವತಿ ೫೨೮
ಸಮತಾಪ್ರೀಯ ೨೮
ಸಮತಾಸಂಘ ೩೦೭, ೩೦೮, ೩೦೯, ೩೧೦, ೩೪೪, ೪೮೨, ೪೮೩, ೪೮೪, ೪೮೫, ೪೮೬, ೪೮೮, ೫೦೯, ೫೩೨, ೫೪೪, ೫೬೦
ಸಮರ್ಥ ರಾಮದಾಸ ೧೨೬, ೫೫೩
ಸಯ್ಯಾಜಿರಾವ್ ಗಾಯಕವಾಡ್ ೫೨೧, ೫೨೮
ಸರಲಾದೇವಿ ಚೌಧರಿ ೧೮೦, ೧೮೧, ೫೪೮, ೫೬೧
ಸವಾಯಿ ಮಾಧವರಾವ್ ೩೮೭, ೫೫೪
ಸಾಕಟ ರಾ. ೧೫೬
ಸಾಕ್ರೆಟೀಸ್ ೫೩೦
ಸಾಠಯೇ ವಿ.ಪಿ. ೫೦೯
ಸಾತವಳೇಕರ್ ದಾ. ೫೧೩
ಸಾತಾರ ೩೯, ೫೫೪, ೫೫೭
ಸಾಯಮನ್ ಕಮೀಶನ್ ೨೮೯
ಸಾರಜ ಬಾಯಿ ೩೭೬, ೩೭೭
ಸಾವಳೇರಾವ್ ದಾಣಿ ೪೩೧
ಸಿಂಗಪುರ ೫೪೦
ಸಿಂಧ್ ೩೧೭, ೪೧೫, ೪೪೨, ೪೪೩, ೪೯೧, ೪೯೨

ಸಿಕಂದರ್ ಶಹ್ ಲೋದಿ ೫೪೮
ಸಿಕಂದರ್ ಶಹ್ ಲೋಧಿ ೫೪೮
ಸಿಖ್ ೫೪೯
ಸಿದ್ಧಾರ್ಥ ೫೩೮
ಸಿರಿಯಾ ೫೨೫
ಸಿಲಾವಟ್ ೫೪೮
ಸಿವಘಡ ೫೩೩
ಸೀತಾಬಾಯಿ ಡುಕಳೆ ೫೫೭
ಸೀತಾಬಾಯಿ ಭಂಡಾರ್ಕರ್ ೫೫೭
ಸೀತಾರಾಮ ಕೇಶವ್ ಬೋಲೆ ೩೭೦, ೩೭೧, ೩೭೨, ೩೭೩, ೪೪೯, ೫೩೯
ಸೀತಾರಾಮ ಬಾಬಾಜಿ ಲಾಂಡಗೆ ೪೦೦, ೪೦೧
ಸೀತಾರಾಮ್ ಪಂತ್ ಬೋಲೆ ೪೮೪
ಸುಖವಿಂದರ್ ಸಿಂಗ್ ೧೩೯
ಸುಬೋಧ ೫, ೬೩, ೫೨೩, ೫೩೮
ಸುಭಾಷ್ ಚಂದ್ರ ಬೋಸ್ ೩೫೭, ೩೬೦, ೪೮೭, ೫೪೦, ೫೪೭
ಸುಮತಿದೇವಿ ೪೪೩
ಸುರೇಂದ್ರನಾಥ್ ಗೋವಿಂದ ಟಿಪ್ಣಿಸ್ ೪೭೪, ೫೩೦, ೫೪೬
ಸುರ್ವೆ ೩೭೦, ೩೭೨
ಸುಲ್ತಾನ್ ೫೨೩
ಸೂರತ್ ೪೧೬
ಸೂರ್ಯಭಾನ್ ಭಿವಸನ್ ಮಹಾರ್ ೨೬೪, ೪೭೪
ಸೂರ್ಯವಂಶಿ ೫೪೮
ಸೆಂಟ್ ಹೆಲೀನಾ ೫೩೫, ೫೫೮
ಸೆಲಿಗ್‌ಮನ್ ಪ್ರೊ. ೫೨
ಸೊರಾಬ್ಜಿ ಮಿಸ್ ೫೫೭
ಸೋಕ್ಯಾ ಮ್ಹಸೋಬಾ ೧೬೩
ಸೋನು ಕಾಳೂ ಭೋಪನ್ಕರ್ ಮೋರೆ ೪೧೧
ಸೋಮನಾಕ್ ಕಮಲನಾಕ್ ನಾಯಕ್ ೩೯೩
ಸೋಯರಾ ೪೨೫
ಸೋಲಂಕಿ ಡಾ. ಪುರುಷೋತ್ತಮ ಗೋವಿಂದಜೀ ೩೧೨, ೩೨೧, ೩೪೩, ೫೦೮, ೫೫೮
ಸೋಲಾಪುರ ೪೮, ೧೪೧, ೩೦೨, ೩೩೨, ೩೪೦, ೩೪೧, ೩೮೨
ಸೌತ್ ಆಫ್ರಿಕಾ ೧೧೦
ಸೌತ್ ಬರೋ ೪೮೯, ೪೯೦, ೪೯೪, ೫೩೦
ಸ್ಕಾಟಲೆಂಡ್ ೫೪೨
ಸ್ಟಾಂಟನ್ ೩೯೦, ೩೯೧, ೩೯೨
ಸ್ಟಾಟ್ ಒ. ಎಚ್.ಬಿ. ೫೦೮
ಸ್ಟಾಟನ್ ೩೯೨
ಸ್ಟಾನ್ಲೆ ಬಾಲ್ಡವಿನ್ ೫೫೬
ಸ್ಪೇನ್ ೨೦
ಸ್ಪ್ಯಾನಿಷ್ ೩೧೩
ಸ್ಮಿತ್ ೩೯೨
ಸ್ಯಾಮ್ಯುಯಲ್ ನಾಯಿಡು ೪೬೦
ಸ್ವರಾಜ್ಯಪಕ್ಷ ೪೪೧
ಸ್ವಾಮಿ ದಯಾನಂದ ಸರಸ್ವತಿ ೫೫೫
ಸ್ವಾಮಿ ಶ್ರದ್ಧಾನಂದ ೧೦೭, ೧೪೦, ೨೧೨, ೨೧೫, ೫೨೨, ೫೫೫
ಸ್ವಿಡ್ಜರ್ಲೆಂಡ್ ೨೦
ಸ್ವೀಡನ್ ೨೦

## ಹ

ಹರಿದ್ವಾರ ೧೩೯, ೧೪೭, ೫೫೮
ಹಿಂದಿ ೩೨೧, ೫೫೫
ಹಿಂದೂ ೧, ೩, ೭, ೧೬, ೧೯, ೨೩, ೨೪, ೨೭, ೪೩, ೫೭, ೬೦, ೬೧, ೭೦, ೭೨, ೭೬, ೭೭, ೮೦, ೯೬, ೯೭, ೧೦೭, ೧೧೬, ೧೧೮, ೧೨೧, ೧೩೩, ೧೩೪, ೧೪೧, ೧೪೪, ೧೪೯, ೧೫೦, ೧೬೩, ೧೬೬, ೧೬೯, ೧೮೨, ೧೮೪, ೧೯೯, ೨೦೫, ೨೦೭, ೨೧೧, ೨೧೫, ೨೧೮, ೨೪೫, ೨೪೬, ೨೪೭, ೨೫೬, ೨೬೨, ೨೬೩, ೨೬೫, ೨೮೯, ೩೧೨, ೩೧೩, ೩೧೭, ೩೧೮, ೩೨೧, ೩೨೨, ೩೪೦

ಹಿಂದೂತ್ವ ೩೧೭, ೫೧೯, ೫೨೨
ಹಿಂದೂಧರ್ಮ ೬೪, ೩೬೫, ೪೦೬, ೪೪೫
ಹಿಮ್ಮತ್ ಬಹಾದ್ದೂರ್ ಸೀತಾರಾಮ ಬಾಬಾಜಿ
ಲಾಂಡಗೇ ೪೦೦
ಹೀರಾಬಾಯಿ ಪದಮ್‌ಜೀ ೫೫೭
ಹೀರೋಜಿ ಪಾಟಂಕರ್ ೧೨೫, ೫೫೫
ಹುಡ್ ಮಿ. ೧೫೩
ಹೆನ್ರಿ ಕಾಟನ್ ೫೪೭
ಹೈದ್ರಾಬಾದ್ ೧೮೦
ಹೊಸಪೇಟೆ ೩೭೬, ೩೭೮
ಹೋಮ್‌ರೂಲ್ ೪೧
ಹೋಳಕರ್ ೩೯೨
ಹ್ಯಾಮಲೆಟ್ ೪೮೧, ೪೮೨
ಹ್ಯಾರಿಸನ್ ೯೯
ಹ್ಯಾರೋ ೪೯೮